ಫೋ||ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೧-೭-೪೯ [ಸಂಚಿಕೆ ೨೭೩

ಕ್ಯಾಂಟೀನ್ ನಡೆಸಲು ಸರ್ಕಾರದವರೇ ಸಿದ್ಧ

ನೆಹರೂರವರಿಗೆ ಹೊತ್ತೇ ಸಾಲದು

ಭಾರತದ ಮುಖ್ಯ ಪ್ರಧಾನಿ ಪಂಡಿತ ನೆಹರೂರವರು ಮೊನ್ನೆ ರಾತ್ರಿ ಆಹಾರದ ಪರಿಸ್ಥಿತಿ ವಿಚಾರವಾಗಿ ರೇಡಿಯೋ ಭಾಷಣ ಮಾಡಿ, ಇತ್ತೀಚೆಗೆ ತಮಗೆ ಕಾಲಾವಕಾಶವಿಲ್ಲದುದರಿಂದ ರೇಡಿಯೋ ಮೂಲಕ ಮಾತನಾಡಲು ಸಾಧ್ಯವಾಗುತ್ತಿಲ್ಲವೆಂದೂ, ತಮಗೆ ತಿಂಗಳಿನಲ್ಲಿರುವ ದಿವಸಗಳೂ, ದಿವಸಗಳಲ್ಲಿರುವ ಗಂಟೆಗಳೂ ಮತ್ತು ನಿಮಿಷಗಳೂ ಸಾಲವೆಂದೂ ಹೇಳಿದರು.

ಕೊಚ್ಚಿ ರಾಜರ ಸಿಂಹಾಸನ ತ್ಯಾಗ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಈ ದಿನದಿಂದ ಐಕ್ಯವಾಗುವುವು. ಕೊಚ್ಚಿ ರಾಜರು ತಮ್ಮ ರಾಜ್ಯಾಡಳಿತವನ್ನು ಈ ದಿನ ಬಿಟ್ಟುಕೊಡುವರು. ಈ ಸಂಬಂಧದಲ್ಲಿ ಅವರು ಒಂದು ಸಂದೇಶವನ್ನು ಕೊಟ್ಟು, ಹೊಸ ಯೋಜನೆಯಲ್ಲಿ ಪ್ರಜೆಗಳಿಗೆ ಸುಖ ಸಮಾಧಾನಗಳು ಉಂಟಾಗಲೆಂದು ಹಾರೈಸಿದ್ದಾರೆ.

ಹೋಟಲುಗಳನ್ನು ಖಾಯಂ ಆಗಿ ಮುಚ್ಚಬೇಕೆಂದು ಮನವಿ

ರಾಜಧಾನಿಯ ಮಂಡಿ ಮೊಹಲ್ಲಾ ನಿವಾಸಿಗಳು ಆಹಾರ ಸಚಿವರಿಗೆ ಒಂದು ಪತ್ರ ಬರೆದು, ಹೋಟಲುಗಳ ಮೇಲೆ ಹಾಕಿರುವ ನಿರ್ಬಂಧಕಾಜ್ಞೆಯನ್ನು ಸ್ವಾಗತಿಸಿ, ಅದರಿಂದ ಜನರಿಗೆ ತುಂಬಾ ಸಹಾಯ ಮಾಡಿದಂತಾಗಿರುವುದೆಂದು ತಿಳಿಸಿರುತ್ತಾರೆ. ಇದೂ ಅಲ್ಲದೆ ಹೋಟಲುಗಳನ್ನು ಖಾಯಂ ಆಗಿ ಮುಚ್ಚುವುದರಿಂದ ಬಡಬಗ್ಗರಿಗೆ ತುಂಬಾ ಅನುಕೂಲವಾಗುವುದೆಂದೂ ಸಹ ಅವರು ಸಲಹೆ ಇತ್ತಿರುತ್ತಾರೆ. ಈ ಆಜ್ಞೆಯನ್ನು ಹೊರಡಿಸಿದ ಬಾಗಾಯ್ತು ಕಳೆದ ೧೦ ದಿನಗಳಲ್ಲಿ ಮಾರ್ಕೆಟ್ ಧಾರಣೆಯು ವಿಶೇಷವಾಗಿ ಇಳಿದಿದೆ. ಸೌದೆ ಗಾಡಿಯ ಬೆಲೆಯು ೪೦ರಿಂದ ೨೫ ರೂ, ಬ್ಲಾಕ್ ಮಾರ್ಕೆಟ್ ಅಕ್ಕಿ ರೂ ಗೆ ೧| ಸೇರಿನಿಂದ ೨ ಸೇರು ಮತ್ತು ಇತರ ಪದಾರ್ಥಗಳ ಬೆಲೆಯೂ ಕಡಿಮೆಯಾಗಿರುತ್ತದೆ - ಎಂದು ಅವರುಗಳು ತಿಳಿಸಿರುತ್ತಾರೆ. ಈ ಪತ್ರಕ್ಕೆ ಸುಮಾರು ೨೫೦ ಜನರ ರುಜು ಇವೆ.

ಸಂಗೀತ ಮತ್ತು ಹರಿಕಥೆ

ಬಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಈ ಸಂಜೆ ೭ ಗಂಟೆಗೆ ಆ|| ವಿ|| ಸ್ವರಮೂರ್ತಿಯವರಿಂದ ವೀಣಾವಾದನ ಮತ್ತು ಹಾಡುಗಾರಿಕೆ ನಡೆಯುವುದು. ನಾಳೆ ಸಂಜೆ ೬ ಗಂಟೆಗೆ ಗೀತಾ ಕಾಲಕ್ಷೇಪ ಮತ್ತು ೭ ಗಂಟೆಗೆ ಬಾಲಶಿರೋಮಣಿ ಶ್ರೀನಾಗೇಶರಾಯರಿಂದ ಭಕ್ತ ಧ್ರುವ ಎಂಬ ಹರಿಕಥೆ. ನಾಳಿದ್ದು ಸಂಜೆ ೭ ಗಂಟೆಗೆ ಆ|| ವಿ|| ಬಿ. ದೇವೇಂದ್ರಪ್ಪನವರಿಂದ ತನಿ ಪಿಟೀಲು ಕಛೇರಿಗಳು ಜರುಗುವುವು

ಗ್ರಾಮ ಸೇವಿಕಾ ವಿದ್ಯಾಲಯದ ವಾರ್ಷಿಕೋತ್ಸವ

ಸಂಸ್ಥಾನದ ಕಸ್ತೂರಿ ಬಾ ಸ್ಮಾರಕಟ್ರಸ್ಟಿನ ಆಶ್ರಯದಲ್ಲಿ ಅರಸೀಕೆರೆ ತಾಲ್ಲೋಕ್ ಕಿರಸಾವೆಯಲ್ಲಿ ಗ್ರಾಮ ಸೇವಿಕಾ ವಿದ್ಯಾಲಯದ ವಾರ್ಷಿಕೋತ್ಸವವು ಇದೇ ೩ ನೇ ತಾ|| ಸಂಜೆ ೬ ಗಂಟೆಗೆ ಶ್ರೀಮತಿ ಮೇರಿ ಕೋದಂಡರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ಲಯಾಕಾಲಿ ಮಂತ್ರಿ ಮಂಡಲದವರ ಬಿಡುಗಡೆ ಇಲ್ಲ

ಹೈದರಾಬಾದಿನ ಲಯಾಕಾಲಿ ಮಂತ್ರಿ ಮಂಡಲದ ೩ ಜನರನ್ನು ಬಿಡುಗಡೆ ಮಾಡಲಾಗಿದೆಯೆಂಬ ಸುದ್ದಿಯು ನಿರಾಧಾರವಾದುದೆಂದು ಹೈದರಾಬಾದ್ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಲಂಚದಿಂದ ಸಂಪಾದಿಸಿದ ಆಸ್ತಿಗಳ ಮುಟ್ಟುಗೋಲು

ಸರ್ಕಾರಿ ಅಧಿಕಾರಿಗಳು ಲಂಚದಿಂದ ಸಂಪಾದಿಸಿದ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕುವ ಕಾನೂನನ್ನು ಸಧ್ಯದಲ್ಲಿಯೇ ತರಲಾಗುವುದೆಂದು ಮದರಾಸಿನ ಸಚಿವ ಡಾ|| ರಾಜನ್‌ರವರು ತಿಳಿಸಿರುತ್ತಾರೆ.

ಮೀನಿನ ಹೊಟ್ಟೆಯಲ್ಲಿ ನೋಟುಗಳು

೨೫೦೦ ರೂ ಬೆಲೆ ಬಾಳುವ ನೋಟುಗಳನ್ನು ಮೀನಿನ ಹೊಟ್ಟೆಯಲ್ಲಿಟ್ಟು ಅಕ್ರಮವಾಗಿ ಕಲ್ಕತ್ತದಿಂದ ಪಾಕೀಸ್ಥಾನಕ್ಕೆ ಸಾಗಿಸುತ್ತಿದ್ದ ಪ್ರಯಾಣಿಕನೊಬ್ಬನನ್ನು ಮೊನ್ನೆ ದಿನ ಪೋಲೀಸರು ವಶ್ಯಾಗಿ ಮಾಡಿರುತ್ತಾರೆ

ಹಾಲಿನ ಉತ್ಪತ್ತಿ ಹೆಚ್ಚಿಸಲು ನೂತನ ಪ್ರಯೋಗ

ಹಸುಗಳಿಗೆ ಕೃತಕ ಗರ್ಭೋತ್ಪತ್ತಿ ಪ್ರಯೋಗ ಮಾಡುವುದರಿಂದ ಉತ್ತಮ ತರದ ಹೆಚ್ಚು ಹಾಲು ಕೊಡುವ ಹಸುಗಳನ್ನು ಪಡೆಯಬಹುದೆಂದೂ ಇದರಿಂದ ಕೆಲವು ವ್ಯಾಧಿಗಳನ್ನು ತಡೆಗಟ್ಟಿ ನಿಧಾನವಾಗಿ ಕರು ಹಾಕುವಿಕೆಯನ್ನು ನಿಲ್ಲಿಸಿ ಬೇಗನೆ ಕರುಗಳ ಉತ್ಪತ್ತಿಗೆ ಅನುಕೂಲವಾಗುವುದೆಂದೂ ಪಶುವೈದ್ಯ ಪ್ರವೀಣರಾದ ಕೊಚ್ಚಿಯ ಡಾ|| ಎಸ್. ಆರ್. ಚಂದ್ರರವರು ತಿಳಿಸಿರುತ್ತಾರೆ.

ವಿವಾಹ ಮಹೋತ್ಸವ

ಹೊಳೇನರಸೀಪುರದ ಶೈಸ್ ಮಿಲ್ ಪ್ರೈವರ್ ಶ್ರೀ ಎಂ ಎಸ್ ಲಕ್ಷ್ಮಣಸಿಂಗ್‌ರವರು ತಮ್ಮ ಸೋದರಳಿಯ ಶ್ರೀ ಬಿ ಕೃಷ್ಣಸಿಂಗ್‌ರವರಿಗೆ ಶ್ರೀ ಎಂ. ಎಸ್ ಬಾಲಾಜಿಸಿಂಗರ ಪುತ್ರಿ ಚಿ|| ಸೌ|| ಪ್ರಮೀಳಾಬಾಯಿಯನ್ನು ತಂದುಕೊಂಡು ವಿವಾಹವನ್ನು ಚಿಕ್ಕೋಡಿಯಲ್ಲಿ ಕಳೆದ ೨೬ ನೇ ತಾ|| ನೆರವೇರಿಸಿದರು.

ಹೋಟಲುಗಳ ಕಾಲದ ಪರಿಮಿತಿ ರದ್ದಾಯಿತು

ಸ್ವಂ ಸು ಫೋ||] ಬೆಂಗಳೂರು ೧

ಹೋಟಲುಗಳ ಮೇಲೆ ಹಾಕಿದ್ದ ಕಾಲದ ಪರಿಮಿತಿಯ ನಿರ್ಬಂಧಾಜ್ಞೆಯನ್ನು ಸರ್ಕಾರದವರು ರದ್ದು ಮಾಡಿರುತ್ತಾರೆ. ಹೊಸ ಹೋಟಲುಗಳನ್ನು ಸ್ಥಾಪಿಸುವ ಮತ್ತು ೨೫ಕ್ಕೆ ಮೇಲ್ಪಟ್ಟು ಉಪಾಹಾರ ಕೊಡಬೇಕಾಗುವ ಸಂದರ್ಭದಲ್ಲಿ ಆಹಾರದ ಡೈರೆಕ್ಟರವರ ಮತ್ತು ಅವರಿಂದ ಅಧಿಕಾರ ಪಡೆದವರ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ. ಮತ್ತು ಉಪಾಹಾರ ಕೂಟಗಳನ್ನು ನಡೆಸುವವರ ರೇಷನ್ ಕಾರ್ಡುಗಳಲ್ಲಿರುವ ಸಂಖ್ಯೆಯು ಇದರಲ್ಲಿ ಸೇರುವುದಿಲ್ಲವೆಂದೂ ತಿಳಿಸಲಾಗಿದೆ. ಹೋಟಲು ಸಂಘಗಳವರೂ ಆಹಾರ ಸಮಿತಿಯವರೂ ಸಾರ್ವಜನಿಕರೂ ಮಾಡಿದ ಮನವಿಗೆ ಅನುಸಾರವಾಗಿ ಈ ಬದಲಾವಣೆ ಮಾಡಿರುವಂತೆ ಹೇಳಲಾಗಿದೆ.

ಹೋಟಲುಗಳ ಮುಷ್ಕರ

ರೇಷನಿಂಗ್ ಅಧಿಕಾರಿಗಳಿಂದ ಊಟದ ವ್ಯವಸ್ಥೆ

ಮೈಸೂರು ೧

ನಿನ್ನೆ ಸಂಜೆ ಚೀಫ್ ರೇಷನಿಂಗ್ ಅಧಿಕಾರಿಗಳೂ, ಪುರಸಭಾಧ್ಯಕ್ಷರೂ ಮತ್ತು ಜಿಲ್ಲಾಧಿಕಾರಿಗಳೂ ನಗರದ ಹೋಟೇಲ್ ಮಾಲೀಕರುಗಳ ಸಂಘದ ಪ್ರತಿನಿಧಿಗಳನ್ನು ಕರೆಸಿಕೊಂಡು, ಮುಷ್ಕರದ ವಿಚಾರವಾಗಿ ಮಾತುಕತೆ ನಡೆಸಿದರು. ಹೋಟೇಲುಗಳನ್ನು ಮುಚ್ಚುವುದರಿಂದ ಜನರಿಗೆ ತೊಂದರೆಯಾಗುವುದೆಂದೂ, ಆ ರೀತಿ ಮಾಡಬಾರದೆಂದೂ ಅಧಿಕಾರಿಗಳು ಸಲಹೆ ಇತ್ತರು. ಆದರೆ ಸಂಸ್ಥಾನದ ಹೋಟೆಲು ಸಂಘದವರು ನಿರ್ಧಾರ ಮಾಡಿರುವುದರಿಂದ, ತಾವು ಅದನ್ನು ಬದಲಾಯಿಸಲು ಅಧಿಕಾರವಿಲ್ಲವೆಂದು ಹೋಟೆಲು ಪ್ರತಿನಿಧಿಗಳು ತಿಳಿಸಿದರೆಂದು ಗೊತ್ತಾಗಿದೆ

ಈ ಪರಿಸ್ಥಿತಿಯನ್ನು ನಿವಾರಿಸಲು ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಗೆಸ್ಟ್ ಕ್ವಾರ್ಟರ್ಸ್ ಮತ್ತು ಪಿಪ್ಪಲ್ಸ್ ಮಿಲ್ಕ್ ಸಪ್ಲೈ ಕಿಚನ್ ಹೋಟಲುಗಳಲ್ಲಿ ಊಟದ ಸೌಕರ್ಯವನ್ನು ರೇಷನಿಂಗ್ ಅಧಿಕಾರಿಗಳು ಏರ್ಪಡಿಸಿದ್ದಾರೆ

ನಗರದ ಮುಖ್ಯ ಹೋಟೇಲುಗಳೆಲ್ಲಾ ಮುಚ್ಚಲ್ಪಟ್ಟಿವೆ. ಆದರೆ ಬೀಗ ಮುದ್ರೆ ಹಾಕಲ್ಪಟ್ಟ ಕೆಲವು ಸಣ್ಣ ಹೋಟೇಲುಗಳು ಅಲ್ಲಲ್ಲಿ ತೆರೆದಿವೆ. ಅನೇಕ ಮುಸ್ಲಿಂ ಹೋಟಲುಗಳೂ ಸಹ ಮುಚ್ಚಲ್ಪಟ್ಟಿವೆ

೧೫ ಸಾವಿರ ಹೋಟಲುಗಳ ಮುಷ್ಕರ

ಸರ್ಕಾರದವರೇ ಕ್ಯಾಂಟೀನ್ ನಡೆಸುವರೆಂದು ಸಚಿವರ ಹೇಳಿಕೆ

ಸ್ವಂ. ಸು. ಫೋ|| ಬೆಂಗಳೂರು ೧

ಇಡ್ಲಿ, ದೋಸೆ ಮುಂತಾದ ತಿಂಡಿ ಪದಾರ್ಥಗಳನ್ನು ರೇಷನ್ ಅಲ್ಲದ ಧಾನ್ಯಗಳಿಂದಲೂ ತಯಾರಿಸಕೂಡದೆಂದು ಸರ್ಕಾರದವರು ಹೊರಡಿಸಿರುವ ನಿರ್ಬಂಧಾಜ್ಞೆಯನ್ನು ಪ್ರತಿಭಟಿಸಲು, ಈ ದಿನದಿಂದ ಸಂಸ್ಥಾನಾದ್ಯಂತ ೧೫ ಸಾವಿರ ಹೋಟಲುಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಚ್ಚಲಾಗಿದೆ. ಮುಸ್ಲಿಂ ಹೋಟಲುಗಳೂ ಇದರಲ್ಲಿ ಭಾಗವಹಿಸಿವೆ. ಈ ಮುಷ್ಕರದಿಂದ ಬೆಂಗಳೂರು ನಗರವೊಂದರಲ್ಲೇ ಹೋಟಲುಗಳಲ್ಲಿ ಊಟ ಮಾಡುತ್ತಿದ್ದ ೫೦ ಸಾವಿರ ಜನರಿಗೆ ಆಹಾರವಿಲ್ಲದೆ ಹೋಗಿದೆ. ಇಲ್ಲಿ ಸುಮಾರು ೬೫೦ ಊಟದ ಹೋಟಲುಗಳು ಇವೆ.

ಹೋಟಲುಗಳ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಕ್ಕೆ ಸಾರ್ವಜನಿಕರ ಸಂಪೂರ್ಣ ಬೆಂಬಲವಿದೆ. ಈಗಲೂ ಕೂಡ ಹೋಟಲಿನವರು ತಮ್ಮ ತೀರ್ಮಾನವನ್ನು ಬದಲಾಯಿಸಿ ಸರ್ಕಾರದೊಂದಿಗೆ ಆಹಾರ ಉಳಿತಾಯ ಕಾರ್ಯದಲ್ಲಿ ಸಹಕರಿಸಬೇಕೆಂದು ಕೋರುತ್ತೇನೆ. ಆದರೆ ಹೋಟಲಿನವರು ತಮ್ಮ ಹಟವನ್ನೇ ಸಾಧಿಸುವುದಾದರೆ ಸರ್ಕಾರದವರೇ ಕ್ಯಾಂಟೀನುಗಳನ್ನು ನಡೆಸುವರು.-ಎಂದು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ತಿಳಿಸಿರುತ್ತಾರೆ.

ಹೋಟಲುಗಳ ಮುಷ್ಕರ

ಶಾಸನ ಸಭೆಯಲ್ಲಿ ನಿಲುವಳಿ ಸೂಚನೆ

ಸ್ವಂ. ಸು. ಫೋ||] ಬೆಂಗಳೂರು ೧

ಶಾಸನ ಸಭೆಯಲ್ಲಿ ಈ ದಿನ ಜನಾಬ್ ಇಮಾಂರವರು ಸಂಸ್ಥಾನದಲ್ಲಿ ಹೋಟಲುಗಳು ಮುಷ್ಕರ ಹೂಡಿರುವ ಪರಿಸ್ಥಿತಿ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದರು. ಸಚಿವ ಶ್ರೀ ಮರಿಯಪ್ಪನವರು ಅದನ್ನು ವಿರೋಧಿಸಿ, ಇದರಿಂದ ವಿಶೇಷ ತೊಂದರೆಯು ಉಂಟಾಗಿಲ್ಲವೆಂದೂ, ಸರ್ಕಾರದವರು ಕ್ಯಾಂಟೀನ್ ಮತ್ತು ಇತರ ಊಟದ ವ್ಯವಸ್ಥೆ ಮಾಡಿದ್ದಾರೆಂದೂ ತಿಳಿಸಿದರು. ಆದರೆ ಅಧ್ಯಕ್ಷರು ಅಂಗೀಕರಿಸಿ, ೪ ಗಂಟೆಗೆ ಚರ್ಚೆಗೆ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಕಾಲೇಜ್ ಶಂಕುಸ್ಥಾಪನೆ

ಶ್ರೀಮನ್ಮಹಾರಾಜರವರು ಈ ದಿನ ಕೋಲಾರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನ ಶಂಕುಸ್ಥಾಪನೆಯನ್ನು ನೆರವೇರಿಸಿ, ಪ್ರೌಢ ವಿದ್ಯಾಭ್ಯಾಸವನ್ನು ಅಭಿರುಚಿಯುಳ್ಳವರು ಮಾತ್ರ ಅದನ್ನು ಹೊಂದಬೇಕೆಂದೂ, ಇದಕ್ಕೆ ಮೊದಲೇ ತಾಯಿ ತಂದೆಗಳು ತಮ್ಮ ಮಕ್ಕಳಿಗೆ ಸೂಕ್ತ ಸಲಹೆ ಕೊಡಬೇಕೆಂದೂ ತಿಳಿಸಿದರು.

೨೫೦೦ ಸಿನಿಮಾಗಳ ಮುಷ್ಕರ

ಸಿನಿಮಾ ಮಂದಿರಗಳ ಮೇಲೆ ಪ್ರಾಂತ ಸರ್ಕಾರಗಳು ವಿಧಿಸಿರುವ ಹೆಚ್ಚಿನ ಮನರಂಜನ ತೆರಿಗೆಯನ್ನು ಪ್ರತಿಭಟಿಸಲು ಭಾರತಾದ್ಯಂತ ೨೫೦೦ ಸಿನಿಮಾ ಮಂದಿರಗಳು ನಿನ್ನೆ ದಿನ ಪ್ರದರ್ಶನಗಳನ್ನು ಮುಚ್ಚಿ ಮುಷ್ಕರ ಹೂಡಿದ್ದುವು. ಬೆಂಗಳೂರು ಮತ್ತು ಮೈಸೂರು ನಗರದ ಮಂದಿರಗಳೂ ಮುಚ್ಚಲ್ಪಟ್ಟಿದ್ದುವು

ಗೋಡ್ಸೆ ಮತ್ತು ಆಪ್ಟೆಗಳ ಪರವಾಗಿ ಕ್ಷಮಾ ಅರ್ಜಿ

ಮಹಾತ್ಮರ ಕೊಲೆ ಅಪಾದನೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥೂ ರಾಂ ಗೋಡ್ಸೆ ಮತ್ತು ನಾರಾಯಣ ಆಪ್ಟೆರವರುಗಳ ಪರವಾಗಿ ಕ್ಷಮಾ ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಹಿಂದೂ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ದೇಶಪಾಂಡೆಯವರು ಅವರುಗಳನ್ನು ಅಂಬಾಲಾ ಜೈಲಿನಲ್ಲಿ ಮೊನ್ನೆ ದಿನ ಭೇಟಿ ಮಾಡಿದ್ದರು

ಈ ವರ್ಷದ ಅಂತ್ಯದಲ್ಲಿ ಸಾರ್ವತ್ರಿಕ ಚುನಾವಣೆ

ಈ ವರ್ಷದ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಕೇಂದ್ರ ಶಾಸನ ಸಭೆಯ ಮಹಾ ಚುನಾವಣೆಯು ನಡೆಯಬಹುದೆಂದು ಹೇಳಲಾಗಿದೆ

ಹಾವು ಹಿಡಿಯುವವನಿಗೆ ಹಾವಿನಿಂದಲೇ ಮೃತ್ಯು

ಬೊಂಬಾಯಿಗೆ ೧೦ ಮೈಲಿ ದೂರದಲ್ಲಿರುವ ಕುರಲಾ ಎಂಬಲ್ಲಿನ ಸಾಹೇಬ್ ಖಾಸಿಂ ಎಂಬ ಹಾವು ಹಿಡಿಯುವವನು ಹತ್ತಿರವಿರುವ ಕಾಡಿಗೆ ಹೋಗಿ ಒಂದು ಸರ್ಪವನ್ನು ಹಿಡಿದು ಬುಟ್ಟಿಗೆ ಹಾಕುತ್ತಿದ್ದಾಗ, ಅದು ಅವನನ್ನು ಕಡಿಯಿತೆಂದೂ, ಅತನು ಆಸ್ಪತ್ರೆಯಲ್ಲಿ ಸತ್ತನೆಂದೂ ವರದಿಯಾಗಿದೆ.

ಷಾಂಗ್ಹೈ ಮೇಲೆ ಬಾಂಬುಗಳು

ಕಮ್ಯೂನಿಸ್ಟರಿಂದ ಆಕ್ರಮಿತವಾಗಿರುವ ಷಾಂಗ್ಹೈ ನಗರದ ಮೇಲೆ ರಾಷ್ಟ್ರೀಯ ವಿಮಾನ ಪಡೆಯವರು ಎರಡು ಗಂಟೆ ಕಾಲ ಬಾಂಬುಗಳನ್ನು ಸುರಿಸಿದರೆಂದು ವರದಿಯಾಗಿದೆ

॥ ಶ್ರೀ ॥

ಗಣೇಶ ಟಾಕೀಸ್

1-7-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಪ್ರದರ್ಶನಗಳು

ಶಂಭಗಪಲ್ಲಿ

(ತಮಿಳು)

ಪಾತ್ರ:–ಎಂ.ಎಸ್ ವಿಜಯಾಳ್, ಟಿ ಎಸ್ ಬಾಲಯ್ಯ, ನಾಟ್ಯರಾಣಿ ಎ ಎಲ್ ಪೆರಿಯನಾಯಕಿ, ಮುಂತಾದವರು

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಗದಂ ಮನೆ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ನೆಹರೂರವರಿಗೆ ಕೆನಡದ ಆಹ್ವಾನ

ಪಂಡಿತ ನೆಹರೂರವರು ಕೆನಡಾಕ್ಕೆ ಭೇಟಿ ಕೊಡಬೇಕೆಂದು ಅಲ್ಲಿನ ಪ್ರಧಾನಿಯವರ ಇತ್ತಿರುವ ಆಹ್ವಾನವನ್ನು ಅವರು ಅಂಗೀಕರಿಸಿದ್ದಾರೆ. ಈ ದಿನ ನಡೆಯುವ ಅಲ್ಲಿನ ರಾಷ್ಟ್ರೀಯ ದಿನಾಚರಣೆಗೆ ಪಂಡಿತ ನೆಹರೂರವರು ಸಂದೇಶವನ್ನು ಕಳುಹಿಸುತ್ತಿದ್ದಾರೆ ನ್ಯೂ ಫೌಂಡ್ ಲೆಂಡ್ ದ್ವೀಪವು ಇಂದಿನಿಂದ ಕೆನಡಾ ದೇಶದೊಡನೆ ಸೇರುವುದು.

ಕರಾಚಿಯ ವೇಶ್ಯೆಯರ ಪ್ರತಿಭಟನೆ

ಪಾಕಿಸ್ತಾನದಲ್ಲಿ ವ್ಯಭಿಚಾರವನ್ನು ನಿಲ್ಲಿಸುವ ಕಾನೂನನ್ನು ಜಾರಿಗೆ ತಂದಿರುವುದನ್ನು ಪ್ರತಿಭಟಿಸಲು ಕರಾಚಿಯ ಕೇಂದ್ರ ದೀಶದ ಪ್ರದೇಶದಲ್ಲಿರುವ ವೇಶ್ಯೆಯರೆಲ್ಲರೂ ಸಂಗೀತ ಸಹಿತ ಮೆರವಣಿಗೆಯನ್ನು ನಡೆಸಲು ನಿರ್ಧರಿಸಿದ್ದಾರೆ ಹಿಂದೆ ಮೊಗಲ್ ಚಕ್ರವರ್ತಿ ಔರಂಗಜೇಬನು ಸಂಗೀತದ ಮೇಲೆ ನಿರ್ಬಂಧ ಹಾಕಿದಾಗ ಇದೇ ರೀತಿ ಜನರು ಮೆರವಣಿಗೆ ನಡೆಸಿದ್ದರೆಂದು ಹೇಳಲಾಗಿದೆ

ಕಾಲು ನಡಗೆಯಲ್ಲಿ ೫೦೦ ಮೈಲಿ ಯಾತ್ರೆ

ಜೈನ ಗುರುಗಳಾದ ಆಚಾರ್ಯ ವಿಜಯ ರಾಮಚಂದ್ರ ಸೂರಜಿಯವರು ಕಚ್ಛಿನಿಂದ ೫೦೦ ಮೈಲಿ ಕಾಲು ನಡಗೆಯಲ್ಲೇ ಹೊರಟು ಸೂರತ್ತನ್ನು ತಲುಪಿರುತ್ತಾರೆ.

ಆಧಾರ, ಭೋಗ್ಯದ ಮೇಲೆ
10,000 ರೂ ಸಾಲ
ಕೊಡಲೇ ಬೇಕು, ಒಳ್ಳೆ ಬಡ್ಡಿ ದೊರೆಯುತ್ತೆ.
ಬಿ. ಎಸ್. ಸುಬ್ಬರಾವ್
ಜಗನ್ಮೋಹನ ಬಂಗ್ಲೆ ರಸ್ತೆ : ಮೈಸೂರು

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಮ ೧ ಕೆಟ್ ರೂ ೩-೪-೦ ಪ್ಯಾಕಿಂಗ್ ಮತ್ತು ಟ ಖ ೧೨ ಅಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೊಳದ ಬೀದಿ ೧೧೯೬ನೇ ನಂಬರ್ ಮನೆಯಲ್ಲಿ ೪-೭-೪೯ರ ಲಾಗಾಯ್ತು ೮-೭-೪೯ರವರಿಗೆ ಕ್ಯಾಂಪ್ ಮಾಡುತ್ತಾರೆ ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

ಚಾಮುಂಡಿಪುರದ ವಿದ್ಯಾರ್ಥಿನಿಯರ ತೊಂದರೆ

ಮೈಸೂರು ೧

ಚಾಮುಂಡಿಪುರಂ ಬಡಾವಣೆಯಲ್ಲಿರುವ ಕಾನ್ವೆಂಟ್ ಸ್ಕೂಲಿನವರು ಕಳೆದ ತಿಂಗಳು ೭ ನೇ ತಾ॥ ನಿಂದ ಹೈಸ್ಕೂಲ್ ತರಗತಿಯನ್ನು ಪ್ರಾರಂಭಿಸಿ, ೨೭ ನೇ ತಾ॥ ವರೆಗೆ ಅದನ್ನು ನಡೆಸಿ ಈಗ ಮುಚ್ಚಿರುತ್ತಾರೆ. ಇದರಿಂದ ಹೊಸದಾಗಿ ಸೇರಿದ ಸುಮಾರು ೫೦ ಜನ ವಿದ್ಯಾರ್ಥಿನಿಯರಿಗೆ ತುಂಬಾ ಅನಾನುಕೂಲವಾಗಿರುತ್ತದೆ ಇಲ್ಲಿಂದ ಬೇರೆ ಶಾಲೆಗೆ ಹೋಗಲು ಹೆಣ್ಣು ಮಕ್ಕಳಿಗೆ ತುಂಬಾ ದೂರವಾಗಿರುತ್ತದೆ. ಮತ್ತು ಇತರ ಶಾಲೆಗೆ ಸೇರುವ ಕಾಲಾವಧಿಯು ಮೀರಿಹೋಗಿರುವುದರಿಂದ ಆ ಶಾಲೆಯವರು ಶಾಲೆಯನ್ನು ಪುನಃ ತೆರೆಯಬೇಕೆಂದು ಅದರ ಫಾದರ್‌ರವರಿಗೆ ವಿನಂತಿ ಮಾಡಿಕೊಂಡರೂ ಅವರು ನಿರಾಕರಿಸಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳು ಈ ಆಜ್ಞೆಯನ್ನು ಪುನರ್ವಿಮರ್ಶೆ ಮಾಡಿ ತರಗತಿಯನ್ನು ಪುನಃ ತೆರೆಯಬೇಕು–ಎಂದು ನೊಂದ ವಿದ್ಯಾರ್ಥಿನಿಯರು ಒಂದು ಪತ್ರ ಬರೆದಿರುತ್ತಾರೆ

ವಿಜ್ಞಾಪನೆ

ಮಾನ್ಯ ಚಂದಾದಾರರಿಗೆ –

'ಸಾಧ್ವಿ' ಪತ್ರಿಕೆ ಹಂಚುವ ಪ್ರತಿಯೊಬ್ಬ ಹುಡುಗನ ಕೈಲೂ ಒಂದು ಕಂಪ್ಲೈಂಟ್ ಪುಸ್ತಕವನ್ನು ಕೊಟ್ಟಿದ್ದೇವೆ ಚಂದಾದಾರರಿಗೆ ಪತ್ರಿಕೆ ಬಾರದಿದ್ದಾಗಲೀ ಅಥವ ಇನ್ಯಾವ ಪುಕಾರಿದ್ದರೂ ದಯವಿಟ್ಟು ಪುಸ್ತಕದಲ್ಲಿ ಅದನ್ನು ಬರೆಯಿರಿ ಹಾಗೆ ಒಂದು ವೇಳೆ ಹುಡುಗನು ಪುಸ್ತಕವನ್ನು ಕೊಡುವುದಕ್ಕೆ ನಿರಾಕರಿಸಿದರೆ ಕೂಡಲೇ ಆಫೀಸಿಗೆ ಫೋನ್ ಮುಖಾಂತರವಾಗಲಿ ಅಥವ ಅಂಚೆ ಮೂಲಕವಾಗಲಿ ದಯ ಮಾಡಿ ತಿಳಿಸಬೇಕಾಗಿ ವಿನಂತಿ. ರಶೀತಿ ಇಲ್ಲದೆ ಹಣವನ್ನು ಕೊಡಬಾರದಾಗಿ ಮತ್ತೊಮ್ಮೆ ವಿಜ್ಞಾಪಿಸುತ್ತೇವೆ.

ಏಜೆಂಟರು:-
'ಸಾಧ್ವಿ' ಟೆಲಿಫೋನ್ ನಂ 792 } ನ್ಯೂಸ್ ಪೇಪರ್ ಹೌಸ್
ಜಯನಗರ, ಮೈಸೂರು

ಏಕ ಕಾಲದಲ್ಲಿ ೩ ಮಕ್ಕಳ ಜನನ

ಉಡುಪಿ ತಾಲ್ಲೂಕು ಕಡೇಕಾರ ಹಳ್ಳಿಯ ಮಹಿಳೆಯೊಬ್ಬಳಿಗೆ ೨ ಗಂಡು ಮತ್ತು ೧ ಹೆಣ್ಣು ಮಕ್ಕಳು ಒಂದೇ ದಿನ ಜನನವಾಗಿದೆಯೆಂದು ವರದಿಯಾಗಿದೆ.

ನೋಟೀಸು

ಮೈಸೂರು ಪ್ರಿನ್ಸಿಪಲ್ ಸಬಾರ್ಡಿನೇಟ್‌ ಜಡ್ಜರವರ ಕೋರ್ಟಿನಲ್ಲಿ

47-48ನೇ ಸಾಲಿನ ಅಸಲು ದಾವಾ ನಂ. 130.

ವಾದಿಗಳು.—ಧರ್ಮ ಪ್ರವರ್ತಕ, ಆಚಾರ್ಯ ಸೇವಾಧುರೀಣ, ಡಾಕ್ಟರ್ ಟಿ ಯಸ್. ಸಿದ್ದಪ್ಪನವರು ವಗೈರೆ.

ಪ್ರತಿವಾದಿಗಳು—1. ಶ್ರೀ॥ ಗುರುಪಾದಪ್ಪನವರು 2 ಶ್ರೀ॥ ಜಪದಕಟ್ಟೆ ಮಠದ ಚರಪಟ್ಟಾಧ್ಯಕ್ಷ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು

ಮೇಲ್ಕಂಡ ೧ ನೇ ಪ್ರತಿವಾದಿ ಶ್ರೀ ಗುರುಪಾದಪ್ಪನವರು ಮೈಸೂರು ಅಶೋಕ ರೋಡಿನಲ್ಲಿರುವ ಶ್ರೀ ಜಪದಕಟ್ಟೆ ಮಠದ ಸ್ಥಿರ ಪಟ್ಟಾಧ್ಯಕ್ಷರಲ್ಲವೆಂದು ಊರ್ಜಿತಪಡಿಸಬೇಕೆಂಬುದಾಗಿ ಮೇಲ್ಕಂಡ ಕೇಸಿನ ವಾದಿಗಳಾದ ಮನಿಸ್ನೈದು ಜನ ವೀರಶೈವರು ತಮ್ಮ ಪರವಾಗಿಯೂ ಮೈಸೂರು ಸಿಟಿಯಲ್ಲಿರುವ ಇತರ ವೀರಶೈವರೆಲ್ಲರ ಪರವಾಗಿಯೂ ಮೇಲ್ಕಂಡ ನಂಬರು ಕೇಸಿನಲ್ಲಿ ಸಿ ಪಿ ಸಿ ಆರ್ಡರು ೧, ರೂಲು ಆರಂತೆ ದಾವಾ ದಾಖಲ್ಮಾಡಿರುತ್ತಾರೆ ಈ ದಾವಾದಲ್ಲಿ ಪಾರ್ಟಿಗಳಾಗಿ ಸೇರಲು ಇಷ್ಟವುಳ್ಳ ವೀರಶೈವರೆಲ್ಲರೂ ತಾ॥ ೨೨-೭-೪೯ರಲ್ಲಿ ಮೇಲ್ಕಂಡ ಕೋರ್ಟು ರೂಬರೂಬು ಹಾಜರಾಗಿ ತಮ್ಮ ಹೇಳಿಕೆಗಳನ್ನು ಕೊಡಬಹುದು.

ಕೋರ್ಟಿನವರ ಅಪ್ಪಣೆ ಮೇರೆ,

ಬಿ. ರಾಮರಾವ್
ವಾದಿಗಳ ಪರ ಅಡ್ವೋಕೇಟ್,
ಮೈಸೂರು.

Edited, printed and published by A.R Nagarajan at the Sadhvi Press, D. Subbiah Road, Mysore

ಪ್ರಭುದೇವಾ ಟಾಕೀಸಿನಲ್ಲಿ

1-7-49ನೇ ಶುಕ್ರವಾರದಿಂದ ಅಮೋಘ 2ನೇ ವಾರ

ಪ್ರತಿ ದಿನ ಮೂರು ಆಟಗಳು

★ ತಾಯಿನಾಡು ★

(ತಮಿಳು)

ಪಾತ್ರ:- ಟಿ.ಎಸ್. ಮಣಿ ಮುಂತಾದವರು

Murder Axis Troops
Latin Beauty !

Target for a Kiss
or a Killer !!

MORNING SHOWS

AT CHAMUNDESWARI TALKIES

From 1st July 1949 For 3 days only At 10.30 a.m

"Despite Blonde & Brunette trouble
The Falcon Smashes a Murderous Gang"

See it in R K O.

THE FALCON'S ADVENTURE

With Tom Conway

(ದಿ ಫಾಲ್ಕನ್ಸ್ ಅಡ್ವೆಂಚರ್)

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು

ಕೌಮುದಿ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಮ್ಮಿ, ಮುಟ್ಟಿನ ಕಾಲದ ಹೊಟ್ಟೆ, ನಡುಗನೋವು. ಮೊದಲಾಗಿ ಗುಣವಾಗುತ್ತದೆ

ಬೆಲೆ ಶೀಸೆ 1ಕ್ಕೆ 2-0

ವಿಳಾಸ:—

ಶ್ರೀ ಸೀತಾರಾಮನ ವೈದ್ಯಶಾಲಾ; ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨-೭-೪೯ [ಸಂಚಿಕೆ ೨೭೪

ಮೋಟಾರ್ ವ್ಯಾನ್‌ನಲ್ಲಿ ಆಹಾರದ ಹಂಚಿಕೆಯೆ

ವ್ಯಾನುಗಳಲ್ಲಿ ಆಹಾರವನ್ನು ಹಂಚಲು ಸರ್ಕಾರ ಸಿದ್ಧ

ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯ ವಾಪಸು

ಸ್ವಂ. ಸು. ಫೋ.] ಬೆಂಗಳೂರು ೨

ಹೋಟಲುಗಳ ಮುಷ್ಕರದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ನಿನ್ನೆ ಶಾಸನ ಸಭೆಯಲ್ಲಿ ಜನಾಬ್ ಮಹಮದ್ ಇಮಾಂರವರು ಮಂಡಿಸಿದ್ದ ನಿಲುವಳಿ ನಿರ್ಣಯವನ್ನು ಅವರು ಚರ್ಚೆಯಾದನಂತರ ವಾಪಸು ತೆಗೆದುಕೊಂಡರು. ಮೊದಲು ಜನಾಬ್ ಇಮಾಂರವರು ಮಾತನಾಡಿ ಇಂದಿನ ಜನಜೀವನದಲ್ಲಿ ಹೋಟಲುಗಳಿಗೆ ಇರುವ ಪ್ರಾಮುಖ್ಯ ಸ್ಥಾನವನ್ನು ವಿವರಿಸಿದರು. ಸಮಾಜಕ್ಕೆ ಅವುಗಳು ಅಗತ್ಯವಾಗಿ ಪರಿಣಮಿಸಿವೆ. ಇಡೀ ಸಂಸ್ಥಾನದಲ್ಲಿ ೮–೧೦ ಲಕ್ಷ ಜನರೂ, ಬೆಂಗಳೂರು ನಗರವೊಂದರಲ್ಲೇ ೫೦ ಸಾವಿರ ಜನರೂ ಹೋಟಲುಗಳನ್ನೇ ನಂಬಿಕೊಂಡಿದ್ದಾರೆ. ಹೋಟಲುಗಳ ಮುಷ್ಕರದಿಂದ ಹಿಂದೆಂದೂ ಒದಗದಿದ್ದ ಪರಿಸ್ಥಿತಿಯು ಈಗ ಉಂಟಾಗಿರುತ್ತದೆ. ಈ ಮುಷ್ಕರದ ವಿಚಾರವು ಮುಂಚೆಯೇ ತಿಳಿದಿತ್ತು. ಪರಿಸ್ಥಿತಿಯನ್ನು ಅವರು ತಹಬಂದಿಯಲ್ಲಿ ಇಟ್ಟುಕೊಳ್ಳಬೇಕಾಗಿತ್ತು–ಎಂದು ಅವರು ಹೇಳಿದರು.

ಜನಾಬ್ ಸಯದ್ ಅಬ್ದುಲ್ ರಹಿಮಾನ್‌ರವರು ನಿರ್ಣಯವನ್ನು ತೀವ್ರವಾಗಿ ವಿರೋಧಿಸಿದರು. ಹೋಟಲುಗಳಿಂದ ಜನರ ಆರೋಗ್ಯವು ಕೆಡುವುದು. ಮುಷ್ಕರದಿಂದ ಸುಸಂಧಿಯು ಪ್ರಾಪ್ತವಾಗಿದೆ. ಇದನ್ನು ಉಪಯೋಗಿಸಿಕೊಂಡು ಹೋಟಲುಗಳ ಮೇಲೆ ಇನ್ನೂ ಹೆಚ್ಚಿನ ನಿರ್ಬಂಧಗಳನ್ನು ಹಾಕಬೇಕು–ಎಂದು ಅವರು ಹೇಳಿದರು.

ಧರ್ಮಪ್ರಕಾಶ ಎಲ್. ಎಸ್. ವೆಂಕಾಜಿರಾಯರು ನಿರ್ಣಯವನ್ನು ವಿರೋಧಿಸಿ ಈ ಮುಷ್ಕರವು ಎರಡು ದಿನ ಸಹ ನಡೆಯುವುದಿಲ್ಲವೆಂದು ಅಭಿಪ್ರಾಯಪಟ್ಟರು. ಆದರೆ ಇಡ್ಲಿಯು ಪರಿಶುದ್ಧಕರವೂ ಮತ್ತು ಪುಷ್ಟಿಕರವೂ ಆದ ಪದಾರ್ಥವಾದುದರಿಂದ ಅದರ ಮೇಲಿನ ಪ್ರತಿಬಂಧಕವನ್ನು ತೆಗೆಯಬೇಕೆಂದು ಸೂಚಿಸಿದರು.

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರೂ ಸಹ ನಿರ್ಣಯವನ್ನು ವಿರೋಧಿಸಿ ಹೋಟಲುಗಳಿಂದ ಗಂಡಸರೆಲ್ಲರೂ ಕೆಟ್ಟು ಹೋಗಿ ಸಂಸಾರಗಳಲ್ಲಿ ಅನರ್ಥವುಂಟಾಗುತ್ತಿದೆಯೆಂದೂ, ಸಂಸಾರವನ್ನು ಅಲಕ್ಷಿಸಿ ಅವರು ಹೋಟಲುಗಳಲ್ಲಿ ದಿನಕ್ಕೆ ೨ ರಿಂದ ೩ ರೂ. ಗಳನ್ನು ಹಾಳುಮಾಡುತ್ತಿರುವರೆಂದೂ ಹೇಳಿದರು.

ಹೋಟಲಿನವರ ಈ ಗೊಡ್ಡು ಬೆದರಿಕೆಗೆ ತಲೆಬಾಗಬಾರದೆಂದು ದಿವಾನ್ ಬಹದ್ದೂರ್ ಸಿ. ಮಹದೇವಯ್ಯನವರು ತಿಳಿಸಿದರು.

ಇನ್ನು ೨೪ ಗಂಟೆಗಳೊಳಗೆ ಹೋಟಲುಗಳನ್ನು ತೆರೆಯಬೇಕೆಂದೂ ಇಲ್ಲವಾದರೆ ಅವರುಗಳ ರಹದಾರಿಯನ್ನು ರದ್ದುಮಾಡಿ ಬೇರೆಯವರಿಗೆ ಕೊಡುವುದಾಗಿಯೂ ಎಚ್ಚರಿಕೆ ಕೊಡಬೇಕೆಂದು ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸೂಚನೆ ಇತ್ತರು. ಈಗ ಯಾವ ಪ್ರಮಾದವೂ ಉಂಟಾಗಿಲ್ಲವೆಂದು ಅವರು ಹೇಳಿದರು.

ಹೋಟಲುಗಳಿಗೆ ಸಿಕ್ಕಿದಂತೆ ಲೈಸನ್ಸು ಕೊಡದೆ ಒಂದು ಗೊತ್ತಾದ ಕ್ರಮವನ್ನು ಅನುಸರಿಸಬೇಕೆಂದು ಶ್ರೀ ಓ. ನೀಲಬಸಪ್ಪನವರು ಸೂಚಿಸಿದರು.

ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಈ ರೀತಿ ಉತ್ತರವಿತ್ತರು.–ಈ ನಿರ್ಣಯದ ಚರ್ಚೆಯಿಂದ ಸಾರ್ವಜನಿಕರಿಗೆ ಬಹಳ ಉಪಯೋಗವಾಗುವುದು. ಸಂಸ್ಥಾನದ ಅನೇಕ ಕಡೆಗಳಲ್ಲಿ ಮುಷ್ಕರವು ನಡೆದೇ ಇಲ್ಲವೆಂದು ವರದಿ ಬಂದಿದೆ. ಕೋಲಾರ, ಶಿವಮೊಗ್ಗ, ತಿಪಟೂರು, ಮತ್ತು ಇನ್ನೂ ಅನೇಕ ಕಡೆಗಳಲ್ಲಿ ಹೋಟಲುಗಳು ಮುಚ್ಚಿಲ್ಲ. ಒಟ್ಟು ಸಂಸ್ಥಾನದಲ್ಲಿ ಯಾವ ವಿಷಮ ಪರಿಸ್ಥಿತಿಯೂ ಉಂಟಾಗಿಲ್ಲ. ಮೈಸೂರು ಮತ್ತು ಬೆಂಗಳೂರುಗಳಲ್ಲಿಯೂ ಕೂಡ ಅನೇಕ ಹೋಟಲುಗಳು ತೆರೆದಿರುತ್ತವೆ. ಈಗ ತೆರೆದಿರುವಷ್ಟು ಹೋಟಲುಗಳು ಇದ್ದರೆ ಅವೇ ಸಾಕೆಂದು ನನ್ನ ಅಭಿಪ್ರಾಯ. ಇಡ್ಲಿ, ದೋಸೆಗಳಿಗೆ ಪ್ರತಿಬಂಧಕ ಹಾಕಿದರೆ ಊಟದ ಹೋಟಲಿನವರ ಅಸಮಾಧಾನಕ್ಕೆ ಏನು ಕಾರಣವೋ ತಿಳಿಯದು. ಸರ್ಕಾರದವರು ಕೈಗೊಂಡಿರುವ ಕ್ರಮಕ್ಕೆ ಬೆಂಬಲ ನೀಡಿ ಎಲ್ಲ ಕಡೆಗಳಿಂದಲೂ ತಂತಿಗಳು ಬರುತ್ತಿವೆ. ಹೋಟಲು ಕೆಲಸಗಾರರೂ ಸಹ ಇದರಿಂದ ಅಸಮಾಧಾನಗೊಂಡಿರುವುದಿಲ್ಲ. ಸರ್ಕಾರದವರಿಗೆ ಸಹಕರಿಸುವುದಾಗಿಯೂ ತಮಗೆ ಪರವಾನಿ ಕೊಡುವುದಾದರೆ ಆರೋಗ್ಯವಾದ ರೀತಿಯಲ್ಲಿ ತಾವೇ ಹೋಟಲುಗಳನ್ನು ನಡೆಸುವುದಾಗಿಯೂ ಹೇಳಿದ್ದಾರೆ. ಇದರಿಂದ ಯಾವ ಬಗೆಯ ಆತಂಕವೂ ಕಾಣಲಿಲ್ಲ. ಈಗಾಗಲೇ ಅನೇಕ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಒಂದು ವೇಳೆ ಇನ್ನೂ ಏನಾದರೂ ತೊಂದರೆ ಉಂಟಾಗುವುದಾದರೆ ಸರ್ಕಾರದವರು ಮೋಟಾರು ವ್ಯಾನುಗಳಲ್ಲಿ ಆಹಾರವನ್ನು ಇಟ್ಟು ಬೀದಿ ಬೀದಿಗಳಲ್ಲಿ ಮಾರಿಸುವುದಕ್ಕೂ ಸಿದ್ಧರಾಗಿದ್ದಾರೆ.

ಬಡತನದ ಬೇಗೆ ತಾಳಲಾರದೆ ಸಂಸಾರದ ಆತ್ಮಹತ್ಯ

ತಿರುಪತಿಗೆ ೪೧ ಮೈಲಿ ದೂರದಲ್ಲಿರುವ ನಾಕಾಲ ಎಂಬ ಹಳ್ಳಿಯಲ್ಲಿ ಬಡತನವನ್ನು ತಡೆಯಲಾರದೆ ಗಂಡ, ಹೆಂಡತಿ ಮತ್ತು ೬ ವರ್ಷದ ಮಗು ಎಲ್ಲರೂ ಬಾವಿಗೆ ಹಾರಿ ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ. ಹೆಂಗಸು ಬಸುರಿಯಾಗಿದ್ದಳು. ಬಡತನವನ್ನು ಹೋಗಲಾಡಿಸಲು ಈ ರೀತಿ ಮಾಡಲಾಗುವುದೆಂದು ಪತ್ರ ಬರೆದಿಟ್ಟಿದ್ದರೆಂದು ಹೇಳಲಾಗಿದೆ.

ಚಿನ್ನದ ಗಣಿಗೆ ಪ್ರಭುಗಳ ಭೇಟಿ

ಸ್ವಂ. ಸು. ಫೋ.] ಬೆಂಗಳೂರು. ೨

ಶ್ರೀಮನ್ಮಹಾರಾಜರವರು ನಿನ್ನೆ ದಿನ ಚಿನ್ನದ ಗಣಿ ಪ್ರದೇಶಕ್ಕೆ ಭೇಟಿ ಇತ್ತರು. ಅಲ್ಲಿನ ಸ್ಯಾನಿಟರಿ ಮತ್ತು ಗಣಿಗಳ ಬೋರ್ಡಿನವರು ರಜತ ಕರಂಡದಲ್ಲಿ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿದ್ದಕ್ಕಾಗಿ ಬಿನ್ನವತ್ತಳೆಯಲ್ಲಿ ಸಂತೋಷವನ್ನು ಸೂಚಿಸಲಾಗಿತ್ತು. ಪ್ರಜಾ ಪ್ರಭುತ್ವದೊಡನೆ ಪ್ರಜೆಗಳ ಜವಾಬ್ದಾರಿಯೂ ಸಹ ಹೆಚ್ಚುವುದೆಂದೂ ಪ್ರಭುಗಳು ಅಪ್ಪಣೆ ಕೊಡಿಸಿದರು. ಕೋಲಾರದಲ್ಲಿ ಒಂದು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದೂ ಸಹ ಅವರು ಹೇಳಿದರು.

ಅಸಿಸ್ಟೆಂಟ್ ಕಮೀಷನರುಗಳ ವರ್ಗಾವರ್ಗಿ

ಅಸಿಸ್ಟೆಂಟ್ ಕಮೀಷನರಾದ ಜನಾಬ್ ಎಂ. ಸೈಯದ್ ಮುರ್ಷಿದ್ ಪೀರ್‌ರವರನ್ನು ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರರಾಗಿ ನೇಮಿಸಲಾಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣರವರನ್ನು ಮೈಸೂರು ನಗರದ ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳಾಗಿಯೂ, ಶ್ರೀ ಹಚ್. ಕೆ. ಶಾಂತವೀರಪ್ಪನವರನ್ನು ನಂಜನಗೂಡು ಸಬ್‌ಡಿವಿಜನ್ ಅಧಿಕಾರಿಗಳಾಗಿಯೂ ವರ್ಗಾಯಿಸಲಾಗಿದೆ.

ಸಹಕಾರ ವ್ಯವಸಾಯ ಯೋಜನೆ

ಮೈಸೂರು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ಮೊನ್ನೆ ನಡೆದು, ವರುಣ ಹೋಬಳಿ ವರಕೋಡಿನಲ್ಲಿ ೧೦೦೦ ಎಕರೆ ಜಮೀನಿನಲ್ಲಿ ಸಹಕಾರ ವ್ಯವಸಾಯ ಯೋಜನೆಯನ್ನು ಕೈಗೊಳ್ಳಬೇಕೆಂದೂ ಮತ್ತು ತಾಲ್ಲೂಕಿನಲ್ಲಿ ಹೆಚ್ಚು ಆಹಾರ ಬೆಳೆ ಬಗ್ಗೆ ಪ್ರಚಾರ ಮಾಡಬೇಕೆಂದೂ ತೀರ್ಮಾನಿಸಲಾಗಿದೆ.

ನಿಲುವಳಿ ಸೂಚನೆಗೆ ನಿರಾಕರಣೆ

ಶ್ರೀಮನ್ಮಹಾರಾಜರವರು ಭಾರತ ಸರ್ಕಾರದ ಆದೇಶಕ್ಕೆ ಕೆಲವು ಬಾಬುಗಳನ್ನು ವಹಿಸಿಕೊಡುವ ಬಗ್ಗೆ ಪುನರ್ವಿಮರ್ಶಿತ ಕರಾರು ಪತ್ರಕ್ಕೆ ರುಜು ಹಾಕಿರುವ ವಿಷಯವನ್ನು ಚರ್ಚಿಸಲು ಮೊನ್ನೆ ಶಾಸನ ಸಭೆಯಲ್ಲಿ ಶ್ರೀ ಎಸ್. ಕೃಷ್ಣಸ್ವಾಮಿಯಾರ್ ತಂದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು.

೧೯೫೦ ರ ಅಂತ್ಯದಲ್ಲಿ ನೂತನ ರಾಜ್ಯಾಂಗ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂ. ಸು. ಫೋ.] ಬೆಂಗಳೂರು ೨

ಶಾಸನ ಸಭೆಯಲ್ಲಿ ಈ ದಿನ ನೂತನ ರಾಜ್ಯಾಂಗವು ೧೯೫೦ನೇ ಅಂತ್ಯದಲ್ಲಿ ಜಾರಿಗೆ ಬರುವುದೆಂದೂ, ಮಹಾ ಚುನಾವಣೆಯು ಮುಂದಿನ ವರ್ಷದ ಮಧ್ಯದಲ್ಲಿ ನಡೆಯುವುದೆಂದೂ ಶ್ರೀ ಕೆ. ಸಿ. ರೆಡ್ಡಿಯವರು ಜನಾಬ್ ಇಮಾಂರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ೧೯೪೯ಕ್ಕೆ ನೂತನ ರಾಜ್ಯಾಂಗವು ಜಾರಿಗೆ ಬರಬೇಕೆಂದೂ ಮತ್ತು ನೂತನ ರಾಜ್ಯಾಂಗ ಬರುವವರೆಗೂ ಇದೇ ಮಂತ್ರಿಮಂಡಲವು ಮುಂದುವರಿಯಬೇಕೆಂದು ಕಾಂಗ್ರೆಸ್ಸಿಗೂ ಮತ್ತು ಶ್ರೀಮನ್ಮಹಾರಾಜರವರಿಗೂ ಯಾವ ಒಪ್ಪಂದವೂ ಆಗಿಲ್ಲವೆಂದೂ ಅವರು ಹೇಳಿದರು.

ಆಕಾಶವಾಣಿಯ ಈಗಿನ ಡೈರೆಕ್ಟರಿಗೆ ಹೆಚ್ಚು ಅನುಭವವಿದೆ. ಅವರನ್ನು ೨ ವರ್ಷ ಕಾಲದವರೆಗೆ ನೇಮಿಸಲಾಗಿದೆ. ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾದರೂ, ಪಕ್ಷಕ್ಕಾಗಿ ಇದನ್ನು ಉಪಯೋಗಿಸುತ್ತಿದ್ದಾರೆಂದು ಹೇಳುವುದು ನಿರಾಧಾರವಾದುದು. ಅದರ ಮೇಲೆ ಯಾವ ದೂರುಗಳೂ ಬಂದಿಲ್ಲ. ಬಾಬಿನಲ್ಲಿ ಅನುಭವವುಳ್ಳವರನ್ನೇ ಡೈರೆಕ್ಟರನ್ನಾಗಿ ನೇಮಿಸುವುದು ಅಗತ್ಯವಲ್ಲ–ಎಂದು ಶ್ರೀ ಕೆ. ಸಿ. ರೆಡ್ಡಿಯವರು ಜನಾಬ್ ಇಮಾಂರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ನಾರಾಯಣ ಆಪ್ಟೆಯ ಪ್ರಾಣ ಭಿಕ್ಷೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾರಾಯಣ ಆಪ್ಟೆಯು ಪ್ರಾಣಭಿಕ್ಷೆಯ ಅರ್ಜಿಯನ್ನು ಗೌರ್ನರ್ ಜನರಲ್ಲರಿಗೆ ಸಲ್ಲಿಸಿದ್ದಾನೆ. ಆತನ ಹೆಂಡತಿಯೂ ಪ್ರಾಣಭಿಕ್ಷೆಗೆ ವಿನಂತಿಯನ್ನು ಸಲ್ಲಿಸಿರುತ್ತಾಳೆ. ನಾಥೂರಾಂ ಗೋಡ್ಸೆಯು ಈ ಬಗ್ಗೆ ಅರ್ಜಿ ಹಾಕಿಲ್ಲ.

ಪೋಲೀಸರಿಂದ ಪುರಸಭಾ ಸದಸ್ಯರ ಉಚ್ಚಾಟನೆ

ಮಧುರೆಯ ಪೌರಸಭೆಯಲ್ಲಿ ಮೊನ್ನೆ ದಿನ ಸದಸ್ಯರೊಬ್ಬರು ಅಧ್ಯಕ್ಷರನ್ನು ಕುರಿತು ಅಸಭ್ಯ ರೀತಿಯಲ್ಲಿ ಮಾತನಾಡಿದಾಗ ಅವರು ಕ್ಷಮಾಪಣೆ ಕೇಳಬೇಕು ಅಥವ ಎರಡು ತಿಂಗಳು ಕಾಲ ಸಭೆಯನ್ನು ಪ್ರವೇಶಿಸಕೂಡದು ಎಂದು ನಿರ್ಣಯ ಮಾಡಲು ಆ ಸದಸ್ಯರು ಅದಕ್ಕೆ ಒಪ್ಪದೆ ಗಲಭೆ ಮಾಡಲು ಪೋಲೀಸರ ಸಹಾಯದಿಂದ ಅವರನ್ನು ಹೊರಕ್ಕೆ ಕಳುಹಿಸಲಾಯಿತು.

ಹಿಂದೀ ಕಾರ್ಯಕರ್ತರ ಸಭೆ

ರಾಜಧಾನಿಯ ಚಾಮರಾಜಪೇಟೆಯಲ್ಲಿರುವ ಹಿಂದೀ ಪ್ರಚಾರ ಸಭೆಯಲ್ಲಿ ಕಾರ್ಯಕರ್ತರುಗಳ ಸಭೆಯು ನಾಳೆ ಸಂಜೆ ೬ ಗಂಟೆಗೆ ನಡೆಯುವುದು. ಶ್ರೀ ಟಿ. ಸುಬ್ರಹ್ಮಣ್ಯಂರವರು ಭೇಟಿ ಕೊಡುವರು. ಕಾರ್ಯಕರ್ತರೆಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ.

○ ಅಖಿಲ ಭಾರತ ಹಿಂದೂ ಮಹಾ ಸಭೆಯ ಕಾರ್ಯದರ್ಶಿಯವರಾದ ಶ್ರೀ ವಿ. ಜಿ. ದೇಶಪಾಂಡೆಯವರು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗ ಬರುವ ರೀತಿಯಲ್ಲಿ ವರ್ತಿಸಕೂಡದೆಂದೂ, ಮತ್ತು ಭಾಷಣ ಮಾಡಕೂಡದೆಂದೂ ಅವರ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಲಾಗಿದೆ.

ಪಾಕೀಸ್ತಾನದ ನೂತನ ರಾಜಧಾನಿ

ಕರಾಚಿಯ ಹತ್ತಿರ ನೂತನ ರಾಜಧಾ ನಿಯನ್ನು ನಿರ್ಮಿಸಲು ಪಾಕೀಸ್ತಾನ ಸರ್ಕಾರವು ನಿರ್ಧರಿಸಿದೆ [illegible] ಅನುಕೂಲವನ್ನು [illegible] ಗುವುದೆಂದು ಹೇಳಲಾಗಿದೆ

ಮಕ್ಕಳನ್ನು ಕೆಲಸಕ್ಕೆ ಸೇರಿಸಕೂಡದು

೧೪ ವರ್ಷದ ಒಳಗಿರುವ ಮಕ್ಕಳನ್ನು ಕೈಗಾರಿಕೆ ಅಥವ ಇನ್ನಾವ ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸಿ ಸಂಯುಕ್ತ ಪ್ರಾಂತ ಸರ್ಕಾರದವರು ಒಂದು ಕಾನೂನನ್ನು ಜಾರಿಗೆ ತಂದಿದ್ದಾರೆ.

ಉಚಿತ ವಾಚನಾಲಯ

ರಾಜಧಾನಿಯ ಲೋಕ ಸೇವಾ ಮಂಡಲಿಯ ಆಶ್ರಯದಲ್ಲಿ ವಾಣೀವಿಲಾಸ ಮಾರ್ಕೆಟ್ ಚೌಕದಲ್ಲಿರುವ ಕೈಲಾಸ ವಿಹಾರ ಭವನದ ಮೇಲೆ ಒಂದು ಉಚಿತ ವಾಚನಾಲಯವನ್ನು ತೆರೆಯಲಾಗಿದೆಯೆಂದೂ, ಅದು ಬೆಳಗ್ಗೆ ೮ ರಿಂ ೧೦ ಗಂಟೆ ಮತ್ತು ಸಂಜೆ ೫ ರಿಂದ ರಾತ್ರಿ ೮ ಗಂಟೆವರೆಗೆ ತೆರೆದಿರುವುದೆಂದೂ ತಿಳಿಸಲಾಗಿದೆ

ಹರಾಜು

ತಾ॥ 3 7—49 ಬೆಳಗ್ಗೆ 9 ಗಂಟೆಗೆ ಚಾಮುಂಡಿ ವಿಹಾರದಲ್ಲಿ ಬಿಟ್ಸ್ ಕಾರ್ (1949), ರೇಡಿಯೋಗಳು, ಜಪ್ತಿಂಗ್ ಸಾಮಾನುಗಳು.

ಹರಾಜುದಾರರು [illegible]

ಸಿಟಿ ಆಕ್ಷನಿಯರಿಂಗ್ ಕೋ.,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮೂರಂ ಮನೆ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ
ಸಾಧ್ವಿ ಆಫೀಸ್, ಮೈಸೂರು

Edited, printed and published by A.R. Nagarajan at the Sadhvi Press, D. Subbiah Road, Mysore.

ಪ್ರಪಂಚದಲ್ಲಿ ಧೂಮಪಾನ ನಿಷೇಧದ ಪ್ರಚಾರ

[illegible] ಜನರು ಮತ್ತು ಪ್ರತಿ [illegible] ಧೂಮಪಾನ [illegible] ಹೇಳಲಾಗಿದೆ [illegible] ಧೂಮಪಾನವನ್ನು ನಿಷೇಧಿಸಲು [illegible] ಧೂಮಪಾನ [illegible] ನಡೆಯುತ್ತಿದೆ

ರಸಾಯನಿಕ ಗೊಬ್ಬರ ಕಾರ್ಖಾನೆ

[illegible] ಲಕ್ಷ ರೂ ವೆಚ್ಚದಿಂದ [illegible] ದಲ್ಲಿ ರಸಾಯನಿಕ ಗೊಬ್ಬರದ ಕಾರ್ಖಾನೆಯನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ.

ಶ್ರೀ ಗಾಯಿತ್ರೀ

ಪ್ರತಿ ದಿನ 3 ಆಟಗಳು
3-7-49 ರಿಂದ 5 ದಿನಗಳು ಮಾತ್ರ
ಯೂನಿವರ್ಸಲ್‌ರವರ ಭಯಂಕರ ಅರಣ್ಯ ಚಿತ್ರ

ಮ್ಯಾನ್ ಈಟರ್ ಆಫ್ ಕುಮಾರ್

MAN EATER OF KUMAON

ಪಾತ್ರ :-ಮೈಸೂರು ಸಾಬು

ಲಕ್ಷ್ಮಿ 2-7-49 ರಿಂದ ದಿನ-ಹಿ 3 ಆಟಗಳು

ಉಷಾ ಹರಣ

USHA HARAN

ಪ್ರಭಾತ್‌ರವರ ಅಮೂಲ್ಯ ಪೌರಾಣಿಕ ಹಿಂದೀ ಚಿತ್ರ
ಭೂಮಿಕೆ—ಶಾಂತಾ ಆಪ್ಟೆ, ಉಲ್ಲಾಸ್, ಅರ್ಜ್, ಜೀವನ್

ಶಾಲಾ ಮಕ್ಕಳ ಮುಷ್ಕರ

ಬೊಂಬಾಯಿ ಪುರಸಭೆಯವರು ಪ್ರಾಥಮಿಕ ಶಾಲೆಗಳ ಫೀಜನ್ನು ಹೆಚ್ಚಿಸಿದುದರಿಂದ, ಅಲ್ಲಿನ ವಿದ್ಯಾರ್ಥಿ ಸಂಘದವರು ಕಮ್ಯೂನಿಸ್ಟರ ಪ್ರೇರಣೆಯಿಂದ ೩೦೦ ಪ್ರಾಥಮಿಕ ಶಾಲೆಗಳ ಮಕ್ಕಳು ಮುಷ್ಕರವನ್ನೇ ಹೂಡಿಸಿದ್ದಾರೆ. ೭೦ ಶಾಲಾ ಮಕ್ಕಳು ಪುರಸಭೆಯ ಮುಂದೆ ಪ್ರದರ್ಶನ ನಡೆಸಿದರು ೧೦ ಸಾವಿರ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ರಸ್ತೆಯಲ್ಲಿ ಸುತ್ತಾಡುತ್ತಿದ್ದರು ಅವರನ್ನು ಪೋಲೀಸರು ಹಿಡಿಯುವುದೇ ಕಷ್ಟವಾಯಿತೆಂದು ಹೇಳಲಾಗಿದೆ.

ದಂಡಿನ ಪುರಸಭಾ ಉಪಾಧ್ಯಕ್ಷರ ಚುನಾವಣೆ

ಬೆಂಗಳೂರು ದಂಡಿನ ಪುರಸಭೆಯ ಉಪಾಧ್ಯಕ್ಷರ ಚುನಾವಣೆಯು ಮೊನ್ನೆ ನಡೆದು, ಶ್ರೀ ದೀನದಯಾಳು ನಾಯ್ಡುರವರಿಗೆ ೧೭ ಓಟುಗಳು ಬಂದು ಬಹುಮತದಿಂದ ಚುನಾಯಿತರಾಗಿದ್ದಾರೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಅತ್ಯಾಧುನಿಕ ರೀತಿಯ ಕಿಂಡರ್ ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಮಾತಾಪಿತೃಗಳು ತ್ವರೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡುವರೆಂದು ಆಶಿಸಲಾಗಿದೆ

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ.

○ ಕೆಂಗೇರಿಯ ಅಕ್ಕಯ್ಯಮ್ಮ ಎಂಬ ವಿಧವೆಯೊಬ್ಬಳು ತನಗೆ ಜನನವಾದ ಮಗುವನ್ನು ಒಂದು ಬಾವಿಯಲ್ಲಿ ಹಾಕಿದಳೆಂಬ ಆಪಾದನೆಯ ಮೇಲೆ ಆಕೆಗೆ ೭ ದಿನ ಶಿಕ್ಷೆಯನ್ನು ವಿಧಿಸಲಾಗಿದೆ

ಚಾಮುಂಡೇಶ್ವರೀ ಟಾಕೀಸ್

3-7-49 ರಿಂದ
ಪ್ರತಿ ದಿನ 3 ಆಟಗಳು

✻ **ಆಸಿಫ್** ✻
(ಹಿಂದಿ)
ಭೂಮಿಕೆ - ವೀಣ, ಅಲ್ಲಾಸೀರ್

8-7-49 ರಿಂದ:-
ರಕ್ಷಾ ರೇಖಾ
(ತೆಲುಗು)

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಬಾರ್ ವೈದ್ಯ ಆಲಬ ನರಸಿಂಹ ಪಂಡಿತರ ಮತೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವುಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ
ಕ್ರಯ ೧ ಸೆಟ್ ರೂ ೩-೪-೦ ಪ್ಯಾಕಿಂಗ್ ಮತ್ತು ಟ ಖ ೧೨ ಆಣೆ
ತಯಾರಿಸುವವರು
ಎ. ರಾಮಸ್ವಾಮಿ ಅಯ್ಯರ್,
ಕಂಬಳಿ, ಯಳಂದೂರು
ಇವರು ಮೈಸೂರು ಕೃಷ್ಣರಾಜ ಪೋಲಿಸ್ ಸ್ಟೇಷನ್ ಎದುರು, ನಾಲ್ಪಿನ ಕೊಳದ ಬೀದಿ ೧೯೯೨ನೇ ನಂಬರ್ ಮನೆಯಲ್ಲಿ ೪-೭-೪೯ರ ಬಾಗಾಯ್ತು ೮-೭-೪೯ ವರಿಗೆ ಕ್ಯಾಂಪ್ ಮಾಡುತ್ತಾರೆ. ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

RAJKAMAL, MYSORE

FROM 1st JULY 1949 **DAILY 3 SHOWS**

William Shakespeare's

HAMLET

WITH—LAURENCE OLIVER, JEAN SIMMONS ETC.,

The greatest Drama in World Literature, snatching away the Academy Award of the year 1948

See this greatest tragedy – a tragedy of a man of thought, who failed as a man of action

ಬೆಳಗಿನ ಆಟ 1-7-49 ರಿಂದ ಪ್ರಾರಂಭ

ಬ್ಯಾರಿಸ್ಟರ್ (ಹಿಂ) —:ಭೂಮಿಕೆ.— ಬೆಂಜಮಿನ್, ಗೀತಾ ಬೋಸ್.

ಪ್ರಭಾ (ಕಡೇ ವಾರ) 4 ನೇಯ ವಾ

ಪ್ರತಿ ದಿನ ಮೂರು ಆಟಗಳು

✻ **ಬಜಾರ್** ✻

ಪಾತ್ರ:- ಶ್ಯಾಮ, ನಿಗಾರ್, ಯಾಕೂಬ್, ಗೋಪ್
ಸಂಗೀತ ಮತ್ತು ಮನರಂಜನೆಗೋಸ್ಕರವೇ ತಯಾರಿಸಲ್ಪಟ್ಟ ಹಿಂದೀ ಚಿತ್ರ
ಇನ್ನೂ ನೋಡದಿದ್ದಲ್ಲಿ ಇಂದೇ ನೋಡಿರಿ
- ಮುಂದಿನ ಬದಲಾವಣೆ :-
ರಾಜಕಮಲ್ ಕಲಾ ಮಂದಿರ್ ರವರ **ಅಪ್ನಾ ದೇಶ್** :-ದಿಗ್ದರ್ಶಕರ ವಿ ಶಾಂತಾರಾಂ

Murder Axis Troops Latin Beauty! — "Target for a Kiss or a Killer"

MORNING SHOWS
AT CHAMUNDESWARI TALKIES
From 1st July 1949 For 3 days only At 10.30 a.m.
"Despite Blonde & Brunette trouble The Falcon Smashes a Murderous Gang"
See it in R K O's
THE FALCON'S ADVENTURE
With:-Tom Conway (ದಿ ಫಾಲ್ಕನ್ಸ್ ಅಡ್ವೆಂಚರ್)

॥ ಶ್ರೀ [illegible] ॥

ಭಿಷಗ್ರತ್ನ ಶಾಳ್ವದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೌಂದರ್ಯ

ಗಂಡಸರ ಮೂತ್ರಕೋಶದ [illegible] ಮೇಲೆ [illegible] ಹುಣ್ಣುಗಳು, [illegible] ಗಳಿಗೆ ಸಿದ್ಧೌಷಧಿ
ಬೆಲೆ ಶೀಸೆ 1ಕ್ಕೆ 2-0-0

ವಿಳಾಸ.-
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೭ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೩-೭-೪೯ [ಸಂಚಿಕೆ ೪೩

- ಹೋಟೆಲುಗಳೆಲ್ಲಾ - ಪುನಃ ಆರಂಭಿಸಲ್ಪಟ್ಟವು

ಹೋಟೇಲು ಮುಷ್ಕರ ಕೊನೆಗೊಂಡಿತು

ಕಾಂಗ್ರೆಸ್ ಅಧ್ಯಕ್ಷರ ಬಳಿ ಹೋಟೇಲಿನವರ ನಿಯೋಗ

...ಸು. ಫೋ.] ಬೆಂಗಳೂರು ೩

ಸಂಸ್ಥಾನದ ಹೋಟೇಲುಗಳ ಮಾಲೀ... ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ... ಟಿ. ಸಿದ್ಧಲಿಂಗಯ್ಯನವರ ಬಳಿಗೆ ನೆ... ನಿಯೋಗ ಹೋಗಿದ್ದರು ರಾಜಧಾನಿ... ಹೋಟೇಲುಗಳ ಪರವಾಗಿ ಶ್ರೀಗಳಾದ ... ವಿ. ರಾಮಯ್ಯರ್, ಮುನ್ನಿಲಾಲ್, ...ದರಿ ಪ್ರಸಾದ್ ಮತ್ತು ರೇವತಿ ಪ್ರಸಾ... ಇವರುಗಳು ಹೋಗಿದ್ದರು. ನಿಯೋ...ದವರು ಸರಕಾರದಿಂದ ಬಂದ ಆಜ್ಞೆ...ಯಿಂದ ಹೋಟೇಲಿನವರಿಗೆ ಆದ ತೊಂದರೆ...ಯನ್ನು ನಿವೇದಿಸಿಕೊಂಡರು. ಅಧ್ಯಕ್ಷರು ...ವರ ಅಭಿಪ್ರಾಯವನ್ನು ಕೇಳಿ; ಮುಷ್ಕರ...ದಿಂದ ಸಾರ್ವಜನಿಕರಿಗೆ ಆದ ತೊಂದರೆಗ...ಳನ್ನು ತಿಳಿಸಿ, ಕೂಡಲೇ ಎಲ್ಲ ಹೋಟೇ...ಲುಗಳನ್ನೂ ತೆರೆಯಬೇಕೆಂದೂ, ನಂತರ ...ತಾವು ಅವರ ಕುಂದುಕೊರತೆಗಳನ್ನು ಪರಿ...ಶೀಲಿಸುವುದಾಗಿಯೂ ತಿಳಿಸಿದರೆಂದು ಹೇ...ಳಲಾಗಿದೆ. ಅಧ್ಯಕ್ಷರ ಭರವಸೆಯ ಮೇಲೆ ಹೋಟೇಲಿನವರು ತಮ್ಮ ಮುಷ್ಕರವನ್ನು ಕೊನೆಗಾಣಿಸುವುದಾಗಿ ನಿರ್ಧರಿಸಿದರು.

ಅದರಂತೆಯೇ ಈ ದಿನ ಸಂಸ್ಥಾನದ ...ಎಲ್ಲ ಹೋಟೇಲುಗಳೂ ತೆರೆದಿವೆ.

ಭಾರತದ ಆಹಾರ ಸಚಿವರು ಬೆಂಗಳೂರಿಗೆ

ಭಾರತದ ಆಹಾರ ಸಚಿವರಾದ ಜೈರಾಂದಾಸ್ ದೌಲತ್‌ರಾಮ್‌ರವರು ಬೆಂಗಳೂರಿಗೆ ಮುಂದಿನ ವಾರ ಭೇಟಿಯಿತ್ತು ವ್ಯವಸಾಯ ಶಾಖೆಯ ಸ್ಥಾಯೀ ಸಮಿತಿ ಸಭೆಯಲ್ಲಿ ಭಾಗವಹಿಸುವರೆಂದು ತಿಳಿದು ಬಂದಿದೆ.

ಮಲಯಾದಲ್ಲಿ ಇದುವರೆಗೆ ೭೦ ಜನರ ಗಲ್ಲು

ಮಲಯಾದಲ್ಲಿ ನಡೆದ ದಂಗೆಯಾರಂಭದಿಂದ ಇದುವರೆಗೆ ಎಪ್ಪತ್ತು ಜನರಿಗೆ ಗಲ್ಲಾಗಿದೆ

ಸ್ಕಾಟ್ಲೆಂಡಿನಲ್ಲಿ ಭಾರಿ ವಿಮಾನಾಪಘಾತ

ಸ್ಕಾಟ್ಲೆಂಡಿನ ಪರ್ತ್ ಎಂಬಲ್ಲಿಂದ ಹೊರಟ ವಿಮಾನವು ಹಾರಿದ ಕೂಡಲೇ ಅಪಘಾತಕ್ಕೆ ಈಡಾಗಿ ೧೪ ಮಂದಿ ಪ್ರಯಾಣಿಕರೂ, ೪ ಜನ ಪೈಲಟ್ಟುಗಳೂ ಪ್ರಾಣ ಬಿಟ್ಟರೆಂದು ವರದಿಯಾಗಿದೆ.

ಪಾಕಿಸ್ತಾನದಲ್ಲಿ ಎಣ್ಣೆ ಗಣಿ

ಪಾಕಿಸ್ತಾನದ ರಾವಲ್‌ಪಿಂಡಿ ಬಳಿ ಒಂದು ಹೊಸ ಎಣ್ಣೆ ಗಣಿಯು ದೊರಕಿರುವುದಾಗಿ ಗೊತ್ತಾಗಿದೆ ಈಗಾಗಲೇ ಅದರಲ್ಲಿ ೧೦೦ ಬ್ಯಾರಲ್‌ಗಳಷ್ಟು ಎಣ್ಣೆ ದೊರೆತುದಾಗಿ ಹೇಳಲಾಗಿದೆ.

ವಿದ್ಯಾರ್ಥಿನಿಯರಿಗೆ ತರಗತಿಗಳು

ರಾಜಧಾನಿಯ ಸಿಟಿ ಟ್ಯುಟೋರಿಯಲ್ ಕಾಲೇಜಿನ ಆಡಳಿತ ವರ್ಗದವರು ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿನಿಯರನ್ನು ಅತ್ಯಲ್ಪ ಕಾಲದಲ್ಲೇ ಎಸ್. ಎಸ್. ಎಲ್. ಸಿ ಪರೀಕ್ಷೆಗೆ ತರಪೇತು ಮಾಡುವ ತರಗತಿಗಳನ್ನು ಪ್ರಾರಂಭಿಸುವರೆಂದೂ ಸಾರ್ವಜನಿಕರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದೂ ಕಾರ್ಯದರ್ಶಿಗಳು ಕೋರಿರುತ್ತಾರೆ

ಗೋಡ್ಸೆ, ಆಪ್ಟೆಗಳಿಗೆ ಪ್ರಾಣ ದಾನ ಮಾಡಲು ಗಾಂಧಿಜಿ ಪುತ್ರರ ಪ್ರಾರ್ಥನೆ

ಮಹಾತ್ಮ ಗಾಂಧಿಜಿಯವರ ಮೂರನೇ ಮಗ ರಾಮದಾಸ್ ಗಾಂಧಿಯವರು ಭಾರತದ ಗೌರ್ನರ್ ಜನರಲ್ಲರಿಗೆ ಪತ್ರವೊಂದನ್ನು ಬರೆದು ಗಾಂಧಿಜಿಯ ಅಹಿಂಸೆ ಮತ್ತು ಮಾನವನ ಪ್ರೇಮದ ಆದರ್ಶಗಳನ್ನು ಗೌರವಿಸುವುದಕ್ಕಾಗಿ ಗೋಡ್ಸೆ ಮತ್ತು ಆಪ್ಟೆ ಇವರುಗಳ ಫಾಸಿ ಶಿಕ್ಷೆಯನ್ನು ಇಳಿಸಬೇಕೆಂದು ಪ್ರಾರ್ಥಿಸಿದ್ದಾರೆ. ಆಪ್ಟೆಯು ದಯಾ ಭಿಕ್ಷೆಗಾಗಿ ಅರ್ಜಿ ಹಾಕಲುಒಪ್ಪಿರುವನೆಂದೂ, ಗೋಡ್ಸೆ ಒಪ್ಪುವ ದಿಲ್ಲವೆಂದೂ ವರದಿಯಾಗಿದೆ

ಮದ್ರಾಸ್ ಪ್ರಾಂತ್ಯದ ೪೫೦೦ ಹೋಟೆಲುಗಳ ಮುಷ್ಕರ

ವ್ಯಾಪಾರ ತೆರಿಗೆಯನ್ನು ಹೆಚ್ಚಿಸಿದುದನ್ನು ಪ್ರತಿಭಟಿಸಲು ಮದರಾಸ್ ಪ್ರಾಂತ್ಯದ ಸುಮಾರು ೪೫೦೦ ಹೋಟೆಲುಗಳು ಮೊನ್ನೆ ದಿನ ಮುಷ್ಕರ ಹೂಡಿದ್ದವು ಮದರಾಸ್ ನಗರದಲ್ಲಿ ೪೦೦ ಹೋಟೆಲುಗಳು ಮುಚ್ಚಿದ್ದವು

ಚಿನ್ನದ ಬಳೆಗಾಗಿ ಕೊಲೆ

ಹಾಸನದ ತಾಲ್ಲೂಕು ಬೈಲ ಹಳ್ಳಿಯ ನಿವಾಸಿಯೊಬ್ಬನು ಕಳೆದ ಸೋಮವಾರ ಬೆಳಗ್ಗೆ ಮನೆಯಿಂದ ಹತ್ತಿರದ ಜಮೀನಿಗೆ ಹೋದಾಗ, ಯಾರೋ ದುರಾತ್ಮರು ಆತನು ಹಾಕಿಕೊಂಡಿದ್ದ ಚಿನ್ನದ ಬಳೆಯನ್ನು ಅಪಹರಿಸಲು ಆತನ ಕೈಯನ್ನು ಮೊದಲು ಕತ್ತರಿಸಿದರೆಂದೂ, ಆತನು ಕೂಗಿಕೊಂಡಾಗ ಆತನನ್ನು ಕೊಲೆ ಮಾಡಿ ಓಡಿಹೋದರೆಂದು ವರದಿಯಾಗಿದೆ

ಜಿನ್ನಾರ ಮನೆ ದೇಶತ್ಯಾಗ ಮಾಡಿದವರ ಆಸ್ತಿ

ಬೊಂಬಾಯಿಯಲ್ಲಿರುವ ದಿವಂಗತ ಮಹಮದ್ ಅಲಿ ಜಿನ್ನಾರವರ ಭವನವನ್ನು ದೇಶ ಬಿಟ್ಟು ಹೋದವರ ಆಸ್ತಿಯೆಂಬುದಾಗಿ ಪರಿಗಣಿಸುವುದಾಗಿ ಬೊಂಬಾಯಿ ಸರಕಾರದವರು ಜಿನ್ನಾರ ಸಹೋದರಿ ಫಾತಿಮಾರವರಿಗೆ ತಿಳಿಸಿದ್ದಾರೆ ಈ ಭವನವು ೪ ಲಕ್ಷ ರೂ ಬಾಳುವುದು.

ಕನ್ಯಕಾ ಪರಮೇಶ್ವರಿ ದೇವಸ್ಥಾನ

ಶಿವರಾಂಪೇಟೆಯಲ್ಲಿರುವ ಮೇಲ್ಕಂಡ ದೇವಸ್ಥಾನದಲ್ಲಿ ಈ ದಿನ ಎಲ್ಲಾ ದೇವರುಗಳಿಗೂ ಹೂವಿನ ಅಂಗಿ ಅಲಂಕಾರವು ನಡೆಸಲ್ಪಡುವುದು.

ಕರಾಚಿ-ಲಂಡನ್ ರೈಲ್ವೆ ಮಾರ್ಗ

ಕರಾಚಿಯನ್ನು ಒಂದು ಪ್ರಮುಖ ಅಂತರ ರಾಷ್ಟ್ರೀಯ ರೈಲ್ವೆ ಕೇಂದ್ರವನ್ನಾಗಿ ಮಾಡಲು ಪ್ರಪಂಚದ ಮುಸ್ಲಿಂ ಮುಖಂಡರುಗಳು ಆಲೋಚಿಸಿ ಈ ತಿಂಗಳ ಅಂತ್ಯದಲ್ಲಿ ಕರಾಚಿಯಲ್ಲಿ ನಡೆಯುವ ಪ್ರಪಂಚದ ಮುಸ್ಲಿಂ ಆರ್ಥಿಕ ಪ್ರವೀಣರ ಸಮ್ಮೇಳನದಲ್ಲಿ ಈ ಅಂಶವನ್ನು ಪರಿಶೀಲಿಸಲಾಗುವುದೆಂದು ವರದಿಯಾಗಿದೆ ಬಾಗ್ದಾದ್, ಕಾನ್‌ಸ್ಟಾಂಟಿನೋಬಲ್, ಪ್ಯಾರಿಸ್ ಮಾರ್ಗವಾಗಿ ಕರಾಚಿ-ಲಂಡನ್ ರೈಲ್ವೆ ಮಾರ್ಗವನ್ನು ನಿರ್ಮಿಸುವ ಆಲೋಚನೆಯೂ ನಡೆದಿದೆ

ತಿರುವಾಂಕೂರು ಮತ್ತು ಕೊಚ್ಚಿ ಯೂನಿಯನ್ನಿನ ಸ್ಥಾಪನೆ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಯೂನಿಯನ್ನಿನ ಆರಂಭೋತ್ಸವು ನಿನ್ನೆ ತಿರುವನಂತಪುರದಲ್ಲಿ ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ ಮೆನನ್‌ರವರ ಸಮ್ಮುಖದಲ್ಲಿ ನಡೆಯಿತು. ತಿರುವಾಂಕೂರಿನ ಮಹಾರಾಜರು ಈ ಒಕ್ಕೂಟದ ರಾಜಪ್ರಮುಖರಾಗಿ ಅಧಿಕಾರವನ್ನು ಸ್ವೀಕರಿಸಿದರು ಮುಖ್ಯ ಸಚಿವರಾಗಿ ಚುನಾಯಿತರಾಗಿರುವ ಶ್ರೀ ಟಿ. ಕೆ. ನಾರಾಯಣ ಪಿಳ್ಳೆ ಮತ್ತು ಇತರ ೭ ಮಂದಿ ಮಂತ್ರಿಗಳು ಪ್ರಮಾಣ ವಚನ ಮತ್ತು ಅಧಿಕಾರವನ್ನು ಸ್ವೀಕರಿಸಿದರು

ಮುಷ್ಕರ ಹೂಡುವ ಹೋಟೆಲುಗಳ ಪಟ್ಟಿ

ಹೋಟೆಲುಗಳ ಮೇಲೆ ಸರ್ಕಾರದವರು ವಿಧಿಸಿರುವ ಹೆಚ್ಚಿನ ಮಾರಾಟದ ತೆರಿಗೆಯನ್ನು ಪ್ರತಿಭಟಿಸಲು ನೆನ್ನೆ ದಿನ ಮಾತ್ರ ಮದರಾಸ್ ಪ್ರಾಂತ್ಯದ ಎಲ್ಲಾ ಹೋಟೆಲುಗಳು ಮುಷ್ಕರ ಹೂಡಿದ್ದವು. ಮುಷ್ಕರದಲ್ಲಿ ಭಾಗವಹಿಸಿರುವ ಹೋಟೇಲ್ ಮಾಲೀಕರ ಹೆಸರನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಆಜ್ಞೆಮಾಡಲಾಗಿದೆ

ಸಂಗೀತ

ಈ ರಾತ್ರಿ ೭ ಗಂಟೆಗೆ ಪಿ ಸುಬ್ಬಯ್ಯನ ರಸ್ತೆಯ ಬ್ರಹ್ಮಾನಂದ ಔಷಧಾಲಯದಲ್ಲಿ ಆರ್. ಎನ್. ಗಾನಸಿಕಾರದ ಬಿ ದೇವೇಂದ್ರಪ್ಪನವರ ಪಿಟೀಲು ಕಚೇರಿ ನಡೆಯುವುದು

ರಾಜಾಜಿ ನಗರದ ಆರಂಭೋತ್ಸವ

ಶ್ರೀಮನ್ಮಹಾರಾಜರವರಿಂದ

ಸ್ವಂ ಸು. ಫೋ.] ಬೆಂಗಳೂರು. ೩

ಕೈಗಾರಿಕೆಗಳ ವಸತಿಗಾಗಿ ಏರ್ಪಾಡಾಗಿರುವ ರಾಜಾಜಿ ನಗರದ ಆರಂಭೋತ್ಸವವನ್ನು ಈ ದಿನ ಶ್ರೀಮನ್ಮಹಾರಾಜರವರು ನೆರವೇರಿಸಿದರು. ನಗರಾಭಿವೃದ್ಧಿ ಸಮಿತಿಯವರೂ ತಿಲೋಕಸ್ವರ ಸಂಸ್ಥೆಯವರೂ ಅವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು.

ನಗರಗಳಲ್ಲಿ ಇತ್ತೀಚೆಗೆ ಆಗುತ್ತಿರುವ ಜನಸಂದಣಿಯನ್ನು ತಡೆಗಟ್ಟಿ ಗ್ರಾಮಾಂತರಗಳಲ್ಲೂ ನಗರಗಳ ಹೊರ ಭಾಗದಲ್ಲೂ ಕೈಗಾರಿಕೆಗಳನ್ನು ಸ್ಥಾಪಿಸುವ ಅವಶ್ಯಕತೆಯನ್ನು ಶ್ರೀಮನ್ಮಹಾರಾಜರವರು ತಮ್ಮ ಉತ್ತರದಲ್ಲಿ ಒತ್ತಿ ಸೂಚಿಸಿದರು.

ನಿನ್ನೆ ರಾಮನಗರಕ್ಕೆ ಪ್ರಭುಗಳು ಭೇಟಿ ಇತ್ತು ಗ್ರಾಮಾಭಿವೃದ್ಧಿ ಸಮಾರಂಭದಲ್ಲಿ ಭಾಗವಹಿಸಿದ್ದರು ಪೌರಸಭೆಯವರೂ ಗ್ರಾಮಾಭಿವೃದ್ಧಿ ಕೇಂದ್ರದವರೂ ಬಿನ್ನವತ್ತಳೆಗಳನ್ನರ್ಪಿಸಿದರು, ಭರತ ಖಂಡವು ಮುಖ್ಯವಾಗಿ ಗ್ರಾಮಗಳ ನಾಡಾದುದರಿಂದ ಹಳ್ಳಿಗಳ ಅಭಿವೃದ್ಧಿಗೆ ಪೂರ್ಣ ಗಮನ ಕೊಡಬೇಕೆಂದು ಅವರು ಅಪ್ಪಣೆ ಕೊಡಿಸಿದರು.

ನೂತನ ಸುಂಕಗಳ ಮಸೂದೆಗಳು

ಸ್ವಂ ಸು. ಫೋ.] ಬೆಂಗಳೂರು ೩

ಸಕ್ಕರೆ, ಬೆಂಕಿ ಕಡ್ಡಿ ಮತ್ತು ಬಟ್ಟೆಗಳ ಹೊಸ ತೆರಿಗೆಗಳನ್ನು ವಿಧಿಸುವ ಮಸೂದೆಗಳಿಗೆ ನಿನ್ನೆ ಶಾಸನ ಸಭೆಯು ಅಂಗೀಕಾರ ಕೊಟ್ಟಿತು. ಭಾರತ ಸರ್ಕಾರದವರು ವಿಧಿಸಿರುವಂತೆಯೇ ಇಲ್ಲಿಯೂ ತೆರಿಗೆಗಳ ಮಟ್ಟವನ್ನು ಗೊತ್ತುಮಾಡಲಾಗಿದೆ.

ಭಾರತಕ್ಕೆ ವಿಶ್ವ ಬ್ಯಾಂಕಿನಿಂದ ಸಾಲ

ವಿಶ್ವ ಬ್ಯಾಂಕಿನಿಂದ ಭಾರತಕ್ಕೆ ೧೦½ ಕೋಟಿ ಡಾಲರುಗಳ ಸಾಲವು ಪ್ರಥಮ ಕಂತಾಗಿ ಬರಬಹುದೆಂದೂ, ಇನ್ನು ೩½ ತಿಂಗಳಲ್ಲಿ ಹಣ ಸಂದಾಯವಾಗಬಹುದೆಂದೂ ಹೇಳಲಾಗಿದೆ.

ರೇಷನ್ ಅಲ್ಲದ ಸಾಮಗ್ರಿಗಳಿಂದ ಪೂರಿ, ಚಪಾತಿ, ಭಾತು

ಮೈಸೂರು ೩

ನಗರದ ಮುಖ್ಯ ರೇಷನಿಂಗ್ ಅಧಿಕಾರಿಗಳು ಹೋಟೇಲು ಮಾಲೀಕರ ಸಂಘಕ್ಕೆ ಸೀಳವಳಿಕೆಯ ಪತ್ರವೊಂದನ್ನು ಬರೆದು, ಸವೊಲಿನಾ, ಟಾಪಿಯೋಕಾ ಹಿಟ್ಟು ಮುಂತಾದ ರೇಷನ್ ಅಲ್ಲದ ಪದಾರ್ಥಗಳ ಸಾಮಾನುಗಳಿಂದ ಪೂರಿ, ಚಪಾತಿ ಭಾತು ಮುಂತಾದುವುಗಳನ್ನು ಮಾಡಲು ಅಡ್ಡಿಯಿಲ್ಲವೆಂದು ತಿಳಿಸಿರುವುದಾಗಿ ಗೊತ್ತಾಗಿದೆ

ಅಕ್ಕಿ ಉಪಯೋಗ ಕಡಿಮೆ ಮಾಡಲು ಸರಕಾರದ ಮನವಿ

ಸರಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ, ಪ್ರಜೆಗಳು ಅದಷ್ಟು ಅಕ್ಕಿಯ ಉಪಯೋಗವನ್ನು ಕಡಿಮೆ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ

Edited, printed and published by A. R. Nagarajan, at Sadhvi Press, D. Subbiah Road, Mysore.

ವಾರ ಭವಿಷ್ಯ

ತಾ॥ ೩-೭-೪೯ರಿಂದ ೧೦-೭-೪೯ರ ವರೆಗೆ

ಮೇಷ—ಧಾರ್ಮಿಕ ಭಾವನೆಯುಂಟಾಗುವುದು ಆರೋಗ್ಯ ನೆಟಗೆ ನೌಕರಿಯುಲ್ಲಿ ಭಾಗ್ಯೋದಯ ವಾತಾವರಣ ವ್ಯಾಪಾರಾದಿಗಳಲ್ಲಿ ಧನಿಕರ ಸಹಾಯ ಕೋರ್ಟು ವ್ಯವಹಾರದಲ್ಲಿ ಯಶ ತಾ॥ ೪, ೫ ಮೃಷ್ಟಾನ್ನ ಭೋಜನ ಲಾಭ ವಿರೋಧ ಪಕ್ಷದ ಸೋಲು ಶುಭ ವಾರ್ತೆ

ವೃಷಭ—ಕಷ್ಟ ಕಡೆಯು ಜಯ ನಿಮಗಿದೆ ಆದುದರಿಂದ ತಾಳಿರಿ ಎಂಬ ವೇದ ವಾಕ್ಯ ಕೆಲ ದಿನಗಳ ಘಟನೆಯಿಂದ ಮಿದುಳಿಗೆ ಅತ್ಯಂತ ನೋವು ಆದರೆ ಕುಂದ ದಾರಿ ಸರಿಯಾಗುವುದು ತಾ॥ ೬, ೭ ಮನಸ್ಸಿಗೆ ಧೈರ್ಯ ಯಾರನ್ನು ಕುರಿತು ಚಿಂತಿಸುತ್ತಿದ್ದರೋ ಅವರ ಭೇಟಿಯಾಗುವುದು

ಮಿಥುನ—ನಿಮ್ಮ "ಆತ್ಮ" ದ ಸ್ಥಿತಿ ಅತ್ಯಂತ ಶೋಚನೀಯವಾಗಿರುವುದು ಇದರಿಂದ ಮನಸ್ಸಿಗೆ ವಿಕಲ್ಪತೆ ಹಣ ಕಾಸಿನ ತೊಂದರೆ ಖರ್ಚು ಮಿರುವುದು ಅಪ್ರೀತ್ಯರು ರೇಗುವರು ನೌಕರಿಯಲ್ಲಿ ದುಷ್ಟ ಜನರಿಂದ ತೊಂದರೆ ತಾ॥ ೭, ೮, ಬಸ್ತದಿಂದ ಕೈ ಕಾಲಿಗೆ ಜಖಂ ಬೆಲೆ ಬಾಳುವ ವಸ್ತುವಿನ ಅಪಹರಣ .

ಕರ್ಕ— ಸ್ವೀಕೃತ ಕಾರ್ಯದಲ್ಲಿ ಜಯ ಆರೋಗ್ಯ ನೆಟ್ಟಗೆ ಸಜ್ಜನರ ಸಹವಾಸ, ಪ್ರವಾಸದ ಚಿಂತೆ ದೂರಾಗುವುದು ಕ್ಷೇತ್ರ ದರ್ಶನ ಲಾಭ ನೌಕರಿಯಲ್ಲಿ ಎದುರಾಳಿಗಳ ಆಟ ನಡೆಯದು ಮೇಲಧಿಕಾರಿಗಳ ಸಂತೃಪ್ತಿ ಸರಕಾರ ದರ್ಬಾರಗಳಲ್ಲಿ ಯಶ ತಾ॥ ೬, ೭ ಧನಲಾಭ, ನುಹತ್ವದ ಪತ್ರ ಉತ್ತರಗಳ ನಿರೀಕ್ಷೆ

ಸಿಂಹ— ಸದ್ಯದ ದಿನಗಳು ಹಿತವಾಗಿಲ್ಲ. ನಿಮ್ಮ ಏಳಿಗೆಯನ್ನು ಮೆಚ್ಚದವರು ಬವಾತಿ, ಜೋಕೆ! ಅವರಿಂದ ಮೋಸ ಪ್ರವೃತ್ತಿ, ಕಾಗದ ಪತ್ರ ಬೆಲೆಯುಳ್ಳ ವಸ್ತುಗಳ ಮೇಲೆ ಹೆಚ್ಚು ನಿಗಾ ಇರಲಿ ಆರೋಗ್ಯದ ಕಡೆ ಗಮನವಿರಲಿ ನಿಮಗೆ ಅಂತಿಮ ಜಯ ತಾ॥ ೩, ೫ ಕ್ಲೇಶ ನಾಶ, ಧನಲಾಭ

ಕನ್ಯೆ ತೀರ್ಥ ಯಾತ್ರೆ ಮಾಡುವ ಉದ್ದೇಶ ನೆರವೇರುವುದು ಆರೋಗ್ಯ ನೆಟ್ಟಗೆ ಮೇಲಧಿಕಾರಿಗಳ ಗುರುತು ಹಂಚಿಕೆ ನೌಕರಿಯಲ್ಲಿ ಲಾಭದಾಯಕ ಸಂಧಿ ವ್ಯಾಪಾರ ಉದ್ಯೋಗಗಳಲ್ಲಿ ಧನಿಕನ ಸ್ನೇಹ ಕೈ ಕಾರ್ಯಗಳ ಸಿದ್ಧಿ ಮನೆಯಲ್ಲಿ ಸುಖ ಶಾಂತಿ ತಾ॥ ೭,೮ ಶುಭವಾರ್ತೆ ಸರಕಾರ ದರ್ಬಾರ ಕಾರ್ಯಗಳಲ್ಲಿ ಸನ್ಮಾನ

ತುಲಾ—ಕಷ್ಟ ದಿನಗಳು ಮುಗಿಯುತ್ತ ಬಂದವು ಆರೋಗ್ಯ ನೋಡಿಕೊಳ್ಳಿ, ನ-ನ ಶ್ಲೋಭೆಗೆ ಅವಕಾಶ ಕೊಡದಿರಿ ಪ್ರವಾಸ ಬೇಡ ನೌಕರಿ ಚಾಕರಿಯಲ್ಲಿ ತೊಂದರೆ ತಂದುಕೊಳ್ಳಬೇಡಿ ತಾ॥ ೭, ೮ ಧನಲಾಭ ಮನಸ್ಸಿಗೆ ಸ್ಫೂರ್ತಿ.

ವೃಶ್ಚಿಕ—ವಾರವು ಅತ್ಯಂತ ಮನಸ್ತಾಪದ್ದು ಮುಖ ಮಂಡಲದಲ್ಲಿ ಚಿಂತೆಯ ಛಾಯೆ ಅಂತಃಕರಣದ ಆನಂದವು ಬಾಡುವುದು ಸ್ತ್ರೀಯು ಉಪಟಲ ತಾ॥ ೪, ೫ ಕಲಹ, ಕ್ಲೇಶ ಗೃಹ ಪೀಡೆ ಕಲಹ ವಾರ್ತೆ

ಧನು ಆರೋಗ್ಯ ನೆಟ್ಟಗೆ ಮನಸ್ಸಿಗೆ ಆನಂದ ಸಾಧು ಸಂತರಿಗೆ ಆತಿಥ್ಯ ವಾಸಂಚಿಕ ವ್ಯವಹಾರ ನೆಟ್ಟಗೆ ನೌಕರಿ ದಂಧೆಗಳಲ್ಲಿ ಲಾಭದಾಯಕ ಘಟನೆ ಬರಬೇಕಾದ ಹಣ ಬರುವುದು ತಾ॥ ೪, ೫ ಹಣಕಾಸಿನ ದೃಷ್ಟಿಯಿಂದ ಹಿತಕರ ಸನ್ಮಾನ

ಮಕರ ಪರಿಸ್ಥಿತಿ ಉತ್ತಮವಾಗಿದ ಆರೋಗ್ಯ ನೆಟ್ಟಗೆ ಶುಭಪ್ರದ ಘಟನೆಗಳು ಎದುರಾಳಿಗಳ ಆಟ ಸಾಗದು ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ನೂತನ ಆಕರ್ಷಣೆ ಪ್ರವಾಸ ಯೋಗ. ತಾ॥ ೬, ೭ ಮಿತ್ರರಿಂದ ಹಿತ

ಕುಂಭ—ಸದ್ಯದ ವಾತಾವರಣ ಅನುಕೂಲದ್ದು ಆರೋಗ್ಯ ಉತ್ತಮ ಹಣಕಾಸಿನ ಅಭಾವವಿರದು ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪರಿಸ್ಥಿತಿ ಅನುಕೂಲ ಅಧಿಕಾರಿಗಳ ಮನ್ನಣೆ ದೊರಕುವುದು ಪ್ರವಾಸ ಸುಖ ಪ್ರದ ತಾ॥ ೩ ಕಷ್ಟಕರ ದಿನ ಹೃದಯಕ್ಕೆ ಧಕ್ಕೆಯಾಗುವ ಅಶುಭ ವಾರ್ತೆ ಅಪಘಾತ. ತಾ॥ ೫, ೮ ಪಶ್ಚತ್ವದ ಚಿಂತಾನಾಶ

ಮೀನ--ಆರೋಗ್ಯ ನೆಟ್ಟಗೆ ಮಿತ್ರರ ಭೇಟಿ ವ್ಯಾಪಾರಾದಿಗಳಲ್ಲಿ ಲಾಭ ಖರೀದಿ ವ್ಯವಹಾರ ನಡೆಯುವುದು. ಪ್ರವಾಸ ನಿರ್ವಿಘ್ನ ತಾ॥ ೪, ೫ ಖರ್ಚು ಗೊಂದಲ

ಚಾಮುಂಡೇಶ್ವರೀ ಟಾಕೀಸ್
3-7-49 ರಿಂದ
ಪ್ರತಿ ದಿನ 3 ಆಟಗಳು
* ಆ ಷಿ ರ್ *
(ಹಿಂದಿ)
ಭೂಮಿಕೆ.- ಮೀನ, ಅಲ್ಲಾ ಸೀರ್

8-7-49ರಿಂದ -
ರಕ್ತ ರೇಖಾ
(ತೆಲುಗು)

AS YOU LIKE IT
Edited by -
P. K V RAO
(With full notes)
Available at -
MURTHY TRADING Co,
D Subbiah Road,
Mysore.

ನೋಟೀಸು

(ತಿದ್ದುಪಡಿ)

ಮೊನ್ನೆ ದಿನದ ಪತ್ರಿಕೆಯಲ್ಲಿ ಮೈಸೂರು ಪ್ರಿನ್ಸಿಪಲ್ ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ ಎಂಬ ಜಾಹಿರಾತಿನಲ್ಲಿ ೪೮. ೪೯ನೇ ಸಾಲಿನ ಅಸಲು ದಾವಾ ಎಂಬುದಕ್ಕೆ ೪೭-೪೮ ಎಂದು ತಪ್ಪಾಗಿ ಬಿದ್ದಿದೆ.

॥ ಶ್ರೀ ॥
ಗಣೇಶಾ ಟಾಕೀಸ್
4-7-49ರಿಂದ 4 ದಿನಗಳು ಮಾತ್ರ
ಪ್ರತಿ ದಿನ ೩ ಪ್ರದರ್ಶನಗಳು
ಭಕ್ತ ಗೌರಿ
(ತಮಿಳು)
ಭೂಮಿಕೆ -ಜೀವರತ್ನಂ, ನಾರಾಯಣ ರಾವ್, ಜಿ ವಿ ವಿ ಪಂತುಲು, ಕಾಳಿ ಎನ್ ರತ್ನಂ

8-7-49ರಿಂದ
ತಲ್ಲಿ ಪ್ರೇಮ
(ತೆಲುಗು)

RAJKAMAL, MYSORE
FROM 1st JULY 1949 DAILY 3 SHOWS
William Shakespeare's
HAMLET
WITH LAURENCE OLIVER, JEAN SIMMONS ETC,
The greatest Drama in World Literature, snatching away the Academy Award of the year 1948
See this greatest tragedy - a tragedy of a man of thought, who failed as a man of action

ಬೆಳಗಿನ ಆಟ 1-7-49ರಿಂದ ಪ್ರಾರಂಭ
ಬ್ಯಾರಿಸ್ಟರ್ (ಹಿಂ)
—ಭೂಮಿಕೆ—
ಬೆಂಜಮಿನ್, ಗೀತಾ ಬೋಸ್.

॥ ಶ್ರೀ ಸೀತಾರಾಮಾರ್ಪಣಮಸ್ತು ॥
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ವೈದ್ಯೋಪಾನಕ
ಸೂತಿಕಾ ವಾತಕ್ಕೆ (ಬಾಣಂತಿ ನಂಜಿಗೆ) ಉತ್ತಮ ಗುಣಕಾರಿ
ಕಣ್ಣು, ಕೈಕಾಲುರಿ, ಮೈ ಬೆಚ್ಚಗೆ ಕಣ್ಣಿಗೆ ಕತ್ತಲೆ ಕವಿದಂತೆ ತೋರುವುದು, ನಿದ್ರೆ ಬಾರದಿರುವಿಕೆ, ಮನಸ್ಸಿನ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ ವಿಳಾಸ.— ಬೆಲೆ ಸೀಸೆ 1ಕ್ಕೆ 2-0-0
ಶ್ರೀ ಸೀತಾರಾಮರಾಘವ ವೈದ್ಯಶಾಲಾ, ಮೈಸೂರು.

ಪ್ರಭುದೇವಾ ಟಾಕೀಸ್
4-7-49ನೇ ಸೋಮವಾರದಿಂದ ಅಮೋಘ ಪ್ರಾರಂಭ

(ತೆಲುಗು)
ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು
ಪ್ರತಿ ದಿನ ೩ ಆಟಗಳು
ಮ್ಯಾಟಿನಿ 2-30ಕ್ಕೆ 1ನೇ ಆಟ 6-30ಕ್ಕೆ, 2ನೇ ಆಟ 10 ಘಂಟೆಗೆ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೨ ಕಾಸು

ಸಂಪುಟ ೭] ಸೋಮವಾರ ೪-೭-೪೯ [ಸಂಚಿಕೆ ೨೭೫

-ಹೈಸ್ಕೂಲುಗಳಲ್ಲಿ- ಕಡ್ಡಾಯ ಹಿಂದೀ ಶಿಕ್ಷಣ

ಸರ್ಕಾರದ ಆಹಾರ ನೀತಿಗೆ ಬೆಂಬಲ

ಮೈಸೂರು ೪

ಮೈಸೂರು ನಗರದ ರೇಷನ್ ಕಾರ್ಡು ಹೋಲ್ಡರುಗಳ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ದಿನ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಹಾರ ಸಂಗ್ರಹಣೆ ಮತ್ತು ಮಿತವ್ಯಯದ ದೃಷ್ಟಿಯಿಂದ ಹೋಟಲುಗಳ ಮೇಲೆ ಸರ್ಕಾರದವರು ಹಾಕಿರುವ ಆಜ್ಞೆಗಳಿಗೆ ಸಂಪೂರ್ಣ ಬೆಂಬಲ ನೀಡುವ ಮತ್ತು ...ಲಿನಿಂದ ತಯಾರಾದ ಪದಾರ್ಥಗಳ ... ತಯಾರಿಸಕೂಡದೆಂಬ ಆಜ್ಞೆಯನ್ನು ...ಲ್ಪವೂ ಸಡಲಿಸಬಾರದೆಂದು ಕೋರುವ ...ರ್ಣಯಗಳು ಅಂಗೀಕೃತವಾದುವು. ...ಸ್ಕರ ಹೂಡುವ ಹೋಟಲುಗಳ ರಹ...ರಿಯನ್ನು ರದ್ದು ಮಾಡಲಾಗುವುದೆಂದು ...ರಸಭಾಧ್ಯಕ್ಷರು ಕೊಟ್ಟ ಎಚ್ಚರಿಕೆಗೆ ...ನುಗುಣವಾಗಿ ರಹದಾರಿಯನ್ನು ಮುಂ...ವರಿಸುವಾಗ ಅವರುಗಳ ಮೇಲೆ ಶೀಘ್ರ ...ರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿ...ಲಾಯಿತು. ದೆಹಲಿ, ಕೊಚ್ಚಿ ಮತ್ತು ...ದರಾಸುಗಳಲ್ಲಿ ಹುಡಿತರವನ್ನು ಹೆಚ್ಚಿಸಿ...ವಂತೆ ಸಂಸ್ಥಾನದಲ್ಲೂ ಕಡೇ ಪಕ್ಷ ೧೪ ...ನ್ಸ್ ಕೊಡಬೇಕೆಂದು ಸರ್ಕಾರದವರ...ನ್ನು ಪ್ರಾರ್ಥಿಸುವ ನಿರ್ಣಯ ಮಾಡ...ಲಾಯಿತು.

ಪ್ರಭುಗಳಿಗೆ ಪುರಸಭೆಯ ಬಿನ್ನವತ್ತಳೆ

ರಾಜಧಾನಿಯ ಚಾಮುಂಡಿಪುರದಲ್ಲಿ ಕ...ಟ್ಟಿರುವ ಸೇಟ್ ನೋರ್ತದಾಸ್ ತುಳಸೀದಾಸ್ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಇದೇ ೯ನೇ ತಾ|| ಶನಿವಾರ ಬೆಳಿಗ್ಗೆ ೧೦-೪೫ ಗಂಟೆಗೆ ನೆರವೇರಿಸುವರು. ಈ ಸಂಬಂಧದಲ್ಲಿ ಪ್ರಭುಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದು ಪುರ ಸಭೆಯವರು ನಿರ್ಧರಿಸಿ, ಅದಕ್ಕಾಗಿ ೨ ಸಾವಿರ ರೂ ಅನ್ನು ಮಂಜೂರು ಮಾಡಿರುತ್ತಾರೆ.

ಜಿಲ್ಲೆಯ ಧಾನ್ಯಗಳು ಹೊರಕ್ಕೆ ಹೋಗಕೂಡದು

ಮೈಸೂರು ಜಿಲ್ಲಾ ಆಹಾರ ಸಮಿತಿಯ ಸಭೆಯು ಶ್ರೀ ಜಾರ್ಜ್ ಮ್ಯಾಥ್ಯೂರವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು. ಮೈಸೂರು ಜಿಲ್ಲೆಯಿಂದ ಹೊರಕ್ಕೆ ಸರಬರಾಜಾಗುತ್ತಿರುವ ಧಾನ್ಯಗಳನ್ನು ನಿಲ್ಲಿಸಿ, ಅದನ್ನು ಮೈಸೂರು ಜಿಲ್ಲಾ ಪ್ರಜೆಗಳಿಗೇ ಹಂಚಬೇಕೆಂದು ಸರ್ಕಾರದವರನ್ನು ಕೋರುವ ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರ ನಿರ್ಣಯವು ಅಂಗೀಕೃತವಾಯಿತು.

ಪಾಕೀಸ್ತಾನದಲ್ಲಿ ಅಶ್ಲೀಲ ಚಿತ್ರಗಳಿಗೆ ನಿಷೇಧ

ಅಶ್ಲೀಲವಾದ ಚಿತ್ರಗಳನ್ನು ಪ್ರದರ್ಶಿಸಕೂಡದೆಂದು ನಿಷೇಧಿಸಲು ಒಂದು ಮಸೂದೆಯನ್ನು ಶಾಸನ ಸಭೆಯ ಮುಂದೆ ಸಧ್ಯದಲ್ಲಿಯೇ ಪಾಕೀಸ್ತಾನ ಸರ್ಕಾರವು ತರಲಿದೆಯೆಂದು ಹೇಳಲಾಗಿದೆ.

ಮೋಟಾರು ಸೈಕಲ್ಲಿನ ಮೇಲೆ ಫುಟ್ ಬಾಲ್ ಪಂದ್ಯ

ಮೋಟಾರು ಸೈಕಲುಗಳ ಮೇಲೆ ಕುಳಿತು ಫುಟ್‌ಬಾಲ್ ಪಂದ್ಯವನ್ನು ಆಡುವ ವ್ಯವಸ್ಥೆಯನ್ನು ಬ್ರಿಟನ್ನಿನಲ್ಲಿ ಏರ್ಪಡಿಸಲಾಗಿದೆಯೆಂದೂ, ಅದನ್ನು ಯೂರೋಪಿನ ಅನೇಕ ಭಾಗಗಳಲ್ಲಿ ಬ್ರಿಟನ್ನಿನ ಆಟಗಾರರು ಪ್ರದರ್ಶಿಸುವರೆಂದೂ ಹೇಳಲಾಗಿದೆ.

೩೦ ಲಕ್ಷ ಸಕ್ಕರೆ ಮೂಟೆಗಳ ನಾಶ

ಇಳಿಯುತ್ತಿರುವ ಬೆಲೆಯನ್ನು ತಡೆಗಟ್ಟಲು ಮತ್ತು ಹೆಚ್ಚಿನ ಬೆಲೆ ಪಡೆಯಲು, ಬ್ರೆಜಿಲ್‌ನಲ್ಲಿ ೩೦ ಲಕ್ಷ ಸಕ್ಕರೆ ಮೂಟೆಗಳನ್ನು ಸುಟ್ಟುಹಾಕಬೇಕೆಂದು ನಿರ್ಧರಿಸಲಾಗಿದೆ. ಇದೇ ರೀತಿ ಸಾವಿರಾರು ಟನ್ನುಗಳಷ್ಟು ಆಲೂಗೆಡ್ಡೆ, ಗೋಧಿ ಮತ್ತು ಇತರ ಧಾನ್ಯಗಳನ್ನು ಸಮುದ್ರಕ್ಕೆ ಸುರಿಯಲಾಗಿದೆ. ಹೆಚ್ಚುವರಿ ಧಾನ್ಯಗಳನ್ನು ಆ ದೇಶದಿಂದ ಹೊರಕ್ಕೆ ಕಳುಹಿಸಲಾಗುತ್ತಿದ್ದರೂ ಅಲ್ಲಿನ ಜನರಿಗೆ ಸಾಕಷ್ಟು ಆಹಾರ ದೊರಕುತ್ತಿಲ್ಲವೆಂದು ಹೇಳಲಾಗಿದೆ

ಪೋಲೀಸ್ ನಿಲ್ದಾಣದ ಮೇಲೆ ಕಮ್ಯೂನಿಸ್ಟರ ಧಾಳಿ

ಭಾಗಲ್ಪುರ ಜಿಲ್ಲೆಯ ಸೈದಾಪುರದಲ್ಲಿ ಪೋಲೀಸರು ಇಬ್ಬರು ಕಮ್ಯೂನಿಸ್ಟರನ್ನು ದಸ್ತಗಿರಿ ಮಾಡಿ ಅವರನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟಿದ್ದಾಗ, ಅವರನ್ನು ಬಿಡಿಸಿಕೊಳ್ಳಲು ಜನರ ಗುಂಪು ಪೋಲೀಸರ ಮೇಲೆ ಬಿದ್ದು ಗಲಭೆ ನಡೆಸಿತೆಂದೂ, ಪೋಲೀಸರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರೆಂದೂ ಹೇಳಲಾಗಿದೆ. ಇದರಿಂದ ಒಬ್ಬ ಸತ್ತು, ಅನೇಕರಿಗೆ ಗಾಯವಾಗಿದೆ

ರಾಮಸ್ವಾಮಿ ನಾಯ್ಕರ ವಿವಾಹ

ದ್ರಾವಿಡ ಸಂಘದ ಮುಖಂಡರಾದ ಇ. ವಿ ರಾಮಸ್ವಾಮಿ ನಾಯ್ಕರು ಪತ್ರಿಕಾ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ೩೦ ವರ್ಷದ ಸ್ತ್ರೀಯೊಬ್ಬಳನ್ನು ರಿಜಿಸ್ಟರ್ಡ್ ಕಾನೂನು ರೀತಿಯಲ್ಲಿ ವಿವಾಹವಾಗುವರೆಂದು ಸುದ್ದಿ ಬಂದಿದೆ. ಈ ವಿವಾಹಕ್ಕೆ ಸಂಘದ ಇತರ ಸದಸ್ಯರ ವಿರೋಧವಿರುವುದರಿಂದ ಸಂಘದಲ್ಲಿ ಒಡಕುಂಟಾಗುವುದೆಂದು ಭಾವಿಸಲಾಗಿದೆ ನಾಯಕರಿಗೆ ಈಗ ೭೦ ವಯಸ್ಸು

ಆಸ್ಪತ್ರೆ ನರ್ಸುಗಳ ಮುಷ್ಕರ

ರಾಜಧಾನಿಯ ಚಲುವಾಂಬಾ ಆಸ್ಪತ್ರೆಯ ೩೬ ಜನ ನರ್ಸುಗಳು ಮೊನ್ನೆ ಬೆಳಗ್ಗೆ ೮ ರಿಂದ ಮಧ್ಯಾಹ್ನ ೧ ಗಂಟೆವರೆಗೆ ಮುಷ್ಕರ ಹೂಡಿದ್ದರೆಂದು ತಿಳಿದುಬಂದಿದೆ. ನರ್ಸುಗಳ ಮೇಲೆ ಅನಾಮಧೇಯ ಅರ್ಜಿಗಳ ಬಗ್ಗೆ ಅಧಿಕಾರಿಗಳು ತನಿಖೆ ನಡೆಸಿದುದನ್ನು ಪ್ರತಿಭಟಿಸಲು ಈ ರೀತಿ ಮಾಡಿದರೆಂದು ಹೇಳಲಾಗಿದೆ

೪೬,೨೦೦ ಅಡಿ ಉದ್ದದ ತೂಗು ಸೇತುವೆ

ಪೆಸಿಫಿಕ್ ಸಮುದ್ರದಲ್ಲಿರುವ ಬ್ರೂಕ್ಲೇನ್ ಮತ್ತು ಸ್ಟೇಟನ್ ದ್ವೀಪಗಳ ಮಧ್ಯೆ ಒಂದು ತೂಗುವ ಸೇತುವೆಯನ್ನು ೭೩೦ ಲಕ್ಷ ಡಾಲರುಗಳ ಖರ್ಚಿನಿಂದ ಕಟ್ಟಲಾಗುವುದೆಂದೂ, ಅದು ೪೬,೨೦೦ ಅಡಿ ಉದ್ದವಿರುವುದೆಂದೂ, ಈ ಸೇತುವೆಯು ಪ್ರಪಂಚದಲ್ಲೇ ಅತ್ಯಂತ ದೊಡ್ಡದೆಂದೂ ಹೇಳಲಾಗಿದೆ

ಖೈಬರ್ ಕಣಿವೆಯ ನೀರು ಸರಬರಾಜಿಗೆ ಧಕ್ಕೆ

ಆಫ್ರಿದಿ ನಗರದ ಟಾರ್ಖಂ ಎಂಬುದಕ್ಕೆ ಖೈಬರ್ ಕಣಿವೆಯ ಮೂಲಕ ದಿನವಹಿ ೪೦ ಸಾವಿರ ಗ್ಯಾಲನ್ನಿನಷ್ಟು ಸರಬರಾಜಾಗುತ್ತಿರುವ ನೀರು ಇನ್ನು ಮುಂದೆ ತಪ್ಪುವಂತಾಗಿದೆ. ಆ ನಗರಕ್ಕೆ ಸರಬರಾಜಾಗುತ್ತಿದ್ದ ಭಾರಿ ನೀರಿನ ಪೈಪನ್ನು ಯಾರೋ ಆಸ್ಫೋಟನೆ ಮಾಡಿದ್ದಾರೆಂದು ವರದಿಯಾಗಿದೆ.

ಪ್ರಪಂಚದಲ್ಲಿ ೫೭೫ ಲಕ್ಷ ಮೋಟಾರುಗಳು

ಕಳೆದ ವರ್ಷ ಪ್ರಪಂಚದಲ್ಲಿ ಒಟ್ಟು ೫,೭೫,೦೨,೪೯೪ ಮೋಟಾರು ಕಾರುಗಳು ಇದ್ದವೆಂದೂ, ಅವುಗಳ ಪೈಕಿ, ಆಫ್ರಿಕದಲ್ಲಿ ೮,೪೭,೯೭೬, ಅಮೇರಿಕದಲ್ಲಿ ೪,೪೧,೪೭,೪೯೭೬, ಏಷ್ಯಾ, ೭,೪೭,೬೭೭, ಯೂರೋಪ್ ೧೦೨,೪೧,೯೩೧, ರಷ್ಯಾ ೩೦ ಲಕ್ಷ, ಬ್ರಿಟನ್ ೨೭ ಲಕ್ಷ ಇದ್ದವೆಂದು ಹೇಳಲಾಗಿದೆ.

ಅತ್ಯಂತ ಎತ್ತರವಾದ ಜನರು

ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಜನರು ಬೆಲ್‌ಜಿಯಂ ಕಾಂಗೋದಲ್ಲಿರುವರೆಂದೂ, ಅಲ್ಲಿನ ಬಾಟಸಿ ಎಂಬ ಜನಾಂಗದವರು ೮ ಅಡಿ ಉದ್ದವಿದ್ದಾರೆಂದೂ ವರದಿಯಾಗಿದೆ

ಪ್ರಭುಗಳ ಕಾರ್ಯಕ್ರಮ

ಶ್ರೀಮನ್ಮಹಾರಾಜರವರು ಈ ದಿನ ಹೊಸ ಕೋಟೆಯಲ್ಲಿ ಬೈರೇಗೌಡ ಬಚ್ಚೇಗೌಡರ ವಿದ್ಯಾರ್ಥಿ ನಿಲಯದ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಹೊಸ ಕೋಟೆ ತಾಲ್ಲೂಕು ನಂದಿ ಗುಡಿಯಲ್ಲಿ ಶ್ರೀ ಸಿದ್ಧಲಿಂಗದೇವರು ಮತ್ತು ಶ್ರೀಮತಿ ವೀರಮ್ಮನವರ ಆಸ್ಪತ್ರೆ ಮತ್ತು ಶ್ರೀ ಕರಿಯಪ್ಪ ಗೌಡರ ಪಶು ವೈದ್ಯ ಆಸ್ಪತ್ರೆಗಳ ಪ್ರಾರಂಭೋತ್ಸವವನ್ನೂ ನಡೆಸಿದರು

ಖಾಸಗೀ ಕೈಗಾರಿಕಾ ಸಂಸ್ಥೆಗಳಿಗೆ ೭೮ ಲಕ್ಷ ರೂ. ಸಾಲ

ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು

ಸ್ವಂ. ವು ಫೋ] ಬೆಂಗಳೂರು ೪

ಶಾಸನ ಸಭೆಯಲ್ಲಿ ಈ ದಿನ ಕೈಗಾರಿಕಾ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಶ್ರೀ ಎಲ್.ಎಸ್. ವೆಂಕಾಜಿರಾಯರ ಪ್ರಶ್ನೆಗೆ ಉತ್ತರವಿತ್ತು, ಸಂಸ್ಥಾನದ ಕೈಗಾರಿಕೆಯ ಅಭಿವೃದ್ಧಿ ಬಗ್ಗೆ ಕಳೆದ ವರ್ಷ ಒಂದು ನಿಪುಣರ ಸಮಿತಿಯನ್ನು ರಚಿಸಲಾಗಿತ್ತೆಂದೂ, ಅವರು ಈಗ ಕಳುಹಿಸಿರುವ ಸಲಹೆಯನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದೂ ತಿಳಿಸಿದರು.

೨೬೭ ಖಾಸಗೀ ಕೈಗಾರಿಕಾ ಸಂಸ್ಥೆಗಳು ಸಾಲಕ್ಕಾಗಿ ಸರ್ಕಾರದವರಲ್ಲಿ ಅರ್ಜಿ ಹಾಕಿಕೊಂಡಿದ್ದವೆಂದೂ, ಆ ಪೈಕಿ ೫೫ ಮಂದಿಗೆ ಒಟ್ಟು ೭೮ ಲಕ್ಷರೂ. ಸಾಲ ಕೊಡಲಾಗಿದೆಯೆಂದೂ ಸಚಿವ ಶ್ರೀ ದಾಸಪ್ಪನವರು ಜನಾಬ್ ಮಹಮದ್ ಇಮಾಂರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

೧೯೪೮ನೇ ಅಕ್ಟೋಬರ್ ತಿಂಗಳಿಂದೀಚೆಗೆ ಮೈಸೂರು ರಾಜ್ಯಾಂಗ ಸಭೆಯು ಸೇರಿಲ್ಲವೆಂದೂ, ಸಂಸ್ಥಾನಗಳಿಗೆಲ್ಲಾ ಒಂದೇ ಮಾದರಿ ರಾಜ್ಯಾಂಗವನ್ನು ರಚಿಸಲು ಒಂದು ಸಮಿತಿಯನ್ನು ನೇಮಿಸಿರುವುದರಿಂದ ಸಂಸ್ಥಾನದ ರಾಜ್ಯಾಂಗ ರಚನೆಯನ್ನು ಮುಂದು ಹಾಕಬೇಕೆಂದು ಭಾರತ ಸರ್ಕಾರದವರಿಂದ ಸೂಚನೆ ಬಂದ ಪ್ರಯುಕ್ತ, ಸಭೆಯ ಕಾರ್ಯಕಲಾಪಗಳನ್ನು ಸಧ್ಯಕ್ಕೆ ನಿಲ್ಲಿಸಲಾಗಿದೆಯೆಂದೂ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ಶ್ರೀ ಓ. ವೀರಬಸಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಅನಂತರ ಸಚಿವ ಶ್ರೀ ಪಾಮಡಿ ಸುಬ್ಬರಾಮ ಶೆಟ್ಟರು ಬೆಂಗಳೂರು ಕಾರ್ಪೋರೇಷನ್ ಮಸೂದೆ ಸೆಲೆಕ್ಟ ಕಮಿಟಿಯ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಮಳೆಯಿಂದ ಕೊಚ್ಚಿಕೊಂಡು ಬಾಲಕಿಯ ಮರಣ

ಹುಬ್ಬಳ್ಳಿಯಲ್ಲಿರುವ ಮೈಸೂರಿನ ಕಾಂಗ್ರೆಸ್ ನಾಯಕರಾದ ಸರ್ದಾರ್ ವೆಂಕಟರಾಮಯ್ಯನವರ ೮ ವರ್ಷದ ಪುತ್ರಿಯು ಕಳೆದ ೨೭ನೇ ತಾ|| ಸಂಜೆ ಶಾಲೆಯಿಂದ ಹಿಂತಿರುಗುತ್ತಿದ್ದಾಗ ಭಾರಿ ಮಳೆಗೆ ಸಿಕ್ಕಿ ಕಾಲು ಜಾರಿ ಚರಂಡಿಗೆ ಬಿದ್ದು ಕೊಚ್ಚಿಕೊಂಡು ಹೋಗಿ ಅಪಮೃತ್ಯುವಿಗೆ ಈಡಾದಳೆಂದು ವರದಿಯಾಗಿದೆ

ಲೋಹಿಯಾ ಮತ್ತು ೪೨ ಮಂದಿಯ ಬಿಡುಗಡೆ

ದೆಹಲಿಯ ನ್ಯಾಯಾಧೀಶರ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ... ಭಾಷಣ ಮಾಡಿದರೆಂಬ ಆಪಾದನೆಯ ಮೇಲೆ ಕಳೆದ ೨೫ನೇ ತಾ|| ಎರಡು ತಿಂಗಳು ಶಿಕ್ಷೆಗೆ ಗುರಿಯಾಗಿದ್ದ ಸಮತಾವಾದಿ ನಾಯಕರಾದ ಡಾ|| ರಾಮ ಮನೋಹರ ಲೋಹಿಯಾ ಮತ್ತು ಇತರ ೪೨ ಜನರನ್ನು ಸರ್ಕಾರದ ಆಜ್ಞೆ ಮೇರೆ ನಿನ್ನೆ ದಿನ ಬಿಡುಗಡೆ ಮಾಡಲಾಯಿತು.

ಆಗಮನ

ಭಾರತ ಸರ್ಕಾರದ ಪವರ್ ಮತ್ತು ಮೈನಿಂಗ್ ಸಚಿವರಾದ ಶ್ರೀ ಎನ್. ವಿ. ಗ್ಯಾಡ್ಗಿಲ್‌ರವರು ಈ ದಿನ ರಾಜಧಾನಿಗೆ ಆಗಮಿಸಿದರು. ಅವರು ಕೃಷ್ಣರಾಜಸಾಗರ, ಭದ್ರಾವತಿಗಳಿಗೆ ಭೇಟಿ ಕೊಡುವರು.

ಹೈಸ್ಕೂಲುಗಳಲ್ಲಿ ಕಡ್ಡಾಯ ಹಿಂದೀ ಶಿಕ್ಷಣ

ಸರ್ಕಾರದ ಪರ್ಯಾಲೋಚನೆಯಲ್ಲಿದೆ

ಮೈಸೂರು ೪

ಸಂಸ್ಥಾನದ ಹಿಂದೀ ಪ್ರಚಾರ ಸಭೆಯ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ನಿನ್ನೆ ದಿನ ಇಲ್ಲಿನ ಹಿಂದೀ ಪ್ರಚಾರ ಸಭೆಗೆ ಭೇಟಿ ಕೊಟ್ಟಿದ್ದರು ಅವರ ಸಂಗಡ ಆದರ ಕಾರ್ಯದರ್ಶಿಗಳಾದ ಶ್ರೀ ವಿಶ್ವನಾಥ್ರವರು ದಯಮಾಡಿಸಿದ್ದರು ಶ್ರೀ ಎಂ. ನಾಗಪ್ಪನವರಿಂದ ಸ್ವಾಗತ ಭಾಷಣವಾದನಂತರ, ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್ ಶ್ರೀರಂಗಾಚಾರ್ಯರು ಒಂದು ಮನವಿ ಪತ್ರವನ್ನು ಅರ್ಪಿಸಿದರು ಸಂಘಕ್ಕೆ ಒಂದ ಉಚಿತ ನಿವೇಶನ ಕೊಡಿಸಿಕೊಡಬೇಕು, ವಿಶ್ವ ವಿದ್ಯಾನಿಲಯ ಮತ್ತು ವಿದ್ಯಾ ಇಲಾಖೆಗಳಲ್ಲಿ ಹಿಂದಿಗೆ ಸರಿಯಾದ ಸ್ಥಾನ ಮಾನ ಸಿಗುವಂತೆ ವ್ಯವಸ್ಥೆ ಮಾಡಬೇಕು. ವಿಶ್ವ ವಿದ್ಯಾನಿಲಯದಲ್ಲಿ ಹಿಂದೀ ಆನರ್ಸ್ ಕೋರ್ಸನ್ನು ತೆರೆಯಬೇಕು ಮತ್ತು ಬಿ ಟಿ. ತರಗತಿಯ ಪಾಠ ಪ್ರವಚನದಲ್ಲಿ ಹಿಂದಿಯನ್ನು ಸೇರಿಸಬೇಕು. ಹೈಸ್ಕೂಲಿನ ಇತರ ಉಪಾಧ್ಯಾಯರುಗಳಿಗಿರುವ ಸ್ಥಾನ ಮಾನಗಳನ್ನು ಹಿಂದೀ ಉಪಾಧ್ಯಾಯರುಗಳಿಗೂ ಕೊಡಬೇಕು, ಮೈಸೂರಿನಲ್ಲಿ ಹಿಂದೀ ಪ್ರಚಾರಕರ ವಿದ್ಯಾಲಯವನ್ನು ಸ್ಥಾಪಿಸಬೇಕು. ಆಕಾಶವಾಣಿಯಲ್ಲಿ ಉರ್ದು ಪ್ರಸಾರಣೆಯನ್ನು ರದ್ದು ಮಾಡಿ, ಹಿಂದಿಯನ್ನು ಜಾರಿಗೆ ತರಬೇಕು—ಇವೇ ಮುಂತಾದ ಅಂಶಗಳನ್ನು ಅವರು ಅರಿಕೆ ಮಾಡಿಕೊಂಡರು.

ಶ್ರೀ ಸುಬ್ರಹ್ಮಣ್ಯಂರವರು ಭಾಷಣ ಮಾಡಿ, ಸಂಸ್ಥಾನದಲ್ಲಿ ಹಿಂದಿಗೆ ಜನರು ಹೆಚ್ಚು ಪ್ರೋತ್ಸಾಹಕೊಡಬೇಕೆಂದು ತಿಳಿಸಿದರು ಹೈಸ್ಕೂಲಿನ ಹಿಂದೀ ಉಪಾಧ್ಯಾಯರುಗಳ ಸ್ಥಾನ ಮಾನಗಳನ್ನು ಉತ್ತಮಪಡಿಸಲಾಗುವುದೆಂದು ವಿದ್ಯಾ ಸಚಿವರು ಭರವಸೆ ಇತ್ತಿದ್ದಾರೆಂದೂ, ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಹಿಂದಿ ಶಿಕ್ಷಣ ಕೊಡುವ ಅಂಶವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದೂ ತಿಳಿಸಿದರು

ಉತ್ತಮವಾದ ರವೆ

ಉಪವಾಸದ ಪಕ್ಷಕ್ಕಾಗಿ ಒಬ್ಬಟ್ಟು, ಚಿರೋಟಿ, ಫೇಣಿ ವಗೈರೆ ಮಾಡ ಬಹುದಾದ ಉತ್ತಮವಾದ

ರವೆಯನ್ನು ತರಿಸಲಾಗಿದೆ

ಶ್ರೀ ಕೃಷ್ಣ ಭವನ್ ಸ್ಟೋರ್ಸ್,

ದೇವರಾಜಾ ಮಾರ್ಕೆಟ್ ಚೌಕ,

ಮೈಸೂರು

॥ ಶ್ರೀ ॥

ಗಣೇಶಾ ಟಾಕೀಸ್

4-7-49ರಿಂದ 4 ದಿನಗಳು ಮಾತ್ರ

ಪ್ರತಿ ದಿನ ೩ ಪ್ರದರ್ಶನಗಳು

ಭಕ್ತ ಗೌರಿ

(ತಮಿಳು)

ಭೂಮಿಕೆ.—ಜೀವರತ್ನಂ, ನಾರಾಯಣ ರಾವ್, ಜಿ ವಿ. ಪಿ ಪಂತುಲು, ಕಾಳಿ ಎನ್. ರತ್ನಂ

ಶ್ರೀ ಗಾಯಿತ್ರೀ

ಪ್ರತಿ ದಿನ 3 ಆಟಗಳು

3-7-49 ರಿಂದ 5 ದಿನಗಳು ಮಾತ್ರ

ಯೂನಿವರ್ಸಲ್ರವರ ಭಯಂಕರ ಅರಣ್ಯ ಚಿತ್ರ

ಮ್ಯಾನ್ ಈಟರ್ ಆಫ್ ಕುಮಾರ್

MAN EATER, OF KUMAON

ಪಾತ್ರ :—ಮೈಸೂರು ಸಾಬು

ಚಾಮುಂಡೇಶ್ವರೀ ಮತ್ತು ಗಣೇಶಾ ಟಾಕೀಸುಗಳಲ್ಲಿ

8-7-49 ರಿಂದ

ರಕ್ಷರೇಖಾ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವೈದ್ಯ, ಆಲಟೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ:-೧ ಸೆಟ್ ರೂ ೩-೪-೦. ಪ್ಯಾಕಿಂಗ್ ಮತ್ತು ಟ.ಖ ೧೩ ಆಣೆ

ತಯಾರಿಸುವವರು

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೊಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೊಳದ ಬೀದಿ ೧೨೯೩ನೇ ನಂಬರ್ ಮನೆಯಲ್ಲಿ ೪-೭-೪೯ರ ಆರಭ್ಯ ೮-೭-೪೯ರ ವರಗೆ ಕ್ಯಾಂಪ್ ಮಾಡುತ್ತಾರೆ ನೋಡತಕ್ಕ ಕಾಲ ಬೆಳಿಗ್ಗೆ ಎಂಟರಿಂದ ಹನ್ನೊಂದು ಘಂಟೆ

ಸಮಗ್ರಸೇವಾ ಸಹಕಾರ ಸಂಘಗಳ ಸ್ಥಾಪನೆ

ಮೈಸೂರು ಜಿಲ್ಲಾ ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರುಗಳ ಸಭೆಯು ನಿನ್ನೆ ನಡೆದು, ಜಿಲ್ಲೆಯಲ್ಲಿ ಹೆಚ್ಚು ಸಮಗ್ರ ಸೇವಾ ಸಹಕಾರ ಸಂಘಗಳನ್ನು ಕೂಡಲೇ ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

ಪ್ರಭುದೇವಾ ಟಾಕೀಸ್

4-7-49 ನೇ ಸೋಮವಾರದಿಂದ ಅಮೋಘ ಪ್ರಾರಂಭ

ಜೆಮಿನಿಯವರ

★ ಬಾಲನಾಗಮ್ಮ ★

(ತೆಲುಗು)

ಪಾತ್ರ:-ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಪ್ರತಿ ದಿನ ೩ ಆಟಗಳು

ಮ್ಯಾಟನಿ 2-30ಕ್ಕೆ, 1ನೇ ಆಟ 6-30ಕ್ಕೆ. 2ನೇ ಆಟ 10 ಘಂಟೆಗೆ

ಸಮಾಜ ಸುಧಾರಣೆಯ ಮಹತ್ಕಾರ್ಯದಲ್ಲಿ ಚಲಚ್ಚಿತ್ರ ದಿಗ್ದರ್ಶಕ ಶ್ರೀ ವಿ ಶಾಂತಾರಾಂರವರ ಚಿತ್ರವೊಂದು ಸಾಧಿಸಿರುವುದನ್ನು ಸಹಸ್ರಾರು ಲೇಖನಗಳೂ ಪುಸ್ತಕಗಳೂ ಸಾಧಿಸಲಾರವು

ಪ್ರಭಾ

9—7—49ರಿಂದ ಅಮೋಘ ಪ್ರಾರಂಭ

ದಿನವಹಿ ಮೂರು ಆಟಗಳು

ರಾಜಕಮಲ್ ಕಲಾ ಮಂದಿರದವರ

* ಅಪ್ನಾ ದೇಶ್ *

(ಹಿಂದಿ)

ಪಾತ್ರ:-ನೂತನ ಶಾರೆ ಪುಷ್ಪಹಂಸ — -:ದಿಗ್ದರ್ಶಕರು:- ವಿ. ಶಾಂತಾರಾಂ

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕೌಟಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ. ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು. ಮೊದಲಾಗಿ ಗುಣವಾಗುತ್ತದೆ.

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ದಸರಾ ವಸ್ತು ಪ್ರದರ್ಶನ

(೧೯೪೯ ನೇ ಸೆಪ್ಟೆಂಬರ್ ೨೩ ನೇ ತಾರೀಖಿನಿಂದ ೧೯೪೯ ನೇ ಅಕ್ಟೋಬರ್ ೮ ನೇತಾರೀಖಿನ ವರೆವಿಗೆ ಎರಡು ದಿನಗಳೂ ಸೇರಿ)

ಈಗ ಪ್ರಿಂಟ್ ಆಗುತ್ತಿರುವ ೧೯೪೯ ನೇ ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಸಂಬಂಧಪಟ್ಟ ಪ್ರಾಸ್ಪೆಕ್ಟಸ್‌ಗೆ ಇಂಡಿಯಾದಲ್ಲೆಲ್ಲಾ ವ್ಯಾಪಾರಿ ವೃತ್ತದಲ್ಲಿ ಮತ್ತು ಸಾರ್ವಜನಿಕರಲ್ಲಿ ಹೆಚ್ಚು ಪ್ರಚಾರವಿರುವುದು. ಇದರಲ್ಲಿ ಜಾಹಿರಾತುದಾರರಿಗಾಗಿ ಕೆಲವು ಪುಟಗಳನ್ನು ಮೀಸಲಾಗಿಟ್ಟಿದೆ ಜಾಹಿರಾತಿನ ದರಗಳು ಕೆಳಗೆ ಕಂಡಂತಿವೆ.—

ಒಂದು ಪುಟಕ್ಕೆ ರೂ. ೧೫-೦-೦

ಅರ್ಧ ಪುಟಕ್ಕೆ ರೂ. ೮-೦-೦

(ಕವರ್ ಪುಟಗಳನ್ನು ರಿಜರ್ವ್ ಮಾಡಲಾಗಿದೆ)

ಜಾಹಿರಾತಿನ ಮ್ಯಾಟರ್, ಬ್ಲಾಕುಗಳು ಮತ್ತು ಜಾಹಿರಾತಿನ ಚಾರ್ಜುಗಳನ್ನು ಸ್ವೀಕರಿಸಲು ಕಡೇ ದಿವಸ ೧೯೪೯ ನೇ ಜುಲೈ ೧೫ ನೇ ತಾರೀಖು ಜಾಹಿರಾತು ಕೊಡಲಿರುವವರು ಅದನ್ನು ಜಾಹಿರಾತು ಚಾರ್ಜಿನೊಡನೆ ನೇರವಾಗಿ "ಸೆಕ್ರೆಟರಿ, ದಸರಾ ಎಕ್ಸಿಬಿಷನ್ ಕಮಿಟಿ, ಮೈಸೂರು" ಇವರಿಗೆ ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ. ಇದಕ್ಕಾಗಿ ಜಾಹಿರಾತು ಕ್ಯಾನ್‌ವಾಸ್ ಮಾಡಲು ಯಾವ ಏಜಂಟರನ್ನೂ ನೇಮಿಸಿರುವುದಿಲ್ಲ

ರುಜು,- ವಿ. ಎ. ಅಣ್ಣಾ ಮೊದಲಿಯಾರ್,

ಕಾರ್ಯದರ್ಶಿ, ವಸ್ತು ಪ್ರದರ್ಶನ ಸಮಿತಿ, ಮೈಸೂರು

Edited, printed and published by A. R. Nagarajan, at Sadhvi Press, D. Subbiah Road Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೫–೭–೪೯ [ಸಂಚಿಕೆ ೨೭೬

ಗೋಪಾಲ್ರಾವ್ ದೇಣೆದಾರರಿಗೆ ರೂ. ಗೆ ೪ ಆಣೆ

ಕಾರ್ಪೋರೇಷನ್ ಮಸೂದೆ

ಶಾಸನ ಸಭೆಯಲ್ಲಿ ಅಂಗೀಕಾರ

ಸ್ವಂ ಸು ಫೋ] ಬೆಂಗಳೂರು ೫

ನಿನ್ನೆ ಶಾಸನ ಸಭೆಯಲ್ಲಿ ಬೆಂಗಳೂರು ಕಾರ್ಪೋರೇಷನ್ ಮಸೂದೆ ಬಗ್ಗೆ ಸೆಲೆಕ್ಟ್ ಸಮಿತಿಯು ವರದಿಯ ಮೇಲೆ ಚರ್ಚೆ ನಡೆಯಿತು ಸರ್ಕಾರದ ಅನುಮತಿ ಇಲ್ಲದೆ ಕೌನ್ಸಿಲರನ್ನು ದುರ್ನಡತೆಗಾಗಿ ವಜಾ ಮಾಡುವುದು, ೩೦೦ ರೂ ಗಿಂತ ಹೆಚ್ಚು ಸಂಬಳ ಬರುವ ಅಧಿಕಾರಿಗಳನ್ನು ಕಮೀಷನರಾಗಿ ನೇಮಿಸಿಕೊಳ್ಳುವುದು, ಮತ್ತು ಸಿಸ್ಟ ತರಗತಿ, ಪಂಗಡ(?)ಗಳು, ಕಾರ್ಮಿಕರು ಮತ್ತು ಕೈಗಾರಿಕಾ ಸಂಸ್ಥೆಗಳ ಬಗ್ಗೆ ೨ ಸ್ಥಾನಗಳ ಮೀಸಲು–ಇವೇ ಮುಂತಾದ ಸೂಚನೆಯನ್ನು ಸಮಿತಿಯವರು ಮಾಡಿದ್ದಾರೆಂದು ಸಚಿವ ಶ್ರೀ ಪಾಮಡಿ ಸುಬ್ಬರಾಮಶೆಟ್ಟರು ತಿಳಿಸಿದರು

ಶ್ರೀಗಳಾದ ಮಹಮದ್ ಇಮಾಂ, ದೀವಿದಯಾಳು ನಾಯ್ಡು, ಸುಬ್ರಹ್ಮಣ್ಯ ಅಯ್ಯರ್ ಮತ್ತು ಸೈಯದ್ ಅಬ್ದುಲ್ ರಹಿಮಾನ್‌ರವರು ಮಸೂದೆಯನ್ನು ಸ್ವಾಗತಿಸಿದರು

ಸರ್ಕಾರಕ್ಕೆ ಕಾರ್ಪೋರೇಷನ್ನಿನ ಮೇಲೆ ಸಾಮಾನ್ಯ ಅಧಿಕಾರ ಮತ್ತು ಕಾರ್ಪೋರೇಷನ್ನು ಮಾಡುವ ನಿರ್ಣಯಗಳು ಕಾನೂನಿಗೆ ವಿರೋಧವಾಗಿದ್ದಲ್ಲಿ ಮಾತ್ರ ಸರ್ಕಾರದವರು ಅವನ್ನು ನಿರಾಕರಿಸುವುದು ಎಂಬ ಶ್ರೀ ಹೆಚ್ ಎಸ್. ರುದ್ರಪ್ಪನವರ ತಿದ್ದುಪಡಿಗಳನ್ನು ಸಚಿವರು ಒಪ್ಪುವುದಾಗಿ ತಿಳಿಸಿದರು ಮಸೂದೆಯು ಸರ್ವಾನುಮತದಿಂದ ಅಂಗೀಕಾರವಾಯಿತು

ಸಭೆಯು ೭ನೇ ತಾರೀಖು ಪುನಃ ನಡೆಯುವುದು

ಓಲ್ಡ್ ಲ್ಯಾಂಡ್ ರೆವಿನ್ಯೂ ಸೆಟ್ಲ್‌ಮೆಂಟ್ ಕಮೀಷನರಾದ ಶ್ರೀ ಎಂ ನವನೀತಂರವರು ನಿವೃತ್ತರಾಗುವುದಕ್ಕೆ ಮುನ್ನ ಕಳೆದ ತಿಂಗಳು ೨೨ನೇ ತಾ॥ನಿಂದ ಅವರಿಗೆ ೬ ತಿಂಗಳು ರಜಾ ಮಂಜೂರಾಗಿದೆ

ಹೈಸ್ಕೂಲ್ ಶಂಕು ಸ್ಥಾಪನೆ

ಶ್ರೀಮನ್ಮಹಾರಾಜರವರು ಈ ದಿನ ಬೆಳಿಗ್ಗೆ ದೊಡ್ಡ ಬಳ್ಳಾಪುರದ ಹೈಸ್ಕೂಲ್ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸಿದರು

ಎಂ. ಜಿ. ಹರಿರಾಯರ ನಿಧನ

ಬೆಂಗಳೂರು ಅವಿನ್ಯೂ ರಸ್ತೆಯಲ್ಲಿರುವ ಎಂಪೈರ್ ಎಲೆಕ್ಟ್ರಿಕ್ ಸ್ಟುಡಿಯೋ ಮಾಲೀಕರಾದ ಶ್ರೀ ಎಂ ಜಿ ಹರಿರಾಯರು ತಮ್ಮ ೩೪ ನೇ ವಯಸ್ಸಿನಲ್ಲಿ ಕಳೆದ ೩ನೇ ತಾ॥ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ ಅವರ ಮಿತ್ರ ಮಂಡಲಿಯವರು ಮೊನ್ನೆ ದಿನ ಮೃತರ ಭಾವಚಿತ್ರದ ಮೆರವಣಿಗೆ ನಡೆಸಿ, ೨ ಸಾವಿರ ಬಡ ಜನರಿಗೆ ಅನ್ನ ಸಂತರ್ಪಣೆ ಮಾಡಿದರು.

ಕಮ್ಯೂನಿಸ್ಟನ ಗಡೀಪಾರು

ಚಿನ್ನದಗಣಿ ಕಮ್ಯೂನಿಸ್ಟ ಕಾರ್ಮಿಕ ಗೋವಿಂದಸ್ವಾಮಿ ಎಂಬುವನನ್ನು ನಿನ್ನೆ ಸಂಜೆ ಮೈಸೂರು ಜೈಲಿನಿಂದ ಬಿಡುಗಡೆ ಮಾಡಿ, ಸಂಸ್ಥಾನವನ್ನು ಬಿಟ್ಟು ಹೋಗಬೇಕೆಂದು ಆತನ ಮೇಲೆ ಆಜ್ಞೆ ಜಾರಿಮಾಡಲಾಯಿತು

ಪ್ರಪಂಚದಲ್ಲಿ ರೋಗ ನಿವಾರಿಸಲು ೬ ಕೋಟಿ ರೂ.

ಮುಂದಿನ ವರ್ಷ ಪ್ರಪಂಚದಲ್ಲಿ ರೋಗಗಳನ್ನು ತಡೆಗಟ್ಟಲು ೬ ಕೋಟಿ ರೂ ಯೋಜನೆಯನ್ನು ವಿಶ್ವ ಆರೋಗ್ಯ ಸಂಸ್ಥೆಯವರು ಮಂಜೂರು ಮಾಡಿರುತ್ತಾರೆ

ಶ್ರೀ ಸ್ವಾಮಿ ರಾಮದಾಸರ ಆಗಮನ

ಮೈಸೂರು ೫

ಮಂಗಳೂರಿನ ಹತ್ತಿರವಿರುವ ಆನಂದಾಶ್ರಮದ ಶ್ರೀ ಸ್ವಾಮಿ ರಾಮದಾಸ್ ಮತ್ತು ಮಾತಾಜಿ ಕೃಷ್ಣಾಬಾಯಿಯವರು ನಿನ್ನೆ ರಾಜಧಾನಿಗೆ ಆಗಮಿಸಿದರು ಅವರು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಶ್ರೀಗಳಾದ ಮುನ್ನಿಲಾಲ್ ಮತ್ತು ಪಿ ವಿ ರಾಮಯ್ಯರ್‌ರವರುಗಳ ಅತಿಥಿಗಳಾಗಿ ಬಿಡಾರ ಮಾಡಿದ್ದಾರೆ ಇದೇ ೭ ನೇ ತಾ॥ ಗುರುವಾರ ಸಂಜೆ ೭ ರಿಂದ ೯ ರವರೆಗೆ ಚಾಮುಂಡೇಶ್ವರಿ ಭವನದಲ್ಲಿ ವಿಶೇಷ ಭಜನಾ ಕೂಟವು ನಡೆಯುವುದು ಸ್ವಾಮಿ ಚಿನ್ಮಯಾನಂದ, ಸಂಗೀತರತ್ನ ಶ್ರೀಮತಿ ಸಿ ವಿ ಸಂಪೂರ್ಣಂ ಮತ್ತು ಶ್ರೀಮತಿ ಸರಸ್ವತಿ ಗಾಂಧೀರವರುಗಳಿಂದ ಭಜನೆಯೂ ನಡೆಯುವುದು ಇದೂ ಅಲ್ಲದೆ ಪ್ರತಿ ದಿನ ಸಂಜೆ ೭ ರಿಂದ ಒಂದು ಗಂಟೆ ಕಾಲ ಭಜನೆ ನಡೆಯುವುದು ಸಾರ್ವಜನಿಕರು ಪ್ರತಿ ದಿನ ಬೆಳಿಗ್ಗೆ ೯ ರಿಂದ ೧೧ ಮತ್ತು ಸಂಜೆ ೪ ರಿಂದ ೬ ಗಂಟೆವರೆಗೆ ಸ್ವಾಮೀಜಿಯವರ ದರ್ಶನ ಪಡೆಯಬಹುದು ಅವರು ೯ ನೇ ತಾ॥ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು

ಭಾರತಕ್ಕೆ ಮೈಸೂರಿನ ಇಂಜನಿಯರುಗಳು

ಬೆಂಗಳೂರು ೫

ಭಾರತ ಸರ್ಕಾರದ ವರ್ಕ್ಸ್ ಮತ್ತು ಮೈನಿಂಗ್ ಸಚಿವರಾದ ಶ್ರೀ ಎನ್ ವಿ ಗಾಡ್ಗೀಳ್‌ರವರನ್ನು ಮೈಸೂರು ಇಂಜನಿಯರ್ ಸಂಘದವರು ನಿನ್ನೆ ಸತ್ಕರಿಸಿದರು ಮೈಸೂರಿನ ಇಂಜನಿಯರುಗಳ ವಿಶೇಷ ಪ್ರತಿಭಾವಂತರಿಂದೂ ಕೆಲವರನ್ನು ಭಾರತಕ್ಕೆ ಕರೆದೊಯ್ಯಬೇಕೆಂದಿರುವುದಾಗಿಯೂ ಸಚಿವರು ತಮ್ಮ ಭಾಷಣದಲ್ಲಿ ತಿಳಿಸಿದರು.

ವೇಶ್ಯಾ ಗೃಹಗಳ ಮೇಲೆ ಧಾಳಿ

ರಾಜಾನ್ ಹಬ್ಬದ ಕಾಲದಲ್ಲಿ ವೇಶ್ಯಾಗೃಹಗಳನ್ನು ಮುಚ್ಚಬೇಕೆಂದು ಕೈಪಿಟ್ಟದ ಸೂರಾಬಾ' ಗಂಜ ನಲ್ಲ ಜನರ ಗುಂಪು ಪ್ರದರ್ಶನ ನಡೆಸಿ, ವೇಶ್ಯಾ ಗೃಹ ಗಳ ಮೇಲೆ ಧಾಳಿ ನಡೆಸಿ ಅನೇಕ ಹೆಂಗಸರನ್ನು ಗಾಯಪಡಿಸಿದರೆಂದೂ, ಹಲವು ಮನೆಗಳನ್ನು ಸರಸ್ಕೈ ಪೋಲೀಸರು ಕಾಯುತ್ತಿದ್ದಾರೆಂದೂ ವರದಿಯಾಗಿದೆ

ಮೇಜರ್ ವೈ. ವಿ. ಕೆ. ಮೂರ್ತಿಯವರ ನಿಧನ

ಸ್ವಂ ಸು ಫೋ] ಬೆಂಗಳೂರು ೫

ಮೈಸೂರು ಚೀಫ್ ಸ್ಕೌಟ್ ಕಮೀಷನರಾದ ಮೇಜರ್ ವೈ ವಿ ಕೆ ಮೂರ್ತಿಯವರು ನಿನ್ನೆ ರಾತ್ರಿ ತಮ್ಮ ೬೨ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಅವರು ಸಂಸ್ಥಾನದ ಸ್ಕೌಟ್ ಚಳವಳಿಗೆ ವಿಶೇಷ ಸೇವೆ ಸಲ್ಲಿಸಿದ್ದರು ಅವರ ಗೌರವಾರ್ಥವಾಗಿ ಕೇಂದ್ರ ಸ್ಕೌಟ್ ಕಛೇರಿ ಮತ್ತು ವಿಜಯಾ ಕಾಲೇಜುಗಳು ಮುಚ್ಚಲ್ಪಟ್ಟಿದ್ದವು

ಸತ್ಯಾಗ್ರಹಿಗಳ ಪಟ್ಟಿ

ಮೈಸೂರು ಕಾಂಗ್ರೆಸ್ ಸತ್ಯಾಗ್ರಹಿಗಳ ಪಟ್ಟಿಯನ್ನು ತಯಾರಿಸಬೇಕೆಂದು ಎ ಎಂ ಸಿ ಸಿ ಸಭೆಯು ನಿರ್ಧರಿಸಿರುವುದರಿಂದ, ಅವರ ಹೆಸರುಗಳು ಮತ್ತು ಸ್ಥಿತಿಗತಿಗಳ ಪೂರ್ಣ ವಿವರಗಳನ್ನು ಇದೇ ೧೫ ನೇ ತಾ॥ ನೊಳಗಾಗಿ ಕಳುಹಿಸಿಕೊಡಬೇಕೆಂದು ಅದರ ಉಪಸಮಿತಿಯವರು ಕೋರಿರುತ್ತಾರೆ ಸತ್ಯಾಗ್ರಹಿಗಳ ಸೂಕ್ಷ್ಮ ಜೀವನ ಪರಿಚಯವನ್ನೊಳಗೊಂಡ ಒಂದು ಸ್ಮಾರಕ ಗ್ರಂಥವನ್ನು ತಯಾರಿಸಬೇಕೆಂದಿರುವುದರಿಂದ ತಾಲ್ಲೂಕು ಸತ್ಯಾಗ್ರಹಿಗಳ ಸಾಮೂಹಿಕ ಭಾವಚಿತ್ರವನ್ನೂ ಕಳುಹಿಸಬೇಕು ಮತ್ತು ಈ ಕೆಲಸಕ್ಕೆ ೫ ಸಾವಿರ ರೂ ಖರ್ಚಾಗುವುದರಿಂದ ತಾಲ್ಲೂಕು ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಧನ ಸಹಾಯ ಮಾಡಬೇಕೆಂದೂ ಸಮಿತಿಯವರು ಪ್ರಾರ್ಥಿಸಿರುತ್ತಾರೆ

ಶ್ರೀ ಅರವಿಂದ ಘೋಷರಿಗೆ ನೋಬಲ್ ಬಹುಮಾನ

ಪ್ರದುಚೇರಿಯಲ್ಲಿರುವ ಯೋಗಿ ಅರವಿಂದ ಘೋಷರಿಗೆ ಸಾಹಿತ್ಯದ ಪ್ರೈಜಿಗಾಗಿ ನೋಬೆಲ್ ಪಾರಿತೋಷಕವನ್ನು ಕೊಡಬೇಕೆಂದು ಚೀಣದ ಪ್ರೊಫೆಸರ್ ಹಾರ್ಟ್‌ಯ... ಸೇರಿದವರು ಸೂಚನೆ ಇತ್ತಿದ್ದಾರೆ

ವಿವಾಹ ಮಹೋತ್ಸವ

ಮೈಸೂರು ಕೈಸ್ತಿಯ ಸ್ಕೂಲ್ ಮಾಸ್ಟರ್ ಶ್ರೀ ಸಿ ಎಸ್ ವೆಂಕಟಸ್ವಾಮಿ ಅಯ್ಯಂಗಾರ್‌ರವರು ತಮ್ಮ ಪುತ್ರಿ ಚಿ। ಸೌ॥ ಸೀತಮ್ಮನವರನ್ನು ಶ್ರೀ ಟಿ ಕೆ ವೆಂಕಟರಮಣ ಅಯ್ಯಂಗಾರ್‌ರವರ ಪುತ್ರ ಶ್ರೀ ಕೆ ವಿ ಗೋಪಿನಾಥರವರಿಗೆ ಕೊಟ್ಟು ವಿವಾಹವನ್ನು ನಿನ್ನೆ ವಿಜೃಂಭಣೆಯಲ್ಲಿ ನೆರವೇರಿಸಿದರು.

ಗೋಪಾಲ ರಾವ್ ಸಾಲಗಾರರಿಗೆ ರೂ. ಗೆ ೪ ಆಣೆ ಡಿವಿಡೆಂಡ್

—.o.—

ಸ್ವಂ ಸು ಫೋ] ಬೆಂಗಳೂರು ೫

ಗೋಪಾಲರಾಯರ ಸಮಿತಿಯು ಈ ದಿನ ಸೇರಿ, ಸಮಿತಿಯವರಿಂದ ಅಂಗೀಕರಿಸಲ್ಪಟ್ಟ ಸಾಲಗಾರರಿಗೆ ರೂ ನಲ್ಲಿ ೪ ಆಣೆಯಂತೆ ಪ್ರಥಮ ಡಿವಿಡೆಂಡನ್ನು ಕೊಡಬೇಕೆಂದು ತೀರ್ಮಾನಿಸಿದೆ

ಪ್ರಿವಿ ಕೌನ್ಸಿಲಿಗೆ ಆಪ್ಟೆ, ಮದನಲಾಲರ ಅಪೀಲು

—.o:—

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣದಂಡನೆಗೆ ಗುರಿಯಾಗಿರುವ ನಾರಾಯಣ ಆಪ್ಟೆ ಮತ್ತು ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮದನಲಾಲ್‌ರವರುಗಳು ಪ್ರಿವಿ ಕೌನ್ಸಿಲಿಗೆ ಅಪೀಲು ಹೋಗಲು ಪೂರ್ವ ಪಂಜಾಬ್ ಹೈಕೋರ್ಟಿಗೆ ಅರ್ಜಿ ಸಲ್ಲಿಸಬೇಕೆಂದು ತಮ್ಮ ವಕೀಲರಿಗೆ ತಿಳಿಸಿದ್ದಾರೆಂದು ಗೊತ್ತಾಗಿದೆ

ಮೀನು ಸಂಶೋಧನಾ ಕೇಂದ್ರಗಳು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಫೋ] ಬೆಂಗಳೂರು ೫

ಶಾಸನ ಸಭೆಯಲ್ಲಿ ಈ ದಿನ ಸಚಿವ ಶ್ರೀ ಹೆಚ್ ಸಿದ್ದಯ್ಯನವರು ಶ್ರೀ ಥಿಯೋಬಾಲ್ಡ್‌ರವರ ಪ್ರಶ್ನೆಗೆ ಉತ್ತರವಿತ್ತು, ಮೀನುಗಳ ಇಲಾಖೆಯನ್ನು ೧೯೩೯ ರಲ್ಲಿ ಸ್ಥಾಪಿಸಲಾಯಿತೆಂದು, ತಿಳಿಸಿದರು ೧೯೪೫ ರಲ್ಲಿ ಮೀನುಗಳ ಅಭಿವೃದ್ಧಿಯೋಜನೆಯನ್ನು ಕೈಗೊಂಡು, ಕೃಷ್ಣರಾಜಸಾಗರ, ಶಿವಮೊಗ್ಗ ಮತ್ತು ಕೋಲಾರಗಳಲ್ಲಿ ಕೇಂದ್ರಗಳನ್ನು ತೆರೆಯಲಾಯಿತು ೫೩೦ ಕೆರೆಗಳಲ್ಲಿ ಮೀನುಗಳನ್ನು ಆಧುನಿಕ ರೀತಿಯಲ್ಲಿ ಹಿಡಿದು ಅವುಗಳ ಮಾರಾಟದ ವ್ಯವಸ್ಥೆಯನ್ನು ಮಾಡಲಾಯಿತು ನ್ಯೂಜೀಲೆಂಡ್ ಮತ್ತು ಇತರ ಕಡೆಗಳಿಂದ ಮೀನುಗಳನ್ನು ತರಿಸಿ, ಇಲ್ಲಿನ ಮೀನುಗಳನ್ನು ಉತ್ತಮಪಡಿಸಲಾಗುತ್ತಿದೆ ೪೭–೪೮ ರಲ್ಲಿ ೪೦,೫೭೭ ರೂ ವರಮಾನಬಂದಿತು ಮಾಕೋನಹಳ್ಳಿ ಮತ್ತು ಮಾರ್ಕಂಡೇಯ ಜಲಾಶಯಗಳಲ್ಲಿ ಮೀನುಗಳ ಸಂಶೋಧನಾಕೇಂದ್ರಗಳನ್ನು ತೆರೆಯಲಾಗಿದೆ ರಾಮನಾಥಪುರ ಮತ್ತು ಶ್ರೀರಂಗಪಟ್ಟಣಗಳಲ್ಲಿ ಸಧ್ಯದಲ್ಲಿಯೇ ನೂತನ ಕೇಂದ್ರಗಳನ್ನು ಸ್ಥಾಪಿಸಲಾಗುವುದು –ಎಂದು ಹೇಳಿದರು

ಸರ್ಕಾರದ ರಿಕ್ರೂಟ್‌ಮೆಂಟ್ ನಿಯಮಗಳ ಮೇಲೆ ಅಮಲ್ದಾರರುಗಳನ್ನು ನೇಮಿಸಲಾಗುತ್ತಿದೆಯೆಂದೂ, ಹಿಂದುಳಿದ ವರ್ಗದವರಿಗೆ ಉತ್ತೇಜನ ಕೊಡಲು ಕೋಮುವಾರು ತತ್ವದ ಮೇಲೂ ಅವರನ್ನು ನೇಮಕಮಾಡಲಾಗುತ್ತಿದೆಯೆಂದೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಶ್ರೀ ಕೆ ರಂಗಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ನಿಮ್ನ ತರಗತಿ ವಿದ್ಯಾರ್ಥಿಗಳಿಗಾಗಿ ವಿದ್ಯಾ ನಿಲಯವನ್ನು ತೆರೆಯುವನ್ನು ಸ್ಥಾಪಿಸಬೇಕೆಂದು ಶ್ರೀ ಎಂ ಮಾದಯ್ಯನವರು ನಿರ್ಣಯವನ್ನು ಮಂಡಿಸಿದರು ಅದರ ಮೇಲೆ ಚರ್ಚೆ ನಡೆಯುತ್ತಿದೆ

ಕಮ್ಯೂನಿಸ್ಟರಿಗೆ ಸತಿ ಸುನ್ಯಾತ್ ಸೇನರ ಸ್ವಾಗತ

ಚೀಣದ ಕಮ್ಯೂನಿಸ್ಟರ ವಿಜಯವನ್ನು ಸ್ವಾಗತಿಸಿ, ಅಲ್ಲಿನ ರಿಪಬ್ಲಿಕ್ಕಿನ ಸ್ಥಾಪಕ ಡಾ. ಸನ್‌ಯಾತ್‌ಸೇನರವರ ಪತ್ನಿಯವರು ಒಂದು ಹೇಳಿಕೆಯನ್ನಿತ್ತಿರುತ್ತಾರೆ. ಚೀಣದ ಜನತೆಯು ಜೀವನದ ಇತಿಹಾಸದಲ್ಲಿ ಒಂದು ಅತ್ಯದ್ಭುತ ಕಾಲವಿದು. ಜನತೆಯ ಸಂಪೂರ್ಣ ವಿಜಯ ಈಗಾಗಲೇ ಗೋಚರವಾಗುತ್ತಿದೆ. ಜಗತ್ತಿಗೇ ಇದೊಂದು ನೂತನ ಜ್ಯೋತಿ. ಇದರಿಂದ ಪ್ರಪಂಚದ ಎಲ್ಲ ಭಾಗಗಳಿಗೂ ಜನತಾ ವಿಜಯದ ಮಹಾ ಪ್ರವಾಹ ಹರಿಯುವುದು, ಎಂದು ಅವರು ಹೇಳಿರುತ್ತಾರೆ.

ಶ್ರೀ ಸದ್ಗುರು ಸೇವಾ ಮಂಡಲಿ

ಶ್ರೀ ಸದ್ಗುರುಗಳವರ ದೇವಾಲಯದಲ್ಲಿ ವಸಂತ ಸಾಹಿತ್ಯೋತ್ಸವದ ಅಂಗವಾಗಿ ಗಮಕಕಲಾ ಕೋವಿದ ಬ್ರ॥ ಶ್ರೀ॥ ನಿರ್ಲೆ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಕಳೆದ ಮೂರು ತಿಂಗಳಿಂದ ಪ್ರತಿ ದಿನ ಸಂಜೆ ಶ್ರೀ ರಾಮಾಯಣ ಪುರಾಣವನ್ನು ನಡೆಸುತ್ತಿದ್ದು, ಅದರ ಮಂಗಳವು ಇದೇ ಶುದ್ಧ ತ್ರಯೋದಶಿ ಶುಕ್ರವಾರ (೮-೭-೪೯) ನಡೆಯುವುದರಿಂದ ಮಹಾಜನಗಳೆಲ್ಲರೂ ಉದಾರವಾಗಿ ದ್ರವ್ಯ ಸಹಾಯ ಮಾಡಿ ಉತ್ಸವದಲ್ಲಿ ಭಾಗವಹಿಸಿ ಶ್ರೇಯೋಭಾಗಿಗಳಾಗಬೇಕಾಗಿ ಕೋರಿದೆ.

D BANUMIAH'S COLLEGE OF COMMERCE
MYSORE

NOTIFICATION

Dated 4th July 1949

Classes have commenced working. Admissions are received up to 9th July 1949. Intending Students are directed to apply to the Principal immediately.

B. V. Banumiah,
Principal

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ:-೧ ಸೆಟ್ ರೂ ೩-೪-೦ ಪ್ಯಾಕಿಂಗ್ ಮತ್ತು ಟಿ.ಪಿ ೧೨ ಆಣೆ

ತಯಾರಿಸುವವರು,

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಬೌಲೀಸ್ ಸ್ಕ್ವೇರ್ ಎದುರು, ದೊಡ್ಡಿನ ಕೊಳದ ಬೀದಿ ೧೫೩ನೇ ನಂಬರ್ ಮನೆಯಲ್ಲಿ ೪-೭-೪೯ರ ಆಗಾಯ್ತು ೮-೭-೪೯ರ ವರಿಗೆ ಕ್ಯಾಂಪ್ ಮಾಡುತ್ತಾರೆ. ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

Edited, printed and published by A R Nagarajan, at Sadhvi Press D Subbiah Road, Mysore

ಕಾಳ ಸಂತೆಗಾಗಿ ಕೋಟ್ಯಾಧೀಶರ ದಸ್ತಗಿರಿ

ಕಾನ್ಪುರದ ಇಬ್ಬರು ಕೋಟ್ಯಾಧೀಶರನ್ನು ಪೊಲೀಸರು ಕಾಳಸಂತೆಯಲ್ಲಿ ಬಟ್ಟೆ ಮಾರುತ್ತಿದ್ದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ಹೂಡಿರುತ್ತಾರೆ.

ಜಾತ್ರೆ ಕಾಲದಲ್ಲಿ ಚಲಿಸುವ ಕೋರ್ಟು

ಪೂರಿಯಲ್ಲಿ ಮೊನ್ನೆ ದಿನ ನಡೆದ ಮಹಾ ರಥ ಜಾತ್ರೆಯ ಸಂಬಂಧದಲ್ಲಿ ಅಸಂಖ್ಯ ಜನ ಸಂದಣಿ ಸೇರಿತ್ತೆಂದೂ, ಹೋಟಲುಗಳು ಶುಚಿಯಾದ ಆಹಾರವನ್ನು ಕೊಡಲಿಲ್ಲವೆಂದು ಅಲ್ಲಿ ಏರ್ಪಡಿಸಿದ್ದ ಸಂಚರಿಸುವ ಕೋರ್ಟಿನವರು ೫ರಿಂದ ೫೦೦ ರೂ ವರೆಗೆ ದಂಡವನ್ನು ವಿಧಿಸಿದರೆಂದೂ, ಒಂದೇ ರಾತ್ರಿ ೧೫೦೦ ರೂ ಜುಲ್ಮಾನೆ ವಸೂಲಾಯಿತೆಂದೂ ಹೇಳಲಾಗಿದೆ.

ಬಲ್ಗೇರಿಯಾ ಪ್ರಧಾನಿಗಳ ನಿಧನ

ಪ್ರಮುಖ ಕಮ್ಯೂನಿಸ್ಟ್ ನಾಯಕರೂ ಮತ್ತು ಬಲ್ಗೇರಿಯಾ ಪ್ರಧಾನಿಗಳೂ ಆದ ಎಂ. ಜಾರ್ಜಿಡಿಮಿಟ್ರೋವ್‌ರವರು ತನ್ನ ೬೭ನೇ ವಯಸ್ಸಿನಲ್ಲಿ ಮಾಸ್ಕೋವಿನಲ್ಲಿ ಮೊನ್ನೆ ದಿನ ನಿಧನರಾದರು

ಸಿಟಿ ಟ್ಯುಟೋರಿಯಲ್ ಕಾಲೇಜ್
1531, ನಾರಾಯಣವಿಲಾಸ ರಸ್ತೆ, ಮೈಸೂರು

M.S. ಪರೀಕ್ಷೆಯಲ್ಲಿ ಪಾಸಾಗಿರುವ ವಿದ್ಯಾರ್ಥಿನಿಯರನ್ನು ಎರಡೇ ವರ್ಷಗಳಲ್ಲಿ S.S.L.C. ಪರೀಕ್ಷೆಗೆ (ಇಂಗ್ಲಿಷ್ ಮೀಡಿಯಂ) ತರಪೇತುಮಾಡುವ ಮತ್ತು M. S ಪರೀಕ್ಷೆಗೆ ಉತ್ತಮ ರೀತಿಯ ಶಿಕ್ಷಣ ಕೊಡುವ

ತರಗತಿಗಳು ಅನುಭವಸ್ಥ ಉಪಾಧ್ಯಾಯರುಗಳಿಂದ ನಡೆಸಲ್ಪಡುತ್ತವೆ,

ವಿವರಗಳಿಗೆ ವಿಚಾರಿಸಿ

ಗಡಿನಾಡಿನ ಮಂತ್ರಿ ಮಂಡಲ ರದ್ದಾಗಬೇಕು

ಗಡಿನಾಡಿನಲ್ಲಿ ಸಾರ್ವಜನಿಕ ರಕ್ಷಣಾ ಕಾನೂನಿನ ನೆಪದಿಂದ ಸಾರ್ವಜನಿಕಾಭಿಪ್ರಾಯವನ್ನು ಮಟ್ಟ ಹಾಕಿ ಸರ್ಕಾರದವರು ದಬ್ಬಾಳಿಕೆ ನಡೆಸುತ್ತಿರುವರೆಂದೂ, ಆ ಮಂತ್ರಿ ಮಂಡಲವನ್ನು ಕೂಡಲೇ ರದ್ದು ಮಾಡಬೇಕೆಂದೂ ಬಂಗಾಳದ ಮಾಜಿ ಪ್ರಧಾನಿ ಹೆಚ್ ಎಸ್ ಸುಹ್ರಾವರ್ದಿಯವರು ತಿಳಿಸಿರುತ್ತಾರೆ

ಹೋಟಲಿನಲ್ಲಿ ಇಡ್ಲಿ, ದೋಸೆ ಸಿಗುತ್ತಿವೆ

ಹೋಟಲುಗಳಲ್ಲಿ ಇಡ್ಲಿ ದೋಸೆ ಮುಂತಾದ ಪದಾರ್ಥಗಳನ್ನು ಮಾಡಕೂಡದೆಂದು ಆಜ್ಞೆ ಮಾಡಿದ್ದರೂ ಹುಣಸೂರು ಬಸ್ ನಿಲ್ದಾಣದ ಹೋಟಲಿನಲ್ಲಿ ಇಡ್ಲಿ, ದೋಸೆಗಳನ್ನು ತಯಾರಿಸಲಾಗುತ್ತಿದೆ. ಆಹಾರದ ಇಲಾಖೆಯವರು ಇದನ್ನು ಗಮನಿಸದಿರುವುದು ತುಂಬಾ ಶೋಚನೀಯ-ಎಂದು ಪ್ರಯಾಣಿಕರೊಬ್ಬರು ಬರೆದಿರುತ್ತಾರೆ.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಅತ್ಯಾಧುನಿಕ ರೀತಿಯ ಕಿಂಡರ್‌ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಮಾತಾಪಿತೃಗಳು ತ್ವರೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡುವರೆಂದು ಆಶಿಸಲಾಗಿದೆ.

ಬಿ. ಕೃಷ್ಣಮೂರ್ತಿ
ವ್ಯವಸ್ಥಾಪಕ.

ಡಾ॥ ಪರಾಂಜಪೆಯ ಬಂಧ

ಗಾಂಧೀಜಿ ಕೊಲೆ ಮೊಕದ್ದಮೆಯಲ್ಲಿ ಬಿಡುಗಡೆಯಾದ ಡಾ॥ ಪರಾಂಜಪೆಯನ್ನು ಅನಿರ್ದಿಷ್ಟ ಕಾಲದವರೆಗೆ ಬಂಧನದಲ್ಲಿಟ್ಟಿರಬೇಕೆಂದು ಪೂರ್ವ ಪಂಜಾಬ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಅವರನ್ನು ಗ್ವಾಲಿಯರ್ ಜೈಲಿಗೆ ಕರೆದೊಯ್ಯಲಾಯಿತು.

ಮನೆಗಳು ಬೆಲೆಗೆ

ಲಕ್ಷ್ಮೀಪುರಂನಲ್ಲಿ ೧೫೦, ×೩೬' (ಸುಮಾರು) ಜಾಗದಲ್ಲಿ ನಲ್ಲಿ, ದೀಪ, ಫ್ಲಷ್ ಕಾಂಪೌಂಡು ಇರುವ ಮನೆ.

ರೂ 12,000

ಚಾಮರಾಜಪುರಂನಲ್ಲಿ, ಕೋಆಪರೇಟಿವ್ ಸ್ಟೋರ್ಸ್ ಪಕ್ಕ, ಕೋರ್ಟ್ ರಸ್ತೆಯಲ್ಲಿ ಒಳ್ಳೆಯ ಮನೆ

ರೂ. 14,500

ಚಾಮುಂಡಿಪುರಂನಲ್ಲಿ, ಮೈಸ್ರಾಯ್ ಸ್ಟ್ರೀಯಲ್ಲಿ ಸರ್ಕಾರದಿಂದ ಒಳ್ಳೆಯ ಬಾಡಿಗೆ ಬರುವ ಸುಮಾರು ೧೫೦'×೮೦' ಜಾಗದಲ್ಲಿ ಭಾರಿ ಮಹಡಿ ಮನೆ.

ರೂ 19,500

ಭೋಗ್ಯಕ್ಕೆ

ರಮಾವಿಲಾಸ ಅಗ್ರಹಾರದಲ್ಲಿ ೩೦×೫೦' ಜಾಗದಲ್ಲಿ ೨೦ ರೂಂ ಮತ್ತು ಮ ಇರುವ ಕಟ್ಟಡ. (ಬಾಡಿಗೆ ಕರಾರು ಬರೆದುಕೊಡಲಾಗುತ್ತೆ)

ರೂ 7,500

ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ೧೦ ರೂ ಸರ್ಕಾರಿ ಬಾಡಿಗೆ ಬರುವ ಒಳ್ಳೆಯ ಅಚ್ಚುಕಟ್ಟಾದ ಬಂಗ್ಲೆ,

ರೂ 15 000

ವಿ ಸೂ:- ಈ ಎರಡಕ್ಕೂ ಶೇಕಡ ೭ ಬಡ್ಡಿ ಕೊಡಲಾಗುತ್ತೆ

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ರೋಡ್, ಮೈಸೂರು

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸು

ತಾ॥ ೨-೭ ೧೯೪೯

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:-

ದೇವರಾಜ ಮೊಹಲ್ಲಾ ಒಂಟಿಕೊಪ್ಪಲಿನಲ್ಲಿ ಮತ್ತು ನಜರ್ ಬಾದಿನಲ್ಲಿ ಹೊಸದಾಗಿ ಮುನಿಸಿಪಾಲಿಟಿಯವರು ಕಟ್ಟಿಸಿರುವ ಅಂಗಡಿ ಮಳಿಗೆಗಳನ್ನು ಬಾಡಿಗೆ ಪಡೆಯುವ ಹಕ್ಕನ್ನು ಈ ಕೆಳಗೆ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾಗಿ ಸದರಿ ಅಂಗಡಿ ಹರಾಜು ಮಾಡಲಾಗುತ್ತೆ. ಬಾಬನ್ನು ಪಡೆಯಲು ಇಷ್ಟವುಳ್ಳವರು ಹರಾಜು ಕಾಲಕ್ಕೆ ಹಾಜರಾಗಬಹುದು. ಸವಾಲ್‌ನಾಮೆ ಬಾಬನ್ನು ಪಡೆಯಬಹುದು. ಹೆಚ್ಚಿಗೆ ವಿಚಾರಗಳನ್ನು ಆಫೀಸು ನಡೆಯುವ ಕಾಲದಲ್ಲಿ ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದಾಗಿರುತ್ತೆ

ಸ್ಥಳ	ಹರಾಜು ತಾ॥	ಕಾಲ
ಒಂಟಿಕೊಪ್ಪಲ್	೧೪-೭-೪೯	೧೨ ಘಂ
ನಜರ್ ಬಾದ್	೧೮-೭-೪೯	೧೨ ,,

(ರುಜು) ಟಿ. ರಾಮರಾವ್,
ಮುನಿಸಿಪಲ್ ಕಮೀಷನರಿಗಾಗಿ

RAJKAMAL, MYSORE

Now Running to Packed Houses

DAILY 3 SHOWS

William Shakespeare's

HAMLET

With -Laurence Olivier, Jean Simmons etc.,

ಪ್ರಭುದೇವಾ ಟಾಕೀಸ್

4-7-49 ನೇ ಸೋಮವಾರದಿಂದ ಅಪೋಘ ಪ್ರಾರಂಭ

ಜೆಮಿನಿಯವರ

ಬಾಲನಾಗಮ್ಮ

(ತೆಲುಗು)

ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಪ್ರತಿ ದಿನ ೩ ಆಟಗಳು

ಮ್ಯಾಟಿನಿ 2-30ಕ್ಕೆ, 1ನೇ ಆಟ 6-30ಕ್ಕೆ, 2ನೇ ಆಟ 10 ಘಂಟೆಗ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೬-೭-೪೯ [ಸಂಚಿಕೆ ೨೬೬

ಚಿಯಾಂಗ್ ಕೈಷೇಕರೇ ಪುನಃನಾಯಕರಾದರು

೧೦೦ ವರ್ಷ ಯುದ್ಧ ಮಾಡಲು ಪಾಕೀಸ್ತಾನ ಸಿದ್ಧ

ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಲು ನಾವು ನ್ಯಾಯವಾದ ರೀತಿಯಲ್ಲಿ ಜನಾಭಿಪ್ರಾಯಕ್ಕೆ ಒಪ್ಪುವುದಾದರೂ, ಕಾಶ್ಮೀರದ ಜನರ ಸ್ವಾತಂತ್ರ್ಯಕ್ಕಾಗಿ ಪಾಕೀಸ್ತಾನವು ೧೦೦ ವರ್ಷಗಳವರೆಗೆ ಯುದ್ಧ ಮಾಡಲು ಸಿದ್ಧವಾಗಿದೆ-ಎಂದು ಅದರ ಪ್ರಧಾನಿ ಲಿಯಾಖತ್‌ಅಲಿಯವರು ಭಾರತಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ. ಕಾಶ್ಮೀರದಸಮಸ್ಯೆಗೆಜನಾಭಿಪ್ರಾಯಅಥವ ಯುದ್ಧವೇ ಹೊರತು ಇನ್ನಾವ ಮಾರ್ಗವೂ ಇಲ್ಲವೆಂದು ಅವರು ಹೇಳಿರುತ್ತಾರೆ. ಹಿಂದೂಗಳ ಅಧೀನದಲ್ಲಿ ಕಾಶ್ಮೀರದ ಮುಸ್ಲಿಮರನ್ನು ಬಿಡಲು ಪಾಕೀಸ್ತಾನವು ಎಂದಿಗೂ ಒಪ್ಪುವುದಿಲ್ಲವೆಂದು ತಿಳಿಸಿರುತ್ತಾರೆ.

ಬ್ರಿಟನ್ನಿನಲ್ಲಿ ನೀರಿಗಾಗಿ ಪ್ರಾರ್ಥನೆ

ಬ್ರಿಟನ್ನಿನಲ್ಲಿ ಮಳೆ ಇಲ್ಲದೆ ಜನರು ಕಳವಳಕ್ಕೀಡಾಗಿದ್ದಾರೆ. ಅಲ್ಲಿನ ಜನರು ಚರ್ಚುಗಳಿಗೆ ಹೋಗಿ ಮಳೆಗಾಗಿ ಭಗವಂತನನ್ನು ಪ್ರಾರ್ಥಿಸುತ್ತಿದ್ದಾರೆ. ಅನೇಕ ಜಲಾಶಯಗಳು ಬತ್ತಿ ಹೋಗುತ್ತಿವೆ ಹುಲ್ಲುಗಾವಲುಗಳು ಒಣಗಿ ಹಾಲಿಗೆ ವಿಶೇಷ ತೊಂದರೆಯಾಗಿದೆ.

ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯದ ತಿರಸ್ಕಾರ

[ಸ್ವಂ. ಸು. ಫೋ.] ಬೆಂಗಳೂರು ೬

ಸರ್ಕಾರದವರು ಶಸ್ತ್ರಗಳ ತಿದ್ದುಪಡಿ ಮಸೂದೆ ಟೀ ಮತ್ತು ರಬ್ಬರ್ ಹತೋಟಿ ಮಸೂದೆ ಮುಂತಾದ ಒಟ್ಟು ೫ ಮಸೂದೆಗಳನ್ನು ಪ್ರ॥ ಪ್ರ॥ ಸಭೆಯ ಮುಂದ ಮಂಡಿಸಿ, ಈ ಸಭೆಯ ಮುಂದೆ ಅವುಗಳನ್ನು ತರದ ವಾಪಸು ತೆಗೆದುಕೊಂಡಿರುವುದರ ಬಗ್ಗೆ ಈ ದಿನ ಶಾಸನ ಸಭೆಯಲ್ಲಿ ಶ್ರೀ ಒ. ವೀರಬಸಪ್ಪನವರು ಒಂದು ನಿಲುವಳಿ ನಿರ್ಣಯವನ್ನು ತಂದರು. ಇದರಿಂದ ಸಭೆಯ ಹಕ್ಕುಬಾಧ್ಯತೆಗಳಿಗೆ ಚ್ಯುತಿಯುಂಟಾಗಿದೆಯೆಂದೂ, ಯಾವ ಕಾರಣಗಳನ್ನೂ ಕೊಡದೆ ಸರ್ಕಾರದವರು ಅವುಗಳನ್ನು ವಾಪಸು ತೆಗೆದುಕೊಂಡಿರುವುದು ಸರಿಯಾದ ಮಾರ್ಗವಲ್ಲವೆಂದೂ ಸೂಚಕರು ತಿಳಿಸಿದರು.

ಅಧ್ಯಕ್ಷರು ನಿರ್ಣಯವನ್ನು ತಳ್ಳಿಹಾಕಿ ಸರ್ಕಾರದವರಿಗೆ ಈ ಬಗ್ಗೆ ಅಧಿಕಾರವಿದೆ ಯೆಂದು ಹೇಳಿದರು

ಆನಂದಾಶ್ರಮಕ್ಕೆ ಸಹಾಯ ನೀಡಿ

ಮೈಸೂರು. ೬

ಮಂಗಳೂರಿನ ಹತ್ತಿರ ಕಣ್ಣಂಗಾಡಿಗೆ ೨॥ ಮೈಲಿ ದೂರದಲ್ಲಿರುವ ಆನಂದಾಶ್ರಮದ ಸ್ವಾಮಿ ರಾಮದಾಸರು ರಾಜಧಾನಿಗೆ ಆಗಮಿಸಿದ್ದಾರಷ್ಟೆ. ಮಾನವ ಪ್ರೇಮ ಮತ್ತು ಸೇವೆಗಾಗಿ ಈ ಆಶ್ರಮವು ೧೫ ವರ್ಷಗಳಿಂದ ಸಾರ್ವಜನಿಕರ ಸಹಾಯದ ಮೂಲಕ ನಡೆಯುತ್ತಿದೆ ಅಲ್ಲಿ ಮಕ್ಕಳ ವಿದ್ಯಾಭ್ಯಾಸ ಮತ್ತು ಕೈಗಾರಿಕಾ ಶಿಕ್ಷಣಕ್ಕಾಗಿ ಎರಡು ಶಾಲೆಗಳನ್ನು ತೆರೆಯಲಾಗಿದೆ ಮತ್ತು ಗೋಶಾಲೆ ಮತ್ತು ಆಸ್ಪತ್ರೆಗಳನ್ನೂ ಸ್ಥಾಪಿಸಲಾಗಿದೆ ಈ ಕಾರ್ಯಕ್ಕೆ ರಾಜಧಾನಿ ನಿವಾಸಿಗಳು ಉದಾರವಾಗಿ ಸಹಾಯ ಮಾಡಬೇಕೆಂದು ಸ್ವಾಮಿಯವರು ಕೋರಿರುತ್ತಾರೆ

೧೫ ಕೋಟಿ ರೂ. ನೂತನ ಆಹಾರ ಯೋಜನೆ

ಬೆಂಗಳೂರು ೬.

ಆಹಾರದ ವಿಚಾರದಲ್ಲಿ ಸಂಸ್ಥಾನವು ಸ್ವಪರಿಪೂರ್ಣವಾಗುವ ೧೫ ಕೋಟಿ ರೂ ವಿನ ನೂತನ ಯೋಜನೆಯನ್ನು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ತಯಾರಿಸಿದ್ದಾರೆಂದು ತಿಳಿದುಬಂದಿದೆ. ಮುಂದಿನ ವಾರ ಬೆಂಗಳೂರಿಗೆ ಆಗಮಿಸುವ ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜಯರಾಂದಾಸ್ ದೌಲತ್‌ರಾಂರವರಿಗೆ ಈ ಯೋಜನೆಯನ್ನು ವಿವರಿಸಿ, ಅದನ್ನು ಕಾರ್ಯ ರೂಪಕ್ಕೆ ತರಲು ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೋರಲಾಗುವುದೆಂದೂ ಗೊತ್ತಾಗಿದೆ ಈ ಯೋಜನೆಯಿಂದ ಒಂದು ಲಕ್ಷ ಟನ್ನು ಆಹಾರವನ್ನು ಹೆಚ್ಚಾಗಿಬೆಳೆಯಬಹುದೆಂದ ಹೇಳಲಾಗಿದೆ.

ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರಿಗೆ ಜುಲ್ಮಾನೆ

ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರು ತಮ್ಮ ಮನೆಯೊಂದು ಖಾಲಿಯಾದುದನ್ನು ಹೌಸ್ ಕಂಟ್ರೋಲರಿಗೆ ತಿಳಿಸಲಿಲ್ಲವೆಂಬ ಆಪಾದನೆಯ ಮೇಲೆ ನಗರ ನ್ಯಾಯಾಧೀಶರು ಅವರಿಗೆ ೬೦ ರೂ. ಜುಲ್ಮಾನೆ ವಿಧಿಸಿರುವರು.

ಬರೋಡಾ ರಾಜಮನೆತನದ ವೇತನ

ಬರೋಡಾ ಮಹಾರಾಜರು ಮತ್ತು ಅವರ ಕುಟುಂಬದವರಿಗೆ ಒಟ್ಟು ೨೬,೫೨,೦೦೦ ರೂ. ರಾಜಧನವನ್ನು ಕೊಡುವಂತೆ ನಿರ್ಧರಿಸಲಾಗಿದೆಯೆಂದು ಆ ಸಂಸ್ಥಾನದ ಮುಖ್ಯ ಸಲಹೆಗಾರರಾದ ಡಾ॥ ಜೀವರಾಜ್ ಮೇಹರವರು ತಿಳಿಸಿರುತ್ತಾರೆ

ನೂತನ ಧೂಮಕೇತು

ಆಪ್ರಿಕದ ಜೊಹಾನ್ಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಹೈದರಾಬಾದಿನ ವಿದ್ಯಾರ್ಥಿ ಶ್ರೀ ಪಿ. ಆರ್. ಬಾಪೂರವರೂ ಮತ್ತು ಇತರ ಇಬ್ಬರು ಅಮೆರಿಕದ ವಿಜ್ಞಾನಿಗಳೂ ನೂತನ ಧೂಮಕೇತುವೊಂದನ್ನು ಕಂಡುಹಿಡಿದಿದ್ದಾರೆ ಅದನ್ನು ದೂರದರ್ಶಕ ಯಂತ್ರದಿಂದ ಚೆನ್ನಾಗಿ ಕಾಣಬಹುದೆಂದು ಅವರು ತಿಳಿಸಿದ್ದಾರೆ

ಮಾಜಿ ಪಂಜಾಬ್ ಪ್ರಧಾನಿ ಮೇಲೆ ಆರೋಪಣೆ

ಕಾಶ್ಮೀರ ಮತ್ತು ಜನತಾ ನಿಧಿಗಳಿಂದ ೨॥ ಲಕ್ಷ ರೂ. ಗಳ ದುರುಪಯೋಗ, ಅಧಿಕಾರಯುತ ರಿಕಾರ್ಡುಗಳನ್ನು ಸುಡಲು ಪಿತೂರಿ, ದೇಶ ಬಿಟ್ಟುಹೋದವರ ಆಸ್ತಿಯ ಅಕ್ರಮ ಹಂಚಿಕೆ ಮುಂತಾದ ಆಪಾದನೆಗಳ ಮೇಲೆ ಪಶ್ಚಿಮ ಪಂಜಾಬಿನ ಮಾಜಿ ಪ್ರಧಾನಿ ಮಮ್ದೋತ್ ನವಾಬರ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆ ನಾಳೆ ದಿನ ಅವರು ಪ॥ ಪಂಜಾಬ್ ಹೈ ಕೋರ್ಟಿನ ಎದುರಿನಲ್ಲಿ ಮೇಲ್ಕಂಡ ಆಪಾದನೆಗಳಿಗೆ ತಕ್ಕ ಸಮಜಾಯಿಷಿ ಕೊಡಬೇಕೆಂದು ತಿಳಿಸಲಾಗಿದೆ

ಸೂಚನೆ

ಪ್ರಥಮ ಏಕಾದಶೀ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ.

೨೭ ಜನ ಮುಸ್ಲಿಮರಿಗೆ ಜೀವಾವಧಿ ಶಿಕ್ಷೆ

ಮೊರಾದಾಬಾದಿನ ಸಾಂಭಲ್ಲಿನಲ್ಲಿ ಕಳೆದ ಜೂನ್ ೧೨ ನೇ ತಾ॥ ಹಿಂದೂ ನಿರಾಶ್ರಿತನಿಗೂ ಮತ್ತು ಮುಸ್ಲಿಂ ಸೈಕಲ್ ವ್ಯಾಪಾರಿಗೂ ಮಾತು ಬೆಳೆದು, ಅದರಿಂದ ದೊಂಬಿ ನಡೆದು, ಅಲ್ಲಿನ ಮುಸ್ಲಿಂ ಲೀಗಿನ ಮಾಜಿ ಅಧ್ಯಕ್ಷರಾದ ನವಾಬ್ ಜಿಯಾವುದ್ದೀನ್ ಹುಸೇನರವರೂ ಮತ್ತು ಇತರ ೨೬ ಜನರೂ ಹಿಂದೂಗಳ ಮೇಲೆ ಬಿದ್ದು, ೯ ಜನರನ್ನು ಕೊಂದು, ೨೩ ಜನರಿಗೆ ಗಾಯಪಡಿಸಿ ಅವರ ಆಸ್ತಿಪಾಸ್ತಿಗಳನ್ನು ನಾಶಪಡಿಸಿದರೆಂಬ ಆಪಾದನೆಯ ಮೇಲೆ ಅವರುಗಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ

ದನಗಳಿಗೆ ವಿಷ ಹಾಕುವ ಗುಂಪು

ದೆಹಲಿಯಲ್ಲಿ ಇತ್ತೀಚೆಗೆ ಜಾನುವಾರುಗಳಿಗೆ ವಿಷವನ್ನು ಹಾಕುವ ಜನರ ಗುಂಪೊಂದು ಗೋಚರವಾಗಿದೆ ಒಂದೇ ದಿನದಲ್ಲಿ ೨೩ ಎಮ್ಮೆಗಳು ವಿಷ ಪ್ರಯೋಗದಿಂದ ಸತ್ತಿವೆ ಕಳೆದ ವಾರದಲ್ಲಿ ೩೦ ಹಸುಗಳು ಮರಣವಾಗಿವೆ ಅವುಗಳ ಚರ್ಮವನ್ನು ಹೆಚ್ಚಿನ ಬೆಲೆಗೆ ಮಾರಲು ಈ ರೀತಿ ಮಾಡಲಾಗುತ್ತಿದೆಯೆಂದು ಹೇಳಲಾಗಿದೆ

ಮತ್ತೆ ಚೀಣದಲ್ಲಿ ಚಿಯಾಂಗರ ನಾಯಕತ್ವ

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ಪುನಃ ಚೀಣದ ಕ್ರಾಂತಿಕಾರಕ ನಾಯಕತ್ವವನ್ನು ವಹಿಸಿಕೊಳ್ಳುವುದಾಗಿ ಅವರೇ ತಿಳಿಸಿರುವರೆಂದು ವರದಿಯಾಗಿದೆ

ವನಸ್ಪತಿ ಅನಾರೋಗ್ಯವಲ್ಲ

ಸರ್ ಭಾಟ್ನಗರರ ಅಭಿಪ್ರಾಯ

ಮೈಸೂರು. ೬

ಭಾರತದ ಸರ್ಕಾರದ ಕೈಗಾರಿಕಾ ಸಂಶೋಧನಾ ಡೈರೆಕ್ಟರಾದ ಸರ್ ಎಸ್. ಎಸ್ ಭಾಟ್ನಗರ್‌ರವರು ಈ ದಿನ ಬೆಳಿಗ್ಗೆ ಚಲುವಾಂಬಾ ಭವನದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿ ಇತ್ತರು. ಅದರ ಮುಖ್ಯಾಧಿಕಾರಿಗಳಾದ ಡಾ॥ ವಿ. ಸುಬ್ರಹ್ಮಣ್ಯರವರು ಅವರನ್ನು ಸ್ವಾಗತಿಸಿ, ಕಳೆದ ಮೂರು ತಿಂಗಳಿನಿಂದ ನಡೆದಿರುವ ಕೆಲಸ ಕಾರ್ಯಗಳನ್ನು ವಿವರಿಸಿದರು

ಈ ಸಂಶೋಧನಾ ಕೇಂದ್ರಕ್ಕೆ ಪರದೇಶಗಳಿಂದ ಪ್ರವೀಣರನ್ನು ನೇಮಿಸಲು ತಾವು ಲಂಡನ್ನಿಗೆ ಈ ತಿಂಗಳ ಕೊನೆಯಲ್ಲಿ ಹೋಗುವುದಾಗಿಯೂ, ಪ್ರವೀಣರುಗಳು ನವೆಂಬರ್ ತಿಂಗಳಿನೊಳಗಾಗಿ ಭಾರತಕ್ಕೆ ಬರಬಹುದೆಂದು ಸರ್ ಭಾಟ್ನಗರರು ತಿಳಿಸಿದರು ಇಡೀ ಏಷ್ಯಾ ದೇಶಗಳಿಗೆ ಮೈಸೂರಿನ ಕೇಂದ್ರವನ್ನು ಪ್ರಧಾನ ಸಂಶೋಧನಾಲಯವನ್ನಾಗಿ ಮಾಡಲು ವಿಶ್ವ ಸಂಸ್ಥೆಯಲ್ಲಿಪ್ರಯತ್ನ ನಡೆಯುತ್ತಿದೆಯೆಂದೂ, ಇನ್ನು ೩-೪ ವರ್ಷಗಳಲ್ಲಿ ಇಲ್ಲಿ ೧,೫೦೦ ಜನ ಪ್ರವೀಣರು ಕೆಲಸ ಮಾಡಲು ವ್ಯವಸ್ಥೆ ಮಾಡಲಾಗುವುದೆಂದೂ ತಿಳಿಸಿದರು.

ವನಸ್ಪತಿ ತುಪ್ಪದಿಂದ ದೇಹಕ್ಕೆ ಯಾವ ಬಾಧಕವೂ ಉಂಟಾಗುವುದಿಲ್ಲವೆಂದು ಅವರು ತಿಳಿಸಿದರು. ಈ ಕೇಂದ್ರದಲ್ಲಿ ಇದುವರೆಗೆ ವನಸ್ಪತಿ, ಸೋಯಾ ಬೀಜದಿಂದ ತಯಾರಾದ ಹಾಲು ಮತ್ತು ನೆಲಗಡಲೆಕಾಯಿಯಿಂದ ಆಗುವ ಪುಷ್ಟಿಕರವಾದ ಆಹಾರಗಳ ಬಗ್ಗೆ ನಡೆದಿರುವ ಸಂಶೋಧನೆಯನ್ನು ಡಾ॥ ಸುಬ್ರಹ್ಮಣ್ಯರವರು ವಿವರಿಸಿದರು ಈ ತಿಂಗಳ ಅಂತ್ಯದೊಳಗಾಗಿ ಇಲ್ಲಿ ಕೆಲಸ ಕಾರ್ಯಗಳು ಕ್ರಮವಾಗಿ ಪ್ರಾರಂಭವಾಗುವುವೆಂದೂ ಅವರು ಹೇಳಿದರು

ಅಕ್ಕಿಗೆ ಪಾಲಿಷ್ ಕೊಡುವುದನ್ನು ಕಡ್ಡಾಯವಾಗಿ ತಪ್ಪಿಸಬೇಕೆಂದೂ, ಕುಚಲಕ್ಕಿಯ ಉಪಯೋಗವನ್ನು ಹೆಚ್ಚುವರಿ ಮಾಡಬೇಕೆಂದೂ ಸಹ ಡಾ॥ ಭಾಟ್ನಗರ್‌ರವರು ತಿಳಿಸಿದರು

ಹೋಟೇಲುಗಳಲ್ಲಿ ತಿಂಡಿ ಬೆಲೆ ಹೆಚ್ಚಿದೆ

ಹೋಟೇಲುಗಳ ಮುಷ್ಕರ ಕೊನೆಗೊಂಡು ಮತ್ತೆ ಅವು ಆರಂಭವಾದ ಮೇಲೆ ಅಲ್ಲಿ ತಿಂಡಿಪದಾರ್ಥಗಳ ಬೆಲೆಯನ್ನು ವಿಪರೀತ ಹೆಚ್ಚಿಸಿ, ತಿಂಡಿಕೊಡುವ ಪ್ರಮಾಣವನ್ನು ಕಡಿಮೆ ಮಾಡಿರುವುದಾಗಿಯೂ, ಮತ್ತು ಅನಾರೋಗ್ಯಕರವಾದ ಪದಾರ್ಥಗಳಿಂದ ತಿಂಡಿಗಳನ್ನು ತಯಾರಿಸುತ್ತಿರುವರೆಂದೂ, ಸಾರ್ವಜನಿಕರು ಈ ಬಗ್ಗೆ ಆಹಾರ ಇಲಾಖೆಯವರು ಹೋಟೇಲುಗಳ ಬೆಲೆಗಳನ್ನು ನಿಯಂತ್ರಿಸಬೇಕೆಂದೂ ರಾಜಧಾನಿಯ ಆಹಾರ ಸಮಿತಿಯ ಸದಸ್ಯರಾದ ಶ್ರೀ ಎಂ. ಸಿ. ನರಸಿಂಹಯ್ಯನವರು ಕೋರಿದ್ದಾರೆ

ಮದರಾಸ್ ಮಂತ್ರಿಮಂಡಲದ ಪುನರ್ರಚನೆಗೆ ಒತ್ತಾಯ

ಪೂರ್ವ ಪಂಜಾಬಿನಲ್ಲಿರುವಂತೆ ಮದರಾಸಿನಲ್ಲಿಯೂ ಮಿಶ್ರ ಮಂತ್ರಿಮಂಡಲ ರಚಿಸಬೇಕೆಂದುಕೋರಿ ಅಲ್ಲಿನ ಶಾಸನಸಭೆಯ ಕಾಂಗ್ರೆಸ್ ಪಕ್ಷದ ೪೦ ಜನ ಸದಸ್ಯರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಮನವಿ ಪತ್ರವನ್ನು ಬರೆದಿರುತ್ತಾರೆ ಕಾಂಗ್ರೆಸ್ಸನ್ನು ಬಲಪಡಿಸುವುದಕೋಸ್ಕರ ಜನರ ವಿಶ್ವಾಸವನ್ನು ಕಳೆದುಕೊಂಡಿರುವ ಸಚಿವರನ್ನು ತೆಗೆದುಹಾಕಬೇಕೆಂದು ಅವರು ಪ್ರಾರ್ಥಿಸಿರುತ್ತಾರೆ

ಹರಿಕಥೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಫ್ರೆಂಡ್ಸ್ ಯೂನಿಯನ್ನಿನಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ಹರಿಹರಾನಂದ ಭಾರತಿ ಸ್ವಾಮಿಗಳಿಂದ ಹರಿಕಥೆ ನಡೆಯುವುದು.

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿ ಔಷಧಾಲಯದ ಬಳಿ ಈ ರಾತ್ರಿ ೯ ಗಂಟೆಗೆ ಕೋಣನೂರು ಶ್ರೀ ಸೀತಾರಾಮ ಶಾಸ್ತ್ರಿಗಳಿಂದ ಶ್ರೀ ಕೃಷ್ಣ ಚರಿತ್ರಾಮೃತ ಎಂಬ ಹರಿಕಥೆ ನಡೆಯುವುದು

ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಅನಂತಪ್ಪನವರಮನೆ ಮುಂಭಾಗದಲ್ಲಿ ಬೆಂಗಳೂರು ಹರಿಕಥಾ ವಿಶಾರದ ಶ್ರೀ॥ ಸುಬ್ಬರಾಯ ದಾಸರಿಂದ ಪ್ರಥಮ ಏಕಾದಶಿ ಪ್ರಯುಕ್ತ ಈ ರಾತ್ರಿ ೯-೩೦ಕ್ಕೆ "ನಾಚಿಕೇತು ಆಖ್ಯಾನ" ಎಂಬ ಕಥೆ ನಡೆಯುತ್ತದೆ

ಕೊತ್ವಾಲ್ ರಾಮಣ್ಣನವರ ಬೀದಿಯಲ್ಲಿರುವ ಶ್ರೀನಿವಾಸ ದಾಸರ ದೇವಸ್ಥಾನದ ಎದುರು ಈ ದಿನ ರಾತ್ರಿ ೧೦ ಗಂಟೆಗೆ ಶ್ರೀ ಸಂಜೀವ ದಾಸರಿಂದ ರುಕ್ಮಾಂಗದ ಎಂಬ ಹರಿಕಥೆ ನಡೆಯುವುದು

VASANTHA INSTITUTE of COMMERCE,

653 Narayana Sastry Road Mysore

EFFICIENT COACHING!

BEST RESULTS!!

Applications for admission to the ONE YEAR DIPLOMA COURSE OF THE MYSORE GOVERNMENT COMMERCIAL EXAMINATIONS are received.

ಪತ್ರಿಕೆ ಮಾರುವ ಹುಡುಗನ ಖುಲಾಸೆ

ರಾಜಕೋಟೆಯಲ್ಲಿ ಪತ್ರಿಕೆ ಮಾರುವ ಹುಡುಗನೊಬ್ಬನು ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಗಳನ್ನು ಸುಳ್ಳಾಗಿ ಕೂಡುತ್ತಿದ್ದನೆಂದು ಆತನ ಮೇಲೆ ಪೋಲೀಸರು ಮೊಕದ್ದಮೆ ಹೂಡಿದ್ದರು. ಆದರೆ ನ್ಯಾಯಾಧೀಶರು ಆತನನ್ನು ನಿರಪರಾಧಿಯೆಂದು ಬಿಡುಗಡೆ ಮಾಡಿದರು

ಪ್ರಥಮೈಕಾದಶಿ ಪ್ರಯುಕ್ತ ವಿಶೇಷ ಸೇವೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ೭೫ನೇ ನಂಬರ್ ಮನೆಯಲ್ಲಿ ಪ್ರಥಮೈಕಾದಶಿ ಪ್ರಯುಕ್ತ ಈದಿನ ರಾಜರಾಜೇಶ್ವರಿ ಸನ್ನಿಧಿಯಲ್ಲಿ ವಿಶೇಷ ಸೇವಾದಿಗಳು ನೆರವೇರುವುವು

ವಿದ್ಯಾರ್ಥಿ ಸಹಕಾರ ಸಂಘ

ಮೇಲ್ಕಂಡ ಸಂಘವು ಕಳೆದ ವರ್ಷ ಆಗಸ್ಟ್ ೧೫ ನೇ ತಾರೀಖು ರಾಜಧಾನಿಯಲ್ಲಿ ಸ್ಥಾಪಿತವಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ಕಳೆದ ಸಾಲಿನಲ್ಲಿ ೫ ವಿದ್ಯಾರ್ಥಿಗಳಿಗೆ ಮತ ಭೇದವಿಲ್ಲದೆ ತಲಾ ತಿಂಗಳೊಂದಕ್ಕೆ ೫ ರೂ ಮೇರೆ ವೇತನ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಹೆಚ್ಚಿಗೆ ಮಂದಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸಂಘದ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಆದ್ದರಿಂದ ಪುರಜನರೂ, ವಿದ್ಯಾರ್ಥಿಗಳೂ ಉದಾರ ಸಹಾಯ ಮಾಡಬೇಕಾಗಿ ಸಂಘದ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ

ಚಾಮುಂಡೇಶ್ವರೀ ಟಾಕೀಸ್

8-7-49ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

Adventures of RED RIDER

ಅಡ್ವೆಂಚರ್ಸ್ ಆಫ್ ರೆಡ್‌ರೈಡರ್

(ಪೂರ್ತಿ ಸೀರಿಯಲ್)

8-7-49 ರಿಂದ

ಚಾಮುಂಡೇಶ್ವರಿ ಮತ್ತು ಗಣೇಶಾ ಟಾಕೀಸುಗಳಲ್ಲಿ

ರಕ್ತರೇಖಾ

(ತೆಲುಗು)

ಖಜಾನೆಯ ಲೂಟಿ

ಇಂದೂರಿಗೆ ೨೨ ಮೈಲಿ ದೂರದಲ್ಲಿರುವ ದೇವಾಸ್ ಖಜಾನೆಯನ್ನು ದರೋಡೆಕಾರರು ಲೂಟಿ ಮಾಡಿದರೆಂದೂ, ಅಲ್ಲಿದ್ದ ಕಾವಲುಗಾರರನ್ನು ಕೊಂದು, ಹಣದ ಕಬ್ಬಿಣದ ಪೆಟ್ಟಿಗೆಗಳನ್ನು ಒಡೆದು, ಹಣವನ್ನು ದೋಚಿಕೊಂಡುಹೋದರೆಂದು ವರದಿಯಾಗಿದೆ

ಮದರಾಸ್ ಅರ್ಥ ಸಚಿವರ ಆಗಮನ

ಮದರಾಸಿನ ಹಣ ಕಾಸಿನ ಸಚಿವರಾದ ಶ್ರೀ ಗೋಪಾಲರೆಡ್ಡಿಯವರು ಇದೇ ೧೦ನೇ ತಾ॥ ರಾಜಧಾನಿಗೆ ಕೊಡಗಿನಿಂದ ಆಗಮಿಸಿ, ಅದೇಸಂಜೆ ಬೆಂಗಳೂರಿಗೆ ಪ್ರಯಾಣ ಬೆಳೆಸಿ, ರಾತ್ರಿ ರೈಲಿನಲ್ಲಿ ಮದರಾಸಿಗೆ ತೆರಳುವರು

D. BANUMIAH'S COLLEGE OF COMMERCE

MYSORE

NOTIFICATION

Dated 4th July 1949

CLASSES have commenced working. Admissions are received up to 9th July 1949 Intending Students are directed to apply to the Principal immediately.

B V. Banumiah,
Principal

ನೂತನ ಮಾದರಿಯ ಒಲೆ

ಪುಣೆಯ ಜೋಗ್ಲೇಕರ್ ಎಂಬುವರು ನೂತನ ಒಲೆಯೊಂದನ್ನು ತಯಾರಿಸಿದ್ದಾರೆ ಇದರಿಂದ ಅಡಿಗೆ ಮತ್ತು ಸ್ನಾನಕ್ಕೆ ನೀರು ಕಾಯಿಸುವುದನ್ನು ಏಕ ಕಾಲದಲ್ಲಿ ಮಾಡಬಹುದೆಂದು ಹೇಳಲಾಗಿದೆ. ಕೇಕಡ ೫೦ ರಷ್ಟು ಇದ್ದಿಲು ಉಳಿತಾಯವಾಗುವುದು

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ:-೧ ಸೆಟ್ ರೂ ೩-೪-೦. ಪ್ಯಾಕಿಂಗ್ ಮತ್ತು ಟಿ.ಖ ೧೨ ಆಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೋಳದ ಬೀದಿ ೧೩೯೭ನೇ ನಂಬರ್ ಮನೆಯಲ್ಲಿ ೪-೭-೪೯ರ ಲಾಗಾಯ್ತು ೮-೭-೪೯ರ ವರೆಗೆ ಕ್ಯಾಂಪ್ ಮಾಡುತ್ತಾರೆ ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

Edited, printed and published by A. R. Nagarajan, at Sadhvi Press, D. Subbiah Road, Mysore.

ಪ್ರಭುದೇವಾ ಟಾಕೀಸ್

4-7-49ನೇ ಸೋಮವಾರದಿಂದ ಅಮೋಘ ಪ್ರಾರಂಭ

ಜೆಮಿನಿಯವರ

✱ ಬಾಲನಾಗಮ್ಮ ✱

(ತೆಲುಗು)

ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಪ್ರತಿ ದಿನ ೩ ಆಟಗಳು

ಮ್ಯಾಟಿನಿ 2-30ಕ್ಕೆ, 1ನೇ ಆಟ 6-30ಕ್ಕೆ, 2ನೇ ಆಟ 10 ಘಂಟೆಗೆ

PUBLIC AUCTION

Old tools, T.W. and jungle-wood poles will be sold at the Trust Board Stores on Friday the 8th July 1949 at 9 A.M. Please see the office notice board for the details

Sd/ **P Gopalakrishna Setty,**
Chairman,
C. I. T. Board, Mysore

ಮೈಸೂರು ಸಿಟಿ ಮುನಿಸಿಪಾಲಿಟಿ

ಪ್ರಕಟನೆ

ಇದರಿಂದ ಮೈಸೂರು ಸಿಟಿಯಲ್ಲಿರುವ ಎಲ್ಲಾ ಲೈಸೆನ್ಸು ಹೋಲ್ಡರುಗಳಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ಲೈಸೆನ್ಸುದಾರರುಗಳು ಸಿಟಿ ಹೆಲ್ತ್ ಆಫೀಸಿನಿಂದ ಪಡೆದಿರುವ ತಮ್ಮ ಲೈಸೆನ್ಸುಗಳನ್ನು 1949-1950ನೇ ಸಾಲಿನಲ್ಲಿಯೂ ಸಹ ನಡೆಸಿಕೊಂಡು ಬರಲು ಲೈಸೆನ್ಸ್ ರಿನ್ಯೂ ಬಗ್ಗೆ ಅರ್ಜಿಗಳನ್ನು ಇದೇ 1949ನೇ ಜುಲೈ ಮಾಹೆ ಹದಿನೈದನೇ ತಾರೀಖಿನೊಳಗಾಗಿ ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಹಾಜರ್ಪಡಿಸತಕ್ಕದ್ದು ಈ ರೀತಿ ಮಾಡದಿದ್ದಲ್ಲಿ ರೂಲ್ಸು ಮೇರೆ ಮುಂದಿನ ಕ್ರಮ ಜರುಗಿಸಲಾಗುತ್ತೆ ತಿಳಿಯುವುದು

ಸಿ. ನರಸಿಂಹ ಮೂರ್ತಿ,
ಮುನಿಸಿಪಲ್ ಕಮೀಷನರ್,
ಸಿಟಿ ಮುನಿಸಿಪಾಲಿಟಿ, ಮೈಸೂರು.

ಮೈಸೂರು
29-6-49

ಬಂಗಲೆ ಕ್ರಯಕ್ಕಿದೆ

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾ ಶ್ರೀನಿವಾಸದೇವರ ದೇವಸ್ಥಾನದ ಸಮೀಪದಲ್ಲಿರುವ, ನಲ್ಲಿ, ದೀಪ ಗ್ಯಾರೇಜ್ ಮತ್ತು ಕಾಂಪೌಂಡ್ ಸಹ ಉಳ್ಳ ಕಾರಸೀ ಬಂಗ್ಲೆ ಕ್ರಯಕ್ಕಿದೆ ಬಾಡಿಗೆಗೂ ಸಿಕ್ಕುತ್ತದೆ ಕೂಡಲೇ ಸ್ವಾಧೀನ ಸಹ ಕೊಡಲಾಗುತ್ತೆ ಹೆಚ್ಚಿನ ವಿವರಗಳನ್ನು ಕೆಳಗಿನ ವಿಳಾಸದಲ್ಲಿ ತಿಳಿಯಬಹುದು

ಜಿ. ವಿ. ದೇಶಿಕಾಚಾರ್,
ಬ್ರೋಕರ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೮-೭-೪೯ [ಸಂಚಿಕೆ ೨೭೮

ಹೈದ್ರಾಬಾದಿನಲ್ಲಿ ಪುನಃ - ರಜಾಕರರ ಹಾವಳಿ -

ಮದರಾಸ್ ಗೌರ್ನರರ ಆಗಮನ

ಮೈಸೂರು, ೮

ಮದರಾಸ್ ಗೌರ್ನರರಾದ ಭಾವನಗರದ ಮಹಾರಾಜರವರು ನಿನ್ನೆ ಇಲ್ಲಿಗೆ ಆಗಮಿಸಿದರು ಅವರು ಲಲಿತ ಮಹಲ್ ಅರಮನೆಯಲ್ಲಿ ಬಿಡಾರ ಮಾಡಿದ್ದಾರೆ ಅವರ ನಿನ್ನೆ ಸಂಜೆ ಬೃಂದಾವನಕ್ಕೆ ಭೇಟಿ ಇತ್ತಿದ್ದರು. ರಾಜಧಾನಿಯಲ್ಲಿ ಬಿಡಾರ ಮಾಡಿರುವ ಆನಂದಾಶ್ರಮದ ಶ್ರೀ ಸ್ವಾಮಿ ರಾಮದಾಸರ ದರ್ಶನವನ್ನು ಅವರು ಪಡೆದರು ನಾಳೆ ದಿನ ಅವರು ಉದಕಮಂಡಲಕ್ಕೆ ಪ್ರಯಾಣ ಬೆಳೆಸುವರು

ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ವರ್ಧಂತಿ

ಇದೇ ೧೨ ನೇ ತಾ॥ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ವರ್ಧಂತ್ಯುತ್ಸವವು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು

ಪ್ರತಿಭಟನಾ ದಿನಾಚರಣೆ

ರಾಜಧಾನಿಯಲ್ಲಿರುವ ಮಲಯಾಳಿಗಳು ಕಳೆದ ೫ ನೇ ತಾ॥ ತಿರುವಾಂಕೂರು ಮತ್ತು ಕೊಚ್ಚಿ ಒಕ್ಕೂಟದ ಪ್ರತಿಭಟನಾ ದಿನವನ್ನು ಜನಾಬ್ ಕೆ ಮಹಮೂದ್‌ರವರ ಅಧ್ಯಕ್ಷತೆಯಲ್ಲಿ ಶಾಂತರಾಜ ಪಾರ್ಕಿನಲ್ಲಿ ಆಚರಿಸಿದರು ಈ ಒಕ್ಕೂಟದಿಂದ ೧॥ಕೋಟಿ ಮಲಯಾಳಿಗಳಿಗೆ ಅನ್ಯಾಯವಾಗಿದೆಯೆಂದೂ ಇದರ ವಿರುದ್ಧ ಐಕ್ಯ ಜನತಾ ಕೇರಳದ ಸ್ಥಾಪನೆಗಾಗಿ ಅಲ್ಲಿನ ಜನರೊಂದಿಗೆ ಮೈಸೂರಿನಲ್ಲಿರುವ ಮಲಯಾಳಿಗಳು ಹೋರಾಟ ನಡೆಸಬೇಕೆಂದೂ ತೀರ್ಮಾನಿಸಲಾಯಿತು ಜೈಲಿನಲ್ಲಿ ಉಪವಾಸ ಮಾಡುತ್ತಿರುವ ಕೇರಳದ ಕಾರ್ಮಿಕ ನಾಯಕರಾದ ಕೆ ಪಿ ಆರ್ ಗೋಪಾಲ್ ಮತ್ತು ಶಾಂತಲೋರ್‌ನವರುಗಳ ಬೇಡಿಕೆಗಳನ್ನು ಈಡೇರಿಸಿ, ಅವರುಗಳನ್ನು ಬಿಡುಗಡೆ ಮಾಡಬೇಕೆಂದು ಮತ್ತು ಮುಂದಿನ ತಿಂಗಳು ನಡೆಯಲಿರುವ ಮಲಬಾರ್ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸ[illegible]ದಸ್ತಗಿರಿಯಾಗಿರುವ ಎಲ್ಲ ರೈತ ಮ[illegible] ಕಾರ್ಮಿಕ ನಾಯಕರುಗಳನ್ನು ಬಿಡು[illegible]ಡೆ ಮಾಡಬೇಕೆಂದೂ ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು

ಪಾಕಿಸ್ತಾನದ ಮುಸ್ಲಿಮರಿಗೆ ಉದ್ಯೋಗ ಕೊಡಕೂಡದು

ಪಾಕಿಸ್ಥಾನ ನಿವಾಸಿಗಳಾದ ಮುಸ್ಲಿಮರನ್ನು ವಿಶೇಷವಾಗಿ ಭಾರತದ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರಿಸಲಾಗಿದೆಯೆಂದೂ, ಇದರಿಂದ ಅನೇಕ ಭಾರತೀಯರಿಗೆ ಉದ್ಯೋಗವಿಲ್ಲದಂತಾಗಿರುವುದಲ್ಲದೆ, ದೇಶದ ಭದ್ರತೆಗೆ ಧಕ್ಕೆ ಬರುವುದರಿಂದಲೂ, ಅವರಿಗೆ ಉತ್ತೇಜನ ಕೊಡಕೂಡದೆಂದೂ ಭಾರತ ಸರ್ಕಾರದವರು ಸೂಚನೆ ಇತ್ತಿದ್ದಾರೆಂದು ವರದಿಯಾಗಿದೆ

ಅಫೀಮು ಸೇವಿಸುವವರಿಗೆ ಚಿಕಿತ್ಸೆ

ಅಸ್ಸಾಂ ಪ್ರಾಂತ್ಯದಲ್ಲಿ ೧೭ ಸಾವಿರ ಜನರು ಅಫೀಮನ್ನು ಸೇವಿಸುತ್ತಿದ್ದಾರೆ ಅವನ್ನು ತಪ್ಪಿಸಲು ಅಲ್ಲಿನ [illegible] ಬಿಟ್ಟದ [illegible]ದೇರದ ನಾಂಗ್ಪೋನಲ್ಲಿ ಒಂದು ಪ್ರತ್ಯೇಕ ಆಸ್ಪತ್ರೆಯನ್ನು ಸರ್ಕಾರದವರು [illegible], ಅಲ್ಲಿ ಚಿಕಿತ್ಸೆ ಕೊಡಲು ವ್ಯವಸ್ಥೆ ಮಾಡಿದ್ದಾರೆ

ಮದರಾಸಿನಿಂದ ಮೈಸೂರಿಗೆ ಗೋ ಮಾಂಸ

ಮದರಾಸಿನಿಂದ ಮೈಸೂರಿಗೆ ಆಮದಾಗುತ್ತಿರುವ ಗೋ ಮಾಂಸವನ್ನು ತಡೆಗಟ್ಟಲು ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಅದು ಸಾಧ್ಯವಿಲ್ಲವೆಂದು, ಮದರಾಸ್ ಸರ್ಕಾರದವರು ತಿಳಿಸಿದ್ದಾರೆ ಈ ಬಗ್ಗೆ ಮೈಸೂರು ಸರ್ಕಾರದವರು ಪ್ರತಿಬಂಧಕವನ್ನು ಹಾಕಬಹುದೆಂದು ಸೂಚಿಸಿರುತ್ತಾರೆ

ಪ್ರೀವಿ ಕೌನ್ಸಿಲಿಗೆ ಗೋಡ್ಸೆಯ ಅಪೀಲು

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥೂರಾಂ ಗೋಡ್ಸೆಯು ತಾನು ಗಾಂಧಿಜಿಯವರನ್ನು ಕೊಲೆ ಮಾಡಲು ಒಳಸಂಚನ್ನು ನಡೆಸಲಿಲ್ಲವೆಂಬ ಕಾರಣದ ಮೇಲೆ ಪ್ರೀವಿ ಕೌನ್ಸಿಲ್ಲಿಗೆ ಅಪೀಲು ಅರ್ಜಿ ಸಲ್ಲಿಸಲಿರುವನು ಅಪೀಲು ಹೋಗುವುದರಿಂದ ಗೋಡ್ಸೆ ಮತ್ತು ಆಪ್ಟೆರವರುಗಳನ್ನು ಗಲ್ಲಿಗೇರಿಸುವುದನ್ನು ತಡೆಯಬೇಕೆಂದೂ ಅರ್ಜಿ ಸಲ್ಲಿಸಲಾಗಿದೆ

ಕಸ್ತೂರಿ ಬಾಯಿ ಗಾಂಧಿ ಶಿಕ್ಷಣ ಶಿಬಿರ

ಅರಸೀಕೆರೆಯಲ್ಲಿ ನಡೆಯುತ್ತಿರುವ ಕಸ್ತೂರಿ ಬಾಯಿ ಗಾಂಧಿ ಗ್ರಾಮ ಸೇವಿಕೆಯರ ಶಿಕ್ಷಣ ಕೇಂದ್ರದಲ್ಲಿ ಈಗ ೩ನೇ ಶಿಬಿರದ ಕಾರ್ಯಕ್ರಮಗಳು ಮುಕ್ತಾಯವಾಗಿವೆ ಆಗಸ್ಟ್ ೧೫ನೇ ತಾರೀಖಿನಿಂದ ೪ನೇ ಶಿಬಿರವು ಆರಂಭವಾಗಲಿದೆ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಊಟ ಮತ್ತು ವಸತಿಗಳನ್ನು ಕಲ್ಪಿಸಲಾಗುವುದು ಕನಿಷ್ಟ ಪಕ್ಷ ಲೋವರ್ ಸೆಕೆಂಡರಿ ಪರೀಕ್ಷೆಯನ್ನಾದರೂ ಕೊಟ್ಟು ೧೮ರಿಂದ ೩೦ ವರ್ಷ ವಯಸ್ಸಿನೊಳಗಿರುವವರು ಅರ್ಜಿ ಹಾಕಿಕೊಳ್ಳಬಹುದು ಶಿಕ್ಷಣವನ್ನು ಪಡೆದ ಮೇಲೆ ಅವರು ಎರಡು ವರ್ಷ ಕಾಲ ಕಸ್ತೂರಿಬಾಯಿ ಟ್ರಸ್ಟಿನ ಆಶ್ರಯದಲ್ಲಿ ಸೇವೆ ಸಲ್ಲಿಸಲು [illegible]-ಎಂದು. [illegible] ಶ್ರೀಮತಿ ಯಶೋಧರ ದಾಸಪ್ಪನವರು ತಿಳಿಸಿದ್ದಾರೆ

ಬೌರಿಂಗ್‌ಪೇಟೆಗೆ ಬಂಗಾರ ಪೇಟೆ ಎಂದು ಹೆಸರು

ಬೌರಿಂಗ್‌ಪೇಟೆಯ ಹೆಸರನ್ನು ಬಂಗಾರ ಪೇಟೆಯೆಂದು ಬದಲಾಯಿಸಲಾಗಿದೆ

ಭಾರತ ಸರ್ಕಾರಕ್ಕೆ ಯಾವ ಅಧಿಕಾರವನ್ನೂ ಕೊಟ್ಟಿಲ್ಲ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂ ಸು ಫೋ] ಬೆಂಗಳೂರು ೮

ಶ್ರೀಮನ್ಮಹಾರಾಜರವರು ವಿಮರ್ಶಿತ ಪ್ರವೇಶ ಪತ್ರಕ್ಕೆ ರುಜು ಹಾಕಿರುವ ಬಗ್ಗೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರ ಅಲ್ಪ ಕಾಲಾವಧಿ ಪ್ರಶ್ನೆಯ ಮೇಲೆ ಈ ದಿನ ಶಾಸನ ಸಭೆಯಲ್ಲಿ ದೀರ್ಘ ಕಾಲ ಪ್ರಶ್ನೋತ್ತರಗಳಾದವು. ಈ ಪ್ರವೇಶ ಪತ್ರಕ್ಕೆ ಕಳೆದ ತಿಂಗಳು ೧ನೇ ತಾ॥ ಶ್ರೀಮನ್ಮಹಾರಾಜರವರು ರುಜು ಹಾಕಿದರು ಅದನ್ನು ಗೌರ್ನರ್ ಜನರಲ್ಲರವರು ೨೩ ನೇ ತಾ॥ ಅಂಗೀಕರಿಸಿದರು ಕೆಲವು ಬಾಬುಗಳ ಬಗ್ಗೆ ನ್ಯಾಯಾಂಗ ಹಕ್ಕನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಲಾಗಿದೆಯೇ ಹೊರತು ಆಡಳಿತದ ಹಕ್ಕನ್ನಲ್ಲ ಇದರಿಂದ ಮೈಸೂರು ಸರ್ಕಾರದವರು ಯಾವ ಅಧಿಕಾರವನ್ನು ಬಿಟ್ಟುಕೊಟ್ಟಂತಾಗಿಲ್ಲ ಮತ್ತು ಇದರಿಂದ ಸಂಸ್ಥಾನಕ್ಕೆ ಖಂಡಿತವಾಗಿಯೂ ಹೆಚ್ಚಿನ ಉಪಯೋಗವಾಗುವುದು ಶ್ರೀಮನ್ಮಹಾರಾಜರವರ ಸ್ಥಾನಮಾನಗಳು ಹಿಂದೆ ಯಾವ ರೀತಿಯಲ್ಲಿದ್ದವೋ ಅದೇ ರೀತಿ ಈಗಲೂ ಇರುವುವು-ಎಂದು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಾಗಿ ತಿಳಿಸಿದರು.

ಕುಮಾರಾ ಪಾರ್ಕಿನ ಸೈಟುಗಳನ್ನು ಹರಾಜು ಮಾಡುವುದರಿಂದ ಬಂಡವಾಳಗಾರರು ತೆಗೆದುಕೊಳ್ಳಬಹುದೆಂಬ ಶಂಕೆಯಿಂದ ಅದನ್ನು ವಜಾ ಮಾಡಿ, ಬಡಜನರಿಗೆ ಅದನ್ನು ಕೊಡಲು ಸರ್ಕಾರವು ನಿರ್ಧರಿಸಿದೆಯೆಂದೂ, ಅದರ ವಿಲೇವಾರಿಯ ಅಧಿಕಾರವನ್ನು ಪೌರಸಭೆಗೆ ಕೊಡುವುದಿಲ್ಲವೆಂದೂ ಸಚಿವ ಶ್ರೀ ದಾಸಪ್ಪನವರು ಶ್ರೀ ಎಂ ಪಿ ಎಲ್ ಶಾಸ್ತ್ರಿಗಳ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ಅನಂತರ ಆಹಾರದ ಪರಿಸ್ಥಿತಿ ಬಗ್ಗೆ ಚರ್ಚೆ ಪ್ರಾರಂಭವಾಯಿತು ೮ ಗಂಟೆಗೆ ಅಧಿವೇಶನವು ಮುಕ್ತಾಯವಾಗುವುದು

ಹಾಲಿನ ಉತ್ಪತ್ತಿ ಹೆಚ್ಚಬೇಕು

ಬೆಂಗಳೂರಿನಲ್ಲಿರುವ ಭಾರತದ ಹಾಲಿನ ಸಂಶೋಧನಾಲಯದ ರಜತಮಹೋತ್ಸವದ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಗೆ ನೆರವೇರಿಸಿದರು ಕೇಂದ್ರದ ಡೈರೆಕ್ಟರಾದ ಡಾ.

ಹೈದರಾಬಾದಿನಲ್ಲಿ ಪುನಃ ರಜಾಕರರ ಹಾವಳಿ

ಹೈದರಾಬಾದಿನ ಬಿದರೆ ಜಿಲ್ಲೆಯ ಕರಮಪುರದಲ್ಲಿ ಪುನರ್ ರಜಾಕರರ ಚಟುವಟಿಕೆಯು ಪ್ರಾರಂಭವಾಗಿದೆಯೆಂದೂ, ಅವರ ಹಾವಳಿಯನ್ನು ತಡೆಗಟ್ಟಲು ಹೋದ ಪೋಲೀಸರಿಗೂ ಅವರಿಗೂ ಘರ್ಷಣೆಯಾಗಿ, ಇಬ್ಬರು ಪೋಲೀಸರು ಗುಂಡಿನಿಂದ ಸತ್ತರೆಂದೂ ವರದಿಯಾಗಿದೆ. ಮಿಲಟರಿಯವರು ಬಂದು ಅವರ ದಾಂಧಲೆಯನ್ನು ಅಡಗಿಸಿದರು ೮ ಜನ ರಜಾಕರರಿಂದ ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತು.

ವಿದ್ಯಾರ್ಥಿಗಳಿಗೆ ಉಚಿತ ಭೋಜನ ಸೌಕರ್ಯ

ರಾಜಧಾನಿಯಲ್ಲಿ ಪೌರಸಭೆಯವರು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿರುವ ಉಚಿತ ಭೋಜನದ ವ್ಯವಸ್ಥೆಗೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ದಿನವನ್ನು ಇದೇ ೧೦ ನೇ ತಾ॥ ೫ ಗಂಟೆವರೆಗೆ ಮುಂದುವರಿಸಲಾಗಿದೆ

ರಾಘವೇಂದ್ರ ಮಠದ ವಾರ್ಷಿಕೋತ್ಸವ

ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಪ್ರಥಮ ವಾರ್ಷಿಕೋತ್ಸವವು ಕಳೆದ ಸೋಮವಾರ ನಡೆಯಿತು ಪ್ರಾತಃಕಾಲ ಶ್ರೀ ಗುರುಗಳಿಗೆ ಪಾದಪೂಜೆ, ಅಭಿಷೇಕ, ಪಾರಾಯಣಗಳಾದನಂತರ, ಶ್ರೀಗುರುಗಳ ಮೆರವಣಿಗೆ ಜರುಗಿತು ಸಂಜೆ ಉಪನ್ಯಾಸ ಮತ್ತು ಸಂಗೀತಗಳು ನಡೆದುವು

ಶ್ರೀಸ್ವಾಮಿ ರಾಮದಾಸರವರ ಕಾರ್ಯಕ್ರಮ

ಮೈಸೂರು ೮

ರಾಜಧಾನಿಯಲ್ಲಿ ಬಿಡಾರ ಮಾಡಿರುವ ಆನಂದಾಶ್ರಮದ ಶ್ರೀಸ್ವಾಮಿ ರಾಮದಾಸರು ನಾಳೆ ದಿನ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಬೆಳೆಸಿ, ನಾಳಿದ್ದು ಬೆಳಗ್ಗೆ ವಿಮಾನದಲ್ಲಿ ಬೊಂಬಾಯಿಗೆ ತೆರಳುವರು

ನಿನ್ನೆ ಸಂಜೆ ಚಾಮುಂಡೇಶ್ವರಿ ಭವನದಲ್ಲಿ ಸಾಮೂಹಿಕ ಭಜನಾ ಕೂಟವು ನಡೆಯಿತು ಸ್ವಾಮಿ ಚಿನ್ಮಯಾನಂದಜಿ, ಶ್ರೀಮತಿ ಸಂಪೂರ್ಣಾಂ ಮತ್ತು ಶ್ರೀಮತಿ ಸ್ವರಸ್ವತಿ ಗಾಂಧೀಯವರುಗಳ ಗಾಯನವು ನಡೆಯಿತು

ಸುಮಾರು ೨ ಸಾವಿರ ಜನರು ದಯಮಾಡಿಸಿದ್ದರು ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದಜೀಯವರು ರಾಮಾಯಣದ ವಿಷಯವಾಗಿ ಉಪನ್ಯಾಸ ಮಾಡಿದರು.

ಶ್ರೀಸ್ವಾಮಿ ರಾಮದಾಸರು ಈ ಸಂಜೆ ೬ ಗಂಟೆಗೆ ರಾಮಕೃಷ್ಣಾಶ್ರಮಕ್ಕೆ ಭೇಟಿ ಕೊಡುವರು

ಗ್ವಾಲಿಯರಿನಲ್ಲಿ ಬಿಸಲಿನ ತಾಪದಿಂದ ಇಬ್ಬರು ಸರ್ಕಾರಿ ನೌಕರರು ಸತ್ತರೆಂದೂ, ಇದರಿಂದ ಗಾಬರಿಗೊಂಡು ಅನೇಕ ನೌಕರರು ರಜೆಗೆ ಅರ್ಜಿ ಹಾಕಿಕೊಂಡಿದಾರೆಂದೂ ಹೇಳಲಾಗಿದೆ

ಕೆ ಸಿ ನೆಗ್, ಭಾರತ ಸರ್ಕಾರದ [illegible] ಡಾಕ್ಟರ್ [illegible]ರವರ [illegible] ಭಾಷಣ ಮಾಡಿದರು. ದೇಶದಲ್ಲಿ [illegible]ರುಗಳ ರಕ್ಷಣೆ ಬಗ್ಗೆ ವಿಶೇಷ ಆಸಕ್ತಿ ವಹಿಸದಿದ್ದುದರಿಂದ ಹಾಲಿನ ಅಭಾವವು ಒದಗಿದೆಯೆಂದೂ, ಅದನ್ನು ನಿವಾರಿಸಲು ಇಂತಹ ಕೇಂದ್ರಗಳು ಹೆಚ್ಚು ಕೆಲಸ ಮಾಡಬೇಕೆಂದೂ ಪ್ರಭುಗಳು ತಮ್ಮ ಭಾಷಣದಲ್ಲಿ ತಿಳಿಸಿದರು

ಅಕ್ಕಿಯ ಪಾಲೀಷ್ ನಿಲ್ಲಿಸುವುದರ ಉಪಯೋಗ

ಪಾಲೀಷ್ ಕೊಡುವುದನ್ನು ನಿಲ್ಲಿಸುವುದರಿಂದ ಶೇಕಡ ೧೩ ರಷ್ಟು ಅಕ್ಕಿಯು ಉಳಿತಾಯವಾಗುವುದೆಂದೂ, ಹೀಗೆ ಉಳಿದ ಧಾನ್ಯವು ಈಗಿನ ಅಭಾವವನ್ನು ನಿವಾರಿಸುವುದೆಂದೂ, ಸಂಯುಕ್ತ ಪ್ರಾಂತ್ಯದ ಆಹಾರ ಇಲಾಖೆಯ ಅಧಿಕಾರಿಗಳೊಬ್ಬರು ತಿಳಿಸಿರುತ್ತಾರೆ.

ಒರಿಸ್ಸಾ ಸಂಸ್ಥಾನಾಧೀಶರಿಗೆ ಉಚಿತ ಸೌದೆ ಇಲ್ಲ

ಒರಿಸ್ಸಾ ಪ್ರಾಂತ್ಯದಲ್ಲಿ ಐಕ್ಯವಾದ ಸಂಸ್ಥಾನಗಳ ರಾಜರುಗಳಿಗೆ ಆಯಾ ಸಂಸ್ಥಾನಗಳ ಅರಣ್ಯ ಪ್ರದೇಶಗಳನ್ನಾಗಲಿ, ಅಲ್ಲಿನ ಸೌದೆ ಮುಂತಾದವನ್ನಾಗಲಿ ಉಚಿತವಾಗಿ ಕೊಡಲಾಗುವುದಿಲ್ಲವೆಂದು ಒರಿಸ್ಸಾ ಸರ್ಕಾರದವರು ತಿಳಿಯಪಡಿಸಿದ್ದಾರೆ

ಉಚಿತ ವಾಚನಾಲಯ

ಕಾಳಮ್ಮನಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ವಿದ್ಯಾರ್ಥಿ ನಿಲಯದ ಕಟ್ಟಡದಲ್ಲಿ ಸಾರ್ವಜನಿಕರಿಗಾಗಿ ಉಚಿತ ವಾಚನಾಲಯವನ್ನು ತೆರೆಯಲಾಗಿದೆ

ಶ್ರೀ ಗಾಯತ್ರೀ

8-7-49ರಿಂದ 2 ದಿನಗಳು ಮಾತ್ರ ಪ್ರತಿ ದಿನ 3 ಆಟಗಳು

ದಟ್ ಲೇಡಿ ಇನ್ ಎರ್‌ಮೈನ್

That Lady in Ermine

(Technicolor)

-- With:--

Betty Grable & Douglas Fairbanks Jr

Morning Shows on Sat 9th & Sun 10th

LOCKET

ತಂದೆಯ ಪ್ರಾರ್ಥನೆ ಮೇರೆ ಮಗನಿಗೆ ಹೆಚ್ಚು ಶಿಕ್ಷೆ

ಷೋಲಾಪುರದ ... ಯೊಂದರಲ್ಲಿ ೧೮ ವರ್ಷದ ಹುಡುಗನೊಬ್ಬನು ಪೋಸ್ಟಾಫೀಸಿನಲ್ಲಿ ಹಣವನ್ನು ಕಳವು ಮಾಡಿದನೆಂದು ಆತನಿಗೆ ೧೫ ದಿನ ಶಿಕ್ಷೆಯನ್ನು ವಿಧಿಸಲಾಗಿತ್ತು. ಕಳ್ಳತನವನ್ನು ನಿಲ್ಲಿಸಲು ಮಗನಿಗೆ ಹೆಚ್ಚು ಶಿಕ್ಷೆ ಕೊಡಬೇಕೆಂದು ಆತನ ತಂದೆಯು ಪ್ರಾರ್ಥನೆ ಮೇರೆ ಆತನಿಗೆ ೯ ತಿಂಗಳು ಶಿಕ್ಷೆಯನ್ನು ನ್ಯಾಯಾಧೀಶರು ವಿಧಿಸಿದರು

ಬಂಗಾಳದ ಪ್ರತಿ ಮನೆಯಲ್ಲೂ ಕ್ಷಯ ರೋಗ

ಬಂಗಾಳದ ಪ್ರತಿ ಮನೆಯಲ್ಲಿಯೂ ಕ್ಷಯ ರೋಗದ ಸೋಂಕಿರುವುದೆಂದೂ, ಪ್ರತಿಯೊಂದು ಮಗುವಿಗೂ ಬಿ ಸಿ ಜಿ ವಾಕ್ಸೀನ್ ಚುಚ್ಚಬೇಕೆಂದೂ ಲಂಡನ್ನಿನಲ್ಲಿ ಮೊನ್ನೆ ಸೇರಿದ ಕಾಮನ್‌ವೆಲ್ತ್ ಕ್ಷಯ ರೋಗದ ಸಮ್ಮೇಳನದಲ್ಲಿ ಪ್ರತಿನಿಧಿಗಳು ತಿಳಿಸಿದರು

ಹ ರಿ ಕ ಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ದಿನ ಸಂಜೆ ೭ ಗಂಟೆಗೆ ಶ್ರೀ ಎಸ್ ಸಂಬಂಧಮೂರ್ತಿ ಭಾಗವತರಿಂದ ಭಕ್ತ ನಂದನಾರ್ ಎಂಬ ಹರಿಕಥೆ ನಡೆಯುವುದು ಅಮ್ಮನವರಿಗೆ ಅನ್ನಪೂರ್ಣ ಅಲಂಕಾರವನ್ನು ಏರ್ಪಡಿಸಲಾಗಿದೆ

ಸಿಟಿ ಟ್ಯುಟೋರಿಯಲ್ ಕಾಲೇಜ್

1531 ವಾಣೀವಿಲಾಸ ರಸ್ತೆ, ಮೈಸೂರು

M S ಪರೀಕ್ಷೆಯಲ್ಲಿ ಪಾಸಾಗಿರುವ ವಿದ್ಯಾರ್ಥಿನಿಯರನ್ನು ಎರಡೇ ವರ್ಷಗಳಲ್ಲಿ S S L C. ಪರೀಕ್ಷೆಗೆ (ಇಂಗ್ಲಿಷ್ ಮೀಡಿಯಂ) ತಯಾರುಮಾಡುವ ಮತ್ತು M. S. ಪರೀಕ್ಷೆಗೆ ಉತ್ತಮ ರೀತಿಯ ಶಿಕ್ಷಣ ಕೊಡುವ ತರಗತಿಗಳು ಅನುಭವಸ್ಥ ಉಪಾಧ್ಯಾಯರುಗಳಿಂದ ನಡೆಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿ

ಯಳಂದೂರು ವಿದ್ಯಾರ್ಥಿ ನಿಧಿ

ಈ ನಿಧಿಯು ೧೯೪೮-೪೯ರ ವರದಿಯಂತೆ ಒಟ್ಟು ೧೭೭೦ ರೂ ಚಂದಾ ಹಣ ವಸೂಲಾಗಿ, ೨೩೩೧ ರೂ ಖರ್ಚಾಗಿರುತ್ತದೆ ಈ ವರ್ಷದಲ್ಲಿ ೧೦೨ ಜನ ವಿದ್ಯಾರ್ಥಿಗಳಿಗೆ ೨೩೪೧ ರೂ. ವೇತನವನ್ನು ಹಂಚಲಾಗಿದೆ ಈ ನಿಧಿಯು ಪ್ರಾರಂಭವಾಗಿ ೨೯॥ ವರ್ಷಗಳಾದುವು ಈ ಕಾಲದಲ್ಲಿ ಒಟ್ಟು ೭೮,೭೩೬ ರೂ ವಸೂಲಾಗಿ, ೭೭,೩೭೬ ರೂ ಖರ್ಚಾಗಿರುತ್ತದೆ ಒಟ್ಟು ೪೧೦೪ ಬಡ ವಿದ್ಯಾರ್ಥಿಗಳಿಗೆ ೭೫,೬೫೬ ರೂ ಸಂದಿರುತ್ತದೆ. ನಿಧಿಯಿಂದ ಸಹಾಯ ಬೇಡುವ ವಿದ್ಯಾರ್ಥಿಗಳ ಸಂಖ್ಯೆಯು ವರ್ಷೇ ವರ್ಷೇ ಹೆಚ್ಚುತ್ತಿರುವುದರಿಂದ ಯಳಂದೂರು ಅಭಿಮಾನಿಗಳು ಉದಾರ ಸಹಾಯ ನೀಡಬೇಕೆಂದು ಅದರ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಮೈಸೂರಿಗೆ ಶಾಂತಾರಾಂರವರ ಭೇಟಿ

ಭಾರತದ ಸುಪ್ರಸಿದ್ಧ ದಿಗ್ದರ್ಶಕರಾದ ಶ್ರೀ ವಿ ಶಾಂತಾರಾಂರವರು ರಾಜಧಾನಿಗೆ ಮುಂದಿನ ವಾರ ಆಗಮಿಸುವರೆಂದು ತಿಳಿದುಬಂದಿದೆ

ಲಕ್ಷ್ಮೀ ಥಿಯೇಟರ್

9-7-49ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಜೆಮಿನಿ ಕಲಾ ಚಿತ್ರದವರ ಸಂಗೀತಮಯ ಸಾಮಾಜಿಕ ಹಿಂದಿ ಚಿತ್ರ

ಹುವ-ಸವೇರ

(HUA-SAVERA)

ಭೂಮಿಕೆ –ನಯನತಾರ, ಸಪ್ರು

ಪಬ್ಲಿಕ್ ಲೈಬ್ರರಿಗೆ ದೀಪದ ಕೊರತೆ

ರಾಜಧಾನಿಯ ಪಬ್ಲಿಕ್ ಲೈಬ್ರರಿಯು ಈಗ ಸಯ್ಯಾಜಿರಾವ್ ರಸ್ತೆಯಲ್ಲಿರುವ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಮಹಡಿಗೆ ೫ ತಿಂಗಳ ಹಿಂದೆ ವರ್ಗಾಯಿಸಲ್ಪಟ್ಟಿದ್ದರೂ, ಅಲ್ಲಿ ದೀಪದ ಸೌಕರ್ಯವಿಲ್ಲ ಪ್ರತಿ ದಿನವೂ ರಾತ್ರಿ ೮ ಗಂಟೆವರೆಗೆ ತೆರೆದಿರಬೇಕಾದ ಲೈಬ್ರರಿಯು ಸಂಜೆ ೬ ಗಂಟೆಗೇ ಮುಚ್ಚಲ್ಪಡುತ್ತಿದೆ ಅಲ್ಲಿಗೆ ದೀಪವನ್ನು ಹಾಕಿಸಿಕೊಡಬೇಕೆಂದು ಲೈಬ್ರರಿಯ ಕಾರ್ಯಕಾರೀ ಸಮಿತಿಯವರೂ ಮತ್ತು ಸಾರ್ವಜನಿಕರೂ ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿರುತ್ತಾರೆ ಈ ಕೊರತೆಯನ್ನು ಸರ್ಕಾರದವರು ಕೂಡಲೇ ನೀಗಿಸುವರೆಂದು ಆಶಿಸಲಾಗಿದೆ ಈಗ ಸದರಿ ಲೈಬ್ರರಿಗೆ ಬೊಂಬಾಯಿ, ಕಲ್ಕತ್ತ ಮತ್ತು ದೆಹಲಿಯಿಂದ ಕೆಲವು ಪತ್ರಿಕೆಗಳನ್ನು ಹೊಸದಾಗಿ ತರಿಸಲಾಗುತ್ತಿದೆ.

Morning Shows at

CHAMUNDESWARI

TALKIES

From 8th July 49 for 3 days at 10-30 a m.

Frank Capra's

It's a Wonderful Life

Starring:- James Stewart & Donna Reed

-. Next Morning Show: -

Boris Karloff in

ISLE OF THE DEAD

Edited, printed and pub lished by A R. Nagarajan, at Sadhvi Press, D. Subbiah Road, Mysore.

ಪ್ರ ಭಾ

9-7-49ನೇ ಶನಿವಾರದಿಂದ ಪ್ರಾರಂಭ

ದಿನವಹಿ 3 ಆಟಗಳು ಮ್ಯಾಟಿನಿ 1-15 ಘಂಟೆಗೆ

ರಾಜಕಮಲ್‌ರವರ ಪುಷ್ಪಮಾಲೆ

ಶ್ರೀ ಶಾಂತಾರಾಂರವರ ಕಲಾಕೃತಿ

* ಅಪ್ನಾ ದೇಶ್ *

(ಹಿಂದಿ)

ಪಾತ್ರ:- ಪುಷ್ಪಹಂಸ ಉಮೇಶ್ ಶರ್ಮ.

(ಎಲ್ಲಾ ವಿಧವಾದ ಕಾಂಪ್ಲಿಮೆಂಟುಗಳನ್ನೂ ನಿಲ್ಲಿಸಲಾಗಿರುತ್ತೆ.)

ಚಾಮುಂಡೇಶ್ವರೀ ಮತ್ತು ಗಣೇಶಾ ಟಾಕೀಸುಗಳಲ್ಲಿ

8-7 49ರಿಂದ ಅಮೋಘ ಆರಂಭ

ದಿನವಹಿ ಮೂರು ಆಟಗಳು

* ರಕ್ತರೇಖಾ *

(ತೆಲುಗು)

ಮುಖ್ಯ ಪಾತ್ರ:- ಅಂಜಲಿ ದೇವಿ, ಭಾನುಮತಿ, ನಾಗೇಶ್ವರ ರಾವ್

MYSORE CITY MUNICIPALITY

NOTICE

Sealed tenders will be received up to 4 p m. on 15-7-49 by the Municipal Engineer for collecting and consolidation of road materials in the City for the year 1949-50.

Each tender other than that of a registered Contractor in the Municipality must be accompanied with a chellan for having remitted Rs 200 - in the Municipal Treasury as earnest money. For full particulars please see the detailed Notification on the office Notice Board

Sd -V K Mukundan,
Municipal Engineer

ಶುಭಮಸ್ತು

॥ ಸಮಸ್ತ ಸನ್ಮಂಗಳಾನಿ ಭವಂತು ॥

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ ಗ್ಯಾರಂಟಿ ಮಾಲು

ಬಿ ಸುಬ್ಬರಾವ್ ಕಂಪೆನಿ, ... ಮೈಸೂರ್ ... ರೋಡ್, ... ಸಾಹುಕಾರ್ ...

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೯-೭-೪೯ [ಸಂಚಿಕೆ ೨೬೯

ಪಾಕೀಸ್ತಾನದಲ್ಲಿ - ಯುದ್ಧಕ್ಕಾಗಿ ಸಿದ್ಧತೆ -

ಮೋಹನ್ ದಾಸ್ ತುಳಸೀದಾಸ್ ಆಸ್ಪತ್ರೆಯ ಆರಂಭೋತ್ಸವ

ಶ್ರೀಮನ್ಮಹಾರಾಜರವರ ಭಾಷಣ

ಮೈಸೂರು ೯

ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಗೆ ಚಾಮುಂಡಿಪುರದಲ್ಲಿರುವ ಸೇಟ್ ಮೋಹನ್‌ದಾಸ್ ತುಳಸೀದಾಸ್ ಮಹಿಳೆಯರ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಶ್ರೀಮತಿ ರಾಜಮ್ಮ ಕಲ್ಲೋಳಿ ಮಠರವರಿಂದ ಸ್ವಾಗತ ಗೀತೆಯಾದ ನಂತರ ಪೌರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಪುರ ಸಭೆಯ ಪರವಾಗಿ ಪ್ರಭುಗಳಿಗೆ ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರು. ಶ್ರೀಮತಿ ವಿಷನ್‌ದೇವಿಬಾಯಿ ತುಲಸೀದಾಸ್ ಮೋಹನ್‌ದಾಸ್‌ರವರ ಪರವಾಗಿ ಶ್ರೀ ರಾಮನಾರಾಯಣ ಚೆಲ್ಲಾರಾಂರವರು ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

ಪ್ರಭುಗಳು ತಮ್ಮ ಉತ್ತರದಲ್ಲಿ ಈರೀತಿ ಅಪ್ಪಣೆ ಕೊಡಿಸಿದರು:-

ಮೈಸೂರು ನಗರದ ಈ ಭಾಗದಲ್ಲಿ ಮಹಿಳೆಯರಿಗಾಗಿ ಏರ್ಪಟ್ಟಿರುವ ಮುನಿಸಿಪಲ್ ಆಸ್ಪತ್ರೆಯ ಪ್ರಾರಂಭೋತ್ಸವದ ಸಂತೋಷ ಸಮಯದಲ್ಲಿ, ಈ ದಿನ ಬೆಳಗ್ಗೆ ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಸಂಸ್ಥಾನದಲ್ಲೆಲ್ಲಾ, ಹೆಂಗ ಆಸ್ಪತ್ರೆಗಳನ್ನೂ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಕೇಂದ್ರಗಳನ್ನೂ ಏರ್ಪಡಿಸುವುದು ಬಹಳ ಅವಶ್ಯಕವೆಂಬುದನ್ನು ಸರ್ಕಾರದವರೂ ಮತ್ತು ಸಾರ್ವಜನಿಕರೂ ಅಂಗೀಕರಿಸಿದ್ದಾರೆ. ಇಂಥ ಕೇಂದ್ರಗಳನ್ನು ಶೀಘ್ರವಾಗಿ ಏರ್ಪಡಿಸಬೇಕೆಂಬ ಕೋರಿಕೆಯನ್ನು ಮೈಸೂರು ನಗರದಲ್ಲಿ ಸಾರ್ವಜನಿಕರು ಒಡನೆಯೇ ಮನ್ನಿಸಿ ವ್ಯವಸ್ಥೆ ಮಾಡಿರುವುದಕ್ಕಿಂತ ಹೆಚ್ಚಾಗಿ, ಮತ್ತೆಲ್ಲಿಯೂ ಸಾರ್ವಜನಿಕರು ಆ ರೀತಿ ಮಾಡಿಲ್ಲ. ಮೈಸೂರು ನಗರದ ನಾನಾ ಭಾಗಗಳಲ್ಲಿ ಇಂಥ ಸಂಸ್ಥೆಗಳನ್ನು ಏರ್ಪಡಿಸುವ ಕಾರ್ಯದಲ್ಲಿ, ಉಪಕಾರ ಬುದ್ಧಿಯುಳ್ಳ ಖಾಸಗಿ ಜನರಿಂದ ಮಹತ್ತರವಾದ ಸಹಾಯವು ದೊರೆತಿದೆ. ಈ ಪ್ರದೇಶದಲ್ಲಿ ಇದುವರೆಗೂ ಮಹಿಳೆಯರಿಗಾಗಿ ಆಸ್ಪತ್ರೆಯ ಸೌಕರ್ಯವಿರಲಿಲ್ಲ. ಖಾಸಗಿ ಸಹಾಯದಿಂದಲೂ, ಮೈಸೂರು ನಗರಸಭೆಯವರ ದೂರಾಲೋಚನೆಯಿಂದಲೂ ಮತ್ತು ಸರ್ಕಾರದವರ ಸಹಾಯದಿಂದಲೂ, ಇಲ್ಲಿ ಆಸ್ಪತ್ರೆಯು ಏರ್ಪಟ್ಟಿರುವುದಕ್ಕಾಗಿ ನಾವು ಹರ್ಷಿಸುತ್ತೇವೆ. ಗರ್ಭಿಣಿಯರ ಮತ್ತು ಬಾಣಂತಿಯರ ಯೋಗಕ್ಷೇಮವನ್ನೂ ಮತ್ತು ಶಿಶುಗಳ ಯೋಗಕ್ಷೇಮವನ್ನೂ ನೋಡಿಕೊಳ್ಳುವ ವ್ಯವಸ್ಥೆಗಳಿರಬೇಕಾದುದು, ಒಟ್ಟು ಜನಾಂಗದ ಹಿತಸಾಧನೆಗೆ ಅತ್ಯಗತ್ಯವಾದ ಪ್ರಾಮುಖ್ಯ ವಿಚಾರವಾಗಿದೆ. ಹೆರಿಗೆಯ ಕಾಲದಲ್ಲಿ ಸ್ತ್ರೀಯರು ಮರಣಹೊಂದುವುದೂ ಮತ್ತು ಮಕ್ಕಳು ಮೃತಪಡುವುದೂ ತೀರ ಅನಿವಾರ್ಯವೇನೂ ಅಲ್ಲ. ಅವುಗಳನ್ನು ಬಹುಮಟ್ಟಿಗೆ ತಪ್ಪಿಸುವುದು ಸಾಧ್ಯವಿದೆ. ಈ ವಿಚಾರದಲ್ಲಿ ಎಷ್ಟು ಪ್ರಗತಿಯು ಸಾಧ್ಯವೆಂಬುದನ್ನೂ, ಈ ಮರಣ ಸಂಖ್ಯೆಗಳ ದರವನ್ನು ಎಷ್ಟುಮಟ್ಟಿಗೆ ತಗ್ಗಿಸಬಹುದು ಸಾಧ್ಯವೆಂಬುದನ್ನೂ ಇತರ ದೇಶಗಳವರು ಕಾರ್ಯತಃ ತೋರಿಸಿದ್ದಾರೆ. ಪ್ರಬುದ್ಧವಾದ ದೂರದೃಷ್ಟಿಯುಳ್ಳ ಕೊಂಡ ಸಾರ್ವಜನಿಕರೂ ಸ್ಥಳೀಯ ಸಂಸ್ಥೆಗಳವರೂ ಮತ್ತು ಸರ್ಕಾರದವರೂ ಈ ವಿಚಾರದಲ್ಲಿ ಪ್ರವರ್ತಿಸುವುದರಿಂದ, ಪೂರ್ವ ದೇಶಗಳಲ್ಲಿಯೂ-ವಿಶೇಷವಾಗಿ ಇಂಡಿಯಾ ದೇಶದಲ್ಲಿಯೂ-ಪಾಶ್ಚಾತ್ಯ ದೇಶಗಳಲ್ಲಿರುವಂತೆಯೇ ಈ ಮರಣ ಸಂಖ್ಯೆಗಳ ದರವನ್ನು ಅಲ್ಪ ಪ್ರಮಾಣಕ್ಕೆ ತಗ್ಗಿಸುವುದು ಸಾಧ್ಯವೆಂಬುದನ್ನು ನಿದರ್ಶನ ಪೂರ್ವಕವಾಗಿ ತೋರಿಸಿಕೊಡುವುದು, ಮೈಸೂರು ಸಂಸ್ಥಾನದಲ್ಲಿ ಸಾಧ್ಯವಾಗಲೆಂಬುದು ನಮ್ಮ ಹಾರೈಕೆಯಾಗಿದೆ.

ಉಪಯುಕ್ತ ರೀತಿಯಲ್ಲಿ ಕೆಲಸ ಮಾಡುತ್ತಿರುವ ಗುಣಾಂಬಾ ಗರ್ಭಿಣೀ ಶಿಶು ಸಂರಕ್ಷಣೆಯ ಟ್ರಸ್ಟ್ ವ್ಯವಸ್ಥೆಯ ವಿಚಾರವನ್ನು ನೀವುಗಳು ಪ್ರಸ್ತಾಪಿಸಿದ್ದೀರಿ. ಈ ವ್ಯವಸ್ಥೆಯ ಕಾರ್ಯಕಲಾಪಗಳು ನಿಚ್ಚಣೆಯಿಂದ ನಡೆಯಲನುಕೂಲಿಸುವಂತೆ ಮೈಸೂರು ನಗರ ಸಭೆಯವರೂ ಸಹಾಯದ್ರವ್ಯವನ್ನು ಕೊಡುತ್ತಿದ್ದಾರೆ. ನಿಮಗೆ ತಿಳಿದೇ ಇರುವಂತೆ, ಪರೋಪಕಾರ ಬುದ್ಧಿಯಿಂದ ನಡೆದ ಈ ಬಗೆಯ ವ್ಯವಸ್ಥೆಗಳಲ್ಲಿ ಅದೇ ಮೊಟ್ಟ ಮೊದಲನೆಯದು. ಅದು ಏರ್ಪಟ್ಟ ತರುವಾಯ ಅನೇಕ ಧರ್ಮಾತ್ಮರು ಉದಾರವಾಗಿ ಧನಸಹಾಯ ಮಾಡಲು ಮುಂದೆ ಬಂದರು. ಈಗ ಪ್ರಾರಂಭೋತ್ಸವವು ನಡೆಯುವುದಾಗಿರುವ ಮಹಿಳೆಯರ ಆಸ್ಪತ್ರೆಯು ಧರ್ಮಬುದ್ಧಿಯುಳ್ಳ ಮಹಿಳೆಯರೊಬ್ಬರು ತಮ್ಮ ಪತಿಯ ಸ್ಮಾರಕವಾಗಿರುವಂತೆ, ಈ ಧರ್ಮಕಾರ್ಯಕ್ಕೆ ಉದಾರ ಸಹಾಯ ಮಾಡಿದ ಪರಿಣಾಮ ಫಲವಾಗಿ ಏರ್ಪಟ್ಟಿದೆ. ಶ್ರೀ ರಾಮನಾರಾಯಣ್ ಚೆಲ್ಲಾರಾಂ ಅವರು ಓದಿದ ಬಿನ್ನವತ್ತಳೆಯಿಂದ, ಅವರ ಕುಟುಂಬದವರಂತೆ ಹೊರಗಿನಿಂದ ಬಂದ ಅನೇಕ ಕುಟುಂಬಗಳವರೂ ನಮ್ಮ ಸಂಸ್ಥಾನದಲ್ಲಿ ಸುಖ ಶಾಂತಿಯುಳ್ಳದ್ದಾದ ನೆಲೆಯನ್ನು ಪಡೆದು ಹಿತವಾದ ಸನ್ನಿವೇಶವನ್ನು ಇಲ್ಲಿ ಕಂಡರೆಂಬುದೂ, ಮತ್ತು ಅವರು ಸಂಸ್ಥಾನವನ್ನು ತಮ್ಮ ಜನ್ಮಭೂಮಿಯಂತೆಯೇ ಭಾವಿಸಿ ಇಲ್ಲಿ ನೆಲಸಿದ್ದಾರೆಂಬುದೂ ವ್ಯಕ್ತವಾಗುತ್ತದೆ. ಹೊರಗಿನಿಂದ ಬಂದು ನಮ್ಮ ಸಂಸ್ಥಾನದಲ್ಲಿ ನೆಲಸಿರುವವರು, ಮೈಸೂರು ಸಂಸ್ಥಾನದಲ್ಲಿ ನಡೆದು ನಡೆಯುತ್ತಲಿರುವ ಪ್ರಗತಿ ಸಾಧನೆಗಾಗಿ ನಮ್ಮ ಇತರ ಪ್ರಜೆಗಳಂತೆಯೇ ಅವರು ಹೆಮ್ಮೆ ಪಡುತ್ತಿರುವುದನ್ನು ತಿಳಿದು ನಾವು ಹೃತ್ಪೂರ್ವಕವಾಗಿ ಹರ್ಷಿಸುತ್ತೇವೆ.

ಮೈಸೂರು ನಗರ ಸಭೆಯ ಸದಸ್ಯರೇ, ನಿಮ್ಮ ಅಧ್ಯಕ್ಷರನ್ನು ನೀವೇ ಚುನಾಯಿಸಿಕೊಳ್ಳುವ ಅಧಿಕಾರವು ನಿಮಗೆ ಈಚೆಗೆ ಲಭಿಸಿದ. ಈ ಪ್ರಗತಿಯು ನಮ್ಮ ಮನೋವೃತ್ತಿಗೂ ಮತ್ತು ಅಭಿಲಾಷೆಗೂ ಅನುಗುಣವಾದುದೆಂದು ಸೂಚಿಸಲಿಚ್ಛಿಸುತ್ತೇವೆ. ನಮ್ಮ ಸರ್ಕಾರದವರು ಇದರಿಂದ ಸತ್ಪರಿಣಾಮವುಂಟಾಗುವುದೆಂದು ಭರವಸೆಯಿಂದಲೇ ನಗರ ಸಭೆಗೆ ಈ ಹಕ್ಕನ್ನು ಕೊಟ್ಟಿದ್ದಾರೆ. ಅವರ ಭರವಸೆಯು ಸರ್ವಥಾ ಸಾರ್ಥಕವಾಗುವುದೆಂದು ನಾವು ನಂಬಿದ್ದೇವೆ. ಏಕೆಂದರೆ, ಮೈಸೂರು ನಗರ ನಿವಾಸಿಗಳಲ್ಲಿ, ಅದರ ಆರೋಗ್ಯ ಸಾಧಕ ಸನ್ನಿವೇಶಗಳನ್ನೂ ಮತ್ತು ನಗರ ಸೌಂದರ್ಯವನ್ನೂ ಕಂಡು ಹೆಮ್ಮೆಪಡದವರು ಯಾರೂ ಇಲ್ಲ. ನೀವುಗಳು, ಈ ನಗರದಲ್ಲಿ ರೂಢಮೂಲವಾಗಿ ಏರ್ಪಟ್ಟಿರುವ ಸತ್ಸಂಪ್ರದಾಯಗಳನ್ನು ಕಾಪಾಡಿ ಮುಂದುವರಿಸಿಕೊಂಡು ಬರುವಿರೆಂದು ನಾವು ದೃಢವಾಗಿ ನಂಬಿದ್ದೇವೆ. ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವಂತೆ, ನಗರ ನಿವಾಸಿಗಳ ಸೌಖ್ಯಕ್ಕಾಗಿ ಏರ್ಪಟ್ಟಿರುವ ನಾನಾಮುಖವಾದ ಸೌಕರ್ಯಗಳನ್ನೂ ಮತ್ತಷ್ಟು ಉತ್ತಮಗೊಳಿಸಿ ವೃದ್ಧಿಪಡಿಸುವಿರೆಂದೂ ಕೂಡ, ನಾವು ದೃಢವಾಗಿ ನಂಬಿದ್ದೇವೆ.

ಬೀಡಿ ಕೆಲಸಗಾರರ ಪ್ರತಿಭಟನೆ

ರಾಜಧಾನಿಯ ಬೀಡಿ ಕಾರ್ಮಿಕ ಸಂಘದ ಸಭೆಯು ಕಳೆದ ೩ನೇ ತಾ॥ ನಡೆದು, ಹೈದರಾಬಾದಿನಲ್ಲಿ ೮ ಜನ ರೈತ ಮುಖಂಡರ ಮೇಲೆ ವಿಧಿಸಿರುವ ಮರಣ ದಂಡನೆಯನ್ನು ರದ್ದುಗೊಳಿಸುವಂತೆ ಒತ್ತಾಯ ಮಾಡಲು ಬೀಡಿ ಮತ್ತು ಇತರ ಕೆಲಸಗಾರರ ರುಜುವುಳ್ಳ ಅರ್ಜಿಯನ್ನು ತಯಾರು ಮಾಡಬೇಕೆಂದು ನಿರ್ಧರಿಸಲಾಯಿತು. ಇಟಲಿಯಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಮಿಕ ಫೆಡರೇಷನ್ ಸಭೆಯಲ್ಲಿ ಭಾಗವಹಿಸಲು ಭಾರತ ಕಾರ್ಮಿಕ ಮುಖಂಡರಾದ ಎಸ್. ಎ. ಡಾಂಗೆ, ಮಿರಜ್‌ಕರ್ ಮುಂತಾದವರಿಗೆ ರಹದಾರಿ ಕೊಡದಿರುವುದನ್ನೂ, ಬೊಂಬಾಯಿನಲ್ಲಿ ಶಾಂತಿ ಸಮ್ಮೇಳನಕ್ಕೆ ಪ್ರತಿಬಂಧಕ ಹಾಕಿರುವುದನ್ನೂ, ಮತ್ತು ಕೊಚ್ಚಿಯಲ್ಲಿ ತಾಟಾ ಎಣ್ಣೆ ಕಂಪೆನಿ ಮತ್ತು ಕಾಶೀಶ್ವರ ಕಾರ್ಖಾನೆಗಳನ್ನು ಮಾಲೀಕರು ಮುಚ್ಚಿರುವುದನ್ನೂ ಖಂಡಿಸಲಾಯಿತು.

ಪಾಕಿಸ್ತಾನದ ಸೈನ್ಯಕ್ಕೆ ವಿದೇಶೀಯರು

ಕಾಶ್ಮೀರದ ಬಿಕ್ಕಟ್ಟಿನ ಬಗ್ಗೆ ಮುಂದೆ ಯುದ್ಧ ಸಂಭವಿಸುವುದಾದರೆ, ಅದಕ್ಕೆ ಸಿದ್ಧವಾಗಿರಲು ಪಾಕೀಸ್ತಾನ ಸರ್ಕಾರದವರು ತಮ್ಮ ಸೈನ್ಯಕ್ಕೆ ವಿದೇಶೀಯರನ್ನು ಸೇರಿಸಿಕೊಳ್ಳಲು ಪ್ರಾರಂಭಿಸಿದ್ದಾರೆ. ಈ ಸೈನ್ಯದಲ್ಲಿ ಈಗಾಗಲೇ ಅಚ್ಚರು ಇದ್ದಾರೆಂದೂ ಅನೇಕರು ಸಧ್ಯದಲ್ಲಿಯೇ ಬರಲಿರುವರೆಂದೂ ಹೇಳಲಾಗಿದೆ. ಪ್ರಧಾನಿ ಲಿಯಾಖತ್ ಅಲಿ ಖಾನರವರು ರಷ್ಯಕ್ಕೆ ಭೇಟಿ ಕೊಟ್ಟಾಗ, ತಮ್ಮ ಸೈನ್ಯವನ್ನು ತರಪೇತು ಮಾಡಲು ರಷ್ಯದ ಉನ್ನತಾಧಿಕಾರಿಗಳನ್ನು ಕಳುಹಿಸಬೇಕೆಂದು ಪ್ರಾರ್ಥಿಸುವರೆಂದೂ ಗೊತ್ತಾಗಿದೆ. ಆಫ್‌ಘಾನಿಸ್ಥಾನ ಮತ್ತು ಕಾಶ್ಮೀರಗಳನ್ನು ಎದುರಿಸಲು ಪಾಕೀಸ್ತಾನವು ಅಗಾಧ ಮಿಲಟರಿ ಸಿದ್ಧತೆ ಮಾಡುತ್ತಿದೆಯೆಂದೂ ಹೇಳಲಾಗಿದೆ.

ಗೋಪಾಲರಾಯರ ಭವನಗಳನ್ನು ಸರ್ಕಾರದವರು ಕೊಂಡರು

ಬೆಂಗಳೂರು. ೯

ಗೋಪಾಲರಾಯರ ಆಸ್ತಿಪಾಸ್ತಿಗಳಿಗೆ ಸೇರಿದ್ದು, ಈಗ ವಿಚಾರಣಾ ಸಮಿತಿಯ ಅಧೀನದಲ್ಲಿರುವ ಏಷ್ಯಾಟಿಕ್ ಭವನ ಮತ್ತು ಇತರ ೨ ಮನೆಗಳನ್ನು ಸರ್ಕಾರದವರು ೧೧ ಲಕ್ಷ ರೂ ಗೆ ಕೊಂಡುಕೊಂಡಿದ್ದಾರೆಂದು ತಿಳಿದುಬಂದಿದೆ.

ಸಂಸ್ಥಾನ ಪ್ರಧಾನಿಗಳ ಸಮ್ಮೇಳನ

ಸಂಸ್ಥಾನಗಳ ಆಡಳಿತ ಮತ್ತು ಇತರ ರಾಜಕೀಯ ವಿಷಯಗಳನ್ನು ಪರಿಶೀಲಿಸಲು, ಇದೇ ೧೮ನೇ ತಾ॥ನಿಂದ ದೆಹಲಿಯಲ್ಲಿ ಸಂಸ್ಥಾನಗಳ ಪ್ರಧಾನಿ ಮತ್ತು ರಾಜಪ್ರಮುಖರುಗಳ ಸಮ್ಮೇಳನವು ನಡೆಯುವುದು. ಇದರಲ್ಲಿ ಭಾಗ ವಹಿಸಲು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇದೇ ೧೬ನೇ ತಾ॥ ದೆಹಲಿಗೆ ಪ್ರಯಾಣ ಬೆಳೆಸುವರು.

ಸಂಗೀತ ಕಛೇರಿ

ಮೈಸೂರು. ೯

ಹುಣ್ಣಿಮೆ ಪ್ರಯುಕ್ತ ನಾಳೆ ರಾತ್ರಿ ೮-೩೦ ಗಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿ ಮಹಡಿಮೇಲೆ ಮೈಸೂರು ಬ್ರದರ್ಸ್‌ರವರ ಸಂಗೀತವು ನಡೆಯುತ್ತದೆ. ಸರ್ವರಿಗೂ ಸ್ವಾಗತವುಂಟು.

ಹರಿಕಥೆ

ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ರಾತ್ರಿ ೭ ಗಂಟೆಗೆ ಮಾಗಡಿ ತಾಲ್ಲೂಕು ಚಕ್ರಬಾವಿ ಅರ್ಚಕ ರಾಮಾನುಜದಾಸರಿಂದ ಶನಿ ಮಹಾತ್ಮೆ ಎಂಬ ಹರಿಕಥೆ ನಡೆಯುವುದು.

ಚಿನ್ನ ಪತ್ತೆಮಾಡಲು ಸರ್ವೆ

ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಚಿನ್ನವು ದೊರೆಯುವುದೆಂಬುದನ್ನು ಕಂಡುಹಿಡಿಯಲು ಕೋಲಾರದ ಚಿನ್ನದ ಗಣಿಯ ಚಾಂಪಿಯನ್ ರೀಫ್ ಕಂಪೆನಿಯವರ ಸಹಾಯವನ್ನು ಪಡೆಯಲಾಗುತ್ತಿದೆ. ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ವಾರಸುದಾರರಿಲ್ಲದುದರಿಂದ ರಾಮಸ್ವಾಮಿ ನಾಯ್ಕರ ವಿವಾಹ

ತಮ್ಮ ಆಸ್ತಿಪಾಸ್ತಿಗಳಿಗೆ ವಾರಸುದಾರರು ಬೇಕಾಗುವುದರಿಂದ ತಾವು ೩೧ ವರ್ಷದ ಶ್ರೀಮತಿ ಮಣಿ ಅಮ್ಮಯ್ಯಾರ್ ರವರನ್ನು ವಿವಾಹವಾಗುವುದಾಗಿ ಮದ್ರಾಸಿನ ದ್ರಾವಿಡ ಸಂಘದ' ನಾಯಕರಾದ ೭೦ ವರ್ಷದ ಶ್ರೀ ಇ ವಿ ರಾಮಸ್ವಾಮಿ ನಾಯಕರು ತಿಳಿಸಿರುತ್ತಾರೆ

ದೆಹಲಿಯಲ್ಲಿರುವ ರಾಜರ ಅರಮನೆಗಳ ವಶ

ದೆಹಲಿಯಲ್ಲಿ ಸಂಸ್ಥಾನಾಧೀಶರುಗಳಿಗೆ ಸೇರಿದ್ದ ೧೬ ಅರಮನೆಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು ಪರದೇಶಗಳ ರಾಯಭಾರಿಗಳ ವಾಸಕ್ಕಾಗಿ ಕೊಡಲು ಭಾರತ ಸರ್ಕಾರವು ನಿರ್ಧರಿಸಿದೆ

ಮಳೆಗಾಗಿ ಪ್ರಾರ್ಥನಾ ಸಭೆ

ಸೂರತ್ತಿನಲ್ಲಿ ಮಳೆಗಾಗಿ ಒಬರಂಗ ಪ್ರಾರ್ಥನಾ ಸಭೆಗಳು ಈ ವಾರದಲ್ಲಿ ನಡೆಯುವುವೆಂದೂ, ಅಲ್ಲಿನ ಸುಪ್ರಸಿದ್ಧ ಸಂಗೀತಗಾರರಾದ ಪಂಡಿತ ಓಂಕಾರ ನಾಥ್ ಠಾಕೂರ್‌ರವರು ಭಜನೆ ನಡೆಸುವರೆಂದೂ ಹೇಳಲಾಗಿದೆ ಇತರ ಸುಪ್ರಸಿದ್ಧ ಗಾಯಕರುಗಳೂ ಇದರಲ್ಲಿ ಭಾಗವಹಿಸುವರು

ಬಿಸಲಿನ ತಾಪದಿಂದ ೪೦೦ ಜನರ ಮರಣ

ಅಮೆರಿಕದಲ್ಲಿ ಕಳೆದ ವಾರ ವಿಪರೀತ ಶಖೆಯಿಂದ ೪೦೦ ಜನರು ಸತ್ತರೆಂದು ವರದಿಯಾಗಿದೆ ೯೩ ಜನರು ರಸ್ತೆಯಲ್ಲಿ ಹಠಾತ್ತನೆ ಮರಣ ಹೊಂದಿದರೆಂದೂ, ೨೬೩ ಮಂದಿ ಬಿಸಲಿನ ತಾಪವನ್ನು ಕಡಿಮೆ ಮಾಡಿಕೊಳ್ಳಲು ನೀರಿನಲ್ಲಿ ಮುಳುಗಿ ಪ್ರಾಣ ಬಿಟ್ಟರೆಂದೂ ಹೇಳಲಾಗಿದೆ

ಹೈದರಾಬಾದು ಸರಕಾರದಿಂದ ಬೆಳ್ಳಿಯ ಮಾರಾಟ

ನಗದು ಹಣ ಪಡೆಯಲು ಬೆಳ್ಳಿಯ ಗಟ್ಟಿಗಳನ್ನು ಮಾರಲು ಹೈದರಾಬಾದ್ ಸರ್ಕಾರವು ನಿರ್ಧರಿಸಿದೆ ಅದನ್ನು ಭಾರತದ ರಿಜರ್ವ್ ಬ್ಯಾಂಕಿನವರು ಮಾರಾಟ ಮಾಡುವರು

ಹರಿಕಥೆ

ಮೈಸೂರು ೯

ಕೊತ್ವಾಲ ರಾಮಯ್ಯನವರ ಬೀದಿ ಶ್ರೀ ಅನಂತಪ್ಪನವರ ಗೃಹದಲ್ಲಿ ಈ ರಾತ್ರಿ ೯ ಗಂಟೆಗೆ ಬೆಂಗಳೂರಿನ ಹರಿಕಥಾ ವಿಶಾರದ ವೇ॥ ಸುಬ್ಬರಾಯ ದಾಸರಿಂದ ಕುಮಾರ ರಾಮಾ ಎಂಬ ಉಪನಿಷದ್ಹರಿಕಥೆಯು ನಡೆಯುವುದು

ಹೋಟೆಲು ಮಾಲೀಕರಿಂದ ಷಾಪ್ ಅಸಿಸ್ಟೆಂಟ್ ಕಾನೂನಿನ ಭಂಗವೇ?

ಸಂಸ್ಥಾನದಲ್ಲಿ ಷಾಪ್ ಅಸಿಸ್ಟೆಂಟ್ ಕಾನೂನು ಜಾರಿಗೆ ಬಂದು ಅನೇಕ ತಿಂಗಳಾದರೂ ಕೂಡ ರಾಜಧಾನಿಯ ಕೆಲವು ಹೋಟೆಲು ಮಾಲೀಕರುಗಳು ತಮ್ಮ ಕೆಲಸಗಾರರಿಗೆ ಸಲ್ಲತಕ್ಕ ವಾರದ ರಜಾ ಮತ್ತು ೮ ಗಂಟೆಗಳ ಕಾಲದ ನಿಯಮಗಳನ್ನು ಅನುಸರಿಸುತ್ತಿಲ್ಲವೆಂದೂ, ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಸರಿಪಡಿಸಬೇಕೆಂದೂ ನಗರ ಹೋಟಲು ಕೆಲಸಗಾರರ ಸಂಘದ ಉಪ ಕಾರ್ಯದರ್ಶಿಗಳು ಕೋರಿರುತ್ತಾರೆ

ಜಯ ಅಂಡ್ ಕಂಪೆನಿ
ಸಯ್ಯಾಜೀರಾವ್ ರೋಡ್, ಮೈಸೂರು
ಟ್ರಂಕ್ ಸೂಟ್‌ಕೇಸುಗಳ ಅಂಗಡಿ ಮತ್ತು ಅಂಡರ್ ಸರ್ಟಿಂಗ್ ಕಟಾ ವಾಯಿಲ್, ಮತ್ತು ಇತರ ಬಟ್ಟೆಗಳು ಬಂದಿವೆ

Morning Shows at
CHAMUNDESWARI
TALKIES
From 8th July 49 for 3 days
at 10-30 a m
Frank Capra's
It's a Wonderful Life
Starring - James Stewart & Donna Reed
- Next Morning Show -
Boris Karloff in
ISLE OF THE DEAD

ಸಿಟಿ ಟ್ಯುಟೋರಿಯಲ್ ಕಾಲೇಜ್
1531 ವಾಣೀವಿಲಾಸ ರಸ್ತೆ, ಮೈಸೂರು
M S ಪರೀಕ್ಷೆಯಲ್ಲಿ ಪಾಸಾಗಿರುವ ವಿದ್ಯಾರ್ಥಿನಿಯರನ್ನು ಎರಡೇ ವರ್ಷಗಳಲ್ಲಿ S S L C ಪರೀಕ್ಷೆಗೆ (ಇಂಗ್ಲಿಷ್ ಮೀಡಿಯಂ) ತರಬೇತು ಮಾಡುವ ಮತ್ತು M S ಪರೀಕ್ಷೆಗ ಉತ್ತಮ ರೀತಿಯ ಶಿಕ್ಷಣ ಕೊಡುವ
ತರಗತಿಗಳು ಅನುಭವಸ್ಥ ಉಪಾಧ್ಯಾಯರುಗಳಿಂದ ನಡೆಸಲ್ಪಡುತ್ತವೆ
ವಿವರಗಳಿಗ ವಿಚಾರಿಸಿ

ಸ್ಪೆಷಲ್ ಎರಡೇ ನಾಟಕಗಳು
ಹುಣಸೂರು ಮಾಧು ಪಾರ್ಟಿ
ಟೌನ್ ಹಾಲಿನಲ್ಲಿ
10-7-49ನೇ ಭಾನುವಾರ
11-7-49ನೇ ಸೋಮವಾರ
ಸಂಜೆ 6-30 ಕ್ಕೆ
ಶ್ರೀ ಹುಣಸೂರ್‌ರವರ
ಧರ್ಮ ರತ್ನಾಕರ
ಶ್ರೀ ಹುಣಸೂರು ಮಾಧವರಾವ್, ಸಮರ್ಥ ಮಂಡಲದ ನಟ ನಟಿಯರು

ಶ್ರೀ ಗಾಯತ್ರೀ
10 7 49ರಿಂದ 4 ದಿನಗಳು ಮಾತ್ರ
ಪ್ರತಿ ದಿನ 3 ಆಟಗಳು
ನೀವು ನಕ್ಕು, ಅಚ್ಚರಿ, ಆಕರ್ಷಣೀಯ ವರ್ಣರಂಜಿತ ವ ಸ್ಟರ್ನ್ ಚಿತ್ರ
ದಿ ಪೇಲ್ ಫೇಸ್
THE PALE FACE
ಪಾತ್ರ ಬಾಬ್ ಹೋಪ್, ಜೇನ್ ರಸಲ್
- Next Change -
THE GOOD EARTH
- ನಿರೀಕ್ಷಿಸಿ -
ಅಡ್ವೆಂಚರ್ಸ್ ಆಫ್ - ಡಾನ್ ಜುವಾನ್
[ವರ್ಣರಂಜಿತ ಚಿತ್ರ]
ಪಾತ್ರ ಎರಾಲ್ ಫ್ಲಿನ್

RAJKAMAL, MYSORE
From 8- 7—49 for 4 days only
In Its Glorious Second Week
HAMLET
— ಬೆಳಗಿನ ಪ್ರದರ್ಶನ —
9-7 49ರಿಂದ 3 ದಿನಗಳು ಮಾತ್ರ
ಜಾದು-ಇ-ಅಂಗೂಟಿ
[ಹಿಂದಿ]
ಭೂಮಿಕೆ ಎಸಿಲ ಕ ನೂರ್, ಶಾಂತಾ ಪಟೇಲ್ ಉರ್ಸಾರ್

ಶ್ರೀ ಕೃಷ್ಣ ಭವನ್ ಸ್ಟೋರ್ಸ್,
ದೇವರಾಜಾ ಮಾರ್ಕೆಟ್ ಚೌಕ,
ಮೈಸೂರು
ಈಗ ತಾನೇ ಬಂದಿರುವ ಶ್ರೇಷ್ಠವಾದ ಮಾಲಿನ ಪುಡಿ, ವಾಲ್ ಬರೀಸ್ ಕಾಂಪೌಂಡ್, ಅಪ್ಪಟ ರವೆ, ಪರಿಶುದ್ಧವಾದ ಬೆಣ್ಣೆ, ಹಸನಾದ ಕಾಫಿ ಪುಡಿ, ಒಳ್ಳೆಯ ಕಾಫಿ ಬೀಜ, ಆಲಿವರ್ ಬೀಗಗಳು, ಇಂಗ್ಲಿಷ್ ಬಿಸ್ಕತ್ತುಗಳು, ಧಾರಾಪುರಂ ಹಬೀಬುಲ್ಲಾ ತುಪ್ಪ ಮತ್ತು ಇತರ ಎಲ್ಲಾ ವಿಧವಾದ ದಿನಸಿ ಪದಾರ್ಥಗಳೂ ದೊರೆಯುತ್ತವೆ

ಲಕ್ಷ್ಮೀ ಥಿಯೇಟರ್
9-7-49ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಜೀವನಕಲಾ ಚಿತ್ರದವರ ಸಂಗೀತಮಯ ಸಾಮಾಜಿಕ ಹಿಂದಿ ಚಿತ್ರ
ಹುವ-ಸವೇರ
(HUA-SAVERA)
ಭೂಮಿಕೆ – ನಯನತಾರ, ಸಪ್ರು

Edited, printed and published by A. R Nagarajan, at Sadhvi Press, D Subbaiah Road, Mysore

ಬಂಗಲೆ ಕ್ರಯಕ್ಕಿದೆ
ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾ ಶ್ರೀನಿವಾಸದೇವರ ದೇವಸ್ಥಾನದ ಸಮೀಪದಲ್ಲಿರುವ, ನಲ್ಲಿ, ದೀಪ, ಗ್ಯಾರೇಜು ಮತ್ತು ಕಾಂಪೌಂಡ್ ಸಹ ಉಳ್ಳ ತಾರಸೀ ಬಂಗ್ಲೆ ಕ್ರಯಕ್ಕಿದೆ ಬಾಡಿಗೆಗೂ ಕೊಡಲು ಸಿದ್ಧ ಕೂಡಲೇ ಸ್ವಾಧೀನ ಸಹ ಕೊಡಲಾಗುತ್ತೆ ಹೆಚ್ಚಿನ ವಿವರಗಳನ್ನು ಕೆಳಗಿನ ವಿಳಾಸದಲ್ಲಿ ತಿಳಿಯಬಹುದು
ಜಿ. ವಿ. ದೇಶಿಕಾಚಾರ್,
ಪ್ರೊಪ್ರೈಟರ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಚಾಮುಂಡೇಶ್ವರೀ ಮತ್ತು ಗಣೇಶಾ ಟಾಕೀಸುಗಳಲ್ಲಿ
8-7 49ರಿಂದ ಅಮೋಘ ಆರಂಭ
ದಿನವಹಿ ಮೂರು ಆಟಗಳು
ರಕ್ಷರೇಖಾ
(ತೆಲುಗು)
ಮುಖ್ಯ ಪಾತ್ರ ಭಾನುಮತಿ, ನಾಗೇಶ್ವರರಾವ್

ಪ್ರಭಾ
9-7-49ನೇ ಶನಿವಾರದಿಂದ ಪ್ರಾರಂಭ
ದಿನವಹಿ 3 ಆಟಗಳು ಮ್ಯಾಟಿನಿ 1-15 ಗಂಟೆಗೆ
ರಾಜಕಮಲ್ ರವರ ಪುಷ್ಪಮಾಲೆ
ಶ್ರೀ॥ ಶಾಂತಾರಾಮರವರ ಕಲಾ ಕೃತಿ
ಅಪ್ನಾ ದೇಶ್
(ಹಿಂದಿ)
ಪಾತ್ರ - ಪುಷ್ಪರಾಣಿ, ಉಮೇಶ್ ಶರ್ಮ.
(ಸುಧಾರಿಸಿ ಕಾಣಿಸುವಾಗ ಕಾರ್ಯಕ್ರಮ ಬದಲಾವಣೆ ಮಾಡಲಾಗಿದೆ)

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧೦-೭-೪೯ [ಸಂಚಿಕೆ ೪೪

ಬಂಜರು ಜಮೀನುಗಳ ಸಾಗುವಳಿಗೆ ಉತ್ತೇಜನ

ವರ್ಧಂತಿ ಮೆರವಣಿಗೆ ಇಲ್ಲ

ಮೈಸೂರು ೧೦

ಈ ಸಾರಿ ಶ್ರೀಮನ್ ಮಹಾರಾಜರವರ ವರ್ಧಂತಿ ಸಂಬಂಧವಾಗಿ ಮೆರವಣಿಗೆ ನಡೆಯುವುದಿಲ್ಲವೆಂದು ಸರಕಾರದ ಪ್ರಕಟಣೆ ತಿಳಿಸಿರುತ್ತದೆ

ಕಾರ್ಯಕಾರಿ ಸಮಿತಿ ಸಭೆಗೆ ವಿಶೇಷ ಆಹ್ವಾನಿತರು

ನಾಳೆ ದಿನ ಬೆಂಗಳೂರಿನಲ್ಲಿ ಸೇರಲಿರುವ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗೆ ಶ್ರೀ ತಗಡೂರು ರಾಮಚಂದ್ರರಾವ್, ಕೆ. ಟಿ ಸತ್ಯನಾರಾಯಣ ಶೆಟ್ಟಿ, ಪಿ ಎಸ್ ನಾರಾಯಣರಾವ್ ಮುಂತಾದ ಹಳೆಯ ಕಾಂಗ್ರೆಸ್ಸಿನವರನ್ನು ವಿಶೇಷ ಆಹ್ವಾನದ ಮೇಲೆ ಕರೆಯಲಾಗಿದೆ ಕಾಂಗ್ರೆಸ್ಸಿನ ಮೂಲಭೂತವಾದ ಹಲವು ಪ್ರಶ್ನೆಗಳು ಉದ್ಭವಿಸಿರುವುದರಿಂದ ಅವರನ್ನು ಆಹ್ವಾನಿಸಲಾಗಿದೆಯೆಂದು ಗೊತ್ತಾಗಿದೆ

ಪ್ರಥಮ ಶಿಶುವಿಗೆ ಬಹುಮಾನ

ನಿನ್ನೆ ದಿನ ಶ್ರೀಮನ್ ಮಹಾರಾಜರವರಿಂದ ಆರಂಭಿಸಲ್ಪಟ್ಟ ಮೋಹನದಾಸ ತುಳಸೀದಾಸ್ ಆಸ್ಪತ್ರೆಯಲ್ಲಿ ಹುಟ್ಟಿದ ಮೊದಲನೆ ಮಗುವಿಗೆ ಓರಿಯಂಟಲ್ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ ಬಿ ಎಸ್ ಸುಬ್ಬರಾಯರು. ಬೆಳ್ಳಿಯ ಹಾಲು ಕುಡಿಸುವ ಸೆಟ್ಟೊಂದನ್ನು ಕೊಡುವುದಾಗಿಯೂ, ಪೌರಸಭಾ ಸದಸ್ಯರಾದ ಶ್ರೀ ಇ ಪಿ. ನಂಜಪ್ಪನವರು ಐವತ್ತು ರೂಪಾಯಿಗಳನ್ನು ಬಹುಮಾನವಾಗಿ ಕೊಡುವುದಾಗಿಯೂ ಒಪ್ಪಿರುವರು

ಸಂಗೀತ ಕಛೇರಿ

ಈ ರಾತ್ರಿ ೮-೩೦ಕ್ಕೆ ಸಾಧ್ವಿ ಪತ್ರಿಕೆಯ ಕಛೇರಿ ಮಹಡಿ ಮೇಲೆ ಮೈಸೂರು ಬ್ರದರ್ಸ್‌ರವರ ಸಂಗೀತವು ವಿದ್ವಾನ್ ವಿಶ್ವೇಶ್ವರನ್‌ರವರ ವೀಣಾವಾದನ ಮತ್ತು ವಿದ್ವಾನ್ ರಾಮಕೃಷ್ಣಯ್ಯರ್‌ರವರ ಮೃದಂಗದೊಡನೆ ನಡೆಯುವುದು ಸರ್ವರಿಗೂ ಸ್ವಾಗತವುಂಟು

ವಿದ್ಯಾರ್ಥಿ ಪರಿಷತ್ತು

ವಿದ್ಯಾರ್ಥಿ ಪರಿಷತ್ತಿನ ಮೈಸೂರು ಶಾಖೆಯು ಈ ವರ್ಷದಲ್ಲಿ ಸದಸ್ಯರ ಗಳನ್ನು ಕೂಡಿಸುವ ಕೆಲಸವನ್ನು ಭರದಿಂದ ಪ್ರಾರಂಭಿಸಿದೆ ವಿದ್ಯಾರ್ಥಿಗಳು ಆಯಾ ಶಾಲೆ ಕಾಲೇಜುಗಳ ಪ್ರತಿನಿಧಿಗಳೊಡನೆ ಸದಸ್ಯರಾಗುವ ನಿಗಾಲಕ ಚಂದಾ ನೀಡಿ ಸಹಕರಿಸಬೇಕಾಗಿ ಕೋರಲಾಗಿದೆ ರಸೀತಿ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವವರೆಲ್ಲರೂ ಈ ತಿಂಗಳು ೧೫ ನೇ ತಾರೀ ಖಿನೊಳಗೆ ಸದಸ್ಯರುಗಳನ್ನು ಕೂಡಿಸುವ ಕಾರ್ಯವನ್ನು ಪೂರೈಸಿ ಸದರಿ ಪುಸ್ತಕಗಳನ್ನು ವಾಪಸು ತಂದು ಕೊಡಬೇಕಾಗಿ ಕಾರ್ಯದರ್ಶಿಗಳಾದ ಎನ್ ಮಧ್ವರಾಯರು ಕೋರಿರುತ್ತಾರೆ

ಶಾಸನಸಭಾ ಸದಸ್ಯರ ಮೇಲೆ ಮಾನಭಂಗದ ಮೊಕದ್ದಮೆ

ಲಕ್ನೋವಿನ ಶಾಸನ ಸಭಾ ಕಾಂಗ್ರೆಸ್ ಸದಸ್ಯರಾದ ಪಂಡಿತ ಒಸ್ಸಿಧಾರ್ ಮಿಶ್ರ ಎಂಬುವರು ಗೋಲಾ ಗೋಕರ್ನಾಥ್ ನಿರಾಶ್ರಿತರ ಶಿಬಿರದಲ್ಲಿದ್ದ ೧೯ ವಯಸ್ಸಿನ ಮದುವೆಯಾದ ಯುವತಿಯನ್ನು ಅಪಹರಿಸಿ ಮಾನಭಂಗ ಮಾಡಿದರೆಂಬ ಆಪಾದನೆಯ ಮೇಲೆ ಅಲ್ಲಿನ ನ್ಯಾಯಾಧೀಶರ ಕೋರ್ಟಿನಲ್ಲಿ ಅವರ ಮೇಲೆ ಮೊಕದ್ದಮೆ ನಡೆಯುತ್ತಿದೆ

ಜಾಡಮಾಲಿಗಳನ್ನು ವಜಾ ಮಾಡಲು ನಿರ್ಧಾರ

ಕಳೆದ ಮೇ ೧೫ನೇ ತಾ|| ನಿಂದ ಬೊಂಬಾಯಿನ ೪ ಸಾವಿರ ಜಾಡಮಾಲಿಗಳು ಮುಷ್ಕರ ಹೂಡಿದ್ದಾರಷ್ಟೆ? ಅವರುಗಳು ಇದೇ ೭ನೇ ತಾ|| ನೊಳಗಾಗಿ ಕೆಲಸಕ್ಕೆ ಹಿಂತಿರುಗಬೇಕೆಂದು ಎಚ್ಚರಿಕೆ ಕೊಟ್ಟಿದ್ದರೂ, ಅವರುಗಳು ಬಾರದಿದ್ದುದರಿಂದ ಅವರನ್ನು ಕೆಲಸದಿಂದ ವಜಾ ಮಾಡಲಾಗಿದೆಯೆಂದು ಅಲ್ಲಿನ ಪುರಸಭೆಯವರು ತಿಳಿಸಿದ್ದಾರೆ

ಕೊನೆಯವರೆಗೂ ಹೋರಾಡಲು ಚೀನಾ ನಿರ್ಧಾರ

ಚೀನಾ ಕಮ್ಯೂನಿಸ್ಟರ ಮೇಲೆ ಕೊನೆಯವರೆಗೂ ಹೋರಾಟ ನಡೆಸಬೇಕೆಂದು ಚಿಯಾಂಗ್ ಕೈಷೇಕ್, ಅಧ್ಯಕ್ಷ ಲಿಸಂಗ್ಜೆನ್ ಮತ್ತು ಇತರ ರಾಷ್ಟ್ರೀಯ ನಾಯಕರುಗಳು ನಿರ್ಧರಿಸಿದ್ದಾರೆ

ಮಧ್ಯಪ್ರಾಚ್ಯದ ಮಕ್ಕಳಿಗಾಗಿ ೩೯ ಲಕ್ಷ ರೂ. ಸಹಾಯ

ಮಧ್ಯಪ್ರಾಚ್ಯದ ನಿರಾಶ್ರಿತ ಅರಬ್ಬರ ಮತ್ತು ಮಕ್ಕಳಿಗೆ ಉಚಿತ ಆಹಾರ ಒದಗಿಸಲು ೩೯ ಲಕ್ಷ ರೂ ಅನ್ನು ಪ್ಯಾರಿಸ್ಸಿನಲ್ಲಿ ಸೇರಿರುವ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ಪೋಷಕ ನಿಧಿಯ ಸಭೆಯವರು ಮಂಜೂರು ಮಾಡಿದ್ದಾರೆ

ಸೋಷಲಿಸ್ಟರ ಬಂಧನ ಮತ್ತು ಬಿಡುಗಡೆ

ರಾಜಧಾನಿಯ ಸೋಷಲಿಸ್ಟ್ ಕಾರ್ಯಕರ್ತರಾದ ಶ್ರೀಗಳು ಶ್ರೀಕಂಠ ಶರ್ಮ, ರಾಮಶೆಟ್ಟಿ, ರಾಮನ ಪತಿ, ಭಾರತೀ ಶಂಕರ್ ಮತ್ತು ವೆಂಕೋಬಾಚಾರ್ ಇವರುಗಳು ಬೆಂಗಳೂರಿನಲ್ಲಿ ಸೇರಲಿರುವ ಕಾರ್ಮಿಕ ಸಮ್ಮೇಳನದ ಸಂಬಂಧವಾಗಿ ಹಸ್ತಪತ್ರಿಕೆ ಆನ್ನು ಹಂಚುತ್ತಿದ್ದಾಗ ಪೋಲೀಸರು ನಿನ್ನೆ ಬೆಳಗ್ಗೆ ಹಂಚುತ್ತಿದ್ದರೆಂದು ಅವರುಗಳನ್ನು ದಸ್ತಗಿರಿ ಮಾಡಿ ಲಕ್ಷ್ಮೀಪುರಂ ಸ್ಟೇಷನ್ನಿಗೆ ಕರೆದೊಯ್ಯಲಾಗಿತ್ತು ಮೂರು ಗಂಟೆ ಕಾಲ ಠಾಣೆಯಲ್ಲಿದ್ದ ನಂತರ ಅವರುಗಳ ಬಿಡುಗಡೆಯಾಯಿತು

○ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬ ನಿಲಯದ ಮುಂದೆ ಈ ಸಂಜೆ ೬ ಗಂಟೆಗೆ ಶ್ರೀ ನ. ಸಿಬಾಗಲು ನಾರಾಯಣದಾಸರಿಂದ ಅಹಲ್ಯಾ ಶಾಪವಿಮೋಚನ ಎಂಬ ಹರಿಕಥೆ ನಡೆಯುವುದು

ದೊಡ್ಡ ಜವರಪ್ಪನವರ ನಿಧನ

ಮೈಸೂರು ೧೦

ರಾಜಧಾನಿಯ ಸುಪ್ರಸಿದ್ಧ ವರ್ತಕರಾದ ಶ್ರೀ ದೊಡ್ಡ ಜವರಪ್ಪನವರು ಇಂದು ಬೆಳಗ್ಗೆ ೭-೩೦ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಹಲವು ತಿಂಗಳಿಂದ ವ್ಯಾಧಿಯಿಂದ ನರಳುತ್ತಿದ್ದರು ಅವರಿಗೆ ಇಬ್ಬರು ಪುತ್ರರೂ ಇಬ್ಬರು ಹೆಣ್ಣು ಮಕ್ಕಳೂ ಪತ್ನಿಯೂ ಇದ್ದಾರೆ ಹಲವು ವರ್ಷಗಳ ಹಿಂದೆ ಅವರು ನಗರ ಸಭೆಯ ಸದಸ್ಯರಾಗಿದ್ದರು ಅವರಿಗೆ ನಾಟಕ ಮುಂತಾದ ಕಲೆಗಳಲ್ಲಿ ವಿಶೇಷ ಅಭಿರುಚಿ ಇತ್ತು ಮೃತರ ಆತ್ಮಕ್ಕೆ ಜಗದಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸಿ, ಅವರ ಬಂಧು ಮಿತ್ರರಿಗೆ ಹೃತ್ಪೂರ್ವಕ ಅನುತಾಪವನ್ನು ಸೂಚಿಸುತ್ತೇವೆ

ಉಪನ್ಯಾಸ

ರಾಜಧಾನಿಯ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ವಿ|| ವೈ ಆರ್ ರಾಮಶಾಸ್ತ್ರಿಗಳು ಸೌಂದರ್ಯಸೋಪಾನ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ವೀಣಾವಾದನ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ಈ ಸಂಜೆ ೭ ಗಂಟೆಗೆ ಗಾನವಿಶಾರದ ಬಿ ದೇವೇಂದ್ರಪ್ಪನವರ ವೀಣಾವಾದನವು ಆ|| ವಿ|| ಸೀತಾರಾಮಶಾಸ್ತ್ರಿಗಳ ಮೃದಂಗದೊಡನೆ ಏರ್ಪಾಡಾಗಿರುತ್ತದೆ

ಭಾರತ ಸರಕಾರದಲ್ಲಿ ಮೈಸೂರಿನವರಿಗೆ ದೊಡ್ಡ ಹುದ್ದೆ

ಮೈಸೂರು ಸರಕಾರದ ಜಿಯೋಲಜಿಸ್ಟರಾದ ಶ್ರೀ ಬಿ ರಾಮಚಂದ್ರರಾಯರನ್ನು ಇಂಡಿಯಾ ಸರಕಾರಕ್ಕೆ ಎರವಲು ಕೊಡಲಾಗಿದೆ ಇವರು ಭಾರತದ ಭೂಗರ್ಭ ಶಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತರಲಿರುವರೆಂದು ಹೇಳಲಾಗಿದೆ

ರಂಜಾನ್‌ನಲ್ಲಿ ಉಪವಾಸ ಮಾಡದವರಿಗೆ ಶಿಕ್ಷೆ

ಮುಲೆಯುದ ಪತಿಕಾ ಸಂಸ್ಥಾನದಲ್ಲಿರುವ ಮುಸ್ಲಿಮರು ರಂಜಾನ್ ಕಾಲದಲ್ಲಿ ಉಪವಾಸ ಮಾಡದಿದ್ದಲ್ಲಿ ಅವರುಗಳನ್ನು ಶಿಕ್ಷೆಗೆ ಒಳಪಡಿಸಲಾಗುವುದೆಂದು ಅಲ್ಲಿನ ಸರ್ಕಾರವು ನಿರ್ಧರಿಸಿದೆ

ಪಾಳು ಬಿದ್ದಿರುವ ಜಮೀನುಗಳಲ್ಲಿ ವ್ಯವಸಾಯ

ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವ ಯೋಜನೆಯ ಅಂಗವಾಗಿ ಬಂಜರು ಜಮೀನುಗಳಲ್ಲಿ ವ್ಯವಸಾಯ ಮಾಡುವವರಿಗೆ ಗೊತ್ತಾದ ಕಾಲದವರೆಗೆ ಕಂದಾಯವನ್ನು ಮಾಫಿ ಮಾಡುವ ಅಂಶವು ಪ್ರಾಂತ ಮತ್ತು ಸಂಸ್ಥಾನ ಸರ್ಕಾರಗಳ ಪರ್ಯಾಲೋಚನೆಯಲ್ಲಿದೆಯೆಂದು ದೆಹಲಿಯ ವಾರ್ತೆ ತಿಳಿಸುತ್ತದೆ

ಕಾಳಿಕಾ ದೇವಿಗೆ ಬಾಲಕನನ್ನು ನರಬಲಿ ಕೊಡುವ ಪ್ರಯತ್ನ

ಅಸ್ಸಾಂ ಪ್ರಾಂತದ ಜೋರ್ಹಟ್ ಎಂಬಲ್ಲಿ ನಿರ್ಮಲನೆಂಬ ಬಾಲಕನನ್ನು ಹಲವು ಚಂಡಾಲರು ಕಾಳಿಕಾ ದೇವಿಗೆ ಬಲಿ ಕೊಡಲು ಪ್ರಯತ್ನಿಸಿದ್ದ ವರದಿಯೊಂದು ತಿಳಿದು ಬಂದಿದೆ ಆದರೆ ಅವನ ಮೈಯಲ್ಲಿ ಕಜ್ಜಿಯಿದ್ದುದರಿಂದ ದೇವಿಗೆ ಆಹುತಿ ಕೊಡಲು ಅವನು ಅನರ್ಹನೆಂದು ಭಾವಿಸಿ ಅವರು ಅವನನ್ನು ಬಿಟ್ಟುಬಿಟ್ಟರೆಂದೂ ಹೇಳಲಾಗಿದೆ ಫುಟ್‌ಬಾಲ್ ಆಟದಿಂದ ಹಿಂದಿರುಗುತ್ತಿದ್ದಾಗ ಗಡ್ಡವನ್ನು ಧರಿಸಿದ್ದ ಇಬ್ಬರು ಧಾಂಡಿಗರು ತಮಗೆ ದಾರಿ ತೋರುವಂತೆ ಅವನನ್ನು ಕೇಳಿ ಸ್ವಲ್ಪ ದೂರ ಹೋದಮೇಲೆ ಅವನನ್ನು ಬೆದರಿಸಿ, ಕಾಡಿಗೆ ಕರೆದೊಯ್ದು ಒಂದು ಮರಕ್ಕೆ ಕಟ್ಟಿಹಾಕಿದರು ಅಲ್ಲಿ ಇನ್ನೊಬ್ಬನು ದೇವತೆಗೆ ಪೂಜೆ ಮಾಡುತ್ತಿದ್ದನು ಮತ್ತೊಬ್ಬನು ನಾಲ್ಕು ಮಕ್ಕಳ ತಲೆ ಬುರುಡೆಗಳನ್ನು ಒಂದೊಂದಾಗಿ ತಂದಿಟ್ಟನು ನಿರ್ಮಲನಿಗೆ ಸ್ನಾನ ಮಾಡಿಸಿ, ಬಟ್ಟೆಯನ್ನೆಲ್ಲಾ ಬಿಚ್ಚಿ ನೋಡುವಲ್ಲಿ ಅವನ ಮೈಯಲ್ಲಿ ಕಜ್ಜಿಗಳು ಕಾಣಬಂದುವು ಆದ್ದರಿಂದ ಅವನನ್ನು ಬಲಿ ಕೊಡದೆ ಬಿಟ್ಟುಬಿಡಲಾಯಿತೆಂದು ಹೇಳಲಾಗಿದೆ

○ ಕಾಶ್ಮೀರದ ಬಗ್ಗೆ ಕರಾಚಿಯಲ್ಲಿ ಜಂಟಿ ಮಿಲಿಟರಿ ಸಮ್ಮೇಳನ ನಡೆಸಬೇಕೆಂಬ ಕಾಶ್ಮೀರದ ಕಮೀಷನ್ನಿನ ಆಹ್ವಾನವನ್ನು ಭಾರತ ಮತ್ತು ಪಾಕಿಸ್ತಾನಗಳು ಒಪ್ಪಿವೆ ಸಮ್ಮೇಳನವು ಕರಾಚಿಯಲ್ಲಿ ಇದೇ ೧೮ನೇ ತಾ| ನಡೆಯಬಹುದು

ಕಾರಿಯಪ್ಪನವರು ಬರುವುದಿಲ್ಲ

ಪ್ರಧಾನ ದಂಡನಾಯಕರಾದ ಜ|| ಕಾರಿಯಪ್ಪನವರು ಕಾರ್ಯ ಗೌರವದ ನಿಮಿತ್ತ ತಮ್ಮ ದಕ್ಷಿಣ ಭಾರತ ಪ್ರವಾಸವನ್ನು ರದ್ದು ಮಾಡಿರುವುದಾಗಿ ತಿಳಿದು ಬಂದಿದೆ ಆದ್ದರಿಂದ ಅವರು ಮುಂದಿನ ವಾರ ಮೈಸೂರಿಗೆ ಬರುವುದಿಲ್ಲ

ಅಫ್ಘಾನಿಸ್ಥಾನಕ್ಕೆ ಮಲೇರಿಯಾ ನಿಯೋಗದಲ್ಲಿ ಮೈಸೂರಿನವರು

ಅಫ್ಘಾನಿಸ್ಥಾನದ ಹಲವು ಗ್ರಾಮಾಂತರ ಪ್ರದೇಶಗಳಲ್ಲಿರುವ ಮಲೇರಿಯಾ ಹಾವಳಿಯನ್ನು ತಡೆಗಟ್ಟುವ ಬಗ್ಗೆ ವಿಶ್ವ ಸಂಸ್ಥೆಯು ಕಳುಹಿಸುವ ನಿವಾರಣಾ ನಿಯೋಗಕ್ಕೆ ಮೈಸೂರಿನವರಾದ ಶ್ರೀ ಟಿ ರಾಮಚಂದ್ರರಾಯರು ನಾಯಕರಾಗಿರುವರು

ರೈಲಿಗೆ ಸಿಕ್ಕಿ ಮರಣ

ನಂಜನಗೂಡು ೧೦

ಈ ದಿನ ಬೆಳಗ್ಗೆ ಚಾಮರಾಜನಗರದಿಂದ ಮೈಸೂರಿಗೆ ರೈಲು ಬರುತ್ತಿದ್ದಾಗ ಗಂಡ್ಲು ನದಿ ಸೇತುವೆ ಮೇಲೆ ಹೋಗುತ್ತಿದ್ದ ಒಬ್ಬಾತನು ಆಕಸ್ಮಾತ್ತಾಗಿ ಅದಕ್ಕೆ ಸಿಕ್ಕಿ ಮೃತನಾದನೆಂದು ತಿಳಿದುಬಂದಿದೆ.

ವಾರಭವಿಷ್ಯ

ಶ್ರೀ

ತಾ॥ ೧೦-೭-೪೯ರಿಂ ೧೬-೭-೪೯ ರವರೆಗೆ

ಮೇಷ—ಲಾಟರಿ ಜೂಜು ಇತ್ಯಾದಿಗಳಲ್ಲಿ ಕೈ ಹಾಕಬೇಡಿ. ಕುಟುಂಬ ಸೌಖ್ಯ ಸಾಧಾರಣ. ಪ್ರವಾಸದ ಯೋಚನೆ, ತಾ॥ ೧೩ರ ಅನಂತರ ಸುಖ. ಪತ್ನಿಗೆ ಸಂಚಕು ಕಸಿಕಾಟ. ತಾ॥ ೧೦, ಸುಖಭಂಗ, ೧೧ ಪ್ರಯಾಣ ೧೪ ನಷ್ಟ.

ವೃಷಭ—ರಾಜಕೀಯದಲ್ಲಿ ಹಣಕಾಸಿನ ಪ್ರಾಪ್ತಿ. ಪತ್ರವ್ಯವಹಾರದಿಂದ ಸಹಾಯ. ಆಕಸ್ಮಿಕ ಕಮಿಷನ್ ಮೂಲಕ ವಿಶೇಷ ಲಾಭ. ಮೋಸ ಕೃತ್ಯಕ್ಕೆ ಗುರಿಯಾಗಬೇಕಾದೀತು. ೧೪ ಲಾಭ.

ಮಿಥುನ—ರಾಜಕೀಯದಲ್ಲಿ ಗುಪ್ತ ಚಿಂತೆ ಕೋರ್ಟು ವ್ಯವಹಾರಗಳಲ್ಲಿ ಅಡಚಣೆ. ಉದ್ಯೋಗ ವಿಚಾರಗಳಲ್ಲಿ ಸುಖ. ಶುಭಯೋಗ ಈ ವಾರದಲ್ಲಿ ಕೈ ಹಾಕುವ ಹೊಸ ಉದ್ಯೋಗವು ಲಾಭದಾಯಕವಲ್ಲ. ಹಣಕಾಸಿನ ತೊಂದರೆ ಅಸ್ಥಿತ್ವವಿಲ್ಲ. ತಾ॥ ೧೦ ಪತ್ರಾಗಮನ, ೧೩ ಅನ್ಯ ಸ್ತ್ರೀ ಕಲಹ, ೧೪ ಕಾರ್ಯ ಭಂಗ.

ಕಟಕ—ನಿಧಾನ ಯೋಗ, ಮನೋವ್ಯಥೆ ಕೈ ತುತ್ತು ಬಾಯಿಗೆ ಇಲ್ಲದಂತಾಗುತ್ತದೆ. ೧೩ನೇ ತಾರೀಖು ಮನೆ ಪತ್ರದ ಅಪಮಾನದ ಸಂಭವ.

ಸಿಂಹ—ಧನಾಗಮನ. ಪತ್ರವ್ಯವಹಾರದಿಂದ ಲಾಭ. ಕೋರ್ಟು ಕಛೇರಿ ವ್ಯವಹಾರ ಲಾಭದಾಯಕ. ಬಡ್ತಿ ದೊರೆಯುತ್ತೆ. ವ್ಯಾಪಾರಾದಿಗಳಲ್ಲಿ ಚಂಚಲತೆ ಸಣ ಮುಕ್ತರಾಗುವ ಯೋಚನೆ. ಕಳತ್ರ ಚಿಂತೆ. ತಾ॥ ೧೦ ವ್ಯಯ ೧೩ ಕಾರ್ಯ ಸಿದ್ಧಿ. ದುಗುಡ.

ಕನ್ಯ—ಪತ್ರವ್ಯವಹಾರ. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವ ಸಾಹಸ ಪ್ರಾಪ್ತಿ. ಆದರೆ ಚುರುಕು ಸಾಲದು. ವ್ಯಾಪಾರಾದಿಗಳ ಚಿಂತೆಯಲ್ಲೇ ಕಳೆಯುತ್ತೆ. ಕಮಿಷನ್ ವ್ಯಾಪಾರದಲ್ಲಿ ಅಧಿಕ ಲಾಭ. ಬರಬೇಕಾದ ಹಣ ಬರಲು ತಡವಾಗುತ್ತೆ. ತಾ॥ ೧೨ ಕಲಹ ೧೪ ಚಂಚಲ ಮನಸ್ಸು.

ತುಲಾ—ಭಾಗ್ಯಯೋಗ ನೌಕರಿ ಸಂಧಿಗಳಲ್ಲಿ ಬಾಧೆ ಆದರೆ ಅನ್ಯ ಸ್ತ್ರೀ ಕಲಹದಿಂದ ವ್ಯಥೆ ಲಾಟರಿ ಜೂಜನಲ್ಲಿ ವಿಶೇಷ ಆಸಕ್ತಿ ಯತ್ನ ಕಾರ್ಯದಲ್ಲಿ ನಿಧಾನ ಫಲ ತಾ॥ ೧೩ ಕಲಹ ೧೪ ಶತ್ರುವಿನ ಸೋಲು.

ವೃಶ್ಚಿಕ—ವಿರೋಧಿಗಳು ಕಾರ್ಯಭಂಗ, ಶರೀರ ಪ್ರಕೃತಿ ಚೆನ್ನಾಗಿರುವುದಿಲ್ಲ ಹೊಟ್ಟೆ ನೋವು ಚಿಂತೆಯಿಂದ ಮನಸ್ಸು ಜರ್ಝರಿತವಾಗುತ್ತೆ. ಸಾಹಸವು ನಿಷ್ಪ್ರಯೋಜನ. ಅಧಿಕ ನಷ್ಟ, ಜಾರಿಗೂ ಜಾಮೀನು ಆಗಬೇಡಿ. ತಾ॥ ೧೩ ಕಾರ್ಯ ಸಿದ್ಧಿ. ೧೪ ಯೋಗ ಭಂಗ.

ಧನು—ಧನಪ್ರಾಪ್ತಿ ಶುಭ ಪತ್ರಾಗಮನ. ಪ್ರವಾಸ ಉಂಟು. ಬಂಧು ಮಿತ್ರರಿಂದ ಸಹಾಯ. ಕಳತ್ರಕ್ಕೆ ವ್ಯಾಸಕೋಶದ ಬಾಧೆ. ವ್ಯಾಪಾರಾದಿಗಳಲ್ಲಿ ನಷ್ಟ. ಪರಸ್ತ್ರೀಯಿಂದ ಪತ್ರ ಮೂಲಕ ಧನಯೋಗ. ತಾ॥ ೧೩ ಕಲಹ. ೧೪ ಯೋಗ ಭಂಗ.

ಮಕರ—ರಾಜಕೀಯದಲ್ಲಿ ದುಃಖಪ್ರತಿಸ್ಪರ್ಧಿ ಉಂಟು. ಕಾರ್ಯದಲ್ಲಿ ಅಪಜಯ. ಕೋರ್ಟಿನಿಂದ ನೋಟೀಸು ಬರುವ ಕಾಲ ಸ್ಥಾನಪಲ್ಲಟ. ತಾ॥ ೧೩ ಮನೆ ತಕರಾರು ೧೪ ಲಾಟರಿ ಜೂಜುಗಳಿಗೆ ಉತ್ತಮ.

ಕುಂಭ—ಯೋಗ ನೆಟ್ಟಗೆ ನಿಧಾನ ಫ

ಜುನಘಡದ ನವಾಬರು ಹೋಟೆಲು ಇಟ್ಟರು

ಜುನಘಡವನ್ನು ಬಿಟ್ಟು ಪರಾರಿಯಾದ ಅಲ್ಲಿನ ನವಾಬರು ಈಗ ಕರಾಚಿಯಲ್ಲಿರುವ ಆಧುನಿಕ ಕಾರಲ್‌ಟನ್ ಹೋಟಲನ್ನು ೨೫ ಲಕ್ಷ ರೂ ಗೆ ಕೊಂಡು, ತಾವೇ ಅದನ್ನು ನಡೆಸುತ್ತಿದ್ದಾರೆ. ನವಾಬರು ತಮ್ಮ ಬೇಟೆ ನಾಯಿಗಳನ್ನು ಮಾರಿ, ಈಗ ವ್ಯಾಪಾರೋದ್ಯಮದಲ್ಲಿ ತೊಡಗಿದ್ದಾರೆ.

ಬರೀ ಕಣ್ಣುಗಳಲ್ಲೇ ಖನಿಜ ಪತ್ತೆ ಮಾಡುವ ಹುಡುಗ

ಭೂಮಿಯ ಕೆಳಗಿರುವ ಖನಿಜ ವಸ್ತುಗಳನ್ನು ಬರೀ ಕಣ್ಣಿನಲ್ಲಿ ನೋಡಿ ಕಂಡು ಹಿಡಿಯಬಲ್ಲ ಅದ್ಭುತ ಶಕ್ತಿಯು ದಕ್ಷಿಣ ಆಫ್ರಿಕದ ಪೀಟರ್ ವಾನ್ ಜಾರ್ಸ್‌ವೆನ್ ಎಂಬಾತನಿಗೆ ಕೇವಲ ೭ ವರ್ಷ ವಯಸ್ಸಿನಲ್ಲೆ ಇದ್ದಿತೆಂದು ವರದಿಯಾಗಿದೆ. ಈ ಈತನಿಗೆ ೧೯ ವರ್ಷ ವಯಸ್ಸು. ಆತನ ಕಣ್ಣುಗಳನ್ನು ೨೦ ಸಾವಿರ ಪೌಂಡುಗಳಿಗೆ ವಿಮೆ ಮಾಡಲಾಗಿದೆ.

೨೦ ರೂ. ನಲ್ಲಿ ಕುಷ್ಠ ರೋಗ ನಿವಾರಣೆ

ಕುಷ್ಠ ರೋಗವನ್ನು ಅತಿ ಕಡಿಮೆ ಖರ್ಚಿನಿಂದ ಗುಣಪಡಿಸಬಲ್ಲ ಸಲ್ಫನಿ ಎಂಬ ನೂತನ ಔಷಧಿಯನ್ನು ಕಂಡು ಹಿಡಿಯಲಾಗಿದೆಯೆಂದೂ, ಕೆಲವು ವರ್ಷಗಳಲ್ಲಿ ಕೇವಲ ೨೦ ರೂ. ಖರ್ಚಿನಿಂದ ಆ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದೆಂದೂ ಲಂಡನ್ನಿನಲ್ಲಿ ನಡೆದ ವಿಶ್ವಸಂಸ್ಥೆಯ ಆರೋಗ್ಯ ಸಮ್ಮೇಳನದಲ್ಲಿ ಬಹಿರಂಗಪಡಿಸಲಾಗಿದೆ.

ನಾಗಮನ ಬಂಧು ದರ್ಶನ ದೇಹ ಪ್ರಕೃತಿ ಉತ್ತಮ. ವ್ಯಾಪಾರದಲ್ಲಿ ಒಳ್ಳೆಯ ಯೋಗ. ಕಳತ್ರಕ್ಕೆ ಕೆಮ್ಮು ಮುಂತಾದ ರೋಗ. ಬಂದ ಹಣವೆಲ್ಲಾ ಖರ್ಚು. ಲಾಟರಿ ಜೂಜುಗಳಲ್ಲಿ ಹಣ ಲಭ್ಯ. ತಾ॥ ೧೨ ಧನವ್ಯಯ ೧೪ ಕುಟುಂಬದಲ್ಲಿ ಕಲಹ.

ಮೀನ—ಬಂಧುವರ್ಗದಿಂದ ಅನುಕೂಲ ಕೋರ್ಟು ವ್ಯವಹಾರ ಮುಗಿಯುವುದು ನೌಕರಿಯಲ್ಲಿ ಉತ್ತಮ ಸ್ಥಿತಿ ಇಲ್ಲ ಲಾಟರಿ ಕಡೆಗೆ ಮನಸ್ಸು ತಾ॥೧೨ ಲಾಭ ೧೪ ಕಲಹ.

ಗುಂಡ್ಲುಪೇಟೆಯಲ್ಲಿ ಮದ್ಯಪಾನದ ಗೊಂದಲ

ಪಾನನಿರೋಧ ಜಾರಿಯಲ್ಲಿರುವ ನೀಲಗಿರಿಗೆ ಗುಂಡ್ಲುಪೇಟೆಯು ಗಡಿ ಪ್ರದೇಶವಾಗಿದ್ದು, ಇಲ್ಲಿ ಮದ್ಯಪಾನದ ಗೊಂದಲವು ದಿನದಿನಕ್ಕೆ ಹೆಚ್ಚುತ್ತಿದೆ. ಇದರಿಂದ ಅನೇಕ ಅನಾಹುತಗಳು ಆಗುತ್ತಿವೆ ಗಡಿ ತಾಲ್ಲೂಕಿನಲ್ಲಿ ನ್ಯಾಯವಾಗಿ ಮದ್ಯಪಾನದ ಅಂಗಡಿಗಳನ್ನು ಮುಚ್ಚಬೇಕು. ಆದರೆ ಇಲ್ಲಿ ಒಂದು ಹೊಸ ಅಂಗಡಿಯನ್ನು ತೆರೆಯಬೇಕೆಂಬ ಏರ್ಪಾಡಿಗೆ ಪುರಸಭೆಯವರು ಒಪ್ಪಿರುವುದು. ತುಂಬಾ ಶೋಚನೀಯ. ಸರ್ಕಾರದವರು ಕೂಡಲೇ ಅದನ್ನು ನಿಲ್ಲಿಸಿ, ಪಾನ ನಿರೋಧವನ್ನು ಜಾರಿಗೆ ತರಬೇಕು—ಎಂದು ಅಲ್ಲಿನ ನಿವಾಸಿಯೊಬ್ಬರು ಕೋರಿರುತ್ತಾರೆ.

ಶ್ರೀ ಸ್ವಾಮಿ ರಾಮದಾಸರ ಪ್ರಯಾಣ

ಆನಂದಾಶ್ರಮದ ಶ್ರೀ ಸ್ವಾಮಿ ರಾಮದಾಸರು ನಿನ್ನೆ ಮಧ್ಯಾಹ್ನ ೧ ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಔಷಧಾಲಯದಲ್ಲಿರುವ ಗಾಂಧೀ ಸೇವಾ ಸಂಘಕ್ಕೆ ಮೊನ್ನೆ ಸಂಜೆ ಸ್ವಾಮಿಗಳು ಮತ್ತು ಮಾತಾಜಿ ಕೃಷ್ಣಾಬಾಯಿಯವರುಗಳು ಭೇಟಿ ಇತ್ತಿದ್ದರು. ಶ್ರೀ ಅಗರಂ ರಂಗಯ್ಯನವರು ಸ್ವಾಗತ ಭಾಷಣ ಮಾಡಿದರು ಸಂಘದವರು ಸ್ವಾಮಿಗಳವರಿಗೆ ಕಾಣಿಕೆಯನ್ನು ಸಲ್ಲಿಸಿದರು.

Edited, printed and published by A. R. Nagarajan, at Sadhvi Press, D. Subbiah Road, Mysore.

RAJKAMAL,
MYSORE
From 8—7—49 for 4 days
only
DAILY 3 SHOWS
In Its Glorious Second
Week
William Shakespeare's
HAMLET
WITH—LAURENCE OLIVIER,
JEAN SIMMONS ETC.,
— ಬೆಳಗಿನ ಪ್ರದರ್ಶನ —
9-7-49ರಿಂದ 3 ದಿನಗಳು ಮಾತ್ರ
ಜಾದೂ-ಕಿ-ಅಂಗೂಠಿ
[ಹಿಂದಿ]
ಭೂಮಿಕೆ:- ಅಸಿಲ್ ಕಿ.ಮಾರ್. ಕಾಂತಾ ಪಟೇಲ್ ಇತ್ಯಾದಿ

ಪ್ರಭುದೇವಾ ಟಾಕೀಸ್
11-7-49ನೇ ಸೋಮವಾರದಿಂದ ಅನೋಘ 2ನೆಯ ವಾರ
ಜೆಮಿನಿಯವರ
ಬಾಲನಾಗಮ್ಮ
(ತೆಲುಗು)
ಪ್ರತಿ ದಿನ ೩ ಆಟಗಳು
ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

TO-NIGHT AT
PRABHA

Rajkamal Pictures
APNA DESH
Directed by
V. SHANTARAM
ಅಪ್ನಾ ದೇಶ್
[ಹಿಂದಿ]

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೧೧-೭-೪೯ [ಸಂಚಿಕೆ ೨೮೦

-ಪಠಾಣಿಸ್ತಾನಕ್ಕೆ- ಇಪಿ ಫಕೀರ್ ದೊರೆಯೆ

ಪಠಾಣಿಸ್ಥಾನದ ದೊರೆ ಯಾಗಲು ಇಪಿ ಫಕೀರರ ಪ್ರಯತ್ನ

ಇಪಿ ಫಕೀರರು ವಜೀರಿಸ್ತಾನದ ಗುರ ಉಮಿರ್ ಪ್ರದೇಶದ ಗುಹೆಯಲ್ಲಿ ವಾಸಿಸು ದ್ದು, ಪಾಕೀಸ್ತಾನದವರ ಹಿಂಸೆಯನ್ನು ಡೆಯಲಾರದೆ ಸ್ವಸ್ಥಾನವನ್ನು ಬಿಟ್ಟು ಫ್ಘಾನಿಸ್ತಾನಕ್ಕೆ ಇತ್ತೀಚೆಗೆ ಹೋಗಿ ನೆಲೆ , ಅಲ್ಲಿ ಪಠಾಣಿಸ್ತಾನದ ದೊರೆಯಾಗಲು ವರು ಪ್ರಯತ್ನಿಸುತ್ತಿರುವರೆಂದು ವರದಿ ಯಾಗಿದೆ. ಮೊಗಲಗಾಯ್ ಎಂಬ ಪ್ರದೇ ದಲ್ಲಿ ಅವರ ಅನುಯಾಯಿಗಳು ಶಸ್ತ್ರ ಸಿ ತೆಗಳನ್ನು ನಡೆಸುತ್ತಿರುವರೆಂದೂ ಹೇ ಲಾಗಿದೆ

ಒಂದು ಓಟಿನಿಂದ ಐರಿಷ್ ಸರಕಾರದ ಜಯ

ಐರ್ಲೆಂಡಿನ ಈಗಿನ ಮಂತ್ರಿಮಂಡಲ ಇರಬೇಕೇ, ಬೇಡವೇ ಎಂಬ ವಿಷ ಯದಲ್ಲಿ ಅಲ್ಲಿನ ಪಾರ್ಲಿಮೆಂಟಿನಲ್ಲಿ ಸದ ರ ಅಭಿಮತ ತೆಗೆದು ಕೊಂಡಾಗ ೧ ಟು ಜಾಸ್ತಿಯಾಗಿ ಸರಕಾರಕ್ಕೆ ಬಂದು ದು ಜಯ ದೊರಕಿತು. ಆಂಚೆ ಲಾಖೆ ಸರಬರಾಜಿನ ಬಗ್ಗೆ ಸರಕಾರಕ್ಕೆ ಸೋಲಾದುದರಿಂದ, ವಿರೋಧ ಪಕ್ಷದ ನಾಯಕರಾದ ಡಿವೇಲರಾರವರು ಸರಕಾರ ರಾಜೀನಾಮೆಯೀಯಬೇಕೆಂದು ಕೇ ಳಿದ್ದರು

ವರಲಕ್ಷ್ಮೀ ಸಂಗೀತ ವಿದ್ಯಾಮಂದಿರ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರಕ್ಕೆ ಸಂಸ್ಥಾನ ಸಂಗೀತ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್ ಚಂದ್ರಶೇಖರಯ್ಯನವರು ಮೊನ್ನೆ ನ ಭೇಟಿ ಕೊಟ್ಟು ಅಲ್ಲಿನ ಕೆಲಸ ಕಾರ್ಯ ಗಳನ್ನು ಪರಿಶೀಲಿಸಿ ತಮ್ಮ ಮೆಚ್ಚಿಗೆಯ ನ್ನು ವ್ಯಕ್ತಪಡಿಸಿದರು

ಮದರಾಸ್ ಸಚಿವರ ಆಗಮನ

ಮದರಾಸಿನ ಹಣಕಾಸಿನ ಸಚಿವ ಶ್ರೀ ಬಿ ಗೋಪಾಲರೆಡ್ಡಿಯವರು ನಿನ್ನೆ ಬೆಳಗ್ಗೆ ಕೊಡಗಿನಿಂದ ರಾಜಧಾನಿಗೆ ಆಗಮಿಸಿ ಶ್ರೀ ಮತಿ ಕಾಮೇಶ್ವರಮ್ಮನವರ ಅತಿಥಿಯಾ ಗಿದ್ದು ಮಧ್ಯಾಹ್ನವೇ ಬೆಂಗಳೂರಿಗೆ ತೆರ ಳಿದರು.

ಸ್ಕೌಟ್‌ಗಳ ದುಃಖ ಸೂಚಕ ಪೆರೇಡ್

ಕಳೆದ ಶುಕ್ರವಾರ ನಿಧನರಾದ ಮೇಜ ರ್ ವೈ. ವಿ ಕೆ ಮೂರ್ತಿಯವರ ಗೌರ ವಾರ್ಥವಾಗಿ ಸಂಸ್ಥಾನಾದ್ಯಂತ ಎಲ್ಲ ಸ್ಕೌ ಟುಗಳೂ ಇದೇ ೧೮ನೇ ತಾರೀಖು ಪ್ರಾ ತಃಕಾಲ ದುಃಖ ಸೂಚಕ ಪೆರೇಡುಗಳ ನ್ನು ನಡೆಸಬೇಕೆಂದು ನಿರ್ಧರಿಸಲಾಗಿದೆ

ಹಿಂದೀ ಪರೀಕ್ಷೆಗಳು

ಮೈಸೂರು ಹಿಂದೀ ಪ್ರಚಾರ ಪರಿಷತ್ತಿ ನ ಆಶ್ರಯದಲ್ಲಿ ಮುಂದಿನ ತಿಂಗಳ ಕೊನೆ ಯವಾರದಲ್ಲಿ ನಡೆಯುವ ಪ್ರಾರಂಭಿಕ ಮತ್ತು ಉಚ್ಚ ಪರೀಕ್ಷೆಗಳಿಗೆ ಕೂಡಲು ಅಪೇಕ್ಷಿಸುವವರು ಇದೇ ೩೦ನೇ ತಾ॥ ನೊಳಗಾಗಿಯೂ, ನವೆಂಬರ್ ತಿಂಗಳಲ್ಲಿ ನಡೆಯುವ ಹಿಂದೀ ಸಾಹಿತ್ಯ ಸಮ್ಮೇಳನ ದ ಪ್ರಾಥಮಿಕ, ಮಾಧ್ಯಮ ಮತ್ತು ಉತ್ತ ಮ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರು ಇದೇ ೩೧ನೇ ತಾ॥ ನೊಳಗಾಗಿಯೂ ನಿ ಗದಿತ ಶುಲ್ಕದೊಡನೆ ಅರ್ಜಿಗಳನ್ನು ಬೆಂಗಳೂರು ಬಸವನಗುಡಿಯಲ್ಲಿರುವ ಪ ರಿಷತ್ತಿನ ಕಾರ್ಯಾಲಯಕ್ಕೆ ಕಳುಹಿಸಬೇಕೆಂ ದು ತಿಳಿಸಲಾಗಿದೆ.

ಗೋಪಾಲರಾಯರ ಪತ್ನಿ ಯವರ ಆಸ್ತಿಗಳು

ಸ್ವಂ. ವ. ಫೋ॥] ಬೆಂಗಳೂರು ೧೧

ನೆನ್ನೆ ದಿನ ಗೋಪಾಲರಾಯರ ವಿಚಾ ರಣಾ ಸಮಿತಿಯು ಗೋಪಾಲರಾಯರ ಧರ್ಮ ಪತ್ನಿ ಶ್ರೀಮತಿ ಲಕ್ಷ್ಮೀ ಬಾಯಿ ಯವರು ಮಲ್ಲೇಶ್ವರದಲ್ಲಿರುವ ಮನೆ, ಟಿ. ನರಸೀಪುರದ ತಾಲ್ಲೂಕಿನಲ್ಲಿರುವ ತರಿ ಜಮೀನುಗಳು, ವಿಲ್ಸ್ನ ತೋಟಗಳ ಲ್ಲಿರುವ ಒಂದು ಖಾಲಿ ನಿವೇಶನ ಮತ್ತು ಹಲವು ಆಭರಣಗಳು ತಮಗೆ ಬರಬೇಕೆಂ ದು ಹಾಕಿದ್ದ ಬೇಡಿಕೆಗಳನ್ನು ನಿರಾಕರಿ ಸಿತು ಆದರೆ ಆಕೆಯ ಹೆಸರಿನಲ್ಲಿರುವ ವಿಮಾ ಪಾಲಿಸಿಗಳು ಆಕೆಗೆ ಸೇರತಕ್ಕ ದ್ದೆಂದು ಆಜ್ಞೆಮಾಡಲಾಯಿತು

ಅಲ್ಲದೆ ಆಕೆಗೆ ಸಲ್ಲತಕ್ಕದ್ದೆಂದು ಆಜ್ಞಾ ಪಿಸಲ್ಪಟ್ಟ ಸ್ವತ್ತುಗಳು ವಿನಹ ಉಳಿದವ ನ್ನು ಸಾಲಗಾರರಿಗೆ ಹಂಚುವ ಸಲುವಾಗಿ ವಶಪಡಿಸಿಕೊಳ್ಳಬೇಕೆಂದು ಆಜ್ಞೆಯಾ ಯಿತು.

ವಿಶೇಷಾಧಿಕಾರಿ

ವರ್ಧಂತಿ ಉತ್ಸವದ ಸಮಯಕ್ಕೆ ಸ ರ್ಕಾರದ ಅಸಿಸ್ಟೆಂಟ್ ಕಾರ್ಯದರ್ಶಿಗಳಾದ ಶ್ರೀ ಎಂ. ಮಲ್ಲೇಶಯ್ಯನವರನ್ನು ವಿಶೇ ಷಾಧಿಕಾರಿಯನ್ನಾಗಿ ನೇಮಿಸಲಾಗಿದೆ

ಕಾರ್ಮಿಕ ಸಮ್ಮೇಳನಕ್ಕೆ ಸಹಾಯ

ಮುಂದಿನ ತಿಂಗಳು ಎರಡನೇವಾರದ ಲ್ಲಿ ಹಿಂದ್ ಮಜದೂರ್ ಸಭೆಯ ಸಂಸ್ಥಾ ನದ ಶಾಖೆಯು ಕೆಲಸಗಾರರ ಸಮ್ಮೇಳನ ವನ್ನು ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಸ ಲು ಏರ್ಪಾಡಾಗಿದೆ. ಸಂಸ್ಥಾನದ ಕಾ ರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹ ರಿಸಿಕೊಳ್ಳಲು ಸಂಘಟನೆ ಅತ್ಯಾವಶ್ಯಕ ವಾಗಿದೆ. ಆದುದರಿಂದ ಬೆಂಗಳೂರು ಮತ್ತು ಸಂಸ್ಥಾನದ ಇತರ ಕಡೆಗಳ ಕಾ ರ್ಮಿಕರೂ, ಕೆಲಸಗಾರರ ಸಂಘಗಳೂ ಸಹಕರಿಸಿ ಸಮ್ಮೇಳನವನ್ನು ಯಶಸ್ವಿಗೊ ಳಿಸಬೇಕೆಂದು ಸ್ವಾಗತ ಸಮಿತಿಯವರು ಪ್ರಾರ್ಥಿಸಿರುತ್ತಾರೆ

ಬಿಹಾರ್ ಮಂತ್ರಿ ಮಂಡಲದ ವಿಚಾರಣೆ

ಸರದಾರ್ ಪಟೇಲರು ಹಾಗೂ ಬಿಹಾರಿ ನ ಮಂತ್ರಿ ಮಂಡಲದ ಮೇಲೆ ಹೊರಿಸ ಲಾಗಿರುವ ಲಂಚ ಮುಂತಾದ ಆಪಾದನೆ ಗಳನ್ನು ವಿಚಾರಿಸುತ್ತಿರುವರೆಂದು ತಿಳಿದು ಬಂದಿದೆ

ರಕ್ತ ಹೀರುವ ಭೂತ ವನ್ನೋಡಿಸಲು ಪ್ರದರ್ಶನ

ಗೌಹತಿ ಪ್ರದೇಶದ ಟೀ ತೋಟಗಳ ಕೆಲಸಗಾರರು ತಮ್ಮ ಮಕ್ಕಳನ್ನು ಭೂತ ವೊಂದು ಅಪಹರಿಸಿ, ಅವುಗಳ ರಕ್ತವನ್ನು ಹೀರುತ್ತಿದೆಯೆಂದು ಹೆದರಿ, ಅಲ್ಲಿನ ಕಛೇ ರಿ ಮುಂದೆ ಕಳೆದ ವಾರ ಪ್ರದರ್ಶನ ನಡೆ ಸಿ, ಅಲ್ಲಿಂದ ಭೂತವನ್ನು ಓಡಿಸಬೇಕೆಂ ದು ಒತ್ತಾಯಪಡಿಸಿದರೆಂದೂ, ಕಾರ್ಯಾ ಲಯದಲ್ಲಿ ಭೂತವಿಲ್ಲವೆಂದು ಅಧಿಕಾರಿಗ ಳು ತಿಳಿಸಿದರೂ ಜನರ ಗುಂಪು ನೌಕರ ರನ್ನು ಹೊಡೆದು ಗಾಯಪಡಿಸಿದರೆಂದೂ ವರದಿಯಾಗಿದೆ

ಹಡಗಿಗೆ ಬೆಂಕಿ ಬಿದ್ದು ೧೦೦ ಜನರ ಮರಣ

ಟರ್ಕಿಯಿಂದ ಕಪ್ಪು ಸಮುದ್ರಕ್ಕೆ ಹೊ ರಟಿದ್ದ ಒಂದು ಹಡಗಿಗೆ ಬೆಂಕಿ ಬಿದ್ದು ೧೦೦ ಜನ ಪ್ರಯಾಣಿಕರು ಸತ್ತರೆಂದೂ, ೩೦ ಮಂದಿಗೆ ತೀವ್ರ ಗಾಯವಾಯಿತೆಂ ದೂ ಹೇಳಲಾಗಿದೆ ರಸಾಯನಿಕ ಪದಾ ರ್ಥಗಳ ಆಸ್ಫೋಟನದಿಂದ ಈ ಅನಾಹು ತ ಉಂಟಾಯಿತೆಂದು ವರದಿಯಾಗಿದೆ

ಬೊಂಬಾಯಿನಲ್ಲಿ ೩೦ ಸಾವಿರ ನೂತನ ಶಾಲೆಗಳು

ಅನಕ್ಷರತೆಯನ್ನು ನಿರ್ಮೂಲ ಮಾಡ ಲು ಬೊಂಬಾಯಿ ಪ್ರಾಂತ್ಯದಲ್ಲಿ ಈ ವರ್ಷ ನೂತನವಾಗಿ ೩೦ ಸಾವಿರ ಪ್ರಾಥಮಿಕ ಶಾ ಲೆಗಳನ್ನು ತೆರೆಯಲಾಗುವುದೆಂದು ಅದರ ಪ್ರಧಾನಿಯವರು ತಿಳಿಸಿರುತ್ತಾರೆ.

ರಾಮಸ್ವಾಮಿ ನಾಯಕರ ವಿವಾಹ

ಮದರಾಸಿನ ದ್ರಾವಿಡ ಸಂಘದ ನಾಯ ಕರಾದ ೭೩ ವರ್ಷದ ಶ್ರೀ ಇ ವಿ ರಾಮ ಸ್ವಾಮಿ ನಾಯಕರು ಅಲ್ಲಿನ ಪತ್ರಿಕಾ ಸಂ ಪಾದಕಿಯರಾದ ಶ್ರೀಮತಿ ಮಣಿಅಮ್ಮೈ ಯವರನ್ನು ರಿಜಿಸ್ಟ್ರಾರ್‌ರವರ ಕಛೇರಿಯ ಲ್ಲಿ ಮೊನ್ನೆ ದಿನ ವಿವಾಹವಾದರು.

ಕಲ್ಕತ್ತಾ ಟ್ರಾಂ ಕೆಲಸಗಾರರ ಮೇಲೆ ಬಾಂಬು

ಕಲ್ಕತ್ತಾದಲ್ಲಿ ನಡೆಯುತ್ತಿರುವ ಟ್ರಾಂಗ ಳ ಮುಷ್ಕರದ ಸಂಬಂಧವಾಗಿ ಹಲವು ನಿ ಷ್ಠ ಕೆಲಸಗಾರರು ಪುನಃ ಟ್ರಾಂಗಳನ್ನು ಓ ಡಾಡಿಸಲು ಪ್ರಯತ್ನ ಪಟ್ಟಾಗ ಅವರುಗಳ ಮೇಲೆ ಬಾಂಬುಗಳನ್ನು ಹಾಕಲಾಯಿತೆಂ ದು ತಿಳಿಸಲಾಗಿದೆ.

ಆರ್. ಎಸ್. ಎಸ್. ಗೂ ಸರ್ಕಾರಕ್ಕೂ ಒಪ್ಪಂದವಿಲ್ಲ

ಆರ್. ಎಸ್. ಎಸ್. ಗೂ ಸರ್ಕಾರಕ್ಕೂ ಮೂಲಭೂತವಾದ ವಿಷಯಗಳಲ್ಲಿ ಭಿನ್ನಾ ಭಿಪ್ರಾಯವಿರುವುದರಿಂದ ಸಂಧಾನ ಮಾ ತುಕತೆಗಳನ್ನು ಮುಂದುವರಿಸುವುದರಿಂದ ಪ್ರಯೋಜನವಿಲ್ಲವೆಂದು ಸರ್ದಾರ್ ಪಟೇ ಲರು ಶ್ರೀ ಟಿ. ಆರ್. ವೆಂಕಟರಾಮಾ ಶಾಸ್ತ್ರಿಗಳಿಗೆ ತಿಳಿಸಿದ್ದಾರೆಂದು ಗೊ ತ್ತಾಗಿದೆ.

ಹೆಂಡತಿಯನ್ನು ಕಿಡಿಕಿಯ ಹೊರಕ್ಕೆ ಎಸೆದ ಪ್ರಸಂಗ

ಮರ್ಸೆಲೀಸಿನ ಪಿಯರಿ ಪಾರ್ಟೆ ಎಂಬ ಕಾರ್ಮಿಕನ ಹೆಂಡತಿಯು ಯಾವಾಗಲೂ ತನ್ನ ಗಂಡನನ್ನು ಮೂದಲಿಸಿ ಪೀಡಿಸು ತ್ತಿದ್ದಳೆಂದೂ ಅದನ್ನು ತಡೆಯಲಾಗದೆ ಅತನು ಒಂದು ದಿನ ಆಕೆಯನ್ನು ಎತ್ತಿ ಕಿಡಿಕಿಯಿಂದಾಚೆಗೆ ಹೊರಕ್ಕೆ ಎಸೆದನೆಂ ದೂ ವರದಿಯಾಗಿದೆ.

ತಾಜ್ ಮಹಲಿನ ದುರಸ್ತು

ಆಗ್ರಾದಲ್ಲಿರುವ ಸುಪ್ರಸಿದ್ಧ ಟಾಜ್ ಮ ಹಲ್ ಗೋರಿಯನ್ನು ಒಂದು ಲಕ್ಷ ರೂ. ಖರ್ಚಿನಿಂದ ದುರಸ್ತು ಮಾಡಲಾಗಿದೆಯೆಂ ದು ಹೇಳಲಾಗಿದೆ ಅದರ ಕಂಭಗಳು ಒ ಡೆದು ಅಪಾಯ ಸ್ಥಿತಿಯಲ್ಲಿದ್ದುದರಿಂದ, ೩೦೦ ವರ್ಷಗಳ ಹಿಂದೆ ಅದನ್ನು ಕಟ್ಟಿದ ೨೦ ಸಾವಿರ ಕೆಲಸಗಾರರ ವಂಶಸ್ಥರ ಸ ಹಾಯದಿಂದ ಅದನ್ನು ಸರಿಪಡಿಸಲಾಯಿ ತು ಈ ವಂಶಸ್ಥರು ಟಾಜ್ ಎದುರಿಗಿರು ವ ಮಮ್ತಾಜ್ ಬಾದ್ ಎಂಬ ಪ್ರದೇಶ ದಲ್ಲಿ ವಾಸಿಸುತ್ತಿದ್ದಾರೆ.

ಬೆರಣಿಯ ಖಾನೇಷುಮಾರಿ

ದೇಶದಾದ್ಯಂತ ಸಾಡೆಯಂತೆ ಬೆರಣಿ ಯನ್ನು ಎಷ್ಟು ಉಪಯೋಗಿಸಲಾಗುತ್ತಿದೆ ಯೆಂಬುದರ ಬಗ್ಗೆ ಅಂಕಿ ಅಂಶಗಳನ್ನು ಪ ಡೆಯಲು ಭಾರತ ಸರ್ಕಾರದವರು ಖಾನೇ ಷುಮಾರಿಯನ್ನು ತೆಗೆಯಲು ವ್ಯವಸ್ಥೆ ಮಾಡಿದ್ದಾರೆಂದು ಹೇಳಲಾಗಿದೆ. ಆ ರೀತಿ ಅದರ ಉಪಯೋಗವಾಗುವುದನ್ನು ಕಡಿ ಮೆ ಮಾಡಿ, ಸಗಣಿಯನ್ನು ವ್ಯವಸಾಯ ಕ್ಕೆ ಉಪಯೋಗಿಸುವುದಕ್ಕಾಗಿಯೇ ಖಾ ನೇಷ ಮಾರಿ ತೆಗೆಯಲಾಗುವುದೆಂದು ಹೇ ಳಲಾಗಿದೆ

ಮಲೆನಾಡಿನ ಅಭಿವೃದ್ಧಿ

ಮೈಸೂರು, ಕೊಡಗು, ಮದರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳ ಮಲೆ ನಾಡು ಪ್ರದೇಶಗಳ ಅಭಿವೃದ್ಧಿ ಯೋಜನೆ ಯನ್ನು ಕೈಗೊಳ್ಳಲು, ನಿನ್ನೆ ದೆಹಲಿಯಲ್ಲಿ ಭಾರತ ಸರ್ಕಾರದ ಆಹಾರ ಸಚಿವರ ಅ ಧ್ಯಕ್ಷತೆ ಒಂದು ಸಮ್ಮೇಳನ ನಡೆಯಿತು. ವ್ಯವಸಾಯ ಸಚಿವ ಶ್ರೀ ಹೆಚ್. ಸಿದ್ದಯ್ಯ ಮತ್ತು ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾ ಯರು ಮೈಸೂರಿನ ಪರವಾಗಿ ಹಾಜರಿದ್ದ ರು. ಪ್ರಕೃತಿ ಸಂಪತ್ತಿನಿಂದ ಕೂಡಿರುವ ಮಲೆನಾಡನ್ನು ಸೂಕ್ತ ರೀತಿಯಲ್ಲಿ ಅಭಿ ವೃದ್ಧಿಗೊಳಿಸುವುದರಿಂದ ಹೆಚ್ಚು ಆಹಾರ ವನ್ನು ಉತ್ಪತ್ತಿಮಾಡಲು ಸಹಾಯಕವಾ ಗುವುದೆಂದು ಅಭಿಪ್ರಾಯಪಟ್ಟು, ಕೇಂದ್ರ ಮಲೆನಾಡು ಅಭಿವೃದ್ಧಿ ಸಮಿತಿಯೊಂ ದನ್ನು ರಚಿಸಬೇಕೆಂದು ನಿರ್ಧರಿಸಲಾಯಿ ತು.

ಹೈಸ್ಕೂಲುಗಳಲ್ಲಿ ವ್ಯವಸಾಯ ಶಿಕ್ಷಣದ ಅಗತ್ಯ

ಹೈಸ್ಕೂಲು ಆರಂಭೋತ್ಸವದಲ್ಲಿ ಪ್ರಭುಗಳ ಭಾಷಣ

ಸ್ವಂ ಸ.] ಚನ್ನರಾಯಪಟ್ಟಣ ೧೦ ಆಳುವ ಮಹಾಸ್ವಾಮಿಯವರು ಶಾಂತಿ ರಾಜಪುರದ ಸರ್ಕಾರಿ ಹೈಸ್ಕೂಲಿನ ಆರಂಭೋತ್ಸವವನ್ನು ಇಂದಿನ ನೆರವೇರಿಸಿದರು. ಕಸ್ತೂರಿ ಬಾ ಕೇಂದ್ರದ ಸ್ವಯಂ ಸೇವಕಿಯರುಗಳಿಂದ ಪ್ರಾರ್ಥನೆಯಾದ ನಂತರ ಶ್ರೀ ವೀರಭದ್ರಶೆಟ್ಟರು ಮಂಗಳ ಶಾಸನವನ್ನು ಓದಿ ಅರ್ಪಿಸಿದರು. ಸಭೆಯ ಸದಸ್ಯರಾದ ಶ್ರೀ ಲಕ್ಕಪ್ಪ ಗೌಡರು ಮಹಾಪ್ರಭುಗಳಿಗೆ ಹೈಸ್ಕೂಲು ಸಮಿತಿ ಸದಸ್ಯರನ್ನು ಪರಿಚಯ ಮಾಡಿಕೊಟ್ಟರು. ವಿದ್ಯಾಶಾಲೆಯ ಉಪಕ್ರಮದ ಶ್ರೀ ಕಸ್ತೂರಿ ರಾಜಶೆಟ್ಟಿಯವರು ಬಿನ್ನವತ್ತಳೆಯನ್ನು ಅರ್ಪಿಸಿ ಸಂಸ್ಥಾನದಲ್ಲಿ ವಿದ್ಯಾ ಪ್ರಗತಿಯನ್ನು ವಿವರಿಸಿದರು. ಶ್ರೀ ಲಕ್ಕಪ್ಪಗೌಡರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಒಪ್ಪಿಸಿದ್ದರು. ಶ್ರೀ ಮಹಾರಾಜರು ತಮ್ಮ ಭಾಷಣದಲ್ಲಿ ಈ ರೀತಿ ಅಪ್ಪಣೆ ಕೊಡಿಸಿದರು.

ವ್ಯವಸಾಯ ವಿದ್ಯಾಭ್ಯಾಸದ ಪ್ರಭಾವವನ್ನು ವ್ಯಾಪಕವಾದ ರೀತಿಯಲ್ಲಿ ಗ್ರಹಿಸಿ ಸರಿಯಾಗಿ ತಿಳಿದುಕೊಂಡರೆ, ವ್ಯವಸಾಯಗಾರರ ಜೀವನಕ್ಕೆ ಸಂಬಂಧಪಟ್ಟ ನಾನಾ ಶಾಸ್ತ್ರಗಳ ಪರಿಜ್ಞಾನವೂ ಅದಕ್ಕೆ ಅಗತ್ಯವಾಗಿ ಅದರಲ್ಲಿ ಸೇರಿರ ಬೇಕು. ಗೊಬ್ಬರಗಳನ್ನು ಸರಿಯಾಗಿ ಬೆರೆಸುವುದು ಮಾಡುವುದು. ಉತ್ತಮವಾದ ಬೀಜಗಳನ್ನು ಆರಿಸುವುದು, ಭೂಗುಣಕ್ಕೆ ತಕ್ಕ ಗೊಬ್ಬರವನ್ನು ಉಪಯೋಗಿಸುವುದು ಇವುಗಳ ತಿಳವಳಿಕೆಯುಂಟಾದ ಮಾತ್ರಕ್ಕೇ ವ್ಯವಸಾಯ ವಿದ್ಯಾಭ್ಯಾಸವು ಪೂರ್ತಿಯಾಗುವುದಿಲ್ಲ. ಪಶುಪಾಲನೆಯೂ, ಪಾಕಶಾಸ್ತ್ರವೂ ಮತ್ತು ಕೈನಿಂದ ಮನೆಯನ್ನು ನಡೆಯಿಸುವುದಕ್ಕೆ ಸಂಬಂಧಪಟ್ಟ ವಿಜ್ಞಾನವೂ ಮುಖ್ಯವಾಗಿ ಅದರಲ್ಲಿ ಸೇರಿರುತ್ತವೆ. ಮೈಸೂರು ಸಂಸ್ಥಾನದಲ್ಲಿ ಹೈಸ್ಕೂಲು ವಿದ್ಯಾಭ್ಯಾಸವನ್ನು ಒಡನೆಯೇ ವೃದ್ಧಿಪಡಿಸಬೇಕೆಂದು ಅಭಿಲಾಷೆಪಟ್ಟವರೆಲ್ಲರೂ ಇದೇ ಧ್ಯೇಯವನ್ನಿಟ್ಟುಕೊಂಡಿದ್ದರು. ಆದರೆ, ಈಚಿನ ವರ್ಷಗಳಲ್ಲಿ ಹಿಂದಿನ ಧ್ಯೇಯಕ್ಕೆ ಪ್ರಾಧಾನ್ಯಕೊಟ್ಟು ಗಮನದಲ್ಲಿಟ್ಟುಕೊಳ್ಳಲಿಲ್ಲ. ಅದರಿಂದ ಹೈಸ್ಕೂಲು ವಿದ್ಯಾಭ್ಯಾಸವು ಕೇವಲ ಸಾಹಿತ್ಯಾತ್ಮಕವಾಗಿ ಪರಿಣಮಿಸಿತು. ಈ ಹೈಸ್ಕೂಲು ದ್ವಿಗುಣವಾದ ಉದ್ದೇಶ ಸಾಧನೆಗೆ ಒಂದು ಮಾದರಿ ಸಂಸ್ಥೆಯಾಗಿ ಪರಿಣಮಿಸುತ್ತದೆಂದೂ ಅಲ್ಲದೆ, ಈಗಿರುವ ಹೈಸ್ಕೂಲುಗಳಲ್ಲಿಯೂ ಅದರ ಮೇಲ್ಪಂಕ್ತಿಯನ್ನೇ ಅನುಸರಿಸಲಾಗುವುದೆಂದೂ ಆಶಿಸುತ್ತೇವೆ.

ಅನಂತರ ಕಸ್ತೂರಿ ಬಾ ಕೇಂದ್ರದವರ ನಿರ್ದೇಶವಿರುವ ಕಾರ್ಯಕಲಾಪಗಳನ್ನು ಮಹಾಪ್ರಭುಗಳವರು ವೀಕ್ಷಿಸಿದರು. ಶ್ರೀಮತಿ ಯಶೋಧರ ದಾಸಪ್ಪನವರ ಬಿಟಿ ರವೆ ಕಾರ್ಯಕಲಾಪಗಳನ್ನು ವಿವರಿಸಿದರು.

Edited, printed and published by V R Nagaraj... at Sadhvi ... Road Mysore

ಹಳ್ಳಿಗಳಲ್ಲಿ ಪರಸ್ಪರ ಸಹಾಯ ಸಂಘಗಳು ಹೆಚ್ಚಬೇಕು

ಶ್ರೀಮನ್ಮಹಾರಾಜರ ಭಾಷಣ

ಸ್ವಂ ಸ.] ಚನ್ನರಾಯಪಟ್ಟಣ ೧೧

ಶ್ರೀಮನ್ಮಹಾರಾಜರವರು ನಿನ್ನೆ ಹಾಸನ ಜಿಲ್ಲೆಯ ಪ್ರವಾಸವನ್ನು ಕೈಕೊಂಡು ಚನ್ನರಾಯಪಟ್ಟಣದಲ್ಲಿ ಶ್ರೀ ಗಾಯತ್ರೀ ದೇವಿ ಆಸ್ಪತ್ರೆ ಮತ್ತು ಬಸ್ ನಿಲ್ದಾಣಗಳ ಕಟ್ಟಡಗಳ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು, ಮಂತ್ರಿ ಮಹೋದಯರುಗಳಾದ ಶ್ರೀಗಳು ಎಚ್ ಸಿ ದಾಸಪ್ಪ, ಡಿ ಎಚ್ ಚಂದ್ರಶೇಖರಯ್ಯ, ಜಿ ಮಹದೇವ ಪ್ರಸಾದ್, ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯ, ಕಾರ್ಯದರ್ಶಿಯವರಾದ ಶ್ರೀ ಎ ಜಿ ರಾಮಚಂದ್ರರಾಯರು, ತೋರಣ್ಣಗೌಡರ ಮತ್ತು ಶ್ರೀಗಳು ಸಭೆ ಮತ್ತು ಶಾಸನ ಸಭೆಗಳ ಸದಸ್ಯರುಗಳು ದಯಮಾಡಿಸಿದ್ದರು. ಬಾಲಿಕೆಯರಿಂದ ಪ್ರಾರ್ಥನೆಯಾದನಂತರ ಶ್ರೀ ವೀರಭದ್ರ ಶೆಟ್ಟರು ಸ್ವಾಗತ ಪತ್ರವನ್ನು ಓದಿದರು. ಚನ್ನರಾಯಪಟ್ಟಣದ ಪೌರಸಭೆಯ ಪರವಾಗಿ ಶ್ರೀ ಸಿ ಎಸ್ ಲಿಂಗೇಗೌಡರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಅರ್ಪಿಸಿದರು. ದಾನಿಗಳ ಪರವಾಗಿ ಶ್ರೀ ಪುಟ್ಟಸ್ವಾಮಿ ಗೌಡರೂ ಸಹ ಬಿನ್ನವತ್ತಳೆಯನ್ನು ಅರ್ಪಿಸಿದರು.

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ರೈತರು ಬೆಳೆದ ಪದಾರ್ಥಗಳನ್ನು ಮಾರುವುದಕ್ಕೆ ಸಹಾಯ ಮಾಡುವಂತಹ ಪರಸ್ಪರ ಸಹಾಯ ಸಂಘಗಳನ್ನು ಏರ್ಪಡಿಸಿದಲ್ಲಿ, ಅವು ಈಗಿನ ಕಾಲಕ್ಕೆ ಹೆಚ್ಚು ಅನುಕೂಲವಾಗಿರುತ್ತದೆ ಎಂದು ತಿಳಿಸಿದರು.

ಶ್ರವಣಬೆಳಗೊಳದಲ್ಲಿ ಮಹಾಸ್ವಾಮಿಯವರು

ಮಹಾಪ್ರಭುಗಳವರು ಶ್ರವಣಬೆಳಗೊಳದಲ್ಲಿರುವ ಶ್ರೀ ಜೈನ ಮಠಕ್ಕೆ ಭೇಟಿ ಕೊಟ್ಟರು. ಮಠದ ಸ್ವಾಮಿಯವರಾದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರು ಪ್ರಭುಗಳವರನ್ನು ಮಠದ ಮರ್ಯಾದೆಗಳೊಡನೆ ಸ್ವಾಗತಿಸಿದರು. ಮಹಾಪ್ರಭುಗಳವರು ಮಠ ಆವರಣ, ಕೀರ್ತಿಸ್ತಂಭಗಳನ್ನು ವೀಕ್ಷಿಸಿ, ಶ್ರೀ ಸ್ವಾಮಿಗಳವರಿಂದ ಆಶೀರ್ವಾದಪೂರ್ವಕವಾಗಿ ಫಲ ಮುಂತಾದ್ದನ್ನೂ, ಹಾರ ಮತ್ತು ಬಿಳಿ ವಸ್ತ್ರಗಳನ್ನು ಸ್ವೀಕರಿಸಿದರು. ಕುಶಲ ಪ್ರಶ್ನೆಯಾದನಂತರ ಮಹಾಪ್ರಭುಗಳವರು ಶ್ರೀ ಸ್ವಾಮಿಗಳವರಿಗೆ ಶಾಲು ಜೋಡಿಯನ್ನು ದಯಪಾಲಿಸಿದರು. ಶ್ರೀ ಸ್ವಾಮಿಯವರ ಗೋಮಟೇಶ್ವರ ವಿಗ್ರಹವನ್ನು ರಕ್ಷಿಸಲು ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿದರು.

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

By Dr N S ... arayan Sastry
Inter Arts & Inter Science
Text Book for 1949 5
ಬೆಲೆ 1 6 0
ಮಿತ್ರ ಮತ್ತು ಕಂಪನಿ,
...

ಪ್ರವಾಹಕ್ಕೆ ಸಿಕ್ಕಿ ೩೦ ಜನರ ಮರಣ

ಬಿರಾರ್ ಪ್ರಾಂತದ ಬುಲ್ಡಾನ ಜಿಲ್ಲೆಯ ಮೆಹಕಾರ್ ಎಂಬಲ್ಲಿ ಅತಿವೃಷ್ಟಿಯಾಗಿ ಪ್ರವಾಹವು ವಿಪರೀತ ಏರಿತೆಂದೂ ಇದರ ಪರಿಣಾಮವಾಗಿ ವ್ಯವಸಾಯದಲ್ಲಿ ನಿರತರಾಗಿದ್ದ ೩೦ ಮಂದಿ ಸ್ತ್ರೀಯರು ಕೊಚ್ಚಿಹೋದರೆಂದೂ ವರದಿಯಾಗಿದೆ. ಇದುವರೆಗೆ ೧೫ ಜನ ಸ್ತ್ರೀಯರ ಶವಗಳು ಮಾತ್ರ ಪತ್ತೆಯಾಗಿವೆ. ನೂರು ಎಳೆಯ ಮಕ್ಕಳೂ ಸಹ ಕೊಚ್ಚಿಕೊಂಡು ಹೋದವೆಂದು ಹೇಳಲಾಗಿದೆ.

ವಜ್ರ ಪುಡಿ ತಿಂದು ಆತ್ಮಹತ್ಯ ಪ್ರಯತ್ನ

ಮದ್ರಾಸಿನಲ್ಲಿ ಅಂಬುಜಾಯಿ ಎಂಬ ಇಪ್ಪತ್ತೊಂದು ವಯಸ್ಸಿನ ಯುವತಿಯು ಜೀವನದಲ್ಲಿ ಜಿಗುಪ್ಸೆ ಹೊಂದಿ ತನ್ನ ಕಿವಿಯಲ್ಲಿದ್ದ ಓಲೆಯ ವಜ್ರಗಳನ್ನು ಪುಡಿ ಮಾಡಿ ತಿಂದು ಆತ್ಮ ಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದ ವಿಷಯವು ವರದಿಯಾಗಿದೆ. ಆಕೆಯು ಈಗ ಆಸ್ಪತ್ರೆಗೆ ಸೇರಿಸಲ್ಪಟ್ಟು ಚಿಕಿತ್ಸೆಯಲ್ಲಿದ್ದಾಳೆ. ಪೋಲೀಸರು ತನಿಖೆ ಕ್ರಮ ಜರುಗಿಸುತ್ತಿದ್ದಾರೆ.

ಮಹಾಪ್ರಭುಗಳಿಂದ ಜಿಲ್ಲಾ ಬೋರ್ಡ್ ಹೈಸ್ಕೂಲ್ ಆರಂಭೋತ್ಸವ

ಆಳುವ ಮಹಾಸ್ವಾಮಿಯವರು ನಿನ್ನೆ ಮಧ್ಯಾಹ್ನ ಹಾಸನ ಜಿಲ್ಲಾ ಬೋರ್ಡಿನ ಆಶ್ರಯದಲ್ಲಿ ನಡೆಯಲಿರುವ ನುಗ್ಗೆಹಳ್ಳಿ ಹೈಸ್ಕೂಲಿನ ಆರಂಭೋತ್ಸವವನ್ನು ನೆರವೇರಿಸಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ವೈ ಧರ್ಮಪ್ಪನವರು, ಹೈಸ್ಕೂಲ್ ಸಮಿತಿ ಸದಸ್ಯರನ್ನು ಮಹಾಪ್ರಭುಗಳವರಿಗೆ ಪರಿಚಯ ಮಾಡಿಕೊಟ್ಟರು. ಹೈಸ್ಕೂಲ್ ಸಮಿತಿ ಅಧ್ಯಕ್ಷರಾದ ಶ್ರೀ ಜಿ ಎ ತಿಮ್ಮಪ್ಪಗೌಡರು ಬಿನ್ನವತ್ತಳೆಯನ್ನು ಓದಿ ಬೆಳ್ಳಿಯ ಕರಂಡದಲ್ಲಿಟ್ಟು ಅರ್ಪಿಸಿದರು.

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಚನ್ನರಾಯಪಟ್ಟಣ ತಾಲ್ಲೂಕನ್ನು ವಿಭಾಗಿಸಿ ಎರಡು ತಾಲ್ಲೂಕುಗಳನ್ನಾಗಿ ಮಾಡಲು ಸಾಧ್ಯವಿಲ್ಲವೆಂದೂ ಈಗಿನ ದ್ರವ್ಯಾನುಕೂಲದ ಪರಿಸ್ಥಿತಿಯಲ್ಲಿ ಆಡಳಿತದ ಸಂಬಂಧವಾಗಿ ಏರ್ಪಟ್ಟಿರತಕ್ಕ ಪ್ರಾದೇಶಿಕ ವಿಭಾಗಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಅನುಕೂಲವಿಲ್ಲವೆಂದೂ ತಿಳಿಸಿದರು.

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಆಧುನಿಕ ರೀತಿಯ ಕಿಂಡರ್ ಗಾರ್ಟನ್ ಉಪಕರಣಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ತೆಗೆದುಕೊಳ್ಳಲು ಅವಕಾಶವಿರುವುದರಿಂದ ಪಾಲಕರು ಮಾತಾಪಿತೃಗಳು ತ್ವರೆ ಮಾಡಿ ಈ ಅವಕಾಶದ ಪ್ರಯೋಜನವನ್ನು ಪಡೆಯ ಬೇಕೆಂದು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ
ವಿವರಣಕರ

ಗಾಂಧಿ ತತ್ವ ಪ್ರಸಾರಕ್ಕಾಗಿ ಪ್ರಪಂಚ ಪರ್ಯಟನ

ಗಾಂಧಿಜಿಯವರ ತತ್ವಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ ಪ್ರೊ|| ಅಗರವಾಲರವರು ಲಂಡನ್ನಿನಿಂದ ಬೆಲ್ಜಿಯಮಿಗೆ ತೆರಳಿರುವರು. ಅವರು ಚೀಣಾ, ಜಪಾನ್ ಮತ್ತು ಅಮೇರಿಕಾಗಳಿಗೆ ಹೋಗಿದ್ದು ಫ್ರಾನ್ಸ್, ಜರ್ಮನಿ, ಗ್ರೀಸ್ ಮುಂತಾದ ದೇಶಗಳಲ್ಲಿ ಸಂಚರಿಸಿ ಭಾರತಕ್ಕೆ ಹಿಂದಿರುಗುವರು.

ಸಗಣಿಯ ಉಪಯೋಗ

ಇಂಗ್ಲೆಂಡಿನ ಸುಪ್ರಸಿದ್ಧ ವೈದ್ಯರೊಬ್ಬರು ಕ್ರಿಮಿಗಳಿಂದ ಸಂಭವಿಸುವ ರೋಗಗಳನ್ನು ನಿರ್ಮೂಲ ಮಾಡಲು ಸಗಣಿಯು ಸಿದ್ಧೌಷಧವೆಂದು ತಿಳಿಸಿದ್ದಾರೆ. ಹೊಟ್ಟೆಯೊಳಗಿನ ವ್ರಣಗಳನ್ನೂ ಸಗಣಿಯ ನೀರು ಗುಣಪಡಿಸಬಲ್ಲುದೆಂದು ಹೇಳಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಅಧ್ಯಕ್ಷರು

ವಿಶ್ವದ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಮದ್ರಾಸಿನ ಡಾ|| ಎ ಲಕ್ಷ್ಮಣಸ್ವಾಮಿ ಮೊದಲಿಯಾರರನ್ನು ಚುನಾಯಿಸಲಾಗಿದೆ.

ರಾಮಸ್ವಾಮಿ ನಾಯ್ಕರ ಅವಿಶ್ವಾಸ ನಿರ್ಣಯ

ಮಧುರೆಯ ದ್ರಾವಿಡ ಸಂಘದ ಸಾಧಾರಣ ಸಭೆಯು ಕಳೆದ ಬುಧವಾರ ದ್ರಾವಿಡ ಸಂಘದ ನಾಯಕರಾದ ಶ್ರೀ ಇ ವಿ ರಾಮಸ್ವಾಮಿ ನಾಯಕರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮಾಡಲಾಯಿತು. ಅವರು ತಮ್ಮ ೭೦ನೇ ವಯಸ್ಸಿನಲ್ಲಿ ೨೦ ವರ್ಷದ ಹೆಣ್ಣನ್ನು ಮದುವೆಯಾಗುವುದು ಸಂಘದ ತತ್ವಕ್ಕೆ ವಿರುದ್ಧವಾದುದೆಂದು ಅಭಿಪ್ರಾಯಪಡಲಾಯಿತು.

✻ ಲಕ್ಷ್ಮಿ ✻

13-7 49 ರಿಂದ

ಪ್ರತಿ ದಿನ 3 ಆಟಗಳು
ಮ್ಯಾಟನಿ ೩-೩೦, ಸಂಜೆ ೬-೩೦
ಮತ್ತು ರಾತ್ರಿ ೧೧-೧೫ ಕ್ಕೆ
ಪಕ್ಷಿರಾಜಾ ಪಿಲಂಸ್‌ರವರ ತಮಿಳು

ಜಗತಲ - ಪ್ರತಾಪ

(ಹೊಸ ಕಾಪಿ)
ಭೂಮಿಕೆ.. ಪಿ ಯು ಚಿನ್ನಪ್ಪ, ಎಂ. ...
ಸರೋಜ, ಎಸ್ ಎಸ್. ಕೃಷ್ಣ ...
ಮತ್ತು ಟಿ ಎ ಮಧುರಂ

ಮೈಸೂರು ಶ್ರೀಮನ್ಮಹಾರಾಜ ಮಮ್ಮಡಿ ಕೃಷ್ಣರಾಜ ಒಡೆಯರ ಪ್ಯಾಸ್ ವೈದ್ಯ ... ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂದವರಿಗೆ ಗ... ಟೀ ಔಷದ
ಕ್ರಯ ೧ ಪಟ್ ರೂ ೩-೪ ೦ ... ಮತ್ತು ಟಪ ಖರ್ಚು ...
ತಯಾರಿಸುವವರು
ಎ. ರಾಮಸ್ವಾಮಿ ಅಯ್ಯ
ಅಂಬಳೆ, ಯಳಂದೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೨-೭-೪೯ [ಸಂಚಿಕೆ ೩೮೧

ಪಶ್ಚಿಮ ಬಂಗಾಳಕ್ಕೆ ಸ॥ ಪಟೇಲರ ಎಚ್ಚರಿಕೆ

ರಾಧಾಕೃಷ್ಣನ್‌ರವರು ರಷ್ಯದಲ್ಲಿ ರಾಯಭಾರಿ

ಡಾ॥ ಎಸ್ ರಾಧಾಕೃಷ್ಣನ್‌ರವರನ್ನು ರಷ್ಯದಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗಿದೆ ಮುಂದಿನ ತಿಂಗಳು ಅವರು ಮಾಸ್ಕೋವಿಗೆ ತೆರಳುವರು

ಕಮ್ಯೂನಿಸ್ಟರ ವಿರುದ್ಧವಾಗಿ ಪೆಸಿಫಿಕ್ ಯೋಜನೆ

ಕಮ್ಯೂನಿಸ್ಟರ ಮುನ್ನಡೆಯನ್ನು ತಡಗಟ್ಟಲು ದೂರ ಪ್ರಾಚ್ಯ ದೇಶಗಳು ಒಟ್ಟಿಗೆ ಸೇರಿ ಶ್ರಮಿಸಬೇಕೆಂಬುದರ ಬಗ್ಗೆ ಚೀಣದ ಚಿಯಾಂಗ್ ಕೈಷೇಕ್ ಮತ್ತು ಫಿಲಿಫೈನಿನ ಅಧ್ಯಕ್ಷರುಗಳಿಗೆ ಮಾತುಕತೆ ನಡೆದು, ಒಂದು ಒಪ್ಪಂದಕ್ಕೆ ಬರಲಾಗಿದೆಯೆಂದು ವರದಿಯಾಗಿದೆ ಫೆಸಿಫಿಕ್ ಯೂನಿಯನ್ ಸ್ಥಾಪಿಸುವ ಬಗ್ಗೆ ಫಿಲಿಪೈನ್ಸ್ ದೇಶವು ಮೊದಲು ಕಾರ್ಯಕ್ರಮ ಕೈಗೊಳ್ಳುವುದೆಂದೂ ಅನಂತರ ಚೀಣಾ, ದಕ್ಷಿಣ ಕೊರಿಯಾ ಮತ್ತು ಇತರ ದೇಶಗಳು ಸೇರುವುವೆಂದೂ ಹೇಳಲಾಗಿದೆ ಚೀಣದ ರಾಷ್ಟ್ರೀಯ ನಾಯಕರುಗಳಿಗೆ ಫಿಲಿಪೈನ್ಸಿನಲ್ಲಿ ಆಶ್ರಯ ಕೊಡಲಾಗುವುದೆಂಬೂ ಗೊತ್ತಾಗಿದೆ

ಆಹಾರ ಸಲಹಾ ಸಮಿತಿಗಳ ನೇಮಕ

ರೇಷನ್ ಇರುವ ಎಲ್ಲ ಪ್ರದೇಶಗಳಲ್ಲೂ ಸ್ಥಳೀಯ ಆಹಾರ ಸಲಹಾ ಸಮಿತಿಗಳನ್ನು ಈ ತಿಂಗಳೊಳಗಾಗಿ ರಚಿಸಬೇಕೆಂದು ಭಾರತ ಸರ್ಕಾರದವರು ಪ್ರಾಂತ್ಯ ಮತ್ತು ಸಂಸ್ಥಾನಗಳ ಸರ್ಕಾರಗಳಿಗೆ ಸೂಚನೆ ಇತ್ತಿದ್ದಾರೆ ಈ ಸಮಿತಿಗಳು ಆಹಾರದ ಬಗ್ಗೆ ಬರುವ ಪುಕಾರುಗಳನ್ನು ಪರಿಶೀಲಿಸುವುದಲ್ಲದೆ, ಸ್ಥಳೀಯ ಸಂಸ್ಥೆಗಳಿಗೆ ಸಲಹೆಗಳನ್ನು ಕೊಡುವುವೆಂದು ಹೇಳಲಾಗಿದೆ

ಪತ್ರಿಕೋದ್ಯೋಗಿ ಸಮ್ಮೇಳನ ಅಧ್ಯಕ್ಷ ಚುನಾವಣೆ

ಬೆಂಗಳೂರಿನಲ್ಲಿ ಮುಂದಿನ ತಿಂಗಳು ನಡೆಯಲಿರುವ ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಆರನೇ ಸಮ್ಮೇಳನದ ಅಧ್ಯಕ್ಷತೆ ಸ್ಥಾನಕ್ಕೆ ಶ್ರೀಗಳಾದ ಎಂ ಎಸ್ ವೆಂಕೋಬರಾವ್, ಬಿ ಬಾಲಯ್ಯ ಕೆ ಜೀವಣ್ಣರಾವ್, ಹೆಚ್ ಶ್ರೀಕಂಠಯ್ಯ ಮತ್ತು ಆಚಾರ್ಯ ಎ ರಾಮಲಿಂಗರವರು ಉಮೇದುವಾರರಾಗಿ ನಿಂತಿದ್ದಾರೆ

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಶ್ರೀ ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ನಡೆಯಿತು. ಶ್ರೀನಿವಾಸಪ್ಪ ಇಂಜನೀಯರಿಂಗ್ ಕಾಲೇಜ್ ಮತ್ತು ಇತರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಥಳ ಸಿಕ್ಕದೆ ತೊಂದರೆ ಪಡುತ್ತಿರುವ ವಿಚಾರವು ಚರ್ಚೆಗೆ ಬಂದು, ಹೆಚ್ಚು ಸೀಟುಗಳನ್ನು ಕಾನುವಂತೆ ವಿಶ್ವ ವಿದ್ಯಾನಿಲಯದ ಕೌನ್ಸಿಲನ್ನು ಪ್ರಾರ್ಥಿಸಬೇಕೆಂದು ನಿರ್ಧರಿಸಲಾಯಿತೆಂದು ತಿಳಿದುಬಂದಿದೆ ಸರ್ಕಾರದ ಕೆಗಾರಿಕೆ ... ರಚನಾ ಕಾರ್ಯದ ಉಪಯೋಗ ... ಮಂತ್ರಿಮಂಡಲದ ವೇಳೆ ಒಂ... ನ ದೂರುಗಳ ವಿಚಾರವಾಗಿಯೂ ಚರ್ಚೆ ನಡೆಯಿತೆಂದು ಗೊತ್ತಾಗಿದೆ ಕರ್ನಾಟಕ ಏಕೀಕರಣ ವಿಷಯವನ್ನು ಮುಂದಕ್ಕೆ ಹಾಕಲಾಗಿದೆ

ಪಶ್ಚಿಮ ಬಂಗಾಳ ಸರ್ಕಾರಕ್ಕೆ ಪಟೇಲರ ಎಚ್ಚರಿಕೆ

ಪಶ್ಚಿಮ ಬಂಗಾಳದ ಕಾಂಗ್ರೆಸ್ಸಿನವರಲ್ಲಿರುವ ಒಡಕುಗಳನ್ನು ಸರಿಪಡಿಸಿಕೊಂಡು, ಒಗ್ಗಟ್ಟಾಗಿ ಕೆಲಸಮಾಡಬೇಕೆಂದೂ ಇಲ್ಲವಾದರೆ ಸರ್ಕಾರದ ಆಡಳಿತವನ್ನು ಗೌರ್ನರರು ವಹಿಸಿಕೊಳ್ಳುವಂತೆ ಭಾರತ ಸರ್ಕಾರವು ಆಜ್ಞೆ ಮಾಡುವುದೆಂದೂ ಸರ್ದಾರ್ ಪಟೇಲರು ಎಚ್ಚರಿಕೆ ಕೊಟ್ಟಿರುವುದಾಗಿಯೂ, ಇದನ್ನು ಕಲ್ಕತ್ತಗೆ ಭೇಟಿ ಕೊಡಲಿರುವ ಪ್ರಧಾನಿ ಪಂಡಿತ ನೆಹರೂರವರು ಕಾಂಗ್ರೆಸ್ ನಾಯಕರುಗಳಿಗೆ ತಿಳಿಸುವರೆಂದೂ ಹೇಳಲಾಗಿದೆ

ಭಾರತದಲ್ಲಿ ಟ್ರಾಕ್ಟರುಗಳ ತಯಾರಿಕೆ

ಭಾರತದಲ್ಲಿ ಟ್ರಾಕ್ಟರುಗಳನ್ನು ತಯಾರಿಸಲು ಕೆನಡಾ ದೇಶದ ಕಂಪೆನಿಯವರ ಇಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲಿರುವರೆಂದೂ, ಮುಂದಿನ ವರ್ಷದಿಂದ ಕಾರ್ಖಾನೆಯು ಪ್ರಾರಂಭವಾಗಿ ಮೂರು ವರ್ಷದಲ್ಲಿ ೩ ಸಾವಿರ ಟ್ರಾಕ್ಟರುಗಳನ್ನು ತಯಾರಿಸಲಾಗುವುದೆಂದೂ ಹೇಳಲಾಗಿದೆ ಅದನ್ನು ಬೊಂಬಾಯಿ, ಕಲ್ಕತ್ತ ಅಥವ ಲಕ್ನೋಗಳಲ್ಲಿ ಸ್ಥಾಪಿಸಬಹುದೆಂದು ಗೊತ್ತಾಗಿದೆ

ವಿದ್ಯುಚ್ಛಕ್ತಿ ಚಿತೆಗಳು

೫ ಲಕ್ಷ ರೂ ವೆಚ್ಚದಿಂದ ಬೊಂಬಾಯಿನಲ್ಲಿ ಎರಡು ವಿದ್ಯುಚ್ಛಕ್ತಿ ಚಿತೆಗಳನ್ನು ಸ್ಥಾಪಿಸಲು ಅಲ್ಲಿನ ಪುರ ಸಭೆಯವರು ನಿರ್ಧರಿಸಿದ್ದಾರೆ ಸೌದೆಯಿಂದ ಶವವನ್ನು ಸುಡಲು ೫೦-೬೦ ರೂ ಖರ್ಚಾಗುವುದೆಂದೂ, ಆದರೆ ಇದಕ್ಕೆ ಕೇವಲ ೧೪ ರೂ ಮಾತ್ರ ಬೇಕಾಗುವುದೆಂದೂ ಹೇಳಲಾಗಿದೆ

ಸ್ವಾಗತ ಸಮಾರಂಭ

ರಾಜಧಾನಿಯ ರಾಜಲಕ್ಷ್ಮಿ ಮೋಟಾರ್ ಸರ್ವೀಸಿನ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಕೆ ಮ ರಾಮಸ್ವಾಮಿಯವರು ತಮ್ಮ ಸಹೋದರರಾದ ಶ್ರೀ ಆರ್ ರಾಘವನ್ ಮತ್ತು ಬಿ ಎಸ್ ಪದ್ಮಾಕ್ಷಿ ... ವಿವಾಹದ ... ನೆನ್ನೆ ಸಂಜೆ ಸ್ವಾಗತ ... ಭವನದಲ್ಲಿ ... ಸಮಾರಂಭವನ್ನು ಏರ್ಪಡಿಸಿ ಅನೇಕ ಮಹನೀಯರು ಮತ್ತು ಮಹಿಳೆಯರು ಆಗಮಿಸಿದ್ದರು

ನಾಳಿದ್ದು ಚಂದ್ರನಾಗೂರಿನ ವರ್ಗ

ಚಂದ್ರನಾಗೂರಿನ ಆಡಳಿತವನ್ನು ಇದೇ ೧೪ ನೇ ತಾ॥ ಭಾರತ ಸರ್ಕಾರಕ್ಕೆ ವಹಿಸುವ ಬಗ್ಗೆ ಫ್ರೆಂಚ್ ಮತ್ತು ಭಾರತ ಸರ್ಕಾರಗಳಿಗೆ ಒಪ್ಪಂದವಾಗಿದೆಯೆಂದು ಫ್ರಾನ್ಸಿನ ಪತ್ರಿಕೆಗಳು ವರದಿಮಾಡಿವೆ ಭಾರತದಲ್ಲಿರುವ ಇತರ ಫ್ರೆಂಚ್ ಪಟ್ಟಣಗಳಲ್ಲೂ ಈ ವರ್ಷದೊಳಗಾಗಿ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದೆಂದೂ ಹೇಳಲಾಗಿದೆ

ಭಾರತದ ಹಳ್ಳಿಯಮೇಲೆ ಪಾಕಿಸ್ತಾನ್ ದರೋಡೆಗಾರರು

ರಾಜಸ್ತಾನ್ ಯೂನಿಯನ್ನಿಗೆ ಸೇರಿದ ಜಯಸಲ್ಮೀರಿನ ಹಳ್ಳಿಗೆ ಪಾಕಿಸ್ತಾನದ ೭ ಜನ ದರೋಡೆಗಾರರು ಮೊನ್ನೆ ರಾತ್ರಿ ನುಗ್ಗಿ ಅಲ್ಲಿನ ಒಬ್ಬ ಜಮೀನ್ದಾರರ ಆಸ್ತಿಪಾಸ್ತಿಗಳನ್ನೆಲ್ಲಾ ದೋಚಿಕೊಂಡು ಪರಾರಿಯಾದರೆಂದೂ ಇವರಿಗೂ ಪೊಲೀಸರಿಗೂ ಆದ ಘರ್ಷಣೆಯಲ್ಲಿ ಒಬ್ಬನು ಸತ್ತನೆಂದೂ ಹೇಳಲಾಗಿದೆ

ಮಾರಿಷಸ್ ದ್ವೀಪವು ಭಾರತಕ್ಕೆ ?

ಬೊಂಬಾಯಿಗೆ ೨೫೦೦ ಮೈಲಿ ದೂರದಲ್ಲಿರುವ ಮಾರಿಷಸ್ ದ್ವೀಪದಲ್ಲಿ ಹೆಚ್ಚು ಮಂದಿ ಭಾರತೀಯರೇ ಇರುವರೆಂದೂ, ಇತ್ತೀಚೆಗೆ ಅವರು ಭಾರತಕ್ಕೆ ಸೇರಬೇಕೆಂದು ಪ್ರಚಾರ ನಡೆಸುತ್ತಿರುವರೆಂದೂ ಹೇಳಲಾಗಿದೆ

ಮಹಡಿ ಮನೆಯ ಎತ್ತರದ ಮೋಟಾರು ಟ್ರಕ್ಕು

ಒಂದು ಮಹಡಿ ಮನೆಯಷ್ಟು ಎತ್ತರವಾದ ಭಾರಿ ಮೋಟಾರು ಟ್ರಕ್ಕನ್ನು ಅಮೆರಿಕದಲ್ಲಿ ತಯಾರಿಸಲಾಗಿದೆ ಅದರ ಚಕ್ರಗಳ ೭॥ ಅಡಿ ಎತ್ತರವಾಗಿದ್ದು, ೧೭ ಟನ್ನುಗಳಷ್ಟು ಸಾಮಾನುಗಳನ್ನು ಅದು ಹೊರಬಲ್ಲದೆಂದು ಹೇಳಲಾಗಿದೆ

ಆಕಾಶವಾಣಿಯಲ್ಲಿ ಭಾಷಣ

ಜಿಲ್ಲಾ ಪ್ರಚಾರಸಮಿತಿಯ ಶ್ರೀ ಬಿ ಪಿ ಸತ್ಯನಾರಾಯಣರವರು ನಾಳೆರಾತ್ರಿ ೭-೩೦ ಗಂಟೆಗೆ ಆಕಾಶವಾಣಿಯಲ್ಲಿ ಮಹಿಳೆಯರು ಮತ್ತು ... ಪ್ರಚಾರ ಎಂಬ ವಿಷಯವಾಗಿ ಪ್ರಸಾರ ಭಾಷಣ ಮಾಡುವರು

ಮೈಸೂರು ಜಿಲ್ಲೆಯಲ್ಲಿ ಮಂತ್ರಿಗಳ ಪ್ರವಾಸ

ಮೈಸೂರು ೧೨

ಸಂಸ್ಥಾನದ ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿಯವರು ನಾಳಿದ್ದು ಇಲ್ಲಿಗೆ ಆಗಮಿಸಿ ಮಧ್ಯಾಹ್ನದ ವೇಳೆ ಕೃಷ್ಣರಾಜನಗರ, ಚಿಟ್ಟದಪುರ, ಸಿರಿಯಾಪಟ್ಟಣ, ಮತ್ತು ಹುಣಸೂರುಗಳಿಗೆ ಭೇಟಿ ಕೊಟ್ಟು ಸಂಜೆ ಹೊತ್ತಿಗೆ ಹಿಂದಿರುಗುವರು ಚಿಟ್ಟದಪುರದಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಮುನಿಸಿಪಲ್ ಶಾಖಾ ಸಚಿವರಾದ ಶ್ರೀ ಎಚ್ ಸಿದ್ದಯ್ಯನವರು ೧೭ನೇ ತಾರೀಖು ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿಗೆ ಭೇಟಿ ಕೊಟ್ಟು ಅಲ್ಲಿನ ಸೇತುವೆಯನ್ನು ಪರಿಶೀಲಿಸುವರು ಸರಗೂರಿನಲ್ಲಿ ಹೈಸ್ಕೂಲಿನ ಪ್ರಾರಂಭೋತ್ಸವವನ್ನೂ ನೆರವೇರಿಸುವರು

ವಿದೇಶಿ ಪ್ರವಾಸ ನಿಲ್ಲಿಸಲು ಮಂತ್ರಿಗಳಿಗೆ ಎಚ್ಚರಿಕೆ

ಮಂತ್ರಿಗಳು ಮತ್ತು ಸರ್ಕಾರೀ ಅಧಿಕಾರಿಗಳು ಇತ್ತೀಚಿಗೆ ವಿದೇಶಗಳಲ್ಲಿ ಪ್ರವಾಸವನ್ನು ಕೈಗೊಳ್ಳುವುದು ಹೆಚ್ಚಾಗುತ್ತಿದೆಯೆಂದೂ, ಅದನ್ನು ನಿಲ್ಲಿಸಿ ಅವರುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕೆಂದೂ ಪ್ರಧಾನಿ ಪಂಡಿತ ನೆಹರೂರವರು ಅವರುಗಳಿಗೆ ಎಚ್ಚರಿಕೆ ಕೊಟ್ಟಿರುವರೆಂದು ತಿಳಿದು ಬಂದಿದೆ

ಬ್ರಿಟನ್ನಿನಲ್ಲಿ ಗಂಡಾಂತರ ಪರಿಸ್ಥಿತಿ

ಲಂಡನ್ನಿನ ಬಂದರು ಕೆಲಸಗಾರರು ಮುಷ್ಕರ ಹೂಡಿರುವುದರಿಂದ, ಬ್ರಿಟನ್ನಿನಲ್ಲಿ ಗಂಡಾಂತರ ಪರಿಸ್ಥಿತಿಯೊದಗಿದೆಯೆಂದು ಅಲ್ಲಿನ ದೊರೆಗಳು ಒಂದು ಅವಸರದ ಆಜ್ಞೆಯನ್ನು ನಿನ್ನೆ ಹೊರಡಿಸಿರುತ್ತಾರೆ ಇದರಿಂದ ಅಲ್ಲಿ ಮುಖ್ಯ ಬಂದರುಗಳ ಆಡಳಿತವನ್ನು ಮಿಲಿಟರಿಯವರು ವಹಿಸಿಕೊಂಡಿರುವರು

ಕೇಂದ್ರ ಅರಾರಾ ಕಛೇರಿಯಲ್ಲಿ ಭೂತ

ದೆಹಲಿಯ ಕೇಂದ್ರ ಅರಾರಾ ಕಛೇರಿಯಲ್ಲಿ ಕೆಲವು ತಿಂಗಳಿನಿಂದ ಭೂತವು ಅನೇಕ ಕೊಠಡಿಗಳಿಗೆ ಭೇಟಿ ಕೊಡುತ್ತಿದೆಯೆಂದೂ, ವ್ಯವಸಾಯ ಸಚಿವರ ಕೊಠಡಿಯ ಬೀಗವನ್ನು ಅದು ತೆಗೆದು ಅಲ್ಲಿ ಊಟ ಮಾಡಿತೆಂದೂ ವರದಿಯಾಗಿದೆ ಮನುಷ್ಯನ ಕಾಲಿನ ಗುರ್ತು ಕಂಡುಬಂದಿದೆಯೆಂದೂ, ಅದನ್ನು ಕಂಡುಹಿಡಿಯಲು ಪೋಲೀಸರಿಗೆ ಸಾಧ್ಯವಿಲ್ಲವಾಗಿದೆಯೆಂದೂ ಹೇಳಲಾಗಿದೆ ಮೊಹರುಮಾಡಿದ ಲಕ್ಕೋಟೆಗಳನ್ನು ಒಡೆದು ಗುಪ್ತ ಕಾಗದಗಳನ್ನು ಓದಿ, ಹಾಗೆಯೇ ಇಟ್ಟು ಹೋಗಲಾಗುತ್ತಿದೆಯೆಂದೂ ಹೇಳಲಾಗಿದೆ

ಮಕ್ಕಳ ದಿನಾಚರಣೆ

ಭಾರತದಾದ್ಯಂತ ಇದೇ ... ನೇ ತಾ॥ ... ಮಕ್ಕಳ ದಿನವನ್ನು ... ವಿಶ್ವ ಸಂಸ್ಥೆಯು ಭಾರತದ ... ಸಂಸ್ಥಾನದಲ್ಲೂ ಅದನ್ನು ಆಚರಿಸುವ ... ಪ್ರಕಟಿಸಿ ... ಕೋರುತ್ತಿದೆ

ಲಾಹೋರಿನ ಸಾವಿರಾರು ಮನೆಗಳಿಗೆ ಅಪಾಯ

ಮಳೆಯ ದೆಸೆಯಿಂದ ಲಾಹೋರಿನಲ್ಲಿ ಸಾವಿರಾರು ಮಣ್ಣಿನ ಮನೆಗಳು ಕುಸಿದು ಬಿದ್ದು ಹೋಗುವ ಸಂಭವವಿರುವುದರಿಂದ ಅನೇಕ ಜನರು ಮನೆಗಳಿಲ್ಲದೆ ಕಷ್ಟಪಡುವ ಪ್ರಸಂಗ ಉಂಟಾಗಿದೆಯೆಂದೂ, ಅವರುಗಳಿಗೆ ವಸತಿ ಏರ್ಪಡಿಸಲು ಪುರಸಭೆಯವರು ಯೋಚನೆ ಮಾಡುತ್ತಿರುವರೆಂದೂ ಹೇಳಲಾಗಿದೆ

೭ ಕೋಟಿ ರೂ. ತಂತಿ ಮತ್ತು ಟೆಲಿಫೋನ್ ಯೋಜನೆ

ದೆಹಲಿ, ಕಲ್ಕತ್ತ, ಬೊಂಬಾಯಿ ಮತ್ತು ಮದರಾಸುಗಳಿಗೆ ತಂತಿ ಮತ್ತು ಟೆಲಿಫೋನುಗಳ ಅಂಡರ್ ಗ್ರೌಂಡ್ ಕೇಬಲ್ಲುಗಳನ್ನು ಹಾಕಲು ೭ ಕೋಟಿ ರೂ ಯೋಜನೆಯನ್ನು ತಯಾರಿಸಲಾಗಿದೆಯೆಂದು ಭಾರತ ಸರ್ಕಾರದ ಸಚಿವ ಶ್ರೀ ಕಿದ್ವಾಯಿಯವರು ತಿಳಿಸಿರುತ್ತಾರೆ.

ಕೊಲೆ ಅಪಾದನೆಗೆ ೩ ವರ್ಷ ಶಿಕ್ಷೆ

ಗುಂಡ್ಲುಪೇಟೆ ತಾಲ್ಲೂಕು ತಿಲಿಗೆರೆಯ ಆದಿಕರ್ನಾಟಕ ಜಾತಿಯ ವೆಂಕಟ ಎಂಬುವನು ೧೪-೧೧-೪೮ರಲ್ಲಿ ಹನುಮನನ್ನು ಗೊಬ್ಬಳಿ ಕಡ್ಡಿಯಿಂದ ಹೊಡೆದು ಕೊಲೆ ಮಾಡಿದನೆಂದು ಮತ್ತು ತನ್ನ ಹೆಂಡತಿಯನ್ನು ಸಹ ಹೊಡೆದು ಆಕೆಯ ಮೂಗಿನ ಮೂಳೆಯನ್ನು ಮುರಿದನೆಂಬ ಅಪಾದನೆಯಮೇಲೆ ಸೆಷನ್ಸಿಗೆ ಗುರಿಯಾಗಿದ್ದು, ಜಿಲ್ಲಾ ನ್ಯಾಯಾಧೀಶರು ಆತನಿಗೆ ೩ ವರ್ಷ ಕಠಿಣ ಶಿಕ್ಷೆಯನ್ನು ನಿನ್ನೆ ದಿನ ವಿಧಿಸಿದರು

ಮೋಸಪಡಿಸಿದುದಕ್ಕೆ ೨ ತಿಂಗಳು ಶಿಕ್ಷೆ

ರಾಜಧಾನಿಯ ಬ್ರೋಕರ್ ಸಿ ಎಸ್ ರಾವ್ ಎಂಬುವರು ಉಮಾಬಾಯಿ ಮತ್ತು ವೆಂಕಾಜಿರಾವ್ ಎಂಬುವರಿಗೆ ಸೇರಿದ ಕೃಷ್ಣರಾಜೇಂದ್ರ ಗಿರಣಿಯ ೧೪ ಷೇರುಗಳನ್ನು ಮಾರಿಸಿ ಕೊಡುವುದಾಗಿ ತಿಳಿಸಿ, ಅವುಗಳನ್ನು ಎಸ್ ರಾಮರಾವ್ ಎಂಬುವರಲ್ಲಿ ಒತ್ತೆ ಇಟ್ಟು ಹಣ ತೆಗೆದುಕೊಂಡು ದ್ರೋಹ ಮಾಡಿದರೆಂಬ ಅಪಾದನೆಯ ಮೇಲೆ ಅವರಿಗೆ ೨ ತಿಂಗಳ ಸಾದಾ ಶಿಕ್ಷೆಯನ್ನು ಮೊದಲನೇ ನ್ಯಾಯಾಧೀಶರು ವಿಧಿಸಿರುತ್ತಾರೆ

ಕೈ ಚೀಲ ಸಿಕ್ಕಿದೆ

ಚಾಮರಾಜಪುರಂ ರೈಲ್ವೆ ಸ್ಟೇಷನ್ನಿನ ಹತ್ತಿರ ಫೀಡಿಂಗ್ ಬಾಟ್ಲು ಮತ್ತಿತರೆ ಸಾಮಾನುಗಳಿರುವ ಒಂದು ಚೀಲ ಸಿಕ್ಕಿರುತ್ತದೆ ಅದು ಮರಿಮಲ್ಲಪ್ಪ ಸ್ಕೂಲಿನ ಸ್ಟಾಫ್ ಉಪಾಧ್ಯಾಯರಲ್ಲಿರುತ್ತದೆ ಸಂಬಂಧಪಟ್ಟವರು ಅವರಲ್ಲಿ ಅದನ್ನು ಪಡೆಯಬಹುದು

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

(By Dr N S Narayan Sastry)
Inter Arts & Inter Science
Text Book for 1949-50
ಬೆಲೆ 1-6-0
ಮಿತ್ರ ಮತ್ತು ಕಂಪೆನಿ,
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

೧ ಕೋಟಿ ರೂ. ಮನೆಗಳ ಯೋಜನೆ

ಸಹಕಾರ ತತ್ವದ ಮೇಲೆ ಮನೆಗಳನ್ನು ಕಟ್ಟಲು ೧ ಕೋಟಿ ರೂ ಅನ್ನು ಮದರಾಸ್ ಸರ್ಕಾರವು ಮಂಜೂರು ಮಾಡಿದೆ ಇನ್ನು ೨೦ ವರ್ಷಗಳಲ್ಲಿ ಮದರಾಸ್ ಪ್ರಾಂತ್ಯದ ದೊಡ್ಡ ನಗರಗಳಲ್ಲಿ ಮನೆಗಳ ಅಭಾವವಿರುವುದಿಲ್ಲವೆಂದು ಅಲ್ಲಿನ ಸಚಿವ ಶ್ರೀ ಎನ್ ಸಂಜೀವ ರೆಡ್ಡಿಯವರು ತಿಳಿಸಿರುತ್ತಾರೆ

ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ

ಮದರಾಸ್ ಪ್ರಾಂತ್ಯದ ಸರ್ಕಾರದ ಸಾರ್ವಜನಿಕ ಕಾಲೇಜುಗಳಲ್ಲಿರುವ ಹಿಂದುಳಿದ ವಿದ್ಯಾರ್ಥಿಗಳಿಗೆ ಪುಸ್ತಕ, ಮಧ್ಯಾಹ್ನದ ಉಪಾಹಾರಗಳನ್ನು ಒದಗಿಸಲು ಸರ್ಕಾರದವರು ೭೧ ಸಾವಿರ ರೂ ಮಂಜೂರು ಮಾಡಿರುತ್ತಾರೆ

ದೆಹಲಿಗೆ ಪ್ರತ್ಯೇಕ ಪ್ರಾಂತೀಯ ಸ್ಥಾನ

ಕಳೆದ ೩೭ ವರ್ಷಗಳಿಂದಲೂ ಚೀಫ್ ಕಮೀಷನರ ಪ್ರಾಂತ್ಯವಾಗಿದ್ದು ಭಾರತ ಸರ್ಕಾರದ ಆಡಳಿತದಲ್ಲಿರುವ ದೆಹಲಿಯನ್ನು ಪ್ರತ್ಯೇಕ ಲೆಫ್ಟಿನೆಂಟ್ ಗೌರ್ನರರ ಆಡಳಿತದ ಪ್ರಾಂತ್ಯವನ್ನಾಗಿ ಮಾಡಲು ಮುಂದಿನ ನವೆಂಬರ್ ತಿಂಗಳಿನಲ್ಲಿ ನಡೆಯುವ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು ಮಂಡಿಸಲಾಗುವುದೆಂದೂ, ಅದರಲ್ಲಿ ಪ್ರತ್ಯೇಕ ಶಾಸನ ಸಭೆ ಮತ್ತು ಮೂವರು ಮಂತ್ರಿಗಳಿರುವರೆಂದೂ ಹೇಳಲಾಗಿದೆ

ರೆಕ್ಕೆಗಳಿಲ್ಲದ ಕೋಳಿಗಳು

ಅಮೆರಿಕದ ಡೆಸ್‌ಮೊಯಿನ್ಸ್ ಎಂಬಲ್ಲಿ ರೆಕ್ಕೆಗಳಿಲ್ಲದ ೪೦ ಕೋಳಿಗಳಿವೆಯೆಂದೂ, ಕೋಳಿ ಸಾಕುವನೊಬ್ಬನು ೧೨ ವರ್ಷಗಳ ಸಂಶೋಧನೆ ನಡೆಸಿ, ಈ ರೀತಿ ಕೋಳಿಗಳು ಹುಟ್ಟುವಂತೆ ಮಾಡಿದ್ದಾನೆಂದೂ, ಇತರ ಕೋಳಿಗಳಿಗಿಂತ ಇವುಗಳಲ್ಲಿ ಹೆಚ್ಚು ಮಾಂಸವಿರುವುದೆಂದೂ ಹೇಳಲಾಗಿದೆ

ಜೂಜುಗಾರರಿಗೆ ದಂಡ

ಲಷ್ಕರ್ ಮೊಹಲ್ಲಾದ ಪೆರುಮಾಳ್ ಎಂಬಾತನ ಮನೆಯಲ್ಲಿ ಜೂಜಾಡುತ್ತಿದ್ದರೆಂದು ರಾಜಣ್ಣ ಮುಂತಾದ ೧೦ ಜನರಿಗೆ ತಲಾ ೧೦ ರೂ ಮತ್ತು ಪೆರುಮಾಳಿಗೆ ೩೦ ರೂ. ದಂಡವನ್ನು ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

RAJKAMAL,
MYSORE

From 12-7-49 for 3 days
Daily 3 Shows

OLIVER TWIST

By Charles Dickens
With-Robert Newton & Kay Walsh

From 15th July
RKO's
TYCOON
in Technicolor

ಹಣ್ಣಿನ ಪದಾರ್ಥಗಳ ಮೇಲೆ ಹತೋಟಿ

ಹಣ್ಣಿನಿಂದ ತಯಾರಾಗುವ ಪದಾರ್ಥಗಳ ಮೇಲೆ ಸರಿಯಾದ ಹತೋಟಿಯನ್ನು ಹಾಕಬೇಕೆಂದೂ ಪದಾರ್ಥಗಳನ್ನು ತಯಾರುಮಾಡುವ ವಿಧಾನಗಳನ್ನು ಪ್ರವೀಣರಿಂದ ತೋರಿಸಿ ಕೊಡುವ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದೂ ಕೇಂದ್ರ ಸರ್ಕಾರದವರು ಎಲ್ಲ ಪ್ರಾಂತ್ಯ ಮತ್ತು ಸಂಸ್ಥಾನಗಳಿಗೆ ಸೂಚನೆ ಕೊಟ್ಟಿರುತ್ತಾರೆ

ಮೈಸೂರಿಗೆ ಗೋಧಿ ಹಿಟ್ಟು

ಆಸ್ಟ್ರೇಲಿಯದಿಂದ ಗೋಧಿ ಹಿಟ್ಟನ್ನು ತುಂಬಿದ ಹಡಗೊಂದು ಮದರಾಸಿಗೆ ಈ ಶನಿವಾರ ಬರಲಿದೆ ಅದರಲ್ಲಿ ೩೦೦ ಟನ್ನು ಮೈಸೂರಿಗೆ ಬರುವುದು

ವಿದ್ಯಾರ್ಥಿ ಸಹಕಾರ ಸಂಘ

ರಾಜಧಾನಿಯ ಸೋನಾರ್ ರಸ್ತೆಯಲ್ಲಿರುವ ವಿದ್ಯಾರ್ಥಿ ಸಹಕಾರ ಸಂಘದ ವಾರ್ಷಿಕ ಸಭೆಯು ಮೊನ್ನೆದಿನ ನಡೆದು, ಶ್ರೀ ಎ ಸಿ ಬಸವರಾಜುರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಸ್ ಪಿ ಶಿವಲಿಂಗಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಎಸ್. ವಿ ಗೌಡಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು. ಯಾವ ವಿಧವಾದ ಸಹಾಯವೂ ಇಲ್ಲದ ಬಡ ವಿದ್ಯಾರ್ಥಿಗಳು ಹಣದ ಸಹಾಯಕ್ಕಾಗಿ ಇದೇ ೨೦ನೇ ತಾ॥ ಒಳಗಾಗಿ ಅರ್ಜಿ ಸಲ್ಲಿಸಬಹುದೆಂದು ತಿಳಿಸಲಾಗಿದೆ

ಕಲಾವಿದರಿಗೆ ಪ್ರೋತ್ಸಾಹ

ಬೆಂಗಳೂರು ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಯಾದ ಶ್ರೀ ಬಿ ಕೃಷ್ಣಪ್ಪನವರ ಕಲಾ ಕೌಶಲ್ಯವನ್ನು ಮೆಚ್ಚಿ ಶಾಂತಿನಿಕೇತನದಲ್ಲಿ ಉಚ್ಚ ಶಿಕ್ಷಣ ಪಡೆಯಲು ಆತನನ್ನು ಸರ್ಕಾರದವರು ಅಲ್ಲಿಗೆ ಕಳುಹಿಸಲಿದ್ದಾರೆ ಭಾರತ ಸರ್ಕಾರದವರು ಅವರ ಪ್ರಾತಿಭೆಯನ್ನು ಮೆಚ್ಚಿ ಕಲೆ ಮತ್ತು ರೇಷ್ಮೆ ಕೈಗಾರಿಕೆಯಲ್ಲಿ ಹೆಚ್ಚು ಶಿಕ್ಷಣ ಪಡೆಯಲು ಜಪಾನ್, ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಗೆ ಕಳುಹಿಸಲು ಆಲೋಚಿಸುತ್ತಿರುವರೆಂದು ಬಂದಿದೆ

* ಲಕ್ಷ್ಮಿ *
13-7 49 ರಿಂದ
ಪ್ರತಿ ದಿನ 3 ಆಟಗಳು
ಮ್ಯಾಟಿನಿ ೨-೩೦, ಸಂಜೆ ೬-೩೦
ಮತ್ತು ರಾತ್ರಿ ೧೦-೧೫ಕ್ಕೆ
ಪಕ್ಷಿರಾಜಾ ಫಿಲಂಸ್‌ರವರ ತಮಿಳು ಚಿತ್ರ

ಜಗತಲ - - ಪ್ರತಾಪನ್
(ಹೊಸ ಕಾಪಿ)
ಭೂಮಿಕೆ.. ಪಿ ಯು ಚಿನ್ನಪ್ಪ, ಎಂ ಎಸ್. ಸರೋಜ, ಎನ್ ಎಸ್ ಕೃಷ್ಣನ್ ಮತ್ತು ಟಿ ಎ ಮಧುರಂ

ನಿರೀಕ್ಷಿಸಿ –
ತೋಷಿ [ಹಿಂದಿ]
ವೀಣ, ರೆಹಮಾನ್, ನವಾಜ್, ಶಾ ನವಾಜ್.

Edited, printed and published by V R Nagarajan, at Sadhvi Press, D Subbiah Road, Mysore

ಪೋಲೀಸರು ಗುಂಡು ಹಾರಿಸಿದರೆ ವಿಚಾರಣೆ ನಡೆಯಬೇಕು

ಪೋಲೀಸರು ಯಾವುದೇ ಸಂದರ್ಭದಲ್ಲಿಯಾದರೂ ಗುಂಡು ಹಾರಿಸಿದರೆ ಕೂಡಲೇ ಆಯಾ ಸರ್ಕಾರದವರು ಆ ಬಗ್ಗೆ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ

○ ಅಮೆರಿಕದಲ್ಲಿ ಕಳೆದ ವರ್ಷ ೧೭೮ ದಿನ ಪತ್ರಿಕೆಗಳು ಇದ್ದವೆಂದು ಹೇಳಲಾಗಿದೆ

ಸ್ಟಾಲಿನ್‌ರವರ ಉತ್ತರಾಧಿಕಾರಿ

ರಷ್ಯದ ಮಾರ್ಷಲ್ ಸ್ಟಾಲಿನ್‌ರವರ ಎರಡನೇ ಪುತ್ರ ವಾಸಿಲ್ಲೀ ಎಂಬುವರು ಸ್ಟಾಲಿನ್‌ರವರ ಉತ್ತರಾಧಿಕಾರಿಗಳಾಗುವರೆಂದು ಹೇಳಲಾಗಿದೆ.

ಆನೆಗಳಿಗೆ ಪಾದರಕ್ಷೆ

ಜರ್ಮನಿಯ ಹಿನವರ್ ಮೃಗಾಲಯದಲ್ಲಿರುವ ಭಾರತದ ನಾಲ್ಕು ಆನೆಗಳ ಪೈಕಿ ಒಂದಕ್ಕೆ ಕಾಲಿಗೆ ನೋವು ಉಂಟಾಗಿ, ಅದರ ಮೋಡಿಯು ಸಡಿಲವಾದುದರಿಂದ ಅದಕ್ಕೆ ಒಂದು ನೂತನ ಚರ್ಮ ಪಾದರಕ್ಷೆಯನ್ನು ಹಾಕಲಾಗಿದೆಯೆಂದೂ ಇದರಿಂದ ಅದರ ಕಾಲು ನೋವು ಗುಣವಾಗಿದೆಯೆಂದೂ ಹೇಳಲಾಗಿದೆ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧವಾದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ
ಕ್ರಯ ೧ ಸೆಟ್ ರೂ ೩-೪-೦ ಪ್ಯಾಕಿಂಗ್ ಮತ್ತು ಟಪಾಲು ೧೨ ಆಣೆ
ತಯಾರಿಸುವವರು
ಎ. ರಾಮಸ್ವಾಮಿ ಅಯ್ಯಂಗಾರ್
ಅಂಬಳೆ, ಯಳಂದೂರು
ಇವರು ಮೈಸೂರು ಕೃಷ್ಣರಾಜ ಫ್ರೀ... ಸ್ ಸ್ಟೋರ್ಸ್ ಎದುರು, ಸೊಪ್ಪಿನ ಕೊ... ಬೀದಿ ೧೫೬ನೇ ನಂಬರ್ ಮನೆಯ... ೧೫-೭-೪೯ರ ಲಾಗಾಯ್ತು ೧೮-೭-೪೯ರ ವರೆಗೆ ಕ್ಯಾಂಪ್ ಮಾಡುತ್ತಾರೆ ನೋ... ತಕ್ಕ ಕಾಲ ಬೆಳಿಗ್ಗೆ ಎಂಟರಿಂದ ಹನ್ನೊ... ದು ಘಂಟೆ

ಶ್ರೀ ಜಗದಂಬಾ ಶಿಶುವಿಹಾ...

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇ... ರಜದ ನಂತರ ಮತ್ತೆ ಆರಂಭವಾಗಿ ... ನ ಕಾರ್ಯಗಳು ಚುರುಕಿನಿಂದ ನಡೆ... ತ್ತಿವೆ ಅತ್ಯಾಧುನಿಕ ರೀತಿಯ ಕಿಂಡ... ಗಾರ್ಟನ್ ಸಲಕರಣೆಗಳಿಂದ ಉತ್ತ... ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡ... ಗುವುದು ಇನ್ನು ಕೆಲವೇ ಹುಡುಗರ... ಸೇರಿಸಿಕೊಳ್ಳಲು ಅವಕಾಶ ವಿರುವುದ... ದ ಬಾಲಕರ ಮಾತಾಪಿತೃಗಳು ... ಮಾಡಿ ಶಿಶುವಿಹಾರದ ಪ್ರಯೋಜ... ನ್ನು ಪಡೆದ ತಮ್ಮ ಪ್ರೋತ್ಸಾಹ ನೀ... ವರೆ ದು ಅಪೇಕ್ಷವಾಗಿದೆ

ಡಿ ಕೃಷ್ಣಮೂರ್ತಿ
ವ್ಯವಸ್ಥಾಪಕ.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು.

ಸಾಧ್ವಿ

ಸಂಪುಟ ೭] ಬುಧವಾರ ೧೩-೭-೪೯ [ಸಂಚಿಕೆ ೨೮೩

ದಕ್ಷಿಣ ಆಫ್ರಿಕ ಬಗ್ಗೆ ದುಂಡು ಮೇಜಿನ ಸಭೆ

ವರ್ಧಂತಿ ಕಾರ್ಯಕ್ರಮ

ಮೈಸೂರು ೧೨

ಇದೇ ೧೬ನೇ ತಾ॥ ಶನಿವಾರ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಪ್ರಯುಕ್ತ ಬೆಳಿಗ್ಗೆ ೧೧-೩೦ ಗಂಟೆಗೆ ಪ್ರಭುಗಳು ಅರಮನೆ ಸಜ್ಜೆಯಲ್ಲಿ ದರ್ಬಾರು ನಡೆಸುವರು ೧೭ ಮತ್ತು ೧೮ನೇ ತಾ॥ ಸಂಜೆ ೭ ಗಂಟೆಗೆ ಕಲ್ಯಾಣ ಮಂಟಪದಲ್ಲಿ ದರ್ಬಾರು ಜರುಗುವುದು.

ಹಾರ್ಡ್ವಿಕ್ ಹೈಸ್ಕೂಲಿನ ವಾರ್ಷಿಕೋತ್ಸವ

ರಾಜಧಾನಿಯ ಹಾರ್ಡ್ವಿಕ್ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ೧೫ನೇ ತಾ॥ ಸಂಜೆ ೫॥ ಗಂಟೆಗೆ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು

ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ ಜಯಂತಿ

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ಜಯಂತಿ ಉತ್ಸವವು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಸಮಿತಿಯ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಸ್ವಾಗತ ಭಾಷಣ ಮಾಡಿದರು ದಿವಾನರು ತಮ್ಮ ಭಾಷಣದಲ್ಲಿ ಆಳಿದ ಮಹಾಸ್ವಾಮಿಯವರ ಗುಣಕಥನ ಮಾಡಿದರು. ಶ್ರೀ ಎಫ್. ಸಿ ದೇವರಾಜೇ ಅರಸಿನವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ಬಾಪೂ ಪ್ರಾರ್ಥನಾ ಸಭೆ

ರಾಜಧಾನಿಯ ಬಾಲ ಸೇವಾ ಸಮಾಜ ಮತ್ತು ಆಜಾದ್ ವಿದ್ಯಾಲಯದವರು ಕಳೆದ ೮ನೇ ತಾ॥ ಲಕ್ಷ್ಮೀಪುರಂ ಶಾಲೆಯ ಮೈದಾನದಲ್ಲಿ ಜನಾಬ್ ಸಯದ್ ಫಕ್ರುದ್ದೀನ್‌ರವರ ಅಧ್ಯಕ್ಷತೆಯಲ್ಲಿ ಬಾಪೂ ಪ್ರಾರ್ಥನಾ ಸಭೆಯನ್ನು ನಡೆಸಿದರು.

ಮರಗಳನ್ನು ನೆಡಲು ಸಹಾಯ

ಸಂಸ್ಥಾನಾದ್ಯಂತ ಮರಗಳನ್ನು ಹೆಚ್ಚಾಗಿ ಬೆಳೆಯಲು ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರದವರು ೧೦ ಸಾವಿರ ರೂ. ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ ಶ್ರೀಮನ್ಮಹಾರಾಜರವರ ವರ್ಧಂತಿಯ ದಿನವಾದ ಇದೇ ೧೬ನೇ ತಾ॥ ಮತ್ತು ಸ್ವಾತಂತ್ರ ದಿನವಾದ ಆಗಸ್ಟ್ ೧೫ನೇ ತಾ॥ ಪ್ರತಿ ಜಿಲ್ಲೆಯಲ್ಲೂ ಮರಗಳನ್ನು ನೆಡುವ ಸಮಾರಂಭವನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ ಹಣ್ಣು, ಗೊಬ್ಬರ ಮತ್ತು ಸೌದೆಗೆ ಅನುಕೂಲವಾಗುವಂತ ಗಿಡಗಳನ್ನು ಸಾಧ್ಯವಾದ ಕಡೆಗಳೆಲ್ಲಾ ನೆಡಬೇಕೆಂದು ಸರ್ಕಾರದವರು ಕೋರಿರುತ್ತಾರೆ ಇದಕ್ಕೆ ಬೇಕಾಗುವ ಬೀಜ ಮತ್ತು ಸಸಿಗಳು ಜಿಲ್ಲಾ ಕೇಂದ್ರಗಳ ಅರಣ್ಯ ಮತ್ತು ರಿವಿನ್ಯೂ ಕಛೇರಿಗಳಲ್ಲಿ ದೊರೆಯುವುವು

ಉದಾರ ದಾನ

ಬೆಂಗಳೂರಿನ ಸುಪ್ರಸಿದ್ಧ ವರ್ತಕರಾದ ಧರ್ಮಪ್ರಕಾಶ ನಂದಿ ಎಂ ಚಂದ್ರಯ್ಯನವರು ಶ್ರೀ ನರಸೀಪುರದ ಗ್ರಾಮಾಂತರ [illegible] ಹೈಸ್ಕೂಲಿಗೆ ೨ ಸಾವಿರ ರೂ ಅನ್ನೂ, ಬನ್ನೂರಿನ ಮಹಾತ್ಮ ಗಾಂಧಿ ಹೈಸ್ಕೂಲಿಗೆ ೩ ಸಾವಿರ ರೂ ಅನ್ನೂ ನಂಜನಾಥಪುರದ ಆಸ್ಪತ್ರೆ ಕಟ್ಟಡಕ್ಕೆ ೧ ಸಾವಿರ ರೂ ಅನ್ನೂ ಉದಾರವಾಗಿ ಸಹಾಯ ಮಾಡಿರುತ್ತಾರೆ

ದಕ್ಷಿಣ ಆಫ್ರಿಕದ ಬಗ್ಗೆ ದುಂಡು ಮೇಜಿನ ಪರಿಷತ್ತು

ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯನ್ನು ಬಗೆಹರಿಸಲು ದುಂಡು ಮೇಜಿನ ಸಮ್ಮೇಳನವನ್ನು ನಡೆಸಬೇಕೆಂಬ ವಿಚಾರವಾಗಿ ಭಾರತ ಮತ್ತು ಪಾಕೀಸ್ತಾನ ಸರ್ಕಾರಗಳು ದಕ್ಷಿಣ ಆಫ್ರಿಕಾ ಸರ್ಕಾರಕ್ಕೆ ಸಲಹೆ ಮಾಡಿರುವುದಾಗಿ ತಿಳಿದುಬಂದಿದೆ

ಆರ್.ಎಸ್.ಎಸ್. ಮೇಲಿನ ಪ್ರತಿಬಂಧಕ ರದ್ದು

ಭಾರತ ಸರ್ಕಾರದವರು ಆರ್. ಎಸ್ ಎಸ್ ಸಂಸ್ಥೆಯ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ತೆಗೆದು ಹಾಕಿದ್ದಾರೆ ಇನ್ನು ಮುಂದೆ ಸಾಂಸ್ಕೃತಿಕ ಪ್ರಚಾರ ಸಂಘವಾಗಿ ಅದು ಕೆಲಸ ಮಾಡುವುದೆಂದೂ, ರಾಜಕೀಯದಲ್ಲಿ ತೊಡಗುವುದಿಲ್ಲವೆಂದೂ, ಭಾರತ ಯೂನಿಯನ್ ಮತ್ತು ರಾಷ್ಟ್ರಧ್ವಜಕ್ಕೆ ನಿಷ್ಠೆಯನ್ನು ತೋರುವುದೆಂದೂ, ಅದರ ನಾಯಕರಾದ ಶ್ರೀ ಗೋಲವಾಳ್ಕರರು ಭರವಸೆ ಕೊಟ್ಟಿದ್ದಾರೆ ಈ ದಿನ ಶ್ರೀ ಗೋಲವಾಲ್ಕರರ ಬಿಡುಗಡೆಯಾಗುವ ನಿರೀಕ್ಷಣೆ ಇದೆ

ಬಿರ್ಲಾ ಭವನ ಬಲಿದಾನ ಭವನ ಆಗುವುದು

ಮಹಾತ್ಮಾ ಗಾಂಧಿಯವರ ತಮ್ಮ ಕಡೇದಿನಗಳನ್ನು ಕಳೆದ ದೆಹಲಿಯ ಬಿರ್ಲಾ ಭವನವನ್ನು ರಾಷ್ಟ್ರಕ್ಕೆ ಅರ್ಪಿಸಲು ಬಿರ್ಲಾ ಸಹೋದರರು ನಿರ್ಧರಿಸಿರುವರೆಂದೂ, ಅದಕ್ಕೆ ಬಲಿದಾನ ಭವನವೆಂದು ಮುಂದಿನ ಅಕ್ಟೋಬರ್ ೨ ನೇ ತಾ॥ ಮಹಾತ್ಮರ ೮೦ನೇ ವರ್ಷ ವರ್ಧಂತಿ ಸಮಯದಲ್ಲಿ ಹೆಸರಿಡಲಾಗುವುದೆಂದೂ ಹೇಳಲಾಗಿದೆ

ಹೆಂಡತಿ ಕೊಲೆ ಅಪಾದನೆ

ಚಾಮರಾಜನಗರದ ತಾಲ್ಲೂಕು ಸಪಿಲೂರಿನಲ್ಲಿ ೨-೭-೪೯ ರಲ್ಲಿ ರಂಗೇಗೌಡನೆಂಬಾತನು ತನ್ನ ಹೆಂಡತಿ ಮರಮ್ಮನ ನಡತೆವಿಚಾರದಲ್ಲಿ ಅನುಮಾನ ಪಟ್ಟು ಆಕೆಯನ್ನು ಕುಡುಗೋಲಿನಿಂದ ಹೊಡೆದು ಕೊಲೆ ಮಾಡಿದನೆಂಬ ಅಪಾದನೆಯ ಮೇಲೆ ನಂಜನಗೂಡು ಸ್ಪೆಷಲ್ ಮ್ಯಾಜಿಸ್ಟ್ರೇಟರು ಆತನನ್ನು ಸೆಷನ್ಸಿಗೆ ಒಪ್ಪಿಸಿದ್ದರು. ಸದರಿ ಮೊಕದ್ದಮೆ ಮೊನ್ನೆ ವಿಚಾರಣೆಗೆ ಬಂದು, ಪ್ರಾರಂಭವಾಯಿತು.

ಪಬ್ಲಿಕ್ ಸರ್ವಿಸ್ ಕಮೀಷನ್ನಿನ ರಚನೆ

ಬೆಂಗಳೂರು ೧೨

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆಯೂ ನಡೆಯಿತು. ಪಬ್ಲಿಕ್ ಸರ್ವಿಸ್ ಕಮೀಷನನ್ನು ಕೂಡಲೇ ರಚಿಸಬೇಕೆಂದು ಸಮಿತಿಯವರು ಒತ್ತಾಯ ಮಾಡಿದರೆಂದೂ, ಈ ತಿಂಗಳಿನ ಅಂತ್ಯದೊಳಗಾಗಿ ಅದು ರಚಿತವಾಗಬಹುದೆಂದೂ ತಿಳಿದುಬಂದಿದೆ ಆಹಾರ ನೀತಿಯಲ್ಲಿ ಕೋಮುವಾರು ಭಾವನೆ, ಸರ್ಕಾರದ ಕೈಗಾರಿಕೆ ನೀತಿಗಳ ವಿಚಾರವಾಗಿ ತೀವ್ರ ಟೀಕೆಗಳು ಬಂದುವೆಂದೂ, ಸಚಿವರು ಸೂಕ್ತ ಸಮಾಧಾನ ಕೊಟ್ಟರೆಂದೂ ಗೊತ್ತಾಗಿದೆ

ಏಕೀಕರಣ ಪ್ರಶ್ನೆಯನ್ನು ಪರೀಶೀಲಿಸಲು ಎ.ಎಂ.ಪಿ.ಸಿ ವಿಶೇಷ ಅಧಿವೇಶನವನ್ನು ಕರೆಯಬೇಕೆಂದೂ, ಈ ಮಧ್ಯೆ ಅಧ್ಯಕ್ಷರು ಮತ್ತು ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿ ಅಲ್ಲಿನ ನಾಯಕರುಗಳ ಅಭಿಪ್ರಾಯ ಪಡೆಯಬೇಕೆಂದು ನಿರ್ಧರಿಸಲಾಯಿತೆಂದೂ ಹೇಳಲಾಗಿದೆ

ಪುನರ್ವ್ಯವಸ್ಥಿತವಾಗುವ ಮಂತ್ರಿ ಮಂಡಲದಲ್ಲಿ ಚಿತ್ರದುರ್ಗ ಜಿಲ್ಲೆಯವರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಒತ್ತಾಯ ಪಡಿಸಲು ಅಲ್ಲಿನ ಜಿಲ್ಲಾ ಕಾಂಗ್ರೆಸ್ ಸಮಿತಿ ನಿಯೋಗದವರು ಕಾಂಗ್ರೆಸ್ ಅಧ್ಯಕ್ಷರನ್ನು ಕಂಡಿದ್ದರು.

ಗೋಪಾಲರಾವ್ ಸಮಿತಿಯವರಲ್ಲಿ ೨೬ ಲಕ್ಷ ರೂ

ಗೋಪಾಲರಾವ್ ವಿಚಾರಣಾ ಸಮಿತಿಯವರ ವಶದಲ್ಲಿ ಈಗ ೨೬ ಲಕ್ಷ ರೂ ಇರುವುದೆಂದೂ, ಈ ಹಣವನ್ನು ಸಾಲಗಾರರಿಗೆ ರೂ ನಲ್ಲಿ ನಾಲ್ಕು ಆಣೆಯಂತೆ ಇದೇ ೧೮ನೇ ತಾ॥ ನಿಂದ ಹಂಚಲಾಗುವುದೆಂದೂ ಹೇಳಲಾಗಿದೆ ಈ ತಿಂಗಳಿನ ಅಂತ್ಯದೊಳಗಾಗಿ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಲಿರುವರು

ಖಾಷ್ಯಂರವರ ಆಗಮನ

ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಲು ಜಿನೀವಾಕ್ಕೆ ತೆರಳಿದ್ದ ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರು ಮೊನ್ನೆ ಸಂಜೆ ಬೊಂಬಾಯಿಗೆ ಆಗಮಿಸಿ, ನಿನ್ನೆ ಬೆಂಗಳೂರಿಗೆ ಹಿಂತಿರುಗಿದರು.

ಕುಮಾರ ಮಂಗಲಂರವರ ಕೊಲೆಯೇ ?

ಮದರಾಸಿನ ಮಾಜಿ ಸಚಿವ ಡಾ॥ ಸುಬ್ಬರಾಯನ್‌ರವರ ಪುತ್ರ ಕಮ್ಯೂನಿಸ್ಟ್ ನಾಯಕರಾದ ಶ್ರೀ ಕುಮಾರ ಮಂಗಲಂರವರನ್ನು ಹೈದರಾಬಾದ್ ಗಡಿ ಪ್ರದೇಶದಲ್ಲಿ ಗುಂಡಿನಿಂದ ಹೊಡೆದು ಕೊಲೆ ಮಾಡಲಾಯಿತೆಂದು ಹೇಳಲಾಗಿದೆ ಅವರು ಇಷ್ಟು ದಿನವೂ ತಲೆ ಮರೆಸಿಕೊಂಡಿದ್ದರು ಕ್ರಾಂತಿಕಾರ ಚಟುವಟಿಕೆಯನ್ನು ಬಿಟ್ಟು ನ್ಯಾಯಬದ್ಧವಾದ ರೀತಿಯಲ್ಲಿ ಕಮ್ಯೂನಿಸ್ಟರು ಕೆಲಸ ಮಾಡಬೇಕೆಂದು ಅವರು ಹೇಳಿದುದನ್ನು ಪಕ್ಷದ ಇತರ ನಾಯಕರು ವಿರೋಧಿಸಿ, ಅವರನ್ನು ಕಳ್ಳತನದಲ್ಲಿ ಹೈದರಾಬಾದ್ ಗಡಿ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಿದರೆಂದು ವರದಿಯಾಗಿದೆ.

ಹೆಚ್ಚು ಆಹಾರ ಬೆಳೆಗೆ ಎಲ್ಲ ಪಕ್ಷಗಳ ಸಹಕಾರ

ಭಾರತದಲ್ಲಿರುವ ಸಮತಾವಾದಿ, ಹಿಂದೂ ಮಹಾಸಭೆ, ಫಾರ್ವರ್ಡ್ ಪಕ್ಷ ಮುಂತಾದ ಎಲ್ಲ ಪಕ್ಷಗಳವರೂ ಹೆಚ್ಚು ಆಹಾರ ಬೆಳೆ ಯೋಜನೆಯಲ್ಲಿ ಸಹಕರಿಸಬೇಕೆಂದು ಭಾರತ ಸರ್ಕಾರದವರು ಮನವಿ ಮಾಡಿದ್ದಾರೆ ಈ ವಿಚಾರದಲ್ಲಿ ಎಲ್ಲ ಪಕ್ಷಗಳವರೊಡನೆ ಸಹಕರಿಸಿ ಕೆಲಸ ಮಾಡಬೇಕೆಂದು ಪ್ರಾಂತೀಯ ಸರ್ಕಾರಗಳಿಗೆ ಸೂಚನೆ ಕೊಡಲಾಗಿದೆ

ವಿಕ್ಟೋರಿಯಾ ರಾಣಿ ಪ್ರತಿಮೆಯ ಉಚ್ಚಾಟನೆ

ಬೊಂಬಾಯಿನ ಕೋಟೆ ಪ್ರದೇಶದಲ್ಲಿ ಇರುವ ವಿಕ್ಟೋರಿಯಾ ರಾಣಿ ಪ್ರತಿಮೆಯನ್ನು ತೆಗೆದು ವಸ್ತು ಪ್ರದರ್ಶನಾಲಯದಲ್ಲಿ ಇಟ್ಟು, ಆ ಪ್ರದೇಶದಲ್ಲಿ ಉದ್ಯಾನ ವನವನ್ನು ನಿರ್ಮಿಸಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಬೊಂಬಾಯಿ ನಗರದ ರಸ್ತೆಗಳಿಗೆ ಇರುವ ಬ್ರಿಟಿಷರ ಹೆಸರನ್ನು ತೆಗೆದುಹಾಕಿ, ನೂತನ ಹೆಸರುಗಳನ್ನು ಇಡಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ

ಮೋಹನ್‌ದಾಸ್ ತುಳಸೀದಾಸ್ ಆಸ್ಪತ್ರೆಯ ಪ್ರಥಮ ಶಿಶು

ರಾಜಧಾನಿಯಲ್ಲಿ ಕಳೆದ ಶನಿವಾರ ಪ್ರಾರಂಭವಾದ ಮೋಹನ ದಾಸ್ ತುಳಸೀದಾಸ್ ಆಸ್ಪತ್ರೆಯಲ್ಲಿ ಮೊನ್ನೆ ಪ್ರಥಮವಾಗಿ ಜನಿಸಿದ ಆದಿ ಕರ್ನಾಟಕ ಕೋಮಿನ ಗಂಡು ಮಗುವಿಗೆ ಪುರಸಭಾ ಸದಸ್ಯರಾದ ಶ್ರೀ ಇ ಪಿ ನಂಜಪ್ಪನವರ ೫೦ ರೂ. ಬಹುಮಾನವನ್ನು ಕೊಡಲಾಗುವುದು.

ಹೆಚ್ಚು ಕಾಲು ರಾಗಿ ಬೆಳೆ

ನಂಜನಗೂಡಿನ ಹತ್ತಿರವಿರುವ ವಿದ್ಯಾಪೀಠದಲ್ಲಿ ಇದೇ ೧೫ನೇ ತಾ॥ ಮಧ್ಯಾಹ್ನ ೩ ಗಂಟೆಗೆ ಕೈಗಾರಿಕಾ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಹೆಚ್ಚು ಕಾಲುರಾಗಿ ಬೆಳೆಯ ಸಮಾರಂಭವನ್ನು ನೆರವೇರಿಸುವರು.

ಜಿಲ್ಲಾ ಬೋರ್ಡಿಗೆ ಧನ ಸಹಾಯ

ಸಿಮೆಂಟ್ ಕಾಂಕ್ರೀಟ್ ಕೆಲಸಗಳು, ನಗರ ಹೊರ ಪ್ರದೇಶಗಳ ರಸ್ತೆಗಳ ದುರಸ್ತಿಗಾಗಿ ಸರ್ಕಾರದವರು ಮೈಸೂರು ಜಿಲ್ಲಾ ಬೋರ್ಡಿಗೆ ೩೦ ಸಾವಿರ ರೂ ವಿಶೇಷ ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ

ಕಲ್ಕತ್ತ ಮಂತ್ರಿಗಳ ಮೇಲೆ ಬಾಂಬು

ಪಶ್ಚಿಮ ಬಂಗಾಳದ ಗೃಹ ಸಚಿವರಾದ ಶ್ರೀ ಕಾಳಿ ಪಾದಮುಕರ್ಜಿಯವರು ಹಾ೦ಡದಲ್ಲಿ ಮೊನ್ನೆ ದಿನ ನಡೆದ ಕಾರ್ಮಿಕರ ಸ್ವಾಗತ ಸಭೆಯಲ್ಲಿ ಭಾಗವಹಿಸಿದ್ದಾಗ ಕೆಲವು ಪುಂಡರು, ಕಮ್ಯೂನಿಸ್ಟ್ ಘೋಷಣೆಗಳನ್ನು ಕೂಗಿ, ಅವರ ಮೇಲೆ ಕೆಲವು ಬಾಂಬುಗಳನ್ನು ಎಸೆದರೆಂದೂ, ದೈವವಶಾತ್ ಅವರಿಗೆ ಯಾವ ಅಪಾಯವೂ ಸಂಭವಿಸಲಿಲ್ಲವೆಂದೂ ಹೇಳಲಾಗಿದೆ. ಗಲಭೆಕಾರರು ಅಲ್ಲಿದ್ದ ರಾಷ್ಟ್ರೀಯ ಧ್ವಜವನ್ನೂ ಸುಟ್ಟು ಓಡಿ ಹೋದರು.

ಸ್ಟಾಲಿನ್ನರ ಪುತ್ರಿಯ ಪ್ರಣಯಕ್ಕೆ ತಂದೆ ವಿರೋಧ

ಮಾರ್ಷಲ್ ಸ್ಟಾಲಿನ್ನರ ಪುತ್ರಿ ಸ್ವೆಟ್ಲಾನ ಎಂಬಾಕೆಯು ಚಿತ್ರ ಕಲೆಗಾರನೊಬ್ಬನೊಡನೆ ಪ್ರಣಯ ಬೆಳೆಸುತ್ತಿರುವುದನ್ನು ಕಂಡು ಸ್ಟಾಲಿನ್ನರು ಖಂಡಿಸಿದ್ದಾರೆ ಆಕೆಯ ವಿಷಯವಾಗಿ ಎಚ್ಚರಿಕೆಯಿಂದ ಇರಲು ಪೋಲೀಸರಿಗೆ ಗುಪ್ತ ಸೂಚನೆ ಕೊಡಲಾಗಿದೆ. ಈಕೆಯು ಚಲುವೆಯಾದ ಹುಡುಗಿ ಮತ್ತು ಸ್ಟಾಲಿನ್ನರ ದ್ವಿತೀಯ ಪತ್ನಿ ನಾಡಿಯಾಳ ಮಗಳು.

ಅಗ್ನಿ ಪರ್ವತದಿಂದ ಅಪಾರ ನಷ್ಟ

ಕ್ಯಾನರಿ ದ್ವೀಪಕ್ಕೆ ಸೇರಿದ ಪಾಲಮುಕ್ಕಿನಲ್ಲಿ ಅಗ್ನಿ ಪರ್ವತವೊಂದು ಕಳೆದ ೧೫ ದಿನಗಳಿಂದಲೂ ಬೆಂಕಿಯನ್ನು ಕಾರುತ್ತಿದೆಯೆಂದೂ, ಇದರಿಂದ ಮೂರು ಚದುರ ಮೈಲಿಗಳಷ್ಟು ಪ್ರದೇಶವು ನಾಶವಾಗಿದೆಯೆಂದೂ, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆಂದೂ ಹೇಳಲಾಗಿದೆ

ಹಾವಿನ ಭಯದಿಂದ ಇಬ್ಬರು ನೀರುಪಾಲಾದರು

ಗೌಹತಿಯಕೆರೆಯಲ್ಲಿ ಬಾತುಗಳ ಬೇಟೆಗಾಗಿ ದೋಣಿಯಲ್ಲಿ ಹೋಗುತ್ತಿದ್ದ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರೂ ಮತ್ತು ಇನ್ನೊಬ್ಬರು ದೋಣಿಯೊಳಕ್ಕೆ ಹಾವೊಂದು ಬಂದುದನ್ನು ಕಂಡು ಗಾಭರಿಗೊಂಡರೆಂದೂ ದೋಣಿಯು ಮುಗುಚಿ, ಅವರುಗಳು ಮುಳುಗಿಹೋದರೆಂದೂ, ಇತರ ಮೂರು ಜನರು ಈಜಿಕೊಂಡು ದಡಕ್ಕೆ ಬಂದರೆಂದೂ ವರದಿಯಾಗಿದೆ

* ಲಕ್ಷ್ಮಿ *

13-7 49 ರಿಂದ

ಪ್ರತಿ ದಿನ 3 ಆಟಗಳು

ಮ್ಯಾಟನಿ ೩-೩೦, ಸಂಜೆ ೬-೩೦

ಮತ್ತು ರಾತ್ರಿ ೧೦-೧೫ ಕ್ಕೆ

ಪಕ್ಷಿರಾಜಾ ಫಿಲಂಸ್‌ರವರ ತಮಿಳು ಚಿತ್ರ

ಜಗತಲ - ಪ್ರತಾಪನ್

(ಹೊಸ ಕಾಪಿ)

ಭಾಗವತರ್ . ಪಿ ಯು. ಚಿನ್ನಪ್ಪ, ಎ. ಎಸ್,

ಸರೋಜ, ಎನ್ ಎಸ್. ಕೃಷ್ಣನ್

ಮತ್ತು ಟಿ ಎ. ಮಧುರಂ

ಸಿರೀಸ್ಸಿ -

ತೋ ೯ ಫಿ [ಹಿಂದಿ]

ಜೀವನ್, ರೆಹಮಾನ್, ನವಾಬ್, ಷಾನವಾಜ್.

ಕನ್ಯಾಪಹಾರ ಪ್ರಯತ್ನಕ್ಕಾಗಿ ಸಿನಿಮಾ ನಟನ ದಸ್ತಗಿರಿ

ಸಂಗೀತ ಮತ್ತು ನೃತ್ಯ ಕಲೆಗಳನ್ನು ಬಲ್ಲ ಪದ್ಮಕುಮಾರಿ ಎಂಬ ೨೫ ವಯಸ್ಸಿನ ತರುಣಿಯನ್ನು ಅಪಹರಿಸಲು ಪ್ರಯತ್ನ ಪಟ್ಟುದಕ್ಕಾಗಿ ಸುಂದರರಾಜನ್ ಎಂಬ ಸಿನಿಮಾ ನಟನನ್ನು ಮದ್ರಾಸಿನ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ನಟನೂ, ಅವನಸ್ನೇಹಿತನೂ ಆಕೆಯನ್ನೂ, ತಾಯಿ ಮತ್ತು ಸಹೋದರ ಇವರುಗಳನ್ನೂ ಸಿನಿಮಾಕ್ಕೆ ಕರೆದುಕೊಂಡು ಹೋಗುವ ನೆಪ ಹೇಳಿ ಒಂದು ಟ್ಯಾಕ್ಸಿಯಲ್ಲಿ ಕೂಡಿಸಿ, ಬೇರೊಂದುಕಡೆಗೆ ಕರೆದೊಯ್ದಾಗ, ತಾಯಿಯು ಕೂಗಿಕೊಂಡಳೆಂದೂ, ಅವರುಗಳು ಗಾಬರಿಯಾಗಿ ಟ್ಯಾಕ್ಸಿಯನ್ನು ಸಿನಿಮಾ ಒಂದರ ಹತ್ತಿರ ನಿಲ್ಲಿಸಿ ಓಡಲು ಪ್ರಯತ್ನಪಟ್ಟಾಗ, ಡ್ರೈವರನು ಅವರನ್ನು ಹಿಡಿದು ಪೋಲೀಸರ ವಶಕ್ಕೆ ಒಪ್ಪಿಸಿದನೆಂದೂ ವರದಿಯಾಗಿದೆ. ನಟನು ಆಕೆಯನ್ನು ವಿವಾಹ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಾಗ ಆಕೆಯ ತಾಯಿಯು ಅದಕ್ಕೆ ಒಪ್ಪಿರಲಿಲ್ಲವೆಂದು ತಿಳಿದುಬಂದಿದೆ.

ನೆಹರೂ ಭಾಷಣಕ್ಕೆ ಸಮತಾವಾದಿಗಳ ಬಹಿಷ್ಕಾರ

ಕಾಂಗ್ರೆಸ್ ಸರ್ಕಾರದ ಇಂದಿನ ನೀತಿಯನ್ನು ಖಂಡಿಸಲು, ಕಲ್ಕತ್ತಾದಲ್ಲಿ ಇದೇ ೧೪ನೇ ತಾ॥ ಪಂಡಿತ ನೆಹರೂರವರು ಭಾಷಣ ಮಾಡಲಿರುವ ಬಹಿರಂಗ ಸಭೆಗೆ ಸಾರ್ವಜನಿಕರು ಹೋಗದೆ ಬಹಿಷ್ಕರಿಸಬೇಕೆಂದು ಪಶ್ಚಿಮ ಬಂಗಾಳ ಪ್ರಾಂತೀಯ ಸಮತಾವಾದಿ ಪಕ್ಷದವರು ನಿರ್ಧರಿಸಿ ಈ ಬಗ್ಗೆ ಹಸ್ತ ಪತ್ರಿಕೆಗಳನ್ನು ಹಂಚುತ್ತಿದ್ದಾರೆ.

ಅಂಡಮಾನ್ ದ್ವೀಪಗಳಲ್ಲಿ ನಿರಾಶ್ರಿತ ಶಿಬಿರ

ಅಂಡಮಾನ್ ದ್ವೀಪಗಳಲ್ಲಿ ನಿರಾಶ್ರಿತರಿಗಾಗಿ ಶಿಬಿರವನ್ನೇರ್ಪಡಿಸಲು ಭಾರತ ಸರ್ಕಾರವು ಆಲೋಚಿಸುತ್ತಿದೆಯೆಂದು ತಿಳಿದುಬಂದಿದೆ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಪಾರ್ಶ್ವ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ.

ಕ್ರಯ:-೧ ಸೆಟ್ ರೂ ೩-೪-೦. ಪ್ಯಾಕಿಂಗ್ ಮತ್ತು ಟ.ಖ ೧೨ ಆಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯಂಗಾರ್,

ಅಂಬಳೆ, ಯಳಂದೂರು.

ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೊಳದ ಬೀದಿ ೧೫೫ನೇ ನಂಬರ್ ಮನೆಯಲ್ಲಿ ೧೫-೭-೪೯ರ ಲಾಗಾಯ್ತು ೧೮-೭-೪೯ರ ವರೆಗೆ ಕ್ಯಾಂಪ್ ಮಾಡುತ್ತಾರೆ. ನೋಡತಕ್ಕ ಕಾಲ ಬೆಳಿಗ್ಗೆ ಎಂಟರಿಂದ ಹನ್ನೊಂದು ಘಂಟೆ

Edited, printed and published by A. R. Nagarajan, at Sadhvi Press, D. Subbiah Road, Mysore.

ಶರಚ್ಚಂದ್ರಬೋಸರ ಭವಿಷ್ಯ ಕಾರ್ಯಕ್ರಮ

ಸ್ವಿಟ್ಸರ್ಲೆಂಡಿನಲ್ಲಿ ಇದುವರಿಗೆ ಇದ್ದ ಶರತ್ ಚಂದ್ರ ಬೋಸರು ಲಂಡನ್ನಿಗೆ ಆಗಮಿಸಿದ್ದಾರೆ. ಅವರು ಇನ್ನೆರಡು ವಾರಗಳಲ್ಲಿ ಭಾರತಕ್ಕೆ ಹಿಂತಿರುಗುವರು ಇಲ್ಲಿಗೆ ಬಂದ ಮೇಲೆ ಕಮ್ಯೂನಿಸ್ಟರ ವಿನಹ ಇತರ ಎಲ್ಲಾ ಎಡ ಪಕ್ಷದವರನ್ನೂ ಒಂದು ಗೂಡಿಸಿ ಸಂಯುಕ್ತ ಸೋಷಲಿಸ್ಟರ ಪಕ್ಷವನ್ನು ಕಟ್ಟಲು ಪ್ರಯತ್ನ ಪಡುವುದಾಗಿ ಅವರು ತಿಳಿಸಿದ್ದಾರೆ.

ವಿಮಾನ ಅಪಾಘಾತದಿಂದ ೩೪ ಜನರ ಮರಣ

ಇಂಡೋನೇಷ್ಯಾದಿಂದ ಅಮೆರಿಕಕ್ಕೆಹಿಂತಿರುಗಿದ್ದ ಡಚ್ ವಿಮಾನವೊಂದು ಬೊಂಬಾಯಿಗೆ ೩ ಮೈಲಿ ದೂರದಲ್ಲಿ ಅಪಘಾತಕ್ಕೆ ಒಳಗಾಗಿ ಅದರಲ್ಲಿದ್ದ ಅಮೆರಿಕದ ಸುಪ್ರಸಿದ್ಧ ೧೩ ಮಂದಿ ಪತ್ರಿಕಾ ಪ್ರತಿನಿಧಿಗಳೂ ಸೇರಿ ಒಟ್ಟು ೩೪ಜನ ಪ್ರಯಾಣಿಕರೆಲ್ಲರೂ ಮರಣ ಹೊಂದಿದರೆಂದು ವರದಿಯಾಗಿದೆ

ಯುದ್ಧದ ನಿಬಂಧನೆಗಳ ತಯಾರಿಕೆ

ಜಿನೀವಾದಲ್ಲಿರುವ ವಿಶ್ವದ ಸರ್ಕಾರಿ ಪ್ರತಿನಿಧಿಗಳು ಯುದ್ಧದ ನಿಬಂಧನೆಗಳನ್ನು ತಯಾರಿಸುವುದರಲ್ಲಿದ್ದಾರೆ. ಸ್ತ್ರೀಯರು, ಮಕ್ಕಳು, ಗಾಯಗೊಂಡವರು, ವಯಸ್ಸಿರು ಮತ್ತು ಖಾಯಿಲೆಯಾದವರು ಧಾಳಿ ಕಾಲದಲ್ಲಿ ಇಡಲು ಸುರಕ್ಷಿತ ಪ್ರದೇಶಗಳನ್ನು ಆಯಾ ದೇಶಗಳಲ್ಲಿ ಏರ್ಪಡಿಸುವಂತೆ ಕೇಳಿಕೊಳ್ಳಲಾಗುವುದು.

ಶ್ರೀ ಗಾಯತ್ರೀ

17-7-49ರಿಂದ 3 ದಿನಗಳು ಮಾತ್ರ

ದಿನವಹಿ 3 ಪ್ರದರ್ಶನಗಳು

ಎಂ.ಜಿ.ಎಂ. ರವರ ಉದ್ರೇಕ ಮತ್ತು ಆಟ್ಟಹಾಸದಿಂದ ಕೂಡಿದ ಅದ್ಭುತ ಚಿತ್ರ

The Good Earth

ದಿ ಗುಡ್ ಅರ್ತ್

With :- Paul Muni

Louise Raina.

-: Morning Shows on :-

16th & 17th July 1949.

TYPHOON

(In Technicolor)

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಅತ್ಯಾಧುನಿಕ ರೀತಿಯ ಕಿಂಡರ್ ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಮಾತಾಪಿತೃಗಳು ತ್ವರೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡುವರೆಂದು ಆಶಿಸಲಾಗಿದೆ.

ಡಿ. ಕೃಷ್ಣಮೂರ್ತಿ

ವ್ಯವಸ್ಥಾಪಕ.

ಅಮೆರಿಕದಲ್ಲಿ ೨೦೦ ಅಣು ಬಾಂಬುಗಳು

ಅಮೆರಿಕದಲ್ಲಿ ೨೦೦ ಅಥವ ೨೫೦ ಅಣುಬಾಂಬುಗಳಿವೆಯೆಂದೂ, ಇವುಗಳಿಂದ ಒಂದು ಭಾರಿ ಯುದ್ಧವನ್ನು ನಡೆಸಬಹುದೆಂದೂ ಹೇಳಲಾಗಿದೆ. ಅವಶ್ಯಕ ಬಿದ್ದರೆ ಇನ್ನೆರಡು ವರ್ಷಗಳಲ್ಲಿ ಒಂದು ಸಾವಿರ ಬಾಂಬುಗಳನ್ನು ತಯಾರಿಸಲು ಅವಕಾಶವಿದೆಯೆಂದೂ ವರದಿಯಾಗಿದೆ.

ನಾಗಸಾಕಿ ನಗರವು ವಿಶ್ವ ಸಂಸ್ಕೃತಿಯ ಕೇಂದ್ರ

೧೯೪೫ರಲ್ಲಿ ಅಣು ಬಾಂಬಿನಿಂದ ನಾಶವಾದ ಜಪಾನಿನ ನಾಗಸಾಕಿ ನಗರವನ್ನು ವಿಶ್ವ ಸಂಸ್ಕೃತಿಯ ಕೇಂದ್ರವನ್ನಾಗಿ ಮಾಡಬೇಕೆಂದು ನಿರ್ಧಾರವಾಗಿದೆ.

VASANTHA INSTITUTE of COMMERCE,

653, Narayana Sastry Road Mysore

EFFICIENT COACHING!

BEST RESULTS !!

Applications for admission to the One Year Diploma Course of the Mysore Government Commercial Examinations are received.

ಬಿಕರಿಗೆ ಸಿದ್ಧವಾಗಿದೆ

ಪಂಚ ರಾತ್ರ

[By Dr. N. S. Narayan Sastry]

Inter Arts & Inter Science

Text Book for 1949-50

ಬೆಲೆ 1—6—0

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ನಿಮ್ಮ ಮೈ ಮೊಗಮಲ್ಲಿನಂತೆ

ಹೊಳೆಯಬೇಕೆ ? ನೀವು

ಲಾವಣ್ಯಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಫೋ|| ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೪-೭-೪೯ [ಸಂಚಿಕೆ ೨೩೦

ಚೀಣದ ಪ್ರವಾಹದಲ್ಲಿ ೨೦ ಲಕ್ಷ ನಿರಾಶ್ರಿತರು

ಪ್ರವಾಹದಿಂದ ೧೦ ಲಕ್ಷ ಎಕರೆ ಜಮೀನು ನಾಶ

ಚೀಣದ ಯಾಂಗ್ಟ್ಸೀನದಿಯಲ್ಲಿ ಭಾರಿ ಪ್ರವಾಹ ಉಂಟಾಗಿ, ಮಧ್ಯ ಚೀಣದ ಸುಮಾರು ೧೦ ಲಕ್ಷ ಎಕರೆ ಜಮೀನುಗಳು ನೀರಿನಲ್ಲಿ ಮುಳುಗಿಹೋಗಿವೆಯೆಂದು ವರದಿಯಾಗಿದೆ. ಅನ್ವೀ ಪ್ರಾಂತ್ಯದಲ್ಲಿ ೭ ಲಕ್ಷ ಎಕರೆ ಜಮೀನಿನಲ್ಲಿ ಭತ್ತದ ಪೈರು ನಾಶವಾಗಿ ಸಾವಿರಾರು ಮಂದಿ ರೈತರು ನಿರ್ಗತಿಕರಾಗಿದ್ದಾರೆ ಪ್ರವಾಹವನ್ನು ತಡೆಗಟ್ಟಲು ಸೈನಿಕರೂ ಮತ್ತು ಜನರೂ ಪ್ರಯತ್ನ ನಡೆಸುತ್ತಿದ್ದಾರೆ ೨೦ ಸಾವಿರ ಜನರಿಗೆ ಸಾವು ನೋವು ಉಂಟಾಗಿದೆಯೆಂದೂ, ೨೦ ಲಕ್ಷ ಜನರು ಮನೆ ಮಠಗಳನ್ನು ಕಳೆದುಕೊಂಡಿದ್ದಾರೆಂದೂ ಹೇಳಲಾಗಿದೆ

—:o:—

ಮಗನವಾಡಿಯಲ್ಲಿ ಗ್ರಾಮ ವಿಶ್ವವಿದ್ಯಾಲಯ

ವಾರ್ಧಾ ಹತ್ತಿರವಿರುವ ಮಗನವಾಡಿಯಲ್ಲಿ ಒಂದು ಗ್ರಾಮ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಲಾಗುವುದೆಂದೂ, ೭ ವರ್ಷಗಳ ಮೂಲಕ ಶಿಕ್ಷಣ ಪಡೆದ ಮತ್ತು ಫೈನಲ್ ಪರೀಕ್ಷೆ ಆಗಿರುವ ವಿದ್ಯಾರ್ಥಿಗಳನ್ನು ಅದಕ್ಕೆ ಸೇರಿಸಲಾಗುವುದೆಂದೂ ಹೇಳಲಾಗಿದೆ.

—:o.—

ಮೈಸೂರಿನವರಿಗೆ ಬಹುಮಾನ

ಬೊಂಬಾಯಿನ ವಿಶ್ವವಿದ್ಯಾನಿಲಯದ ೧೯೪೮ನೇ ವರ್ಷದ ಏಪ್ರಿಲ್ ಮತ್ತು ಅಕ್ಟೋಬರ್ ಲಾ ತರಗತಿಯ ಪರೀಕ್ಷೆಗೆ ಕುಳಿತವರಲ್ಲಿ ಹಿಂದೂ ಲಾನಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರಿನ ಶ್ರೀ ಡಿ. ಗೋಪಾಲರಾಜ ಅರಸಿನವರಿಗೆ ಬಹುಮಾನವನ್ನು ವಿಶ್ವ ವಿದ್ಯಾನಿಲಯದವರು ಕೊಟ್ಟಿರುತ್ತಾರೆ

ಕೌಟಿಲ್ಯ ಮಂಡಲಿ

ರಾಜಧಾನಿಯ ಕೌಟಿಲ್ಯ ಮಂಡಲಿಯ ಪ್ರಾರಂಭ ಭಾಷಣವನ್ನು ಆರ್ಥಿಕ ಸಚಿವ ಶ್ರೀ ಹೆಚ್.ಸಿ. ದಾಸಪ್ಪನವರು ನಾಳೆ ಸಂಜೆ ೬-೩೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಮಾಡುವರು. ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು

ಹರಿಕಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀರಾಮ ಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಪದ್ಮನಾಭಮೂರ್ತಿ ಭಾಗವತರಿಂದ ವೆಳ್ಳಿ ಕಲ್ಯಾಣ ಎಂಬ ಹರಿಕಥೆ ನಡೆಯುವುದು. ಪ್ರತಿ ಭಾನುವಾರ ಸಂಜೆ ೫ ಗಂಟೆಗೆ ಶ್ರೀಗಳಾದ ಹಿರಣ್ಣಯ್ಯ ಮತ್ತು ಮಾಯಿಗೌಡರುಗಳಿಂದ ಪುರಾಣವು ಜರುಗುವುದು

ಗ್ರಂಥ ವಾಚನ

ರಾಜಧಾನಿಯ ಶ್ರೀ ಸದ್ಗುರು ಸೇವಾ ಮಂಡಲಿಯ ಆಶ್ರಯದಲ್ಲಿ ಈ ದಿನದಿಂದ ಪ್ರತಿ ಗುರುವಾರ ಸಂಜೆ ೭ ಗಂಟೆಗೆ ಶ್ರೀ ಶ್ರೀಗಳವರ ದೇವಾಲಯದಲ್ಲಿ ಶ್ರೀಗಳಾದ ವಿದ್ವಾನ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಮತ್ತು ಬಿ.ಎಸ್. ವೆಂಕಟರಾಮಯ್ಯನವರುಗಳಿಂದ ಶ್ರೀ ಶಂಕರ ಗುರುವಿಲಾಸ ಗ್ರಂಥ ವಾಚನ ಮತ್ತು ಅರ್ಥಾನುವಾದಗಳು ನಡೆಯುತ್ತವೆ.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯ

—:o.—

ಮೈಸೂರು ೧೪

ಕಳೆದ ೫ ತಿಂಗಳಿನಿಂದ ನಡೆಯುತ್ತಿದ್ದ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರವು ಆರೋಗ್ಯ ಸಚಿವರ ಭರವಸೆ ಮೇಲೆ ಕಳೆದ ೯ ನೇ ತಾ|| ಮುಕ್ತಾಯವಾಯಿತೆಂದು ತಿಳಿದುಬಂದಿದೆ. ಕೆಲವು ಕುಂದು ಕೊರತೆಗಳನ್ನು ಈಗಲೇ ಸರಿಪಡಿಸಿ, ಉಳಿದ ಬೇಡಿಕೆಗಳನ್ನು ಆದಷ್ಟು ಬೇಗನೆ ಈಡೇರಿಸಿಕೊಡುವುದಾಗಿ ಸಚಿವರು ತಿಳಿಸಿದರೆಂದೂ ಹೇಳಲಾಗಿದೆ.

ಆರೆಸ್ಸೆಸ್ ಪ್ರತಿಬಂಧಕ ರದ್ದು ಮಾಡಿದುದಕ್ಕೆ ಅಭಿನಂದನೆ

ಆರ್. ಎಸ್. ಎಸ್. ಮೇಲಿನ ಪ್ರತಿಬಂಧಕವನ್ನು ಭಾರತ ಸರ್ಕಾರದವರು ತೆಗೆದುಹಾಕಿರುವುದನ್ನು ರಾಜಧಾನಿಯ ಸಮಾಜಸೇವಾ ಸಮಿತಿ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೈಸೂರು ಶಾಖೆಗಳು ಸ್ವಾಗತಿಸಿ, ಸರ್ಕಾರವನ್ನು ಅಭಿನಂದಿಸಿರುತ್ತವೆ.

ಶ್ರೀ ಗಾಯತ್ರೀ ಟಾಕೀಸ್

ದಿ ಗುಡ್ ಅರ್ಥ್ ಎಂಬ ಚಿತ್ರವು ೧೭ನೇ ತಾ|| ನಿಂದ ಪ್ರಾರಂಭವಾಗುವುದೆಂದು ನಿನ್ನೆ ತಪ್ಪಾಗಿ ಪ್ರಕಟವಾಗಿದೆ ಅದು ಈ ದಿನದಿಂದ ಪ್ರಾರಂಭವಾಗುತ್ತದೆ

ಆರ್. ಎಸ್. ಎಸ್. ನವರ ಸೈಕಲ್ ಪೆರೇಡ್

ಆರ್ ಎಸ್ ಎಸ್ ಸಂಸ್ಥೆಯ ನಾಯಕರಾದ ಶ್ರೀಗೋಲ್ವಾಲ್ಕರರನ್ನು ನಿನ್ನೆ ಭಾರತ ಸರ್ಕಾರದವರು ಬಿಡುಗಡೆ ಮಾಡಿದುದರಿಂದ, ತಮ್ಮ ಸಂತೋಷವನ್ನು ವ್ಯಕ್ತಪಡಿಸಲು ರಾಜಧಾನಿಯ ಆರ್ ಎಸ್ ಎಸ್ ನ ನೂರು ಮಂದಿ ನಿನ್ನೆ ಸಂಜೆ ಸೈಕಲ್ ಮೆರವಣಿಗೆ ನಡೆಸಿದರು

ರೇಷ್ಮೆ ಸಂಶೋಧನಾ ಸಂಸ್ಥೆ

ಸರಕಾರದವರು ೧,೩೦,೫೦೦ ರೂ ಗಳ ವೆಚ್ಚದಿಂದ ರೇಷ್ಮೆ ಸಂಶೋಧನೆಯನ್ನು ಚನ್ನಪಟ್ಟಣದಲ್ಲಿ ಸ್ಥಾಪಿಸಲಿದ್ದಾರೆ ಇದಕ್ಕೆ ತಗಲುವ ಒಟ್ಟು ಖರ್ಚಿನಲ್ಲಿ ಅರ್ಧ ಭಾಗವನ್ನು ಕೇಂದ್ರ ರೇಷ್ಮೆ ಬೋರ್ಡಿನವರು ಕೊಡಬೇಕೆಂದು ಕೋರಲಾಗಿದೆ

ಸರ್ಕಾರಿ ನೌಕರಿಗಳಲ್ಲಿ ಶಿಫಾರಸನ್ನು ಲಕ್ಷಿಸುವುದಿಲ್ಲ

ಸ್ವಂ.ಸು ಫೋ.] ಬೆಂಗಳೂರು, ೧೪

ಸರ್ಕಾರಿ ನೌಕರಿಗಳನ್ನು ಅಥವ ಪ್ರಮೋಷನ್ನುಗಳನ್ನು ಕೊಡುವಾಗ ಶಿಫಾರಸುಗಳಿಗಾಗಲೀ ದಾಕ್ಷಿಣ್ಯಕ್ಕಾಗಲೀ ಬೆಲೆ ಕೊಡಲಾಗುವುದಿಲ್ಲವೆಂದೂ, ಕೇವಲ ಯೋಗ್ಯತೆ ಮೇಲೆ ಅವುಗಳನ್ನು ಕೊಡಲಾಗುವುದೆಂದೂ ಸರ್ಕಾರದವರು ಒಂದು ಪ್ರಕಟಣೆಯಲ್ಲಿ ತಿಳಿಯಪಡಿಸಿರುತ್ತಾರೆ.

ಆರ್.ಎಸ್.ಎಸ್. ಮೇಲಿನ ಪ್ರತಿ ಬಂಧಕ ಹೋಯಿತು

ಕಳೆದ ವರ್ಷ ಫೆಬ್ರವರಿ ೫ನೇ ತಾ|| ಆರ್.ಎಸ್.ಎಸ್ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಸರ್ಕಾರದವರು ಈ ದಿನ ರದ್ದುಮಾಡಿರುತ್ತಾರೆ.

○ ವ್ಯವಸಾಯ ಸಂಸ್ಥೆಯ ಪ್ರಿನ್ಸಿಪಾಲರಾದ ಶ್ರೀ ಪಿ ಎಸ್. ರಾಮರೆಡ್ಡಿಯವರ ಅವಧಿಯನ್ನು ಇನ್ನೊಂದು ವರ್ಷದವರೆಗೆ ಹೆಚ್ಚಿಸಲಾಗಿದೆ.

○ ಹಣ್ಣಿನ ಮುರಬ್ಬ ಕೈಗಾರಿಕೆಯನ್ನು ಬೆಂಗಳೂರಿನಲ್ಲಿ ೩೦ ಸಾವಿರ ರೂ. ಖರ್ಚಿನಿಂದ ಸರಕಾರದವರು ಸ್ಥಾಪಿಸುವುದಾಗಿ ಗೊತ್ತಾಗಿದೆ.

ಪುರ ಸಭಾಧಿವೇಶನ

—:o.—

ನೆನ್ನೆ ದಿನ ಪುರ ಸಭಾಧಿವೇಶನವು ನಡೆದು ಪೌರ ಸಭೆಗೆ ಸೇರಿದ ಕಟ್ಟಡಗಳ ಮೇಲೆ ಸರಕಾರದ ರೆಂಟ್ ಕಂಟ್ರೋಲರರ ಅಧಿಕಾರವನ್ನು ತಪ್ಪಿಸಿ, ಅದನ್ನು ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟು ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವು ಆಯಿತು. ಹೊಂದದಂಗಡಿಗಳನ್ನು ಪೌರ ಸಭೆಯ ಎಲ್ಲಾ ಕಟ್ಟೆ ನಿಂದಾಟಿಗೆ ಸಾಗಿಸಿ, ಅಲ್ಲಿ ಅವುಗಳಿಗೆ ತಾತ್ಕಾಲಿಕ ಕಟ್ಟಡಗಳನ್ನು ಕಟ್ಟಿಕೊಡಬಹುದೆಂದು ಅಭಿಪ್ರಾಯ. ಪಡಲಾಯಿತು ಗಾಂಧಿ ನಗರದಲ್ಲಿ ಒಂದು ವಿದ್ಯಾರ್ಥಿನಿಯರ ಹೈಸ್ಕೂಲನ್ನು ಸ್ಥಾಪಿಸಲು ತೀರ್ಮಾನವಾಯಿತು ಬೆಂಗಳೂರಿನ ಟ್ರಾನ್ಸ್‌ಪೋರ್ಟ್ ಮೋಟಾರು ಸರ್ವೀಸನ್ನು ಪೌರ ಸಭೆಯವರು ಕೊಂಡುಕೊಂಡು, ಅವರಿಗೆ ಸೂಕ್ತ ಪರಿಹಾರ ದ್ರವ್ಯವನ್ನು ಕೊಡಬೇಕೆಂದು ತೀರ್ಮಾನವಾಯಿತು.

ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದಕ್ಕೆ ಹುಡುಗಿಯ ಆತ್ಮಹತ್ಯ

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ನಾಲ್ಕನೇ ಬಾರಿಯೂ ತೇರ್ಗಡೆಯಾಗದೆ ಜಿಗುಪ್ಸೆಯಿಂದ ಗುಡಿಯಾಟ್ಟಂನ ರುಕ್ಮಿಣಿ ಎಂಬ ಹೆಂಗಸು ವಿದ್ಯಾರ್ಥಿಯು ಸೀರೆಗೆ ಸೀಮೆಎಣ್ಣೆ ಸುರಿದುಕೊಂಡು ಅದಕ್ಕೆ ಬೆಂಕಿ ಹಚ್ಚಿ ಆತ್ಮ ಹತ್ಯ ಮಾಡಿಕೊಂಡಳೆಂದು ವರದಿಯಾಗಿದೆ.

—:o:—

ಆಸ್ಪತ್ರೆ ಕೆಲಸಗಾರರ ಮುಷ್ಕರ

ಕಲ್ಕತ್ತ ಆಸ್ಪತ್ರೆಗಳ ಕೆಲಸಗಾರರು ಮುಷ್ಕರ ಹೂಡುವುದಾಗಿ ತಿಳಿಸುವುದರಿಂದ ಅರೀತಿ ಆದರೆ ಆಸ್ಪತ್ರೆಗಳನ್ನು ಮುಚ್ಚಿ ರೋಗಿಗಳನ್ನೆಲ್ಲಾ ಅವರ ಮನೆಗಳಿಗೆ ಕಳುಹಿಸಲಾಗುವುದೆಂದು ಸರ್ಕಾರದವರು ತಿಳಿಸಿರುತ್ತಾರೆ

—:o:—

ದುಃಖ ಸೂಚಕ ಪೆರೇಡು

ಸಂಸ್ಥಾನದ ಚೀಫ್ ಸ್ಕೌಟ್ ಕಮೀಷನರಾಗಿದ್ದ ಮೇಜರ್ ವೈ.ವಿ.ಕೆ ಮೂರ್ತಿಯವರ ನಿಧನಕ್ಕಾಗಿ ಸಂತಾಪ ಸೂಚಿಸಲು ಈ ದಿನ ಬೆಳಗ್ಗೆ ಟೌನ್‌ಹಾಲಿನ ಮೈದಾನದಲ್ಲಿ ರಾಜಧಾನಿಯ ಸ್ಕೌಟುಗಳ ದುಃಖ ಸೂಚಕ ಪೆರೇಡ್ ನಡೆಯಿತು ಪುರಸಭಾ ಕಮೀಷನರಾದ ಶ್ರೀ ಸಿ. ನರಸಿಂಹ ಮೂರ್ತಿಯವರು, ಅಧ್ಯಕ್ಷತೆ ವಹಿಸಿದ್ದರು ದಿವಂಗತ ಜೀವನ ಚರಿತ್ರೆಯನ್ನು ಅಧ್ಯಕ್ಷರು ಓದಿದ ಮೇಲೆ ೨ ನಿಮಿಷಗಳ ಮೌನವನ್ನು ಆಚರಿಸಲಾಯಿತು

—:o:—

ಗೋಪಾಲರಾವ್ ಠೇಣಿಗಾರರಿಗೆ ೭ ಆಣೆ ಡಿವಿಡೆಂಡ್

ಗೋಪಾಲರಾಯರ ಠೇಣಿಗಾರರಿಗೆ ರೂಗೆ ೭ ಆಣೆ ವರೆಗೂ ಡಿವಿಡೆಂಡನ್ನು ಕೊಡಬೇಕೆಂದು ಸಮಿತಿಯವರು ತೀರ್ಮಾನಿಸಬಹುದೆಂದು ತಿಳಿದುಬಂದಿದೆ. ಬಡವರು ವಿಧವೆಯರು ಮತ್ತು ಇತರ ಸಣ್ಣ ಠೇವಾದೇವಿಗಾರರಿಗೆ ಇನ್ನೂ ಕೊಂಚ ಹೆಚ್ಚು ಭಾಗ ಕೊಡಬಹುದೆಂದು ಹೇಳಲಾಗಿದೆ

—:o:—

ಮ್ಯಾಟನಿ ಪ್ರದರ್ಶನಗಳಲ್ಲಿ ಧೂಮಪಾನ ಕೂಡದು

ಮುಂಬಾಯಿ ನಗರದ ಸಿನಿಮಾ ಮಂದಿರಗಳ ಮ್ಯಾಟನಿ ಪ್ರದರ್ಶನಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಿ ಅಲ್ಲಿನ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ

—:o:—

ಲಂಡನ್ನಿನ ಬಂದರು ಕೆಲಸಗಾರರ ಮುಷ್ಕರ

ಲಂಡನ್ನಿನ ಬಂದರು ಕೆಲಸಗಾರರ ಮುಷ್ಕರದಿಂದ ಇತ್ತ ನೆನ್ನೆ ದಿನ ವಿಕೋಪದ ಸ್ಥಿತಿ ತಲ್ಪಿರುವ ಹಾಗೆ ಎಂದ ಕೆಲವು ಗಂಟೆಗಳೊಳಗಾಗಿ ಮತ್ತೆ ೩೫೦೦ ಮಂದಿ ಮುಷ್ಕರಕ್ಕೆ ಸೇರಿದರು. ಈಗ ಒಟ್ಟು ೧೩ ಸಾವಿರ ಮಂದಿ ಕಾರ್ಮಿಕರು, ಕೆಲಸಕ್ಕೆ ಹೋಗುತ್ತಿಲ್ಲ ಇದರಿಂದ ೧೨೩ ಹಡಗುಗಳು ಬಂದರಿನಲ್ಲಿ ನಿಂತುಹೋಗಿವೆ

ಬ್ರಿಟನ್ನನ್ನು ಅಮೆರಿಕವು ಕೊಂಡುಕೊಳ್ಳಬಹುದು

ಬ್ರಿಟನ್ನನ್ನ ಈಗ ಸುಲಭವಾಗಿ ಅಮೆರಿಕವು ಕೊಂಡುಕೊಳ್ಳಬಹುದೆಂದು ಅಮೆರಿಕದ ಸುಪ್ರಸಿದ್ಧ ಪತ್ರಿಕೋದ್ಯೋಗಿ [illegible] ತಿಳಿಸಿದ್ದಾರೆ ಐರೋಪ್ಯ ರಾಷ್ಟ್ರಗಳನ್ನು ದರೋಡೆ ಮಾಡುವಾಗ ಬ್ರಿಟಿಷರು ಬಹಳ ಬಲವಾಗಿದ್ದರು [illegible] ಜನರು ಹೊಟ್ಟೆಗಿಲ್ಲದೆ ಉಪವಾಸವಿರುತ್ತಿದ್ದಾಗ ಬ್ರಿಟಿಷರು ತಿಂದು ತೇಗುತ್ತಿದ್ದರು ಆದರೆ ಈಗ ಅವರ ಪರಿಸ್ಥಿತಿಯು ಚಿಂತಾಜನಕವಾಗಿದೆ ಮಯುಸ್ಸದ ಹಂದಿಯನ್ನು ಹಣ ಕೊಟ್ಟು ಕೊಳ್ಳುವಂತೆ ಬ್ರಿಟನ್ನನ್ನು ಅಮೆರಿಕವು ಕೊಳ್ಳಬಹುದೆಂದು ಅವರು ಹೇಳಿರುತ್ತಾರೆ

ರಾಜಘಾಟಿನಲ್ಲಿ ಮಹಾತ್ಮರ ಸ್ಮಾರಕ ಉದ್ಯಾನವನ

ಮಹಾತ್ಮರ [illegible] ನಡೆದ [illegible] ರಾಜಘಾಟಿನಲ್ಲಿ ಒಂದು [illegible] ಭಾರತ ಸರ್ಕಾರದವರು [illegible] ಲಕ್ಷ ರೂ ಮಂಜೂರು ಮಾಡಿದ್ದಾರೆ ಈ ಕೆಲಸವು ಮುಂದಿನ ಅಕ್ಟೋಬರ್ [illegible] ಪೂರ್ತಿಯಾಗುವುದೆಂದೂ ಅದರ ಪ್ರಾರಂಭೋತ್ಸವವನ್ನು [illegible] ಶ್ರೀ ಗಾಡ್ಗೀಲ್ ರವರ ನೆರವೇರಿಸುವರೆಂದೂ ಗೊತ್ತಾಗಿದೆ

ರಕ್ಷ್ಯ ಪೊಲೀಸಿನವನಿಗೆ ೭ ವರ್ಷ ಶಿಕ್ಷೆ

ತಂಜಾವೂರು ಜಿಲ್ಲೆಯ ಕಿಲಿಮಂಗಳಂ ನಿವಾಸಿ ಮೊಟ್ಟಯ್ಯ [illegible] ಎಂಬಾತನು ತಾನು ಪೊಲೀಸಿನವನೆಂದು ಹೇಳಿ ಇಬ್ಬರನ್ನು ಹೆದರಿಸಿ ಅವರಲ್ಲಿದ್ದ ಆಕ್ಕಿಯನ್ನು ಅಪಹರಿಸಿ ಮಾರಿದನೆಂಬ ಆಪಾದನೆಯ ಮೇಲೆ ಆತನಿಗೆ ೭ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ

ಸಿಲೋನ್ ಪಾರ್ಲಿಮೆಂಟಿಗೆ ಕಮ್ಯೂನಿಸ್ಟರ ಬಹಿಷ್ಕಾರ

ಸಿಂಹಳ ದ್ವೀಪದ ಪಾರ್ಲಿಮೆಂಟಿನ ಸಭೆಯ ಪ್ರಾರಂಭೋತ್ಸವದ ಸಮಾರಂಭಕ್ಕೆ ಅಲ್ಲಿನ ಕಮ್ಯೂನಿಸ್ಟರು ಬಹಿಷ್ಕಾರ ಹಾಕಿದ್ದಾರೆ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸದೆ ಇಂತಹ ಸಮಾರಂಭಕ್ಕೆ ಕಾಲಹರಣ ಮಾಡುವುದನ್ನು ಪ್ರತಿಭಟಿಸಲು ಅವರು ಈ ರೀತಿ ಮಾಡಿದ್ದಾರೆಂದು ಹೇಳಲಾಗಿದೆ

ಚಾಮುಂಡೇಶ್ವರೀ ಟಾಕೀಸ್

15-7-1949 ರ [illegible] [illegible]

ರಕ್ತರೇಖಾ

[ತೆಲುಗು]

[illegible]

Edited printed and published by A K N[illegible], at Sadhvi Press D[illegible] Road Mysore

ಕಾಂಗ್ರೆಸ್ಸನ್ನು ಶುದ್ಧಿಗೊಳಿಸಲು ನೆಹರೂರವರ ಸೂಚನೆ

ಕಾಂಗ್ರೆಸ್ ಸಂಸ್ಥೆಯನ್ನು ಶುದ್ಧಿಗೊಳಿಸಿ ನವಚೇತನವನ್ನು ತುಂಬುವುದು ಈಗ ಅತ್ಯವಶ್ಯಕವಾಗಿದೆಯೆಂದು ಪ್ರಧಾನಿ ಪಂಡಿತ ನೆಹರೂರವರು ಎಲ್ಲ ಪ್ರಾಂತೀಯ ಸರ್ಕಾರಗಳಿಗೂ ಸೂಚನೆಕೊಟ್ಟಿರುವರು ಈ ಸಂದರ್ಭದಲ್ಲಿ ಪ್ರಾಂತೀಯ ಸರ್ಕಾರಗಳು ಅಲ್ಲಿನ ಕಾಂಗ್ರೆಸ್ ಸಮಿತಿಗಳ ನಾಯಕರೊಂದಿಗೆ ಆಗಾಗ್ಗೆ ಕಲೆತು ಸಮಾಲೋಚನೆ ನಡೆಸಬೇಕೆಂದೂ ಸಲಹೆ ಇತ್ತಿರುತ್ತಾರೆ

[illegible] ಪ್ರಧಾನಿ ಮನೆ ಮುಂದೆ ನೌಕರರ ಪ್ರದರ್ಶನ

[illegible] ಸ್ಥಾನದ ಕೇಂದ್ರ ಸರ್ಕಾರಿ ಕಚೇರಿಯ ಸುಮಾರು [illegible] ಸಾವಿರ ಗುಮಾಸ್ತರುಗಳು ತಮಗೆ ಹೆಚ್ಚು ಸಂಬಳ, ಉಚಿತ ವಸತಿ, ವೈದ್ಯ ಸೌಲಭ್ಯ ಮತ್ತು ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಪ್ರಧಾನಿ [illegible] ಆಲಿಖಾನರ ಮನೆ ಮುಂದೆ ಮೊನ್ನೆ ದಿನ ಪ್ರದರ್ಶನ ನಡೆಸಿದರೆಂದು ಹೇಳಲಾಗಿದೆ

ಕೋಮುವಾರು ವಿಷಯದ ಪುಸ್ತಕಗಳಿಗೆ ನಿಷೇಧ

ಕೋಮುವಾರು ಮತ್ತು ಆಕ್ಷೇಪಣೀಯವಾದ ವಿಷಯಗಳನ್ನೊಳಗೊಂಡ ಪುಸ್ತಕಗಳನ್ನು ಸರ್ಕಾರಿ ಶಾಲೆಗಳಿಗೆ ಬಹುಮಾನ ಮಾಡಿದರೆ ಅವುಗಳನ್ನು ಅಂಗೀಕರಿಸುವ ಮುನ್ನ ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳ ಒಪ್ಪಿಗೆ ಪಡೆಯಬೇಕೆಂದು ಮದರಾಸ್ ಸರ್ಕಾರದವರು ಆಜ್ಞೆಮಾಡಿದ್ದಾರೆ

ಇನ್ನು ೩ ವರ್ಷಗಳಲ್ಲಿ ೩ರಷ್ಟು ರೈಲು ಹೆಚ್ಚುವುದು

ಇನ್ನು ಮೂರು ವರ್ಷಗಳಲ್ಲಿ ಈಗಿರುವ ಪ್ರಯಾಣಿಕರ ರೈಲನ್ನು ಮೂರರಷ್ಟು ಹೆಚ್ಚಿಸಲಾಗುವುದೆಂದು ಭಾರತ ಸರ್ಕಾರದ ರೈಲ್ವೆ ಮಂತ್ರಿಗಳಾದ ಶ್ರೀ ಸಂತಾನಂರವರು ತಿಳಿಸಿರುತ್ತಾರೆ

ಬೇಕರಿಗ ಸಿದ್ಧವಾಗಿದೆ

ಪಂಚರಾತ್ರ

[By Dr N S Narayan Sastry]

Inter Arts & Inter Science

Text Book for 1949 50

ಬೆಲೆ 1—6—0

ಮಿತ್ರ ಮತ್ತು ಕಂಪನಿ,

[illegible] ಬಿಲ್ಡಿಂಗ್ಸ್ ಮೈಸೂರು

ಜಪಾನಿಗೆ ಚಿಯಾಂಗರ ಭೇಟಿಯೋ ?

ಪೆಸಿಫಿಕ್ ರ [illegible] ಸ್ಥಾಪನೆ ಬಗ್ಗೆ ಫಿಲಿಪೈನ್ಸಿನೊಡನೆ ಒಪ್ಪಂದಕ್ಕೆ ಬಂದು ಈಗ ಫಾರ್ಮೋಸಾಕ್ಕೆ ಹಿಂದಿರುಗಿರುವ ಚೀಣದ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕರು ಸಧ್ಯದಲ್ಲಿಯೇ ಜಪಾನಿಗೆ ಭೇಟಿ ಕೊಟ್ಟು, ಈ ಬಗ್ಗೆ ಜ॥ ಮೆಕ್ ಆರ್ಥರ್‌ರವರೊಡನೆ ಮಾತುಕತೆ ನಡೆಸುವರೆಂದು ವರದಿಯಾಗಿದೆ

ಮದ್ರಾಸ್ ಸಚಿವರ ಬಹಿರಂಗ ವಿಚಾರಣೆಗೆ ಒತ್ತಾಯ

ಮದ್ರಾಸಿನ ಮಾಜಿ ಪ್ರಧಾನಿ ಟಿ ಪ್ರಕಾಶಂರವರ ನಾಯಕತ್ವದಲ್ಲಿ ಒಂಬತ್ತು ಮಂದಿ ಶಾಸನ ಸಭೆಯ ನಿಯೋಗವು ಮುಂದಿನ ಶನಿವಾರ ದೆಹಲಿಯಲ್ಲಿ ಸೇರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕಾಣಲು ಹೋಗುವುದೆಂದು ಗೊತ್ತಾಗಿದೆ ಮದ್ರಾಸು ಮಂತ್ರಿಗಳನ್ನು ಬಹಿರಂಗವಾಗಿ ವಿಚಾರಣೆಗೆ ಒಳಪಡಿಸಬೇಕೆಂದು ನಿಯೋಗದವರು ಕಾರ್ಯಕಾರಿ ಸಮಿತಿಯನ್ನು ಒತ್ತಾಯಪಡಿಸುವರೆಂದು ಹೇಳಲಾಗಿದೆ

ವಿವಾಹ ಮಹೋತ್ಸವಗಳು

ರಾಜಧಾನಿಯ ವಕೀಲರಾದ ಶ್ರೀ ಕೆ ನಾರಾಯಣಚಾರ್ಯರು ತಮ್ಮ ಪುತ್ರಿ ಚಿ॥ ಸೌ॥ ಲಲಿತಾಳನ್ನು ಬೆಂಗಳೂರಿನ ರಾಜಾ ಸ್ಟೀಲ್ ಕಂಪನಿ ಮಾಲೀಕರಾದ ಶ್ರೀ ಎ ರಾಜಂ ಅಯ್ಯಂಗಾರ್ಯರ ಪುತ್ರ ಶ್ರೀ ಅನಂತಾಚಾರ್ಯರವರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ಮೈಸೂರು ಸಂಸ್ಕೃತ ಪಾಠಶಾಲೆ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಹೆಚ್ ರಾಮಾನುಜಾಚಾರ್ಯರ ಪುತ್ರಿ ಚಿ॥ ಸೌ॥ ಜಯಲಕ್ಷ್ಮಮ್ಮ ಮತ್ತು ತಿರುಮಲೆ ಶ್ರೀ ಶ್ರೀನಿವಾಸ ತಾತಾಚಾರ್ಯರ ಪುತ್ರ ಶ್ರೀ ನರಸಿಂಹರಾಘವ ತಾತಾಚಾರ್ಯ,

ಯಳಂದೂರು ಶ್ರೀ ಪಿ ರಾಮರಾಯರ ಪುತ್ರಿ ಚಿ॥ ಸೌ॥ ಶೇಷಮ್ಮ ಮತ್ತು ಶ್ರೀ ಪಿ ಶ್ರೀನಿವಾಸಅಯ್ಯಂಗಾರ್‌ರವರ ಪುತ್ರ ಶ್ರೀ ಎಸ್ ನಾಗಭೂಷಣರವರುಗಳ ವಿವಾಹವು ನಿನ್ನೆ ರಾಜಧಾನಿಯಲ್ಲಿ ನಡೆದುವು

ಗಣೇಶಾ ಟಾಕೀಸ್

15 7-49ನೇ ಶುಕ್ರವಾರದಿಂದ

ಪ್ರತಿ ದಿನ 3 ಆಟಗಳು

ತಲ್ಲಿ ಪ್ರೇಮ

[ತೆಲುಗು]

ಪಾತ್ರ-ಕನ್ನಾಂಬ [illegible] ಎಸ್ ರಾವ್,

ರಘುರಾಮಯ್ಯ, ಮಹೇಂದ್ರಮಣಿ

RAJKAMAL, MYSORE

From 15 7 49 for [illegible] days Daily 3 Shows

[illegible] TYCOON in Technicolor

With John Wayn[e] [illegible] Day

15 7 1949 ರ ಬೆಳಗಿನ ಪ್ರದರ್ಶನ [illegible] ದಿನಗಳು ಮಾತ್ರ,

ಪೇರ್ಸ [illegible] ರವರ

[illegible]

[illegible] ಕರ್ನಾಟಕ ಪ್ರಕಾಶ್

ಪ್ರ. ಸೂಂನಲ್ಲಿ ಪ್ರದನ ಪ್ರದರ್ಶನ

ಹರಿಜನ ವಸತಿಯಲ್ಲಿ ಮಹಾತ್ಮರ ಪ್ರತಿಮೆ

ದೆಹಲಿಯ ಹರಿಜನ ವಸತಿಯಲ್ಲಿ ವಾಲ್ಮೀಕಿ ಮಂದಿರದ ಹತ್ತಿರವಿರುವ ಬೇವಿನ ಮರದ ಬಳಿ ಒಂದು ದೇವಸ್ಥಾನವನ್ನು ನಿರ್ಮಿಸಿ, ಅಲ್ಲಿ ಗಾಂಧೀಜಿಯವರ ಪ್ರತಿಮೆಯನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿದೆ ಅಲ್ಲಿ ಮಹಾತ್ಮರು ಪ್ರತಿದಿನ ಸಂಜೆ ಪ್ರಾರ್ಥನೆ ನಡೆಸುತ್ತಿದ್ದರು.

ನೀರಿಗಾಗಿ ಪ್ರಧಾನಿಗಳ ಮನೆ ಮುಂದೆ ಪ್ರದರ್ಶನ

ಢಾಕಾ ನಗರದಲ್ಲಿ ನೀರು ಸರಬರಾಜು ಯಂತ್ರಗಳಿಗೆ ಅಪಾಯ ಒದಗಿ ನೀರಿನ ಅಭಾವ ಉಂಟಾಗುವ ಸಂಭವವಿರುವುದರಿಂದ ಅದನ್ನು ನಿವಾರಿಸಬೇಕೆಂದು ಅನೇಕ ಸರ್ಕಾರಿ ನೌಕರರುಗಳು ಅಲ್ಲಿನ ಪ್ರಧಾನಿಗಳ ಮನೆ ಮುಂದೆ ಖಾಲಿ ಕೊಡ ಮತ್ತು ಬಕೇಟುಗಳನ್ನು ಹಿಡಿದುಕೊಂಡು ಪ್ರದರ್ಶನ ನಡೆಸಿದರೆಂದು ಹೇಳಲಾಗಿದೆ.

ಯಜ್ಞದ ಫಲವಾಗಿ ಮಳೆ

ಸೂರತ್ತಿನಲ್ಲಿ ಮಳೆಗಾಗಿ ಮೂರು [illegible] ಗಳು ನಡೆಸಿದ ಸಂಗೀತ ಯಜ್ಞದ ಫಲವಾಗಿ ನಿನ್ನೆ ದಿನ ನಗರ ಮತ್ತು ಸುತ್ತುಮುತ್ತಲಿನಲ್ಲಿ ಭಾರಿ ಮಳೆ ಆಯಿತೆಂದು ಹೇಳಲಾಗಿದೆ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ [illegible] ವೈದ್ಯ [illegible] ಸಂಸ್ಥಾನ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ ೧ ಸೆಟ್ ರೂ ೩-೪-೦ ಪ್ಯಾಕಿಂಗ್ ಮತ್ತು ಟಪಾಲ ೧೨ ಆಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯರ್,

ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೊಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೋಳದ ಬೀದಿ [illegible] ನಂಬರ್ ಮನೆಯಲ್ಲಿ [illegible] ವರೆಗೆ ಕ್ಯಾಂಪ್ ಮಾಡುತ್ತಾರೆ ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ ಅತ್ಯಾಧುನಿಕ ರೀತಿಯ ಕಿಂಡರ್‌ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಪೋಷಕರುಗಳು ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡಬೇಕೆಂದು ಆಶಿಸಲಾಗಿದೆ

ಡಿ ಕೃಷ್ಣಮೂರ್ತಿ

ವ್ಯವಸ್ಥಾಪಕ

ಫೋನ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೧೫-೭-೪೯ [ಸಂಚಿಕೆ ೨೮೧

ಮೈಸೂರಿನ ಐಕ್ಯಕ್ಕಾಗಿ ವಿದ್ಯಾರ್ಥಿಗಳ ಚಳವಳಿ

ಬೆಟ್ಟದಪುರದಲ್ಲಿ ಹೈಸ್ಕೂಲು

:o:

ಮುಖ್ಯ ಮಂತ್ರಿಗಳಿಂದ ಆರಂಭೋತ್ಸವ

ಮೈಸೂರು, ೧೫

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಮಧ್ಯಾಹ್ನ ರಾಜಧಾನಿಯಿಂದ ಹೊರಟು, ಕೃಷ್ಣರಾಜನಗರ, ಹೆಬ್ಬಾಳು ಆರೋಗ್ಯ ಕೇಂದ್ರ, ಚುಂಚನಕಟ್ಟೆ, ಹೊಸೂರು ಅತ್ತಿಗೋಡು, ಬೆಟ್ಟದಪುರ, ಪಿರಿಯಾಪಟ್ಟಣ ಮತ್ತು ಹುಣಸೂರುಗಳಿಗೆ ಭೇಟಿ ಇತ್ತು, ರಾತ್ರಿ ೧-೩೦ ಗಂಟೆಗೆ ವಾಪಸು ಹಿಂದಿರುಗಿದರು.

ಕೃಷ್ಣರಾಜನಗರದಲ್ಲಿ ಪುರ ಸಭೆಯವರು ಸಚಿವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ, ನೀರು, ಚರಂಡಿ ಮತ್ತು ಇತರ ಸೌಲಭ್ಯಗಳಿಗಾಗಿ ಹಣ ಒದಗಿಸಬೇಕೆಂದು ಕೋರಿದರು, ಆಹಾರ ನಿಯಮದ ಆಜ್ಞೆಗಳನ್ನು ಉಲ್ಲಂಘಿಸಿದವರ ಮೇಲೆ ಹಾಕಲಾಗುತ್ತಿರುವ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಜನರು ಮನವಿ ಮಾಡಿಕೊಂಡರು ಮುಖ್ಯ ಮಂತ್ರಿಗಳು ಉತ್ತರವಿತ್ತು, ನಿಷ್ಕಾರಣವಾಗಿ ಜನರಿಗೆ ತೊಂದರೆ ಕೊಡಬೇಕೆಂಬುದು ಸರ್ಕಾರದ ಆಶೆಯಲ್ಲವೆಂದೂ, ಆದರೆ ಪ್ರಜಾ ಸರ್ಕಾರದ ಪೂರ್ಣ ಪ್ರತಿಫಲವು ದೊರೆಯಬೇಕಾದರೆ ಜನರು ತನ್ನ ಜವಾಬ್ದಾರಿಯನ್ನು ಅರಿತು, ಸರ್ಕಾರದ ಆಜ್ಞೆಗಳನ್ನು ಪಾಲಿಸಬೇಕೆಂದೂ ತಿಳಿಸಿದರು

ಅನಂತರ ಸಚಿವರು ಹೆಬ್ಬಾಳಿಗೆ ಭೇಟಿ ಕೊಟ್ಟು, ಅಲ್ಲಿ ಸಮಗ್ರ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಅಲ್ಲಿನ ಆರೋಗ್ಯ ಕೇಂದ್ರಕ್ಕೂ ಭೇಟಿ ಇತ್ತರು ಚುಂಚನಕಟ್ಟೆ, ಅತ್ತಿಗೋಡು, ಹೊಸೂರು ಗ್ರಾಮಗಳ ಜನರ ಅಹವಾಲುಗಳನ್ನು ಕೇಳಿ, ರಾತ್ರಿ ೯ ಗಂಟೆಗೆ ಬೆಟ್ಟದ ಪುರಕ್ಕೆ ದಯಮಾಡಿಸಿದರು

ಅಲ್ಲಿನ ಮಠಕ್ಕೆ ಭೇಟಿ ಇತ್ತು ಸ್ವಾಮಿಗಳ ದರ್ಶನ ಪಡೆದರು. ಅಲ್ಲಿ ಭಕ್ತ ಮಂಡಲಿಯವರು ಬಿನ್ನವತ್ತಳೆಯನ್ನು ಅರ್ಪಿಸಿದರು ಅನಂತರ ಅಲ್ಲಿ ಜಿಲ್ಲಾ ಬೋರ್ಡಿನವರಿಂದ ನಡೆಯಲಿರುವ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಹೈಸ್ಕೂಲ್ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ವಿ ಕೃಷ್ಣಪ್ಪನವರು ವರದಿಯನ್ನು ಒಪ್ಪಿಸಿದರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ನಾರಾಯಣ ಸ್ವಾಮಿಯವರು ಬಿನ್ನವತ್ತಳೆಯನ್ನು ಅರ್ಪಿಸಿದರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸ್ವಾಗತ ಭಾಷಣ ಮಾಡಿ, ವಿದ್ಯಾ ಪ್ರಸಾರಕ್ಕಾಗಿ ಬೋರ್ಡಿನವರು ಕೈಗೊಂಡಿರುವ ಕೆಲಸ ಕಾರ್ಯಗಳನ್ನು ವಿವರಿಸಿದರು ಗ್ರಾಮಾಂತರಗಳಲ್ಲಿ ಹೈಸ್ಕೂಲನ್ನು ತೆರೆಯುವ ಮುನ್ನ, ವಿದ್ಯಾರ್ಥಿ ನಿಲಯಗಳನ್ನು ತೆರೆಯಬೇಕಾದುದು ಅತ್ಯವಶ್ಯಕವೆಂದು ಹೇಳಿದರು

ಶ್ರೀ ಡಿ ದೇವರಾಜೇ ಅರಸಿನವರ ಭಾಷಣ ಮಾಡಿ ಈಗಿನ ವಿದ್ಯಾಭ್ಯಾಸ ನೀತಿಯನ್ನು ಮಾರ್ಪಡಿಸಬೇಕೆಂದೂ, ವ್ಯವಸಾಯಕ್ಕೆ ಸಹಕಾರಿಯಾಗುವಂತೆ ಶಿಕ್ಷಣ ಕೊಡಬೇಕೆಂದೂ ಹೇಳಿದರು

ಮುಖ್ಯಮಂತ್ರಿಗಳು ಉತ್ತರವಿತ್ತು [illegible]

ಶುಭಾಶಯಗಳು

ಶ್ರೀಮನ್ಮಹಾರಾಜರವರ ೩೧ ನೇ ವರ್ಷ ವರ್ಧಂತಿ ಸಮಯದಲ್ಲಿ ಪ್ರಭುಗಳಿಗೆ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತೇವೆ —ಸಂ

ಜಾ ಸರ್ಕಾರವು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ ಜನರು ಸಹಕರಿಸಬೇಕೆಂದೂ, ಎಲ್ಲ ಕಾರ್ಯಗಳಿಗೂ ಸರ್ಕಾರದವರೇ ಹಣ ಒದಗಿಸಲು ಸಾಧ್ಯವಿಲ್ಲವೆಂದೂ ಹೇಳಿದರು. ಈಗಿನ ವಿದ್ಯಾಭ್ಯಾಸ ನೀತಿಯನ್ನು ಬದಲಾಯಿಸಲು ಸರ್ಕಾರಕ್ಕೆ ಕಾತುರವಿದೆಯೆಂದೂ, ಹೈಸ್ಕೂಲುಗಳಲ್ಲಿ ವ್ಯವಸಾಯ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಲಾಗುವುದೆಂದೂ ತಿಳಿಸಿದರು ಹೈಸ್ಕೂಲುಗಳನ್ನು ಹೆಚ್ಚಾಗಿ ತೆರೆಯಲು ಉದಾರದೃಷ್ಟಿ ನೀತಿ ಅನುಸರಿಸಲಾಗುತ್ತಿದೆಯೆಂದೂ ಹೇಳಿದರು. ಬೆಟ್ಟದಪುರ ಮತ್ತು ಪ್ರೇಸರ್ ಪೇಟೆ ರಸ್ತೆಯನ್ನು ದುರಸ್ತು ಮಾಡಿಸಲಾಗುವುದೆಂದೂ ತಿಳಿಸಿದರು

ಅನಂತರ ಪಿರಿಯಾಪಟ್ಟಣ ಮತ್ತು ಹುಣಸೂರುಗಳಿಗೆ ಭೇಟಿ ಇತ್ತು ಅಲ್ಲಿನ ಜನರ ಕುಂದುಕೊರತೆಗಳನ್ನು ವಿಚಾರಿಸಿದರು.

ಸತ್ಯಾಗ್ರಹಿಗಳ ಪಟ್ಟಿ

ಸಂಸ್ಥಾನದ ಸತ್ಯಾಗ್ರಹಿಗಳ ಪರಿಚಯ ಪಟ್ಟಿಯನ್ನು ತಯಾರಿಸಬೇಕೆಂದು ತುಮಕೂರಿನಲ್ಲಿ ನಡೆದ ಎ ಎಂ. ಪಿ. ಸಿ ಯಲ್ಲಿ ನಿರ್ಧಾರವಾಗಿರುವುದರಿಂದ, ಮೈಸೂರು ನಗರದಲ್ಲಿ ಈ ವಿಷಯವನ್ನು ಅರಿತವರು ಅಂತಹ ಪಟ್ಟಿಯನ್ನು ತಯಾರಿಸಿ ನಗರದ ಕಾಂಗ್ರೆಸ್ ಸಮಿತಿಗೆ ಇದೇ ೩೧ ನೇ ತಾ॥ ನೊಳಗಾಗಿ ಕಳುಹಿಸಬೇಕೆಂದೂ, ಈ ಒಂದು ಸ್ಮಾರಕ ಗ್ರಂಥವನ್ನು ಹೊರಡಿಸಲು ೫ ಸಾವಿರ ರೂ ಖರ್ಚಾಗುವುದರಿಂದ, ಮಹಾಜನರು ಧನ ಸಹಾಯ ಮಾಡಬೇಕೆಂದೂ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಕೋರಿರುತ್ತಾರೆ

ಮಕ್ಕಳಿಗಾಗಿ ಚಲನಚಿತ್ರ ಪ್ರದರ್ಶನ

ಶ್ರೀ ಮನ್ಮಹಾರಾಜರವರ ವರ್ಧಂತಿ [illegible]

ಸೂಚನೆ

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ನೆಹರೂ ಭಾಷಣ ಕಾಲದಲ್ಲಿ ಪೋಲೀಸರ ಮೇಲೆ ಬಾಂಬು

ಕಲ್ಕತ್ತದಲ್ಲಿ ನಿನ್ನೆ ಪ್ರಧಾನಿ ಪಂಡಿತ ನೆಹರೂರವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ, ಒಂದು ಬಾಂಬು ಆಸ್ಫೋಟನೆಯಾಗಿ ಇಬ್ಬರು ಪೋಲೀಸರಿಗೆ ಏಟು ಬಿದ್ದು ಒಬ್ಬನು ಮಡಿದನೆಂದೂ ೫ ಮಂದಿಗೆ ತೀವ್ರ ಗಾಯವಾಯಿತೆಂದೂ ಹೇಳಲಾಗಿದೆ ಬಾಂಬು ಎಸೆದವನನ್ನು ಜನರು ಪೋಲೀಸರಿಗೆ ಹಿಡಿದು ಕೊಟ್ಟರು

ಆರ್. ಎಸ್. ಎಸ್. ಮುಖಂಡತ್ವಕ್ಕೆ ಗೋಲ್ವಾಲ್ಕರ್ ರಾಜೀನಾಮೆ?

ಆರ್ ಎಸ್ ಎಸ್ ಸಂಘದ ಮುಖಂಡತ್ವಕ್ಕೆ ಶ್ರೀ ಎಂ ಎಸ್ ಗೋಲ್ವಾಲ್ಕರ್‌ರವರು ರಾಜೀನಾಮೆಯನ್ನೀಯುವರೆಂದು ತಿಳಿದು ಬಂದಿದೆ

ಲಂಡನ್ನಿನ ಬಂದರು ಕೆಲಸಗಾರರ ಮುಷ್ಕರ

ಲಂಡನ್ನಿನ ಬಂದರು ಕೆಲಸಗಾರರ ಮುಷ್ಕರದ ಪರಿಸ್ಥಿತಿಯು ವಿಷಮಿಸುತ್ತಿದೆಯೆಂದೂ, ಗಸ್ತಿನ ಜನರು ಕೆಲಸಕ್ಕೆ ಹೋಗುತ್ತಿಲ್ಲವೆಂದೂ ಹೇಳಲಾಗಿದೆ ಇದರಿಂದ ಲಂಡನಿನಲ್ಲಿ ಆಹಾರ ಮತ್ತು ಇತರ ಪದಾರ್ಥಗಳನ್ನು ತುಂಬಿದ ೧೩೩ ಹಡಗುಗಳು ನಿಂತುಹೋಗಿವೆ ಸಾಮಾನುಗಳನ್ನು ತೆಗೆಯಲು ೫೦೦೦ ಸೈನಿಕರನ್ನು ನೇಮಿಸಲಾಗಿದೆ

ರೇಷ್ಮೆ ನೂಲುವ ಕಾರ್ಖಾನೆ ಕೆಲಸಗಾರರ ಸಂಪು

ಸರ್ಕಾರಿ ರೇಷ್ಮೆ ನೂಲುವ ಕಾರ್ಖಾನೆ ಕೆಲಸಗಾರರ ಸಂಘದಲ್ಲಿ ಪ್ರಸಕ್ತ ಸಂಪು [illegible]

ಕರ್ನಾಟಕದಲ್ಲಿ ಮೈಸೂರನ್ನು ಸೇರಿಸಲು ಚಳುವಳಿ

ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರು ಸಂಸ್ಥಾನವನ್ನು ಐಕ್ಯಮಾಡುವ ಒಕ್ಕೆ ಕರ್ನಾಟಕ ಮತ್ತು ಮೈಸೂರಿನ ವಿದ್ಯಾರ್ಥಿಗಳು ಸಂಸ್ಥಾನಾದ್ಯಂತ ಪ್ರಚಾರ ಕಾರ್ಯವನ್ನು ಕೈಗೊಳ್ಳುವರೆಂದು ತಿಳಿದುಬಂದಿದೆ ಈಗಾಗಲೇ ವಿದ್ಯಾರ್ಥಿಗಳು ಕರ್ನಾಟಕದ ಪ್ರವಾಸ ಮಾಡುತ್ತಿರುವರೆಂದೂ ಹೇಳಲಾಗಿದೆ

ಪ್ರಾಂತ್ಯ ಮತ್ತು ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಮ್ಮೇಳನ

ಪ್ರಾಂತೀಯ ಮತ್ತು ಸಂಸ್ಥಾನಗಳ ಹಣ ಕಾಸಿನ ಸಂಬಂಧವು ಕೇಂದ್ರ ಸರ್ಕಾರದೊಡನೆ ಯಾವರೀತಿ ಇರಬೇಕೆಂಬುದನ್ನು ನಿರ್ಧರಿಸಲು ಇದೇ ೨೧ ತಾ॥ ಗಳಲ್ಲಿ ದೆಹಲಿಯಲ್ಲಿ ಸಮ್ಮೇಳನವು ನಡೆಯುವುದು

ಭಾರತದ ಚಿತ್ರಕ್ಕೆ ಬಹುಮಾನ

ಬ್ರಸೆಲ್ಸಿನಲ್ಲಿ ನಡೆದ ಅಂತರ ರಾಷ್ಟ್ರೀಯ ಚಲನ ಚಿತ್ರ ಸ್ಪರ್ಧೆಯಲ್ಲಿ ಭಾರತದ ಉದಯಶಂಕರರವರ ಕಲ್ಪನಾ ಎಂಬ ಹಿಂದಿ ಚಿತ್ರಕ್ಕೆ ಬಹುಮಾನ ದೊರೆತಿದೆ

ಅಹಮದಾಬಾದಿನ ೩೦ ಗಿರಣಿಗಳ ಬಂದು

೭ ತಿಂಗಳಿನ ಬಟ್ಟೆ ದಾಸ್ತಾನ ಬಿಕರಿಯಾಗದೆ ಬಿದ್ದಿರುವ ಪ್ರಯುಕ್ತ ಅನೇಕ ಗಿರಣಿ ಮಾಲೀಕರುಗಳು ಕೆಲಸಗಾರರಿಗೆ ಸಂಬಳಕೊಡುವುದಕ್ಕೆ ಹಣವಿಲ್ಲದಿರುವ ಪರಿಸ್ಥಿತಿ ಉಂಟಾಗಿ, ಈ ತಿಂಗಳಿನ ಕೊನೆಯಿಂದ ಅಹಮದಾಬಾದಿನಲ್ಲಿ ೩೦ ಬಟ್ಟೆ ಗಿರಣಿಗಳನ್ನು ಮುಚ್ಚಲಾಗುವುದೆಂದು ಅಲ್ಲಿನ ಗಿರಣಿ ಮಾಲೀಕರ ಸಂಘದವರು ತಿಳಿಸಿರುತ್ತಾರೆ

ಕಲ್ಕತ್ತೆಯಲ್ಲಿ ಬಾಂಬುಗಳ ಆಸ್ಫೋಟನೆ

ಕಲ್ಕತ್ತದಲ್ಲಿ ಪಂಡಿತ ನೆಹರೂರವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ನಿರ್ಮಿಸಿದ್ದ ದ್ವಾರದ ಬಳಿ ನಿಂತಿದ್ದ ಪೋಲೀಸ್ ಅಧಿಕಾರಿಗಳ ಮೇಲೆ ಒಬ್ಬ ಯುವಕನು ೩ ಬಾರಿ ಗುಂಡು ಹಾರಿಸಿದನೆಂದೂ, ಇದರಿಂದ ಯಾರಿಗೂ ಪ್ರಾಣಾಪಾಯವಾಗಲಿಲ್ಲವೆಂದೂ ವರದಿಯಾಗಿದೆ ಯುವಕನನ್ನು ದಸ್ತಗಿರಿ ಮಾಡಲಾಯಿತು

ಪ್ರಾಂತೀಯ ಕಾಂಗ್ರೆಸ ಕಛೇರಿ, ಆಶುತೋಷ್ ಕಾಲೇಜು, ಭವಾನಿಪುರದ ಟ್ರಾಂ ಡಿಪೋಗಳಲ್ಲಿ [illegible] ಹೇಳಲಾಗಿದೆ

ಸರ್ಕಾರಿ ನೌಕರರಿಗೆ ಎಚ್ಚರಿಕೆ

[illegible]

ಖಾಸಿಂ ರಜ್ವಿಯ ವಿಚಾರಣೆ

ಈ ತಿಂಗಳ ಕೊನೆಯ ವಾರದಲ್ಲಿ ಹೈದರಾಬಾದಿನ ರಜಾಕರರ ಮಾಜಿ ನಾಯಕನಾದ ಖಾಸಿಂ ರಜ್ವಿಯ ವಿಚಾರಣೆಯು ಸಿಕಂದರಾಬಾದಿನ ತ್ರಿಮುಲ್ಗೇರಿಯಲ್ಲಿ ಒಂದು ಬ್ರಿಟಿಷ್ ಮಿಲಿಟರಿ ಆಸ್ಪತ್ರೆಯಾಗಿದ್ದ ಕಟ್ಟಡದಲ್ಲಿ ಪ್ರಾರಂಭವಾಗುವುದು. ೨೫೦ ಜನ ಪ್ರೇಕ್ಷಕರಿಗೂ, ೪೦ ಮಂದಿ ಪತ್ರಿಕಾ ಪ್ರತಿನಿಧಿಗಳಿಗೂ ಸ್ಥಳಾವಕಾಶ ಕಲ್ಪಿಸಿಕೊಡಲಾಗುವುದು.

ಕಾಶಿ ಮಠದ ಸ್ವಾಮಿಗಳ ಸಮಾಧಿ

ಗೌಡ ಸಾರಸ್ವತ ಬ್ರಾಹ್ಮಣರ ಗುರುಗಳಾದ ಕಾಶಿ ಮಠದ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಗಳು ತಮ್ಮ ೫೮ ನೇ ವರ್ಷದಲ್ಲಿ ಕಳೆದ ೧೦ ನೇ ತಾ|| ಎರ್ನಾಕುಲಮ್ಮಿನಲ್ಲಿ ಸಮಾಧಿ ಹೊಂದಿದರು. ಹಿಂದಿನ ದಿವಸ ಅವರ ಗುರುಗಳ ಆರಾಧನೆಯಾಗಿದ್ದ ಆ ದಿನ ಸಮಾಧಿ ಹೊಂದುವುದು ನಿಜವೆಂದು ಅವರು ತಮ್ಮ ಶಿಷ್ಯಂದಿರುಗಳಿಗೆ ಹೇಳಿದರೆಂದೂ, ಯಾವ ಖಾಯಿಲೆಯೂ ಇಲ್ಲದೆ ಅವರು ಸಮಾಧಿ ಹೊಂದಿದರೆಂದೂ ಹೇಳಲಾಗಿದೆ.

ಭಾರತಕ್ಕೆ ವಿಶ್ವಬ್ಯಾಂಕಿನಿಂದ ಸಾಲ

೧೫ ಕೋಟಿ ಡಾಲರ್ ಸಾಲವನ್ನು ಭಾರತಕ್ಕೆ ಕೊಡಲು ವಿಶ್ವದ ಬ್ಯಾಂಕು ನಿರ್ಧರಿಸಿದೆಯೆಂದೂ, ಈ ಬಗ್ಗೆ ಸಧ್ಯದಲ್ಲಿಯೇ ಪ್ರಕಟಣೆ ಹೊರಬೀಳುವುದೆಂದೂ ಗೊತ್ತಾಗಿದೆ.

ಪ್ರಭಾ

16-7-49ರಿಂದ ಯಶಸ್ವಿಯಾದ ೨ನೇ ವಾರ

ದಿನವಹಿ 3 ಆಟಗಳು ಮ್ಯಾಟಿನಿ 3-15 ಕ್ಕೆ

ಶ್ರೀ ಶಾಂತಾರಾಂರವರ ಕಲಾಕೃತಿ

ಅಪ್ನಾ ದೇಶ್ [ಹಿಂದಿ]

-:ಮುಖ್ಯ ಪಾತ್ರ:-

ಪುಷ್ಪಹಂಸ, ಉಮೇಶ್ ಶರ್ಮ

(ಎಲ್ಲಾ ವಿಧವಾದ ಕಾಂಗ್ರೆಸ್ ಮುಖಂಡರುಗಳನ್ನೂ ಮನ್ನಾ ಮಾಡಿರುತ್ತೆ.)

ಬೆಳಗಿನ ಪ್ರದರ್ಶನ

15-4-49ರಿಂದ 4 ದಿನಗಳು ಮಾತ್ರ

ನ್ಯೂ ಥಿಯೇಟರ್ಸ್ಸರವರ ಹಿಂದಿ ಚಿತ್ರ

ದುಪ್ ಮರ್ಕ

ಗಣೇಶ್ ಟಾಕೀಸ್

15-7-49ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ತಲ್ಲಿ ಪ್ರೇಮ [ತೆಲುಗು]

ಪಾತ್ರ ವರ್ಗ: ...

...

ಕಲ್ಕತ್ತದಲ್ಲಿ ೨ ಲಕ್ಷ ಕಾರ್ಮಿಕರಿಗೆ ನಿರುದ್ಯೋಗ

ಕಲ್ಕತ್ತದಲ್ಲಿ ಸೆಣಬಿನ ನಾರು ಕಾರ್ಖಾನೆಗಳನ್ನು ತಿಂಗಳಿನಲ್ಲಿ ಒಂದು ವಾರ ಮುಚ್ಚಬೇಕೆಂದು ಮಾಲೀಕರು ನಿರ್ಧರಿಸಿರುವುದರಿಂದ ಸುಮಾರು ೨ ಲಕ್ಷ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆಂದು ಹೇಳಲಾಗಿದೆ.

೩|| ವರ್ಷಗಳನಂತರ ಅಂಚೆ ಕಾರ್ಡು ತಲಪಿತು

ಸಹರಾನಪುರದಿಂದ ಅಹಮದಾಬಾದಿಗೆ ೧೯೪೫ನೇ ಅಕ್ಟೋಬರ್ ೧೬ನೇ ತಾ|| ಕಳುಹಿಸಿದ ಅಂಚೆ ಕಾರ್ಡು ಇದೇ ೯ನೇ ತಾ|| ತಲುಪಿತೆಂದು ಹೇಳಲಾಗಿದೆ.

ಉದಾರ ಸಹಾಯ

ಹುಣಸೂರಿನಲ್ಲಿ ಸ್ಥಾಪಿತವಾಗಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಕೃಷ್ಣರಾಜನಗರದ ಚಂದ್ರಮೌಳೀಶ್ವರ ಟೂರಿಂಗ್ ಟಾಕೀಸಿನ ಮಾಲೀಕರಾದ ಶ್ರೀ ಪಿ. ಆರ್. ಮುದ್ದಪ್ಪನವರು ಒಂದು ಸಹಾಯಾರ್ಥ ಪ್ರದರ್ಶನದಲ್ಲಿ ಬಂದ ೧೫೦೦ ರೂ ಅನ್ನು ಉದಾರವಾಗಿ ಕೊಟ್ಟಿರುತ್ತಾರೆ.

MORNING SHOWS AT

CHAMUNDESWARI

TALKIES

From 15th July for 3 days

It will make you shriek with terror!

Boris Karloff in

ISLE OF DEAD

With:- Ellen Drew and Mark Crammer

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

[By Dr. N. S. Narayan Sastry]

Inter Arts & Inter Science Text Book for 1949-50

ಬೆಲೆ 1-6-0

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Edited, printed and published by A. R. Nagarajan, at Sadhvi Press, D. Subbiah Road, Mysore.

ಆರ್. ಎಸ್. ಎಸ್. ಪ್ರತಿಬಂಧಕ ತೆಗೆದುದಕ್ಕಾಗಿ ಅಭಿನಂದನೆ

ಆರ್. ಎಸ್. ಎಸ್. ಮೇಲಿನ ಪ್ರತಿಬಂಧಕವನ್ನು ಸರ್ಕಾರದವರು ತೆಗೆದು ಹಾಕಿದುದಕ್ಕಾಗಿ ಅಭಿನಂದಿಸಿ ರಾಜಧಾನಿಯ ಲೋಕಸೇವಾ ಮಂಡಲಿಯವರು ಸರ್ದಾರ್ ಪಟೇಲರು, ಶ್ರೀ ಎಂ. ಎಸ್. ಗೋಳ್ವಾಲ್ಕರ್ ಮತ್ತು ಶ್ರೀ ವೆಂಕಟರಾಮಾಶಾಸ್ತ್ರಿಗಳವರಿಗೆ ತಂತಿ ಕಳುಹಿಸಿರುತ್ತಾರೆ.

ಸಮಗ್ರ ಸೇವಾ ಸಹಕಾರ ಸಂಘ

ಹುಣಸೂರು ತಾಲ್ಲೂಕು ಸಮಗ್ರ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಸಬ್ ಡಿವಿಜನ್ ಅಧಿಕಾರಿಗಳಾದ ಜನಾಬ್ ಬಿ. ಎಂ. ಅಬು ಬೇಕರ್‌ರವರು ಕಳೆದ ೧೯ನೇ ತಾ|| ನೆರವೇರಿಸಿದರು. ಆ ಮಲ್ಲಾರ್, ಶ್ರೀ ಎಸ್. ಎ. ಪಾಳೇಗಾರ್ ಮತ್ತು ಶ್ರೀ ಜಿ. ಕೃಷ್ಣಮೂರ್ತಿಯವರು ಆ ದಿನದಲ್ಲಿ ೨೬ ಸಾವಿರ ರೂ. ಷೇರುಗಳನ್ನು ವಸೂಲುಮಾಡಿದ್ದಾರೆ.

THE COORG & MYSORE COFFEE CO, (1937) LTD.

Chamundi Curing Works

vanivilas Mohalla

MYSORE.

Best quality Plantation Coffee in 'A' & 'PB' grades available.

Retail sales made daily at the Depot in the Works

The Public are invited to avail themselves of this opportunity."

ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಬೆಲೆ 2-0-0

ಗೂರ್ಲು, ಉಬ್ಬಸ, ಪರಿಣಾಮಶೂಲೆ ಮತ್ತು Tonsil ಗೆ (ಗಲಾಯುಕ) ಖಚಿತವಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಪದಕಗಳನ್ನು ಕೊಟ್ಟಿದ್ದಾರೆ.

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ

ದಿವಾನರ ರಸ್ತೆ, ಮೈಸೂರು

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಸಹಾಯ

ಮೇಲ್ಕಂಡ ಸಂಸ್ಥೆಗೆ ಚನ್ನಪಟ್ಟಣ ತಾಲ್ಲೂಕು ಸೋಗಾಲದ ಶ್ರೀ ಸೀನಪ್ಪನವರು ತಮ್ಮ ಪುತ್ರಿಯ ವಿವಾಹ ಸಂಬಂಧದಲ್ಲಿ ೨೫ ರೂ. ಉದಾರ ಸಹಾಯಮಾಡಿದ್ದಾರೆ.

ಚಾಮುಂಡಿಪುರಂ

ಶ್ರೀ ಸೀತಾರಾಮ ಮಂದಿರದ ಕಟ್ಟಡದ ನಿಧಿಗಾಗಿ ಸಹಾಯಾರ್ಥನಾಟಕ

ಕೊಳ್ಳೇಗಾಲದ ಅಕ್ಕಮಹಾದೇವಿ ನಾಟಕ ಸಂಘದವರು

ವೈರಾಗ್ಯ ನಿಧಿ ಅಕ್ಕಮಹಾದೇವಿ

ಎಂಬ ನಾಟಕವನ್ನು

ಮೈಸೂರು ಟೌನ್ ಹಾಲಿನಲ್ಲಿ

ತಾ|| 18-7-49ನೇ ಸೋಮವಾರ ರಾತ್ರಿ 10 ಗಂಟೆಗೆ ಅಭಿನಯಿಸುತ್ತಾರೆ

ರೆವಿನ್ಯೂ ಸಚಿವರು ಶ್ರೀ ಹೆಚ್. ಸಿದ್ದಯ್ಯ ಬಿ.ಎ.,ಎಲ್.ಎಲ್.ಬಿ. ಯವರು ಅಧ್ಯಕ್ಷತೆ ವಹಿಸುತ್ತಾರೆ.

ರಾವ್ ಸಾಹೇಬ್ ಜಿ. ಪಿ. ಮಲ್ಲಪ್ಪ ಸಂಘಾಧ್ಯಕ್ಷ

ಎ. ಕೃಷ್ಣಮೂರ್ತಿ ರಾವ್ ಮಂದಿರದ ಸಮಿತಿ ಅಧ್ಯಕ್ಷ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ.

ಕ್ರಯ:-೧ ಸೆಟ್ ರೂ ೩-೮-೦. ಪ್ಯಾಕಿಂಗ್ ಮತ್ತು ಟ.ಖ ೦-೨ ಆಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯಂಗಾರ್,

ಅಂಬಳೆ, ಯಳಂದೂರು.

ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೊಳದ ಬೀದಿ ೧೯೯೩ನೇ ನಂಬರ್ ಮನೆಯಲ್ಲಿ ೧೯-೭-೪೯ರಿಂದ ಆಗಾಯ್ಟು ೭-೮-೪೯ರ ವರೆಗೆ ಕ್ಯಾಂಪ್ ಮಾಡುತ್ತಾರೆ. ನೋಡತಕ್ಕ ಕಾಲ ಬೆಳಿಗ್ಗೆ ಎಂಟರಿಂದ ಹನ್ನೊಂದು ಘಂಟೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು.

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಅತ್ಯಾಧುನಿಕ ರೀತಿಯ ಕಿಂಡರ್ ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶವಿರುವುದರಿಂದ ಬಾಲಕರ ಮಾತಾಪಿತೃಗಳು ತ್ವರೆಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡಬೇಕೆಂದು ಅಪೇಕ್ಷಿಸಲಾಗಿದೆ.

ಡಿ. ಕೃಷ್ಣಮೂರ್ತಿ

ವ್ಯವಸ್ಥಾಪಕ.

ಮೈಸೂರು ಸ್ಟೇಟ್ ರೈಲ್ವೆ

ನೋಟೀಸ್

ಟ್ರಾಫಿಕ್ ಮ್ಯಾನೇಜರವರ ಕಛೇರಿ ಮೈಸೂರು, ಜುಲೈ ೧, ೧೯೪೯

೧೯೪೯ನೇ ಜುಲೈ ೧೫ನೇ ತಾರೀಖಿನಿಂದ ... ಮತ್ತು ... ಎಕ್ಸ್‌ಪ್ರೆಸ್ ರೈಲು ಗಾಡಿಗಳು ಪ್ರಯಾಣಿಕರ ಸೌಕರ್ಯಕ್ಕಾಗಿ ... ಮತ್ತು ... ಸ್ಟೇಷನುಗಳಲ್ಲಿ ನಿಲ್ಲುವುದು ... ವೇಳೆಗಳು ಈ ರೀತಿಯಾಗಿ ... ಬದಲಾಯಿಸಲ್ಪಟ್ಟಿವೆ.-

ನಂ. ೫ನೇ ಗಾಡಿ		ಗಂ. ನಿ.	ನಂ. ೬ನೇ ಗಾಡಿ		ಗಂ. ನಿ.
ಮೈಸೂರು	ಹೊರಡುವುದು	೭ ೧೫	ಶ್ರೀರಂಗಪಟ್ಟಣ	ಹೊರಡುವುದು	೧೯-೧೮
ನಾಗೇನಹಳ್ಳಿ	,,	೭ ೨೨	ಪ್ಯಾಲೇಸ್ ಸಾಹಿಡಿಂಗ್	,,	೧೯-೨೫
ಪ್ಯಾಲೇಸ್ ಸಾಹಿಡಿಂಗ್	,,	೭ ೩೫	ನಾಗೇನಹಳ್ಳಿ	,,	೧೯-೩೦
ಶ್ರೀರಂಗಪಟ್ಟಣ	,,	೭ ೪೦	ಮೈಸೂರು	ಸೇರುವುದು	೧೯-೪೦

ಶ್ರೀರಂಗಪಟ್ಟಣ ಮತ್ತು ... ಗಾಡಿಗಳ ವೇಳೆಗಳ ಪಟ್ಟಿಯಲ್ಲಿ ಯಾವ ಬದಲಾವಣೆ ಇಲ್ಲ.

ಮಿರ್ಜಾ ಇನಾಯತ್ ಹುಸೇನ್,

ಟ್ರಾಫಿಕ್ ಮ್ಯಾನೇಜರ್

ಪೋ ೧೦ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧೭-೭-೪೯ [ಸಂಚಿಕೆ ೮೫

ಮೈಸೂರಿಗೆ ಶರಚ್ಚಂದ್ರ ಬೋಸರ ಆಗಮನ

ಪ್ರಭುಗಳ ವರ್ಧಂತಿ ಉತ್ಸವ

ಮೈಸೂರು ೧೭

ಶ್ರೀಮನ್ ಮಹಾರಾಜರ ೩೧ನೇ ವರ್ಷದ ವರ್ಧಂತಿ ಉತ್ಸವವು ನೆನ್ನೆ ದಿನ ಅರಮನೆಯಲ್ಲಿ ಜರುಗಿತು ಪ್ರಾತಃ ಕಾಲದಲ್ಲಿ ಪ್ರಭುಗಳು ಮಿಂದು ದೇವತಾರಾಧನೆ ಮುಂತಾದುವುಗಳನ್ನು ಮಾಡಿ, ರಾಜಗುರುಗಳಿಗೆ ಪಾದ ಪೂಜೆಯನ್ನು ಮಾಡಿ ಅವರಿಂದ ಆಶೀರ್ವಾದ ಪಡೆದರು. ೧೦-೩೦ ಗಂಟೆಗೆ ಸಜ್ಜೆಯಲ್ಲಿ ದರ್ಬಾರು ನಡೆಯಿತು ದರ್ಬಾರಿಗೆ ದಿವಾನರೂ, ಮುಖ್ಯ ಮಂತ್ರಿಗಳೂ, ಇತರ ಸಚಿವರೂ, ನ್ಯಾಯವಿಧಾಯಕ, ಪ್ರ|| ಪ್ರ|| ಸಭೆಗಳ ಅಧ್ಯಕ್ಷರೂ, ರಾಜ್ಯಾಂಗ ಸಭೆ ಅಧ್ಯಕ್ಷರೂ, ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರೇ ಮುಂತಾದ ಉನ್ನತಾಧಿಕಾರಿಗಳೂ ದಯಮಾಡಿಸಿದ್ದರು ಪ್ರಭುಗಳ ವರ್ಷದ ಹೆಚ್ಚನ್ನು ಸೂಚಿಸುವ ೩೧ ಕುಶಾಲ ತೋಪುಗಳು ಹಾರಿಸಲ್ಪಟ್ಟವು

ಶಾಲಾ ದಿನೋತ್ಸವ

ರಾಜಧಾನಿಯ ಹಾರ್ಡ್ವಿಕ್ ಹೈಸ್ಕೂಲಿನ ಶಾಲಾ ದಿನೋತ್ಸವ ಮತ್ತು ಬಹುಮಾನ ವಿನಿಯೋಗ ಸಮಾರಂಭವು ನೆನ್ನೆ ನೆರವೇರಿತು. ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು

ದೇವತಾ ಪ್ರಾರ್ಥನೆ ಶಾಲಾ ಗೀತೆ, ಮತ್ತು ಮಹಾತ್ಮಗಾಂಧಿ, ಪಂಡಿತ್ ನೆಹರೂ, ಮತ್ತು ಶಾಲೆಯ ಮಾಜಿ ಪ್ರಿನ್ಸಿಪಾಲರಾದ ರೆ|| ಜಿ ಕೆಲ್‌ರವರ ಭಾವಚಿತ್ರಗಳ ಅನಾವರಣವಾದನಂತರ, ಮುಖ್ಯ ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಸಮರ್ಪಿಸಲಾಯಿತು ಶಾಲಾ ವರದಿಯು ಓದಲ್ಪಟ್ಟ ಮೇಲೆ ಮುಖ್ಯ ಮಂತ್ರಿಗಳು ಬಹುಮಾನಗಳನ್ನು ಹಂಚಿ, ಹೆಡ್ಮಾಸ್ಟರ್ ಮಿಸ್ಟರ್ ಹೈಸ್ಕೂಲು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು ಅನಂತರ ಶ್ರೀ|| ಕೆ ಸಿ ರೆಡ್ಡಿಯವರು ಭಾಷಣಮಾಡಿ ವಿದ್ಯಾನಂತರ ಸಂಸ್ಥೆಯನ್ನು ಹೆಚ್ಚಿಸಲು ಖಾಸಗೀ ಸಂಸ್ಥೆಗಳು ಮುಂದೆ ಬರಬೇಕೆಂದು ತಿಳಿಸಿದರು ನಂತರ ವಿಶ್ವ ವಿದ್ಯಾಲಯದ ಬಗ್ಗೆ ಶ್ರೀ ಸಿ ಆರ್. ರೆಡ್ಡಿಯವರು ಕಳುಹಿಸಿದ ವರದಿಯನ್ನು ಸಾರ್ವಜನಿಕಾಭಿಪ್ರಾಯಕ್ಕಾಗಿ ಪ್ರಕಟಿಸಲಾಗುವುದೆಂದು ತಿಳಿಸಿದರು ವ್ಯವಸಾಯ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವುದೆಂದರು.

ಕೌಟಿಲ್ಯ ಮಂಡಲಿಯ ಆರಂಭ ಭಾಷಣ

ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಮೊನ್ನೆ ಸಂಜೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ ಎ ಹಾಲಿನಲ್ಲಿ ಕೌಟಿಲ್ಯ ಮಂಡಲಿಯ ಪ್ರಾರಂಭ ಭಾಷಣವನ್ನು ಮಾಡಿದರು. ದೇಶವು ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸುವ ಜವಾಬ್ದಾರಿಯು ಹೆಚ್ಚಾದುದೆಂದೂ, ಜನರು ನಿಜವಾದ ಪ್ರಜಾ ಪ್ರಭುತ್ವದ ತತ್ವವನ್ನು ಅರ್ಥಮಾಡಿಕೊಳ್ಳುವ ಪರಿಸ್ಥಿತಿಯು ಒದಗಿ, ಹೊರದೇಶದಲ್ಲಿ ಜೀವನದ ಬಗ್ಗೆ ಇರುವ ಪ್ರಯೋಗಗಳನ್ನು ಅನುಸರಿಸಿಕೊಂಡು ಭಾರತೀಯರು ನಡೆಯಬೇಕೇ, ಇಲ್ಲವೇ ಅನುಭವಸಿದ್ಧವಾದ ಹಳೆಯ ಪದ್ಧತಿಗಳನ್ನು ರೂಢಿಸಿಕೊಂಡ ಒಡವೇಕೇ, ಎಂಬುದರ ಬಗೆ ಹುಟ್ಟುವ ಸಹಜವಾದ ಜಿಜ್ಞಾಸೆಯ ಬಗ್ಗೆ ತಕ್ಕ ಉಪಾಯಗಳನ್ನು ಕಂಡುಕೊಳ್ಳಲು ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೌಟಿಲ್ಯ ಮಂಡಲಿಯಂತಹ ಸಂಸ್ಥೆಗಳು ಕೊಡಬೇಕೆಂದು ಹೇಳಿದರು. ಆದರ್ಶೋದ್ದೇಶಗಳು ಕೇವಲ ಪುಸ್ತಕಜ್ಞಾನವಾಗದೆ ಕಾರ್ಯರೂಪದಲ್ಲಿ ತರಬೇಕಾದುದು ಅಗತ್ಯವೆಂದು ಅವರು ತಿಳಿಸಿದರು ಸಮಾರಂಭಕ್ಕೆ ಶ್ರೀ ತಂಬಿ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಟಿ ಎಸ್ ರಾಜಗೋಪಾಲ ಅಯ್ಯಂಗಾರ್ಯರು ಕೌಟಿಲ್ಯನ ಮಹಿಮೆಯನ್ನು ಕುರಿತು ವರ್ಣಿಸಿದರು. ಶ್ರೀ ಸಂಗೀತ ರತ್ನ ಚೌಡಯ್ಯನವರ ಪಿಟೀಲು ವಾದನವು ಏರ್ಪಾಟಾಗಿತ್ತು

ಹರಿಕಥೆ

೩ ಸುಬ್ಬರಾಯ ರಸ್ತೆಯಲ್ಲಿರುವ ಶ್ರೀ ಪ್ರಸನ್ನ [illegible] ಗೀತೋಪದೇಶ [illegible] ಸಂಘದಲ್ಲಿ ಈ ದಿನ [illegible] ಶ್ರೀ [illegible] ವೇದದಾಸರಿಂದ [illegible] ಹರಿಕಥೆ [illegible]

ಬಂದಿತಿದೊ!

ಬಂದಿತಿದೊ ಗ್ರೀಷ್ಮ ಋತು
ನಾಡು ನಲಿವಾನಂದ ಮಾಸ
ಎನ್ನುವಂತೆ ಮೂಡಿತದೊ
ಕನ್ನಡ ರಾಜನು ಮೆರವನದೊ

ಒಂದಿಹ ಹೊಸ ವರ್ಧಂತ್ಯುತ್ಸವವು
ಕರ್ನಾಟಕಕೆ ಕಳೆಕೊಟ್ಟಿಹುದು
ಪಸರಿಸಿ ಎಂಟೆಡೆ ರಾಜಸಿರಿಯಾ
ಪೂಸತೆರ ನರ್ತನ ಮಾಡುತಿದೆ

ಮಂಗಳ ರಾಜನ ಹೃನ್ಮಂದಿರದಲಿ
ಬಂಧುರ ಭಾವ ಹುಟ್ಟಿರಲು
ಬಂಧನ ವಿರಹಿತ ಭಾರತ ಮಾತೆಯಾ
ನಂಬಾಟ್ಟಿಯೊಳೋಲಾಡುತಿದೆ

ಕರುಣ ಕಟಾಕ್ಷಿಯ ದೈವ್ಯ ನೋಟವು
ದೀನ ಜನರೆಡೆಗೋಡುತಿದೆ
ತ್ಯಾಗ ಮಾಡುತ ರಾಜ್ಯವನುವನು
ಭವದಾಟೆ ವೈರಾಗ್ಯವ ಡಿಸಿಹನು

ಮದದಿಂ ಕುಣಿಯುತೆ ಚಾಮುಂಡಾಂಬೆಯು
ಮುದ್ದಾದರ್ಪಣ ಕೊಟ್ಟಿರಲು
ಹುಟುಹನು ಕೊಡುವ ಜಯಚಾಮನ ನೆನೆದದು
ಹರುಷದಿ ನಿಲ್ಲದೆ ಹಾಡುವೆನು

ಕೆ. ನರಸಿಂಹ ಮೂರ್ತಿ.

ಶರತ್ ಚಂದ್ರಬೋಸರ ಆಗಮನ

ಸ್ವಂ ಸು ಪ್ರೋ] ಬೆಂಗಳೂರ ೧೭

ಇದೇ ತಿಂಗಳು ೩೭ ನೇ ತಾರೀಕು ದಾವಣಗೆರೆಯಲ್ಲಿ ನಡೆಯಲಿರುವ ಕರ್ನಾಟಕ ಯುವಕ ಸಮ್ಮೇಳನದ ಪ್ರಾರಂಭೋತ್ಸವವನ್ನು ಶ್ರೀ ಶರತ್ ಚಂದ್ರಬೋಸರು ನೆರವೇರಿಸಲು ಒಪ್ಪಿರುವರೆಂದು ತಿಳಿದು ಬಂದಿದೆ ಶ್ರೀ ಬೋಸರು ಬರುವ ೩೬ ನೇ ತಾರೀಕು ಲಂಡನ್ನಿನಿಂದ ಬೊಂಬಾಯಿಗೆ ಆಗಮಿಸಿ ಅದೇ ದಿನ ಬೆಂಗಳೂರಿಗೆ ಬಂದು ಅನಂತರ ದಾವಣಗೆರೆಗೆ ತೆರಳುವರೆಂದು ಹೇಳಲಾಗಿದೆ

○ ಭಾರತ ಸಂಸ್ಥಾನಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ಶ್ರೀ ಕೆ ಸಿ ರೆಡ್ಡಿಯವರು ಈ ದಿನ ದೆಹಲಿಗೆ ಪ್ರಯಾಣ ಬೆಳೆಸಿದರು ಅವರು ಅಲ್ಲಿ ೧೦ ದಿನಗಳಿರುವರೆಂದು ತಿಳಿದುಬಂದಿದೆ

○ ಬೊಂಬಾಯಿನ ಸುಪ್ರಸಿದ್ಧ ಚಲನ ಚಿತ್ರಗಾರರಾದ ಶ್ರೀ ಶಾಂತಾರಾಂರವರು ಈ ದಿನ ರಾಜಧಾನಿಗೆ ಆಗಮಿಸಿ ೨ ದಿನಗಳು ಮೊಕ್ಕಾಂ ಮಾಡುವರೆಂದು ತಿಳಿದು ಬಂದಿದೆ

ಸ್ವೀಕಾರ

ಪ್ರಭುಗಳ ವರ್ಧಂತಿಯ ಪ್ರಯುಕ್ತ ರಾಜಧಾನಿಯ ಶ್ರೀ ಗಾಯತ್ರಿ ರೇಡಿಯೋ ಕಾರ್ಪೊರೇಷನ್ನಿನವರು ಕಳುಹಿಸಿದ ಸಿಹಿ ತಿಂಡಿಗಳನ್ನು ಆದರದಿಂದ ಸ್ವೀಕರಿಸುತ್ತೇವೆ

ಶ್ರೀ ಗಾಯತ್ರೀ

17-7-49ರಿಂದ 3 ದಿನಗಳು ಮಾತ್ರ
ದಿನವಹಿ 3 ಪ್ರದರ್ಶನಗಳು
ಪ್ಯಾರಮೌಂಟ್ಸ್‌ರವರ ವಿ ಜೋಕ್ಷನ [illegible]
ವರ್ಣರಂಜಿತ ಚಿತ್ರ

The Emperor Waltz
ದಿ ಎಂಪರರ್ ವಾಲ್ಟ್ಜ್
[illegible]

ಬರಲಿರುವ ಚಿತ್ರ
ಓಲ್ಡ್ ಲಾಸ್ ಏಂಜಲ್ಸ್

Edited printed and published by A R Nagarajan, at Sadhvi Press D. Subbaiah Road Mysore

ಕಪಿಲೆ ನದಿ ಪ್ರವಾಹ

ಸ್ವಂ ಸು.] ನಂಜನಗೂಡು ೧೭

ಕಳೆದ ಹಲವು ದಿನಗಳಿಂದ ಕಪಿಲೇ ನದಿಯಲ್ಲಿ ಪ್ರವಾಹವು ಹೆಚ್ಚಾಗಿ ಬರುತ್ತಿದೆ ಪ್ರವಾಹವು ಈಗ ಪೂರ್ಣವಾಗಿ ಬಂದು ಸಂತೆ ಮಾಳವನ್ನೆಲ್ಲಾ ಆಕ್ರಮಿಸಿದೆ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಮಲ್ಲಿನಮೂಲೆ ದೇವಸ್ಥಾನಗಳೊಳಗೆಲ್ಲಾ ನೀರು ನುಗ್ಗಿದೆ ಮೈಸೂರು-ನೀಲಗಿರಿ ರಸ್ತೆಯೂ ಸಹ ನೀರಿನಿಂದ ಆವರಿಸಲ್ಪಡುವ ಸಂಭವವಿದೆ

ಲಾಹೋರಿನಲ್ಲಿ ಗೋಡ್ಸೆ ಮತ್ತು ಆಪ್ಟೆ ಅಪೀಲು

ಮಹಾತ್ಮ ಗಾಂಧಿ ಕೊಲೆ ಮೊಕದ್ದಮೆ ಸಂಬಂಧದಲ್ಲಿ ಪೂರ್ವ ಪಂಜಾಬ್ ಹೈಕೋರ್ಟಿನವರು ಕೊಟ್ಟ ತೀರ್ಪಿನ ಮೇಲೆ ಪ್ರಿವಿ ಕೌನ್ಸಿಲ್ಲಿಗೆ ಮುಕ್ತ್ತೆ ಪಾಸಲಿನಲ್ಲಿ ಅಪೀಲು ದಾಖಲು ಮಾಡುವ ನಿರೀಕ್ಷೆಯುವೆ ಮೇಲ್ಕಂಡ ಅಪಾದಿತರಾಗಲಿ ಅಥವಾ ಅವರ ಬಗ್ಗೆ ನೇಮಿಸಿರುವ ಡಿಫೆನ್ಸ್ ಸಮಿತಿಯವರಾಗಲಿ ಅಪೀಲಿನ ಬಗ್ಗೆ ತಗಲಬಹುದಾದ ಬಿಗಾಡ ವೆಚ್ಚದ ಹೊರೆಯನ್ನು ವಹಿಸಲು ಸಾಧ್ಯವಿಲ್ಲದುದರಿಂದ ಸಾರ್ವಜನಿಕ [illegible] ಹೂಡಲು ಆಲೋಚಿಸುತ್ತಿರುವಂತಿದೆ

ಪಾಟಿಯಾಲದ ೧೨ ಗ್ರಾಮಗಳು ಪ್ರವಾಹದಲ್ಲಿ ಕೊಚ್ಚಿಹೋದುವು

ಪಂಜಾಬಿನ ಸಟ್ಲೆಜ್ ನದಿಯಲ್ಲಿ ಮಳೆಯ ರಭಸದಿಂದ ಪ್ರವಾಹವು ವಿಪರೀತ ಹೆಚ್ಚಿದೆಯೆಂದು ವರದಿಯಾಗಿದೆ ಇದರಿಂದ ಪಾಟಿಯಾಲಾ ನಗರದ ಬಳಿ ಇರುವ ಒಂದು ಭಾರಿ ಜಲಾಶಯವು ಎರಡು ಕಡೆ ಛಿದ್ರಿಸಲ್ಪಟ್ಟು ನಗರವು ನೀರಿನಿಂದ ಸಂಪೂರ್ಣವಾಗಿ ಸುತ್ತುವರಿಯಲ್ಪಟ್ಟಿದೆ ಸುತ್ತಮುತ್ತಲಿನ ೧೨ ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಿಹೋಗಿವೆ ಪಾಟಿಯಾಲಾದಿಂದ ಅಂಬಾಲಕ್ಕೆ ಹೋಗುವ ರಸ್ತೆಗಳಲ್ಲಿ ಸುಮಾರು ಆರು ಮೈಲಿ ದೂರ ಮಂಡಿಮಟ್ಟಕ್ಕೆ ನೀರು ನಿಂತಿದೆ ರೈಲ್ವೆ ಸಂಚಾರವು ನಿಲ್ಲಿಸಲ್ಪಟ್ಟಿದೆ ಪಾಟಿಯಾಲಾ ಬಳಿ ಇದ್ದ ಒಂದು ನಿರಾಶ್ರಿತ ಶಿಬಿರವು ನೀರಿನಲ್ಲಿ ಮುಳುಗಿದೆ 'ಆನೆ ಮತ್ತು ದೋಣಿಗಳ ಮೇಲೆ ಸಾಧ್ಯವಾದಷ್ಟು ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸಾಗಿಸಲಾಗುತ್ತಿದೆ ಅಲ್ಲಿನ ಪ್ರವಾಹವು ಇಳಿಯುವ ಸೂಚನೆಗಳು ಲಭ್ಯವಾಗಿ ಇಲ್ಲವೆಂದು ವರದಿ ತಿಳಿಸುತ್ತದೆ

ಶೃಂಗೇರಿ ಮಠದ ಧರ್ಮಾಧಿಕಾರಿಗಳು

ಶ್ರೀ ಜಗದ್ಗುರು ಮಹಾ ಸಂಸ್ಥಾನ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳಾದ ವೇ|| ಬ್ರಂ|| ಶ್ರೀ ವಿದ್ವಾನ್ ಪಂಡಿತರೆ ಶೇಷಶಾಸ್ತ್ರಿಗಳು ರಾಜಧಾನಿಗೆ ದಯಮಾಡಿಸಿ ಮಂಡಿಮೊಹಲ್ಲಾ ಕಾಮಾಟಗೇರಿಯ ಕಂಟ್ರಾಕ್ಟರ್ ದಾಸಪ್ಪನವರ ಛತ್ರದಲ್ಲಿ ಮೊಕ್ಕಾಂಮಾಡಿ, ಪ್ರತಿ ದಿನ ಶಿಷ್ಯರೆಲ್ಲರನ್ನೂ ಬರಮಾಡಿಕೊಂಡು ಧರ್ಮ ಬೋಧೆಯನ್ನು ಶ್ರೀಮಠದ ವೀಣಾರಾಧನೆ ಕಾರ್ತಿಕ [illegible] ಮಾಡುತ್ತ ಇದ್ದಾರೆ [illegible] ಒಂದ ಶ್ರೀ [illegible] ದರ್ಶನ ಮಾಡಿಸಿ ಶ್ರೀ [illegible] ಸ್ವೀಕರಿಸಿ ಅನೇಕ [illegible] ವಿಷಯ [illegible] ಮಾಡಲಾಗಿದೆ

ವಾರ ಭವಿಷ್ಯ

ತಾ|| ೧೭-೭-೪೯ರಿಂದ ೨೩-೭-೪೯ರವರೆಗೆ

ಮೇಷ—ಶರೀರ ಸ್ಥಿತಿ ನೆಟ್ಟಗೆ ಕಾರ್ಯಕ್ಕೆ ಅಡ್ಡಿ ಮತ್ತು ಗೊಂದಲ ಕೈಕೆಳಗಿನವರ ಅಕ್ಷೇಪಣೆ ಬಾಕಿ ವಸೂಲಾಗುವುದು ಪರೋಪಕಾರ ಹಾಗೂ ಸಾಹಸ ಸಮಾಜಕ ಕಾರ್ಯನೆರವೇರುವುದು ತಾ|| ೨೧, ೨೨ ಆಪ್ತೇಷ್ಟರಿಂದ ಕುಶಲ ಪತ್ರಾಗಮನ ಶುಭ ವಾರ್ತೆ

ವೃಷಭ—ಮಾನಸಿಕ ದೃಷ್ಟಿಯಿಂದ ವಾರ ಮೇದದ್ದು ಆರೋಗ್ಯ ನೆಟ್ಟಗಿರದು. ವಿಚಿತ್ರ ವೇದನೆ ವ್ಯಾಪಾರ ವ್ಯವಹಾರಗಳಲ್ಲಿ ಅಡಚಣೆ ತಾ|| ೧೮, ೧೯ ಅಸುಚ ವಾರ್ತೆ, ಕುಟುಂಬದಲ್ಲಿ ಕಲಹ, ಪ್ರವಾಸದಲ್ಲಿ ಹಾನಿ

ಮಿಥುನ—ಪ್ರತಿಕಾರ್ಯದಲ್ಲೂ ಎಚ್ಚರಿಕೆ ಇರಲಿ ಮನಸ್ಥಿತಿ ಚೆನ್ನಾಗಿರದು ಭಯಾನಕ ಸ್ವಪ್ನ ನೌಕರಿ ದಂಧೆಗಳಲ್ಲಿ ಎದುರಾಳಿಗಳ ಕಾ ' ಖರ್ಚು ಬಹಳ. ಪ್ರವಾಸ ಬೇಡ ತಾ|| ೨೦, ೨೧, ೨೨ ಆರೋಗ್ಯಕ್ಕೆ ಧಕ್ಕೆ. ಅಗ್ನಿ ಅಪಘಾತ ಭಯ, ಆಪ್ತ ಜನರಿಂದ ತೊಂದರೆ

ಕರ್ಕ—ಆರೋಗ್ಯ ನೆಟ್ಟಗಿರದು ಕೈಕಾಲು ನೋವು ಹಲವರಿಗೆ ಕೆಮ್ಮು ನೆಗಡಿ ಬಾಧೆ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಕೈಕೆಳಗಿನವರು ನಿಮ್ಮ ಮೇಲ್ಪಟ್ಟವರಲ್ಲಿ ನಿಮ್ಮ ಮೇಲೆ ಚಾಡಿ ಹೇಳುವರು. ಆದರೆ ಇದು ಫಲಕಾರಿಯಾಗದು. ತಾ|| ೧೭, ೨೧ ಇದ್ದುದರಲ್ಲಿ ಉತ್ತಮ

ಸಿಂಹ—ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಒಂದಿಲ್ಲೊಂದು ತೊಂದರೆ. ಏನಾದರೂ ಅಪಯಶ ತಪ್ಪದು ಪ್ರತಿ ಕೆಲಸಕ್ಕೂ ವಿರುದ್ಧ ಫಲ ಕೋರ್ಟು ವ್ಯವಹಾರದಲ್ಲಿ ಕಾಟಸ್ಥ ಅಪ್ತೇಷ್ಟರ ಕಾಟವು ಅಸಹನೀಯ. ಮಾಡಿದ ಸಿದ್ಧತೆ ಕೊನೆಗಳಿಗೆಯಲ್ಲಿ ವ್ಯರ್ಥವಾಗುವ ಸಂಭವ ತಾ|| ೧೮, ೧೯, ತಾತ್ಕಾಲಿಕ ಧನ, ಚಿಂತಾ ನಿವಾರಣೆ

ಕನ್ಯಾ—ಉದಾತ್ತ ವಿಚಾರ ಅಂತಃಕರಣದಲ್ಲಿ ಬರ ವುದು ಆರೋಗ್ಯ ನೆಟ್ಟಗೆ ನಿಮ್ಮ ದಕ್ಷತೆ ಬಗ್ಗೆ ಮೇಲಿನವರ ತೃಪ್ತಿ ಹಣಕಾಸಿನ ಆಕಸ್ಮಿಕ ಲಾಭ ವ್ಯಾಪಾರಾದಿಗಳಲ್ಲಿ ಅಂದಾಜು ಸರಿ ಹೊಂದುವುದು ತಾ|| ೧೮, ೧೯ ಗೊಂದಲ, ಹೆಚ್ಚು ಖರ್ಚು.

ತುಲಾ—ಈ ವಾರ ಪರಿಸ್ಥಿತಿಯು ಸಾಧಾರಣ ಆರೋಗ್ಯದಲ್ಲಿ ತೀವ್ರ ಬದಲಾವಣೆ ಅಶಾ ವಾತಾವರಣ ನಿಂದನೆ ಮಾಡಿದವರು ಮುಂದೆ ವಂದಿಸುವರು ಸಾಂಪತ್ತಿಕ ಕ್ಲೇಶ ನಾಶ. ತಾ|| ೨೦, ೨೧, ೨೨ ಅತಿಥಿ ಅಭ್ಯಾಗತರ ಆಗಮನ

ವೃಶ್ಚಿಕ—ಮನಸ್ಥಿತಿ ಅತ್ಯಂತಕ್ಷುಬ್ಧಕರ ಅಭಿಪ್ರಾಯಗಳ ಘರ್ಷಣೆ ದೇಹಕ್ಕೆ ತೊಂದರೆ. ವ್ಯಾಪಾರಾದಿಗಳ ಸ್ಥಿತಿ ಅಸಮರ್ಪಕ. ತಾ|| ೧೮, ೧೯ ವಿಶೇಷ ಖರ್ಚು ವಾಹನಾದಿಗಳಿಗೆ ಅಥವ ವಾಹನಾದಿಗಳಿಂದ ಅಪಘಾತದುರ್ಘಟನೆ ಘಟನೆ.

ಧನು—ಮಾನಸಿಕ ಅಶಾಂತಿ ಪತ್ನಿಗೆ ಇದ್ದಕ್ಕಿದ್ದಹಾಗೆ ಕಾಯಿಲೆ. ಸ್ತ್ರೀವರ್ಗದವರೊಡನೆ ನಿಷ್ಕಾರಣ ಕಲಹ ಪ್ರವಾಸದಲ್ಲಿ ಕ್ಲೇಶ ತಾ|| ೨೧, ೨೨ ಸುಳ್ಳು, ಆರೋಪಣೆ, ಮಿತ್ರ ವಿಯೋಗ.

ಮಕರ—ವ್ಯಾಪಾರಾದಿಗಳಲ್ಲಿ ಯಶಸ್ಸು ಕೋರ್ಟು ವ್ಯವಹಾರದಲ್ಲಿ ಜಯ ಕಲ್ಪನಾಶಕ್ತಿಯ ಉಪಯೋಗ ಪ್ರವಾಸ ನಿವಿಷ್ಣ ಕಮಾನರ ಸನ್ಮಾನ ತಾ|| ೧೭, ೨೧, ೨೨ ಶುಭವಾರ್ತೆ, 'ಮಹತ್ವದ ಪತ್ರ

ಕುಂಭ—ಮಕ್ಕಳ ಆರೋಗ್ಯ ಕೆಡುವುದು ಹಣಕಾಸಿನ ಮುಗ್ಗಟ್ಟು ಬುದ್ಧಿಜೀವಿಗಳ ಸ್ಥಿತಿ ಶೋಚನೀಯ ತಾ|| ೨೦ ೨೧, ೨೨ ನೌಕರಿಯಲ್ಲಿ ಮೇಲಧಿಕಾರಿಗಳಿಂದ ಅಪಮಾನ ದಂಧೆಯಲ್ಲಿ ಎದುರಾಳಿಗಳ ಕಾಟ ಹಣದ ಅಭಾವ.

ಮೀನ—ಶಾರೀರಕ ಮತ್ತುಮಾನಸಿಕ ಸ್ಥಿತಿಯಲ್ಲಿ ದಗದಗಿ ಕೈಗೊಂಡ ಕಾರ್ಯದಲ್ಲಿ ತೊಂದರೆ ವಾಹನಾಘಾತ ತಾ|| ೧೯, ೨೧ ಮಿತ್ರ ಸಹಾಯ, ಪ್ರಾಣಕ್ಕೆ ಬಂದಿದ್ದ ಸಂಕಟ ದೂರವಾಗುವುದು.

|| ಶ್ರೀ ||

ಗಣೇಶಾ ಟಾಕೀಸ್

18-7-49ನೇ ಶನಿವಾರದಿಂದ
ಪ್ರತಿ ದಿನ 3 ಆಟಗಳು

ಮಂಜ್ ಧಾರ್
(ಹಿಂದಿ)
(Lost in Mid-stream)

—:ಡೈರೆಕ್ಟರ್:—
ಸೊಹರಾಬ್ ಮೋದಿ

—:ಮುಖ್ಯ ಪಾತ್ರ:—
ಸುರೇಂದ್ರ, ಕುರ್ಷಿದ್.

22-7-49ರಿಂದ
ಆಜ್-ಕಿ-ರಾತ್

THE COORG & MYSORE COFFEE CO, (1937) LTD

Chamundi Curing Works
Vanivilas Mohalla
MYSORE.

Best quality Plantation Coffee in 'A' & 'PB' grades available.

Retail sales made daily at the Depot in the Works

The Public are invited to avail themselves of this opportunity."

ಪ್ರಭಾ

16-7-49ರಿಂದ ಯಶಸ್ವಿಯಾದ
೨ನೇ ವಾರ
ದಿನವಹಿ 3 ಆಟಗಳು ಮ್ಯಾಟನಿ 3 15ಕ್ಕೆ
ರಾಜಕಮಲ್‌ರವರ ಪುಷ್ಪಮಾಲೆ

ಶ್ರೀ ಶಾಂತಾರಾಂರವರ ಕಲಾಕೃತಿ

ಅಪ್ನಾ ದೇಶ್
[ಹಿಂದಿ]

-:ಮುಖ್ಯ ಪಾತ್ರ:-
ಪುಷ್ಪಹಂಸ, ಉಮೇಶ್ ಶರ್ಮ
(ಎಲ್ಲಾ ವಿಧವಾದ ಕಾಂಟ್ರಿಮೆಂಟರಿಗಳನ್ನು ಮುದ್ರಿಸಾಮಾಡಿರುತ್ತೆ)

ಬೆಳಗಿನ ಪ್ರದರ್ಶನ
15-7-49ರಿಂದ 4 ದಿನಗಳು ಮಾತ್ರ
ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ದುಷ್ಮನ್

ರಾಜಕಮಲ್, ಮೈಸೂರು

16-7-49ರಿಂದ ದಿನವಹಿ 3 ಆಟಗಳು

ಜಸ್ಟಿಸ್ ಅಥವ ನ್ಯಾಯ
(ಹಿಂದಿ)

ಭೂಮಿಕೆ.- ಸ್ವರ್ಣಲತಾ, ಕೆ ಸಿ ಡೇ, ದೇವಿಡ್ ಮತ್ತು ನವೀನ ಯಾಜ್ನಿಕ್

15-7-49ರಿಂದ — ಬೆಳಗಿನ ಪ್ರದರ್ಶನ — 4 ದಿನಗಳು ಮಾತ್ರ

ಮೋಹನ್ ಪಿಕ್ಚರ್ಸ್‌ರವರ **ಜಾದು-ಇ-ಷಹನಾಯ್**
ಪಾತ್ರ:- ಅಮೀರ್‌ಬಾಯಿ ಕರ್ನಾಟಕಿ, ಪ್ರಕಾಶ್.
ಮೈಸೂರಿನಲ್ಲಿ ಪ್ರಥಮ ಪ್ರದರ್ಶನ

ಪ್ರಭುದೇವಾ ಟಾಕೀಸ್

18-7-49ನೇ ಸೋಮವಾರದಿಂದ ಅಮೋಘ **3**ನೆಯ ವಾರ

ಜೆಮಿನಿಯವರ

ಬಾಲನಾಗಮ್ಮ
(ತೆಲುಗು)

ಪ್ರತಿ ದಿನ ೩ ಆಟಗಳು
ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಭಾರತದ ಹೆಮ್ಮೆ

ಹೆಮ್ಮೆ ಪಡುವ ವಿಚಾರವು ಇದೋ ಇಲ್ಲಿದೆ ನೋಡಿ! ಇತರ ಯಾವುದೇ ದೇಶವು ವೈದ್ಯ ವಿಜ್ಞಾನವೆಂಬುದನ್ನು ತಿಳಿಯುವುದಕ್ಕಿಂತ ಎಷ್ಟೋ ಮುಂಚೆ ಭಾರತವು ಈ ಶಾಸ್ತ್ರದಲ್ಲಿ ಪ್ರಗತಿಯನ್ನು ಪಡೆದಿತ್ತು. ಪ್ರಪಂಚದ ಬಹು ಹಳೆಯ ವೈದ್ಯ ಪದ್ಧತಿಯಾದ ಆಯುರ್ವೇದದ ತೌರು ಮನೆ-ಭಾರತ ಈ ದೇಶದಲ್ಲೆಲ್ಲಾ ಹೆಸರುವಾಸಿಯಾದ ಆಯುರ್ವೇದದ ಔಷಧಿಗಳಿಗೆ ತೌರುಮನೆ-ಅಹಮದ್‌ನಗರದ ಆಯುರ್ವೇದಾಶ್ರಮಂ ಫಾರ್ಮಸಿ. ಈ ಫಾರ್ಮಸಿಯ ಗುರುತನ್ನು ತೋರಿಸುವ ಈ ಮುದ್ರೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಒಳಿತು.

AYURVEDASHRAM PHARMACY LTD., (APHALI), AHMEDNAGAR.

o 19

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು.

ಸಾಧ್ವಿ

ಸಂಪುಟ ೭] ಸೋಮವಾರ ೧೮-೭-೪೯ [ಸಂಚಿಕೆ ೨೪೫

ಕಮ್ಯೂನಿಸ್ಟ್ ಸರ್ಕಾರಕ್ಕೆ ಹೈದ್ರಾಬಾದಿನಲ್ಲಿ ಯತ್ನ

ಗಂಡಭೇರುಂಡ ಬಿರುದಾಂಕಿತರು

ಮೈಸೂರು ೧೮

ಶ್ರೀಮನ್ಮಹಾರಾಜರವರು ನಿನ್ನೆ ರಾತ್ರಿ ಅರಮನೆಯಲ್ಲಿ ವಿಶೇಷ ದರ್ಬಾರನ್ನು ನಡೆಸಿ, ಕೆಳಗೆ ಕಂಡ ಮಹನೀಯರುಗಳಿಗೆ ಬಿರುದುಗಳನ್ನು ದಯಪಾಲಿಸಿದರು:-

ರಾಜಕಾರ್ಯ ಪ್ರಸಕ್ತ— ಬಿ ಎಸ್ ರಾಘವೇಂದ್ರ ರಾಯರು [ನಿವೃತ್ತ ಪ್ಲಾನಿಂಗ್ ಅಧಿಕಾರಿಗಳು], ಎ ವೇದವ್ಯಾಸಾಚಾರ್ [ರೆವಿನ್ಯೂ ಕಮೀಷನರ್], ಬಿ ಜಿ. ಅಪ್ಪಾದೊರೆ [ಕೈಗಾರಿಕಾ ಡೈರೆಕ್ಟರು], ಎಸ್ ಎಸ್ ಗುಬ್ಬಿ [ಬೊಂಬಾಯಿ]

ಧರ್ಮಪ್ರಕಾಶ—ಎ ಆರ್. ಚಿಕ್ಕಚನ್ನ ನಂಜಪ್ಪ [ಕೋಲಾರ]; ಕೊಡಗಿ ಸಿ. ರಾಮಯ್ಯ [ಬೆಂಗಳೂರು], ಪಿ ಕೃಷ್ಣಯ್ಯ ಶೆಟ್ಟಿ, ಎಂ ಎ ವೀರಪ್ಪ, ಎಸ್ ಎ ಶ್ರೀನಿವಾಸ ಶೆಟ್ಟಿ [ಬೆಂಗಳೂರು]

ಧರ್ಮಪ್ರವರ್ತ — ಬಿ. ಸುಬ್ಬಣ್ಣ [ಮೈಸೂರು ವರ್ತಕರು], ಹೊಂಬಾಳೆ ರಂಗಯ್ಯ [ಮೈಸೂರು], ಗಟ್ಟಿ ಚನ್ನಬಸಪ್ಪ [ಗುಬ್ಬಿ], ಎಸ್ ಬೋರೇಗೌಡ [ಸಾಗ್ರಾಮ], ಎಸ್ ನಂಜಪ್ಪ [ಕಾಂತರಾಜಪುರ].

ಲೋಕ ಸೇವಾನಿರತ—ಎಂ ಹನುಮಂತಯ್ಯ [ನೆಲಮಂಗಲ]

ನಾಟ್ಯ ಕಲಾವಿಶಾರದ—ಎಂ ಸಿ ಮಹದೇವಸ್ವಾಮಿ [ಗುಬ್ಬಿ ಕಂಪೆನಿ ಮೈಸೂರು],

ರಾಜಸೇವಾಸಕ್ತ — ಸಿ ಕೆ ವೆಂಕಟರಾಮಯ್ಯ [ಕನ್ನಡ ಟ್ರಾನ್ಸ್‌ಲೇಟರ್],

ಪಂಡಿತ ರತ್ನ—ಆ॥ ಮ॥ ವಿ॥ ಪುರುಷೋತ್ತಮ ಶಾಸ್ತ್ರಿಗಳು [ಮತ್ತೂರು], ಆ॥ ಮ॥ ವಿ॥ ಶಿವಮೂರ್ತಿ ಶಾಸ್ತ್ರಿಗಳು [ಬೆಂಗಳೂರು], ಆ॥ ಮ॥ ವಿ॥ ಎ ವೆಂಕಟರಮಣ ದೀಕ್ಷಿತರು [ಮುಳಬಾಗಿಲು]

ಸಂಗೀತ ರತ್ನ—ಟಿ ಪುಟ್ಟಸ್ವಾಮಯ್ಯ [ಮೈಸೂರು]

ಕಸ್ತೂರಿ ಬಾ ಸಮಾಜದ ವಾರ್ಷಿಕೋತ್ಸವ

ರಾಜಧಾನಿಯ ಇಟ್ಟಿಗೆ ಗೂಡಿನಲ್ಲಿರುವ ಕಸ್ತೂರಿ ಬಾ ಸಮಾಜದ ಪ್ರಥಮ ವಾರ್ಷಿಕೋತ್ಸವವು ನಿನ್ನೆ ಸಂಜೆ ವಿ ಡಿ ಎಸ್ ನಾಯ್ಡುರವರ ವ್ಯಾಯಾಮಶಾಲೆಯಲ್ಲಿ ಆರ್ಥಿಕ ಸಚಿವರಾದ ಶ್ರೀ ಹೆಚ್ ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಸ್ಥೆಯ ಅಧ್ಯಕ್ಷಿಣಿ ಶ್ರೀಮತಿ ಪ್ರಫುಲ್ಲ ಕೃಷ್ಣಅಯ್ಯಂಗಾರ್ಯರವರಿಂದ ಸ್ವಾಗತ ಭಾಷಣವಾದನಂತರ, ಸಂಗೀತ ನಾಟಕಗಳು ನಡೆದುವು ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ, ದಿವಂಗತ ಕಸ್ತೂರಿ ಬಾರವರ ಆದರ್ಶದ ಮೇಲೆ ಸಂಸ್ಥೆಯವರು ನಡೆಸುತ್ತಿರುವ ಕೆಲಸ ಕಾರ್ಯಗಳನ್ನು ಪ್ರಶಂಸಿಸಿದರು

ಹೆಚ್ಚು ಕಾರು ರಾಗಿ ಬೆಳೆಗೆ ಪ್ರೋತ್ಸಾಹ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ನಂಜನಗೂಡು ಒಳ ವಿದ್ಯಾಪೀಠದಲ್ಲಿ ಹೆಚ್ಚು ಕಾರುರಾಗಿ ಬೆಳೆಗಾಗಿ ಪ್ರೋತ್ಸಾಹ ನೀಡಲು ಒಂದು ಸಮಾರಂಭವನ್ನು ಕಳೆದ ಶುಕ್ರವಾರ ಮಧ್ಯಾಹ್ನ ಏರ್ಪಡಿಸಿದ್ದರು ಆರ್ಥಿಕ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಸಮಾರಂಭವನ್ನು ನೆರವೇರಿಸಿದರು

ರೂ. ೧ಕ್ಕೆ ೪ ಸೇರು ಅಕ್ಕಿ, ೮ ಸೇರು ರಾಗಿಯಾಗಬೇಕು

ಮೈಸೂರು ೧೮

ಶ್ರೀ ಎ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೆನ್ನೆ ಅಧಿಕರ್ನಾಟಕ ಪುರದ ರೇಷನ್ ಕಾರ್ಡು ಹೋಲ್ಡರುಗಳ ಸಭೆಯು ನಡೆಯಿತು. ದೆಹಲಿಯಲ್ಲಿರುವಂತೆ ಇಲ್ಲೂ ಸಹ ಎ ಬಿ ತರಗತಿಗಳ ಭೇದವಿಲ್ಲದೆ ಎಲ್ಲರಿಗೂ ೧೮ ಔನ್ಸುಗಳ ಪಡಿತರ ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವಾಯಿತು ಆಹಾರ ಧಾನ್ಯಗಳ ಹೊರಕ್ಕೆ ಸಾಗದಂತೆ ನೋಡಿಕೊಳ್ಳಬೇಕೆಂದೂ, ಬಡ ಪ್ರಜೆಗಳ ಹಿತ ದೃಷ್ಟಿಯಿಂದ ರೂ ೧ಕ್ಕೆ ೪ ಸೇರು ಸಣ್ಣಕ್ಕಿ, ೪॥ ಸೇರು ದಪ್ಪಕ್ಕಿ ಮತ್ತು ೮ ಸೇರು ರಾಗಿ ಮತ್ತು ಜೋಳಗಳನ್ನು ಕೊಡಬೇಕೆಂದೂ ಸರಕಾರಕ್ಕೆ ಪ್ರಾರ್ಥನೆಯನ್ನು ಸಲ್ಲಿಸಲಾಯಿತು ಶ್ರೀರಂಗಪಟ್ಟಣದ ಸ್ಥಾನಕ್ಕೆ ಕುಂದುಕ ಬರದಂತೆ ಕರ್ನಾಟಕವು ಮೈಸೂರಿನಲ್ಲಿ ಐಕ್ಯವಾಗಲೆಂದು ಹಾರೈಸುವ ನಿರ್ಣಯವೂ ಆಯಿತು

ಯಕ್ಷಗಾನ

ದಿ॥ ಸುಬ್ಬಯ್ಯ ಭಾಗವತರ ಸ್ಮಾರಕ ದಿನಾಚರಣೆ ಪ್ರಯುಕ್ತ ಶ್ರೀರಾಮ ಪೇಟೆ ಶ್ರೀರಾಮಚಂದ್ರ ಮಂದಿರದಲ್ಲಿ ನಾಳೆ ರಾತ್ರಿ ೯ ಘಂಟೆಗೆ ಶ್ರೀ ಹನುಮತ್ಸಂಕಲ್ಪ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ "ತಾಮ್ರಧ್ವಜ"ಎಂಬ ಯಕ್ಷಗಾನ ಪ್ರಸಂಗವು ನಡೆಯುತ್ತದೆ

ಗಿಡಗಳನ್ನು ನೆಡುವ ಕಾರ್ಯ

ಪ್ರಭುಗಳ ವರ್ಧಂತ್ಯುತ್ಸವದ ಅಂಗವಾಗಿ ರಾಜಧಾನಿಯ ನಗರಾಭಿವೃದ್ಧಿ ಸಮಿತಿಯವರು ಈ ದಿನ ಶ್ರೀರಂಗಪಟ್ಟಣದ ರಸ್ತೆ, ಯಾದವಗಿರಿ, ಒಂಟಿಕೊಪ್ಪಲು, ದೇವಸ್ಥಾನದ ರಸ್ತೆ, ಮತ್ತು ಗೋಕುಲಂ ಎಂಬಿ ಒಟ್ಟು ೬೬ ಗಿಡಗಳನ್ನು ನೆಟ್ಟರು

ಪ್ರಭಾ ಚಿತ್ರಮಂದಿರಕ್ಕೆ ಶಾಂತಾರಾಮರವರ ಭೇಟಿ

ಬೊಂಬಾಯಿನ ಸುಪ್ರಸಿದ್ಧ ಚಲನಚಿತ್ರಗಾರರೂ, ರಾಜ ಕಮಲ ಚಿತ್ರದ ನಿರ್ದೇಶಕರೂ ಆದ ಶ್ರೀ ವಿ ಶಾಂತಾರಾಮರವರ ತಮ್ಮ ಪತ್ನಿ ಶ್ರೀಮತಿ ಜಯಶ್ರೀಯ ಜತೆಯಲ್ಲಿ ... ಪ್ರಭಾ ಚಿತ್ರಮಂದಿರಕ್ಕೆ ... ಗಂಟೆಗೆ ... ಪ್ರದರ್ಶನ ಕಾಲದಲ್ಲಿ ಭೇಟಿ ಕೊಡುವರು.

ವರ್ಧಂತ್ಯುತ್ಸವ

ಮೈಸೂರು ೧೮

ರಾಜಧಾನಿಯ ಚಾಮರಾಜಪುರಂ ಪ್ರೈಮರಿ ಬಾಲಕರ ಶಾಲೆಯಲ್ಲಿ ನಿನ್ನೆ ದಿನ ಶ್ರೀಮನ್ಮಹಾರಾಜರವರ ೩೧ನೇ ವರ್ಷದ ವರ್ಧಂತ್ಯುತ್ಸವವು ಶ್ರೀ ಬಿ ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ಎಲ್ ರಾಜಯ್ಯ ಮತ್ತು ಎಸ್ ಶಿವರುದ್ರಪ್ಪನವರು ಭಾಷಣ ಮಾಡಿದರು

ನಗರದ ಪ್ರಭಾಕಲಾವಿದರ ಸಂಘದವರು ಪ್ರಭುಗಳ ವರ್ಧಂತ್ಯುತ್ಸವವನ್ನು ನಿನ್ನೆ ಆಚರಿಸಿದರು

ಗುಂಡ್ಲುಪೇಟೆ ಪುರ ಸಭೆಯವರು ನಿನ್ನೆ ದಿನ ಶ್ರೀಮನ್ಮಹಾರಾಜರವರ ೩೧ನೇ ವರ್ಷದ ವರ್ಧಂತ್ಯುತ್ಸವವನ್ನು ಕೃಷ್ಣರಾಜೇಂದ್ರ ಪುರ ಭವನದಲ್ಲಿ ಅಮಲ್ದಾರರ ಅಧ್ಯಕ್ಷತೆಯಲ್ಲಿ ಆಚರಿಸಿದರು ಪುರಸಭಾ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಪಂಚಾಯಿತಿಯವರು ಶ್ರೀ ಹೆಚ್ ವಿ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು ಬಾಲಕ ಬಾಲಕಿಯರಿಗೆ ಸಿಹಿ ಹಂಚಲಾಯಿತು

ಉಪನ್ಯಾಸ

ತಾಯಿನಾಡು ಪತ್ರಿಕೆಯ ಮಾಲೀಕರಾದ ಶ್ರೀ ಪಿ ಆರ್ ರಾಮಯ್ಯನವರು ಈ ಸಂಜೆ ೬-೩೦ಕ್ಕೆ ನಜರಬಾದಿನಲ್ಲಿರುವ ಆದಿಕರ್ನಾಟಕ ವಿದ್ಯಾರ್ಥಿನಿಲಯದಲ್ಲಿ ನಗರ ಮತ್ತು ಜಿಲ್ಲಾ ಹರಿಜನರ ಸೇವಕ ಸಂಘದವರು ಏರ್ಪಡಿಸಿರುವ ಸಭೆಯಲ್ಲಿ ಭಾಷಣಮಾಡುವರು

———— ೦ ————

ಹುಡುಗ ತಪ್ಪಿಸಿಕೊಂಡಿದ್ದಾನೆ

ರಾಮಚಂದ್ರ ಅಗ್ರಹಾರದ ನಗರಸಭೆ ... ನರಸಿಂಹಯ್ಯನವರ ... ವರ್ಷದ ... ಎಂಬ ಹುಡುಗನು ... ದಿನಗಳಿಂದ ತಪ್ಪಿಸಿಕೊಂಡಿರುತ್ತಾನೆ ... ಕೊ... ಯಾರಾದರೂ ... ತಪ್ಪಿಸದೆ ... ಪ್ರಾರ್ಥನೆ

ನರಸಿಂಹಯ್ಯ.
ಹುಡುಗನ ತಂದೆ

ಹೈದರಾಬಾದಿನಲ್ಲಿ ಕಮ್ಯೂನಿಸ್ಟ್ ಸರ್ಕಾರ ರಚಿಸಲು ಪಿತೂರಿ

ಹೈದರಾಬಾದಿನಲ್ಲಿ ಕಮ್ಯೂನಿಸ್ಟರ ಮಂತ್ರಿ ಮಂಡಲವನ್ನು ಸ್ಥಾಪಿಸಲು ಒಳಸಂಚು ನಡೆದಿದ್ದುದನ್ನು ಪೋಲೀಸರು ಪತ್ತೆ ಹಚ್ಚಿದ್ದಾರೆ ಆಕ್ಷೇಪಕರವಾದ ಕಾಗದ ಪತ್ರಗಳನ್ನು ಕಮ್ಯೂನಿಸ್ಟರಿಂದ ಪೋಲೀಸರು ವಶಪಡಿಸಿಕೊಂಡಾಗ, ಅದರಲ್ಲಿ ಕಮ್ಯೂನಿಸ್ಟ್ ಸರ್ಕಾರದ ೯ ಜನ ಮಂತ್ರಿಗಳ ಹೆಸರಿದ್ದ ಒಂದು ಕಾಗದವು ಪತ್ತೆಯಾಗಿದೆಯೆಂದೂ, ಮಕ್ದೂಮ್ ಮೊಹಿಯುದ್ದೀನರವರು ಪ್ರಧಾನಿಗಳಾಗಿದ್ದು, ರಜಾ ಮತುಲ್ಲಾಖಾನ್, ಎಸ್. ಗುಪ್ತ, ರಜಿಯ, ಮಜುಂದಾರ್ ಕ್ವಾಸಿಂ ಅಜೀಜ್, ರಾಜ ಬಹದ್ದೂರ್ ಗೌಡ್, ಎಂ ಎ ಅಲೀಂ, ಸಮುದ್ ರಜ್ವಿ ಮತ್ತು ಕಿಶನ್ ಲಾಲ್‌ರವರುಗಳು ಮಂತ್ರಿಗಳಾಗಿರಬೇಕೆಂದು ಸೂಚಿಸಲಾಗಿತ್ತೆಂದೂ ಹೇಳಲಾಗಿದೆ ಇವರುಗಳ ಪೈಕಿ, ಕೆಲವರು ದಸ್ತಗಿರಿಯಾಗಿದ್ದಾರೆ ಈ ಸಂಬಂಧದಲ್ಲಿ ಹೈದರಾಬಾದಿನ ಡೆಮೊಕ್ರಾಟಿಕ್ ಲೀಗಿನ ಕಾರ್ಯದರ್ಶಿಗಳನ್ನು ದಸ್ತಗಿರಿಮಾಡಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಸಾರ್ವತ್ರಿಕ ಚುನಾವಣೆ

ಪಶ್ಚಿಮ ಬಂಗಾಳದ ಜನರೇ ತಮ್ಮ ಆಡಳಿತದ ವ್ಯವಸ್ಥೆಯನ್ನು ರೂಪಿಸಿಕೊಂಡು ಸುವ್ಯವಸ್ಥಿತ ಸರ್ಕಾರವನ್ನು ಏರ್ಪಡಿಸಿಕೊಳ್ಳಲು ಸಾರ್ವತ್ರಿಕ ಚುನಾವಣೆ ನಡೆಸಬೇಕೆಂದು ದೆಹಲಿಯಲ್ಲಿ ನಿನ್ನೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ನಿರ್ಧರಿಸಿದೆಯೆಂದು ತಿಳಿದು ಬಂದಿದೆ ಆದರೆ ಚುನಾವಣೆಯು ೩ ಅಕ್ಟೋಬರ್ ತಿಂಗಳಿಗೆ ಮುಂಚೆ ನಡೆಯಲು ಸಾಧ್ಯವಿಲ್ಲವೆಂದು ಹೇಳಲಾಗಿದೆ ಸಧ್ಯಕ್ಕೆ ಪುನರ್ರಚಿತ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಗುವುದೆಂದೂ ಗೊತ್ತಾಗಿದೆ

ಪೆಟ್ರೋಲ್ ಖೋತಾ

ಪ್ರಾಂತ್ಯ ಮತ್ತು ಸಂಸ್ಥಾನಗಳಿಗೆ ಕೊಡುತ್ತಿರುವ ಪೆಟ್ರೋಲಿನ ಪರಿಮಾಣವನ್ನು ಶೇಕಡ ೨೫ ರಷ್ಟು ಕೂಡಲೇ ಕಡಿಮೆ ಮಾಡಲು ಮತ್ತು ಮುಂದಿನ ತಿಂಗಳಿನಿಂದ ಖಾಸಗೀಯವರಿಗೆ ಶೇಕಡ ೫೦ ರಷ್ಟು ಕಡಿಮೆ ಮಾಡಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ

ಮೈಸೂರಿಗೆ ಭಾರತದಿಂದ ೪೯ ಸಾವಿರ ಟನ್ ಧಾನ್ಯ

ಮೈಸೂರು ಸಂಸ್ಥಾನಕ್ಕೆ ಈ ವರ್ಷ ೨೫ ಸಾವಿರ ಟನ್ ಗೋದಿ, ೨೪ ಸಾವಿರ ಟನ್ ಅಕ್ಕಿ ಮತ್ತು ೧೦ ಸಾವಿರ ಟನ್ ಇತರ ಧಾನ್ಯಗಳನ್ನು ಭಾರತ ಸರ್ಕಾರದವರು ಕೊಡಲು ನಿರ್ಧರಿಸಿರುವರೆಂದು ತಿಳಿದು ಬಂದಿದೆ ಬರುವ ಆರು ತಿಂಗಳಿಗೆ ೫೯ ಸಾವಿರ ಟನ್ ಆಹಾರ ಧಾನ್ಯಗಳನ್ನು ಕೊಡಲಾಗುವುದು

ಕಾರ್ಮಿಕ ಸಚಿವರ ಬಳಿ ನಿಯೋಗ

ಮೈಸೂರು ಜಿಲ್ಲಾ ಹೋಟೆಲು ಕೆಲಸಗಾರರ ಸಂಘದವರು ನಿನ್ನೆ ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಬಳಿ ನಿಯೋಗ ಹೋಗಿ, ಹೋಟೆಲು ಮಾಲೀಕರುಗಳು ಕೆಲಸಗಾರರಿಗೆ ಕೊಡುತ್ತಿರುವ ಕಷ್ಟಗಳನ್ನೂ ಮತ್ತು ... ಆದ್ದರಿಂದ ... ಅವಶ್ಯಕತೆಯನ್ನೂ ವಿವರಿಸಿದರು ಕಾರ್ಮಿಕರ ತೊಂದರೆಗಳನ್ನು ನಿವಾರಿಸುವುದಾಗಿ ಸಚಿವರು ಭರವಸೆ ಇತ್ತಿರುವುದಾಗಿ ಹೇಳಲಾಗಿದೆ

ಸುಳ್ಳು ರೇಷನ್ ಕಾರ್ಡು ಪತ್ತೆ ಮಾಡಿದವರಿಗೆ ಬಹುಮಾನ

ಮೈಸೂರು ೧೮

ಮೈಸೂರು ನಗರದಲ್ಲಿ ಸುಳ್ಳು ರೇಷನ್ ಕಾರ್ಡು ಇಟ್ಟುಕೊಂಡಿರುವವರನ್ನು ಪತ್ತೆ ಮಾಡಿ ಕೊಟ್ಟವರಿಗೆ ಬಹುಮಾನ ಕೊಡಲು ಸರ್ಕಾರದವರು ೨೦೦ ರೂ ವಿಶೇಷ ಗ್ರಾಂಟನ್ನು ಮಂಜೂರು ಮಾಡುತ್ತಾರೆ. ೫ ರಿಂದ ೨೫ ರೂ ವರೆಗೆ ಸಾರ್ವಜನಿಕರಿಗೆ ಬಹುಮಾನವನ್ನು ಕೊಡಬಹುದೆಂದು ಸರ್ಕಾರದವರು ರೇಷನ್ ಅಧಿಕಾರಿಗಳಿಗೆ ತಿಳಿಸಿದ್ದಾರೆ

ಆರಂಭ ಭಾಷಣ

ರಾಜಧಾನಿಯ ಲಕ್ಷ್ಮೀಪುರದ ಮಿಡ್ಲ್ ಸ್ಕೂಲ್ ಉಪಾಧ್ಯಾಯರ ಸಂಘದ ಪ್ರಾರಂಭ ಭಾಷಣವನ್ನು ಟ್ರೈನಿಂಗ್ ಕಾಲೇಜಿನ ಶ್ರೀ ಬಿ ಸುಬ್ಬಣ್ಣಾಚಾರ್‌ರವರು ಕಳೆದ ಶನಿವಾರ ಮಾಡಿದರು. ಶ್ರೀ ಸಿ ರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಬೀಡಿ ಕೆಲಸಗಾರರ ಪ್ರದರ್ಶನ

ಬಂಧನದಲ್ಲಿರುವ ಕಮ್ಯೂನಿಸ್ಟರನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಲು ಕಳೆದ ೧೪ನೇ ತಾ॥ ನಗರದ ಬೀಡಿ ಕೆಲಸಗಾರರ ಸಂಘದ ನೂರು ಸದಸ್ಯರೂ ಮತ್ತು ಪುರಸಭೆಯ ಕೆಲಸಗಾರರೂ ನಗರದಲ್ಲೆಲ್ಲಾ ಮೆರವಣಿಗೆ ನಡೆಸಿದರು. ನಗರ ನ್ಯಾಯಾಧೀಶರ ಕೋರ್ಟಿನ ಮುಂದೂ ಪ್ರದರ್ಶನ ನಡೆಸಿದರು. ಸಂಜೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆ ಜರುಗಿತು

ಚೀಣೀ ಕಮ್ಯುನಿಸ್ಟರಿಗೆ ಸೋಲು

ಕ್ಯಾಂಟನ್ ನಗರಕ್ಕೆ ನೂರು ಮೈಲಿ ದಕ್ಷಿಣದಲ್ಲಿರುವ ಕಾಂಗ್ಚೌಕೊಲ್ಲಿ ಹತ್ತಿರ ಚೀಣಿ ರಾಷ್ಟ್ರೀಯ ಸೈನ್ಯಗಳನ್ನು ತಂದು ಇಳಿಸಲಾಯಿತೆಂದೂ, ಅಲ್ಲಿ ಹಲವು ದ್ವೀಪಗಳನ್ನು ಅವು ಆಕ್ರಮಿಸಿವೆಯೆಂದೂ, ಇನ್ನೂ ಇತರ ಕಡೆಗಳಲ್ಲಿ ಹಲವು ಊರುಗಳನ್ನು ಹಿಡಿದ ಪರಿಣಾಮವಾಗಿ, ಕಮ್ಯೂನಿಸ್ಟ್ ಸೈನ್ಯಗಳು ಹಿಮ್ಮೆಟ್ಟಿವೆಯೆಂದೂ ವರದಿಯಾಗಿದೆ

॥ ಶ್ರೀ ॥

ಗಣೇಶ ಟಾಕೀಸ್

18-7-49ನೇ ಸೋಮವಾರದಿಂದ

ಪ್ರತಿ ದಿನ 3 ಆಟಗಳು

ಮಂಝ್‌ಧಾರ್

(ಹಿಂದಿ)

(Lost in Mid-stream)

ನಿರ್ದೇಶಕ —

ಸೊಹರಾಬ್ ಮೋದಿ

— ಮುಖ್ಯ ಪಾತ್ರ —

ಸುರೇಂದ್ರ, ಖುರ್ಷೀದ್.

22-7-49ರಿಂದ

ಆಗ್-ಕಿ-ರಾತ್

Edited, printed and published by V. R. Nagarajan, at Sadhvi Press, D. Subbiah Road, Mysore

ಚಿರತೆಯೊಡನೆ ಯುವಕನ ಕಾದಾಟ

ಅರಸೀಕೆರೆಯ ಬಳಿ ಮಲ್ಲಯ್ಯನೆಂಬ ಒಬ್ಬ ಹುಡುಗನು ಕಳೆದ ಸೋಮವಾರ ಹತ್ತಿರದಲ್ಲಿರುವ ಕಾಡಿನಲ್ಲಿ ಕುರಿಗಳನ್ನು ಕಾಯುತ್ತಿದ್ದಾಗ ಒಂದು ಚಿರತೆಯು [illegible] ಮೇಲೆ ಬಿದ್ದಿತು. ಇದನ್ನು ಕಂಡು ಮಲ್ಲಯ್ಯನು ಗಟ್ಟಿಯಾಗಿ ಕೂಗಿದನು. ಇದರಿಂದ ಚಿರತೆಯು ರೋಷಗೊಂಡು ಮಲ್ಲಯ್ಯನ ಮೇಲೆ ಬಿದ್ದಿತು. ಇತನು [illegible] ತನ್ನಲ್ಲಿದ್ದ [illegible]ಯನ್ನು ಚಿರತೆಯ ಬಾಯಿಗೆ ತುರುಕಿ, ಅದನ್ನು ಕುಡುಗೋಲಿನಿಂದ ಹೊಡೆದನು. ಸ್ವಲ್ಪ ಹೊತ್ತಿನಲ್ಲೇ ಅವನ ಮಿತ್ರನೊಬ್ಬನು ಬಂದು [illegible] ತರವಾಗಿ ಮಲ್ಲಯ್ಯನು [illegible] ಚಿರತೆಯ ಗಂಟಲಿಗೆ [illegible] ಸಾಯಿಸಿದನು. ಮಲ್ಲಯ್ಯನ ಸಾಹಸವನ್ನು ಮೆಚ್ಚಿ ಗ್ರಾಮಸ್ಥರು ಅವನಿಗೆ ಹಾರವನ್ನು ಹಾಕಿ ಗೌರವಿಸಿದ್ದಲ್ಲದೆ ಅವನಿಗೂ ಮತ್ತು ಸತ್ತ ಚಿರತೆಗೂ ಮೆರವಣಿಗೆ ನಡೆಸಿದರು. ಸ್ಥಳದ [illegible] ಠಾಣೆಯಲ್ಲಿದ್ದ ಪೋಲೀಸ್ ಅಧಿಕಾರಿಗಳು ಮಲ್ಲಯ್ಯನಿಗೆ ೧೫ ರೂ ಇನಾಮು ಕೊಟ್ಟರು

ಕಲ್ಕತ್ತದಲ್ಲಿ ಪಡಿತರ ಹೆಚ್ಚಿತು

ಕಲ್ಕತ್ತದ ಕೈಗಾರಿಕಾ ಪ್ರದೇಶಗಳಲ್ಲಿ ಪಡಿತರವನ್ನು ಇದುವರೆಗೆ [illegible] ೩ ಸೇರಿನಂತೆ ಕೊಡಲಾಗುತ್ತಿತ್ತು. ಕೇಂದ್ರ ಸರ್ಕಾರದವರು ಅಲ್ಲಿಗೆ ೧೦,೦೦೦ ಟನ್ ಅಕ್ಕಿ ಮತ್ತು ಗೋಧಿಯನ್ನು ಹೆಚ್ಚಾಗಿ ಸರಬರಾಜು ಮಾಡಿರುವುದರಿಂದ ನಾಳೆಯಿಂದ ಅಕ್ಕಿಯ ರೇಷನ್ ಪ್ರಮಾಣವನ್ನು ೩ ಸೇರು ಮತ್ತು ೧೦ ಛಟಾಕುಗಳಿಗೆ ಹೆಚ್ಚಿಸಲಾಗಿದೆ ಎಂದು ಪಶ್ಚಿಮ ಬಂಗಾಳದ ಸರಬರಾಜು ಶಾಖಾ ಸಚಿವರು ರೇಡಿಯೋ ಭಾಷಣ ಮಾಡುತ್ತಾ ತಿಳಿಸಿದರು

ಮದರಾಸ್ ಬಂದರಿನಲ್ಲಿ ನೀರಿಗೆ ಮಾರಾಟ ತೆರಿಗೆ

ಮದರಾಸು ಬಂದರಿಗೆ ಬರುವ ಹಡಗುಗಳಿಗೆ ಅಲ್ಲಿನ ಪೋರ್ಟ್ ಟ್ರಸ್ಟಿನವರು ಸರಬರಾಜು ಮಾಡುವ ನೀರಿಗೆ ಮಾರಾಟದ ತೆರಿಗೆಯನ್ನು ವಸೂಲು ಮಾಡಬೇಕೆಂದು ಮದರಾಸ್ ಸರ್ಕಾರದವರು ಸೂಚಿಸಿದ್ದಾರೆ. ಇದೇ ತಿಂಗಳು ೧ನೇ ತಾರೀಖಿನಿಂದ ಸದರಿ ಸುಂಕವನ್ನು ವಸೂಲು ಮಾಡಲಾಗುವುದು. ಪೋರ್ಟ್ ಟ್ರಸ್ಟಿನವರು ಇದಕ್ಕಾಗಿ ತಮ್ಮ ಪ್ರತಿಭಟನೆಯನ್ನು ಸೂಚಿಸಿ ಸುಂಕವನ್ನು ವಸೂಲಿ ಮಾಡುತ್ತಿರುವರೆಂದು ಹೇಳಲಾಗಿದೆ

ಕಾಂಗ್ರೆಸ್ ಕಾರ್ಯಕರ್ತರ ಸಭೆ

ರಾಜಧಾನಿಯ ಸತ್ಯಾಗ್ರಹಿಗಳ ಪಟ್ಟಿಯನ್ನು ತಯಾರು ಮಾಡುವುದಕ್ಕಾಗಿ ನಾಳೆ ಸಂಜೆ ೬-೩೦ಕ್ಕೆ ನಗರ ಕಾಂಗ್ರೆಸ್ ಸಮಿತಿಯ ಕಚೇರಿಯಲ್ಲಿ ಕಾರ್ಯಕರ್ತರ ಸಭೆಯು ಸೇರುವುದಾಗಿದೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಮತ್ತೆ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ. ಅತ್ಯಾಧುನಿಕ ರೀತಿಯ ಕಿಂಡರ್‌ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಮಾತಾಪಿತೃಗಳು ತ್ವರೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡುವರೆಂದು ಆಶಿಸಲಾಗಿದೆ.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ.

ಹಿಂದೂಗಳಿಂದ ಮುಸ್ಲಿಂ ಫಕೀರನ ಅಂತ್ಯ ಕ್ರಿಯೆ

ಇಂದೂರಿನ ಹತ್ತಿರವಿರುವ ಸನವೀರನ [illegible] ಆಲಂಷಾ ಎಂಬ ಮುಸ್ಲಿಂ ಫಕೀರರು ಮೊನ್ನೆ ನಿಧನರಾದಾಗ ಅವರನ್ನು ಸ್ಮಶಾನಕ್ಕೆ ಒಯ್ಯಲು ಅಲ್ಲಿನ ಮುಸ್ಲಿಮರು ನಿರಾಕರಿಸಿದರೆಂದೂ, ಆದರ ಮೇಲೆ ಅಲ್ಲಿನ ೫೦೦ ಜನ ಹಿಂದೂಗಳು ಶವವನ್ನು ಸ್ಮಶಾನಕ್ಕೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆ ನಡೆಸಿದರೆಂದೂ ವರದಿಯಾಗಿದೆ. ಹಿಂದೆ ದಿವಂಗತರು ಷಾ ಯೂಂಬೆ ಸ್ಮಾರಕ ಮೊಕದ್ದಮೆಯಲ್ಲಿ ಮುಸ್ಲಿಮರಿಗೆ ವಿರುದ್ಧವಾಗಿ ರುಜುವಾತು ಕೊಟ್ಟರೆಂದು ಅಲ್ಲಿನ ಮುಸ್ಲಿಮರು ಫಕೀರರ ಮಗನು ಎಷ್ಟು ಪ್ರಾರ್ಥಿಸಿದರೂ ಅಂತ್ಯಕ್ರಿಯೆ ನಡೆಸಲು ನಿರಾಕರಿಸಿದರೆಂದು ಹೇಳಲಾಗಿದೆ

Hand-book of Mathematical Formulae for Intermediate Students

By V. K. DORASWAMY

Price:—Eight annas

Ramachandra Book Depot, Mysore.

ಬಿಕರಿಗೆ ಸಿದ್ಧವಾಗಿದೆ

ಪಂಚ ರಾತ್ರ

[By Dr N. S. Narayan Sastry]

Inter Arts & Inter Science Text Book for 1949-50

ಬೆಲೆ 1-6-0

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ನಿಮ್ಮ ಮೈ ಮೊಕಮಲ್ಲಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

'ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆ
ಪ್ರಕಟಣೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಆವರಣಗಳಿಂದ, ಹಲವು ಮಂದಿ ತಾವು ವಿದ್ಯುಚ್ಛಕ್ತಿ ಇಲಾಖೆಯ ನೌಕರರೆಂದು ಹೇಳಿಕೊಂಡು ಬಂದು ಅನೇಕ ಕಡೆಗಳಲ್ಲಿ ಇಲಾಖೆಗೆ ಸೇರಿದ ಮೀಟರುಗಳನ್ನು ತೆಗೆದುಕೊಂಡು ಹೋಗಿರುವ ಸಂಗತಿಗಳು ಗಮನಕ್ಕೆ ಬಂದಿವೆ. ಹಲವು ಮೀಟರುಗಳು ಕಳುವಾಗಿರುವುದಾಗಿಯೂ ವರದಿಯಾಗಿದೆ.

ವಿದ್ಯುಚ್ಛಕ್ತಿಯನ್ನು ಬಳಸುವವರ ಮೀಟರುಗಳನ್ನು ಬದಲಾಯಿಸುವ ಅಥವ ತೆಗೆದು ಹಾಕುವ ಪಕ್ಷದಲ್ಲಿ ಅದನ್ನು ಇಲಾಖೆಯ ನೌಕರರೇ ಬಂದು ಮಾಡುವರು. ಸದರಿ ನೌಕರರುಗಳಿಗೆ ಇಲಾಖೆಯ ಬ್ಯಾಡ್ಜುಗಳು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಒದಗಿಸಲಾಗಿದೆ. ವಿದ್ಯುಚ್ಛಕ್ತಿ ಉಪಯೋಗಿಸುವವರು ಸದರಿ ಬ್ಯಾಡ್ಜು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೇಳಿ ನೋಡಬಹುದು. ಯಾವುದಾದರೂ ಆವರಣದಿಂದ ಮೀಟರನ್ನು ಬದಲಾಯಿಸಬೇಕಾದಲ್ಲಿ ಅಥವಾ ತೆಗೆಯಬೇಕಾದಲ್ಲಿ ಆ ಬಗ್ಗೆ ಇಲಾಖೆಯವರು ಆಫೀಷಿಯಲ್ ಕಾರ್ಡನ್ನು ನೌಕರರೊಡನೆ ಕಳುಹಿಸುತ್ತಾರೆ. ಆಯಾ ಆವರಣಗಳ ಮಾಲೀಕರು ಸದರಿ ಕಾರ್ಡನ್ನು [illegible] ಮಾಡತಕ್ಕದ್ದು. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರ ಆವರಣಗಳಲ್ಲಿರುವ ಮೀಟರು ಮತ್ತು ಇತರ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಲಕರಣೆಗಳ ರಕ್ಷಣೆಯು ಸಂಪೂರ್ಣವಾಗಿ ಆವರಣಗಳ ಮಾಲೀಕರಿಗೇ ಸೇರಿದ್ದು. ಅವುಗಳು ಯಾವುದಾದರೂ ಕಳೆದು ಹೋದಲ್ಲಿ ಅದರ ಬೆಲೆಯನ್ನು ಆಯಾ ಆವರಣಗಳ ಮಾಲೀಕರೇ ಕೊಡಬೇಕಾಗುವುದು. [illegible] ಯಾವುದಾದರೂ ಆವರಣದಲ್ಲಿ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಾಮಾನುಗಳು ಕಳುವಾಗಿದ್ದಲ್ಲಿ [illegible] ಸರ್ವೀಸನ್ನೂ ಮತ್ತು [illegible]ಗಳನ್ನು [illegible] ವಿದ್ಯುಚ್ಛಕ್ತಿಯನ್ನು [illegible] ಸೂಚಿಸಲಾಗಿದೆ

(ಸಹಿ) ಎಂ. ಹನುಮಂತ್,

ಬೆಂಗಳೂರು
೧೧-೭-೧೯೪೯

ಮೈಸೂರು ಸರ್ಕಾರದ ಚೀಫ್
ಎಲೆಕ್ಟ್ರಿಕಲ್ ಇಂಜನಿಯರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೯-೭-೪೯ [ಸಂಚಿಕೆ ೨೪೬

-ಸಂಸ್ಥಾನಗಳಿಗೆ- ಪ್ರತ್ಯೇಕ ರಾಜ್ಯಾಂಗವಿಲ್ಲ

ಪುರಸಭೆಗೆ ಸಚಿವರುಗಳ ಭೇಟಿ

ಮೈಸೂರು, ೧೯

ಮುಜರಾಯಿ ಸಚಿವ ಶ್ರೀ ಸಾಮಿಡಿ ಸುಬ್ಬರಾವು ಶೆಟ್ಟಿ ಮತ್ತು ಆರೋಗ್ಯ ಸಚಿವ ಜನಾಬ್ ಮಹಮದ್ ಷರೀಫ್ ರವರುಗಳು ನಿನ್ನೆ ಬೆಳಿಗ್ಗೆ ಪುರಸಭೆಗೆ ಭೇಟಿ ಇತ್ತು ಅಲ್ಲಿನ ಕೆಲಸಕಾರ್ಯಗಳನ್ನು ಪರಿಶೀಲಿಸಿದರು. ಪುರಸಭೆಯ ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸಲು ಪೌರಸಭೆಯವರು ವಿಧಿಸಬೇಕೆಂದಿರುವ ಹಲವಾರು ತೆರಿಗೆಗಳ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರುಗಳೊಡನೆ ಸಚಿವರುಗಳು ಮಾತುಕತೆ ನಡೆಸಿದರು. ಪ್ರತಿ ಪ್ರದರ್ಶನಗಳು, ಜಾಹಿರಾತುಗಳು ಮತ್ತು ಅಂಗಡಿಗಳ ಮೇಲೆ ತೆರಿಗೆಗಳನ್ನು ಹಾಕಬಹುದೆಂದೂ, ಆದರೆ ರೈಲಿನಿಂದ ಬರುವ ಪ್ರಯಾಣಿಕರ ಮೇಲೆ ತೆರಿಗೆ ಹಾಕುವ ನೀತಿಗೆ ಸರ್ಕಾರದವರು ವಿರೋಧವಾಗಿದ್ದಾರೆಂದೂ ಶ್ರೀ ಸಾಮಿಡಿಯವರು ತಿಳಿಸಿದರೆಂದು ಗೊತ್ತಾಗಿದೆ.

ಸಹಕಾರ ಶಿಕ್ಷಣದ ಆವಶ್ಯಕತೆ

ಮೈಸೂರು ಜಿಲ್ಲಾ ಸಹಕಾರ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಮೊನ್ನೆ ದಿನ ಸಹಕಾರ ಭವನದಲ್ಲಿ ಸಚಿವ ಶ್ರೀ ಎಚ್. ಸಿದ್ದಯ್ಯನವರು ಪ್ರಾರಂಭ ಭಾಷಣವನ್ನು ಮಾಡಿದರು. ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ಸ್ವಾಗತ ಭಾಷಣಮಾಡಿ, ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಸಹಕಾರ ಶಿಕ್ಷಣದ ವಿವರಗಳನ್ನು ತಿಳಿಸಿದರು. ಶ್ರೀ ಸಿದ್ದಯ್ಯನವರು ಭಾಷಣ ಮಾಡಿ, ಸಂಸ್ಥಾನದಲ್ಲಿ ಸಹಕಾರ ಸಂಘಗಳು ಹೆಚ್ಚುತ್ತಿರುವುದರಿಂದ ಶಿಕ್ಷಣ ಪಡೆದ ನೌಕರರುಗಳ ಅಗತ್ಯ ವಿಶೇಷವಾಗಿದೆಯೆಂದೂ, ಇಂತಹ ಶಿಕ್ಷಣ ತರಗತಿಗಳನ್ನು ಎಲ್ಲೆಲ್ಲೂ ತೆರೆಯಬೇಕೆಂದೂ ಹೇಳಿದರು.

ಗಾಂಧಿ ಸೇವಾ ಸಂಘ

ರಾಜಧಾನಿಯ ಗಾಂಧೀ ಸೇವಾ ಸಂಘದ ಸಭೆಯು ಮೊನ್ನೆ ದಿನ ನಡೆದು, ಶ್ರೀ ಕೆ.ವಿ. ಶ್ರೀಕಂಠಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ಮಹದೇವಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಸ್. ಎಸ್. ಶಾಸ್ತ್ರಿಗಳನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು.

ವರ್ಧಂತ್ಯುತ್ಸವ

ಶ್ರೀಮನ್ಮಹಾರಾಜರವರ ೩೧ ನೇ ವರ್ಷದ ವರ್ಧಂತ್ಯುತ್ಸವವನ್ನು ನಿನ್ನೆ ಶಾರದಾವಿಲಾಸ ಹೈಸ್ಕೂಲಿನಲ್ಲಿ ಶ್ರೀ ಬಿ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೇಯಃ ಪ್ರಾರ್ಥನೆಯಾದನಂತರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಯಿತು.

ತಂದೆಯ ಮೇಲೆ ಮಗನ ಅರ್ಜಿ

ಕಾಶಿಯ ಬಾಲಕನೊಬ್ಬನು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ, ತನ್ನ ತಂದೆಯು ಅನುಕೂಲಸ್ಥನಾಗಿದ್ದರೂ, ತನ್ನನ್ನು ವಿದ್ಯಾಭ್ಯಾಸ ಬಿಟ್ಟು ವ್ಯಾಪಾರಕ್ಕೆ ಸೇರಬೇಕೆಂದು ಒತ್ತಾಯ ಪಡಿಸುತ್ತಿರುವುದಾಗಿಯೂ ತನಗೆ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದ್ದನು. ಅದರ ಮೇಲೆ ಜಿಲ್ಲಾಧಿಕಾರಿಗಳು ಹುಡುಗನ ಕೋರಿಕೆಯನ್ನು ಈಡೇರಿಸಿಕೊಟ್ಟಿದ್ದಾರೆ.

ಸಂಸ್ಥಾನಗಳಿಗೆ ಪ್ರತ್ಯೇಕ ರಾಜ್ಯಾಂಗವಿಲ್ಲ

ಸಂಸ್ಥಾನಗಳಿಗೆ ಪ್ರತ್ಯೇಕ ರಾಜ್ಯಾಂಗ ಇರಬೇಕಾಗಿಲ್ಲವೆಂದೂ, ಸಂಸ್ಥಾನಗಳು ಮತ್ತು ಸಂಸ್ಥಾನಗಳ ಯೂನಿಯನ್ನುಗಳ ರಾಜ್ಯಾಂಗಗಳನ್ನು ಪ್ರಾಂತ್ಯಗಳ ಸ್ವರೂಪದಂತೆ ಭಾರತ ರಾಜ್ಯಾಂಗದಲ್ಲಿ ಅಡಕ ಪಡಿಸಲಾಗುವುದೆಂದೂ ನಿನ್ನೆ ದೆಹಲಿಯಲ್ಲಿ ನಡೆದ ಸಂಸ್ಥಾನ ಮತ್ತು ಯೂನಿಯನ್ನು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತೆಂದು ತಿಳಿದು ಬಂದಿದೆ.

ಸಿಡ್ನಿ ಕಾಟನ್ನಿನ ವೈಮಾನಿಕ ರಹದಾರಿ ರದ್ದು

ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಗಳನ್ನು ಸರಬರಾಜು ಮಾಡಿದ ಸಿಡ್ನಿ ಕಾಟನ್ನನಿಗೆ ವೈಮಾನಿಕ ರಹದಾರಿಯನ್ನು ಕೊಡಲು ಲಂಡನ್ನಿನ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಈಗ ಆತನು ತನ್ನ ವಿಮಾನಗಳನ್ನೂ ಮತ್ತು ಕರಾಚಿಯಲ್ಲಿರುವ ಮೋಟಾರು ಕಾರುಗಳನ್ನೂ ಮಾರಲಿದ್ದಾನೆಂದು ಹೇಳಲಾಗಿದೆ.

ಸೈಬೀರಿಯಾಕ್ಕೆ ೧॥ ಲಕ್ಷ ಜರ್ಮನ್ ಸೈನಿಕರ ರವಾನೆ

ಬಾಲ್ಟಿಕ್ ಸ್ಟೇಟುಗಳಲ್ಲಿರುವ ಜರ್ಮನ್ ಖೈದಿಗಳ ಪೈಕಿ ೧,೭೫,೦೦೦ ಜನರನ್ನು ಸೈಬೀರಿಯಾಕ್ಕೆ ರಷ್ಯವು ಕಳುಹಿಸಿದೆಯೆಂದೂ, ಸಾವಿರಾರು ಜನರನ್ನು ಎಸ್ತೋನಿಯಾ ರಾಜಧಾನಿಯಿಂದ ಸೈಬೀರಿಯಾಕ್ಕೆ ಗುಲಾಮ ಚಾಕರಿಗಾಗಿ ಸಾಗಿಸಲಾಗುತ್ತಿದೆಯೆಂದೂ ವರದಿಯಾಗಿದೆ.

ಬಿಹಾರ್ ಮಂತ್ರಿಗಳ ಮೇಲಿನ ಆರೋಪಣೆ

ಬಿಹಾರ್ ಮಂತ್ರಿಮಂಡಲದ ಮೇಲೆ ಒಂದಿರುವ ದೂರುಗಳ ವಿಚಾರಣೆಯನ್ನು ಡಾ॥ ರಾಜೇಂದ್ರ ಪ್ರಸಾದರವರು ನಡೆಸುವರೆಂದು ಹೇಳಲಾಗಿದೆ.

ಒತ್ತಾಯದ ಧಾರ್ಮಿಕ ಶಿಕ್ಷಣ

ತುರ್ಕಿಯ ಎಲ್ಲಾ ಶಾಲಾ ಮತ್ತು ಕಾಲೇಜುಗಳಲ್ಲೂ ಒತ್ತಾಯವಾಗಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಮತ ಪ್ರಚಾರ ತತ್ವಗಳಿಗೆ ವಿರೋಧ ಅಭಿಪ್ರಾಯ ಪ್ರಕಟಿಸುವ ಅನೇಕ ವಿದ್ವಾಂಸರುಗಳನ್ನು ಅಲ್ಲಿ ಕೆಲಸದಿಂದ ವಜಾ ಮಾಡಲಾಗಿದೆ.

ನಾಗರಾಜರಾಯರು ಮೈಸೂರು ಜಿಲ್ಲಾಧಿಕಾರಿ

ಸ್ವಂ. ಸು. ಪ್ರೋ] ಬೆಂಗಳೂರು ೧೯

ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಜಿ. ಎನ್. ನಾಗರಾಜರಾಯರನ್ನು ಮೈಸೂರು ಜಿಲ್ಲಾಧಿಕಾರಿಗಳನ್ನಾಗಿಯೂ, ಬೆಂಗಳೂರು ಪುರಸಭೆಯ ಕಮೀಷನರಾದ ಶ್ರೀ ರಘುಪತಿರಾಮರಾವರನ್ನು ಪ್ರಭುಗಳ ಆಪ್ತ ಕಾರ್ಯದರ್ಶಿಯನ್ನಾಗಿಯೂ, ಶ್ರೀ ಜಾರ್ಜ್ ಮ್ಯಾಥ್ಯೂರವರನ್ನು ಬೆಂಗಳೂರು ಪುರಸಭಾ ಕಮೀಷನರನ್ನಾಗಿಯೂ ವರ್ಗಾಯಿಸಲಾಗಿದೆ.

ರಾಮಲಿಂಗಂರವರ ಉಯಿಲು ಮೊಕದ್ದಮೆ

ಬೆಂಗಳೂರು ಸುಪ್ರಸಿದ್ಧ ವ್ಯಾಪಾರಿಗಳಾಗಿದ್ದ ಶ್ರೀ ರಾಮಲಿಂಗಂರವರ ಉಯಿಲಿನ ಮೊಕದ್ದಮೆಯಲ್ಲಿ ಅವರ ಮಕ್ಕಳ ಪರವಾಗಿ ಶ್ರೀ ಶರತ್ ಚಂದ್ರಬೋಸರು ಮೈಸೂರು ಹೈ ಕೋರ್ಟಿನಲ್ಲಿ ವಾದಿಸಲಿರುವರೆಂದೂ, ಅವರು ಆಗಸ್ಟ್ ತಿಂಗಳ ಮಧ್ಯ ಭಾಗದಲ್ಲಿ ಬೆಂಗಳೂರಿಗೆ ಬರಲಿರುವರೆಂದೂ ಹೇಳಲಾಗಿದೆ.

ಖಾಸಿಂ ರಜ್ವಿಯ ವಕೀಲರ ಖರ್ಚು ಸರ್ಕಾರದ್ದು

ಹೈದರಾಬಾದಿನ ರಜಾಕರ ನಾಯಕ ಖಾಸಿಂ ರಜ್ವಿಯ ವಿಚಾರಣೆಯ ಸಂಬಂಧದಲ್ಲಿ ಆತನ ಪರವಾಗಿ ವಾದಿಸಲು ವಕೀಲರುಗಳಿಗೆ ಆಗುವ ವೆಚ್ಚವನ್ನೆಲ್ಲಾ ಸರ್ಕಾರದವರೇ ವಹಿಸುವರೆಂದು ಅಲ್ಲಿನ ಮಿಲಿಟರಿ ಗೌರ್ನರರು ತಿಳಿಸಿರುತ್ತಾರೆ. ಪಾಕಿಸ್ತಾನದಿಂದ ತನಗೆ ವಕೀಲರುಗಳನ್ನು ಕರೆಸಬೇಕಾಗಿಲ್ಲವೆಂದೂ, ಸ್ಥಳೀಯ ಪ್ರಮುಖರನ್ನು ನೇಮಿಸಬಹುದೆಂದು ಖಾಸಿಂ ರಜ್ವಿಯು ತಿಳಿಸಿರುವುದಾಗಿಯೂ ಅವರು ಹೇಳಿದರು. ಈ ತಿಂಗಳ ಅಂತ್ಯದಲ್ಲಿ ವಿಚಾರಣೆಯು ಪ್ರಾರಂಭವಾಗುವುದು.

ರಕ್ತ ಮಹಾರಾಣಿಗೆ ಶಿಕ್ಷೆ

ನಾಗಪುರದ ಸೀಕ್ರೇಟ್ ಸಿಮಿಂಬಾಕೆಯು ಕಾನ್ಪುರದ ಮಹಾರಾಣಿ ಎಂದು ಹೇಳಿಕೊಂಡ ಮೋಸಗಾತಿಯಾದವಳನ್ನು ಆಕೆಗೆ ೬ ತಿಂಗಳು ಶಿಕ್ಷೆ ವಿಧಿಸಲಾಗಿದ್ದು ಈಗ ಆಕೆ ಬಿಡುಗಡೆಯಾದ ಮೇಲೆ ಬೊಂಬಾಯಿ ಪೋಲೀಸರು ಆಕೆಯ ಮೇಲೆ ಮೊಕದ್ದಮೆ ಹೂಡುವರೆಂದು ಹೇಳಲಾಗಿದೆ.

ಗೋಪಾಲರಾವ್ ದೇಣಿದಾರರಿಗೆ ಡಿವಿಡೆಂಡು

ಸ್ವಂ. ಸು. ಪ್ರೋ] ಬೆಂಗಳೂರು ೧೯

ನಿನ್ನೆ ದಿನ ಗೋಪಾಲರಾವ್ ವಿಚಾರಣಾ ಸಮಿತಿಯವರು ದೇಣಿದಾರರಿಗೆ ರೂ. ಗೆ ೪ ಆಣೆ ಡಿವಿಡೆಂಡನ್ನು ಹಂಚಿದರು. ಸುಮಾರು ೧೧೫ ಜನರಿಗೆ ಒಟ್ಟು ೭ ಲಕ್ಷ ರೂ ಕೊಡಲಾಯಿತು.

ಫೆಡರಲ್ ನ್ಯಾಯಾಧೀಶರ ಭೇಟಿ

ಸಂಸ್ಥಾನದ ಹೈ ಕೋರ್ಟನ್ನು ಇತರ ಪ್ರಾಂತ್ಯಗಳ ಕೋರ್ಟಿಗೆ ಸರಿದೂಗುವಂತೆ ಮಾಡುವ ವಿಚಾರವನ್ನು ಪರಿಶೀಲಿಸಲು ಭಾರತದ ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಜನಾಬ್ ಫಜಲ್ ಅಲಿಯವರು ಇಲ್ಲಿಗೆ ಮುಂದಿನ ವಾರ ಆಗಮಿಸುವರು.

ಜೈಪ್ರಕಾಶರ ಆಮರಣಾಂತ ಉಪವಾಸವೇ ?

ರೋಹಟಾಸ್ ಗಿರಣಿ ಕೆಲಸಗಾರರ ಬಿಕ್ಕಟ್ಟಿನ ಸಂಬಂಧದಲ್ಲಿ ಬಿಹಾರ್ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ ತಾವು ಆಮರಣಾಂತ ಉಪವಾಸ ಮಾಡುವುದಾಗಿ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಬಿಹಾರ್ ಪ್ರಧಾನಿಗೆ ತಿಳಿಸಿರುವರೆಂದೂ, ಈ ವಿಷಯವು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಮುಂದೆ ಬರಲಿದೆಯೆಂದೂ ಹೇಳಲಾಗಿದೆ.

ವಾರಕ್ಕೆ ೧ ದಿನ ಗೌರ್ನರರ ಉಪವಾಸ

ಭಾರತದಲ್ಲಿ ಉಂಟಾಗಿರುವ ಆಹಾರದ ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಮಧ್ಯಪ್ರಾಂತ್ಯದ ಗೌರ್ನರರಾದ ಶ್ರೀ ಮಂಗಲದಾಸ್ ಪಕ್ವಾಸಾರವರು ವಾರದಲ್ಲಿ ಒಂದು ದಿನ ಉಪವಾಸಮಾಡುತ್ತಿರುವರೆಂದೂ, ಮತ್ತು ಪ್ರಭುತ್ವ ಭವನದ ಭೋಜನ ಕೂಟಗಳಿಗೆ ಅಕ್ಕಿಯನ್ನು ಉಪಯೋಗಿಸ ಕೂಡದೆಂದು ಆಜ್ಞೆ ಮಾಡಿದ್ದಾರೆಂದೂ ಹೇಳಲಾಗಿದೆ.

ಕಾರ್ಯಾಂಗ ನ್ಯಾಯಾಂಗಗಳ ಪ್ರತ್ಯೇಕ

ಮದರಾಸ್ ಪ್ರಾಂತ್ಯದ ೨೬ ಜಿಲ್ಲೆಗಳ ಪೈಕಿ ೧೨ ಜಿಲ್ಲೆಗಳಲ್ಲಿ ಬರುವ ಅಕ್ಟೋಬರಿನಿಂದ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಿ ಜಾರಿಗೆ ತರಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ.

ಪ್ರಭುಗಳೊಡನೆ ಭೇಟಿ

ಮೈಸೂರು ೧೯

ಈ ವರ್ಷದ ವರ್ಧಂತಿ ಮಹೋತ್ಸವದಲ್ಲಿ ಬಿರುದಾಂಕಿತರಾದ ಶ್ರೀ ಎಂ. ಸಿ. ಮಹದೇವಸ್ವಾಮಿಯವರಿಗೆ ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಭೇಟಿ ದಯಪಾಲಿಸಿದ್ದರು. ಸಂಸ್ಥಾನದಲ್ಲಿ ಲಲಿತ ಕಲಾಭಿವೃದ್ಧಿ ಬಗ್ಗೆ ಅವರು ಚರ್ಚೆ ಮಾಡಿಕೊಂಡರೆಂದು ಹೇಳಲಾಗಿದೆ.

ಬಿರುದಾಂಕಿತರಿಗೆ ಸನ್ಮಾನ

ರಾಜಕಾರ್ಯ ಪ್ರಸಕ್ತ ಎಂಬ ಬಿರುದನ್ನು ಈ ವರ್ಷ ಪಡೆದ ಬೊಂಬಾಯಿನ ಶ್ರೀ ಎಲ್. ಎಸ್. ಗುಪ್ತರವರನ್ನು ಸನ್ಮಾನಿಸಲು ನಿನ್ನೆ ರಾತ್ರಿ ಶ್ರೀ ಪಿ. ಎಸ್. ಸುಬ್ಬರಾಯರು ಒಂದು ಸಲ್ಲಾಪದ ಹೋಟೆಲಿನಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಸಾರ್ವಜನಿಕ ಸೇವಾ ಪ್ರಶಸ್ತಿ ಪದಕಗಳು

ಮೈಸೂರು ೧೮

ನಿನ್ನೆ ರಾತ್ರಿ ಅರಮನೆಯಲ್ಲಿ ನಡೆದ ವಿಶೇಷ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಕೆಳಗೆ ಕಂಡವರಿಗೆ ಸಾರ್ವಜನಿಕ ಸೇವಾ ಪದಕ ಪ್ರಶಸ್ತಿಗಳನ್ನು ದಯಪಾಲಿಸಿದರು:—

ಹೊಸಕೋಟೆ ತಾ॥ ಬೆಂಡಿಗನಹಳ್ಳಿ ಶ್ರೀ ಬಿ ಚನ್ನಬೋರೇಗೌಡ, ಕೃಷ್ಣರಾಜಪೇಟೆಯ ಶ್ರೀ ಕೆ. ಸಿ ಪ್ರಸನ್ನ ಮಲ್ಲಿಕಾರ್ಜುನಪ್ಪ, ಶ್ರೀರಂಗಪಟ್ಟಣದ ತಾ॥ ಚಂದಗಾಲಿನ ಶ್ರೀ ಬಿ ಮರಿಗೌಡ, ಕೋಲಾರದ ಶ್ರೀ ಸಿ ಹೆಚ್ ವೆಂಕಟರಮಣಪ್ಪ, ಕೊರಟಗೆರೆಯ ಶ್ರೀ ಹೆಚ್ ಸುಬ್ಬಣ್ಣ, ಮಧುಗಿರಿಯ ಶ್ರೀ ಬಿ. ರಂಗರಾಜಯ್ಯ, ಅಜ್ಜಂಪುರದ ಶ್ರೀ ಎಸ್ ಶಿವಪ್ಪ, ಸಾಗರ ತಾ॥ ಅವಿನಹಳ್ಳಿ ಶ್ರೀ ಹೆಚ್ ದೇವಪ್ಪಗೌಡರು, ಸೊರಬದ ಶ್ರೀಮತಿ ಕೆ. ನಾಗಮ್ಮ ಹೊಳಿಯಪ್ಪ ಕೈರ, ತೀರ್ಥಹಳ್ಳಿಯ ಶ್ರೀ ಯು ಮಂಜಪ್ಪ, ಬೆಂಗಳೂರಿನ ಶ್ರೀ ಟಿ. ವೆಂಕಟಸುಬ್ಬಯ್ಯ, ಹಂಪಾಪುರದ ಶ್ರೀ ನಾರಾಯಣ ಗೌಡ, ಶಿವಗಿರಿಯ ಶ್ರೀ ಬಿ ಮರುಳಪ್ಪ, ಹೊಸದುರ್ಗದ ಜಾನಕಲ್ಲಿನ ಶ್ರೀ ಪಿ ತಿಪ್ಪಪ್ಪ, ಹಿರಿಯೂರು ತಾ॥ ಮಲ್ಲಪ್ಪನಹಳ್ಳಿಯ ಶ್ರೀಮತಿ ಲಿಂಗಮ್ಮ, ಹಿರಿಯೂರಿನ ಶ್ರೀ ಜಾತಪ್ಪ ನಾಯಕ್. ಮೈಸೂರಿನ ಶ್ರೀಮತಿ ನಿರ್ಮಲದೇವಿ ಬಾಯಿ ತುಳಸೀದಾಸ್ ಮೋರ್ತಿದಾಸ್, ಬೆಂಗಳೂರಿನ ಅರ್ ಕೃಷ್ಣಪ್ಪ ಮತ್ತು ಶ್ರೀ ಎಲ್ ರಾಮಯ್ಯಶೆಟ್ಟಿ. ಹೊಸಕೋಟೆಯ ಶ್ರೀ ಹೆಚ್. ಎಂ. ಗುರುಸ್ವಾಮಿ ಗೌಡ, ಶ್ರೀರಂಗಪಟ್ಟಣದ ಶ್ರೀ ಆರ್. ರುದ್ರಯ್ಯ, ಚಿಂತಾಮಣಿ ತಾ॥ ಕೊನಪಲ್ಲಿಯ ಶ್ರೀ ಸಬ್ಬಾರೆಡ್ಡಿ, ಚಿಕ್ಕನಾಯಕನಹಳ್ಳಿ, ಶ್ರೀ ಸಿ.ಹೆಚ್. ಲಿಂಗದೇವರು, ಚಿಕ್ಕಬಳ್ಳಾಪುರದ ಶ್ರೀಮತಿ ರುಕ್ಮಿಣಿಯಮ್ಮ, ತುರುವೇಕೆರೆ ತಾ॥ ಮಾಯಕೆರೆಯ ಶ್ರೀ ಎಂ ಎಸ್. ನಂಜೇಗೌಡ, ? ೦೦ ತಾ॥ ಕಾಳಂಚೆಲ್ಲದ ಶ್ರೀಮತಿ ಚಂದ್ರಮ್ಮ, ಕೊಪ್ಪ ತಾ॥ ಅಂಟಿಗೋಡಿನ ಶ್ರೀ ಚನ್ನಪ್ಪಗೌಡ, ಸಾಗರದ ಯು ಬಸಪ್ಪ, ಜ್ಞಾನವರು ಮತ್ತು ಶ್ರೀ ಜಿ. ಗುಂಡಪ್ಪಶೆಟ್ಟಿ, ತಿಗುಂಚಿಯ ಶ್ರೀ ಮಂಜುನಾಥ ಶಿವಯ್ಯ, ನೆಲ್ಲೂರಿನ ಶ್ರೀ ಎಂ ಜಿ ಚನ್ನಪ್ಪಗೌಡ, ಚನ್ನಗಿರಿಯ ಶ್ರೀ ಎಂ.ಎಸ್ ಪಾಪಣ್ಣ, ದೊಡ್ಡಬಳ್ಳಾಪುರದ ಶ್ರೀ ಪಿ ವೀರೆಗೌಡ, ಬೆಂಗಳೂರಿನ ಡಾ॥ ಕೆ.ಆರ್. ಶ್ರೀಕಂಠೇಶ್ವರ, ಶಿವಮೊಗ್ಗದ ಕೂಡ್ಲಿ ಸುಬ್ಬಣ್ಣಾಚಾರ್, ಗುಂಡ್ಲುಪೇಟೆ ತಾ॥ ರಾಘವಪುರದ ಶ್ರೀ ಕೆ. ಅರಸಯ್ಯ, ಯಳಂದೂರಿನ ಶ್ರೀ ಪುಟ್ಟ ಲಿಂಗಪ್ಪ. ಗರ್ಗೇಶ್ವರಿಯ ಜನಾಬ್ ಜಿ ಪಿ ಮಹಮದ್ ನಜೀರ್, ಹೆಗ್ಗಡದೇವನಕೋಟೆ ತಾ॥ ಬೀರಂಬಳ್ಳಿ ಶ್ರೀ ಪಿ ದೊಡ್ಡ ತಮ್ಮಯ್ಯ, ಗುಂಡ್ಲುಪೇಟೆ ತಾ॥ ಮಾದಾಪಟ್ಟಣದ ಶ್ರೀ ಬಸಪ್ಪ, ಮೈಸೂರಿನ ಜಿ.ಎಲ್ ಮರಿಚಂಡಯ್ಯ, ಮೊಳಕಾಲ್ಮೂರಿನ ಶ್ರೀ ಟಿ. ತಿಪ್ಪೇಸ್ವಾಮಪ್ಪ, ಮೊಳಕಾಲ್ಕರೆ ತಾ॥ ವಾಳ್ಯದ ಶ್ರೀ ಡಿ. ಸುಬ್ಬಯ್ಯ, ಹಂಪಾಪುರದ ಶ್ರೀ ಎಂ ಮರಿಗಪ್ಪ, ಹೊಸಕೋಟೆ ತಾ॥ ನಂದಿಗುಡಿಯ ಶ್ರೀ ವೆಂಕಟಪ್ಪ, ದಾವಣಗೆರೆ ಹೆಬ್ಬಾಳಿನ ಶ್ರೀ ಪಟೇಲ್ ಬಸಪ್ಪ ತರೀಕೆರೆಯ ಶ್ರೀ ಟಿ ಡಿ ದಾಸಪ್ಪ, ಮೈಸೂರಿನ ಶ್ರೀ ಪಿ ವೇದಾಂತ ಅಯ್ಯಂಗಾರ್, ಬೆಂಗಳೂರಿನ ಶ್ರೀ ಎಸ್. ಗುರುಮೂರ್ತಿ, ಹುಣಸೂರು ತಾ॥ ಹಲಗೂಡಿನ ಶ್ರೀ ಸಿ ಹೆಚ್. ವೆಂಕಟಪ್ಪ

ಸ್ಕೌಟ್ ಸೇವಾ ಪದಕ

ಮೈಸೂರಿನ ಡಾ॥ ಹೆಚ್. ಎಲ್. ಹರಿಯಪ್ಪ, ಬೆಂಗಳೂರಿನ ಶ್ರೀ ವೈ. ಜಿ ಶಾಂತರಾಜಯ್ಯ, ಟಿ. ನರಸೀಪುರದ ಶ್ರೀ ಡಿ ಶಿಲ್ಪಪ್ಪಳ್ಳಿ ಅಯ್ಯಂಗಾರ್. ಶಿವಮೊಗ್ಗದ ಶ್ರೀ ಹೆಚ್. ಆರ್ ರಂಗನಾಥರಾವ್.

SRI GAYATHRI
Daily 3 Shows
From 21—7—49 for 2 days
Adventure Drama
Old Losangeles
With:-William Elliott

Next Change
THE WRECK OF THE HESPERUS

Watch for the Date 1949's
Brand New Adventure Smash
The New Adventures of DON JUAN
Starring
Errol Flynn

Hand-book of Mathematical Formulae for Intermediate Students
By V K. DORASWAMY
Price:—Eight annas
Ramachandra Book Depot, Mysore.

ಜಯಪುರದ ಹೋಟೆಲುಗಳಲ್ಲಿ ಅಕ್ಕಿ ಇಲ್ಲ

ಗೌರ್ನರ್ ಜನರಲ್ ಮತ್ತು ಪಂಡಿತ ನೆಹರೂರವರು ಆಹಾರ ಮಿತವ್ಯಯದ ಬಗ್ಗೆ ಇತ್ತ ಮನವಿಗೆ ಮನ್ನಣೆ ಕೊಡಲು ಜಯಪುರದ ಹೋಟಲಿನವರೆಲ್ಲರೂ ಅಕ್ಕಿಯನ್ನು ಉಪಯೋಗಿಸುವುದನ್ನು ನಿಲ್ಲಿಸಬೇಕೆಂದು ನಿರ್ಧರಿಸಿದ್ದಾರೆ ರಾಜಸ್ಥಾನದ ಹೋಟೇಲಿನವರೆಲ್ಲರೂ ಅಕ್ಕಿಯನ್ನು ನಿಷೇಧಿಸುವಂತೆ ಆಜ್ಞೆ ಮಾಡಬೇಕೆಂದು ಸರ್ಕಾರಕ್ಕೆ ಅಲ್ಲಿನ ಹೋಟಲಿನವರು ಮನವಿ ಮಾಡಿರುತ್ತಾರೆ

ಕೆಲಸ ಹೋದ ದೇಶಾಭಿಮಾನಿಗಳಿಗೆ ಪುನಃ ಕೆಲಸ

ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ ಕೆಲಸದಿಂದ ವಜಾ ಆದ ಸರ್ಕಾರಿ ನೌಕರರುಗಳಿಗೆ ಪುನಃ ಕೆಲಸ ಕೊಡಬಹುದೆಂದು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ.

೧ ಸರ್ಕಾರಿ ಕಛೇರಿಯಲ್ಲಿ ೧ ಲಕ್ಷ ರೂ. ಮಾಯ

ಸಂಯುಕ್ತ ಪ್ರಾಂತ್ಯ ಸರ್ಕಾರದ ವ್ಯವಸಾಯ ಇಲಾಖೆಯ ಇಂಜನಿಯರ ಕಛೇರಿಯಲ್ಲಿ ಒಂದು ಲಕ್ಷ ರೂ. ನೋಟುಗಳು ಪತ್ತೆ ಇಲ್ಲವೆಂದೂ, ಈ ಸಂಬಂಧದಲ್ಲಿ ಅಲ್ಲಿನ ನೌಕರರೊಬ್ಬರು ತಲೆ ತಪ್ಪಿಸಿಕೊಂಡಿರುವರೆಂದು ಹೇಳಲಾಗಿದೆ

ರಾಜಕಮಲ್,
ಮೈ ಸೂ ರು
16-7-49 ರಿಂದ ಪ್ರಾರಂಭ
ಜಸ್ಟಿಸ್ (ಹಿಂದಿ)
ಭೂಮಿಕೆ :— ಸ್ವರ್ಣಲತಾ, ಕೆ.ಸಿ ಡೇ, ಡೇವಿಡ್ ಮತ್ತು ನವೀನ ಯಾಜ್ಞಿಕ್.

ಬಸ್ಸಿನ ತೊಂದರೆ

ಗುಂಡ್ಲುಪೇಟೆ ೧೫

ಇಲ್ಲಿಂದ ಮೈಸೂರಿಗೆ ಹೊರಡುವ ಖಾಸಗೀ ಬಸ್ಸುಗಳು ಪ್ರತಿದಿನ ಸಂಯಾದ ಕಾಲಕ್ಕೆ ಹೊರಡದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿರುತ್ತದೆ ಸಂಬಂಧಪಟ್ಟ ಅಧಿಕಾರಿಗಳು ಈ ಕೊರತೆಯನ್ನು ನಿವಾರಿಸಬೇಕೆಂದು ಕೋರಲಾಗಿದೆ.

ಅಂಗಡಿ ಕೆಲಸಗಾರರ ಬೇಡಿಕೆ

ರಾಜಧಾನಿಯ ಅಂಗಡಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಮೊನ್ನೆ ದಿನ ಜನಾಬ್ ಅಬ್ದುಲ್ ಖುದ್ದೂಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಮದರಾಸಿನಲ್ಲಿರುವಂತೆ ಇಲ್ಲಿಯೂ ಅಂಗಡಿ ಮಾಲೀಕರುಗಳು ಅಂಗಡಿ ತೆರೆದಿರುವ ಕಾಲವನ್ನು ಬೋರ್ಡಿನಲ್ಲಿ ಬರೆದು ಪ್ರದರ್ಶಿಸುವಂತೆ ಒತ್ತಾಯಪಡಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು. ಶ್ರೀ ಸುಬ್ರಹ್ಮಣ್ಯರವರನ್ನು ಉಪಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು.

ಚಾಮುಂಡಿ ಬೆಟ್ಟದ ಬಡ ನೌಕರರ ತೊಂದರೆ

ಚಾಮುಂಡಿ ಬೆಟ್ಟದಲ್ಲಿ ವಾಸಿಸುತ್ತಿರುವ ಕೆಲವರ ಮನೆಗಳನ್ನು ಒಡೆದು ಹಾಕಬೇಕೆಂದು ಅಧಿಕಾರಿಗಳು ನಿರ್ಧರಿಸಿ, ೮ ದಿವಸಗಳಲ್ಲಿ ಮನೆಗಳನ್ನು ಖಾಲಿ ಮಾಡಬೇಕೆಂದು ನೋಟೀಸ್ ಕೊಟ್ಟಿರುತ್ತಾರೆ. ಇದರಿಂದ ಬಡ ದೇವಸ್ಥಾನದ ನೌಕರರುಗಳಿಗೆ ತುಂಬಾ ತೊಂದರೆಯಾಗಿದೆ. ಅವರುಗಳಿಗೆ ಸೂಕ್ತ ನಿವೇಶನ, ಹಣ ಮತ್ತು ಕಾಲಾವಧಿಯನ್ನು ಕೊಟ್ಟು ಅವರ ತೊಂದರೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನಿವಾರಿಸಬೇಕೆಂದು ನೊಂದವರೊಬ್ಬರು ಪ್ರಾರ್ಥಿಸಿರುತ್ತಾರೆ.

* ಲಕ್ಷ್ಮಿ *
20-7-49ನೇ ಬುಧವಾರದಿಂದ
ಯಶಸ್ವಿ ೨ನೇ ವಾರ
ಜಗತಲ ಪ್ರತಾಪನ್ (ತಮಿಳು)
ತಾ॥ 27-4-49 ರಿಂದ
ಪ್ರತಿ ದಿನ 3 ಆಟಗಳು
ರಂಜಾನ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ
A. J. K. ಫಿಲಂಸ್‌ರವರ
ಅಮೋಘ ಹಿಂದಿ ಚಿತ್ರ
ತೋಹ್ಫ
ಪಾತ್ರ:—ವೀರ, ನವಾಬ್, ರೆಹಮಾನ್, ಷಾ ನವಾಜ್

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆ

ಪ್ರಕಟನೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಆವರಣಗಳಿಂದ, ಹಲವು ಮಂದಿ ತಾವು ವಿದ್ಯುಚ್ಛಕ್ತಿ ಇಲಾಖೆಯ ನೌಕರರೆಂದು ಹೇಳಿಕೊಂಡು ಬಂದು ಅನೇಕ ಕಡೆಗಳಲ್ಲಿ ಇಲಾಖೆಗೆ ಸೇರಿದ ಮೀಟರುಗಳನ್ನು ತೆಗೆದುಕೊಂಡು ಹೋಗಿರುವ ಸಂಗತಿಗಳು ಗಮನಕ್ಕೆ ಬಂದಿವೆ ಹಲವು ಮೀಟರುಗಳು ಕಳುವಾಗಿರುವುದಾಗಿಯೂ ವರದಿಯಾಗಿದೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಮೀಟರುಗಳನ್ನು ಬದಲಾಯಿಸುವ ಅಥವ ತೆಗೆದು ಹಾಕುವ ಪಕ್ಷದಲ್ಲಿ ಅದನ್ನು ಇಲಾಖೆಯ ನೌಕರರೇ ಬಂದು ಮಾಡುವರು. ಸದರಿ ನೌಕರರುಗಳಿಗೆ ಇಲಾಖೆಯ ಬ್ಯಾಡ್ಜುಗಳು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಒದಗಿಸಲಾಗಿದೆ. ವಿದ್ಯುಚ್ಛಕ್ತಿ ಉಪಯೋಗಿಸುವವರು ಸದರಿ ಬ್ಯಾಡ್ಜು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೇಳಿ ನೋಡಬಹುದು. ಯಾವುದಾದರೂ ಆವರಣದ ಮೀಟರನ್ನು ಬದಲಾಯಿಸಬೇಕಾದಲ್ಲಿ ಅಥವಾ ತೆಗೆಯಬೇಕಾದಲ್ಲಿ ಆ ಬಗ್ಗೆ ಇಲಾಖೆಯವರು ಆಫೀಸ್ ಕಾರ್ಡನ್ನು ನೌಕರರೊಡನೆ ಕಳುಹಿಸುತ್ತಾರೆ ಆಯಾ ಆವರಣಗಳ ಮಾಲೀಕರು ಸದರಿ ಕಾರ್ಡನ್ನು ಅಜಮಾಯಿಷಿ ಮಾಡತಕ್ಕದ್ದು. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರ ಆವರಣಗಳಲ್ಲಿರುವ ಮೀಟರು ಮತ್ತು ಇತರ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಲಕರಣೆಗಳ ರಕ್ಷಣೆಯು ಸಂಬಂಧಪಟ್ಟ ಆವರಣಗಳ ಮಾಲೀಕರಿಗೇ ಸೇರಿದ್ದು. ಅವುಗಳು ಯಾವುದಾದರೂ ಕಳುವಾದಲ್ಲಿ ಅದರ ಬೆಲೆಯನ್ನು ಆಯಾ ಆವರಣಗಳ ಮಾಲೀಕರೇ ಕೊಡಬೇಕಾಗುವುದು. ಹಾಲಿ ಯಾವುದಾದರೂ ಆವರಣದಲ್ಲಿ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಾಮಾನುಗಳು ಕಳುವಾಗಿದ್ದಲ್ಲಿ ಅವುಗಳ ಬೆಲೆಯನ್ನು ಮತ್ತು ಅವುಗಳನ್ನು ಹಾಕಲು ತಗಲುವ ಖರ್ಚನ್ನು ಕೊಟ್ಟು ಅನಂತರ ವಿದ್ಯುಚ್ಛಕ್ತಿಯನ್ನು ಪಡೆಯಬಹುದೆಂದೂ ಸೂಚಿಸಲಾಗಿದೆ

(ಸಹಿ) ಎಂ ಹನುಮಂತರಾವ್,

ಬೆಂಗಳೂರು,
... ...
ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರು.

ವಿಕರಿಗೆ ಸಿದ್ಧವಾಗಿದೆ
ಪಂಚರಾತ್ರ
[By Dr. N S. Narayan Sastry
Inter Arts & Inter Science
Text Book for 1949-50
ಬೆಲೆ 1-6-0
ಮಿತ್ರ ಮತ್ತು ಕಂಪನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Edited, printed and published by A. R. Nagarajan at Sadhvi Press, D. Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೨೦-೭-೪೯ [ಸಂಚಿಕೆ ೨೪೭

ಕಮ್ಯೂನಿಸ್ಟ್ ಚೀಣಾದಲ್ಲಿ ಸುಭಾಷ್ ಬೋಸರು ?

ಸುಭಾಷ್ ಚಂದ್ರಬೋಸರು ಓಂತಿರುಗಬಹುದು

ಕಮ್ಯೂನಿಸ್ಟರ ಅಕ್ರಮಿತ ಪ್ರದೇಶದಲ್ಲಿ ಸುಭಾಷ ಚಂದ್ರಬೋಸರು ಇರುವರೆಂದೂ, ಅವರ ನೇತೃತ್ವದ ಪ್ರತಿಬಂಧಕಶಕ್ತಿಯನ್ನು ಭಾರತ ಸರ್ಕಾರದವರು ತೆಗೆದು ಹಾಕಿದಲ್ಲಿ ಅವರು ಭಾರತಕ್ಕೆ ಹಿಂತಿರುಗಬಹುದೆಂದೂ, ಈ ಬಗ್ಗೆ ಪ್ರಚಾರ ನಡೆಸಲು ಸಾರ್ವಜನಿಕ ಸಭೆಗಳನ್ನು ಏರ್ಪಡಿಸಬೇಕೆಂದೂ ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ನಾಯಕರುಗಳು ಮನವಿ ಮಾಡಿರುತ್ತಾರೆ

೩ ಜನರನ್ನು ಕೊಲೆ ಮಾಡಿ ರಕ್ತ ಕುಡಿದ ಪಾಪಿ

ಸನಸ್ಸಿನ [illegible] ಎಂಬಲ್ಲಿ ೩೯ ವರ್ಷದ [illegible] ಜಾರ್ಜ್ ಹೈಗ್ ಎಂಬುವನು ೩ ಜನರನ್ನು ಕೊಲೆ ಮಾಡಿ, ಅವರ ರಕ್ತವನ್ನು ಕುಡಿದು ಶವಗಳನ್ನು ಆಸಿಡ್‌ನಲ್ಲಿ [illegible] ವಿಚಾರಣೆಯು ಮೊನ್ನೆ ಪ್ರಾರಂಭವಾಯಿತು. ಇವನಿಗೆ ಸ್ವಾಧೀನವಿಲ್ಲವೆ, ಆದ್ದರಿಂದ ತನ್ನ ಕನಸಿನಲ್ಲಿ ಬರುತ್ತಿದ್ದ ಭೂತಪ್ರೇತದ ಆಜ್ಞೆಯ ಮೇರೆ ಈ ರೀತಿ ಮಾಡಿದನೆಂದು ಅವನ ಪರವಾಗಿ ವಕೀಲರು ವಾದಿಸಿದ್ದಾರೆ.

ಸತ್ಯಾಗ್ರಹಿಗಳ ಪಟ್ಟಿ ತಯಾರಿಕೆ

ಸತ್ಯಾಗ್ರಹಿಗಳ ಪಟ್ಟಿ ತಯಾರಿಕೆಯು ಕೆಲಸವನ್ನು ಈ ಮಾಹೆ [illegible]ನೇ ತಾರೀಕಿನೊಳಗೆ ಮುಗಿಸಬೇಕೆಂದೂ [illegible] [illegible]

[illegible]

ಸಂಸ್ಕೃತ ಪರೀಕ್ಷೆಗಳಲ್ಲಿ ಬಹುಮಾನಿತರು

ಮೈಸೂರು ೨೦

ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಈ ವರ್ಷ ವಿದ್ವತ್ ಮಧ್ಯಮ ಮತ್ತು ಉತ್ತಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೫೦ ಜನ ಮತ್ತು ಆಗಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೬ ಜನ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರವರು ಮೊನ್ನೆ ರಾತ್ರಿ ವಿಶೇಷ ದರ್ಬಾರಿನಲ್ಲಿ ಪದ್ವತ್ ಸಂಭಾವನೆಗಳನ್ನೂ, ಅವರ ಪೈಕಿ ೨೦ ಮಂದಿಗೆ ವಿಶೇಷ ಪಾರಿತೋಷಕಗಳನ್ನೂ ದಯಪಾಲಿಸಿದರು

ಉತ್ತಮ ಪರೀಕ್ಷೆ-ಅಲಂಕಾರ ಶಾಸ್ತ್ರ-ಶ್ರೀ ಕೃಷ್ಣವಾಸುದೇವ ಗೋವಿಂದ ೩ ವಿಶೇಷ ಬಹುಮಾನಗಳು

ಅದ್ವೈತ ವೇದಾಂತ-ವಿದ್ವಾನ್ ಓ. ನರಸಿಂಹಮೂರ್ತಿ ಶಾಸ್ತ್ರಿ-೮ ಬಹುಮಾನಗಳು

ಕೃಷ್ಣಯಜುರ್ವೇದಸಲಕ್ಷಣಘನಪಾಠ-ಶ್ರೀ ಕೆ ಪಾಂಡುರಂಗಾಚಾರ್ಯ-೬ ಬಹುಮಾನಗಳು

ಸಾಮವೇದ ಲಕ್ಷಣ-ವಿದ್ವಾನ್ ಟಿ.ಎ. ಅನಂತಕೃಷ್ಣ ದೀಕ್ಷಿತ-೨ ಬಹುಮಾನ

ವ್ಯಾಕರಣ-ಶ್ರೀ ಟಿ ನಾರಾಯಣಶಾಸ್ತ್ರಿ-೩ ಬಹುಮಾನಗಳು

ನವೀನ ನ್ಯಾಯ-ಶ್ರೀ ಎಚ್ ಗುರುಮೂರ್ತಿ ಶಾಸ್ತ್ರಿ-ವಿಶೇಷ ಪಾರಿತೋಷಕ.

ಪೂರ್ವ ಮೀಮಾಂಸಾ-ವಿದ್ವಾನ್ ಸಿ ಶ್ರೀನಾಥಾಚಾರ್ಯ-೩ ಬಹುಮಾನ

ವಿಶಿಷ್ಟಾದ್ವೈತ ವೇದಾಂತ-ಶ್ರೀ ಎಂ. ಶ್ರೀನಿವಾಸ ಅಯ್ಯಂಗಾರ್ಯರು-೩ ಬಹುಮಾನ.

ದ್ವೈತ ವೇದಾಂತ-ಶ್ರೀ ಹೆಚ್ ಆರ್. ರಾಮಚಂದ್ರಾಚಾರ್ಯ-೬ ಬಹುಮಾನ

ಋಗ್ವೇದ ಸಲಕ್ಷಣಘನಪಾಠ-ಶ್ರೀ ಎ. ಕೆ. ರಾಮಣ್ಣ-೨ ಬಹುಮಾನ

ಋಗ್ವೇದ ಸ್ಮಾರ್ತ ಪ್ರಯೋಗ-ಶ್ರೀ ಸಿ. ಚಿದಂಬರ ನಾರಾಯಣ-ಪಾರಿತೋಷಕ.

ಶುಕ್ಲಯಜುರ್ವೇದ ಸ್ಮಾರ್ತ ಪ್ರಯೋಗ-ವಿದ್ವಾನ್-ಎಸ್ ದತ್ತಾತ್ರೇಯ ಭಟ್ಟ-ಪಾರಿತೋಷಕ.

ಅದ್ವೈತ ವೇದಾಂತ-ಶ್ರೀ ಸಿ ರಾಮಶಾಸ್ತ್ರಿ-೫ ಬಹುಮಾನ

ವಿಶಿಷ್ಟಾದ್ವೈತ ವೇದಾಂತ-ಶ್ರೀ ಟಿ ಎಸ್ ಅನಂತ ಕೃಷ್ಣಮಾಚಾರ್ಯ-ಪಾರಿತೋಷಕ.

ದ್ವೈತ ವೇದಾಂತ-ವಿದ್ವಾನ್ ಎಲ್. ಗೋಪಾಲಾಚಾರ್ಯ-೫ ಬಹುಮಾನಗಳು

ಕವಿತಾ ಸ್ಪರ್ಧೆ ಶ್ರೀ ಪಿ. ಎಸ್. ಎ. ಶ್ರೀನಿವಾಸ ರಾಘವಾಚಾರ್ಯ ಪಾರಿತೋಷಕ.

ಆಗಮ ಪರೀಕ್ಷೆ-ಶ್ರೀನಿವಾಸ ರಾಮಕೃಷ್ಣ ಭಟ್ಟ, ವಿ ಎಸ್ ರಾಜಶೇಖರ ಮೂರ್ತಿ, ಎಚ್ ನಾಗೇಶ್ವರ ಭಟ್ಟ, ಡಿ ಕೆ ಶ್ರೀನಿವಾಸ ಗೋಪಾಲ ಭಟ್ಟ, ನರಸಿಂಹ ಭಟ್ಟ, ಜಿ ಎಸ್ ಶ್ರೀನಿವಾಸ ಭಟ್ಟಾಚಾರ್ಯ-ವಿಶೇಷ ಬಹುಮಾನಗಳು.

ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನ

ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನದ ೧೩ನೇ ವಾರ್ಷಿಕ ಸಭೆ [illegible] ಪಟ್ಟಣದಲ್ಲಿ ಆಗಸ್ಟ್ [illegible] ರವರೆಗೆ ನಡೆಯುವುದು. ಈ ಸಮ್ಮೇಳನಕ್ಕೆ ಮೈಸೂರು ವಿದ್ಯಾರ್ಥಿ [illegible] [illegible] ಭಾಗವಹಿಸುವರೆಂದು [illegible] ತಿಳಿಸಿದ್ದಾರೆ

॥ ವಂದೇ ಮಾತರಂ ॥

ಸಾಧ್ವಿ

ಏಳನೆಯ ವಾರ್ಷಿಕೋತ್ಸವ

ತಾ॥ 21-7-49ನೇ ಗುರುವಾರ ಸಂಜೆ 6 ಗಂಟೆಗೆ

ಮೈಸೂರಿನ ೩ ಸುಬ್ಬಯ್ಯ ರಸ್ತೆ ವಿದ್ಯಾಶಾಲೆಯ [illegible]

'ಸಾಧ್ವಿ' ಪತ್ರಿಕೆಯ ಏಳನೆಯ ವಾರ್ಷಿಕೋತ್ಸವವು ನಡೆಯುತ್ತದೆ

ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾದ

ಶ್ರೀ . ಮಾ ॥

ಹಿ. ವೆಂಕಟಪ್ಪನವರು

ಅಗ್ರಾಸನವನ್ನು ವಹಿಸುವರು ತಾವು ದಾರಸ್ನೇಹರೂ ಇದನ್ನು ಆಹ್ವಾನವೆಂದು ಅಂಗೀಕರಿಸಿ ದಯಮಾಡಿಸಬೇಕಾಗಿ ವಿನಂತಿ

— ಕಾರ್ಯಕ್ರಮ —

1 ಮಂಗಳಾಚರಣೆ- [illegible] ವಿದ್ವಾನ್ ಎಸ್ ಎಸ್. ಭಾರತೀಯವರು

2 ಕಿನ್ನರಿ ಮತ್ತು ಸಿತಾರ್ ವಾದನ-ಆಸ್ಥಾನ ವಿದ್ವಾನ್ [illegible] ಕೃಷ್ಣಾಚಾರ್ಯರು,

ತಬಲ- [illegible] ವಿದ್ವಾನ್ [illegible] ತಿಮ್ಮಪ್ಪನವರು

3 ಅಧ್ಯಕ್ಷರ ಭಾಷಣ

4 ಗಾನ-ಶ್ರೀಮತಿ [illegible] ಅವರು, ಪಿಟೀಲು-ವಿದ್ವಾನ್ ಎ ವಿ ಕೃಷ್ಣಮಾಚಾರ್ಯರು

ಮೃದಂಗ ವಿದ್ವಾನ್ ವಿ ವಿ ರಂಗನಾಥನವರ

ಮೋರ್ಚಿಂಗ್- ಆಸ್ಥಾನ ವಿದ್ವಾನ್ [illegible]

ಕಂಜರಿ ವಿದ್ವಾನ್ [illegible] ಗಿರಿ ರಾಮರು

5 ವೃಷ್ಣರಾಜಬಾಲ ಎನಿಯೋಗ ಆಗರಂ ರಂಗಯ್ಯ, ಸಂಚ [illegible]

ಸತ್ಯಾಗ್ರಹಿಗಳ ಪಟ್ಟಿ

[illegible]

ಕೊಳದಲ್ಲಿ ಗರ್ಭಿಣಿ ಹೆಂಗಸಿನ ಶವ

ಸ್ವಂ ಸು] ಚಾಮರಾಜನಗರ ೨೦

ಈ ಊರಿನ ಸಿಟಿ ಹೈಸ್ಕೂಲಿನ ದೊಡ್ಡ ದೇವರಾಜ ಅರಸರವರ ಕೊಳದಲ್ಲಿ ಜಟ್ಟಿ ಜಾತಿಯವಳೆಂದು ಹೇಳಲಾದ ಗರ್ಭಿಣಿ ಸ್ತ್ರೀಯೊಬ್ಬಳ ಶವವು ಮೂರು ದಿನಗಳ ಹಿಂದೆ ಸಿಕ್ಕಿತೆಂದು ವರದಿಯಾಗಿದೆ ಪೋಲೀಸರು ಮಹಜರು ಕ್ರಮ ನಡೆಸಿರುತ್ತಾರೆ ಮುಂದಿನ ತನಿಖೆಯಾಗುತ್ತಿದೆ

ನೆಹರೂ ಆಗಮಿಸಿದ ವಿಮಾನದಲ್ಲಿ ಬಾಂಬು

ಮೊನ್ನೆ ದಿನ ಪಂಡಿತ ನೆಹರೂರವರು ಲಕ್ನೋಗೆ ವಿಮಾನದಲ್ಲಿ ಆಗಮಿಸಿದಾಗ ವಿಮಾನದಲ್ಲಿ ಒಂದು ಸಣ್ಣ ಬಾಂಬು ಇದ್ದುದನ್ನು ಪೋಲೀಸರು ಪತ್ತೆ ಮಾಡಿರುತ್ತಾರೆ

ತೆಹರಿ ಘರ್ವಾಲ್ ಸಂಸ್ಥಾನದ ಐಕ್ಯ

ಮುಂದಿನ ತಿಂಗಳು ೧ನೇ ತಾರೀಕು ತೆಹರಿ ಘರ್ವಾಲ್ ಸಂಸ್ಥಾನವನ್ನು ಸಂಯುಕ್ತ ಪ್ರಾಂತ್ಯದಲ್ಲಿ ಐಕ್ಯ ಮಾಡಲಾಗುವುದೆಂದು ಭಾರತ ಸರ್ಕಾರದ ಪ್ರಕಟಣೆ ತಿಳಿಸುತ್ತದೆ

ಕಾಂಗ್ರೆಸ್ ಒಳ ಪಕ್ಷದವರಿಗೆ ನೆಹರೂರವರ ಎಚ್ಚರಿಕೆ

ಕಾಂಗ್ರೆಸ್ ಪಕ್ಷಗಳಲ್ಲಿ ಒಳಪಂಗಡಗಳಿರಕೂಡದೆಂದು ಪಂಡಿತ ನೆಹರೂರವರು ಕೊಟ್ಟ ಎಚ್ಚರಿಕೆಯ ಫಲವಾಗಿ ಸಂಯುಕ್ತ ಪ್ರಾಂತ್ಯದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಏರ್ಪಟ್ಟಿದ್ದ ೨೦ ಜನ ಸದಸ್ಯರ ಒಳ ಪಕ್ಷವನ್ನು ಈಗ ರದ್ದು ಮಾಡಲಾಗಿದೆ

ವಿಶ್ವೇಶ್ವರಯ್ಯ ನಾಲಾದಲ್ಲಿ ಹತ್ತಿಯ ಬೆಳೆ

ಮಂಡ್ಯದ ಪಕ್ಕದಲ್ಲಿರುವ ವಿಶ್ವೇಶ್ವರಯ್ಯ ನಾಲಾ ಕ್ಷೇತ್ರದಲ್ಲಿ ಉತ್ತಮವಾದ ಹತ್ತಿಯನ್ನು ಬೆಳೆಯಬಹುದೆಂದು ಪ್ರಯೋಗದಿಂದ ಸಿದ್ಧಪಡಿಸಲ್ಪಟ್ಟಿರುವರೆಂದು ಹೇಳಲಾಗಿದೆ

ಕೋತಿ ಹಿಡಿದುಕೊಟ್ಟವರಿಗೆ ಬಹುಮಾನ

ಮದರಾಸ್ ನಗರದ ಅನೇಕ ಭಾಗಗಳಲ್ಲಿ ಕೋತಿಗಳ ಕಾಟವು ವಿಪರೀತವಾಗಿರುವುದರಿಂದ ಅವುಗಳನ್ನು ಹಿಡಿದು ಕೊಡುವವರಿಗೆ ಒಂದು ಕೋತಿಗೆ ೫ ರೂ ಬಹುಮಾನ ಕೊಡುವುದಾಗಿ ಅಲ್ಲಿನ ಪುರಸಭೆಯವರು ತಿಳಿಸಿದ್ದಾರೆ.

ಪತ್ರಿಕೆಗಳಲ್ಲಿ ಉಗುಳುವುದಕ್ಕೆ ನಿಷೇಧ

[illegible] ರೋಗವನ್ನು ತಡೆಗಟ್ಟಲು ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು [illegible] [illegible] ನಿಷೇಧಿಸುತ್ತೇವೆಂದು ಪ್ರಕಟಿಸಲಾಗಿದೆ

ಜಪಾನ ದೇಶದಿಂದ ಔಷಧಿ

[illegible]

ಸಾರ್ವಜನಿಕ ಸೇವಾ ಪ್ರಶಸ್ತಿ ಪದಕಗಳು

ಮೈಸೂರು ೧೮

ನಿನ್ನೆ ರಾತ್ರಿ ಅರಮನೆಯಲ್ಲಿ ನಡೆದ ವಿಶೇಷ ದರ್ಬಾರಿನಲ್ಲಿ ಶ್ರೀ ಮನ್ಮಹಾರಾಜರವರು ಕೆಳಕಂಡವರಿಗೆ ಸಾರ್ವಜನಿಕ ಸೇವಾ ಪದಕ ಪ್ರಶಸ್ತಿಗಳನ್ನು ದಯಪಾಲಿಸಿದರು.—

ಹೊಸಕೋಟೆ ತಾ॥ ಬೆಂಡಿಗನಹಳ್ಳಿ ಶ್ರೀ ವಿ ಚನ್ನಬಸವೇಗೌಡ, ಕೃಷ್ಣರಾಜಪೇಟೆಯ ಶ್ರೀ ಕೆ ಸಿ ಪುಟ್ಟಸ್ವಾಮಿ ಕಾಡುಗಡಪ್ಪ, ಶ್ರೀರಂಗಪಟ್ಟಣದ ತಾ॥ ಚಂದಗಾಲಿನ ಶ್ರೀ ವಿ ನಂಜೇಗೌಡ, ಕೋಲಾರದ ಶ್ರೀ ಸಿ ಹೆಚ್ ವೆಂಕಟರಮಣಪ್ಪ, ಕೊರಟಗೆರೆಯ ಶ್ರೀ ಬಿ ಸುಬ್ಬಣ್ಣ, ಮಧುಗಿರಿಯ ಶ್ರೀ ಬಿ ರಂಗರಾಜಯ್ಯ, ... ಶ್ರೀ ಎಸ್ ಸಿದ್ದಪ್ಪ ... ತಾ॥ ... ಶ್ರೀ ... ಗೌಡರು ... ಶ್ರೀ ... ಹೆಂಜೂರು ... ಶ್ರೀಮತಿ ಲಿಂಗಮ್ಮ, ... ಶ್ರೀ ... ಸಾಯಿಕ್ ಮೈಸೂರಿನ ಶ್ರೀಮತಿ ... ಬಾಯಿ, ... ಬೆಂಗಳೂರಿನ ಆರ್ ಕೃಷ್ಣಪ್ಪ ಮತ್ತು ಶ್ರೀ ಎಲ್ ರಾಮಯ್ಯಶೆಟ್ಟಿ ಹೊಸಕೋಟೆಯ ಶ್ರೀ ಹೆಚ್ ಎಂ ಗುರುಸ್ವಾಮಿ ಗೌಡ, ಶ್ರೀರಂಗಪಟ್ಟಣದ ಶ್ರೀ ಆರ್ ರುದ್ರಯ್ಯ, ಚೆನ್ನರಾಯಪಟ್ಟಣ ತಾ॥ ಕೊಡಗಲ್ಲಿನ ಶ್ರೀ ಸಿ ಬೋರೇಗೌಡ, ಚಿಕ್ಕನಾಯಕನಹಳ್ಳಿ ಶ್ರೀ ... ಲಿಂಗದೇವರು, ಚಿಕ್ಕಬಳ್ಳಾಪುರದ ಶ್ರೀಮತಿ ರತ್ನಮ್ಮ, ... ಶ್ರೀ ಎಂ ... ನಂಜೇಗೌಡ, ... ತಾ॥ ... ಶ್ರೀಮತಿ ... ತಾ॥ ... ಚನ್ನಪ್ಪಗೌಡ, ... ಜ್ಞಾನವರು ... ಶ್ರೀ ... ಚಿಕ್ಕಮಗಳೂರಿನ ಶ್ರೀ ಎಂ ಜಿ ಚನ್ನಪ್ಪಗೌಡ, ಚನ್ನಗಿರಿಯ ಶ್ರೀ ಎಂ ಎಸ್ ಪಾಪಣ್ಣ, ದೊಡ್ಡಬಳ್ಳಾಪುರದ ಶ್ರೀ ವಿ ವೀರೆಗೌಡ, ಬೆಂಗಳೂರಿನ ಡಾ॥ ಕೆ ಆರ್ ಶ್ರೀಕಂಠೇಶ್ವರ, ಶಿವಮೊಗ್ಗದ ಕೂಡ್ಲಿ ಸುಬ್ಬಣ್ಣಾಚಾರ್, ಗುಂಡ್ಲುಪೇಟೆ ತಾ॥ ರಾಘವಪುರದ ಶ್ರೀ ಕೆ ಬಸವಯ್ಯ, ಯಳಂದೂರಿನ ಶ್ರೀ ಪುಟ್ಟ ಲಿಂಗಪ್ಪ, ಗೌರಿಬಿದನೂರಿನ ಜನಾಬ್ ಕೆ ಎ ಮಹಮದ್ ನಜೀರ್, ದೇವನಹಳ್ಳಿ ತಾ॥ ಬೀರಂಬಳ್ಳಿ ಶ್ರೀ ವಿ ದೊಡ್ಡ ತಿಮ್ಮಯ್ಯ, ಗುಂಡ್ಲುಪೇಟೆ ತಾ॥ ಮೂಡಿಗಟ್ಟದ ಶ್ರೀ ಬಸಪ್ಪ, ಮೈಸೂರಿನ ಜಿ.ಎಲ್. ಮಾರಿದಂಡಯ್ಯ, ಗೋಳಗಲ್ಲೂರಿನ ಶ್ರೀ ಟಿ. ತಿಪ್ಪೇಸ್ವಾಮಿ, ... ತಾ॥ ... ಶ್ರೀ ಟಿ ಮಲ್ಲಯ್ಯ, ... ಶ್ರೀ ಎಂ ಮುನಿಗಪ್ಪ, ಹೊಸಕೋಟೆ ತಾ॥ ನಂದಿಗುಡಿಯ ಶ್ರೀ ವೆಂಕಟಪ್ಪ, ದಾವಣಗೆರೆ ... ಶ್ರೀ ಪಟೇಲ್ ಬಸಪ್ಪ ತರೀಕೆರೆಯ ಶ್ರೀ ಟಿ ವಿ ದಾಸಪ್ಪ, ಮೈಸೂರಿನ ಶ್ರೀ ವಿ ವೇದಾಂತ ಅಯ್ಯಂಗಾರ್, ... ಶ್ರೀ ಎಸ್ ಗುರುಮೂರ್ತಿ, ... ತಾ॥ ... ಶ್ರೀ ಸಿ ... ವೆಂಕಟಪ್ಪ

ಸ್ಕೌಟ್ ಸೇವಾ ಪದಕ

ಮೈಸೂರಿನ ಡಾ॥ ಹೆಚ್ ಎಲ್ ಹರಿಯಪ್ಪ, ಬೆಂಗಳೂರಿನ ಶ್ರೀ ವೈ ಜಿ ... ತಿರುಮಲಯ್ಯ, ಟಿ ನರಸೀಪುರದ ಶ್ರೀ ಡಿ ... ಅಯ್ಯಂಗಾರ್ ಶಿವಮೊಗ್ಗದ ಶ್ರೀ ಹೆಚ್ ಆರ್ ರಂಗನಾಥರಾವ್.

ಜಯಪುರದ ಹೋಟೆಲು ಗಳಲ್ಲಿ ಅಕ್ಕಿ ಇಲ್ಲ

ಗೌರ್ನರ್ ಜನರಲ್ ಮತ್ತು ಪಂಡಿತ ನೆಹರೂರವರು ಆಹಾರ ಮಿತವ್ಯಯದ ಬಗ್ಗೆ ಇತ್ತ ಮನವಿಗೆ ಮನ್ನಣೆ ಕೊಡಲು ಜಯಪುರದ ಹೋಟೆಲಿನವರೆಲ್ಲರೂ ಅಕ್ಕಿಯನ್ನು ಉಪಯೋಗಿಸುವುದನ್ನು ನಿಲ್ಲಿಸಬೇಕೆಂದು ನಿರ್ಧರಿಸಿದ್ದಾರೆ ರಾಜಸ್ಥಾನದ ಹೋಟೆಲಿನವರೆಲ್ಲರೂ ಅಕ್ಕಿಯನ್ನು ನಿಷೇಧಿಸುವಂತೆ ಆಜ್ಞೆ ಮಾಡಬೇಕೆಂದು ಸರ್ಕಾರಕ್ಕೆ ಅಲ್ಲಿನ ಹೋಟೆಲಿನವರು ಮನವಿ ಮಾಡಿರುತ್ತಾರೆ

ಕೆಲಸ ಹೋದ ದೇಶಾಭಿ ಮಾನಿಗಳಿಗೆ ಪುನಃ ಕೆಲಸ

ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ ಕೆಲಸದಿಂದ ವಜಾ ಆದ ಸರ್ಕಾರಿ ನೌಕರರುಗಳಿಗೆ ಪುನಃ ಕೆಲಸ ಕೊಡಬಹುದೆಂದು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ.

ಸರ್ಕಾರಿ ಕಛೇರಿಯಲ್ಲಿ ೧ ಲಕ್ಷ ರೂ. ಮಾಯ

ಸಂಯುಕ್ತ ಪ್ರಾಂತ್ಯ ಸರ್ಕಾರದ ವ್ಯವಸಾಯ ಇಲಾಖೆಯ ಇಂಜನಿಯರ ಕಛೇರಿಯಲ್ಲಿ ಒಂದು ಲಕ್ಷ ರೂ ನೋಟುಗಳು ಪತ್ತೆ ಇಲ್ಲವೆಂದೂ, ಈ ಸಂಬಂಧದಲ್ಲಿ ಅಲ್ಲಿನ ನೌಕರರೊಬ್ಬರು ತಲೆ ತಪ್ಪಿಸಿಕೊಂಡಿರುವರೆಂದು ಹೇಳಲಾಗಿದೆ

ಬಸ್ಸಿನ ತೊಂದರೆ

ಗುಂಡ್ಲುಪೇಟೆ ೧೫

ಇಲ್ಲಿಂದ ಮೈಸೂರಿಗೆ ಹೊರಡುವ ಬಾನಗೀ ಬಸ್ಸುಗಳು ಪ್ರತಿದಿನ ಸರಿಯಾದ ಕಾಲಕ್ಕೆ ಹೊರಡದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿರುತ್ತದೆ ಸಂಬಂಧಪಟ್ಟ ಅಧಿಕಾರಿಗಳು ಈ ಕೊರತೆಯನ್ನು ನಿವಾರಿಸಬೇಕೆಂದು ಕೋರಲಾಗಿದೆ

ಅಂಗಡಿ ಕೆಲಸಗಾರರ ಬೇಡಿಕೆ

ರಾಜಧಾನಿಯ ಅಂಗಡಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಮೊನ್ನೆ ದಿನ ಜನಾಬ್ ಅಬ್ದುಲ್ ಖುದ್ದೂಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಮದರಾಸಿನಲ್ಲಿರುವಂತೆ ಇಲ್ಲಿಯೂ ಅಂಗಡಿ ಮಾಲೀಕರುಗಳು ಅಂಗಡಿ ತೆರೆದಿರುವ ಕಾಲವನ್ನು ಬೋರ್ಡಿನಲ್ಲಿಬರೆದು ಪ್ರದರ್ಶಿಸುವಂತೆ ಒತ್ತಾಯಪಡಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು. ಶ್ರೀ ಸುಬ್ರಹ್ಮಣ್ಯರವರನ್ನು ಉಪಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು

ಚಾಮುಂಡಿ ಬೆಟ್ಟದ ಬಡ ನೌಕರರ ತೊಂದರೆ

ಚಾಮುಂಡಿ ಬೆಟ್ಟದಲ್ಲಿ ವಾಸಿಸುತ್ತಿರುವ ಕೆಲವರ ಮನೆಗಳನ್ನು ಒಡೆದು ಹಾಕಬೇಕೆಂದು ಅಧಿಕಾರಿಗಳು ನಿರ್ಧರಿಸಿ, ... ದಿವಸಗಳಲ್ಲಿ ಮನೆಗಳನ್ನು ಖಾಲಿ ಮಾಡಬೇಕೆಂದು ನೋಟೀಸ್ ಕೊಟ್ಟಿರುತ್ತಾರೆ. ಇದರಿಂದ ಬಡ ದೇವಸ್ಥಾನದ ನೌಕರರುಗಳಿಗೆ ತುಂಬಾ ತೊಂದರೆಯಾಗಿದೆ ಈ ... ರುಗಳಿಗೆ ಸೂಕ್ತ ನಿವೇಶನ, ಹಣ ಮತ್ತು ಕಾಲಾವಧಿಯನ್ನು ಕೊಟ್ಟು ಅವರ ತೊಂದರೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನಿವಾರಿಸಬೇಕೆಂದು ನೊಂದವರೊಬ್ಬರು ಪ್ರಾರ್ಥಿಸಿರುತ್ತಾರೆ

Hand-book of Mathematical Formulae for Intermediate Students

By V K DORASWAMY

Price: Eight annas

Ramachandra Book Depot, Mysore

SRI GAYATHRI

Daily 3 Shows

From 2. 7 49 for 2 days

Adventure Drama

Old Losangeles

With William Elliott

Next Change

THE WRECK OF THE HESPERUS

Watch on ... 1949

Brand New ... Coming

The New Adventures of DON JUAN

...

ರಾಜಕಮಲ್,

ಮೈಸೂರು

16-7-49 ರಿಂದ ಪ್ರಾರಂಭ

ಜಸ್ಟಿಸ್ (ಹಿಂದಿ)

ಭೂಮಿಕೆ — ಸ್ವರ್ಣಲತಾ, ಕೆ ಸಿ ಡೇ, ಡೇವಿಡ್ ಮತ್ತು ನವೀನ ಯಾಜ್ಞಿಕ್

* ಲಕ್ಷ್ಮಿ *

20-7-49ನೇ ಬುಧವಾರದಿಂದ ... ಯಶಸ್ವಿ ಎರಡನೇ ವಾರ

ಜಗತಲ ಪ್ರತಾಪನ್ (ತಮಿಳು)

ತಾ॥ 27 4-49 ರಿಂದ

ಪ್ರತಿ ದಿನ 3 ಆಟಗಳು

ರಂಜಾನ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ

A. J. K. ... ಅವರ

ಅದ್ಭುತ ಹಿಂದಿ ಚಿತ್ರ

ತೋಫ

ಪಾತ್ರ — ವೀರ, ನವಾಬ್, ... ಷಾ ನವಾಜ್

ವಿಕ್ರಯಕ್ಕೆ ಸಿದ್ಧವಾಗಿದೆ

ಪಂಚರಾತ್ರ

[By Dr N S Narayan Sastry

Inter Arts & Inter Science Text Book for 1949-50

ಬೆಲೆ 1—6—0

ಮಿತ್ರ ಮತ್ತು ಕಂಪನಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆ ಪ್ರಕಟನೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಮನೆಗಳಿಂದ, ಹಲವು ಮಂದಿ ತಾವು ವಿದ್ಯುಚ್ಛಕ್ತಿ ಇಲಾಖೆಯ ನೌಕರರೆಂದು ಹೇಳಿಕೊಂಡು ಬಂದು ಅನೇಕ ಕಡೆಗಳಲ್ಲಿ ಇಲಾಖೆಗೆ ಸೇರಿದ ಮೀಟರುಗಳನ್ನು ತೆಗೆದುಕೊಂಡು ಹೋಗಿರುವ ಸಂಗತಿಗಳು ಗಮನಕ್ಕೆ ಬಂದಿವೆ ಹಲವು ಮೀಟರುಗಳು ಕಳವಾಗಿರುವುದಾಗಿಯೂ ವರದಿಯಾಗಿದೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಮೀಟರುಗಳನ್ನು ಬದಲಾಯಿಸುವ ಅಥವ ತೆಗೆದು ಹಾಕುವ ಪಕ್ಷದಲ್ಲಿ ಅದನ್ನು ಇಲಾಖೆಯ ನೌಕರರೇ ಬಂದು ಮಾಡುವರು ಸದರಿ ನೌಕರರುಗಳಿಗೆ ಇಲಾಖೆಯು ವ್ಯಾಡ್ಜುಗಳು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಒದಗಿಸಲಾಗಿದೆ ವಿದ್ಯುಚ್ಛಕ್ತಿ ಉಪಯೋಗಿಸುವವರು ಸದರಿ ಬ್ಯಾಡ್ಜು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೇಳಿ ನೋಡಬೇಕು. ಯಾವುದಾದರೂ ಅಪರಿಚಿತರು ಮೀಟರನ್ನು ಬದಲಾಯಿಸ ಬೇಕಾದಲ್ಲಿ ಅಥವಾ ತೆಗೆಯಬೇಕಾದಲ್ಲಿ ಅವರ ಬಳಿ ಇಲಾಖೆಯವರ ಐಡೆಂಟಿಫಿಕೇಷನ್ ಕಾರ್ಡನ್ನು ನೌಕರರೊಡನೆ ಕಳುಹಿಸದ ... ಅದರ ಅವರನ್ನು ಮಾಲೀಕರು ಸದರಿ ಕಾರ್ಡನ್ನು ಕೇಳಬಹುದು. ಮಾಡಕೂಡದು ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರ ಆವರಣಗಳಲ್ಲಿರುವ ಮೀಟರು, ... ಇತರ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಲಕರಣೆಗಳ ರಕ್ಷಣೆಯು ... ಹೊಣೆಯಾಗಿರುವುದರಿಂದ ... ಅನ್ನಿಗೆ ಯಾವುದಾದರೂ ಕಳವು ನಷ್ಟವಾದಲ್ಲಿ ಒಡನೆ ಪೊಲೀಸ್ ಠಾಣೆಗೆ ಮಾಹಿತಿ ಕೊಡಬೇಕು ... ಯಾವುದಾದರೂ ಆವರಣದಲ್ಲಿ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ... ಕಳವಾಗಿದ್ದಲ್ಲಿ ಅವುಗಳ ಬೆಲೆಯನ್ನೂ ಮತ್ತು ಅವುಗಳನ್ನು ... ತಗಲುವ ಖರ್ಚನ್ನೂ ಕೊಟ್ಟ ಅನಂತರ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದು.

(ಸಹಿ) ಎಂ. ಹಯಾತ್,

ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರು.

ಬೆಂಗಳೂರು, ... ರ

Edited, printed and published by V R Nagaraja at Sadhvi Press, D Subbiah Road Mysore

ಸಾಧ್ವಿ

ಸಂಪುಟ ೭] ೭ ದಿನಾಂಕ ೨೨-೭-೪೯ [ಸಂಚಿಕೆ ೨೦೭

ಕಮ್ಯೂನಿಸ್ಟ್ ಚೀಣದಲ್ಲಿ ಸುಭಾಸ್ ಬೋಸರು?

ಸಂಸ್ಕೃತ ಪರೀಕ್ಷೆಗಳಲ್ಲಿ ಬಹುಮಾನಿತರು

ಬೆಂಗಳೂರು, ...

ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಈ ವರ್ಷ ವಿದ್ವತ್ ಮಧ್ಯಮ ಮತ್ತು ಉತ್ತಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೨೦ ಜನ ಮತ್ತು ಆಗಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೬ ಜನ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರವರು ಮೊನ್ನೆ ರಾತ್ರಿ ವಿಶೇಷ ದರ್ಬಾರಿನಲ್ಲಿ ಉದ್ವತ್ ಸಂಭಾವನೆಗಳನ್ನೂ, ಅವರ ... ೩೦ ಮಂದಿಗೆ ವಿಶೇಷ ಬಹುಮಾನಗಳನ್ನೂ ದಯಪಾಲಿಸಿದರು

ಉತ್ತಮ ಪರೀಕ್ಷೆ-ಅಲಂಕಾರ ಶಾಸ್ತ್ರ-ಶ್ರೀ ಕೃಷ್ಣವಾಸುದೇವ ಗೋವಿಂದೀಕ ವಿಶೇಷ ಬಹುಮಾನಗಳು

ಅದ್ವೈತ ವೇದಾಂತ-ವಿದ್ವಾನ್ ಓ. ನರಸಿಂಹಮೂರ್ತಿ ಶಾಸ್ತ್ರಿ-೮ ಬಹುಮಾನಗಳು

ಕೃಷ್ಣಯಜುರ್ವೇದಘನಲಕ್ಷಣಘನಾನ್ತ-ಶ್ರೀ ಕೆ ಪಾಂಡುರಂಗಾ ಚಾರ್ಯ ೩ ಬಹುಮಾನಗಳು.

ಸಾಮವೇದ ಲಕ್ಷಣ-ವಿದ್ವಾನ್ ಟಿ ಎ ... ದೀಕ್ಷಿತ-೨ ಬಹುಮಾನ

ವ್ಯಾಕರಣ-ಶ್ರೀ ಟಿ ನಾರಾಯಣಶಾಸ್ತ್ರಿ-೩ ಬಹುಮಾನಗಳು

ನವೀನ ನ್ಯಾಯ ಶ್ರೀ ಎಸ್ ಗುರುಮೂರ್ತಿ ಶಾಸ್ತ್ರಿ-ವಿಶೇಷ ಪಾರಿತೋಷಕ.

ಪೂರ್ವ ಮೀಮಾಂಸಾ ವಿದ್ವಾನ್ ಪಿ ಶ್ರೀನಾಥಾ ಚಾರ್ಯ ೩ ಬಹುಮಾನ

ವಿಶಿಷ್ಟಾದ್ವೈತ ವೇದಾಂತ ಶ್ರೀ ಎಂ. ಶ್ರೀನಿವಾಸ ಅಯ್ಯಂಗಾರ್ಯರು ೩ ಬಹುಮಾನ

ದ್ವೈತ ವೇದಾಂತ ಶ್ರೀ ಜಿ ಎಂ. ರಾಮಚಂದ್ರಾಚಾರ್ಯ-೬ ಬಹುಮಾನ

ಋಗ್ವೇದ ಪದಕ್ರಮಾಂತ ಶ್ರೀ ಎ ಕೆ. ರಾಮಣ್ಣ - ಬಹುಮಾನ

ಋಗ್ವೇದ ಸ್ಮಾರ್ತ ಪ್ರಯೋಗ-ಶ್ರೀ ಸಿ. ಚಿಂದಂಬರ ನಾರಾಯಣ ಪಾರಿತೋಷಕ.

ಶುಕ್ಲಯಜುರ್ವೇದ ಸ್ಮಾರ್ತ ಪ್ರಯೋಗ-ವಿದ್ವಾನ್ ಎಸ್ ದತ್ತಾತ್ರೇಯ ಭಟ್ಟ ಪಾರಿತೋಷಕ.

ಅದ್ವೈತ ವೇದಾಂತ-ಶ್ರೀ ಸಿ ರಾಮಾ ಶಾಸ್ತ್ರಿ-೨ ಬಹುಮಾನ

ವಿಶಿಷ್ಟಾದ್ವೈತ ವೇದಾನ್ತ-ಶ್ರೀ ಟಿ ಎಸ್ ಅನಂತ ಕೃಷ್ಣಮಾಚಾರ್ಯ-ಪಾರಿತೋಷಕ

ದ್ವೈತ ವೇದಾನ್ತ ವಿದ್ವಾನ್ ಎಲ್ ಗೋಪಾಲಾಚಾರ್ಯ-೨ ಬಹುಮಾನಗಳು

ಶಿವಾಗಮ ಸ್ಮಾರ್ತ- ಶ್ರೀ ವಿ ಎನ್ ವಿ ಶ್ರೀನಿವಾಸ ... ಪಾರಿತೋಷಕ

ಆಗಮ ... ಶ್ರೀ ... ರಾಮಾನ್ವ ... ದೀಕ್ಷಿತ ... ಶ್ರೀನಿವಾಸ ಗೋಪಾಲ ... ಪಾರಿತೋಷಕ ... [illegible]

ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನ

[illegible]

॥ ವಂದೇ ಮಾತರಂ ॥

ಸಾಧ್ವಿ

ಏಳನೆಯ ವಾರ್ಷಿಕೋತ್ಸವ

ತಾ॥ 21-7-49ನೇ ಗುರುವಾರ ಸಂಜೆ 6 ಗಂಟೆಗೆ

ಮೈಸೂರಿನ ... ದಲ್ಲಿ ...

'ಸಾಧ್ವಿ' ಪತ್ರಿಕೆಯ ಏಳನೆಯ ವಾರ್ಷಿಕೋತ್ಸವವು ನಡೆಯುತ್ತದೆ

... ಶ್ರೀ ...

ವಿ. ವೆಂಕಟಪ್ಪನವರು

... ಅಧ್ಯಕ್ಷತೆ ವಹಿಸುವರು. ...

ಬೇಕಾಗಿ ಪ್ರಾರ್ಥನೆ

ಕಾರ್ಯಕ್ರಮ —

1 ಮಂಗಳಾಚರಣೆ— ... ವಿದ್ವಾನ್ ಎಸ್ ಎಸ್. ಭಾರತಿ ... ಯವರು

2 ಕಿನ್ನರಿ ಮತ್ತು ಸಿತಾರ್ ವಾದನ —... ವಿದ್ವಾನ್ ... ಕೃಷ್ಣಾಚಾರ್ಯರು,

ತಬಲ—... ವಿದ್ವಾನ್ ... ಶೀನಪ್ಪನವರು

3 ಅಧ್ಯಕ್ಷರ ಭಾಷಣ

4 ಗಾನ—ಶ್ರೀಮತಿ ... ಪಿಟೀಲು ವಿದ್ವಾನ್ ... ಮೃದಂಗ—ವಿದ್ವಾನ್ ... ಮೋರ್ಚಿಂಗ್—... ಕಂಜರಿ ...

ಪುಷ್ಪತಾಂಬೂಲ ವಿನಿಯೋಗ

ಆಗರದ ರಂಗಣ್ಣ ...

... ಸಂಪಾದಕ

ಸುಭಾಸ್ ಚಂದ್ರಬೋಸರು ಜೀವಂತರಾಗಿರಬಹುದು

ಕಮ್ಯೂನಿಸ್ಟರ ... ಕೃಷಿ ... ಸುಭಾಸ್ ಚಂದ್ರಬೋಸರು ... ಅವರ ... ಭಾರತ ಸರಕಾರದವರು ... ಪ್ರಚಾರ ... ಭಾರತ ... [illegible]

೩ ಜನರನ್ನು ಕೊಂದ ಮಾವಿ ರಕ್ತ ಕುಡಿದ ನಾಸಿ

... ವರ್ಷ ... ಅವರ ರಕ್ತವನ್ನು ... [illegible]

ಸತ್ಯಾಗ್ರಹಿಗಳ ಹಚ್ಚಿ ...

[illegible]

ಕೂಳಿಪಕ್ಷ ಗರ್ಭಿಣಿ ಹೆಂಗಸಿನ ಶವ

ಸ್ವಂ. ವ.] ಚಾಮರಾಜನಗರ ...

ಈ ... ಗೆಜ್ಜಲಗೆರೆ ... ಬಳಿ ... [illegible]

ನೆಹರೂ ಆಗಮಿಸಿದ ನಿಲ್ದಾಣದಲ್ಲಿ ಬಾಂಬು

ಪಂಡಿತ ನೆಹರೂರವರು ಲಕ್ನೋಗೆ ವಿಮಾನದಲ್ಲಿ ಆಗಮಿಸಿದಾಗ ನಿಲ್ದಾಣದಲ್ಲಿ ಒಂದು ಸಣ್ಣ ಬಾಂಬು ... ವನ್ನು ಪೊಲೀಸರು ಪತ್ತೆ ಮಾಡಿದ್ದಾರೆ

ಕೆ ದ ರಿ ಫ್ರ ರ್ ನಾ ಲ್ ಸಂಸ್ಥಾನದ ಐಕ್ಯ

... ಸಂಸ್ಥಾನವನ್ನು ... ಭಾರತ ಸರಕಾರದ ... ಕ್ಷಿಪ್ತ.

ಕಾಂಗ್ರೆಸ್ ಒಳ ಪಕ್ಷಗಳಿಗೆ ನೆಹರೂರವರ ಎಚ್ಚರಿಕೆ

ಕಾಂಗ್ರೆಸ್ ಪಕ್ಷಗಳಲ್ಲಿ ... ಪಂಡಿತ ನೆಹರೂರವರು ... ಪ್ರಾಂತ್ಯದ ... ಕಾಂಗ್ರೆಸ್ ... [illegible]

ವಿಶ್ವೇಶ್ವರಯ್ಯ ನಾಲಾದಲ್ಲಿ ಮತ್ತೊಂದು ಬಲಿ

... ವಿಶ್ವೇಶ್ವರಯ್ಯ ನಾಲೆಯಲ್ಲಿ ... [illegible]

ಕೋತಿ ಹಿಡಿದುಕೊಟ್ಟವನಿಗೆ ಬಹುಮಾನ

... ನಗರದ ... ಕೋತಿಗಳ ... ಹಿಡಿದು ಕೊಡುವವರಿಗೆ ... ಕೋತಿಗೆ ... [illegible]

ರಸ್ತೆಗಳಲ್ಲಿ ಉಗುಳುವುದಕ್ಕೆ ನಿಷೇಧ

[illegible]

... ಪಕ್ಷದಿಂದ ಹಿಸ್ಕರಿ...

[illegible]

ಕಲೆಯ ಅಭಿವೃದ್ಧಿಗೆ ಕಲಾಭಿಮಾನಿಗಳ ಪ್ರೋತ್ಸಾಹ ಅಗತ್ಯ

ಶಾಂತಾರಾಮರವರಿಗೆ ಸ್ವಾಗತ

ಮೈಸೂರು ೨೦

ಭಾರತದ ಸುಪ್ರಸಿದ್ಧ ಸಿನಿಮಾ ದಿಗ್ದರ್ಶಕರೂ ಮತ್ತು ನಟರೂ ಆದ ಶ್ರೀ ವಿ. ಶಾಂತಾರಾಂ ಮತ್ತು ಅವರ ಪತ್ನಿ ನಟಿ ಶ್ರೀಮತಿ ಜಯಶ್ರೀಯವರುಗಳು ನಿನ್ನೆ ಸಂಜೆ ಪ್ರಭಾ ಸಿನಿಮಾ ಮಂದಿರಕ್ಕೆ ಭೇಟಿ ಕೊಟ್ಟು, ಅಲ್ಲಿ ನೆರೆದಿದ್ದ ಅಸಂಖ್ಯಾತ ಜನರಿಗೆ ತಮ್ಮ ದರ್ಶನವನ್ನು ಇತ್ತರು.

ಚಿತ್ರ ಮಂದಿರದ ಮಾಲೀಕರಾದ [illegible] ರಾಮಯ್ಯ ರಸ್ತೆಹಳ್ಳಿಯವರು ಅವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಮಾರಂಭಕ್ಕೆ ಪೌರಗಣ್ಯರೂ ಮತ್ತು ನಗರದ ಅನೇಕ ಗಣ್ಯ ಮಹಾಶಯರೂ ಮತ್ತು ಮಹಿಳೆಯರೂ ಆಗಮಿಸಿದ್ದರು.

ಶ್ರೀ ಶೇಷಗಿರಿ ರಾಯರಿಂದ ಸ್ವಾಗತ ಭಾಷಣಾನಂತರ, ಶ್ರೀ ರಾಮಯ್ಯ ರಸ್ತೆಹಳ್ಳಿಯವರು ಮಲ್ಲಿಗೆ ಹಾರವನ್ನು ಪರಿಮಳ ಗಂಧದ ಪೆಟ್ಟಿಗೆಯನ್ನೂ ಅರ್ಪಿಸಿದರು. ಶ್ರೀ ಶಾಂತಾರಾಮರವರು ಭಾಷಣ ಮಾಡಿ, ಕಲೆಯ ನೆಲೆವೀಡಾದ ಮೈಸೂರಿನಲ್ಲಿ ತಮಗೆ ಇತ್ತ ಸ್ವಾಗತಕ್ಕೆ ವಂದನೆಯನ್ನು ಅರ್ಪಿಸಿದರು. ಉತ್ತಮವಾದ ಕಲೆಗೆ ಸಾರ್ವಜನಿಕರು ಕೊಡುವ ಪ್ರೋತ್ಸಾಹವೇ ಕಲೆಗಾರನಿಗೆ ಒಂದು ಗೌರವವೆಂದು ಹೇಳಿದರು. 'ಅಪ್ನಾ ದೇಶ್' ಚಿತ್ರವನ್ನು ತಾವು ತಯಾರಿಸಿದ ಮೇಲೆ ತಮಗೆ ಅನೇಕ ಕಡೆಯಿಂದ ಪತ್ರಗಳು ಬರುತ್ತಿವೆಯೆಂದೂ ಅವರೂ ಇನ್ನೂ ಉತ್ತಮ ದರ್ಜೆಯ ಚಿತ್ರಗಳನ್ನು ನಿರ್ಮಿಸಿ ಇದರ ಮೂಲಕ ದೇಶದ ಮತ್ತು ಜನತಾ ಸೇವೆಯನ್ನು ಮಾಡುವುದೇ ತಮ್ಮ ಗುರಿಯೆಂದು ತಿಳಿಸಿದರು. ಕಲಾಭಿಮಾನಿಗಳಿಲ್ಲದೆ ಕಲೆಯ ಪ್ರೋತ್ಸಾಹವು ಸಾಧ್ಯವಿಲ್ಲವೆಂದೂ ಜನರು ತಮಗೆ ತೋರಿದ ಸ್ವಾಗತವು ತಮ್ಮ ಕಲೆಯನ್ನು ಮುಂದುವರಿಸಲು ಹುರಿದುಂಬಿಸುತ್ತಾ ಇರುವುದೆಂದೂ ಹೇಳಿದರು.

ರಾಣಿ ಮೋಟಾರಿಗೆ ಬೆಂಕಿ ಹಾಕಿದುದಕ್ಕೆ ಶಿಕ್ಷೆ

ನಂಜನಗೂಡು ತಾ|| ಹಳ್ಳಿಕೆರೆ ಹುಂಡಿಯ ನಂಜಪ್ಪ ಎಂಬುವನು [illegible] ರಾಣಿ ಮೋಟಾರಿಗೆ ಬೆಂಕಿ ಇಟ್ಟು ನಷ್ಟಪಡಿಸಿದ ಆಪಾದನೆಯ ಮೇಲೆ ನಗರ ಮ್ಯಾಜಿಸ್ಟ್ರೇಟರು ನ್ಯಾಯಾಧೀಶರು, ಅವನಿಗೆ ೯ ತಿಂಗಳು ಕಠಿಣ ಶಿಕ್ಷೆ ವಿಧಿಸಿರುತ್ತಾರೆ

ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಬೆಲೆ 2-6-0

[illegible]

ಕಮ್ಯೂನಿಸ್ಟರನ್ನು ತಡೆಗಟ್ಟಲು ಗುಪ್ತ ನಿಧಿ

ಪೂರ್ವ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರ ಪ್ರಭಾವವನ್ನು ತಡೆಗಟ್ಟಲು ಅಮೆರಿಕವು ೧೫೦ ಕೋಟಿ ಡಾಲರುಗಳ ಗುಪ್ತ ನಿಧಿಯನ್ನು ಮಂಜೂರು ಮಾಡಬೇಕೆಂದು ಅಲ್ಲಿನ ಅಧಿಕಾರಿಗಳು ಅಧ್ಯಕ್ಷ ಟ್ರೂಮನ್‌ರವರಿಗೆ ಮನವಿ ಮಾಡಿದ್ದಾರೆ. ಚೀಣದಲ್ಲಿ ಕಮ್ಯೂನಿಸ್ಟರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳದಂತೆ ಮಾಡಲು ಈ ಹಣವನ್ನು ಖರ್ಚು ಮಾಡಬೇಕೆಂದು ಅವರು ಸಲಹೆ ಮಾಡಿದ್ದಾರೆ

ಬಿಹಾರಿನಲ್ಲಿ ಹುತಾತ್ಮರ ಸ್ಮಾರಕ

೧೯೪೨ನೇ ಆಗಸ್ಟ್ ೧೧ನೇ ತಾ|| ಪಾಟ್ನಾ ಅಸೆಂಬ್ಲಿ ಕಟ್ಟಡದ ಮುಂದೆ ಪ್ರಾಣ ಅರ್ಪಿಸಿದ ೭ ಮಂದಿ ವಿದ್ಯಾರ್ಥಿಗಳ ಜ್ಞಾಪಕಾರ್ಥವಾಗಿ ಅಲ್ಲಿ ಒಂದು ಹುತಾತ್ಮರ ಸ್ಮಾರಕವನ್ನು ೧ ಲಕ್ಷ ರೂ. ಖರ್ಚಿನಿಂದ ಸ್ಥಾಪಿಸಲು ಬಿಹಾರ್ ಸರ್ಕಾರದವರು ನಿರ್ಧರಿಸಿದ್ದಾರೆ.

೨೩ ಸಾವಿರ ಕಲ್ಲಿದ್ದಲು ಕಾರ್ಮಿಕರ ಮುಷ್ಕರ

ಆಸ್ಟ್ರೇಲಿಯಾದ ಕಲ್ಲಿದ್ದಲು ಗಣಿಗಳ ಸುಮಾರು ೨೩ ಸಾವಿರ ಜನ ಕೆಲಸಗಾರರು ಕಳೆದ ೩ ದಿನಗಳಿಂದ ಮುಷ್ಕರ ಹೂಡಿರುತ್ತಾರೆ. ಇದರಿಂದ ಒಂದು ಕೋಟಿ ಪೌಂಡುಗಳಷ್ಟು ರಫ್ತು ವ್ಯಾಪಾರ ನಷ್ಟವಾಗಿದೆಯೆಂದು ಹೇಳಲಾಗಿದೆ

Edited, printed and published by A. R. Nagarajan, at Sadhvi Press, D. Subbiah Road, Mysore.

ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಕೂಡದು

ಕಾಂಗ್ರೆಸ್ ಮಂತ್ರಿ ಮಂಡಲಗಳ ಮೇಲೆ ದೂರುಗಳಿದ್ದಲ್ಲಿ ಅವುಗಳನ್ನು ಕೇಂದ್ರ ಪಾರ್ಲಿಮೆಂಟರಿ ಸಮಿತಿ ಅಥವ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಗಮನಕ್ಕೆ ತರಬೇಕೇ ಹೊರತು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು 'ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯಗಳನ್ನು ತರಕೂಡದೆಂದು ಸೂಚಿಸುವ ನಿರ್ಣಯವು ಮೊನ್ನೆ ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯಲ್ಲಿ ಅಂಗೀಕೃತವಾಯಿತು.

ನಿಧನ

ಮೈಸೂರು ರೈಲ್ವೆಯ ಅಸಿಸ್ಟೆಂಟ್ ಲೋಕೋ ಸೂಪರಿಂಟೆಂಡೆಂಟರಾದ ಶ್ರೀ ಎಂ. ಆರ್. ಶೇಷಗಿರಿ ರಾಯರ ತಂದೆ ಶ್ರೀ ಎಂ. ರಾಮಸ್ವಾಮಯ್ಯನವರು ತಮ್ಮ ೮೦ನೇ ವಯಸ್ಸಿನಲ್ಲಿ ಹೃದಯ ವೇದನೆಯಿಂದ ಕಳೆದ ೧೬ನೇ ತಾ|| ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಬಿಕರಿಗೆ ಸಿದ್ಧವಾಗಿದೆ

ಪಂಚ ರಾತ್ರ

[By Dr. N. S. Narayan Sastry]
Inter Arts & Inter Science
Text Book for 1949-50
ಬೆಲೆ 1-6-0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಕರ್ನಾಟಕ ವಿಶ್ವವಿದ್ಯಾಲಯ ಉಪಸ್ಥಾನಪತಿ

ಬೊಂಬಾಯಿನ ವಕೀಲರಾದ ಶ್ರೀ ಆರ್. ಎ. ಜಹಗೀರದಾರರನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳನ್ನಾಗಿ ೩ ವರ್ಷಕಾಲ ನೇಮಿಸಲಾಗಿದೆ.

ಸಂಸ್ಥಾನದಲ್ಲಿ ಪೆಟ್ರೋಲ್ ಖೋತಾ

ಕೇಂದ್ರ ಸರ್ಕಾರದ ಆಜ್ಞೆಯ ಮೇರೆ ಸಂಸ್ಥಾನದಲ್ಲೂ ಪೆಟ್ರೋಲ್ ರೇಷನನ್ನು ಕಡಿಮೆ ಮಾಡಲಾಗಿದೆ. ಕಾರುಗಳ್ಳೆ ಮತ್ತು ಮೋಟಾರು ಸೈಕಲ್ಲುಗಳಿಗೆ ಬೇಸಿಕ್ ಪ್ರಮಾಣವನ್ನು ಮುಂದಿನ ತಿಂಗಳು ೧ನೇ ತಾ||ನಿಂದ ಶೇಕಡ ೫೦ ರಷ್ಟು ಇಳಿಸಲಾಗುವುದು. ಈ ತಿಂಗಳಿನಲ್ಲಿ ಕೊಡುವ ಪೆಟ್ರೋಲಿನಲ್ಲಿ ಶೇ. ೭ ರಷ್ಟು ಮಾತ್ರ ಕೊಡಲಾಗುವುದು. ಟ್ರಕ್ಕುಗಳಿಗೆ ಶೇಕಡ ೫೦ ರಷ್ಟು ಕಡಿಮೆ ಮಾಡಲಾಗುವುದು. ಬಸ್ಸುಗಳಿಗೆ ೩೦ ದಿನಗಳ ಪೆಟ್ರೋಲ್ ಕೋಟಾವನ್ನು ೧೮ ದಿನಗಳಿಗೆ ಇಳಿಸಲಾಗುವುದು. ಹೊಸದಾಗಿ ರಹದಾರಿ ಪಡೆದ ಬಸ್ಸುಗಳನ್ನು ಗ್ಯಾಸಿನಿಂದ ಓಡಿಸಬೇಕು ಎಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ.

ರಷ್ಯವು ಯುದ್ಧಕ್ಕೆ ಸಿದ್ಧವಿಲ್ಲ

ರಷ್ಯಕ್ಕೆ ಯಾವ ಮಹಾ ಯುದ್ಧವೂ ಬೇಕಾಗಿಲ್ಲವೆಂದೂ, ಅದಕ್ಕಾಗಿ ಅದು ಪ್ರಯತ್ನಿಸುತ್ತಿಲ್ಲವೆಂದೂ ಮತ್ತು ಸಿದ್ಧವಾಗಿಲ್ಲವೆಂದೂ ದೂರಪ್ರಾಚ್ಯದ ಬ್ರಿಟನ್ನಿನ ಮುಖ್ಯ ದಂಡನಾಯಕರಾದ ಆರ್. ಎಲ್. [illegible]ರವರು ಅಭಿಪ್ರಾಯಪಟ್ಟಿದ್ದಾರೆ.

ಅಯ್ಯನಾರ್ [illegible] ಕಲಾ ಶಾಲೆ

ರಾಜಧಾನಿಯ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿರುವ ಅಯ್ಯನಾರ್ ಸಾರ್ವಜನಿಕ ಕಲಾ ಶಾಲೆಯು ಸ್ಥಾಪಿತವಾಗಿ ೪ ವರ್ಷಗಳಾದುವು. ಅಲ್ಲಿ ದಿನವೂ ಬೆಳಿಗ್ಗೆ ೮ ರಿಂದ ೧೦-೩೦ ಮತ್ತು ಮಧ್ಯಾಹ್ನ ೪ ರಿಂದ ೬-೩೦ ಗಂಟೆವರೆಗೆ ಬಾಯಿ ಹಾಡುಗಾರಿಕೆ, ವೀಣೆ, ಪಿಟೀಲು, ಕೊಳಲು ಮತ್ತು ಮೃದಂಗಗಳ ತರಗತಿಗಳು ಪ್ರತಿದಿನವೂ ನಡೆಯುತ್ತವೆ. ಸೇರಬಿಚ್ಛಿಸುವ ವಿದ್ಯಾರ್ಥಿಗಳು ಕಾರ್ಯಾಲಯದಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಬಹುದೆಂದು ಪ್ರಿನ್ಸಿಪಾಲರಾದ ಸಂಗೀತ ರತ್ನ ಟಿ. ಚೌಡಯ್ಯನವರು ತಿಳಿಸುತ್ತಾರೆ.

|| ಶ್ರೀ ||

ಗಣೇಶ ಟಾಕೀಸ್

21-7-49ರಿಂದ

ಪ್ರತಿ ದಿನ 3 ಆಟಗಳು

ಆಜ್-ಕಿ-ರಾತ್
(ಹಿಂದಿ)

ಭೂಮಿಕೆ- ಮೋತಿಲಾಲ್, ಸುರೈಯ್ಯಾ, ಯಾಕೂಬ್, ಪಾ ನವಾಜ್.

—ಮುಂದಿನ ಬದಲಾವಣೆ—

ನಾಟಕ್-ಕ-ಫೂಲ್
(ಹಿಂದಿ)

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆ

ಪ್ರಕಟಣೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಆವರಣಗಳಿಂದ, ಹಲವು ಮಂದಿ ತಾವು ವಿದ್ಯುಚ್ಛಕ್ತಿ ಇಲಾಖೆಯ ನೌಕರರೆಂದು ಹೇಳಿಕೊಂಡು ಬಂದು ಅನೇಕ ಕಡೆಗಳಲ್ಲಿ ಇಲಾಖೆಗೆ ಸೇರಿದ ಮೀಟರುಗಳನ್ನು ತೆಗೆದುಕೊಂಡು ಹೋಗಿರುವ ಸಂಗತಿಗಳು ಗಮನಕ್ಕೆ ಬಂದಿವೆ. ಹಲವು ಮೀಟರುಗಳು ಕಳುವಾಗಿರುವುದಾಗಿಯೂ ವರದಿಯಾಗಿದೆ

ವಿದ್ಯುಚ್ಛಕ್ತಿಯನ್ನು ಬಳಸುವವರ ಮೀಟರುಗಳನ್ನು ಬದಲಾಯಿಸುವ ಅಥವ ತೆಗೆದು ಹಾಕುವ ಪಕ್ಷಕ್ಕೆ ಅದನ್ನು ಇಲಾಖೆಯ ನೌಕರರೇ ಬಂದು ಮಾಡುವರು. ಸದರಿ ನೌಕರರುಗಳಿಗೆ ಇಲಾಖೆಯ ಬ್ಯಾಡ್ಜುಗಳು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಒದಗಿಸಲಾಗಿದೆ. ವಿದ್ಯುಚ್ಛಕ್ತಿ ಉಪಯೋಗಿಸುವವರು ಸದರಿ ಬ್ಯಾಡ್ಜು ಅಥವಾ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೇಳಿ ನೋಡಬಹುದು. ಯಾವುದಾದರೂ ಆವರಣದಿಂದ ಮೀಟರನ್ನು ಬದಲಾಯಿಸ ಬೇಕಾದಲ್ಲಿ ಅಥವಾ ತೆಗೆಯ ಬೇಕಾದಲ್ಲಿ ಆ ಬಗ್ಗೆ ಇಲಾಖೆಯವರು ಅಥಾರಿಟೀಷನ್ ಕಾರ್ಡನ್ನು ನೌಕರರೊಡನೆ ಕಳುಹಿಸುತ್ತಾರೆ. ಆ ಆವರಣಗಳ ಮಾಲೀಕರು ಸದರಿ ಕಾರ್ಡನ್ನು [illegible] ಮಾಡತಕ್ಕದ್ದು. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರ ಆವರಣಗಳಲ್ಲಿರುವ ಮೀಟರ್ ಮತ್ತು ಇತರ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ ಸಲಕರಣೆಗಳ ರಕ್ಷಣೆಯು ಸಂಪೂರ್ಣವಾಗಿ ಆವರಣಗಳ ಮಾಲೀಕರಿಗೇ ಸೇರಿದ್ದು. ಅವುಗಳು ಯಾವುದಾದರೂ ಕಳೆದು ಹೋದಲ್ಲಿ ಅದರ ಬೆಲೆಯನ್ನು ಆಯಾ ಆವರಣಗಳ ಮಾಲೀಕರೇ ಕೊಡಬೇಕಾಗುವುದು. [illegible] ಯಾವುದಾದರೂ ಆವರಣದಲ್ಲಿ ಸರ್ಕಾರಕ್ಕೆ ಸೇರಿದ ವಿದ್ಯುಚ್ಛಕ್ತಿ [illegible] ಕಳುವಾಗಿದ್ದಲ್ಲಿ ಅವುಗಳ ಬೆಲೆಯನ್ನು ಮತ್ತು ಅವುಗಳನ್ನು [illegible] ಕೊಟ್ಟ ಅನಂತರ ವಿದ್ಯುಚ್ಛಕ್ತಿಯನ್ನು ಪಡೆಯಬಹುದು [illegible]

(ಸಹಿ) ಎಂ. ಹಯಾತ್,

ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ೧೮೬೧ರ ೨೧ ೩ ೪೯ ಸಂಚಿಕೆ ೧

ಕಮ್ಯೂನಿಸ್ಟ್ ಚೀಣದ ಮೇಲೆ ದಿಗ್ಬಂಧನವೇ ?

ಪ್ರವಾಹದಿಂದ ರೈಲ್ವೆ ಓಡಾಟಕ್ಕೆ ತೊಂದರೆ

ಮೈಸೂರು ೨೧

ಚನ್ನಪಟ್ಟಣದ ಹತ್ತಿರ ಕೆರೆಯ ಕೋಡಿ ಒಡೆದು ನಿನ್ನೆ ರಾತ್ರಿ ವಿಪರೀತ ನೀರು ಬಂದು ರೈಲ್ವೆ ಲೈನಿನ ಮೇಲೆ ನೀರು ಹರಿಯುತ್ತಿದ್ದುದರಿಂದ ರೈಲು ಓಡಾಟಕ್ಕೆ ಅಡಚಣೆಯುಂಟಾಗಿ, ನಿನ್ನೆ ರಾತ್ರಿ ಬೆಂಗಳೂರಿನಿಂದ ಹೊರಟ ಪ್ಯಾಸೆಂಜರ್ ಗಾಡಿಯು ಈ ಬೆಳಿಗ್ಗೆ ರಾಜಧಾನಿಗೆ ೬ ಗಂಟೆಗೆ ಬದಲಾಗಿ ೧೧ ೧೫ ಗಂಟೆಗೆ ಬಂದಿತು. ಈ ಬೆಳಿಗ್ಗೆ ಲೈನನ್ನು ದುರಸ್ತುಪಡಿಸಿದುದರಿಂದ ಮಿಕ್ಕ ರೈಲುಗಳ ಓಡಾಟಕ್ಕೆ ಯಾವ ತೊಂದರೆಯೂ ಉಂಟಾಗಲಿಲ್ಲ

ವರ್ಧಂತ್ಯುತ್ಸವ

ಮೈಸೂರು ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯಲ್ಲಿ ಶ್ರೀಯುವರಾಜರವರ ೧೧ ನೇ ವರ್ಷದ ವರ್ಧಂತ್ಯುತ್ಸವವನ್ನು ಕಳೆದ ೧೮ ನೇ ತಾ॥ ಶ್ರೀ ... ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ... ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು

ಚಲನ ಚಿತ್ರ ಪ್ರದರ್ಶನ

ರಾಜಧಾನಿಯ ಬಾಲಕ ... ಸಮಾಜದ ಆಶ್ರಯದಲ್ಲಿ ಈ ದಿನ ಸಂಜೆ ೬-೩೦ ಗಂಟೆಗೆ ಲಕ್ಷ್ಮೀಪುರಂ ಮಿಡ್ಲ್ ಸ್ಕೂಲಿನಲ್ಲಿ ವಿದ್ಯಾಪ್ರಸಾರ ಚಲನಚಿತ್ರ ಪ್ರದರ್ಶನವು ನಡೆಯುವುದು. ಪುರಸಭಾ ಉಪಾಧ್ಯಕ್ಷರಾದ ಶ್ರೀ ಟಿ ... ಅಯ್ಯಂಗಾರರು ಅಧ್ಯಕ್ಷತೆ ವಹಿಸುವರು

ಆಯುರ್ವೇದ ಪರೀಕ್ಷೆಗಳ ಫಲಿತಾಂಶ

... ಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳಲ್ಲಿ ಈ ವರ್ಷ ಬೆಂಗಳೂರು ಕೇಂದ್ರದಿಂದ ಕೆಳಗೆ ಕಂಡವರು ಉತ್ತೀರ್ಣರಾಗಿರುತ್ತಾರೆ – ಆಯುರ್ವೇದ ಆಚಾರ್ಯ ಪರೀಕ್ಷೆ–ಪ್ರಥಮ ... ಶ್ರೀ ... ಶೆಟ್ಟಿ, ... ಶ್ರೀ ... ಭಾರದ್ವಾಜ್, ಪ್ರಥಮ ಶ್ರೇಣಿ–ಶ್ರೀ ಎಸ್ ... ರಾವ್, ದ್ವಿತೀಯ ಶ್ರೇಣಿ ಶ್ರೀಮತಿ ಎಂ ಕೆ ನಾಗರತ್ನಮ್ಮ, ... ಬಾಲಕೃಷ್ಣರಾವ್ ... ಉಪಾಧ್ಯಾಯ

ಪರಿಶೆ

... ಪೇಟೆ ... ಗುಡಿ ... ಶ್ರೀ ... ಗೋಪುರ ... ಈ ದಿನ ಸಂಜೆ ೭ ಗಂಟೆಗೆ ಶ್ರೀ ... ನಡೆಸಲಾಗುವುದು

ಮನೆ ಕಟ್ಟಲು ಅನುಮತಿ

ದೇವರಾಜ ... ಕಟ್ಟಡ ... ಅಪ್ಪಣೆ ... ನಗರ ... ಅರ್ಜಿಗಳನ್ನು ... ಶ್ರೀ ... ಕ್ಕೆ ...

ಶ್ರೀಮತಿ ಆರ್. ಪದ್ಮರವರು



ಈ ದಿನ ಸಾಧ್ವಿ ಪತ್ರಿಕಾ ವಾರ್ಷಿಕ ಕಾಲೇಜ್ಜನ ದಲ್ಲಿ ಇವರು ಗಾಯನ ಮಾಡುವರು

ಶಾಂತಾರಾಂರವರಿಗೆ ಪುರಸಭೆಯ ಸತ್ಕಾರ

ಬೆಂಗಳೂರು ೨೧

ಭಾರತದ ಸುಪ್ರಸಿದ್ಧ ಚಲನ ಚಿತ್ರ ನಿರ್ಮಾಪಕರಾದ ... ವಿ ಶಾಂತಾರಾಂ ಮತ್ತು ಅವರ ಪತ್ನಿ ... ಬೆಂಗಳೂರು ಪುರಸಭೆಯವರು ಗೌರವಾರ್ಪಣೆ ... ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಅಧ್ಯಕ್ಷ ... ಶ್ರೀ ಆರ್ ... ಶಾಂತಾರಾಂ ರವರು ಭಾಷಣ ಮಾಡಿ ... ಈ ರೀತಿ ಸನ್ಮಾನ ಮಾಡುವುದು ... ಉತ್ತರ ಭಾರತದಲ್ಲಿ ಇಲ್ಲವೆಂದೂ, ದಕ್ಷಿಣ ಭಾರತದಲ್ಲಿ ... ಚಿತ್ರಗಳನ್ನು ... ಮೈಸೂರು ...

೨೧ನೇ ತಾ॥ ಕರ್ನಾಟಕ ಪ್ರಾಂತ್ಯ ವಿಭಾಜನೆ

... ಕರ್ನಾಟಕ ಪ್ರಾಂತ್ಯ ... [illegible]

ಕಮ್ಯೂನಿಸ್ಟ್ ಚೀಣದ ಮೇಲೆ ದಿಗ್ಬಂಧನವೇ?

ಕಮ್ಯೂನಿಸ್ಟ್ ಚೀಣದ ... ೧೦ ವರ್ಷಗಳ ಕಾಲ ಆರ್ಥಿಕ ದಿಗ್ಬಂಧನವನ್ನು ಹಾಕಬಹುದು ... ಇದಕ್ಕೆ ಚೀಣದ ಜನರು ಸಿದ್ಧರಾಗಿರಬೇಕೆಂದು ... ಕಮ್ಯೂನಿಸ್ಟ್ ನಾಯಕ ... ರವರು ಎಚ್ಚರಿಕೆ ಕೊಟ್ಟಿರುತ್ತಾರೆ

೩ ಜನರ ಕೊಲೆಪಾತಕನಿಗೆ ಮರಣ ದಂಡನೆ

... ೩ ಜನರನ್ನು ಕೊಲೆ ಮಾಡಿ, ಅವರ ರಕ್ತವನ್ನು ... ದ್ರಾವಕದಲ್ಲಿ ... ಮರಣದಂಡನೆಯನ್ನು ಅಲ್ಲಿನ ನ್ಯಾಯಾಧೀಶರು ವಿಧಿಸಿರುತ್ತಾರೆ

ಸಚಿವರ ಮನೆ ಮುಂದೆ ನಿರಾಶ್ರಿತರ ಸತ್ಯಾಗ್ರಹ

ಗುಜರಾತ ರೈಲು ಅಪಘಾತದಿಂದ ... ೩೦೦ ಜನ ನಿರಾಶ್ರಿತರು ... ನಿನ್ನೆ ದಿನ ... ಸಚಿವ ಶ್ರೀ ಮೋರಾರ್ಜಿ ದೇಸಾಯಿರವರ ಮನೆಯ ಮುಂದೆ ಸತ್ಯಾಗ್ರಹ ಮಾಡಿದರು ... ಮುಚ್ಚಿದ ... ತಮಗೆ ... ಕೊಡಬೇಕೆಂದು ಅವರು ಕೇಳಿದ್ದಾರೆ

ಪಶ್ಚಿಮ ಪಂಜಾಬಿನ ಗವರ್ನರರು

ಪಾಕಿಸ್ತಾನದ ... ಸಚಿವರಾದ ... ಪಶ್ಚಿಮ ಪಂಜಾಬಿನ ಗವರ್ನರರಾಗಿ ... [illegible]

ಪರಿಶೆ

... ಶ್ರೀ ... [illegible]

ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ವ್ಯವಸ್ಥಾಪಕ ಸಮಿತಿಯ ಮುಂದಿನ ಅಧಿವೇಶನವು ೧೯೫೦ ನೇ ವರ್ಷದ ಡಿಸೆಂಬರ್ ... ನೇ ತಾ॥ ನಿಂದ ಜನವರಿ ೭ ನೇ ತಾ ॥ ವರೆಗೆ ಮೈಸೂರಿನಲ್ಲಿ ನಡೆಯಬೇಕೆಂದು ನಿರ್ಧಾರವಾಗಿದೆ

ಗ್ವಾಟೇಮಾಲದಲ್ಲಿ ದಂಗೆ

ಗ್ವಾಟೆಮಾಲದ ... ಯಾದ ... ರವರ ಕೊಲೆಯಾದ ಕೆಲವು ಗಂಟೆಗಳಲ್ಲಿ ಅಲ್ಲಿನ ... ದೇಶದಲ್ಲಿ ... ಉಂಟಾಗಿದೆಯೆಂದು ವರದಿಯಾಗಿದೆ ... ಪ್ರಾರಂಭವಾಗಿದೆ ... ಉಂಟಾಗಿದೆಯೆಂದು ಸರ್ಕಾರವು ... ಮಾಡಿದೆ

ಮುದ್ರಣ ಕೆಲಸಗಾರರ ಮುಷ್ಕರ

ಮುಂಬಯಿಯ ಅನೇಕ ಪ್ರಿಂಟಿಂಗ್ ಪ್ರೆಸ್ಸುಗಳ ಸುಮಾರು ೧೦೦೦ ಜನ ಕೆಲಸಗಾರರು ತಮಗೆ ಹೆಚ್ಚು ಸಂಬಳ ಮತ್ತು ಭತ್ಯಗಳನ್ನು ಕೊಡಬೇಕೆಂದು ... ಮುಷ್ಕರ ಹೂಡಿರುತ್ತಾರೆ. ಕಮ್ಯೂನಿಸ್ಟರ ಪ್ರಚೋದನೆಯಿಂದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಡಲು ಯತ್ನಿಸಿದ ೧೭ ಜನ ಮುಷ್ಕರಗಾರರಿಗೆ ... ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು.

ಲಂಡನ್ನಿನಲ್ಲಿ ವರ್ಣ ದಂಗೆ

ಲಂಡನ್ನಿನ ಥೇಮ್ಸ್ ನದಿಯ ದಡದ ... ನೀಗ್ರೋ ಕೆಲಸಗಾರರ ಹೋಟೆಲಿನಲ್ಲಿ ... ಜನರು ಗಲಭೆ ನಡೆಸಿ, ... ಗಂಟೆ ಕಾಲ ... ನಡೆಸಿ, ... ರಿಗೆ ಗಾಯ ಪಡಿಸಿದರು. ಇಂತಹ ವರ್ಣ ದ್ವೇಷ ... ಬ್ರಿಟನ್ನಿನಲ್ಲಿ ನಡೆದಿರುವುದು ಇದೇ ಪ್ರಥಮವೆಂದು ಹೇಳಲಾಗಿದೆ

ಅಣು ಬಾಂಬು ನಿಷೇಧಕ್ಕೆ ವಿರೋಧ

ನ್ಯೂಯಾರ್ಕ ... ಅಣು ಬಾಂಬು ... ನಿಷೇಧಿಸಬೇಕೆಂದು ... ಅಂತರ ರಾಷ್ಟ್ರೀಯ ... ರಾಷ್ಟ್ರಗಳ ... ನಿರ್ಣಯವು ತಿರಸ್ಕರಿಸಲಾಯಿತು

ಗಡಿ ಪ್ರದೇಶದಲ್ಲಿ ಯುಗೋಸ್ಲೇವಿಯಾದ ಸೈನ್ಯ

ಗ್ರೀಸ್ ... ಯುಗೋಸ್ಲೇವಿಯಾ ಗಡಿ ಪ್ರದೇಶಗಳಲ್ಲಿ ಯುಗೋಸ್ಲೇವಿಯಾ ... ಸೈನ್ಯವನ್ನು ಜಮಾಯಿಸುತ್ತಿದೆಯೆಂದು ವರದಿಯಾಗಿದೆ

ನವಗ್ರಹ ದೇವಸ್ಥಾನದಲ್ಲಿ

... ೩ ನೆಯ ... ಶ್ರೀ ... ದೇವಸ್ಥಾನ ... [illegible]

ಫೋ। ನಂ. 792 ॥ವಂದೇ ಮಾತರಂ॥ ಬಿಡಿಪ್ರತಿ ೩ ಕಾಸು

ಸಾಧ್ವಿ

ಸಂಪುಟ ೨] ಗುರುವಾರ ೨೧-೭-೪೮ [ಸಂಚಿಕೆ ೧

ಕಮ್ಯೂನಿಸ್ಟ್ ಚೀಣದ ಮೇಲೆ ದಿಗ್ಬಂಧನವೇ?

ಪ್ರವಾಹದಿಂದ ರೈಲ್ವೆ ಓಡಾಟಕ್ಕೆ ತೊಂದರೆ

ಮೈಸೂರು ೨೧

ಚನ್ನಪಟ್ಟಣ ಮತ್ತು ಶೆಟ್ಟೀಹಳ್ಳಿ ಬಳಿ ನೆನ್ನೆ ರಾತ್ರಿ ವಿಪರೀತ ಮಳೆ ಬಂದು ರೈಲ್ವೆ ಲೈನಿನ ಮೇಲೆ ನೀರು ಹರಿಯುತ್ತಿದ್ದುದರಿಂದ ರೈಲ್ವೆ ಓಡಾಟಕ್ಕೆ ಅಡಚಣೆ ಉಂಟಾಗಿ ನೆನ್ನೆ ರಾತ್ರಿ ಬೆಂಗಳೂರಿನಿಂದ ಹೊರಟು ಪ್ಯಾಸೆಂಜರ್ ಗಾಡಿಯು ಈ ಬೆಳಗ್ಗೆ ರಾಜಧಾನಿಗೆ ೭ ಗಂಟೆಗೆ ಬದಲಾಗಿ ೧೧-೧೫ ಗಂಟೆಗೆ ಬಂದಿತು ಈ ಬೆಳಗ್ಗೆ ಲೈನನ್ನು ದುರಸ್ತು ಪಡಿಸಿದುದರಿಂದ ಮಿಕ್ಕ ರೈಲುಗಳ ಓಡಾಟಕ್ಕೆ ಯಾವ ತೊಂದರೆಯೂ ಉಂಟಾಗಲಿಲ್ಲ

ವರ್ಧಂತ್ಯುತ್ಸವ

ಮೈಸೂರು ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯಲ್ಲಿ ಶ್ರೀಮನ್ಮಹಾರಾಜರವರ ೧೧ ನೇ ವರ್ಷದ ವರ್ಧಂತ್ಯುತ್ಸವವನ್ನು ಕಳೆದ ೧೮ ನೇ ತಾ॥ ಶ್ರೀ ಜೆ. ಎನ್ ಕೃಷ್ಣನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರಭುಗಳ ಭಾವಚಿತ್ರ ಅನಾವರಣೋತ್ಸವವೂ ಜರುಗಿತು. ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು

ಚಲನ ಚಿತ್ರ ಪ್ರದರ್ಶನ

ರಾಜಧಾನಿಯ ಬಾಲಸೇವಾ ಸಮಾಜದ ಆಶ್ರಯದಲ್ಲಿ ಈ ದಿನ ಸಂಜೆ ೬-೩೦ ಗಂಟೆಗೆ ಲಕ್ಷ್ಮೀಪುರಂ ಮಿಡ್ಲ್ ಸ್ಕೂಲಿನಲ್ಲಿ ವಿದ್ಯಾಪ್ರಸಾರ ಚಲನಚಿತ್ರ ಪ್ರದರ್ಶನವು ನಡೆಯುವುದು. ಪುರಸಭಾ ಉಪಾಧ್ಯಕ್ಷರಾದ ಶ್ರೀ ಟಿ ನರಸಿಂಹ ಅಯ್ಯಂಗಾರರು ಅಧ್ಯಕ್ಷತೆ ವಹಿಸುವರು

ಆಯುರ್ವೇದ ಪರೀಕ್ಷೆಗಳ ಫಲಿತಾಂಶ

ನಿಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳಲ್ಲಿ ಈ ವರ್ಷ ಬೆಂಗಳೂರು ಕೇಂದ್ರದಿಂದ ಕೆಳಗೆ ಕಂಡವರು ಉತ್ತೀರ್ಣರಾಗಿರುತ್ತಾರೆ – ಆಯುರ್ವೇದ ಆಚಾರ್ಯ ಪರೀಕ್ಷೆ–ಪ್ರಥಮ ಖಂಡ ಶ್ರೀ ಸ್ವಿ. ವಿ. ರವೀಂದ್ರ ಶೆಟ್ಟಿ. ವಿಶಾರದ ದ್ವಿತೀಯ ಖಂಡ ಶ್ರೀ ಆರ್ ಸಿ ಭಾರದ್ವಾಜ. ಪ್ರಥಮ ಶ್ರೇಣಿ ಶ್ರೀ ಎನ್ ಸುಬ್ಬರಾವ್, ದ್ವಿತೀಯ ಶ್ರೇಣಿ ಶ್ರೀಮತಿ ಎಂ ಕೆ ನಾಗರತ್ನಮ್ಮ, ಶ್ರೀಗಳಾದ ಪಿ ಎ ಲ ಕೃಷ್ಣರಾವ್ ಯಜ್ಞೇಶ್ವರ ಉಪಾಧ್ಯಾಯ

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮ ಲಿಂಗೇಶ್ವರ ಚೌಡೇಶ್ವರಿ ದೇವಾಲಯದಲ್ಲಿ ಈ ದಿನ ಸಂಜೆ ೭ ಗಂಟೆಗೆ ಶ್ರೀ ಗುಂಡೂರಾಯರಿಂದ ರಾಮಾಂಜನೇಯ ಯುದ್ಧ ಎಂಬ ಹರಿಕಥೆ ನಡೆಯುವುದು

ಮನೆ ಕಟ್ಟಲು ಅನುಮತಿ

ಜೀವರಾಜ ಮೊಹಲ್ಲಾ ಧನ್ವಂತರಿ ರಸ್ತೆಯ ನಿರುಪ ಮನೆಗಳನ್ನು ಆಕ್ರಮಿಸಿ ಮಾಡಿಕೊಳ್ಳಲು ... ಮನೆಗಳನ್ನು ... ಕಟ್ಟಬೇಕೆಂದು ... ವನ್ನು ... ಮಾಡಲು ... ಸೀನಿ ... ಅನುಮತಿ ... ಶ್ರೀ ... ನವರು

ಶ್ರೀಮತಿ ಆರ್. ಪದ್ಮರವರು

ಈ ದಿನ ಇಂದಿರಾ ಸಭಾಂಗಣದಲ್ಲಿ ನಾಟಕ ಕಲೋತ್ಸವದಲ್ಲಿ ಇವರು ಗಾಯನ ಮಾಡುವರು

ಶಾಂತಾರಾಂರವರಿಗೆ ಪುರಸಭೆಯ ಸತ್ಕಾರ

ಬೆಂಗಳೂರು ೨೧

ಭಾರತದ ಸುಪ್ರಸಿದ್ಧ ಚಲನ ಚಿತ್ರ ನಿರ್ದೇಶಕರಾದ ಶ್ರೀ ವಿ ಶಾಂತಾರಾಂ ಮತ್ತು ಅವರ ಪತ್ನಿ ನಟಿ ಶ್ರೀಮತಿ ಜಯಶ್ರೀರವರುಗಳ ಗೌರವಾರ್ಥವಾಗಿ ಪುರಸಭೆಯವರು ನೆನ್ನೆ ಸಂಜೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಅಧ್ಯಕ್ಷರಾದ ಶ್ರೀ ಆರ್ ಸುಬ್ಬಣ್ಣನವರು ಸ್ವಾಗತ ಭಾಷಣಮಾಡಿದರು. ಶ್ರೀ ಶಾಂತಾರಾಂರವರು ಭಾಷಣ ಮಾಡಿ ಕಲಾವಿದರಿಗೆ ಈ ರೀತಿ ಸನ್ಮಾನ ಮಾಡುವುದು ಉತ್ತರ ಭಾರತದಲ್ಲಿ ಇಲ್ಲವೆಂದೂ, ದಕ್ಷಿಣ ಭಾರತದಲ್ಲಿ ಕಲೆಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿದೆಯೆಂದೂ ತಿಳಿಸಿದರು. ಉತ್ತಮ ಚಿತ್ರಗಳನ್ನು ತಯಾರಿಸ ... ತ ... ಹೇಳಿದರು

೨೪ನೇ ತಾ॥ ಕರ್ನಾಟಕ ಪ್ರಾಂತ್ಯ ದಿನಾಚರಣೆ

ಇದೇ ೨೪ ನೇ ತಾ॥ ಕರ್ನಾಟಕದ ಪ್ರತಿಯೊಂದು ಕಡೆ ... ಪ್ರಾಂತ್ಯ ದಿನಾಚರಣೆಯನ್ನು ಆಚರಿಸಿ ... ಕರ್ನಾಟಕ ಏಕೀಕರಣ ... ಒಂದು ... ಪ್ರತಿನಿಧಿಗಳ ... ಮಾಡಬೇಕೆಂದು ... ಪ್ರಾಂತ್ಯ ... ಆಚರಿಸಬೇಕು ...

ಕಮ್ಯೂನಿಸ್ಟ್ ಚೀಣದ ಮೇಲೆ ದಿಗ್ಬಂಧನವೇ?

ಕಮ್ಯೂನಿಸ್ಟ್ ಆಕ್ರಮಿತ ಚೀಣದ ಮೇಲೆ ಅಮೆರಿಕವು ೧೦ ವರ್ಷಗಳ ಕಾಲ ಆರ್ಥಿಕ ದಿಗ್ಬಂಧನವನ್ನು ಹಾಕಬಹುದೆಂದೂ, ಇದಕ್ಕೆ ಚೀಣದ ಜನರು ಸಿದ್ಧರಾಗಿರಬೇಕೆಂದೂ ಚೀಣದ ಕಮ್ಯೂನಿಸ್ಟ್ ನಾಯಕ ಜ. ಚೌ ಎನ್ ಲೈರವರು ಎಚ್ಚರಿಕೆ ಕೊಟ್ಟಿರುತ್ತಾರೆ

೬ ಜನರ ಕೊಲೆಪಾತಕನಿಗೆ ಮರಣ ದಂಡನೆ

ಬ್ರಿಟನ್ನಿನ ಸಸೆಕ್ಸಿನ ಲೆವಸ್ ನಲ್ಲಿ ೩೯ ವರ್ಷದ ಹೇಗ್ ಎಂಬುವನು ೬ ಜನರನ್ನು ಕೊಲೆ ಮಾಡಿ, ಅವರ ರಕ್ತವನ್ನು ಕುಡಿದು ಶವಗಳನ್ನು ದ್ರಾವಕದಲ್ಲಿ ಕರಗಿಸಿದನೆಂಬ ಅಪಾದನೆಯ ಮೇಲೆ ಆತನಿಗೆ ಮರಣದಂಡನೆಯನ್ನು ಅಲ್ಲಿನ ನ್ಯಾಯಾಧೀಶರು ವಿಧಿಸಿರುತ್ತಾರೆ

ಸಚಿವರ ಮನೆ ಮುಂದೆ ನಿರಾಶ್ರಿತರ ಸತ್ಯಾಗ್ರಹ

ಗುಜರಾತ್ ರೈಲು ಅಪಘಾತದಿಂದ ಪಾರಾದ ೩೦೦ ಜನ ನಿರಾಶ್ರಿತ ಹೆಂಗಸರು ಮತ್ತು ಮಕ್ಕಳು ಮೊನ್ನೆ ದಿನ ದೆಹಲಿಯಲ್ಲಿ ನಿರಾಶ್ರಿತ ಪುನರ್ವ್ಯವಸ್ಥಾ ಸಚಿವ ಶ್ರೀ ಮೋಹನ್‌ಲಾಲ್ ಸಕ್ಸೇನಾರವರ ಮನೆ ಮುಂದೆ ಸತ್ಯಾಗ್ರಹ ಮಾಡಿದರು. ರಾತ್ರಿ ಮಳೆ ಬಿದ್ದರೂ ಮೈದಾನದಲ್ಲೇ ಬಿಡಾರವನ್ನು ಹೂಡಿದ್ದರು. ... ಬೇಕೆಂದು ಅವರು ಹಠ ಹಿಡಿದಿದ್ದಾರೆ

ಪಶ್ಚಿಮ ಪಂಜಾಬಿನ ಗವರ್ನರರು

ಪಾಕಿಸ್ಥಾನದ ಪಂಜಾಬ ಸಚಿವರ ... ಸರದಾರ್ ಅಬ್ದುರ್ ರಬ್ ನಿಷ್ತಾರರವರನ್ನು ಪಶ್ಚಿಮ ಪಂಜಾಬಿನ ಗವರ್ನರಾಗಿ ನೇಮಿಸಲಾಗಿದೆ. ಇವರು ಮುಂದಿನ ತಿಂಗಳು ... ನೇ ತಾ। ಅಧಿಕಾರ ವಹಿಸಿಕೊಳ್ಳುವರು.

ಹರಿಕಥೆ

ಬೆಂಗಳೂರಿನ ... ನವರ ಗ್ಗೀದಿಯ ... ರ ... ದೇವಸ್ಥಾನದಲ್ಲಿ ... ಶ್ರೀ ... ಈ ದಿನ ಸಂಜೆ ... ಶ್ರೀ ಬೆಂಗಳೂರು ... ಕಥೆ ನಡೆಯಲಿದೆ

ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ವ್ಯವಸ್ಥಾಪಕ ಸಮಿತಿಯ ಮುಂದಿನ ಅಧಿವೇಶನವು ೧೯೫೦ ನೇ ಇಸವಿ ಡಿಸೆಂಬರ್ ೨೭ ನೇ ತಾ॥ ನಿಂದ ಜನವರಿ ೭ ನೇ ತಾ। ವರೆಗೆ ಮೈಸೂರಿನಲ್ಲಿ ನಡೆಯುವುದೆಂದು ನಿರ್ಧಾರವಾಗಿದೆ

ಗ್ವಾಟೆ ಮಾಲದಲ್ಲಿ ದಂಗೆ

ಗ್ವಾಟೆ ಮಾಲದ ಮಾಜಿ ಸೈನ್ಯಾಧಿಕಾರಿಯಾದ ಫ್ರಾನ್ಸಿಸ್ಕೋರವರ ಕೊಲೆಯಾದ ಕೆಲವು ಗಂಟೆಗಳಲ್ಲಿ ಅಲ್ಲಿನ ಸೇನೆಗಳಲ್ಲಿ ಎರಡು ಪಕ್ಷವಾಗಿ, ದೇಶದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿಯು ಉಂಟಾಗಿದೆಯೆಂದು ವರದಿಯಾಗಿದೆ. ಎಲ್ಲೆಲ್ಲೂ ಗಲಭೆ ಪ್ರಾರಂಭವಾಗಿದೆ. ಗಂಭೀರ ಪರಿಸ್ಥಿತಿ ಉಂಟಾಗಿದೆಯೆಂದು ಸರ್ಕಾರವು ಘೋಷಣೆ ಮಾಡಿದೆ

ಮುದ್ರಣ ಕೆಲಸಗಾರರ ಮುಷ್ಕರ

ಮುದರಾಸಿನ ಎಸೋಸಿಯೇಟೆಡ್ ಪ್ರಿಂಟಿಂಗ್ ಪ್ರೆಸ್ಸುಗಳ ಸುಮಾರು ೧೦೦೦ ಜನ ಕೆಲಸಗಾರರು ತಮಗೆ ಹೆಚ್ಚು ಸಂಬಳ ಮತ್ತು ಭತ್ಯಗಳನ್ನು ಕೊಡಬೇಕೆಂದು ನೆನ್ನೆಯಿಂದ ಮುಷ್ಕರ ಹೂಡಿದ್ದಾರೆ. ಕಮ್ಯೂನಿಸ್ಟರ ಪ್ರಚೋದನೆಯಿಂದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಡಲು ಯತ್ನಿಸಿದ ೧೪ ಜನ ಮುಷ್ಕರಗಾರರನ್ನು ಕ... ಬಂಧಿಸಲಾಯಿತು

ಲಂಡನ್ನಿನಲ್ಲಿ ವರ್ಣ ದಂಗೆ

ಲಂಡನ್ನಿನ ... ದ ... ದ ... ನ ನೀಗ್ರೋ ಕೆಲಸಗಾರರ ಹೋಟೆಲಿನಲ್ಲಿ ೧೧ ಸಾವಿರ ಬಿಳಿಯ ಜನರು ಗಲಭೆ ನಡೆಸಿ, ನೀಗ್ರೋ ಜನರ ಮೇಲೆ ೩ ಗಂಟೆ ಕಾಲ ಹಲ್ಲೆ ನಡೆಸಿ, ಅನೇಕರಿಗೆ ಗಾಯ ಪಡಿಸಿದರೆಂದೂ, ಇಂತಹ ವರ್ಣ ದ್ವೇಷವನ್ನು ಪ್ರದರ್ಶಿಸುವ ಪ್ರಯತ್ನದಲ್ಲಿ ನಡೆದಿರುವುದು ಇದೇ ಪ್ರಥಮವೆಂದೂ ಹೇಳಲಾಗಿದೆ

ಅಣು ಬಾಂಬು ನಿಷೇಧಕ್ಕೆ ವಿರೋಧ

ಮುಂದಿನ ಯುದ್ಧದಲ್ಲಿ ಅಣು ಬಾಂಬು ಮುಂತಾದ ವಿನಾಶಕಾರಕ ಶಸ್ತ್ರಗಳನ್ನು ಉಪಯೋಗಿಸದಂತೆ ನಿಷೇಧಿಸಬೇಕೆಂದು ಜಿನೀವಾದಲ್ಲಿ ನಡೆದಿದ್ದ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯ ೩೦ ರಾಷ್ಟ್ರಗಳ ಸಭೆಯಲ್ಲಿ ಸೂಚಿಸಿದ್ದ ನಿರ್ಣಯವು ತಿರಸ್ಕೃತವಾಯಿತು

ಗಡಿ ಪ್ರದೇಶದಲ್ಲಿ ಯುಗೋಸ್ಲೇವಿಯಾದ ಸೈನ್ಯ

ಗ್ರೀಕ್ ಅಲ್ಬೇನಿಯಾ ... ಗಡಿ ಪ್ರದೇಶಗಳಲ್ಲಿ ಯುಗೋಸ್ಲೇವಿಯಾ ... ಸೈನ್ಯವನ್ನು ಜಮಾಯಿಸಲಾಗಿದೆ

ನವಗ್ರಹ ದೇವಸ್ಥಾನದಲ್ಲಿ ಅಲಂಕಾರ

ರಾಜಧಾನಿಯ ಕೋಟೆ ಶ್ರೀ ... ನವಗ್ರಹ ದೇವಸ್ಥಾನದಲ್ಲಿ ... ನ ... ಶ್ರೀ ... ಅಲಂಕಾರ ... ಪೂಜೆ ... ನಡೆಯುವುದು

ಸಾಧ್ವಿ

ಷ ಸ್ಯ ಸಾ ದ ಗ ಳು

ಸ್ವಾತಂತ್ರ್ಯ ದಿನಾಚರಣೆಯಲ್ಲಿ ದೀಪೋತ್ಸವ ಕೂಡದು

ಯೂನಿ ಅದಂಬರ ಮತ್ತು ದೀಪೋತ್ಸ ವಗಳನ್ನು ಆಗಸ್ಟ್ ೧೫ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬೇಕೆ ಡ. ಭಾರತ ಸರ್ಕಾರದವರು ಪ್ರಾಂತ್ಯ ಮತ್ತು ಸಂಸ್ಥಾನ ಸರ್ಕಾರಗಳಿಗೆ ಸೂಚನೆ ಕೊಟ್ಟಿರುತ್ತಾರೆ

ಮಹಿಳಾ ಜ್ಯೂರಿಗಳು

ಮದರಾಸಿನ ಹೈ ಕೋರ್ಟಿನಲ್ಲಿ ಪ್ರಥಮ ಬಾರಿ ಮಹಿಳಾ ಜ್ಯೂರಿಗಳನ್ನು ನೇಮಿಸಲಾಗಿದೆ ೩೬ ಜನ ಸ್ತ್ರೀಯರ ಹೆಸರುಗಳನ್ನು ಪಟ್ಟಿಯೊಳಗೆ ಸೇರಿಸಲಾಗಿದೆ

RAJKAMAL,
MYSORE
From 22—7—49
Daily 3 Shows
Black Narcissus
In Technicolour
With Mysore Sabu and Jean Simmons

ಬೆಳಗಿನ ಪ್ರದರ್ಶನಗಳು
ತಾ॥ 22-7-49 ರಿಂದ 4 ದಿನಗಳು
ಫಿಕ್ ರಾತ್
(ಹಿಂದಿ)

Edited printed and published by A. R. Nagarajan, at Sadhvi Press, Lr. Subbaiah Road, Mysore.

॥ ಶ್ರೀ ॥
ಗಾಯಿತ್ರಿ ಟಾಕೀಸ್
22-7-49 ರಿಂದ ಎರಡು ದಿನ ಮಾತ್ರ ಪ್ರತಿ ದಿನ 3 ಆಟಗಳು
ದಿ ರೆಕ್ ಆಫ್ ದಿ ಹೆಸ್ಪೆರಸ್

-:Coming:-
The New Adventures of DON JUAN

ಬೆಳಗಿನ ಪ್ರದರ್ಶನಗಳು
23-7-49 ರಿಂದ 3 ದಿನ

MYSORE CITY MUNICIPALITY

—:o:—

Sealed tenders will be received up to 4 p.m. on 27-7-49 by the Municipal Engineer for the works 1. Protecting the sides of Adam Khan Masjid Road, K. R. Mohalla, 2. Constructing the played wing wall after demantling the damaged wing wall, up stream side across Doddakere tank bund. Each tender must be accompanied with a chellan for having remitted Rs 65 and Rs 32 respectively for the items 1 & 2 in the Municipal Treasury. For full particulars please see the detailed notification on the office notice board.

Sd. V. K. MUKUNDAN,
Municipal Engineer

CITY MUNICIPALITY, MYSORE

NOTICE

Sealed tenders will be received up to 4 P.M. on 27-7-1949 by the Municipal Engineer for constructing two rooms on either sides of passage of Devaraja Market 1st floor, Mysore. Each tender must be accompanied with a chellan for having remitted Rs 20 to the Municipal Treasury as earnest money. For full particulars please see the notification on the office notice board.

V. K. Mukundan,
[illegible]

॥ ಶುಭಮಸ್ತು ॥

ಮಂಗಳಾರಂಭನಂ

—:o:—

ಶ್ರೀ ಸಾಧ್ವೀ ಪತ್ರಿಕೆಯ ಸಪ್ತ ವಾರ್ಷಿಕ ಮಹೋತ್ಸವ ಸಂದರ್ಭದಲ್ಲಿ ಪಠಿಸಿದ ಮಂಗಳಾರಂಭದ ದಿವ್ಯ

ಪದ್ಯ ಮಾಲಿಕೆ

ಶ್ರೀಮನೋಹರ ಮಾರಸಿತ ವರ
ಸಾಮಗಾನ ವಿಲೋಲ, ಸಾಸಿರ
ನಾಮ, ರವಿಶತಸನ್ನಿಭ ವಿಶ್ವಾರಾಧ್ಯ
ಮೂರುತಿಯೆ

ಭಾಮನುಂದರ ಗಾತ್ರ ಭಕ್ತಸು
ಧಾಮ ರಕ್ಷಕ ಕೃಷ್ಣ ಪೊರೆಯ್ಯೋ
ಕಾಮಿತಾರ್ಥವ ನಿತ್ತು ಸಂತತ ಸಕಲ
ಸಜ್ಜನರ ॥೧॥

ಶಾಂತಿಯೇ ಸರ್ವಕ್ಕೆ ಸಾಧನ
ಶಾಂತಿಯೇ ಸೌಖ್ಯಕ್ಕೆ ಮೂಲವು
ಶಾಂತಿಯೇ ಸ್ವರ್ಗಾಪವರ್ಗವನೀವ
ನಿಷ್ಪತಿಗೆ

ಶಾಂತಿ ದೇಹದ ಕಾಂತಿ ತಿಳಿಯಲು
ಶಾಂತಿಯಲ್ಲದೆ ಬೇರೆ ಮನುಜಗೆ
ದಾ..ತಿ ಕಾಣೊದಗುವುದೆ, ಶಾಂತಿ
ಸರ್ವಾಧಾರ ॥

ಚರಣಗಳ ಕಮಲಯುಗಳ ...
... ವಾಲಂಕಾ
ಮೋದಿಸಿ

ಪರಮ ಮಂಗಳ ಸಾಧ್ವಿ ಯೊಳುನೆರೆ
... ಸಾಧ್ವಿ ಪತ್ರಿ
... ಸೊಗಯಿಸಲಿ ॥

... ನೊಡಿದ ಸದ್ಗುಣ
... ವೆಂಕಟಕೃಷ್ಣನಾಮರು
... ತುಂ
ಬಿಗಿರಲಿ

... ಮಂದಿನೆ
...
...
ಸಾಕ್ಷಿ ...॥

...
...
ಪಂತ, ಜನನುತ ವೆಂಕಟಕೃಷ್ಣ, ಭ
ದ್ಯಕರು

ಸಂತಸದೊಳ್ ...
...
... ಕುಡುಗೆ ಪರದಂತೆ ॥

ಮಂಗಳವು ಭಾರತಕೆ ಸಂತತ
ಮಂಗಳವು ಜಾಪ್ರಜೆಯ ...
ಮಂಗಳವು ಜಯ ಚಾಮರಾಜರ
ದಿವ್ಯ ...

ಮಂಗಳವು ಸಾಧ್ವೀ ಸುಪತ್ರಿಕೆ
ಮಂಗಳವು ಸದ್ಭಕ್ತಗೆ ನಿರುತವು
ಮಂಗಳವು ಗೋಪಾಲ ಕೃಷ್ಣನ ...
ಚರಣ ...॥

ಕವಿ, ಆರುಕಂರತ್ನಂ ಭಾರ.

ಬಿಕರಿಗೆ ಸಿದ್ಧವಾಗಿದೆ
ಪಂಚ ರಾತ್ರ
By Dr. R. S. Narayan Sastri
Inter Arts & Inter Science
Text Book for 1949-50
ಬೆಲೆ 1-6-0
ಮಿತ್ರ ಮತ್ತು ಕಂಪೆನಿ.

ಫೋನ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೨೨-೭-೧೯೪೮ [ಸಂಚಿಕೆ ೨

ಭಾರತದಲ್ಲಿ ಪಾಕಿಸ್ತಾನ್ ಗೂಢಚಾರರ ತಂಡ

ಸಾಧ್ವಿ ಪತ್ರಿಕೆಯ ವಾರ್ಷಿಕೋತ್ಸವ

೭ ನೇ ವರ್ಷದ ಸಮಾರಂಭ

ಮೈಸೂರು, ..

"ಸಾಧ್ವಿ" ಪತ್ರಿಕೆಯ ೭ ನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಶ್ರೀ ರಾಮ ಪ್ರೆಸ್ಸಿನಲ್ಲಿ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷತೆ ವಹಿಸಬೇಕಾಗಿದ್ದ ಶ್ರೀ ಪಿ. ವೆಂಕಟಪ್ಪನವರು ಕಾರಣಾಂತರ ವಶ ನಿಮಿತ್ತ ಬರಲಿಲ್ಲ. ನಗರದ ಅನೇಕ ಗಣ್ಯ ಮಹನೀಯರೂ, ಮಹಿಳೆಯರೂ ದಯಮಾಡಿಸಿದ್ದರು.

ಸಾಹಿತ್ಯ ವಿದ್ವಾನ್ ಎಚ್. ರಾಮರಾವ್ ಅವರಿಂದ ಸಂಸ್ಕೃತದಲ್ಲೂ, ಆಶುಕವಿ ರತ್ನಂ ವಿದ್ವಾನ್ ಭಾರತೀಯವರಿಂದ ಕನ್ನಡದಲ್ಲೂ ಮಂಗಳಾಚರಣೆಯು ನಡೆಯಿತು. ನಂತರ ಆಸ್ಥಾನ ವಿದ್ವಾನ್ ಪ. ಲಿಂಗೂರು ಕೃಷ್ಣಾಚಾರ್ಯರಿಂದ ವೀಣೆ ಮತ್ತು ಸಿತಾರ್ ವಾದನವು ಆರ್. ಎಸ್. ಶ್ರೀನಿವಾಸಪ್ಪನವರ ತಬಲದೊಡನೆ ನಡೆಯಿತು.

ಪತ್ರಿಕೆಯ ಸಂಪಾದಕರಾದ ಶ್ರೀ ಎಂ. ರಂಗಯ್ಯನವರು ಸ್ವಾಗತ ಭಾಷಣ ಮಾಡಿ, ತಾವು ಮೈಸೂರಿನ ಪ್ರಸಿದ್ಧ ನಾಯಕರಾದ ಶ್ರೀ ಮಾನ್ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ "ಸಾಧ್ವಿ" ಪತ್ರಿಕೆಯನ್ನು ನಡೆಸುತ್ತಿರುವ ಉದ್ದೇಶವನ್ನು ತಿಳಿಸಿ, ತಮ್ಮ ಉದ್ಯಮದಲ್ಲಿ ಸಕಲರ ಬೆಂಬಲವನ್ನೂ ಕೋರಿದರು.

ಪುರಸಭಾ ಅಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಭಾಷಣ ಮಾಡಿ, ವೃದ್ಧ ತಾತಯ್ಯನವರ ೧.೧೧ ಕಥನವನ್ನು ಮಾಡಿದರು. ಶ್ರೀಮಾನ್ ವೆಂಕಟಕೃಷ್ಣಯ್ಯನವರು ಅನೇಕ ರಾಜಕೀಯ ಹಿಂಸೆಯೇ ಯಾವ ತೊಂದರೆಗಳಿಗೂ ಅಂಜದೆ ಧೈರ್ಯದಿಂದ ಹಲವಾರು ಪತ್ರಿಕೆಗಳನ್ನು ಪ್ರಕಟಿಸಿ, ಸರ್ಕಾರವನ್ನು ಎದುರಿಸಿ ಜನರ ಅಂತರಂಗವನ್ನು ತಿಳಿಸಿದರು. ಪತ್ರಿಕಾ ವ್ಯವಸಾಯದಲ್ಲಿ ಶ್ರೀ ತಾತಯ್ಯನವರು ಎಷ್ಟು ಕಷ್ಟಪಟ್ಟರೂ ನಿಜವಾಗ ಪತ್ರಿಕೋದ್ಯಮದ ಸ್ವಾತಂತ್ರ್ಯಗಳನ್ನು ಅವರ ಸಾಹಸದಿಂದ ಕೊನೆಯವರೆಗೂ ಕಾಪಾಡಿಕೊಂಡು ಬಂದರೆಂದೂ, ಪತ್ರಿಕೆಯವರೆಲ್ಲರೂ ಅವರ ಉನ್ನತ ಆದರ್ಶಗಳನ್ನು ಅನುಸರಿಸಬೇಕೆಂದೂ ಹೇಳಿದರು. ಸಂಸ್ಥಾನದಲ್ಲಿ ವಿದ್ಯಾ ವಿಚಾರ ಮತ್ತು ಆರ್ಥಿಕ ಪ್ರಗತಿಗಳಲ್ಲೂ ಅವರ ಪಾತ್ರ ಹಿರಿದೆಂದು ತಿಳಿಸಿದರು.

ಅವರ ನಂತರ ಪತ್ರಿಕೋದ್ಯಮದ ಕಷ್ಟಗಳನ್ನು ತಿಳಿಸಿ, ಪತ್ರಿಕೆಗಳ ರಕ್ಷಣೆಗೆ ಬೇಕೆಂದು ಹೇಳಿದರು. ... ಮೈಸೂರು ... ಬೆಳೆದ ಹಣ ... ಪತ್ರಿಕೆಗಳು ... ಎಂದಿರುವ ... ಬಗ್ಗೆ ... ಮಾತನಾಡಿ ... ಹೇಳಿದರು.

[illegible]

ಹೆಂಡತಿಯ ಕೊಲೆಗೆ ಜೀವಾವಧಿ ಶಿಕ್ಷೆ

ಮೈಸೂರು, ೨೨

ಚಾಮರಾಜನಗರ ತಾಲ್ಲೂಕು ಹನಿಯೂರಿನ ರಂಗೇಗೌಡನು ತನ್ನ ಹೆಂಡತಿ ಮರಮ್ಮನ ನಡತೆಯ ವಿಚಾರದಲ್ಲಿ ಅನುಮಾನ ಪಟ್ಟು ೨-೩-೪೮ರಲ್ಲಿ ಮಚ್ಚಿನಿಂದ ಕೊಚ್ಚಿ ಕೊಲೆಮಾಡಿದನೆಂದು ಆತನಿಗೆ ಜೀವಾವಧಿ ಶಿಕ್ಷೆಯನ್ನು ಸೆಷನ್ಸ್ ನ್ಯಾಯಾಧೀಶರು ವಿಧಿಸಿದರು.

ಜೇಬುಗಳ್ಳನಿಗೆ ೬ ತಿಂಗಳು ಶಿಕ್ಷೆ

ಚಾಮುಂಡಿ ಬೆಟ್ಟದಲ್ಲಿ ಶ್ರೀ ಕೆ. ಜನಾರ್ಧನ ನಾಯ್ಡುರವರ ಜೇಬಿನಲ್ಲಿದ್ದ ಹಣ ಮತ್ತು ಕಾಗದಗಳನ್ನು ಕದ್ದ ... ಕಳವು ಮಾಡಿದನೆಂದು ... ರಂಗಪ್ಪನಿಗೆ ... ಮ್ಯಾಜಿಸ್ಟ್ರೇಟರು ೬ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ.

ಗಾಂಧಿ ಸೇವಾ ಸಂಘ

ರಾಜಧಾನಿಯ ಗಾಂಧೀ ಸೇವಾ ಸಂಘದ ಸಭೆಯು ಕಳೆದ ೧೮ನೇ ತಾ|| ನಡೆದು ಸಂಘದಲ್ಲಿರುವ ಚಟ್ಟೆಯಲ್ಲಿ ೮೦ ಗಜಗಳನ್ನು ... ಬೆಳೆದ ಚಟ್ಟೆಯನ್ನು ಜನ ಸೇವಕರಿಗೆ ಉಚಿತವಾಗಿ ಹಂಚಬೇಕೆಂದು ತೀರ್ಮಾನಿಸಲಾಯಿತು. ಶ್ರೀ ಗಣಪತಿ ... ಎಸ್. ರಾಮಯ್ಯ ... ರಾಜಧಾನಿ ... ತೀರ್ಮಾನಿಸಲಾಯಿತು. ... ಕಾರ್ಯದರ್ಶಿ ... ಸಭೆಯು ... ಬರಖಾಸ್ತಾಯಿತು.

ಪ್ರಧಾನಿಗಳ ಭೇಟಿ

[illegible]

ಮುಕ್ತ ಳ ಹಬ್ಬ

ಮೈಸೂರು, ೨೨

ಇದೇ ೩೦ ನೇ ತಾರೀಖು ಶುಕ್ರವಾರ ಗಾಂಧೀ ಸ್ವಾಮಿಯವರ ಮುತ್ತಿನ ಪಲ್ಲಕ್ಕಿಯನ್ನು ಆಚರಿಸಲು ಏರ್ಪಾಡಾಗಿದೆ. ಬೆಳಿಗ್ಗೆ ೬-೩೦ ರಿಂದ ೧೧ ಗಂಟೆಯವರೆಗೆ ಎಲ್ಲಾ ವಾರ್ಡುಗಳಲ್ಲಿ ಧ್ವಜ ವಂದನೆ, ನೃತ್ಯ, ಕೋಲಾಟಗಳೊಡನೆ ಸಭೆ. ಆ ಗಳು ಮತ್ತು ಸಿಹಿ ತಿಂಡಿ ವಿತರಣೆ, ಬಹುಮಾನ ವಿತರಣೆ ಮತ್ತು ಸಭೆ, ಸಂಜೆ ೪ ರಿಂದ ಟೌನ್ ಹಾಲ್ ಮೈದಾನದಲ್ಲಿ ವಿವಿಧ ವಿನೋದಗಳು ಮತ್ತು ಸಭೆ ನಡೆಯುತ್ತವೆ.

ಇದೇ ೨೩ ಮತ್ತು ೨೪ನೇ ತಾ|| ಗಳು ... ಪಾಠಶಾಲಾ ಬಾಲಕ ಬಾಲಕಿಯರಿಗೆ ಆಟಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸೇರಬೇಕೆನ್ನುವವರು ಇದೇ ೨೩ನೇ ತಾ|| ಸಂಜೆಯೊಳಗಾಗಿ ... ಹೆಸರುಗಳನ್ನು ಕೊಡಬೇಕೆಂದು ... ಕೋರಿದ್ದಾರೆ.

ಸ್ಥಾಪಕರ ದಿನಾಚರಣೆ

೬ ... ವಿದ್ಯಾ ಸಂಸ್ಥೆಗಳ ಸ್ಥಾಪಕರ ದಿನಾಚರಣೆಯು ಇದೇ ೨೩ನೇ ತಾ|| ೬ ಗಂಟೆಗೆ ... ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಸ್ವೀಕಾರ

... ಕರ್ನಾಟಕ ... ಕಾಂಗ್ರೆಸ್ ... ವಿಮರ್ಶೆಗಾಗಿ ... ಪುಸ್ತಕಗಳನ್ನು ಅವರಿಂದ ಸ್ವೀಕರಿಸಿದ್ದೇವೆ.

೩೧ ನೇ ತಾ|| ನಾಸಿಂ ರಜ್ವಿಯ ವಿಚಾರಣೆ

[illegible]

ಮದರಾಸ್ ರಸ್ತೆಯಲ್ಲಿ ವಿದ್ಯಾರ್ಥಿಗಳ ಹಾವಳಿ

[illegible]

ಭಾರತದಲ್ಲಿ ಪಾಕಿಸ್ತಾನದ ಗೂಢಚಾರರು

ಭಾರತದಲ್ಲಿ ಪಾಕೀಸ್ತಾನದ ಗೂಢಚಾರರ ಚಟುವಟಿಕೆಯು ಇತ್ತೀಚೆಗೆ ಹೆಚ್ಚಿರುವುದು ಪತ್ತೆಯಾಗಿದೆಯೆಂದು ವರದಿಯಾಗಿದೆ. ಪಾಕೀಸ್ತಾನದ ಮುಸ್ಲಿಮರುಗಳನ್ನು ಹೆಚ್ಚಾಗಿ ಮುಖ್ಯ ಕೈಗಾರಿಕಾ ಕೇಂದ್ರಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಬಾರದೆಂದು ಭಾರತ ಸರ್ಕಾರದವರು ಪ್ರಾಂತೀಯ ಸರ್ಕಾರಗಳಿಗೆ ಇತ್ತ ಗುಪ್ತ ಸೂಚನೆಯನ್ನು ಪಾಕೀಸ್ತಾನದ ಪತ್ರಿಕೆಯೊಂದು ವಿಶದವಾಗಿ ಪ್ರಕಟಿಸಿರುವುದು ಭಾರತದಲ್ಲಿ ಪಾಕೀಸ್ತಾನದ ಗೂಢಚಾರರ ಕೆಲಸವು ಎಷ್ಟು ತೃಪ್ತಿಕರವಾಗಿ ನಡೆಯುತ್ತಿದೆಯೆಂಬುದು ಬಹಿರಂಗವಾಗಿದೆ.

ದೇವರಿಗೆ ಮಗನ ತಲೆಯ ಸಮರ್ಪಣೆ

ಮದರಾಸ್ ಪ್ರಾಂತ್ಯದ ಕಲೂರು ಗ್ರಾಮದ ಕನ್ನೆ ಮತ್ತು ಗೌಡರ್ ಎಂಬುವರು ತಮಗೆ ಹಿಂದಿನ ರಾತ್ರಿ ಕನಸಿನಲ್ಲಿ ತಮ್ಮ ಮಗನ ತಲೆಯನ್ನು ಅರ್ಪಿಸಬೇಕೆಂದು ದೈವಿಕ ಶಕ್ತಿಯು ಹೇಳಿತೆಂದೂ, ಮಾರನೇ ದಿನ ತಮ್ಮ ೫ ವರ್ಷದ ಮಗನ ತಲೆಯನ್ನು ಕತ್ತರಿಸಿ, ದೇವರಿಗೆ ಅರ್ಪಿಸಿದರೆಂದೂ ವರದಿಯಾಗಿದೆ. ಈಗ ಅವರನ್ನು ಪೋಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಮದರಾಸು ಆಂಧ್ರ ಮತ್ತು ತಮಿಳು ರಾಜಧಾನಿ

ಮದರಾಸು ನಗರವು ಆಂಧ್ರ ಮತ್ತು ತಮಿಳು ಪ್ರಾಂತ್ಯಗಳೆರಡಕ್ಕೂ ರಾಜಧಾನಿಯಾಗಿರಬೇಕೆಂದೂ, ಅದು ಸಾಧ್ಯವಾಗದಿದ್ದಲ್ಲಿ, ನಗರವನ್ನು ಉತ್ತರ ಮತ್ತು ದಕ್ಷಿಣ ಭಾಗಗಳನ್ನಾಗಿ ವಿಂಗಡಿಸಿ, ಉತ್ತರವನ್ನು ಆಂಧ್ರಕ್ಕೂ ಮತ್ತು ದಕ್ಷಿಣವನ್ನು ತಮಿಳು ಪ್ರಾಂತ್ಯಕ್ಕೂ ರಾಜಧಾನಿಯನ್ನಾಗಿ ಮಾಡಬೇಕೆಂದೂ ನಿನ್ನೆ ದಿನ ನಡೆದ ಆಂಧ್ರ ಪಿ. ಕಾಂಗ್ರೆಸ್ ಸಮಿತಿ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು.

ಮಹಾ ಮಂಗಳಾರತಿ

ನಟರಾಜ ದೇವಸ್ಥಾನದಲ್ಲಿರುವ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಈ ರಾತ್ರಿ ೭-೩೦ ಗಂಟೆಗೆ ಶ್ರೀ ಅಮ್ಮನವರಿಗೆ ಮಹಾ ಮಂಗಳಾರತಿಯು ಪ್ರಮುಖ ವಕೀಲರಾದ ಶ್ರೀ ಪಿ. ಆರ್. ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಭಕ್ತಾದಿಗಳು ದಯಮಾಡಿಸಬೇಕೆಂದು ಕೋರಲಾಗಿದೆ.

ಬಟ್ಟೆ ಪೆಟ್ಟಿಗೆಯ ರಹಸ್ಯ ಇಲ್ಲ

ಎರಡನೆಯ ಮೇಲಿನ ಪೆಟ್ಟಿಗೆಯನ್ನು ... ತೆಗೆದು ... ರಂಗಸ್ವಾಮಿಯವರ ಪತ್ನಿಯ ... ಒಡ್ಡೆಯನ್ನು ಕೊಳ್ಳುತ್ತಿದ್ದನೆಂಬ ... ಸರ್ಕಾರದ ... ಪೆಟ್ಟಿಗೆಯನ್ನು ತೆಗೆ... ಎಂದು ... ಹೇಳಿದ್ದಾರೆ.

ರಾತ್ರಿ ೯ ಗಂಟೆಗೆ ಬೀಗ ಹಾಕುವುದು ನಿಂತಿತು

[illegible]

ಶುಭ ಸಂದೇಶಗಳು

[illegible]

ಯುಗೋಸ್ಲೋವಿಯಾದಲ್ಲಿ ಗ್ರೀಸಿನ ಸೈನ್ಯ

[illegible]

[illegible]

[illegible]

[illegible]

[illegible]

ಮೈಸೂರು ಕೊ-ಆಪರೇಟಿವ್ ...

[illegible]

[illegible] ಪ್ರದೇಶದಲ್ಲಿ ಕಾವಲುಗಾರರ ... ಹೋರಾಟ

[illegible]

... ಮೇಲೆ ಬೊಂಬಾಯಿನಲ್ಲಿ ನಿರ್ಬಂಧ

[illegible]

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ವಾರ್ಷಿಕ ಸಭೆಯು ... ಶ್ರೀ ... ಅಧ್ಯಕ್ಷರನ್ನಾಗಿಯೂ ಶ್ರೀ ಕೆ. ... ಉಪಾಧ್ಯಕ್ಷರನ್ನಾಗಿಯೂ, ಶ್ರೀ ಟಿ. ಎಸ್. ಸುಬ್ಬಣ್ಣನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು. [illegible]

[illegible]

ಬ್ರಹ್ಮಾಸ್ತ್ರ [illegible]

[illegible]

[illegible] ಔಷಧಿ
WHOOPING COUGH REMEDY
ಬೆಲೆ 2—0—0

[illegible]

ಭವನದ ಮೇಲೆ ವಿಮಾನ ಬಿತ್ತು

ಅಮೇರಿಕದ ಸಿಯಾಟಲ್ ಎಂಬ ನಗ[ರ]ದಿಂದ ಚಿಕಾಗೋವಿಗೆ ಹೊರಟ ಪ್ರಯಾ[ಣ]ಿಕರ ವಿಮಾನವೊಂದು ಆ ಊರಿನ ಭ[ವ]ನ ಬಂಧರ ಮೇಲೆ ಬಿದ್ದು ಭಸ್ಮವಾಯಿ[ತು] ಎಂದು ಹೇಳಲಾಗಿದೆ. ಕೆಲವರು ಮಾ[...] ಉಳಿದಿರುವರು.

ಸರ್ಕಾರಿ ಮೋಟಾರು ಕೆಲಸಗಾರರ ಬೇಡಿಕೆಗಳು

ಮೈಸೂರು ಸರ್ಕಾರದ ಬಸ್ ಕೆಲಸಗಾರರ ಸಂಘದ ಸಭೆಯು ಶ್ರೀ ಎಚ್. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ೧೮ ನೇ ತಾ|| ನಡೆಯಿತು. ಅಧಿಕಾರಿ ವರ್ಗದವರು ಕೂಡಲೇ ಸ್ಟಾಂಡಿಂಗ್ ಆರ್ಡರುಗಳನ್ನು ಜಾರಿಗೆ ತರಬೇಕೆಂದೂ, ಸಂಬಳವನ್ನು ೧ ನೇ ತಾ|| ಕೊಡಬೇಕೆಂದೂ, ಕೆಲಸಗಾರರಿಗೆ ಉಡುಪುಗಳನ್ನು ಮುಫತ್ತಾಗಿ ಕೊಡಬೇಕೆಂದೂ ಕೋರುವ ನಿರ್ಣಯ ಮಾಡಲಾಯಿತು. ಅಧಿಕಾರಿ ವರ್ಗದವರು ಕೆಲಸಗಾರರನ್ನು ತುಚ್ಛವಾಗಿ ಕಾಣುವುದನ್ನು ತಪ್ಪಿಸಿ, ಹೆಚ್ಚು ಮಧುರ ಭಾಂದವ್ಯ ಇಟ್ಟುಕೊಳ್ಳುವಂತೆ ಮಾಡಬೇಕೆಂದೂ ಪ್ರಾರ್ಥಿಸಲಾಯಿತು.

ಕಮ್ಯೂನಿಸ್ಟರಿಗೆ ಶಿಕ್ಷೆ

ರಾಜಧಾನಿಯ ಕಮ್ಯೂನಿಸ್ಟರಾದ ಶ್ರೀ[...] ಧರ್, ಎಸ್. ರಾಘವೇಂ, ... ಕೆ. ... ಕುಟ್ಟಿ, ಸಿ. ಕಣ್ಣನ್, ಎಸ್. ಟಿ. ಶಂಕರನಾರಾಯಣ ರಾವ್ ಮತ್ತು ಎಸ್. ಆರ್. ಶ್ರೀನಿವಾಸರವರುಗಳಿಗೆ ನಗರದ ನ್ಯಾಯಾಧೀಶರು ತಲಾ ೨ ತಿಂಗಳು ಸಾದಾ ಸ[ಜೆ] ಮತ್ತು ೫೦ ರೂ. ಜುಲ್ಮಾನೆ ವಿಧಿಸಿರುತ್ತಾರೆ.

UNIVERSITY OF MYSORE
Office of the University of Myso[re]
Mysore Dated 19th July 1949
No. Ex 3. 122/49-50

NOTIFICATION

—:o:—

University Examinations [...] September 1949

The following University Examinations will commence from **Thursda[y] the 1st September 194[9]**. The detailed time-tabl[e] will be published in th[e] Gazette in due course.

1) Intermediate in Arts
2) Intermediate in Scien[ce]
3) Intermediate in Commerce
4) B. A.,
5) B. Sc.,
6) B. Sc., Textiles
7) B.A. (Hons) Prelimina[ry]
8) B.Sc. (Hons) Prelimina[ry]
9) B. Com.,
10) Engineering
11) L. M. P.
12) Law.

BY ORDER,
(Sd) C. Rangach[ari]
AG. REGISTRAR

Printed and published by A. R. Nagaraj... at Sadhvi Press, ... Road, Mysore.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೮] ಶನಿವಾರ ೨೩-೭-೧೯೪೯ [ಸಂಚಿಕೆ ೩

-ಜಪಾನಿನ ಮಕ್ಕಳಿಗೆ - ಮೈಸೂರಿನ ಆನೆ

ತುಮಕೂರು ಜಿಲ್ಲೆಯಲ್ಲಿ ಪ್ರಭುಗಳ ಪ್ರವಾಸ

ಸ್ವಂ ಸು.ಫೋ.] ಬೆಂಗಳೂರು ೨೨

ಶ್ರೀಮನ್ಮಹಾರಾಜರು ಈ ತಿಂಗಳ ೨೮-೩೦ ರಲ್ಲಿ ತುಮಕೂರು ಜಿಲ್ಲೆಯಲ್ಲಿ ಪ್ರವಾಸಮಾಡುವರು. ೨೮ ರ ರಾತ್ರಿ ವಿಶೇಷ ರೈಲಿನಲ್ಲಿ ರಾಜಧಾನಿಯನ್ನು ಬಿಟ್ಟು ತುಮಕೂರಿಗೆ ಬೆಳಿಗ್ಗೆ ೭ ಗಂಟೆಗೆ ತಲುಪುವರು. ಬೆಳಿಗ್ಗೆ ೯ ಗಂಟೆಗೆ, ಪೌರ ಸಭೆಯ ಮಾನ ಪತ್ರವನ್ನು ಸ್ವೀಕರಿಸಿ ಕಾಲೇಜಿನ ಶಂಕುಸ್ಥಾಪನೆ ಮತ್ತು ಸಿದ್ಧಗಂಗಾ ಹೈಸ್ಕೂಲಿನ ಕಟ್ಟಡದ ಪ್ರಾರಂಭೋತ್ಸವ ನೆರವೇರಿಸುವರು ೧೧ಗಂಟೆಗೆ ಮಾರ್ಕೋನಹಳ್ಳಿಗೆ ಪ್ರಯಾಣಮಾಡುವರು ಅಲ್ಲಿಂದ ೩-೩೦ ಜಗ್ಗೆರೆಗೆ ಭೇಟಿ. ಕೊಟ್ಟಿಕಲ್ಲಿ ನಾನಿ ನದಿ ಸೇತುವೆಯ ಅಸ್ತಿ ಭಾರ ಹಾಕುವರು ಮಾರನೇ ದಿನ ಬೆಳಿಗ್ಗೆ ಕೊರಟಗೆರೆ ಮೂಲಕ ಮಧುಗಿರಿಗೆ ಪ್ರಯಾಣ. ೧೦-೪೫ ಕ್ಕೆ ಆಸ್ಪತ್ರೆಯ ಅಸ್ತಿಭಾರ. ೧೨ ಗಂಟೆಗೆ ಪಾವುಗಡ. ೨-೧೫ ಕ್ಕೆ ಮುನಿಸಿಪಲ್ ಹೈಸ್ಕೂಲು ಕಟ್ಟಡ ಪ್ರಾರಂಭೋತ್ಸವ. ಮಧ್ಯಾಹ್ನ ೩-೩೦ ಕ್ಕೆ ಪುರವಾರಕ್ಕೆ ಪ್ರಯಾಣ ಜಯಮಂಗಲಿ ನದ ಸೇತುವೆಗೆ ಅಸ್ತಿಭಾರ, ಸಂಜೆ ೬ ಕ್ಕೆ ವಾಪಸು. ರಾತ್ರಿ ರೈಲಿನಲ್ಲಿ ಮೈಸೂರಿಗೆ ಪ್ರಯಾಣ

ಗೋಪಾಲರಾಯರ ಸಮಿತಿಯ ವ್ಯವಹಾರ

ನೆನ್ನೆ ಗೋಪಾಲರಾಯರ ಸಮಿತಿಯು ೫॥ ಲಕ್ಷ ರೂ ಗಳನ್ನು ಹಂಚಿತು ಇದುವರೆಗೆ ೪೦೦ ಜನರಿಗೆ ಹಣವನ್ನು ಹಂಚಲಾಗಿದೆ ಒಟ್ಟು ೧೫॥ ಲಕ್ಷ ರೂ ಕೊಡಲಾಗಿದೆ ಇನ್ನೆರಡು ದಿನಗಳಲ್ಲಿ ಈ ಕೆಲಸ ಮುಗಿಯುವುದು ನಂತರ ಈ ತಿಂಗಳ ಒಳಗಾಗಿ ಸಮಿತಿಯು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸುವದೆಂದು ಹೇಳಲಾಗಿದೆ

ಶ್ರೀ ಕೆ. ಸಿ. ರೆಡ್ಡಿ

ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ. ರೆಡ್ಡಿಯವರು ೨೭ನೇ ತಾರೀಖು ದೆಹಲಿಯಿಂದ ಆಗಮಿಸಿ, ಇಲ್ಲಿ ಒಂದೆರಡು ದಿನಗಳಿದ್ದು ಪುನಃ ದೆಹಲಿಗೆ ಹೋಗಿ ಅಲ್ಲಿ ೫-೬ನೇ ತಾರೀಖಿನವರೆಗೆ ಇರುವರೆಂದು ಗೊತ್ತಾಗಿದೆ

ವರ್ಧಂತ್ಯುತ್ಸವ

ಬೆಂಗಳೂರ ಕಬ್ಬನ್ ಪೇಟೆಯಲ್ಲಿರುವ ಬಡವರ ಬಳಗದಲ್ಲಿ ಶ್ರೀಮನ್ಮಹಾರಾಜರವರ ೩೧ನೇ ವರ್ಷದ ವರ್ಧಂತ್ಯುತ್ಸವವು ಲೋಕಸೇವಾನಿರತ ಶ್ರೀ ಎಂ ಕೃಷ್ಣಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಸಂಘದ ಅಧ್ಯಕ್ಷರಾದ ಶ್ರೀ ರಾಜಗೋಪಾಲಾಚಾರ್ಯರು ಭಾಷಣಮಾಡಿ ಶ್ರೀಮನ್ಮಹಾರಾಜರವರು ಚಿರಕಾಲ ಕರ್ನಾಟಕದ ಅಧಿಪತಿಗಳಾಗಬೇಕೆಂದು ತಿಳಿಸಿದರು ಶ್ರೀಯುತ ಕೃಷ್ಣ ಶೆಟ್ಟಿಯವರ ನಂತರ ಸಿಹಿ ತಿಂಡಿ ವಿನಿಯೋಗಿಸಲಾಯಿತು

ಬಿರುಗಾಳಿಯಿಂದ ೪೯ ದೋಣಿಗಳ ನಾಶ

ಕೊಲ್ಲಿಯಿಂದ ... ನಗರದ ... ಬೀಸಿದ ... ದೋಣಿಗಳು ನಿನ್ನೆ ದಿನ ... ಸಮುದ್ರದ ... ಎಂದೂ ... ಜನರು ... ಕೊಂಡು ... ಕಾಣೆ ... ಯಾಗಿದೆ

ಜಪಾನಿಗೆ ಮೈಸೂರಿನ ಆನೆ

ಜಪಾನಿನ ಮೃಗಾಲಯಕ್ಕೆ ಭಾರತದಿಂದ ಒಂದು ಆನೆಯನ್ನು ಕಳುಹಿಸಬೇಕೆಂದು ಅಲ್ಲಿನ ಮಕ್ಕಳು ಪ್ರಧಾನಿ ಪಂಡಿತ ನೆಹರೂರವರಿಗೆ ಮನವಿ ಮಾಡಿಕೊಂಡಿದ್ದರಷ್ಟೆ. ಶ್ರೇಷ್ಠವಾದ ಒಂದು ಆನೆಯನ್ನು ಕೂಡಲೇ ಜಪಾನಿಗೆ ಕಳುಹಿಸಿಕೊಡಬೇಕೆಂದು ಪಂಡಿತ ನೆಹರೂರವರು ಮೈಸೂರು ಸರ್ಕಾರಕ್ಕೆ ತಂತಿ ಕಳುಹಿಸಿದ್ದಾರೆಂದೂ, ಅದನ್ನು ಸಧ್ಯದಲ್ಲಿಯೇ ಮೈಸೂರು ಸರ್ಕಾರದವರು ಟೋಕಿಯೋಕ್ಕೆ ನೇರವಾಗಿ ಕಳುಹಿಸುವರೆಂದೂ ತಿಳಿದುಬಂದಿದೆ

ಕೇಂದ್ರಕ್ಕೆ ಸಂಸ್ಥಾನಗಳ ಕೆಲವು ಇಲಾಖೆಗಳ ವರ್ಗ

ಉನ್ನತ ವಿದ್ಯಾಭ್ಯಾಸ, ನೀರಾವರಿ ಯೋಜನೆಗಳು, ವಿದ್ಯುಚ್ಛಕ್ತಿ, ಸೋಷಿಯಲ್ ಇನ್ಸೂರೆನ್ಸ್, ಸೋಷಿಯಲ್ ಸೆಕ್ಯೂರಿಟಿ ನೌಕಾಯಾನ, ವಿಜ್ಞಾನ ಸಂಶೋಧನೆಗಳು, ಕಾಶಿ ಮತ್ತು ದೆಹಲಿ ವಿಶ್ವವಿದ್ಯಾನಿಲಯಗಳು ಇವೇ ಮುಂತಾದ ಬಾಬುಗಳನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ವಹಿಸಬೇಕೆಂದು ಮೊನ್ನೆ ದೆಹಲಿಯಲ್ಲಿ ನಡೆದ ನಾನಾ ಪ್ರಾಂತ್ಯ ಮತ್ತು ಸಂಸ್ಥಾನಗಳ ಪ್ರಧಾನಿಗಳ ಸಭೆಯಲ್ಲಿ ನಿರ್ಧರಿಸಲಾಯಿತೆಂದು ಹೇಳಲಾಗಿದೆ.

ಪಶ್ಚಿಮ ಯೂರೋಪಿಗೆ ಮಿಲಿಟರಿ ಸಹಾಯ

ಪಶ್ಚಿಮ ಯೂರೋಪಿನ ರಾಷ್ಟ್ರಗಳು ತಮ್ಮ ರಕ್ಷಣಾ ಬಲವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುವಂತೆ ಅಮೆರಿಕವು ೧೪೫೦ ಕೋಟಿ ರೂ ಸಹಾಯ ಮಾಡಬೇಕೆಂಬ ಯೋಜನೆಯನ್ನು ಅಧ್ಯಕ್ಷ ಟ್ರೂಮನ್‌ರವರು ಅಲ್ಲಿನ ಕಾಂಗ್ರೆಸ್ಸಿಗೆ ಕಳುಹಿಸಿದ್ದಾರೆಂದು ಹೇಳಲಾಗಿದೆ

ಹೈದರಾಬಾದಿನ ಹಣಕಾಸಿನ ಆಡಳಿತ ಕೇಂದ್ರಕ್ಕೆ

ಹೈದರಾಬಾದ್ ಸಂಸ್ಥಾನದ ಹಣಕಾಸಿನ ಇಲಾಖೆಗಳನ್ನು ಭಾರತ ಸರ್ಕಾರದ ಆಡಳಿತದಲ್ಲಿ ಐಕ್ಯ ಮಾಡಬೇಕೆಂದು ... ದ ತಾತ್ಕಾಲಿಕ ಯೋಜನೆಯನ್ನು ... ರಿಸಲಾಗಿದೆ. ... ಸಂಸ್ಥಾನಗಳ ... ಹಣಕಾಸಿನ ವಿಚಾರ... ... ರಾದ ಶ್ರೀ ... ... ನ್ನುತ್ತೆ

ಸರ್ ಆರ್ಕಾಟರಿಗೆ ನೂತನ ಹುದ್ದೆಯೇ ?

ಮುಂದಿನ ತಿಂಗಳು ೭ ನೇ ತಾ॥ನಿಂದ ನಿವೃತ್ತರಾಗಲಿರುವ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರವರನ್ನು ದಕ್ಷಿಣ ಭಾರತ ಸಂಸ್ಥಾನಗಳ ಆಡಳಿತಗಾರರನ್ನಾಗಿ ನೇಮಿಸಬಹುದೆಂದು ಹೇಳಲಾಗಿದೆ

ಬೊಂಬಾಯಿಗೆ ಮೈಸೂರಿನ ಹೂವು

ಮೈಸೂರು, ಬೆಂಗಳೂರು. ಕೇರಳ, ಡಾರ್ಜಲಿಂಗ್, ಕಾಶ್ಮೀರ ಮತ್ತು ದೆಹಲಿಗಳಿಂದ ಪ್ರತಿದಿನ ಅಪೂರ್ವವಾದ ಹೂವುಗಳನ್ನು ಬೊಂಬಾಯಿಗೆ ವಿಮಾನದಲ್ಲಿ ಕಳುಹಿಸಲು ಏರ್ಪಾಡಾಗಿದೆ.

ಲಂಡನ್ ಬಂಧರು ಕಾರ್ಮಿಕರ ಮುಷ್ಕರ ಮುಕ್ತಾಯ

ಕಳೆದ ೨೫ ದಿನಗಳಿಂದಲೂ ನಡೆಯುತ್ತಿದ್ದ ಲಂಡನ್ನಿನ ಬಂದರು ಕೆಲಸಗಾರರ ಮುಷ್ಕರವು ನಿನ್ನೆ ದಿನ ಮುಕ್ತಾಯವಾಯಿತು ೧೫ ಸಾವಿರ ಕೆಲಸಗಾರರು ಸೋಮವಾರದಿಂದ ಕೆಲಸಕ್ಕೆ ಹಿಂತಿರುಗುವರು.

ಅಂಗಡಿ ಕೆಲಸಗಾರರ ಸಭೆ

ಹಿಂದ್ ಮಜ್ದೂರ್ ಸಭೆಯ ಅಧ್ಯಕ್ಷರಾದ ಶ್ರೀ ಎನ್. ನಾಗಭೂಷಣರವರು ಶಿವಾಜಿಪೇಟೆ ಮಸೀದಿ ಪಕ್ಕದಲ್ಲಿರುವ ಕಾರ್ಮಿಕರ ಕಛೇರಿಯಲ್ಲಿ ನಾಳೆ ಬೆಳಗ್ಗೆ ೧೧ ಘಂಟೆಗೆ ಅಂಗಡಿ ಕೆಲಸಗಾರರನ್ನು ಕುರಿತು ಭಾಷಣ ಮಾಡುತ್ತಾರೆ ಸದಸ್ಯರೆಲ್ಲರೂ ಭಾಗ ವಹಿಸಬೇಕೆಂದು ಕೋರಲಾಗಿದೆ

ಸತ್ಕಾರ ಕೂಟ

ವೃದ್ಧಿ ಪತ್ರಿಕೆಯ ೭ನೇ ವಾರ್ಷಿಕೋತ್ಸವದ ಸಂಬಂಧದಲ್ಲಿ ನಿನ್ನೆ ಸಂಜೆ ಇದರ ಕಾರ್ಯಾಲಯದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. ನಗರದ ಅನೇಕ ಗಣ್ಯ ಮಹನೀಯರುಗಳನ್ನು ಆಹ್ವಾನಿಸಿ ಸತ್ಕರಿಸಲಾಯಿತು. ಆಸ್ಥಾನ ವಿದ್ವಾನ್ ಎಸ್. ... ಮರಿಯಪ್ಪನವರಿಗಾರ್ತ, ... ರಂಗಸ್ವಾಮಿ ... ... ಆಸ್ಥಾನ ವಿದ್ವಾಂಸ ... ... ಜರಗಿದುವು

ತಾತ್ಕಾಲಿಕವಾಗಿ ಬಟ್ಟೆ ರೇಷನಿಂಗ್ ವಜಾ

ಬೆಂಗಳೂರು ೨೨

ಸಂಸ್ಥಾನದಲ್ಲಿ ಬಟ್ಟೆ ಕೂಪನ್ನುಗಳ ವ್ಯವಸ್ಥೆಯನ್ನು ಅಕ್ಟೋಬರ್ ತಿಂಗಳ ಅಂತ್ಯದವರೆಗೆ ವಜಾ ಮಾಡಲಾಗಿದೆಯೆಂದೂ, ಕೂಪನ್ನಿಲ್ಲದೆಯೇ ಎಷ್ಟು ಬಟ್ಟೆಯನ್ನಾದರೂ ಜನರು ಕೊಳ್ಳಬಹುದೆಂದೂ ತಿಳಿಸಿ ಸಿವಿಲ್ ಸಪ್ಲೈಸ್ ಕಂಟ್ರೋಲರು ಪ್ರಕಟಣೆ ಹೊರಡಿಸಿರುತ್ತಾರೆ.

ಬೆಂಗಳೂರು ಕಾರ್ಪೊರೇಷನ್

ಮುಂದಿನ ಅಕ್ಟೋಬರ್ ತಿಂಗಳಿನಿಂದ ಬೆಂಗಳೂರು ನಗರ ಮತ್ತು ದಂಡನ್ನು ಸೇರಿಸಿ, ಅವುಗಳನ್ನು ಕಾರ್ಪೊರೇಷನ್ ಮಾಡುವ ಮಸೂದೆಯನ್ನು ಜಾರಿಗೆ ತರಲಾಗುವುದೆಂದು ಗೊತ್ತಾಗಿದೆ. ಅಕ್ಟೋಬರ್ ತಿಂಗಳಿನಲ್ಲಿ ಈ ಬಗ್ಗೆ ಸಾರ್ವತ್ರಿಕ ಚುನಾವಣೆ ನಡೆಸಬಹುದೆಂದೂ ತಿಳಿದುಬಂದಿದೆ.

ಫಿಲೇಚರ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರು

ಕಾನಕಾನಹಳ್ಳಿಯ ಸರಕಾರಿ ಸಿಲ್ಕ್ ಫಿಲೇಚರಿನಲ್ಲಿದ್ದ ಎಕ್ಸಿಕ್ಯೂಟೀವ್ ಇಂಜನಿಯರಾದ ಶ್ರೀ ಎ. ಸಾಂಬಮೂರ್ತಿಯವರನ್ನು ಟಿ. ನರಸೀಪುರದ ಸಿಲ್ಕ್ ಫಿಲೇಚರ್ಸಿನ ಮ್ಯಾನೇಜಿಂಗ್ ಡೈರೆಕ್ಟರ ಮತ್ತು ಜನರಲ್ ಮ್ಯಾನೇಜರ್ ಆಗಿ ನೇಮಿಸಲಾಗಿದೆ.

ರೆಸಿಡೆನ್ಸಿಯಲ್ಲಿ ಆಹಾರ ಬೆಳೆ

ಬೆಂಗಳೂರು ದಂಡಿನಲ್ಲಿರುವ ರೆಸಿಡೆನ್ಸಿ ಭವನದ ವಿಶಾಲ ಮೈದಾನದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಸಿದ್ಧತೆ ಮಾಡಲಾಗುತ್ತಿದೆಯೆಂದು ತಿಳಿದುಬಂದಿದೆ.

ಆರಂಭೋತ್ಸವ

ಹುಣಸೂರಿನ ಪ್ರೌಢಶಾಲಾ ಸಾರ್ವಜನಿಕ ವಿದ್ಯಾರ್ಥಿ ನಿಲಯ ಮತ್ತು ತಾಲ್ಲೂಕು ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳ ಪ್ರಾರಂಭೋತ್ಸವವನ್ನು ನಾಳೆ ಬೆಳಿಗ್ಗೆ ೧೦-೩೦ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಜಾರ್ಜ್ ಮ್ಯಾಥ್ಯೂರವರು ನೆರವೇರಿಸುವರು.

ಯುದ್ಧ ಮಾಡುವ ಶಕ್ತಿ ಕುಂದಿಸುವ ಶಸ್ತ್ರ

ಮನುಷ್ಯನು ಯುದ್ಧಮಾಡುವ ಶಕ್ತಿಯನ್ನು ತಾತ್ಕಾಲಿಕವಾಗಿ ನಾಶಪಡಿಸುವಂತಹ ನೂತನ ವಾಯುವನ್ನು ವೈಜ್ಞಾನಿಗಳು ಕಂಡು ಹಿಡಿಯಲು ಸಂಶೋಧನೆ ನಡೆಸುತ್ತಿರುವರೆಂದೂ, ಇದರಿಂದ ರಕ್ಷಣಾ ವ್ಯವಸ್ಥೆಗೆ ಧಕ್ಕೆ ಉಂಟಾಗುವುದರಿಂದ ರಾಷ್ಟ್ರಗಳು ಎಚ್ಚರಿಕೆಯಿಂದ ಇರಬೇಕೆಂದೂ ಅಮೆರಿಕದ ಶಾಸನ ಸಭೆಯ ಸದಸ್ಯರಾದ ರಾಬರ್ಟ್ ಸ್ಮಿತ್ಸನ್‌ರವರು ತಿಳಿಸಿರುತ್ತಾರೆ.

ಸಮಗ್ರ ಗ್ರಾಮಸೇವಾ ಸಹಕಾರ ಸಂಘ

ಯಳಂದೂರು ೨೨

ಈ ತಾಲ್ಲೂಕಿನ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವು ಈ ದಿನ ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಹೆಚ್. ಕೆ. ವೀರಭದ್ರಪ್ಪನವರಿಂದ ನೆರವೇರಿಸಲ್ಪಟ್ಟಿತು. ಸ್ವಾಗತ, ಕಾರ್ಯದರ್ಶಿಗಳಿಂದ ವರದಿ ಮತ್ತು ಭಾಷಣಗಳು ನಡೆದವು.

ಭಾರತೀಕರಣ ಸಪ್ತಾಹ

ಮೈಸೂರು ೨೨

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಸೂಚನೆಯ ಮೇರೆ ರಾಜಧಾನಿಯಲ್ಲಿ ಭಾರತೀಕರಣ ಸಪ್ತಾಹವನ್ನು ನಾಳೆಯಿಂದ ೨೯ನೇ ತಾ॥ ವರೆಗೆ ಆಚರಿಸಲು ಮೈಲ್ಯಾಂಡ ಪರಿಷತ್ತಿನ ಸ್ಥಳೀಯ ಶಾಖೆಯವರು ನಿರ್ಧರಿಸಿದ್ದಾರೆ ರಾಷ್ಟ್ರ ಭಾಷೆ ಹಿಂದಿ ಮತ್ತು ರಾಷ್ಟ್ರಲಿಪಿ ನಾಗರಿಲಿಪಿಗಳಾಗಬೇಕೆಂದೂ ಮತ್ತು ದೇಶದ ಹೆಸರನ್ನು ಭಾರತ ಎಂದು ಕರೆಯಬೇಕೆಂದೂ ಈ ವಾರದಲ್ಲಿ ಪ್ರಚಾರ ನಡೆಸುವುದಲ್ಲದ, ಈ ವಿಷಯ ಗಳಲ್ಲಿ ಜನಮತ ಸಂಗ್ರಹ ಮಾಡಿ ಅದನ್ನು ಕೇಂದ್ರ ರಾಜ್ಯಾಂಗ ರಚನಾ ಸಭಾಧ್ಯಕ್ಷರಿಗೆ ಕಳುಹಿಸಲಾಗುವುದು ಆದುದರಿಂದ ಈ ಕಾರ್ಯದಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ

ಈ ಸಂಬಂಧದಲ್ಲಿ ನಾಳೆ ಸಂಜೆ ೫ ಗಂಟೆಗೆ ವಿದ್ಯಾರ್ಥಿಗಳ ಮೆರವಣಿಗೆಯು ಸುಬ್ಬರಾಯನ ಕೆರೆ ಮೈದಾನದಿಂದ ಹೊರಡುವುದು

ಈ ಸಪ್ತಾಹದ ಕಾರ್ಯಕ್ರಮಕ್ಕೆ ಸ್ವಯಂಸೇವಕರು ಬೇಕಾಗಿರುವುದರಿಂದ ಸೇರಬಿಚ್ಛಿಸುವವರು ಇದೇ ೨೬ನೇ ತಾ॥ ಒಳಗಾಗಿ ಸುಬ್ಬರಾಯ ಕೆರೆಯ ಪ್ರಿರ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬ ನಿಲಯದ ಮುಂದೆ ನಾಳೆ ಸಂಜೆ ೬ ಗಂಟೆಗೆ ಶ್ರೀ ಎಂ ಎಲ್ ನಾರಾಯಣ ದಾಸರಿಂದ ದ್ರೌಪದಿ ವಸ್ತ್ರಾಪಹರಣ ಎಂಬ ಹರಿಕಥೆ ನಡೆಯುವುದು

ಉದಾರ ಸಹಾಯ

ಅಖಿಲ ಮೈಸೂರು ಬ್ರಾಹ್ಮಣ ಮಹಾ ಸಭೆಯ ನಗರದ ಶಾಖೆ ಕನ್ಯಾ ವಸೆಯ ವಿವಾಹಸಂಬಂಧದಲ್ಲಿ ಕಾಫಿ ಪ್ಲಾಂಟರ್ ಶ್ರೀ ಮಂಜನಾಥ ಅಯ್ಯರ್‌ರವರು ೧೧೦ ರೂ ಶ್ರೀ ಮುತ್ತು ಸ್ವಾಮಿ ತಿಥ್ಯರ್‌ರವರು ೫ ರೂ ಮತ್ತು ಶ್ರೀ ವಿ ರಾಮಸ್ವಾಮಯ್ಯನವರ ೫ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ಈ ಸಭೆಗೆ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಪ್ರಭಾ

೨೩ 7-49 ರಿಂದ ಯಶಸ್ವಿಯಾದ

3ನೇ ವಾರ

ದಿನದ 3 ಆಟಗಳು [illegible]

ಶಾ ಸವಲ್‌ದಾಸ್ ಪ್ರಸ್ತಾವನೆ

ಶ್ರೀ ಶಾಂತಾರಾಂರವರ ಕಲಾಕೃತಿ

ಅಪ್ನಾ ದೇಶ್

[ಹಿಂದಿ]

ಮುಖ್ಯ ಪಾತ್ರ

ಪುಷ್ಪಹಂಸ, ಉಮೇಶ್ ಶರ್ಮ

(ಎಲ್ಲಾ ವಿಧವಾದ ಜಾತಿ ಮತಗಳಿಗೂ ಮನ್ನಾ ಮಾಡಿದ್ದು)

ಚೀಣಾಂಗರು ಪರಾರಿ ಯಾಗಲು ಸಿದ್ಧತೆ

ಚೀಣದ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕ್ ಪಕ್ಷ ಇತರ ರಾಷ್ಟ್ರೀಯ ಸರ್ಕಾರದ ನಾಯಕರ ಗಳು ಫಾರ್ಮೋಸ ದ್ವೀಪಕ್ಕೆ ಪರಾರಿಯಾಗಲು ಸಿದ್ಧತೆ ಮಾಡುತ್ತಿರುವರೆಂದೂ, ಇದಕ್ಕೆ ಕಮ್ಯೂನಿಸ್ಟರು ದಕ್ಷಿಣ ಚೀಣದ ಮೇಲೆ ಧಾಳಿ ಪ್ರಾರಂಭಿಸಿರುವುದೇ ಕಾರಣವೆಂದೂ ಹೇಳಲಾಗಿದೆ

ಭಾರಿ ಮಳೆಯಿಂದ ಇಬ್ಬರು ಬಾಲಕರ ಮರಣ

ದೆಹಲಿಯಲ್ಲಿ ಮೊನ್ನೆ ದಿನ ವಿಪರೀತ ಮಳೆ ಬಂದು, ರಸ್ತೆಯ ಮೇಲೆ ನೀರು ಹರಿಯುತ್ತಿದ್ದ ಪ್ರದೇಶದಲ್ಲಿ ಇಬ್ಬರು ಬಾಲಕರು ಆಟವಾಡುತ್ತಿದ್ದಾಗ, ನೀರಿನ ಸೆಳೆತಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗಿ, ಚಚ್ಚಿ ರಂಧ್ರದಲ್ಲಿ ಬಿದ್ದು ಮರಣ ಹೊಂದಿದರೆಂದು ಹೇಳಲಾಗಿದೆ ೨೪ ಗಂಟೆಗಳಲ್ಲಿ ೫ ಅಂಗುಲಗಳ ಮಳೆ ಬಿದ್ದಿತೆಂದು ವರದಿಯಾಗಿದೆ

ಕುರುಡರಿಗೆ ಕಣ್ಣು

ಸತ್ತ ಮನುಷ್ಯನ ಕಣ್ಣಿನ ಗುಡ್ಡೆಗಳ ಗ್ರಂಥಿಗಳನ್ನು ತೆಗೆದು ಕುರುಡರಿಗೆ ಕಣ್ಣು ಒದಗಿಸುವ ಹೊಸ ಶಸ್ತ್ರ ಚಿಕಿತ್ಸೆಯ ವಿಧಾನವನ್ನು ಅಮೇರಿಕದಲ್ಲಿ ಕಂಡುಹಿಡಿಯಲಾಗಿದೆ ಮನುಷ್ಯನು ಸತ್ತ ೨೪ ಗಂಟೆಗಳೊಳಗಾಗಿ ಅವನ ಕಣ್ಣು ಗ್ರಂಥಿಗಳನ್ನು ತೆಗೆದು ಅದನ್ನು ಶೀತಲಾಗಾರದಲ್ಲಿಟ್ಟು ಆ ನಂತರ ಉಪಯೋಗಿಸಲಾಗುವುದು ಎಂದು ಹೇಳಲಾಗಿದೆ

ಬಿಕರಿಗಿದೆ

೫ ಸೈಕಲ್ ಮತ್ತು ಸಾಮಾನುಗಳು ಮಾರಾಟಕ್ಕಿದೆ ಕೃಷ್ಣರಾಜ ಬೊಲೆವಾರ್ಡ್, ಸ್ಟಾಂಡರ್ಡ್ ಸೈಕಲ್ ಹೌಸ್, ಬಸವೇಶ್ವರ ರೋಡ್ ಮೈಸೂರು, ಎನ್ ವೆಂಕಟರಾವ್

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

(By Dr N S Narayan Sastry)

Inter Arts & Inter Science

Text Book for 1949 50

ಬೆಲೆ 1—6—0

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಬ್ರಿಟನ್ನಿನಲ್ಲೂ ಅಣು ಬಾಂಬು ತಯಾರಿಕೆ

ಬ್ರಿಟನ್ನಿನಲ್ಲೂ ಅಣು ಬಾಂಬುಗಳನ್ನು ತಯಾರು ಮಾಡಲು ಅಲ್ಲಿ ವಿಜ್ಞಾನಿಗಳು ಎಲ್ಲಾ ಸಿದ್ಧತೆ ಮಾಡಿದ್ದಾರೆಂದು ಹೇಳಲಾಗಿದೆ

ದೋಣಿ ಮೊಗಚಿ ೧೭ ಜನರ ಮರಣ

ಡಾಕಾ ಪಟ್ಟಣದಲ್ಲಿರುವ ಬುರಿ ಗಂಗಾ ದಿಂದ ಹಜೂರಾಯ್ ಜಾತ್ರೆಗೆ ದೋಣಿಯಲ್ಲಿ ಹೋಗುತ್ತಿದ್ದ ೧೭ ಜನ ಹೆಂಗಸರು, ಮಕ್ಕಳು ದೋಣಿಯು ಮುಗುಚಿಕೊಂಡುದರಿಂದ ನೀರು ಪಾಲಾದರೆಂದು ಹೇಳಲಾಗಿದೆ

ಭತ್ತದ ಪೈರಿಗೆ ಕಾಯಿಲೆ

ಶಿವಮೊಗ್ಗ ಜಿಲ್ಲೆಯ ಬಾರದ ಸ್ಥಳಗಳಲ್ಲಿ ಭತ್ತದ ಮೊಳಕೆಗಳಿಗೆ ಕೆಟ್ಟ ಕಾಯಿಲೆಯೊಂದು ತಗುಲಿದೆ ಇದರಿಂದ ರೈತರು ತುಂಬಾ ಆತಂಕಪಟ್ಟವರಾಗಿದ್ದಾರೆ ಆ ಪೈರುಗಳಲ್ಲಿ ಕೆಲವನ್ನು ಪರೀಕ್ಷೆಗಾಗಿ ಕಳುಹಲಾಗಿದೆ

ಟಿಬೆಟ್ಟಿನಲ್ಲಿ ದಂಗೆ

ಟಿಬೆಟ್ಟಿನಲ್ಲಿ ಕಮ್ಯೂನಿಸ್ಟರ ಪ್ರೇರೇಪಣೆಯಿಂದ ಜನರು ದಂಗೆ ಎದ್ದಿರುವರೆಂದು ಚೀಣಾ ರಾಷ್ಟ್ರೀಯ ಸರ್ಕಾರಕ್ಕೆ ವರದಿ ಬಂದಿರುವುದಾಗಿ ಹೇಳಲಾಗಿದೆ

RAJKAMAL

MYSORE

From 22—7—49

Daily 3 Shows

Black Naricissus

In Technicolour

With Mysore Sabu and Jean Simmons

ಬೆಳಗಿನ ಪ್ರದರ್ಶನಗಳು

ತಾ॥ 22-7-49 ರಿಂದ 4 ದಿನಗಳು

ಏಕ್ ರಾತ್

(ಹಿಂದಿ)

ದೂಮಿತೆ-ಸೀನಾ, ಪೃಥ್ವಿರಾಜ್

Edited, printed and published by A R Nagarajan, at Sadhvi Press, D Subbiah Road, Mysore

ಹಿಟ್ಲರನು ಕಾಣಿ ಕೊಂಡನಂತೆ

ಹಿಟ್ಲರನು ಬದುಕಿರುವನೆಂದೂ, ನು ಆರ್ಜಂಟೈನಾದಲ್ಲಿ ಕಾಣಿಸಿಕೊಂಡನೆಂದೂ ಲಂಡನ್ನಿನಲ್ಲಿ ವದಂತಿ ಹರಡಿದೆ

ಚಿರತೆಯನ್ನು ಎದುರಿಸಿದ ಮುದುಕಿ

ಬಾಗೇಪಲ್ಲಿ ತಾ॥ ಬೆಳ್ಳೂರು ಗ್ರಾಮದಲ್ಲಿ ೬೦ ವರ್ಷದ ಕದಿರಮ್ಮ ಎಂಬಾಕೆ ಕಾಡಿನಲ್ಲಿ ಮೇಕೆಯನ್ನು ಮೇಯಿಸುತ್ತಿದ್ದಾಗ ಚಿರತೆಯು ಬಂದು ಅದನ್ನು ಕೊಂಡು ಹೋಯಿತೆಂದೂ, ಮುದುಕಿಯು ಧೈರ್ಯದಿಂದ ಚಿರತೆಯನ್ನು ಹಿಂಬಾಲಿಸಿ ಅದನ್ನು ಬೆದರಿಸಿ ಮೇಕೆಯನ್ನು ಕಸಿದಳೆಂದು ವರದಿಯಾಗಿದೆ

ರೈಲ್ವೆ ಅಧಿಕಾರಿಗಳ ಶಿಕ್ಷಣ ಶಾಲೆ

ಬರೋಡಾದಲ್ಲಿ ರೈಲ್ವೆ ಅಧಿಕಾರಿಗಳ ಶಿಕ್ಷಣ ಕೊಡಲು ಒಂದು ಕಾಲೇಜನ್ನು ಮುಂದಿನ ಅಕ್ಟೋಬರ್ ತಿಂಗಳಲ್ಲಿ ಭಾರತ ಸರ್ಕಾರದವರು ಸ್ಥಾಪಿಸಲಿದ್ದಾರೆ ಪ್ರತಿ ವರ್ಷವೂ ೨೫ ಮಂದಿಗೆ ಶಿಕ್ಷಣ ಕೊಡಲಾಗುವುದು

ಆಯುರ್ವೇದ ಔಷಧಿ ತಯಾರಿಕೆ

ಆಯುರ್ವೇದ ಮತ್ತು ಯುನಾನಿ ಪದಗಳನ್ನು ತಯಾರಿಸಲು ಲಕ್ನೋದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಸಂಯುಕ್ತ ಪ್ರಾಂತ ಸರ್ಕಾರವು ನಿರ್ಧರಿಸಿದೆ ವರ್ಷಕ್ಕೆ ೨೦ ಲಕ್ಷ ರೂ ಬಾಳುವ ಔಷಧಿಗಳನ್ನು ಅಲ್ಲಿ ತಯಾರಾಗುವುದೆಂದು ಹೇಳಲಾಗಿದೆ

ನಿಮ್ಮ ಮೈ ಮೊಕಮಲ್ಲಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗು

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ಮಾರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

(ಗ್ರಾಮಾಭಿವೃದ್ಧಿ ಇಲಾಖಾ ಪ್ರಕಟಣೆ)

ಮೈಸೂರು ಸಂಸ್ಥಾನದಲಿ

ಮರಗಳನ್ನು ನೆಡುವ ಕಾರ್ಯಕ್ರಮ

೧-೭-೪೯ ರಿಂದ ೩೧-೮-೪೯ರ ವರೆಗೆ

ಪ್ರತಿ ಪಂಚಾಯತಿಗಳಿಗೆ

ಭಾರಿ ಬಹುಮಾನಗಳು

ಸಸಿಗಳನ್ನು [illegible]

[illegible]

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೨೪-೭-೧೯೪೯ [ಸಂಚಿಕೆ ೧

— ಆಹಾರದ ಉತ್ಪತ್ತಿಗೆ — ಮೊದಲನೇ ಸ್ಥಾನ

ನೌಕರನ ಮೇಲೆ ಅಧಿಕಾರಿಗಳ ಕೈ

ನಂಜನಗೂಡು ೨೧

ಮೊನ್ನೆ ರಾತ್ರಿ ಈ ಊರಿನ ಅಧಿಕಾರಿಗಳೊಬ್ಬರು ತಮ್ಮ ಮನೆಯಲ್ಲಿ ಅಡಿಗೆ ಮಾಡಲು ಪ್ರತಿ ನಿತ್ಯವೂ ಬರುತ್ತಿದ್ದ ಸರಕಾರಿ ಚಿಣ್ಣ ನೌಕರನು ಸ್ವಲ್ಪ ತಡವಾಗಿ ಬಂದನೆಂದು ಆತನನ್ನು ಕೊಠಡಿಯೊಳಕ್ಕೆ ಸೇರಿಸಿಕೊಂಡು ಚೆನ್ನಾಗಿ ಹೊಡೆದರೆಂದೂ ಅವರಲ್ಲದೆ ಇನ್ನೂ ಇಬ್ಬರು ಅಧಿಕಾರಿಗಳೂ ಸಹ ಇದರಲ್ಲಿ ಭಾಗಿಯಾಗಿದ್ದರೆಂದೂ, ಇದರಿಂದ ನೌಕರನು ತುಂಬಾ ನಿತ್ರಾಣನಾಗಿರುವನೆಂದೂ ಹೇಳಲಾಗಿದೆ ಅಷ್ಟೇ ಅಲ್ಲದೆ ಒಂದೆರಡು ಕಾಗದಗಳಿಗೆ ಆತನಿಂದ ರುಜುವನ್ನೂ ಸಹ ತೆಗೆದುಕೊಂಡರೆಂದು ಹೇಳಲಾಗಿದೆ

ಹುಲ್ಲು ತಿಂದು ೫೦೦ ವರ್ಷ ಬದುಕುವ ಆಶೆ

ಯಾವ ಆಹಾರವೂ ಇಲ್ಲದೆ ೧೫೦ ವರ್ಷ ಕಾಲ ಬದುಕಿರಬಲ್ಲೆನೆಂದು ಕೆನ್ಸಿಂಗ್ಟನ್ ಎಂಬಲ್ಲಿಯ ೬೭ ವರ್ಷ ವಯಸ್ಸಿನ ಒಬ್ಬ ಹೆಂಗಸು ನಂಬಿದ್ದಾಳೆ ಹತ್ತು ವರ್ಷಗಳಿಂದ ಆಕೆಯು ಊಟವನ್ನೇ ಮಾಡಿಲ್ಲವೆಂದು ಮತ್ತು ಹಣ್ಣಿನ ರಸವನ್ನು ಮಾತ್ರ ಸೇವಿಸುತ್ತಿದ್ದಾಳೆ ಆಹಾರವು ಅಗತ್ಯವಾದ ವಸ್ತುವಲ್ಲವೆಂದು ಆಕೆಯು ಹೇಳುತ್ತಾಳೆ ಹಸಿಯ ಹುಲ್ಲನ್ನೂ ಮತ್ತು ಒಂದು ಬಗೆಯ ಜೊಂಡನ್ನೂ ಸಂಗ್ರಹಿಸಿ ಅದನ್ನು ಕಿತ್ತಳೆ ಮತ್ತು ಟೊಮ್ಯಾಟೊ ರಸದಲ್ಲಿ ನೆನೆ ಹಾಕಿ ಅದರ ರಸವನ್ನು ಆಕೆಯು ಸೇವಿಸುತ್ತಾಳೆ ಇದರಿಂದ ೫೦೦ ವರ್ಷದವರೆಗೆ ತಾನು ಬದುಕಿರಲು ಸಾಧ್ಯವೆಂದು ಆಕೆಯು ನಂಬಿದ್ದಾಳೆ ಕೆಲವು ದಿನಗಳನಂತರ ಈ ಆಹಾರವನ್ನೂ ತ್ಯಜಿಸಿ ಶುದ್ಧವಾದ ಗಾಳಿ ಮತ್ತು ಸೂರ್ಯನ ಬೆಳಕಿನಿಂದಲೇ ತನ್ನ ಆಯುಷ್ಯವನ್ನು ಬೆಳೆಸಬಲ್ಲೆನೆಂದು ಹೇಳುತ್ತಾಳೆ.

೪ ವರ್ಷ ಸ್ತ್ರೀಯಾಗಿದ್ದ ಸಿಪಾಯಿಗೆ ಶಿಕ್ಷೆ

ಅಮೇರಿಕದ ವಿಮಾನ ಬಲಕ್ಕೆ ಸೇರಿದ್ದ ೨೫ ವಯಸ್ಸಿನ ಡಿಲ್‌ಬರ್ಟ್ ಯೂರ್ಜೆಲ್ ಎಂಬುವನು, ರಜವನ್ನು ಪಡೆಯದೆ ನಾಲ್ಕು ವರ್ಷಗಳ ಕಾಲ 'ಸ್ತ್ರೀ' ವೇಷಧಾರಿಯಾಗಿ ನಾಟ್ಯಮಂದಿರಗಳಲ್ಲಿ ನಟಿಸುತ್ತಿದ್ದುದು ವರದಿಯಾಗಿದೆ ಸ್ತ್ರೀಯರ ಹಾವಭಾವ ವಿಲಾಸಗಳ ಪ್ರತಿಯೊಂದು ಸೂಕ್ಷ್ಮವನ್ನೂ ಅರಿತು ಆತನು, ಸ್ತ್ರೀಯಂತೆಯೇ ನಟಿಸುತ್ತಿದ್ದನೆಂದೂ, ಆದರೆ ಅನ್ನ ಗುಪ್ತನೆಲ್ಲಾ ಒಬ್ಬ ಹೆಂಗಸಿಗೆ ತಿಳಿದದ್ದರಿಂದ ಈತನ ಮೇಲೆ ಜನರಿಗೆ ಇದ್ದ ಅನುರಾಗವನ್ನು ಕಂಡು ಹೊಟ್ಟೆಕಿಚ್ಚಿನಿಂದ ಆಕೆಯು ಪೋಲೀಸರಿಗೆ ತಿಳಿಸಿದ್ದರಿಂದ ಇವನು, ನಿಜಸ್ಥಿತಿಯನ್ನು ಒಪ್ಪಿಕೊಂಡನೆಂದೂ ಗೊತ್ತಾಗಿದೆ ಸೈನ್ಯದಿಂದ ರಜಾ ಪಡೆಯದ ಇದ್ದುದಕ್ಕಾಗಿ ಇವನಿಗೆ ೨ ವರ್ಷ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಲಾಗಿದೆ

ಲಿಯಾಖತ್‌ರವರ ಮಾಸ್ಕೋ ಯಾತ್ರೆ

ಪಾಕಿಸ್ಥಾನದ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು ಮಾಸ್ಕೋವಿಗೆ ಪ್ರಯಾಣ ಮಾಡಿ ಸ್ಟಾಲಿನ್ನರನ್ನು ಭೇಟಿ ಮಾಡುವ ವಿಷಯವು ಬಹು ಅರ್ಥಗರ್ಭಿತವಾಗಿದೆಯೆಂದು ಲಂಡನ್ನಿನ ಟೈಮ್ಸ್ ಎಂಬ ಪತ್ರಿಕೆಯು ತಿಳಿಸಿದೆ

ರಜ್ವಿಯ ವಿಚಾರಣೆ ಬುಧವಾರದಿಂದ ಪ್ರಾರಂಭ

ಹೈದರಾಬಾದಿನ ಮಾಜಿ ರಜಾಕರರ ನಾಯಕ ಖಾಸಿಂ ರಜ್ವಿ ಮತ್ತು ಅವರ ಅನುಯಾಯಿಗಳ ವಿಚಾರಣೆಯು ತಿರಮಲಗೇರಿಯ ಹಳೆಯ ಬ್ರಿಟಿಷ್ ಮಿಲಿಟರಿ ಆಸ್ಪತ್ರೆಯಲ್ಲಿ ಆಗಸ್ಟ್ ೩ ನೇ ಬುಧವಾರದಿಂದ ಪ್ರಾರಂಭವಾಗುವುದು

ಜಿಲ್ಲಾ ಮ್ಯಾಜಿಸ್ಟ್ರೇಟರ ಮನೆ ಮುಂದೆ ಸತ್ಯಾಗ್ರಹ

ಸಂಯುಕ್ತ ಪ್ರಾಂತ್ಯದ ಎಟಾವಾ ನಗರ ರೇಷನ್ ಡಿಪೋಗಳಿಗೆ ಉತ್ತಮ ರೀತಿಯ ಆಹಾರ ಧಾನ್ಯ ಒದಗಿಸಬೇಕೆಂದೂ ಜಮೀನು ಇಲ್ಲದ ಕಾರ್ಮಿಕರಿಗಾಗಿ ರೇಷನ್ ಡಿಪೋಗಳನ್ನು ಏರ್ಪಡಿಸಬೇಕೆಂದೂ ಒತ್ತಾಯ ಮಾಡಲು ಅಲ್ಲಿನ ಜಿಲ್ಲಾಧಿಕಾರಿಗಳ ಮನೆ ಮುಂದೆ ನೂರು ಮಂದಿ ಕೆಂಪು ಟೋಪಿ ಧರಿಸಿದ ಸೋಷಲಿಸ್ಟರು ಸತ್ಯಾಗ್ರಹವನ್ನು ಹೂಡಿದ್ದಾರೆ ಅವರು ರಾತ್ರಿಯೂ ಸಹ ತಮ್ಮ ಸ್ಥಾನ ಬಿಟ್ಟು ಕದಲದೇ ಇದ್ದಾರೆ

ಗುಡ್ಡಗಾಡಿನವರ ಮೇಲೆ ಪೋಲೀಸರ ಗುಂಡು

ಪೂರ್ವ ಪಾಕಿಸ್ತಾನಕ್ಕೆ ಸೇರಿದ ಮೈಮನ್‌ಸಿಂಗ್ ಜಿಲ್ಲೆಯ ಕಲ್ಮಕಂಡಾ ಎಂಬ ಹಳ್ಳಿಯ ಪೋಲೀಸು ಠಾಣೆಯಮೇಲೆ ಕಮ್ಯೂನಿಸ್ಟ್ ಪ್ರೇರಿತ ಗುಡ್ಡಗಾಡಿನವರು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಪೋಲೀಸರು ಗುಂಡುಹಾರಿಸಿದರೆಂದು ವರದಿಯಾಗಿದೆ ಹೆಚ್ಚಿನ ವಿವರ ತಿಳಿದುಬಂದಿಲ್ಲ

ಬ್ರಿಟಿಷ್ ಸರಕಾರಕ್ಕೆ ಭಾರಿ ಆರ್ಥಿಕ ಬಿಕ್ಕಟ್ಟು

ಬ್ರಿಟನ್ನಿನ ಕಾರ್ಮಿಕ ಸರಕಾರವು ೧೯೪೭ರಲ್ಲಿ ಉಂಟಾಗಿದ್ದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯನು ಪುನಃ ಎದುರಿಸಬೇಕಾಗಿ ಬಂದಿದೆ ಬ್ರಿಟಿಷ್ ನಾಣ್ಯವಾದ ಪೌಂಡಿನ ಬೆಲೆಯನ್ನು ಇಳಿಸಬೇಕೆಂದು ಅಮೇರಿಕನ್ನರು ಒತ್ತಾಯಪಡಿಸುತ್ತಿರುವರೆಂದೂ, ಇದರಿಂದ ಬ್ರಿಟನ್ನಿನಿಂದ ಹೊರಕ್ಕೆ ಸಾಮಾನುಗಳ ರಫ್ತು ಪುನಃ ಹೆಚ್ಚುವುದೆಂದೂ ಹೇಳುತ್ತಿರುವರು ಇತರ ಯೂರೋಪು ರಾಷ್ಟ್ರಗಳು ತಮ್ಮ ನಾಣ್ಯಗಳ ಬೆಲೆಗಳನ್ನು ಇಳಿಸಿದರೆ, ಆಗ ಬ್ರಿಟನ್ನೂ ಸಹ ಕಡ್ಡಾಯವಾಗಿ ಇಳಿಸಬೇಕಾಗುವುದೆಂದೂ ಹೇಳಲಾಗಿದೆ

ಆಹಾರಕ್ಕೆ ಮೊದಲನೇ ಸ್ಥಾನ

೧೯೫೧ ರಿಂದ ಆಹಾರದ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದು ಆದ್ದರಿಂದ ಇತರ ಸುಧಾರಣೆಗಳು ತಡವಾದರೂ ಹೆಚ್ಚು ಆಹಾರ ಬೆಳೆಯುವ ಕಾರ್ಯವನ್ನು ನಿಧಾನಿಸಲಾಗದು ಪಾನ ನಿರೋಧ, ಕುದುರೆ ಜೂಜು ಮುಂತಾದುವುಗಳ ನಿಷೇಧವನ್ನು ಜಾಗರೂಕತೆಯಿಂದ ಜಾರಿಗೆ ತರಬಹುದು ಎಂದು ಪಂಡಿತ ನೆಹರೂರವರು ಹೇಳಿರುವರು

ರಸಾಯನಿಕ ವಸ್ತುಗಳಿಂದ ಧಾನ್ಯ

ಬರುವ ವರ್ಷದ ಹೊತ್ತಿಗೆ ವಿಜ್ಞಾನ ಶೋಧನೆಗಳ ಮೂಲಕ ರಸಾಯನಿಕ ಧಾನ್ಯಗಳನ್ನು ಸಿದ್ಧ ಮಾಡಲಾಗುವುದೆಂಬ ಅಂಶವನ್ನು ಕೇಂದ್ರ ಆಹಾರ ಸಂಶೋಧನಾ ಸಮಿತಿ ಸದಸ್ಯರಾದ ಶ್ರೀ ಎಸ್. ವಿ. ರಾಮಮೂರ್ತಿಯವರು ಹೊರಗೆಡಹಿದ್ದಾರೆ ಗಡ್ಡೆಗೆಣಸುಗಳ ಬೆಳೆಗೆ ವಿಶೇಷ ಪ್ರೋತ್ಸಾಹ ಕೊಡಲಾಗುವುದೆಂದೂ ಅವರು ಹೇಳಿದ್ದಾರೆ

ತಾಯಿಯೊಡನೆ ನಿದ್ರಿಸುತ್ತಿದ್ದ ಮಗನ ಅಪಹಾರ

ಆಗ್ರಾದಲ್ಲಿ ಮನೆಯೊಂದರ ಬಿಸಲು ಮಚ್ಚಿನ ಮೇಲೆ ತಾಯಿಯ ಜೊತೆಯಲ್ಲಿ ಮಲಗಿದ್ದ ಏಳು ವರ್ಷದ ಬಾಲಕನ ಅಪಹಾರದ ಸಂಗತಿಯು ವರದಿಯಾಗಿದೆ ಹುಡುಗನ ತಂದೆ ಸರದಾರ್ ಸಂತ ಸಿಂಗರವರಿಂದ ಐವತ್ತು ಸಾವಿರ ರೂ ಗಳ ದಂಡವನ್ನು ಕೇಳಲಾಗಿದೆ ಈ ಸಂದರ್ಭದಲ್ಲಿ ಪೋಲೀಸರು ಗುರುಭಕ್ತಸಿಂಗ್ ಎಂಬ ಪಂಜಾಬಿನವನನ್ನು ಮತ್ತು ಆತನ ಸಹೋದರಿಯನ್ನೂ ದಸ್ತಗಿರಿ ಮಾಡಿರುವುದಾಗಿ ಗೊತ್ತಾಗಿದೆ

೨೫ ಸಾವಿರ ಡಾಲರಿಗೆ ಬೆಂಕಿ ಪೆಟ್ಟಿಗೆಯ ವಿಮೆ

ಬೆಂಕಿಯಿಂದ ಸುಟ್ಟುಹೋಗದಿರುವಂತೆ ೨೫ ಸಾವಿರ ರೂಪಾಯಿಗೆ ಒಂದು ಬೆಂಕಿ ಪೆಟ್ಟಿಗೆಯನ್ನು ಅಮೇರಿಕದ ಒಬ್ಬ ಭಾರಿ ಬೆಂಕಿ ಪೆಟ್ಟಿಗೆ ತಯಾರಿಸುವವನು ವಿಮೆ ಮಾಡಿಸಿದ್ದಾನೆ ಆತನ ಗಿರಣಿಯಲ್ಲಿ ತಯಾರಾದ ಮೊದಲನೆಯ ಪೆಟ್ಟಿಗೆ ಇದೆಂಬ ಈ ವಿಮೆಗೆ ಕಾರಣ ೧೮೫೨ರಲ್ಲಿ ಇದನ್ನು ತಯಾರಿಸಲಾಗಿತ್ತು

ಮುಂದಿನ ವರ್ಷ ಬ್ರಿಟನ್ನಿನಲ್ಲಿ ಮಹಾ ಚುನಾವಣೆ

ಬರುವ ವರ್ಷ ಜುಲೈ ತಿಂಗಳಿನೊಳಗಾಗಿ ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವುದು ಇದಕ್ಕಾಗಲೇ ಇಂಗ್ಲೆಂಡಿನ ಟೋರಿ ಸಂಘವು ಸಿದ್ಧ ಮಾಡಿಕೊಂಡು ತಮ್ಮ ಕಾರ್ಯಕ್ರಮದ ಪಟ್ಟಿಯನ್ನು ಪ್ರಸಿದ್ಧಪಡಿಸಿದೆ

ಗಾಂಧಿ ನಿಧಿ ಒಟ್ಟು ೯ ಕೋಟಿ

ಗಾಂಧೀಜಿ ಸ್ಮಾರಕ ನಿಧಿಗೆ ಒಟ್ಟು ೯, ೩೪,೮೪,೬೬೨ ರೂ ಗಳನ್ನು ವಸೂಲಾಗಿದೆ

ಗಿಡಗನಿಗೂ ಹಾವಿಗೂ ಆಕಾಶದಲ್ಲಿ ಕಾಳಗ

ಕೆಲವು ದಿವಸಗಳ ಹಿಂದೆ ಕೈರೋ ಬಳಿ ಒಂದು ಊರಿನಲ್ಲಿ ಒಂದು ಗಿಡಗನಿಗೂ, ಮೂರು ಅಡಿ ಉದ್ದದ ಒಂದು ಹಾವಿಗೂ ಸುಮಾರು ೧೫ ನಿಮಿಷ ಕಾಲ ಆಕಾಶದಲ್ಲಿ ಕಾಳಗ ನಡೆದ ಸಂಗತಿ ವರದಿಯಾಗಿದೆ. ಗಿಡಗನು ನೆಲದ ಮೇಲೆ ಹರಿಯುತ್ತಿದ್ದ ಹಾವನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿತು ಅದರ ಹಿಡಿತದಿಂದ ಬಿಡಿಸಿಕೊಳ್ಳಲು ಹಾವು ಅದರ ಮೈಸುತ್ತಲೂ ಬಿಗಿಯಾಗಿ ಸುತ್ತಿಕೊಂಡಿತು ಹಾಗೆಯೇ ಸ್ವಲ್ಪ ಕಾಲ ಗಿಡಗವು ಆಕಾಶದಲ್ಲಿ ಹಾರಾಡಿ, ಕಡೆಗೆ ಸುಸ್ತಾಗಿ ಹಾವನ್ನು ಕೆಳಕ್ಕೆ ಹಾಕಿಬಿಟ್ಟಿತು ಪ್ರೇಕ್ಷಕರು ಅದನ್ನು ಹೊಡೆದು ಸಾಯಿಸಿದರು

ಧನಿಕರಾದ ಕಾಂಗ್ರೆಸ್ಸಿನವರ ಮೇಲೆ ತೆರಿಗೆ

ಬಿಹಾರ್ ಪ್ರಾಂತ್ಯ ಕಾಂಗ್ರೆಸ್ ನಿಧಿಗೆ ಹಣವನ್ನು ಶೇಖರಿಸುವ ನಿಮಿತ್ತ ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಧನಿಕರಾದ ಕಾಂಗ್ರೆಸ್ಸಿನವರಿಂದ ಅವರ ವರಮಾನದ ಒಂದು ಭಾಗವನ್ನು ವಸೂಲು ಮಾಡಲು ಆಲೋಚಿಸಿರುವರೆಂದು ತಿಳಿದು ಬಂದಿದೆ ಇದಕ್ಕಾಗಿ ಅಲ್ಲಿರುವ ಧನಿಕ ಕಾಂಗ್ರೆಸ್ಸಿನವರ ಪಟ್ಟಿಯನ್ನು ತಯಾರಿಸುವಂತೆ ಎಲ್ಲಾ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆ ಕೊಡಲಾಗಿದೆ

ಭದ್ರಾವತಿಯಲ್ಲಿ ಪಾರಿಭಾಷಿಕ ಕಾಲೇಜು

ಈ ವರ್ಷದಿಂದಲೇ ಭದ್ರಾವತಿಯಲ್ಲಿ ಪಾರಿಭಾಷಿಕ ಕಾಲೇಜೊಂದನ್ನು ಸ್ಥಾಪಿಸಲು ಸರಕಾರದವರು ನಿರ್ಧರಿಸಿದ್ದಾರೆ ಹಾಗೆಯೇ ಮೈಸೂರು, ಹಾಸನ ಚಿಂತಾಮಣಿಗಳಲ್ಲಿ ಔದ್ಯೋಗಿಕ ಶಾಲೆಗಳನ್ನು ತೆರೆಯಲು ಆಲೋಚನೆಗಳು ನಡೆದಿವೆ

ಸಾಮಗ್ರಿಗಳ ಬೆಲೆ ಮೇಲೆ ಅಂತರ ರಾಷ್ಟ್ರ ಹತೋಟಿ

ಸಾಮಗ್ರಿಗಳ ಬೆಲೆಯ ಮೇಲೆ ಅಂತರ ರಾಷ್ಟ್ರೀಯ ಹತೋಟಿಯನ್ನು ಹಾಕಬೇಕೆಂದು ೩೪ ರಾಷ್ಟ್ರಗಳ ಸುಂಕ ಮತ್ತು ವ್ಯಾಪಾರಿ ಸಮ್ಮೇಳನದಲ್ಲಿ ಬಂದಿದ್ದ ಬ್ರಿಟನ್ನಿನ ಸೂಚನೆಗೆ ಬಹಳ ಬೆಂಬಲವು ದೊರೆತಿದೆ ಆದರೆ ಅಮೇರಿಕಾದ ಸಂಯುಕ್ತ ಸಂಸ್ಥಾನವು ಇದನ್ನು ವಿರೋಧಿಸಿದೆ

○ ಕೇಂದ್ರ ಸರಕಾರದ ನೌಕರರು ೫೫ ವರ್ಷಕ್ಕೆ ನಿವೃತ್ತರಾಗಬೇಕೆಂದು ಕೇಂದ್ರ ಸಂಬಳ ಸಮಿತಿಯವರು ಶಿಫಾರಸು ಮಾಡಿದ್ದರೂ ಸಹ ಈಗ ಇರುವಂತೆ ನೌಕರರು ೬೦ ವರ್ಷಕ್ಕೆ ನಿವೃತ್ತರಾಗತಕ್ಕ ನಿಬಂಧನೆಯು ಮುಂದೆಯೂ ಇರಬೇಕೆಂದು ನಿರ್ಧರಿಸಲಾಗಿದೆ

ವಾರ ಭವಿಷ್ಯ

ತಾ|| ೨೪-೭-೪೯ರಿಂದ ೩೦-೭-೪೯ರ ವರೆಗೆ

ಮೇಷ ಓರ್ವ ಎದುರಾಳಿಯನ್ನು ಗೆದ್ದಿರಿ. ನಿಮ್ಮ ಪರಾಕ್ರಮ ಮತ್ತು ಚಾತುರ್ಯಗಳ ಉಪಯೋಗದ ಪ್ರಮೇಯ ಒದಗುವುದು. ಆರೋಗ್ಯ ಉತ್ತಮ. ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಧನ ಲಾಭ. ಕೋರ್ಟು ಕಾರ್ಯದಲ್ಲಿ ಜಯ. ತಾ|| ೨೫, ೨೬ ವಿಶೇಷ ಖರ್ಚು.

ವೃಷಭ ಹಣಕಾಸಿನ ಸ್ಥಿತಿ ಸಾಧಾರಣವಿರುವುದು. ಆಕಸ್ಮಿಕ ಖರ್ಚು. ನೌಕರಿಯಲ್ಲಿ ವಾದವಿವಾದ, ಮೇಲ್ಪಟ್ಟವರಿಂದ ದೋಷ. ಆರೋಗ್ಯ ನೆಟ್ಟಗಿರದ ... ಮಾನಸಿಕ ತಾಪ. ತಾ|| ೨೪, ೨೮ ವಿಘ್ನ ಪರಿಹಾರ, ಧನ ಚಿಂತೆ ಸಂಶಯ.

ಮಿಥುನ ಮನಸ್ಸಿನಲ್ಲಿ ಆಂದೋಲನ. ಆರೋಗ್ಯ ನೆಟ್ಟಗಿರದು. ತಲೆ ತಿರುಗಿ ರಕ್ತ ಮೇಲೆ ಬೀಳುವ ಸಂಭವ. ಜಾಗ್ರತೆ ಇರಲಿ. ವ್ಯಾಪಾರಾದಿಗಳಲ್ಲಿ ಏಕಾಗ್ರತೆ ತಪ್ಪುವುದು. ತಾ|| ೨೬, ೨೭ ಇದ್ದುದರಲ್ಲಿ ಉತ್ತಮ.

ಕರ್ಕ ಅಸ್ತವ್ಯಸ್ತ ವಾದ ವಿವಾದ. ಆರೋಗ್ಯ ನೆಟ್ಟಗಿರದು. ಸ್ತ್ರೀಯಲ್ಲಿ ತೈ ಕಾಲಿಗೆ ಗಾಯ. ನೌಕರಿಯಲ್ಲಿ ಬಿಸ್ತಾ ಫಿರ್ಯಾದು. ಕಳೆಯುವ ಸಂಭವ. ಸಾಲಗಾರ ರೊಡನೆ ಚಿಂತೆ. ತಾ|| ೨೪, ೨೫ ಜಾಗರೂಕತೆ ಇರಲಿ, ಸೀತದ ಪರಿವಾರ.

ಸಿಂಹ — ಚಿತ್ತ ಚಾಂಚಲ್ಯ, ಕಲಹವು ... ಆಕಸ್ಮಿಕ ವರ್ಗದ ಸಂಭವ. ನಾರವು ಒದಗಿ ಬರುವುದು. ಕೋರ್ಟು ಕಾರ್ಯದಲ್ಲಿ ಹಾಟಸ್ಥ್ಯ, ಕುಟುಂಬಕ ಸುಖ ಅಷ್ಟಾಗಿ ಇಲ್ಲ. ತಾ|| ೨೫, ೨೬ ಅಪ್ರಿಯ ವಾರ್ತೆ, ಶತ್ರುತ್ವ.

ಕನ್ಯಾ—ಆರೋಗ್ಯ ಉತ್ತಮ. ಹಣಕಾಸಿನ ದೃಷ್ಟಿಯಿಂದ ಶ್ರೇಷ್ಠ ವಾರ. ಕೋರ್ಟು ವ್ಯವಹಾರದಲ್ಲಿ ಜಯ. ತಾ|| ೨೫, ೨೬ ನೌಕರಿ ದಂಧೆಯಲ್ಲಿ ಶುಭ ವಾರ್ತೆ.

ತುಲಾ ಸಾರ್ವಜನಿಕ ಕಾರ್ಯ ಜರುಗುವುದು. ಆರೋಗ್ಯ ಉತ್ತಮ. ಮೇಲಧಿಕಾರ ದೊರಕುವ ಶುಭ ಯೋಗ. ವ್ಯಾಪಾರಾದಿಗಳಲ್ಲಿ ಧನ ಲಾಭ. ಖರೀದಿ ಮುಂತಾದುವುಗಳು ನಡೆಯುವುವು. ಶತ್ರುವಿನ ನಾಶ. ತಾ|| ೨೭, ೨೮ ಮಿಶ್ರದ ಪತ್ರ.

ವೃಶ್ಚಿಕ— ಚಮತ್ಕಾರಿಕ ಘಟನೆಗಳ ಸಂಭವ. ಶರೀರ ಸ್ಥಿತಿ ಚೆನ್ನಾಗಿರದು. ವಾಹನಾಘಾತ ಭಯ. ಪ್ರವಾಸ ಬೇಡ. ಹಣಕಾಸಿನಲ್ಲಿ ಅಪ್ರಿಯ ಸ್ಥಿತಿ. ನೌಕರಿಯಲ್ಲಿ ಪೇಚಾಟ. ತಾ|| ೨೬, ೨೭ ಕೊಂಚ ಉತ್ತಮ.

ಧನು ಅತ್ಯಂತ ಸಂತರುಷ್ಟರಾಗುವ ವಾರ. ಮಾನಸಿಕ ವಿಚಿತ್ರ ಪರಿಸ್ಥಿತಿ. ಪತ್ನಿಯ ಅನಾರೋಗ್ಯ. ನೌಕರಿಯಲ್ಲಿ ಮೇಲಧಿಕಾರಿಗಳ ಅತೃಪ್ತಿ. ವ್ಯಾಪಾರಾದಿಗಳಲ್ಲಿ ಸಾಲಗಾರರಿಂದ ಮೋಸ. ತಾ|| ೨೫, ೨೬ ಪ್ರಿಯ ವ್ಯಕ್ತಿಯ ವಿಯೋಗ.

ಮಕರ ರಾಶಿಯ ಮನೋಭಾವನೆಯಿಂದ ಕೂಡಿದ ವರ್ತನೆ ನಿಮ್ಮದು. ಆರೋಗ್ಯ ಉತ್ತಮ. ವ್ಯಾಪಾರಾದಿಗಳಲ್ಲಿ ಇಷ್ಟ ಸಾತ್ರೇಕ ಧನ ಲಾಭ. ತಾ|| ೭, ೨೮ ಮನರಂಜನೆಗಾಗಿ ಖರ್ಚು.

ಕುಂಭ ವಾತ... ಸ್ಥಿತಿ ಎರಡೂ ಒಂದೇ ಎನ್ನುವವರ. ಪಿತ್ತ ಅದರಿಂದ ಕ್ಷೀಣ ಒಪ್ಪಿಸುವಂತೆ. ಆರೋಗ್ಯ ನಿಮ್ಮಗೆ ವ್ಯಾಪಾರ ಉದ್ಯೋಗದಲ್ಲಿ ತೊಂದರೆ ಇಲ್ಲ.

ನಾಥೂರಾಂ ಗೋಡ್ಸೆ ಆರೆಸ್ಸೆಸ್ ಸದಸ್ಯನಲ್ಲ

ಆರ್ ಎಸ್ ಎಸ್ ಸಂಸ್ಥೆಯು ಹಿಂಸಾತ್ಮಕ ಸಂಸ್ಥೆಯಲ್ಲವೆಂದೂ, ಅದರ ಕಾರ್ಯಾಚರಣೆಯಲ್ಲಿ ಯಾವ ರಹಸ್ಯವೂ ಇಲ್ಲವೆಂದೂ, ಅದರ ನಾಯಕರಾದ ಶ್ರೀ ಗೋಳ್ವಾಲ್ಕರರು ತಿಳಿಸಿರುತ್ತಾರೆ. ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆಯು ಆರ್ ಎಸ್ ಎಸ್ ಸಂಸ್ಥೆಯ ಸದಸ್ಯನಲ್ಲವೆಂದೂ, ೧೦ ವರ್ಷಗಳ ಹಿಂದೆಯೇ ಅದಕ್ಕೆ ಆತನು ರಾಜೀನಾಮೆ ಕೊಟ್ಟಿದ್ದನೆಂದೂ ಅವರು ಹೇಳಿರುತ್ತಾರೆ.

ಕರ್ಣಾಟಕ ವಿಶ್ವವಿದ್ಯಾಲಯ

ಧಾರ್ವಾಡದ ಹತ್ತಿರವಿರುವ ಚೋಟಾ ಮಹಾಬಲೇಶ್ವರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಬೊಂಬಾಯಿ ಸರ್ಕಾರದವರು ೩೦೦ ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಮುಂದಿನ ವರ್ಷದಿಂದ ಇದು ಪ್ರಾರಂಭವಾಗುವುದು.

೩ ಜನ ವಿಮಾನಾಧಿಕಾರಿಗಳ ದಸ್ತಗಿರಿ

ಅನೇಕ ಸಹಸ್ರ ರೂಪಾಯಿನ ಸರಕಾರಿ ಆಸ್ತಿಯ ದುರುಪಯೋಗ ಮತ್ತು ಮೋಸದ ಆಪಾದನೆಗಳ ಮೇಲೆ ದೆಹಲಿ ವಿಶೇಷ ಪೊಲೀಸರು ಭಾರತ ಸರಕಾರದ ವಿಮಾನ ಶಾಖೆಯ ಮೂವರು ಅಧಿಕಾರಿಗಳನ್ನೂ ಇಬ್ಬರು ಸರಕಾರಿ ಕಂಟ್ರಾಕ್ಟರುಗಳನ್ನೂ ದಸ್ತಗಿರಿ ಮಾಡಿರುವುದಾಗಿ ಗೊತ್ತಾಗಿದೆ.

ಮನಸ್ಸಿಗೆ ತೃಪ್ತಿ. ತಾ|| ೨೭, ೨೦ ದೂರ ದೇಶದವರ ಕುರಿತಿತೆ ಬಗ್ಗೆ ಚಿಂತೆ.

ಮೀನ ಮನಸ್ಸಿನಲ್ಲಿ ಹಲವಾರು ಯೋಜನೆ. ಆದರೆ ಕೆಲಸ ಸಾಧ್ಯವಿಲ್ಲ. ಮನೆಯವರ ಅನಾರೋಗ್ಯ ದುರ್ಬಲತೆಯಿಂದ ನಿಮ್ಮ ಆರೋಗ್ಯವೂ ಕೊಂಚ ಕೆಡಬಹುದು. ಹಣಕಾಸಿನ ಖರ್ಚು. ವ್ಯಾಪಾರಾದಿಗಳಲ್ಲಿ ಏಕಾಗ್ರತೆ ಇರದು. ತಾ|| ೨೭, ೨೮ ಅಪ್ರಿಯವಾರ್ತೆ ಎದೆಯಲ್ಲಿ ವೇದನೆ.

ಮೀನಿನ ಹೊಟ್ಟೆಯಲ್ಲಿ ಹಣ ಏಟ್ಟು ರವಾನೆ

ಕಲ್ಕತ್ತದಿಂದ ಪಾಕಿಸ್ತಾನಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಮೀನಿನ ಹೊಟ್ಟೆಯಲ್ಲಿದ್ದ ೩೫೦೦ ರೂ. ಮತ್ತು ಮಹಿಳೆಯೊಬ್ಬಳ ಬಳಿ ಇದ್ದ ೧೧೦೦ ರೂ.ಗಳನ್ನು ಪೊಲೀಸರು ಸಿಲ್ದಾ ರೈಲ್ವೆ ಸಿಲ್ದಾಣದಲ್ಲಿ ಪತ್ತೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ಢಾಕ್ಕಾಕ್ಕೆ ಹೋಗುತ್ತಿದ್ದ ರೈಲುಗಾಡಿಯಲ್ಲಿ ಕಳ್ಳತನದಲ್ಲಿ ಮಾವಿನ ಹಣ್ಣಿನ ಬುಟ್ಟಿಯಲ್ಲಿ ಇಟ್ಟು ಸಾಗಿಸಲಾಗುತ್ತಿದ್ದ ೧೯೪೦ ಗಜ ಬಟ್ಟೆಯನ್ನೂ ವಶಪಡಿಸಿಕೊಳ್ಳಲಾಗಿದೆ.

ಬಾಲ್ಕನ್ನಿನಲ್ಲಿ ರಷ್ಯದ ಸೈನ್ಯ

ಬಾಲ್ಕನ್ ಪ್ರದೇಶದಲ್ಲಿ ರಷ್ಯವು ೨|| ಲಕ್ಷ ಸೈನಿಕರನ್ನು ಇಟ್ಟಿದೆಯೆಂದೂ, ಇದು ಯುಗೋಸ್ಲಾವಿನ ಪ್ರಧಾನಿ ಮಾರ್ಷಲ್ ಟಿಟೋರವರ ವಿರೋಧ ಪ್ರಚಾರವನ್ನು ತಡೆಗಟ್ಟುವುದಕ್ಕೆಂದೂ ಹೇಳಲಾಗಿದೆ.

—o—

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ತಾ|| ೨೫-೭-೪೯ನೇ ಸೋಮವಾರ ಸಾಯಂಕಾಲ ೭ ಘಂಟೆಗೆ ಸರಿಯಾಗಿ ದೇವಾಂಗ ಸಂಘದ ಆಶ್ರಯದಲ್ಲಿ ಮ||ರಾ|| ಕೆ ಗುಂಡೂರಾಯರಿಂದ 'ದ್ರೌಪದಿ ಜನ್ಮ' ಎಂಬ ಹರಿಕಥೆಯೂ ಮತ್ತು ಅಮ್ಮನವರಿಗೆ 'ಕಾಳಿ' ಅಲಂಕಾರವೂ ನಡೆಯುವುವು.

೨೪ ವರ್ಷದ ಸೇಡಿಗಾಗಿ ಕೊಲೆ

೨೪ ವರ್ಷದ ಸೇಡಿಗಾಗಿ ಕೊಲೆಯೊಂದು ನಡೆದ ಸಂಗತಿಯು ನಾಯಿಯೊಂದರ ಸಹಾಯದಿಂದ ಪತ್ತೆಯಾದ ಸುದ್ದಿಯು ದೆಹಲಿಯಿಂದ ಬಂದಿದೆ. ಒಂದು ಕಾಂಪೌಂಡಿನಲ್ಲಿ ನಾಯಿಯು ನೆಲವನ್ನು ಮೂಸಿ, ಅಗೆದು ರಕ್ತವಾಗಿದ್ದ ಬಟ್ಟೆಗಳನ್ನು ಎಳೆಯುತ್ತಿದ್ದಾಗ, ಕಡಿದ ರುಂಡವೊಂದು ಪತ್ತೆಯಾಯಿತು. ಇದನ್ನು ವಶಪಡಿಸಿಕೊಂಡ ಪೊಲೀಸರು ದೂರದಲ್ಲಿ ಬೇರೊಂದು ಕಡೆ ಹೂಳಲಾಗಿದ್ದ ಮುಂಡವನ್ನು ಕಂಡು ಹಿಡಿದು, ಈ ಸಂಬಂಧವಾಗಿ ಮೂವರನ್ನು ದಸ್ತಗಿರಿ ಮಾಡಿರುವರು. ನಾಲ್ಕನೆಯವನು ಸಿಕ್ಕಿಲ್ಲ. ದಸ್ತಗಿರಿಯಾದವರ ತಂದೆಯನ್ನು ಕೊಲೆಯಾದ ರಾಮುಶಾಯಿ ಎಂಬುವನು ಹಿಂದೆ ಕೊಲೆ ಮಾಡಿ, ಜೈಲನ್ನು ಅನುಭವಿಸಿ ವಾಪಸು ಬಂದನಂತರ, ಆತನಿಗೆ ನೌಕರಿ ಕೊಡಿಸುವುದಾಗಿ ಹೇಳಿ ಅವರುಗಳು ತಮ್ಮ ಮನೆಯಲ್ಲಿಟ್ಟುಕೊಂಡನು. ಒಂದು ರಾತ್ರಿ ದ್ರಾವಕವನ್ನು ಕುಡಿಸಿ, ಆತನ ತಲೆ ಕಡಿದುಹಾಕಿ ಕೊಲೆ ಮಾಡಿ ಹೂತಿಟ್ಟರೆಂದು ಹೇಳಲಾಗಿದೆ.

○ ಡಿ ಸುಬ್ಬಯ್ಯ ರಸ್ತೆಯ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ದಿನ ನಡೆಯಬೇಕಾಗಿದ್ದ ಶ್ರೀ ಮಾಚೊಕ್ಕಮ್ಮನವರ ಸಂಗೀತವನ್ನು ಕಾರಣಾಂತರದಿಂದ ಮುಂದುವರಿಸಿ ಇದೇ ೩೧ನೇ ತಾರೀಖು ಭಾನುವಾರ ಏರ್ಪಡಿಸಿರುತ್ತೆ.

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

[By Dr. N S Narayan Sastry]
Inter Arts & Inter Science
Text Book for 1949-50
ಬೆಲೆ 1—6—0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

|| ಶ್ರೀ ||

ಗಾಯತ್ರೀ ಟಾಕೀಸ್

24-7-49 ರಿಂದ 3 ದಿನ ಮಾತ್ರ
ಪ್ರತಿ ದಿನ 3 ಆಟಗಳು
2000 ವರ್ಷಗಳ ಹಿಂದೆ ನಡೆದ ಚರಿತ್ರಾರ್ಹವಾದ ಆರ್.ಕೆ.ಓ ರವರ ಅಮರ ಚಿತ್ರ

ದಿ ಲಾಸ್ಟ್ ಡೇಸ್ ಆಫ್ ಪಾಂಪೆ

ಪಾತ್ರ-ಪ್ರೆಸ್ಟನ್ ಫಾಸ್ಟರ್ ಅಲನ್ ಹೇಲ್ ಮತ್ತು ಬೆಸಿಲ್ ರಾತ್ ಬೋನ್

—Next Change:—
Roosevelt Story

— Coming Shortly —
THE NEW ADVENTURES OF
DON JUAN

RAJKAMAL,
MYSORE
—:o:—
From 25—7—49
for 3 days only
Daily 3 Shows
ABBOTT & COSTELLO
in
THE NOSE HANGS HIGH
A Hilarious Comedy

ರಂಜಾನ್ ಹಬ್ಬಕ್ಕಾಗಿ
28—7—49 ರಿಂದ
ಪ್ರತಿ ದಿನ 3 ಆಟಗಳು
ಫಿಲ್ಮಿಸ್ತಾನ್‌ರವರ
ನದಿಯಾ-ಕೆ-ಪಾರ್
[ಹಿಂದಿ]
ಪಾತ್ರ:-ಕಾಮಿನಿ ಕೌಶಲ್
ದಿಲೀಪ್ ಕುಮಾರ್.

ಬೆಳಗಿನ ಪ್ರದರ್ಶನಗಳು
ತಾ|| 22-7-49 ರಿಂದ 4 ದಿನಗಳು
ಏಕ್ ರಾತ್
(ಹಿಂದಿ)
ಭೂಮಿಕೆ:-ನೀನಾ, ಪೃಥ್ವಿರಾಜ್.

ಪ್ರಭುದೇವಾ ಟಾಕೀಸ್

25-7-49ನೇ ಸೋಮವಾರದಿಂದ ಅನೋಘ 4ನೆಯ ವಾರ
ಜೆಮಿನಿಯವರ
ಬಾಲನಾಗಮ್ಮ
(ತೆಲುಗು)
ಪ್ರತಿ ದಿನ ೩ ಆಟಗಳು
ಪಾತ್ರ:-ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

Edited, printed and published by A. R. Nagarajan, at Sadhvi Press, D. Subbaiah Road, Mysore.

ಫೋ॥ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೨೫-೭-೧೯೪೯ [ಸಂಚಿಕೆ ೪

ಮೈ॥ ರಾಜ್ಯಾಂಗ ಸಭೆ ಅಂತಿಮ ಅಧಿವೇಶನ

ಪಡಿತರ ಹೆಚ್ಚಿಸಲು ಸಾಧ್ಯವಿಲ್ಲ

ಆಹಾರ ಸಮಿತಿಯಲ್ಲಿ ಗೃಹ ಸಚಿವರ ಹೇಳಿಕೆ

ಮೈಸೂರು. ೨೫

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನಿನ್ನೆ ದಿನ ನಗರದ ಆಹಾರ ಸಮಿತಿಯಲ್ಲಿ ಭಾಗವಹಿಸಿ, ದೇಶದ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಬೇರೆ ಪ್ರದೇಶಗಳಿಗಿಂತ ಮೈಸೂರಿನಲ್ಲಿ ಕಡಿಮೆ ಪಡಿತರ ಕೊಡಲಾಗುತ್ತಿದೆ ಯೆಂಬುದು ನಿರಾಧಾರವಾದುದು. ಸಂಸ್ಥಾನದಲ್ಲಿ ಹೆಚ್ಚು ಸಂಖ್ಯೆಯಲ್ಲಿರುವ ಬಿ. ಕ್ಲಾಸ್ ನವರಿಗೆ ೧೧.೫ ಔನ್ಸ್ ಪಡಿತರವನ್ನು ಕೊಡಲಾಗುತ್ತಿದೆ ಮತ್ತು ಈಗ ಅವರಿಗೆ ಹೆಚ್ಚು ಅಕ್ಕಿಯನ್ನೂ ಸರಬರಾಜು ಮಾಡಲಾಗುತ್ತಿದೆ ವ್ಯವಸಾಯ ಮಾಡುವವರು ಮತ್ತು ಶ್ರಮ ಜೀವಿಗಳಿಗೆ ಇನ್ನೂ ಹೆಚ್ಚಿನ ಪಡಿತರ ಕೊಡಲಾಗುತ್ತಿದೆ. ಅತಿ ಕಡಿಮೆ ಸಂಖ್ಯೆಯಲ್ಲಿರುವ ಎ ಕ್ಲಾಸ್ ನವರಿಗೆ ೯ ಔನ್ಸ್ ಮಾತ್ರ ಕೊಡಲಾಗುತ್ತಿದೆ. ಅವರು ಇದರ ಜೊತೆಗೆ ತರಕಾರಿ ಮತ್ತು ಇತರ ಧಾನ್ಯಗಳನ್ನು ಉಪಯೋಗಿಸುತ್ತಿದ್ದಾರೆ. ಈಗಿರುವ ಪಡಿತರವನ್ನು ಹೆಚ್ಚು ಮಾಡಬೇಕೆಂದು ಸರ್ಕಾರದವರಿಗೆ ಇರಾದೆಯಿದ್ದರೂ, ಪ್ರಕೃತ ಆಹಾರ ದಾಸ್ತಾನಿನ ಪರಿಮಿತಿಯಿಂದ, ಅದು ಸಧ್ಯಕ್ಕೆ ಸಾಧ್ಯವಿಲ್ಲ. ಆಹಾರ ಧಾನ್ಯಗಳ ಬೆಲೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಹೊರಗನಿಂದ ಬರುವ ಆಹಾರ ಧಾನ್ಯಗಳು ಮತ್ತು ಸಂಗ್ರಹಣೆ ಮೇಲೆ ಬೆಲೆಯನ್ನು ನಿಗದಿ ಮಾಡಲಾಗುವುದು ಈಗಾಗಲೇ ಸರ್ಕಾರದವರು ಆಹಾರಕ್ಕಾಗಿ ೨ ಕೋಟಿ ರೂ. ಖರ್ಚು ಮಾಡುತ್ತಿದ್ದಾರೆ. ಬೆಲೆ ಕಡಿಮೆ ಮಾಡಿದರೆ ಸರ್ಕಾರಕ್ಕೆ ಇನ್ನೂ ಹೆಚ್ಚು ನಷ್ಟ ಉಂಟಾಗುವುದು ಇತ್ತೀಚೆಗೆ ವ್ಯವಸಾಯದ ವೆಚ್ಚವು ದುಬಾರಿಯಾಗಿರುವುದರಿಂದ ರೈತರು ಹೆಚ್ಚು ಧಾನ್ಯ ಬೆಳೆಯುವಂತೆಯೂ ಮತ್ತು ಅವರ ಖರ್ಚು ದೊರೆಯುವಂತೆಯೂ ಅವರಿಗೆ ವಿಶೇಷ ಬೆಲೆಯನ್ನು ಕೊಡಬೇಕಾದುದ ಅತ್ಯವಶ್ಯಕ ಈ ಪರಿಸ್ಥಿತಿಗಳನ್ನು ಅರಿತು ಆಹಾರದ ಅಭಾವವನ್ನು ನೀಗಿಸಲು ಎಲ್ಲರೂ ಸಹಕರಿಸಬೇಕು—ಎಂದು ಸಚಿವರು ತಿಳಿಸಿದರು.

ಇತ್ತೀಚೆಗೆ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಯು ಹೆಚ್ಚಿರುವುದನ್ನು ತಡೆಗಟ್ಟಲು, ಅವುಗಳ ದರದ ಮೇಲೆ ಹತೋಟಿ ಇಡುವುದು ನಗರಕ್ಕೆ ಹೊರಗಿನಿಂದ ಹೆಚ್ಚು ಜನರು ಬಂದು ನೆಲಸುವುದನ್ನು ತಡೆಗಟ್ಟುವುದು, ಇವೇ ಮುಂತಾದ ವಿಚಾರಗಳು ಸಭೆಯಲ್ಲಿ ಚರ್ಚಿಸಲ್ಪಟ್ಟವು.

ರೇಷನ್ ಅಧಿಕಾರಿಗಳು ಒಂದು ವರದಿಯನ್ನು ಒಪ್ಪಿಸಿ, ಕಳೆದ ಆರು ತಿಂಗಳಲ್ಲಿ ೨೫೫೦ ಅಕ್ರಮ ರೇಷನ್ ಕಾರ್ಡುಗಳನ್ನು ರದ್ದು ಮಾಡಲಾಗಿದೆಯೆಂದೂ, ಇದರಿಂದ ೩೨೦ ಪಲ್ಲ ಅಕ್ಕಿ, ೧೮೦ ಪಲ್ಲ ಗೋಧಿ ಮತ್ತು ೩೦೦ ಪಲ್ಲ ಇತರ ಧಾನ್ಯಗಳು ಉಳಿತಾಯ ವಾಯಿತೆಂದೂ ತಿಳಿಸಿದರು.

ಹಿಟ್ಲರನ ರಾಯಭಾರಿಗೆ ೨೦ ವರ್ಷ ಶಿಕ್ಷೆ

ಯುದ್ಧಕಾಲದಲ್ಲಿ ಪ್ಯಾರಿಸ್ಸಿನಲ್ಲಿ ಹಿಟ್ಲರನ ರಾಯಭಾರಿಯಾಗಿದ್ದ ಅಟ್ಟೊ ಅಬೆಟ್ಜ್ ಎಂಬುವರಿಗೆ ಫ್ರೆಂಚ್ ಮಿಲಿಟರಿ ನ್ಯಾಯಾಸ್ಥಾನವು ೨೦ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದೆ

ವಯಸ್ಕರ ಶಿಕ್ಷಣ ಸಮಾರಂಭ

ಮೈಸೂರು ೨೫

ಮೈಸೂರು ನಗರದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಿನ್ನೆ ಸಂಜೆ ಟೌನಹಾಲಿನಲ್ಲಿ ವಯಸ್ಕರ ಶಿಕ್ಷಣ ಕಾರ್ಯಾರಂಭೋತ್ಸವ ಮತ್ತು ಜನಪದ ಕಲಾ ಸಮಾರಂಭಗಳು ಗೃಹ ಸಚಿವ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದುವು

ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರಿಂದ ಸ್ವಾಗತ ಭಾಷಣ ಮತ್ತು ಕಾರ್ಯದರ್ಶಿಯವರಿಂದ ವರದಿಯಾದನಂತರ, ಕೋಲಾಟ, ಹಳ್ಳಿಯ ಪದಗಳು, ಕೈ ಚಪ್ಪಾಳೆ ಕುಣಿತ, ವೀರಭದ್ರ ಕುಣಿತ, ಯಕ್ಷಗಾನ ಮುಂತಾದ ಜನಪದ ಕಲಾ ಮತ್ತು ಚಲನ ಚಿತ್ರ ಪ್ರದರ್ಶನಗಳು ಜರುಗಿದುವು ಅಧ್ಯಕ್ಷರು ಭಾಷಣ ಮಾಡಿ, ದೇಶವು ಅಭಿವೃದ್ಧಿಯಾಗಬೇಕಾದರೆ ಅನಕ್ಷರತೆಯು ನಿರ್ಮೂಲವಾಗಬೇಕೆಂದೂ, ಇದಕ್ಕೆ ಜನರ ಸಹಕಾರವು ಅತ್ಯಗತ್ಯವೆಂದೂ ತಿಳಿಸಿದರು ಗ್ರಾಮ ಕಲೆಗಳು ಅಭಿವೃದ್ಧಿಯಾಗಬೇಕೆಂದೂ ಹೇಳಿದರು.

ಸಂಗೀತ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮುಂದೆ ಈ ಸಂಜೆ ೭ ಗಂಟೆಗೆ ವಿದ್ವಾನ್ ಬಿ ಕೆ ಪದ್ಮನಾಭರಾಯರ ಸಂಗೀತ ಎ ವಿ ಕೃಷ್ಣಮಾಚಾರ್ಯರ ಪಿಟೀಲು, ಮತ್ತು ಆ॥ ವಿ॥ ಸಂಗೀತ ರತ್ನ ಟಿ.ಎಂ. ಪುಟ್ಟಸ್ವಾಮಯ್ಯನವರ ಮೃದಂಗಗಳು ನಡೆಯುವುವು

ಆಕಾಶವಾಣಿಯಲ್ಲಿ ಭಾಷಣ

ಈ ದಿನ ಸಂಜೆ ೭ ಗಂಟೆಗೆ ಆಕಾಶವಾಣಿಯಲ್ಲಿ ವರ್ತಮಾನ' ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಶ್ರೀಕಂಠಯ್ಯನವರು 'ಹಬ್ಬಗಳು' ಎಂಬ ವಿಚಾರವಾಗಿ ಪ್ರಸಾರ ಭಾಷಣ ಮಾಡುವರು

ಆಕಾಶವಾಣಿ ಕೇಂದ್ರ ಸರ್ಕಾರಕ್ಕೆ

ಮೈಸೂರಿನ ಆಕಾಶವಾಣಿಯನ್ನು ಕೇಂದ್ರ ಸರ್ಕಾರಕ್ಕೆ ವಹಿಸುವ ಬಗ್ಗೆ ನಡೆಯುತ್ತಿರುವ ಮಾತುಕತೆಗಳ ಅಂಗವಾಗಿ, ಇಬ್ಬರು ಅಧಿಕಾರಿಗಳು ಬೆಂಗಳೂರಿಗೆ ಬಂದಿರುವರು ಒಂದೆರಡು ದಿನಗಳಲ್ಲಿ ಅವರು ರಾಜಧಾನಿಗೆ ಬಂದು ಆಕಾಶವಾಣಿಯ ಪರಿಶೀಲನೆ ನಡೆಸುವರು.

ರಾಜ್ಯಾಂಗ ಸಭೆಯ ತುರ್ತು ಅಧಿವೇಶನ

ಸ್ವಂ.ಸು ಫೋ॥] ಬೆಂಗಳೂರು ೨೫

ಶ್ರೀ ಕೆ. ಸಿ. ರೆಡ್ಡಿಯವರು ಈ ತಿಂಗಳು ೨೮ ನೇ ತಾ॥ ದೆಹಲಿಯಿಂದ ಹಿಂತಿರುಗುವರು. ಸಂಸ್ಥಾನಗಳಿಗಾಗಿ ಸಿದ್ಧವಾಗಿರುವ ಮಾದರಿ ರಾಜ್ಯಾಂಗದ ಕರಡು ಪ್ರತಿಯನ್ನು ಅವರು ತರುವರೆಂದು ಹೇಳಲಾಗಿದೆ ಮತ್ತು ಇನ್ನು ಒಂದು ವಾರದೊಳಗೆ ಮೈಸೂರು ರಾಜ್ಯಾಂಗ ಸಭೆಯ ವಿಶೇಷ ಅಧಿವೇಶನವು ನಡೆದು ರಾಜ್ಯಾಂಗವನ್ನು ಅಂತಿಮವಾಗಿ ಅಂಗೀಕರಿಸಲು ವ್ಯವಸ್ಥೆ ಮಾಡಲಾಗುತ್ತದೆಂದು ಅಧಿಕೃತ ಆವರಣಗಳಿಂದ ತಿಳಿದುಬಂದಿದೆ

ಆಹಾರ ಇಲಾಖೆಗೆ ಮದರಾಸ್ ಅಧಿಕಾರಿಗಳೇ ?

ಸಿವಿಲ್ ಸಪ್ಲೈಸ್ ಮತ್ತು ಆಹಾರ ಇಲಾಖೆಗಳನ್ನು ಒಂದುಗೂಡಿಸಿ, ಅದರ ಮೇಲ್ವಿಚಾರಣೆಗೆ ಮದರಾಸಿನ ಅಧಿಕಾರಿಗಳೊಬ್ಬರನ್ನು ನೇಮಿಸಲಾಗುವುದೆಂದು ನಂಬಲರ್ಹವಾದ ಕಡೆಗಳಿಂದ ವರದಿಯಾಗಿದೆ.

ಮಂತ್ರಿ ಮಂಡಲದ ಮೇಲೆ ಅಸಮಾಧಾನ

ಬೆಂಗಳೂರು ೨೫

ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ನಿನ್ನೆ ನಡೆದು ಮಂತ್ರಿ ಮಂಡಲ ಮತ್ತು ಕಾಂಗ್ರೆಸ್ ನಾಯಕತ್ವದ ಬಗ್ಗೆ ಅಸಮಾಧಾನ ಸೂಚಿಸುವ ನಿರ್ಣಯವನ್ನು ಮಾಡಲಾಯಿತು. ಅಧಿಕಾರ ವರ್ಗದವರ ಸಡಿಲತೆ, ಅನೀತಿಯನ್ನು ತಡೆಯದಿರುವಿಕೆ, ಲಂಚ ರುಷುವತ್ತುಗಳು, ಅಸಮರ್ಪಕವಾದ ಆಹಾರ ನೀತಿ, ಬಂಡವಾಳಗಾರರ ಸಂರಕ್ಷಣೆ, ಹಳ್ಳಿಗರ ಉಪೇಕ್ಷೆ ಮೊದಲಾದ ಆಪಾದನೆಗಳು ಮಂತ್ರಿ ಮಂಡಲದ ಮೇಲೆ ಬಂದಿರುವುದಾಗಿಯೂ, ದೇಶದ ಹಿತದೃಷ್ಟಿಯಿಂದ ಇವೆಲ್ಲವನ್ನೂ ನಿಷ್ಪಕ್ಷಪಾತವಾಗಿ ವಿಮರ್ಶಿಸಿ, ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಒಂದು ನಿಯೋಗವು ಮಂತ್ರಿಮಂಡಲದ ಬಳಿ ಹೋಗಬೇಕೆಂಬ ನಿರ್ಣಯವು ಅಂಗೀಕೃತವಾಯಿತು

ಮಂತ್ರಿ ಮಂಡಲದವರೂ ಮತ್ತು ಕಾಂಗ್ರೆಸ್ ನಾಯಕರೂ ಶಿಸ್ತಿಗೆ ವಿರುದ್ಧ ವರ್ತನೆಗಳಲ್ಲಿ ತೊಡಗಿರುವುದರಿಂದ, ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ಪ್ರವೇಶಿಸಿ, ಜಯಪುರದ ನಿರ್ಣಯವನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುವ ನಿರ್ಣಯವೂ ಅಂಗೀಕೃತವಾಯಿತು.

ಜಪಾನಿಗೆ ಇಂದಿರಾ ಎಂಬ ಮೈಸೂರು ಆನೆ

ಜಪಾನಿನ ಮಕ್ಕಳಿಗೆ ಮೈಸೂರಿನಿಂದ ಒಂದು ಆನೆಯನ್ನು ಕಳುಹಿಸಬೇಕೆಂದು ಪಂಡಿತ ನೆಹರೂರವರು ಮೈಸೂರು ಸರ್ಕಾರಕ್ಕೆ ತಂತಿ ಕಳುಹಿಸಿದ್ದರಷ್ಟೆ. ಈ ಬಗ್ಗೆ ಹಣಕಾಸಿನ ಸಚಿವ ಶ್ರೀ ಹೆಚ್.ಸಿ. ದಾಸಪ್ಪನವರು ಅರಣ್ಯ ಇಲಾಖಾಧಿಕಾರಿಗಳೊಡನೆ ಶಿವಮೊಗ್ಗದ ಹತ್ತಿರವಿರುವ ಸಕ್ಕರೆಬೈಲಿಗೆ ಹೋಗಿ, ಅಲ್ಲಿ ೧೫ ವರ್ಷದ ಒಂದು ಸುಂದರವಾದ ಹೆಣ್ಣಾನೆಯನ್ನು ಪತ್ತೆ ಮಾಡಿ, ಅದನ್ನು ಜಪಾನಿಗೆ ಕಳುಹಿಸಬೇಕೆಂದು ನಿರ್ಧರಿಸಿದ್ದಾರೆ. ಅದಕ್ಕೆ ಇಂದಿರಾ ಎಂದು ಹೆಸರಿಡಲಾಗಿದೆ.

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘ

ಮೈಸೂರು ೨೫

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ವಾರ್ಷಿಕೋತ್ಸವವು ನಿನ್ನೆ ಮಧ್ಯಾಹ್ನ ಟೌನಹಾಲಿನಲ್ಲಿ ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರ ಸ್ವಾಗತ ಭಾಷಣವಾದನಂತರ ಸಚಿವರು ಭಾಷಣ ಮಾಡಿ, ಭಾರತದಲ್ಲಿ ಎಲ್ಲೂ ಇಲ್ಲದಷ್ಟು ಕಾರ್ಮಿಕರ ಹಿತ ಸಾಧನಾ ಶಾಸನಗಳನ್ನು ಮೈಸೂರಿನಲ್ಲಿ ಜಾರಿಗೆ ತರಲಾಗಿದೆಯೆಂದೂ, ಆದುದರಿಂದ ಕಾರ್ಮಿಕರು ಕೇವಲ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ ಮತ್ತು ಮುಷ್ಕರಗಳನ್ನು ನಡೆಸದೆ, ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಪ್ರಗತಿಗಾಗಿ ದುಡಿಯಬೇಕೆಂದೂ ತಿಳಿಸಿದರು.

ಸಚಿವ ಶ್ರೀ ಟಿ. ಮರಿಯಪ್ಪನವರೂ ಭಾಷಣ ಮಾಡಿ, ಕಾರ್ಮಿಕರಲ್ಲಿ ಶಿಸ್ತಿನ ಅಗತ್ಯವನ್ನು ತಿಳಿಸಿದರು

ನಂತರ ಚುನಾವಣೆ ನಡೆದು ಶ್ರೀ ಪುಟ್ಟಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಎಲ್ ರಾಮಯ್ಯನವರು ಉಪಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟರು

ಮಕ್ಕಳ ಹಬ್ಬ

ಇದೇ ೩೦ನೇ ತಾ॥ ಶನಿವಾರ ರಾಜಧಾನಿಯಲ್ಲಿ ನಡೆಯಲಿರುವ ಮಕ್ಕಳ ಹಬ್ಬದಲ್ಲಿ ನಗರದ ಖಾಸಗೀ ಶಿಶು ವಿಹಾರ, ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿಂದಿ ಶಾಲೆಗಳ ೧೪ ವರ್ಷದೊಳಗಿನ ಮಕ್ಕಳು ಆಟಗಳ ಸ್ಪರ್ಧೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶವಿರುವುದರಿಂದ ಅಂತಹವರ ಹೆಸರುಗಳನ್ನು ಇದೇ ೨೮ನೇ ತಾರೀಕಿನೊಳಗಾಗಿ ಪುರಸಭೆಯ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಅದರ ಕಾರ್ಯದರ್ಶಿಗಳು ಕೋರಿರುತ್ತಾರೆ

ಕ್ರಿಕೆಟ್ ಬೋರ್ಡಿನ ಮೇಲೆ ಅಮರನಾಥರ ದಾವಾ

ಕಳೆದ ಏಪ್ರಿಲ್ ತಿಂಗಳಲ್ಲಿ ಭಾರತದ ಕ್ರಿಕೆಟ್ ಬೋರ್ಡಿನವರು ಟೆಸ್ಟ್ ಪಂದ್ಯಗಳ ನಾಯಕರಾಗಿದ್ದ ಲಾಲಾ ಅಮರನಾಥರನ್ನು ಸಸ್ಪೆಂಡು ಮಾಡಿದುದಕ್ಕಾಗಿ ಅವರು ಬೋರ್ಡಿನ ಮೇಲೆ ದಾವಾ ಹೂಡಲಿರುವರೆಂದು ಹೇಳಲಾಗಿದೆ

ಮಹಿಳೆಯರ ಓಟಿನ ಬಗ್ಗೆ ಹೊಡೆದಾಟ

ಟರ್ಕಿಯ ಪಾರ್ಲಿಮೆಂಟ್ ಸಭೆಯಲ್ಲಿ ಮಹಿಳೆಯರಿಗೆ ಓಟಿನ ಹಕ್ಕನ್ನು ಕೊಡಬೇಕೆಂದು ಲಿಬರಲ್ ಪಕ್ಷದ ಸದಸ್ಯರೊಬ್ಬರು ನಿರ್ಣಯ ಮಂಡಿಸಿದಾಗ, ಲಿಬರಲ್ ಮತ್ತು ಕನ್ಸರ್ವೇಟಿವ್ ಪಕ್ಷದವರಿಗೆ ಹೊಡೆದಾಟವಾಯಿತೆಂದೂ, ಕೊನೆಗೆ ಪೊಲೀಸಿನವರ ಸಹಾಯದಿಂದ ಅವರನ್ನು ಹೊರಕ್ಕೆ ತೆಗೆದು ಕೊಳ್ಳಲಾಯಿತೆಂದೂ ಹೇಳಲಾಗಿದೆ

ಕಲ್ಕತ್ತದಲ್ಲಿ ನೂತನ ಟೆಲಿಫೋನ್ ವ್ಯವಸ್ಥೆ

೧೪ ಕೋಟಿ ರೂ ಬೆಲೆಯ ಕಲ್ಕತ್ತದಲ್ಲಿ ನೂತನ ಟೆಲಿಫೋನ್ ವ್ಯವಸ್ಥೆಯನ್ನು ಮಾಡಲಾಗಿದೆ ... ಹೊಸ ಲೈನುಗಳನ್ನು ಹಾಕಲಾಗುತ್ತದೆ

ಮಲೆಯಾದಲ್ಲಿ ೨೩೬ ಭಾರತೀಯ ಖೈದಿಗಳು

ಮಲೆಯಾದಲ್ಲಿ ಈಗ ೨೩೬ ಭಾರತೀಯರು ಬಂಧನದಲ್ಲಿದ್ದಾರೆಂದೂ, ಯಾವ ವಿಚಾರಣೆಯೂ ನಡೆಯದೆ ಜೈಲುಗಳಲ್ಲಿ ಅವರುಗಳು ಬಹು ಕಷ್ಟಪಡುತ್ತಿದ್ದಾರೆಂದೂ ಹೇಳಲಾಗಿದೆ ಇವರುಗಳ ಬಿಡುಗಡೆ ಬಗ್ಗೆ ಭಾರತ ಸರ್ಕಾರದವರು ಒತ್ತಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ

ಇಡ್ಲಿ ಜಪ್ತಿ

ಸ್ವಂ ವ ಸು] ಚಾಮರಾಜನಗರ, ೨೫

ಈ ಊರಿನ ಹೋಟೇಲ್ ಸುಬ್ಬಪ್ಪನವರು ಇಡ್ಲಿ ಮಾರಾಟ ಮಾಡುತ್ತಿದ್ದುದನ್ನು ಇಲ್ಲಿನ ಪೋಲೀಸಿನವರು ಪತ್ತೆ ಹಚ್ಚಿ ಸುಮಾರು ೫೪ ಅಕ್ಕಿ ಇಡ್ಲಿಯನ್ನು ಜಪ್ತಿ ಮಾಡಿ ಮುಂದಿನ ತನಿಖೆ ಕ್ರಮ ಜರುಗಿಸುತ್ತಿದ್ದಾರೆಂದು ತಿಳಿದುಬಂದಿದೆ

ಚೆಲುವಾಂಬಾ ಆಸ್ಪತ್ರೆ

ಮೈಸೂರು ತಾ|| ೨೦-೭-೧೯೪೯

ಪ್ರಕಟಣೆ

ಮೈಸೂರು ಚೆಲುವಾಂಬಾ ಆಸ್ಪತ್ರೆಯಲ್ಲಿ, ರೋಗಿಗಳ ಉಪಯೋಗಕ್ಕಾಗಿ ಒಂದು ಆಂಬ್ಯುಲೆನ್ಸ್ ವ್ಯಾನನ್ನು ಇಡಲಾಗಿದೆ ವ್ಯಾನನ್ನು ತರಲು ಸಾಕಷ್ಟು ಕಾಲ ಮುಂಚಿತವಾಗಿ ತಿಳಿಸಿ ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕೆ ಉಪಯೋಗಿಸಬಹುದು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಲ್ಪಟ್ಟ ರೋಗಿಗಳೂ ಸಹ ಆಸ್ಪತ್ರೆಯಿಂದ ತಮ್ಮ ಮನೆಗೆ ಹೋಗಲು ಈ ವ್ಯಾನನ್ನು ಉಪಯೋಗಿಸಿಕೊಳ್ಳಬಹುದು ಮೈಸೂರು ನಗರದ ಎಲ್ಲೆಯೊಳಗೆ ಹೋಗಿ ಬರುವ ಪ್ರತಿಯೊಂದು ಟ್ರಿಪ್ಪಿಗೂ ೩ ರೂ ಗಳ ಛಾರ್ಜು ತಗಲುವುದು.

ಎಂ. ಜಿ. ಹನುಮಟ್ಟೇಕರ್,
ಮೆಡಿಕಲ್ ಆಫೀಸರ್,
ಚೆಲುವಾಂಬಾ ಆಸ್ಪತ್ರೆ,
ಮೈಸೂರು

ಉತ್ತರ ಗ್ರೀಸಿನಲ್ಲಿ ಮುಸ್ಲಿಮರ ಕೊಲೆ

ಗ್ರೀಸ್ ಸರ್ಕಾರ ಅಲ್ಬೇನಿಯಾ ಗಡಿ ಪ್ರದೇಶದಲ್ಲಿದ್ದ ಅನೇಕ ಮುಸ್ಲಿಮರನ್ನು ಕೊಲೆ ಮಾಡಲಾಗಿದೆಯೆ. ದಗೆ ಒಬ್ಬ ಗ್ರೀಸಿನ ಕಮ್ಯೂನಿಸ್ಟರನ್ನು ಮುಸ್ಲಿಮ ನೊಬ್ಬನು ಕೊಲೆ ಮಾಡಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ವಿಶ್ವಸಂಸ್ಥೆಯವರು ಈ ಬಗೆ ವಿಚಾರಣೆ ನಡೆಸಲು ಜನ ವೀಕ್ಷಕರನ್ನು ಕಳುಹಿಸಿದ್ದಾರೆ

ಕಾಂಗ್ರೆಸ್ಸಿನವರ ಗಡೀಪಾರು

ಬೆಳಗಾಂ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ನಾಯಕರಾದ ಶ್ರೀ ಚನ್ನಪ್ಪ ವಾಲಿ ಮತ್ತು ಇತರ ... ಪ. ಬಿ ಕಾಂಗ್ರೆಸ್ಸಿನವ

ಧಾರವಾಡ, ಬೆಳಗಾಂ ಮತ್ತು ಬಿಜಾಪುರ ... ಗಳನ್ನು ಬಿಟ್ಟುಹೋಗಬೇಕೆಂದು ಸರ್ಕಾರದವರು ಗೂಂಡಾ ಕಾನೂನಿನ ರೀತ್ಯ ಅವರ ಮೇಲೆ ಗಡೀಪಾರು ಆಜ್ಞೆಯನ್ನು ಜಾರಿ ಮಾಡಿರುತ್ತಾರೆ ಶ್ರೀ ಯುತರು ... ಸತ್ಯಾಗ್ರಹದಲ್ಲಿ ತಲೆ ಮರೆಸಿಕೊಂಡಿದ್ದ ಅವರನ್ನು ಹಿಡಿದು ಕೊಟ್ಟವರಿಗೆ ಐದು ಸಾವಿರ ರೂ. ಬಹುಮಾನ ಕೊಡುವುದಾಗಿ ಸಾರಲಾಗಿತ್ತು

೨|| ಲಕ್ಷ ಬಟ್ಟೆ ಕಾರ್ಮಿಕರ ಮುಷ್ಕರ

ಕೆಲಸಗಾರರಿಗೆ ಬೋನಸ್ಸನ್ನು ರಾಷ್ಟ್ರೀಯ ಸೇವಿಂಗ್ಸ್ ಸರ್ಟಿಫಿಕೇಟ್ ರೂಪದಲ್ಲಿ ಕೊಡಬೇಕೆಂದು ಭಾರತ ಸರ್ಕಾರದವರು ಹೊರಡಿಸಿರುವ ಆಜ್ಞೆಯನ್ನು ರದ್ದು ಮಾಡಬೇಕೆಂದು ಬೊಂಬಾಯಿನ ೨|| ಲಕ್ಷ ಬಟ್ಟೆ ಗಿರಣಿ ಕೆಲಸಗಾರರು ಮುಂದಿನ ತಿಂಗಳು ೧೬ ನೇ ತಾ||ನಿಂದ ಮುಷ್ಕರ ಹೂಡಲಿದ್ದಾರೆ

ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳ ನಿಧನ

ಕರ್ನಾಟಕದ ಸುಪ್ರಸಿದ್ಧ ಕೀರ್ತನಕಾರರಾದ ಶ್ರೀ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು ಕಳೆದ ೨೧ನೇ ತಾ|| ಹೃದಯ ಸ್ತಂಭನದಿಂದ ಅಕಸ್ಮಾತ್ ಮರಣ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಅವರು ಸ್ವಾತಂತ್ರ್ಯದ ಹೋರಾಟದಲ್ಲಿ ಅನೇಕ ಸಾರಿ ಜೈಲು ವಾಸವನ್ನನುಭವಿಸಿದ್ದರು

ಕೋರ್ಟಿನಲ್ಲಿ ಫಿರ್ಯಾದಿ ತಿವಿದುಕೊಂಡ ಪ್ರಸಂಗ

ಮದರಾಸ್ ಪ್ರಾಂತ್ಯದ ಚಿಕಾಕೋಲ್ ಎಂಬಲ್ಲಿಯ ಸಬಾರ್ಡಿನೇಟ್ ಕೋರ್ಟಿನಲ್ಲಿ ಜೋಗಣ್ಣ ಎಂಬುವನು ಸಾಂಬಲಪುರದ ಶೋಗಣ್ಣನ ಮೇಲೆ ಹೂಡಿದ್ದ ಭೂಮಿ ವ್ಯಾಜ್ಯದ ಮೊಕದ್ದಮೆಯ ಅಪೀಲನ್ನು ನ್ಯಾಯಾಧೀಶರು ವಜಾ ಮಾಡಿದಾಗ ಕೋರ್ಟಿನಲ್ಲಿಯೇ ಆತನು ಚಾಕುವಿನಿಂದ ತಿವಿದುಕೊಂಡು ಕೆಳಕ್ಕೆ ಬಿದ್ದನೆಂದೂ, ಕೂಡಲೇ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ

ದೆಹಲಿ ಜೈಲಿಗೆ ಗೋಡ್ಸೆ

ಮಹಾತ್ಮರ ಕೊಲೆ ಆಪಾದನೆಯಲ್ಲಿ ಮರಣ ದಂಡನೆಗೆ ಗುರಿಯಾಗಿ ಅಂಬಾಲ ಜೈಲಿನಲ್ಲಿರುವ ನಾಥೂರಾಂ ಗೋಡ್ಸೆಯನ್ನು ದೆಹಲಿಯ ಜೈಲಿಗೆ ವರ್ಗಾಯಿಸಲಾಗುವುದು.

ಭಾಗವತ ಪುರಾಣ

ಸುಬ್ಬರಾಯನ ಕೆರೆ ಮೇಲಿರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಆಗಸ್ಟ್ ೯-೧೦-೧೧ ಈ ಮೂರು ದಿವಸಗಳಲ್ಲಿ ನಡೆಯುವ ಆರಾಧನಾ ಅಂಗವಾಗಿ ಶ್ರಾವಣ ಶುದ್ಧ ದ್ವಿತೀಯಾ ೨೭-೭-೪೯ ಬುಧವಾರದಿಂದ ೧೨-೮-೪೯ರ ಪರ್ಯಂತರ ಪ್ರತಿ ನಿತ್ಯ ಬೆಳಿಗ್ಗೆ ೭-೩೦ ರಿಂದ ೮-೪೦ ರವರಿಗೆ ಭಾಗವತ ಸಪ್ತಮಸ್ಕಂದ ಪುರಾಣವು ವೇ|| ರುಚ್ಯಾಚಾರ್ಯರಿಂದ ನಡೆಯುತ್ತದೆ ಹೋದ ವರ್ಷ ಆರಾಧನಾ ಚಂದಾ ಕೊಟ್ಟವರ ಪೂರ್ತಾ ವಿಳಾಸ ಗೊತ್ತಿಲ್ಲವಾದ್ದರಿಂದ ದಯವಿಟ್ಟು ಕಾಣಿಕೆ ಸಲ್ಲಿಸಿದ ಭಕ್ತಾದಿಗಳು ಈ ವರ್ಷ ಮಾತ್ರ ಮಠದಲ್ಲೇ ಬಂದು ವರದಿಯನ್ನು ಪಡೆಯಬೇಕೆಂದು ಕೋರಲಾಗಿದೆ

॥ ಶ್ರೀ ॥

ಗಾಯತ್ರೀ ಟಾಕೀಸ್

27-7-49 ರಿಂದ 2 ದಿನ ಮಾತ್ರ
ಪ್ರತಿ ದಿನ 3 ಆಟಗಳು

Roosevelt Story

ರೂಸ್‌ವೆಲ್ಟ್ ಸ್ಟೋರಿ

— 29ನೇ ಶುಕ್ರವಾರದಿಂದ

ಡಾನ್ ಜಾನ್

THE NEW ADVENTURES OF

DON JUAN

Edited, printed and pub lished by A R Nagarajan, at Sadhvi Press, D Subbiah Road, Mysore

RAJKAMAL,

MYSORE

From 25—7—49
for 3 days only
Daily 3 Shows
ABBOTT & COSTELLO
in

THE NOOSE HANGS HIGH

A Hilarious Comedy

28—7—49 ರಿಂದ
ಪ್ರತಿ ದಿನ 3 ಆಟಗಳು
ಫಿಲ್ಮಿಸ್ತಾನರವರ

ನದಿಯ-ಕೆ-ಪಾರ್

[ಹಿಂದಿ]
ಪಾತ್ರ - ಕಾಮಿನಿ ಕೌಶಲ್
ದಿಲೀಪ್ ಕುಮಾರ್.

-: ರಂಜಾನ್ ಹಬ್ಬದ ಪ್ರಯುಕ್ತ ಸ್ಪೆಷಲ್ :-

ಶ್ರೀ ಗಣೇಶಾ ಟಾಕೀಸ್

26-7-49 ರಿಂದ :: ಪ್ರತಿ ದಿನ ೩ ಆಟಗಳು



ಸಾಜನ್ - ಕೆ - ಘರ್

[ಹಿಂದಿ]

ಮುಖ್ಯ ಪಾತ್ರ:-ಜೈರಾಜ್, ಕುಸುಂ ದೇಶಪಾಂಡೆ.

-:ಮುಂದಿನ ಬದಲಾವಣೆ:-
ಚಾಮುಂಡೇಶ್ವರಿ ಮತ್ತು ಗಣೇಶಾ ಟಾಕೀಸುಗಳಲ್ಲಿ

ನವಜೀವನಂ

(ತಮಿಳು)

ವಾಣೀವಿಲಾಸ ಮೊಹಲ್ಲಾ
ಕಿಡ್ಡೀಸ್ ಹ್ಯಾಪಿ ಕ್ಲಬ್
ಸಹಾಯಾರ್ಥವಾಗಿ
28-7-49 ನೇ ಗುರುವಾರ
ಬೆಳಿಗ್ಯೆ ೧೦-೩೦ ಗಂಟೆಗೆ
ಲಾ ಮಿಸರಬ್ಲ
ಬದಲು
ರ್‍ಯಾಂಡಂ ಹಾರ್ವೆಸ್ಟ್
ಪಾತ್ರ - ಗ್ರಿಯರ್ ಗಾರ್ಸನ್ ಮತ್ತು ರೊನಾಲ್ಡ್ ಕೋಲ್ಮನ್
ಶ್ರೀ ಗಾಯತ್ರೀ ಟಾಕೀಸ್

ರಾಜಲಕ್ಷ್ಮಿ,
ವಿ. ಉಮಾ ಮಣಿ,
ಕಾರ್ಯದರ್ಶಿಗಳು.

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY
ಬೆಲೆ 2—0—0

ಗೂರ್ಲು, ಉಬ್ಬಸ, ಪರಿಣಾಮಶೂಲೆ ಮತ್ತು Tonsil ಗೆ (ಗಲಾಯುಕ) ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨೭-೭-೧೯೪೯ [ಸಂಚಿಕೆ ೭

ಬಿರುದಾಂಕಿತರಿಗೆ ಸತ್ಕಾರ

ಮೈಸೂರು ೨೭

ಧರ್ಮಪ್ರಕಾಶ ಎಸ್. ಪಿ. ಶ್ರೀನಿವಾಸ ಶೆಟ್ಟರನ್ನೂ, ಸಾರ್ವಜನಿಕ ಸೇವಾ ಪದಕ ಪಡೆದಿರುವ ಶ್ರೀ ಶಾಂಪೂರ್ ಗುರುಮೂರ್ತಪ್ಪನವರನ್ನೂ ಸತ್ಕರಿಸಲು ನಿನ್ನೆ ಟೌನ್ ಹಾಲಿನಲ್ಲಿ ಸಮಾರಂಭವೊಂದು ಏರ್ಪಾಡಾಗಿದ್ದಿತು. ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಅಧ್ಯಕ್ಷತೆ ವಹಿಸಿದ್ದರು ಆಶು ಕವಿ ರತ್ನಂ ಭಾರತಿ ಮತ್ತು ವಿದ್ವಾನ್ ಮಾಯಿಗ ಗೌಡರಿಂದ ಮಂಗಳಾಚರಣೆಯಾದನಂತರ ವಿದ್ವಾನ್ ಸಂಬಂಧ ಮೂರ್ತಿ ಭಾಗವತರ್ ಮತ್ತು ಮಂಡಲಿಯವರ ಸುಶ್ರಾವ್ಯವಾದ ಸಂಗೀತವು ಜರುಗಿತು. ಮುಖ್ಯ ಅತಿಥಿಗಳ ಸಾರ್ವಜನಿಕ ಸೇವೆಯನ್ನು ಪ್ರಶಂಸಿಸಿ ಬಿನ್ನವತ್ತಳೆಗಳು ಅರ್ಪಿಸಲ್ಪಟ್ಟವು ಅದಕ್ಕಾಗಿ ತಮ್ಮ ಕೃತಜ್ಞತೆಯನ್ನು ಸೂಚಿಸಿ ಅವರುಗಳು ಭಾಷಣ ಮಾಡಿದರು.

ದಿವಾನರು ಭಾಷಣ ಮಾಡಿ, ರಾಜ ಸನ್ಮಾನವು ಯಾವ ರೀತಿ ಕಲಾಕೋವಿದರ ಪಾಂಡಿತ್ಯಕ್ಕೂ ಮತ್ತು ಧರ್ಮಾತ್ಮರ ಪ್ರಜ್ಞಾ ಕಾರ್ಯಗಳಿಗೂ ಪ್ರೋತ್ಸಾಹವೀಯುವುದೆಂಬುವನ್ನು ವಿವರಿಸಿದರು. ಗುಣೈಕ ಪಕ್ಷಪಾತದಿಂದ ಕೊಡಲಾಗುತ್ತಿರುವ ಈ ಪ್ರಶಸ್ತಿಗಳು ಮೈಸೂರು ಸಂಸ್ಥಾನದ ವೈಶಿಷ್ಟ್ಯವನ್ನು ಪ್ರಕಾಶಪಡಿಸುತ್ತಿವೆಯೆಂದು ಹೇಳಿ, ಅವುಗಳನ್ನು ಮುಂದೆಯೂ ನಡೆಸಿಕೊಂಡುಬರಬೇಕೆಂದು ದಿವಾನರು ತಿಳಿಸಿದರು ಧನ್ಯವಾದಗಳನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು. ಎಲ್ಲರಿಗೂ ಸಿಹಿ ತಿಂಡಿಗಳನ್ನು ಹಂಚಲಾಯಿತು.

ಹೋಟಲು ಕೆಲಸಗಾರರ ಸಭೆ

ನಗರದ ಹೋಟಲು ಕೆಲಸಗಾರರ ಸಂಘದ ಸಾಮಾನ್ಯ ಸಭೆಯು ನಿನ್ನೆ ನಡೆಯಿತು ಶ್ರೀ ಎಸ್. ನಾಗಭೂಷಣರವರು ಸಂಸ್ಥಾನದ ಕೆಲಸಗಾರರ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು ಬೆಂಗಳೂರಿನಲ್ಲಿ ಬರುವ ತಿಂಗಳು ಸೇರಲಿರುವ ಮೇಲ್ಕಂಡ ಸಮ್ಮೇಳದಲ್ಲಿ ಭಾಗವಹಿಸ ಬೇಕೆಂದು ತೀರ್ಮಾನಿಸಲಾಯಿತು ಇನ್ನು ಮುಂದೆ ಸಂಘದ ಮೂಲಕವೇ ಕೆಲಸಗಾರರನ್ನು ಹೊಟೇಲು ಮಾಲೀಕರು ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು.

ಮೊಹಲ್ಲಾ ಪರಿಶೀಲನೆ

ನಾಳೆ ದಿನ ಬೆಳಗ್ಗೆ ಚಾಮರಾಜ ಮೊಹಲ್ಲಾ, ಕೃಷ್ಣಮೂರ್ತಿಪುರದಲ್ಲಿ ಪೌರ ಸಭಾ ಸದಸ್ಯರುಗಳೂ, ಅಧಿಕಾರೀ ವರ್ಗದವರೂ ಪರಿಶೀಲನೆ ನಡೆಸುವರು. ಮೊಹಲ್ಲಾ ನಿವಾಸಿಗಳು ತಮ್ಮ ಕುಂದುಕೊರತೆಗಳನ್ನು ತಿಳಿಸಬೇಕೆಂದು ಕೋರಲಾಗಿದೆ.

ಏಷ್ಯಾ ಜನಾಂಗಗಳಲ್ಲಿ ಐಕಮತ್ಯ

"ಯುನೈಟೆಡ್ ನೇಷನ್ಸ್ ಆಫ್ ಏಷ್ಯಾ" ಎಂಬ ಏಷ್ಯಾ ರಾಜ್ಯಗಳ ಪ್ರತ್ಯೇಕ ಕೂಟವನ್ನು ಭಾರತವು ಕಟ್ಟಬೇಕೆಂದು ಶರತ್ ಚಂದ್ರಬೋಸರು ತಿಳಿಸಿದ್ದಾರೆ. ಪಶ್ಚಿಮದಲ್ಲಿರುವ ಎರಡು ಪಕ್ಷಗಳು ತಮ್ಮೊಳಗೆ ಜಗಳ ಮಾಡಿಕೊಂಡು ಪ್ರಪಂಚದ ಶಾಂತಿಯನ್ನು ಭಂಗ ಪಡಿಸುತ್ತಿವೆಯೆಂದೂ, ಆದ್ದರಿಂದ ಭಾರತವು ವಿಶ್ವ ಶಾಂತಿಗಾಗಿ ಈರೀತಿಯ ವ್ಯವಸ್ಥೆ ಮಾಡಬೇಕೆಂದೂ ಅವರು ಹೇಳಿರುತ್ತಾರೆ.

- ದಾವಣಗೆರೆಯಲ್ಲಿ - ಯುವಕರ ಸಮ್ಮೇಳನ

ಸಮಾಜವಾದೀ ಪ್ರಭುತ್ವವೇ ಇಂದಿನ ತೊಂದರೆಗಳಿಗೆ ಪರಿಹಾರ

ಯುವಕ ಪರಿಷತ್ತಿನಲ್ಲಿ ಶರತ್ ಬೋಸರ ಉದ್ಗಾರ

[ನಮ್ಮ ವಿಶೇಷ ಪ್ರತಿನಿಧಿಗಳಿಂದ ತಂತಿ]

ದಾವಣಗೆರೆ ೨೭

ಹಿಂದೂಸ್ಥಾನದ ಸೋಷಿಯಲಿಸ್ಟ್ ರಿಪಬ್ಲಿಕ್ ಪಂಗಡದ ನಾಯಕರಾದ ಶ್ರೀ ಶರತ್ ಚಂದ್ರ ಬೋಸರು ಈ ಪ್ರಾತಃಕಾಲ ಕರ್ನಾಟಕ ಯುವಕ ಪರಿಷತ್ತಿನ ತೃತೀಯಾಧಿವೇಶನದ ಪ್ರಾರಂಭೋತ್ಸವವನ್ನು "ನಿಜ ಲಿಂಗಪ್ಪರ"ದಲ್ಲಿ ನೆರವೇರಿಸಿದರು ಈ ಸಮಾರಂಭಕ್ಕೆ ೫೦೦ ಜನ ಪ್ರತಿನಿಧಿಗಳೂ, ೫ ಸಾವಿರ ಮಂದಿ ಪ್ರೇಕ್ಷಕರೂ ಆಗಮಿಸಿದ್ದರು

ಬೋಸರು ನೆನ್ನೆ ಬೊಂಬಾಯಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಬಂದು, ರೈಲಿನಲ್ಲಿ ದಾವಣಗೆರೆಯನ್ನು ಈ ಪ್ರಾತಃಕಾಲ ತಲಪಿದರು. ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಭಾರಿ ಸ್ವಾಗತವನ್ನು ಕೊಡಲಾಯಿತು.

ನಂತರ ಮೆರವಣಿಗೆಯಲ್ಲಿ ಅವರನ್ನು ಸಮ್ಮೇಳನದ ಮಂಟಪಕ್ಕೆ ಕರೆದೊಯ್ಯಲಾಯಿತು.

ಬೋಸರಿಗೆ ಇನಾಕ್ಯುಲೇಷನ್

ಶರತ್ ಚಂದ್ರ ಬೋಸರು ದಾವಣಗೆರೆಗೆ ಈ ಪ್ರಾತಃಕಾಲ ಬಂದಾಗ, ಚಿತ್ರದುರ್ಗದ ಜಿಲ್ಲಾಧಿಕಾರಿಗಳು ಅವರನ್ನು ಕಂಡು ದಾವಣಗೆರೆಯಲ್ಲಿ ಪ್ಲೇಗು ಜಾಡ್ಯವು ಇರುವುದೆಂದೂ ಅವರು ಇನಾಕುಲೇಷನ್ ಮಾಡಿಸಿಕೊಳ್ಳಬೇಕೆಂದೂ ತಿಳಿಸಿದರು ಆದರೆ ಅವರು ಯೂರೋಪನ್ನು ಬಿಡುವ ಮುನ್ನವೇ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದುದರಿಂದ ಆ ವಿಷಯವನ್ನು ಅಲ್ಲಿಗೇ ಬಿಡಲಾಯಿತು.

ಭಾಷಾವಾರು ಪ್ರಾಂತ್ಯಗಳ ಅಗತ್ಯ

ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುತ್ತಾ ಬಾಬು ಬೋಸರು ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳ ಪುನರ್ರಚನೆಯಾಗಬೇಕೆಂದು ಒತ್ತಿ ಹೇಳಿದರು. ಕಳೆದ ೩೦ ವರ್ಷಗಳಿಂದಲೂ ಕಾಂಗ್ರೆಸ್ಸು ಈ ಧ್ಯೇಯಕ್ಕಾಗಿ ಹೋರಾಡುತ್ತಿರುವಲ್ಲಿ ಈ ಪ್ರಶ್ನೆಯನ್ನು ಈಗ ಮುಂದೆ ಹಾಕಿರುವುದಕ್ಕಾಗಿ ಸರ್ಕಾರವನ್ನು ತೀವ್ರವಾಗಿ ಟೀಕಿಸಿದರು ಇಂದಿನ ಅಸಂತುಷ್ಟಿ ಮತ್ತು ಅಶಾಂತಿಗಳ ನಿವಾರಣೆಗೆ ಸಮಾಜವಾದೀ ಪ್ರಭುತ್ವದ ಸ್ಥಾಪನೆಯೇ ಮುಖ್ಯ ಸಾಧನನೆಂದು ಅವರು ಹೇಳಿದರು

ಬೊಂಬಾಯಿನ ಪ್ರಧಾನಿ ಬಿ ಜಿ. ಖೇರ್, ಮೈಸೂರಿನ ಗೃಹ ಮಂತ್ರಿ ಶ್ರೀ ಟಿ ಮರಿಯಪ್ಪ ಮುಂತಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದರು. ಶ್ರೀಗಳಾದ ಎಸ್. ನಿಜಲಿಂಗಪ್ಪ ಮತ್ತು ಎಸ್ ಕಾರಂತರು ಸಮ್ಮೇಳನಕ್ಕೆ ದಯಮಾಡಿಸಿದ್ದರು

ಧ್ವಜಾರೋಹಣ

ಸಮ್ಮೇಳನದ ಅಂಗವಾಗಿ ಬೋಸರು ಈ ಬೆಳಗ್ಗೆ ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು. ಪ್ರಗತಿ, ಶಾಂತಿ ಮತ್ತು ಸ್ವಾತಂತ್ರ್ಯಗಳ ಸೂಚಕವಾದ ಈ ಧ್ವಜಕ್ಕೆ ನಾವೆಲ್ಲರೂ ಗೌರವ ಸಲ್ಲಿಸಬೇಕೆಂದು ತಿಳಿಸಿದರು

ಶ್ರೀ ಎಸ್ ಪಿ ಕೃಷ್ಣಮೂರ್ತಿರಾಯರ ಬದಲು ಶ್ರೀ ಕೆ ಎಂ. ರುದ್ರಪ್ಪನವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ದಾವಣಗೆರೆಯಲ್ಲಿ ಪ್ಲೇಗ್ ಇರುವುದರಿಂದ ಸಂತೆ, ಸಿನಿಮಾ, ಸಭೆ ಮತ್ತು ಕೂಟಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿದ್ದರು. ಆದರೆ ಈ ಸಮ್ಮೇಳನಕ್ಕಾಗಿ ವಿಶೇಷ ಅನುಮತಿಯನ್ನು ಕೊಡಲಾಗಿತ್ತು.

ಚಂಡಮಾರುತದಿಂದ ಷಾಂಗ್ಹೈ ನಗರದಲ್ಲೆಲ್ಲಾ ನೀರು

ಜಪಾನಿನ ಒಕಿನಾವಾ ದ್ವೀಪದ ಕಡೆಯಿಂದ ಬೀಸಿದ ಸಮುದ್ರದ ಚಂಡಮಾರುತದ ಪೆಟ್ಟಿನಿಂದ ಷಾಂಘೈ ನಗರದಲ್ಲಿ ೨ ರಿಂದ ೪ ಅಡಿ ವರೆಗೆ ನೀರು ನಿಂತಿದೆಯೆಂದು ಹೇಳಲಾಗಿದೆ. ಈ ಮಾರುತವು ಓಕಿನಾವಾ ಮೇಲೆ ಬೀಸಿದಾಗ ವಾಯುಪಡೆಗಳ ಯಂತ್ರೋಪಕರಣಗಳನ್ನು ಹಾಳು ಮಾಡಿತು

ಮಕ್ಕಳ ಹಬ್ಬಕ್ಕಾಗಿ ನಿಮ್ಮ ಉದಾರವಾದ

ಕಾಣಿಕೆಯನ್ನು

ಕೂಡಲೇ ಸಲ್ಲಿಸಿರಿ

ಟಿ. ವೆಂಕಟರಮಣಯ್ಯ
ಅಧ್ಯಕ್ಷ

ಆಗಸ್ಟ್ ತಿಂಗಳಲ್ಲಿ ಆಕಾಶವಾಣಿಯ ವರ್ಗ

ಮೈಸೂರು ೨೭

ಬರುವ ತಿಂಗಳಲ್ಲಿ ಆಕಾಶವಾಣಿಯು ಆಡಳಿತವು ಕೇಂದ್ರ ಸರಕಾರದ ವಶಕ್ಕೆ ಹೋಗುವುದೆಂದು ತಿಳಿದುಬಂದಿದೆ. ಈ ಸಂಬಂಧವಾಗಿ ಅಖಿಲ ಭಾರತ ರೇಡಿಯೊ ಚೀಫ್ ಇಂಜನಿಯರ್ ಬಿ ವಿ ಬಲಿಗ, ಡೆಪ್ಯುಟಿ ಚೀಫ್ ಇಂಜನಿಯರ್ ಮಿರ್ಚಂದಾನಿ ಮತ್ತು ಮದರಾಸ್ ಸ್ಟೇಷನ್ ಡೈರೆಕ್ಟರ್ ಜಿ. ಟಿ ಶಾಸ್ತ್ರಿಯವರು ನಮ್ಮ ಸರ್ಕಾರದವರೊಡನೆ ಮಾತುಕತೆ ನಡೆಸಿದರು. ಇಲ್ಲಿನ ಆಕಾಶವಾಣಿ ಕೇಂದ್ರವನ್ನೂ ಸವಿಸ್ತಾರವಾಗಿ ಪರಿಶೀಲನೆ ಮಾಡಿದರು.

ಶಾಖಾ ಕಚೇರಿ

ನಂಜನಗೂಡಿನಲ್ಲಿ ಅಡ್ವೊಕೇಟರಾಗಿರುವ ಶ್ರೀ ಆರ್. ಬಸವಣ್ಣನವರು ನಾಳೆ ದಿನ ತಮ್ಮ ಕಚೇರಿಯ ಶಾಖೆಯೊಂದನ್ನು ಚಾಮರಾಜನಗರದಲ್ಲಿ ಆರಂಭಿಸಲಿರುವರು

ನಗರದ ಆರೋಗ್ಯಾಧಿಕಾರಿಗಳು

ಬೆಂಗಳೂರು ಜಿಲ್ಲೆಯ ಆರೋಗ್ಯಾಧಿಕಾರಿಗಳಾದ ಶ್ರೀ ಬಿ.ಎನ್. ಲಿಂಗರಾಜು ಅವರನ್ನು ಮೈಸೂರು ನಗರದ ಆರೋಗ್ಯಾಧಿಕಾರಿಗಳಾಗಿ ವರ್ಗಾಯಿಸಲಾಗಿದೆ

ನಂದೀ ಬೆಟ್ಟದಲ್ಲಿ ಗಾಂಧೀ ನಿಲಯ

ನಂದಿ ಬೆಟ್ಟದ ಮೇಲಿರುವ ಓಕ್ಲೆಂಡ್ ಹೌಸ್ ಎಂಬ ಭವನವನ್ನು ಇನ್ನು ಮುಂದೆ ಗಾಂಧಿ ನಿಲಯವೆಂದು ಕರೆಯುವಂತೆ ಸರ್ಕಾರದ ಆಜ್ಞೆಯಾಗಿದೆ

೩೦ ಕೋಟಿ ರೂ.ನ ಹೊಸ ವಿದ್ಯುದ್ಯೋಜನೆ

ಬೆಂಗಳೂರು. ೨೭

ದಿನೇ ದಿನೇ ವಿದ್ಯುಚ್ಛಕ್ತಿಯ ಉಪಯೋಗವು ಹೆಚ್ಚುತ್ತಿರುವುದರಿಂದ ಸದ್ಯದಲ್ಲಿಯೇ ಸಂಸ್ಥಾನಕ್ಕೆ ಬೇಕಾಗುವ ಅಂದಾಜು ಎಪ್ಪತ್ತು ಸಾವಿರ ಕಿಲೋವಾಟ ನಷ್ಟು ಹೆಚ್ಚು ವಿದ್ಯುತ್ ಶಕ್ತಿಯನ್ನು ಉತ್ಪತ್ತಿ ಮಾಡಲು ಮೇಕೆದಾಟು ಮತ್ತು ಹೊನ್ನೆಹುರಡು ಎಂಬಲ್ಲಿ ೩೦ ಕೋಟಿ ರೂ. ವೆಚ್ಚದಿಂದ ಕೈಗೊಳ್ಳಬೇಕೆಂದಿರುವ ಐದು ವರ್ಷಗಳ ಯೋಜನೆಯ ವಿವರಗಳನ್ನು ಸಚಿವ ಶ್ರೀ ಕೆ ಟಿ. ಭಾಷ್ಯಂರವರು ನಿನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಮೈಸೂರು ಸಿಟಿ ರೇಷನಿಂಗ್

ನಂ. M. 9-7/49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೊ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೊ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳಲ್ಲಿ ಮುಚ್ಚಲ್ಪಡುತ್ತವೆ:-

31-7-49—ಭಾನುವಾರ-ಪೂರ್ತ ರಜ-ದಾಸ್ತಾನು ಎಣಿಕೆ ಒಗ್ಗೆ-ಸರ್ಕಾರಿ ಡಿಪೊ. ವರ್ತಕರ ಡಿಪೊ ಮತ್ತು ಸಹಕಾರ ಸಂಘಗಳು

1-8-49—ಸೋಮವಾರ—ಪೂರ್ತ ರಜ-ದಾಸ್ತಾನು ಎಣಿಕೆ ಬಗ್ಗೆ-ಮೊಹಲ್ಲಾ ಸಬ್ ಗೋಡೌನ್ ಮಾತ್ರ

(ಸಹಿ) ಡಿ. ಜೆ. ಬಾಲರಾಜ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಮೈಸೂರು
25-7-49

ಮೈಸೂರು ಸಿನಿಮಾ ಕೆಲಸಗಾರರ ಸಂಘ

—o—

ಸಂಸ್ಥಾನದ ಸಿನಿಮಾ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಕೆ ಎಸ್ ಕುಮಾರರವರು ಕೆಳಗೆ ಕಂಡಂತೆ ಒಂದು ಮನವಿಯನ್ನು ಹೊರಡಿಸಿದ್ದಾರೆ

ಮೈಸೂರು ಸಂಸ್ಥಾನದ ಸಿನಿಮಾ ಕೆಲಸಗಾರರ ಸಂಘವು ಸ್ಥಾಪನೆಯಾಗಿ ಒಂದು ವರ್ಷದ ಮೇಲಾಯಿತು ಈ ಕಾಲಾವಧಿಯಲ್ಲಿ ಸಂಘವು ಸಿನಿಮಾ ಕೆಲಸಗಾರರ ಕುಂದು ಕೊರತೆಗಳನ್ನು ಪರಿಶೀಲಿಸಿದೆ ಸಂಸ್ಥಾನದ ನಾನಾ ಥಿಯೇಟರುಗಳಲ್ಲಿ, ಚಲನಚಿತ್ರ ಪ್ರದರ್ಶಕರಲ್ಲಿ ಮತ್ತು ಟೂರಿಂಗ್ ಟಾಕೀಸುಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಪರವಾಗಿ ಕೆಲವು ಬೇಡಿಕೆಗಳನ್ನು ಮಂಡಿಸಲಾಗಿದೆ

ಸಂಘವು ತನ್ನ ಬೇಡಿಕೆಗಳನ್ನು ಕಾರ್ಯಗತ ಮಾಡಲು ತಕ್ಕ ಕಾರ್ಯಕ್ರಮ ಕೈಗೊಳ್ಳಲು ತೀರ್ಮಾನಿಸಿದ ಸಂಘವು ಕೈಗೊಳ್ಳಬೇಕಾಗಿರುವ ಯಾವ ಕಾರ್ಯಕ್ರಮವು ಸಾಮೂಹಿಕವಾದ ಹಾಗಿಯೂ ಒಗ್ಗಟ್ಟಿನದಾಗಿಯೂ ಇರಬೇಕು ಎಲ್ಲಾ ಸಿನಿಮಾ ಕೆಲಸಗಾರರೂ ತಮ್ಮ ಸಂಘದ ಸದಸ್ಯರಾದರೆ ಮಾತ್ರ ಇದು ಸಾಧ್ಯ ಆದುದರಿಂದ ಸಂಸ್ಥಾನಾದ್ಯಂತ ಸಿನಿಮಾ ಕೆಲಸಗಾರರು ಕೂಡಲೇ ಸಂಘದ ಸದಸ್ಯರಾಗಬೇಕೆಂದೂ ಮತ್ತು ಸಂಘದ ಸದಸ್ಯರ ಚಂದಾ ಬಾಕಿಯಾಗಿರುವವರ ತಮ್ಮ ಬಾಕಿ ಚಂದಾವನ್ನು ಕೂಡಲೇ ಪಾವತಿ ಮಾಡುವುದಲ್ಲದೆ ತಮ್ಮ ಸದಸ್ಯತ್ವವನ್ನು ಕ್ರಮವಾಗಿ ಮುಂದುವರಿಸಬೇಕೆಂದೂ ಕೋರುತ್ತೇನೆ

— ಪ್ರಭಾ —

ವಿಜಯ ಪ್ರದರ್ಶನಗಳು

28-7-49ರಿಂದ 5 ದಿನಗಳು ಮಾತ್ರ

ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ವಾಪಸ್

- ಮುಖ್ಯ ಪಾತ್ರ -

ಭಾರತಿ, ಅಜಿತ ಬರ್ಮ, ಗೋಪಾಲ

ಜನರ ಗುಂಪು ರಾಷ್ಟ್ರ ಧ್ವಜವನ್ನು ಸುಟ್ಟಿತು

ಮಧುರೆಯು ಮೂನ್ನಿರಾಣಿ ವನದಲ್ಲಿ ಮೊನ್ನೆ ಸಂಜೆ ಕಮ್ಯೂನಿಸ್ಟರೆಂದು ಹೇಳಲಾದ ಪ್ರದರ್ಶನಕಾರರು ಅಲ್ಲಿದ್ದ ರಾಷ್ಟ್ರ ಧ್ವಜವನ್ನು ಸುಟ್ಟರೆಂದೂ ವರದಿಯಾಗಿದೆ ಇದಕ್ಕೆ ಪ್ರತೀಕಾರವಾಗಿ ಪಕ್ಕದಲ್ಲಿರುವ ಕಮ್ಯೂನಿಸ್ಟ್ ಕಚೇರಿಯನ್ನು ಸ್ವಯಂ ಸೇವಕರು ಪ್ರಯತ್ನಿಸಿ ವಿಫಲರಾದರೆಂದೂ ಅಲ್ಲಿದ್ದ ಇಬ್ಬರು ಕಾಂಗ್ರೆಸ್ಸಿನವರಿಗೆ ಗಾಯವಾಯಿತೆಂದೂ ಈ ಸಂದರ್ಭದಲ್ಲಿ ಒಂಭತ್ತು ಜನರನ್ನು ಪೋಲೀಸರು ಬಂಧಿಸಿದರೆಂದೂ ತಿಳಿದುಬಂದಿದೆ

ಈಜಿಪ್ಟ್ ಸರಕಾರದ ರಾಜೀನಾಮೆ

ಈಜಿಪ್ಟಿನ ಪ್ರಧಾನ ಮಂತ್ರಿ ಇಬ್ರಾಹಿಂ ಅಬ್ದುಲ್ ಹಾದಿಪಾಷಾರವರು ಅಲ್ಲಿನ ದೊರೆಗಳಾದ ಫರೂಕರಿಗೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನೊಪ್ಪಿಸಿದ್ದಾರೆ ಇವರು ಹಿಂದೆ ಕೊಲೆಯಾದ ನಕ್ರೋಷಿ ಪಾಷಾರವರ ನಂತರ ಅಧಿಕಾರಕ್ಕೆ ಬಂದಿದ್ದರು ಸ್ವತಂತ್ರ ರಾಜಕೀಯ ನಾಯಕರಾದ ಹುಸೇನ್ ಸಿರ್ರಿ ಪಾಷಾರವರು ಸಾರ್ವತ್ರಿಕ ಚುನಾವಣೆಯಾಗುವವರೆಗೆ ಮಂತ್ರಿ ಮಂಡಲವನ್ನು ರಚಿಸಬೇಕೆಂದು ದೊರೆಗಳು ಆಜ್ಞಾಪಿಸಿದ್ದಾರೆ

ಮಕ್ಕಳ ಹಬ್ಬ

ಈ ತಿಂಗಳ ಕೊನೆ, ತಾ॥ ೩೧ ಭಾನುವಾರ ಮಕ್ಕಳ ಹಬ್ಬದ ಪ್ರಯುಕ್ತ ಬೆಳಿಗ್ಗೆ ೭-೩೦ ಗಂಟೆಗೆ ಎಲ್ಲಾ ವಿದ್ಯಾ ಶಾಲೆಗಳಲ್ಲಿಯೂ ತಂದೆ ತಾಯಿಗಳ ಮತ್ತು ಪೋಷಕರ ಸಭೆ ನಡೆಯುವುದು ಮಧ್ಯಾಹ್ನ ೪ರಿಂದ ೬ ಗಂಟೆವರೆಗೆ ಬಹಿರಂಗ ಸಭೆ ಜರುಗುವುದು

ಮಕ್ಕಳಿಗೆ ಹೊದಿಸುವ

ಅಪ್ಪಟ ಉಣ್ಣೆಯ ರಗ್ಗುಗಳು

ಬಾಹುಸಾರ್ ಕಂಪೆನಿ,

ಬ್ರಾಡ್ ರೋಡ್, ಮೈಸೂರು

ಬ್ಯಾಂಕಿನ ಅಧಿಕಾರಿ ವರ್ಗದ ಚುನಾವಣೆ

ನಂಜನಗೂಡು ೨೫

ಇಲ್ಲಿಯ ಸಹಕಾರ ಬ್ಯಾಂಕಿನ ೧೯೪೯ನೇ ಸಾಲಿನ ಅಧಿಕಾರಿ ವರ್ಗ ಮತ್ತು ಡೈರಕ್ಟರುಗಳ ಚುನಾವಣೆ ನಡೆದು, ಶ್ರೀ ಜಿ ನಂಜುಂಡಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಎಲ್ ಆರ್ ಪ್ರಭುಸ್ವಾಮಿಯವರು ಗೌರವಕಾರ್ಯದರ್ಶಿಯಾಗಿಯೂ ಚುನಾಯಿತರಾದರು

ಗೊರಿಲ್ಲಾ ಮತ್ತು ಚಿರತೆಯ ಕಾಳಗ

ವಾಷಿಂಗ್‌ಟನ್ನಿನ ಹತ್ತಿರ ಇರುವ ಊರೊಂದರಲ್ಲಿ ನಡೆಯುತ್ತಿದ್ದ ಕಾಡುಮೃಗಗಳ ಪ್ರದರ್ಶನದಲ್ಲಿದ್ದ ಒಂದು ಕರಿಯ ಚಿರತೆಗೂ, ಕಾಡು ಕಪಿ ಗೊರಿಲ್ಲಾಗೂ ಕಾಳಗವಾಗಿ ಕೊನೆಗೆ ಚಿರತೆಯು ಗೊರಿಲ್ಲಾವನ್ನು ಹರಿದು ಹಾಕಿತೆಂದು ಹೇಳಲಾಗಿದೆ ಎರಡು ಗಂಟೆ ಕಾಲ ಎರಡು ಪ್ರಾಣಿಗಳಿಗೂ ಬಹು ಭಯಂಕರ ಕಾಳಗವಾಯಿತು ಅವುಗಳ ಕಾದಾಟದ ಶಬ್ದವು ಒಂದು ಮೈಲಿ ದೂರ ಕೇಳಿಸುತ್ತಿತ್ತು ಕೊನೆಗೆ ಗೊರಿಲ್ಲನನ್ನು ಕೊಡೆದುಹಾಕಲಾಯಿತು

ವಯಸ್ಸು ೧೧೬ ಆದರೂ ನೃತ್ಯ ಮಾಡಬಲ್ಲ ಸ್ತ್ರೀ

ಬೆಲ್ಜಿಯಮ್ಮಿನ ಅತ್ಯಂತ ವೃದ್ಧೆಯೆಂದು ಗಣಿಸಲ್ಪಟ್ಟ ಬ್ರುಸೆಲ್ಸಿನ ಮೇರಿ ಪಂಪ್ಲಾರ್ ಎಂಬುವಳಿಗೆ ಈಗ ೧೧೬ ವರ್ಷವಾಗಿದೆ ಆಕೆಯು ಇನ್ನೂ ಧೃಢಕಾಯಳಾಗಿಯೇ ಇರುವಳು ಆಕೆಯ ಗೌರವಾರ್ಥವಾಗಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಆಕೆಯು ಎಲ್ಲರಂತೆಯೇ ನೃತ್ಯ ಮಾಡಿದಳು

ಚಲುವಾಂಬಾ ಆಸ್ಪತ್ರೆ

ಮೈಸೂರು, ತಾ॥ ೨೦-೭-೧೯೪೯

ಪ್ರಕಟಣೆ

—o—

ಮೈಸೂರು ಚಲುವಾಂಬಾ ಆಸ್ಪತ್ರೆಯಲ್ಲಿ, ರೋಗಿಗಳ ಉಪಯೋಗಕ್ಕಾಗಿ ಒಂದು ಆಂಬ್ಯುಲೆನ್ಸ್ ವ್ಯಾನನ್ನು ಇಡಲಾಗಿದೆ ವ್ಯಾನನ್ನು ತರಲು ಸಾಕಷ್ಟು ಕಾಲ ಮುಂಚಿತವಾಗಿ ತಿಳಿಸಿ ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕೆ ಉಪಯೋಗಿಸಬಹುದು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಲ್ಪಟ್ಟ ರೋಗಿಗಳೂ ಸಹ ಆಸ್ಪತ್ರೆಯಿಂದ ತಮ್ಮ ಮನೆಗಳಿಗೆ ಹೋಗಲು ಸದರಿ ವ್ಯಾನನ್ನು ಉಪಯೋಗಿಸಿಕೊಳ್ಳಬಹುದು ಮೈಸೂರು ಮುನಿಸಿಪಲ್ ಎಲ್ಲೆಯೊಳಗೆ ಹೋಗಿ ಬರುವ ಪ್ರತಿಯೊಂದು ಟ್ರಿಪ್ಪಿಗೂ ೩ ರೂ ಗಳು ಛಾರ್ಜು ತೆಗೆಲುವುದು

ಎಂ. ಜಿ. ಹನುಮಂತ್ಸೇಕರ್,

ಮೆಡಿಕಲ್ ಆಫೀಸರ್,

ಚಲುವಾಂಬಾ ಆಸ್ಪತ್ರೆ

ಮೈಸೂರು

Edited, printed and published by A R Nagarajan, at Sadhvi Press, D Subbiah Road, Mysore

ಒಂದು ಸಲ ಭೇಟಿ ಕೊಡಿರಿ!

ರುಚಿ — ರುಚಿ — ಆರೋಗ್ಯ

29—7—49ರಿಂದ ಪ್ರಾರಂಭ

ನ್ಯೂ ಗ್ರಾಂಡ್ ಹಿಂದು ಮಿಲಿಟರಿ ಹೋಟೆಲ್,

ಮಂಡಿ ಪೋಲೀಸ್ ಸ್ಟೇಷನ್ ಚೌಕ, ಮೈಸೂರು.

ಎಕ್ಸಿಕ್ಯುಟಿವ್ ಇಂಜನಿಯರರ ಕಛೇರಿ, ಬಿಲ್ಡಿಂಗ್ಸ್ ಡಿವಿಜನ್, ಮೈಸೂರು

ಬಿಲ್ಡಿಂಗ್ಸ್ ಡಿವಿಜನ್, ಮೈಸೂರು

ಪ್ರಕಟಣೆ

ಈ ಕೆಳಗೆ ರುಜು ಮಾಡಿರುವವರಿಂದ ಆಫೀಸಿನಲ್ಲಿ ೬-೮-೧೯೪೯ನೇ ತಾರೀಖು ಮಧ್ಯಾಹ್ನ ೪ ಗಂಟೆವರೆಗೆ, ೧೯೪೯ನೇ ಸೆಪ್ಟೆಂಬರಿನ ದಸರಾ ವಸ್ತುಪ್ರದರ್ಶನದ ಸಂಬಂಧವಾಗಿ ಜೀವಣ್ಣರಾಯನ ಕಟ್ಟೆ ಮತ್ತು ವಸ್ತುಪ್ರದರ್ಶನದ ಕಟ್ಟಡದೊಳಗೆ ಹಂಗಾಮಿ ಅಂಗಡಿ ಸ್ಟಾಲುಗಳನ್ನು ಕಟ್ಟಲು ಮೊಹರಾದ ಟೆಂಡರುಗಳನ್ನು ಸ್ವೀಕರಿಸಲಾಗುವುದು ಲಕ್ಕೋಟೆಯ ಮೇಲೆ ಮೇಲ್ಕಂಡ ರೀತಿಯ ಟೆಂಡರುಗಳು ಎಂದು ಬರೆದಿರಬೇಕು

೧ ಕೆಳಗೆ ರುಜು ಮಾಡಿರುವವರಿಗೆಂದು ಪಿ ಡಬ್ಲ್ಯು ಡಿ ಗಾಗಿ ಟ್ರಿಜರಿಗೆ ಜಮಾ ಎಂದು ೪೦(೧) ನಿಬಂಧನೆ ರೀತ್ಯಾ ಸರಕಾರಿ ಖಜಾನೆಯಲ್ಲಿ ೯೦ ರೂಪಾಯಿಗಳನ್ನು ಠೇವಣಿ ಮಾಡಿರುವ ಬಗ್ಗೆ ಚಲನನ್ನು ಟೆಂಡರುಗಳಿಗೆ ಲಗತ್ತಿಸಿರಬೇಕು ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ ಇಂತಹ ಚಲನ್ನುಗಳು ಇಲ್ಲದ ಟೆಂಡರುಗಳನ್ನು ಪರಿಶೀಲಿಸದೇ ತಿರಸ್ಕರಿಸಲಾಗುವುದು

೨ ಇದಕ್ಕೆ ಸಂಬಂಧಪಟ್ಟ ವಿವರಗಳ ಅಂದಾಜುಗಳು, ಪ್ಲಾನುಗಳು ಮತ್ತು ಒಪ್ಪಂದಗಳ ನಮೂನೆಗಳನ್ನು ಎಲ್ಲಾ ಕೆಲಸದ ದಿನಗಳಲ್ಲೂ ಮಧ್ಯಾಹ್ನ ೧ ರಿಂದ ೪ ಗಂಟೆ ವರೆಗೂ ಮೊದಲೇ ಗೊತ್ತುಮಾಡಿಕೊಂಡು ನೋಡಬಹುದು ಒಟ್ಟು ಕೆಲಸದ ಅಂದಾಜಿನ ಒಂದು ಗೋಷ್ವಾರೆಯನ್ನು ಕೊಡಲಾಗುವುದು

೩ ಇದಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳೂ, ೧೯೪೯ನೇ ಜುಲೈ ೨೮ ಮತ್ತು ಆಗಸ್ಟ್ ೪ ರಲ್ಲಿ ಪಾಯಿಸ್ ಆಗುವ ಮೈಸೂರು ಗೆಜೆಟ್ಟಿನಲ್ಲಿರುವ ಪ್ರಕಟಣೆಯ ರೀತ್ಯಾ ಇರುವುವು

(ರುಜು) ಎ ಎಸ್ ಗೋಪಾಲಕೃಷ್ಣ ಅಯ್ಯಂಗಾರ್,

ಎಕ್ಸಿಕ್ಯುಟಿವ್ ಇಂಜನಿಯರಿಗಾಗಿ, ಬಿಲ್ಡಿಂಗ್ಸ್ ಡಿವಿಜನ್.

-: ರಂಜಾನ್ ಹಬ್ಬದ ಪ್ರಯುಕ್ತ ಸ್ಪೆಷಲ್ :-

ಶ್ರೀ ಗಣೇಶಾ ಟಾಕೀಸ್

26-7-49ರಿಂದ :: ಪ್ರತಿ ದಿನ ೩ ಆಟಗಳು

✱ ಸಾಜನ್-ಕಿ-ಘರ್ ✱

[ಹಿಂದಿ]

ಮುಖ್ಯ ಪಾತ್ರ:- ಜೈರಾಜ್, ಕುಸುಂ ದೇಶಪಾಂಡೆ.

ಸಂಡಿತ ನೆಹರೂ ಮತ್ತು ಗೌರ್ನರ್ ಜನರಲ್ ರಾಜಾಜಿ ಯವರ ದಕ್ಷಿಣ ಭಾರತ ಪ್ರವಾಸದ ಚಿತ್ರಗಳನ್ನೂ ಮತ್ತು ಎನ್ನಾರವರ ತೀರ್ಥ ಯಾತ್ರೆಯ ದೃಶ್ಯಗಳನ್ನೂ ಸಹ ಪ್ರದರ್ಶಿಸಲಾಗುತ್ತದೆ

-: ಮುಂದಿನ ಬದಲಾವಣೆ:-

ಚಾಮುಂಡೇಶ್ವರಿ ಮತ್ತು ಗಣೇಶಾ ಟಾಕೀಸುಗಳಲ್ಲಿ

ನವಜೀವನಂ

(ತಮಿಳು)

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೮-೭-೧೯೪೯ [ಸಂಚಿಕೆ ೭

ಮಂತ್ರಿಗಳ ಸಂಖ್ಯೆ ಇಳಿಸಲು ಕೇಂದ್ರ ಸಲಹೆ

ಮಂತ್ರಿ ಮಂಡಲ ಸಾಧಿಸಿದ ಕಾರ್ಯದ ಪ್ರಕಟಣೆ

ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಒತ್ತಾಯ

ತುಮಕೂರು ೨೭

ನೆನ್ನೆ ದಿನ ಇಲ್ಲಿ ಸೇರಿದ್ದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಇಂದಿನ ಮಂತ್ರಿ ಮಂಡಲದವರು ಇದುವರೆಗೆ ಸಾಧಿಸಿದ ಕಾರ್ಯ, ಜನರಿಗೆ ಮಾಡಿದ ವಾಗ್ದಾನಗಳಲ್ಲಿ ಸಾಧಿಸಲಾರದೆ ಇರುವುದಕ್ಕೆ ಉಂಟಾದ ಅಡ್ಡಿ ಆತಂಕಗಳೇನು ಮುಂತಾದವುಗಳನ್ನು ತಿಳಿಸುವ ಅಧಿಕೃತ ಪ್ರಕಟಣೆಯೊಂದನ್ನು ಹೊರಡಿಸಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡುವ ನಿರ್ಣಯ ಮಾಡಲಾಯಿತು.

ಮದ್ರಾಸಿನಲ್ಲಿ ಒಂದು ಬಾರಿಗೆ ನಾಲ್ಕು ವಾರಗಳ ರೇಷನ್

ಈ ತಿಂಗಳು ಆಖೈರಿನಿಂದ ಮದ್ರಾಸಿನ ಪ್ರಾಂತದಲ್ಲಿ ಪಡಿತರದ ಪ್ರದೇಶಗಳಲ್ಲಿ ನಾಲ್ಕು ವಾರಗಳ ರೇಷನ್ ಪದಾರ್ಥಗಳನ್ನು ಒಟ್ಟಿಗೆ ತೆಗೆದುಕೊಳ್ಳಲು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ

ಭದ್ರತಾ ಸಮಿತಿ ಸದಸ್ಯತನಕ್ಕೆ ಭಾರತದ ಉಮೇದುವಾರಿಕೆ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಮೂರು ಸ್ಥಾನಗಳು ಖಾಲಿಯಿರುವುದರಿಂದ ಅವುಗಳಲ್ಲಿ ಒಂದು ಸ್ಥಾನಕ್ಕೆ ಭಾರತವು ತನ್ನ ಉಮೇದುವಾರಿಕೆಯನ್ನು ಮುಂದಿಡುವ ಸೂಚನೆಗಳಿವೆ

ಭಾರತಕ್ಕೆ ಜರ್ಮನಿಯಲ್ಲಿ ತಯಾರಾದ ಮನೆ

ಜರ್ಮನಿಯಲ್ಲಿ ಸಿದ್ಧಗೊಳಿಸಲ್ಪಟ್ಟ ಮನೆಗಳನ್ನು ಭಾರತಕ್ಕೆ ಇನ್ನು ಮುಂದೆ ಆಮದು ಮಾಡಿಕೊಳ್ಳಲಾಗುವುದು ಇವು ಅಲ್ಲಿನ ಪ್ರಖ್ಯಾತ ವಿಮಾನ ಕಾರ್ಖಾನೆಗಾರರಾದ ಮೆಸರ್‌ಸ್ಮಿಟ್ಟರಿಂದ ತಯಾರಾದವು.

ವನಸ್ಪತಿಯಿಂದ ಮೋಟಾರು ಎಣ್ಣೆ

ಡಾರ್ಜಿಲಿಂಗ್ ಸಮೀಪದಲ್ಲಿರುವ ಊರೊಂದರಲ್ಲಿ ಭಾರತೀಯ ವ್ಯಾಪಾರ ಸಂಸ್ಥೆಯೊಂದು ವನಸ್ಪತಿ ವಸ್ತುಗಳಿಂದ ಹೊಸ ವಿಧವಾದ ಮೋಟಾರು ಎಣ್ಣೆಯನ್ನೇ ತಯಾರಿಸಿದೆಯೆಂದು ಹೇಳಲಾಗಿದೆ.

ಸಹಕಾರ ಶಿಕ್ಷಣ ಪರೀಕ್ಷೆ

ನೆನ್ನೆ ರಾಜಧಾನಿಯಲ್ಲಿ ನಡೆದ ಸಹಕಾರ ಶಿಕ್ಷಣದ ಭಾಗಗಳಾದ ಅಕೌಂಟೆನ್ಸಿ ಬ್ಯಾಂಕಿಂಗ್ ಮತ್ತು ಆಡಿಟಿಂಗ್ ಪರೀಕ್ಷೆಗಳಲ್ಲಿ ಕೊಡಲಾಗಿದ್ದ ಪ್ರಶ್ನ ಪತ್ರಿಕೆಯ ಮುಖ್ಯಾಲು ಭಾಗವು ಅಕೌಂಟೆನ್ಸಿ ಸಂಬಂಧವಾದ ಪ್ರಶ್ನೆಗಳಿಂದ ಕೂಡಿದ್ದಿತು ತರಗತಿಗಳಲ್ಲಿ ಈ ವಿಭಾಗದ ವಿಷಯವಾಗಿ ಎರಡು ಮೂರು ಗಂಟೆಗಳು ಮಾತ್ರ ಪಾಠವಾಗಿತ್ತೆಂದೂ, ಆದ್ದರಿಂದ ಪ್ರಶ್ನೆಗಳು ಕಠಿಣವಾಗಿ ವಿದ್ಯಾರ್ಥಿಗಳಿಗೆ ತುಂಬಾ ಕಷ್ಟವಾಯಿತೆಂದೂ ಇದರಿಂದ ವಿದ್ಯಾರ್ಥಿಗಳು ನಿರಾಶರಾಗಿ ಉತ್ತರಗಳನ್ನು ಬರೆದಿಟ್ಟರೆಂದೂ ಹೇಳಲಾಗಿದೆ ಈ ವಿಷಯಕ್ಕೆ ಸಂಬಂಧಪಟ್ಟವರು ಇದನ್ನು ಗಮನಿಸಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪರೀಕ್ಷೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಕೋರಿರುತ್ತಾರೆ.

ಸಚಿವರ ಸಂಖ್ಯೆ ಕಡಿಮೆ ಮಾಡಲು ಸೂಚನೆ?

ಸ್ವಂ ಸು ಪ್ರೋ[F] ಬೆಂಗಳೂರು ೨೮

ಸಂಸ್ಥಾನದ ಆಡಳಿತ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ನಮ್ಮ ಸಚಿವರುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಂಶವನ್ನು ಪರ್ಯಾಲೋಚಿಸುವಂತೆ ಕೇಂದ್ರ ಸರ್ಕಾರದವರು ಸಲಹೆ ನೀಡಿರುವರೆಂದು ನಂಬಲರ್ಹವಾದ ಕಡೆಗಳಿಂದ ವರದಿಯಾಗಿದೆ ಮಂತ್ರಿ ಮಂಡಲದ ಪುನರ್ರಚನೆಯ ಕಾಲದಲ್ಲಿ ಈ ಅಂಶವೂ ಸಹ ಪರಿಶೀಲಿಸಲ್ಪಡುವುದೆಂದು ಹೇಳಲಾಗಿದೆ ದೆಹಲಿಗೆ ತೆರಳಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಕೇಂದ್ರ ಸರ್ಕಾರದಿಂದ ಸಂಸ್ಥಾನಕ್ಕೆ ಪಡೆದುಕೊಳ್ಳಬೇಕಾದ ಸುಮಾರು ಮೂರು ಕೋಟಿ ರೂ ಸಾಲದ ಬಗ್ಗೆ ಮಾತುಕತೆ ನಡೆಸುವರೆಂದೂ ತಿಳಿದುಬಂದಿದೆ

○ ಪ್ರಧಾನ ಮಂತ್ರಿ ಶ್ರೀ ರೆಡ್ಡಿಯವರು ಆಗಸ್ಟ್ ಒಂದನೇ ತಾ॥ ದೆಹಲಿಯಿಂದ ಹಿಂದಿರುಗುವರು.

○ ಕೇಂದ್ರ ಸಂಚಾರ ಸಮಿತಿಯಲ್ಲಿ ಭಾಗವಹಿಸಲು ಇಂದು ದೆಹಲಿಗೆ ತೆರಳಬೇಕಾಗಿದ್ದ ಗೃಹ ಸಚಿವ ಮರಿಯಪ್ಪನವರು ಅಲಸ್ಯದ ನಿಮಿತ್ತ ಪ್ರವಾಸವನ್ನು ರದ್ದುಮಾಡಿದ್ದಾರೆ

○ ಗೋಪಾಲರಾವ್ ವಿಚಾರಣಾ ಸಮಿತಿಯವರು ನಿನ್ನೆ ೨೨ ಜನರಿಗೆ ೫೦೫೯೪ ರೂ. ಹಂಚಿದರು. ಒಟ್ಟು ೨೦ ಲಕ್ಷ ರೂ. ಇದುವರೆಗೆ ಬಟವಾಡೆಯಾಗಿದೆ. ಸಮಿತಿಯ ವೆಚ್ಚವನ್ನು ಅದು ವಸೂಲು ಮಾಡಿರುವ ಹಣದಿಂದಲೇ ಮಾಡಬಹುದೆಂದು ಸರ್ಕಾರದವರು ತಿಳಿಸಿರುತ್ತಾರೆ

○ ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ತುಮಕೂರು, ಚಿತ್ರದುರ್ಗ ಮುಂತಾದ ಒಂಭತ್ತು ತಾಲ್ಲೂಕುಗಳಲ್ಲಿ ಬಲತ್ಕಾರವಾಗಿ ವಿದ್ಯಾಭ್ಯಾಸ ಕ್ರಮವನ್ನು ಪೂರ್ಣವಾಗಿ ಜಾರಿಗೆ ತರುವಂತೆ ಸರ್ಕಾರದ ಆಜ್ಞೆಯಾಗಿದೆ ಇದಕ್ಕಾಗಿ ೧೫,೫೧,೨೮೦ ರೂ. ಮೂಲ ವೆಚ್ಚವೂ ೫೬೭೨೫೫ ರೂ ಸಾಲಿಯಾನಾ ವೆಚ್ಚವೂ ತಗಲುವುದು

ಮಳೆಗಾಲ ಕಳೆದನಂತರ, ಅಕ್ಟೋಬರ್ ತಿಂಗಳಿನಿಂದ ರಾತ್ರಿ ಕಾಲದಲ್ಲಿ ವಿಮಾನಗಳ ಮೂಲಕ ಅಂಚೆಗಳನ್ನು ಸಾಗಿಸಲು ಪುನಃ ಏರ್ಪಾಡುಗುವುದೆಂದು ಹೇಳಲಾಗಿದೆ

ಮಕ್ಕಳ ಹಬ್ಬದ ಕಾರ್ಯಕ್ರಮ

ಮೈಸೂರು ೨೮

ನಾಳೆದ್ದು ಸಂಜೆ ನಾಲ್ಕು ಘಂಟೆಗೆ ಮಕ್ಕಳ ಹಬ್ಬವು ಮೈಸೂರು ಟೌನ್ ಹಾಲಿನಲ್ಲಿ ಆರ್ಥಿಕ ಸಚಿವರಾದ ಶ್ರೀ ಹೆಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀಮನ್ಮಹಾರಾಜರವರ ಸಂದೇಶವನ್ನು ಸಾರಲಾಗುವುದು. ವಿವಿಧ ವಿನೋದಾವಳಿ ವ್ಯಾಯಾಮ ಪ್ರದರ್ಶನ, ಯಕ್ಷಗಾನ, ಹುಲಿವೇಷ, ಬ್ಯಾಂಡು ಮುಂತಾದ ಕಾರ್ಯಕ್ರಮಗಳು ಜರುಗುವುವು.

ವರ್ಧಂತ್ಯುತ್ಸವ

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯಲ್ಲಿ ಕಳೆದ ಶನಿವಾರ ಸಂಜೆ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವು ಧ॥ ಪ್ರ॥ ಎ ಎಸ್. ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಶಾಲೆಯ ಮ್ಯಾನೇಜರವರು ಪ್ರಭುಗಳ ಆದರ್ಶವನ್ನು ಕುರಿತು ಪ್ರಶಂಸಿಸಿ ಭಾಷಣ ಮಾಡಿದರು. ಪ್ರಭುಗಳಿಗೆ ಆಯುರಾರೋಗ್ಯಗಳನ್ನು ಕೋರಲಾಯಿತು. ಬಾಲಕರಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಕಾಶ್ಮೀರದ ಬಗ್ಗೆ ಒಪ್ಪಂದ

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳಲ್ಲಿ ಸಮರ ಮುಕ್ತಾಯಮಾಡಲು ಭಾರತ ಮತ್ತು ಪಾಕಿಸ್ತಾನದ ಮಿಲಿಟರಿ ಪ್ರತಿನಿಧಿಗಳಿಗೆ ಪೂರ್ಣ ಒಪ್ಪಂದವಾಗಿರುತ್ತದೆ

ಮೈಸೂರು ಸಿಟಿ ರೇಷನಿಂಗ್

ನಂ. M. 9-7/49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳಲ್ಲಿ ಮುಚ್ಚಲ್ಪಡುತ್ತವೆ:--

31-7-49—ಭಾನುವಾರ—ಪೂರ್ತ ರಜ-ದಾಸ್ತಾನು ಎಣಿಕೆ ಬಗ್ಗೆ—ಸರ್ಕಾರಿ ಡಿಪೋ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು

1-8-49—ಸೋಮವಾರ— ಪೂರ್ತ ರಜ-ದಾಸ್ತಾನು ಎಣಿಕೆ ಬಗ್ಗೆ—ಮೊಹಲ್ಲಾ ಸಬ್ ಗೋಡೌನ್ ಮಾತ್ರ

(ಸಹಿ) ಡಿ. ಜೆ. ಬಾಲರಾಜ್

ರೇಷನಿಂಗ್ ಆಫೀಸರ್
ಮೈಸೂರು ಸಿಟಿ.

ಮೈಸೂರು
25-7-49

ರಜ್ವಿ ವಿಚಾರಣೆಯ ಪ್ರಾರಂಭ

ಖಾಸಿಂ ರಜ್ವಿ ಮತ್ತು ಇನ್ನಿಬ್ಬರ ವಿಚಾರಣೆಯು ಹೈದರಾಬಾದಿನಲ್ಲಿ ನಿನ್ನೆ ಬೆಳಗ್ಗೆ ೧೧-೩೦ ಕ್ಕೆ ಪ್ರಾರಂಭವಾಯಿತು. ಇವರಲ್ಲದೆ ಬೇರೆಯವರಿಬ್ಬರು ಪತ್ತೆಯಿಲ್ಲವಾಗಿದ್ದಾರೆ. ಅಪಾದಿತರ ಪೈಕಿ ಒಬ್ಬನು ಅಪ್ರೂವರ್ ಆಗಿರುವನು. ಇವರು 'ಇಮ್ರೋಜ್' ಪತ್ರಿಕೆಯ ಸಂಪಾದಕರಾದ ಷೋಯಬುಲ್ಲಾಖಾನರವರ ಕೊಲೆ ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿದ್ದಾರೆ. ರಜ್ವಿಯ ಪರ ಆಸ್ಕರ್ ಯಾರ್ ಜಂಗ್‌ರವರು ವಕಾಲತ್ತು ವಹಿಸಿದ್ದಾರೆ

ಗೋಡ್ಸೆಯು ಗೀತಾ ಪಠಣ ಮಾಡುತ್ತಿದ್ದಾನೆ

ಅಂಬಾಲಾ ಸೆಂಟ್ರಲ್ ಜೈಲಿನಲ್ಲಿರುವ ನಾಥೂರಾಂ ಗೋಡ್ಸೆಯು ಗೀತಾ, ಬೈಬಲ್ ಮತ್ತು ನ್ಯಾಯಾಸ್ಥಾನದಲ್ಲಿ ತಾನು ಇತ್ತ ಹೇಳಿಕೆ-ಇವುಗಳನ್ನು ನಿತ್ಯವೂ ಪಠಣ ಮಾಡುತ್ತಿರುವನೆಂದು ಹೇಳಲಾಗಿದೆ. ಇದಲ್ಲದೆ ಪೂರ್ವ ಪಂಜಾಬು ಹೈ ಕೋರ್ಟಿನ ತೀರ್ಪನ್ನು ಓದುತ್ತಿರುವನು. ಸ್ವತಂತ್ರ ಭಾರತದಲ್ಲಿ ಸ್ಥಾಪಿತವಾಗುವ ಸುಪ್ರೀಂ ಕೋರ್ಟಿನ ಎದುರಿಗೆ ಸ್ವತಃ ವಾದಿಸಲು ಅವಕಾಶ ಸಿಗುವುದೆಂದು ಗೋಡ್ಸೆ ನಂಬಿದ್ದಾನೆ ಗೋಡ್ಸೆ ಮತ್ತು ಆಪ್ಟೆ ಇಬ್ಬರನ್ನೂ ಜೈಲಿನಲ್ಲಿ ಪ್ರತಿ ದಿನವೂ ಒಂದು ಕೋಣೆಯಿಂದ ಬೇರೊಂದು ಕೋಣೆಗೆ ವರ್ಗಾಯಿಸಿ, ಅವರ ಮೇಲೆ ಸತತ ಕಾವಲು ಇಡಲಾಗಿದೆ ಇವರಿಬ್ಬರೂ ತಮ್ಮನ್ನು ಒಂದು ಗಂಟೆ ಕಾಲ ಹೊರಕ್ಕೆ ಕರೆದುಕೊಂಡುಬಂದಾಗ ಪರಸ್ಪರ ಭೇಟಿಯಾಗುವರು

ಬೋಸರು ಬದುಕಿದ್ದಾರೆಂದು ಶರತ್ ಚಂದ್ರರ ಹೇಳಿಕೆ

ಸುಭಾಷ್ ಚಂದ್ರ ಬೋಸರು ಬದುಕಿದ್ದಾರೆ. ಒಂದಾನೊಂದು ದಿನ ಅವರು ಭಾರತ ಭೂಮಿಯಲ್ಲಿ ಕಾಣಿಸಿಕೊಳ್ಳುವರು ವಿಮಾನ ಅಪಘಾತದಲ್ಲಿ ಅವರು ಮಡಿದರೆಂಬುದು ಕಟ್ಟುಕಥೆ-ಎಂಬುದಾಗಿ ಬಾಬು ಶರತ್ ಚಂದ್ರ ಬೋಸರು ದಾವಣಗೆರೆಯಲ್ಲಿ ಕೊಟ್ಟ ಹೇಳಿಕೆಯಲ್ಲಿ ತಿಳಿಸಿದ್ದಾರೆ

You have a Lucky Date

on Friday 29th July 1949.

With Boldest Adventures and lover of old Spain

THE NEW ADVENTURES of **DON JUAN** (Technicolor)

ಡಾನ್ ಜುವಾನ್

With:— ERROL FLYNN

who gave his Sword for his Country and his Heart to his Queen

You are requested to book your Balcony Seats in advance at

GAYATHRI

Phone No. 568

Daily 3 Shows

ಹೆಚ್ಚು ಆಲೂಗೆಡ್ಡೆ ಬೆಳೆದ ರೈತನಿಗೆ ಬಹುಮಾನ

ಸಂಯುಕ್ತ ಪ್ರಾಂತದ ಮೀರಟ್ ಜಿಲ್ಲೆಯ ರೈತನೊಬ್ಬನ ಉಸಾಲಿನಲ್ಲಿ ಒಂದು ಎಕರೆ ಜಮೀನಿನಲ್ಲಿ ೫೪೦ ಮಣ ಆಲೂಗೆಡ್ಡೆಯನ್ನು ಬೆಳೆದುದಕ್ಕಾಗಿ ಆ ಪ್ರಾಂತ್ಯದ ಸರಕಾರದವರು ಅವನಿಗೆ ಐದು ಸಾವಿರ ರೂಗಳ ಬಹುಮಾನವನ್ನು ಕೊಟ್ಟಿದ್ದಾರೆ ಕಳೆದ ವರ್ಷ ಎಕರೆಗೆ ೪೪೭ ಮಣದಷ್ಟು ಬೆಳೆಯಲಾಗಿತ್ತು

ಒಂದು ಸಲ ಭೇಟಿ ಕೊಡಿರಿ!

ಶುಚಿ ರುಚಿ ಆರೋಗ್ಯಕ್ಕೆ

29 7-49ರಿಂದ ಪ್ರಾರಂಭ

ನ್ಯೂ ಗ್ರಾಂಡ್ ಹಿಂದು ಮಿಲಿಟರಿ ಹೋಟೆಲ್,

ಮಂಡಿ ಪೊಲೀಸ್ ಸ್ಟೇಷನ್ ಚೌಕ ಮೈಸೂರು

ಕಾರ್ಯದರ್ಶಿಗಳ ಕಚೇರಿ, ದಸರಾ ವಸ್ತು ಪ್ರದರ್ಶನ ಸಮಿತಿ,
ಮೈಸೂರು, ಜುಲೈ 22, 1949

ನೋಟೀಸು

ಮುಖ್ಯ ವಸ್ತು ಪ್ರದರ್ಶನದ ಕಟ್ಟಡಗಳ ಪ್ರದರ್ಶನ ಮಂದಿರದಲ್ಲಿ ಪೋಸ್ಟರುಗಳು ಮತ್ತು ಬ್ಯಾನರುಗಳ ಇವುಗಳನ್ನು-ಗೋಡೆಗಳ, ದೀಪದ ಕಂಭಗಳ ಮತ್ತು ಮರಗಳ ಮೇಲೆ, 1949 ನೇ ಸೆಪ್ಟೆಂಬರ್ ೨೩ ರಿಂದ ಅಕ್ಟೋಬರ್ ೮ ರವರೆಗೆ ಪ್ರಕಟವ ಪ್ರತ್ಯೇಕವಾದ ಹಕ್ಕು ಬಾಧ್ಯತೆ ಪಡೆಯಲು ಇಚ್ಛೆ ಪಡುವವರಿಂದ ಟೆಂಡರುಗಳನ್ನು ಸ್ವೀಕರಿಸಲಾಗುವುದು

ಬೇಕಾಗುವ ಸ್ಥಳಾವಕಾಶಗಳನ್ನು ವಿವರಿಸಬೇಕು ಮತ್ತು ವಸ್ತು ಪ್ರದರ್ಶನದ ಅಧಿಕಾರಿಗಳಿಂದ ಪೂರ್ವ ಭಾವಿಯಾಗಿ ಒಪ್ಪಿಗೆ ಪಡೆಯಬೇಕು

ಜಯಶೀಲರಾದ ಟೆಂಡರುದಾರರು ಪ್ರದರ್ಶನಾಧಿಕಾರಿಗಳ ಸೂಚನೆಗಳನ್ನು ಪೂರ್ಣವಾಗಿ ಪಾಲಿಸಬೇಕು

ಟೆಂಡರುಗಳನ್ನು ತೆಗೆದುಕೊಳ್ಳಲು ೧೯೪೯ ನೇ ಆಗಸ್ಟ್ ೧ ನೇ ತಾರೀಖೇ ಕಡೆಯ ದಿನ

ಮೇಲ್ಕಂಡ ಹಕ್ಕನ್ನು ಪಡೆಯಲು ತಾನು ಕೊಡಬಲ್ಲ ಮೊಬಲಗಿನ ಪರಮಾವಧಿಯನ್ನು ಟೆಂಡರುದಾರರು ಸ್ಪಷ್ಟವಾಗಿ ತಿಳಿಸಬೇಕು ಟೆಂಡರಿನ ಜೊತೆಗೆ ೫೦ ರೂಪಾಯಿಗಳ ಠೇವಣಿಮೊಬಲಗು ಇರಬೇಕು. ಜಯಶೀಲರಲ್ಲದ ಟೆಂಡರುದಾರರಿಗೆ ಅವರ ಹಣವನ್ನು ವಾಪಸು ಮಾಡಲಾಗುವುದು

ಜಯಶೀಲರಾದ ಟೆಂಡರುದಾರರು ಪ್ರದರ್ಶನದ ಅಧಿಕಾರಿಗಳು, ಮುನಿಸಿಪಲ್ ಇಲಾಖೆ ಮತ್ತು ವಿದ್ಯುಚ್ಛಕ್ತಿ ಇಲಾಖೆಗಳು ಕೊಡುವ ಎಲ್ಲಾ ತಿಳುವಳಿಕೆಗಳನ್ನೂ ಪಾಲಿಸಬೇಕು ಮತ್ತು ಒಪ್ಪಿಗೆ ನಮೂನೆಯಲ್ಲಿ ಕರಾರನ್ನು ಬರೆದುಕೊಡಬೇಕು ಮತ್ತು ಟೆಂಡರಿನ ಪ್ರಾರ್ಥನೆಗಳನ್ನು ಪಾವತಿ ಮಾಡಬೇಕು ಪರಮಾವಧಿಯ ಅಥವ ಇನ್ಯಾವುದೇ ಟೆಂಡರನ್ನು ಒಪ್ಪಲು ವಸ್ತು ಪ್ರದರ್ಶನಾಧಿಕಾರಿಗಳು ಬದ್ಧರಾಗಿಲ್ಲ, ಅಥವಾ ಯಾವುದನ್ನೇ ಆಗಲಿ ತಿರಸ್ಕರಿಸಿದರೆ ಅದಕ್ಕೆ ಕಾರಣಗಳೇನೇ ಇರಲಿ, ಅವನ್ನು ತಿಳಿಸಲು ಬಾಧ್ಯರಲ್ಲ

(ರುಜು) ವಿ.ಎ. ಅಣ್ಣಾ ಮೊದಲಿಯಾರ್,
ಕಾರ್ಯದರ್ಶಿ, ವಸ್ತು ಪ್ರದರ್ಶನ ಸಮಿತಿ

ಎಕ್ಸಿಕ್ಯುಟಿವ್ ಇಂಜನಿಯರರ ಕಚೇರಿ, ಬಿಲ್ಡಿಂಗ್ಸ್ ಡಿವಿಜನ್ ಮೈಸೂರು
ಬಿಲ್ಡಿಂಗ್ಸ್ ಡಿವಿಜನ್, ಮೈಸೂರು

ಪ್ರಕಟಣೆ

ಈ ಕೆಳಗೆ ರುಜು ಮಾಡಿರುವವರಿಂದ ಆಫೀಸಿನಲ್ಲಿ ೬-೮-೪೯ನೇ ತಾರೀಖು ಮಧ್ಯಾಹ್ನ ೪ ಗಂಟೆವರೆಗೆ, ೧೯೪೯ನೇ ಸೆಪ್ಟೆಂಬರಿನ ದಸರಾ ವಸ್ತುಪ್ರದರ್ಶನದ ಸಂಬಂಧವಾಗಿ ಜೀವರ್ಣೋದ್ಧಾರ ಕಟ್ಟೆ ಮತ್ತು ವಸ್ತುಪ್ರದರ್ಶನದ ಕಟ್ಟಡದೊಳಗೆ ಹಂಗಾಮಿ ಅಂಗಡಿ ಸ್ಟಾಲುಗಳನ್ನು ಕಟ್ಟಲು ಬೇಕಾಗುವ ಟೆಂಡರುಗಳನ್ನು ಸ್ವೀಕರಿಸಲಾಗುವುದು ಲಕೋಟೆಯ ಮೇಲೆ ಮೇಲ್ಕಂಡ ರೀತಿಯ ಟೆಂಡರುಗಳು ಎಂದು ಬರೆದಿರಬೇಕು

೧ ಕೆಳಗೆ ರುಜು ಮಾಡಿರುವವರಿಗೆಂದು ಪಿ ಡಬ್ಲ್ಯು ಡಿ ಇಂಗ್ಲಿಷ್ ಜನರಲ್ ಕ್ರೆಡಿಟ್ ೪೦(೧) ಸಂಬಂಧದ ಇಲ್ಲಿಯವರೆಗಿನ ಯಾವ ಜೈಲುಸ್ಥಿತಿಯನ್ನು ರುಜು ಮಾಡಿರುವ ಬಗೆ ಚಲನ್ನು ಟೆಂಡರುಗಳಿಗೆ ಲಗತ್ತಿಸಿರಬೇಕು ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ ಅಂತಹ ಚಲನ್ನುಗಳು ಇಲ್ಲದ ಟೆಂಡರುಗಳನ್ನು ಪರಿಶೀಲಿಸದೇ ತಿರಸ್ಕರಿಸಲಾಗುವುದು.

೨ ಇವಕ್ಕೆ ಸಂಬಂಧಪಟ್ಟ ವಿವರಗಳ ಅಂದಾಜುಗಳು, ಪ್ಲಾನುಗಳು ಮತ್ತು ಒಪ್ಪಂದಗಳ ನಮೂನೆಗಳನ್ನು ಎಲ್ಲಾ ಕೆಲಸದ ದಿನಗಳಲ್ಲೂ ಮಧ್ಯಾಹ್ನ ೧ ರಿಂದ ೪ ಗಂಟೆ ವರೆಗೂ ಮೊದಲೇ ಗೊತ್ತು ಮಾಡಿಕೊಂಡು ನೋಡಬಹುದು ಒಟ್ಟು ಕೆಲಸದ ಅಂದಾಜಿನ ಬಗ್ಗೆ ಗೋಪ್ಯತೆಯನ್ನು ಕೊಡಲಾಗುವುದು

೩ ಇದಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳೂ, ೧೯೪೯ನೇ ಜುಲೈ ೨೮ ಮತ್ತು ಆಗಸ್ಟ್ ೪ ರಲ್ಲಿ ಹೊರಡುವ ಮೈಸೂರು ಗೆಜೆಟ್ಟಿನಲ್ಲಿರುವ ಪ್ರಕಟಣೆಯಲ್ಲಿ ಇರುವುವು

(ರುಜು) ಎ ಎಸ್ ಗೋಪಾಲಕೃಷ್ಣ ಅಯ್ಯಂಗಾರ್,
ಎಕ್ಸಿಕ್ಯುಟಿವ್ ಇಂಜನಿಯರ್, ಬಿಲ್ಡಿಂಗ್ಸ್ ಡಿವಿಜನ್

ತಾತಾ ವಿಜ್ಞಾನ ಶಾಲೆಗೆ ಜರ್ಮನ್ ವೈಜ್ಞಾನಿಕರು

ಬೆಂಗಳೂರಿನಲ್ಲಿರುವ ತಾತಾ ವಿಜ್ಞಾನ ಶಾಲೆಯ ಹೈಟೆನ್ಷನ್ ಇಲಾಖೆಯ ಅಧಿಕಾರಿಗಳಾಗಿ ಜರ್ಮನಿಯ ಸುಪ್ರಸಿದ್ಧ ವೈಜ್ಞಾನಿಕರಾದ ಪ್ರೊ|| ಹೆಚ್ ಮುಲ್ಲರ್‌ರವರು ಬರುವವರಾಗಿದ್ದಾರೆ

ಚಲುವಾಂಬಾ ಆಸ್ಪತ್ರೆ

ಮೈಸೂರು, ತಾ|| ೨೦-೭-೧೯೪೯

ಪ್ರಕಟಣೆ

ಮೈಸೂರು ಚಲುವಾಂಬಾ ಆಸ್ಪತ್ರೆಯಲ್ಲಿ, ರೋಗಿಗಳ ಉಪಯೋಗಕ್ಕಾಗಿ ಒಂದು ಆಂಬ್ಯುಲೆನ್ಸ್ ವ್ಯಾನನ್ನು ಇಡಲಾಗಿದೆ ವ್ಯಾನನ್ನು ತರಲು ಸಾಕಷ್ಟು ಕಾಲ ಮುಂಚಿತವಾಗಿ ತಿಳಿಸಿ ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕೆ ಉಪಯೋಗಿಸಬಹುದು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಲ್ಪಟ್ಟ ರೋಗಿಗಳೂ ಸಹ ಆಸ್ಪತ್ರೆಯಿಂದ ತಮ್ಮ ಮನೆಗಳಿಗೆ ಹೋಗಲು ಸದರಿ ವ್ಯಾನನ್ನು ಉಪಯೋಗಿಸಿಕೊಳ್ಳಬಹುದು ಮೈಸೂರು ಮುನಿಸಿಪಲ್ ಎಲ್ಲೆಯೊಳಗೆ ಹೋಗಿ ಬರುವ ಪ್ರತಿಯೊಂದು ಟ್ರಿಪ್ಪಿಗೂ ೩ ರೂ ಗಳು ಛಾರ್ಜ್ ತಗಲುವುದು

ಎಂ. ಜಿ. ಹನುಮಂಟ್ಟೇಕರ್,
ಮೆಡಿಕಲ್ ಆಫೀಸರ್,
ಚಲುವಾಂಬಾ ಆಸ್ಪತ್ರೆ,
ಮೈಸೂರು.

ಷಾಪ್ ಅಸಿಸ್ಟೆಂಟುಗಳ ಸಂಘ

ಮೈಸೂರು ಷಾಪ್ ಅಸಿಸ್ಟೆಂಟುಗಳ ಸಂಘದ ಸಭೆಯು ಕಳೆದ ಭಾನುವಾರ ಶ್ರೀ ಎಸ್ ನಾಗಭೂಷಣರವರ ಅಧ್ಯಕ್ಷತೆಯಲ್ಲಿ ನಡೆಯಿತು ಅಂಗಡಿ ಮಾಲೀಕರು ವಾರಕ್ಕೆ ಒಂದು ದಿನವಾದರೂ ಅಂಗಡಿಗಳನ್ನು ಮುಚ್ಚುವಂತೆಯೂ, ಅಂಗಡಿ ತೆರೆದಿರುವ ಕಾಲವನ್ನು ಬೋರ್ಡಿನಲ್ಲಿ ಪ್ರದರ್ಶಿಸುವಂತೆಯೂ, ಸರ್ಕಾರವು ಒಂದು ಶಾಸನವನ್ನು ಜಾರಿಗೆ ತರಬೇಕೆಂದು ಕೋರುವ ನಿರ್ಣಯಗಳು ಮಾಡಲ್ಪಟ್ಟವು

ನಿಮ್ಮ ಮೈ ಚೊಕ್ಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗು ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ರಾಜಕಮಲ್, ಮೈಸೂರು

ರಂಜಾನ್ ಹಬ್ಬಕ್ಕಾಗಿ

28-7-49 ರಿಂದ ಪ್ರಾರಂಭ

ಪ್ರತಿ ದಿನ ೩ ಆಟಗಳು

ಕಾಮಿನಿ ಕೌಶಲ್, ದಿಲೀಪ್ ಕುಮಾರ್ ಪಾತ್ರವಹಿಸಿರುವ ಹಿಂದಿ ಚಿತ್ರ

ಫಿಲ್ಮಿಸ್ತಾನ್‌ರವರ

ನದಿಯಾಕೆ ಪಾರ್

29-7-49ರಿಂದ ಬೆಳಗಿನ ಆಟಗಳು 4 ದಿನಗಳು ಮಾತ್ರ

ಹರಿಕೇನ್ ಎಕ್ಸ್‌ಪ್ರೆಸ್

ಎಂಬ ಅದ್ಭುತವಾದ ಇಂಗ್ಲೀಷ್ ಸೀರಿಯಲ್

Edited, printed and published by A R Nagar, at Sadhvi Press, D Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೨೯-೭-೧೯೪೯ [ಸಂಚಿಕೆ ೮

ಬರ್ನಾರ್ಡ್ ಷಾರಿಂದ – ಸ್ಟಾಲಿನ್ನರ ಪ್ರಶಂಸೆ –

ಜಪಾನಿಗೆ ಹೋಗುವ ಆನೆ

(ಸು ಫ್ರೋ) ಬೆಂಗಳೂರು ೨೮ ಪಂಡಿತ ನೆಹರೂರವರ ಸೂಚನೆಯಂ ಜಪಾನಿಗೆ ಕಳುಹಿಸಲಾಗುವ ಇಂದಿರಾ ಬ ಆನೆಯು ಇಲ್ಲಿಗೆ ಬಂದಿರುತ್ತದೆ ನ್ನು ಸುಭಾಷ ನಗರದಲ್ಲಿ ಇಡಲಾಗಿದೆ ಕೆ ದಿನ ರೈಲಿನಲ್ಲಿ ಅದನ್ನು ಮದ್ರಾಸಿಗೆ ಹಿಸಲಾಗುವುದು

○ ಸಾರ್ವಜನಿಕ ಶಿಸ್ತಿನ ರಕ್ಷಣೆಯ ಸರ್ಕಾರದವರು ಹೊರಡಿಸಿದ್ದ ಶಾಸನ್ನು ಬರುವ ೭ನೇ ತಾರೀಖಿನಿಂದ ಮ್ನೊಂದು ವರ್ಷಕಾಲ ಮುಂದುವರಿಸ ಗಿದೆ.

○ ಆರ್. ಎಸ್. ಎಸ್. ಸಂಸ್ಥೆಯ ಲಿನ ಪ್ರತಿಬಂಧಕವನ್ನು ತೆಗೆದು ಹಾಕಿವ ಪ್ರಯುಕ್ತ, ಶ್ರೀರಾಮ ಪುರದಲ್ಲಿದ್ದ ಂದ್ರ ಕಛೇರಿ ಮತ್ತು ಮೈಸೂರು ಕೃಷ್ಣಮೂರ್ತಿ ಪುರದ ಬಳಗಿರಿ ನಿವಾಸಿಗಳ ಲೆ ಹಾಕಿದ್ದ ನಿಷೇಧವನ್ನೂ ಸಹ ತೆಗೆದು ಹಾಕಲಾಗಿದೆ

○ ಶ್ರೀಮನ್ಮಹಾರಾಜರವರ ಭೇಟಿ ಯುಕ್ತ ಈ ದಿನ ತುಮಕೂರು ಮತ್ತು ಮಧುಗಿರಿಗಳಲ್ಲಿ ಸಾರ್ವಜನಿಕ ರಜಾ ಕೊಡಲಾಗಿದೆ.

○ ದಿವಾನರ ಅಧ್ಯಕ್ಷತೆಯಲ್ಲಿ ನಿನ್ನೆ ಕೈಗಾರಿಕೆಗಳ ಸಂಶೋಧನಾ ಸಮಿತಿಯು ಸಭೆ ಸೇರಿತ್ತು. ಕೈಗಾರಿಕೆಗಳಲ್ಲಿ ವಿಜ್ಞಾನದ ಸಹಾಯವನ್ನು ಹೆಚ್ಚು ಹೆಚ್ಚಾಗಿ ಪಡೆಯುವ ಅಂಶವನ್ನು ಪರಿಶೀಲಿಸಲಾಯಿತು

ವಕಾಲತ್ತಿನಿಂದ ನಿವೃತ್ತರಾಗಲು ಅವಕಾಶವಿಲ್ಲ

ರಾಮಲಿಂಗಂ ವಿಲ್ ಮೊಕದ್ದಮೆಯ ಸಂಬಂಧದಲ್ಲಿ ಅವರ ಮಗನ ಪರ ವಕಾಲತ್ತು ವಹಿಸಿದ್ದ ಶ್ರೀ ಎಲ್ ಎಸ್ ರಾಜುರವರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿ, ತಾವು ವಕಾಲತ್ತಿನಿಂದ ನಿವೃತ್ತರಾಗಲು ಅವಕಾಶವನ್ನು ಕೇಳಿದ್ದರು ಚೀಫ್ ಜಸ್ಟಿಸ್ ಮೇದಪ್ಪನವರು ಈ ರೀತಿ ಅನುಮತಿ ಕೊಡಲು ಸಾಧ್ಯವಿಲ್ಲವೆಂದು ಹೇಳಿದರು ಅರ್ಜಿದಾರರ ಬೇಡಿಕೆಯು ಸಾಧುವಾದ ಕಾರಣದಿಂದ ಕೂಡಿಲ್ಲವೆಂದು ಅಭಿಪ್ರಾಯಪಟ್ಟರು

ಅರ್ಜಿಯ ಬಗ್ಗೆ ಶ್ರೇಷ್ಠ ನ್ಯಾಯಾಧೀಶರು ಮದ್ರಾಸಿನ ಅಡ್ವೋಕೇಟ್ ಜನರಲ್ಲಾದ ಶ್ರೀ ಎಸ್. ರಾಜ ಅಯ್ಯರ್ರವರ ಅಭಿಪ್ರಾಯವನ್ನು ಕೇಳಲಾಗಿ ಅವರು ಈ ರೀತಿ ಮೊಕದ್ದಮೆಯ ಮಧ್ಯದಲ್ಲಿ ನಿವೃತ್ತರಾಗಲು ಅಪೇಕ್ಷಿಸಿ, ಅದರಿಂದ ವಿಚಾರಣೆಗೆ ಅಡಚಣೆ ಉಂಟಾಗುವುದೆಂದು ಕೋರ್ಟಿಗೆ ತೋರಿದರೆ ಆಗ ಅಂಥ ವಕೀಲರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು

ಸಾಲ ವಾಪಸಿಗಾಗಿ ಕೋರ್ಟಿನಲ್ಲಿ ದೇವರಪಟದ ಪ್ರದಕ್ಷಿಣೆ

ಮಲಯದ ಕೌಲಾಲಂಪೂರ ಕೋರ್ಟಿನಲ್ಲಿ ದ ಭಾರತದ ಸ್ತ್ರೀಯೊಬ್ಬಳು ಒಳಸಿ ಹಾರವನ್ನು ಧರಿಸಿ ಮಹಾ ವಿಷ್ಣುವಿನ ಪಟಕ್ಕೆ ಪ್ರದಕ್ಷಿಣೆ ನಮಸ್ಕಾರ ಮಾಡಿ ತನಗೆ ಮುನಿಯಾಂಡಿ ಎಂಬುವನಿಂದ ರೂಗಳು ಬರಬೇಕೆಂದು ಆಣೆಯಿಟ್ಟು ಹೇಳಿದುದರಿಂದ ನ್ಯಾಯಾಧೀಶರು ಹಣವನ್ನು ಆಕೆಗೆ ಸಲ್ಲಬೇಕೆಂದು ಆಜ್ಞೆ ಮಾಡಿದರು ಸಾಲ ತೆಗೆದುಕೊಂಡವನು ಇಲ್ಯಾಂಡ ರೀತಿಯಲ್ಲಿ ಪ್ರಮಾಣ ಮಾಡಬೇಕೆಂದು ಕೇಳಿದ್ದನು.

ವಿದ್ಯಾ ಪ್ರಸಾರಕ್ಕೆ ಖಾಸಗಿ ಸಹಾಯದ ಅಗತ್ಯ

ತುಮಕೂರಿನಲ್ಲಿ ಶ್ರೀಮನ್ಮಹಾರಾಜರ ಭಾಷಣ

ತುಮಕೂರು ೨೮

ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಇಲ್ಲಿನ ಮೊದಲನೇ ಗ್ರೇಡ್ ಕಾಲೇಜಿನ ಶಂಕು ಸ್ಥಾಪನೆಯನ್ನು ನೆರವೇರಿಸಿದರು ಆ ಸಮಯದಲ್ಲಿ ವಿಶ್ವ ವಿದ್ಯಾಲಯದ ಉಪಸ್ಥಾನ ಪತಿಗಳೂ, ಪೌರ ಸಭೆಯವರೂ, ಸಿದ್ಧ ಗಂಗಾ ಹೈಸ್ಕೂಲು ಸಮಿತಿಯವರೂ ಪ್ರಭುಗಳಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು

ಪ್ರಭುಗಳು ತಮ್ಮ ಭಾಷಣದಲ್ಲಿ ವಿದ್ಯಾಪ್ರಚಾರಕ್ಕಾಗಿ ಸರ್ಕಾರದವರೂ, ಮಹಾಜನರೂ ವಹಿಸಬೇಕಾದ ಶ್ರದ್ಧೆಯನ್ನು ಒತ್ತಿ ತಿಳಿಸಿದರು ಸರ್ಕಾರದವರಿಂದ ಸಾಧ್ಯವಾದ ಎಲ್ಲಾ ಸಹಾಯವೂ ಈ ಭಾಗದಲ್ಲಿ ದೊರೆಯುವುದೆಂದು ಅಪ್ಪಣೆ ಕೊಡಿಸಿದರು ಇತ್ತೀಚೆಗೆ ಔದ್ಯೋಗಿಕ ಮತ್ತು ಪಾರಿಭಾಷಿಕ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಬೇಡಿಕೆಗಳು ಬರುತ್ತಿವೆ ಸರ್ಕಾರದವರಿಗಿರುವ ಮಿತವಾದ ಆದಾಯದಲ್ಲಿ ಈ ಎಲ್ಲ ಬೇಡಿಕೆಗಳನ್ನೂ ಪೂರೈಸುವುದಕ್ಕಾಗುವುದಿಲ್ಲ, ಆದ್ದರಿಂದ ಖಾಸಗಿ ಮಹನೀಯರು ಮುಂದೆ ಬಂದು ಈ ಬಗ್ಗೆ ಹೆಚ್ಚು ನೆರವು ನೀಡಬೇಕು ಪ್ರೌಢವಿದ್ಯಾಭ್ಯಾಸದಲ್ಲಿ ವಿಜ್ಞಾನ ವಿಭಾಗಗಳಿಗೆ ಹೆಚ್ಚು ಪ್ರಾಮುಖ್ಯತೆ ದೊರೆತು ಮಾನವೀಯ ಶಾಸ್ತ್ರಗಳ ಹಿಂದಕ್ಕೆ ತಳ್ಳಲ್ಪಟ್ಟರೆ, ಅದು ನಿಜವಾಗಿಯೂ ವಿಷಾದಕರವಾದ ಸಂಗತಿ ಇವೆರಡು ವಿದ್ಯೆಗಳನ್ನೂ ಸಮನ್ವಯಗೊಳಿಸಿ ವಿದ್ಯಾ ಪ್ರಚಾರ ಮಾಡುವುದು ಅಗತ್ಯ- ಎಂದು ಪ್ರಭುಗಳು ಅಪ್ಪಣೆ ಕೊಡಿಸಿದರು

ಮಧುಗಿರಿ ತಾಲ್ಲೂಕಿನ ಕೆಳಗಿನ ಬಳಿ ನಾಗಿನಿ ನದಿ ಸೇತುವೆಯ ಆರಂಭೋತ್ಸವವನ್ನು ಪ್ರಭುಗಳು ಈ ದಿನ ನೆರವೇರಿಸಿದರು ಗ್ರಾಮಗಳ ಆರ್ಥಿಕ ಉನ್ನತಿಗೆ ಈ ಬಗೆಯ ಮಾರ್ಗಾನುಕೂಲಗಳು ಆವಶ್ಯಕವೆಂದು ಪ್ರಭುಗಳು ಅಪ್ಪಣೆ ಕೊಡಿಸಿದರು

ಸಂಗೀತ

ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆಯಲ್ಲಿರುವ ಒಕ್ಕಲಿಗರ ರಾಮಮಂದಿರದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ನಾಳೆ ಸಂಜೆ ೫॥ ಗಂಟೆಗೆ ಶ್ರೀ ಎಂ ಆರ್ ರಾಮಕೃಷ್ಣ ಭಾಗವತರಿಂದ ಸಂಗೀತವು ಏರ್ಪಾಡಾಗಿದೆ

ಓದಲು ಒತ್ತಾಯಪಡಿಸಿದ್ದಕ್ಕಾಗಿ ತಂದೆಯ ಕೊಲೆ

ಅನಂತಪುರ ಜಿಲ್ಲೆಯ ರಾಮರೆಡ್ಡಿ ರಾಮುಡು ಇವರಿಬ್ಬರೂ ಸೇರಿ ಎರಡನೆಯವನ ತಂದೆ ನಾಗಿರೆಡ್ಡಿಯನ್ನು ಕೊಲೆ ಮಾಡಿದ ಆಪಾದನೆ ಮೇಲೆ ಮೊದಲನೆಯವನನ್ನು ಫಾಸಿ ಶಿಕ್ಷೆಗೂ, ಎರಡನೆಯವನನ್ನು ಆರು ವರ್ಷ ಚಿಕ್ಕ ವಯಸ್ಸಿನವರಿಗಾಗಿ ಇರುವ ಜೈಲಿಗೂ ಗುರಿಪಡಿಸಲಾಯಿತು ರಾಮುಡುವಿನ ತಂದೆಯು ತನ್ನ ಹುಡುಗನು ಶಾಲೆಗೆ ಹೋಗದೆ ಇದ್ದುದಕ್ಕಾಗಿ ಆಗಾಗ್ಗೆ ಹೊಡೆಯುತ್ತಿದ್ದನೆಂದೂ, ಇದನ್ನು ಬಾಲಕನು ಇನ್ನೊಬ್ಬನಿಗೆ ಹೇಳಿ ತನ್ನ ತಂದೆಯನ್ನು ಕೊಲೆ ಮಾಡಬೇಕೆಂದು ತಿಳಿಸಿದನೆಂದೂ, ಕಳೆದ ಜನವರಿ ೩೦ರ ರಾತ್ರಿ ನಾಗಿ ರೆಡ್ಡಿಯನ್ನು ರಾಮರೆಡ್ಡಿಯು ಕತ್ತಿಯಿಂದ ಹೊಡೆದು ಕೊಲೆಮಾಡಿದನೆಂದೂ, ಮೃತನ ಮಗನು ಈ ಕಾರ್ಯದ ಸಹಾಯಕ್ಕಾಗಿ ದೀಪವನ್ನು ಹಿಡಿದಿದ್ದನೆಂದೂ ಹೇಳಲಾಗಿದೆ

ವಾಲಿ ಚನ್ನಪ್ಪನವರ ಮೇಲಿನ ಆಜ್ಞೆ ರದ್ದು

ಉತ್ತರ ಕರ್ನಾಟಕದ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಚನ್ನಪ್ಪ ವಾಲಿಯವರ ಮೇಲೆ ಹಾಕಿದ್ದ ಗಡಿಪಾರು ಆಜ್ಞೆಯನ್ನು ವಾಪಸು ತೆಗೆದುಕೊಂಡಿದ್ದಾರೆ. ವಾಲಿಯವರು ಈ ಆಜ್ಞೆಯನ್ನು ಉಲ್ಲಂಘಿಸುವುದಾಗಿ ತಿಳಿಸಿದ್ದರು.

ಉದ್ಘಾಟನಾ ಸಮಾರಂಭ

ರಾಜಧಾನಿಯ ಇಟ್ಟಿಗೆ ಗೂಡಿನ ಯುವಕ ಸಂಘದ ಉದ್ಘಾಟನಾ ಸಮಾರಂಭವನ್ನು ನಾಳಿದ್ದು ಸಂಜೆ ೫-೩೦ ಕ್ಕೆ ಮಹಾರಾಜಾ ಕಾಲೇಜಿನ ಕನ್ನಡ ಭಾಷಾ ಅಧ್ಯಾಪಕರಾದ ಶ್ರೀ ಕೆ. ವಿ ರಾಘವಾಚಾರ್ಯರವರು ನೆರವೇರಿಸುವರು.

ಮಕ್ಕಳ ಹಬ್ಬಕ್ಕಾಗಿ ನಿಧಿ ಸಂಗ್ರಹ

ಮಕ್ಕಳ ಹಬ್ಬದ ಸಮಿತಿಯವರು, ಮಕ್ಕಳ ಬೆಳವಣಿಗೆಗಾಗಿ ಹಣವನ್ನು ಕೂಡಿಸಲು ಅಧಿಕೃತ ಬಾವುಟಗಳನ್ನು ನಿನ್ನೆ, ಇಂದು ಮತ್ತು ನಾಳೆ ಮಾರುವಂತೆ ಏರ್ಪಾಡು ಮಾಡಿರುತ್ತಾರೆ ನಾಗರಿಕರು ಪ್ರತಿ ಬಾವುಟಕ್ಕೆ ೨ ಆಣೆಗೆ ಕಡಿಮೆಯಿಲ್ಲದಂತೆ ಕೊಟ್ಟು ದಿನಾಚರಣೆಯನ್ನು ಯಶಸ್ವಿಯಾಗಿ ಮಾಡಬೇಕೆಂದು ಕೋರಲಾಗಿದೆ

ಸ್ಟಾಲಿನ್ನರು ಯೂರೋಪಿನ ಶಾಂತಿ ಸಂರಕ್ಷಕರು

ಬರ್ನಾರ್ಡ್ ಷಾರವರ ಹೇಳಿಕೆ

ಯೂರೋಪಿನ ಶಾಂತಿ ರಕ್ಷಣೆಗೆ ರಷ್ಯದ ಮಾರ್ಷಲ್ ಸ್ಟಾಲಿನ್ನರೇ ಆಧಾರ ಸ್ತಂಭರು ಬ್ರಿಟನ್ನಿನ ಕಾರ್ಮಿಕ ಸರ್ಕಾರವು ರಷ್ಯದ ಮೇಲೆ ಒಂದು ಸೈತಿಕ ಯುದ್ಧವನ್ನು ಹೂಡಲು ಪವಣಿಸುತ್ತಿದೆ –ಎಂದು ಸುಪ್ರಸಿದ್ಧ ಲೇಖಕರಾದ ಜಾರ್ಜ್ ಬರ್ನಾರ್ಡ್ ಷಾರವರು ಹೇಳಿದ್ದಾರೆ ದಿವಾಳಿತನದ ಮೇರೆಯನ್ನು ಮುಟ್ಟಿರುವ ಬ್ರಿಟಿಷ್ ಸರ್ಕಾರವು ಎಲ್ಲ ಅನರ್ಥಗಳಿಗೂ ಕಮ್ಯೂನಿಸ್ಟರೇ ಕಾರಣರೆಂದು ಹೇಳುವುದನ್ನು ಟೀಕಿಸಿದ್ದಾರೆ

ಅಸಹ್ಯತ ಮೈನರ್ ಹುಡುಗಿ ತಾಯಿಯ ವಶಕ್ಕೆ

ಬನ್ನೂರು ಹೋಬಳಿ ಯಾಚೇನಹಳ್ಳಿಯ ದೋರಮ್ಮ ಎಂಬಾಕೆಯ ಮೈನರ್ ಮಗಳು ಲಿಂಗಮ್ಮನನ್ನು ಮಳವಳ್ಳಿ ತಾಲ್ಲೂಕು ಅಂದ ಹಳ್ಳಿಯ ತಿರಕೆಂಪೇ ಗೌಡ, ಮಾಯಿಗ ಮತ್ತು ಅವನ ಹೆಂಡತಿ ತಿಮ್ಮಮ್ಮನೆಂಬುವರು ಅಪಹರಿಸಿದರೆಂದು ಅವರ ಮೇಲೆ ಹೂಡಿದ್ದ ಕನ್ಯಾಪಹಾರ ಮೊಕದ್ದಮೆಯ ಅಪೀಲಿನಲ್ಲಿ ಜಿಲ್ಲಾ ನ್ಯಾಯಾಧೀಶರು ಹುಡುಗಿಯನ್ನು ತಾಯಿಯ ವಶಕ್ಕೆ ಕೊಡಬೇಕೆಂದು ಕೆಳ ಕೋರ್ಟಿನವರು ಮಾಡಿದ್ದ ಆಜ್ಞೆಯನ್ನು ಖಾಯಂ ಮಾಡಿರುವರು ಕೆಳ ಕೋರ್ಟಿನಲ್ಲಿ ವಿಚಾರಣೆಯಾದಾಗ ಚಿಕ್ಕ ನಿಂಗೇಗೌಡನು ತಾನು ಹುಡುಗಿಯನ್ನು ಮದುವೆಯಾದುದರಿಂದ ತನ್ನ ವಶಕ್ಕೆ ಕೊಡಬೇಕೆಂದೂ, ಹೊಂಬಾಳಮ್ಮನು ತನ್ನ ವಶಕ್ಕೆ ಕೊಡಬೇಕೆಂದೂ ಅರ್ಜಿ ಹಾಕಿಕೊಂಡಿದ್ದರು. ಆದರೆ ತಾಯಿಯ ವಶಕ್ಕೆ ಕೊಡುವಂತೆ ಮ್ಯಾಜಿಸ್ಟ್ರೇಟರು ತೀರ್ಪಿತ್ತಿದ್ದರು

ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರು

ವಿಶ್ವ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ಟಿ ಎಸ್ ವೆಂಕಣ್ಣಯ್ಯರಾಯರು ಬಹುಮತದಿಂದ ಈ ಸಾರಿಯ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಸೂಚನೆ

ಗರುಡ ಪಂಚಮಿ ಪ್ರಯುಕ್ತ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ.

ಮೈಸೂರು ಸಿಟಿ ರೇಷನಿಂಗ್

ನಂ M 9-7-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳಲ್ಲಿ ಮುಚ್ಚಲ್ಪಡುತ್ತವೆ–

31-7-49—ಭಾನುವಾರ–ಪೂರ್ತಿ ರಜ ದಾಸ್ತಾನು ಎಣಿಕೆ ಬಗ್ಗೆ–ಸರ್ಕಾರಿ ಡಿಪೋ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು

1-8-49—ಸೋಮವಾರ— ಪೂರ್ತಿ ರಜ–ದಾಸ್ತಾನು ಎಣಿಕೆ ಬಗ್ಗೆ–ಮೊಹಲ್ಲಾ ಸಬ್ ಗೋಡೌನ್ ಮಾತ್ರ

(ಸಹಿ) ಡಿ. ಜೆ. ಬಾಲರಾಜ್

ರೇಷನಿಂಗ್ ಆಫೀಸರ್

ಮೈಸೂರು ಸಿಟಿ

ಮೈಸೂರು

25-7-49

ಬೆಲ್ಜಿಯಂ ಅರಸರ ಬಗ್ಗೆ ಪ್ರಜಾಭಿಪ್ರಾಯ

ಬೆಲ್ಜಿಯಂ ಗಿರಿಕ [illegible] ಲಿ [illegible] ತನ್ನ ಅಧಿಕಾರವನ್ನ ವ ಹಿಸುವ ಬಗ್ಗೆ [illegible] ವನ್ನು ಪಡೆಯಲು ಅವರೊಡನೆ ಕಲ್ಪಿಸಬೇಕೆಂದು ಅಲ್ಲಿನ [illegible] ಶಾಸನ ಸಭೆಯಲ್ಲಿ [illegible] ಪಂಗಡದ [illegible] ನ್ನು ಕೊಟ್ಟಿದ್ದಾರೆ

ಫ್ರೆಂಚ್ ಶಾಸನ ಸಭೆಯಲ್ಲಿ ಹೊಡೆದಾಟ

ಫ್ರಾನ್ಸಿನ ಶಾಸನ ಸಭೆಯಲ್ಲಿ ಅಟ್ಲಾಂಟಿಕ್ [illegible] ವಿಷಯವು ಚರ್ಚೆಗೆ ಬಂದಾಗ ಸದಸ್ಯರಲ್ಲಿ ಹೊಡೆದಾಟವಾಯಿತೆಂದ ವರದಿಯಾಗಿದೆ

೩ ಮೈಲಿ ಉದ್ದದ ಮಂಜಿನ ಅಣೆಕಟ್ಟು

[illegible] ಯುವ ಜಲಸಾನಿ ನದಿಗೆ [illegible] ಅಣೆಕಟ್ಟು [illegible] ದ್ದವಾದ ಮಂಜಿನ [illegible] ದ ಒಂದಿದೆ [illegible] ಎದ್ದು ಇದಕ್ಕೆ [illegible] ಬಹುದೆಂದೂ ಹೇಳಲಾಗಿದೆ ಇದರಿಂದ [illegible] ಪೌಲ್ಟ್ರಿ [illegible] ವುದು

ಸರಕಾರಿ ಕೈಗಾರಿಕೆಗಳ ಕೆಲಸಗಾರರಿಗೆ ಬೋನಸ್ಸು

ಸರಕಾರಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಿಗೆ [illegible] ಸರಕಾರದವರ [illegible] ಕೊಡಲಾಗುವುದು

ಯುದ್ಧಕ್ಕಾಗಿ ರಷ್ಯದ ಶಸ್ತ್ರಾಸ್ತ್ರ ಸನ್ನಾಹ

ರಷ್ಯವು ಯುದ್ಧಮಾಡುವ ಸಲುವಾಗಿ ಶಸ್ತ್ರಾಸ್ತ್ರ ಸನ್ನಾಹ ಮಾಡಿಕೊಳ್ಳುತ್ತಿವೆಯೆಂಬ ವಿಷಯವು ಅಮೆರಿಕದ ಗೂಢಚಾರರ ವರದಿಯಿಂದ ತಿಳಿದುಬಂದಿದೆ ಈ ವಿಷಯವನ್ನು ಅಲ್ಲಿನ ಕಾಂಗ್ರೆಸ್ಸಿನ ಮುಂದೆ ಇಡಲಾಗುವುದು ರಷ್ಯದ ಮಿಲಿಟರಿ ತಯಾರಿಯ ಬಗ್ಗೆ ಇದ್ದ ರಹಸ್ಯವನ್ನು ಅಮೆರಿಕದ ಮತ್ತು ಇತರ ಮಿತ್ರ ರಾಷ್ಟ್ರಗಳ ಗೂಢಚಾರರು ಬಯಲು ಮಾಡಿದರೆಂದು ಹೇಳಲಾಗಿದೆ ಈ ವರದಿಗಳ ಪ್ರಕಾರ ರಷ್ಯ ಮತ್ತು ಅದರ ಹಿಂಬಾಲಕ ರಾಷ್ಟ್ರಗಳಲ್ಲಿ ಒಟ್ಟು [illegible] ಶಸ್ತ್ರ ಧಾರಿಗಳಿರುವರೆಂದೂ, [illegible] ಸಾವಿರದಷ್ಟು ಯುದ್ಧ ವಿಮಾನಗಳಿರುವುವೆಂದೂ [illegible] ಸಾವಿರ ವಿಮಾನಗಳನ್ನು ತಯಾರಿಸಬಲ್ಲ ಶಕ್ತಿಯು ಅದಕ್ಕಿರುವುದೂ ಗೊತ್ತಾಗಿದೆ

ಪಾಕಿಸ್ಥಾನ ಅಧಿಕಾರಿ ಮೇಲೆ ಗುಂಡುಹಾರಿಸುವ ಪ್ರಯತ್ನ

ಪಾಕಿಸ್ಥಾನದ ಮುಸ್ಲಿಂ ಲೀಗಿನ ಅಧ್ಯಕ್ಷರಾದ [illegible] ಚೌಧರಿ ಖಲೀಕ್ ಉಜ್ಜಮಾನ್ ರವರ ಮೇಲೆ [illegible] ಪಾಕಿಸ್ಥಾನದ [illegible] ಬೋರ್ಡಿನ [illegible] ಆಲಿ ಖಾನರ ಮೇಲೆ ಬಿದ್ದನೆಂದೂ ಆದರೆ [illegible] ಅವರ ಮಿತ್ರರೊಬ್ಬರು ತನ್ನ ಪ್ರಾಣವನ್ನು [illegible] ಅವರ [illegible]

ಟೆಸ್ಟ್ ಪರೀಕ್ಷೆ ವಜಾ

ಬಿಹಾರ್ ಪ್ರಾಂತದಲ್ಲಿ ವಿದ್ಯಾರ್ಥಿಗಳ [illegible] ಕಾರ್ಯ ಜೋರವಾದ ವಾರ್ಷಿಕ [illegible] ವಿಶ್ವವಿದ್ಯಾ [illegible] ವಿಶೇಷ [illegible] ವಿಶ್ವವಿದ್ಯಾನಿಲಯದ ಶಾಸನಗಳಿಗೆ ತಿದ್ದುಪಡಿಯನ್ನು ಮಾಡಿದರು

ಗೋಷಾ ಗಾಡಿಯಲ್ಲಿ ಡಕಾಯಿತ ಸ್ತ್ರೀ ವೇಷ ಧಾರಿಗಳು

ಸಂಯುಕ್ತ ಪ್ರಾಂತದ ಲಕ್ನೋ ನಗರದಲ್ಲಿ ಮೊನ್ನೆ ದಿನ ಗೋಷಾ 'ಸ್ತ್ರೀ' ವೇಷ ಧಾರಿಗಳಾದ ಪುರುಷರಿಂದ ತುಂಬಿದ್ದ ಒಂದು ಎಕ್ಕಾ ಗಾಡಿಯನ್ನು ಶೋಧಿಸಿದಾಗ ಅದರಲ್ಲಿ ಕೆಲವು ಮಂದಿ ಪ್ರಸಿದ್ಧ ಡಕಾಯಿತರು ಪೋಲೀಸರಿಗೆ ಸಿಕ್ಕಿದರೆಂದು ಗೊತ್ತಾಗಿದೆ ಗಾಡಿಯು ಅತಿ ವೇಗವಾಗಿ ಹೋಗುತ್ತಿದ್ದಾಗ, ಟ್ರಾಫಿಕ್ ಪೋಲೀಸಿನವನೊಬ್ಬಗೆ ಅನುಮಾನ ಬಂದುದರಿಂದ ಅದನ್ನು ತಡೆದು ಪರಿಶೋಧನೆ ನಡೆಸಲಾಯಿತು ಅವರುಗಳು ಹತ್ತಿರದ ಹಳ್ಳಿಯೊಂದರ ಮೇಲೆ ದರೋಡೆ ಮಾಡಲು ಅನುವಾಗಿದ್ದರೆಂದು ಹೇಳಲಾಗಿದೆ

ಕರ್ನಾಟಕ ಪ್ರಾಂತವಿಲ್ಲದ ರಾಜ್ಯಾಂಗ ಬೇಡ

ದಾವಣಗೆರೆಯಲ್ಲಿ ಸೇರಿದ್ದ ಕರ್ನಾಟಕ ಯುವಕ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತವನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ ಕನ್ನಡ ಪ್ರಾಂತವು ಇರದ ಭಾರತ ರಾಜ್ಯಾಂಗವು ಕನ್ನಡಿಗರಿಗೆ ಬೇಡವೆಂದೂ, ಸೂಚಿಸುವ ನಿರ್ಣಯವು ಅಂಗೀಕೃತವಾಯಿತು

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಆರೋಗ್ಯ ಸಂಸ್ಥೆ

ಅಂತರ ರಾಷ್ಟ್ರೀಯ ರಾಕ್‌ಫೆಲ್ಲರ್ ರೋಗ್ಯ ಸಂಸ್ಥೆಯ ಪೂರ್ವ ರಾಷ್ಟ್ರಗಳ ಭೇರಿಯು ಈವರೆಗೆ ಚೀನಾದಲ್ಲಿದ್ದುದ ಮುಂದೆ ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು ಇದಕ್ಕೆ ಮೈಸೂರು ಸರ್ಕಾರದವರು ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿಕೊಡುವುದಾಗಿ ವಾಗ್ದಾನವಿತ್ತಿದ್ದಾರೆಂದು ತಿಳಿದುಬಂದಿದೆ

ಶ್ರೀ ಚಾಮುಂಡೇಶ್ವರಿ ಟಾಕೀಸ್
29-7-49ರಿಂದ ಒಂದು ವಾರ ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಜಗಬೀರ
(ಹಿಂದಿ)
ಭೂಮಿಕೆ - ಸುರಯ್ಯ ಮತ್ತು ಸಾದಿಕ್
- ಮುಂದಿನ ಬದಲಾವಣೆ -
5-8-49ನೇ ಶುಕ್ರವಾರದಿಂದ
ನವಜೀವನಂ
(ತಮಿಳು)

Running to Crowded Houses
AT
SRI GAYATHRI
FROM TO DAY
With Boldest Adventures and loves of old Spain
THE NEW ADVENTURES of DON JUAN (Technicolor)
ಡಾನ್ ಜಾನ್
With — ERROL FLYNN
who gave his Sword for his Country and his Heart to his Queen
Daily 3 Shows
MORNING SHOWS on 30th and 31st
The Perils of Pauline
ದಿ ಪೆರಿಲ್ಸ್ ಆಫ್ ಪಾಲೀನ್

ರಾಜಕಮಲ್, ಮೈಸೂರು
ರಂಜಾನ್ ಹಬ್ಬಕ್ಕಾಗಿ,
28-7-49 ರಿಂದ
ಪ್ರತಿ ದಿನ 3 ಆಟಗಳು
ನದಿಯಾ ಕೆ ಪಾರ್
ಕಾಮಿನಿ ಕೌಸಲ್, ದಿಲೀಪ್ ಕುಮಾರ್ ನಟಿಸಿರುವ
ಫಿಲ್ಮಿಸ್ಥಾನರವರ ಹಿಂದಿ ಚಿತ್ರ
ಬೆಳಗಿನ ಆಟಗಳು
29-7-49ರಿಂದ 4 ದಿನಗಳು ಮಾತ್ರ
ಹರಿಕೇನ್ ಎಕ್ಸ್‌ಪ್ರೆಸ್
ಎಂಬ ಅದ್ಭುತವಾದ ಇಂಗ್ಲೀಷ್ ಸೀರಿಯಲ್

ಒಂದು ಸಲ ಭೇಟಿ ಕೊಡಿರಿ!
ರುಚಿ — ಶುಚಿ — ಆರೋಗ್ಯಕ್ಕೆ
ಇಂದಿನಿಂದ ಪ್ರಾರಂಭ
ನ್ಯೂ ಗ್ರಾಂಡ್ ಹಿಂದು ಮಿಲಿಟರಿ ಹೋಟೆಲ್,
ಮಂಡಿ ಪೋಲೀಸ್ ಸ್ಟೇಷನ್ ಚೌಕ, ಮೈಸೂರು.

MILK SUPPLY
Good Milk available at 1½ seers per rupee
Please apply sharp to -
ELITE MILK SUPPLIES,
1496, Ediga, Mysore
-: ಹಾಲಿನ ಸರಬರಾಜು :-
ಒಳ್ಳೆಯ ಹಾಲು ರೂಪಾಯಿಗೆ 1½ ಸೇರಿನಂತೆ ದೊರೆಯುತ್ತದೆ ಈ ವಿಳಾಸದಲ್ಲಿ ವಿಚಾರಿಸಿ
ಇಲೈಟ್ ಮಿಲ್ಕ್ ಸಪ್ಲೈಸ್
೧೪೯೬ ಈಡಿಗ, ಮೈಸೂರು

ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಆಫೀಸು ಮೈಸೂರು
ಬಿಲ್ಡಿಂಗ್ಸ್ ದಿವಿಜನ್ ಮೈಸೂರು,

ಪ್ರಕಟಣೆ

[illegible] ರು ಮಾಡಿರುವವರಿಂದ [illegible] ವರ್ಷದ [illegible] ಪ್ರದರ್ಶನದ [illegible] ಪ್ರದರ್ಶನದ ಕಟ್ಟಡದೊಳಗೆ [illegible] ಸ್ವೀಕರಿಸಲಾಗುವುದು [illegible] ಟೆಂಡರುಗಳು [illegible]

[illegible] ಮಾಡಿರುವವರಿಂದ [illegible] (೧) [illegible] ಇಲ್ಲದ ಟೆಂಡರ್ [illegible]

[illegible] ಮತ್ತು [illegible] ಒಟ್ಟು ಕೆಲಸ [illegible] ಗುವುದು

ಇದಕ್ಕೆ [illegible] ಮತ್ತು [illegible] ಪ್ರಕಟಣೆಯು [illegible] ವುದು

[illegible] ಎಸ್ [illegible] ಕೃಷ್ಣ ಅಯ್ಯಂಗಾರ್
[illegible]

Edited printed and published by A R Nagarajan, at [illegible] Road Mysore

ಫೋ॥ ನಂ. 792 WEEKLY EDITION ಇಂದಿನ ಪತ್ರಿಕೆ ೭ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೩೧-೭-೧೯೪೯ [ಸಂಚಿಕೆ ೨

– ಹೈದರಾಬಾದಿನಲ್ಲಿ – ಮಶೀದಿಮುಂದೆವಾದ್ಯ

ಕನ್ನಡ ಸಂಸ್ಕೃತಿಯ ರಕ್ಷಣೆ

ಗವಿ ಮಠದ ಸ್ವಾಮಿಗಳ ಮತ್ತು ಅ. ನ. ಕೃಷ್ಣರಾಯರ ಭಾಷಣ

ಸ್ವಂ ವಿ ಸು] ದಾವಣಗೆರೆ ೨೮

ಕರ್ಣಾಟಕ ಯುವಕ ಪರಿಷತ್ತಿನ ಅಂಗವಾಗಿ ಈ ದಿನ ಬೆಳಗ್ಗೆ ನಿಜಲಿಂಗ ಮಠದಲ್ಲಿ ಕರ್ಣಾಟಕ ಸಾಂಸ್ಕೃತಿಕ ಸಮ್ಮೇಳನವು ಶ್ರೀ ಅ ನ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಗ ಸ ಹಾಲಪ್ಪನವರು ಸ್ವಾಗತ ಭಾಷಣ ಮಾಡಿದರು

ಉರವಕೊಂಡ ಶ್ರೀ ಜಗದ್ಗುರು ಗವಿ ಮಠದ ಶ್ರೀ ಮನ್ನಿರಂಜನ ಕರಿ ಬಸವ ರಾಜೇಂದ್ರ ಸ್ವಾಮಿಗಳು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಸುಸಂಸ್ಕೃತ ಮಾನವ ಸಮೂಹವೇ ಸಮಾಜ ;ಅಂತಹ ಸಮಾಜ ರಚನೆ ಹೇಗೆ ನಡೆಯಬೇಕೆಂದು ಗಾಂಧೀಜಿಯ ಮನಸ್ಸಿನ ಪರಿಶುದ್ಧಿಯೇ ಸಂಸ್ಕೃತಿಯ ಮುಖ್ಯ ಲಕ್ಷಣ ಮನಸ್ಸು ಮಾಡಿದರೆ ಮಾನವನೂ ಜೀವನಸಂಸ್ಕೃತಿಯ ಅತ್ಯುನ್ನತ ಮಟ್ಟವನ್ನು ಮುಟ್ಟಬಲ್ಲನೆಂಬುದುದ್ಯೋತಕವಾಗಿ ಬುದ್ಧ, ಕ್ರಿಸ್ತ, ಬಸವ, ಗಾಂಧಿ ಮುಂತಾದ ಕೀರ್ತಿ ಸ್ತಂಭಗಳು ಎದ್ದು ಕಾಣುತ್ತಿರುವವಾದರೂ ಬರಿಯ ಕಂಬಗಳೇ ಉಳಿದಿದ್ದು ಮಂದಿರವನ್ನು ಕಟ್ಟಲು ಆಗಿಲ್ಲವೆಂದೇ ಅನ್ನಿಸುವಂತಿದೆ ಇಂದಿನ ವಿಶ್ವದ ಸ್ಥಿತಿ, ಇಂದಿನ ವಿಷಮ ಪರಿಸ್ಥಿತಿಯನ್ನು ದಾಟಿ ನೈಜ ಸಂಸ್ಕೃತಿಯ ಬೆಳಕನ್ನು ಕೊಡುವ ರೀತಿಯಲ್ಲಿ ತರುಣರು ಪ್ರಗತಿಯನ್ನು ಸಾಧಿಸಬೇಕು. ಕರ್ಣಾಟಕ ಸಂಸ್ಕೃತಿಯು ಬೆಳೆಯಬೇಕಾದರೆ ಭಿನ್ನವಾಗಿರುವ ಎಲ್ಲ ಕರ್ಣಾಟಕ ಭಾಗಗಳೂ ಒಂದಾಗಬೇಕು—ಎಂದು ಸ್ವಾಮಿಗಳು ತಿಳಿಸಿದರು,

ಶ್ರೀ ಅ ನ ಕೃಷ್ಣರಾಯರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು,—

ಸ್ವಾತಂತ್ರ್ಯವು ನಮ್ಮ ಮೇಲೆ ಹಚ್ಚಿನ ಜವಾಬ್ದಾರಿಯನ್ನು ಹೊರಿಸಿದೆ ಶತಮಾನಗಳ ಪರಾಧೀನತೆಯಿಂದ ಕಲಿತ ವಿಷಯಗಳನ್ನು ಜೀವನದಲ್ಲಿ ಸಮರ ಮಾಡಿಕೊಳ್ಳಲು ಅಸಮರ್ಥರಾಗಿದ್ದೇವೆ ಭಾರತದ ಧನ್ಯತೆಗೊಪ್ಪುವ ಹೊಸಜೀವನವನ್ನೇ ಕಂಡುಹಿಡಿಯಬೇಕಾಗಿದೆ ಅಂಥ ಜೀವನಕ್ಕೆ ನಮ್ಮ ಆರ್ಥಿಕ, ಔದ್ಯೋಗಿಕ ಕೈಗಾರಿಕಾ ದಾಸ್ಯ ನಿರ್ಮೂಲದ ಹೇಗೆ ಅಗತ್ಯವೋ ಹಾಗೆ ಮಾನಸಿಕ ದಾಸ್ಯ ನಿರ್ಮೂಲನವೂ ಅತ್ಯಗತ್ಯ ಜಾತಿ, ಮತ, ಪಂಥ, ಕೋಮು ಬಾಷೆ, ಪ್ರಾಂತ್ಯಗಳ ಇತಿಮಿತಿಗಳಿಂದ ಸಾಹಿತ್ಯ ಕಲೆಗಳು ಕಲುಷಿತವಾಗಿಲ್ಲ ಪರಂಪರಾನುಗತವಾಗಿ ಬಂದ ಆಧ್ಯಾತ್ಮಿಕ ಸತ್ತ್ವಯನ್ನು ಆವಿರ್ಭವಿಸಿಕೊಂಡು ಸಾಹಿತ್ಯ ಕಲೆಗಳು ಪ್ರಾಯಶಃ ವಿಶ್ವಬಂಧುತ್ವನ್ನು ಸಾಧಿಸುವ ಗುರುತರ ಜವಾಬ್ದಾರಿಯನ್ನು ಇನ್ನು ಮುಂದೆ ಹೊತ್ತುಕೊಳ್ಳ ಬೇಕಾಗಿದೆ

ಭಾಷಾವಾರ ಪ್ರಾಂತ್ಯ ನಿರ್ಮಾಣ ಪ್ರಶ್ನೆಯನ್ನು ಕೇಂದ್ರ ಸರ್ಕಾರ ಮುಂದೆ ತಳ್ಳಹಾಕಿರುವುದುವಿಹಿತವಾಗಿಲ್ಲ ಈಗಿನ ಸರ್ಕಾರದ ನೀತಿ ಕನ್ನಡ ಜನಕ್ಕೆ ಭಾರತೀಯತ್ವವನ್ನು ಕಲಿಸುತ್ತಿಲ್ಲ ಕನ್ನಡನಾಡು, ಕನ್ನಡ ಜನ ಒಮ್ಮಟಬೇಕಾದರೆ ಆದರ ಹಂಚಿ ಹೋಗಿರುವ ಪ್ರದೇಶಗಳನ್ನು ಒಗ್ಗೂಡಿಸಿದ ಪ್ರಾಂತ್ಯವಾಗಲೇಬೇಕು ಸಂಸ್ಕೃತಿಯ ದೃಷ್ಟಿಯಿಂದ ನೈ

ಪೌರಸಭಾ ಚುನಾವಣೆ

ಮೈಸೂರು ೩೧

ಬರುವನವಂಬರ್ ೨೬ನೇ ತಾ॥ ರಾಜಧಾನಿಯ ಪೌರಸಭಾ ಚುನಾವಣೆಯು ನಡೆಯುವುದು ನವಂಬರ್೧೧ನೇ ತಾರಿಖು ೪ಗಂಟೆವರಿಗೆ ಉಮೇದುವಾರಿಕೆಗಳನ್ನು ತೆಗೆದು ಕೊಳ್ಳಲಾಗುವುದು

ದನವನ್ನು ಕೊಲ್ಲುತ್ತಿದ್ದವರಿಗೆ ಸಜಾ

ರಾಜಧಾನಿಯ ಕಾನ್ವೆಂಟ್ ರಸ್ತೆಯಲ್ಲಿರುವ ೩೦೭೦ ನೇ ನಂಬರು ಮನೆಯಲ್ಲಿ ಮೊನ್ನೆ ದಿನ ಆದಿಕರ್ನಾಟಕಪ್ಪರದ ಪುಟ್ಟ ಮತ್ತು ಮಹದೇವ ಎಂಬುವರಿಬ್ಬರು ಹಸುವನ್ನು ಕೊಲ್ಲುತ್ತಿದ್ದರೆಂದು ನಗರದ ಪ್ರಥಮ ನ್ಯಾಯಾಧೀಶರು ಪುಟ್ಟನಿಗೆ ೨ ತಿಂಗಳ ಸಾದಾ ಸಜವನ್ನೂ ಮಹದೇವನಿಗೆ ಕೋರ್ಟು ಏಳುವವರೆಗೆ ಸಜವನ್ನೂ ವಿಧಿಸಿದರು

ವೀಣಾ ವಾದನ

ಈ ಸಂಜೆ ೭ ಗಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಶ್ರೀಮತಿ ಚೊಕ್ಕಮ್ಮನವರಿಂದ ವೀಣಾವಾದನ ಮತ್ತು ಸಂಗೀತವು ನಡೆಯುತ್ತವೆ

ಸೂರು ಕನ್ನಡ ನಾಡಿನ ಇತರ ಭಾಗಗಳಿಗಿಂದ ಪ್ರಗತಿಶೀಲವಾಗಿದೆ ಇದರಿಂದ ಮೈಸೂರು ಕನ್ನಡ ನಾಡಿನ, ಇತರ ಭಾಗಗಳನ್ನು ತನ್ನ ಉಡಿಯಲ್ಲಿ ಹಾಕಿ ಕೊಂಡು ಸರ್ವ ಸಮ್ಮತವಾದ ರಾಜ್ಯಾಂಗ ನಿಯೋಜನೆ ಮಾಡಬೇಕು

ಕನ್ನಡನಾಡಿನ ಸಂಸ್ಕೃತಿ ಬೆಳೆಯಲು ನಮ್ಮ ಸರ್ಕಾರ ಹಾಗೂ ಪ್ರಜಾ ವರ್ಗ ಜಾಗೃತರಾಗಿ ಯುಕ್ತ ಕಾರ್ಯಕ್ರಮ ಕೈಗೊಳ್ಳಬೇಕಾಗಿದ ಸಂಸ್ಕೃತಿಯ ಸಂವರ್ಧನಕ್ಕೆ ಪ್ರಾಚೀನತೆಯ ರಕ್ಷಣೆ ಮತ್ತು ಪ್ರೋಷಣೆಗಳು ಅತ್ಯಗತ್ಯ ಸಾಹಿತ್ಯ ಪೋಷಣೆಗೆ ನಮ್ಮ ನಾಡಿನಲ್ಲಿ ಯಾವ ಪ್ರಯತ್ನವೂ ನಡೆದಿಲ್ಲ ನಾಡಿನ ಲೇಖಕರ ಕಷ್ಟ ಸುಖಗಳನ್ನು ಪರಿಹರಿಸಬೇಕು ಮತ್ತು ಸಂಶೋಧನಾ ಕಾರ್ಯವು ಹೆಚ್ಚಾಗಿ ಆಗಬೇಕು ಇವಕ್ಕೆ ಸರ್ಕಾರ ಮತ್ತು ಮಹಾಜನರು ಹಣ ಒದಗಿಸಬೇಕು ಕನ್ನಡ ನಾಡಿನ ಪ್ರಾಚೀನ ವೈಭವವನ್ನು ಮುಂದುವರಿಸಬೇಕಾದುದು ಕನ್ನಡ ನಾಡಿನ ಹಿತದೃಷ್ಟಿಯಿಂದ ಮಾತ್ರವಲ್ಲ, ಭಾರತ ಹಿತದೃಷ್ಟಿಯಿಂದ ಹ ತ್ತು ಇಡೀ ಜಗತ್ತಿನ ಹಿತದೃಷ್ಟಿಯಿಂದ ಅವಶ್ಯಕ

ಸರ್ ಆರ್ಕಾಟರನ್ನು ಮೈಸೂರಲ್ಲೇ ಉಳಿಸುವುದು

ಪ್ರಭುಗಳಲ್ಲಿಗೂ ಮತ್ತು ದೆಹಲಿಗೂ ನಿಯೋಗ

ದಿವಾನಗಿರಿಯಿಂದ ನಿವೃತ್ತರಾದ ಮೇಲೂ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ರವರ ಸೇವೆಯು ಮೈಸೂರು ಸಂಸ್ಥಾನಕ್ಕೆ ದೊರೆಯುವಂತೆ ಮಾಡಲು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಂ ಕೃಷ್ಣಸ್ವಾಮಿಪಿಳ್ಳೆ ಮತ್ತು ಇತರರು ಸದ್ಯದಲ್ಲಿಯೇ ದೆಹಲಿಗೆ ಪ್ರಯಾಣ ಬೆಳೆಸಿ, ಗೌರ್ನರ್ ಜನರಲ್ ರಾಜಾಜಿ, ಸರದಾರ್ ಪಟೇಲ್, ವಿ ಪಿ ಮೇನನ್ ಮುಂತಾದವರನ್ನು ಭೇಟಿ ಮಾಡುವರೆಂದು ತಿಳಿದು ಬಂದಿದೆ

ಕಳೆದ ಗುರುವಾರ, ಶ್ರೀ ಗಳಾದ ಎಂ ಕೃಷ್ಣಸ್ವಾಮಿಪಿಳ್ಳೆ, ರಾವ್ ಬಹದ್ದೂರ್ ಎಂ ರಾಮಸ್ವಾಮಿ, ಎಂ ಸಿ ಲಿಂಗೇ ಗೌಡ, ಜಿ ಮರುಳಪ್ಪ, ಎಂ. ಮುದ್ದಪ್ಪ, ಅಹಮದ್‌ಖಾನ್, ಬಿ ಚನ್ನಬೈರೇಗೌಡ, ಭೋಗಿ ಮಲ್ಲಯ್ಯ ಮುಂತಾದವರು ಶ್ರೀಮನ್ ಮಹಾರಾಜರವರಲ್ಲಿ ನಿಯೋಗ ಹೋಗಿ, ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಸಂಸ್ಥಾನಕ್ಕೆ ಸಲ್ಲಿಸಿರುವ ಅಪಾರವಾದ ಸೇವೆಯನ್ನು ಕೊಂಡಾಡಿ, ಅವರ ಸೇವೆಯು ಇನ್ನೂ ಕೆಲವುಕಾಲ ಲಭಿಸುವ ಅಗತ್ಯವನ್ನು ಅಂಕೆ ಮಾಡಿ ಮನವಿಯನ್ನು ಅರ್ಪಿಸಿದರೆಂದು ತಿಳಿದು ಬಂದಿದೆ ಎಲ್ಲವನ್ನೂ ಸಾವಧಾನವಾಗಿ ಪರಿಶೀಲಿಸುವುದಾಗಿ, ಪ್ರಭುಗಳು ಭರವಸೆಯಿತ್ತರೆಂದೂ ವರದಿಯಾಗಿದೆ

ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಜಯ

ಮಥುರೆಯ ಜಿಲ್ಲಾ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ೧೭ ಮಂದಿ ಕಾಂಗ್ರೆಸ್ಸಿನವರೂ, ಒಬ್ಬ ಆಂಗ್ಲೋಇಂಡಿಯನ್ ಜಯಶೀಲರಾಗಿದ್ದಾರೆ ೧೪ ಜನ ಕಾಂಗ್ರೆಸ್ಸಿನವರಿಗೆ ಪ್ರತಿ ಸ್ಪರ್ಧೆಯೇ ಇರಲಿಲ್ಲ

ರಾಜ್ಯಾಂಗ ಸಭಾಧಿವೇಶನ

ಬೆಂಗಳೂರು ೩೧

ಬರುವ ೪ನೇ ತಾರೀಖು, ಗುರುವಾರ ಮಧ್ಯಾಹ್ನ ೨ ಗಂಟೆಗೆ ಬೆಂಗಳೂರಿನ ನ್ಯಾಯವಿಧಾಯಕ ಸಭಾ ಭವನದಲ್ಲಿ ಮೈಸೂರು ರಾಜ್ಯಾಂಗ ಸಭಾಧಿವೇಶನವು ಸೇರುವುದೆಂದು ತಿಳಿದುಬಂದಿದೆ

ಮಕ್ಕಳ ಹಬ್ಬದ ಆಚರಣೆ

ಮೈಸೂರು ೩೧

ನಿನ್ನೆ ದಿನ ರಾಜಧಾನಿಯಲ್ಲಿ ಮಕ್ಕಳ ಹಬ್ಬವು ವಿಶೇಷ ವೈಭವದಿಂದ ಆಚರಿಸಲ್ಪಟ್ಟಿತು ಬೆಳಗ್ಗೆ ಪ್ರೈಮರಿ ಮತ್ತು ಮಿಡಲ್ ಶಾಲೆಗಳಲ್ಲಿಯೂ, ಶಿಶುವಿಹಾರ ಮತ್ತು ಇತರ ಸಂಸ್ಥೆಗಳಲ್ಲಿಯೂ ಮೆರವಣಿಗೆ, ಧ್ವಜಾರೋಹಣ ಮತ್ತು ಆಟ ಪಾಟಗಳು ಜರುಗಿದ ಮೇಲೆ ಮಕ್ಕಳಿಗೆ ಸಿಹಿ ತಿಂಡಿ, ಗೋಲಿ, ಬುಗುರಿ, ಪೆನ್ಸಿಲ್ ಮುಂತಾದ ಆಟದ ಸಾಮಾನುಗಳನ್ನು ಹಂಚಲಾಯಿತು

ಪೌರಸಭೆಯ ಲಾರಿಗಳಲ್ಲಿ ಭಾರತ ಮಾತಾ, ಕೃಷ್ಣಲೀಲಾ ಮತ್ತು ಮಕ್ಕಳ ಕ್ರೀಡಾ ವಿನೋದಗಳ ದೃಶ್ಯಗಳು ನಯನ ಮನೋಹರಗಳಾಗಿ ಶೃಂಗರಿಸಲ್ಪಟ್ಟು ನಗರದ ಬೀದಿಗಳಲ್ಲೆಲ್ಲಾ ಪ್ರದರ್ಶಿಸಲ್ಪಟ್ಟವು ಎಲ್ಲೆಲ್ಲೂ ಮಕ್ಕಳ ಉತ್ಸಾಹವು ಮೇರೆ ಮೀರಿ ಕಾಣುತ್ತಿತ್ತು ಈ ಸಮಾರಂಭಕ್ಕಾಗಿ ನಗರವನ್ನೆಲ್ಲಾ ಸುಂದರವಾಗಿ ಅಲಂಕರಿಸಲಾಗಿದ್ದಿತು

ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾರಿ ಮಕ್ಕಳ ಕೂಟವು ಜರುಗಿತು ಸುಮಾರು ೨೦ ಸಾವಿರ ಮಕ್ಕಳು ಸೇರಿದ್ದರು ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಭಾಷಣ ಮಾಡಿ ಎಲ್ಲರಿಗೂ ಸ್ವಾಗತ ನೀಡಿದರು ಮಕ್ಕಳ ವಿನೋದಾವಳಿಗಳೂ, ವ್ಯಾಯಾಮ ಪ್ರದರ್ಶನಗಳೂ, ಹುಲಿ ವೇಷ, ಪಾಳೆಯಗಾರ ವೇಷ ಮುಂತಾದ ಪ್ರದರ್ಶನಗಳೂ ಜರುಗಿದವು

ಶ್ರೀಮನ್ ಮಹಾರಾಜರವರಿಂದ ಬಂದಿದ್ದ ಸಂದೇಶವನ್ನು ಅಧ್ಯಕ್ಷರು ಓದಿ ಹೇಳಿದರು ವಿವಿಧ ಆಟ ಪಾಟಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿದರು

ಅಧ್ಯಕ್ಷರು ಭಾಷಣ ಮಾಡಿ, ಮಕ್ಕಳು ರಾಷ್ಟ್ರದ ಅಮೂಲ್ಯವಾದ ಐಶ್ವರ್ಯವೆಂದೂ ಅವರ ಏಳಿಗೆಯು ಸಕಲರ ಆದ್ಯ ಕರ್ತವ್ಯವೆಂದೂ ತಿಳಿಸಿದರು ಮಕ್ಕಳ ಹಿತಸಾಧನೆಗಾಗಿ ನಡೆದಿರುವ ಕಾರ್ಯಕ್ರಮಗಳನ್ನು ಪ್ರಶಂಸಿಸಿ ಈ ಬಗ್ಗೆ ಶಾಶ್ವತವಾದ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಸೂಚಿಸಿದರು

ಮಶೀತಿ ಮುಂದೆ ವಾದ್ಯಕ್ಕೆ ಹೈದ್ರಾಬಾದಿನಲ್ಲಿ ಅವಕಾಶ

ಮಶೀತಿಗಳ ಮುಂದೆ ವಾದ್ಯ ಸಮೇತ ಮೆರವಣಿಗೆ ಅಥವ ಉತ್ಸವಗಳನ್ನು ಕೊಂಡುಹೋಗುವ ಬಗ್ಗೆ ಇದುವರೆಗೆ ಇದ್ದ ಆಜ್ಞೆಗಳನ್ನು ಒದಲಾಯಿಸಿ ಸಾರ್ವಜನಿಕ ರಸ್ತೆಗಳಲ್ಲಿ ಸದಾ ಕಾಲದಲ್ಲಿಯೂ ಯಾರು ಬೇಕಾದರೂ ವಾದ್ಯಸಮೇತ ಮೆರವಣಿಗೆಗಳನ್ನು ನಡೆಸಲು ನಿರ್ವಿವಾದವಾದ ಹಕ್ಕಿರುವುದೆಂದು ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿರುತ್ತಾರೆ ಕೋಮುಗಳ ಧಾರ್ಮಿಕ ಅಥವ ಸಾರ್ವಜನಿಕ ಹಕ್ಕಿನ ವಿಷಯದಲ್ಲಿ ಸರ್ಕಾರದವರು ತಾಟಸ್ಥ್ಯ ನೀತಿಯನ್ನು ಅನುಸರಿಸುವುದಾಗಿಯೂ ತಿಳಿಸಿರುತ್ತಾರೆ

ಮಹಾ ವಿಷ್ಣು ಸ್ಟಾಂಪು

ಈ ಸಾರಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಹಾವಿಷ್ಣುವಿನ ಚಿತ್ರವುಳ್ಳ ಅಂಚೆ ಟಿಕೇಟುಗಳನ್ನು ಮಾರಲಾಗುವುದು

ವಾರ ಭವಿಷ್ಯ

ತಾ॥ ೨೮-೭-೪೯ರಿಂದ ೭-೮-೪೯ರ ವರೆಗೆ

ಮೇಷ ಮಹತ್ವದ ಅನೇಕ ಕಾರ್ಯ ಮಾಡಿ ಜನ ಪ್ರಿಯರಾಗುವಿರಿ ಆರೋಗ್ಯ ನೆಟ್ಟಗೆ ವ್ಯಾಪಾರ, ನೌಕರಿ ವ್ಯವಹಾರಗಳಲ್ಲಿ ಉತ್ತಮ ಲಾಭವುಂಟು ಹಿಂಗಾಮಿಯವರಿಗೆ ಖಾಯಂ ಆಗುವುದು ಕೌಟುಂಬಿಕ ಕಲಹ ಪರಿಹಾರ ತಾ॥ ೧, ೨ ಶುಭವಾರ್ತೆ ಧನಲಾಭ

ವೃಷಭ—ಈ ವಾರ ಪ್ರಗತಿ ಸಹಾಯಕವಿದ್ದು ಅನಾರೋಗ್ಯ ಕಡಿಮೆ. ವ್ಯಾಪಾರಾದಿಗಳಲ್ಲಿದ್ದ ಭೀತಿ ತಪ್ಪುವುದು. ತಟಸ್ಥ ವ್ಯವಹಾರ ಪುನಃ ಆರಂಭವಾಗುವುದು ತಾ॥ ೩, ೪ ಪ್ರವಾಸ ಮಹತ್ವವಾರ್ತೆ

ಮಿಥುನ—ಆರೋಗ್ಯ ನೆಟ್ಟಗಿರದು ಹಣ ನೋವಿನ ಬಾಧೆ ಆದಾಯ ಸಾಧಾರಣ ವಿಶೇಷ ವೆಚ್ಚಗಳು ಕಾದಿವೆ ಮಿತ್ರರಿಂದ ಖರ್ಚು ಹೆಚ್ಚುವುದು ಪತ್ನಿಯೊಡನೆ ಕಲಹ ತಾ॥ ೩, ೪ ವಿರೋಧ ನಿವಾರಣ

ಕರ್ಕ—ಕೈಕೊಂಡ ಕಾರ್ಯ ಕಾಟ ಸ್ವಂತ ಆರೋಗ್ಯ ನೆಟ್ಟಗಿರದು ಪ್ರವಾಸ ಬೇಡ ಅಪಘಾತ ಭಯ ನೌಕರಿ, ವ್ಯಾಪಾರ ವ್ಯವಹಾರಗಳಲ್ಲಿ ಪ್ರತಿ ಸ್ಪರ್ಧಿಗಳ ಕಾಟ ತಾ॥ ೩೧, ೧, ೨ ಕಳ್ಳರ ಕಾಟ ಪತ್ನಿಯ ಅನಾರೋಗ್ಯ

ಸಿಂಹ—ಆರೋಗ್ಯ ನೆಟ್ಟಗಿಲ್ಲ ವಾತ ಪೀಡೆ ಚಿಂತೆ ಮೇಲಧಿಕಾರಿಗಳಿಂದ ಅಪಮಾನ ಪ್ರವಾಸಬೇಡ ಕುಟುಂಬದ ಸ್ಥಿತಿ ಸರಿಯಿರದು ತಾ॥ ೩, ೪ ಅಣ್ಣ ತಮ್ಮಂದಿರ ತಕರಾರು ಮಾನಹಾನಿ

ಕನ್ಯಾ—ಕೈಗೊಂಡ ಕಾರ್ಯದಲ್ಲಿ ಲಾಭವುಂಟು ಆರೋಗ್ಯ ನೆಟ್ಟಗೆ ಧರ್ಮ ಕಾರ್ಯ ನೌಕರಿಯಲ್ಲಿ ಮೇಲಿನವರ ಸಂತೃಪ್ತಿ ನಿರ್ವಿಘ್ನ ಪ್ರವಾಸ ತಾ॥ ೧ ೩, ಶುಭವಾರ್ತೆ ಆಪ್ತರ ಭೇಟಿ

ತುಲಾ—ವಾರ ಉಲ್ಲಾಸದ್ದು ಉತ್ಸಾಹಕರ ವಾರ್ತೆ ಎದುರಾಳಿಗಳ ಆಟ ಸಾಗದು ಲಾಭವುಂಟು ತಾ॥ ೩ ೪ ವಾಹನ ಸೌಖ್ಯ, ಪವಿತ್ರ ಸ್ಥಳ ದರ್ಶನ

ವೃಶ್ಚಿಕ—ಆರೋಗ್ಯ ಕ್ಲೇಶದಾಯಕ ಭಯಂಕರ ಅಪಘಾತದಿಂದ ತಪ್ಪಿಸಿ ಕೊಳ್ಳುವಿರಿ ಅನೇಕರಿಗೆ ವಾಹನಾಘಾತ, ನೌಕರರ ಅಸಂತುಷ್ಟಿ ಕಳತ್ರದ ಕೋಪ ತಾ॥ ೩೧, ೧, ೨ ಅಪ್ರಿಯವಾರ್ತೆ ಅಗ್ನಿಯಿಂದ ಹಾನಿ

ಧನು ಪರಸ್ಪರ ವಿರುದ್ಧ ವಿಚಾರಗಳ ತಿಕ್ಕಾಟ ಸಂತಾಪ ಜನಕ ಘಟನೆ ಸೇವಕರು ನಿಮ್ಮ ಮೇಲೆ ಚಾಡಿ ಹೇಳುವರು ವ್ಯಾಪಾರ, ವ್ಯವಹಾರಗಳಲ್ಲಿ ವಿಶ್ವಾಸದಿಂದ ಹಾನಿ, ಕೌಟುಂಬಿಕತ್ರಾಸ ತಾ॥ ೩, ೪ ಬಾರಿ ಖಚು ಒಳ ಸಂಚಿನ ಸಂಭವ

ಮಕರ—ಅಧಿಕಾರಿಗಳಲ್ಲಿರುವ ಈ ರಾಶಿಯವರಲ್ಲ ಹಲವರು ನಿರಾಜಮಾನವಾಗುವರು ಆರೋಗ್ಯ ನೆಟ್ಟಗೆ ಸರಕಾರಿ ಕಾರ್ಯಗಳಲ್ಲಿ ಯಶ ಎದುರಾಳಿಗಳ ಸೋಲು ವ್ಯಾಪಾರದಲ್ಲಿ ಲಾಭ ತಾ॥ ೩, ೪ ಶುಭವಾರ್ತೆ

ಕುಂಭ—ಮಾನಸಿಕ, ಯಾತನೆಯ ಆವೇಗ ಕಡಿಮೆಯಾಗುವುದು ಮಕ್ಕಳಿಗೆ ಅನಾರೋಗ್ಯ, ಮಕ್ಕಳು ತಂದೆಯ ಆಜ್ಞಾಭಂಗ ಮಾಡುವರು ವ್ಯಾಪಾರಾದಿಗಳಲ್ಲಿ ತೊಂದರೆ ತಾ॥ ೧, ೫ ಆರ್ಥಿಕ ಚಿಂತೆ ನಿವಾರಣೆ ಗುಪ್ತ ಚಿಂತೆಯಿಂದ ಮುಕ್ತಿ

ಮೀನ—ಕ್ಲೇಶದ ದಿನಗಳು ಅವನ್ನು ದಾಟಲು ಶ್ರಮಿಸಿದರೆ ಮುಂದೆ ಒಳ್ಳೆಯ ದಿನಗಳು ಬರುವುವು ಆರೋಗ್ಯ ನೌಕರಿಯಲ್ಲಿ ಮೇಲಿನವರು ಸಿಟ್ಟೇಳುವರು. ತಾ॥ ೧ ಚಿಂತೆ ಪಶುಹಾನಿ ಅಪಘಾತ ಭಯ

ಪುನಃ ಗೋಡ್ಸೆ ಅಪೀಲು

ಗಾಂಧೀಜಿ ಕೊಲೆಯಲ್ಲಿ ತಾನು ಪಿತೂರಿನಡಸಿದನೆಂಬ ಆಪಾದನೆಯನ್ನು ವಿರೋಧಿಸಲು ಪ್ರಿವಿ ಕೌನ್ಸಿಲ್ಲಿಗೆ ಅಪೀಲುಮಾಡುವುದಾಗಿ ನಾಥೂರಾಂ ಗೋಡ್ಸೆಯು ತಿಳಿಸಿರುತ್ತಾನೆ

ಪ॥ ಬಂಗಾಳದಲ್ಲಿ ಚುನಾವಣೆ

ಈ ವರ್ಷದ ಕೊನೆಯ ಅಥವಾ ಬರುವ ಜನವರಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಸಾರ್ವತ್ರಿಕ ಚುನಾವಣೆಯು ನಡೆಯಬೇಕೆಂದು ದೆಹಲಿಯಲ್ಲಿ ಸೇರಿದ್ದ ಅ ಭಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿದ

ತ್ರಿ ಮೂ ರ್ತಿ ಗ ಳಿಂ ದ ಮದ್ರಾಸು ಮಂತ್ರಿಗಳ ತನಿಖೆ

ಮದ್ರಾಸು ಮಂತ್ರಿ ಮಂಡಲದ ಮೇಲೆ ಬಂದಿರುವ ಆಪಾದನೆಗಳಲ್ಲಿ ಹಲವನ್ನು ಉಳಿದು, ವಿ ಕ್ಷಪುಗಳನ್ನು ವಿಚಾರಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿ ಸರ್ದಾರ್ ಪಟೇಲ್, ನೆಹರೂ ಮತ್ತು ರಾಜೇಂದ್ರ ಪ್ರಸಾದ್ ಇವರುಗಳು ತನಿಖೆ ನಡೆಸಬೇಕೆಂದು ಗೊತ್ತು ಮಾಡಿರುತ್ತದೆ

ಬಡ ವಿದ್ಯಾರ್ಥಿಗಳಿಗೆ ಅನ್ನದಾನ

ರಾಜಧಾನಿಯ ಪೌರ ಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಪುರನಿವಾಸಿಗಳಲ್ಲಿ ಪ್ರಾರ್ಥನೆಯೊಂದನ್ನು ಸಲ್ಲಿಸಿ, ಎಲ್ಲ ಕೋಮುಗಳ ೮೦ ಮಂದಿ ಬಡ ವಿದ್ಯಾರ್ಥಿಗಳಿಗೆ ಪೌರ ಸಭೆಯವರು ಏರ್ಪಡಿಸಿರುವ ಅನ್ನ ದಾನದ ವ್ಯವಸ್ಥೆಗೆ ಉದಾರ ಸಹಾಯ ಮಾಡಬೇಕೆಂದು ಕೋರಿದ್ದಾರೆ

ಮಕ್ಕಳ ಉತ್ಸವಕ್ಕೆ ಶ್ರೀಮನ್ ಮಹಾರಾಜರವರ ಸಂದೇಶ

ಮೈಸೂರು ಅರಮನೆ

೩೦ ಜುಲೈ ೧೯೪೯

ವಿಶ್ವ ಸಂಸ್ಥೆಯು ಏರ್ಪಡಿಸಿರುವ ಮಕ್ಕಳ ನಿಧಿಗೋಸ್ಕರ ಹಣ ಕೂಡಿಸುವ ಕಾರ್ಯವನ್ನು ಮೈಸೂರು ನಗರ ಸಭೆಯು ಕೈಗೊಂಡಿರುವ ವಿಷಯವನ್ನು ಕೇಳಿ ನನಗೆ ಸಂತೋಷವಾಗಿದೆ ಸಹಾಯದ ಅವಶ್ಯಕತೆ ಇರುವ ಬಡವರಾದ, ಅಂಗಹೀನರಾದ ಮಕ್ಕಳಿಗೆ ಆಸರೆ ನೀಡುವುದೇ ಈ ನಿಧಿಯ ಉದ್ದೇಶ ಅಂತಹ ಸಹಾಯ ಮತ್ತು ಆಸರೆಯ ಅವಶ್ಯಕತೆ ಈ ನಾಡಿನಲ್ಲಿ ಅಗತ್ಯವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ ಪೂರ್ಣ ಆಹಾರ ಸಿಗದ ಅನಾರೋಗ್ಯವಂತರಾದ ಮಕ್ಕಳ ಸಂಖ್ಯೆ ಈ ಸಂಸ್ಥಾನದಲ್ಲಿ ಕಡಿಮೆಯೇನೂ ಇಲ್ಲದಿರುವುದು ದುರದೃಷ್ಟ ಪೌರಸಭೆಯು ಕೈಗೊಂಡಿರುವ ಈ ಕಾರ್ಯದಲ್ಲಿ ಈ ನಗರದ ಧರ್ಮಾತ್ಮರೆಲ್ಲ ಸಹಾಯ ನೀಡಿ ಅರ್ಹರಾದ ಮಕ್ಕಳಿಗೆ ಅಗತ್ಯವಾದ ಆಸರೆ ದೊರಕುವಂತಾಗುತ್ತದೆಂದು ನಂಬಿದ್ದೇನೆ

ಜಯಚಾಮರಾಜ ಒಡೆಯರ್.

ಆಹಾರವನ್ನು ಹೆಚ್ಚು ಬೆಲೆಗೆ ಮಾರಿದ್ದಕ್ಕೆ ಛಡಿ ಶಿಕ್ಷೆ

ರೊಟ್ಟಿ ಮತ್ತು ತರಕಾರಿಗಳನ್ನು ನಿಗದಿಯಾದುದಕ್ಕಿಂದ ಹೆಚ್ಚಿನ ಬೆಲೆಗೆ ಮಾರಿದುದಕ್ಕಾಗಿ ಡಮಾಸ್ಕಸ್ಸಿನಲ್ಲಿ ಹತ್ತು ಜನರಿಗ ಬಹಿರಂಗವಾಗಿ ಛಡಿ ಏಟಿನ ಶಿಕ್ಷೆಯನ್ನು ವಿಧಿಸಲಾಗಿರುತ್ತದೆ

ಕ್ಯಾಂಟನ್ ನಗರ ತ್ಯಾಗ

ಕಮ್ಯೂನಿಸ್ಟ್ ಸೈನ್ಯಗಳು ದಕ್ಷಿಣದ ಕಡೆ ಮುಂದೆ ಬರುತ್ತಿರುವುದರಿಂದ, ದ. ಚೀಣದ ರಾಜಧಾನಿ ಕ್ಯಾಂಟನ್ನನ್ನು ಸರಕಾರಿ ಸೈನ್ಯಗಳು ಬಿಡಲು ಸಿದ್ಧವಾಗಿವೆಯೆಂದು ವರದಿಯಾಗಿದೆ

ರಾಜಕಮಲ್, ಮೈಸೂರು

28-7-49 ರಿಂದ

ಪ್ರತಿ ದಿನ 3 ಆಟಗಳು

ನದಿಯಾ ಕೆ ಪಾರ್

ಕಾಮಿನಿ ಕೌಶಲ್, ದಿಲೀಪ್ ಕುಮಾರ್ ನಟಿಸಿರುವ

ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ

ಬೆಳಗಿನ ಆಟಗಳು

29-7-49ರಿಂದ 4 ದಿನಗಳು ಮಾತ್ರ

ಹರಿಕೇನ್ ಎಕ್ಸ್‌ಪ್ರೆಸ್

ಎಂಟು ಅದ್ಭುತವಾದ ಇಂಗ್ಲೀಷ್ ಸೀರಿಯಲ್

* ಲಕ್ಷ್ಮಿ *

ತಾ॥ 3-8-49ರಿಂದ

ದಿನವಹಿ 3 ಪ್ರದರ್ಶನ

ಪ್ರತಿಭಾರವರ ಅಮೋಘ ತೆಲುಗು ಚಿತ್ರ ರತ್ನ

ಬಾಲ ರಾಜು

ಭೂಮಿಕೆ ವರಲಕ್ಷ್ಮಿ, ಅಂಜಲಿ ದೇವಿ, ನಾಗೇಶ್ವರರಾವ್, ಶಿವರಾವ್

ಬರುತ್ತಿದೆ

ಸ್ವರ್ಗಸೀಮ

(ತೆಲುಗು)

ತಿರುಮಜಿಸೈ ಆಳ್ವಾರ್

(ತಮಿಳು)

ಗಣೇಶಾ ಟಾಕೀಸ್

31-7-49ರಿಂದ ಪ್ರತಿ ದಿನ 3 ಆಟಗಳು

೫ ದಿನಗಳು ಮಾತ್ರ

ಮಾಡರ್ನ್ ಥಿಯೇಟರ್ಸ್‌ರವರ

ಅರುಂಧತಿ

(ತಮಿಳು)

ಭೂಮಿಕೆ–ಯು ಆರ್ ಜೀವರತ್ನಂ, ಹೊನ್ನಪ್ಪ ಭಾಗವತರ್, ಎನ್ ಎಸ್ ಕೃಷ್ಣನ್ ಟಿ ಎ ಮಧುರಂ

5-8-49 ನೇ ಶುಕ್ರವಾರದಿಂದ

ನವಜೀವನಂ

(ತಮಿಳು)

ಪ್ರಭುದೇವಾ ಟಾಕೀಸ್

1-8-49 ನೇ ಸೋಮವಾರದಿಂದ ಅಮೋಘ 5ನೆಯ ವಾರ

ಜೆಮಿನಿಯವರ

ಬಾಲನಾಗಮ್ಮ

(ತೆಲುಗು)

ಪ್ರತಿ ದಿನ ೩ ಆಟಗಳು

ಪಾತ್ರ:–ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಶ್ರೀ ಚಾಮುಂಡೇಶ್ವರಿ ಟಾಕೀಸ್

29-7-49ರಿಂದ ಒಂದು ವಾರ ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಜಗಬೀತಿ

(ಹಿಂದಿ)

ಭೂಮಿಕೆ-ಸುರಯ್ಯ ಮತ್ತು ಸಾದಿಕ್ ಅಲಿ

– ಮುಂದಿನ ಬದಲಾವಣೆ –

5-8-49ನೇ ಶುಕ್ರವಾರದಿಂದ

ನವಜೀವನಂ

(ತಮಿಳು)

ಪ್ರಭಾ

31-7-49ರಿಂದ ಯಶಸ್ವಿಯಾದ 1ನೇ ವಾರ

ಪ್ರತಿ ದಿನ 2 ಆಟಗಳು

ರಾಜಕಮಲ್‌ರವರ ಪುಷ್ಪದೂಲೆ

ಶಾಂತಾರಾಮರವರ ಕಲಾಕೃತಿ

ಅಪ್ನಾ ದೇಶ್

ಮುಖ್ಯ ಪಾತ್ರ-

ಪುಷ್ಪಹಂಸ, ಉಮೇಶ್ ಶರ್ಮ

Edited printed and published by A R Nagarajan, at Sadhvi Press D Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ವೃದ್ಧಿ

ಸಂಪುಟ ೮] ಸೋಮವಾರ ೧-೮-೧೯೪೯ [ಸಂಚಿಕೆ ೯

ಮೈಸೂರಿನಲ್ಲಿ ವಿಶ್ವದ ವಯಸ್ಕ ಶಿಕ್ಷಣ ಗೋಷ್ಠಿ

ಸಾಮಾನ್ಯ ವಿದ್ಯಾಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕು

ಮಧುಗಿರಿಯಲ್ಲಿ ಪ್ರಭುಗಳ ಭಾಷಣ

ತುಮಕೂರು ೩೦

ಶ್ರೀಮನ್ಮಹಾರಾಜರವರು ಈ ದಿನ ಮಧುಗಿರಿಯಲ್ಲಿ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು ಈ ಸಂಬಂಧದಲ್ಲಿ ಅಲ್ಲಿನ ಪುರಸಭೆಯವರು ಒಂದು ಬಿನ್ನವತ್ತಳೆಯನ್ನು ರಜತಕರಂಡದಲ್ಲಿಟ್ಟು ಅವರಿಗೆ ಅರ್ಪಿಸಿದರು

ಪ್ರಭುಗಳು ತಮ್ಮ ಉತ್ತರದಲ್ಲಿ ದೇಶದ ನಾನಾ ಸ್ಥಳಗಳಲ್ಲಿ ಕಾಲೇಜು ಮತ್ತು ವೃತ್ತಿ ಶಿಕ್ಷಣ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಪ್ರೋತ್ಸಾಹ ಕೊಡುವುದು ಅಗತ್ಯವಾದರೂ ಹಾಗೆ ಮಾಡುವುದಕ್ಕೆ ಮುಂಚೆ ಒಟ್ಟು ಸಂಸ್ಥಾನದಲ್ಲೆಲ್ಲಾ ಸಾಮಾನ್ಯ ವಿದ್ಯಾಭಿವೃದ್ಧಿ ಸಾಧನೆಯಾಗುವುದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ಕೈಗೊಳ್ಳುವುದು ಅವಶ್ಯಕವಾಗಿದೆಯೆಂದೂ ತಿಳಿಸಿದರು ಈ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ, ವಿದ್ಯಾಭ್ಯಾಸಕ್ಕೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸುವ ಒಂದು ಗೊತ್ತಾದ ಯೋಜನೆಯನ್ನು ಅನುಸರಿಸಿ ಕೆಲಸ ನಡೆಸಲಾಗುವುದೆಂದೂ ಪ್ರಭುಗಳು ಅಪ್ಪಣೆ ಕೊಡಿಸಿದರು

ಶ್ರೀಮನ್ಮಹಾರಾಜರವರು ಪಾವಗಡ ಮತ್ತು ಸಿರಾಗಳಿಗೆ ಭೇಟಿ ಕೊಟ್ಟು ಅಲ್ಲಿ ಮುನಿಸಿಪಲ್ ಹೈಸ್ಕೂಲುಗಳ ಶಂಕುಸ್ಥಾಪನೆಯನ್ನು ನೆರವೇರಿಸಿದರು

ಪುರವರ ಗ್ರಾಮದ ಬಳಿ ಜಯಮಂಗಲೀ ನದಿಗೆ ಜಿಲ್ಲಾ ಬೋರ್ಡಿನವರು ನಿರ್ಮಿಸಲಿರುವ ಸೇತುವೆಯ ಅಸ್ತಿಭಾರಶಿಲೆಯನ್ನು ಪ್ರಭುಗಳು ಈ ದಿನ ನೆರವೇರಿಸಿದರು ಗ್ರಾಮವಾಸಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿದರೆ ಅದರಿಂದ ಸರ್ಕಾರದ ಹುಟ್ಟುವಳಿಯೂ ಹೆಚ್ಚುತ್ತದೆ ರೈತರ ಆರ್ಥಿಕ ಸ್ಥಿತಿಯೂ ತನ್ಮೂಲಕ ಜಿಲ್ಲಾ ಬೋರ್ಡು ಮತ್ತು ಸರ್ಕಾರಗಳ ಹಣಕಾಸಿನ ಪರಿಸ್ಥಿತಿಯೂ ಉತ್ತಮಗೊಂಡಲ್ಲಿ ವಿದ್ಯಾಭಿವೃದ್ಧಿಯು ಹೆಚ್ಚು ಸುಸೂತ್ರವಾಗಿ ನೆರವೇರಲು ಸಾಧ್ಯವಾಗುತ್ತದೆ-ಎಂದು ಪ್ರಭುಗಳು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದರು

ಪಾಕೀಸ್ತಾನದಲ್ಲಿ ಜಮೀನುಗಳು ಸರಕಾರದ ವಶ

೧೫೦ ಎಕರೆಗಳಿಗಿಂತ ಹೆಚ್ಚು ಇರುವ ಜಮೀನುಗಳನ್ನೆಲ್ಲಾ ಸರ್ಕಾರವು ವಶಪಡಿಸಿಕೊಳ್ಳಬೇಕೆಂದೂ ಮತ್ತು ಯಾವ ಪರಿಹಾರವನ್ನೂ ಕೊಡದೆ ಜಮೀನುದಾರೀ ಮತ್ತು ಇನಾಮು ಪದ್ಧತಿಗಳನ್ನು ರದ್ದುಮಾಡಬೇಕೆಂದೂ ಪಾಕೀಸ್ತಾನದ ಮುಸ್ಲಿಂ ಲೀಗಿನವರು ಸಲಹೆ ಮಾಡಿರುವರು

ಲಂಚದ ಆಪಾದನೆಗಾಗಿ ನ್ಯಾಯಾಧೀಶರ ದಸ್ತಗಿರಿ

ಕಟಕ್ ಜಿಲ್ಲೆಯ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರೊಬ್ಬರನ್ನು ಲಂಚದ ಆಪಾದನೆ ಮೇಲೆ ಕೋರ್ಟಿನಲ್ಲೇ ದಸ್ತಗಿರಿ ಮಾಡಲಾಗಿದೆ ಪೋಲೀಸರು ಅವರ ಮನೆಯನ್ನು ಶೋಧಿಸಿ ೭೭೭೪ ರೂ ಕರೆನ್ಸಿ ನೋಟುಗಳನ್ನು ವಶಪಡಿಸಿಕೊಂಡಿರುತ್ತಾರೆ ವಿಚಾರಣೆ ನಡೆಸುತ್ತಿದ್ದ ಒಂದು ವ್ಯವಹಾರದಲ್ಲಿ ಲಂಚ ತೆಗೆದುಕೊಂಡರೆಂದು ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿ ಮುಂದಿನ ತನಿಖೆ ನಡೆಸಲಾಗುತ್ತಿದೆ

ರಾಜಧಾನಿಯಲ್ಲಿ ಹರಿಜನರ ದೇವಾಲಯ ಪ್ರವೇಶ

ಮೈಸೂರು ೧

ನಾಳಿದ್ದು ಬುಧವಾರ ಸಂಜೆ ೬ ಗಂಟೆಗೆ ಟೌನ್‌ಹಾಲಿನ ಮೈದಾನದಲ್ಲಿ ಹರಿಜನರ ಸಭೆಯು ಪುರಸಭೆಗಳ ಸಚಿವರಾದ ಶ್ರೀ ಹಾಪಡಿ ಸಬ್ಬರಾಮಚೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು ಅನಂತರ ಅಲ್ಲಿಂದ ಸಚಿವರು ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ಹರಿಜನರ ಸಮೇತನಾಗಿ ತೆರಳುವರು ನಗರದಲ್ಲಿರುವ ಎಲ್ಲ ಹರಿಜನ ಭಜನಾ ಕೂಟಗಳು ಆ ದಿನ ಟೌನ್‌ಹಾಲಿಗೆ ಬರಬೇಕೆಂದು ಜಿಲ್ಲಾ ಮತ್ತು ನಗರದ ಹರಿಜನ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ ಶೇಷಾದ್ರಿಯವರು ಪ್ರಾರ್ಥಿಸಿರುತ್ತಾರೆ

ಮಕ್ಕಳ ಹಬ್ಬ

ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯಲ್ಲಿ ಮೊನ್ನೆ ದಿನ ಮಕ್ಕಳ ಹಬ್ಬವು ಶ್ರೀಮತಿ ವಿ ಆರ್ ನಾಯ್ಡುರವರ ಅಧ್ಯಕ್ಷತೆಯಲ್ಲಿ ಜರುಗಿತು ಧ್ವಜ ವಂದನೆ, ಮಕ್ಕಳ ಮೆರವಣಿಗೆ ಸಭೆ ಮತ್ತು ಸಿಹಿ ತಿಂಡಿ ವಿನಿಯೋಗಗಳು ನಡೆದುವು ಶ್ರೀಮತಿ ನಾಯ್ಡುರವರು ಮಕ್ಕಳಿಗೆ ಸಿಹಿ ತಿಂಡಿ ಹಂಚಲು ಹಣ ಸಹಾಯ ಮಾಡಿದ್ದರು

ಧರ್ಮ ಪ್ರವರ್ತ ಗೋಂಬಾಳೆ ರಂಗಯ್ಯನವರ ಪತ್ನಿ ಶ್ರೀಮತಿ ಪುಟ್ಟಮ್ಮನವರು ತಮ್ಮ ನಿಲಯದ ವಿದ್ಯಾರ್ಥಿಗಳಿಗೆ ಉಪಾಹಾರ ಮತ್ತು ಊಟವನ್ನು ಮಕ್ಕಳ ಹಬ್ಬದ ಸಂದರ್ಭದಲ್ಲಿ ಏರ್ಪಡಿಸಿದ್ದರು

ಜಯನಗರದಲ್ಲಿರುವ ವನಿತಾ ಸದನದಲ್ಲಿ ಸಮಾರಂಭವು ಧ್ವಜಾರೋಹಣ ಮತ್ತು ಮಕ್ಕಳ ಆಟಪಾಟಗಳೊಡನೆ ಜರುಗಿತು ಶ್ರೀ ತಗರಂ ರಂಗಯ್ಯನವರು ಮಕ್ಕಳ ಹಬ್ಬದ ವೈಶಿಷ್ಟ್ಯವನ್ನು ಕುರಿತು ಭಾಷಣ ಮಾಡಿದರು

ಮನೆ ಬಾಡಿಗೆಗೆ ಕೊಡಲು ೨ ಲಕ್ಷ ರೂ. ಲಂಚ

ಬೊಂಬಾಯಿನ ಜಪರಲ್ಲಿ ಗುಲಾಂ ಹುಸೇನ್ ಮತ್ತು ಅವರ ಪತ್ನಿಯವರು ತಮ್ಮ ಭವನವನ್ನು ಬಾಡಿಗೆಗೆ ಕೊಡಲು ೨ ಲಕ್ಷ ರೂ ಪಗ್ಡಿ (ಲಂಚದ) ಹಣವನ್ನು ಪಡೆದರೆಂದು ಅವರನ್ನು ಪೋಲೀಸರು ದಸ್ತಗಿರಿ ಮಾಡಿ, ಮೊಕದ್ದಮೆ ಹೂಡಿದ್ದಾರೆ ಅವರುಗಳನ್ನು ೩೫ ಸಾವಿರ ರೂ. ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ

೧೦ನೇ ತಾ॥ ರಾಜ್ಯಾಂಗ ಸಭೆ

ಬೆಂಗಳೂರು ೧

ಇದೇ ೮ನೇ ತಾ॥ ಆರಂಭವಾಗಬೇಕಾಗಿದ್ದ ರಾಜ್ಯಾಂಗ ಸಭಾಧಿವೇಶನವು ೧೦ನೇ ತಾ॥ ಮಧ್ಯಾಹ್ನ ೨ ಗಂಟೆಗೆ ಪ್ರಾರಂಭವಾಗುವುದು ಅದು ಕೇವಲ ೬ ದಿನಗಳು ಮಾತ್ರ ನಡೆಯುವುದೆಂದೂ ಕೇಂದ್ರ ಸರ್ಕಾರದವರು ರಚಿಸಿರುವ ಮಾದರಿ ರಾಜ್ಯಾಂಗವನ್ನು ಭಾರತದ ರಾಜ್ಯಾಂಗದಲ್ಲಿ ಸೇರಿಸುವ ಬಗ್ಗೆ ಸಮ್ಮತಿ ಸೂಚಿಸುವುದೇ ಸಭೆಯ ಮುಖ್ಯ ಉದ್ದೇಶವೆಂದೂ ತಿಳಿಸಲಾಗಿದೆ

ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಇದೇ ೮ನೇ ತಾ॥ ದೆಹಲಿಯಿಂದ ವಾಪಸು ಬರುವರು

ಸೂರ್ಯನ ಸಮೀಪದಲ್ಲಿ ಹೊಸ ಗ್ರಹ

ಸೂರ್ಯ ಗ್ರಹದ ಸಮೀಪದಲ್ಲಿರುವ ಗ್ರಹವೊಂದು ಕಾಣಿಸಿಕೊಂಡಿರುವುದಾಗಿ ಅಮೆರಿಕದ ವೈಜ್ಞಾನಿಕರು ಕಂಡು ಹಿಡಿದಿದ್ದಾರೆ ಇದು ಬುಧ ಗ್ರಹದ ಸಂಚಾರ ಮಾರ್ಗದಲ್ಲಿ ಚಲಿಸುತ್ತದೆ ಅತಿ ಸಮೀಪದಲ್ಲಿರುವಾಗ ಈ ಗ್ರಹವು ಸೂರ್ಯನಿಗೆ ೨ ಕೋಟಿ ಮೈಲಿ ದೂರದಲ್ಲಿ ಇರುವುದು ಇದು ಭೂ ಗ್ರಹಕ್ಕೆ ೪೦ ಲಕ್ಷ ಮೈಲಿ ದೂರದವರೆಗೆ ಬರುವುದೆಂದೂ, ನಂತರ ಕುಜ ಗ್ರಹದ ಕಡೆಗೆ ಹೋಗುವುದೆಂದೂ ಆಗ ಅದು ಸೂರ್ಯನಿಂದ ೧೫ ಕೋಟಿ ಮೈಲಿ ದೂರವಿರುವುದೆಂದೂ ಗೊತ್ತಾಗಿದೆ

ಫ್ಲೋರ್ ಮಿಲ್ ಇಡುವ ಬಗ್ಗೆ ವಿದ್ಯಾರ್ಥಿಗಳ ಪ್ರತಿಭಟನೆ

ರಾಜಧಾನಿಯ, ಕೃಷ್ಣರಾಜ ಮೊಹಲ್ಲಾ ಚಲುವಾಂಬಾ ಅಗ್ರಹಾರದ ಬೀದಿಯಲ್ಲಿ ಕಾಳು, ಹಿಟ್ಟು, ತೊಗರಿ ಮುಂತಾದುವುಗಳನ್ನು ಒಡೆಯುವ ಮತ್ತು ಬೀಸುವ ಗಿರಣಿಗಳನ್ನು ಇಡಲು ರಹದಾರಿ ಕೊಡಲಾಗುವುದೆಂದು ತಿಳಿದು ಒಂದಿನೆ ಅಲ್ಲಿ ವಾಸಿಸುತ್ತಿರುವ ಅನೇಕ ವಿದ್ಯಾರ್ಥಿಗಳಿಗೆ ಇದರಿಂದ ವ್ಯಾಸಂಗ ಮಾಡಲು ತುಂಬಾ ತೊಂದರೆಯಾಗುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಅವಕಾಶ ಕೊಡಬಾರದೆಂದು ಪ್ರಾರ್ಥಿಸಿ ಅಲ್ಲಿನ ೨೦ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ರುಜು ಮಾಡಿ ಪತ್ರವೊಂದನ್ನು ನಮಗೆ ಬರೆದಿರುತ್ತಾರೆ

ವಿಶ್ವದ ವಯಸ್ಕರ ಶಿಕ್ಷಣ ಗೋಷ್ಠಿ

ಮೈಸೂರು ೧

ವಿಶ್ವ ಸಂಸ್ಥೆಯ ವಯಸ್ಕರ ಶಿಕ್ಷಣ ಗೋಷ್ಠಿಯ ಅಧಿವೇಶನವು ಮೈಸೂರು ನಗರದಲ್ಲಿ ಸಧ್ಯದಲ್ಲಿಯೇ ನಡೆಯುವುದೆಂದು ತಿಳಿದುಬಂದಿದೆ ಇಡೀ ಭಾರತದಲ್ಲಿ ಮೈಸೂರು ಸಂಸ್ಥಾನವು ವಯಸ್ಕರ ಶಿಕ್ಷಣದ ಬಗ್ಗೆ ಕೈಗೊಂಡಿರುವ ಪ್ರಗತಿಪರವಾದ ಕಾರ್ಯಕ್ರಮಗಳು ವಿಶ್ವ ಸಂಸ್ಥೆಯ ಮೆಚ್ಚುಗೆಯನ್ನು ಪಡೆದಿವೆಯೆಂದೂ, ಈ ಕಾರಣದಿಂದಲೇ ಅವರು ಅಧಿವೇಶನವನ್ನು ಮೈಸೂರಿನಲ್ಲಿ ನಡೆಸಲು ನಿರ್ಧರಿಸಿದ್ದಾರೆಂದೂ ಹೇಳಲಾಗಿದೆ

ಅಹಮದಾಬಾದ್ ಬಟ್ಟೆ ಗಿರಣಿಗಳ ಬಂದು

ಅಹಮದಾಬಾದಿನ ೨ ಬಟ್ಟೆ ಗಿರಣಿಗಳು ತಮ್ಮಲ್ಲಿ ಬಟ್ಟೆ ದಾಸ್ತಾನು ವಿಪರೀತವಾಗಿರುವುದೆಂದು ಅವನ್ನು ಮುಚ್ಚಲು ನಿರ್ಧರಿಸಿವೆ ಇದರಿಂದ ೫ ಸಾವಿರ ಕಾರ್ಮಿಕರು ನಿರುದ್ಯೋಗಿಗಳಾಗಿರುವರು ಇತರೆ ೮ ಗಿರಣಿಗಳೂ ಕೆಲಸವನ್ನು ನಿಲ್ಲಿಸಲಾಗುವುದೆಂದು ನೋಟೀಸ್ ಕೊಟ್ಟಿವೆ ಇದರಿಂದ ೬೫೦೦ ಜನ ಕಾರ್ಮಿಕರಿಗೆ ಕೆಲಸವಿರುವುದಿಲ್ಲ

ಅಮರನಾಥರ ಮೇಲಿನ ಶಿಸ್ತಿನ ಕ್ರಮ ರದ್ದು

ಭಾರತದ ಮಾಜಿ ಕ್ರಿಕೆಟ್ ಟೆಸ್ಟ್ ಕ್ಯಾಪ್ಟನ್ ಶ್ರೀ ಲಾಲಾ ಅಮರನಾಥ್‌ರವರ ಮೇಲೆ ಭಾರತದ ಕ್ರಿಕೆಟ್ ಕಂಟ್ರೋಲ್ ಬೋರ್ಡಿನವರು ವಿಧಿಸಿದ್ದ ಶಿಸ್ತಿನ ಕ್ರಮವನ್ನು ರದ್ದುಮಾಡಿ, ಅವರ ಮೇಲಿನ ಆಪಾದನೆಗಳನ್ನು ವಾಪಸು ತೆಗೆದುಕೊಂಡಿರುತ್ತಾರೆ. ಶ್ರೀ ಅಮರನಾಥ್‌ರವರೂ ಸಹ ಬೋರ್ಡಿನ ಅಧ್ಯಕ್ಷರಾದ ಶ್ರೀ ಡಿಮೆಲ್ಲೋರವರ ಮೇಲೆ ಹೂಡಿದ್ದ ಮೊಕದ್ದಮೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ.

ಹುಲಿಗಳೊಡನೆ ದಂಪತಿಗಳ ಹೋರಾಟ

ರೇವಾ ಸಂಸ್ಥಾನಕ್ಕೆ ಸೇರಿದ ಕಾಡಿನ ಸಮೀಪದಲ್ಲಿರುವ ಹಳ್ಳಿಯೊಂದರಲ್ಲಿ ಎರಡು ಹುಲಿಗಳು ಹಸುಗಳ ದೊಡ್ಡಿಯ ಮೇಲೆ ಬಿದ್ದುವೆಂದೂ, ಅಲ್ಲಿನ ದಂಪತಿಗಳಿಬ್ಬರು ಭರ್ಜಿ ಮತ್ತು ಕೊಡಲಿಗಳ ಸಮೇತ ಹೋರಾಡಿ ಅವುಗಳನ್ನು ಕೊಂದುಹಾಕಿದರೆಂದೂ ವರದಿಯಾಗಿದೆ ಮೊದಲು ಹೆಣ್ಣು ಹುಲಿಯೊಡನೆ ಕಾದಾಡಿ, ಅದನ್ನು ಕೊಂದನಂತರ ಗಂಡು ಹುಲಿಯು ಅವರ ಮೇಲೆ ಬಿದ್ದಿತು ಕೊನೆಗೆ ಅದನ್ನೂ ಸಾಯಿಸಲಾಯಿತು

ಕಳೆದು ಹೋಗಿದೆ

ಆವತ್ತು ಬೆಳಿಗ್ಗೆ [illegible] ರಸ್ತೆ [illegible] ಬಸ್ಸಿನಲ್ಲಿ ಬರುತ್ತಿರುವಾಗ ಒಂದು ಕೆಂಪು ಬ್ಯಾಗು [illegible] ಹೋಟೆಲ್ [illegible] ರಾಯರ [illegible] ಪುಸ್ತಕ ಮತ್ತು [illegible] ಇಟ್ಟಿದ್ದ [illegible] ಕಳೆದು ಹೋಗಿದೆ ಇದನ್ನು ಸಿಕ್ಕಿದವರು ಈ ಕೆಳಗಿನ [illegible] ಕ್ಕೆ ತಲುಪಿಸಿದವರಿಗೆ [illegible] ಬಹುಮಾನ ಕೊಡಲಾಗುತ್ತೆ.

ವಿಳಾಸ [illegible]
ಚಾಮರಾಜಪುರಂ ಕೊ-ಆಪರೇಟಿವ್ ಸ್ಟೋರ್ಸ್
ಎದುರು ಪೋಸ್ಟ್ ಆಫೀಸು, ಮೈಸೂರು.

ಭಾರತ ಸರ್ಕಾರದ ಖಂಡನೆ

ಶರಚ್ಚಂದ್ರ ಬೋಸರ ಭಾಷಣ

ಸ್ವಂ ವಿ ಸು] ದಾವಣಗೆರೆ ೨೮

ನಿನ್ನೆ ರಾತ್ರಿ ನಿಜಲಿಂಗಪುರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಶರತ್ ಚಂದ್ರ ಬೋಸರು ಭಾಷಣ ಮಾಡಿ ಈಗಿನ ಕೇಂದ್ರ ಸರ್ಕಾರದ ಆಡಳಿತವನ್ನು ಕಟುತರವಾಗಿ ಟೀಕಿಸಿದರು. ಅಧಿಕಾರ ವಹಿಸಿಕೊಂಡ ಈ ೨೪ ತಿಂಗಳಲ್ಲಿ ಭಾರತ ಸರ್ಕಾರವು ಯಾವ ಕೆಲಸವನ್ನೂ ಮಾಡಿಲ್ಲ ಜನರ ಕಷ್ಟಗಳು ಹೆಚ್ಚಾಗುತ್ತಿವೆ ಮಾನವನ ಸ್ವಾತಂತ್ರ್ಯಕ್ಕೆ ಚ್ಯುತಿ ಉಂಟಾಗುವಂತಹ ಅನೇಕ ಶಾಸನಗಳನ್ನು ಜಾರಿಗೆ ತರಲಾಗಿದೆ ಬ್ರಿಟಿಷ್ ಪದ್ಧತಿಯನ್ನೇ ಈಗಿನ ಸರ್ಕಾರವೂ ಅನುಸರಿಸುತ್ತಿದೆ ಒಂದು ಸರಿಯಾದ ಕೈಗಾರಿಕೆ ಅಥವ ವ್ಯವಸಾಯ ನೀತಿಯಿಲ್ಲ. ಗಾಂಧೀಜಿಯವರ ಹೆಸರನ್ನು ಹೇಳಿ ಅನೇಕ ಅಪರಾಧಗಳನ್ನು ಮಾಡಲಾಗುತ್ತಿದೆ. ಕಿಸಾನ್-ಮಜದೂರ್-ಪ್ರಜಾ ಸರ್ಕಾರವನ್ನು ಸ್ಥಾಪಿಸುತ್ತೇವೆಯೆಂದು ಹೇಳುತ್ತಿದ್ದ ನಾಯಕರು ಈಗ ಬಂಡವಾಳಶಾಹೀ ಸರ್ಕಾರ ಸ್ಥಾಪಿಸಿದ್ದಾರೆ ಕಮ್ಯೂನಿಸ್ಟರ ಹಾವಳಿ ಎಂಬ ನೆಪದಿಂದ ಅನೇಕರನ್ನು ಜೈಲಿನಲ್ಲಿ ಬಂಧನದಲ್ಲಿಡಲಾಗಿದೆ. ಈ ಕಾರ್ಯಕ್ರಮಗಳಿಂದ ಜನರಿಗೆ ಸರ್ಕಾರದಲ್ಲಿ ಪ್ರೀತಿ ವಿಶ್ವಾಸ ಮಾಯವಾಗಿದೆ ಗಾಂಧೀಜಿಯವರ ತತ್ವಗಳನ್ನು ಪರಿಪಾಲಿಸುತ್ತಿಲ್ಲ. ಅವರ ಹೆಸರನ್ನು ಅಪಮಾನಗೊಳಿಸಲಾಗುತ್ತಿದೆ ನಾಥೂರಾಂ ಗೋಡ್ಸೆಯು ಮಹಾತ್ಮರನ್ನು ಕೊಲೆ ಮಾಡಿದನು ಆದರೆ ಮಹಾತ್ಮರ ಆತ್ಮವನ್ನು ಈಗಿನ ಸರ್ಕಾರ ಕೊಲೆ ಮಾಡುತ್ತಿದೆ. ಇವೆಲ್ಲವೂ ಸರಿಯಾಗಬೇಕಾದರೆ ಭಾರತದಲ್ಲಿ ಕೂಡಲೇ ಸಮತಾವಾದಿ ಸರ್ಕಾರ ಏರ್ಪಡಬೇಕು. ಬಲವಾದ ಸಮತಾವಾದಿ ಪಕ್ಷವು ದೇಶದಲ್ಲಿ ನಿರ್ಮಿತವಾಗುವಂತೆ ಯುವಕರೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು—ಎಂದು ಅವರು ಹೇಳಿದರು

ಸರಕಾರವನ್ನು ವಜಾ ಮಾಡುವ ಅಧಿಕಾರ ಗೌರ್ನರರಿಗೆ ಇಲ್ಲ

ಸಂಸ್ಥಾನದಲ್ಲಿ ಸರಕಾರವನ್ನು ವಿಶೇಷ ಸಂದರ್ಭದಲ್ಲಿ ವಜಾ ಮಾಡುವ ಅಧಿಕಾರವನ್ನು ಗೌರ್ನರರಿಗೆ ವಹಿಸದೆ, ಭಾರತದ ರಿಪಬ್ಲಿಕ್ಕಿನ ಅಧ್ಯಕ್ಷರಿಗೆ ವಹಿಸಬೇಕೆಂದು ದೆಹಲಿಯಲ್ಲಿ ಸೇರಿದ್ದ ರಾಜ್ಯಾಂಗ ರಚನಾ ಸಭೆಯಲ್ಲಿ ತೀರ್ಮಾನವಾಗಿದೆ.

ನಾಯಿ ಕೆಮ್ಮಿಗೆ ಔಷಧಿ

WHOOPING COUCH REMEDY

ಬೆಲೆ 2—0—0

ಗೂರ್ಲು, ಉಬ್ಬಸ, ಪಂಚಾಮಶೂಲೆ ಮತ್ತು Tonsil ಗೆ (ಗಲಾ ತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಪದಕಗಳನ್ನು ಕೊಟ್ಟಿದ್ದಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

೧೯೪೮ರಲ್ಲಿ ಪ್ರಪಂಚದ ಆದಾಯ ೫೩ ಸಾವಿರ ಕೋಟಿ ಡಾಲರ್

೧೯೪೮ರಲ್ಲಿ ಪ್ರಪಂಚದ ಒಟ್ಟು ಆದಾಯವು ೫೩,೧೦೦ ಕೋಟಿ, ಡಾಲರುಗಳಷ್ಟು ಇತ್ತೆಂದು ಗೊತ್ತಾಗಿದೆ ಈ ಪೈಕಿ ಉತ್ತರ ಅಮೇರಿಕಕ್ಕೆ ಶೇಕಡ ೪೬ ರಷ್ಟು ಆದಾಯ ಬಂದಿದೆ ಏಷ್ಯಾ ರಾಜ್ಯಗಳಲ್ಲಿ ಒಟ್ಟು ಶೇಕಡ ೧೧ ರಷ್ಟು ಆದಾಯವೂ, ರಷ್ಯದಲ್ಲಿ ಶೇ॥ ೧೦ ರಂತೆಯೂ ಬಂದಿರುವುದಾಗಿ ಗೊತ್ತಾಗಿದೆ

ಮಾಜಿ ಮಂತ್ರಿಗಳ ಮೇಲೆ ಮೊಕದ್ದಮೆ

ಪಶ್ಚಿಮ ಪಂಜಾಬಿನ ಶಾಸನ ಸಭೆಯ ಸುಮಾರು ೭೧ ಮಂದಿ ಸದಸ್ಯರ ಮೇಲೆ ಇರುವ ಆರೋಪಣೆಗಳ ಬಗ್ಗೆ ಅವರ ಮೇಲೆ ಕೋರ್ಟಿನಲ್ಲಿ ಮೊಖದ್ದಮೆ ಹೂಡಿ ಅವರುಗಳ ವಿಚಾರಣೆ ಮಾಡಬೇಕೆಂದು ಅಲ್ಲಿನ ಗೌರ್ನರರು ಆಜ್ಞೆ ಮಾಡಿದ್ದಾರೆ. ಈ ಪೈಕಿ ಹಲವು ಮಾಜಿ ಮಂತ್ರಿಗಳು ಇರುವರು ಆಸ್ತಿಯದುಂದು ವೆಚ್ಚ ಅಧಿಕಾರ ದುರುಪಯೋಗದ ಆರೋಪಣೆಗಳು ಇತರ ಮೇಲೆ ಇವೆ.

ಖಡ್ಗ ಮೃಗದ ಪ್ರದರ್ಶನಕ್ಕಾಗಿ ಸಲಹೆ

ಪ್ರಖ್ಯಾತ ವೈಜ್ಞಾನಿಕರೂ ಇತಿಹಾಸ ಸಂಶೋಧಕರೂ ಆದ ಸಾಲಿಂ ಅಲಿ ಮತ್ತು ಅಮೇರಿಕದ ಯೇಲ್ ವಿಶ್ವವಿದ್ಯಾಲಯದ ಎಸ್. ಡಿ. ರಿಪ್ಲಿ ಮುಂತಾದವರು ಅಸ್ಸಾಮಿನ ಗುಡ್ಡಗಾಡುಗಳಲ್ಲಿರುವ ಮತ್ತು ದಿನ ದಿನಕ್ಕೂ ಕ್ಷೀಣಿಸುತ್ತಿರುವ ಒಂದು ಕೊಂಬಿನ ಖಡ್ಗ ಮೃಗವನ್ನು ಹಿಡಿದು ಜನರಿಗೆ ಪ್ರದರ್ಶನ ಮಾಡಬೇಕೆಂದು ಅಲ್ಲಿನ ಸರಕಾರಕ್ಕೆ ಸಲಹೆ ಮಾಡಿದ್ದಾರೆ

ಕಡಲ್ಗಾಲುವೆ ದಾಟುವ ಪ್ರಯತ್ನ ಫಲಿಸಲಿಲ್ಲ

ಡೋವರ್ ಬಳಿ ಇಂಗ್ಲಿಷ್ ಕಡಲ್ಗಾಲುವೆಯನ್ನು ಈಜಿ ದಾಟಬೇಕೆಂದು ಹೊರಟಿದ್ದ ಮೂವತ್ತು ವರ್ಷ ವಯಸ್ಸಿನ ಎಲ್ಲಿ ಕ್ರೋಸ್ ಎಜ್‌ಸಲ್ ಎ ಬಾಕೆಯು ೧೪ ದಿನಗಳು ಸತತವಾಗಿ ನೀರಿನಲ್ಲಿದ್ದು ನಂತರ ಚಳಿ, ಗಾಳಿಗಳಿಗೆ ಹೆದರಿ ತನ್ನ ಪ್ರಯತ್ನವನ್ನು ಬಿಟ್ಟಳೆಂದು ಹೇಳಲಾಗಿದೆ.

Hand-book of Mathematical Formulae for Intermediate Students.

By V. K. DORASWAMY

PRICE -EIGHT ANNAS

RAMACHANDRA BOOK DEPOT

MYSORE

ರೈಲು ಗಾಡಿಯಲ್ಲಿ ೧೩೦೦ ವಿಷ ಸರ್ಪಗಳು

ಜಪಾನಿನ ಮಿಯಾಜಕಿ ಎಂಬ ಊರಿನಿಂದ ರೈಲಿನಲ್ಲಿ ಅಂಜೊ ಆಯಿಚಿ ಎಂಬಲ್ಲಿಗೆ ರೈಲಿನಲ್ಲಿ ರವಾನೆಯಾಗುತ್ತಿದ್ದ ೧೩೦೦ ವಿಷ ಸರ್ಪಗಳು, ಅವುಗಳನ್ನು ಇಡಲಾಗಿದ್ದ ಪೆಟ್ಟಿಗೆಗಳಿಂದ ಹೊರಬಂದು ರೈಲು ನಡೆಸುವವರಿಗೆ ತುಂಬಾ ಆತಂಕವುಂಟು ಮಾಡಿದವೆಂದು ಹೇಳಲಾಗಿದೆ ಅವುಗಳು ಗಾಡಿಯಿಂದ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳುವುದೇ ಪ್ರಯಾಸವಾಗಿತ್ತು.

ಪಶು ವೈದ್ಯ ಶಾಲೆಯ ಶಂಕುಸ್ಥಾಪನೆ

ಶ್ರೀ ಬೆಂಗಳೂರು ಸುಬ್ಬಣ್ಣನವರ ಮುನಿಸಿಪಲ್ ಪಶು ವೈದ್ಯ ಶಾಲೆಯ ಶಂಕುಸ್ಥಾಪನೆಯನ್ನು ಮುರಾಮತ್ತು ಶಾಖಾ ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರು ಇದೇ ೩ನೇ ತಾರೀಖು ಬುಧವಾರ ಬೆಳಗ್ಗೆ ೯-೩೦ ಗಂಟೆಗೆ ರೇಷ್ಮೆ ಕಾರ್ಖಾನೆಯ ಬಳಿಯಲ್ಲಿರುವ ನಿವೇಶನದಲ್ಲಿ ನೆರವೇರಿಸುತ್ತಾರೆ. ಪೌರಸಭೆಗಳ ಸಚಿವರಾದ ಶ್ರೀ ಪಾಪಮುಡಿ ಸುಬ್ಬರಾಮ ಶೆಟ್ಟರು ಅಧ್ಯಕ್ಷತೆ ವಹಿಸುವರು.

ಗೃಹಕೃತ್ಯದ ನೋಟೀಸು

——:೦:——

ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಹೆಜ್ಜಿಗೆ ಗ್ರಾಮದಲ್ಲಿರುವ ಮಲ್ಲಯ್ಯನ ಮಾದಪ್ಪನ ಮಗ ಮಹದೇವಯ್ಯ ಉರುಫ್ ಪುಟ್ಟಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಡಿಟೋ ಹೆಜ್ಜಿಗೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ ೬೦ ಮತ್ತು ೨೧ಕ್ಕೆ ವಿಸ್ತೀರ್ಣ ಮೂರು ಎಕ್ರೆ ಇಪ್ಪತ್ತಾರು ಗುಂಟೆ ಉಳ್ಳ ತರಿ ಜಮೀನನ್ನು ಹರವೆ ಗ್ರಾಮದಲ್ಲಿರುವ ನನ್ನ ಅತ್ತೆಯಾದ ಪುಟ್ಟನಂಜಪ್ಪನ ಹೆಂಡತಿ ಪುಟ್ಟಮಾದಮ್ಮ ಎಂಬುವರು ಕ್ರಯ ಮಾಡಿಬಿಡಲು ತರದೂದು ಮಾಡುತ್ತಿದ್ದಾರೆ ಸದರಿ ಜಮೀನಿನ ಮೇಲೆ ಸದರಿ ಪುಟ್ಟಮಾದಮ್ಮನಿಗೆ ಯಾವ ವಿಧವಾದ ಹಕ್ಕುಬಾಧ್ಯತೆಯಾಗಲೀ ಸ್ವಾಧೀನವಾಗಲೀ ಇಲ್ಲ ಸದರಿ ಜಮೀನು ನನ್ನ ಸಾಧೀನಾನುಭವ ಮತ್ತು ಹಕ್ಕಿಗೆ ಒಳಪಟ್ಟಿರುತ್ತೆ. ಯಾರಾದರೂ ಮೇಲ್ಕಂಡ ನನ್ನ ಅತ್ತೆಯಿಂದ ಕ್ರಯ ವಗೈರೆ ಪರಾಧೀನ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸಿರುತ್ತೇನೆ.

ಮಹದೇವಯ್ಯ ಉರುಫ್ ಪುಟ್ಟಯ್ಯ
ಹೆಜ್ಜಿಗೆ, ೩೧-೭-೪೯

ಹೆಣ್ಣುಮಗು ಸಿಕ್ಕಿದೆ

ನಂಜನಗೂಡು

ಇಲ್ಲಿಯ ಬಟ್ಟೆ ವರ್ತಕರಾದ ಶ್ರೀ ಜೀರ ಸಿದ್ದಯ್ಯನವರಿಗೆ ೬ ವರ್ಷದ ಹೆಣ್ಣು ಮಗುವು ಸಿಕ್ಕಿದೆ ಹೆಸರು ತುಳಸಿ, ತಂದೆ ವೆಂಕಟರಮಣಯ್ಯ, ತಾಯಿ ಲಕ್ಷ್ಮಮ್ಮ ದೇವಾಂಗ ಮತ, ನಾಲ್ಕು ದಿನಗಳಿಂದಲೂ ಅವರ ವಶದಲ್ಲಿಯೇ ಇದೆ. ವಾರಸುದಾರರು ರುಜುವಾತು ಕೊಟ್ಟು ಕರೆದುಕೊಂಡು ಹೋಗಬಹುದೆಂದು ಅವರು ತಿಳಿಸಿದ್ದಾರೆ.

ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳ ವಿದ್ಯಾರ್ಥಿ ನಿಲಯ

ಮೇಲ್ಕಂಡ ನಿಲಯದ ಸಂಘದ ೪೯ನೇ ಸಾಲಿನ ವಾರ್ಷಿಕ ಸಭೆಯು ಕಳೆದ ೨೮ನೇ ತಾರೀಖು ನಡೆದು, ಶ್ರೀ ಸಿ. ಬಸವರಾಜಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ ಆರ್. ರಾಚಪ್ಪ, ಜ ಶಿದ್ದಲಿಂಗ ಶೆಟ್ಟಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್. ಎಂ. ಭೋಗಶೆಟ್ಟಿಯವರು ಖಜಾಂಚಿಯಾಗಿಯೂ ಚುನಾಯಿತರಾಗಿರುವರು.

ಆಂಧ್ರ ಪ್ರಾಂತಕ್ಕೆ ಕೋಲಾರ ಬೇಕಂತೆ

ಮೈಸೂರು ಸಂಸ್ಥಾನದ ಕೋಲಾರ ಜಿಲ್ಲೆಯೂ, ಮದ್ರಾಸಿನ ಬಳ್ಳಾರಿ ಜಿಲ್ಲೆಯೂ ವಿಶೇಷವಾಗಿ ತೆಲುಗು ಭಾಷೆಯ ಪ್ರದೇಶಗಳಾಗಿರುವುದರಿಂದ ಅವುಗಳು ಆಂಧ್ರ ಪ್ರಾಂತದೊಳಗೆ ಸೇರಬೇಕೆಂದೂ ಈ ವಿಷಯವನ್ನು ಗಡಿ ಸಮಿತಿಗಳು ನಿರ್ಧರಿಸಬಹುದೆಂದೂ ವಿಜಯವಾಡದಲ್ಲಿ ಸೇರಿದ್ದ ಅಖಿಲ ಆಂಧ್ರ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ

ಎಸ್. ಎಚ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮ ಬಾಣ
ಶೀಸೆ ೦-೧೨-೦
ಮಹಾ ಸುಗಂಧ ರಾಜ ತೈಲ:-]
" ಚಂದಿನಾದಿ ತೈಲ:-]
" ಭೃಂಗಾಮಲಕ ತೈಲ:-]
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.
ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಶೀಸೆ ೨-೦-೦
ಪಂಚಾಮೃತ—ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ.
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

M's. Raghavendra Stores,
Bidaram Krishnappa Street, Mysore.
Are appointed as our Sole Distributors for RAMANI TOOTH POWDER in Mysore State.
RAMANI TRADING COMPANY,
Krishnamurthypuram, Mysore

Edited, printed and published by A. R. Nagarajan, at Sadhvi Press, D. Subbiah Road, Mysore

ಫೋನ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಮಂಗಳವಾರ ೨-೮-೧೯೪೪ [ಸಂಚಿಕೆ ೧೦

-ರೈಲ್ವೆಗಳ ಆಡಳಿತವು- ಕಾರ್ಮಿಕರ ಅಧೀನಕ್ಕೆ

ಭಾರತಕ್ಕೆ ಸ್ಟಾಫರ್ಡ್ ಕ್ರಿಪ್ಸ್‌ರವರ ಭೇಟಿ

ಬ್ರಿಟನ್ನಿನ ಹಣ ಕಾಸಿನ ಸಚಿವರಾದ ಸ್ಟಾಫರ್ಡ್ ಕ್ರಿಪ್ಸ್‌ರವರು ವೈದ್ಯ ಚಿಕಿತ್ಸೆಗಾಗಿ ಸ್ವಿಟ್ಜರ್ಲೆಂಡಿಗೆ ಈಗ ಹೋಗಿದ್ದಾರೆ. ಭಾರತದ ಪ್ರಕೃತಿ ಚಿಕಿತ್ಸಾ ಪ್ರವೀಣರಾದ ಡಾ|| ದಿವಾನ್ ಶರ್ಮರವರ ಆಹ್ವಾನದ ಮೇಲೆ ಸರ್ ಕ್ರಿಪ್ಸ್‌ರವರು ಭಾರತಕ್ಕೆ ಸಧ್ಯದಲ್ಲಿಯೇ ಬಂದು ಚಿಕಿತ್ಸೆ ಪಡೆಯಬಹುದೆಂದು ಹೇಳಲಾಗಿದೆ

ಪಾಕೀಸ್ತಾನದಲ್ಲಿ ಮಕ್ಕಳ ಮಾರಾಟ

ಪಾಕೀಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ಇತ್ತೀಚೆಗೆ ಸಣ್ಣ ಮಕ್ಕಳ ಅಪಹಾರವು ಹೆಚ್ಚುತ್ತಿದೆಯೆಂದೂ ಮಕ್ಕಳ ಅಪಹಾರದ ಗುಂಪೊಂದು ಮಕ್ಕಳಿಲ್ಲದವರಿಗೆ ಅಧಿಕ ಬೆಲೆಗೆ ಅವುಗಳನ್ನು ಮಾರುತ್ತಿದೆಯೆಂದೂ ವರದಿಯಾಗಿದೆ

ಬಿಡಿ ಮುತ್ತು

ಮೈಸೂರು ವಾಣಿವಿಲಾಸ ಮೊಹಲ್ಲಾ ಶ್ರೀ ಬಿ ನಾರಾಯಣ ಸ್ವಾಮಿರಾಯರಿಂದ ಪ್ರಕಟವಾಗಿರುವ 'ಬಿಡಿ ಮುತ್ತು' ಎಂಬ ಕನ್ನಡ ಗ್ರಂಥವು ನಮ್ಮ ಹಸ್ತಗತವಾಗಿದೆ. ಪ್ರಕೃತಿ ಸೌಂದರ್ಯ, ಕೋತಿ ಆಡಿಸುವುದು ಮತ್ತು ಸಾಹಸದ ಸವಾರ ಇವೇ ಮುಂತಾದ ಕವನಗಳನ್ನು ಮೃದು ಮಧುರವಾದ ಶೈಲಿಯಲ್ಲಿ ಪ್ರಕಟಿಸಿರುತ್ತಾರೆ ಬೆಲೆ ೪ ಆಣೆ

ವಿಮಾನಗಳಿಗೆ ಢಿಕ್ಕಿ

ನ್ಯೂಯಾರ್ಕಿನ ಬಳಿ ಒಂದು ವ್ಯಾಪಾರಿ ವಿಮಾನಕ್ಕೂ ಮಿಲಿಟರಿ ವಿಮಾನಕ್ಕೂ ಅಂತರಿಕ್ಷದಲ್ಲಿ ಢಿಕ್ಕಿಯಾದುದರ ಪರಿಣಾಮವಾಗಿ ಆರು ಜನರು ಮಡಿದರೆಂದು ವರದಿಯಾಗಿದೆ

ರಸ್ತೆಯ ದುರವಸ್ಥೆ

ರಾಜಧಾನಿಯ ಉತ್ತರ ಭಾಗದಲ್ಲಿ ಪಶ್ಚಿಮ ಶ್ರೀರಂಗಪಟ್ಟಣದ ಉಕ್ಕಡದಿಂದ ಈಚೆ ಉಕ್ಕಡದವರೆಗಿರುವ ಬೊಪ್ಪನಹಳ್ಳಿ ಕೆರೆಯ ರಸ್ತೆಯು ಇತ್ತೀಚೆಗೆ ಬಹಳವಾಗಿ ಕೆಟ್ಟು ಹೋಗಿರುತ್ತದೆ ಕೆಲವು ದಿನಗಳ ಹಿಂದೆ ಮಳೆ ಬಿದ್ದ ಮೇಲಂತೂ ಇದರ ಸ್ಥಿತಿಯು ಅತ್ಯಂತ ಹೀನಾಯವಾಗಿರುತ್ತದೆ ಅಲ್ಲಿ ಸಂಚರಿಸುವ ಗಾಡಿ, ಬೈಸಿಕಲ್ ಮತ್ತು ಇತರ ವಾಹನಗಳಿಗೂ ಕಾಲ್ನಡಗೆಯಲ್ಲಿ ಹೋಗುವವರಿಗೂ ವಿಶೇಷ ಕಷ್ಟವಾಗಿರುತ್ತದೆ ಪೌರಸಭೆಯವರು ಕೂಡಲೇ ಗಮನ ಕೊಟ್ಟು ಇದನ್ನು ಸರಿಪಡಿಸಬೇಕು—ಎಂಬುದಾಗಿ ಕೋರಿ ವಿ ಚಿಕ್ಕಪುಟ್ಟರು ಪತ್ರ ಬರೆದಿರುತ್ತಾರೆ

ಹೊಂಬಾಳೆ ರಂಗಯ್ಯನವರ ವಿದ್ಯಾರ್ಥಿ ನಿಲಯ

ನೂರಡಿ ರಸ್ತೆಯಲ್ಲಿರುವ ಮೇಲ್ಕಂಡ ವಿದ್ಯಾರ್ಥಿ ನಿಲಯದಲ್ಲಿ ಬಡ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಏರ್ಪಡಿಸಲಾಗಿದೆ ಬ್ರಾಹ್ಮಣರಿಂದಲೇ ಅಡಿಗೆ ಮಾಡಿಸಲಾಗುವುದು ಬ್ರಾಹ್ಮಣರು ೪, ಕುಂಚಿಟಿಗರು ೪, ಕುರುಬರು ಮಡಿವಾಳ ಶೆಟ್ಟರು, ಒಕ್ಕಲಿಗರು, ಕುಂಬಾರ ಶೆಟ್ಟರು, ಗಂಗಾ ಮತ, ಕುಹಾರಾಸ್ಯ, ನಯನಕ್ಷತ್ರಿಯ, ಲಿಂಗಾಯತ, ವೈಶ್ಯ, ಭಾವಸಾರ ಕ್ಷತ್ರಿಯ ಮತ್ತು ಮುಸಲ್ಮಾನ ಕೋಮಿನವರಿಗೆ ತಲಾ ೧ ರಂತೆ ಸೀಟುಗಳನ್ನು ಕೊಡಲಾಗುವುದು ಸೇರಬಿಚ್ಛಿಸುವರು ಕೂಡಲೇ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ

ರೈಲ್ವೆಯ ಆಡಳಿತವನ್ನು ಅದರ ಸಂಘಕ್ಕೇ ಬಿಡಬೇಕು

ಮೆಕ್ಸಿಕೋವಿನಲ್ಲಿರುವಂತೆ ಭಾರತದ ರೈಲ್ವೆ ಆಡಳಿತವನ್ನೂ ಆಯಾ ಸಂಬಂಧಪಟ್ಟ ರೈಲ್ವೆ ಕಾರ್ಮಿಕ ಸಂಘಗಳಿಗೇ ವಹಿಸಬೇಕೆಂದು ನಿನ್ನೆ ಮದರಾಸಿನಲ್ಲಿ ನಡೆದ ಎಂ.ಎಸ್.ಎಂ ರೈಲ್ವೆ ಕೆಲಸಗಾರರ ಸಂಘದವರು ನಿರ್ಣಯ ಮಾಡಿದ್ದಾರೆ

ಕೊಲೆ ಮೊಕದ್ದಮೆಯಲ್ಲಿ ಖುಲಾಸೆ

ಶ್ರೀರಂಗಪಟ್ಟಣದ ಕೃಷ್ಣಣ್ಣನ ಗರಡಿಯ ಸಾಧು ಕೃಷ್ಣ ಎಂಬುವನು ೨೮-೧-೪೭ ರಲ್ಲಿ ಅಲ್ಲಿನ ಧರ್ಮಲಿಂಗಾಚಾರಿಯನ್ನು ಚೂರಿಯಿಂದ ಇರಿದು ಕೊಲೆ ಮಾಡಿದನೆಂಬ ಅಪಾದನೆಯ ಮೇಲೆ ಅವನನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು ಮೈಸೂರು ಜಿಲ್ಲಾ ನ್ಯಾಯಾಧೀಶರು ಮೊನ್ನೆ ಅಲ್ಲಿ ತೀರ್ಪಿತ್ತು, ಅಪಾದಿತನು ತಪ್ಪಿತಸ್ಥನಲ್ಲವೆಂದು ಖುಲಾಸೆ ಮಾಡಿರುತ್ತಾರೆ

ಗೋವಧೆಗೆ ಶಿಕ್ಷೆ

ರಾಜಧಾನಿಯ ಕಾರ್ವೆಂಟ್ ರಸ್ತೆಯ ಕಮಾನಿ ದರ್ವಾಜಾ ಬಳಿ ಇರುವ ಅಬ್ದುಲ್ ಗಫ್ಫಾರ್ ಸಾಹೇಬರವರ ಮನೆಯಲ್ಲಿ ಕಾನೂನಿಗೆ ವಿರೋಧವಾಗಿ ಗೋವಧೆ ಮಾಡುತ್ತಿದ್ದುದನ್ನು ಲಷ್ಕರ್ ಪೋಲೀಸರು ಕಳೆದ ೨೭ನೇ ತಾ|| ಪತ್ತೆ ಮಾಡಿ, ಮೊಕದ್ದಮೆ ಹೂಡಿದ್ದರು ಅಪಾದಿತನಿಗೆ ನಗರ ನ್ಯಾಯಾಧೀಶರು ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ

ಮನಿ ಆರ್ಡರು ದುರುಪಯೋಗಕ್ಕಾಗಿ ಶಿಕ್ಷೆ

ಮಳವಳ್ಳಿ ಅಂಚೆ ಕಛೇರಿಯ ಪೋಸ್ಟ್ ಮಾಸ್ಟರ್ ಅಬ್ದುಲ್ ಜಬ್ಬಾರ್ ಖಾನ್ ಎಂಬುವನು ಧನಗೂರಿನ ಚಿಕ್ಕವೀರಪ್ಪನ ಮಗ ದೇವರುರವರಿಗೆ ಬಂದಿದ್ದ ೩೦ ರೂ ಮನಿ ಆರ್ಡರು ಹಣವನ್ನು ದುರುಪಯೋಗ ಪಡಿಸಿದನೆಂಬ ಆಪಾದನೆಯ ಮೇಲೆ ಇಲ್ಲಿನ ಸೆಷನ್ಸ್ ನ್ಯಾಯಾಧೀಶರು ಆತನಿಗೆ ೨ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ

ಪತ್ರಿಕೋದ್ಯೋಗಿ ಸಮ್ಮೇಳನ

ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಇದೇ ೧೫ ನೇ ತಾ||ನೊಳಗಾಗಿ ನಿರ್ಣಯಗಳನ್ನು ಕಳುಹಿಸಬೇಕೆಂದೂ ಆ ತಾ|ನೊಳಗಾಗಿ ಪತ್ರಿಕೋದ್ಯೋಗಿಗಳೆಲ್ಲರೂ ಸದಸ್ಯರಾಗಬಹುದೆಂದು ತಿಳಿಸಲಾಗಿದೆ

ದಸರಾ ಅಧಿವೇಶನ

ಸ್ವಂ. ಸು ಫೋ] ಬೆಂಗಳೂರು ೨

ಪ್ರಜಾ ಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಅಕ್ಟೋಬರ್ ೬ನೇ ತಾ|| ಮೈಸೂರಿನಲ್ಲಿ ಪ್ರಾರಂಭವಾಗುವುದೆಂದು ತಿಳಿದುಬಂದಿದೆ

ಔದ್ಯೋಗಿಕ ಶಾಲೆಗಳ ಸ್ಥಾಪನೆ

ದಾವಣಗೆರೆ, ಚಿಂತಾಮಣಿ, ಮತ್ತು ಹಾಸನಗಳಲ್ಲಿ ಈ ವರ್ಷದಿಂದಲೇ ಔದ್ಯೋಗಿಕ ಶಾಲೆಗಳನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ

ಮಂತ್ರಿಮಂಡಲದ ಪುನರ್ವ್ಯವಸ್ಥೆಯು ಜಗಳದಿಂದ ಆಗಕೂಡದು

ಹಠ ಮತ್ತು ವ್ಯಾಜ್ಯದಿಂದ ಮಂತ್ರಿಮಂಡಲದ ಪುನರ್ವ್ಯವಸ್ಥೆ ಮಾಡುವುದರಿಂದ ದೇಶಕ್ಕೆ ಕ್ಷೇಮವಿಲ್ಲವೆಂದೂ, ಶಾಂತಿ ಸೌಹಾರ್ದದಿಂದ ಈ ಕಾರ್ಯವು ನಡೆಯಬೇಕೆಂದೂ, ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ ಈಗಿರುವ ಅಶಾಂತಿ ಮತ್ತು ಅಸಮಾಧಾನಗಳನ್ನು ತೃಪ್ತಿಕರವಾಗಿ ಪರಿಹರಿಸಲು ಸಾಧ್ಯವೆಂದು ತಮಗೆ ತಿಳಿದರೆ ಮಾತ್ರ ತಾವು ಮಂತ್ರಿಯಾಗಲು ಒಪ್ಪುವುದಾಗಿಯೂ ಹೇಳಿರುತ್ತಾರೆ

ಹೆಂಡತಿಯ ಮೂಗನ್ನು ಕಚ್ಚಿದುದಕ್ಕೆ ಜುಲ್ಮಾನೆ

ಹೆಂಡತಿಯನ್ನು ಹೊಡೆದು ಆಕೆಯ ಮೂಗನ್ನು ಕಚ್ಚಿ ಗಾಯಪಡಿಸಿದ ಪತಿಯೊಬ್ಬನಿಗೆ ಅಲಹಾಬಾದ್ ಹೈ ಕೋರ್ಟಿನವರು ೧೦ ಸಾವಿರ ರೂ. ಜುಲ್ಮಾನೆಯನ್ನು ವಿಧಿಸಿರುತ್ತಾರೆ ಹೆಂಡತಿಯು ಗಂಡನ ಮೇಲೆ ಮೊಕದ್ದಮೆ ಹೂಡಿದ್ದಳು.

ಪರಾಂಜಪೆಯ ಬಿಡುಗಡೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಖುಲಾಸೆಯಾಗಿದ್ದ ಡಾ|| ಪರಾಂಜಪೆಯನ್ನು ಪುನಃ ದಸ್ತಗಿರಿ ಮಾಡಿ ಇಂದೂರಿನಲ್ಲಿ ಬಂಧನದಲ್ಲಿಡಲಾಗಿತ್ತಷ್ಟೆ ಈಗ ಆತನನ್ನು ಬಿಡುಗಡೆ ಮಾಡಿ, ಗ್ವಾಲಿಯರ್ ಉಜ್ಜಯಿನಿ ಮತ್ತು ಇಂದೂರು ಮೊದಲಾದ ೮ ಜಿಲ್ಲೆಗಳಿಗೆ ಅವರು ಪ್ರವೇಶಿಸಕೂಡದೆಂದೂ ಅವರು ತಮ್ಮ ಚಲನವಲನಗಳನ್ನು ಪೋಲೀಸರಿಗೆ ತಿಳಿಸುತ್ತಿರಬೇಕೆಂದೂ ಮಧ್ಯ ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಶಂಕರ್‌ರವರ ಬಿಡುಗಡೆ

ಮೈಸೂರು ೨

ಮೈಸೂರು ಜೈಲಿನಲ್ಲಿ ಕಳೆದ ೬ ತಿಂಗಳಿನಿಂದಲೂ ಬಂಧನದಲ್ಲಿಡಲಾಗಿದ್ದ ಕಮ್ಯೂನಿಸ್ಟ್ ನಾಯಕರಾದ ಶ್ರೀ ಎನ್ ಡಿ. ಶಂಕರ್‌ರವರನ್ನು ಅವರ ಬಂಧನದ ಅವಧಿ ಮುಗಿದ ಪ್ರಯುಕ್ತ ಈ ದಿನ ಬಿಡುಗಡೆ ಮಾಡಲಾಯಿತು

ಸಂಗೀತ ಕಛೇರಿ

ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಇದೇ ೬ ನೇ ತಾ|| ಶನಿವಾರ ಸಂಜೆ ೬ ಗಂಟೆಗೆ ಸಹಕಾರ ಭವನದಲ್ಲಿ ಅಣ್ಣಾಮಲೈ ನಗರದ ಶ್ರೀಮತಿ ವೇದವಲ್ಲಿಯವರ ಸಂಗೀತ ಕಛೇರಿಯು ನಡೆಯುವುದು ಟಿಕೇಟ್ ಮೂಲಕ ಪ್ರವೇಶ

ಪ್ರಾರಂಭೋತ್ಸವ

ಚಾಮರಾಜ ನಗರ ತಾಲ್ಲೂಕು ಸಮಗ್ರ ಸಹಕಾರ ಸಂಘದ ಪ್ರಾರಂಭೋತ್ಸವವು ನಿನ್ನೆ ದಿನ ಪುರಸಭಾಧ್ಯಕ್ಷರಾದ ಶ್ರೀ ಬಿ. ನಾರಾಯಣರಾಯರವರಿಂದ ನೆರವೇರಿಸಲ್ಪಟ್ಟಿತು

ಯೂರೋಪಿಗೆ ಹನುಮಂತಯ್ಯನವರು

ಮುಂದಿನ ತಿಂಗಳು ೬ನೇ ತಾ|| ಸ್ಟಾಕ್‌ಹೋಮಿನಲ್ಲಿ ನಡೆಯಲಿರುವ ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಪ್ರತಿನಿಧಿಯಾಗಿ ಶ್ರೀ ಕೆ ಹನುಮಂತಯ್ಯನವರು ಮುಂದಿನ ತಿಂಗಳು ೨ನೇ ತಾ|| ಅಲ್ಲಿಗೆ ಪ್ರಯಾಣ ಬೆಳೆಸುವರು

ಭಾಷ್ಯಂರವರ ಹೆಸರಿನಲ್ಲಿ ಮರದ ಸೇತುವೆ

ಬೆಂಗಳೂರು ಮತ್ತು ಕೆಂಗೇರಿ ರಸ್ತೆಯಲ್ಲಿರುವ ವೃಷಭಾವತಿ ನದಿಗೆ ಮರದಲ್ಲಿ ಕಟ್ಟಲಾಗಿರುವ ಸೇತುವೆಯ ಪ್ರಾರಂಭೋತ್ಸವವನ್ನು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರು ಮೊನ್ನೆ ದಿನ ನೆರವೇರಿಸಿದರು ಸಾಗುವಾನಿ ನಿಪುಣರಾದ ಡಾ|| ಕಾವೇರಿಶಂಕರವರ ಕೇವಲ ೧೦ ಸಾವಿರ ರೂ ಖರ್ಚಿನಿಂದ ಅದನ್ನು ನಿರ್ಮಿಸಿದ್ದಾರೆ. ಇಂತಹ ಮರದ ಸೇತುವೆಯು ಇದೇ ಪ್ರಥಮವೆಂದೂ, ಸಿಮೆಂಟ್ ಮತ್ತು ಕಲ್ಲಿನ ಸೇತುವೆಗೆ ತಗಲುವ ವೆಚ್ಚದ ಅರ್ಧದಲ್ಲಿ ಇದನ್ನು ಕಟ್ಟಬಹುದೆಂದೂ ಹೇಳಲಾಗಿದೆ ಆದಕ್ಕೆ ಶ್ರೀ ಭಾಷ್ಯಂರವರ ಹೆಸರನ್ನು ಇಡಲಾಗಿದೆ

ಎಲ್ಲ ಕೋಮಿನವರೂ ಅರ್ಚಕರಾಗಲು ಅವಕಾಶ

ತಮಿಳಿನಲ್ಲೇ ಮಂತ್ರ ಹೇಳಬೇಕು

ಮದರಾಸ್ ಪ್ರಾಂತ್ಯದ ದೇವಸ್ಥಾನಗಳ ಸುಧಾರಣಾ ಸಮ್ಮೇಳನವು ಮದರಾಸಿನಲ್ಲಿ ಮೊನ್ನೆ ದಿನ ನಡೆದು, ಎಲ್ಲ ಕೋಮಿನವರೂ ಅರ್ಚಕರಾಗಲು ಅವಕಾಶವಿರಬೇಕೆಂದು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು. ದೇವಸ್ಥಾನಗಳ ನಿಧಿಯ ಪೈಕಿ, ಸ್ವಲ್ಪ ಹಣವನ್ನು ಧಾರ್ಮಿಕ ವಿದ್ಯಾಭ್ಯಾಸಕ್ಕಾಗಿ ಮೀಸಲಾಗಿಡಬೇಕೆಂದೂ, ತಮಿಳಿನಲ್ಲೇ ಪ್ರಾರ್ಥನೆ ಮತ್ತು ಪೂಜೆಗಳು ನಡೆಯಬೇಕೆಂದೂ, ತೇವಾರಂ ಮತ್ತು ತಮಿಳು ಶಾಸ್ತ್ರಗಳಲ್ಲಿ ಶಿಕ್ಷಣ ಹೊಂದಿದವರನ್ನೇ ಅರ್ಚಕರನ್ನಾಗಿ ನೇಮಿಸಬೇಕೆಂದೂ, ದೇವಸ್ಥಾನದಲ್ಲಿರುವ ಖಾಲಿ ಸ್ಥಳಗಳನ್ನು ಶಾಲೆ ಮತ್ತು ಪುಸ್ತಕ ಭಂಡಾರಕ್ಕಾಗಿ ಉಪಯೋಗಿಸಬೇಕೆಂದೂ ಕೋರಲಾಯಿತು.

ಹಿಂದಿಯು ರಾಷ್ಟ್ರಭಾಷೆಯಾಗಬೇಕು

—:o:—

ಭಾರತೀಯ ಕರಣ ಸಪ್ತಾಹದಲ್ಲಿ ಭಾಷಣ

ಮೈಸೂರು ೩

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೈಸೂರು ಶಾಖೆಯ ಆಶ್ರಯದಲ್ಲಿ ಮೊನ್ನೆ ಸಂಜೆ ಟೌನ್‌ಹಾಲಿನಲ್ಲಿ ಭಾರತೀಯ ಕರಣ ಸಪ್ತಾಹದ ಮುಕ್ತಾಯ ಸಮಾರಂಭವು ಶ್ರೀ ಎಂ.ಎನ್. ಜೋಯಿಸರ ಅಧ್ಯಕ್ಷತೆಯಲ್ಲಿ ನಡೆಯಿತು

ಪ್ರಾರ್ಥನೆಯಾದನಂತರ, ಶ್ರೀ ಮಧ್ವರಾಯರು ಸ್ವಾಗತ ಭಾಷಣ ಮಾಡಿದರು ಶ್ರೀ ಶ್ರೀಶಾಸ್ತ್ರಿಯವರು ಭಾಷಣ ಮಾಡಿ. ಪರಿಷತ್ತಿನ ಕೆಲಸ ಕಾರ್ಯಗಳನ್ನು ವಿವರಿಸಿದರು.

ಶ್ರೀ ಜೋಯಿಸರು ಭಾಷಣಮಾಡಿ, ಭಾರತೀಯ ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸಲು ವಿದ್ಯಾರ್ಥಿಗಳು ಶ್ರಮವಹಿಸುತ್ತಿರುವುದು ಶ್ಲಾಘನೀಯವಾದುದೆಂದು ತಿಳಿಸಿದರು. ಇಂದಿನ ವಿದ್ಯಾರ್ಥಿಗಳೇ ಮುಂದಿನ ಪ್ರಜೆಗಳು ಅವರೇ ನಾಡನ್ನು ನಡೆಸಿಕೊಂಡು ಹೋಗುವರು. ಅವರು ತಮ್ಮ ಭವಿಷ್ಯವನ್ನು ಸುಗಮ ಮಾಡಿಕೊಳ್ಳಬೇಕು ಅವರು ಸಂಘಟಿತರಾಗಬೇಕು. ಬಹಳ ಹಿಂದಿನಿಂದಲೂ ಬಳಕೆಯಲ್ಲಿದ್ದು ಹೆಚ್ಚು ಜನರ ಉಪಯೋಗದಲ್ಲಿರುವ ಹಿಂದೀ ಭಾಷೆಯೇ ರಾಷ್ಟ್ರಭಾಷೆಯಾಗಬೇಕು ವಿದ್ಯಾರ್ಥಿಗಳೆಲ್ಲರೂ ಹಿಂದಿಯನ್ನು ಕಲಿಯಬೇಕು - ಎಂದು ಅವರು ಹೇಳಿದರು

—:o:—

ಭಾರತದ ಹೆಸರಿನ ಬಗ್ಗೆ ಜನಾಭಿಪ್ರಾಯ

ದೇಶದ ಹೆಸರು ಭಾರತ ಅಥವ ಇಂಡಿಯಾ, ರಾಷ್ಟ್ರ ಭಾಷೆಯು ಹಿಂದಿ ಅಥವ ಹಿಂದೂಸ್ತಾನಿ, ಭಾರತದ ರಾಜ್ಯಾಂಗವು ಹಿಂದೀ ಅಥವ ಇಂಗ್ಲೀಷ್‌ನಲ್ಲೇ, ಮತ್ತು ರಾಷ್ಟ್ರ ಗೀತೆಯು ಜನಗಣಮನ ಅಥವ ವಂದೇ ಮಾತರಂ ಇರಬೇಕೇ ಎಂಬುದನ್ನು ನಿರ್ಧರಿಸಲು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನವರು ಜನಾಭಿಪ್ರಾಯ ಪಡೆಯಲು ವ್ಯವಸ್ಥೆ ಮಾಡಿದ್ದಾರೆ ಈಗಾಗಲೇ ಮದರಾಸ್, ಬೊಂಬಾಯಿ, ಬಂಗಾಳ ಮತ್ತು ಬಿಹಾರುಗಳಿಂದ ೩॥ ಲಕ್ಷ ಜನರು ಉತ್ತರವನ್ನು ಕಳುಹಿಸಿರುವರೆಂದು ಹೇಳಲಾಗಿದೆ

ರಾಜಕಮಲ್,

ಮೈಸೂರು

28-7-49 ರಿಂದ

ಪ್ರತಿ ದಿನ ೩ ಆಟಗಳು

ನದಿಯಾ ಕೆ ಪಾರ್

ಕಾಮಿನಿ ಕೌಶಲ್, ದಿಲೀಪ್ ಕುಮಾರ್ ನಟಿಸಿರುವ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸರ್ ಮಿರ್ಜಾರವರಿಂದ ಪಾಕೀಸ್ತಾನ್ ಪ್ರಧಾನಿಯ ಖಂಡನೆ

ಭಾರತದಲ್ಲಿರುವ ೩॥ ಕೋಟಿ ಮುಸ್ಲಿಮರು ತಮ್ಮಂತೆ ಈದ್ ಹಬ್ಬವನ್ನು ನಿರಾತಂಕವಾಗಿ ಆಚರಿಸಲಿಲ್ಲವೆಂದು ಪಾಕೀಸ್ತಾನದ ಪ್ರಧಾನಿ ಲಿಯಾಖತ್ ಆಲಿ ಖಾನರವರು ಇತ್ತ ಹೇಳಿಕೆಯನ್ನು ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲ್‌ರವರು ಖಂಡಿಸಿ, ಪಾಕಿಸ್ತಾನದಲ್ಲಿನ ಮುಸ್ಲಿಮರು ಎಷ್ಟು ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವರೋ ಅಷ್ಟೇ ಭಾರತದಲ್ಲಿರುವ ಮುಸ್ಲಿಮರೂ ಸಹ ಅನುಭವಿಸುತ್ತಿರುವರೆಂದೂ, ಹಿಂದೂಗಳಿಗಿರುವಷ್ಟೇ ಸ್ವಾತಂತ್ರ್ಯವು ಅವರಿಗೂ ಇದೆಯೆಂದೂ, ಇಂತಹ ಅನವಶ್ಯಕವಾದ ಮತ್ತು ಅಯೋಗ್ಯವಾದ ಹೇಳಿಕೆಯನ್ನು ಕೊಟ್ಟು, ಉದ್ರೇಕಗಳಿಗೆ ಆಸ್ಪದ ಕೊಡುವುದು ವಿಷಾದಕರವೆಂದೂ ತಿಳಿಸಿರುತ್ತಾರೆ.

ಅಂಗಡಿ ಮಾಲೀಕರುಗಳೂ ಭಾನುವಾರ ಮುಚ್ಚಬೇಕೆ?

ಷಾಪ್ ಅಸಿಸ್ಟೆಂಟ್ ಕಾನೂನಿನ ಪ್ರಕಾರ ಭಾನುವಾರ ಅಂಗಡಿಗಳನ್ನು ಮುಚ್ಚಬೇಕೆಂದು ಅಧಿಕಾರಿಗಳು ಅಂಗಡಿಯವರಿಗೆ ಇತ್ತ ಸೂಚನೆಯ ವಿಚಾರದಲ್ಲಿ ಅಂಗಡಿ ಮಾಲೀಕರೊಬ್ಬರು ನಮಗೆ ಪತ್ರವೊಂದನ್ನು ಬರೆದು, ಈ ರೀತಿ ತಿಳಿಸಿರುತ್ತಾರೆ.-ಅಂಗಡಿಯಲ್ಲಿ ಕೆಲಸ ಮಾಡುವರಿಗೆ ಮಾತ್ರ ರಜಾ ಕೊಟ್ಟು, ಮಾಲೀಕರೇ ಆ ದಿನ ಸ್ವತಃ ವ್ಯಾಪಾರ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಎಷ್ಟೋ ಸಣ್ಣ ವ್ಯಾಪಾರಿಗಳು ಕೆಲಸಗಾರರನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲದೆ, ತಾವೇ ವ್ಯಾಪಾರ ನಡೆಸುತ್ತಿದ್ದಾರೆ ಒಂದು ದಿನ ಅಂಗಡಿಯನ್ನು ಮುಚ್ಚುವುದರಿಂದ ಸಣ್ಣಪುಟ್ಟ ಬಡ ವರ್ತಕರುಗಳಿಗೆ ತುಂಬಾ ನಷ್ಟವುಂಟಾಗುವುದು. ಆದುದರಿಂದ ಸರ್ಕಾರದವರು ಈ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಕೊಡಬೇಕು

ಹೀರ್ ಬೀಡಿ ಕಾರ್ಖಾನೆ ಮಾಲೀಕರ ವರ್ತನೆ

ರಾಜಧಾನಿಯ ಹೀರ್ ಬೀಡಿ ಕಾರ್ಖಾನೆಯ ಮಾಲೀಕರು ರಂಜಾನ್ ಹಬ್ಬದ ಪ್ರಯುಕ್ತ ತಮ್ಮ ಕೆಲಸಗಾರರಿಗೆ ರಜಾ ಕೊಟ್ಟಿದ್ದರೂ ಆ ದಿನದ ವೇತನವನ್ನು ಕೇಳಲು ಹೋದ ೫ ಜನ ಕೂಲಿಗಾರರನ್ನು ಅಸಭ್ಯ ರೀತಿಯಲ್ಲಿ ನೋಡಿ ಅವರನ್ನು ಕೆಲಸದಿಂದ ವಜಾ ಮಾಡಿರುತ್ತಾರೆಂದೂ ಇಂತಹ ಅನ್ಯಾಯವನ್ನು ಸಂಬಂಧ ಪಟ್ಟ ಅಧಿಕಾರಿಗಳು ಸರಿಪಡಿಸಬೇಕೆಂದೂ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ

ಗಾಂಧೀ ಕೊಲೆ ಅಪಾದಿತರಲ್ಲಿ ಇನ್ನೊಬ್ಬನ ದಸ್ತಗಿರಿ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪಾದಿತನಾಗಿದ್ದು ಕಳೆದ ೧॥ ವರ್ಷದಿಂದ ತಲೆ ಮರೆಸಿಕೊಂಡಿದ್ದ ಗಂಗಾಧರ ಸಖಾರಾಂ ದಂಡವಾಟೆ ಎಂಬುವನನ್ನು ಗ್ವಾಲಿಯರ್‌ನಲ್ಲಿ ಪೊಲೀಸರು ನಿನ್ನೆ ದಿನ ದಸ್ತಗಿರಿ ಮಾಡಿರುತ್ತಾರೆ. ಉಳಿದ ಇಬ್ಬರು ಅಪಾದಿತರಾದ ಗಂಗಾಧರ ಜಾದವ್ ಮತ್ತು ಸೂರ್ಯದೇವ ಶರ್ಮರವರುಗಳು ಇನ್ನೂ ಪತ್ತೆ ಆಗಿಲ್ಲ.

ಬಿಹಾರಿನಲ್ಲಿ ನಾಗರಿಕ ಹಕ್ಕಿಗಾಗಿ ಸತ್ಯಾಗ್ರಹವೇ?

ಬಿಹಾರಿನಪ್ರಜೆಗಳಿಗೆ ಪೌರಸ್ವಾತಂತ್ರ್ಯವನ್ನು ದೊರಕಿಸಲು ಅಲ್ಲಿನ ಸಮತಾವಾದಿ ಪಕ್ಷದವರು ಸತ್ಯಾಗ್ರಹ ಹೂಡಬಹುದೆಂದು ಶ್ರೀ ಜೈ ಪ್ರಕಾಶ್ ನಾರಾಯಣ್‌ರವರು ತಿಳಿಸಿರುತ್ತಾರೆ.

ರೈತರಿಗೆ ಹೆಚ್ಚು ಬೋನಸ್ ಕೊಡಬೇಕು

ಸರ್ಕಾರದವರು ಬಡ ಜನರ ಪ್ರೀತಿಗೆ ಪಾತ್ರರಾಗಬೇಕಾದರೆ ಹೆಚ್ಚಿನ ಉತ್ಪತ್ತಿ ಬರುವ ಜಮೀನುದಾರರು ಮತ್ತು ನಗರವಾಸಿಗಳಿಗೆ ಕಡಿಮೆ ಬೆಲೆಯನ್ನು ಕೊಟ್ಟು ಸ್ವಂತವಾಗಿ ಬೇಸಾಯ ಮಾಡುವ ರೈತನಿಗೆ ಪಲ್ಲಾ ಒಂದಕ್ಕೆ ೫ ರೂ ನಂತೆ ಬೋನಸ್ ಕೊಡಬೇಕೆಂದೂ, ಇದರಿಂದ ರೈತನು ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುವುದೆಂದೂ, ಹೆಚ್ಚು ಅನುಭವ ಪಡೆದಿರುವ ಜಿಲ್ಲಾ ಬೋರ್ಡು ಮತ್ತು ಇತರ ಸ್ಥಳೀಯ ಸಂಸ್ಥೆಗಳನ್ನು ಬಿಟ್ಟು, ನೂತನ ಗ್ರಾಮಾಭಿವೃದ್ಧಿ ಸಮಿತಿಗಳನ್ನು ರಚಿಸಿ, ಅನುಭವವಿಲ್ಲದವರನ್ನು ಅದಕ್ಕೆ ನೇಮಿಸಿರುವುದು ಆಕ್ಷೇಪಣೀಯವಾದುದು, ಎಂದು ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ ಸಿ ನರಸಿಂಹಯ್ಯನವರು ಒಂದು ಪತ್ರದಲ್ಲಿ ಬರೆದಿರುತ್ತಾರೆ

ಚಾಮರಾಜನಗರದ ಏಜನ್ಸಿ

ಶ್ರೀ ಕೆ. ಎಸ್. ಸೀತಾರಾಂರವರನ್ನು ಚಾಮರಾಜನಗರದಲ್ಲಿ ನಮ್ಮ ಏಜೆಂಟರನ್ನಾಗಿ ನೇಮಿಸಿದ್ದೇವೆ.

ವ್ಯವಸ್ಥಾಪಕ,
"ಸಾಧ್ವಿ"

ಕೃತಜ್ಞತೆ

ನನ್ನ ಇತರ ಕಾರ್ಯ ಗೌರವಗಳ ನಿಮಿತ್ತ ಸಾಧ್ವಿ ಪತ್ರಿಕೆ ಏಜೆನ್ಸಿಯನ್ನು ತಾ॥ ೧-೭-೪೯ರ ಲಾಗಾಯ್ತು ಬಿಟ್ಟಿದ್ದೇನೆ. ಈ ವರೆವಿಗೆ ಸಹಕಾರವಿತ್ತ ಚಂದಾದಾರರಿಗೂ ಇತರರಿಗೂ ಕೃತಜ್ಞನಾಗಿದ್ದೇನೆ.

ಸಿ. ಗೋಪಾಲರಾವ್,
ಚಾಮರಾಜನಗರ.

M's. Raghavendra Stores,

Bidaram Krishnappa Street, Mysore.
Are appointed as our Sole Distributors for RAMANI TOOTH POWDER in Mysore State.

RAMANI TRADING COMPANY,
Krishnamurthypuram. Mysore

Edited, printed and published by A. R. Nagarajan, at Sadhvi Press, D. Subbiah Road, Mysore.

ಬಟ್ಟೆ ಹತ್ತೋಟಿ ಹೋಗುವುದಿಲ್ಲ

ಬಟ್ಟೆಯ ಮೇಲೆ ಹಾಕಲಾಗಿರುವ ಹತೋಟಿಯನ್ನು ತೆಗೆದುಹಾಕುವುದಿಲ್ಲ ದು ಭಾರತ ಸರ್ಕಾರದ ಪ್ರಕಟಣೆಯದು ತಿಳಿಸಿರುತ್ತದೆ

ಮೆಡಿಟರೇನಿಯನ್ನಿನಲ್ಲಿ ಅಮೆರಿಕದ ನೌಕಾ ನೆಲೆಗ[ಳು]

ಮೆಡಿಟರೇನಿಯನ್ ಸಮುದ್ರ ಕ್ಷೇತ್ರದಲ್ಲಿ ಅಮೆರಿಕವು ನೌಕಾ ನೆಲೆಗಳನ್ನು ನಿ[ರ್ಮಿ]ಸುತ್ತಿದೆಯೆಂದೂ, ಕಪ್ಪು ಸಮುದ್ರ ಮ[ತ್ತು ಏ]ಜಿಯನ್ ಮುಂತಾದ ಬಂದರುಗಳನ್ನು [ಆಧು]ನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸಿ, ಮಿಲಿಟರಿ ವಿಮಾನಗಳನ್ನು ಸ್ಥಾಪಿಸುತ್ತಿದೆಯೆಂದೂ ವರದಿಯಾಗಿದೆ ತು[ರ್ಕಿ]ಯಲ್ಲಿ ಆಧುನಿಕ ಮಿಲಿಟರಿ ಕೇಂದ್ರ[ವ]ನ್ನು ಸ್ಥಾಪಿಸಲು ಅಮೆರಿಕ ಸರ್ಕಾರ[ವು] ಆ ದೇಶದೊಡನೆ ಮಾತು ಕತೆ ನಡೆಸ[ು]ರುವರೆಂದೂ ಹೇಳಲಾಗಿದೆ.

ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಬೆಲೆ 2—0—0

ಗೂರಲ್ಲು, ಉಬ್ಬಸ, ಪರಿಣಾಮಕಾ[ರಿ] ಮತ್ತು Tonsil ಗೆ (ಗಲಾಯಿಕ). ತರಿಯಾದ ಔಷಧಿ ದೊರೆಯುತ್ತೆ. ಅನೇ[ಕ] ದೊಡ್ಡ ಮನುಷ್ಯರು ಸರ್ಟಿಫಿಕೇಟ್‌ಗಳು ಬಂಗಾರದ ಮೆಡಲುಗಳನ್ನು ಕೊಟ್ಟಿದ[್ದಾರೆ]

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

ಎಸ್. ಎಸ್. ಪಂಡಿತ್ ಅಂ[ಡ್] ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾ[ಮ್]

ನೋವು, ಕೀಲು ನೋವು ಮುಂತಾ[ದ] ಸಕಲ ಬಾಧೆಗಳಿಗೂ ರಾಮ ಬಾ[ಣ]

ಶೀಸೆ ೦-೧೨

ಮಹಾ ಸುಗಂಧ ರಾಜ ತೈಲ:-]
,, ಚಂದನಾದಿ ತೈಲ:-]
,, ಭೃಂಗಾಮಲಕ ತೈಲ:-]

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂ[ಜನ] ತೈಲಗಳು.

ಮಹಾಕೇತಕೀ ತೈಲ—ತಲೆ ಬ[ಾಚಿ] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [ಉಪ]ಯೋಗಿಸ ಬಹುದಾದ ಉತ್ತಮ ವ[ಸ್ತು]

ಬ್ರೇನ್ ಟಾನಿಕ್ ಶೀಸೆ ೨-೦

ಪಂಚಾಮೃತ—ಮಲೇರಿಯಾ [ಜ್ವರ]ಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ

೯೦. ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂ[ರು]

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೩-೮-೧೯೪೯ [ಸಂಚಿಕೆ ೧೧

ಮಂತ್ರಿ ಮಂಡಲದಲ್ಲಿ ಕಾಂಗ್ರೆಸ್ಸಿನವರು ಮಾತ್ರ

…ಶದಲ್ಲಿ ಪಶುವೈದ್ಯ ಶಾಲೆಗಳು ಹೆಚ್ಚಬೇಕು

…ಕುಸ್ಥಾಪನಾ ಮಹೋತ್ಸವದಲ್ಲಿ …ರುದಾಮತ್ತು ಸಚಿವರ ಭಾಷಣ

ಮೈಸೂರು ೩

ರಾಜಧಾನಿಯ ಮಾಧ್ವಾಚಾರ್ ರಸ್ತೆ …ಬಳಿ ಪೌರಸಭೆಯವರಿಂದ ನಿರ್ಮಿತ …ಗಲಿರುವ ಧರ್ಮ ಪ್ರವರ್ತ ಬೆಂಗಳೂ… ಸುಬ್ಬಣ್ಣನವರ ಪಶುವೈದ್ಯ ಶಾಲೆಯ …ಕುಸ್ಥಾಪನೆಯನ್ನು ಈ ದಿನ ಬೆಳಿಗ್ಗೆ …ರಾಮತ್ತು ಸಚಿವರಾದ ಶ್ರೀ ಹೆಚ್. …ದ್ದಯ್ಯನವರು ನೆರವೇರಿಸಿದರು ಪೌ… ಸಭೆಗಳ ಸಚಿವ ಶ್ರೀ ಪಾಮುಡಿ ಸುಬ್ಬ…ಮ ಶೆಟ್ಟಿಯವರು ಅಧ್ಯಕ್ಷತೆ ವಹಿ…ದ್ದರು

ಶ್ರೀಮತಿ ರತ್ನಮ್ಮನವರಿಂದ ಪ್ರಾರ್ಥನೆ …ದನಂತರ, ಪುರಸಭಾಧ್ಯಕ್ಷರಾದ ಶ್ರೀ …ವೆಂಕಟರಮಣಯ್ಯನವರು ಸ್ವಾಗತ …ಷಣ ಮಾಡಿ, ಈ ಪಶು ವೈದ್ಯ ಶಾಲೆ…ಯ ಕಟ್ಟಡಕ್ಕಾಗಿ ಸಂತೇಪೇಟೆ ವರ್ತಕರಾ…ದ ಶ್ರೀ ಬೆಂಗಳೂರು ಸುಬ್ಬಣ್ಣನವರು ೨೫ ಸಾವಿರ ರೂ ಉದಾರ ಸಹಾಯ ಮಾಡಿ…ದುದಕ್ಕಾಗಿ ಅವರಿಗೆ ವಂದನೆಯನ್ನು ಅ…ರ್ಪಿಸಿದರು ಮೈಸೂರು ನಗರದಲ್ಲಿ ೨೦ …ಸಾವಿರ ದನಗಳು ಮತ್ತು ತಾಲ್ಲೂಕಿನಲ್ಲಿ ೬೦ ಸಾವಿರ ದನಗಳಿದ್ದು, ಮತ್ತೊಂದು …ವೈದ್ಯ ಶಾಲೆಯ ಅವಶ್ಯಕತೆ ಬಹಳ ದಿನಗಳಿಂದ ಇದ್ದುದರಿಂದ ಈ ಕಾರ್ಯವನ್ನು ಕೈಗೊಳ್ಳಲಾಯಿತೆಂದು ಅಧ್ಯಕ್ಷರು ತಿಳಿಸಿದರು

ಸಚಿವ ಶ್ರೀ ಸಿದ್ದಯ್ಯನವರು ಭಾಷಣ ಮಾಡಿ, ಸಂಸ್ಥಾನದಲ್ಲಿ ಜಾನುವಾರುಗಳು ಅಭಿವೃದ್ಧಿ ಹೊಂದಬೇಕಾದರೆ ಇನ್ನೂ ಹೆಚ್ಚಾಗಿ ಪಶು ವೈದ್ಯ ಶಾಲೆಗಳನ್ನು ಸ್ಥಾಪಿಸಬೇಕಾದ ಅಗತ್ಯವಿದೆಯೆಂದು ತಿಳಿಸಿದರು ೧೯೩೮ ರಲ್ಲಿ ರಾಯಲ್ ಕಮೀಷನ್ನಿನವರು ನಡೆಸಿದ ಪರಿಶೀಲನೆ ಪ್ರಕಾರ, ಇಡೀ ಭಾರತದಲ್ಲಿ ೨೫ ಸಾವಿರ ದನಕರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಸಲಹೆ ಮಾಡಿದ್ದರು ಅದನ್ನನುಸರಿಸಿ ಸಂಸ್ಥಾನದಲ್ಲಿ ಕಳೆದ ೨೦ ವರ್ಷದಿಂದ ಇಲ್ಲಿಯವರೆಗೆ ೧೮೨ ಪಶು ವೈದ್ಯಶಾಲೆಗಳನ್ನು ಸ್ಥಾಪಿಸಲಾಗಿದೆ ಮೇಲ್ಕಂಡ ಸಂಖ್ಯೆಗೆ ಅನುಗುಣವಾಗಿ ಇನ್ನೂ ೨೧ ಆಸ್ಪತ್ರೆಗಳನ್ನು ತೆರೆಯಬೇಕಾಗಿರುವುದರಿಂದ, ಈ ವರ್ಷ ಸರ್ಕಾರದವರು ಅವುಗಳಿಗಾಗಿ ಹಣ ಒದಗಿಸಿದ್ದಾರೆ ಈ ಕಾರ್ಯವು ನೆರವೇರುವಂತೆ ಧನಿಕರು ಮುಂದೆ ಬಂದು ಕಟ್ಟಡಗಳಿಗೆ ಹಣ ಸಹಾಯ ಮಾಡಬೇಕು ಮದರಾಸ್ ಪ್ರಾಂತ್ಯದಲ್ಲಿ ೪೭ ಸಾವಿರ ದನಕರುಗಳಿಗೆ ಒಂದು ಆಸ್ಪತ್ರೆ, ಬೊಂಬಾಯಿನಲ್ಲಿ ೪೯ ಸಾವಿರಕ್ಕೆ ಒಂದು, ಸಂಯುಕ್ತ ಪ್ರಾಂತ್ಯದಲ್ಲಿ ೫೦ ಸಾವಿರಕ್ಕೆ ಒಂದು ಆಸ್ಪತ್ರೆಗಳಿದ್ದು, ಮೈಸೂರು ಸಂಸ್ಥಾನದಲ್ಲಿ ೨೭ ಸಾವಿರಕ್ಕೆ ಒಂದು ಪಶು ವೈದ್ಯಶಾಲೆಯಿರುವುದು ಪ್ರಶಂಸನೀಯವಾದುದು ದೂರ ಪ್ರಾಚ್ಯದಲ್ಲೇ ಮೈಸೂರು ನಗರದ ಪಶು ವೈದ್ಯಶಾಲೆಯು ಅತ್ಯುತ್ತಮವಾದುದೆಂದು ವಿದೇಶೀ ಪ್ರವೀಣರು ಅಭಿಪ್ರಾಯಪಟ್ಟಿದ್ದಾರೆ ಆದರೂ ಸಂಸ್ಥಾನದಲ್ಲಿರುವ ೬೩ ಲಕ್ಷ ಜಾನುವಾರುಗಳಿಗೆ ಈಗಿರುವ ಪಶು ವೈದ್ಯಶಾಲೆಗಳು ಸಾಲವು ಮಕ್ಕಳ ಹಿತದೃಷ್ಟಿಯಿಂದ ಹಾಲಿನ ಉತ್ಪತ್ತಿಯು ದೇಶದಲ್ಲಿ ಹೆಚ್ಚಬೇಕು ಅದಕ್ಕಾಗಿ ಜಾನುವಾರುಗಳ ರಕ್ಷಣೆ ಕಡೆ ಹೆಚ್ಚು ಗಮನ ಕೊಡಬೇಕು ಸಂಸ್ಥಾನದಲ್ಲಿ ಸಾರ್ವಜನಿಕ ಕಾರ್ಯಗಳಿಗಾಗಿ ಧನಿಕರು ಉದಾರ ಸಹಾಯ ಮಾಡುತ್ತಿರುವುದು ಪ್ರಶಂಸನೀಯವಾದುದು ಎಂದು ಸಚಿವರು ತಿಳಿಸಿದರು

ಮೋಹನ್ ದಾಸ್ ತುಳಸೀ ದಾಸ್ ಆಸ್ಪತ್ರೆಯಲ್ಲಿ ಇಲ್ಲಿಯವರೆಗೆ ಜನಿಸಿದ ೩೩ ಮಕ್ಕಳ ತಾಯಂದಿರಿಗೆ ಸಚಿವ ಪಾಮಿಡಿಯವರು ಬಹುಮಾನಗಳನ್ನು ಹಂಚಿದರು

ಸಂಸ್ಥಾನಗಳ ಮಾದರಿ ರಾಜ್ಯಾಂಗ

ಮುಖ್ಯ ಮಂತ್ರಿಗಳ ಮಾತುಕತೆ

—— o ——

ಬೆಂಗಳೂರು ೩

ದೆಹಲಿಯಲ್ಲಿರುವ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈಗ ತಯಾರಿಸಲ್ಪಟ್ಟಿರುವ ಸಂಸ್ಥಾನಗಳ ಮಾದರಿ ರಾಜ್ಯಾಂಗದ ಬಗ್ಗೆ ಅಲ್ಲಿನ ನಾಯಕರೊಡನೆ ಚರ್ಚಿಸಿ, ಕೆಲವು ಬದಲಾವಣೆಗಳನ್ನು ಸೂಚಿಸಿದರೆಂದು, ತಿಳಿದುಬಂದಿದೆ ಸಂಸ್ಥಾನಗಳ ಮಹಾರಾಜರುಗಳನ್ನು ರಾಜರು ಅಥವ ರಾಜಪ್ರಮುಖರೆಂದು ಕರೆಯಬೇಕೆಂದೂ, ಸಂಸ್ಥಾನಗಳ ರಾಜ್ಯಾಂಗವನ್ನು ಭಾರತ ರಾಜ್ಯಾಂಗದಲ್ಲಿ ಸಮ್ಮಿಳನ ಮಾಡುವಾಗ ಆಯಾ ಸಂಸ್ಥಾನಗಳ ರಾಜ್ಯಾಂಗ ಸಭೆಯ ಅನುಮತಿಯನ್ನು ಪಡೆಯಬೇಕು—ಇವೇ ಮುಂತಾದ ತಿದ್ದುಪಡಿಗಳನ್ನು ಒಪ್ಪಲಾಯಿತೆಂದೂ ಹೇಳಲಾಗಿದೆ ಸಂಸ್ಥಾನಗಳ ಶಾಖಾ ಸಲಹೆಗಾರರಾದ ಶ್ರೀ ವಿ ಪಿ ಮೆನನ್, ಹಣಕಾಸಿನ ಸಚಿವ ಡಾ|| ಮಥಾಯ್, ಆಹಾರ ಸಚಿವ ಶ್ರೀ ಜಯರಾಂದಾಸ್ ದೌಲತ್ ರಾಂ, ವಾರ್ತಾ ಸಚಿವ ಶ್ರೀ ಆರ್ ಆರ್ ದಿವಾಕರ್ ಮುಂತಾದವರೊಡನೆಯೂ ಶ್ರೀ ರೆಡ್ಡಿಯವರು ಮಾತುಕತೆ ನಡೆಸಿದರೆಂದೂ ತಿಳಿದುಬಂದಿದೆ

ಹಿಂದಿಯೇ ಅಧಿಕಾರೀ ಭಾಷೆ

ಭಾರತದ ಅಧಿಕಾರೀ ಭಾಷೆಯು ಹಿಂದಿಯೇ ಇರಬೇಕೆಂದು ಒಂದು ತಿದ್ದುಪಡಿ ಸೂಚನೆಯನ್ನು ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಭಾರತ ಸರ್ಕಾರದ ನ್ಯಾಯಾಂಗ ಸಚಿವ ಡಾ|| ಅಂಬೇಡ್ಕರ್‌ರವರು ಮಂಡಿಸಿದ್ದಾರೆ

ಮಂತ್ರಿ ಮಂಡಲದ ಪುನರ್ರಚನೆ

ಸ್ವಂ ಸು ಫೋನ್] ಬೆಂಗಳೂರು ೩

ಮೈಸೂರು ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡುವ ವಿಚಾರವನ್ನು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ದೆಹಲಿಯಲ್ಲಿ ಸಂಸ್ಥಾನಗಳ ಶಾಖೆ ಮತ್ತು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಗಳೊಡನೆ ಮಾತುಕತೆ ನಡೆಸಿದರೆಂದೂ, ಇದರ ಫಲವಾಗಿ ಈಗಿನ ಮಂತ್ರಿಮಂಡಲದ ಪುನರ್ವ್ಯವಸ್ಥೆಯಾಗಿ ಕಾಂಗ್ರೆಸ್ಸಿನವರು ಮಾತ್ರ ಅದರಲ್ಲಿ ಇರುವರೆಂದೂ ತಿಳಿದುಬಂದಿದೆ

ಪ್ರಪಂಚವನ್ನೇ ನಾಶ ಮಾಡಬಲ್ಲ ರಸಾಯನಿಕ ಅಸ್ತ್ರ

ಇಡೀ ಮನುಷ್ಯ, ಪ್ರಾಣಿ ಮತ್ತು ಸಸ್ಯಗಳನ್ನೇ ನಾಶ ಮಾಡಬಲ್ಲ ಅತಿ ಭಯಂಕರವಾದ ರಸಾಯನಿಕ ಯುದ್ಧಾಸ್ತ್ರವೊಂದನ್ನು ತಯಾರಿಸಲಾಗಿದೆಯೆಂದು ಬ್ರಿಟನ್ನಿನ ಅಣು ಬಾಂಬಿನ ಪ್ರವೀಣರಾದ ಪ್ರೊ|| ಒಲಿಫಾಂಟ್‌ರವರು ತಿಳಿಸಿರುತ್ತಾರೆ ಒಂದು ಬಗೆಯ ಸತ್ವಗಳನ್ನು ಕೂಡಿದ ವಾಯುವನ್ನು ಆಕಾಶದಲ್ಲಿ ಹರಡುವುದರಿಂದ ಪ್ರಪಂಚವೇ ಅದರಿಂದ ನಾಶವಾಗುವುದೆಂದೂ ಹೇಳಲಾಗಿದೆ

ವಿದೇಶ ಪ್ರವಾಸ

ಬೊಂಬಾಯಿನ ಸೇಠ್ ವಾಲ್‌ಚಂದ್ ಹೀರಾ ಚಂದ್‌ರವರ ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಯಲ್ಲಿ ಇಂಜನಿಯರಾಗಿರುವ, ಮೈಸೂರಿನ ಅಡ್ವೋಕೇಟರಾದ ಶ್ರೀ ಕೆ ಪುಟ್ಟರಾಜುರ ಪುತ್ರರಾದ ಶ್ರೀ|| ಕೆ ಸಿ ಅಯ್ಯರವರು ಹೆಚ್ಚು ಶಿಕ್ಷಣ ಪಡೆಯುವ ಸಲುವಾಗಿ ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಪ್ರವಾಸ ಕೈಗೊಳ್ಳುವ ನಿಮಿತ್ತ ಇದೇ ೬ನೇ ತಾರೀಕು ವಿಮಾನದಲ್ಲಿ ಬೊಂಬಾಯಿನಿಂದ ಪ್ರಯಾಣ ಬೆಳೆಸುವರು

ಕನಕಾಭಿಷೇಕ ಮಹೋತ್ಸವ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಮುಳಂದೂರು ಗೋಪಾಲ ಶಾಸ್ತ್ರಿಗಳವರು ತಮ್ಮ ೧೦೦ ವರ್ಷ ವಯಸ್ಸಿನ ವೃದ್ಧ ಮಾತೆಯವರ ಕನಕಾಭಿಷೇಕ ಮಹೋತ್ಸವವನ್ನು ಈ ದಿನ ನೆರವೇರಿಸುವರು

ಇಡ್ಲಿ, ದೋಸೆಗಳ ಮೇಲಿನ ನಿಷೇಧ ರದ್ದಿಲ್ಲ

ಬೆಂಗಳೂರು ೩

ಸಂಸ್ಥಾನದಲ್ಲಿ ಇಡ್ಲಿ ಮತ್ತು ದೋಸೆಗಳನ್ನು ರೇಷನ್ ಅಥವ ಇನ್ನಾವ ಪದಾರ್ಥಗಳಿಂದಲೂ ಹೋಟಲಿನವರು ತಯಾರಿಸಕೂಡದೆಂದು ಸರ್ಕಾರದವರು ಹಾಕಿರುವ ನಿಷೇಧಾಜ್ಞೆಯನ್ನು ರದ್ದು ಮಾಡಬೇಕೆಂದು ಹಲವಾರು ಅರಿಕೆಗಳು ಬಂದ ಮೇಲೆ, ಅದನ್ನು ಪರಿಶೀಲಿಸಿ, ಈಗಿನ ಆಹಾರ ಅಭಾವ ಪರಿಸ್ಥಿತಿಯಲ್ಲಿ ಅದನ್ನು ರದ್ದುಮಾಡುವುದು ಸೂಕ್ತವಲ್ಲವೆಂದು ಸರ್ಕಾರದವರು ನಿರ್ಧಾರಕ್ಕೆ ಬಂದಿದ್ದಾರೆ. ಅದಕಾರಣ ಈ ಕಾರ್ಯದಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ

ಶ್ರೀ ಕೆ. ಸಿ. ರೆಡ್ಡಿಯವರು

ಪ್ರಧಾನ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ದೆಹಲಿಯಿಂದ ನಾಳೆ ಬೆಂಗಳೂರಿಗೆ ಹಿಂದಿರುಗುವರು

ತಾಲ್ಲೂಕಿನ ವಿಭಾಗದ ವಿರೋಧ ಸತ್ಯಾಗ್ರಹ

ಬರೋಡಾ ಸಂಸ್ಥಾನವು ಬೊಂಬಾಯಿನಲ್ಲಿ ಐಕ್ಯವಾದುದರಿಂದ ಅಲ್ಲಿಗೆ ಸೇರಿದ ಬೋರ್‌ಸದ್ ತಾಲ್ಲೂಕನ್ನು ವಿಭಾಗ ಮಾಡಿರುವುದನ್ನು ಪ್ರತಿಭಟಿಸಲು ಅಲ್ಲಿನ ಕಾಂಗ್ರೆಸ್ಸಿನವರು ಸತ್ಯಾಗ್ರಹ ಹೂಡುವುದನ್ನು ಸರ್ದಾರ್ ಪಟೇಲರ ಸಲಹೆ ಮೇರೆ ಈಗ ನಿಲ್ಲಿಸಲಾಗಿದೆ ಕಳೆದ ೩ ವರ್ಷಗಳ ಹಿಂದೆ ಅಲ್ಲಿ ವಿಧಿಸಲಾಗಿದ್ದ ಪುಂಡುಗಂದಾಯದ ವಿರುದ್ಧವಾಗಿ ಸರ್ದಾರ್ ಪಟೇಲರ ನಾಯಕತ್ವದಲ್ಲಿ ಸತ್ಯಾಗ್ರಹ ಹೂಡಲಾಗಿತ್ತು

ನೂತನ ಅಣು ಬಾಂಬುಗಳು

ನೂತನ ಮತ್ತು ಭಯಂಕರವಾದ ಅಣು ಬಾಂಬುಗಳನ್ನು ಕಳೆದ ೬ ತಿಂಗಳಿನ ತಯಾರಿಸಲಾಗಿದೆಯೆಂದು ಅಮೆರಿಕದ ಅಣು ಸತ್ವ ಸಮಿತಿಯವರು ವರದಿ ಮಾಡಿದ್ದಾರೆ

ಸ್ವಾತಂತ್ರ್ಯ ದಿನಾಚರಣೆಯ ದಿನ ಪ್ರತಿಭಟನಾ ಸಭೆಗಳು

ಭಾರತದ ಸಂಯುಕ್ತ ಸಮಾಜವಾದಿ ಪಕ್ಷದ ಕೇಂದ್ರ ಸಭೆಯು ಕಲ್ಕತ್ತದಲ್ಲಿ ಮೊನ್ನೆ ದಿನ ಸೇರಿ, ಭಾರತದ ಅದ್ಯಂತ ಇದೇ ೧೫ನೇ ತಾ|| ಸ್ವಾತಂತ್ರ್ಯ ದಿನಾಚರಣೆಯ ದಿನ ಪ್ರತಿಭಟನಾ ಸಭೆ ಮತ್ತು ಪ್ರದರ್ಶನಗಳನ್ನು ನಡೆಸಿ, ನಾವು ಗಳಿಸಿರುವ ಸ್ವಾತಂತ್ರ್ಯವು ಎಷ್ಟು ಜೊಳ್ಳಾಗಿದೆಯೆಂಬುದನ್ನು ತೋರಿಸಬೇಕೆಂದು ತೀರ್ಮಾನಿಸಿದೆ

ತಾಯಿಯರ ಕೂಟ

ರಾಜಧಾನಿಯ ಒಂಟಿಕೊಪ್ಪಲಿನ ಸರಕಾರೀ ಬಾಲಿಕಾ ಮಿಡಲ್ ಸ್ಕೂಲಿನಲ್ಲಿ ತಾಯಿಯರ ಕೂಟವು ಮೊನ್ನೆ ಸಂಜೆ ಶ್ರೀಮತಿ ಪಿ ಕೆ ರುಕ್ಮಿಣಿಯಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ವಿದ್ಯಾರ್ಥಿನಿಯರಿಂದ ನೃತ್ಯ, ವಿವಿಧ ವಿನೋದಾವಳಿ ಮುಂತಾದುವುಗಳಾದನಂತರ ಕಳೆದ ವರ್ಷ ಲೋವರ್ ಸೆಕೆಂಡರೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರವನ್ನು ಹಂಚಲಾಯಿತು ಅಧ್ಯಕ್ಷರ ಭಾಷಣವಾದನಂತರ ಕುಮಾರಿ ಎಚ್ ಪದ್ಮ ಮತ್ತು ಪಿ ಆರ್ ಪೃಥಿವಿಯವರಿಗೆ ಬಹುಮಾನಗಳನ್ನು ಕೊಡಲಾಯಿತು

ಅವಳಿ ಜವಳಿ ಹೆಂಗಸರನ್ನು ಪ್ರತ್ಯೇಕಿಸಲು ಪ್ರಯತ್ನ

ಬೆಂಗಳೂರಿನ ಗೌರಮ್ಮ ಮತ್ತು ಗಂಗಮ್ಮ ಎಂಬ ಅವಳಿ ಜವಳಿ ಹೆಂಗಸರು ಕಳೆದ ೪೦ ವರ್ಷದಿಂದಲೂ ಒಟ್ಟಿಗೆ ಸೊಂಟಕ್ಕೆ ಸೇರಿಕೊಂಡಿರುವರೆಂದೂ, ಈಗ ಒಬ್ಬರಿಗೆ ಪಾರ್ಶ್ವ ವಾಯು ರೋಗವು ಒಂದಿರುವುದರಿಂದ, ಅವರು ವೈದ್ಯರಿಗೆ ದೊಡ್ಡ ಸಮಸ್ಯೆಯಾಗಿದ್ದಾರೆಂದೂ ಹೇಳಲಾಗಿದೆ ಅವರ ದೇಹವನ್ನು ಶಸ್ತ್ರ ಚಿಕಿತ್ಸೆಯಿಂದ ಪ್ರತ್ಯೇಕಿಸಬಹುದೇ ಎಂಬುದನ್ನು ವೈದ್ಯರು ಪರೀಕ್ಷಿಸುತ್ತಿದ್ದಾರೆಂದೂ ತಿಳಿದುಬಂದಿದೆ ಅವರಿಬ್ಬರೂ ಇಲ್ಲಿಯವರೆಗೆ ಆರೋಗ್ಯವಾಗಿದ್ದು, ಅವಿವಾಹಿತರಾಗಿದ್ದಾರೆ ಇಂತಹ ಅವಳಿ ಜವಳಿ ಹೆಂಗಸರಲ್ಲಿ ಇವರೇ ಎರಡನೆಯವರೆಂದು ತಿಳಿದು ಬಂದಿದೆ ಹಿಂದೆ ಯುವರಾಜರು ಅವರನ್ನು ಯೂರೋಪಿಗೆ ಕರೆದುಕೊಂಡುಹೋಗಿ ವೈದ್ಯ ಪ್ರವೀಣರಿಗೆ ತೋರಿಸಿದಾಗ, ಶಸ್ತ್ರ ಚಿಕಿತ್ಸೆಯಿಂದ ಅವರನ್ನು ಪ್ರತ್ಯೇಕಿಸಕೂಡದೆಂದು ಅವರುಗಳು ಅಭಿಪ್ರಾಯಪಟ್ಟಿದ್ದರೆಂದು ಹೇಳಲಾಗಿದೆ

ಗೋವಧೆ ತಪ್ಪಿಸಲು ಸರ್ಕಾರದ ಒಪ್ಪಿಗೆ ಇಲ್ಲ

ಬೊಂಬಾಯಿ ಪ್ರಾಂತ್ಯದಲ್ಲಿ ವಿಶೇಷವಾಗಿ ಜಾನುವಾರುಗಳಿದ್ದರೂ, ಅವುಗಳ ಪೈಕಿ ಹೆಚ್ಚು ದನಗಳು ಹಾಲನ್ನು ಕೊಡದ ಕರುಗಳನ್ನು ಹಾಕದೆ ಯಾವ ಉಪಯೋಗಕ್ಕೂ ಬರುತ್ತಿಲ್ಲವೆಂದೂ, ಇಂತಹ ಆಹಾರ ಅಭಾವ ಕಾಲದಲ್ಲಿ ಅವುಗಳಿಗೆ ಮೇವನ್ನು ಒದಗಿಸುವುದು ಕಷ್ಟ ಸಾಧ್ಯವೆಂದೂ, ಆದುದರಿಂದಲೇ ಗೋವಧೆ ನಿಲ್ಲಿಸುವುದಕ್ಕೆ ಸರ್ಕಾರದವರು 'ಸಮ್ಮತಿ ಕೊಟ್ಟಿಲ್ಲವೆಂದೂ ಬೊಂಬಾಯಿನ ವ್ಯವಸಾಯ ಸಚಿವರಾದ ಶ್ರೀ ಎಂ ಪಿ ಪಾಟೀಲರು ತಿಳಿಸಿರುತ್ತಾರೆ

ಮುಳುಗುತ್ತಿದ್ದ ೮ ಜನರನ್ನು ರಕ್ಷಿಸಿದುದಕ್ಕೆ ಬಹುಮಾನ

ಮಂಗಳೂರಿನ ಸಮತಾವಾದಿ ಯುವಕ ಸಭೆಯ ಸದಸ್ಯರಾದ ಶ್ರೀ ವಾಮನ ಕರಕರೆಯವರು ಕಳೆದ ಫೆಬ್ರವರಿ ತಿಂಗಳಿನಲ್ಲಿ ಗುರುಪುರ ನದಿಯಲ್ಲಿ ಪ್ರಯಾಣ ಮಾಡುತ್ತಿದ್ದ ದೋಣಿಯೊಂದು ಮುಗುಚಿಕೊಂಡು, ನೀರುಪಾಲಾಗುತ್ತಿದ್ದ ೮ ಜನರನ್ನು ರಕ್ಷಿಸಿದರೆಂದು ಅವರಿಗೆ ೧೦೦ ರೂ ಬಹುಮಾನವನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಕೊಟ್ಟಿರುತ್ತಾರೆ ಅವರ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಮದರಾಸ್ ಸರ್ಕಾರದವರು ವೇತನವನ್ನೂ ಕೊಟ್ಟಿರುತ್ತಾರೆ

ಬಾಡಿಗೆಗೆ ಇದೆ

ನಲ್ಲಿ, ದೀಪ, ಮಹಡಿ, ಕಾಂಪೌಂಡ್ ಇರುವ ಹೊಸ ಕಾಲದ ಮನೆ ವಿ ವಿ ಪುರಂ, ಶ್ರೀನಿವಾಸ ದೇವರ ಗುಡಿ ಹಿಂದೆ ಮಾಹೆ ೧ಕ್ಕೆ ೬೦ ರೂ ನಂತೆ ಕೂಡಲೆ ದೊರೆಯುತ್ತೆ.

ಬಿ ಎ ಕೃಷ್ಣಮೂರ್ತಿ, ಬಿ ಎಸ್‌ಸಿ
ಗೋಕುಲಂ ರಸ್ತೆ, ಇವರಲ್ಲಾಗಲಿ ಅಥವಾ
ಬಿ. ಎಸ್ ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ವೀದಿ, ಮೈಸೂರು
ಇವರಲ್ಲಾಗಲಿ ವಿಚಾರಿಸಿ

ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

ಇದೇ ೧೫ನೇ ತಾ|| ಭಾರತದ ಎರಡನೇ ಸ್ವಾತಂತ್ರ್ಯ ದಿನಾಚರಣೆಯನ್ನು ರಾಷ್ಟ್ರ ಸೇವೆ ಮತ್ತು ವಂದನಾರ್ಪಣೆ ಸಲ್ಲಿಸುವ ಮನೋಭಾವದಿಂದ ನೆರವೇರಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ನಿರ್ಧರಿಸಿದ್ದಾರೆ ಅಂದು ರಾಷ್ಟ್ರೀಯ ಕಾರ್ಯಗಳ ಸಾಧನೆಗಾಗಿ ಕಾಂಗ್ರೆಸ್ಸಿನವರು ಮತ್ತು ಇತರರು ಸಹಕರಿಸಬೇಕೆಂದೂ, ಆ ದಿನ ಕಾರ್ಯಕ್ರಮಗಳು ಸರಳವಾದುವಾಗಿ ಆಹಾರೋತ್ಪತ್ತಿ ಹೆಚ್ಚಿಸುವ ಕಾರ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂದೂ, ಬಂಜರು ಜಮೀನುಗಳಲ್ಲಿ ಆಹಾರ ಧಾನ್ಯ ಮತ್ತು ತರಕಾರಿ ಬೆಳೆಯುವುದು ಮತ್ತು ಗಿಡಗಳನ್ನು ನೆಡುವುದು ಮುಂತಾದುವುಗಳಲ್ಲಿ ನಿರತರಾಗಬೇಕೆಂದು ಸೂಚನೆ ಕೊಡಲಾಗಿದೆ

ಸೋಮನಾಥ ಗುಡಿಯ ಪುನರುಜ್ಜೀವನ

೯೦೦ ವರ್ಷಗಳ ಹಿಂದೆ ಘಜನಿ ಮಹಮ್ಮದನಿಂದ ನಾಶ ಮಾಡಲ್ಪಟ್ಟ ಸುಪ್ರಸಿದ್ಧ ಸೋಮನಾಥ ದೇವಾಲಯವನ್ನು ಪುನರುಜ್ಜೀವನಗೊಳಿಸುವ ಯೋಜನೆಯನ್ನು ಭಾರತ ಸರ್ಕಾರದವರು ಕೈಗೊಂಡಿದ್ದಾರೆ ಆ ಪ್ರದೇಶದಲ್ಲಿ ನೂತನ ನಗರವೊಂದನ್ನು ನಿರ್ಮಿಸುವುದು, ಅಲ್ಲಿ ಅಖಿಲ ಭಾರತ ಸಂಸ್ಕೃತ ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವುದು ಮತ್ತು ಲಲಿತ ಮತ್ತು ಶಿಲ್ಪಕಲಾ ಮಂದಿರ ಮತ್ತು ಹಿಂದೂ ಸಂಸ್ಕೃತಿಯ ಪುನರುಜ್ಜೀವನದ ಕೇಂದ್ರಗಳ ಸ್ಥಾಪನೆ ಇವೇ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಗುವುದೆಂದೂ, ಹಿಂದೆ ಸೋಮನಾಥ ಪ್ರತಿಮೆ ಎಲ್ಲಿದ್ದಿತೋ ಅದೇ ಜಾಗದಲ್ಲಿ ದೇವರನ್ನು ಪ್ರತಿಷ್ಠಿಸಲಾಗುವುದೆಂದೂ ಹೇಳಲಾಗಿದೆ.

ವನಸ್ಪತಿ ವಿರೋಧ ದಿನಾಚರಣೆ

ಭಾರತದಲ್ಲಿ ವನಸ್ಪತಿ ತುಪ್ಪವನ್ನು ತಯಾರಿಸುವುದು ಮತ್ತು ಮಾರುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಬೊಂಬಾಯಿನಲ್ಲಿ ಮೊನ್ನೆ ದಿನ ಅಖಿಲ ಭಾರತೀಯ ಗೋ ಸೇವಕ ಸಂಘದವರು ಏರ್ಪಡಿಸಿದ್ದ ವನಸ್ಪತಿ ವಿರೋಧ ದಿನಾಚರಣೆಯಲ್ಲಿ ನಿರ್ಣಯ ಮಾಡಲಾಯಿತು

ಪುರಿ ಮಾರಿದುದಕ್ಕೆ ದಂಡ

ರಾಜಧಾನಿಯ ಮಂಡಿ ಮಾರ್ಕೆಟ್ಟಿನಲ್ಲಿ ೮-೬-೪೯ ರಲ್ಲಿ ೩ನೆ ಸೇರು ಪುರಿಯನ್ನು ಮಾರುತ್ತಿದ್ದನೆಂಬ ಅಪಾದನೆಯ ಮೇಲೆ ಈರಪ್ಪನಿಗೆ ನಗರ ನ್ಯಾಯಾಧೀಶರು ೧೫ ರೂ. ಜುಲ್ಮಾನೆಯನ್ನು ವಿಧಿಸಿದರು

ಅಧಿಕಾರಿಗಳನ್ನು ಪಾದರಕ್ಷೆಯಿಂದ ಹೊಡೆದ ಅಪಾದನೆ

ಮೈಸೂರಿನ ನಾಟಾ ವ್ಯಾಪಾರಿಗಳಾದ ಶ್ರೀ ಆರ್. ದೇವೀ ಸಿಂಗ್ ಎಂಬುವರು ೨೯-೭-೪೯ನೇ ಸಂಜೆ ೬ ಗಂಟೆಯಲ್ಲಿ ಅರಾರಾ ಕಛೇರಿಯ ಮೈದಾನದಲ್ಲಿ ಮೈಸೂರು ಜಿಲ್ಲಾ ಫಾರೆಸ್ಟ್ ಅಧಿಕಾರಿಗಳ ಮೂಗಿನ ಮೇಲೆ ಪಾದರಕ್ಷೆಯಿಂದ ಹೊಡೆದು ಗಾಯಪಡಿಸಿದರೆಂಬ ಅಪಾದನೆಯ ಮೇಲೆ ಲಕ್ಷ್ಮೀಪುರಂ ಪೋಲೀಸರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ

ಇಡ್ಲಿ ಮಾಡಿದುದಕ್ಕೆ ಜುಲ್ಮಾನೆ

ಕೃಷ್ಣರಾಜ ಮೊಹಲ್ಲಾದ ರುದ್ರಪ್ಪ ಎಂಬುವನು ನಿನ್ನೆ ದಿನ ಇಡ್ಲಿ ಮಾಡಿ ಮಾರುತ್ತಿದ್ದುದನ್ನು ಫುಡ್‌ರೇಡ್ ಪಾರ್ಟಿಯವರು ಪತ್ತೆ ಮಾಡಿ ಮೊಕದ್ದಮೆ ಹೂಡಿದ್ದರು. ನಗರ ನ್ಯಾಯಾಧೀಶರು ಆಪಾದಿತನಿಗೆ ೨೦ ರೂ ಜುಲ್ಮಾನೆ ವಿಧಿಸಿ, ಇಡ್ಲಿಯನ್ನು ಮಾರಿ ಬಂದ ೩ ರೂ ಮೊಬಲಗನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದು ಆಜ್ಞೆ ಮಾಡಿದರು

ರಾಘವೇಂದ್ರಸ್ವಾಮಿಗಳ ಆರಾಧನೆ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಶ್ರೀಗಳವರ ಆರಾಧನಾ ಮಹೋತ್ಸವವು ಇದೇ ೯, ೧೦ ಮತ್ತು ೧೧ ನೇ ತಾ||ಗಳಲ್ಲಿ ನಡೆಯುವುದು ಪ್ರತಿ ದಿನ ಬೆಳಗ್ಗೆ ಅಭಿಷೇಕ ಮತ್ತು ಅಲಂಕಾರಗಳೂ ಮತ್ತು ೧೧ನೇ ತಾ|| ಬೆಳಗ್ಗೆ ಮೆರವಣಿಗೆಯೂ ಜರುಗುವುವು

ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆ ಕೆಲಸಗಾರರ ತೊಂದರೆ

ಈದಿಗಾ ಬಡಾವಣೆಯಲ್ಲಿರುವ ಕೂರ್ಗ್ ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆ ಕೆಲಸಗಾರರ ಸಂಘದ ವಾರ್ಷಿಕ ಸಭೆಯು ಶ್ರೀ ಜಿ ಆರ್ ರಂಗಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ತಿಂಗಳು ೧ ನೇ ತಾ|| ನಿಂದ ಆಡಳಿತವರ್ಗದವರು ಕಾರ್ಖಾನೆಯನ್ನು ಮುಚ್ಚಿರುವುದನ್ನು ಖಂಡಿಸಿ, ಕೆಲಸಗಾರರಿಗೆ ಸರಿಯಾದ ಪರಿಹಾರವನ್ನು ಕೊಡುವ ತನಕ ಸಂಬಳವನ್ನು ತೆಗೆದುಕೊಳ್ಳಕೂಡದೆಂದು ತೀರ್ಮಾನಿಸಲಾಯಿತು ನೋಟೀಸ್ ಆಫ್ ಚೇಂಜ್ ಕೊಡದೆ ಕಾರ್ಖಾನೆಯನ್ನು ಮುಚ್ಚಿರುವುದು ಅಕ್ರಮವೆಂದೂ, ಅದನ್ನು ಅಸಿಸ್ಟೆಂಟ್ ಲೇಬರ್ ಕಮೀಷನರ ಗಮನಕ್ಕೆ ತಂದಿದ್ದರೂ ಆ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನೂ ಅವರು ಕೈಗೊಳ್ಳದಿರುವುದು ವಿಷಾದಕರವೆಂದೂ, ಕೆಲಸಗಾರರ ಹಿತ ದೃಷ್ಟಿಯಿಂದ ಕಾರ್ಖಾನೆಯನ್ನು ತೆರೆಯುವಂತೆ ಸರ್ಕಾರದವರು ಒತ್ತಾಯಪಡಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು

M/s. Raghavendra Stores,
Bidaram Krishnappa Street, Mysore
Are appointed as our Sole Distributors for
RAMANI TOOTH POWDER in Mysore State
RAMANI TRADING COMPANY,
Krishnamurthypuram, Mysore

Edited, printed and published by A R Nagarajan, at Sadhvi Press, D Subbiah Road, Mysore

ಹೋಟೇಲ್ ಕೆಲಸಗಾರರ ಸಂಘದ ಸಭೆ

ಮೈಸೂರು ನಗರದ ಹೋಟೇಲ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಇದೇ ೫ನೇ ತಾ|| ಶುಕ್ರವಾರ ರಾತ್ರಿ ೮-೩೦ ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ನಡೆಯುವುದು ಸ್ವಾತಂತ್ರ್ಯ ದಿನಾಚರಣೆಯ ದಿನ ರಜಾ ಕೊಡುವುದು, ಕೆಲಸಗಾರರಿಗೆ ಪಾಠಶಾಲೆಗಳನ್ನು ತೆರೆಯುವುದು, ಬೋನಸ್ ಇವೇ ಮುಂತಾದ ವಿಷಯಗಳು ಚರ್ಚೆಗೆ ಬರಲಿರುವುದರಿಂದ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ಆನಂದ ರಾಮಾಯಣ ವಾಚನ

ಚಾಮರಾಜ ಮೊಹಲ್ಲಾ ಗೊಲ್ಲಗೇರಿಯಲ್ಲಿರುವ ಶ್ರೀ ರಾಮಮಂದಿರದಲ್ಲಿ ಈ ದಿನದಿಂದ ಪ್ರತಿ ದಿನ ರಾತ್ರಿ ೮-೩೦ ಗಂಟೆಗೆ ಶ್ರೀ ವಿರ್ಲೆ ಸುಬ್ರಹ್ಮಣ್ಯ ಶಾಸ್ತ್ರಿಗಳವರಿಂದ ಶ್ರೀ ಆನಂದ ರಾಮಾಯಣ ವಾಚನ ಮತ್ತು ಅರ್ಥಾನುವಾದವು ನಡೆಯುತ್ತವೆ.

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY
ಬೆಲೆ 2—0—0

ಗೂರಲು, ಉಬ್ಬಸ, ಪುರಾಣಾಮತೂಲೆ ಮತ್ತು Tonsil ಗೆ (ಗಲಾಯಿಕ) ಖಾತರಿಯಾದ ಔಷಧಿ ದೊರೆಯುತ್ತೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯ್ನ್ ಬಾಮ್
ನೋವು, ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮ ಬಾಣ
ಶೀಸೆ ೦-೧೨-೦
ಮಹಾ ಸುಗಂಧ ರಾಜ ತೈಲ -]
„ ಚಂದನಾದಿ ತೈಲ -]
„ ಭೃಂಗಾಮಲಕ ತೈಲ -]
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು
ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ ವಾದ
ಬ್ರೇನ್ ಟಾನಿಕ್ ಶೀಸೆ ೨-೦-೦
ಪಂಚಾಮೃತ—ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೪-೮-೧೯೪೯ [ಸಂಚಿಕೆ ೧೨

ಶನಿವಾರ ಅಥವ ಭಾನುವಾರ ಪ್ರಭುಗಳ ಘೋಷಣೆ

ಮಂತ್ರಿಗಳ ರಾಜೀನಾಮೆ

ಹೊಸ ಮಂತ್ರಿ ಮಂಡಲದ ರಚನೆಗೆ ಪೀಠಿಕೆ

ಸ್ವಂ ಸು ಫೋನ್] ಬೆಂಗಳೂರು ೪

ಸಂಸ್ಥಾನದ ಮಂತ್ರಿ ಮಂಡಲದ ಪುನ ರಚನೆಗೆ ಪೂರ್ವ ಭಾವಿಯಾಗಿ ಈಗಿರುವ ಮಂತ್ರಿ ಮಂಡಲದ ಸದಸ್ಯರು ಪದ್ಧತಿಯ ಪ್ರಕಾರ ತಮ್ಮ ಸ್ಥಾನಗಳಿಗೆ ರಾಜೀನಾಮೆ ಗಳನ್ನು ಸಲ್ಲಿಸಿರುವರೆಂದು ಹೇಳಲಾಗಿದೆ

ಈ ದಿನ ಬೆಳಗ್ಗೆ ೧೧ ಗಂಟೆಯಿಂದ ಮಂತ್ರಿ ಮಂಡಲದ ಸಭೆಯು ದಿವಾನರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ ಮಂತ್ರಿ ಮಂಡಲದ ಪುನರ್ರಚನೆಯ ವಿಚಾರವು ಅದರಲ್ಲಿ ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟಿ ತೆಂದು ತಿಳಿದು ಬಂದಿದೆ

ದೆಹಲಿಗೆ ತೆರಳಿದ್ದ ಶ್ರೀ ಕೆ ಸಿ ರೆಡ್ಡಿಯ ವರು ಈ ದಿನ ಬೆಳಗ್ಗೆ ಇಲ್ಲಿಗೆ ಆಗಮಿಸಿದ ರು ಭಾರತ ಸರ್ಕಾರದ ಸಚಿವರುಗಳೊಡ ನೆ ಅವರು ನಡೆಸಿದ ಸಮಾಲೋಚನೆಗಳ ವಿವರಗಳನ್ನು ಮಂತ್ರಿ ಮಂಡಲದ ಮುಂ ದೆ ನಿರೂಪಿಸಿದರೆಂದೂ ಹೇಳಲಾಗಿದೆ

ಈ ಸಂಜೆ ಶ್ರೀ ರೆಡ್ಡಿಯವರು ರಾಜಭಾ ನಿಗೆ ಬಂದು ಎಲ್ಲ ವಿದ್ಯಮಾನಗಳನ್ನೂ ಮ. ಹಾರಾಜರವರಿಗೆ ಅರಿಕೆ ಮಾಡುವ ನಿರೀಕ್ಷೆ ಇದೆ

ಈಗಿನ ಮಂತ್ರಿ ಮಂಡಲವನ್ನು ವಿಸ್ತ ರಿಸಿ ಇನ್ನೂ ಹಲವರನ್ನು ಅದಕ್ಕೆ ಸೇರಿಸ ಕೊಳ್ಳಬೇಕೆಂಬ ಸಲಹೆಗಳು ಕೆಲವು ಆವ ರಣಗಳಲ್ಲಿ ಇರುವುದಾದರೂ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಕೇವಲ ಕಾಂಗ್ರೆಸ್ಸಿನವರೇ ಮಂತ್ರಿ ಮಂಡಲದಲ್ಲಿ ಇರಬೇಕೆಂಬ ಬಗ್ಗೆ ಹೆಚ್ಚು ಒತ್ತಾಯವು ಬರುತ್ತಿದೆಯೆಂದು ತಿಳಿದುಬಂದಿದೆ

ನಾಳೆ ದಿನ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ವಿಶೇಷ ಸಭೆಯು ಸೇರಿ ಈ ಬಗ್ಗೆ ಸಮಾಲೋಚನೆಯನ್ನು ಕೈಗೊಳ್ಳ ತ್ತದೆ

ದಿವಾನರ ಹುದ್ದೆಯು ನಾಳಿದ್ದಿನಿಂದ ರ ದ್ದಾಗುವುದರಿಂದ ಸಧ್ಯಕ್ಕೆ ಅವರ ಅಧಿಕಾ ರಗಳನ್ನು ಪ್ರಧಾನ ಮಂತ್ರಿಗಳೇ ಚಲಾ ಯಿಸುವಂತೆ ವ್ಯವಸ್ಥೆ ಮಾಡಲಾಗುವು ದೆಂದು ತಿಳಿದುಬಂದಿದೆ

ಬಿಹಾರ್ ಸಚಿವರ ಪುತ್ರರ ದಸ್ತಗಿರಿ

ಬಿಹಾರಿನ ನೀರಾವರಿ ಸಚಿವರಾದ ಶ್ರೀ ರಾಮ ಚರಿತ ಸಿನ್ಹರವರ ಪುತ್ರ ಚಂದ್ರಶೇ ಖರ ಪ್ರಸಾದ್ ಸಿನ್ಹರವರು ಕಮ್ಯೂನಿಸ್ಟ ರಾಗಿ ಒಂದು ವರ್ಷದಿಂದ ತಲೆ ಮರೆಸಿ ಕೊಂಡಿದ್ದರು ಅವರನ್ನು ಪೋಲೀಸರು ಪ ರ್ನಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ದಸ್ತಗಿ ರಿ ಮಾಡಿರುತ್ತಾರೆ. ಒಬ್ಬ ಮೊಚ್ಚಿಯ ಮ ನೆಯಲ್ಲಿ ಕಮ್ಯೂನಿಸ್ಟರು ಬಚ್ಚಿಟ್ಟಿದ್ದ ಹಲ ವು ಪ್ರಕಟಣೆಗಳನ್ನೂ ಸಹ ಪೋಲೀಸರು ವಶಪಡಿಸಿಕೊಂಡಿರುತ್ತಾರೆ

ಬೊಂಬಾಯಿ ಉಪಾಧ್ಯಾಯರುಗಳ ಉಪವಾಸ

ಭಾರತದ ವಿದ್ಯಾಭ್ಯಾಸ ಸೊಸೈಟಿಯವ ರು ಇಬ್ಬರು ಉಪಾಧ್ಯಾಯರುಗಳನ್ನು ಕೆ ಲಸದಿಂದ ತೆಗೆದು ಹಾಕಿರುದನ್ನು ಪ್ರ ಭಟಿಸಲು ಬೊಂಬಾಯಿ ಪ್ರಾಂತದ ಎಲ್ಲ ಮಾಧ್ಯಮಿಕ ಶಾಲಾ ಉಪಾಧ್ಯಾಯರುಗ ಳೂ ಮೊನ್ನೆ ದಿನ ಉಪವಾಸ ಮುಷ್ಕರವ ನ್ನು ಹೂಡಿದ್ದರು

ಸಂಸ್ಥಾನಕ್ಕೆ ಒಂದೇ ಸಂಯುಕ್ತ ಶಾಸನ ಸಭೆ

ಸ್ವಂ ಸು ಫೋನ್] ಬೆಂಗಳೂರು ೪.

ಈಗಿರುವ ಪ್ರಜಾ ಪ್ರತಿನಿಧಿ ಸಭೆ, ಶಾಸ ನ ಸಭೆ ಮತ್ತು ರಾಜ್ಯಾಂಗ ಸಭೆಗಳ ಚು ನಾಯಿತ ಸದಸ್ಯರುಗಳಿಂದ ಕೂಡಿದ ನೂ ತನ ಶಾಸನ ಸಭೆಯನ್ನು ರಚಿಸಿ, ಹೊಸ ರಾಜ್ಯಾಂಗವು ಜಾರಿಗೆ ಬರುವವರೆಗೆ ಆ ಸ ಭೆಯೇ ಶಾಸನ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವಂತೆ ಮಾಡುವ ಆಲೋಚನೆ ಯು ಸರ್ಕಾರದವರಿಗೆ ಇರುವುದಾಗಿ ಅಧಿಕ ವರ್ಗಗಳಿಂದ ತಿಳಿದುಬಂದಿದೆ ಕೇಂದ್ರ ಸ ರ್ಕಾರದಲ್ಲಿರುವಂತೆಯೇ ಇಲ್ಲಿಯೂ ಪಾ ರ್ಲಿಮೆಂಟರಿ ಪದ್ಧತಿಗೂ ಪ್ರಜಾ ಪ್ರಭು ತ್ವ ತತ್ವಗಳಿಗೂ ಅನುಗುಣವಾಗಿ ಶಾಸನ ಸಭೆ ಯು ಕೆಲಸ ಮಾಡಬೇಕೆಂಬುದೇ ಈ ಯೋಜನೆಯ ಉದ್ದೇಶವೆಂದು ಹೇಳಲಾ ಗಿದೆ

ಆಹಾರದ ಆಮದಿಗೆ ಪ್ರತಿಬಂಧಕ

ಸಂಸ್ಥಾನದ ಹೊರಗಿನಿಂದ ರಹದಾರಿ ಇಲ್ಲದೆ ಯಾರೂ ಆಹಾರ ಧಾನ್ಯಗಳನ್ನು ಆಮದು ಮಾಡಲಾಗದೆಂದೂ ಮತ್ತು ಆಮ ದು ಮಾಡಿದ ಧಾನ್ಯಗಳ ಬಗ್ಗೆ ಅಂತ ಅಂ ಶಗಳನ್ನು ಅಧಿಕಾರಿಗಳಿಗೆ ಒದಗಿಸಬೇಕೆಂ ದೂ ಸೂಚಿಸುವ ಅವಸರದ ಆಜ್ಞೆಯೊಂ ದನ್ನು ಸರ್ಕಾರದವರು ಹೊ ರ ಡಿ ಸಿ ದ್ದಾರೆ

ಎಕ್ಸ್‌ರೇ ಫೋಟೋಗಳು ಸಿಕ್ಕಿವೆ

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತೆಗೆದ ಎರಡು ಎಕ್ಸರೇ ಫೋಟೋಗಳು ರಸ್ತೆ ಯಲ್ಲಿ ಬಿದ್ದಿದ್ದುದನ್ನು ಕಂಡವರು ನಮಗೆ ತಂದುಕೊಟ್ಟಿರುತ್ತಾರೆ ಫೋಟೋ ಮೇ ಲೆ ಶ್ರೀ ಕೆ ರಾಜೇ ಅರಸ್ ಮತ್ತು ತಾ॥ ೨೭-೬-೪೯ ಎಂದು ನಮೂದಿಸಲಾಗಿದೆ ಸಂಬಂಧಪಟ್ಟವರು ಅದನ್ನು "ಸಾಧ್ವಿ" ಕಾರ್ಯಾಲಯಕ್ಕೆ ಬಂದು ಪಡೆಯಬ ಹುದು

ಉಪಾಕರ್ಮ

ಶ್ರೀಮನ್ಮಹಾರಾಜರವರ ಸಂಸ್ಕೃತ ಮ ಹಾ ಪಾಠಶಾಲೆಯಲ್ಲಿ ಇದೇ ೮ ನೇ ತಾ॥ ಸೋಮವಾರ ಬೆಳಿಗ್ಗೆ ೮-೩೦ ಗಂಟೆಗೆ ಋಗ್ ಮತ್ತು ಯಜುರುಪಾಕರ್ಮಗಳು ಮತ್ತು ತ್ರಯ ಬ್ರಾಹ್ಮಣರಿಗೆ ಪ್ರತ್ಯೇಕ ಸ್ಥ ಳಗಳಲ್ಲಿ ನಡೆಯುವುವು. ೨೭ ನೇ ತಾ॥ ಶನಿವಾರ ಬೆಳಿಗ್ಗೆ ೬-೩೦ ಘಂಟೆಗೆ ಸಾಮ ಗೋಪಾಕರ್ಮವೂ ಜರುಗುವುದು

ನೂತನ ಮಂತ್ರಿ ಮಂಡಲದಲ್ಲಿ ೧೦ ಜನ ಸಚಿವರು

ಶನಿವಾರ ಅಥವ ಭಾನುವಾರ ರಾಜ ಘೋಷಣೆ

ಸ್ವಂ ಸು ಫೋನ್] ಬೆಂಗಳೂರು ೪

ಈಗಿನ ಮಂತ್ರಿ ಮಂಡಲವು ಪುನರ್ರ ಚನೆಯಾಗುವುದು ಅದರಲ್ಲಿ ಸುಮಾರು ೧೦ ಜನ ಸಚಿವರುಗಳಿರುವರು ಈಗ ಸ ರ್ಕಾರದ ಬಾಬುಗಳಲ್ಲಿ ಕೆಲಸ ಹೆಚ್ಚಾಗಿರು ವುದರಿಂದ ಮಂತ್ರಿ ಮಂಡಲವನ್ನು ವಿಸ್ತ ರಿಸಬೇಕಾದ ಆವಶ್ಯಕತೆ ಇದೆ ಆಹಾರ ಮತ್ತು ವ್ಯವಸಾಯ ಇಲಾಖೆಗಳಿಗೆ ಪ್ರತ್ಯೇಕ ಸಚಿ ವರುಗಳಿರುವರು ಸಮ್ಮಿಶ್ರ ಅಥವ ಕೇವಲ ಕಾಂಗ್ರೆಸ್ಸಿನವರೊಳಗೊಂಡ ಮಂತ್ರಿ ಮಂ ಡಲ ಇರಬೇಕೆ ಎಂಬುದನ್ನು ಇನ್ನೂ ನಿ ರ್ಧರಿಸಿಲ್ಲ

ಈ ವಿಚಾರಗಳನ್ನು ನನ್ನ ಸಹೋ ದ್ಯೋಗಿಗಳು ಮತ್ತು ಪ್ರಮುಖ ಕಾಂಗ್ರೆ ಸ್ ನಾಯಕರೊಡನೆ ಈ ದಿನ ಮಾತ ಕತೆ ನಡೆಸಿ, ಅನಂತರ ಶ್ರೀಮನ್ಮಹಾರಾಜರವ ರನ್ನು ಭೇಟಿ ಮಾಡುವೆನು ದಿವಾನರ ಹುದ್ದೆಯ ರದ್ದು ಮತ್ತು ಮಂತ್ರಿಮಂಡ ಲದ ಪುನರ್ರಚನೆ ಬಗ್ಗೆ ಇದೇ ಶನಿವಾರ ಅಥವಾ ಭಾನುವಾರ ರಾಜಘೋಷಣೆ ಹೊ ರಬೀಳುವುದು- ಎಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಈ ದಿನ ಪತ್ರಿ ಕಾ ಪ್ರತಿನಿಧಿಗಳಿಗೆ ತಿಳಿಸಿದರು

೩೧ ಪೌಂಡುಗಳ ಸಮೇತ ಹೆಂಡತಿಯ ಬಹುಮಾನ

ಉತ್ತರ ಪ್ರದೇಶದ ನಿಗಾಓ ಎಂಬ ನಗ ರದ ಒಬ್ಬನು ೬ ಅಡಿ ೭ ಅಂಗುಲ ಎತ್ತರ ದ, ೩೨ ವರ್ಷದ ಸುಂದರ ಪದವೀಧರ ತ ರುಣಿಯಾದ ತನ್ನ ಹೆಂಡತಿಯನ್ನು ೩೧ ಪೌಂಡು ಹಣದ ಸಮೇತ ಬಹು ಮಾನ ಕೊಡುವುದಾಗಿ ಅಲ್ಲಿನ ಪೇಟೆಯ ಗೋಡೆ ಯ ಮೇಲೆ ಜಾಹೀರಾತು ಚೀಟಿಯನ್ನು ಅಂಟಿಸಿದ್ದನೆಂದೂ, ೩೮ ವರ್ಷದವನೊಬ್ಬ ನು ದಕ್ಷಿಣ ಜ್ಯೋತಿಷ್ಯನ ಸಹಾಯದಿಂ ದ ಬಹುಮಾನವನ್ನು ಪಡೆದನೆಂದೂ ಹೇಳ ಲಾಗಿದೆ ತನ್ನ ಸತತ ಅನಾರೋಗ್ಯದ ವಿ ಷಯದಿಂದ ಸಂಸಾರದಲ್ಲಿ ಯಾವಾಗಲೂ ಜ ಗಳವುಂಟಾಗುತ್ತಿದ್ದುದರಿಂದ ಈ ರೀತಿ ಮಾಡಬೇಕಾಯಿತೆಂದು ಆಕೆಯ ಗಂಡನು ತಿಳಿಸಿರುತ್ತಾನೆ

ಮೊಸಳೆ ಹೊಟ್ಟೆಯಲ್ಲಿ ನಾಯಿ, ರವಿಕೆ, ಬಳೆ

ನಂಜನಗೂಡು ೩

ಇಲ್ಲಿನ ಕಪಿಲಾ ನದಿಯಲ್ಲಿ ಕಳೆದ ೧೦- ೧೫ ದಿನಗಳಿಂದ ಜನರಿಗೂ ಮತ್ತು ದನ ಕರುಗಳಿಗೂ ತೊಂದರೆ ಕೊಡುತ್ತಿದ್ದ ೧೫ ಅಡಿ ೪ ಅಂಗುಲ ಉದ್ದದ ಭಾರಿ ಮೊಸಳೆ ಯೊಂದನ್ನು ಇಲ್ಲಿನ ಎಲೆಕ್ಟ್ರಿಕ್ ಮೋಟಾರ್ ಸರ್ವಿಸಿನ ಮಾಲೀಕರಾದ ಶ್ರೀ ಎನ್ ಸಿ. ವೆಂಕಟಸ್ವಾಮಿಯವರು ನಿನ್ನೆ ಬೆಳಿಗ್ಗೆ ಗುಂಡಿನಿಂದ ಹೊಡೆದು ಸಾಯಿಸಿದರು. ಮೊಸಳೆಯ ಹೊಟ್ಟೆಯನ್ನು ಕುಯ್ಯಲಾಗಿ ಅದರೊಳಗೆ ಒಂದು ಕಡಗ, ಬಳೆ, ರವಿಕೆ, ಆಮೆ ಮತ್ತು ನಾಯಿಗಳು ಇದ್ದುವೆಂದು ಹೇಳಲಾಗಿದೆ

ವಿಷ ತಿಂದು ಮರಣ

ಚಾಮರಾಜನಗರ ೪.

ಈ ತಾಲ್ಲೂಕು ಬಾಣಹಳ್ಳಿಯ ಒಂದು ಇಡೀ ಸಂಸಾರದವರೆಲ್ಲರೂ ಕಳೆದ ಸೋ ಮವಾರ ವಿಷವನ್ನು ತಿಂದುದರ ಪರಿಣಾ ಮವಾಗಿ ಒಬ್ಬನು ಸತ್ತನೆಂದೂ ಇತರರೂ ಆಸ್ಪತ್ರೆಯಲ್ಲಿ ಔಷಧಿಯನ್ನು ತೆಗೆದುಕೊಂ ಡು ಗುಣಮುಖರಾಗುತ್ತಿರುವರೆಂದೂ ಗೊ ತ್ತಾಗಿದೆ ಪೋಲೀಸರು ತನಿಖೆ ನಡೆಸುತ್ತಿ ದ್ದಾರೆ

ರಫಿ ಅಹಮದ್ ಕಿದ್ವಾಯ್ ರವರ ರಾಜೀನಾಮೆಯೇ?

ಭಾರತ ಸರ್ಕಾರದ ಸಂಚಾರಸಚಿವರಾ ದ ಜನಾಬ್ ರಫಿ ಅಹಮದ್ ಕಿದ್ವಾಯ್ ರವರು ತಮ್ಮ ಹುದ್ದೆಗೆ ರಾಜೀನಾಮೆ ಇ ತ್ತಿರುವರೆಂದು ತಿಳಿದುಬಂದಿದೆ

ಆಗಾಖಾನರ ೩೦ ಲಕ್ಷ ರೂ. ಒಡವೆ ದರೋಡೆ

ಆಗಾಖಾನರೂ, ಅವರ ಪತ್ನಿಯವರೂ ಮತ್ತು ಸೇವಕನೊಬ್ಬನು ಕಾರಿನಲ್ಲಿ ಫ್ರಾ ನ್ಸಿನ ಹತ್ತಿರವಿರುವ ನೀಸ್‌ನಿಂದ ಡ್ಯಾನಿ ಲಗೆ ಹೋಗುತ್ತಿದ್ದಾಗ ಶಸ್ತ್ರಧಾರಿಗಳಾದ ದರೋಡೆಕಾರರು ಕಾರನ್ನು ತಡೆಗಟ್ಟಿ, ಅ ವರುಗಳನ್ನು ಬೆದರಿಸಿ ೩೦ ಲಕ್ಷ ರೂ ಬೆ ಲೆ ಬಾಳುವ ಆಭರಣಗಳನ್ನು ಅಪಹರಿಸಿ ಕೊಂಡು ಪರಾರಿಯಾದರೆಂದು ವರದಿಯಾ ಗಿದೆ

ಹಿಂದಿ ರಾಷ್ಟ್ರ ಭಾಷೆ ಯಾಗಬೇಕೆಂದು ಉಪವಾಸ

ಹಿಂದೀ ಭಾಷೆಯೇ ರಾಷ್ಟ್ರಭಾಷೆಯಾ ಗಬೇಕೆಂದೂ ಮತ್ತು ದೇಶವನ್ನು ಭಾರತ ವರ್ಷ ಎಂಬುದಾಗಿ ಕರೆಯಬೇಕೆಂದೂ ಒ ತ್ತಾಯ ಪಡಿಸಲು ಇದೇ ೧ ನೇ ತಾ॥ ನಿಂದ ಹಿಮಾಲಯ ಪ್ರದೇಶದಲ್ಲಿರುವ ಸ ನ್ಯಾಸಿನಿಯಾದ ಶ್ರೀ ಪ್ರಜ್ಞಾ ಮಾತರವರು ಆಮರಣಾಂತ ಉಪವಾಸವನ್ನು ಕೈಗೊಂ ಡಿದ್ದಾರೆ.

ಹರಿಕಥೆ

ಕೀರ್ತನಕಾರ ಮಂಡಲಿಯ ಆಶ್ರಯದ ಲ್ಲಿ ಶ್ರೀ ಪಾಂಡುರಂಗ ದೇವಾಲಯದ ಬಳಿ ಇರುವ ಶ್ರೀ ಬಾಲೆ ವೆಂಕಟರಾಯರ ಛತ್ರ ದಲ್ಲಿ ಈ ದಿನ ಸಂಜೆ ೭ ಘಂಟೆಗೆ ಶ್ರೀ ಕೆ ಗುಂಡೂರಾಯರಿಂದ ರುಕ್ಮಿಣೀ ಕಲ್ಯಾಣ ಎಂಬ ಹರಿಕಥೆ ನಡೆಯುವುದು

ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಸೌಡೇಶ್ವರಿ ದೇವ ಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ನ್ಯಾಯ ಬಾಗಿಲ ಶ್ರೀ ನಾರಾಯಣದಾಸರಿಂದ ಶ್ರೀ ವರನಂದಿ ಕಲ್ಯಾಣ ಎಂಬ ಹರಿಕಥೆ ನಡೆಯುವುದು

ಪ್ರಸನ್ನ ನಂಜುಂಡೇಶ್ವರ ದೇವಸ್ಥಾನಕ್ಕೆ ಹರಿಜನರ ಪ್ರವೇಶ

ಮುಜರಾಯಿ ಸಚಿವರ ನೇತೃತ್ವದಲ್ಲಿ

ಮೈಸೂರು ೪

ಮುಜರಾಯಿ ಸಚಿವರಾದ ಶ್ರೀ ಪಾಮಿಡಿ ಸುಬ್ಬರಾಮ ಶೆಟ್ಟರ ನಾಯಕತ್ವದಲ್ಲಿ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಾಲಯಕ್ಕೆ ನೂರಾರು ಜನ ಹರಿಜನರು ನಿನ್ನೆ ಸಂಜೆ ಪ್ರವೇಶ ಮಾಡಿದರು ಇದಕ್ಕೆ ಪೂರ್ವಭಾವಿಯಾಗಿ ಟೌನ್‌ಹಾಲ್ ಮೈದಾನದಲ್ಲಿ ಹರಿಜನರೂ ದೇವಾಲಯ ಪ್ರವೇಶವೂ" ಎಂಬ ವಿಷಯವಾಗಿ ಶ್ರೀ ಪಾಮಿಡಿ ಸುಬ್ಬರಾಮ ಶೆಟ್ಟರು ಭಾಷಣ ಮಾಡಿದರು ಜಗತ್ಸರ್ವಾಧೀನನಾದ ಪರಮಾತ್ಮನನ್ನು ಭಜಿಸಿ ಪೂಜಿಸುವುದಕ್ಕೆ ಭಗವಂತನಿಂದ ಸೃಷ್ಟಿಯಾದ ಮನುಷ್ಯರೆಲ್ಲರಿಗೂ ಸಮಾನಾವಕಾಶವಿರಬೇಕೆಂದು ತಿಳಿಸಿದರು. ಅನೇಕ ತಲೆಮಾರುಗಳಿಂದ ಬಂದಿದ್ದ ಪದ್ಧತಿಯನ್ನು ತಪ್ಪಿಸಿ ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಶ್ರಮಿಸಿದ ದಿವಂಗತ ಮಹಾತ್ಮ ಗಾಂಧಿಯವರನ್ನು ಕೊಂಡಾಡಿದರು ಪ್ರತಿಯೊಬ್ಬ ಹರಿಜನನೂ ತನಗೆ ದೊರಕಿಸಿಕೊಟ್ಟ ಈ ಸೌಲಭ್ಯಕ್ಕಾಗಿ ಮಹಾತ್ಮ ಗಾಂಧಿಜಿಯವರ ಆದರ್ಶ ತತ್ವಗಳಾದ ಸತ್ಯ, ಅಹಿಂಸೆ, ನ್ಯಾಯ ಇವೇ ಮುಂತಾದುವುಗಳನ್ನು ಪಾಲಿಸಿಕೊಂಡು ಬರಬೇಕೆಂದು ಹೇಳಿದರು ಹರಿಜನರು ಒಳ ಪಂಗಡಗಳನ್ನು ಬಿಟ್ಟು, ಒಗ್ಗಟ್ಟಿನಿಂದ ವರ್ತಿಸಿ, ಅಭಿವೃದ್ಧಿ ಹೊಂದಬೇಕೆಂದು ಸೂಚಿಸಿದರು.

ಪ್ರಾರಂಭದಲ್ಲಿ ಜಿಲ್ಲಾ ಹರಿಜನ ಸಂಘದ ಅಧ್ಯಕ್ಷರಾದ ಶ್ರೀ ಎಸ್ ರಂಗರಾಮಯ್ಯನವರು ಸ್ವಾಗತ ಭಾಷಣ ಮಾಡಿದರು ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಶ್ರೀ ಸಿ ಆರ್ ರಾಮಯ್ಯನವರೂ ಕಾರ್ಯದರ್ಶಿಯವರಾದ ಶ್ರೀ ಪ್ರಿಯವರ್ತರೂ ಮತ್ತು ಮೈಸೂರು ನಗರದ ಹರಿಜನ ಸೇವಾ ಸಂಘದ ಅಧ್ಯಕ್ಷಿಣಿಯಾದ ಶ್ರೀಮತಿ ರಾಮೇಶ್ವರಮ್ಮನವರೂ ಹರಿಜನರ ಏಳಿಗೆ ಬಗ್ಗೆ ಭಾಷಣಗಳನ್ನು ಮಾಡಿದರು

ನಂತರ ಆದಿಕರ್ನಾಟಕ ಪುರ, ಜಲಪುರಿ ಮುಂತಾದ ಕಡೆಗಳಿಂದ ಬಂದಿದ್ದ ಹರಿಜನರು ಭಜನೆ ನಡೆಸಿದರು ಶ್ರೀ ಕೆ ಶೇಷಾದ್ರಿಯವರು ವಂದನೆ ಅರ್ಪಿಸಿದರು

ಟೌನ್‌ಹಾಲ್ ಮೈದಾನದಿಂದ ಹರಿಜನರೆಲ್ಲರೂ ತ್ರಿವರ್ಣ ಧ್ವಜ ಮತ್ತು ಮಹಾತ್ಮ ಗಾಂಧೀಜಿಯವರ ಭಾವಚಿತ್ರದೊಡನೆ ಸಯ್ಯಾಜಿರಾವ್ ರಸ್ತೆಯಿಂದ ಸಂತೇಪೇಟೆಗೆ ಬಂದು ಅಲ್ಲಿ ದೇವಸ್ಥಾನದೊಳಕ್ಕೆ ಪ್ರವೇಶಿಸಿದರು ದೇವಸ್ಥಾನದ ಬಳಿ ಧರ್ಮದರ್ಶಿಗಳ ಪರವಾಗಿ ಶ್ರೀ ಬಿ ಎಸ್. ಸುಬ್ಬರಾಯರು ಜಿ|| ಆಬೂ ಬೇಕರ್‌ರವರೂ ಎಲ್ಲರನ್ನೂ ಸ್ವಾಗತಿಸಿದರು ದೇವಸ್ಥಾನದಲ್ಲಿ ಪ್ರದಕ್ಷಿಣೆಯಾದನಂತರ ಮಂಗಳಾರತಿಯು ಜರುಗಿ ಸರ್ವರಿಗೂ ತೀರ್ಥ ಪ್ರಸಾದವನ್ನು ವಿನಿಯೋಗಿಸಲಾಯಿತು ಸಂಚಾಲಕರಾದ ಶ್ರೀ ಬಿ ಎಸ್ ಸುಬ್ಬರಾಯರೂ, ಮುಜರಾಯಿ ಸಚಿವರೂ, ಶ್ರೀ ಕೆ ಸಿದ್ದಯ್ಯನವರೂ ಭಾಷಣ ಮಾಡಿ ಈ ಅವಕಾಶ ದೊರೆತಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು

ಸಮಾರಂಭವು ಶಾಂತಿಯಿಂದಲೂ, ಶಿಸ್ತಿನಿಂದಲೂ ಯಶಸ್ವಿಯಾಗಿಯೂ ಜರುಗಿತು

ರಷ್ಯಕ್ಕೆ ಪಾಕಿಸ್ತಾನದ ಪ್ರಧಾನಿಯ ಭೇಟಿ

ಪಾಕೀಸ್ತಾನದ ಪ್ರಧಾನಿ ಲಿಯಾಖತ್ ಆಲಿ ಖಾನರವರು ಬರುವ ನವಂಬರ್ ತಿಂಗಳಿನಲ್ಲಿ ರಷ್ಯಕ್ಕೆ ಭೇಟಿ ಕೊಡುವರೆಂದೂ, ಅವರ ಪ್ರವಾಸಕ್ಕಾಗಿ ರಷ್ಯವು ಕರಾಚಿಗೆ ಒಂದು ವಿಮಾನವನ್ನು ಕಳುಹಿಸುವುದೆಂದೂ ಹೇಳಲಾಗಿದೆ

ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಬೆಲೆ 2—0—0

ಗೂರ್ಕ್ಸ್, ಉಬ್ಬಸ, ಪರಿಣಾಮಶೂಲೆ ಮತ್ತು Tonsil ಗೆ (ಗಲಾಯುಕ) ಖಾತರಿಯಾದ ಔಷಧಿ ದೊರೆಯುತ್ತೆ, ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಬ್ರಿಟನ್ನಿನಲ್ಲಿ ೨೮೨ ಜನ ಕೋಟ್ಯಾಧೀಶ್ವರರು

ಬ್ರಿಟನ್ನಿನಲ್ಲಿ ವಿಶೇಷವಾಗಿ ತೆರಿಗೆಗಳು ಇರುವುದರಿಂದ ಅಲ್ಲಿ ವರ್ಷಕ್ಕೆ ೬ ಸಾವಿರ ಪೌಂಡ್ ವರಮಾನ ಇರುವವರು ಕೇವಲ ೭೦ ಜನರು ಮಾತ್ರ ಇದ್ದಾರೆಂದು ಹೇಳಲಾಗಿದೆ ೧೯೪೭-೪೮ರಲ್ಲಿ ೩,೮೨,೦೦೦ ಜನರು ಹಲವಾರು ತೆರಿಗೆಗಳನ್ನು ಕೊಟ್ಟ ನಂತರ ಅವರಲ್ಲಿ ಕೇವಲ ೧ ಸಾವಿರ ಪೌಂಡುಗಳ ಮಾತ್ರ ಇದ್ದುವೆಂದು ಹೇಳಲಾಗಿದೆ ಕಳೆದ ವರ್ಷ ಅಲ್ಲಿ ೨೮೨ ಜನ ಕೋಟ್ಯಾಧೀಶರಿದ್ದರೆಂದೂ, ೧೯೪೫ ೪೬ರಲ್ಲಿ ೨೪೨ ಮಂದಿ ಇದ್ದರೆಂದೂ ತಿಳಿಸಲಾಗಿದೆ

ರಾಜಾಜಿಯವರ ಮೂರ್ತಿ ಸ್ಥಾಪನೆ

೧೯೩೦ರಲ್ಲಿ ತಂಜಾವೂರಿನ ಹತ್ತಿರವಿರುವ ವೇದಾರಣ್ಯದಲ್ಲಿ ರಾಜಾಜಿಯವರ ನಾಯಕತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಜ್ಞಾಪಕಾರ್ಥವಾಗಿ ಅಲ್ಲಿ ಒಂದು ಪಾರ್ಕನ್ನು ನಿರ್ಮಿಸಿ, ಶ್ರೀ ರಾಜಗೋಪಾಲಾಚಾರಿಯವರ ಮೂರ್ತಿಯನ್ನು ಸ್ಥಾಪಿಸಬೇಕೆಂದು ಅಲ್ಲಿನ ಪಂಚಾಯಿತಿ ಬೋರ್ಡಿನವರು ನಿರ್ಧರಿಸಿದ್ದಾರೆ

ಲಕ್ಷ್ಮೀ ಥಿಯೇಟರ್

ಬೆಳಗಿನ ಪ್ರದರ್ಶನಗಳು
5-8-49ರಿಂದ 3 ದಿನಗಳು ಮಾತ್ರ
ಬೆಳಗ್ಗೆ ೧೦.೩೦ ಘಂಟೆಗೆ

ದೇವದಾಸ್

ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ
ಪಾತ್ರ — ಜಮುನಾ, ಸೈಗಾಲ್

ಖಾಸಿಂ ರಜ್ವಿಗೆ ಲಂಡನ್ನಿನ ಲಾಯರು

ಹೈದರಾಬಾದಿನ ರಜಾಕರರ ಮುಖ್ಯ ನಾಯಕನಾದ ಖಾಸಿಂ ರಜ್ವಿಯ ಮೊಕದ್ದಮೆಯಲ್ಲಿ ಅವನ ಪರವಾಗಿ ವಾದಿಸಲು ಲಂಡನ್ನಿನ ವಕೀಲರಾದ ಮಿ|| ಜಿ ರಾಬರ್ಟ್ಸ್‌ರವರು ಹೈದರಾಬಾದಿಗೆ ಆಗಮಿಸಿದ್ದಾರೆ

ರಾಜಕಮಲ್

ಮೈಸೂರು

4 8-49ರಿಂದ ಯಶಸ್ವಿಯಾದ
2ನೇ ವಾರ
ಪ್ರತಿದಿನ 2 ಆಟಗಳು

ನದಿಯಾ ಕೆ * ಪಾರ್ *

ಕಾಮಿನಿ ಕೌಶಲ್, ದಿಲೀಪ್ ಕುಮಾರ್ ನಟಿಸಿರುವ
ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ

MORNING SHOWS
From 5-8 49 for 4 days

CAPTAIN - - BOYCOTT

—WITH.—

Stewart Granger &
Kathleen Ryan

ಘನವಾದ ಸಂಗೀತ ಕಚೇರಿ

ಭಾರತದ ಗೌರ್ನರ್ ಜನರಲ್ ರಾಜಾಜಿಯವರ ಬಹುಮಾನವನ್ನು ಪಡೆದ
ಅಣ್ಣಾಮಲೈ ನಗರದ **ವೇದವಲ್ಲಿ**ಯವರ ಹಾಡುಗಾರಿಕೆ
ವಿ|| ಎ ವಿ ಕೃಷ್ಣಮಾಚಾರ್ಲು ಪಿಡಲ್, ವಿ|| ಎಂ ಎಸ್ ರಾಮಯ್ಯನವರ ಮೃದಂಗ
ವಿ|| ಶೇಷಗಿರಿ ದಾಸ್- ಖಂಜಿರ
6-8-49ನೇ ಶನಿವಾರ ಸಂಜೆ 6 ಗಂಟೆಗೆ ಸಹಕಾರ ಭವನದಲ್ಲಿ
ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ
ಟಿಕೆಟ್ ದರ - ಗಂ ರೂ ೧-೦-೦, ಹೆಂ. ರೂ ೦-೮-೦

The National Institute of Engineering, Mysore

ADMISSION TO THE A M·I E CLASS

In view of the modification in the rules for ad mission to the student-ship of the Institution of Engi neers (India) reducing the age limit from 21 to 18 years, it has been decided to comply with the repre sentation by the passed Intermediate candidates and allot a few seats to them also in the order of merit

Only students who are 18 years of age and who have obtained 50% and above in their optionals (P. C M) need apply for seats before 8th August and obtain forms in person The last date for joining is 12th August 1949,

S RAMASWAMY,
Principal

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ ಟಾಕೀಸ್

ಎರಡು ಥಿಯೇಟರುಗಳಲ್ಲಿಯೂ

5-8-49ರಿಂದ :: ಅಮೋಘ ಪ್ರಾರಂಭ

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ಅತ್ಯುತ್ತಮ ತಮಿಳು ಚಿತ್ರ

— ನವಜೀವನಂ —

ತಾರಾಗಣ - ನಾಗಯ್ಯ, ಕನ್ನಾಂಬ, ಎಲ್. ನಾರಾಯಣ ರಾವ್,
ಟಿ. ಆರ್. ರಾಮಚಂದ್ರನ್, ವರಲಕ್ಷ್ಮೀ, ಜಯಲಕ್ಷ್ಮೀ
ಮುಂತಾದವರು

(R V ಪಿಕ್ಚರ್ಸ್ ರಿಲೀಸ್

ಶ್ರೀ ಗಣೇಶಾ ಟಾಕೀಸಿನಲ್ಲಿ
ಮುಂದಿನ ಬದಲಾವಣೆ

WE TWO (ತಮಿಳು) ನಾವಿಬ್ಬರು

Edited, printed and published by A R Nagarajan at Sadhvi Press, D Subbiah Road, Mysore

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೫-೮-೧೯೪೯ [ಸಂಚಿಕೆ ೧೩

– ಮಂತ್ರಿಮಂಡಲದ – ಪುನರ್ರಚನೆ ಸಾವಕಾಶ

ಮೋಟಾರು ಕೆಲಸಗಾರರ ಮುಷ್ಕರವೇ?

ಮೈಸೂರು ೫.

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ಮೊನ್ನೆ ದಿನ ಶ್ರೀ ಸಿ. ಜೆ. ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಾಡರ್ನ್ ಮೋಟಾರು ಕಂಪೆನಿಯಲ್ಲಿ ಕಂಡಕ್ಟರಾಗಿದ್ದ ಶ್ರೀ ಗುಂಡಪ್ಪನವರ ವಿಚಾರದಲ್ಲಿ ಕಾನೂನಿನ ಪ್ರಕಾರ ತೆಗೆದುಕೊಳ್ಳಬೇಕಾದ ಕಾರ್ಯ ಕ್ರಮವು ಮುಗಿದುಹೋಗಿರುವುದರಿಂದ ಕೂಡಲೇ ಬ್ಯಾಲಟ್ ತೆಗೆದುಕೊಳ್ಳಬೇಕೆಂದೂ, ಆ ರೀತಿ ಮುಂದಿನ ತಿಂಗಳು ೩ ನೇ ತಾ|| ರೊಳಗಾಗಿ ಮಾಡದಿದ್ದಲ್ಲಿ ಮಾರನೇ ದಿನದಿಂದ ಮುಷ್ಕರ ಹೂಡಬೇಕೆಂದೂ ತೀರ್ಮಾನಿಸಲಾಯಿತು.

ಸರ್ಕಾರದವರು ಅನೇಕ ಖಾಸಗೀ ಬಸ್ ಲೈನುಗಳನ್ನು ವಹಿಸಿಕೊಂಡಾಗ, ಆ ಲೈನುಗಳಲ್ಲಿರುವ ಕೆಲಸಗಾರರನ್ನೇ ನೇಮಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡಿದ್ದರೂ ಆ ಬಗ್ಗೆ ಯಾವ ಕಾರ್ಯ ಕ್ರಮವನ್ನು ತೆಗೆದುಕೊಳ್ಳದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ತಮ್ಮ ಪ್ರಾರ್ಥನೆಯನ್ನು ಸರ್ಕಾರದವರು ಈಡೇರಿಸಬೇಕೆಂದು ಕೋರಲಾಯಿತು.

ಎಲ್ಲ ಬಸ್ ಮಾಲೀಕರುಗಳಿಗೂ ನೋಟೀಸ್ ಆಫ್ ಚೇಂಜನ್ನು ಕೊಡಬೇಕೆಂದು ನಿರ್ಧರಿಸಲಾಯಿತು.

ಸರಗೂರಿನ ಹೈಸ್ಕೂಲು

ಹೆಗ್ಗಡದೇವನಕೋಟೆ ತಾ|| ಸರಗೂರಿನಲ್ಲಿ ಜಿಲ್ಲಾ ಬೋರ್ಡಿನ ಹೈಸ್ಕೂಲು ಈ ತಿಂಗಳಿನಿಂದ ಪ್ರಾರಂಭವಾಗಿರುವುದರಿಂದ ತಾಲ್ಲೂಕಿನಲ್ಲಿ ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳೆಲ್ಲರೂ ಕೂಡಲೆ ಬಂದು ಸೇರಬೇಕೆಂದೂ, ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಏರ್ಪಡಿಸಲಾಗಿದೆಯೆಂದೂ ಅಲ್ಲಿನ ಪುರ ಸಭೆಯ ಅಧ್ಯಕ್ಷರು ತಿಳಿಸಿರುತ್ತಾರೆ

೩ ಪೌಂಡ್ ತೂಕದ ಮೊಟ್ಟೆ

ಆಸ್ಟ್ರೇಲಿಯದ ವಸ್ತು ಪ್ರದರ್ಶನಾಲಯದಲ್ಲಿ ೧೮೬೨ ರಿಂದ ೧೩ ಇಂಚು ಉದ್ದದ ಒಂದು ಮೊಟ್ಟೆಯು ಇರುವುದೆಂದೂ, ಅದು ಎರಡು ಶತಮಾನಗಳ ಹಿಂದಿನ ಮಡಗಾಸ್ಕರಿನ ಪಕ್ಷಿಯ ಮೊಟ್ಟೆಯೆಂದೂ ಹೇಳಲಾಗಿದೆ. ಮೊಟ್ಟೆಯೊಳಗಿರುವ ವಸ್ತುಗಳನ್ನು ಕಂಡು ಹಿಡಿಯಲು ಅದರ ಎಕ್ಸ್ ರೇ ಫೋಟೋವನ್ನು ತೆಗೆಯಲಾಗಿದೆ. ೯|| ಇಂಚು ಸುತ್ತಳತೆಯುಳ್ಳ ಅದು ೩ ಪೌಂಡು ತೂಕವಿರುವುದೆಂದು ಹೇಳಲಾಗಿದೆ.

ಬ್ರಾಂದಿ ಅಂಗಡಿಗೆ ರಹದಾರಿ

ಗುಂಡ್ಲುಪೇಟೆ ೨

ಈ ಊರಿನಲ್ಲಿ ಹೊಸದಾಗಿ ಬ್ರಾಂದಿ ಅಂಗಡಿಯನ್ನು ತೆರೆಯಲು ಸರ್ಕಾರದವರು ಅವಕಾಶ ಕೊಟ್ಟಿರುವರೆಂದು ತಿಳಿದು ಬಂದಿದೆ. ಇದರಿಂದ ಜನರಿಗೆ ತುಂಬಾ ಕಷ್ಟ ನಷ್ಟಗಳು ಉಂಟಾಗುವುವು. ಸಂಪೂರ್ಣ ಪಾನ ನಿರೋಧವಿರುವ ಪಕ್ಕದ ನೀಲಗಿರಿ ಜಿಲ್ಲೆಯಿಂದ ಇಲ್ಲಿಗೆ ಕುಡಿಯಲು ಬರುವವರ ಸಂಖ್ಯೆಯು ದಿನ ದಿನಕ್ಕೆ ಹೆಚ್ಚುತ್ತಿದೆ. ಪಾನ ನಿರೋಧವನ್ನು ಜಾರಿಗೆ ತರಲಿರುವ ಸರ್ಕಾರದವರು ಈ ಹೊಸ ರಹದಾರಿಯನ್ನು ರದ್ದು ಮಾಡಬೇಕೆಂದು ಕೋರಲಾಗಿದೆ

ಸಮ್ಮಿಶ್ರ ಮಂತ್ರಿ ಮಂಡಲವೇ ಇರುವುದು

ಪಾರ್ಲಿಮೆಂಟರಿ ಕಾರ್ಯದರ್ಶಿಗಳ ನೇಮಕ

ಮುಖ್ಯ ಮಂತ್ರಿಗಳ ಹೇಳಿಕೆ

ಮೈಸೂರು ೮

ಈ ದಿನ ಬೆಳಿಗ್ಗೆ ೯-೪೫ ಗಂಟೆಗೆ ಮುಖ್ಯ ಮಂತ್ರಿ ಶ್ರೀ ಕೆ.ಸಿ ರೆಡ್ಡಿಯವರು ಶ್ರೀ ಮನ್ಮಹಾರಾಜರವರನ್ನು ಭೇಟಿ ಮಾಡಿ, ಒಂದು ಗಂಟೆ ಕಾಲ ಮಾತು ಕತೆ ನಡೆಸಿದರು.

ಪತ್ರಿಕಾ ಪ್ರತಿನಿಧಿಗಳು ಅವರನ್ನು ಶೇಷಾದ್ರಿ ಭವನದಲ್ಲಿ ಭೇಟಿ ಮಾಡಿ, ಮಂತ್ರಿ ಮಂಡಲದ ಪುನರ್ರಚನೆ ವಿಚಾರವಾಗಿ ಪ್ರಶ್ನಿಸಿದಾಗ, ಆ ವಿಷಯದಲ್ಲಿ ಈಗ ಯಾವ ನಿರ್ಧಾರವೂ ಆಗಿಲ್ಲವೆಂದೂ, ನಾಳೆಯಾಗಲೀ ಅಥವ ೮ನೇ ತಾ|| ಆಗಲೀ ಈ ಬಗ್ಗೆ ಪ್ರಭುಗಳ ಘೋಷಣೆಯು ಹೊರಬೀಳುವ ಸಂಭವವಿಲ್ಲವೆಂದೂ ತಿಳಿಸಿದರು. ಈಗಿರುವ ಸಮ್ಮಿಶ್ರ ರೀತಿಯ ಮಂತ್ರಿಮಂಡಲವನ್ನು ಬದಲಾಯಿಸುವ ಯೋಚನೆಯನ್ನು ಸರ್ಕಾರದವರು ಮಾಡಿಲ್ಲವೆಂದೂ ಹೇಳಿದರು.

ಸಧ್ಯದಲ್ಲಿಯೇ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗುವುದೆಂದೂ ಈ ವಿಚಾರದಲ್ಲಿ ಹೆಚ್ಚು ವಿವರಗಳನ್ನು ಪಡೆಯಲು ತಾವು ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತ್ಯ ಸರ್ಕಾರದೊಡನೆ ವ್ಯವಹಾರ ನಡೆಸುತ್ತಿರುವುದಾಗಿಯೂ ತಿಳಿಸಿದರು. ಇಷ್ಟರಲ್ಲಿಯೇ ಪಬ್ಲಿಕ್ ಸರ್ವೀಸ್ ಕಮೀಷನನ್ನು ನೇಮಿಸಲಾಗುವುದೆಂದೂ ಹೇಳಿದರು.

ಸಂಸ್ಥಾನದಲ್ಲಿ ೩೦ ವರ್ಷಗಳಿಂದಲೂ ನಡೆದು ಬಂದಿದ್ದ ದಿವಾನಗಿರಿಯು ನಾಳೆಯಿಂದ ರದ್ದಾಗುವುದೆಂದೂ, ಈ ಬಗ್ಗೆ ನಾಳೆ ದಿನ ಪ್ರಭುಗಳಿಂದ ಘೋಷಣೆ ಹೊರಬೀಳುವುದೆಂದೂ, ಮತ್ತು ಮೈಸೂರು ಕಾನೂನಿನಲ್ಲಿ ಈ ವಿಚಾರವಾಗಿ ಅವಶ್ಯಕವಾದ ತಿದ್ದುಪಡಿಗಳೂ ಆಗಿ, ಮುಖ್ಯ ಮಂತ್ರಿಗಳೇ ದಿವಾನರ ಕೆಲಸವನ್ನು ವಹಿಸಿಕೊಳ್ಳುವರೆಂದೂ ಅವರು ಹೇಳಿದರು

ಇದೇ ೧೮ ನೇ ತಾ|| ಸೇರಲಿರುವ ಮೈಸೂರು ರಾಜ್ಯಾಂಗ ಸಭೆಯು ಭಾರತದಲ್ಲಿ ಇಲ್ಲಿಯವರೆಗೆ ಆಗಿರುವ ರಾಜಕೀಯ ಘಟನೆಗಳನ್ನು ಪರಿಶೀಲಿಸುವುದಲ್ಲದೆ ಸಂಸ್ಥಾನಗಳ ಮಾದರಿ ರಾಜ್ಯಾಂಗದ ಬಗ್ಗೆ

ಮೈಸೂರಿಗೆ ಭಾರತದಿಂದ ೨೫ ಸಾವಿರ ಟನ್ ಆಹಾರ

ಬೆಂಗಳೂರು ೫

ದೆಹಲಿಯ ನಡೆದ ಆಹಾರ ಸಮ್ಮೇಳನದಲ್ಲಿ ಭಾಗವಹಿಸಿ, ಸಚಿವ ಶ್ರೀ ಟಿ ಮರಿಯಪ್ಪನವರು ಮೊನ್ನೆ ದಿನ ವಾಪಸು ಬಂದರು. ಸಂಸ್ಥಾನದಲ್ಲಿ ಮುಂದಿನ ತಿಂಗಳಿನ ಹೊತ್ತಿಗೆ ಆಹಾರ ಪರಿಸ್ಥಿತಿಯು ಕಷ್ಟವಾಗುವುದರಿಂದ ಭಾರತ ಸರ್ಕಾರದವರು ೨೫ ಸಾವಿರ ಟನ್ ಧಾನ್ಯವನ್ನು ಮತ್ತು ಹೆಚ್ಚು ಆಹಾರ ಬೆಳೆಯ ಯೋಜನೆಗೆ ಹಣದ ಸಹಾಯವನ್ನು ಕೊಡುವುದಾಗಿ ಕೇಂದ್ರ ಸರ್ಕಾರದವರು ತಮ್ಮ ಮನವಿಗೆ ಭರವಸೆ ಕೊಟ್ಟಿದ್ದಾರೆಂದು ಸಚಿವರು ತಿಳಿಸಿರುತ್ತಾರೆ

ಕೇಂದ್ರ ರಾಜ್ಯಾಂಗ ಸಭೆಯವರು ಸೂಚಿಸಿರುವ ಕೆಲವು ತಿದ್ದುಪಡಿಗಳನ್ನು ಪರಿಶೀಲಿಸುವುದೆಂದೂ, ಭಾರತವು ರಾಜ್ಯಾಂಗವನ್ನು ಘೋಷಿಸಿದ ನಂತರ, ಅದನ್ನು ಸಂಸ್ಥಾನದ ರಾಜ್ಯಾಂಗ ಸಭೆಯು ಅನುಮೋದಿಸುವುದೆಂದೂ ಈ ಸಭೆಯು ಮುಂದಿನ ಜನವರಿ ೨೬ನೇ ತಾ|| ವರೆಗೂ ಇರುವುದೆಂದೂ ಮುಖ್ಯ ಮಂತ್ರಿಗಳು ಹೇಳಿದರು

ಮೈಸೂರಿನ ಕೆಲವು ಮಂತ್ರಿಗಳ ಮೇಲೆ ಬಂದಿರುವ ಆರೋಪಣೆಗಳನ್ನು "ಅಖಿಲ ಭಾರತ ಕಾಂಗ್ರೆಸ್ ಪ್ರಧಾನ ನಾಯಕರು ತಮ್ಮಲ್ಲಿ ಚರ್ಚಿಸಿದರೇ" ಎಂದು ಪ್ರಶ್ನಿಸಲಾಗಿ ಅವರು ಆ ವಿಚಾರವನ್ನೇ ತನಗೆ ತಿಳಿಸಲಿಲ್ಲವೆಂದೂ ಉತ್ತರ ಕೊಟ್ಟರು

ಈ ದಿನ ಸಂಜೆ ಶ್ರೀ ರೆಡ್ಡಿಯವರು ಬೆಂಗಳೂರಿಗೆ ಹಿಂದಿರುಗುವರು. ನಾಳೆ ದಿನ ಪುನಃ ಮಂತ್ರಿ ಮಂಡಲದ ಸಭೆಯು ನಡೆಯುವುದು.

ಪ್ರಭುಗಳೊಡನೆ ದಿವಾನರ ಭೇಟಿ

ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ಈ ದಿನ ೧೨ ಗಂಟೆಗೆ ಆಗಮಿಸಿ, ಮಧ್ಯಾಹ್ನ ೩ ಗಂಟೆಗೆ ಶ್ರೀ ಮನ್ಮಹಾರಾಜರವರನ್ನು ಭೇಟಿ ಮಾಡಿದರು

ಬರುವ ಅಕ್ಟೋಬರ್ ತಿಂಗಳಿನ ಅಂತ್ಯದವರೆಗೆ ಒಟ್ಟೆ ಕೂಪನ್ನುಗಳನ್ನು ರದ್ದು ಮಾಡಲಾಗಿದೆಯೆಂದೂ ಅದರಿಂದ ಕೂಪನ್ನುಗಳಿಲ್ಲದೆ ಒಟ್ಟೆಗಳನ್ನು ಪಡೆಯಬಹುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ

ಹೊಸಕೋಟೆ ತಾ|| ಗ್ರಾಮದಲ್ಲಿ ಪುಂಡರ ಹಾವಳಿ

ಸ್ವಂ ಸು ಪ್ರೋ.] ಬೆಂಗಳೂರು ೫

ಹೊಸಕೋಟೆ ತಾಲ್ಲೂಕು ಚನ್ನಸಂದ್ರದಲ್ಲಿರುವ ಪ್ರ|| ಪ|| ಸಭಾ ಸದಸ್ಯರಾದ ಶ್ರೀ ಅಪ್ಪಯ್ಯ ಗೌಡ, ಅವರ ಅಣ್ಣ ಪಟೇಲ್ ಶ್ರೀ ಚನ್ನಮಾರೇಗೌಡ ಮತ್ತು ಅವರ ಪತ್ನಿಯನ್ನು ಕೆಲವು ಜನ ಪುಂಡರು ಅವರ ಮನೆಗೆ ನುಗ್ಗಿ ಬಹಳವಾಗಿ ಹೊಡೆದು ಗಾಯಪಡಿಸಿದರೆಂದೂ, ಅವರುಗಳು ಬೆಂಗಳೂರಿಗೆ ಲಾರಿಯಲ್ಲಿ ಬಂದು ಗೃಹ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಲು ಪ್ರಯತ್ನ ಪಟ್ಟರೆಂದೂ, ಅಷ್ಟರಲ್ಲಿ ಸಚಿವರಾದ ಶ್ರೀ ಭಾಷ್ಯಂರವರು ಅವರನ್ನು ಕಂಡು ಸಮಾಧಾನ ಪಡಿಸಿ, ಮೊದಲು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯುವಂತೆ ಸೂಚನೆ ಕೊಟ್ಟರೆಂದೂ ತಿಳಿದುಬಂದಿದೆ

ಖಾಸಿಂ ರಜ್ವಿಯ ಲಂಡನ್ ವಕೀಲರಿಗೆ ಅವಕಾಶವಿಲ್ಲ

ಹೈದರಾಬಾದಿನ ಖಾಸಿಂ ರಜ್ವಿಯ ಪರ ವಕಾಲತ್ತು ವಹಿಸಲು ಲಂಡನ್ನಿನಿಂದ ಬಂದಿರುವ ವಕೀಲರಾದ ಮಿ|| ರಾಬರ್ಟ್ಸ್ ಮತ್ತು ಮಿ|| ಲೇಕರವರುಗಳಿಗೆ ಉರ್ದು ಭಾಷೆ ಬರದಿರುವುದರಿಂದ ಅವರನ್ನು ಹೈ ಕೋರ್ಟಿಗೆ ವಕೀಲರಾಗಿ ಸೇರಿಸಲು ಕಾನೂನಿನ ಪ್ರಕಾರ ಅವಕಾಶವಿಲ್ಲವೆಂದು ಅವರುಗಳ ಅರ್ಜಿಯನ್ನು ಹೈ ಕೋರ್ಟಿನವರು ನಿರಾಕರಿಸಿದ್ದಾರೆ.

ಅಂತಿಮ ಪ್ರಾರ್ಥನೆ ನಡೆಸದಿದ್ದುದಕ್ಕೆ ಪಾದ್ರಿಗೆ ಶಿಕ್ಷೆ

ಜಕೋಸ್ಲೋವೇಕಿಯಾದಲ್ಲಿ ಮರಣಶಯ್ಯೆಯಲ್ಲಿದ್ದ ಕಮ್ಯೂನಿಸ್ಟ್ ಮಹಿಳೆಯೊಬ್ಬರಿಗೆ ಅಂತಿಮ ಮತ ಪ್ರಾರ್ಥನೆಯ ನಡೆಸಲು ನಿರಾಕರಿಸಿದ ರೋಮನ್ ಕ್ಯಾಥಲಿಕ್ ಪಾದ್ರಿಯೊಬ್ಬರಿಗೆ ೮ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಕಮ್ಯೂನಿಸ್ಟರನ್ನು ರೋಮನ್ ಕ್ಯಾಥಲಿಕ್ ಪಾದ್ರಿಗಳು ಆಶೀರ್ವದಿಸಕೂಡದೆಂದು ಪೋಪರು ಆಜ್ಞೆ ಮಾಡಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಕುದುರೆ ಲದ್ದಿ ಬೀಳದಂತೆ ಚೀಲ ಕಟ್ಟಲು ಆಜ್ಞೆ

ಪೂನಾನಗರದ ಜಟಕಾ ಗಾಡಿಯವರಿಗೆ ಪ್ರಮಾದವಾದ ಸಮಸ್ಯೆಯು ಎದ್ದಿರುತ್ತದೆ. ಸಾರ್ವಜನಿಕ ರಸ್ತೆಗಳಲ್ಲಿ ಗಾಡಿ ಕುದುರೆಗಳ ಲದ್ದಿಯು ಬೀಳುವದನ್ನು ಬೊಂಬಾಯಿ ಸರಕಾರದವರು ನಿಷೇಧಿಸಿರುವುದೇ ಇದಕ್ಕೆ ಕಾರಣ. ಲದ್ದಿಯು ನೆಲದ ಮೇಲೆ ಬೀಳದಂತೆ ಕುದುರೆಗಳ ಹಿಂದುಗಡೆ ಚೀಲಗಳನ್ನು ಕಟ್ಟಬೇಕೆಂದು ಆಜ್ಞೆ ಮಾಡಲಾಗಿದೆ. ಎಷ್ಟು ಚೀಲಗಳನ್ನು ಒದಗಿಸಿಕೊಳ್ಳಬೇಕೆಂಬುದು ಗಾಡಿಯವರಿಗೆ ಮತ್ತೊಂದು ಸಮಸ್ಯೆಯಾಗಿದೆ. ಈ ಆಜ್ಞೆಯು ಲದ್ದಿಗೆ ಮಾತ್ರ ಅನ್ವಯಿಸುವುದಾದರೆ ಕುದುರೆಯ ಗಂಜಲಕ್ಕೆ ಮತ್ತೊಂದು ಚೀಲವನ್ನು ಕಟ್ಟಬೇಕೇ–ಎಂದೂ ಕೆಲವರು ವಿನೋದವಾಗಿ ಪ್ರಶ್ನಿಸುತ್ತಾರೆ. ಈ ಚೀಲಗಳನ್ನು ಒಗೆದು ಒಣಗಿಸಲು ಬೇಕಾದಾಗ ದೊರಕುವರೇ ಎಂಬುದೂ ಜಟಕಾ ಗಾಡಿಯವರಿಗೆ ಮತ್ತೊಂದು ಚಿಂತೆಯಾಗಿರುತ್ತದೆಯೆಂದು ವರದಿಯಾಗಿದೆ

ಟೆಹ್ರಿ ರಾಜರಿಗೆ ೩ ಲಕ್ಷ ರೂ ರಾಜವೇತನ

ಇದೇ ೧ನೇ ತಾ॥ನಿಂದ ಸಂಯುಕ್ತ ಪ್ರಾಂತ್ಯದಲ್ಲಿ ಐಕ್ಯವಾದ ಟೆಹ್ರಿ ಗರ್ವಾಲ್ ಸಂಸ್ಥಾನದ ರಾಜರಿಗೆ ವರ್ಷಕ್ಕೆ ೩ ಲಕ್ಷ ರೂ ರಾಜವೇತನವನ್ನು ಕೊಡಲು ನಿರ್ಧರಿಸಲಾಗಿದೆ

ಆ ಕಾರ್ಕಟರಿಗೆ ರಾಯಭಾರತ್ವವೇ?

ಇದೇ ೬ ನೇ ತಾ॥ ನಿಂದ ನಿವೃತ್ತರಾಗಲಿರುವ ಮಾಸರಾದ ಸರ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ಸದ್ಯದಲ್ಲಿಯೇ ವಿದೇಶೀ ರಾಯಭಾರತ್ವವನ್ನು ಕೊಡಲಾಗುವುದೆಂದ ತಿಳಿದುಬಂದಿದೆ

* ಪ್ರಭಾ *

6-8-49ರಿಂದ ಪ್ರತಿ ದಿನ 3 ಆಟಗಳು

ಮಿರ್ಜಾ - - ಸಾಹೆಬಾನ್

ಪಾತ್ರ: ನೂರ್ ಜಹಾನ್ ಮತ್ತು ತ್ರಿಲೋಕ್ ಕಪೂರ್

ಹೆಂಡದ ಅಂಗಡಿ ಮುಚ್ಚಿಸಲು ಸತ್ಯಾಗ್ರಹ

ದೆಹಲಿಯಲ್ಲಿ ಇತ್ತೀಚೆಗೆ ನೂತನ ಹೆಂಡದ ಅಂಗಡಿಗಳಿಗೆ ಪರವಾನಿ ಕೊಟ್ಟಿರುವುದನ್ನು ಪ್ರತಿಭಟಿಸಲು ಅಲ್ಲಿನ ಕಾಂಗ್ರೆಸ್ ಸಮಿತಿಯವರು ಮುಂದಿನ ತಿಂಗಳಿನಿಂದ ಸತ್ಯಾಗ್ರಹ ಹೂಡಬೇಕೆಂದು ನಿರ್ಧರಿಸಿದ್ದಾರೆ

॥ ಶ್ರೀ ॥

ಗಾಯತ್ರೀ ಟಾಕೀಸ್

5—8—49ರಿಂದ 2ನೇ ವಾರ

ಡಾನ್ ಜುವಾನ್

THE NEW ADVENTURES of DON JUAN (Technicolor)

With Errol Flynn

MORNING SHOWS on 6th & 7th

Things to Come

ಜಪಾನಿನಲ್ಲಿ ಸ್ಮಾರಕ ಸ್ಟಾಂಪುಗಳು

ಅಣುಬಾಂಬಿನಿಂದ ನಾಶವಾದ ಹಿರೋಷಿಮಾವನ್ನು ಶಾಂತಿ ಸ್ಮಾರಕ ನಗರ ಮತ್ತು ನಾಗಸಾಕಿಯನ್ನು ಅಂತರ ರಾಷ್ಟ್ರೀಯ ಸಾಂಸ್ಕೃತಿಕ ನಗರ ಎಂದು ಕಟ್ಟಿ ಪುನರ್ನಿರ್ಮಾಣ ಮಾಡಲಾಗುವುದೂ, ಅವುಗಳ ಜ್ಞಾಪಕಾರ್ಥವಾಗಿ, ಹೊಸ ಸ್ಮಾರಕ ಸ್ಟಾಂಪುಗಳನ್ನು ಜಪಾನ್ ಸರ್ಕಾರದವರು ಹೊರಡಿಸುವುದೂ ಹೇಳಲಾಗಿದೆ

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ

ಎರಡು ಥಿಯೇಟರುಗಳಲ್ಲಿಯೂ

5-8-49 ರಿಂದ ಅಮೋಘ ಪ್ರಾರಂಭ

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ

ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ಅತ್ಯುತ್ತಮ ತಮಿಳು ಚಿತ್ರ

-ನವಜೀವನಂ-

ತಾರಾಗಣ - ನಾಗಯ್ಯ, ಕನ್ನಾಂಬ, ಎಲ್. ನಾರಾಯಣರಾವ್, ಟಿ. ಆರ್. ರಾಮಚಂದ್ರನ್, ವರಲಕ್ಷ್ಮೀ, ಜಯಲಕ್ಷ್ಮೀ ಮುಂತಾದವರು

[R V. ಪಿಕ್ಚರ್ಸ್ ರಿಲೀಸ್

ಟೆಂಡರು ನೋಟೀಸು

೭.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಈ ಕೆಳಗೆ ನಮೂದಿಸಿರುವ ಕೆಲಸಗಳಿಗೆ ಅಂದಾಜು ಮಂಜೂರಾಗಿರುತ್ತೆ—

ಸದರೀ ಕೆಲಸಗಳನ್ನು ಕೆಳಕಂಡ ಷರತ್ತುಗಳಿಗೆ ಅನುಸಾರವಾಗಿ ಕಟ್ಟಿಸಲು ಇಷ್ಟಪಡುವವರು ತಾ॥ 22-8-49 ಸೋಮವಾರ ಸಾಯಂಕಾಲ ೩ ಗಂಟೆ ಒಳಗಾಗಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರವರ ಆಫೀಸಿಗೆ ಸೀಲಾದ ಕವರಿನಲ್ಲಿ ಟೆಂಡರನ್ನು ಕಳುಹಿಸತಕ್ಕದ್ದು

ಪ್ಲಾನು ಮತ್ತು ಅಂದಾಜನನ್ನು ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ರಜಾ ದಿನಗಳ ಹೊರತು ಉಳಿದ ದಿನಗಳಲ್ಲಿ ಪ್ರತಿದಿನ ೧೧ ಗಂಟೆಯಿಂದ ಸಾಯಂಕಾಲ ೫ ಗಂಟೆ ವರೆಗೆ ನೋಡಿ ಅವಶ್ಯಕವಾದ ಇನ್ನಿತರ ವಿವರಗಳನ್ನು ತಿಳಿಯಬಹುದು

ಟೆಂಡರಿನ ಷರತ್ತುಗಳು

೧ ಪ್ರತಿ ಒಂದು ಕೆಲಸದ ಪರನ್ನಾವರಿ ಅಂದಾಜು ಆಯಾ ಕೆಲಸಕ್ಕೆ ನಮೂದಿಸಿರುವಂತೆ ಇರುತ್ತೆ ... ಪ್ರತಿ ಟೆಂಡರಿನೊಂದಿಗೆ ಡಿಸ್ಟ್ರಿಕ್ಟ್ ಫಂಡಿಗೆ ೧೦೦ ರೂಪಾಯಿಗಳನ್ನು ಜಮಾ ಮಾಡಿದ ಬಗ್ಗೆ ಚಲನನ್ನು ಹಾಜರು ಪಡಿಸತಕ್ಕದ್ದು ೩ ಟೆಂಡರು ಅಂದಾಜು ಮೊಬಲಗಿನ ಮೇಲೆ ಶೇಕಡಾವಾರು ಹೆಚ್ಚು ಅಥವಾ ಕಡಿಮೆಯನ್ನು ಸೂಚಿಸಿ ಸ್ಪಷ್ಟವಾಗಿ ಬರೆದು ಟೆಂಡರನ್ನು ಕೊಡತಕ್ಕದ್ದು ೪ ಟೆಂಡರು ಮಂಜೂರಾದ ... ಕೆಲಸವನ್ನು ಪೂರ್ತಿ ಮಾಡಿ ಜಿಲ್ಲಾ ಬೋರ್ಡಿಗೆ ಹಾಜರು ... ಉತ್ತೀರ್ಣರಾದ ಟೆಂಡರುದಾರರು ಸರಿಯಾದ ... ಕಾಲದಲ್ಲಿ ... ಕೊಟ್ಟ ಕೆಲಸವನ್ನು ಕೈಗೊಳ್ಳತಕ್ಕದ್ದು ... ಟೆಂಡರನ್ನು ಅಂಗೀಕರಿಸುವ ವಿಷಯದಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಪೂರ್ಣಾಧಿಕಾರವಿರುತ್ತೆ ೭ ಕಡಿಮೆಯಾದ ಟೆಂಡರನ್ನು ಅಂಗೀಕರಿಸಬೇಕೆಂಬ ನಿಯಮ ಇರುವುದಿಲ್ಲ ಯಾವ ಕಾರಣವನ್ನೂ ತಿಳಿಸದೆ ಟೆಂಡರನ್ನು ನಿರಾಕರಿಸತಕ್ಕ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ ... ಉತ್ತೀರ್ಣರಾದ ಟೆಂಡರುದಾರರು ಕೆಲಸವನ್ನು ಮತ್ತಾರಿಗೂ ವರ್ಗಾಯಿಸ ಮಾಡಬಾರದು ... ಒಪ್ಪಿಕೊಂಡ ಕಾಲದಲ್ಲಿ ಕೆಲಸವನ್ನು ಪೂರ್ತಿ ಮಾಡದೇ ಇದ್ದಲ್ಲಿ ಟೆಂಡರು ಡಿಪಾಸಿಟ್ಟನ್ನು ಡಿಸ್ಟ್ರಿಕ್ಟ್ ಫಂಡಿಗೆ ... ೧೦ ಈ ಸಂದರ್ಭದಲ್ಲಿ ಒದಗಬಹುದಾದ ಎಲ್ಲಾ ತಕರಾರುಗಳ ವಿಷಯದಲ್ಲಿ ಜಿಲ್ಲಾ ಬೋರ್ಡ್ ತೀರ್ಮಾನವೇ ಅಂತಿಮ ತೀರ್ಮಾನವಾಗತಕ್ಕದ್ದು

ಕೆಲಸಗಳು

೧ ಚಾಮರಾಜನಗರ ತಾಲ್ಲೂಕು ... ಪ್ರೈಮರಿ ಸ್ಕೂಲ್ ಕಟ್ಟಡ ರೂ ... ೨ ... -ನಾರಲಾಪುರ ರಸ್ತೆ ಮಾರ್ಗ ರೂ ... ೩ ನಾರಲಾಪುರ-ನ ...

ಎಚ್. ಎಂ. ಚೆನ್ನಬಸಪ್ಪ,

ಪ್ರೆಸಿಡೆಂಟ್

ಡಿಸ್ಟ್ರಿಕ್ಟ್ ಬೋರ್ಡ್ ಮೈಸೂರು

ರಾಜಕಮಲ್, ಮೈಸೂರು

6—8—49ರಿಂದ ಅಮೋಘ ಆರಂಭ

ಪ್ರತಿ ದಿನ 3 ಆಟಗಳು

ಮೆಹಬೂಬ್‌ರವರ ಹಿಂದಿ ಚಿತ್ರ

* ಅನೋಖಿ ಅದಾ *

ಭೂಮಿಕೆ —ನಾಸಿಂ, ಪ್ರೇಮ್ ಅದೀಬ್, ಸುರೇಂದ್ರ

ಈ ದಿನ ಮಾತ್ರ ನದಿಯಾ-ಕೆ-ಪಾರ್ [ಹಿಂ

ಮೈಸೂರು ಸಿಟಿ ರೇಷನಿಂಗ್ ಆಫೀಸರವರ ಕಛೇರಿಯಿಂದ

ಪ್ರಸಿದ್ಧ ಪತ್ರಿಕೆ

ಹಾಲೀ ಮೈಸೂರು ಸಿಟಿಯಲ್ಲಿ ಹೊಸದಾಗಿ ರೇಷನ್ ಕಾರ್ಡುಗಳನ್ನು ಕೊಡುವ ಪೂರ್ವ ಭಾವಿಯಾಗಿ ರೇಷನ್ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ಮನೆಗೂ ಹೋಗಿ ಅಜಮಾಯಿಷಿ ಮಾಡಿ ಮುನಿಸಿಪಲ್ ಡೋರು ನಂಬರನ್ನು ಸರಿ ಬೀದಿವಾರು ಮತ್ತು ಮನೆವಾರು ರೇಷನ್ ಕಾರ್ಡು ಪಟ್ಟಿಯನ್ನು ತಯಾರು ಮಾಡುವಂತೆ ತಿಳುವಳಿಕೆ ಕೊಟ್ಟಿರುತ್ತೆ ಈ ಅಜಮಾಯಿಷಿ ಕಾಲದಲ್ಲಿ ತನಿಖೆಗೆ ಒಳಪಟ್ಟ ರೇಷನ್ ಕಾರ್ಡುಗಳನ್ನು ಹೊಡೆದುಹಾಕಿ ಆ ಕಾರ್ಡುಗಳ ಮೇಲೆ ಕೊಡಲ್ಪಡುವ ರೇಷನನ್ನು ನಿಲ್ಲಿಸಲ್ಪಡುತ್ತದೆ ಈ ರೀತಿ ಅಜಮಾಯಿಷಿ ಮಾಡುವ ಸಂದರ್ಭದಲ್ಲಿ ರೇಷನ್ ಕಾರ್ಡುದಾರರು ಅವರು ಈಗ ಹಾಲೀ ವಾಸಮಾಡುತ್ತಿರುವ ವಿಳಾಸಕ್ಕೆ ರೇಷನ್ ಕಾರ್ಡನ್ನು ಹೊಂದಿಲ್ಲದ ಪಕ್ಷದಲ್ಲಿಯೂ, ಅಥವಾ ತಮ್ಮದಲ್ಲದ ಅಕ್ರಮವಾದ ಇತರರ ರೇಷನ್ ಕಾರ್ಡುಗಳನ್ನು ಪಡೆದಿದ್ದಲ್ಲಿಯೂ ಅಂತಹ ರೇಷನ್ ಕಾರ್ಡುಗಳನ್ನು ರದ್ದು ಮಾಡುವುದಲ್ಲದೆ ಆ ತಪ್ಪಿಗೆ ರೇಷನ್ ಕಾಯಿದೆ ಮೇರೆ ನಡವಳಿಕೆಯನ್ನು ಕೈಗೊಳ್ಳಲಾಗುತ್ತೆ ಈ ಮೇಲ್ಕಂಡ ನಡವಳಿಕೆಯಿಂದ ರೇಷನ್ ಕಾರ್ಡುದಾರರಿಗೆ ಯಾವ ವಿಧವಾದ ತೊಂದರೆ ಉಂಟಾಗಬಾರದೆಂಬ ಉದ್ದೇಶದಿಂದ ಅಕ್ರಮವಾದ ರೇಷನ್ ಕಾರ್ಡು ಪಡೆದಿರತಕ್ಕವರು ಈಗಿನಿಂದ ೧೫ ದಿನಗಳ ಒಳಗಾಗಿ ರೇಷನಿಂಗ್ ಆಫೀಸಿಗೆ ತಂದು ಕೊಡುವುದಕ್ಕೂ, ಅಥವಾ ವಿಳಾಸ ಬದಲಾವಣೆ ಆಗಿದ್ದ ಸಂದರ್ಭದಲ್ಲಿ ಅದನ್ನು ತಿಳಿಸುವುದಕ್ಕೂ ರಿಯಾಯಿತಿ ಕೊಟ್ಟಿರುತ್ತೆ ಅಂತಹವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ- ಈ ವಾಯಿದೆ ಕಳೆದ ನಂತರ ಮೇಲೆ ನಮೂದು ಮಾಡಿರತಕ್ಕಂಥ ಅಕ್ರಮ ನಡವಳಿಕೆಗಳು ರೇಷನಿಂಗ್ ಅಧಿಕಾರಿಗಳ ಗಮನಕ್ಕೆ ಬಂದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮಗಳನ್ನು ರೂಲ್ಸ್ ಪ್ರಕಾರ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೂ ತಿಳಿಯಪಡಿಸಿರುತ್ತೆ

ಡಿ. ಜೆ. ಬಾಲರಾಜ್,

ಸಿಟಿ ರೇಷನಿಂಗ್ ಆಫೀಸರವರು. ಮೈಸೂ

Edited printed and published by V R Narrajan, at Sadhvi Press D. Subbiah Road Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೭-೮-೧೯೪೯ [ಸಂಚಿಕೆ ೩

ರಾಜ ಘೋಷಣೆಯು ನಾಳೆ ಹೊರಡುವುದು

ತಾತಯ್ಯನವರ ಶತಮಾನೋತ್ಸವ

ದಿವಂಗತ ವೃದ್ಧಪಿತಾಮಹ ಶ್ರೀ ಎಂ. ವೆಂಕಟಕೃಷ್ಣಯ್ಯನವರ ಶತಮಾನೋತ್ಸವವನ್ನು ಈ ವರ್ಷ ಆಚರಿಸಬೇಕೆಂದು ಕೆಲವು ಮಿತ್ರರು ಸಲಹೆ ಮಾಡಿರುತ್ತಾರೆ ಆದುದರಿಂದ ಅದಕ್ಕೆ ಎಲ್ಲರೂ ಸಹಕರಿಸಿ ಧನ ಸಹಾಯ ಮಾಡಬೇಕೆಂದು ತಾಯಿನಾಡು ಪತ್ರಿಕೆಯ ಮಾಲೀಕರಾದ ಶ್ರೀ ಪಿ. ಆರ್. ರಾಮಯ್ಯನವರು ಒಂದು ಮನವಿಯನ್ನು ಹೊರಡಿಸಿರುತ್ತಾರೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ರಾಜಧಾನಿಯ ಕಾಶೀಪತಿ ಲಾಯದಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀಮನ್ಮಹಾರಾಜರವರ ೩೧ನೇ ವರ್ಷದ ವರ್ಧಂತ್ಯುತ್ಸವವು ಪುರಸಭಾಧ್ಯಕ್ಷರಾದ ಶ್ರೀ ಕೆ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಭಾರತೀಯಕರಣದ ಬಗ್ಗೆ ಜನಮತ

ಅಖಿಲ ಭಾರತೀಯ ವಿದ್ಯಾರ್ಥಿ ಸಂಸ್ಥೆಯ ಮೈಸೂರು ಶಾಖೆಯ ಆಶ್ರಯದಲ್ಲಿ ಇಲ್ಲಿ ನಡೆದ ಜನಮತ ಸಂಗ್ರಹದ ಕಾರ್ಯವು ಯಶಸ್ವಿಯಾಗಿ ನಡೆಯುತ್ತಿದೆ. ಇಲ್ಲಿಯವರೆಗೆ ಬಂದಿರುವ ಅಭಿಪ್ರಾಯಗಳ ವಿವರವು ಈ ರೀತಿ ಇದೆ:-

ಭಾರತ ೫೯೪೦, ಇಂಡಿಯಾ ೨೯ ೩; ಹಿಂದೀ ೩೧೭೧, ಹಿಂದೂಸ್ಥಾನಿ ೧೪೫೩; ವಂದೇ ಮಾತರಂ ೩೫೮೩, ಜನಗಣಮನ ೫೭೭; ರಾಷ್ಟ್ರಭಾಷೆ ೨೧೩೪ ಮತ್ತು ಇಂಗ್ಲೀಷ್ ೩೪೦.

ಭಾರತಕ್ಕೊಂದು ಶಾಂತಿ ಸಂರಕ್ಷಕ ಸಂಘ

ಭಾರತದ ಸರ್ವತೋಮುಖವಾದ ಪ್ರಗತಿಯ ಸಾಧನೆಗೆ ಆವಶ್ಯಕವಾದ- ಶಾಂತಿ ಮತ್ತು ಶಿಸ್ತಿನ ಪಾಲನೆಗಾಗಿ ದೆಹಲಿಯಲ್ಲಿ ಭಾರತ ರಾಷ್ಟ್ರೀಯ ಶಾಂತಿ ಸಂಘವೊಂದು ಸ್ಥಾಪನೆಯಾಗಿದೆ ಇದರ ಅಧ್ಯಕ್ಷರು ಸುಪ್ರಸಿದ್ಧ ರಾಷ್ಟ್ರೀಯ ಸಿಖ್ ನಾಯಕರಾದ ಬಾಬಾ ಖಾರಕ್ ಸಿಂಗ್‌ರವರು.

ರಾಜಕಮಲ್,
ಮೈಸೂರು
6–8–49 ರಿಂದ
ದಿನವಹಿ 3 ಪ್ರದರ್ಶನ
ಮೆಹಬೂಬ್‌ರವರ ಹಿಂದಿ ಚಿತ್ರ
ಅನೋಖಿ ಅದ
ಭೂಮಿಕೆ:- ನಾಸಿಂ, ಪ್ರೇಮ್ ಅದೀಬ್ ಮತ್ತು ಸುರೇಂದ್ರ

MORNING SHOWS
From 5-8-49 for 4 days
CAPTAIN -
- BOYCOTT
—WITH:—
Stewart Granger &
Kathleen Ryan

ಸೂಚನೆ

ಉಪಾಕರ್ಮದ ಪ್ರಯುಕ್ತ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಆಹಾರ ಧಾನ್ಯಗಳ ಸರಬರಾಜಿಲ್ಲ

ಸ್ವಂ. ವ.] ಅಗರ-ಮಾಂಬಳ್ಳಿ ೪

ಈ ತಾಲ್ಲೂಕಿಗೆ ಇತ್ತೀಚೆಗೆ ಆಹಾರ ದಿನಸಿಗಳು ಸರಿಯಾಗಿ ಸರಬರಾಜಾಗುತ್ತಿಲ್ಲ. ಅಗರದ ಡಿಪ್ಪೋವಿಗೆ ತಿಂಗಳಿಗೆ ಸುಮಾರು ೫೦೦ ಪಲ್ಲ ದಿನಸಿ ಬೇಕಾಗುವುದು ಆದರೆ ಇಲ್ಲಿಗೆ ಕೇವಲ ೧೫೦ ಪಲ್ಲ ಮಾತ್ರ ಕಳುಹಿಸಲಾಗುತ್ತಿದೆ ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಅಗರ, ಮಾಂಬಳ್ಳಿ, ಕಿನಕಹಳ್ಳಿ, ಮುಂತಾದ ೧೧೦ ಗ್ರಾಮಗಳಿಗೆ ಈ ಡಿಪ್ಪೋದಿಂದ ಆಹಾರ ಧಾನ್ಯಗಳು ಸರಬರಾಜಾಗುತ್ತಿರುವುದರಿಂದ ಇದನ್ನು ಸಂಪಡಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ತಂತಿ ಕಳುಹಿಸಲಾಗಿದೆ.

ಆರೆಸ್ಸೆಸ್ ಬಗ್ಗೆ ನೆಹರೂರವರಿಗೆ ನಂಬಿಕೆಯಿಲ್ಲ

ಆರ್. ಎಸ್. ಎಸ್ ವಿಷಯದಲ್ಲಿ ತಮಗೆ ಪೂರ್ಣ ನಂಬಿಕೆ ಇಲ್ಲವೆಂದೂ, ಆದುದರಿಂದ ಅದರ ಕಾರ್ಯಾಚರಣೆಯನ್ನು ಎಚ್ಚರಿಕೆಯಿಂದ ನೋಡಲಾಗುತ್ತಿದೆಯೆಂದೂ ಪ್ರಧಾನಿ ಪಂಡಿತ ನೆಹರೂರವರು ತಿಳಿಸಿರುತ್ತಾರೆ.

ಅಮೆರಿಕಕ್ಕೆ ಪಂಡಿತ ನೆಹರೂರವರ ಭೇಟಿ

ಅಕ್ಟೋಬರ್ ೧೧ ನೇ ತಾ|| ಅಮೆರಿಕಕ್ಕೆ ಮಹಾ ಪ್ರಧಾನಿ ಪಂಡಿತ ನೆಹರೂರವರು ಭೇಟಿ ಕೊಟ್ಟು ತಿಂಗಳ ಕೊನೆಯವರೆಗೂ ಅಲ್ಲಿ ಇರುವರೆಂದೂ ಅನಂತರ ಕೆನಡಾಕ್ಕೆ ಭೇಟಿ ಕೊಡುವರೆಂದೂ ಹೇಳಲಾಗಿದೆ

ವಿದ್ಯಾರ್ಥಿನಿಯಿಂದ ಪೋಲೀಸರಿಗೆ ಪಾದರಕ್ಷಾ ಪ್ರಯೋಗ

ಕಮ್ಯೂನಿಸ್ಟ್ ಚಳುವಳಿಯಲ್ಲಿ ಭಾಗವಹಿಸಿದ್ದಳೆಂದು ಕಾಶಿ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯೊಬ್ಬಳನ್ನು ಪೋಲೀಸರು ಮೊನ್ನೆ ದಸ್ತಗಿರಿ ಮಾಡಲು ಹೋದಾಗ ಆಕೆಯು ತನ್ನ ಪಾದರಕ್ಷೆಯಿಂದ ಅವರನ್ನು ಹೊಡೆದಳೆಂದು ಹೇಳಲಾಗಿದೆ

ಚಿನ್ನದಗಣಿಯಲ್ಲಿ ಕಾನೂನು ಭಂಗವೇ?

ಮೈಸೂರು ೨

ಸಮಾಜವಾದಿ ಪಕ್ಷದ ನಗರ ಸಮಿತಿ ಸಭೆಯು ಶ್ರೀ ಬಿ. ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಚಿನ್ನದಗಣಿ ಕಾರ್ಮಿಕ ಮುಖಂಡರಾದ ಶ್ರೀ ಎಸ್. ಬಿ. ಅರಿಕೇಲ್‌ರವರ ಮೇಲೆ ಸರ್ಕಾರದವರು ಹೊರಡಿಸಿರುವ ಗಡೀಪಾರು ಆಜ್ಞೆಯನ್ನು ತೀವ್ರವಾಗಿ ಖಂಡಿಸಿರುದಲ್ಲದೆ ಈ ತಿಂಗಳು ೧೫ ನೇ ತಾ|| ನಿಂದ ವ್ಯಕ್ತಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಕೇಂದ್ರ ಸಮಿತಿಯು ಚಿನ್ನದ ಗಣಿಯಲ್ಲಿ ಶಾಂತಿಯುತವಾದ ಕಾನೂನು ಭಂಗ ಚಳುವಳಿ ನಡೆಸಲು, ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

ಸಮಾಜವಾದಿ ಪಕ್ಷದ ನಗರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಕ್ರಾಂತಿಲಾಲ್‌ರವರು ಒಂದು ಹೇಳಿಕೆಯನ್ನಿತ್ತು ಈ ಗಡೀಪಾರು ಆಜ್ಞೆಯನ್ನು ಪ್ರತಿಭಟಿಸಿದ್ದಾರೆ. ಮತ್ತು ಈ ಆಜ್ಞೆಯನ್ನು ರದ್ದು ಮಾಡದಿದ್ದಲ್ಲಿ ಸತ್ಯಾಗ್ರಹ ಹೂಡಲಾಗುವುದೆಂದೂ ತಿಳಿಸಿದ್ದಾರೆ.

ವರ್ಧಂತ್ಯುತ್ಸವ

ಮೈಸೂರು ತಾ|| ಇಲವಾಲದ ಹೋಬಳಿ ಹುಯಿಲಾಳು ಗ್ರಾಮದ ಪ್ರೈಮರಿ ಶಾಲೆಯಲ್ಲಿ ಶ್ರೀಮನ್ಮಹಾರಾಜರವರ ೩೧ ನೇ ವರ್ಷ ವರ್ಧಂತಿ ಮಹೋತ್ಸವವು ಪಂಚಾಯಿತಿ ಚೇರ್ಮನ್ ಶ್ರೀ ಎಚ್. ಪಿ. ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆ ಮುಗಿಯಿತು. ಕಳೆದ ೩೦ ನೇ ತಾ|| ಪ್ರೈಮರಿ ಶಾಲೆಯಲ್ಲಿ ಚೇರ್ಮನ್‌ರವರ ಅಧ್ಯಕ್ಷತೆಯಲ್ಲಿ ಮಕ್ಕಳ ಹಬ್ಬವನ್ನು ಆಚರಿಸಲಾಯಿತು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯ ನಂತರ ಸಭೆ ಮುಗಿಯಿತು.

ಸಂಗೀತ

ಈ ರಾತ್ರಿ ೭ ಗಂಟೆಗೆ ಡಿ. ಸುಬ್ಬಯ್ಯನವರ ರಕ್ಷೆಯ ಬ್ರಹ್ಮಾನಂದ ಔಷಧಾಲಯದ ಬಳಿ ಆರ್. ವಿ. ಮರಿಯಪ್ಪನವರ ಸಂಗೀತವು ವಿದ್ವಾನ್ ಬಿ. ಕೇಶವಮೂರ್ತಿಯವರಿಂದ ಪಿಟೀಲು ಮತ್ತು ಎಸ್. ಆರ್. ವರದಾಚಾರ್ರ ಮೃದಂಗದೊಡನೆ ನಡೆಯುತ್ತದೆ

ನಾಳೆ ರಾಜ ಘೋಷಣೆ

ಸ್ವಂ.ಸು.ಪ್ರೋ.] ಬೆಂಗಳೂರು ೬

ಕುತೂಹಲದಿಂದ ನಿರೀಕ್ಷಿಸಲಾಗುತ್ತಿದ್ದ ರಾಜಘೋಷಣೆಯು ಈ ದಿನವೂ ಹೊರಡಲಿಲ್ಲ. ನಾಳೆ ಹೊರಬೀಳುವುದೆಂದು ಪ್ರಧಾನ ಮಂತ್ರಿ ರೆಡ್ಡಿಯವರು ತಿಳಿಸಿರುವರು. ಈ ರಾತ್ರಿ ನಡೆಯಲಿರುವ ಕಾಂಗ್ರೆಸ್ ಪಕ್ಷದ ಕಾರ್ಯಕಾರೀ ಮಂಡಲಿಯಲ್ಲಿ ಈ ವಿಷಯವು ಚರ್ಚೆಗೆ ಬರುವುದೆಂದು ಹೇಳಲಾಗಿದೆ ಶ್ರೀ ಕೆ. ಸಿ. ರೆಡ್ಡಿಯವರು ೯ ನೇ ತಾ|| ಪತ್ರಿಕಾ ಸಮ್ಮೇಳನವನ್ನು ನಡೆಸುವರು ನಿನ್ನೆ ರೆಡ್ಡಿಯವರು ಕಾಂ|| ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯ ಮತ್ತು ಶ್ರೀ ಕೆ. ಹನುಮಂತಯ್ಯನವರೊಡನೆ ಭೇಟಿನಡೆಸಿದರು. ಕಾಂಗ್ರೆಸ್ ಪಕ್ಷಕ್ಕೆ ತೃಪ್ತಿಕರವಾಗುವ ರೀತಿಯಲ್ಲಿ ಮಂತ್ರಿಮಂಡಲವನ್ನು ಪುನರ್ರಚಿಸಬೇಕೆಂದು ಅವರು ಹೇಳಿದರೆಂದು ಗೊತ್ತಾಗಿದೆ

ಕ್ರಾಫರ್ಡ್ ಭವನದಲ್ಲಿ ಪ್ರಜಾ ಪ್ರತಿನಿಧಿ ಸಭೆ

ನವರಾತ್ರಿ ಪ್ರ|| ಪ್ರ|| ಸಭಾಧಿವೇಶನವು ಅಕ್ಟೋಬರ್ ೪ನೇ ತಾ|| ಮೈಸೂರು ಕ್ರಾಫರ್ಡ್ ಭವನದಲ್ಲಿ ನಡೆಯುವಂತೆ ಏರ್ಪಾಡಾಗಿದೆ

ಸರ್ ಆರ್ಕಾಟರು ಮುಂದೆಯೂ ಸಂಸ್ಥಾನದಲ್ಲೇ ಇರುವರು

ನಿನ್ನೆಗೆ ದಿವಾನರ ಹುದ್ದೆ ರದ್ದಾಯಿತು, ಸರ್ ಆರ್ಕಾಟರು ನಿವೃತ್ತರಾದರು, ಸೆಕ್ರೆಟೇರಿಯಟ್ ನೌಕರರೆಲ್ಲರಿಂದಲೂ 'ಅಪ್ಪಣೆ ತೆಗೆದುಕೊಂಡರು' ಮೈಸೂರಿನಂತಹ ಸೆಕ್ರೆಟೇರಿಯಟ್ಟು ಎಲ್ಲೂ ಇಲ್ಲವೆಂದು ಹೊಗಳಿದರು. ತಾವು ಮೈಸೂರನ್ನು ಬಿಟ್ಟು ಹೋಗುವುದಿಲ್ಲವೆಂದೂ ಮುಂದೆಯೂ ಇಲ್ಲಿ ಇರುವುದಾಗಿಯೂ ಸೂಚಿಸಿದರು.

ಮೈ|| ಕಾಂ|| ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಕಾಂಗ್ರೆಸ್ ಕಾರ್ಯಕಾರಿಸಮಿತಿಯ ಸಭೆಯು ನಾಳಿದ್ದು ನಡೆದು ಪ್ರಕೃತ ರಾಜಕೀಯ ಸಮಸ್ಯೆಗಳ ಬಗ್ಗೆ ಆಲೋಚನೆ ನಡೆಸುವುದೆಂದು ಹೇಳಲಾಗಿದೆ

ಭೂಕಂಪದಿಂದ ಐನೂರು ಜನರ ಸಾವು

ದ|| ಅಮೆರಿಕದ ಯುಕಡಾರ್ ಸಂಸ್ಥಾನದ ಅಂಬಾಟೋ ಎಂಬ ಬೆಟ್ಟಗಿರಣಿಗಳ ಕೇಂದ್ರ ನಗರದಲ್ಲಿ ಮೊನ್ನೆ ಭೂಕಂಪವಾಗಿ ಐನೂರು ಜನರು ಸತ್ತರೆಂದು ವರದಿಯಾಗಿದೆ. ಯುಕಡಾರ್ ದೇಶದ ಬೆಟ್ಟಗುಡ್ಡಗಳ ನಗರ ಮತ್ತು ಹಳ್ಳಿಗಳೂ ಸಹ ಭೂಕಂಪಕ್ಕೆ ಒಳಗಾದವು.

ಇಡ್ಲಿ ತಯಾರಿ ಪತ್ತೆ

ಗುಂಡ್ಲುಪೇಟೆ ೫.

ಇಲ್ಲಿನ ವೀರಶೈವರ ಹೋಟೇಲೊಂದರಲ್ಲಿ ಈ ದಿನ ಇಡ್ಲಿ ಮಾರಾಟವನ್ನು ಪೋಲೀಸರು ಪತ್ತೆ ಮಾಡಿ, ೧೧೦ ಇಡ್ಲಿಗಳನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿರುತ್ತಾರೆ

ಮಕ್ಕಳ ದಿನಾಚರಣೆಯು ಅಮಲ್ದಾರರವರ ಅಧ್ಯಕ್ಷತೆಯಲ್ಲಿ ಜರುಗಿತು ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿ ಮತ್ತು ಆಟಪಾಟಗಳು ನಡೆದುವು.

ಮಲಯದ ರೇಡಿಯೋವು ನ ಚಿಯಾನ ತನ್ನ ಬಿರ್ಡನ್ನು ಪಟ್ಟಿಕೊಳ್ಳುವ ಸಲುವಾಗಿ ಇನ್ನು ಮುಂದೆ ಶಾಕಿರಾತುಗಳನ್ನು ಪ್ರಸಾರ ಮಾಡುವುದಾಗಿ ಗೊತ್ತಾಗಿದೆ

ವಾರ ಭವಿಷ್ಯ

ಶ್ರೀ

೭-೮-೪೯ರಿಂದ ೧೪-೮-೪೯ರ ವರೆಗೆ

ಮೇಷ—ಆರೋಗ್ಯ ಉತ್ತಮ, ವ್ಯಾಪಾರದಲ್ಲಿ ಲಾಭ, ಶತ್ರು ನಾಶ, ಮಿತ್ರ ಸಹಾಯ ಒಪ್ಪಂದಕ್ಕೆ ಅನುಕೂಲ ಪ್ರಯಾಣಕ್ಕೆ ಉತ್ತಮ, ವ್ಯವಹಾರದಲ್ಲಿ ಜಯ ತಾ॥ ೯, ೧೦, ೧೧ ಶುಭವಾರ್ತೆ ಸನ್ಮಾನ

ವೃಷಭ—ದೇಹ ಪ್ರಕೃತಿ ನೆಟ್ಟಗೆ, ವಿರೋಧಿಗಳು ಮಿತ್ರರಾಗುವರು ಮೇಲಧಿಕಾರಿಗಳ ಪ್ರೀತಿ ಪತ್ನೀ ಆರೋಗ್ಯ ಉತ್ತಮ ಹಣಕಾಸಿನ ಸ್ಥಿತಿ ಸುಧಾರಿಸುವುದು ತಾ॥ ೭-೮ ಪ್ರಯಾಣ ಮಿತ್ರ ದರ್ಶನ

ಮಿಥುನ—ಉದ್ದೇಶ ಭಂಗದಿಂದ ದುಃಖ ಆರೋಗ್ಯ ತೃಪ್ತಿಕರವಿಲ್ಲ ವ್ಯಾಪಾರೋದ್ಯೋಗಗಳೂ ಸಾಮಾನ್ಯ, ಮನಸ್ಸಿಗೆ ಚಿಂತೆ ಕೆಲಸ ಕಾರ್ಯಗಳಲ್ಲಿ ಆಯಾಸ ತಾ॥ ೭-೮ ಆಕಸ್ಮಿಕ ಘಟನೆಯೂ ಗಬಹುದು ಹಣದ ತೊಂದರೆ

ಕರ್ಕ ಸಂತೋಷ ಚಿತ್ತವಿರುವುದು ಆರ್ಥಿಕ ಅಡಚಣೆ ವ್ಯಾಪಾರಗಳಲ್ಲಿ ನಷ್ಟ ದೇಹ ಪ್ರಕೃತಿಯೂ ಸಾಮಾನ್ಯ, ನೌಕರಿಯಲ್ಲಿ ಕಿರುಕುಳ ಸಂಸಾರದಲ್ಲಿ ಅಪಾರ ತಾಪತ್ರಯ ಧರ್ಮಕಾರ್ಯಗಳಲ್ಲಿ ಅನಾದರಣೆ, ಪತ್ನಿಯ ವಿರಸ ಮತ್ತು ದ್ವಂದು ವೆಚ್ಚ ತಾ॥ ೯, ೧೦, ೧೧ ದುಃಖ ಸಮಾಚಾರ, ಕಳ್ಳತನ

ಸಿಂಹ—ದುಷ್ಕರ್ಮ ಫಲ ನಿವಾರಣೆಗಾಗಿ ದೇವತಾ ಕಾರ್ಯದಲ್ಲಿ ತೊಡಗಿರಿ ಧನಾದಾಯವೂ ತೃಪ್ತಿಕರವಿಲ್ಲ ಚಿಂತಾಗ್ರಸ್ಥರಾಗುವಿರಿ ಮೇಲಧಿಕಾರಿಗಳೊಡನೆ ವಿರಸ, ವಿರೋಧ ಸಮಾಚಾರ ತಾ॥ ೭, ೮ ಅಧಿಕ ವೆಚ್ಚ ಜಗಳ ಶಸ್ತ್ರ ಭೀತಿ ಮಾನ ಹಾನಿ

ಕನ್ಯಾ—ಭಾರಿ ಕಾರ್ಯ ಸಾಧನೆ ಆರೋಗ್ಯ ಉತ್ತಮ, ಕಾರ್ಯಸಾಧನೆ, ಅನಿರೀಕ್ಷಿತ ಪ್ರಯಾಣ ಮತ್ತು ಲಾಭ, ಎಲ್ಲೆಲ್ಲೂ ಸನ್ಮಾನ ವಿದ್ಯಾರ್ಥಿಗಳಿಗೆ ಯಶಸ್ಸು ಆರ್ಥಿಕ ಲಾಭ ಮಿತ್ರರಿಂದ ಲಾಭ ತಾ॥ ೭-೮ ಒಳ್ಳೆಯ ಸುದ್ದಿ ಸುಖ ಭೋಜನ

ತುಲಾ—ವಿಘ್ನಗಳು ತೊಲಗಿ ಕಡೆಯಲ್ಲಿ ಕಾರ್ಯಸಿದ್ಧಿ ದೇಹಸ್ಥಿತಿ ಉತ್ತಮ ವಿದ್ವಾಂಸರಿಗೆ ಸನ್ಮಾನ ಧನಾದಾಯ ಉತ್ತಮ ಶತ್ರುಗಳ ಪರಾಜಯ ತಾ॥ ೯, ೧೦ ೧೧ ಪ್ರಯಾಣ ಸಂಭವ ವಿದ್ಯಾರ್ಥಿಗಳಿಗೆ ಅನುಕೂಲ

ವೃಶ್ಚಿಕ—ಪ್ರತಿ ಸ್ಪರ್ಧಿಗಳು ಹೆಚ್ಚುವರು ಆರೋಗ್ಯ ಸಮರ್ಪಕವಿಲ್ಲ ವಾಹನದಿಂದ ತೊಂದರೆಯ ಸಂಭವ ಕಾರ್ಯಗಳು ಮುಗಿಯುವುದಿಲ್ಲ ತಾ॥ ೯-೧೦-೧೧ ಬೆಂಕಿ, ಶಸ್ತ್ರ ಮುಂತಾದುವುಗಳ ಭೀತಿ ಸಂಸಾರದಲ್ಲಿ ತೊಂದರೆ

ಧನಸ್ಸು—ಮನಸ್ಸಿಗೆ ಚಿಂತೆ, ಮಿತ್ರರ ದುಃಖ ಮನಸ್ಸಿಗೆ ಅಶಾಂತಿ ಮಿತಿ ಮೀರಿದ ವೆಚ್ಚ ಹಿತ ಶತ್ರುಗಳ ಕಾಟ ಅಪಖ್ಯಾತಿಯ ಸಂಭವ ಪತ್ನಿಗೆ ಆಲಸ್ಯ, ಸಂಸಾರ ತಾಪತ್ರಯ ತಾ॥ ೮-೧೦ ಸ್ವಲ್ಪ ಉತ್ತಮ

ಮಕರ ಕಾರ್ಯ ಸಿದ್ಧಿ, ದೇಹ ಸ್ಥಿತಿ ಉತ್ತಮ, ಧರ್ಮ ಕಾರ್ಯಗಳು ನಡೆಯುವುವು ಉದ್ಯೋಗದಲ್ಲಿ ಉಪಯುಕ್ತ ಸಲಹೆಗಳು ದೊರೆಯುವುವು ತಾ॥ ೧೦ ೧೧ ಒಳ್ಳೆಯ ಸುದ್ದಿ ಭೋಜನ, ಧನಾದಾಯ,

ಕುಂಭ—ಚಿಂತಾತರಂಗಗಳುಂಟಾಗುತ್ತವೆ ಮನಸ್ಸಿಗೆ ಜಿಗುಪ್ಸೆ ಉದ್ಯೋಗದಲ್ಲಿ ವಿರೋಧಿಗಳ ಕಾಟ ವ್ಯಾಪಾರದಲ್ಲಿ ಲಾಭವಿಲ್ಲ ತಾ॥ ೭-೮ ೯ ನಷ್ಟ ಕೆಲಸಗಳಿಗೆ ಅಡಚಣೆ, ವಿಶೇಷ ವೆಚ್ಚ ದುರಭಿಪ್ರಾಯ

ಮೀನ—ತೊಂದರೆಗಳೇ ಮುಂದಿನ ಪ್ರಗತಿಗೆ ಪೀಠಿಕೆಗಳಾಗುವುವು. ಮನೆಯವರಿಗೆ ಆಲಸ್ಯ ಮನಸ್ಸಿಗೆ ವ್ಯಾಕುಲ ಉದ್ಯೋಗದಲ್ಲಿ ತೊಂದರೆ ಪ್ರಯಾಣದ ವಾಹನ ಭಯ ತಾ॥ ೯-೧೦-೧೧ ವಿತ್ತ ಹಾನಿ ನಿದ್ರಾ ಭಂಗ ವಿಶೇಷ ವೆಚ್ಚ.

ALL WOOL BABY RUGS

ಮಕ್ಕಳಿಗೆ ಹೊದಿಸುವ

ಅಪ್ಪಟ ಉಣ್ಣೆಯ ರಗ್ಗುಗಳು

ಬಾಹುಸಾರ್ ಕಂಪೆನಿ,

ಬ್ಯಾಂಕ್ ರೋಡ್, ಮೈಸೂರು

ಕಡೇ ವಾರ! ಕಡೇ ವಾರ!

ಪ್ರಭುದೇವಾ ಟಾಕೀಸ್

8-8-49ರಿಂದ ಅಮೋಘ 6 ನೆಯ ವಾರ!

(ತೆಲುಗು)

ಪ್ರತಿ ದಿನ ೩ ಆಟಗಳು

ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ

ಎರಡು ಥಿಯೇಟರುಗಳಲ್ಲಿಯೂ

5-8-49 ರಿಂದ ಅಮೋಘ ಪ್ರಾರಂಭ

ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿತವಾಗುತ್ತಿದೆ

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ

ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ಅತ್ಯುತ್ತಮ

ತಮಿಳು ಚಿತ್ರ

-ನವಜೀವನಂ-

ತಾರಾಗಣ – ನಾಗಯ್ಯ, ಕನ್ನಾಂಬ, ಎಲ್. ನಾರಾಯಣ ರಾವ್, ಟಿ. ಆರ್. ರಾಮಚಂದ್ರನ್, ವರಲಕ್ಷ್ಮೀ, ಜಯಲಕ್ಷ್ಮೀ ಮುಂತಾದವರು

[R V ಪಿಕ್ಚರ್ಸ್ ರಿಲೀಸ್

ನಂಜನಗೂಡು ಟೌನ್ ಮುನಿಸಿಪಲ್ ಆಫೀಸ್

ಇಸ್ತಿಹಾರ್‌ನಾಮೆ ನಂ H C ೧೦೯/೪೮ ತಾರೀಖು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ನಂಜನಗೂಡು ಮುನಿಸಿಪಾಲಿಟಿಯಲ್ಲಿ ೪೯-೫೦ನೆಯ ಸಾಲಿನಲ್ಲಿ ಟೋಲ್‌ಗೇಟ್ ಫೀ ವಸೂಲ್ ಮಾಡತಕ್ಕ ಹಕ್ಕನ್ನು ತಾರೀಖು ೧೨-೮-೪೯ನೇ ಶುಕ್ರವಾರ ಮಧ್ಯಾಹ್ನ ೩ ಗಂಟೆ ಅಗಾಯ್ತು ಮುನಿಸಿಪಲ್ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಹರಾಜು ಕಾಲಕ್ಕೆ ಹಾಜರಾಗಿ ೧೫೦೦ ರೂಪಾಯಿ ಗಳ ಠೇವಣಿ ಮಾಡಿ ಹರಾಜಿನಲ್ಲಿ ಸವಾಲ್ ಮಾಡಬಹುದು ಹೆಚ್ಚು ವಿಷಯಗಳನ್ನು ನಂಜನಗೂಡು ಮುನಿಸಿಪಲ್ ಆಫೀಸಿನಲ್ಲಿ ಪ್ರತಿದಿನವೂ ಆಫೀಸ ನಡೆಯುವ ವೇಳೆಯಲ್ಲಿ ೧೧ ರಿಂದ ೫ ಗಂಟೆ ವರೆವಿಗೂ ತಿಳಿದುಕೊಳ್ಳಬಹುದಾಗಿದೆ

ಬಿ ಎನ್ ಎಸ್ ಆರಾಧ್ಯ,
ಪ್ರೆಸಿಡೆಂಟ್

* ಪ್ರಭಾ *

'ಬಜಾರ್' ನಿರ್ಮಾಪಕರಿಂದ ತಯಾರಿಸಲ್ಪಟ್ಟ ಮತ್ತೊಂದು ಅತ್ಯುತ್ತಮ ಚಿತ್ರ

6-8-49 ರಿಂದ

ಪ್ರತಿ ದಿನ ೩ ಆಟಗಳು

ಮಧುಕರ್ ರವರ ಹಿಂದೀ ಚಿತ್ರ

ಮಿ ಜಾರ್ಜ - ಸಾಹೇಬಾ

ಸಂಗೀತ ನಸೀರ್ ಜಹಾನ್ ಪ್ರಿಲೋಕ್ ... ಕಪೂರ್ ... ಗೋಪ್

Edited, printed and published by V R Nagarajan, at Sadhvi Press, D Subbiah Road Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೯-೮-೧೯೪೯ [ಸಂಚಿಕೆ ೧೫

ಆರ್ಕಾಟರು ವಿಶ್ವಸಂಸ್ಥೆ ಸೆಕ್ರೆಟರಿ-ಜನರಲ್ಲರೇ?

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಮೈಸೂರು ೯

ರಾಜಧಾನಿಯ ಶಾಶೀಪತಿ ಛಾಯದಲ್ಲಿ ರ ಶ್ರೀ ವರಲಕ್ಷ್ಮೀ ಸಂಗೀತ ಮಂದಿರ ! ನಿನ್ನೆ ಸಂಜೆ ಶ್ರೀಮನ್ಮಹಾರಾಜರವ ೫೧ ನೇ ವರ್ಷದ ವರ್ಧಂತ್ಯುತ್ಸವವು ಸಭಾಧ್ಯಕ್ಷರಾದ ಶ್ರೀ ಟಿ ವೆಂಕಟ ರಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿ ಪ್ರಾರ್ಥನೆಯಾದನಂತರ ಮಂದಿರದ ಧ್ಯಕ್ಷರಾದ ರಾವ್ ಬಹದ್ದೂರ್ ಎಂ ಮಸ್ವಾಮಿಯವರು ಸ್ವಾಗತ ಭಾಷಣ ಾಡಿದರು ಅನಂತರ ಮೈಸೂರು ಸ ೋದರರು ಮತ್ತು ಅಲ್ಲಿನ ವಿದ್ಯಾರ್ಥಿಗ ಂದ ಸುಶ್ರಾವ್ಯವಾದ ಸಂಗೀತ ನಡೆಯಿ . ವೈಣಿಕ ಪ್ರವೀಣ, ಸಂಗೀತ ವಿಶಾರ ವೆಂಕಟಗಿರಿಯಪ್ಪನವರು ಭಾಷಣ ಮಾ , ಪ್ರಭುಗಳ ಪ್ರಶಂಸೆ ಮಾಡಿದರು. ಅ ಕ್ಷರು ಭಾಷಣ ಮಾಡಿ, ಮಂದಿರದ ಕೆ ಸಕಾರ್ಯಗಳ ಬಗ್ಗೆ ತಮ್ಮ ಮೆಚ್ಚಿಗೆ ಯನ್ನು ವ್ಯಕ್ತಪಡಿಸಿದರು ಶ್ರೀಮನ್ಮಹಾ ರಾಜರವರಿಗೆ ಶ್ರೇಯಸ್ಸನ್ನೂ ಮತ್ತು ರಾ ಭಕ್ತಿಯನ್ನೂ ಸೂಚಿಸುವ ನಿರ್ಣಯ ನ್ನು ಮಾಡಲಾಯಿತು. ಸಿಹಿ ತಿಂಡಿ ವಿ ಯೋಗ ಮತ್ತು ವಂದನಾರ್ಪಣೆಯೊಡ ಸಮಾರಂಭವು ಮುಕ್ತಾಯವಾಯಿತು

ಕ್ರಾಂತಿ ದಿನಾಚರಣೆ

ರಾಜಧಾನಿಯ ದೇಶೀಯ ವಿದ್ಯಾಶಾಲೆ ಯ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂ ಟೆಗೆ ಕ್ರಾಂತಿ ದಿನಾಚರಣೆಯು ಶ್ರೀ ಗೋ ಪಾಲ ಕೃಷ್ಣ ಅಡಿಗರವರ ಅಧ್ಯಕ್ಷತೆಯಲ್ಲಿ ನಡೆಯುವುದು

ಸಿಂಧ್ ಮಾಜಿ ಪ್ರಧಾನಿಯ ಖುಲಾಸೆ

ಸಿಂಧಿನ ಮಾಜಿ ಪ್ರಧಾನಿ ಮಹಮದ್ ಖುರೋರವರು ಕಳುವು ಮಾಲನ್ನು ಪಡೆ ದಿದ್ದರೆಂದೂ ಮತ್ತು ಹಣದ ದುರುಪ ಯೋಗ ಪಡಿಸಿದರೆಂದೂ ಕರಾಚಿಯ ನಗ ರ ನ್ಯಾಯಾಧೀಶರು ಅವರಿಗೆ ೨ ವರ್ಷ ಶಿಕ್ಷೆಯನ್ನು ವಿಧಿಸಿದ್ದರು ಅಪೀಲಿನಲ್ಲಿ ಅಲ್ಲಿನ ಹೈ ಕೋರ್ಟಿನವರು ಅವರನ್ನು ಖುಲಾಸೆ ಮಾಡಿದ್ದಾರೆ

ಪೀಕಿಂಗು ಕಮ್ಯೂನಿಸ್ಟರ ರಾಜಧಾನಿ

ಚೀನಾದ ಕಮ್ಯೂನಿಸ್ಟರು ಪೀಕಿಂಗ ನ್ನು ತಮ್ಮ ರಾಜಧಾನಿಯನ್ನಾಗಿ ಮಾಡು ವರೆಂದೂ, ಅಕ್ಟೋಬರ್ ೧೦ನೇ ತಾ॥ ಕಮ್ಯೂನಿಸ್ಟರು ನೂತನ ಸರ್ಕಾರವನ್ನು ಘೋಷಿಸುವರೆಂದೂ ಹೇಳಲಾಗಿದೆ

ಜನ ಸಂಖ್ಯೆ ಹತೋಟಿ ಯಲ್ಲಿಡಲು ಮಿತ ಸಂತಾನ

ಭಾರತದಲ್ಲಿ ಜನ ಸಂಖ್ಯೆ ಹೆಚ್ಚುವುದ ನ್ನು ತಡೆಗಟ್ಟಬೇಕೆಂದೂ, ಅದಕ್ಕಾಗಿ ಮಿ ತ ಸಂತಾನ ಪದ್ಧತಿಯನ್ನು ಜಾರಿಗೆ ತಂ ದು, ಸರ್ಕಾರದವರು ಅದರ ಬಗ್ಗೆ ಆರೋ ಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂದೂ ಸರ್ ಎಂ. ವಿಶ್ವೇಶ್ವರಯ್ಯನವರು ಪೂನೆಯ ಲ್ಲಿ ಮೊನ್ನೆ ದಿನ ನಡೆದ ಅಖಿಲ ಭಾರತ ತ ಯಾರಿಕೆಗಾರರ ಸಂಘದ ವಾರ್ಷಿಕ ಸಭೆ ಯಲ್ಲಿ ತಿಳಿಸಿರುತ್ತಾರೆ

ಅಕ್ಕಿಯ ಬೆಳೆ ಹೆಚ್ಚಾಗಿದೆ

೧೯೪೮-೪೯ರಲ್ಲಿ ಅಕ್ಕಿಯ ಬೆಳೆಯು ಪ್ರ ಪಂಚದಲ್ಲಿ ಅತ್ಯಂತ ಹೆಚ್ಚಾಗಿದೆಯೆಂದೂ, ಭಾರತದಲ್ಲಿ ಶೇಕಡ ೧೧ ರಷ್ಟು ಬೆಳೆಯು ಹೆಚ್ಚಿದೆಯೆಂದೂ ಹೇಳಲಾಗಿದ

ಸರ್ ಆರ್ಕಾಟರು ವಿಶ್ವ ಸಂಸ್ಥೆಯ ಸೆಕ್ರೆಟರಿ-ಜನರಲ್ಲ ರಾಗುವರೇ?

ವಿಶ್ವ ಸಂಸ್ಥೆಯ ಸೆಕ್ರೆಟರಿ ಜನರಲ್ಲರಾ ದ ಮಿ॥ ಟ್ರಿಗ್ವೆ ಲೀಯವರು ಈ ವರ್ಷದ ಅಂತ್ಯದಲ್ಲಿ ನಿವೃತ್ತರಾಗಲಿರುವುದರಿಂದ ಅ ವರ ಸ್ಥಾನಕ್ಕೆ ಬೇರೊಬ್ಬರನ್ನು ಚುನಾಯಿ ಸುವಾಗ ಮೈಸೂರಿನ ಮಾಜಿ ದಿವಾನರಾ ದ ಸರ್ ಆರ್ಕಾಟರ ಹೆಸರನ್ನು ಭಾರತ ಸರ್ಕಾರವು ಸೂಚಿಸುವುದೆಂದು. ರಾಜಕೀ ಯ ಆವರಣದಲ್ಲಿ ಹೇಳಲಾಗುತ್ತಿದೆ ಅ ಮೆರಿಕ, ಫ್ರಾನ್ಸ್, ಬ್ರಿಟನ್ ಮತ್ತು ರಷ್ಯಗ ಳು ಈ ಹುದ್ದೆಗೆ ಸ್ಪರ್ಧಿಸುವುದಿಲ್ಲವೆಂದೂ, ಭಾರತದ ಪ್ರತಿನಿಧಿಯು ಜಯಶೀಲರಾಗು ವ ಸಂಭವವಿದೆಯೆಂದೂ ಹೇಳಲಾಗಿದೆ

ರಾಜಕೀಯ ವಾತಾವರಣವು ಕಲಕಿರುತ್ತದೆ

ಟಿ. ಸಿದ್ದಲಿಂಗಯ್ಯನವರ ಹೇಳಿಕೆ

ಬೆಂಗಳೂರು ೯

ಇದೇ ೬ ನೇ ತಾ ಮೈಸೂರು ರಾಜ ಕೀಯದಲ್ಲಿ ಅತ್ಯಂತ ಮಹತ್ವದ ದಿನವೆಂ ದು ಸರ್ವರೂ ನಂಬಿದ್ದರು ಮಂತ್ರಿ ಮಂ ಡಲವನ್ನು ಆ ದಿವಸ ಪುನಃಪ್ರಚಿಸಲಾಗುವು ದೆಂದು ಮುಖ್ಯ ಮಂತ್ರಿಗಳೇ ದೇಶಕ್ಕೆ ಆ ಶ್ವಾಸನ ಕೊಟ್ಟಿದ್ದರು ಆ ದಿನವು ಮುಗಿ ದುಹೋಯಿತಾದ್ದರಿಂದ ಕಾಂಗ್ರೆಸ್ಸಿನವರು ವಚನ ಭ್ರಷ್ಟರಾಗಲಿಲ್ಲವೇ- ಎಂದು ಜನ ರು ಕೇಳುತ್ತಿದ್ದಾರೆ ರಾಜಕೀಯ ವಾತಾ ವರಣವು ಈಗ ಕಲಕಿದೆ ಅದರ ಅಧಿಕೃತ ವಾಗಿ ಈ ವಿಚಾರವಾಗಿ ಏನನ್ನೂ ಹೇಳ ಲು ನನಗೆ ಈಗ ಸಾಧ್ಯವಿಲ್ಲ ಮಹಾ ಜನ ರಿಗೆ ಇತ್ತ ಆಶ್ವಾಸನವನ್ನು ಕಾಲದಲ್ಲಿ ಪ ರಿಪಾಲಿಸಬೇಕು ಹಾಗೆ ಮಾಡದಿದ್ದಲ್ಲಿ ಪ್ರ ಜೆಗಳಲ್ಲಿನ ವಿಶ್ವಾಸಕ್ಕೆ ಭಂಗ ಬರುವುದಾ ದ್ದರಿಂದ ಆ ಮಹಿಮೆಯರು ಇಂತಹ ಗುರು ತರ ಜವಾಬ್ದಾರಿಯ ಸ್ಥಾನದಲ್ಲಿರಲು ಅ ರ್ಹರೇ ಅಲ್ಲವೆಂದಾಗುವುದು- ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗ ಯ್ಯನವರು ತಿಳಿಸಿರುತ್ತಾರೆ

ಉಪ್ಪಿನ ಮೇಲೆ ತೆರಿಗೆ ಇಲ್ಲ

ಉಪ್ಪಿನ ಮೇಲೆ ತೆರಿಗೆಯನ್ನು ಖಂಡಿ ತವಾಗಿ ವಿಧಿಸಲಾಗುವುದಿಲ್ಲವೆಂಬ ಭರ ವಸೆಯನ್ನು ಪ್ರಧಾನಿ ಪಂಡಿತ ನೆಹರೂ ರವರು ಕೇಂದ್ರ ಶಾಸನಾಂಗ ಸಭೆಯಲ್ಲಿ ಕೊಟ್ಟಿರುತ್ತಾರೆ

ದಿವಾನರ ಹುದ್ದೆಯ ರದ್ದಿನ ಬಗ್ಗೆ ರಾಜ ಘೋಷಣೆ

ಸ್ವಂ ಸು. ಫೋ॥] ಬೆಂಗಳೂರು ೯

ಶ್ರೀಮನ್ಮಹಾರಾಜರವರು ಇದೇ ೭ನೇ ತಾ॥ ರುಜುಮಾಡಿರುವ ಕೆಳಗೆ ಕಂಡ ವಿ ಶೇಷ ಘೋಷಣೆಯೊಂದನ್ನು ಈ ದಿನ ಸ ರ್ಕಾರದವರು ಪ್ರಕಟಿಸಿರುತ್ತಾರೆ

೩ ವರ್ಷಗಳ ಕಾಲ ಅಮೋಘ ಸೇವೆ ಸಲ್ಲಿಸಿದ ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ತ ಮ್ಮನ್ನು ಈ ಕೆಲಸದಿಂದ ನಿವೃತ್ತಿ ಮಾಡ ಬೇಕೆಂದು ಕೇಳಿಕೊಂಡಿದ್ದುದರಿಂದ ಅ ವರು ಈ ದಿನದಿಂದ ನಿವೃತ್ತರಾಗಲು ಅನುಮತಿ ಕೊಡಲಾಗಿದೆ, ಮತ್ತು ಅದೇ ದಿನದಿಂದ ದಿವಾನರ ಹುದ್ದೆಯನ್ನು ರದ್ದು ಮಾಡಲಾಗಿದೆ ಈ ಸಂಬಂಧದಲ್ಲಿ ೧೯೪೦ ನೇ ಮೈಸೂರು ಕಾನೂನನ್ನು ತಿದ್ದುಪಡಿ ಮಾಡಲಾಗಿದೆ ಮತ್ತು ಶ್ರೀ ಕೆ ಸಿ ರೆಡ್ಡಿ ಯವರು ದಿವಾನರು ನಡೆಸುತ್ತಿದ್ದ ಕಾರ್ಯ ಕ್ರಮಗಳನ್ನೆಲ್ಲ ಮುಖ್ಯ ಮಂತ್ರಿಗಳಾಗಿ ನಡೆಸುವರ ಮುಖ್ಯ ಮಂತ್ರಿಗಳೂ ಮತ್ತು ಮಂತ್ರಿಮಂಡಲದವರೂ ದೇಶದ ಉನ್ನತಿಗೂ ಮತ್ತು ಪ್ರಜಾ ಸೌಖ್ಯಕ್ಕೂ ದುಡಿಯುವರೆಂದು ನಾವು ನಂಬಿದ್ದೇವೆ

ಈ ದಿನ ಮಧ್ಯಾಹ್ನ ೩ ಗಂಟೆಗೆ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಪತ್ರಿಕಾ ಸಮ್ಮೇಳನವನ್ನು ಕರೆದಿದ್ದರು

ಸರ್ ದೇಶ್ ಮುಖ್‌ರವರಿಗೆ ನೂತನ ಹುದ್ದೆ

ಭಾರತದ ರಿಜರ್ವ್ ಬ್ಯಾಂಕಿನ ಮಾಜಿ ಗೌರ್ನರರಾದ ಸರ್ ಚಿಂತಾಮಣಿ ದೇಶ್ ಮುಖ್‌ರವರನ್ನು ಅಮೆರಿಕ ಮತ್ತು ಯೂ ರೋಪು ಗಳಲ್ಲಿ ವಿದೇಶಾಂಗ ರಾಯಭಾರಿ ಭಾರತದ ಪ್ರತಿನಿಧಿಯನ್ನಾಗಿ ನೇಮಿಸ ಲಾಗಿದೆ ಇವರು ಮುಂದಿನ ಸೆಪ್ಟಂಬರ್ ತಿಂಗಳು ೨೧ ದಿನ ಈ ಪದವಿ ವಹಿಸಿ ಕೊಳ್ಳುವರು

ಫಾರ್ಮೋಸಾದ ಸ್ವಾತಂತ್ರ್ಯ ಸೈನ್ಯ

ಫಾರ್ಮೋಸಾದಲ್ಲಿರುವ ಚೀನಾ ರಾ ಷ್ಟ್ರೀಯ ಸರ್ಕಾರವನ್ನು ಎದುರಿಸಲು ಜಪಾ ನಿನಲ್ಲಿ ೧೧ ಸೈನ್ಯಗಳನ್ನೊಳಗೊಂಡ ಒಂದು ಸೈನ್ಯವನ್ನು ತಯಾರಿಸಲಾಗಿದೆ ಯೆಂದು ಹೇಳಲಾಗಿದೆ

ಸಂಗೀತ ಕಛೇರಿ

ಮೈಸೂರು ೯

ಈ ದಿನ ರಾತ್ರಿ ೮-೩೦ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಕಛೇ ರಿಯ ಮಹಡಿ ಮೇಲೆ ಆಸ್ಥಾನ ವಿದ್ವಾನ್ ಎಸ್. ಎಸ್. ಮರಿಯಪ್ಪನವರ ಸಂಗೀತ ಕ ಛೇರಿಯು ನಡೆಯುವುದು. ಸರ್ವರಿಗೂ ಸ್ವಾಗತವುಂಟು

ಮಂತ್ರಿ ಮಂಡಲದ ಪುನ ರ್ರಚನೆಗೆ ತಡಮಾಡಬೇಕು

ಕೇಂದ್ರ ಕಾಂಗ್ರೆಸ್ ಪಾರ್ಲಿ ಮೆಂಟರಿ ಸಮಿತಿಯ ಸೂಚನೆ

ಬೆಂಗಳೂರು ೯

ಸಂಸ್ಥಾನದ ಮಂತ್ರಿಮಂಡಲದ ಪುನ ರ್ರಚನೆಯ ವಿಷಯವನ್ನು ತಡ ಮಾಡಬೇ ಕೆಂದು ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟ ರಿ ಬೋರ್ಡಿನವರಿಂದ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ಸೂಚನೆ ಬಂ ದಿರುವುದೆಂದೂ, ಅಲ್ಲಿಂದ ಮುಂದಿನ ಸಲ ಹೆ ಬರುವವರೆಗೂ ಅಂತಿಮ ನಿರ್ಧಾರಕ್ಕೆ ಬರುವಹಾಗಿಲ್ಲವೆಂದೂ ತಿಳಿದುಬಂದಿದೆ

ಐವತ್ತು ಗಂಟೆ ಕಾಲ ಖೈದಿಗಳಿಗೆ ಬೇಡಿ ಮತ್ತು ಛಡಿ ಏಟು

ಅಮೆರಿಕದ ಉತ್ತರ ಕ್ಯಾರೋಲಿನಾ ಸಂ ಸ್ಥಾನದ ಜೈಲುಗಳಲ್ಲಿ ಖೈದಿಗಳನ್ನು ಛಡಿ ಶಿಕ್ಷೆಗೆ ಗುರಿಪಡಿಸುವುದಲ್ಲದೆ ಐವತ್ತು ಗಂಟೆಕಾಲ ಕೈಗಳಿಗೆ ಬೇಡಿ ಹಾಕಿ ನಿಲ್ಲಿಸಿ ಅವರುಗಳಿಗೆ ಊಟವನ್ನೂ ಸಹ ಕೊಡ ದೇ ಇರುವ ಪದ್ಧತಿಯನ್ನು ಪ್ರತಿಭಟಿಸ ಲು ಅಲ್ಲಿನ ಪೌರ ಸಭಾಧ್ಯಕ್ಷರು ಸಂಸ್ಥಾನ ದ ಜೈಲು ಕಾನೂನು ಬದಲಾವಣೆಯಾಗು ವವರೆಗೂ ತಾವು ಯಾವ ಅಪರಾಧಿಗೂ ಜೈಲಿನ ಶಿಕ್ಷೆಯನ್ನು ವಿಧಿಸುವುದಿಲ್ಲವೆಂದು ತಿಳಿಸಿದುದರ ಮೇಲೆ ಈಗ ಅಲ್ಲಿಯ ಗೌ ರ್ನರರು ಜೈಲುಗಳ ಸ್ಥಿತಿಯ ಬಗ್ಗೆ ತನಿಖೆ ಗೆ ಒಂದು ಸಮಿತಿಯನ್ನೇರ್ಪಡಿಸಿದ್ದಾರೆ.

ಯುದ್ಧ ನಡೆಯುವುದಿದ್ದರೆ ನಿರುದ್ಯೋಗ

ಪಶ್ಚಿಮದ ಪ್ರಮುಖ ರಾಷ್ಟ್ರಗಳು ಯುದ್ಧ ಕ್ಕಾಗಿ ತಮ್ಮ ವರಮಾನದಲ್ಲಿ ಮೂರನೇ ಒಂದು ಭಾಗವನ್ನು ಖರ್ಚು ಮಾಡದಿದ್ದ ಲ್ಲಿ ನಿರುದ್ಯೋಗಿಗಳ ಸಂಖ್ಯೆಯು ವಿಪರೀ ತವಾಗಿ ಪ್ರಪಂಚದ ಪರಿಸ್ಥಿತಿಯು ವಿಷಮ ಗೊಳ್ಳುವುದೆಂದು ವಿಶ್ವ ಸಂಸ್ಥೆಯ ಆಹಾ ರ ಮತ್ತು ವ್ಯವಸಾಯ ಸಮಿತಿಯ ಮಾಜಿ ಮುಖ್ಯಾಧಿಕಾರಿಗಳಾದ ಲಾರ್ಡ್ ಬಾಯ್ಡ್ ಆರ್ ರವರು ತಿಳಿಸುತ್ತಾರೆ ದೈವವಶಾ ತ್ ಪ್ರಪಂಚದಲ್ಲಿ ಶಾಂತಿ ನೆಲಸಿ ಸೈನ್ಯದ ಲ್ಲಿರುವವರು ಕೆಲಸದಿಂದ ವಾಪಸು ಬಂದ ರೆ, ಆಗ ದೇಶಗಳ ಆರ್ಥಿಕ ಸ್ಥಿತಿಯು ವಿ ಶೇಷ ಹದಗೆಡುವುದೆಂದೂ ಅವರು ಹೇಳಿ ರುತ್ತಾರೆ

ವಿಶ್ವವಿದ್ಯಾನಿಲಯದಲ್ಲಿ ಧರ್ಮ ಮತ್ತು ತತ್ವ ಜ್ಞಾನದ ಶಿಕ್ಷಣ

ಕಾಲೇಜಿನ ವಿದ್ಯಾರ್ಥಿಗಳು ಶೀಲ ಮ ತ್ತು ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊ ಳ್ಳಲು ಧರ್ಮ ಮತ್ತು ತತ್ವ ಜ್ಞಾನದ ಶಿ ಕ್ಷಣವನ್ನು ವಿಶ್ವವಿದ್ಯಾನಿಲಯದವರು ಏರ್ಪ ಡಿಸಬೇಕೆಂದು ಗವರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರು ನಿನ್ನೆ ಬೊಂಬಾಯಿನಲ್ಲಿ ಭಾರತೀಯ ವಿದ್ಯಾ ಭ ವನದ ಸ್ನಾತಕೋತ್ಸವವನ್ನು ನೆರವೇರಿ ಸುತ್ತಾ ತಿಳಿಸಿದ್ದಾರೆ

ರಾಜಧಾನಿಯಲ್ಲಿ ಪ್ರಕಟಣಾಧಿಕಾರಿಗಳ ಶಾಖೆ

ಮೈಸೂರು ೯

ಮೊನ್ನೆ ದಿನ ಇಲ್ಲಿನ ಪತ್ರಿಕೋದ್ಯೋಗಿಗಳ ಸಂಘದ ಸಭೆಯು ನಡೆದು ೧೫ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯನ್ನು ಎಂದಿನಂತೆ ವೈಭವದಿಂದ ನೆರವೇರಿಸಬೇಕೆಂದು ತೀರ್ಮಾನಿಸಲಾಯಿತು. ರಾಜಧಾನಿಯಲ್ಲಿಪ್ರಕಟಣಾಧಿಕಾರಿಗಳ ಕಚೇರಿ ಶಾಖೆಯೊಂದನ್ನು ತೆಗೆಯುವಂತೆ ಸರ್ಕಾರದವರನ್ನು ಒತ್ತಾಯಪಡಿಸಬೇಕೆಂಬ ನಿರ್ಣಯವೂ ಆಯಿತು

ಸಮಗ್ರ ಸಹಕಾರ ಸಂಘದ ಪ್ರಾರಂಭ

ಸೋಮನಾಥಪುರದ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ನಾಳೆ ಮಧ್ಯಾಹ್ನ ೩ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಎಲ್. ನಾಗರಾಜರಾಯರು ನೆರವೇರಿಸುವರು.

ಸ್ವತಂತ್ರ ಭಾರತದ ಅಂಚೆ ಸ್ಟಾಂಪುಗಳು

ಸ್ವತಂತ್ರ ಭಾರತದ ಹಲವಾರು ಅಂಚೆ ಸ್ಟಾಂಪುಗಳು ಮತ್ತು ಸ್ವಾತಂತ್ರ್ಯ ದಿನದ ೧ ಆಣೆಯ ಲಕೋಟೆಗಳನ್ನು ಮೈಸೂರು ಪ್ರಧಾನ ಅಂಚೆ ಕಛೇರಿಯಲ್ಲಿ ಇದೇ ೮ ರಿಂದ ೧೫ ನೇ ತಾ॥ ವರೆಗೆ ಮಾರಲು ವ್ಯವಸ್ಥೆ ಮಾಡಲಾಗಿದೆ.

ರೈಲ್ವೆ ಅಧಿಕಾರಿಗಳು ಗಮನಿಸಬೇಕು

ಚಾಮರಾಜನಗರದಿಂದ ಮೈಸೂರಿಗೆ ಬರುವ ರೈಲಿನಲ್ಲಿ ಹಾಲು ಮಾರುವ ಅನೇಕರು ಪ್ರತಿ ದಿನವೂ ಬರುತ್ತಿರುವರಷ್ಟೆ. ರೈಲು ಸ್ಟೇಷನ್ನನ್ನು ಬಿಟ್ಟು ಬಹಳ ದೂರ ಹೋದ ಮೇಲೆ ಅವರ ಪೈಕಿ ಹಲವರು ರೈಲಿಗೆ ಹತ್ತುವ ವಾಡಿಕೆಯಾಗಿದೆಯೆಂದೂ ಇದರಿಂದ ಅನಾಹುತಗಳಾಗುವ ಸಂಭವವಿರುವುದರಿಂದ ಅಧಿಕಾರಿಗಳು ಇದನ್ನು ಗಮನಿಸಿ ಕೂಡಲೇ ತಪ್ಪಿಸಬೇಕೆಂದೂ ಕೋರಿ ಪ್ರಯಾಣಿಕರೊಬ್ಬರು ಪತ್ರ ಬರೆದಿರುತ್ತಾರೆ

ಬೊಂಬಾಯಿಯಲ್ಲಿ ಹಾಲಿನ ಬೆಲೆ ಹತೋಟಿ

ಬೊಂಬಾಯಿ ನಗರ ಮತ್ತು ಸುತ್ತಮುತ್ತಲಿನಲ್ಲಿ ಹಾಲಿನ ದರ ಮತ್ತುಶುದ್ಧತೆಯನ್ನು ಹತೋಟಿಯಲ್ಲಿಡಲು ಸರ್ಕಾರದವರು ಕಾರ್ಯಕ್ರಮ ಕೈಕೊಳ್ಳುವರೆಂದು ಹೇಳಲಾಗಿದೆ. ಒಳ್ಳೆಯ ಹಾಲನ್ನು ಇಷ್ಟೇ ಬೆಲೆಗೆ ಮಾರಬೇಕೆಂದು ನಿಗದಿ ಮಾಡುವ ಆಜ್ಞೆಯನ್ನು ಜಾರಿಗೆ ತರಲಾಗುವುದೆಂದೂ. ಆನಂತರ ಪುರಸಭೆಯು ಆಡಳಿತದಲ್ಲಿರುವ ಹಾಲಿನ ಹತೋಟಿಯನ್ನು ಸರ್ಕಾರವು ವಹಿಸಿಕೊಳ್ಳುವುದೆಂದೂ ತಿಳಿದು ಬಂದಿದೆ

ಸ್ವತಂತ್ರ ಕಾರ್ಮಿಕ ಸಂಘದ ಸ್ಥಾಪನೆ

—:o:—

ಬೆಂಗಳೂರು ೯.

ಸಂಸ್ಥಾನದ ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಮ್ಮೇಳನವು ಶ್ರೀ ಕೆ. ಕಣ್ಣಾರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಇಲ್ಲಿನ ಮೈತ್ರಿ ನಿಲಯದಲ್ಲಿ ನಡೆಯಿತು.

ಕಾರ್ಮಿಕ ವರ್ಗದ ಶಕ್ತಿ ಸಂಘಟನೆಯನ್ನು ರಾಜಕೀಯ ಪಕ್ಷಗಳು ದುರುಪಯೋಗ ಪಡಿಸಿಕೊಳ್ಳಲು ಒಳ ಸಂಚು ನಡೆಸುತ್ತಿರುವ ಪ್ರತಿ ಗಾಮಿ ಧೋರಣೆಯನ್ನು ಖಂಡಿಸಲಾಯಿತು.

ಈ ಲಕ್ಷ್ಯ ಕಾರ್ಮಿಕರ ಸಂಘಟನೆಯ ಹಿತದೃಷ್ಟಿಯಿಂದ ರಾಜಕೀಯ ಪಕ್ಷಗಳ ಜಂಜಾಟದಿಂದ ದೂರವಾಗಿ ಸ್ವತಂತ್ರ ಕಾರ್ಮಿಕ ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ಅದಕ್ಕೆ ಶ್ರೀ ಎಸ್. ಬಿ ಅರೆಕಲ್ಲರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಬಿ. ಶ್ರೀಕಂಠಪ್ಪ ಮತ್ತು ಎಂ. ಎ. ಅಮಲೋದ್ಭವಂರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು

ಚಿನ್ನದ ಗಣಿ ಕಾರ್ಮಿಕ ನಾಯಕರಾದ ಶ್ರೀ ಎಸ್. ಬಿ. ಅರೇಕಲ್ಲರವರನ್ನು ಸಂಸ್ಥಾನದಿಂದ ಗಡೀಪಾರು ಮಾಡಿರುವುದನ್ನು ಖಂಡಿಸಿ, ಅದನ್ನು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಲಾಯಿತು. ವ್ಯಕ್ತಿಸ್ವಾತಂತ್ರ್ಯ ಮತ್ತು ಕಾರ್ಮಿಕ ಚಳುವಳಿಯನ್ನು ತುಳಿಯಲು ಜಾರಿಮಾಡಿರುವ ಪಬ್ಲಿಕ್ ಸೆಕ್ಯೂರಿಟಿ ಕಾನೂನು ಮತ್ತು ಗಡೀಪಾರು ಆಜ್ಞೆಗಳನ್ನು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು.

ರಾಜಕಮಲ್,
ಮೈ ಸೂ ರು

6—8—49 ರಿಂದ

ದಿನವಹಿ 3 ಪ್ರದರ್ಶನ

ಮೆಹಬೂಬ್‌ರವರ ಹಿಂದಿ ಚಿತ್ರ

ಅನೋಖಿ ಅದ

ಭೂಮಿಕೆ:- ನಾಸಿಂ, ಪ್ರೇಮ್ ಅದೀಬ್ ಮತ್ತು ಸುರೇಂದ್ರ.

ದೆಹಲಿಗೆ ರೈಲ್ವೆ ಕೆಲಸಗಾರರ ನಿಯೋಗ

—:o:—

ಮೈಸೂರು ೯.

ಮೈಸೂರು ರೈಲ್ವೆಕೆಲಸಗಾರರಸಂಘದ ಸಭೆಯು ಮೊನ್ನೆ ದಿನ ಜನಾಬ್ ಗುಲಾಂ ಖಾದರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ರೈಲ್ವೆಯ ಆಡಳಿತವನ್ನು ಕೇಂದ್ರ ಸರ್ಕಾರದವರು ಸಧ್ಯದಲ್ಲಿಯೇ ವಹಿಸಿಕೊಳ್ಳುವರೆಂದು ತಿಳಿದುಬಂದಿರುವುದರಿಂದ, ಇಲ್ಲಿನ ರೈಲ್ವೆ ಕೆಲಸಗಾರರ ಹಿತರಕ್ಷಣೆ ಮತ್ತು ಹಕ್ಕು ಬಾಧ್ಯತೆಗಳ ಬಗ್ಗೆ ರೈಲ್ವೆ ಸಚಿವರಾದ ಶ್ರೀ ಟಿ. ಮರಿಯಪ್ಪನವರ ನಾಯಕತ್ವದಲ್ಲಿ ೩ ಜನರ ನಿಯೋಗವೊಂದನ್ನು ದೆಹಲಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು. ಕೆಲಸದಿಂದ ವಜಾ ಮಾಡಿರುವ ರೈಲ್ವೆ ಕೆಲಸಗಾರರ ಸಂಘದ ಅಧಿಕಾರೀ ವರ್ಗದವರನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಮತ್ತು ಪುನರ್ರಚಿತ ಮಂತ್ರಿಮಂಡಲದಲ್ಲಿ ಕಾರ್ಮಿಕರ ಪರವಾಗಿ ಒಬ್ಬರು ಮಂತ್ರಿಗಳನ್ನು ನೇಮಿಸಬೇಕೆಂದೂ ಕೋರುವ ನಿರ್ಣಯ ಮಾಡಲಾಯಿತು.

೩ ತಿಂಗಳು ಬೋನಸ್ಸನ್ನು ಕೊಡಬೇಕೆಂದೂ, ಅದರ ಪೈಕಿ, ೮ ದಿನಗಳ ವೇತನವನ್ನು ಗಾಂಧಿ ನಿಧಿಗೂ ೪ ದಿನಗ[ಳ] ವೇತನವನ್ನು ನಿರಾಶ್ರಿತರ ಮತ್ತು [...]ಗಳ ವೇತನವನ್ನು ಸಂಘದ ಕಟ್ಟ[...]ಧಿಗೂ ಕೊಡಬೇಕೆಂದು ತೀರ್ಮಾ[ನಿಸ]ಲಾಯಿತು.

ಭೂಕಂಪದಿಂದ ಸಾವಿ[ರಾರು] ಜನರ ಮರಣ

ಈಕ್ವೇಡಾರ್‌ನಲ್ಲಿ ಕಳೆದ ೫ ನೇ [...]ಬಾರಿ ಭೂಕಂಪವಾಗಿ ೪೬೦೦ ಜನ[...]ತ ಪಟ್ಟರೆಂದೂ ಲಕ್ಷಾಂತರ ಡಾಲ[ರು]ಷ್ಟು ನಷ್ಟ ಸಂಭವಿಸಿದೆಯೆಂದು [...]ಲಾಗಿದೆ.

ದಿ ಸೌತ್ ಇಂಡಿ[ಯನ್] ಎಲೆಕ್ಟ್ರಿಕ್ ಕಂಪೆನಿ

ನಂ. ೧೦ ಇವನಿಂಗ್ ಬಜಾರ್ ಶಿವರಾಂಪೇಟೆ, ಮೈಸೂರು.

—:o:—

ನಮ್ಮಲ್ಲಿ ಎಲ್ಲಾ ವಿಧವಾದ ಎಲೆ[ಕ್ಟ್ರಿಕ್] ಸಾಮಾನುಗಳು ಚಿಲ್ಲರೆಯಾಗಿಯೂ [ಮ]ತ್ತು ಹೋಲ್‌ಸೇಲ್‌ನಲ್ಲೂ ಕಮ್ಮಿ ದ[ರಕ್ಕೆ] ಸಿಕ್ಕುತ್ತವೆ. ಒಂದಾವರ್ತಿ ಪರೀಕ್ಷಿ[ಸಿ]

ಎಂ. ಬಸಪ್ಪ[...]
ಪ್ರೊಪ್ರೈಟ[ರ್]

Office of the Executive Engine[er]
Buildings Division, Mysore.
7th August 1949.

TENDER NOTIFICATION

—:o:—

CONSTRUCTION OF TEMPORARY STALLS AT JEEVANA-RAYANAKATTE FOR THE DASARA EXHIBITION 1949

It is hereby notified for the information [of] the public, that the last date for accepting tende[rs] for the above is extended up to the 13th August 19[49].

(1) Sealed Tenders will be received by th[e] undersigned up to 4 p.m. on 13th August 1949.

(2) The Tenders should be accompanied by [a] challan for having credited Rs 950/- as earne[st] money to Government Treasury in favour of t[he] undersigned under 40(1) With Treasury by P.W.[D.] No cheques will be accepted. Tenders not accomp[a]nied by such challans will be disqualified without a[ny] consideration.

(3) Tenders should quote hire charges only f[or] a period of one month commencing from 20th Se[p]tember 1949.

(4) A layout plan showing the position of sta[lls] etc. may be seen in this office on all working da[ys] between 1 p.m. and 4 p.m. An abstract estima[te] with approximate quantity of work will be sent [on] application.

(5) The undersigned will have the full discr[e]tion for approving the quality of work and his de[ci]sion in all matters shall be final.

(6) The stalls should be completed and hand[ed] over to the Department on the 20th September 19[49] from which date the hire charges will be calcualte[d].

(Sd) T. HUTCHAVEERIAH,
Executive Engineer,
Buildings Division, Mysore.

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ

5-8-49 ರಿಂದ :: ದಿನವಹಿ 3 ಆಟಗಳು

ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ತಮಿಳು ಚಿತ್ರ

—ನವಜೀವನಂ—

R. V. ಪಿಕ್ಚರ್ಸ್ ರಿಲೀಸ್

Edited, printed and published by A. R Nagarajan, at Sadhvi Press, D. Subbiah Road, Mysore.

ಫೋ|| ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೧೦-೮-೧೯೪೯ [ಸಂಚಿಕೆ ೧೬

ಹೊಸ ಸಿನಿಮಾಗಳಿಗೆ ೩ ವರ್ಷ ರಹದಾರಿ ಇಲ್ಲ

ಹೋಟೆಲುಗಳ ಸಂಖ್ಯೆಯನ್ನು ಕಡಿಮೆಮಾಡಬೇಕು

ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೧೦

ನಗರದಲ್ಲಿರುವ ಹೋಟೆಲುಗಳ ವಿಚಾರದಲ್ಲಿ ಆರೋಗ್ಯ ಸಮಿತಿಯವರಿಂದ ಬಂದ ಸಲಹೆಗಳನ್ನು ಪರಿಶೀಲಿಸಲು ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ನಡೆಯಿತು. ನಗರದಲ್ಲಿ ಹೋಟೆಲುಗಳ ಸಂಖ್ಯೆಯು ಮಿತಿಮೀರಿರುವುದು. ಇದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕು. ಆರೋಗ್ಯ ನಿಯಮಗಳಿಗನುಸಾರವಾಗಿರುವ ಹೋಟೆಲುಗಳಿಗೆ ಮಾತ್ರ ರಹದಾರಿಯನ್ನು ಮುಂದುವರಿಸಬೇಕು. ಇತರ ಹೋಟೆಲುಗಳಲ್ಲಿ ಅಗತ್ಯವಾದ ಸುಧಾರಣೆಗಳನ್ನು ಮಾಡಿಸಿ ಅನಂತರ ರಹದಾರಿ ಕೊಡಬೇಕು. ಕೇವಲ ಅನಾರೋಗ್ಯಕರವಾಗಿಯೂ ಅಸ್ವಚ್ಛಕರವಾಗಿಯೂ ಇರುವ ಹೋಟೆಲುಗಳಿಗೆ ಲೈಸೆನ್ಸುಗಳನ್ನು ಕೊಡಬಾರದು. ನಗರದಲ್ಲಿ ಗೊತ್ತಾದ ಸಂಖ್ಯೆಯಲ್ಲಿ ಮಾತ್ರ ಹೋಟೆಲುಗಳು ನಡೆಯುವಂತೆ ಶಾಸನ ಮಾಡಲು ಸರ್ಕಾರದವರನ್ನು ಕೋರಬೇಕು. ಈ ಹೋಟೆಲುಗಳನ್ನು ನಡೆಸುವ ಹಕ್ಕನ್ನು ಬಹಿರಂಗವಾಗಿ ಹರಾಜು ಮಾಡಲು ಪುರಸಭೆಗೆ ಅವಕಾಶವಿರಬೇಕು–ಎಂಬಿವೇ ಮುಂತಾದ ಸಲಹೆಗಳು ಆರೋಗ್ಯ ಸಮಿತಿಯವರಿಂದ ಬಂದಿದ್ದವು. ಅವುಗಳ ಮೇಲೆ ಸದಸ್ಯರು ದೀರ್ಘವಾಗಿ ಚರ್ಚೆ ನಡೆಸಿದರು.

ರಹದಾರಿ ಪಡೆಯದೆ ಹಾದಿ ಬೀದಿಗಳಲ್ಲಿ ಅಕ್ರಮವಾಗಿ ತಿಂಡಿ ಪದಾರ್ಥಗಳನ್ನು ಮಾಡಿ ಮಾರುವವರ ಮೇಲೆ ಉಗ್ರ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸಲಾಯಿತು. ಶಾಸನದಲ್ಲಿ ಯುಕ್ತವಾದ ಬದಲಾವಣೆಗಳನ್ನು ಮಾಡಿ ಮೇಲ್ಕಂಡ ಸಲಹೆಗಳನ್ನು ಜಾರಿಗೆ ತರುವಂತೆ ವ್ಯವಸ್ಥೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಶೃಂಗೇರಿ ಮಠದ ಆಡಳಿತಗಾರರು

ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಶ್ರೀ ಎ. ಡಿ. ವೆಂಕಟಸುಬ್ಬಯ್ಯನವರನ್ನು ಶೃಂಗೇರಿ ಮಠದ ಆಸ್ತಿಪಾಸ್ತಿಗಳ ಮೇಲ್ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಉಪಾಧ್ಯಾಯರುಗಳ ತೊಂದರೆ

ಕಳೆದ ತಿಂಗಳು ೮ನೇ ತಾ|| ನಡೆದ ಮೈಸೂರು ವಿದ್ಯಾ ಇಲಾಖೆಯ ಪ್ರೊಫಿಷಿಯನ್ಸಿ ಪರೀಕ್ಷೆಯಲ್ಲಿ ೨ನೇ ಭಾಗದ ಪ್ರಶ್ನೆಯು ವಿಶೇಷ ಕಷ್ಟವಾಗಿದ್ದು ಉಪಾಧ್ಯಾಯರು ಮತ್ತು ಗುಮಾಸ್ತರುಗಳು ಅದಕ್ಕೆ ಉತ್ತರ ಬರೆಯಲು ಆಗದೆ ತುಂಬಾ ಪೇಚಾಡುತ್ತಿದ್ದಾರೆ. ಪಠ್ಯ ಪುಸ್ತಕಗಳು ದೊರೆಯದೆ ಅವರುಗಳು ಬಹಳ ಕಷ್ಟಪಡಬೇಕಾಯಿತು. ಆದುದರಿಂದ ಅವರುಗಳಿಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಬೇಕು ಮತ್ತು ಮುಂದಿನ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಎಲ್ಲ ಪಠ್ಯ ಪುಸ್ತಕಗಳೂ ದೊರೆಯುವಂತೆ ಇಲಾಖೆಯವರು ವ್ಯವಸ್ಥೆ ಮಾಡಬೇಕು–ಎಂದು ನೊಂದ ಉಪಾಧ್ಯಾಯರೊಬ್ಬರು ಪ್ರಾರ್ಥಿಸಿ ಒಂದು ಪತ್ರ ಬರೆದಿರುತ್ತಾರೆ.

ಸಿ. ಆರ್. ರೆಡ್ಡಿಯವರು ಪ್ರೊಛಾನ್ಸಲರು

ಬೆಂಗಳೂರು ೧೦

ಮೈಸೂರು ವಿಶ್ವ ವಿದ್ಯಾನಿಲಯದ ಪ್ರೊಛಾನ್ಸಲರಾಗಿ ಡಾ|| ಸಿ ಆರ್ ರೆಡ್ಡಿಯವರನ್ನು ತಿಂಗಳಿಗೆ ೨೫೦೦ ರೂ ತಲಬಿನ ಮೇಲೆ ನೇಮಿಸಲಾಗಿದೆಯೆಂದು ತಿಳಿದುಬಂದಿದೆ.

ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಬಿ. ಎಲ್ ಮಂಜುನಾಥರವರನ್ನು ವಿಶ್ವ ವಿದ್ಯಾನಿಲಯದ ಉಪ ಸ್ಥಾನಪತಿಗಳನ್ನಾಗಿ ನೇಮಿಸಲಾಗಿದೆಯೆಂದೂ ಗೊತ್ತಾಗಿದೆ.

೩ ವರ್ಷಕಾಲ ಸಿನಿಮಾ ಮಂದಿರಗಳಿಗೆ ಅನುಮತಿ ಇಲ್ಲ

ಸಂಸ್ಥಾನದಲ್ಲಿ ಸಿಮೆಂಟ್, ಕಬ್ಬಿಣ ಮತ್ತು ಮರಗಳ ಅಭಾವವಿರುವುದರಿಂದಲೂ ಮತ್ತು ವಾಸ ಗೃಹಗಳ ಅವಶ್ಯಕತೆ ಇರುವುದರಿಂದಲೂ ಸಂಸ್ಥಾನಾದ್ಯಂತ ಇದೇ ೧ನೇ ತಾ|| ನಿಂದ ೩ ವರ್ಷಗಳ ಕಾಲ ಸಿನಿಮಾ ಮಂದಿರಗಳನ್ನು ಕಟ್ಟಲು ಅನುಮತಿ ಕೊಡಲಾಗುವುದಿಲ್ಲವೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಮಾನ ನಷ್ಟ ಮೊಕದ್ದಮೆ ವಜಾ

ಬೆಂಗಳೂರು ರೇಸ್ ಕ್ಲಬ್ಬಿನ ಸ್ಟೂವರ್ಡರಾದ ಜಸ್ಟಿಸ್ ಪಿ ಮೇದಪ್ಪನವರ ಮೇಲೆ ಅದೇ ಕ್ಲಬ್ಬಿನ ಮಾಜಿ ಕಾರ್ಯದರ್ಶಿ ಮೇಜರ್ ಪೀರವರು ಹೂಡಿದ್ದ ಮಾನ ನಷ್ಟದ ಮೊಕದ್ದಮೆಯನ್ನು ನಗರ ನ್ಯಾಯಾಧೀಶರು ತಳ್ಳಿಹಾಕಿದ್ದಾರೆ. ಕಳೆದ ಮೇ ತಿಂಗಳಿನಲ್ಲಿ ನಡೆದ ಸಂಘದ ಸಭೆಯಲ್ಲಿ ಶ್ರೀ ಮೇದಪ್ಪನವರು ಅವಮಾನಕರವಾಗುವ ರೀತಿಯಲ್ಲಿ ತಮ್ಮ ಮೇಲೆ ಮಾತನಾಡಿದರೆಂದು ಶ್ರೀ ಪೀರವರು ಆಪಾದನೆ ಹೊರಿಸಿದ್ದರು.

ವಿವಾಹ ಮಹೋತ್ಸವ

ಬೆಂಗಾಲ್ ಎಲೆಕ್ಟ್ರಿಕಲ್ ಕಂಪೆನಿಯ ಶ್ರೀ ಜಿ ಎ ಆಚಾರ್ಯರವರ ಪುತ್ರಿ ಚಿ|ಸೌ|| ಶಕುಂತಲಾ ಮತ್ತು ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರುಗಳ ವಿವಾಹವು ನಾಳೆ ದಿನ ಬೆಂಗಳೂರು ಮಲ್ಲೇಶ್ವರದಲ್ಲಿ ನೆರವೇರುವುದು. ನೂತನ ದಂಪತಿಗಳಿಗೆ ಸಕಲ ಸನ್ಮಂಗಳಗಳುಂಟಾಗಲೆಂದು ನಾವು ಹಾರೈಸುತ್ತೇವೆ.

ಸರ್ ಆರ್ಕಾಟರ ಸೇವೆ ಬಗ್ಗೆ ಪ್ರಭುಗಳ ಮೆಚ್ಚಿಗೆ

ಸ್ವಂ ವ ಪ್ರೋ] ಬೆಂಗಳೂರು ೧೦

ದಿವಾನಗಿರಿಯಿಂದ ನಿವೃತ್ತರಾಗಿರುವ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರ ಸೇವೆಯನ್ನು ಮೆಚ್ಚಿ ಶ್ರೀಮನ್ಮಹಾರಾಜರವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವ ಬಗ್ಗೆ ಸರ್ಕಾರದವರು ವಿಶೇಷ ಗೆಜೆಟ್ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಕಠಿಣತರವಾಗಿದ್ದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಜನೀತಿ ನೈಪುಣ್ಯದಿಂದಲೂ, ಅಪೂರ್ವವಾದ ಮೇಧಾಶಕ್ತಿಯಿಂದಲೂ ಅವರು ಸಂಸ್ಥಾನದ ಆಡಳಿತದ ಸೂತ್ರಗಳನ್ನು ನಿರ್ವಹಿಸಿದರು. ವಿಶೇಷ ಕೌಶಲ್ಯದಿಂದ ಭಾರತದೊಡನೆ ಮೈಸೂರು ಸೇರುವ ಬಗ್ಗೆ ಸಂಧಾನ ನಡೆಸಿದರು. ಒಂದು ಬಗೆಯ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಕಾರಣ ಕರ್ತರಾದರು. ತಮ್ಮ ಅಪೂರ್ವವಾದ ಗುಣಾತಿಶಯಗಳಿಂದ ಅವರು ಅಂತರ ರಾಷ್ಟ್ರೀಯ ವಿಖ್ಯಾತಿಯನ್ನೂ ಪಡೆದಿರುವರು. ಅವರಿಗೆ ಮುಂದೆ ಸಕಲ ಶ್ರೇಯಸ್ಸೂ ಉಂಟಾಗಿ ದೇಶ ಸೇವೆಯನ್ನು ಇನ್ನೂ ಹೆಚ್ಚಿಗೆ ಸಲ್ಲಿಸಲು ಶಕ್ತಿ ಉಂಟಾಗಲಿ–ಎಂದು ಪ್ರಭುಗಳು ಹಾರೈಸಿರುತ್ತಾರೆ.

ಭೂಕಂಪದಿಂದ ೯೨೮೧ ಜನರ ಮರಣ

ಮಧ್ಯ ಇಕ್ವೆಡಾರ್‌ನಲ್ಲಿ ಸಂಭವಿಸಿದ ಭೂಕಂಪದಿಂದ ಒಟ್ಟು ೯೨೮೧ ಜನರು ಮೃತಪಟ್ಟರೆಂದೂ, ೬ ಕೋಟಿ ರೂ ಗಳಷ್ಟು ನಷ್ಟ ಉಂಟಾಗಿದೆಯೆಂದೂ ಹೇಳಲಾಗಿದೆ. ಅಂಬೋಟೊ ನಗರವೊಂದರಲ್ಲೇ ೫ ಸಾವಿರ ಜನರು ಮರಣಹೊಂದಿದರು. ಈ ಪ್ರದೇಶದ ೧ ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಒಂದು ಇಡೀ ಗುಡ್ಡವೇ ಕಣಿವೆ ಒಳಕ್ಕೆ ಕುಸಿದುಬಿದ್ದು, ನದಿಯ ಮಾರ್ಗವನ್ನು ಅಡ್ಡಗಟ್ಟಿರುತ್ತದೆ.

ನೆಹರೂರವರಿಗೆ ಅಮೆರಿಕಾ ವಿಶ್ವ ವಿದ್ಯಾಲಯದ ಪ್ರಶಸ್ತಿ

ಪಂಡಿತ ನೆಹರೂರವರು ಅಮೆರಿಕಕ್ಕೆ ಭೇಟಿ ಇತ್ತಾಗ ನ್ಯೂಯಾರ್ಕ್ ಕೊಲಂಬಿಯಾ ವಿಶ್ವ ವಿದ್ಯಾನಿಲಯ ಮತ್ತು ಬಾಸ್ಟನ್ನಿನ ಹಾರ್ವರ್ಡ್ ವಿದ್ಯಾನಿಲಯದವರು ಗೌರವ ಪ್ರಶಸ್ತಿಗಳನ್ನು ಕೊಡಲು ನಿರ್ಧರಿಸಿದ್ದಾರೆ.

ಇನ್ನು ೧ ವಾರದಲ್ಲಿ ಮಂತ್ರಿ ಮಂಡಲದ ಪುನರ್ರಚನೆ

ಮಂತ್ರಿಗಳ ಸಂಖ್ಯೆ ಕಡಿಮೆ ಮಾಡುವುದಿಲ್ಲ

ಉಪ ಮುಖ್ಯ ಮಂತ್ರಿಯ ನೇಮಕವಿಲ್ಲ

ಪತ್ರಿಕಾ ಸಮ್ಮೇಳನದಲ್ಲಿ ಕೆ. ಸಿ. ರೆಡ್ಡಿಯವರ ವಿವರಣೆ

ಸ್ವಂ. ಸ ಪ್ರೋ] ಬೆಂಗಳೂರು ೧೦

ಮಂತ್ರಿ ಮಂಡಲದ ಪುನರ್ರಚನೆಯು ಕಳೆದ ೬ನೇ ತಾ||ನ ದಿನವೇ ಆಗಬೇಕಾಗಿತ್ತು. ಕಾರಣಾಂತರಗಳಿಂದ ಅದು ಸಾವಕಾಶವಾಗಿರುತ್ತದೆ. ಆದರೆ ಇನ್ನು ಹೆಚ್ಚು ಕಾಲ ವಿಳಂಬವಾಗುವುದಿಲ್ಲ. ಇನ್ನು ಒಂದು ವಾರದೊಳಗೆ ಈ ಕಾರ್ಯವು ಮುಕ್ತಾಯವಾಗುವುದು – ಎಂದು ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ನಿನ್ನೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಅವರು ಇನ್ನೂ ಹೇಳಿದುದೇನೆಂದರೆ–

ಅಖಿಲ ಭಾರತ ಕಾಂಗ್ರೆಸ್ಸಿನ ಅಂಗವಾಗಿ ಮೈಸೂರು ಕಾಂಗ್ರೆಸ್ಸು ಇರುವುದರಿಂದ ಭಾರತದ ಪಾರ್ಲಿಮೆಂಟರಿ ಸಮಿತಿಯೊಡನೆ ಸಮಾಲೋಚನೆ ನಡೆಸಿ, ನಾವು ಕೆಲಸ ಮಾಡಬೇಕಾಗಿದೆ. ಅವರೊಡನೆ ಇನ್ನೂ ಮಾತುಕತೆ ನಡೆಯುತ್ತಿದೆ. ಆದಷ್ಟು ಬೇಗನೆ ಈ ವಿಷಯವನ್ನು ತೀರ್ಮಾನ ಮಾಡಲಾಗುವುದು. ನಾನು ಈ ಕಾರ್ಯವನ್ನು ಉದ್ದೇಶಪೂರ್ವಕವಾಗಿ ತಡ ಮಾಡುತ್ತಿರುವೆನೆಂದು ಹೇಳುವುದು ಸರಿಯಲ್ಲ.

ಭಾರತ ರಾಜ್ಯಾಂಗ ಸಭೆಯವರು ರಚಿಸಿರುವ ಮಾದರಿ ರಾಜ್ಯಾಂಗವು ಸಧ್ಯದಲ್ಲಿಯೇ ನಮ್ಮ ಕೈ ಸೇರಲಿದೆ. ಅದನ್ನು ನಾವು ಇಲ್ಲಿ ಅಂಗೀಕರಿಸಲು ಯಾವ ಅಡಚಣೆಯೂ ಇರಲಾರದು.

ಇಂದಿನ ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆ ಮಾಡುವ ಆಲೋಚನೆ ಇಲ್ಲ. ಉಪ ಮುಖ್ಯ ಮಂತ್ರಿ ಸ್ಥಾನವು ಯಾವ ಪ್ರಾಂತ ಅಥವ ಸಂಸ್ಥಾನದಲ್ಲೂ ಇಲ್ಲ. ಆದ್ದರಿಂದ ಇಲ್ಲಿಯೂ ಅದನ್ನು ಏರ್ಪಡಿಸುವುದಿಲ್ಲ.

೧೯೫೦ನೇ ಏಪ್ರಿಲ್ ಹೊತ್ತಿಗೆ ಸಂಸ್ಥಾನದ ಹಣಕಾಸು, ಸೈನ್ಯ ಮುಂತಾದ ಬಾಬುಗಳು ಕೇಂದ್ರ ಸರ್ಕಾರದೊಡನೆ ವಿಲೀನವಾಗಬಹುದು.

ಆಕಾಶವಾಣಿಯು ಇನ್ನೂ ಕೆಲವು ದಿನಗಳಲ್ಲಿ ಕೇಂದ್ರಕ್ಕೆ ಸೇರಲು ಮಾತುಕತೆ ನಡೆಯುತ್ತಿದೆ. ೫೦ ಕಿಲೋವಾಟಿನ ದೊಡ್ಡ ಕೇಂದ್ರವನ್ನು ಇಲ್ಲಿ ಸ್ಥಾಪಿಸಲಾಗುವುದು. ಭಾರತ ಸರ್ಕಾರದವರು ಇದಕ್ಕಾಗಿ ೮-೫ ಲಕ್ಷ ರೂ ವೆಚ್ಚ ಮಾಡುವರು ಮತ್ತು ನಮಗೆ ಸೂಕ್ತವಾದ ಪರಿಹಾರವನ್ನೂ ಕೊಡುವರು. ಆಕಾಶವಾಣಿಯು ಮುಂದೆ ಟ್ರಿಚಿ ಮತ್ತು ಮದರಾಸುಗಳಂತೆ ಭಾರಿ ಕೇಂದ್ರವಾಗುವುದು.

೧೯೫೦ ನೇ ವರ್ಷದಲ್ಲಿ ರಾಜಕೀಯ ವಾತಾವರಣವು ಸಂಪೂರ್ಣವಾಗಿ ಪರಿಷ್ಕಾರಗೊಂಡು ಪ್ರಜಾ ಪ್ರಭುತ್ವ ತತ್ವಗಳು ಪರಿಪೂರ್ಣವಾಗಿ ಜಾರಿಗೆ ಬರುವುವು. ಮುಂದೆ ನಾವು ಕೈಗೊಳ್ಳಲಿರುವ ಮಹತ್ತರವಾದ ಕಾರ್ಯಗಳಲ್ಲಿ ಮಹಾಜನರು ಸಂಪೂರ್ಣವಾದ ಸಹಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಬೊಂಬಾಯಿ ಕಾಂಗ್ರೆಸ್ಸನ್ನು ಬಲ ಪಡಿಸಲು ಕಾರ್ಯಕ್ರಮ

ಬೊಂಬಾಯಿನಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲ ಪಡಿಸುವ ಉದ್ದೇಶದಿಂದ ಅಲ್ಲಿನ ಪ್ರಾಂತ್ಯ, ಜಿಲ್ಲಾ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಅಧಿಕಾರ ವರ್ಗದವರೆಲ್ಲರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿ ಮತ್ತೆ ಚುನಾವಣೆಗೆ ನಿಲ್ಲಬೇಕೆಂದು ನಿರ್ಧರಿಸಲಾಗಿದೆ. ನೂತನ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ಸಿನವರು ಪ್ರತಿ ದಿನ ಕನಿಷ್ಟ ಪಕ್ಷ ೭ ಗಂಟೆಗಳ ಕಾಲವನ್ನಾದರೂ ಕಾಂಗ್ರೆಸ್ ಕೆಲಸಕ್ಕೆ ಮೀಸಲಾಗಿಡಬೇಕೆಂದೂ ಕಾಂಗ್ರೆಸ್ಸಿನವರು ತಮ್ಮ ಸಹೋದ್ಯೋಗಿಗಳ ಮೇಲೆ ಅಪಪ್ರಚಾರ ಮಾಡಕೂಡದೆಂದೂ ಆಪಾದನೆಗಳಿರುವ ಯಾರಿಗೂ ಕಾಂಗ್ರೆಸ್ ಸಮಿತಿ ಅಧಿಕಾರಿ ಸ್ಥಾನಕ್ಕೆ ಚುನಾವಣೆಗೆ ನಿಲ್ಲಲು ಅವಕಾಶವಿಲ್ಲವೆಂದೂ ಅಲ್ಲಿನ ನಗರ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಸೂಚಿಸಿರುತ್ತಾರೆ.

ಗೃಹಕೃತ್ಯದ ನೋಟೀಸ್

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಶಿವರಾಂಶಾಸ್ತ್ರಿಗಳ ಮಠದ ಬೀದಿಯಲ್ಲಿ ವಾಸವಾಗಿರುವ ಲೇಟ್ ನರಸಿಂಹಯ್ಯನ ಹೆಂಡತಿ ಚೆನ್ನಮ್ಮನು ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:- ನನ್ನ ಪಿತ್ರಾರ್ಜಿತವಾದ ನನ್ನ ಸ್ವಾಧೀನಾನುಭವದಲ್ಲಿರುವ ನನ್ನ ಮನೆ ನಂಬರ್ ೭೦೭ ರಲ್ಲಿ ವಾಸವಾಗಿದ್ದ ನನ್ನ ಸೊಸೆ, ರಾಚಯ್ಯನ ಮಗಳು ನಾಗಮ್ಮನು ನನ್ನ ಮನೆಯಲ್ಲಿದ್ದ ಕಾಗದ ಪತ್ರಗಳನ್ನು ನನ್ನ ಅನುಮತಿ ಇಲ್ಲದೆ ತೆಗೆದುಕೊಂಡು ಪರಾರಿಯಾಗಿರುತ್ತಾಳೆ. ಈ ಮೇಲ್ಕಂಡ ನಾಗಮ್ಮನಿಗೆ ಈ ಮನೆಯ ಮೇಲೆ ಯಾವ ವಿಧವಾದ ಹಕ್ಕೂ ಇರುವುದಿಲ್ಲ. ಆಕೆ ಈ ಮನೆಯನ್ನು ಯಾರಿಗಾದರೂ ಆಧಾರ, ಭೋಗ್ಯ ಅಥವ ಕ್ರಯ ಮಾಡಲು ಅಧಿಕಾರ ಇರುವದಿಲ್ಲ. ಹಾಗೇನಾದರೂ ನನ್ನ ಅನುಮತಿ ಇಲ್ಲದೆ ಯಾರಾದರೂ ಕ್ರಯ, ಆಧಾರ ಅಥವ ಭೋಗ್ಯ ಮಾಡಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲ ಮತ್ತು ಸಕಲ ನಷ್ಟಗಳಿಗೂ ಅವರೇ ಗುರಿಯಾಗುವರು-ಎಂದು ಈ ಮೂಲಕ ತಿಳಿಸಿರುತ್ತೇನೆ

ಈ ಮನೆ ಚೌಕಸ್ತ:-

ಉತ್ತರಕ್ಕೆ: ಚೆಲುವರಾಯಪ್ಪನ ಮನೆ ಪೂರ್ವಕ್ಕೆ: ಮರಿಯಪ್ಪನ ಮನೆ, ದಕ್ಷಿಣಕ್ಕೆ: ರೋಡು, ಪಶ್ಚಿಮಕ್ಕೆ ಶಿವರಾಂ ಶಾಸ್ತ್ರಿಗಳ ರಸ್ತೆ.

○ ಚೆನ್ನಮ್ಮನ ಎಡಗೈ ಹೆಬ್ಬೆಟ್ಟಿನ ರುಜು

ಮೈಸೂರಿನವರಿಗೆ ಬೊಂಬಾಯಿ ಚೀಫ್ ಇಂಜನಿಯರ ಹುದ್ದೆ

ಮೈಸೂರಿನವರಾದ ಶ್ರೀ ಎಲ್. ವಿ ಎಸ್. ಮೂರ್ತಿಯವರನ್ನು ಬೊಂಬಾಯಿ ಸರ್ಕಾರದ ಚೀಫ್ ಇಂಜನಿಯರನ್ನಾಗಿ ನೇಮಿಸಲಾಗಿದೆ.

ಶ್ರೀ ಗಾಯತ್ರಿ ಟಾಕೀಸ್

ಪ್ರತಿ ದಿನ ಮ್ಯಾಟಿನಿ .: ಇಂದೇ ಕಡೇದಿನ

ಡಾರ್ಕ್ ಜಾರ್ಕ್

11—8—49 ರಿಂದ

ಎಂ. ಜಿ. ಎಂ ರವರ

This Time for Keeps

ದಿಸ್ ಟೈಂ ಫಾರ್ ಕೀಪ್ಸ್

ಬೆಳಗಿನ ಆಟಗಳು

ತಾ|| 13 ಮತ್ತು 14

Dancing with Crime

UNIVERSITY OF MYSORE

Office of the University of Mysore

Mysore Dated 19th July 1949

No. Ex 3. 122/49-50

NOTIFICATION

University Examinations of September 1949

The following University Examinations will commence from **Thursday the 1st September** 1949 The detailed time-table will be published in the Gazette in due course.

1) Intermediate in Arts
2) Intermediate in Science
3) Intermediate in Commerce
4) B. A.,
5) B. Sc.,
6) B. Sc., Textiles
7) B.A. (Hons) Preliminary
8) B.Sc. (Hons) Preliminary
9) B. Com.,
10) Engineering;
11) L. M. P.
12) Law.

BY ORDER,

(Sd) **C. Rangachar**,

Ag. REGISTRAR,

ವಿದ್ಯಾರ್ಥಿಗಳಿಗೆ ತೊಂದರೆ

ರಾಜಧಾನಿಯ, ಲಕ್ಷ್ಮೀಪುರದಲ್ಲಿರುವ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಶಾಲೆಯಲ್ಲಿ ವಿದ್ಯಾರ್ಥಿಗಳ ಗಲಾಟೆಯು ವಿಶೇಷವಾಗಿದ್ದು ಆ ಪ್ರದೇಶದಲ್ಲಿರುವ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಶಾಲಾ ಮುಖ್ಯಾಧಿಕಾರಿಗಳು ಅದನ್ನು ತಪ್ಪಿಸಬೇಕು-ಎಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ

— ಲಕ್ಷ್ಮಿ —

10-8 49ರಿಂದ ಯಶಸ್ವಿ 2ನೇ ವಾರ

ದಿನವಹಿ 3 ಪ್ರದರ್ಶನ

ಪ್ರತಿಭಾರವರ ಅನೋಘ ತೆಲುಗು ಚಿತ್ರ ರತ್ನ

ಬಾಲರಾಜು

ಭೂಮಿಕೆ:- ವರಲಕ್ಷ್ಮಿ, ಅಂಜಲಿ ದೇವಿ, ನಾಗೇಶ್ವರರಾವ್, ಶಿವರಾವ್

-: ಮುಂದಿನ ಬದಲಾವಣೆ:-

ಇಷ್ಟೆ ಅರಸು .ದಂಡಪಾಣಿ ದೇಶಿಕರ್ ನಟಿಸಿರುವ

ತಿರುಮಜಿಸೈ ಆಳ್ವಾರ್

(ತಮಿಳು)

ವಾರ್ಷಿಕೋತ್ಸವ

ರಾಜಧಾನಿಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ [illegible] ನೇ ತಾ|| ಸಂಜೆ ೫ ಗಂಟೆಗೆ ಶ್ರೀ ಎಂ. [illegible] ಜೋಯಿಸರ ಅಧ್ಯಕ್ಷತೆಯಲ್ಲಿ ಮ[illegible] ಜಾ ಹೈ ಸ್ಕೂಲಿನಲ್ಲಿ ನಡೆಯುವುದು.

ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮೈಸೂರು

ಪ್ರಕಟನೆ

ಮೇಲ್ಕಂಡ ಸ್ಟೋರ್ಸ್‌ನಲ್ಲಿ (ಹ[illegible] ಆಫೀಸು) ಅತ್ಯುತ್ತಮವಾದ ರಮಿ[illegible] ಕಾಫಿ ಬಿತ್ತ, ಮಿಲ್ ಬಟ್ಟೆಗಳು, ಲಾಂ[illegible] ಕ್ಲಾತ್, ಷರಟಿಂಗ್, ಕೋಟಿಂಗ್, [illegible] ಗಳು, ಸೀರೆಗಳು ಮತ್ತು ತರ[illegible] ಸ್ಟೇಷನರಿ ಸಾಮಾನುಗಳು, ಎಕ್ಸರ್[illegible] ಪುಸ್ತಕಗಳು, ನಿತ್ಯ ಉಪಯೋಗಕ್ಕೆ ಬೇಕಾದ ದಿನಸಿಸಾಮಾನುಗಳು ಕಂಟ್ರೋಲ್ ಬೆಲೆಗೆ ಮೆಂಬರುಗಳಿಗೂ ಮತ್ತು ಮೆಂಬರಲ್ಲದವರಿಗೂ ಬಿಕರಿಗೆ ದೊರೆಯುತ್ತ[illegible] ನಮ್ಮ ಸ್ವಂತ ಗಾಣದಲ್ಲಿ ತಯಾರಾಗಿ[illegible] ರುವ ಹುಚ್ಚೆಳ್ಳೆಣ್ಣೆ, ಅಚ್ಚೆಳ್ಳೆಣ್ಣೆ ಇವ[illegible] ನ್ನು ಒಮ್ಮೆ ಪರೀಕ್ಷಿಸಿರಿ.

[ಸಹಿ] ಬಿ. ರಾಮಕೃಷ್ಣಯ್ಯ

ಸೆಕ್ರೆಟರಿ

Office of the Executive Engineer

Buildings Division, Mysore.

7th August 1949.

TENDER NOTIFICATION

—:o:—

CONSTRUCTION OF TEMPORARY STALLS AT JEEVANA-RAYANAKATTE FOR THE DASARA EXHIBITION 1949

It is hereby notified for the information of the public, that the last date for accepting tenders for the above is extended up to the 13th August 1949.

(1) Sealed Tenders will be received by the undersigned up to 4 p.m. on 13th August 1949.

(2) The Tenders should be accompanied by challan for having credited Rs 950/- as earnest money to Government Treasury in favour of the undersigned under 40 (1) With Treasury by P.W.D. No cheques will be accepted. Tenders not accompanied by such challans will be disqualified without any consideration.

(3) Tenders should quote hire charges only for a period of one month commencing from 20th September 1949.

(4) A layout plan showing the position of stalls etc. may be seen in this office on all working days between 1 p.m and 4 p.m An abstract estimate with approximate quantity of work will be sent on application.

(5) The undersigned will have the full discretion for approving the quality of work and his decision in all matters shall be final.

(6) The stalls should be completed and handed over to the Department on the 20th September 1949 from which date the hire charges will be calculated.

(Sd) T. HUTCHAVLERIAH,

Executive Engineer,

Buildings Division, Mysore.

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ

5-8-49 ರಿಂದ :: ದಿನವಹಿ 3 ಆಟಗಳು

ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ತಮಿಳು ಚಿತ್ರ

— ನವಜೀವನಂ —

R. V. ಪಿಕ್ಚರ್ಸ್ ರಿಲೀಸ್

Edited, printed and published by A R. Nagarajan, at Sadhvi Press, D Subbiah Road, Mysore.

ಫೋ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು.

ಸಾಧ್ವಿ

ಸಂಪುಟ ೮] ಗುರುವಾರ ೧೧-೮-೧೯೪೯ [ಸಂಚಿಕೆ ೧೭

ವಿಮಾನಗಳ ಮೂಲಕ ಆಹಾರ ಬೆಳೆ ಪ್ರಚಾರ

ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

ಮೈಸೂರು ೧೧

ಇದೇ ೧೫ನೇ ತಾ॥ ಸೋಮವಾರ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಕೆಳಗೆ ಕಂಡ ಕಾರ್ಯಕ್ರಮಗಳನ್ನು ಸಾರ್ವಜನಿಕರು ಮತ್ತು ಸಂಸ್ಥೆಗಳು ಅನುಸರಿಸಿ ಅದರಲ್ಲಿ ಭಾಗವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಬೆಳಿಗ್ಗೆ ೭ ರಿಂದ ೮ ಗಂಟೆ ಪ್ರಭಾತ ಭೇರಿ–ಸಂಸ್ಥೆಗಳು ತಮ್ಮ ಮೊಹಲ್ಲಾಗಳ ಅದನ್ನು ನಡೆಸಬೇಕು

೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ

ಸಂಜೆ ೩ ರಿಂದ ೬ ಗಂಟೆವರೆಗೆ ಸಾರ್ವಜನಿಕ ಸಂಸ್ಥೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ೬ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಸಾರ್ವಜನಿಕ ಬಹಿರಂಗ ಸಭೆ,

ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರ

ಕಳೆದ ೮ ವರ್ಷಗಳಿಂದಲೂ ಶಾಸ್ತ್ರೀಯ ಸಾಂಪ್ರದಾಯಿಕ ಕರ್ಣಾಟಕ ಸಂಗೀತ ವಿದ್ಯೆಯನ್ನು ಅತಿ ಸುಲಭ ಬೆಲೆಯಲ್ಲಿ ಯಾವ ಜಾತಿ ಕೋಮುಗಳ ಭೇದವೂ ಇಲ್ಲದೆ ಹೇಳಿಕೊಡುತ್ತಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದವರು ಇದೇ ೯ ನೇ ತಾ॥ ನಿಂದ ಕೃಷ್ಣಮೂರ್ತಿಪುರಂನಲ್ಲಿರುವ ೧೪೪೩ ನೇ ನಂಬರಿನ ಕಟ್ಟಡದ ಶಾಖೆಯನ್ನು ಪ್ರಾರಂಭಿಸುವರೆಂದೂ, ಇದಕ್ಕೆ ಮಹಾಜನರು ಸಹಕರಿಸಿ ಸಹಾಯ ಮಾಡಬೇಕೆಂದೂ ಅದರ ವ್ಯವಸ್ಥಾಪಕರಾದ ಮೈಸೂರು ಸಹೋದರರು ಪ್ರಾರ್ಥಿಸಿರುತ್ತಾರೆ

ಮಾದರಿ ಶಾಲೆಗೆ ಸಹಾಯ

ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಮಾದರಿ ಶಾಲೆಯ ಸಹಾಯಾರ್ಥವಾಗಿ ೧೫ ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಬೆಳಿಗ್ಗೆ ೧೦-೩೦ ಗಂಟೆಗೆ ರಾಜಕಮಲ್ ಟಾಕೀಸಿನಲ್ಲಿ ‘ ಒಂಥನ್'' ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು ಮಹಾಜನರ ಉದಾರಾಶ್ರಯವನ್ನು ಕೋರಲಾಗಿದೆ

ನಯನಜ ಕ್ಷತ್ರಿಯರ ದೇವಾಲಯಕ್ಕೆ ಸಹಾಯ

ಶ್ರೀರಂಗಪಟ್ಟಣದ ನಯನಜಕ್ಷತ್ರಿಯರ ಶ್ರೀರಾಮ ದೇವರ ದೇವಸ್ಥಾನದ ದುರಸ್ತಿಗಾಗಿ ಸರ್ಕಾರದವರು ೫೦೦ ರೂ ಗ್ರಾಂಟನ್ನು ಕೊಟ್ಟಿರುದಕ್ಕಾಗಿಯೂ, ಶ್ರೀ ಎಸ್ ಬೇಲೂರಯ್ಯನವರಿಗೆ ಈ ವರ್ಷ ಸಾರ್ವಜನಿಕ ಸೇವಾ ಪದಕವನ್ನು ಶ್ರೀಮನ್ಮಹಾರಾಜರವರು ದಯಪಾಲಿಸಿದುದಕ್ಕಾಗಿಯೂ ವಂದನೆಯನ್ನು ಅರ್ಪಿಸಿ, ಅಲ್ಲಿನ ನಯನಜ ಕ್ಷತ್ರಿಯರ ಸಂಘದವರು ನಿರ್ಣಯ ಮಾಡಿದ್ದಾರೆ

ಎಚ್. ಡಿ. ಶಂಕರ್ ರವರಿಗೆ ಪೋಲೀಸರ ಕಿರುಕುಳ

ತಮ್ಮನ್ನು ಮೈಸೂರು ಜೈಲಿನಿಂದ ಬಿಡುಗಡೆ ಮಾಡಿದ ಮೇಲೆ ತಾವು ನಾಗಮಂಗಲಕ್ಕೆ ತಾಯಿಯನ್ನು ನೋಡಲು ಹೊರಟರೂ ಪೋಲೀಸರು ತಮ್ಮನ್ನು ಹಿಂಬಾಲಿಸುತ್ತಿರುವರೆಂದೂ, ಅವರ ಕಿರುಕುಳವು ಹೆಚ್ಚಾಗುತ್ತಿದೆಯೆಂದೂ ಕಮ್ಯೂನಿಸ್ಟರಾದ ಶ್ರೀ ಎಚ್ ಡಿ ಶಂಕರ್‌ರವರು ಪತ್ರವೊಂದರಲ್ಲಿ ನಮಗೆ ಬರೆದಿರುತ್ತಾರೆ

ವಿಮಾನ ಮೂಲಕ ಹೆಚ್ಚು ಆಹಾರ ಪ್ರಚಾರ ಹಸ್ತಪತ್ರಿಕೆಗಳು

ಸಂಸ್ಥಾನಾದ್ಯಂತ ಆಹಾರಧಾನ್ಯೋತ್ಪನ್ನದ ಬಗ್ಗೆ ಪ್ರಚಾರ ನಡೆಸಲು, ಇದೇ ೧೫ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯ ದಿನ ೪ ವಿಮಾನಗಳ ಮೂಲಕ ‘ಹೆಚ್ಚು ಆಹಾರ ಬೆಳೆಯಿರಿ, ಮರಗಳನ್ನು ನೆಡಿ, ಪಶು ಸಂಪತ್ತನ್ನ ಅಭಿವೃದ್ಧಿ ಪಡಿಸಿ’ ಎಂಬ ಹಸ್ತ ಪತ್ರಿಕೆಗಳನ್ನು ಹಂಚಲು ಏರ್ಪಾಡು ಮಾಡಲಾಗಿದೆಯೆಂದು ಆಹಾರ ಸಚಿವ ಶ್ರೀ ಓ ವ ರಿಯಪ್ಪನವರು ತಿಳಿಸಿರುತ್ತಾರೆ

ಬಹುಮಾನ ವಿನಿಯೋಗ ಸಮಾರಂಭ

ರಾಜಧಾನಿಯ ಪರಕಾಲಸ್ವಾಮಿಗಳ ಮಠದಲ್ಲಿ ಹಯಗ್ರೀವ ಜಯಂತಿಯ ಅಂಗವಾದ ೨೫ ನೇ ವೇದ ಶಾಸ್ತ್ರಗಳ ವತ್ತ್ರಯ ವಿದ್ವತ್ ಸಭೆಯ ಬಹುಮಾನ ವಿನಿಯೋಗ ಸಮಾರಂಭವು ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ನಾಳೆ ಮಧ್ಯಾಹ್ನ ೩॥ ಗಂಟೆಗೆ ನೆರವೇರುವುದು

ವಿದ್ಯಾರ್ಥಿಗಳಿಂದ ಗಲಾಟೆ ಇಲ್ಲ

ರಾಜಧಾನಿಯ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜನಿಯರಿಂಗ್ ಶಾಲೆಯ ವಿದ್ಯಾರ್ಥಿಗಳಿಂದ ಗಲಾಟೆಯಾಗುತ್ತಿರುವುದೆಂದು ನಿನ್ನೆ ದಿನ ಪ್ರಕಟವಾಗಿರುವ ವಿಚಾರವಾಗಿ ಅಲ್ಲಿನ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳು ನಮಗೆ ಪತ್ರವೊಂದನ್ನು ಬರೆದು, ಸಂಘದ ಚುನಾವಣೆಯ ಸಂಬಂಧದಲ್ಲಿ ಒಂದು ದಿನ ಮಾತ್ರ ಸ್ವಲ್ಪ ಶಬ್ದವಾಯಿತೆ ಹೊರತು, ಪ್ರತಿದಿನ ಅರೀತಿ ನಡೆಯುತ್ತಿಲ್ಲವೆಂದೂ, ಸೇಠರ ಹಿತಕ್ಕಾಗಿ ಕೋಟೆ ನಾರು ಭವನವನ್ನು ಬಿಟ್ಟು ನಡೆಯುತ್ತಿರುವ ಶಾಲೆಯ ಮೇಲೆ ಈ ರೀತಿ ದೂರು ಒಂದಿರುವುದು ಸರಿಯಾದುದಲ್ಲವೆಂದೂ ಹೇಳಿರುತ್ತಾರೆ

ಮದರಾಸಿನ ೧೩ ಜಮೀನುದಾರಿಗಳ ರದ್ದು

ಬೊಬ್ಬಿಲಿ, ಪೀಠಾಪುರಂ, ವಿಜಯನಗರಂ, ವೆಂಕಟಗಿರಿ, ಚಲ್ಲಪಲ್ಲಿ, ರಾಮನಾಡ್, ಶಿವಗಂಗಾ ಮುಂತಾದ ೧೩ ಭಾರಿ ಜಮೀನುದಾರಿಗಳನ್ನು ಮದರಾಸ್ ಸರ್ಕಾರದವರು ಭಾರತದ ಸ್ವಾತಂತ್ರ್ಯ ದಿನವಾದ ೧೫ ನೇ ತಾ॥ ವಹಿಸಿಕೊಳ್ಳುವರೆಂದೂ ಅದಕ್ಕಾಗಿ ೧೮ ಕೋಟಿ ರೂ ವೆಚ್ಚವಾಗುವುದೆಂದೂ ಹೇಳಲಾಗಿದೆ

ನೆಹರೂರವರ ಮನೆ ಮುಂದೆ ಸತ್ಯಾಗ್ರಹ

ಕುರುಕ್ಷೇತ್ರ ಮತ್ತು ಫರೀದಾಬಾದ್ ಶಿಬಿರಗಳಿಂದ ಬಂದ ೩೦೦೦ ಜನ ನಿರಾಶ್ರಿತರು, ಪ್ರಧಾನಿ ಪಂಡಿತ ನೆಹರೂರವರ ಭವನದ ಮುಂದ ನಿನ್ನೆಯಿಂದ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ದೆಹಲಿಯ ಸಮೀಪದಲ್ಲಿ ವಾಸ ಮಾಡಲು ತಮಗೆ ವಸತಿಯನ್ನು ಏರ್ಪಡಿಸಿಕೊಡಬೇಕೆಂದೂ ಮತ್ತು ತಮ್ಮ ಜೀವನಕ್ಕೆ ಹೊಸ ಉದ್ಯಮ ಪ್ರಾರಂಭಿಸಲು ಹಣ ಸಹಾಯ ಮಾಡಬೇಕೆಂದೂ ಅವರು ಕೇಳುತ್ತಿದ್ದಾರೆ

೩೫ ಸಾವಿರ ಪಂಚಾಯಿತಿಗಳ ಸ್ಥಾಪನೆ

ಭಾರತದ ಸ್ವಾತಂತ್ರ್ಯ ದಿನಾಚರಣೆಯ ದಿನ ಸಂಯುಕ್ತ ಪ್ರಾಂತ್ಯದಲ್ಲಿ ೩೫ ಸಾವಿರ ಹಳ್ಳಿಯ ರಿಪಬ್ಲಿಕ್ ಎಂಬ ಪಂಚಾಯಿತಿಗಳ ಯೋಜನೆ ಪ್ರಾರಂಭೋತ್ಸವವನ್ನು ನಡೆಸಲಾಗುವುದೆಂದೂ, ಆ ದಿನ ಪಂಚಾಯಿತಿ ಅಧಿಕಾರ ಪತ್ರದ ವಿತರಣ ಸಮಾರಂಭದಲ್ಲಿ ಸರ್ಕಾರದವರು ಭಾಗವಹಿಸುವರೆಂದೂ ಹೇಳಲಾಗಿದೆ ಪ್ರತಿಯೊಂದು ಪಂಚಾಯಿತಿಯವರು ಮುಂದಿನ ಮಾರ್ಚ್ ತಿಂಗಳೊಳಗಾಗಿ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ತಿಳಿಸಲಾಗಿದೆ ರಸ್ತೆಗಳ ದುರಸ್ತು ಬಾವಿಗಳ ನಿರ್ಮಾಣ, ಆರೋಗ್ಯ, ರಕ್ಷಣೆ ಮತ್ತು ಕೈಗಾರಿಕೆ ಇವೇ ಮುಂತಾದ ಕೆಲಸ ಕಾರ್ಯಗಳನ್ನು ಈ ಪಂಚಾಯಿತಿಗಳು ನೋಡಿಕೊಳ್ಳುವುವು

ಕರ್ಣಾಟಕದಲ್ಲಿ ಕ್ಷಯ ರೋಗದ ಆಸ್ಪತ್ರೆ

ಬೆಳಗಾಮಿನ ಹತ್ತಿರವಿರುವ ಹುಕ್ಕೇರಿ ರಸ್ತೆಯಲ್ಲಿ ಒಂದು ಆಧುನಿಕ ಕ್ಷಯರೋಗದ ಕೇಂದ್ರವನ್ನು ೫೦ ಲಕ್ಷ ರೂ ವೆಚ್ಚದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದ ಆರೋಗ್ಯ ಸಚಿವ ಶ್ರೀ ಆರ್ ಆರ್ ದಿವಾಕರರು ಕರ್ಣಾಟಕದ ಸುಪ್ರಸಿದ್ಧ ಡಾ॥ ಜೋಷಿ ಮತ್ತು ಶ್ರೀ ಆರ್ ಪಿ ಅಮಗೀಕರ ರವರು ಯೋಚಿಸುತ್ತಿದ್ದಾರೆಂದು ಹೇಳಲಾಗಿದೆ ಇದಕ್ಕಾಗಿ ಹಣ ಸಂಗ್ರಹಿಸಲು ಕರ್ಣಾಟಕದಲ್ಲಿ ನಾಯಕರು ಮುಂದಿನ ತಿಂಗಳ ಪ್ರವಾಸ ಮಾಡುವರೆಂದೂ ತಿಳಿದು ಬಂದಿದೆ

೧೯೫೦ ನೇ ಏಪ್ರಿಲ್‌ಗೆ ಸಂಸ್ಥಾನಗಳ ಆರ್ಥಿಕ ವಿಲೀನೀಕರಣ

೧೯೫೦ ನೇ ಏಪ್ರಿಲ್ ತಿಂಗಳಿನಿಂದ ಸಂಸ್ಥಾನಗಳ ಮತ್ತು ಸಂಸ್ಥಾನದ ಒಕ್ಕೂಟಗಳ ಹಣ ಕಾಸಿನ ವಿಚಾರಗಳನ್ನು ಕೇಂದ್ರದೊಡನೆ ವಿಲೀನೀಕರಣ ಮಾಡಬೇಕೆಂದು ಶ್ರೀ ಕೃಷ್ಣಮಾಚಾರಿ ಸಮಿತಿಯವರು ತಮ್ಮ ವರದಿಯಲ್ಲಿ ಶಿಫಾರಸು ಮಾಡಿರುತ್ತಾರೆ ಇದರಿಂದ ಸಂಸ್ಥಾನ, ಒಕ್ಕೂಟ ಮತ್ತು ಕೇಂದ್ರಗಳ ಆರ್ಥಿಕ ಬಾಂಧವ್ಯಕ್ಕೆ ಯಾವ ಧಕ್ಕೆಯೂ ಉಂಟಾಗುವುದಿಲ್ಲವೆಂದೂ ಈಗ ಪ್ರಾಂತ್ಯಗಳಿಗೆ ದೊರೆಯುತ್ತಿರುವ ಸಹಾಯಗಳೆಲ್ಲಾ ಸಂಸ್ಥಾನಗಳಿಗೂ ದೊರೆಯುವುವೆಂದೂ ಅವರು ತಿಳಿಸಿರುತ್ತಾರೆ ಸಂಸ್ಥಾನಗಳ ಆಡಳಿತ ವ್ಯವಸ್ಥೆಯು ಕೇಂದ್ರಕ್ಕೆ ಸರಿಸಮಾನವಾಗಿರುವುದು ಭಾರತದ ವರಮಾನ ತೆರಿಗೆ ಕಾನೂನಿನಂತೆ ಸಂಸ್ಥಾನಗಳಲ್ಲಿ ತೆರಿಗೆಯನ್ನು ವಸೂಲು ಮಾಡಲಾಗುವುದು ಮತ್ತು ಒಳಸುಂಕದ ವ್ಯವಸ್ಥೆಯನ್ನು ರದ್ದು ಮಾಡಲಾಗುವುದು ಇವುಗಳು ಆಚರಣೆಗೆ ಬಂದ ಕೂಡಲೇ ಅದನ್ನು ಪರಿಶೀಲಿಸಿ ಕೇಂದ್ರಕ್ಕೆ ವರದಿ ಮಾಡಲು ಖಾಸಗೀ ಅಧ್ಯಕ್ಷರು ಸಂಸ್ಥಾನಗಳ ಮತ್ತು ಕೇಂದ್ರ ಆರ್ಥಿಕ ಶಾಖೆಯ ಪ್ರತಿನಿಧಿಗಳನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಿಸಬೇಕೆಂದೂ ಶಿಫಾರಸು ಮಾಡಲಾಗಿದೆ

ಬೆಂಗಳೂರು ಮಂಡಿನ ಪ್ರದೇಶದಲ್ಲಿರುವ ಕಟ್ಟಡಗಳ ಬಗ್ಗೆ ಸರ್ಕಾರದವರು ಹಿಂದೆ ಕೇಂದ್ರಕ್ಕೆ ಕೊಟ್ಟಿರುವ ಋಣದ ವಿಚಾರವನ್ನು ಪರಿಶೀಲಿಸಬೇಕೆಂದು ಮೈಸೂರು ಸರ್ಕಾರದವರು ಪ್ರಾರ್ಥಿಸಿದ್ದರೆಂದೂ, ಅವುಗಳನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಲಾಗುತ್ತಿದೆಯೆಂಬುದನ್ನು ಪರಿಶೀಲಿಸಿ ಅನಂತರ ಒಂದು ನಿರ್ಧಾರಕ್ಕೆ ಬರಬೇಕೆಂದೂ ಸಮಿತಿಯ ವರದಿಯಾಗಿದೆ

ರೈಲ್ವೆ ಸಂಘದವರು ಮುಷ್ಕರ ಹೂಡಬೇಕಾಗುವುದು

ಭಾರತದ ರೈಲ್ವೆ ಕೆಲಸಗಾರರ ಸಂಘದವರ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸಿಲ್ಲವೆಂದೂ, ಸಂಘದ ಶಕ್ತಿಯನ್ನು ಸರ್ಕಾರದವರು ಅಲ್ಲಗಳೆಯುವುದಾದರೆ, ತಮ್ಮ ಸಂಘದ ನಾ ಶಕ್ತಿಯನ್ನು ಪ್ರದರ್ಶಿಸಲು ಸಂಕೇತ ಮುಷ್ಕರ ಹೂಡಬೇಕಾಗುವುದೆಂದೂ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ನಾರಾಯಣರವರು ತಿಳಿಸಿರುತ್ತಾರೆ

ಲಾರಿಯಿಂದ ಹುಲಿಯ ಕೊಲೆ

ಬೊಂಬಾಯಿ ಪ್ರಾಂತ್ಯದ ಕನ್ನೂರು ಪ್ರದೇಶದ ಪಾಟೀಲ್ ಎಂಬುವರು ಲಾರಿಯಿಂದ ಹೊಡೆದು ೮ ಅಡಿ ಉದ್ದದ ಹುಲಿಯನ್ನು ಕೊಂದು ಹಾಕಿದರೆಂದು ವರದಿಯಾಗಿದೆ ಅವರು ಹೊರಕ್ಕೆ ಹೋದಾಗ ಹುಲಿಯು ಅವರ ಮೇಲೆ ಬಿದ್ದಿತೆಂದೂ, ಆಗ ಲಾರಿಯಿಂದ ಬಲವಾಗಿ ಅದರ ತಲೆಯ ಮೇಲೆ ಹೊಡೆದು ಸಾಯಿಸಲಾಯಿತೆಂದೂ ಹೇಳಲಾಗಿದೆ

ಆಗಸ್ಟ್ ೧೫ಕ್ಕೆ ಭಾರತಕ್ಕೆ ಚಂದ್ರ ನಗರ

ಭಾರತ ಸ್ವಾತಂತ್ರ್ಯ ದಿನವಾದ ಇದೇ ೧೫ ನೇ ತಾ॥ ಚಂದ್ರನಾಗೂರವನ್ನು ಭಾರತದ ವಶಕ್ಕೆ ಒಪ್ಪಿಸಲಾಗುವುದೆಂದು ಫ್ರೆಂಚ್ ವಿದೇಶಾಂಗ ಶಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ

ಬೆಂಗಳೂರು ಸುಬ್ಬಣ್ಣ ನವರಿಗೆ ಸತ್ಕಾರ

ಮೈಸೂರು ೧೧

ಈ ವರ್ಷದ ವರ್ಧಂತ್ಯುತ್ಸವದಲ್ಲಿ ಧರ್ಮ ಪ್ರವರ್ತ ಎಂಬ ಬಿರುದನ್ನು ಪಡೆದ ಸಂತೆಪೇಟೆ ವರ್ತಕರಾದ ಶ್ರೀ ಬೆಂಗಳೂರು ಸುಬ್ಬಣ್ಣನವರನ್ನು ಗೌರವಿಸಲು ಸಂತೇಪೇಟೆ ವರ್ತಕರು ಟೌನ್ ಹಾಲಿನಲ್ಲಿ ಒಂದು ಸತ್ಕಾರ ಸಮಾರಂಭವನ್ನು ಸರ್ದಾರ್ ಕೆ ಬಸವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಿನ್ನೆ ಏರ್ಪಡಿಸಿದ್ದರು

ಪ್ರಾರ್ಥನೆಯಾದ ನಂತರ ವರ್ತಕರ ಪರವಾಗಿ ಶ್ರೀ ಸುಬ್ಬರಾಯಪ್ಪನವರು ಬಿರುದಾಂಕಿತರ ಸೇವೆಯನ್ನು ಕೊಂಡಾಡಿ ಒಂದು ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡದಲ್ಲಿಟ್ಟು ಕೊಟ್ಟರು ಅತಿಥಿಗಳು ಭಾಷಣಮಾಡಿ, ತಮ್ಮ ಸಹೋದ್ಯೋಗಿಗಳ ಸತ್ಕಾರಕ್ಕಾಗಿ ವಂದನೆಯನ್ನು ಅರ್ಪಿಸಿದರು ಅಧ್ಯಕ್ಷರು ಶ್ರೀ ಸುಬ್ಬಣ್ಣನವರ ಉದಾರತನವನ್ನು ಪ್ರಶಂಸಿಸಿ, ದೇಶದ ಅಭಿವೃದ್ಧಿ ಕಾರ್ಯಗಳಿಗೆ ದಾನಿಗಳು ಮುಂದೆ ಬಂದು ಸಹಾಯ ಮಾಡಬೇಕೆಂದು ತಿಳಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತದೊಡನೆ ಸಮಾರಂಭವು ಮುಕ್ತಾಯವಾಯಿತು

ಯುದ್ಧವಾಗದಂತೆ ಹಿರೋಷಿಮಾ ಬೇಡಿಕೆ

ಜಪಾನ್ ಯುದ್ಧದಲ್ಲಿ ಅಣು ಬಾಂಬಿಗೆ ಆಹುತಿಯಾದ ಹಿರೋಷಿಮಾ ನಗರದಲ್ಲಿರುವ ಜನರು ಮೊನ್ನೆ ದಿನ ಶಾಂತಿಯ ಹಬ್ಬವನ್ನು ಆಚರಿಸಿದರೆಂದು ವರದಿಯಾಗಿದೆ ಈ ನಗರವನ್ನು ಶಾಂತಿ ನಗರವೆಂದು ಕರೆಯಲಾಗಿದೆ ನಗರದ ಅಧ್ಯಕ್ಷರು ಅಮೆರಿಕಾದ ಅಧ್ಯಕ್ಷ ಟ್ರೂಮನ್‌ರವರಿಗೆ ಕಳುಹಿಸಲಾಗುವ ಸಾಮೂಹಿಕ ಅರ್ಜಿಗೆ ತಮ್ಮ ರುಜುವನ್ನು ಹಾಕಿ ಪ್ರಪಂಚದಲ್ಲಿ ಇನ್ನು ಮುಂದೆ ಯುದ್ಧವೇ ಆಗದಂತೆ ತಡೆಗಟ್ಟಲು ತಕ್ಕ ಏರ್ಪಾಡು ಮಾಡುವುದರಲ್ಲಿ ಟ್ರೂಮನ್ನರು ಮುಂದಾಳುತನವನ್ನು ವಹಿಸಬೇಕೆಂದು ಕೋರಿದ್ದಾರೆ

ಗರೀಬರಿಗೆ ಉಚಿತವೇ !

ನಾಯಿ ಕೆಮ್ಮು, ಲಿವರ್ ಎಡ್ ಸ್ಪ್ಲೀನ್, ಟ್ಯಾಸಿಲ, ಪರಿಣಾಮ ಶೂಲೆ, ಮೂಲವ್ಯಾಧಿ ಮತ್ತು ವ್ರಣಗಳಿಗೆ ಖಾತರಿಯಾದ ಶೀಘ್ರ ಗುಣಕಾರಿ ಚಿಕಿತ್ಸೆ

ಎ ಸ್ ಶಾಮಣ್ಣ

ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆ

ಚಾಮುಂಡೇಶ್ವರೀ ರೋಡ್

ಚಾಮುಂಡಿಪುರಂ, ಮೈಸೂರು

ಮಾಜಿ ರಾಜರುಗಳ ಪ್ರತಿಭಟನೆ

ಒರಿಸ್ಸಾ ಪ್ರಾಂತಕ್ಕೆ ಸೇರಿದ ಪಾಟ್ನಾ, ಧೇನಕನಾಲ್ ಕಲಹಂಡಿ, ಸೋನ್‌ಪುರ ಮತ್ತು ಭಾಧ್ ಸಂಸ್ಥಾನಗಳ ಮಾಜಿ ರಾಜರುಗಳು ಭಾರತದ ಗೌರ್ನರ್ ಜನರಲ್ ಮತ್ತು ಪ್ರಧಾನಿಗಳಿಗೆ ತಂತಿಯನ್ನು ಕಳುಹಿಸಿ ಬಿಹಾರ್ ಪ್ರಾಂತದಲ್ಲಿ ಖರ್ಸವಾನ್ ಮತ್ತು ಸೆರೈಕೆಲಾ ಸಂಸ್ಥಾನಗಳನ್ನು ಐಕ್ಯಗೊಳಿಸಿರುವುದನ್ನು ಪ್ರತಿಭಟಿಸಿ, ಈ ಎರಡು ಸಂಸ್ಥಾನಗಳ ಭವಿಷ್ಯವನ್ನು ನಿರ್ಧರಿಸಲು ಪ್ರಜಾಭಿಪ್ರಾಯವನ್ನು ಕೇಳಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ ಹೀಗೆ ಐಕ್ಯ ಮಾಡಿರುವುದರಿಂದ ಈ ಸಂಸ್ಥಾನಗಳಿಗೂ ಒರಿಸ್ಸಾಕ್ಕೂ ಇದ್ದ ಪುರಾತನ ಸಂಸ್ಕೃತಿಯ ಸಂಪರ್ಕವು ಬಿಟ್ಟು ಹೋಗುವುದೆಂದೂ ತಿಳಿಸಲಾಗಿದೆ ತಮ್ಮಗಳ ಅನುಮತಿಯಿಲ್ಲದೆ ಈ ರೀತಿ ಮಾಡಿದ ಏರ್ಪಾಡಿಗೆ ತಂವು ವಿರೋಧಿಸುವುದಾಗಿ ಅವರು ತಿಳಿಸಿರುವುದಲ್ಲದೆ, ಈ ಸಂಸ್ಥಾನಗಳ ಜನರಿಗೆ ಬಿಹಾರ್ ಪೋಲೀಸರು ಕೊಡುತ್ತಿರುವ ಕಿರುಕುಳಗಳನ್ನೂ ಖಂಡಿಸಿದ್ದಾರೆ

ರಷ್ಯ ಜೊತೆಗೆಸೇರಿ ಯುದ್ಧಕ್ಕೆ ನಿಲ್ಲಲು ಸದಾ ಸಿದ್ಧ

ರಷ್ಯದ ಜೊತೆಗೆ ನಿಂತು ಯಾವುದೇ ಯುದ್ಧದಲ್ಲಾದರೂ ಕದನ ನಡೆಸಲು ಸಿದ್ಧವಿರುವುದಾಗಿ ಜೆಕೊಸ್ಲೊವೇಕಿಯಾವು ತಿಳಿಸಿದೆ

ರಾಜಕಮಲ್,

ಮೈಸೂರು

6—8—49 ರಿಂದ

ದಿನವಹಿ 3 ಪ್ರದರ್ಶನ

ಮೆಹಬೂಬ್‌ರವರ ಹಿಂದಿ ಚಿತ್ರ

ಅನೋಖಿ ಅದ

MORNING SHOWS

From 12 8 49 for 3 days

LADY from - SHANGHAI

With Rita Hayworth & Orson Wells

ಹೋಟೆಲ್ ಕೆಲಸಗಾರರ ಬೇಡಿಕೆಗಳು

ಮೈಸೂರು ನಗರದ ಹೋಟಲು ಕೆಲಸಗಾರರ ಸಂಘದ ಸಭೆಯು ಕಳೆದ ೫ನೇ ತಾ॥ ಶ್ರೀ ಕೆ ಎಸ್ ಕೇಶವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಇದೇ ೧೫ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಆ ದಿನ ಕೆಲಸಗಾರರೆಲ್ಲರಿಗೂ ರಜಾ ಕೊಡಬೇಕೆಂದು ಮಾಲೀಕರನ್ನು ಪ್ರಾರ್ಥಿಸಲಾಯಿತು ಸಂಘದ ಸದಸ್ಯರಲ್ಲದವರನ್ನು ಮಾಲೀಕರುಗಳು ಕೆಲಸಕ್ಕೆ ಸೇರಿಸಿಕೊಳ್ಳಬಾರದೆಂದೂ, ಕೆಲಸಗಾರರನ್ನು ಸಂಘದ ಮೂಲಕವೇ ಸೇರಿಸಿಕೊಳ್ಳಬೇಕೆಂದೂ ಮಾಲೀಕರುಗಳನ್ನು ಒತ್ತಾಯಪಡಿಸಲಾಯಿತು ಕೆಲಸಗಾರರ ಬೇಡಿಕೆಗಳ ಬಗ್ಗೆ ಮಾಲೀಕರುಗಳಿಗೂ ಮತ್ತು ಸರ್ಕಾರಕ್ಕೂ ೩-೫-೪೯ರಲ್ಲಿ ಮನವಿ ಮಾಡಿ ಕೊಂಡಿದ್ದರೂ, ಆ ಬಗ್ಗೆ ಯಾವ ಉತ್ತರವೂ ಬಾರದೇ ಇರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ಅವುಗಳನ್ನು ಕೂಡಲೇ ಈಡೇರಿಸಿಕೊಡಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಲಾಯಿತು

ಹರಿಕಥೆ

ರಾಜಧಾನಿಯ ಕಾರಂಜೀ ಕೆರೆ ಒಳಿ ಇರುವ ಶ್ರೀ ಆಂಜನೇಯ ದೇವಸ್ಥಾನದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಹರಿಹರಾನಂದ ಭಾರತೀ ಸ್ವಾಮಿಯವರಿಂದ ಹರಿಕಥೆ ನಡೆಯುವುದು

ಚಿನ್ನದ ಗಣಿ ಪತ್ತೆ

ಕ್ಯಾಲಿಫೋರ್ನಿಯಾ ಮತ್ತು ಅರಿಜೋನಾ ಮಧ್ಯದ ಗುಡ್ಡ ಪ್ರದೇಶಗಳಲ್ಲಿ ವಿಶಾಲವಾದ ೭೭ ಚಿನ್ನದ ಗಣಿಗಳಿವೆಯೆಂದೂ, ಅವುಗಳನ್ನು ಪತ್ತೆಮಾಡಲು ಅಮೆರಿಕದ ಅಧಿಕಾರಿಗಳು ಸರ್ವೆ ನಡೆಸುತ್ತಿರುವರೆಂದು ಹೇಳಲಾಗಿದೆ

ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮೈಸೂರು

ಪ್ರಕಟನೆ

ಮೇಲ್ಕಂಡ ಸ್ಟೋರ್ಸ್ಸಿನಲ್ಲಿ (ಹೆಡ್ ಆಫೀಸು) ಅತ್ಯುತ್ತಮವಾದ ರಮಿಂಪಾ ಕಾಪಿ ಬೀಜ, ಮಿಲ್ ಬಟ್ಟೆಗಳು, ಲಾಂಗ್ ಕ್ಲಾತ್, ಷರಟಿಂಗ್, ಕೋಟಿಂಗ್, ಪಂಚೆಗಳು, ಸೀರೆಗಳು ಮತ್ತು ತರಹವಾರಿ ಸ್ಟೇಷನರಿ ಸಾಮಾನುಗಳು, ಎಕ್ಸರ್‌ಸೈಜ್ ಪುಸ್ತಕಗಳು, ನಿತ್ಯ ಉಪಯೋಗಕ್ಕೆ ಬೇಕಾದ ದಿನಸಿಸಾಮಾನುಗಳು ಕಂಟ್ರೋಲ್ ಬೆಲೆಗೆ ಮೆಂಬರುಗಳಿಗೂ ಮತ್ತು ಮೆಂಬರಲ್ಲದವರಿಗೂ ಬಿಕರಿಗೆ ದೊರೆಯುತ್ತವೆ ನಮ್ಮ ಸ್ವಂತ ಗಾಣದಲ್ಲಿ ತಯಾರಾಗುವ ಹುಚ್ಚೆಳ್ಳೆಣ್ಣೆ, ಅಚ್ಚೆಳ್ಳೆಣ್ಣೆ ಇವುಗಳನ್ನು ಒಮ್ಮೆ ಪರೀಕ್ಷಿಸಿರಿ

[ಸಹಿ] ಬಿ. ರಾಮಕೃಷ್ಣಯ್ಯ

ಸೆಕ್ರೆಟರಿ

Office of the Executive Engineer
Buildings Division, Mysore
7th August 1949

TENDER NOTIFICATION

CONSTRUCTION OF TEMPORARY STALLS AT JEEVANA-RAYANAKATTE FOR THE DASARA EXHIBITION 1949

It is hereby notified for the information of the public, that the last date for accepting tenders for the above is extended up to the 13th August 1949

(1) Sealed Tenders will be received by the undersigned up to 4 p m on 13th August 1949

(2) The Tenders should be accompanied by a challan for having credited Rs 950 - as earnest money to Government Treasury in favour of the undersigned under 40 (1) With Treasury by P W D No cheques will be accepted Tenders not accompanied by such challans will be disqualified without any consideration

(3) Tenders should quote hire charges only for a period of one month commencing from 20th September 1949

(4) A layout plan showing the position of stalls etc may be seen in this office on all working days between 1 p m and 4 p m An abstract estimate with approximate quantity of work will be sent on application

(5) The undersigned will have the full discretion for approving the quality of work and his decision in all matters shall be final

(6) The stalls should be completed and handed over to the Department on the 20th September 1949 from which date the hire charges will be calculated

(Sd) I Hutchaiah,
Executive Engineer,
Buildings Division, Mysore

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ

ನಾಳೆಯಿಂದ 2ನೇ ವಾರ ದಿನವಹಿ 3 ಆಟಗಳು

ರಾಜರಾಜೇಶ್ವರಿ ಫಿಲಂಸ್‌ರವರ ತಮಿಳು ಚಿತ್ರ

-ನವಜೀವನಂ-

R V ಪಿಕ್ಚರ್ಸ್ ರಿಲೀಸ್

Edited printed and published by A R Nagarajan, at Sadhvi Press, D Subbiah Road, Mysore

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೭ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೧೨-೮-೧೯೪೯ [ಸಂಚಿಕೆ ೧೮

ಆಲ್ಬೇನಿಯಾ ಮೇಲೆ ಗ್ರೀಸಿನ ದಂಡಯಾತ್ರೆ

ಆಲ್ಬೇನಿಯಾ ಮೇಲೆ ಗ್ರೀಸಿನ ದಂಡಯಾತ್ರೆ

ಗ್ರೀಸು ಆಲ್ಬೇನಿಯಾ ಮೇಲೆ ದಂಡಯಾತ್ರೆ ಪ್ರಾರಂಭಿಸಿದೆಯೆಂದು ಆಲ್ಬೇನಿಯಾ ಸರ್ಕಾರವು ದೂರುಕೊಟ್ಟಿದೆ. ೩೦ ಮೈಲಿಯ ಕ್ಷೇತ್ರದಲ್ಲಿ ಭೀಕರ ಕದನವು ನಡೆಯುತ್ತಿದೆಯೆಂದೂ ಗ್ರೀಸಿನ ಸೈನ್ಯಕ್ಕೆ ಅಪಾರ ನಷ್ಟ ಉಂಟಾಗಿದೆಯೆಂದೂ, ಆಲ್ಬೇನಿಯಾ ರೇಡಿಯೋ ವರದಿಮಾಡಿದೆ.

ಆಲ್ಬೇನಿಯಾ ಗಡಿ ಪ್ರದೇಶದಲ್ಲಿ ಗ್ರೀಸಿನ ಗೊರಿಲ್ಲಾಗಳು ಕೇಂದ್ರಗಳನ್ನು ಸ್ಥಾಪಿಸಿ ಸರ್ಕಾರಕ್ಕೆ ಕಿರುಕುಳ ಕೊಡುತ್ತಿರುವರೆಂದೂ, ಆಲ್ಬೇನಿಯಾದಿಂದ ಅವರಿಗೆ ಶಸ್ತ್ರಾಸ್ತ್ರಗಳು ಸರಬರಾಜಾಗುತ್ತಿದೆಯೆಂದೂ ಗ್ರೀಸ್ ಸರ್ಕಾರದವರು ಅಪಾದನೆ ಹೊರಿಸಿದ್ದಾರೆ. ಆಲ್ಬೇನಿಯಾ ಮೇಲೆ ಯಾವ ದಂಡ ಯಾತ್ರೆಯೂ ನಡೆದಿಲ್ಲವೆಂದೂ, ಗಡಿ ಪ್ರದೇಶದಲ್ಲಿ ಕೆಲವು ಘರ್ಷಣೆ ನಡೆದಿರಬೇಕೆಂದೂ ಗ್ರೀಸ್ ಸರ್ಕಾರವು ತಿಳಿಸಿದೆ.

ಕಲ್ಕತ್ತದಲ್ಲಿ ೧॥ ಲಕ್ಷ ರೂ. ದರೋಡೆ

ಕಲ್ಕತ್ತಾಕ್ಕೆ ೧೪ ಮೈಲಿ ದೂರದಲ್ಲಿರುವ ಒಂದು ಸೆಣಬಿನ ಕಾರ್ಖಾನೆಯ ಕೂಲಿಗಾರರಿಗೆ ಸಂಬಳವನ್ನು ಬಟವಾಡೆ ಮಾಡಲು ಕಾರ್ಖಾನೆಯ ಮೂರು ಮಂದಿ ನೌಕರರು ನೆನ್ನೆ ದಿನ ಕಲ್ಕತ್ತದಿಂದ ಲಾರಿಯಲ್ಲಿ ೧॥ ಲಕ್ಷ ರೂ ಅನ್ನು ತೆಗೆದುಕೊಂಡು ಹೋಗುತ್ತಿದ್ದರು. ಲಾರಿಯು ಕಾರ್ಖಾನೆ ಗೇಟಿನ ಬಳಿ ಬಂದಾಗ ಪಿಸ್ತೂಲು ಮತ್ತು ಸ್ಟೆನ್ ಗನ್ನುಗಳಿಂದ ಸಜ್ಜಿತರಾದ ಹಲವು ಮಂದಿ ದರೋಡೆಕೋರರು ಲಾರಿಯಲ್ಲಿದ್ದ ನೌಕರರ ಮೇಲೆ ಅವಿಚ್ಛಿನ್ನವಾಗಿ ಗುಂಡು ಹಾರಿಸಿದರು. ಅವರುಗಳು ಕೆಳಗೆ ಬೀಳಲು ದರೋಡೆಕೋರರು ಹಣದ ಪೆಟ್ಟಿಗೆಗಳಿದ್ದ ಲಾರಿಯನ್ನು ತಾವೇ ನಡೆಸಿಕೊಂಡು ಪರಾರಿಯಾದರು. ಪೊಲೀಸರ ಪತ್ತೆ ತರದೂದಿನಿಂದ ೨೨ ಸಾವಿರ ರೂ. ಸಿಕ್ಕಿದೆಯೆಂದು ಗೊತ್ತಾಗಿದೆ. ದರೋಡೆಕೋರರು ಯಾರೂ ಸಿಕ್ಕಿಲ್ಲ.

ಕಮ್ಯೂನಿಸ್ಟ್ ಚೀಣಾದಲ್ಲಿ ರೈತರುಗಳ ದಂಗೆ

ಕಮ್ಯೂನಿಸ್ಟರಿಂದ ಆಕ್ರಮಿತವಾದ ಮಧ್ಯ ಚೀಣಾದಲ್ಲಿ ೨॥ ಲಕ್ಷ ಜನ ರೈತರುಗಳು ಶಸ್ತ್ರಸಜ್ಜಿತರಾಗಿ ದಂಗೆಯೆದ್ದಿದ್ದಾರೆಂದೂ, ಇದರಿಂದ ಅಲ್ಲಿನ ಕಮ್ಯೂನಿಸ್ಟರ ಆಳಿತವು ಕುಸಿದು ಬೀಳಬಹುದೆಂದೂ ಅಲ್ಲಿನ ರಾಷ್ಟ್ರೀಯ ಸರ್ಕಾರದ ಸೈನ್ಯಾಧಿಕಾರಿಗಳೊಬ್ಬರು ತಿಳಿಸಿರುತ್ತಾರೆ.

ಸಂಸ್ಥಾನದ ಕಾರ್ಮಿಕರ ಸಮ್ಮೇಳನ

ಸಂಸ್ಥಾನದ ಕಾರ್ಮಿಕರ ಸಮ್ಮೇಳನವು ಈ ತಿಂಗಳು ೨೭ ಮತ್ತು ೨೮ನೆಯ ತಾರೀಖು ಬೆಂಗಳೂರಿನಲ್ಲಿ ನಡೆಯುವುದು. ಶ್ರೀ ಅಶೋಕ ಮೆಹ್ತಾರವರು ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ದೇವನಾಗರಿ ಲಿಪಿಯಲ್ಲಿ ಹಿಂದಿ ಭಾಷೆ

೧೫ ವರ್ಷಗಳ ನಂತರ ದೇವನಾಗರಿ ಲಿಪಿಯಲ್ಲಿ ಹಿಂದಿಯು ರಾಷ್ಟ್ರಭಾಷೆಯಾಗಬೇಕೆಂದೂ, ಈಗ ಯಾವ ಭಾಷೆ ಇರಬೇಕೆಂದು ನಿರ್ಧರಿಸಲು ಒಂದು ಉಪಸಮಿತಿಯನ್ನು ನೇಮಿಸಬೇಕೆಂದೂ, ಭಾರತ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದವರು ತೀರ್ಮಾನಿಸಿದ್ದಾರೆ.

ರಾಜ್ಯಾಂಗರಚಿಸಲು ಮೈಸೂರಿಗೆ ಅಧಿಕಾರವಿರಬೇಕು

ರಾಜ್ಯಾಂಗ ಸಭೆಯಲ್ಲಿ ಚರ್ಚೆ

——:o:——

ಬೆಂಗಳೂರು ೧೨

ಸಂಸ್ಥಾನಗಳಿಗೆ ಮಾದರಿ ರಾಜ್ಯಾಂಗವನ್ನು ರಚಿಸಲು ಏರ್ಪಡಿಸಿರುವ ಕೇಂದ್ರ ಸಮಿತಿಯವರಿಂದ ವರದಿಯು ಬರುವವರಿಗೂ ಮೈಸೂರಿಗೆ ನೂತನ ರಾಜ್ಯಾಂಗವನ್ನು ರಚಿಸುವುದನ್ನು ಮುಂದಕ್ಕೆ ಹಾಕಬೇಕು— ಎಂಬ ಶ್ರೀ ಕೆ. ಸಿ ರೆಡ್ಡಿಯವರ ನಿರ್ಣಯದ ಮೇಲೆ ನೆನ್ನೆ ರಾಜ್ಯಾಂಗ ಸಭೆಯಲ್ಲಿ ದೀರ್ಘ ಚರ್ಚೆ ನಡೆಯಿತು. ಬೇಕಾದ ರಾಜ್ಯಾಂಗವನ್ನು ರಚಿಸಲು ತಮಗೆ ಅಧಿಕಾರವಿರಬೇಕೆಂದೂ, ಪ್ರತಿಯೊಂದು ಕಾರ್ಯದಲ್ಲೂ ಕೇಂದ್ರದವರು ಅತಿಕ್ರಮ ಪ್ರವೇಶ ಮಾಡುವುದು ಸರಿಯಲ್ಲವೆಂದೂ, ಕೇಂದ್ರದವರು ತಮಗಾಗಿ ರಾಜ್ಯಾಂಗವನ್ನು ರಚಿಸುವುದಾದರೆ ಮೈಸೂರಿನ ರಾಜ್ಯಾಂಗ ಸಭೆಯ ಅವಶ್ಯಕತೆಯೇ ಇಲ್ಲವೆಂದೂ ಹಲವು ಸದಸ್ಯರುಗಳು ಟೀಕೆ ಮಾಡಿ ಮಾತನಾಡಿದರು.

ಶ್ರೀ ರೆಡ್ಡಿಯವರು ಉತ್ತರವಿತ್ತು, ರಾಜ್ಯಾಂಗವನ್ನು ಭಾರತ ಅಥವಾ ಮೈಸೂರು ಸರ್ಕಾರಗಳು ರಚಿಸುತ್ತಿಲ್ಲವೆಂದೂ, ಕೇಂದ್ರ ರಾಜ್ಯಾಂಗ ಸಭೆಯು ಆ ಕೆಲಸವನ್ನು ಮಾಡುತ್ತಿದೆಯೆಂದೂ ತಿಳಿಸಿದರು. ಚರ್ಚೆಯನ್ನು ಈ ದಿನಕ್ಕೆ ಮುಂದುವರಿಸಲಾಯಿತು. ಈ ದಿನ ಸಭೆಯು ಮುಕ್ತಾಯವಾಗುವುದು.

ಗೋಪಾಲರಾವ್ ಸಮಿತಿಗೆ ೪ ಲಕ್ಷ ರೂ.

ಧರ್ಮರತ್ನಾಕರ ಗೋಪಾಲರಾಯರ ಪ್ರಮುಖ ದೇಣಿಗಾರರಲ್ಲೊಬ್ಬರಾದ ಶ್ರೀ ಅಪ್ಪಯ್ಯ ನಾಯ್ಡುರವರು ವಿಚಾರಣಾ ಸಮಿತಿಗೆ ತಾವು ೪ ಲಕ್ಷ ರೂ ಅನ್ನು ಕೊಡಲು ಸ್ವತಃ ಮುಂದೆ ಬಂದಿದ್ದಾರೆ. ಸದರಿ ಮೊಬಲಗನ್ನು ಗೋಪಾಲರಾಯರು ಲೇವಾದೇವಿಯಲ್ಲಿ ಹಣ ಕಳೆದುಕೊಂಡ ಜನರಿಗೆ ಹಂಚಬೇಕೆಂದು ಅವರ ಅಪೇಕ್ಷೆಪಟ್ಟಿದ್ದಾರೆ. ಅಲ್ಲದೆ ಮೇಲ್ಕಂಡ ಲೇವಾದೇವಿಯಲ್ಲಿ ತಮಗೆ ಬರಬೇಕಾಗಿರುವ ಸುಮಾರು ೧೧,೭೭,೦೦೦ ರೂ ಗಳನ್ನು ತಾವು ಕೇಳುವುದಿಲ್ಲವೆಂದೂ ಶ್ರೀ ಅಪ್ಪಯ್ಯನಾಯ್ಡುರವರು ತಿಳಿಸಿರುತ್ತಾರೆ.

ಅಮೆರಿಕಕ್ಕೆ ನೆಹರೂರವರ ಭೇಟಿ

ಪಂಡಿತ ಜವಹರಲಾಲ್ ನೆಹರೂರವರು ಬರುವ ಅಕ್ಟೋಬರ್ ತಿಂಗಳಿನಲ್ಲಿ ಅಮೆರಿಕಕ್ಕೆ ಭೇಟಿ ಕೊಡುವ ಸಂದರ್ಭದಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತ ನೀಡಲು ಸರ್ವಸಿದ್ಧತೆಗಳೂ ನಡೆಯುತ್ತಿವೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅಧ್ಯಕ್ಷರಾದ ಡಾ॥ ಐಸೆನ್‌ಹೋವರ್‌ರವರು ತಮ್ಮ ವಿಶ್ವವಿದ್ಯಾನಿಲಯದಲ್ಲಿ ನೆಹರೂರವರ ಭಾಷಣವನ್ನು ಏರ್ಪಡಿಸಲು ಬಹಳ ಉತ್ಸುಕತೆ ವಹಿಸುತ್ತಿರುವರೆಂದೂ ವರದಿಯಾಗಿದೆ.

ಆಹಾರ ಶಾಸನ ಉಲ್ಲಂಘಿಸಿದವರಿಗೆ ಛಡಿ ಶಿಕ್ಷೆ

ಆಹಾರದ ಹಂಚಿಕೆ ಮತ್ತು ರವಾನೆ ಹತೋಟಿ ಆಜ್ಞೆಯನ್ನು ಉಲ್ಲಂಘಿಸಿದವರಿಗೂ ಮತ್ತು ಆಹಾರದ ಕಳ್ಳ ದಾಸ್ತಾನುದಾರರಿಗೂ ಮತ್ತು ಲಾಭಕೋರರಿಗೂ ೭ ವರ್ಷ ಶಿಕ್ಷೆ, ಆಸ್ತಿ ಮುಟ್ಟುಗೋಲು ಮತ್ತು ಛಡೀ ಶಿಕ್ಷೆಯನ್ನು ವಿಧಿಸುವ ಒಂದು ವಿಶೇಷಾಜ್ಞೆಯನ್ನು ಕಾಶ್ಮೀರ ಸರ್ಕಾರದವರು ಜಾರಿ ಮಾಡಿರುತ್ತಾರೆ.

ಜೂಜುಗಾರರಿಗೆ ಜುಲ್ಮಾನೆ

ನಂಜನಗೂಡು ೧೧

ಇಲ್ಲಿನ ಕುರುಬಗೇರಿಯಲ್ಲಿರುವ ದೀವಟಿಗೆ ಮಾದಯ್ಯನ ಮನೆಯಲ್ಲಿ ಜೂಜಾಡುತ್ತಿದ್ದ ೧೫ ಜನರನ್ನು ಪೊಲೀಸರು ದಸ್ತಗಿರಿ ಮಾಡಿ ಅಲ್ಲಿದ್ದ ೧೩೦ ರೂ ಹಣವನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿದ್ದರು. ೧೫ ಜನರಿಗೆ ತಲಾ ೨೦ ರೂ ದಂಡವನ್ನೂ ಇಬ್ಬರಿಗೆ ಸಜಾ ಶಿಕ್ಷೆಯನ್ನು ವಿಧಿಸಲಾಗಿದೆ.

ನಂಜನಗೂಡು-ಗುಂಡ್ಲುಪೇಟೆ ರಸ್ತೆಯ ದುರಸ್ತು

ಬೆಂಗಳೂರು-ನೀಲಗಿರಿ ಮಾರ್ಗದಲ್ಲಿ ನಂಜನಗೂಡಿನಿಂದ ಗಡಿಯವರೆಗೆ ಇರುವ ರಸ್ತೆಯು ಕಳೆದ ೩ ವರ್ಷಗಳಿಂದಲೂ ರಿಪೇರಿಯಾಗದೆ ಸಂಚರಿಸುವವರಿಗೆ ಬಹಳ ತೊಂದರೆಯಾಗುತ್ತಿದೆ. ಈ ರಸ್ತೆಯಲ್ಲಿ ಅನೇಕ ಮೋಟಾರುಗಳು ಓಡಾಡುವುದರಿಂದ ಇದನ್ನು ಕೂಡಲೇ ದುರಸ್ತು ಪಡಿಸಬೇಕೆಂದು ಗುಂಡ್ಲುಪೇಟೆ ಪ್ರಜಾಪರಿಷತ್ತಿನವರು ಪ್ರಾರ್ಥಿಸಿರುತ್ತಾರೆ.

ನಗರಗಳೊಳಕ್ಕೆ ಬೆರಣಿಯನ್ನು ತರಲು ಪ್ರತಿಬಂಧಕ

ಮೈಸೂರು ೧೨

ಸಗಣಿಯನ್ನು ಗೊಬ್ಬರವಾಗಿ ಉಪಯೋಗಿಸದೆ, ಅದನ್ನು ಬೆರಣಿಯನ್ನಾಗಿ ಮಾಡುತ್ತಿರುವುದರಿಂದ ಗೊಬ್ಬರದ ಅಭಾವವುಂಟಾಗಿರುವುದರಿಂದಲೂ ಮತ್ತು ಸಗಣಿಯು ವ್ಯವಸಾಯಕ್ಕೆ ಅತ್ಯಗತ್ಯವಾದುದರಿಂದಲೂ, ಮತ್ತು ಈಗಿನ ಆಹಾರ ಅಭಾವ ಕಾಲದಲ್ಲಿ ಹೆಚ್ಚು ಆಹಾರ ಬೆಳೆಯುವ ಯೋಜನೆಗೂ ಅದು ಅವಶ್ಯಕವಾಗಿರುವುದರಿಂದಲೂ, ಬೆರಣಿಯನ್ನು ನಗರ ಮತ್ತು ಟೌನುಗಳ ಪುರಸಭಾ ಸರಹದ್ದಿನೊಳಕ್ಕೆ ತರುವುದನ್ನು ಪ್ರತಿಬಂಧಿಸಲು ಜಿಲ್ಲಾಧಿಕಾರಿಗಳು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಯಾವ ಪಕ್ಕದ ಹಳ್ಳಿಯ ಪ್ರದೇಶಗಳಿಂದಲೂ ಬೆರಣಿಯನ್ನು ಸೌದೆಗಾಗಿ ನಗರ ಅಥವ ಟೌನುಗಳೊಳಕ್ಕೆ ಮುಂದಿನ ತಿಂಗಳು ೧ನೇ ತಾ॥ ನಿಂದ ಸಾಗಿಸಕೂಡದೆಂದು ಅವರು ಆಜ್ಞೆ ಮಾಡಿರುತ್ತಾರೆ.

ಸನ್ಮಾನ ಸಭೆ

ಈ ವರ್ಷದ ವರ್ಧಂತ್ಯುತ್ಸವದಲ್ಲಿ ಸಾರ್ವಜನಿಕ ಸೇವಾ ಪದಕವನ್ನು ಪಡೆದ ಶ್ರೀ ಟಿ ಎಲ್ ಮುಂಡಯ್ಯನವರನ್ನು ಸನ್ಮಾನಿಸಲು ಆದಿಕರ್ನಾಟಕಪುರದ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಎಂ ಮಾದಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಒಂದು ಸಮಾರಂಭವು ನಡೆಯಿತು.

ಮಾಂಸದ ಅಂಗಡಿಯಿಂದ ತೊಂದರೆ

ಕೃಷ್ಣರಾಜ ಮೊಹಲ್ಲಾ ಚಿಕ್ಕ ಅಂಗಡಿ ಬೀದಿಯಲ್ಲಿ ೧೦-೧೨ ವರ್ಷಗಳ ಹಿಂದೆ ಇದ್ದ ಮಾಂಸದ ಅಂಗಡಿಯನ್ನು ಬೇರೆ ಕಡೆಗೆ ವರ್ಗಾಯಿಸಿ, ಈಗ ಪುನಃ ಅದನ್ನು ಅದೇ ಸ್ಥಳದಲ್ಲಿ ಇಡಲು ಪುರಸಭೆಯವರು ಅವಕಾಶ ಕೊಟ್ಟಿರುತ್ತಾರೆ. ಇದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಅದನ್ನು ಪಬ್ಲಿಕ್ ರಸ್ತೆಯಿಂದ ಪ್ರತ್ಯೇಕವಾದ ಸ್ಥಳಕ್ಕೆ ಬದಲಾಯಿಸಬೇಕೆಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ.

ಯುವಕನ ಕಾಲಿಗೆ ಕುದುರೆ ಲಾಳ

ಸತಾರಾ ಜಿಲ್ಲೆಯ ಕಲಾಡ್ ಗ್ರಾಮಕ್ಕೆ ದರೋಡೆಗಾರರು ನುಗ್ಗಿ, ಮನೆಯೊಂದರಲ್ಲಿದ್ದ ೨೫ ವರ್ಷದ ಯುವಕನೊಬ್ಬನನ್ನು ಅಪಹರಿಸಿಕೊಂಡು ಹೋದರೆಂದೂ, ಹಳ್ಳಿಯ ಹೊರಗಡೆ ಆತನನ್ನು ಕಟ್ಟಿಹಾಕಿ ಬಲವಾಗಿ ಹೊಡೆದು, ಕಾಲಿಗೆ ಕುದುರೆಯ ಲಾಳವನ್ನು ಹೊಡೆದು ಹೊರಟುಹೋದರೆಂದೂ ಹೇಳಲಾಗಿದೆ.

ಕಾರು-ಲಾರಿ ಡಿಕ್ಕಿ ಹೊಡೆದು ೧೩ ಜನರಿಗೆ ಗಾಯ

ಬೆಂಗಳೂರು ೧೨

ರಾಜ್ಯಾಂಗ ಸಭಾ ಉಪಾಧ್ಯಕ್ಷರಾದ ಶ್ರೀ ಗಾಂಜಿ ವೀರಪ್ಪನವರು ನೆನ್ನೆ ದಿನ ಮಧ್ಯಾಹ್ನ ತಮ್ಮ ಕಾರಿನಲ್ಲಿ ಕುಮಾರ ಪಾರ್ಕಿನಿಂದ ಹೊರಕ್ಕೆ ಬರುತ್ತಿದ್ದಾಗ ಗೇಟಿನ ಬಳಿ ಅವರ ಕಾರಿಗೂ, ಸಿವಿಲ್ ಸಪ್ಲೈಸಿನ ಒಂದು ಲಾರಿಗೂ ಡಿಕ್ಕಿ ಹೊಡೆದು ೧೩ ಜನರಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಗಾಯಗೊಂಡವರ ಪೈಕಿ ಬಹಳ ಬಲವಾಗಿ ಪೆಟ್ಟುಬಿದ್ದವರ ಪೈಕಿ ಸ್ತ್ರೀ ಸಭಾ ಸದಸ್ಯರಾದ ಶ್ರೀ ... ಅವರು ಇರುವರೆಂದು ಗೊತ್ತಾಗಿದೆ. ಶ್ರೀ ಗಾಂಜಿ ವೀರಪ್ಪನವರು ಅಪಾಯದಿಂದ ಪಾರಾಗಿದ್ದಾರೆ.

ಭೂಕಂಪದಿಂದ ದ್ವೀಪವು ವಿಸ್ತರಿಸಿತು.

ದಕ್ಷಿಣ ಪೆಸಿಫಿಕ್ ಸಾಗರದಲ್ಲಿರುವ ನ್ಯೂಥ್ಯೂ ದ್ವೀಪವು ಈಗ ಸಮುದ್ರದೊಳಗಡೆ ನಡೆದ ಭೂಕಂಪವೊಂದರ ಪರಿಣಾಮವಾಗಿ ಒಂದಕ್ಕೆ ಎರಡರಷ್ಟಾಗಿದೆಯೆಂದು ವರದಿಯಾಗಿದೆ ಆ ದ್ವೀಪವು ೩೦ ಎಕರೆ ವಿಸ್ತೀರ್ಣವಿದ್ದು ಅಲ್ಲಿ ಒಂದೇ ಒಂದು ಸಣ್ಣ ಶಿಖರವಿತ್ತೆಂದೂ, ಈಗ ಅದರ ಪಕ್ಕದಲ್ಲಿ ೫೦೦ ಅಡಿಯ ಇನ್ನೊಂದು ಶಿಖರವು ಕಂಡುಬಂದಿದೆಯೆಂದೂ ಹೇಳಲಾಗಿದೆ

ಉಚಿತ ಚಿಕಿತ್ಸೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಧರ್ಮಪ್ರವರ್ತ ಹೊಂಬಾಳೆ ರಂಗಯ್ಯನವರು ಉಚಿತವಾಗಿ ಉಳುಕು, ಮೂಳೆ ಮುರಿದಿರುವುದು ಮುಂತಾದುವುಗಳಿಗೆ ಚಿಕಿತ್ಸೆಮಾಡುತ್ತಾರೆ. ಇದರ ಉಪಯೋಗವನ್ನು ಎಲ್ಲರೂ ಪಡೆಯಬಹುದೆಂದು ತಿಳಿಸಲಾಗಿದೆ

ಕ್ಯಾಂಟೀನ್ ಸ್ಥಾಪನೆ

ರಾಜಧಾನಿಯ ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯಲ್ಲಿ ಇದೇ ೬ ನೇ ತಾ|| ನಿಂದ ಬಾಲಕರಿಗಾಗಿ ಒಂದು ಕ್ಯಾಂಟೀನನ್ನು ಜಿಲ್ಲಾಬೋರ್ಡು ಸದಸ್ಯರಾದ ಶ್ರೀ ಬೊಮ್ಮಣ್ಣ, ಎಫ್ ಸಿ. ದೇವರಾಜೇ ಅರಸ್ ಮತ್ತು ಎಂ ರಾಮಸ್ವಾಮಿಗಳವರ ನೇತೃತ್ವದಲ್ಲಿ ತೆರೆಯಲಾಗಿದೆ ಇದಕ್ಕೆ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಅದರ ವ್ಯವಸ್ಥಾಪಕರು ಕೋರಿರುತ್ತಾರೆ

ಆಟವಾಡುತ್ತಿದ್ದಾಗ ಸಿಡಿಲು ಹೊಡೆದು ಮರಣ

ಅರ್ಬಾನಾದಲ್ಲಿ ಕಳೆದ ೯ ನೇ ತಾ|| ಬೇಸ್‌ಬಾಲ್ ಎಂಬ ಪಂದ್ಯವು ನಡೆಯುತ್ತಿದ್ದಾಗ, ಸಿಡಿಲು ಬಡಿದು, ಒಬ್ಬ ಆಟಗಾರನು ಸತ್ತನೆಂದೂ, ೯ ಜನರಿಗೆ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ

ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನ,

ಇದೇ ೩೦ ಮತ್ತು ೩೧ ನೇ ತಾ||ಗಳು ನಡೆಯಬೇಕಾಗಿದ್ದ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ಸೆಪ್ಟೆಂಬರ್ ೩ ಮತ್ತು ೪ ನೇ ತಾ|| ಗೆ ಮುಂದುವರಿಸಲಾಗಿದೆಯೆಂದು ಅದರ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಟಿಂಬರ್ ಮತ್ತು ಪ್ಲೈವುಡ್ ಕೆಲಸಗಾರರ ಕುಂದು ಕೊರತೆ

ರಾಜಧಾನಿಯ ಕೂರ್ಗ್ ಟಿಂಬರ್ ಮತ್ತು ಪ್ಲೈವುಡ್ ಕಂಪೆನಿಯ ಅಧಿಕಾರಿಗಳು ಸಂಘಕ್ಕೆ ಅಕ್ರಮವಾಗಿ ನೋಟೀಸ್ ಕೊಟ್ಟು, ಕಾರ್ಖಾನೆಯನ್ನು ಇದೇ ೧ನೇ ತಾ|| ಮುಚ್ಚಿರುವುದರಿಂದ ಕೆಲಸಗಾರರಿಗೆ ತುಂಬಾ ಕಷ್ಟ ನಷ್ಟ ಉಂಟಾಗಿರುತ್ತದೆ ಕಂಪೆನಿಯು ಸ್ಥಾಪನೆಯಾದಾಗಿನಿಂದಲೂ ಕಾರ್ಮಿಕರಿಗೆ ಯಾವ ವಿಧವಾದ ಪರಿಹಾರವನ್ನೂ ಕೊಟ್ಟಿಲ್ಲ ಕೆಲಸವಿಲ್ಲದೆ ಬಡ ಕಾರ್ಮಿಕರು ತುಂಬಾ ತೊಂದರೆಗೆ ಒಳಗಾಗಿದ್ದಾರೆ ಸರ್ಕಾರದವರು ಕೂಡಲೇ ಇದನ್ನು ಪರಿಹರಿಸಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ

ರಷ್ಯದಲ್ಲಿ ೪೦ ಲಕ್ಷ ಸೈನಿಕರು

ರಷ್ಯದಲ್ಲಿ ಈಗ ೪೦ ಲಕ್ಷ ಸೈನಿಕರಿರುವರು ಯುರೋಪಿನಲ್ಲೆಲ್ಲಾ ರಷ್ಯವು ಹೆಚ್ಚಿನ ಸೈನ್ಯ ಬಲವುಳ್ಳ ರಾಷ್ಟ್ರವಾಗಿದೆ ಅದು ತನ್ನ ಒಟ್ಟು ಆದಾಯದಲ್ಲಿ ಶೇಕಡ ೧೫ ರಷ್ಟನ್ನು ಸೈನ್ಯ ಮತ್ತು ಶಸ್ತ್ರಾಸ್ತ್ರಗಳಿಗಾಗಿ ಖರ್ಚು ಮಾಡುತ್ತಿದೆ

೧೫ ನೇ ತಾ|| ಕೈಗಾರಿಕಾ ಸಂಸ್ಥೆಗಳಿಗೂ ರಜಾ

ಇದೇ ೧೫ನೇ ತಾ|| ಭಾರತದ ಸ್ವಾತಂತ್ರ್ಯ ದಿನದ ಪ್ರಯುಕ್ತ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಿಗೆ ರಜಾ ಕೊಡಬೇಕೆಂದೂ, ೧೪ನೇ ತಾ|| ಭಾನುವಾರವನ್ನು ಕೆಲಸದ ದಿನವೆಂದು ಪರಿಗಣಿಸಬಹುದೆಂದೂ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ರಾಮಲಿಂಗೇಶ್ವರ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಸಂಬಂಧ ಮೂರ್ತಿ ಭಾಗವತರಿಂದ ಶರ ಸೇತು ಬಂಧನ ಎಂಬ ಹರಿಕಥೆ ಮತ್ತು ಅಮ್ಮನವರಿಗೆ ಅಲಂಕಾರವೂ, ಭಾನುವಾರ ಸಂಜೆ ೫ ಗಂಟೆಗೆ ಶ್ರೀ ಮಾಯಿ ಗೌಡರಿಂದ ಪುರಾಣವೂ ನಡೆಯುವುವು

§ ದೆಹಲಿಯಲ್ಲಿ ಬಸ್ ಕೆಲಸಗಾರರು ... ಷ್ಕರ ಹೂಡಿರುವದರಿಂದ, ಅಲ್ಲಿನ ಸಾರ್ವ... ನಿಕರಿಗೆ ತೊಂದರೆಯಾಗದಂತೆ ನೋ... ಕೊಳ್ಳಲು ಮಿಲಿಟರಿ ವಾಹನಗಳನ್ನು ... ಸುವರು ಬಸ್‌ಗಳನ್ನು ನಡೆಸುತ್ತಿ... ರೆಂದೂ, ಪೊಲೀಸರು ಕಂಡಕ್ಟರಾಗಿಕೆ... ಮಾಡುತ್ತಿದ್ದಾರೆಂದೂ ಹೇಳಲಾಗಿದೆ.

Independence Day Greeting Cards

"ಸ್ವಾತಂತ್ರ್ಯ ದಿನಾಚರಣೆ"

—ಶುಭಾಶಯದ ಓಲೆಗಳು—

ಗಾಂಧಿ ಸಾಹಿತ್ಯ ಮತ್ತು ರಾಷ್ಟ್ರೀಯ ಸಾಹಿತ್ಯ ಗ್ರಂಥಗಳ ಮೇಲೆ ರೂಪಾಯಿಗೆ ಒಂದು ಆಣೆ ರಿಯಾಯಿತಿ ಕೊಡಲಾಗುವುದು.

ಚೇತನ ಪುಸ್ತಕಾಲಯ, ಮೈಸೂರು

ಗರೀಬರಿಗೆ ಉಚಿತವೇ!

ನಾಯಿ ಕೆಮ್ಮು, ಲಿವರ್ ಅಂಡ್ ಸ್ಪ್ಲೀನ್, ಟಾನ್ಸಿಲ್, ಪರಿಣಾಮ ಶೂಲೆ, ಪ... ಲವ್ಯಾಧಿ ಮತ್ತು ವ್ರಣಗಳಿಗೆ ಖಾ... ಯಾದ ಶೀಘ್ರ ಗುಣಕಾರಿ ಚಿಕಿತ್ಸೆ

ಎ ಸ್. ಶಾ ಮ ಣ್ಣ

ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆ
೨೮೩೨, ಚಾಮುಂಡೇಶ್ವರೀ ರೋಡ್
ಚಾಮುಂಡಿಪುರಂ, ಮೈಸೂರು

CENTRAL FOOD TECHNOLOGICAL RESEARCH INSTITUTE, MYSORE.

10th August 1949

NOTIFICATION

Tenders in the prescribed form enclosed in a sealed cover superscribed as "TENDER FOR PREPARING AND SUPPLYING TEAK WOOD AND ROSE WOOD FURNITURE" (amounting approximately to Rs 15,500/-) will be received in the office of the undersigned up to 4 P. M on 15th August 1949. The Tender should be accompanied by a stamped receipt for having credited a sum of Rs 250/- (Two hundred and fifty) in cash as earnest money in the above office No cheques will be accepted Tenders not accompanied by such receipts will be disqualified.

Detailed estimates Plans and Agreement forms may be seen in the office on all working days between 10 A. M. and 12 noon, after making an appointment Prescribed Tender forms can be had in the office on payment of a sum of four annas

Tender should be on detailed rates per unit of furniture to be quoted. Such rate must hold good for a period of three months from the date of Tender All non tendered items will be paid for on data including ten per cent profit

The work should be completed within sixty days from the date of acceptance of the tender.

The undersigned reserves the right to accept or reject any tender without assigning any reason whatsoever

M G Srinivasan
For Planning Officer.

Office of the Executive Engineer,
Buildings Division, Mysore.
7th August 1949.

TENDER NOTIFICATION

CONSTRUCTION OF TEMPORARY STALLS AT JEEVANARAYANAKATTE FOR THE DASARA EXHIBITION 1949

It is hereby notified for the information of the public, that the last date for accepting tenders for the above is extended up to the 13th August 1949.

(1) Sealed Tenders will be received by the undersigned up to 4 p m on 13th August 1949.

(2) The Tenders should be accompanied by a challan for having credited Rs 950/- as earnest money to Government Treasury in favour of the undersigned under 40 (1) With Treasury by P.W.D No cheques will be accepted. Tenders not accompanied by such challans will be disqualified without any consideration.

(3) Tenders should quote hire charges only for a period of one month commencing from 20th September 1949.

(4) A layout plan showing the position of stall etc. may be seen in this office on all working days between 1 p m and 4 p.m. An abstract estimate with approximate quantity of work will be sent on application

(5) The undersigned will have the full discretion for approving the quality of work and his decision in all matters shall be final.

(6) The stalls should be completed and handed over to the Department on the 20th September 1949 from which date the hire charges will be calculated

(Sd) T H. THCHAVELKIAH,
Executive Engineer,
Buildings Division, Mysore.

Edited, printed and published by A R Nagarajan at Sadhvi Press, D. Subbiah Road, Mysore.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ರವಿವಾರ ೧೩-೮-೧೯೪೮ [ಸಂಚಿಕೆ ೧೯

ಮದರಾಸ್ ಮಂತ್ರಿಗೆ ಕಮ್ಯೂನಿಸ್ಟರಿಂದ ಧಮಕಿ

೯೬೮ ಲಕ್ಷ ರೂ. ಹೊಸ ಆಹಾರ ಯೋಜನೆ

ಬೆಂಗಳೂರು ೧೪

ಸಂಸ್ಥಾನದಲ್ಲಿ ಇನ್ನು ಮೂರು ವರ್ಷಗಳಲ್ಲಿ ೫ ಲಕ್ಷ ಎಕರೆ ಜಮೀನುಗಳನ್ನು ಸಾಗುವಳಿಗೆ ತರುವ ೯೬೮ ಲಕ್ಷ ರೂ. ವೆಚ್ಚದ ಹೊಸ ಯೋಜನೆಯೊಂದನ್ನು ಸರ್ಕಾರದವರು ತಯಾರಿಸಿದ್ದಾರೆಂದು ತಿಳಿದುಬಂದಿದೆ.

ಸಂಸ್ಥಾನದಲ್ಲಿ ಡಿ. ಡಿ. ಟಿ. ತಯಾರಿಕೆ

ಬೆಂಗಳೂರಿನಲ್ಲಿ ಡಿ ಡಿ ಟಿ ದ್ರಾವಕವನ್ನು ತಯಾರಿಸಲು ಸರ್ಕಾರದವರು ಇಂಡಿಯನ್ ವಿಜ್ಞಾನ ಶಾಲೆಯ ಡಾ॥ ಗುಹರವರೊಡನೆ ಸಮಾಲೋಚನೆ ನಡೆಸುತ್ತಿರುವರೆಂದು ತಿಳಿದು ಬಂದಿದೆ. ಈ ದ್ರಾವಕವು ಮಲೇರಿಯ ಹಾವಳಿಯನ್ನು ತಡೆಗಟ್ಟಲು ಉಪಯುಕ್ತವಾದ ಸಿದ್ಧೌಷಧ.

ಆಹಾರ ಮತ್ತು ಪೌಷ್ಟಿಕ ಸಂಶೋಧನಾ ಕೇಂದ್ರ

ಕುನ್ನೂರಿನಲ್ಲಿರುವಂತೆ ಮೈಸೂರಿನಲ್ಲೂ ಆಹಾರ ಮತ್ತು ಪೌಷ್ಟಿಕ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆಂದು ತಿಳಿದು ಬಂದಿದೆ. ಪುಷ್ಟಿಕರವಾದ ಆಹಾರವಿಲ್ಲದಿರುವುದೇ ಮಲೇರಿಯಾ ಹಾವಳಿಯು ಹೆಚ್ಚಾಗಿರುವುದಕ್ಕೆ ಕಾರಣವೆಂದೂ, ಇದನ್ನು ತಡೆಗಟ್ಟಲು ಒಳ್ಳೆ ಆಹಾರ ಒದಗಿಸುವ ಬಗ್ಗೆ ಸಂಶೋಧನೆಯು ಅತ್ಯಗತ್ಯವೆಂದೂ ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ.

ಟಿಬೆಟ್ಟು ಭಾರತದೊಡನೆ ಸೇರುವುದೇ ?

ಚೀಣದ ರಾಷ್ಟ್ರೀಯ ಸರಕಾರದ ಸದ್ಯದ ದುಸ್ಥಿತಿಯನ್ನು ಕಂಡು, ಟಿಬೆಟ್ ದೇಶವು ತನ್ನ ಮೇಲೆ ಚೀಣವು ಇಟ್ಟುಕೊಂಡಿರುವ ನಾಮಮಾತ್ರದ ಮೇಲಧಿಕಾರವನ್ನು ತೊರೆದು ಭಾರತದೊಡನೆ ಸಂಬಂಧ ಬೆಳೆಸಲು ಪ್ರಯತ್ನಿಸುವುದೆಂದು ವಾಷಿಂಗ್‌ಟನ್ನಿನಲ್ಲಿರುವ ರಾಜ ತಾಂತ್ರಿಕ ವೀಕ್ಷಕರು ತಿಳಿಸಿದ್ದಾರೆ.

೧೫ ಸಾವಿರ ರೂ.ಗೆ ಗಡ್ಡದ ವಿಮೆ

ಬ್ರಿಟನ್ನಿನಲ್ಲಿ ಈಗ ಗಡ್ಡ ಬೆಳೆಸುವವರು ಹೆಚ್ಚಾಗಿದ್ದಾರೆಂದೂ, ಯುದ್ಧದಿಂದ ವಾಪಸಾದವರು ಈ ರೀತಿ ಮಾಡುತ್ತಿದ್ದಾರೆಂದೂ ಹೇಳಲಾಗಿದೆ. ಅಮೆರಿಕದ ನಟ ಮಾಂಟ ಉಲ್ಲಿರವರ ಗಡ್ಡವನ್ನು ೧೫ ಸಾವಿರ ರೂ. ಗೆ ವಿಮೆ ಮಾಡಲಾಗಿತ್ತೆಂದೂ ಆತನು ಹಾರ್ವರ್ಡ್ ವಿಶ್ವ ವಿದ್ಯಾನಿಲಯಕ್ಕೆ ಭೇಟಿ ಕೊಟ್ಟಾಗ, ಆತನ ಗಡ್ಡವು ಬೆಂಕಿ, ಗಾಳಿ ಮತ್ತು ಕಳುವುಗಳಿಂದ ನಾಶವಾಗದಂತೆ ಮೂರು ವಾರಗಳ ಕಾಲ ವಿಮೆ ಮಾಡಿ ಅದಕ್ಕಾಗಿ ವಿಶ್ವ ವಿದ್ಯಾನಿಲಯದವರು ೭೫ ರೂ. ಪ್ರೀಮಿಯಂ ಕೊಟ್ಟರೆಂದೂ ವರದಿಯಾಗಿದೆ.

ಮೂಳೆಗಳ ಬ್ಯಾಂಕು

ಲಂಡನ್ನಿನಲ್ಲಿ ಮೂಳೆಗಳ ಬ್ಯಾಂಕನ್ನು ಸ್ಥಾಪಿಸಲಾಗಿದೆ. ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ನಡೆಸಿದಾಗ ಅಲ್ಲಿ ಬಿಸಾಡುವ ಮೂಳೆಗಳನ್ನು ತಂಪಾಗಿರುವ ಈ ಬ್ಯಾಂಕುಗಳಲ್ಲಿ ಇಟ್ಟು, ಮುಂದೆ ಅವುಗಳನ್ನು ಉಪಯೋಗಿಸಲು ಅನುಕೂಲವಾಗುವುದೆಂದೂ, ೬ ತಿಂಗಳ ಕಾಲದವರೆಗೆ ಅವುಗಳನ್ನು ಇಟ್ಟಿರಬಹುದೆಂದೂ ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೩

ಇದೇ ೧೫ನೇ ತಾ॥ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ, ಟೌನ್ ಹಾಲ್ ಮೈದಾನದಲ್ಲಿ ಬೆಳಗ್ಗೆ ೯ ಗಂಟೆಗೆ ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ರಾಷ್ಟ್ರೀಯ ಧ್ವಜವನ್ನೂ, ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಮೈಸೂರು ಧ್ವಜವನ್ನೂ ಹಾರಿಸುವರು. ಸಂಜೆ ೭ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡಯುವುದು.

ಸ್ವಾತಂತ್ರ್ಯ ದಿನಾಚರಣೆಯಂದು ನಗರದ ವರ್ತಕರುಗಳು ತಮ್ಮ ಕೆಲಸಗಾರರಿಗೆ ರಜಾ ಕೊಟ್ಟು ಸಮಾರಂಭದಲ್ಲಿ ಭಾಗವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಟಿ ನರಸಿಂಹ ಅಯ್ಯಂಗಾರ್ಯರು ಪ್ರಾರ್ಥಿಸಿರುತ್ತಾರೆ.

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಶ್ರದ್ಧಾನಂದ ಸ್ವಾಮಿಗಳ ಬ್ರಹ್ಮಚಾರ್ಯಾಶ್ರಮದಲ್ಲಿ ಇದೇ ೧೫ ನೇ ತಾ॥ ಬೆಳಗ್ಗೆ ೭-೩೦ ಗಂಟೆಗೆ ಧ್ವಜಾರೋಹಣ, ಸಂಜೆ ೬ ಗಂಟೆಗೆ ಆ॥ ವಿ॥ ಹಾನಗಲ್ ಗಣೇಶ ಶಾಸ್ತ್ರಿಗಳಿಂದ ಅನಾಸಕ್ತ ಯೋಗ ಎಂಬ ವಿಷಯವಾಗಿ ಉಪನ್ಯಾಸ ಮತ್ತು ೭ ಗಂಟೆಗೆ ಆ॥ ಸಂಗೀತ ವಿದ್ವಾನ್ ಬಿ ವರದರಾಜ ಅಯ್ಯಂಗಾರ್ಯರ ಸಂಗೀತ. ೧೬ ನೇ ತಾ॥ ಸಂಜೆ ೫ ಗಂಟೆಗೆ ಕಾಂಗ್ರೆಸ್ ಉಪ ಸ್ಥಾಪಕ ಶ್ರೀ ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ.

ಜಗನ್ಮೋಹನ ಸೇವಾ ಸಮಾಜದಲ್ಲಿ ಬೆಳಗ್ಗೆ ೮ ಗಂಟೆಗೆ ಧ್ವಜಾರೋಹಣ, ಸಂಜೆ ೬ ಗಂಟೆಗೆ ಸಭೆ. ಶ್ರೀ ಎಂ ವಿ ಕೃಷ್ಣರಾಯರಿಂದ ಉಪನ್ಯಾಸ.

ಗೊಲ್ಲಗೇರಿಯಲ್ಲಿರುವ ಶ್ರೀ ರಾಮ ಸಮಾಜ ಸಂಘದಲ್ಲಿ ಬೆಳಗ್ಗೆ ೭-೩೦ ಗಂಟೆಗೆ ಶ್ರೀ ಎಂ ಎ. ಜೋಯಿಸ್‌ರವರಿಂದ ಧ್ವಜಾರೋಹಣ, ಸಂಜೆ ೬-೩೦ ಗಂಟೆಗೆ ಶ್ರೀ ಕೆ ಎಸ್ ಸತ್ಯನಾರಾಯಣ ರಾವ್ ರವರ ಅಧ್ಯಕ್ಷತೆಯಲ್ಲಿ ಸಭೆ.

ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವಾಸುದೇವಾಚಾರ್ಯ ಸಂಗೀತ ವಿದ್ಯಾ ಮಂದಿರದಲ್ಲಿ ಸಂಜೆ ೬-೩೦ ಗಂಟೆಗೆ ಶ್ರೀ ಎ [illegible] ಮೂರ್ತಿಯವರ ಅಧ್ಯಕ್ಷತೆಯಲ್ಲಿ [illegible] ರಂಭ.

ಮದರಾಸ್ ಸಚಿವರಿಗೆ ಕಮ್ಯೂನಿಸ್ಟರಿಂದ ಮರಣ ದಂಡನೆ ಶಿಕ್ಷೆ

ಮದರಾಸಿನ ಸಚಿವರಾದ ಶ್ರೀ ಕೆ ಮಾಧವ ಮೆನನ್‌ರವರಿಗೆ "ಮರಣ ದಂಡನೆಯನ್ನು ವೆಲ್ಲೂರು ಜೈಲಿನಲ್ಲಿರುವ ಕಮ್ಯೂನಿಸ್ಟರ ಪ್ರಜಾ ಕೋರ್ಟು ವಿಧಿಸಿದೆಯೆಂದು" ತಿಳಿಸಿರುವ ಅನಾಮಧೇಯ ಪತ್ರವೊಂದು ಅವರಿಗೆ ತಲುಪಿದೆಯೆಂದೂ ಇಂತಹ ಭಯೋತ್ಪಾದಕ ಪತ್ರಗಳು ಇತರ ಸಚಿವ ಮತ್ತು ಅಧಿಕಾರಿಗಳಿಗೂ ಬಂದಿವೆಯೆಂದೂ, ಅವರು ತಿಳಿಸಿರುತ್ತಾರೆ.

ಯಕ್ಷಗಾನ

ಕೋಟೆ ಆಂಜನೇಯ ದೇವಾಲಯ [illegible] ಬೀದಿಯಲ್ಲಿರುವ ಅನಂತಪ್ಪನವರ ಮನೆ ಮುಂಭಾಗದಲ್ಲಿರುವ ಚಪ್ಪರದಲ್ಲಿ ಈ ರಾತ್ರಿ ೯ಕ್ಕೆ ಶ್ರಾವಣ ಶನಿವಾರದ ಪ್ರಯುಕ್ತ ಶ್ರೀ ಚಾಮುಂಡೇಶ್ವರೀ ಪ್ರಸನ್ನ ಯಕ್ಷಗಾನ [illegible] ಮಂಡಲಿಯವರಿಂದ "[illegible] ಸುದನ್ವ" ಎಂಬ ಪ್ರಸಂಗವು ನಡೆಯುತ್ತೆ.

ಕನ್ನಡಕ ಸಿಕ್ಕಿದೆ

ಲಕ್ಷ್ಮೀಪುರಂ ಕನ್ನಡ ಬಾಲಕರ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಕನ್ನಡಕವೊಂದು ಸಿಕ್ಕಿದೆ. ವಾರೀಸುದಾರರು ಸರಿಯಾದ ರುಜುವಾತು ಕೊಟ್ಟು ಅದನ್ನು ಅವರಿಂದ ಪಡೆಯಬಹುದೆಂದು ತಿಳಿಸಲಾಗಿದೆ.

ವಾಣೀ ವಿಲಾಸ ಮೊಹಲ್ಲಾದಲ್ಲಿರುವ ಜೈ ಹಿಂದ್ ತರುಣ ವಿದ್ಯಾರ್ಥಿ ಸಂಘದಲ್ಲೂ ದಿನಾಚರಣೆಯು ಜರುಗುವುದು.

ವಿದ್ಯಾರ್ಥಿ ಕಾಂಗ್ರೆಸ್ಸಿನವರಿಂದ ಬೆಳಗ್ಗೆ ೬-೩೦ರಿಂದ ೭-೩೦ ಗಂಟೆವರೆಗೆ ಮಹಾರಾಜಾ ಕಾಲೇಜಿನ ಮುಂಭಾಗದಲ್ಲಿ ಪ್ರಭಾತ ಫೇರಿ ೭-೩೦ ಗಂಟೆಗೆ [illegible] ಯನ ಕೆರೆಯಲ್ಲಿ ಧ್ವಜ ವಂದನೆ.

ಇಟ್ಟಿಗೆಗೂಡಿನಲ್ಲಿರುವ ಕಸ್ತೂರಿ ಬಾ ಸಮಾಜದಲ್ಲಿ ಬೆಳಗ್ಗೆ ೬ ಗಂಟೆಗೆ ಧ್ವಜಾರೋಹಣ, ಸಂಜೆ ೫ ಗಂಟೆಗೆ ಶ್ರೀಮತಿ ಎ ವಿ [illegible]ರವರ ಅಧ್ಯಕ್ಷತೆಯಲ್ಲಿ ಸಭೆ.

ಇಟ್ಟಿಗೆಗೂಡಿನಲ್ಲಿರುವ [illegible] ಸಂಘದಲ್ಲಿ ಬೆಳಗ್ಗೆ [illegible] ಗಂಟೆಗೆ ಧ್ವಜಾರೋಹಣ, ಮಧ್ಯಾಹ್ನ ೩ ಗಂಟೆಗೆ ಸ್ಪರ್ಧೆ [illegible] ಗಂಟೆ [illegible] ಯವರ ಅಧ್ಯಕ್ಷತೆಯಲ್ಲಿ ಸಭೆ.

ಮಾದರಿ ರಾಜ್ಯಾಂಗದ ಪರಿಶೀಲನೆಗೆ ಅವಕಾಶ ಕೊಡಬೇಕು

ಕೇಂದ್ರ ಸಭೆಯನ್ನು ಪ್ರಾರ್ಥಿಸಲು ನಿರ್ಣಯ

ಸ್ಪೆಷಲ್ ಫೋನ್] ಬೆಂಗಳೂರು ೧೩

ಸಂಸ್ಥಾನಗಳ ಮಾದರಿ ರಾಜ್ಯಾಂಗವನ್ನು ಭಾರತದ ರಾಜ್ಯಾಂಗ ಸಭೆಯು ಅನುಮೋದಿಸುವುದಕ್ಕೆ ಮುಂಚೆ ಸಂಸ್ಥಾನದ ರಾಜ್ಯಾಂಗ ಸಭೆಯವರು ಅದನ್ನು ಪರಿಶೀಲಿಸಲು ಅವಕಾಶ ಕೊಡಬೇಕೆಂದು ಸಂಸ್ಥಾನಗಳ ಖಾತೆ ಮತ್ತು ರಾಜ್ಯಾಂಗ ಸಭೆಯ ಅಧ್ಯಕ್ಷರನ್ನು ಪ್ರಾರ್ಥಿಸುವ ಶ್ರೀ ವೀರಣ್ಣ ಗೌಡರ ನಿರ್ಣಯವು ನಿನ್ನೆ ದಿನ ರಾಜ್ಯಾಂಗ ಸಭೆಯಲ್ಲಿ ಅಂಗೀಕೃತವಾಯಿತು.

ರಾಜ್ಯಾಂಗ ಸಭೆಯ ಕಾರ್ಯ ಕಲಾಪಗಳನ್ನು ನಿಲ್ಲಿಸಬೇಕೆಂಬ ಜನಾಬ್ ಅಬ್ದುಲ್ ರಹಿಮಾನ್‌ರವರ ತಿದ್ದುಪಡಿಯು ಬಿದ್ದು ಹೋಯಿತು.

ರಾಜ್ಯಾಂಗವನ್ನು ನಾವೇ ರಚಿಸಲು ನಮಗೆ ಅವಕಾಶವಿರಬೇಕೆಂಬ ತಿದ್ದುಪಡಿಯನ್ನು ಶ್ರೀ ಹೆಚ್ ಬಿ ಗುಂಡಪ್ಪಗೌಡರು ವಾಪಸ ತೆಗೆದುಕೊಂಡರು.

ಚರ್ಚೆಗೆ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು, ಸಂಸ್ಥಾನದ ಆಡಳಿತದಲ್ಲಿ ಮತ್ತು ರಾಜ್ಯಾಂಗ ರಚನೆಯಲ್ಲಿ ಕೇಂದ್ರ ಸರ್ಕಾರದವರು ಕೈ ಹಾಕುತ್ತಿದ್ದಾರೆಂದೂ ಮತ್ತು ಒತ್ತಾಯ ಪಡಿಸುತ್ತಿದ್ದಾರೆಂದೂ ಹೇಳುವುದು ನಿಜವಲ್ಲವೆಂದೂ, ಕೇಂದ್ರದಿಂದ ಇಲ್ಲಿಯವರೆಗೆ ಯಾವ ಒತ್ತಾಯವೂ ಬಂದಿಲ್ಲವೆಂದೂ, ಮಹಾರಾಜರವರ ಸ್ಥಾನಕ್ಕೆ ಯಾವ ಚ್ಯುತಿಯುಂಟಾಗುವುದಿಲ್ಲವೆಂದೂ ತಿಳಿಸಿದರು. ರಾಜ್ಯಾಂಗ ರಚನೆಯ ವಿಚಾರದಲ್ಲಿ ಮೈಸೂರಿನವರಿಗೆ ಅಧಿಕಾರವಿದ್ದೇ ಇರುವುದೆಂದೂ ಹೇಳಿದರು.

ಮೈಸೂರು ಸಂಸ್ಥಾನವು ಭಾರತದಲ್ಲಿ ಐಕ್ಯವಾಗಬೇಕೆಂದೂ, ಮತ್ತು ಈಗಿನ ಶಾಸನ ಸಭೆಗಳನ್ನು ರದ್ದು ಮಾಡಿ, ರಾಜ್ಯಾಂಗ ಸಭೆಯೇ ಆ ಕೆಲಸ ಕಾರ್ಯಗಳನ್ನು ನಡಸುವಂತೆ ಶ್ರೀಮನ್ಮಹಾರಾಜರವರು ಘೋಷಣೆ ಹೊರಡಿಸಬೇಕೆಂದೂ ಕೋರುವ ಜನಾಬ್ ವಲಿಯುಲ್ಲಾರವರ ೨ ನಿರ್ಣಯಗಳ ಪರಿಶೀಲನೆಯನ್ನು ಮುಂದಕ್ಕೆ ಹಾಕಲಾಯಿತು.

ಸಭೆಯ ಕಾರ್ಯ ಕಲಾಪಗಳು ಇಲ್ಲಿಗೆ ಮುಕ್ತಾಯವಾದುವು.

ವಯಸ್ಕರ ಶಿಕ್ಷಣಕ್ಕಾಗಿ ಬಹುಮಾನ

ರಾಜಧಾನಿಯ ಅಧಿಕರ್ನಾಟಕ ಪುರದಲ್ಲಿ ೧೯೪೮-೪೯ ನೇ ವರ್ಷದಲ್ಲಿ ಹೆಚ್ಚು ಜನರನ್ನು ಅಕ್ಷರಸ್ಥರನ್ನಾಗಿ ಮಾಡುವವರಿಗೆ ೨೫ ರೂ ಬೆಲೆ ಬಾಳುವ ಒಂದು ಬೆಳ್ಳಿಯ ಬಟ್ಟಲಿನ ಪಾರಿತೋಷಕವನ್ನು ಕೊಡಲು ಸಮಾಜ ಸೇವಾ ಸಂಘ ಸದಸ್ಯರಾದ ಶ್ರೀ ಬಿ ಎಲ್. ಮರಿಮಾದಯ್ಯನವರು ಒಪ್ಪಿರುತ್ತಾರೆ. ಜಲಪುರಿಯ ಅಧಿಕರ್ನಾಟಕ ಸಂಘದವರು ಕೂಡ ಇದಕ್ಕಾಗಿ ಬೆಳ್ಳಿ ಬಟ್ಟಲು ಒಂದನ್ನು ಕೊಡುತ್ತಾರೆ.

[illegible] ಶಾರದಾ ಸಂಘ

ಮೈಸೂರು [illegible] ರಸ್ತೆಯಲ್ಲಿರುವ ಶ್ರೀ ಶಾರದಾ ನಿಕೇತನ ವಿದ್ಯಾರ್ಥಿನಿಯರಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ [illegible] ಶಾರದಾ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯು ನಡೆಯುವುದು.

ಕಾಶ್ಮೀರವನ್ನು ಪಡೆಯಲು ಪಾಕೀಸ್ತಾನಕ್ಕೆ ರಷ್ಯದ ಬೆಂಬಲವೇ ?

ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪಾಕೀಸ್ತಾನವು ಸಪ ಪ್ರಯತ್ನ ನಡೆಸುತ್ತಿದೆಯೆಂದು ಈ ವಿಚಾರದಲ್ಲಿ ರಷ್ಯದ ಬೆಂಬಲವನ್ನು ಪಡೆಯಲು ಅಲ್ಲಿಗೆ ಭೇಟಿ ಕೊಡಲಿರುವ ಪಾಕೀಸ್ತಾನದ ಪ್ರಧಾನಿ ಲಿಯಾಖತ್ ಅಲಿ ಖಾನರವರು ಮಾತು ಕತೆ ನಡೆಸ ವರೆ ದೂ ಗೊತ್ತಾಗಿದೆ ರಷ್ಯದಲ್ಲಿ ಪಾಕೀಸ್ತಾನದ ರಾಯಭಾರಿಯನ್ನು ನೇಮಿಸಲಾಗುವುದ ದೂ, ಪಾಕೀಸ್ತಾನಕ್ಕೆ ಸ್ಟಾಲಿನ್ನರ ಆಹ್ವಾನವು ರಾಜಕೀಯ ಆವರಣಗಳಲ್ಲಿ ಗಾಬರಿಯನ್ನುಂಟು ಮಾಡಿದೆಯೆಂದೂ ಹೇಳಲಾಗಿದೆ

ಉಪವಾಸ ಮಾಡುವ ಸನ್ಯಾಸಿನಿ ಭೇಟಿಗೆ ನೆಹರೂ

ನಾಡಿನ ಹೆಸರನ್ನು 'ಭಾರತ' ವೆಂದು ಕರೆಯಬೇಕೆ ದೂ ಲಿಪಿ ಯು ನಾಗರಿ ಭಾಷೆಯಲ್ಲಿಯೇ ಇರಬೇಕೆಂದೂ ತಿಳಿಸಿ ದೆಹಲಿಯಲ್ಲಿ ಉಪವಾಸವನ್ನು ಮಾಡುತ್ತಿರುವ ಶಾರದಾ ಮಾತಾ ಎಂಬ ಸನ್ಯಾಸಿನಿ ಮನೆಗೆ ಭಾರತದ ಪ್ರಧಾನಿ ನೆಹರೂರವರು ಮೊನ್ನೆ ಭೇಟಿಯಿತ್ತಿದ್ದರು

ಯಹೂದ್ಯರಿಗೂ ಪೋಲೀಸರಿಗೂ ಹೊಡೆದಾಟ

ನ್ಯೂಯಾರ್ಕಿನ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವೊಂದನ್ನು ಪ್ರತಿಭಟಿಸಲು ಮೆರವಣಿಗೆ ಹೊರಟಿದ್ದ ಸಾವಿರ ಯಹೂದ್ಯರಿಗೂ ಪೋಲೀಸರಿಗೂ ಕಳೆದ ಬುಧವಾರ ಹೊಡೆದಾಟವಾಗಿ ಉಭಯರಿಗೂ ತೀವ್ರ ಗಾಯಗಳಾದವು ಪೋಲೀಸರ ಕಾರುಗಳು ನಷ್ಟವಾದವು

ಹರಿಕಥೆ

ಮೈಸೂರು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಉಪಹಾರಮಂದಿರದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ಈ ದಿವಸ ರಾತ್ರಿ ೭ ಘಂಟೆಗೆ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಸೇತು ಮಾಧವ ದಾಸರಿಂದ ಭಕ್ತ ಪುರಂದರ ದಾಸ ಎಂಬ ಹರಿಕಥೆಯು ನಡೆಯುವುದು

ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರಿಂದ ... ಅಂಬಳ ... ಸಂಪಾದಿಸಲ್ಪಟ್ಟ ...

ಸಂತಾನ ಸಿಂಧೂರ

ಒಡಿಸ್ಸ ಸ ಬಾಧೆಯ ಹೊಟ್ಟೆ ನೋವು ಉಬ್ಬು ಮಕ್ಕಳಿಲ್ಲ ಬಂಧನರಿಗೆ ... ಔಷಧ

ಮಹಿಳೆಯರು ಮಾತ್ರ ಪ್ರತಿ ಭಾನುವಾರ ಬೆಳಗ್ಗೆ ... ಘಂಟೆಯಿಂದ ಸಾಯಂಕಾಲ ೪ ಘಂಟೆವರೆಗೆ ಈ ಕೆಳಗಿನ ವಿಳಾಸದಲ್ಲಿ ಮಹಿಳೆಯರಿಂದಲೇ ... ಬಹುದು

... ಮೈಸೂರು

... ತಿಪಟೂರು ...

... ರಾಮಸ್ವಾಮಿ ...

ಚೀಣಾಕ್ಕೆ ಕಳ್ಳತನದಲ್ಲಿ ಭಾರತದ ಅಕ್ಕಿ ರವಾನೆ

ಚೀಣಾ ಮತ್ತು ಪಾಕಿಸ್ತಾನಗಳಿಗೆ ಕಳ್ಳತನದಿಂದ ನೂರು ಮಣಕ್ಕಿಂತಲೂ ಹೆಚ್ಚಾಗಿ ಬತ್ತ ಮತ್ತು ಅಕ್ಕಿಯನ್ನು ಸುಳ್ಳು ರಹದಾರಿಗಳ ಮೂಲಕ ರವಾನಿಸಲು ಪ್ರಯತ್ನಿಸುತ್ತಿದ್ದ ಆರು ಜನರ ಮೇಲೆ ಅಸ್ಸಾಮಿನ ಪೋಲೀಸರು ಮೊಕದ್ದಮೆ ಹೂಡಿದ್ದಾರೆ ಇವರುಗಳು ಬ್ರಹ್ಮಪುತ್ರ ನದಿಯಲ್ಲಿ ರಾತ್ರಿ ಹೊತ್ತು ದೋಣಿಗಳ ಮೂಲಕ ಧಾನ್ಯವನ್ನು ಸಾಗಿಸುತ್ತಿದ್ದರೆಂದು ಹೇಳಲಾಗಿದೆ

ನೀರು ಯಾಚಿಸಿ ಒಡವೆ ದೋಚಿದರು

ಬೊಂಬಾಯಿನ ಗೋರೆಗಾಂವ್ ಎಂಬಲ್ಲಿರುವ ವಿದ್ಯುಚ್ಛಕ್ತಿ ಇಂಜನಿಯರಾದ ಶ್ರೀ ಬಿ ಕೆ ಜೆ ಅಯ್ಯಂಗಾರ್‌ರವರ ಮನೆಗೆ ಮೊನ್ನೆ ದಿನ ಮೂವರು ತಮಿಳು ಭಾಷೆ ಮಾತನಾಡುವ ತರುಣರು ಬಂದು, ದಾಹವನ್ನಡಗಿಸಲು ಅವರ ಪತ್ನಿಯವರನ್ನು ನೀರು ಕೇಳಿ ಆಕೆಯ ಬಾಯಿಗ ಬಟ್ಟೆ ತುರುಕಿ ೧೨ ಸಾವಿರ ರೂ ಗಳ ಆಭರಣ ಮತ್ತು ಹಣವನ್ನು ದೋಚಿಕೊಂಡು ಹೋದರೆಂದು ವರದಿಯಾಗಿದೆ

ಸಾಧು ವೇಷದಲ್ಲಿ ಕಮ್ಯೂನಿಸ್ಟರು

ಸಾಧುಗಳ ವೇಷವನ್ನು ಧರಿಸಿ ಕಮ್ಯೂನಿಸ್ಟರು ತಮ್ಮ ಚಟುವಟಿಕೆಯನ್ನು ನಡೆಸುತ್ತಿದ್ದಾರೆಂದು ಅಸ್ಸಾಮಿನಿಂದ ವರದಿ ಬಂದಿದೆ ಇಂತಹ ಕಮ್ಯೂನಿಸ್ಟ ಮುಖಂಡರೊಬ್ಬರನ್ನು ಪೋಲೀಸರು ಹಿಡಿದು ಬಂಧಿಸಿದಾಗ ಆತನ ಹತ್ತಿರ ಹಿಂಸಾತ್ಮಕ ಹಸ್ತಪತ್ರಿಕೆಗಳು ದೊರತವೆಂದು ವರದಿಯಾಗಿದೆ

ದಿ ಸೌತ್ ಇಂಡಿಯಾ ಎಲೆಕ್ಟ್ರಿಕ್ ಕಂಪೆನಿ

ನಂ ೧೦ ಇರ್ವಿನ್ ರೋಡ್

ಶಿವರಾಂಪೇಟೆ, ಮೈಸೂರು

ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳು ಚಿಲ್ಲರೆಯಾಗಿಯೂ ಮತ್ತು ಹೋಲ್‌ಸೇಲ್‌ನಲ್ಲೂ ಕಮ್ಮಿದರದಲ್ಲಿ ಸಿಕ್ಕುತ್ತವೆ ಒಂದಾವರ್ತಿ ಪರೀಕ್ಷಿಸಿರಿ

ಎಂ ಬಸಪ್ಪ

ಪ್ರೊಪ್ರೈಟರ್

ಹೊಲವೇ ರೈತರ ಮಕ್ಕಳಿಗೆ ನಿಜವಾದ ಶಾಲೆ

ಭಾರತದಲ್ಲಿ ಮಧ್ಯಮ ವರ್ಗದ ಜನರ ಕಷ್ಟ ನಿಷ್ಟೂರಗಳು ಹೆಚ್ಚಿ, ಅವರಲ್ಲಿ ನಿರುದ್ಯೋಗವು ವಿಶೇಷವಾಗಿದೆಯೆಂದೂ ಅದನ್ನು ತಡೆಗಟ್ಟಲು ಅವರು ಕಾರ್ಮಿಕ ವರ್ಗಗಳಂತೆ ಇತರ ವೃತ್ತಿಗಳನ್ನು ಅವಲಂಬಿಸಬೇಕೆಂದೂ ಗೌರ್ನರ್ ಜನರಲ್ ಶ್ರೀ ರಾಜಾಜಿಯವರು ತಿಳಿಸಿರುತ್ತಾರೆ ಈಗಿನ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸದಿಂದ ಮುಂದೆ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನವಾಗಲಾರದೆಂದೂ, ಆದುದರಿಂದ ಮಕ್ಕಳನ್ನು ವಾರದಲ್ಲಿ ೩ ದಿನಗಳು ಮಾತ್ರ ಶಾಲೆಗೆ ಕಳುಹಿಸಿ ಮಿಕ್ಕ ದಿನಗಳಲ್ಲಿ ಅವರಿಗೆ ಕುಟುಂಬ ವೃತ್ತಿಗಳನ್ನು ಕಲಿಸಬೇಕೆಂದೂ ದೇಶದಲ್ಲಿ ವೃತ್ತಿ ವಿದ್ಯೆಯನ್ನು ಕಲಿಸತಕ್ಕ ಶಾಲೆಗಳು ವಿಶೇಷವಾಗಿಲ್ಲವಾದುದರಿಂದ, ರೈತರ ಮಕ್ಕಳಿಗೆ ಹೊಲವೇ ಸರಿಯಾದ ಶಿಕ್ಷಣ ಶಾಲೆಯೆಂದೂ ಅವರ ಹೇಳಿರುತ್ತಾರೆ

ಗರೀಬರಿಗೆ ಉಚಿತವೇ !

ನಾಯಿಕೆಮ್ಮು, ಲಿವರ್ ಅಂಡ್ ಸ್ಪ್ಲೀನ್, ಟಾನ್ಸಿಲ್, ಪರಿಣಾಮ ಶೂಲೆ, ಮೂಲವ್ಯಾಧಿ ಮತ್ತು ವ್ರಣಗಳಿಗೆ ಖಾತರಿಯಾದ ಶೀಘ್ರ ಗುಣಕಾರಿ ಚಿಕಿತ್ಸೆ

ಎ ಸ್. ಶಾಮಣ್ಣ

ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆ

೨೩೦ ಚಾಮುಂಡೇಶ್ವರೀ ರೋಡ್

ಚಾಮುಂಡಿಪುರಂ, ಮೈಸೂರು

ರಾಜಕಮಲ್, ಮೈಸೂರು

6–8–49ರಿಂದ

ದಿನವಹಿ ೩ ಪ್ರದರ್ಶನ

ಮೆಹಬೂಬ್‌ರವರ ಹಿಂದಿ ಚಿತ್ರ

ಅನೋಖಿ ಅದ

MORNING SHOWS
From 12 8 49 for 3 days

LADY from SHANGHAI

With Rita Hayworth & Orson Wells

14-8-49ನೇ ಭಾನುವಾರ

ಮೈಸೂರು ದೊಡ್ಡಕೆರೆ ಮೈದಾನದಲ್ಲಿ

ಅಮೋಘವಾದ ೯ ಜೊತೆ ಭಾರಿಕುಸ್ತಿಗಳು

ಪೈಲ್ವಾನ್ ಸಣ್ಣ ಬೋರ	ಪೈಲ್ವಾನ್ ರಾಮು
ಪೈ ... ರಾಮು	ಪೈ ... ಸಿಂಗ್
ಪೈ ಒಡ್ಡ	ಪೈ ಕೃಷ್ಣಜಿ
ಪೈ ...	ಪೈ ...(ನೋನನಗೂಡ)
ಪೈ ...	ಪೈ ಮಾಯಪ್ಪ
ಪೈ ...	ಪೈ ಕರಿಯಪ್ಪ

ಭಾರತದಲ್ಲಿ ಹಡಗುಗಳ ತಯಾರಿಕೆ

ಭಾರತದಲ್ಲಿ ಹಡಗುಗಳನ್ನು ನಿರ್ಮಿಸುವ ಕೈಗಾರಿಕೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದಾಗಿಯೂ ಈಗ ವಿಶಾಖ ಪಟ್ಟಣದಲ್ಲಿ ಸಿಂಧ್ಯ ಕಂಪೆನಿಯವರಿಂದ ನಡೆಸುತ್ತಿರುವ ಕಾರ್ಯವನ್ನು ಸರ್ಕಾರದವರೇ ವಹಿಸಿಕೊಳ್ಳುವರೆಂದು ತಿಳಿದುಬಂದಿದೆ ನೌಕಾ ಪಡೆಗಳಿಗೆ ಬೇಕಾದ ಸಲಕರಣೆಗಳನ್ನೆಲ್ಲವನ್ನೂ ಭಾರತದಲ್ಲೇ ತಯಾರಿಸಲು ವ್ಯವಸ್ಥೆ ಮಾಡಲಾಗುವುದೆಂದೂ, ಗೊತ್ತಾಗಿದೆ

ಬ್ರಿಟಿಷ್ ಗಯಾನಾದಲ್ಲಿ ಮಹಾತ್ಮರ ಪ್ರತಿಮೆ

ಬ್ರಿಟಿಷ್ ಗಯಾನಾದಲ್ಲಿ ಮಹಾತ್ಮರ ಪ್ರತಿಮೆಯನ್ನು ಅಲ್ಲಿನ ಕ್ರಿಕೆಟ್ ಕ್ಲಬ್ಬಿನಲ್ಲಿ ಸ್ಥಾಪಿಸಲಾಗಿದೆ ೧ ಲಕ್ಷ ಡಾಲರು ಸ್ಮಾರಕ ನಿಧಿಯನ್ನು ಏರ್ಪಡಿಸಲಾಗಿದೆ

— ಲಕ್ಷ್ಮಿ —

14-8-49ನೇ ಭಾನುವಾರದಿಂದ

ದಿನವಹಿ ೩ ಪ್ರದರ್ಶನ

ಮ್ಯಾಟಿನಿ ಮಧ್ಯಾಹ್ನ ೩ ಘಂಟೆಗೆ

ಶ್ರೀ ಕನ್ನಾ ಫಿಲಂಸ್‌ರವರ ಸುಮಧುರ ಸಂಗೀತಮಯ ಭಕ್ತಿ ರಸ ತಮಿಳು ಚಿತ್ರ

ತಿರುಮಜಿಸೈ ಆಳ್ವಾರ್

ಪಾತ್ರ - ಇಸೈ ಅರಸು ದಂಡಪಾಣಿ ದೇಸಿಕರ್, ಶಿವ ಭಾಗ್ಯಂ, ಪ್ರೇಮಾವತಿ

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

Edited, printed and published by A R Nagaraja at Sadhvi Press D Subbiah Road, Mysore

ಫೋ॥ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೧೪-೮-೧೯೪೯ [ಸಂಚಿಕೆ ೪

ಸರ್ದಾರ್ ಪಟೇಲರ ಆರೋಗ್ಯಕ್ಕಾಗಿ ಯಜ್ಞ

ಗೃಹ ಸಚಿವರ ಬಳಿ ಟ್ರಾನ್ಸ್‌ಪೋರ್ಟ್ ಕೆಲಸಗಾರರ ನಿಯೋಗ

ಮೈಸೂರು ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಂಘದ ಅಧಿಕಾರಿಗಳಾದ ಶ್ರೀಗಳು ಸಿ ಹನುಮಂತಯ್ಯ, ರಂಗಸ್ವಾಮಿ, ನಂಜುಂಡಯ್ಯ, ಕೆಟ್ಟಪ್ಪ, ಇನ್ನೂ ಮುಂತಾದವರು ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಸಿ ಜೆ. ದೇವನಾಥ್, ಕಾರ್ಯದರ್ಶಿ ಟಿ.ಎಸ್ ಸುಬ್ಬಣ್ಣ ಇವರ ಮುಂದಾಳುತನದಲ್ಲಿ ಗೃಹ ಸಚಿವರ ಬಳಿ ನಿಯೋಗ ಹೋಗಿ ಹೆಚ್ಚಿಗೆಸಂಬಳ, ವಿಚಾರಣೆ ಇಲ್ಲದೆ ಕೆಲಸದಿಂದ ತೆಗೆಯುವುದು, ಟೈರು ಸವೆದು ಹೋಯಿತೆಂದೂ ಜುಲ್ಮಾನೆ ಹಾಕುವುದು, ಕರ್ಟ್ ಪ್ಯಾಸೆಂಜರ್ಸ್ ಬುಕ್ ಮಾಡುವ ವಿಚಾರ, ಪ್ರಯಾಣಿಕರು ಯಾರಾದರೂ ಜನರಲ್ ಮ್ಯಾನೇಜರಿಗೆ ಪತ್ರ ಬರೆದರೆ ಅದರ ಮೇಲೆ ವಿಚಾರಣೆ ಇಲ್ಲದೆ ಕೆಲಸಗಾರರನ್ನು ವಜಾ ಮಾಡುವುದು, ವರ್ಕ್ಸ್ ಮ್ಯಾನೇಜರ್‌ರವರು ಕೆಲಸಗಾರರನ್ನು ವಜಾ ಮಾಡುವುದು, ವರ್ಕ್ಸ್ ಮ್ಯಾನೇಜರ್‌ರವರು ಕೆಲಸಗಾರರನ್ನು ಬೈದು ಜುಲ್ಮಾನೆ ಹಾಕುವುದು, ಇವೇ ಮುಂತಾದ ವಿಚಾರಗಳನ್ನು ಅರಿಕೆ ಮಾಡಿಕೊಂಡರು ಸಚಿವರು ಸಾವಧಾನದಿಂದ ಎಲ್ಲವನ್ನೂ ಕೇಳಿ ವಿಚಾರ ಮಾಡುವುದಾಗಿ ಹೇಳಿ ಕೆಲಸಗಾರರು ಮಾತ್ರ ನಿಷ್ಪೃಹತೆಯಿಂದ ಇದ್ದು ಕೆಲಸ ಮಾಡಬೇಕೆಂದು ಹೇಳಿದರು ಕೆಲಸಗಾರರಿಗೆ ಹೆಚ್ಚಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡುವುದಾಗಿ ಭರವಸೆ ಇತ್ತರು

೯೬.೮ ಲಕ್ಷ ರೂ. ಆಹಾರ ಯೋಜನೆ

ಬಂಜರಾಗಿರುವ ೧೭ ಲಕ್ಷ ಎಕರೆ ಜಮೀನುಗಳನ್ನು ಶೀಘ್ರದಲ್ಲಿಯೇ ಸಾಗುವಳಿಗೆ ತರುವ ಯೋಜನೆಯನ್ನು ಮೈಸೂರು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ ಉತ್ತಮ ರೀತಿಯ ಭತ್ತ ಮತ್ತು ಗೊಬ್ಬರವನ್ನು ೬ ಲಕ್ಷ ಎಕರೆ ಜಮೀನಿನಲ್ಲಿ ಉಪಯೋಗಿಸಿ. ಅದರಿಂದ ೭೫ ಸಾವಿರ ಟನ್ನಿನಷ್ಟು ಭತ್ತವನ್ನು ಬೆಳೆಯಲಾಗುವುದು. ೫೦ ಸಾವಿರ ಎಕರೆಯಷ್ಟು ಜಮೀನಿನ ಈಗ ಇರುವ ಉಚಲು ಮರಗಳನ್ನು ತೆಗೆದು ಬೇಸಾಯಕ್ಕೆ ಉಪಯೋಗಿಸಲಾಗುವುದು ೧೯೫೧ರ ವೇಳೆಗೆ ಒಟ್ಟು ೪॥ ಲಕ್ಷ ಎಕರೆ ಜಮೀನನ್ನು ಸಾಗುವಳಿಗೆ ತರಲಾಗುವುದು ಒಟ್ಟು ಖರ್ಚಾಗುವ ೯೬.೮೦ ಲಕ್ಷ ರೂ ಗಳನ್ನು ರೈತರಿಗೆ ಸಾಲವಾಗಿಯೂ, ಗ್ರಾಂಟುಗಳಾಗಿಯೂ ವಿನಿಯೋಗಿಸುವುದಲ್ಲದೆ, ಉತ್ತಮ ಬೀಜ, ಗೊಬ್ಬರ, ಪಂಪು ಮತ್ತು ಕೆರೆಗಳ ದುರಸ್ತಿಗಾಗಿ ಉಪಯೋಗಿಸಲಾಗುವುದು ಈ ವೆಚ್ಚದ ಪೈಕಿ ಅರ್ಧ ಭಾಗವನ್ನಾದರೂ ಭಾರತ ಸರ್ಕಾರದಿಂದ ಪಡೆಯುವ ನಿರೀಕ್ಷಣೆ ಇದೆ

ಪಟೇಲರ ಆರೋಗ್ಯಕ್ಕಾಗಿ ಯಜ್ಞ

ಸರ್ದಾರ್ ಪಟೇಲರ ದೇಹಾಲಸ್ಯವು ನಿವಾರಣೆಯಾಗಿ ಅವರಿಗೆ ಸಂಪೂರ್ಣ ಆರೋಗ್ಯವುಂಟಾಗುವುದಕ್ಕಾಗಿ ದೆಹಲಿಯಲ್ಲಿ ಶ್ರೀ ಬಿರ್ಲಾರವರ ಶ್ರೀ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಹನ್ನೊಂದು ದಿನಗಳ ಮಹಾ ಯಜ್ಞವನ್ನು ನಡೆಸಲಾಗುತ್ತದೆ.

ದೇಶಕ್ಕೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ದೊರಕಬೇಕು

ಸ್ವಾತಂತ್ರ್ಯ ದಿನಾಚರಣೆಗೆ ಮೈ॥ ಕಾಂ॥ ಅಧ್ಯಕ್ಷರ ಸಂದೇಶ

ಆಗಸ್ಟ್ 15 ಚರಿತ್ರಾರ್ಹವಾದ ದಿನ. ಭಾರತವು ಸ್ವತಂತ್ರ ರಾಷ್ಟ್ರವಾಗಿ ಎರಡು ವರ್ಷವಾಯಿತು ಸ್ವಾತಂತ್ರ್ಯ ದಿನವನ್ನು ನಾಡಹಬ್ಬವನ್ನಾಗಿ ಆಚರಿಸುವ ಸಂಪ್ರದಾಯವು ರೂಢಿಗೆ ಬಂದಿರುತ್ತದೆ ಜನಂಗೆ ರಾಜಕೀಯ ಸ್ವಾತಂತ್ರ್ಯವು ಬಂದಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ದೊರಕಬೇಕಾಗಿರುತ್ತದೆ ಈ ಮಹಾ ಕಾರ್ಯವನ್ನು ಸಫಲಗೊಳಿಸಲು ಪ್ರತಿಯೊಬ್ಬ ಪ್ರಜೆಯೂ ದುಡಿಯಬೇಕಾಗಿದೆ

ದೇಶದಲ್ಲಿ ತಲೆದೋರಿರುವ ಆಹಾರ ಸಮಸ್ಯೆಯನ್ನು ಬಿಡಿಸಲು ಸರ್ವರೂ ಪ್ರಯತ್ನಿಸಬೇಕಾಗಿದೆ ಹೆಚ್ಚು ಆಹಾರ ಬೆಳೆ ಮತ್ತು ವೃಕ್ಷ ಸಂಪತ್ತನ್ನು ಹೆಚ್ಚಿಸುವ ಕಡೆ ದೇಶದ ಗಮನವನ್ನು ಸೆಳೆಯಬೇಕು

ಈ ಸ್ವಾತಂತ್ರ್ಯೋತ್ಸವದ ದಿನ ಮೇಲ್ಕಂಡ ಕಾರ್ಯಗಳಲ್ಲಿ ಮಹಾಜನರು ಉದ್ಯುಕ್ತರಾಗಬೇಕು ಮತ್ತು ಯಾವ ಆಡಂಬರವೂ ಇಲ್ಲದೆ ದಿನಾಚರಣೆಯನ್ನು ಕೈಕೊಳ್ಳಬೇಕು—ಎಂಬುದಾಗಿ ಸೂಚಿಸಿ, ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ಧಲಿಂಗಯ್ಯನವರು ಒಂದು ಮನವಿಯನ್ನು ಹೊರಡಿಸಿರುತ್ತಾರೆ

ಮಂತ್ರಿಗಳ ಇಲಾಖೆಗಳಲ್ಲಿ ಬದಲಾವಣೆ

ಬೆಂಗಳೂರು ೧೪

ಸಚಿವ ಶ್ರೀ ಹೆಚ್. ಸಿದ್ದಯ್ಯನವರಿಗಿದ್ದ ಮುನಿಸಿಪಲ್, ವ್ಯವಸಾಯ, ಪಶು ವೈದ್ಯ ಶಾಲೆ, ಸಹಕಾರ ಮತ್ತು ಸರ್ಕಾರಿ ಉದ್ಯಾನಗಳ ಇಲಾಖೆಗಳನ್ನು ಶ್ರೀ ಟಿ ಮರಿಯಪ್ಪನವರಿಗೂ, ಶ್ರೀ ಮರಿಯಪ್ಪನವರಿಗಿದ್ದ ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟುಗಳನ್ನು ಶ್ರೀ ಸಿದ್ದಯ್ಯನವರಿಗೂ ವರ್ಗಾಯಿಸಲಾಗಿದೆ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೪

ಮೈಸೂರು ಮಕ್ಕಳ ಕೂಟದವರು ನಾಳೆ ಬೆಳಗ್ಗೆ ೬-೩೦ಕ್ಕೆ ಪ್ರಭಾತ ಪೇರಿ, ಧ್ವಜವಂದನೆ, ಸಂಜೆ ೫-೩೦ಕ್ಕೆ ಲಕ್ಷ್ಮೀಪುರಂ ಶಿಶುವಿಹಾರದಲ್ಲಿ ಬಹಿರಂಗ ಸಭೆ ನಾಟಕ ಇತ್ಯಾದಿಗಳನ್ನು ಏರ್ಪಡಿಸಿರುವರು

ದಿವಾನರ ಅಗ್ರಹಾರದಲ್ಲಿರುವ ಪ್ರಭಾಕಲಾವಿದರ ಕಚೇರಿಯಲ್ಲಿ ನಾಳೆ ಸಂಜೆ ೬ ಗಂಟೆಗೆ ಗುಬ್ಬಿ ಕಂಪೆನಿ ಮ್ಯಾನೇಜರ್ ನಾಟ್ಯಕಲಾ ವಿಶಾರದ ಎಂ ಸಿ ಮಹದೇವ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮಾರಂಭ ಜರಗುವುದು ನೃತ್ಯ, ಸಂಗೀತ, ನಾಟಕಗಳು ಏರ್ಪಾಡಾಗಿವೆ

ಚಾಮುಂಡಿಪುರಂ ಯುವಕ ಸಂಘದ ಆಶ್ರಯದಲ್ಲಿ ನಾಳೆ ಪ್ರಾತಃಕಾಲ ೭-೩೦ಕ್ಕೆ ಧ್ವಜಾರೋಹಣ, ಲಕ್ಕೆ ಭಜನೆ, ನಂತರ ನೂಲುವ ಸ್ಪರ್ಧೆ, ಮಧ್ಯಾಹ್ನ ೩ ೩೦ ಗಂಟೆಗೆ ಸಭೆ ನಡೆಯುವುವು ಪೌರ ಸಭಾ ಸದಸ್ಯರಾದ ಶ್ರೀ ಎ ಎನ್ ಸೂರ್ಯನಾರಾಯಣ ರಾಯರು ಅಧ್ಯಕ್ಷತೆ ವಹಿಸುವರು

ಸೂಚನೆ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಾಳೆ 'ಸಾಧ್ವಿ' ಪತ್ರಿಕೆಗೆ ರಜ ಕೊಡಲಾಗಿದೆ ಸ್ವಾತಂತ್ರ್ಯ ದಿನೋತ್ಸವದ ವಿಶೇಷ ಸಂಚಿಕೆಯನ್ನು ನಮ್ಮ ಚಂದಾದಾರರೆಲ್ಲರಿಗೂ ನಾಳೆ ಉಚಿತವಾಗಿ ಹಂಚಲಾಗುವುದು —ಸಂ

ಕೃಷ್ಣಮೂರ್ತಿಪುರಂನಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಸಂಘದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮-೩೦ಕ್ಕೆ ರಾಷ್ಟ್ರ ಧ್ವಜಾರೋಹಣ ಸಂಜೆ ೫-೩೦ ಗಂಟೆಗೆ ವಿಶ್ವ ವಿದ್ಯಾಲಯದ ವೇದಾಂತ ಮಹೋಪಾಧ್ಯಾಯರಾದ ಡಾ॥ ಟಿ ಪುರುಷೋತ್ತಮರವರ ಅಧ್ಯಕ್ಷತೆಯಲ್ಲಿ ಸಭೆಯೂ ನಡೆಯುವುವು

ಈದಿ ೯ವಲ್ಲಿರುವ ಗಂಗಾ ಪರಮೇಶ್ವರ ಯುವಕರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಪೌರ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯೂ, ನಗರ ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕ ಭಂಡಾರ ಮತ್ತು ವಾಚನಾಲಯಗಳ ಪ್ರಾರಂಭವೂ ನಡೆಯುವುವು ಶ್ರೀಗಳಾದ ಎ. ಶಂಕರಯ್ಯ,

ಭಾರತದ ರಾಜಧಾನಿಯಲ್ಲಿ ಸ್ವಾತಂತ್ರ್ಯೋತ್ಸವಕಾರ್ಯಕ್ರಮ

ನಾಳೆ ದಿನ ಭಾರತವು ಉದ್ದಿಷ್ಟ ಪೂರ್ವಕವಾಗಿ ಸರಳವಾದ ರೀತಿಯಲ್ಲಿ ದ್ವಿತೀಯ ಸ್ವಾತಂತ್ರ್ಯೋತ್ಸವದ ಸಮಾರಂಭವನ್ನು ನೆರವೇರಿಸುವುದು ಮುಖ್ಯವಾಗಿ ಆಹಾರ ವಿಷಯದಲ್ಲಿ ೧೯೫೧ರ ಹೊತ್ತಿಗೆ ಸ್ವಾವಲಂಬನೆಯ ಕಡೆಗೆ ಲಕ್ಷ್ಯ ಕೊಡಲಾಗುವುದು ಯಾವ ವಿಧವಾದ ದೀಪಾಲಂಕಾರ ಮುಂತಾದ ವಿಜೃಂಭಣೆಗೂ ಅವಕಾಶವಿಲ್ಲ ಭಾರತದ ರಾಜಧಾನಿಯಾದ ದೆಹಲಿಯಲ್ಲಿ ಏರ್ಪಾಡಾಗಿರುವ ಕಾರ್ಯಕ್ರಮ ಹೀಗಿದೆ –

ಕಾರ್ಯಕ್ರಮವು ರಾಷ್ಟ್ರಪಿತನಿಗೆ ಪ್ರಣಾಮ ಸಲ್ಲಿಸುವುದರಿಂದ ಪ್ರಾರಂಭಿಸುವುದು ಇತರ ಸಚಿವರೊಡಗೂಡಿ, ಭಾರತದ ಪ್ರಧಾನಿಗಳು ರಾಜಘಟ್ಟದಲ್ಲಿರುವ ಮಹಾತ್ಮಾ ಗಾಂಧಿಯವರ ಸಮಾಧಿಯ ಬಳಿ ಸಾರಿ, ಅಲ್ಲಿ ಪ್ರಾರ್ಥನಾ ಸಭೆ ನಡೆಸುವರು ನಂತರ ೮ ಗಂಟೆಗೆ ಅವರು ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವರು ಆ ಸಮಯದಲ್ಲಿ ದೇಶಾದ್ಯಂತವೂ ಅಶೋಕ ಚಕ್ರದಿಂದೊಡಗೂಡಿದ ತ್ರಿವರ್ಣ ಧ್ವಜವು ಎಲ್ಲೆಲ್ಲೂ ಮೆರೆಯುವುದು. ಪ್ರಜೆಗಳು ಧ್ವಜ ವಂದನೆ ಸಲ್ಲಿಸುವರು

ಕೆಂಪು ಕೋಟೆ ಮೇಲೆ ಧ್ವಜವನ್ನು ನೆಹರೂರವರು ಹಾರಿಸುವಾಗ ಭಾರತದ ಟೆಂಪೆಸ್ಟ್ ವಿಮಾನಗಳು ಹಾರಿ ಬಂದು ಧ್ವಜಕ್ಕೆ ಮೇಲಿನಿಂದ ಬಗ್ಗಿ ವಂದನೆಗೈಯುವುವು

ಆ ಸಮಯಕ್ಕೆ ಸರಿಯಾಗಿ ಮದ್ರಾಸು ಸಮುದ್ರ ತೀರದಲ್ಲಿರುವ ದೆಹಲಿ ಎಂಬ ಭಾರತದ ನಾವಿಕ ನೌಕೆಯು ೨೧ ಗುಂಡನ್ನು ಹಾರಿಸುವುದು ಹಾಗೆಯೇ ವಿಜಯವಾಡ, ಕಾಕಿನಾಡಾ ಮತ್ತು ನಾಗಪಟ್ಟಣದಲ್ಲಿರುವ ಜಮುನಾತೀರ್ ಮತ್ತು ಕಾವೇರಿ ನೌಕೆಗಳೂ ಗುಂಡನ್ನು ಹಾರಿಸುವುವು

ದೆಹಲಿಯಲ್ಲಿರುವ ಕೆಂಪು ಕೋಟೆ ಮೇಲೆ ರಾಷ್ಟ್ರ ಧ್ವಜ ಏರಿದಾಗ ಭಾರತದ ನೌಕಾ ವಿಮಾನ ಮತ್ತು ನೌಕಾ ಬಲಗಳು ಮಾರ್ಚ್ ಪಾಸ್ಟ್ ಮಾಡುವುವು ಇತರ ಕಡೆಗಳಲ್ಲಿ ಪೊಲೀಸ್, ಮಿಲಿಟರಿ ಹೋಂಗಾರ್ಡ್ಸ್‌ಗಳ ಪೆರೇಡು ನಡೆಯುವುವು

○ ಸಹಸ್ರಾರು ಜ ಕ್ಯಾನ್‌ವಾಸ್ ಬಟ್ಟೆಯನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡಿದುದಕ್ಕಾಗಿ ಕಾನ್ಪುರದ ವ್ಯಾಪಾರಿಯೊಬ್ಬನ ಹೆಂಡತಿಯನ್ನು ದಸ್ತಗಿರಿ ಮಾಡಲಾಗಿದೆ ಜಾಮೀನಿನಮೇಲೆ ಆಕೆಯು ಹೊರಕ್ಕೆ ಬಂದಿದ್ದಾಳೆ

ನಾ ಭದ್ರಯ್ಯ ಮತ್ತು ಶ್ರೀ ಟಿ ಕೃಷ್ಣಮೂರ್ತಿಯವರುಗಳು ಭಾಷಣ ಮಾಡುವರು

ಕಬೀರ್ ಯುವಕರ ಕ್ಲಬ್ಬಿನ ಆಶ್ರಯದಲ್ಲಿ ಶ್ರೀ ಯು ಎಲ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಾಳೆ ಪ್ರಾತಃಕಾಲ ೧೧ಗಂಟೆಗೆ ಸ್ವಾತಂತ್ರ್ಯ ದಿನಾಚರಣೆಯು ಕಬೀರ್ ರಸ್ತೆಯಲ್ಲಿ ಹಾಕಿರುವ ಚಪ್ಪರದಡಿಯಲ್ಲಿ ನೆರವೇರುವುದು

ಕೃಷ್ಣರಾಜ ಮೊಹಲ್ಲಾ ಚಾಮುಂಡಿ ಒಡ್ಡಾವಣೆಯಲ್ಲಿರುವ ಪತ್ರಾ ಜನರ ಶ್ರೀ ರಾಮಮಂದಿರದಲ್ಲಿ ಬೆಳಗ್ಗೆ ೧೦॥ ಗಂಟೆಗೆ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಾದ ಶ್ರೀ ವಾರ್ ಟಿ ವೆಂಕಟರಮಣಯ್ಯನವರ ಘನ ಅಧ್ಯಕ್ಷತೆಯಲ್ಲಿ ದಿನಾಚರಣೆ ನಡೆಯುವುದು

ವಾರ ಭವಿಷ್ಯ

೧೪-೮-೪೯ರಿಂದ ೨೦-೮-೪೯ರ ವರೆಗೆ

ಮೇಷ— ವಾರವು ಸಂತಸದಿಂದ ಕಳೆಯುವುದು ಆರೋಗ್ಯ ನೆಟ್ಟಗೆ ಹಣಕಾಸಿನ ಅಡಚಣೆ ಸ್ವಲ್ಪವುಂಟು ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಹೆಚ್ಚು ಉತ್ಸಾಹ ವಿರದು ತಾ|| ೧೬, ೧೭ ಅಲ್ಪ ಪ್ರವಾಸ ಲಾಭ

ವೃಷಭ—ನಿಮ್ಮ ಮೇಲ್ಪಟ್ಟವರ ಪ್ರೀತಿ ಹೆಚ್ಚುವುದು ಪ್ರಕೃತಿ ನೆಟ್ಟಗೆ ಹಣಕಾಸಿನ ಸ್ಥಿತಿ ಉತ್ತಮ ೧೫, ೧೬ ಮಿತ್ರ ದರ್ಶನ ವಿಶ್ರಾಂತಿ

ಮಿಥುನ -ನಿಮ್ಮ ಮನಸ್ಸಿನ ಅಳುಕು ಇನ್ನೂ ಹಾಗೆಯೇ ಇರುವುದು ಆರೋಗ್ಯ ಸ್ವಲ್ಪ ಸುಧಾರಿಸುವುದು ವ್ಯಾಪಾರಾದಿಗಳೂ ಸಾಮಾನ್ಯ ರೀತಿಯಲ್ಲಿರುವುವು ಕಳತ್ರದ ಆರೋಗ್ಯದ ಕಡೆ ಲಕ್ಷ್ಯ ವಿರಲಿ ತಾ|| ೧೬, ೧೭ ಎಚ್ಚರಿಕೆ, ಪ್ರವಾಸ

ಕರ್ಕ—ಆರ್ಥಿಕ ಅಡಚಣೆ ಇನ್ನೂ ವುಂಟು ವ್ಯಾಪಾರದಲ್ಲಿ ನಷ್ಟ ಕಡಿಮೆ ದೇಹ ಪ್ರಕೃತಿಯು ಇದ್ದ ಹಾಗೇ ಸಂಸಾರದಲ್ಲಿ ಸುಖವಿಲ್ಲ ಧರ್ಮ ಕಾರ್ಯದಲ್ಲಿ ಪ್ರೋತ್ಸಾಹ ಕಳತ್ರ ದೊಡನೆ ಕಲಹ ತಾ|| ೧೭-೧೮ ಪತ್ರಾಗಮನ

ಸಿಂಹ—ಧನಾದಯವು ವೆಚ್ಚಕ್ಕೆ ಸರಿಹೊಂದದು ಹೊಸ ಕಾರ್ಯದಲ್ಲಿ ಪ್ರವೃತ್ತಿ ಮಾಡಲು ಮನಸ್ಸು ಒಗ್ಗದು ನಿಮಗೆ ಪರರ ಕಿರಿಕಾಟದಿಂದ ತೊಂದರೆ ಇದ್ದೀತು ಮೇಲಧಿಕಾರಿಗಳನ್ನು ಎತ್ತಿ ಹಾಕಿಕೊಳ್ಳಬೇಡಿ ತಾ|| ೧೭, ೧೯ ಅಲ್ಪ ಲಾಭ, ಸುಖ ಪ್ರವಾಸ

ಕನ್ಯಾ- ನಿಮ್ಮ ಭವಿಷ್ಯವು ಕಳೆದ ವಾರಕ್ಕಿಂತಲೂ ಉತ್ತಮ ಪ್ರಯಾಣ ಸುಖಕರ, ಲಾಭ ಹೊಸಕಾರ್ಯದಲ್ಲಿ ಪ್ರವೃತ್ತಿ ತಾ|| ೧೭-೧೯ ಒಳ್ಳೆಯ ಸುದ್ದಿ ಸುಖ

ತುಲಾ — ಕಾರ್ಯ ಸಿದ್ಧಿಯಿಂದ ಆನಂದ ದೇಹಸ್ಥಿತಿ ನೆಟ್ಟಗೆ ಆದರೂ ಹಣಕಾಸಿನ ಚಿಂತೆ ಶತ್ರುಗಳ ಪರಾಜಯ ತಾ|| ೧೬, ೧೭ ಮನಸ್ಸಿಗೆ ಉಲ್ಲಾಸ ಮಂಗಳ ಕಾರ್ಯ

ವೃಶ್ಚಿಕ—ಆರೋಗ್ಯ ಅಷ್ಟು ತೃಪ್ತಿಕರವಾಗಿರದು ವಾಹನಾದಿಗಳಿಂದ ದೂರವಿರಿ ಕೈಗೊಂಡ ಕಾರ್ಯ ಅರ್ಧಕ್ಕೇ ನಿಲ್ಲುವುದು ತಾ|| ೧೬-೧೭ ಇದ್ದರಲ್ಲಿ ಉತ್ತಮ ಸುಖ ಭೋಜನ

ಧನು -ಮನಸ್ಸಿನ ಚಿಂತೆ ಇನ್ನೂ ತಪ್ಪದು ವೆಚ್ಚವು ಅಧಿಕವಾಗುವುದು ಶತ್ರುಗಳ ಉಪಟಳ ಪತ್ನಿಗೆ ಆಲಸ್ಯ ತಾ|| ೧೭-೧೯ ಇದ್ದುದರಲ್ಲಿ ಉತ್ತಮ

ಮಕರ—ಮನಸ್ಸಿಗೆ ಉಲ್ಲಾಸ, ಕಾರ್ಯಸಿದ್ಧಿ ಮೇಲಧಿಕಾರಿಗಳ ಸಂತೃಪ್ತಿ, ವ್ಯಾಪಾರಾದಿಗಳಲ್ಲಿ ಲಾಭ ತಾ|| ೧೯-೨೦ ಪ್ರವಾಸ ಸುಖ ಭೋಜನ

ಕುಂಭ—ಚಿಂತೆಯು ನಿಮ್ಮನ್ನು ಇನ್ನೂ ಬಿಡದು ಧೈರ್ಯದಿಂದ ಕೆಲಸ ಮಾಡಿರಿ ವಿರೋಧಿಗಳು ಕಷ್ಟದಿಂದ ದಮನರಾಗುವರು ವ್ಯಾಪಾರದಲ್ಲಿ ಲಾಭ ಬರದು ನೌಕರಿಯಲ್ಲಿ ತೊಂದರೆ ತಾ|| ೧೬, ೧೭ ಇದ್ದುದರಲ್ಲಿ ಉತ್ತಮ, ಪತ್ರಾಗಮನ

ಮೀನ—ಪ್ರಗತಿ ಸೂಚಕ ವಿಷಯಗಳು ಕಾಣುತ್ತವೆ ಮನೆಯವರಿಗೆ ಆಲಸ್ಯ ಉದ್ಯೋಗದಲ್ಲಿ ಇನ್ನೂ ತೊಂದರೆ ತಪ್ಪಿಲ್ಲ ಪ್ರವಾಸ ಹಿತಕರವಲ್ಲ ನಿದ್ರಾನಾಶ ದೇಹಪ್ರಕೃತಿ ನೆಟ್ಟಗಿರದು ತಾ|| ೧೮, ೧೯ ಉತ್ತಮ

— ಲಕ್ಷ್ಮಿ —

14-8-49ನೇ ಭಾನುವಾರದಿಂದ

ದಿನವಹಿ 3 ಪ್ರದರ್ಶನ

ಮ್ಯಾಟಿನಿ ಮಧ್ಯಾಹ್ನ ೩ ಘಂಟೆಗೆ

ಶ್ರೀ ಕನ್ನಾ ಫಿಲಂಸ್‌ರವರ ಸುಮಧುರ ಸಂಗೀತಮಯ ಭಕ್ತಿರಸ ತಮಿಳು ಚಿತ್ರ

ತಿರುಮಂಗೈ ಆಳ್ವಾರ್

ಪಾತ್ರ - ಇಷ್ಟೆ ಅರಸು ದಂಡಪಾಣಿ ದೇಶಿಕರ್, ಶಿವಭಾಗ್ಯಂ, ಪ್ರೇಮಾವತಿ

ರೋಗ ತಗುಲಿದ ೫೦ ಸಾವಿರ ರೂ. ಗೋಧಿಯ ನಾಶ

ಚಿತ್ರದುರ್ಗಕ್ಕೆ ೫ ಮೈಲಿ ದೂರವಿರುವ ಸಿದ್ಧಪ್ಪನಹಳ್ಳಿಯಲ್ಲಿಗೋಧಿ ಪೈರಿಗೆ ಕ್ರಿಮಿರೋಗವು ತಲೆದೋರಿರುವುದರಿಂದ ೫೦ ಸಾವಿರ ರೂ ಬೆಲೆ ಬಾಳುವ ಆ ಪೈರುಗಳನ್ನು ಸುಟ್ಟು ಹಾಕಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆಂದೂ ಇದರಿಂದ ಅಲ್ಲಿನ ರೈತರಿಗೆ ತುಂಬಾ ನಷ್ಟವಾಗುವುದೆಂದೂ ಸರ್ಕಾರಕ್ಕೆ ತಂತಿ ಮೂಲಕ ಮನವಿ ಮಾಡಲಾಗಿದೆಯೆಂದು ತಿಳಿದು ಬಂದಿದೆ

ಹೈದ್ರಾಬಾದಿನ ಇತ್ತಿಹಾದ್ ಸಂಸ್ಥೆ ರದ್ದು

ಹೈದರಾಬಾದಿನಲ್ಲಿ ಹಿಂದ ಅತಿ ಪ್ರಮುಖ ಪಕ್ಷವಾಗಿದ್ದ ಇತ್ತಿಹಾದ್ ಮುಸ್ಲಿಮೀನ್ ಸಂಸ್ಥೆಯನ್ನು ರದ್ದು ಮಾಡಲಾಗುವುದೆಂದು ಈಗ ಬಂಧನದಲ್ಲಿರುವ ಅವರ ನಾಯಕರುಗಳು ತಿಳಿಸಿರುತ್ತಾರೆ

ಮುಖ್ಯ ಮಂತ್ರಿಗಳ ಬ್ರಾಡ್ ಕ್ಯಾಸ್ಟ್ ಭಾಷಣ

ಬೆಂಗಳೂರು ೧

ದ್ವಿತೀಯ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ ನಾಳಿದ್ದು ಮಧ್ಯಾಹ್ನ ೨-೪ ಗಂಟೆಗೆ ಆಕಾಶವಾಣಿಯಿಂದ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಭಾಷಣ ಮಾಡುವರು

ಹುತಾತ್ಮರ ಗೌರವಕ್ಕಾಗಿ ನಾಳೆ ೨ ನಿಮಿಷ ಮೌನ

ಭಾರತದ ಸ್ವಾತಂತ್ರ್ಯ ಸಾಧನೆಗಾ ಬಲಿದಾನ ಮಾಡಿದ ಹುತಾತ್ಮರ ನೆನಪಿಗಾಗಿ ನಾಳೆ ಮಧ್ಯಾಹ್ನ ೧೨ ಗಂಟೆಯು ೨ ನಿಮಿಷ ಮೌನ ವ್ರತವನ್ನಾಚರಿಸಲು ಬೊಂಬಾಯಿ ಸರಕಾರವು ನಿರ್ಧರಿಸಿದೆ

ಗರೀಬರಿಗೆ ಉಚಿತವೇ!

ನಾಯಿಕೆಮ್ಮು, ಲಿವರ್ ಅಂಡ್ ಸ್ಪ್ಲೀನ್, ಟಾನ್ಸಿಲ್, ಪರಿಣಾಮ ಶೂಲೆ, ಮಲವ್ಯಾಧಿ ಮತ್ತು ವ್ರಣಗಳಿಗೆ ಖಾತರಿಯಾದ ಶೀಘ್ರ ಗುಣಕಾರಿ ಚಿಕಿತ್ಸೆ.

ಎಸ್. ಶಾಮಣ್ಣ

ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆ

೨೮೩೦, ಚಾಮುಂಡೇಶ್ವರೀ ರೋಡ್ ಚಾಮುಂಡಿಪುರಂ, ಮೈಸೂರು

Edited, printed and published by A R Nagarajan, at Sadhvi Press, D Subbiah Road, Mysore



ಮಕ್ಕಳಿಗೆ ಹೊದಿಸುವ ಅಪ್ಪಟ ಉಣ್ಣೆಯ ರಗ್ಗುಗಳು

ಬಾಹುಸಾರ್ ಕಂಪೆನಿ,

ಬ್ಯಾಂಕ್ ರೋಡ್, ಮೈಸೂರು

ಮೈಸೂರು ಸಿಟಿ ರೇಷನಿಂಗ್ ಆಫೀಸ್

ತಾರೀಖು ೧೨-೮-೧೯೪೯

ನೋಟಿಫಿಕೇಷನ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ರೇಷನ್ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ, ಸಹಕಾರ ಸಂಘಗಳಿಗೆ ಸಹ ೧೫-೮-೪೯ನೇ ಸೋಮವಾರ ಸ್ವಾತಂತ್ರ್ಯ ದಿನವಾದ್ದರಿಂದ ರಜಾ ಕೊಡಲ್ಪಟ್ಟಿರುತ್ತೆ

ಡಿ ಜೆ. ಬಾಲರಾಜ್,
ರೇಷನಿಂಗ್ ಆಫೀಸರ್

ರಾಜಕಮಲ್, ಮೈಸೂರು

6—8—49ರಿಂದ

ದಿನವಹಿ 3 ಪ್ರದರ್ಶನ

ಮೆಹಬೂಬ್‌ರವರ ಹಿಂದಿ ಚಿತ್ರ

ಅನೋಖಿ ಅದ

ರಾಜಕಮಲ್, ಮೈಸೂರು

15—8—49ನೇ ಸೋಮವಾರ ಬೆಳಿಗ್ಗೆ 10-30ಕ್ಕೆ

ಅಶೋಕ್ ಕುಮಾರ್ ಲೀಲಾ ಚಿಟ್ನೀಸ್, ವಿ ಹೆಚ್ ದೇಸಾಯ್ ಮತ್ತು ಸುರೇಶ್ ನಟಿಸಿದ ಬಾಂಬೆ ಟಾಕೀಸಿನವರ ಹಿಂದಿ ಚಿತ್ರ

✻ ಬಂಧನ್ ✻

ಸ್ವಾತಂತ್ರ್ಯ ದಿನದ ಸಲುವಾಗಿ ಏರ್ಪಡಿಸಿರುವ ಈ ಪ್ರದರ್ಶನಕ್ಕೆ ತಪ್ಪದೆ ಬಂದು ಸಹಾಯ ಮಾಡಬೇಕಾಗಿ ಕೋರಲಾಗಿದೆ



ಭಾರತದ ಹೆಮ್ಮೆ

ಹೆಮ್ಮೆ ಪಡುವ ವಿಚಾರವು ಇದೋ ಇಲ್ಲಿದೆ ನೋಡಿ! ಇತರರು ಯಾವುದೇ ದೇಶವು ವೈದ್ಯ ವಿಜ್ಞಾನವೇನೆಂಬುದನ್ನು ತಿಳಿಯುವುದಕ್ಕಿಂತ ಎಷ್ಟೋ ಮುಂಚೆ ಭಾರತವು ಈ ಶಾಸ್ತ್ರದಲ್ಲಿ ಪ್ರಗತಿಯನ್ನು ಪಡೆದಿತ್ತು. ಪ್ರಪಂಚದ ಬಹು ಹಳೆಯ ವೈದ್ಯ ಪದ್ಧತಿಯಾದ ಆಯುರ್ವೇದದ ತೌರು ಮನೆ-ಭಾರತ. ಈ ದೇಶವಲ್ಲೆಲ್ಲಾ ಹೆಸರುವಾಸಿಯಾದ ಆಯುರ್ವೇದದ ಔಷಧಿಗಳಿಗೆ ತೌರುಮನೆ-ಅಹಮದ್ ನಗರದ ಆಯುರ್ವೇದಾಶ್ರಮಂ ಫಾರ್ಮಸಿ. ಈ ಫಾರ್ಮಸಿಯ ಗುರುತನ್ನು ಯನ್ನು ಜ್ಞಾಪಕದಲ್ಲಿಟ್ಟು ಕೋರಿಸಿ - ಈ ಮುದ್ರೆ ಕೊಳ್ಳುವುದು ಒಳಿತು

AYURVEDASHRAM PHARMACY LTD., (APHALI), AHMEDNAGAR.

★ ಪರದಾಸ್ಯ ವಿಮೋಚನೆಗಾಗಿ ಬಲಿದಾನಮಾಡಿದ ವೀರರ ಪುಣ್ಯಸ್ಮರಣೆ ★

ಭಾರತ ಭಾಗ್ಯದ ಭವ್ಯ ದ್ಯೋತಕ ರಾಷ್ಟ್ರಧ್ವಜ

**ಈ ಧ್ವಜದ ಆಶ್ರಯದಲ್ಲಿ
ಸಕಲ ಭಾರತೀಯರಿಗೂ
ಸಮಸ್ತ ಸನ್ಮಂಗಳಗಳೂ
ಉಂಟಾಗಲಿ!**

ಸ್ವಾತಂತ್ರ್ಯದ ಮುನ್ನಡೆ

ಪರದಾಸ್ಯ ಶೃಂಖಲೆಯಿಂದ ನಮ್ಮ ದೇಶವು ಪಾರಾಗಿ ಇಂದಿಗೆ ಎರಡು ವರ್ಷಗಳಾದವು ಸ್ವಾತಂತ್ರ್ಯೋತ್ಸವದ ಎರಡನೆಯ ಸಮಾರಂಭವನ್ನು ಭಾರತೀಯರು ಇಂದು ಆನಂದೋತ್ಸಾಹಗಳಿಂದ ಆಚರಿಸುತ್ತಿರುವರು ಪ್ರಪಂಚದ ನಾಗರಿಕ ರಾಷ್ಟ್ರಗಳೊಡನೆ ಇಂದು ನಮ್ಮ ನಾಡು ಸರಿಸಮಾನತೆಯಿಂದ ತಲೆಯೆತ್ತಿ ಮೆರೆಯುತ್ತಿದೆ ಈ ವೈಭವದ ದಿನವನ್ನು ಭಾರತೀಯರೆಲ್ಲರೂ ಅತ್ಯಂತ ಹೆಮ್ಮೆಯಿಂದ ಆಚರಿಸುವುದು ಸಹಜವಾಗಿಯೇ ಇದೆ ಇಂತಹ ಪವಿತ್ರವಾದ ದಿನದಲ್ಲಿ ನಮ್ಮ ಪ್ರಿಯ ವಾಚಕರಿಗೆ ಈ ನಮ್ಮ ಸಣ್ಣ ಕಾಣಿಕೆಯನ್ನು ಪ್ರೀತಿ ವಿಶ್ವಾಸಗಳಿಂದ ನಾವು ಅರ್ಪಿಸಿರುತ್ತೇವೆ ನಮ್ಮ ದೇಶಬಾಂಧವರೆಲ್ಲರಿಗೂ ಈ ಸುದಿನವು ಸಕಲ ಶ್ರೇಯಸ್ಸಿಗೂ ಮಾರ್ಗದರ್ಶನವನ್ನು ಮಾಡಲೆಂದೂ, ಭಗವಂತನು ಸಮಸ್ತಲೋಕಗಳಿಗೂ ಸನ್ಮಂಗಳಗಳನ್ನು ಕರುಣಿಸಲೆಂದೂ ಬೇಡುತ್ತೇವೆ

ರಾಜಕೀಯ ಸ್ವಾತಂತ್ರ್ಯವು ನಮ್ಮ ದೇಶದಲ್ಲಿ ಸ್ಥಾಪಿಸಲ್ಪಟ್ಟಿದೆಯಾದರೂ ನಿಜವಾದ ಪುನರ್ರಚನಾ ಕಾರ್ಯವು ಇನ್ನೂ ಬಹಳಮಟ್ಟಿಗೆ ಹಿಂದೆ ಬಿದ್ದಿದೆ ನಮ್ಮ ಜನರ ಆರ್ಥಿಕ ಪರಿಸ್ಥಿತಿಯು ಇನ್ನೂ ಬಹಳ ಶೋಚನೀಯವಾಗಿದೆ ಮಾನವ ಜೀವನಕ್ಕೆ ಅತ್ಯಗತ್ಯವಾದ ಆಹಾರ, ಬಟ್ಟೆ, ವಸತಿ ಮುಂತಾದ ಸೌಲಭ್ಯಗಳಿಗೇ ಅಗಾಧವಾದ ಅಭಾವವಿರುತ್ತದೆ ಸ್ವಾತಂತ್ರ್ಯದ ಅರುಣೋದಯವಾದೊಡನೆಯೇ ಮಂಜು ಕರಗುವಂತೆ ನಮ್ಮ ಕಷ್ಟಗಳೆಲ್ಲವೂ ಮಾಯವಾಗುವುವೆಂದು ಭಾವಿಸಿದ್ದವರು ಭ್ರಾಂತರಾಗುತ್ತಿದ್ದಾರೆ ಅಂತಹವರ ಮನಸ್ಸಿಗೆ ಸ್ವಾತಂತ್ರ್ಯದ ಸವಿಯು ಕಹಿಯಾಗಿಯೂ ಕಾಣಬರಬಹುದು

ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಹಲವು ಸಂಕುಚಿತ ಪ್ರಕೃತಿಗಳು ರಾಷ್ಟ್ರನಾಯಕರಿಗೂ ರಾಷ್ಟ್ರೀಯ ಸರಕಾರಕ್ಕೂ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿರುವುದು ಅತ್ಯಂತ ವಿಷಾದಕರವಾದ ವಿಷಯ ನಮ್ಮ ಸಂಸ್ಕೃತಿ, ಆದರ್ಶ ಮತ್ತು ಜೀವನಗಳಿಗೇ ವಿರುದ್ಧವಾದ ಮಾರ್ಗಗಳಲ್ಲಿ ಹಲವರು ಪ್ರವರ್ತಿಸಿ ರಾಷ್ಟ್ರಘಾತಕ ಮಾರ್ಗಗಳಲ್ಲಿ ತೊಡಗಿರುವುದು ಮತ್ತೂ ಶೋಚನೀಯ ವಿಚಾರ. ಇಂತಹ ವಿನಾಶಕಾರಕ ಚರ್ಯೆಗಳಿಂದ ದೇಶಕ್ಕೆ ಹೆಚ್ಚಿನ ವಿಪತ್ತು ಸಂಭವಿಸುವುದರಲ್ಲಿ ಸಂದೇಹವಿಲ್ಲ

ಸ್ವಾತಂತ್ರ್ಯಸಾಧನೆಯ ಜೊತೆಯಲ್ಲಿಯೇ ಸಂಪ್ರಾಪ್ತವಾದ ರಾಷ್ಟ್ರವಿಭಜನೆಯ ದುಷ್ಪರಿಣಾಮಗಳು ಇನ್ನೂ ನಮ್ಮನ್ನು ಕಾಡಿಸಲು ಬಿಟ್ಟಿಲ್ಲ ಯಾವ ಘನವಾದ ಉದ್ದೇಶದಿಂದ ದೇಶವು ಇಬ್ಭಾಗವಾಗುವದಕ್ಕೆ ನಮ್ಮ ನಾಯಕರುಗಳು ಸಮ್ಮತಿಸಿದರೋ ಅದಕ್ಕೆ ಸಂಪೂರ್ಣ ವ್ಯತಿರೇಕವಾದ ಪರಿಣಾಮಗಳು ಪ್ರಾಪ್ತವಾದವು ಈ ಸಂಬಂಧವಾದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿಯೇ ನಮ್ಮ ನಾಯಕರ ಕಾಲವೆಲ್ಲವೂ ವಿನಿಯೋಗವಾಗುತ್ತಿದೆ. ಈ ಕಾರಣದಿಂದ ನಿಜವಾದ ರಾಷ್ಟ್ರರಚನಾ ಕಾರ್ಯಕ್ಕೆ ಸಾಕಾದಷ್ಟು ಗಮನಕೊಡಲು ಅವಕಾಶವಿಲ್ಲವಾಗಿದೆ

ಹೀಗಿರುವಲ್ಲಿ ಪ್ರತಿಗಾಮಿಗಳೂ ವಿನಾಶಕಾರಿಗಳೂ ಆದ ರಾಷ್ಟ್ರಘಾತಕ ಶಕ್ತಿಗಳು ತಲೆಯೆತ್ತುತ್ತಿರುವುದು ನಿಜವಾಗಿಯೂ ಅಸಹನೀಯವಾದುದು. ಇಂತಹ ದುಷ್ಟಶಕ್ತಿಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವುದು ಅಗತ್ಯ ಇಂದಿನ ಸನ್ನಿವೇಶದಲ್ಲಿ ಪ್ರಪಂಚದ ಪ್ರತಿಯೊಂದು ಭಾಗವೂ ಇತರ ಭಾಗಗಳನ್ನು ಅವಲಂಬಿಸಿಕೊಂಡಿರುತ್ತದೆ ಪ್ರತ್ಯೇಕತೆಗೆ ಇಂದಿನ ಜಗತ್ತಿನಲ್ಲಿ ಸ್ಥಾನವಿಲ್ಲ ಅಂತರರಾಷ್ಟ್ರೀಯ ವಿದ್ಯಮಾನಗಳ ಒತ್ತಡದಿಂದ ಭಾರತವು ಹಲವು ಬಿಕ್ಕಟ್ಟುಗಳಿಗೆ ಒಳಗಾಗಬೇಕಾಗಿರುತ್ತದೆ ಅವರೂ ಸಹ ನಮ್ಮ ರಾಷ್ಟ್ರನಾಯಕರುಗಳು ತಮ್ಮ ಮುಂದಿರುವ ಸಮಸ್ಯೆಗಳನ್ನು ದಿಟ್ಟತನದಿಂದಲೂ ದೇಶಾಭಿಮಾನದಿಂದಲೂ ದೀನ ಜನರ ಹಿತದೃಷ್ಟಿಯಿಂದಲೂ ಎದುರಿಸುತ್ತಿದ್ದಾರೆ ಇಂತಹ ನಿಸ್ವಾರ್ಥರನ್ನೂ, ಪ್ರಜಾಸೇವಕರೂ, ಪರೋಪಕಾರಿಗಳೂ ಆದ ಧುರೀಣರನ್ನು ಪಡೆದಿರುವ ನಾವೇ ಧನ್ಯರು ಅವರು ಹಾಕಿಕೊಟ್ಟಿರ ಮಹೋನ್ನತಿಯನ್ನು ಅನುಸರಿಸಿ ನಮ್ಮ ನಾಡಿನ ಅಭ್ಯುದಯವನ್ನೂ ಲೋಕಕಲ್ಯಾಣವನ್ನೂ ಸಾಧಿಸುವೆವೆಂಬ ದೃಢಸಂಕಲ್ಪದಿಂದ ಈ ಸುದಿನದ ಉತ್ಸವದಲ್ಲಿ ನಾವೆಲ್ಲರೂ ಭಾಗಿಗಳಾಗೋಣ ಇಂದಿನ ನಮ್ಮ ಸ್ಥಿತಿಗೆ ಕಾರಣಕರ್ತರಾದ ಸಮಸ್ತ ಹುತಾತ್ಮರಿಗೂ ಶ್ರದ್ಧಾಂಜಲಿಯನ್ನರ್ಪಿಸೋಣ!

ವಂದೇಮಾತರಂ

ವಂದೇ ಮಾತರಂ |
ಸುಜಲಾಂ, ಸುಫಲಾಂ,
ಮಲಯಜ ಶೀತಲಾಂ ||
ಸಸ್ಯ ಶ್ಯಾಮಲಾಂ ಮಾತರಂ |
ವಂದೇ ಮಾತರಂ ||

ಶುಭ್ರಜ್ಯೋತ್ಸ್ನಾ ಪುಲಕಿತ
ಯಾಮಿನೀಂ |
ಫುಲ್ಲ ಕುಸುಮಿತ ದ್ರುಮದಲ
ಶೋಭಿನೀಂ |
ಸುಹಾಸಿನೀಂ, ಸುಮಧುರ ಭಾಷಿಣೀಂ |
ಸುಖದಾಂ, ವರದಾಂ, ಮಾತರಂ |
ವಂದೇ ಮಾತರಂ ||

ಯೂರೋಪಿನಲ್ಲೂ ಗಾಂಧೀ ತತ್ವ ಪ್ರಚಾರ

ಯೂರೋಪಿನ ಜನರಲ್ಲಿ ಗಾಂಧೀಜಿಯವರ ಜೀವನದ ಬಗ್ಗೆ ವಿಶೇಷ ಆಸಕ್ತಿಯುಂಟಾಗಿದೆ. ಮತ್ತು ಅವರ ತತ್ವವು ಅಲ್ಲಿ ಕ್ರಾಂತಿಯನ್ನುಂಟು ಮಾಡುತ್ತಲಿದೆ ಯುದ್ಧದಿಂದ ನೊಂದ ಯೂರೋಪಿಗೆ ಮಹಾತ್ಮರ ತತ್ವವು ಅತ್ಯಗತ್ಯವಾಗಿದೆ—ಎಂದು ಸರ್ವೋದಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಎಂ ಅಗರವಾಲಾರವರು ತಿಳಿಸುತ್ತಾರೆ. ಅವರು ಇತ್ತೀಚೆಗೆ ಯೂರೋಪು, ಬ್ರಿಟನ್, ಅಮೆರಿಕ ಮತ್ತು ಇತರ ದೇಶಗಳಿಗೆ ಭೇಟಿ ಕೊಟ್ಟು ಈಗ ಹಿಂತಿರುಗಿದ್ದಾರೆ

ಸ್ವತಂತ್ರ ಭಾರತದ ದ್ವಿತೀಯ ವರ್ಷದ ಪ್ರಮುಖ ಘಟ್ಟಗಳು

ಭಾರತ ಮತ್ತು ಮೈಸೂರಿನಲ್ಲಿ ನಡೆದ ವಿಶೇಷ ಘಟನೆಗಳು

ಆಗಸ್ಟ್— ಹೈದರಾಬಾದಿನಲ್ಲಿ ರಜಾಕರರ ಹಾವಳಿ ಹೈದರಾಬಾದಿನ ಸಂಪಾದಕರಾದ ಜನಾಬ್ ಷೋಯಬುಲ್ಲಾಖಾನ್ ರವರ ಕೊಲೆ ವಿಶ್ವಭದ್ರತಾ ಸಮಿತಿಗೆ ಹೈದ್ರಾಬಾದಿನ ಪ್ರಶ್ನೆ ಬರೋಡಾ ಬಿಕ್ಕಟ್ಟಿನ ಪರಿಹಾರ

ಸೆಪ್ಟೆಂಬರ್- ಪಾಕೀಸ್ಥಾನದ ಗೌರ್ನರ್ ಜನರಲ್ಲರಾದ ಜಿನ್ನಾರವರ ನಿಧನ ಹೈದ್ರಾಬಾದಿನ ಮೇಲೆ ಭಾರತದ ಪೋಲೀಸ್ ಕಾರ್ಯಾಚರಣೆ ನೈಜಾಮರ ಶರಣಾಗತಿ. ಖಾಸಿಂ ರಜ್ವಿಯ ದಸ್ತಗಿರಿ ಹೈದರಾಬಾದಿನಲ್ಲಿ ಮಿಲಿಟರಿ ಸರ್ಕಾರ

ಬೆಂಗಳೂರು ಪತ್ರಿಕಾ ಸಂಪಾದಕರ ಕಂಟೆಂಪ್ಟ್ ಅರ್ಜಿಯ ವಜಾ. ಅವರುಗಳ ದಸ್ತಗಿರಿ ಮತ್ತು ಬಿಡುಗಡೆ ಮೈಸೂರು ಮುಸ್ಲಿಂ ಲೀಗು ರಾಜಕೀಯವನ್ನು ಬಿಟ್ಟದ್ದು. ಬೆಂಗಳೂರು ದಂಡಿನ ಪೋಲೀಸರ ಮುಷ್ಕರ, ಅವರಮೇಲೆ ಗುಂಡಿನೇಟು

ಅಕ್ಟೋಬರ್— ಗಾಂಧಿ ಜಯಂತಿ ಮದರಾಸ್ ಪ್ರಾಂತ್ಯದಲ್ಲಿ ಸಂಪೂರ್ಣ ಪಾನ ನಿರೋಧ ಬೊಂಬಾಯಿ ಬಂದರು ಕೆಲಸಗಾರರ ಮುಷ್ಕರ

ಸರ್ ಎಂ ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾರವರಿಗೆ ಮೈಸೂರು ವಿಶ್ವವಿದ್ಯಾನಿಲಯದವರಿಂದ ಗೌರವಪ್ರಶಸ್ತಿ ಮೈಸೂರಿಗೆ ಮದರಾಸಿನ ಪ್ರಧಾನಿ ಶ್ರೀ ಓಮಂದೂರ್‌ರವರ ಭೇಟಿ ಮೈಸೂರು ಸೇನಾಪತಿ ಬ್ರಿ|| ಬಾಲ್‌ರವರಿಗೆ ಬಳ್ಳಾರಿಯ ಜನರಿಂದ ಬೆಳ್ಳಿಯ ಕತ್ತಿ ಬಹುಮಾನ

ನವೆಂಬರ್— ಮೈಸೂರಿನಲ್ಲಿ ಧಾನ್ಯ ಶೇಖರಣೆ ಹತೋಟಿ ಆಜ್ಞೆ. ತುಮಕೂರಿನಲ್ಲಿ ಎ ಎಂ ಸಿ.ಸಿ ಸಭೆ.

ಡಿಸೆಂಬರ್— ಜಯಪುರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಅಧ್ಯಕ್ಷರಾಗಿ ಆಯ್ಕೆ. ಆರ್ ಎಸ್ ಎಸ್. ನವರ ದಸ್ತಗಿರಿ.

ಮೈಸೂರಿಗೆ ಪ್ರಧಾನಿ ಪಂಡಿತ ನೆಹರೂರವರ ಭೇಟಿ ಕೇಂದ್ರ ಆಹಾರ ಸಂಶೋಧನಾಲಯದ ಸ್ಥಾಪನೆ ಅಖಿಲ ಭಾರತ ವಿದ್ಯಾ ಸಮ್ಮೇಳನ.

ಜನವರಿ— ಕಾಶ್ಮೀರದ ಕದನ ನಿಂತಿತು ಪಾಕೀಸ್ಥಾನದ ಮೇಲೆ ಪಠಾಣರ ದಂಗೆ. ಸುಪ್ರಸಿದ್ಧ ಪತ್ರಿಕಾ ಸಂಪಾದಕರಾದ ಶ್ರೀ ಬ್ರೆಲ್ವಿಯವರ ನಿಧನ. ರಾತ್ರಿ ಕಾಲದಲ್ಲಿ ವಿಮಾನಗಳ ಮೂಲಕ ಅಂಚೆ ರವಾನೆ ವ್ಯವಸ್ಥೆ, ಗಾಂಧಿ ಸ್ಮಾರಕ ದಿನಾಚರಣೆ

ಮೈಸೂರು ರಾಜರು ಕರ್ನಾಟಕದ ಶಾಸನಬದ್ಧ ಅಧಿಪತಿಗಳಾಗಬೇಕೆಂದು ಕೆ ಪಿ ಸಿ ಸಿ ಯ ನಿರ್ಣಯ ರೇಷನ್ ಪದಾರ್ಥಗಳಿಂದ ಇಡ್ಲಿ ಮತ್ತು ದೋಸೆ ತಯಾರಿಕೆಗೆ ನಿಷೇಧ

ಫೆಬ್ರವರಿ— ಮಹಾತ್ಮರ ಕೊಲೆ ಅಪರಾಧಿತನಾದ ನಾಥೂರಾಂ ಗೋಡ್ಸೆಗೆ ಮರಣದಂಡನೆ. ಬೊಂಬಾಯಿ ಪ್ರಾಂತ್ಯದಲ್ಲಿ ಬರೋಡಾ ಮತ್ತು ಕೊಲ್ಹಾಪುರ ಸಂಸ್ಥಾನಗಳ ಐಕ್ಯ, ಆಹಾರ ಅಭಾವ ನಿವಾರಿಸಲು ಮಿತ ಆಹಾರ ಪ್ರಚಾರದ ಬಗ್ಗೆ ಪಂಡಿತ ನೆಹರೂರವರ ಮನವಿ.

ಮೈಸೂರಿಗೆ ಭಾರತದ ಉಪಪ್ರಧಾನಿ ಸರ್ದಾರ್ ಪಟೇಲರ ಭೇಟಿ

ಮಾರ್ಚಿ— ಭಾರತದ ಕವಿಕೋಕಿಲೆ ಶ್ರೀಮತಿ ಸರೋಜಿನಿ ದೇವಿಯವರ ನಿಧನ ಮದರಾಸಿನಲ್ಲಿ ಹೊಸ ಮಂತ್ರಿ ಮಂಡಲದ ರಚನೆ

ಮೈಸೂರಿನಲ್ಲಿ ಅಂತರರಾಷ್ಟ್ರೀಯ
ಜ್ಞಾನಸಮ್ಮೇಳನ, ನೂತನ ಗ್ರಾಮಾಭಿ
ಯೋಜನೆಯ ಪ್ರಾರಂಭ.

ಏಪ್ರಿಲ್— ಕಾರ್ಡು ಮತ್ತು ಕ
ಗಳ ಬೆಲೆ ಹೆಚ್ಚಿತು ಭೂಪಾಲ್
ಬರ ಸ್ವಂತ ಜಮೀನುಗಳು ಸರ್ಕಾ
ವಶ ವಿಂಧ್ಯಪ್ರದೇಶ ಸಂಸ್ಥಾನದ ಅಧ
ಭಾರತಕ್ಕೆ. ಲಂಡನ್ನಿಗೆ ಪಂಡಿತ ನೆಹ
ರೂರವರ ಭೇಟಿ, ಕಾಮನ್‌ವೆಲ್ತಿನಲ್ಲಿ ಭಾರ
ಇರಲು ಒಪ್ಪಂದ ಕಲ್ಕತ್ತದಲ್ಲಿ ಕಮ್ಯು
ಸ್ಟರ ಹಾವಳಿ ಕಲ್ಕತ್ತಾ ಮಹಿಳೆ
ಮೇಲೆ ಗುಂಡಿನೇಟು

ಮೈಸೂರು ಸಂಸ್ಥಾನಕ್ಕೆ ಡಾ|| ಬಾ
ರಾಜೇಂದ್ರ ಪ್ರಸಾದ್‌ರವರ ಭೇಟಿ

ಮೇ— ಸಂಸ್ಥಾನಕ್ಕೆ ರಾಷ್ಟ್ರಪತಿ ಡಾ
ಪಟ್ಟಾಭಿ ಸೀತಾರಾಮಯ್ಯನವರ ಭೇ
ಸ್ತ್ರೀಯರಿಗೆ ಸರ್ಕಾರಿ ಉದ್ಯೋಗಗ
ಅವಕಾಶಕೊಡುವ ಆಜ್ಞೆ ಭಾ
ಸರ್ಕಾರದ ವಾರ್ತಾ ಸಚಿವ ಶ್ರೀ
ಆರ್. ದಿವಾಕರರ ಭೇಟಿ ಅಖಿಲ ಭಾ
ತ ವೃತ್ತ ಪತ್ರಿಕಾ ಸಂಪಾದಕರು
ಸಮ್ಮೇಳನ ಬೆಂಗಳೂರಿಗೆ ಗೌರ್ನ
ಜನರಲ್ ರಾಜಾಜಿಯವರ ಭೇಟಿ
ಇರ್ವಿನ್ ಕಾಲುವೆಯ ಹೆಸರನ್ನು ವಿಶ್ವೇ
ಶ್ವರಯ್ಯ ನಾಲಾ ಎಂದು ಬದಲಾವ
ಭಾರತದೊಡನೆ ಮೈಸೂರಿನ ನ

[5ನೇ ಪುಟ ನೋಡಿ]

ಬೆಳ್ಳಗಿರುವುದೆಲ್ಲಾ ಹಾಲಲ್ಲ

ಅತ್ಯುತ್ತಮವಾದ ಮತ್ತು ಹೆಸರುವಾಸಿಯಾದ
ಸಿಹಿತಿಂಡಿಗಳು ಮೈಸೂರಿನಲ್ಲಿ ದೊರೆಯುವ
ಫಲಾಹಾರ ಮಂದಿರ

ಶ್ರೀ ಕೃಷ್ಣ ಭವನ್

ಮಾರ್ಕೆಟ್ ಚೌಕ

(BY APPOINTMENT TO
H. H. THE MAHARAJA OF MYSORE)

ಶುದ್ಧವಾದ ಚನ್ನೆಕಾಸಿದ ತುಪ್ಪದಿಂದಲೇ ಎಲ್ಲಾ ಆಹಾರಪದಾರ್ಥಗಳನ್ನೂ ಅತ್ಯುತ್ತಮವಾದ ರೀತಿಯಲ್ಲಿ ತಯಾರಿಸುವುದಾಗಿ ಹೆಮ್ಮೆಯಿಂದ ಮಹಾಜನರಿಗೆ ಅರಿಕೆಮಾಡುತ್ತೇವೆ.

ಹೊರಗಿನ ಆಕಾರದಿಂದಲೇ ಮೋಸಹೋಗಬೇಡಿರಿ !
ರುಚಿ ನೋಡಿ ಪರೀಕ್ಷಿಸಿರಿ !!
ಪೇಟೆಯಲ್ಲಿ ದೊರೆಯುವ ಪದಾರ್ಥಗಳಲ್ಲೆಲ್ಲಾ
ಅತ್ಯುತ್ತಮವಾದುವು !!!
ಎಲ್ಲಾ ಆರೋಗ್ಯ ನಿಯಮಗಳನ್ನೂ ಪಾಲಿಸುವುದೆಂದು
ಹೆಸರುವಾಸಿಯಾಗಿವೆ !!!!

ತಮ್ಮ ಉದಾರಾಶ್ರಯವನ್ನು ಕೋರಲಾಗಿದೆ.

ಶ್ರೀ ಕೃಷ್ಣ ಭವನ್ ಸ್ಟೋರ್ಸಿಗೆ

ದಯವಿಟ್ಟು ಭೇಟಿ ಕೊಡಿರಿ !

ನಿಮಗೆ ಬೇಕಾದ ಅತ್ಯುತ್ತಮವಾದ ಎಲ್ಲಾ ದಿನಸಿ
ವಗೈರೆ ಸಾಮಾನುಗಳೂ ದೊರೆಯುತ್ತವೆ.

INDEPENDENCE DAY SAL

1 Long Cloth Pyjamas	1	8	9
2 Olympic Founten pens	1	5	6
3 Agnidev Shawl No. 1	22	0	0
4 Longcloth Half arm Shirt	1	8	0
5 Woollen Palmbeach Suiting 54" wide	9	13	6
6 English Cotton Gaberdine 54" wide	6	14	0
7 Italian Rugs 60x90	16	8	0
8 Real Spun Silk Suiting per yard	1	4	0
9 Ladies Cotton Sweater	1	15	0
10 Waterproof Hat Cover	1	4	0
11 Ovaltine Half pound tin (big size)	2	0	0
12 Ceylon Art Silk Saree	4	8	9
13 Linen, Woollen & Assorted Ties	1	15	0
14 Ladies Pure wool Sweaters	4	14	0
15 2×8 yards Dhoties per pair	4	8	0
16 Knitting Wool per pound	7	14	0
17 Delhi Silk for Jubbas	1	11	0
18 Gents Celluloid Handle Umbrella	8	0	0
19 Mosquito Net 3 x6' square mesh	10	8	0
20 Door Curtain Netting 48" wide per yard	1	15	0
21 Cotton Blankets	3	8	0
22 Pure Wool Shawl 48"x100"	12	14	0
23 Art Silk Shirting 45"	1	4	0
24 Hospital Rubber Sheeting	2	14	
25 Cream Striped Suiting	0	14	
26 Pure Wool Gents Socks	2	0	
27 Real Mysore Silk 45" wide	3	8	
28 Blue Drill Knicker for villagers	1	4	
29 Real Silk Wing	2	0	
30 Silken Angavasthram	2	10	
31 Artificial Dharmavaram Silk Saree	17	8	
32 English Wool Black Colour per lb	10	0	
33 Lifeguard Condensed Milk	1	0	
34 Waterproof Hold all	9	14	
35 Raja Junior Pen	1	8	
36 Linen for Bush Shirts	2	0	
37 Unbleached Bedsheet (big size)	2	8	
38 Baby Talcum Powder (biggest size tin)	1	4	
39 Baroda Rugs of Pure wool	21	0	
40 Dextrosol per pound	3	0	
41 Long cloth 49" wide per yard	1	0	
42 Silk Net Sarees with Satin piping Border	29	0	
43 Real Mysore Silk Printed Saree	26	12	
44 Black Velvet per yard	6	14	
45 Color Twill and Long cloth (Mill made)	0	11	

NATIONAL EMPORIUM, MYSORE.

ಕಾಂಗ್ರೆಸ್ ಸಂಸ್ಥೆಯ ಪುನರುಜ್ಜೀವನ

ಸ್ವಾತಂತ್ರ್ಯ ದಿನಾಚರಣೆಗೆ ರಾಷ್ಟ್ರಪತಿಯವರ ಸಂದೇಶ

ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಮಹಾಜನರಿಗೂ, ಸರಕಾರಕ್ಕೂ ಈ ಕೆಳಗೆ ಕಂಡಂತೆ ಸಂದೇಶವನ್ನು ಕಳುಹಿಸಿದ್ದಾರೆ —

ಆಹಾರದ ಪ್ರಶ್ನೆಯ ಜೊತೆಯಲ್ಲಿಯೇ ಕಾಂಗ್ರೆಸ್ ಸಂಸ್ಥೆಯ ಪುನರುಜ್ಜೀವನದ ಸಮಸ್ಯೆಗೂ ಬರುವ ಹನ್ನೆರಡು ತಿಂಗಳುಗಳಲ್ಲಿ ಇಡೀ ರಾಷ್ಟ್ರವು ತನ್ನ ಗಮನವನ್ನು ಕೊಡಬೇಕು ಆದಾದನಂತರ ಬರುವ ವರ್ಷದಲ್ಲಿ ಈ ಎರಡು ಕಾರ್ಯಕ್ರಮಗಳು ಸಾಂಗವಾಗಿ ಮುಕ್ತಾಯವಾಗಬೇಕು ತನ್ನ ಸ್ವಂತ ಕಾರ್ಯಸಾಧನೆಯ ಅಸ್ತಿಭಾರದ ಮೇಲೆ ಉಳಿಯುವ ಅಥವ ಅಳಿಯುವ ಸತ್ವಪರೀಕ್ಷೆಯಲ್ಲಿ ಕಾಂಗ್ರೆಸ್ ಸಂಸ್ಥೆಯು ಬರುವ ಹನ್ನೆರಡು ತಿಂಗಳೊಳಗೆ ತನ್ನ ಭವಿಷ್ಯವನ್ನು ನಿರ್ಧರಿಸುವುದೆಂದು ಆಶಿಸೋಣ

ದೇಶದ ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಮೇಲೆ, ಕಳೆದ ೨ ವರ್ಷಗಳಿಂದ ಕಾಂಗ್ರೆಸ್ ಸಂಸ್ಥೆಯು ಸಾಧಿಸಿರುವ ಕಾರ್ಯವು ಸಮರ್ಪಕವಾಗಿಯೂ ತೃಪ್ತಿಕರವಾಗಿಯೂ ಇರುವುದೆಂದು ಅವರ ವಿರೋಧಿಗಳೂ ಸಹ ಮನಗಂಡಿದ್ದಾರೆ ಇಷ್ಟು ಅಲ್ಪಕಾಲದಲ್ಲಿ ಮಹತ್ತ್ವದ ಕಾರ್ಯಗಳನ್ನು ಸಾಧಿಸಿದವರಿಂದ ಮುಂದಿನ ಕರ್ತವ್ಯದ ಹೊರೆಯ ಬಗ್ಗೆ ನಾವು ಕಣ್ಣು ಮುಚ್ಚಿ ಕುಳಿತಿರಬಾರದು ವಿಜಯ ಸಾಧನೆಯ ಹೆಮ್ಮೆಯಲ್ಲಿ ದೇಶಕ್ಕೂ ದೇಶದ ಸಾಮಾನ್ಯ ಪ್ರಜೆಗೂ ಸಲ್ಲಿಸಬೇಕಾದ ಕರ್ತವ್ಯದ ಹೊಣೆಯನ್ನು ಮರೆಯದಿರೋಣ

ಸಾಮಾನ್ಯಪ್ರಜೆಯ ಅಭ್ಯುದಯವೇ ದೇಶೋನ್ನತಿಯ ಹೆಗ್ಗುರುತು ಅವನ ತೃಪ್ತಿ, ಸಮಾಧಾನಗಳೇ ಶಾಶ್ವತ ಶಾಂತಿಯ ಅಡಿಗಲ್ಲು ಅವನ ಸಂತೋಷವೇ ರಾಷ್ಟ್ರದ ಉನ್ನತಿಯ ಭರವಸೆ ಪ್ರತಿಯೊಬ್ಬ ಪ್ರಜೆಗೂ ಹೊಟ್ಟೆತುಂಬಾ ಅನ್ನದ ನೆರವಳಿಯು ಉಂಟಾದಲ್ಲದೆ ಈ ಸೌಭಾಗ್ಯವು ನಾಡಿಗೆ ಉಂಟಾಗಲಾರದು ಬೋರೆಗೌಡನ ಅಜ್ಞಾನ, ಅನಾರೋಗ್ಯ ಮತ್ತು ಅವನ ಆರೆಬೆತ್ತಲೆ ಸ್ಥಿತಿಯು ಸರ್ಕಾರದ ಗಮನವನ್ನು ಮೊದಲು ಸೆಳೆಯಬೇಕು

ಆಹಾರ ಮತ್ತು ಬಟ್ಟೆ ಉತ್ಪತ್ತಿಗ ಪ್ರತಿ ಪ್ರಜೆಯೂ ಮುಖ್ಯ ಗಮನಕೊಡಬೇಕು ಆದರೆ ಉತ್ಪತ್ತಿಯಲ್ಲಿ ಎಲ್ಲರೂ ಭಾಗಿಗಳಾಗಬೇಕು ಸಾಕಾದಷ್ಟು ಆಹಾರವನ್ನು ಒದಗಿಸುತ್ತಿಲ್ಲವೆಂದು ಸರ್ಕಾರವನ್ನು ದೂರುವುದು ವಾಡಿಕೆಯಾಗಿರುತ್ತದೆ ಒಂದೇ ದಿನದಲ್ಲಿ ಯಾವ ಪ್ರಜಾಪ್ರಭುತ್ವ ರಾಷ್ಟ್ರವೂ ಆಹಾರವನ್ನು ಸೃಷ್ಟಿಮಾಡಲಾರದು ಆದರೆ ರೈತರೂ, ಕಾರ್ಮಿಕರೂ ಈ ಕೆಲಸವನ್ನು ಮಾಡಬಲ್ಲರು ಪ್ರಜಾಪ್ರಭುತ್ವಗಳು ಓಟಿನ ಸಂಖ್ಯೆಯನ್ನು ಬೆಳೆಸಬಲ್ಲವು ಆದರೆ ಓಟುಗಳಿಂದಲೇ ಹೊಟ್ಟೆಯು ತುಂಬುವುದಿಲ್ಲ ಸಹಕಾರ ತತ್ವದ ರೀತಿಯಲ್ಲಿ ಆಹಾರ ಧಾನ್ಯವನ್ನು ಬೆಳೆಯಲು ಎಲ್ಲರೂ ಪ್ರಯತ್ನಿಸಬೇಕು

ಕಾಂಗ್ರೆಸ್ಸಿನ ಅಧೋಗತಿಯ ಬಗ್ಗೆ ಕೆಲವರು ಚಿಂತಿಸುವರು ಆದರೆ ಕಾಂಗ್ರೆಸ್ ಸಂಸ್ಥೆಯಲ್ಲಿರುವ ಕೊಳಕುಗಳು ಮಾತ್ರ ಮೇಲೆ ತೇಲಿ ಬಂದು ಎದ್ದು ಕಾಣುವುದು ಅದರ ಗುಣಾತಿಶಯಗಳು ಅಗೋಚರವಾಗಿ ಹಿಂಬದಿಯಲ್ಲಿಯೇ ಉಳಿದಿರಲು ಸಾಧ್ಯ ನಿರಾಶೆಯಿಂದ ಕೇವಲ ಆತ್ಮತೃಪ್ತಿಗಾಗಿ ಈ ಮಾತನ್ನು ನಾನು ಹೇಳುತ್ತಿಲ್ಲ ವಾಸ್ತವಿಕ ವಿದ್ಯಮಾನಗಳನ್ನು ಕುರಿತು ಜನರು ತಮ್ಮ ಕರ್ತವ್ಯದಲ್ಲಿ ತೊಡಗಬೇಕು

ಹಳೆಯ ವೈಭವದ ಹಿರಿಮೆಯಿಂದಲೇ ಬಾಳಲು ಬಯಸುವುದನ್ನು ಬಿಟ್ಟು, ಹೊಸ ಶಕ್ತಿ ಸಾಮರ್ಥ್ಯಗಳನ್ನು ಗಳಿಸಿ ಸೇವೆ ಮತ್ತು ಶ್ರದ್ಧೆಯಿಂದ ನಾಡಿನ ಪ್ರಗತಿಗಳ ಉನ್ನತಿಯನ್ನು ಸಾಧಿಸಬೇಕು ಕೇವಲ ಇಂದಿನ ತಾತ್ಕಾಲಿಕ ಅನುಕೂಲಗಳನ್ನು ಮಾತ್ರವೇ ಗಮನಿಸದೆ ಶಾಶ್ವತವಾದ ಸುಖಶಾಂತಿಗಳನ್ನು ಸಾಧಿಸಬೇಕು

ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು

ಜಯ ಅಂಡ್ ಕಂಪೆನಿ

ಷ್ಯಾರ್ ಮತ್ತು ಷೇರು ಬ್ರೋಕರ್ಸ್, ಮನೆ ಗದ್ದೆ ಮಾರಾಟದ ಏಜೆಂಟರು ಮತ್ತು ಜವಳಿ ವರ್ತಕರು

ಷೇರು, ಮನೆ, ಗದ್ದೆ ಕೊಳ್ಳುವುದು, ಮಾರಾಟಮಾಡುವುದು

ಆಧಾರ, ಭೋಗ್ಯ, ಬಂಗಾರದ ಮೇಲೆ

ಸಾಲ ಕೊಡಿಸುವುದು ಇವುಗಳಲ್ಲಿ ನಾವು ನಿಮಗೆ ಸಹಾಯ ಮಾಡುತ್ತೇವೆ

ಕಂಟ್ರೋಲ್ ಮತ್ತು ಅನ್‌ಕಂಟ್ರೋಲ್

ಎಲ್ಲಾ ತರಹ ಬಟ್ಟೆಗಳೂ ನಮ್ಮಲ್ಲಿ ದೊರೆಯುತ್ತವೆ

ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ

[illegible]

—ಡೀನ್ ಇಂಜ್

ಸ್ವಾತಂತ್ರ್ಯ ಪದ್ಯರತ್ನಮಾಲಾ

ಲೇಖಕರು—ಅಕುಕವಿರತ್ನಂ ಭಾರತೀ

(ಭಾಮಿನೀ ಷಟ್ಪದಿ)

ಭರತಖಂಡದ ದಾಸ್ಯವಳಿಯಿಸಿ
ಪರಮ ಶಾಂತಿಯ ವಹಿಸಿ ವಿದ್ಯಾ
ಶರಧಿಯೆಂಬುವ ಹೆಸರ ಪೊಂದುತ ಸರ್ವ
ಜನಗಳಿಗು ॥
ಹಿರಿಯ ಬೋಧೆಯ ನೀಡಿ ಘನಗುಣ
ಭರಿತನಾಗುತ ಮೆರೆದ ಬಾಪುಜಿ
ವರನ ಕೀರ್ತಿಯ ಗುಡಿಗೆ ಜಯ ಜಯ ನಮೋ
ಜಯತು ॥ ೧ ॥

ಎಸೆವ ಜನಗಣ ಭರತಖಂಡದೆ
ಹೊಸದೆನಿಪ ಸ್ವಾತಂತ್ರ್ಯವೊಂದಿರೆ
ಜಸವ ಪೊಂದಲು ದೇಶಸೇವೆಯನೆಸಗಿ
ಬಿಡದಂತೆ ॥
ವಿಶದವಾಗಿಹ ಕೀರ್ತಿ ಕಾರ್ಯವ
ನೆಸಗಿ ಶಾಂತಿಯ ಪೊಂದಿ ಬಾಪುಜಿ
ಯಶಕೆ ಮಣಿಯುತ ಬಳಿಯಲಿಯೆ
ಬಾಳಲ್ಕೆ ಯತ್ನಿಪುದು ॥ ೨ ॥

ಇಂದಿಗೀ ಸ್ವಾತಂತ್ರ್ಯ ವರ್ಷವು
ಚಂದಮೆನಲೆರಡಕ್ಕೆ ದಾಟುತ
ಮುಂದಕಡಿಯಿಟ್ಟಿಹುದು ಕಲಿಯೊಳಗು
ಕಾರ್ಯದೊಳು ॥
ಅಂದವಾಯಿತು ಬೆರೆದ ವಿದ್ಯಾ
[illegible]
[illegible]
ಸಜ್ಜನರ ॥ ೩ ॥

[illegible]
[illegible]
[illegible]
[illegible] ॥
[illegible]
[illegible]
[illegible]
ಸಮರಾರು ॥ ೪ ॥

[illegible]
[illegible]
ಬನ್ನ ಬಾರದವೋಲು ಸಂತತ ದುಡಿದು
ಭಾವೆಯೊಳು ॥
ಮುನ್ನ ಮೆರೆದಾ ಕವಿವರರ ಸಂ
ಪನ್ನ ಮತಿ ಲಕ್ಷ್ಮೀಶ ರನ್ನರ
ಹೊನ್ನ ಕನ್ನಡ ಕವಿ ಬಲವು ತಾನುಳ್ಳ
ಯತ್ನಿಸಿರಿ ॥ ೫ ॥

ಮಂಗಳವು ಕರ್ನಾಟ ದೇಶಕೆ
ಮಂಗಳವು ಜಯಚಾಮ ನೃಪರಿಗೆ
ಮಂಗಳವು ಸ್ವಾತಂತ್ರ್ಯವರ್ಷದ ದಿವ್ಯ
ಸುಧ್ವಜಕೆ ॥
ಮಂಗಳವು ಕರ್ನಾಟ ಸಾಧ್ವಿಗೆ
ಮಂಗಳವು ಸಜ್ಜನರ ತಂಡಕೆ
ಮಂಗಳವು ಭಾರತಿಯ ಕವಿತಾರತ್ನ
ಮಾಲಿಕೆಗೆ ॥ ೬ ॥

ಸ್ವಾತಂತ್ರ್ಯ ದಿನದ ಜ್ಞಾಪಕಾರ್ಥವಾಗಿ
ತಾ॥ 15, 16 ಈ ಎರಡು ದಿನಗಳಲ್ಲಿ

ಪೋಸ್ಟು ಕಾರ್ಡ್ ಸೈಜಿನ
ನಿಮ್ಮ ಫೋಟೋ 2ಕ್ಕೆ
1 ಒಂದು ರೂಪಾಯಿ ಮಾತ್ರ

ಛಾಯಾ ಸ್ಟುಡಿಯೋ
ಶಿವರಾಂಪೇಟೆ ಮೈಸೂರು

ಭವಿಷ್ಯದಲ್ಲಿ ವಿಶ್ವಾಸವಿಟ್ಟು ಮುನ್ನಡಿಯಿಡೋಣ

ಸ್ವಾತಂತ್ರ್ಯೋತ್ಸವಕ್ಕೆ ಗೌರ್ನರ್ ಜನರಲ್ಲರ ಸಂದೇಶ

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ದ್ವಿತೀಯ ಸ್ವಾತಂತ್ರ್ಯೋತ್ಸವದ ಸಂಬಂಧದಲ್ಲಿ ಕೆಳಗೆ ಕಂಡಂತೆ ಸಂದೇಶವನ್ನಿತ್ತಿದ್ದಾರೆ:—

ಸ್ವಾತಂತ್ರ್ಯದ ತೃತೀಯ ವರ್ಷದಲ್ಲಿ ನಾವು ಕಾಲಿಡುತ್ತಿರುವೆವು ಸಹೋದರ ಸಹೋದರಿಯರೇ, ನಿಮ್ಮೆಲ್ಲರ ಪರವಾಗಿ ನಾನು ಮೊಟ್ಟಮೊದಲು ಬಾಪೂಜಿಯವರಿಗೆ ಪ್ರಣಾಮವನ್ನು ಸಲ್ಲಿಸುವೆನು ಅವರ ಆತ್ಮವು ನಮ್ಮನ್ನು ಕಾಯುತ್ತಿರಲಿ

ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿರುವ ಸರಕಾರಗಳು ಮತ್ತು ರಾಷ್ಟ್ರೀಯ ಸೇವೆಯಲ್ಲಿ ನಿರತರಾಗಿರುವ ಸಂಸ್ಥೆಗಳು ಅನೇಕವಾದ ಮತ್ತು ಕಷ್ಟತಮವಾದ ಸಮಸ್ಯೆಗಳನ್ನು ಎದುರಿಸಲು ತಮ್ಮ ಕೈಲಾದುದೆಲ್ಲವನ್ನು ಮಾಡುತ್ತಿವೆ ಜನರು ಸಾಮಾನ್ಯವಾಗಿ ಒಪ್ಪಿರುವಂತಹ ನೀತಿಗಳನ್ನು ಜಾರಿಗೆ ತರುವ ಸಂದರ್ಭದಲ್ಲೂ ನಮಗಿರುವ ಅಡಚಣೆಗಳು ಅಲ್ಪವಲ್ಲ ಜನರು ಈ ಕಷ್ಟಗಳನ್ನರಿತು, ಮನಃಪೂರ್ವಕವಾಗಿ ಸಹಕಾರಮಾಡಲು ಮನಸ್ಸು ಮಾಡಿದರೆ ಈ ತೊಂದರೆಗಳನ್ನು ದಾಟಬಹುದು

ನಾನು ಆಗಲೇ ಆಹಾರ ಮತ್ತು ಗೊಬ್ಬರಗಳ ಬಗ್ಗೆ ನನ್ನ ಆತಂಕವನ್ನೂ ಮತ್ತು ಮನವಿಯನ್ನೂ ತಿಳಿಸಿರುತ್ತೇನೆ ಅದು ನಮ್ಮ ಅತಿ ಪ್ರಾಮುಖ್ಯವಾದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ

ನಮ್ಮ ಪುರಾತನ ವೇದಗಳು ಸಾರುವಂತೆ ಅನ್ನದಿಂದ ಎಲ್ಲ ಜೀವಗಳೂ ಹುಟ್ಟುತ್ತವೆ, ಅನ್ನದಿಂದಲೇ ಜೀವಿಸುತ್ತವೆ, ಸತ್ತಮೇಲೂ ಸಹ ಇತರ ಜೀವಗಳಿಗೆ ಆಹಾರವಾಗುತ್ತವೆ ಅನ್ನವೇ ಬ್ರಹ್ಮ ನಾವು ಅನ್ನದ ವಿಷಯವಾಗಿ ಅನಾಚ್ಯವನ್ನಾಡಬಾರದು ಅನ್ನವನ್ನು ಬಿಸಾಡಬಾರದು ನಾವು ಬಹುವಾಗಿ ಅನ್ನವನ್ನು ಸೃಷ್ಟಿಸಬೇಕು ಹಸಿವಿನಿಂದ ಬಂದವನು ಹಿಂತಿರುಗುವಂತಾಗದಿರಲಿ ಇದು ಬಹು ಪುರಾತನವಾದ ವಿವೇಕದ ಮಾತು ಹಿಂದಿನ ಕಾಲಕ್ಕೆ ಅನ್ವಯವಾಗುವಂತೆ ಈ ಕಾಲಕ್ಕೂ ಸಹ ಅದು ಅನ್ವಯಿಸುವುದು

ಪ್ರಪಂಚದ ಇತರ ದೇಶಗಳ ಜನರಿಗಿಂತಲೂ ನಾವು ಹೆಚ್ಚು ಅದೃಷ್ಟಶಾಲಿಗಳಾಗಿ ಇರುವೆವೆಂಬುದು ಪ್ರಜೆಗಳಿಗೆ ಮನವರಿಕೆಯಾಗಿಲ್ಲ ನಮ್ಮ ಸ್ತ್ರೀ-ಪುರುಷರು ಪ್ರಪಂಚದ ಇತರ ಭಾಗಗಳಲ್ಲಿರುವ ಜನರಿಗಿಂತಲೂ ಕಡಿಮೆ ಪ್ರಾಮಾಣಿಕರಾಗಿಲ್ಲ

ಕುಂದಿದ ಮನಸ್ಸಿನಿಂದಲಾಗಲಿ, ಆತ್ಮನಿಂದನೆಯಿಂದಾಗಲಿ ಯಾವ ಪುರುಷಾರ್ಥವೂ ಸಾಧನೆಯಾಗುವುದಿಲ್ಲ ಸಾಧನೆಗೆ ವಿಶ್ವಾಸವೇ ಅಡಿಗಲ್ಲು ಚಿಂತಾಕುಲರಾದ ಅಥವಾ ಶಂಕೆಯುಳ್ಳ ಜನರಿಗೆ ನಾನು ಹೇಳುವುದಿಷ್ಟೇ ನಮ್ಮ ನಾಡಿನ ವಿಶ್ವಾಸ ಮತ್ತು ರಾಷ್ಟ್ರದ ಘನತೆಯನ್ನು ಕಡಿಮೆ ಮಾಡುವುದರಿಂದ ನಾವು ಉತ್ತಮರಾಗಬಲ್ಲೆವೇ? ನಾವು ಬದುಕಿ, ಬಾಳಲು ಒಬ್ಬರೊಡನೊಬ್ಬರು ಸಹಕರಿಸಿ, ನ[ಮ್ಮ] ಘನತೆಯನ್ನು ಹೊರಗಡೆಯಲ್ಲಿ ಹೆಚ್ಚಿ[ಸಿ]ಕೊಳ್ಳಬೇಕು

ನಿಮ್ಮ ಮನೆಯು ಭೂತಚೇಷ್ಟೆಗೆ [ಒಳ]ಗಾಗಿದೆಯೆಂಬುದನ್ನು ನಂಬಿ ಅದೇ [...]ವನೆಯನ್ನು ಪ್ರಚುರಪಡಿಸಿದರೆ, ಅದ[...] ಬಾಡಿಗೆ ಸಿಗುವುದಿಲ್ಲ ಅಥವಾ ಅದ[...] ಮಾರಾಟದ ಒಳ್ಳೆಯ ಬೆಲೆಯೂ ಬರ[ು]ದಿಲ್ಲ ನಿಮ್ಮ ನಿವಾಸದ ಗವಾಕ್ಷಗಳ[ನ್ನು] ಪೂರ್ಣವಾಗಿ ತೆಗೆದು, ನೀವು ಅಲ್ಲಿ ವಾ[ಸಿ]ಸಿ ಬೆಳಕುಂಟುಮಾಡಬೇಕು ಆಗ [...] ಜಾತೀಯ ಶಬ್ದಗಳು ಕೇಳಿಬರುವುದಿ[ಲ್ಲ] ಭೂತವು ಆ ಸ್ಥಾನವನ್ನು ಬಿಟ್ಟೋ[ಡು]ವುದು

ಪ್ರಜಾಸತ್ತೆಯೆಂದರೆ, ತನಗಾಗಿ[...] ಎಲ್ಲವೂ ಎಂಬುದಲ್ಲ ಸಾರ್ವಜ[ನಿಕ] ಹಿತವೇ ಬಯಸಲ್ಪಡತಕ್ಕದ್ದು

ಹಳೆಯಕಾಲದಲ್ಲಿದ್ದ ವೈಯಕ್ತಿಕ[...]ತ್ತು ಸರ್ವಾಧಿಕಾರದ ಆಡಳಿತಗಳು ತ[ಮ್ಮ] ರಕ್ಷಣೆಯನ್ನು ಮಾಡಿಕೊಳ್ಳುತ್ತಿದ್ದ [...]ಯಲ್ಲಿ ಪ್ರಜಾಸತ್ತೆಯೂ ತನ್ನ ಅಧಿ[...]ವನ್ನು ರಕ್ಷಿಸಿಕೊಂಡು ಬರದಿದ್ದರೆ, ದೇಶದ ವಿಸ್ತಾರ, ಜನತೆಯ ಬಾಹು[...] ಮತ್ತು ಅವರ ಗುಣಾವಗುಣಗಳ ಪರಿ[...]ವಾಗಿ ಪ್ರಜಾಸತ್ತೆಯು ಮುರಿ[ದು]ಕೊಂಡು ಬೀಳಬಹುದು ಅಧಿಕಾ[ರ] ಎಲ್ಲಾದರೊಂದೆಡೆ ಇರಲೇಬೇಕು ಮ[...] ದಕ್ಷತೆಯಿಂದ ನಡೆಯಬೇಕು

ನಮ್ಮ ರಾಷ್ಟ್ರದ ಜವಾಬ್ದಾರಿಯ[ನ್ನು] ಹೊತ್ತಿರುವವರು ಯಾವ ರೀತಿಯ[ಲ್ಲೂ] ಸರ್ವಾಧಿಕಾರಿಗಳಲ್ಲ ತಲೆಕೆಳಗ[ಾಗಿ ಮಾ]ಡುವ ಚಟುವಟಿಕೆಗಳು ಅವರಿಗೆ ಹಿ[...]ವೆಂಬುದು ನಿಜ ಆದರೆ ಅವರು ಸ[...] ಪ್ರಾಯವನ್ನು ತುಳಿಯಲು ಇಚ್ಛಿಸ[ು]ವರಲ್ಲ ದೇಶದಲ್ಲಿ ಅವ್ಯವಸ್ಥೆಯನ್ನು[ಂಟು] ಮಾಡುವಂತಹ ತುಚ್ಛ ಅಭಿಲಾಷೆ[ಯಿಲ್ಲ]ದ ಯಾವುದೇ ಟೀಕೆ ಮತ್ತು ಅಭಿಪ್ರಾ[ಯ]ಗಳನ್ನಾಗಲಿ ಅವರು ಸ್ವಾಗತಿಸುವರು. ಕೈಶವಾವಸ್ಥೆಯ ಪ್ರಜಾಸತ್ತೆಯು ಹಿ[...] ಅಥವ ಅವ್ಯವಸ್ಥೆಯನ್ನು ತಡೆ[ಯ]ಲಾರದು

ಶಾಸನ ಸಭೆಗಳಲ್ಲಿರುವ ಬಹುಮತ[...]ಬ್ಯಾಕರ ಬೆಂಬಲ ಹೊಂದಿರುವುದು ಸ[...] ಸರ್ಕಾರಗಳ ತಪ್ಪಲ್ಲ ವಿರೋಧವ[...]ದ್ದರೂ ಸಹ ಅದರ ಪ್ರಸಾರಕ್ಕೆ ಅವಕ[ಾಶ]ವಿದೆ ಇದೇ ಪ್ರಜಾಸತ್ತೆಗೂ, ಸರ್ವಾ[ಧಿ]ಕಾರತ್ವಕ್ಕೂ ಇರುವ ಮೂಲಭೂತ[...] ವ್ಯತ್ಯಾಸ ಆದರೆ ಪ್ರಜಾಸತ್ತೆಯಲ್ಲಿ ಜ[...]ಕಳೆ ತುಂಬಲು ಕೃತಕ ಸೃಷ್ಟಿಮಾಡ[ಲು] ಸಾಧ್ಯವಾಗದ ಮಾತು ನಾವು ನ[...]

[೭ನೇ ಪುಟ ನೋಡಿ]

ರಾಷ್ಟ್ರಪಿತ ಪೂಜ್ಯ ಬಾಪೂಜಿ

ಸ್ವಾತಂತ್ರ್ಯದ ಸವಿ ನೆನಪು

ಅಂಧಕಾರದಿಂದ ಬೆಳಕಿಗೆ, ದಾಸ್ಯದಿಂದ ಸ್ವಾತಂತ್ರ್ಯಕ್ಕೆ, ಭಾರತವು ಮುನ್ನಡಿಯನ್ನಿಟ್ಟು ಇಂದಿಗೆ 2 ವರ್ಷಗಳಾದವು. ಇದುವರ ವಿಗೂ ನಮಗೆ ನೆರವಿತ್ತ ಸಕಲರಿಗೂ ಈ ಸುದಿನದಲ್ಲಿ ನಮ್ಮ ಹೃತ್ಪೂರ್ವಕವಾದ ವಂದನೆಗಳು

ಈ ಮಹೋತ್ಸವಕ್ಕಾಗಿ ಏರ್ಪಡಿಸಿರುವ

ಸುಪ್ರಸಿದ್ಧ ದಿಗ್ದರ್ಶಕ ಮೆಹಬೂಬ್‌ರವರ

ಅನೋಖಿ ಅದ

[ಹಿಂದಿ]

ಎಂಬ ಚಿತ್ರವನ್ನು ನೋಡಲು ನಿಮ್ಮೆಲ್ಲರ ಸ್ವಾಗತ ಬಯಸಿದೆ

ಮನಮೋಹಿನಿಯಾದ ನಾಸೀಂ ಮುಖ್ಯ ಪಾತ್ರವನ್ನು ವಹಿಸಿರುವರು.

—ಜೈ ಹಿಂದ್ !

ವ್ಯವಸ್ಥಾಪಕರು

ರಾಜಕಮಲ್ ಟಾಕೀಸ್

ಮೈಸೂರು.

ಪ್ರಭುದೇವಾ ಟಾಕೀಸ್

15-8-49 ನೇ ಸೋಮವಾರದಿಂದ ಅಮೋಘ 7 ನೆಯ ವಾರ

ಜೆಮಿನಿಯವರ ಶ್ರೇಷ್ಠ ಕಲಾಕೃತಿ

ಬಾಲನಾಗಮ್ಮ

(ತೆಲಗು)

ಪ್ರತಿ ದಿನ ೨ ಆಟಗಳು

ಪಾತ್ರ:- ಪುಷ್ಪವಲ್ಲಿ, ಕಾಂಚನಮಾಲ ಮುಂತಾದವರು

ಇಡೀ ಭರತಖಂಡದ ಹಿತವನ್ನೇ ಚಿಂತಿಸೋಣ

ಮಹಾಪ್ರಧಾನಿ ಪಂಡಿತ ನೆಹರೂರವರ ಸಂದೇಶ

ಮಹಾಪ್ರಧಾನಿ ಪಂಡಿತ ನೆಹರು.

ನಮ್ಮ ಸ್ವಾತಂತ್ರ್ಯದ ದ್ವಿತೀಯ ವಾರ್ಷಿಕೋತ್ಸವದ ಈ ದಿವಸ ಕಳೆದ ಸಂವತ್ಸರದಲ್ಲಿ ಸಾಧಿಸಲ್ಪಟ್ಟ ಕಾರ್ಯಗಳನ್ನು ಪರಿಶೀಲಿಸೋಣ ನಮ್ಮಿಂದ ಆಗದೆ ಉಳಿದ ಕಾರ್ಯಗಳನ್ನು ನೆನೆದು, ಬರುವ ವರ್ಷದಲ್ಲಿ ಅದಕ್ಕಾಗಿ ದುಡಿಯಲು ಸಿದ್ಧರಾಗೋಣ ನಮ್ಮ ಸಾಧನೆಗಳ ಮೇಲೆ ನಮ್ಮನ್ನು ಅಳತೆ ಮಾಡಲಾಗುವುದು, ನಾವು ಉಚ್ಚರಿಸುವ ಮಾತುಗಳಿಂದಲ್ಲ

ಬರಲಿರುವ ವರ್ಷದಲ್ಲಿ ಭಾರತದ ರಿಪಬ್ಲಿಕ್ಕು ಸ್ಥಾಪಿತವಾಗುವುದು ನಾಡಿನ ಜೀವನದಲ್ಲಿ ಹೊಸ ಅಧ್ಯಾಯವು ಪ್ರಾರಂಭಿಸುವುದು ಯಾವ ಭಾರತದ ರಿಪಬ್ಲಿಕ್ಕಿನ ಸ್ಥಾಪನೆಗಾಗಿ ನಮ್ಮಲ್ಲಿ ನೇಕರು ಇಡೀ ಜೀವಮಾನವನ್ನೆಲ್ಲಾ ಕಳೆದಿರುವರೋ, ಅಂತಹ ರಾಜ್ಯದ ಅಸ್ತಿವಾರವನ್ನು ನಾವು ನಿಧಾನವಾದರೂ ಸ್ಥಿರವಾಗಿ ಹಾಕುತ್ತಲಿದ್ದೇವೆ

ಇಡೀ ಭಾರತದ ಹಿತವನ್ನೇ ದೃಷ್ಟಿಪಥದಲ್ಲಿಟ್ಟುಕೊಂಡು, ಸರ್ವಸಾಮಾನ್ಯರ ಹಿತಸಾಧನೆಗಾಗಿ ದುಡಿಯೋಣ. ಪಂಗಡ, ಗುಂಪು ಅಥವಾ ಪ್ರಾಂತಕ್ಕಾಗಿ ಬೇಡ ಭಾರತದ ಜನಸಾಮಾನ್ಯರು ಆರ್ಥಿಕ ಬಿಕ್ಕಟ್ಟಿನ ಸಿಕ್ಕು ನರಳುತ್ತಿರುವುದು ನಮ್ಮ ದೇಶದಲ್ಲಿ ಮಾತ್ರವಲ್ಲದೇ, ಪ್ರಪಂಚದ ಇತರ ಭಾಗಗಳಲ್ಲೂ ಈ ಸ್ಥಿತಿ ಇದೆ.

ಸಮೃದ್ಧಿ, ಶಿಸ್ತು ಮತ್ತು ಸ್ಥಿಮಿತ ಪರಿಸ್ಥಿತಿಗಳಿದ್ದರೆ ಮಾತ್ರ ನಮ್ಮ ಆರ್ಥಿಕ ರೀತಿನೀತಿಗಳು ಫಲಕೊಡಬಲ್ಲವು ಅವ್ಯವಸ್ಥೆಯಾದರೆ ಏನೂ ಸಾಧಕವಾಗುವುದಿಲ್ಲ ಆದಕ್ಕಾಗಿ ಭಾರತದ ಹಿತ ಬಯಸುವವರೆಲ್ಲರೂ ಹಿಂಸೆ ಮತ್ತು ಅವ್ಯವಸ್ಥೆಯನ್ನು ಎದುರಿಸಿ ನಿಲ್ಲಬೇಕು. ಪ್ರತಿಯೊಬ್ಬನೂ ತಾನು ಸ್ವತಂತ್ರ ಪ್ರಜೆಯೆಂದು ಅರಿತು ತನ್ನ ಜವಾಬ್ದಾರಿಯನ್ನು ಹೊರಬೇಕು

ಎಷ್ಟೇ ಉತ್ತಮವಾದರೂ, ಸರಕಾರಗಳು ಪರಿಮಿತ ವ್ಯಾಪ್ತಿಗಳಲ್ಲಿ ಕಾರ್ಯ ಮಾಡಬಲ್ಲವು ಪ್ರಜಾಸತ್ತಾತ್ಮಕ ಸರ್ಕಾರಕ್ಕೆ ಪ್ರಜೆಗಳ ಪೂರ್ಣ ಸಹಕಾರವಿರಬೇಕು.

ಮನುಷ್ಯಮಾತ್ರದವನಿಗೆ ಮುಖ್ಯವಾಗಿ ಬೇಕಾದುದು ಆಹಾರ ಇದಕ್ಕೆ ಪ್ರಥಮಸ್ಥಾನವನ್ನು ಕಲ್ಪಿಸಿರುವೆವು ಪ್ರತಿಯೊಬ್ಬರೂ ಆಹಾರದ ಉತ್ಪತ್ತಿಗಾಗಿ ದುಡಿಯಬೇಕು ನಾವು ಆಹಾರದಲ್ಲಿ ಸ್ವಾವಲಂಬಿಗಳಾಗದಿದ್ದರೆ ಅನ್ಯರ ಮೇಲೆ ಭಾರ ಹಾಕಬೇಕಾಗುವುದು

ನಮ್ಮಲ್ಲಿ ನಾವು ಗಾಢವಾದ ನಂಬಿಕೆಯಿಡೋಣ ಆದರಿಂದ ಎಲ್ಲವೂ ಒಳ್ಳೆಯದಾಗಿ ಪರಿಣಮಿಸುವುದು ಹೇಗೆಂದರೆ ನಮ್ಮ ರಾಷ್ಟ್ರಪಿತನ ಸಂದೇಶವನ್ನು ನಾವು ಸದಾ ನೆನಪಿಗೆ ತಂದುಕೊಂಡಂತೆಯೇ ಸರಿ

ಚರಿತ್ರಾರ್ಹವಾದ ಪ್ರಾಮುಖ್ಯತೆಯುಳ್ಳ ಈ ದಿನದಲ್ಲಿ ಮಹಾತ್ಮಾ ಗಾಂಧಿಯವರನ್ನು, ಅವರ ಬೋಧನೆಗಳನ್ನೂ ಭಕ್ತಿಪುರಸ್ಸರವಾಗಿ ನೆನೆಸಿಕೊಳ್ಳೋಣ ಹಾಗೆಯೇ ನಮ್ಮನ್ನು ಸ್ವಾತಂತ್ರ್ಯದ ಅಭಿಮಾನಿಗಳಾಗಿ ಇರಿಸಿಕೊಂಡು ಅತ್ಯಾಗ್ರಹದಿಂದ ಬಾಳೋಣ

ಮಹಾತ್ಮರ ಪ್ರಾರ್ಥನೆ

ರಘುಪತಿ ರಾಘವ ರಾಜಾರಾಂ ।
ಪತಿತ ಪಾವನ ಸೀತಾರಾಂ ॥
ಈಶ್ವರ ಅಲ್ಲಾ ತೇರೇ ನಾಂ ।
ಸಬ್‌ಕೋ ಸನ್ಮತಿ ದೇ ಭಗವಾನ್ ॥

ಸ್ವತಂತ್ರ ಭಾರತದ ದ್ವಿತೀಯ ವರ್ಷದ ಪ್ರಮುಖ ಘಟ್ಟಗಳು

[2ನೇ ಪುಟದಿಂದ ಮುಂದುವರಿದುದು]

...ರರು, ವಿಶ್ವವಿದ್ಯಾನಿಲಯದ ಸುಧಾರಣೆ ಬಗ್ಗೆ ಡಾ॥ ಸಿ ಆರ್ ರೆಡ್ಡಿಯವರ ವರದಿ, ಪ್ರ ಪ್ರ ಸಚಿಗ ಚುನಾಯಿತರಾಸಗೀ ವಿಷ್ಯಕ್ಷರು, ರ್ಯಾರ್ಯ ಅಲ್ಲದ ಸದಾ...ರ್ಗಗಳಿಂದಲೂ ಇಲ್ಲಿ ದೋಸೆಗಳ ತಯಾರಿಕೆ ನಿಷೇಧ

ಸ್ವಿಟ್ಜರ್ಲೆಂಡಿಗ ಪ್ರಧಾನಿ ಪಂಡಿತ ನೆಹರೂರವರ ಭೇಟಿ ತಿರುವಾಂಕೂರು, ರಾಜರ 20 ಸಾವಿರ ಎಕರೆ ಜಮೀನು ...ಳು ಸರ್ಕಾರಕ್ಕೆ ಭಾರತದಾದ್ಯಂತ ...ನಿವಾಸ ಮಂದಿರಗಳ ಮಸ್ತರ ಕಲ್ಪ... ಉಪಮುಖ್ಯಾಪಕೆಯಲ್ಲಿ ಶ್ರೀ ಶರತ್ ಚಂದ್ರ ಬೋಸರಿಗೆ ಜಯ, ಭಾರತದ ರಾಜ್ಯಾಂಗ ಸಭೆಯಲ್ಲಿ ಕಾಶ್ಮೀರದ ಸದಸ್ಯರಿಗೆ ಸ್ಥಾನ

ಜೂನ್—ಆಫ್ಘಾನಿಸ್ಥಾನಕ್ಕೂ ಪಾಕೀಸ್ಥಾನಕ್ಕೂ ಘರ್ಷಣೆ, 1951 ರಿಂದ ಆಹಾರಧಾನ್ಯಗಳನ್ನು ಹೊರಗಿನಿಂದ ತರಿಸುವುದನ್ನು ನಿಲ್ಲಿಸುವ ಬಗ್ಗೆ ಕಾರ್ಯಕ್ರಮ

ಜುಲೈ—ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಐಕ್ಯ ಆರ್. ಎಸ್ ಎಸ್ ಮೇಲಿನ ಪ್ರತಿಬಂಧಕ ರದ್ದು ಭಾರತದಲ್ಲಿ ಪಾಕೀಸ್ಥಾನದ ಗೂಢಚಾರರ ತಂಡದ ಪತ್ತೆ ಹೈದರಾಬಾದಿನ ಖಾಸಿಂ ರಜ್ವಿಯ ವಿಚಾರಣೆ ಪ್ರಾರಂಭ, ಮೈಸೂರಿನಿಂದ ಜಪಾನಿನ ಮುಕ್ಕಾಳಿಗೆ ಆನೆಯ ರವಾನೆ ಭಾರತಕ್ಕೂ ಮತ್ತು ಬ್ರಿಟನ್ನಿಗೂ ಸ್ಟರ್ಲಿಂಗ್ ನಿಧಿಯ ಬಗ್ಗೆ ಒಪ್ಪಂದ

ಮೈಸೂರು ಸಂಸ್ಥಾನದಲ್ಲಿ 15 ಸಾವಿರ ಹೋಟಲುಗಳ ಮುಷ್ಕರ ಗೋಪಾಲರಾವ್ ದೇವನಗಾರರಿಗೆ 1 ಆಣೆ ಡಿವಿಡೆಂಡ್

ಆಗಸ್ಟ್—ಮೈಸೂರಿನಲ್ಲಿ ದಿವಾನರ ಹುದ್ದೆ ರದ್ದು ಮಂತ್ರಿಮಂಡಲದ ಪುನರ್ರಚನೆ ಬಗ್ಗೆ ಮಾತುಕತೆ, 15 ನೇ ತಾ॥ ಸ್ವಾತಂತ್ರ್ಯ ದಿನೋತ್ಸವ

ವಿಜಯೋತ್ಸವ

ವಿಜಯೋತ್ಸವದಿ ನಲಿಯುವ ಬನ್ನಿ
ವಿಮುಕ್ತ ದೇಶವ ಹೊಗಳುವ ಬನ್ನಿ
ನಲಿಯುವ ಹೊಗಳುವ ಮಣಿಯುವ ಬನ್ನಿ
ಜಯಭಾರತ ಜಯಭಾರತ ಜೈಹಿಂದ್

—ಮಕ್ಕಳ ಕೂಟ.

ಭವಿಷ್ಯದಲ್ಲಿ ವಿಶ್ವಾಸವಿಟ್ಟು ಮುನ್ನಡಿಯಿಡೋಣ

[4ನೇ ಪುಟದಿಂದ ಮುಂದುವರಿದುದು]

...ಧಿಕಾರಿಗಳೆಂದೂ, ಆದುದರಿಂದಲೇ ವಿರೋಧಿಗುಂಪನ್ನು ತುಳಿಯುವವರೆಂದೂ ಹಲವೆಡೆಗಳಲ್ಲಿರುವ ಭಾವನೆಯ ಮೇಲೆ ಬದಲಾಗುತ್ತಿರುವ ವಾದಗಳನ್ನು ನೋಡಿ ನಾನೀ ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ ಕೇಂದ್ರ ಮತ್ತು ಪ್ರಾಂತಗಳಲ್ಲಿ ಈಗಿರುವ ಸರಕಾರಗಳಿಗೆ ಇರುವ ಬಹು ಸಂಖ್ಯೆಯ ಬೆಂಬಲವೇ ಆ ಭ್ರಾಂತಿಗೆ ಕಾರಣ

ಎಂದಾದರೊಂದು ದಿನ ದೇಶ ಪ್ರೇಮವು ಸಣ್ಣ ಕಾರಣಗಳಿಗಾಗಿ ಭಿನ್ನ ಭಾವವನ್ನು ತಾಳುವುದು. ಅಲ್ಲಿಯವರೆಗೆ ನಾವು ಕಾಯಬೇಕು ಆಕಾಲದಲ್ಲಿ ಭಿನ್ನತೆಗಳನ್ನು ಮುಂದುಮಾಡಿಕೊಂಡು ಪರಿಸ್ಥಿತಿ ಹದಗೆಡಿಸಿದರೆ ಯಾವ ಲಾಭವೂ ಬಾರದು

ಅಧಿಕಾರವನ್ನು ಪಡೆದಿರುವ ವ್ಯಕ್ತಿಗಳನ್ನು ಬದಲಿಸಲು, ಹಕ್ಕನ್ನೂ ಅವಕಾಶವನ್ನೂ ಹೊಂದಿರುವುದೇ ಪ್ರಜಾಸತ್ತಾತ್ಮಕ ರಾಜ್ಯಾಂಗದ ಬೀಜಮಂತ್ರವೆಂಬುದು ಸತ್ಯ ಆದರೆ ಈ ಹಕ್ಕನ್ನು ಚಲಾಯಿಸಲು ನವೀನ ಮತ್ತು ಅಂಗೀಕೃತವಾದ ರೀತಿನೀತಿಯನ್ನು ಜಾರಿಗೆ ತರಲೋಸ್ಕರವೇ ಉಪಯೋಗಿಸತಕ್ಕದ್ದು ಇಂತಹ ರೀತಿನೀತಿಗಳನ್ನು ಅನುಸರಿಸಿ ಕೆಲಸ ಮಾಡಬಲ್ಲ ಜನವು ಬೇಕು. ಅದನ್ನು ಳಿ ಮ ವ್ಯಕ್ತಿಯ ಆಶೆಗಳನ್ನು ಹೆಚ್ಚಿಸಿಕೊಳ್ಳಲು ಅಧಿಕಾರಗಳನ್ನು ಪಯೋಗಿಸುವುದು ಸರಿಯಲ್ಲ ನಮ್ಮ ದೃಷ್ಟಿಯಲ್ಲಿ ಸ್ಥಿಮಿತವಾದ ಸ್ಥಿತಿಯು ಇಡೆಗೇ ಇರತಕ್ಕದ್ದು ನಮಗೆ ಸ್ಥಿರ ಉತ್ಪಾದನೆ, ವಾಣಿಜ್ಯ, ಪ್ರಗತಿ ಮತ್ತು ಇವೆಲ್ಲಕ್ಕೂ ಆಧಾರವಾದ ಆಡಳಿತಗಳು ಅವಶ್ಯಕ

ಹೆಚ್ಚು ವಿಶ್ವಾಸ, ಪರಸ್ಪರ ನಂಬುಗೆ, ಮತ್ತು ನಮ್ಮ ಬೃಹದ್ರಾಷ್ಟ್ರದ ಭವಿಷ್ಯದಲ್ಲಿ ನಾವು ವಿಶ್ವಾಸವುಳ್ಳವರಾಗಿ ದುಡಿಯಲು ಅವಕಾಶವಾಗುವಂತೆ ಬರುವ ವರ್ಷವು ಪರಿಣಮಿಸಲಿ.

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ
ನಮ್ಮಲ್ಲಿ

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ
ಸ್ವಂತ ಮಗ್ಗದಿಂದ ತಯಾರಾದ
ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಕುಂಭಕೋಣಂ ಸೀರೆಗಳು
ಗ್ಯಾರಂಟಿಯಾಗಿ ದೊರೆಯುತ್ತವೆ
ದಯವಿಟ್ಟು ಇಂದೇ ಭೇಟಿ ಕೊಡಿ!
ಶಿವರಾಂಪೇಟೆ, ಮೈಸೂರು.

REMEMBER

Decorate Your Stalls at:

DASARA EXHIBITION
WITH
SPRAY PAINTINGS
AWARDED 1ST PRIZE IN 1948
DASARA EXHIBITION

Consult for—
SIGN BOARDS
SHOW CARDS
FIGURE BOARDS

Book Your Orders Early for
NEAT, FINE & PROMPT WORK

APPLY TO
FILM ART SERVICE
1946, KOTWAL RAMAIAH S STREET, MYSORE

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ
ಎರಡು ಥಿಯೇಟರುಗಳಲ್ಲಿಯೂ
12—8—49 ರಿಂದ 2ನೇ ವಾರ
ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಶ್ರೀ ರಾಜರಾಜೇಶ್ವರಿ ಫಿಲಂಸ್‌ರವರ ಅತ್ಯುತ್ತಮ
ತಮಿಳು ಚಿತ್ರ
—ನವಜೀವನಂ—
ತಾರಾಗಣ—ನಾಗಯ್ಯ, ಕನ್ನಾಂಬ, ಎಲ್ ನಾರಾಯಣರಾವ್,
ಟಿ. ಆರ್. ರಾಮಚಂದ್ರನ್, ವರಲಕ್ಷ್ಮೀ, ಜಯಲಕ್ಷ್ಮೀ
ಮುಂತಾದವರು
IRV ಪಿಕ್ಚರ್ಸ್ ರಿಲೀಸ್

ಹೆಚ್ಚು ಆಹಾರ ಬೆಳೆಯಲು ಜನರು ಪ್ರತಿಜ್ಞೆ ತೆಗೆದುಕೊಳ್ಳಬೇಕು

ಸಚಿವ ಶ್ರೀ ಟಿ. ಮರಿಯಪ್ಪನವರ ಸೂಚನೆ

ಭಾರತದ ದ್ವಿತೀಯ ಸ್ವಾತಂತ್ರ್ಯ ದಿನಾಚರಣೆಯನ್ನು ಗಂಭೀರವಾದ ರೀತಿಯಲ್ಲಿ ಆಚರಿಸಬೇಕೆಂದೂ ಮತ್ತು ಆ ದಿನ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕೆಂದೂ ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ಸಂಸ್ಥಾನದ ಜಿಲ್ಲಾ ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಗಳಿಗೆ ಸೂಚನೆ ಕೊಟ್ಟಿರುತ್ತಾರೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಆರ್ಥಿಕ ಸ್ವಾತಂತ್ರ್ಯವು ಬಂದಿಲ್ಲ. ಬಡಜನರ ಕಷ್ಟಗಳು ನಿವಾರಣೆಯಾಗಿಲ್ಲ. ದಿನೇ ದಿನೇ ಆಹಾರದ ಪರಿಸ್ಥಿತಿಯು ಹದಗೆಡುತ್ತಿದೆ. ಪರಿಸ್ಥಿತಿಯನ್ನು ಸುಧಾರಿಸಲು ಪ್ರತಿಯೊಬ್ಬ ಪ್ರಜೆಯೂ ತನ್ನ ಕೈಲಾದಮಟ್ಟಿಗೆ ಹೆಚ್ಚು ಆಹಾರ ಬೆಳೆಯಲು ಮತ್ತು ಆಹಾರ ಮಿತವ್ಯಯ ಮಾಡಲು ಸರ್ವಪ್ರಯತ್ನ ಮಾಡುವುದಾಗಿ ಪ್ರತಿಜ್ಞೆ ತೆಗೆದುಕೊಳ್ಳಬೇಕು.



ಶ್ರೀ ಟಿ. ಮರಿಯಪ್ಪನವರು.

ಈ ಸಮಾರಂಭದಲ್ಲಿ ಹಳ್ಳಿಗಳಲ್ಲಿ ಹೆಚ್ಚು ಪ್ರಚಾರ ಕಾರ್ಯವನ್ನು ಗ್ರಾಮಾಭಿವೃದ್ಧಿ ಸಮಿತಿಗಳವರು ನಡೆಸಬೇಕು. ರೈತರು ತಮ್ಮ ವ್ಯವಸಾಯವನ್ನು ಸುಧಾರಿಸುವುದು, ಹೆಚ್ಚು ಆಹಾರ ಬೆಳೆ ವೃಕ್ಷಗಳನ್ನು ನೆಡುವುದು, ಹೆಚ್ಚು ಹಣ್ಣು ಮತ್ತು ತರಕಾರಿ ಬೆಳೆಯುವುದು, ಕೋಳಿ ಸಾಕುವುದು, ಹಾಲಿನ ಅಭಿವೃದ್ಧಿ—ಇವೇ ಮುಂತಾದ ಕಾರ್ಯಗಳಿಗೆ ಹೆಚ್ಚು ಗಮನ ಕೊಡಬೇಕು ಮತ್ತು ಈ ಕಾರ್ಯದಲ್ಲಿ ಗ್ರಾಮಸ್ಥರು ಸಹಕರಿಸಬೇಕು—ಎಂದು ಸಚಿವರು ಮನವಿಮಾಡಿರುತ್ತಾರೆ.

ಬಡಜನರ ಕಷ್ಟವನ್ನು ನಿವಾರಿಸುವುದೇ ನಿಜವಾದ ಸ್ವರಾಜ್ಯ

ಜೆ. ಸಿ. ಕುಮಾರಪ್ಪನವರ ಸಂದೇಶ

ಜನಗಳ ಸೌಕರ್ಯಕ್ಕಾಗಿ ರಾಷ್ಟ್ರದ ಜೀವನವನ್ನು ಪರಿವರ್ತನಗೊಳಿಸಿದರೆ ಆಗ ನಿಜವಾದ ಸ್ವರಾಜ್ಯವನ್ನು ಗಳಿಸಿದಂತಾಗುವುದು. ಕಳೆದ ೨ ವರ್ಷಗಳಿಂದ ಭಾರತವು ಪರದೇಶಗಳ ಸಂಕೋಲೆಯಿಂದ ಪಾರಾಗಿದೆ. ಆದರೆ ಗಾಂಧೀಜಿಯವರ ಸ್ವರಾಜ್ಯವು ಈಗ ಭಾರತದಲ್ಲಿ ಇಲ್ಲ. ಏಕೆಂದರೆ ಬ್ರಿಟಿಷರು ಹಾಕಿಕೊಟ್ಟ ಮಾರ್ಗದಲ್ಲಿಯೇ ರಾಷ್ಟ್ರದ ಜೀವನವು ನಡೆಯುತ್ತಿದೆ. ಪರದೇಶಗಳ ಒಂದವಾಳ, ವಿದೇಶಿ ಪ್ರವೀಣರ ಬಳಕೆ, ಪರದೇಶಗಳಿಗೆ ರಾಯಭಾರಿಗಳನ್ನು ಕಳುಹಿಸುವುದು ಇವುಗಳಿಂದ ಜನಸಾಮಾನ್ಯರಿಗೆ ಪ್ರಯೋಜನವೂ ಉಂಟಾಗುತ್ತಿಲ್ಲ. ಈಗಿನ ಆಹಾರ, ಬಟ್ಟೆ ಮತ್ತು ಗೃಹಗಳ ಅಭಾವವನ್ನು ಪ್ರಜೆಗಳೇ ಒಟ್ಟಾಗಿ ನಿವಾರಿಸಬೇಕು. ಇದನ್ನು ಮಾಡಿದ ಹೊರತು ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಎಂದ ಕರೆಯುವುದು ನಿರರ್ಥಕ. ಮುಂದಿನ ವರ್ಷವಾದರೂ ಭಾರತದ ಸ್ಥಿತಿ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ಪ್ರಾರ್ಥಿಸುತ್ತೇನೆ—ಎಂದು ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘದ ಅಧ್ಯಕ್ಷರಾದ ಶ್ರೀ ಜೆ. ಸಿ. ಕುಮಾರಪ್ಪನವರು ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ...

ಕಾಂಗ್ರೆಸ್ಸಿಗೆ ಹೆಚ್ಚು ಸದಸ್ಯರನ್ನು ಸೇರಿಸಬೇಕು

ಶಂಕರರಾವ್ ದೇವ್‌ರವರ ಸೂಚನೆ

ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಈ ಸ್ವಾತಂತ್ರ್ಯ ವಾರದಲ್ಲಿ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ಒಂದು ಮನವಿಯನ್ನು ಹೊರಡಿಸಿರುತ್ತಾರೆ.

ನಾವು ರಾಜಕೀಯ ಸ್ವಾತಂತ್ರ್ಯವನ್ನು ಮಾತ್ರ ಗಳಿಸಿದ್ದೇವೆ. ಅದನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಮತ್ತು ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯಗಳನ್ನು ಗಳಿಸಬೇಕಾಗಿದೆ. ಪರದಾಸ್ಯವನ್ನು ತೊಲಗಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಕಾಂಗ್ರೆಸ್ ಸಂಸ್ಥೆಯಿಂದ ಮಾತ್ರ ಈ ಕಾರ್ಯ ಸಾಧ್ಯ. ಕಾಂಗ್ರೆಸ್ಸಿನಲ್ಲಿ ಹೊಸ ಚೇತನವನ್ನು ತುಂಬಿ ಅದನ್ನು ಬಲಪಡಿಸಬೇಕಾದುದು ಎಲ್ಲರ ಕರ್ತವ್ಯ. ಆದರಿಂದ ಕಾಂಗ್ರೆಸ್ ಕಾರ್ಯಕರ್ತರುಗಳು ಸ್ವಾತಂತ್ರ್ಯ ದಿನೋತ್ಸವದಲ್ಲಿ ಹೆಚ್ಚುಮಂದಿ ಸದಸ್ಯರನ್ನು ಸೇರಿಸಬೇಕು—ಎಂದು ಅವರು ತಿಳಿಸಿರುತ್ತಾರೆ.

... ಒಂದು ಸಂದೇಶವನ್ನು ಕೊಟ್ಟಿರುತ್ತಾರೆ.

ಮೈ ಸೂ ರು ಸ್ಟೇ ಟ್ ರೈ ಲ್ವೆ

ಆಹಾರ ಸರಬರಾಜು ಇಲಾಖೆ

ಫುಡ್ ಕಂಟ್ರೋಲರವರ ಕಚೇರಿ, ಮೈಸೂರು.

ತಾ|| 4 ನೇ ಆಗಸ್ಟ್ 1949

ಪ್ರಕಟಣೆ

ಈ ಇಲಾಖೆಗೆ ಸೇರಿದ ಉಪಯೋಗಿಸಿದ ಸುಮಾರು ೨೧,೦೦೦ ನಾನಾ ವಿಧವಾದ ಗೋಣಿಚೀಲಗಳು ಬಿಕರಿಗೆ ಸಿದ್ಧವಾಗಿವೆ. ಕೊಂಡುಕೊಳ್ಳಲು ಇಷ್ಟವುಳ್ಳವರು ತಮ್ಮ ಟೆಂಡರುಗಳನ್ನು ಎರಡು ಪ್ರತಿಗಳಲ್ಲಿ ಬರೆದು ಸೀಲಾದ ಕವರಿನಲ್ಲಿಟ್ಟು, ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ **೧೯೪೯ನೇ ಸೆಪ್ಟೆಂಬರ್ ೧ನೇ ತಾರೀಖಿನೊಳಗಾಗಿ** ತಲುಪುವಂತೆ ರವಾನಿಸಬೇಕು. ಸೀಲಾದ ಕವರಿನ ಮೇಲೆ "ಗೋಣಿ ಚೀಲಗಳಿಗಾಗಿ ಟೆಂಡರು" ಎಂಬುದಾಗಿ ವಿಶದವಾಗಿ ನಮೂದಿಸಿರಬೇಕು. ಮೇಲೆ ನಮೂದಿಸಿದ ತಾರೀಖಿನ ನಂತರ ಬರುವ ಟೆಂಡರುಗಳನ್ನು ಗಮನಿಸುವುದಿಲ್ಲ. ವಿಧಿತವಾದ ನಿಯಮಗಳಿಗನುಸಾರವಾಗಿ ಬರುವ ಟೆಂಡರುಗಳನ್ನು ೧೯೪೯ ನೇ ಸೆಪ್ಟೆಂಬರ್ ೧ನೇ ತಾರೀಖು ೩ ಘಂಟೆಗೆ ಈ ಕೆಳಗೆ ಸಹಿಮಾಡಿರುವವರಿಂದಾಗಲೀ ಅಥವಾ ಅವರಿಂದ ನಿಯಮಿತನಾದ ಅಧಿಕಾರಿಯಿಂದಾಗಲೀ ಫುಡ್ ಕಂಟ್ರೋಲರ್‌ರವರ ಕಚೇರಿಯಲ್ಲಿ ತೆರೆಯಲಾಗುವುದು ಮತ್ತು ಟೆಂಡರುಗಳನ್ನು ಸಲ್ಲಿಸತಕ್ಕವರು ಆ ಹೊತ್ತಿನಲ್ಲಿ ಹಾಜರಿರಬಹುದು.

ಟೆಂಡರಿಗೆ ಸಂಬಂಧಿಸಿದ ನಿಯಮಗಳು ಈ ಕೆಳಗೆ ಕಂಡಂತಿವೆ —

(೧) ಪ್ರತಿ ಟೆಂಡರುದಾರನೂ ನಗದು ೫೦೦ ರೂಪಾಯಿಗಳ ಠೇವಣಿಯನ್ನು ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು, ಇವರಿಗಾಗಲೀ ಅಥವಾ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟ್, ಬೆಂಗಳೂರು ಸಿಟಿ, ಇವರಿಗಾಗಲೀ ಪಾವತಿ ಮಾಡಬೇಕು ಮತ್ತು ಅದರ ರಸೀತಿಯನ್ನು ಟೆಂಡರು ಅರ್ಜಿಯೊಂದಿಗೆ ಲಗತ್ತಿಸಬೇಕು. ಚೆಕ್ಕುಗಳು ಇತ್ಯಾದಿಗಳನ್ನು ಕೊಟ್ಟಲ್ಲಿ ಈ ಉದ್ದಿಶ್ಯಕ್ಕೆ ಅರ್ಹವಾಗುವುದಿಲ್ಲ.

(೨) ಕಟ್ಟಕಡೆಯದಾಗಿ ಟೆಂಡರನ್ನು ಒಪ್ಪಿಕೊಳ್ಳಲು ಇಲ್ಲವೇ ತಳ್ಳಿಹಾಕಲು ಮೈಸೂರಿನ ಮೈಸೂರು ಸ್ಟೇಟ್ ರೈಲ್ವೆ ಜನರಲ್ ಮ್ಯಾನೇಜರ್‌ರವರ ಅಧಿಕಾರಕ್ಕೊಳಪಟ್ಟಿದೆಯಲ್ಲದೆ ಟೆಂಡರನ್ನು ಒಪ್ಪಿಕೊಳ್ಳುವುದಕ್ಕೂ ಅಥವಾ ತಳ್ಳಿಹಾಕುವುದಕ್ಕೂ ಯಾವ ಕಾರಣವನ್ನೂ ಕೊಡಬೇಕಾದ್ದಿಲ್ಲ. ಈ ಇಲಾಖೆಗೆ ಅತಿ ಹೆಚ್ಚಿನದೆಂದು ತೋರಿದ ಟೆಂಡರನ್ನು ಒಪ್ಪಿಕೊಳ್ಳಬೇಕೆಂಬ ಕಡ್ಡಾಯವೇನೂ ಇಲ್ಲ.

(೩) ಜನರಲ್ ಮ್ಯಾನೇಜರವರ ತೀರ್ಮಾನವಾದ ನಂತರ ಜಯಪ್ರದವಾದ ಟೆಂಡರುದಾರನಿಗೆ ತಿಳಿಸಲಾಗುವುದು. ಹಾಗೆ ತಿಳಿಸಿದ ನಂತರ ಟೆಂಡರುದಾರನು ಮೂರು (೩) ದಿನಗಳೊಳಗಾಗಿ ಠೇವಣಿ ಹಣವನ್ನು ಬಿಟ್ಟು ಟೆಂಡರಿನ ಬಾಕಿ ಮೊಬಲಗನ್ನು ಪಾವತಿ ಮಾಡಬೇಕು ಮತ್ತು ಆ ದಿನದಿಂದ ೭ ದಿನಗಳೊಳಗಾಗಿ ಗೋಣೀಚೀಲಗಳನ್ನು ಸಾಗಿಸಲು ಏರ್ಪಾಡು ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

(೪) ಟೆಂಡರಿನಲ್ಲಿ ದರವನ್ನು ನಮೂದಿಸುವಾಗ ಸಾಧಾರಣವಾಗಿ ಉಪಯೋಗಿಸಿದ ಡ್ಯಾಮೇಜಾದ, ಉಪಯೋಗಕ್ಕೆ ಬರುವ ಮತ್ತು ಬಾರದಿರುವ ಗೋಣೀಚೀಲಗಳನ್ನು ಸೇರಿಸಿಕೊಂಡು, ಒಂದು ನೂರಕ್ಕೆ ಒಂದು ಲಾಟಿನಂತೆ ಬರೆಯಬೇಕು. ಆರಿಸಿದ ಗೋಣೀಚೀಲಗಳಿಗೆ ಮಾತ್ರ ಬರುವ ಯಾವ ಟೆಂಡರನ್ನೂ ಗಮನಿಸಲಾಗುವುದಿಲ್ಲ.

(೫) ಒಂದು ವೇಳೆ ಟೆಂಡರನ್ನು ಒಪ್ಪಿಕೊಳ್ಳುವ ಸಮಯದಲ್ಲಿ ಮೇಲಿನ ಲಾಟಿನಲ್ಲಿ ಸ್ವಲ್ಪ ಭಾಗವನ್ನು ಉಳಿಸಿಕೊಳ್ಳಬೇಕೆಂಬ ಅವಶ್ಯಕತೆ ತೋರಿದಲ್ಲಿ, ಈ ಕೆಳಗೆ ಸಹಿ ಮಾಡಿರುವವರು ಜಯಪ್ರದನಾದ ಟೆಂಡರುದಾರನಿಗೆ ಎಷ್ಟು ಗೋಣೀಚೀಲಗಳನ್ನು ಕೊಡಬಹುದೋ ಅಷ್ಟನ್ನು ಕೊಡಲು ಸ್ವಾತಂತ್ರ್ಯವನ್ನು ಪಡೆದಿದ್ದಾರೆ.

(೬) ಜಯಪ್ರದನಾದ ಟೆಂಡರುದಾರನು ಅವನ ಟೆಂಡರನ್ನು ಒಪ್ಪಿಕೊಂಡು ತಿಳಿಸಿದ ನಂತರ ಏನಾದರೂ ಹಿಂಜರಿದಲ್ಲಿ ಠೇವಣಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುವುದು.

(೭) ಜಯಪ್ರದರಾಗದ ಟೆಂಡರುದಾರರು ಠೇವಣಿಯನ್ನು ಪಾವತಿ ಮಾಡಿದಾಗ ಪಡೆದ ರಸೀತಿಯನ್ನು ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು, ಇವರಿಗೆ ಹಾಜರಿಪಡಿಸಿ ತಮ್ಮ ಹಣವನ್ನು ವಾಪಸು ಪಡೆಯಬಹುದು.

(೮) ಕೊಳ್ಳಲಿಚ್ಛಿಸುವವರು ಗೋಣೀಚೀಲಗಳನ್ನು ರೈಲ್ವೆ ಸೆಂಟ್ರಲ್ ಡಿಪೋ (ರೈಲ್ವೆ ಗುಡ್ಸ್‌ಶೆಡ್ ಪಕ್ಕದಲ್ಲಿ), ಮೈಸೂರಿನಲ್ಲಿ ಕೆಲಸದ ಕಾಲದಲ್ಲಿ ೩ ಘಂಟೆಯಿಂದ ೫ ಘಂಟೆವರೆಗೆ ಪರಿಶೀಲಿಸಬಹುದು.

(ಸಹಿ) ಪಿ. ಆರ್. ಬಾಬು ಮೊದಲಿಯಾರ್,
ಫುಡ್ ಕಂಟ್ರೋಲರ್,
ಮೈಸೂರು ಸ್ಟೇಟ್ ರೈಲ್ವೆ.

ಹೆಚ್ಚು ಬೆಳೆ ಕಾರ್ಯಕ್ರಮದಲ್ಲಿ ನಗರವಾಸಿಗಳ ಕರ್ತವ್ಯ

ಮೈಸೂರು ಪುರಜನರಲ್ಲಿ ನಗರಾಧ್ಯಕ್ಷರ ಮನವಿ

ಆಗಸ್ಟ್ ತಿಂಗಳಿನ ಹದಿನೈದನೆ ತಾರೀಖು ಭಾರತ ದೇಶದಲ್ಲಿ ಸ್ವಾತಂತ್ರ್ಯಯುಗ ಪ್ರಾರಂಭವಾದ ದಿವಸ ಸ್ವಾತಂತ್ರ್ಯಯುಗವು ಸ್ವರ್ಣಯುಗವಾಗಬೇಕಾದರೆ ಪ್ರಜೆಗಳೆಲ್ಲರೂ ಸ್ವಾತಂತ್ರ್ಯ ಸಾಧನೆಗ ಶ್ರಮಪಟ್ಟದ್ದಕ್ಕಿಂತ ನೂರ್ಮಡಿಯಾಗಿ ಶ್ರಮಪಡಬೇಕು ಸ್ವಾತಂತ್ರ್ಯ ದಿನಾಚರಣೆ ಬರಿಯ ವಿಜೃಂಭಣೆಯಲ್ಲ ಆ ದಿನ ಸ್ವಾತಂತ್ರ್ಯ ಸಂಪಾದನೆಗಾಗಿ ಕಷ್ಟಪಟ್ಟ ಎಲ್ಲಾ ದೇಶದ ಭಕ್ತರನ್ನೂ ಸ್ಮರಿಸಿಕೊಂಡು ಅವರ ತ್ಯಾಗವೂ ಸೇವೆಯೂ ಸಾರ್ಥಕವಾಗುವಂತೆ ಮಾಡಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ ದಿನ

ಮೈಸೂರು ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಆಗಸ್ಟ್ ತಿಂಗಳ ಹದಿನೈದನೆಯ ತಾರೀಖು ಪ್ರಾತಃಕಾಲ ಒಂಭತ್ತು ಘಂಟೆಗೆ ರಂಗಾಚಾರ್ಲು ಸ್ಮಾರಕ ಭವನದ ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನು ಏರ್ಪಡಿಸಲಾಗಿದೆ ಪುರಜನರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ

ದೇಶದ ಮುಂದಿರುವ ಅತಿ ಮುಖ್ಯವಾದ ಆಹಾರ ಸಮಸ್ಯೆಯ ಕಡೆಗೆ ಸಾರ್ವಜನಿಕರ ಗಮನವನ್ನು ಸೆಳೆಯುವ ಸಲುವಾಗಿ, ಆಹಾರ ಪದಾರ್ಥಗಳ ಉತ್ಪತ್ತಿ, ಅವುಗಳ ಮಿತವ್ಯಯ, ಅವನ್ನು ಪೋಲು ಮಾಡದೆ ಇರುವುದು— ಇವುಗಳನ್ನು ಕುರಿತು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಪ್ರಚಾರ ಕಾರ್ಯವನ್ನು ಎಲ್ಲಾ ಸಂಸ್ಥೆಗಳೂ ಕೈಗೊಳ್ಳಬೇಕೆಂದು ಸೂಚಿಸ ಬಯಸುತ್ತೇನೆ

ದಷ್ಟು ಆಹಾರವನ್ನು ಬೆಳೆಯುವುದಕ್ಕೆ ನಗರವಾಸಿಗಳೂ ಕೂಡ ಮಾಡಬಹುದಾದ ಸಹಾಯ ಬೇಕಾದಷ್ಟಿದೆ ಪ್ರದಾನಿಗಳವರು ಇತ್ತೀಚೆಗೆ ಹೇಳಿರುವಂತೆ ನಗರವಾಸಿಗಳೆಲ್ಲರೂ ತಮಗೆ ಅನುಕೂಲವಿರುವಷ್ಟು ಪ್ರದೇಶದಲ್ಲಿ ತರಕಾರಿಗಳನ್ನು ಬೆಳೆಯಬಹುದು ಮೈಸೂರು ನಗರದಲ್ಲಿ ಅನೇಕ ಮನೆಗಳಿಗೆ ಸೇರಿದಂತೆ ಆವರಣಗಳಿವೆ ವಿಸ್ತಾರವಾದ ಆವರಣವಿರುವ ಮನೆಯವರು ಅವುಗಳಲ್ಲಿ ಕಾಲಕ್ಕೆ ಅನುಗುಣವಾಗಿ ರಾಗಿ ಅವರೆ ಜೋಳ, ಮೊದಲಾದ ಧಾನ್ಯಗಳನ್ನು ಬೆಳೆಯಬಹುದು. ತರಕಾರಿಗಳನ್ನು ಬೆಳೆಯಬಹುದು ಕಡಿಮೆ ಪ್ರದೇಶವನ್ನು ಹೊಂದಿರುವವರು ಬರಿಯ ತರಕಾರಿಗಳನ್ನಾದರೂ ಬೆಳೆಯಬಹುದು ನಗರವಾಸಿಗಳೆಲ್ಲರೂ ತಮಗೆ ಅನುಕೂಲವಾಗುವಷ್ಟು ಪ್ರದೇಶದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ದಿವಸ ಆಹಾರಧಾನ್ಯಗಳನ್ನೋ ತರಕಾರಿಬೀಜಗಳನ್ನೋ ಬಿತ್ತಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಸಾರ್ವಜನಿಕರಿಗೆ ತರಕಾರಿ ಬೀಜಗಳು ಬೇಕಾದಲ್ಲಿ ಮುನಿಸಿಪಲ್ ಫಾರಂನಲ್ಲಿ ಒದಗಿಸಲು ಏರ್ಪಾಡು ಮಾಡಲಾಗಿದೆ

ಹಣ್ಣಿನ ಗಿಡಗಳನ್ನು, ನೆರಳಿನ ಗಿಡಗಳನ್ನು ಸ್ವಾತಂತ್ರ್ಯ ದಿನಾಚರಣೆಯ ದಿವಸ ಸಾಧ್ಯವಾದ ಕಡೆಗಳಲ್ಲೆಲ್ಲಾ ನೆಡಬೇಕೆಂದು ಕೋರುತ್ತೇನೆ ಇದಕ್ಕೆ ಬೇಕಾಗುವ ಸಸಿಗಳನ್ನು ನಗರ ಸಭೆಯ [illegible] ಪಾರ್ಕಿನಲ್ಲಿ ಕೊಡಿಸಲು ಏರ್ಪಾಡು ಮಾಡಲಾಗಿದೆ

ಈಗಿನ ಪರಿಸ್ಥಿತಿಯಲ್ಲಿ ಹೊರಗಿನಿಂದ ಆಹಾರಧಾನ್ಯಗಳನ್ನು ತರಿಸ ಪ್ರತಿ ವರ್ಷ [illegible] ಕೋಟ್ಯಂತರ ರೂಪಾಯಿ ಹಣ ವ್ಯಯವಾಗುತ್ತಿದೆ ಎಂದು ಭಾರತ ಸರ್ಕಾರದವರು [illegible] 1951 ನೇ ಇಸವಿ ಕೊನೆಗೆ [illegible] ಆಹಾರದಲ್ಲಿ ಸ್ವಾವಲಂಬನೆಯನ್ನು ಹೊಂದಬೇಕೆಂದು ನಿರ್ಧರಿಸಿದ್ದಾರೆ ಈ ಕಾರ್ಯದಲ್ಲಿ ನಾವೆಲ್ಲರೂ ನೆರವಾಗಬೇಕು

ಹೊರಗಿನಿಂದ [illegible] ಮಾಡಬೇಕಾದ ಅಕ್ಕಿಗೆ, ಗೋಧಿಗೆ ಕೊಡಬೇಕಾದ ಎರಡರಷ್ಟು, ಇತರ ಧಾನ್ಯಗಳಿಗೆ [illegible] ಎರಡರಷ್ಟು [illegible] ಬೇಕೆಂದು [illegible] ಸಾಧ್ಯವಾದಮಟ್ಟಿಗೆ [illegible] ಗಿ, ಇತರ ಆಹಾರ ಪದಾರ್ಥಗಳನ್ನು, ಅದರಲ್ಲೂ ರೇಷನ್ ವ್ಯವಸ್ಥೆಗೆ ಸಂಬಂಧ ಪಡದ ಆಹಾರ ಪದಾರ್ಥಗಳನ್ನು ಬಳಕೆಗೆ ತಂದುಕೊಳ್ಳುವುದು ಅತ್ಯಗತ್ಯವಾಗಿದೆ.

ನಮ್ಮಲ್ಲಿ ಆಹಾರ ಪದಾರ್ಥಗಳನ್ನು ಅರಿಯದೆ ಪೋಲುಮಾಡುವುದು ಸ್ವಲ್ಪಮಟ್ಟಿಗೆ ವಾಡಿಕೆಯಾಗಿದೆ ಇದು ಸಂಪೂರ್ಣವಾಗಿ ನಿಲ್ಲಬೇಕು ಆಹಾರಪದಾರ್ಥದ ಒಂದು ಕಾಳನ್ನೂ ಪೋಲುಮಾಡುವುದು ಮಹಾ ಪಾಪವೆಂದು ಪರಿಗಣಿಸಬೇಕು. ನಗರವಾಸಿಗಳೆಲ್ಲರೂ ಈ ವಿಷಯಕ್ಕೆ ಗಮನವನ್ನು ಕೊಟ್ಟರೆ ಆಹಾರದ ಕೊರತೆಯು ಬಹುಮಟ್ಟಿಗೆ ಕಡಿಮೆಯಾಗುತ್ತದೆ.

ಟಿ. ವೆಂಕಟರಮಣಯ್ಯ,
ಪೌರಸಭಾಧ್ಯಕ್ಷ.

Caterers by Appointment to H H The Maharaja of Mysore

Tel No 541 Estd 1944

SRI CHAMUNDESWARI BHAVAN

YELWAL ROAD, MYSORE



★

THE PREMIER BOARDING AND LODGING HOUSE AND RESTAURANT IN THE CAPITAL CITY

★

The HOTEL is modern and well furnished For those who appreciate the good things of life—good food well served in pleasant surroundings comfort, courteous attention and convenience

We assure all these in our Hotel.

PLEASE VISIT OUR—

C. B. GENERAL STORES

Located in our premises

For all your requirements of best quality

PROVISIONS, TOILET AND PERFUMERY GOODS CROCKERY AND CUTLERY, BENGAL BULBS, etc etc.

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟಣೆ

ಟ್ರಾಫಿಕ್ ಮ್ಯಾನೇಜರ ಕಛೇರಿ,
ಮೈಸೂರು
ತಾ 9-8-1949

ಹೊರದಾಗಿ ಪಾರ್ಸಲ್ಲುಗಳಾಗಿ ಬುಕ್ ಮಾಡಿದ ಹಣ್ಣುಗಳಿಗೆ ಇಲ್ಲಿಯವರೆಗೆ [illegible] ವರವಂತೆ ಚಾರ್ಜು ಮಾಡುತ್ತಿದ್ದುದನ್ನು ಇನ್ನು ಮುಂದೆ [illegible] ಪಾರ್ಸಲು ದರವನ್ನು ಸ್ಥಳೀಯ ರೈಲು ಮತ್ತು ದ್ರೂ ಬುಕ್ಕಿಂಗಿನಲ್ಲಿ ಚಾರ್ಜು ಮಾಡಲಾಗುವುದು. ಮುಂಗಡವಾಗಿ ಹಣ ಪಾವತಿಮಾಡುವುದು ಮತ್ತು ಮಾಲಿಕರ ಜವಾಬ್ದಾರಿ ಇವೇ ಮುಂತಾದ ಬುಕ್ಕಿಂಗಿನ ಇತರ ಷರತ್ತುಗಳಲ್ಲಿ ಯಾವ ಬದಲಾವಣೆಯೂ ಇಲ್ಲ

ಮಿರ್ಜಾ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್.

★ LAKSHMI ★

Announcement Extraordinary

The management have great pleasure in announcing that with effect from 2nd September 49 best ENGLISH PICTURES will be screened for MORNING SHOWS at concession rates.

YOUR PATRONAGE IS SOLICITED

Pacific Adventure, Gun Fighters
Return of Montecristo
To the Ends of the Earth
You were never Lovelier
Jhonny O'clock
Down to Earth Jonson Story
Thrill of Brazil, Pardon my Past

Corner of Greek (Technicolor)
Return of October ..
The Big Sombero .

ಸ್ವತಂತ್ರ ಭಾರತದಲ್ಲಿ ಆಹಾರೋತ್ಪತ್ತಿಗೆ ಅಗ್ರಸ್ಥಾನ

ಆಹಾರ ಧಾನ್ಯಕ್ಕಾಗಿ ವಿದೇಶೀಯರ ಮೇಲೆ ಅವಲಂಬನೆ ಕೂಡದು

ಯುದ್ಧ ಸನ್ನಾಹದ ರೀತಿಯಲ್ಲಿ ಧಾನ್ಯದ ಉತ್ಪತ್ತಿ ಮಾಡಬೇಕೆಂದು ನಾಯಕರ ಕರೆ

ಭಾರತ ಮಾತಾ

ನಮ್ಮ ದೇಶವು ಸ್ವತಂತ್ರವಾಗಿ ಇಂದಿಗೆ ಎರಡುವರ್ಷಗಳು ಪೂರೈಸಿದವು. ಸ್ವತಂತ್ರವಾದಮೇಲೆ ಸಹಜವಾಗಿ ಉದ್ಭವಿಸುವ ಪ್ರಶ್ನೆಗಳು ಈಗ ಪ್ರಜೆಗಳೆಲ್ಲರ ಮನಸ್ಸನ್ನೂ ಸೆಳೆದಿವೆ. ನಾಡಿನ ರಕ್ಷಣೆ ಎಷ್ಟು ಅತ್ಯವಶ್ಯಕವೋ, ಜನರಿಗೆ ಆಹಾರ ಒದಗಿಸುವುದೂ ಅಷ್ಟೇ ಅವಶ್ಯಕ. ಆದ ಕಾರಣ ಭಾರತದ ರಾಷ್ಟ್ರೀಯ ಸರಕಾರದವರು ಆಹಾರೋತ್ಪತ್ತಿಗೆ ಅಗ್ರಸ್ಥಾನವನ್ನು ಕಲ್ಪಿಸಿದ್ದಾರೆ.

ಯುದ್ಧ ಮುಗಿದಮೇಲೆ ಈಚೆಗೆ ಭಾರತವು ತನಗೆ ವರ್ಷಂಪ್ರತಿ ಬೇಕಾಗುವಷ್ಟು ಆಹಾರವನ್ನು ಒದಗಿಸಿಕೊಳ್ಳಲು ವಿದೇಶಗಳಿಂದ ಅಧಿಕ ಬೆಲೆಯನ್ನು ಕೊಟ್ಟು ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುತ್ತಿದೆ. ಸಾಮಾನ್ಯವಾಗಿ ಭಾರತಕ್ಕೆ ಸುಲಭಬೆಲೆಯಲ್ಲಿ ದೊರಕುತ್ತಿದ್ದ ಬರ್ಮಾ, ಸಯಾಂ ದೇಶಗಳ ಆಹಾರ ಧಾನ್ಯಗಳು ಹಲವು ಕಾಲದಿಂದ ತಪ್ಪಿಹೋಗಿ ದೇಶದಲ್ಲಿ ವಿಪರೀತವಾದ ಆಹಾರದ ಕೊರತೆಯು ಕಂಡುಬರುವುದು. ಇದನ್ನು ಪರಿಹರಿಸಲು ಬೇರೊಂದು ಮಾರ್ಗವೇ ಇಲ್ಲದೆ ಹೊರಗಿನಿಂದ ಧಾನ್ಯವನ್ನು ಯಥೇಷ್ಟವಾಗಿ ಹಣ ವ್ಯಯಮಾಡಿ ಕೊಂಡುಕೊಳ್ಳಬೇಕಾಯಿತು. ಇದೂ ದೇಶದಲ್ಲಿ ಆಹಾರದ ಅಭಾವವೇ ಕಾಣಲು ಒಂದು ಕಾರಣ. ಈ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಪರಿಹರಿಸಲು ರಾಷ್ಟ್ರದ ನಾಯಕರು ತಮ್ಮ ಗಮನವನ್ನೆಲ್ಲಾ ಇತ್ತಕಡೆ ತಿರುಗಿಸಿದ್ದಾರೆ.

ಬೇರೆ ದೇಶಗಳಿಂದ ಧಾನ್ಯವನ್ನು ಕೊಂಡುಕೊಳ್ಳುವ ಪದ್ಧತಿಯನ್ನು ತಪ್ಪಿಸಿ ಆಹಾರದ ವಿಷಯದಲ್ಲಾದರೂ ಭಾರತವು ಇತರ ದೇಶಗಳ ಮೇಲೆ ಅವಲಂಬನೆ ಮಾಡದಿರಲೆಂದು ಅಭಿಪ್ರಾಯಪಟ್ಟು, ಸಮಸ್ತರೂ ಆಹಾರೋತ್ಪತ್ತಿಯ ಕಡೆಗೆ ಗಮನವೀಯಬೇಕೆಂದು ಅವರು ಕೋರಿದ್ದಾರೆ. ಯುದ್ಧಕಾಲದಲ್ಲಿ ಭಾರತವು ಸಂಗ್ರಹಿಸಿದ ಸ್ಟರ್ಲಿಂಗ್ ನಿಧಿಯನ್ನು ಭಾರತದ ಅಭ್ಯುದಯಕ್ಕೆ ಬೇಕಾದ ಇತರ ಮೂಲ ಯಂತ್ರೋಪಕರಣ ಮತ್ತು ಆವಶ್ಯಕತೆಗಳಿಗಾಗಿ ಮೀಸಲಾಗಿಟ್ಟುಕೊಂಡು ಅವುಗಳನ್ನು ಹೆಚ್ಚುಮಾಡಿ ಆಹಾರಧಾನ್ಯ ಕೊಳ್ಳಬಾರದೆಂದೇ ಅವರ ಅಭಿಪ್ರಾಯ. ಅದಕ್ಕಾಗಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ದೇಶಕ್ಕೆ ಕೊಟ್ಟ ಸಂದೇಶದಲ್ಲಿ ಆಹಾರೋತ್ಪತ್ತಿಯನ್ನು ಯುದ್ಧ ಸನ್ನಾಹದ ಮಾದರಿಯಲ್ಲಿ ಮಾಡಬೇಕೆಂದು ಕೋರಿದ್ದಾರೆ.

ನಮ್ಮ ದೇಶದಲ್ಲಿ ನೈಸರ್ಗಿಕ ಸಂಪತ್ತು ಹೇರಳವಾಗಿದೆ. ನೀರಾವರಿಗೆ ಅವಶ್ಯಕವಾದ ಅನೇಕ ನದಿಗಳೂ ಪ್ರವಹಿಸುತ್ತಿವೆ. ಲಕ್ಷಾಂತರ ದೊಡ್ಡದೊಡ್ಡ ಕೆರೆಗಳೂ ಇವೆ. ಬಂಜರು ಬಿದ್ದಿರುವ ವಿಶಾಲವಾದ ಭೂಮಿಗಳೂ ಹೇರಳವಾಗಿವೆ. ಇಂತಹ ಅನುಕೂಲಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡುದೇ ಆದರೆ, 1951ರ ಒಳಗೆ ಭಾರತವು ತನಗೆ ಬೇಕಾದ ಆಹಾರವನ್ನು ಪೂರ್ತಿಯಾಗಿ ತಾನೇ ಬೆಳೆಯಬಹುದು. ಇನ್ನೆರಡು ವರ್ಷಗಳಲ್ಲಿ ಆಹಾರದ ಆಮದು ಪೂರ್ಣವಾಗಿ ನಿಂತುಹೋಗಲು ಕಾರ್ಯಕ್ರಮ ಕೈಗೊಳ್ಳಲಾಗಿದೆ. ಎಲ್ಲೆಲ್ಲಿ ಹೊಸದಾಗಿ ಉಳಬಹುದೋ ಅಂತಹ ಜಮೀನುಗಳೆಲ್ಲವನ್ನೂ ಉಪಯೋಗಿಸಲಾಗುವುದು. ನೀರಾವರಿ ಸೌಲಭ್ಯಕ್ಕಾಗಿ ಎಲ್ಲ ಏರ್ಪಾಡೂ ಮಾಡಲಾಗುವುದು. ಭಾರಿ ಪ್ರದೇಶಗಳಲ್ಲಿ ಉಳುಮೆಗೆ ಟ್ರಾಕ್ಟರುಗಳನ್ನು ಉಪಯೋಗಿಸಲು ಅವಕಾಶ ಕಲ್ಪಿಸಲಾಗುವುದು. ನಾಡಿನ ಯಾವ ಭಾಗದ ಭೂಮಿಯೂ ಅನುಪಯುಕ್ತವಾಗದಂತೆ ನೋಡಿಕೊಳ್ಳಲು ಏರ್ಪಾಡಾಗುವುದು.

ಇದಕ್ಕಾಗಿ ಭಾರತದ ಗೌರ್ನರ್ ಜನರಲ್ ರಾಜಗೋಪಾಲಚಾರಿಯವರು, ಪ್ರಧಾನಿ ಪಂಡಿತ ನೆಹರೂರವರೇ ಆದಿಯಾಗಿ ಪ್ರಾಂತ್ಯಗಳ ಗೌರ್ನರ್‌ರವರುಗಳೂ ತಮ್ಮ ಭವನಗಳಲ್ಲಿರುವ ಹುಲ್ಲುಗಾವಲುಗಳಲ್ಲಿ ಆಹಾರ ಬೆಳೆಯಲು ಅವಕಾಶ ಕಲ್ಪಿಸಿದ್ದಾರೆ. ರಾಜಾಜಿಯವರೇ ಸ್ವತಃ ತಮ್ಮ ಕೈಯ್ಯಿಂದ ನೇಗಿಲನ್ನು ಹಿಡಿದು ಭೂಮಿಯನ್ನು ಉತ್ತು, ಈ ಭಾಗದಲ್ಲಿ ದೇಶದ ಪ್ರಜೆಗಳಿಗೆ ಮೇಲ್ಪಂಕ್ತಿಯನ್ನು ಹಾಕಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ಆಹಾರೋತ್ಪನ್ನ ಕಾರ್ಯಕ್ರಮವು ಯಶಸ್ವಿಯಾಗಿ ಈಡೇರುವುದೆಂದು ನಂಬಲಾಗಿದೆ.

ಆಹಾರೋತ್ಪತ್ತಿಗೆ ಅವಶ್ಯಕವಾದ ಗೊಬ್ಬರಗೋಡನ್ನು ಭಾರತ ಸರ್ಕಾರದವರು ಕಡಿಮೆ ಬೆಲೆಗೆ ಒದಗಿಸುವವರಾಗಿದ್ದಾರೆ. ರೈತನಿಗೆ ಬೇಕಾಗುವ ಸಾಧನ ಸಂಪತ್ತುಗಳು ಸುಲಭವಾಗಿ ದೊರಕುವಂತೆ ಏರ್ಪಾಡಾಗಿರುವುದು.

ದೇಶದ ಹಲವೆಡೆಗಳಲ್ಲಿ ವ್ಯಾಪಾರಿ ಬೆಳೆಗಳನ್ನು ಕಡಿಮೆ ಮಾಡಿ, ಆಹಾರ ಧಾನ್ಯ ಬೆಳೆಯಲು ಉತ್ತೇಜನವೀಯಲಾಗುವುದು. ಬೆಳೆಯುವ ಪೈರುಗಳಿಗೆ ರೋಗಗಳು ತಗಲದಂತೆಯೂ, ಹುಳಗಳೇ ಆದಿಯಾಗಿ ಯಾವ ವಿಧವಾದ ಶತ್ರುಗಳ ಕಾಟವೂ ಇಲ್ಲದಂತೆಯೂ ನೋಡಿಕೊಳ್ಳಲು ತಕ್ಕ ಏರ್ಪಾಡಾಗಲಿರುವುದು.



ಗೌರ್ನರ್ ಜನರಲ್ ರಾಜಾಜಿ ಹೊಲವನ್ನು ಉಳುತ್ತಿರುವುದು

ಆಹಾರೋತ್ಪತ್ತಿಯಲ್ಲಿ, ಕಾಯಿಪಲ್ಲೆಗಳಿಗೂ ಸ್ಥಾನವುಂಟು. ಅಕ್ಕಿ ಮುಂತಾದ ಮೂಲ ಆಹಾರವಸ್ತುಗಳು ದೊರಕದ ಭಾಗದಲ್ಲಿ ಜನರು ತಮಗೆ ಸಾಕಷ್ಟು ಆಹಾರ ದೊರಕಿಸಿಕೊಳ್ಳಲು ತರಕಾರಿ ಮತ್ತು ಗೆಡ್ಡೆಗೆಣಸುಗಳನ್ನು ಬೆಳೆಯಬೇಕು. ಪ್ರತಿಯೊಬ್ಬರ ಮನೆ ಮುಂಭಾಗ ಅಥವಾ ಹಿತ್ತಲಿನಲ್ಲಿ ಎಷ್ಟು ಜಾಗವು ಸಿಗುವುದೋ ಅಷ್ಟನ್ನು ಸಹ ತರಕಾರಿಯನ್ನು ಬೆಳೆಯುವುದಕ್ಕಾಗಿ ಉಪಯೋಗಿಸಬೇಕು.

ಈ ಕಾರ್ಯವನ್ನು ಯಥಾವತ್ತಾಗಿ ಸಾಗಿಸಲು ದೇಶದ ಸೇವಕರ ನೆರವು ಅಗತ್ಯವಾಗಿದೆ. ದೇಶದ ನಾಯಕರುಗಳು, ಕಾಂಗ್ರೆಸ್ಸಿನ ಸದಸ್ಯರೂ, ಇತರ ಸಾರ್ವಜನಿಕ ಕಾರ್ಯಕರ್ತರುಗಳ ಮೇಲೆ ಈ ಕಾರ್ಯದ ಭಾರವು ಗುರುತರವಾಗಿ ಬಿದ್ದಿರುವುದು. ನಾಯಕರ ಸಂದೇಶವನ್ನು ಪ್ರತಿಹಳ್ಳಿಗೂ ತಿಳಿಸಿ, ರೈತಾಪಿ ಜನರು ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸುವಂತೆ ಮಾಡಬೇಕಾದ ಭಾರವು ಅವರ ಮೇಲೆ ಬಿದ್ದಿದೆ.

ರಾಷ್ಟ್ರಮುದ್ರೆ

ಈಸಾರಿ ನಡೆಯುವ ಸ್ವಾತಂತ್ರ್ಯೋ
ವದಲ್ಲಿ ದೇಶದ ಎಲ್ಲ ಕಡೆಗಳಲ್ಲೂ
ಗಿಡಗಳನ್ನು ನೆಡುವ ಕಾರ್ಯವು ವಿ
ಶ್ರಾಗಿ ಜರಗುವಂತೆ ಏರ್ಪಾಡಾ
ಆಹಾರದ ಸಂಬಂಧವಾದ ಗಿಡಗ
ಹೆಚ್ಚು ಪ್ರಾಶಸ್ತ್ಯವೀಯಲಾಗುವು
ಈ ಕಾರ್ಯದಲ್ಲಿ ಸಮಸ್ತರೂ ನೆರವಾ
ಬೇಕೆಂಬುದೇ ದೇಶದ ನಾಯಕರ
ಲಾಷೆಯಾಗಿದೆ

ಮುಂದೆ ಆಹಾರದ ಅಭಾವಕ್ಕೆ
ಕದೇ, ಕ್ಷಾಮಡಾಮರ ಭೀತಿಗೆ
ಪಾರಾಗಿ, ಧನಧಾನ್ಯ ಸಮೃದ್ಧಿಯಿ
ಕೂಡಿ, ಭಾರತವು ಕಳಕಳಿಯಿಂದ ಕಂ
ಸುವ ದೃಶ್ಯವು ನಮ್ಮೆಲ್ಲರ ಮುಂದೆ
ತಾಗ, ನಾವು ಧನ್ಯ ಪ್ರಜೆಗಳೆಂದು ತ
ಪಟ್ಟುಕೊಳ್ಳುವ ಕಾಲವು ಜಾಗ್ರತೆ
ಹಿತವಾಗಲೆಂದು ಈ ಪವಿತ್ರದಿನ
ಪ್ರಾರ್ಥಿಸೋಣ

ಎಸ್. ಎನ್. ಪಂಡಿತ್ ಅಂ
ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ
ನೋವು, ಕೀಲು ನೋವು ಮುಂತಾ
ಸಕಲ ಬಾಧೆಗಳಿಗೂ ರಾಮಬಾಣ
ಶೀಸೆ ೦-೧
ಮಹಾ ಸುಗಂಧ ರಾಜ ತೈಲ -]
„ ಚಂದಿನಾದಿ ತೈಲ -]
„ ಭೃಂಗಾಮಲಕ ತೈಲ -]
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂ
ತೈಲಗಳು
ಮಹಾಕೇತಕೀ ತೈಲ—ತಲೆ ಬ
ಕೊಳ್ಳುವುದಕ್ಕೂ ಅಭ್ಯಂಜನಕ್ಕೂ
ಯೋಗಿಸ ಬಹುದಾದ ಉತ್ತಮ
ಬ್ರೇನ್ ಟಾನಿಕ್ ಶೀಸೆ ೩-೦
ಪಂಚಾಮೃತ—ಮಲೇರಿಯಾ
ಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್
ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂ

Edited, Printed and Published
A.R. Nagarajan, at Sadhvi Pr
D Subbiah Road, Mysore.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೧೬-೮-೧೯೪೯ [ಸಂಚಿಕೆ ೨೦

ಮೈಸೂರಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೬.

ಭಾರತದ ದ್ವಿತೀಯ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ನಗರದಲ್ಲಿ ಅತಿ ವಿಜೃಂಭಣೆಯಿಂದ ನಿನ್ನೆ ದಿನ ನೆರವೇರಿಸಲಾಯಿತು

ಬೆಳಿಗ್ಗೆ ಟೌನ್‌ಹಾಲ್ ಮೈದಾನದಲ್ಲಿ ಕಾರ್ಮಿಕ ಸಚಿವ ಶ್ರೀ ಕೆ ಟಿ. ಭಾಷ್ಯಂರವರು ರಾಷ್ಟ್ರೀಯ ಧ್ವಜವನ್ನೂ, ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು ಈ ಸಮಾರಂಭಕ್ಕೆ ಸಾವಿರಾರು ಜನರು ನೆರೆದಿದ್ದರು ಪೋಲೀಸರು ಮಿಲಿಟರಿ, ಮತ್ತು ಇತರ ಸಂಸ್ಥೆಗಳು ಇದರಲ್ಲಿ ಭಾಗವಹಿಸಿದ್ದವು

ಸಂಜೆ ೭ ಗಂಟೆ ಟೌನ್‌ಹಾಲ್ ಮೈದಾನದಲ್ಲಿ ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀಗಳಾದ ಸಿ ನರಸಿಂಹಮೂರ್ತಿ, ಎಸ್ ರಂಗರಾಮಯ್ಯ, ಎ ರಾಮಣ್ಣ, ಎ ಎಲ್ ನಂಜರಾಜೇ ಅರಸ್, ಅಬ್ದುಲ್ ರಹಿಮಾನ್ ಮುಂತಾದವರು ಭಾಷಣಮಾಡಿ, ಸ್ವತಂತ್ರ ಭಾರತದಲ್ಲಿ ಈಗ ಒದಗಿರುವ ಆಹಾರ ಅಭಾವವನ್ನು ನಿವಾರಿಸಲು ಪ್ರತಿಯೊಬ್ಬ ಪ್ರಜೆಯೂ ಸಹಕರಿಸಬೇಕಾದುದು ಅತ್ಯಗತ್ಯವೆಂದೂ, ಗ್ರಾಮದ ಪುನರ್ರಚನೆಗೆ ಹೆಚ್ಚು ಗಮನ ಕೊಡಬೇಕೆಂದೂ ತಿಳಿಸಿದರು

ದೇಶದ ಮುಂದೆ ಒದಗಿರುವ ಆಹಾರ ಸಮಸ್ಯೆಯನ್ನು ನಿವಾರಿಸಲು ಈ ಕೆಳಗಣ ಕಾರ್ಯಕ್ರಮವನ್ನು ಪ್ರತಿಯೊಬ್ಬರೂ ಕೈಗೊಳ್ಳುವುದಾಗಿ ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದು ಮನವಿ ಮಾಡಿ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ಹೊರಡಿಸಿದ್ದ ಹಸ್ತ ಪತ್ರಿಕೆಗಳನ್ನು ಸಂಸ್ಥಾನಾದ್ಯಂತ ವಿಮಾನಗಳ ಮೂಲಕ ಹಂಚಲಾಯಿತು –

ಶಕ್ತಿ ಮೀರಿ ಆಹಾರ ಬೆಳೆಯುವುದು, ಹಣ್ಣು ಹಂಪಲುಗಳ ಮತ್ತು ವರಮಾನ ಬರುವ ಮರಗಳನ್ನು ನೆಡುವುದ, ಉತ್ತಮವಾದ ಗೊಬ್ಬರವನ್ನು ಒದಗಿಸುವುದ, ಒಳ್ಳೆಯ ಬಿತ್ತನೆಯ ಬೀಜಗಳನ್ನ ಬಿತ್ತುವುದು ಉತ್ತಮ ತಳಿಯ ರಾಸುಗಳನ್ನು ಸಾಕುವುದು, ಸಾಧ್ಯವಾದ ಕಡೆ ಕಾರು ಬೆಳೆಗಳನ್ನು ಬೆಳೆಯುವುದು

ಡಿ ಸುಬ್ಬಯ್ಯ ರಸ್ತೆಯಲ್ಲಿರವ ಶ್ರೀ ರಾಮ ಸಹಾಯ ಸಂಘದಲ್ಲಿ ನಿನ್ನೆ ಬೆಳಗ್ಗೆ ಶ್ರೀ ಎಂ ಎನ್ ಜೋಯಿಸರು ರಾಷ್ಟ್ರ ಧ್ವಜವನ್ನ ಹಾರಿಸಿದರು ಸಂಜೆ ಶ್ರೀ ಕೆ. ಎಸ್ ಸತ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀ ಸೂರ್ಯನಾರಾಯಣರಾಯರು ಹಿಂದೀ ವಿಚಾರವಾಗಿ ಭಾಷಣ ಮಾಡಿದರು

ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಪಿ ಮುಪ್ಪಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಮಾರಂಭವು ಜರುಗಿತು ಮಹಾತ್ಮರ ಮತ್ತು ಪಂಡಿತ ನೆಹರೂರವರುಗಳ ಭಾವಚಿತ್ರಗಳನ್ನು ಅನಾವರಣ ಮಾಡಲಾಯಿತು

ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಪುರಸಭಾ ಸದಸ್ಯರಾದ ಶ್ರೀ ಟಿ ಎನ್ ಸೂರ್ಯನಾರಾಯಣ ರಾಯರು ಭಾಷಣ ಮಾಡಿ, ವಿದ್ಯಾರ್ಥಿಗಳು ಪ್ರತಿ ದಿನವೂ ೧॥ ಗಂಟೆ ಕಾಲ ನೂಲಬೇಕೆಂದು ತಿಳಿಸಿದರು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಇನ್ನು ಒಂದು ವಾರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಕ

ಸ್ವಂ ಸು ಪ್ರೋ.] ಬೆಂಗಳೂರು ೧೬

ನಿನ್ನೆ ಮಧ್ಯಾಹ್ನ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ಮಂತ್ರಿ ಮಂಡಲದ ಸಭೆಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ನೇಮಕದ ಬಗ್ಗೆ ಅಂತ್ಯ ತೀರ್ಮಾನಕ್ಕೆ ಬರಲಾಯಿತೆಂದೂ, ಇನ್ನು ಒಂದು ವಾರದಲ್ಲಿ ಈ ಬಗ್ಗೆ ಪ್ರಭುತ್ವ ಆಜ್ಞೆಯು ಹೊರಬೀಳಲಿರುವುದೆಂದೂ ತಿಳಿದುಬಂದಿದೆ

ಸ್ವಾತಂತ್ರ್ಯ ದಿನಾಚರಣೆ

ಸುಭಾಷ್ ನಗರದಲ್ಲಿ ನಿನ್ನೆ ಬೆಳಗ್ಗೆ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಶ್ಯಾಮರಾಜ ಅಯ್ಯಂಗಾರ್ಯರು ರಾಷ್ಟ್ರಧ್ವಜವನ್ನು ಹಾರಿಸಿದರು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಭಾಷಣ ಮಾಡಿದರು ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಟಿ. ಸಿದ್ದಲಿಂಗಯ್ಯ ಮತ್ತು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಗಳು ಭಾಷಣ ಮಾಡಿದರು.

ಬಸವನಗುಡಿಯಲ್ಲಿರುವ ಶ್ರೀ ಗೋಖಲೆ ಸಂಸ್ಥೆಯಲ್ಲಿ ಸರ್ ಮಿರ್ಜಾ ಇಸ್ಮೈಲ್‌ರವರು ಗೌರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು

ಜಿಲ್ಲಾ ಪ್ರೌಢ ಶಾಲೆಯ ಹಿಂದೀ ಪ್ರಚಾರ ಸಮಿತಿಯಲ್ಲೂ ಸ್ವಾತಂತ್ರ್ಯ ದಿನಾಚರಣೆಯು ಆಚರಿಸಲ್ಪಟ್ಟಿತು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಶ್ರೀ ಎಂ ಶಂಕರಯ್ಯನವರ ಅಧ್ಯಕ್ಷತೆಯಲ್ಲಿ ದೇವಾಂಗ ವಿದ್ಯಾರ್ಥಿ ನಿಲಯದವರು ಸಮಾರಂಭವನ್ನು ಆಚರಿಸಿದರು.

ಗಿಡಗಳನ್ನು ನೆಡುವ ಸಮಾರಂಭ

ರಾಜಧಾನಿಯ ಸ್ಯಾಂಕಿ ಪಾರ್ಕ್ ಮತ್ತು ಪ್ಯಾಲೇಸ್ ಗಾರ್ಡನ್‌ನಲ್ಲಿ ನಿನ್ನೆ ಬೆಳಗ್ಗೆ ಗಿಡಗಳನ್ನು ನೆಡುವ ಸಮಾರಂಭವು ನಡೆಯಿತು ಶ್ರೀಗಳು ಟಿ ವೆಂಕಟರಮಣಯ್ಯ ಮತ್ತು ಇತರ ಪುರಸಭಾ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದರು ನಜರಬಾದಿನ ಪೊಲೀಸ್ ಸ್ಟೇಷನ್ನಿನ ಪಕ್ಕದಲ್ಲಿರುವ ಸ್ಥಳದಲ್ಲಿ ಬೇವಿನ ಮರವನ್ನು ನೆಡಲಾಯಿತು.

ಸಿರಿಯಾದ ಅಧ್ಯಕ್ಷ ಮತ್ತು ಪ್ರಧಾನಿಗಳ ಕೊಲೆ

ಸಿರಿಯಾದ ಪ್ರತಿ ಕ್ರಾಂತಿ ಪಕ್ಷದ ನಾಯಕರುಗಳು ಕರ್ನಲ್ ಅಧ್ಯಕ್ಷ ಹುಸ್ನಿ ಜಾಯಿಂ ಮತ್ತು ಪ್ರಧಾನಿ ಡಾ॥ ಮೊಹಸಿನ್ ಬರಾಜಿರವರುಗಳನ್ನು ಅವರುಗಳ ಮನೆಯಲ್ಲೇ ಗುಂಡಿನಿಂದ ಹೊಡೆದು ಕೊಲೆ ಮಾಡಿ, ಸರ್ಕಾರದ ಆಡಳಿತವನ್ನ ವಶಪಡಿಸಿಕೊಂಡಿರುತ್ತಾರೆ ರಾಷ್ಟ್ರೀಯ ಸರ್ಕಾರದ ಪ್ರಧಾನಿ ಮತ್ತ ಅಧ್ಯಕ್ಷರು ತಮ್ಮ ಅಧಿಕಾರವನ್ನ ದುರುಪಯೋಗ ಪಡಿಸಿ, ದೇಶಕ್ಕೆ ದಕ್ಕೆ ಉಂಟಾಗುವ ರೀತಿಯಲ್ಲಿ ವರ್ತಿಸುತ್ತಿದ್ದರೆಂಬ ಆಪಾದನೆಯ ಮೇಲೆ ಅವರುಗಳನ್ನು ಕ್ರಾಂತಿಕಾರ ಮಿಲಿಟರಿ ನ್ಯಾಯಾಸ್ಥಾನದಲ್ಲಿ ಮರಣ ದಂಡನೆಗೆ ಗುರಿಪಡಿಸಿ, ಅನಂತರ ಅವರುಗಳನ್ನು ಕೊಲೆಮಾಡಲಾಯಿತೆಂದು ವರದಿಯಾಗಿದೆ

ಕುಪ್ಪೇಗಾಲದಲ್ಲಿ ಸ್ವಾತಂತ್ರ್ಯೋತ್ಸವ

ಮೈಸೂರು ತಾಲ್ಲೂಕು ಕುಪ್ಪೇಗಾಲ ಗ್ರಾಮದ ಪಂಚಾಯತಿ ಮತ್ತು ಮಾಧ್ಯಮಿಕ ಪಾಠಶಾಲೆಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನೋತ್ಸವವು ನಿನ್ನೆ ವಿಜೃಂಭಣೆಯಿಂದ ಜರುಗಿತು. ಬೆಳಗ್ಗೆ ೧೦ ಗಂಟೆಗೆ ರಾಷ್ಟ್ರ ಧ್ವಜ ಮತ್ತು ಮೈಸೂರು ಧ್ವಜಗಳನ್ನು ಹಾರಿಸಲಾಯಿತು ಮಧ್ಯಾಹ್ನ ಶ್ರೀ ವಿ ಸುಬ್ಬರಾವ್ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶಾಲಾ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು. ಮಹಾತ್ಮರ ನೆನಪಿಗಾಗಿ ೨ ನಿಮಿಷ ಮೌನಾಚರಿಸಲಾಯಿತು ಪಂಚಾಯಿತಿ ಮೆಂಬರು ಶ್ರೀಗಳಾದ ಕೆಂಪವೀರಯ್ಯ, ರಾಮೇಗೌಡ ಮತ್ತು ಮೈಸೂರಿನ ಶ್ರೀ ಟಿ ಬಸವರವರು ಭಾಷಣ ಮಾಡಿದರು. ಅಧ್ಯಕ್ಷರು ದಿನೋತ್ಸವದ ಪ್ರಾಮುಖ್ಯತೆಯನ್ನ ತಿಳಿಸಿ, ಎಲ್ಲರೂ ಭಾರತ ಸರ್ಕಾರದವರು ಕೈಗೊಂಡಿರುವ ಆಹಾರ ಬೆಳೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಹಾರ ಅಭಾವವು ದೇಶದಲ್ಲಿಲ್ಲದಂತೆ ಮಾಡಬೇಕೆಂದು ಪ್ರಾರ್ಥಿಸಿದರು. ವಂದೇ ಮಾತರಂನೊಡನೆ ಸಭೆ ಮುಕ್ತಾಯವಾಯಿತು.

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ದಿನ ಬೆಳಗ್ಗೆ ಹವಾಯಿ ವಿಮಾನದಲ್ಲಿ ಪ್ರಯಾಣ ಬೆಳೆಸಿದರು. ಇನ್ನು ಒಂದು ವಾರದಲ್ಲಿ ಅವರು ಹಿಂತಿರುಗ ವರು

ಆಹಾರದ ಯೋಜನೆಗಾಗಿ ಹೊಸ ಇಲಾಖೆ

ಮುಖ್ಯ ಮಂತ್ರಿಗಳ ಪ್ರಸಾರ ಭಾಷಣ

ನಿನ್ನೆ ದಿನ ಮುಖ್ಯ ಮಂತ್ರಿ ಶ್ರೀ ಕೆ.ಸಿ ರೆಡ್ಡಿಯವರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಪ್ರಸಾರ ಭಾಷಣ ಮಾಡಿ ಕಳೆದ ೨ ವರ್ಷಗಳಲ್ಲಿ ನಡೆದ ಘಟನೆಗಳನ್ನು ವಿವರಿಸಿ, ದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ನಿವಾರಣೆಯಾಗಿಲ್ಲವೆಂದೂ, ಸಾಮಾನ್ಯ ಜನರ ಜೀವನ ಮಟ್ಟವನ್ನು ಏರಿಸಬೇಕಾದುದು ಪ್ರಥಮ ಕರ್ತವ್ಯವೆಂದೂ ತಿಳಿಸಿದರು. ಅಖಿಲ ಭಾರತ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಮೈಸೂರು ಭಾಗವಹಿಸುವುದು, ಕೇಂದ್ರಕ್ಕೆ ಸಂಸ್ಥಾನ ಸೈನ್ಯದ ವರ್ಗ, ಭಾರತ ಹಣಕಾಸಿನ ವ್ಯವಸ್ಥೆಯಲ್ಲಿ ಮೈಸೂರಿನ ಐಕ್ಯ, ಮೈಸೂರಿನೊಳಗೆ ಇತರ ಕರ್ನಾಟಕ ಭಾಗಗಳು ಐಕ್ಯವಾಗುವುದು – ಇವೇ ಮುಂತಾದ ವಿಷಯಗಳು ಪರಿಶೀಲನೆಯಲ್ಲಿವೆ ಈಗ ದೇಶದ ಮುಂದೆ ಅನೇಕ ಕಷ್ಟ ಸಮಸ್ಯೆಗಳು ಇವೆ ಅವುಗಳಲ್ಲಿ ಮುಖ್ಯವಾದುದು ಆಹಾರ ಅದನ್ನು ನಿವಾರಿಸಲು ಸಂಸ್ಥಾನದಲ್ಲಿ ೩ ವರ್ಷದ ಯೋಜನೆಯನ್ನು ತಯಾರಿಸಲಾಗಿದೆ ಅದಕ್ಕಾಗಿ ಒಂದು ನೂತನ ಇಲಾಖೆಯನ್ನು ಏರ್ಪಡಿಸಲಾಗುವುದು. ಈ ಕಾರ್ಯದಲ್ಲಿ ಪ್ರತಿಯೊಬ್ಬರು ಸಹಕರಿಸಬೇಕು– ಎಂದು ಅವರು ಹೇಳಿದರು

ಕೆ. ಆರ್. ಮಾಧವರಾಯರಿಗೆ ನೂತನ ಹುದ್ದೆ

ಮೈಸೂರು ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿದ್ದ ಶ್ರೀ ಕೆ ಆರ್. ಮಾಧವರಾಯರನ್ನ ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಡೈರೆಕ್ಟರನ್ನಾಗಿ ಮಾಹೆಯಾನ ೫೦೦ ರೂ. ಸಂಬಳದ ಮೇಲೆ ನೇಮಿಸಲಾಗಿದೆ

ಬೊಂಬಾಯಿನಲ್ಲಿ ಸ್ವಾತಂತ್ರ್ಯ ದಿನ ಚರಣೆ

[ಸ್ವಂತ ಸುದ್ದಿಗಾರರಿಂದ ತಂತಿ

ಬೊಂಬಾಯಿ ೧೫

ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ಇಲ್ಲಿ ನೆರವೇರಿಸಲ್ಪಟ್ಟಿತು ಗೋವಾಲಿಯ ಕೆರೆಯ ಮೈದಾನದಲ್ಲಿ ಮೇಯರಾದ ಶ್ರೀ ಕೆ ಪಾಟೀಲರವರು ರಾಷ್ಟ್ರ ಧ್ವಜವನ್ನು ಹಾರಿಸಿದರು ದೇಶವು ಗಳಿಸಿರುವ ಸ್ವಾತಂತ್ರ್ಯ ಮತ್ತು ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದೂ, ಮತ್ತು ಜನರು ಸರ್ಕಾರದೊಡನೆ ಸಹಕರಿಸಬೇಕೆಂದೂ ಅವರು ತಿಳಿಸಿದರು

ಬ್ರಬೋರ್ನ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಗೌರ್ನರರಾದ ಮಹಾರಾಜಾ ಸಿಂಗ್‌ರವರು ರಾಷ್ಟ್ರಧ್ವಜವನ್ನು ಹಾರಿಸಿದರು ಅಲ್ಲಿ ನಡೆದ ನೌಕಾ, ವಿಮಾನ, ಪೋಲೀಸ್, ಮಿಲಿಟರಿಗಳವರ ಪೆರೇಡಿನಲ್ಲಿ ಸೆಲ್ಯೂಟನ್ನು ಸ್ವೀಕರಿಸಿದರು. ಇದರಲ್ಲಿ ೫೦ ಸಾವಿರ ಹೋಂ ಗಾರ್ಡುಗಳವರು ಭಾಗವಹಿಸಿದ್ದರು ಗೌರ್ನರರ ಭಾಷಣಮಾಡಿ ಭಾರತ ಸೈನ್ಯದ ಸಂಘಟನವನ್ನ ಕೊಂಡಾಡಿ, ಅವರು ಹೈದರಾಬಾದ್ ಮೇಲೆ ನಡೆಸಿದ ಜಯಪ್ರದವಾದ ಕಾರ್ಯಾಚರಣೆಯನ್ನು ಪ್ರಶಂಸಿಸಿದರು ಮ ಹೋಂ ಗಾರ್ಡುಗಳವರ ಕಾರ್ಯ ಚತುರತೆಗಾಗಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು ೨೧ ಕುಶಾಲು ತೋಪುಗಳನ್ನು ಹಾರಿಸಲಾಯಿತು.

ಸತ್ಯಮೇವ ಜಯತೆ

ಭಾರತದ ರಾಷ್ಟ್ರಮುದ್ರೆಯ ಅಡಿಯಲ್ಲಿ "ಸತ್ಯಮೇವ ಜಯತೆ" ಎಂದು ಅಂಕಿತ ವಿರಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ. ವ್ಯಾಕರಣ ಪಂಡಿತರಲ್ಲಿ ಸತ್ಯಮೇವ ಜಯತಿ, ಎಂದಿರಬೇಕೆಂದು ವ್ಯಾಖ್ಯಾನವು ನಡೆದು, ಕಡೆಗೆ ಮೇಲ್ಕಂಡಂತೆ ತೀರ್ಮಾನವಾಗಿರುತ್ತದೆ

ಭಾರತ ಅಥವಾ ಇಂಡಿಯಾ

ಬೊಂಬಾಯಿಯ ಹತ್ತಿರ ಸ್ಥಾಪಿತವಾಗಿರುವ ನಿರಾಶ್ರಿತ ಶಿಬಿರವನ್ನು ಉಲ್ಲಾಸ ನಗರವೆಂದು ಕರೆಯಬೇಕೆಂಬುದರ ಬಗ್ಗೆ, ಹಲವು ನಿರಾಶ್ರಿತರು ಆಕ್ಷೇಪಿಸಿ, ಅದನ್ನು ಸಿಂಧಿ ನಗರವೆಂದು ಬದಲಾಯಿಸಬೇಕೆಂದು ಒತ್ತಾಯ ಪಡಿಸಿದುದಕ್ಕೆ ಭಾರತದ ಗೌರ್ನರ್ ಜನರಲ್ ರಾಜಾಜಿಯವರು ಇಡೀ ದೇಶದ ಹೆಸರು ಇಂಡಿಯಾ ಎಂಬುದರ ಬದಲು ಭಾರತವೆಂದು ಪರಿವರ್ತಿಸಬೇಕೆಂಬುದರ ಬಗ್ಗೆ ಬಹಳ ಒತ್ತಾಯ ಬಂದಿರುವುದರಿಂದ ಆ ಹೆಸರು ಬದಲಾವಣೆಯಾಗುವುದೆಂದೂ ಬರಿಯ ಹೆಸರಿನಲ್ಲೇನಿದೆಯೆಂದೂ ತಿಳಿಸಿದರು.

ಜೈಲಿನಲ್ಲಿ ಕಮ್ಯೂನಿಸ್ಟರ ಮೇಲೆ ಗುಂಡು

ಕಡಲೂರಿನ ಸೆಂಟ್ರಲ್ ಜೈಲಿನಲ್ಲಿರುವ ೪೦೦ ಜನ ಕಮ್ಯೂನಿಸ್ಟರು ಕಳೆದ ಶುಕ್ರವಾರ ತಮ್ಮ ಕೊಠಡಿಗಳಿಗೆ ಹೋಗಲು ನಿರಾಕರಿಸಿ ಪೊಲೀಸರ ಮೇಲೆ ಕಲ್ಲು, ಚಾಕು, ಇಟ್ಟಿಗೆ, ಮೆಣಸಿನಪುಡಿ, ಕುರ್ಚಿ ಮೇಜುಗಳ ಚೂರು ಮುಂತಾದುವುಗಳನ್ನು ಎಸೆದು ಗಲಭೆ ನಡೆಸಿದರೆಂದೂ, ಅದನ್ನು ಅಡಗಿಸಲು ಪೊಲೀಸರು ಮೊದಲು ಟಿಯರ್ ಗ್ಯಾಸನ್ನು ಉಪಯೋಗಿಸಿ, ಅನಂತರ ಗುಂಡು ಹಾರಿಸಿದರೆಂದೂ, ಇದರಿಂದ ಒಬ್ಬ ಕಮ್ಯೂನಿಸ್ಟನು ಸತ್ತನೆಂದೂ ವರದಿಯಾಗಿದೆ

ಕ್ರಿಕೆಟ್ ಪಂದ್ಯ

ಸ್ವಾತಂತ್ರ್ಯ ಸಮಾರಂಭದಲ್ಲಿ ಫ್ರೀ ಇಂಡಿಯಾ ಕ್ರಿಕೆಟ್ಟಿನವರು, ಜೈ ಹಿಂದ್ ಕ್ರಿಕೆಟ್ಟಿನವರನ್ನು ೨೩ ರನ್ನುಗಳಿಂದ ಮೊನ್ನೆ ದಿನ ನಡೆದ ಪಂದ್ಯದಲ್ಲಿ ಸೋಲಿಸಿದರು

ತಿರುವಾಂಕೂರಿನಲ್ಲಿ ಮಾದರಿ ಭೋಜನ ಶಾಲೆಗಳು

ಈಗ ತಿರುವಾಂಕೂರು ಹೋಟಲುಗಳಲ್ಲಿ ಊಟಕ್ಕಾಗಿ ವಿಪರೀತ ಹಣ ತೆಗೆದುಕೊಳ್ಳುತ್ತಿರುವುದರಿಂದ ಸಾಮಾನ್ಯ ಊಟದ ಮಾದರಿ ಭೋಜನ ಶಾಲೆಗಳ ಪದ್ಧತಿಯನ್ನು ಸರ್ಕಾರದವರು ಅಲ್ಲಿ ಜಾರಿಗೆ ತರಲಿರುವರೆಂದು ಗೊತ್ತಾಗಿದೆ. ಒಂದು ಊಟಕ್ಕೆ ಆರಾಣೆ ವಸೂಲು ಮಾಡಲಾಗುವುದು

ಮಹಾರಾಜಾ ಕಾಲೇಜು ಯೂನಿಯನ್

ಮೇಲ್ಕಂಡ ಸಂಘಕ್ಕೆ ಶ್ರೀ ಜೆ. ಆರ್. ಮಹಾಲಿಂಗಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಕೆ ಪಿ ಶಾಂತಮೂರ್ತಿಯವರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ ಶ್ರೀಗಳಾದ ಎಂ. ಎಸ್. ಪಾರ್ಥಸಾರಥಿಯವರೂ, ವೈ. ಭಗವಾನ್‌ರವರೂ ಉಪಾಧ್ಯಾಯರ ಪ್ರತಿನಿಧಿಗಳಾಗಿದ್ದಾರೆ.

ಅಕಾಲದಲ್ಲಿ ಟೀ ವ್ಯಾಪಾರಕ್ಕೆ ಶಿಕ್ಷೆ

ನ್ಯೂಪದ್ಮಾಲಯ ಹೋಟಲು ಮಾಲೀಕರಾದ ಸೀತಾರಾಮ ರಾಯರೂ, ಪದ್ಮಾಲಯ ಹೋಟಲು ಮಾಲೀಕರಾದ ಕೃಷ್ಣರಾಯರೂ ಅಕಾಲದಲ್ಲಿ ಟೀ ಮಾರಿದರೆಂದು ಫುಡ್ ರೇಡ್ ಪೊಲೀಸಿನವರು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ತಲಾ ೧೫ ಮತ್ತು ೧೦ ರೂ ಜುಲ್ಮಾನೆ ವಿಧಿಸಲಾಗಿದೆ.

ಆಹಾರ ಸಮಸ್ಯೆಯನ್ನು ಪರಿಹರಿಸಲು

ಪ್ರತಿಯೊಬ್ಬರೂ ಮಾಡಬೇಕಾದ ಕೆಲಸಗಳು

೧ ಅಕ್ಕಿಯನ್ನು ಆದಷ್ಟು ಕಮ್ಮಿಯಾಗಿ ಉಪಯೋಗಿಸುವುದು ಅದರ ಬದಲು ಇತರ ಉಪ ಆಹಾರ ಪದಾರ್ಥಗಳನ್ನು ಉಪಯೋಗಿಸುವುದು (ಹೊರಗಡೆಯಿಂದ ತರಿಸುವ ಅಕ್ಕಿಯು ಗೋಧಿಯ ಬೆಲೆಯು ಎರಡರಷ್ಟಾಗುತ್ತದೆ, ರಾಗಿ ಮತ್ತು ಜೋಳದ ಮೂರರಷ್ಟಾಗುತ್ತದೆ

೨ ತರಕಾರಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವುದು.

೩. ರಾಗಿ, ಜೋಳ, ದ್ವಿದಳಧಾನ್ಯ ಮತ್ತು ತರಕಾರಿಗಳನ್ನು ಮನೆಯ ಆವರಣದಲ್ಲಿ ಮತ್ತು ಖಾಲಿ ನಿವೇಶನಗಳಲ್ಲಿ ಬೆಳೆಯುವುದು.

೪ ಆಹಾರ ಪದಾರ್ಥಗಳನ್ನು ಪೋಲು ಮಾಡದಿರುವುದು.

೫ ಕಾಳಸಂತೆಯಲ್ಲಿ ಯಾವ ಧಾನ್ಯವನ್ನೂ ಕೊಳ್ಳದಿರುವುದು

(ರೇಷನ್ ಇಲಾಖೆ, ಮೈಸೂರು ಇವರಿಂದ ಪ್ರಕಟಿಸಲ್ಪಟ್ಟಿದೆ.)

Edited, printed and published by A. R. Nagarajan, at Sadhvi Press, D.Subbiah Road, Mysore

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಜು ಇಲಾಖೆ.

ಫುಡ್ ಕಂಟ್ರೋಲರವರ ಕಚೇರಿ, ಮೈಸೂರು.

ತಾ॥ 4 ನೇ ಆಗಸ್ಟ್ 1949.

ಪ್ರಕಟಣೆ

ಈ ಇಲಾಖೆಗೆ ಸೇರಿದ ಉಪಯೋಗಿಸಿದ ಸುಮಾರು ೨೧,೦೦೦ ನಾನಾ ವಿಧವಾದ ಗೋಣಿಚೀಲಗಳು ಬಿಕರಿಗೆ ಸಿದ್ಧವಾಗಿವೆ. ಕೊಂಡುಕೊಳ್ಳಲು ಇಷ್ಟವುಳ್ಳವರು ತಮ್ಮ ಟೆಂಡರುಗಳನ್ನು ಎರಡು ಪ್ರತಿಗಳಲ್ಲಿ ಬರೆದು ಸೀಲಾದ ಕವರಿನಲ್ಲಿಟ್ಟು ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ **೧೯೪೯ನೇ ಸೆಪ್ಟೆಂಬರ್ ೧ನೇ ತಾರೀಖಿನೊಳಗಾಗಿ** ತಲುಪುವಂತೆ ರವಾನಿಸಬೇಕು. ಸೀಲಾದ ಕವರಿನ ಮೇಲೆ "ಗೋಣಿ ಚೀಲಗಳಿಗಾಗಿ ಟೆಂಡರು" ಎಂಬುದಾಗಿ ವಿಶದವಾಗಿ ನಮೂದಿಸಿರಬೇಕು. ಮೇಲೆ ನಮೂದಿಸಿದ ತಾರೀಖಿನ ನಂತರ ಬರುವ ಟೆಂಡರುಗಳನ್ನು ಗಮನಿಸುವುದಿಲ್ಲ. ವಿ ಧಿ ತ ವಾ ದ ನಿಯಮಗಳಿಗನುಸಾರವಾಗಿ ಬರುವ ಟೆಂಡರುಗಳನ್ನು ೧೯೪೯ ನೇ ಸೆಪ್ಟೆಂಬರ್ ೧ ನೇ ತಾರೀಖು ೪ ಘಂಟೆಗೆ ಈ ಕೆಳಗೆ ಸಹಿ ಮಾಡಿರುವವರಿಂದಾಗಲಿ ಅಥವಾ ಅವರಿಂದ ನಿಯಮಿತವಾದ ಅಧಿಕಾರಿಯಿಂದಾಗಲೀ ಫುಡ್ ಕಂಟ್ರೋಲರ್‌ರವರ ಕಚೇರಿಯಲ್ಲಿ ತೆರೆಯಲಾಗುವುದು ಮತ್ತು ಟೆಂಡರುಗಳನ್ನು ಸಲ್ಲಿಸಿರತಕ್ಕವರು ಆ ಹೊತ್ತಿನಲ್ಲಿ ಹಾಜರಿರಬಹುದು.

ಟೆಂಡರಿಗೆ ಸಂಬಂಧಿಸಿದ ನಿಯಮಗಳು ಈ ಕೆಳಗೆ ಕಂಡಂತಿವೆ:—

(೧) ಪ್ರತಿ ಟೆಂಡರುದಾರನೂ ನಗದು ೫೦೦ ರೂಪಾಯಿಗಳ ಠೇವಣಾತಿಯನ್ನು ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು, ಇವರಿಗಾಗಲೀ ಅಥವಾ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟ್, ಬೆಂಗಳೂರು ಸಿಟಿ, ಇವರಿಗಾಗಲೀ ಪಾವತಿ ಮಾಡಬೇಕು ಮತ್ತು ಅದರ ರಸೀತಿಯನ್ನು ಟೆಂಡರು ಅರ್ಜಿಯೊಂದಿಗೆ ಲಗತ್ತಿಸಿರಬೇಕು. ಚೆಕ್ಕುಗಳು ಇತ್ಯಾದಿಗಳನ್ನು ಕೊಟ್ಟಲ್ಲಿ ಈ ಉದ್ದಿಷ್ಟಕ್ಕೆ ಅರ್ಹವಾಗುವುದಿಲ್ಲ

(೨) ಕಟ್ಟಕಡೆಯದಾಗಿ ಟೆಂಡರನ್ನು ಒಪ್ಪಿಕೊಳ್ಳಲು ಇಲ್ಲವೇ ತಳ್ಳಿಹಾಕಲು ಮೈಸೂರು ಮೈಸೂರು ಸ್ಟೇಟ್ ರೈಲ್ವೆ ಜನರಲ್ ಮ್ಯಾನೇಜರ್‌ರವರ ಅಧಿಕಾರಕ್ಕೊಳಪಟ್ಟದೆಯಲ್ಲದೆ ಟೆಂಡರನ್ನು ಒಪ್ಪಿಕೊಳ್ಳುವುದಕ್ಕೂ ಅಥವಾ ತಳ್ಳಿಹಾಕುವುದಕ್ಕೂ ಯಾವ ಕಾರಣವನ್ನೂ ಕೊಡಬದ್ಧರಲ್ಲ. ಈ ಇಲಾಖೆಗೆ ಅತಿ ಹೆಚ್ಚಿನದೆಂದು ತೋರಿದ ಟೆಂಡರನ್ನು ಒಪ್ಪಿಕೊಳ್ಳಬೇಕೆಂದು ಕಡ್ಡಾಯವೇನೂ ಇಲ್ಲ.

(೩) ಜನರಲ್ ಮ್ಯಾನೇಜರವರ ತೀರ್ಮಾನವಾದ ನಂತರ ಜಯಪ್ರದವಾದ ಟೆಂಡರುದಾರನಿಗೆ ತಿಳಿಸಲಾಗುವುದು. ಹಾಗೆ ತಿಳಿಸಿದ ನಂತರ ಟೆಂಡರುದಾರನು ಮೂರು (೩) ದಿನಗಳೊಳಗಾಗಿ ಠೇವಣಾತಿ ಹಣವನ್ನು ಬಿಟ್ಟು ಟೆಂಡರಿನ ಬಾಕಿ ಮೊಬಲಗನ್ನು ಪಾವತಿ ಮಾಡಬೇಕು ಮತ್ತು ಆ ದಿನದಿಂದ ೮ ದಿನಗಳೊಳಗಾಗಿ ಗೋಣೀಚೀಲಗಳನ್ನು ಸಾಗಿಸಲು ಏರ್ಪಾಟು ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಠೇವಣಾತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

(೪) ಟೆಂಡರಿನಲ್ಲಿ ಹಣವನ್ನು ನಮೂದಿಸುವಾಗ ಸಾರಾಸಗಟ್ಟಾಗಿ ಉಪಯೋಗಿಸಿದ ಡ್ಯಾಮೇಜಾದ, ಉಪಯೋಗಕ್ಕೆ ಬರುವ ಮತ್ತು ಬಾರದಿರುವ ಗೋಣೀಚೀಲಗಳನ್ನು ಸೇರಿಸಿಕೊಂಡು, ಒಂದು ನೂರಕ್ಕೆ ಒಂದು ಲಾಟಿನಂತೆ ಬರೆಯಬೇಕು. ಆರಿಸಿದ ಗೋಣೀಚೀಲಗಳಿಗೆ ಮಾತ್ರ ಬರುವ ಯಾವ ಟೆಂಡರನ್ನೂ ಗಮನಿಸಲಾಗುವುದಿಲ್ಲ

(೫) ಒಂದು ವೇಳೆ ಟೆಂಡರನ್ನು ಒಪ್ಪಿಕೊಳ್ಳುವ ಸಮಯದಲ್ಲಿ ಮೇಲಿನ ಲಾಟಿನಲ್ಲಿ ಸ್ವಲ್ಪ ಭಾಗವನ್ನು ಉಳಿಸಿಕೊಳ್ಳಬೇಕೆಂಬ ಆವಶ್ಯಕತೆ ತೋರಿದಲ್ಲಿ, ಈ ಕೆಳಗೆ ಸಹಿ ಮಾಡಿರುವವರು ಜಯಪ್ರದನಾದ ಟೆಂಡರುದಾರನಿಗೆ ಎಷ್ಟು ಗೋಣೀಚೀಲಗಳನ್ನು ಕೊಡಬಹುದೋ ಅಷ್ಟನ್ನು ಕೊಡಲು ಇಚ್ಛಕತೆಯನ್ನು ಪಡೆದಿದ್ದಾರೆ.

(೬) ಜಯಪ್ರದನಾದ ಟೆಂಡರುದಾರನು ಅವನ ಟೆಂಡರನ್ನು ಒಪ್ಪಿಕೊಂಡು ತಿಳಿಸಿದ ನಂತರ ಏನಾದರೂ ಹಿಂಜರಿದಲ್ಲಿ ಠೇವಣಾತಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುವುದು.

(೭) ಜಯಪ್ರದರಾಗದ ಟೆಂಡರುದಾರರು ಠೇವಣಾತಿಯನ್ನು ಪಾವತಿ ಮಾಡಿದಾಗ ಪಡೆದ ರಸೀತಿಯನ್ನು ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು, ಇವರಿಗೆ ಹಾಜರಿಪಡಿಸಿ ತಮ್ಮ ಹಣವನ್ನು ವಾಪಸು ಪಡೆಯಬಹುದು.

(೮) ಕೊಳ್ಳಬಿಚ್ಛಿಸುವವರು ಗೋಣೀಚೀಲಗಳನ್ನು ರೈಲ್ವೆ ಸೆಂಟ್ರಲ್ ಡಿಪೋ (ರೈಲ್ವೆ ಗೂಡ್ಸ್ ಷೆಡ್ ಹತ್ತಿರ), ಮೈಸೂರಿನಲ್ಲಿ ಕೆಲಸದ ಕಾಲದಲ್ಲಿ ೪ ಘಂಟೆಯಿಂದ ೫ ಘಂಟೆವರೆಗೆ ಪರೀಕ್ಷಿಸಬಹುದು.

(ಸಹಿ) ವಿ. ಆರ್. ಬಾಬು ಮೊದಲಿಯಾರ್

ಫುಡ್ ಕಂಟ್ರೋಲರ್,

ಮೈಸೂರು ಸ್ಟೇಟ್ ರೈಲ್ವೆ.

ರಾಜಕಮಲ್, ಮೈಸೂರು

6—8—49 ರಿಂದ

ದಿನವಹಿ 3 ಪ್ರದರ್ಶನ

ಮೆಹಬೂಬ್‌ರವರ ಹಿಂದಿ ಚಿತ್ರ

ಅನೋಖಿ - ಅದ -

ಪ್ರಭಾ — 19—8—49 ರಿಂದ

ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಶೋಭನಾಚಲರವರ ತೆಲುಗು ಚಿತ್ರ

— ಮದಾಲಸ —

— ಪ್ರಧಾನ ಭೂಮಿಕೆ ಯಲ್ಲಿ —

ಅಂಜಲಿದೇವಿ, ಕೃಷ್ಣವೇಣಿ, ಶ್ರೀರಂಜಿನಿ, ರಘುರಾಮಯ್ಯ

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೧೭-೮-೧೯೪೯ [ಸಂಚಿಕೆ ೨೧

ಸಂಯುಕ್ತ ಪ್ರಾಂತ್ಯದಲ್ಲಿ ಗ್ರಾಮ ಪ್ರಜಾ ರಾಜ್ಯ

ಸ್ವಾತಂತ್ರ್ಯ ದಿನಾಚರಣೆ

—:o:—

ಮೈಸೂರು ೧೭

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ನಿನ್ನೆ ಸಂಜೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಯಿತು ಪ್ರಾರ್ಥನೆ, ಭಜನೆ ಮತ್ತು ಸ್ವಾಗತಗಳಾದನಂತರ, ಮಹಾರಾಜಾ ಕಾಲೇಜಿನ ಅ॥ ಪ್ರೊಫೆಸರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಸ್ವತಂತ್ರ ಭಾರತ ಎಂಬ ವಿಚಾರವಾಗಿ ಭಾಷಣ ಮಾಡಿದರು ಅನಂತರ ಆ॥ ವಿ॥ ಚನ್ನಕೇಶವಯ್ಯ ಮತ್ತು ಆಸ್ಥಾನ ಸಂಗೀತ ವಿದ್ವಾನ್ ಬಿ ದೇವೇಂದ್ರಪ್ಪನವರ ಸಂಗೀತವು ನಡೆಯಿತು ಅಧ್ಯಕ್ಷರು ಭಾಷಣಮಾಡಿ, ಮಹಾತ್ಮರ ತತ್ವಗಳನ್ನು ಎಲ್ಲರೂ ಪರಿಪಾಲಿಸಿಕೊಂಡು ಬರಬೇಕೆಂದು ತಿಳಿಸಿದರು

ರಾಜಧಾನಿಯ ಮಿತ್ರ ಸಂಘದವರು ಶ್ರೀ ಎಸ್. ರಾಮಸ್ವಾಮಿಯವರ ಗೃಹದಲ್ಲಿ ಸಮಾರಂಭವನ್ನು ಮೊನ್ನೆ ದಿನ ನೆರವೇರಿಸಿದರು. ಧ್ವಜಾರೋಹಣ, ಪ್ರಾರ್ಥನೆ, ವಿವಿಧ ವಿನೋದಾವಳಿ, ಸಂಗೀತ ಮತ್ತು ನಾಟಕಗಳು ಜರುಗಿದವು

ಪ್ರಭಾ ಕಲಾವಿದರು ಸಮಾರಂಭವನ್ನು ಮಂಮಲ್ಲಪ್ಪನವರ ಹೈಸ್ಕೂಲಿನಲ್ಲಿ ಶ್ರೀ ಶಾಸ್ತ್ರಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆಸಿದರು ಶ್ರೀಕೃಷ್ಣಾಚಾರ್ಯರವರ ನೃತ್ಯ ಮತ್ತು ಶ್ರೀ ಕೆ ವಿ ರಾಜಅಯ್ಯಂಗಾರ್ಯರ ಸಂಗೀತವು ನಡೆದವು

ರೈಲ್ವೆಯ ಹಂಗಾಮಿ ನೌಕರರಿಗೆ ಬಡ್ತಿ

ಮೈಸೂರು ರೈಲ್ವೆಯ ಹಂಗಾಮಿ ನೌಕರರು ೩ ವರ್ಷಗಳ ಕಾಲ ಸರ್ವಿಸ್ ಮಾಡಿದ್ದರೂ ಅವರಿಗೆ ಸಂಬಳದ ಬಡ್ತಿಯನ್ನು ಕೊಡುತ್ತಿಲ್ಲವೆಂದು ದೂರು ಬರುತ್ತಿರುವುದೆಂದೂ, ಆ ರೀತಿ ಮಾಡುವುದು ಆಳಿಕದ ತತ್ವಕ್ಕೆ ವಿರೋಧವಾಗಿರುವುದಾಗಿಯೂ, ಹಂಗಾಮಿ ಮತ್ತು ಇತರ ನೌಕರರಿಗೆ ಸಲ್ಲಬೇಕಾದ ಎಲ್ಲ ಬಡ್ತಿಗಳನ್ನೂ ಕೂಡಲೇ ಅವರಿಗೆ ಕೊಡಬೇಕೆಂದೂ ರೈಲ್ವೆ ಜನರಲ್ ಮ್ಯಾನೇಜರವರು ಸೂಚನೆ ಕೊಟ್ಟಿರುವುದಾಗಿ ಸರ್ಕಾರದ ಪ್ರಕಟಣೆ ತಿಳಿಸುತ್ತದೆ

೪ ಸೈಕಲ್ ಫ್ರೇಮುಗಳ ಪತ್ತೆ

ಲಕ್ಷ್ಮೀಪುರಂ ಪೋಲೀಸರು ೪ ಸೈಕಲ್ಲು ೪ ಫ್ರೇಮು, ಸೀಟು, ಚಕ್ರ, ಡೈನಮೋ ಮುಂತಾದವುಗಳನ್ನು ಪತ್ತೆ ಮಾಡಿ, ಈ ಸಂಬಂಧದಲ್ಲಿ ಅಪಾದಿತರನ್ನು ದಸ್ತಗಿರಿ ಮಾಡಿರುತ್ತಾರೆ ಮಾಲೀಕರುಗಳು ತಕ್ಕ ರುಜುವಾತು ಕೊಟ್ಟು ಸ್ಟೇಷನ್ನಿನಲ್ಲಿ ಮಾಲುಗಳನ್ನು ಪಡೆಯಬಹುದೆಂದು ತಿಳಿಸಲಾಗಿದೆ

ವಿವಾಹ ಮಹೋತ್ಸವ

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯರ ಅಣ್ಣಂದಿರಾದ ಶ್ರೀ ವೆಂಕಟರಾಮ ರೆಡ್ಡಿಯವರು ತಮ್ಮ ಪುತ್ರ ಶ್ರೀ ರಾಮಕೃಷ್ಣ ಪ್ರಸಾದ್‌ರವರಿಗೆ ಮದರಾಸ್ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಪಿ ಚಂದ್ರ ರೆಡ್ಡಿಯವರ ಪುತ್ರಿ ಚಿ॥ ಸೌ॥ ರಾಮಲಕ್ಷ್ಮಿದೇವಿಯವರನ್ನು ತಂದುಕೊಂಡು ಕಳೆದ ಭಾನುವಾರ ಮದರಾಸಿನಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಘಾಟಿನಲ್ಲಿ ಮಹಾತ್ಮರಿಗೆ ಶ್ರದ್ಧಾಂಜಲಿ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ದೆಹಲಿಯ ಸಹಸ್ರಾರು ಜನರು ಮೊನ್ನೆ ದಿನ ರಾಜಘಾಟಿಗೆ ಹೋಗಿ ಮಹಾತ್ಮರ ಸ್ಮಾರಕ ಸ್ಥಳದಲ್ಲಿ ಪುಷ್ಪಗಳನ್ನು ಅರ್ಪಿಸಿದರು. ಪ್ರಧಾನಿ ಪಂಡಿತ ನೆಹರೂ ಮತ್ತು ಪ್ರಧಾನ ಸೇನಾನಿ ಜ॥ ಕಾರಿಯಪ್ಪನವರುಗಳೂ ಪುಷ್ಪ ಕಾಣಿಕೆಯನ್ನು ಸಲ್ಲಿಸಿದರು

ದೆಹಲಿಯ ಕೆಂಪು ಕೋಟೆಯ ಮೇಲೆ ಪಂಡಿತ ನೆಹರೂರವರಿಂದ ರಾಷ್ಟ್ರ ಧ್ವಜಾರೋಹಣವಾದಾಗ ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು ಮತ್ತು ವಿಮಾನ ಪಡೆಯವರು ಮೇಲೆ ಹಾರಾಡಿ ಧ್ವಜ ವಂದನೆ ಸಲ್ಲಿಸಿದರು ಪಂಡಿತ ನೆಹರೂರವರು ಭಾಷಣ ಮಾಡಿ, ಗಳಿಸಿರುವ ಮಹಾ ಸ್ವಾತಂತ್ರ್ಯವನ್ನು ಭದ್ರಪಡಿಸಿಕೊಳ್ಳಬೇಕೆಂದೂ, ಸಣ್ಣಪುಟ್ಟ ಜಗಳಗಳನ್ನು ಜನರು ಮರೆತು, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಎಲ್ಲರೂ ತೊಡಗಬೇಕೆಂದೂ ತಿಳಿಸಿದರು

ಚಂದ್ರನಗರದ ಪೋಲೀಸ್ ಆಡಳಿತದ ವರ್ಗ

ಕಳೆದ ೨೫೦ ವರ್ಷಗಳಿಂದಲೂ ಫ್ರಾನ್ಸಿನ ಆಡಳಿತದಲ್ಲಿದ್ದ ಚಂದ್ರನಗರದ ಪೋಲೀಸ್ ಆಡಳಿತವನ್ನು ಭಾರತಕ್ಕೆ ನೊನ್ನೆ ವಹಿಸಲಾಯಿತು

೨೦ ಮಕ್ಕಳ ತಂದೆ

ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡಿನ ಎಡ್ವರ್ಡ್ ಥೋರಲಿ ಎಂಬ ೯೪ ವರ್ಷದ ಗಣಿ ಕೆಲಸಗಾರನಿಗೆ ೨೦ ಮಕ್ಕಳಿರುವರೆಂದೂ, ಆತನ ಎರಡನೇ ಹೆಂಡತಿಗೆ ೭೦ ವರ್ಷದ ಮಗನಿರುವನೆಂದೂ ಮತ್ತು ಕಡೇ ಮಗನಿಗೆ ಈಗ ಕೇವಲ ೩ ವಯಸ್ಸೆಂದೂ ಹೇಳಲಾಗಿದೆ

ಪತ್ರಿಕೋದ್ಯೋಗಿಗಳ ಸಮ್ಮೇಳನ

ಬೆಂಗಳೂರಿನಲ್ಲಿ ಮುಂದಿನ ತಿಂಗಳು ೩ ಮತ್ತು ೪ ನೇ ತಾ॥ ನಡೆಯಲಿರುವ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಪ್ರಾರಂಭೋತ್ಸವವನ್ನು ಮದರಾಸಿನ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ ಕಾಸಾ ಸುಬ್ಬರಾಯರು ನೆರವೇರಿಸುವರು

ಗೋಡ್ಸೆ ಡಿಫೆನ್ಸ್ ನಿಧಿಗೆ ೬೦೨೧೫ ರೂ. ಸಂಗ್ರಹ

ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆಯ ಪರವಾಗಿ ಕೋರ್ಟಿನ ಖರ್ಚಿಗಾಗಿ ಒಟ್ಟು ೬೦೩೧೫ ರೂ ನಿಧಿ ವಸೂಲಾಗಿತ್ತೆಂದೂ, ಅದರ ಪೈಕಿ. ದೆಹಲಿಯಲ್ಲಿ ನಡೆದ ವಿಚಾರಣೆಗಾಗಿ ೭೯,೧೦೦ ರೂ, ಮತ್ತು ಸಿಮ್ಲಾದಲ್ಲಿ ನಡೆದ ಅಪೀಲಿನ ವಿಚಾರಣೆಗಾಗಿ ೧೭೬೨ ರೂ ವೆಚ್ಚವಾಗಿ, ೪೯೩ ರೂ ಉಳಿದಿದೆಯೆಂದೂ, ನಿಧಿಯ ಖಜಾಂಚಿಯವರು ತಿಳಿಸಿರುತ್ತಾರೆ ಈ ನಿಧಿಗೆ ಮರಾಠಿ ಭಾಷೆ ಮಾತನಾಡುವವರಿಂದ ಹಣ ಒಂದಿತೆಂದು ಹೇಳಲಾಗಿದೆ

ಭಾರತ ಧ್ವಜ ಹಾರಿಸಿದುದಕ್ಕಾಗಿ ಕರಾಚಿಯಲ್ಲಿಗಲಭೆ

ಕರಾಚಿಯಲ್ಲಿ ಕಳೆದ ೧೪ನೇ ತಾ॥ ನಡೆದ ಪಾಕೀಸ್ತಾನದ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಭಾರಿ ಗಲಭೆ ನಡೆದು, ಪೋಲೀಸರು ಅದನ್ನು ಅಡಗಿಸಲು ಗುಂಡು ಹಾರಿಸಿದರೆಂದೂ, ಅದರಿಂದ ಇಬ್ಬರು ಸತ್ತರೆಂದೂ ವರದಿಯಾಗಿದೆ ಭಾರತದ ಹೈ ಕಮೀಷನರ ಭವನದ ಆವರಣದ ಮುಂದೆ ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಿದುದನ್ನು ಪ್ರತಿಭಟಿಸಲು ಜನರ ಗುಂಪು ನುಗ್ಗಿ ಗಲಭೆ ನಡೆಸಿತೆಂದು ಹೇಳಲಾಗಿದೆ ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ.

ಸರ್ಕಾರಿ ವ್ಯವಹಾರದಲ್ಲಿ ಜಾತಿ ಮತಗಳ ರದ್ದು

ಸರ್ಕಾರಿ ಕಾಗದ ಪತ್ರಗಳು, ನೌಕರಿ ಮತ್ತು ಇತರ ಸಾರ್ವಜನಿಕ ಸಂದರ್ಭಗಳಲ್ಲಿ ಜಾತಿ, ಮತ ಮತ್ತು ಕೋಮುಗಳನ್ನು ಬರೆಯಕೂಡದೆಂದು ಓರಿಸ್ಸ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿ ವೇತನ, ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಅರ್ಜಿಗಳು, ಕೋರ್ಟಿನಲ್ಲಿ ರುಜುವಾತು ಕೊಡುವುದು ಇವುಗಳಲ್ಲಿ ಜಾತಿ ಕೋಮುಗಳನ್ನು ನಮೂದಿಸಕೂಡದೆಂದೂ ಆಜ್ಞೆ ಮಾಡಲಾಗಿದೆ

● ರೈಲ್ವೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಭಾರತಕ್ಕೆ ವಿಶ್ವದ ಬ್ಯಾಂಕಿನವರು ೩೪ ಲಕ್ಷ ಪೌಂಡುಗಳ ಸಾಲವನ್ನು ಕೊಡಲು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ದೇಶ ಭಕ್ತ ಕೊಂಡಾ ವೆಂಕಟಪ್ಪಯ್ಯನವರ ನಿಧನ

ಆಂಧ್ರದ ಕಾಂಗ್ರೆಸ್ ಪ್ರಮುಖರೂ ಮತ್ತು ಕಾಂಗ್ರೆಸ್ ನಾಯಕರೂ ಆದ ದೇಶಭಕ್ತ ಕೊಂಡಾ ವೆಂಕಟಪ್ಪಯ್ಯನವರು ಮೊನ್ನೆ ದಿನ ಗುಂಟೂರಿನಲ್ಲಿ ತಮ್ಮ ೮೪ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರ ಅಂತ್ಯ ಕ್ರಿಯೆಯು ಮೊನ್ನೆ ಸಂಜೆ ನಡೆಯಿತು ೧೦ ಸಾವಿರಕ್ಕೆ ಮೇಲ್ಪಟ್ಟು ಜನರು ಮೆರವಣಿಗೆಯಲ್ಲಿ ಭಾಗ ವಹಿಸಿದ್ದರು ಅವರ ನಿಧನದ ಪ್ರಯುಕ್ತ, ಆ ದಿನ ನಡೆಯಬೇಕಾಗಿದ್ದ ಸ್ವಾತಂತ್ರ್ಯ ದಿನಾಚರಣೆಯನ್ನು ರದ್ದುಗೊಳಿಸಲಾಯಿತು. ಅವರು ತಮ್ಮ ಮರಣಕ್ಕೆ ಒಂದೆರಡು ನಿಮಿಷಗಳ ಮುಂಚೆ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸಂದೇಶವನ್ನು ಬರೆಯುತ್ತಿದ್ದರೆಂದು ಹೇಳಲಾಗಿದೆ ಅವರನ್ನು ಆಂಧ್ರ ದೇಶದ ಗಾಂಧಿಯೆಂದೂ ಸಹ ಕರೆಯಲಾಗುತ್ತಿತ್ತು.

ಚೀಣಾ ಕಮ್ಯೂನಿಸ್ಟ್ ನಾಯಕರ ಮರಣವೇ?

ಚೀಣಾ ಕಮ್ಯೂನಿಸ್ಟ ಪ್ರಮುಖ ನಾಯಕರಾದ ಮಾವೋತ್ಸೆಟುಂಗರವರು ಪಿಪಿಂಗ್‌ನಲ್ಲಿ ಕಳೆದ ೧೭ ನೇ ತಾ॥ ಕ್ಷಯರೋಗದಿಂದ ನಿಧನರಾದರೆಂದು ಚೀಣಾ ರಾಷ್ಟ್ರೀಯ ಸರ್ಕಾರದ ರೇಡಿಯೋ ವರದಿ ಮಾಡಿದೆ ಈ ಸುದ್ದಿಯು ಕಮ್ಯೂನಿಸ್ಟರಿಂದ ದೃಢಪಟ್ಟಿಲ್ಲ.

ಇಡ್ಲಿ ಮಾರುತ್ತಿದ್ದುದಕ್ಕಾಗಿ ದಂಡ

ನಜರಬಾದ್ ಮೊಹಲ್ಲಾ ಮಾರರ ರಸ್ತೆಯಲ್ಲಿ ೫೭ ನೇ ನಂಬರ್ ಮನೆಯಲ್ಲಿರುವ ಹೋಟೆಲಿನಲ್ಲಿ ಈ ದಿನ ಇಡ್ಲಿ ಮಾರುತ್ತಿದ್ದರೆಂಬ ಆಪಾದನೆಯ ಮೇಲೆ ಅದರ ಮಾಲೀಕರಾದ ದೇವಪ್ಪ ಎಂಬುವರಿಗೆ ನಗರ ನ್ಯಾಯಾಧೀಶರು ೨೦ ರೂ ಜುಲ್ಮಾನೆ ವಿಧಿಸಿದರು.

ಸಂಯುಕ್ತ-ಪ್ರಾಂತ್ಯದಲ್ಲಿ-ಗ್ರಾಮ ರಿಪಬ್ಲಿಕ್ ಸ್ಥಾಪನೆ

ಸಂಯುಕ್ತ ಪ್ರಾಂತ್ಯದ ೧,೧೪,೦೦೦ ಗ್ರಾಮಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ಗ್ರಾಮಗಳ ರಿಪಬ್ಲಿಕ್ ಸ್ಥಾಪನೆಯ ಯೋಜನೆಯನ್ನು ಪ್ರಾರಂಭಿಸಲಾಯಿತು ಅಲ್ಲಿನ ೧೩ ಲಕ್ಷ ಗ್ರಾಮ ಪಂಚಾಯಿತಿ ಸದಸ್ಯರುಗಳು ಆ ದಿನ ಸಾರ್ವಜನಿಕ ಸೇವಾ ಪ್ರತಿಜ್ಞೆಯನ್ನು ತೆಗೆದುಕೊಂಡರು ೪೦ ಲಕ್ಷ ಪ್ರಜಾ ಸಂಖ್ಯೆಯುಳ್ಳ ೩೫ ಸಾವಿರ ಗ್ರಾಮಪಂಚಾಯಿತಿಗಳು ಈ ಕೆಲಸವನ್ನು ಪ್ರಾರಂಭಿಸಿವೆ ಇದಕ್ಕಾಗಿ ಸರ್ಕಾರದವರು ಒಂದು ಕೋಟಿ ರೂ ಅನ್ನು ಮಂಜೂರು ಮಾಡಿರುತ್ತಾರೆ

ಮದರಾಸಿನಲ್ಲಿ ೧೦೦೦ ಜನ ಖೈದಿಗಳ ಬಿಡುಗಡೆ

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಮದರಾಸ್ ಸರ್ಕಾರದವರು ೭೦೦೦ರಿಂದ ೧೦೦೦ ಜನ ಖೈದಿಗಳನ್ನು ಬಿಡುಗಡೆ ಮಾಡಿರುತ್ತಾರೆ ಅಕ್ರಮ ಸ್ತ್ರೀ ಸಂಗ, ಜೈಲಿನಿಂದ ತಪ್ಪಿಸಿಕೊಂಡಿದ್ದವರು, ಕಮ್ಯೂನಿಸ್ಟರು ಮತ್ತು ಇತರ ರಾಜಕೀಯ ಖೈದಿಗಳಿಗೆ ಈ ಆಜ್ಞೆಯು ಅನ್ವಯಿಸುವುದಿಲ್ಲ

ಲೋಹದ ರೈಲ್ವೆ ಗಾಡಿಗಳು

ಬೆಂಗಳೂರು ೧೭

ಬೆಂಗಳೂರಿನ ವಿಮಾನ ಕಾರ್ಖಾನೆಯವರು ಹೆಚ್ಚು ಸಂಖ್ಯೆಯಲ್ಲಿ ಲೋಹದ ರೈಲ್ವೆ ಗಾಡಿಗಳನ್ನು ತಯಾರಿಸಬೇಕೆಂದು ನಿರ್ಧರಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೬

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ನಿನ್ನೆ ಶ್ರೀ ಎನ್ ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಮಾರಂಭವು ಜರುಗಿತು ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸಂಗೀತ, ಮೈಸೂರು ಸಹೋದರರಿಂದ ಸ್ವಾತಂತ್ರ್ಯ ಗೀತೆ ಮತ್ತು ಶ್ರೀ ಎಂ ರಾಮಸ್ವಾಮಿ ಮತ್ತು ಅಧ್ಯಕ್ಷರುಗಳಿಂದ ಭಾಷಣಗಳಾದನಂತರ, ಸಿಹಿ ತಿಂಡಿ ಹಂಚಲಾಯಿತು

ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಇಟ್ಟಿಗೆಗೂಡಿನಲ್ಲಿರು ಯುವಕರ ಸಂಘದಲ್ಲಿ ದಿನಾಚರಣೆಯು ನಡೆಸಲ್ಪಟ್ಟಿತು. ಕೋಲಾಟ ಗಾನ, ಬಹುಮಾನ ವಿನಿಯೋಗ ಮತ್ತು ಸಿಹಿ ತಿಂಡಿ ಹಂಚಿಕೆಗಳಾದನಂತರ ಅಧ್ಯಕ್ಷರು ಭಾಷಣ ಮಾಡಿ, ದೇಶದ ಪ್ರಗತಿಗಾಗಿ ಯುವಕರೆಲ್ಲರೂ ಸೇವಾ ಕಾಂಕ್ಷೆಯಿಂದ ಮುಂದೆ ಬರಬೇಕೆಂದು ತಿಳಿಸಿದರ ಬೆಳಿಗ್ಗೆ ಶ್ರೀಮತಿ ಪ್ರಫುಲ್ಲಾ ಕೃಷ್ಣಯ್ಯಂಗಾರ್ಯರು ಧ್ವಜಾರೋಹಣ ಮಾಡಿದರು

ವಿಠ್ಠಲರಾವ್ ಶೇಷಣ್ಣನವರ ವಿದ್ಯಾರ್ಥಿನಿಲಯದಲ್ಲಿ ಸಮಾರಂಭವು ಪ್ರೊ॥ ವಿ ಎಲ್ ಡಿಸೋಜಾರವರ ಅಧ್ಯಕ್ಷತೆಯಲ್ಲಿ ಜರುಗಿತು ಪಂಡಿತ ನೆಹರೂರವರ ಭಾವ ಚಿತ್ರ ಅನಾವರಣೋತ್ಸವವೂ ನಡೆಯಿತು

ಜಯನಗರದಲ್ಲಿರುವ ವನಿತಾ ಸದನದಲ್ಲಿ ಪುರಸಭಾ ಕಮೀಷನರಾದ ಶ್ರೀ ಸಿ ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಭಾಷಣ ಮಾಡಿ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ವಿಧೇಯತೆ, ಶಿಸ್ತು ಮತ್ತು ಶ್ರದ್ಧೆಗಳ ಆವಶ್ಯಕತೆಯನ್ನು ಒತ್ತಿ ಹೇಳಿದರು

ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಬೆಳಿಗ್ಗೆ ಪ್ರಾರ್ಥನೆ ಮತ್ತು ಮಹಾತ್ಮರ ಜ್ಞಾಪಕಾರ್ಥವಾಗಿ ಎರಡು ನಿಮಿಷಗಳ ಕಾಲ ಮೌನ ನಡೆಯಿತು ಅನಂತರ ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿಯವರು ರಾಷ್ಟ್ರೀಯ ಧ್ವಜವನ್ನು ಹಾರಿಸಿ, ಬಾಪೂಜಿಯವರ ತ್ಯಾಗದ ಬಲದಿಂದ ಗಳಿಸಿರುವ ಸ್ವಾತಂತ್ರ್ಯವನ್ನು ಪ್ರತಿಯೊಬ್ಬರೂ ರಕ್ಷಿಸಿಕೊಂಡು ಬರಬೇಕೆಂದು ತಿಳಿಸಿದರು

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ಎಸ್ ವಿ ಭೀಮಾ ಭಟ್ಟರವರ ಅಧ್ಯಕ್ಷತೆಯಲ್ಲಿ ಸಮಾರಂಭವು ನಡೆಯಿತು ಇದೇ ಸಂದರ್ಭದಲ್ಲಿ 'ಪ್ರಫುಲ್ಲಾ' ಎಂಬ ಸಂಸ್ಕೃತ ಲಿಖಿತ ಪತ್ರಿಕೆಯು ಪ್ರಕಾಶನ ವಾಯಿತು

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಿದರು

ನೂರಡಿ ರಸ್ತೆಯಲ್ಲಿರುವ ಪೊಂಬಾಳೆ ರಂಗಯ್ಯನವರ ವಿದ್ಯಾರ್ಥಿ ನಿಲಯದಲ್ಲಿ ಸಮಾರಂಭವು ಶ್ರೀ ಜಿ ಬಿ ಸೂದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತ ಧ್ವಜಾರೋಹಣವಾದನಂತರ ಶ್ರೀ ಪೊಂಬಾಳೆ ರಂಗಯ್ಯನವರು ಮತ್ತು ಅಧ್ಯಕ್ಷರು ಭಾಷಣ ಮಾಡಿ, ದೇಶ ಕಲ್ಯಾಣ ಮತ್ತು ಸಿಹಿ ಆಹಾರ ಬೆಳೆಗಾಗಿ ವಿದ್ಯಾರ್ಥಿಗಳು ವ ಸಾರ್ವಜನಿಕರು ಸರ್ವ ಪ್ರಯತ್ನ ಪ ಬೆಕೆ ಮ ...ದ... ಬಗ್ಗೆ ... ... ನ್ನದ ... ನಡೆಯಿತು

ಸ್ವಾತಂತ್ರ್ಯ

ವರುಷವೆರಡಾಗಿಹುದು,
ಸ್ವಾತಂತ್ರ್ಯದ ಹಬ್ಬ ಬಂದಿಹುದು,
ಭಾರತ ಮಾತೆ ಕೂಗುತಿಗಳು,
'ಓಡಿ ಬನ್ನಿ ಕಂದಗಳಿರಾ!' ॥೧॥

ಭಾರತ ಮಾತೆಯು
ದಾಸ್ಯದಾ ಬಿಡುಗಡೆಯು,
ಇಂದಿನ ದಿವಸಕ್ಕೆ
ತುಂಬಿಹುದು ವರುಷಗಳೆರಡು. ॥೨॥

ದಾಸ್ಯದ ಮಡುವಿನಿಂದೆತ್ತಲು
ಕೈ ಸರಪಳಿಗಳ ಬಿಚ್ಚಲು
ಸ್ವಾತಂತ್ರ್ಯದ ಜ್ಯೋತಿ ಬೆಳಗಲು
ಪ್ರಾಣಗಳನರ್ಪಿಸಿದಿರಿ ॥೩॥

ಸ್ವಾತಂತ್ರ್ಯದಾ ಕಿರೀಟವನು
ಶಿರದಲ್ಲಿ ಧರಿಸಿದಿರಿ
ಕಣ್ಮರೆಯಾಯಿತು
ನಾಯಕ ಮಣಿ ॥೪॥

ಜೇಷ್ಠ ಪುತ್ರನನುಸರಿಸಿ
ಸತ್ಯಾ ಹಿಂಸೆಗಳ ಬಿಡದೆ
ಸ್ವಾತಂತ್ರ್ಯ ಉಳಿಸಿರಿ
ಹರಸುವೆನು ಬನ್ನಿ ಕಂದಗಳಿರಾ ॥೫॥

ಗ. ಪ್ರ. ನ.

ಕೃಷ್ಣ ಜಯಂತಿ

ಟಿ ನರಸೀಪುರದ ತಾಲ್ಲೂಕು ಕೃಷ್ಣಾಪುರದ ಶ್ರೀ ಸಂತಾನ ಗೋಪಾಲ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಇದೇ ೧೮ ನೇ ತಾ॥ ನಿಂದ ೨೬ ನೇ ತಾ॥ ವರೆವಿಗೆ ಶ್ರೀ ಕೃಷ್ಣ ಜಯಂತಿ ಉತ್ಸವವು ನಡೆಯುವುದು.

ಸುಪ್ರಸಿದ್ಧ ಹಿಂದೀ ಕವಿಗಳ ದುರ್ಮರಣ

ಜಾನ್ಸಿಯ ಸುಪ್ರಸಿದ್ಧ ಹಿಂದೀ ಕವಿಗಳಾದ ೨೪ ವರ್ಷದ ಸಹೇಲ್ ಚತುರ್ವೇದಿರವರು ರೈಲಿಗೆ ಸಿಕ್ಕಿ ಮೃತಪಟ್ಟರೆಂದು ವರದಿಯಾಗಿದೆ ಅವರು ಮೂರು ವಾರ ಪತ್ರಿಕೆಗಳ ಸಂಪಾದಕರಾಗಿದ್ದು ಪ್ರಮುಖ ಕವಿಗಳಾಗಿದ್ದರೂ, ಜೀವನಕ್ಕಾಗಿ ರೇಷನಿಂಗ್ ಇನ್ಸ್ಪೆಕ್ಟರಾಗಿ ಕೆಲಸ ಮಾಡುತ್ತಿದ್ದರೆಂದ. ಹೇಳಲಾಗಿದೆ

ಜಪಾನಿಗೆ ಮತ್ತೊಂದು ಆನೆ

ಜಪಾನಿನ ಮಕ್ಕಳಿಗಾಗಿ ಸಯಾಂ ಸರ್ಕಾರವು ಒಂದು ಗಂಡು ಆನೆಯನ್ನು ಕಳುಹಿಸಲಿದೆಯೆಂದು ಹೇಳಲಾಗಿದೆ

ಹೈದರಾಬಾದಿನಲ್ಲಿ ಜಮೀನುದಾರಿ ಪದ್ಧತಿ ರದ್ದು

ಹೈದರಾಬಾದಿನಲ್ಲಿ ೨೫,೬೦೦ ಚದುರ ಮೈಲಿ ವಿಸ್ತೀರ್ಣವುಳ್ಳ ಜಹಗೀರುಗಳನ್ನೆಲ್ಲಾ ಸರ್ಕಾರದವರು ಕೂಡಲೇ ವಹಿಸಿಕೊಳ್ಳುವ ಜಹಗೀರುದಾರಿ ಪದ್ಧತಿಯು ರದ್ದಿನ ಅಜ್ಞೆಯನ್ನು ಮೊನ್ನೆ ದಿನ ಸರ್ಕಾರದವರು ಜಾರಿ ಮಾಡಿರುತ್ತಾರೆ

ಎಕನಾಮಿಕ್ ವೀಕ್ಲಿ

ಬೊಂಬಾಯಿನಿಂದ ಶ್ರೀ ಸಚಿನ್ ಚೌಧ್ರಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ "ಎಕನಾಮಿಕ್ ವೀಕ್ಲಿ" ಎಂಬ ಆಂಗ್ಲ ವಾರ ಪತ್ರಿಕೆಯು ನಮ್ಮ ಹಸ್ತಗತವಾಗಿದೆ ಇದರಲ್ಲಿ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಅನೇಕ ಉತ್ತಮ ಲೇಖನಗಳು ಪ್ರಕಟವಾಗಿವೆ ಬೆಲೆ ೮ ಆಣೆ

ಭಾರತಮಾತೆಯ ಚಿತ್ರ

ರಾಜಧಾನಿಯ ಪ್ರಭಾ ಕಲಾವಿದರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಕಳುಹಿಸಿರುವ ಭಾರತ ಮಾತೆ ಮತ್ತು ಮಹಾತ್ಮರನ್ನೊಳಗೊಂಡ ವರ್ಣರಂಜಿತ ಕಾರ್ಡನ್ನು ನಾವು ಆದರಿಂದ ಸ್ವೀಕರಿಸಿದ್ದೇವೆ

ಶ್ರೀ ಗಾಯತ್ರಿ ಟಾಕೀಸ್

ಪ್ರತಿ ದಿನ 3 ಆಟಗಳು

17-8-49ರಿಂದ 2 ದಿನಗಳು ಮಾತ್ರ

ಆರ್ ಕೆ ಒ ರವರ ಪ್ರೇಮಪೂರಿತ ಚಿತ್ರ

THE PEARL

(ದಿ ಪೆರ್ಲ್)

ಪಾತ್ರ–ಪೆಡ್ರೋ ಆರ್ಮಡ್ರೆ ಮತ್ತು ಮೇರಿಯಾ ಎಲಿನಾ ಮಾರ್ಕ್

ಶ್ರೀ ಗಣೇಶಾ ಟಾಕೀಸ್

19-8-49ರಿಂದ ಪ್ರತಿ ದಿನ ೪ ಪ್ರದರ್ಶನಗಳು

ಚಿತ್ರ ಪ್ರೇಮಿಗಳ ಕೋರಿಕೆಯ ಮೇರೆಗೆ ಮತ್ತೊಮ್ಮೆ

ಎ. ವಿ. ಎಂ. ಪ್ರೊಡಕ್ಷನ್ಸ್‌ರವರ

WE TWO → (ನಾವಿಬ್ಬರು)

(ತಮಿಳು)

ಭೂಮಿಕೆ—ಟಿ. ಆರ್ ಮಹಾಲಿಂಗಂ, ಕೆ ಸಾರಂಗ ಪಾಣಿ, ರಾಮಚಂದ್ರ್, ಬಿ ಟಿ ಕಮಲ, ಟಿ ಎ. ಜಯಲಕ್ಷ್ಮಿ, ಕೆ. ಆರ್ ಚೆಲ್ಲಂ ಮುಂತಾದವರು.

ಪ್ರಭಾ— 19–8–49 ರಿಂದ

ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಶೋಭನಾಚಲರವರ ತೆಲುಗು ಚಿತ್ರ

ಮದಾಲಸ—

— ಪ್ರಧಾನ ಭೂಮಿಕೆಯಲ್ಲಿ —

ಅಂಜಲಿದೇವಿ, ಕೃಷ್ಣವೇಣಿ, ಶ್ರೀರಂಜನಿ, ರಘುರಾಮಯ್ಯ

ಮರಗಳನ್ನು ನೆಡುವ ಸಮಾರಂಭ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಟಿ ಸಿದ್ಧಲಿಂಗಯ್ಯನವರು ನಿನ್ನೆ ... ಕ್ಲೋಸ್‌ಪೇಟೆ, ಕಾನಕಾನಹಳ್ಳಿ, ಚನ್ನ... ಟ್ಟ, ಮಂಡ್ಯ ಮತ್ತು ಇತರ ಗ್ರಾಮಗಳ ಮರಗಳನ್ನು ನೆಡುವ ಸಮಾರಂಭ... ಭಾಗವಹಿಸಿದ್ದರು

ಮೈಸೂರು ಜಿಲ್ಲಾ ರೈತರ ಸಂಘದ ... ಪಾಧ್ಯಕ್ಷರಾದ ಶ್ರೀ ಕೊಡಗಹಳ್ಳಿ ರಾಮ... ಮಿಯವರು ಸ್ವಾತಂತ್ರ್ಯ ದಿನಾಚರಣೆ... ನೆನಪಿಗಾಗಿ ನನ್ನ ಸ್ವಂತ ಜಮೀನಿ... ೧೦೦೦ ಹೊಂಗೆ, ಆಲ ಮುಂತಾದ ... ಗಳನ್ನು ನೆಟ್ಟಿರುತ್ತಾರೆ

ಡಾ॥ ಎಂ ಸಿ. ಮೋದಿಯವರ ಸಂದೇಶ

ನ್ಯೂಯಾರ್ಕಿನಲ್ಲಿ ಉನ್ನತ ಶಿಕ್ಷಣ ... ಡೆಯುತ್ತಿರುವ ಬೆಳಗಾವಿನ ಸುಪ್ರ... ನೇತ್ರ ವೈದ್ಯರಾದ ಡಾ॥ ಎಂ ಸಿ ಮೋ... ಯವರು ಸ್ವಾತಂತ್ರ್ಯ ದಿನಾಚರಣೆ... ಸಂಬಂಧದಲ್ಲಿ ನಮಗೆ ಒಂದು ಪತ್ರವ... ಬರೆದು, ದೇಶಕ್ಕೆ ಸರ್ವ ಸಂಪತ್ತು ... ತ್ತು ಅಭ್ಯುದಯ ಉಂಟಾಗಲೆಂದೂ, ... ತ್ತು ಮಹಾತ್ಮರ ತತ್ವಗಳನ್ನು ಭಾರ... ಯರು ಮರೆಯದಿರಲೆಂದೂ ಹಾರೈಸು... ತ್ತಾರೆ

○ ಸ್ವಾತಂತ್ರ್ಯ ದಿನಾಚರಣೆಯ ಸಂಬ... ವಾಗಿ ಮುಜರಾಯಿ ಸಚಿವ ಶ್ರೀ ಪಾವ... ಸುಬ್ಬರಾಮಶೆಟ್ಟರು ಒಂದು ಸಂದೇ... ಶವನ್ನು ಕೊಟ್ಟು, ದೇಶದಲ್ಲಿ ಉಂಟಾಗಿರ... ಆಹಾರದ ಅಭಾವವನ್ನು ನಿವಾರಿಸ... ಪ್ರತಿಯೊಬ್ಬರೂ ಕಂಕಣ ಬದ್ಧರಾಗಿ ... ಸಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ

ಎಸ್. ಎಸ್. ಪಂಡಿತ್ ಅಂ... ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ...
ನೋವು, ಕೀಲು ನೋವು ಮುಂತಾ...
ಸಕಲ ಬಾಧೆಗಳಿಗೂ ರಾಮ ಬಾಣ
ಕೀಸೆ ೦–೧೨

ಮಹಾ ಸುಗಂಧ ರಾಜ ತೈಲ –]
,, ಚಂದನಾದಿ ತೈಲ –]
,, ಭೃಂಗಾಮಲಕ ತೈಲ –]

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂ... ತೈಲಗಳು

ಮಹಾಕೇತಕೀ ತೈಲ—ತಲೆ ಬಾ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸ ಬಹುದಾದ ಉತ್ತಮವಾ... ಬ್ರೇನ್ ಟಾನಿಕ್ ಕೀಸೆ ೨–೦

ಪಂಚಾಮೃತ—ಮಲೇರಿಯಾ ... ಗಳಿಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ

೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Edited, printed and published by V R Nagaraja at Sadhvi Press, D Subbia Road, Mysore

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೮-೮-೧೯೪೯ [ಸಂಚಿಕೆ ೨೨

ಮೈಸೂರಿನಲ್ಲಿ ಆಹಾರ ಉತ್ಪತ್ತಿ ಕಮೀಷನರು

ರಷ್ಯದ ಭಾಷೆಯಲ್ಲಿ ತುಳಸೀ ರಾಮಾಯಣ

ಸುಪ್ರಸಿದ್ಧ ತುಳಸೀದಾಸರ ರಾಮಾಯಣವನ್ನು ರಷ್ಯದ ಪ್ರಮುಖ ಸಾಹಿತಿಗಳಾದ ಪ್ರೊ|| ಬಾರಾನಿಕೊವ್‌ರವರು ರಷ್ಯದ ಭಾಷೆಗೆ ತರ್ಜುಮೆ ಮಾಡಿರುವರೆಂದೂ ಈ ಪುಸ್ತಕವನ್ನು ರಷ್ಯದ ಅನೇಕ ಜನರು ಓದುತ್ತಿದ್ದಾರೆಂದೂ ಹೇಳಲಾಗಿದೆ.

ರಂಗೂನ್ ಹೋಟಲುಗಳ ಮೇಲೆ ಶೇ|| ೩೦ ರಷ್ಟು ತೆರಿಗೆ

. ರಂಗೂನಿನ ಹೋಟಲುಗಳ ಮೇಲೆ ಸರ್ಕಾರದವರು ಒಟ್ಟು ವ್ಯಾಪಾರದ ಶೇಕಡ ೩೦ ರಷ್ಟು ಹೊಸ ತೆರಿಗೆಯನ್ನು ವಿಧಿಸಿರುತ್ತಾರೆ ಇದರಿಂದ ಅಲ್ಲಿನ ಹೋಟಲಿನವರಿಗೆ ತುಂಬಾ ನಷ್ಟ ಉಂಟಾಗಿದೆಯೆಂದೂ, ಅವರು ಪದಾರ್ಥಗಳ ಬೆಲೆಯನ್ನು ವಿಪರೀತವಾಗಿ ಏರಿಸಿರುವರೆಂದೂ, ಪ್ರತಿ ದಿನ ಹೋಟೇಲುಗಳಲ್ಲಿ ಗಲಭೆ ನಡೆಯುತ್ತಿದೆಯೆಂದೂ ಹೇಳಲಾಗಿದೆ

ದಿನಕ್ಕೆ ೨೦೦ ಟನ್ ಸಿಮೆಂಟ್ ತಯಾರಿ ಸೌಲಭ್ಯ

ಪೂರ್ವ ಪಂಜಾಬಿನ ರಾಜಧಾನಿಯಾಗಲಿರುವ ಚಂಡಿಗರ್‌ನಲ್ಲಿ ಸಿಮೆಂಟ್ ತಯಾರಿಕೆಗೆ ಮುಖ್ಯ ವಸ್ತುವಾದ ಸುಣ್ಣ ಕಲ್ಲುಗಳು ಹೇರಳವಾಗಿ ಸಿಕ್ಕಿವೆಯೆಂದೂ ಒಂದು ದಿನಕ್ಕೆ ೨೦೦ ಟನ್ನು ಸಿಮೆಂಟನ್ನು ಅಲ್ಲಿ ತಯಾರಿಸಲು ಸಲಕರಣೆಗಳು ಇವೆಯೆಂದೂ ಹೇಳಲಾಗಿದೆ

ಡಾಲರುಗಳನ್ನು ಪಡೆಯಲು ರಕ್ತದ ದಾನ

ಅಮೆರಿಕದಲ್ಲಿ ಡಾಲರುಗಳ ಮೇಲೆ ಹಾಕಿರುವ ನಿರ್ಬಂಧವನ್ನು ನಿವಾರಿಸಲು ಅಲ್ಲಿರುವ ಬ್ರಿಟನ್ನಿನ ಜನರು ಆಸ್ಪತ್ರೆಗಳಿಗೆ ತಮ್ಮ ರಕ್ತವನ್ನು ಪಿಂಟಿಗೆ ೨೫ ಡಾಲರುಗಳಂತೆ ಮಾರುತ್ತಿದ್ದಾರೆಂದೂ ಹೇಳಲಾಗಿದೆ,

ಶ್ರೀ ಕೃಷ್ಣ ಜಯಂತಿ

ಮೈಸೂರು ಚಾಮರಾಜ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ, ಪದ್ಧತಿ ಪ್ರಕಾರ ಈ ವರ್ಷವೂ ಶ್ರೀ ಕೃಷ್ಣ ಜಯಂತೀ ಮಹೋತ್ಸವದ ಅಂಗವಾಗಿ ನಾಳೆಯಿಂದ ಸಂಗೀತ ಮತ್ತು ಹರಿಕಥೆಗಳು ನಡೆಯುವುವು

ಭಾರತ ಹರಿಕಥೆ ಮಂಗಳಾಚರಣೆ

ಕಳೆದ ಒಂದು ವರ್ಷದಿಂದ ದೇವೀರಮ್ಮಣ್ಣಿ ಅಗ್ರಹಾರದಲ್ಲಿ ನಡೆಯುತ್ತಿದ್ದ ಮಹಾಭಾರತ ಕಥಾನಕವಾದವು ಕಳೆದ ಭಾನುವಾರ ಮುಕ್ತಾಯವಾಯಿತು ಸಮಾರಂಭಕ್ಕೆ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆ ವಹಿಸಿದ್ದರು ಈ ಸಂದರ್ಭದಲ್ಲಿ ಹರಿಕಥಾ ವಿದ್ವಾನ್ ಹೆಚ್. ಟಿ ವಾಮಣ್ಣನವರಿಗೆ ಒಂದು ಚಿನ್ನದ ಉಂಗುರವನ್ನು ಶ್ರೀ ನರಸಿಂಹಯ್ಯಂಗಾರ್ಯರು ಬಹುಮಾನವಾಗಿ ಕೊಟ್ಟರು. ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಮಂಗಳಾಚರಣೆಯು ನಡೆಯಿತು.

ಹರಿಕಥೆ

ಚಾಮುಂಡಿ ಪುರಂನಲ್ಲಿರುವ ಶ್ರೀ ಶಂಕರ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಾಳಿದ್ದು ಸಂಜೆ ಕೋಣನೂರು ಕೆ ಎಸ್ ಸೀತಾರಾಮಶಾಸ್ತ್ರಿಗಳಿಂದ ಚಂದ್ರಹಾಸ ಎಂಬ ಹರಿಕಥೆ ನಡೆಯುವುದು

ಆಹಾರ ಉತ್ಪತ್ತಿ ಕಮೀಷನರ ಹುದ್ದೆ

ಬೆಂಗಳೂರು ೧೮

ಸಂಸ್ಥಾನವು ಇನ್ನು ೩ ವರ್ಷಗಳಲ್ಲಿ ಆಹಾರದ ಬಗ್ಗೆ ಸ್ವಯಂ ಪೂರ್ಣತೆ ಹೊಂದಲು ೧೦ ಕೋಟಿ ರೂ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ ಆಹಾರ ಉತ್ಪತ್ತಿಯ ವಿಶೇಷ ಕಮೀಷನರ ಹುದ್ದೆಯನ್ನು ಸ್ಥಾಪಿಸಿ, ಅದಕ್ಕೆ ಶ್ರೀ ಎಂ ಕೆ ಅಪ್ಪಾಜಪ್ಪನವರನ್ನು ನೇಮಿಸಲಾಗುವುದೆಂದೂ ತಿಳಿದುಬಂದಿದೆ ಈ ನೂತನ ಯೋಜನೆಯ ಪ್ರಕಾರ ೪ ಲಕ್ಷ ಎಕರೆ ಬೀಳು ಜಮೀನು ಸಾಗುವಳಿಗೆ ಬರುವುದಲ್ಲದೆ, ಈಗ ಸಾಗುವಳಿಯಾಗುತ್ತಿರುವ ಜಮೀನುಗಳ ಉತ್ಪತ್ತಿಯನ್ನು ಹೆಚ್ಚಿಸಲಾಗುವುದೆಂದೂ ಹೇಳಲಾಗಿದೆ

ಲಂಡನ್ನಿಗೆ ಪಂಡಿತ ನೆಹರೂರವರ ಭೇಟಿ

ಪ್ರಧಾನಿ ಪಂಡಿತ ನೆಹರೂರವರು ಬರುವ ಅಕ್ಟೋಬರ್ ತಿಂಗಳಿನಲ್ಲಿ ಲಂಡನ್ನಿಗೆ ಭೇಟಿ ಕೊಟ್ಟು ಅಲ್ಲಿ ಆರು ದಿನಗಳಿದ್ದು ಅನಂತರ ಅಮೆರಿಕಕ್ಕೆ ಪ್ರಯಾಣ ಬೆಳೆಸುವರೆಂದು ತಿಳಿದುಬಂದಿದೆ

ಆಲ್ಬೇನಿಯಾ ಮೇಲೆ ಗ್ರೀಸಿನ ಧಾಳಿ

ಆಲ್ಬೇನಿಯಾ ಗಡಿ ಪ್ರದೇಶದ ಮೇಲೆ ಗ್ರೀಸಿನ ಸೈನ್ಯವು ಧಾಳಿ ನಡೆಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ವಿಶ್ವಸಂಸ್ಥೆಗೆ ಆ ದೇಶವು ಮನವಿ ಮಾಡಿದೆಯೆಂದು ತಿಳಿದುಬಂದಿದೆ

ಕಾಮನ್‌ವೆಲ್ತಿಗೆ ಬರ್ಮಾ ಪುನಃ ಸೇರುವುದೇ?

ಕಮ್ಯೂನಿಸ್ಟರ ಹಾವಳಿಯನ್ನು ತಡೆಗಟ್ಟಲು ಬರ್ಮಾವು ಪುನಃ ಕಾಮನ್‌ವೆಲ್ತಿಗೆ ಸೇರುವುದೆಂದು ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ

ಜೋಳದ ಮೆದೆಗೆ ಬೆಂಕಿ

ಚಾಮರಾಜನಗರದ ತಾಲ್ಲೂಕು ಹೆಗ್ಗೋಠಾರದ ಕುಂಬಾರರ ಶಿದ್ದಶೆಟ್ಟಿಯವರಿಗೆ ಸೇರಿದ್ದ ೬ ಮೆದೆ ಜೋಳದ ತೆನೆಯನ್ನು ಯಾರೋ ಕತ್ತರಿಸಿ, ಮೆದೆಗೆ ಬೆಂಕಿ ಹಾಕಿ ನಷ್ಟಪಡಿಸಿದರೆಂದು ವರದಿಯಾಗಿದೆ

ಆಡಳಿತ ವೆಚ್ಚದ ಖೋತಾ ಯೋಜನೆ

ಬೆಂಗಳೂರು ೧೮

ಸಂಸ್ಥಾನದಲ್ಲಿ ಸರ್ಕಾರದ ವಿವಿಧ ಇಲಾಖೆ ಮತ್ತು ಸರ್ಕಾರದ ಆಡಳಿತದಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ದಕ್ಷತೆಗೆ ಚ್ಯುತಿ ಬರದಂತೆ ವೆಚ್ಚವನ್ನು ತಗ್ಗಿಸುವ ಬಗ್ಗೆ ಪರಿಶೀಲನೆ ನಡೆಸಲು ನೇಮಕರಾಗಿದ್ದ ಶ್ರೀ ಬಿ ಎಸ್ ರಾಘವೇಂದ್ರ ರಾಯರ ವಿಶೇಷ ವರದಿಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ತಿಳಿದುಬಂದಿದೆ

ಅನೇಕ ಇಲಾಖೆಗಳ ವೆಚ್ಚವನ್ನು ವಿಶೇಷವಾಗಿ ಕಡಿಮೆ ಮಾಡಬೇಕೆಂದೂ, ಹಲವು ಕಛೇರಿಗಳನ್ನು ಮುಚ್ಚುವಂತೆಯೂ ಅವರು ಸಲಹೆ ಮಾಡಿರುವರೆಂದೂ, ಇದರಿಂದ ಸರ್ಕಾರಕ್ಕೆ ೨ ಕೋಟಿ ರೂ ಉಳಿತಾಯವಾಗುವುದೆಂದೂ ಗೊತ್ತಾಗಿದೆ ಅವರು ಸೂಚಿಸಿರುವ ನೂತನ ತೆರಿಗೆಗಳಿಂದ ೩ ಕೋಟಿ ರೂ ವರಮಾನ ಬರುವುದೆಂದೂ ಹೇಳಲಾಗಿದೆ.

ಬೆಂಗಳೂರಿಗೆ ಅಮೆರಿಕದ ರಾಯಭಾರಿಯ ಭೇಟಿ

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಮಿ|| ಲಾಯ್ ಹೆಂಡರ್‌ಸನ್‌ರವರು ಇದೇ ೨೩ ನೇ ತಾ|| ಬೆಂಗಳೂರಿಗೆ ಆಗಮಿಸುವರೆಂದು ತಿಳಿದುಬಂದಿದೆ

ನಿರಾಶ್ರಿತರಿಗೆ ಕಡ್ಡಾಯ ಸೈನ್ಯ ಶಿಕ್ಷಣ

೧೫ ರಿಂದ ೪೦ ವರ್ಷದೊಳಗಿನ ಶಕ್ತರಾದ ಎಲ್ಲ ನಿರಾಶ್ರಿತರಿಗೂ ಕಡ್ಡಾಯದ ಮಿಲಿಟರಿ ಶಿಕ್ಷಣವನ್ನು ಕೊಡುವ ಯೋಜನೆಯನ್ನು ಪ್ರಧಾನಿ ಪಂಡಿತ ನೆಹರೂರವರು ಪರಿಶೀಲಿಸುತ್ತಿದ್ದಾರೆಂದು ತಿಳಿದುಬಂದಿದೆ. ಅವರುಗಳನ್ನು ಸೈನ್ಯಕ್ಕೆ ಸೇರಿಸದಿದ್ದರೂ, ಆರ್ಥಿಕ ಮತ್ತು ಇತರ ಕಾರ್ಯಗಳಲ್ಲಿ ಭಾಗವಹಿಸುವಂತೆ ಅವರಿಗೆ ಶಿಕ್ಷಣವನ್ನು ಕಲಿಸಲಾಗುವುದೆಂದೂ ಹೇಳಲಾಗಿದೆ

ವಿವಾಹ ಮಹೋತ್ಸವ

ಮೈಸೂರು ವಿಶ್ವ ವಿದ್ಯಾನಿಲಯದ ಕಛೇರಿಯ ಶ್ರೀ ಎಸ್ ರಾಮಸ್ವಾಮಿ ಯವರು ತಮ್ಮ ಪುತ್ರಿ ಚಿ|| ಸೌ|| ಪದ್ಮಾವತಿಯನ್ನು ಬೆಂಗಳೂರು ಶ್ರೀ ಕೆ ಸುಬ್ರಹ್ಮಣ್ಯರವರ ಪುತ್ರ ಶ್ರೀ ಸಿ ಎಸ್ ನಾರಾಯಣ ರಾಯರಿಗೆ ಕೊಟ್ಟು ಈ ದಿನ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಶ್ರೀಮನ್ ಮಹಾರಾಜರವರು ಕರ್ಣಾಟಕದ ಅರಸರಾಗಲಿ

ಮೈಸೂರಿನ ಶ್ರೀಮನ್ಮಹಾರಾಜರವರನ್ನು ಶಾಸನ ಬದ್ಧ ಅಧಿಪತಿಗಳನ್ನಾಗಿ ಕರ್ಣಾಟಕದ ಜನರು ಒಪ್ಪಿಕೊಂಡಲ್ಲಿ ಬಹಳ ದಿನಗಳಿಂದಲೂ ಬಯಸುತ್ತಿರುವ ಕರ್ಣಾಟಕ ಏಕೀಕರಣವು ಶೀಘ್ರದಲ್ಲಿಯೇ ಆಗುವುದನ್ನು ಯಾರೂ ತಡೆಯಲಾರರು —ಎಂದು ಶ್ರೀ ಟಿ ಸುಬ್ರಹ್ಮಣ್ಯಂರವರು ಹುಬ್ಬಳ್ಳಿಯ 'ನವಯುಗ' ದಿನಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ತಿಳಿಸಿರುತ್ತಾರೆ.

ಮೋಟಾರು ಅಪಘಾತದಲ್ಲಿ ಮಗುವಿಗೆ ಪರಿಹಾರ

ಲಿವರ್‌ಪೂಲಿನ ನೋರಾ ಆರ್ಥರ್ ಎಂಬಾಕೆಯ ೧೮ ತಿಂಗಳಿನ ಮಗುವು ಜಾನ್ ಜೋಸೆಫ್ ಎಂಬುವರ ಮೋಟಾರು ಅಪಘಾತಕ್ಕೆ ಒಳಗಾಗಿ, ಒಂದು ಕಣ್ಣು ಹೋಗಿ, ತೀವ್ರ ಗಾಯವಾದುದಕ್ಕಾಗಿ ಅಲ್ಲಿನ ಕೋರ್ಟಿನವರು ೮೫೦೦ ಪೌಂಡುಗಳ ಪರಿಹಾರ ದ್ರವ್ಯವನ್ನು ಕೊಡಿಸಿರುತ್ತಾರೆ

ಮಜ್ದೂರ್ ವಾರ ಪತ್ರಿಕೆ

ಮೈಸೂರು ಸಂಸ್ಥಾನದ ಸೋಷಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ಮಜ್ದೂರ್ ಎಂಬ ವಾರ ಪತ್ರಿಕೆಯು ಇಷ್ಟರಲ್ಲೇ ಪ್ರಕಟವಾಗಲಿದೆ. ಶ್ರೀ ಡಿ ಶ್ರೀಕಂಠಪ್ಪನವರು ಪತ್ರಿಕೆಯ ಸಂಪಾದಕರಾಗಿ ಡಿಕ್ಲೇರ್ ಮಾಡಿಕೊಂಡಿರುತ್ತಾರೆ

ವರಲಕ್ಷ್ಮೀ ಸಂಗೀತ ವಿದ್ಯಾಮಂದಿರ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ತಮ್ಮ ಮೊದಲನೆಯ ಶಾಖೆಯನ್ನು ಕೃಷ್ಣಮೂರ್ತಿ ಪುರದ ಹೊಸ ಪೋಸ್ಟಾಫೀಸ್ ರಸ್ತೆಯಲ್ಲಿರುವ ೧೪೪೩ ನೇ ನಂಬರು ಮನೆಯಲ್ಲಿ ನಾಳೆಯಿಂದ ಪ್ರಾರಂಭಿಸುವರು. ಮಹಾ ಜನರು ಇದಕ್ಕೆ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ

ಮುಂದಿನ ತಿಂಗಳು ೧೧ ನೇ ತಾ|| ಮೈಸೂರಿನಲ್ಲಿ ಸಂಸ್ಥಾನದ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವನ್ನು ನಡೆಸಬೇಕೆಂದು ಬೆಂಗಳೂರಿನಲ್ಲಿ ಮೊನ್ನೆ ನಡೆದ ಕಾಂಗ್ರೆಸ್ ಕೆಲಸಗಾರರ ಪ್ರತಿನಿಧಿ ಸಭೆಯಲ್ಲಿ ನಿರ್ಧರಿಸಲಾಯಿತು

ವಿಶೇಷ ಮಂಗಳಾರತಿ

ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಂಬಾಳೆ ರಂಗಯ್ಯನವರ ಕುಂಚಿಟಿಗರ ವಿದ್ಯಾರ್ಥಿನಿಲಯದಲ್ಲಿ ನಾಳಿದ್ದು ಶನಿವಾರ ಸಂಜೆ ೭-೩೦ ಗಂಟೆಗೆ ಕಡೇ ಶ್ರಾವಣ ಶನಿವಾರದ ಪ್ರಯುಕ್ತ ವಿಶೇಷ ಮಂಗಳಾರತಿಯು ಪುರ ಸಭಾ ಕಮೀಷನರಾದ ಶ್ರೀ ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಬಾಲಸುಬ್ರಹ್ಮಣ್ಯ ಶಿವಶಿವಾನಂದ ಬಾಲಿಕೆಯಿಂದ ನೃತ್ಯವೂ ಜರುಗುವುದು.

ವೈ. ಕೆ. ಎಸ್. ಲಕ್ಷ್ಮಣ ಶೆಟ್ಟರಿಗೆ ಅಲಸ್ಯ

ನಂಜನಗೂಡು ಪುರಸಭಾ ಉಪಾಧ್ಯಕ್ಷರಾದ ಶ್ರೀ ವೈ ಕೆ ಎಸ್ ಲಕ್ಷ್ಮಣ ಶೆಟ್ಟಿಯವರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಹೊಟ್ಟೆ ನೋವಿಗಾಗಿ ಚಿಕಿತ್ಸೆ ಪಡೆದು ಗುಣ ಮುಖರಾಗುತ್ತಿದ್ದಾರೆ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ನಗರದ ಹೋಟೆಲ್ ಕೆಲಸಗಾರರ ಸಂಘದವರು ಸಮಾರಂಭವನ್ನು ಶ್ರೀ ಮಂಜುನಾಥರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಬೆಳಿಗ್ಗೆ ಶ್ರೀ ಕೆ ಎಸ್ ಕೇಶವ ರಾಯರಿಂದ ಧ್ವಜಾರೋಹಣವಾದನಂತರ, ಮಧ್ಯಾಹ್ನವೆ ರವಣಿಗೆ ನಡೆಯಿತು. ಸಂಜೆ ಶಾಲೆಯ ಪ್ರಾರಂಭೋತ್ಸವ ಪೂಜೆ ಮತ್ತು ಯಕ್ಷಗಾನವೂ ಜರುಗಿದವು.

ಗುಂಡ್ಲುಪೇಟೆಯ ಪುರ ಜನರು ಸ್ವಾತಂತ್ರ್ಯ ದಿನಾಚರಣೆಯನ್ನು ತಾಲ್ಲೂಕು ಅಮಲ್ದಾರರ ಅಧ್ಯಕ್ಷತೆಯಲ್ಲಿ ಟೌನ್‌ಹಾಲಿನಲ್ಲಿ ನೆರವೇರಿಸಿದರು. ವಿದ್ಯಾರ್ಥಿ ಸಂಘದವರೂ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಯವರೂ ಸಮಾರಂಭವನ್ನು ಪುರ ಸಭಾ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಿದರು. ಆಹಾರದ ಅಭಾವವನ್ನು ನೀಗಿಸಲು ಮತ್ತು ಆಹಾರ ಬೆಳೆ ಮತ್ತು ವೃಕ್ಷ ಸಂಪತ್ತನ್ನು ಹೆಚ್ಚಿಸಲು ಸರ್ವರೂ ಸಹಕರಿಸಬೇಕೆಂದು ಅಧ್ಯಕ್ಷರು ಕೋರಿದರು.

ಕೊಡಗಹಳ್ಳಿ ಅರವಟ್ಟಿಗೆ, ಹೂಸ್ಪಲು, ಗಾಡಿ ಜೋಗಿ ಹುಂಡಿ ಗ್ರಾಮಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಮೈಸೂರು ಇಂಟರ್ ಕಾಲೇಜಿನ ಪ್ರೊಫೆಸರ್ ಡಾ|| ಸಿ ವಿ ಕೃಷ್ಣ ಅಯ್ಯಂಗಾರ್ಯರ ಅಧ್ಯಕ್ಷತೆಯಲಿ ನಡೆಯಿತು. ಜಿಲ್ಲಾ ರೈತರ ಸಂಘದ ಉಪಾಧ್ಯಕ್ಷರಾದ ಶ್ರೀ ಕೊಡಗಹಳ್ಳಿ ರಾಮಸ್ವಾಮಿ ಶ್ರೀಗಳಾದ ಎಂ ಸುಬ್ಬೇಗೌಡ ರಾಘವೇಂದ್ರರಾವ ಮತ್ತು ಕೃಷ್ಣರಾಜ ರಾವರವರುಗಳು ಭಾಷಣ ಮಾಡಿದರು. ಅಧ್ಯಕ್ಷರು ಸಭೆಯನ್ನು ನಡೆಸಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಬದರೀನಾಥ ದೇವಾಲಯಕ್ಕೆ ಅಪಾಯ

ಹಿಮಾಲಯ ಪರ್ವತದಲ್ಲಿರುವ ಶ್ರೀ ಬದರೀನಾಥ್ ದೇವಸ್ಥಾನದ ಕೆಳಗಿರುವ ಅಲಕನಂದಾ ನದಿಯ ದಡವು ಕುಸಿದು ಬೀಳುತ್ತಿರುವುದರಿಂದ, ದೇವಾಲಯಕ್ಕೆ ಅಪಾಯ ಉಂಟಾಗಿದೆಯೆಂದು ವರದಿಯಾಗಿದೆ. ಇದನ್ನು ತಪ್ಪಿಸಲು ಕಲ್ಲಿನ ಗೋಡೆಯೊಂದನ್ನು ಕಟ್ಟಲಾಗುತ್ತಿದೆ ಮತ್ತು ನದಿಯನ್ನು ಬೇರೆ ಕಡೆಗೆ ತಿರುಗಿಸಲು ಎಡಭಾಗದಲ್ಲಿ ಒಂದು ಕಾಲುವೆಯನ್ನು ರಚಿಸಲಾಗುತ್ತಿದೆ.

ವಾರದಲ್ಲಿ ಒಂದು ದಿನ ಉಪವಾಸ

ಅಲಹಾಬಾದಿನ ಆಹಾರ ಇಲಾಖೆಯ ೧೦೦೦ ಜನ ನೌಕರರು ವಾರದಲ್ಲಿ ಒಂದು ದಿನ ಉಪವಾಸ ಮಾಡುವುದಾಗಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಪ್ರತಿಜ್ಞೆ ತೆಗೆದುಕೊಂಡಿರುತ್ತಾರೆ.

ಮದರಾಸ್ ವಿದ್ಯಾರ್ಥಿಗಳ ಅಸಭ್ಯ ವರ್ತನೆ

ಮದರಾಸಿನ ಕ್ವೀನ್ ಮೇರಿ ಕಾಲೇಜಿನ ಸಮಾಜ ಸೇವಾ ಸಂಘದ ಸಹಾಯಾರ್ಥವಾಗಿ ಮೊನ್ನೆ ದಿನ ನಡೆದ ವಿವಿಧ ವಿನೋದಾವಳಿ ಕೂಟದಲ್ಲಿ ವಿದ್ಯಾರ್ಥಿಯೊಬ್ಬನು ಅಲ್ಲಿನ ವಿದ್ಯಾರ್ಥಿನಿಯ ಬಗ್ಗೆ ಅನುಚಿತ ರೀತಿಯಲ್ಲಿ ವರ್ತಿಸಿದನೆಂದು ಒತನನ್ನು ಪೋಲೀಸ್ ಕಾನ್‌ಸ್ಟೇಬಲನು ದಸ್ತಗಿರಿ ಮಾಡಿದುದನ್ನು ಪ್ರತಿಭಟಿಸಲು ಅಲ್ಲಿ ಸೇರಿದ್ದ ೫೦೦ ಜನ ವಿದ್ಯಾರ್ಥಿಗಳು ಕಲ್ಲುಗಳನ್ನು ಎಸೆದು ಗಲಭೆ ನಡೆಸಿದರೆಂದೂ, ಪೋಲೀಸರು ಲಾಠಿ ಪ್ರಯೋಗ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದರೆಂದೂ, ಈ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕಮ್ಯೂನಿಸ್ಟರ ಗಲಭೆ

ಪಶ್ಚಿಮ ಬಂಗಾಲದ ಬೂರಲ್ ಹಳ್ಳಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಕಮ್ಯೂನಿಸ್ಟರು ವಿರುದ್ಧ ಮೆರವಣಿಗೆಯನ್ನು ನಡೆಸಿ ಗಲಭೆ ಮಾಡಿದರೆಂದೂ, ಅದನ್ನು ಚದುರಿಸಲು ಪೋಲೀಸರ ಗುಂಡು ಹಾರಿಸಿದರೆಂದೂ ವರದಿಯಾಗಿದೆ. ಪ್ರದರ್ಶಕರಿಂದ ಬಾಂಬುಗಳನ್ನು ವಶಪಡಿಸಿಕೊಳ್ಳಲಾಯಿತು.

ವಿದ್ಯಾಪೀಠದ ಪ್ರಶಸ್ತಿಪತ್ರ ವಿನಿಯೋಗ ಸಮಾರಂಭ

ನಂಜನಗೂಡಿನ ಹತ್ತಿರವಿರುವ ವಿದ್ಯಾಪೀಠದ ರಾತ್ರಿ ಮತ್ತು ಸಾಲ್ಯನೆಗಳ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿನಿಯೋಗಗಳ ಸಮಾರಂಭವು ಇದೇ ೩೧ ನೇ ತಾ|| ಅಖಿಲ ಕರ್ನಾಟಕ ಗ್ರಾಮೋದ್ಯೋಗ ಸಂಘದ ಅಧ್ಯಕ್ಷರಾದ ಶ್ರೀ ಜೆ ಸಿ ಕುಮಾರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಮೈಸೂರು ಸಿಟಿ ಕೋ—ಆಪರೇಟೀವ್ ಬ್ಯಾಂಕ್ ಲಿ, ಮೈಸೂರು

ನೋಟೀಸು

ಈ ಬ್ಯಾಂಕಿನ ೩೮ನೆಯ ವಾರ್ಷಿಕ ಸಾಧಾರಣ ಸಭೆಯು ತಾ|| ೨೧-೮-೧೯೪೯ ನೆಯ ಭಾನುವಾರ ಮಧ್ಯಾಹ್ನ ೩-೩೦ ಗಂಟೆಗೆ ಸಾಹುಕಾರ್ ರಾವ್ ಬಹದ್ದೂರ್ ಧರ್ಮಪ್ರಕಾಶ ಡಿ ಬನುಮಯ್ಯನವರ ಸ್ಕೂಲ್ ಸಭಾಂಗಣದಲ್ಲಿ ನಡೆಯುವುದಾಗಿ ಏರ್ಪಡಿಸಿದೆ. ಮೆಂಬರುಗಳೆಲ್ಲರೂ ಮೀಟಿಂಗಿಗೆ ದಯಮಾಡಿಸಬೇಕೆಂದು ಪ್ರಾರ್ಥನೆ

ಹೆಚ್ ರಾಮಣ್ಣ
ಆ ಸೆಕ್ರೆಟರಿ

Edited, printed and published by A R Nagarajan at Sadhvi Press, D Subbiah Road, Mysore

Central Food Technological Research Institute

Subject — "Tender for preparing and supplying teakwood and rosewood furniture"

With further reference to the advertisement appearing on the 10th August 1949 the time for receiving the tenders for the above supplies has been extended up to 5 P M on Monday the 22nd August 1949

PLANNING OFFICER

FOR SALE

One Bale of

NEWS PRINT

Double Crown Size
Weight 18 lbs per Ream
Price Rs Eight per Ream
at
Nearest Offer
ENQUIRE AT
SADHVI OFFICE
MYSORE

UNIVERSITY OF MYSORE

Office of the University of Mysore
Mysore Dated 13th August 1949
No ... 49 50

NOTIFICATION

Issue of Hall Tickets for September 1949 Examinations

It is hereby notified that candidates for the above examinations may obtain Hall-ticket on or after the 25th August 1949 from the Heads of Colleges through which they have sent the applications

Candidates who have been permitted change of centres should also obtain their Hall-tickets from the Heads of colleges through which applications were sent

C Rangachar
Ag Registrar

ಶ್ರೀ ಗಣೇಶಾ ಟಾಕೀಸ್

19-8-49ರಿಂದ ಪ್ರತಿ ದಿನ ೩ ಪ್ರದರ್ಶನಗಳು

ಚಿತ್ರ ಪ್ರೇಮಿಗಳ ಕೋರಿಕೆಯ ಮೇರೆಗೆ ಮತ್ತೊಮ್ಮೆ

ಎ. ವಿ. ಎಂ ಪ್ರೊಡಕ್ಷನ್ಸ್ ರವರ

WE TWO → (ನಾವಿಬ್ಬರು)
(ತಮಿಳು)

ಭೂಮಿಕೆ — ಟಿ ಆರ್ ಮಹಾಲಿಂಗಂ, ಕೆ. ಸಾರಂಗ ಪಾಣಿ, ರಾಮಚಂದ್ರ, ಟಿ ಬಿ ಕಮಲ, ಟಿ ಎ ಜಯಲಕ್ಷ್ಮಿ, ಕೆ. ಆರ್ ಚೆಲ್ಲಂ ಮುಂತಾದವರು

ರಾಜಕಮಲ್, ಮೈಸೂರು

19—8—49ರಿಂದ ಅಮೋಘ ಆರಂಭ

ದಿನವಹಿ ೩ ಪ್ರದರ್ಶನಗಳು

ಲಾಟರಿ
(ಹಿಂದಿ)
ಭೂಮಿಕೆ ಕೌಸಲ್ಯ, ಸುಂದರ್ ಮುಕರ್ಜೀ ಮತ್ತು ಕುಕ್ಕೂ ರವರ ನರ್ತನ

MORNING SHOWS From 19 8 49 for 4 days

— CARAVAN —

With Stewart Granger, Jean Kent, Dennis Price

A very satisfying entertainment of the Romantic Melodrama with Grand Adventure and attractive Gypsy dances

ಪ್ರಭಾ — 19—8—49 ರಿಂದ

ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಶೋಭನಾಚಲರವರ ತೆಲುಗು ಚಿತ್ರ

ಮದಾಲಸ

— ಪ್ರಧಾನ ಭೂಮಿಕೆಯಲ್ಲಿ —

ಅಂಜಲಿದೇವಿ, ಕೃಷ್ಣವೇಣಿ, ಶ್ರೀರಂಜಿನಿ, ರಘುರಾಮಯ್ಯ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೨೯-೮-೧೯೪೭ [ಸಂಚಿಕೆ ೨೩

ಪ|| ಯೂರೋಪ್ ಕಡೆ ರಷ್ಯದ ಬಾಂಬು ನೆಲೆ

ಬೇಸಾಯಕ್ಕೆ ಖೈದಿಗಳ ಮತ್ತು ಸೈನಿಕರ ಸಹಾಯ

ಭೂಮಿಗಳನ್ನು ಬಂಜರು ಬಿಡಕೂಡದೆಂದು ಒತ್ತಾಯ

ವ್ಯವಸಾಯ ಸಮಿತಿಯವರ ಸಲಹೆಗಳು

ಬೆಂಗಳೂರು ೨೮

ಮೈಸೂರು ಆರ್ಥಿಕ ಸಮ್ಮೇಳನದ ವ್ಯವಸಾಯ ಸಮಿತಿಯ ಸಭೆಯು ಶ್ರೀ ಎ ಕೆ ಯಜ್ಞನಾರಾಯಣ ಅಯ್ಯರವರ ಅಧ್ಯಕ್ಷತೆಯಲ್ಲಿ ಕಳೆದ ೯ ನೇ ತಾ|| ನಡೆಯಿತು ಸಂಸ್ಥಾನದಲ್ಲಿ ಆಹಾರ ಬೆಳೆಯನ್ನು ಹೆಚ್ಚಿಸುವ ವಿಚಾರವಾಗಿ ಕೆಳಗೆ ಕಂಡ ಸಲಹೆಗಳನ್ನು ಸರ್ಕಾರಕ್ಕೆ ಸಮಿತಿಯವರು ಸೂಚಿಸಿದ್ದಾರೆ –

ಸರ್ಕಾರಕ್ಕೆ ಸೇರಿದ ಜಮೀನುಗಳನ್ನು ಸರ್ಕಾರದ ಇಲಾಖೆಯವರಿಂದಲೇ ಸಾಗುವಳಿ ಮಾಡಿಸುವುದು ಕೆರೆ ಮತ್ತು ಕಾಲುವೆಗಳ ಅಚ್ಚುಕಟ್ಟಿನಲ್ಲಿರುವ ಬಂಜರು ಜಮೀನುಗಳನ್ನು ಕೂಡಲೇ ಸಾಗುವಳಿಗೆ ತರುವುದು, ಸಂಸ್ಥಾನದಲ್ಲಿ ವ್ಯವಸಾಯ ಕಾರ್ಮಿಕರ ಅಭಾವವಿರುವುದರಿಂದ ಅದಕ್ಕಾಗಿ ಖೈದಿಗಳು ಮತ್ತು ಮಿಲಿಟರಿಯವರ ಸಹಾಯವನ್ನು ಪಡೆಯುವುದು, ಹೊರಗಿನಿಂದ ವ್ಯವಸಾಯ ಕಾರ್ಮಿಕರನ್ನು ಕರೆಸಲು ಅನುಮತಿ ಕೊಡುವುದು ಮತ್ತು ಟ್ರಾಕ್ಟರುಗಳನ್ನು ಹೆಚ್ಚಾಗಿ ಉಪಯೋಗಿಸುವುದು

ವ್ಯವಸಾಯಕ್ಕೆ ಯೋಗ್ಯವಾದ ಭೂಮಿಗಳನ್ನು ಸಾಗುವಳಿ ಮಾಡದೆ ಬಂಜರು ಬಿಡಕೂಡದೆಂದು ೩ ವರ್ಷಗಳ ಕಾಲ ಒತ್ತಾಯಪಡಿಸುವ ತಾತ್ಕಾಲಿಕ ಆಜ್ಞೆಯನ್ನು ಸರ್ಕಾರದವರು ಕೂಡಲೇ ಜಾರಿಗೆ ತರಬೇಕೆಂದು ಸಮಿತಿಯವರು ಸಲಹೆ ಮಾಡಿರುತ್ತಾರೆ

ಅಖಿಲ ಭಾರತ ನೂಲೆನಾದು ಅಭಿವೃದ್ಧಿ ಸಮಿತಿಗೆ ಸರ್ಕಾರದವರು ಇಬ್ಬರು ಪ್ರತಿನಿಧಿಗಳನ್ನು ನಾಮಕರಣ ಮಾಡಬೇಕೆಂದೂ ಪ್ರಾರ್ಥಿಸಲಾಗಿದೆ

ಫಸ್ಟ್ ಗ್ರೇಡ್ ಕಾಲೇಜ್ ಸಂಘದ ಚುನಾವಣೆ

ಮೈಸೂರು ಫಸ್ಟ್ ಗ್ರೇಡ್ ಕಾಲೇಜ್ ಸಂಘದಲ್ಲಿ ಪ್ರಸಕ್ತ ಸಾಲಿಗೆ ಶ್ರೀ ಎ ಜಿ ರಾಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಆರ್ ಎಲ್ ಕೆ ತಾತಾಚಾರ್ಯರವರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ

ಹರಿಕಥೆ

ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಎಸ್ ಕೆ. ನಂಜುಂಡ ಭಾಗವತರಿಂದ ಸುಗ್ರೀವ ಸಖ್ಯ ಎಂಬ ಹರಿಕಥೆ ನಡೆಯುವುದು ಭಾನುವಾರ ಸಂಜೆ ೬ ಗಂಟೆಗೆ ಶ್ರೀ ಗಂಗಾಧರ ನಾಯಿ ಗೌಡ ಮತ್ತು ಹಿರಣ್ಣಯ್ಯನವರುಗಳಿಂದ ಪುರಾಣ ಜರುಗುವುದು.

ಠಾಗೂರರ ದಿನಾಚರಣೆ

ರಾಜಧಾನಿಯ ಒನುಮಾಯ್ಯನವರ ಹೈಸ್ಕೂಲಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ಕಳೆದ ೧೬ ನೇ ತಾ|| ಠಾಗೂರರ ದಿನಾಚರಣೆಯು ಶ್ರೀ ವಿ ಟಿ ತಿರುನಾರಾಯಣಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಆರಂಭ ಭಾಷಣವನ್ನು ಶ್ರೀ ಸಿ. ಆರ್ ನರಸಿಂಹ ಶಾಸ್ತ್ರಿಗಳವರು ನೆರವೇರಿಸಿದರು ಕಳೆದ ಸೋಮವಾರ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಲಾಯಿತು

ಪಶ್ಚಿಮ ಯೂರೋಪಿನ ಮೇಲೆ ರಷ್ಯದ ವಿ ೨ ರಾಕೆಟ್ ಬಾಂಬು

ಪಶ್ಚಿಮ ಯೂರೋಪಿನ ಮೇಲೆ ಪ್ರಯೋಗಿಸಲು ರಷ್ಯವು ವಿ೨ ರಾಕೆಟ್ ಬಾಂಬುಗಳ ನೆಲೆಗಳನ್ನು ಸ್ಥಾಪಿಸುತ್ತಿದೆಯೆಂದೂ ಬಾಲ್ಟಿಕ್ ತೀರ ಮತ್ತು ಪೂರ್ವ ಜರ್ಮನಿಯ ಪ್ರದೇಶಗಳಲ್ಲಿ ರಷ್ಯದ ಗುಪ್ತ ಚಟುವಟಿಕೆಯು ಹೆಚ್ಚಾಗುತ್ತಿದೆಯೆಂದೂ ರಷ್ಯದಲ್ಲಿ ೩ ವರ್ಷಗಳ ಕಾಲ ಒತ್ತಾಯವಾಗಿ ಕೆಲಸಮಾಡುತ್ತಿದ್ದ ಪ್ರವೀಣರೊಬ್ಬರು ತಿಳಿಸಿರುತ್ತಾರೆ

ಮೈಸೂರಿಗೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿಯೋಗ

ಭಾರತದ ಕಾರ್ಮಿಕರ ಸ್ಥಿತಿಗಳನ್ನು ಪರಿಶೀಲಿಸಲು, ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿಯೋಗವೊಂದು ಭಾರತಕ್ಕೆ ಸಧ್ಯದಲ್ಲಿಯೇ ಬರಲಿದೆಯೆಂದೂ ಅವರು ಮೊದಲು ಮೈಸೂರಿಗೆ ಭೇಟಿ ಕೊಡುವರೆಂದೂ ತಿಳಿದುಬಂದಿದೆ

ಜಿನ್ನಾ ಸ್ಮಾರಕ ಸ್ಟಾಂಪುಗಳು

ಜಿನ್ನಾರವರ ಪ್ರಥಮ ವಾರ್ಷಿಕ ದಿನದ ಜ್ಞಾಪಕಾರ್ಥವಾಗಿ ಮುಂದಿನ ತಿಂಗಳು ೧೧ ನೇ ತಾ|| ಪಾಕೀಸ್ತಾನದಲ್ಲಿ ಸ್ಮಾರಕ ಸ್ಟಾಂಪುಗಳನ್ನು ಮಾರಲಾಗುವುದೆಂದೂ, ಅದರಲ್ಲಿ ಅವರ ಭಾವ ಚಿತ್ರವಿರದೆ, ಅವರ ಸಂದೇಶವಾದ ಒಗ್ಗಟ್ಟು, ಭಕ್ತಿ ಮತ್ತು ಶಿಸ್ತುಗಳಿರುವುವೆಂದೂ ಹೇಳಲಾಗಿದೆ

ಸಂಗೀತ ಕಚೇರಿ

ರಾಜಧಾನಿಯ ಮಿರ್ಜ಼ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂಗೀತ ವಿದ್ವಾನ್ ಎಂ ಆರ್ ರಾಮಕೃಷ್ಣ ಭಾಗವತರಿಂದ ಸಂಗೀತವೂ, ರಾತ್ರಿ ೮ ಗಂಟೆಗೆ ಶ್ರೀ ಗಂಗಾಧರ ಹಿರಣ್ಣಯ್ಯ ಮತ್ತು ನಾಯಿ ಗೌಡ ಮರುಗಳಿಂದ ಪುರಾಣವೂ ನಡೆಯುವುವು

ಚಾಮುಂಡಿ ಬಡಾವಣೆಯಲ್ಲಿ ಕಳ್ಳತನಗಳು

ಇತ್ತೀಚೆಗೆ ಚಾಮುಂಡಿ ಬಡಾವಣೆ ಮತ್ತು ಸುತ್ತಮುತ್ತ ಕಳ್ಳತನಗಳು ಹೆಚ್ಚಾಗುತ್ತಿವೆಯೆಂದು ತಿಳಿದುಬಂದಿದೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡುವುದು ಅಗತ್ಯವಾಗಿದೆ

ಉನ್ನತ ವಿದ್ಯಾಭ್ಯಾಸಕ್ಕೆ ನಿರ್ಬಂಧವಿರಬಾರದು

ಮದರಾಸ್ ಘಟಿಕೋತ್ಸವದಲ್ಲಿ ಸರ್ ಆರ್ಕಾಟರ ಭಾಷಣ

ಮದರಾಸ್ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಭಾಷಣವನ್ನು ಈ ದಿನ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಮಾಡಿದರು

ಸರ್ ಆರ್ಕಾಟರವರು ದೇಶದ ವಿದ್ಯಾಭಿವೃದ್ಧಿ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮವನ್ನು ವಿವರಿಸಿ, ವಿಶ್ವ ವಿದ್ಯಾನಿಲಯದ ಶಿಕ್ಷಣವು ಕೆಲವರಿಗೆ ಮಾತ್ರ ಲಭಿಸಬೇಕೆಂಬ ವಾದವನ್ನು ಟೀಕಿಸಿದರು. ಉನ್ನತ ಶಿಕ್ಷಣ ಪಡೆದ ಪ್ರತಿಯೊಬ್ಬರಿಗೂ ಸರಿಯಾದ ನೌಕರಿಯು ಸಿಕ್ಕುವುದೆಂಬ ಭರವಸೆ ಇಲ್ಲದಿದ್ದರೂ ದೇಶದ ಪ್ರತಿಯೊಬ್ಬ ಗಂಡಸಿಗೂ ಮತ್ತು ಹೆಂಗಸಿಗೂ ಅದು ದೊರೆಯಬೇಕಾದುದು ಅತ್ಯವಶ್ಯಕವೆಂದು ಅವರು ಹೇಳಿದರು ಈಗ ಭಾರತಕ್ಕೆ ಹೆಚ್ಚು ಮಂದಿ ವಿದ್ಯಾವಂತರು ಬೇಕಾಗಿದ್ದಾರೆಂದೂ, ಆದ ಕಾರಣ ವಿದ್ಯಾರ್ಥಿಗಳ ಮೇಲೆ ನಿರ್ಬಂಧ ಹಾಕುವುದು ಸರಿಯಲ್ಲವೆಂದೂ ತಿಳಿಸಿದರು

ಬಲಯುತವಾದ ಕೇಂದ್ರ ಸರ್ಕಾರವು ಇರಬೇಕಾದದು ಅತ್ಯಾವಶ್ಯಕವಾದರೂ ಪ್ರಾಂತೀಯ ಸರ್ಕಾರಗಳ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಅದು ಇರಕೂಡದೆಂದೂ ಕೆಲವು ವಿಷಯಗಳಲ್ಲಿ ಮಾತ್ರ ಕೇಂದ್ರಕ್ಕೆ ಸಂಪೂರ್ಣ ಅಧಿಕಾರ ವಿರಬೇಕೆಂದೂ ಅವರು ಅಭಿಪ್ರಾಯ ಪಟ್ಟರು

ವಿಶ್ವ ವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಕ್ಕಿಂತಲೂ ಹೆಚ್ಚಾಗಿ ಸಹನಾಶಕ್ತಿಯನ್ನು ಹೇಳಿಕೊಟ್ಟಿವೆ ದೇಶದಲ್ಲಿ ಎಷ್ಟೋ ಬದಲಾವಣೆಗಳು ಆಗಬೇಕಾಗಿವೆ ಅವುಗಳನ್ನು ಒಂದು ರಾತ್ರಿಯಲ್ಲೇ ಬದಲಾವಣೆ ಮಾಡಬೇಕೆಂದು ಆತುರ ಪಡುವುದರಿಂದ ಪ್ರಯೋಜನವಿಲ್ಲವೆಂದೂ ಆದ ಕಾರಣ ವಿದ್ಯಾರ್ಥಿಗಳು ತಾಳ್ಮೆಯಿಂದ ವರ್ತಿಸಿ, ದೇಶದ ಪ್ರಗತಿಗೂ ಮತ್ತು ಶಿಸ್ತಿನ ಜೀವನಕ್ಕೂ ದುಡಿಯಬೇಕೆಂದು ಅವರು ಹೇಳಿದರು.

೨ ಲಕ್ಷ ಕಿಲೋವ್ಯಾಟ್ ವಿದ್ಯುಚ್ಛಕ್ತಿ ಯೋಜನೆ ಆದರ ಉತ್ಪತ್ತಿಯನ್ನು ಹೆಚ್ಚಿಸುವ ವಿಚಾರವನ್ನು ಭಾರತ ಸರ್ಕಾರದವರು ಪರ್ಯಾಲೋಚನೆಯಲ್ಲಿಟ್ಟಿರುವರೆಂದು ತಿಳಿದುಬಂದಿದೆ

ಮಂತ್ರಿ ಮಂಡಲದ ಪುನರ್ರಚನೆ ಇಲ್ಲ

ಕಾಂಗ್ರೆಸ್ ಮಹಾನಾಯಕರಿಂದ ಸೂಚನೆ

ಸ್ವಂ ಸು ಪ್ರೆ (ಸ] ಬೆಂಗಳೂರು ೨೮

ಅಖಿಲ ಭಾರತದ ಕಾಂಗ್ರೆಸ್ಸಿನ ಮಹಾನಾಯಕರಿಂದ ಮೈಸೂರು ಕಾಂಗ್ರೆಸ್ಸಿಗೆ ಬಂದಿರುವ ಸೂಚನೆ ಪ್ರಕಾರ, ಈಗಿನ ಮಂತ್ರಿ ಮಂಡಲದ ಪುನರ್ರಚನೆ ಆಗುವುದಿಲ್ಲವೆಂದು ತಿಳಿದುಬಂದಿದೆ ಕೇವಲ ಪಾರ್ಲಿಮೆಂಟರಿ ಕಾರ್ಯದರ್ಶಿಗಳ ನೇಮಕ ಮಾತ್ರ ಸಧ್ಯದಲ್ಲಿಯೇ ಹೊರಬೀಳಲಿದೆಯೆಂದು ಗೊತ್ತಾಗಿದೆ

ಕರಾಚಿಯ ಗಲಭೆ ಬಗ್ಗೆ ವಿಚಾರಣೆ

ಸ್ವಾತಂತ್ರ್ಯ ದಿನಾಚರಣೆಯಂದು ಕರಾಚಿಯಲ್ಲಿ ನಡೆದ ಗಲಭೆಯ ಬಗ್ಗೆ ವಿಚಾರಣೆ ನಡೆಸಲು ಪಾಕೀಸ್ತಾನ ಸರ್ಕಾರದವರು ಮಿ|| ವೆಲ್ಲಾನಿಯವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಸಮಿತಿಯನ್ನು ರಚಿಸಿರುತ್ತಾರೆ

ಭಾರತಕ್ಕೆ ೫೦ ಸಾವಿರ ಕೈಗಾರಿಕಾ ಪ್ರವೀಣರ ಅಗತ್ಯ

ಭಾರತದಲ್ಲಿ ಮುಂದಿನ ೫ ಅಥವ ೧೦ ವರ್ಷಗಳಲ್ಲಿ ಸುಮಾರು ೫೦ ಸಾವಿರ ಜನ ವೈಜ್ಞಾನಿಕ ಮತ್ತು ಕೈಗಾರಿಕಾ ಪ್ರವೀಣರು ಬೇಕಾಗುವುದೆಂದು ಭಾರತ ಸರ್ಕಾರದ ವೈಜ್ಞಾನಿಕ ಸಲಹಾ ಸಮಿತಿಯವರು ವರದಿಮಾಡಿದ್ದಾರೆ

ಯುಗೋಸ್ಲೇವಿಯಾದ ಮೇಲೆ ರಷ್ಯದ ಕಣ್ಣು

ಇನ್ನು ೮ ವಾರದೊಳಗಾಗಿ ರಷ್ಯವು ಯುಗೋಸ್ಲೇವಿಯಾದ ಮೇಲೆ ಬಿದ್ದು, ಅಲ್ಲಿನ ಟಿಟೋರವರ ಆಡಳಿತವನ್ನು ರದ್ದುಮಾಡಿ, ಆ ದೇಶವನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಳ್ಳುವುದೆಂದು ಅಮೆರಿಕದ ಮಿಲಿಟರಿ ಪ್ರವೀಣರು ಅಧ್ಯಕ್ಷ ಟ್ರೂಮನ್ನರವರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆಂದು ವರದಿಯಾಗಿದೆ

ಮೊಸಳೆಯನ್ನು ತಿನ್ನುವ ಪಕ್ಷಿ

ಆಸ್ಟ್ರೇಲಿಯಾದಲ್ಲಿ ಕೂ-ಕಾಬುರಾ ಎಂಬ ಪಕ್ಷಿಯು ಹಾವುಗಳನ್ನು ಕೊಲ್ಲುವುದಲ್ಲದೆ ಮೊಸಳೆಗಳನ್ನು ತಿನ್ನುವುದೆಂದು ಹೇಳಲಾಗಿದೆ

ಕೋತಿಗೂ ಸ್ವಾತಂತ್ರ್ಯ

ಸ್ವಾತಂತ್ರ್ಯ ದಿನಾಚರಣೆಯಂದು ಜಯಪುರದಲ್ಲಿ ಕೋತಿಯೊಂದು ಮನೆಯೊಂದರ ಮೇಲೆ ಹಾರಾಡುತ್ತಿದ್ದ ರಾಷ್ಟ್ರ ಧ್ವಜವನ್ನು ಕಿತ್ತುಕೊಂಡು ಪಕ್ಕದಲ್ಲಿದ್ದ ಧ್ವಜಾರೋಹಣ ಮೈದಾನಕ್ಕೆ ಬಂದು ಜನರನ್ನು ಆಶ್ಚರ್ಯ ಗೊಳಿಸಿತೆಂದೂ, ಧ್ವಜವನ್ನು ಕೋತಿಯಿಂದ ಕಿತ್ತುಕೊಳ್ಳಲು ಜನರು ಪ್ರಯತ್ನ ಪಟ್ಟರೂ ಅದು ವಿಫಲವಾಗಿ ಕೋತಿಯು ಧ್ವಜದೊಂದಿಗೆ ಮತ್ತೊಂದು ಮನೆಯ ಮೇಲೆ ಹಾರಿ ಬಾವುಟವನ್ನು ಹಿಡಿದುಕೊಂಡು ಓಡಾಡುತ್ತಿತ್ತೆಂದೂ ಹೇಳಲಾಗಿದೆ

"ಯುಗಶಕ್ತಿ" ವಾರಪತ್ರಿಕೆ

ಕಾರ್ಮಿಕ ಮುಖಂಡರೂ, ಕ್ರಾಂತಿ ಪತ್ರಿಕೆಯ ಉಪ ಸಂಪಾದಕರೂ ಆದ ಶ್ರೀ ಎಸ್ ಶೇಷಣ್ಣನವರ 'ಯುಗಶಕ್ತಿ' ಎಂಬ ಕನ್ನಡ ಇಂಗ್ಲಿಷ್ ವಾರ ಪತ್ರಿಕೆಯೊಂದನ್ನು ಹೊರಡಿಸುವುದಾಗಿ ಡಿಕ್ಲೇರ್ ಮಾಡಿಕೊಂಡಿರುವರು.

ಹೆಂಗಸಿನ ವೇಷದಲ್ಲಿದ್ದ ದರೋಡೆಕಾರನ ದಸ್ತಗಿರಿ

ಕಲ್ಕತ್ತದ ಷಂಡಂ ದರೋಡೆ ಸಂಬಂಧದಲ್ಲಿ ಕಣ್ಮರೆಯಾಗಿದ್ದ ಒಬ್ಬ ಅಪಾದಿತನು ಹೆಂಗಸಿನ ವೇಷದಲ್ಲಿ ಒಂದು ಮನೆಯಲ್ಲಿ ಮಹಿಳೆಯರೊಡನೆ ಇದ್ದಾಗ ಪ್ರೋಲೀಸರು ಆತನನ್ನು ದಸ್ತಗಿರಿಮಾಡಿರುತ್ತಾರೆ. ಆತನು ಕ್ರಾಂತಿಕಾರ ಕಮ್ಯೂನಿಸ್ಟ ಪಕ್ಷಕ್ಕೆ ಸೇರಿದವನೆಂದು ಹೇಳಲಾಗಿದೆ

ಡಾಲರ್ ಮಿತವ್ಯಯಕ್ಕೆ ಮಂತ್ರಿಗಳ ಸಮಿತಿ

ಭಾರತದಲ್ಲಿ ಡಾಲರುಗಳ ಮಿತವ್ಯಯವು ಅತ್ಯಗತ್ಯವಾಗಿರುವುದರಿಂದ ಪರದೇಶಗಳ ಪದಾರ್ಥಗಳನ್ನು ತರಿಸುವ ಬಗ್ಗೆ ಹೆಚ್ಚು ಎಚ್ಚರಿಕೆಯಿಂದ ವರ್ತಿಸಲಾಗುವದೆಂದೂ ಅವುಗಳ ಬಗ್ಗೆ ರಹದಾರಿ ಕೊಡುವುದನ್ನು ಅಂತರ ಪ್ರಾಂತೀಯ ಮಂತ್ರಿಗಳ ವಿಶೇಷ ಸಮಿತಿಯೊಂದು ಪರಿಶೀಲಿಸುವುದೆಂದೂ ಭಾರತ ಸರ್ಕಾರದ ಆರ್ಥಿಕ ಸಚಿವರು ತಿಳಿಸಿರುತ್ತಾರೆ

ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿ ಅಗತ್ಯ

ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿಯೂ ಅಗತ್ಯವೆಂದೂ, ಇದಾದ ಹೊರತು ನಿಜವಾಗಿಯೂ ಜನರು ಸ್ವತಂತ್ರರೆಂದು ಭಾವಿಸಲಾಗುವುದಿಲ್ಲವೆಂದೂ ಡಾ|| ರಾಧಾ ಕೃಷ್ಣರವರು ತಿಳಿಸಿರುತ್ತಾರೆ

೧೯೩೫ನೇ ಭಾರತದ ಕಾನೂನಿನ ತಿದ್ದುಪಡಿ

ಪ್ರಾಂತ್ಯಗಳಲ್ಲಿ ಚುನಾವಣೆ, ಶಾಸನ ಸಭೆಗಳ ಸದಸ್ಯರ ಸಂಖ್ಯೆ, ಅವುಗಳ ಅಧಿಕಾರ ವ್ಯಾಪ್ತಿ ಮುಂತಾದ ವಿಚಾರಗಳ ಬಗ್ಗೆ ಗೌರ್ನರ್ ಜನರಲ್ಲರಿಗೆ ವಿಶೇಷ ಅಧಿಕಾರವನ್ನು ಕೊಡುವುದಕ್ಕಾಗಿ ೧೯೩೫ನೇ ಭಾರತದ ಕಾನೂನನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಭಾರತ ರಾಜ್ಯಾಂಗ ಸಭೆಯಲ್ಲಿ ಮಂಡಿಸಲಾಗಿದೆ.

ಸರ್ಕಾರದ ಹಲವು ಇಲಾಖೆಗಳನ್ನು ರದ್ದು ಮಾಡಬೇಕು

ವಿಶೇಷ ಅಧಿಕಾರಿಗಳ ಸೂಚನೆ

ಬೆಂಗಳೂರು ೧೮

ರಸ್ತೆ ಮತ್ತು ಭವನಗಳ ಚೀಫ್ ಇಂಜನಿಯರ್, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಚೋಗ್, ತುಮಕೂರು, ಮತ್ತು ಮೈಸೂರುಗಳ ಸೂಪರಿಂಟೆಂಡಿಂಗ್ ಇಲಾಖೆಗಳು ಮತ್ತು ಹಾರ್ಟಿಕಲ್ಚರ್ ಡೈರೆಕ್ಟರ್ ಹುದ್ದೆಗಳನ್ನು ರದ್ದು ಮಾಡುವುದು, ಹೈ ಕೋರ್ಟು ನ್ಯಾಯಾಧೀಶರುಗಳ ಸಂಖ್ಯೆ ಕಡಿಮೆಮಾಡುವುದು, ಸೀನಿಯರ್ ಸರ್ಜನ್ ಮತ್ತು ಆರೋಗ್ಯ ಡೈರೆಕ್ಟರವರ ಗಳ ಹುದ್ದೆಯನ್ನು ಬಂದು ಮಾಡುವುದದು, ದ್ಯಾಭ್ಯಾಸ ತೆರಿಗೆಯನ್ನು ದ್ವಿಗುಣಪಡಿಸಿ, ಶಾಲಾ ಇನ್ಸ್‌ಪೆಕ್ಟರುಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, ಜಮೀನು ಕಂದಾಯದ ಜೊತೆಗೆ ವ್ಯವಸಾಯ ವರಮಾನ ತೆರಿಗೆ ವಿಧಿಸುವುದು-ಇವೇ ಮುಂತಾದ ಸಲಹೆಗಳನ್ನು ವಿಶೇಷ ಮಿತವ್ಯಯ ಅಧಿಕಾರಿಗಳಾಗಿ ನೇಮಕವಾಗಿದ್ದ ಶ್ರೀ ಬಿ. ಎಸ್. ರಾಘವೇಂದ್ರ ರಾಯರು ತಮ್ಮ ವರದಿಯಲ್ಲಿ ಸೂಚಿಸಿರುವರೆಂದು ತಿಳಿದುಬಂದಿದೆ

MORNING SHOWS
AT
CHAMUNDESWARI
TALKIES
From Friday the 19th August for 3 days
Vibrant with Suspense ! So Daring!! So Fascinating
IN
R. K. O's
SPIRAL — — STAIRCASE
—:Starring.—
GEORGE BRENT & DOROTHY MC GUIRE

ಸ್ವಾತಂತ್ರ್ಯ ದಿನಾಚರಣೆ

ನಂಜನಗೂಡು ೧೭

ಇಲ್ಲಿನ ಮಹಿಳಾ ಸೇವಾ ಸಮಾಜದಲ್ಲಿ ಸಮಾರಂಭವು ಶ್ರೀಮತಿ ಸುನಂದಮ್ಮನವರ ಅಧ್ಯಕ್ಷತೆಯಲ್ಲಿ ಜರಗಿತು ಬೇಗ್ಗೆ ಶ್ರೀಮತಿ ಶಾರದಮ್ಮ ಶಾಂತವೀರಪ್ಪನವರು ರಾಷ್ಟ್ರ ಧ್ವಜವನ್ನೂ ಮತ್ತು ಶ್ರೀಮತಿ ಕಮಲಾನಾಯ್ಡುರವರು ಮೈಸೂರುಧ್ವಜವನ್ನೂ ಹಾರಿಸಿದರು. ಶ್ರೀಮತಿ ಗಂಗಮ್ಮ, ಶಾಂತ, ಸುನಂದಮ್ಮ ಮುಂತಾದವರು ಭಾಷಣ ಮಾಡಿ, ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸರ್ವರೂ ಪ್ರಯತ್ನ ಮಾಡಬೇಕೆಂದೂ, ಅಜ್ಞಾನದಲ್ಲಿರುವ ತಮ್ಮ ಸೋದರಿಯರನ್ನು ಉದ್ಧಾರ ಮಾಡಲು ಸಮಾಜದವರು ದುಡಿಯಬೇಕೆಂದೂ ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸಮಾಜದ ವಾಚನಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಚಾಮರಾಜನಗರದ ತಾಲ್ಲೂಕು ಹರದನಹಳ್ಳಿಯ ಮಾಧ್ಯಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನೋತ್ಸವವು ಪುರ ಸಭಾಧ್ಯಕ್ಷರಾದ ಶ್ರೀ ಬಿ ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಶ್ರೀ ಎ. ಶ್ರೀಕಂಠರಾವ್ ಗಾಯಕವಾಡ್‌ರವರು ಧ್ವಜಾರೋಹಣ ಮಾಡಿದರು ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿ ನಡೆಯಿತು.

ಆಹಾರ ಸಮಸ್ಯೆ ಬಗೆಹರಿ ಬೆಲೆ ಹೆಚ್ಚಿಸಬೇಕು

ಪ್ರಪಂಚದಲ್ಲಿ ಈಗ ಉಂಟಾಗಿ[ರುವ ಆ]ಹಾರದ ಕಷ್ಟಕ್ಕೆ ಭೂಮಿಗಳ ಅಭಾವ [ಕಾ]ರಣವಲ್ಲವೆಂದೂ, ಆದಕ್ಕೆ ರೈತರ ... ವೇ ಕಾರಣವೆಂದೂ ಆಸ್ಟ್ರೇಲಿಯಾದ ... ರಿಕಾ ಪ್ರವೀಣರಾದ ಡಾ|| ಕೊಲಿ[ನ್ ಕ್ಲಾ]ರ್ಕ್‌ರವರು ತಿಳಿಸಿರುತ್ತಾರೆ ಈ ... ಯನ್ನು ಬಗೆಹರಿಸಬೇಕಾದರೆ ... ಹಾರ ಧಾನ್ಯಗಳ ದರವನ್ನು ಹೆಚ್ಚಿಸ... ಕೆಂದು ಅವರು ಸಲಹೆ ಮಾಡಿರುತ್ತಾರೆ.

ಗಾಯತ್ರೀ ಟಾಕೀ[ಸ್]
19-8-49ರಿಂದ 2 ದಿನಗಳು ...
ಪ್ಯಾರಾಮೌಂಟ್ಸ್‌ರವರ ಆದ...
ಪತ್ತೇದಾರಿ ಚಿತ್ರ
THE
ACCUSE[D]
ದಿ ಅಕ್ಯೂಸ್ಡ್
ಬೆಳಗಿನ ಪ್ರದರ್ಶ[ನ]
20 ಮತ್ತು 21 ತಾ||ಗಳಲ್ಲಿ
ಎಂ. ಜಿ ಎಂ ರವರ
ಲೀ ಮಿ ಸ ರ ಬ ಲ್

Edited, printed and pu[b]lished by A R. Nagara[j] at Sadhvi Press, D.Subb[...] Road, Mysore.

RAJKAMAL, MYSORE
MORNING SHOWS From 19 8-49 for 4 da[ys]
— CARAVAN —
With Stewart Granger, Jean Kent, Dennis Price
A very satisfying entertainment of the Romantic Melodrama with Grand Adventure and attractive Gypsy dances

ಶ್ರೀ ಗಣೇಶಾ ಟಾಕೀಸ್
19-8-49ರಿಂದ ಪ್ರತಿ ದಿನ ೪ ಪ್ರದರ್ಶನಗಳು
ಚಿತ್ರ ಪ್ರೇಮಿಗಳ ಕೋರಿಕೆಯ ಮೇರೆಗೆ ಮತ್ತೊಮ್ಮೆ
ಎ. ವಿ. ಎಂ. ಪ್ರೊಡಕ್ಷನ್ಸ್‌ರವರ
WE TWO → (ನಾವಿಬ್ಬರು)
(ತಮಿಳು)
ಭೂಮಿಕೆ:—ಟಿ. ಆರ್. ಮಹಾಲಿಂಗಂ, ಕೆ. ಸಾರಂಗ ಪಾಣಿ, ರಾಮಚಂದ್ರನ್, ಬಿ ಬಿ ಕಮಲ, ಟಿ.ಎ. ಜಯಲಕ್ಷ್ಮಿ, ಕೆ. ಆರ್. ಚೆಲ್ಲಂ ಮುಂತಾದವರು

ಪ್ರಭಾ — 19-8-49 ರಿಂದ
ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಶೋಭನಾಚಲರವರ ತೆಲುಗು ಚಿತ್ರ
— ಮದಾಲಸ —
—:ಪ್ರಧಾನ ಭೂಮಿಕೆಯಲ್ಲಿ:—
ಅಂಜಲಿದೇವಿ, ಕೃಷ್ಣವೇಣಿ, ಶ್ರೀರಂಜನಿ, ರಘುರಾಮಯ್ಯ

ಚಾಮುಂಡೇಶ್ವರೀ ಟಾಕೀಸ್
19—8- 49ರಿಂದ ಯಶಸ್ವಿಯಾದ 3ನೇ ವಾರ
ಪ್ರತಿ ದಿನ 3 ಆಟಗಳು
— ನವಜೀವನಂ —
ನಾಗಯ್ಯ, ಕಣ್ಣಾಂಬ, ಎನ್ ನಾರಾಯಣ ರಾವ್, ಟಿ ಆರ್ ರಾಮಚಂದ್ರನ್ ಪಾತ್ರವಹಿಸಿರುವ ತಮಿಳು ಚಿತ್ರ
(R V. ಪಿಕ್ಚರ್ಸ್ ರಿಲೀಸ್

MYSORE CITY MUNICIPALITY

NOTICE

Sealed Tenders will be received up to 4 P M. o[n] 25-8-1949 by the Municipal Engineer for (1) Constru[ct]ing an office of the Hackney Carriage Inspector ne[ar] Railway Station (2) Construction of a masonary dr[ain] in Devaraja Market (3) Constructing a Radio Ro[om] in Narasimharaja Mohalla (4) Providing and supp[ly]ing Octroi and Toll Schedule Boards Each Tend[er] must be accompanied with a chellan for having remitted Rs 45/-, Rs. 50,-, Rs 60,- and Rs. 6[...] respectively in the Municipal Treasury as earn[est] money. For full particulars please see the notificati[on] on the Office Notice Board.

Sd V. K Mukundan,
Municipal Engineer

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೨೦-೮-೧೯೪೮ [ಸಂಚಿಕೆ ೩೩

ಮಳೆಯಿಂದ ಸಾವಿರ ಲಕ್ನೋ ಮನೆಗಳ ನಾಶ

ಶಾಸ್ತ್ರಿಯವರ ಶತಮಾನೋತ್ಸವ

ಮೈಸೂರು ೨೦

ವೃದ್ಧ ಪಿತಾಮಹ ಎಂ. ವೆಂಕಟ ಕೃಷ್ಣಯ್ಯನವರ ಶತಮಾನೋತ್ಸವವನ್ನು ವೃದ್ಧದಲ್ಲಿಯೇ ರಾಜಧಾನಿಯಲ್ಲಿ ನಡೆಸಲು ಕ್ಕೆ ಏರ್ಪಾಡುಗಳಾಗುತ್ತಿವೆ ಶ್ರೀ ಆರ್ ಸುಬ್ರಹ್ಮಣ್ಯ ಅಯ್ಯರ್‌ರವರ ನೇತೃ ದಲ್ಲಿ ಇದಕ್ಕಾಗಿ ಈ ದಿನ ಸಂಜೆ ಒಂದು ಭೆ ನಡೆಯಲಿದೆ ರಾಜ್ಯಾಂಗ ಸಭಾ ಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಮಾನೋತ್ಸವ ಸಮಾರಂಭದ ಅಧ್ಯಕ್ಷ ವಹಿಸಲು ಒಪ್ಪಿರುವರು ಪ್ರೊ॥ ಪ್ರೊ॥ ಧ್ಯಕ್ಷರಾದ ಶ್ರೀ ಪಿ ವೆಂಕಟಪ್ಪ, ತಾ ನಾಡು ಪತ್ರಿಕಾ ಮಾಲೀಕರಾದ ಶ್ರೀ ಆರ್ ರಾಮಯ್ಯ ಮತ್ತು ಇತರ ಪ್ರ ಮುಖರು ಭಾಷಣ ಮಾಡುವರು

ಭಾಷಣ

ನಂಜನಗೂಡು ಹೈಸ್ಕೂಲಿನಲ್ಲಿ ಮೊನ್ನೆ ನ ಶ್ರೀ ಜಿ ಎಸ್ ವೆಂಕಟಸುಬ್ಬಯ್ಯ ವರ ಅಧ್ಯಕ್ಷತೆಯಲ್ಲಿ ವಿದೇಶದಿಂದ ಹಿಂತಿ ಗಿರುವ ಶ್ರೀ ಎಲ್ ಶ್ರೀಕಂಠಯ್ಯನವರು ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮ ಎಂಬ ವಿಷಯವಾಗಿ ಭಾಷಣ ಮಾಡಿದರು

ಆಂಗ್ಲ ಭಾಷೆಯಲ್ಲೇ ಶಿಕ್ಷಣ

ಭಾರತೀಯ ವಿಶ್ವ ವಿದ್ಯಾನಿಲಯಗಳ ಆಂಗ್ಲ ಭಾಷೆಯಲ್ಲಿಯೇ ಶಿಕ್ಷಣ ಕೊಡ ಬೇಕೆಂದು ವಿಶ್ವ ವಿದ್ಯಾನಿಲಯಗಳ ಕ ಮೀಷನ್ನಿನವರು ಅಭಿಪ್ರಾಯ ಪಟ್ಟಿರುವ ಂದು ಮೌಲಾನಾ ಅಬುಲ್ ಕಲಾಂ ಆಜಾ ದ್ ವಿದ್ಯಾ ಸಚಿವರುಗಳ ಸಮ್ಮೇಳನ ದಲ್ಲಿ ತಿಳಿಸಿರುತ್ತಾರೆ

ಹಿಂದೂ ಮತಕ್ಕೆ ಬಂದ ಕ್ರೈಸ್ತ ವಿದ್ಯಾರ್ಥಿಗಳಿಗೆ ರಿಯಾಯಿತಿ

ಕ್ರೈಸ್ತರಾಗಿರುವ ವಿದ್ಯಾರ್ಥಿಗಳು ಹಿಂದೂ ಮತಕ್ಕೆ ವಾಪಸು ಬಂದರೆ ಅವರು ಗಳಿಗೆ ಮೊದಲಿನಂತೆಯೇ ಶಾಲಾ ಫೀಜು ರಿಯಾಯಿತಿ ತೋರಿಸಬೇಕೆಂದು ಮದ ರಾಸ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಭಾರತಕ್ಕೆ ಡಿವೇಲರಾರವರ ಭೇಟಿ

ಐರ್ಲೆಂಡಿನ ಮಾಜಿ ಪ್ರಧಾನಿ ಡಿವೇಲರವರು ಭಾರತ ಮತ್ತು ಪಾಕಿಸ್ತಾನಗಳಿ ಗೆ ಶೀಘ್ರದಲ್ಲಿಯೇ ಭೇಟಿ ಕೊಡುವರೆಂದು ತಿಳಿದುಬಂದಿದೆ

ಗ್ರಾಮಾಭಿವೃದ್ಧಿ ಸಮಿತಿಯ ಸಭೆ

ಗುಂಡ್ಲುಪೇಟೆ ೧೯

ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಸಭೆಯು ನಿನ್ನೆ ದಿನ ಕರೀ ಗೌಡನ ಹಳ್ಳಿ ಯಲ್ಲಿ ನಡೆದು, ಆರೋಗ್ಯ ದೃಷ್ಟಿಯಿಂದ ಬಾಲ್ಯ ವಿವಾಹ ನಿರೋಧ ಕಾನೂನನ್ನು ಗುಂಡ್ಲುಪೇಟೆಯಲ್ಲಿ ಕೂಡಲೇ ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು. ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಕಾಂತ ವೀರಪ್ಪನವರು ಭಾಷಣ ಮಾಡಿ ಆಹಾರ ದ ಉತ್ಪತ್ತಿಯಲ್ಲಿ ತಾಲ್ಲೂಕಿನವರು ಸ್ವಾವಲಂ ಬನೆ ಹೊಂದಲು ಕೂಡಲೇ ಕಾರ್ಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು

ಪರೀಕ್ಷಾ ಫಲಿತಾಂಶಗಳು

ಮೈಸೂರು ೨೦

ಕಳೆದ ಜುಲೈ ಆಗಸ್ಟ್ ತಿಂಗಳಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಎಂ ಎ ಮತ್ತು ಎಂ ಎಸ್ ಸಿ ಪರೀಕ್ಷೆಗಳ ಫಲಿತಾಂಶವು ಕೆಳಗೆ ಕಂಡಂತೆ ಇದೆ

ಎಂ ಎ ಡಿಗ್ರಿ ಪರೀಕ್ಷೆ

ಇಂಗ್ಲಿಷ್ ಪ್ರಥಮ ದರ್ಜೆ ಇಲ್ಲ ಎರಡನೇ ದರ್ಜೆ ೨, ೩, ೬

ಕನ್ನಡ - ಪ್ರಥಮ ದರ್ಜೆ ೧೦ ಎರಡನೇ ದರ್ಜೆ ೯

ಸಂಸ್ಕೃತ - ಪ್ರಥಮ ದರ್ಜೆ ಇಲ್ಲ ಎರಡನೇ ದರ್ಜೆ ೧೨

ಪರ್ಶಿಯನ್ - ಮೊದಲನೇ ದರ್ಜೆ ಇಲ್ಲ, ಎರಡನೇ ದರ್ಜೆ ೧೩

ಚರಿತ್ರೆ - ಮೊದಲನೇ ದರ್ಜೆ ೧೫, ೧೬, ಎರಡನೇ ದರ್ಜೆ ೧೮

ಎಕನಾಮಿಕ್ಸ್ - ಮೊದಲನೇ ದರ್ಜೆ ೧೭, ೨೩, ೨೪, ಎರಡನೇ ದರ್ಜೆ ೧೮ ೨೦, ೨೧, ೨೨

ಪಾಲಿಟಿಕ್ಸ್ - ಮೊದಲನೇ ದರ್ಜೆ ೨೮, ಎರಡನೇ ದರ್ಜೆ ೨೫, ೨೭, ೩೦

ಸೋಷಿಯಲ್ ಫಿಲಾಸಫಿ ಮೊದಲನೇ ತರಗತಿಯಲ್ಲಿ ಉತ್ತಮ ವರ್ಗ ೩೧

ಸೈಕಾಲಜಿ - ೩೨, ೩೩, ೩೪

ಎಂ ಎಸ್ ಸಿ ಡಿಗ್ರಿ ಪರೀಕ್ಷೆ

ಸ್ಟ್ಯಾಟಿಸ್ಟಿಕ್ಸ್ - ಪ್ರಥಮ ದರ್ಜೆ ಇಲ್ಲ, ಎರಡನೇ ದರ್ಜೆ ೩೬

ಗಣಿತ - ಪ್ರಥಮ ದರ್ಜೆ ೩೮, ೩೯, ಎರಡನೇ ದರ್ಜೆ ಇಲ್ಲ

ಫಿಜಿಕ್ಸ್ ಪ್ರಥಮ ದರ್ಜೆ ४೦, ४೮, ४೯, ಎರಡನೇ ದರ್ಜೆ ४೨, ४೩ ४೭

ಜಿಯಾಲಜಿ - ಪ್ರಥಮ ದರ್ಜೆ ೬೭, ೭೦ ಎರಡನೇ ದರ್ಜೆ ೬೫, ೬೬, ೬೮, ೬೯, ೭೧, ೭೨, ೭೩

ಪ್ರಾಣಿ ಶಾಸ್ತ್ರ ಪ್ರಥಮ ದರ್ಜೆ ೯೧, ೯೨, ೧೩, ಎರಡನೇ ದರ್ಜೆ ೭೪, ೭೫, ೭೬, ೭೭ ಪ್ರಥಮ ದರ್ಜೆಯಲ್ಲಿ ಶ್ರೇಷ್ಠ ವರ್ಗ ೭೯

ಸಸ್ಯ ಶಾಸ್ತ್ರ ಪ್ರಥಮ ದರ್ಜೆ ೮೪ ೯ ಎರಡನೇ ದರ್ಜೆ ೮೦, ೮೧ ೮೨, ೮೩, ೮೫

ಎಂ ಎಸ್ ಸಿ ರಸಾಯನ ಶಾಸ್ತ್ರದ ಪರೀಕ್ಷಾ ಫಲಿತಾಂಶವನ್ನು ಮುಂದೆ ಪ್ರಕಟಿಸ ಲಾಗುವುದು

ಲಕ್ನೋವಿನಲ್ಲಿ ಭಾರಿ ಮಳೆ; ಸಾವಿರ ಮನೆಗಳ ನಷ್ಟ

ಮೊನ್ನೆ ದಿನ ಲಕ್ನೋ ಜಿಲ್ಲೆಯ ಇಟಾವಾ ಎಂಬಲ್ಲಿ ಹನ್ನೊಂದು ಅಂಗುಲ ಮಳೆ ಬಿದ್ದುದರಿಂದ ಸಾವಿರ ಮನೆ ಗಳು ಕುಸಿದು ಬಿದ್ದುವು ಹನ್ನೊಂದು ಜನರು ಮರಣ ಹೊಂದಿದರು ನಿರಾಶ್ರಿತರಿಗೆ ವಸತಿಯನ್ನು ಕಲ್ಪಿಸಲು ಪೌರಸಭೆಯ ಶಾಲೆ ಗಳ ತರಗತಿಗಳಿಗೆ ರಜಾ ಕೊಡಲಾಗಿದೆ

ಭೂಕಂಪದಿಂದ ೨೦ ಜನರ ಮರಣ

ಅನಟೋಲಿಯಾಕ್ಕೆ ಸೇರಿದ ಎರ್ಜೆರಂ ಪ್ರದೇಶದಲ್ಲಿ ಮೊನ್ನೆ ದಿನ ಬಾರಿ ಭೂಕಂಪವಾಗಿ ಅನೇಕ ಮನೆಗಳು ನಾಶವಾಗಿ ೨೦ ಜನರು ಸತ್ತರೆಂದೂ, ೧೩ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ

ಮಾಜಿ ಮೈಸೂರಿನವರ ಮಗಳು ಮೇನನ್ನರ ಆಪ್ತ ಕಾರ್ಯದರ್ಶಿ

ಭಾರತದ ಮಾಜಿ ಗೌರ್ನರ್ ಜನರಲ್ಲಾದ ಲಾರ್ಡ್ ಮೌಂಟ್ ಬ್ಯಾಟನ್ನರವರು ಲಂಡನ್ನಿನಲ್ಲಿರುವ ಭಾರತ ರಾಯಭಾರಿಯಾದ ಶ್ರೀ ವಿ ಕೆ ಮೆನನ್ನರವರ ಆಪ್ತ ಕಾರ್ಯದರ್ಶಿಗಳಾಗಿ ನೇಮಿತರಾಗಬಹುದೆಂದು ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ

ಕಮ್ಯೂನಿಸ್ಟ್ ಬಂದಿಗಳ ಬಿಡುಗಡೆ

ಮೈಸೂರು ೨೦

ಆರು ತಿಂಗಳ ಜೈಲುವಾಸದ ನಂತರ ಮೊನ್ನೆ ೧೦ ಮಂದಿ ಕಮ್ಯೂನಿಸ್ಟ್ ಬಂದಿಗಳ ಬಿಡುಗಡೆಯಾಯಿತು. ಎ ಎಸ್ ರಾಮರಾವ್, ವಿಟ್ಠಲರಾವ್, ಅನಂತಸ್ವಾಮಿ ಮತ್ತು ಗುರ್ರಪ್ಪನವರ ಮೇಲೆ ಮೈಸೂರು ನಗರಕ್ಕೆ ೬ ತಿಂಗಳ ಕಾಲ ಬರಕೂಡದೆಂಬ ಆಜ್ಞೆಯನ್ನು ಜಾರಿ ಮಾಡಲಾಗಿದೆ ಕೆ ಜಿ ಎಫ್‌ನ ಕಾರ್ಮಿಕ ನಾಯಕರಾದ ಪಿ ಆರ್ ಕೃಷ್ಣನ್ ಎಂಬು ಯವರನ್ನು ಬಿಡುಗಡೆ ಮಾಡಿದ ಕೂಡಲೇ ಕೈದಿಗಳ ಒಳಗಿನಿಂದ ಕೆ . . . ಪೋಲೀಸಲು ಪುನಃ ದಸ್ತಗಿರಿ ಮಾಡಿ ಸ್ಟೇಷನ್ನಿನಲ್ಲಿ ಕೆ ಜಿ ಎಫ್‌ಗೆ ಕಳಿಸ ಕೊಂಡು ಹೋದರ . . . ವಾದ ರಾಮಾ ಮ . . . , ಎಸ್ ಕೃ ಮೂರ್ತಿ ಜೋಸೆ ಮತ್ತು . . . ಲ ರವರನ್ನು ಷರತ್ತಿಲ್ಲದ ಬಿಡುಗಡೆ ಮಾಡಲಾಯಿತು

ವಿನೋಬಾ ಭಾವೆಯವರಿಂದ ಕಾಂಗ್ರೆಸ್ ಭವನದ ಶಂಕುಸ್ಥಾಪನೆ

ಬೆಂಗಳೂರು ಶೇಷಾದ್ರಿ ರಸ್ತೆಯಲ್ಲಿ ಕಟ್ಟಬೇಕೆಂದಿರುವ ಸಂಸ್ಥಾನದ ಕಾಂಗ್ರೆಸ್ ಭವನದ ಶಂಕು ಸ್ಥಾಪನಾ ಮಹೋತ್ಸವವನ್ನು ನೆರವೇರಿಸಬೇಕೆಂದು ಮಹಾತ್ಮ ಗಾಂಧಿಯವರ ಶಿಷ್ಯಂದಿರಾದ ಆಚಾರ್ಯ ವಿನೋಬಾ ಭಾವೆಯವರಿಗೆ ಆಹ್ವಾನ ಕಳುಹಿಸಲಾಗಿದೆಯೆಂದು ಗೊತ್ತಾಗಿದೆ ಬರುವ ಅಕ್ಟೋಬರಿನಲ್ಲಿ ನಡೆಯಲಿರುವ ಗಾಂಧಿ ಜಯಂತಿ ಸಂದರ್ಭದಲ್ಲಿ ಈ ಸಮಾರಂಭವನ್ನು ನಡೆಸಲಾಗುವುದೆಂದು ಹೇಳಲಾಗಿದೆ

ಹಿಂದೀ ಪರೀಕ್ಷೆಗಳು

ಮೈಸೂರು ೨೦

ಹಿಂದೀ ಪರೀಕ್ಷೆಗಳಿಗೆ ಈ ಸಲ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ನಡೆಯುವ ಪ್ರಾಥಮಿಕ ಪರೀಕ್ಷೆಯು ಪುರುಷರಿಗೆ ಮಾತ್ರ ದೇವಾಂಬ ಹೈಸ್ಕೂಲಿನಲ್ಲಿ ಯೂ, ಸ್ತ್ರೀ ಪರೀಕ್ಷೆಗಳು ಬನುಮಯ್ಯನವರ ಹೈಸ್ಕೂಲಿನಲ್ಲೂ ನಡೆಯುವುವೆಂದು ವ್ಯವಸ್ಥಾಪಕರು ತಿಳಿಸಿರುತ್ತಾರೆ

ಡೈರೆಕ್ಟರುಗಳ ಚುನಾವಣೆ ಇಲ್ಲ

ನಾಳೆ ದಿನ ನಡೆಯಬೇಕಾಗಿದ್ದ ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರ ಗಳ ಚುನಾವಣೆಯು ಶ್ರೀಗಳಾದ ಎ ಕೃಷ್ಣಮೂರ್ತಿ ರಾವ್ ಮತ್ತು ಎಂ ಆರ್ ಸಿ ಬಸಪ್ಪನವರ ತಕರಾರು ಅರ್ಜಿ ಮೇರೆ, ಕೋ ಆಪರೇಟಿವ್ ಸೊಸೈಟೀಸ್ ರಿಜಿಸ್ಟ್ರಾರರ ಸೂಚನೆಯಂತೆ ನಿಲ್ಲಿಸಲ್ಪಟ್ಟಿದೆ ಬ್ಯಾಂಕಿನ ಸಾಮಾನ್ಯ ಸಭೆ ಮಾತ್ರ ನಾಳೆ ನಡೆಯುತ್ತದೆ

ಸರ್ಕಾರಿ ಆಸ್ಪತ್ರೆ ಕೆಲಸಗಾರರ ಬೇಡಿಕೆಗಳು

ನೌಕರ ಸಭೆಯು ನಿನ್ನೆ ದಿನ ಶ್ರೀ॥ ಎನ್ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನೆರೆದು ಕೆಳಗೆ ಕಂಡ ನಿರ್ಣಯಗಳನ್ನು ಮಾಡಲಾಯಿತು –

ದೇಶ ಭಕ್ತ ಕೊಂಡ ವೆಂಕಟಪ್ಪಯ್ಯನವರ ನಿಧನಕ್ಕಾಗಿ ಸಂತಾಪ ಸೂಚಿಸಿದ್ದು ದ ಇತರೇ ಆಸ್ಪತ್ರೆಗಳಿಗೆ ಇಕ್ರಿಮೆಂಟ್ ಬಾಕಿ ಕೊಟ್ಟಿರುವಂತೆ ಕ್ಷಯರೋಗ ಆಸ್ಪತ್ರೆಯವರಿಗೂ ಇಕ್ರಿಮೆಂಟ್ ಬಾಕಿ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು. ಮತ್ತು ಆಯಾ ಆಸ್ಪತ್ರೆಗಳ ಹತ್ತಿರ ಕೆಲಸಗಾರರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು. ಇಲ್ಲವೇ ಮನೆಯನ್ನು ಕಟ್ಟಿಸುವವರೆಗೆ ಮನೆ ಬಾಡಿಗೆಯನ್ನಾದರೂ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತದೆ

ಪೊಲೀಸ್ ಉಸ್ತುವಾರಿ

ಚಾಮುಂಡಿಪುರಂ ಮುಂತಾದ ಕಡೆಗಳಲ್ಲಿ ಇತ್ತೀಚೆಗೆ ನಡೆದ ಕಳ್ಳತನ ಗಳನ್ನು ತಡೆಗಟ್ಟಲು ಪೊಲೀಸ್ ಜಿಲ್ಲಾ ಸೂಪರಿಂಟೆಂಡೆಂಟರು, ಎಸ್ಟೇಟ್ ನ ಸೂಪರಿಂಟೆಂಡೆಂಟರು ದಿ ಪೆನ್ಷನ್ ಸಮಿತಿಗಳು ವಿಶೇಷ ಏರ್ಪಾಡು ಮಾಡಿ ಕಾರ್ಯಕ್ರಮ . . . ನಿವಾಸಿಗಳು ಕೇವಲ . . . ಬೇಕಾಗಿಲ್ಲವೆಂದು . . . ಶ್ರೀ . . . ದೇವರಾಜ್ ಅರಸಿನವರು ಹೇಳಿರುತ್ತಾರೆ

ಸ್ವಾತಂತ್ರ್ಯ ದಿನಾಚರಣೆ

ವಾಣೀವಿಲಾಸ ಮೊಹಲ್ಲಾದಲ್ಲಿರುವ ಮಾಧ್ಯಮಿಕ ಬಾಲಕಿಯರ ಶಾಲೆಯಲ್ಲಿ ಸಮಾರಂಭವು ನಡೆಯಿತು ಪ್ರಭಾತ ಫೇರಿ, ಪ್ರಾರ್ಥನೆಯಾದನಂತರ ಶ್ರೀ ಸೋಮಾನಂದಜೀಯವರು ಧ್ವಜಾರೋಹಣ ಮಾಡಿದರು ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀ ಜಯಮ್ಮನವರು ರಾಷ್ಟ್ರಧ್ವಜದ ಮಹಿಮೆಯನ್ನು ವಿವರಿಸಿ, ಸ್ವತಂತ್ರ ಭಾರತದಲ್ಲಿ ಮಹಿಳೆಯರ ಪಾತ್ರವನ್ನು ತಿಳಿಸಿದರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಲಾಯಿತು.

ಮೈಸೂರು ತಾಲ್ಲೂಕು ಇಲವಾಲದ ಹೋಬಳಿ ಹುಯಿಲಾಳು ಪ್ರೈಮರಿ ಶಾಲೆಯಲ್ಲಿ ಸಮಾರಂಭವು ಪಂಚಾಯಿತ ಚೇರ್‌ಮನ್ನರಾದ ಶ್ರೀ ಹೆಚ್ ಸಿ ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ವಿವಾಹ ಮಹೋತ್ಸವ

'ಪೌರವಾಣಿ' ಪತ್ರಿಕೆ ಕಚೇರಿಯಲ್ಲಿರುವ ಶ್ರೀ ಕೆ. ಎಸ್ ಸುಬ್ರಹ್ಮಣ್ಯರವರ ಮತ್ತು ಕೋಲಾರದ ಇನ್ಸ್‌ಪೆಕ್ಟರ್ ಶ್ರೀ ಕೆ. ಲಕ್ಷ್ಮೀನಾರಣಪ್ಪನವರ ಪುತ್ರಿ ಚಿ॥ ಸೌ॥ ಸುಬ್ಬಲಕ್ಷ್ಮಿರವರ ವಿವಾಹ ಮಹೋತ್ಸವವು ನಿನ್ನೆ ದಿನ ಕೆ ಜಿ ಎಫ್‌ನಲ್ಲಿ ನಡೆಯಿತು.

ಮಹಾರಾಣಿ ಕಾಲೇಜ್ ಸಂಘದ ಆರಂಭ ಭಾಷಣ

ಮೈಸೂರು ಮಹಾರಾಣಿ ಕಾಲೇಜ್ ಸಂಘದ ಪ್ರಾರಂಭ ಭಾಷಣವನ್ನು ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ ಜೆ ವಾರ್ಕಿಯವರು ನಾಳೆ ಸಂಜೆ ೫-೩೦ ಗಂಟೆಗೆ ವಸ್ತು ಪ್ರದರ್ಶನ ಭವನದಲ್ಲಿ ಮಾಡುವರು

ಹರಿಕಥೆ

ರಾಜಧಾನಿಯ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಸಂಜೆ ಶ್ರೀ ಎಂ ಎಲ್. ನಾರಾಯಣ ದಾಸರಿಂದ ಶ್ರೀ ಕೃಷ್ಣ ಕಂಸವಧೆ ಎಂಬ ಹರಿಕಥೆ ನಡೆಯುವುದು

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ರಾತ್ರಿ ೮ ಗಂಟೆಗೆ ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳವರಿಂದ ವಿಶ್ವರೂಪ ದರ್ಶನ ಎಂಬ ಹರಿಕಥೆ ನಡೆಯುವುದು.

Edited printed and published by A. R. Nagarajan, at Sadhvi Press, D Subbiah Road, Mysore.

ಖಾಸಿಂ ರಜ್ವಿಯ ಪರವಾಗಿ ವಿಶ್ವ ಸಂಸ್ಥೆಗೆ ದೂರು

ಹೈದರಾಬಾದಿನ ಮಾಜಿ ರಜಾಕರರ ನಾಯಕ ಖಾಸಿಂ ರಜ್ವಿಯ ವಿಚಾರಣಾ ಕೋರ್ಟಿನವರು ಅವನ ಪರ ವಕಾಲತ್ತು ವಹಿಸಲು ಸರಿಯಾದ ಲಾಯರನ್ನು ನೇಮಿಸಿಕೊಳ್ಳಲು ಅನುಮತಿ ಕೊಡಲಿಲ್ಲವೆಂದೂ, ಮತ್ತು ಲಂಡನ್ನಿನ ವಕೀಲರಿಗೆ ಕೇವಲ ಉರ್ದು ಭಾಷೆ ಬಾರದೆಂದು ಅವರನ್ನು ನಿರಾಕರಿಸಿದುದು ಅನ್ಯಾಯವೆಂದೂ ಪಾಕೀಸ್ತಾನದ ಮುಸ್ಲಿಂ ಸಮ್ಮೇಳನವು ವಿಶ್ವ ಸಂಸ್ಥೆಗೆ ದೂರು ಕೊಟ್ಟು, ಅದರ ಸಹಾಯವನ್ನು ಕೋರಿದೆ.

ವಿಮಾನ ನಿಲ್ದಾಣದ ಬಳಿ ಬಾಂಬುಗಳ ಆಸ್ಫೋಟನೆ

ಲರೋಪಿಲ್ ವಿಮಾನ ನಿಲ್ದಾಣದ ಹತ್ತಿರವಿರುವ ಕಾಡಿಗೆ ಬೆಂಕಿ ಬಿದ್ದು, ಆ ಪ್ರದೇಶದಲ್ಲಿ ಸಂಗ್ರಹಿಸಿಡಲಾಗಿದ್ದ ೧೨ ಸಾವಿರ ಬಾಂಬುಗಳು ಆಸ್ಫೋಟಿಸಿದವೆಂದೂ, ಸಿಡಿಯುತ್ತಿರುವ ಬಾಂಬುಗಳ ಧ್ವನಿಯು ೩೦ ಮೈಲಿಗಳವರೆಗೂ ಕೇಳಿಸುತ್ತಿತ್ತೆಂದೂ ಹೇಳಲಾಗಿದೆ ಈ ಬೆಂಕಿಯಿಂದ ದಕ್ಷಿಣ ಮತ್ತು ನೈಋತ್ಯ ಫ್ರಾನ್ಸಿಗಳಲ್ಲಿ ೭ ಸಾವಿರ ಎಕರೆ ಜಮೀನು ನಾಶವಾಗಿದೆ

ಸಶಸ್ತ್ರ ಕಮ್ಯೂನಿಸ್ಟರ ಮೇಲೆ ಗುಂಡು

ಕಲ್ಕತ್ತದ ಬಿಷಸುಕಸ್ ಪ್ರದೇಶದಲ್ಲಿರುವ ಹಳ್ಳಿಗಳ ಮೇಲೆ ಸಶಸ್ತ್ರ ಕಮ್ಯೂನಿಸ್ಟ ದರೋಡೆಗಾರರು ಧಾಳಿ ನಡೆಸಿ ಲೂಟಿ ಮಾಡುತ್ತಿದ್ದುದನ್ನು ತಡೆಯಲು ಪೋಲೀಸರು ಅವರ ಮೇಲೆ ಮೊನ್ನೆ ದಿನ ಗುಂಡು ಹಾರಿಸಿದರೆಂದೂ, ಇದರಿಂದ ೩ ಜನರು ಸತ್ತರೆಂದೂ ವರದಿಯಾಗಿದೆ.

MORNING SHOWS
AT
CHAMUNDESWARI
TALKIES
From Friday the 19th August
for 3 days
Vibrant with Suspense !
So Daring!! So Fascinating
IN
R K O's
SPIRAL — — STAIRCASE
—Starring—
GEORGE BRENT & DOROTHY MC GRUIE

ಆಹಾರ ಹೆಚ್ಚಿಸಲು ವಿಶ್ವ ಸಂಸ್ಥೆ ನಿಧಿ

ಆಹಾರವನ್ನು ಹೆಚ್ಚಿಸಲು ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಸಹಾಯವಾಗುವಂತೆ ಒಂದು ನಿಧಿಯನ್ನು ಕೂಡಿಸಬೇಕೆಂದು ವಿಶ್ವ ಸಂಸ್ಥೆಯ ಸಾಧನ ಸಂಪತ್ತಿನ ಸಮ್ಮೇಳನವು ನಿರ್ಧರಿಸಿದೆ

ಭಾರತಕ್ಕೆ ವಿಶ್ವದ ಬ್ಯಾಂಕಿನಿಂದ ಸಾಲ

ಭಾರತದಲ್ಲಿ ರೈಲ್ವೆ ಮತ್ತು ಇತರ ಕೈಗಾರಿಕಾಪುನರ್ರಚನೆಗಾಗಿ ವಿಶ್ವದ ಬ್ಯಾಂಕಿನವರು ೩೪೦ ಲಕ್ಷ ಡಾಲರುಗಳ ಸಾಲವನ್ನು, ಶೇಕಡ ೩ ರಷ್ಟು ಬಡ್ಡಿ ಮತ್ತು, ಶೇಕಡ ಒಂದರಷ್ಟು ಕಮೀಷನ್ನಿನ ಮೇಲೆ ಕೊಟ್ಟಿರುತ್ತಾರೆ

ಕರಾಚಿ ಗಲಭೆಯ ಬಗ್ಗೆ ೯ ಜನರ ದಸ್ತಗಿರಿ

ಭಾರತದ ಸ್ವಾತಂತ್ರ್ಯ ದಿನಾಚರಣೆಯಂದು ಕರಾಚಿಯಲ್ಲಿ ಭಾರತದ ಹೈಕಮೀಷನರ ಭವನದ ಮುಂದೆ ನಡೆದ ಗಲಭೆಯ ಸಂದರ್ಭದಲ್ಲಿ ೯ ಜನರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ

ಚೀಣಾಕ್ಕೆ ಮಾಜಿ ನಾಜಿ ಸೇನಾಧಿಕಾರಿಯ ಭೇಟಿ

ಜರ್ಮನಿಯ ಮಾಜಿ ನಾಜಿ ಫೀಲ್ಡ್ ಮಾರ್ಷಲ್‌ರಾದ ಫ್ರೆಡ್ರಿಕ್ ವಾನ್ ಪಾಲಸ್‌ರವರನ್ನು ರಷ್ಯವು ಚೀಣಾಕ್ಕೆ ಕಳಹಿಸಿದೆಯೆಂದೂ, ಅಲ್ಲಿ ಅವರು ದೂರ ಪ್ರಾಚ್ಯದ ಯುದ್ಧದ ಹಂಚಿಕೆಯನ್ನು ತಯಾರಿಸಲು ಚೀಣಾ ಕಮ್ಯೂನಿಸ್ಟರ ನಾಯಕರೊಂದಿಗೆ ಸಮಾಲೋಚನೆ ನಡೆಸುತ್ತಿರುವರೆಂದೂ ಹೇಳಲಾಗಿದೆ

ಬಾಡಿಗೆದಾರರ ಸಂಘದ ಸಭೆ

ರಾಜಧಾನಿಯ ಬಾಡಿಗೆದಾರರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯು ನಡೆಯುವುದು

ನಿಮ್ಮ ಮೈ ಮೊಕಮಲ್ಲಿನಂತೆ
ಹೊಳೆಯಬೇಕೆ ? ನೀವು
ಲಾವಣ್ಯಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ !
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗೌರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

ಚಾಮುಂಡೇಶ್ವರೀ ಟಾಕೀಸ್
19—8—49ರಿಂದ ಯಶಸ್ವಿಯಾದ 3ನೇ ವಾರ
ಪ್ರತಿ ದಿನ 3 ಆಟಗಳು
- ನವಜೀವನಂ -
ನಾಗಯ್ಯ, ಕನ್ನಾಂಬ, ಎಲ್. ನಾರಾಯಣ ರಾವ್, ಟಿ ಆರ್ ರಾಮಚಂದ್ರನ್
ಪಾತ್ರವಹಿಸಿರುವ ತಮಿಳು ಚಿತ್ರ
(R V ಪಿಕ್ಚರ್ಸ್ ರಿಲೀಸ್

CITY MUNICIPAL OFFICE
Mysore, dated 6-8-49

NOTICE

Notice is hereby given to the inhabitants of the Mysore City that the Mysore City Municipal Council have resolved to adopt a set of byelaws for the registration of Hawkers in the City of Mysore framed under section 51 (i) (b) (2) (4) & (6) read with section 82 and 167 of the City Municipalities Act, 1933 with a view to regulate the sale of food stuffs generally along roads, foot paths etc., A copy of the byelaws is kept in the Municipal office for inspection

Any person having objection to the above byelaws may prefer the same in writing within one month from the date of this notification to the undersigned after which no objection will be heard.

(Sd) C. Narasimha Moorthy,
Municipal Commissioner

ರಾಜಕಮಲ್, ಮೈಸೂರು
19-8-49ರಿಂದ ತಿನೋಷ ಆರಂಭ
ಏನವಹಿ ಪ್ರದರ್ಶನಗಳು
ಭೂಮಿಕೆ- ಕೌಸಲ್ಯ, ಸುಂದರ್
ಮಹೇಶ ಮತ್ತು ತಕಲ್ಲು
ರವರ ನರ್ತನ
ಲಾಟರಿ
(ಹಿಂದಿ)
MORNING SHOWS From 19-8-49 for 4 days
- CARAVAN -
With Stewart Granger, Jean Kent, Dennis Price

ಫೋ|| ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೮] ಭಾನುವಾರ ೨೧-೮-೧೯೪೯ [ಸಂಚಿಕೆ ೫

ಪ್ರೀವಿ ಕೌನ್ಸಿಲಿನಲ್ಲಿ ಗೋಡ್ಸೆ ವಾದಿಸುವನು

ತಾತಯ್ಯನವರ ಶತಮಾನೋತ್ಸವ

ಮೈಸೂರು ೨೧

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಶತಮಾನೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿ ಅವರ ಸ್ಮಾರಕಾರ್ಥವಾಗಿ ಒಂದು ಶಾಶ್ವತವಾದ ಸ್ಮಾರಕವನ್ನು ನಿರ್ಮಿಸುವ ವಿಚಾರವನ್ನು ಪರಿಶೀಲಿಸಲು ನಿನ್ನೆ ಸಂಜೆ ಸಾಧ್ವಿ ಪತ್ರಿಕಾ ಕಾರ್ಯಾಲಯದಲ್ಲಿ ಒಂದು ಸಭೆ ನಡೆಯಿತು. ತಾತಯ್ಯನವರ ಮಿತ್ರರೂ, ಶಿಷ್ಯರೂ, ಅನುಯಾಯಿಗಳೂ ಸೇರಿದ್ದರು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರು ಅಗ್ರಾಸನವನ್ನು ವಹಿಸಿದ್ದರು, ಈ ತಿಂಗಳು ೨೮ನೇ ತಾ|| ಭಾನುವಾರ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ಶತಮಾನೋತ್ಸವವನ್ನು ನೆರವೇರಿಸುವಂತೆ ನಿರ್ಧರಿಸಲಾಯಿತು. ಸಮಾರಂಭದ ಅಗ್ರಾಸನವನ್ನು ವಹಿಸಲು ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯರವರು ಒಪ್ಪಿರುವರು.

ಈ ಬಗ್ಗೆ ಕಾರ್ಯಕ್ರಮಗಳನ್ನು ಏರ್ಪಡಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಅದಕ್ಕೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರು ಅಧ್ಯಕ್ಷರು. ಶ್ರೀ ಅಗರಂ ರಂಗಯ್ಯನವರು ಕಾರ್ಯದರ್ಶಿ. ಶ್ರೀಗಳಾದ ರಾವ್ ಬಹದ್ದೂರ್ ರಾಮಸ್ವಾಮಿ, ಟಿ ವೆಂಕಟರಮಣಯ್ಯ, ಡಾ|| ಅಣ್ಣಾಜಪ್ಪ ಮತ್ತು ಎಂ.ಪಿ ಲಿಂಗಪ್ಪಯ್ಯನವರು ಸದಸ್ಯರು.

ಅಕ್ರಮ ದಾಸ್ತಾನು ಪತ್ತೆ

ಮೈಸೂರು ತಾಲ್ಲೂಕು ಅಮಲ್ದಾರರಾದ ಶ್ರೀ ಎಂ ಆರ್. ನರಸಿಂಗರಾಯರು ತಮ್ಮ ಸಿಬ್ಬಂದಿಯೊಡನೆ ಮೈಸೂರು ತಾಲ್ಲೂಕು ವರುಣ ಹೋಬಳಿ ಎಡಕೊಳ ಗ್ರಾಮಕ್ಕೆ ಮೊನ್ನೆ ತೆರಳಿ ಗುಮಾಸ್ತಿ ಮೇಲೆ ಸದರಿ ಗ್ರಾಮದ ಶ್ರೀ ರುದ್ರಯ್ಯ ಮತ್ತು ಶ್ರೀ ಆಂಜನೇಯ ನಾಯ್ಡು ಇವರುಗಳ ಮನೆಯನ್ನು ಜಪ್ತಿ ಮಾಡಿಸಿದರು ಆಂಜನೇಯ ನಾಯ್ಡುರ ಮನೆಯಲ್ಲಿ ಸುಮಾರು ಒಂಭತ್ತು ಪಲ್ಲ ರತ್ನ ಚೂಡಿ ಭತ್ತದ ಅಕ್ರಮ ದಾಸ್ತಾನು ಪತ್ತೆಯಾಯಿತು. ಮನೆಯವರನ್ನು ವಿಚಾರಿಸಿದ್ದರಲ್ಲಿ ಸದರಿ ಭತ್ತವು ಹಿಂದೆ ಅಸೆಂಬ್ಲಿ ಮೆಂಬರ್ ಮತ್ತು ಆರ್ ಆರ್.ಡಿ ಸದಸ್ಯರಾಗಿದ್ದ ಬಾಲಿ ಪಳ್ಳದ ಕೇರಿಯಲ್ಲಿರುವ ಶ್ರೀ ಬಸವಣ್ಣನವರದೆಂದು ತಿಳಿಸಿದರೆಂದೂ ಶ್ರೀ ಬಸವಣ್ಣನವರನ್ನು ವಿಚಾರಿಸಿದ್ದರಲ್ಲಿ ಆ ಭತ್ತವು ತಮಗೆ ಸೇರಿದ್ದಲ್ಲವೆಂದೂ, ಅದು ಶ್ರೀ ಆಂಜನೇಯ ನಾಯ್ಡುರು ತಮಗೆ ಗುತ್ತಿಗೆ ಕೊಡಬೇಕಾದ ಭತ್ತವೆಂದು ತಿಳಿಸಿದರೆಂದೂ ವರದಿಯಾಗಿದೆ. ಸದರಿ ಭತ್ತವನ್ನು ಅಮಲ್ದಾರರು ಸರಕಾರಕ್ಕೆ ವಶಪಡಿಸಿಕೊಂಡು ಮುಂದಿನ ತನಿಖೆಯನ್ನು ನಡೆಸುತ್ತಿದ್ದಾರೆಂದು ತಿಳಿದುಬಂದಿದೆ

ಸ್ವಂತ ಬಟ್ಟೆ ಸಾಗಿಸಲೂ ತೊಂದರೆ

ಸ್ವಂತ ಉಪಯೋಗಕ್ಕಾಗಿ ಹತ್ತು ಪೌಂಡ್ ಮಿಲ್ ಬಟ್ಟೆಯನ್ನು ಪ್ರಯಾಣಿಕರು ತೆಗೆದುಕೊಂಡು ಹೋಗಲು ಧಾರಾಳವಾದ ಅವಕಾಶವಿದ್ದರೂ ಮೈಸೂರು ಮತ್ತು ಕೊಡಗು ಸೀಮೆಯಲ್ಲಿ ಎರಡು ಕಡೆಗಳ ಅಧಿಕಾರಿಗಳೂ ಪ್ರಯಾಣಿಕರನ್ನು ಶೋಧಿಸಿ ಒಂದು ಅಂಗುಲದಷ್ಟು ಬಟ್ಟೆಯ ನ್ನೂ ಬಿಡುತ್ತಿಲ್ಲವೆಂದು ಪುಕಾರು ಬರುತ್ತಿದೆ ಇತ್ತೀ

ಜೆ. ಸಿ. ಕುಮಾರಪ್ಪನವರ ಭಾಷಣ

ಮೈಸೂರು ೨೧

ಅಖಿಲಭಾರತ ಗ್ರಾಮೋದ್ಯೋಗಸಂಘದ ಸಂಚಾಲಕರಾದ ಶ್ರೀ ಜೆ ಸಿ ಕುಮಾರಪ್ಪನವರು ನಾಳೆ ಸಂಜೆ ಆರು ಗಂಟೆಗೆ ಟೌನ್ ಹಾಲಿನಲ್ಲಿ ಭಾಷಣ ಮಾಡುವರು ಸರ್ವರೂ ದಯಮಾಡಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಕೋರಿರುತ್ತಾರೆ.

ಬಂದೋಬಸ್ತು ಕ್ರಮ

ರಾಜಧಾನಿಯ ಹಲವು ಕಡೆಗಳಲ್ಲಿ ನಡೆಯುತ್ತಿರುವ ಕಳ್ಳತನಗಳನ್ನು ತಪ್ಪಿಸಲು ಪೊಲೀಸ್ ಅಧಿಕಾರಿಗಳು ಮಹಾಜನರ ಸಹಕಾರದಿಂದ ವಿಜಿಲೆನ್ಸ್ ಸಮಿತಿಗಳನ್ನು ಸ್ಥಾಪಿಸಿ ರಾತ್ರಿ ಕಾಲದಲ್ಲಿ ಉಸ್ತುವಾರಿ ನಡೆಸುತ್ತಿದ್ದಾರೆ ಇದರಿಂದ ಕಳ್ಳತನಗಳು ಕಡಿಮೆಯಾಗುತ್ತಿವೆಯೆಂದೂ ಮಹಾಜನರು ಈ ಕಾರ್ಯದಲ್ಲಿ ಸಹಕಾರ ನೀಡಬೇಕೆಂದೂ ಪ್ರಾರ್ಥಿಸಲಾಗಿದೆ

ಪ್ರೀವಿ ಕೌನ್ಸಿಲ್ಲಿನಲ್ಲಿ ಸ್ವತಃ ವಾದಿಸಲು ಗೋಡ್ಸೆಗೆ ಅವಕಾಶ

ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಪಿತೂರಿ ನಡೆಯಿತೆಂಬ ಆಪಾದನೆ ಮೇಲೆ ಪ್ರೀವಿ ಕೌನ್ಸಿಲ್ಲಿಗೆ ಹಾಕಿರುವ ಅಪೀಲಿನಲ್ಲಿ ನಾಥೂರಾಂ ಗೋಡ್ಸೆಯು ಸ್ವತಃ ಹಾಜರಾಗಿ ವಾದಿಸಲು ಅನುಮತಿ ಕೊಡಲಾಗಿದೆ ಇತರ ವ್ಯಕ್ತಿಗಳೂ ಸಹ ಸ್ವತಃ ಹಾಜರಾಗಿ ತಮ್ಮ ವಕೀಲರುಗಳಿಗೆ ಸಲಹೆ ನೀಡಲು ಅವಕಾಶವನ್ನು ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ ಈ ರೀತಿ ಒಬ್ಬ ಆಪಾದಿತನು ಪ್ರೀವಿ ಕೌನ್ಸಿಲ್ಲಿನಲ್ಲಿ ತನ್ನ ವಾದವನ್ನು ತಾನೇ ನಡೆಸಲು ಅವಕಾಶ ದೊರೆತಿರುವುದು ಇದೇ ಮೊದಲೆಂದು ಹೇಳಲಾಗಿದೆ

ಚಿಗೆ ಹತ್ತು ಪೌಂಡಿನ ನಿರ್ಬಂಧವನ್ನೂ ಸಹ ತೆಗೆದುಹಾಕಿ ಸ್ವಂತ ಉಪಯೋಗಕ್ಕೆ ಎಷ್ಟು ಬಟ್ಟೆಯನ್ನ ಬೇಕಾದರೂ ತೆಗೆದುಕೊಂಡು ಹೋಗಲು ಭಾರತ ಸರ್ಕಾರದನುಮತಿ ಇತ್ತಿರುವುದರಿಂದ ಮೇಲ್ಕಂಡ ಸ್ಥಳಗಳಲ್ಲಿ ಜನರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಏರ್ಪಡಿಸಬೇಕೆಂದು ಕೋರಿ ಒಬ್ಬ ವಾಚಕರು ಪತ್ರ ಬರೆದಿದ್ದಾರೆ

ಭಾಷಾವಾರು ಪ್ರಾಂತ್ಯ ರಚನೆ ಈಗ ಇಲ್ಲ

ಆಂಧ್ರ ಪ್ರಾಂತ್ಯ ರಚನೆ ಬಗ್ಗೆ ಪ್ರೊ|| ಎನ್. ಜಿ ರಂಗಾ, ಶ್ರೀಗಳಾದ ಎಸ್. ವಿ. ರಾಮಮೂರ್ತಿ, ಅನಂತಶಯನಂ ಅಯ್ಯಂಗಾರ್ಯರು ಮತ್ತು ಇತರ ಐದು ಮಂದಿ ಆಂಧ್ರ ಪ್ರಮುಖರಿಂದ ಕೂಡಿದ ಒಂದು ನಿಯೋಗದವರು ನೆನ್ನೆ ನವದೆಹಲಿಯಲ್ಲಿ ಪಂಡಿತ ನೆಹರೂರವರನ್ನು ಭೇಟಿ ಮಾಡಿ ಆಂಧ್ರ ಪ್ರಾಂತ್ಯವನ್ನು ಕೂಡಲೇ ರಚಿಸಬೇಕೆಂಬ ಬಗ್ಗೆ ತಮ್ಮ ಮನವಿಯನ್ನು ಅವರಿಗೆ ಒಪ್ಪಿಸಿದರು ಆಂಧ್ರ ಪ್ರಾಂತ್ಯ ರಚನೆಯಲ್ಲಿ ಮದರಾಸ್ ನಗರದ ಒಂದು ಭಾಗವಾದ ಕೂವಂ ನದಿಯ ಉತ್ತರ ಭಾಗವನ್ನೂ ಸೇರಿಸಬೇಕೆಂದು ಅವರು ಪ್ರಾರ್ಥಿಸಿರುವರೆಂದು ಗೊತ್ತಾಗಿದೆ

ಪಂಡಿತ ನೆಹರೂರವರು ಅವರ ಅಹವಾಲುಗಳನ್ನು ಸಾವಧಾನದಿಂದ ಕೇಳಿ, ದೇಶದಲ್ಲಿ ಭಿನ್ನಾಭಿಪ್ರಾಯವೂ ಮತ್ತು ಘರ್ಷಣೆಗಳೂ ಇಲ್ಲದಿದ್ದಲ್ಲಿ ಈ ಸಮಸ್ಯೆಯು ಸುಲಭ ಸಾಧ್ಯವೆಂದೂ, ಇಲ್ಲದಿದ್ದರೆ ಅನೇಕ ತೊಡಕುಗಳಿರುವ ಪ್ರಕೃತ ಸಂದರ್ಭದಲ್ಲಿ ಸರ್ಕಾರದವರು ಈ ಬಗ್ಗೆ ಜವಾಬ್ದಾರಿಯನ್ನು ವಹಿಸಲು ಸಿದ್ಧರಿಲ್ಲವೆಂದೂ ತಿಳಿಸಿದುದಾಗಿ ಗೊತ್ತಾಗಿದೆ

ಭೂಕಂಪದಿಂದ ೨೫೩ ಮರಣ

ತುರ್ಕಿಯ ಅನಟೋಲಿಯಾ ಪ್ರದೇಶದಲ್ಲಿ ಕಳೆದ ಗುರುವಾರ ಉಂಟಾದ ಭೂಕಂಪದಿಂದ ೪೫ ಗ್ರಾಮಗಳು ನಾಶವಾಗಿವೆ. ೧೧೦೦ ಮನೆಗಳು ನೆಲಸಮನಾಗಿವೆ ೨೫೩ ಜನರು ಮಡಿದಿರುವರು. ೬೦೦೦ ಜನ ನಿರಾಶ್ರಿತರಾಗಿರುವರು. ೧೪೫ ಜನ ಗಾಯಗೊಂಡಿರುವರು ಅಲ್ಲಲ್ಲಿ ಇನ್ನೂ ಭೂಮಿ ನಡುಗುತ್ತಲೇ ಇದೆ

ಮದುವೆಯಾಗದ ಹುಡುಗಿಯ ಕೈಕತ್ತರಿಸಿದ

ಪಾಲಂಕೋಟೆಯ ರಾಮಯ್ಯ ಎಂಬ ಹರಿಜನ ಯುವಕನು ಪ್ರೀತಿಸುತ್ತಿದ್ದ ಒಬ್ಬ ಹುಡುಗಿಯನ್ನು ಆಕೆಯ ತಂದೆ ತಾಯಿಗಳು ಅವನಿಗೆ ಕೊಡಲಿಲ್ಲವಾದುದರಿಂದ ಆಕೆಯ ಎರಡು ಕೈಗಳನ್ನೂ ಅವನು ಕತ್ತರಿಸಿ ಹಾಕಿದುದಕ್ಕಾಗಿ ೧೮ ತಿಂಗಳ ಕಠಿಣ ಸಜಾ ವಿಧಿಸಲಾಯಿತು

ಕೃಷ್ಣರಾಜಸಾಗರದಲ್ಲಿ ನೌಕಾ ಶಿಕ್ಷಣ ಕೇಂದ್ರ

ಬೆಂಗಳೂರು ೨೧

ಕೃಷ್ಣರಾಜಸಾಗರದಲ್ಲಿ ಒಂದು ನೌಕಾ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಆಲೋಚಿಸಿರುವರೆಂದೂ, ಅದಕ್ಕಾಗಿ ಮೈಸೂರು ಸರ್ಕಾರದವರು ೪೦೦ ಎಕರೆ ಜಮೀನನ್ನು ಭಾರತ ಸರ್ಕಾರಕ್ಕೆ ಕೊಟ್ಟಿರುವರೆಂದೂ ಗೃಹ ಸಚಿವ ಶ್ರೀ|| ಟಿ. ಮರಿಯಪ್ಪನವರು ತಿಳಿಸಿರುತ್ತಾರೆ. ಸದರಿ ಶಿಕ್ಷಣ ಕೇಂದ್ರಕ್ಕೆ ಸರ್ಕಾರದವರು ಒಂದು ಕೋಟಿ ರೂ. ಕೊಟ್ಟಿರುವರೆಂದೂ, ಯೋಜನೆಯು ಸದ್ಯದಲ್ಲೇ ಕಾರ್ಯಗತವಾಗಲಿದೆಯೆಂದೂ ಗೊತ್ತಾಗಿದೆ

ಕಲ್ಲೀಕೋಟೆಯಲ್ಲಿ ಭೂತದ ಚೇಷ್ಟೆ

ಕಲ್ಲಿಕೋಟೆಯ ಒಂದು ಮನೆಯ ಬಳಿ ಕಲ್ಲು ಮತ್ತು ಇಟ್ಟಿಗೆ ಚೂರುಗಳು ಸತತವಾಗಿ ಬೀಳಲಾರಂಭಿಸಿವೆ ಯಾರು ಅವನ್ನು ಹಾಕುವರೆಂಬುದು ಪತ್ತೆಯಿಲ್ಲ ಇದೊಂದು ಭೂತದ ಚೇಷ್ಟೆಯೆಂದು ಭಾವಿಸಲಾಗಿದೆ ಅನೇಕ ಜನರು ಇದನ್ನು ನೋಡಿದರು ಒಂದು ಹದಿನೈದು ದಿನಗಳಿಂದ ಈ ರೀತಿ ನಡೆಯುತ್ತಿದೆ. ಒಲೆಯ ಬೆಂಕಿ ಮೇಲೆ ಮರಳು ಚೆಲ್ಲಲ್ಪಡುತ್ತಿವೆ ರಾತ್ರಿ ಹೊತ್ತು ಬಾಗಿಲನ್ನು ತಟ್ಟಲಾಗುತ್ತಿದೆ

ನಾಗರಿಕ ಸ್ವಾತಂತ್ರ್ಯಕ್ಕಾಗಿ ಸೋಷಲಿಸ್ಟರ ಸತ್ಯಾಗ್ರಹವೇ

ಭಾರತದ ಹಲವು ಪ್ರಾಂತ್ಯಗಳಲ್ಲಿ ನಾಗರಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿರುವುದರಿಂದ ಆ ಪ್ರಾಂತ್ಯಗಳಲ್ಲಿ ಸತ್ಯಾಗ್ರಹವನ್ನು ಹೂಡದೆ ಗತ್ಯಂತರವೇ ಇಲ್ಲವೆಂಬ ಅಂಶವನ್ನು ನಿನ್ನೆ ದಿನ ಕಲ್ಕತ್ತದಲ್ಲಿ ನಡೆದ ಸೋಷಿಯಲಿಸ್ಟ್ ಪಕ್ಷದ ಸಭೆಯಲ್ಲಿ ಪರಿಶೀಲಿಸಲಾಯಿತು. ಕಾಂಗ್ರೆಸ್, ಅಂತರ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳ ವಿಚಾರವಾಗಿ ಸೋಷಿಯಲಿಸ್ಟ್ ಪಕ್ಷದ ಧ್ಯೇಯಧೋರಣೆಗಳ ಬಗ್ಗೆಯೂ ಆ ಸಭೆಯಲ್ಲಿ ಚರ್ಚಿಸಲಾಯಿತೆಂದು ವರದಿಯಾಗಿದೆ

ಕದ್ದ ಒಡವೆಗಳನ್ನು ಕೊಡುವುದಾಗಿ ಪತ್ರಿಕೆಗೆ ಪತ್ರ

ಆಗಾ ಖಾನರ ಪತ್ನಿಯವರಿಂದ ಕದ್ದಿದ್ದ ಎರಡು ಲಕ್ಷ ರೂ. ಬೆಲೆ ಬಾಳುವ ಒಡವೆಗಳು ತಮ್ಮಗಳಲ್ಲಿರುವುದಾಗಿಯೂ ೧೮೦೦೦ ಪೌಂಡನ್ನು ಬಹುಮಾನವಾಗಿ ಕೊಡುವುದಾದರೆ ಅವನ್ನು ವಾಪಸು ಕೊಡುವುದಾಗಿಯೂ ಒಬ್ಬಾತನು ಪೋಲೀಸರಿಗೆ ಪತ್ರವನ್ನು ಬರೆದು ಮೊರಾಕೋ ಪತ್ರಿಕೆಯೊಂದಕ್ಕೆ ಕಳುಹಿಸಿದ್ದನು ಈ ಪತ್ರವನ್ನು ಪೋಲೀಸರು ಅಂಗೀಕರಿಸಿ ಒಡವೆಗಳನ್ನು ಹಿಂದಕ್ಕೆ ಕೊಡುವಂತೆ ಅದೇ ಪತ್ರಿಕೆಯ ಪ್ರಕಟಣೆ ಮೂಲಕ ಅವನಿಗೆ ಉತ್ತರ ಬರೆದಿದ್ದಾರೆ

ಬಟ್ಟೆ ಮತ್ತು ಇತರ ದಿನಸಿ ಪದಾರ್ಥಗಳನ್ನು ಧಾರಾಳವಾಗಿ ನೀಡುವುದರಿಂದ ಇಂಗ್ಲೆಂಡಿನಲ್ಲಿ ಕಾಳಸಂತೆಯು ಪತ್ತೆಯಾಗದಂತೆ ಮಾಯವಾಗಿದೆ. ಆದರೆ ಕೋಳಿ ಮತ್ತು ಮೊಟ್ಟೆಗಳಲ್ಲಿ ಮಾತ್ರ ಕಾಳಸಂತೆ ವ್ಯಾಪಾರ ಇದ್ದೇ ಇದೆ ಇದನ್ನೂ ಸದ್ಯದಲ್ಲೇ ಹೋಗಲಾಡಿಸುವ ಪ್ರಯತ್ನದಲ್ಲಿ ಅಧಿಕಾರಿಗಳು ಇದ್ದಾರೆ.

ವಾರ ಭವಿಷ್ಯ

೨೧-೮ ೪೯ರಿಂದ ೨೭-೮ ೪೯ರ ವರೆಗೆ

ಮೇಷ—ಸರ್ಕಾರ ಉದ್ಯೋಗದಲ್ಲಿ ಆಸಕ್ತಿ ... ಉತ್ತಮ ... ಪ್ರಯಾಣದಲ್ಲಿ ... ಉದ್ಯೋಗದಲ್ಲಿ ಅದಾಯ ... ವ್ಯಾಪಾರ ... ಸ್ನೇಹಿತರ ಸಂದರ್ಶನ ... ತಾ॥ ೨೫-೨೬ ಹಚ್ಚಿನ ವೆಚ್ಚ

ವೃಷಭ—ಆರೋಗ್ಯ ಚೆನ್ನಾಗಿದೆ ... ಲಾಭವೃದ್ಧಿ ಒಳ್ಳೆ ... ಪ್ರಯಾಸದಿಂದ ಕಾರ್ಯಸಾಧನೆ, ವ್ಯವಹಾರಗಳಲ್ಲಿ ಜಯ, ವಿದ್ಯಾರ್ಥಿಗಳಿಗೆ ಅಭಿವೃದ್ಧಿ, ತಾ॥ ೨೪-೨೫ ಅಧಿಕ ವೆಚ್ಚ

ಮಿಥುನ—... ಪರಿಸ್ಥಿತಿ, ... ಪ್ರಕೃತಿ ಸಮರ್ಪಕವಿಲ್ಲ ಪಿತ್ತ ವ್ಯಾಧಿಯುಂಟಾಗುವುದು ... ಕೆಲಸ ಕಾರ್ಯಗಳಿಗೆ ಅಡಚಣೆ ಅತ್ಯಧಿಕವಾದ ವೆಚ್ಚ ತಾ॥ ... ಪರಾವಲಂಬನ ... ಸ್ವಾತಂತ್ರ್ಯ ...

ಕರ್ಕ—... ವ್ಯಾಪಾರ ... ಕಾಲಿಗೆ ನೋವು ಆಗಬಹುದು ಪ್ರಯಾಣಕ್ಕೆ ಒಳ್ಳೆಯದಲ್ಲ ... ಜಯ ಉದ್ಯೋಗದಲ್ಲಿ ... ಮುಂದು ವೆಚ್ಚ ... ತೊಂದರೆಗಳು ... ಸ್ನೇಹಿತರ ಸಹಾಯ ... ಆಗಮನ

ಸಿಂಹ—ಆರೋಗ್ಯವನ್ನು ... ಉದ್ಯೋಗದಲ್ಲಿ ... ಧೈರ್ಯ ಮತ್ತು ... ವೇಕು ತಾ॥ ... ಜಗಳ ಅಧಿಕ ವೆಚ್ಚ ಆತಂಕ

ಕನ್ಯಾ—ಪರಿಸ್ಥಿತಿ ಉತ್ತಮ ಮನಸ್ಸಿಗ ನೆಮ್ಮದಿ ... ಗೌರವ ಪ್ರಾಪ್ತಿ ಉತ್ತಮರ ಸಹವಾಸ, ಸ್ನೇಹಿತರಿಂದ ಸಹಾಯ ... ಕಾರ್ಯಸಾಧನೆ ... ತಾ॥ ... ಕೆಲಸಗಳಿಗಾಗಿ ವೆಚ್ಚ

ತುಲಾ—ಸರ್ಕಾರ ವಿಧಿಯಿಂದಲೂ ಸಕಲ ಕಾರ್ಯಗಳ ಸಿದ್ಧಿ, ಆನಂದ, ಧನಾದಾಯ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರದಲ್ಲಿ ಅನುಕೂಲ ... ಲಾಭ ... ತಾ॥ ... ವೆಚ್ಚ

ವೃಶ್ಚಿಕ—... ಪ್ರಯಾಣವು ... ... ತಾ॥ ...

ಧನಸ್ಸು—...

ಮಕ್ಕಳಿಗೆ ...

... ...

... ಕಂಪೆನಿ,

ಪಾಕಿಸ್ತಾನದ ಹಿಂದೂ ವರ್ತಕರ ಆಸ್ತಿಗಳ ವಶ

ತಮ್ಮ ಆಸ್ತಿಪಾಸ್ತಿಗಳನ್ನು ಭಾರತದಲ್ಲಿ ಮಾರಾಟ ಮಾಡುವರೆಂಬ ಸಂಶಯದ ಮೇಲೆ ಪಾಕಿಸ್ತಾನದಲ್ಲಿರುವ ಹಿಂದೂಗಳ ಬಾರಿ ಸ್ವತ್ತುಗಳನ್ನು ಅಲ್ಲಿನ ಸರ್ಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ ಅಲ್ಲದ ಅನೇಕ ಭಾರಿ ಅಂಗಡಿಗಳನ್ನೂ ವಶಪಡಿಸಿಕೊಳ್ಳಲಾಗಿದೆ

ಪ್ರದೋಷ ಸಂಗೀತ

ಮೈಸೂರು ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ದೊಡ್ಡ ರಾಮಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಈ ದಿನ ರಾತ್ರಿ ಶ್ರೀಮತಿ ನಾಗಮ್ಮಣ್ಣಿಯವರ ಹಾಡುಗಾರಿಕೆಯು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

ಖಾದಿ ಕೈಗಾರಿಕೆಯ ಅಭಿವೃದ್ಧಿಗೆ ಸಮಿತಿ

ಸಂಸ್ಥಾನದಲ್ಲಿ ಖಾದಿ ಕೈಗಾರಿಕೆಯ ಇಂದಿನ ಸ್ಥಿತಿಗತಿಗಳನ್ನು ಪರಿಶೀಲಿಸಿ ಅದನ್ನು ಉತ್ತಮಪಡಿಸಲು ಸಲಹೆಗಳನ್ನೀಯುವುದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದ್ದಾರೆ ಸರ್ಕಾರದ ಕೈಗಾರಿಕಾ ಇಲಾಖೆಯ ಅ॥ ಡೈರೆಕ್ಟರ್ ಶ್ರೀ ಕೆ ನಾರಾಯಣ ಸ್ವಾಮಿ, ಮೈಸೂರು ಜಿಲ್ಲಾ ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಚನ್ನಬಸಪ್ಪ ಮತ್ತು ಸಂಸ್ಥಾನದ ಚರಖಾ ಪ್ರಚಾರ ಸಂಘದ ಕಾರ್ಯದರ್ಶಿ ಶ್ರೀ ಎಸ್ ವಾಸುದೇವರಾಯರು ಅದರ ಸದಸ್ಯರು

ಗಳವೆ ... ವಿಯೋಗ ... ಶಕ್ತಿಗೆ ಅ... ತಾ॥ ೨೧, ೨೨ ಅಧಿಕ ವೆಚ್ಚ ಮೋಸ ಆತಂಕ

ಮಕರ—ಅಧಿಕ ಹಣ ಬೆಯ, ಆರೋಗ್ಯ ಸಮರ್ಪಕ ಧನಾದಾಯವು ತೃಪ್ತಿಕರ ವಿದ್ಯಾರ್ಥಿಗಳಿಗೆ ಜಯ ಪ್ರತಿಸ್ಪರ್ಧಿಗಳ ಪರಾಜಯ ತಾ॥ ೨೨-೨೫ ಕಳವಳ

ಕುಂಭ—ಕಾರ್ಯಗಳಿಗೆ ಅಡಚಣೆ ಉದ್ಯೋಗದಲ್ಲಿ ಆತಂಕ ಶ್ರಮಕ್ಕೆ ತಕ್ಕ ಫಲವಿಲ್ಲ ನೆಮ್ಮದಿಯಿಲ್ಲ ಪತ್ನಿಯ ಅಸಮಾಧಾನ ತಾ॥ ೨೩-೨೫ ಕುಟುಂಬದಲ್ಲಿ ಚಿಂತೆ ... ಕೆಲಸಗಳಲ್ಲಿ ...

ಮೀನ—ದೇಹಾಲಸ್ಯ ಮನಸ್ಸಿಗೆ ನೆಮ್ಮದಿ ಇಲ್ಲ ತಾಯಿಗೂ ಅನಾರೋಗ್ಯ ಅಧಿಕ ವೆಚ್ಚ ಕೆಲಸ ಕಾರ್ಯಗಳಲ್ಲಿ ಅನಾಸಕ್ತಿ ಉದಾಸೀನತೆ ತಾ॥ ... ಜನರಿಂದಲೂ ವಾಹನದಿಂದಲೂ ಭಯ

ಗಾಯತ್ರೀ ಟಾಕೀಸ್

... ರಿಂದ 4 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

... ನಗೆ ... ಚಿತ್ರ

ಅಬಾಟ್ ಅಂಡ್ ಕ್ಯಾಸ್ಟೆಲೋ

... ಟ್

...

ಕುಚ್ ಬಿಹಾರ್ ಸಂಸ್ಥಾನ ಭಾರತ ಸರ್ಕಾರಕ್ಕೆ

ತಮ್ಮ ಸಂಸ್ಥಾನವು ನೆರೆಯಲ್ಲಿರುವ ಪಶ್ಚಿಮ ಬಂಗಾಳದೊಡನೆ ಸೇರಲು ಪ್ರಜೆಗಳು ಇಷ್ಟಪಡುವುದಿಲ್ಲವೆಂದೂ ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡಲು ಒಪ್ಪುವರೆಂದೂ ಕುಚ್ ಬಿಹಾರಿನ ರಾಜರಾದ ಜಗದ್ದೀಪೇಂದ್ರ ನಾರಾಯಣರವರು ತಿಳಿಸಿದ್ದಾರೆ ಇನ್ನೊಂದು ವಾರದಲ್ಲಿ ಈ ಬಗ್ಗೆ ಅವರು ಕೇಂದ್ರ ಸರ್ಕಾರದೊಡನೆ ಒಪ್ಪಂದಕ್ಕೆ ರುಜು ಹಾಕುವರೆಂದು ತಿಳಿದುಬಂದಿದೆ

ಶ್ರೀ ಕೃಷ್ಣ ಜಯಂತಿ

ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಳೆದ ಶುಕ್ರವಾರದಿಂದ ಪ್ರತಿ ದಿನ ಸಂಜೆ ವಿದ್ವಾಂಸರುಗಳಿಂದ ಶ್ರೀ ಕೃಷ್ಣೋತ್ಸವದ ಪ್ರಯುಕ್ತ ಸಂಗೀತ ಹರಿಕಥೆ, ಮುಂತಾದ ಕಾರ್ಯಕ್ರಮಗಳು ನಡೆಯುತ್ತಿವೆ ಇವು ಬರುವ ತಿಂಗಳು ... ನೇ ತಾ॥ ನವರೆಗೂ ನಡೆಯುವುವು

ಸಂಗೀತ ಕಚೇರಿ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದಸ್ವಾಮಿಗಳ ಔಷಧಾಲಯದ ... ದಿನ ರಾತ್ರಿ ೭ ಗಂಟೆಗೆ ಸಂಗೀತ ಭೂಷಣ ಆರ್ ಕೆ ಶ್ರೀಕಂಠನ್ ರವರ ಗಾನ... ವಿದ್ವಾನ್ ಬಿ ಕೆ ಮೂರ್ತಿಯವರ ಪಿಟೀಲು ಮತ್ತು ವಿದ್ವಾನ್ ಕೆ ಎಸ್ ಗೋಪಾಲಯ್ಯರ ಮೃದಂಗದೊಡನೆ ನಡೆಯುವುದು

ಶಾರದಾ ಪೂಜೆ

ಗೊಲ್ಲಗೇರಿ ಶ್ರೀ ರಾಮ ಸಹಾಯ ... ದಲ್ಲಿ ಮೊನ್ನೆ ಸಂಜೆ ಶಾರದಾ ಪೂಜೆಯು ಪ್ರಚಾರ ಸಭೆಯ ಕಾರ್ಯಕರ್ತ ... ವಿನಾಯಕರಾವ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು ಅಧ್ಯಕ್ಷರು ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಹಂಚಿದರು

Edited, printed and published by A R Nagaraj... at Sadhvi Press, D Subbaiah Road, Mysore

ಪ್ರಭುದೇವಾ ಟಾಕೀಸ್

22-8-49 ನೇ, ಸೋಮವಾರದಿಂದ

ಅಮೋಘವಾದ 50 ನೇ ದಿನ

ಜೆಮಿನಿಯವರ ಶ್ರೇಷ್ಠ ಕಲಾಕೃತಿ

ಬಾಲನಾಗಮ್ಮ

(ತೆಲುಗ)

26-8-49 ನೇ ಶುಕ್ರವಾರದಿಂದ

ಮಹಾತ್ಮ ಉದಂಗರ್

(ತಮಿಳು)

ಪಾತ್ರ—ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ ಆರ್ ರಾಮಚಂದ್ರ ಬೇಬಿ ಕಮಲ ಮುಂತಾದವರು

ರಾಜಕಮಲ್, ಮೈಸೂರು

19—8—49 ರಿಂದ ಅಮೋಘ ಆರಂಭ

ದಿನವಹಿ 3 ಪ್ರದರ್ಶನಗಳು

ಭೂಮಿಕೆ - ಕೌಸಲ್ಯ, ಸುಂದರ್ ಮುಕರ್ಜಿ ಮತ್ತು ಶಕ್ಕೂ ರವರ ನರ್ತನ

ಲಾಟರಿ

(ಹಿಂದಿ)

MORNING SHOWS From 19 8 49 for 4 d...

— CARAVAN —

With Stewart Granger, Jean Kent, Dennis Price

ಚಾಮುಂಡೇಶ್ವರೀ ಟಾಕೀಸ್

19-8-49 ರಿಂದ ಯಶಸ್ವಿಯಾದ 3 ನೇ ವಾರ

ಪ್ರತಿ ದಿನ 3 ಆಟಗಳು

— ನವಜೀವನಂ —

... ...

(R V ...)

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸೆ

ಸಾಧ್ವಿ

ಸಂಪುಟ ೧] ಸೋಮವಾರ ೨೨ ೨-೧೯೪೯ [ಸಂಚಿಕೆ ೨೪

ಸಂಯುಕ್ತ ಪ್ರಾಂತದಲ್ಲಿ ರೈತರ ಸತ್ಯಾಗ್ರಹ

ಕ್ಷತ್ರಿಯ ಬಾಡರ ಸಂಘದ ಕಟ್ಟಡಕ್ಕೆ ಸಹಾಯ

ಮೈಸೂರು, ೨೧

ಸಂಸ್ಥಾನದ ಕ್ಷತ್ರಿಯರ ಬಾಡರ ಸಂಘದ ದ್ವಿತೀಯ ವಾರ್ಷಿಕ ಸಭೆಯು ನಿನ್ನೆ ಶ್ರೀರಂಗ ದೇವಸ್ಥಾನದಲ್ಲಿ ಶ್ರೀ ಯು ಆರ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ಸ್ವಾಗತ ಭಾಷಣ ಮತ್ತು ವಾರ್ಷಿಕ ವರದಿಗಳಾದ ನಂತರ ಪ್ರಸಕ್ತ ಸಾಲಿಗೆ ಕಾರ್ಯ ನಿರ್ವಾಹಕ ಮಂಡಲಿಯ ಚುನಾವಣೆಯು ನಡೆಯಿತು. ಸಂಘದ ಕಟ್ಟಡದ ನಿಧಿಗಾಗಿ ಕೆಳಗೆ ಕಂಡವರು ಉದಾರವಾಗಿ ಸಹಾಯ ಮಾಡಿರುತ್ತಾರೆ —

ಶ್ರೀ ಹುಚ್ ಕೃಷ್ಣಾಜಪ್ಪನವರು ೫೦೦೧ ರೂ; ಶ್ರೀಗಳಾದ ಬಿ. ಲಕ್ಷ್ಮಣ್ಣನವರು ವಸ್ತ್ರ; ಹಂಪಾಪುರದ ಎಂ. ಬಿ. ತನಪ್ಪನವರು ೧೧೦೦೧ ರೂ; ಶ್ರೀ ಆರ್. ಸನ್ನಪ್ಪನವರು ೧೧೦೧ ರೂ; ಶ್ರೀಗಳಾದ ಬಿ. ನಂಜಪ್ಪ, ಎಲ್. ಆರ್. ಕೃಷ್ಣಪ್ಪ, ವಿ. ಲಕ್ಷ್ಮಯ್ಯ, ಜಿ. ಆರ್. ಗೋವಿಂದಪ್ಪನವರು ೨೧ ರೂ; ಶ್ರೀ ಚಿಳಿತೆ ನಂಜಪ್ಪ ೧೧ ರೂ.

ಸಹಾಯಾರ್ಥ ನಾಟಕ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಶ್ರೀ ರಾಮ ಮಂದಿರದ ಕಟ್ಟಡದ ನಿಧಿಗಾಗಿ ಇದೇ ೨೬ ನೇ ತಾ॥ ಸೋಮವಾರ ರಾತ್ರಿ ೧೦ ಘಂಟೆಗೆ ಟೌನ್ ಹಾಲಿನಲ್ಲಿ ಶ್ರೀ ರಾಮ ಕೃಪಾ ಪೋಷಿತ ಮಿತ್ರ ಮಂಡಲಿಯವರು ಸಂಪೂರ್ಣ ಕೃಷ್ಣಲೀಲಾ ಎಂಬ ನಾಟಕವನ್ನು ಆಡುವರು. ಮಹಾ ಜನರು ಸಹಾಯ ನೀಡಬೇಕೆಂದು ಕೋರಲಾಗಿದೆ.

ನವಾಬರ ಅಸಪ್ರಚಾರದ ಬಗ್ಗೆ ಹೈದ್ರಾಬಾದ್ ಮುಸ್ಲಿಮರ ಪ್ರತಿಭಟನೆ

ರಜಾಕರರ ಮಾಜಿ ನಾಯಕ ಖಾಸಿಂ ರಜ್ವಿಯ ಪರವಾಗಿ ವಕಾಲತ್ತು ವಹಿಸಲು ಹೈದರಾಬಾದ್ ಮಿಲಿಟರಿ ಸರ್ಕಾರದವರು ಹೊರಗಿನ ಲಾಯರುಗಳಿಗೆ ಅವಕಾಶ ಕೊಟ್ಟಿಲ್ಲವೆಂದು ವಿಶ್ವ ಸಂಸ್ಥೆಗೆ ಮಾಜಿ ವಿದೇಶಾಂಗ ಮಂತ್ರಿ ನವಾಬ್ ಮೊಯಿನ್ ನವಾಬ್ ಜಂಗ್ ಬಹದ್ದೂರರವರು ದೂರಿತ್ತಿರುವ ದೂರನ್ನು ಪ್ರತಿಭಟಿಸಿ, ಪ್ರಮುಖರಾದ ೪ ಜನ ಮುಸ್ಲಿಂ ನಾಯಕರು ಹೇಳಿಕೆಯನ್ನಿತ್ತಿದ್ದಾರೆ. ಇದು ಭಾರತಕ್ಕೆ ವಿರುದ್ಧವಾಗಿ ನವಾಬರು ಮತ್ತು ಪಾಕೀಸ್ತಾನಗಳು ಕೈಗೊಂಡಿರುವ ಅಪಪ್ರಚಾರವೆಂದೂ, ಖಾಸಿಂ ರಜ್ವಿಯ ಡಿಫೆನ್ಸಿಗೆ ಎಲ್ಲಾ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆಂದೂ ಅವರು ಹೇಳಿದ್ದಾರೆ.

ಏಷ್ಯಾ ರಾಷ್ಟ್ರಗಳ ಸಾಂಸ್ಕೃತಿಕ ಸಹಕಾರ ಸಂಘ

ಏಷ್ಯಾ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಸಹಕಾರವನ್ನು ಏರ್ಪಡಿಸಲು ಭಾರತದಲ್ಲಿ ಒಂದು ಸಂಘವನ್ನು ಮೊನ್ನೆ ದೆಹಲಿಯಲ್ಲಿ ನಡೆದ ಮಧ್ಯ ಪ್ರಾಚ್ಯ ವಿದ್ಯಾ ರಾಷ್ಟ್ರಗಳ ಮತ್ತು ಭಾರತದ ವಿದ್ಯಾ ಪ್ರತಿನಿಧಿಗಳ ಸಭೆಯಲ್ಲಿ ರಚಿಸಲಾಯಿತು. ಈ ಕಾರ್ಯವನ್ನು ಕೂಡಲೇ ಆರಂಭಿಸಲು ಒಂದು ಪಾಠನಿಲಯ, ಪುಸ್ತಕ ಭಂಡಾರಗಳನ್ನು ಸ್ಥಾಪಿಸಬೇಕೆಂದೂ ನಿರ್ಧರಿಸಲಾಯಿತು.

ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ್ ರೈತರುಗಳ ಸತ್ಯಾಗ್ರಹವೇ?

ಜಮೀನುದಾರಿ ಪದ್ಧತಿಯನ್ನು ರದ್ದುಮಾಡುವ ಬಗ್ಗೆ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ್ ಸರ್ಕಾರಗಳು ನಿಗದಿಪಡಿಸಿರುವ ಪರಿಹಾರ ಕ್ರಮವನ್ನು ಪ್ರತಿಭಟಿಸಿ ... ಪ್ರಾಂತದ ... ಗಳಲ್ಲಿ ಒಂದು ... ಸತ್ಯಾಗ್ರಹ ಹೂಡುವರೆಂದು ... ರವರು ... ಹೇಳಿದ್ದಾರೆ. ... ವ್ಯವಸಾಯ ಮಾಡುವವರಿಗೆ ಭೂಮಿಯು ... ಮಾಡಬೇಕೆಂದು ಅವರು ಸೂಚನೆ ಇತ್ತಿದ್ದಾರೆ.

ದಂಪತಿಯನ್ನು ಕೂಡಿ ಮಾಡುವುದು ಪತಿಯ ಹಕ್ಕು

ಮದ್ರಾಸ್ ಹೈಕೋರ್ಟಿನ ... ಗಂಡಹೆಂಡತಿಯರಲ್ಲಿ ... ಮತ್ತು ... ಕೊಡುವುದು ... ಅವರಾದರಲ್ಲಿ ... ಹಕ್ಕೆಂದು ಹೇಳಲಾಗಿದೆ.

ಹಣ್ಣಿನ ವಾಸನೆಯುಳ್ಳ ಸಿಗರೇಟು

ಹಣ್ಣಿನ ವಾಸನೆಯುಳ್ಳ ಸಿಗರೇಟುಗಳನ್ನು ತಯಾರಿಸಲು ... ಇಂಗ್ಲೆಂಡಿನಲ್ಲಿ ... ಹೇಳಲಾಗಿದೆ ... ಉಪಯೋಗಿಸಲಾಗುತ್ತಿದೆ.

ಪರೋಪಜೀವಿಗಳ ಪತ್ತೆಗಿರಿ

ಬೆಂಗಳೂರು ... ಕಳೆದ ... ನೇ ತಾರೀಖು ... ದರೋಡೆಕೋರರ ದಸ್ತಗಿರಿ ... ಶ್ರೀ ... ಪೊಲೀಸರು ... ಹಿಡಿದು ... ಪ್ರಕರಣವು ವಿಚಾರಣೆಯಲ್ಲಿದೆ.

ವ್ಯವಸಾಯ ಪ್ರಾಯೋಗಿಕ ಕೇಂದ್ರಗಳ ಸ್ಥಾಪನೆ

ಸಚಿವ ಶ್ರೀ ಟಿ. ಮರಿಯಪ್ಪನವರ ಸೂಚನೆ

ಬೆಂಗಳೂರು, ೨೧

ಸಂಸ್ಥಾನದಲ್ಲಿ ರೈತರು ಎಕರೆ ಒಂದಕ್ಕೆ ಹೆಚ್ಚು ಭತ್ತ, ಒಂದು ಪಲ್ಲ ರಾಗಿಯನ್ನು ಹೆಚ್ಚಾಗಿ ಬೆಳೆದರೆ ಆಹಾರದ ಅಭಾವವು ಇರುವುದಿಲ್ಲ. ವ್ಯವಸಾಯವನ್ನು ಒಂದು ಕೈಗಾರಿಕೆಯಂತೆ ಭಾವಿಸಬೇಕು. ವ್ಯವಸಾಯ ನಿಪುಣರು ರೈತರ ಹೆಚ್ಚು ಬೆಳೆಯುವುದಕ್ಕೆ ಸಹಾಯವೀಯಬೇಕು. ಮತ್ತು ಪ್ರಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಿ, ರೈತರಿಗೆ ಪ್ರೋತ್ಸಾಹ ಕೊಡಬೇಕು. ಮತ್ತು ವ್ಯವಸಾಯದ ಪದ್ಧತಿಯನ್ನು ಸುವ್ಯವಸ್ಥೆಗೊಳಿಸಬೇಕು. ಉತ್ತಮ ಬೀಜಗಳನ್ನು ಸಿದ್ಧಗೊಳಿಸಿ ಸಹಾಯ ಮಾಡಬೇಕು. ರೈತರಿಗೆ ಉತ್ತಮ ಗೊಬ್ಬರ, ಬೀಜ ಮತ್ತು ಇತರ ಸಲಕರಣೆಗಳು ಸುಲಭ ದರದಲ್ಲಿ ಸಿಕ್ಕುವಂತೆ ಮಾಡಬೇಕು — ಎಂದು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಕಳೆದ ಶುಕ್ರವಾರ ನಡೆದ ವ್ಯವಸಾಯ ಅಧಿಕಾರಿಗಳ ಸಭೆಯಲ್ಲಿ ತಿಳಿಸಿರುತ್ತಾರೆ.

ಮುಸ್ಲಿಂ ಲೀಗಿನ ನಿಧಿಯ ಬಗ್ಗೆ ಪ್ರಧಾನಿಯ ನೋಟೀಸು

ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿದ್ದ ಜಿನ್ನಾರವರು ಸಂಗ್ರಹಿಸಿದ್ದ ... ಲಕ್ಷ ರೂಗಳು ಪಾಕಿಸ್ತಾನದ ಮುಸ್ಲಿಂ ಲೀಗಿಗೆ ಸಂಪೂರ್ಣವಾಗಿ ವರ್ಗಾಯಿಸಲ್ಪಡಬೇಕೆಂದು ಸಿಂಧ್ ಚೀಫ್ ಕೋರ್ಟಿನಲ್ಲಿ ಪಾಕಿಸ್ತಾನದ ಪ್ರಧಾನಿ ಮತ್ತು ನಾಜಿಮುದ್ದೀನ್, ಜಿನ್ನಾರವರುಗಳಿಗೆ ನೋಟೀಸ್ ಜಾರಿ ... ಲೀಗಿನ ... ದಾವೆ ಹೂಡಿದ್ದಾರೆ.

ಕರ್ನಾಟಕದ ನಿಯೋಗ

ಕರ್ನಾಟಕ ಪ್ರಾಂತ್ಯ ರಚನೆಯ ಬಗೆ ... ಇದೇ ೨೩ ನೇ ತಾ॥ ದಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯ ಸಮಿತಿ ... ನಿಯೋಗ ... ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದಾರೆಂದು ತಿಳಿದುಬಂದಿದೆ.

ಸಕ್ಕರೆ ಬೆಲೆ ಇಳಿಸಬೇಕು

ಸಕ್ಕರೆ ಬೆಲೆಯನ್ನು ಕಡಿಮೆ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಭಾರತ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ಸೂಚನೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ವರ್ತಕರು ಲಾಭದಾಸೆಯಿಂದ ಸಕ್ಕರೆ ಬೆಲೆಯನ್ನು ವಿಪರೀತವಾಗಿ ಏರಿಸಿ ಜನರಿಗೆ ತೊಂದರೆ ಕೊಡುತ್ತಿದ್ದಾರೆಂದೂ, ಅದನ್ನು ನಿಲ್ಲಿಸದೇ ಹೋದರೆ ವರ್ತಕರುಗಳಿಗೆ ಸಕ್ಕರೆ ಮಾರಾಟದ ಅಧಿಕಾರವನ್ನು ತಪ್ಪಿಸಿ, ಸಹಕಾರ ಸಂಘಗಳ ಮೂಲಕ ಅದನ್ನು ಮಾರುವ ವ್ಯವಸ್ಥೆಯನ್ನು ಮಾಡಲು ಮೈಸೂರು ಸರ್ಕಾರದವರ ಯೋಚಿಸುತ್ತಿದ್ದಾರೆಂದೂ ತಿಳಿದುಬಂದಿದೆ.

ಚರಖಾ ಜಯಂತಿ

ಮುಂದಿನ ತಿಂಗಳು ೧೧ರಿಂದ ಅಕ್ಟೋಬರ್ ೨ನೇ ತಾರೀಖಿನವರೆಗೆ ಚರಖಾ ಜಯಂತಿಯನ್ನು ಆಚರಿಸಬೇಕೆಂದು ಅಖಿಲ ಭಾರತ ಚರಖಾ ಸಂಘದವರು ಮನವಿ ಮಾಡಿದ್ದಾರೆ.

ಈಗಿನ ಬಟ್ಟೆಯ ಅಭಾವವನ್ನು ನೀಗಿಸಲು ಎಲ್ಲರೂ ತಮ್ಮ ಸ್ವಂತ ಬಟ್ಟೆಯನ್ನು ತಯಾರಿಸಬೇಕೆಂದೂ, ಇದು ಚರಖಾವೊಂದರಿಂದಲೇ ಸಾಧ್ಯವೆಂದೂ, ಭಾರತೀಯರೆಲ್ಲರೂ ಚರಖಾ ಸಂಘದ ಕಾರ್ಯ ಕಲಾಪಗಳಲ್ಲಿ ಸಹಕಾರಿಯಾಗುವುದರಿಂದ ಭಾರತದ ಒಂದು ಮುಖ್ಯ ಸಮಸ್ಯೆಯನ್ನು ಬಗೆಹರಿಸಿದಂತಾಗುವುದೆಂದೂ ಸರ್ದಾರ್ ಪಟೇಲರು ಒಂದು ಸಂದೇಶವನ್ನು ... ಸಂಘಕ್ಕೆ ಕೊಟ್ಟಿರುತ್ತಾರೆ.

ಗಂಗಾ ಪ್ರವಾಹದಿಂದ ೧೯ ಹಳ್ಳಿಗಳಿಗೆ ಅಪಾಯ

ಕಾನ್ಪುರದಲ್ಲಿ ಗಂಗಾ ನದಿಯ ನೀರು ೩೩೩-೬ ಅಡಿಗೆ ಏರಿ ವಿಪರೀತ ಪ್ರವಾಹ ಒದಗಿದೆಯೆಂದೂ, ಇದರಿಂದ ಉನ್ನಾವ್ ಜಿಲ್ಲೆಯ ೧೯ ಹಳ್ಳಿಗಳು ನೀರುಪಾಲಾಗಿವೆಯೆಂದೂ ಹೇಳಲಾಗಿದೆ.

ಗೋಲ್ವಾಲ್ಕರರಿಗೆ ಅದ್ಭುತ ಸ್ವಾಗತ

ಆರ್. ಎಸ್. ಎಸ್. ಸಂಸ್ಥೆಯ ನಾಯಕರಾದ ಶ್ರೀ ಎಂ. ಎಸ್. ಗೋಲ್ವಾಲ್ಕರರಿಗೆ ದೆಹಲಿಯಲ್ಲಿ ನಿನ್ನೆ ದಿನ ೧ ಲಕ್ಷ ಜನರು ರೈಲ್ವೆ ನಿಲ್ದಾಣದಲ್ಲಿ ಅಭೂತಪೂರ್ವ ಸ್ವಾಗತವನ್ನು ಇತ್ತರು. ಒಟ್ಟು ೩೩ ... ಗಳು ಅವರಿಗೆ ಸ್ವಾಗತವನ್ನು ನೀಡಿದವು. ಅನಂತರ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಅಂತರ ರಾಷ್ಟ್ರೀಯ ಬ್ಯಾಂಕಿನ ಗೌರ್ನರರು

ಭಾರತದ ರಿಜರ್ವ್ ಬ್ಯಾಂಕಿನ ಗವರ್ನರರಾದ ಶ್ರೀ ಬಿ. ರಾಮರಾಯರನ್ನು ಅಂತರ ರಾಷ್ಟ್ರೀಯ ಬ್ಯಾಂಕಿನ ಭಾರತೀಯ ಗೌರ್ನರರಾಗಿ ನೇಮಿಸಲಾಗಿದೆ.

ಸರ್ಕಾರೀ ಜವಾನರು ಮನೆ ಕೆಲಸಕ್ಕಿಲ್ಲ

ಸರ್ಕಾರೀ ಜವಾನರ ಸೇವೆಯನ್ನು ... ಉಪಯೋಗಿಸಿಕೊಳ್ಳುತ್ತಿರುವ ... ಅಧಿಕಾರಿಗಳು ... ಕೊಡಲಾಗಿದೆ ... ಸಂಸ್ಥಾನ ಸರ್ಕಾರದವರು ಸ್ಪಷ್ಟ ನಿರ್ದೇಶನಗಳನ್ನು ಹೊರಡಿಸಿದ್ದಾರೆ. ಇದನ್ನು ಉಲ್ಲಂಘಿಸಿದವರ ಮೇಲೆ ಉಗ್ರಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಕೆ ಕೊಟ್ಟಿದ್ದಾರೆ.

ವಾರ ಭವಿಷ್ಯ

೨೧-೮-೪೯ರಿಂದ ೨೭-೮-೪೯ರ ವರೆಗೆ

ಮೇಷ— ಧರ್ಮ ಕಾರ್ಯದಲ್ಲಿ ಆಸಕ್ತಿ, ದೇಹಸ್ಥಿತಿ ಉತ್ತಮ, ಸತ್ಪುರುಷರ ಸಹವಾಸ ಪ್ರಯಾಣದಲ್ಲಿ ಸೌಖ್ಯ ಉದ್ಯೋಗದಲ್ಲಿ ಆದಾಯ.. ವ್ಯಾಪಾರ ಸುಮ ಸ್ನೇಹಿತರ ಸಂದರ್ಶನ. ಧನಾದಾಯ. ತಾ॥ ೨೧-೨೨ ಹೆಚ್ಚಿನ ವೆಚ್ಚ.

ವೃಷಭ—ಆರೋಗ್ಯ ಚೆನ್ನಾಗಿದೆ. ಹಣ ಲಾಭವುಂಟು ಒಳ್ಳೆ ಸುದ್ದಿಗಳು ಬರುವುವು ಪ್ರವಾಸದಿಂದ ಕಾರ್ಯಸಾಧನೆ,ವ್ಯವಹಾರಗಳಲ್ಲಿ ಜಯ,ವಿದ್ಯಾರ್ಥಿಗಳಿಗೆ ಅಭಿವೃದ್ಧಿ, ತಾ॥ ೨೪-೨೫ ಅಧಿಕ ವೆಚ್ಚ.

ಮಿಥುನ- ವ್ಯಾಕುಲ ಪರಿಸ್ಥಿತಿ, ದೇಹ ಪ್ರಕೃತಿ ಸಮರ್ಪಕವಿಲ್ಲ ಪಿತ್ತ ವ್ಯಾಧಿಯುಂಟಾಗುವುದು. ದೇಹಾಲಸ್ಯದಿಂದ ಕಾರ್ಯ ವಿಘ್ನ. ಕೆಲಸ ಕಾರ್ಯಗಳಿಗೆ ಅಡಚಣೆ. ಅತ್ಯಧಿಕವಾದ ವೆಚ್ಚ ತಾ॥ ೨೩ ಮತ್ತು ೨೪ ಹಂಗಾಮಿಯಾಗಿ ದುಡ್ಡಿನ ತಾಪತ್ರಯ ನಿವಾರಣೆ

ಕರ್ಕ —ಅಕ್ಕ ಪಕ್ಕದಲ್ಲಿರುವವರ ಅಸಮಾಧಾನ ಆಳುಗಳ ಕೆಲಸ ಅತೃಪ್ತಿಕರ! ಕಾಲಿಗೆ ನೋವು ಆಗಬಹುದು ಪ್ರಯಾಣಕ್ಕೆ ಒಳ್ಳೆಯದಲ್ಲ ವಾಹನ ಭಯ ಉದ್ಯೋಗದಲ್ಲಿ ನಿಷ್ಠುರ ಬಂಧುಗಳಿಂದ ದುಂದು ವೆಚ್ಚ. ಪ್ರಾರಂಭದಲ್ಲಿ ಬಂದ ತೊಂದರೆಗಳು ಕಡೆಯಲ್ಲಿ ನಿವಾರಣೆಯಾಗುವುವು ತಾ॥ ೨೪-೨೬ ಸ್ನೇಹಿತರ ಸಹಾಯ ಹಿತ್ತಿಷಿಗಳ ಆಗಮನ

ಸಿಂಹ--ಆರೋಗ್ಯವನ್ನು ಲಕ್ಷಿಸಬೇಕು ಉದ್ಯೋಗದಲ್ಲಿ ಅಪಮಾನದ ಸಂಭವ ಧೈರ್ಯ ಮತ್ತು ತಾಳ್ಮೆಯಿಂದಿರಬೇಕು. ತಾ॥ ೨೧ ೨೨ ೨೭ ಜಗಳ, ಅಧಿಕ ವೆಚ್ಚ ಆತಂಕ

ಕನ್ಯಾ—ದೇಹಸ್ಥಿತಿ ಉತ್ತಮ ಮನಸ್ಸಿಗೆ ನೆಮ್ಮದಿ ಹಣದ ವರಮಾನವುಂಟು ಗೌರವ ಪ್ರಾಪ್ತಿ, ಉತ್ತಮರ ಸಹವಾಸ, ಸ್ನೇಹಿತರಿಂದ ಸಹಾಯ ಸುಖ ಪ್ರಯಾಣ ಕಾರ್ಯಸಾಧನೆ ಮನಸ್ಸಿಗೆ ಶಾಂತಿ ಮೇಲ್ಪಟ್ಟವರಿಂದ ಮೆಚ್ಚಿಗೆ ತಾ॥ ೨೪, ೨೫ ಒಳ್ಳೇ ಕೆಲಸಗಳಿಗಾಗಿ ವೆಚ್ಚ

ತುಲಾ—ಸರ್ವ ವಿಧದಿಂದಲೂ ಸಕಲ ಕಾರ್ಯಗಳ ಸಿದ್ಧಿ, ಆನಂದ, ಧನಾದಾಯ ಉದ್ಯೋಗದಲ್ಲಿ ಪ್ರಗತಿ, ವ್ಯಾಪಾರದಲ್ಲಿ ಅನುಕೂಲ. ೨೪ನೇ ತಾ॥ ಅಧಿಕ ಲಾಭ ೨೬ನೇ ತಾ॥ ಹೆಚ್ಚು ವೆಚ್ಚ

ವೃಶ್ಚಿಕ--ದೊಡ್ಡ ಪ್ರಯಾಣವು ಹಿತಕರವಲ್ಲ ಆಕಸ್ಮಿಕಗಳ ಭಯವಿದೆ ಉದ್ಯೋಗದಲ್ಲಿ ವಿರೋಧಿಗಳ ಬಾಧೆ ದೇಹಸಿತಿ ಉತ್ತಮವಿಲ್ಲ ಹೆಚ್ಚಿನ ವೆಚ್ಚ ಒದಗುವುದ ತಾ॥ ೨೨-೨೬ ಆತಂಕರಣ

ಧನುಸ್ಸು— ಧರ್ಮದಿಂದ ಶ್ರೇಯಸ್ಸು ಧನ ಹಬ್ಬ ಸಂತೋಷ ಸಂಗೀತ ಪ್ರಸಂಗ

ಗಳವೆ ಆಪ್ತರ ವಿಯೋಗ ಶಕ್ತಿಗೆ ಬಲಸ್ಯ ತಾಪತ್ರಯ ತಾ॥ ೨೧, ೨೨ ಅಧಿಕ ವೆಚ್ಚ, ದ್ರೋಹ ಆತಂಕ...

ಮಕರ—ಅಧಿಕ ಹಣ ಭಯ, ಆರೋಗ್ಯ ಸಮರ್ಪಕ ಧನಾದಾಯವು ತೃಪ್ತಿಕರ ವಿದ್ಯಾರ್ಥಿಗಳಿಗೆ ಜಯ ಪ್ರತಿಸ್ಪರ್ಧಿಗಳ ಪರಾಜಯ. ತಾ॥ ೨೪-೨೫ ಕಳವಳ

ಕುಂಭ—ಕಾರ್ಯಗಳಿಗೆ ಅಡಚಣೆ ಉದ್ಯೋಗದಲ್ಲಿ ಆತಂಕ ಶ್ರಮಕ್ಕೆ ತಕ್ಕ ಫಲವಿಲ್ಲ ನೆಮ್ಮದಿಯಿಲ್ಲ ಪತ್ನಿಯ ಅಸಮಾಧಾನ ತಾ॥ ೨೩-೨೬ ಕುಟುಂಬದಲ್ಲಿ ಚಿಂತೆ ದುಃಖ ವಾರ್ತೆ ಕೆಲಸಗಳಲ್ಲಿ ನಿರಾಶೆ.

ಮೀನ—ದೇಹಾಲಸ್ಯ. ಮನಸ್ಸಿಗೆ ನೆಮ್ಮದಿ ಇಲ್ಲ ತಾಯಿಗೂ ಅನಾರೋಗ್ಯ ಅಧಿಕ ವೆಚ್ಚ ಕೆಲಸ ಕಾರ್ಯಗಳಲ್ಲಿ ಅನಾಸಕ್ತಿ, ಉದಾಸೀನತೆ ತಾ॥ ೨೪-೨೫ ಸ್ತ್ರೀಗಳಿಂದಲೂ ವಾಹನದಿಂದಲೂ ಭಯ.

MILKWOOD BY ...
ಮಕ್ಕಳಿಗೆ ಕೊಡಿಸುವ
ಅಪ್ಪಟ ಉತ್ತಮ ಹಾಲು ...
ಬಾರೊಸಾರ್ ಕಂಪೆನಿ,

ಪಾಕಿಸ್ತಾನ ಹಿಂದೂ ವರ್ತಕರ ಆಸ್ತಿಗಳ ವಶ

ತಮ್ಮ ಆಸ್ತಿಪಾಸ್ತಿಗಳನ್ನು ಭಾರತದಲ್ಲಿ ಮಾರಾಟ ಮಾಡುವರೆಂಬ ಸಂಶಯದ ಮೇಲೆ ಪಾಕಿಸ್ತಾನದಲ್ಲಿರುವ ಹಿಂದೂಗಳ ಭಾರಿ ಸ್ವತ್ತುಗಳನ್ನು ಅಲ್ಲಿನ ಸರ್ಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ ಅಲ್ಲದೆ ಅನೇಕ ಭಾರಿ ಅಂಗಡಿಗಳನ್ನೂ ವಶಪಡಿಸಿಕೊಳ್ಳಲಾಗಿದೆ

ಪ್ರದೋಷ ಸಂಗೀತ

ಮೈಸೂರು ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ದೊಡ್ಡ ರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಈ ದಿನ ರಾತ್ರಿ ಶ್ರೀಮತಿ ನಾಗಮ್ಮಣ್ಣಿಯವರ ಹಾಡುಗಾರಿಕೆಯು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು.

ಖಾದಿ ಕೈಗಾರಿಕೆಯ ಅಭಿವೃದ್ಧಿಗೆ ಸಮಿತಿ

ಸಂಸ್ಥಾನದಲ್ಲಿ ಖಾದಿ ಕೈಗಾರಿಕೆಯ ಇಂದಿನ ಸ್ಥಿತಿಗತಿಗಳನ್ನು ಪರಿಶೀಲಿಸಿ ಅದನ್ನು ಉತ್ತಮಪಡಿಸಲು ಸಲಹೆಗಳನ್ನೀಯುವುದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದ್ದಾರೆ ಸರ್ಕಾರದ ಕೈಗಾರಿಕಾ ಇಲಾಖೆಯ ಅ॥ ಡೈರೆಕ್ಟರ್ ಶ್ರೀ ಕೆ. ನಾರಾಯಣ ಸ್ವಾಮಿ, ಮೈಸೂರು ಜಿಲ್ಲಾ ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಚನ್ನಬಸಪ್ಪ ಮತ್ತು ಸಂಸ್ಥಾನದ ಚರಖಾ ಪ್ರಚಾರ ಸಂಘದ ಕಾರ್ಯದರ್ಶಿ ಶ್ರೀ ಎಸ್ ವಾಸುದೇವಾಚಾರ್ಯರು ಅದರ ಸದಸ್ಯರು.

ಗಾಯತ್ರೀ ಟಾಕೀಸ್
21-8-49ರಿಂದ 4 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಯೂನಿವರ್ಸಲ್ ರವರ ಹಾಸ್ಯ ಮತ್ತು ಭಯಂಕರದಿಂದೊಡಗೂಡಿರುವ ಚಿತ್ರ
ಅಬಾಟ್ ಅಂಡ್ ಕ್ಯಾಸ್ಟೆಲೋ
ಮೀಟ್
ಫ್ರಾಂಕೆನ್‌ಸ್ಟೀನ್

ಕುಚ್ ಬಿಹಾರ್ ಸಂಸ್ಥಾನ ಭಾರತ ಸರ್ಕಾರಕ್ಕೆ

ತಮ್ಮ ಸಂಸ್ಥಾನವು ನೆರೆಯಲ್ಲಿರುವ ಪಶ್ಚಿಮ ಬಂಗಾಳದೊಡನೆ ಸೇರಲು ಪ್ರಜೆಗಳು ಇಷ್ಟಪಡುವುದಿಲ್ಲವೆಂದೂ ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡಲು ಒಪ್ಪುವರೆಂದೂ ಕುಚ್ ಬಿಹಾರಿನ ರಾಜರಾದ ಜಗದ್ದೀಪೇಂದ್ರ ನಾರಾಯಣರವರು ತಿಳಿಸಿದ್ದಾರೆ. ಇನ್ನೊಂದು ವಾರದಲ್ಲಿ ಈ ಬಗ್ಗೆ ಅವರು ಕೇಂದ್ರ ಸರ್ಕಾರದೊಡನೆ ಒಪ್ಪಂದಕ್ಕೆ ರುಜು ಹಾಕುವರೆಂದು ತಿಳಿದುಬಂದಿದೆ.

ಶ್ರೀ ಕೃಷ್ಣ ಜಯಂತಿ

ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಳೆದ ಶುಕ್ರವಾರದಿಂದ ಪ್ರತಿ ದಿನ ಸಂಜೆ ವಿದ್ವಾಂಸರುಗಳಿಂದ ಶ್ರೀ ಕೃಷ್ಣೋತ್ಸವದ ಪ್ರಯುಕ್ತ ಸಂಗೀತ ಹರಿಕಥೆ, ಮುಂತಾದ ಕಾರ್ಯಕ್ರಮಗಳು ಏರ್ಪಾಡಾಗಿವೆ. ಇವು ಬರುವ ತಿಂಗಳು —೮ ನೇ ತಾ॥ ನವರೆಗೂ ನಡೆಯುವುವು

ಸಂಗೀತ ಕಚೇರಿ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ... ನಂದಸ್ವಾಮಿಗಳ ಔಷಧಾಲಯದ ... ದಿನ ರಾತ್ರಿ ೭ ಗಂಟೆಗೆ ಸಂಗೀತ ಭೂ... ಆರ್. ಕೆ ಶ್ರೀಕಂಠನ್‌ರವರ ಗಾನ... ದ್ವಾನ್ ಬಿ ಕೆ ಮೂರ್ತಿಯವರ ಪಿ... ಮತ್ತು ವಿದ್ವಾನ್ ಕೆ ಎಸ್. ಗೋಪಾ... ಯರ ಮೃದಂಗದೊಡನೆ ನಡೆಯು...

ಶಾರದಾ ಪೂಜೆ

ಗೊಲ್ಲಗೇರಿ ಶ್ರೀ ರಾಮ ಸಹಾಯ... ಥದಲ್ಲಿ ಮೊನ್ನೆ ಸಂಜೆ ಶಾರದಾ ... ಯು ಪ್ರಚಾರ ಸಭೆಯ ಕಾರ್ಯಕರ್ತ... ವಿನಾಯಕರಾವ್ ಅವರ ಅಧ್ಯಕ್ಷತೆ... ನೆರವೇರಿತು. ಅಧ್ಯಕ್ಷರು ಭಾಷಣ ಮಾ... ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗ... ಹಂಚಿದರು

Edited, printed and p... lished by A. R Nagara... at Sadhvi Press, D.Subb... Road, Mysore.

ಪ್ರಭುದೇವಾ ಟಾಕೀಸ್
22-8-49ನೇ, ಸೋಮವಾರದಿಂದ
ಅಮೋಘವಾದ 50ನೇ ದಿನ
ಜೆಮಿನಿಯವರ ಶ್ರೇಷ್ಠ ಕಲಾಕೃತಿ
ಬಾಲನಾಗಮ್ಮ
(ತೆಲುಗು)
26-8-49ನೇ ಶುಕ್ರವಾರದಿಂದ
ಮಹಾತ್ಮ ಉದಂಗರ್
[ತಮಿಳು
ಪಾತ್ರ:—ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ ಆರ್ ರಾಮಚಂದ್ರ ಬೇಬಿ ಕಮಲ ಮುಂತಾದವರು

ರಾಜಕಮಲ್, ಮೈಸೂರು
19—8—49ರಿಂದ ಅಮೋಘ ಆರಂಭ
ದಿನವಹಿ 3 ಪ್ರದರ್ಶನಗಳು
ಭೂಮಿಕೆ:- ಕೌಸಲ್ಯ, ಸುಂದರ್ ಕುಮಾರ್ ಮತ್ತು ಶಕೀಲಾ ರವರ ನರ್ತನ
ಲಾಟರಿ
(ಹಿಂದಿ)

MORNING SHOWS From 19-8-49 for 4 d...
— CARAVAN —
With Stewart Granger, Jean Kent, Dennis Pric...

ಚಾಮುಂಡೇಶ್ವರೀ ಟಾಕೀಸ್
19—8—49ರಿಂದ ಯಶಸ್ವಿಯಾದ 3ನೇ ವಾರ
ಪ್ರತಿ ದಿನ 3 ಆಟಗಳು
— ನವಜೀವನಂ —
ನಾಗಯ್ಯ, ಕನ್ನಾಂಬ, ಎಲ್. ನಾರಾಯಣ ರಾವ್, ಟಿ ಆರ್ ರಾಮಚಂದ್ರನ್ ಪಾತ್ರವಹಿಸಿರುವ ತಮಿಳು ಚಿತ್ರ
(R. V. ಪಿಕ್ಚರ್ಸ್ ರಿಲೀಸ್

ಫೋನ್ ನಂ. 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸ್

ಸಾಧ್ವಿ

ಸಂಪುಟ ೨] ಸೋಮವಾರ ೨೩-೮-೧೯೪೮ [ಸಂಚಿಕೆ ೨೪

ಸಂಯುಕ್ತ ಪ್ರಾಂತದಲ್ಲಿ ರೈತರ ಸತ್ಯಾಗ್ರಹ

ಕ್ಷತ್ರಿಯ ಲಾಡರ ಸಂಘದ ಕಟ್ಟಡಕ್ಕೆ ಸಹಾಯ

ಮೈಸೂರು ೨೨

ಸಂಸ್ಥಾನದ ಕ್ಷತ್ರಿಯರ ಲಾಡರ ಸಂಘದ ದ್ವಿತೀಯ ವಾರ್ಷಿಕ ಸಭೆಯು ನಿನ್ನೆ ಪಾಂಡುರಂಗ ದೇವಸ್ಥಾನದಲ್ಲಿ ಶ್ರೀ ಯು. ಆರ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ಸ್ವಾಗತ ಭಾಷಣ ಮತ್ತು ವಾರ್ಷಿಕ ವರದಿಗಳಾದ ನಂತರ ಪ್ರಸಕ್ತ ಸಾಲಿಗೆ ಕಾರ್ಯ ನಿರ್ವಾಹಕ ಮಂಡಲಿಯ ಚುನಾವಣೆಯು ನಡೆಯಿತು. ಸಂಘದ ಕಟ್ಟಡದ ನಿಧಿಗಾಗಿ ಕೆಳಗೆ ಕಂಡವರು ಉದಾರವಾಗಿ ಸಹಾಯ ಮಾಡಿರುತ್ತಾರೆ –

ಶ್ರೀ ಹೆಚ್. ಕೃಷ್ಣಜಪ್ಪನವರು ೫೦೦ ರೂ; ಶ್ರೀಗಳಾದ ಬಿ. ಲಕ್ಷ್ಮಣ್ಣನವರು ಮತ್ತು ಹಂಪಾಪುರದ ಎಂ. ಬಿ. ಕನಪ್ಪನವರು ೧೦೦೦೦ ರೂ ಶ್ರೀ ಆರ್. ಹನುಮಂತಪ್ಪನವರು ೧೦೦೧ ರೂ. ಶ್ರೀಗಳಾದ ಜಿ. ಡಿ. ನಂಜಪ್ಪ, ಎಲ್. ಆರ್. ಕೃಷ್ಣಪ್ಪ, ಬಿ. ಲಕ್ಷ್ಮಯ್ಯ, ಜೆ. ಆರ್. ಗೋವಿಂದಪ್ಪ ಇವರು ೨೦೧ ರೂ ಶ್ರೀ ಬಿಳಿಕೆರೆ ನಂಜಪ್ಪ ೨೦೧ ರೂ

ಸಹಾಯಾರ್ಥ ನಾಟಕ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಶ್ರೀ ರಾಮ ಮಂದಿರದ ಕಟ್ಟಡದ ನಿಧಿಗಾಗಿ ಇದೇ ೨೫ ನೇ ತಾ॥ ಸೋಮವಾರ ರಾತ್ರಿ ೧೦ ಘಂಟೆಗೆ ಟೌನ್ ಹಾಲಿನಲ್ಲಿ ಶ್ರೀ ರಾಮ ಕೃಪಾ ಪೋಷಿತ ಮಿತ್ರ ಮಂಡಲಿಯವರು ಸಂಪೂರ್ಣ ಕೃಷ್ಣಲೀಲಾ ಎಂಬ ನಾಟಕವನ್ನು ಆಡುವರು. ಮಹಾ ಜನರು ಸಹಾಯ ನೀಡಬೇಕೆಂದು ಕೋರಲಾಗಿದೆ.

ನವಾಬರ ಅಪಪ್ರಚಾರದ ಬಗ್ಗೆ ಹೈದ್ರಾಬಾದ್ ಮುಸ್ಲಿಮರ ಪ್ರತಿಭಟನೆ

ರಜಾಕರರ ಮಾಜಿ ನಾಯಕ ಖಾಸಿಂ ರಜ್ವಿಯ ಪರವಾಗಿ ವಕಾಲತ್ತು ವಹಿಸಲು ಹೈದರಾಬಾದ್ ನಿಲಿಟರಿ ಸರ್ಕಾರದವರು ಹೊರಗಿನ ಲಾಯರುಗಳಿಗೆ ಅವಕಾಶ ಕೊಟ್ಟಿಲ್ಲವೆಂದು ವಿಶ್ವ ಸಂಸ್ಥೆಗೆ ಮಾಜಿ ವಿದೇಶಾಂಗ ಮಂತ್ರಿ ನವಾಬ್ ಮೊಯಿನ್ ನವಾಜ್ ಜಂಗ್ ಬಹದ್ದೂರ್‌ರವರು ಕೊಟ್ಟಿರುವ ದೂರನ್ನು ಪ್ರತಿಭಟಿಸಿ, ಹೈದರಾಬಾದಿನ ೪ ಜನ ಮುಸ್ಲಿಂ ನಾಯಕರು ಹೇಳಿಕೆಯನ್ನಿತ್ತಿದ್ದಾರೆ. ಇದು ಭಾರತಕ್ಕೆ ವಿರುದ್ಧವಾಗಿ ನವಾಬರು ಮತ್ತು ಪಾಕಿಸ್ತಾನಗಳು ಕೈಗೊಂಡಿರುವ ಅಪಪ್ರಚಾರವೆಂದೂ, ಖಾಸಿಂ ರಜ್ವಿಯ ಡಿಫೆನ್ಸಿಗೆ ಎಲ್ಲ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆಂದೂ ಇವರು ಹೇಳಿದ್ದಾರೆ.

ಏಷ್ಯಾ ರಾಷ್ಟ್ರಗಳ ಸಾಂಸ್ಕೃತಿಕ ಸಹಕಾರ ಸಂಸ್ಥೆ

ಏಷ್ಯಾ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಸಹಕಾರಗಳನ್ನು ನಿರ್ವಹಿಸಲು ಭಾರತದಲ್ಲಿ ಒಂದು ಸಮಿತಿಯನ್ನು ಮೊನ್ನೆ ದೆಹಲಿಯಲ್ಲಿ ನಡೆದ ಮಧ್ಯ ಪ್ರಾಚ್ಯ, ಏಷ್ಯಾ ರಾಷ್ಟ್ರಗಳ ಮತ್ತು ಭಾರತದ ವಿದ್ಯಾ ಪ್ರವೀಣರುಗಳ ಸಭೆಯಲ್ಲಿ ರಚಿಸಲಾಯಿತು. ಈ ಕಾರ್ಯವನ್ನು ಕೂಡಲೇ ಜಾರಿಗೆ ತರಲು, ಒಂದು ವಾಚನಾಲಯ ಪುಸ್ತಕ ಭಂಡಾರಗಳನ್ನು ಸ್ಥಾಪಿಸಬೇಕೆಂದೂ ನಿರ್ಧರಿಸಲಾಯಿತು

ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ್ ರೈತರುಗಳ ಸತ್ಯಾಗ್ರಹವೇ?

ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡುವ ಬಗ್ಗೆ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ್ ಸರ್ಕಾರಗಳು ಕೈಗೊಂಡಿರುವ ಅತೃಪ್ತಿಕರವಾದ ಕಾರ್ಯಕ್ರಮವನ್ನು ಪ್ರತಿಭಟಿಸಲು ಅಲ್ಲಿನ ಲಕ್ಷಾಂತರ ರೈತರು ಗ್ರಾಮಾಂತರ ಪ್ರದೇಶಗಳಿಂದ ರಾಜಧಾನಿಗೆ ಬಂದು ಇನ್ನು ೩ ತಿಂಗಳಲ್ಲಿ ಸತ್ಯಾಗ್ರಹ ಹೂಡುವರೆಂದು ಸಮಾಜವಾದಿ ಪಕ್ಷದ ನಾಯಕರಾದ ಡಾ॥ ರಾಮ ಮನೋಹರ ಲೋಹಿಯಾರವರು ತಿಳಿಸಿದ್ದಾರೆ. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡುವಾಗ ವ್ಯವಸಾಯ ಮಾಡುವವರಿಗೆ ಭೂಮಿಯು ಸಿಕ್ಕುವಂತೆ ಶಾಸನ ಮಾಡಬೇಕೆಂದು ಅವರು ಸೂಚನೆ ಇತ್ತಿದ್ದಾರೆ

ಹೆಂಡತಿಯನ್ನು ಕೊಲೆ ಮಾಡುವುದು ಪತಿಯ ಹಕ್ಕು

ಮಧ್ಯ ಏಷ್ಯಾದ ತಾರ್ಕಿಸ್ತಾನ ಗುಡ್ಡಗಾಡಿನವರಲ್ಲಿ ಪತಿಯು ಪತ್ನಿ ಮತ್ತು ಮಕ್ಕಳನ್ನು ಕೊಲ್ಲುವುದು ಅಪರಾಧವಲ್ಲವೆಂದೂ, ಅದು ಪತಿಯ ಹಕ್ಕೆಂದೂ ಹೇಳಲಾಗಿದೆ

ಹಣ್ಣಿನ ವಾಸನೆಯುಳ್ಳ ಸಿಗರೇಟು

ಹಣ್ಣಿನ ವಾಸನೆಯುಳ್ಳ ಸಿಗರೇಟುಗಳನ್ನು ತಯಾರಿಸಲು ಕೆನಡಾದಲ್ಲಿ ಸಂಶೋಧನೆ ನಡೆಯುತ್ತಿದೆಯೆಂದು ಹೇಳಲಾಗಿದೆ. ಹಣ್ಣಿನಿಂದ ತಯಾರಾದ ಕಾಗದಗಳನ್ನು ಇದಕ್ಕೆ ಉಪಯೋಗಿಸಲಾಗುವುದೆಂದು ಗೊತ್ತಾಗಿದೆ

ದರೋಡೆಕಾರನ ದಸ್ತಗಿರಿ

ಬೆಂಗಳೂರು, ವಿಶ್ವೇಶ್ವರಪುರದಲ್ಲಿ ಕಳೆದ ೧೮ ನೇ ರಾತ್ರಿ ದರೋಡೆ ನಡೆಸಿದ ಒಬ್ಬ ಮುಸ್ಲಿಂ ದರೋಡೆಕಾರರು ಶಸ್ತ್ರ ಸಜ್ಜಿತರಾಗಿ ಶ್ರೀ ರಾಜಲಕ್ಷ್ಮಮ್ಮನವರ ಮನೆಯೊಳಗೆ ಹೊಕ್ಕು ಒಳಗೆ ನುಗ್ಗಲು ಪ್ರಯತ್ನಿಸಿದರೆಂದೂ, ಕೂಡಲೆ ನೆರೆಯವರು ಅವರನ್ನು ತಡೆದು ಒಬ್ಬನನ್ನು ದಸ್ತಗಿರಿ ಮಾಡಿ, ಪೊಲೀಸರಿಗೆ ಒಪ್ಪಿಸಿದರೆಂದೂ ಅವರ ಪೈಕಿ ಒಬ್ಬನು ತಪ್ಪಿಸಿಕೊಂಡನೆಂದೂ ಪೊಲೀಸರಿಗೆ ತಿಳಿಸಲಾಗಿದೆಯೆಂದೂ ವರದಿಯಾಗಿದೆ

ವ್ಯವಸಾಯ ಪ್ರಾಯೋಗಿಕ ಕೇಂದ್ರಗಳ ಸ್ಥಾಪನೆ

ಸಚಿವ ಶ್ರೀ ಟಿ. ಮರಿಯಪ್ಪನವರ ಸೂಚನೆ

ಬೆಂಗಳೂರು ೨೨

ಸಂಸ್ಥಾನದಲ್ಲಿ ರೈತರು ಎಕರೆ ಒಂದಕ್ಕೆ ಮೂರು ಪಲ್ಲ ಭತ್ತ, ಒಂದು ಪಲ್ಲ ರಾಗಿಯನ್ನು ಹೆಚ್ಚಾಗಿ ಬೆಳೆದರೆ ಆಹಾರದ ಅಭಾವವು ಇರುವುದಿಲ್ಲ. ವ್ಯವಸಾಯವನ್ನು ಒಂದು ಕೈಗಾರಿಕೆಯಂತೆ ಭಾವಿಸಬೇಕು. ವ್ಯವಸಾಯ ನಿಪುಣರು ರೈತರು ಹೆಚ್ಚು ಬೆಳೆಯುವುದಕ್ಕೆ ನೆರವಾಗಬೇಕು ಮತ್ತು ಪ್ರಾಯೋಗಿಕ ಕಾರಂಗಳನ್ನು ಸ್ಥಾಪಿಸಿ, ರೈತರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು ಮತ್ತು ವ್ಯವಸಾಯ ಹಾದಿಯನ್ನು ಪುನರ್ವ್ಯವಸ್ಥೆಗೊಳಿಸಬೇಕು. ಉತ್ತಮ ಬೀಜಗಳನ್ನು ಸಿದ್ಧಗೊಳಿಸಲು ಸಹಾಯ ಮಾಡಬೇಕ. ರೈತರಿಗೆ ಉತ್ತಮ ಗೊಬ್ಬರ, ಬೀಜ ಮತ್ತು ಇತರ ಸಲಕರಣೆಗಳು ಸುಲಭ ದರದಲ್ಲಿ ಸಿಕ್ಕುವಂತೆ ಮಾಡಬೇಕು ಎಂದು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಕಳೆದ ಶುಕ್ರವಾರ ನಡೆದ ವ್ಯವಸಾಯ ರಾಜ್ಯ ಅಧಿಕಾರಿಗಳ ಸಭೆಯಲ್ಲಿ ತಿಳಿಸಿರುತ್ತಾರೆ.

ಮುಸ್ಲಿಂ ಲೀಗಿನ ನಿಧಿಯ ಬಗ್ಗೆ ಪ್ರಧಾನಿಯ ಮೇಲೆ ದಾವಾ

ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿದ್ದ ಜಿನ್ನಾರವರು ಸಂಘಕ್ಕಾಗಿ ಒಂದೆ ಭಾರತದಾದ್ಯಂತ ಸಂಗ್ರಹಿಸಿದ್ದ ೭೪ ಲಕ್ಷ ರೂಗಳು ಪಾಕಿಸ್ತಾನದ ಮುಸ್ಲಿಂ ಲೀಗಿಗೆ ಸಂಪೂರ್ಣವಾಗಿ ವರ್ಗಾಯಿಸಲ್ಪಡಬೇಕೆಂದು ಸಿಂಧ್ ಹೈಕೋರ್ಟಿನಲ್ಲಿ ಪಾಕಿಸ್ತಾನದ ಪ್ರಧಾನಿ ಮತ್ತು ನಾತಿಮಾ ಜಿನ್ನಾರವರುಗಳ ಮೇಲೆ ಅಲ್ಲಿನ ಮುಸ್ಲಿಂ ಲೀಗಿನ ಕಾರ್ಯದರ್ಶಿಗಳು ದಾವಾ ಹೂಡಿದ್ದಾರೆ

ಕರ್ನಾಟಕದ ನಿಯೋಗ

ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಒತ್ತಾಯಪಡಿಸಲು ಇದೇ ೨೭ ನೇ ತಾ॥ ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯ ಕಾರಿ ಮಂಡಲಿಯ ಬಳಿ ನಿಯೋಗವನ್ನು ಕಳುಹಿಸಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ

ಸಕ್ಕರೆ ಬೆಲೆ ಇಳಿಸಬೇಕು

ಸಕ್ಕರೆ ಬೆಲೆಯನ್ನು ಕಡಿಮೆ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಭಾರತ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ಸೂಚನೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ

ವರ್ತಕರು ಲಾಭದಾಸೆಯಿಂದ ಸಕ್ಕರೆ ಬೆಲೆಯನ್ನು ವಿಪರೀತವಾಗಿ ಏರಿಸಿ ಜನರಿಗೆ ತೊಂದರೆ ಕೊಡುತ್ತಿದ್ದಾರೆಂದೂ, ಅದನ್ನು ನಿಲ್ಲಿಸದೇ ಹೋದರೆ ವರ್ತಕರುಗಳಿಗೆ ಸಕ್ಕರೆ ಮಾರಾಟದ ರಹದಾರಿಯನ್ನು ತಪ್ಪಿಸಿ, ಸಹಕಾರ ಸಂಘಗಳ ಮೂಲಕ ಅದನ್ನು ಮಾರುವ ವ್ಯವಸ್ಥೆಯನ್ನು ಮಾಡಲು ಮೈಸೂರು ಸರ್ಕಾರದವರು ಯೋಚಿಸುತ್ತಿದ್ದಾರೆಂದೂ ತಿಳಿದುಬಂದಿದೆ

ಚರಖಾ ಜಯಂತಿ

ಮುಂದಿನ ತಿಂಗಳು ೧೦ರಿಂದ ಅಕ್ಟೋಬರ್ ೨ನೇ ತಾ॥ವರೆವಿಗೆ ಚರಖಾ ಜಯಂತಿಯನ್ನು ಆಚರಿಸಬೇಕೆಂದು ಅಖಿಲ ಭಾರತ ಚರಖಾ ಸಂಘದವರು ಮನವಿ ಮಾಡಿದ್ದಾರೆ

ಈಗಿನ ಬಟ್ಟೆಯ ಅಭಾವವನ್ನು ನೀಗಿಸಲು ಎಲ್ಲರೂ ತಮ್ಮ ಕೈಲಾದಷ್ಟು ಬಟ್ಟೆಯನ್ನು ತಯಾರಿಸಬೇಕೆಂದೂ, ಇದು ಚರಖಾವೊಂದರಿಂದಲೇ ಮಾತ್ರ ಸಾಧ್ಯವೆಂದೂ, ಭಾರತೀಯರೆಲ್ಲರೂ ಚರಖಾ ಸಂಘದ ಕಾರ್ಯ ಕಲಾಪಗಳಲ್ಲಿ ಸಹಕಾರಿಯಾಗುವುದರಿಂದ ಭಾರತದ ಒಂದು ಮುಖ್ಯ ಸಮಸ್ಯೆಯನ್ನು ಬಗೆಹರಿಸಿದಂತಾಗುವುದೆಂದೂ ಸರ್ದಾರ್ ಪಟೇಲರು ಒಂದು ಸಂದೇಶವನ್ನು ಡೇಲ್ಹಾಂಡ ಸಂಘಕ್ಕೆ ಕೊಟ್ಟಿರುತ್ತಾರೆ

ಗಂಗಾ ಪ್ರವಾಹದಿಂದ ೧೯ ಹಳ್ಳಿಗಳಿಗೆ ಅಪಾಯ

ಕಾನಪುರದಲ್ಲಿ ಗಂಗಾ ನದಿಯ ನೀರು ೩೬೩-೬ ಅಡಿಗೆ ಏರಿ ವಿಪರೀತ ಪ್ರವಾಹ ಬಂದಿದೆಯೆಂದೂ, ಇದರಿಂದ ಅಲ್ಲಿನ ೧೯ ಹಳ್ಳಿಗಳು ನೀರುಪಾಲಾಗಿವೆಯೆಂದೂ ಹೇಳಲಾಗಿದೆ

ಗೋಲ್ವಾಲ್ಕರರಿಗೆ ಅದ್ಭುತ ಸ್ವಾಗತ

ಆರ್. ಎಸ್. ಎಸ್ ಸಂಸ್ಥೆಯ ನಾಯಕರಾದ ಶ್ರೀ ಎಂ. ಎಸ್. ಗೋಲ್ವಾಲ್ಕರರಿಗೆ ದೆಹಲಿಯಲ್ಲಿ ನಿನ್ನೆ ದಿನ ೧ ಲಕ್ಷ ಜನರು ರೈಲ್ವೆ ನಿಲ್ದಾಣದಲ್ಲಿ ಅಭೂತಪೂರ್ವ ಸ್ವಾಗತವನ್ನು ಇತ್ತರು. ಒಟ್ಟು ೫೭ ಸಂಸ್ಥೆಗಳು ಅವರಿಗೆ ಸ್ವಾಗತವನ್ನು ನೀಡಿದವು. ಅನಂತರ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು

ಅಂತರ ರಾಷ್ಟ್ರೀಯ ಬ್ಯಾಂಕಿನ ಗೌರ್ನರರು

ಭಾರತದ ರಿಜರ್ವ್ ಬ್ಯಾಂಕಿನ ಗವರ್ನರರಾದ ಶ್ರೀ ಬಿ. ರಾಮರಾಯರನ್ನು ಅಂತರ ರಾಷ್ಟ್ರೀಯ ಬ್ಯಾಂಕಿನ ಭಾರತೀಯ ಗೌರ್ನರ್‌ರಾಗಿ ನೇಮಿಸಲಾಗಿದೆ

ಸರ್ಕಾರೀ ಜವಾನರು ಮನೆ ಕೆಲಸಕ್ಕಲ್ಲ

ಸರ್ಕಾರೀ ಜವಾನರುಗಳನ್ನು ಮನೆ ಕೆಲಸಕ್ಕಾಗಿ ಅಧಿಕಾರಿಗಳು ಉಪಯೋಗಿಸ ಕೂಡದೆಂದ ತಿರುವಾಂಕೂರ್ ಮತ್ತು ಕೊಚ್ಚಿ ಸಂಸ್ಥಾನ ಸರ್ಕಾರದ ಪ್ರಿನ್ಸ್ ಕಾರ್ಯದರ್ಶಿಗಳು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಆದನ್ನು ಉಲ್ಲಂಘಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಕೆ ಕೊಟ್ಟಿರುತ್ತಾರೆ

ಮಹಿಳಾ ವಿದ್ಯಾಭ್ಯಾಸದ ಆದರ್ಶ

ಪ್ರೊ|| ವಾರ್ತೆಯವರ ಭಾಷಣ

ಮೈಸೂರು ೨೨

ಮಹಾರಾಣಿ ಕಾಲೇಜ್ ಸಂಘದ ಪ್ರಾರಂಭ ಭಾಷಣವನ್ನು ಸೇಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ ಜೆ ವಾರ್ತೆಯವರು ನಿನ್ನೆ ಸಂಜೆ ನೆರವೇರಿಸಿದರು. ಸಮಾರಂಭವು ವಸ್ತು ಪ್ರದರ್ಶನಾಲಯದಲ್ಲಿ ನಡೆಯಿತು. ಪ್ರಾರ್ಥನೆ ಸಂಗೀತಗಳಾದನಂತರ, ಸಂಘದ ಉಪಾಧ್ಯಕ್ಷೆ ಶ್ರೀಮತಿ ಪಿ. ಆರ್. ಶಾಂತಾರವರು ಸ್ವಾಗತ ಭಾಷಣವನ್ನಾಡಿದರು.

ಶ್ರೀ ವಾರ್ತೆಯವರು ಭಾಷಣ ಮಾಡಿ, ಮಹಿಳೆಯರಿಗೆ ವಿದ್ಯಾಭ್ಯಾಸದ ಆವಶ್ಯಕತೆಯನ್ನು ತಿಳಿಸಿದರು. ಭಾರತದ ಮಹಿಳೆಯರು ಪರಪುರುಷರ ಪದ್ಧತಿಯನ್ನು ಅನುಸರಿಸುವುದು ಸರಿಯಲ್ಲವೆಂದೂ, ಅವರುಗಳು ವಿದ್ಯಾವತಿಯರಾಗಿ ಗಂಡಂದಿರೊಡನೆ ಸಹಕಾರಿಗಳಾಗಿ, ಸ್ವತಂತ್ರ ಭಾರತದಲ್ಲಿ ಆದರ್ಶ ಮಹಿಳೆಯರಾಗಬೇಕೆಂದೂ, ಭಾರತದ ಸಂಸ್ಕೃತಿ ಸತ್ವ ಕಲೆಯು ಬೆಳವಣಿಗೆ ಮಾಡಬೇಕೆಂದೂ ಹೇಳಿದರು.

ನೃತ್ಯ, ವಸ್ತು ಇಂಗ್ಲೀಷ್, ಕನ್ನಡ ನಾಟಕಗಳ ಪ್ರದರ್ಶನದ ನಂತರ, ಸಮಾರಂಭವು ಮುಕ್ತಾಯವಾಯಿತು.

ಮಂಕು ಬೂದಿ ಹಾಕಿ ಒಡವೆಯ ಅಪಹರಣ

ಬೊಂಬಾಯಿನ ೪೭ ವರ್ಷದ ದೆಂಬಿಬಾಯಿಪ್ರಿ ಎಂಬಾಕೆಯಲ್ಲಿದ್ದ ೭ ತೊಲದ ಚಿನ್ನದ ಹಾರ ಮತ್ತು ೪೦ ರೂ. ಗಳನ್ನು ಒಬ್ಬ ವ್ಯಕ್ತಿಯು ಮೋಸದಿಂದ ಅಪಹರಿಸಿಕೊಂಡು ಹೋದ ಪ್ರಸಂಗವು ವರದಿಯಾಗಿದೆ ಆಕೆಯು ಮಾರ್ಕೆಟ್ಟಿಗೆ ಸಾಮಾನುಗಳನ್ನು ಕೊಳ್ಳಲು ಹೋಗುತ್ತಿದ್ದಾಗ ಆತನು ಆಕೆಗೆ ಒಂದು ಚೀಟಿಯನ್ನು ಕೊಟ್ಟು ಮಂಕು ಬೂದಿ ಎರಚಿ, ಒಡವೆ ಮತ್ತು ಹಣವನ್ನು ಇಸಿದುಕೊಂಡು, ಆಕೆಗೆ ಕಲ್ಲಿಟ್ಟಿದ್ದ ಪೊಟ್ಟಣವನ್ನು ಕೊಟ್ಟು ಪರಾರಿಯಾದನೆಂದು ಹೇಳಲಾಗಿದೆ

ಒಂದು ಲೋಟಾ ಕಾಫಿಗೆ ೨|| ಆಣೆ

ಮದರಾಸಿನಲ್ಲಿ ಕಾಫಿ, ಸಕ್ಕರೆ ಮತ್ತು ಇತರ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರಿರುವುದರಿಂದಲೂ ಮತ್ತು ಹೋಟೆಲುಗಳ ಮೇಲೆ ಹೆಚ್ಚು ವ್ಯಾಪಾರ ತೆರಿಗೆಯನ್ನು ಸರ್ಕಾರದವರು ವಿಧಿಸಿರುವುದರಿಂದಲೂ, ಒಂದು ಲೋಟಾ ಕಾಫಿಯ ಬೆಲೆಯನ್ನು ೨|| ಆಣೆಗೆ ಮದರಾಸು ಹೋಟೆಲಿನವರು ಹೆಚ್ಚಿಸಲು ನಿರ್ಧರಿಸಿದ್ದಾರೆ ಸ್ಪೆಷಲ್ ಕಾಫಿಗೆ ೩ ಆಣೆ ಬೆಲೆ ಮಾಡಲಾಗಿದೆ

Edited, printed and published by A R Nagarajan, at Sadhvi Press, D Subbiah Road, Mysore

ಸಕ್ಕರೆ ಬೆಲೆಯನ್ನು ಏರಿಸಿಲ್ಲ

ಬೆಂಗಳೂರು ಮತ್ತು ಇತರ ಪ್ರದೇಶಗಳಲ್ಲಿ ಇತ್ತೀಚಿಗೆ ಸಕ್ಕರೆಯ ಬೆಲೆಯನ್ನು ವಿಪರೀತವಾಗಿ ಏರಿಸಿದ್ದಾರೆ ಚೀಲಕ್ಕೆ ೧೧೬ ರೂ ಮತ್ತು ಪಂಚೇರಿಗೆ ೧-೧೨-೦ ನಂತೆ ಮಾರಲಾಗುತ್ತಿದೆ. ಕಳೆದ ತಿಂಗಳಿನಿಂದ ಭಾರತದಾದ್ಯಂತ ಸಕ್ಕರೆ ಬೆಲೆಯು ಏರುತ್ತಿದ್ದರೂ, ಮೈಸೂರು ಸಕ್ಕರೆ ಕಂಪೆನಿಯವರು ಬೆಲೆಯನ್ನು ಏರಿಸಿಲ್ಲ ಅದನ್ನು ಈಗ ಪಂಚೇರಿಗೆ ೧-೭-೬ ರೂ ಮತ್ತು ಚೀಲಕ್ಕೆ ೧೦೬-೧೨-೦ ರೂ. ನಂತೆ ಕಂಪೆನಿಯವರಿಂದ ಮಾರಲಾಗುತ್ತಿದೆ. ಆದುದರಿಂದ ಮೈಸೂರಿನ ವರ್ತಕರುಗಳು ಅದರ ಬೆಲೆಯನ್ನು ಏರಿಸಿರುವುದು ಸರಿಯಾದುದಲ್ಲ ಆ ರೀತಿ ಮಾಡುವವರಿಗೆ ಸಕ್ಕರೆಯನ್ನು ಸರಬರಾಜು ಮಾಡುವುದಿಲ್ಲ ಮತ್ತು ಸಂಸ್ಥಾನದಲ್ಲಿ ಸಕ್ಕರೆ ಅಭಾವವೂ ಇಲ್ಲ- ಎಂದು ಕಂಪೆನಿಯವರು ಒಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ

ಪೂನಾದಲ್ಲಿ ಡಕಾಯಿತರ ಅವಾಂತರ

ಪೂಣೆಯ ದಂಡಿನ ಪ್ರದೇಶದಲ್ಲಿ ಕಳೆದ ಒಂದು ತಿಂಗಳಿನಿಂದಲೂ ಹಾವಳಿ ನಡೆಸುತ್ತಿದ್ದ ೯ ಜನ ಡಕಾಯಿತರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಇವರುಗಳನ್ನು ಹಿಡಿಯಲು ಹೋದಾಗ, ಅವರು ಮನೆಗಳ ಮೇಲೆ ಛಾವಣಿಗೆ ಓಡಿಹೋಗಿ, ಕೋತಿಗಳಂತೆ ಒಂದು ಮನೆಯಿಂದ ಮತ್ತೊಂದಕ್ಕೆ ಹಾರಿ, ಪೋಲೀಸರ ಮೇಲೆ ಹೆಂಚನ್ನು ಎಸೆದರೆಂದೂ ವರದಿಯಾಗಿದೆ.

ಸಮಗ್ರ ಸಹಕಾರ ಸಂಘ

ಹಿರೀಸಾವೆ ೧೮

ಹಾಸನ ಜಿಲ್ಲಾ ಹಿರೀಸಾವೆಯಲ್ಲಿ ಕಳೆದ ೧೪ ನೇ ತಾ|| ಸಮಗ್ರ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಅಮಲ್ದಾರರು ನೆರವೇರಿಸಿದರು. ೧೫ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ನಡೆಯಿತು

— ಲಕ್ಷ್ಮಿ —

ತಾ|| 24-8-49 ರಿಂದ

ಅನೋನ್ಸ್ ಆರಂಭ ದಿನವೂ 3 ಆಟಗಳು

ಮಯೂರಿ ಪಿಕ್ಚರ್ಸ್ ರವರ ಹಿಂದಿ ಐತಿಹಾಸಿಕ ಚಿತ್ರ

✻ 1857 ✻

1857ರಲ್ಲಿ ನಡೆದ ಯುದ್ಧವನ್ನು ಪ್ರತಿಬಿಂಬಿಸುವ ನೋಡಲೇಬೇಕಾದ ಚಿತ್ರ

—:ಭೂಮಿಕೆ:—

ಸಂಗೀತ ಸೊಬಗಿನ ಸೊಗಸಿನ ರಾಣಿ

ಸುರಯ್ಯ ಮತ್ತು ಸುರೇಂದ್ರ

—:ನಿರೀಕ್ಷಿಸಿ:—

ಬಾಗ್ದಾದ್-ಕಾ-ಚೋರ್

ಪಾತ್ರ:-ಮೈಸೂರ್ ಸಟು.

ನಾಗ ಕನ್ನಿಕಾ

(ಕನ್ನಡ)

ಸಂಚರಿಸುವ ಮ್ಯಾಜಿಸ್ಟ್ರೇಟ್ ಕೋರ್ಟುಗಳು

ಮೈಸೂರು ೨೨

ಮೈಸೂರು ತಾ| ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ನಿನ್ನೆ ಶ್ರೀ ಹೆಚ್. ಕೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಪಶು ವೈದ್ಯ ಶಾಲೆಗಳನ್ನು ಸ್ಥಾಪಿಸಬೇಕು; ವಾರಕ್ಕೆ ಅಥವ ಪಕ್ಷಕ್ಕೆ ಒಂದಾವರ್ತಿಯಾದರೂ ಗ್ರಾಮಗಳಿಗೆ ವೈದ್ಯರು ಭೇಟಿ ಕೊಟ್ಟು, ಗರ್ಭಿಣಿಯರ ಮತ್ತು ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳಲು ವ್ಯವಸ್ಥೆ ಮಾಡುವುದು; ಅಮಲ್ದಾರ್-ಮ್ಯಾಜಿಸ್ಟ್ರೇಟರ ಕೋರ್ಟನ್ನು ಗ್ರಾಮಾಂತರಗಳಲ್ಲಿ ಚಲಿಸುವ ಕೋರ್ಟುಗಳಾಗಿ ಪರಿವರ್ತಿಸಿ, ಗ್ರಾಮಗಳಲ್ಲೇ ಮೊಕದ್ದಮೆಗಳನ್ನು ಇತ್ಯರ್ಥಪಡಿಸಬೇಕು- ಇವೇ ಮುಂತಾದ ನಿರ್ಣಯಗಳು ಅಂಗೀಕೃತವಾದುವು.

ಸಮಾರಂಭಕ್ಕೆ ಸಚಿವರು ಬಾರದಿದ್ದುದರಿಂದ ರಾಜೀನಾಮೆ

ಜಬ್ಬಲ್ಪುರದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಂದು ಅಲ್ಲಿನ ಗೃಹ ಸಚಿವರು ಸಮಾರಂಭಕ್ಕೆ ಬಾರದಿದ್ದುದನ್ನು ಪ್ರತಿಭಟಿಸಿ, ಅಲ್ಲಿನ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ರತನ್ ಚಂದ್‌ರವರು ರಾಜೀನಾಮೆ ಸಲ್ಲಿಸಿದ್ದಾರೆ. ಸಚಿವರ ಭಾಷಣವನ್ನು ಕೇಳಲು ಸಾವಿರಾರು ಶಾಲಾ ಮಕ್ಕಳು ಮಳೆಯಲ್ಲಿ ನಿಂತಿದ್ದರೆಂದೂ, ಆದರೆ ಅವರಿಗೆ ಈ ಸಮಾರಂಭವು ಗೊತ್ತಿಲ್ಲದೆ, ಬೇರೆ ಕಡೆಯಲ್ಲಿ ಭಾಷಣ ಮಾಡುತ್ತಿದ್ದರೆಂದೂ ಹೇಳಲಾಗಿದೆ.

UNIVERSITY OF MYSORE

Office of the University of Mysore
Mysore Dated 13th August 1949

No. Ex2/ 49-50.

NOTIFICATION

—:o:—

Issue of Hall-Tickets for September 1949 Examinations

It is hereby notified that candidates for the above examinations may obtain Hall-tickets on or after the 25th August 1949 from the Heads of Colleges through which they have sent the applications.

Candidates who have been permitted change of centres should also obtain their Hall-tickets from the Heads of colleges through which applications were sent.

C. Rengachar,
Ag. Registrar.

ಫೀಜು ಕೊಡಲು ಆಗದ ವಿದ್ಯಾರ್ಥಿಯ ಆತ್ಮಹತ್ಯೆ

ಶಾಲಾ ಫೀಜನ್ನು ಕೊಡಲು ಆಗದ ಜಾನ್ಸಿಯ ಇಂಟರ್ ಕಾಲೇಜಿನ ವಿದ್ಯಾರ್ಥಿಯೊಬ್ಬನು ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ.

ಯೂನಾನ್ ಪ್ರಾಂತ್ಯ ಚೀನಾ ಕಮ್ಯೂನಿಸ್ಟರ ವಶ

ಬರ್ಮಾ ಗಡಿಯಲ್ಲಿರುವ ಯೂನಾನ್ ಪ್ರದೇಶವನ್ನು ಚೀನಾ ಕಮ್ಯೂನಿಸ್ಟರು ಆಕ್ರಮಿಸಿದ್ದಾರೆಂದು ಹೇಳಲಾಗಿದೆ

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಕೊಳ್ಳೇಗಾಲದ ಶ್ರೀ ನಾಗಾಚಾರ್ಯರಿಂದ ಶ್ರೀನಿವಾಸ ಕಲ್ಯಾಣ, ಹರಿಕಥೆಯು ನಡೆಯುವುದು.

FOR SALE

One Bale of

NEWS PRINT

Double Crown Size
Weight 18 lbs per Ream
Price Rs Eight per Ream
OR
Nearest Offer
ENQUIRE AT:-
SADHVI OFFICE,
MYSORE

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೈರ್ಸ್ ಬಾಮ
ನೋವು, ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮ ಬಾಣ
ಬೆಲೆ ೦-೧೨

ಮಹಾ ಸುಗಂಧ ರಾಜ ತೈಲ:-]
,, ಚಂದನಾದಿ ತೈಲ:-]
,, ಭೃಂಗಾಮಲಕ ತೈಲ:-]
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು.

ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸ ಬಹುದಾದ ಉತ್ತಮವಾದ
ಬ್ರೇನ್ ಟಾನಿಕ್ ಬೆಲೆ ೨-೦

ಪಂಚಾಮೃತ—ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಗಾಂಧಿ ಪತ್ರಿಕೆ

ಹೊಸ ಹೊಸ ನಮೂನೆಯಲ್ಲಿ, ಹೊಸಾ ಹೊಸ ಸೀರೆಗಳು, ಖಣಗಳು

ನ್ಯಾಯವಾದ ಬೆಲೆ ಶ್ರೇಷ್ಠವಾದ ಮಾಲು. ಬನ್ನಿ, ನೋಡಿ, ಆರಿಸಿ. ಬಾಬುಸಾಹ್ ಕಂಪೆನಿ, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೨] ಬುಧವಾರ ೨೪-೮-೧೯೪೯ [ಸಂಚಿಕೆ ೨೬

ಟಿಬೆಟ್ಟಿನ ಗಡಿಯಲ್ಲಿ ಚೀಣಾ ಕಮ್ಯೂನಿಸ್ಟರು

ಬೊಂಬಾಯಿ ಸರ್ಕಾರವು ಕರ್ನಾಟಕಕ್ಕೆ ಅನ್ಯಾಯ ಮಾಡಿದೆ

ಕೆ. ಪಿ. ಸಿ. ಸಿ. ಯಲ್ಲಿ ನಿರ್ಣಯ

ಬಿಜಾಪುರದಲ್ಲಿ ಕಳೆದ ಶನಿವಾರ ನಡೆದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ, ಬೊಂಬಾಯಿ ಸರ್ಕಾರದವರು ಕರ್ನಾಟಕದ ಮುಖ್ಯ ಸಮಸ್ಯೆಗಳನ್ನು ಬಗೆಹರಿಸದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮಾಡಲಾಯಿತು ಹೊಸದಾಗಿ ನೇಮಕರಾಗಿರುವ ಮಂತ್ರಿಗಳಲ್ಲಿ ಕರ್ನಾಟಕದವರಿಗೆ ಸ್ಥಾನ ಕೊಡದಿರುವುದು, ನೂತನವಾಗಿ ರಚಿತವಾಗಿರುವ ದಕ್ಷಿಣ ಸತಾರ ಜಿಲ್ಲೆಗೆ ಕನ್ನಡ ಭಾಗವನ್ನು ಸೇರಿಸಿರುವುದು ಮತ್ತು ಜತ್ತ ಪ್ರದೇಶವನ್ನು ಸಾಂಗ್ಲಿ ಜಿಲ್ಲೆಗೆ ಸೇರಿಸಿರುವುದು ಕನ್ನಡಿಗರಿಗೆ ಅನ್ಯಾಯ ಮಾಡಿದಂತಾಗಿದೆಯೆಂದು ಸೂಚಿಸುವ ನಿರ್ಣಯ ಅಂಗೀಕೃತವಾಯಿತು.

ಕರ್ನಾಟಕ ಪ್ರಾಂತ ರಚನೆಯನ್ನು ಸಾವಕಾಶ ಮಾಡಿದರೆ ಕಾಂಗ್ರೆಸ್ಸಿನ ಒಳಗೆ ಕರ್ನಾಟಕದಲ್ಲಿ ಕುಗ್ಗಿ ವಿರೋಧಿಗಳು ಪ್ರಬಲಗೊಳ್ಳುವರೆಂದೂ ಅಭಿಪ್ರಾಯ ಸೂಚಿಸಲಾಯಿತು

ಪ್ರತಿ ಎರಡು ಸೆಕೆಂಡಿಗೂ ಸೀನುವ ಹುಡುಗ

ಲಂಡನ್ನಿನ ೧೫ ವರ್ಷದ ಮೈಕೆಲ್ ಹಿಪ್ಸ್ಲಿ ಎಂಬ ಹುಡುಗನು ಕಳೆದ ಎರಡು ವಾರದಿಂದಲೂ ಪ್ರತಿ ಎರಡು ಸೆಕೆಂಡುಗಳಿಗೆ ಒಂದಾವರ್ತಿ ಸೀನುತ್ತಿದ್ದಾನೆಂದೂ, ನಿದ್ರೆ ಗುಳಿಗೆಗಳನ್ನು ಕೊಟ್ಟರೆ ಮಾತ್ರ ಆತನು ನಿದ್ದೆ ಮಾಡಬಲ್ಲನೆಂದೂ ವರದಿಯಾಗಿದೆ

ಹಾವುಗಳನ್ನು ಧರಿಸಿದ್ದ ವಧೂವರರು

ಆಮಸ್ಟರ್‌ಡಾಮ್ ಸರ್ಕಸ್ಸಿನ ಹಾವುಗಳ ಆಟಗಾರನಾದ ಜಾನಿ ವೆಸ್ಟರ್‌ಬರ್ಗ್ ಎಂಬುವನ ವಿವಾಹವು ಅಲ್ಲಿನ ಟೌನ್‌ಹಾಲಿನಲ್ಲಿ ನಡೆದಾಗ ಆತನು ಸಾಕಿದ್ದ ಹಾವುಗಳು ಭಾಗವಹಿಸಿದ್ದುವೆಂದೂ, ಗಂಡ ಹೆಂಡತಿಯರಿಬ್ಬರೂ ಹಾವುಗಳನ್ನು ತಮ್ಮ ಕತ್ತಿಗೆಗೆ ಸುತ್ತಿಕೊಂಡಿದ್ದರೆಂದೂ ಹೇಳಲಾಗಿದೆ.

ಮಹಿಳೆಗೆ ತನ್ನನ್ನು ಮಾರಿಕೊಳ್ಳುವ ಮನುಷ್ಯ

೩೬ ವರ್ಷದ ಅವಿವಾಹಿತ ಮಾಜಿ ಸೈನಿಕನೊಬ್ಬನು ಹೆಚ್ಚು ಹಣ ಕೊಡುವ ಯಾವ ಮಹಿಳೆಯಾದರೂ ತನ್ನನ್ನು ಕೊಳ್ಳಬಹುದೆಂದು ಲಂಡನ್ನಿನ ಪತ್ರಿಕೆಯೊಂದರಲ್ಲಿ ಜಾಹಿರಾತನ್ನು ಪ್ರಕಟಿಸಿದ್ದಾನೆ ತನಗೆ ಬುದ್ಧಿವಂತಳಾದ ಹೆಂಡತಿಯು ಬೇಕೆಂದೂ, ತನ್ನಲ್ಲಿದ್ದ ಹಣವೆಲ್ಲಾ ವೆಚ್ಚವಾಗಿರುವುದರಿಂದ ಹಣ ಗಳಿಸಲು ಈ ರೀತಿ ಮಾಡಿರುವುದಾಗಿಯೂ ಆತನು ತಿಳಿಸಿರುತ್ತಾನೆ

ಹಸುವಿನ ಹಾಲನ್ನು ಹೆಚ್ಚಿಸಲು ನೂತನ ಮೂಲಿಕೆ

ಒಂದು ಮೂಲಿಕೆಯನ್ನು ಉಪಯೋಗಿಸುವುದರಿಂದ ಹಸುವಿನ ಹಾಲನ್ನು ಹೆಚ್ಚಿಸಬಹುದೆಂದು ಲಂಡನ್ನಿನಲ್ಲಿ ನಡೆದ ಸಂಶೋಧನೆಯಿಂದ ಕಂಡು ಹಿಡಿಯಲಾಗಿದೆ. ಇದರಿಂದ ದಿನಕ್ಕೆ ೫ ಸೇರು ಹಾಲು ಹೆಚ್ಚಾಗಿ ಉತ್ಪತ್ತಿಯಾಗುವುದೆಂದು ಹೇಳಲಾಗಿದೆ

ವ್ಯವಸಾಯ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ

ವಿದ್ಯಾಪೀಠದಲ್ಲಿ ಕುಮಾರಪ್ಪನವರ ಭಾಷಣ

ಮೈಸೂರು ೨೩

ನಂಜನಗೂಡಿನ ಬಳಿ ಮಹಿಳಾ ಶಿಕ್ಷಣ ಸಮಿತಿಯವರಿಂದ ನಡೆಸಲ್ಪಡುತ್ತಿರುವ ವಿದ್ಯಾಪೀಠದ ಛಾತ್ರ ಮತ್ತು ಪ್ರಶಸ್ತಿ ಪತ್ರವಿನಿಯೋಗ ಸಮಾರಂಭವು ನಿನ್ನೆ ನಡೆಯಿತು ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘದ ಅಧ್ಯಕ್ಷರಾದ ಶ್ರೀ ಜೆ ಸಿ ಕುಮಾರಪ್ಪನವರು ಅಗ್ರಾಸನವನ್ನು ವಹಿಸಿದ್ದರು

ಬೆಳಗ್ಗೆ ಪ್ರಭಾತ ಭೇರಿ ಮತ್ತು ಧ್ವಜಾರೋಹಣವಾದನಂತರ, ಶ್ರೀ ಕುಮಾರಪ್ಪನವರು ವಿದ್ಯಾಪೀಠದ ಕೆಲಸ ಕಾರ್ಯಗಳನ್ನು ಪರಿಶೀಲಿಸಿ ಅಲ್ಲಿನ ವಿದ್ಯಾರ್ಥಿಗಳೊಂದನೆ ಮಾತುಕತೆ ನಡೆಸಿದರು

ಮಧ್ಯಾಹ್ನ ಸೂತ್ರ ಯಜ್ಞ, ಗಾರಡಿ ಗೊಂಬೆ ವೀರ ಮತ್ತು ನಂದಿ ಕಂಬದ ಕುಣಿತಗಳು, ಕೋಲಾಟ, ಕಡ್ಡಿ ವರಸೆ, ಕುಸ್ತಿ, ಲಾವಣಿಗಳು ಜರುಗಿದುವು

ಅನಂತರ ಪ್ರಶಸ್ತಿ ಪತ್ರವಿನಿಯೋಗ ಸಮಾರಂಭವು ನಡೆಯಿತು ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ಮಾದೇಗೌಡರು ಸ್ವಾಗತ ಭಾಷಣ ಮಾಡಿ, ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿ, ಸಚಿವ ಶ್ರೀ ಗಂಗಾಧರ ದಾಸಪ್ಪ ಮತ್ತು ಚನ್ನಿಗರಾಮಯ್ಯ ಮತ್ತು ವಿಶ್ವನಾಥ ವರವರುಗಳಿಂದ ಬಂದಿದ್ದ ಸಂದೇಶಗಳನ್ನು ಓದಿದರು

ಪಾಠಶಾಲಾ ಆಚಾರ್ಯರಾದ ಶ್ರೀ ಜಿ ವೀರಭದ್ರಾಚಾರ್ಯರು ವರದಿಯನ್ನು ಒಪ್ಪಿಸಿದರು ೨೧ ಜನ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಪ್ರಶಸ್ತಿ ಪತ್ರಗಳನ್ನು ವಿನಿಯೋಗಿಸಿದರು ವಿದ್ಯಾರ್ಥಿಗಳ ಪರವಾಗಿ ಶ್ರೀ ಕೆಂಚೇಗೌಡರು ಉತ್ತರವಿತ್ತು ಶಾಲೆಯಿಂದ ತಮಗೆ ಆಗಿರುವ ಅನುಕೂಲಗಳನ್ನು ವಿವರಿಸಿದರು.

ಶ್ರೀ ಕುಮಾರಪ್ಪನವರ ಭಾಷಣ ಮಾಡಿ, ವಿದ್ಯಾಪೀಠದ ಶಾಸ್ತ್ರೀಯ ಬೆಳವಣಿಗೆಯನ್ನು ಪ್ರಶಂಸಿಸಿ, ಇಂತಹ ಸಂಸ್ಥೆಗಳು ಸಂಸ್ಥಾನದಲ್ಲಿ ಹೆಚ್ಚಬೇಕೆಂದು ತಿಳಿಸಿದರು ವ್ಯವಸಾಯ ಶಿಕ್ಷಣವನ್ನು ಇಲ್ಲಿ ಒಂದು ಭಾಗವನ್ನಾಗಿ ಮಾತ್ರ ಇಟ್ಟುಕೊಂಡಿರುವುದು ಸರಿಯಲ್ಲವೆಂದೂ, ಅದನ್ನೇ ಮೂಲವಾಗಿಟ್ಟುಕೊಂಡು, ಅದರ ಮೂಲಕ ಇತರ ಶಿಕ್ಷಣಗಳನ್ನು ಕೊಡಬೇಕೆಂದೂ ತಿಳಿಸಿದರು

ಈಗಿನ ವಿದ್ಯಾಭ್ಯಾಸ ಕ್ರಮವನ್ನು ಅವರು ತೀವ್ರವಾಗಿ ಟೀಕಿಸಿ, ನಮ್ಮ ಕಾಲೇಜುಗಳಿಗೂ ವಿಶ್ವವಿದ್ಯಾನಿಲಯಗಳಿಗೂ ಬಾಂಬು ಬಿದ್ದು ನಾಶವಾದರೂ ಆಗುವ ನಷ್ಟವೇನೂ ಇರುವುದಿಲ್ಲವೆಂದೂ, ನಿಜವಾದ ವಿದ್ಯೆಯು ಗ್ರಾಮಾಂತರಗಳಲ್ಲಿ ಪ್ರಸಾರವಾಗಬೇಕೆಂದೂ ಅವರು ಹೇಳಿದರು

ಶ್ರೀ ಕುಮಾರಪ್ಪನವರು ನಂಜನಗೂಡು ಹೈಸ್ಕೂಲಿಗೆ ಭೇಟಿ ಇತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು

ಸುಭಾಷರು ಬದುಕಿದ್ದಾರಂತೆ

ಸುಭಾಷ್ ಚಂದ್ರಬೋಸರು ಬದುಕಿದ್ದಾರೆಂದೂ, ಅವರು ಜಪಾನು, ಚೀಣಾ ಅಥವ ರಷ್ಯಾಗಳಲ್ಲಿ ಇರಬಹುದೆಂದೂ ಜರ್ಮನಿಯಲ್ಲಿ ಐ ಎನ್ ಎ ಸ್ಥಾಪಕರಾಗಿದ್ದ ಜನರಲ್ ಮೋಹನಸಿಂಗರವರು ತಿಳಿಸಿರುತ್ತಾರೆ

ಜಪಾನರು ಶರಣಾಗತರಾದ ಬಳಿಕ, ಸಿಂಗಪುರದಿಂದ ಸುರಕ್ಷಿತ ಪ್ರದೇಶಕ್ಕೆ ಹೋಗಲು ಮತ್ತು ವಶ್ಯಗಿರಿಯಾಗದೆ ತಪ್ಪಿಸಿಕೊಳ್ಳಲು ಪೂರ್ವ ಭಾವಿಯಾಗಿ ಸುಭಾಷರು ಒಂದು ಯೋಜನೆಯನ್ನು ತಯಾರಿಸಿದ್ದರು ಅವರು ಹೊರಟ ವಿಮಾನವು ಅಪಘಾತಕ್ಕೆ ಒಳಗಾಗಿದ್ದ ಪಕ್ಷದಲ್ಲಿ ತ್ವವರ ಸಂಗಡವಿದ್ದ ಕ|| ಹಬೀಬ್ ರಹಮಾನರು ಕೊಟ್ಟಿರುವ ಕಾರಣಗಳು ಅನುಮಾನ ಹುಟ್ಟಿಸುತ್ತವೆ ರಹಮಾನರು ನೇತಾಜಿಯವರ ಶವವನ್ನು ಖುದ್ದಾಗಿ ನೋಡಲಿಲ್ಲ ಸುಭಾಷರು ಮೃತರಾದರೆಂದು ವೈದ್ಯರು ರಹಮಾನರಿಗೆ ತಿಳಿಸಿದಾಗ, ಅವರನ್ನು ಆಸ್ಪತ್ರೆಯಲ್ಲಿ ನೋಡಲು ಹೋದಾಗ, ಗುರುತಿಸಲು ಬಟ್ಟೆ ಬಿಚ್ಚಿ ನೋಡಲಿಲ್ಲ ಎಂದು ಅವರೇ ತಿಳಿಸಿರುವುದು ಸಂಶಯಾಸ್ಪದವಾಗಿರುತ್ತದೆ ಅನೇಕ ವೇಳೆ ಈ ಒಗಟ್ಟೆ ಪ್ರಶ್ನಿಸಿದರೂ ರಹಮಾನರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ ಆದುದರಿಂದ ನೇತಾಜಿಯವರು ಬದುಕಿಯೇ ಇದ್ದಾರೆಂಬ ನಂಬಿಕೆ ಇದೆ ಎಂದು ಮೋಹನಸಿಂಗರವರು ಹೇಳಿರುತ್ತಾರೆ

○ ರಾಜಧಾನಿಯ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಶ್ರೀ ಎಂ ಪಿ ನಾರಾಯಣ ಅಯ್ಯಂಗಾರ್ರನ್ನು ಅ| ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ

ಅಮೇರಿಕದ ರಾಯಭಾರಿಗಳ ಆಗಮನ

ಮೈಸೂರು ೨೪

ಭಾರತದಲ್ಲಿ ಅಮೇರಿಕದ ರಾಯಭಾರಿಗಳಾದ ಶ್ರೀ ಜಾರ್ಜ್ ಹೆಂಡರ್ಸನ್‌ರವರು ಪತ್ನೀಸಮೇತರಾಗಿ ಈ ದಿನ ೧೨ ಗಂಟೆಗೆ ಬೆಂಗಳೂರಿನಿಂದ ಆಗಮಿಸಿದರು ಅವರು ನಗರದ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟಿದ್ದರು. ಬೃಂದಾವನಕ್ಕೂ ಸಂಜೆ ಭೇಟಿ ಕೊಟ್ಟು, ನಾಳೆ ಬೆಳಗ್ಗೆ ಅವರು ಕೋಳಿಗೆ ಪ್ರಯಾಣ ಬೆಳೆಸುವರು

ಟಿಬೆಟ್ ಗಡಿಯ ಹತ್ತಿರ ಚೀಣಾ ಕಮ್ಯೂನಿಸ್ಟರು

ವಾಯುವ್ಯ ಚೀಣಾದಲ್ಲಿ ಕಳೆದ ೩೦ ದಿನಗಳಿಂದಲೂ ಘೋರ ಕದನ ನಡೆಸುತ್ತಿದ್ದ ಕಮ್ಯೂನಿಸ್ಟರು ಟಿಬೆಟ್ಟಿನ ಗಡಿಯ ಹತ್ತಿರವಿರುವ ಲಾಂಚಾವ್ ಎಂಬ ರಾಜಧಾನಿಯ ಕಡೆಗೆ ನುಗ್ಗುತ್ತಿರುವರೆಂದು ವರದಿಯಾಗಿದೆ

ಮೈಸೂರು ಬಿಟ್ಟು ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕು

ನಿನ್ನೆ ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಮುಂದೆ ಕರ್ನಾಟಕದ ನಿಯೋಗದವರು ಹೋಗಿ ಭಾಷಾವಾರು ಆಧಾರದ ಮೇಲೆ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕೆಂದು ಒತ್ತಾಯ ಪಡಿಸಿದರು ಕನ್ನಡ ಮಾತಾಡುವ ಪ್ರದೇಶಗಳನ್ನೊಳಗೊಂಡ ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ರಚನೆಯು ಕೂಡಲೇ ಆದಲ್ಲಿ ಮೈಸೂರನ್ನು ಅದಕ್ಕೆ ಸೇರಿಸಬೇಕೆನ್ನುವುದನ್ನು ಸಧ್ಯಕ್ಕೆ ಬಿಡಲು ಸಿದ್ಧರಾಗಿರುವುದಾಗಿ ನಿಯೋಗದವರು ತಿಳಿಸಿದರೆಂದು ಗೊತ್ತಾಗಿದೆ

ಪೋಲೀಸ್ ಇಲಾಖೆಯಲ್ಲಿ ಮೋಸ

ಸ್ವಂ ಸು ಫೋ(ನ್)] ಬೆಂಗಳೂರು ೨೪

ಮೈಸೂರು ಪೋಲೀಸ್ ದಳದಲ್ಲಿ ಮೋಸ ಮಾಡುವ ವಿಚಾರವನ್ನು ನಿನ್ನೆ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾಯಿತೆಂದು ತಿಳಿದುಬಂದಿದೆ ಆಡಳಿತದ ದಕ್ಷತೆಗೆ ಧಕ್ಕೆ ಬರದಂತೆ ಇನ್‌ಸ್ಪೆಕ್ಟರು, ಸಬ್‌ಇನ್ಸ್‌ಪೆಕ್ಟರು ಮತ್ತು ಕಾನ್‌ಸ್ಟೇಬಲರುಗಳ ಸಂಖ್ಯೆಯನ್ನು ಸಧ್ಯಕ್ಕೆ ಕಡಿಮೆ ಮಾಡಬೇಕೆಂದು ಸಮಿತಿಯವರು ಸಲಹೆ ಮಾಡಿದರೆಂದು ಗೊತ್ತಾಗಿದೆ

○ ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಈ ದಿನ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

○ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ದೆಹಲಿಯಿಂದ ನಾಳಿದ್ದು ವಾಪಸು ಬರುವ ನಿರೀಕ್ಷಣ ಇದೆ

ಬೆಂಕಿ ಕಡ್ಡಿಗಳಿಂದಲೇ ತಯಾರಾದ ಗಡಿಯಾರ

೧ ಲಕ್ಷ ೭೬ ಸಾವಿರ ಬೆಂಕಿ ಕಡ್ಡಿಗಳಿಂದ ೧,೨೦೦ ಗಂಟೆಗಳಲ್ಲಿ ಸ್ವೀಡನ್ನಿನ ಒಬ್ಬ ಗುಮಾಸ್ತೆಯೊಬ್ಬರ ತಯಾರಿಸಿದ ವಿಚಿತ್ರದ ಗಡಿಯಾರವನ್ನು ಈಗ ಸ್ಟಾಕ್‌ಹೋಮಿನ ವಸ್ತು ಪ್ರದರ್ಶನದಲ್ಲಿ ಇಡಲಾಗಿದೆ ೨೪ ಗಂಟೆಗಳ ಕಾಲ ಅದು ಗಂಟೆಯನ್ನು ಸರಿಯಾಗಿ ತೋರಿಸುವುದೆಂದು ಹೇಳಲಾಗಿದೆ

ವಿದ್ಯಾರ್ಥಿಗಳ ಚೇಷ್ಟೆಗೆ ಗವರ್ನರರ ಮೆಚ್ಚಿಗೆ

ಜೋಹಾನ್ಸ್ ಗವರ್ನರರಾದ ರಾಜಾ ಮಹಾರಾಜ್ ಸಿಂಗ್ ನೆನ್ನೆ ದಿನ ಪ್ರಜೆಗೆ ಹೋಗುವಾಗ, ವಿಟ್ವಿಟ್ಸ್ ಸರ್ಕಾರೀ ಭವನದ ಕ್ಷೇತ್ರದ ಪಕ್ಕದಲ್ಲಿ ಇಬ್ಬರು ವಿದ್ಯಾರ್ಥಿಗಳು ರುಜು ಹಾಕಿದ್ದರೆಂದೂ, ಅದನ್ನು ನೋಡಿ ಗವರ್ನರರು ಅವರನ್ನು ಚಹಾ ಪಾನಕ್ಕಾಗಿ ಆಹ್ವಾನಿಸಿ, ಪುಸ್ತಕದಲ್ಲಿ ಅವರು ಏತಕ್ಕಾಗಿ ರುಜು ಹಾಕಿದರೆಂದು ಪ್ರಶ್ನಿಸಲಾಗಿ, ಚೇಷ್ಟೆಗಾಗಿ ಹಾಗೆ ಮಾಡಿದೆವಾಗಿ ವಿದ್ಯಾರ್ಥಿಗಳು ತಿಳಿಸಿದರೆಂದೂ, ಅವರ ಉತ್ತರವನ್ನು ಕೇಳಿ ಗವರ್ನರರು ಮೆಚ್ಚಿದರೆಂದೂ ಹೇಳಲಾಗಿದೆ

ಹೆಂಗಸಿನ ವೇಷದಲ್ಲಿ ಕಳ್ಳ

ಧರ್ಮಸ್ಥಳಕ್ಕೆ ಸೇರಿದ ಕನ್ನಸಕ್ಕಿ [illegible] ಹೆಂಗಸಿನ ವೇಷದಲ್ಲಿ ವನಿತೋದರದಿಂದ [illegible] ಒರ ಶ್ರೀಮ ಕಳ್ಳನೊಬ್ಬನನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಮಾಸಿಕ [illegible] ಆತನ [illegible] ಒಂದು ಕೂಗಿಕೊಂಡಾಗ [illegible] ಆತನನ್ನು ಬಂಧಿಸಿದರೆಂದು ಹೇಳಲಾಗಿದೆ

ಕಾಗದದ ಅಭಾವ ದಾಟಿ ದವಾಗುವುದಿಲ್ಲ

[illegible] ವ ಕಾಗದ ಅಭಾವ [illegible] ವದಿಂದ [illegible] ಪ್ರಕಟವಾಗಿದೆಯೆಂದು ತಿಳಿಸಿರುತ್ತದೆ

೯೫ ಸಾವಿರ ಚೀಣಾ ಸೈನಿಕರ ನಾಶ

[illegible] ರಣಕ್ಷೇತ್ರದಲ್ಲಿ [illegible] ಸಾವಿರ ಚೀಣಾ ಸೈನಿಕರು ಮಡಿದಿರುವರೆಂದೂ [illegible] ಸಾವಿರಾರು ಸೈನಿಕರನ್ನು ಕಮ್ಯೂನಿಸ್ಟರು ಸೆರೆಹಿಡಿದಿರುವರೆಂದೂ ಹೇಳಲಾಗಿದೆ

ಮೈಸೂರು ಸಿಟಿ ರೇಷನಿಂಗ್ ಆಫೀಸು

ನಂಬರು 137 C 9-50

ಮೈಸೂರು ಸಿಟಿಯಲ್ಲಿರುವ ಎಲ್ಲ ರೇಷನ್ ಡಿಪೋ, ಹೋಲ್‌ಸೇಲ್ ಸಬ್ ಡಿಪೋ, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಿಗೆ ೨೬-೮-೧೯೪೯ನೇ ಶುಕ್ರವಾರ ವಿಶೇಷ ಗಣೇಶನ ಹಬ್ಬದ ಪ್ರಯುಕ್ತ ಪೂರಾ ರಜಾ ಕೊಡಲ್ಪಟ್ಟಿರುತ್ತೆ

೨೬-೮-೧೯೪೯ನೇ ಶುಕ್ರವಾರ ಪೂರ್ತಾ ಮಾರ್ಚೆಂಟುಗಳ ಡಿಪೋಗಳಲ್ಲಿ ಕೆಲಸಗಳು ನಡೆಯಲ್ಪಡುತ್ತವೆ.

[ರುಜು] ಡಿ. ಜೆ. ಬಾಂಡಾರ್ಕರ್,
ರೇಷನಿಂಗ್ ಆಫೀಸರ್,
ಮೈಸೂರು
೬-೮-೧೯೪೯

Edited, printed and published by A. R. Nagarajan, at Sadhvi Press, D Subbiah Road, Mysore

ಪ್ರವಾಹದಿಂದ ೧೮ ಜನರ ಮರಣ

ಬಲ್ಗೇರಿಯಾದಲ್ಲಿರುವ ಡೋಬ್ರಿಚ್ ಪ್ರದೇಶದಲ್ಲಿ ವಿಪರೀತ ಮಳೆ ಬಿದ್ದು ಅಲ್ಲಿಯ ನದಿಯಲ್ಲಿ ಪ್ರವಾಹವು ವುಂಟಾಗಿ ೧೮ ಜನರು ಮುಳಗಿ ಹೋದರೆಂದೂ ೩೩೦ ಮನೆಗಳು ನಾಶವಾದುವೆಂದೂ ವರದಿಯಾಗಿದೆ

ಭೂಕಂಪದಿಂದ ಮನೆಗಳ ನಾಶ

ಕಾಲಿಟ್ ಸಂಸ್ಥಾನದಲ್ಲಿ ಭೂಕಂಪವಾಗಿ ಅನೇಕ ಮನೆಗಳು ನಾಶವಾಗಿವೆಯೆಂದೂ ಪರಂಗಾಬಾದಿನದಲ್ಲಿ ಶೇಕಡ ೮೦ ರಷ್ಟು ಮನೆಗಳು ಬಿರುಕು ಬಿಟ್ಟಿವೆಯೆಂದೂ, ಒಬ್ಬನು ಮೃತಪಟ್ಟನೆಂದೂ ವರದಿಯಾಗಿದೆ

೨೦ ಅಂತಸ್ತಿನಿಂದ ಕೆಳಕ್ಕೆ ಬಿದ್ದು ಆತ್ಮಹತ್ಯ

ನ್ಯೂ ಯಾರ್ಕಿನಲ್ಲಿದ್ದ ೧೯ ವರ್ಷದ ಮುನೀರ್ ಸಜಲ್ ಖಾಯ್ ಎಂಬ ಬೊಂಬಾಯಿನ ವಿದ್ಯಾರ್ಥಿಯು ಅಲ್ಲಿನ ೨೦ ಅಂತಸ್ತಿನ ಹೋಟಲಿನಿಂದ ಕೆಳಕ್ಕೆ ಹಾರಿ ಬಿದ್ದು ಸತ್ತನೆಂದೂ, ಅದಕ್ಕೆ ಕಾರಣವೇನೆಂಬುದು ಗೊತ್ತಿಲ್ಲವೆಂದೂ ವರದಿಯಾಗಿದೆ.

ಬೊಂಬಾಯಿಗೆ ಕೃತಕ ಮಳೆಯಿಂದ ನೀರು ಸರಬರಾಜು

ಬೊಂಬಾಯಿ ನಗರಕ್ಕೆ ಉಂಟಾಗಿರುವ ನೀರಿನ ಅಭಾವವನ್ನು ನೀಗಿಸಲು ಮೋಡಗಳ ಮೇಲೆ ಮಂಜಿನ ಗೆಡ್ಡೆಗಳನ್ನು ಚೆಲ್ಲುವದರಿಂದ ಕೃತಕ ಮಳೆಯನ್ನು ಉಂಟು ಮಾಡಲು ವ್ಯವಸ್ಥೆ ಮಾಡಬೇಕೆಂಬುದನ್ನು ಅಲ್ಲಿನ ಪುರಸಭೆಯವರು ಚರ್ಚಿಸಿದರು.

ಗಾಯತ್ರೀ ಟಾಕೀಸ್

21-8-49ರಿಂದ 4 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಯೂನಿವರ್ಸಲ್‌ರವರ ಹಾಸ್ಯ ಮತ್ತು ಭಯಂಕರದಿಂದೊಡಗೂಡಿರುವ ಚಿತ್ರ
ಅಬಾಟ್ ಅಂಡ್ ಕ್ಯಾಸ್ಟೆಲೋ ಮೀಟ್
ಫ್ರಾಂಕೆನ್‌ಸ್ಟೀನ್

ಮದರಾಸ್ ಸಚಿವರೊಡನೆ ಮೋಟಾರ್ ಕೆಲಸಗಾರರ ಸಂಘದ ಅಧ್ಯಕ್ಷರ ಭೇಟಿ

ಸಂಸ್ಥಾನದ ಮೋಟಾರು ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಸಿ. ಜೆ. ದೇವನಾಥರವರು ಮದರಾಸಿನಲ್ಲಿ ಕಾರ್ಮಿಕ ಸಚಿವ ಶ್ರೀ ಸೀತಾರಾಮ ರೆಡ್ಡಿಯವರನ್ನು ಭೇಟಿ ಮಾಡಿ, ಅವರು ಸಂಸ್ಥಾನಕ್ಕೆ ಬಂದು ಕಾರ್ಮಿಕರ ಸಂಸ್ಥೆಗಳಿಗೆ ಭೇಟಿ ಕೊಡಬೇಕೆಂದು ಆಹ್ವಾನಿಸಿದರೆಂದೂ, ಅದನ್ನು ಅಂಗೀಕರಿಸಿ, ಸಧ್ಯದಲ್ಲಿಯೇ ಭೇಟಿ ಕೊಡಲು ಅವರು ಒಪ್ಪಿರುವರೆಂದೂ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ.

○ ಮಧ್ಯ ಪ್ರಾಂತ್ಯದ ಭಂಡಾರದಲ್ಲಿ ೧೫ ವರ್ಷದ ಹುಡುಗಿಯೊಬ್ಬಳಿಗೆ ಕರುವಿನಂತೆ ಕಾಣುವ ಮಗುವು ಜನನವಾಗಿ, ಕೆಲವು ಗಂಟೆಗಳು ಕಳೆದನಂತರ ಸತ್ತು ಹೋಯಿತೆಂದು ಹೇಳಲಾಗಿದೆ

UNIVERSITY OF MYSORE
Office of the University of Mysore
Mysore Dated 13th August 1949
No Ex 4 122 49 50

NOTIFICATION

University Examinations of September 1949

The following University Examinations will commence from **Thursday the 1st September** 1949. The detailed time-table will be published in the Gazette in due course.

1) Intermediate in Arts
2) Intermediate in Science
3) Intermediate in Commerce
4) B A.,
5) B Sc.,
6) B .Sc., Textiles
7) B.A (Hons) Preliminary
8) B Sc (Hons) Preliminary
9) B Com.,
10) Engineering.
11) L M P.
12) Law

BY ORDER,
C. Rengachar.
Ag. Registrar.

ಪ್ರಭುದೇವಾ ಟಾಕೀಸ್

26–8–49ನೇ ಶುಕ್ರವಾರದಿಂದ
* ಮಹಾತ್ಮ ಉದಂಗರ್ * [ತಮಿಳು]
ಪ್ರತಿ ದಿನ ಮೂರು ಪ್ರದರ್ಶನಗಳು
ಪಾತ್ರ — ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ ಆರ್. ರಾಮಚಂದ್ರನ್, ಜೀವಿ ಕಮಲ, ವಿಜಯ ಕುಮಾರಿ ಮುಂತಾದವರು

ದಸರಾ ವಸ್ತುಪ್ರದರ್ಶ[ನ]

ಮುಂದಿನ ತಿಂಗಳು ೨೬ನೇ [illegible] ದ ಅಕ್ಟೋಬರ್ ೮ನೇ ತಾರೀ[ಖಿ]ನ ವರೆಗೆ [ರಾಜ]ಧಾನಿಯಲ್ಲಿ ದಸರಾ ವಸ್ತುಪ್ರ[ದರ್ಶನ] ನಡೆಯುವುದು. ಈ ಸಂಬಂಧ[ವಾದ ವಿವ]ರ ವಿವರಣೆಗಳನ್ನೊಳಗೊಂಡ [ಒಂದು] ಪುಸ್ತಕವನ್ನು ವಸ್ತು ಪ್ರದರ್ಶನ [ಸಮಿ]ತಿಯವರು ಪ್ರಕಟಿಸಿರುತ್ತಾರೆ.

CENTRAL FOO[D] TECHNOLOG[ICAL] RESEARCH INSTIT[UTE]
MYSORE

NOTIFICATIO[N]

Tenders in the pr[escri]bed form enclosed [in] sealed cover supersc[ribed] as "Tender for Rec[onstruction of] main approach road[s lea]ding to Cheluva[mba] Mansion with water [bound] macadam" will be rec[eived] in the Office of the [under]signed up to 4 P. M. o[n] September 1949. [All] tenders should be ac[com]panied by a stamped [rece]ipt for having credi[ted a] sum of Rs 150. (one [hund]red and fifty) in ca[sh as] earnest money in the [...] office. No cheques [will] be accepted. Te[nders] not accompanied by [such] receipts will be disq[uali]fied.

Detailed Estima[tes,] Plans & Agreement [forms] may be seen in the [Office] on all working days [bet]ween 10 A.M. and 12 [noon] after making an app[oint]ment.

Tenders should [be ...] detailed rates to be q[uoted]. Such rates must hold [good] for a period of th[ree] months from the da[te of] Tender. All non-tend[ered] items will be paid f[or on] data including ten per [cent] profit.

The work should [be] completed within [...] months from the da[te of] acceptance of the ten[der].

The undersigned r[eser]ves the right to accep[t or] reject any tender w[ithout] assigning any reason [what]soever.

PLANNING O[FFICER]

ಹೊಸ ಹೊಸ ನಮೂನೆಯಲ್ಲಿ, ಹೊಸಾ ಹೊಸ ಸೀರೆಗಳು, ಖಣಗಳು
ನ್ಯಾಯವಾದ ಬೆಲೆ ನಾಣ್ಯವಾದ ಮಾಲು ಬನ್ನಿ, ನೋಡಿ ಆರಿಸಿ ಸಾಹುಕಾರ್ ಕಂಪೆನಿ, ಮೈಸೂರು

ಗಾಂಧಿ ಪತ್ರಿಕೆ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೫-೮-೧೯೪೯ [ಸಂಚಿಕೆ ೨೭

ಕಮ್ಯೂನಿಸ್ಟರ ಮೇಲೆ ಚಿಯಾಂಗರ ಪ್ರತಿಧಾಳಿ

ತಟಸ್ಥವಾಗಿರಲು ಚೀಣಾಕ್ಕೆ ರಷ್ಯದ ಸೂಚನೆ

ಯುದ್ಧದಲ್ಲಿ ರಷ್ಯವು ತೊಡಗಬೇಕಾಗಿ ಬಂದಲ್ಲಿ ಆಗ ಚೀಣವು ತಟಸ್ಥವಾಗಿರಬೇಕೆಂದೂ, ಚೀಣಾದಲ್ಲಿ ಅಮೆರಿಕದ ಪ್ರಭಾವವನ್ನು ಕಡಿಮೆ ಮಾಡಬೇಕೆಂದೂ ರಷ್ಯವು ಚೀಣಾ ಸರ್ಕಾರಕ್ಕೆ ಕಳೆದ ಜನವರಿ ತಿಂಗಳಿನಲ್ಲೇ ಪತ್ರ ಬರೆದಿದ್ದಬಗ್ಗೆ ಭರವಸೆಯನ್ನು ಚೀಣವು ಕೊಡಲಿಲ್ಲವಾದುದರಿಂದ, ಕಮ್ಯೂನಿಸ್ಟರು ತಮ್ಮ ಮೇಲೆ ಕದನ ನಡೆಸುತ್ತಿರುವರೆಂಬು, ಚೀಣದ ಅಧ್ಯಕ್ಷರ ವೈಯುಕ್ತಿಕ ಪ್ರತಿನಿಧಿ ಡಾ॥ ಯು. ತಾಕೀಚೌರವರು ತಿಳಿಸಿರುತ್ತಾರೆ

ಹಡಗಿನ ಆಸ್ಫೋಟನೆಯಿಂದ ನಗರಕ್ಕೆ ನಷ್ಟ

ಫಾರ್ಮೋಸಾ ದ್ವೀಪದ ಕೊಸಿಯಂಗ್ ಟೃಫಾ ನಗರದ ಬಳಿ ಚುಂಗ್ಲಿ ಎಂಬ ಹಡಗಿನಲ್ಲಿದ್ದ ಮದ್ದು ಗುಂಡುಗಳಿಗೆ ಬೆಂಕಿ ತಗುಲಿ, ಭಾರಿ ಆಸ್ಫೋಟನೆ ಆಗಿ ಅದರಿಂದ ಇಡೀ ನಗರವೇ ಅದರಿತೆಂದೂ, ಅನೇಕ ಮನೆಗಳು ಭಸ್ಮವಾಗಿ ವಿಶೇಷ ನಷ್ಟ ಉಂಟಾಯಿತೆಂದೂ ವರದಿಯಾಗಿದೆ

ಪಾದರಕ್ಷೆ ಕದ್ದವನಿಗೆ ಕತ್ತೆಯ ಮೇಲೆ ಮೆರವಣಿಗೆ

ಕರಾಚಿಯ ಮಸೀದಿಯೊಂದರಲ್ಲಿ ಪ್ರಾರ್ಥನೆ ನಡೆಯುತ್ತಿದ್ದಾಗ ಒಬ್ಬನು ಪಾದರಕ್ಷೆಯನ್ನು ಕದಿಯುತ್ತಿದ್ದುದನ್ನು ಜನರು ಪತ್ತೆಮಾಡಿ, ಆತನ ಕತ್ತಿಗೆ ಪಾಪಿಷ್ಟಗಳಿಸಿದ್ದಾನೆ ಎಚ್ಚರಿಕೆ ಎಂದು ಬರೆದ ಕಾಗದ ರಟ್ಟನ್ನು ನೇತುಹಾಕಿ, ಮುಖಕ್ಕೆ ಬೂದಿ ಬಳಿದು, ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿಸಿದರೆಂದು ವರದಿಯಾಗಿದೆ.

ನಿಕ್ಕಲ್ ನಾಣ್ಯಗಳು

ಕಲ್ಕತ್ತಾದಲ್ಲಿ ಕಟ್ಟಲಾಗುತ್ತಿರುವ ಟಂಕಸಾಲೆಯ ಭವನವು ಪೂರ್ತಿಯಾದೊಡನೆ ನಿಕ್ಕಲ್ ನಾಣ್ಯಗಳನ್ನು ಅಲ್ಲಿ ತಯಾರಿಸಲಾಗುವುದೆಂದೂ, ರೂಪಾಯಿ, ೮ ಮತ್ತು ೪ ಆಣೆ ನಾಣ್ಯಗಳನ್ನು ತಯಾರಿಸುವ ಪಡಿಯಚ್ಚುಗಳನ್ನು ಇನ್ನು ಮುಂದೆ ಬ್ರಿಟನ್ನಿನಿಂದ ತರಿಸದೆ, ಅವುಗಳನ್ನು ಭಾರತದಲ್ಲೇ ತಯಾರಿಸಲಾಗುವುದೆಂದೂ ತಿಳಿದು ಬಂದಿದೆ

ಜೈಲಿನಲ್ಲಿ ನೇಪಾಳದ ಕವಿಯ ಉಪವಾಸ

ನೇಪಾಳದ ರಾಷ್ಟ್ರೀಯ ಚಳುವಳಿಯಲ್ಲಿ ಭಾಗ ವಹಿಸಿದುದಕ್ಕಾಗಿ ಕಳೆದ ೨ ವರ್ಷಗಳಿಂದಲೂ ಜೈಲಿನಲ್ಲಿರುವ ಅಲ್ಲಿನ ಸುಪ್ರಸಿದ್ಧ ಕವಿ ಪಂಡಿತ ಶೋಧ ಪ್ರಸಾದ ಉಪಾಧ್ಯಾಯರು ತಮಗೆ ಜೈಲಿನಲ್ಲಿ ಕೊಡುತ್ತಿರುವ ಚಿತ್ರ ಹಿಂಸೆಯನ್ನು ಪ್ರತಿಭಟಿಸಿ, ಕಳೆದ ೧೧ ನೇ ತಾ॥ ನಿಂದ ಉಪವಾಸ ಪ್ರಾರಂಭಿಸಿದ್ದಾರೆ.

ಸಮತಾವಾದಿ ಮತ್ತು ಎಡಪಕ್ಷಗಳ ಸಂಘಟನೆ ಇಲ್ಲ

ಭಾರತದ ಸಮತಾವಾದಿ ಮತ್ತು ಶ್ರೀ ಶರತ್ ಚಂದ್ರ ಬೋಸರ ನೂತನ ಎಡಪಕ್ಷಗಳ ಸಂಘಟನೆ ಬಗ್ಗೆ ಕಲ್ಕತ್ತದಲ್ಲಿ ನಡೆಯುತ್ತಿದ್ದ ಮಾತು ಕತೆಗಳು ವಿಫಲವಾಗಿ, ನಾಗಪುರದಲ್ಲಿ ನಡೆಯುವ ಎಡ ಪಕ್ಷದ ಸಮ್ಮೇಳನದಲ್ಲಿ ಸಮತಾವಾದಿಗಳು ಭಾಗವಹಿಸುವುದಿಲ್ಲವೆಂದು ತಿಳಿದುಬಂದಿದೆ

ಸರ್ ಆರ್ಕಾಟರ ಬಾಲ್ಯದ ವಿನೋದ ಪ್ರಸಂಗ!

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರವರ ಬಗ್ಗೆ ಲಂಡನ್ನಿನ ಪತ್ರಿಕೆಯೊಂದು ಸ್ವಾರಸ್ಯವಾದ ಕಥೆಯೊಂದನ್ನು ಪ್ರಕಟಿಸಿದೆ ೧೫೮ ಡಿಗ್ರಿ ಬಿಸಲಿನ ತಾಪವಿದ್ದರೂ ಇವರು ಉಣ್ಣೆಯ ಉಡುಪನ್ನೇ ಧರಿಸಿಕೊಂಡು ಸುಖವಾಗಿಯೂ, ಶಾಂತರಾಗಿಯೂ ಇರಬಲ್ಲರು ಇವರು ವಿನೋದದಲ್ಲಿ ನಿಪುಣರು ಇವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಸ್ವಲ್ಪ ಗಡ್ಡ ಬೆಳೆದಾಗ, ಕ್ಷೌರಿಕನ ಅಂಗಡಿಗೆ ಹೋಗಿ, ಕ್ಷೌರ ಮಾಡಬೇಕೆಂದು ಕೇಳಿದರು, ಸಣ್ಣ ವಯಸ್ಸಿನ ಹುಡುಗನನ್ನು ಕಂಡು, ನೀನು ಹೋರಗೆ ಬಂದಿರುವುದು ನಿನ್ನ ತಾಯಿಗೆ ಗೊತ್ತೇ ಎಂದು ಕ್ಷೌರಿಕನು ಹೀಗಿಸಿದನು ಅದಕ್ಕೆ ಆರ್ಕಾಟರು ರೇಗಿ, ಎರಡು ಗಂಟೆಗೆ ಒಂದಾವರ್ತಿ ತಾವು ಕ್ಷೌರ ಮಾಡಿಕೊಳ್ಳುವುದಾಗಿ ಹೆಮ್ಮೆಯಿಂದ ತಿಳಿಸಿದರು ಕ್ಷೌರಿಕನು ಆಶ್ಚರ್ಯಗೊಂಡು, ಎರಡು ಗಂಟೆಗಳಲ್ಲಿ ಗಡ್ಡ ಬೆಳೆದರೆ ಉಚಿತವಾಗಿ ಕ್ಷೌರ ಮಾಡುವುದಾಗಿ ತಿಳಿಸಿದನು ಈ ಸಂಕಕ್ಕೆ ರಾಮಸ್ವಾಮಿಯವರು ಒಪ್ಪಿ, ಕ್ಷೌರ ಮಾಡಿಸಿಕೊಂಡು, ಹೊರಕ್ಕೆ ಹೋಗಿ, ತಮ್ಮ ಅವಳಿ ಸಹೋದರರಾದ ಲಕ್ಷ್ಮಣ ಸ್ವಾಮಿಯವರನ್ನು ಕಳುಹಿಸಿದರು ಕ್ಷೌರಿಕನು ಇವರೇ ರಾಮಸ್ವಾಮಿಯವರೆಂದು ಭ್ರಮಿಸಿ, ಅವರ ಗಡ್ಡವನ್ನು ತಡವರಿಸಿ ನೋಡಿ ತಾನು ಪಂತದಲ್ಲಿ ಸೋತು ಹೋದನೆಂದು ಒಪ್ಪಿಕೊಂಡು, ಉಚಿತವಾಗಿ ಕ್ಷೌರಮಾಡಿ ಕಳುಹಿಸಿದನು. ತನಗೆ ಆದ ಅಪಮಾನಕ್ಕೆ ಪ್ರತೀಕಾರವನ್ನು ಸರ್ ಆರ್ಕಾಟರು ಮಾಡುವ ಮಾರ್ಗಗಳಲ್ಲಿ ಇದೂ ಒಂದೆಂದು ಪತ್ರಿಕೆಯು ಹೇಳಿರುತ್ತದೆ

ಮಕ್ಕಳ ಮೇಲೆ ತಂದೆತಾಯಿಗಳ ಹೆಸರಿನ ಮುದ್ರೆ

ಅಮೆರಿಕದಲ್ಲಿರುವ ಎಷ್ಟೋ ಮಕ್ಕಳಿಗೆ ಅವರ ತಂದೆತಾಯಿಗಳ ಹೆಸರುಗಳು ಗೊತ್ತಿಲ್ಲದಿರುವುದು ಇತ್ತೀಚೆಗೆ ಹೆಚ್ಚುತ್ತಿರುವುದರಿಂದ ಇದನ್ನು ತಪ್ಪಿಸಲು, ಒಂದು ಹೊಸ ವ್ಯವಸ್ಥೆಯನ್ನು ಮಾಡಲಾಗಿದೆ ಆಗತಾನೆ ಹುಟ್ಟಿದ ಮಕ್ಕಳ ಬೆನ್ನಿನ ಮೇಲೆ ವಿದ್ಯುಚ್ಛಕ್ತಿಯ ವಿಧಾನದಿಂದ ತಂದೆತಾಯಿಗಳ ಮತ್ತು ಮಗುವಿನ ಹೆಸರುಗಳನ್ನು ಮುದ್ರಿಸಲಾಗುವುದೆಂದೂ, ಇದು ಶಾಶ್ವತವಾಗಿ ಇರುವುದೆಂದೂ ಹೇಳಲಾಗಿದೆ

ಪ್ರಾಂತ್ಯ ಮತ್ತು ಸಂಸ್ಥಾನಗಳ ಕಾರ್ಮಿಕ ಸಚಿವರುಗಳ ಸಮ್ಮೇಳನ

ಮೈಸೂರು ೨೫

ಭಾರತದ ಪ್ರಾಂತ್ಯ ಮತ್ತು ಸಂಸ್ಥಾನ ಕಾರ್ಮಿಕ ಸಚಿವರುಗಳ ಸಮ್ಮೇಳನವು ರಾಜಧಾನಿಯಲ್ಲಿ ಮುಂದಿನ ಡಿಸೆಂಬರ್ ೨೫ ಮತ್ತು ೨೬ನೇ ತಾ॥ಗಳಲ್ಲಿ ಕೇಂದ್ರ ಸರ್ಕಾರದ ಸಚಿವ ಶ್ರೀ ಜಗಜೀವನರಾಂರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಆ ನಂತರ ಅಂತರ ರಾಷ್ಟ್ರೀಯ ಕೂಲಿಗಾರ ಸಮ್ಮೇಳನವೂ ಜರುಗುವುದು

ಬನ್ನಿಮಂಟಪದ ರಸ್ತೆಯಲ್ಲಿ ದರೋಡೆ

ರಾಜಧಾನಿಯ ಹೊಸ ಬನ್ನಿಮಂಟಪದ ರಸ್ತೆಯಲ್ಲಿ ಮೊನ್ನೆ ಸಂಜೆ ವಿದ್ಯುಚ್ಛಕ್ತಿ ಇಲಾಖೆಯ ನೌಕರರೊಬ್ಬರು ಹೋಗುತ್ತಿದ್ದಾಗ ಮೂರುಜನ ಅಪರಿಚಿತರು ಅವರ ಮೇಲೆ ಬಿದ್ದು, ಅವರಲ್ಲಿದ್ದ ೯ ರೂ ಹಣದ ಚೀಲವನ್ನು ಕಿತ್ತುಕೊಂಡು ಪರಾರಿಯಾದರೆಂದು ಹೇಳಲಾಗಿದೆ ಇಂತಹ ನಿರ್ಜನವಾದ ಪ್ರದೇಶದಲ್ಲಿ ತಿರುಗಾಡಲು ಜನರಿಗೆ ಯಾವ ತೊಂದರೆಯೂ ಉಂಟಾಗದಂತೆ ಅಧಿಕಾರಿಗಳು ತಕ್ಕ ಬಂದು ಬಸ್ತು ಮಾಡಬೇಕೆಂದೂ ಕೋರಲಾಗಿದೆ

ಸುತ್ತೂರು ವಿದ್ಯಾರ್ಥಿ ನಿಲಯ ಸಂಘ

ರಾಜಧಾನಿಯ ಶ್ರೀ ಸುತ್ತೂರು ವಿದ್ಯಾರ್ಥಿ ನಿಲಯ ಸಂಘದ ವಾರ್ಷಿಕ ಚುನಾವಣೆಯು ನಿನ್ನೆ ನಡೆದು, ಶ್ರೀ ಬಿ. ಕೆ ಕೆಂಪನಂಜಪ್ಪನವರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಸಿ. ವೀರಭದ್ರಯ್ಯ ಮತ್ತು ಕೆ ಎಂ. ಜಯದೇವಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು.

ಮಧ್ಯ ಚೀಣಾದಲ್ಲಿ ಕಮ್ಯೂನಿಸ್ಟರ ಮೇಲೆ ಪ್ರತಿ ಧಾಳಿ

ಚೀಣಾದ ಮಾಜಿ ಅಧ್ಯಕ್ಷ ಜ॥ ಚಿಯಾಂಗ್ ಶೈಷೇಕರು ಅನಿರೀಕ್ಷಿತವಾಗಿ ಕ್ಯಾಂಟನ್ನಿಗೆ ತೆರಳಿ, ಕಮ್ಯೂನಿಸ್ಟರ ಮೇಲೆ ಪ್ರತಿ ಧಾಳಿ ನಡೆಸಲು, ಉನ್ನತ ಸೈನ್ಯಾಧಿಕಾರಿಗಳೊಡನೆ ಸಮಾಲೋಚನೆ ನಡೆಸುತ್ತಿರುವರೆಂದೂ, ಮಧ್ಯ ಚೀಣಾದಿಂದ ಈ ಧಾಳಿಯನ್ನು ಪ್ರಾರಂಭಿಸುವರೆಂದೂ ಹೇಳಲಾಗಿದೆ

ಮೈಸೂರು ಮಂತ್ರಿ ಮಂಡಲದಲ್ಲಿ ಇಬ್ಬರು ನೂತನ ಸಚಿವರೆ?

ಬೆಂಗಳೂರು ೨೫

ಮೈಸೂರು ಮಂತ್ರಿ ಮಂಡಲದಲ್ಲಿ ಹೆಚ್ಚು ಬದಲಾವಣೆ ಆಗುವುದಿಲ್ಲವೆಂದೂ, ಆದರೆ ಸಚಿವ ಶ್ರೀ ಪಾಮಡಿ ಸುಬ್ಬರಾಮ ಶೆಟ್ಟರನ್ನೂ ಮತ್ತು ಶ್ರೀಗಳಾದ ಡಿ. ಹೆಚ್. ಚಂದ್ರಶೇಖರಯ್ಯ ಅಥವ ಹೆಚ್ ಸಿದ್ದಯ್ಯನವರ ಪೈಕಿ ಒಬ್ಬರನ್ನೂ ತೆಗೆದುಹಾಕಿ ಶ್ರೀಗಳಾದ ಹೆಚ್ ಎಸ್. ರುದ್ರಪ್ಪ ಮತ್ತು ಶ್ರೀ ಕೆ ಪಟ್ಟಾಭಿರಾಮರವರನ್ನು ಹೊಸದಾಗಿ ನೇಮಿಸಲಾಗುವುದೆಂದೂ, ಈ ಬಗ್ಗೆ ನಾಳೆ ದೆಹಲಿಯಿಂದ ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ವಾಪಸು ಬಂದ ನಂತರ ಪ್ರಕಟಣೆ ಹೊರಡಿಸಲಾಗುವುದೆಂದೂ ಇಲ್ಲಿನ ಪತ್ರಿಕೆಯೊಂದು ಸುದ್ದಿ ಪ್ರಕಟಿಸಿದೆ

ವಿಮಾನ ಕಾರ್ಖಾನೆಯಲ್ಲಿ ಬಸ್ ಬಾಡಿಗಳು

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಲೋಹದ ಬಸ್ಸು ಬಾಡಿಗಳನ್ನು ತಯಾರಿಸಲಾಗುವುದೆಂದೂ, ಇನ್ನು ೫-೬ ವರ್ಷಗಳೊಳಗಾಗಿ ನಾಲ್ಕು ವಿಧವಾದ ಬಸ್ ಬಾಡಿಗಳ ಪೂರ್ಣ ರಚನೆಯ ವ್ಯವಸ್ಥೆಯನ್ನು ಮಾಡಲಾಗುವುದೆಂದೂ ತಿಳಿದುಬಂದಿದೆ

ಬೆಂಗಳೂರಿನಲ್ಲಿ ಟೆಲಿಫೋನುಗಳ ತಯಾರಿಕೆ

ಬೆಂಗಳೂರಿಗೆ ೮ ಮೈಲಿ ದೂರದಲ್ಲಿ ಕೇಂದ್ರ ಸರ್ಕಾರದವರು ಸ್ಥಾಪಿಸಿರುವ ಟೆಲಿಫೋನ್ ಕಾರ್ಖಾನೆಯಲ್ಲಿ ಇನ್ನು ೨ ತಿಂಗಳೊಳಗೆ ಟೆಲಿಫೋನ್ ಸಲಕರಣೆಗಳನ್ನು ತಯಾರಿಸಲಾಗುವುದೆಂದು ತಿಳಿದುಬಂದಿದೆ

ಟಿಂಬರ್ ಮತ್ತು ಪ್ಲೈವುಡ್ ಕೆಲಸಗಾರರ ಸತ್ಯಾಗ್ರಹವೇ?

ಮೈಸೂರು ೨೫

ರಾಜಧಾನಿಯ ಕರ್ನಾಟಕ ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆಯ ಕೆಲಸಗಾರರ ಕುಂದುಕೊರತೆಗಳನ್ನು ಸಂಬಂಧಪಟ್ಟವರು ಇಲ್ಲಿಯವರೆಗೂ ಇತ್ಯರ್ಥಗೊಳಿಸದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿಯೂ, ಮೈಸೂರು ಕಾರ್ಖಾನೆಯನ್ನು ಇದೇ ೨೯ ನೇ ತಾ॥, ಹುಣಸೂರಿನ ಕಾರ್ಖಾನೆಯನ್ನು ೩೦ ನೇ ತಾ॥ ಹರಾಜು ಮಾಡುವುದರ ಮುಂಚೆ ಕೆಲಸಗಾರರಿಗೆ ಸಲ್ಲಬೇಕಾಗಿರುವ ಸಂಬಳ ಮತ್ತು ಇತರ ಪರಿಹಾರಗಳನ್ನು ಕೊಡದೇ ಇದ್ದಪಕ್ಷಕ್ಕೆ ಕೆಲಸಗಾರರು ಉಪವಾಸ ಸತ್ಯಾಗ್ರಹ ಮಾಡಬೇಕಾಗುವುದೆಂದೂ ಮೇಲ್ಕಂಡ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ

೫೦ ಜನ ಹೆಂಗಸರನ್ನು ಮದುವೆಯಾದವನು

ಲಾರ್ಡ್ ಬೀವರ್ ಬ್ರುಕ್ ಎಂದು ಹೇಳಿಕೊಂಡು, ೫೦ ಜನ ಹುಡುಗಿಯರನ್ನು ಮದುವೆ ಮಾಡಿಕೊಂಡ ೩೩ ವರ್ಷದ ಸಿಗ್ಮಂಡ್ ಎಂಜಲ್ ಎಂಬಾತನನ್ನು ಅಮೆರಿಕದಲ್ಲಿ ದಸ್ತಗಿರಿ ಮಾಡಲಾಗಿದೆ ೫೫ ವರ್ಷದ ಪರೋಲ್ ಎಂಬ ವೃದ್ಧ ಮಹಿಳೆಯನ್ನು ವಿವಾಹವಾಗುವುದಾಗಿ ಆತನು ತಿಳಿಸಿದಾಗ ಆಕೆಗೆ ಸಂದೇಹ ಬಂದು ಪೋಲೀಸರಿಗೆ ತಿಳಿಸಿದಳೆಂದೂ, ಆತನು ಚಿಕಾಗೋವಿನ ಅಂಗಡಿಯಲ್ಲಿ ಸಾಮಾನು ಕೊಳ್ಳುತ್ತಿದ್ದಾಗ ಬಂಧಿಸಲಾಯಿತೆಂದೂ ಹೇಳಲಾಗಿದೆ.

ಗಂಗಾ ಪ್ರವಾಹದಿಂದ ೫೦೦ ಹಳ್ಳಿಗಳಿಗೆ ನಷ್ಟ

ಸಂಯುಕ್ತ ಪ್ರಾಂತದಲ್ಲಿ ಗಂಗೆ, ರಾಮಗಂಗೆ, ಘೋರಾ ಮತ್ತು ಗೋಮತಿ ನದಿಗಳಲ್ಲಿ ವಿಪರೀತ ಪ್ರವಾಹವುಂಟಾಗಿ, ೫೦೦ ಗ್ರಾಮಗಳಿಗೆ ಅಪಾಯವುಂಟಾಗಿದೆಯೆಂದು ಹೇಳಲಾಗಿದೆ ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಿ, ಪೈರುಗಳಿಗೆ ವಿಶೇಷ ನಷ್ಟವುಂಟಾಗಿದ ಪ್ರವಾಹ ನಷ್ಟದ ಪರಿಹಾರಕ್ಕಾಗಿ ಸರ್ಕಾರದವರು ೧ ಲಕ್ಷ ರೂ ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ

ಬೆಂಕಿಯಿಂದ ೧೦ ಲಕ್ಷ ರೂ. ನಷ್ಟ

ಕೊಯಮತ್ತೂರಿಗೆ ೮ ಮೈಲಿ ದೂರವಿರುವ ಮದುಕರೈ ಎಂಬಲ್ಲಿನ ಸಿಮೆಂಟ್ ಕಾರ್ಖಾನೆಗೆ ಬೆಂಕಿ ಬಿದ್ದು ಒಟ್ಟು ೧೦ ಲಕ್ಷ ರೂ. ನಷ್ಟವುಂಟಾಗಿದೆಯೆಂದು ವರದಿಯಾಗಿದೆ

ಹರಿಜನರನ್ನು ಕ್ರೈಸ್ತರೆಂದು ನಮೂದಿಸಲಾಗುತ್ತಿದೆ

ಪಶ್ಚಿಮ ಪಂಜಾಬಿನಲ್ಲಿ ಮುಂದೆ ನಡೆಯಲಿರುವ ಸಾರ್ವತ್ರಿಕ ಚುನಾವಣೆಯ ಸಂಬಂಧವಾಗಿ ತಯಾರಾಗುತ್ತಿರುವ ಮತದಾರರ ಪಟ್ಟಿಯಲ್ಲಿ ಅನೇಕ ಹರಿಜನರನ್ನು ಕ್ರೈಸ್ತರೆಂದು ನಮೂದಿಸಲಾಗುತ್ತಿದೆಯೆಂದು ಅಲ್ಲಿನ ಹಿಂದು ವರ್ಗದ ಫೆಡರೇಷನ್ನಿನ ಕಾರ್ಯದರ್ಶಿಗಳು ದೂರು ಕೊಟ್ಟಿರುತ್ತಾರೆ

ತಂದೆಯ ಮಾನವನ್ನು ಕಾಪಾಡಲು ಮಗನ ಉಪವಾಸ

ಗ್ವಾಲಿಯರಿನ ಶ್ರೀ ಗಂಗಾಧರ ರಾವ್ ರಾಮರಾವ್ ಎಂಬ ಜಹಗೀರುದಾರರು ಮೊನ್ನೆಯಿಂದ ಉಪವಾಸ ಕೈಗೊಂಡಿದ್ದಾರೆ ಅಲ್ಲಿನ ಜಹಗೀರು ಇಲಾಖೆಯವರು ತನ್ನ ತಂದೆಯವರು ೧೨,೦೬೮ ರೂ ಸಾಲವನ್ನು ತೀರಿಸಲಿಲ್ಲವೆಂದೂ ವಗೈರೆ ಅನ್ಯಾಯವಾದ ಅಪಾದನೆಗಳನ್ನು ಹೊರಿಸಿರುವುದನ್ನು ವಾಪಸು ತೆಗೆದುಕೊಳ್ಳಬೇಕೆಂದು ಇವರ ತಂದೆಯವರು ೧೦ನೇ ವಾರ್ಷಿಕ ತಿಥಿಯ ದಿನ ಉಪವಾಸ ಪ್ರಾರಂಭಿಸಿದ್ದಾರೆ

ಗಾಯತ್ರೀ ಟಾಕೀಸ್

25-8-49ರಿಂದ 2 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಪ್ರೇಮ ಮತ್ತು ಆಕ್ರೋಶದಿಂದೊಡಗೂಡಿದ ಚಿತ್ರ

A Woman's Vengeance

(ಎ ಉಮನ್ಸ್ ವೆಂಜನ್ಸ್)
ಛಾರ್ಲ್ಸ್ ಬಾಯೆರ್ ಮತ್ತು ಆನ್ ಬ್ಲೈತ್

—: Next Change :—
SINBAD THE SAILOR
(ವರ್ಣರಂಜಿತ ಚಿತ್ರ)

Morning Shows on 27th and 28th
The Golden Ear-rings

ಬಲಾತ್ಕಾರವಾಗಿ ಇಸ್ಲಾಮಿಗೆ ಸೇರಿಸಿದವರ ದಸ್ತಗಿರಿ

ದಕ್ಷಿಣ ಕನ್ನಡ ಜಿಲ್ಲೆಯ ಪದನಕಳ್ಳಿಯ ೧೨ ವರ್ಷದ ಚಿರಮಾರ್ ಕಣ್ಣ ಎಂಬ ಹಿಂದೂ ಹುಡುಗನನ್ನು ಇಸ್ಲಾಂ ಜಾತಿಗೆ ಬಲಾತ್ಕಾರವಾಗಿ ಸೇರಿಸಿದರೆಂದು ನಾಲ್ಕು ಜನ ಮುಸ್ಲಿಮರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ

ಶ್ರೀನಿವಾಸ ಸ್ಯಾರಿ ಪ್ರಿಂಟಿಂಗ್

ವರ್ಕ್ಸ್ ಮತ್ತು ಬಟ್ಟೆ ಅಂಗಡಿ,
೩೪೪, ದಿವಾನರ ಅಗ್ರಹಾರ,
ಮತ್ತು
ಅನಂತಲಕ್ಷ್ಮಿ ಬಟ್ಟೆ ಅಂಗಡಿ,
ವಾಣೀವಿಲಾಸ ಮೊಹಲ್ಲಾ, ಮೈಸೂರು,

★

ನಮ್ಮಿಂದ ಅಂಗಡಿಗಳಲ್ಲಿ ಗೌರಿ ಹಬ್ಬದ ಪ್ರಯುಕ್ತ ಕಲರ್ ಸೀರೆಗಳು, ವಾಯಿಲ್‌ಗಳು, ಚೀಟಿಗಳು ಮತ್ತು ಇತರ ಮಿಲ್ ಬಟ್ಟೆಗಳು ವಿಶೇಷವಾಗಿ ಬಂದಿರುತ್ತವೆ

ಮೈಸೂರು ಸಿಟಿ ರೇಷನಿಂಗ್ ಆಫೀಸು

ನಂಬರು 187/ C.

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಿಗೆ ೨೭-೮-೧೯೪೯ ಶನಿವಾರ ದಿವಸ ಗಣೇಶನ ಹಬ್ಬದ ಪ್ರಯುಕ್ತ ಪೂರ್ತಿ ರಜಾ ಕೊಡಲಾಗುತ್ತೆ

೨೬-೮-೪೯ನೇ ಶುಕ್ರವಾರ ಪ್ರಕಾರ ಮಾಮೂಲಿನಂತೆ ಡಿಪೋಗಳಲ್ಲಿ ... ಗಳು ನಡೆಸಲ್ಪಡುತ್ತವೆ.

[ರುಜು] ಡಿ. ಜೆ. ಬಾಲರಾಜ್
ರೇಷನಿಂಗ್ ಆಫೀಸರ್,
ಮೈಸೂರು
೨೨-೮-೧೯೪೯

Edited, printed and published by A R. Nagaraj at Sadhvi Press, D Sub Road, Mysore.

ಪ್ರಭುದೇವಾ ಟಾಕೀಸ್

26-8-49ನೇ ಶುಕ್ರವಾರದಿಂದ
* ಮಹಾತ್ಮ ಉದಂಗರ್ * [ತಮಿಳು]
ಪ್ರತಿ ದಿನ ಮೂರು ಪ್ರದರ್ಶನಗಳು
ಪಾತ್ರ:—ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ ಆರ್. ರಾಮಚಂದ್ರ, ಬೇಬಿ ಕಮಲ, ವಿಜಯ ಕುಮಾರಿ ಮುಂತಾದವರು

ರಾಜಕಮಲ್, ಮೈಸೂರು

ಈಗ ನಡೆಯುತ್ತಿದೆ
ದಿನವಹಿ 3 ಪ್ರದರ್ಶನಗಳು
ಲಾಟರಿ

GALA OPENING, Daily 3 Shows FROM 26-8-49
Grand Double Programme
The First Russian Picture for the First Time
THE STONE FLOWER
(In Technicolor in Hindi)
THE FESTIVAL OF YOUTH
(in Technicolor in English)
Winner of the First Prize at the International Film Festival, at Cannes, France.

MORNING SHOWS From 26-8-49 For 4 days
The Prince of Thieves
(In Cine Colour)
With John Hall, Patricia Morrison.
Never told on any Screen before ! Rare, Lusty Robinhood Secrets !

ಪ್ರಭಾ

26-8-49 ರಿಂದ
ಅನೋಘವಾದ 2ನೇ ವಾರ
ಶೋಭನಾಚಲ ರವರ **ಮದಾಲಸ** ತೆಲುಗು ಚಿತ್ರ
ಮುಖ್ಯ ಪಾತ್ರ:- ಅಂಜಲಿದೇವಿ, ಕೃಷ್ಣವೇಣಿ,

MORNING SHOWS
From 26 8-49 for 3 days only
M. G. M.'s **Mrs. PARKINGTON**

ಚಾಮುಂಡೇಶ್ವರೀ ಟಾಕೀಸ್

26—8—49ರಿಂದ ಯಶಸ್ವಿಯಾದ 4ನೇ ವಾರ
ಪ್ರತಿ ದಿನ 3 ಆಟಗಳು
- ನವಜೀವನಂ -
ನಾಗಯ್ಯ, ಕನ್ನಾಂಬ, ಎಲ್, ನಾರಾಯಣ ರಾವ್, ಟಿ ಆರ್ ರಾಮಚಂದ್ರ ಪಾತ್ರವಹಿಸಿರುವ ತಮಿಳು ಚಿತ್ರ
(R. V. ಪಿಕ್ಚರ್ಸ್ ರಿಲೀಸ್

CITY MUNICIPAL OFFICE
MYSORE, 22-8-49

NOTIFICATION

—:o:—

Notice is hereby given to the inhabitants of Mysore City Municipality that the Council has resolved to levy shop tax as contemplated in section 64 (xii) of the City Municipalities Act 1 on the owners and users of shops and places of business and framed the Bye-Laws in this behalf. A copy of the same is available for inspection in the Municipal Offices during office hours.

Any person having objection to the same may prefer the same in writing to the undersigned within one month from the date of this notification after which no objections will be heard.

[Sd] C. Narasimha Moorthy
Municipal Commissioner

ರಿಜಿಸ್ಟರ್ಡ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೨೮-೧-೧೯೪೯ [ಸಂಚಿಕೆ ೨೦

ಮೈಸೂರಿನಲ್ಲಿ ಸೇರಲು ಕರ್ಣಾಟಕದ ಒಪ್ಪಿಗೆ

ತಾತಯ್ಯನವರ ಶತಮಾನೋತ್ಸವ

ಮೈಸೂರು ೨೭

ವೃದ್ಧ ಪಿತಾಮಹ, ದಯಾಸಾಗರ ಎಂ ವೆಂಕಟಕೃಷ್ಣಯ್ಯನವರ ಶತಮಾನೋತ್ಸವವು ನಾಳಿದ್ದು ಭಾನುವಾರ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ಟಿ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ನಡೆಯುವುದು ಶ್ರೀಮತಿ ಚೊಕ್ಕಮ್ಮ ಮತ್ತು ಪಾರ್ಟಿಯವರಿಂದ ಸಂಗೀತ, ಮತ್ತು ಶ್ರೀಗಳಾದ ವಿ. ವೆಂಕಟಪ್ಪ, ಪಿ ಆರ್ ರಾಮಯ್ಯ, ಸಿ ನರಸಿಂಹಮೂರ್ತಿ, ಎಂ ಪಿ ಲಿಂಗಪ್ಪಯ್ಯ ಮತ್ತು ಎಂ ಎನ್ ಜೋಯಿಸ್‌ರವರುಗಳ ಭಾಷಣ ಜರುಗುವುದು

ಸ್ಕೌಟುಗಳಿಂದ ಗ್ರಾಮಾಭಿವೃದ್ಧಿ ಕಾರ್ಯ

ಗ್ರಾಮ ಪುನರುಜ್ಜೀವನ ಕಾರ್ಯ ಮತ್ತು ಹೆಚ್ಚು ಆಹಾರ ಬೆಳೆ ಯೋಜನೆಯಲ್ಲಿ ಸ್ಕೌಟುಗಳ ಸಹಕಾರವನ್ನು ಪಡೆಯುವ ವಿಷಯವನ್ನು ಕುರಿತು ಡೆಪ್ಯುಟಿ ಚೀಫ್ ಸ್ಕೌಟ್ ಕಮೀಷನರ್, ಶ್ರೀ ಸಿ ಶಿವಶಂಕರ್ ಮತ್ತು ಇತರ ಸ್ಕೌಟ್ ಸಂಸ್ಥೆಯ ಅಧಿಕಾರಿಗಳು ಗ್ರಾಮಾಭಿವೃದ್ಧಿ ಕಮೀಷನರೊಡನೆ ಮಾತುಕತೆ ನಡೆಸಿದರೆಂದೂ ಪ್ರತಿಯೊಂದು ಜಿಲ್ಲೆಯಲ್ಲೂ ಈ ಕ್ಷೇತ್ರದ ಕಾರ್ಯದಲ್ಲಿ ಭಾಗವಹಿಸುವುದಕ್ಕಾಗಿ ಶಿಕ್ಷಣ ಕೊಡಲು ಗೌರವ ಸ್ಕೌಟ್ ಕಲಸಗಾರರನ್ನು ತಂಪೇತು ಮಾಡಬೇಕೆಂದು ತೀರ್ಮಾನಿಸಲಾಗಿದೆಯೆಂದು ಗೊತ್ತಾಗಿದೆ

ಕೃಷ್ಣರಾಜ ಮೊಹಲ್ಲಾ ನಿವಾಸಿಗಳ ಸಂಘ

ಕೃಷ್ಣರಾಜ ಮೊಹಲ್ಲಾ ನಿವಾಸಿಗಳ ಸಂಘದ ಉದ್ದೇಶಗಳನ್ನು ಪ್ರಚಾರ ಮಾಡಲು ಮತ್ತು ಸದಸ್ಯರುಗಳನ್ನು ಸೇರಿಸಲು ಶ್ರೀ ಹೆಚ್ ಕೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರೀ ಸಮಿತಿಯನ್ನು ರಚಿಸಲಾಗಿದೆ ಈ ಸಂಬಂಧದಲ್ಲಿ ಸಂಘದ ಸಭೆಯು ಮುಂದಿನ ತಿಂಗಳು ೧ನೇ ತಾ॥ ೪ ಗಂಟೆಗೆ ಒಕ್ಕಲಿಗರ ಬಡಾವಣೆ ಅರಸಿನವರ ಛತ್ರದಲ್ಲಿ ನಡೆಯುವುದು ನಿವಾಸಿಗಳು ತಮ್ಮ ಸಲಹೆಗಳನ್ನು ಇದೇ ೩೧ನೇ ತಾ॥ನೊಳಗಾಗಿ ಕಳುಹಿಸಬೇಕೆಂದು ಕೋರಲಾಗಿದೆ

ಕೇಂದ್ರ ಕಾರ್ಮಿಕ ಸಂಘವನ್ನು ಬಲಪಡಿಸಬೇಕು

ರಾಜಕೀಯ ಮತ್ತು ಇತರ ಪಕ್ಷಗಳ ಗೊಂದಲಕ್ಕೆ ಒಳಗಾಗದೆ ಸ್ವತಂತ್ರವಾದ ಕಾರ್ಮಿಕ ಪ್ರತಿನಿಧಿಗಳ ಸಮ್ಮೇಳನವು ಬೆಂಗಳೂರಿನಲ್ಲಿ ಸದ್ಯದಲ್ಲೇ ಸೇರಲಿದೆ ಅನೇಕ ಕಾರ್ಮಿಕ ಸಂಸ್ಥೆಗಳು ರಾಜಕೀಯ ಪಕ್ಷಗಳ ಕಿತ್ತಾಟಕ್ಕೆ ಸಿಕ್ಕಿ ಅವನ್ನು ಮುಂದುವರಿಸಲು ಪ್ರಯತ್ನಿಸುವುದು ಖಂಡನೀಯ ಸಂಸ್ಥಾನದ ಎಲ್ಲ ಕಾರ್ಮಿಕ ಸಂಘಗಳು ಕೇಂದ್ರ ಸಂಸ್ಥೆಗೆ ಸೇರಿ ಅದನ್ನು ಬಲಪಡಿಸಬೇಕೆಂದು ಮೈಸೂರು ಕಾರ್ಮಿಕ ಸಂಘದ ಕಾರ್ಯದರ್ಶಿ ಶ್ರೀ ಬಿ ಶ್ರೀಕಂಠಪ್ಪನವರು ಕೋರಿರುತ್ತಾರೆ

ವಿದ್ಯಾ ಗಣಪತಿ ಮಹೋತ್ಸವ

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆಯಿಂದ ಮುಂದಿನ ತಿಂಗಳು ೧೬ ನೇ ತಾ॥ ವರೆವಿಗೆ ಶ್ರೀ ವಿದ್ಯಾ ಗಣಪತಿ ಮಂಗಳಾರತಿ ಮಹೋತ್ಸವದ ಪ್ರಯುಕ್ತ, ಪ್ರತಿ ದಿನ ಸಂಜೆ ೬ ಗಂಟೆಗೆ ಉಪನ್ಯಾಸ, ಸಂಗೀತ ಮತ್ತು ಹರಿಕಥೆಗಳು ನಡೆಯುವುವು

ಪಾಕೀಸ್ತಾನದಲ್ಲಿ ಹಿಂದೂಗಳ ಆಸ್ತಿ ಮುಟ್ಟುಗೋಲು

ಪಶ್ಚಿಮ ಪಾಕಿಸ್ತಾನದಲ್ಲಿ ಮುಸ್ಲಿಮೇತರ ಪ್ರಜೆಗಳಿಗೆ ಸೇರಿದ ಅಂಗಡಿ ಇತರ ಕಟ್ಟಡಗಳು ನಗದು ಹಣ, ಮತ್ತು ಬ್ಯಾಂಕ್ ಗಳಲ್ಲಿರುವ ಡಿಪಾಜಿಟ್ ಗಳನ್ನು ನಿರಾಶ್ರಿತರ ಆಸ್ತಿಪಾಸ್ತಿಯು ಶಾಸನದಿಂದ ಸರ್ಕಾರವು ವಶಪಡಿಸಿಕೊಂಡಿದೆ ಈ ವಿಚಾರವಾಗಿ ವಿವರಗಳನ್ನು ಕಾದಿದೇವೆಂದು ಈ ಕಿಸ್ತಾನಕ್ಕೆ ಭಾರತ ಸರ್ಕಾರದ ಪ್ರತಿಭಟನಾಪತ್ರ ಬರೆದಿದೆಯೆಂದು ಗೊತ್ತಾಗಿದೆ

ಗೌವರ್ನರ್ ಜನರಲ್ಲರ ಭವನದಲ್ಲಿ ಜೋಳದ ಕಟಾವು

ಭಾರತದ ಗೌವರ್ನರ್ ಜನರಲ್ಲರ ಭವನದ ಆವರಣದಲ್ಲಿ ಹೆಚ್ಚು ಬೆಳೆ ಯೋಜನೆಯ ಅಂಗವಾಗಿ ೨೦ ಎಕರೆ ಜಮೀನಿನಲ್ಲಿ ಮುಸುಕಿನ ಜೋಳ, ಗೋದಿ ಮತ್ತು ಇತರ ಧಾನ್ಯಗಳನ್ನು ಬೆಳೆಯಲಾಗಿದೆ ಮುಸುಕಿನ ಜೋಳದ ಕಟಾವನ್ನು ನಿನ್ನೆ ರಾಜಾಜಿಯವರ ನೋಡಿ, ಹಸಿ ಮುಸುಕಿನ ಜೋಳವನ್ನು ತಿಂದರೆಂದೂ, ಬೆಳೆ ಬಹಳ ತೃಪ್ತಿಯಾಗಿದೆಯೆಂದೂ ಹೇಳಲಾಗಿದೆ

ಸೂಚನೆ

ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ - ವ್ಯವಸ್ಥಾಪಕ

ಆಹಾರ ಧಾನ್ಯಗಳ ಬೆಲೆ ಇಳಿಯಬೇಕು

ಆಹಾರ ಧಾನ್ಯಗಳ ಬೆಲೆಯನ್ನು ಕಡಿಮೆ ಮಾಡುವವರೆಗೂ ಜೀವನ ವೆಚ್ಚದ ಮಟ್ಟವನ್ನು ತಗ್ಗಿಸುವುದು ಸಾಧ್ಯವಿಲ್ಲವೆಂದು ಭಾರತ ಸರ್ಕಾರದ ಆರ್ಥಿಕ ಮಂತ್ರಿಗಳಾದ ಶ್ರೀ ಆರ್ ಕೆ ಷಣ್ಮುಖಂ ಚೆಟ್ಟಿಯವರು ತಿಳಿಸಿರುತ್ತಾರೆ

ಕಂಪನಿಯ ಅಧಿಕಾರಿಗಳೇ ಬಸ್ಸನ್ನು ನಡೆಸಿದರು

ಬೆಳಗಾವಿ ಮೋಟಾರ್ ಸರ್ವೀಸ್ ಕಂಪನಿಯ ನೌಕರರು ಮುಷ್ಕರ ಹೂಡಿದ್ದಾರೆ. ಆ ಕಂಪನಿಯ ಅಧಿಕಾರಿಗಳೇ ಒಂದು ಬಸ್ಸನ್ನು ನಡೆಸಿದರು. ಇದನ್ನು ನೋಡಿ ಸ್ಥಳೀಯ ಕೆಲಸಗಾರರು ಬಸ್ಸನ್ನು ತಡೆದರೆಂದೂ ಅಧಿಕಾರಿಗಳು ನಿರಾಕರಿಸಿದರೆಂದೂ ವರದಿಯಾಗಿದೆ

ಅವಿಶ್ವಾಸ ನಿರ್ಣಯ ತರಲು ಪಾರ್ಲಿಮೆಂಟರಿ ಸಮಿತಿಯ ಅನುಮತಿ

ಕಾಂಗ್ರೆಸ್ ಪಕ್ಷದ ನಾಯಕರ ಬಗ್ಗೆ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಅನುಮತಿಯನ್ನು ಪಡೆಯಬೇಕೆಂದೂ ಮತ್ತು ಶಾಸನ ಸಭೆ ಇರುವವರೆಗೂ ನಾಯಕರ ಅವಧಿಯು ಮುಂದುವರಿಯಬೇಕೆಂದು ನಿಗದಿ ಮಾಡಿರುವುದರಿಂದಲೂ ಪ್ರಾಂತೀಯ ಪಂಜಾಬ ಮಂತ್ರಿ ಮಂಡಲದ ಮೇಲೆ ೪೨ ಜನ ಶಾಸನ ಸಭೆಯ ವಿರೋಧ ಪಕ್ಷದವರು ತಮ್ಮ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಅವಕಾಶ ಇಲ್ಲದ ಹಾಗಿದೆಯೆಂದು ಹೇಳಲಾಗಿದೆ

ಈಗಿನ ಪರೀಕ್ಷೆ ಪದ್ಧತಿ ಬದಲಾವಣೆ ಆಗಬೇಕು

ವಿಶ್ವ ವಿದ್ಯಾನಿಲಯ ಸಮಿತಿಯ ವರದಿ

ಈಗಿನ ಪರೀಕ್ಷೆಯ ಪದ್ಧತಿಯು ಬದಲಾಗಬೇಕೆಂದೂ, ವಸ್ತುನಿಷ್ಠ ಪರೀಕ್ಷೆಗಳಾಗಬೇಕೆಂದೂ, ಪದವಿಗಳ ಸರ್ಕಾರದ ಉದ್ಯೋಗಗಳಿಗೆ ಸಾಧನವೆಂಬ ಭಾವನೆ ಹೋಗಬೇಕು. ಭಾರತದ ಶಿಕ್ಷಣ ಕ್ರಮವು ಭಾರತೀಯ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳನ್ನು ಅನುಸರಿಸಬೇಕು ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕು ಉನ್ನತ ಶಿಕ್ಷಣಕ್ಕೆ ಬೋಧ ಭಾಷೆ ಪ್ರಾದೇಶಿಕ ಭಾಷೆಯಾಗಿರಬೇಕು ಸಹ ಶಿಕ್ಷಣವು ಪ್ರಾಥಮಿಕ ಮತ್ತು ಕಾಲೇಜು ತರಗತಿಗಳಲ್ಲಿ ಮಾತ್ರ ಅವಕಾಶವಿರಬೇಕು ಇಂಗ್ಲೀಷ್ ಭಾಷೆಯನ್ನು ಕೂಡಲೇ ಮಾಡಕೂಡದು ಉಚ್ಚ ಶಿಕ್ಷಣಕ್ಕೆ ಸರ್ಕಾರದವರು ಹೆಚ್ಚು ಹಣ ಖರ್ಚು ಮಾಡಿ, ವಿದ್ಯಾರ್ಥಿಗಳಿಗೆ ಉದಾರವಾಗಿ ವೇತನಗಳನ್ನು ಕೊಡಬೇಕು ಉಪಾಧ್ಯಾಯರುಗಳ ಸಂಬಳ ಹೆಚ್ಚಬೇಕು ಕಾಲೇಜುಗಳಲ್ಲಿ ಗರಿಷ್ಠ ಮಿತಿಗಿಂತ ಹೆಚ್ಚು ವಿದ್ಯಾರ್ಥಿಗಳಿರಕೂಡದು--ಇವೇ ಮುಂತಾದ ಸಲಹೆಗಳನ್ನು ಡಾ॥ ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಶ್ವ ವಿದ್ಯಾನಿಲಯಗಳ ಸುಧಾರಣಾ ಸಮಿತಿಯವರು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ

○ ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಅಧಿವೇಶನವು ಇದೇ ೩೧ನೇ ತಾ॥ ಸೋಮವಾರ ಮಧ್ಯಾಹ್ನ ೨ ಗಂಟೆಗೆ ನಡೆಯುವುದು

ಇಲಾಖಾ ಮುಖ್ಯಾಧಿಕಾರಿಗಳ ಸಂಖ್ಯೆ ಇಳಿಸಬೇಕು

ಎಕಾನಮಿ ಅಧಿಕಾರಿಗಳ ವರದಿ

ಸ್ವಂತ ವರದಿಗಾರರಿಂದ] ಬೆಂಗಳೂರು ೨೭

ಸರಕಾರದವರು ನೇಮಿಸಿದ್ದ ವಿಶೇಷ ಮಿತವ್ಯಯಾಧಿಕಾರಿಗಳಾದ ಶ್ರೀ ಬಿ ಎಸ್ ರಾಘವೇಂದ್ರರಾಯರು ಈಗ ಇರುವ ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಶಿಫಾರಸು ಮಾಡಿರುವುದಾಗಿ ತಿಳಿದುಬಂದಿದೆ ಕೆಳಗಿನ ಸಿಬ್ಬಂದಿಯನ್ನೂ ಮತ್ತು ಬಹು ಪ್ರಮಾಣದ ವೆಚ್ಚದ ಯೋಜನೆಗಳನ್ನೂ ಕಡಿಮೆ ಮಾಡಬೇಕೆಂಬುದಾಗಿಯೂ ಅವರ ಸಲಹೆ ಮಾಡಿರುತ್ತಾರೆ ಅಧಿಕಾರಿಗಳಿಗೆ ಕೊಡಲಾಗುವ ಭತ್ಯದ ಪುನರ್ವಿಮರ್ಶೆಯಾಗಬೇಕೆಂದೂ, ಅವರ ನಿವೃತ್ತಿಕಾಲವನ್ನು ೫೫ ರಿಂದ ೫೮ಕ್ಕೆ ಹೆಚ್ಚಿಸಬೇಕೆಂದೂ ಸೂಚಿಸಲಾಗಿದೆ

ಇದಲ್ಲದೆ ಭೂಕಂದಾಯದ ಪದ್ಧತಿಯನ್ನೂ ಕೂಡಲೆ ಪುನರ್ವಿಮರ್ಶೆ ಮಾಡಿ ಏತನ್ಮಧ್ಯೆ ಎಲ್ಲಾ ಭೂಕಂದಾಯದ ಬಾಬುಗಳ ಮೇಲೆ ಶೇಕಡ ೩೩॥ ರಷ್ಟು ಜಾಸ್ತಿ ತೆರಿಗೆಯನ್ನು ಹಾಕಬೇಕೆಂದು ತಿಳಿಸಿರುತ್ತಾರೆ ಲ್ಯಾಂಡ್ ಸರ್ವೆ ರಿಕಾರ್ಡಿನ ಕಮೀಷನರ ಹುದ್ದೆಯನ್ನು ವಜಾ ಮಾಡಬೇಕೆಂದು ಸೂಚಿಸಲಾಗಿದೆ

○ ಸಂಸ್ಥಾನದ ಮುಖ್ಯಮಂತ್ರಿಗಳಾದ ಶ್ರೀ ಕೆ ಚಂಗಲರಾಯರೆಡ್ಡಿಯವರು ದೆಹಲಿಯಿಂದ ಇಲ್ಲಿಗೆ ೨೯ನೇ ತಾರೀಖು ಬರುವರೆಂದು ತಿಳಿದುಬಂದಿದೆ

○ ದಕ್ಷಿಣ ಆಫ್ರಿಕಾದ ಮುಖಂಡರಾದ ಡಾ॥ ಎಂ ಕೊಸಿಂಗೆರವರು ೨೮ನೇ ತಾ॥ ತಮ್ಮ ಅಖಿಲ ಭಾರತ ಪ್ರವಾಸದ ಅಂಗವಾಗಿ ಇಲ್ಲಿಗೆ ಆಗಮಿಸುವರು ೨೯ನೇ ತಾ॥ ಪುಟ್ಟಣ್ಣಚೆಟ್ಟಿ ಟೌನ್ ಹಾಲಿನಲ್ಲಿ ಅವರ ಉಪನ್ಯಾಸವೇರ್ಪಾಡಾಗಿದೆ ೩೦ನೇ ತಾ॥ ಹಲವು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟು ನಂತರ ರಾಜಧಾನಿಗೆ ಪ್ರಯಾಣ ಮಾಡಿ ಅಲ್ಲಿ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡುವರು.

ಮೈಸೂರಿಗೆ ಇತರ ಕರ್ಣಾಟಕ ಭಾಗಗಳು ಸೇರಲು ಒಪ್ಪಿಗೆ

ಕರ್ಣಾಟಕದ ಪ್ರದೇಶಗಳನ್ನು ಮೈಸೂರಿಗೆ ಸೇರಿಸಿ ಕರ್ಣಾಟಕ ಪ್ರಾಂತ್ಯ ರಚನೆಯಾಗಲು ಮತ್ತು ಮೈಸೂರ ಅರಸರು ಅದರ ಶಾಸನ ಬದ್ಧ ಅಧಿಪತಿಗಳಾಗಲು ಸಿದ್ಧರಾಗಿರುವರೆಂದು ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ನಿಯೋಗದವರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರಿಗೆ ಸ್ಪಷ್ಟಪಡಿಸಿದ್ದಾರೆ ಈ ವಿಷಯದಲ್ಲಿ ಒಂದು ವೇಳೆ ಇವು ಆಗದಿದ್ದರೆ ಕರ್ಣಾಟಕದ ಇತರ ಭಾಗಗಳನ್ನೇ ಸೇರಿಸಿ ಪ್ರಾಂತ್ಯ ರಚಿಸಬೇಕೆಂದು ಅವರು ಪ್ರತಿಪಾದಿಸಿದರೆಂದೂ ತಿಳಿದುಬಂದಿದೆ

ಗ್ರಾಜ್ಯುಯೇಟ್ಸ್ ಸಹಕಾರ ಸಂಘ

ರಾಜಧಾನಿಯ ಗ್ರಾಜ್ಯುಯೇಟ್ಸ್ ಸಹಕಾರ ಸಂಘದ ಗೃಹ ನಿರ್ಮಾಣ ಸಂಘವು ನಾಗೇನಹಳ್ಳಿ ಭಾವಿ ರಸ್ತೆಯ ಬಳಿ ಪ್ರಾರಂಭ ವಿಲಾಸ ಹೈಸ್ಕೂಲಿನಲ್ಲಿ ಬೋಜನ ಕೂಟವನ್ನು ಏರ್ಪಡಿಸಿದೆ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಅಮೆರಿಕದಲ್ಲಿ ಭಾರಿ ಬೆಂಕಿ ಅನಾಹುತ

ಆಸೆರಿ'ದ ದ–ಣ ಡಕೋಟಾ, ಇಡಾ ಹೋ . . . . ಸಿ ಯಾ ಮತ್ತು ವ್ಯೋ ಟಿ ಸ ಪ್ರದೇಶಗಳಲ್ಲಿ ಭಾರಿ ಬೆಂಕಿ . . . . ಏಕತೆ ಪ್ರದೇಶದಲ್ಲಿ ಬೆ . . . ತ್ತಿದ್ದುದರಿಂದ ಇದರಿಂದ ಅಪಾರ ನಷ್ಟ . . . ದಯೆಂದೂ ಹೇಳಲಾ ದೆ

ಅಂಬೇ ತರಗತಿಗಳು

ಗುಂಡ್ಲುಪೇಟೆ ೨೪

ಇ . . ನ . . . ಯಲ್ಲಿ . . . ಜಿಲ್ಲೆ . . . ಸಿಂದ . . ದೂರ . . . . ಕ ಮತ್ತು ಮಾಧ್ಯ . . . . . . ಪ್ರವಚನಗಳನ್ನು . . . . ವಿದ್ಯಾರ್ಥಿ . . . ಗಳು . . ನೇ . . . ಳಗಾಗಿ ಸೇರಲು ಅವಕಾಶವಿದೆಯೆಂದು ತಿಳಿಸಿ . ದೆ

ಉಪಾಧ್ಯಾಯರ ಮುಷ್ಕರವೇ?

ಪಶ್ಚಿಮ ಬಂಗಾಳದ ಖಾಸಗಿ ಶಾಲೇಜು ಮತ್ತು ಶಾಲೆಗಳ ೮೦೦೦ ನ ಉಪಾಧ್ಯಾಯರುಗಳು ಹೆಚ್ಚು ಸಂಬಳ ಮತ್ತು ಭತ್ಯ ಮುಂತಾದ ಬೇಡಿಕೆಗಳನ್ನು ಈಡೇರಿಸಲಿಲ್ಲವೆಂದು ಮುಷ್ಕರ ಹೂಡಲು ಪ್ರಯತ್ನಿಸುತ್ತಿದ್ದಾರೆಂದು ಹೇಳಲಾಗಿದೆ

ರಾಮಮಂದಿರದ ಆರಂಭೋತ್ಸವ

ವರುಣ ಹೋಬಳಿ ಕುಪ್ಪೇಗಾಲದಲ್ಲಿ ನಿನ್ನೆ ದಿನ ವೆ ಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಿ ಎಲ್ ನಾಗರಾಜರಾಯರು ಹರಿಜನ ಕೇರಿಯಲ್ಲಿ ರಾಮ ಮಂದಿರ ಮತ್ತು ಸಾರ್ವಜನಿಕ ಪ್ರಾಥಮಿಕ ಶಾಲೆಗಳ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಮಕ್ಕಳಿಗಿಂತಲೂ ಕೋತಿಗಳಿಗೆ ಬುದ್ಧಿ ಹೆಚ್ಚು

ಅಮೆರಿಕದ ಸುಪ್ರಸಿದ್ಧ ಮನಶ್ಶಾಸ್ತ್ರ ಪ್ರವೀಣರಾದ ಜೆಸ್ಸಿ . . . . ರವರ ನಡೆಸಿದ ಸಂಶೋಧನೆ ಪ್ರಕಾರ, ಮಕ್ಕಳಿಗಿಂತಲೂ ಕೋತಿಗಳಿಗೆ ಬುದ್ಧಿಶಕ್ತಿಯು ಹೆಚ್ಚೆಂದೂ, ಕೋತಿಗಳೇ ಅತಿ ಚುರುಕಿನಿಂದ ವರ್ತಿಸಿದವೆಂದೂ ಮಕ್ಕಳು ಮಂಕಾಗಿದ್ದವೆಂದೂ ಗೊತ್ತಾಗಿದೆ

ಹಾರ್ಮೋನಿಯಂ ನುಡಿಸಿದುದಕ್ಕೆ ದಂಡ

ಬೊಂಬಾಯಿನ ಪ್ರಾಥಮಿಕ ಶಾಲೆಯ ಉಪಾಧ್ಯಾಯರಾದ ಶ್ರೀ ಮಕ್ವಾನರವರು ತರಗತಿಯಲ್ಲಿ ಹಾರ್ಮೋನಿಯಂ . . . ದರೆಂದು ಅವರಿಗೆ ಶಾಲಾ ಅಧಿಕಾರಿಗಳು . . ರೂ ದಂಡವನ್ನು ವಿಧಿಸಿದ್ದರು ಮಕ್ಕಳಿಗೆ ಪದ್ಯ ಭಾಗದ ಪಾಠ ಹೇಳಿಕೊಡುವಾಗ ಇಂಪಿಗೋಸ್ಕರ ತಾವು ಅದನ್ನು ನುಡಿಸಿದರೆಂದೂ, ಅಧಿಕಾರಿಗಳು ತಪ್ಪು ಭಾವನೆಯಿಂದ ತಮಗೆ ಜುಲ್ಮಾನೆ ವಿಧಿಸಿದರೆಂದೂ ವಿವರಣೆ ಕೊಟ್ಟ ಮೇಲೆ ಪುರ . . . ಯವರು ದಂಡವನ್ನು ವಾಪಸ್ ಕೊಟ್ಟಿರುತ್ತಾರೆ

ಗುಡ್ಡಗಾಡಿನಲ್ಲಿ ಪರ . . . ಸ್ಥಾಪನೆಯವರ ಚಳುವ . . .

ಗುಡ್ಡಗಾಡು ಪ್ರದೇಶದಲ್ಲಿ ಪರ . . . ನವನ್ನು ಸ್ಥಾಪಿಸುವ ಬಗ್ಗೆ ನಡೆ . . . ವ ಚಳುವಳಿಯು ಅಡಗಿಲ್ಲವೆಂದು . . . ಶ್ರೀಜಗ ಆಫ್ರಿದೀ ಮತ್ತು . . . ಯ ಪಂಗಡದವರು ಒಟ್ಟಿಗೆ . . . ಮತ್ಯದಿಂದ ತಮ್ಮ ಗುರಿ ಸಾಧನೆ . . . ಲಸ ಮಾಡಬೇಕೆಂದು ನಿರ್ಧರಿ . . . ವೂ ವರದಿಯಾಗಿದೆ

ಗಣಪತಿ ಮಹಾ ಮಂಗ . . .

ರಾಜಧಾನಿಯ ನೂರಡಿ ರಸ್ತೆ . . . ವ ಹೆಂ . . ರಂಗಯ್ಯನವರ . . . ಗರ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾ . . . ರತಿಮಂಗಳಾರತಿ ಪ್ರಯುಕ್ತ ಈ ದಿ . . ಗ ನೇ ತಾ|| ವರೆವಿಗೆ ಪ್ರತಿ ದಿನ . . . ಗಂಟೆಗೆ ನರ್ತನ ಲಾವಣಿ ಮತ್ತು . . . ಯು ನಡೆಯುವವು ನಾಳೆ ಸಂಜೆ . . . ಸಭಾಧ್ಯಕ್ಷರಾದ ಶ್ರೀ ಟಿ ವೆಂಕ . . . ಯ್ಯನವರ ಅಧ್ಯಕ್ಷತೆಯಲ್ಲಿ ಪೂ . . . ರಗುವುದು

ಚಾಮುಂಡೇಶ್ವರಿ ಟಾಕೀಸ್

ಬೆಳಗಿನ ಪ್ರದರ್ಶನ

20ನೇ ತಾ . . . 3 ದಿನಗಳ ಮಾತ್ರ

. . . . 1 30 ಕ್ಕೆ

ಆರ್.ಕೆ.ಓ. ರವರ ಅದ್ಭುತ ಚಿತ್ರ

TARZAN TRIUMPHS

ಟಾರ್ಜಾನ್ - ಟ್ರಯಂಫ್ಸ್

ಗಾಯತ್ರೀ ಟಾಕೀಸ್

27 8 49ರಿಂದ ಪ್ರತಿ ದಿನ 3 ಆಟಗಳು

ಚಿತ್ರ ಪ್ರೇಮಿಗಳ ಆಕೋತ್ತರಗಳನ್ನು ಈಡೇರಿಸಲು ಅನಿರೀಕ್ಷಿತವಾಗಿ ನಿರ್ಮಿಸಿರುವ R K O ರವರ ಅದ್ಭುತ ಚಿತ್ರ

ಸಿಂದಬಾದ್ ದಿ ಸೈಲರ್

(ವರ್ಣರಂಜಿತ ಚಿತ್ರ)

ಪಾತ್ರ–ಡಗ್ಲಸ್ ಫೇರ್ ಬ್ಯಾಂಕ್ಸ್ (ಜೂನಿಯರ್), ಮಾರೀನ್ ಓ ಹರಾ

ಬೆಳಗಿನ ಪ್ರದರ್ಶನ

ರವಿವಾರ ಮತ್ತು ಭಾನುವಾರ

ಗೋಲ್ಡನ್ ಇಯರ್ ರಿಂಗ್

Remember Remember

RATAN RADIO SERVICE,

1155 Narayana Sastry Road . . .

★

For all kinds of repairs, windings etc

Japan Fans Winding a Speciality

ಮನೆ ಬಿಕರಿಗಿದೆ

ಮೈಸೂರು ದೇವರಾಜ ಮೊಹಲ್ಲಾ ದಿವಾನರ ಅಗ್ರಹಾರದಲ್ಲಿ . . . ನೇ ನ . . ರಿನ ಮನೆಯು ಕ್ರಯಕ್ಕಿದೆ ಬೆಲೆ ಸುಮಾರು ೬೦೦೦ ರೂ ವಿಚಾರಿಸಿ ಎಸ್ ವೆಂಕೋಬರಾವ್.

Edited printed and published by A K Nagarajan, at Sadhvi Press D Subbiah Road, Mysore

ಶ್ರೀ ಗಣೇಶಾ ಟಾಕೀಸ್

27-8-49ರಿಂದ ಪ್ರತಿ ದಿನ 4 ಪ್ರದರ್ಶನಗಳು

ಮಾಡರ್ನ್ ಥಿಯೇಟರ್ಸ್‌ರವರ ತಮಿಳು ಚಿತ್ರ

1000 ತಲೈವಾಂಗಿ ಅಪೂರ್ವ ಚಿಂತಾಮಣಿ

ತಾರಾಗಣ –ಪಿ. ಎಸ್. ಗೋವಿಂದನ್, ಕಾಳಿ ಎನ್ ರತ್ನಂ, ಮೊರೆ ರಾಜ್, ಸರಲಕ್ಷ್ಮಿ, ವಿ.ಎನ್ ಜಾನಕಿ, ರಾಜಕಾಂತಂ ಮುಂತಾದವರು

ಚಾಮುಂಡೇಶ್ವರೀ ಟಾಕೀಸ್

26—8—49ರಿಂದ ಯಶಸ್ವಿಯಾದ 4ನೇ ವಾರ

ಕೊನೇ 3 ದಿನಗಳು

– ನವಜೀವನಂ –

ನಾಗಯ್ಯ, ಕನ್ನಾಂಬ, ಎಲ್ ನಾರಾಯಣ ರಾವ್, ಟಿ ಆರ್ ರಾಮಚಂದ್ರನ್ ಪಾತ್ರವಹಿಸಿರುವ ತಮಿಳು ಚಿತ್ರ

(R V ಪಿಕ್ಚರ್ಸ್ ರಿಲೀಸ್

RAJKAMAL, MYSORE

GALA OPENING Daily 3 Shows FROM 26 8 49

Grand Double Programme

The First Russian Picture for the First Time

THE STONE FLOWER

(In Technicolor in Hindi)

THE FESTIVAL OF YOUTH

(In Technicolor in English)

Winner of the First Prize at the International Film Festival at Cannes, France

MORNING SHOWS From 26-8-4' For 4 days

The Prince of Thieves

(In Cine Colour)

With Jon Hall Patricia Morrison

. . . . Screen before Rare Lusty Robinhood Secrets!

ಪ್ರಭುದೇವಾ ಟಾಕೀಸ

26 8–49ನೇ ಶುಕ್ರವಾರದಿಂದ

✻ ಮಹಾತ್ಮ ಉದಂಗರ್

ಪ್ರತಿ ದಿನ ಮೂರು ಪ್ರದರ್ಶನಗಳು

ಪಾತ್ರ –ಕೊತ್ತಮಂಗಲಂ ಸೀನು, ಅಂಜಲಿದೇವಿ, ಟಿ ಆರ್ ರಾಮಚಂದ್ರನ್ ಬೇಬಿ ಕಮಲ, ವಿಜಯ ಕುಮಾರಿ ಮುಂತಾದವರು

ಪ್ರಭಾ 26–8–49 ರಿಂದ

ಅನೋಘವಾದ 4ನೇ ವಾರ

ಶೋಭನಾಚಲ ರವರ ಮದಾಲಸ ತೆಲುಗು ಚಿತ್ರ

ಮ . . ನಾಸ್ಟ್ರೀ ಅಂಜಲಿದೇವಿ, ಕೃಷ್ಣವೇಣಿ,

MORNING SHOWS

From 6 8 49 for 3 days only

M G M Mrs. PARKINGTON

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೨೭-೮-೧೯೪೪ [ಸಂಚಿಕೆ ೬

-ತಾತಯ್ಯನವರ- ಶತಮಾನೋತ್ಸವ

ಆರ್. ಎಸ್. ಎಸ್. ನೌಕರರಿಗೆ ಕೆಲಸವಿಲ್ಲ

ಆರ್ ಎಸ್ ಎಸ್ ಚಳುವಳಿಯಲ್ಲಿ ಸೇರಿದ್ದ ನೌಕರರನ್ನೂ ಪುನಃ ಕೆಲಸಕ್ಕೆ ಸೇರಿಸಿಕೊಳ್ಳಕೂಡದೆಂದು ಭಾರತ ಸರಕಾರದವರು ಎಲ್ಲಾ ಇಲಾಖೆಗಳಿಗೂ ತಾಕೀತು ಮಾಡಿರುವುದಾಗಿ ತಿಳಿದುಬಂದಿದೆ ಅಲ್ಲದೆ ಸರಕಾರಿ ನೌಕರರು ಯಾವ ರಾಜಕೀಯ ಚಟುವಟಿಕೆಗಳಲ್ಲೂ ಭಾಗವಹಿಸದಿರಲು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ತಿಳಿಸಲಾಗಿದೆ

ಹಿಂದಿ ತರಗತಿಗಳು

ರಾಜಧಾನಿಯ ಗೊಲ್ಲಗೇರಿಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ೧೯೪೪ ರಿಂದ ಸಂಜೆಯ ವೇಳೆ ಹಿಂದಿ ಪ್ರಾಥಮಿಕ, ಮಧ್ಯಮ ತರಗತಿಗಳು ನಡೆಯುತ್ತವೆ ಉತ್ಸಾಹಿಗಳು ಬಂದು ಸೇರಬೇಕೆಂದು ಸಂಚಾಲಕರು ಪ್ರಾರ್ಥಿಸಿರುತ್ತಾರೆ

ವೃದ್ಧ ಪಿತಾಮಹ, ದಯಾಸಾಗರ ಶ್ರೀಮಾನ್ ಎಂ ವೆಂಕಟಕೃಷ್ಣಯ್ಯನವರ ಶತಮಾನೋತ್ಸವವು ಈ ದಿನ ಮೈಸೂರು ಪುರಭವನದಲ್ಲಿ ವೈಭವದಿಂದ ಆಚರಿಸಲ್ಪಡುತ್ತಿದೆ

ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ

ಬೆಂಗಳೂರು ೨೮

ಅಖಿಲಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ಆರನೆಯ ಅಧಿವೇಶನವು ಸೆಪ್ಟಂಬರ್ ೪ ನೇ ತಾರೀಖು ಭಾನುವಾರ ಮತ್ತು ೫ ನೇ ತಾರೀಖು ಸೋಮವಾರ ಬೆಂಗಳೂರು ವಿಶ್ವೇಶ್ವರ ಪುರದಲ್ಲಿರುವ ಶ್ರೀ ಸಜ್ಜನರಾಯರ ಕಲ್ಯಾಣ ಮಂಟಪದಲ್ಲಿ ನಡೆಯುವುದು "ವಿಶ್ವಕರ್ಣಾಟಕ" ದಿನ ಪತ್ರಿಕೆಯ ಸಂಪಾದಕರಾದ ಶ್ರೀ ಎನ್ ಎಸ್ ವೆಂಕೋಬರಾಯರು ಅಧ್ಯಕ್ಷತೆ ವಹಿಸುವರು

ಮದ್ರಾಸಿನ "ಸ್ವತಂತ್ರ ವಾರ ಪತ್ರಿಕೆಯ ಸಂಪಾದಕರಾದ ಶ್ರೀ ಖಾಸಾ ಸುಬ್ಬರಾಯರು ಅಧಿವೇಶನದ ಆರಂಭೋತ್ಸವ ನಡಿಸುವರು ಕಾರ್ಯಕ್ರಮ ಸೆ॥ ೪ ನೇ ಭಾನ ವಾರ ಪ್ರಾತಃಕಾಲ ೯-೩೦ ಘಂಟೆಗೆ ಅಧಿವೇಶನದ ಪ್ರಾರಂಭೋತ್ಸವ, ಮಧ್ಯಾಹ್ನ ವಿಷಯ ನಿಯಾಮಕ ಸಮಿತಿ ಸಭೆ ಮತ್ತು ಬಹಿರಂಗ ಅಧಿವೇಶನ ೫ ನೇ ತಾರೀಖು ಸೋಮವಾರ ಬಹಿರಂಗ ಅಧಿವೇಶನ

ಸಂಗೀತ ಕಛೇರಿ

ಮೈಸೂರು ಲಕ್ಷ್ಮೀಪುರದಲ್ಲಿರುವ ಹೊಯ್ಸಳ ಕರ್ಣಾಟಕ ವಿದ್ಯಾರ್ಥಿ ನಿಲಯದಲ್ಲಿ ಗಣಪತಿ ಪೂಜೆ ಸಂಬಂಧವಾಗಿ ಈ ದಿನ ಸಂಜೆ ೬ ಗಂಟೆಗೆ ವಿ ಮುತ್ತಣ್ಣನವರ ಪಿಟೀಲು, ಸಾಹಿತ್ಯರತ್ನಂ ಕೆ. ಗೋಪಾಲಕೃಷ್ಣಾ ಶಾಸ್ತ್ರಿಗಳವರ ಮಕ್ಕಳು ವಿ॥ ರಾಮಸ್ವಾಮಿ ಶಾಸ್ತ್ರಿಗಳವರಿಂದ ವೇಣುಗಾನ ಮತ್ತು ವಿ ನಂಜಪ್ಪನವರಿಂದ ಮೃದಂಗ ಏರ್ಪಡಿಸಲಾಗಿದೆ ನಿನ್ನೆ ಸಂಜೆ ಗಾನವಿಶಾರದ ತಿಟ್ಟೆ ಕೃಷ್ಣಯ್ಯಂಗಾರ್ಯರ ಗಾನವು ವಿ॥ ರಾಮರಾಯರ ಮೃದಂಗ ಮತ್ತು ವಿ ಶಿವರಾಮಯ್ಯನವರ ಪಿಟೀಲಿನೊಡನೆ ಏರ್ಪಡಿಸಲಾಗಿತ್ತು

ಹರಿಕಥಾ ವಿದ್ವಾನ್ ಎಚ್ ಟಿ ಶಾನ ಣ್ಣನವರು ನಿನ್ನೆ ದಿನ ತಮ್ಮ ಮನೆಯಲ್ಲಿ ಗಣಪತಿ ಮಂಗಳಾರತಿ ಸಂದರ್ಭದಲ್ಲಿ ವಿ॥ ಬಿ ಕೆ ಪದ್ಮನಾಭರಾವ್ ಗಾಯನ ವೆ ನ್ನಾ ವಿ ಪಿ ಮಾನ ನ ಮತ್ತು ವಿ॥ ಕೃಷ್ಣಮೂರ್ತಿ ಪಿಟೀಲಿನೊಡನೆ ಏರ್ಪಡಿಸಿದ್ದರು

ಕಾಂಗ್ರೆಸ್ ಕೆಲಸಗಾರರ ಸಭೆ

ನಾಳೆ ಸಂಜೆ ೬ ಗಂಟೆಗೆ ನಗರದ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರರ ಸಭೆಯು ಜರುಗುವುದು ಕೆಲಸಗಾರರೆಲ್ಲರೂ ಹಾಜರಿರಬೇಕೆಂದು ಶ್ರೀ ಟಿ ಎಸ್ ಸುಬ್ಬಣ್ಣ ಮುಂತಾದವರು ಕೋರಿರುತ್ತಾರೆ

ಸುಣ್ಣದ ಸರಬರಾಜು

ಮೈಸೂರು ದೇವರಾಜ ಮಾರ್ಕೆಟ್ಟಿನ ಗಡಿಯಾರದ ಚೌಕದಲ್ಲಿ ಪೌರಸಭೆಯ ಸೂಯೆಜ್ ಫಾರಂನಿಂದ ರೋಡ್ಸ್ ಗ್ರಾಸ್ (ಸೀಮೆ ಹುಲ್ಲನ್ನು) ಪ್ರತಿ ದಿನ ಬೆಳಗ್ಗೆ ೨೫ ಪೌಂಡುಗಳಂತೆ ಒಂದಕ್ಕೆ ೬ ಆಣೆಯಂತೆ ಬೇಕಾದವರಿಗೆ ಇಡಲಾಗುವುದೆಂದು ತಿಳಿಸಲಾಗಿದೆ

ಟಿಬೆಟ್ಟಿನ ಅಭಿಮುಖವಾಗಿ ಕಮ್ಯೂನಿಸ್ಟ್ ಸೈನ್ಯ

ಚೀಣದ ಕಟ್ಟಕಡೆಯ ಪಶ್ಚಿಮ ಪ್ರಾಂತವಾದ ಕಿಂಗ್ಸುವಿನ ಮುಖ್ಯಪಟ್ಟಣ ಲ್ಯಾಂಚೌ ನಗರವನ್ನು ಚೀಣೀ ಕಮ್ಯೂನಿಸ್ಟ್ ಸೈನ್ಯಗಳು ಪ್ರವೇಶಿಸಿವೆ ಈ ನಗರವು ಟಿಬೆಟ್ಟಿನ ಗಡಿಗೆ ಸ್ವಲ್ಪ ದೂರದಲ್ಲಿ ಮಾತ್ರವಿದೆ

ಸರ್ಕಾರಿ ಡಿಪೋವಿನಿಂದ ಅಕ್ಕಿ ಅಕ್ರಮ ರವಾನೆ?

ಗುಂಡ್ಲುಪೇಟೆ ೨೬

ಇಲ್ಲಿನ ರಿಸರ್ವ್ ಡಿಪೋವಿನಿಂದ ೨೩ ನೇ ತಾರೀಖು ನಡುರಾತ್ರಿ ಸಮಯದಲ್ಲಿ ಎಪ್ಪತ್ತು ಸೇರು ಅಕ್ಕಿ, ೩೦ ಸೇರ ಗೋಧಿಯು ಖಾಸಗೀ ಲಾರಿಯೊಂದರಲ್ಲಿ ಸಾಗುತ್ತಿದ್ದುದನ್ನು ಪೋಲೀಸರು ಹಿಡಿದು ತನಿಖೆ ನಡೆಸುತ್ತಿದ್ದಾರೆ ಈ ಧಾನ್ಯಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯ ಇಬ್ಬರು ನೌಕರರಿಗೆ ಕೊಟ್ಟಿದ್ದಾಗಿಯೂ ಅವರುಗಳು ಇದನ್ನು ಲಾರಿಯಲ್ಲಿ ತರುವ ಸಮಯದಲ್ಲಿ ಇಷ್ಟುದಾಗಿಯೂ ತಿಳಿದುಬಂದಿದೆ

ಹಿಂದೂಸ್ಥಾನಿ ಗಾನ

ಈ ರಾತ್ರಿ ೯ಳ ಗಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದಸ್ವಾಮಿಗಳ ಔಷಧಾಲಯದಲ್ಲಿ ಜನಾಬ್ ಮಹಮದ್ ಇಬ್ರಾಹಿಂ ಮತ್ತು ಶ್ರೀ ಬಾಲಚಂದ್ರ ಇವರ ವಾರ್ಕೆಯಿಂದ ಹಿಂದೂಸ್ಥಾನಿ ಸಂಗೀತವು ನಡೆಯುತ್ತದೆ

ಶಾರದಾವಿಲಾಸ ಕಾಲೇಜ್ ಸಂಘ

ನಾಳೆಯಿಂದ ಸಂಘದ ಆಶ್ರಯದಲ್ಲಿ ಶ್ರೀ ತರ ವಿಜ್ಞಾನದ ಉಪನ್ಯಾಸವನ್ನು ಉಪಮ ಪ್ರಿನ್ಸಿಪಾಲ್ ಶ್ರೀ ಎ ಸುಬ್ರಹ್ಮಣ್ಯ ರವರನ್ನು ಕಾರ್ಯದರ್ಶಿಯನ್ನಾಗಿ ಆರಿಸಲಾಗಿದೆ

ಲಂಡನ್ನಿಗೆ ರಾಧಾಕೃಷ್ಣರ ಆಗಮನ

ಮಾಸ್ಕೋ ನಿಂದ ಭಾರತದ ರಾಯಭಾರಿಯಾಗಿ ನೇಮಕರಾಗಿರುವ ಸರ್ ಸರ್ವೆಪಲ್ಲಿ ರಾಧಾಕೃಷ್ಣರವರು ಲಂಡನ್ನಿಗೆ ವಿಮಾನದಲ್ಲಿ ಆಗಮಿಸಿದವರು ಇಂಗ್ಲೆಂಡ ಒಪ್ಪಂದ ಮಾತುಕತೆಗೆ ತೆರಳುವರು ಅವರ ಬಳಿಕ ರಾಜ್ಯಾಂಗ ಲಾರ್ಡ್ ಹೆಂಡರ್ಸನರವರ ಜೊತೆಗೆ ಈ ದಿನ ಪ್ರಯಾಣ ಮಾಡಿದರು ನಾಳೆ ಅವರು ಬೆಕಲಿಗೆ ಹಿಂತಿರುಗಿ ತೆರಳುವರು

ವಾರ ಭವಿಷ್ಯ

ತಾ॥ 28-8-49 ರಿಂದ 3-9-49 ರವರೆಗೆ

ಮೇಷ— ನಮ್ಮ ಬಾವನೆ ಕಾರ್ಯ ರೂಪಕ್ಕೆ ಬರುವ ಸುಂದರ ವಾತಾವರಣ ಸ್ನೇಹಿತರ ಪ್ರಿಯ ಜನ ಭೇಟಿ ನೌಕರಿಯ ಸ್ಥಳಗಳಲ್ಲಿ ಶುಭ ವಾರ್ತೆ ತಾ॥ ೩೦, ೩೧ ಮನ ರಂಜನೆ ಗೊಂದಲ

ವೃಷಭ— ಪ್ರಯತ್ನ ಪ್ರಮಾಣದ ಮಾನ ಸನ್ಮಾನ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರಗತಿ ಲಾಭವುಂಟು ಸುಖ ಪ್ರವಾಸ ಪ್ರವಾಸದ ಉದ್ದಿಶ್ಯ ಕೈಗೂಡುವುದು ಸುಂದರ ಸ್ತ್ರೀಯರ ಪರಿಚಯ ಕೋರ್ಟು ವ್ಯವಹಾರದಲ್ಲಿ ಜಯ ತಾ॥ ೧, ೨ ಮನ ರಂಜನೆ

ಮಿಥುನ— ಕಳೆದ ವಾರದಷ್ಟು ಉಗ್ರ ಸ್ಥಿತಿ ಇರದು ಶುಭ ವಾರ್ತೆಗಳು ಸ್ವಾಗತ ಸಮಾಧಾನ ನೌಕರಿ ದಂಧೆಗಳಲ್ಲಿ ಆಶಾದಾಯಕ ಘಟನೆ ಹಣ ಕಾಸಿನ ಲಾಭ, ಆದರೆ ಎಲ್ಲವೂ ಖರ್ಚಾಗುವುದು ಪರೋಪಕಾರ ಕಾರ್ಯ, ಪತ್ನಿಯ ಸಹಕಾರ ತಾ॥ ೨, ೩ ಆನಂದ, ಉತ್ಸಾಹ. ಪ್ರಿಯ ಜನ ಭೇಟಿ

ಕರ್ಕ— ಮಾನಸಿಕ ಕಷ್ಟ, ಬಹಳ ಹೊಸ ಜವಾಬ್ದಾರಿ ಬೀಳುವುದು ಆರೋಗ್ಯ ತೃಪ್ತಿಕರವಿಲ್ಲ ಎಷ್ಟೋ ಜನರು ಮೂರ್ಖರಾಗುವರು ವ್ಯಾಪಾರಾದಿಗಳಲ್ಲಿ ಕಷ್ಟ ಅಸ್ಥಿರದ ಚಿತ್ತ ವೃತ್ತಿಯಿಂದ ಹಣ ಖರ್ಚು ಶ್ರಮವಾದರೆ ಚೆನ್ನಾಗಿರುವುದು, ತಾ॥ ೨, ೩ ಅಪ್ರಿಯ ವಾರ್ತೆ, ಕಲಹ

ಸಿಂಹ— ನಿಮ್ಮ ಕೀರ್ತಿ ಹಂಗಸ್ಥೆ ವಿರೋಧಿಗಳ ಪ್ರಯತ್ನ ಅದಕ್ಕಾಗಿ ಇಲ್ಲದ ಆಲೋಚನೆ ಮನಸ್ಸಿಗೆ ಬೇಸರವಾಗುವ ಘಟನೆ ಹಣ ಕಾಸಿನ ಹೆಚ್ಚು ಖರ್ಚು ಆರೋಗ್ಯ ಚೆನ್ನಾಗಿರದು ನೌಕರಿ ದಂಧೆಗಳಲ್ಲಿ ಅಲಕ್ಷ್ಯ ತಾ॥ ೩೦, ೩೧ ಮಾನ ಹಾನಿ, ದುಷ್ಟ ವಾರ್ತೆ, ಅಗ್ನಿ ಭಯ

ಕನ್ಯಾ— ಸಾಲಕ್ಕಾಗಿ ಹಲವರು ನಿಮ್ಮ ಬಳಿಗೆ ಬರುವರು ಅಂತಹವರ ಉದ್ದಿಶ್ಯ ಒಳ್ಳೆಯುದಲ್ಲ ಆರೋಗ್ಯ ನೆಟ್ಟಗೆ ಸದ್ಭಾವನೆ ಮಿತ್ರರ ಭೇಟಿ ನೌಕರಿ ದಂಧೆಗಳಲ್ಲಿ ಉಲ್ಲಾಸ ತಾ॥ ೩೦, ೩೧ ಆಕಸ್ಮಿಕ ಪ್ರವಾಸ, ಲಾಭ

ತುಲಾ – ಒಳ್ಳೆಯ ಘಟನೆಗಳು ಜರುಗುವುವು ಆರೋಗ್ಯ ನೆಟ್ಟಗೆ. ಕಠಿಣ ಕರ ಪ್ರಸಂಗಗಳು ಯಶಸ್ವಿಯಾಗಿ ಮುಕ್ತಾಯವಾಗುವುವು ವ್ಯಾಪಾರಾದಿಗಳಲ್ಲಿ ಲಾಭ. ತಾ॥ ೧, ೨ ವಾಹನ ಸುಖ, ಮಹತ್ವದ ಪತ್ರ

ವೃಶ್ಚಿಕ— ಕೃಷ್ಣಪಕ್ಷದ ಜೀವನದ ನಿವೃತ್ತಿ, ಆರೋಗ್ಯದ ಸುಧಾರಣೆ ನೌಕರಿಯಲ್ಲಿ ಉಂಟಾಗಿದ್ದ ಅಪಮಾನವು ಪರಿಹಾರ ಆದರೂ ಎಚ್ಚರಿಕೆ ಇರಲಿ ತಾ॥ ೧, ೩ ಧನ ಲಾಭ ಅನುಕೂಲ ವಾರ್ತೆ

ಧನು— ಅವಿಚಾರದ ಕಾರ್ಯ, ಆರೋಗ್ಯ ಬಿಗಡಾಯಿಸುವುದು ನೌಕರಿ ದಂಧೆಗಳಲ್ಲಿ ಅಲಕ್ಷ್ಯ. ಧನ ನೀರಿನಂತೆ ಖರ್ಚಾಗುವುದು ತಾ॥ ೩೦, ೩೧ ಕಲಹ, ಕೀಳು ಜನ ಸಹವಾಸ

ಮಕರ— ಮನರಂಜನೆಯ ಘಟನೆ ವಾರದ ಕೊನೆಯಲ್ಲಿ ಬೇಸರಿಕೆಯಾಗುವ ಸ್ಥಿತಿ ಉಂಟು ತಾ॥ ೧, ೩ ರಲ್ಲಿ ಕಲಹ, ಖೇದಕರ ಘಟನೆ.

ಕುಂಭ— ಆಸೆಯ ಅಂಕುರ ವುಂಟಾಗುವುದು ಆರೋಗ್ಯ, ಹಣಕಾಸಿನ ಸ್ಥಿತಿ ಚೆನ್ನಾಗಿರುವುದು ವ್ಯಾಪಾರಾದಿಗಳಲ್ಲಿ ಬರವಸೆ ತಾ॥ ೧, ೨, ಧನ ಲಾಭ, ಶುಭಕಾರ್ಯ, ಆನಂದ

ಮೀನ — ವಾರ ಆಪಯಶದಾಯಕವಲ್ಲ. ಹಣಕಾಸಿನ ಖರ್ಚು ಅಧಿಕ ಕಾರ್ಯಗಳು ಅಪ್ಪಕ್ಕೇ ನಿಲ್ಲುವುವು ತಾ॥ ೨೮-೨೯ ದಾಂಧಲೆ, ಜಾಗರಣೆ

ಕಾದ ಕಬ್ಬಿಣದ ಸಲಾಕಿಯಿಂದ ಸೊಸೆಗೆ ಬರೆ

ಪೂನದ ಪಾರ್ವತಿ ಮಲವಂಡೆಯೆಂಬಾಕೆಯುನ್ನು ಅವಳ ಗಂಡ ಮತ್ತು ಅತ್ತೆ ಸೇರಿ ಹಿಂಸಿಸಿದುದಕ್ಕಾಗಿ ಗಂಡನಿಗೆ ೧೦೦ ರೂ ಮತ್ತು ಅತ್ತೆಗೆ ೨೦೦ ರೂ ಗಳನ್ನು ಜುಲ್ಮಾನೆ ವಿಧಿಸಲಾಗಿದೆ ಅವರಿಬ್ಬರೂ ಸೇರಿ ಆಕೆಯನ್ನು ಕಟ್ಟಿಹಾಕಿ ಕಾದ ಕಬ್ಬಿಣದ ಸಲಾಕಿಯಿಂದ ಬೆನ್ನಿನ ಮೇಲೆ ಬರೆ ಎಳೆದರೆಂದೂ, ಆಕೆಯ ಕೈಗಳನ್ನು ಸುಟ್ಟರೆಂದೂ ಆಪಾದಿಸಲಾಗಿದೆ

ನಿಮ್ಮ ಮೈ ಮೊಕವಲ್ಲಿನಂತೆ ಹೊಳೆಯಬೇಕೆ ? ನೀವು 'ಲಾವಣ್ಯಮೂರ್ತಿಗಳಾಗಬೇಕೆ' ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಶ್ರೀ ಚಾಮುಂಡೇಶ್ವರೀ ಟಾಕೀಸ್

29-8-49 ರಿಂದ 4 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಸಾಮ್ರಾಟ್ ಚಂದ್ರಗುಪ್ತ

(ಹಿಂದಿ)

ಪಾತ್ರ – ಈಶ್ವರಲಾಲ್, ಸುರೈಯ

Edited, printed and published by A R. Nagarajan, at Sadhvi Press, D Subbiah Road, Mysore.

RAJKAMAL, MYSORE

GALA OPENING Daily 3 Shows FROM 26-8-49

Grand Double Programme

The First Russian Picture for the First Time

THE STONE FLOWER

(In Technicolor in Hindi)

THE FESTIVAL OF YOUTH

(in Technicolor in English)

Winner of the First Prize at the International Film Festival, at Cannes, France

MORNING SHOWS From 26-8-49 For 4 days

The Prince of Thieves

(In Cine Colour)

With-JOHN HALL, PATRICIA MORRISON.

Never told on any Screen before ! Rare, Lusty Robinhood Secrets !!

ಘನವಾದ ಸಂಗೀತ ಕಛೇರಿ

ಮೈಸೂರು ಟೌನ್ ಹಾಲಿನಲ್ಲಿ

6-9-49 ನೇ ಮಂಗಳವಾರ

— ಸಾಯಂಕಾಲ ಆರು ಘಂಟೆಗೆ —

(ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದ ನಿಧಿಗಾಗಿ)

ಶ್ರೀಮತಿ ಕೋಕಿಲ ಗಾನ ಇಷೈವಾಣಿ

ಎಂ. ಎಸ್. ಸುಬ್ಬುಲಕ್ಷ್ಮಿಯವರ ಗಾನ

ಸಂಗೀತ ರತ್ನ ಆ॥ ವಿ॥ ಟಿ. ಚೌಡಯ್ಯನವರ ಪಿಟೀಲು

ವಿ॥ ಕಲ್ಪಾತಿ ರಾಮನಾಥರವರ ಮೃದಂಗ,

ವಿ॥ ಅಲ್ಲಂಗುಡಿ ರಾಮಚಂದ್ರರವರ ಘಟಂ

ಮೆಂಬರುಗಳಲ್ಲದವರಿಗೆ ಟಿಕೇಟ್ ಮೂಲಕ ಪ್ರವೇಶ

ಮೆಂಬರುಗಳಿಗೆ ಕೊನೇ ಎರಡು ತರಗತಿಗಳಲ್ಲಿ ವಿನಹಾ ಬಾಕಿ ತರಗತಿಗಳಲ್ಲಿ ಅರ್ಧ ಛಾರ್ಜು.

ಟಿಕೇಟು ದರ. – ಗಂಡಸರಿಗೆ ರೂ. 25, 15, 10, 5 ಮತ್ತು 2,

,, ಹೆಂಗಸರಿಗೆ ರೂ 15, 10, 5 ಮತ್ತು 2

—: ಟಿಕೇಟು ದೊರೆಯುವ ಸ್ಥಳ : —

1) ರಾಮ ಮಂದಿರಂ, ಮೈಸೂರು, ಬೆಳಿಗ್ಗೆ ೯ ರಿಂದ ೧೨ ಘಂಟೆ ವರೆಗೆ ಸಾಯಂಕಾಲ ೪ ರಿಂದ ೬ ಘಂಟೆ ವರೆವಿಗೆ ,

2) ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಸೆಕ್ರೆಟರಿಯವರ ಆಫೀಸಿನಲ್ಲಿ - ಬೆಳಿಗ್ಗೆ ೯ ರಿಂದ ೧೦-೩೦ ರ ವರೆಗೆ, ಸಂಜೆ ೭ ರಿಂದ ೯ ರ ವರೆಗೆ

ಡಿ. ಕಪಿನೀಪತಿ ರಾವ್, ಗೌ॥ ಕಾರ್ಯದರ್ಶಿ

ಶ್ರೀ ಗಣೇಶಾ ಟಾಕೀಸ್

27-8-49 ರಿಂದ ಪ್ರತಿ ದಿನ ೩ ಪ್ರದರ್ಶನಗಳು

ಮೊಡರ್ನ್ ಥಿಯೇಟರ್ಸ್‌ರವರ ತಮಿಳು ಚಿತ್ರ

1000 ತಲೈವಾಂಗಿ ಅಪೂರ್ವ ಚಿಂತಾಮಣಿ

ಪಾತ್ರ — ಪಿ. ಎಸ್. ಗೋವಿಂದನ್, ಕಾಳಿ ಎನ್. ರತ್ನಂ, ದೊರೆರಾಜ್, ವರಲಕ್ಷ್ಮಿ, ವಿ. ಎನ್. ಜಾನಕಿ, ರಾಜಾಕಾಂತಂ ಮುಂತಾದವರು

ಪ್ರಭುದೇವಾ ಟಾಕೀಸ್

26-8-49 ನೇ ಶುಕ್ರವಾರದಿಂದ

* ಮಹಾತ್ಮ ಉದಂಗರ್ *

[ತಮಿಳು

ಪ್ರತಿ ದಿನ ಮೂರು ಪ್ರದರ್ಶನಗಳು

ಪಾತ್ರ — ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ. ಆರ್. ರಾಮಚಂದ್ರನ್, ಬೇಬಿ ಕಮಲ, ವಿಜಯಕುಮಾರಿ ಮುಂತಾದವರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಸೋಮವಾರ ೨೯-೮-೧೯೪೯ [ಸಂಚಿಕೆ ೨೯

ಅಂಚೆ ಕವರಿನ ಬೆಲೆ ೧॥ ಆಣೆ ಆಗುವುದೇ?

ಮೈಸೂರಿನ ಅಭ್ಯುದಯಕ್ಕೆ ತಾತಯ್ಯನವರೇ ಮೂಲ ಕಾರಣರು

ಶತಮಾನೋತ್ಸವದಲ್ಲಿ ವೃದ್ಧ ಪಿತಾಮಹರ ಗುಣಗಾನ

ಮೈಸೂರು ೨೮

ವೃದ್ಧ ಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಶತಮಾನೋತ್ಸವ ಸಮಾರಂಭವು ನಿನ್ನೆ ಪುರಭವನದಲ್ಲಿ ವಿಶೇಷ ವೈಭವದಿಂದ ಆಚರಿಸಲ್ಪಟ್ಟಿತು ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಕಾರ್ಯ ಗೌರವ ನಿಮಿತ್ತ ದೆಹಲಿಯಿಂದ ಬರಲಾಗದಿದ್ದ ಪ್ರಯುಕ್ತ ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ವೃದ್ಧ ಪಿತಾಮಹರ ಗುಣ ಕಥನ ರೂಪವಾಗಿ ಕೀರ್ತನ ಕಲಾನಿಧಿ, ಗಾಯತ್ರಿ ಮುಕ್ಕದೀಕ್ಷಿತ ಗಮಕಿ ರಾಮಕೃಷ್ಣ ಶಾಸ್ತ್ರಿಗಳವರಿಂದ ವಿರಚಿತವಾದ ಪದ್ಯ ಮಾಲಿಕೆ ಮತ್ತು ಶ್ರೀಮತಿ ಎಸ್ ರತ್ನಮ್ಮನವರು ಪಠಿಸಿದರು ಉತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಸರ್ವರಿಗೂ ಸ್ವಾಗತವನ್ನು ನೀಡಿದರು.

ಸಂಗೀತ ವಿದುಷಿ ಶ್ರೀಮತಿ ಎನ್ ಚೊಕ್ಕಮ್ಮನವರ ಗಾನವು, ಆಸ್ಥಾನ ವಿದ್ವಾನ್ ಎಸ್ ವೆಂಕಟರಾಮಣಯ್ಯನವರ ಪಿಟೀಲು ಮತ್ತು ಆಸ್ಥಾನ ವಿದ್ವಾನ್ ವಿ ಶೇಷಪ್ಪನವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು

ಸಮಾರಂಭಕ್ಕಾಗಿ ಈ ಕೆಳಗೆ ಕಂಡ ಮಹನೀಯರುಗಳಿಂದ ಬಂದಿದ್ದ ಸಂದೇಶಗಳನ್ನು ಶ್ರೀ ಅಗರಂ ರಂಗಯ್ಯನವರು ಓದಿದರು:- ಸರ್ ಎಂ ವಿಶ್ವೇಶ್ವರಯ್ಯನವರು, ಆರ್. ಆರ್. ದಿವಾಕರ್, ಸರ್ ಎ ರಾಮಸ್ವಾಮಿ ಮೊದಲಿಯಾರ್, ಎಸ್ ಟಿ. ರಾಜಗೋಪಾಲಾಚಾರಿಯವರು ನಿಟ್ಟೂರು ಮಾಧವರಾವ್, ಎ ವಿ ರಾಮನಾಥ್, ಟಿ ಮಹದೇವಯ್ಯ, ಕೆ ಟಿ ಭಾಷ್ಯಂ, ಟಿ ಮರಿಯಪ್ಪ, ಡಿ ವಿ ಗುಂಡಪ್ಪ, ಆಲೂರು ವೆಂಕಟರಾಯರು, ಎಂ ಪಿ. ಸೋಮಶೇಖರರಾವ್, ಎಸ್ ಜಿ ಶಾಸ್ತ್ರಿ, ಬಿ. ಗರುಡಾಚಾರ್, ಸಿ ಕೆ ವೆಂಕಟರಾಮಯ್ಯ, ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಬಿ. ಶಿವಮೂರ್ತಿ ಶಾಸ್ತ್ರಿ, ಎಂ ಪಿ ಎಲ್ ಶಾಸ್ತ್ರಿ, ಸಿ ನರಸಿಂಹಮೂರ್ತಿ

ಶ್ರೀಗಳಾದ ಪಿ ಆರ್ ರಾಮಯ್ಯ ಆರ್ ಶ್ರೀನಿವಾಸಯ್ಯ, ಡಾ॥ ಅಣ್ಣಾಜಪ್ಪ, ಎಂ. ಟಿ. ಲಿಂಗಪ್ಪಯ್ಯ ಎಂ ಎ ಜೋಯಿಸ್ ಮತ್ತು ಹೆಚ್ ಸಿ ದಾಸಪ್ಪನವರು ಭಾಷಣಮಾಡಿ, ತಾತಯ್ಯನವರ ಗುಣಕಥನ ಮಾಡಿದರು ಅವರು ತಮ್ಮ ಜೀವಮಾನವನ್ನೆಲ್ಲಾ ದೇಶದ ಏಳಿಗೆಗಾಗಿ ವಿನಿಯೋಗಿಸಿ ಬಂದ ಕಷ್ಟಗಳನ್ನು ಎದುರಿಸಿ, ಸರ್ಕಾರದೊಡನೆ ಧೈರ್ಯದಿಂದ ಹೋರಾಡಿ, ವಿದ್ಯಾಭ್ಯಾಸ, ಪತ್ರಿಕೋದ್ಯಮ, ಸಮಾಜ ಸುಧಾರಣೆ, ಗೃಹ ಕೈಗಾರಿಕೆಗಳು ಜೀರ್ಣೋದ್ಧಾರ ಮತ್ತು ದೀನ ಜನರ ಉದ್ಧಾರ ಕಾರ್ಯಗಳಲ್ಲಿ ಮಾಡಿದ ಸೇವೆಯನ್ನು ಕೊಂಡಾಡಿದರು. ಮತ್ತು ಅವರ ಪವಿತ್ರ ಸ್ಮರಣೆಯು ಚಿರಸ್ಥಾಯಿಯಾಗಿರುವಂತೆ ಮಾಡಲು ಒಂದು ಶಾಶ್ವತವಾದ ಸ್ಮಾರಕವನ್ನು ಏರ್ಪಡಿಸಬೇಕೆಂದೂ ಕೋರಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೈಸೂರು ಸಂಸ್ಥಾನದ ಇಂದಿನ ಪ್ರಗತಿಗೆ ತಾತಯ್ಯನವರೇ ಅಸ್ತಿಭಾರ ಹಾಕಿದವರೆಂದು ಹೇಳಿದರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಸಕಲ ಕಾರ್ಯಗಳ ಮೇಲೆಯೂ ಅವರ ಪ್ರಭಾವವು ಬೀರಲ್ಪಡುತ್ತಿದ್ದಿತೆಂದು ಹೇಳಿದರು

ಅನಂತರ ಅಧ್ಯಕ್ಷರು ಮಂಡಿಸಿದ ಈ ಕೆಳಗೆ ಕಂಡ ನಿರ್ಣಯವು ಸಭೆಯಲ್ಲಿ ಅಂಗೀಕೃತವಾಯಿತು –

ದಿವಂಗತ ವೃದ್ಧಪಿತಾಮಹ ಶ್ರೀ ಎಂ ವೆಂಕಟಕೃಷ್ಣಯ್ಯನವರು ಮೈಸೂರು ಸಂಸ್ಥಾನಕ್ಕೂ ಕನ್ನಡ ನಾಡಿಗೂ ತಮ್ಮ ಆಜೀವ ಪರ್ಯಂತರವೂ ಸರ್ವಸ್ವವನ್ನೂ ತ್ಯಾಗಮಾಡಿ ಸಲ್ಲಿಸಿರುವ ಅಪಾರವಾದ ಸೇವೆಯನ್ನು ಕೃತಜ್ಞತೆಯಿಂದ ಈ ಸಭೆಯು ಸ್ಮರಿಸುವುದಲ್ಲದೆ, ಅವರ ಕೀರ್ತಿಯು ಶಾಶ್ವತವಾಗಿ ನೆಲೆಸುವಂತೆಯೂ ಅವರ ಜೀವನದ ಆದರ್ಶ ಮತ್ತು ಕಾರ್ಯಸಾಧನೆಗಳಿಗೆ ಅನುರೂಪವಾಗಿಯೂ ಇರುವ ಒಂದು ಪ್ರತ್ಯೇಕ ಸ್ಮಾರಕವನ್ನು ಅವರ ಜ್ಞಾಪಕಾರ್ಥವಾಗಿ ಮೈಸೂರು ನಗರದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸುತ್ತದೆ ಈ ಬಗ್ಗೆ ಅವಶ್ಯಕವಾದ ನಿಧಿ ಸಂಗ್ರಹ ಮತ್ತು ಇತರ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಈ ಕೆಳಗೆ ಕಂಡ ಮಹನೀಯರನ್ನೊಳಗೊಂಡ ಸಮಿತಿಯನ್ನು ಸ್ಥಾಪಿಸುತ್ತದೆ ಅವಶ್ಯಕವಿದ್ದರೆ ಸಮಿತಿಯವರು ಇತರ ಮಹನೀಯರುಗಳನ್ನು ಸೇರಿಸಿಕೊಳ್ಳಲು ಅಧಿಕಾರ ಕೊಟ್ಟಿರುತ್ತದೆ

ಶ್ರೀಗಳಾದ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು (ಅಧ್ಯಕ್ಷರು) ಅಗರಂ ರಂಗಯ್ಯನವರು, ಪಿ ಆರ್ ರಾಮಯ್ಯನವರು ಕಾರ್ಯದರ್ಶಿಗಳು ಡಾ॥ ಅಣ್ಣಾಜಪ್ಪನವರು ಪಿ ಜಾನ್ಸಿ

ಸದಸ್ಯರು –

ಶ್ರೀಗಳಾದವಿ ವೆಂಕಟಪ್ಪನವರು, ಟಿ ಸುಬ್ರಹ್ಮಣ್ಯಂರವರು ಕೆ ರಂಗಯ್ಯಂಗಾರ್‌ರವರು ಟಿ ವೆಂಕಟ ಸುಬ್ಬಾಶಾಸ್ತ್ರಿಗಳವರು ರಾವ್ ಬಹದ್ದೂರ್ ಎಸ್ ಎಸ್ ಸಂಬಂಡಯ್ಯನವರು ಯನ ವೆ ಬಸವಯ್ಯನವರ ಸಾಹುಕಾರ್ ಯಸ್ ಚನ್ನಯ್ಯನವರು ಎಂ ಪಿ ಲಿಂಗಪ್ಪಾಜಿನವರು ರಾವ್ ಬಹದ್ದೂರ್ ಎ ರಾಮಸ್ವಾಮಿಯವರು ಟಿ ವೆಂಕಟರಮಣಯ್ಯನವರ ಡಿ ವಿ ಗುಂಡಪ್ಪನವರು ಎಂ ಪಿ ಸೋಮ

ವಸ್ತುಪ್ರದರ್ಶನಲ್ಲಿ ಗಾಂಧಿಜಿಯವರ ಸ್ಮಾರಕಗಳು

ಮೈಸೂರು ೨೮

ಬರುವ ನವರಾತ್ರಿ ವಸ್ತುಪ್ರದರ್ಶನದಲ್ಲಿ ಒಂದು ವಿಶೇಷ ಸ್ಥಾಲನ್ನು ಏರ್ಪಡಿಸಿ, ಮಹಾತ್ಮ ಗಾಂಧೀಯವರ ಜೀವನಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಇಡಲಾಗುವುದೆಂದು ತಿಳಿದುಬಂದಿದೆ ಮತ್ತು ಜಪಾನ್ ದೇಶದ ಗೃಹ ಕೈಗಾರಿಕೆಗಳನ್ನು ವಿವರಿಸಲೂ ಸಹ ವಿಶೇಷ ಏರ್ಪಾಡನ್ನು ಮಾಡಲಾಗುವುದೆಂದು ಗೊತ್ತಾಗಿದೆ

ಕೆನಿಯಾ ಆಫ್ರಿಕದ ಪ್ರಮುಖರ ಭಾಷಣ

ಕೆನಿಯಾದ ಆಫ್ರಿಕ ಜನಾಂಗದ ಸಂಘದ ನಾಯಕರಾದ ಮಿ॥ ಪೀಟರ್ ಕೊಯಿನೇಜ್‌ರವರು ನಾಳಿದ್ದು ಬುಧವಾರ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಕೆನಿಯಾದಲ್ಲಿ ವರ್ಣಬಾಂಧವ್ಯ ಎಂಬ ವಿಚಾರವಾಗಿ ಭಾಷಣ ಮಾಡುವರು. ಡಾ॥ ಎಂ ವಿ ಗೋಪಾಲಸ್ವಾಮಿಯವರು ಅಧ್ಯಕ್ಷತೆ ವಹಿಸುವರು

ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಅಧಿಕಾರಿ ವರ್ಗ

ಮೇಲ್ಕಂಡ ಸಂಸ್ಥೆಗೆ ಶ್ರೀ ಡಬ್ಲ್ಯೂ ಹೆಚ್ ಥಿಯೋಬಾಲ್ಡ್‌ರವರು ಅಧ್ಯಕ್ಷರಾಗಿಯೂ, ಡಾ॥ ಎ ವಿ ರಂಗರಾಯರು ಉಪಾಧ್ಯಕ್ಷರಾಗಿಯೂ, ಮತ್ತು ಶ್ರೀ ಕೆ ಪುಟ್ಟಾಚಾರ್ಯರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ

ಗ್ರಾಜುಯೇಟ್ಸ್ ಸಹಕಾರ ಸಂಘದ ಚುನಾವಣೆ

ಮೈಸೂರು ಗ್ರಾಜ್ಯುಯೇಟ್ಸ್ ಸಹಕಾರ ಸಂಘಕ್ಕೆ ಶ್ರೀ ಎಂ ನಾರಾಯಣ ಅಯ್ಯಂಗಾರ್‌ರು ಅಧ್ಯಕ್ಷರಾಗಿಯೂ, ಶ್ರೀ ಎ ಎ ದೊರೆಸ್ವಾಮಿ ಅಯ್ಯಂಗಾರ್‌ರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಎಸ್ ಪಿ ರಂಗನಾಥಾಚಾರ್ ಮತ್ತು ನಾರಸಿಂಹ ನಾರಗರವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ

ಶೇಖರರಾಯರು ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಕೆ ಟಿ ಸತ್ಯನಾರಾಯಣ ಶೆಟ್ಟರವರು ಟಿ ರಾಮಾಚಾರ್ಯರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಲಕೋಟೆ ಬೆಲೆ ಕಡಿಮೆಯಾಗಬಹುದು

ಈಗಿರುವ ಅಂಚೆ ಲಕೋಟೆಯ ಬೆಲೆಯನ್ನು ೨ ಆಣೆಯಿಂದ ೧॥ ಆಣೆಗೆ ಇಳಿಸಬಹುದೆಂದು ತಿಳಿದುಬಂದಿದೆ ಅವುಗಳ ತಯಾರಿಕೆ ಸಾಗಿಸುವಿಕೆ ಮತ್ತು ಇತರ ಖರ್ಚುಗಳು ಕಳೆದು ಒಂದು ಲಕೋಟೆಗೆ ೧೪ ಕಾಸು ಉಳಿತಾಯವಾಗುತ್ತಿರುವುದರಿಂದ ಈಗಿನ ಬೆಲೆಯನ್ನು ಕಡಿಮೆಮಾಡಬಹುದೆಂದೂ ಆದರೆ ಕಾರ್ಡಿನ ಬೆಲೆಯು ಇಳಿಯುವುದಿಲ್ಲವೆಂದೂ ಗೊತ್ತಾಗಿದೆ

ಮಂತ್ರಿ ಮಂಡಲದ ಪುನರ್ರಚನೆ ಮುಖ್ಯ ಮಂತ್ರಿಗಳಿಗೆ ಬಿಟ್ಟಿದೆ

ಮೈಸೂರು ಮಂತ್ರಿ ಮಂಡಲದ ಪುನರ್ರಚನೆ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿಗಳ ನೇಮಕಗಳ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಸ್ವಾತಂತ್ರ್ಯ ಕೊಟ್ಟಿದ್ದಾರೆಂದು ಉಪನಾಯಕರಾದ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ

○ ಮೈಸೂರು ಸಂಸ್ಥಾನಕ್ಕೆ ಇಟಲಿ ಮತ್ತು ಜಪಾನುಗಳಿಂದ ೧ ಲಕ್ಷ ಪೌಂಡು ರಚ್ಚಾ ರೇಷ್ಮೆಯನ್ನು ತರಿಸಿಕೊಳ್ಳಲು ಭಾರತ ಸರ್ಕಾರದವರು ಸಮಾನುಭೂತಿ ತೋರಿಸುವುದಾಗಿ ತಿಳಿಸಿರುತ್ತಾರೆ

○ ಅಸಿಸ್ಟೆಂಟ್ ಕಮೀಷನರರಾದ ಶ್ರೀ ಡಿ ಎಸ್ ಸೂರ್ಯನಾರಾಯಣರಾಯರನ್ನು ಸರಕಾರದ ಕೈಗಾರಿಕೆಗಳ ಮ್ಯಾನೇಜ್‌ಮೆಂಟ್ ಬೋರ್ಡಿನ ಕಮಿಷನರನ್ನಾಗಿ ನೇಮಕ ಮಾಡಲಾಗಿದೆ

ಸಂಗೀತ

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಹೊಯ್ಸಳ ಕರ್ಣಾಟಕ ವಿದ್ಯಾರ್ಥಿ ನಿಲಯದಲ್ಲಿ ಗಣಪತಿ ಪೂಜೆ ಸಂಬಂಧವಾಗಿ ಇದೇ ೩೦ನೇ ತಾ॥ ಮಂಗಳವಾರ ಸಂಜೆ ೬-೩೦ ಗಂಟೆಗೆ ವಿ॥ ಅರಕೆರೆ ನಾರಾಯಣರಾಯರ ಸಂಗೀತವು ವಿ॥ ಮರಿತಿಮ್ಮನವರ ಪಿಟೀಲು, ವಿ॥ ಎಸ್ ರಾಜಾರಾಯರ ಮೃದಂಗ ಮತ್ತು ವಿ॥ ವಿ ವಿ ಸಂಜಪ್ಪನವರ ಖಂಜರಿಯೊಡನೆ ನಡೆಯುವುದು

ಭಾರತ ಪಠಣ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದಸ್ವಾಮಿಗಳ ಓದುಶಾಲೆಯ ಬಳಿ ಈ ಸಂಜೆ ೭ ಗಂಟೆಗೆ ಶ್ರೀ ಎಂ ವಿ ಕೃಷ್ಣರಾಯರವರಿಂದ ಕೃಷ್ಣ ಸಂಧಾನ ಎಂಬ ಭಾರತ ಭಾಗ ಪಠಣವೂ, ಬ್ರ॥ ಶ್ರೀ॥ ಗಣೇಶ ಶಾಸ್ತ್ರಿಗಳಿಂದ ವ್ಯಾಖ್ಯಾನವೂ ನಡೆಯುವುವೆ

ಡಿ. ಎಸ್. ಪಿ. ಯವರ ಮೇಲೆ ಆಪಾದನೆ ವಜಾ

ಸ್ವಂತ ವರದಿಗಾರ] ಬೆಂಗಳೂರು ೨೮

ಡಿ ಎಸ್ ಪಿ ಮಿ॥ ಚಂದ್ರಶೇಖರ್ ಮತ್ತು ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ಲಿಂಗಪ್ಪನವರು ಮೈಸೂರಿನಲ್ಲಿ ನಡೆದ ಒಂದು ಪ್ರಕರಣದಲ್ಲಿ ಒಬ್ಬಾತನ ಕೊಲೆಗೆ ಸಹಾಯ ಮಾಡಿದರೆಂದೂ ರುಜುವಾತನ್ನು ನಾಶ ಮಾಡಿದರೆಂದೂ ವಗೈರೆ ಬಂದ ಮೊಕದ್ದಮೆಯಲ್ಲಿ ಆಪಾದನೆಗೆ ಆಧಾರವಿಲ್ಲವೆಂದು ಹೇಳಿ ನಗರ ನ್ಯಾಯಾಧೀಶರಾದ ಶ್ರೀ ಎ ಲಕ್ಷ್ಮಣರಾಯರು ಈ ವಿಷಯದಲ್ಲಿ ಇಬ್ಬರನ್ನೂ ಡಿಸ್‌ಚಾರ್ಜ್ ಮಾಡಿರುತ್ತಾರೆ.

ಕಾಂಗ್ರೆಸ್ಸು ಸಾಧಿಸಿದುದು ಅತ್ಯಲ್ಪ

ಕಳೆದ ಎರಡು ಮೂರು ವರ್ಷಗಳಲ್ಲಿ ಕಾಂಗ್ರೆಸ್ ಸಂಸ್ಥೆಯು ಸಾಧಿಸಿರುವುದು ಬಹಳ ಸ್ತೋತ್ರಾರ್ಹವಾದುದಲ್ಲವೆಂದು ಪ್ರಧಾನಿ ಪಂಡಿತ ನೆಹರೂರವರು ಸಂಯುಕ್ತ ಪ್ರಾಂತದ ಕಾಂಗ್ರೆಸ್ ಸಮಿತಿಯನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು ಒಳಗಡೆ ಮತ್ತು ಹೊರಗಡೆ ಇರುವ ಜನರು ದೇಶದಲ್ಲಿ ಕ್ರಾಂತಿಯನ್ನುಂಟುಮಾಡಿದ ಸಂಸ್ಥೆಯು ಇದೇಯೋ? ಎಂದು ಆಶ್ಚರ್ಯಪಡುತ್ತಿರುವರೆಂದು ಅವರು ತಿಳಿಸಿರುತ್ತಾರೆ ಇದರಿಂದ ಕಾಂಗ್ರೆಸ್ಸು ಮುಗಿಯಿತೆಂದೂ ಅರ್ಥವಾಗುವುದಿಲ್ಲ ಅದರೂ ಸುಸ್ತಾಗಿರುವುದೆಂದು ಗೊತ್ತಾಗುತ್ತದೆ ಮುಂದುವರಿಯುತ್ತ ನೆಹರೂರವರು ಹಿಂದೆ ಕಾಂಗ್ರೆಸ್ಸಿನವರು ಸ್ವರಾಜ್ಯಕ್ಕಾಗಿ ತಮ್ಮ ಸ್ವಾರ್ಥತೆಯನ್ನು ಮತ್ತು ತಮ್ಮ ಕುಟುಂಬಗಳನ್ನೇ ಮರೆತಿದ್ದರೆಂದೂ, ಈ ಮಾರ್ಗವನ್ನು ತುಳಿಯದೇ ಬಿಟ್ಟರೆ ಅವರೆಲ್ಲರೂ ಹಾಳಾಗಬೇಕಾಗುವುದೆಂದೂ ಎಚ್ಚರಿಸಿದರು ಕಾಂಗ್ರೆಸ್ಸಿನವರಲ್ಲಿ ಇರುವ ಮನಸ್ತಾಪ ಮತ್ತು ಕಲಹಗಳನ್ನು ಕಂಡು ಅವರು ಆಯಾಸಪಟ್ಟಿರುವುದಾಗಿಯೂ ತಿಳಿಸಿದರು ಇಡೀ ಏಷ್ಯಾದಲ್ಲಿ ಜಮೀನುಗಳ ಪದ್ಧತಿ ಬಗ್ಗೆ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಿದರೆ, ದೇಶದ ಜನರ ಇತರ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಿಕೊಳ್ಳಲು ಸಾಧ್ಯವಾಗುವುದೆಂದೂ, ಆದಕಾರಣ ಸಂಯುಕ್ತ ಪ್ರಾಂತದ ಸರಕಾರವು ತಂದಿರುವ ಜಮೀನುದಾರಿ ಪದ್ಧತಿಯನ್ನು ವಜಾ ಮಾಡುವ ಮಸೂದೆಯನ್ನು ತಾವು ಶ್ಲಾಘಿಸುವುದಾಗಿಯೂ ಹೇಳಿದರು

ಹೂತಿಟ್ಟ ಚಿನ್ನದ ಪತ್ತೆಗೆ ಮೆಕ್ಸಿಕೊ ಸರಕಾರದ ಪ್ರಯತ್ನ

ಮಧ್ಯ ಅಮೇರಿಕದ ಯುಕಟಾನ್ ದೇಶದಲ್ಲಿ ನೂರಾರು ವರ್ಷಗಳ ಹಿಂದೆ ವಾಸಿಸುತ್ತಿದ್ದ ಮಾಯ ಎಂಬ ಕುಲದವರು ಬಚ್ಚಿಟ್ಟಿರುವ ಚಿನ್ನದ ಕೊಪ್ಪರಿಗೆಗಳನ್ನು ಹುಡುಕಲು ಮೆಕ್ಸಿಕೋ ಸರಕಾರವು ಒಂದು ಮಂಡಲವನ್ನು ಕಳುಹಿಸಲಿದೆಯೆಂದು ತಿಳಿದುಬಂದಿದೆ

ಸಕ್ಕರೆ ಸರಾಬರಾಯಿ ಕಡಿಮೆ

ಸಕ್ಕರೆಯು ಜನರಿಗೆ ಬೇಕಾದಷ್ಟು ಸಿಕ್ಕದೆ ಸರಬರಾಯಿ ಕಡಿಮೆಯಾಗಿದೆಯೆಂದು, ಕಲ್ಕತ್ತದಲ್ಲಿರುವ ಇಂಡಿಯನ್ ಸಕ್ಕರೆ ಸಿಂಡಿಕೇಟಿನವರು ಹೇಳಿಕೆಯನ್ನಿತ್ತಿದ್ದಾರೆ ೧೯೪೯ರಲ್ಲಿ ಒಟ್ಟು ೧೨೨೨ ಸಾವಿರ ಟನ್ನಿನಷ್ಟು ಸಕ್ಕರೆಯು ಸರಬರಾಜು ಆಗಿತ್ತೆಂದೂ, ಆಗಸ್ಟ್ ೧ನೇ ತಾ|| ಸುಮಾರು ೨ ಲಕ್ಷ ೩೨ ಸಾವಿರ ಟನ್ನಷ್ಟು ಸ್ಟಾಕು ಇರುವುದೆಂದೂ, ಉಳಿದಿರುವುದೆಲ್ಲವೂ ಖರ್ಚಾಗಿದೆಯೆಂದೂ ತಿಳಿಸಲಾಗಿದೆ

ಬಾಲಕರ ಪೋಲೀಸ್ ಪಡೆ

ಅಮೇರಿಕದ ಟೂಕಾಮಾದಲ್ಲಿ ೧೧ ರಿಂದ ೧೫ ವರ್ಷದ ಬಾಲಕರ ಪೋಲೀಸ್ ಪಡೆ ಏರ್ಪಾಡಾಗಿದೆಯೆಂದೂ, ರಸ್ತೆಯಲ್ಲಿ ನಡೆಯುವ ಸಣ್ಣಪುಟ್ಟ ಜನಗಳ ಮತ್ತು ಬಾಲಕರಿಂದ ನಡೆಯುವ ಅಪರಾಧಗಳನ್ನು ಈ ಪಡೆಯವರೇ ತನಿಖೆ ನಡೆಸುವರೆಂದೂ ಹೇಳಲಾಗಿದೆ

ಹೆಂಡತಿಯ ಸಮಾಧಿ ಮೇಲೆ ವೈಮಾನಿಕನ ಆತ್ಮಹತ್ಯ

ಕ್ಯಾಲಿಫೋರ್ನಿಯದ ವೈಮಾನಿಕನೊಬ್ಬನು ತನ್ನ ಹೆಂಡತಿಯ ಮರಣದ ಬಗ್ಗೆ ದುಃಖಿತನಾಗಿ, ವಿಮಾನದಲ್ಲಿ ಅತಿ ಎತ್ತರಕ್ಕೆ ಹಾರಿ, ಅಲ್ಲಿಂದ ಅದರ ಸಹಿತ ಕೆಳಕ್ಕೆ ಹಾರಿ ಹೆಂಡತಿಯ ಸಮಾಧಿಯ ಬಳಿ ಬಿದ್ದು ಪ್ರಾಣ ಬಿಟ್ಟನೆಂದು ವರದಿಯಾಗಿದೆ

ವಿವಾಹಿತಳಿಗೆ ಪುನರ್ವಿವಾಹ ಪ್ರಯತ್ನ

ಅಕೋಲಾ ನಗರದ ವಿಧವಾಶ್ರಮದ ಮ್ಯಾನೇಜರಾದ ಕಸ್ತೂರ ಚಂದ್ ಜೈನ್ ಮತ್ತು ಅವರ ಪತ್ನಿ ಇಬ್ಬರೂ ಸೇರಿ ಓರ್ವ ವಿವಾಹಿತ ತರುಣಿಗೆ ವಿವಾಹಮಾಡುವ ಪ್ರಯತ್ನದಲ್ಲಿ ತೊಡಗಿದ್ದುದರಿಂದ ಅವರನ್ನು ದಸ್ತಗಿರಿ ಮಾಡಲಾಗಿದೆ

ದೆಹಲಿಯ ಹತ್ತಿರ ಹೆಚ್ಚು ಆಹಾರ ಬೆಳೆ

ದೆಹಲಿಯ ರಾಜಘಾಟಿನ ಹತ್ತಿರವಿರುವ ಜಿಲ್ಲಾ ಎಂಬ ಕಾಡಿನ ಪ್ರದೇಶದ ೭೦೦ ಎಕರೆ ಜಮೀನಿನಲ್ಲಿ ಆಹಾರವನ್ನು ಬೆಳೆಯಲು ವ್ಯವಸ್ಥೆ ಮಾಡಲಾಗಿದೆಯೆಂದೂ, ಈ ಕೆಲಸವನ್ನು ಅಲ್ಲಿನ ಸಮಗ್ರ ಸೇವಾ ಸಹಕಾರ ಸಂಘಕ್ಕೆ ವಹಿಸಲಾಗಿದೆಯೆಂದೂ ಹೇಳಲಾಗಿದೆ

ವಿದ್ಯಾರ್ಥಿ ಪಾರಿತೋಷಿಕ ಸಭೆ

ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಪಾರಿತೋಷಿಕ ಸಭೆಯು ನಾಳೆ ಮಂಗಳವಾರ ಸಾಯಂಕಾಲ ೫ ಘಂಟೆಗೆ ರಾಜಸೇವಾ ಪ್ರಸಕ್ತ ಅಂಬಳೆ ಸುಬ್ರಹ್ಮಣ್ಯ ಐಯ್ಯಂಗ್ ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ

ಸಹಾಯಾರ್ಥ ನಾಟಕ

ತಾ|| ೨೯-೮-೪೯ ನೇ ಸೋಮವಾರ ರಾತ್ರಿ ೧೦ ಘಂಟೆಗೆ ರಾಜಧಾನಿಯ ಸಿನೆಮಾ ಟಾಕೀಸಿನಲ್ಲಿರುವ ಶ್ರೀ ರಾಮ ಕೃಪಾಪೋಷಿತ ಮಿತ್ರಮಂಡಲಿಯವರು ಸಂಪೂರ್ಣ ಶ್ರೀ ಕೃಷ್ಣಲೀಲಾ ಎಂಬ ನಾಟಕವನ್ನು ಟೌನ್‌ಹಾಲಿನಲ್ಲಿ ಅಭಿನಯಿಸಿ ಬಂದ ಉತ್ಪತ್ತಿಯನ್ನು ಶ್ರೀ ರಾಮಮಂದಿರಕ್ಕೆ ಕೊಡುವರು

○ ಸ್ಥಾನಭ್ರಷ್ಟರ ಜೀವನೋಪಾಯಕ್ಕಾಗಿ ಸಹಾಯ ಮಾಡಲು ಭಾರತ ಸರ್ಕಾರದವರು ಮೈಸೂರಿಗೆ ೩ ಲಕ್ಷ ರೂ ಸಾಲವನ್ನು ಕೊಟ್ಟಿರುತ್ತಾರೆ ಈಗಾಗಲೇ ಕೇಂದ್ರ ಸರ್ಕಾರದವರು ಗೃಹ ವಸತಿಗಾಗಿ ೪೮ ಲಕ್ಷ ರೂ ಸಾಲ ಕೊಟ್ಟಿದ್ದಾರೆ

ಸಂಸ್ಥಾನಕ್ಕೆ ಕೇಂದ್ರದಿ[ಂದ] ೨೦೦೦೦ ಟನ್ ಹೆಚ್ಚು ಧಾ[ನ್ಯ]

ಮುಖ್ಯ ಮಂತ್ರಿಗಳ ಹೇಳಿ[ಕೆ]

ಸ್ವಂ ಸು ವರದಿ] ಬೆಂಗಳೂ[ರು]

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ[ಯವ]ರೂ, ಶ್ರೀ ಕೆ ಹನುಮಂತಯ್ಯ[ನವರೂ] ನಿನ್ನೆ ಸಂಜೆ ಬೊಂಬಾಯಿ ಮಾರ್ಗ[ವಾಗಿ] ಇಲ್ಲಿಗೆ ಹಿಂತಿರುಗಿದರು. ಬೊಂ[ಬಾಯಿಯ]ಲ್ಲಿ ಶ್ರೀ ರೆಡ್ಡಿಯವರು ಸರ್ದಾರ್ [ಪಟೇ]ಲರೊಡನೆ ಮಾತುಕತೆ ನಡೆಸಿದ್ದರ[ು] ... ಕಾ ಪ್ರತಿನಿಧಿಗಳು ಭೇಟಿ ಮಾಡಿದ[ಾಗ] ರೆಡ್ಡಿಯವರು ಈ ರೀತಿ ತಿಳಿಸಿದರ[ು]

ಸಂಸ್ಥಾನದ ಹಲವಾರು ಸಮ[ಸ್ಯೆಗಳ] ಬಗ್ಗೆ ನಾನು ಗೌರ್ನರ್ ಜನರಲ್ ... ಜಿ, ಪ್ರಧಾನ ಮಂತ್ರಿ ಪಂಡಿತ ನೆ[ಹರೂ] ಸರ್ದಾರ್ ಪಟೇಲ್ ಮತ್ತು ಇ[ತರ] ಮುಖರೊಡನೆ ಮಾತುಕತೆ ನಡ[ೆಸಿದೆ] ಹೆಚ್ಚು ಆಹಾರ ಬೆಳೆಯಲು ನಾವು ... ಕೊಂಡಿರುವ ೩ ವರ್ಷದ ಯೋಜನೆ[ಗೆ ಭಾ]ರತ ಸರ್ಕಾರದವರು ಒಪ್ಪಿಗೆ ಇತ್ತಿ[ದ್ದಾರೆ] ನಮಗೆ ಬೇಕಾಗುವ ಕಬ್ಬಿಣ, ... ಮತ್ತು ಇತರ ಸಾಮಾನುಗಳನ್ನು ... ಸುವುದಾಗಿ ಹೇಳಿದ್ದಾರೆ

ಸಂಸ್ಥಾನದಲ್ಲಿ ಇರುವ ಆಹಾ[ರ] ಸಸ್ತ್ರ್ಯನು ಅಕ್ಟೋಬರ್ ತಿಂಗಳ[ವರೆಗೆ] ಮಾತ್ರ ಸಾಕಾಗುವುದು ಆದ[ುದರಿಂದ] ೨೦ ಸಾವಿರ ಟನ್ ಹೆಚ್ಚಿನ ಧಾನ್ಯ[ವನ್ನು] ಒದಗಿಸುವುದಾಗಿ ಅವರು ಭರವಸ[ೆ ಕೊಟ್ಟಿ]ದ್ದಾರೆ ಇದರ ಪೈಕಿ, ಅರ್ಧ ಭಾ[ಗ ಅಕ್ಕಿ]ಯೂ ದೊರೆಯುವುದು

ಬರುವ ಏಪ್ರಿಲ್ ಹೊತ್ತಿಗೆ ... ವಿಲೀನೀಕರಣವು ಜಾರಿಗೆ ಬರುವ ... ಣೆ ಇದೆ ಅದರ ಜೊತೆಯಲ್ಲಿಯೆ ... ಮತ್ತು ರೈಲ್ವೆಮುಂತಾದುವುಗಳ ವಿ[ಲೀನೀ]ಕರಣವೂ ಆಗಲಿದೆ ಇವುಗಳ ಪರಿ[ಣಾಮ]ವಾಗಿ ಸಂಸ್ಥಾನಕ್ಕೆ ಉಂಟಾಗಬಹ[ುದಾದ] ನಷ್ಟಗಳಿಗೆ ಪರಿಹಾರವನ್ನು ಕಟ್ಟಿ[ಕೊಡು]ವುದಾಗಿಯೂ ಅವರು ಭರವಸೆ ಇತ್ತ[ಿದ್ದಾರೆ]

ಸಂಸ್ಥಾನಗಳ ಮಾದರಿ ರಾಜ್ಯಾ[ಂಗದ] ವರದಿಯು ಇನ್ನೂ ಸಿದ್ಧವಾಗಿಲ್ಲ ... ತಿಂಗಳ ಹೊತ್ತಿಗೆ ಅದು ತಯಾ[ರಾಗ]ಹುದು ಹೊಸ ರಾಜ್ಯಾಂಗವು ... ದಲ್ಲಿ ಜನವರಿ ೨೬ ನೇ ತಾ|| ಜಾರಿ[ಗೆ ಬರು]ವುದು ಇಲ್ಲಿಯೂ ಅಂದಿನಿಂದಲೇ ... ನ ರಾಜ್ಯಾಂಗವನ್ನು ಜಾರಿಗೆ ... ಗುವುದು

ಭಾರತ ಸರ್ಕಾರದವರು ಸ್ಥಾಪಿ[ಸಿರು]ವ ಪಬ್ಲಿಕ್ ಸರ್ವಿಸ್ ಕಮಿಷನ್ನಿ[ನ ಮಾ]ದರಿಯಲ್ಲಿಯೇ ನಾವೂ ಸಹ ... ಸಧ್ಯದಲ್ಲಿಯೇ ಅದನ್ನು ರಚಿಸ[ುವೆವು]

ಬರುವ ತಿಂಗಳು ೨-೩ನೇ ತಾ|| ದೆಹಲಿಯ ವಿವಿಧ ಪ್ರಾಂತ್ಯ ಮತ್ತು [ಸಂ]ಸ್ಥಾನಗಳ ಶಾಸನ ಸಭೆಗಳ ಅಧ್ಯ[ಕ್ಷರ ಸ]ಮ್ಮೇಳನವು ನಡೆಯುವುದು

ಇಲ್ಲಿಂದ ತ್ರಿಗುಣಾದ ವಿ ವೆಂಕಟ[ಪ್ಪನವರೂ ಮ]ತ್ತು ರಾಜಮಂತ್ರ ಪ್ರವೀಣ ಹ... ಗುಂಡಪ್ಪ ಗೌಡರುಗಳನ್ನು ... ಸಿದ್ದೇನೆ,

ಮೈಸೂರು ರಾಜ್ಯಾಂಗ ಸಭೆ ... ನುಸರಿಸುತ್ತಿರುವ ತತ್ವಗಳಿಗೂ ... ತಿಗಳಿಗೂ ಭಾರತ ಸರ್ಕಾರದವರ ... ಯು ದೊರೆತಿರುತ್ತಿಗೆ ನಮ್ಮ ರಾ[ಜ್ಯಾಂಗ] ಸಭೆಯ ಅಧ್ಯಕ್ಷರಾದ ಶ್ರೀ ಟಿ. ಸ[ಿದ್ದಲಿಂಗ]ಯ್ಯನವರು ಈ ಬಗ್ಗೆ ಇಲ್ಲಿ ಮಾ[ತುಕತೆ] ನಡೆಸುತ್ತಿದ್ದಾರೆ

ALL-WOOL BABY RUGS

ಮಕ್ಕಳಿಗೆ ಹೊದಿಸುವ

ಅಪ್ಪಟ ಉಣ್ಣೆಯ ರಗ್ಗುಗಳು

ಬಾಹುಸಾರ್ ಕಂಪೆನಿ,

ಬ್ಯಾಂಕ್ ರೋಡ್, ಮೈಸೂರು

ಮನೆ ಬಿಕರಿಗಿದೆ

ಮೈಸೂರು ದೇವರಾಜ ಮೊಹಲ್ಲಾ, ದಿವಾನರ ಅಗ್ರಹಾರದಲ್ಲಿ ೩೩೬ ನಂಬರಿನ ಮನೆಯು ಕ್ರಯಕ್ಕಿದೆ ಬೆಲೆ ಸುಮಾರು ೬೦೦೦ ರೂ ಮಾಲೀಕರಲ್ಲಿ ವಿಚಾರಿಸಿ

ಎಸ್. ವೆಂಕೋಬರಾವ್,

Edited, printed and published by A R. Nagaraiyan, at Sadhvi Press, D Subbiah Road, Mysore

— ಲಕ್ಷ್ಮೀ —

ತಾ|| 31—8—49 ರಿಂದ

ಯಶಸ್ವಿ ೨ನೇ ವಾರ

* 1857 *

ನಿಮ್ಮ ಮೆಚ್ಚಿನ ತಾರೆ ಸುರೈಯ ಮತ್ತು ಸುರೇಂದ್ರ ನಟಿಸಿರುವ ಹಿಂದಿ ಚಿತ್ರ

Please Note -

MORNING SHOWS

At concession rates From 2nd September 1949

Box - 0—12—0,

-. Balcony -

0-8-0, 0 6 0 & 0-4-0

Your Patronage is Solicited

ಶ್ರೀ ಚಾಮುಂಡೇಶ್ವರಿ ಟಾಕೀಸ್

29-8-49ರಿಂದ 5 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಸಾಮ್ರಾಟ್ ಚಂದ್ರಗುಪ್ತ

(ಹಿಂದಿ)

ಪಾತ್ರ -ಈಶ್ವರಲಾಲ್, ಸುರೈಯ

3-9-49 ರಿಂದ

ಹಂಜೋಲಿ

[ಹಿಂದಿ]



ಪ್ರಭಾ * 2 9-49ರಿಂದ

ಅಮೋಘ ಪ್ರಾರಂಭ

ದಿನವಹಿ ಮೂರು ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

★ ಬಡಿಬಹೆನ್ ★

• ಸುರೈಯ್ಯ • ಗೀತಾ ಬಾಲಿ

• ರೆಹಮಾನ್ • ಉಲ್ಹಾಸ್

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೩೦-೮-೧೯೪೯ [ಸಂಚಿಕೆ ೩೦

ಪುರಸಭಾ ಸದಸ್ಯರ ಉಪವಾಸ ಸತ್ಯಾಗ್ರಹ?

ಸರ್ಕಾರದ ಆಜ್ಞೆ ಬಗ್ಗೆ ಪುರಸಭೆಯ ಪ್ರತಿಭಟನೆ

ಮೈಸೂರು ೩೦

ವಾಣೀವಿಲಾಸ ರಸ್ತೆಯಲ್ಲಿರುವ ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಹೆಚ್ಚಿಸಲು ಅದರ ಹಿಂದೆ ಇರುವ ಖಾಲಿ ನಿವೇಶನವನ್ನು ನಗರಾಭಿವೃದ್ಧಿ ಸಮಿತಿಯವರು ನೆಪ ಮಾತ್ರದ ೧೦ ರೂ. ರೆಂಟನ್ನು ಕೊಟ್ಟು, ಅಕ್ವೈರ್ ಮಾಡಿ ವಿದ್ಯಾರ್ಥಿ ನಿಲಯಕ್ಕೆ ಕೊಡುವಂತೆ ಸರ್ಕಾರದವರು ಮಾಡಿರುವ ಆಜ್ಞೆಯ ಮೇಲೆ ನಿನ್ನೆ ರಾಜಧಾನಿಯ ಪೌರ ಸಭೆಯ ಅಧಿವೇಶನದಲ್ಲಿ ತೀವ್ರವಾದ ಟೀಕೆಗಳು ಆದವು. ಇದುವರೆಗೆ ಅಕ್ವೈರ್ ಮಾಡಬೇಕಾದ ಸಂದರ್ಭಗಳಲ್ಲೆಲ್ಲಾ ಮೊದಲು ಪುರಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಿದ್ದ ಪದ್ಧತಿಯನ್ನು ಬಿಟ್ಟು, ಈ ರೀತಿ ಆಜ್ಞೆ ಮಾಡಿರುವುದಕ್ಕಾಗಿ ಅಸಮಾಧಾನವನ್ನು ವ್ಯಕ್ತಪಡಿಸಲಾಯಿತು. ಸಾರ್ವಜನಿಕವಲ್ಲದ ಮತ್ತು ಕೇವಲ ಒಂದು ಕೋಮಿಗೆ ಸೇರಿದ ಸಂಸ್ಥೆಗೆ ಹೀಗೆ ಖಾಲಿ ನಿವೇಶನವನ್ನು ಅಕ್ವೈರ್ ಮಾಡಿ ಕೊಡುವುದು ಕಾನೂನು ಮತ್ತು ನ್ಯಾಯಗಳ ವಿರುದ್ಧವಾಗಿರುವುದರಿಂದ ಸದರಿ ಆಜ್ಞೆಯನ್ನು ರದ್ದು ಮಾಡುವಂತೆ ಸರ್ಕಾರದವರನ್ನು ಪ್ರಾರ್ಥಿಸಿ, ಅದನ್ನು ಅವರಿಗೆ ವಾಪಸು ಕಳುಹಿಸತಕ್ಕದ್ದೆಂದು ನಿರ್ಣಯ ಮಾಡಲಾಯಿತು.

ದೇವರಾಜ ಮಾರ್ಕೆಟ್ಟಿನ ಸಾರ್ಜೆಂಟ್ ಮತ್ತು ಅ|| ಸಾರ್ಜೆಂಟರಿಗೆ ವಾಹನ ಭತ್ಯ ಕೊಡುವುದನ್ನು ಒಪ್ಪದೆ ಬಂದಿದ್ದ ಸರ್ಕಾರದ ಪತ್ರದ ಬಗ್ಗೆಯೂ ಸಹ ವಿಶೇಷ ಚರ್ಚೆ ನಡೆಯಿತು. ಬೇರೆ ಕಡೆಗಳಲ್ಲಿರುವ ಸಾರ್ಜೆಂಟರುಗಳಿಗೆ ಈ ಭತ್ಯವನ್ನು ಕೊಡುತ್ತಿರುವುದರಿಂದ ಇವರಿಗೂ ಕೊಡಬೇಕಾದ ಅಂಶವನ್ನು ಸರ್ಕಾರದವರು ಪುನರ್ವಿಮರ್ಶೆ ಮಾಡಬೇಕೆಂದು ಪ್ರಾರ್ಥಿಸಲಾಯಿತು.

ನೀರಿನ ಇಲಾಖೆಯವರು ನಲ್ಲಿಗಳನ್ನು ಕಾಳಜಿ ಉದಾಸೀನ ಮಾಡುತ್ತಿರುವ ವಿಷಯದಲ್ಲೂ ಸಹ ತೀವ್ರವಾದ ಪ್ರತಿಭಟನೆಯನ್ನು ಸೂಚಿಸಲಾಯಿತು.

ಅಭಿನವ ಶಂಕರಾಲಯದ ದಕ್ಷಿಣ ಭಾಗದಲ್ಲಿರುವ ಖಾಲಿ ಸ್ಥಳದಲ್ಲಿ ಸೈಟುಗಳನ್ನು ಮಾಡಿ ಮಕ್ಕಳ ಆಟದ ಸ್ಥಳವನ್ನೂ ಮತ್ತು 'ಪ್ರೇಕ್ಷಣಾಲಯ'ವನ್ನೂ ಸ್ಥಾಪಿಸುವುದಕ್ಕೆ ವ್ಯವಸ್ಥೆ ಮಾಡಲು ೩೭ ಸಾವಿರ ರೂ.ನ ಅಂದಾಜನ್ನು ಮಂಜೂರು ಮಾಡಿ ಬಂದಿದ್ದ ಸರ್ಕಾರದ ಹುಕುಂ ಅನ್ನು ರಿಕಾರ್ಡು ಮಾಡಲಾಯಿತು.

ಚಾಮರಾಜಪುರಂ ಕೋಪರೇಟಿವ್ ಸೊಸೈಟಿಯ ಮುಂಭಾಗದಲ್ಲಿ ೨೨೦೦೦ ರೂ ವೆಚ್ಚದಿಂದ ಸರ್ಕಲ್ಲನ್ನು ಮಾಡುವುದು, ದೇವರಾಜ ಮೊಹಲ್ಲಾ ಸೀವೇಜ್ ಟ್ಯಾಂಕಿನ ಗಲ್ಲಿ ಬಳಿ ಚರಂಡಿ ವ್ಯವಸ್ಥೆಗಾಗಿ ೨೫ ಸಾವಿರ ರೂ.ನ ಅಂದಾಜುಗಳು ಮಂಜೂರಾಗಿರುವುದನ್ನೂ ಸಹ ರಿಕಾರ್ಡು ಮಾಡಲಾಯಿತು.

ಬೆಂಗಳೂರಿಗೆ ವಿಖ್ಯಾತ ಈಜುಗಾರಳ ಆಗಮನ

ಬರುವ ತಿಂಗಳು ೩, ೪, ಮತ್ತು ೫ ನೇ ತಾರೀಖುಗಳಲ್ಲಿ ಪೌರ ಸಭೆಗೆ ಸೇರಿದ ಈಜುವ ಕೊಳದಲ್ಲಿ ಪ್ರದರ್ಶನ ಕೊಡಲು ಪ್ರಪಂಚದ ವಿಖ್ಯಾತ ಸ್ತ್ರೀ ಈಜುಗಾರಳಾದ ಮಿಸ್ ಬೆಟ್ಟಿ ಸ್ಲೇಡರವರು ಬೆಂಗಳೂರಿಗೆ ಆಗಮಿಸಲಿರುವರು.

ಪೌರಸಭಾ ಸದಸ್ಯರ ಉಪವಾಸವೇ?

ಮೈಸೂರು ೩೦

ರಾಜಧಾನಿಯ [illegible] ಕೋಳದ ಬೀದಿಯಲ್ಲಿ ರಸ್ತೆಯ ಮಧ್ಯ ಭಾಗಕ್ಕಿರುವ ವಿದ್ಯುಚ್ಛಕ್ತಿ ಕಂಭದಿಂದ ಸಂಚಾರಕ್ಕೆ ತಡೆಯುಂಟಾಗಿರುವುದರಿಂದ ಅದನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಪೌರ ಸಭೆಯವರು ೧|| ವರ್ಷದಿಂದಲೂ ಒತ್ತಾಯಪಡಿಸುತ್ತಿದ್ದರೂ ಸಹ ಇಲಾಖೆಯವರು ಲಕ್ಷ್ಯ ಮಾಡದೆ ಉದಾಸೀನದಿಂದಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿ, ಈ ವಿಚಾರದಲ್ಲಿ ಬರುವ ೩ ನೇ ತಾ|| ಶನಿವಾರದೊಳಗೆ ಸೂಕ್ತ ಕಾರ್ಯಕ್ರಮವನ್ನು ವಿದ್ಯುಚ್ಛಕ್ತಿ ಇಲಾಖೆಯವರು ಕೈಗೊಳ್ಳದಿದ್ದಲ್ಲಿ ೪ ನೇ ತಾ|| ಭಾನುವಾರದಿಂದ ತಾವು ಸದರಿ ಕಂಬದ ಬಳಿ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಪೌರ ಸಭಾ ಸದಸ್ಯರಾದ ಶ್ರೀ ಎ ಎನ್ ಸೂರ್ಯನಾರಾಯಣ ರಾಯರು ನಿನ್ನೆ ದಿನ ಪೌರ ಸಭೆಯ ಅಧಿವೇಶನದಲ್ಲಿ ವ್ಯಕ್ತಪಡಿಸಿದರು. ಈ ವಿಷಯವನ್ನು ಇಲಾಖೆಯವರಿಗೆ ಅಧ್ಯಕ್ಷರು ತಿಳಿಯಪಡಿಸಬೇಕೆಂದೂ ಕೋರಿದರು.

ಹಿಂದೀ ತರಗತಿಗಳು

ರಾಜಧಾನಿಯ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರ ಭಾಷಾ ತರಗತಿಗಳು ಮುಂದಿನ ತಿಂಗಳು ೧ ನೇ ತಾ|ನಿಂದ ನಡೆಯುವುವು. ಸೇರಬಿಚ್ಛಿಸುವವರು ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕೋರಲಾಗಿದೆ.

ಬೆಳಗುವ ಮರದ ತುಂಡು

ಹರಿದ್ವಾರದ ಬಳಿ ಹರಿಯುವ ಗಂಗಾ ನದಿಯ ಹತ್ತಿರ ಇದ್ದ ಬೆಳಗುವ ಮರದ ತುಂಡೊಂದು ಪಶ್ಚಿಮ ಪಂಜಾಬಿನಿಂದ ಬಂದ ನಿರಾಶ್ರಿತನೊಬ್ಬನಿಗೆ ಸಿಕ್ಕಿರುವುದಾಗಿ ತಿಳಿದುಬಂದಿದೆ. [illegible] ಅಡಿ ಉದ್ದವಿರುವ ಈ ತುಂಡು, ಸೂರ್ಯೋದಯದ ಹೊತ್ತಿಗೆ ಪುನಃ ಬೆಳಕು ಕಾಣಿಸದಂತಾಗುವುದೆಂದು ಹೇಳಲಾಗಿದೆ. ನೀರನ್ನು ತುಂಡಿನ ಮೇಲೆ ಚೆಲ್ಲಿದರೆ ಅದು ಇನ್ನೂ ಪ್ರಕಾಶಿಸುವುದು. ಹಗಲು ಹೊತ್ತಿನಲ್ಲಿ ಅದನ್ನು ಕತ್ತಲೆ ಕೋಣೆಗೆ ಕೊಂಡೊಯ್ದರೂ ಅದು ಬೆಳಕನ್ನು ಚೆಲ್ಲುವುದಿಲ್ಲ.

ಕೊಂಡಾ ವೆಂಕಟಪ್ಪಯ್ಯನವರ ನಿಧನದಬಗ್ಗೆ ಸಂತಾಪ

ಮೈಸೂರು ೩೦

ಆಂಧ್ರ ದೇಶದ ಸುಪ್ರಸಿದ್ಧ ದೇಶಭಕ್ತರಾದ ಕೊಂಡ ವೆಂಕಟಪ್ಪಯ್ಯನವರು ಕಳೆದ ೧೫ ನೇ ತಾ|| ನಿಧನರಾದ ಬಗ್ಗೆ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯವನ್ನು ನಿನ್ನೆ ಪೌರ ಸಭೆಯ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಶ್ರೀ ಬಿ ನಾರಾಯಣಸ್ವಾಮಿಯವರು ನಿರ್ಣಯವನ್ನು ಮಂಡಿಸಿ, ದಿವಂಗತರ ಗುಣಕಥನವನ್ನು ಮಾಡಿದರು. ಎಲ್ಲರೂ ೨ ನಿಮಿಷಗಳ ಕಾಲ ಮೌನದಿಂದ ನಿಂತು ಅದನ್ನು ಅಂಗೀಕರಿಸಿದರು.

ವಸ್ತು ಪ್ರದರ್ಶನದಲ್ಲಿ ಮನರಂಜಕ ಕಾರ್ಯಕ್ರಮ

ರಾಜಧಾನಿಯಲ್ಲಿ ಮುಂದಿನ ತಿಂಗಳು ೨೩ ನೇ ತಾ|| ನಿಂದ ಪ್ರಾರಂಭವಾಗುವ ವಸ್ತು ಪ್ರದರ್ಶನದಲ್ಲಿ ಭರತ ನಾಟ್ಯ, ಕಾವ್ಯ ವಾಚನ, ಸಂಗೀತ, ಸುಗ್ಗಿಯ ಕುಣಿತ, ಸೂತ್ರದ ಗೊಂಬೆಯಾಟ, ಪಾಂಡುರಂಗ ಭಜನೆ, ಲಂಬಾಣಿ ನೃತ್ಯ, ಮಕ್ಕಳಿಂದ ಪ್ರದರ್ಶನ, ವೀರ ಕುಣಿತ, ಕೋಲು, ಕುಮರೆ, ಯಕ್ಷಗಾನ, ಬಯಲಾಟ, ಹರಿಕಥೆ, ಕುಸ್ತಿ ಇವೇ ಮುಂತಾದ ಕಲಾ ಪ್ರದರ್ಶನಗಳನ್ನು ಏರ್ಪಡಿಸಲಾಗುವುದು. ಈ ಕಾರ್ಯಕ್ರಮಗಳಲ್ಲಿ ಪಾತ್ರವಹಿಸಲಿಚ್ಛಿಸುವವರು ಮುಂದಿನ ತಿಂಗಳು ೧ ನೇ ತಾ|| ಒಳಗಾಗಿ ತಿಳಿಸಬೇಕೆಂದು ಅದರ ಕಾರ್ಯದರ್ಶಿಗಳು ಕೋರಿರುತ್ತಾರೆ.

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನದ ಸ್ವಾಗತ ಸಮಿತಿ

ಸಂಸ್ಥಾನದ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನದ ಸ್ವಾಗತ ಸಮಿತಿಯ ಸಭೆಯು ನಾಳೆ ಸಂಜೆ ೬ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ವಿಜಯ ಕಾರ್ಯಾಲಯ'ದಲ್ಲಿ ನಡೆಯುವುದು. ಸಮಿತಿಗೆ ಹೆಚ್ಚು ಸದಸ್ಯರನ್ನು ಸೇರಿಸುವುದಕ್ಕೂ ಮತ್ತು ಮುಂದಿನ ಕಾರ್ಯಕ್ರಮವನ್ನು ಗೊತ್ತುಪಡಿಸುವುದಕ್ಕೂ ಸಭೆಯು ನಡೆಯುವುದರಿಂದ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಸಂಚಾಲಕರಾದ ಶ್ರೀ ಎ ರಾಮಣ್ಣನವರು ಕೋರಿರುತ್ತಾರೆ.

ಇನ್ನೊಂದು ಸ್ವಾಗತ ಸಮಿತಿಯ ಅಗತ್ಯವಿಲ್ಲ

ಮೈಸೂರು, ೩೦

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನಕ್ಕಾಗಿ ಸ್ವಾಗತ ಸಮಿತಿಯೊಂದನ್ನು ಸ್ಥಾಪಿಸಲು ಶ್ರೀಗಳಾದ ಟಿ ಎಸ್ ಸುಬ್ಬಣ್ಣ, ಮತ್ತು ಎ ರಾಮಣ್ಣನವರು ನಿನ್ನೆ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರರ ಸಭೆಯನ್ನು ಕರೆದಿದ್ದರು. ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈಗಾಗಲೇ ಬೆಂಗಳೂರಿನಲ್ಲಿ ಇದಕ್ಕಾಗಿ ಒಂದು ಸ್ವಾಗತ ಸಮಿತಿಯು ರಚನೆಯಾಗಿರುವುದರಿಂದ ಇನ್ನೊಂದು ಸಮಿತಿಯನ್ನು ರಚಿಸುವ ಬಗ್ಗೆ ಶ್ರೀ ಎಚ್ ಕೆ ಕುಮಾರಸ್ವಾಮಿಯವರು ಕ್ರಿಯಾಲೋಪವನ್ನು ಎತ್ತಿದರು. ಇದರ ಮೇಲೆ ಚರ್ಚೆ ನಡೆದು, ಕ್ರಿಯಾಲೋಪಕ್ಕೆ ವಿಶೇಷ ಬಹುಮತ ದೊರೆತು, ಸ್ವಾಗತ ಸಮಿತಿಯ ರಚನೆಯ ವಿಚಾರವನ್ನು ಅಲ್ಲಿಗೇ ಬಿಡತಕ್ಕದ್ದೆಂದು ನಿರ್ಧಾರವಾಯಿತು.

ಪ್ರಭುಗಳೊಡನೆ ಹನುಮಂತಯ್ಯನವರ ಭೇಟಿ

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಕೆ ಹನುಮಂತಯ್ಯನವರು ನಿನ್ನೆ ಸಂಜೆ ರಾಜಧಾನಿಗೆ ಆಗಮಿಸಿ, ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ ವಾಪಸು ಬೆಂಗಳೂರಿಗೆ ತೆರಳಿದರು.

ಸಂಗೀತ

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಹೊಯ್ಸಳ ಕರ್ನಾಟಕ ವಿದ್ಯಾರ್ಥಿ ನಿಲಯದಲ್ಲಿ ಗಣಪತಿ ಪೂಜೆ ಪ್ರಯುಕ್ತ ನಾಳೆ ಸಂಜೆ ೬|| ಘಂಟೆಗೆ ವಿ|| ಎಸ್ ಸುಬ್ಬಕೃಷ್ಣಯ್ಯನವರ ಸಂಗೀತವೂ, ಅ|| ವಿ|| ಎಚ್ ವಿ ರಾಮರಾಯರ ಪಿಟೀಲು, ವಿ|| ಎಸ್ ರಾಜಾರಾಮರ ಮೃದಂಗ ಮತ್ತು ವಿ|| ನಂಜಪ್ಪನವರ ಖಂಜರಿಯೊಡನೆ ನಡೆಯುವುದು.

ಸಂಸ್ಥಾನದಲ್ಲಿ ಹಿಂದ್ ಮಜ್ದೂರ್ ಸಂಘ

ಸಂಸ್ಥಾನದ ಕಾರ್ಮಿಕ ಪ್ರತಿನಿಧಿಗಳ ಸಮ್ಮೇಳನವು ಮೊನ್ನೆ ದಿನ ಬೆಂಗಳೂರಿನಲ್ಲಿ ಶ್ರೀ ಅಶೋಕ ಮೆಹ್ತಾರವರ ಅಧ್ಯಕ್ಷತೆಯಲ್ಲಿ ನಡೆದು, ಅಖಿಲ ಮೈಸೂರು ಹಿಂದ್ ಮಜ್ದೂರ್ ಸಂಘವನ್ನು ಸ್ಥಾಪಿಸಲಾಯಿತು. ಅದಕ್ಕೆ ಶ್ರೀ ರಾಮಚಂದ್ರ ಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಎಸ್ ನಾಗಭೂಷಣರವರು ಕಾರ್ಯದರ್ಶಿಯಾಗಿಯೂ ಶ್ರೀಗಳಾದ ಎಚ್ ಪಿ ರಾಮಸ್ವಾಮಿ ಮತ್ತು ಶಿವಾನಂದಸ್ವಾಮಿಯವರುಗಳು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು.

ಕಾಂಗ್ರೆಸ್ಸಿನವರಿಗೆ ವಾರದಲ್ಲಿ ಒಂದು ದಿನ ಉಪವಾಸ

ದೇಶದಲ್ಲಿ ಉಂಟಾಗಿರುವ ಆಹಾರದ ಅಭಾವವನ್ನು ನೀಗಿಸಲು ಕಾಂಗ್ರೆಸ್ಸಿನವರು ಹೆಚ್ಚು ಆಹಾರ [illegible] ಕೊಡಬೇಕೆಂದೂ ಮತ್ತು ಆಹಾರವನ್ನು ಪೋಲು ಮಾಡಕೂಡದೆಂದೂ ಸಂಯುಕ್ತ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ನಿರ್ಣಯ ಮಾಡಿದೆ. ಈ ಬಗ್ಗೆ ಆಂದೋಲನದೊಡನೆ ಸಹಕರಿಸಲು ಕಾಂಗ್ರೆಸ್ಸಿನವರೆಲ್ಲರೂ ಪ್ರತಿ ವಾರದಲ್ಲೂ ಒಂದು ದಿನ ಉಪವಾಸ ಮಾಡಬೇಕೆಂದೂ ಸೂಚನೆ ಕೊಡಲಾಗಿದೆ.

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ೩೦

ಮೈಸೂರು ಜಿಲ್ಲಾ ಬೋರ್ಡಿನ ಸಭೆ [illegible] ಶ್ರೀ ಜಿ. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ಪ್ರಾರಂಭದಲ್ಲಿ ಅಧ್ಯಕ್ಷರು ಕಳೆದ ೩ ತಿಂಗಳಿನಲ್ಲಿ ನಡೆದಿರುವ ಕಾರ್ಯಕ್ರಮಗಳನ್ನು ವಿವರಿಸಿ, ಸದಸ್ಯರುಗಳು ತಮ್ಮ ತಾಲ್ಲೂಕುಗಳಲ್ಲಿ ನಡೆಯುವ ಕೆಲಸ ಕಾರ್ಯಗಳಲ್ಲಿ [illegible] ವಹಿಸಬೇಕೆಂದು ಕೋರಿದರು.

ರಸ್ತೆ [illegible] ಮುಂತಾದುವುಗಳ [illegible] ರೂ ಅಂದಾಜನ್ನು [illegible] ಮಾಡಲಾಯಿತು.

ಬೋರ್ಡಿನ ಆಡಳಿತದಲ್ಲಿರುವ ಎಲ್ಲ [illegible] ಆಸ್ಪತ್ರೆಗಳಿಗೂ [illegible] [illegible] ಮಂಜೂರು ಮಾಡಬೇಕೆಂದು ತೀರ್ಮಾನಿಸಲಾಯಿತು

[illegible] ಶ್ರೀ [illegible] [illegible] ಕಾಲೇಜು [illegible] [illegible] [illegible] ಭಾಗದ [illegible] ಕೊಡಬೇಕೆಂದು ನಿರ್ಧರಿಸಲಾಯಿತು

ಬೋರ್ಡಿನ ಸ್ಥಾಯಿ [illegible] ಬೋರ್ಡಿನ ಅಧ್ಯಕ್ಷರು, ವಿದ್ಯಾಧಿಕಾರಿಗಳು, [illegible] [illegible] ಬೋರ್ಡಿನ ಸದಸ್ಯರುಗಳನ್ನೊಳಗೊಂಡ ೧೦ ಜನರ ಒಂದು ಸಮಿತಿಯನ್ನು ನೇಮಿಸಲಾಯಿತು

[illegible] [illegible] ಕಾವೇರಿ ನದಿ [illegible] ಗಳ [illegible] ಮಹೋತ್ಸವ [illegible] [illegible] ರೂ ಕೊಡಬೇಕೆಂದು [illegible] ಲಾಯಿತು.

ರಾಷ್ಟ್ರಧ್ವಜವನ್ನು ಕೆಡಿಸಿದುದಕ್ಕೆ ಪ್ರೊಫೆಸರರ ದಸ್ತಗಿರಿ

ರಾಷ್ಟ್ರಧ್ವಜಗಳ ಮುಖಭಾವವನ್ನು ಕೆಡಿಸಿದುದಕ್ಕಾಗಿ ಮೀರತ್ತಿನ ಇಂಟರ್ಮೀಡಿಯೆಟ್ ಕಾಲೇಜಿನ ಕಲಾ ಪ್ರೊಫೆಸರ [illegible] [illegible] ವರನ್ನು ದಸ್ತಗಿರಿ ಮಾಡಲಾಗಿದೆ ಇವರು ಸ್ವಾತಂತ್ರ್ಯ ದಿನಾಚರಣೆ ದಿವಸ ಧ್ವಜಗಳ ಮೇಲೆ ಇದ್ದ ಅಶೋಕ ಚಕ್ರದ ಮೇಲೆ [illegible] ಕಾಗದವನ್ನು ಅಂಟಿಸಿ ಧ್ವಜ [illegible] [illegible] [illegible]

ರಜ್ವಿ ಮೇಲೆ ದಕಾಯಿತಿ ಆಪಾದನೆ

ಹೈದರಾಬಾದಿನ ರಜಾಕರ ಮಾಜಿ ನಾಯಕರಾದ ಖಾಸಿಂ ರಜ್ವಿ ಮತ್ತು ಇತರ ೨೫ ಮಂದಿಯ ಮೇಲೆ ಹೈದರಾಬಾದು ಜಿಲ್ಲೆಯ ಬೀಬಿ ನಗರದಲ್ಲಿ ೧೯೪೮ ನೇ ಜನವರಿ ೧೦ ರಲ್ಲಿ ದಕಾಯಿತಿ, ಕೊಳ್ಳೆಹೊಡೆದು ಕುವುದು ಮುಂತಾದ ಆಪಾದನೆಗಳನ್ನು ಹೊರಿಸಿ ಮತ್ತೊಂದು ಮೊಕದ್ದಮೆ ಹೂಡಲಾಗಿದೆ,

ಆಂಧ್ರ ಪ್ರಾಂತವಾಗದಿದ್ದರೆ ಸತ್ಯಾಗ್ರಹ

ಆಂಧ್ರದಿಂದ ಹೋಗಿದ್ದ ನಿಯೋಗಕ್ಕೆ ಭಾರತದ ಪ್ರಧಾನಿಯವರು ಕೊಟ್ಟ ಉತ್ತರವನ್ನು ಪ್ರತಿಭಟಿಸಿ ಆಂಧ್ರ ಪ್ರಾಂತ ಹಿಂದೂ ಮಹಾ ಸಭೆ ಅಧ್ಯಕ್ಷರಾದ ಪಿ. ಕೇಶವರಾಯರು, ನೆಹರೂರವರಿಗೆ ತಂತಿ ಕಳುಹಿಸಿದ್ದಾರೆ ಮದ್ರಾಸು ನಗರದ ಮೇಲೆ ಆಂಧ್ರರ ಹಕ್ಕಿರುವುದೆಂದೂ, ಆಂಧ್ರ ಪ್ರಾಂತಕ್ಕಾಗಿ ಸತ್ಯಾಗ್ರಹ ಮಾಡಲು ಸಿದ್ಧತೆಗಳಾಗುತ್ತಿವೆಯೆಂದೂ ಅವರು ತಿಳಿಸಿದ್ದಾರೆ

ಜಮ್ಮುವಿನಲ್ಲಿ ಎ. ಆರ್. ಪಿ. ಶಿಕ್ಷಣ

ಜಮ್ಮು ನಗರದ ನಿವಾಸಿಗಳು ವಿಮಾನ ಧಾಳಿ ಎಚ್ಚರಿಕೆ ಶಿಕ್ಷಣವನ್ನು ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳಿಂದ ಹೊಂದಬೇಕಾಗುವುದೆಂದು ಗೊತ್ತಾಗಿದೆ. ಈ ಸಂದರ್ಭದಲ್ಲಿ ಕಾಶ್ಮೀರ ಸರಕಾರವು ಎಲ್ಲ ಕಾರ್ಯ ಕ್ರಮಗಳನ್ನೂ ಕೈಗೊಂಡಿದೆಯೆಂದು ಗೊತ್ತಾಗಿದೆ

ಕಾಶ್ಮೀರ ಪ್ರಶ್ನೆ ಬಿಡಿಸಲು ಮತ್ತೊಂದು ಪ್ರಯತ್ನ

ಕರಾಚಿ ಮತ್ತು ದೆಹಲಿಗಳಿಗೆ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ವಿಶ್ವಸಂಸ್ಥೆಯ ಕಾಶ್ಮೀರ ಸಮಿತಿಯು ನಿರ್ಧರಿಸಿದೆ ನಾಲ್ಕು ದಿನಗಳ ನಂತರ ಈ ಪ್ರತಿನಿಧಿಗಳು ಶ್ರೀ ನಗರಕ್ಕೆ ವಾಪಸು ಹೋಗುವರೆಂದು ಗೊತ್ತಾಗಿದೆ

ಮಧ್ಯ ಪ್ರಾಂತದ ಸರಕಾರಕ್ಕೆ ಸೇರಿದ ಛತ್ತೀಸಗಡ ಸಂಸ್ಥಾನಗಳ ಪ್ರತಿನಿಧಿಗಳೊಬ್ಬರನ್ನು ಸಂಯುಕ್ತ ಪ್ರಾಂತ ಮಂತ್ರಿಗಳನ್ನಾಗಿ ತೆಗೆದುಕೊಳ್ಳಲಾಗುವುದೆಂದು ಗೊತ್ತಾಗಿದೆ

ಬರುವ ಜನವರಿ ೨೬ ರಿಂದ ಹೊಸ ನಾಣ್ಯ

ಬರುವ ಜನವರಿ ೨೬ನೇ ತಾರೀಖಿನಿಂದ ಭಾರತದ ರಿಪಬ್ಲಿಕ್ ಸ್ಥಾಪನೆಯ ಗುರುತಿಗೋಸ್ಕರ ಹೊಸ ನಾಣ್ಯವನ್ನು ಚಲಾವಣೆ ಮಾಡಲು ಭಾರತ ಸರಕಾರದವರು ತೀರ್ಮಾನಿಸಿದ್ದಾರೆಂದು ಗೊತ್ತಾಗಿದೆ ನಾಣ್ಯದಮೇಲೆ ಬ್ರಿ|| ರಾಜರ ತಲೆಯ ಬದಲು ಮೂರು ಸಿಂಹಗಳು ಮತ್ತು ಅಶೋಕ ಸ್ತಂಭವನ್ನು ಮುದ್ರಿಸಲಾಗುವುದು

ರಾಜಾಸ್ಥಾನ್-ಪಾಕಿಸ್ತಾನ್ ಗಡಿಯಲ್ಲಿ ವಿಶೇಷ ಪೋಲೀಸ್ ಪಡೆ

ರಾಜಾಸ್ಥಾನ ಮತ್ತು ಪಾಕಿಸ್ತಾನಗಳ ನಡುವೆ ಇರುವ ೭೦೦ ಮೈಲಿ ಗಡಿ ಪ್ರದೇಶದ ಉದ್ವೇಗಸ್ಥಿತಿ. ವಿಶೇಷ ಶಸ್ತ್ರ ಸಜ್ಜಿತ ಪೋಲೀಸ್ ಬಲವನ್ನು ಸ್ಥಾಪಿಸುವ ವಿಷಯವು ರಾಜಾಸ್ಥಾನದ ಯೂನಿಯನ್ ಸರಕಾರದ ಪರ್ಯಾಲೋಚನೆಯಲ್ಲಿದೆ. ಈ ಸಂದರ್ಭದಲ್ಲಿ ಅಲ್ಲಿನ ರಾಜ ಪ್ರಮುಖರು ಗಡಿ ಪ್ರದೇಶಕ್ಕೆ ಭೇಟಿ ಇತ್ತಿದ್ದರು

ಚುನಾವಣೆ ಕಾಲದಲ್ಲಿ ಕೋಮುವಾರು ಕೂಗಿಲ್ಲ

ಕೋಮು, ಜಾತಿ ಮುಂತಾದುವುಗಳಿಗೆ ಸಂಬಂಧಿಸಿದ ಕೂಗುಗಳನ್ನು ಶಾಸನ ಸಭೆಗಳ ಚುನಾವಣೆ ಕಾಲದಲ್ಲಿ ಕೂಗಕೂಡದೆಂದು ಸಂಯುಕ್ತ ಪ್ರಾಂತ ಸರಕಾರದವರು ಚುನಾವಣಾ ನಿಬಂಧನೆಗಳನ್ನು ಮಾಡುವವರಾಗಿದ್ದಾರೆ

Edited, printed and published by A. R. Nagarajan, at Sadhvi Press, D Subbiah Road, Mysore.

ಚಮತ್ಕಾರ, ವೈದ್ಯ, ಅಗ[illegible] ಮೇಲೆ ತೆರಿಗೆ

ಚಮತ್ಕಾರರು, ವೈದ್ಯರು, ವಕೀ[illegible] [illegible]ಂಕರು ಮತ್ತು ಅಗಸರೇ ಮುಂ[illegible] ಎಲ್ಲಾ ವಿಧವಾದ ವ್ಯಾಪಾರಿಗಳ [illegible] ಹೊಸ ತೆರಿಗೆಯೊಂದನ್ನು ವಿಧಿಸಲು [illegible]ನಾ ಜಿಲ್ಲಾ ಬೋರ್ಡು ತೀರ್ಮಾನಿಸಿ[illegible]

ಗಣಪತಿ ಮಂಗಳಾರತಿ

ಡಿ ಸುಬ್ಬಯ್ಯ ರಸ್ತೆಯುಲ್ಲಿರುವ ಬ್ರ[illegible]ನಂದ ಔಷಧಾಲಯದ ಬಳಿ ಈ ಸಂ[illegible] ಗಂಟೆಗೆ ಗಣಪತಿ ಮಂಗಳಾರತಿಯು [illegible] ಬಾರ್ ಭಕ್ಷಿಯವರಾದ ಶ್ರೀ [illegible] ಎಲ್. ದೇವರಾಜ ಅರಸಿನವರ ಅ[illegible]ಯಲ್ಲಿ ನಡೆಯುವುದು. ವಿದ್ವಾನ್ ಬಿ [illegible] ಮೂರ್ತಿಯವರ ಪಿಟೀಲು ಮತ್ತು [illegible] ದ್ವಾನ್ ಡಿ ಶೇಷಪ್ಪನವರ ಮೃದಂ[illegible] ಜರುಗುವುವು

ಮೈ ಸೂ ರು ಕೋ-ಆಪರೇಟಿವ್ ಸೊ[illegible] ಲಿ., ಮೈಸೂರು

ಹರಾಜು ನೋಟೀ[illegible]

ತಾ|| ೩೧-೮-೪೯ನೇ ಬು[illegible] ಸಾಯಂಕಾಲ ೫ ಗಂಟೆಗೆ ಸೊಸೈ[illegible] ಆವರಣದಲ್ಲಿ ಖಾಲಿ ಗೋಣಿ ಚೀ[illegible] ಬಹಿರಂಗವಾಗಿ ಹರಾಜು ಮಾಡಲ್ಪ[illegible]ವೆ ಇಷ್ಟವುಳ್ಳವರು ಹರಾಜಿನಲ್ಲಿ [illegible] ಮಾಡಿ, ಮಾಲುಗಳನ್ನು ಪಾವತಿ[illegible] ಪಡೆಯಬಹುದು

ಜಿ. ವಿ. ದೇಶಿಕಾಚಾ[illegible]
ಗೌ|| ಕಾರ್ಯದರ್ಶಿ

ರೇಷನಿಂಗ್ ಆಫೀಸರವರ ಕಛೇರಿ, ಮೈಸ[illegible]
ತಾರೀಖು ೨೪-೮-೪೯.

ಇಸ್ತಿಹಾರ್ ನಾಮೆ

ನಂ. ೨೪೯/೪೯-[illegible]

೫೯ ೧೯೪೮ನೇ ಇಸ್ವಿ ಮೈಸೂರು ಸಂಸ್ಥಾನದ ರೇಷನಿಂಗ್ ಹುಕು[illegible] ೧೧ನೆಯ ನಿಬಂಧನೆಯ ಪ್ರಕಾರ ಮೈಸೂರು ಸಿಟಿ ರೇಷನಿಂಗ್ ಆಫೀಸರಾದ [illegible] ಜೆ ಬಾಲರಾಜ್ ಈ ಮೂಲಕ, ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ [illegible]ವುದೇನೆಂದರೆ —

ಡಿಸೆಂಬರ್ ೧೯೪೯ರಿಂದ ಜಾರಿಗೆ ಬರತಕ್ಕ ಹೊಸ ಕಾರ್ಡುಗಳನ್ನು ಪಡೆಯುವುದಕ್ಕೋಸ್ಕರ ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರು ಈ ಕೆಳಗೆ ಕಂಡ [illegible]ಳಲ್ಲಿ ತಮ್ಮ ರೇಷನ್ ಕಾರ್ಡು ರಿಜಿಸ್ಟರಾಗಿರತಕ್ಕ ರೇಷನ್ ಡಿಪೋಗಳಲ್ಲಿ ಹೊಸ [illegible] ರೇಷನ್ ಫಾರಂಗಳನ್ನು ಪಡೆಯತಕ್ಕದ್ದು

ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರನು ಡಿಕ್ಲರೇಷನ್ ಫಾರಂ ತೆಗೆದು[illegible]ದು ಅದರಲ್ಲಿರುವ ಸತ್ಯಾಂಶವನ್ನು ಬರೆದು, ಆಯಾ ಡಿಪೋಗಳಿಗೆ ವಾಪಸು [illegible] ತಕ್ಕದ್ದು ಈ ರೀತಿ ಡಿಕ್ಲರೇಷನ್ ಫಾರಂಗಳನ್ನು ಬರೆದು ಸಕಾಲದಲ್ಲಿ ಕೊಡು[illegible] ಅಂತಹವರಿಗೆ ಹೊಸ ಕಾರ್ಡುಗಳು ನಿಲ್ಲಿಸಲ್ಪಡುತ್ತವೆ ಈ ತರಹ ಡಿಕ್ಲರೆ[illegible] ಫಾರಂಗಳು ಸ್ಪೆಷಲ್ ಇನ್ಸ್‌ಪೆಕ್ಟರುಗಳಿಂದ ಚಕಮಾಯಿಷಿ ಮಾಡಲ್ಪಡುತ್ತವೆ [illegible] [illegible] ಸುಳ್ಳು ಅಂಶಗಳೇನಾದರೂ ಇದ್ದಲ್ಲಿ ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾ[illegible] ಕಾಗುವುದು.

೧	ಡಿಕ್ಲರೇಷನ್ ಫಾರಂಗಳನ್ನು ಡಿಪೋಗಳಿಂದ ತೆಗೆದುಕೊಳ್ಳುವುದು	೧-೯-೪[illegible] ೭-೯-೪೯ರ
೨	ಡಿಕ್ಲರೇಷನ್ ಫಾರಂಗಳನ್ನು ಸರಿಯಾಗಿ ಬರೆದು ಆಯಾ ಡಿಪೋಗಳಿಗೆ ಕೊಡತಕ್ಕದ್ದು	೨-೯-೪[illegible] ೧೫-೯-೪೯ರ

ಈ ತಾರೀಖಿನ ನಂತರ ಬರತಕ್ಕ ಡಿಕ್ಲರೇಷನ್ ಫಾರಂಗಳನ್ನು ಯಾವ [illegible] ಲ್ಲೂ ತೆಗೆದುಕೊಳ್ಳಲಾಗುವುದಿಲ್ಲ

(ಸಹಿ) ಡಿ. ಜೆ. ಬಾಲರಾ[illegible]
ರೇಷನಿಂಗ್ ಆಫೀಸರು, ಮೈಸೂರು

From :: Daily 3 Shows

For the First Time in India !

Two Magnificent Russian Pictures in Superfine Technicolor

[illegible] Prize Winner at the International Film Festival at Cannes, France

1) THE STONE FLOWER
(in Hindi)

2) THE FESTIVAL OF YOUTH
(in English)

Russian Olympic Games

Now Running to Crowded House at

RAJKAMAL, MYSORE

[illegible] ಗಳ ಕರಕುಶಲ ಹೊಸ ಡಿಸೈನ್‌ಗಳ, ಬೇಕಾದ ಸೈಜುಗಳ, ಉಕ್ಕಿನ ಕ್ಯಾಷ್ ಬಾಕ್ಸ್ ಅಥವ ಬೀರುಗಳು [illegible]
[illegible] ದೊರೆಯುತ್ತವೆ ಡಿ. ಸಿ. ಐ. ವರ್ಕ್ಸ್, ೭೬೭, ಹಳ್ಳದಕೇರಿ (ಗಸ್ತಿ ಮರದ ಹತ್ತಿರ), ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಬುಧವಾರ ೨೧-೧-೧೯೪೬ [ಸಂಚಿಕೆ ೩೧

ಫೆಬ್ರವರಿ ೧೧ನೇ ತಾ॥ ಸುಭಾಸರು ಬರುವರು

ಭಾರತದ ಪ್ರಧಾನಸೇನಾನಿಗೆ ಅಮೆರಿಕದ ಗೌರವ

ಭಾರತದ ಪ್ರಧಾನ ದಂಡ ನಾಯಕರಾದ ... ಕೆ ಎಂ ಕರಿಯಪ್ಪನವರು ಹಿಂದಿನ ... ಯುದ್ಧದಲ್ಲಿ ಸಲ್ಲಿಸಿದ ಅಮೋಘ ಸೇವೆಗಾಗಿ ಅಮೆರಿಕ ಸರ್ಕಾರವು ಪ್ರಶಸ್ತಿ ಪದಕವನ್ನು ಬಹುಮಾನವಾಗಿ ಅವರಿಗೆ ಕೊಡುತ್ತದೆ

ನಿಗ್ರೋ ಗಾಯಕರ ವಿರುದ್ಧ ಪ್ರದರ್ಶನದಿಂದ ಗಲಭೆ

ನ್ಯೂಯಾರ್ಕಿನ ಪೀಕ್ಸ್‌ಕಿಲಿನಲ್ಲಿ ನಿವೃತ್ತ ಮಿಲಟರಿ ಕೆಲಸಗಾರರ ಗೌರವಾರ್ಥವಾಗಿ ಏರ್ಪಡಿಸಿದ್ದ ಸಭೆಯಲ್ಲಿ ಸುಪ್ರಸಿದ್ಧ ನಿಗ್ರೋ ಸಂಗೀತಗಾರರಾದ ಪಾಲ್ ರಾಬ್ಸನ್‌ರವರು ಭಾಗವಹಿಸಕೂಡದೆಂದು ಮೂರು ಪಕ್ಷದವರು ಪ್ರತಿಭಟನೆ ಮಾಡಿ, ಭಾರಿ ಗಲಭೆ ನಡೆಸಿದರೆಂದೂ, ಎರಡು ಪಕ್ಷದವರೂ ಕಲ್ಲು, ಇಟ್ಟಿಗೆ ಮತ್ತು ಇತರ ಆಯುಧಗಳಿಂದ ಹೊಡೆದಾಡಿದರೆಂದೂ ಮೂರು ಗಂಟೆಗಳ ಕಾಲ ಗಲಭೆ ನಡೆದು ... ಜನರು ಸತ್ತರೆಂದೂ, ನೂರಾರು ಮಂದಿಗೆ ಗಾಯವಾಯಿತೆಂದೂ ಹೇಳಲಾಗಿದೆ

ಯುವಕನನ್ನು ಜೀವಸಹಿತ ಸುಡಲಾಯಿತು

...ಚಿಯ ೩೨ ವರ್ಷದ ದಾವೂದ್ ರಹಿಮತ್ ಉಲ್ಲಾ ಎಂಬುವನನ್ನು ವೈಯಕ್ತಿಕ ದ್ವೇಷದಿಂದ ಗುಲ್ ಮಹಮದ್ ಮತ್ತು ಇತರ ೩ ಜನರು ನಿರ್ಜನವಾದ ಮನೆಯೊಂದಕ್ಕೆ ಎಳೆದು ಕೊಂಡು ಹೋಗಿ, ಬಾಯಿಗೆ ಬಟ್ಟೆ ತುರುಕಿ, ಕಂಬಕ್ಕೆ ಕಟ್ಟಿ, ಸೀಮೆಎಣ್ಣೆ ಸುರಿದು ಬೆಂಕಿ ಇಟ್ಟು ಕೊಲೆಮಾಡಿದರೆಂದು ಪೋಲೀಸರು ಅವರನ್ನು ದಸ್ತಗಿರಿ ಮಾಡಿರುತ್ತಾರೆ

ಚಕ್ರಬಂಧ ಸ್ಪರ್ಧೆಗಳ ಪ್ರಕಟಣೆಗಾಗಿ ಸಂಪಾದಕರ ಮೇಲೆ ಮೊಕದ್ದಮೆ

ಸರಕಾರದ ಅನುಮತಿ ಪಡೆಯದೆ ಚಕ್ರಬಂಧ ಸ್ಪರ್ಧೆಗಳನ್ನು ಪ್ರಕಟಿಸಿದುದಕ್ಕಾಗಿ ಪೂನದ ವಾರ ಪತ್ರಿಕೆಯೊಂದರ ಸಂಪಾದಕರಾದ ಡಾ॥ ಪಾರುಳೇಕರ್ ಮತ್ತು ಮುದ್ರಣಾಲಯದ ಮಾಲೀಕರುಗಳನ್ನು ನ್ಯಾಯಾಲಯದ ಮುಂದೆ ವಿಚಾರಣೆಗೆ ಹಾಜರು ಮಾಡಲು ಬೊಂಬಾಯಿ ಪ್ರಾಂತದ ಪೋಲೀಸರು ನಿರ್ಧರಿಸಿದ್ದಾರೆ

ಗಣಪತಿ ಮಂಗಳಾರತಿ

... ರಾಜಧಾನಿಯ ಸಿಟಿ ಟ್ಯುಟೋರಿಯಲ್ ಕಾಲೇಜು ಮತ್ತು ಶಾಂತಿ ಟೆಕ್ಸ್‌ಟೈಲ್ ಸಂಸ್ಥೆಗಳವರು ನಿನ್ನೆ ದಿನ ವಿದ್ಯಾ ಗಣಪತಿ ಮಂಗಳಾರತಿಯನ್ನು ನಡೆಸಿ, ಅನೇಕ ಮಹನೀಯರುಗಳನ್ನು ಆಹ್ವಾನಿಸಿ ಸತ್ಕರಿಸಿದರು

ಮಹಾರಾಜರ ಪಟ್ಟಾಭಿಷೇಕ ದಿನಾಚರಣೆ

ಅರಮನೆ ಕಛೇರಿಯ ಅಧಿಕಾರಿಗಳು ಮತ್ತು ನೌಕರರುಗಳು ನಿನ್ನೆಯ ದಿನ ಬೆಳಗ್ಗೆ ಜಗನ್ಮೋಹನ ಬಂಗಲೆಯಲ್ಲಿ ಮಹಾರಾಜರವರ ಪಟ್ಟಾಭಿಷೇಕ ದಿನಾಚರಣೆಯನ್ನು ಸರ್ದಾರ್ ಎಂ. ಹೆಚ್. ಮುದ್ದುರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಸಿದರು ಪ್ರಾರ್ಥನೆ, ಮತ್ತು ಸಂಗೀತಗಳಾದ ನಂತರ, ಶ್ರೀಮನ್ಮಹಾರಾಜರವರಿಗೆ ಶ್ರೇಯಸ್ಸನ್ನು ಕೋರುವ ನಿರ್ಣಯವನ್ನು ಮಾಡಲಾಯಿತು

ವಿಶ್ವದ ವಯಸ್ಕರ ಶಿಕ್ಷಣ ಸಮ್ಮೇಳನ

ಮೈಸೂರು ೩೧

ವಿಶ್ವ ಸಂಸ್ಥೆಯ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಿತಿಯ ವಯಸ್ಕರ ಶಿಕ್ಷಣ ಶಾಖೆಯ ಅಧಿವೇಶನವು ಮುಂದಿನ ನವೆಂಬರ್ ೨ ನೇ ತಾ॥ ನಿಂದ ೬ ವಾರಗಳು ಬೃಂದಾವನದಲ್ಲಿ ನಡೆಯುವುದು ಪ್ರಪಂಚದ ನಾನಾ ಭಾಗಗಳಿಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುವರೆಂದು ತಿಳಿದುಬಂದಿದೆ

ಹರಿಕಥೆ

ವಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಪ್ರಜ್ಞಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ರಾತ್ರಿ ೮ ಗಂಟೆಗೆ ಗಮಕ ವಿದ್ವಾನ್ ಶ್ರೀ ಮಾಯಿಗೌಡರಿಂದ ಭಾರತಪುರಾಣವೂ ಶ್ರೀ ಹಿರಣ್ಣಯ್ಯನವರಿಂದ ಅನುವಾದವೂ ನಡೆಯುವುವು

ಸಿ. ಆರ್. ರೆಡ್ಡಿಯವರು

ಆಂಧ್ರ ವಿಶ್ವ ವಿದ್ಯಾನಿಲಯದ ಉಪಸ್ಥಾನ ಪತಿಗಳಾದ ಡಾ॥ ಸಿ. ಆರ್ ರೆಡ್ಡಿಯವರು ಸಧ್ಯದಲ್ಲಿಯೇ ತಮ್ಮ ಹುದ್ದೆಗೆ ರಾಜೀನಾಮೆ ಇತ್ತು, ಮೈಸೂರು ವಿಶ್ವ ವಿದ್ಯಾಲಯದ ಪ್ರೋ ಚಾನ್ಸಲರ ಹುದ್ದೆಯನ್ನು ಸ್ವೀಕರಿಸುವರೆಂದು ತಿಳಿದುಬಂದಿದೆ.

ಮುಂದಿನ ಫೆಬ್ರವರಿಗೆ ಸುಭಾಸರು ಹಿಂತಿರುಗುವರು

ಸುಭಾಷ್ ಚಂದ್ರಬೋಸರು ಮುಂದಿನ ಫೆಬ್ರವರಿ ೧೧ ನೇ ತಾ॥ ಭಾರತಕ್ಕೆ ಹಿಂತಿರುಗುವರೆಂದು ಶ್ರೀ ಸತ್ಯಭಾವ ವಿಭೂತಿ ಸ್ವಾಮಿಯವರು ವಿಜಾಪುರ ಪಟ್ಟಣದಲ್ಲಿ ಭವಿಷ್ಯ ಹೇಳುತ್ತಾರೆ

ಬೊಂಬಾಯಿನಲ್ಲಿ ಪಾನ ನಿರೋಧ

ದೇಶದ ಆಹಾರ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಮೊದಲು ಗಮನ ಕೊಡಬೇಕೆಂದೂ, ಪಾನ ನಿರೋಧದ ಬಗ್ಗೆ ನಿಧಾನನೀತಿಯನ್ನು ಅನುಸರಿಸಬೇಕೆಂದು ಪಂ॥ ನೆಹರೂರವರು ಬೊಂಬಾಯಿ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದರೂ, ತಮ್ಮ ದೇ ಆದ ನೀತಿಯನ್ನು ಅನುಸರಿಸಲಾಗುವುದೆಂದೂ ಮತ್ತು ಪಾನ ನಿರೋಧವನ್ನು ಪ್ರಾಂತ್ಯದಲ್ಲಿ ಕೂಡಲೇ ಜಾರಿಗೆ ತರಲಾಗುವುದೆಂದೂ ಬೊಂಬಾಯಿನ ಮಂತ್ರಿ ಎಸ್ ಎಂ. ಪಾಟೀಲರವರು ತಿಳಿಸಿರುತ್ತಾರೆ

ಸಂಸ್ಥಾನ ಶಾಖಾ ಕಾರ್ಯದರ್ಶಿಯವರ ಆಗಮನ

ಸ್ವಂ ಪ್ರ ಪ್ರೋ] ಬೆಂಗಳೂರು ೩೧

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಯವರಾದ ಶ್ರೀ ಎಂ ಕೆ ವೆಲ್ಲೋಡಿಯವರು ಒರುವ ತಿಂಗಳು ೨ನೇ ತಾರೀಖು ಇಲ್ಲಿಗೆ ಆಗಮಿಸಿ, ಒಂದಿನ ಮಾತ್ರ ಇರುವರೆಂದು ಗೊತ್ತಾಗಿದೆ

ಹೆಚ್. ಸಿ. ಸೂರ್ಯನಾರಾಯಣ ರಾಯರ ನಿಧನ

ಬೆಂಗಳೂರಿನ ಸುಪ್ರಸಿದ್ಧ ವ್ಯಾಪಾರಿಗಳೂ, ಪೌರಸಭಾ ಸದಸ್ಯರೂ ಮತ್ತು ಕಾಂಗ್ರೆಸ್ ಮುಖಂಡರೂ ಆಗಿದ್ದ ಶ್ರೀ ಹೆಚ್ ಸಿ ಸೂರ್ಯನಾರಾಯಣ ರಾಯರು ತಮ್ಮ ೩೬ನೇ ವಯಸ್ಸಿನಲ್ಲಿ ನೆನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹನುಮಂತಯ್ಯನವರ ಪ್ರಯಾಣ

ಶ್ರೀ ಕೆ ಹನುಮಂತಯ್ಯನವರು ಸ್ಕಾಟ್ಲೆಂಡಿನಲ್ಲಿ ಸೇರುವ ಅಂತರ ರಾಷ್ಟ್ರೀಯ ಪಾರ್ಲಿಮೆಂಟರಿ ಸದಸ್ಯರ ಕೂಟದಲ್ಲಿ ಭಾಗವಹಿಸಲು ಈ ಪ್ರಾಂತ ಕಾಲ ಬೊಂಬಾಯಿಗೆ ಪ್ರಯಾಣಮಾಡಿದರು.

ಗೋಪಾಲರಾಯರ ಆಸ್ತಿ ಹರಾಜು

ಗೋಪಾಲರಾಯರ ವ್ಯವಹಾರದ ಸಂಬಂಧವಾಗಿ ಅವರ ಆಸ್ತಿಯನ್ನು ನೆನ್ನೆ ಪುನಃ ಹರಾಜು ಮಾಡಿದಾಗ ೫೦ ಸಾವಿರ ರೂಗಳು ಬಂದವು ಇದುವರೆಗೆ ೧॥ ಲಕ್ಷ ರೂಗಳು ಬಂದಿರುತ್ತವೆ

ವರ್ಗಾವರ್ಗಿ

ಎಕ್ಸಿಕ್ಯುಟಿವ್ ಇಂಜನಿಯರಾದ ಶ್ರೀ ಕೆ. ಎಸ್ ಕೃಷ್ಣಸ್ವಾಮಿಯವರನ್ನು ಕೆ ಆರ್ ಎಸ್ ಡಿವಿಜನ್ನಿಗೂ, ಶ್ರೀ ಕೆ ಶಾಸ್ತ್ರಿಯವರನ್ನು ಲೋಯರ್ ಚಾನಲ್ ಡಿವಿಜನ್ನಿಗೂ ವರ್ಗಾಯಿಸಲಾಗಿದೆ

ಶೃಂಗೇರಿ ಮಠಾಧಿಕಾರಿಗಳು

ಶೃಂಗೇರಿ ಮಠದ ವಹಿವಾಟನ್ನು ನೋಡಿಕೊಳ್ಳಲು ಸರಕಾರದವರು ಶ್ರೀ ವೆಂಕಟ ಸುಬ್ಬಯ್ಯನವರ ಜಾಗದಲ್ಲಿ ಶ್ರೀ ಸಿ. ಸೂರ್ಯನಾರಾಯಣ ರಾಯರನ್ನು ನೇಮಿಸಿದ್ದಾರೆ.

○ ವಿಶ್ವದಲ್ಲಿ ಉಂಟಾಗಿರುವ ಆಹಾರ ಅಭಾವವನ್ನು ನೀಗಿಸಲು ಪಾಕೀಸ್ತಾನ ಸರ್ಕಾರದವರು ೧೭ ಕೋಟಿ ರೂ ನ ೫ ವರ್ಷದ ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ಕೈಗೊಳ್ಳುವರೆಂದು ಹೇಳಲಾಗಿದೆ.

ಮಹಾರಾಜರನ್ನೊಳಗೊಂಡ ಕರ್ನಾಟಕ ಪ್ರಾಂತ್ಯ

ಮೈಸೂರು ಮಹಾರಾಜರವರನ್ನು ಶಾಸನ ಬದ್ಧ ಅಧಿಪತಿಗಳನ್ನಾಗಿಟ್ಟುಕೊಳ್ಳುವುದರಿಂದ ಕರ್ನಾಟಕ ಏಕೀಕರಣಕ್ಕೆ ಯಾವ ಅಡ್ಡಿಯೂ ಉಂಟಾಗುವುದಿಲ್ಲವೆಂದೂ, ಇತರ ಪ್ರಾಂತ್ಯಗಳಿಗೆ ಸಮನಾದ ಸ್ಥಾನ ಮಾನಗಳನ್ನು ಮೈಸೂರು ಗಳಿಸಿರುವುದರಿಂದ ಕರ್ನಾಟಕದ ಪ್ರಜೆಗಳೆಲ್ಲರೂ ಒಂದಾಗಲು ಅನುಕೂಲವಾಗುವುದೆಂದೂ ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ ಮಹಾರಾಜರಿರುವುದರಿಂದ ಪ್ರಜಾ ಪ್ರಭುತ್ವ ಸರ್ಕಾರ ಏರ್ಪಡಿಸಲು ಯಾವ ತೊಂದರೆಯೂ ಉಂಟಾಗುವುದಿಲ್ಲವೆಂದೂ ಅವರು ಹೇಳಿರುತ್ತಾರೆ

೨ ಕೊಂಬುಗಳುಳ್ಳ ಮಗುವಿನ ಜನನ

ನೆಲ್ಲೂರಿಗೆ ೨ ಮೈಲಿ ದೂರವಿರುವ ಚಿಂತಾದ್ರಿ ಪಾಳ್ಯದ ಸುಬ್ಬಮ್ಮ ಎಂಬ ಹರಿಜನ ಮಹಿಳೆಗೆ ಎರಡು ಕೊಂಬುಗಳುಳ್ಳ ಮಗುವೊಂದು ಜನನವಾಗಿದೆಯೆಂದು ಹೇಳಲಾಗಿದೆ ಕೊಂಬುಗಳು ಒಂದು ಗೇಣು ಉದ್ದವಿದ್ದು, ಕೆಂಪು ಬಣ್ಣದಿಂದ ಕೂಡಿರುವುವೆಂದೂ, ಮಗುವು ಸೌಖ್ಯವಾಗಿದೆಯೆಂದೂ ವರದಿಯಾಗಿದೆ

ಹೈದರಾಬಾದಿನಲ್ಲಿ ಮಿಲಿಟರಿ ಆಡಳಿತ ಮುಕ್ತಾಯ

ಈ ವರ್ಷದ ಅಂತ್ಯದೊಳಗಾಗಿ ಹೈದರಾಬಾದಿನ ಮಿಲಿಟರಿ ಆಡಳಿತವು ಕೊನೆಗಾಣುವುದೆಂದೂ, ಸಂಸ್ಥಾನದ ರಾಜ್ಯಾಂಗ ಸಭೆಯ ಚುನಾವಣೆಯೂ ಅಷ್ಟರಲ್ಲೇ ಮುಗಿಯುವುದೆಂದೂ ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ತಿಳಿಸಿರುತ್ತಾರೆ

ಬುದ್ಧನ ಹೆಜ್ಜೆಯ ಗುರುತಿನ ಪತ್ತೆ

ಸಯಾಮಿನ ಪರ್ವತಶ್ರೇಣಿ ಬೆಟ್ಟದ ತಪ್ಪಲಿನಲ್ಲಿ ಗೌತಮ ಬುದ್ಧನ ಹೆಜ್ಜೆಯ ಗುರುತು ಪತ್ತೆ ಆಗಿದೆಯೆಂದೂ, ಅದು ೧೧ ಅಂಗುಲ ಮತ್ತು ೩ ಅಡಿ ಉದ್ದವಿರುವುದೆಂದೂ, ಅದರ ದರ್ಶನ ಪಡೆಯಲು ಸಾವಿರಾರು ಬೌದ್ಧರು ಅಲ್ಲಿಗೆ ಹೋಗುತ್ತಿರುವರೆಂದೂ ಹೇಳಲಾಗಿದೆ

LATEST NEWS

ಬಲಾತ್ಕಾರದ ರಾಜಿ ಒಪ್ಪಂದಕ್ಕೆ ರುಜುವೇ ?

ಗೋಪಾಲರಾವ್ ಸಮಿತಿಯ ಮೇಲೆ ಅಪ್ಪಯ್ಯನಾಯ್ಡುರವರ ಆಪಾದನೆ

ಸ್ವಂ ಪ್ರ ಪ್ರೋ] ಬೆಂಗಳೂರು ೩೧

ಗೋಪಾಲರಾವ್ ಸಾಲಗಾರರಲ್ಲೊಬ್ಬರಾದ ಶ್ರೀ ಅಪ್ಪಯ್ಯನಾಯ್ಡುರವರಿಗೆ ಒರಬೇಕಾದ ೧೧ ಲಕ್ಷ ರೂ ಪೈಕಿ ೪ ಲಕ್ಷ ರೂ ಮಾತ್ರ ತೆಗೆದುಕೊಳ್ಳುವುದಾಗಿ ಅವರು ಒಪ್ಪಿಕೊಂಡಿದ್ದರೆಂದು ವರದಿಯಾಗಿತ್ತಷ್ಟೆ ಈಗ ಅವರು ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿ, ಗೋಪಾಲರಾವ್ ಸಮಿತಿಯವರು ತಮ್ಮಿಂದ ಬಲಾತ್ಕಾರವಾಗಿ ರಾಜಿ ಒಪ್ಪಂದಕ್ಕೆ ರಾತ್ರಿ ೨ ಗಂಟೆಯಲ್ಲಿ ರುಜು ಹಾಕಿಸಿಕೊಂಡರೆಂದೂ, ತಾವು ಮನಃಪೂರ್ವಕವಾಗಿ ಅದಕ್ಕೆ ಒಪ್ಪಿರಲಿಲ್ಲವೆಂದೂ ತಿಳಿಸಿದ್ದಾರೆ

ಭೂಮಿಯು ಕುಸಿದು ೧೫ ಜನರ ಮರಣ

ತಿರುವಾಂಕೂರಿನ ಕೊಟ್ಟಾಯಂನಲ್ಲಿ ಅತಿಶಯ ಮಳೆ ಬಂದು, ಗುಡ್ಡ ಪ್ರದೇಶದ ಅನೇಕ ಭಾಗಗಳು ಕುಸಿದು ಬಿದ್ದು, ೫ ಜನ ಹೆಂಗಸರು ಮತ್ತು ಮಕ್ಕಳು ಸತ್ತುಹೋದರೆಂದು ವರದಿಯಾಗಿದೆ.

ಗಂಟೆಗೆ ೭೦೦ ಮೈಲಿ ಸಂಚರಿಸುವ ವಿಮಾನ

ಗಂಟೆಗೆ ೭೦೦ ಮೈಲಿ ವೇಗದಲ್ಲಿ ಸಂಚರಿಸುವ ಎರಡು ನೂತನ ವಿಮಾನಗಳನ್ನು ಬ್ರಿಟನ್ನು ತಯಾರಿಸಿದೆಯೆಂದೂ, ಅವುಗಳನ್ನು ಮುಂದಿನ ತಿಂಗಳು ೭ನೇ ತಾ॥ ಹಾಂಪ್ಷೈರಿನಲ್ಲಿ ನಡೆಯುವ ವಾರ್ಷಿಕ ವಿಮಾನ ಸಮಾರಂಭದಲ್ಲಿ ಪ್ರದರ್ಶಿಸಲಾಗುವುದೆಂದೂ ಹೇಳಲಾಗಿದೆ

ಮಲೇರಿಯಾ ನಿವಾರಣೆಗೆ ಮೀನುಗಳು

ಮಲೇರಿಯಾ ಹಾವಳಿಯನ್ನು ತಡೆಗಟ್ಟುವುದಕ್ಕೆ ಮೀನುಗಳನ್ನು ಉಪಯೋಗಿಸಲು ಸಂಯುಕ್ತ ಪ್ರಾಂತ್ಯ ಸರ್ಕಾರದವರು ಯೋಜನೆ ತಯಾರಿಸಿದ್ದಾರೆ ಸೊಳ್ಳೆಗಳು ಇರುವ ಕೆರೆ ಮತ್ತು ಇತರ ಪ್ರದೇಶಗಳಲ್ಲಿ ಮೀನುಗಳನ್ನು ಬಿಡಲಾಗುವುದೆಂದೂ ಅವುಗಳು ಸೊಳ್ಳೆಗಳ ಮೊಟ್ಟೆಗಳನ್ನು ತಿಂದು ಹಾಕುವುದರಿಂದ, ಮಲೇರಿಯಾ ರೋಗವು ಕಡಿಮೆ ಆಗುವುದೆಂದೂ ಹೇಳಲಾಗಿದೆ

೭೦ಕ್ಕಿಂತ ಹೆಚ್ಚು ತೆರಿಗೆ

ಸೌರಾಷ್ಟ್ರ ಯೂನಿಯನ್ನಿಗೆ ಐಕ್ಯವಾಗುವ ಮುನ್ನ ಅಲ್ಲಿನ ೨೦೦ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಒಟ್ಟು ೭೦ ವಿಧವಾದ ತೆರಿಗೆಗಳಿದ್ದುವೆಂದು ಹೇಳಲಾಗಿದೆ ಒಂದು ಸಂಸ್ಥಾನದಲ್ಲಿ ರಾಜ ಮನೆತನದವರ ಮದುವೆ ಆದನ ಮಾಗುವಿನ ಜನನಗಳಿಗೂ ತೆರಿಗೆ ಕೊಡಬೇಕಾಗಿತ್ತೆಂದೂ ಸೌರಾಷ್ಟ್ರ ಮುಖ್ಯ ಮಂತ್ರಿಗಳು ತಿಳಿಸಿರುತ್ತಾರೆ

೩೦ ಅಡಿ ಎತ್ತರದ ಗಳುವಿನ ಮೇಲೆ ವಾಸ

ಅಮೆರಿಕದ ಮಸಾಚುಸೆಟ್ಸಿನ ಜೇಮ್ಸ್ ಸಂಬಾಕೆಯು ತನಗೆ ಸರಿಯಾದ ಮನೆ ದೊರೆಯದಿರುವುದನ್ನು ಪ್ರತಿಭಟಿಸಲು ೩೦ ಅಡಿ ಎತ್ತರದ ಗಳುವಿನ ಮೇಲೆ ವಾಸಿಸುತ್ತಿದ್ದಾನೆಂದು ಹೇಳಲಾಗಿದೆ ದಪ್ಪವಾದ ಕೋಲಿನ ಮೇಲೆ ಒಂದು ವೇದಿಕೆಯನ್ನು ಏರ್ಪಡಿಸಿ, ಅದರ ಮೇಲೆ ವಾಸಿಸುತ್ತಿರಲಾಗಿದೆಯೆಂದು ಹೇಳಲಾಗಿದೆ

ರಷ್ಯದ ಸಹಾಯ ಪಡೆಯಲು ಪಾಕಿಸ್ತಾನದ ಪ್ರಯತ್ನ

ಕಾಶ್ಮೀರದ ಬಿಕ್ಕಟನ್ನು ಬಗೆಹರಿಸುವ ದಕ್ಕೆ ಪಾಕೀಸ್ತಾನವು ತನ್ನ ಅಂತ್ಯ ನಿರ್ಧಾರವನ್ನು ತಿಳಿಸುವುದಕ್ಕೆ ಮುಂಚೆ ರಷ್ಯದ ಮನೋಭಾವವನ್ನು ತಿಳಿಯಲು ಅಪೇಕ್ಷಿಸಿದೆಯೆಂದೂ, ಈ ಬಗ್ಗೆ ಪ್ರಧಾನಿ ಲಿಯಾಖತ್ ಅಲಿ ಖಾನರವರು ತಮ್ಮ ರಷ್ಯದ ಪ್ರವಾಸದಲ್ಲಿ ಸ್ಟಾಲಿನರವರೊಡನೆ ಮಾತುಕತೆ ನಡೆಸುವರೆಂದೂ, ಇದರಿಂದಲೇ ಕಾಶ್ಮೀರದ ವಿಚಾರದಲ್ಲಿ ಪಾಕೀಸ್ತಾನವು ಬಿಗಿಯಾಗಿರುವುದೆಂದೂ ಹೇಳಲಾಗಿದೆ

ಬ್ಯಾಂಕಿನಲ್ಲಿ ಕಳುವು

ಗುಂಡ್ಲುಪೇಟೆ ೨೮

ಇಲ್ಲಿನ ವಿಜಯಾ ನಾಷ್ಯನಲ್ ಬ್ಯಾಂಕಿನಲ್ಲಿ ಗಣಪತಿ ಪಟ್ಟದ ದಿನ ೩೦೦ ರೂ. ಬೆಲೆ ಬಾಳುವ ಒಡವೆ ಮತ್ತು ನಗದು ಹಣ ಕಳುವಾಗಿದೆಯೆಂದು ಪೋಲೀಸರಿಗೆ ದೂರು ಕೊಡಲಾಗಿದೆ

ಈ ತಾಲ್ಲೂಕಿನ ಕಲ್ಲಹಳ್ಳಿಯ ಈಚಲುವನದಲ್ಲಿರುವ ಜಮೀನುಗಳ ವಿಲೇವಾರಿಯಾಗಿರುವ ಬಗ್ಗೆ ರೈತರುಗಳ ಅರ್ಜಿಯನ್ನು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸದಸ್ಯರಾದ ಶ್ರೀ ಹೆಚ್ ಎಸ್ ರಾಮಣ್ಣನವರ ಮುಂದಾಳತ್ವದಲ್ಲಿ ಒಂದು ಸಮಿತಿಯವರು ಪರಿಶೀಲಿಸಿ, ಸರ್ಕಾರದ ಬಳಿ ನಿಯೋಗ ಹೋಗಬೇಕೆಂದು ನಿರ್ಧರಿಸಲಾಗಿದೆ ೪೦ ಸಂಸಾರಗಳಿಗೆ ಜಮೀನು ಇಲ್ಲದೆ ಕಷ್ಟವಾಗಿರುವುದರಿಂದ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

ಬಂದೇ ಕ ನೇ ' ಮುಂದೆ ನೋಡಲಾರಿರಿ !!

ಈಗಲೇ ನಡೆಯಿರಿ !!!

ಸಿಂದಬಾದ್ ದಿ ಸೈಲರ್

ತಾ॥ 1-9-49ರಿಂದ 3 ದಿನಗಳು

PARAMOUNT'S

WHISPERING SMITH

ವಿಸ್ಪರಿಂಗ್ ಸ್ಮಿತ್

(ವರ್ಣರಂಜಿತ ಚಿತ್ರ)

With—Alan Ladd & Brenda Marshall

ಸಬ್ ರಿಜಿಸ್ಟ್ರಾರರಾಗಲು ಮಹಿಳೆಯರಿಗೆ ಅವಕಾಶ

ಸಬ್ ರಿಜಿಸ್ಟ್ರಾರ್ ಕೆಲಸಕ್ಕೆ ಮಹಿಳೆಯರನ್ನು ನೇಮಿಸಲು ಇದ್ದ ಪ್ರತಿ ಬಂಧಕವನ್ನು ಮದರಾಸ್ ಸರ್ಕಾರದವರು ತೆಗೆದು ಹಾಕಿದ್ದಾರೆ

ಸೌರಾಷ್ಟ್ರದಲ್ಲಿ ಗೋವಧೆ ನಿಷೇಧ

ಮಹಾತ್ಮರ ಜಯಂತಿಯಾದ ಅಕ್ಟೋಬರ್ ೨ನೇ ತಾ॥ನಿಂದ ಗೋವಧೆಯನ್ನು ನಿಷೇಧಿಸಲು ಸೌರಾಷ್ಟ್ರ ಸರ್ಕಾರದವರು ನಿರ್ಧರಿಸಿದ್ದಾರೆ ಕರೆಯುವ ಹಸುಗಳನ್ನು ಹೊರಕ್ಕೆ ರವಾನಿಸುವುದನ್ನು ಪ್ರತಿಬಂಧಿಸಲಾಗುವುದೆಂದೂ ಹೇಳಲಾಗಿದೆ

ಗ್ವಾಲಿಯರ್ ರಾಜರು ಕಂಪೆನಿಯ ಡೈರೆಕ್ಟರು

ಗ್ವಾಲಿಯರ್ ಮಹಾರಾಜರು ಮತ್ತು ಮಹಾರಾಣಿಯವರು ಸಿಂಹಳ ದ್ವೀಪದಲ್ಲಿ ಹೊಸದಾಗಿ ೨೦೦ ಲಕ್ಷ ರೂ ಬಂಡವಾಳದ ಮೇಲೆ ಸ್ಥಾಪಿಸಿರುವ ನೂಲುವ ಕಾರ್ಖಾನೆಯ ಡೈರೆಕ್ಟರುಗಳಾಗಿದ್ದಾರೆ

ಸಮಗ್ರ ಸೇವಾ ಸಂಘ

ಮೈಸೂರು ತಾಲ್ಲೂಕು ನಾಚನಹಳ್ಳಿಯಲ್ಲಿ ನಿನ್ನೆ ದಿನ ಸಮಗ್ರ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ನೆರವೇರಿಸಿದರು

ಉದಾರ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಪೌರವಾಣಿ ಸಂಪಾದಕರಾ ಶ್ರೀ ಹೆಚ್ ಎಸ್ ದೊರೆಸ್ವಾಮಿಯವರು ೧೪೦ ರೂ ಬೆಲೆ ಬಾಳುವ ಪುಸ್ತಕಗಳನ್ನು ದಾನ ಮಾಡಿರುತ್ತಾರೆ

ವಿಶಾಖ ಪಟ್ಟಣದ ಹ… ಕೇಂದ್ರ ಸರ್ಕಾರಕ್ಕೆ

ವಿಶಾಖ ಪಟ್ಟಣದಲ್ಲಿರುವ … ತಯಾರಿಕಾ ಕಾರ್ಖಾನೆಯನ್ನು … ಸರ್ಕಾರದವರು ವಹಿಸಿಕೊಳ್ಳಲು … ಸಿದ್ಧರೆಂದು ಕೇಂದ್ರ ಸರ್ಕಾರದ … ಕಾ ಸಚಿವರು ತಿಳಿಸಿರುತ್ತಾರೆ. ಇ… ಲವು ವರ್ಷಗಳಲ್ಲಿ ಅದನ್ನು ಆಧು… ಡಗು ತಯಾರಿಕಾ ಕೇಂದ್ರವನ್ನಾ… ಡಲಾಗುವುದೆಂದೂ ಅವರು ಹೇಳಿ…

ಪ್ರದರ್ಶನಕಾರರ ಸಂಘ

ಮೈಸೂರಿನ ಅಖಿಲ ಭಾರತ ಪ್ರ… ಕಾರರ ಸಂಘದ ಕಾರ್ಯಕಾರೀ ಸ… ಸಭೆಯು ಕಳೆದ ೨೪ ನೇ ತಾ॥ … ತು ಮುಂದಿನ ತಿಂಗಳು ನಡೆಯು… ರಾತ್ರಿ ವಸ್ತುಪ್ರದರ್ಶನದಲ್ಲಿ ಭಾಗ… ವ ಪ್ರದರ್ಶನಕಾರರು ಪೂರ್ವ ಭಾ… ಗಿ ತಿಳಿಸದಲ್ಲಿ ಸಾಧ್ಯವಾದ ಅನು… ಗಳನ್ನು ಕಲ್ಪಿಸಿ ಕೊಡಲಾಗುವು… ಸೂಚಿಸಿ ನಿರ್ಣಯಮಾಡಲಾಯಿ…

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ… ಒಳ್ಳೆಯ ಸಮಯ

ಎಂ. ಎಸ್. ಪರೀಕ್ಷೆಗೆ …

ತಿಂಗಳಿಗೆ ಎಲ್ಲ ಭಾಗಗಳಿಗೂ … ರೂ ಶುಲ್ಕ ಮುಂಗಡವಾಗಿ ಕೊಡ… ೫-೯-೪೯ ಸೇರಲು ಕೊನೆಯ…

— ಹೆಚ್ಚು ವಿವರಗಳಿಗೆ ವಿಚಾರಿ… ಬೆಳಿಗ್ಗೆ ೬ ರಿಂದ ೯-೩೦ ಮತ್ತು … ೬ ರಿಂದ ೮ ಗಂಟೆವರೆಗೆ

ಎಸ್. ರಾಮಸ್ವಾಮಿ,

೧೧೧೯, ಕಾಂತರಾಜ ಅರಸ್ ರ…

ಲಕ್ಷ್ಮೀಪುರಂ, ಮೈಸೂರು

Edited, printed and p… lished by A R Nagara… at Sadhvi Press, D Sub… Road, Mysore.

ಪ್ರಭಾ 2-9-49ರಿಂದ

ಅನೋಘ ಪ್ರಾರಂಭ

ದಿನವಹಿ ಮೂರು ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

— ಬಡಿ ಬಹೆನ್ —

ಸುರೈಯ್ಯಾ, ಗೀತಾಬಾಲಿ, ರಹಮಾನ್, ಉಲ್ಲಾಸ್

MORNING SHOWS

From 2 9 49 for 3 days only

Her Highness & The Bell Boy

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು

ತಾರೀಖು ೨೪-೮-೪೯.

ಇಸ್ತಿಹಾರ್ ನಾಮೆ

ನಂ. ೨೪೮/೪೯-…

೧೯೪೮ನೇ ಇಸ್ವಿ ಮೈಸೂರು ಸಂಸ್ಥಾನದ ರೇಷನಿಂಗ್ ಹುಕುಂ ೧೧ನೆಯ ನಿಬಂಧನೆಯ ಪ್ರಕಾರ ಮೈಸೂರು ಸಿಟಿ ರೇಷನಿಂಗ್ ಆಫೀಸರಾದ ಡಿ. ಜೆ. ಬಾಲರಾಜ್ ಈ ಮೂಲಕ, ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ತಿಳಿಸುವುದೇನೆಂದರೆ —

ಡಿಸೆಂಬರ್ ೧೯೪೯ರಿಂದ ಜಾರಿಗೆ ಬರತಕ್ಕ ಹೊಸ ಕಾರ್ಡುಗಳನ್ನು ಪಡೆಯುವುದಕ್ಕೋಸ್ಕರ ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರು ಈ ಕೆಳಗೆ ಕಂಡ ತಾರೀಖುಗಳಲ್ಲಿ ತನ್ನ ರೇಷನ್ ಕಾರ್ಡು ರಿಜಿಸ್ಟರಾಗಿರತಕ್ಕ ರೇಷನ್ ಡಿಪೋಗಳಲ್ಲಿ ಹೊಸ ರೇಷನ್ ಫಾರಂಗಳನ್ನು ಪಡೆಯತಕ್ಕದ್ದು

ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರನು ಡಿಕ್ಲರೇಷನ್ ಫಾರಂ ತೆಗೆದುಕೊಂಡು ಅದರಲ್ಲಿರುವ ಸತ್ಯಾಂಶವನ್ನು ಬರೆದು, ಆಯಾ ಡಿಪೋಗಳಿಗೆ ವಾಪಸು ಕೊಡತಕ್ಕದ್ದು ಈ ರೀತಿ ಡಿಕ್ಲರೇಷನ್ ಫಾರಂಗಳನ್ನು ಬರೆದು ಸಕಾಲದಲ್ಲಿ ಕೊಡದ… ಅಂತಹವರಿಗೆ ಹೊಸ ಕಾರ್ಡುಗಳು ನಿಲ್ಲಿಸಲ್ಪಡುತ್ತವೆ ಈ ತರಹ ಡಿಕ್ಲರೇಷನ್ ಫಾರಂಗಳು ಸ್ಪೆಷಲ್ ಇನ್ಸ್‌ಪೆಕ್ಟರುಗಳಿಂದ ಪರೀಕ್ಷಿಸಿ ಮಾಡಲ್ಪಡುತ್ತವೆ … ಸುಳ್ಳು, ಅಂತಹವೇನಾದರೂ ಇದ್ದಲ್ಲಿ ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾಗುವುದು

೧	ಡಿಕ್ಲರೇಷನ್ ಫಾರಂಗಳನ್ನು ಡಿಪೋವಿನಿಂದ ತೆಗೆದುಕೊಳ್ಳುವುದು	೧-೯-೪೯ ರಿಂದ ೭-೯-೪೯ರವರೆಗೆ
೨.	ಡಿಕ್ಲರೇಷನ್ ಫಾರಂಗಳನ್ನು ಸರಿಯಾಗಿ ಬರೆದು ಆಯಾ ಡಿಪೋಗಳಿಗೆ ಕೊಡತಕ್ಕದ್ದು	೭-೯-೪೯ರಿಂದ ೧೫-೯-೪೯ರವರೆಗೆ

ಈ ತಾರೀಖಿನ ನಂತರ ಬರತಕ್ಕ ಡಿಕ್ಲರೇಷನ್ ಫಾರಂಗಳನ್ನು ಯಾವ ಸ್ಥಿತಿಯಲ್ಲೂ ತೆಗೆದುಕೊಳ್ಳಲಾಗುವುದಿಲ್ಲ

(ಸಹಿ) ಡಿ.ಜೆ. ಬಾಲರಾಜ್

ರೇಷನಿಂಗ್ ಆಫೀಸರು, ಮೈಸೂರು

ಫೋನ್ ನಂ. 792 | ವಂದೇ ಮಾತರಂ | ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಗುರುವಾರ ೧-೯-೧೯೪೯ [ಸಂಚಿಕೆ ೩೭

ಯುಗೋಸ್ಲೇವಿಯ ಬಳಿ ರಷ್ಯಾ ಸೈನ್ಯ ಜಮಾವಣೆ

ಆಣೆ ಕಾಂಗ್ರೆಸ್ ಸದಸ್ಯತನ ಇಲ್ಲ

ಸಂಯುಕ್ತ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ಹಣ ಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲು ೪ ಆಣೆ ಕಾಂಗ್ರೆಸ್ ಸದಸ್ಯತನವನ್ನು ಪುನಃ ಆಚರಣೆಗೆ ತರಬೇಕೆಂದು ಸದರಿ ಸಮಿತಿಯವರು ಮಾಡಿದ ಪ್ರಾರ್ಥನೆಯನ್ನು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಿರಸ್ಕರಿಸಿದೆ

ಜನರು ಹುಲ್ಲು ತಿನ್ನುತ್ತಿದ್ದಾರೆ

ಪಾಕಿಸ್ತಾನದ ಆಕ್ರಮಿತ ಕಾಶ್ಮೀರ ಪ್ರದೇಶವಾದ ಕೃಷ್ಣ ಗಂಗಾದ ಪ್ರಜೆಗಳಿಗೆ ಆಹಾರವಿಲ್ಲದೆ ಹುಲ್ಲನ್ನು ತಿನ್ನುತಿದ್ದಾರೆಂದು ಹೇಳಲಾಗಿದೆ

ಖಾಸಿಂ ರಜ್ವಿಯ ಮೇಲೆ ಮತ್ತೊಂದು ಕೊಲೆ ಆಪಾದನೆ

ಗುಲ್ಬರ್ಗ ಜಿಲ್ಲೆಯ ಅಲಂದಿಯಲ್ಲಿ ನಡೆದ ಮತ್ತೊಂದು ಕೊಲೆಯ ಸಂಬಂಧವಾದ ಆಪಾದನೆಯನ್ನು ಹೈದರಾಬಾದಿನ ರಜಾಕಾರರ ಮಾಜಿ ನಾಯಕ ಖಾಸಿಂ ರಜ್ವಿಯ ಮೇಲೆ ಹೊರಿಸಲಾಗಿದೆ

ಸ್ಕಾಟ್‌ಲೆಂಡ್ ಯುವತಿಯೊಡನೆ ರಾಜರ ವಿವಾಹ

ಜೋಧ್‌ಪುರದ ಮಹಾರಾಜರಾದ ಹನುಮಾಂತ್ ಸಿಂಹಜಿರವರು ಸ್ಕಾಟ್ಲೆಂಡಿನ ಮೆಕ್‌ಬ್ರೈಡ್ಜ್ ಎಂಬ ಯುವತಿಯನ್ನು ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಮದುವೆಯಾದರೆಂದು ಹೇಳಲಾಗಿದೆ

ಅಮೆರಿಕಕ್ಕೆ ಸಿಲೋನಿನ ಸರ್ಪಗಳು

ಅಮೆರಿಕದ ಫ್ಲಾರಿಡಾ ಸರ್ಪಗಳ ಸಂಶೋಧನಾಲಯಕ್ಕೆ ಸಿಂಹಳ ದ್ವೀಪದಿಂದ ನಾಗರ ಹಾವು ಮತ್ತು ಒಂದು ಭಾರಿ ಹೆಬ್ಬಾವನ್ನು ಕಳುಹಿಸಲಾಗುವುದೆಂದು ಹೇಳಲಾಗಿದೆ

ನ್ಯಾಯಾಧೀಶರ ಮೇಲೆ ಪಾದರಕ್ಷೆ

ಆಗ್ರಾ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ರಾಮಸ್ವರೂಪ್ ಎಂಬುವನಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದಾಗ, ಆತನು ನ್ಯಾಯಾಧೀಶರ ಮೇಲೆ ಪಾದರಕ್ಷೆಯನ್ನು ಎಸೆದನೆಂದೂ, ಅದು ಅವರಿಗೆ ತಗುಲಲಿಲ್ಲವೆಂದೂ ವರದಿಯಾಗಿದೆ

ಹೋಟೇಲು ಸಂಘದ ಅಧ್ಯಕ್ಷರು ಉತ್ತರ ಕೊಡುವರೇ?

ಮೈಸೂರು ನಗರದ ಹೋಟೆಲು ಸಂಘವು ಸಾರ್ವಜನಿಕ ಸಂಸ್ಥೆಯಾದುದರಿಂದ, ಈ ಕೆಳಗೆ ಕಂಡ ಅಂಶಗಳಿಗೆ ಅದರ ಅಧ್ಯಕ್ಷರು ಉತ್ತರ ಕೊಡಬೇಕೆಂದು ಕೆಲವರು ಕೋರಿ, ನಮಗೆ ಪತ್ರ ಬರೆದಿರುತ್ತಾರೆ:– ಸಂಘದಲ್ಲಿ ಹಣದ ದುರುಪಯೋಗ ನಡೆಯಿತೇ? ಅದಕ್ಕೆ ಸಂಬಂಧಪಟ್ಟವರು ಯಾರು, ದುರುಪಯೋಗ ಪಡಿಸಿದ ಹಣ ವಸೂಲಾಯಿತೇ, ಆದ ಪಕ್ಷದಲ್ಲಿ ಎಷ್ಟು ಬಾಕಿ ಉಳಿದಿದೆ ಅದು ನಡೆಯುತ್ತಿದ್ದಾಗ ಡೈರೆಕ್ಟರುಗಳು ಏನು ಮಾಡುತ್ತಿದ್ದರು, ಈ ಸಂಬಂಧದಲ್ಲಿ ಸಂಘದ ಅಧ್ಯಕ್ಷರ ಜವಾಬ್ದಾರಿ ಏನು!

ಆಫ್ರಿಕಕ್ಕೆ ಮಹಾತ್ಮರ ಸಂದೇಶದ ಅಗತ್ಯ

ಕೆನಿಯಾ ಪ್ರಮುಖ ನಾಯಕರ ಭಾಷಣ

ಮೈಸೂರು ೧

ಪೂರ್ವ ಆಫ್ರಿಕಾ ಜನಾಂಗದ ಪ್ರಮುಖ ನಾಯಕರಾದ ಮಿ॥ ಸ್ಪೀಟರ್ ಕೊಯನಾಂಗರವರು ನಿನ್ನೆ ದಿನ ರಾಜಧಾನಿಗೆ ಆಗಮಿಸಿ, ಹಲವು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟಿದ್ದರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗೂ ದಯಮಾಡಿಸಿ ಅಲ್ಲಿನ ಕಾರ್ಯಕರ್ತರುಗಳೊಡನೆ ಮಾತುಕತೆ ನಡೆಸಿದರು ಶ್ರೀಮನ್ಮಹಾರಾಜರವರು ಅವರಿಗೆ ಭೇಟಿಯನ್ನು ದಯಪಾಲಿಸಿದ್ದರು

ವಿಶ್ವ ವಿದ್ಯಾನಿಲಯದ ಉಪಸ್ಥಾನಪತಿಗಳಾದ ಶ್ರೀ ಆರ್ ಕಸ್ತೂರಿ ರಾಜ ಚೆಟ್ಟಿಯವರು ನಿನ್ನೆ ಮಧ್ಯಾಹ್ನ ಅವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ಮಹಾರಾಜಾ ಕಾಲೇಜಿನಲ್ಲಿ ಅವರು ನಿನ್ನೆ ಸಂಜೆ ಕೆನಿಯಾದಲ್ಲಿ ವರ್ಣ ಸಂಬಂಧ ಎಂಬ ವಿಷಯವಾಗಿ ಭಾಷಣ ಮಾಡಿದರು ಡಾ॥ ಎಂ ವಿ. ಗೋಪಾಲಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಪೂರ್ವ ಆಫ್ರಿಕಾದಲ್ಲಿ ಐರೋಪ್ಯರೂ, ಭಾರತೀಯರೂ, ಅರಬ್ಬರೂ ಒಂದು ನೆಲೆಸಿ ಅಲ್ಲಿನ ಜನ ಜೀವನದಲ್ಲಿ ವಹಿಸುತ್ತಿರುವ ಪಾತ್ರವನ್ನು ಅವರು ವಿವರಿಸಿದರು ಸರ್ವ ವಿಧದಲ್ಲಿಯೂ ಐರೋಪ್ಯರು ಪ್ರಾಬಲ್ಯವನ್ನು ಹೊಂದಿರುವುದಾಗಿ ತಿಳಿಸಿದರು ವಿದ್ಯಾಭ್ಯಾಸದಲ್ಲಿ ಐರೋಪ್ಯರ ಪ್ರತಿ ತಲೆ ೧ ಸ್ಟೆ ೪೪ ಪೌಂಡು, ಭಾರತೀಯರಿಗೆ ೪ ಪೌಂಡು, ಆಫ್ರಿಕದವರಿಗೆ ೬ ಷಿಲಿಂಗಿನಂತೆ ವೆಚ್ಚ ಮಾಡಲಾಗುತ್ತಿದೆ ಶಾಸನ ಸಭೆಗಳಲ್ಲಿ ಆಫ್ರಿಕನರ ಪರವಾಗಿ ಒಬ್ಬ ಸದಸ್ಯರನ್ನೂ ತೆಗೆದುಕೊಂಡಿಲ್ಲ ಕ್ರೈಸ್ತ ಪಾದ್ರಿಯೊಬ್ಬರು ಅವರನ್ನು ಪ್ರತಿನಿಧಿಸುತ್ತಾರೆ ಐರೋಪ್ಯರು ಮುಕ್ಕಾಲು ಭಾಗಕಿಂತ ಹೆಚ್ಚು ಸ್ಥಾನಗಳನ್ನು ಆಕ್ರಮಿಸಿದ್ದಾರೆ–ಎಂದು ಹೇಳಿದರು ಪ್ರಪಂಚಕ್ಕೆಲ್ಲಾ ಈಗ ಅವಶ್ಯಕತೆಯಾಗಿರುವ ಶಾಂತಿ ಸೌಹಾರ್ದಗಳ ಸಂದೇಶಗಳು ಆಫ್ರಿಕಕ್ಕೂ ಈಗ ಬೇಕಾಗಿವೆ. ಈ ಸಂದೇಶಗಳ ಆದರ್ಶ ಮೂರ್ತಿಯಾದ ಮಹಾತ್ಮ ಗಾಂಧೀಜಿಯವರ ಶಿಷ್ಯ ಕೋಟಿಯವರು ಈ ವಿಷಯದಲ್ಲಿ ಆಫ್ರಿಕಕ್ಕೆ ನೆರವಾಗಬೇಕು–ಎಂದು ಹೇಳಿ ಅವರು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಯುಗೋಸ್ಲೇವಿಯಾ ಗಡಿಯಲ್ಲಿ ರಷ್ಯದ ಸೈನ್ಯ

ರುಮೇನಿಯಾದಿಂದ ೫ ಡಿವಿಜನ್ ರಷ್ಯದ ಸೈನ್ಯವನ್ನು ಯುಗೋಸ್ಲೇವಿಯಾ ಗಡಿಯ ಬಳಿಗೆ ಕಳುಹಿಸಲಾಗಿದೆಯೆಂದು ಹೇಳಲಾಗಿದೆ ಗಡಿಗೆ ೩೦ ಮೈಲಿ ದೂರದಲ್ಲಿ ರಷ್ಯವು ಏ ಲಿಟರಿ ಕೇಂದ್ರವನ್ನು ಸ್ಥಾಪಿಸಿ, ಅಲ್ಲಿಗೆ ಟ್ಯಾಂಕು, ವಿಮಾನ ಮತ್ತು ಇತರ ಆಧುನಿಕ ಯುದ್ಧ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆಯೆಂದೂ ಹೇಳಲಾಗಿದೆ ಜರ್ಮನಿಯಿಂದ ಪೋಲೀಸ್ ಪಡೆಯನ್ನೂ ಕಳುಹಿಸಲಾಗಿದೆ ಯುಗೋಸ್ಲೇವಿಯಾದ ರಾಷ್ಟ್ರೀಯ ಅಕ್ರೋತ್ತರಗಳಿಗೆ ಪ್ರಧಾನಿ ಟಿಟೋರವರು ದ್ರೋಹವೆಸಗುತ್ತಿರುವರೆಂದು ರಷ್ಯ ಆಪಾದಿಸಿದೆ

ಮಾಜಿ ಐ.ಸಿ.ಎಸ್. ಅಧಿಕಾರಿಗೆ ೪೫ ಲಕ್ಷ ರೂ ಜುಲ್ಮಾನೆ

ಬರ್ಮಾ ನಿರಾಶ್ರಿತರ ನಿಧಿಯ ಮಾಜಿ ಅಧಿಕಾರಿಗಳಾದ ಕಲ್ಕತ್ತದ ಶ್ರೀ ಎಸ್ ಕ ಷ್ರೋಫ್‌ರವರು ೪೦ ಲಕ್ಷ ರೂ. ಹಣವನ್ನು ದುರುಪಯೋಗ ಪಡಿಸಿದರೆಂಬ ಆಪಾದನೆಯ ಮೇಲೆ ಅವರಿಗೆ ೫ ವರ್ಷ ಕಠಿಣ ಶಿಕ್ಷೆ ಮತ್ತು ೪೫ ಲಕ್ಷ ರೂ ದಂಡವನ್ನು ವಿಧಿಸಲಾಗಿದೆ

ಮಾಧ್ಯಮಿಕ ಶಾಲೆಗಳಲ್ಲಿ ಪರೀಕ್ಷೆಗಳು ರದ್ದಾಗಬೇಕು

ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ಪರೀಕ್ಷಾ ಪದ್ಧತಿಯನ್ನು ರದ್ದುಮಾಡಿ, ವಿದ್ಯಾರ್ಥಿಗಳ ಬುದ್ಧಿ ಶಕ್ತಿಯನ್ನು ಕಂಡುಹಿಡಿಯಲು ಟೆಸ್ಟುಗಳನ್ನು ನಡೆಸಬೇಕೆಂದು ಮದರಾಸಿನ ಮಾಧ್ಯಮಿಕ ವಿದ್ಯಾಭ್ಯಾಸ ಪರಿಶೀಲನಾ ಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ

ಪಂಡಿತ ಕೆ. ಸಂತಾನಂರವರ ನಿಧನ

ಸುಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಪಂಡಿತ ಕೆ ಸಂತಾನಂರವರು ಕಳೆದ ಸೋಮವಾರ ದೆಹಲಿಯಲ್ಲಿ ತಮ್ಮ ೬೪ನೇ ವಯಸ್ಸಿನಲ್ಲಿ ನಿಧನರಾದರು ಅವರು ಪಂಜಾಬಿನ ಮಾಜಿ ಸಚಿವ ಶ್ರೀ ಕೆ ಭಾಷ್ಯಂರವರ ಸಹೋದರರು. ೧೯೦೫ರಲ್ಲಿ ಸಾರ್ವಜನಿಕ ಸೇವೆಗೆ ಸೇರಿ ಕಾಂಗ್ರೆಸ್ ಕೆಲಸದಲ್ಲಿ ನಿರತರಾಗಿದ್ದರು.

ಆರ್ಥಿಕ ಉಬ್ಬರ ತಡೆಗಟ್ಟಲು ಕಾರ್ಯಕ್ರಮ

ಭಾರತದಲ್ಲಿ ಉಂಟಾಗಿರುವ ಆರ್ಥಿಕ ಉಬ್ಬರವನ್ನು ತಡೆಗಟ್ಟಲು ಮತ್ತು ಆಯವ್ಯಯವನ್ನು ಸರಿದೂಗಿಸಲು ಕೇಂದ್ರ ಸರ್ಕಾರದವರು ಕೂಡಲೇ ಕಾರ್ಯಕ್ರಮ ಕೈಗೊಳ್ಳುವರೆಂದು ತಿಳಿದುಬಂದಿದೆ ಎಲ್ಲ ಸರಕೋಟಿ ಪದಾರ್ಥಗಳ ಬೆಲೆಯನ್ನೂ ಶೇಕಡ ೧೦ ರಷ್ಟು, ಅಭಿವೃದ್ಧಿ ಕಾರ್ಯದಲ್ಲಿ ಶೇಕಡ ೨೦ ರಷ್ಟು, ಸಂಬಳದಲ್ಲಿ ಶೇಕಡ ೫ ರಷ್ಟು ಮತ್ತು ಮಂತ್ರಿಗಳ ಕಛೇರಿಗಳಲ್ಲಿ ಶೇಕಡ ೧೦ ರಷ್ಟು ಕಡಿಮೆ ಮಾಡಲಾಗುವುದೆಂದೂ, ತಿಂಗಳಿಗೆ ೩ ಸಾವಿರ ರೂ ಗಿಂತ ಹೆಚ್ಚು ಸಂಬಳ ಇರಕೂಡದೆಂದೂ, ೧ ಸಾವಿರ ರೂ ಸಂಬಳ ಇರುವವರಿಗೆ ತುಟ್ಟಿ ಭತ್ಯ ಕೊಡಕೂಡದೆಂದೂ ನಿರ್ಧರಿಸಲಾಗುವುದೆಂದೂ, ಇವುಗಳಿಂದ ಒಟ್ಟು ೫ ಕೋಟಿ ರೂ ಉಳಿತಾಯವಾಗುವುದೆಂದೂ ತಿಳಿದುಬಂದಿದೆ

ಹಾವು ಕಡಿದು ಸತ್ತಿದ್ದವಳು ಬದುಕಿದಳು

ಲಕ್ನೋವಿನ ಹತ್ತಿರವಿರುವ ಪರಸಾಮ ಎಂಬ ಹಳ್ಳಿಯ ಮಹಿಳೆಯೊಬ್ಬಳಿಗೆ ಹಾವು ಕಡಿದು ಮೃತಪಟ್ಟಳು. ಆಕೆಯ ಅಂತ್ಯ ಸಂಸ್ಕಾರಕ್ಕಾಗಿ ಎಲ್ಲ ಸಿದ್ಧತೆಗಳೂ ನಡೆದು ಶವವನ್ನು ಚಟ್ಟದ ಮೇಲೆ ಇಡಲಾಯಿತು ಆಗ ಒಬ್ಬ ಆಗಂತುಕನು ಬಂದು ಒಂದು ಗಂಟೆ ಕಾಲ ಮಂತ್ರಗಳನ್ನು ಹೇಳಿದನು. ಹೃದಯದ ನಾಡಿ ನಿಂತು ಹೋದ ಒಂದು ಗಂಟೆಗೆ ಮೇಲೆ ಪುನಃ ಆಕೆಗೆ ಜೀವ ಬಂದಿತು–ಎಂದು ವರದಿಯಾಗಿದೆ.

ಸಿ. ಆರ್. ರೆಡ್ಡಿಯವರ ಹುದ್ದೆ ನಿರ್ಧಾರವಾಗಿಲ್ಲ

ಮೈಸೂರು ವಿಶ್ವ ವಿದ್ಯಾನಿಲಯದ ಪ್ರೋಚಾನ್ಸಲರ ಹುದ್ದೆಯನ್ನು ಸಧ್ಯದಲ್ಲಿಯೇ ಡಾ॥ ಸಿ ಆರ್ ರೆಡ್ಡಿಯವರು ಸ್ವೀಕರಿಸುವರೆಂಬ ಸುದ್ದಿಯ ಬಗ್ಗೆ ಅವರನ್ನು ವಿಚಾರಿಸಿದಾಗ, ಆ ಬಗ್ಗೆ ಯಾವ ಅಂತ್ಯ ನಿರ್ಧಾರವೂ ಆಗಿಲ್ಲವೆಂದು ಅವರು ತಿಳಿಸಿರುತ್ತಾರೆ.

ಆಂಧ್ರ ವಿಶ್ವ ವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ॥ ರೆಡ್ಡಿಯವರ ಅವಧಿಯು ೧೯೫೦ನೇ ಮಧ್ಯಭಾಗದಲ್ಲಿ ಮುಕ್ತಾಯವಾಗುವುದರಿಂದ, ಅದಕ್ಕೆ ಅವರು ರಾಜೀನಾಮೆ ಕೊಡುವುದಿಲ್ಲವೆಂದೂ ಹೇಳಲಾಗಿದೆ

○ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಾಳೆ ಸಂಜೆ ರಾಜಧಾನಿಗೆ ಆಗಮಿಸಿ. ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡುವರು.

ಯುಕೆಂದೂರಿನಲ್ಲಿ ಪುರಸ್ಕಾರ ಪ್ರಶ್ನ

[illegible] ನವ ಸ್ವರ ಚಿನ್ನಣ ಸಮಿತಿಯವರು ಕಳೆದ ವರ್ಷ ನಡೆಸಿದ ಸ್ಪರ್ಧೆಗಳ ವರದಿ ಪ್ರಕಾರ, ಒಟ್ಟು ೪೬ ಕಥೆಗಳನ್ನು [illegible] ಗಳಲ್ಲಿ ಬಹುಮಾನ [illegible] ರಗತಿಗಳ ಪೈಕಿ, ೩೦ ಪರ ರಿಷ್ಟಿಗಾಗಿ ಕೆಲಸ ಮಾಡಿ, ೫೦ ಮ. ೨ ವಯಸ್ಕರು [illegible] ಪಡೆದರು, ಕಳೆದ ವರ್ಷ ಬೇರೆ ೬ ಪುಸ್ತಕ ಭಂಡಾರಗಳ ತೋರಿಗ ಈ ವರ್ಷ ಬೆಳಗಿನ ರಾಗದ ಜಿಲ್ಲೆಯಲ್ಲಿ ಒಂದು [illegible]

ಸ್ಥಾನ ಭ್ರಷ್ಟ ಮುಸ್ಲಿಮರ ಆಸ್ತಿಗಳು ನಿರಾಶ್ರಿತರಿಗೆ

ಭಾರತವನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋಗಿ ನೆಲೆಸಿರುವ ಮುಸ್ಲಿಮರ ಆಸ್ತಿಗಳಿಂದ ಬರುವ ವರಮಾನವನ್ನು ಭಾರತದ ನಿರಾಶ್ರಿತರ ಸಹಾಯಕ್ಕೆ ಉಪಯೋಗಿಸಲಾಗುವುದೆಂದು ಕೇಂದ್ರ ಸರ್ಕಾರದ ಸಚಿವ ಶ್ರೀ ಮೋಹನಲಾಲ್ ಸಾಕ್ಸೇನಾರವರು ತಿಳಿಸಿರುತ್ತಾರೆ

ಪ್ರಭಾ — 2-9-49ರಿಂದ

ದಿನವೂ 3 ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

- ಬಡಿ ಬಹೆನ್ -

ಸುರಯ್ಯಾ, ಗೀತಾಬಾಲಿ, ರೆಹಮಾನ್, ಉಲ್ಹಾಸ್ ನಟಿಸಿರುವ ಹಿಂದಿ ಚಿತ್ರ

MORNING SHOWS From 2-9-49 for 3 days only

M G M's

Her Highness & The Bell Boy

RAJKAMAL, MYSORE

From 2—9—49 :: Daily 3 Shows

Grand glorious Second Week

For the First Time in India'

Two Magnificent Russian Pictures in Superfine Technicolor

First Prize winner at the International Film Festival at Cannes, France

1) THE STONE FLOWER

(in Hindi)

2) THE FESTIVAL OF YOUTH

(in English)

Russian Olympic Games

Now Running to Crowded House at

MORNING SHOWS

From 2—9—49 for 4 days

Great Expectations

By Charles Dickens

With Bernad Miles, Finlay Currie and Fransis L Sullivan

ಚಾಮುಂಡೇಶ್ವರೀ ಟಾಕೀಸ್

2-9-49ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

- ಹಮ್ ಜೋಲಿ

(ಹಿಂದಿ)

ಪಾತ್ರ:- ಜೈರಾಜ್, ನೂರ್‌ಜಹಾನ್ ಮುಂತಾದವರು

ಪ್ರಭುದೇವಾ ಟಾಕೀಸ್

2—9—49ನೇ ಶುಕ್ರವಾರದಿಂದ 2ನೇ ವಾರ

* ಮಹಾತ್ಮ ಉದಂಗರ್ * (ತಮಿಳು)

ಪ್ರತಿ ದಿನ ಮೂರು ಪ್ರದರ್ಶನಗಳು

ಪಾತ್ರ:—ಕೊತ್ತಮಂಗಲಂ ಶೀನು, ಅಂಜಲಿದೇವಿ, ಟಿ ಆರ್ ರಾಮಚಂದ್ರ ಬೇಬಿ ಕಮಲ, ವಿಜಯ ಕುಮಾರಿ ಮುಂತಾದವರು

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು
ತಾರೀಖು ೨೪-೮-೪೯.

ಇಸ್ತಿಹಾರ್ ನಾಮೆ

ನಂ ೨೪೯/೪೯-೫೦

ಸನ್ ೧೯೪೮ನೇ ಇಸ್ವಿ ಮೈಸೂರು ಸಂಸ್ಥಾನದ ರೇಷನಿಂಗ್ ಹುಕುಮಿನ ೧೧ನೆಯ ನಿಬಂಧನೆಯ ಪ್ರಕಾರ ಮೈಸೂರು ಸಿಟಿ ರೇಷನಿಂಗ್ ಆಫೀಸರಾದ ಡಿ ಜೆ ಬಾಲರಾಜ್ ಈ ಮೂಲಕ ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ತಿಳಿಸುವುದೇನೆಂದರೆ —

ಡಿಸೆಂಬರ್ ೧೯೪೯ರಿಂದ ಜಾರಿಗೆ ಬರತಕ್ಕ ಹೊಸ ಕಾರ್ಡುಗಳನ್ನು ಪಡೆಯುವುದಕ್ಕೋಸ್ಕರ ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರು ಈ ಕೆಳಗೆ ಕಂಡ ಕಾಲಗಳಲ್ಲಿ ತಮ್ಮ ರೇಷನ್ ಕಾರ್ಡು ರಿಜಿಸ್ಟರಾಗಿರತಕ್ಕ ರೇಷನ್ ಡಿಪೋಗಳಲ್ಲಿ ಹೊಸ ಡಿಕ್ಲರೇಷನ್ ಫಾರಂಗಳನ್ನು ಪಡೆಯತಕ್ಕದ್ದು

ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರನು ಡಿಕ್ಲರೇಷನ್ ಫಾರಂ ತೆಗೆದುಕೊಂಡು ಅದರಲ್ಲಿರುವ ಕಲಂಗಳನ್ನು ಬರೆದು, ಆಯಾ ಡಿಪೋಗಳಿಗೆ ವಾಪಸು ಮಾಡತಕ್ಕದ್ದು ಈ ರೀತಿ ಡಿಕ್ಲರೇಷನ್ ಫಾರಂಗಳನ್ನು ಬರೆದು ಸಕಾಲದಲ್ಲಿ ಕೊಡದಿದ್ದರೆ ಅಂತಹವರಿಗೆ ಹೊಸ ಕಾರ್ಡುಗಳು ಸಿಕ್ಕಲ್ಪಡುತ್ತವೆ ಈ ತರಹ ಡಿಕ್ಲರೇಷನ್ ಫಾರಂಗಳು ಸ್ಪೆಷಲ್ ಇನ್ಸ್‌ಪೆಕ್ಟರುಗಳಿಂದ ಪರಿಶೀಲಿಸಲ್ಪಡುತ್ತವೆ ಅದರಲ್ಲಿ ಸುಳ್ಳು ಅಂಶಗಳೇನಾದರೂ ಇದ್ದಲ್ಲಿ ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾಗಬೇಕಾಗುವುದು

೧	ಡಿಕ್ಲರೇಷನ್ ಫಾರಂಗಳನ್ನು ಡಿಪೋಗಳಿಂದ ತೆಗೆದುಕೊಳ್ಳುವುದು	೧-೯-೪೯ರಿಂದ ೭-೯-೪೯ರವರೆಗೆ
೨	ಡಿಕ್ಲರೇಷನ್ ಫಾರಂಗಳನ್ನು ಸರಿಯಾಗಿ ಬರೆದ ಬಳಿಕ ಡಿಪೋಗಳಿಗೆ ಕೊಡತಕ್ಕದ್ದು	೭-೯-೪೯ರಿಂದ ೧೫-೯-೪೯ರವರೆಗೆ

ಈ ತಾರೀಖಿನ ನಂತರ ಬರೆಯಲ್ಪಟ್ಟ ಡಿಕ್ಲರೇಷನ್ ಫಾರಂಗಳನ್ನು ಯಾವ ವಿಧದಲ್ಲೂ ತೆಗೆದುಕೊಳ್ಳಲಾಗುವುದಿಲ್ಲ

(ಸಹಿ) ಡಿ.ಜೆ. ಬಾಲರಾಜ್,
ರೇಷನಿಂಗ್ ಆಫೀಸರು, ಮೈಸೂರು ಸಿಟಿ

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು

ನೋಟೀಸು

ಈ ನೋಟೀಸಿನ ಮೂಲಕ ತಿಳಿಯಪಡಿಸುವುದೇನೆಂದರೆ –

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್ಡಿನ ಷೇರುದಾರರ ಇಪ್ಪತ್ತೊಂದನೆಯ ಸಾಮಾನ್ಯ ಮಹಾ ಸಭೆಯು ಮೈಸೂರಿನಲ್ಲಿ ಬೆಂಗಳೂರು ರಸ್ತೆಯಲ್ಲಿರುವ ಕಂಪೆನಿಯ ರಿಜಿಸ್ಟರ್ಡು ಆಫೀಸಿನಲ್ಲಿ ಈ ಕೆಳಗೆ ಕಾಣಿಸಿರುವ ಕಾರ್ಯಕ್ರಮಗಳ ವ್ಯವಹರಿಸಲು ೧೯೪೯ನೇ ಅಕ್ಟೋಬರ್ ಮಾಹೆ ೧ನೇ ತಾರೀಖು ಶನಿವಾರ ಮಧ್ಯಾಹ್ನ ೪|| ಘಂಟೆಗೆ ನಡೆಯುತ್ತದೆ

೧ ೧೯೪೯ನೇ ಜೂನ್ ೩೦ನೇ ತಾರೀಖಿಗೆ ಅಖೈರಾದ ವರ್ಷದ ಪರಿಶೋಧಿತವಾದ ಲೆಕ್ಕಪತ್ರಗಳನ್ನೂ ಮತ್ತು ಡೈರೆಕ್ಟರುಗಳ ವರದಿಯನ್ನೂ ಅಂಗೀಕರಿಸುವುದು

೨. ಡಿವಿಡೆಂಡ್ ಮತ್ತು ಬೋನಸ್ಸನ್ನು ನಿರ್ಧರಿಸುವುದು

೩. ಸರದಿ ಮೇರೆಗೆ ನಿವೃತ್ತರಾಗುವ ಶ್ರೀಮಾನ್ ರಾಜಸೇವಾಸಕ್ತ ಸಿ ನರಸಿಂಹಯ್ಯನವರು ಬಿ ಎ ಬಿ ಎಲ್., ಶ್ರೀಮಾನ್ ಎ ಕೆ ರಂಗರಾಯರು, ಮತ್ತು ಮಾನ್ ಧರ್ಮಪ್ರಕಾಶ ಎಲ್. ಎಸ್ ವೆಂಕಾಜಿರಾಯರು ಇವರ ಸ್ಥಾನಗಳಿಗೆ ಮೂವರು ಡೈರೆಕ್ಟರುಗಳನ್ನು ಚುನಾಯಿಸುವುದು

೪ ಪ್ರಸಕ್ತ ವರ್ಷಕ್ಕೆ (ಅಂದರೆ ೧೯೪೯ನೇ ಜುಲೈ ೧ ರಿಂದ ೧೯೫೦ ಜೂನ್ ೩೦ನೇ ತಾರೀಖಿನವರಿಗೆ) ಆಡಿಟರುಗಳನ್ನು ನೇಮಿಸಿ ಅವರ ಸಂಭಾವನೆಯನ್ನು ನಿರ್ಧರಿಸುವುದು

೫ ಸ್ಪೆಷಲ್ ರೆಸೊಲ್ಯೂಷನ್‌ಗಳಾಗಿ ಸೂಚಿಸಲ್ಪಡತಕ್ಕ ಇದಕ್ಕೆ ಲಗತ್ತಾದ ರೆಸಲ್ಯೂಷನ್‌ಗಳನ್ನು (ಷೇರುದಾರರಿಗೆಲ್ಲಾ ಪ್ರತ್ಯೇಕವಾಗಿ ಕಳುಹಿಸಲ್ಪಟ್ಟಿರುವ ಮೀಟಿಂಗ್ ನೋಟೀಸಿನಲ್ಲಿ ಇವು ವಿವರಿಸಲ್ಪಟ್ಟಿವೆ) ಪರ್ಯಾಲೋಚಿಸುವುದು ಮತ್ತು ಸರಿಯೆಂದು ತೋರಿದರೆ ಅವುಗಳನ್ನು (ತಿದ್ದುಪಡಿಗಳೊಡನೆ ಅಥವಾ ತಿದ್ದುಪಡಿಗಳಿಲ್ಲದೆ) ಅಂಗೀಕರಿಸುವುದು

ಕಂಪೆನಿಯ ಷೇರು ಟ್ರಾನ್ಸ್‌ಫರ್ ಪುಸ್ತಕಗಳು ೧೯೪೯ನೇ ಸೆಪ್ಟೆಂಬರ್ ೧ನೇ ತಾರೀಖಿನಿಂದ ಅಕ್ಟೋಬರ್ ೧ನೇ ತಾರೀಖಿನವರಿಗೆ, ಎರಡು ದಿನಗಳೂ ಸೇರಿ, ಮುಚ್ಚಲ್ಪಡುತ್ತವೆ

ಮೈಸೂರು ೨೧ನೇ ಆಗಸ್ಟ್ ೧೯೪೯	ಬೋರ್ಡಿನ ಅಪ್ಪಣೆ ಪ್ರಕಾರ ಬಿ. ಎಸ್ ವಿಶ್ವೇಶ್ವರಯ್ಯ, ಸೆಕ್ರೆಟರಿ

ಸೂಚನೆ – (೧) ಡಿವಿಡೆಂಡ್ ಮತ್ತು ಬೋನಸ್ ನಿರ್ಧರಿಸಿದ ನಂತರ ಅವುಗಳನ್ನು ಮೈಸೂರು ಸಿಟಿಯಲ್ಲಿರುವ ' ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್ " ನ ಮುಖಾಂತರ ೧೯೪೯ನೇ ಅಕ್ಟೋಬರ್ ೧೦ನೇ ತಾರೀಖಿನ ಬಳಿಕ ಪಾವತಿ ಮಾಡಲಾಗುವುದು ಡಿವಿಡೆಂಡ್ ಮತ್ತು ಬೋನಸ್ಸು ವಾರಂಟುಗಳು ೧೯೪೯ನೇ ಸೆಪ್ಟೆಂಬರ್ ೧ನೇ ತಾರೀಖಿನ ದಿನ ಕಂಪೆನಿಯ ಷೇರುದಾರರ ಪಟ್ಟಿಯಲ್ಲಿ ನಮೂದಿಸಿರುವ ಷೇರುದಾರರಿಗೆಲ್ಲಾ ಕಳುಹಿಸಲಾಗುವುದು

(೨) ಕಂಪೆನಿಯು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ೯೩ನೇ ನಿಯಮದ ಪ್ರಕಾರ ಡೈರೆಕ್ಟರ ಸ್ಥಾನಕ್ಕೆ ಉಮೇದುವಾರಿಕೆ ನೋಟೀಸನ್ನು ಕಡೆಯ ಪಕ್ಷ ಮೀಟಿಂಗಿಗೆ ಹತ್ತು ದಿನಗಳಿದ್ದರೂ ಮುಂಚಿತವಾಗಿ ೧೯೪೯ನೇ ಅಕ್ಟೋಬರ್ ೧ನೇ ತಾರೀಖು ಮಧ್ಯಾಹ್ನ ನಾಲ್ಕು ಘಂಟೆಯೊಳಗಾಗಿ ಕಂಪೆನಿಯ ರಿಜಿಸ್ಟರ್ಡು ಆಫೀಸಿಗೆ ಲಿಖಿತ ಮೂಲಕ ಕೊಡಬೇಕಾಗಿದೆ

(೩) ಷೇರುದಾರರು ತಮ್ಮ ವಿಳಾಸದಲ್ಲಿ ಬದಲಾವಣೆ ಏನಾದರೂ ಇದ್ದರೆ ಅದನ್ನು ಕೂಡಲೇ ಕಂಪೆನಿಗೆ ತಿಳಿಸಬೇಕಾಗಿ ಕೋರಿದೆ

Edited, printed and published by A. R Nagaraj at Sadhvi Press, D Subbiah Road, Mysore

ಅಕ್ಕಿ ಖೋತಾ ಇಲ್ಲ

ಂ ಸು ಫೋ[] ಬೆಂಗಳೂರು ೩

ಸಂಸ್ಥಾನದಲ್ಲಿ ರೇಷನ್ ಇರುವ ಪ್ರದೇಶಗಳಲ್ಲಿ ಅಕ್ಕಿಯ ಪ್ರಮಾಣವನ್ನು ಒಂದು ಸ್ಟಿನಷ್ಟು ಕಡಿಮೆ ಮಾಡಬೇಕೆಂದು ರಕಾರದವರ ಪರ್ಯಾಲೋಚನೆಯಲ್ಲಿತ್ತು. ದರೆ ಹಾಗೆ ಕಡಿಮೆ ಮಾಡುವುದಿಲ್ಲವೆಂ ನಂಬಲರ್ಹವಾದ ಕಡೆಗಳಿಂದ ಇ ಚೆಗೆ ತಿಳಿದುಬಂದಿದೆ ಕೇಂದ್ರದಿಂದ ವರ್ಷಕ್ಕೆ ನಿಗದಿಯಾಗಿದ್ದ ೧ ಲಕ್ಷ ಸಾವಿರ ಟನ್ ಆಹಾರ ಧಾನ್ಯದ ಸರಬರಾಜಿನ ಪೈಕಿ ಈಗಾಗಲೇ ೮೫ ಸಾವಿರ ಟನ್ನಷ್ಟು ಧಾನ್ಯವು ಬಂದಿರುವುದೆಂದೂ ಳಿದ ಧಾನ್ಯದ ಜೊತೆಗೆ ಹೆಚ್ಚಾಗಿ ೨೦ ವಿರ ಟನ್ ಧಾನ್ಯಬರುವುದರಿಂದ ಇನ್ನು ೂರು ತಿಂಗಳವರೆಗೆ ಸಾಕಷ್ಟು ಆಹಾರ ಕ್ಕುವುದೆಂಬ ಭರವಸೆಯಿರುವುದರಿಂದ ಸನ್ನಿನಲ್ಲಿ ಖೋತಾ ಆಗುವುದಿಲ್ಲವೆಂದು ಳಲಾಗಿದೆ.

ಪ್ರಸಿದ್ಧ ಈಜುಗಾರರ ಪ್ರದರ್ಶನ ಪ್ರಪಂಚದದಲ್ಲೆಲ್ಲಾ ಹೆಸರುವಾಸಿ ಈಜುಗಾರರಾದ ಮಿಸ್ ಬೆಟ್ಟಿ ಸ್ಲೀಡ್ ಎಂಬುವಳು ಭಾರತದ ನೀರಾಟದ ಪ್ರವೀಣರಾದ ಜಾನಿ ಜಾನ್ಸನ್‌ರವರೊಡನೆ ನೆನ್ನೆ ರಸಭೆಯು ಈಜುವ ಕೊಳದಲ್ಲಿ ಅದ್ಭುತ ಪ್ರದರ್ಶನವನ್ನು ಕೊಟ್ಟಳು. ಇಂದು ನಾಳೆ ಮತ್ತು ನಾಳಿದ್ದು ಸಹ ಪ್ರದರ್ಶನಗಳಾಗುವು ಇದಕ್ಕಾಗಿ ಶಾಲಾ ಕಾಲೇಜುಗಳಿಗೆ ಮಧ್ಯಾಹ್ನ ರಜಾ ಕೊಡಲಾಗಿತ್ತು.

ದ. ಆಫ್ರಿಕ ಮುಖಂಡರಿಗೆ ಸತ್ಕಾರ

ದ ಆಫ್ರಿಕಾದ ಮುಖಂಡರಾದ ಪೀಟ ಕಾನಿಂಗೆಯವರು ನೆನ್ನೆ ಅರಸೀಕೆರೆ ಹೋಗಿ ಮುಂತಾದ ಪ್ರದೇಶಗಳನ್ನು ನೋಡಿಕೊಂಡು, – ಹಿಂತಿರುಗಿದರು_ ಅರಸೀಕೆರೆಯಲ್ಲಿ ಸ್ತ್ರೀಬಾಯಿ ಶಿಕ್ಷಣ ಶಿಬಿರಕ್ಕೆ ಹೋಗಿ ಅಲ್ಲಿನ ಕಾರ್ಯಕ್ರಮಗಳನ್ನು ನೋಡಿ ಮೆಚ್ಚಿದರು. ಸಂಜೆ ಅವರಿಗೆ ಮುಖ್ಯ ಮಂತ್ರಿ ರೆಡ್ಡಿಯವರು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಈ ಪ್ರಾತಃಕಾಲ ಅವರು ದೆಹಲಿಗೆ ವಾಪಸು ತೆರಳಿದರು

ಚೀ|| ಇಂಜನಿಯರಾದ ಶ್ರೀ ಪಿ. ಸುಬ್ಬ ರಾವ್‌ರವರು ರಜದಿಂದ ಕೆಲಸಕ್ಕೆ ಹಿಂತಿರುಗಿದ ನಂತರ ಅವರನ್ನು ಕೆಜ್ಜಾ ಸಬ್ ಡಿವಿಜನ್ನಿಗೆ ವರ್ಗಾಯಿಸಲಾಗುವುದು.

ವಿದ್ಯಾರ್ಥಿ ಮತ್ತು ಉಪಾಧ್ಯಾಯರುಗಳಿಂದ ಸಹಾಯ

ಮಧ್ಯ ಪ್ರಾಂತ್ಯದ ಉತ್ತರ ಜಿಲ್ಲೆಗಳ ಪ್ರೈಮರಿ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಹೆಚ್ಚು ಆಹಾರ ಬೆಳೆ ಯೋಜನೆಗೆ ಸಹಾಯಕರಾಗಲು ಜಮೀನುಗಳಲ್ಲಿ ಕೆಲಸ ಮಾಡಲು ಒಪ್ಪಿರುವರೆಂದು ಹೇಳಲಾಗಿದೆ

ನೆಹರೂರವರಿಗೆ ಬ್ರಿಟಿಷ್ ಪ್ರಧಾನಿಯ ಮನವಿ

ಕಾಶ್ಮೀರದ ಬಿಕ್ಕಟ್ಟನ್ನು ಒಗೆಹರಿಸಲು ರಾಷ್ಟ್ರಸಂಸ್ಥೆಯ ಕಮಿಷನ್ನಿನವರು ಸೂಚಿಸಿರುವ ನೂತನ ಸಲಹೆಗಳನ್ನು ಅಂಗೀಕರಿಸಬೇಕೆಂದು ಬ್ರಿಟನ್ನಿನ ಪ್ರಧಾನಿ ಮಿ|| ಅಟ್ಲಿಯವರು ಪಂಡಿತ ನೆಹರೂರವರಿಗೆ ಪತ್ರ ಬರೆದಿರುವರೆಂದು ತಿಳಿದುಬಂದಿದೆ

ಫೋನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಶನಿವಾರ ೩-೯-೧೯೪೮ [ಸಂಚಿಕೆ ೩೪

ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆ ಇಲ್ಲ?

ಮೈಸೂರಿಗೆ ಪ್ರತ್ಯೇಕ ಪಬ್ಲಿಕ್ ಸರ್ವಿಸ್ ಕಮಿಷನ್ ಬೇಡ

ಕೇಂದ್ರ ಸರಕಾರದ ಸೂಚನೆ

ಸ್ವಂ. ಸು ಫೋ[] ಬೆಂಗಳೂರು ೩

ಮೈಸೂರು ಸಂಸ್ಥಾನಕ್ಕೆ ಭಾರತ ಸರಕಾರದ ಮಾದರಿಯಲ್ಲಿಯೇ ಒಂದು ಪಬ್ಲಿಕ್ ಸರ್ವಿಸ್ ಕಮಿಷನನ್ನು ಸ್ಥಾಪಿಸಲು ಪ್ರಯತ್ನಗಳಾಗುತ್ತಿದ್ದುವಷ್ಟೆ? ಆದರೆ ಮೈಸೂರಿಗೆ ಬೇರೆ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಸ್ಥಾಪಿಸುವ ಅಗತ್ಯವಿಲ್ಲವೆಂದೂ ಕೇಂದ್ರದಲ್ಲಿ ಸ್ಥಾಪಿತವಾಗುವ ಪಬ್ಲಿಕ್ ಸರ್ವಿಸ್ ಕಮಿಷನ್ನೇ ಸಂಸ್ಥಾನಕ್ಕೂ ಅನ್ವಯವಾಗಬಹುದೆಂದೂ ತಿಳಿಯಪಡಿಸಿ, ಭಾರತ ಸರಕಾರದವರು ಮೈಸೂರಿಗೆ ಸೂಚನೆಯನ್ನು ಕಳುಹಿಸಿರುವುದಾಗಿ ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ

ಸಕ್ಕರೆ ಬೆಲೆಯನ್ನು ಇಳಿಸಲು ನಿರ್ಧಾರ

ಭಾರತ ಸರ್ಕಾರದವರು ಸಕ್ಕರೆ ಬೆಲೆಯನ್ನು ಇಳಿಸಲು ಕೆಳಗೆ ಕಂಡ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಸಕ್ಕರೆ ಕಂಪೆನಿಗಳಲ್ಲಿರುವ ಎಲ್ಲ ಸಕ್ಕರೆಯನ್ನೂ ಸರ್ಕಾರದವರು ಕೊಳ್ಳುವರು; ಸಕ್ಕರೆ ಹಂಚುವ ಮತ್ತು ಮಾರಾಟ ಮಾಡುವವರಿಗೆ ರಹದಾರಿ ಕೊಡುವ ಅಧಿಕಾರವನ್ನು ಪ್ರಾಂತ್ಯ ಸರ್ಕಾರಗಳಿಗೆ ಕೊಡುವರು ಸಕ್ಕರೆಯ ಸಟ್ಟಾ ವ್ಯಾಪಾರವನ್ನು ನಿಷೇಧಿಸಲಾಗಿದೆ ಡಿ ೨೪ನೇ ರಖಂಗೆ ೩೫-೧-೬ ರೂ. ಬೆಲೆಯನ್ನು ನಿಗದಿ ಮಾಡಲಾಗಿದೆ.

ಪುರ ಸಭಾ ಸದಸ್ಯರು ವೇಶ್ಯೆಯರನ್ನು ವಿವಾಹವಾಗಬೇಕಂತೆ

ಛಾವಲ್ ಪುರ, ಮತ್ತು ಬಿಕಾನ್ಪುರ ಸಂಸ್ಥಾನಗಳ ವೇಶ್ಯೆಯರು ನಗರದಿಂದಾಚೆ ವಾಸಿಸಬೇಕೆಂದು ಅಲ್ಲಿನ ಪುರ ಸಭೆಯವರು ಮಾಡಿರುವ ಆಜ್ಞೆಯನ್ನು ಪ್ರತಿಭಟಿಸಿ, ವೇಶ್ಯೆಯರೆಲ್ಲರೂ ವಿದ್ಯಾ ಮಂತ್ರಿಗಳಲ್ಲಿ ನಿಯೋಗ ಹೋಗಿದ್ದರು ಈ ಆಜ್ಞೆಯನ್ನು ರದ್ದುಗೊಳಿಸಬೇಕು. ಇಲ್ಲದಿದ್ದರೆ ತಮ್ಮ ಜೀವನೋಪಾಯವನ್ನು ಸರ್ಕಾರದವರೇ ನಿರ್ವಹಿಸಬೇಕು ಅಥವ ಪುರ ಸಭಾ ಸದಸ್ಯರುಗಳು ತಮ್ಮನ್ನು ಮದುವೆಯಾಗಬೇಕು–ಎಂದು ಅವರು ಕೋರಿರುವರೆಂದು ವರದಿಯಾಗಿದೆ

ಆಹಾರ ಸಮಸ್ಯೆಯಲ್ಲಿ ಇತರ ಪ್ರಶ್ನೆಗಳನ್ನು ಸೇರಿಸಬಾರದು

ಪತ್ರಿಕಾ ಸಮ್ಮೇಳನದಲ್ಲಿ ರೇಷನ್ ಅಧಿಕಾರಿಗಳ ಮನವಿ

ಮೈಸೂರು ೩

ನಗರದ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ. ನರಸಿಂಹ ಮೂರ್ತಿಯವರು ಈ ದಿನ ಬೆಳಿಗ್ಗೆ ಪತ್ರಿಕಾ ಸಮ್ಮೇಳನವನ್ನು ಕರೆದು ನಗರದ ಆಹಾರ ಪರಿಸ್ಥಿತಿಯನ್ನು ವಿವರಿಸಿದರು

ಸಂಸ್ಥಾನದ ಆಹಾರದ ಪರಿಸ್ಥಿತಿಯು ಸಮರ್ಪಕವಾಗಿಲ್ಲ ಆದರೆ ಕಳವಳಕ್ಕೆ ಕಾರಣವಿಲ್ಲ ಸಕಾಲದಲ್ಲಿ ಮಳೆ ಬಗದೆ, ಮೈಸೂರು, ಚಿತ್ರದುರ್ಗ ಮತ್ತು ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಪೈರು ಚೆನ್ನಾಗಿಲ್ಲ ಮುಂದಿನ ನಾಲ್ಕು ತಿಂಗಳಿಗೆ ಸಂಸ್ಥಾನಕ್ಕೆ ಒಟ್ಟು ೬೦ ಸಾವಿರ ಟನ್ ಅಕ್ಕಿ, ೧೫ ಸಾವಿರ ಟನ್ ಗೋಧಿ ಮತ್ತು ೩೫ ಸಾವಿರ ಟನ್ ಇತರ ಧಾನ್ಯಗಳು ಬೇಕಾಗುವುದು ಅದರ ಪೈಕಿ, ೨೫ ಸಾವಿರ ಟನ್ ಅಕ್ಕಿ ಖೋತಾ ಬೀಳುವುದು. ಭಾರತ ಸರ್ಕಾರದವರು ಇಲ್ಲಿಯವರೆಗೆ ೬೯ ಸಾವಿರ ಟನ್ ಧಾನ್ಯಗಳನ್ನು ಸಂಸ್ಥಾನಕ್ಕೆ ಕೊಟ್ಟಿರುತ್ತಾರೆ ಬಾಕಿ ೩೧ ಸಾವಿರ ೯ ಮತ್ತು ಹೆಚ್ಚಿಗೆ ೨೫ ಸಾವಿರ ಟನ್ ಧಾನ್ಯ ಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೋರಲಾಗಿದೆ ೨೫ ಸಾವಿರ ಟನ್ ಅಕ್ಕಿ ಸರಬರಾಜಾಗದಿದ್ದ ಪಕ್ಷದಲ್ಲಿ ಒಂದು ಔನ್ಸು ಅಕ್ಕಿಯ ಪಡಿತರವನ್ನು ಕಡಿಮೆ ಮಾಡಬೇಕಾಗುವುದು ನಗರಕ್ಕೆ ಇಲ್ಲಿಯವರೆಗೆ ಮೈಸೂರು ಜಿಲ್ಲೆಯಿಂದ ಅಕ್ಕಿ ಸರಬರಾಜಾಗುತ್ತಿತ್ತು ಆದರೆ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಧಾನ್ಯ ಹೋಗಿ, ಜಿಲ್ಲೆಯಿಂದ ಅಕ್ಕಿ ಬರದೆ, ೧೫ ದಿವಸಗಳ ಹಿಂದೆ ಕೇವಲ ೩ ದಿನಗಳ ಅಕ್ಕಿ ದಾಸ್ತಾನು ಮಾತ್ರ ಇತ್ತು ಈ ತಿಂಗಳಿಗೆ ಬೇಕಾಗುವ ೧೦ ಸಾವಿರ ಪಲ್ಲ ಮಧ್ಯಮ ವರ್ಗದ ಅಕ್ಕಿಯನ್ನು ಶಿವಮೊಗ್ಗ ಜಿಲ್ಲೆಯಿಂದ ತರಿಸಲಾಗಿದೆ ಇದ ಸ್ವಲ್ಪ ಕೆಂಪಾಗಿದ್ದರೂ, ಹೊರಗಿನ ಅಕ್ಕಿಗಿಂತ ಪುಷ್ಟಿಕರವಾಗಿದ ಅದನ್ನು ಜನರ ತಿಂದು ಕೊಂಡು ಸಹಕರಿಸಬೇಕು. ಉತ್ತಮ ದರ್ಜೆಯ ಅಕ್ಕಿಯ ದಾಸ್ತಾನು ಇಲ್ಲ

ಅಕ್ಕಿಯ ದಾಸ್ತಾನು ಪೇಟೆಯಲ್ಲಿ ಕಡಿಮೆಯಾಗಿರುವುದರಿಂದ ಅದನ್ನು ಕೇಳಬಾರದು. ಅಕ್ಕಿಯ ಬದಲು ಬೇರೆ ಧಾನ್ಯವನ್ನಾದರೂ ರೇಷನ್ ಕಾರ್ಡ್ ಹೋಲ್ಡರುಗಳು ತೆಗೆದುಕೊಳ್ಳಬಹುದು ಅಕ್ಕಿಯ ಬದಲು ರಾಗಿಯನ್ನು ಬೇಕಾದರೆ ತಾತ್ಕಾಲಿಕವಾಗಿ ಕೊಡಲಾಗುವುದು. ಈ ವರ್ಷದ ಜನವರಿಯಿಂದ ಆಗಸ್ಟ್ ತಿಂಗಳಿನ ಅಂತ್ಯದವರೆಗೆ ಒಟ್ಟು ೧೫,೦೦೦ ಅಕ್ರಮ ರೇಷನ್ ಕಾರ್ಡುಗಳನ್ನು ಕಂಡುಹಿಡಿದು ಅವುಗಳನ್ನು ರದ್ದು ಮಾಡಲಾಯಿತೆಂದು ಅವರು ತಿಳಿಸಿದರು

ಆಹಾರದ ಪರಿಸ್ಥಿತಿಯನ್ನು ಉತ್ತಮಪಡಿಸಲು ಸಾರ್ವಜನಿಕರು ಸಹಕರಿಸಬೇಕು, ಆಹಾರದ ಪ್ರಶ್ನೆಯೊಡನೆ ಇತರ ಸಮಸ್ಯೆಗಳನ್ನು ಸೇರಿಸದೆ ಆಹಾರವನ್ನೇ ಪ್ರತ್ಯೇಕ ಸಮಸ್ಯೆಯಾಗಿ ಜನರು ತಿಳಿದರೆ, ಸರ್ಕಾರಕ್ಕೂ ಅವರಿಗೂ ಸಹಾಯಕವಾಗುವುದೆಂದು ಅವರು ಹೇಳಿದರು.

ಪ್ರೋಚಾನ್ಸಲರ ನೇಮಕದ ಪ್ರಶ್ನೆ

ಸಿ. ಆರ್. ರೆಡ್ಡಿಯವರ ಷರತ್ತುಗಳ ಪರ್ಯಾಲೋಚನೆ

ಸ್ವಂ. ಸು ಫೋ.] ಬೆಂಗಳೂರು ೩

ವಿಶ್ವ ವಿದ್ಯಾಲಯಕ್ಕೆ ಪ್ರೋಚಾನ್ಸಲರನ್ನು ನೇಮಿಸುವ ಪ್ರಶ್ನೆಯು ನೆನ್ನೆ ಬೆಳಗ್ಗೆ ೯ ರಿಂದ ೧೧-೩೦ ಗಂಟೆಗೆ ಅಠಾರಾ ಕಛೇರಿಯಲ್ಲಿ ಸೇರಿದ್ದ ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಡಾ|| ಸಿ ಆರ್ ರೆಡ್ಡಿಯವರನ್ನು ಆ ಸ್ಥಾನಕ್ಕೆ ನೇಮಿಸುವ ವಿಷಯವಿನ್ನೂ ತೀರ್ಮಾನವಾಗಿಲ್ಲ. ಡಾ|| ರೆಡ್ಡಿಯವರು ಸರಕಾರಕ್ಕೆ ಹಲವು ಷರತ್ತುಗಳನ್ನು ಹಾಕಿದ್ದಾರೆಂದೂ ಗೊತ್ತಾಗಿದೆ. ಅವುಗಳ ಪೈಕಿ, ವಿಶ್ವ ವಿದ್ಯಾಲಯದಮೇಲೆ ಸರಕಾರದ ಅತಿಕೋಟೆಯಿಲ್ಲದೆ ಸಂಪೂರ್ಣ ಸ್ವಾತಂತ್ರ್ಯ ವಿರಬೇಕೆಂದೂ, ಪ್ರೋಚಾನ್ಸಲರ ಸಂಬಳ ೩ ಸಾವಿರ ರೂ. ಗಳಿರಬೇಕೆಂದೂ, ವಿಶ್ವ ವಿದ್ಯಾಲಯಕ್ಕಾಗಿ ವಿಶೇಷ ಬ್ಲಾಕ್‌ಬಡ್ಜೆಟ್ ಆಗಬೇಕೆಂದೂ ರೆಡ್ಡಿಯವರು ಕೇಳಿರುವುದಾಗಿ ತಿಳಿದುಬಂದಿದೆ ಈ ವಿಷಯಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ

ಕೆ. ಸಿ. ರೆಡ್ಡಿಯವರು ಪುನಃ ದೆಹಲಿಗೆ

. ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಪುನಃ ದೆಹಲಿಗೆ ಬರುವ ವಾರದಲ್ಲಿ ತೆರಳಲಿರುವರೆಂದು ತಿಳಿದುಬಂದಿದೆ ಈ ಪ್ರಾತಃಕಾಲ ಅವರು ಮೈಸೂರಿಗೆ ಪ್ರಯಾಣ ಮಾಡಿದರು

ಪ್ರ|| ಪ್ರ|| ಸಭೆ ಅಕ್ಟೋಬರ್ ೨೪ ಕ್ಕೆ

ಸ್ವಂ ಸು ಫೋ[] ಬೆಂಗಳೂರು ೩

ಪ್ರ|| ಪ್ರ|| ಸಭೆಯು ದಸರಾ ಅಧಿವೇಶನವು ಹಂಗಾಮಿಯದಾಗಿ ಬರುವ ತಿಂಗಳು ೨೪ ಕ್ಕೆ ಸೇರುವುದೆಂದು ಗೊತ್ತಾಗಿದೆ. ನಿನ್ನೆ ಸಂಜೆ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಪ್ರ|| ಪ್ರ|| ಸಭೆಯನ್ನು ಕರೆಯಲು ಕೊಡಬೇಕಾದ ನೋಟೀಸಿನ ವೇಳೆಯನ್ನು ೩೦ ದಿನಗಳಿಂದ ೧೦ ದಿನಗಳಿಗೆ ಇಳಿಸುವ ಬಗ್ಗೆ ಆ ಸಭೆಯ ನಿಬಂಧನೆಗಳಿಗೆ ತಿದ್ದುಪಡಿಯನ್ನು ತರಬೇಕೆಂದು ನಿರ್ಧರಿಸಲಾಯಿತು;

ಹರಿಕಥೆ

ರಾಜಧಾನಿಯ ಕಬೀರ್ ಪಕ್ಷೆಯಲ್ಲಿರುವ ಶ್ರೀ ಲಾಲಿ ವೆಂಕಟರಾಯರ ಛತ್ರದಲ್ಲಿ ಈ ಸಂಜೆ ೭ ಗಂಟೆಗೆ ನಿಜಾಮಕೀರ್ತನ ಪ್ರಯುಕ್ತ ಶ್ರೀ ಪಟ್ಟಾಭಿ ರಾಮ ದಾಸರಿಂದ ಸತೀ ಸುಲೋಚನ ಎಂಬ ಹರಿಕಥೆ ನಡೆಯುವುದು

ಜಾಡಮಾಲಿಗಳ ಬದಲು ಕಾಗೆಗಳು

ಕಳೆದ ನಾಲ್ಕು ತಿಂಗಳಿನಿಂದಲೂ ಬೊಂಬಾಯಿನ ಪುರಸಭೆಯ ಜಾಡಮಾಲಿಗಳು ಮುಷ್ಕರಹೂಡಿದ್ದಾರಷ್ಟೆ. ಅದನ್ನು ಬಗೆಹರಿಸುವ ವಿಚಾರವಾಗಿ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ, ಮುಷ್ಕರವಾದ ಮೇಲೆ ರಸ್ತೆಗಳು ಹೆಚ್ಚು ಚೊಕ್ಕಟವಾಗಿವೆಯೆಂದೂ, ಅದಕ್ಕೆ ಕಾಗೆಗಳೇ ಜವಾಬ್ದಾರಿಯೆಂದೂ ಒಬ್ಬ ಸದಸ್ಯರು ತಿಳಿಸಿದಾಗ, ಜಾಡಮಾಲಿಗಳನ್ನು ಸಂಪೂರ್ಣವಾಗಿ ವಜಾ ಮಾಡಿ, ಹೆಚ್ಚು ಕಾಗೆಗಳನ್ನು ನಗರಕ್ಕೆ ತರಿಸಬೇಕೆಂದು ಮತ್ತೊಬ್ಬ ಸದಸ್ಯರು ಸೂಚಿಸಿದರು. ಹಾಗೆ ಮಾಡಿದರೆ ಕಾಗೆಗಳನ್ನೆಲ್ಲಾ ಕೊಂದುಹಾಕುವುದಾಗಿ ಸಮತಾವಾದಿ ಪಕ್ಷದ ಸದಸ್ಯರೊಬ್ಬರು ಹೇಳಿದರು.

ಷಾಹ್ ದೊರೆಗಳ ಕೊಲೆ

ಬರ್ಮಾದ ಸರ್ವಾಧಾಂಗ ಸಂಸ್ಥಾನದ ಷಾಹ್ ದೊರೆಗಳಾದ ಸೋರ್ಟೆ ಪಾಲರವರನ್ನು ಕರೆ ದರೋಡೆಕಾರರು ಗುಂಡಿನಿಂದ ಹೊಡೆದು ಕೊಲೆ ಮಾಡಿದರೆಂದೂ, ಮತ್ತೊಬ್ಬ ಷಾಹ್ ದೊರೆಗಳಿಗೂ ಅರಮನೆಯಲ್ಲಿ ತೀವ್ರ ಗಾಯಪಡಿಸಲಾಯಿತೆಂದೂ ವರದಿಯಾಗಿದ. ೫೦ ಜನ ಶಸ್ತ್ರ ಸಜ್ಜಿತ ಕರೆನ್ನರು ಅರಮನೆಗೆ ನುಗ್ಗಿದಾಗ, ಪ್ರಾಣವನ್ನು ಉಳಿಸಬೇಕೆಂದು ದೊರೆಗಳು ಹಣ ಮತ್ತು ಆಭರಣಗಳನ್ನು ಕೊಡಲು ಹೋದರೂ, ಅದನ್ನು ತ್ಯಜಿಸಿ ಅವರನ್ನು ಕೊಂದರೆಂದೂ ಹೇಳಲಾಗಿದೆ

ಬಂಜರುಭೂಮಿ ಸರ್ಕಾರಕ್ಕೆ

ಸಾಗುವಳಿಗೆ ಉಪಯೋಗವಿದ್ದು ಬಂಜರು ಬಿದ್ದಿರುವ ಎಲ್ಲ ಜಮೀನುಗಳನ್ನೂ ವಶಪಡಿಸಿಕೊಳ್ಳಲು ಪೂರ್ವ ಪಂಜಾಬ್ ಸರ್ಕಾರದವರು ನಿರ್ಧರಿಸಿದ್ದಾರೆ. ಅವುಗಳಿಗೆ ಪರಿಹಾರವನ್ನು ಕೊಟ್ಟು ಭೂಮಿಗಳನ್ನು ಹೆಚ್ಚು ಆಹಾರ ಯೋಜನೆಗೆ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಸನ್ಯಾಸಿಗಳು ರಾಜಕೀಯದಲ್ಲಿ ಭಾಗವಹಿಸಬಹುದೇ?

ಮೌನಿ ಭುವ ಪುರದ ಶ್ರೀ ಕ್ಷಾತ್ರ ಜಗದ್ಗುರು ಸ್ವಾಮಿಯವರನ್ನು ಬೊಂಬಾಯಿ ಶಾಸನ ಸಭೆಯ ಸದಸ್ಯರನ್ನಾಗಿ ನಾಮಕರಣ ಮಾಡಿರುವ ಬಗ್ಗೆ ಕೊಲ್ಹಾಪುರದ ಕೋರ್ಟಿನಲ್ಲಿ ತಕರಾರು ಅರ್ಜಿಯನ್ನು ದಾಖಲು ಮಾಡಲಾಗಿದೆ. ಧಾರ್ಮಿಕ ಸಂಸ್ಥೆಯ ಅಧಿಪತಿಗಳೂ ಛತ್ರಪತಿ ಶಿವಾಜಿಯವರ ಅನುಭೋಗಿಗಳೂ ಮತ್ತು ಸನ್ಯಾಸಿಗಳೂ ಆದ ಅವರು ರಾಜಕೀಯ ವ್ಯವಹಾರಗಳಲ್ಲಿ ಕೈಹಾಕಬಾರದೆಂದು ತಿಳಿಸಿ, ಅವರು ಸಭೆಯಲ್ಲಿ ಭಾಗವಹಿಸದಂತೆ ಆಜ್ಞೆ ಮಾಡಬೇಕೆಂದು ಕೋರಲಾಗಿದೆ

ಪ್ರಧಾನಿ ಅಟ್ಲಿಯವರು ನಿವೃತ್ತರಾಗುವರೇ ?

ಬ್ರಿಟನ್ನಿನಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆ ನಡೆದನಂತರ, ಪ್ರಧಾನಿ ಮಿ॥ ಅಟ್ಲಿಯವರು ನಿವೃತ್ತರಾಗಬಹುದೆಂದೂ, ಬೆವಿನ್ ಅಥವ ಹರ್ಬರ್ಟ್ ಮಾರಿಸನ್‌ರವರುಗಳು ಪ್ರಧಾನಿಯಾಗಬಹುದೆಂದೂ ವದಂತಿ ಹರಡಿದೆ

॥ ಶ್ರೀ ॥

ಗಣೇಶ ಟಾಕೀಸ್

4—9—49ರಿಂದ ಆಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ರಾಜಮುಕ್ತಿ

(ತಮಿಳು)

—ಭೂಮಿಕೆ: —

† ಎಂ. ಕೆ. ತ್ಯಾಗರಾಜ ಭಾಗವತರ್

† ಭಾನುಮತಿ

† ವಿ. ಎನ್. ಜಾನಕಿ

ಮುಂತಾದವರು

ಜಪಾನಿನಲ್ಲಿ ಪ್ರಚಂಡ ಬಿರುಗಾಳಿ ಅನಾಹುತ

ಟೋಕಿಯೋದಲ್ಲಿ ಮೊನ್ನೆ ದಿನ ಪ್ರಚಂಡ ಬಿರುಗಾಳಿ ಎದ್ದು ೪೭ ಜನರು ಸತ್ತರೆಂದೂ, ೫೦ ಸಾವಿರ ಮನೆಗಳಿಗೆ ನೀರು ನುಗ್ಗಿದೆಯೆಂದೂ ವರದಿಯಾಗಿದೆ. ೧೦ ಲಕ್ಷ ಪೌಂಡ್ ಭತ್ತದ ಪೈರಿಗೆ ನಷ್ಟ ಉಂಟಾಗಿದೆಯೆಂದೂ, ಯೋಕಾಹಾಮಾ ಬಂದರಿನಲ್ಲಿದ್ದ ೭ ಹಡಗುಗಳು ಮುಳುಗಿ ಮಿಕ್ಕ ೧೦ ಹಡಗುಗಳಿಗೆ ನಷ್ಟ ಉಂಟಾಗಿದೆಯೆಂದೂ ಹೇಳಲಾಗಿದೆ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಆಬಳಿ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಿಳಿಸ್ರಾವ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ.

ಕ್ರಯ ೧ ಸೆಟ್ ರೂ ೩-೪-೦ ಮನಿಯಾರ್ಡರ್ ಕಮೀಷನ್, ಪ್ಯಾಕಿಂಗ್ ಮತ್ತು ಟಪ್ಪಾಲ್ ಖರ್ಚು ೧೪ ಆಣೆ.

ಮೈಸೂರು ಸಿಟಿಯಲ್ಲಿ ಮಹಿಳೆಯರು ರೂ. ೩-೪-೦ ಕೊಟ್ಟು ಮಹಿಳೆಯರಿಂದಲೇ ಇದನ್ನು ಪಡೆಯಬಹುದು ವಿವರಗಳಿಗೆ ಹೊಸ ಕ್ಯಾಟ್ಲಾಗ್ ನೋಡಿರಿ ಬರೆದರೆ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯರ್, ಆಬಳಿ, ಮಳವಂದೂರು

ಸಹಾಯಾರ್ಥ ವಿವಿಧ ವಿನೋದಾವಳಿ

ಮೈಸೂರು ಮಿಷನ್ ಆಸ್ಪತ್ರೆ ಪ್ರಾಟೆಸ್ಟೆಂಟ್ ಬಿಷಪ್‌ರವರ ನಿಧಿಯ ಸಹಾಯಾರ್ಥವಾಗಿ ವಿವಿಧ ವಿನೋದಾವಳಿಯು ಇದೇ ೯ನೇ ತಾ॥ ಶುಕ್ರವಾರ ಸಂಜೆ ೭ ಗಂಟೆಗೆ ಹಾರ್ಡ್‌ವಿಕ್ ಹೈಸ್ಕೂಲಿನಲ್ಲಿ ನಡೆಯುವುದು ಮಹಾಜನರು ಸಹಾಯ ಮಾಡಬೇಕೆಂದು ಕೋರಲಾಗಿದೆ

— ಲಕ್ಷ್ಮಿ —

ತಾ॥ 3—9—49 ರಿಂದ

ಪ್ರತಿ ದಿನ 3 ಪ್ರದರ್ಶನಗಳು

ಪ್ರಕಾಶ್‌ರವರ ಸಂಗೀತಮಯ ಸಾಮಾಜಿಕ ಹಿಂದಿ ಚಿತ್ರ

ಘೂಂಘಟ್

(GUNGHAT)

ಪಾತ್ರ - ನಿರ್ಮಲಾ ದೇವಿ

MORNING SHOWS

From 3-9-49 for 2 days

COLUMBIA'S

Pacific Adventure

Starring - Ron Rande

ಪ್ರಭಾ

2-9-49ರಿಂದ ದಿನವಹಿ 3 ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

- ಬಡಿ ಬಹೆನ್ -

ಸುರಯ್ಯಾ, ಗೀತಾಬಾಲಿ, ರೆಹಮಾನ್, ಉಲ್ಲಾಸ್

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು

ತಾರೀಖು ೨೪-೮-೪೯.

ಇಸ್ತಿಹಾರ್ ನಾಮೆ

ನಂ. ೨೪೯/೪೯-೫೦

೧೯೪೮ನೇ ಇಸ್ವಿ ಮೈಸೂರು ಸಂಸ್ಥಾನದ ರೇಷನಿಂಗ್ ಹುಕುಮಿನ ೧೧ನೆಯ ನಿಬಂಧನೆಯ ಪ್ರಕಾರ ಮೈಸೂರು ಸಿಟಿ ರೇಷನಿಂಗ್ ಆಫೀಸರಾದ ಡಿ. ಜೆ. ಬಾಲರಾಜ್ ಆದ ನಾನು, ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ತಿಳಿಸುವುದೇನೆಂದರೆ :—

ಡಿಸೆಂಬರ್ ೧೯೪೯ರಿಂದ ಜಾರಿಗೆ ಬರತಕ್ಕ ಹೊಸ ಕಾರ್ಡುಗಳನ್ನು ಪಡೆಯುವುದಕ್ಕೋಸ್ಕರ ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರು ಈ ಕೆಳಗೆ ಕಂಡ ಕಾಲಗಳಲ್ಲಿ ತಮ್ಮ ರೇಷನ್ ಕಾರ್ಡು ರಿಜಿಸ್ಟರಾಗಿರತಕ್ಕ ರೇಷನ್ ಡಿಪೋಗಳಲ್ಲಿ ಹೊಸ ಡಿಕ್ಲರೇಷನ್ ಫಾರಂಗಳನ್ನು ಪಡೆಯತಕ್ಕದ್ದು

ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರನು ಡಿಕ್ಲರೇಷನ್ ಫಾರಂ ತೆಗೆದುಕೊಂಡು ಅದರಲ್ಲಿರುವ ಸಂಖ್ಯಾಂಶವನ್ನು ಬರೆದು, ಆಯಾ ಡಿಪೋಗಳಿಗೆ ವಾಪಸು ಮಾಡತಕ್ಕದ್ದು. ಈ ರೀತಿ ಡಿಕ್ಲರೇಷನ್ ಫಾರಂಗಳನ್ನು ಒಪ್ಪಿಸುವ ಕಾಲದಲ್ಲಿ ಕೊಡದಿದ್ದರೆ ಅಂತಹವರಿಗೆ ಹೊಸ ಕಾರ್ಡುಗಳು ನಿರಾಕರಿಸಲ್ಪಡುತ್ತವೆ. ಈ ತರಹ ಡಿಕ್ಲರೇಷನ್ ಫಾರಂಗಳು ಸ್ಪೆಷಲ್ ಇನ್ಸ್‌ಪೆಕ್ಟರುಗಳಿಂದ ತನಿಖೆ ಮಾಡಲ್ಪಡುತ್ತವೆ. ಅದರಲ್ಲಿ ಸುಳ್ಳು ಅಂಶಗಳೇನಾದರೂ ಇದ್ದಲ್ಲಿ ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾಗಬೇಕಾಗುವುದು

೧	ಡಿಕ್ಲರೇಷನ್ ಫಾರಂಗಳನ್ನು ಡಿಪೋಗಳಿಂದ ತೆಗೆದುಕೊಳ್ಳುವುದು	೧-೯-೪೯ರಿಂದ ೭-೯-೪೯ರವರೆಗೆ
೨	ಡಿಕ್ಲರೇಷನ್ ಫಾರಂಗಳನ್ನು ಸರಿಯಾಗಿ ಬರೆದು ಆಯಾ ಡಿಪೋಗಳಿಗೆ ಕೊಡತಕ್ಕದ್ದು	೭-೯-೪೯ರಿಂದ ೧೫-೯-೪೯ರವರೆಗೆ

ಈ ತಾರೀಖಿನ ನಂತರ ಬರತಕ್ಕ ಡಿಕ್ಲರೇಷನ್ ಫಾರಂಗಳನ್ನು ಯಾವ ವಿಧದಲ್ಲೂ ತೆಗೆದುಕೊಳ್ಳಲಾಗುವುದಿಲ್ಲ

(ಸಹಿ) ಡಿ. ಜೆ. ಬಾಲರಾಜ್,

ರೇಷನಿಂಗ್ ಆಫೀಸರು, ಮೈಸೂರು ಸಿಟಿ

RAJKAMAL, MYSORE

From 2—9—49 :: Daily 3 Shows

Grand glorious Second Week

For the First Time in India !

Two Magnificent Russian Pictures in Superfine Technicolor

First Prize winner at the International Film Festival at Cannes, France

1) THE STONE FLOWER

(in Hindi)

2) THE FESTIVAL OF YOUTH

(in English)

Russian Olympic Games

Now Running to Crowded House

MORNING SHOWS

From 2—9—49 for 4 days

Great Expectations

By Charles Dickens

With Bernard Miles, Finlay Currie and Fransis L. Sullivan

Edited, printed and published by A. R. Nagarajan, at Sadhvi Press, D Subbiah Road, Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೪-೯-೧೯೪೯ [ಸಂಚಿಕೆ ೬

ಕಾಶ್ಮೀರ ಮಧ್ಯಸ್ತಿಕೆಗೆ ಭಾರತವು ಒಪ್ಪದು

ನಗರದಲ್ಲಿ ಕಳ್ಳತನಗಳನ್ನು ತಡೆಗಟ್ಟಬೇಕು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೪

ಮೈಸೂರು ಪೌರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ನಡೆಯಿತು. ನಗರದಲ್ಲಿ ಕಳ್ಳತನಗಳು ಮಕ್ಕಳ ಒಡವೆಗಳ ಅಪಹಾರ ಮತ್ತು ಇತರ ಹೀನ ಕೃತ್ಯಗಳು ಹೆಚ್ಚಿ ಪ್ರಜೆಗಳ ಆಸ್ತಿಪಾಸ್ತಿಗಳ ಭದ್ರತೆಗೆ ಭಂಗವುಂಟಾಗುತ್ತಿರುವುದರಿಂದ ಅದನ್ನು ತಡೆಗಟ್ಟಲು ತಕ್ಕ ಬಂದೋಬಸ್ತು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವು ಶ್ರೀ ಎ. ಕೃಷ್ಣಮೂರ್ತಿರಾಯರಿಂದ ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕೃತವಾಯಿತು. ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸಣ್ಣಪುಟ್ಟ ಕಳ್ಳತನಗಳನ್ನು ಸದಸ್ಯರು ವಿವರಿಸಿ ಪೌರಸಭೆಯ ರೇಡಿಯೋ, ಫ್ಯಾನು ಮುಂತಾದುವುಗಳೂ ಕಳವು ಹೋಗುತ್ತಿರುವುದನ್ನು ತಿಳಿಸಿದರು. ಬಜಾರಿ ಮತ್ತು ಗಿರವಿ ವರ್ತಕರುಗಳ ಬಗ್ಗೆ ಸರಿಯಾದ ಎಚ್ಚರಿಕೆ ತೆಗೆದುಕೊಳ್ಳಬೇಕೆಂದು ಅನೇಕರು ಅಭಿಪ್ರಾಯಪಟ್ಟರು. ಪೋಲೀಸ್ ಶಿಬ್ಬಂದಿಯನ್ನು ಕಡಿಮೆ ಮಾಡದೆ ಅವರು ಇನ್ನೂ ಹೆಚ್ಚು ದಕ್ಷತೆಯಿಂದಲೂ ಶ್ರದ್ಧೆಯಿಂದಲೂ ಕೆಲಸ ಮಾಡುವಂತಾಗಬೇಕೆಂದು ಹೇಳಿದರು.

ಈಗ ಜಾರಿಯಲ್ಲಿರುವ ಮಾರಾಟದ ತೆರಿಗೆ ಮತ್ತು ಆಕ್ಟ್ರಾಯಿ ತೆರಿಗೆಗಳಿಂದ ಪ್ರವಾಸಿಗಳ ಮೇಲೆ ಎರಡು ಬಗೆಯ ಹೊರೆಯು ಬೀಳುತ್ತಿರುವುದರಿಂದ ಆಕ್ಟ್ರಾಯಿ ತೆರಿಗೆಯನ್ನು ರದ್ದು ಮಾಡಿ ಅದರಿಂದ ಪೌರಸಭೆಗೆ ಈಗ ಬರುತ್ತಿರುವಷ್ಟು ಹಣವನ್ನು ಸರ್ಕಾರದವರು ಮಾರಾಟದ ತೆರಿಗೆಯಿಂದ ಕಟ್ಟಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಚೌಡಯ್ಯನವರು ಮಂಡಿಸಿದರು. ಯಾವ ಪದಾರ್ಥಗಳ ಮೇಲೆ ಮಾರಾಟ ತೆರಿಗೆ ಬೀಳುವುದಿಲ್ಲವೋ ಅವುಗಳಿಗೆ ಆಕ್ಟ್ರಾಯಿ ತೆರಿಗೆ ಹಾಕಲು ಅವಕಾಶವಿರಬೇಕೆಂದು ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ತಿದ್ದುಪಡಿಯನ್ನು ತಂದರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

ತಾತಯ್ಯನವರ ಸ್ಮಾರಕ ಸಮಿತಿಯ ಸಭೆ

ಮೈಸೂರು ೪

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕ ಸಮಿತಿಯ ಸಭೆಯು ಮೈಸೂರು ಲಕ್ಷ್ಮೀಪುರಂನಲ್ಲಿರುವ ಕೆ. ವಿ. ಪ್ರೆಸ್ಸಿನಲ್ಲಿ ಇದೇ ೬ನೇ ತಾರೀಖು ಮಂಗಳವಾರ ಮಧ್ಯಾಹ್ನ ೪ ಘಂಟೆಗೆ ಸೇರುತ್ತದೆ. ಸದಸ್ಯರೆಲ್ಲರೂ ದಯಮಾಡಿ ಬರಬೇಕೆಂದು ಕೋರಲಾಗಿದೆ.

ಕಾಶ್ಮೀರದ ಬಗ್ಗೆ ಮಧ್ಯಸ್ತಿಕೆಗೆ ತಿರಸ್ಕಾರ

ಮೂಲಭೂತ ಪಕ್ಷಗಳಿಗೆ ಸಂಬಂಧಪಟ್ಟ ಅಂಶಗಳನ್ನು ಪಂಚಾಯಿತಿಗೆ ಒಪ್ಪಿಸುವುದು ಉಚಿತವಲ್ಲವೆಂಬುದಾಗಿ ತಿಳಿಸಿ, ಭಾರತ ಸರ್ಕಾರದವರು ಕಾಶ್ಮೀರ ಸಮಸ್ಯೆ ಬಗ್ಗೆ ಅಡ್ಮಿರಲ್ ನಿಮಿಟ್ಜರ ಪಂಚಾಯಿತಿ ಮಧ್ಯಸ್ತಿಕೆಯನ್ನು ಅಂಗೀಕರಿಸಲಾರರೆಂದು ತಿಳಿದುಬಂದಿದೆ.

ಸ್ವತಂತ್ರ ಭಾರತದಲ್ಲೂ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ

ಪತ್ರಿಕೆಗಳ ಮೇಲೆ ಮಾರಾಟದ ತೆರಿಗೆಯನ್ನು ಹೊರಿಸಕೂಡದು

ಪತ್ರಿಕಾ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಆರನೇ ಸಮ್ಮೇಳನದಲ್ಲಿ ಅಧ್ಯಕ್ಷರಾದ ಶ್ರೀ ಎನ್. ಎಸ್. ವೆಂಕೋಬರಾಯರು ಕೆಳಗೆ ಕಂಡಂತೆ ಭಾಷಣ ಮಾಡಿದರು:–

ಮೈಸೂರು ಸಂಸ್ಥಾನದ ವೃತ್ತಪತ್ರಿಕೋದ್ಯೋಗಿಗಳ ಸಮ್ಮೇಳನದ ಈ ಆರನೇ ಅಧಿವೇಶನಕ್ಕೆ ಅಧ್ಯಕ್ಷನನ್ನಾಗಿ ತಾವುಗಳು ನನ್ನನ್ನು ಚುನಾಯಿಸಿ ಗೌರವವನ್ನು ದೊರಕಿಸಿಕೊಟ್ಟಿರುವುದಕ್ಕಾಗಿ ನಾನು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮ್ಮೇಳನದ ಪ್ರತಿನಿಧಿಗಳಿಗೆಲ್ಲ ಅರ್ಪಿಸಬೇಕಾಗಿದೆ.

ಸಂಸ್ಥಾನದ ಪತ್ರಿಕೋದ್ಯಮಿಗಳು ಇಂದು ನೆರೆದಿರುವ ಸಮಯದಲ್ಲಿಯೇ ಸಂಸ್ಥಾನದ ವೃತ್ತಪತ್ರಿಕೆಗಳ ಸ್ವಾತಂತ್ರ್ಯಕ್ಕಾಗಿ ಅವಿಶ್ರಾಂತವಾಗಿ ದುಡಿದವರಾದ ದಿವಂಗತ ವೃದ್ಧಪಿತಾಮಹ ಶ್ರೀ ವೆಂಕಟಕೃಷ್ಣಯ್ಯನವರ ಶತಮಾನೋತ್ಸವವೂ ನೆರವೇರುತ್ತಿರುವುದು ಈ ಸಮ್ಮೇಳನದ ಸುಯೋಗವೆಂದು ನಾನು ಭಾವಿಸಿದ್ದೇನೆ. 'ವೃದ್ಧಪಿತಾಮಹ,' 'ದಯಾಸಾಗರ'ರೆಂಬ ಖ್ಯಾತಿಗಳಿಸಿದ್ದ ಅವರು, ನಮ್ಮ ಸಂಸ್ಥಾನದ ವೃತ್ತಪತ್ರಿಕೋದ್ಯಮವು ಸ್ವತಂತ್ರವಾದ ಮನೋಧರ್ಮದಿಂದ ಮುಂದುವರಿಯಲು ಬಹುಮಟ್ಟಿಗೆ ನೆರವಾಗಿ, ಅನಂತರ ಬಂದ ಪತ್ರಿಕೋದ್ಯೋಗಿಗಳಿಗೆಲ್ಲ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ.

ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಪ್ರಭುತ್ವದಿಂದ ಅನೇಕ ಸಾರಿ ಸಂಚಕಾರ ಬಂದಿದ್ದರೂ ಒಟ್ಟಿನಲ್ಲಿ ಪತ್ರಿಕಾವೃತ್ತಿಯು ಬೆಳೆಯುತ್ತ ಬಂದಿದೆಯೆಂದು ಹೇಳಬಹುದು. ಭಾರತಕ್ಕೆ ಸ್ವಾತಂತ್ರ್ಯ ಬಂದು ನಮ್ಮವರೇ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದರೂ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಆಗಿಂದಾಗ್ಗೆ ಧಕ್ಕೆ ಬರುತ್ತಿರುವ ಪ್ರಸಂಗಗಳನ್ನು ನಾವು ನೋಡುತ್ತಲೇ ಇದ್ದೇವೆ. ಮೈಸೂರಿನ ಪರಿಸ್ಥಿತಿ ಕೂಡ ಭಿನ್ನವಾಗಿಲ್ಲ. ಪತ್ರಿಕೆಗಳ ಕರಾಳ ಶಾಸನವು ಇನ್ನೂ ಶಾಸನ ಕಡತದಲ್ಲಿಯೇ ಭದ್ರವಾಗಿದೆ. ಆ ಶಾಸನದ ಏಟುಗಳ ಆಘಾತಕ್ಕೆ, 'ಕಾಲಚಕ್ರ', "ಕೇಸರಿ", "ಕಿಡಿ" ಮತ್ತು 'ಜಾಗೃತಿ' ಪತ್ರಿಕೆಗಳು ಈಗಾಗಲೇ ಗುರಿಯಾಗಿವೆ.

ಪ್ರಜೆಗಳ ಮುಖಂಡರಾದವರೇ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿರುವ ಈ ಸಮಯದಲ್ಲಿ ದೇಶಾಭ್ಯುದಯ ದೃಷ್ಟಿಯಿಂದ ಪತ್ರಿಕೆಗಳಿಗೂ, ಪ್ರಭುತ್ವಕ್ಕೂ ಮಧುರ ಬಾಂಧವ್ಯವೇರ್ಪಟ್ಟಿರಲೇಬೇಕು. ಅದಕ್ಕೆ ತಕ್ಕಂತಹ ವಾತಾವರಣವನ್ನು ಪ್ರಭುತ್ವವೂ ಕಲ್ಪಿಸಲೆತ್ನಿಸಬೇಕು. ಪತ್ರಿಕೆಗಳೂ ಪ್ರಯತ್ನಪಡಬೇಕು. ಈ ಉದ್ದೇಶವನ್ನಿಟ್ಟುಕೊಂಡೇ, ಭಾರತದ ವೃತ್ತಪತ್ರಿಕೆಗಳ ಸಂಪಾದಕರ ಸಮ್ಮೇಳನವು ಎಲ್ಲ ಪ್ರಾಂತ್ಯಗಳಲ್ಲಿಯೂ ವೃತ್ತಪತ್ರಿಕಾ ಸಲಹಾ ಸಮಿತಿಗಳನ್ನು ಏರ್ಪಡಿಸಿದೆ. ನಮ್ಮ ಸರ್ಕಾರದವರು ಈ ಸಮಿತಿಯನ್ನು ಬೇಗನೆ ರಚಿಸುವ ನಿರೀಕ್ಷೆ ಇದೆ.

ಪತ್ರಿಕಾ ವೃತ್ತಿಯು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಬೇಕಾದರೆ, ಪತ್ರಿಕಾ ಕರ್ತರಲ್ಲಿಯೂ ಪತ್ರಿಕೋದ್ಯೋಗಿಗಳಲ್ಲಿಯೂ ಶಿಸ್ತಿರಬೇಕು, ಸಂಯಮವಿರಬೇಕು, ವಿಶಾಲ ಮನೋಭಾವನೆ ಇರಬೇಕು, ದೂರದೃಷ್ಟಿ ಇರಬೇಕು, ವಿಷಯಗಳನ್ನು ಆಳವಾಗಿ ವಿಮರ್ಶೆ ಮಾಡಿ ದೇಶದ ಹಿತದೃಷ್ಟಿಯನ್ನೇ ಗಮನದಲ್ಲಿರಿಸಿ, ಟೀಕೆ ಮಾಡುವ ಸಾಮರ್ಥ್ಯವಿರಬೇಕು, ಮುಂದೊದಗಬಹುದಾದ ಸನ್ನಿವೇಶವನ್ನು ಇಂದಿನ ಸ್ಥಿತಿಗತಿಗಳ ವಿಮರ್ಶೆಯಿಂದ ಊಹಿಸಿ, ದೇಶಕ್ಕೆ ಸರಿಯಾದ ಮಾರ್ಗ ತೋರಿಸುವ ಶಕ್ತಿಯನ್ನು ಗಳಿಸಿರಬೇಕು. ಪತ್ರಿಕಾ ವೃತ್ತಿಗೆ ಸಂಬಂಧಪಟ್ಟ "ಕೋಡ್ ಆಫ್ ಆನರ್" ಪ್ರಣಾಳಿಕೆಯೊಂದನ್ನು ನಮ್ಮ ಸಂಸ್ಥಾನದಲ್ಲಿ ಆದಷ್ಟು ಬೇಗನೆ ಸಿದ್ಧಗೊಳಿಸಿ, ಅವುಗಳನ್ನು ಎಲ್ಲ ಪತ್ರಿಕೋದ್ಯೋಗಿಗಳೂ ಅನುಸರಿಸುವಂತೆ ವ್ಯವಸ್ಥೆ ಮಾಡುವ ಅತಿ ಮುಖ್ಯ ಜವಾಬ್ದಾರಿಯು ಈ ಸಮ್ಮೇಳನದ ಮೇಲೆ ಬಿದ್ದಿದೆಯೆಂಬುದನ್ನು ನಾನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಪತ್ರಿಕೆಗಳ ಮೇಲೆ ಹಾಕಿರುವ ಮಾರಾಟ ತೆರಿಗೆಯನ್ನು ಮೈಸೂರು ಸಂಸ್ಥಾನದ ವೃತ್ತಪತ್ರಿಕೆಗಳು ಮಾತ್ರವಲ್ಲ, ಅಖಿಲ ಭಾರತ ವೃತ್ತಪತ್ರಿಕೆಗಳೂ ಪ್ರತಿಭಟಿಸಿವೆ. ಮೈಸೂರು ಸರ್ಕಾರದವರು ಈ ವ್ಯಾಪಾರ ತೆರಿಗೆಯನ್ನು ವೃತ್ತಪತ್ರಿಕೆಗಳಿಗೆ ಅನ್ವಯಿಸದಂತೆ ಬೇಗನೆ ಆಜ್ಞೆ ಹೊರಡಿಸುವರೆಂದು ನಾನು ನಿರೀಕ್ಷಿಸಿದ್ದೇನೆ.

ಜನತೆಯ ಸೇವಾವೃತ್ತಿಯಿಂದ ನೋಡುವುದಾದರೆ ಪತ್ರಿಕೋದ್ಯಮಕ್ಕಿಂತ ಶ್ರೇಷ್ಠವಾದ ವೃತ್ತಿ ಇನ್ನೊಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ವೃತ್ತಿಯು ನಮ್ಮ ದೇಶದಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿದ್ದರೂ ದೇಶಾಭಿಮಾನ ಪ್ರೇರಿತರಾದ ಅನೇಕ ಮಂದಿ ಹಿರಿಯ ಪತ್ರಿಕೋದ್ಯೋಗಿಗಳು ಸಲ್ಲಿಸಿರುವ ಸೇವೆಯ ಪ್ರಭಾವದಿಂದ ಅದು ಪ್ರಗತಿ ಮಾರ್ಗದಲ್ಲಿ ಮುಂದುವರಿಯುತ್ತಿದೆ. ನಮ್ಮ ಹಿರಿಯರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಸರಿಸಿ, ದೇಶ ಸೇವೆಯನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡು ನಮ್ಮ ಕೆಲಸದಲ್ಲಿ ನಿರತರಾಗಿ ಮತ್ತಷ್ಟು ಉತ್ಸಾಹದಿಂದ ದುಡಿಯೋಣ. ಆಗ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವು ತಾನಾಗಿಯೇ ದೊರೆಯುವುದು.

ಪತ್ರಿಕೋದ್ಯೋಗಿಗಳ ಸಮ್ಮೇಳನ

ಸಮ್ಮೇಳನಕ್ಕೆ ಗ|| ಜನರಲ್ ಮತ್ತು ಮಹಾರಾಜರ ಸಂದೇಶ

ಸ್ವಂ ಸು. ಫೋ.] ಬೆಂಗಳೂರು ೪

ಈ ಪ್ರಾತಃಕಾಲ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನವು ಆರಂಭವಾಯಿತು. ಮದ್ರಾಸಿನ ಸ್ವತಂತ್ರ ಪತ್ರಿಕೆ ಸಂಪಾದಕರಾದ ಶ್ರೀ ಖಾಸಾ ಸುಬ್ಬರಾಯರು ಪ್ರಾರಂಭ ಭಾಷಣ ಮಾಡಿದರು.

ಸಮ್ಮೇಳನಕ್ಕೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಸಚಿವರುಗಳಾದ ಶ್ರೀಗಳು ಎಚ್. ಸಿದ್ಧಯ್ಯ, ಪಾಮಿಡಿ ಸುಬ್ಬರಾಮಚೆಟ್ಟಿ, ಡಿ. ಹೆಚ್. ಚಂದ್ರಶೇಖರಯ್ಯ, ಆರ್. ಚನ್ನಿಗರಾಮಯ್ಯ ಮುಂತಾದವರು ದಯಮಾಡಿಸಿದ್ದರು. ಸುಮಾರು ೨೦೦ ಜನ ಪ್ರತಿನಿಧಿಗಳು ಆಗಮಿಸಿದ್ದರು. ಸಮಾರಂಭಕ್ಕೆ ಯಶಸ್ಸನ್ನು ಕೋರಿ ರಾಜಾಜಿಯವರು ಸಂದೇಶನ್ನು ಕಳುಹಿಸಿದ್ದರು. ಇಲ್ಲದೆ ಮೌ|| ಆಜಾದ್, ರಾಜಕುಮಾರಿ ಅಮೃತ ಕೌರ್, ಡಾ|| ಪಟ್ಟಾಭಿ ಸೀತಾರಾಮಯ್ಯ, ಕೇಂದ್ರ ಮಂತ್ರಿ ಶ್ರೀ ಕೆ. ಸಂತಾನಂ, ಮೇ|| ಜನರಲ್ ಚೌಧುರಿ, ಶ್ರೀ ಹೆಚ್. ಸಿ. ದಾಸಪ್ಪ, ಶ್ರೀ ಕೆ. ಟಿ. ಭಾಷ್ಯಂ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಮುಂತಾದವರು ಸಂದೇಶಗಳನ್ನು ಕಳುಹಿಸಿದ್ದರು. ಶ್ರೀಮನ್ಮಹಾರಾಜರು ಕಳುಹಿಸಿದ್ದ ಸಂದೇಶದಲ್ಲಿ ಅವರು ಸಮ್ಮೇಳನಕ್ಕೆ ಯಶಸ್ಸು ಕೋರಿ, ಪತ್ರಿಕೋದ್ಯೋಗಿಗಳ ಜವಾಬ್ದಾರಿಯು ಹೆಚ್ಚಿನದೆಂದೂ, ಅವರು ಸತ್ಯವನ್ನು ತಿಳಿಸತಕ್ಕವರಾಗಿಯೂ, ಪ್ರಜಾವರ್ಗಕ್ಕೆ ವಿದ್ಯಾಭ್ಯಾಸ ಕಲಿಸತಕ್ಕವರಾಗಿಯೂ ಇರುವವರಾದ ಕಾರಣ ಅವರು ಜನತೆಯ ಇಂಗಿತವನ್ನು ತಿಳಿದು ಅವರ ಆಕಾಂಕ್ಷೆಗಳನ್ನು ಪ್ರಕಟಿಸಲು ಸಮರ್ಥರಾಗಿರುವರೆಂದೂ, ಪತ್ರಿಕೋದ್ಯೋಗಿಗಳು ತಮ್ಮ ವೃತ್ತಿಯಲ್ಲಿ ನ್ಯಾಯ ಪ್ರತಿಪಾದನೆಗೆ ಹೆಚ್ಚು ಬೆಲೆ ಕೊಡುವಂತಾಗಿ ತಾವು ನಂಬಿಕೆಯಿಟ್ಟಿರುವುದಾಗಿ ಪ್ರಭುಗಳು ಅಪ್ಪಣೆ ಕೊಡಿಸಿದ್ದಾರೆ.

ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ, ಶ್ರೀ ಖಾಸಾ ಸುಬ್ಬರಾಯರು, ಸರಕಾರ, ಪತ್ರಿಕೆ ಮತ್ತು ಕೈಗಾರಿಕೆಗಳ ಮೇಲೆ ದೇಶದ ಪ್ರಗತಿ ಅವಲಂಬಿಸಿದೆಯೆಂದೂ, ಈಚೆಗೆ ಪತ್ರಿಕೆಗಳು ಬಂಡವಾಳಸ್ಥರ ಹಸ್ತಗತವಾಗುತ್ತಿರುವುದಾಗಿಯೂ ಹೇಳಿದರು.

[ಹಿಂದಿನ ಪುಟ ನೋಡಿ]

ವಾರ ಭವಿಷ್ಯ

ತಾ|| ೪-೯-೪೯ರಿಂದ ೧೧-೯-೪೯ರ ವರೆಗೆ

ಮೇಷ—ಆರೋಗ್ಯದ ಕಡೆ ಲಕ್ಷ್ಯವಿರಲಿ. ವಿಶ್ರಾಂತಿ ಇರದು. ಇತರರ ಬಾಯಿಲೆಗೆ ಹಣ ವ್ರಯ. ಜಮೀನು ವ್ಯವಹಾರದಲ್ಲಿ ತಕರಾರು ವ್ಯಾಪಾರಾದಿಗಳಲ್ಲಿ ಬಿಕ್ಕಟ್ಟು ಪ್ರವಾಸದಲ್ಲಿ ಕ್ಲೇಶ ತಾ|| ೮, ೯ ಅಪ್ರಿಯ ವಾರ್ತೆ. ಚತುಷ್ಪಾದ ಜಂತುಗಳಿಂದ ಹಾನಿ

ವೃಷಭ—ಕೈಗೊಂಡ ಕಾರ್ಯದಲ್ಲಿ ಜಯ. ಆರೋಗ್ಯ ಕೆಟ್ಟಗೆ ಕೋರ್ಟು ವ್ಯವಹಾರದಲ್ಲಿ ಜಯ. ನೌಕರಿಯಲ್ಲಿ ಮೇಲ್ಪಟ್ಟವರಿಂದ ಪ್ರಶಂಸೆ. ಪ್ರಗತಿದಾಯಕ ವಾರವಿದು. ತಾ|| ೮, ೯ ಆಪ್ತ ಜನ ಭೇಟಿ.

ಮಿಥುನ—ಹಣಕಾಸಿನ ಬಗ್ಗೆ ಎಚ್ಚರಿಕೆ ಇರಲಿ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಗಮನವಿಟ್ಟು ಕೆಲಸ ಮಾಡಿ. ವಾರದಲ್ಲಿ ಅಪಯಶ ಜಾಗರಣೆ ಪರಿಣಾಮವಾಗಿ ತಲೆ ನೋವು. ಕಣ್ಣುರಿ ತಾ|| ೬, ೭ ಪ್ರವಾಸ, ಮಹತ್ವ ಪತ್ರ.

ಕರ್ಕ—ವಾರ ನಿಷ್ಪ್ರಯೋಜಕ ಮೆದುಳಿಗೆ ತೀವ್ರ ತಾಪ. ವ್ಯಾಪಾರಾದಿಗಳಲ್ಲಿ ಕಷ್ಟಗಳು ಮನಸ್ಸಿಗೆ ನಿರುತ್ಸಾಹ ಪಶ್ಚಾತ್ತಾಪ ತಾ|| ೬, ೭ ತಲೆಗೆ ಪೆಟ್ಟು ದುಃಖ ವಾರ್ತೆ

ಸಿಂಹ—ಅನಾನುಕೂಲದ ಪ್ರಸಂಗಗಳು. ನೌಕರಿಯಲ್ಲಿ ಮೇಲಧಿಕಾರಿಗಳೊಡನೆ ನಿಷ್ಠೂರ. ಪ್ರವಾಸ ಅಹಿತಕರ ಮಾತು ಸಾಘಾತ ಕೌಟುಂಬಿಕ ಕಲಹದ ಉಗ್ರತೆ ತಾ|| ೮, ೯ ಹೃದಯ. ವಿಪ್ರಿಯ ವಾರ್ತೆ ಅಪಮಾನ

ಕನ್ಯಾ—ವಾರ ಎಲ್ಲ ಬಗೆಯ ಉತ್ಸಾಹದಾಯಕವು ಆರೋಗ್ಯ ನೆಟ್ಟಗೆ ಹಣಕಾಸಿನ ಸ್ಥಿತಿ ತೃಪ್ತಿಕರ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ಕಾರ್ಯದಕ್ಷತೆಗೆ ಮೇಲ್ಪಟ್ಟವರ ಮೆಚ್ಚಿಕೆ ಸುಖ ಪ್ರವಾಸ ತಾ|| ೮, ೯ ಲಾಭ

ತುಲಾ—ಪ್ರಗತಿಪರ ವಾರ, ಆರೋಗ್ಯ ಸಾಂಪತ್ತಿಕ ಸ್ಥಿತಿ ಉತ್ತಮ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಜಯ ಲಾಭ ಸನ್ಮಾನ, ಪ್ರವಾಸದಲ್ಲಿ ಇಷ್ಟಾರ್ಥ ಸಿದ್ಧಿ ತಾ|| ೬-೭ ಧನ ಲಾಭ, ಜಯ.

ವೃಶ್ಚಿಕ—ಶತ್ರುವಿನ ಸೋಲು ತಪ್ಪುವುದು ನಿಮ್ಮ ಮೇಲಿನ ಆರೋಗ್ಯದ ಸುಧಾರಣೆ ನೌಕರಿಯಲ್ಲಿ ನಾಳಿಗೆ ಗೌರವ ತಾ|| ೮, ೯ ಶುಭ ವಾರ್ತೆ

ಧನು—ನಿಮ್ಮ ಮೇಲಿನ ಸಂಕಟ ದಿಂದ ಪಾರಾಗುವಿರಿ ಆರೋಗ್ಯದ ಕಡೆ ಗಮನ ಕೊಡಿ ಪ್ರವಾಸ ಬೇಡ, ತಾ|| ೬ ೭ ಆರ್ಥಿಕ ವಂಚನೆಯಿಂದ ಪಾರಾಗುವಿರಿ

ಮಕರ—ನೀವು ಪ್ರೀತಿಸುತ್ತಿದ್ದ ವ್ಯಕ್ತಿಗೆ ಧಕ್ಕೆ ವ್ಯಾಪಾರಾದಿಗಳು ಬೇಡವಾಗುವುವು ಆರೋಗ್ಯ ನೆಟ್ಟಗಿದ್ದರೂ, ಚಿತ್ತವು ವ್ಯಾಕುಲಿತವಾಗುವುದು. ವಿಶ್ವಾಸಘಾತಕತನ ಅಪಘಾತ, ಭಯ.. ತಾ|| ೮-೯ ಹಾನಿ, ಚಿಂತೆ.

ಕುಂಭ—ಎದುರಾಳಿಗಳು ತತ್ತರಿಸುವರು ಆರೋಗ್ಯ ನೆಟ್ಟಗೆ, ಶಕ್ತಿ ಇಮ್ಮಡಿಸುವುದು ಹಣ ಲಾಭ ವ್ಯಾಪಾರಾದಿಗಳಲ್ಲಿ ಲಾಭ ಸುಖ ಪ್ರವಾಸ. ತಾ|| ೮-೯ ಉತ್ತಮ.

ಮೀನ—ಬಹುಕಾಲ ಆಲಸ್ಯದಲ್ಲಿ ಕಳೆದಿರಿ ವ್ಯಾಪಾರಾದಿಗಳಲ್ಲಿ ಅನಾಸಕ್ತಿ ಹಣಕಾಸಿನ ಖರ್ಚು ಇಮ್ಮಡಿಸುವುದು ತಾ|| ೬ ೭ ಚೈನಿಗಾಗಿ ಖರ್ಚು.

ದೆಹಲಿಗೆ ಬರುವವರ ಮೇಲೆ ತೆರಿಗೆ

ದೆಹಲಿಗೆ ೩೦ ಮೈಲಿಯಿಂದಾಚೆಯಿಂದ ಬರುವ ಪ್ರಯಾಣಿಕರ ಮೇಲೆ ತೆರಿಗೆ ಹಾಕಲು ಅಲ್ಲಿನ ಪುರ ಸಭೆಯವರು ತೀರ್ಮಾನಿಸಿದ್ದಾರೆ ಮೊದಲನೆ ತರಗತಿ ಪ್ರಯಾಣಿಕರಿಗೆ ತಲಾ ೮ ಆಣೆ, ಎರಡನೇ ತರಗತಿ ೪ ಆಣೆ ಮತ್ತು ೩ ನೇ ತರಗತಿ ೨ ಆಣೆ ವಿಧಿಸಲಾಗುವುದೆಂದೂ, ಎತ್ತಿನ ಗಾಡಿ ಅಥವ ಟಾಂಗಾ ಬಿಟ್ಟು, ರೈಲು, ಮೋಟಾರು ಮತ್ತು ವಿಮಾನಗಳಲ್ಲಿ ಬರುವವರ ಮೇಲೆ ಅದನ್ನು ಹಾಕಲಾಗುವುದೆಂದೂ ಹೇಳಲಾಗಿದೆ.

ಮೋಟಾರು ಕೆಲಸಗಾರರ ಮುಷ್ಕರ ಮುಂದುವರಿಯಿತು

ರಾಜಧಾನಿಯ ಮಾಡರ್ನ್ ಮೋಟಾರು ಕೆಲಸಗಾರರ ತೊಂದರೆಯು ನಿವಾರಣೆಗಾಗಿ ನಾಳೆಯಿಂದ ನಡೆಯಬೇಕಾಗಿದ್ದ ಮುಷ್ಕರವನ್ನು ಪಂಚಾಯಿತಿ ನಡೆಸಲು ನಿರ್ಧರವಾಗಿರುವುದರಿಂದ ಮುಂದುವರಿಸಲಾಗಿದೆಯೆಂದು ಮೋಟಾರು ಕೆಲಸಗಾರರ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಆಫ್ಘಾನಿಸ್ಥಾನಕ್ಕೆ ಪಾಕೀಸ್ಥಾನದಿಂದ ಪರಿಹಾರ

ಕಳೆದ ಜುಲೈ ೧೨ ನೇ ತಾ|| ಪಾಕೀಸ್ಥಾನದ ವಿಮಾನಗಳು ಆಫ್ಘಾನಿಸ್ಥಾನಕ್ಕೆ ಸೇರಿದ ಮೊಗಲ್ಗಯ್ ಪ್ರದೇಶದ ಮೇಲೆ ಮಾಡಿದ ವಿಮಾನ ಧಾಳಿಯಿಂದಾದ ನಷ್ಟಕ್ಕೆ ಪರಿಹಾರ ಕೊಡಲು ಪಾಕೀಸ್ಥಾನವು ನಿರ್ಧರಿಸಿದೆಯೆಂದು ಹೇಳಲಾಗಿದೆ

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನದ ಸ್ವಾಗತ ಸಮಿತಿ

ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನದ ಸ್ವಾಗತ ಸಮಿತಿಯ ಸಭೆಯು ಕಳೆದ ೩೧ ನೇ ತಾ|| ಶ್ರೀ ಟಿ. ಎಸ್. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಮ್ಮೇಳನವನ್ನು ಇದೇ ೧೧ ನೇ ತಾ||ಗೆ ಬದಲು ೧೮ ನೇ ತಾ|| ನಡೆಸಬೇಕೆಂದು ಕೋರಲಾಯಿತು. ಶ್ರೀ ಟಿ. ಎಸ್ ಸುಬ್ಬಣ್ಣನವರನ್ನು ಸ್ವಾಗತಾಧ್ಯಕ್ಷರನ್ನಾಗಿಯೂ, ಎ ೯ ಬಿ ಕೃಷ್ಣನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಬಿ ಬಾಲಯ್ಯ ಮತ್ತು ಎಸ್ ಟಿ. ಪುಟ್ಟಸ್ವಾಮಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಶ್ರೀ ಎ ಕೆ. ಎಸ್. ರಾಘವೇಂದ್ರರವರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು

ಸ್ವಾಗತ ಸಮಿತಿಗೆ ಶ್ರೀಗಳಾದ ಎಸ್. ಎಸ್. ಶಾಸ್ತ್ರಿ, ಹೆಚ್. ಕೆ ಸುಬ್ಬರಾವ್, ಎಸ್. ಟಿ. ರಾಮರಾವ್, ಎಸ್ ಟಿ ಪುಟ್ಟಸ್ವಾಮಿ, ಡಿ. ಸೂರ್ಯನಾರಾಯಣ, ಎಲ್. ಗೋಪಾಲರಾವ್ ಮತ್ತು ಎಂ ಆರ್. ಬಿ ಬಸಪ್ಪರವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು

(ಹಿಂದಿನ ಪುಟದಿಂದ ಮುಂದುವರಿದ

ಅನಂತರ ಅಧ್ಯಕ್ಷರ ಭಾಷಣವಾ... ಆದಾದ ಮೇಲೆ ಮುಖ್ಯ ಮಂತ್ರಿ ... ಸಿ. ರೆಡ್ಡಿಯವರು ಮಾತನಾಡಿ, ಹ... ತ್ರಿಕೆಗಳ ಮೇಲೆ ವಿಧಿಯಿಲ್ಲದೆ ಕಾ... ತೆಗೆದುಕೊಳ್ಳಬೇಕಾಯಿತೆಂದೂ, ... ಮ್ಮೇಳನವು ಮುಗಯುವುದರೊಳಗೆ ... ಸ್ಥಾನದಲ್ಲೂ ಒಂದು ಪತ್ರಿಕಾ ಸಲ... ಮಿತಿಯನ್ನು ರಚಿಸಿ, ಅದರ ಸಲ... ನ್ನು ನೋಡಿಕೊಂಡು ಕಾರ್ಯಕ್ರಮ... ಸಲಾಗುವುದೆಂದೂ, ಏತನ್ಮಧ್ಯೆ ... ವಾತಾವರಣ ಉಂಟಾಗಲು ನಾಲ್ಕ... ತ್ರಿಕೆಗಳ ಮೇಲೆ ಹಾಕಿರುವ ನಿಬಂಧ... ತೆಗೆದು ಹಾಕುವುದಾಗಿಯೂ ತಿಳಿಸಿ...

— ಲಕ್ಷ್ಮಿ

ತಾ|| 3—9—49 ರಿಂದ ಪ್ರತಿ ದಿನ 3 ಪ್ರದರ್ಶನಗಳು ಪ್ರಕಾಶ್‌ರವರ ಸಂಗೀತಮಯ ಸಾಮಾಜಿಕ ಹಿಂದಿ ಚಿತ್ರ

ಘೂಂಘಟ್ (GUNGHAT)

ಪಾತ್ರ—ನಿರ್ಮಲಾ ದೇವಿ

ಘನವಾದ ಸಂಗೀತ ಕಛೇರಿ

ಮೈಸೂರು ಟೌನ್ ಹಾಲಿನಲ್ಲಿ

6-9-49ನೇ ಮಂಗಳವಾರ

ಸಾಯಂಕಾಲ ಆರು ಘಂಟೆಗೆ

(ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದ ನಿಧಿಗಾಗಿ)

ಶ್ರೀಮತಿ ಕೋಕಿಲ ಗಾನ ಇಷ್ಟವಾಣಿ

ಎಂ. ಎಸ್. ಸುಬ್ಬಲಕ್ಷ್ಮಿಯವರ ಗಾನ

ಸಂಗೀತ ರತ್ನ ಆ|| ವಿ|| ಟಿ. ಚೌಡಯ್ಯನವರ-ಪಿಟೀಲು.

ವಿ|| ಶಕ್ತಿವೇಲೂರವರ ಮೃದಂಗ

ವಿ|| ಅಲ್ಲಂಗುಡಿ ರಾಮಚಂದ್ರರವರ ಘಟಂ

ಮೆಂಬರುಗಳಲ್ಲದವರಿಗೆ ಟಿಕೇಟ್ ಮೂಲಕ ಪ್ರವೇಶ

ಮೆಂಬರುಗಳಿಗೆ ಕೊನೇ ಎರಡು ತರಗತಿಗಳಲ್ಲಿ ಪೂರ್ತಾ ಛಾರ್ಜು ಮತ್ತು ಮಿಕ್ಕ ತರಗತಿಗಳಲ್ಲಿ ಅರ್ಧ ಛಾರ್ಜು.

ಟಿಕೇಟು ದರ—ಗಂಡಸರಿಗೆ ರೂ. 25, 15. 10, 5 ಮತ್ತು 2,

,, ಹೆಂಗಸರಿಗೆ ರೂ 15, 10, 5 ಮತ್ತು 2.

—: ಟಿಕೇಟು ದೊರೆಯುವ ಸ್ಥಳ :

1) ರಾಮ ಮಂದಿರಂ, ಮೈಸೂರು, ಬೆಳಿಗ್ಗೆ ೯ ರಿಂದ ೧೨ ಘಂಟೆ ವರೆಗೆ ಸಾಯಂಕಾಲ ೪ ರಿಂದ ೬ ಘಂಟೆ ವರೆವಿಗೆ,

2) ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಸಿಕ್ರೆಟರಿಯವರ ಆ... ನಲ್ಲಿ- ಬೆಳಿಗ್ಗೆ ೯ರಿಂದ ೧೦-೩೦ರ ವರೆಗೆ, ಸಂಜೆ ೭ರಿಂದ ೯ ರ ವ...

3 ತಾ|| ಜೆ ಎಸ್. ಕೃಷ್ಣಮೂರ್ತಿ ಹಾಲ್, ಹಳೇ ಮೈಸೂರು ಬ್ಯಾಂಕ್...

ಡಿ. ಕಪಿನೀಪತಿ ರಾವ್, ಗೌ|| ಕಾರ್ಯದ...

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾ... ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ವ... ಚಿನ್ನಾಭರಣಗಳ ಆಧಾರದ ಮೇಲೆ ಸುಲಭ ... ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು.

U HARI SHENOY

ಏಜೆಂಟ್

RAJKAMAL, MYSORE

From 2—9—49 :: Daily 2 Shows

Grand glorious Second Week

Two Russian Pictures in Technicolor

1) THE STONE FLOWER

(in Hindi)

2) THE FESTIVAL OF YOUTH

(in English)

From 2 9 49 MORNING SHOWS for 4 days

Great Expectations

Edited, printed and published by A R Nagarajan at Sadhvi Press, D. Subbiah Road, Mysore.

ಫೋನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಸೋಮವಾರ ೫-೯-೧೯೪೯ [ಸಂಚಿಕೆ ೩೫

ಕರೆನ್ನರಿಂದ ಷಾನ್

- ಸಂಸ್ಥಾನಾಧೀಶರ ಕೊಲೆ -

ಸರ್ ಆರ್ಕಾಟರಿಗೆ ಸನ್ಮಾನ

ಮೈಸೂರು ೫

ಸಂಸ್ಥಾನದರೈಲ್ವೆ ಅಧಿಕಾರಿಗಳೂ, ನೌಕರರೂ ಮಾಜಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ಗೌರವಿಸುವುದಕ್ಕಾಗಿ ನೆನ್ನೆ ಸಂಜೆ ರಾಜಧಾನಿಯ ರೈಲ್ವೆ ಇನ್‌ಸ್ಟಿಟ್ಯೂಟಿನ ಬಳಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಗೃಹ ಸಚಿವರಾದ ಶ್ರೀ|| ಟಿ ಮರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು. ರೈಲ್ವೆ ಸಚಿವ ಶ್ರೀ|| ಸಿದ್ದಯ್ಯನವರು ಸಭೆಗ ಆಗಮಿಸಿದ್ದರು.

ರೈಲ್ವೆ ನೌಕರರ ಪರವಾಗಿ ಜನರಲ್ ಮ್ಯಾನೇಜರವರಾದ ಶ್ರೀ|| ಆರ್ ರಾಮಕೃಷ್ಣರವರು ಬೀಳ್ಕೊಡುವ ಮಾನಪತ್ರವನ್ನು ಓದಿ, ಸರ್ ಆರ್ಕಾಟರಿಗೆ ರಜತ ಕರಂಡದಲ್ಲಿ ಅರ್ಪಿಸಿದರು. ಒಂದು ಬೆಳ್ಳಿಯ ರೈಲ್ವೆ ಇಂಜನ್ನನ್ನೂ ಸಹ ಮಾಜಿ ದಿವಾನರಿಗೆ ಅರ್ಪಿಸಲಾಯಿತು.

ಸರ್ ಆರ್ಕಾಟರು ಭಾಷಣ ಮಾಡಿ, ಮೈಸೂರು ಸಂಸ್ಥಾನದ ರೈಲ್ವೆ ನೌಕರರು ದಕ್ಷತೆಯಿಂದ ಕೆಲಸ ಮಾಡಿರುವುದು ಹೇಳಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ರೈಲ್ವೆ ಇಲಾಖೆಯಲ್ಲಿ ಹೆಚ್ಚಿನ ವರಮಾನ ಬಂದಿದೆಯೆಂದೂ, ಸಂಸ್ಥಾನದ ರೈಲ್ವೆ ನೌಕರರಿಗೂ ಭಾರತದ ಇತರ ಪ್ರದಮದರ್ಜೆ ರೈಲ್ವೆಗಳ ನೌಕರರಿಗೆ ದೊರೆಯುತ್ತಿರುವ ಸಂಬಳ ಸಾರಿಗೆಯ ಮತ್ತೆ ದೊರೆಯುವುದು ಅಗತ್ಯವೆಂದೂ, ಈ ಬಗ್ಗೆ ಸಂಸ್ಥಾನದ ಮಾಜಿ ಮಂತ್ರಿ ಮಂಡಲದ ವರು ಕೊಟ್ಟಿದ್ದ ಭರವಸೆಯು ಈಗಿನ ಮಂತ್ರಿ ಮಂಡಳಿಯವರಿಂದ ಪರ್ಯಾಲೋಚಿಸಲ್ಪಡುತ್ತಿದೆಯೆಂದೂ, ಅದು ಇಷ್ಟರಲ್ಲೇ ಫಲಕಾರಿಯಾಗಬಹುದೆಂದೂ ಸರ್ ಆರ್ಕಾಟರು ನುಡಿದರು. ದೇಶದ ಆರ್ಥಿಕ ಸ್ಥಿತಿಯು ಈಗ ಸಮರ್ಪಕವಾಗಿಲ್ಲದಿರುವುದರಿಂದ ನೌಕರರು ಸಂಪಾದನೆಯನ್ನೇ ಮುಖ್ಯರಿಯಾಗಿಟ್ಟುಕೊಳ್ಳದೆ ತಮ್ಮ ಜೀವನ ಮಟ್ಟವನ್ನು ಒಂದು ಪರಿಮಿತಿಯಲ್ಲಿಟ್ಟುಕೊಂಡು ಸರ್ಕಾರದೊಡನೆ ಸಹಕರಿಸಬೇಕೆಂದ, ಅವರು ಬೋಧಿಸಿದರು.

ಸಮಾಜವಾದಿ ಪಕ್ಷದ ಸಭೆಯ ಸ್ವಾಗತ ಸಮಿತಿ

ಸೋಷಲಿಸ್ಟ್ ಪಾರ್ಟಿಯ ರಾಷ್ಟ್ರೀಯ ಕಾರ್ಯಕಾರಿ ಮಂಡಲಿಯ ಮತ್ತು ಜನರಲ್ ಕೌನ್ಸಿಲ್ ಸಭೆಗಳ ಬರುವ ತಿಂಗಳು ... ರಿಂದ ೬ ವರೆಗೆ ಬೆಂಗಳೂರಿನಲ್ಲಿ ನಡೆಯುವುದರ ಪ್ರಯುಕ್ತ, ಅಲ್ಲೊಂದು ಸ್ವಾಗತ ಸಮಿತಿಯು ಏರ್ಪಾಡಾಗಿ, ಶ್ರೀ ಸಿ ಕೆ ರೆಡ್ಡಿಯವರು ಅಧ್ಯಕ್ಷರಾಗಿಯೂ, ... ನಾಗಭೂಷಣರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಕರಾಚಿಯಲ್ಲಿ ಭಾರತದ ವಸ್ತ್ರ ದಹನ

ಕರಾಚಿಯ ಒಟ್ಟೆ ವರ್ತಕರ ಸಂಘದವರು ಭಾರತೀಯ ಬಟ್ಟೆಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ನ ಒಂದರಲ್ಲಿ ಇಡೀ ನಗರದಲ್ಲೆಲ್ಲಾ ಮೆರವಣಿಗೆಯನ್ನು ನಡೆಸಿ, ಗೋಲ್ ... ಬಟ್ಟೆ ಮಾರ್ಕೆಟ್ಟಿನಲ್ಲಿ ಭಾರತದ ವಸ್ತ್ರಗಳನ್ನೆಲ್ಲಾ ಸುಡಲು ನಿರ್ಧರಿಸಿದ್ದಾರೆ. ಪ್ರಾಂತ ಪಾಕಿಸ್ತಾನ ಮತ್ತು ... ಗಳಲ್ಲೂ ಈ ಬಗ್ಗೆ ಪ್ರಚಾರ ನಡೆಸಿ ಬಟ್ಟೆ ವರ್ತಕರ ಸಂಘದ ನಿಯೋಗವನ್ನು ಕಳಿಹಿಸಲಾಗುವುದೆಂದೂ ವರದಿಯಾಗಿದೆ.

ಪತ್ರಿಕೆಗಳೊಡನೆ ಅಧಿಕಾರಿಗಳು ತೋರಿದ ಅವಮರ್ಯಾದೆ

ಸಮ್ಮೇಳನದಲ್ಲಿ ಖಂಡನಾನಿರ್ಣಯ

ಸ್ವಂ ಸು ಫೋರ್] ಬೆಂಗಳೂರು ೫

ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ ನೆನ್ನೆ ದಿನ ದಿವಂಗತ ಎಂ. ವೆಂಕಟಕೃಷ್ಣಯ್ಯನವರು ಪತ್ರಿಕಾ ಪ್ರಪಂಚಕ್ಕೆ ಮಾಡಿದ ಸೇವೆಯನ್ನು ಸ್ಮರಿಸಿ ಅವರಿಗೆ ಕೃತಜ್ಞತೆಯನ್ನು ಸೂಚಿಸುವ ನಿರ್ಣಯವು ಅಧ್ಯಕ್ಷರಿಂದ ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕೃತವಾಯಿತು.

ಹಲವು ಮಂತ್ರಿಗಳೂ ಅಧಿಕಾರಿಗಳೂ ಪತ್ರಿಕಾ ಕರ್ತರನ್ನು ಅಗೌರವದಿಂದ ಕಂಡು ಅವರ ಒಗ್ಗ ಕೈಕೆಳಗಿನ ನೌಕರರಂತೆ ವರ್ತಿಸಿರುವುದಕ್ಕಾಗಿ ಸಮ್ಮೇಳನವು ಖಂಡನಾ ನಿರ್ಣಯವನ್ನು ಮಾಡಿತು. ಇಂತಹ ಪ್ರಸಂಗಗಳಾಗಬಾರದೆಂದು ಆಶಿಸಲಾಯಿತು.

ಸಮ್ಮೇಳನದ ಸ್ವಾಯೀ ಸಮಿತಿಯವರು ಅಭ್ಯಾಗತರಿಗೂ ಪ್ರತಿನಿಧಿಗಳಿಗೂ ಬೋಜನ ಕೂಟವನ್ನೇರ್ಪಡಿಸಿದ್ದರು. ಸಚಿವರುಗಳೂ ದಯಮಾಡಿದ್ದರು.

ಪೌರ ಸಭಾ ಚುನಾವಣೆಯ ಓಟರುಗಳ ಪಟ್ಟಿ

ಮೈಸೂರು ನಗರದ ನಿವಾಸಿಗಳಲ್ಲಿ ವಿನಂತಿ.-

ಮೈಸೂರು ನಗರದ ಪೌರ ಸಭೆಯ ಚುನಾವಣೆಯು ಇದೇ ನವಂಬರು ಮಾಹೆ ... ರಲ್ಲಿ ನಡೆಯುವುದು ಸಂಭವಿಸ್ಸೆ ಈ ಬಗ್ಗೆ ಈಗಾಗಲೇ ಪೂರ್ವಭಾವಿ ಓಟರುಗಳ ಪಟ್ಟಿಯು ತಯಾರಾಗಿ ನಗರದ ಅನೇಕ ಮುಖ್ಯ ಸ್ಥಳಗಳಲ್ಲಿಯೂ ಮತ್ತು ಮೊಹಲ್ಲಾ ಪೌರ ಸಭಾ ಸದಸ್ಯರುಗಳ ಬಳಿಯಲ್ಲಿಯೂ ಇಟ್ಟಿರುತ್ತೆ. ಅರ್ಹತೆಯುಳ್ಳವರು ಓಟರುಗಳ ಪಟ್ಟಿಯಲ್ಲಿ ಬಿಟ್ಟುಹೋಗಿರುವವರಗಳು ಅದರಾ ತಪ್ಪು ಹೆಸರು ಅಚ್ಚಾಗಿರುವುದ, ಅಥವಾ ಇನ್ಯಾವ ಕಾರಣಗಳಿಂದಲಾದರೂ ಬಿಟ್ಟು ಹೋಗಿದ್ದ ಪಕ್ಷದಲ್ಲಿ ಇದನ್ನು ಸರಿಪಡಿಸಲು ಇದೇ ಮಾಹೆ ೧೦ರವರೆವಿಗೂ ಅವಧಿ ಇರುತ್ತೆ. ಈ ವಿಚಾರಗಳನ್ನು ಸರ್ವರೂ ದಿನ ಎಲ್ಲರ ಅನುಕೂಲಕ್ಕಾಗಿಯೂ ಪ್ರಕಟ ಮಾಡಿರುವ ಸಾರ್ವಜನಿಕ ಕಾಂಗ್ರೆಸ್ ಪೌರ ಸಭಾ ಸದಸ್ಯರ ಗುಲ್ಲಿಯ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ

ಸಕ್ಕರೆ ಹತೋಟಿ ಕಾರ್ಯಕ್ರಮ

ಬೆಂಗಳೂರು ೫

ಸರ್ಕಾರದವರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ, ಯಾವ ಸಕ್ಕರೆ ಕಾರ್ಖಾನೆ, ಅಥವಾ ಹೋಲ್‌ಸೇಲ್ ವರ್ತಕನೇ ಆಗಲಿ ಈ ತಿಂಗಳು ೩ ನೇ ತಾರೀಖಿನಲ್ಲಿ ತನ್ನ ವಶದಲ್ಲಿದ್ದ ಸಕ್ಕರೆ ದಸ್ತಾನನ್ನು ಸರಕಾರದ ಅಪ್ಪಣೆಯಿಲ್ಲದೆ ವಿಲೇವಾರಿ ಮಾಡಕೂಡದೆಂದು ನಿರ್ಬಂಧ ಮಾಡಿದ್ದಾರೆ. ಫ್ಯಾಕ್ಟರಿ ಶವಲ್ಲಿರುವ ದಾಸ್ತಾನನ್ನೊಂದನ್ನು ತಿಳಿಸಬೇಕಾಗಿದೆ.

ಮಜ್ದೂರ್ ವಾರ ಪತ್ರಿಕೆ

ಸಂಸ್ಥಾನದ ಸಮಾಜವಾದಿ ಪಕ್ಷದ ವಾರ ಪತ್ರಿಕೆಯೊಂದು ಈ ತಿಂಗಳು ೩೦ ರಿಂದ ರಾಜಧಾನಿಯಲ್ಲಿ ಹೊರಡುವುದು ಪತ್ರಿಕೆಯ ಹೆಸರು ಮಜ್ದೂರು ವಾರ ಪತ್ರಿಕೆ, ಸಂಪಾದಕರು, ಶ್ರೀ ಬಿ ಶ್ರೀಕಂಠಪ್ಪನವರು.

ಸೂಚನೆ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನ ವೃತ್ತ ಅನಂತ ಪದ್ಮನಾಭ ಚತುರ್ದಶಿ ಸಂಬಂಧವಾಗಿ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ

ಯೂ ಮತ್ತು ಪೌರ ಸಭಾ ಉಪಾಧ್ಯಕ್ಷರಲ್ಲಿಯೂ ಪಡೆಯಬಹುದು. ಓಟರು ಪಟ್ಟಿಯಲ್ಲಿ ವಾಖಲಾಗದವರು ತಮ್ಮ ಹೆಸರು ಈ ಸದವಕಾಶವನ್ನು ಉಪಯೋಗಿಸಿಕೊಂಡು, ತಮ್ಮ ಹಕ್ಕು ಭಾದ್ಯತೆಯನ್ನು ಚಲಾಯಿಸಬೇಕೆಂದು ಪೌರಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ವಿ ಕೃಷ್ಣಮೂರ್ತಿಯವರು ಪ್ರಾರ್ಥಿಸುತ್ತಾರೆ.

ಓಟುದಾರರಾಗಲು ಅರ್ಹತೆ

ಶ್ರೀಮಂತ ಮಹಾರಾಜರವರ ಪ್ರಜೆಯವರನ್ನು ಪಡೆದವರೂ ಪ್ರಾಪ್ತ ವಯಸ್ಕರಾದ ಪದವೀಧರರೂ, ೧೧ ರೂ ಕಂದಾಯ ... ಸ್ವತ್ತಿನ ಮಾಲೀಕರು, ಬಾಡಿಗೆದಾರರು ... ಆದಾಯ ತೆರಿಗೆ ದಾ ... ರೂ ಕಂದಾಯ ಕಟ್ಟುವ ... ಮೊದಲಾದವರು, ಸಭ್ಯಾ ... ಇದ್ದವರು ... ಇತ್ಯಾದಿ ಅರ್ಹತೆ ಇರಬೇಕು.

ಪತ್ರಿಕಾ ಶಾಸನವು ಕೂಡಲೇ ರದ್ದಾಗಬೇಕು

ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ನಿರ್ಣಯ

ಸ್ವಂ ಸು ಫೋರ್] ಬೆಂಗಳೂರು ೫

ಪತ್ರಿಕೋದ್ಯೋಗಿಗಳ ಸಮ್ಮೇಳನವು ಈ ದಿನವೂ ಮುಂದುವರಿದ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟ ನಂತರ ಮಧ್ಯಾಹ್ನ ಒಂದು ಘಂಟೆಗೆ ಸಮಾರಂಭವು ಮುಕ್ತಾಯವಾಯಿತು.

ನಿರ್ಣಯಗಳು

೧ ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಮುಂದಿನ ಅಧಿವೇಶನವನ್ನು ಮೈಸೂರಿನಲ್ಲಿ ನಡೆಸುವುದು. ೨ ಸ್ವತಂತ್ರ ಪತ್ರಿಕಾ ವೃತ್ತಿಯ ಹಿತದೃಷ್ಟಿಯಿಂದ ಕೂಡಲೇ ಪತ್ರಿಕಾಶಾಸನವನ್ನು ಸರ್ಕಾರದವರು ರದ್ದು ಮಾಡಬೇಕು ಮತ್ತು ಸಾರ್ವಜನಿಕ ಹಿತ ರಕ್ಷಣಾ ಸಂಬಂಧದಲ್ಲಿ ಜಾರಿ ಮಾಡಲ್ಪಟ್ಟಿರುವ ಪ್ರೀ ಸೆನ್ಸಾರ್‌ಷಿಪ್ ಆಜ್ಞೆಗಳನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕು. ೩ ರಾಜಧಾನಿ ಜಿಲ್ಲಾ ಒಂದು ಸರ್ಕಾರದ ಪ್ರಕಟಣಾ ಇಲಾಖೆಯ ಶಾಖಾ ಕಛೇರಿಯನ್ನು ತೆರೆಯಬೇಕು. ೪ ಕನ್ನಡ ಟೈಪ್‌ರೈಟರಿಗೆ ಪ್ರೋತ್ಸಾಹನ ಕೊಡಬೇಕು.

ಫ್ಲೈಟ್ ಲೆಫ್ಟಿನೆಂಟ್ ಶ್ರೀ ಸುಂದರಂರವರು ಈ ದಿನ ಬೆಳಿಗ್ಗೆ ಸಮ್ಮೇಳನದ ಪ್ರತಿನಿಧಿಗಳನ್ನು ಕೊಂಚ ಕಾಲ ವಿಮಾನ ಹಾರಾಟದಲ್ಲಿ ಕರೆದೊಯ್ದರು.

ಕೆಳಗೆ ಕಂಡವರು ಪತ್ರಿಕಾ ಸ್ಥಾಯೀ ಸಮಿತಿಗೆ ಚುನಾಯಿಸಲ್ಪಟ್ಟರು. ಶ್ರೀಗಳು ಪಿ ಆರ್ ವೆಂಕಟೇಶ್, ಎಚ್ ಕೆ ಕುಮಾರಸ್ವಾಮಿ, ಎಚ್ ಎಸ್ ದೊರೆಸ್ವಾಮಿ, ಕಿದಿರು ರಾಮಣ್ಣ, ಕೆ ವಿ ಶ್ರೀನಿವಾಸನ್, ಸಿ ವೀರಪ್ಪ, ಆರ್ ಎಸ್ ... ಎಂ ಎಸ್ ಚಿಂತಾಮಣಿ, ಆರ್ ಎಲ್ ಕೆ ಅಯ್ಯಂಗಾರ್, ಎಸ್ ಎಂ ರಾಮಸ್ವಾಮಿ.

ಕೊನೆಯಲ್ಲಿ ಶ್ರೀಗಳಾದ ಟಿ ಟಿ ಶರ್ಮ, ವಿ ಎಲ್ ಶ್ರೀಕಂಠಯ್ಯ, ಎಸ್ ಎಸ್ ವೆಂಕೋಬರಾವ್ ಮುಂತಾದವರು ಭಾಷಣ ಮಾಡಿದನಂತರ ಧನ್ಯವಾದಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಷಾನ್ ಸಂಸ್ಥಾನದ ಅರಸರ ಕೊಲೆ

ಬರ್ಮಾದ ಷಾನ್ ಸಂಸ್ಥಾನದ ಅರಸರಾದ ಸಾರ್ಬ್ವಾ ... ಅವರನ್ನು ಕರೆನ್ ದಂಗೆಕೋರರು ಕೊಲೆಮಾಡಿ ಅವರ ಬಳಿ ಇದ್ದ ಒಡವೆ ಮತ್ತು ಹಣವನ್ನು ದೋಚಿಕೊಂಡು ಹೋಗಿದ್ದಾರೆ. ...

ಲಂಡನ್ನಿನ ಭಾರತದ ರಾಯಭಾರಿಗೆ ಭಾರಿ ಅರಮನೆ

ಲಂಡನ್ನಿನಲ್ಲಿರುವ ಭಾರತದ ರಾಯಭಾರಿ ... ಅರಮನೆಯನ್ನು ... ಸರ್ಕಾರವು ... ಪೌಂಡು ...

೩ ದಕ್ಷಿಣ ಭಾರತದ ... ಹಿಂದಿ ... ಎಂದು ... ನುಡಿದಿದ್ದಾರೆ

ಕಾಶ್ಮೀರದ ಬಗ್ಗೆ ನೆಹ್ರೂ-ಪಟೇಲ್ ಸಮಾಲೋಚನೆ

ಕಾಶ್ಮೀರದ ಪ್ರಶ್ನೆಯ ಇತ್ಯರ್ಥಕ್ಕೆ ಅಡ್ಮಿರಲ್ ನಿಮಿಟ್ಜರನ್ನು ಮಧ್ಯಸ್ಥಿಕೆಗಾರರನ್ನಾಗಿ ತೆಗೆದುಕೊಳ್ಳಬೇಕೆಂದು ವಿಶ್ವಸಂಸ್ಥೆಯು ತಿಳಿಸಿರುವ ವಿಷಯಕ್ಕೆ ಅಮೆರಿಕಾದ ಅಧ್ಯಕ್ಷ ಟ್ರೂಮನ್ ಮತ್ತು ಬ್ರಿಟಿಷ್ ಪ್ರಧಾನಿ ಅಟ್ಲೀಯವರು ಬೆಂಬಲವಿತ್ತಿರುವ ವಿಷಯವನ್ನು ದೆಹಲಿಯಲ್ಲಿ ಸೂಕ್ಷ್ಮವಾಗಿ ಪರ್ಯಾಲೋಚಿಸಲಾಗುತ್ತಿದೆ. ಪ್ರಧಾನಿ ನೆಹರೂರವರು ಸರದಾರ್ ಪಟೇಲರೊಡನೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಿರುವರೆಂದು ಹೇಳಲಾಗಿದೆ.

ಜಪಾನಿನೊಡನೆ ಕರಾರು ಆಗಬೇಕು

ಜಪಾನರು ಯುದ್ಧದಲ್ಲಿ ಸೋತಮೇಲೆ ತಮ್ಮ ಮೇಲೆ ವಿಧಿಸಲಾಗಿದ್ದ ಎಲ್ಲಾ ಷರತ್ತುಗಳನ್ನೂ ಪೂರೈಸಿರುವರಾದಕಾರಣ ಅವರು ಶಾಂತಿಯ ಕರಾರು ಮಾಡಿಕೊಳ್ಳ ಅರ್ಹರಾಗಿದ್ದಾರೆಂದು ಜನರಲ್ ಮೆಕ್ ಆರ್ಥರ್‌ರವರು ತಿಳಿಸಿದ್ದಾರೆ. ಜಪಾನರು ಕಮ್ಯೂನಿಸಂ ತತ್ವವನ್ನು ತಿರಸ್ಕರಿಸಿದ್ದಾರೆಂದು ಅವರು ಅಭಿಪ್ರಾಯಪಟ್ಟರು.

ಹುಚ್ಚಿಗೆ ವಿಚಿತ್ರ ಮದ್ದು

ಸಿಂಹಳದ ಹಳ್ಳಿಯ ಗೌಡನೊಬ್ಬನು ತನ್ನ ಹೆಂಡತಿಯನ್ನು ಚೂರಿಯಿಂದ ಇರಿದ ಪರಿಣಾಮವಾಗಿ ತನ್ನ ಹುಚ್ಚನ್ನು ಹೋಗಲಾಡಿಸಿಕೊಂಡುದಾಗಿ ಅವನು ಸ್ಥಳೀಯ ನ್ಯಾಯಾಧೀಶರ ಮುಂದೆ ತಿಳಿಸಿದ್ದಾನೆ. ಅವನಿಗೆ ೪ ತಿಂಗಳ ಕಾಲ ಜೈಲುವಾಸ ವಿಧಿಸಲಾಯಿತು.

ಕಮ್ಯೂನಿಸ್ಟ್ ಚೀಣಾಕ್ಕೆ ಹೊಸ ಧ್ವಜ

ಕಮ್ಯೂನಿಸ್ಟರಿಂದ ಆಕ್ರಮಿತವಾಗಿರುವ ಚೀಣದಲ್ಲಿ ಹೊಸ ರಾಷ್ಟ್ರ ಧ್ವಜವನ್ನು ಹಾರಿಸುವ ಏರ್ಪಾಡಾಗುತ್ತಿದೆ.

ರಷ್ಯಾಕ್ಕೆ ಪಾಕಿಸ್ತಾನದ ರಾಯಭಾರಿ ನೇಮಕ

ಸೋವಿಯಟ್ ರಷ್ಯಾಕ್ಕೆ ಪಾಕಿಸ್ತಾನವು ಬೇಗಂ ಷಾ ನವಾಜರನ್ನು ತನ್ನ ಪ್ರಥಮ ರಾಯಭಾರಿಯನ್ನಾಗಿ ಕಳುಹಿಸಲಿದೆಯೆಂದು ಗೊತ್ತಾಗಿದೆ.

ಜಾಮೋರಿನ್ ದೊರೆಗಳ ನಿಧನ

ಕಲ್ಲಿಕೋಟೆಯ ಜಾಮೋರಿನರಾದ ಶ್ರೀ ಕುಟ್ಟುಣ್ಣಿರಾಜರು ತಮ್ಮ ೮೯ನೇ ವಯಸ್ಸಿನಲ್ಲಿ ಕಳೆದ ತಿಂಗಳು ೩೧ರಲ್ಲಿ ನಿಧನರಾದರು. ಅವರ ಸ್ಥಾನಕ್ಕೆ ಶ್ರೀ ವಿ ಕೆ ಮನವಿಕ್ರಮರಾಜರು ಬಂದಿದ್ದಾರೆ.

ALL-WOOL BABY RUGS
ಮಕ್ಕಳಿಗೆ ಹೊದಿಸುವ
ಅಪ್ಪಟ ಉಣ್ಣೆಯ ರಗ್ಗುಗಳು
ಬಾಪುಸಾಬ್ ಕಂಪೆನಿ,
ಬ್ಯಾಂಕ್ ರೋಡ್, ಮೈಸೂರು

An Experienced Stenographer wants a part time job. Apply with terms to X c/o Sadhvi, Mysore

ಚೀಣಿ ಕಮ್ಯೂನಿಸ್ಟ್ ಮುಖಂಡರ ದಸ್ತಗಿರಿಗೆ ಆಜ್ಞೆ

೧೯ ಮಂದಿ ಕಮ್ಯೂನಿಸ್ಟ್ ಮುಖಂಡರ ದಸ್ತಗಿರಿ ಬಗ್ಗೆ ರಾಷ್ಟ್ರೀಯ ಸರಕಾರದ ಅಧ್ಯಕ್ಷರು ನಿರೂಪವನ್ನು ಹೊರಡಿಸಿದ್ದಾರೆ. ಈ ಮುಖಂಡರು ತಮ್ಮ ದೇಶವನ್ನು ಪರರಿಗೆ ಮಾರಿರುವರೆಂದು ಆಪಾದಿಸಲಾಗಿದೆ. ಆದರೆ ಯಾವ ರೀತಿ ಈ ದಸ್ತಗಿರಿಗಳಾಗಬೇಕೆಂಬುದನ್ನು ನಿರೂಪದಲ್ಲಿ ವಿವರಿಸಿಲ್ಲ.

ಬೂಟಿನ ದಾರದಿಂದ ೨೦ ಪೌಂಡು ಮೀನು ಸಿಕ್ಕಿತು

ಸ್ಲಿಮತ್ತಿನ್ಸ್ ಕ್ಲಾರ್ಕ್ ಎಂಬುವರು ತಮ್ಮ ಬೂಟ್ಸನ್ನು ಕಟ್ಟುವ ದಾರದಿಂದ ೨೦ ಪೌಂಡು ತೂಕದ ಮೀನನ್ನು ಹಿಡಿದರೆಂದು ಕೇಳಲಾಗಿದೆ. ಈ ಮೀನು ಒಂದು ತರಹೆಯ ಮಂಕು ಬೆಳಕನ್ನು ಕೊಡುತ್ತದೆ. ಇದು ೪೩ ಅಂಗುಲ ಉದ್ದ, ೩೦ ಅಂಗುಲ ಅಗಲವಿದೆ.

ಮೈಸೂರು ಕಾಂಗ್ರೆಸ್ಸಿಗೆ ಪ್ರತ್ಯೇಕ ಸ್ಥಾನವಿಲ್ಲ

ಮೈಸೂರು ಕಾಂಗ್ರೆಸ್ಸಿಗೆ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಸ್ಥಾನವನ್ನು ಕೊಡಬೇಕೆಂಬ ಮನವಿಯನ್ನು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಕಳೆದ ೨೫ನೇ ತಾ॥ ನಡೆದ ಸಭೆಯಲ್ಲಿ ತಿರಸ್ಕರಿಸಿತೆಂದು ತಿಳಿದುಬಂದಿದೆ.

೫ ಅಡಿ ಉದ್ದದ ಭಾರಿ ಕಪ್ಪೆ

೫ ಅಡಿ ಉದ್ದ ಮತ್ತು ೫ ಪೌಂಡು ತೂಕವುಳ್ಳ ಆಫ್ರಿಕದ ಕಪ್ಪೆಯೊಂದು ಮೃಗಾಲಯದಲ್ಲಿ ಮರಣಹೊಂದಿತು. ಅದಕ್ಕಾಗಿ ಅಲ್ಲಿನ ಅಧಿಕಾರಿಗಳು ಅನುತಾಪವನ್ನು ವ್ಯಕ್ತಪಡಿಸಿದ್ದಾರೆ.

ಗಣಪತಿ ಮಂಗಳಾರತಿ

ಮೈಸೂರು ೩

ರಾಜಧಾನಿಯ ವಿಠ್ಠಲರಾವ್ ಶೇಷಣ್ಣನವರ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ದಿನ ವಿದ್ಯಾ ಗಣಪತಿ ಮಂಗಳಾರತಿ ಪ್ರಯುಕ್ತ ಶ್ರೀ ಆರ್ ಕೆ ಶ್ರೀಕಂಠನ್‌ರವರಿಂದ ಸಂಗೀತ ಕಛೇರಿಯು ನಡೆಯಿತು.

ವಾಣೀವಿಲಾಸ ರಸ್ತೆಯಲ್ಲಿರುವ ವಿಕ್ಟೋರಿಯ ಷರ್ಟ್ ಚರ್ ಹೌಸಿನಲ್ಲಿ ಮಂಗಳಾರತಿಯು ಡಾ॥ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಜರುಗಿತು.

ಶ್ರೀರಂಗಪಟ್ಟಣದ ಆರ್ಯ ನಯನಜ ಕ್ಷತ್ರಿಯ ಕೋದಂಡರಾಮ ದೇವಾಲಯದಲ್ಲಿ ಗಣಪತಿ ಉತ್ಸವವು ಮೊನ್ನೆ ದಿನ ನಡೆಯಿತು.

ಯಳಂದೂರ್ ಎಜುಕೇಷನ್ ಫಂಡಿನ ವಾರ್ಷಿಕ ಸಭೆ

ಯಳಂದೂರು ೪

ಈ ದಿನ ಜಹಗೀರುದಾರರ ಮಿಡಲ್ ಸ್ಕೂಲಿನಲ್ಲಿ ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕ ಯಳಂದೂರ್ ಎಜುಕೇಷನ್ ಫಂಡಿನ ವಾರ್ಷಿಕ ಸಭೆಯು ಅಮಲ್ದಾರ್ ಶ್ರೀಮಾನ್ ಅನಂತರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಹಾಯವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೆ ಹೆಚ್ಚುತ್ತಿರುವುದರಿಂದ ಸದಸ್ಯರು ಹೆಚ್ಚು ಆಸಕ್ತಿ ವಹಿಸಿ ವಿಶೇಷವಾಗಿ ನಿಧಿ ಸಂಗ್ರಹಿಸಬೇಕೆಂದು ನಿರ್ಧರಿಸಿ ಸಭೆಯು ವಾರ್ಷಿಕ ವರದಿಯನ್ನು ಅನುಮೋದಿಸಿತು.

ಅನಿವಾರ್ಯವಾಗಿ ಸಭೆಗೆ ಬರಲು ಆಗದೆ ಶ್ರೀಗಳಾದ ಆಗರಂರಂಗಯ್ಯನವರು, ಡಾ. ಎ ಎನ್ ನರಸಿಂಹಯ್ಯನವರು ಮುಂತಾದ ಮಹನೀಯರು ಸಂದೇಶವನ್ನು ಕಳುಹಿಸಿದ್ದರು.

ಅನಂತರ ಸಭೆಯು ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಿ ಈ ವರ್ಷವು ೧೦೩ ವಿದ್ಯಾರ್ಥಿಗಳಿಗೆ ೧೫೦೦ ರೂ.ಗಳ ವೇತನವನ್ನು ಮಂಜೂರು ಮಾಡಿತು.

ಹುಯಿಲಾಳು ಗ್ರಾಮಾಭಿವೃದ್ಧಿಗೆ ಹಣದ ಅವಶ್ಯಕತೆ

ಮೈಸೂರು ತಾ॥ ಇಲವಾಲದ ಹೋಬಳಿ ಹುಯಿಲಾಳು ಗ್ರಾಮಕ್ಕೆ ಪ್ರೈಮರಿ ಶಾಲಾ ಕಟ್ಟಡದಬಳಿ ಚರಂಡಿ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ಹಣದ ಸಹಾಯ ಮಾಡಬೇಕೆಂದು ಸರ್ಕಾರದವರನ್ನು ಎಷ್ಟೋ ಬಾರಿ ಪ್ರಾರ್ಥಿಸಿಕೊಂಡಿದ್ದರೂ ಇಲ್ಲಿಯವರೆಗೂ ಯಾವ ಸಹಾಯವೂ ಒದಗಿಲ್ಲ. ೯೦೦ ಜನ ಸಂಖ್ಯೆಯುಳ್ಳ ಈ ಗ್ರಾಮದ ಅಭಿವೃದ್ಧಿ ಕಡೆ ಸರ್ಕಾರದವರು ನಿಗಾ ಕೊಡಬೇಕೆಂದು ಅದರ ಪಂಚಾಯಿತಿ ಅಧ್ಯಕ್ಷರು ಕೋರಿರುತ್ತಾರೆ.

ಅಸಾಮ ಬೆಟ್ಟದಲ್ಲಿ ಜ್ವಾಲಾಮುಖಿ

ಜಪಾನಿನ ಅಸಾಮ ಬೆಟ್ಟದಲ್ಲಿ ಜ್ವಾಲಾಮುಖಿಯು ಎದ್ದು ಬೆಟ್ಟದ ಅಕ್ಕಪಕ್ಕದಲ್ಲಿದ್ದ ಅನೇಕ ಮನೆಗಳು ಬೂದಿಯಲ್ಲಿ ಮುಚ್ಚಿಹೋದವು. ಸಾವುನೋವುಗಳೇನೂ ವರದಿಯಾಗಿಲ್ಲ. ಅನಧಿಕೃತ ವರದಿ ಪ್ರಕಾರ ಕಾದ ಶಿಲಾರಸವು ಬೆಟ್ಟದ ಮೇಲ್ಭಾಗದಿಂದ ಹರಿದುಕೊಂಡು ಬರುತ್ತಿದೆ. ೧೫ ಸಾವಿರ ಅಡಿ ಎತ್ತರದವರೆಗೆ ಹೊಗೆಯು ವ್ಯಾಪಿಸಿದೆ.

ಎಲ್ಲವನ್ನೂ ಶುದ್ಧಪಡಿಸಲು
ಉತ್ತಮವಾದ
ಮೈಸೂರು ಸೋಪ್
ಎಲ್ಲೆಲ್ಲೂ ದೊರೆಯುತ್ತವೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಸರ್ ಆರ್ಕಾಟರಿಗೆ ತೈಲಚಿತ್ರ ಸಮರ್ಪಣೆ

ಜಗನ್ಮೋಹನ್ ಬಂಗ್ಲೆ ರಸ್ತೆಯಲ್ಲಿ ಮೈಸೂರು ಆರ್ಟ್ಸ್ ಸ್ಟುಡಿಯೋ ಮಾಲೀಕರಾದ ಶ್ರೀ ಎಂ ಎಚ್ ರಾಮುರವರೇ ಚಿತ್ರಿಸಿದ ಸರ್ ಆರ್ಕಾಟರ ಚಿತ್ರವನ್ನು ಪ್ರೇಮದ ಕುರುಹಾಗಿ ಆರ್ಕಾಟರಿಗೆ ನೆನ್ನೆಯ ದಿನ ಲೋಕರಂಜನ ಭವನದಲ್ಲಿ ಸಮರ್ಪಿಸಿದರು. ಅವರು ಅದನ್ನು ಅತ್ಯಾನಂದದಿಂದ ಸ್ವೀಕರಿಸಿ ಸಂತೋಷವನ್ನು ವ್ಯಕ್ತಪಡಿಸಿದರು.

ಬನುಮಯ್ಯ ಹೈಸ್ಕೂಲು ಸಾಹಿತ್ಯ ಸಂಘ

ಮೇಲ್ಕಂಡ ಸಂಘದ ಆಶ್ರಯ... ಕಳೆದ ಗುರುವಾರ ಕಾಮರ್ಸ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಬಿ ವಿ ... ಯ್ಯನವರ ಅಧ್ಯಕ್ಷತೆಯಲ್ಲಿ "ಪ್ರ... ಪ್ರದರ್ಶನ"ವು ಮತ್ತು ನೆನ್ನೆಯ ... ಸಾಯಂಕಾಲ ಗಣಪತಿಯ ಮಹಾ... ಆರತಿಯೂ, ಶ್ರೀ ಬಿ ಸಿ ರಂಗನಾಥ... ಗಾರ್ಯರ ಸಂಗೀತ ಮತ್ತು ಶ್ರೀ ವೇಣು... ಪಾಲದಾಸರ ಹರಿಕಥೆಗಳೊಡನೆ ... ಭಕ್ತಿಯಿಂದ ನಡೆಯಿತು.

ಉಚಿತ ಪಾಠ

ರಾಜಧಾನಿಯ ಕೃಷ್ಣರಾಜ ಮೊ... ದಲ್ಲಿರುವ ಮುರುಪೇಂದ್ರ ಪ್ರಸಾದ್ ... ದ ಮೊದಲನೇ ರಾಮಿನಲ್ಲಿ ಸೆಪ್ಟೆ... ಪರೀಕ್ಷೆಗೆ ಕೂರುವ ವಿದ್ಯಾರ್ಥಿಗಳಿಗೆ ... ಶಾಸ್ತ್ರದಲ್ಲಿ ಉಚಿತವಾಗಿ ಪಾಠ ಹೇಳಿಕೊಡಲು ಏರ್ಪಾಡು ಮಾಡಿರುವುದಾಗಿ ಸ್ಥಾಪಕರು ತಿಳಿಸಿರುತ್ತಾರೆ.

ಎಸ್. ಎನ್. ಪಂಡಿತ್ ಅಂ... ಸನ್ಸ್ ರವರ

ಯೂನಿವರ್ಸಲ್ ಹೇರ್ ...
ನೋವು, ಕೀಲು ನೋವು ಮು...
ಸಕಲ ಬಾಧೆಗಳಿಗೂ ರಾಮಬಾಣ
ಶೀಸೆ ೦-...
ಮಹಾ ಸುಗಂಧ ರಾಜ ತೈಲ
,, ಚಂದನಾದಿ ತೈಲ
,, ಭೃಂಗಾಮಲಕ ತೈಲ
—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು.
ಮಹಾಕೇತಕೀ ತೈಲ—... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸ ಬಹುದಾದ ಉತ್ತಮ ... ಫ್ರೀ ಪೋಸ್ಟ್ ... ಶೀಸೆ ...
ಸುಧಾಮೃತ—ಮಲೇರಿಯಾ ... ಗಳಿಗೆ ಸಿದ್ಧ ಸಂಜೀವಿನಿ.
ಮೈಸೂರು ಆಯುರ್ವೇದಿಕ್ ಫಾರ್ಮಸಿ
... ಬಾಲಸುಬ್ರಹ್ಮಣ್ಯ ಬಿಲ್ಡಿಂಗ್ಸ್, ...

Edited, printed and published by A. R. Nagaraj at Sadhvi Press, D. S. Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೭–೯–೧೯೪೯ [ಸಂಚಿಕೆ ೩೬

ತಾತಯ್ಯಸ್ಮಾರಕಕ್ಕೆ ೧ ಲಕ್ಷ ರೂ. ಭವನ

ತಾತಯ್ಯನವರ ಸ್ಮಾರಕ ಭವನಕ್ಕೆ ೧ ಲಕ್ಷ ರೂ.

ಸಾರ್ವಜನಿಕ ವಾಚನಾಲಯವನ್ನು ಸ್ಥಾಪಿಸಲು ಯೋಜನೆ

ಮೈಸೂರು ೭

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕ ಸಮಿತಿಯ ಸಭೆಯು ನಿನ್ನೆ ಸಂಜೆ ಕೆ. ಪಿ. ಪಿ. ಪ್ರೆಸ್ಸಿನಲ್ಲಿ ನಡೆಯಿತು. ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಗ್ರಾಸನವನ್ನು ವಹಿಸಿದ್ದರು ಶ್ರೀಗಳಾದ ಟಿ. ವೆಂಕಟರಮಣಯ್ಯ, ಸಿ. ನರಸಿಂಹಮೂರ್ತಿ, ಪಿ. ಆರ್. ರಾಮಯ್ಯ, ರಾವ್‌ಬಹದ್ದೂರ್ ರಾಮಸ್ವಾಮಿ ಎಂ. ಪಿ. ಲಿಂಗಪ್ಪಯ್ಯ ಮತ್ತು ಅಗರಂ ರಂಗಯ್ಯನವರು ದಯಮಾಡಿಸಿದ್ದರು

ವೃದ್ಧಪಿತಾಮಹರ ಸ್ಮಾರಕಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಬಂದ ಸಲಹೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು ಅವರ ಸ್ಮರಣೆಯು ಶಾಶ್ವತವಾಗಿರುವುದಕ್ಕೂ ಮತ್ತು ಅವರಿಗೆ ಪ್ರಿಯವಾದ ಕಾರ್ಯಕ್ಕೆ ಅನುರೂಪವಾಗಿಯೂ ಮೈಸೂರು ನಗರದ ಕೇಂದ್ರ ಪ್ರದೇಶದಲ್ಲಿ ಭವ್ಯವಾದ ಭವನವೊಂದನ್ನು ಅವರ ಹೆಸರಿನಲ್ಲಿ ಕಟ್ಟಿಸಿ, ಅದರಲ್ಲಿ ಸಕಲ ಜನರ ಉಪಯೋಗಾರ್ಥವಾಗಿ ಮೈಸೂರು ಸಾರ್ವಜನಿಕ ವಾಚನಾಲಯವನ್ನು (ಪಬ್ಲಿಕ್ ಲೈಬ್ರರಿ) ಸ್ಥಾಪಿಸಲು ಏರ್ಪಾಡು ಮಾಡುವಂತೆ ನಿರ್ಣಯ ಮಾಡಲಾಯಿತು. ಈ ಉದ್ದೇಶದ ಸಾಧನೆಗಾಗಿ ೧ ಲಕ್ಷ ರೂ. ಗೆ ಕಡಿಮೆ ಇಲ್ಲದಂತೆ ನಿಧಿಯನ್ನು ಸಂಗ್ರಹ ಮಾಡುವಂತೆಯೂ ತೀರ್ಮಾನ ಮಾಡಲಾಯಿತು

ಉ ಪ ನ್ಯಾ ಸ

ಮಹಾರಾಜ ಕಾಲೇಜ್ ಸಂಘದ ಆಶ್ರಯದಲ್ಲಿ ಶ್ರೀ ಎಂ. ಇ. ಭರತರಾಜ ಸಿಂಗ್‌ರವರು ನಾಳೆ ಸಂಜೆ ೬ ಗಂಟೆಗೆ ಕಾಲೇಜಿನ ಜೂನಿಯರ್ ಬಿ ಎ ತರಗತಿಯಲ್ಲಿ ತಮ್ಮ ಪಾಶ್ಚಾತ್ಯ ಪ್ರವಾಸದ ಅನುಭವಗಳನ್ನು ಕುರಿತು ಭಾಷಣ ಮಾಡುವರು. ಪ್ರೊ|| ಎ. ಎಲ್ ಡಿಸೋಜರವರು ಅಧ್ಯಕ್ಷತೆ ವಹಿಸುವರು.

ಇನ್ನು ೧೫ ದಿನಗಳಲ್ಲಿ ರಾಜ್ಯಾಂಗ ಸಭೆ

ಸ್ವಂ ಸು ಫೋನ್] ಬೆಂಗಳೂರು ೭

ಸಂಸ್ಥಾನಗಳಿಗೆ ಅನ್ವಯಿಸುವ ಭಾರತ ರಾಜ್ಯಾಂಗದ ಕರಡು ಪ್ರತಿಯು ತಿದ್ದುಪಡಿಸು ಇನ್ನೊಂದು ವಾರದೊಳಗೆ ಬರುವ ನಿರೀಕ್ಷಣೆ ಇದೆಯೆಂದೂ, ಸಂಸ್ಥಾನದ ಪರಿಸ್ಥಿತಿಗೆ ಅನುಗುಣವಾಗಿ ಅದನ್ನು ತಿದ್ದುಪಡಿ ಮಾಡುವ ವಿಷಯವನ್ನು ಪರಿಶೀಲಿಸಲು ಇನ್ನು ೧೫ ದಿನಗಳೊಳಗಾಗಿ ರಾಜ್ಯಾಂಗ ಸಭೆಯ ಅಧಿವೇಶನವನ್ನು ಏರ್ಪಡಿಸುವುದಾಗಿಯೂ ದೆಹಲಿಯಿಂದ ಹಿಂತಿರುಗಿದ ಶ್ರೀ ಟಿ. ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ

ಕರ್ನಾಟಕ ಏಕೀಕರಣ ಮಹಾ ಸಮಿತಿಯು ರದ್ದು

ಕರ್ನಾಟಕ ಏಕೀಕರಣ ಮಹಾ ಸಮಿತಿಗೆ ಪ್ರತ್ಯೇಕ ಸ್ಥಾನಮಾನ ಇಲ್ಲದೆ ಸ್ವತಂತ್ರವಾಗಿ ಕೆಲಸ ಮಾಡಲು ಅಧಿಕಾರವಿಲ್ಲದ ಪರಿಂದ ಅದನ್ನು ರದ್ದು ಮಾಡಬೇಕೆಂದು ಹುಬ್ಬಳ್ಳಿಯಲ್ಲಿ ಕಳೆದ ಭಾನುವಾರ ನಡೆದ ಮಹಾ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು.

ಸಕ್ಕರೆ ಕಂಪೆನಿ ಕೆಲಸಗಾರರ ಮುಷ್ಕರವೇ?

ಮೈಸೂರು ಸಕ್ಕರೆ ಕಂಪೆನಿ ಕೆಲಸಗಾರರ ಸಂಘದ ಅನೇಕ ಬೇಡಿಕೆಗಳ ಬಗ್ಗೆ ಕಂಪೆನಿಯವರು ಯಾವ ಜವಾಬನ್ನೂ ಕೊಡದೆ ಅನಾದರಣೆಯನ್ನು ತೋರಿಸಿರುವುದನ್ನು ಪ್ರತಿಭಟಿಸಲು ಇದೇ ೧೫ ನೇ ತಾ|| ಕೆಲಸಗಾರರು ಪ್ರತಿಭಟನಾ ಮುಷ್ಕರವನ್ನು ಹೂಡಬೇಕು ಮತ್ತು ಸಂಘದವರು ೯–೬–೪೯ ರಲ್ಲಿ ಕೊಟ್ಟಿದ್ದ ಬದಲಾವಣೆ ನೋಟೀಸಿನಲ್ಲಿ ಅಡಕವಾಗಿದ್ದ ಕೆಲವು ಬೇಡಿಕೆಗಳ ಬಗ್ಗೆ ಪಂಚಾಯಿತಿ ಸ್ವೀಕಾರಾರ್ಹವಾಗಿ ಕಾನೂನಿಗೆ ಅನುಸಾರವಾಗಿ ಕಾಲ ಕಳೆದುಹೋಗಿರುವುದರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕಾನೂನು ಬದ್ಧವಾದ ಮುಷ್ಕರ ಹೂಡಲು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು–ಎಂದು ಮೇಲ್ಕಂಡ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ನಿರ್ಧರಿಸಿದೆ

ವಿಶ್ವವಿದ್ಯಾನಿಲಯದ ಪ್ರಚಾರ ಭಾಷಣ

ನಾಳೆ ಸಂಜೆ ೬ ಗಂಟೆಗೆ ಕೋಲಾರದ ಇಂಟರ್ ಮೀಡಿಯಟ್ ಕಾಲೇಜಿನಲ್ಲೂ ನಾಡಿದ್ದು ಸಂಜೆ ಬಂಗಾರಪೇಟೆಯ ಥಿಯಸಾಫಿಕಲ್ ಸೊಸೈಟಿ ಕಟ್ಟಡದಲ್ಲೂ "ಪತ್ರಿಕಾ ಸ್ವಾತಂತ್ರ್ಯ" ಎಂಬ ವಿಚಾರವಾಗಿ ಮೈಸೂರಿನ ಶ್ರೀ ಎನ್. ಶ್ರೀನಿವಾಸಮೂರ್ತಿಯವರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸದ ಆಶ್ರಯದಲ್ಲಿ ಭಾಷಣ ಮಾಡುವರು

ಮ ರ ಣ ದ ಭ ವಿ ಷ್ಯ ಸತ್ಯವಾಯಿತು

ಆಸ್ಟ್ರೇಲಿಯದಲ್ಲಿ ವಾಸಿಸುತ್ತಿದ್ದ ೧೧೫ ವರ್ಷದ ಭಾರತದ ಆನರಾರ್ ಸಿ ೧೯ ಎಂ ಬಿ ಜ್ಯೋತಿಷ್ಯರು ತಾವು ಸೆಪ್ಟೆಂಬರ್ ೩ನೇ ತಾ|| ನಿಧನರಾಗುವುದಾಗಿ ಭವಿಷ್ಯ ನುಡಿದಿದ್ದು ಸತ್ಯವಾಯಿತೆಂದೂ, ಸಾಯುವ ದಿನದವರೆಗೂ ಅವರು ಆರೋಗ್ಯವಾಗಿದ್ದರೆಂದೂ ವರದಿಯಾಗಿದೆ

ಹ ರಿ ಕ ಥೆ

ರಾಜಧಾನಿಯ ಒಂಟಿಕೊಪ್ಪಲ್ ಶ್ರೀ ಆಂಜನೇಯ ಮಂದಿರದಲ್ಲಿ ಈ ದಿನದಿಂದ ೧೫ ದಿನಗಳು ಪ್ರತಿದಿನ ಸಂಜೆ ೬–೩೦ ಗಂಟೆಗೆ ವಿದ್ವಾನ್ ಹೆಚ್ ಪಿ ರಾಮಣ್ಣನವರಿಂದ ವಿರಾಟ ಪರ್ವ ಹರಿಕಥೆ ನಡೆಯುವುದು

ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಕಾರ್ಯಕ್ರಮ

ಕಾಂಗ್ರೆಸ್ಸಿನ ನೂತನ ರಾಜ್ಯಾಂಗ ರಚನೆ ಪ್ರಕಾರ, ೨೧ ವರ್ಷಕ್ಕೆ ಮೇಲ್ಪಟ್ಟು, ಕಾಂಗ್ರೆಸ್ಸಿನ ಧ್ಯೇಯಗಳಿಗೆ ಒಪ್ಪುವವರೆಲ್ಲರನ್ನು ಯಾವ ಶುಲ್ಕವೂ ಇಲ್ಲದೆ ಕಾಂಗ್ರೆಸ್ ಸದಸ್ಯರನ್ನಾಗಿ ತೆಗೆದುಕೊಳ್ಳಬಹುದೆಂದೂ, ಮುಂದಿನ ತಿಂಗಳಿನೊಳಗಾಗಿ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸಿಕೊಳ್ಳುವ ಕಾರ್ಯವು ಚುರುಕಿನಿಂದ ನಡೆಯಬೇಕೆಂದೂ ತಮಿಳು ನಾಡು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ಮನವಿ ಮಾಡಿದ್ದಾರೆ.

ಶರಣಾಗತರಾದ ಕಮ್ಯೂನಿಸ್ಟರಿಗೆ ಮರಣ ದಂಡನೆ ಇಲ್ಲ

ಮಲೆಯ ದರೋಡೆಕಾರರ ಪ್ರಭಾವಕ್ಕೆ ಒಳಗಾದ ಕಮ್ಯೂನಿಸ್ಟರು ತಮ್ಮ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ವಶಪಡಿಸಿ, ಅವರು ಶರಣಾಗತರಾಗಲು ಅನುಕೂಲವಾಗುವಂತೆ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡಿರುವವರನ್ನು ಮರಣ ದಂಡನೆಗೆ ಗುರಿಪಡಿಸಲಾಗುವುದಿಲ್ಲವೆಂದು ಈಗಿರುವ ಕಾನೂನನ್ನು ಬದಲಾಯಿಸಲಾಗುವುದೆಂದು ಅಲ್ಲಿನ ಹೈ ಕಮೀಷನರು ತಿಳಿಸಿರುತ್ತಾರೆ

ನೂತನ ಕರೆನ್ಸಿ ನೋಟುಗಳು

ಬ್ರಿಟಿಷ್ ದೊರೆಗಳ ತಲೆಯನ್ನು ತೆಗೆದು ಹಾಕಿ ಅವರ ಸ್ಥಳದಲ್ಲಿ ಅಶೋಕ ಸ್ತಂಭವನ್ನು ಹಾಕಿರುವ ೨, ೫, ೧೦ ಮತ್ತು ೧೦೦ ರೂ.ಗಳ ಭಾರತದ ನೂತನ ನೋಟುಗಳನ್ನು ಮುಂದಿನ ವರ್ಷದಿಂದ ಚಲಾವಣೆಗೆ ಕೊಡಲಾಗುವುದೆಂದು ತಿಳಿದುಬಂದಿದೆ. ಅವುಗಳು ಈಗಿನ ನೋಟುಗಳಂತೇ ಇರುತ್ತವೆ. ೧ ರೂ ನೋಟು ಸೇರಿರಬೇಕೆಂಬುದು ಇನ್ನೂ ನಿರ್ಧಾರವಾಗಿಲ್ಲ.

ಸ ಕ್ಕ ರೆ ಬೆ ಲೆ ಕ ಡಿ ಮೆ ಯಾಗುವುದು

ಈ ತಿಂಗಳಿನ ಅಂತ್ಯದಿಂದ ಸಕ್ಕರೆ ಬೆಲೆಯನ್ನು ಕಡಿಮೆ ಮಾಡಲಾಗುವುದೆಂದು ಭಾರತ ಸರ್ಕಾರದ ವ್ಯವಸಾಯ ಶಾಖೆಯ ಜಂಟಿ ಕಾರ್ಯದರ್ಶಿಗಳು ತಿಳಿಸಿರುತ್ತಾರೆ ಇದರಿಂದ ಅಕ್ರಮವಾಗಿ ದಾಸ್ತಾನು ಮಾಡಿರುವ ವರ್ತಕರುಗಳು ಸಕ್ಕರೆಯನ್ನು ಹೊರಕ್ಕೆ ತೆಗೆಯಲು ಅನುಕೂಲವಾಗುವುದೆಂದೂ ಅವರು ಹೇಳಿರುತ್ತಾರೆ

ಮದ್ರಾಸಿನಲ್ಲಿ ಜಮೀನುದಾರಿ ಪದ್ಧತಿ ವಜಾ

ಈ ದಿನದಿಂದ ಮದರಾಸಿನಲ್ಲಿ ೩೩ ಜಮೀನುದಾರಿಗಳು ರದ್ದಾಗಿ, ಅವುಗಳನ್ನು ಸರ್ಕಾರದವರು ವಹಿಸಿಕೊಳ್ಳುವರು. ಬೊಬ್ಬಿಲಿ, ಪೀಠಾಪುರಂ, ವೆಂಕಟಗಿರಿ, ವಿಜಯನಗರಂ, ರಾಮನಾಡ್ ಮತ್ತು ಶಿವಗಂಗಾ ಜಮೀನುದಾರಿಗಳು ಸರ್ಕಾರದ ಆಡಳಿತಕ್ಕೆ ಬರಲಿವೆ. ಪ್ರಾಂತ್ಯದಲ್ಲಿರುವ ೨೮೦೦ ಜಮೀನುದಾರಿಗಳೆಲ್ಲವನ್ನು ಇನ್ನು ೩ ವರ್ಷಗಳೊಳಗಾಗಿ ರದ್ದು ಮಾಡಲಾಗುವುದು.

ಸಕ್ಕರೆಯ ಅಭಾವವಿಲ್ಲ

ಸಕ್ಕರೆಯ ದಾಸ್ತಾನನ್ನು ವಶಪಡಿಸಿಕೊಳ್ಳುವುದಾಗಿ ಭಾರತ ಸರ್ಕಾರದವರು ಆಜ್ಞೆ ಮಾಡಿರುವುದರಿಂದ ಅದರ ಅಭಾವವುಂಟಾಗುವುದೆಂಬ ಹೆದರಿಕೆಗೆ ಕಾರಣವಿಲ್ಲವೆಂದೂ, ಈಗ ವಶಪಡಿಸಿಕೊಂಡಿರುವ ೨ ೫ ಲಕ್ಷ ಟನ್ನುಗಳಷ್ಟು ಸಕ್ಕರೆಯು ೩ ತಿಂಗಳ ಕಾಲಕ್ಕೆ ಸಾಕಾಗುವುದೆಂದೂ ಹೇಳಲಾಗಿದೆ.

ಕಮ್ಯೂನಿಸ್ಟರ ಹಾವಳಿ ತಡೆಯಲು ಏಷ್ಯಾ ಸಮ್ಮೇಳನ

ಆಗ್ನೇಯ ಏಷ್ಯಾದಲ್ಲಿ ಕಮ್ಯೂನಿಸ್ಟರ ಮುನ್ನಡೆಯನ್ನು ತಡೆಗಟ್ಟುವಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಫಿಲಿಪೈನ್ಸಿನ ಪ್ರಧಾನಿಯವರ ಭಾರತ, ಬರ್ಮಾ ಮತ್ತು ಫಿಲಿಪೈನ್ಸ್ ದೇಶಗಳ ಸರ್ಕಾರಕ್ಕೆ ಪ್ರತಿನಿಧಿಗಳನ್ನು ಕಳುಹಿಸಲು ಆಹ್ವಾನವನ್ನು ಕೊಟ್ಟಿದ್ದಾರೆ ಮುಂದಿನ ನವೆಂಬರ್ ತಿಂಗಳಿನಲ್ಲಿ ಬಾಂಕಾಕಿನಲ್ಲಿ ಸಮ್ಮೇಳನವು ನಡೆಯಲಿದೆ

ಖಾಸಿಂ ರಜ್ವಿಗೆ ಮರಣ ದಂಡನೆ ವಿಧಿಸಬೇಕು

ಹೈದರಾಬಾದಿನ ರಜಾಕರರ ಮಾಜಿ ನಾಯಕ ಖಾಸಿಂ ರಜ್ವಿಯ ವಿಚಾರಣೆ ಕೋರ್ಟಿನಲ್ಲಿ ಷೋಯಬುಲ್ಲಾಖಾನರ ಪತ್ನಿ ಶ್ರೀಮತಿ ಅಜ್ಮಲುನ್ನಿಸಾ ಬೇಗಂರವರು ಸಾಕ್ಷ್ಯವಿತ್ತು, ತಮ್ಮ ಪತಿಯನ್ನು ಕೊಲೆಮಾಡಿದವರಿಗೆ ಮರಣ ದಂಡನೆಯನ್ನು ವಿಧಿಸಬೇಕೆಂದು ತಿಳಿಸಿದರು. ಷೋಯಬುಲ್ಲಾರವರ ಮಾತಾ ಪಿತೃಗಳೂ ಸಹ ಸಾಕ್ಷ್ಯವಿತ್ತು, ಮಗನ ಕೊಲೆಗಡುಕರಿಗೆ ಮರಣ ದಂಡನೆ ಶಿಕ್ಷೆ ಕೊಡಬೇಕೆಂದು ಹೇಳಿದರು

ಖಾಸಗೀ ಆಸ್ತಿಗಳಿಲ್ಲದ ನೂತನ ಆಶ್ರಮ

ತಿರುವಾಂಕೂರಿನ ಮಂಗನಾಡು ಹಳ್ಳಿಯಲ್ಲಿ ಶ್ರೀ ಕೆ ಕೆ ಚಾಂಡಿ ಎಂಬುವರು ಒಂದು ಆಶ್ರಮವನ್ನು ಸ್ಥಾಪಿಸಿದ್ದಾರೆ. ಅಲ್ಲಿ ಖಾಸಗೀ ಆಸ್ತಿ ಪಾಸ್ತಿಗಳಿಗೆ ಆಸ್ಪದವಿಲ್ಲ ಅಲ್ಲಿರುವ ೧೭ ಜನರು ತಮ್ಮ ಆಸ್ತಿಗಳನ್ನೆಲ್ಲಾ ಸಮಾನವಾಗಿ ಹಂಚಿಕೊಳ್ಳುವರು ಮತ್ತು ೨೦ ಎಕರೆ ಜಮೀನಿನಲ್ಲಿ ತಾವೇ ಧಾನ್ಯಗಳನ್ನು ಬೆಳೆಯುವರು ಇಂತಹ ಆಶ್ರಮವನ್ನು ದೇಶದ ಎಲ್ಲ ಕಡೆಯಲ್ಲಿಯೂ ಸ್ಥಾಪಿಸಬೇಕೆಂದೂ, ಕಮ್ಯೂನಿಸ್ಟರು ಹಿಂಸಾಕೃತ್ಯದಲ್ಲಿ ತೊಡಗುವುದರಿಂದ ಅವರನ್ನು ಇದಕ್ಕೆ ಸೇರಿಸುವುದಿಲ್ಲವೆಂದೂ ಅವರು ಹೇಳಿರುತ್ತಾರೆ

○ ಫಿನ್‌ಲೆಂಡ್ ಎಂಬಲ್ಲಿ ೬೦ ಲಕ್ಷ ವರ್ಷಗಳ ಹಿಂದಿನ ಮೀನೊಂದನ್ನು ಭೂಗರ್ಭ ಸಂಶೋಧನಾ ಇಲಾಖೆಯವರು ಪತ್ತೆ ಮಾಡಿದ್ದರು ಅದು ೪ ಅಡಿ ಉದ್ದವಿತ್ತು.

ಕ್ರೈಸ್ತರ ಪ್ರತಿಭಟನಾ ಸಭೆ

ಮೈಸೂರು ೭

ಸಂಸ್ಥಾನದ ಕ್ಯಾಥೋಲಿಕ್ ಕ್ರೈಸ್ತರ ಸಂಘದ ವಿಶೇಷ ಸಭೆಯು ಕಳೆದ ೩ನೇ ತಾ|| ರಾಜಧಾನಿಯಲ್ಲಿ ಶ್ರೀ ಡಬ್ಲ್ಯು. ಹೆಚ್. ಥಿಯೋಬಾಲ್ಡ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು

ಬಿಹಾರ್ ಸಂಸ್ಥಾನದ ಗುಡ್ಡಗಾಡಿನ ಜನಾಂಗದವರು ಕ್ರೈಸ್ತರ ಜಾತಿಗೆ ಸೇರಿರುವುದರಿಂದ ಅವರ ಹಕ್ಕುಬಾಧ್ಯತೆಗಳನ್ನು ರದ್ದುಮಾಡುವ ಬಗ್ಗೆ ಶ್ರೀ ಎ ವಿ ಥಕ್ಕರ್‌ರವರು ಭಾರತದ ರಾಜ್ಯಾಂಗ ಸಭೆಯಲ್ಲಿ ತಿದ್ದುಪಡಿಯನ್ನು ಮಂಡಿಸಿರುವುದನ್ನು ಪ್ರತಿಭಟಿಸಿ, ಭಾರತದ ರಾಜ್ಯಾಂಗದ ಪ್ರಕಾರ, ಇದು ಕ್ರೈಸ್ತರ ಹಕ್ಕುಬಾಧ್ಯತೆಗಳಿಗೆ ಚ್ಯುತಿ ತರುವುದೆಂದು ಸೂಚಿಸಿ, ಪ್ರಧಾನಿ, ರಾಜ್ಯಾಂಗ ಸಭೆ ಮತ್ತು ಕಾಂಗ್ರೆಸ್ ಅಧ್ಯಕ್ಷರುಗಳು ಮತ್ತು ಡಾ|| ಅಂಬೇಡ್ಕರ್‌ರವರುಗಳಿಗೆ ತಂತಿಯನ್ನು ಕಳುಹಿಸಬೇಕೆಂದು ನಿರ್ಣಯ ಮಾಡಲಾಯಿತು.

ಹಿಂದೀ ತರಗತಿಗಳು

ರಾಜಧಾನಿಯ. ಬಾಲಸೇವಾ ಸಮಾಜದ ಆಶ್ರಯದಲ್ಲಿ 'ಮಾಧ್ವಾಚಾರ್' ರಸ್ತೆಯಲ್ಲಿರುವ ಲಕ್ಷ್ಮೀಪುರಂ ಪ್ರೈಮರಿ ಶಾಲೆಯಲ್ಲಿ ಸಂಜೆ ೫-೩೦ರಿಂದಲೂ, ಮಂಡಿಪೇಟೆ ಕೇಂದ್ರದಲ್ಲಿ ಸಂಜೆ ೬ ಗಂಟೆಯಿಂದಲೂ ಹಿಂದೀ ತರಗತಿಗಳು ಇದೇ ೧೦ನೇ ತಾ|| ಪ್ರಾರಂಭವಾಗುವವು ಸೇರಲಿಚ್ಛಿಸುವವರು ಇದೇ ೮ನೇ ತಾ||ನೊಳಗಾಗಿ ಅರ್ಜಿಸಲ್ಲಿಸಬೇಕೆಂದು ತಿಳಿಸಲಾಗಿದೆ

ಗಣಪತಿ ಮಂಗಳಾರತಿ

ವನಿತಾ ಸದನದವರು ಗಣಪತಿ ಮಂಗಳಾರತಿಯನ್ನು ಮೊನ್ನೆ ದಿನ ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಿದರು ಶ್ರೀಮತಿ ಜಯಮ್ಮನವರ ಸಂಗೀತವೂ ಜರುಗಿತು

ರಾಜಧಾನಿಯ ಲಿಂಗೋಜಿರಾವ್ ರಾಮರಾವ್ ಉತ್ತರ್‌ಕರ್ ವಿದ್ಯಾರ್ಥಿ ನಿಲಯದಲ್ಲೂ ಮಂಗಳಾರತಿಯು ಮೊನ್ನೆ ದಿನ ನಡೆಯಿತು

ಜಯಾ ಸ್ಕೌಟ್ ಸಂಸ್ಥೆಯವರ ಶ್ರೀ ಎಲ್ ನಾಗೇಶಾಚಾರ ಅಧ್ಯಕ್ಷತೆಯಲ್ಲಿ ವಿದ್ಯಾಗಣಪತಿ ಉತ್ಸವವನ್ನು ನೆರವೇರಿಸಿದರು.

ದ. ಕೊರಿಯದ ಆಕ್ರಮಣಕ್ಕೆ ರಷ್ಯದ ಪ್ರೇರೇಪಣೆ

ಉತ್ತರ ಕೊರಿಯದಲ್ಲಿ ಸ್ಥಾಪಿತವಾಗಿರುವ ಕಮ್ಯೂನಿಸ್ಟ್ ಸರ್ಕಾರದವರು ದಕ್ಷಿಣ ಕೊರಿಯದ ಮೇಲೆ ಆಕ್ರಮಣವನ್ನು ಈ ತಿಂಗಳ ಅಂತ್ಯದೊಳಗೆ ಆರಂಭಿಸಬೇಕೆಂದು ರಷ್ಯವು ಒತ್ತಾಯಪಡಿಸುತ್ತಿದೆಯೆಂದು ವರದಿಯಾಗಿದೆ ಈ ಬಗ್ಗೆ ಕಾರ್ಯಕ್ರಮ. ಕೈಗೊಳ್ಳದಿದ್ದಲ್ಲಿ ಉತ್ತರ ಕೊರಿಯಕ್ಕೆ ಶಸ್ತ್ರಾಸ್ತ್ರಗಳ ಸರಬರಾಜನ್ನು ನಿಲ್ಲಿಸಲಾಗುವುದೆಂದು ರಷ್ಯ ಬೆದರಿಕೆ ಕೊಟ್ಟಿದೆ

Edited, printed and published by A. R Nagarajan at Sadhvi Press, D.Subbiah Road, Mysore

ಕಾಶ್ಮೀರ ಪ್ರಶ್ನೆಯಲ್ಲಿ ವಿದೇಶೀಯರ ಕೈವಾಡ

ಅಮೇರಿಕದ ಅಧ್ಯಕ್ಷ ಟ್ರೂಮನ್ ಮತ್ತು ಬ್ರಿ|| ಪ್ರಧಾನಿ ಅಟ್ಲಿಯವರು ಭಾರತ ಪಾಕಿಸ್ಥಾನಗಳಿಗೆ ಬರೆದಿರುವ ಪತ್ರಗಳನ್ನು ಕಂಡು ಪ್ರಧಾನಿ ನೆಹರೂರವರು ಆಶ್ಚರ್ಯ ಚಕಿತರಾಗಿದ್ದಾರೆ ಭಾರತದ ಭಾಗವಾದ ಕಾಶ್ಮೀರದ ಮೇಲೆ ಪಾಕಿಸ್ಥಾನರ ಕಡೆಯಿಂದ ಬಂದ ದರೋಡೆ ಕೋರರು ಬಿದ್ದು, ಹಳ್ಳಿಗಳನ್ನು ನಾಶ ಮಾಡಿ, ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದ್ದಾರೆಂದು ನೆಹರೂರವರು ತಿಳಿಸಿದ್ದಾರೆ ಭಾರತದ ಈ ಅಭಿಪ್ರಾಯವು ಸತ್ಯಾಂಶಗಳಿಂದ ಕೂಡಿದ್ದರೆ ಪ್ರಪಂಚವು ಭಾರತದ ನಿಲುವನ್ನು ಪ್ರಶಂಸಿಸಬೇಕು ಇಲ್ಲವೇ ಭಾರತವು ತಪ್ಪುಮಾಡಿದ್ದ ಪಕ್ಷದಲ್ಲಿ ಅದನ್ನಾದರೂ ಸ್ಪಷ್ಟವಾಗಿ ಹೇಳಬೇಕು. ಇವೆರಡನ್ನೂ ಬಿಟ್ಟು ಕಲಹದ ಮುಖ್ಯಾಂಶವನ್ನು ಅಡ್ಡ ಹಾದಿಗೆ ಎಳೆಯುವುದು ಸಾಧುವಲ್ಲವೆಂದೂ. ಅಂತಹ ಪರಿಸ್ಥಿತಿಯು ತಮಗೆ ಖೇದವನ್ನುಂಟು ಮಾಡುವುದಾಗಿ ಅವರು ಅಭಿಪ್ರಾಯ ಪಟ್ಟಿತ್ತಾರೆ

ಹಳ್ಳಿಗರಿಂದ ಪೋಲೀಸರ ಮೇಲೆ ಮುತ್ತಿಗೆ

ಪೋಲೀಸರಿಂದ ದಸ್ತಗಿರಿಯಾದವನನ್ನು ಬಿಡಿಸುವ ಉದ್ದೇಶದಿಂದ ಕಲ್ಕತ್ತ ಹತ್ತಿರವಿರುವ ಜಗನ್ನಾಥ ಪುರದಲ್ಲಿ ಕಳೆದ ಶುಕ್ರವಾರ ರಾತ್ರಿಯೆಲ್ಲಾ ಅಲ್ಲಿದ್ದ ಪೋಲೀಸು ಪಡೆಯು ಸಾವಿರ ಮಂದಿ ಹಳ್ಳಿಗರಿಂದ ಮುತ್ತಲ್ಪಟ್ಟು, ಮಾರನೆ ಬೆಳಗ್ಗೆವರೆಗೂ ಅವರು ಬಾಣ ಮುಂತಾದ ಆಯುಧಗಳಿಗೆ ಗುರಿಯಾಗಬೇಕಾಯಿತೆಂದು ಗೊತ್ತಾಗಿದೆ ಪೋಲೀಸರು ಗುಂಡು ಹಾರಿಸಿದುದರ ಪರಿಣಾಮವಾಗಿ ಒಬ್ಬಹಳ್ಳಿಗನು ಸತ್ತು ಮತ್ತೊಬ್ಬನಿಗೆ ಗಾಯವಾಯಿತು.

ಚುಂಕಿಂಗಿನಲ್ಲಿ ಭಾರಿ ಅಗ್ನಿ ಅನಾಹುತ

ಚೀಣಾದ ಯುದ್ಧ ಕಾಲದ ರಾಜಧಾನಿಯಾದ ಚುಂಕಿಂಗಿನಲ್ಲಿ ಭಾರಿ ಬೆಂಕಿಯು ಕಾಣಿಸಿಕೊಂಡು ಸಾವಿರ ಜನರು ಸತ್ತು, ಒಂದು ಲಕ್ಷ ಜನರು ಮನೆ ಮಠ ವಿಲ್ಲವಾಗಿದ್ದಾರೆ. ಬೆಂಕಿಯಿಂದ ಸಾವಿರ ಮನೆಗಳು ಸುಟ್ಟು ಹೋದವು.

೧೨೫ ವರ್ಷದಲ್ಲಿ ಕರಿಯ ಕೂದಲು

ಲಾಹೋರಿನ ಮಸೀದಿಯೊಂದರ ಇಮಾಮರಿಗೆ ೧೨೫ ವರ್ಷ ವಯಸ್ಸಾಗಿದ್ದರೂ ಅವರು ಧಷ್ಟಪುಷ್ಟರಾಗಿದ್ದಾರೆಂದೂ ಅವರಿಗೆ ಕರಿಯ ಕೂದಲು ಪುನಃ ಹುಟ್ಟುತ್ತಿರುವುದಾಗಿಯೂ ಹೇಳಲಾಗಿದೆ ಅವರು ದಿನಕ್ಕೊಂದು ಬಾರಿ ಒಂದೇಒಂದು ಪರೋಟಾ, ಗೋಧಿ ರೊಟ್ಟಿಯನ್ನು ತಿನ್ನುವರೆಂದು ಹೇಳಲಾಗಿದೆ.

ರೈಲ್ವೆ ನೌಕರರ ಖೋತಾ ಇಲ್ಲ

ಭಾರತ ಸರ್ಕಾರದ ರೈಲ್ವೆ ಇಲಾಖೆಯಲ್ಲಿ ಮಿತವ್ಯಯ ಮಾಡುವ ಅಭಿಪ್ರಾಯವನ್ನು ಸರ್ಕಾರದವರು ಹೊಂದಿದ್ದರೂ, ಆ ಉದ್ದೇಶಕ್ಕಾಗಿ ರೈಲ್ವೆ ನೌಕರರನ್ನು ಕೆಲಸದಿಂದ ತೆಗೆಯುವ ಆಲೋಚನೆಯು ಇಲ್ಲವೆಂದು ರೈಲ್ವೆಗಳ ಸಚಿವ ಶ್ರೀ ಕೆ ಸಂತಾನಂರವರು ತಿಳಿಸಿರುತ್ತಾರೆ

ಲೋಕ ಕಲ್ಯಾಣಕ್ಕಾಗಿ ಜೈನರ ಉಪವಾಸ

ರಾಜಧಾನಿಯ ಅಶೋಕಾ ರಸ್ತೆಯಲ್ಲಿ ಬಿಡಾರ ಮಾಡಿರುವ ಶ್ವೇತಾಂಬರ ಜೈನ ಗುರುಗಳ ಪೈಕಿ ಇಬ್ಬರು ಲೋಕ ಮತ್ತು ಆತ್ಮ ಕಲ್ಯಾಣಕ್ಕಾಗಿ ಕಳೆದ ತಿಂಗಳು ೮ನೇ ವಾರದಿಂದ ೮ ದಿನಗಳು ಉಪವಾಸವನ್ನು ಕೈಗೊಂಡಿದ್ದರು. ಇದೇ ರೀತಿ ೨೧೧ ಜನ ಭಕ್ತಾದಿಗಳೂ ಉಪವಾಸವನ್ನು ಮಾಡಿದ್ದರು.

ಪ್ರಜಾ ಸಂಘದ ಮನವಿ

ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಹಿತ ರಕ್ಷಣೆಗಾಗಿ ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಪ್ರಜಾ ಸಂಘಕ್ಕೆ ೨೧ ವರ್ಷಕ್ಕೆ ಮೀರಿದ ಸ್ತ್ರೀ ಪುರುಷರೆಲ್ಲರೂ ಸದಸ್ಯರಾಗಿ ಸಹಕರಿಸಬೇಕೆಂದು ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ಸಿ. ನರಸಿಂಹಯ್ಯನವರು ಪ್ರಾರ್ಥಿಸಿರುತ್ತಾರೆ ಮುಂದಿನ ನವೆಂಬರ್ ತಿಂಗಳಿನಲ್ಲಿ ನಡೆಯುವ ಪುರಸಭಾ ಚುನಾವಣೆಯ ಸಂಬಂಧದಲ್ಲಿ ತಯಾರಾಗಿರುವ ಓಟರುಗಳ ಪಟ್ಟಿಯಲ್ಲಿ ಅನೇಕ ಜನರ ಹೆಸರು ಬಿಟ್ಟುಹೋಗಿರುವುದರಿಂದ, ಇದೇ ೧೦ನೇ ತಾ||ನೊಳಗಾಗಿ ಅಂತಹವರು ಸಂಘದವರು ಕಳುಹಿಸುವ ಅರ್ಜಿಗಳಿಗೆ ರುಜು ಮಾಡಿ ಕಳುಹಿಸಬೇಕೆಂದೂ ಒಂದು ಮನವಿ ಹೊರಡಿಸಿರುತ್ತಾರೆ.

ಗಾಯತ್ರೀ ಟಾಕೀಸ್

ಇಂದೇ ಕಡೇ ದಿನ :: ದಿನವಹಿ ಮ್ಯಾಟಿನಿ

ಕಿಂಗ್ ಆಫ್ ದಿ ಜಂಗಲ್

8-9-49 ರಿಂದ (ನಾಳೆಯಿಂದ)

ಭಗವಂತನ ದಿವ್ಯ ಸೃಷ್ಟಿಯ ವೈಚಿತ್ರದಲ್ಲಿ ನೋಡಿ ನಲಿಯಬೇಕಾದ ದೃಶ್ಯಗಳು, ಪಕ್ಷಿವರ್ಗವನ್ನು ಕುಣಿಸಿ! ನಗಿಸಿ ಹಾಡಿಸಬಲ್ಲ ಮಾನವನ ಪ್ರತಿಭೆಯ ಹಲಸ ಚಿತ್ರ

BILL & COO

ಬಿಲ್ ಅಂಡ್ ಕೂ

(ವರ್ಣರಂಜಿತ ಚಿತ್ರ)

ಇದೀ ಚಿತ್ರವು ಕೇವಲ ಪಕ್ಷಿಗಳಿಂದಲೇ ಕೂಡಿರುತ್ತದೆ. ಪ್ರತಿಯೊಬ್ಬನೂ ನೋಡಲೇಬೇಕಾದ ಚಿತ್ರ

MORNING SHOWS
on 10th Sat. & 11th Sun.
THE DESERT SONG
(IN TECHNICOLOUR)
With- Dennis Morgan

ಅಕ್ಕ ತಂಗಿಯರ ವಾತ್ಸಲ್ಯ ಹೀಗಿರಬೇಕು ಎಂದು ನೀವು ನುಡಿಯದಿರಲಾರಿರಿ!

ಪ್ರಭಾ ಈ ರಾತ್ರಿ

ಪ್ರತಿ ದಿನ ೩ ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

ಬಡಿ ಬಹೆನ್

ಸುರೈಯ್ಯಾ, ಗೀತಾಬಾಲಿ, ರೆಹಮಾನ್

MORNING SHOWS on 10th & 11th Sept
UNDER CURRENT IT'S MGM's

ಸಂಯುಕ್ತ ಪ್ರಾಂತ್ಯದಲ್ಲಿ ಆಹಾರಕ್ಕೆ ಹೆಚ್ಚು ಗಮನ

ಆಹಾರ ಬೆಳೆಯನ್ನು ಹೆಚ್ಚಿಸಲು ವ... ಖ್ಯವಾಗಿ ಗಮನ ಕೊಡುವ ಉದ್ದೇಶದ... ದ ಸಂಯುಕ್ತ ಪ್ರಾಂತ್ಯ ಸರ್ಕಾರದವ... ಇನ್ನು ಎರಡು ವರ್ಷ ಕಾಲ ವಿದ್ಯುಚ್ಛಕ್ತಿ... ರಸ್ತೆ ಮತ್ತು ಕಟ್ಟಡಗಳ ನಿರ್ಮಾಣ... ರ್ಯವನ್ನು ನಿಲ್ಲಿಸುವಂತೆ ತೀರ್ಮಾನಿ... ವುದಾಗಿ ಹೇಳಲಾಗಿದೆ

ಕಾಂಗ್ರೆಸ್ ಕೆಲಸಗಾರ... ಸಮ್ಮೇಳನದ ಸಹಾಯಕ್ಕಾಗಿ ಮನವಿ

ಇದೇ ೧೮ ನೇ ತಾ|| ರಾಜಧಾನಿ... ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತ... ಗಳ ಸಮ್ಮೇಳನವು ನಡೆಯುವುದಷ್ಟೆ... ತದು ಸಮ್ಮೇಳನವು ಮೈಸೂರು ನಗ... ಲ್ಲಿ ನಡೆಯುವುದು ಇದೇ ಮೊದಲ... ದಾದುದರಿಂದ ಅದು ಯಶಸ್ವಿಯಾ... ಕಾಂಗ್ರೆಸ್ ಪ್ರೇಮಿಗಳೂ, ವರ್ತಕರೂ... ತ್ತು ಸಾರ್ವಜನಿಕರೂ ಉದಾರವಾಗಿ... ಸಹಾಯ ಮಾಡಬೇಕೆಂದು ಅದರ ... ತ ಸಮಿತಿಯವರು ಪ್ರಾರ್ಥಿಸಿರುತ್ತಾ...

ಹರಿಕಥೆ

ಚಾಮರಾಜಮೊಹಲ್ಲಾ ಶ್ರೀ ದತ್ತಾ... ಯ ದೇವಸ್ಥಾನದಲ್ಲಿ ಈ ದಿನ ರಾ... ಗಂಟೆಗೆ ಶ್ರೀ ಸೀತಾರಾಮ ಶಾಸ್ತ್ರಿಗ... ಶಶಿರೇಖಾ ಪರಿಣಯ ಎಂಬ ಹ... ನಡೆಯುವುದು

An Experienced Ste... grapher wants a part-t... job. Apply with terms to c/o Sadhvi, Mysore.

ಎಸ್. ಎಲ್. ಪಂಡಿತ್ ಅ... ಸನ್ಸ್ ರವರ

ಯೂನಿವರ್ಸಲ್ ಹೇರ್ ...

ನೋವು, ಕೀಲು ನೋವು ಮು... ಸಕಲ ಬಾಧೆಗಳಿಗೂ ರಾಮ ... ಸೀಸೆ ೦...

ಮಹಾ ಸುಗಂಧ ರಾಜ ತೈಲ...
,, ಚಂದನಾದಿ ತೈಲ
,, ಭೃಂಗಾಮಲಕ ತೈಲ

—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು.

ಮಹಾಕೇತಕೀ ತೈಲ—ತ... ಕೂದಲು ಬೆಳೆಯುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತ... ಬ್ರೇನ್ ಟಾನಿಕ್ ಸೀಸೆ

ಪಂಚಾಮೃತ — ಮಲೇರಿಯ... ಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇ... ಫಾರ್ಮಸಿ

೯೦ ಬ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ...

ಫೋ। ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೮-೯-೧೯೪೯ [ಸಂಚಿಕೆ ೩೭

ಬಂಜರು ಭೂಮಿಗಳು ಸರ್ಕಾರದ ವಶಕ್ಕೆ

...ಖಾಸಗೀ ಮಸೂದೆಗಳಿಗೆ ...ಭುಗಳ ಅನುಮತಿ ಬೇಕು

ವಿಶೇಷ ಗೆಜೆಟ್ ಪ್ರಕಟಣೆ

...ಸು ಫೋ.] ಬೆಂಗಳೂರು ೮

...೪೦ ನೇ ಮೈಸೂರು ಕಾನೂನನ್ನು ...ಪಡಿ ಮಾಡಿ ಕೆಲವು ಬದಲಾವಣೆಗ... ಮಾಡಿರುವ ಬಗ್ಗೆ ಶ್ರೀಮನ್ಮಹಾರಾ...ರಿಂದ ರುಜು ಮಾಡಲ್ಪಟ್ಟಿರುವ ವಿ... ಗೆಜೆಟ್ಟು ನಿನ್ನೆ ರಾತ್ರಿ ಹೊರಬಿದ್ದಿದೆ ...ಪ್ರತಿನಿಧಿ ಸಭೆಯಲ್ಲಿ ಶ್ರೀಮನ್ಮಹಾ...ರವರ ಅನುಮತಿ ಇಲ್ಲದೆ ಖಾಸಗೀ ...ಸೂದೆಯನ್ನು ಮಂಡಿಸಲಾಗದು, ಯಾ...ವಲದಲ್ಲಾದರೂ ಶ್ರೀಮನ್ಮಹಾರಾಜ...ರು ಎರಡು ಶಾಸನ ಸಭೆಗಳಲ್ಲಿ ಬರುವ ... ನಿರ್ಣಯ ಅಥವ ಸೂಚನೆಗಳನ್ನು ...ಹಾಕಬಹುದು. ಅಂತಹ ತಳ್ಳಿಹಾಕಿದ ...ಯಗಳ ಬಗ್ಗೆ ವಿವರಣೆ ಅಥವ ಚರ್ಚೆ ...ಡಲು ಅಧ್ಯಕ್ಷರು ಅವಕಾಶ ಕೊಡಕೂ...-ಎಂಬ ತಿದ್ದುಪಡಿಗಳನ್ನು ಮಾಡ...ದೆ.

ಬಿಹಾರಿನಲ್ಲಿ ಉಚಿತ ...ಮರಿ ವಿದ್ಯಾಭ್ಯಾಸ

...ಉಚಿತ ಪ್ರೈಮರಿ ವಿದ್ಯಾಭ್ಯಾಸ ಕೊ... ಬಿಹಾರ್ ಸರ್ಕಾರದವರೇ ಸಂಪೂ...ವಾಗಿ ಹಣವನ್ನು ಖರ್ಚು ಮಾಡಲು ...ರಿಸಿದ್ದಾರೆ.

...ತುಮತಿ ವಿವಾಹ ಶಾಂತಿ

...ಸ್ಥಾನ ಮಹಾ ವಿದ್ವಾನ್ ವೇದರತ್ನಂ ...ನುಳಲವಾಡಿ ವೆಂಕಟರಾಮಾವಧಾ...ನವರು ಋತುಮತೀ ವಿವಾಹ ಶಾಂತಿ ...ತಾದ ಅಂಶಗಳನ್ನೊಳಗೊಂಡ ಗ್ರಂ...ನ್ನು ಪ್ರಕಟಿಸಿರುತ್ತಾರೆ. ಇದರಲ್ಲಿ ಶಾ...ಧಾರಗಳ ಮೂಲಕ ಋತುಮತೀ ವಿ... ಶಾಂತಿ, ಉಪನಯನ ಕಾಲಾತೀತ ...ಯಶ್ಚಿತ್ತ, ಸಮುದ್ರ ಯಾನ ಪ್ರಾಯ... ಇವೇ ಮುಂತಾದ ಮುಖ್ಯ ವಿಷಯ... ವಿವರಿಸಲ್ಪಟ್ಟಿರುತ್ತವೆ. ಶಾಂತಿಗಳ ..., ಪ್ರಾಯಶ್ಚಿತ್ತಗಳನ್ನೂ ಮಾಡಿಕೊ... ಇರುವವರಿಗೆ ದೋಷವು ಹೇಳಲ್ಪ...ವುದರಿಂದ ಕರ್ಮಾನುಷ್ಠಾನಕ್ಕೆ ...ಗ್ಯತೆಯನ್ನು ಪಡೆಯಲೆಂಬ ಉದ್ದೇ...ದ ಈ ಗ್ರಂಥವನ್ನು ಪ್ರಕಟಿಸಲಾಗಿದೆ ...ಕ್ಕೆ ಅನುಗುಣವಾಗಿಯೂ ಮತ್ತು ಅ...ರ ಶಕ್ತಿಗೆ ತಕ್ಕಂತೆಯೂ ಪ್ರಾಯಶ್ಚಿ...ಳನ್ನು ಸೂಚಿಸಲಾಗಿದೆ ಇದುವರೆಗೆ ...ಜನರು ಅರಿಯದೆ ಇದ್ದ ಹೊಸ ವಿ...ಗಳನ್ನು ಸಂಶೋಧನೆ ಮಾಡಿ ಪ್ರ...ಪಡಿಸಿರುವುದರಿಂದ ಗ್ರಂಥಕರ್ತರು ...ಜನಿಕರಿಗೆ ಮಹೋಪಕಾರವನ್ನು ...ದಂತಾಗಿದೆ ವೇದೋಕ್ತ ಕರ್ಮಗ...ಶಕ್ತಿಯುಳ್ಳವರು ಈ ಗ್ರಂಥವನ್ನು ...ಲೋಕಿಸಿ, ಅದರಲ್ಲಿ ಹೇಳಿರುವ ಕ್ರಮ...ನ್ನ ಅನುಸರಿಸಿ, ಇಹಪರಗಳನ್ನು ಸಾ...ಂದು ನಾವು ಹಾರೈಸುತ್ತೇವೆ ಪುಸ್ತ...ಬೆಲೆ ೮ ಆಣೆ ಮೈಸೂರು ಚಲು...ಪು ಅಗ್ರಹಾರದಲ್ಲಿರುವ ಗ್ರಂಥಕರ್ತ...ರಿಂದ ದೊರೆಯುತ್ತದೆ.

ಹರಿಕಥೆ

...ಗೌರಿ ಮಂಗಳಾರತಿ ಪ್ರಯುಕ್ತ ...ಸಂಜೆ ೪ ಗಂಟೆಗೆ ಕೃಷ್ಣವಿಲಾಸ ...ರಸ್ತೆಯಲ್ಲಿರುವ ಮಾದರಿ ಶಾಲೆಯಲ್ಲಿ ...ಮಾರ್ತಿ ನದೀಪುರಂ ಶ್ರೀನಿವಾಸ...ದಾಸರಿಂದ ಲವಕುಶ ಎಂಬ ಹರಿಕ...ಥೆಯುತ್ತದೆ

ಸಂಗೀತ ಕಛೇರಿ

ಮೈಸೂರು ೮

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಚೇರಿಯ ಮಹಡಿಯ ಮೇಲೆ ಈ ರಾತ್ರಿ ೮ ಗಂಟೆಗೆ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ವಿದ್ಯಾರ್ಥಿಗಳಾದ ಶ್ರೀಗಳು ಕೆ ಶ್ರೀನಿವಾಸ ಅಯ್ಯಂಗಾರ್ ಮತ್ತು ಕೆ ವರದರಾಜಯ್ಯಂಗಾರರವರ ಸಂಗೀತ ಕಛೇರಿ ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಗಣಪತಿ ಮಂಗಳಾರತಿ

ರಾಜಧಾನಿಯ ಗೊಲ್ಲಗೇರಿಯ ಶ್ರೀ ರಾಮ ಸಹಾಯ ಸಂಘದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ, ನಾಳಿದ್ದು ಸಂಜೆ ೬ ಗಂಟೆಗೆ ವಿದ್ವಾನ್ ಶ್ರೀ ಶ್ರೀನಿವಾಸರವರ ಸಂಗೀತ ನಡಯುವುದು ಶ್ರೀ ಡೆಪ್ಯುಟಿ ಕೆ. ಕುಮಾರಸ್ವಾಮಿಯವರು ಅಧ್ಯಕ್ಷತೆ ವಹಿಸುವರು

ಮಾದರಿ ರಾಜ್ಯಾಂಗವು ಬಂದಿರುತ್ತದೆ

ಸ್ವಂ ಸು ಫೋ.] ಬೆಂಗಳೂರು ೮

ಕೇಂದ್ರ ರಾಜ್ಯಾಂಗ ಸಭೆಯ ಸಮಿತಿಯವರಿಂದ ತಯಾರಿಸಲ್ಪಟ್ಟಿರುವ ಸಂಸ್ಥಾನಗಳ ಮಾದರಿ ರಾಜ್ಯಾಂಗದ ಕರಡು ಪ್ರತಿಯು ಈಗ ಸರ್ಕಾರದ ಕೈ ಸೇರಿದೆಯೆಂದೂ, ಅದನ್ನು ನಿನ್ನೆ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಪರಿಶೀಲಿಸಲಾಯಿತೆಂದೂ ತಿಳಿದುಬಂದಿದೆ

ಬಸ್ಸು ಮರಕ್ಕೆ ಡಿಕ್ಕಿಹೊಡೆದು ೧೮ ಜನರಿಗೆ ಗಾಯ

ಬೆಂಗಳೂರಿನಿಂದ ನಿನ್ನೆ ಬೆಳಿಗ್ಗೆ ಗುಂಡ್ಲುಪೇಟೆಗೆ ಹೊರಟ ಸರ್ಕಾರಿ ಬಸ್ಸು ಕೆಂಗೇರಿಯ ಹತ್ತಿರ ಡ್ರೈವರನ ಹಿಡಿತಕ್ಕೆ ತಪ್ಪಿ, ಮರಕ್ಕೆ ಡಿಕ್ಕಿ ಹೊಡೆಯಿತೆಂದೂ, ಇದರಿಂದ ೧೮ ಜನ ಪ್ರಯಾಣಿಕರಿಗೆ ಗಾಯವಾಯಿತೆಂದೂ, ಡ್ರೈವರ್ ಮತ್ತು ಇಬ್ಬರ ಸ್ಥಿತಿ ಚಿಂತಾಜನಕವಾಗಿದೆಯೆಂದೂ ವರದಿಯಾಗಿದೆ ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದೆ

ಯುವತಿ-ಯುವಕರ ಆತ್ಮಹತ್ಯ

ಪ್ರೇಯಸಿ ಕಮಲ ಎಂಬ ೧೫ ವರ್ಷದ ಯುವತಿ ಮತ್ತು ೨೦ ವರ್ಷದ ಯುವಕ ಇಬ್ಬರೂ ಒಟ್ಟಿಗೇ ಕಟ್ಟಿಕೊಂಡು ಭಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಿರುವುದನ್ನು ಪೋಲೀಸರು ಪತ್ತೆಮಾಡಿ, ಮುಂದಿನ ತನಿಖೆ ನಡೆಸುತ್ತಿದ್ದಾರೆ.

ರೇಷನ್ ಡಿಪೋಗಳ ಮೂಲಕ ಸಕ್ಕರೆ ಮಾರಾಟ

ಬೆಂಗಳೂರು ೮

ಸಕ್ಕರೆ ಬೆಲೆಯನ್ನು ಇಳಿಸುವ ಬಗ್ಗೆ ಭಾರತ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಅನುಸಾರವಾಗಿ, ಸಂಸ್ಥಾನದಲ್ಲಿ ಕ್ರಮವನ್ನು ಕೈಗೊಳ್ಳಲಾಗಿದೆ ಸಕ್ಕರೆಯ ಅಭಾವವಿರುವುದೆಂದು ಜನರು ಹೆಚ್ಚು ಬೆಲೆ ಕೊಟ್ಟು ಕಾಳಸಂತೆಯಲ್ಲಿ ಕೊಳ್ಳಬೇಕಾಗಿಲ್ಲ ಸಾಕಷ್ಟು ದಾಸ್ತಾನು ಇರುವುದೆಂದೂ ಅದನ್ನು ನಿಗದಿ ಬೆಲೆಗೆ ರೇಷನ್ ಡಿಪೋಗಳು ಮತ್ತು ಸಹಕಾರ ಸಂಘಗಳ ಮೂಲಕ ಮಾರಲು ವ್ಯವಸ್ಥೆ ಮಾಡಲಾಗುವುದೆಂದೂ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ಮೋದಪ್ಪನವರ ಮೇಲೆ ಮಾನ ನಷ್ಟ ಮೊಕದ್ದಮೆ

ಬೆಂಗಳೂರು ರೇಸ್‌ಕೋರ್ಸಿನ ಸ್ಟೇಜ ರ್ ಹಿರಿಯರು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ ಮೇದಪ್ಪನವರ ಮೇಲೆ ಹೂಡಿದ್ದ ಮಾನ ನಷ್ಟ ಮೊಕದ್ದಮೆಯನ್ನು ನಗರ ನ್ಯಾಯಾಧೀಶರು ತಿರಸ್ಕರಿಸಿದುದರಿಂದ ಸೆಷನ್ಸ್ ನ್ಯಾಯಾಧೀಶರ ಮುಂದೆ ಅಪೀಲು ಅರ್ಜಿಯನ್ನು ಅವರು ಸಲ್ಲಿಸಿರುತ್ತಾರೆ

ಕೊಲೆಗಾಗಿ ಮರಣ ದಂಡನೆ

ಮೈಸೂರು ೮

ಯಳಂದೂರು ತಾಲ್ಲೂಕು ಗುಂಬಳ್ಳಿಯ ಮಹಂತದೇವರು, ಅವರ ತಮ್ಮ ಶಿವಪ್ಪ ಮತ್ತು ಸೋದರಮಾವ ಶಿವಬಸಪ್ಪನವರುಗಳು ೧೮-೩-೪೯ ರಲ್ಲಿ ಮಹಂತದೇವರ ಅತ್ತೆ ರುದ್ರಮ್ಮನನ್ನು ಮಚ್ಚಿನಿಂದ ಹೊಡೆದು ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಸೆಷನ್ಸಿಗೆ ಒಪ್ಪಿಸಲ್ಪಟ್ಟಿದ್ದರು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಪಿ ವೇಣುಗೋಪಾಲ ನಾಯುಡು ಅವರು ಈ ದಿನ ತೀರ್ಪಿತ್ತು, ಮಹಂತ ದೇವರಿಗೆ ಮರಣ ದಂಡನೆಯನ್ನೂ ಶಿವಪ್ಪ ಮತ್ತು ಶಿವಬಸಪ್ಪನವರಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಿರುತ್ತಾರೆ ಆಪಾದಿತರ ಪರವಾಗಿ ಶ್ರೀಗಳಾದ ಟಿ ಜಿ ಶ್ರೀನಿವಾಸ ಅಯ್ಯಂಗಾರ್, ಜಿ ಶಂಕರ ಶೆಟ್ಟಿ ಮತ್ತು ಎಂ ಎಸ್ ಮಹಂತ ದೇವರುಗಳು ವಕಾಲತ್ತು ವಹಿಸಿದ್ದರು

ಸಂಸ್ಥಾನದಲ್ಲಿ ಸಿಗರೇಟ್ ಕಾರ್ಖಾನೆ

ಬೆಂಗಳೂರು ೮

ಇನ್ನು ಮೂರು ವರ್ಷಗಳೊಳಗಾಗಿ ಸಂಸ್ಥಾನದಲ್ಲಿ ಒಂದು ಸಿಗರೇಟ್ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ ೩ ಸಾವಿರ ಎಕರೆ ಜಮೀನಿನಲ್ಲಿ ಹೊಗೆ ಸೊಪ್ಪಿನ ಬೆಳೆಯಾಗುತ್ತಿರುವುದರಿಂದಲೂ ಮತ್ತು ಇತರ ಸೌಕರ್ಯಗಳು ಸಂಸ್ಥಾನದಲ್ಲಿ ಇರುವುದರಿಂದಲೂ, ಅಂತಹ ಕಾರ್ಖಾನೆಗೆ ಅವಕಾಶವಿದೆಯೆಂದು ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ

ಸಾಗುವಳಿ ಮಾಡದ ಜಮೀನು ಸರ್ಕಾರಕ್ಕೆ

ವ್ಯವಸಾಯಕ್ಕೆ ಅರ್ಹವಾಗಿದ್ದರೂ ಮಾಲೀಕರು ಬಂಜರಾಗಿ ಬಿಟ್ಟಿರುವ ಭೂಮಿಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುವ ಬಗ್ಗೆ ಒಂದು ಮಸೂದೆಯನ್ನು ಸರ್ಕಾರದವರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಂಡಿಸುವರೆಂದು ತಿಳಿದುಬಂದಿದೆ. ಹೆಚ್ಚು ಆಹಾರ ಉತ್ಪತ್ತಿ ಯೋಜನೆಯ ಪ್ರಕಾರ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದು ಹೇಳಲಾಗಿದೆ

ಹೋಟೇಲುಗಳಿಗೆ ಹಾಲಿನ ಪುಡಿ

ಸಾರ್ವಜನಿಕರಿಗೆ ಒಳ್ಳೆಯ ಹಾಲು ಸಿಗುವಂತೆ ಮಾಡಲು, ಸಂಸ್ಥಾನದಲ್ಲಿರುವ ೧೫ ಸಾವಿರ ಹೋಟೇಲುಗಳಿಗೆ ಹಾಲಿನ ಪುಡಿಯನ್ನು ಸರಬರಾಜು ಮಾಡಲು ಸರ್ಕಾರದವರು ವ್ಯವಸ್ಥೆ ಮಾಡುವರೆಂದು ತಿಳಿದು ಬಂದಿದೆ.

ನೈಜಾಂ ರೈಲ್ವೆ ಭಾರತಕ್ಕೆ

ಶೀಘ್ರದಲ್ಲಿಯೇ ನೈಜಾಂ ರೈಲ್ವೆಯನ್ನು ಭಾರತ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳಲಾಗುವುದೆಂದು ಕೇಂದ್ರ ಸರ್ಕಾರದ ರೈಲ್ವೆ ಸಚಿವ ಶ್ರೀ ಕೆ. ಸಂತಾನಂರವರು ತಿಳಿಸಿರುತ್ತಾರೆ

ಹುಚ್ಚನಿಂದ ೧೨ ಜನರ ಕೊಲೆ

ನ್ಯೂಜರ್ಸಿಯ ಹವಾರ್ಡ್ ಉನ್ರೂ ಎಂಬ ೨೮ ವರ್ಷದ ನಿವೃತ್ತ ಸೈನಿಕನಿಗೆ ಹಠಾತ್ತಾಗಿ ಹುಚ್ಚು ಹಿಡಿದು, ರಸ್ತೆಯಲ್ಲಿ ಓಡಾಡುತ್ತಿದ್ದ ಜನಗಳ ಮೇಲೆಲ್ಲಾ ಅತನು ಗುಂಡು ಹಾರಿಸಿದನೆಂದೂ, ಇದರಿಂದ ೧೨ ಜನರು ಮರಣ ಹೊಂದಿದರೆಂದೂ ವರದಿಯಾಗಿದೆ ೨೫ ನಿಮಿಷಗಳ ಕಾಲ ಅತನು ಗಲಾಟೆ ಮಾಡಿ ತನ್ನ ಕೊಠಡಿಗೆ ಹೋಗಿ ಬೀಗ ಹಾಕಿಕೊಂಡನೆಂದೂ, ಪೋಲೀಸರು ಟಿಯರ್ ಗ್ಯಾಸ್ ಪ್ರಯೋಗಿಸಿ ಆತನನ್ನು ದಸ್ತಗಿರಿ ಮಾಡಿದರೆಂದೂ ಹೇಳಲಾಗಿದೆ

ಗೌರ್ನರರ ವಿಮಾನವು ಗಂಡಾಂತರದಿಂದ ಪಾರು

ಬೊಂಬಾಯಿನಲ್ಲಿರುವ ಸರ್ದಾರ್ ಪಟೇಲರನ್ನು ಭೇಟಿ ಮಾಡಲು ನಿನ್ನೆ ಬೆಳಿಗ್ಗೆ ೧೦-೩೦ ಗಂಟೆಗೆ ಅಸ್ಸಾಂ ಗೌರ್ನರರಾದ ಶ್ರೀ ಪ್ರಕಾಶರು ವಿಮಾನದಲ್ಲಿ ಷಿಲಾಂಗಿನಿಂದ ಹೊರಟರು ಸಂಜೆ ೬ ಗಂಟೆಯಾದರೂ ಬೊಂಬಾಯಿಗೆ ತಲಪದಿದ್ದುದು, ಎಲ್ಲರಿಗೂ ಗಾಬರಿಯನ್ನುಂಟುಮಾಡಿತ್ತು ಅವರ ವಿಮಾನವು ಪಾಲನಪುರಕ್ಕೆ ೩೦ ಮೈಲಿ ಪಶ್ಚಿಮದಲ್ಲಿನ ಡೀಸಾ ಎಂಬಲ್ಲಿ ಇಳಿದಂತದಿಂದ ಇಳಿಯಬೇಕಾಯಿತೆಂದೂ, ಶ್ರೀ ಪ್ರಕಾಶರು ಮತ್ತು ಜೊತೆಯಲ್ಲಿದ್ದವರು ಸುರಕ್ಷಿತರಾಗಿದ್ದಾರೆಂದೂ ವರದಿಯಾಗಿದೆ.

ಫುಟ್‌ಬಾಲ್ ಪಂದ್ಯದಿಂದ ಕಾಲೇಜುಗಳಿಗೆ ಹೊಡೆದಾಟ

ಬರ್ದ್ವಾನ್ ಮತ್ತು ಅಸನ್ಸಾಲ್ ಕಾಲೇಜುಗಳಿಗೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಉಂಟಾದ ದ್ವೇಷದ ಪರಿಣಾಮವಾಗಿ, ಬರ್ದ್ವಾನಿನ ಕಾಲೇಜಿನ ಆವರಣದಲ್ಲಿ ಭಾರಿ ಗಲಭೆಯಾಗಿ ವಿದ್ಯಾರ್ಥಿಗಳು ಕಲ್ಲು, ಇಟ್ಟಿಗೆ ಮತ್ತು ಇತರ ಶಸ್ತ್ರಗಳನ್ನು ಉಪಯೋಗಿಸಿ, ಕಾದಾಡಿದರೆಂದೂ, ಇದರಿಂದ ವಿದ್ಯಾರ್ಥಿಗಳು, ಪ್ರೊಫೆಸರುಗಳು ಮತ್ತು ಪೊಲೀಸರುಗಳು ಸೇರಿ ೨೫ ಜನರಿಗೆ ತೀವ್ರ ಗಾಯಗಳಾದುವೆಂದೂ ಹೇಳಲಾಗಿದೆ ಪೊಲೀಸರು ಅಶ್ರುವಾಯುವನ್ನು ಪ್ರಯೋಗಿಸಿ ಗುಂಪನ್ನು ಚದುರಿಸಿದರು

ಕರಾಚಿಗೆ ಕೋತಿಗಳು ಮತ್ತು ಬಾವಲಿಗಳ ರಫ್ತು

ಲಕ್ನೋವಿನ ವರ್ತಕನೊಬ್ಬನು ಕರಾಚಿಗೆ ವಿಮಾನದಲ್ಲಿ ೧೭೦೦ ಕೋತಿಗಳು ಮತ್ತು ೨೪ ಭಾರಿ ಬಾವಲಿಗಳನ್ನು ರವಾನೆ ಮಾಡುತ್ತಿದ್ದಾಗ್ಯೂ, ದೆಹಲಿಯಲ್ಲಿ ಅದರ ರಹದಾರಿಯನ್ನು ಕಳೆದುಕೊಂಡುದರಿಂದ ಅವು ಅನ್ನು ದೆಹಲಿಯ ವಿಮಾನ ನಿಲ್ದಾಣದಲ್ಲಿ ನಿಲ್ಲಿಸಲಾಗಿದೆ ಬೇರೆ ರಹದಾರಿಯನ್ನು ಪಡೆಯಲು ಅವನು ಲಕ್ನೋವಿಗೆ ಹಿಂತಿರುಗಿದ್ದಾನೆ

ಮುನಿಸಿಪಲ್ ಕಾರ್ಪೊರೇಷನ್ ಮತ್ತು ರಿಟರ್ನಿಂಗ್ ಆಫೀಸರವರ ಕಛೇರಿ, ಮುನಿಸಿಪಲ್ ಕೌನ್ಸಿಲ್
ಮೈಸೂರು ೫—೯—೪೯

ಪ್ರಕಟಣೆ

೧೯೪೯ನೇ ನವಂಬರಿನಲ್ಲಿ ನಡೆಯುವ ಸಾರ್ವತ್ರಿಕ ಪೌರಸಭಾ ಚುನಾವಣೆ-ನಗರ ಪೌರಸಭೆಯ ಚುನಾವಣಾ ನಿಬಂಧನೆಗಳ ೭ (ಬ) ನಿಯಮ

ಈ ಮೊದಲೇ ಪ್ರಕಟಿಸಿರುವಂತೆ ೧೯೪೯ನೇ ಆಗಸ್ಟ್ ೨೫ನೇ ತಾರೀಕು ಪ್ರಸಿದ್ಧಪಡಿಸಿರುವ ಮೈಸೂರು ನಗರದ ವಿವಿಧ ಮೊಹಲ್ಲೆಗಳ ಓಟರುಗಳ ಪಟ್ಟಿಯ ಕಡೆಗೆ ಮಹಾಜನರ ಗಮನವನ್ನು ಕೋರಲಾಗಿದೆ

ಒಂದಕ್ಕಿಂತಲೂ ಹೆಚ್ಚು ಮೊಹಲ್ಲೆಗಳಲ್ಲಿ ಯಾರೂ ಓಟು ಮಾಡಲು ಅರ್ಹತೆ ಇಲ್ಲದಿರುವುದರಿಂದ ಸದರಿ ಓಟರುಗಳ ಪಟ್ಟಿಯ ಪ್ರಕಾರ ಒಂದಕ್ಕಿಂತಲೂ ಹೆಚ್ಚು ಮೊಹಲ್ಲೆಯಲ್ಲಿ ಓಟುಮಾಡುವ ಅರ್ಹತೆಯನ್ನು ಪಡೆದಿರುವವರು ಮೇಲ್ಕಂಡ ನಿಯಮದ ಪ್ರಕಾರ ತಾವು ಯಾವ ಮೊಹಲ್ಲೆಯಲ್ಲಿ ಓಟುಮಾಡಬೇಕೆಂದಿರುವರೋ ಅದನ್ನು ಚುನಾಯಿಸಿ ಸದರಿ ವಿಷಯವನ್ನು ಈ ತಾರೀಕಿನಿಂದ ಒಂದು ವಾರದೊಳಗಾಗಿ ಲಿಖಿತಮೂಲಕ ಈ ಕೆಳಗೆ ರುಜು ಮಾಡಿರುವವರಿಗೆ ತಿಳಿಸಬೇಕು ತಪ್ಪಿದರೆ ಈ ಬಗ್ಗೆ ಮುನಿಸಿಪಲ್ ಕೌನ್ಸಿಲ್ಲಿನವರು ನಿರ್ಧಾರ ಮಾಡುವ ಮೊಹಲ್ಲೆಯಲ್ಲಿಯೇ ಅವರು ಓಟು ಮಾಡುವ ಅರ್ಹತೆಯುಳ್ಳವರಾಗುವರು

ಟಿ. ರಾಮರಾವ್,
ಮುನಿಸಿಪಲ್ ಕಮಿಷನರ್ ಮತ್ತು ರಿಟರ್ನಿಂಗ್ ಆಫೀಸರಿಗಾಗಿ

ರೈಲ್ವೆ ಅಪಘಾತದಿಂದ ೩೨ ಜನರ ಮರಣ

ಪೂರ್ವ ಬಂಗಾಳದ ಪ್ರಯಾಣಿಕ ರೈಲು ದೆಹಲಿ ಸ್ಟೇಷನ್ ಎಂಬಲ್ಲಿ ಮತ್ತೊಂದು ಗೂಡ್ಸ್ ರೈಲಿಗೆ ಡಿಕ್ಕಿಹೊಡೆದು ಅಪಘಾತಕ್ಕೆ ಒಳಗಾಯಿತೆಂದೂ ಇದರಿಂದ ೩೨ ಜನ ಪ್ರಯಾಣಿಕರು ಸತ್ತರೆಂದೂ ವರದಿಯಾಗಿದೆ

ಭಾರತದಲ್ಲಿ ೨೫ ಲಕ್ಷ ಕ್ಷಯ ರೋಗಿಗಳು

ಭಾರತದಲ್ಲಿ ೨೫ ಲಕ್ಷ ಜನ ಕ್ಷಯ ರೋಗದಿಂದ ನರಳುತ್ತಿರುವರೆಂದೂ, ಆದರೆ ಕೇವಲ ೮ ಸಾವಿರ ಜನರಿಗೆ ಮಾತ್ರ ಚಿಕಿತ್ಸಾ ಸೌಕರ್ಯವಿದೆಯೆಂದೂ, ಆದುದರಿಂದ ಇದನ್ನು ನಿವಾರಿಸಲು ಸರ್ಕಾರದ ಮೇಲೆ ಜವಾಬ್ದಾರಿ ಹಾಕದೆ, ಸಾರ್ವಜನಿಕರು ಮುಂದೆ ಬಂದು ಸಹಾಯ ಮಾಡಬೇಕೆಂದೂ ಭಾರತ ಸರ್ಕಾರದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತ್ ಕೌರ್‌ರವರು ತಿಳಿಸಿರುತ್ತಾರೆ

ಅಂಚೆ ಸೌಕರ್ಯದ ಅಗತ್ಯ

ಮಳವಳ್ಳಿ ತಾಲ್ಲೂಕು ಹಲಗೂರಿನಲ್ಲಿ ೮ ಸಾವಿರ ಜನ ಸಂಖ್ಯೆ ಇದ್ದು, ಅನೇಕ ಬಸ್ಸುಗಳು ತಿರುಗಾಡುತ್ತಿದ್ದರೂ, ಅಂಚೆಯ ಸೌಕರ್ಯವಿಲ್ಲದೆ, ಜನರಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ಬಗ್ಗೆ ಅನೇಕ ಸಲ ಜನರು ಪ್ರಾರ್ಥಿಸಿಕೊಂಡಿದ್ದರೂ, ಅಧಿಕಾರಿಗಳು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಸರ್ಕಾರದವರು ಈ ಹಳ್ಳಿಗೆ ಕೂಡಲೇ ಅಂಚೆ ಸೌಕರ್ಯದ ವ್ಯವಸ್ಥೆ ಮಾಡಿಕೊಡಬೇಕೆಂದು ಶ್ರೀ ಹೆಚ್. ಸಿ ರಾಜಶೇಖರ್ ಎಂಬುವರು ಕೋರಿ ಪತ್ರ ಬರೆದಿರುತ್ತಾರೆ.

ಗಣೇಶಾ ಟಾಕೀಸ್

9—9—49ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು

ದೇವದಾಸಿ

(ತಮಿಳ್)
—ಭೂಮಿಕೆ—
ಟಿ. ಎಸ್. ಕೃಷ್ಣ,
ಟಿ. ಎ. ಮಧುರಂ ಮತ್ತು
ಡೋರೆರಾಜ್

Edited, printed and published by A. R. Nagarajan at Sadhvi Press, D. Subbiah Road, Mysore

ಲಂಡನ್ನಿಗೆ ಅಡಿಗೆ ಐಯ್ಯರ್

ಲಂಡನ್ನಿನಲ್ಲಿರುವ ಇಂಡಿಯಾ ಭವನದಲ್ಲಿ ಅಡಿಗೆ ಕೆಲಸ ಮಾಡಲು ತಿರುವಾಂಕೂರಿನ ಎಸ್. ರಾಮನಾಥ ಎಂಬುವರು ಒಪ್ಪಿದ್ದಾರೆ. ಅವರಿಗೆ ವಾರಕ್ಕೆ ೬೬—೮—೦ ರೂ ಸಂಬಳ ಕೊಡಲಾಗುವುದು ಅವರು ಸದ್ಯದಲ್ಲಿಯೇ ಲಂಡನ್ನಿಗೆ ತೆರಳುವರು

ಇಂಟರ್ ಪರೀಕ್ಷೆ ವಿದ್ಯಾರ್ಥಿಗಳ ತೊಂದರೆ

ವಿಶ್ವವಿದ್ಯಾಲಯದ ಸೆಪ್ಟೆಂಬರ್ ಇಂಟರ್ ಪರೀಕ್ಷೆಯಲ್ಲಿ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಶ್ನೆಗಳನ್ನು ಈ ವರ್ಷ ಇಟ್ಟಿದ್ದ ಪಠ್ಯಪುಸ್ತಕದಲ್ಲಿ ಕೊಡದೆ ಹಿಂದಿನ ಸಾಲಿನ ಪುಸ್ತಕದಿಂದ ಕೊಟ್ಟಿರುವುದು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ ಆದುದರಿಂದ ವಿಶ್ವವಿದ್ಯಾಲಯದವರು ಈ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಿ, ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ನೊಂದ ವಿದ್ಯಾರ್ಥಿಗಳು ಕೋರಿರುತ್ತಾರೆ

An Experienced Stenographer wants a part-time job Apply with terms to X, c/o Sadhvi, Mysore

ಲಕ್ಷ್ಮಿ ಥಿಯೇಟರ್

ನಾಳೆಯಿಂದ
ಪ್ರತಿ ದಿನ 3 ಪ್ರದರ್ಶನಗಳು
ಇದುವರೆಗಿನ ಕನ್ನಡ ಚಿತ್ರಗಳ ಆದರ್ಶಪ್ರಾಯವಾದ

ನಾಗ ಕನ್ನಿಕಾ

—ಪ್ರಧಾನ ಭೂಮಿಕೆಯಲ್ಲಿ—
ಜಯಶ್ರೀ, ರತ್ನಮಾಲಾ, ಪ್ರತಿಮಾದೇವಿ, ರಾಘವೇಂದ್ರರಾವ್, ಜಿ. ಆರ್. ಸ್ಯಾಂಡೋ, ವೀರಭದ್ರಪ್ಪ.

MORNING SHOWS on Fri. 9th, Sat. 10th and Sun. 11th.
ಕೊಲಂಬಿಯಾರವರ
GUN FIGHTERS
(ಗನ್ ಫೈಟರ್ಸ್)
With—Randolph Scott & Barbara Britton
(Adventure Drama in Cine Colour

ತಾಲ್ಲೂಕು ಕಛೇರಿಗ... ಕಾಗದ ಪತ್ರಗಳ ವಿಲೇ...

ಜಿಲ್ಲಾಧಿಕಾರಿಗಳಿಗೆ ಮು... ಮಂತ್ರಿಗಳ ಸೂಚನೆ

ಬೆಂಗ...
ಮುಖ್ಯ ಮಂತ್ರಿ ಶ್ರೀ ಕೆ. ಸಿ... ವರ ಅಧ್ಯಕ್ಷತೆಯಲ್ಲಿ ಕಳೆದ ಜ... ಜಿಲ್ಲಾಧಿಕಾರಿಗಳ ಮತ್ತು ಇತರ ... ಧಿಕಾರಿಗಳ ಸಭೆಯು ನಡೆಯಿತು ... ಕು ಕಛೇರಿಗಳಲ್ಲಿ ಅಧಿಕಾರಿಗಳು ... ನೌಕರರು ಸರಿಯಾದ ಕಾಲಕ್ಕೆ ... ಕಾಗದ ಪತ್ರಗಳನ್ನು ಶೀಘ್ರವಾಗಿ ... ವಾರಿ ಮಾಡಬೇಕೆಂದೂ ಮತ್ತು ... ಕಾರಿಗಳು ಆಗಿಂದಾಗ್ಗೆ ಅಲ್ಲಿಗೆ ... ಭೇಟಿಯನ್ನು ಕೊಡಬೇಕೆಂದೂ ... ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ... ಕೊಟ್ಟಿರೆಂದೂ ತಿಳಿದುಬಂದಿದೆ ... ಗೆ ಮುಖ್ಯ ಮಂತ್ರಿಗಳು ಬಂಗ... ತಾಲ್ಲೂಕು ಕಛೇರಿಗೆ ಅನಿರೀ... ೧೧-೧೫ ಘಂಟೆಗೆ ಭೇಟಿ ಇತ್ತಾ... ಶೇಕಡ ೫೦ ರಷ್ಟು ನೌಕರರು ... ಲ್ಲವೆಂದೂ, ಅನೇಕಜನರು ಕಾಫ... ಹೋದರೆಂದೂ, ಈ ರೀತಿ ಆಗದಂ... ಲೇ ಕಾರ್ಯಕ್ರಮ ಕೈಗೊಳ್ಳಬೇ... ಅಧಿಕಾರಿಗಳಿಗೆ ಮುಖ್ಯ ಮಂತ್ರಿಗ... ಸಿದರೆಂದೂ ಗೊತ್ತಾಗಿದೆ ಇನ್ನು ... ಮಂತ್ರಿಗಳು ಅನಿರೀಕ್ಷಿತ ಭೇಟಿ... ಕೊಡುವುದಾಗಿಯೂ ತಿಳಿಸಿದರು.

ಎಸ್. ಎಚ್. ಪಂಡಿತ್ ಅ... ಸನ್ಸ್ ರವರ

ಯೂನಿವರ್ಸಲ್ ಹೇರ್ ... ಸೋವು, ಕೀಲು ನೋವು ಮು... ಸಕಲ ಬಾಧೆಗಳಿಗೂ ರಾಮಬಾ... ಶೀಸೆ ೦-...
ಮಹಾ ಸುಗಂಧ ರಾಜ ತೈಲ
,, ಚಂದನಾದಿ ತೈಲ
,, ಭೃಂಗಾಮಲಕ ತೈಲ
—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು.
ಮಹಾಕೇತಕೀ ತೈಲ—ತಲೆ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸ ಬಹುದಾದ ಉತ್ತಮ ... ಫ್ರೀ ಟಾನಿಕ್ ಶೀಸೆ ...
ಸಂಜೀವಾಮೃತ—ಮಲೇರಿಯಾ ... ಗಳಿಗೆ ಸಿದ್ಧ ಸಂಜೀವನ.
ಮೈಸೂರು ಆಯುರ್ವೇದಿ... ಫಾರ್ಮಸಿ
೫೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈ...

ರಾಜಕಮಲ್, ಮೈಸೂರು

9-9-49ರಿಂದ :: ಅಮೋಘ ಆರಂಭ
ಪ್ರತಿ ದಿನ ಮೂರು ಪ್ರದರ್ಶನಗಳು

— ನಾಗ ಕನ್ನಿಕಾ —

(ಕನ್ನಡ)
ಭೂಮಿಕೆ:—ಒಬ್ಬಾರಿ ರತ್ನಮಾಲಾ, ಜಯಶ್ರೀ, ವೀರಭದ್ರಪ್ಪ
ಇಂಪಾದ ಸಂಗೀತದಿಂದಲೂ, ಮನಮೋಹಕ ಅಭಿನಯ ನೃತ್ಯಗಳಿಂದಲೂ ಕೂಡಿದ ಮಹೋನ್ನತ ಚಿತ್ರ

❊ ಕಬ್ಬಿಣದ ಪೆಟ್ಟಿಗೆಗಳು, ತರಹಾವರಿ ಹೊಸ ಡಿಸೈನ್‌ಗಳು, ಕ್ಯಾಷ್ ಬಾಕ್ಸ್, ಬೀರುಗಳು ❊
ಕಡಿಮೆ ಬೆಲೆಗಳಲ್ಲಿ ದೊರೆಯುತ್ತವೆ ಬಿ. ಸಿ. ಐ. ವರ್ಕ್ಸ್, ೨೦೭೭, ಹಳ್ಳದಕೇರಿ (ಛತ್ರಿ ಮರದ ಹತ್ತಿರ), ಮೈಸೂರು.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೯-೯-೧೯೪೯ [ಸಂಚಿಕೆ ೩೮

-ಮೈಸೂರಿನಲ್ಲಿಯೂ- ಗ್ರಾಮ ಸ್ವರಾಜ್ಯ ಪದ್ಧತಿ

…ದೇ ೩೦ನೇ ತಾ|| ಮಂತ್ರಿ ಮಂಡಲದ ಪುನರ್ವ್ಯವಸ್ಥೆ

ಬೆಂಗಳೂರು ೯

ವಿಜಯದಶಮಿ ದಿನ ಮಂತ್ರಿ ಮಂಡ…ದ ಪುನರ್ರಚನೆಯ ಬಗ್ಗೆ ಪ್ರಕಟಣೆ ಹೊ…ಡಲಾಗುವುದೆಂದು ತಿಳಿದುಬಂದಿದೆ.

ಅದೇ ದಿನ ಪಾರ್ಲಿಮೆಂಟರಿ ಕಾರ್ಯದ…ಗಳ ಹೆಸರು ಮತ್ತು ಪಬ್ಲಿಕ್ ಸರ್ವಿ… ಕಮಿಷನ್ನಿನ ಸದಸ್ಯರುಗಳನ್ನು ಪ್ರಕ…ಟಿಸಲಾಗುವುದೆಂದು ಗೊತ್ತಾಗಿದೆ. ಕೇವ…ಲ ಜನ ಪಾರ್ಲಿಮೆಂಟರಿ ಕಾರ್ಯದ…ರ್ಶಿಗಳಿರುವರೆಂದೂ ತಿಳಿದುಬಂದಿದೆ.

ಪಬ್ಲಿಕ್ ಸರ್ವಿಸ್ ಕಮಿಷನ್ನಿನ ರಚ…ನೆ ಬಗ್ಗೆ ಭಾರತ ರಾಜ್ಯಾಂಗ ಸಭೆಯಲ್ಲಿ …ವು ಬದಲಾವಣೆಗಳನ್ನು ಮಾಡಿರುವು…ದರಿಂದ, ಆ ನಿಯಮಗಳನ್ನು ಇಲ್ಲೂ ಅ…ನುಸರಿಸಬೇಕಾದುದರಿಂದ ಇಷ್ಟು ತಡವಾ…ಯಿತೆಂದು ಹೇಳಲಾಗಿದೆ.

ಕೊರಿಯಾದಲ್ಲಿ ಅಂತಃ ಕಲಹ

ಕೊರಿಯಾದಲ್ಲಿ ಸೈನ್ಯದ ಚಟುವಟಿಕೆ…ಗಳು ವಿಶೇಷವಾಗಿ ನಡೆಯುತ್ತಿದೆಯೆಂ…ದೂ, ಇದರಿಂದ ಘರ್ಷಣೆಯು ಉಂಟಾಗಿ …ಜಗಳಸಂಭವಿಸಬಹುದೆಂದೂ ಹೇಳ…ಲಾಗಿದೆ. ಕೊರಿಯಾ ಯುದ್ಧಕ್ಕೆ ಮುಂ…ಚೆ ಜಪಾನಿನ ಆಡಳಿತದಲ್ಲಿದ್ದು, ಉತ್ತರ…ಭಾಗವು ರಷ್ಯದ ಮತ್ತು ದಕ್ಷಿಣವು ಅಮೆ…ರಿಕದ ಅಧೀನಕ್ಕೆ ಬಂದು, ಕೆಲವು ತಿಂ…ಗಳ ಕೆಳಗೆ ಎರಡು ರಾಷ್ಟ್ರಗಳೂ ತ…ಮ್ಮ ಸೈನ್ಯವನ್ನು ವಾಪಸು ಕರೆಸಿಕೊಂಡವು. ರಷ್ಯ…ಕ್ಕೂ ಮತ್ತು ಅಮೆರಿಕಕ್ಕೂ ಉಂಟಾಗಿರು… ಮನಸ್ತಾಪವೇ ಅಲ್ಲಿನ ತೊಂದರೆಗೆ …ಕಾರಣವೆಂದು ಹೇಳಲಾಗಿದೆ

…ನ್ಯಾಷನಲಿಸ್ಟ್ ವಾರ ಪತ್ರಿಕೆ

…ದೆಹಲಿಯಿಂದ ಪ್ರಕಟವಾಗಿರುವ 'ನ್ಯಾ…ಷನಲಿಸ್ಟ್' ಎಂಬ ಸ್ವತಂತ್ರ ರಾಜಕೀಯ…ದ ಪತ್ರಿಕೆಯು ನಮ್ಮ ಹಸ್ತಗತವಾಗಿದೆ. …ದರ ಬೆಲೆ ೭ ಆಣೆ. ಅದರ ಸಂಪಾದಕರು …ಮುಲಾಲ್ ಸಾಕ್ಸೇನಾರವರು.

…ಡ್ರೈವರ್ ಮತ್ತು ಗಾರ್ಡಿಗೆ ರೇಡಿಯೋ ಸಂಬಂಧ

ರೈಲು ಗಾಡಿಯ ಇಂಜಿನ್ ಡ್ರೈವರಿಗೂ ಮ…ತ್ತು ಗಾರ್ಡಿಗೂ ರೇಡಿಯೋ ವ್ಯವಹಾ…ರ ಸಂಬಂಧವನ್ನು ಏರ್ಪಡಿಸುವ ವಿಷಯ…ವನ್ನು ಬಿ. ಬಿ. ಸಿ. ಐ. ರೈಲ್ವೆಯವರು ಪ…ರಿಶೀಲನೆ ನಡೆಸುತ್ತಿರುವರೆಂದು ಹೇಳಲಾ…ಗಿದೆ.

…ಅತ್ಯುತ್ತಮ ರೈಲ್ವೆ ನಿಲ್ದಾಣ

ರೈಲ್ವೆ ನಿಲ್ದಾಣಗಳನ್ನು ಚೊಕ್ಕಟವಾ…ಗಿಡುವಂತೆ ಪ್ರೋತ್ಸಾಹ ಕೊಡಲು ರೈಲ್ವೆ… …ಯವರು ಪ್ರತಿ ವರ್ಷವೂ ಕೊಡು…ವ ಬಹುಮಾನದ ಪಾರಿತೋಷಕವು …ಲಿರಾ ಎಂಬ ರೈಲ್ವೆ ನಿಲ್ದಾಣಕ್ಕೆ ಕಳೆದ …ವರ್ಷಗಳಿಂದಲೂ ದೊರೆತಿದೆ

…ಸ್ಥಳೀಯ ಅಂಚೆ ದರಗಳ ಕೋತಾ

…ಮದರಾಸ್ ಪ್ರಾಂತ್ಯದ ಅಂಚೆ ಮತ್ತು …ತಿ ಇಲಾಖಾ ಸಲಹಾ ಸಮಿತಿಯ ಸ…ಭೆ ಕಳೆದ ವಾರ ಮದರಾಸಿನಲ್ಲಿ ನಡೆ…ದು ಒಂದೇ ಊರಿನಲ್ಲಿ ಚಲಾವಣೆ ಆಗು…ವ ಕಾಗದಗಳ ದರವನ್ನು ಕಡಿಮೆ ಮಾಡು…ವ ವಿಚಾರವನ್ನು ಪರಿಶೀಲಿಸಿತೆಂದು ತಿಳಿ…ದುಬಂದಿದೆ

ಇದೇ ೨೪ ನೇ ತಾ|| ರಾಜ್ಯಾಂಗ ಸಭೆ

ಬೆಂಗಳೂರು ೯

ಮೈಸೂರು ರಾಜ್ಯಾಂಗ ಸಭೆಯ ಅಧಿವೇಶನವು ಇದೇ ೨೪ ನೇ ತಾ|| ರಾಜಧಾನಿಯಲ್ಲಿ ನಡೆಯುವುದೆಂದು ತಿಳಿದುಬಂದಿದೆ

ಮುಂದಿನ ತಿಂಗಳು ೨೪ ನೇ ತಾ|| ಪ್ರ. ಪ್ರ. ಸಭೆ

ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವು ಮುಂದಿನ ತಿಂಗಳು ೨೪ ನೇ ತಾ|| ರಾಜಧಾನಿಯ ಜಗನ್ಮೋಹನ ಭವನದಲ್ಲಿ ನಡೆಯುವುದು.

ಮೈಸೂರಿನವರಿಗೆ ರಾಕ್‌ಫೆಲರ್ ವೇತನ

ಮೈಸೂರು ವಿಶ್ವ ವಿದ್ಯಾನಿಲಯದ ಅ|| ಪ್ರೊಫೆಸರಾದ ಶ್ರೀ ಸಿ ಡಿ ನರಸಿಂಹಯ್ಯನವರಿಗೆ ಆಂಗ್ಲ ಸಾಹಿತ್ಯ ಪರಿಶೋಧನೆಗಾಗಿ ರಾಕ್‌ಫೆಲರ್ ವೇತನವು ಬಂದಿರುವುದರಿಂದ ಅವರು ಅಮೆರಿಕಕ್ಕೆ ಈ ದಿನ ಬೆಂಗಳೂರಿನಿಂದ ಪ್ರಯಾಣ ಬೆಳಸಿದರು.

ಮದರಾಸಿನಲ್ಲಿ ನ್ಯಾಯಾಂಗದ ಪ್ರತ್ಯೇಕ

ಮಹಾತ್ಮರ ಜನ್ಮದಿನೋತ್ಸವದ ಜ್ಞಾಪಕಾರ್ಥವಾಗಿ ಮುಂದಿನ ತಿಂಗಳು ೨ ನೇ ತಾ|| ನಿಂದ ಮದರಾಸ್ ಪ್ರಾಂತ್ಯದ ಚಿಂಗಲ್‌ಪಟ್ ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲಾಗುವುದು. ಎರಡು ಜಿಲ್ಲೆಗಳಿಗೂ ಪ್ರತ್ಯೇಕ ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಜಿಲ್ಲಾ ಕಲೆಕ್ಟರುಗಳನ್ನು ನೇಮಿಸಲಾಗುವುದು

ಬೊಂಬಾಯಿನಲ್ಲಿ ಮೂಷಕ ನಾಶನ ವಾರ

ಬೊಂಬಾಯಿನಲ್ಲಿ ಇಲಿಗಳನ್ನು ನಾಶಪಡಿಸುವ ವಾರವನ್ನು ಆಚರಿಸಬೇಕೆಂದು ಅಲ್ಲಿನ ಪುರ ಸಭೆಯವರು ನಿರ್ಧರಿಸಿದ್ದಾರೆ. ಬೊಂಬಾಯಿ ನಗರದಲ್ಲಿ ೩೬ ಲಕ್ಷ ಇಲಿಗಳಿವೆಯೆಂದೂ, ಅವುಗಳಿಂದ ವರ್ಷಕ್ಕೆ ೩.೫೦ ಲಕ್ಷ ರೂ ನ ವಸ್ತುಗಳು ನಾಶವಾಗುತ್ತಿವೆಯೆಂದೂ ಕಂಡುಹಿಡಿಯಲಾಗಿದೆ ಆ ವಾರದಲ್ಲಿ ಇಲಿಗಳು ವಾಸ ಮಾಡುವ ಸ್ಥಳಗಳನ್ನು ಕಂಡುಹಿಡಿದು, ಅವುಗಳನ್ನು ಧ್ವಂಸ ಮಾಡುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು

ಪ್ರೀವಿ ಕೌನ್ಸಿಲ್ಲಿಗೆ ಪಾಕೀಸ್ಥಾನದ ಅಪೀಲು ವಜಾ

ಮುಂದಿನ ವರ್ಷದ ಫೆಬ್ರವರಿ ತಿಂಗಳಿಂದ ಪಾಕಿಸ್ತಾನದಿಂದ ಲಂಡನ್ನಿನ ಪ್ರೀವಿ ಕೌನ್ಸಿಲಿಗೆ ಅಪೀಲುಗಳನ್ನು ಕಳುಹಿಸುವುದನ್ನು ನಿಷೇಧಿಸಲಾಗಿದೆ.

ತಲೆ ಬಾಚುವ ಕೋತಿ

ಮಾಂಟ್ರಿಯಲಿನ ಮೋಡಿ ಎಂಬುವನು ಒಂದು ಕೋತಿಗೆ ತಲೆ ಬಾಚುವ ಶಿಕ್ಷಣವನ್ನು ಕೊಟ್ಟಿದ್ದಾನೆ. ಅದು ಪಕ್ಕದಲ್ಲಿ ತಿರುಗಾಡುವವರನ್ನು ಕರೆದು, ಅವರ ತಲೆ ಕೂದಲಿನಲ್ಲಿರುವ ಹೇನನ್ನು ತೆಗೆದುಹಾಕಿ, ಎಣ್ಣೆ ಹಚ್ಚಿ ತಲೆ ಬಾಚುವುದು. ಪಕ್ಕದ ಕ್ಷೌರಿಕನ ಅಂಗಡಿಯವನು ಈ ಕೋತಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿದರೂ ಅದರ ಮಾಲೀಕನು ಅದಕ್ಕೆ ತಿರಸ್ಕರಿಸಿದನೆಂದು ಹೇಳಲಾಗಿದೆ

ಸಂಗೀತ ಕಛೇರಿ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದೊಡ್ಡರಾಮ ದೇವಸ್ಥಾನದಲ್ಲಿ ಗಣಪತಿ ಸಂಗೀತಾರತಿ ಪ್ರಯುಕ್ತ, ನಾಳೆ ಸಂಜೆ ೭-೩೦ ಗಂಟೆಗೆ ಸಂಗೀತ ವಿದ್ವಾನ್ ಟಿ. ಪುಟ್ಟಸ್ವಾಮಯ್ಯನವರ ಸಂಗೀತವು ನಡೆಯುವುದು.

ಮಾರ್ಕೆಟ್ ಪ್ರದರ್ಶನ

ಇದೇ ೨೭ ನೇ ತಾ|| ಮಂಗಳವಾರ ಬೆಳಗ್ಗೆ ಪುರ ಸಭೆಯ ಆಶ್ರಯದಲ್ಲಿ ದೇವರಾಜಾ ಮಾರ್ಕೆಟ್ಟಿನಲ್ಲಿ ಫಲ ಪುಷ್ಪ ಮತ್ತು ಮಾರ್ಕೆಟ್ ಪ್ರದರ್ಶನ ನಡೆಯುವುದು

ಬೀಗದ ಕೈ ಸಿಕ್ಕಿದೆ

ರಾಮಸ್ವಾಮಿ ಸರ್ಕಲ್ ಹತ್ತಿರ ಇರುವ ಐದು ಲಾಂದ್ರದ ಕಂಭದ ಬಳಿ ಬಿದ್ದಿದ್ದ ಬೀಗದ ಕೈ ಗೊಂಚಲೊಂದು ಸಿಕ್ಕಿದೆ ಸಂಬಂಧಪಟ್ಟವರು, ಪುರಾವಾತ ಕೊಟ್ಟು ಅದನ್ನು ಸಾಧ್ವಿ ಪತ್ರಿಕೆ ಕಛೇರಿಯಲ್ಲಿ ಪಡೆಯಬಹುದು.

ತಿದ್ದುಪಡಿ

ಮಳವಳ್ಳಿ ತಾಲ್ಲೂಕು ಗುಂಡ್ಲುಪೇಟೆ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ಶ್ರೀ ಜಿ ಶಂಕರ ಶೆಟ್ಟರು ವಕಾಲತ್ತು ವಹಿಸಿದ್ದರೆಂದು ನಿನ್ನೆ ನಮ್ಮ ಪತ್ರಿಕೆಯಲ್ಲಿ ತಪ್ಪಾಗಿ ಪ್ರಕಟವಾಗಿದೆ. ಅವರು ಸರ್ಕಾರದ ಪರವಾಗಿ ವಕಾಲತ್ತು ವಹಿಸಿದ್ದರೆಂದು ತಿದ್ದಿಕೊಳ್ಳಬೇಕಾಗಿ ವಿನಂತಿ

ಗ್ರಾಮಾಭಿವೃದ್ಧಿ ಪರಿಶೀಲನಾ ಸಮಿತಿಯ ರಚನೆ

ಬೆಂಗಳೂರು ೯

ಸಂಸ್ಥಾನದ ಗ್ರಾಮಾಭಿವೃದ್ಧಿ ಕಾರ್ಯಗಳು ಈಗ ಗ್ರಾಮ ಪಂಚಾಯಿತಿ, ಜಿಲ್ಲಾ ಬೋರ್ಡ್ ಮತ್ತು ಗ್ರಾಮಾಭಿವೃದ್ಧಿ ಸಮಿತಿಗಳ ಮೂಲಕ ನಡೆಯುತ್ತಿರುವುದನ್ನು ಕ್ರೋಢೀಕರಿಸಿ, ಒಂದು ಕೇಂದ್ರ ಸಂಸ್ಥೆಯನ್ನು ರಚಿಸುವ ವಿಚಾರವನ್ನು ಪರಿಶೀಲಿಸಲು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಈಗಿರುವ ೧೭ ಸಾವಿರ ಪಂಚಾಯಿತಿಗಳ ಸಂಖ್ಯೆಯನ್ನು ೭ ಸಾವಿರಕ್ಕೆ ಇಳಿಸಿ, ಅವುಗಳು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು ಅನುಕೂಲ ಕಲ್ಪಿಸುವುದು; ೫೦-೭೦ ಹಳ್ಳಿಗಳಿಗೆ ಒಂದು ಕೇಂದ್ರ ಸಮಿತಿ, ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಒಂದೊಂದು ಸಮಿತಿಯನ್ನು ನೇಮಿಸುವುದು, ಈಗಿರುವ ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳನ್ನು ರದ್ದುಮಾಡಿ, ಮೇಲ್ಕಂಡ ಸಮಿತಿಗಳಿಗೆ ಕೆಲವು ಅಧಿಕಾರಗಳನ್ನು ಕೊಟ್ಟು ಅವು ಉ ಸ್ಥಳೀಯ ಶಾಸನ ಸಭೆಗಳಂತೆ ಕೆಲಸಮಾಡುವುದು, ಇವೇ ಮುಂತಾದ ವಿಷಯಗಳನ್ನು ಸಮಿತಿಯವರು ಪರಿಶೀಲಿಸುವರೆಂದು ತಿಳಿದುಬಂದಿದೆ

ಹರಿಜನ ವಿದ್ಯಾರ್ಥಿಗಳಿಗೆ ಫೀಜಿನ ಮಾಫಿ

ಎಲ್ಲ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಹರಿಜನ ವಿದ್ಯಾರ್ಥಿಗಳಿಗೆ ಇನ್ನು ೧೦ ವರ್ಷಗಳ ಕಾಲ ಫೀಜನ್ನು ಸಂಪೂರ್ಣವಾಗಿ ವಜಾ ಮಾಡಲಾಗುವುದೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಒಂದರಿಂದ ೮ ನೇ ಫಾರಂ ತರಗತಿಗಳಲ್ಲಿರುವ ಬಡವ ಅಥವ ಐಶ್ವರ್ಯವಂತರಾದ ಹರಿಜನ ವಿದ್ಯಾರ್ಥಿಗಳೆಲ್ಲರಿಗೂ ಈ ಸೌಕರ್ಯ ದೊರೆಯುವುದು ಒಂದು ತರಗತಿಯಲ್ಲಿ ಫೇಲಾದವರಿಗೂ ಎರಡನೇ ವರ್ಷ ಫೀಜನ್ನು ಮಾಫಿ ಮಾಡಲಾಗುವುದು. ಇದು ಎಲ್ಲ ಸರ್ಕಾರಿ ಮತ್ತು ಖಾಸಗೀ ಶಾಲೆಗಳಿಗೂ ಅನ್ವಯಿಸುವುದು

ಭಾರತದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ

ಭಾರತದಲ್ಲಿ ನಿರುದ್ಯೋಗ ಹೆಚ್ಚುತ್ತಿದೆಯೆಂದು ಕೇಂದ್ರ ಸರ್ಕಾರದ ಉದ್ಯೋಗ ಶಾಖಾ ಡೈರೆಕ್ಟರವರು ತಿಳಿಸಿರುತ್ತಾರೆ. ಇಲ್ಲಿಯವರೆಗೆ ೧,೮೪,೧೩೧ ಜನರು ಕೆಲಸಕ್ಕಾಗಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿರುವರೆಂದೂ, ನಿರುದ್ಯೋಗಿಗಳು ಹೆಚ್ಚುತ್ತಿದ್ದಾರೆಂದೂ ತಿಳಿಸಲಾಗಿದೆ.

ಟ್ರೂಮನ್-ಅಟ್ಲಿ ಸಲಹೆಗೆ ಭಾರತದ ತಿರಸ್ಕಾರ

ಕಾಶ್ಮೀರದ ಬಿಕ್ಕಟ್ಟನ್ನು ಶಾಂತರೀತಿಯಲ್ಲಿ ಬಗೆಹರಿಸುವ ಬಗ್ಗೆ ವಿಶ್ವ ಸಂಸ್ಥೆಯ ಕಾಶ್ಮೀರದ ಕಮಿಷನ್ನಿನವರು ಇತ್ತಿರುವ ಸಲಹೆಯನ್ನು ಒಪ್ಪಬೇಕೆಂಬ ಟ್ರೂಮನ್ ಮತ್ತು ಅಟ್ಲಿಯವರ ಸೂಚನೆಯನ್ನು ಭಾರತವು ತಿರಸ್ಕರಿಸಿ, ಉತ್ತರವಿತ್ತಿರುವುದಾಗಿ ತಿಳಿದುಬಂದಿದೆ.

ಬಳ್ಳಾರಿ ಪುರ ಸಭೆಯವರು ವಿಧಿಸಿರುವ ತೆರಿಗೆಯನ್ನು ಪ್ರತಿಭಟಿಸಲು ಅಲ್ಲಿನ ನಾವಿದರು ಮುಂದೆ ಕ್ಷೌರವನ್ನು ನಿನ್ನೆಯಿಂದ ಮುಷ್ಕರ ಹೂಡಿದ್ದಾರೆ.

ಮೋಟಾರು ಕೆಲಸಗಾರರ ಸಂಧಾನ ಮುರಿದು ಬಿತ್ತು

ಮೈಸೂರು ೯

ವರಾಯಿ ಬಸ್ ಸರ್ವೀಸಿನ ಶ್ರೀ ಕೆ ಸುಬ್ಬಾಚೆಟ್ಟಪ್ಪ ಮತ್ತು ಮಾಡರ್ನ ಮೋಟಾರು ಸರ್ವೀಸ್ಸಿನ ಶ್ರೀ ಡಿ ಎಸ್. ಗುಂಡಪ್ಪನವರನ್ನು ಕೆಲಸದಿಂದ ವಜಾ ಮಾಡಿದ ಬಗ್ಗೆ ಜಿಲ್ಲಾ ಮೋಟಾರು ಕೆಲಸಗಾರರ ಸಂಘಕ್ಕೂ, ಬಸ್ ಮಾಲೀಕರುಗಳಿಗೂ ಚೀಫ್ ಕನ್ಸಿಲಿಯೇಟರ್ ಶ್ರೀ ಕೆ. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ನಡೆದ ಸಂಧಾನವು ಮುಂದುವರಿದ್ದಿತು ಬೋನಸ್ಸು, ಕೆಲಸಗಾರರಿಗೆ ಮನೆ ಕಟ್ಟಿಸಿಕೊಡುವುದು ಮತ್ತು ಇತರ ಬೇಡಿಕೆಗಳ ಬಗ್ಗೆ ಕೊಟ್ಟಿದ್ದ ನೋಟೀಸ್ ಆಫ್ ಛೇಂಜನ್ನು ಅನೇಕ ಮಾಲೀಕರು ತಿರಸ್ಕರಿಸಿದುದರಿಂದ ಸಂಧಾನವು ವಿಫಲವಾಯಿತು ಸಂಘದ ಪರವಾಗಿ ಶ್ರೀಗಳಾದ ಕೆ ದೌಲತ್ ರಾವ್, ಟಿ ಎಸ್. ಸುಬ್ಬಣ್ಣ ಮತ್ತು ಎ ರಾಮಣ್ಣನವರುಗಳು ಭಾಗ ವಹಿಸಿದ್ದರು—ಎಂದು ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಅನಂತಸ್ವಾಮಿಯವರ ಜನ್ಮೋತ್ಸವ

ರಾಜಧಾನಿಯ ಪಡವಾರಹಳ್ಳಿಯಲ್ಲಿರುವ ಶ್ರೀ ಅನಂತಸ್ವಾಮಿ ಆಶ್ರಮದಲ್ಲಿ ಸ್ವಾಮಿಯವರ ಜನ್ಮೋತ್ಸವವು ಕಳೆದ ೫ ಮತ್ತು ೬ನೇ ತಾ॥ ಗಳಲ್ಲಿ ಆಚರಿಸಲ್ಪಟ್ಟಿತು ಶ್ರೀಮದ್ಭಗವದ್ಗೀತಾ ಪಾರಾಯಣ, ಅಖಂಡ ಭಜನೆ, ಮಹಾ ಮಂಗಳಾರತಿ, ಶ್ರೀಮತಿ ಚೊಕ್ಕಮ್ಮಾರವರ ಸಂಗೀತ, ಮತ್ತು ಶ್ರೀ ಹರಿಹರಾನಂದ ಭಾರತಿ ಸ್ವಾಮಿಯವರಿಂದ ಉಪನ್ಯಾಸಗಳು ಜರುಗಿದುವು

ಹಾಲಿಗೆ ನೀರು ಬೆರಸಿದುದಕ್ಕಾಗಿ ಜುಲ್ಮಾನೆ

ದೇವಲಾಪುರದ ನಂಜಪ್ಪ ಎಂಬುವನು ೩೦-೬-೪೯ರಲ್ಲಿ ಹಾಲಿಗೆ ನೀರು ಬೆರೆಸಿ ಮಾರಾಟ ಮಾಡುತ್ತಿದ್ದನೆಂಬ ಆಪಾದನೆಯ ಮೇಲೆ ನಗರ ನ್ಯಾಯಾಧೀಶರು ೧೦ ರೂ ಜುಲ್ಮಾನೆಯನ್ನು ಆತನಿಗೆ ವಿಧಿಸಿರುತ್ತಾರೆ.

ಅಪಾರ ಹಣದೊಡನೆ ಚಿಯಾಂಗರ ಪರಾರಿಯೇ?

ಚೀನಾ ರಾಷ್ಟ್ರೀಯ ಸರ್ಕಾರಕ್ಕೆ ಸೇರಿದ ೧೩೮ ಮಿಲಿಯನ್ ಡಾಲರ್ ಬೆಲೆ ಬಾಳುವ ಚಿನ್ನವನ್ನು ತೆಗೆದುಕೊಂಡು ಚಿಯಾಂಗ್ ಕೈಷೇಕ್‌ರವರು ಫಾರ್ಮೋಸಾಕ್ಕೆ ಪಲಾಯನ ಮಾಡಿದ್ದಾರೆಂದೂ, ಇದರಿಂದ ತಮ್ಮ ಜನರನ್ನೇ ಅವರು ನಡು ನೀರಿನಲ್ಲಿ ಕೈ ಬಿಟ್ಟಂತಾಗಿದೆಯೆಂದೂ ಅಮೆರಿಕದ ಸೆನೆಟ್ ಸಭೆಯಲ್ಲಿ ಚಾರಿಕಾ ನೋಲಿಯವರು ಆಪಾದನೆ ಮಾಡಿದ್ದಾರೆ

೧೦೫೭ ಹುಲಿಗಳನ್ನು ಹೊಡೆದ ರಾಜಕುಮಾರ

ಸಂಯುಕ್ತ ಪ್ರಾಂತ್ಯದಲ್ಲಿ ಸರಗೋಜ ಸಂಸ್ಥಾನಾಧೀಶರು ಸುಪ್ರಸಿದ್ಧ ಅಂತರ ರಾಷ್ಟ್ರೀಯ ಶಿಕಾರಿಗಳೆಂದೂ, ೧೦೫೭ ಹುಲಿಗಳನ್ನು ಕೊಂದಿದ್ದಾರೆಂದೂ ಹೇಳಲಾಗಿದೆ ಪೂರ್ವ ಆಫ್ರಿಕದಲ್ಲಿ ಅವರು ೩೦ ಸಿಂಹಗಳು, ಆನೆ ಮತ್ತು ಇತರ ಪ್ರಾಣಿಗಳನ್ನು ಬೇಟೆ ಮಾಡಿದ್ದಾರೆಂದೂ, ಅರ್ಧ ಗಂಟೆಯಲ್ಲಿ ೫ ಹುಲಿಗಳನ್ನು ೫ ಗುಂಡಿನಿಂದ ಹೊಡೆದು ಹಾಕಿರುವರೆಂದು ಒಂದೇ ರಾತ್ರಿ ೧೧ ಚಿರತೆಗಳನ್ನು ಬೇಟೆ ಮಾಡಿದ್ದಾರೆಂದೂ ಹೇಳಲಾಗಿದೆ

ಬಿರುಗಾಳಿಯಿಂದ ೬೩೬ ಕೋಟಿ ರೂ. ನಷ್ಟ

ಇತ್ತೀಚಿಗೆ ಜಪಾನಿನ ರಾಜಧಾನಿಯಾದ ಟೋಕಿಯೋದಲ್ಲಿ ಸಂಭವಿಸಿದ ಪ್ರಚಂಡ ಮಾರುತದಿಂದ ಒಟ್ಟು ೬೩೬ ಕೋಟಿ ರೂ ನಷ್ಟ ಉಂಟಾಗಿದೆಯೆಂದು ವರದಿಯಾಗಿದೆ.

ಬ್ರಿಟನ್ನಿನಲ್ಲಿ ರಾಷ್ಟ್ರೀಕರಣದಿಂದ ಭಾರಿ ನಷ್ಟ

ಬ್ರಿಟನ್ನಿನಲ್ಲಿ ರೈಲ್ವೆ, ರಸ್ತೆ, ಬಂದರು ಮತ್ತು ಇತರ ವಾಹನಗಳನ್ನು ಸರ್ಕಾರದವರು ರಾಷ್ಟ್ರೀಕರಣ ಮಾಡಿದುದರಿಂದ ಕಳೆದ ವರ್ಷ ಸರ್ಕಾರಕ್ಕೆ ೬ ಕೋಟಿ ರೂ. ನಷ್ಟ ಸಂಭವಿಸಿತೆಂದೂ, ಈ ವರ್ಷ ಇನ್ನೂ ಹೆಚ್ಚು ನಷ್ಟ ಉಂಟಾಗಬಹುದೆಂದೂ ಹೇಳಲಾಗಿದೆ

ಹೈದ್ರಾಬಾದಿನ ಮಾಜಿ ಮಂತ್ರಿಗೆ ಭತ್ಯ

ಹೈದರಾಬಾದಿನ ಮಾಜಿ ಲಿಯಾಕಾಲಿ ಮಂತ್ರಿ ಮಂಡಲದ ಅಬ್ದುಲ್ ರಹೀಮ್ ರವರನ್ನು ಗೃಹಬಂಧನದಲ್ಲಿಡಲಾಗಿದೆಯ. ಪ್ತೈ ಈಗ ಅವರಿಗೆ ತಿಂಗಳಿಗೆ ೮೦೦ ರೂ ಭತ್ಯವನ್ನು ಸರ್ಕಾರವು ಮಂಜೂರು ಮಾಡಿದೆ ಬ್ಯಾಂಕಿನಲ್ಲಿರುವ ಅವರ ಸ್ವಂತ ಹಣದಿಂದ ತಿಂಗಳಿಗೆ ೩೫೦ ರೂ ತೆಗೆದುಕೊಳ್ಳಲು ಅನುಮತಿ ಕೊಡಲಾಗಿದೆ

ಮಗುವಿನ ತಾಯಿಯ ಬಗ್ಗೆ ಕೋರ್ಟಿನಲ್ಲಿ ಮೊಕದ್ದಮೆ

ಡೆಪ್ಯಾರ್ಡೂ ನ್ಯಾಯಾಸ್ಥಾನದಲ್ಲಿ ಇಬ್ಬರು ನಿರಾಶ್ರಿತ ಮಹಿಳೆಯರು ಐದು ವರ್ಷದ ಒಂದು ಮಗುವಿನ ತಾಯಿಯಾರೆಂಬುದರ ಬಗ್ಗೆ ವಿವಾದವನ್ನು ಹೂಡಿದ್ದಾರೆ ರಕ್ತ ಪರೀಕ್ಷೆ ನಡೆಸಬೇಕೆಂದು ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ

ನ್ಯೂ ಆಪೇರಾ
ಟಾಕೀಸ್, ಮೈಸೂರು
9-9-49ರಿಂದ
ಪ್ರತಿ ದಿನ ೩ ಆಟಗಳು
ಭಾಗ್ಯ ಪಿಕ್ಚರ್ಸ್‌ರವರ
ಮಂಗಯಾರ್ ಕರಸಿ
(ತಮಿಳು)
ತಾರಾ ಗಣ - ಕನ್ನಾಂಬ, ಅಂಜಲಿ ದೇವಿ, ಪಿ. ಯು. ಚಿನ್ನಪ್ಪ, ಎನ್.ಎಸ್. ಕೃಷ್ಣನ್, ಟಿ.ಎ. ಮಧುರಂ
ಲಲಿತ – ಪದ್ಮಿನಿ,
ಪ್ರದರ್ಶನ—ಮಧ್ಯಾಹ್ನ ೩, ೬-೩೦ ಮತ್ತು ರಾತ್ರಿ ೯-೪೫
Distributors for Mysore State, S Canara & Coorg
-: R. V. PICTURES :-
157, Subedar Chatram Road, Bangalore 2

ಹೋಟೇಲು ಕೆಲಸಗಾರರ ಬ

ನಗರದ ಹೋಟೇಲು ಕೆಲಸಗಾ
ಘದ ಸಭೆಯು ಕಳೆದ ೬ನೇ ತಾ
ಸಿ ಜೆ ದೇವನಾಥ್‌ರವರ ಅಧ್ಯಕ್ಷ
ನಡೆಯಿತು ಕಳೆದ ದಸರಾದಲ್ಲಿ
ಗಾರರು ಹೆಚ್ಚಿಗೆ ಕಾಲ ಕೆಲಸ ಮ
ರೂ ಇದುವರೆಗೂ ಮಾಲೀಕರಿಂದ
ವ ಪ್ರತಿಫಲವೂ ಬಾರದಿರುವು
ಇನ್ನು ಮುಂದೆ ದಸರಾದಲ್ಲಿ ಹೆಚ್ಚಿಗೆ
ಮಾಡುವವರಿಗೆ ೨ ರಷ್ಟು ಸಂಬ
ಆಯಾ ದಿನ ಕೊಟ್ಟರೇ ಕೆಲಸ ಮ
ಕೆಂದು ನಿರ್ಧರಿಸಲಾಯಿತು ೩೦.
ರಲ್ಲಿ ಸಂಘದವರು ತೀರ್ಮಾನ ವ
ಬೇಡಿಕೆಗಳ ಬಗ್ಗೆ ಮಾಲೀಕರಿಂ
ಸರ್ಕಾರದವರಿಂದಾಗಲೀ ಯಾವ
ವೂ ಬಾರದಿರುವುದಕ್ಕೆ ವಿಷಾದವ
ಕ್ತ ಪಡಿಸಿ, ಮತ್ತೊಂದು ನೊ
ಕೊಟ್ಟು ಅನಂತರ ಮುಂದಿನ ಕ
ಗೊಳ್ಳಬೇಕೆಂದು ತೀರ್ಮಾನಿಸಲಾ

ಶ್ರೀ ಕೃಷ್ಣರಾಜೇಂದ್ರ ಕೋ-ಆಪ
ಸೊಸೈಟಿ, ಲಿಮಿಟೆಡ್,
ವಾಣೀವಿಲಾಸ ಮಾರ್ಕೆಟ್ ಚೌಕ, ೯

ಪ್ರಕಟಣೆ

ಈ ಸೊಸೈಟಿಯ ೧೯೪೮-೪೯
ಲಿನ ವಾರ್ಷಿಕ ಮಹಾಸಭೆಯನ್ನು
11-9-49ನೇ ಭಾನುವಾರ ಮಧ್ಯಾ
ಘಂಟೆಗ ಸರಿಯಾಗಿ ರಾವ್ ಬಹ
ಧರ್ಮಪ್ರಕಾಶ ಲೇಟ್ ಡಿ ಬನ
ನವರ ಹೈಸ್ಕೂಲ್ ಹಾಲಿನಲ್ಲಿ ನ
ಏರ್ಪಡಿಸಿರುತ್ತೆ ಮೆಂಬರುಗಳ್ಳಿ
ಆಹ್ವಾನ ಪತ್ರಿಕೆಗಳನ್ನು ಪೋಸ್ಟ್
ಲಕ ಕಳುಹಿಸಿರುತ್ತೆ ಕಾರಣಾಂ
ತರದಿಂದ ಮೆಂಬರುಗಳಿಗೆ ರಿಪೋರ್ಟು
ಗಳು ತಲುಪದಿದ್ದಲ್ಲಿ ಇದನ್ನೇ ಆ
ವನ್ನಾಗಿ ಸ್ವೀಕರಿಸಿ ಮೀಟಿಂಗಿಗೆ
ಮಾಡಿಕೊಡಬೇಕಾಗಿ ಪ್ರಾರ್ಥನೆ

ಟಿ. ಎಲ್. ಸುಬ್ಬರಾವ್
ಆನರರಿ ಸೆಕ್ರೆಟರಿ

Edited, printed and lished by A R Nag at Sadhvi Press, D.Sub Road, Mysore

ಶ್ರೀ ಚಾಮುಂಡೇಶ್ವರೀ
ಟಾಕೀಸ್
ತಾ॥ 10-9-49ರಿಂದ 1 ವಾರ ಮಾತ್ರ
ಪ್ರತಿ ದಿನ 3 ಆಟಗಳು
ಭಕ್ತ ಜನಾ
(ತಮಿಳು)
ಭೂಮಿಕೆ-ನಾಗಯ್ಯ, ಹೊನ್ನಪ್ಪ ಭಾಗವತರ್, ಶಾಂತಕುಮಾರಿ, ಚಲ್ಲಂ ಮತ್ತು ಇತರರು

ಗಣೇಶಾ ಟಾಕೀಸ್
9-9-49ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ದೇವದಾಸಿ
(ತಮಿಳು)
-ಭೂಮಿಕೆ-
ಎನ್ ಎಸ್. ಕೃಷ್ಣನ್,
ಟಿ.ಎ. ಮಧುರಂ ಮತ್ತು
ದೊರೆರಾಜ್

ಪ್ರಭುದೇವಾ ಟಾಕೀಸ್
9-9-49ನೇ ಶುಕ್ರವಾರದಿಂದ 3ನೇ ವಾರ
ಪ್ರತಿ ದಿನ ಮೂರು ಆಟಗಳು
* ಮಹಾತ್ಮ ಉದಂಗರ್ *
[ತಮಿಳು]
ಪಾತ್ರ—ಕೊತ್ತಮಂಗಲಂ ಸೀನು, ಅಂಜಲಿದೇವಿ, ಟಿ ಆರ್ ರಾಮಚಂದ್ರನ್, ಬೇಬಿ ಕಮಲ, ವಿಜಯ ಕುಮಾರಿ ಮುಂತಾದವರು

ಪ್ರಭಾ * 9-9-49ರಿಂದ
ಅಮೋಘವಾದ 2ನೇ ವಾರ
ದಿನವಹಿ 3 ಆಟಗಳು
ವೀನಸ್ ಪಿಕ್ಚರ್ಸ್‌ರವರ
ಹಿಂದಿ ಚಿತ್ರ
ಬಡಿ ಬಹೆನ್

ಪಾತ್ರ. ಸೊಬಗಿನ ರಾಣಿ ಸುರೈಯ್ಯ, ಗೀತಾಬಾಲಿ, ರೆಹಮಾನ್, ಉಲ್ಲಾಸ್.
MORNING SHOWS on 10th & 11th Sept
M G M's UNDER CURRENT
STARRING - ROBERT TAYLOR - KATHERINE HEPBURN

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೮] ಶನಿವಾರ ೧೦-೯-೧೯೪೯ [ಸಂಚಿಕೆ ೩೯

ಕೊಲಂಬಿಯಾ ಶಾಸನ ಸಭೆಯಲ್ಲಿ ಗುಂಡು

ನೂತನ ಗ್ರಾಮ ಕೈಗಾರಿಕಾ ಯೋಜನೆ

(ಂ ಸು ಫೋ] ಬೆಂಗಳೂರು ೧೦

ಗ್ರಾಮಾಂತರ ಪ್ರದೇಶದ ಜನಗಳು ತ ಬಿಡುವಿನ ವೇಳೆಯಲ್ಲಿ ಯಾವುದಾದ ಕೈಗಾರಿಕೆಗಳಲ್ಲಿ ನಿರತರಾಗುವಂತೆ ಎಂ ವಿಶ್ವೇಶ್ವರಯ್ಯನವರು ತಯಾ ರಿಸಿದ್ದ ಗ್ರಾಮ ಕೈಗಾರಿಕಾ ಯೋಜನೆಯ ಜಾರಿಗೆ ತರಲು ಸರ್ಕಾರದವರು ನಿ ರ್ಧರಿಸಿದ್ದಾರೆ ಇದಕ್ಕಾಗಿ ಚುನಾಯಿತ ಸ ದಸ್ಯರಿಂದ ಕೂಡಿದ ಶಾಖಾ ಸಮಿತಿಗಳ ನ್ನು, ಮತ್ತು ಚುನಾಯಿತ ಮತ್ತು ನಾ ಮಕರಣ ಸದಸ್ಯರಿಂದ ಕೂಡಿದ ಒಂದು ಕೇಂದ್ರ ಸಮಿತಿಯನ್ನೂ ನೇಮಿಸಲಾಗುವು ದು ಈ ಸಮಿತಿಗಳು ವಿವಿಧೋದ್ದೇಶಗಳ ಸಹಕಾರ ಸಂಘಗಳೊಡನೆ ಸಹಕರಿಸಿ ಕೊಂಡು ತಮ್ಮ ಕೆಲಸವನ್ನು ಮುಂದುವ ರಿಸುವುವು ಇದಕ್ಕಾಗಿ ಜಿಲ್ಲಾ ಮತ್ತು ತಾ ಲ್ಲೂಕು ಸೂಪರ್ ವೈಜರುಗಳನ್ನು ನೇಮಿ ಸಲಾಗುವುದು ಸಧ್ಯಕ್ಕೆ ಈ ಯೋಜನೆಯ ನ್ನು ಎರಡು ಜಿಲ್ಲೆಗಳಲ್ಲಿ ಜಾರಿಗೆ ತರಲು ಯೋಚಿಸಲಾಗಿದೆ

ಮತ್ತೊಂದು ಸಕ್ಕರೆ ಕಾರ್ಖಾನೆ

ಶಿವಮೊಗ್ಗದಲ್ಲಿ ಒಂದು ಸಕ್ಕರೆ ಕಾ ರ್ಖಾನೆಯನ್ನು ಸ್ಥಾಪಿಸಲು ಸರ್ಕಾರದವ ರು ತೀರ್ಮಾನ ಮಾಡಿದ್ದಾರೆ ಇದಕ್ಕಾಗಿ ಸಂಸ್ಥಾನದ ಶಾಖಾ ನಿಧಿಯಲ್ಲಿರುವ ಹಲವು ಸ್ಕೀನ ಯಂತ್ರೋಪಕರಣಗಳನ್ನು ಉಪ ಯೋಗಿಸಿ ಕೊಳ್ಳಲಾಗುವುದ ದು ತಿಳಿದು ಬಂದಿದೆ

ಹಿತ್ತಾಳೆ ಕಾರ್ಖಾನೆ

ನಾಗಮಂಗಲದಲ್ಲಿ ಹಿತ್ತಾಳೆ ಮತ್ತು ಇ ತರ ಲೋಹದ ಕಾರ್ಖಾನೆಯನ್ನು ಸ್ಥಾಪಿ ಸಲು ಸರ್ಕಾರದವರು ೫೬,೩೪೦ ರೂ ಅ ನ್ನು ಮಂಜೂರು ಮಾಡಿದ್ದಾರೆ.

ಮಂತ್ರಿ ಮಂಡಲದ ಸಭೆ

ಕಳೆದ ಮೂರು ದಿವಸಗಳಿಂದಲೂ ಮಂತ್ರಿ ಮಂಡಲದ ಸಭೆಯು ನಡೆಯುತ್ತಿ ದೆ ನೆನ್ನೆ ನಡೆದ ಸಭೆಯಲ್ಲಿ ಪಬ್ಲಿಕ್ ಸರ್ವೀ ಸ್ ಕಮಿಷನ್ನಿಗೆ ಸಂಬಂಧಪಟ್ಟ ಹಲವು ವಿಷಯಗಳನ್ನು ಪರಿಶೀಲಿಸಲಾಯಿತೆಂ ದು ಹೇಳಲಾಗಿದೆ

○ ವಾಣಿಜ್ಯ ಮತ್ತು ಕೈ ಗಾ ರಿ ಕಾ ಡೈರೆಕ್ಟರಾದ ಶ್ರೀ ಬಿ ಜಿ ಅಪ್ಪಾ ಜಿ ಮೊದಲಿಯಾರರು ಇದೇ ತಿಂಗಳು ೩೦ನೇ ತಾ|| ನಿಂದ ನಿವೃತ್ತರಾಗಲು ಅ ನುಮತಿ ಕೊಡಲಾಗಿದೆ

○ ದಕ್ಷತೆ ತನಿಖೆ ಡೈರೆಕ್ಟರ್ ಮತ್ತು ಆ ಹಾರ ನಿರೋಧ ಅಧಿಕಾರಿಗಳ ಹುದ್ದೆಯ ನ್ನು ಒಂದುಗೂಡಿಸಿ, ಅದಕ್ಕೆ ಶ್ರೀ ಸೊಂ ಪ್ಪನವರನ್ನು ನೇಮಿಸಲಾಗಿದೆ

○ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ ಯವರು ನಾಳೆ ದಹಲಿಗೆ ಪ್ರಯಾಣ ಮಾ ಡಲಿದ್ದಾರೆ

○ ಎಕ್ಸಿಕ್ಯೂಟಿವ್ ಕಮೀಷನರಾದ ಶ್ರೀ ರಾಮಸ್ವಾಮಿಯವರನ್ನು ನವರಾತ್ರಿ ಉತ್ಸವ ಸಂದರ್ಭದಲ್ಲಿ ಸ್ಪೆಷಲ್ ಡ್ಯೂ ಟಿ ಕೆಲಸಗಳನ್ನಾಗಿ ನೇಮಿಸಲಾಗಿದೆ, ಡಾ| ಸಿ. ಆರ್ ರೆಡ್ಡಿಯವರು

ಪ್ರೋ ಚಾನ್ಸಲರ್

ಆಂಧ್ರ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಡಾ|| ಸಿ ಆರ್. ರೆಡ್ಡಿ ಯವರ ಮೈಸೂರು ವಿಶ್ವ ವಿದ್ಯಾನಿಲಯ ಪ್ರೋ ಚಾನ್ಸಲರಾಗಲು ತಮ್ಮ ಒಪ್ಪಿಗೆ ಯನ್ನು ಕೊಡುವುದಾಗಿ ಅವರು ಸಿಂಡಿಕೇಟ್ ಸಭೆಗೆ ತಿಳಿಸಿದಾರೆ

ಸಂಯುಕ್ತ ಸೇವಾ ಸಂಘ

ಮೈಸೂರು ೧೦

ನಿನ್ನೆ ದಿನ ಪೌರಸಭೆಯ ಕಛೇರಿಯಲ್ಲಿ ನಗರದ ವಿವಿಧ ಸ್ಥಳಗಳ ಪ್ರತಿನಿಧಿಗಳ ಸ ಭೆಯು ನಡೆಯಿತು ಶ್ರೀ ಟಿ ವೆಂಕಟರ ಮಣಯ್ಯನವರು ಅಗ್ರಾಸನವನ್ನು ವಹಿಸಿ ದ್ದರು ಎಲ್ಲ ಸಂಸ್ಥೆಗಳೂ ಏಕೀ ಭವಿಸಿ ಸಾರ್ವಜನಿಕ ಸೇವಾ ಕಾರ್ಯಗಳನ್ನು ನ ಡೆಸಲು ಅನುಕೂಲಿಸುವ ಬಗ್ಗೆ ರಚಿಸಿದ್ದ ನಿಯಮಾವಳಿಗಳನ್ನು ಅಂಗೀಕರಿಸಲಾ ಯಿತು ಒಂದು ಕೇಂದ್ರ ಸಂಘವನ್ನು ಸ್ಥಾಪಿಸಿ ಎಲ್ಲ ಸಂಸ್ಥೆಗಳೂ ಅದರೊಡನೆ ಸಂಪರ್ಕವಿಟ್ಟುಕೊಳ್ಳಬೇಕೆಂದು ಒಪ್ಪ ಲಾಯಿತು ಅದಕ್ಕೆ ಪೌರಸಭಾಧ್ಯಕ್ಷ ರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸ್ಥಾಪಿಸು ವಂತೆ ತೀರ್ಮಾನವಾಯಿತು. ಅವರೇ ಸಮಿತಿಯ ಸದಸ್ಯರುಗಳನ್ನು ಸೇರಿಸಿ ಕೊಳ್ಳುವಂತೆಯೂ ಗೊತ್ತು ಮಾಡಲ್ಪಟ್ಟಿ ತು. ಸಂಘದ ಆಶ್ರಯದಲ್ಲಿ ಎಲ್ಲ ಸಂಸ್ಥೆ ಗಳೂ ಸೇರಿ ಒಂದು ದಿವಸ ಗಾಂಧಿ ಜ ಯಂತಿಯನ್ನು ಆಚರಿಸುವಂತೆಯೂ ಇತ್ಯ ರ್ಥವಾಯಿತು

ಸಹಕಾರ ವ್ಯವಸಾಯ ಯೋಜನೆ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಧಾನ್ಯ ಗಳನ್ನು ಬೆಳೆಯಲು ಮತ್ತು ನಿಮ್ನ ತರ ಗತಿಯವರು ಸಹಕಾರ ಪದ್ಧತಿಯ ಮೇಲೆ ಕೆಲಸಮಾಡುವಂತೆ ಪ್ರೋತ್ಸಾಹಿಸಲು ಸ ರ್ಕಾರದವರು ಹೊಸಕೋಟೆ ತಾಲ್ಲೂಕಿನ ಜ್ಯೋತಿಪುರ ಮತ್ತು ಮಾಯಸಂದ್ರ ಕಾ ವಲಿನ ಪ್ರದೇಶದಲ್ಲಿ ೨೦೦ ಎಕರೆ ಜಮೀನ ನ್ನು ಮೀಸಲಾಗಿಟ್ಟಿದ್ದಾರೆ ಸಹಕಾರ ತತ್ವದ ಮೇಲೆ ಕೆಲಸಮಾಡಲು ೮೦ ಜನ ರನ್ನು ನೇಮಿಸಲಾಗುವುದು ಅವರಿಗೆ ವೇತನವನ್ನು ಕೊಡುವುದಲ್ಲದೆ, ಬರುವ ಆದಾಯದಲ್ಲಿ ಒಂದು ಭಾಗವನ್ನೂ ಸಹ ಕೊಡಲಾಗುವುದು ಇದಕ್ಕಾಗಿ ಸರ್ಕಾರ ದವರು ೭ ಸಾವಿರ ರೂ ಗ್ರಾಂಟನ್ನು ಮಂ ಜೂರು ಮಾಡಿರುತ್ತಾರೆ ಇದರಿಂದ ೬ ಸಾ ವಿರ ಪಲ್ಲ ಹುರುಳಿಯ ಉತ್ಪತ್ತಿಯಾಗುವ ನಿರೀಕ್ಷೆ ಇದೆ

○ ಮೈಸೂರಿನಲ್ಲಿ ೫೦ ಸೈಕಲ್ ವಿದ್ಯುಚ್ಛ ಕ್ತಿಯನ್ನು ಒದಗಿಸುವ ಬಗ್ಗೆ ವ್ಯವಸ್ಥೆ ಮಾಡಲು ೧೩ ಲಕ್ಷ ರೂ ಅನ್ನು ಸರ್ಕಾ ರವು ಮಂಜೂರು ಮಾಡಿದೆ

ಪಡುವಾರಹಳ್ಳಿಯ ಅಭಿವೃದ್ಧಿಗೆ ೮೦ ಸಾವಿರ ರೂ.

ಮೈಸೂರು ೧೦

ರಾಜಧಾನಿಯ ಪಡುವಾರಹಳ್ಳಿ, ಒಡವಾ ಣೆ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದ ವರು ೮೦ ಸಾವಿರ ರೂ ಮಂಜೂರು ಮಾ ಡಿರುತ್ತಾರೆ

ಗಣಪತಿ ಮಂಗಳಾರತಿ.

ಸದ್ವಿದ್ಯಾ ಪಾಠಶಾಲೆಯಲ್ಲಿ ವಿದ್ಯಾ ಗ ಣಪತಿ ಮಂಗಳಾರತಿ ಮತ್ತು ಸ್ವಾತಂತ್ರ್ಯ ದಿನಾಚರಣೆಗಳು ಮೊನ್ನೆ ದಿನ ಧರ್ಮ ಪ್ರ ವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾ ರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಧ್ವ ಜಾರೋಹಣವಾದ ನಂತರ, ಅಧ್ಯಕ್ಷರು ಭಾಷಣ ಮಾಡಿ, ವಿದ್ಯಾರ್ಥಿಗಳಿಗೆ ಹಿ ತೋಕ್ತಿಗಳನ್ನು ನುಡಿದರು ಮಂಗಳಾರ ತಿ ಮತ್ತು ಮಕ್ಕಳಿಗೆ ಸಿಹಿ ತಿಂಡಿ ವಿನಿ ಯೋಗಗಳೊಡನೆ ಸಮಾರಂಭವು ಮು ಕ್ತಾಯವಾಯಿತು.

ಉಪನ್ಯಾಸ

ರಾಜಧಾನಿಯ ಸುತ್ತೂರು ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ಈ ದಿನ ಸಂಜೆ ೫-೩೦ ಗಂಟೆಗೆ ಶ್ರೀ ಎಲ್ ಸೀಬ ಯ್ಯನವರು ಕಾಸ್ಮಿಕ್ ಎನರ್ಜಿ ಎಂಬ ವಿಚಾರವಾಗಿ ಭಾಷಣ ಮಾಡುವರು ಶ್ರೀ ಸಿ ಜೆ ವಾರ್ಕಿಯವರು ಅಧ್ಯಕ್ಷತೆ ವಹಿ ಸುವರು

ಕೂಪರ್ ಇಲ್ಲದೆ ಬಟ್ಟೆ ಮಾರಾಟ

ಈ ವರ್ಷದ ಕೊನೆಯವರೆಗೂ ಕೂಪನ್ ಇಲ್ಲದೆ ಬಟ್ಟೆಯನ್ನು ಮಾರಾಟ ಮಾಡಬ ಹುದೆಂದು ಸರ್ಕಾರದ ಪ್ರಕಟಣೆ ತಿಳಿಸಿರು ತ್ತದೆ

ಪುರಸಭೆಗಳ ಆಡಳಿತ ಪರಿಶೀಲನಾ ಸಮಿತಿ

ಚಿತ್ರದುರ್ಗದ ಶ್ರೀ ಎ ಭೀಮಪ್ಪ ನಾ ಯಕರ ಅಧ್ಯಕ್ಷತೆಯಲ್ಲಿ ಪುರಸಭೆಗಳ ಆಡ ಳಿತ ಪರಿಶೀಲನಾ ಸಮಿತಿಯೊಂದನ್ನು ಸ ರ್ಕಾರದವರು ರಚಿಸಿದ್ದಾರೆ

ಆಯುರ್ವೇದ ಸಮ್ಮೇಳನ

ಸಂಸ್ಥಾನದ ಆಯುರ್ವೇದ ಯುನಾನಿ ವೈದ್ಯರ ಸಮ್ಮೇಳನವು ೧೯ನೇ ಅಧಿ ವೇಶನವು ಹಾಸನದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ಡಾ|| ಎಂ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು ಆರೋಗ್ಯ ಸಚಿವ ಜನಾಬ್ ಮಹಮೂದ ಷರೀಫರ ವರು ಸಮ್ಮೇಳನದ ಪ್ರಾರಂಭೋತ್ಸವವ ನ್ನು ನೆರವೇರಿಸ ವರು.

ಕೊಲಂಬಿಯಾ ಪಾರ್ಲಿಮೆಂಟಿ ನಲ್ಲಿ ಗುಂಡಿನ ಕಾಳಗ

ಅಧ್ಯಕ್ಷರ ಚುನಾವಣೆ ಇರಬೇಕೆ ಬೇಡ ವೇ ಎಂಬ ವಿಚಾರವಾಗಿ ಕೊಲಂಬಿಯಾ ಪಾರ್ಲಿಮೆಂಟಿನ ಸಭೆಯಲ್ಲಿ ಚರ್ಚೆ ನಡೆ ಯುತ್ತಿದ್ದಾಗ, ಗಲಭೆ ಸಂಭವಿಸಿ, ಗುಂಡಿ ನ ಕಾಳಗವೇ ನಡೆಯಿತೆಂದೂ, ಅದರಿಂದ ಡೆಪ್ಯುಟಿ ಅಧ್ಯಕ್ಷರು ಸತ್ತು, ಮಾಜಿ ಮಂ ತ್ರಿ ಮತ್ತು ಇತರ ಮೂರು ಮಂದಿಗೆ ತೀ ವ್ರ ಗಾಯವಾಯಿತೆಂದೂ ವರದಿಯಾಗಿದೆ ಕೆಲವು ದಿನಗಳಿಂದ ದೇಶದಲ್ಲಿ ಪರಿಸ್ಥಿತಿ ಯು ಶಾಂತಿಯುತವಾಗಿಲ್ಲವೆ, ಅನೇಕ ನಗ ರಗಳಲ್ಲಿ ಮಿಲಿಟರಿ ಕಾವಲನ್ನು ಹಾಕಲಾ ಗಿದೆಯೆಂದೂ ಹೇಳಲಾಗಿದೆ

ಸರ್ಕಾರಿ ನೌಕರರಿಂದ ೧೪ ಲಕ್ಷ ರೂ ದುರುಪಯೋಗ

ಪಾಟ್ನಾದ ನಾಮಕರ ಮತ್ತು ರಾಂ ಜಿ ವ್ಯಾಕ್ಸೀನ್ ಡಿಪೋಗಳಲ್ಲಿ ಒಟ್ಟು ೧೪ ಲ ಕ್ಷ ರೂ ಗಳಷ್ಟು ಹಣವನ್ನು ದುರುಪ ಯೋಗಪಡಿಸಿದರೆಂಬ ಅಪವಾದನೆಯ ಮೇ ಲೆ ಅಲ್ಲಿನ ಇಬ್ಬರು ಗುಮಾಸ್ತರನ್ನು ಪೊ ಲೀಸರು ದಸ್ತಗಿರಿ ಮಾಡಿರುತ್ತಾರೆ ಸರ್ಕಾ ರಕ್ಕೆ ಮೋಸಮಾಡಬೇಕೆಂಬ ಉದ್ದೇಶ ದಿಂದ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಗುಮಾಸ್ತರುಗಳು ಒಂದು ಪಿತೂರಿಯನ್ನು ನಡೆಸಿದ್ದರೆಂದು ಹೇಳ ಲಾಗಿದೆ

ಬೊಂಬಾಯಿನಲ್ಲಿ ೨೦೦ ಕೋಟಿ ರೂ. ರಸ್ತೆ ಯೋಜನೆ

೧೬೫೦೦ ಮೈಲಿಗಳಷ್ಟು ರಸ್ತೆಯನ್ನು ಹಾಕಲು ಬೊಂಬಾಯಿ ಸರ್ಕಾರದವರು ೨೦೦ ಕೋಟಿ ರೂ ಯೋಜನೆಯನ್ನು ಮಂ ಜೂರು ಮಾಡಿರುತ್ತಾರೆ ಮೊದಲನೆ ಎರ ಡು ವರ್ಷಗಳಲ್ಲಿ ಪ್ರಾಂತ್ಯ, ಜಿಲ್ಲಾ ಮತ್ತು ಗ್ರಾಮಗಳ ರಸ್ತೆಗಳನ್ನು ೧೧ ಕೋಟಿ ರೂ ವೆಚ್ಚದಿಂದ ರಚಿಸಲಾಗುವುದು.

ಪಾಕೀಸ್ತಾನ ರೈಲ್ವೆಯ ಮೇಲೆ ಕೆಲಸಗಾರರ ದಾವ

ರೈಲ್ವೆ ಕೆಲಸಗಾರರಿಗೆ ಸಂಬಳ, ಬಡ್ತಿ ಮುಂತಾದವುಗಳನ್ನು ಕೊಡದೆ ಒಟ್ಟು ೪೦ ಲಕ್ಷರೂ ಗಳಷ್ಟು ನಷ್ಟಕ್ಕೆ ಕಾರಣ ರಾ ಗಿದ್ದಾರೆಂದು ವಾಯುವ್ಯ ಸರಹದ್ದು ರೈಲ್ವೆ ಜನರಲ್ ಮ್ಯಾನೇಜರವರ ಮೇಲೆ ಪಾಕೀ ಸ್ತಾನ ರೈಲ್ವೆ ಕೆಲಸಗಾರರ ಸಂಘದವರು ಮೊಕದ್ದಮೆ ಹೂಡಲು ನಿರ್ಧರಿಸಿದ್ದಾರೆ.

ಮಹಿಳಾ ಯೋಗಕ್ಷೇಮ ಇಲಾಖೆ

ಮೈಸೂರು ಸಂಸ್ಥಾನದಲ್ಲಿ ವಿದ್ಯಾ ಇ ಲಾಖೆಯ ಆಶ್ರಯದಲ್ಲಿ ಒಂದು ಮಹಿಳಾ ಯೋಗಕ್ಷೇಮ ಶಾಖೆಯನ್ನು ಸರ್ಕಾರದ ವರು ಸ್ಥಾಪಿಸಲಿರುವರೆಂದು ತಿಳಿದುಬಂದಿ ದೆ ಈಗ ಇಬ್ಬರು ಮೈಸೂರು ಮಹಿಳೆಯ ರು ಮದರಾಸು ಮಹಿಳಾ ಇಲಾಖೆಯಲ್ಲಿ ಶಿಕ್ಷಣವನ್ನು ಪಡೆಯಲು ಹೋಗಿದ್ದಾರೆ

ಗ್ರಾಮಾಭಿವೃದ್ಧಿ ಪರಿಶೀಲನಾ ಸಮಿತಿ

ಜಿಲ್ಲಾ ಬೋರ್ಡು ಪಂಚಾಯಿತಿ ಮು ತ್ತು ಇತರ ಸಮಿತಿಗಳ ಮೂಲಕ ನಡೆ ಯುತ್ತಿರುವ ಗ್ರಾಮಾಭಿವೃದ್ಧಿ ಕಾರ್ಯವ ನ್ನು ಕೇಂದ್ರೀಕರಿಸುವ ವಿಚಾರವನ್ನು ಪ ರಿಶೀಲಿಸಲು ಶ್ರೀ ಸಿ ವೆಂಕಟಪ್ಪನವರ ಅ ಧ್ಯಕ್ಷತೆಯಲ್ಲಿ ೧೩ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆ

ಪ್ರತ್ಯೇಕ ಕರ್ನಾಟಕ ಪ್ರಾಂತ್ಯದ ಅಗತ್ಯ

ಕರ್ನಾಟಕ ಏಕೀಕರಣ ಮಹಾ ಸಮಿತಿಯ ವಾರ್ಷಿಕ ಸಭೆಯು ಕಳೆದ ಭಾನುವಾರ ಹುಬ್ಬಳ್ಳಿಯಲ್ಲಿ ಶ್ರೀ ಎಸ್ ಪಿ ಗೋಕರ್ಣರವರ ಅಧ್ಯಕ್ಷತೆಯಲ್ಲಿ ನಡೆದು, ಪ್ರತ್ಯೇಕ ಕರ್ನಾಟಕ ಪ್ರಾಂತ್ಯವನ್ನು ಕೂಡಲೇ ರಚಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರನ್ನು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು. ಈ ವಿಚಾರದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ತೋರುತ್ತಿರುವ ಅನಾದರಣೆಯನ್ನು ತೀವ್ರವಾಗಿ ಖಂಡಿಸಿ, ಕರ್ನಾಟಕದ ಜನರ ತಾಳ್ಮೆಯು ಮಿತಿ ಮೀರಿದೆಯೆಂದೂ ಏಕೀಕರಣ ಸಾಧನೆಗಾಗಿ ಶಾಂತಿಯುತವಾದ ಚಳುವಳಿ ಹೂಡಬೇಕಾಗುವುದೆಂದೂ ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಸಂಯುಕ್ತ ಪ್ರಾಂತ್ಯದಲ್ಲಿ ಕಾಶಿ ಸಂಸ್ಥಾನದ ಐಕ್ಯ

ಕಾಶಿ ಸಂಸ್ಥಾನವನ್ನು ಮುಂದಿನ ತಿಂಗಳು ೧೫ನೇ ತಾ|| ಸಂಯುಕ್ತ ಪ್ರಾಂತ್ಯದಲ್ಲಿ ಐಕ್ಯ ಮಾಡಲಾಗುವುದೆಂದು ಹೇಳಲಾಗಿದೆ. ಅಲ್ಲಿನ ರಾಜರ ಅಪೇಕ್ಷೆಯಂತೆ ಅಲ್ಲಿ ಒಂದು ಭಾರತ ಸಂಸ್ಕೃತಿಯ ವಿದ್ಯಾಲಯವನ್ನು ಸ್ಥಾಪಿಸಲಾಗುವುದು.

ಚರ್ಮದ ಬಣ್ಣವನ್ನು ಬದಲಾಯಿಸುವ ದ್ರಾವಕ

ಒಂದು ವಿಶೇಷ ದ್ರಾವಕವನ್ನು ಉಪಯೋಗಿಸುವುದರಿಂದ ಮನುಷ್ಯನ ಚರ್ಮದ ಬಣ್ಣವನ್ನು ಬದಲಾಯಿಸಬಹುದೆಂದು ಅಮೆರಿಕದ ಡಾ|| ಲೂಯಿ ರವರು ತಿಳಿಸಿರುತ್ತಾರೆ. ಯುದ್ಧದ ಸಮಯದಲ್ಲಿ ಈ ದ್ರಾವಕವನ್ನು ಅವರು ಕಂಡು ಹಿಡಿದರೆಂದೂ, ಇದರಿಂದ ಸಾವಿರಾರು ನೀಗ್ರೋ ಜನರ ಕಪ್ಪುಬಣ್ಣವನ್ನು ಬಿಳಿಯ ಬಣ್ಣಕ್ಕೆ ಪರಿವರ್ತಿಸಿದರೆಂದೂ ಹೇಳಲಾಗಿದೆ.

ಭಾಷಾ-ವಾರು ಪ್ರಾಂತ್ಯ ರಚನೆಗೆ ಆರ್. ಎಸ್ಸೆಸ್ ನಾಯಕರ ವಿರೋಧ

ಭಾಷಾವಾರು ತತ್ವಗಳಿಗೆ ಅನುಗುಣವಾಗಿ ಪ್ರಾಂತ್ಯಗಳನ್ನು ವಿಭಾಗಿಸುವುದನ್ನು ತಪ್ಪೆಂದು ಆರ್ ಎಸ್ ಎಸ್ ಸಂಸ್ಥೆಯ ನಾಯಕರಾದ ಶ್ರೀ ಗೋಲ್ವಾಲ್ಕರರು ತಿಳಿಸಿರುತ್ತಾರೆ. ಇದರಿಂದ ಭಿನ್ನ ಭಾವಗಳು ಹೆಚ್ಚುವುವೆಂದು ಅವರು ತಿಳಿಸಿದ್ದಾರೆ.

ಪುಸ್ತಕದ ಬೈಂಡಿಗಾಗಿ ಚರ್ಮಕೊಡುವ ಉಯಿಲು

ಕೆನಡಾದ ಮಾಜಿ ಸೈನ್ಯಾಧಿಕಾರಿ ಮೇಜರ್ ಕೇ ಹಾಲೆಂಡ್ ಎಂಬುವರು ಚಿಕಾಗೋವಿನಲ್ಲಿ ತಮ್ಮ ೭೮ನೇ ವಯಸ್ಸಿನಲ್ಲಿ ನಿಧನರಾದಾಗ ಒಂದು ವಿಚಿತ್ರ ಉಯಿಲನ್ನು ಬಿಟ್ಟು ಹೋಗಿದ್ದಾರೆ. ಅವರ ಮೃತ ಶರೀರವನ್ನು ಹೂಳಲು ಹಣ ಕೊಡಕೂಡದು, ಆದರೆ ಹೂಳುವುದಕ್ಕೆ ಬರುವವರೇ ೧ ಸಾವಿರ ಡಾಲರನ್ನು ಕೊಡಬೇಕು, ಯಾರೂ ಬಾರದಿದ್ದ ಪಕ್ಷದಲ್ಲಿ ತಮ್ಮ ಶರೀರವನ್ನು ವೈದ್ಯ ಸಂಶೋಧನೆಗೆ ಕೊಡಬೇಕು, ಚರ್ಮವನ್ನು ಮಾತ್ರ ಪುಸ್ತಕದ ಬೈಂಡಿಗೆ ಉಪಯೋಗಿಸಲು ನ್ಯೂಯಾರ್ಕಿನಲ್ಲಿರುವ ಮಹಿಳಾ ಸ್ನೇಹಿತರೊಬ್ಬಳಿಗೆ ಕಳುಹಿಸಬೇಕು ಎಂದು ಅವರು ನಮೂದಿಸಿದ್ದಾರೆ.

ರಾತ್ರಿ ಕಾಲದಲ್ಲಿ ವಿಮಾನದ ಅಂಚೆ ರವಾನೆ

ಮುಂದಿನ ತಿಂಗಳು ೧ನೇ ತಾ|| ನಿಂದ ರಾತ್ರಿ ಕಾಲದಲ್ಲಿ ವಿಮಾನಗಳ ಮೂಲಕ ಅಂಚೆಯನ್ನು ರವಾನಿಸುವ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸಲಾಗುವುದು.

ನೀರು ಕೊಡದಿದ್ದ ಮನೆ ಮಾಲೀಕನಿಗೆ ಜುಲ್ಮಾನೆ

ಬಾಡಿಗೆ ಮನೆಯವರಿಗೆ ನೀರನ್ನು ಸರಬರಾಜು ಮಾಡಲು ತೊಂದರೆ ಕೊಟ್ಟ ಕಲ್ಕತ್ತದ ಮನೆ ಯಜಮಾನನೊಬ್ಬನಿಗೆ ಅಲ್ಲಿನ ನ್ಯಾಯಾಧೀಶರು ಸಾವಿರ ರೂ ಜುಲ್ಮಾನೆಯನ್ನು ವಿಧಿಸಿರುತ್ತಾರೆ.

ಶ್ರೀ ಚಾಮುಂಡೇಶ್ವರೀ

ಟಾಕೀಸ್

ತಾ|| 10-9-49ರಿಂದ 1 ವಾರ ಮಾತ್ರ
ಪ್ರತಿ ದಿನ 3 ಆಟಗಳು

ಭಕ್ತ ಜನಾ

(ತಮಿಳು)

ಭೂಮಿಕೆ – ನಾಗಯ್ಯ, ಯಾನ್ನಪ್ಪ ಭಾಗವತರ್, ಶಾಂತಕುಮಾರಿ, ಚಲ್ಲಂ ಮತ್ತು ಇತರರು

Edited, printed and published by A R Nagarajan at Sadhvi Press, D Subbiah Road, Mysore.

ಕುದುರೆಗಳನ್ನು ರವಾನಿಸಲು ವಿಶೇಷ ವಿಮಾನ

೨೦ ಸಾವಿರ ಪೌಂಡುಗಳ ಬೆಲೆ ಬಾಳುವ ೫ ರೇಸು ಕುದುರೆಗಳನ್ನು ಲಂಡನ್ನಿನಿಂದ ನ್ಯೂಯಾರ್ಕಿಗೆ ರವಾನಿಸಲು ಒಂದು ವಿಶೇಷ ವಿಮಾನವನ್ನು ಏರ್ಪಡಿಸಲಾಗಿದೆಯೆಂದೂ ಅದರಲ್ಲಿ ಕುದುರೆಗಳ ಲಾಯ ಮತ್ತು ಅವನ್ನು ನೋಡಿಕೊಳ್ಳುವವರಿಗೆ ಸ್ಥಳ ವಸತಿಯನ್ನು ಏರ್ಪಡಿಸಲಾಗಿದೆಯೆಂದೂ ಹೇಳಲಾಗಿದೆ.

ಗ್ರಾಮಾಧಿಕಾರಿಗಳ ಸಮ್ಮೇಳನ

ಕಡೂರಿನಲ್ಲಿ ಇದೇ ೧೦ ಮತ್ತು ೧೧ನೇ ತಾ|| ಗಳಲ್ಲಿ ನಡೆಯಬೇಕಾಗಿದ್ದ ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನವನ್ನು ನವೆಂಬರ್ ತಿಂಗಳಿಗೆ ಮುಂದುವರಿಸಲಾಗಿದೆ. ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರ್‌ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು.

ರಾಜಕಮಲ್, ಮೈಸೂರು

9—9—49ರಿಂದ ಅಪೋಷ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು

ನಾಗಕನ್ನಿಕಾ [ಕನ್ನಡ]

ಪಾತ್ರ – ವೀರಭದ್ರಪ್ಪ, ಜಯಶ್ರೀ, ಬಳ್ಳಾರಿ ರತ್ನಮಾಲಾ
ಮಧುರ ಸಂಗೀತಗಳಿಂದಲೂ ಮನಮೋಹಕ ಅಭಿನಯ, ನೃತ್ಯಗಳಿಂದಲೂ ಕೂಡಿದ ಮಹೋನ್ನತ ಚಿತ್ರ

MORNING SHOWS
From 10—9—49 for 3 days

WHISTLING IN DIXIE

With Red Skelton, Ann Rutherford

ನೆಹರೂರವರ ಆದಾಯ ತಿಂಗಳಿಗೆ ಕೇವಲ ೫೦ ರ…

ಮಹಾ ಪ್ರಧಾನಿ ಪಂಡಿತ ನೆಹರೂ… ರ ಆದಾಯವು ತಿಂಗಳಿಗೆ ೫೦ ರೂ… ಕಡಿಮೆಯೆಂದು ಹೇಳಲಾಗಿದೆ. ಕಳೆ… ರ್ಷ ಅವರು ೬೧ ಸಾವಿರ ರೂ ಸ… ವನ್ನು ಪಡೆದು ತಮ್ಮ ಎಲ್ಲ ವರ… ಗಳ ಮೇಲೆ ೭೦೪೧೫ ರೂ ಅನ್ನು … ಯ ತೆರಿಗೆಯಾಗಿ ಕೊಟ್ಟರು. ಇದೂ … ತಮ್ಮ ಪುಸ್ತಕಗಳ ಮಾರಾಟದ … ತೆರಿಗೆಯನ್ನು ಕೊಟ್ಟರೆಂದೂ ಹೇ… ಗಿದೆ.

ಕೃಷ್ಣರಾಜ ಮೊಹಲ್ಲಾ ನಿವಾ… ಸಂಘ

ಕೃಷ್ಣರಾಜ ಮೊಹಲ್ಲಾ ನಿವಾ… ಸಂಘದ ಸಭೆಯು ಭಾನುವಾರ ಸಂ… ಗಂಟೆಗೆ ನಾಲಾ ಬೀದಿ ದೊಡ್ಡರಾವ… ದಿರದಲ್ಲಿ ನಡೆಯುವುದು.

ನ್ಯೂ ಅಪೇರ…

ಟಾಕೀಸ್, ಮೈಸೂರು

9-9-49ರಿಂದ

ಪ್ರತಿ ದಿನ ೩ ಆಟಗಳು
ಭಾಗ್ಯ ಪಿಕ್ಚರ್ಸ್‌ರವರ

ಮಂಗಯಾ… ಕರಸಿ

(ತಮಿಳ…

ತಾರಾ ಗಣ – ಕನ್ನಾಂಬ, …
ದೇವಿ, ಪಿ. ಯು. ಚಿನ್ನಪ…
ಎನ್.ಎಸ್. ಕೃಷ್ಣನ್,
ಟಿ.ಎ. ಮಧುರಂ
ಲಲಿತ – …
ಪ್ರದರ್ಶನ – ಮಧ್ಯಾಹ್ನ ೩, ೬-…
ಮತ್ತು ರಾತ್ರಿ ೯-೪೫

Distributors for My…
State, S Canara & Co…
–: R. V. PICTURES
157, Subedar Chatra…
Road, Bangalore 2

[ಸ್ಥಾಪನ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಂಪ್ಯಾಜಿರಾವ್ ರಸ್ತೆಯಲ್ಲಿರುವ ಎಸ್. ಶಟ್ಯಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ವಿಚಾರಿಸಬಹುದು.

U HARI SHENOY …,
ಏಜೆಂಟ್

ಪ್ರಭಾ * 9-9-49ರಿಂದ

ಅಪೋಷವಾದ 2ನೇ ವಾರ

ದಿನವಹಿ ೩ ಆಟಗಳು
ವೀನಸ್ ಪಿಕ್ಚರ್ಸ್‌ರವರ
ಹಿಂದಿ ಚಿತ್ರ

ಬಡಿ ಬಹೆನ್

ಪಾತ್ರ – ಸುಲೋಚನ ಚಟರ್ಜಿ, ಸುರೈಯ್ಯ, ಗೀತಾಬಾಲಿ, ರೆಹಮಾನ್, ಉಲ್ಲಾಸ್

MORNING SHOWS on 10th & 11th Sept
M G M'S UNDER CURRENT
STARRING ROBERT TAYLOR KATHERINE HEPBURN

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೧೧-೮-೧೯೪೯ [ಸಂಚಿಕೆ ೮

– ಕಾಶ್ಮೀರ ಪ್ರಶ್ನೆ ಮತ್ತೆ – ಭದ್ರತಾ ಸಮಿತಿಗೆ ?

ಪೌರ ಸಭೆಗಳ ವಿಚಾರಣಾ ಸಮಿತಿ

[ನಮ್ಮ ಸು ಫೋನ್] ಬೆಂಗಳೂರು ೧೧ ಸಂಸ್ಥಾನದ ಮ್ಯೈನರ್ ಪೌರ ಸಭೆಗಳ ವ್ಯವಸ್ಥೆ, ಅಧಿಕಾರ, ಮತ್ತು ಕೆಲಸ ಕಾರ್ಯಗಳನ್ನು ಪರಿಶೀಲಿಸಿ ಅವುಗಳು ಉತ್ತಮ ರೀತಿಯಿಂದ ಕೆಲಸ ಮಾಡುವಂತೆ ಸಲಹೆಗಳನ್ನು ನೀಡಲು ಶಾಸನ ಸಭಾಸದಸ್ಯರಾದ ಶ್ರೀ ಎ ಭೀಮಪ್ಪ ನಾಯಕರ ಅಧ್ಯಕ್ಷತೆಯಲ್ಲಿ ಸರ್ಕಾರದವರು ಸಮಿತಿಯೊಂದನ್ನು ರಚಿಸಿರುತ್ತಾರೆ ಈ ಕೆಳಗೆ ಕಂಡವರು ಅದರ ಸದಸ್ಯರಾಗಿದ್ದಾರೆ ಶ್ರೀಗಳಾದ ... ಕೃಷ್ಣಪ್ಪ, ಎ. ಎಸ್ ಮಲ್ಲಪ್ಪ, ಮುದಿಯಪ್ಪ, ಬಿ ಸಿ, ನಂಜುಂಡಯ್ಯ, ಬಿ ... ಲ್ ನಾರಾಯಣಸ್ವಾಮಿ, ಎ ವೆಂಕಟಸುಬ್ಬಯ್ಯ, ಡಾ॥ ಸಿ. ಬಂದೀಗೌಡ, ಎಂ. ಎಸ್ ಶ್ರೀನಿವಾಸಯ್ಯಂಗಾರ್, ಸಿ. ವಿ ವೆಂಕಟರಾಯಪ್ಪ, ಹೆಚ್ ಹನುಮಂತಯ್ಯ, ಇಮಾಂ ಹುಸೇನ್ ಸಾಹೇಬ್, ಬೆಂಗಳೂರ್ ಜಿಲ್ಲಾಧಿಕಾರಿಗಳು ಮತ್ತು ರೆವಿನ್ಯೂ ಸೆಕ್ರೆಟರಿ (ಕಾರ್ಯದರ್ಶಿ)

ದೆಹಲಿಗೆ ಕೆ. ಸಿ. ರೆಡ್ಡಿಯವರು

ಇದಿನ ಬೆಳಗ್ಗೆ ಶ್ರೀ ಕೆ ಸಿ ರೆಡ್ಡಿಯವರು ವಿಮಾನದಲ್ಲಿ ದೆಹಲಿಗೆ ತೆರಳಿದರು ... ... ಇವರು ಹಿಂದಿರುಗುವವರೆಗೆ ಇವರ ಗೈರುಹಾಜರಿನಲ್ಲಿ ಹಣ ಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಇವರ ಕೆಲಸಗಳನ್ನು ನೋಡಿಕೊಳ್ಳುವರು ಈ ಸಂಬಂಧವಾಗಿ ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ರಾಜ್ಯಾಂಗ ರಚನೆಯ ಕಾರ್ಯವು ಭಾರತದಲ್ಲೂ, ಮೈಸೂರಿನಲ್ಲೂ ಇದುವರೆಗೆ ನಡೆದಿರುವ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಇನ್ನೂ ಹೆಚ್ಚಿನ ಮಾತುಕತೆಗಳಿಗಾಗಿ ಶ್ರೀ ರೆಡ್ಡಿಯವರು ದೆಹಲಿಗೆ ತೆರಳಿರುತ್ತಾರೆಂದು ಸಹಾ ತಿಳಿಸಲಾಗಿದೆ.

ಪ್ರಜಾ ಸಂಖ್ಯೆ ೩ ಸೆಕೆಂಡಿಗೆ ಎರಡರಂತೆ ಹೆಚ್ಚುತ್ತಿದೆ

ಪ್ರತಿ ಮೂರು ಸೆಕೆಂಡುಗಳಿಗೂ ಇಬ್ಬರು ಜನಿಸುತ್ತಿರುವರೆಂದೂ, ಈಗ ಒಟ್ಟು ... ಕೋಟಿ ಜನ ಸಂಖ್ಯೆಯಿದ್ದು, ಪ್ರತಿ ವರ್ಷವೂ ಅದು ೨ ಕೋಟಿಯಷ್ಟು ಹೆಚ್ಚುಗುತ್ತಿದೆಯೆಂದೂ ಬ್ರಿಟನ್ನಿನ ಸರ್ ... ರಸ್ಸೆಲ್ ರವರು ತಿಳಿಸಿರುತ್ತಾರೆ ಕಳೆದ ೧೦೦ ವರ್ಷಗಳಲ್ಲಿ ವಿಜ್ಞಾನವು ಅಭಿವೃದ್ಧಿ ಹೊಂದಿ ಮಾನವನ ಆಯುಸ್ಸನ್ನು ಹೆಚ್ಚು ಮಾಡಿದೆಯೆಂದೂ ಅವರು ಹೇಳಿರುತ್ತಾರೆ.

ಗಣಪತಿ ಮಂಗಳಾರತಿ

ಶಾರದಾವಿಲಾಸ ಕಾಲೇಜು ಸಂಘದ ಸದಸ್ಯರು ನೆನ್ನೆ ರಾತ್ರಿ ಕಾಲೇಜಿನಲ್ಲಿ ಗಣಪತಿಯನ್ನು ಬೀಳ್ಕೊಡುವ ಸಮಾರಂಭವನ್ನು ನೆರವೇರಿಸಿದರು

ರಥೋತ್ಸವ

ನಾಳೆ ಪ್ರಾತಃಕಾಲ ೯-೩೦ ಗಂಟೆಗೆ ಶ್ರೀ ಪ್ರಸನ್ನ ಕೃಷ್ಣಸ್ವಾಮಿಯವರ ರಥೋತ್ಸವವು ಅರಮನೆ ಕೋಟೆಯೊಳಗೆ ನಡೆಯುವುದು

ಹರಿಕಥೆ

ಕೋತ್ವಾಲ ರಾಮಯ್ಯನವರ ಬೀದಿಯ ... ನಿಲಯದಲ್ಲಿ ಈ ಸಂಜೆ ... ಕ್ಕೆ ಶ್ರೀ ನಾರಾಯಣ ದಾಸರಿಂದ ... ಚಲ ರಾಮದಾಸ್ ಎಂಬ ಹರಿಕಥೆ ... ನಡೆಯುವುದು.

ಗ್ರಾಮಾಭಿವೃದ್ಧಿ ಕಾರ್ಯಗಳ ಪರಿಶೀಲನಾ ಸಮಿತಿ

ಜಿಲ್ಲಾ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ಮತ್ತು ನೂತನ ಗ್ರಾಮಾಭಿವೃದ್ಧಿ ಸಮಿತಿಗಳ ಕಾರ್ಯ ಕಲಾಪಗಳನ್ನು ಪರಿಶೀಲಿಸಿ, ಈ ಮೂರು ಸಂಸ್ಥೆಗಳನ್ನೂ ಸಮನ್ವಯಗೊಳಿಸಿ ಗ್ರಾಮಾಭಿವೃದ್ಧಿ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಲು, ಸರ್ಕಾರದವರು ಶ್ರೀ ಎ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ ಈ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಒಂದಕ್ಕೊಂದಕ್ಕೆ ಮಿಶ್ರಣವಾಗದಂತೆಯೂ, ಮತ್ತು ಸದರಿ ಸಂಸ್ಥೆಗಳಿಗೆ ಬೇಕಾದಷ್ಟು ಒಳಾಡಳಿತಾಧಿಕಾರವನ್ನು ಕೊಡುವಂತೆಯೂ, ಸಮಿತಿಯವರು ಸಲಹೆ ಕೊಡಬೇಕೆಂದು ಕೋರಲಾಗಿದೆ ಈ ಬಗ್ಗೆ ಒಂದು ಮಸೂದೆಯನ್ನೂ ಸಹ ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಗೆ ತಂದಿರುತ್ತಾರೆ.

ಸಮಿತಿಯಲ್ಲಿ ಈ ಕೆಳಗೆ ಕಂಡವರು ಸದಸ್ಯರಾಗಿರುತ್ತಾರೆ.–ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ವೈ 'ಧರ್ಮಪ್ಪ, ಹೆಚ್. ಎಸ್ ರುದ್ರಪ್ಪ, ಹುಚ್ಚೇಗೌಡ, ಹೆಚ್. ಕೆ ವೀರಣ್ಣಗೌಡ, ಬಿ ಸಿ. ಬಸಪ್ಪಶೆಟ್ಟಿ, ಸೈಯದ್ ಅಬ್ದುಲ್ ರಹಮಾನ್, ಬಿ ಬಸವಲಿಂಗಪ್ಪ, ಎಂ ಗೋವಿಂದರೆಡ್ಡಿ, ಟಿ ಮಾದಯ್ಯಗೌಡ, ಯಂ ವಿ ರಾಮರಾವ್, ಯಂ ಕೃಷ್ಣಪ್ಪ, ಯಂ. ಲಿಂಗಣ್ಣ, ಮಲ್ಲಿಕಾರ್ಜುನಪ್ಪ ಗೌಡ, ಯನ್. ಎಸ್. ಹಿರಿಯಣ್ಣ ಕೆ ಲಕ್ಷ್ಮಣರಾವ್, (ಕಾರ್ಯದರ್ಶಿ)

○ ಮೈಸೂರು ಅಡಿಷನಲ್ ಮ್ಯಾಜಿಸ್ಟ್ರೇಟರಾದ ಶ್ರೀ ... ಸುಬ್ರಹ್ಮಣ್ಯಂರವರನ್ನು ಬೆಂಗಳೂರಿನ ಎರಡನೇ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲಾಗಿದೆ

ಮದ್ರಾಸು ನಗರವನ್ನು ಇಬ್ಭಾಗಿಸಬೇಕೆಂದು ಪ್ರಕಾಶಂ

ಆಂಧ್ರ ಪ್ರಾಂತದ ನಿರ್ಮಾಣದ ಅವಶ್ಯಕತೆಯನ್ನು ಕುರಿತು ಮದ್ರಾಸಿನ ಮಾಜಿ ಪ್ರಧಾನರಾದ ಶ್ರೀ ಟಿ ಪ್ರಕಾಶಂರವರು ರಾಜ್ಯಾಂಗ ಸಭೆಯ ಮೊದಲನೆ ಪೆಡ್ಯೂಲಿಗೆ ತಿದ್ದುಪಡಿಯನ್ನು ಕಳುಹಿಸಿ, ಮದ್ರಾಸು ನಗರವನ್ನು ವಿಭಾಗ ಮಾಡಿ ಉತ್ತರ ಭಾಗವನ್ನು ಆಂಧ್ರ ಪ್ರಾಂತದೊಳಗೆ ಸೇರ್ಪಡಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ

ನೂತನ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಡೈರೆಕ್ಟರ್

ನಿವೃತ್ತರಾಗಲಿರುವ ಶ್ರೀ ಬಿ. ಜಿ ಅಪ್ಪಾದೊರೆ ಮೊದಲಿಯಾರರ ಜಾಗದಲ್ಲಿ ಮೈಸೂರು ರೈಲ್ವೆಯ ಜನರಲ್ ಮ್ಯಾನೇಜರರಾದ ಶ್ರೀ ಆರ್. ರಾಮಕೃಷ್ಣರವರನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರ್ ಆಗಿ ನೇಮಕ ಮಾಡಲಾಗಿದೆ

ನಟಿ ಸುರೆಯ್ಯಳಿಗೆ ಚೂರಿ ಇರಿತ

ಅಕೋಲಾ ನಗರದಲ್ಲಿರುವ ಸುಪ್ರಸಿದ್ಧ ಸಿನಿಮಾ ನಟಿಯಾದ ಸುರೆಯ್ಯಳನ್ನು ಯಾರೋ ಚೂರಿಯಿಂದ ಇರಿದರೆಂಬ ವರ್ತಮಾನ ಬಂದಿದೆ. ಆಕೆಯು ಈಗ "ದುನಿಯಾ" ಎಂಬ ಚಿತ್ರದಲ್ಲಿ ಪಾತ್ರವಹಿಸುವವಳಾಗಿದ್ದಳು

ಕಾಶ್ಮೀರದಲ್ಲಿ ಹೆಚ್ಚು ಭತ್ತದ ಬೆಳೆ

ಕಾಶ್ಮೀರದಲ್ಲಿ ಈ ವರ್ಷ ೧೦೦ ಲಕ್ಷ ಮಣದಷ್ಟು ಭತ್ತದ ಬೆಳೆ ಆಗಬಹುದೆಂದು ಅಂದಾಜು ಮಾಡಲಾಗಿದೆ ಅದರಲ್ಲಿ ೧೭ ಲಕ್ಷ ಮಣದಷ್ಟು ಧಾನ್ಯವನ್ನು ಮಾತ್ರ ಸರ್ಕಾರವು ವಶಪಡಿಸಿಕೊಳ್ಳುವುದು

ಮಗುವು ಸತ್ತುಹೋದುದಕ್ಕಾಗಿ ಆಸ್ಪತ್ರೆಗೆ ದಂಡ

ಫಾಂಡಿಚೇರಿಯಲ್ಲಿರುವ ಫ್ರೆಂಚ್ ಸೇಂಟ್ ಮೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಒಂದಿದ್ದ ಮೂರು ವರ್ಷದ ಚೀಣದ ಮಗುವನ್ನು ಮೂರು ಗಂಟೆಗಳ ಕಾಲ ಯಾರೂ ನೋಡದೆ ಅನಾದರಣೆಯಿಂದ ಬಿಟ್ಟಿದ್ದಕ್ಕಾಗಿ ಅದು ಸತ್ತುಹೋದುದರಿಂದ ಅದರ ಪರಿಹಾರಾರ್ಥವಾಗಿ ಮಗುವಿನ ತಾಯಿಗೆ ೩೦ ಲಕ್ಷ ಫ್ರಾಂಕುಗಳನ್ನು ಆಸ್ಪತ್ರೆಯವರು ಕೊಡಬೇಕೆಂದು ಅಲ್ಲಿನ ಪ್ರಧಾನ ಕೋರ್ಟಿನವರು ತೀರ್ಪಿತ್ತಿದ್ದಾರೆ.

ಕಳುವು ಮಾಲಿನ ಪತ್ತೆ

ಟೌನ್‌ಹಾಲ್ ಭವನದ ಆವರಣದಲ್ಲಿರುವ ಮನೆಗಳಲ್ಲಿ ಕಳೆದ ಗುರುವಾರ ನಾಲ್ಕು ಸಾವಿರ ರೂ ಬೆಲೆ ಬಾಳುವ ಚಿನ್ನ ಬೆಳ್ಳಿ ಪದಾರ್ಥಗಳನ್ನೂ, ಸೀರೆಗಳನ್ನೂ ಅಪಹರಿಸಿದ್ದ ಹರಿಸಿಂಗ್ ಉರುಫ್ ಬಾಜ್ಜಿ ಎಂಬುವನನ್ನು ಹಿಡಿದುಕೊಟ್ಟಿಲ್ ಪೋಲೀಸರು ಬಂಧಿಸಿ, ಮುಂದಿನ ತನಿಖೆ ಕ್ರಮ ನಡೆಸುತ್ತಿದ್ದಾರೆ

ಕಾಶ್ಮೀರದ ಪ್ರಶ್ನೆ ಭದ್ರತಾ ಸಮಿತಿಗೇ ವಾಪಸ್

ಭದ್ರತಾ ಸಮಿತಿಯವರು ನೇಮಿಸಿದ್ದ ಕಾಶ್ಮೀರ ಕಮಿಷನ್ನಿನವರು ಭಾರತ ಮತ್ತು ಪಾಕೀಸ್ತಾನಗಳಿಗೆ ಕಾಶ್ಮೀರದ ಬಗ್ಗೆ ಕೊಟ್ಟ ಹೊಸ ಸಲಹೆಗಳನ್ನು ಪಾಕಿಸ್ತಾನವು ಅಂಗೀಕರಿಸಿದೆ, ಆದರೆ ಭಾರತವು ನಿರಾಕರಿಸಿದೆ ಈ ಬಗ್ಗೆ ಇಷ್ಟರಲ್ಲೇ ಕಮಿಷನ್ನಿನವರು ಸಭೆ ಸೇರಿ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಲಿರುವರೆಂದು ವರದಿಯಾಗಿದೆ. ಈ ಕಮಿಷನ್ನಿನವರು ಕಾಶ್ಮೀರ ಪ್ರಶ್ನೆಯನ್ನು ಸಂಪೂರ್ಣವಾಗಿ ಮತ್ತೆ ವಿಶ್ವ ಸಂಸ್ಥೆಗೇ ವಾಪಸು ಕಳುಹಿಸಬಹುದೆಂದು ಹಲವು ಆವರಣಗಳಲ್ಲಿ ಊಹಿಸಲಾಗಿದೆ

ಚೀಣಾ ಕಮ್ಯೂನಿಸ್ಟರಿಗೂ ಗೊರಿಲ್ಲಾಗಳಿಗೂ ಘರ್ಷಣೆ

ಮಧ್ಯ ಚೀಣಾದ ಹೂಪೇ ಪ್ರಾಂತ್ಯದಲ್ಲಿ ೪೦ ಸಾವಿರ ಮಂದಿ ಗೊರಿಲ್ಲಾ ಸೈನಿಕರು ಕಮ್ಯೂನಿಸ್ಟರ ವಿರುದ್ಧವಾಗಿ ಶಸ್ತ್ರಾಸ್ತ್ರಗಳನ್ನು ಹಿಡಿದು ಕದನ ನಡೆಸುತ್ತಿರುವರೆಂದು ವರದಿಯಾಗಿದೆ. ಹೂಪೇ ಪ್ರಾಂತ್ಯದ ಪೂರ್ವ ಮತ್ತು ದಕ್ಷಿಣ ಪ್ರದೇಶ ಮತ್ತು ಮಂಚೂರಿಯಾದಲ್ಲಿ ಗೊರಿಲ್ಲಾ ಸೈನಿಕರು ಕಮ್ಯೂನಿಸ್ಟರಿಗೆ ಬಲವಾದ ಪ್ರತಿಭಟನೆ ತೋರುತ್ತಿರುವರೆಂದೂ ಹೇಳಲಾಗಿದೆ.

ವಿದ್ಯಾರ್ಥಿಗಳಿಂದ ಕಲ್ಕತ್ತ ವಿಶ್ವ ವಿದ್ಯಾಲಯದ ಮುತ್ತಿಗೆ

ಮೊನ್ನೆ ದಿನ ಸಂಜೆ ಕಲ್ಕತ್ತ ವಿಶ್ವ ವಿದ್ಯಾಲಯದ ಸೆನೆಟ್ ಸಭೆ ನಡೆಯುತ್ತಿದ್ದಾಗ ಸುಮಾರು ಒಂದು ಸಾವಿರ ಮಂದಿ ವಾಣಿಜ್ಯ ವಿದ್ಯಾರ್ಥಿಗಳು ಕಾಲೇಜಿನಲ್ಲಿ ವಾಣಿಜ್ಯ ಶಿಕ್ಷಣ ಶಾಖೆಯನ್ನು ತೆರೆಯಬೇಕೆಂದೂ ಮತ್ತು ವಾಣಿಜ್ಯ ವಿದ್ಯಾರ್ಥಿಗಳಿಗೆ ರಾತ್ರಿ ತರಗತಿಗಳನ್ನು ನಡೆಸಬೇಕೆಂದೂ ಘೋಷಿಸುತ್ತಾ ಪ್ರದರ್ಶನ ನಡೆಸಿದರು ಹಲವು ಮಂದಿ ವಿದ್ಯಾರ್ಥಿಗಳು ವಿಶ್ವ ವಿದ್ಯಾಲಯಕ್ಕೆ ಮುತ್ತಿಗೆ ಹಾಕಿ ಬಲೋದ್ಬಂದಿಯಿಂದ ಸಿಂಡಿಕೇಟ್ ಕಛೇರಿಗೆ ನುಗ್ಗಲು ಪ್ರಯತ್ನಿಸಿದರೆಂದೂ, ಆಗ ಪೋಲೀಸರು ಲಾಠಿ ಪ್ರಯೋಗ ಮಾಡಿ ಗುಂಪನ್ನು ಚದುರಿಸಿದರೆಂದೂ ವರದಿಯಾಗಿದೆ ೧೦ ಮಂದಿ ವಿದ್ಯಾರ್ಥಿಗಳಿಗೂ ಮತ್ತು ೩ ಮಂದಿ ಪೋಲೀಸರಿಗೂ ಪೆಟ್ಟುಬಿದ್ದಿದೆ ಒಂದು ನೂರು ಮಂದಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಲಾಗಿದೆ

ಸಂಸ್ಕೃತ ಅಧಿಕಾರ ಭಾಷೆಯಾಗಲಿ

ಸಂಸ್ಕೃತವು ದೇಶದ ಅಧಿಕಾರ ಭಾಷೆಯಾಗಬೇಕೆಂಬ ತಿದ್ದುಪಡಿಯು ಭಾರತ ರಾಜ್ಯಾಂಗ ಸಭೆಯಲ್ಲಿ ಬರಲಿದೆ ಈ ತಿದ್ದುಪಡಿಗೆ ಡಾ॥ ಸುಬ್ಬರಾಯನ್, ನಾಜಿರ್ ಉದ್ದೀನ್ ಅಹಮದ್ ಡಾ॥ ಬಿ ಆರ್ ಅಂಬೇಡ್ಕರ್, ಟಿ ಟಿ ಕೃಷ್ಣಮಾಚಾರಿ ಇವರ ಬೆಂಬಲವಿದೆಯೆಂದು ಹೇಳಲಾಗಿದೆ

ಸಂಗೀತ ಕಛೇರಿ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಪ್ರವಚನಾಲಯದಲ್ಲಿ ಈ ದಿನ ರಾತ್ರಿ ಏಳು ಗಂಟೆಗೆ ಶ್ರೀಮತಿ ಎಸ್ ರತ್ನಮ್ಮನವರ ಗಾನವು ವಿದ್ವಾನ್ ಬಿ ಕೇಶವಮೂರ್ತಿಯವರ ಪಿಟೀಲು ಮತ್ತು ವಿದ್ವಾನ್ ಅನಂತಸ್ವಾಮಿಯವರ ಮೃದಂಗಗಳೊಡನೆ ನಡೆಯುವುದು

ವಾರ ಭವಿಷ್ಯ

ತಾ॥ ೧೧-೯-೪೯ರಿಂದ ೧೮-೯-೪೯ರ ವರೆಗೆ

ಮೇಷ—ವ್ಯಾಪಾರ ಉದ್ಯೋಗಾದಿಗಳಲ್ಲಿ ಸ್ಥಿತಿ ಚಂಚಲ ಮೇಲಧಿಕಾರಿಗಳಿಗೂ ನಿಮಗೂ ವ್ಯತ್ಯಾಸ ಸ್ಥಿರ ಆಸ್ತಿ ಬಗ್ಗೆ ತಕರಾರು ಕುಟುಂಬದ ಆಪಹಾಯು ಹಣಕಾಸಿನ ಖರ್ಚು ವಿಪರೀತ ಯೋಜಿತ ಕಾರ್ಯ ಅರ್ಧಕ್ಕೆ ನಿಲ್ಲುವುದು ದನಕರುಗಳ ಹಾನಿ ತಾಯಿಯ ಆಲಸ್ಯ ತಾ॥ ೧೧, ೧೨ ಅಪಘಾತ, ಭಯ

ವೃಷಭ—ತ್ಯಾಗಶೀಲರಾದ ನೀವು ಜನಪ್ರಿಯರಾಗಿ ಕಾರ್ಯ ಜಯವಾಗುವುದು ಆದಾಯ ಸಮರ್ಪಕ, ಪರಾಕ್ರಮ ಕಾರ್ಯ ಪ್ರವಾಸ ಸುಖಕರ ಜಮೀನಿನ ತಕರಾರು ಬಗೆಹರಿಯುವುದು ದಂಧೆಯಲ್ಲಿ ಲಾಭ ತಾ॥ ೧೧, ೧೨ ಮನರಂಜನೆ

ಮಿಥುನ—ಅತಿಥಿ ಅಭ್ಯಾಗತರ ಆಗಮನ ಹಣಕಾಸಿನ ಖರ್ಚು ಹೆಚ್ಚುವುದು ಕೆಲ್ಸ ಕಾರ್ಯ ಹಿಂದಕ್ಕೆ ಬೀಳುವುದು. ಪತ್ನಿಯು ರೋಗಿಣಿಯಾಗುವಳು ತಾ॥ ೧೩, ೧೪, ೧೫ ಜಾಗರಣೆಯಿಂದ ಕಣ್ಣಾರಿ ಔತಣ

ಕರ್ಕ—ಕ್ಷಣಕ್ಷಣಕ್ಕೂ ಮನಸ್ಸು ವಿಚಿತ್ರವಾಗುತ್ತೆ ಆಯಾಸವುಂಟುಮಾಡುವ ಘಟನಾವಳಿಗಳು ಕಣ್ಣಿಗೆ ಬೀಳುವುವು ನೌಕರಿಯಲ್ಲಿ ಹೆಚ್ಚಿನ ಜವಾಬ್ದಾರಿ ಬೀಳುವುದು ವ್ಯಾಪಾರಾದಿಗಳಲ್ಲಿ ಬೇಜವಾಬ್ದಾರಿಯವರ ವ್ಯವಹಾರ ಆರೋಗ್ಯ ನೆಟ್ಟಗಿರದು ತಲೆ ತಿರುಗುವುದು ತಾ॥ ೧೫, ೧೬ ಆಕಸ್ಮಿಕ ಖರ್ಚು ಬೆಲೆಯಾದ ವಸ್ತುವಿನ ಅಪಹರಣ

ಸಿಂಹ—ಬಿರುಗಾಳಿಯೆದ್ದು ಬೀಸುವುದು ವಿಶೇಷ ಎಚ್ಚರಿಕೆಯಿಂದ ವರ್ತಿಸಿರಿ ಆರೋಗ್ಯ ನೆಟ್ಟಗಿರದು ಆದಾಯಕ್ಕಿಂತ ಖರ್ಚು ಹೆಚ್ಚಾಗುವುದು ಕೈಗೊಂಡ ಕಾರ್ಯದಲ್ಲಿ ವಿಘ್ನ ತಾ॥ ೧೫, ೧೬ರಲ್ಲಿ ಪರರು ಮಿತ್ರರಿಂದ ಧನ ಸಹಾಯ

ಕನ್ಯಾ—ವಿಶೇಷ ಜವಾಬ್ದಾರಿಯು ತೋರುವುದು ಮಹತ್ವದ ಭೇಟಿ ಕೈಗೊಂಡ ಕಾರ್ಯ ಅರ್ಧಕ್ಕೇ ನಿಲ್ಲುವುದು ವಿದ್ವಾಂಸರ ಭೇಟಿ ಖರ್ಚು ಹೆಚ್ಚಿದರೂ ಧನಾಭಾವವಿಲ್ಲ ನೌಕರಿಯಲ್ಲಿ ಗಡಿಬಿಡಿ ಆದರೆ ಅಸಮಾಧಾನವಿಲ್ಲ ತಾ॥ ೧೭, ೧೮ ಶುಭವಾರ್ತೆ

ತುಲಾ—ಆರೋಗ್ಯ, ಮಾನಸಿಕ ಸ್ಥಿತಿ ಉತ್ತಮ ಸಾಮಾಜಿಕ ಸೇವಾ ಕಾರ್ಯ ಜರುಗುವುದು ಪರಿಹಾಸ್ಯ ಮಾಡಿದವರು ನಿಮ್ಮ ಕ್ಷಮ ಬೇಡುವರು ಈ ವಾರ ಒಳ್ಳೆ ವರು. ಪಣಲಾಭವುಂಟು ವ್ಯಾಪಾರಾದಿಗಳಲ್ಲಿ ಯಶ. ತಾ॥ ೧೩, ೧೪ ಭೋಜನ ವಸ್ತ್ರ, ದಾನ

ವೃಶ್ಚಿಕ—ನಿಮ್ಮ ಒಳ್ಳೆಯ ತನವನ್ನು ದುರುಪಯೋಗ ಪಡಿಸಿಕೊಂಡವರನ್ನು ದಮನ ಮಾಡುವಿರಿ ನಿಮ್ಮ ಅಂತಸ್ತು ಸುಧಾರಿಸುವುದು ನಿಮ್ಮ ಕಳತ್ರ ಮತ್ತು ನಿಮ್ಮ ವಿಚಾರಗಳು ಒಂದೇ ಆಗುವುವು ತಾ॥ ೧೫, ೧೬ ಮನೆ ಖರ್ಚು ಹೆಚ್ಚುವುದು

ಧನು—ವಾಹನ, ಚತುಷ್ಪಾದ ಪ್ರಾಣಿಗಳಿಂದ ಅಪಘಾತ ಸಂಭವ ದೂರ ಪ್ರವಾಸ ಬೇಡ ಆರೋಗ್ಯದ ಕಡೆ ದೃಷ್ಟಿ ಇರಲಿ ನೌಕರಿಯಲ್ಲಿ ಮೇಲ್ಪಟ್ಟವರ ಅಟ್ಟಹಾಸ ಆದರೆ ಧೈರ್ಯಗುಂದದಿರಿ ತಾ॥ ೧೩, ೧೪ ಪ್ರಿಯಜನ ವಿಯೋಗ ಕೌಟುಂಬಿಕ ತ್ರಾಸ

ಮಕರ—ಚತುರತೆಯಿಂದ ಈ ವಾರ ಕಳೆಯಬೇಕಾಗಿದೆ ಹೊಸಗೆಳೆಯರ ಬಗ್ಗೆ ಎಚ್ಚರಿಕೆ ಇರಲಿ ಹೊಸ ವ್ಯವಹಾರದಲ್ಲಿ ಕೈಹಾಕಬೇಡಿ ಆರೋಗ್ಯ ಮಾನಸಿಕ ಸ್ಥಿತಿ ಚೆನ್ನಾಗಿರುವುದು ತಲೆಯಲ್ಲಿ ಪರಸ್ತ್ರೀ ಯೋಚನೆ ಸಿಕ್ಕಾಪಟ್ಟೆ ಖರ್ಚು ತಾ॥ ೧೧, ೧೨ ಆಕಸ್ಮಿಕ ಸಂಕಟ

ಕುಂಭ—ಅದೃಷ್ಟಶಾಲಿಗಳಾದ ನಿಮ್ಮಿಂದ ಸಜ್ಜನರ ಆದರ ಮನಃಶ್ಶಾಂತಿ ಲಭ್ಯ, ಉದ್ಯಮಗಳು ಸ್ವೀಕೃತವಾಗುವುವು ದಂಧೆಯಲ್ಲಿ ಅಂದಾಜು ಸರಿಬರುವುದು ಒಟ್ಟಿನಲ್ಲಿ ಈ ವಾರ ಉತ್ತಮ ತಾ॥ ೧೦, ೧೪ ಸ್ನೇಹಿತರ ಆಗಮನ ಖರ್ಚು

ಮೀನ—ಓದುಗರಿಗೆ ಆಲಸ್ಯ ಪ್ರದ ವ್ಯಾಪಾರಾದಿಗಳನ್ನು ಅವಲಂಬಿಸಿರುವವರಿಗೆ ವಂಚನೆ ಕಾಲ ತಾ॥ ೧೫, ೧೬ ಹಣ ಚರ್ಚೆ, ಇತ್ಯಂಡವಾದ

ಗಾಯತ್ರೀ ಟಾಕೀಸ್

ತಾ॥ 11-9-49 ರಿಂದ 3 ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

ಮೇರಿ ಆಂಟಾಯಿನೆಟ್

ಪಾತ್ರ—ನಾರ್ಮಾ ಷೀರರ್ ಮತ್ತು ಟೈರೋನ್ ಪವರ್

ಮುಂದಿನ ಬದಲಾವಣೆ

THE STREET WITH NO NAME

Edited, printed and published by A R Nagarajan at Sadhvi Press, D Subbiah Road, Mysore

ಟೀ ಕುಡಿದುದರಿಂದ ಜ್ಞಾಪಕ ಶಕ್ತಿ ಹೋಯಿತು

ನಾಗಪುರದ ಜಿಲ್ಲಾ ಕೋರ್ಟಿನ ಹೊಟೇಲಿನಲ್ಲಿ ಸ್ನೇಹಿತನೊಬ್ಬನ ಸಂಗಡ ಟೀ ಕುಡಿದ ವೃದ್ಧ ಮನುಷ್ಯನೊಬ್ಬನಿಗೆ ಜ್ಞಾಪಕ ಶಕ್ತಿಯು ಹೋಯಿತೆಂದು ಹೇಳಲಾಗಿದೆ ಆತನು ಈಗ ಯಾರನ್ನೂ ಗುರ್ತಿಸಲಾರನೆಂದೂ, ಹುಚ್ಚನಂತೆ ರಸ್ತೆಗಳಲ್ಲಿ ತಿರುಗಾಡುತ್ತಿರುವನೆಂದೂ ವರದಿಯಾಗಿದೆ

ವೈಮಾನಿಕ ಶಿಕ್ಷಣ ವಿಶ್ವ ವಿದ್ಯಾನಿಲಯ

ಬ್ರಿಟನ್ನಿನ ಲಿಂಕನ್‌ಷೈರಿನಲ್ಲಿ ಬರುವ ಜನವರಿ ತಿಂಗಳಿನಿಂದ ವಿಮಾನ ಶಿಕ್ಷಣ ವಿಶ್ವ ವಿದ್ಯಾನಿಲಯವನ್ನು ಸರ್ಕಾರದವರು ಸ್ಥಾಪಿಸುವರೆಂದು ಹೇಳಲಾಗಿದೆ ಬ್ರಿಟನ್ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳ ವಿ ಅಟಿರಿ ಉನ್ನತಾಧಿಕಾರಿಗಳಿಗೆ ಅಲ್ಲಿ ಪ್ರೌಢ ಶಿಕ್ಷಣ ಕೊಡಲಾಗುವುದು

ನ್ಯೂ ಅಪೇರಾ ಟಾಕೀಸ್, ಮೈಸೂರು

9-9-49ರಿಂದ

ಪ್ರತಿ ದಿನ ೩ ಆಟಗಳು

ಭಾಗ್ಯ ಪಿಕ್ಚರ್ಸ್ ರವರ

ಮಂಗಯಾರ್ ಕರಸಿ (ತಮಿಳು)

ತಾರಾ ಗಣ—ಕನ್ನಾಂಬ, ಅಂಜಲಿ ದೇವಿ, ಪಿ ಯು. ಚಿನ್ನಪ್ಪ, ಎನ್.ಎಸ್. ಕೃಷ್ಣನ್, ಟಿ ಎ. ಮಧುರಂ ಲಲಿತ — ಪದ್ಮಿನಿ,

ಪ್ರದರ್ಶನ—ಮಧ್ಯಾಹ್ನ ೩, ೬-೩೦ ಮತ್ತು ರಾತ್ರಿ ೯ ೪೫

Distributors for Mysore State, S Canara & Coorg

—: R. V. PICTURES —

157, Subedar Chatram Road, Bangalore 2

ಮುಸ್ಲಿಂ ಲೀಗಿಗೆ ಸೇರ[illegible] ಹಿಂದೂಗಳ 'ಬೇಡಿಕ[illegible]

ಪಾಕೀಸ್ಥಾನದಲ್ಲಿ ಒಂದೇ ರಾಜಕ[illegible] ಸಂಸ್ಥೆಯಾದ ಮುಸ್ಲಿಂ ಲೀಗಿಗೆ ಹಿ[illegible] ಗಳು ಸದಸ್ಯರಾಗಲು ಅವಕಾಶ ಕೊ[illegible] ಕೆಂದು ಅಲ್ಲಿನ ಸಿಂಧ್ ಹಿಂದೂ ನಿ[illegible] ದವರು ಸಿಂಧ್ ಮುಸ್ಲಿಂ ಲೀಗಿನ ವ[illegible] ಕ ಅಧಿವೇಶನದಲ್ಲಿ ಒತ್ತಾಯಪಡಿ[illegible] ದು ವರದಿಯಾಗಿದೆ

ಮುಚ್ಚಲಾದ ಹತ್ತಿ ಗಿರ[illegible] ತೆಗೆಯಿಸಲು ಸತ್ಯಾಗ್ರ[illegible]

ಪೂನದಲ್ಲಿರುವ ಬಟ್ಟೆ ಗಿರಣಿಗಳ[illegible] ಚ್ಚಲ್ಪಟ್ಟು, ಈಗ ಅವುಗಳನ್ನು ತೆಗೆ[illegible] ಅಲ್ಲಿನ ಸಮಾಜವಾದಿ ಪಕ್ಷದವರು [illegible] ಗ್ರಹ ಹೂಡಲು ಸಿದ್ಧವಾಗಿರುವ[illegible] ಹೇಳಲಾಗಿದೆ ಅಲ್ಲಿ ಸುಮಾರು [illegible] ಸಾವಿರ ಕೂಲಿಗಾರರು ಕೆಲಸವಿಲ್ಲದೆ ಕಳೆಯಬೇಕಾಗಿದೆಯೆಂದು ವರದಿಯಾಗಿದೆ

ಬೆಲ್ಲದ ತಯಾರಿಕೆ ಹತೋ[illegible] ಆಜ್ಞೆ

ಮಂಡ್ಯ ಜಿಲ್ಲೆಯ ಗ್ರಾಮಗಳಲ್ಲಿ[illegible] ನ ರಸ ತೆಗೆಯುವುದು ಮತ್ತು ಬೆಲ್ಲ[illegible] ತಯಾರಿಸುವುದರ ಬಗ್ಗೆ ಹತೋಟಿ[illegible] ಯೊಂದನ್ನು ಸರ್ಕಾರದವರು ಹೊರ[illegible] ತ್ತಾರೆ ಸಕ್ಕರೆಕಂಪನಿಗೆ ಸರಬರಾಜು ಮಾಡುವ ಕಬ್ಬನ್ನು ರೈತರುಗಳು ಇನ್ನು[illegible] ಕ್ಕೂ ಉಪಯೋಗಿಸಕೂಡದು, [illegible] ಕಾರಿಗಳು ವಿಶೇಷ ಸಂದರ್ಭದಲ್ಲಿ ಮಾಡಲು ಅನುಮತಿ ಕೊಡಬ[illegible] ಬೆಲ್ಲ ಮಾಡುವರವರೆಲ್ಲರೂ ಜಿಲ್ಲಾ[illegible] ಗಳಿಂದ ರಹದಾರಿ ಪಡೆಯಬೇಕು [illegible] ಅನುಮತಿ ಇಲ್ಲದೆ ನೂತನ ಬೆಲ್ಲ[illegible] ಖಾನೆಗಳನ್ನು ತೆರೆಯಲಾಗದೆಂದ[illegible] ಜ್ಞೆ ಮಾಡಲಾಗಿದೆ

ಶ್ರೀ ಚಾಮುಂಡೇಶ್ವ[illegible] ಟಾಕೀಸ್

ತಾ॥ 12-9-49ರಿಂದ 4 ದಿನ[illegible]

ಪ್ರತಿ ದಿನ 3 ಆಟಗಳು

ಉಮರ್ — ಖಯ್ಯಾ[illegible] (ಹಿಂದಿ)

ಪಾತ್ರ—ಸುರೈಯ್ಯಾ ಮತ್ತು ಸೈ[illegible]

ಹೊಸ ಪ್ರಿಂಟ್

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್ ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು

U HARI SHENOY B A,
ಏಜೆಂಟ್

ರಾಜಕಮಲ್, ಮೈಸೂರು

9-9-49 :: ಆರ್ನೋಫ಼ ಆರ[illegible]

ಪ್ರತಿ ದಿನ ಮೂರು ಪ್ರದರ್ಶನಗಳು

ಮಧ್ಯಾಹ್ನ ೩-೧೫, ೬-೩೦ ಮತ್ತು ರಾತ್ರಿ ೯-೪೫ಕ್ಕೆ

ಚಕ್ಕೆರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

— ನಾಗ ಕನ್ನಿಕಾ (ಕನ್ನಡ)

ಪಾತ್ರ—ವೀರಭದ್ರಪ್ಪ, ಜಯಶ್ರೀ ಬಳ್ಳಾರಿ ರತ್ನಮಾಲ

MORNING SHOWS From 10—9 49 for 3

WHISTLING IN DIXI

With Red Skelton Ann Rutherford

ಫೋ। ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೧೨-೯-೧೯೪೯ [ಸಂಚಿಕೆ ೩೯

ವಾರದಲ್ಲಿ ೧ ಊಟ ಬಿಡಲು ಚಳುವಳಿ

…ಟ್ಟಾಭಿಷೇಕ ಮಹೋತ್ಸವ …ಮತ್ತು ಸನ್ಮಾನ ಸಭೆ

ಮೈಸೂರು ೧೨

…ನ್ಮಹಾರಾಜರವರ ಪಟ್ಟಾಭಿಷೇಕ …ತ್ಸವವನ್ನು ನಿನ್ನೆ ಸಂಜೆ ಶ್ರೀ ಬಿ. ಸುಬ್ಬರಾಯರು ತಮ್ಮ ಗೃಹದಲ್ಲಿ …ಾ ಶಮೀತನರಾದ ಶ್ರೀ ಸಿ ನರಸಿಂ…ರ್ತಿಯವರ ಅಧ್ಯಕ್ಷತೆಯಲ್ಲಿ ನೆರ…ದರು. ರಾವ್‌ಬಹದ್ದೂರ್ ಎಂ. ರಾ…ಮಿ ಮತ್ತು ಶ್ರೀ ಅಗರಂ ಸೂರ್ಯನಾ…ಾ ಪಂಡಿತರು ಭಾಷಣ ಮಾಡಿ…

…ಈ ಸಂದರ್ಭದಲ್ಲಿ ಬಿರುದಾಂಕಿತರಾ…ಗೀತರತ್ನ ಟಿ. ಎಂ ಪುಟ್ಟಸ್ವಾಮ…ರನ್ನು ಸನ್ಮಾನಿಸಲು ಶ್ರೀ ಎಲ್. ಶ್ರೀ… ಮೂರ್ತಿಯವರ ಅಧ್ಯಕ್ಷತೆಯಲ್ಲಿ …ನ್ನು ಏರ್ಪಡಿಸಲಾಗಿತ್ತು. ಶ್ರೀಗಳಾ… ಪುಟ್ಟಸ್ವಾಮಿರಾವ್ ಮತ್ತು ಅಗರಂ ರಂ…ರವರು ಭಾಷಣ ಮಾಡಿದರು. ಶ್ರೀ…ತಿ ವಿ ರಂಗನಾಯಕಮ್ಮನವರ ಸು…ವಾದ ಸಂಗೀತವು ಜರುಗಿತು.

…ಂಧಿ ಜಯಂತಿ ಸ್ಪರ್ಧೆಗಳು

…ಜಧಾನಿಯ ಮಕ್ಕಳ ಕೂಟದವರು … ಜಯಂತಿ ಪ್ರಯುಕ್ತ ವಿವಿಧ ಸ್ಪ…ನ್ನು ೩ ರಿಂದ ೧೩ ವರ್ಷದ ಮಕ್ಕ… ಏರ್ಪಡಿಸಿದ್ದಾರೆ ಅದಕ್ಕೆ ಸೇರಲಿ…ರವರು ಇದೇ ೧೮ ನೇ ತಾ॥ ನೊಳ…ಳಿಸಬೇಕೆಂದು ಅದರ ಕಾರ್ಯದರ್ಶಿ…ಮತಿ ಹೆಚ್ ವೈ. ಸರಸ್ವತಮ್ಮನವ…ರಿರುತ್ತಾರೆ.

…ಗತ ಸಮಿತಿ ಕಾರ್ಯಾಲಯ

…ಲ ಮೈಸೂರು ಕಾಂಗ್ರೆಸ್ ಕಾ…ರ್ತರ ಸಮ್ಮೇಳನದ ಸ್ವಾಗತ ಸ…ಿ ಕಾರ್ಯಾಲಯವನ್ನು ಸಯ್ಯಾ…ಿ ರಸ್ತೆಯಲ್ಲಿರುವ ವಿಜಯಾ ವಿಜ… ಕಾರ್ಯಾಲಯದಲ್ಲಿ ತೆರೆಯಲಾಗಿ…ಳಗ್ಗೆ ೮ ಗಂಟೆಯಿಂದ ರಾತ್ರಿ ೮…ಯವರೆಗೆ ಆಫೀಸು ತೆರೆದಿರುತ್ತೆ. ಸ್ವಾ…ಮಿತಿಗೆ ಧನ ಸಹಾಯ ನೀಡುವವ…ಲ್ಲಿಂದ ಸ್ಥಳದಲ್ಲಿ ಕಾರ್ಯದರ್ಶಿಗಳ…ಣಬಹುದು

…ಪತಿ ಮಂಗಳಾರತಿ

…ಜಧಾನಿಯ ಅಶೋಕ ರಸ್ತೆಯಲ್ಲಿರು…ಯೂನಿವರ್ಸಲ್ ಫಿಸಿಕಲ್ ಕಲ್ಚ…ಸ್ಟಿಯವರು ನಿನ್ನೆ ಸಂಜೆ ಗಣಪತಿ…ಳಾರತಿಯನ್ನು ವೈಭವದಿಂದ ನೆರ…ದರು

ಸನ್ಮಾನ ಸಭೆ

…ವರ್ಷದ ಬಿರುದಾಂಕಿತರಾದ ಧ…ಪ್ರವರ್ತ ಬೆಂಗಳೂರು ಸುಬ್ಬಣ್ಣನವ…ರವಾರ್ಥವಾಗಿ ಸಂತೇಪೇಟೆ ವರ್ತ…ನಿನ್ನೆ ಸಂಜೆ ಒಂದು ಸತ್ಕಾರ ಕೂಟ… ಚಲುವಾಂಬಾ ವಿಲಾಸ ಆಂಜನೇ…ದೇವಸ್ಥಾನದಲ್ಲಿ ಏರ್ಪಡಿಸಿದ್ದರು.

…ಮೆರಿಕದಲ್ಲಿ ಡಾ॥ ಮೋದಿ …ಯವರ ಬಗ್ಗೆ ಪ್ರಶಂಸೆ

…ನ್ಯೂಯಾರ್ಕಿನಲ್ಲಿರುವ ಬೆಳಗಾ…ಸುಪ್ರಸಿದ್ಧ ನೇತ್ರ ಚಿಕಿತ್ಸಾ ವೈದ್ಯ…ಡಾ॥ ಎಂ ಸಿ ಮೋದಿಯವರು ಅ…ಕಣ್ಣಿನ ಆಸ್ಪತ್ರೆಯೊಂದರಲ್ಲಿ ತಮ್ಮ…ವಿಧಾನವನ್ನು ಪ್ರದರ್ಶಿಸಿ, ಪ್ರ…ವೈದ್ಯರುಗಳಿಂದ ಪ್ರಶಂಸೆಯನ್ನು …ರುತ್ತಾರೆ ಮುಂದಿನ ತಿಂಗಳು ೯… ಚಿಕಾಗೋದಲ್ಲಿ ನಡೆಯುವ ಕ…ವೈದ್ಯರುಗಳ ಸಮ್ಮೇಳನಕ್ಕೆ ಅವರ…ಮಂತ್ರಿಸಲಾಗಿದೆ.

ಕುರುಬರ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ

ಕೃಷ್ಣರಾಜ ನಗರದ ಕುರುಬರ ಸಂಘದ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವವನ್ನು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನಿನ್ನೆ ಮಧ್ಯಾಹ್ನ ನೆರವೇರಿಸಿದರು. ಈ ಸಂಬಂಧದಲ್ಲಿ ಬಿರುದಾಂಕಿತರುಗಳಾದ ಸಂಗೀತರತ್ನ ಟಿ ಎಂ. ಪುಟ್ಟಸ್ವಾಮಯ್ಯ ಮತ್ತು ಧರ್ಮ ಪ್ರವರ್ತ-ಸಾಲಿಗ್ರಾಮದ ಬೋರೇಗೌಡರುಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿ, ಸತ್ಕರಿಸಲಾಯಿತು

ನೂತನ ಕೃತಕ ಕೈ

ಅಮೆರಿಕದ ಮಿಲಿಟರಿ ಇಲಾಖೆಯಲ್ಲಿ ನೂತನ ಆಧುನಿಕ ಕೃತಕ ಕೈಯನ್ನು ತಯಾರಿಸಲಾಗಿದೆಯೆಂದೂ, ಇದು ನಿಜವಾದ ಕೈಯಷ್ಟೇ ಉಪಯೋಗವಾಗುವುದೆಂದೂ ಹೇಳಲಾಗಿದೆ

ಚರಖಾ ಜಯಂತಿ

ಸ್ವಂ. ವ.] ಚಿಕ್ಕಮಂಗಳೂರು ೧೦

ಇದೇ ೧೯ ರಿಂದ ಮುಂದಿನ ತಿಂಗಳು ೨ ನೇ ತಾ॥ ವರೆವಿಗೆ ಚರಖಾ ಜಯಂತಿಯು ದೇಶಾದ್ಯಂತವೂ ಆಚರಿಸಲ್ಪಡುವುದು. ಈ ಕಾಲದಲ್ಲಿ ಕೇವಲ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಿದರೆ ಸಾಲದು. ಪ್ರತಿಯೊಬ್ಬರೂ ಸ್ವಲ್ಪ ವೇಳೆಯನ್ನು ನೂಲು ತೆಗೆಯಲು ವಿನಿಯೋಗಿಸಬೇಕು ಮತ್ತು ೮೨ ಅಡಿಗಳ ನೂಲನ್ನು ತಯಾರಿಸುವಂತೆ ಪ್ರತಿಜ್ಞೆ ಮಾಡಬೇಕು ಇದೂ ಅಲ್ಲದೆ ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಚರಖಾ ನೂಲುವ ಮಂಡಲಿಗಳನ್ನು ನಿರ್ಮಿಸಬೇಕು—ಎಂಬುದಾಗಿ ಅಖಿಲ ಭಾರತ ಚರಖಾ ಸಂಘದ ಚಿಕ್ಕಮಗಳೂರು ಶಾಖೆಯ ವ್ಯವಸ್ಥಾಪಕರು ಕೋರಿರುತ್ತಾರೆ

ಸಮಗ್ರ ಸಹಕಾರ ಸಂಘ

ಇದೇ ೧೪ ನೇ ತಾ॥ ರಾಮದೇವರ ಪಕ್ಕಿಯಲ್ಲಿ ವಿವಿಧೋದ್ದೇಶಗಳ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಶ್ರೀ ಬಿ. ಸಿ. ಒಸಪ್ಪ ಶೆಟ್ಟರು ನೆರವೇರಿಸುತ್ತಾರೆ

ಮೈಸೂರಿಗೆ ಅಜಾದರ ಭೇಟಿ

ರಾಜಧಾನಿಯಲ್ಲಿ ನವೆಂಬರ್ ೨ನೇ ತಾ॥ ನಿಂದ ಪ್ರಾರಂಭವಾಗುವ ಅಂತರ ರಾಷ್ಟ್ರೀಯ ಪರಸ್ಪರ ವಿದ್ಯಾ ಸಮ್ಮೇಳನದಲ್ಲಿ ಭಾಗವಹಿಸಲು ಕೇಂದ್ರ ಸರ್ಕಾರದ ವಿದ್ಯಾ ಸಚಿವರಾದ ಮೌ॥ ಅಬ್ದುಲ್ ಕಲಾಂ ಆಜಾದ್‌ರವರು ಇಲ್ಲಿಗೆ ಬರುವರು.

ಪ್ರೋಚಾನ್ಸಲರಾಗಿ ಸಿ. ಆರ್. ರೆಡ್ಡಿಯವರ ನೇಮಕ

ಮೈಸೂರು ೧೨

ಆಂಧ್ರ ವಿಶ್ವವಿದ್ಯಾನಿಲಯದ ಉಪಸ್ವಾಮಿಪತಿಗಳಾದ ಡಾ॥ ಸಿ ಆರ್. ರೆಡ್ಡಿಯವರನ್ನು ಮೈಸೂರು ವಿಶ್ವ ವಿದ್ಯಾನಿಲಯದ ಪ್ರೋಚಾನ್ಸಲರಾಗಿ ಶ್ರೀಮನ್ಮಹಾರಾಜರವರು ನೇಮಿಸಿದ್ದಾರೆಂದೂ, ಅವರು ಈ ತಿಂಗಳಿನ ಕೊನೆಯ ವಾರದಲ್ಲಿ ಅಧಿಕಾರವನ್ನು ಸ್ವೀಕರಿಸುವರೆಂದೂ ತಿಳಿದುಬಂದಿದೆ ಡಾ॥ ರೆಡ್ಡಿಯವರು ತಮ್ಮ ಉಪಸ್ವಾಮಿಪತಿ ಹುದ್ದೆಗೆ ರಾಜೀನಾಮೆ ಇತ್ತುದನ್ನು ಆಂಧ್ರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ಅಂಗೀಕರಿಸಿದೆ

ಘಟಿಕೋತ್ಸವಕ್ಕಾಗಿ ಅಜಾದರಿಗೆ ಆಹ್ವಾನ

ಬರುವ ನವೆಂಬರ್ ೩ನೇ ತಾ॥ ನಡೆಯುವ ಮೈಸೂರು ವಿಶ್ವ ವಿದ್ಯಾನಿಲಯದ ಘಟಿಕೋತ್ಸವದ ಭಾಷಣವನ್ನು ಮಾಡಬೇಕೆಂದು ಭಾರತದ ವಿದ್ಯಾ ಸಚಿವರಾದ ಮೌಲಾನಾ ಅಬುಲ್ ಕಲಾಂ ಆಜಾದ್‌ರವರನ್ನು ಪ್ರಾರ್ಥಿಸಲಾಗಿದೆಯೆಂದು ತಿಳಿದುಬಂದಿದೆ

ವಾರಕ್ಕೊಂದು ಊಟ ಕಡಿಮೆ ಮಾಡಿ

ದೇಶದಲ್ಲಿ ಉಂಟಾಗಿರುವ ಆಹಾರದ ಅಭಾವವನ್ನು ನೀಗಿಸಲು, ಜನರು ವಾರದಲ್ಲಿ ಒಂದು ಊಟವನ್ನು ಕಡಿಮೆ ಮಾಡಬೇಕೆಂದು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಕಾಳಾ ವೆಂಕಟರಾಯರು ಮತ್ತು ಇತರ ಪಕ್ಷಗಳ ೨೫ ಜನ ಪ್ರಮುಖ ನಾಯಕರುಗಳು ಒಂದು ಮನವಿಯನ್ನು ಹೊರಡಿಸಿರುತ್ತಾರೆ ರಾಷ್ಟ್ರೀಯ ಬಿಕ್ಕಟ್ಟಿನ ಕಾಲದಲ್ಲಿ ಹೀಗೆ ಉಪವಾಸ ಮಾಡುವುದರಿಂದ ಶಿಸ್ತು ಮತ್ತು ನಿಸ್ವಾರ್ಥತೆಯ ಭಾವನೆಗಳು ಅಭಿವೃದ್ಧಿಯಾಗುವುವೆಂದು ಅವರು ಹೇಳಿರುತ್ತಾರೆ ದೇಶಾದ್ಯಂತವೂ ಇದನ್ನು ಆಚರಣೆಗೆ ತರಲು ದಿವಾನ್ ಯೋಧರಾಜ್, ಬ್ರಜಲಾಲ ನೆಹರು ಮತ್ತು ಜಗತ್ಪ್ರದೇಶ ಚಂದ್ರರವರುಗಳು ಸಿದ್ಧತೆ ನಡೆಸುತ್ತಿದ್ದಾರೆ ಮುಂದಿನ ತಿಂಗಳು ೩ನೇ ತಾ॥ ನಿಂದ ಈ ಚಳುವಳಿಯನ್ನು ಪ್ರಾರಂಭಿಸಲಾಗುವುದು.

ರಾಗಿ ಕುಯ್ಯುವ ಸಮಾರಂಭ

ಮೈಸೂರು ೧೨

ನಿನ್ನೆ ದಿನ ಮೈಸೂರು ತಾಲ್ಲೂಕು ನಾಗವಾಲಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರುಗಳೂ, ನಗರದ ಹಲವು ಪೌರಸಭಾ ಸದಸ್ಯರುಗಳೂ, ಪತ್ರಿಕೋದ್ಯೋಗಿಗಳೂ, ಇತರ ಮಹನೀಯರುಗಳೂ ಭೇಟಿ ಇತ್ತು ಕಾರ್ಯಕ್ರಮವಾಗಿ ಕುಯ್ಯುವ ಸಮಾರಂಭದಲ್ಲಿ ಭಾಗವಹಿಸಿದ್ದರು. ಶ್ರೀ ಜಿ ಮಲ್ಲಣ್ಣನವರು ಎಲ್ಲರನ್ನೂ ಸ್ವಾಗತಿಸಿದರು. ಊರಿನ ರಾಮಮಂದಿರದಲ್ಲಿ ಸಭೆ ನಡೆಯಿತು. ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ರಂಗರಾಮಯ್ಯನವರು ಅಗ್ರಾಸನವನ್ನು ವಹಿಸಿದ್ದರು ಶ್ರೀಗಳಾದ ಹೆಚ್. ಕೆ. ಕುಮಾರಸ್ವಾಮಿ, ಅಗರಂ ರಂಗಯ್ಯ, ಟಿ ವೆಂಕಟರಮಣಯ್ಯ ಮತ್ತು ಎಂ. ಎಲ್. ಜೋಯಿಸ್‌ರವರುಗಳು ಭಾಷಣ ಮಾಡಿ, ಗ್ರಾಮಾಭಿವೃದ್ಧಿ ಮತ್ತು ಸಹಕಾರ ಸಂಘಗಳ ಆವಶ್ಯಕತೆಯನ್ನು ತಿಳಿಸಿದರು. ಅನಂತರ ಶ್ರೀ ಜಿ ಮಲ್ಲಣ್ಣನವರು ಆಹ್ವಾನಿತರೆಲ್ಲರಿಗೂ ಚೊಕ್ಕ ಭೋಜನವನ್ನು ಏರ್ಪಡಿಸಿದ್ದರು. ಮಧ್ಯಾಹ್ನ ಹೊಲದಲ್ಲಿ ನಡೆದ ರಾಗಿ ಕುಯ್ಯುವ ಸಮಾರಂಭದಲ್ಲಿ ಎಲ್ಲರೂ ಭಾಗವಹಿಸಿದ್ದರು ಅಮಲ್ದಾರರು, ರೈತರುಗಳು ಮತ್ತು ಇತರರು ರಾಗಿ ಕಟಾವನ್ನು ಮಾಡಿದರು.

ಅಲ್ಲಿಂದ ಎಲ್ಲರೂ ಪಕ್ಕದ ಈರಪ್ಪನ ಕೊಪ್ಪಲಿಗೆ ಭೇಟಿ ಇತ್ತು, ಅಲ್ಲಿಗೆ ಶಾಲೆ, ಭಾವಿ ಮುಂತಾದ ಸೌಲಭ್ಯಗಳನ್ನೇರ್ಪಡಿಸುವ ಬಗ್ಗೆ ಅಲ್ಲಿನ ಜನರ ಅಹವಾಲನ್ನು ಕೇಳಿ, ಸೂಕ್ತ ಭರವಸೆ ಕೊಟ್ಟರು

ಭಾರತದಲ್ಲಿ ಬೆಳೆ ವಿಮೆ ಜಾರಿಗೆ ತರಲು ಪರಿಶೀಲನೆ

ಭಾರತದ ರೈತರುಗಳು ಕಾಲದ ಹೊರೆಯಿಂದ ಕಷ್ಟಪಡುತ್ತಿರುವುದನ್ನು ತಪ್ಪಿಸಲು, ಅಮೆರಿಕದಲ್ಲಿರುವಂತೆ ಇಲ್ಲೂ ಬೆಳೆಯ ವಿಮೆ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ವಿಚಾರವನ್ನು ಭಾರತ ಸರ್ಕಾರದ ವ್ಯವಸಾಯ ಇಲಾಖೆಯವರು ಪರಿಶೀಲಿಸುತ್ತಿದ್ದಾರೆ

ದೇವಸ್ಥಾನದ ಅಭಿವೃದ್ಧಿಗಾಗಿ ಕಾಂ॥ ಅಧ್ಯಕ್ಷರ ಉಪವಾಸ?

ಮೇಲುಕೋಟೆ ೧೧

ಇಲ್ಲಿನ ದೇವಾಲಯವನ್ನು ಅಭಿವೃದ್ಧಿಪಡಿಸಬೇಕೆಂದು ಕಳೆದ ೨೫ ವರ್ಷಗಳಿಂದಲೂ ಮನವಿ ಮಾಡುತ್ತಿದ್ದರೂ ಸರ್ಕಾರದವರು ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಈ ಊರಿನ ಅಭಿವೃದ್ಧಿಯು ದೇವಸ್ಥಾನವನ್ನೇ ಆಶ್ರಯಿಸಿದೆ ಇಲ್ಲಿನ ದೇವಾಲಯದಲ್ಲಿ ಆಡಳಿತ ಮತ್ತು ಆರ್ಥಿಕ ದೃಷ್ಟಿಯಿಂದ ತೊಂದರೆಗಳು ಹೆಚ್ಚಾಗುತ್ತಿವೆ ಇದರಿಂದ ದೇವರ ಸೇವೆಗೂ, ನೌಕರರಿಗೂ ಮತ್ತು ಭಕ್ತಾದಿಗಳಿಗೂ ತುಂಬಾ ಕಷ್ಟವಾಗಿರುತ್ತದೆಯೆಂದು ಸೂಚಿಸಿ, ದೇವಸ್ಥಾನದ ಸುಧಾರಣಾ ಸಮಿತಿಯೊಂದನ್ನು ಸರ್ಕಾರದವರು ರಚಿಸುವವರೆಗೂ ಇದೇ ೧೬ನೇ ತಾ॥ ನಿಂದ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವುದಾಗಿ ಇಲ್ಲಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ ಬಿ ಸಂಪತ್ಕುಮಾರ್ ಮತ್ತು ವಿದ್ಯಾರ್ಥಿ ಪರಿಷತ್ ಶ್ರೀನಿವಾಸ ಅಯ್ಯಂಗಾರ್ಯರವರುಗಳು ನಿರ್ಧರಿಸಿರುವುದಾಗಿ ತಿಳಿಸಿರುತ್ತಾರೆ

"ರಾಬಿನ್ ಹುಡ್" ಸ್ಮಾರಕ ಪ್ರತಿಮೆ

ಕ್ರಿ. ಶ. ಹನ್ನೆರಡನೇ ಶತಮಾನದಲ್ಲಿ ಇಂಗ್ಲೆಂಡಿನ ಅರಣ್ಯದಲ್ಲಿ ವಾಸಿಸುತ್ತಿದ್ದು ಸಾಹುಕಾರ ಜನರನ್ನು ಕೊಳ್ಳೆಹೊಡೆಯುತ್ತಿದ್ದ ರಾಬಿನ್‌ಹುಡ್ ಎಂಬಾತನ ಸ್ಮಾರಕ ಪ್ರತಿಮೆಯೊಂದನ್ನು ಮಾಡಲು ಏರ್ಪಾಡಾಗಿದೆ. ಇದಕ್ಕಾಗಿ ಲಂಡನ್ನಿನ ವ್ಯಾಪಾರಿಯೊಬ್ಬನು ಐದು ಸಾವಿರ ಪೌಂಡುಗಳನ್ನು ಕೊಟ್ಟಿರುತ್ತಾನೆ.

ತ್ರಿಪುರ ಸಂಸ್ಥಾನ ಕೇಂದ್ರ ಆಡಳಿತಕ್ಕೆ

ಬರುವ ಅಕ್ಟೋಬರ್ ೧೫ನೇ ತಾರೀಕು ತ್ರಿಪುರ ಸಂಸ್ಥಾನದ ಆಡಳಿತವನ್ನು ಭಾರತ ಸರ್ಕಾರದವರು ವಹಿಸಿಕೊಳ್ಳುವರು

ಇಡೀ ಮಾನವ ಪ್ರಪಂಚವನ್ನೇ ನಾಶಮಾಡಬಲ್ಲ ಹೊಸ ಸಾಧನ

ಅಣುಬಾಂಬನ್ನು ಮೀರಿಸಬಲ ವಿನಾಶಕಾರಕ ವಸ್ತು ಒಂದು ಕಂಡುಹಿಡಿಯಲ್ಪಟ್ಟಿದೆಯೆಂದು ವರದಿಯಾಗಿದೆ ಇದನ್ನು ಏಳು ಔನ್ಸಿನಷ್ಟು ಪ್ರಯೋಗಿಸಿದರೆ ಇಡೀ ಜಗತ್ತೇ ನಾಶವಾಗುವುದೆಂದು ಹೇಳಲಾಗಿದೆ

ಹಿಂದೀ ತರಗತಿಗಳು

ಮೈಸೂರು ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ಪ್ರಥಮ, ಮಧ್ಯಮ, ಮತ್ತು ರಾಷ್ಟ್ರಭಾಷಾ, ತರಗತಿಗಳು ನಡೆಯುತ್ತಿವೆ ಸೇರಬಯಸುವವರು ಇದೇ ೧೫ ನೇ ತಾ|| ಒಳಗೆ ಸೇರಬೇಕೆಂದು ಗೌ|| ಸಂಚಾಲಕರು ಪ್ರಾರ್ಥಿಸಿರುತ್ತಾರೆ.

ಶ್ರೀ ಚಾಮುಂಡೇಶ್ವರೀ ಟಾಕೀಸ್

ತಾ|| 12-9-49ರಿಂದ 4 ದಿನ ಮಾತ್ರ
ಪ್ರತಿ ದಿನ 3 ಆಟಗಳು

ಏಕ್ ಥೀ ಜಿಂದಗಿ

ಎಂ. ಇಸ್ಮಾಯಿಲ್, ಬೇಗಂ ಪ್ರವೀಣ್

—: ಮುಂದಿನ ಬದಲಾವಣೆ —
16—9—49ರಿಂದ
ಕನ್ನಿಂಗ್ ಕಾದಲಿ

॥ ಶ್ರೀ ॥ ಗಣೇಶಾ ಟಾಕೀ[ಸ್]

ತಾ|| 13-9-49 ರಿಂದ 3 ದಿ[ನ]
ಪ್ರತಿ ದಿನ 3 ಪ್ರದರ್ಶನಗಳು

ಮಣಿಮೇಖ[ಲೈ]

ಅಥವಾ ಬಾಲಸನ್ಯಾಸಿನಿ

ಭೂಮಿಕೆ:—ಕೆ. ಬಿ. ಸುಂದರಾಂಬಾಳ್ ಕೃಷ್ಣನ್, ಮಧುರಂ.

—ಮುಂದಿನ ಬದಲಾವಣೆ —
16—9—49 ರಿಂದ
ಕನ್ನಿಂಗ್ ಕಾದ

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಜು ಇಲಾಖೆ

೭ನೇ ಸೆಪ್ಟೆಂಬರ್ ೧೯೪೯ರ ಪ್ರಕಟಣೆ

ಈ ಇಲಾಖೆಯು ಸುಮಾರು ೨೧ ಸಾವಿರ ಉಪಯೋಗಿಸಲ್ಪಟ್ಟ ಎಲ್ಲ
ಯ ಖಾಲಿ ಗೋಣಿ ಚೀಲಗಳು ಮಾರಾಟಕ್ಕೆ ದೊರೆಯುವುವು-ಎಂದು ಸಾರ್ವ
ರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ. ಕೊಳ್ಳಲಿಚ್ಛಿಸುವವರು ಎರಡು
ಳುಳ್ಳ ಟೆಂಡರನ್ನು ಕೆಳಗೆ ರುಜು ಮಾಡಿರುವವರ ವಿಳಾಸಕ್ಕೆ ಬರೆದು ಮೊಹರು
ಡಿದ ಲಕ್ಕೋಟೆಯಲ್ಲಿ ೧೯೪೯ನೇ ಸೆಪ್ಟೆಂಬರ್ ೨೮ನೇ ತಾರೀಖು ಬುಧವಾ
ಧ್ಯಾಹ್ನ ೩ ಗಂಟೆ ಒಳಗೆ ತಲುಪಿಸಬೇಕು.

ಮೊಹರಾದ ಟೆಂಡರುಗಳ ಲಕ್ಕೋಟೆಗಳ ಮೇಲೆ "ಗೋಣಿ ಚೀಲಗ
ಟೆಂಡರು" ಎಂದು ಬರೆದಿರಬೇಕು ಮೇಲೆ ಕಾಣಿಸಿದ ತಾರೀಖು ಮತ್ತು
ಯಾದನಂತರ ಬರುವ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ. ಗೊತ್ತಾ
ರತ್ತುಗಳ ಮೇಲೆ ಸ್ವೀಕೃತವಾದ ಟೆಂಡರುಗಳನ್ನು ಮಾತ್ರ ೨೮-೯-೧೯೪೯ರ ಮ
ಧ್ಯಾಹ್ನ ೩ ಗಂಟೆಗೆ ಕೆಳಗೆ ರುಜು ಮಾಡಿರುವವರಿಂದಾಗಲಿ, ಅಥವಾ ಕೆಳಗೆ ರುಜು
ಡಿರುವವರಿಂದ ಅಧಿಕಾರ ಹೊಂದಿದ ಬೇರೆ ಯಾವ ಅಧಿಕಾರಿಯಿಂದಾಗಲಿ
ಕಂಟ್ರೋಲರವರ ಕಛೇರಿಯಲ್ಲಿ ಒಡೆದು ನೋಡಲಾಗುವುದು ಯಾರ್ಯಾರು
ಡರುಗಳನ್ನು ಕೊಟ್ಟಿರುವರೋ ಅವರೆಲ್ಲರೂ ಆ ಸಮಯದಲ್ಲಿ ಹಾಜರಿರಬಹು

ಈ ಟೆಂಡರಿನ ಬಗ್ಗೆ ಗೊತ್ತು ಮಾಡಲ್ಪಟ್ಟ ಷರತ್ತುಗಳು ಕೆಳಗೆ ಕ
ಇವೆ:—

೧ ಪ್ರತಿ ಟೆಂಡರುದಾರನೂ ಚೀಫ್ ಆಡಿಟರ್, ಮೈಸೂರು ಸ್ಟೇಟ್
ಮೈಸೂರು ಅಥವಾ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟ್ (ಸ್ಟೋರ್ಸ್) ಬೆ
ರು ಸಿಟಿ-ಇವರಲ್ಲಿ ೫೦೦ ರೂಪಾಯಿಗಳನ್ನು ಠೇವಣಿಯಾಗಿಡಬೇಕು. ಮ
ಬಗ್ಗೆ ರಶೀತಿಯನ್ನು ತನ್ನ ಟೆಂಡರು ಅರ್ಜಿಯೊಡನೆ ಲಗತ್ತಿಸಬೇಕು. ಇ
ಚೆಕ್ಕುಗಳು ಮುಂತಾದವನ್ನು ಕಳುಹಿಸಿದರೆ ಪರಿಶೀಲಿಸಲಾಗುವುದಿಲ್ಲ. ೨
ರನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಖೈರು ತೀರ್ಮಾನವು ಜನರಲ್ ಮ
ಜರ್, ಮೈಸೂರು ಸ್ಟೇಟ್ ರೈಲ್ವೆ ಇವರಿಗೆ ಸೇರಿದೆ. ಅವರು ಒಪ್ಪಲು, ಅಥ
ಸ್ಕರಿಸಲು ಯಾವ ಕಾರಣವನ್ನೂ ಕೊಡದೆ ಇರುವ ಹಕ್ಕನ್ನೂ ಹೊಂದಿರ
ಅತ್ಯಂತ ಹೆಚ್ಚಿನ ಟೆಂಡರನ್ನು ಒಪ್ಪಬೇಕೆಂಬ ಬಗ್ಗೆಯೂ ಈ ಇಲಾಖೆಯ
ಪಡುವುದಿಲ್ಲ ೩. ಜನರಲ್ ಮ್ಯಾನೇಜರವರ ತೀರ್ಮಾನವಾದ ನಂತರ ಜ
ಲನಾದ ಟೆಂಡರುದಾರನಿಗೆ ತಿಳಿಸಲಾಗುವುದು ಅನಂತರ ಆತನು ತನಗೆ ಬಂ
ವಳಿಕೆಯ ಕಾಲದಿಂದ ಮೂರು ದಿನಗಳಲ್ಲಿ ಠೇವಣಾತಿ ಮೊಬಲಗಿನ ಜಾತಾ
ಪೂರ್ತ ಮೊತ್ತವನ್ನು ಪಾವತಿಮಾಡಬೇಕು. ಮತ್ತು ಅಲ್ಲಿಂದ ಮೂರು ದಿ
ಳಗೆ ಗೋಣೀಚೀಲಗಳನ್ನು ಸಾಗಿಸಲು ಏರ್ಪಾಡು ಮಾಡಿಕೊಳ್ಳಬೇಕು ಈ
ಮಾಡುವದರಲ್ಲಿ ತಪ್ಪಿದರೆ ಠೇವಣಾತಿ ಮೊಬಲಗನ್ನು ಮುಟ್ಟುಗೋಲು ಹಾಕ
ಲಾಗುವುದು. ೪. ಹಿಂಗಡಿಸಲ್ಪಡದ, ಉಪಯೋಗಿಸಲ್ಪಟ್ಟ, ನಷ್ಟವಾದ,
ಯೋಗಕರವಾದ ಮತ್ತು ಅನುಪಯುಕ್ತವಾದ ಗೋಣೀಚೀಲಗಳನ್ನು ಸೂ
ಕಟ್ಟಿದ ಕಂತೆಗಳಿಗೆ ಟೆಂಡರು ದರವನ್ನು ಕೊಡಬೇಕು ಅರಿಸಿದ ಗೋಣೀ
ಗೆ ಕಳುಹಿಸಲಾಗುವ ಟೆಂಡರನ್ನು ಪರಿಶೀಲಿಸಲಾಗುವುದಿಲ್ಲ ೫. ಟೆಂಡರು
ಒಪ್ಪುವ ಕಾಲದಲ್ಲಿ ಮೇಲ್ಕಾಣಿಸಿದ ಚೀಲಗಳ ಲಾಟುಗಳ ಭಾಗವನ್ನು ಉ
ಳ್ಳಬೇಕಾದ ಸಂದರ್ಭ ಒದಗಿದಲ್ಲಿ ಜಯಶೀಲ ಟೆಂಡರುದಾರನಿಗೆ ಉಳಿಕೆಯ
ಣಿಚೀಲಗಳನ್ನು ಕೊಡುವ ಅಧಿಕಾರವನ್ನು ಕೆಳಗೆ ರುಜು ಮಾಡಿರುವವರು
ರುತ್ತಾರೆ ೬. ಜಯಶೀಲನಾದ ಟೆಂಡರುದಾರನ, ತನಗೆ ತೀರುವಳಿ ಕೊ
ಲೆ ಹಿಂತೆಗೆದರೆ ಆತನು ಇಟ್ಟಿರುವ ಠೇವಣಾತಿ ಹಣವನ್ನು ಸರಕಾರಕ್ಕೆ
ಗೋಲು ಹಾಕಿಕೊಳ್ಳಲಾಗುವುದು ೭. ಜಯಶೀಲರಲ್ಲದ ಟೆಂಡರುದಾರರು
ಮೊಬಲಗನ್ನು ಚೀಫ್ ಆಡಿಟರ್, ಎಂ. ಎಸ್ ರೈಲ್ವೆ, ಮೈಸೂರು ಇವರಿ
ಹಾಕಿ ವಾಪಸು ಪಡೆಯಬಹುದು ಹಾಗೆ ಮಾಡುವ ಕಾಲದಲ್ಲಿ ಠೇವಣಿ ಮೊ
ಕಟ್ಟುವ ವೇಳೆ ಪಡೆದಿದ್ದ ರಶೀತಿಯನ್ನು ತೋರಿಸಬೇಕು. ೮ ಕೊಳ್ಳಲಿ
ವರು ಗೋಣೀಚೀಲಗಳನ್ನು ಬೆಂಗಳೂರು ಸಿಟಿ ರೈಲ್ವೆ ಆಹಾರ ಧಾನ್ಯ ಡಿಪೋ
ಯಾಗಲಿ, ಮೈಸೂರು ರೈಲ್ವೆ ಸೆಂಟ್ರಲ್ ಡಿಪೋ (ಗೂಡ್ಸ್‌ಷೆಡ್ ಪಕ್ಕ) ಗಳ
ಲಿ, ೨೬, ೨೭ ನೇ ಸೆಪ್ಟೆಂಬರ್ ೧೯೪೯ ರ ವೇಳೆಗೆ ೧೧ ರಿಂದ ಸಂಜೆ ೫ ಗಂ
ಪರಿಶೀಲಿಸಬಹುದು.

ಪಿ. ಆರ್. ಬಾಬು ಮೊದಲಿಯ[ಾರ್]
ಆಹಾರ ಲಕ್ಕೋಟೆ ಅಧಿಕಾರಿಗಳು

ಮೈಸೂರು ದಸರಾ ವಸ್ತುಪ್ರದರ್ಶನ ೧೯೪೯

೧೯೪೯ನೇ ಸೆಪ್ಟೆಂಬರ್ ೨೪ರಿಂದ ಅಕ್ಟೋಬರ್ ೮ರ ವರೆಗೆ (ಎರಡು ದಿನಗಳೂ ಸೇರಿ)
ಮೈಸೂರಿನಲ್ಲಿರುವ ಪ್ರಮುಖ ವಸ್ತುಪ್ರದರ್ಶನಾಲಯ ಕಟ್ಟಡಗಳಲ್ಲಿ ಮತ್ತು
ಎದುರಿನಲ್ಲಿರುವ ಜೀವಣ್ಣರಾಯನ ಕಟ್ಟೆಯಲ್ಲಿ ನಡೆಯಲಿದೆ

§ ಹೊಸ ಪ್ರಯೋಗಗಳನ್ನು ಅರಿತುಕೊಳ್ಳಲು ಮತ್ತು ಹೆಚ್ಚು ಸಂಪಾದಿಸಲು ಅತ್ಯುತ್ತಮ ಸ್ಥಳ ನಿಮ್ಮ ಅಭ್ಯುದಯಕ್ಕಾಗಿ ಹಾಗೂ ಇತರ ಅನುಕೂಲಕ್ಕಾಗಿ ಜಾಹಿರಾತು ನಡೆಯಿಸಲು ಯೋಗ್ಯ ಸ್ಥಳ

§ ಇಂಡಿಯಾದ ಎಲ್ಲಾ ಭಾಗಗಳಿಂದಲೂ ಅನೇಕ ಸಾರ್ವಜನಿಕರು ಮೈಸೂರು ವಸ್ತುಪ್ರದರ್ಶನದ ಕಾಲದಲ್ಲಿ ಮೈಸೂರಿಗೆ ಭೇಟಿ ಕೊಡಲಿದ್ದಾರೆ

ಮೈಸೂರು ವಸ್ತುಪ್ರದರ್ಶನಾಲಯಕ್ಕೆ ಭೇಟಿ ಕೊಡಿ

§ ಇಂಡಿಯಾದ ಪ್ರಮುಖ ಆಕರ್ಷಣೆ.

* ಈ ವರ್ಷ "ಮಹಾತ್ಮ ಗಾಂಧಿ ಸ್ಟಾಲ್" ಒಂದು ವಿಶೇಷ ಆಕರ್ಷಣೆ. ವಿವರಗಳಿಗೆ ಡೆಪ್ಯುಟಿ ಇವರಿಗೆ ಬರೆಯಿರಿ—

ಕಾರ್ಯದರ್ಶಿ,
ಮೈಸೂರು ದಸರಾ ವಸ್ತುಪ್ರದರ್ಶನಾಲಯ
ಸಮಿತಿ ಮೈಸೂರು

ಮೈಸೂರು ಸ್ಟೇಟ್ ರೈಲ್ವೆ

ಟೆಂಡರ್ ನೋಟಿಫಿಕೇಷನ್ ನಂ. ೮

ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರ

೧) ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸಲು ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ

೨) "ಹಾಸನದಲ್ಲಿ ನಾನ್ ವೆಜಿಟೇರಿಯನ್ ಫಲಹಾರ ಮಂದಿರವನ್ನು ನಡೆಸಲು ಟೆಂಡರು" ಎಂದು ಲಕೋಟೆ ಮೇಲೆ ಬರೆದು ಮೊಹರು ಮಾಡಿದ ಲಕ್ಕೋಟೆಗಳಲ್ಲಿ ಟೆಂಡರುಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರ ವಿಳಾಸಕ್ಕೆ ಕಳುಹಿಸತಕ್ಕದ್ದು

೩) ಈ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸುವ ಕಂಟ್ರಾಕ್ಟು ಅವಧಿಯು ೧೯೪೯ನೇ ಅಕ್ಟೋಬರ್ ೧ರಿಂದ ೧೯೫೦ನೇ ಸೆಪ್ಟೆಂಬರ್ ೩೦ರ ವರೆಗೆ ಇರತಕ್ಕದ್ದು.

೪) ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಲ್ಲಿ ೨೦೦ ರೂ (ಇನ್ನೂರು ರೂಪಾಯಿಗಳು ಮಾತ್ರ) ಠೇವಣಿಯನ್ನು ಕಟ್ಟಿ, ಆ ಬಗ್ಗೆ ರಶೀತಿಯನ್ನು ಟೆಂಡರಿನೊಡನೆ ಕಳುಹಿಸಬೇಕು ಆ ವಿಧದ ರಶೀತಿಗಳಿಲ್ಲದ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ

೫) ಕೆಳಗೆ ರುಜು ಮಾಡಿರುವವರು ಯಾವುದೇ ಟೆಂಡರನ್ನು ಅಂಗೀಕರಿಸುವ ಹಕ್ಕಾಗಲೀ ಅಥವ ಯಾವುದೇ ಅಥವ ಎಲ್ಲ ಟೆಂಡರುಗಳನ್ನೂ ತಿರಸ್ಕರಿಸುವ ಬಗ್ಗೆ ಕಾರಣಗಳನ್ನು ಕೊಡುವುದಕ್ಕಾಗಲೀ ಬದ್ಧರಾಗಿರುವುದಿಲ್ಲ

೬) ೧೯೪೯ನೇ ಸೆಪ್ಟೆಂಬರ್ ೨೦ನೇ ತಾರೀಖು ಮಧ್ಯಾಹ್ನ ೩ ಘಂಟೆವರೆಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು ಟೆಂಡರು ಕಂಟ್ರಾಕ್ಟಿನ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಿಗೆ ಬರೆದು ತಿಳಿದುಕೊಳ್ಳಬಹುದು

ಟ್ರಾಫಿಕ್ ಮ್ಯಾನೇಜರರ ಕಛೇರಿ, ಮೈಸೂರು, ೨ ... — ಮೀರ್ ಇನಾಯತ್ ಹುಸೇನ್, ಟ್ರಾಫಿಕ್ ಮ್ಯಾನೇಜರ್

Edited, printed and published by A. R Nagarajan at Sadhvi Press, D Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಮಂಗಳವಾರ ೧೩-೯-೧೯೪೯ [ಸಂಚಿಕೆ ೪೦

ಆಸ್ಟ್ರೇಲಿಯಾದಲ್ಲಿ ಕೃತಕ ಅಕ್ಕಿ ತಯಾರಿ

...% ಕ್ಕಿಂತ ಹೆಚ್ಚು ಬಡ್ಡಿ ತೆಗೆದುಕೊಳ್ಳಕೂಡದು

ಆಧಾರದ ಸಾಲಗಳಿಗೆ ಶೇ|| ೬ ಮತ್ತು ...ರ ಸಾಲಗಳಿಗೆ ಶೇ|| ೯ಕ್ಕಿಂತಲೂ ಹೆ... ಬಡ್ಡಿಯನ್ನು ತೆಗೆದುಕೊಳ್ಳಕೂಡದು ನಿರ್ಬಂಧಪಡಿಸುವ ಮಸೂದೆ ...ಂದು ಬೊಂಬಾಯಿ ಶಾಸನ ಸಭೆಯಲ್ಲಿ ...ಗೀಕೃತವಾಯಿತು. ಈ ಶಾಸನದ ವಿ...ನೆಗಳನ್ನು ಉಲ್ಲಂಘಿಸಿದವರಿಗೆ ೫೦೦ ದಂಡ ಮತ್ತು ೬ ತಿಂಗಳ ಶಿಕ್ಷೆಯು ವಿಧಿಸಲಾಗುವುದು

...ದ್ಯಾರ್ಥಿಗಳು ರಾಜಕೀಯ ...ದಲ್ಲಿ ಭಾಗವಹಿಸಕೂಡದು

ವಿದ್ಯಾರ್ಥಿಗಳು ವೈಯಕ್ತಿಕವಾಗಿ ರಾ...ಕೀಯದಲ್ಲಿ ಭಾಗವಹಿಸಬಹುದಾದರೂ, ...ದ್ಯಾರ್ಥಿ ವೃಂದವು ರಾಜಕೀಯ ಗೊಂ...ಕ್ಕೆ ಒಳಗಾಗದೆ, ಸಂಸ್ಕೃತಿ ಮತ್ತು ...ದ್ಯಾಭ್ಯಾಸದ ಅಭಿವೃದ್ಧಿ ಕಾರ್ಯಗಳಲ್ಲಿ ತೊ...ಡಗಬೇಕೆಂದು ಮಹಾ ಪ್ರಧಾನಿ ಪಂಡಿತ ...ನೆಹರೂರವರು ತಿಳಿಸಿರುತ್ತಾರೆ

ಪಾಕೀಸ್ಥಾನದಲ್ಲಿ ಭಾರತದ ಬಟ್ಟೆಗೆ ಬಹಿಷ್ಕಾರ

ದೇಶಾದ್ಯಂತ ಭಾರತದ ಬಟ್ಟೆಯನ್ನು ಬಹಿಷ್ಕರಿಸಬೇಕೆಂದು ಪಾಕೀಸ್ತಾನದ ...ಟ್ಟೆ ವರ್ತಕರ ಸಂಘದವರು ನಿರ್ಣಯ ಮಾಡಿದ್ದಾರೆ ಇದಕ್ಕಾಗಿ ಪಾಕೀಸ್ತಾನದ ...ಲ್ಲಾ ನಿಧಿಯನ್ನು ಸಂಗ್ರಹಿಸಿ, ಚಳುವಳಿ ಮಾಡಬೇಕೆಂದು ಅವರು ತೀರ್ಮಾನಿಸಿ...ದ್ದಾರೆ

ಪಾಕೀಸ್ಥಾನದಲ್ಲಿ ಮುಸ್ಲಿ[ಮೇ]ತರರ ಆಸ್ತಿ ವಶ

ಲಾಹೋರಿನ ಅನಾರ್ಕಲಿ ಮತ್ತು ಇತರ ಪ್ರದೇಶಗಳಲ್ಲಿರುವ ಮುಸ್ಲಿಮೇತರರ ...ಸ್ತಿಗಳನ್ನು ಪೋಲೀಸರು ಮತ್ತು ಪುನ...ರ್ವಸತಿ ಇಲಾಖೆಯವರು ವಶಪಡಿಸಿ...ಕೊಂಡಿದ್ದಾರೆಂದು ಗೊತ್ತಾಗಿದೆ ಹಿಂದೂ ...ರ್ತಕರು ನಿರಾಶ್ರಿತರ ಸಂಬಂಧವಾದ ಕಾ...ನೂನುಗಳನ್ನು ಉಲ್ಲಂಘಿಸಿ, ತಮ್ಮ ಆಸ್ತಿ...ಗಳನ್ನು ಮಾರಲು, ಇಲ್ಲವೆ ಸುಳ್ಳು ಪಾಲು...ಗಾರಿಕೆಗೆ ಒಳಪಡಿಸಲು ಪ್ರಯತ್ನಿಸುತ್ತಿದ್ದ...ರೆಂದು ಸರ್ಕಾರಿ ಪ್ರಕಟಣೆ ತಿಳಿಸಿದೆ

...ಜೂಜಿನ ಕುದುರೆ ಸಾಕುವ ಕೆಲಸಕ್ಕೆ ಚರ್ಚಿಲ್

ಜೂಜಿನ ಕುದುರೆಗಳನ್ನು ಸಾಕುವ ಕಾ...ರ್ಯದಲ್ಲಿ ಬ್ರಿಟನ್ನಿನ ಮಾಜಿ ಪ್ರಧಾನಿ ವಿ...ನ್ಸ್ಟನ್ ಚರ್ಚಿಲ್ಲರು ತೊಡಗಿರುವರೆಂದು ...ಹೇಳಲಾಗಿದೆ. ಈಚೆಗೆ ಅವರು "ಕಾಲೊ...ನಿಸ್ಟ್" ಎಂಬ ಅಭಿಧಾನದ ಕುದುರೆಯ...ನ್ನು ಕೊಂಡು ಕೊಂಡರು

೨೦೦ ಜನ ಮುಸ್ಲಿಮರು ಭಾರತಕ್ಕೆ ಸೇರುವರು

ಕಾಶ್ಮೀರದ ಗ್ಯುರೆಜ್ ಕ್ಷೇತ್ರದಲ್ಲಿ ನೂ...ರೆ ಪಾಕೀಸ್ತಾನದ ರಕ್ಷಣಾ ಪ್ರದೇಶದಲ್ಲಿ...ನ ೨೦೦ ಜನ ಮುಸ್ಲಿಮರು ಮುಂದೆ ...ಭಾರತ ಭಾಗದಲ್ಲಿ ಸೇರಲು ನಿರ್ಧರಿ...ಸಿದ್ದಾರೆ

ನೂತನ ಆಹಾರ ಕಮೀಷನರು

...ಸ್ವಂ. ಸು ಫೋರ್ಸ್] ಬೆಂಗಳೂರು ೧೩. ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಎಂ. ... ಅಪ್ಪಾಜಪ್ಪನವರನ್ನು ಆಹಾರ ತಯಾ...ರಾ ಯೋಜನೆಯ ಕಮೀಷನರನ್ನಾಗಿ ... ಈ ದಿನ ಸರ್ಕಾರ ಆಜ್ಞೆ ಹೊ...ರಡಿಸಿದೆ

ಭಾರತದ ಆಹಾರ ಸಚಿವರ ಆಗಮನ

ಸ್ವಂ. ಸು ಫೋರ್ಸ್] ಬೆಂಗಳೂರು ೧೩.

ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜಯರಾಂದಾಸ್ ದೌಲತ್‌ರಾಂರವರು ಈ ತಿಂಗಳು ೧೮ ನೇ ತಾ|| ಬೆಂಗಳೂರಿಗೆ ಬರುವರು ನೆರೆಯ ಪ್ರಾಂತ್ಯಗಳಿಗೆ ಭೇಟಿ ಇತ್ತು ಅವರು ಪುನಃ ೨೫ ನೇ ತಾ|| ಬೆಂಗಳೂರಿಗೆ ಹಿಂತಿರುಗುವರು

ಭಾರತ ಸರ್ಕಾರದ ಆಹಾರದ ಡೈರೆಕ್ಟರಾದ ಶ್ರೀ ಕರುಣಾಕರ ಮೆನನ್‌ರವರು ನಿನ್ನೆ ಬೆಂಗಳೂರಿಗೆ ಭೇಟಿ ಇತ್ತಿದ್ದರು ಮೈಸೂರಿನ ಆಹಾರದ ಪರಿಸ್ಥಿತಿ, ಅದರ ದರ್ಜೆಯನ್ನು ಉತ್ತಮಪಡಿಸುವುದು ಮತ್ತು ಒಳ್ಳೆಯ ಬೀಜಗಳನ್ನು ಒದಗಿಸುವುದೇ ಮುಂತಾದ ವಿಚಾರವಾಗಿ ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರೊಡನೆ ಅವರು ಮಾತುಕತೆ ನಡೆಸಿದರು

○ ಸಂಸ್ಥಾನದಲ್ಲಿ ಗುಜನಿಂದ ಕೋಳಿಗಳೇ ಮುಂತಾದ ಸಾಮಗ್ರಿಗಳನ್ನು ತಯಾರಿಸಲು ೫ ಲಕ್ಷ ರೂ ನ ಯೋಜನೆಯೊಂದನ್ನು ಆರ್ಥಿಕ ಸನ್ನಿವೇಶದ ಕೈಗಾರಿಕಾ ಉಪಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ

○ ಪಾಸ್ ಅಸಿಸ್ಟೆಂಟ್ ಕಾನೂನಿನ ನಿಯಮಗಳು ಬರುವ ಅಕ್ಟೋಬರ್ ೧ ನೇ ತಾ|| ನಿಂದ ಚಿಕ್ಕಮಗಳೂರಿಗೆ ಅನ್ವಯಿಸುವುದಾಗಿ ಸರ್ಕಾರದವರು ಪ್ರಕಟಿಸಿದ್ದಾರೆ

ವಿಶ್ವದಲ್ಲಿ ಇಸ್ಲಾಮಿಸ್ತಾನ ಸ್ಥಾಪಿಸಲು ಯೋಜನೆ

ಪಾಕಿಸ್ತಾನದ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಚೌಧ್ರಿ ಖಾಲಿಕ್ ಉಜ್ ಜಮಾನ್‌ರವರು ವಿಶ್ವದಲ್ಲಿ ಇಸ್ಲಾಮಿಸ್ತಾನವನ್ನು ಸ್ಥಾಪಿಸುವ ಬಗ್ಗೆ ಬೆಂಬಲ ಪಡೆಯಲು ಮಧ್ಯ ಪ್ರಾಚ್ಯ ಮತ್ತು ಇತರ ರಾಷ್ಟ್ರಗಳಲ್ಲಿ ೬ ತಿಂಗಳ ಕಾಲ ಪ್ರವಾಸ ಮಾಡುವರೆಂದು ಹೇಳಲಾಗಿದೆ

ಡಿ. ಎಸ್. ಮಲ್ಲಪ್ಪನವರ ನಿಧನ

ಮೈಸೂರು ಶಾಸನ ಸಭಾ ಸದಸ್ಯರೂ, ಮೈಸೂರು ಬ್ಯಾಂಕಿನ ಡೈರೆಕ್ಟರೂ ಆದ ಶ್ರೀ ಡಿ ಎಸ್ ಮಲ್ಲಪ್ಪನವರು ನಿನ್ನೆ ಸಂಜೆ ಮದರಾಸ್ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ರೈಲ್ವೆ ಜನರಲ್ ಮ್ಯಾನೇಜರ್

ಮೈಸೂರು ೧೩

ಮೈಸೂರು ರೈಲ್ವೆಯನ್ನು ಭಾರತ ಸರ್ಕಾರದವರು ವಹಿಸಿಕೊಳ್ಳಲಿರುವುದರಿಂದ ಅದರ ಜನರಲ್ ಮ್ಯಾನೇಜರ್ ಸ್ಥಾನಕ್ಕೆ ಭಾರತ ಸರ್ಕಾರದ ಅಧಿಕಾರಿಗಳನ್ನೇ ನೇಮಿಸಲಾಗುವುದೆಂದು ಹೇಳಲಾಗಿದೆ. ಪ್ರಕೃತದಲ್ಲಿ ಮೈಸೂರು ರೈಲ್ವೆ ಸಲಹೆಗಾರರಾಗಿರುವ ಶ್ರೀ ನಂದೂರರವರನ್ನು ಆ ಸ್ಥಾನಕ್ಕೆ ನೇಮಿಸಬಹುದೆಂದು ತಿಳಿದುಬಂದಿದೆ

○ ಮೆಡಿಕಲ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಕೃಷ್ಣರವರ ಅವಧಿಯನ್ನು ಒಂದು ವರ್ಷ ಕಾಲ ಹೆಚ್ಚಿಸಲಾಗಿದೆ

ಬಟ್ಟೆ ಅಂಗಡಿಯಲ್ಲಿ ಕಳ್ಳತನ

ರಾಜಧಾನಿಯ ಶಿವರಾಂಪೇಟೆ ಶ್ರೀ ರಾಜಲಕ್ಷ್ಮಿ ಬಟ್ಟೆ ಅಂಗಡಿಯಲ್ಲಿ ಮೊನ್ನೆ ರಾತ್ರಿ ಒಬ್ಬರು ಬಟ್ಟೆ ಕೊಳ್ಳಲು ಬಂದಾಗ ಮತ್ತೊಬ್ಬನು ಬಂದು ಭಾರಿ ರಗ್ಗುಗಳನ್ನು ಎತ್ತಿಕೊಂಡು ಓಡಿಹೋದನೆಂದೂ, ಅತನನ್ನು ಹಿಡಿಯಲು ಎಷ್ಟು ಪ್ರಯತ್ನಿಸಿದರೂ ಸಿಕ್ಕಲಿಲ್ಲವೆಂದೂ ಹೇಳಲಾಗಿದೆ ಇಂತಹ ಜನಭರಿತವಾದ ಪ್ರದೇಶಗಳಲ್ಲಿ ಕಳ್ಳತನವಾಗುವುದನ್ನು ನಿಲ್ಲಿಸಲು ಪೋಲೀಸರು ತಕ್ಕ ಬಂದೋಬಸ್ತು ಮಾಡಬೇಕೆಂದು ಕೋರಲಾಗಿದೆ

ಗಣಪತಿ ಮಂಗಳಾರತಿ

ರಾಜಧಾನಿಯ ಕೆಂಪನಂಜಾಂಬಾ ಅಗ್ರಹಾರದಲ್ಲಿರುವ ಎಸ್. ಕೆ. ಕೆ. ಬಿ. ವಿದ್ಯಾರ್ಥಿನಿಲಯದಲ್ಲಿ ಗಣಪತಿ ಮಂಗಳಾರತಿಯು ಶ್ರೀ ಎಂ. ಇ. ಭರತರಾಜ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ ಉಪನ್ಯಾಸ ಮತ್ತು ಸಂಗೀತಗಳೂ ಜರುಗಿತು

ಭಾರತದ ನೂತನ ಪಾರ್ಲಿಮೆಂಟ್ ಸಭೆ

ಮುಂದಿನ ಜ|| ೨೬ ನೇ ತಾ|| ಭಾರತವು ರಿಪಬ್ಲಿಕ್ ಘೋಷಣೆಯಾದ ಮೇಲೆ ತಾತ್ಕಾಲಿಕ ನೂತನ ಪಾರ್ಲಿಮೆಂಟ್ ಸಭೆಯನ್ನು ರಚಿಸಲಾಗುವುದೆಂದೂ ಅದು ನೂತನ ಅಧ್ಯಕ್ಷರನ್ನು ಚುನಾಯಿಸುವುದೆಂದೂ ಶಾಸನ ಸಭೆಗೆ ... ಮುಂದಿನ ನವೆಂಬರ್ ತಿಂಗಳಿನ ಕೊನೆಗೆ ರಾಜ್ಯಾಂಗ ರಚನಾ ಕೆಲಸವು ಪೂರೈಸುವುದೆಂದೂ ಅನಂತರ ತಾತ್ಕಾಲಿಕ ಪಾರ್ಲಿಮೆಂಟ್ ಸ್ಥಾಪನೆಗೆ ಚುನಾವಣೆ ನಡೆಯುವುದೆಂದೂ ಅದರಲ್ಲಿ ... ಸದಸ್ಯರಿರುವರೆಂದೂ ಹೇಳಲಾಗಿದೆ

ಆಸ್ಟ್ರೇಲಿಯಾದಲ್ಲಿ ಕೃತಕ ಅಕ್ಕಿ

ಕೃತಕ ಅಕ್ಕಿಯನ್ನು ತಯಾರಿಸುವುದಕ್ಕೆ ಬೇಕಾದ ಯಂತ್ರಗಳನ್ನು ಕೊಳ್ಳಲು ಆಸ್ಟ್ರೇಲಿಯಾ ಸರ್ಕಾರವು ನಿರ್ಧರಿಸಿದೆ ಇದರಿಂದ ೫೧,೬೦೦ ಟನ್ ಕೃತಕ ಅಕ್ಕಿಯನ್ನು ತಯಾರಿಸಬಹುದೆಂದು ಹೇಳಲಾಗಿದೆ

ಹಿಂದಿಯು ರಾಷ್ಟ್ರದ ಭಾಷೆ

ಭಾರತದ ಆಡಳಿತ ಭಾಷೆಯು ದೇವನಾಗರಿ ಲಿಪಿಯಲ್ಲಿ ಬರೆಯುವ ಹಿಂದಿಯಾಗಿರಬೇಕೆಂದು ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಮಂಡಿಸಿದ ನಿರ್ಣಯದ ಮೇಲೆ ನಿನ್ನೆ ದೀರ್ಘ ಚರ್ಚೆ ನಡೆಯಿತು. ವ್ಯವಹಾರದಲ್ಲಿ ಮೊದಲು ೧೫ ವರ್ಷಗಳು ಇಂಗ್ಲೀಷನ್ನು ಉಪಯೋಗಿಸಬೇಕೆಂದೂ, ಈಗಿರುವ ಸಂಖ್ಯಾ ಪದ್ಧತಿಯೇ ಆಚರಣೆಯಲ್ಲಿರಬೇಕೆಂದೂ ನಿರ್ಣಯದ ಸೂಚಕರಾದ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರ್ಯರು ತಿಳಿಸಿದರು

ಪ್ರಾಣ ಸಂಜೀವಿನಿ ಸಿಕ್ಕಿದೆ

ಮನುಷ್ಯ ಮಾತ್ರದವನ ಮುಪ್ಪನ್ನು ಹೋಗಲಾಡಿಸಿ, ಇನ್ನೂ ಹೆಚ್ಚು ಕಾಲ ಬದುಕುವಂತೆ ಮಾಡಬಲ್ಲ ಉಷ್ಣವಲಯದಲ್ಲಿ ದೊರೆಯುವ ಸಂಜೀವಿನಿ ಲತೆಯು ಸಿಕ್ಕಿರುವುದಾಗಿ ಅಮೆರಿಕಾ ಮತ್ತು ಸ್ವಿಟ್ಜರ್‌ಲೆಂಡಿನ ವೈಜ್ಞಾನಿಕರು ತಿಳಿಸಿರುತ್ತಾರೆ. ಈ ಲತೆಯ ಬೀಜಗಳಿಂದ ಔಷಧಿಯನ್ನು ತಯಾರಿಸಬಹುದೆಂದು ಹೇಳಲಾಗಿದೆ. ಹಿಂದೆ ಈ ಔಷಧವನ್ನು ಪ್ರಾಣಿಗಳನ್ನು ಕೊಂದು ತಯಾರಿಸಬೇಕಾಗಿತ್ತು ಆದ್ದರಿಂದ ಅದು ಹೆಚ್ಚಾಗಿ ದೊರೆಯುತ್ತಿರಲಿಲ್ಲ

ಜಾತಕವನ್ನು ನಂಬಿ ಆತ್ಮಹತ್ಯೆ

ತಾನು ತನ್ನ ೩೮ನೇ ವಯಸ್ಸಿನ ನಂತರ ಬದುಕುವುದಿಲ್ಲವೆಂಬ ಮೂಢ ನಂಬಿಕೆಯಿಂದ ಜಂಷೆಡ್‌ಪುರದ ಕ್ರೈಸ್ತನೊಬ್ಬನು ಆಸ್ಪತ್ರೆಯಲ್ಲಿ ನೇಣುಹಾಕಿಕೊಂಡು ಪ್ರಾಣ ಬಿಟ್ಟನೆಂದು ವರದಿಯಾಗಿದೆ ಆತನಿಗೆ ಜ್ಯೋತಿಷ್ಯವು ಸ್ವಲ್ಪ ಬರುತ್ತಿದ್ದುದರಿಂದ, ತನ್ನ ಭವಿಷ್ಯವನ್ನು ಹೇಳಿ ೩೮ನೇ ವಯಸ್ಸಿನಲ್ಲಿ ಸಾಯುವುದಾಗಿ ತಿಳಿಸಿದ್ದನು ೩೮ನೇ ವಯಸ್ಸು ಸಮೀಪಿಸಲು ಆತನು ಮನೋರೋಗದಿಂದ ಬಾಯಿಲೆ ಮಲಗಿ, ಆಸ್ಪತ್ರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡನೆಂದು ಹೇಳಲಾಗಿದೆ ಆತನ ತಂದೆ ಮತ್ತು ತಾತಂದಿರೂ ಸಹ ಅದೇ ವಯಸ್ಸಿನಲ್ಲಿ ಮರಣ ಹೊಂದಿದ್ದರೆಂದು ಹೇಳಲಾಗಿದೆ

ವಿ. ಡಿ. ರಾಜಾರಾಮ್‌ರವರ ನಿಧನ

ಮೈಸೂರು ೧೩

ರಾಜಧಾನಿಯ ಸೀಪಿ ಎಣ್ಣೆ ಮತ್ತು ಪೆಟ್ರೋಲ್ ಏಜೆಂಟರಾಗಿದ್ದ ಸುಪ್ರಸಿದ್ಧ ಪ್ರಕಾಶ್ ವಿ ಡಿ ರಾಜಾರಾಮ್ ರವರು ಈ ದಿನ ಬೆಳಗ್ಗೆ ಮನೆಯಲ್ಲಿ ತಮ್ಮ [illegible] ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಕಳೆದ ಕೆಲವು ತಿಂಗಳಿಂದ ಅವರು ಬಾಯಿಲೆಯಿಂದ ನರಳುತ್ತಿದ್ದು, ಚಿಕಿತ್ಸೆಗಾಗಿ ಇತ್ತೀಚೆಗೆ ಮದರಾಸಿಗೆ ಹೋಗಿದ್ದರು ಅವರು ಧರ್ಮಿಷ್ಠರಾಗಿ, ಅನೇಕ ಸಾರ್ವಜನಿಕ ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿದ್ದರು. ರಾಮಾನುಜ ರಸ್ತೆಯಲ್ಲಿ ಬಡವರಿಗಾಗಿ ಮಾದರಿ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದರು

ಪಾಶ್ಚಿಮಾತ್ಯ ದೇಶಗಳಿಂದ ಭಾರತಕ್ಕೆ ಸಹಾಯ

ಇಕ್ಸ್‌ಟರ್‌ಹೋಂನಲ್ಲಿ ನಡೆಯುತ್ತಿರುವ ಅಂತರ ಪಾರ್ಲಿಮೆಂಟರಿ ಯೂನಿಯನ್ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡಿ, ವಿಶ್ವ ಸಮ್ಮೇಳನದಲ್ಲಿ ಸೂಚಿಸಿರುವ ಸಮಾಜ ಸುಧಾರಣೆಗಳನ್ನು ಭಾರತವು ಆಚರಣೆಗೆ ತರಬೇಕಾದರೆ, ಯೂರೋಪ್ ಮತ್ತು ಅಮೆರಿಕ ದೇಶಗಳು ಕೈಗಾರಿಕೆಗಳ ಬಗ್ಗೆ ವಿಶೇಷ ಸಹಾಯ ಮಾಡಬೇಕೆಂದು ತಿಳಿಸಿರುತ್ತಾರೆ ಜಗತ್ತಿಗೆ ಶಾಂತಿ ಎಷ್ಟು ಮುಖ್ಯವೋ ಆರ್ಥಿಕ ಪ್ರಗತಿಯೂ ಅಷ್ಟೇ ಮುಖ್ಯವೆಂದು ಅವರು ಹೇಳಿರುತ್ತಾರೆ

ಜೂಜಾಟವನ್ನು ನಿಲ್ಲಿಸಲು ನೂತನ ಔಷಧಿ

ಜೂಜಾಡುವ ಅಭ್ಯಾಸವನ್ನು ತಪ್ಪಿಸಲು ಅಮೆರಿಕದಲ್ಲಿ ಒಂದು ನೂತನ ಔಷಧಿಯನ್ನು ಕಂಡುಹಿಡಿಯಲಾಗಿದೆ ಇತ್ತೀಚೆಗೆ ಬೆಲ್ಲಿಸ್ಟಿಮಾರ್ಸ ಎಂಬ ಮಹಿಳೆಯು ಜೂಜಾಟದಲ್ಲಿ ಸೋತು, ಅಕ್ರಮ ಚೆಕ್ಕನ್ನು ಕೊಟ್ಟಾಗ, ಆಕೆಗೆ ಕೋರ್ಟಿನವರು ಜೈಲುವಾಸ ಅಥವ ನೂತನ ಔಷಧಿಯನ್ನು ತೆಗೆದುಕೊಳ್ಳಬೇಕೆಂಬ ಶಿಕ್ಷೆ ಇತ್ತರು. ಆಕೆಯು ಅದನ್ನು ತೆಗೆದುಕೊಂಡುದರಿಂದ ಜೂಜಾಟದ ಅಭ್ಯಾಸವು ಹೋಯಿತೆಂದು ವರದಿಯಾಗಿದೆ

ರಾಜಕಮಲ್,

9—9—49ರಿಂದ ಅಮೋಘ ಪ್ರಾರಂಭ

ನಾಗಕನ್ನಿಕಾ [ಕನ್ನಡ]

ಮಧುರ ಸಂಗೀತಗಳಿಂದಲೂ ಮನವೋಹಕ ಅಭಿನಯ ನೃತ್ಯಗಳಿಂದಲೂ ಕೂಡಿದ ಮಹೋನ್ನತ ಚಿತ್ರ

॥ ಶ್ರೀ ॥

ಗಣೇಶಾ ಟಾಕೀ

ತಾ॥ 13-9-49 ರಿಂದ 3

ಪ್ರತಿ ದಿನ 3 ಪ್ರದರ್ಶನ

ಮಣಿಮೇ

ಅಥವಾ ಬಾಲ ಸನ್ಯಾ

ಭೂಮಿಕೆ:-ಕೆ. ಬಿ ಸುಂದರಾ

ಕೃಷ್ಣನ್, ಮಧುರಂ

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಜು ಇಲಾಖೆ

ರನೇ ಸೆಪ್ಟೆಂಬರ್ ೧೯೪೯ರ ಪ್ರಕಟಣೆ

ಈ ಇಲಾಖೆಯು ಸುಮಾರು ೨೧ ಸಾವಿರ ಉಪಯೋಗಿಸಲ್ಪಟ್ಟ ಎ[illegible] ಯ ಖಾಲಿ ಗೋಣಿ ಚೀಲಗಳು ಮಾರಾಟಕ್ಕೆ ದೊರೆಯುವುವು-ಎಂದು ಸಾ[illegible] ರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ ಕೊಳ್ಳಲಿಚ್ಛಿಸುವವರು ಎರಡ[illegible] ಳುಳ್ಳ ಟೆಂಡರನ್ನು ಕೆಳಗೆ ರುಜು ಮಾಡಿರುವವರ ವಿಳಾಸಕ್ಕೆ ಬರೆದು ಮೊಹ[illegible] ಡಿದ ಲಕ್ಕೋಟೆಯಲ್ಲಿ ೧೯೪೯ನೇ ಸೆಪ್ಟೆಂಬರ್ ೨೧ನೇ ತಾರೀಖು ಬುಧ[illegible] ಧ್ಯಾಹ್ನ ೩ ಗಂಟೆ ಒಳಗೆ ತಲುಪಿಸಬೇಕು

ಮೊಹರಾದ ಟೆಂಡರುಗಳ ಲಕ್ಕೋಟೆಗಳ ಮೇಲೆ 'ಗೋಣಿ ಚೀಲ[illegible] ಟೆಂಡರು" ಎಂದು ಬರೆದಿರಬೇಕು ಮೇಲೆ ಕಾಣಿಸಿದ ತಾರೀಖು ಮ[illegible] ಯಾದನಂತರ ಬರುವ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ ಗೊತ್ತ[illegible] ರತ್ತುಗಳ ಮೇಲೆ ಸ್ಪಷ್ಟವಾದ ಟೆಂಡರುಗಳನ್ನು ಮಾತ್ರ ೨೧-೯-೧೯೪೯ [illegible] ಹ್ನ ೩ ಗಂಟೆಗೆ ಕೆಳಗೆ ರುಜು ಮಾಡಿರುವವರಿಂದಾಗಲಿ, ಅಥವಾ ಕೆಳಗೆ ರು[illegible] ದಿರುವವರಿಂದ ಅಧಿಕಾರ ಹೊಂದಿದ ಬೇರೆ ಯಾವ ಅಧಿಕಾರಿಯಿಂದಾಗಲಿ ಕಂಟ್ರೋಲರವರ ಕಛೇರಿಯಲ್ಲಿ ಒಡೆದು ನೋಡಲಾಗುವುದು ಯಾರಾ[illegible] ಡರುಗಳನ್ನು ಕೊಟ್ಟಿರುವರೋ ಅವರೆಲ್ಲರೂ ಆ ಸಮಯದಲ್ಲಿ ಹಾಜರಿರಬ[illegible]

ಈ ಟೆಂಡರಿನ ಬಗ್ಗೆ ಗೊತ್ತು ಮಾಡಲ್ಪಟ್ಟ ಷರತ್ತುಗಳು ಕೆಳಗೆ [illegible] ಇವೆ —

೧ ಪ್ರತಿ ಟೆಂಡರುದಾರನೂ ಚೀಫ್ ಆಡಿಟರ್, ಮೈಸೂರು ಸ್ಟೇಟ[illegible] ಮೈಸೂರು ಅಥವಾ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟ್ (ಸ್ಟೋರ್ಸ) [illegible] ರು ಸಿಟಿ-ಇವರಲ್ಲಿ ೫೦೦ ರೂಪಾಯಿಗಳನ್ನು ಠೇವಣಿಯಾಗಿಡಬೇಕು [illegible] ಬಗ್ಗೆ ರಶೀತಿಯನ್ನು ತನ್ನ ಟೆಂಡರು ಅರ್ಜಿಯೊಡನೆ ಲಗತ್ತಿಸಬೇಕು [illegible] ಚೆಕ್ಕುಗಳು ಮುಂತಾದವನ್ನು ಕಳುಹಿಸಿದರೆ ಪರಿಶೀಲಿಸಲಾಗುವುದಿಲ್ಲ [illegible] ರನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರು ತೀರ್ಮಾನವು ಜನರಲ್ [illegible] ಜರ್, ಮೈಸೂರು ಸ್ಟೇಟ್ ರೈಲ್ವೆ ಇವರಿಗೆ ಸೇರಿದೆ ಅವರು ಒಪ್ಪಲು, ಅಥ[illegible] ಸ್ಕರಿಸಲು ಯಾವ ಕಾರಣವನ್ನೂ ಕೊಡದೆ ಇರುವ ಹಕ್ಕನ್ನೂ ಹೊಂದಿ[illegible] ಅತ್ಯಂತ ಹೆಚ್ಚಿನ ಟೆಂಡರನ್ನು ಒಪ್ಪಬೇಕೆಂಬ ಬಗ್ಗೆಯೂ ಈ ಇಲಾಖೆ[illegible] ಪಡುವುದಿಲ್ಲ ೩ ಜನರಲ್ ಮ್ಯಾನೇಜರವರ ತೀರ್ಮಾನವಾದ ನಂತರ [illegible] ಲನಾದ ಟೆಂಡರುದಾರನಿಗೆ ತಿಳಿಸಲಾಗುವುದು ಅನಂತರ ಆತನು ತನಗೆ [illegible] ವಳಕೆಯಕಾಲದಿಂದ ಮೂರು ದಿನಗಳಲ್ಲಿ ಠೇವಣಿಯಾತಿ ಮೊಬಲಗಿನ ಜಾ[illegible] ಪೂರ್ತಿ ಮೊತ್ತವನ್ನು ಪಾವತಿಮಾಡಬೇಕು ಮತ್ತು ಅಲ್ಲಿಂದ ಮೂರು [illegible] ಳಗೆ ಗೋಣೀಚೀಲಗಳನ್ನು ಸಾಗಿಸಲು ಏರ್ಪಾಡು ಮಾಡಿಕೊಳ್ಳಬೇಕು [illegible] ಮಾಡುವದರಲ್ಲಿ ತಪ್ಪಿದರೆ ಠೇವಣಿಯಾತಿ ಮೊಬಲಗನ್ನು ಮುಟ್ಟುಗೋಲು ಹಾ[illegible] ಲಾಗುವುದು ೪ ವಿಂಗಡಿಸಲ್ಪಡದ, ಉಪಯೋಗಿಸಲ್ಪಟ್ಟ, ನಷ್ಟವಾದ[illegible] ಯೋಗಕರವಾದ ಮತ್ತು ಅನುಪಯುಕ್ತವಾದ ಗೋಣೀಚೀಲಗಳನ್ನು [illegible] ಕಟ್ಟಿದ ಕಂತೆಗಳಿಗೆ ಟೆಂಡರು ದರವನ್ನು ಕೊಡಬೇಕು ಆರಿಸಿದ ಗೋಣಿ[illegible] ಗೆ ಕಳುಹಿಸಲಾಗುವ ಟೆಂಡರನ್ನು ಪರಿಶೀಲಿಸಲಾಗುವುದಿಲ್ಲ ೫ ಟೆಂಡ[illegible] ಒಪ್ಪುವ ಕಾಲದಲ್ಲಿ ಮೇಲ್ಕಾಣಿಸಿದ ಚೀಲಗಳ ಲಾಟುಗಳ ಭಾಗವನ್ನು [illegible] ಳ್ಳಬೇಕಾದ ಸಂದರ್ಭ ಒದಗಿದಲ್ಲಿ ಜಯಶೀಲ ಟೆಂಡರುದಾರನಿಗೆ ಉಳಿ[illegible] ಣಿಚೀಲಗಳನ್ನು ಕೂಡುವ ಅಧಿಕಾರವನ್ನು ಕೆಳಗೆ ರುಜು ಮಾಡಿರುವವ[illegible] ರುತ್ತಾರೆ ೬ ಜಯಶೀಲನಾದ ಟೆಂಡರುದಾರನು, ತನಗೆ ತಿಳುವಳಿಕೆ ಕೊ[illegible] ಲೆ ಹಿಂತೆಗೆದರೆ ಆತನು ಇಟ್ಟಿರುವ ಠೇವಣಿಯಾತಿ ಹಣವನ್ನು ಸರಕಾರ[illegible] ಗೋಲು ಹಾಕಿಕೊಳ್ಳಲಾಗುವುದು ೭ ಜಯಶೀಲರಲ್ಲದ ಟೆಂಡರುದಾ[illegible] ಮೊಬಲಗನ್ನು ಚೀಫ್ ಆಡಿಟರ್, ಎಂ ಎಸ್ ರೈಲ್ವೆ, ಮೈಸೂರು ಇವ[illegible] ಹಾಕಿ ವಾಪಸು ಪಡೆಯಬಹುದು ಹಾಗೆ ಮಾಡುವ ಕಾಲದಲ್ಲಿ ಠೇವಣಿ [illegible] ಕಟ್ಟುವ ವೇಳೆ ಪಡೆದಿದ್ದ ರಶೀತಿಯನ್ನು ತೋರಿಸಬೇಕು ೮ ಕೊಳ್[illegible] ವರು ಗೋಣೀಚೀಲಗಳನ್ನು ಬೆಂಗಳೂರು ಸಿಟಿ ರೈಲ್ವೆ ಆಹಾರ ಧಾನ್ಯ ಡಿ[illegible] ಯಾಗಲಿ, ಮೈಸೂರು ರೈಲ್ವೆ ಸಂಟ್ರಲ್ ಡಿಪ್ಪೋ (ಗೂಡ್ಸ್‌ಷೆಡ್ ಪಕ್ಕ) [illegible] ಲಿ ೨೦, ೨೧ ನೇ ಸಪ್ಟೆಂಬರ್ ೧೯೪೯ರ ಬೆಳಗ್ಗೆ ೧೧ ರಿಂದ ಸಂಜೆ ೫ [illegible] ಪರಿಶೀಲಿಸಬಹುದು

ವಿ. ಆರ್ ಬಾಬು ಮೊದಲಿಯ[illegible]

ಆಹಾರ ಖಜಾನೆ ಅಧಿಕಾರಿಗ[illegible]

ಪ್ರಭುದೇವಾ ಟಾಕೀಸ್

14-9-49ನೇ ಬುಧವಾರದಿಂದ

ಒಂದು ವಾರ ಮಾತ್ರ ಪ್ರತಿ ದಿನ 3 ಆಟಗಳು

— ಶ್ರೀ ವಳ್ಳಿ —

(ತಮಿಳು)

ಪಾತ್ರ ಟಿ ಆರ್ ಮಹಾಲಿಂಗಂ, ಕುಮಾರಿ ರುಕ್ಮಿಣಿ ಕೃಷ್ಣನ್, ಮಧುರಂ

ಷೇಕ್ಸ್‌ಪಿಯರ್ ಮಹಾಕವಿಯ ಪ್ರಖ್ಯಾತ ನಾಟಕದ ಆಧಾರದ ಮೇಲೆ ಚಿತ್ರಿತವಾದ

ಅಮೋಘ ಕಲಾಕೃತಿ

ಜೂಪಿಟರ್ಸ್‌ರವರ

ಕನ್ನಿಯಿನ್ ಕಾದಲಿ

(ತಮಿಳು)

† ಅಂಜಲಿ † ಮಾಧುರಿ † ಲಲಿತ-ಪದ್ಮಿನಿ

† ಸಾರಂಗಪಾಣಿ † ಪುಳಿಮೂಟ್ಟೆ

ಅಭಿನಯ

—: ಮೈಸೂರು :—

ಚಾಮುಂಡೇಶ್ವರಿ-ಗಣೇಶ

ಟಾಕೀಸುಗಳಲ್ಲಿ

16-9-49 ರಿಂದ

ಅಮೋಘ ಪ್ರಾರಂಭ : ದಿನವಹಿ ೩ ಪ್ರದರ್ಶನ

ಬೆಂಗಳೂರು :- ಸೂಪರ್-ಶ್ರೀ ಟಾಕೀಸುಗಳಲ್ಲಿ

ಯಶಸ್ವಿಯಾದ 9ನೇ ವಾರ

ಕೆ.ಜಿ.ಎಫ್:- ಒಲಂಪಿಯಾ ಟಾಕೀಸಿನಲ್ಲಿ

ಅಮೋಘ 2ನೇ ವಾರ

A Karnataka Release

Edited printed and published by V R Nagarajan at Sadhvi Press, D Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಬುಧವಾರ ೧೪-೯-೧೯೪೯ [ಸಂಚಿಕೆ ೪೧

ತಿರುವಾಂಕೂರು ರಾಜರ ದೇಶತ್ಯಾಗ?

ಸ್ತ್ರೀಯರನ್ನು ಮಾರಿ ಹಣ ಸಂಪಾದಿಸುತ್ತಿದ್ದ ಆಶ್ರಮ

ಅಕೋಲಾದಲ್ಲಿರುವ ಸನಾತನ ಹೈನ ವಿಧವಾ ಆಶ್ರಮದಲ್ಲಿ ನಿರಾಶ್ರಿತರ ಹುಡುಗಿಯರು ಮತ್ತು ವಿಧವೆಯರಿಗೆ ಆಶ್ರಯ ಕೊಡುವುದಾಗಿ ತಿಳಿಸಿ, ಅವರುಗಳನ್ನು ಅ ಮಾನವಾಗಿ ವೇಶ್ಯಾ ವೃತ್ತಿಗೆ ಎಳೆದು, ಅ ನಂತರ ಹೆಚ್ಚು ಹಣಕ್ಕಾಗಿ ವಿವಾಹ ಮಾಡುತ್ತಿದ್ದರೆಂಬ ಅಪಾದನೆಯ ಮೇಲೆ ಆ ದ ಸಂಚಾಲಕರಾದ ಶ್ರೀ ಕಸ್ತೂರಿ ಚಂದ್ ...ನ್, ಅವರ ಪತ್ನಿ ಮತ್ತು ಇತರ ಅನುಯಾಯಿಗಳನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಇಂತಹ ಮದುವೆಯಾದ ಹುಡುಗಿಯರು ಸ್ವಲ್ಪ ಕಾಲ ಗಂಡಂದಿರ ಮನೆಯಲ್ಲಿ ಇದ್ದು, ನಂತರ ಅಲ್ಲಿದ್ದ ಆಭರಣ ಮತ್ತು ಹಣವನ್ನು ದೋಚಿಕೊಂಡು ಓಡಿಯಾಗುತ್ತಿದ್ದರೆಂದೂ, ಅವರನ್ನು ಮತ್ತೆ ಬೇರೊಬ್ಬರಿಗೆ ಮಾರಿ, ಈ ಆಸ್ತಿ ವಸ್ತುಗಳನ್ನು ಆಶ್ರಮದವರು ಪಡೆಯುತ್ತಿದ್ದರೆಂದೂ ಹೇಳಲಾಗಿದೆ

ಕಲ್ಕತ್ತೆಯ ವಿದ್ಯಾರ್ಥಿಗಳ ಉಪವಾಸ

ಕಲ್ಕತ್ತಾ ವಿಶ್ವ ವಿದ್ಯಾನಿಲಯದ ಪರೀಕ್ಷಾ ಪದ್ಧತಿಗಳನ್ನು ಪ್ರತಿಭಟಿಸಲು ... ನ ಜಾಧವ ಪುರದ ಎಂಜನಿಯರಿಂಗ್ ಕಾಲೇಜಿನ ೪ ಮಂದಿ ವಿದ್ಯಾರ್ಥಿಗಳು ನಿ ನ್ನೆಯಿಂದ ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ್ದಾರೆ ಕಲ್ಕತ್ತೆಯ ನಾನಾ ಕಾಲೇಜುಗಳ ೧೫೦೦ ಜನ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ

ಭಾರತಕ್ಕೆ ಇಂಗ್ಲೆಂಡಿನ ಕ್ರಿಕೆಟ್ ಆಟಗಾರರು

ಇಂಗ್ಲೆಂಡಿನ ಪ್ರಮುಖ ಕ್ರಿಕೆಟ್ ಆಟಗಾರರಾದ ಓಲ್ಡ್ ಫೀಲ್ಡ್ ಮತ್ತು ರಾಯ್ ... ಎಂಬುವರುಗಳು ಭಾರತ, ಪಾಕಿಸ್ತಾನ ಮತ್ತು ಸಿಲೋನುಗಳಲ್ಲಿ ಪ್ರವಾಸ ಹೊರಡಲಿದ್ದಾರೆ

ಕಟ್ಟೇಲಿನ ಮೇಲೆ ಸಿನಿಮಾ ನಟಿಯ ದಾವಾ

ನ್ಯೂಯಾರ್ಕಿನ ಹೋಟೇಲೊಂದರ ... ಮನೆಯಲ್ಲಿದ್ದ ಕಾಲು ಒರಸಿಕೊ ಳ್ಳುವ ಕಟ್ಟಿನ ಮೇಲೆ ಕಾಲಿಟ್ಟು, ಜಾರಿ ಬಿದ್ದು ಗಾಯವಾದುದರಿಂದ, ಹಾಲಿವುಡ್ಡಿನ ಪ್ರಸಿದ್ಧ ಸಿನಿಮಾ ನಟಿ ಮೇವೆಸ್ಟಳು ಆ ಹೋಟೇಲಿನ ಮೇಲೆ ೬,೫೦೦ ಪೌಂಡು ನಷ್ಟ ಪರಿಹಾರಕ್ಕಾಗಿ ಕೋರ್ಟಿನಲ್ಲಿ ದಾವಾ ಹೂಡಿದ್ದಾಳೆ.

...ನ್ನಾ ವಿಶ್ವ ವಿದ್ಯಾನಿಲಯ

...ನ್ನಾರವರ ಹೆಸರಿನಲ್ಲಿ ವಿಶ್ವ ವಿದ್ಯಾನಿಲಯವೊಂದನ್ನು ಗಡಿನಾಡಿನಲ್ಲಿ ಸ್ಥಾಪಿಸಲು ಪಾಕೀಸ್ಥಾನ ಸರ್ಕಾರವು ನಿರ್ಧರಿಸಿದೆ. ಇದಕ್ಕೆ ೨೫ ಲಕ್ಷ ರೂ ವೆಚ್ಚವಾಗುವುದು, ಇದು ಬರುವ ವರ್ಷದಿಂದ ಪ್ರಾರಂಭವಾಗುವುದೆಂದೂ ಹೇಳಲಾಗಿದೆ.

ಮುಸ್ಲಿಮನಿಂದ ಗಣಪತಿ ಪೂಜೆ

... ಪ್ರಾಂತ್ಯದ ಹೈದರಾಬಾದ ಮುಸ್ಲಿಂ ... ಬ್ಬನ ಮನೆಯಲ್ಲಿ ಗಣಪತಿಯನ್ನು ... ಇಡಲಾಗಿದೆ. ಅದರ ಪೂಜೆಗಾಗಿ ಹಿಂದೂ ಪುರೋಹಿತನನ್ನು ನೇಮಿಸಲಾಗಿದೆಯೆಂದೂ, ಪೂಜೆಯ ಜೊತೆಗೆ ಪ್ರತಿ ದಿನವೂ ಮುಸ್ಲಿಮರು ಭಜನೆಯನ್ನು ನಡೆಸಲಾಗುತ್ತಿದೆ ಎಂದು ಹೇಳಲಾಗಿದೆ

ರೈಲ್ವೆ ಪ್ರದೇಶಗಳಲ್ಲಿ ಹೆಚ್ಚು ಬೆಳೆ

ರೈಲ್ವೆಗಳಿಗೆ ಸೇರಿದ ಖಾಲಿ ಜಮೀನುಗಳಲ್ಲಿ ಈಗ ಹುಲ್ಲು ಬೆಳೆಯುತ್ತಿರುವುದನ್ನು ನಿಲ್ಲಿಸಿ, ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಭಾರತ ಸರ್ಕಾರವು ನಿರ್ಧರಿಸಿದೆಯೆಂದೂ, ಅವುಗಳನ್ನು ಪ್ರಾಂತೀಯ ಸರ್ಕಾರಗಳಿಗೆ ಕೊಡಲು ರೈಲ್ವೆ ಆಡಳಿತದವರು ಒಪ್ಪಿದ್ದಾರೆಂದೂ ತಿಳಿದು ಬಂದಿದೆ

ಚಲಿಸುವ ಕೋರ್ಟುಗಳು

ರೈತರ ಮತ್ತು ಕಾರ್ಮಿಕರ ಅನುಕೂಲಕ್ಕೋಸ್ಕರ ಚಲಿಸುವ ಕೋರ್ಟುಗಳನ್ನು ಜೆಕೋಸ್ಲೋವೇಕಿಯಾ ಸರ್ಕಾರದವರು ಏರ್ಪಡಿಸುತ್ತಾರೆ ಅವು ಕಾರ್ಖಾನೆಗಳಿಗೆ ಮತ್ತು ಹಳ್ಳಿಗಳಿಗೆ ಭೇಟಿ ಇತ್ತು ವ್ಯವಹಾರಗಳನ್ನು ಅಲ್ಲಿ ಇತ್ಯರ್ಥ ಮಾಡುವುವು

ಮಹಾರಾಜಾ ಕಾಲೇಜ್ ಸಂಘದ ಪ್ರಾರಂಭ ಭಾಷಣ

ಮಾಜಿ ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರ್ ರವರು ಕಾರ್ಯಗೌರವದ ನಿಮಿತ್ತ ಮದರಾಸಿಗೆ ಪ್ರಯಾಣ ಮಾಡಿದುದರಿಂದ, ಈ ದಿನ ನಡೆಯಬೇಕಾಗಿದ್ದ ಮಹಾರಾಜಾ ಕಾಲೇಜ್ ಸಂಘದ ಪ್ರಾರಂಭ ಭಾಷಣವನ್ನು ಮುಂದಕ್ಕೆ ಹಾಕಲಾಗಿದೆ

ಪುರಸಭಾ ಕೆಲಸಗಾರರ ಬೇಡಿಕೆಗಳು

ನಂಜನಗೂಡು ೧೩

ಇಲ್ಲಿನ ಪುರಸಭಾ ಕೆಲಸಗಾರರಿಗೆ ವಾಸಕ್ಕೆ ಮನೆ, ಮತ್ತು ಇತರ ಸೌಲಭ್ಯಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆಂದೂ, ಅದರ ಬಗ್ಗೆ ಪುರಸಭೆಯವರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದೂ, ಅವರುಗಳಿಗೆ ೨೫ ರೂ ಕನಿಷ್ಟ ಸಂಬಳ ಮತ್ತು ೧೫ ರೂ ತುಟ್ಟಿ ಭತ್ಯ, ವಾರಕ್ಕೆ ಒಂದು ದಿನ ಪೂರ್ತಿ ರಜಾ, ತಿಂಗಳಿಗೆ ಮೂರು ದಿನ ಖಾಯಿಲೆಯ ರಜಾ, ಹೆಂಗಸರಿಗೆ ಹೆರಿಗೆಯ ಕಾಲದಲ್ಲಿ ೫ ವಾರ ರಜಾ ಮತ್ತು ವರ್ಷಕ್ಕೆ ಎರಡು ಜೊತೆ ಉಡುಪುಗಳನ್ನು ಕೊಡಬೇಕೆಂದು ಪುರಸಭೆಯವರನ್ನು ಒತ್ತಾಯಪಡಿಸಬೇಕೆಂದು ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಒಂದು ಮನವಿಯನ್ನು ಹೊರಡಿಸಿರುತ್ತಾರೆ

ತಿರುವಾಂಕೂರು ಅರಸರು ದೇಶವನ್ನು ಬಿಡುವರೇ?

ತಿರುವಾಂಕೂರ ಮತ್ತು ಕೊಚ್ಚಿ ಸಂಸ್ಥಾನದ ರಾಜಪ್ರಮುಖರಿಗೂ ಮಂತ್ರಿ ಮಂಡಲದವರಿಗೂ ಭಿನ್ನಾಭಿಪ್ರಾಯವುಂಟಾಗಿರುವುದರಿಂದ ತಿರುವಾಂಕೂರಿನ ಅರಸರು ತಮ್ಮ ದೇಶವನ್ನು ಬಿಟ್ಟು ಬೊಂಬಾಯಿನಲ್ಲಿ ನೆಲೆಸುವರೆಂದು ಹೇಳಲಾಗಿದೆ ಇತ್ತೀಚೆಗೆ ಅವರು ಬೊಂಬಾಯಿನಲ್ಲಿ ಆಸ್ತಿಯನ್ನು ಕೊಂಡಿರುವರೆಂದೂ, ಈ ವರ್ಷದ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ, ಶ್ರೀ ಪದ್ಮನಾಭ ಸ್ವಾಮಿಯವರ ಮಹೋತ್ಸವ ಮುಂತಾದುವುಗಳಲ್ಲಿ ಅವರು ಭಾಗವಹಿಸದಿರುವುದು ಈ ಸುದ್ದಿಗೆ ಬೆಂಬಲವಿತ್ತಿದೆಯೆಂದೂ ಹೇಳಲಾಗಿದೆ.

ಪತ್ರಿಕೆಗಳ ಮೇಲಿನ ಕಾರ್ಯಕ್ರಮ ವಾಪಸು

ಸಂಸ್ಥಾನದಲ್ಲಿ ಸರ್ಕಾರದವರು ಪತ್ರಿಕಾ ಸಲಹಾ ಸಮಿತಿಯೊಂದನ್ನು ರಚಿಸಿರುವ ಸಂಬಂಧದಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿ, ಸರ್ಕಾರಕ್ಕೂ ಮತ್ತು ಪತ್ರಿಕೆಗಳಿಗೂ ಸೌಹಾರ್ದ ಮತ್ತು ಸಮಾಧಾನಕರವಾದ ಸಂಬಂಧವುಂಟಾಗಲೆಂದು ೧೯೪೭ನೇ ಸೆಪ್ಟೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ ಪತ್ರಿಕೆಗಳ ಮೇಲೆ ಕೈಗೊಂಡಿರುವ ಎಲ್ಲ ಕಾರ್ಯಕ್ರಮಗಳನ್ನೂ ವಾಪಸು ತೆಗೆದುಕೊಳ್ಳಲಾಗಿದೆಯೆಂದು ತಿಳಿಸಿರುತ್ತಾರೆ

ಪತ್ರಿಕಾ ಸಲಹಾ ಸಮಿತಿಯ ಸಭೆ

ಸರ್ಕಾರದವರಿಂದ ನೂತನವಾಗಿ ರಚಿಸಲ್ಪಟ್ಟಿರುವ ಪತ್ರಿಕಾ ಸಲಹಾ ಸಮಿತಿಯ ಪ್ರಥಮ ಸಭೆಯು ರಾಜಧಾನಿಯಲ್ಲಿ ಇದೇ ೩೦ ನೇ ತಾ|| ನಡೆಯುವುದು. ವಿದ್ಯಾಸಚಿವರಾದ ಶ್ರೀ ಸಿ ಆರ್ ಶ್ರೀನಿವಾಸನ್‌ರವರು ಭಾಷಣ ಮಾಡುವರು. ಅದೇ ದಿನ ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಸ್ಥಾಯಿ ಸಮಿತಿಯ ಸಭೆಯೂ ನಡೆಯುವುದು

ಎರಡು ತಲೆಯ ಮಗು

ಗುಂಟೂರು ಜಿಲ್ಲಾ ಇಕ್ಕುರುತಿ ಎಂಬಲ್ಲಿನ ರಾಧಮ್ಮ ಎಂಬಾಕೆಗೆ ಕಳೆದ ೧೦ನೇ ತಾ|| ಎರಡು ತಲೆಯುಳ್ಳ ಮಗುವೊಂದು ಜನನವಾಯಿತೆಂದೂ, ಅದರೆ ಅದು ಕೆಲವು ಗಂಟೆಗಳ ನಂತರ ಸತ್ತುಹೋಯಿತೆಂದೂ ಹೇಳಲಾಗಿದೆ

ಇಸ್ರೇಲ್ ಪ್ರಧಾನಿಯ ಕೊಲೆಯ ಪ್ರಯತ್ನ

ಇಸ್ರೇಲ್ ದೇಶದ ಪ್ರಧಾನಿಯಾದ ಡೇವಿಡ್ ಬೆನ್ ಗುರಿಯನ್‌ರವರನ್ನು ಅಲ್ಲಿನ ಪಾರ್ಲಿಮೆಂಟ್ ಸಭೆಯಲ್ಲೇ ಕೊಲೆ ಮಾಡಲು ಪ್ರಯತ್ನ ನಡೆಯಿತೆಂದೂ ೩೫ ವರ್ಷದ ಗಡ್ಡವನ್ನುಳ್ಳ ಯುವಕನೊಬ್ಬನು ಬಂದೂಕವನ್ನು ಅವರ ಕಡೆಗೆ ಹಿಡಿದು ಹೊಡೆಯಲು ಯತ್ನಿಸುತ್ತಿದ್ದಾಗ ಆತನನ್ನು ದಸ್ತಗಿರಿ ಮಾಡಲಾಯಿತೆಂದೂ ವರದಿಯಾಗಿದೆ.

ಪ್ರ|| ಪ್ರ|| ಸಭೆಯನ್ನು ಮುಂದು ವರಿಸಲು ಮನವಿ

ಮುಂದಿನ ತಿಂಗಳು ೩೧ನೇ ತಾ|| ನಿಂದ ಭಾರತ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳಿಗೆ ಸಂಬಧಂಪಟ್ಟ ರಾಜ್ಯಾಂಗವು ಚರ್ಚೆಗೆ ಬರುವುದರಿಂದ ಅದೇ ಕಾಲದಲ್ಲಿ ಮೈಸೂರಿನಲ್ಲಿ ಸೇರಲಿರುವ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವನ್ನು ಮುಂದಕ್ಕೆ ಹಾಕಬೇಕೆಂದು ದೆಹಲಿಯಲ್ಲಿರುವ ರಾಜ್ಯಾಂಗ ಸಭೆಯ ಮೈಸೂರು ಪ್ರತಿನಿಧಿಗಳು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರನ್ನು ಪ್ರಾರ್ಥಿಸಿರುವರೆಂದೂ ಅವರು ಅದನ್ನು ಪರಿಶೀಲಿಸುವುದಾಗಿ ಭರವಸೆ ಇತ್ತಿರುವರೆಂದೂ ತಿಳಿದು ಬಂದಿದೆ.

ಪೋಲೀಸರಿಗೆ ಮೋಟಾರ್ ಡ್ರೈವಿಂಗ್ ಶಿಕ್ಷಣ

ಸಂಸ್ಥಾನದಲ್ಲಿ ಮೋಟಾರು, ಕೆಲಸಗಾರರು ಮುಷ್ಕರ ಹೂಡುವ ಪರಿಸ್ಥಿತಿ ಒದಗಿದಾಗ ಅದನ್ನು ನಿವಾರಿಸಲು, ಪೋಲೀಸರಿಗೆ ಮೋಟಾರು ನಡೆಸುವ ಶಿಕ್ಷಣವನ್ನು ಪೂರ್ವಭಾವಿಯಾಗಿ ಕೊಟ್ಟಿರುವುದು ಉತ್ತಮವೆಂದೂ, ಸುಮಾರು ೧೦೦ ಜನ ಶಿಕ್ಷಣ ಪಡೆದ ಪೋಲೀಸರು ಈ ಕೆಲಸಕ್ಕೆ ಸಿದ್ಧರಾಗಿರಬೇಕೆಂದೂ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ತಿಳಿಸಿರುತ್ತಾರೆ

ಸಂತಾಪ ಸೂಚನೆ

ಧರ್ಮ ಪ್ರಕಾಶ ಡಿ ಬಿ ರಾಮಸ್ವಾಮಿ ಮೊದಲಿಯಾರರ ನಿಧನಕ್ಕಾಗಿ ರಾಜಧಾನಿಯ ರಾಮಾಂ ... ಅಗ್ರಹಾರದ ನಿವಾಸಿಗಳು ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರರ ಮೂಲಕ ಮೃತರ ಪತ್ನಿಯವರಿಗೆ ಸಂತಾಪ ಸೂಚನೆಯನ್ನು ಕಳುಹಿಸಿದ್ದಾರೆ

ಆಯುರ್ವೇದ ಕಾಲೇಜು ಬೆಂಗಳೂರಿಗೆ

ಹಾಸನ ೧೩.

ರಾಜಧಾನಿಯಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಲಾಗುವುದೆಂದೂ ಮತ್ತು ಅದನ್ನು ವಿಶ್ವ ವಿದ್ಯಾನಿಲಯದ ಆಡಳಿತಕ್ಕೆ ವಹಿಸಲಾಗುವುದೆಂದೂ ಆರೋಗ್ಯ ಸಚಿವ ಜನಾಬ್ ಎ. ಜಿ. ರಮಣಾರವರು ಇಲ್ಲಿ ನಡೆದ ಆಯುರ್ವೇದ ವೈದ್ಯರ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ತಿಳಿಸಿರುತ್ತಾರೆ.

ಕಾಲೇಜನ್ನು ಪುನರ್ವ್ಯವಸ್ಥೆಗೊಳಿಸಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದೂ, ಆಯುರ್ವೇದ ಮತ್ತು ಯುನಾನಿಗಳಲ್ಲಿ ಸಂಶೋಧನೆಗಳನ್ನು ನಡೆಸಲು ಎರಡು ವೇತನಗಳನ್ನು ಕೊಡಲಾಗುವುದೆಂದೂ, ವೈದ್ಯರ ಮತ್ತು ಪಂಡಿತರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಲು ಸರ್ಕಾರವು ಆಲೋಚಿಸುತ್ತಿದೆಯೆಂದೂ ಅವರು ಹೇಳಿದರು.

ಕಾಶ್ಮೀರದ ಸೈನ್ಯ ಭಾರತಕ್ಕೆ

ಕಾಶ್ಮೀರ ಸಂಸ್ಥಾನದ ಸೈನ್ಯದ ಆಡಳಿತವನ್ನು ಇದೇ ೧೫ನೇ ತಾ|| ಭಾರತ ಸರ್ಕಾರದವರು ವಹಿಸಿಕೊಂಡಿರುವರೆಂದೂ ಅದರ ವೆಚ್ಚವನ್ನೆಲ್ಲಾ ಕೇಂದ್ರ ಸರ್ಕಾರದವರೇ ವಹಿಸುವರೆಂದೂ ಹೇಳಲಾಗಿದೆ

ಮದ್ರಾಸ್ ರೇಡಿಯೋವಿನಲ್ಲಿ ಮೈಸೂರಿನವರ ಸಂಗೀತ

ಮೈಸೂರಿನ ವಿ|| ಟಿ ಆರ್ ಶ್ರೀನಿವಾಸ್ ರವರು ಈ ಸಂಜೆ ೭ ಘಂಟೆಗೆ ಮದರಾಸ್ ರೇಡಿಯೋವಿನಿಂದ ಹಾಡಲಿರುವರು

FOR EXHIBITION SIGN BOARDS & Stall Decoration

Consult:- N. Chandran's FILM ART, Behind Rajkamal, MYSORE

ರೇಷನಿಂಗ್ ಆಫೀಸರ್‌ರವರ ಕಛೇರಿ, ಮೈಸೂರು ಸಿಟಿ

ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಡಿಕ್ಲರೇಷನ್ ಫಾರಮ್‌ಗಳನ್ನು ಡಿಪೋಗಳಲ್ಲಿ ಹಂಚುವುದು ಮತ್ತು ಆ ಫಾರಂಗಳನ್ನು ಭರ್ತಿಮಾಡಿ ಡಿಪೋಗಳಿಗೆ ವಾಪಸ್ಸು ತಲುಪಿಸಲು ನಿಗದಿ ಮಾಡಿರುವ ತಾರೀಖಿನ್ನು ಈ ತಿಂಗಳು ೧೫ನೇ ತಾರೀಖಿನಿಂದ ೨೦ನೇ ತಾರೀಖಿಗೆ ಬದಲಾಯಿಸಿದೆ

ಈ ಡಿಕ್ಲರೇಷನ್ ಫಾರಂಗಳನ್ನು ಛತ್ರದ ದಾಸ್ತಾನು ಇರುವ ರೇಷನ್ ಕಾರ್ಡುದಾರರೂ ಸಹ ಡಿಪೋಗಳ[illegible] ಫಾರಂಗಳನ್ನು ಪಡೆದು ಭರ್ತಿ[illegible] ಯಾಯ ಡಿಪೋಗಳಿಗೆ ವಾಪಸ್ಸು ಸತಕ್ಕದ್ದು

ಮೈಸೂರು ಸಿಟಿಯಲ್ಲಿರುವ ಪ್ರತಿ ಕುಟುಂಬದ ಯಜಮಾನನು [illegible] ರಂನಲ್ಲಿ ಮನೆಯ ನಂಬರನ್ನು [illegible] ಯಾಗಿ ನಮೂದಿಸದಿದ್ದಲ್ಲಿ ಅಂತ[illegible] ಮನೆ ಮನೆಗೂ ಹಂಚಲ್ಪಡುವ ರೇಷನ್ ಕಾರ್ಡನ್ನು ಪಡೆಯಲು [illegible] ಯಾಗಬಹುದು

[ಸಹಿ] ಡಿ. ಜೆ. ಬಾಲ[illegible]
ರೇಷನಿಂಗ್ ಆಫೀಸರ್
ಮೈಸೂ[illegible]
೮-೯[illegible]

ಗಾಯತ್ರೀ ಟಾಕೀಸ್

14-9-49 ರಿಂದ 2 ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

ದಿ ಸ್ಟ್ರೀಟ್ ವಿತ್ ನೊ ನೇಮ್

THE STREET WITH NO NAME

ಪಾತ್ರ:- ಮಾರ್ಕ್ ಸ್ಟೀವನ್ಸ್ ಮತ್ತು ರಿಚರ್ಡ್ ವಿಡ್‌ಮಾರ್ಕ್.

-: ಮುಂದಿನ ಬದಲಾವಣೆ -

A DATE WITH JUDY (Technicolor)

ಪ್ರಭುದೇವಾ ಟಾಕೀಸ್

14—9—49ನೇ ಬುಧವಾರದಿಂದ

ಒಂದು ವಾರ ಮಾತ್ರ ಪ್ರತಿ ದಿನ 3 ಆಟಗಳು

- ಶ್ರೀ ವಳ್ಳಿ -

(ತಮಿಳು)

ಪಾತ್ರ — ಟಿ ಆರ್ ಮಹಾಲಿಂಗಂ, ಕುಮಾರಿ ರುಕ್ಮಿಣಿ, ಕೃಷ್ಣನ್, ಮಧುರಂ

ಮೈಸೂರು ಸ್ಟೇಟ್ ರೈಲ್ವೆ
ಟೆಂಡರ್ ನೋಟಿಫಿಕೇಷನ್ ನಂ. ೮

ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರ

೧) ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸಲು ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ

೨) "ಹಾಸನದಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸಲು ಟೆಂಡರು" ಎಂದು ಲಕೋಟೆ ಮೇಲೆ ಬರೆದು ಮೊಹರು ಮಾಡಿದ ಲಕ್ಕೋಟೆಗಳಲ್ಲಿ ಟೆಂಡರುಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರ ವಿಳಾಸಕ್ಕೆ ಕಳುಹಿಸತಕ್ಕದ್ದು

೩) ಈ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸುವ ಕಂಟ್ರಾಕ್ಟಿನ ಅವಧಿಯು ೧೯೪೯ನೇ ಅಕ್ಟೋಬರ್ ೧ರಿಂದ ೧೯೫೦ನೇ ಸೆಪ್ಟೆಂಬರ್ ೩೦ರ ವರೆಗೆ ಇರತಕ್ಕದ್ದು.

೪) ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಲ್ಲಿ ೨೦೦ ರೂ (ಇನ್ನೂರು ರೂಪಾಯಿಗಳು ಮಾತ್ರ) ಠೇವಣಿಯನ್ನು ಕಟ್ಟಿ, ಆ ಬಗ್ಗೆ ರಶೀತಿಯನ್ನು ಟೆಂಡರಿನೊಡನೆ ಕಳುಹಿಸಬೇಕು ಆ ವಿಧದ ರಶೀತಿಗಳಿಲ್ಲದ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ

೫) ಕೆಳಗೆ ರುಜು ಮಾಡಿರುವವರು ಯಾವುದೇ ಟೆಂಡರನ್ನು ಅಂಗೀಕರಿಸುವುದಕ್ಕಾಗಲೀ ಅಥವ ಯಾವುದೇ ಅಥವ ಎಲ್ಲ ಟೆಂಡರುಗಳನ್ನೂ ತಿರಸ್ಕರಿಸುವ ಬಗ್ಗೆ ಕಾರಣಗಳನ್ನು ಕೊಡುವುದಕ್ಕಾಗಲೀ ಬದ್ಧರಾಗಿರುವುದಿಲ್ಲ

೬) ೧೯೪೯ನೇ ಸೆಪ್ಟೆಂಬರ್ ೧೯ನೇ ತಾರೀಕು ಮಧ್ಯಾಹ್ನ ೨ ಘಂಟೆವರೆಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು ಟೆಂಡರು ಕಂಟ್ರಾಕ್ಟಿನ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಿಗೆ ಬರೆದು ತಿಳಿದುಕೊಳ್ಳಬಹುದು.

ಟ್ರಾಫಿಕ್ ಮ್ಯಾನೇಜರರ ಕಛೇರಿ, ಮೈಸೂರು, ೮-೯-೪೯ ಮೀರ್ ಇನಾಯತ್ ಹುಸೇನ್ ಟ್ರಾಫಿಕ್ ಮ್ಯಾನೇಜರ್

ಮೈಸೂರು

ಚಾಮುಂಡೇಶ್ವರಿ-ಗಣೇಶ

ಟಾಕೀಸುಗಳಲ್ಲಿ

ಷೇಕ್ಸ್‌ಪಿಯರ್ ಮಹಾಕವಿಯ ಪ್ರಖ್ಯಾತ ನಾಟಕದ ಆಧಾರದ ಮೇಲೆ ಚಿತ್ರಿತವಾದ ಅಮೋಘ ಕಲಾಕೃತಿ

ಜೂಪಿಟರ್‌ರವರ

ಕನ್ನಿಯಿನ್ ಕಾದಲಿ

(ತಮಿಳು)

-: ಮುಖ್ಯ ಪಾತ್ರ:-

† ಅಂಜಲಿ
† ಮಾಧುರಿ
† ಲಲಿತ-ಪದ್ಮಿನಿ
† ಸಾರಂಗಪಾಣಿ
† ಪುಳಿಮೂಟೈ

ಅಭಿನಯ

16-9-49

ರಿಂದ

ಅಮೋಘ ಪ್ರಾರಂಭ

ದಿನವಹಿ ೩ ಆಟಗಳು

A Karnataka Release

ಎಲ್ಲವನ್ನೂ ಶುದ್ಧಪಡಿಸಲು ಉತ್ತಮವಾದ

ಮೈಸೂರು ಸೋಪ್

ಎಲ್ಲೆಲ್ಲೂ ದೊರೆಯುತ್ತವೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

Edited, printed and published by A. R. Nagarajan at Sadhvi Press, D. Subbiah Road, Mysore

※ ಕಬ್ಬಿಣದ ಪೆಟ್ಟಿಗೆಗಳು, ತರಹಾವರಿ ಹೊಸ ಡಿಸೈನ್‌ಗಳು, ಕ್ಯಾಷ್ ಬಾಕ್ಸ್, ಬೀರುಗಳು ※

ಕಡಿಮೆ ಬೆಲೆಗಳಲ್ಲಿ ದೊರೆಯುತ್ತವೆ. ದಿ ಸಿ. ಐ. ವರ್ಕ್ಸ್, ೨೭೬೬, ಹಳ್ಳದಕೇರಿ (ಛತ್ರಿ ಮರದ ಹತ್ತಿರ), ಮೈಸೂರು

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೫-೯-೧೯೪೯ [ಸಂಚಿಕೆ ೪೩

ಭದ್ರಾಚಲದಲ್ಲಿ ಕುರುಡನ ಕಣ್ಣು ಬಂತು

ಫುಟ್‌ಬಾಲ್ ಆಟಗಾರರ ನಿಧನ

ಮೈಸೂರು ೧೫

... ಸಂಜೆ ಮಹಾರಾಜಾ ವರ್ಧಂತಿ ...ಬಾಲ್ ಪಂದ್ಯದಲ್ಲಿ ಮೈಸೂರು ಮು... ಮತ್ತು ಮೈಸೂರು ಆರ್ಯನ್ಸ್ ...ಗಳಿಗೆ ಆಟವು ನಡೆಯುತ್ತಿದ್ದಾಗ ...ನ್ಸ್ ಟೀಮಿನ ಫುಲ್ ಬ್ಯಾಕ್ ಸೀ...ರು ಹರಾತ್ತನೆ ಆಟವಾಡುವುದನ್ನು ... ಕೆಳಗೆ ಕುಳಿತು ಮಲಗಿಕೊಂಡರು ... ಕಂಡು ರೆಫರಿಯವರು ಆಟ ನಿಲ್ಲಿ...ಡಿದಾಗ ಅವರಿಗೆ ಪ್ರಜ್ಞೆ ತಪ್ಪಿ ...ಕೂಡಲೇ ಅವರನ್ನು ಆಸ್ಪತ್ರೆಗೆ ಸಾ...ಯಿತು ಆದರೆ ಅವರು ಅಲ್ಲಿ ಮರ...ಂದಿದರು ಅವರು ಹೊಟ್ಟೆ ನೋ... ಇತ್ತೀಚೆಗೆ ನರಳುತ್ತಿದ್ದರೆಂದು ...ಗಿದೆ ಅವರ ಗೌರವಾರ್ಥವಾಗಿ, ... ನಡೆಯಬೇಕಾಗಿದ್ದ ಆಟವನ್ನು ...ಕಾಗಿದೆ

...ಲ್ಲಾ ಗ್ರಾಮಾಭಿವೃದ್ಧಿ ಅಧಿಕಾರಿಗಳ ವರ್ಗ

...ಸೂರು ಜಿಲ್ಲಾ ಗ್ರಾಮಾಭಿವೃದ್ಧಿ ...ರಿಗಳಾದ ಶ್ರೀ ಜಿ ಚನ್ನಬಸವಪ್ಪನವ... ಷಲ್ ಲ್ಯಾಂಡ್ ಆಫೀಸರ್ ...ರಿಗಳನ್ನಾಗಿ ಬೆಂಗಳೂರಿಗೆ ವರ್ಗಾ...ನೆ ಅವರ ಸ್ಥಾನಕ್ಕೆ ಜನಾಬ ...ದ್ ಪೀರ್‌ರವರನ್ನು ನೇಮಿಸಲಾ...

...ಕೆಲಸಗಾರರ ಸಮ್ಮೇಳನದ ಬಗ್ಗೆ ನೀತಿಯೇನು ?

...೧೮ನೇ ತಾ॥ ರಾಜಧಾನಿಯಲ್ಲಿ ...ಯಲಿರುವ ಸಂಸ್ಥಾನದ ಕಾಂಗ್ರೆಸ್ ...ಗಾರರ ಸಮ್ಮೇಳನವನ್ನು ನಗರ ...ಗ್ರೆಸ್ ಸಮಿತಿಯ ನೇತೃತ್ವದಲ್ಲಿ ಜರು...ಬೇಕೆಂದು ಶ್ರೀ ಎ ರಾಮಣ್ಣ ಮುಂ...ದವರು ಪ್ರಾರ್ಥಿಸಿದ್ದರು ಬೆಂಗಳೂರಿ... ಏರ್ಪಡಿಸಿದ ಸಮಿತಿಯವರಿಂದ ಅಧಿ...ಹನವು ಬಂದಾಗ ಅದನ್ನು ಆಲೋ...ಬಹುದೆಂದು ನಗರ ಸಮಿತಿಯವರು ...ರಿಸಿದ್ದರು ಇತ್ತೀಚೆಗೆ ಶ್ರೀ ರಾಮಣ್ಣ...ರೇ ಸಭೆಯನ್ನು ಕರೆದು ಸ್ವಾಗತ ಸ...ಯ ಸದಸ್ಯರನ್ನು ಏರ್ಪಡಿಸಿಕೊಂ...ಲಸ ಕಾರ್ಯದಲ್ಲಿ ತೊಡಗಿದ್ದಾರೆ ಈ ...ಳನದ ಬಗ್ಗೆ ಕಾಂಗ್ರೆಸ್ ಕಾರ್ಯ...ರುಗಳ ಪಾತ್ರ ಮತ್ತು ವರ್ತನೆಗಳ ...ರ್ಧರಿಸಲು ಕಾಂಗ್ರೆಸ್ ಪ್ರಧಾನ ...ದರ್ಶಿಗಳಿಗೆ ಪತ್ರವನ್ನು ಬರೆಯ...ದೆ ಅವರಿಂದ ಉತ್ತರ ಬಂದನಂ...ದನ್ನು ತಿಳಿಸಲಾಗುವುದು—ಎಂದು ...ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ...ದ ಶ್ರೀ ಟಿ ನರಸಿಂಹ ಅಯ್ಯಂಗಾರ್ಯ ...ತಿಳಿಸಿರುತ್ತಾರೆ

ಹಿಂದಿಯು ಭಾರತದ ಆಡಳಿತದ ಭಾಷೆ

...ರತದ ಅಧಿಕೃತ ಭಾಷೆಯು ದೇವ...ಲಿಪಿಯ ಹಿಂದಿಯಾಗಿರಬೇಕೆಂದೂ ...ವರ್ಷಗಳ ನಂತರ ಇಂಗ್ಲಿಷ್ ಭಾಷೆಯ ...ಯೋಗವನ್ನು ಬಿಡುವುದು ಅಥವ ...ಯೋಗಿಸುವ ವಿಚಾರದಲ್ಲಿ ಅಂತ್ಯ ...ರಕ್ಕೆ ಬರಬಹುದೆಂದೂ, ಅಂತರ...ಯ ಅಂಕೆಯನ್ನೇ ಉಪಯೋಗಿಸ...ದೆಂದೂ ಶ್ರೀ ಗೋಪಾಲಸ್ವಾಮಿ ...ಂಗಾರ್ಯರು ಮುಂದಿಸಿದ ಅಧಿಕೃತ ನಿ...ಯವು ಕೇಂದ್ರ ರಾಜ್ಯಾಂಗ ಸಭೆಯ...ನ್ನೆ ಅಂಗೀಕೃತವಾಯಿತು.

ಕುರುಡನಿಗೆ ಕಣ್ಣು ಬಂತು; ಮೂಕತನವೂ ಹೋಯಿತು

ಭದ್ರಾಚಲದ ಬಳಿ ಗೋದಾವರಿ ನದಿಯಲ್ಲಿ ಘಟನೆ

ಮೊನ್ನೆ ದಿನ ಭದ್ರಾಚಲಕ್ಕೆ ಹೋಗಿದ್ದ ಯಾತ್ರಾರ್ಥಿಗಳ ಪೈಕಿ, ೩೦ ವರ್ಷದ ಮೊದಲು ಪೋತುರಾಜು ಎಂಬ ಕುರುಡ ಮತ್ತು ಕಿವುಡನು ಅಲ್ಲಿನ ಗೋದಾವರಿ ನದಿಯಲ್ಲಿ ಶ್ರೀರಾಮ ದೇವರ ಹೆಸರನ್ನು ಜಪಿಸುತ್ತಾ ಮುಳುಗಿ ಎದ್ದಾಗ ಆತನಿಗೆ ಕಣ್ಣುಗಳು ಬಂದುವೆಂದೂ, ಇದನ್ನು ಅಲ್ಲಿ ನೆರೆದಿದ್ದ ನೂರಾರು ಜನ ಭಕ್ತಾದಿಗಳು ಕಂಡು ಆಶ್ಚರ್ಯಪಟ್ಟರೆಂದೂ ವರದಿಯಾಗಿದೆ ಆತನ ಸಂಗಡ ಅವನ ತಂದೆ ತಾಯಿಗಳೂ ಇದ್ದರು ಎರಡು ವಾರಗಳ ಹಿಂದೆ ತನ್ನ ಮುಂದೆ ಮನುಷ್ಯನಾಕೃತಿಯಲ್ಲಿದ್ದ ಛಾಯೆಯೊಂದು ಕಾಣಿಸಿಕೊಂಡು ಭದ್ರಾಚಲದ ಬಳಿ ಗೋದಾವರಿ ನದಿಯಲ್ಲಿ ಸ್ನಾನಮಾಡಿದರೆ ಕುರುಡು ಮತ್ತು ಕಿವುಡು ಹೋಗುವುದೆಂದು ತಿಳಿಸಿ ಅದು ಮಾಯವಾಯಿತೆಂದೂ, ಅನಂತರ ತಾನು ಪ್ರಜ್ಞೆ ತಪ್ಪಿ ಬಿದ್ದುದಾಗಿಯೂ ಆತನು ತಿಳಿಸಿರುತ್ತಾನೆ ಹೋಗಿದ್ದ ನಾಲಿಗೆ ಮತ್ತು ಕಣ್ಣುಗಳು ತನಗೆ ಶ್ರೀರಾಮ ದೇವರ ಕೃಪೆಯಿಂದ ಬಂದುವೆಂದೂ ಆತನು ಹೇಳುತ್ತಾನೆ

ರಾಜ್ಯಾಂಗ ಸಭೆಯು ನಿದ್ದೆಯ ಕೊಠಡಿಯಾಯಿತು

ಭಾರತ ರಾಜ್ಯಾಂಗ ಸಭೆಯು ಮೊನ್ನೆ ದಿನ ವಿರಾಮಕ್ಕಾಗಿ ಮೂರು ಘಂಟೆಗಳ ಕಾಲ ಎದ್ದಾಗ ಅದನ್ನು ಕೆಲವು ಸದಸ್ಯರುಗಳು ಮಲಗುವ ಕೊಠಡಿಯನ್ನಾಗಿ ಮಾಡಿ, ನಿದ್ದೆ ಮಾಡಿದರೆಂದೂ, ವಿರಾಮ ಕಾಲವಾದನಂತರ ಅಧ್ಯಕ್ಷರು ಘಂಟೆ ಹೊಡೆದರೂ ಒಬ್ಬ ಸದಸ್ಯರು ನಿದ್ದೆ ಮಾಡುತ್ತಲೇ ಇದ್ದರೆಂದೂ ಅವರನ್ನು ಮತ್ತೊಬ್ಬರು ಎಬ್ಬಿಸಿದರೆಂದೂ ಹೇಳಲಾಗಿದೆ

ನಿರಾಶ್ರಿತ ಮಹಿಳೆಗೆ ಮೂರು ಮಕ್ಕಳ ಜನನ

ಲೂಧಿಯಾನಾ ಆಸ್ಪತ್ರೆಯೊಂದರಲ್ಲಿ ನಿರಾಶ್ರಿತ ಮಹಿಳೆಯೊಬ್ಬಳಿಗೆ ಏಕಕಾಲದಲ್ಲಿ ಮೂರು ಮಕ್ಕಳು ಜನನವಾಗಿವೆಯೆಂದೂ, ಅವುಗಳ ಪೈಕಿ, ೨ ಗಂಡು ಒಂದು ಹೆಣ್ಣು, ಅವುಗಳೆಲ್ಲವೂ ಸುಖವಾಗಿವೆಯೆಂದೂ ತಿಳಿದುಬಂದಿದೆ

ಸರ್ ಎಂ. ವಿ. ಯವರ ೮೯ನೇ ವರ್ಧಂತಿ

ಸರ್ ಎಂ ವಿಶ್ವೇಶ್ವರಯ್ಯನವರಿಗೆ ಈ ದಿನ ೮೯ ವರ್ಷ ತುಂಬುವುದು ಅವರು ಎಂದಿನಂತೆ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ "ಸಾಧಾರಣವಾಗಿ ಮನುಷ್ಯನು ೬೦ ವರ್ಷ ಕಾಲ ಜೀವಿಸಿರುತ್ತಾನೆ ೫೦ ರಲ್ಲಿ ಆತನು ಮೃತ್ಯುವಿನ ಛಾಯೆಗೆ ಸಿದ್ಧನಾಗಿರಬೇಕು ನಾನು ಕೆಲಸದಿಂದ ಬಹಳ ಕಾಲದ ಹಿಂದೆಯೇ ನಿವೃತ್ತನಾಗಬೇಕಾಗಿತ್ತು ಆದರೆ ಕೆಲಸವೇ ನನ್ನನ್ನು ಇಷ್ಟು ದೃಢಕಾಯನನ್ನಾಗಿ ಮಾಡಿರುವುದು ನಾನು ಜೀವನದಲ್ಲಿ ಆಸಕ್ತಿಯನ್ನು ಹೊಂದಿದ್ದೇನೆ' ಎಂದು ಅವರು ಒಂದು ಭೇಟಿಯಲ್ಲಿ ತಿಳಿಸಿರುತ್ತಾರೆ ಭಾರತದ ಕೈಗಾರಿಕೆಗಳು ಇನ್ನೂ ಹೆಚ್ಚು ಅಭಿವೃದ್ಧಿಯಾಗಿ ಎಲ್ಲೆಲ್ಲೂ ಕೈಗಾರಿಕೆಗಳು ಸ್ಥಾಪಿತವಾಗಬೇಕೆಂಬುದೇ ತಮ್ಮ ಬಯಕೆ ಎಂದೂ ಹೇಳಿರುತ್ತಾರೆ

ಅಜಾದರಿಗೆ ಡಾಕ್ಟರೇಟ್ ಪ್ರಶಸ್ತಿ

ಮೈಸೂರು ೧೫

ಭಾರತ ಸರ್ಕಾರದ ವಿದ್ಯಾ ಸಚಿವರಾದ ಮೌಲಾನಾ ಅಬುಲ್ ಕಲಾಂ ಅಜಾದರು ನವೆಂಬರ್ ೩ ನೇ ತಾ॥ ನಡೆಯುವ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಪ್ರಾರಂಭ ಭಾಷಣವನ್ನು ಮಾಡಲು ಒಪ್ಪಿದ್ದಾರೆ ಆ ಸಮಯದಲ್ಲಿ ಅವರಿಗೆ ಡಾಕ್ಟರೇಟ್ ಗೌರವ ಪ್ರಶಸ್ತಿಯನ್ನು ವಿಶ್ವವಿದ್ಯಾನಿಲಯದವರು ದಯಪಾಲಿಸುವರು

ಸಿ. ಆರ್. ರೆಡ್ಡಿಯವರು

ಡಾ॥ ಸಿ ಆರ್ ರೆಡ್ಡಿಯವರನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರೋ ಚಾನ್ಸಲರನ್ನಾಗಿ ೪ ವರ್ಷ ಕಾಲ ಮಾಹೆಯಾನ ೩,೫೦೦ ರೂ ಸಂಬಳದ ಮೇಲೆ ನೇಮಿಸಲಾಗುವುದೆಂದು ತಿಳಿದುಬಂದಿದೆ,

ಕಾಶ್ಮೀರವಿಲ್ಲದೆ ಪಾಕಿಸ್ತಾನವು ಅಪೂರ್ಣ

ಕಾಶ್ಮೀರವು ಪಾಕಿಸ್ತಾನಕ್ಕೆ ಜೀವ, ಮತ್ತು ಧರ್ಮದ ಸಂಕೇತ, ಅದು ಇಲ್ಲದ ಪಾಕಿಸ್ತಾನವು ಸಂಪೂರ್ಣವಾಗಿ ಪ್ರಬಲ್ಲ ಅದನ್ನು ಪಡೆಯಲು ರಕ್ತವನ್ನು ಚೆಲ್ಲುವುದಕ್ಕೂ ನಾವು ಸಿದ್ಧರಾಗಿದ್ದೇವೆ ಎಂಬುದಾಗಿ ಅಲ್ಲಿನ ವ್ಯವಹಾರ ಸಚಿವ ಮುಷ್ತಾಕ್ ಅಹಮದ್ ಗುರ್ಮಾನಿಯವರು ಜಿನ್ನಾ ದಿನಾಚರಣೆಯಲ್ಲಿ ತಿಳಿಸಿರುತ್ತಾರೆ

ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ

ಮೈಸೂರು ೧೫

ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತರುಗಳ ಸಮ್ಮೇಳನವು ಇದೇ ೧೮ನೇ ತಾ॥ ಭಾನುವಾರ ಬೆಳಿಗ್ಗೆ ೧೦-೩೦ ಗಂಟೆಗೆ ಟೌನ್ ಹಾಲಿನಲ್ಲಿ ಶ್ರೀ ಕೆ ಪಟ್ಟಾಭಿರಾಮಯ್ಯರವರ ಅಧ್ಯಕ್ಷತೆಯಲ್ಲಿ ನಡೆಯುವುದು, ಈಗಾಗಲೇ ಸಮ್ಮೇಳನಕ್ಕಾಗಿ ಕಾರ್ಯಕರ್ತರುಗಳಿಗೆಲ್ಲಾ ಆಹ್ವಾನಗಳನ್ನು ಕಳುಹಿಸಲಾಗಿದೆ ಯಾರಿಗಾದರೂ ಅದು ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ಸಮ್ಮೇಳನಕ್ಕೆ ದಯಮಾಡಿಸಬೇಕೆಂದು ಸಂಚಾಲಕರಾದ ಶ್ರೀ ದೊರೆಸ್ವಾಮಿಯವರು ಪ್ರಾರ್ಥಿಸಿರುತ್ತಾರೆ

ಹೂತಿಟ್ಟ ನಿಧಿ ತಿಳಿಸದೆ ಇದ್ದುದಕ್ಕಾಗಿ ಶಿರಚ್ಛೇದನ

ಮಧ್ಯ ಭಾರತ ಯೂನಿಯನ್ನಿನ ಬಲದೇವ ದಾಸ್ ಎಂಬುವರು ಸಿನಿಮಾದಿಂದ ಹಿಂತಿರುಗುತ್ತಿದ್ದಾಗ ಮೂರು ಜನರು ಅವರನ್ನು ಅಪಹರಿಸಿ, ಕಾಡಿಗೆ ಒಯ್ದು, ಕೈಕಾಲುಗಳನ್ನು ಕಟ್ಟಿ, ಅವರಿಂದ ಹೂತ ನಿಧಿಯ ಬಗ್ಗೆ ಸಮಾಚಾರ ತಿಳಿಯಲು ಯತ್ನಿಸಿದರೆಂದೂ ಅವರು ಅದನ್ನು ತಿಳಿಸಲು ನಿರಾಕರಿಸಿದುದರಿಂದ ಅವರ ತಲೆಯನ್ನು ಕತ್ತರಿಸಿ ಪರಾರಿಯಾದರೆಂದೂ, ಪೋಲೀಸರು ಮೂರು ಮಂದಿಯನ್ನು ದಸ್ತಗಿರಿ ಮಾಡಿರುವರೆಂದೂ ವರದಿಯಾಗಿದೆ

ವಿಪರೀತ ಮಳೆಯಿಂದ ಕಟ್ಟೆಯು ಒಡೆಯಿತು

ಒರ್ಛಾ ತಾಲ್ಲೂಕಿನಲ್ಲಿರುವ ವೇಂಡೋಲಾ ನದಿಗೆ ಕಟ್ಟಲಾಗಿರುವ ೬೦ ಅಡಿ ಎತ್ತರದ ಜಲಾಶಯವು ವಿಪರೀತ ಮಳೆಯಿಂದ ಒಡೆದು, ವಿಶೇಷ ನಷ್ಟವುಂಟಾಗಿದೆಯೆಂದು ಹೇಳಲಾಗಿದೆ

ನಾಲ್ಕು ರಾಷ್ಟ್ರಗಳ ಸಮ್ಮೇಳನ

ಮುಂದಿನ ವಾರ ನಡೆಯುವ ವಿಶ್ವಸಂಸ್ಥೆಯ ಅಧಿವೇಶನದ ಸಂಬಂಧದಲ್ಲಿ ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ಸೇರುವುದೆಂದೂ, ಅದರಲ್ಲಿ ರಷ್ಯ ಭಾಗವಹಿಸಲು ಒಪ್ಪಿದೆಯೆಂದೂ ಹೇಳಲಾಗಿದೆ

ಕೈನರೀಸ್ ಎಂಬ ಪದ ಉಪಯೋಗಿಸಕೂಡದು

ಕೈನರೀಸ್ ಎಂಬ ಪದವನ್ನು ಉಪಯೋಗಿಸಕೂಡದೆಂದೂ, ಅದು ಇರುವ ಕಡೆಯೆಲ್ಲಾ ಕನ್ನಡವೆಂದು ಬದಲಾಯಿಸಬೇಕೆಂದೂ ಭಾರತ ರಾಜ್ಯಾಂಗ ಸಭೆಯು ನಿರ್ಣಯ ಮಾಡಲಾಗಿದೆ

ಅಖಿಲ ಭಾರತ ಪುಸ್ತಕ ಭಂಡಾರಗಳ ಸಮ್ಮೇಳನ

ಸ್ವಂತ ವರದಿ] ಬೆಂಗಳೂರು ೧೫

ಮುಂದಿನ ಜನವರಿ ತಿಂಗಳಿನಲ್ಲಿ ಅಖಿಲ ಭಾರತ ಪುಸ್ತಕ ಭಂಡಾರಗಳ ಸಮ್ಮೇಳನವು ರಾಜಧಾನಿಯಲ್ಲಿ ನಡೆಯುವುದೆಂದು ತಿಳಿದುಬಂದಿದೆ

○ ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಲು ಆಚಾರ್ಯ ಕಾಕಾ ಕಾಲೇಲ್ಕರ್‌ರಿಗೆ ಆಹ್ವಾನ ಕೊಡಲಾಗಿದೆ

ಡಾಲರ್ ಬಿಕ್ಕಟ್ಟಿನ ಬಗ್ಗೆ ಒಪ್ಪಂದ

ಬ್ರಿಟನ್ನಿನಲ್ಲಿ ಉಂಟಾಗಿರುವ ಡಾಲರು ಬಿಕ್ಕಟ್ಟನ್ನು ೧೯೫೨ರ ಒಳಗಾಗಿ ಪರಿಹರಿಸುವ ಬಗ್ಗೆ ಅಮೆರಿಕ, ಕೆನಡಾ ಮತ್ತು ಬ್ರಿಟನ್ನುಗಳಿಗೆ ಒಂದು ಒಪ್ಪಂದವು ಆಗಿದೆಯೆಂದು ಹೇಳಲಾಗಿದೆ. ರಬ್ಬರ್ ಮತ್ತು ಟಿನ್‌ಗಳ ಶೇಖರಣೆ, ಧಾರಾಳವಾದ ಮಾರ್ಷಲ್ ಡಾಲರುಗಳ ಉಪಯೋಗ, ಅಮೆರಿಕದ ಸುಂಕ ನಿಬಂಧನೆಗಳ ಸಡಿಲಿಕೆ ಮತ್ತು ಅಂತರ ಯೂರೋಪ್ ವ್ಯಾಪಾರ ಸೌಲಭ್ಯಗಳಿಂದ ಬಿಕ್ಕಟ್ಟು ಬಗೆ ಹರಿಯುವುದೆಂದು ನಿರೀಕ್ಷಿಸಲಾಗಿದೆ.

ಫಸ್ಟ್ ಗ್ರೇಡ್ ಕಾಲೇಜ್ ಸಂಘದ ಪ್ರಾರಂಭ ಭಾಷಣ

ಮೈಸೂರು ಫಸ್ಟ್ ಗ್ರೇಡ್ ಕಾಲೇಜ್ ಸಂಘದ ಪ್ರಾರಂಭಭಾಷಣವನ್ನು ಆಹಾರ ಡೈರೆಕ್ಟರಾದ ಶ್ರೀ ಕೆ ಗುರುದತ್ತರವರು ಇದೇ ೧೯ ನೇ ತಾ॥ ಸೋಮವಾರ ಮಾಡುವರು.

ಗಣಪತಿ ಮಂಗಳಾರತಿ

ರಾಜಧಾನಿಯ ಕುಂಚಿಟಿಗರ ಶ್ರೀರಾಮ ಮಂದಿರದಲ್ಲಿ ನಾಳೆ ರಾತ್ರಿ ೭ ಗಂಟೆಗೆ ಗಣಪತಿ ಮಂಗಳಾರತಿ ಪ್ರಯುಕ್ತ ಆಸ್ಥಾನ ವಿದ್ವಾನ್ ಬಿ ದೇವೇಂದ್ರಪ್ಪನವರ ಪಿಟೀಲು ಮತ್ತು ನಾಳಿದ್ದು ಸಂಜೆ ೬ ಗಂಟೆಗೆ ಗಣಪತಿ ಉತ್ಸವವು ನಡೆಯುವುವು.

ತಿರುವಾಂಕೂರಿನ ಗುಡ್ಡದಲ್ಲಿ ಭಾರಿ ಬಿರುಕುಗಳು

ಉತ್ತರ ತಿರುವಾಂಕೂರಿನ ಗುಡ್ಡದ ಪ್ರದೇಶದಲ್ಲಿ ಇತ್ತೀಚೆಗೆ ಭೂಮಿಯು ಕುಸಿದು, ೫-೬ ಅಡಿಗಳ ದಪ್ಪ ಬಿರುಕು ಬಿಟ್ಟಿದೆಯೆಂದೂ, ಅಲ್ಲಿ ವಾಸಿಸುತ್ತಿದ್ದ ಜನರೆಲ್ಲರೂ ಗಾಬರಿಗೊಂಡು ಪರಾರಿಯಾಗುತ್ತಿದ್ದಾರೆಂದೂ ವರದಿಯಾಗಿದೆ.

ಪ್ರತ್ಯೇಕ ಬಾಲಕ ಬಾಲಕಿಯರ ಶಾಲೆಗಳ ವಜಾ

ಮದರಾಸ್ ಪ್ರಾಂತ್ಯದಲ್ಲಿರುವ ಪ್ರತ್ಯೇಕ ಪ್ರಾಥಮಿಕ ಬಾಲಕ ಮತ್ತು ಬಾಲಕಿಯರ ಶಾಲೆಗಳನ್ನು ರದ್ದು ಮಾಡಿ, ಎರಡನ್ನೂ ಐಕ್ಯಮಾಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಅದೇ ರೀತಿ ಮಾಡಬೇಕೆಂದು ಜಿಲ್ಲಾಬೋರ್ಡುಗಳಿಗೂ ಸೂಚನೆ ಕೊಡಲಾಗಿದೆ.

ರೈತರ ಸಭೆ

ಟಿ ನರಸೀಪುರ ತಾಲ್ಲೂಕು ಸೋಮನಾಥಪುರದಲ್ಲಿ ಇದೇ ೧೯ನೇ ತಾ॥ ಸೋಮವಾರ ಸಂಜೆ ೪ ಗಂಟೆಗೆ ರೈತರ ಸಭೆಯು ಶ್ರೀ ಎಸ್ ಸಿ ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀ ಕೆ ಲಕ್ಕಪ್ಪಗೌಡರು ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುವರು.

ತಿರುಪತಿ ಸ್ವಾಮಿಯವರ ಚಿತ್ರಕ್ಕೆ ಬಹುಮಾನ

ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿಯವರ ಉತ್ತಮ ಚಿತ್ರಪಟಗಳು ಭಕ್ತಾದಿಗಳಿಗೆ ಸಿಕ್ಕುವಂತೆ ಮಾಡಲು ಅಲ್ಲಿನ ದೇವಸ್ಥಾನ ಸಮಿತಿಯವರು ಉತ್ತಮ ಚಿತ್ರಪಟವನ್ನು ಬರೆದವರಿಗೆ ೧ ಸಾವಿರ ರೂ ಬಹುಮಾನ ಕೊಡುವುದಾಗಿ ತಿಳಿಸಿರುತ್ತಾರೆ.

ದಿನಸಿ ವರ್ತಕರ ಸಂಘದ ಸಭೆ

ಮೈಸೂರು ನಗರದ ದಿನಸಿ ವರ್ತಕರ ಸಭೆಯು ನಾಳೆ ಬೆಳಗ್ಗೆ ೮ ಗಂಟೆಗೆ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿದೇವಸ್ಥಾನದಲ್ಲಿ ನಡೆಯುವುದು. ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆ ಮತ್ತು ಸಂಘದ ಅಭಿವೃದ್ಧಿ ಮುಂತಾದ ಮುಖ್ಯ ವಿಷಯಗಳು ಚರ್ಚೆಗೆ ಬರಲಿರುವುದರಿಂದ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ರಾಜಕಮಲ್
ಟಾಕೀಸ್, ಮೈಸೂರು

16-9-49ರಿಂದ ಅಮೋಘ
ನಾಗಕನ್ನಿ
ಮಧುರ ಸಂಗೀತಗಳಿಂದಲೂ ...
ಹಕ ಅಭಿನಯ ನೃತ್ಯಗಳಿಂ...
ಕೂಡಿದ ಮಹೋನ್ನತ ...

MORNING SHO...
From 16-9-49 for ...
Out of the B...
With George Br...
Virginia Mayo
Turhan be...

ಪ್ರಭುದೇವಾ ಟಾಕೀಸ್
14-9-49ನೇ ಬುಧವಾರದಿಂದ
ಒಂದು ವಾರ ಮಾತ್ರ :: ಪ್ರತಿ ದಿನ 3 ಆಟಗಳು
- ಶ್ರೀ ವಳ್ಳಿ -
(ತಮಿಳು)
ಪಾತ್ರ:— ಟಿ ಆರ್ ಮಹಾಲಿಂಗಂ, ಕುಮಾರಿ ರುಕ್ಮಿಣಿ, ಕೃಷ್ಣನ್, ...

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟಿಫಿಕೇಷನ್

ನಂಬರು R 8 PR 91/48] [ತಾ॥ 9-9-1...

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಸಿಟಿ ಮಜಕೂರು ನಜರ್‌ಬಾದಿನಲ್ಲಿ ಮುನಿಸಿಪಾಲಿಟಿಯವರು ಹೊಸ... ಟ್ಟಿಸಿರುವ ಮಾರ್ಕೆಟ್ಟಿನಲ್ಲಿ ವ್ಯಾಪಾರಕ್ಕೋಸ್ಕರ ತರುವ ತರಕಾರಿ, ತಲೆ ... ಮೇಲೆ ವಿಧಾಯಕವಾದ ದರವಂತೆ ಡೈಲಿ ಫೀಯನ್ನು ವಸೂಲು ಮಾಡು... ನ್ನು ೧೯೪೯ನೇ ಸೆಪ್ಟೆಂಬರ್ ಮಾಹೆ ತಾರೀಖು ೨೪ನೇ ಶನಿವಾರ ಏಪಿ ೧... ಗೆ ಮೇಲ್ಕಂಡ ಮಾರ್ಕೆಟ್ಟಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ... ನ್ನು ಪಡೆಯಲು ಇಷ್ಟವುಳ್ಳವರು ಹರಾಜು ಕಾಲಕ್ಕೆ ಹಾಜರಾಗಿ ಭಡ... ಮೂಲ್ಯ ಪಡೆಯಬಹುದು. ಹೆಚ್ಚಿಗೆ ವಿಷಯಗಳನ್ನು ಮುನಿಸಿಪಲ್ ಆಫೀ... ಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

ಟಿ. ರಾಮರಾವ್,
ಮುನಿಸಿಪಲ್ ಕಮಿಷನರ್

[ಸ್ಥಾಪನೆ 1906]
ಕೆನರಾ ಬ್ಯಾಂಕ್, ಲಿಮಿಟೆಡ್
(ಮೈಸೂರು ಬ್ರಾಂಚ್)
(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)
ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು.
U HARI SHENOY B A,
ಏಜೆಂಟ್

Edited, printed and published by A. R. Nagarajan at Sadhvi Press, D Subbiah Road, Mysore

16-9-49ರಿಂದ :: ಪ್ರದರ್ಶನಾರಂಭ
(ದಿನವಹಿ 3 ಪ್ರದರ್ಶನ)

ಮೈಸೂರು **ಚಾಮುಂಡೇಶ್ವರಿ-ಗಣೇಶ** ಟಾಕೀಸ್

ಸ್ತ್ರೀಯನ್ನು ಸ್ತ್ರೀಯೇ ಮೋಹಿಸುವ ವಿನೋದ ಚಿತ್ರ
ಷೇಕ್ಸ್‌ಪಿಯರ್ ಮಹಾಕವಿಯ "ಟ್ವೆಲ್ತ್‌ನೈಟ್" ಎಂಬ ಅಮೋಘ ಕಥೆಯ ಆಧಾರದ ಮೇಲೆ ಚಿತ್ರಿತವಾದ

ಜೂಪಿಟರ್ಸ್‌ರವರ **ಕನ್ನಿಯಿನ್ ಕಾದಲಿ** (ತಮಿಳು)

ಸುಮಧುರ ಸಂಗೀತ, ನಯನ ಮನೋಹರ ನೃತ್ಯ, ಮನಾನಂದವನ್ನೀಯುವ ಹಾಸ್ಯ, ಅಮೋಘ ದೃಶ್ಯ ವೈಖರಿ ಇವುಗಳನ್ನು ನೋಡಲು ಸದವಕಾಶ
† ಅಂಜಲಿ † ಮಾಧುರಿ † ಲಲಿತ-ಪದ್ಮಿನಿ † ಸಾರಂಗಪಾಣಿ † ಪುಳಿಮೂ...
ಅಭಿನಯ

ಬೆಂಗಳೂರು:— ಸೂಪರ್, ಶ್ರೀ ಟಾಕೀಸುಗಳಲ್ಲಿ 10ನೇ ವಾರ
ಕೆ.ಜಿ.ಎಫ್:— ಒಲಂಪಿಯಾ ೩ನೇ ವಾರ A Karnataka Rele...

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೧೭-೯-೧೯೪೯ [ಸಂಚಿಕೆ ೪೩

– ಅಹಮದಾಬಾದ್ –
ಜನರಿಂದ ಅಕ್ಕಿ ತ್ಯಾಗ

...ಟಕದ ಆರ್ ಎಸ್ ಎಸ್ ...ನಾಯಕರ ಆಗಮನ

ಮೈಸೂರು ೧೬

...ರ್.ಎಸ್.ಎಸ್. ಸಂಸ್ಥೆಯ ಕರ್ನಾ... ಪ್ರಾಂತೀಯ ನಾಯಕರಾದ ಶ್ರೀ ...ದವರಾವ್ ಜೋಷಿಯವರು ರಾಜ...ಗೆ ನಾಳೆ ಆಗಮಿಸುವರು. ಸಂಜೆ ...ಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ...ಜನಿಕ ಸಭೆಯಲ್ಲಿ ಭಾಷಣ ಮಾಡು... ನಾಳಿದ್ದು ಬೆಳಿಗ್ಗೆ ೮-೩೦ ಗಂಟೆಗೆ ... ಸಹಕಾರ ಭವನದಲ್ಲಿ ಸ್ಥಳೀಯ ...ಎಸ್.ಎಸ್.ನವರನ್ನುದ್ದೇಶಿಸಿ ಭಾ... ಮಾಡುವರು.

...ಕೀರ್ತನಕಾರರ ತೊಂದರೆ

...ರ್ತನಕಾರರಲ್ಲಿ ಕೆಲವರಿಗೆ ಆಕಾಶ...ಯಲ್ಲಿ ೩ ಅಥವ ೪ ತಿಂಗಳಾದರೂ ...ಶ ದೊರೆಯುತ್ತಿಲ್ಲ. ಈ ಬಗ್ಗೆ ಡೈರೆ...ರಲ್ಲಿ ನಿಯೋಗ ಹೋಗಿದ್ದರೂ ಫಲ...ಯಾಗಿಲ್ಲ. ಅವರಿಗೆ ಆದಷ್ಟು ಪ್ರಯೋ...ಂಟಾಗುವಂತೆ ವ್ಯವಸ್ಥೆ ಮಾಡಬೇ... ರಾಜಧಾನಿಯ ಕೀರ್ತನಕಾರ ...ಡಲಿಯವರು ಪ್ರಾರ್ಥಿಸಿರುತ್ತಾರೆ

...ರ ಸಭೆ ಮುಂದೆ ಹೋಯಿತು

... ನರಸೀಪುರದ ತಾಲ್ಲೂಕು ಸೋ...ದಪುರದಲ್ಲಿ ಇದೇ ೧೯ನೇ ತಾ॥ ನ...ಬೇಕಾಗಿದ್ದ ರೈತರ ಸಭೆಯನ್ನು ಕಾ...ತರದಿಂದ ಮುಂದಿನ ತಿಂಗಳಿಗೆ ...ದುವರಿಸಲಾಗಿದೆಯೆಂದು ವ್ಯವಸ್ಥಾ... ತಿಳಿಸಿರುತ್ತಾರೆ

○ ಮುಂದಿನ ತಿಂಗಳು ನಡೆಸುಲಿರುವ ...ಸ್ತ್ರ॥ ಸಭೆಯಲ್ಲಿ ವನಸ್ಪತಿಗಳ ಪ...ಟಿ, ನರ್ಸ್, ಸೂಲಗಿತ್ತಿಯರು ... ವಿಸಿಟರುಗಳು, ಮೈಸೂರು ಮೆಡಿಕ...ನ್ಸಿಲ್, ನರ್ಸಿಂಗ್ ಹೋಂ, ರಿಜಿ... ಮತ್ತು ಇನ್ಸ್‌ಪೆಕ್ಟರ್ ಮಸೂದೆಗಳ ...ಕಾರ್ರದವರು ಮಂಡಿಸಲಿದ್ದಾರೆ

...ಲ್ವೆ ನಿಲ್ದಾಣದಲ್ಲಿ ಬೀಡಾ ...ಮಾರಾಟದ ನಿಷೇಧ

...ಲ್ಕತ್ತಾ ರೈಲ್ವೆ ನಿಲ್ದಾಣದಲ್ಲಿ ರಾತ್ರಿ...ಲ್ಲಿ ಪಾನ್ ಬೀಡಾಗಳ ಮಾರಾಟ ...ವುದನ್ನು ನಿಷೇಧಿಸಲು ರೈಲ್ವೆಯ ...ಇಷ್ಟರಲ್ಲೇ ಒಂದು ಆಜ್ಞೆಯನ್ನು ...ಡಿಸಲಿದ್ದಾರೆಂದು ತಿಳಿದುಬಂದಿದೆ

...ರತ ಮತ್ತು ಇಂಡಿಯಾ ...ಂಬ ಎರಡು ಹೆಸರು

...ಕ್ಕೆ ಭಾರತ ಮತ್ತು ಇಂಡಿಯ ...ಎರಡು ಹೆಸರುಗಳು ಇರಬೇಕೆಂದು ... ರಾಜ್ಯಾಂಗ ಸಭೆಯ ಕಾಂಗ್ರೆಸ್...ವರು ನಿರ್ಧರಿಸಿದ್ದಾರೆ. ಇಂಗ್ಲೀಷಿ...ರೆಯುವಾಗ ಇಂಡಿಯಾ ಎಂದೂ, ...ು ಭಾಷೆಗಳಲ್ಲಿ ಬರೆಯುವಾಗ ... ಎಂದೂ ಕರೆಯಬೇಕೆಂದು ...ರ್ಮಾನಿಸಿದ್ದಾರೆ

...ಡ್ ಸ್ಪೀಕರುಗಳನ್ನು ...ಪಯೋಗಿಸಕೂಡದು

...ದರಾಸ್ ನಗರದಲ್ಲಿ ಲೌಡ್ ಸ್ಪೀಕ...ಗಳಿಂದ ಜನರಿಗೆ ಉಂಟಾಗುತ್ತಿರುವ ...ರೆಯನ್ನು ತಡೆಯಲು ಸರ್ಕಾರದ ...ಯ ಕ್ರಮ ಕೈಗೊಳ್ಳುವರೆಂದೂ, ...ಂ ಕೊಡುವುದನ್ನು ಆದಷ್ಟು ಕಡಿ...ಡಿ, ರಾತ್ರಿ ೮ ಘಂಟೆ ಮೇಲೆ ಅ...ನ್ನು ಉಪಯೋಗಿಸಕೂಡದೆಂದ ನಿ... ಹಾಕಲಾಗುವುದೆಂದೂ ತಿಳಿದು...ಂದಿದೆ.

೧೪ ಸಾವಿರ ಜನರು ಅಕ್ಕಿಯನ್ನು ಬಿಟ್ಟಿದ್ದಾರೆ

ಅಹಮದಾಬಾದಿನ ೧೪ ಸಾವಿರ ಜನರು ಕಳೆದ ೪ ವಾರಗಳಿಂದ ತಮ್ಮ ಅಕ್ಕಿಯ ರೇಷನ್ನನ್ನು ಬಿಟ್ಟಿದ್ದಾರೆಂದು ಹೇಳಲಾಗಿದೆ

೩ ತಿಂಗಳಿನಲ್ಲಿ ೩ ಲಕ್ಷ ಟಿಕೇಟಿಲ್ಲದ ಪ್ರಯಾಣ

ಬೊಂಬಾಯಿನ ಬಿ ಬಿ ಸಿ ಐ ರೈಲ್ವೆಯಲ್ಲಿ ಟಿಕೇಟನ್ನು ಇಲ್ಲದೆ ಪ್ರಯಾಣ ಮಾಡುವುದನ್ನು ನಿಲ್ಲಿಸಲು ರೈಲ್ವೆಯವರು ವಿಶೇಷ ಕಾರ್ಯಕ್ರಮ ಕೈಗೊಂಡಿದ್ದಾರೆಂದೂ, ಕಳೆದ ೩ ತಿಂಗಳಿನಲ್ಲಿ ೩,೧೩,೯೭೮ ಟಿಕೇಟು ಇಲ್ಲದ ಪ್ರಯಾಣಿಕರನ್ನು ಕಂಡುಹಿಡಿಯಲಾಯಿತೆಂದೂ, ಅವರ ಪೈಕಿ ೧॥ ಲಕ್ಷ ಜನರು ಭಿಕ್ಷುಕರೆಂದೂ ಹೇಳಲಾಗಿದೆ. ಅವರುಗಳ ದಂಡ ತೆಗೆದುಕೊಂಡ ದಂಡದಿಂದ ರೈಲ್ವೆಗೆ ಒಟ್ಟು ೧೬,೯೩,೫೦೦ ರೂ ಹೆಚ್ಚಿನ ವರಮಾನ ಬಂದಿತೆಂದೂ ಹೇಳಲಾಗಿದೆ

ಅಮೆರಿಕದಲ್ಲಿ ಮಹಾತ್ಮರ ಸ್ಮಾರಕ

ಅಮೆರಿಕದ ವಾಷಿಂಗಟನ್ನಿನಲ್ಲಿ ಮಹಾತ್ಮ ಗಾಂಧಿಯವರ ಸುಂದರವಾದ ಸ್ಮಾರಕ ಭವನವೊಂದನ್ನು ಕಟ್ಟಿ ಅಲ್ಲಿ ಭಾರತ ಸಂಸ್ಕೃತಿಯ ಕಲಾ ವಸ್ತುಗಳನ್ನು ಪ್ರದರ್ಶಿಸಬೇಕೆಂಬುದಕ್ಕೆ ಅಮೆರಿಕದ ಸೆನೆಟ್ ಸಭೆಯು ಅಂಗೀಕಾರ ಕೊಟ್ಟಿದೆ

೧೦ ಲಕ್ಷ ಡಾಲರುಗಳಿಗೆ ಕಣ್ಣುಗಳ ವಿಮೆ

ವಿಶ್ವದಲ್ಲೇ ಅತ್ಯಂತ ಸುಂದರಿಯಾದ ತರುಣಿಯೆಂದು ಪ್ರಖ್ಯಾತಿಹೊಂದಿರುವ ಫ್ರಾನ್ಸಿನ ನ್ಯಾನ್ಸಿ ಡಿಸ್ಟಾಸಾ ಎಂಬ ೧೯ ವರ್ಷದ ಯುವತಿಯು ತನ್ನ ಪಚ್ಚೆ ನೀಲಿ ಬಣ್ಣದ ಕಣ್ಣುಗಳನ್ನು ೧೦ ಲಕ್ಷ ಡಾಲರುಗಳಿಗೆ ವಿಮೆ ಮಾಡಿದ್ದಾಳೆ. ಆಕೆಯು ಈಗ ಬೊಂಬಾಯಿಗೆ ಬಂದಿದ್ದಾಳೆ

ಹೆಚ್ಚು ಆಹಾರ ಬೆಳೆ ಬಗ್ಗೆ ಸ್ಪರ್ಧೆಗಳು

ದೇಶದಲ್ಲಿ ಹೆಚ್ಚು ಬೆಳೆ ಯೋಜನೆಯ ಅಂಗವಾಗಿ ಧಾನ್ಯ, ಆಲೂಗಡ್ಡೆ ಮುಂತಾದವುಗಳನ್ನು ಹೆಚ್ಚು ಬೆಳೆ ಸ್ಪರ್ಧೆಗೆ ಬಹುಮಾನ ಕೊಡಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ

ಜಂಬೂ ಸವಾರಿ

ಮೈಸೂರು ೧೬

ವಿಜಯದಶಮಿ ಪ್ರಯುಕ್ತ, ಶ್ರೀಮನ್ಮಹಾರಾಜರವರ ಜಂಬೂ ಸವಾರಿಯು ಅಕ್ಟೋಬರ್ ೧ ನೇ ತಾ॥ ಶನಿವಾರ ಸಂಜೆ ೪-೧೦ ಗಂಟೆಗೆ ಅರಮನೆಯಿಂದ ಎಂದಿನಂತೆ ಸಕಲ ಮರ್ಯಾದೆಗಳೊಡನೆ ಬನ್ನಿಮಂಟಪಕ್ಕೆ ಬಿಜಯ ಮಾಡಿಸುವುದು.

ಸನ್ಮಾನ ಸಭೆ

ಶ್ರೀಮನ್ಮಹಾರಾಜರವರಿಂದ ಸಾರ್ವಜನಿಕ ಸೇವಾ ಪ್ರಶಸ್ತಿ ಪದಕವನ್ನು ಪಡೆದ ಮಾಗಡಿ ಲಿಂಗಪ್ಪನವರನ್ನು ಸನ್ಮಾನಿಸಲು ನಾಳೆ ಮಧ್ಯಾಹ್ನ ೩ ಗಂಟೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್. ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಹುಳಿಮಾವಿನ ಜಹಗೀರ್‌ದಾರರ ಬಂಗಲೆಯಲ್ಲಿ ಸಭೆಯು ನಡೆಯುವುದು

ಶಾರದಾ ವಿಲಾಸ ಕಾಲೇಜ್ ಸಂಘ

ಮೇಲ್ಕಂಡ ಸಂಘದ ಪ್ರಾರಂಭ ಭಾಷಣವನ್ನು ಶ್ರೀ ಸಿ ಆರ್ ನರಸಿಂಹ ಶಾಸ್ತ್ರಿಗಳು ನಾಳೆ ಸಂಜೆ ೫-೩೦ ಗಂಟೆಗೆ ಕಾಲೇಜಿನ ಆವರಣದಲ್ಲಿ ಮಾಡುವರು

ಗೋಮಟೇಶ್ವರ ವಿಗ್ರಹದ ರಕ್ಷಣೆ ಬಗ್ಗೆ ಸಮಿತಿ

ಶ್ರವಣಬೆಳಗೊಳದಲ್ಲಿರುವ ಸುಪ್ರಸಿದ್ಧ ಗೋಮಟೇಶ್ವರ ವಿಗ್ರಹದ ರಕ್ಷಣೆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸರ್ಕಾರದವರು ಭೂಗರ್ಭ ಇಲಾಖಾಧಿಕಾರಿಗಳಾದ ಡಾ॥ ಪಿಚಾಮುತ್ತುರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ ಮತ್ತು ೫ ಸಾವಿರ ರೂ ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ

ಮತಾಂತರಿಸಲ್ಪಟ್ಟವರು ಹಿಂದೂಗಳಾದರೆ ಸೌಲಭ್ಯ

ಹರಿಜನರು ಬೇರೆ ಜಾತಿಗೆ ಮತಾಂತರವಾಗಿ ಪುನಃ ಹಿಂದೂಗಳಾದರೆ, ಅವರಿಗೆ ತಪ್ಪಿಸಲಾಗಿದ್ದ ಶಾಲಾ ಫೀಜು ಮಾಫಿ ಮತ್ತು ಇತರ ಸೌಲಭ್ಯಗಳನ್ನು ಕೊಡಬೇಕೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

○ ಅಂತರರಾಷ್ಟ್ರೀಯ ಬ್ಯಾಂಕಿನ ಮುಂದಿನ ವರ್ಷದ ಅಧಿವೇಶನ ನಮ್ಮ ಭಾರತದಲ್ಲಿ ಸೇರುವುದೆಂದೂ, ಅವರ ಚುನಾವಣೆಯು ಈ ತಿಂಗಳು ನಡೆಯುವುದೆಂದೂ ಹೇಳಲಾಗಿದೆ

ಅಂತರ ರಾಷ್ಟ್ರೀಯ ಅಕ್ಷರ ಪ್ರಚಾರ ಸಮ್ಮೇಳನ

ಮೈಸೂರು ೧೬

ಮುಂದಿನ ನವೆಂಬರ್ ತಿಂಗಳು ೨ ನೇ ತಾ॥ ನಿಂದ ಪ್ರಾರಂಭವಾಗಲಿರುವ ಅಂತರ ರಾಷ್ಟ್ರೀಯ ಅಕ್ಷರ ಪ್ರಚಾರ ಸಮ್ಮೇಳನದಲ್ಲಿ ಆಸ್ಟ್ರೇಲಿಯಾ, ಸಯಾಂ, ಬ್ರಿಟನ್, ಇರಾಕ್, ಇರಾನ್, ಸಿಲೋನ್, ಬರ್ಮಾ, ಇಂಡೋನೇಷ್ಯ, ಆಫ್ಘಾನಿಸ್ಥಾನ, ನೇಪಾಳ, ಫಿಲಿಪೈನ್ಸ್, ಫ್ರಾನ್ಸ್, ಮಲೆಯಾ, ಅರೇಬಿಯಾ ಮತ್ತು ಕೆನಡಾ ದೇಶಗಳು ಭಾಗವಹಿಸುವುವೆಂದು ತಿಳಿದುಬಂದಿದೆ. ಡಾ॥ ಜಕೀರ್ ಹುಸೇನ್ ಮತ್ತು ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರುಗಳನ್ನು ಭಾರತದ ಪ್ರತಿನಿಧಿಗಳಾಗಿ ನೇಮಿಸಲಾಗಿದೆ

ಕುರುಡನಿಗೆ ಕಣ್ಣು ಬಂದ ಪ್ರಸಂಗದ ವಿವರ

ಭದ್ರಾಚಲದ ಹತ್ತಿರವಿರುವ ಗೋದಾವರಿ ನದಿಯಲ್ಲಿ ಸ್ನಾನ ಮಾಡಿದುದರಿಂದ ಮದರಾಸ ಪ್ರೋಹಿತರಾಜ ಎಂಬವನಿಗೆ ಕುರುಡನಿಗೆ ಕಣ್ಣು ಮತ್ತು ನಾಲಿಗೆ ಬಂದುವೆಂದು ನಿನ್ನೆ ಪ್ರಕಟಿಸಲಾಗಿತ್ತಷ್ಟೆ. ಕಳೆದ ವಾರ ಅವನ ಕಣ್ಣಿನಲ್ಲಿ ಉರಿಕಾಣಿಸಿಕೊಂಡು ಅವನು ಕ್ಷಣ ಕಾಲ ಕಾಗೆಗಳು ಹಾರುತ್ತಿರುವುದನ್ನು ಕಂಡನಂತೆ. ಅನಂತರ ಕೈಯಲ್ಲಿ ಹಂಚನ್ನು ಹಿಡಿದ ಒಬ್ಬ ಆಕೃತಿಯು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು, ನದಿಯಲ್ಲಿ ಸ್ನಾನ ಮಾಡುವಂತೆ ಹೇಳಿ, ಮಾಯವಾಯಿತೆಂದೂ ಇತ್ತೀಚಿನ ವರದಿ ಪ್ರಕಾರ ಗೊತ್ತಾಗಿದೆ

ಗೋಡ್ಸೆ ಮರಣದಂಡನೆಯು ಮುಂದಕ್ಕೆ ಹೋಯಿತು

ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆ ಮತ್ತು ಆಪ್ಟೆಯವರನ್ನು ಗಲ್ಲಿಗೇರಿಸುವುದನ್ನು ಮುಂದಕ್ಕೆ ಹಾಕಲಾಗಿದೆ. ಅವರುಗಳು ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ರೇಷನ್ ಸಾಮಾನಿನೊಡನೆ ಕೋರ್ಟಿನಲ್ಲಿ ದೂರು

ಬಾಗಲ್‌ಪುರದ ರೇಷನ್ ಡಿಪೋವೊಂದರಲ್ಲಿ ರೇಷನ್ ಪ್ರಮಾಣವನ್ನು ಪೂರ್ತಿಯಾಗಿ ಕೊಡದೆ ತೂಕದಲ್ಲಿ ಮೋಸಪಡಿಸಲಾಗುತ್ತಿದೆಯೆಂಬುದನ್ನು ತಿಳಿಸಲು ತಾವು ಕೊಂಡ ರೇಷನ್ನುಗಳನ್ನು ಹೊತ್ತುಕೊಂಡು ಅನೇಕ ಹೆಂಗಸರು ಕೋರ್ಟಿಗೆ ಬಂದು ನ್ಯಾಯಾಧೀಶರ ಮುಂದೆ ದೂರನ್ನು ಕೊಟ್ಟರೆಂಬ ವರದಿಯಾಗಿದೆ

ಅಜಂತಾ, ಎಲ್ಲೋರಾ ಗುಹೆಗಳ ರಕ್ಷಣೆ

ಜಗದ್ವಿಖ್ಯಾತವಾದ ಅಜಂತಾ ಮತ್ತು ಎಲ್ಲೋರಾ ಗುಹೆಗಳಲ್ಲಿರುವ ಕಲಾಕೃತಿಯನ್ನು ರಕ್ಷಿಸಿ, ಉತ್ತಮ ಸ್ಥಿತಿಯಲ್ಲಿ ಇಡಬೇಕೆಂಬ ಉದ್ದೇಶದಿಂದ ಹೈದರಾಬಾದ ಸರ್ಕಾರದವರು ೯ ಲಕ್ಷ ರೂ ಗಳನ್ನು ಮಂಜೂರು ಮಾಡಿದ್ದಾರೆ

○ ಮದರಾಸಿನ ಹಿಂದೂ ಮತಾಭಿವೃದ್ಧಿ ಶಾಖಾ ಪತಿವೂ ದ ಶ್ರೀ ಟಿ ಹರಿಹರೇಶ್ವರ ರವರು ಬೆಂಗಳೂರು ವಾಣೀವಿಲಾಸ ವಿದ್ಯಾರ್ಥಿನಿ ಶ್ರೀಮತಿ ಶಾರದಾಬಾಯಿಯವರನ್ನು ತಿರುಚನೂರಿನಲ್ಲಿ ಮೊನ್ನೆ ದಿನ ವಿವಾಹವಾದರು

ಮಹಾತ್ಮರ ಸ್ಮಾರಕ ಸ್ತಂಭ

ದಕ್ಷಿಣ ತಿರುನಾಂತೂರಿನ ನಾಗರ್ ಕೋಯಿಲಿನಲ್ಲಿ ಸುಪ್ರಸಿದ್ಧ ತಮಿಳು ನಟ ನಟಿಯರಾದ ಶ್ರೀ ಎನ್ ಎಸ್. ಕೃಷ್ಣನ್ ಮತ್ತು ಶ್ರೀಮತಿ ಟಿ ಎ ಮಧುರಂರವರು ೪೦ ಸಾವಿರ ರೂ. ಖರ್ಚಿನಿಂದ ಸ್ಥಾಪಿಸಿರುವ ೫೧ ಅಡಿ ಎತ್ತರದ ಮಹಾತ್ಮರ ಸ್ಮಾರಕ ಸ್ತಂಭದ ಅನಾವರಣೋತ್ಸವವು ಮೊನ್ನೆ ದಿನ ಮದರಾಸ್ ಪ್ರಧಾನಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರಿಂದ ನೆರವೇರಿಸಲ್ಪಟ್ಟಿತು ೬೪ ಚದರಡಿ ವಿಸ್ತೀರ್ಣವುಳ್ಳ ಸ್ತಂಭದ ಕೆಳಭಾಗದಲ್ಲಿ ಗಾಂಧೀಜಿಯವರ ಉಪದೇಶಗಳನ್ನು ಕೆತ್ತಲಾಗಿದೆ ಕೃಷ್ಣನ್ ಮತ್ತು ಮಧುರಂರವರ ವಿನೋದ ಸಾಮರ್ಥ್ಯವನ್ನು ಪ್ರಶಂಸಿಸಿ, ಶ್ರೀ ಕೃಷ್ಣನ್‌ರವರಿಗೆ ವಿಶೇಷ ವಿನೋದದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಡಬೇಕೆಂದು ಪ್ರಧಾನಿಯವರು ತಿಳಿಸಿರುತ್ತಾರೆ.

ಪಾಕೀಸ್ತಾನದಿಂದ ಸಿಕ್ಕರ ಗುರುದ್ವಾರಗಳ ವಾಪಸು

ಪಾಕೀಸ್ತಾನಕ್ಕೆ ಸೇರಿದ ಲಾಹೋರ್ ಜಿಲ್ಲೆಯಲ್ಲಿರುವ ಸಿಕ್ಕರ ಗುರುದ್ವಾರಗಳನ್ನು ವಾಪಸು ಕೊಡಿಸಿಕೊಡಬೇಕೆಂದು ಅಖಿಲ ಭಾರತ ಸಿಖ್ ಸಂಘದವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಭಾರತ ಮತ್ತು ಪಾಕೀಸ್ತಾನಗಳ ಗಡಿಯು ಬದಲಾವಣೆ ಮತ್ತು ಕಾರರ್‌ಪುರದಲ್ಲಿರುವ ಗುರುದ್ವಾರಗಳ ಬಗ್ಗೆ ಭಾರತ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಕೋರಲಾಗಿದೆ

ರೇಷನಿಂಗ್ ಆಫೀಸರ್‌ರವರ ಕಛೇರಿ, ಮೈಸೂರು ಸಿಟಿ

ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಡಿಕ್ಲರೇಷನ್ ಫಾರಮ್‌ಗಳನ್ನು ಡಿಪೋಗಳಲ್ಲಿ ಹಂಚುವುದು ಮತ್ತು ಆ ಫಾರಂಗಳನ್ನು ಭರ್ತಿಮಾಡಿ ಡಿಪೋಗಳಿಗೆ ವಾಪಸ್ಸು ಕಳುಹಿಸಲು ನಿಗದಿ ಮಾಡಿರುವ ತಾರೀಖನ್ನು ಈ ತಿಂಗಳು ೧೫ನೇ ತಾರೀಖಿನಿಂದ ೩೦ನೇ ತಾರೀಖಿಗೆ ಬದಲಾಯಿಸಿದೆ

ಈ ಡಿಕ್ಲರೇಷನ್ ಫಾರಂಗಳನ್ನು ಛತ್ರದ ದಾಸ್ತಾನು ಇರುವ ರೇಷನ್ ಕಾರ್ಡುದಾರರೂ ಸಹ ಡಿಪೋಗಳ ಮೂಲಕ ಫಾರಂಗಳನ್ನು ಪಡೆದು ಭರ್ತಿ ಮಾಡಿ ಆಯಾಯ ಡಿಪೋಗಳಿಗೆ ವಾಪಸ್ಸು ತಲುಪಿಸತಕ್ಕದ್ದು

ಮೈಸೂರು ಸಿಟಿಯಲ್ಲಿರುವ ಪ್ರತಿಯೊಂದು ಕುಟುಂಬದ ಯಜಮಾನನೂ ಈ ಫಾರಂನಲ್ಲಿ ಮನೆಯ ನಂಬರನ್ನು ಸರಿಯಾಗಿ ನಮೂದಿಸದಿದ್ದಲ್ಲಿ ಅಂತಹವರಿಗೆ ಮನೆ ಮನೆಗೂ ಹಂಚಲ್ಪಡುವ ಹೊಸ ರೇಷನ್ ಕಾರ್ಡನ್ನು ಪಡೆಯಲು ತೊಂದರೆಯಾಗಬಹುದು.

[ಸಹಿ] ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್.

ಮೈಸೂರು ಸಿಟಿ
೮-೯-೪೯

ಮನೆ ಬಿಕರಿಗಿದೆ

ಮೈಸೂರು ದೇವರಾಜ ಮೊಹಲ್ಲಾ ದಿವಾನರ ಅಗ್ರಹಾರದಲ್ಲಿ ೩೩೬ನೇ ನಂಬರಿನ ಮನೆಯು ಕ್ರಯಕ್ಕಿದೆ ಬೆಲೆ ಸುಮಾರು ೬೦೦೦ ರೂ. ಮಾಲೀಕರಲ್ಲಿ ವಿಚಾರಿಸಿ.

ಎಸ್. ವೆಂಕೋಬರಾವ್

ಗಾಯತ್ರೀ ಟಾಕೀಸ್

16-9-49 ರಿಂದ 2 ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

ಎಂ ಜಿ ಎಂ ರವರ ಪ್ರಣಯ ಸಾಹಸದ ವರ್ಣರಂಜಿತ ಚಿತ್ರ

ಎ ಡೇಟ್ ವಿತ್ ಜೂಡಿ

ಪಾತ್ರ:- ವ್ಯಾಲೇಸ್ ಬೀರಿ ಮತ್ತು ಜೇನ್ ಪವೆಲ್

ಬೆಳಗಿನ ಪ್ರದರ್ಶನ
17 ಮತ್ತು 18ನೇ ತಾ॥
ಎಂ.ಜಿ.ಎಂ ರವರ ವರ್ಣರಂಜಿತ ಚಿತ್ರ
ಎ ಯಾಲಿಂಗ್ |

— ಲಕ್ಷ್ಮೀ —

ಈ ವತ್ತಿನಿಂದ
ಅಮೋಘ 2 ನೇ ವಾರ

ನಾಗಕನ್ನಿಕಾ [ಕನ್ನಡ]

ಮಧುರ ಸಂಗೀತಗಳಿಂದಲೂ ಮನಮೋಹಕ ಅಭಿನಯ ನೃತ್ಯಗಳಿಂದಲೂ ಕೂಡಿದ ಮಹೋನ್ನತ ಚಿತ್ರ

-: ಬರುತ್ತದೆ :-
ಬಾಗ್ದಾದ್-ಕಾ-ಚೋರ್
ವರ್ಣರಂಜಿತ ಹಿಂದಿ ಚಿತ್ರ

MORNING SHOWS
From 16-9-49 for 3 days
TEXAS
(ಟೆಕ್ಸಾಸ್)

ಮೈಸೂರು ಸ್ಟೇಟ್ ರೈಲ್ವೆ
ಟೆಂಡರ್ ನೋಟಿಫಿಕೇಷನ್ ನಂ. ೮

ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರ

೧) ಹಾಸನ ಸ್ಟೇಷನ್ನಿನಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸಲು ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ

೨) "ಹಾಸನದಲ್ಲಿ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸಲು ಟೆಂಡರು" ಎಂದು ಲಕೋಟೆ ಮೇಲೆ ಬರೆದು ಮೊಹರು ಮಾಡಿದ ಲಕ್ಕೋಟೆಗಳಲ್ಲಿ ಟೆಂಡರುಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರ ವಿಳಾಸಕ್ಕೆ ಕಳುಹಿಸತಕ್ಕದ್ದು

೩) ಈ ನಾನ್ ವೆಜಿಟೇರಿಯನ್ ಫಲಾಹಾರ ಮಂದಿರವನ್ನು ನಡೆಸುವ ಕಂಟ್ರಾಕ್ಟು ಅವಧಿಯು ೧೯೪೯ನೇ ಅಕ್ಟೋಬರ್ ೧ರಿಂದ ೧೯೫೦ನೇ ಸೆಪ್ಟೆಂಬರ್ ೩೦ರ ವರೆಗೆ ಇರತಕ್ಕದ್ದು.

೪) ಚೀಫ್ ಆಡಿಟರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಲ್ಲಿ ೨೦೦ ರೂ (ಇನ್ನೂರು ರೂಪಾಯಿಗಳು ಮಾತ್ರ) ಠೇವಣಿಯನ್ನು ಕಟ್ಟಿ, ಆ ಬಗೆ ರಶೀತಿಯನ್ನು ಟೆಂಡರಿನೊಡನೆ ಕಳುಹಿಸಬೇಕು ಆ ವಿಧದ ರಶೀತಿಗಳಿಲ್ಲದ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ

೫) ಕೆಳಗೆ ರುಜು ಮಾಡಿರುವವರು ಯಾವುದೇ ಟೆಂಡರನ್ನು ಅಂಗೀಕರಿಸುತ್ತದಕ್ಕಾಗಲೀ ಅಥವ ಯಾವುದೇ ಅಥವ ಎಲ್ಲ ಟೆಂಡರುಗಳನ್ನೂ ತಿರಸ್ಕರಿಸುವ ಬಗ್ಗೆ ಕಾರಣಗಳನ್ನು ಕೊಡುವುದಕ್ಕಾಗಲೀ ಬದ್ಧರಾಗಿರುವುದಿಲ್ಲ

೬) ೧೯೪೯ನೇ ಸೆಪ್ಟೆಂಬರ್ ೧೯ನೇ ತಾರೀಕು ಮಧ್ಯಾಹ್ನ ೩ ಘಂಟೆವರೆಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು ಟೆಂಡರು ಕಂಟ್ರಾಕ್ಟಿನ ಬಗ್ಗೆ ಷರತು ಮತ್ತು ನಿಯಮಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಇವರಿಗೆ ಬರೆದು ತಿಳಿದುಕೊಳ್ಳಬಹುದು.

ಟ್ರಾಫಿಕ್ ಮ್ಯಾನೇಜರರ ಕಛೇರಿ, ಮೈಸೂರು, ೮-೯-೪೯

ಮೀರ್ ಇನಾಯತ್ ಹುಸೇನ್
ಟ್ರಾಫಿಕ್ ಮ್ಯಾನೇಜರ್.

ಪ್ರಭಾ ★ 16-9-49ರಿಂದ
ಯಶಸ್ವಿಯಾದ 3 ನೇ ವಾರ

ಫೇಮಸ್ ಪಿಕ್ಚರ್ಸ್ ರವರ ಹಿಂದಿ ಚಿತ್ರ ಬಡಿ ಬಹೆನ್

ಪಾತ್ರ:- ಸುರೈಯ್ಯ, ಗೀತಾಬಾಲಿ, ರೆಹಮಾನ್, ಉಲ್ಹಾಸ್

MORNING SHOWS on 17th & 18th Sept.
M.G.M's The Valley of Decision
Starring:-Greer Garson & Gregory Peck.

Edited, printed and published by A. R. Nagarajan at Sadhvi Press, D. Subbiah Road, Mysore.

16-9-49ರಿಂದ :: ಪ್ರದರ್ಶನಾರಂಭ
(ದಿನವಹಿ 3 ಪ್ರದರ್ಶನ)

ಮೈಸೂರು ಚಾಮುಂಡೇಶ್ವರಿ-ಗಣೇಶ ಟಾಕೀಸ್

ಸ್ತ್ರೀಯನ್ನು ಸ್ತ್ರೀಯೇ ಮೋಹಿಸುವ ವಿನೋದ ಚಿತ್ರ

ಷೇಕ್ಸ್‌ಪಿಯರ್ ಮಹಾಕವಿಯ "ಟ್ವೆಲ್ಫ್ತ್‌ನೈಟ್" ಎಂಬ ಅಮೋಘ ಕಥೆಯ ಆಧಾರದ ಮೇಲೆ ಚಿತ್ರಿತವಾದ

ಜೂಪಿಟರ್ಸ್‌ರವರ ಕನ್ನಿಯಿನ್ ಕಾದಲಿ (ತಮಿಳು)

ಮಧುರ ಸಂಗೀತ, ನಯನ ಮನೋಹರ ನೃತ್ಯ, ಮನಾನಂದವನ್ನೀಯುವ ಹಾಸ್ಯ, ಅಮೋಘ ದೃಶ್ಯ ವೈಖರಿ ಇವುಗಳನ್ನು ನೋಡಿರಿ ಸದವಕಾಶ

† ಅಂಜಲಿ † ಮಾಧುರಿ † ಲಲಿತ-ಪದ್ಮಿನಿ † ಸಾರಂಗಪಾಣಿ † ಪುಳಿಮೂಟ್ಟೈ
ಅಭಿನಯ

ಬೆಂಗಳೂರು:- ಸೂಪರ್, ಶ್ರೀ ಟಾಕೀಸುಗಳಲ್ಲಿ 10ನೇ ವಾರ
ಕೆ.ಜಿ.ಎಫ್:- ಒಲಿಂಪಿಯ ೩ನೇ ವಾರ

A Karnataka Release

ಫೋ। ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೧೭-೯-೧೯೪೯ [ಸಂಚಿಕೆ ೪೪

ಚಿಯಾಂಗ್ ಕೈಷೇಕರ ಕೊಲೆಯ ಪ್ರಯತ್ನ?

ಕಾಡು ಯುವತಿಯೊಡನೆ ಅಸ್ಸಾಂ ಗೌರ್ನರರ ನೃತ್ಯ

ಅಸ್ಸಾಂ ಗೌರ್ನರರಾದ ಶ್ರೀ ಶ್ರೀ ಪ್ರಕಾಶ ...ಇತ್ತೀಚೆಗೆ ಅಲ್ಲಿನ ಗುಡ್ಡಗಾಡು ಪ್ರದೇಶ ಭೇಟಿ ಕೊಟ್ಟಾಗ ಕಾಡು ಯುವತಿಯೊ... ನೃತ್ಯ ಮಾಡಬೇಕಾಯಿತೆಂದು ಹೇಳ...ಗಿದೆ. ಅವರ ಗೌರವಾರ್ಥವಾಗಿ ಏರ್ಪ...ಸಿದ್ದ ಸಮಾರಂಭದಲ್ಲಿ ನೃತ್ಯ ಮಾಡು...ದ್ದ ಹುಡುಗಿಯರು ತಮ್ಮ ಜನಾಂಗದ ...ದ್ಧತಿಯಂತೆ ಆಹ್ವಾನಿತರನ್ನು ಎಳೆದು ...ಂಡು ನೃತ್ಯ ಮಾಡಿದರೆಂದೂ, ಅವರ ...ಕಿ ಒಬ್ಬ ಯುವತಿಯು ಗೌರ್ನರರ ಹ...ರ ಬಂದು ತನ್ನೊಡನೆ ನೃತ್ಯ ಮಾಡಲು ...ವರನ್ನು ಎಳೆದುಕೊಂಡು ಹೋದಳೆಂ...ು, ಅಲ್ಲಿನ ಜನರ ಉತ್ಸಾಹ ಭಂಗ ಮಾ...ಡಿಸದೆ ಗೌರ್ನರರು ಕೆಲವು ನಿಮಿಷ ...ಲ ನೃತ್ಯ ಮಾಡಿದರೆಂದೂ ವರದಿಯಾ...ಗಿದೆ

ಬ್ರಿಟನ್ನಿನ ಅತ್ಯಂತ ವೃದ್ಧನ ಮರಣ

ಬ್ರಿಟನ್ನಿನ ಅತಿ ವೃದ್ಧನಾದ ೧೦೪ ವ...ದ ವಿಲ್ ಟ್ವೈ ನೇಲ್ ಎಂಬಾತನು ...ನ್ನೆ ದಿನ ಮರಣ ಹೊಂದಿದನು. ೮೦ ...ದವರೆಗೂ ಆತನು ಬೇಸಾಯದಲ್ಲಿ ...ಡಗಿದ್ದನು. ಸಾಯುವವರೆಗೆ ಆತನು ...ಟುವಟಿಕೆಯಾಗಿ ಇದ್ದನೆಂದೂ ಪ್ರತಿ ... ಬೆಳಿಗ್ಗೆ ೬ ಗಂಟೆಗೆ ಎದ್ದು, ಬೇಕಾ...ಷ್ಟು ತಿರುಗಾಡುತ್ತಿದ್ದನೆಂದೂ ಹೇಳಲಾ...ಗಿದೆ

...ಹೋರಾಟದಿಂದ ಕರ್ಣಾಟಕ ಪ್ರಾಂತ್ಯ ರಚಿಸಬೇಕು

ಕರ್ಣಾಟಕದಲ್ಲಿ ಉಂಟಾಗಿರುವ ಆಗಾ...ಧ ಅಜ್ಞಾನ, ಬಡತನಗಳು ನಿವಾ...ಣಯಾಗಬೇಕಾದರೆ ಏಕೀಕರಣವಾಗ...ಬೇಕೆಂದೂ, ಪ್ರಬಲವಾದ ಹೋರಾಟ...ದಿಯಾದರೂ ಮೈಸೂರನ್ನೊಳಗೊಂ...ಡ ಕರ್ಣಾಟಕವನ್ನು ದೊರಕಿಸಿಕೊಳ್ಳಬೇ...ಕೆಂದೂ ರಾಣಿ ಬೆನ್ನೂರಿನ ಶ್ರೀ ಉಕಿವ...ಂಠ ಜಗದ್ಗುರುಗಳು ತಿಳಿಸಿರುತ್ತಾರೆ

ಚಿದಂಬರ ಸಪ್ತಾಹ

...ಪಟೂರಿನ ಬೆಳ್ಳೂರು ಮೈಲಾರಯ್ಯ...ರ ಧರ್ಮ ಛತ್ರದಲ್ಲಿ ಬೆಳಗಾವಿನ ಶ್ರೀ ...ಂಬರ ದೀಕ್ಷಿತರ ವಂಶಭೂಷಿತರಾದ ...ಬಾಪೂ ದೀಕ್ಷಿತ ಗುರುಗಳು ಇದೇ ...ಂದ ೨೫ನೇ ತಾ॥ ವರೆವಿಗೆ ನಿದ್ರಾ...ರ ರಹಿತವಾಗಿಯೂ. ಮಲಮೂತ್ರ ...ರ್ಜನೆಗೆ ಏಳದೆಯೂ ಏಕಾಸನದಲ್ಲಿ ...ತು ಶ್ರೀ ಸದ್ಗುರು ಚಿದಂಬರೇಶ್ವರರ ...ನ ಸಪ್ತಾಹವನ್ನು ಹಗಲೂ, ರಾತ್ರಿ ...ತವಾಗಿ ನಡೆಸುತ್ತಾರೆಂದೂ, ಈ ...ಹವನ್ನು ಯಶಸ್ವಿಯಾಗಿ ಜನಗಳ ... ಭಕ್ತಾದಿಗಳು ಧನ ಮತ್ತು ಧಾನ್ಯ...ದಲ್ಲಿ ಸಹಾಯ ಮಾಡಬೇಕೆಂದೂ ...ಸ್ಥಾಪಕರಾದ ಶ್ರೀ ಸಿ ಎಸ್ ನಾರಾ...ಣಯರು ಕೋರಿರುತ್ತಾರೆ

ಯಕ್ಷಗಾನ

...ತ್ತಾಲ ರಾಮಯ್ಯನವರ ಬೀದಿ ...ನ ಅನಂತಪ್ಪನವರ ಮನೆ ಮುಂ...ದಲ್ಲಿ ನಾಳೆ ರಾತ್ರಿ ೮-೩೦ಕ್ಕೆ ವಿಠಾಪ...ಯುಕ್ತ ಶ್ರೀ ಚಾಮುಂಡೇಶ್ವರಿ ಪ್ರಸ...ನ ಸಂಕಲ್ಪ ಯಕ್ಷಗಾನ ಮಂಡ...ಳಿಯಿಂದ ಶ್ರೀಮದ್ರಾಮಾಯಣದ ...ಭಾಗ "ಅಂಗದ ರಾಯಭಾರ" ಎಂಬ ...ನ್ನು ಪ್ರಸಂಗ ರೂಪದಲ್ಲಿ ನಡೆಸ...ತ್ತಾರೆ

ಭಾರತ ಆಡಳಿತಗಾರರು ನಿಜವಾದ ದೇಶ ಹಿತಚಿಂತಕರು

ಸ್ವಂ ಸು ಪ್ರೋ॥] ಬೆಂಗಳೂರು ೧೭

ಬೊಂಬಾಯಿನ ಸುಪ್ರಸಿದ್ಧ ವ್ಯಾಪಾರಿಗಳೂ ಮತ್ತು ಭಾರತ ರಿಸರ್ವ್ ಬ್ಯಾಂಕಿನ ಡೈರೆಕ್ಟರೂ ಆದ ಸರ್ ಪುರುಷೋತ್ತಮ ದಾಸ್ ಠಾಕೂರ್ ದಾಸ್‌ರವರಿಗೆ ನೆನ್ನೆ ಸಂಜೆ ವಾಣಿಜ್ಯ ಸಂಘದವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

ಮುಖ್ಯ ಅತಿಥಿಗಳು ಭಾಷಣ ಮಾಡುತ್ತಾ, ವ್ಯಾಪಾರಿಗಳು ಸರಕಾರವನ್ನು ಕೇವಲ ಟೀಕೆ ಮಾಡುವುದರಲ್ಲೇ ಇರಬಾರದೆಂದೂ, ಅವರ ಟೀಕೆಗಳು ರಚನಾತ್ಮಕವಾದುವಾಗಿರಬೇಕೆಂದೂ ದೇಶದಲ್ಲಿ ಈಗ ಹೊಸ ಪರಿಸ್ಥಿತಿ ಏರ್ಪಟ್ಟಿರುವುದನ್ನು ಎಲ್ಲರೂ ಗಮನದಲ್ಲಿಟ್ಟುಕೊಂಡು ಸರಕಾರಕ್ಕೆ ಬೆಂಬಲ ನೀಡಬೇಕಾದುದು ಅಗತ್ಯವೆಂದೂ, ಪಂಡಿತ ನೆಹರೂ ಮತ್ತು ಸರದಾರ್ ಪಟೇಲರುಗಳ ನಾಯಕತ್ವದಲ್ಲಿ ದೇಶವು ಮುಂದುವರಿಯುವುದರಲ್ಲಿ ಸಂಶಯವಿಲ್ಲವೆಂದೂ ಹೇಳಿದರು ವರ್ತಕರು ತಾಳ್ಮೆಯಿಂದ ಇರಬೇಕೆಂದೂ ಸರಕಾರದವರಾದರೂ ಜನರ ಅಭಿಪ್ರಾಯಕ್ಕೆ ಗಮನ ಕೊಡಬೇಕೆಂದೂ ಅವರು ತಿಳಿಸಿದರು.

ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನ

ಇದೇ ೨೭ನೇ ತಾ॥ ಪುರಸಭೆಯ ಆಶ್ರಯದಲ್ಲಿ ದೇವರಾಜಾ ಮಾರ್ಕೆಟ್ಟಿನಲ್ಲಿ ನಡೆಯುವ ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನದ ಅಂಗವಾಗಿ ತರಕಾರಿ, ಬರ್ಜಿ ಮೋಲು, ಹಾರಗಳನ್ನು ಕಟ್ಟುವುದು, ಎಲ್ಲ ತರಹ ಹೂವು ಮತ್ತು ಗುಲಾಬಿ ಮೊದಲಾದ ಗಿಡಗಳ ಸಂಗ್ರಹ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಮಾರ್ಕೆಟ್, ಆವರಣದ ಮತ್ತು ಸರ್ಕಾರದ ತೋಟಗಳವರೂ, ವಾಸಗೀ ನರ್ಸರಿಯವರೂ ಮತ್ತು ಮುಖ್ಯರೂ ಇವರಲ್ಲಿ ಭಾಗವಹಿಸಬಹುದೆಂದು ತಿಳಿಸಲಾಗಿದೆ

ಹರಿಕಥೆ

ರಾಜಧಾನಿಯ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಎ. ಎಲ್ ನಾರಾಯಣ ದಾಸರಿಂದ ರುಕ್ಮಾಂಗದ ಎಂಬ ಹರಿಕಥೆ ನಡೆಯುವುದು

ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ

ಮೈಸೂರು ೧೭

ನಾಳೆ ಭಾನುವಾರ ಬೆಳಗ್ಗೆ ೯ ಗಂಟೆಗೆ ಸಮ್ಮೇಳನದ ಅಂಗವಾಗಿ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ ಸಮಾರಂಭವನ್ನು ಶ್ರೀಗಳಾದ ಕೆ. ಹನುಮಂತಯ್ಯ ಮತ್ತು ಟಿ. ಎಸ್. ಸುಬ್ಬಣ್ಣನವರು ನೆರವೇರಿಸುವರು ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಬೇಕಾಗಿ ಸ್ವಾಗತ ಸಮಿತಿಯು ಪ್ರಾರ್ಥಿಸುತ್ತದೆ

ಸಮ್ಮೇಳನದ ಅಧ್ಯಕ್ಷರು ನಾಳೆ ಬೆಳಿಗ್ಗೆ ೫-೩೦ರ ಗಾಡಿಯಲ್ಲಿ ಬಂದು, ಮೋಟಾರ್ ಕೆಲಸಗಾರರ ಸಂಘದ ಕಛೇರಿಯಲ್ಲಿ ಬಿಡಾರ ಮಾಡುವರು ಅಲ್ಲಿಂದ ಗಾಂಧಿ ಚೌಕ, ಸಿಟಿ ಬ್ಯಾಂಕ್ ರಸ್ತೆ, ಸಯ್ಯಾಜಿರಾವ್ ರಸ್ತೆ ಮೂಲಕ ರಂಗಾಚಾರ್ಲು ಸ್ಮಾರಕಭವನಕ್ಕೆ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಗುವುದು

ರೈಲ್ವೆ ಕೆಲಸಗಾರರ ಬೇಡಿಕೆಗಳು

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಸಾಮೂಹಿಕ ಸಭೆಯು ಕಳೆದ ೧೫ನೇ ತಾ॥ ಶ್ರೀ ಲಾರೆನ್ಸ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಹಿಂದೆ ವಜಾ ಮಾಡಲ್ಪಟ್ಟ ಕೆಲಸಗಾರರ ಸಂಘದ ಕಾರ್ಮಿಕರನ್ನು ಮುಂದಿನ ತಿಂಗಳು ೧೫ನೇ ತಾ॥ ನೊಳಗಾಗಿ ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕೆಂದೂ, ಇಲ್ಲದಿದ್ದಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಮುಂದಿನ ಸಭೆಯಲ್ಲಿ ತೀರ್ಮಾನಿಸಬೇಕೆಂದೂ ನಿರ್ಧರಿಸಲಾಯಿತು ಕೆಲಸಗಾರರಿಗೆ ಕೊಡಬೇಕಾದ ೩ ತಿಂಗಳ ಬೋನಸ್ಸನ್ನು ದಸರಾ ಪ್ರಾರಂಭವಾಗುವುದಕ್ಕೆ ಮುಂಚೆಯೇ ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದೂ ನಿರ್ಣಯ ಮಾಡಲಾಯಿತು.

ಅಕೆಡಮಿಕ್ ಕೌನ್ಸಿಲ್

ಮೈಸೂರು ವಿಶ್ವ ವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್ ಸಭೆಯು ಇದೇ ೨೦ರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯಲ್ಲಿ ನಡೆಯುವುದು.

ವೀರ ಕೇಸರಿ ದಿನ ಪತ್ರಿಕೆ

ವಿಜಯದಶಮಿ ದಿನದಿಂದ ಶ್ರೀ ಎಂ. ಸೀತಾರಾಮಶಾಸ್ತ್ರಿಗಳವರ ಸಂಪಾದಕತ್ವದಲ್ಲಿ ವೀರ ಕೇಸರಿ ದಿನ ಪತ್ರಿಕೆಯು ಪ್ರಕಟವಾಗುವುದು.

ಚಿಯಾಂಗ್ ಕೈಷೇಕರ ಮೇಲೆ ಬಾಂಬು ಪ್ರಯೋಗ

ಕಳೆದ ಬುಧವಾರ ಚುಂಗ್‌ಕಿಂಗಿನಲ್ಲಿ ಭಾರಿ ಬೆಂಕಿ ಅನಾಹುತವುಂಟಾಗಿ ಸಾವಿರಾರು ಮಂದಿ ನಿರಾಶ್ರಿತರಾದರೆಂದು ವರದಿಯಾಗಿದೆಯಷ್ಟೆ ಹಲವು ಕಮ್ಯೂನಿಸ್ಟ್ ಕ್ರಾಂತಿಕಾರರು ಈ ಅಕೃತ್ಯವನ್ನೆಸಗಿದರೆಂದು ಹೇಳಲಾಗಿದೆ. ಈ ಗೊಂದಲದಲ್ಲಿ ಹಲವರು ನಗರದಲ್ಲಿದ್ದ ಚಿಯಾಂಗ್ ಕೈಷೇಕರ ಮನೆಯೊಳಕ್ಕೆ ಕಿಟಕಿಯಿಂದ ಬಾಂಬುಗಳನ್ನು ಎಸೆದರೆಂದೂ, ಆದರೆ ಚಿಯಾಂಗರು ಯಾವ ಅಪಾಯಕ್ಕೂ ಒಳಗಾಗದೆ ಪಾರಾದರೆಂದೂ ವರದಿಯಾಗಿದೆ. ಕೂಡಲೇ ಅವರ ಅಂಗ ರಕ್ಷಕನೊಬ್ಬನು ಹೊರಕ್ಕೆ ಬಂದು ಗುಮಾಸಿ ಮೇಲೆ ಹಲವು ಮಂದಿ ಆತ್ಯಾತ್ಯಕಾರರನ್ನು ಗುಂಡಿನಿಂದ ಹೊಡೆದು ಸಾಯಿಸಿದನೆಂದೂ ಗೊತ್ತಾಗಿದೆ

ಮೈಸೂರಿಗೆ ಆಸ್ಟ್ರೇಲಿಯಾ ಗೋಧಿ

೯೨೦೦ ಟನ್ನುಗಳಷ್ಟು ಗೋಧಿಯನ್ನುಳ್ಳ, ಆಸ್ಟ್ರೇಲಿಯಾದ ಹಡಗು ಮದರಾಸಿಗೆ ಬಂದಿದೆ ಅದರ ಪೈಕಿ ೨೫೦೦ ಟನ್ನುಗಳು ಮೈಸೂರಿಗೆ ಬರಲಿದೆ

ಹುಲಿಗೆ ಬೆದರಿ ಓಡಿದ ಹಸು ಬಸ್ಸಿಗೆ ಸಿಕ್ಕಿತು

ಚಿಕ್ಕಮಗಳೂರು ೧೬

ಕಳೆದ ೯ನೇ ತಾ॥ ಇಲ್ಲಿಂದ ಹೊರಟ ಸಿ ಪಿ ಸಿ ಬಸ್ಸಿಗೆ ಮಾರ್ಗದಲ್ಲಿ ಹುಲಿಯು ಅಟ್ಟಿಸಿಕೊಂಡು ಓಡಿ ಬಂದ ಹಸುವು ಸಿಕ್ಕಿಕೊಂಡು ಮೃತಪಟ್ಟಿತು ಹುಲಿಯು ಅದನ್ನು ಕಂಡು ಆರ್ಭಟಿಸುತ್ತಾ ಪರಾರಿಯಾಯಿತೆಂದು ವರದಿಯಾಗಿದೆ

ಭಾರತದ ತಾತ್ಕಾಲಿಕ ಅಧ್ಯಕ್ಷರ ಚುನಾವಣೆ

ಭಾರತದ ರಿಪಬ್ಲಿಕ್ಕಿನ ತಾತ್ಕಾಲಿಕ ಅಧ್ಯಕ್ಷರ ಚುನಾವಣೆ ವಿಚಾರವು ಕೇಂದ್ರ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಚರ್ಚಿಸಲ್ಪಟ್ಟಿತೆಂದೂ ಶ್ರೀ ಸಿ ರಾಜಗೋಪಾಲಾಚಾರಿ, ಡಾ॥ ರಾಜೇಂದ್ರ ಪ್ರಸಾದ್ ಮತ್ತು ಮೌಲಾನಾ ಅಬುಲ್ ಕಲಾಂ ಆಜಾದ್‌ರವರುಗಳ ಹೆಸರುಗಳನ್ನು ಆ ಸ್ಥಾನಕ್ಕೆ ಸೂಚಿಸಲಾಗಿದೆಯೆಂದೂ ತಿಳಿದುಬಂದಿದೆ

ಗೋಡ್ಸೆ ಅಪೀಲಿಗೆ ತಿರಸ್ಕಾರವೆ?

ಪ್ರೀವಿ ಕೌನ್ಸಿಲ್ಲಿಗೆ ಅಪೀಲನ್ನು ಕಳುಹಿಸುವ ಪದ್ಧತಿಯನ್ನು ವಜಾ ಮಾಡುವಂತೆ ಭಾರತ ರಾಜ್ಯಾಂಗ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿರುವುದರಿಂದ, ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ವಿ. ಗೋಡ್ಸೆಯ ಅಪೀಲನ್ನು ಪ್ರೀವಿ ಕೌನ್ಸಿಲ್ಲಿನವರು ತೆಗೆದುಕೊಳ್ಳುವುದಿಲ್ಲವೆಂದು ತಿಳಿದುಬಂದಿದೆ

...ಮುಂದಿನ ವರ್ಷದಿಂದ ಭಾರತದ ...ಯುನಿವರ್ಸಿಟಿಯಲ್ಲಿ ಐದು ವರ್ಷದ ವ್ಯಾಸಂಗವನ್ನೇರ್ಪಡಿಸಿ ಪದವಿ ಕೊಡಲು ಮದರಾಸ್ ವಿಶ್ವ ವಿದ್ಯಾನಿಲಯದವರು ನಿರ್ಧರಿಸಿದ್ದಾರೆ

೧೦ ಕಾಬೂಲಿನಲ್ಲಿ ಇತ್ತೀಚೆಗೆ ಅಖಿಲ ಭಾರತ ಕಲಾ ಪ್ರದರ್ಶನವು ಪ್ರದರ್ಶಿಸಲ್ಪಟ್ಟ ವಸ್ತುಗಳನ್ನು ಮೈಸೂರು ನಗರದ ವಸ್ತು ಪ್ರದರ್ಶನದಲ್ಲಿ ಇಡಲಾಗುವುದೆಂದು ತಿಳಿದುಬಂದಿದೆ

ರೇಷನಿಂಗ್ ಆಫೀಸರ್‌ರವರ

ಕಛೇರಿ, ಮೈಸೂರು ಸಿಟಿ

ಮೈಸೂರು ಸಿಟಿ ರೇಷನ್ ಕಾರ್ಡುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಡಿಕ್ಲರೇಷನ್ ಫಾರಮ್‌ಗಳನ್ನು ಡಿಪೋಗಳಲ್ಲಿ ಹಂಚುವುದು ಮತ್ತು ಆ ಫಾರಂಗಳನ್ನು ಭರ್ತಿಮಾಡಿ ಡಿಪೋಗಳಿಗೆ ವಾಪಸ್ಸು ಕಳುಹಿಸಲು ನಿಗದಿ ಮಾಡಿರುವ ತಾರೀಖನ್ನು ಈ ತಿಂಗಳು ೧೫ನೇ ತಾರೀಖಿನಿಂದ ೨೦ನೇ ತಾರೀಖಿಗೆ ಬದಲಾಯಿಸಿದೆ

ಈ ಡಿಕ್ಲರೇಷನ್ ಫಾರಂಗಳನ್ನು ಭರ್ತಿದ ದಾಖಸ್ತಾನು ಇರುವ ರೇಷನ್ ಕಾರ್ಡುದಾರರೂ ಸಹ ಡಿಪೋಗಳ ಮೂಲಕ ಫಾರಂಗಳನ್ನು ಪಡೆದು ಭರ್ತಿ ಮಾಡಿ ಆಯಾಯ ಡಿಪೋಗಳಿಗೆ ವಾಪಸ್ಸು ತಲುಪಿಸತಕ್ಕದ್ದು.

ಮೈಸೂರು ಸಿಟಿಯಲ್ಲಿರುವ ಪ್ರತಿಯೊಂದು ಕುಟುಂಬದ ಯಜಮಾನನೂ ಆ ಫಾರಂನಲ್ಲಿ ಮನೆಯ ನಂಬರನ್ನು ಸರಿಯಾಗಿ ನಮೂದಿಸದಿದ್ದಲ್ಲಿ ಅಂತಹವರಿಗೆ ಮನೆ ಮನೆಗೂ ಹಂಚಲ್ಪಡುವ ಹೊಸ ರೇಷನ್ ಕಾರ್ಡನ್ನು ಪಡೆಯಲು ತೊಂದರೆಯಾಗಬಹುದು

[ಸಹಿ] ಬಿ. ಜಿ. ಬಾಲರಾಜ್,
ರೇಷನಿಂಗ್ ಆಫೀಸರ್.

ಮೈಸೂರು ಸಿಟಿ
೨-೯-೪೯

FOR EXHIBITION SIGN BOARDS & Stall Decoration

Consult:- N. Chandran's **FILM ART**, Behind Rajkamal, MYSORE

ಕುದುರೆ ಜೂಜಿನ ಬೆಟ್ಟಿಂಗ್

ಮದರಾಸ್ ಪ್ರಾಂತ್ಯದಲ್ಲಿ ಕುದುರೆ ಜೂಜಿನ ಬೆಟ್ಟಿಂಗನ್ನು ಇನ್ನು ಸ್ವಲ್ಪ ಕಾಲ ಮುಂದುವರಿಸಬೇಕೇ, ಬೇಡವೇ ಬುದನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆಂದು ಪ್ರಧಾನಿಗಳು ತಿಳಿಸಿರುವರು

ಚೇರ್ಮನ್, ಟೌನ್‌ಹಾಲ್ ಕಮಿಟಿ ಕಛೇರಿ,
ಮೈಸೂರು ತಾ॥ ೧೪-೯-೧೯೪೯

ಪ್ರಕಟಣೆ

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ.—ಟೌನ್‌ಹಾಲಿನಲ್ಲಿ ದಸರಾ ಪ್ರಯುಕ್ತ ಅಂದರೆ ತಾರೀಖು ೨೩-೯-೧೯೪೯ ರಿಂದ ೬-೧೦-೧೯೪೯ರ ವರೆಗೆ ವಿಜಯ ದಶಮಿ ವಿನಹ ಬಾಕಿ ಎಲ್ಲಾ ದಿನಗಳಲ್ಲಿ ನಾಟಕಗಳನ್ನು ನಡೆಸಲು ತಾ॥ ೧೯-೯-೧೯೪೯ನೇ ಸೋಮವಾರ ಬೆಳಿಗ್ಗೆ ೧೨-೩೦ ಘಂಟೆಗೆ ಸರಿಯಾಗಿ ಟೌನ್‌ಹಾಲಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಹೆಚ್ಚಿನ ವಿವರಗಳಿಗೆ ಟೌನ್‌ಹಾಲಿನಲ್ಲಿರುವ ನೋಟೀಸು ಬೋರ್ಡನ್ನು ನೋಡುವುದು.

ಟಿ. ವೆಂಕಟರಮಣಯ್ಯ
ಚೇರ್ಮನ್

16-9-49ರಿಂದ :: ಪ್ರದರ್ಶನಾರಂಭ
(ದಿನವಹಿ 3 ಪ್ರದರ್ಶನ)

ಮೈಸೂರು **ಚಾಮುಂಡೇಶ್ವರಿ-ಗಣೇಶ** ಟಾಕೀಸ್

ಸ್ತ್ರೀಯನ್ನು ಸ್ತ್ರೀಯೇ ಮೋಹಿಸುವ ವಿನೋದ ಚಿತ್ರ
ಷೇಕ್ಸ್‌ಪಿಯರ್ ಮಹಾಕವಿಯ "ಟ್ವೆಲ್ತ್‌ನೈಟ್" ಎಂಬ ಅಮೋಘ ಕಥೆಯ ಆಧಾರದ ಮೇಲೆ ಚಿತ್ರಿತವಾದ

ಜೂಪಿಟರ್ಸ್‌ರವರ **ಕನ್ನಿಯಿನ್ ಕಾದಲಿ** (ತಮಿಳು)

ಸುಮಧುರ ಸಂಗೀತ, ನಯನ ಮನೋಹರ ನೃತ್ಯ, ಮನಾನಂದವನ್ನೀಯುವ ಹಾಸ್ಯ, ಅಮೋಘ ದೃಶ್ಯ ವೈಖರಿ ಇವುಗಳನ್ನು ನೋಡಲು ಸದವಕಾಶ

† ಅಂಜಲಿ † ಮಾಧುರಿ † ಲಲಿತ-ಪದ್ಮಿನಿ † ಸಾರಂಗಪಾಣಿ † ಪುಳಿಮೂಟ್ಟೈ
ಅಭಿನಯ

ಬೆಂಗಳೂರು:- ಸೂಪರ್, ಶ್ರೀ ಟಾಕೀಸುಗಳಲ್ಲಿ 10ನೇ ವಾರ
ಕೆ.ಜಿ.ಎಫ್:- ಒಲಂಪಿಯ ೩ನೇ ವಾರ [A Karnataka Release

RAJKAMAL,
MYSORE

MORNING SHOWS
From 16-9-49 for 4 days
Out of the Blue
With:-George Brent, Virginia Mayo, Turhan be

Edited, printed and published by A. R. Nagarajan at Sadhvi Press, D. Subbiah Road, Mysore

16-9-49ರಿಂದ : ಯಶಸ್ವಿ 2ನೇ ವಾರ

ಪ್ರತಿದಿನ ೩ ಪ್ರದರ್ಶನಗಳು

ಮೈಸೂರು **ಲಕ್ಷ್ಮೀ ಮತ್ತು ರಾಜಕಮಲ್**

ಟಾಕೀಸುಗಳಲ್ಲಿ

ಮಾಯಾ ಜಾಲದಿಂದ ಜಗತ್ತನ್ನೇ ತನ್ನ ವಶಪಡಿಸಿಕೊಳ್ಳುವುದರಲ್ಲಿ ಪ್ರಯತ್ನಿಸಿದ ಮಾಂತ್ರಿಕನ ದುರವಸ್ಥೆಯನ್ನು ಚಿತ್ರಿಸುವ

ಮಹಾತ್ಮಾರವರ

★ **ನಾಗಕನ್ನಿಕಾ** ★
(ಕನ್ನಡ)

ಭಾವನಾ ಪ್ರಪಂಚದ ಭಯಂಕರ ದೃಶ್ಯಗಳಿಂದಲೂ ಇಂಪಾದ ಗಾನ, ಮತ್ತು ನೇತ್ರಾನಂದಕರವಾದ ನೃತ್ಯಗಳಿಂದ ಕೂಡಿದ ಜಾನಪದ ಚಿತ್ರ

ಪ್ರಧಾನ ಭೂಮಿಕೆಯಲ್ಲಿ:—

ಜಯಶ್ರೀ, ರತ್ನಮಾಲಾ, ಪ್ರತಿಮಾ ದೇವಿ, ರಾಘವೇಂದ್ರರಾವ್, ಜಿ.ಆರ್. ಸ್ವಾಂಡೋ ವೀರಭದ್ರಪ್ಪ, ಮಹಾಬಲರಾವ್.

[SHANTHA PICTURES' RELEASE

ಪೋ॥ ನಂ 792 WEEKLY EDITION ಬಿಡಿಪ್ರತಿ ೬ ಕಾಸು

ಸಂಪುಟ ೧೪] ಭಾನುವಾರ ೧೪-೯-೧೯೪೯ [ಸಂಚಿಕೆ ೯

ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನದ ಆರಂಭ

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ

ಗೌರ್ನರ್ ಜನರಲ್ಲರ ಸಂದೇಶ

ಶ್ರೀ ಪಟ್ಟಾಭಿರಾಮರವರ ಭಾಷಣ

ಮೈಸೂರು ೧೪

ದಿನ ಬೆಳಿಗ್ಗೆ ಟೌನ್ ಹಾಲಿನಲ್ಲಿ ಸಂದ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ ಕೋಲಾರದ ಶ್ರೀ ಪಟ್ಟಾಭಿರಾಮರ ಅಧ್ಯಕ್ಷತೆಯಲ್ಲಿ ಸೇರಿತು. ಬೆಂಗ ಶ್ರೀ ನೀಲಕಂಠಪ್ಪನವರಿಂದ ಲಾ ಮಾಜಿ ಐ. ಎನ್. ಎ ದಳದ ಶ್ರೀ ರಾಯರಿಂದ ಸ್ವಾಗತ ಗೀತೆ ಮತ್ತು ಬಾಲಕಿಯರಿಂದ ದೇವತಾ ಪ್ರಾ ನಡೆದನಂತರ ಸ್ವಾಗತ ಸಮಿತಿ ಅ ರಾದ ಶ್ರೀ ಟಿ.ಎಸ್. ಸುಬ್ಬಣ್ಣನವರು ಮಾಡಿದರು ಕಾಂಗ್ರೆಸ್ಸು ಸಂಸ್ಥಾ ಧಿಕಾರ ಸೂತ್ರವನ್ನು ವಹಿಸಿಕೊಂ ದ ಎರಡು ವರ್ಷಗಳಿಂದ ಏನೇನು ವಾಗಿದೆ? ಯಾವ ವಾಗ್ದಾನಗಳನ್ನು ಲಾಗಿತ್ತು? ಇನ್ನೂ ಸಾಧಿಸಲ್ಪಡದೇ ದೇನು- ಮುಂತಾದ ವಿಷಯಗಳ ರಿತು ಭಾಷಣ ಮಾಡಿದರು ನಂ ಂಚಾಲಕರಾದ ಶ್ರೀ ಎಚ್. ಎಸ್. ಸ್ವಾಮಿಯವರು ಶೀರಿಕಾ ರೂಪನಾ ಸಣ ಮಾಡಿ, ಕಾರ್ಯಕರ್ತರ ಸ ನವನ್ನು ಕರೆದಿರುವ ಉದ್ದೇಶವನ್ನು ಪ್ರಸ್ತಾಪಿಸಿದರು ಸರ್ಕಾರದವರ ,, ಕಾಂಗ್ರೆಸ್ಸು ಜನತೆಗೆ ಇತ್ತಿರುವ ಯಲ್ಲಿ ಉಂಟಾಗಿರುವ ಲೋಪ ಇ ಕುರಿತು ಟೀಕೆ ಮಾಡುವುದ ಮ ಸೇರಿದ್ದಲ್ಲವೆಂದೂ, ಕಾರ್ಯ ರ ಸಹ ಈ ಸಮಯದಲ್ಲಿ, ತಾವು ಮಾಡುತ್ತಿರುವ ಕಾರ್ಯಗಳ ಬಗ್ಗೆ ವಿಮರ್ಶೆಯಾಗಬೇಕಾಗಿದೆಯೆಂದೂ ರು

ಮ್ಮೇಳನಕ್ಕೆ ಭಾರತದ ಗೌರ್ನರ್ ಜ ದ ಶ್ರೀ ರಾಜಗೋಪಾಲಾಚಾರಿಯ ಸಂದೇಶವನ್ನು ಕಳುಹಿಸಿದ್ದಾರೆ. ಸ್ಸಿನ ಜನರಲ್ ಸೆಕ್ರೆಟರಿ ಶ್ರೀ ಕಾಲೇ ರಾವ್, ಮದ್ರಾಸಿನ ಮಂತ್ರಿ ಶ್ರೀ ಶೆಟ್ಟಿ, ಮೈಸೂರಿನ ಹಣ ಕಾಸಿನ ಶ್ರೀ ಎಚ್. ಸಿ. ದಾಸಪ್ಪ ಮತ್ತು ನದ ಹಲವು ಕಾಂಗ್ರೆಸ್ ಕಾರ್ಯ ಗಳು ಕಳುಹಿಸಿದ ಸಂದೇಶಗಳ ನಲಾಯಿತು

ತರ ಅಧ್ಯಕ್ಷತೆ ವಹಿಸಿದ ಶ್ರೀ ಕೆ. ರಾಮರವರು ಭಾಷಣ ಮಾಡು ನೆಡೆಗಳಲ್ಲಿ ಈ ಸಮ್ಮೇಳನ ಕರೆ ಸಂಶಯಗಳು ಉಂಟಾಗಿವೆಯೆಂ ಕ್ಕೆ ಯಾವ ಕಾರಣವೂ ಇಲ್ಲ ಹೇಳಿ, ಹಿಂದೆ ೧೨ ವರ್ಷಗಳ ಮೈಸೂರು ಕಾಂಗ್ರೆಸ್ಸು ರಾಜಧಾನಿ ಜನ್ಮತಾಳಿತಾದುದರಿಂದ ಸಮ್ಮೇಳನವು ಸೇರಿರುವುದು ರಾದುದೆಂದರು ದೇಶಕ್ಕೆ ಕಾಂ ಟ್ಟ ಭರವಸೆಗಳು ಪೂರೈಸಿದು ಂತಾದ ವಿಷಯಗಳನ್ನು ಪರಿಶೀ ಅಗಾಗ್ಗೆ ಹೀಗೆ ಸೇರುವುದು ಉ ವರು ಪ್ರಜೆಗಳು ಕಾಂಗ್ರೆಸ್ಸಿನವ ರೀಕ್ಷಿಸುತ್ತಿರುವ ವಿಷಯಗಳನ್ನು ಂತು ಅವುಗಳ ಬಗ್ಗೆ ತಕ್ಕ ಕಾ ಗಳನ್ನು ಹಾಕಿಕೊಂಡು ಕಾರ್ಯ ಸಬೇಕಾದರೆ ಇಂತಹ ಸಮ್ಮೇಳ ಅವಶ್ಯಕವೆಂದು ಅಭಿಪ್ರಾಯ ಪ ಯವನಾಗಿ ಗಾಂಧಿಜಿಯವರ ತತ್ವದ ಒರೆಗಲ್ಲಿಗೆ ತಮ್ಮ ಕಾರ್ಯಗಳನ್ನು ಒರೆ ಹಚ್ಚಿ ನೋಡಿದರೆ ಆಗ ನಮ್ಮ ಕೆಲಸಗಳ ಔಚಿತ್ಯಾನೌಚಿತ್ಯಗಳು ಭಾಸವಾಗುವುವೆಂದರು ಮೊದಲಿನಿಂದಲೂ ಕಾಂಗ್ರೆಸ್ಸು ಪ್ರಜಾಪ್ರಭುತ್ವವನ್ನೇ ಪ್ರತಿಪಾದಿಸಿಕೊಂಡು ಬಂದಿದೆ ಇದರ ಹೊಣೆಗಾರಿಕೆಯು ಎಂತಹ ಗುರುತರವಾದುದೆಂಬುದನ್ನು ತಿಳಿದುಕೊಳ್ಳಬೇಕಾಗಿದೆ ಹಿಂದೆ ನಮ್ಮ ಜನರು ಎಂಟು ಆಣೆಗಾಗಿ ತಮ್ಮ ಓಟುಗಳನ್ನು ಕೊಟ್ಟಿರುವ ನಿದರ್ಶನಗಳಿವೆ ಇಂತಹ ಅನೀತಿಗಳು ತಪ್ಪಿಲ್ಲ ಆದುದರಿಂದ ಜನರಿಗೆ ಈ ಬಗ್ಗೆ ಪ್ರಜಾಪ್ರಭುತ್ವದ ನಿಜವಾದ ಲಕ್ಷಣಗಳನ್ನು ತಿಳಿಸುವ ಜವಾಬ್ದಾರಿ ಕಾಂಗ್ರೆಸ್ಸಿನವರ ಮೇಲೆ ಬಿದ್ದಿರುವುದಾಗಿ ಅವರು ಹೇಳಿದರು

ನಂತರ ಹಲವು ಭಾಷಣಗಳಾದವು ಶ್ರೀ ಆನೇಕಲ್ ದೇವರಕೊಂಡಪ್ಪನವರು ಧ್ಯವಾದ ವಿವಾದಗಳು ಬೇಕಿಲ್ಲವೆಂದೂ, ನಿಜವಾದ ಕಾರ್ಯಸಾಧನೆ ಕಡೆಗೆ ಎಲ್ಲರ ಗಮನವಿರಬೇಕೆಂದೂ ಹೇಳಿದರು ಡಾ॥ ಸಾಥ-ನಾರಾಯಣ ಪಂಡಿತರು ಮಾತನಾಡಿ ದೇಶದ ಮುಖಂಡರೇ ಆಡಳಿತಗಾರರಾಗಿರುವುದರಿಂದ ನಿಜವಾದ ನಾಯಕರಿಲ್ಲದಂತಾಗಿದೆಯೆಂದೂ, ಮಂತ್ರಿಗಳ ಪೈಕಿ ಹಲವರು ಆ ಸ್ಥಾನಗಳನ್ನು ಬಿಟ್ಟು ಪ್ರಜಾವರ್ಗಕ್ಕೆ ಮಾರ್ಗದರ್ಶಕರಾಗಬೇಕೆಂದೂ ಕೋರಿದರು ನಂತರ ಶ್ರೀ ಎಂ ಆರ್ ಎಸ್. ಶಾಸ್ತ್ರಿಗಳು ಮಾತನಾಡಿ, ಕೆಲಸಗಾರರು ಸದಾ ತ್ಯಾಗ ಮಾಡಿಕೊಂಡಿರಬೇಕೆಂಬುದರಲ್ಲಿ ಅರ್ಥವಿಲ್ಲವೆಂದೂ, ಅವರಿಗೆ ತಕ್ಕ ಸಹಾಯಗಳನ್ನು ಒದಗಿಸಿಕೊಟ್ಟು ಅವರಿಂದ ದುಡಿಸಿಕೊಳ್ಳಬೇಕಾದುದು ಧರ್ಮವೆಂದೂ ತಿಳಿಸಿದರು

ಸಮ್ಮೇಳನಕ್ಕೆ ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂ, ತುಮಕೂರಿನ ಕೆ ರಂಗಯ್ಯಂಗಾರ್, ಕೆ ರಾಮಾಚಾರ್ಯಯ್ಯಂಗಾರ್, ಎಸ್. ಕೇಶವಯ್ಯಂಗಾರ್ ಮುಂತಾದವರು ಆಗಮಿಸಿದ್ದಾರೆ

ಗೂಡ್ಸ್ ಗಾಡಿಯ ಅಪಘಾತ ದಿಂದ ೯ ಮಂದಿಯ ಮರಣ

ಪಾಟ್ನಾ ೬ ನಿನ್ನೆ ದಿನ ಒಂದು ಗೂಡ್ಸ್ ರೈಲು ಗಾಡಿಯು ಅಪಘಾತಕ್ಕೀಡಾಗಿ ೯ ಮಂದಿ ಮೃತಪಟ್ಟರೆಂದೂ ಮತ್ತು ಅನೇಕ ಜಾನುವಾರುಗಳೂ ಮರಣ ಹೊಂದಿದುವೆಂದೂ ವರದಿಯಾಗಿದೆ

ಆರ್. ಎಸ್. ಎಸ್. ನ ಧ್ಯೇಯ

ಯಾದವರಾವ್ ಜೋಷಿಯವರ ಭಾಷಣ

ಮೈಸೂರು ೧೪

ಕರ್ನಾಟಕ ಪ್ರಾಂತದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕರಾದ ಶ್ರೀ ಯಾದವರಾವ್ ಜೋಷಿಯವರು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡಿ ತಮ್ಮ ಸಂಸ್ಥೆಯ ಧ್ಯೇಯಗಳನ್ನು ವಿವರಿಸಿದರು.

ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿ ಭಾರತೀಯರಲ್ಲಿ ಏಕತ್ವವನ್ನುಂಟುಮಾಡಿ ಪ್ರಪಂಚದ ಇತರ ರಾಷ್ಟ್ರಗಳೊಡನೆ ಭಾರತೀಯರೂ ಸಮಾನಸ್ಕಂಧರಾಗಿ ಮೆರೆಯಬೇಕೆಂಬುದೇ ತಮ್ಮ ಧ್ಯೇಯವೆಂದು ಅವರು ತಿಳಿಸಿದರು

ಸುಮಾರು ೩ ೭ ಸಾವಿರ ಜನ ಸೇರಿದ್ದರು ಸ್ವಯಂ ಸೇವಕರು ಶಿಸ್ತು, ವ್ಯವಸ್ಥೆಗಳನ್ನು ಏರ್ಪಡಿಸಿದ್ದರು ಸಂಸ್ಥೆಯ ಗೀತೆಗಳು, ಸ್ವಯಂ ಸೇವಕರ ಪ್ರದರ್ಶನಗಳೂ ನಡೆದವು

ಪೋಲೀಸರ ಮೇಲೆ ನಾಡು ಬಾಂಬು

ಮೊನ್ನೆ ದಿನ ರಾತ್ರಿ ಮಧುರೆಯ ಪೋಲೀಸರು ಜೀಪ್ ಕಾರಿನಲ್ಲಿ ನಗರದ ಪೂರ್ವ ಭಾಗದಲ್ಲಿ ಗಸ್ತು ತಿರುಗುತ್ತಿದ್ದಾಗ ರಸ್ತೆಯಲ್ಲಿದ್ದ ಮೂವರನ್ನು ಗುಮಾನಿ ಮೇಲೆ ಪ್ರಶ್ನಿಸಲಾಗಿ, ಅವರುಗಳು ಮೆಲ್ಲ ಮೆಲ್ಲಗೆ ರಸ್ತೆಯ ಹಿಂದಕ್ಕೆ ಸರಿಯುತ್ತಿದ್ದು ಒಬ್ಬನು ತನ್ನ ಬಳಿ ಇದ್ದ ಚೀಲದಿಂದ ಒಂದು ಬಾಂಬನ್ನು ತೆಗೆದು ಜೀಪಿನ ಕಡೆ ಎಸೆದನು. ಅನಂತರ ಅವರು ಮೂವರೂ ಓಡಲಾರಂಭಿಸಿದರು. ಪೋಲೀಸರು ಬಂದೂಕಗಳೊಡನೆ ಅವರನ್ನು ಅಟ್ಟಿಸಿಕೊಂಡು ಓಡಿ ಹೋಗಲು ಅವರುಗಳು ತಮ್ಮ ಬಳಿ ಇದ್ದ ಇತರ ಬಾಂಬುಗಳನ್ನು ಎಸೆದು ಒಂದು ಮಾವಿನ ತೋಪಿನ ಮೂಲಕ ತಪ್ಪಿಸಿಕೊಂಡು ಹೋದರೆಂದು ವರದಿಯಾಗಿದೆ ಸಬ್ ಇನ್ಸ್‌ಪೆಕ್ಟರಿಗೆ ಪೆಟ್ಟು ಗಾಯವಾಗಿದೆ

ಎರಡು ರೈಲುಗಳಿಗೆ ಡಿಕ್ಕಿ

ಎಸ್ ಐ ರೈಲ್ವೆಯಲ್ಲಿ ಮೊನ್ನೆ ದಿನ ಎರಡು ರೈಲುಗಳಿಗೆ ಡಿಕ್ಕಿಯಾಗಿ ಹಲವು ಸಾವು ನೋವುಗಳು ಸಂಭವಿಸಿವೆ ವಿವರಗಳು ತಿಳಿದುಬಂದಿಲ್ಲ

ಧ್ವಜಾರೋಹಣ

ಮೈಸೂರು ೧೪

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನದ ಅಂಗವಾಗಿ ಈ ದಿನ ಬೆಳಿಗ್ಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ ಸಮಾರಂಭವು ಜರುಗಿತು ಶ್ರೀ ಕೆ. ಪಟ್ಟಾಭಿರಾಮನ್‌ರವರು ರಾಷ್ಟ್ರ ಧ್ವಜವನ್ನೂ, ಶ್ರೀ ಟಿ. ಎಸ್. ಸುಬ್ಬಣ್ಣನವರು ಮೈಸೂರು ಧ್ವಜವನ್ನೂ ಹಾರಿಸಿದರು. ಸುಮಾರು ೩೦೦ ಜನ ಕಾಂಗ್ರೆಸ್ ಕೆಲಸಗಾರರೂ, ಇತರರೂ ನೆರೆದಿದ್ದರು ಸಮ್ಮೇಳನಕ್ಕಾಗಿ ಸಂಸ್ಥಾನದ ಅನೇಕ ಕಡೆಗಳಿಂದ ಸುಮಾರು ೩೦೦ ಜನ ಕಾಂಗ್ರೆಸ್ ಕೆಲಸಗಾರರು ಬಂದಿರುವರು

ಶ್ರೀ ಕೆ. ಪಟ್ಟಾಭಿರಾಮನ್‌ರವರು ಭಾಷಣ ಮಾಡಿ ಹನ್ನೆರಡು ವರ್ಷಗಳ ಹಿಂದೆ ಮೈಸೂರ್ ಕಾಂಗ್ರೆಸ್ ಸ್ಥಾಪನೆಯಾದಾಗ ಮಹಾತ್ಮಾ ಗಾಂಧಿಯವರ ಯಾವ ಉನ್ನತ ಆದರ್ಶಗಳ ಸಾಧನೆಗಾಗಿ ರಾಷ್ಟ್ರ ಧ್ವಜವು ಹಾರಿಸಲ್ಪಟ್ಟಿತೋ, ಆ ಗುರಿಯನ್ನು ಈ ವರ್ಷ ಬರುವ ಗಾಂಧಿ ಜಯಂತಿಯಿಂದಲಾದರೂ ಸಂಪೂರ್ಣವಾಗಿ ಆಚರಣೆಗೆ ತರುವ ದೃಢ ಸಂಕಲ್ಪವನ್ನು ಎಲ್ಲರೂ ಮಾಡಬೇಕೆಂದು ಕೋರಿದರು. ಶ್ರೀ ಟಿ ಎಸ್ ಸುಬ್ಬಣ್ಣನವರು ಮಾತನಾಡಿ ರಾಷ್ಟ್ರ ಧ್ವಜದ ಅರ್ಥವನ್ನು ವಿವರಿಸಿ ಅದು ನಮ್ಮ ದೇಶದ ಸ್ವಾತಂತ್ರ್ಯದ ಹೆಗ್ಗುರುತೆಂದು ಹೇಳಿದರು

ಬಹಿರಂಗ ಸಭೆಯಲ್ಲಿ ಘೋಷ

ಇನ್‌ಸ್ಪೆಕ್ಟರಿಗೆ ಇರಿತ

ನೆಹರೂರವರ ಭಾಷಣ

ನಡೆಯುತ್ತಿದ್ದಾಗ ದುರ್ಘಟನೆ

ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ನಿನ್ನೆ ದಿನ ಫಿರೋಜ್‌ಪುರದ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಹಲವು ಮಂದಿ ಕಮ್ಯೂನಿಸ್ಟರು ತಮ್ಮ ಧ್ವಜವನ್ನು ಹಿಡಿದು ಸಭೆಯಲ್ಲಿ ಗಲಾಟೆ ಮಾಡಲು ಪ್ರಯತ್ನಿಸಿದರು. ಅವರುಗಳನ್ನು ತಡೆಯಲು ಬಂದ ಹಲವು ಪೋಲೀಸರಿಗೆ ಪೆಟ್ಟು ಬಿದ್ದು, ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಮಾರಕವಾದ ಆಯುಧದಿಂದ ಇರಿಯಲಾಯಿತು ಆ ವೇಳೆಯಲ್ಲಿ ಪೋಲೀಸರು ಗುಂಡುಹಾರಿಸಿ ಪರಿಸ್ಥಿತಿಯನ್ನು ತಹಬಂದಿಗೆ ತಂದರು ಹಲವು ಮಂದಿ ಕಮ್ಯೂನಿಸ್ಟರನ್ನು ದಸ್ತಗಿರಿ ಮಾಡಲಾಗಿದೆ

ಕಾಂಗ್ರೆಸ್ ಪಕ್ಷಕ್ಕೆ ತಾಂಡೇಕರವರ ರಾಜೀನಾಮೆ

ಭಾರತ ರಾಜ್ಯಾಂಗ ಸಭೆಯಲ್ಲಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರು ಮಂಡಿಸಿದ ಭಾಷೆಯ ನಿರ್ಣಯದ ಮೇಲೆ ಅಂತರರಾಷ್ಟ್ರೀಯ ಅಂಕೆಗಳನ್ನು ಉಪಯೋಗಿಸಬೇಕೆಂದು ಕಾಂಗ್ರೆಸ್ ಪಕ್ಷದ ಬೆಂಬಲ ಕೊಡಬೇಕೆಂದು ಕಾಂಗ್ರೆಸ್ ಪಕ್ಷದವರಿಗೆ ಇತ್ತ ಸೂಚನೆಯನ್ನು ಪ್ರತಿಭಟಿಸಿ ಶ್ರೀ ಬಾಬೂ ಪುರುಷೋತ್ತಮದಾಸ್ ತಾಂಡನ್‌ರವರು ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಇತ್ತಿದ್ದಾರೆ.

ವಿದೇಶೀಯರು ಪತ್ರಿಕೆ ನಡೆಸಲು ನಿಷೇಧ

ಪಾಕಿಸ್ತಾನದಲ್ಲಿ ವಿದೇಶೀಯರು ಪತ್ರಿಕೆಗಳನ್ನು ಕೊಂಡು ನಡೆಸ ದನ್ನು ನಿಷೇಧಿಸಲು ಒಂದು ಶಾಸನವನ್ನು ಸಧ್ಯದಲ್ಲಿಯೇ ಸರ್ಕಾರದವರು ಜಾರಿಗೆ ತರುವರೆಂದು ಹೇಳಲಾಗಿದೆ

ವಾರ ಭವಿಷ್ಯ

ತಾ|| ೧೮-೯-೪೯ರಿಂದ ೨೪-೯-೪೯ರ ವರೆಗೆ

ಮೇಷ—ಸಹನೆ ಶಿಸ್ತು, ಧೈರ್ಯಗಳು ಅವಶ್ಯಕ. ಆರೋಗ್ಯ ಉತ್ತಮವಿಲ್ಲ. ರಕ್ತ ದ್ಬಒತ್ತಡ. ಶಾರೀರಕ ಮಾನಸಿಕ ಶ್ರಮ ಬೇಡ ಜಮೀನು ಮುಂತಾದ ವ್ಯವಹಾರದಲ್ಲಿ ಕಾಟನ್ಸ್ಯ ಸೂಕ್ತ. ತಾ|| ೧೮, ೧೯ ಬೇಸರಿಕೆಯ ವಾರ್ತೆ, ವಿಯೋಗ.

ವೃಷಭ—ಆರೋಗ್ಯ ಉತ್ತಮ ಯೋಜಿತ ಕಾರ್ಯ ಯಶಸ್ವಿಯಾಗುವುದು ಎದುರಾಳಿಗಳು ವಿನ್ನರಾಗುವರು ವ್ಯಾಪಾರ ಉದ್ಯೋಗ, ನೌಕರಿಗಳ ಸ್ಥಿತಿ ಸ್ಫೂರ್ತಿಯುತವಾದುದು ಮಾನ ಸನ್ಮಾನ. ಹಣಕಾಸಿನ ಸ್ಥಿತಿ ಸಮರ್ಪಕ, ತಾ|| ೨೦-೨೩ ಖರ್ಚು ಮಿತ್ರರಿಗೆ ಔತಣ

ಮಿಥುನ—ಖರ್ಚಿನ ವಾರ ಕುಟುಂಬದ ಖರ್ಚು ವಿಶೇಷ ಶಾರೀರಿಕ ಕ್ಲೇಶ. ಹೆಚ್ಚಿಲ್ಲ ಆದರೆ ಮಾನಸಿಕ ಕ್ಲೇಶ ಹೆಚ್ಚು ಸಹೋದರರೊಡನೆ ಕಲಹ ಪ್ರಸಂಗ ಆಕಸ್ಮಿಕ ಪ್ರವಾಸ. ನೌಕರಿ, ದಂಧೆಗಳಲ್ಲಿ ಅವ್ಯವಸ್ಥೆ. ಕೈ ಕೆಳಗಿನವರ ಅಲಕ್ಷ್ಯದಿಂದ ತೊಂದರೆ. ಕೋರ್ಟು ವ್ಯವಹಾರ ಕಾಟಸ್ಯ. ಬರುವ ಹಣ ಬರಲಾರದು ತಾ|| ೨೩-೨೪ ಪರಿಚಿತರ ಆಗಮನ

ಕರ್ಕ—ಆರೋಗ್ಯದೃಷ್ಟಿಯಿಂದ ಕ್ಲೇಶದಾಯಕ ಮನಸ್ಸಿಗೆ ಖೇದ. ನೌಕರಿಯಲ್ಲಿ ಮೇಲಧಿಕಾರಿಗಳ ವರ್ತನೆ ಅಸಮರ್ಪಕ. ಹೊಸ ಜವಾಬ್ದಾರಿ. ನಿರಾಶೆ ಚಿಂತೆ. ಪ್ರವಾಸ ಒಳಿತಲ್ಲ ವಾಹನಾಘಾತ ವಿಘ್ನ. ತಾ||೧೮-೧೯ ಕುಟುಂಬಕ್ಕೆ ಅನಾರೋಗ್ಯ.

ಸಿಂಹ—ಗಡ್ಡಲದ ಘಟನಾವಳಿ. ನೌಕರಿಯಲ್ಲಿ ಬೇರವಾದ ಊರಿಗೆ ವರ್ಗ ಇದರಿಂದ ಜಿಹಾಸೆ ವ್ಯಾಪಾರ, ವ್ಯವಹಾರದಲ್ಲಿ ನೌಕರರಿಂದ ತೊಂದರೆ ತಾ|| ೧೮-೧೯ ವಾಹನಾಘಾತ, ಧನ ಚಿಂತೆ, ಅಗ್ನಿಯಿಂದ ಹಾನಿ.

ಕನ್ಯಾ—ಕೋರ್ಟು ವ್ಯವಹಾರದಲ್ಲಿ ಜಯ. ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಉತ್ತಮ ಸ್ಥಿತಿ. ಪ್ರವಾಸವುಂಟು. ಪಕ್ಷಹವಾಸ. ಪರೋಪಕಾರ. ತಾ|| ೨೦-೨೧ ಕಳತ್ರದೊಡನೆ ಚರ್ಚೆ

ತುಲಾ—ಪರೋಪಕಾರ ಕಾರ್ಯ. ಧನ, ಕೀರ್ತಿ ಲಾಭ ಆರೋಗ್ಯ ನೆಟ್ಟಗೆ ಪ್ರವಾಸ ಸುಖ ರೂಪದ್ದು. ಮಾನ ಸನ್ಮಾನ. ತಾ|| ೨೩-೨೪ ಅತಿಥಿ ಸತ್ಕಾರ

ವೃಶ್ಚಿಕ—ನೌಕರಿ ದಂಧೆಗಳಲ್ಲಿ ಆಗಿದ್ದ ಮಾನ ಹಾನಿ ಹೋಗುವುದು. ಯಾರು ತೊಂದರೆಯನ್ನು ಕೊಟ್ಟಿದ್ದರೋ ಅವರೇ ತಪ್ಪನ್ನು ತಿದ್ದಿಕೊಳ್ಳುವರು. ಆರೋಗ್ಯ ನೆಟ್ಟಗೆ. ಹಣ ಲಾಭ ತಾ|| ೧೮, ೧೯ ಉತ್ಸಾಹಕರ ಪತ್ರ.

ಧನು—ತೀವ್ರ ಖಾಯಿಲೆ ಪ್ರಸಂಗ. ದೂರ ಪ್ರವಾಸ ಬೇಡ. ನೌಕರಿ ದಂಧೆಗಳಲ್ಲಿ ತ್ರಾಸ ಪ್ರತಿಸ್ಪರ್ಧಿಗಳಲ್ಲಿ ಹಾವಳಿ. ಹಣದ ಖರ್ಚು ಅಳತೆ ಮೀರುವುದು ತಾ|| ೧೮, ೧೯ ಅಗ್ನಿಯಿಂದ ಹಾನಿ, ಧನ ಚಿಂತೆ.

ಮಕರ—ಮೇಲಧಿಕಾರಿಗಳೊಡನೆ ವಿರೋಧ. ಆರೋಗ್ಯ ನೆಟ್ಟಗೆ ಮಾನಸಿಕ ಸ್ಥಿತಿ ಹಾಗಿಲ್ಲ ವ್ಯಾಪಾರ ವ್ಯವಹಾರಗಳಲ್ಲಿ ವಿಶ್ವಾಸ ಘಾತ. ತಾ|| ೨೦-೨೧ ಪಶ್ಚಾತ್ತಾಪ.

ಕುಂಭ—ಆರೋಗ್ಯ ನೆಟ್ಟಗೆ ಕೈಗೊಂಡ ಕಾರ್ಯ ಶೀಘ್ರದಲ್ಲಿ ಸಿದ್ಧಿ. ಕೋರ್ಟಿನಲ್ಲಿ ನಿಮಗನುಕೂಲದ ತೀರ್ಪು ಮೇಲಧಿಕಾರಿಗಳು ಸುಪ್ರೀತರಾಗುವರು ಪತ್ನಿಯು ಆದರ ತಾ|| ೨೩-೨೪ ಮುಗ್ಗಟ್ಟು

ಮೀನ—ಆನಂದದ ಘಟನೆ ಸಂಭವ. ಆರೋಗ್ಯ ನೆಟ್ಟಗೆ ಕರ್ತವ್ಯದ ಜಾಗೃತಿ ಬಗ್ಗೆ ಮಿತ್ರರ ಭೇಟಿ ಕುಟುಂಬದ ಆರೋಗ್ಯ ನೆಟ್ಟಗೆ. ವ್ಯಾಪಾರ ನೌಕರಿಗಳಲ್ಲಿ ಪರಿಸ್ಥಿತಿ ನೆಟ್ಟಗೆ, ಹೆಚ್ಚಿನ ಪ್ರಯತ್ನ ಸಾಧ್ಯವಿಲ್ಲ, ತಾ|| ೧೯, ೨೦ ಮಹತ್ವದ ಪತ್ರ

ಅಭಯಾಂಬಾಳ್ ಸ್ಮಾರಕ ಭಾಷಣ

ವಿಶ್ವ ವಿದ್ಯಾನಿಲಯದ ಡಾ|| ಯು. ಅಭಯಾಂಬಾಳ್ ಸ್ಮಾರಕ ಭಾಷಣ ಮಾಲೆಯ ಆಶ್ರಯದಲ್ಲಿ ಮದರಾಸ್ ವಿಶ್ವ ವಿದ್ಯಾನಿಲಯದ ಪ್ರೊಫೆಸರಾದ ಡಾ|| ಆರ್ ಬಾಲಕೃಷ್ಣನ್‌ರವರು ಇದೇ ೧೯ ಮತ್ತು ೨೦ನೇ ತಾ|| ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಆರ್ಥಿಕ ವ್ಯವಸ್ಥೆಯ ಪುನರುಜ್ಜೀವನದ ವಿಚಾರವಾಗಿ ಭಾಷಣ ಮಾಡುವರು ಪ್ರೊ|| ವಿ ಎಲ್. ಡಿಸೋಜಾರವರು ಅಧ್ಯಕ್ಷತೆ ವಹಿಸುವರು.

ಗಾಯತ್ರೀ ಟಾಕೀಸ್

18-9-49 ರಿಂದ 2 ದಿನಗಳು
ಪ್ರತಿ ದಿನ 3 ಪ್ರದರ್ಶನಗಳು

Green Daulphin Street

(ಗ್ರೀನ್ ಡಾಲ್ಫಿನ್ ಸ್ಟ್ರೀಟ್)
ಪಾತ್ರ - ಲಾನಾ ಟರ್ನರ್.

-: ಮುಂದಿನ ಬದಲಾವಣೆ :-

BOOM TOWN

ಹಿಂದಿಯನ್ನು ರಾಷ್ಟ್ರ ಭಾಷೆ ಮಾಡಿದುದಕ್ಕೆ ರಾಜೀನಾಮೆ

ಹಿಂದೂಸ್ಥಾನಿ ಬದಲು ಹಿಂದಿಯನ್ನು ಭಾರತದ ರಾಷ್ಟ್ರ ಭಾಷೆಯನ್ನಾಗಿ ಮಾಡಬೇಕೆಂದು ಕೇಂದ್ರ ರಾಜಾಂಗ ಸಭೆಯಲ್ಲಿ ಆದ ತೀರ್ಮಾನವನ್ನು ಪ್ರತಿಭಟಿಸಿ, ಆ ಸಭೆಗೆ ಅಲಹಾಬಾದಿನ ಜಡ್ಜ್ ಹೆಚ್ ಲಾರಿಯವರು ರಾಜೀನಾಮೆ ಇತ್ತಿದ್ದಾರೆ.

ರಾಜಕಮಲ್,

ಟಾಕೀಸ್, ಮೈಸೂರು
16--9—49 ರಿಂದ
ಅಮೋಘ 2 ನೇ ವಾರ

ನಾಗಕನ್ನಿಕಾ [ಕನ್ನಡ]

ಮಧುರ ಸಂಗೀತಗಳಿಂದಲೂ ಮನಮೋಹಕ ಅಭಿನಯ ನೃತ್ಯಗಳಿಂದಲೂ ಕೂಡಿದ ಮಹೋನ್ನತ ಚಿತ್ರ

MORNING SHOWS
From 16-9-49 for 4 days

Out of the Blue

With-George Brent,
Virginia Mayo.
Turhan be

ಗಣಪತಿ ಮಂಗಳಾರ

ಮೈಸೂರು ದೊಡ್ಡ ಗಡಿಯಾ ಇರುವ ಸ್ಟ್ಯಾಂಡರ್ಡ್ ಆಯಿಲ್ ಸಂಸ್ಥೆಯವರು ಗಣಪತಿ ಮಂ ಯನ್ನು ಮೊನ್ನೆ ಸಂಜೆ ಆಚ

ನ್ಯೂ ಅಪೇ

ಟಾಕೀಸ್, ಮೈಸೂ
16-9-49 ರಿಂ
ಅಮೋಘ ೨ ನೇ ವಾ
ಭಾಗ್ಯ ಪಿಕ್ಚರ್ಸ್‌ರವರ

ಮಂಗಯ

* ಕರಸ್ಸಿ

ಕನ್ನಾಂಬ, ಅಂಜಲಿ ದೇವಿ, ಚಿನ್ನಪ್ಪ, ಎಲ್. ಎಸ್. ಕೃಷ್ಣ ಮಧುರಂ, ಲಲಿತ-ಪದ್ಮ ಪಾತ್ರ ವಹಿಸಿರುವ ತಮಿಳು ಪ್ರದರ್ಶನ - ಮಧ್ಯಾಹ್ನ ೩, ಸಂಜೆ ಮತ್ತು ರಾತ್ರಿ ೯-೪೫

Distributors for M State, S. Canara & C
R. V. PICTURES
137, Subedar Chatr Road, Bangalore



ಪೂರ್ಣ ಚಂದ್ರನ ವರಪ್ರಸಾದ !

ವಿಷಪೂರಿತ ... ಯ ಗಾಲೂಬಾಧಾನ್ಯ ... ಅನೇಕ ಅಗಿರುವರೆಂದು ನಮ್ಮ ಗಳಿಗೆ ಅಧಿಕಾರಿಕ ವಿಚ್ಛಾರ ರೂಪ್ಯ ತಿಳಿಸುತ್ತವೆ. ಬಹುಕಾಲದಿಂದಲೂ ಚಂದ್ರನಲ್ಲಿ ... ನಮ್ಮ ... ಜನರಿಗೆ ... ಆಯುರ್ವೇದದ ಹಲವು ... ಚಂದ್ರನ ... ಚಂದ್ರ

ಅತ್ಯಮೂಲ್ಯ ... ಆಯುರ್ವೇದಾಶ್ರಮ ಫಾರ್ಮಸಿಯಲ್ಲಿ ... ಆಯುರ್ವೇದಾಶ್ರಮ ಫಾರ್ಮಸಿ ... ಅಹಮದ್‌ನಗರ.

AYURVEDASHRAM PHARMACY LTD. AHMEDNAGAR

G 17

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು

U HARI SHENOY B.A.,
ಏಜೆಂಟ್

Edited, printed and published by A. R. N rajan at Sadhvi Press, D Subbiah Road, Mysore

ಫೋ॥ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೧೯-೯-೧೯೪೯ [ಸಂಚಿಕೆ ೪೫

ಬ್ಯಾಂಕು ಅಂಚೆ ಕಛೇರಿಗಳಿಗೆ ೩ ದಿನ ರಜಾ

ಕಾಂಗ್ರೆಸ್ಸಿನ ನೈತಿಕ ಮಟ್ಟವನ್ನು ಸಂರಕ್ಷಿಸಬೇಕು

ಮೂರು ತಿಂಗಳೊಳಗೆ ಕಾಂಗ್ರೆಸ್ ಸಮಿತಿಗಳ ಚುನಾವಣೆ ನಡೆಯಬೇಕು

ಕೆಲಸಗಾರರ ಸಮ್ಮೇಳನದಲ್ಲಿ ನಿರ್ಣಯಗಳು

ಮೈಸೂರು ೧೯

ಸಂಸ್ಥಾನದ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವು ನಿನ್ನೆ ರಾತ್ರಿ ೮ ಗಂಟೆಗೆ ಮುಕ್ತಾಯವಾಯಿತು. ಸುಮಾರು ೨೦ ಮಂದಿ ಪ್ರತಿನಿಧಿಗಳು ಭಾಷಣ ಮಾಡಿ, ಕಾಂಗ್ರೆಸ್ಸಿನ ನೈತಿಕ ಮಟ್ಟವು ಇಳಿದಿದೆಯೆಂದೂ ಜನರಲ್ಲಿ ಹಿಂದೆ ಸಂಸ್ಥೆಯ ಮೇಲೆ ಇದ್ದ ಗೌರವವು ಹೋಗುತ್ತಿದೆಯೆಂದೂ, ಕಾಂಗ್ರೆಸ್ ಸಂಸ್ಥೆಯು ಭದ್ರವಾಗಬೇಕಾದರೆ, ಕಾರ್ಯಕರ್ತರುಗಳು ಸೇವಾಕಾಂಕ್ಷೆಯಿಂದ 'ಮಹಾತ್ಮರ ಧ್ಯೇಯಗಳನ್ನು ಕಾರ್ಯರೂಪಕ್ಕೆ ತಂದು, ಸಾಮಾನ್ಯ ಜನರಲ್ಲಿ ಹೆಚ್ಚು ಸಂಪರ್ಕವನ್ನಿಟ್ಟುಕೊಳ್ಳಬೇಕೆಂದೂ ತಿಳಿಸಿದರು

ಡಾ॥ ಪಾರ್ಥನಾರಾಯಣ ಪಂಡಿತರು ಮಾತನಾಡಿ, ಈಗಿನ ಕಾಂಗ್ರೆಸ್ ನಾಯಕತ್ವವು ಬಹಳಮಟ್ಟಿಗೆ ಗೆಜ್ಜಲು ಹಿಡಿದಂತಾಗಿದೆಯೆಂದೂ, ಅನೀತಿಯು ತಲೆದೋರಿದೆಯೆಂದೂ ಹೇಳಿದರು. ನಾಯಕರೆಲ್ಲರೂ ಮಂತ್ರಿ ಪದವಿಗಳನ್ನು ಆಕ್ರಮಿಸಿರುವುದರಿಂದ ಮುಖಂಡರ ಅಭಾವವುಂಟಾಗುವುದೆಂದೂ ಆದುದರಿಂದ ಶ್ರೀಗಳಾದ ...ಸಿ ರೆಡ್ಡಿ, ಹೆಚ್. ಸಿ ದಾಸಪ್ಪ, ಕೆ. ... ಭಾಷ್ಯಂ ಮುಂತಾದವರು ಮಂತ್ರಿ ಪದವಿಯನ್ನು ತ್ಯಜಿಸಿ ಕಾಂಗ್ರೆಸ್ ಸಂಸ್ಥೆಯ ಮುಖಂಡತ್ವವನ್ನು ವಹಿಸಬೇಕೆಂದೂ ಸೂಚಿಸಿದರು.

ಶ್ರೀ ಟಿ. ಸುಬ್ರಹ್ಮಣ್ಯಂರವರು ಮಾತನಾಡಿ, ಸಂಸ್ಥೆಯಲ್ಲಿರುವ ಲೋಪ ದೋಷಗಳನ್ನು ಸರಿಪಡಿಸುವುದು ಎಲ್ಲರ ಕರ್ತವ್ಯವೆಂದು ಹೇಳಿದರು ಆದರೆ ಸಂಸ್ಥೆಯ ಅಸ್ತಿತ್ವಕ್ಕೆ ಧಕ್ಕೆ ಬರುವ ಕಾರ್ಯವನ್ನು ಯಾರೂ ಮಾಡಬಾರದೆಂದೂ ಸೂಚಿಸಿದರು ...ನಾಯಕರುಗಳಾಗಿದ್ದವರು ಮಂತ್ರಿಗಳಾದ ... ಇತರ ಉತ್ಸಾಹಿಗಳು ಮುಂದೆ ಬಂದು ನಾಯಕತ್ವವನ್ನು ವಹಿಸಿ ಮಂತ್ರಿಗಳ ಮೇಲೂ ತಮ್ಮ ಪ್ರಭಾವವನ್ನು ಬೀರಬಹುದೆಂದೂ ಹೇಳಿದರು ಕಾಂಗ್ರೆಸ್ ಸಂಸ್ಥೆಗಳಲ್ಲಿ ಅನೀತಿಯು ತಲೆದೋರಿದೆ ಎಂಬುವನ್ನು ನಿರಾಕರಿಸಿದರು. ಅಲ್ಲಲ್ಲಿ ... ಕಂಡುಬಂದಿರಬಹುದಾದ ತಪ್ಪುಗಳನ್ನು ಸರಿಪಡಿಸುವುದು ಅಸಾಧ್ಯವಲ್ಲವೆಂದು ಹೇಳಿದರು. ಇಂ'ನ ಪರಿಸ್ಥಿತಿಯಲ್ಲಿ ಮಂತ್ರಿಮಂಡಳದವರನ್ನೂ ಕಾಂಗ್ರೆಸ್ ನಾಯಕರನ್ನೂ ಮನಸ್ಸು ಬಂದಂತೆ ಟೀಕಿಸದೆ ಎಲ್ಲರೂ ಒಂದು ವರ್ಷಕಾಲ ಬಾಯಿಗೆ ಬೀಗ ಹಾಕಿಕೊಂಡಿದ್ದರೆ ಕಡೆಯಲ್ಲಿ ಒಳ್ಳೆಯ ಪರಿಣಾಮವುಂಟಾಗುವುದೆಂದು ಅಭಿಪ್ರಾಯಪಟ್ಟರು. ಸರ್ಕಾರದಲ್ಲಿ ಕೋಮುವಾರು ಪ್ರಾಬಲ್ಯ ಹೆಚ್ಚಾಗುತ್ತಿದೆ ಎಂದು ಜನರಲ್ಲಿರುವ ಭಾವನೆಯು ನಿಜವೇ ಆದು ಅವರ ... ಬೆಳಸುತ್ತಿದೆಯೆಂದು ಹೇಳಿದರು

ಮಧ್ಯಾಹ್ನ ಸಭೆಯು ಮತ್ತೆ ಸೇರಿದಾಗ ಹಲವು ಸದಸ್ಯರು ಮಾತನಾಡಿದರು ... ಗಳಾದ ಟಿ. ಸಿದ್ದಲಿಂಗಯ್ಯ, ಕೆ ಸಿ ರೆಡ್ಡಿ ಮತ್ತು ಎಸ್. ನಿಜಲಿಂಗಪ್ಪನವರು ಗೈರುಹಾಜರಿಯಿಂದ ಸಮ್ಮೇಳನಕ್ಕೆ ಕಳುಹಿಸಿದ ... ಶುಭ ಸಂದೇಶವನ್ನು ಓದಲಾಯಿತು

ಏಕಮತ್ಯ, ವಿಶಾಲಭಾವನೆ, ರಚನಾತ್ಮಕ ಕಾರ್ಯ ಮತ್ತು ಹೆಚ್ಚು ಆಹಾರ ಬೆಳೆ ಯೋಜನೆಗಳಿಗೆ ಎಲ್ಲರೂ ಮುಖ್ಯ ಗಮನಕೊಡಬೇಕೆಂದು ಅವರು ಕೋರಿದ್ದರು.

ಅನಂತರ ಅಧ್ಯಕ್ಷರು ಕೆಳಗೆ ಕಂಡ ನಿರ್ಣಯಗಳನ್ನು ಮಂಡಿಸಿದರು –

ನಿರ್ಣಯಗಳು

ಕಾಂಗ್ರೆಸ್ಸು ತನ್ನ ಕಾರ್ಯಕ್ರಮಗಳನ್ನು ನೈತಿಕ ಧೋರಣೆಯಿಂದಲೇ ಮೊದಲಿನಿಂದಲೂ ನಡೆಸಿಕೊಂಡುಬರುತ್ತಿದೆ ಸ್ವರಾಜ್ಯವನ್ನು ನೀತಿಯ ಬಲದಿಂದಲೇ ಗಳಿಸಿದೆ. ಇತ್ತೀಚೆಗೆ ಜನತೆಗೆ ಸ್ವರಾಜ್ಯವು ಬಂದ ಮೇಲೆ ನೀತಿಯ ಧೋರಣೆಯು ಕಡಿಮೆಯಾಗಿರುವುದನ್ನು ಈ ಸಮ್ಮೇಳನವು ಮನದಟ್ಟು ಮಾಡಿಕೊಂಡಿದೆ ದೇಶವೂ ಕಾಂಗ್ರೆಸ್ಸಿನ ಬೇರೆ ಬೇರೆ ಅಂಗಗಳೂ ನೀತಿವಂತವಾಗಿ ಬೆಳಗದಿದ್ದರೆ ಕಾಂಗ್ರೆಸ್ಸಿನ ಭವಿಷ್ಯವು ಕಠಿಣವಾಗುತ್ತದೆ. ಈ ಶಕ್ತಿಯು ಸಂಚಾರವಾಗುವಂತೆ ಮಾಡಲು ರಾಷ್ಟ್ರದ ಪ್ರತಿಯೊಂದು ಅಂಗಗಳಿಗೆ ಜವಾಬ್ದಾರರೆಲ್ಲರೂ ಕೂಡಲೇ ಕಾರ್ಯಕ್ರಮಗಳನ್ನು ಹಾಕಿ ಪ್ರಗತಿ ದಾರಿ ಮಾಡಬೇಕೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ ಅದಕ್ಕೆ ಸಾಧಕವಾಗಿ ಕಾರ್ಯಕರ್ತರಲ್ಲಿಯೂ ಸರ್ಕಾರಕ್ಕೆ ಸಂಬಂಧಿಸಿದ ಕಾಂಗ್ರೆಸ್ಸಿಗರಲ್ಲಿಯೂ ಹೆಚ್ಚಿನ ಸಂಯಮ, ಸೇವಾ ದೃಷ್ಟಿ, ರಾಷ್ಟ್ರೀಯ ಭಾವನೆಗಳು ಬೆಳಗಬೇಕೆಂದೂ, ಕಾಂಗ್ರೆಸ್ ಸಂಸ್ಥೆಯ ಚುನಾವಣೆಗಳು ಮತ್ತು ಪುನರ್‌ರಚನೆಯ ಎಲ್ಲಾ ಕಾರ್ಯಕ್ರಮಗಳೂ ೩ ತಿಂಗಳ ಅವಧಿಯಲ್ಲಿ ಪೂರೈಸಲ್ಪಡಬೇಕೆಂದೂ ಈ ಸಮ್ಮೇಳನವು ಒತ್ತಾಯಪಡಿಸುತ್ತದೆ

ಕಾಂಗ್ರೆಸ್ ಕೆಲಸಗಾರರು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡುವುದರಿಂದ ಅನೇಕ ವಿಷಯಗಳು ಸ್ಪಷ್ಟೀಕರಣವಾಗಿ ಎಲ್ಲರೂ ಒಮ್ಮತವಾಗಿ ಕೆಲಸಮಾಡಲು ಅನುಕೂಲವಾಗುವದರಿಂದಲೂ ಈ ಬಗೆಯ ಪರಿಸ್ಥಿತಿ ಪರಿಶೀಲನೆ ಪದೇ ಪದೇ ಅಗತ್ಯವಾಗಿರುವುದರಿಂದಲೂ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವು ಆಗಾಗ ನಡೆಸಲ್ಪಡಬೇಕೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ

ಶ್ರೀಮತಿ ಸುನಂದಮ್ಮ ಮತ್ತು ಶ್ರೀ ... ತಿಮ್ಮೇಗೌಡರು ನಿರ್ಣಯವನ್ನು ವಿರೋಧಿಸಿ ಅದು ಕೇವಲ ನಷ್ಟ ರಚನೆ ... ದರ್ಶಕ್ಕಾಗಿ ಈ ಸಮ್ಮೇಳನವನ್ನು ಸೇರಿಸುವ ಅಗತ್ಯವೇ ಇರಲಿಲ್ಲವೆಂದೂ ಹೇಳಿದರು.

ಮಂತ್ರಿ ಮಂಡಲದಲ್ಲೂ ಕಾಂಗ್ರೆಸ್ ಸಂಸ್ಥೆಯಲ್ಲೂ ಇರುವ ಲೋಪ ದೋಷಗಳನ್ನು ಕ್ರಮಪಡಿಸಲು ಸೂಕ್ತವಾದ ಸಲಹೆಗಳನ್ನು ನೀಡಬೇಕೆಂದು ಸೂಚಿಸಿದರು.

ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಉತ್ತರವಿತ್ತು ಮಂತ್ರಿ ಮಂಡಲದವರ ಮೇಲಾಗಲೀ ಇತರರ ಮೇಲಾಗಲೀ ಆರೋಪಣೆಗಳನ್ನು ಮಾಡುವುದರಿಂದಲೇ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ, ಲೋಪದೋಷಗಳು ಎಲ್ಲರಲ್ಲಿಯೂ ಇರುವುವೆಂದೂ ಅವುಗಳನ್ನು ತಿದ್ದಿಕೊಂಡು ಮುಂದೆ ಸಂಸ್ಥೆಯು ಯಶಸ್ವಿಯಾಗಿ ಪ್ರಜಾ ಸೇವೆ ಮಾಡುವಂತೆ ಎಲ್ಲರೂ ಪ್ರಯತ್ನಿಸಬೇಕೆಂದೂ ಹೇಳಿದರು

ಓಟಿಗೆ ಹಾಕಿದಾಗ ನಿರ್ಣಯಗಳು ವಿಶೇಷ ಬಹುಮತದಿಂದ ಅಂಗೀಕರಿಸಲ್ಪಟ್ಟವು

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಸರ್ಕಾರದವರು ಕೈಗೊಳ್ಳುವ ಕಾರ್ಯಕ್ರಮಗಳಿಗೆ ಎಲ್ಲರೂ ಸಂಪೂರ್ಣವಾದ ಸಹಕಾರವನ್ನು ನೀಡಬೇಕೆಂದೂ, ಇನ್ನು ಮುಂದೆ ಕಾಂಗ್ರೆಸ್ಸಿನ ಧ್ಯೇಯಗಳಿಗೆ ಅನುಗುಣವಾಗಿ ನಡೆಯುವಂತೆ ಗಾಂಧೀಜಿಯವರ ಜಯಂತಿ ಸಮಯದಲ್ಲಿಯೇ ದೃಢ ಸಂಕಲ್ಪ ಮಾಡಬೇಕೆಂದೂ ಕೋರಿದರು

ವಿಶ್ವ ಸಂಸ್ಥೆಯ ಮೈಸೂರು ಶಾಖೆಯ ಪ್ರಬಂಧ ಸ್ಪರ್ಧೆ

ಇದೇ ೨೪ ನೇ ತಾ॥ ಆಚರಿಸಲ್ಪಡುವ ವಿಶ್ವ ಸಂಸ್ಥೆಯ ದಿನಾಚರಣೆಯ ಸಂಬಂಧದಲ್ಲಿ ವಿಶ್ವ ಸಂಸ್ಥೆಯ ಮೈಸೂರು ಸಂಘದವರು ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ, ಆರು ಬಹುಮಾನಗಳನ್ನು ಕೊಡಲು ನಿರ್ಧರಿಸಿದ್ದಾರೆ ಅವುಗಳ ಸ್ಕೀಮನ್ನು ವಿದ್ಯಾರ್ಥಿಗಳಿಗಾಗಿ ಮೀಸಲಾಗಿಟ್ಟಿದೆ ಪ್ರಬಂಧಗಳು ಇಂಗ್ಲೀಷಿನಲ್ಲಿದ್ದು ೨,೦೦೦ ಪದಗಳಿಗಿಂತ ಹೆಚ್ಚಿರಕೂಡದು ಮತ್ತು ಅಕ್ಟೋಬರ್ ೧೦ ನೇ ತಾ। ರೊಳಗಾಗಿ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯಲ್ಲಿ ... ನೇ ನಂಬರು ಮನೆಯಲ್ಲಿರುವ ಸಂಘಕ್ಕೆ ಕಳುಹಿಸಬೇಕೆಂದು ಅದರ ಅಧ್ಯಕ್ಷರು ತಿಳಿಸಿರುತ್ತಾರೆ

... ಬೊಂಬಾಯಿನ ಪುರ ಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಉಪ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದವರಿಗೆ ಸಂಪೂರ್ಣ ಜಯ ಲಭಿಸಿದೆಯೆಂದು ತಿಳಿದುಬಂದಿದೆ.

ಬ್ಯಾಂಕುಗಳಿಗೆ ೩ ದಿನಗಳು ರಜಾ

ಇದೇ ೧೯, ೨೦ ಮತ್ತು ೨೧ ನೇ ತಾ॥ ಗಳು ಬ್ಯಾಂಕು ಮತ್ತು ಅಂಚೆ ಕಛೇರಿಗಳಿಗೆ ರಜಾ ದಿನವೆಂದು ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಪೌಂಡು ಸ್ಟರ್ಲಿಂಗ್ ಬೆಲೆಯನ್ನು ಕಡಿಮೆ ಮಾಡಲಾಗುವುದೆಂದು ಬ್ರಿಟನ್ನು ನಿರ್ಧರಿಸಿರುವುದರಿಂದ ಅದರ ಬಗ್ಗೆ ಸಟ್ಟಾ ವ್ಯಾಪಾರ ನಿಲ್ಲಿಸಲು ಬ್ಯಾಂಕುಗಳಿಗೆ ರಜಾ ಕೊಡಲಾಗಿದೆಯೆಂದೂ, ಈ ಕಾಲದೊಳಗಾಗಿ ರೂಪಾಯಿನ ಬೆಲೆಯನ್ನು ಸ್ಟರ್ಲಿಂಗ್ ಬೆಲೆಯಷ್ಟೇ ಇಳಿಸಲಾಗುವುದೆಂದೂ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ಹಡಗಿಗೆ ಬೆಂಕಿ ಬಿದ್ದು ನೂರಾರು ಜನರ ಮರಣ

ಟೋರೊಂಟೋ ಬಂದರಿನಲ್ಲಿ ಭಾರಿ ಹಡಗಿಗೆ ಬೆಂಕಿ ಬಿದ್ದು ೨೨೫ ಜನರು ಸತ್ತರೆಂದೂ, ಅನೇಕರು ನೀರಿಗೆ ಹಾರಿ ಮುಳುಗಿಹೋದರೆಂದೂ, ಹಡಗು ಸಂಪೂರ್ಣವಾಗಿ ನಾಶವಾಯಿತೆಂದೂ ವರದಿಯಾಗಿದೆ.

ಕಾಶ್ಮೀರದ ಧಾಳಿಗೆ ಅಜಾದ್ ಸೈನ್ಯ

ಕಾಶ್ಮೀರ ಮತ್ತು ಜಮ್ಮುಗಳ ಮೇಲೆ ಪುನಃ ಧಾಳಿ ನಡೆಸಲು ೪೦ ಸಾವಿರ ಆಜಾದ್ ಕಾಶ್ಮೀರ ಸೈನ್ಯವನ್ನು ಪಾಕೀಸ್ತಾನದಲ್ಲಿ ಸಜ್ಜುಗೊಳಿಸಲಾಗುತ್ತಿದೆಯೆಂದು ತಿಳಿದುಬಂದಿದೆ

ವಿಮಾನದ ಮೂಲಕ ಪೈರಿನ ಕ್ರಿಮಿಗಳ ನಾಶ

ನಾರ್ಮಂಡಿಯಲ್ಲಿ ೧೦ ಸಾವಿರ ಎಕರೆ ಜಮೀನುಗಳಲ್ಲಿ ಪೈರುಗಳನ್ನು ನಾಶಪಡಿಸುತ್ತಿದ್ದ ಕ್ರಿಮಿಗಳನ್ನು ಕೊಲ್ಲಲು ಬ್ರಿಟನ್ನಿನ ವಿಮಾನವೊಂದು ೨೪ ಸಾವಿರ ಗ್ಯಾಲನ್ ಎಣ್ಣೆಯನ್ನು ಚೆಲ್ಲಿತೆಂದು ವರದಿಯಾಗಿದೆ

ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮರಿಗೆ ಪಾನನಿರೋಧ

ಮುಂದಿನ ತಿಂಗಳಿನಿಂದ ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮರಿಗೆ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಲು ಸರ್ಕಾರದವರು ನಿರ್ಧರಿಸಿದ್ದಾರೆ ಮುಸ್ಲಿಮೇತರರಿಗೆ ರಹದಾರಿ ಮೂಲಕ ಅದನ್ನು ಕೊಡಲಾಗುವುದು

ಕಲ್ಕತ್ತದ ೨೦೦ ವಿದ್ಯಾರ್ಥಿಗಳ ಉಪವಾಸ

ಇದೇ ೯ ನೇ ತಾ' ನಿಂದ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜ್ ವಿದ್ಯಾರ್ಥಿಗಳು ಮುಷ್ಕರ ಹೂಡಿರುವುದರಿಂದ ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳನ್ನು ಈ ದಿನದಿಂದ ಮುಚ್ಚಬೇಕೆಂದು ಸರ್ಕಾರದವರು ಮಾಡಿರುವ ಆಜ್ಞೆಯನ್ನು ಪ್ರತಿಭಟಿಸಲು ನಿಲಯದ ೨೦೦ ಮಂದಿ ವಿದ್ಯಾರ್ಥಿಗಳು ನೆನ್ನೆ ದಿನದಿಂದ ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ್ದಾರೆ

ಸತ್ಕಾರ ಸಭೆ

ಉತ್ತರ ಹಿಂದೂಸ್ಥಾನ ಯಾತ್ರೆಗಾಗಿ ... ಹೊರಡುವ ಶ್ರೀ ... ವಿಶ್ವೇಶ್ವರಯ್ಯನವರ ಗೌರವಾರ್ಥವಾಗಿ ದೇವಾಂಗ ಸಂಘದವರು ನಾಳೆ ಸಂಜೆ ೬-೩೦ ಗಂಟೆಗೆ ಕಾಶೀಮಠದ ಛತ್ರದಲ್ಲಿ ಡಾ॥ ... ರಾಮಲಿಂಗ ರೆಡ್ಡಿ ... ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದಾರೆ

ದುಗಪಟ್ಟಿ ಪುಟ್ಟಲಿಂಗಪ್ಪ ನವರಿಗೆ ಸತ್ಕಾರ

ಯಳಂದೂರು ೧೫

ಶ್ರೀಮನ್ಮಹಾರಾಜರವರಿಂದ ಸಾರ್ವಜನಿಕ ಸೇವಾ ಪ್ರಶಸ್ತಿ ಪದಕವನ್ನು ಪಡೆದಿರುವ ಶ್ರೀ ದುಗಪಟ್ಟಿ ಪುಟ್ಟಲಿಂಗಪ್ಪನವರನ್ನು ಸನ್ಮಾನಿಸಲು ಇಲ್ಲಿನ ಜಹಗೀರುದಾರರ ಭವನದಲ್ಲಿ ನಿನ್ನೆ ದಿನ ಒಂದು ಭಾರಿ ಸಮಾರಂಭವು ಏರ್ಪಾಡಾಗಿತ್ತು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಆ ಸ್ಥಾನವನ್ನು ವಹಿಸಿದ್ದರು ತಾಲ್ಲೂಕಿನ ಎಲ್ಲಾ ಭಾಗಗಳಿಂದಲೂ ಮತ್ತು ಇತರ ತಾಲ್ಲೂಕುಗಳಿಂದಲೂ ಅನೇಕ ಮಹನೀಯರುಗಳು ದಯಮಾಡಿಸಿದ್ದರು

ಬಾಲಕಿಯ ಸ್ವಾಗತಗೀತೆಯೊಡನೆ ಸಭೆಯು ಪ್ರಾರಂಭವಾಯಿತು ಶ್ರೀ ಆರ್ ಬಸವಣ್ಣನವರು ಶ್ರೀ ಪುಟ್ಟಲಿಂಗಪ್ಪನವರ ಸೇವೆಯನ್ನು ಕೊಂಡಾಡಿ, ರಾಜ ಸನ್ಮಾನವು ದೊರೆತಿರುವುದಕ್ಕಾಗಿ ಅವರನ್ನು ಅಭಿನಂದಿಸಿ ಅವರ ಸರ್ವತೋಮುಖವಾದ ಧರ್ಮ ಕಾರ್ಯಗಳಿಗಾಗಿ ತಾಲ್ಲೂಕು ನಿವಾಸಿಗಳ ಕೃತಜ್ಞತೆಯನ್ನು ಸಲ್ಲಿಸಿ ಬಿನ್ನವತ್ತಳೆಯೊಂದನ್ನು ಅರ್ಪಿಸಿದರು ಶ್ರೀಗಳಾದ ಪುರಿಸರ್ವೋತ್ತಮ ರಾವ್, ಕುದೇರು ವೀರಣ್ಣ, ಯಳಂದೂರು ಲಕ್ಷ್ಮೀನಾರಾಯಣ ರಾವ್, ನಂಜನಗೂಡಿನ ಟಿ. ವಿ ರಾಮರಾವ್, ಅಗರದ ಶ್ರೀನಿವಾಸಾಚಾರ್, ಅಗರಂ ರಂಗಯ್ಯ ಮತ್ತು ರಾಮಸಮುದ್ರದ ರೇವಣ್ಣ ಮುಂತಾದವರು ಭಾಷಣ ಮಾಡಿ ಶ್ರೀ ಪುಟ್ಟಲಿಂಗಪ್ಪನವರ ಸರಳ ಜೀವನ, ನಿಸ್ವಾರ್ಥಬುದ್ಧಿ, ಪರೋಪಕಾರ ಪರಾಯಣತೆ ಮುಂತಾದ ಗುಣಗಳನ್ನು ಪ್ರಶಂಸೆ ಮಾಡಿದರು. ಮತ್ತು ಅವರಿಗೆ ಸಕಲ ಸನ್ಮಂಗಳಗಳುಂಟಾಗಿ, ಇನ್ನೂ ಹೆಚ್ಚು ಸೇವೆ ಸಲ್ಲಿಸುವ ಅವಕಾಶ ದೊರೆಯಲೆಂದು ಹಾರೈಸಿದರು

ಪುಟ್ಟಲಿಂಗಪ್ಪನವರು ಭಾಷಣ ಮಾಡಿ ಸತ್ಕಾರಕ್ಕಾಗಿ ತಮ್ಮ ಧನ್ಯವಾದವನ್ನು ಸಲ್ಲಿಸಿದರು. ತಮ್ಮ ಕಾರ್ಯದಲ್ಲಿ ನೆರವಾದ ಸಕಲರಿಗೂ ವಂದನೆಯನ್ನು ಅರ್ಪಿಸಿದರು.

ಅಧ್ಯಕ್ಷರಾದ ಶ್ರೀ ಚನ್ನಬಸಪ್ಪನವರು ತಮ್ಮ ಭಾಷಣದಲ್ಲಿ ನಿಜವಾದ ಪ್ರಜಾಸೇವೆಯು ಹೇಗೆ ಪರಮಾತ್ಮನ ಪ್ರೀತಿಗೆ ಪಾತ್ರವಾಗುವುದೆಂಬದನ್ನು ವಿವರಿಸಿ ಶ್ರೀ ಪುಟ್ಟಲಿಂಗಪ್ಪನವರಂತೆ ಇತರ ಮಹನೀಯರುಗಳೂ ಮುಂದೆ ಬಂದು ಸಮಾಜ ಸೇವೆಯಲ್ಲಿ ತೊಡಗಬೇಕೆಂದು ಪ್ರಾರ್ಥಿಸಿದರು.

ರಾಜಸೇವಾಸಕ್ತ ವೈ ಕೆ ರಾಮಚಂದ್ರರಾಯರು, ಪಾರ್ಥನಾರಾಯಣ ಪಂಡಿತ್, ಮತ್ತು ಅಡ್ವೋಕೇಟ್ ಶ್ರೀ ಪಿ ಸುಬ್ಬರಾಯರು ಶುಭ ಸಂದೇಶಗಳನ್ನು ಕಳುಹಿಸಿದ್ದರು ಧನ್ಯವಾದಗಳಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ನೆಹರೂ ಜನಿಸಿದ ಭವನದ ಮಾದರಿ

ಪ್ರಧಾನಿ ಪಂಡಿತ ನೆಹರೂರವರು ಯಾವಭವನದಲ್ಲಿ ಹುಟ್ಟಿದರೋ, ಅಂತಹ ಭವನದ ಮಾದರಿಯೊಂದನ್ನು ಬೀಟೆ ಮರದಲ್ಲಿ ಮಾಡಿ, ಲಕ್ನೋವಿನಲ್ಲಿ ನಡೆಯುವ ಗೃಹ ಕೈಗಾರಿಕಾ ಪ್ರದರ್ಶನದಲ್ಲಿ ಇಡಲಾಗುವುದು

ವಿಶ್ವ ಬ್ಯಾಂಕಿಗೆ ಭಾರತೀಯ ಅಧ್ಯಕ್ಷರು

ವಿಶ್ವ ಬ್ಯಾಂಕಿನ ಅಧ್ಯಕ್ಷತೆಗೆ ಈ ಬಾರಿ ಭಾರತೀಯರಾದ ಸರ್ ಚಿಂತಾಮಣಿ ದೇಶಮುಖ್‌ರವರನ್ನು ಆರಿಸಲಾಗಿದೆ

ಭಾರತದ ಮೇಲೆ ಪ್ರೀವಿ ಕೌನ್ಸಿಲ್ ಅಧಿಕಾರದ ರದ್ದು

ಪ್ರೀವಿ ಕೌನ್ಸಿಲ್ಲಿಗೆ ಭಾರತದ ಮೇಲೆ ನ್ಯಾಯಾಂಗದ ವ್ಯಾಪ್ತಿಯು ರದ್ದಾಗುವ ಬಗ್ಗೆ ಮೊನ್ನೆ ದಿನ ರಾಜ್ಯಾಂಗ ಸಭೆಯು ಮಸೂದೆಯೊಂದನ್ನು ಅಂಗೀಕರಿಸಿತು

ಯುಗೋಸ್ಲೇವಿಯಾ, ಆಲ್ಬೇನಿಯಾ ಗಡಿ ದಾಟಿತೇ?

ಪ್ರಪಂಚ ಸಂಸ್ಥೆಗೆ ಯುಗೋಸ್ಲೇವಿಯಾ ಮತ್ತು ಆಲ್ಬೇನಿಯಾಗಳು ದೂರನ್ನು ಕಳುಹಿಸಿ, ಗ್ರೀಕು ಸರಕಾರ ಆ ರಾಜ್ಯಗಳ ಗಡಿಗಳನ್ನು ಅತಿಕ್ರಮಿಸಿದೆಯೆಂತಿಳಿಸಿವೆ

ಹೇಸರ ಕತ್ತೆ ಮಾರಾಟಕ್ಕೂ ಕಾಳ ಸಂತೆ

ಆಲ್ಮೋರಾದಲ್ಲಿ ಹೇಸರ ಕತ್ತೆಗಳನ್ನು ಕಾಳ ಸಂತೆಕೋರರಿಗೆ ಮಾರಲಾಗುತ್ತಿರುವುದರಿಂದ ಬಡ ಜನರಿಗೆ ತಮ್ಮ ಸಾಮಾನುಗಳನ್ನು ಸಾಗಿಸಲು ಅವುಗಳು ಸಿಕ್ಕದೆ ತೊಂದರೆಯಾಗುತ್ತಿದೆಯೆಂದು ಹೇಳಲಾಗಿದೆ ಇದನ್ನು ಸರ್ಕಾರದವರು ಕಂಡುಹಿಡಿದು ಆಹಾರ ಧಾನ್ಯಗಳನ್ನು ಸಾಗಿಸಲು ೬೦ ಪ್ರಾಣಿಗಳನ್ನು ವಶಪಡಿಸಿಕೊಂಡಿರುವುದರಿಂದ, ಕಾಳಸಂತೆಕೋರರಿಗೆ ತಲೆನೋವು ಉಂಟಾಗಿದೆಯೆಂದು ಹೇಳಲಾಗಿದೆ

ಕೈಸರ್ ಭವನವನ್ನು ಸ್ಮಾರಕ ಮಾಡಲು ನಿರಾಕರಣೆ

ಜರ್ಮನಿಯ ಚಕ್ರವರ್ತಿಯಾಗಿದ್ದ ಕೈಸರ್‌ರವರು ತಮ್ಮ ದೇಶವನ್ನು ಬಿಟ್ಟಮೇಲೆ ವಾಸಿಸುತ್ತಿದ್ದ ಡೂರ್ನ್ಎಂಬಭವನವನ್ನು ಸ್ಮಾರಕವನ್ನಾಗಿ ಇಟ್ಟಿರಲು ಕೊಡಬೇಕೆಂಬ ಅವರ ವಂಶದವರ ಪ್ರಾರ್ಥನೆಯನ್ನು ಡಚ್ ಸರ್ಕಾರದವರು ತಿರಸ್ಕರಿಸಿದ್ದಾರೆ

ಅರ್ಜೆಂಟೈನಾದಲ್ಲಿ ನಾಜಿ ವೈಮಾನಿಕರ ಕೇಂದ್ರ

ಅರ್ಜೆಂಟೈನಾದಲ್ಲಿ ಜರ್ಮನಿಯ ಮಾಜಿ ನಾಜಿ ವೈಮಾನಿಕರಿಗೆ ಆಶ್ರಯ ಕೊಡಲಾಗಿದೆಯೆಂದೂ, ಅಲ್ಲಿ ನಾಜಿಗಳ ವಸತಿಯೊಂದನ್ನು ಸ್ಥಾಪಿಸಲಾಗಿದೆಯೆಂದೂ ಹೇಳಲಾಗಿದೆ

ಗಿರಣಿಯ ಬಾಗಿಲನ್ನು ಒಡೆಯಲು ಸತ್ಯಾಗ್ರಹ

ಬಟ್ಟೆಗಳ ದಾಸ್ತಾನು ವಿಶೇಷವಾಗಿರುವುದೆಂಬ ಕಾರಣದಿಂದ ಮುಚ್ಚಲ್ಪಟ್ಟಿರುವ ಅಹಮದಾಬಾದಿನ ಗಿರಣಿಗಳ ಬಾಗಿಲುಗಳನ್ನು ಬಲಾತ್ಕಾರವಾಗಿ ಒಡೆದು ತೆರೆಯಲು ಅಲ್ಲಿನ ಸಮತಾವಾದೀ ಪಕ್ಷದವರು ಈ ದಿನದಿಂದ ಸತ್ಯಾಗ್ರಹ ಹೂಡುವರೆಂದು ತಿಳಿದುಬಂದಿದೆ. ಗಿರಣಿಗಳು ಮುಚ್ಚಿದುದರಿಂದ ಕಾರ್ಮಿಕರಿಗೆ ವಿಶೇಷ ತೊಂದರೆಯಾಗಿರುವುದೇ ಸತ್ಯಾಗ್ರಹಕ್ಕೆ ಕಾರಣವೆಂದು ಹೇಳಲಾಗಿದೆ

ಮೈಸೂರು ಸಿಟಿ ರೇಷನಿಂಗ್ ಆಫೀಸು

ತಾ॥ ೧೬-೯-೧೯೪೯

ನೋಟಿಫಿಕೇಷನ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರಕಾರಿ ಡಿಪೋ, ವರ್ತಕರ ಡಿಪೋ, ಸಹಕಾರ ಸಂಘಗಳು ಮತ್ತು ಮೈಸೂರು ಸಬ್ ಗೋಡೌನುಗಳು ಸಹಾ ೨೨ನೇ ಗುರುವಾರ ಮಹಾಲಯ ಅಮಾವಾಸ್ಯೆ ಪ್ರಯುಕ್ತ, ಪೂರ್ತಿ ವ್ಯಾಪಾರ ಮುಚ್ಚಲ್ಪಡುತ್ತವೆ

(ರುಜು) ಡಿ. ಜೆ. ಬಾಲರಾಜ್

ರೇಷನಿಂಗ್ ಆಫೀಸರು,

ಮೈಸೂರು ಸಿಟಿ

ಪ್ರಭಾ ★ ಈ ರಾತ್ರಿ

ಪ್ರತಿ ದಿನ 3 ಆಟಗಳು

ಜನಭರಿತ 3 ನೆಯ ವಾರ

ಫೇಮಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ ಬಡಿ ಬಹೆನ್

ತಂಗಿಯ ಏಳಿಗೆಗಾಗಿ ಸ್ವಸುಖಕ್ಕೆ ತಿಲಾಂಜಲಿಯನ್ನಿತ್ತ ಅಕ್ಕನೊಬ್ಬಳ ಹಿರಿಮೆಯ ಕಥೆ

ಭೂಮಿಕೆಯಲ್ಲಿ — ಸಂಗೀತದ ರಾಣಿ

ಸುರೈಯ್ಯ, ಗೀತಾ ಬಾಲಿ, ರೆಹಮಾನ್, ಉಲ್ಲಾಸ್

ಎಲ್ಲವನ್ನೂ ಶುದ್ಧಪಡಿಸಲು

ಉತ್ತಮವಾದ

ಮೈಸೂರು ಸೋಪ್ —

ಎಲ್ಲೆಲ್ಲೂ ದೊರೆಯುತ್ತವೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

Office of the Municipal Engineer
City Municipal Council,
Mysore, Dated 10-9-1948.

NOTIFICATION

Sealed tenders will be received up to 4 p. m 26-9-49 by the Municipal Engineer for constructi[ng] 7 shops to the East of Sri. A N. Raghavacha[r's] house in Chamaraja Road, Mysore

Each tender must be accompanied with a chall[an] for having remitted Rs 640 in Municipal Treasury earnest money For full particulars, please see [the] detailed notification on the Notice Board

V. K Mukund[a]
Municipal Engine[er]

Edited, printed and published by A. R. Nag[a]rajan at Sadhvi Press, D Subbiah Road, Mysore.

ಪ್ರಭುದೇವಾ ಟಾಕೀಸ್ 22-9-49ನೇ ಗುರುವಾರದಿಂ[ದ]

[ತಮಿಳು] ═══ ಮಾಯಾ ಕುದುರೈ ═══

ಫೋ|| ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೨೦-೯-೧೯೪೯ [ಸಂಚಿಕೆ ೪೬

ಮದರಾಸಿನಲ್ಲಿ ಹೊಸ ಅಕ್ಕಿ ಗಿರಣಿಗಳ ನಿಷೇಧ

ನವರಾತ್ರಿ ದರ್ಬಾರಿನ ಕಾರ್ಯಕ್ರಮ

ಮೈಸೂರು ೨೦

ನವರಾತ್ರಿ ಪ್ರಯುಕ್ತ, ಇದೇ ೨೩ ರಿಂ ೦ ನೇ ತಾ|| ವರೆವಿಗೆ ಅರಮನೆಯಲ್ಲಿ ರ್ಬಾರು ನಡೆಯುವುದು. ೨೩ ನೇ ತಾ|| ಗ್ಗೆ ೯-೨೪ ಗಂಟೆಗೆ ಶ್ರೀಮನ್ಮಹಾರಾಜರು ಸಿಂಹಾಸನಾರೋಹಣ ಮಾಡು ಅಂದಿನಿಂದ ಪ್ರತಿ ದಿನ ಸಂಜೆ ಂಟೆಗೆ ದರ್ಬಾರು ಜರುಗುವುದು. ಪ್ರ ನ ಬೆಳಿಗ್ಗೆ ೮ ಮತ್ತು ಸಂಜೆ ೬ ಗಂ ಪಟ್ಟದ ಆನೆ ಮತ್ತು ಕುದುರೆಗಳು ಮೇಶ್ವರ ದೇವಸ್ಥಾನಕ್ಕೆ ಬಿಜಯ ಡುವುವು ೩೦ ನೇ ತಾ|| ಬೆಳಿಗ್ಗೆ ೧೨ ಗಂಟೆಗೆ ಆಯುಧ ಮತ್ತು ಗಜಾದಿಗಳ ಪೂಜೆ ಅಕ್ಟೋಬರ್ ೧ ನೇ ಶನಿವಾರ ಬೆಳಿಗ್ಗೆ ೮-೪೨ ಗಂಟೆಗೆ ಆ ಧ, ಮತ್ತು ಗಜಾಶ್ವಗಳು ಬನ್ನಿಯ ಟಪಕ್ಕೆ ಬಿಜಯಮಾಡುವುವು. ಸಂಜೆ ೧೦ ಗಂಟೆಗೆ ಜಂಬೂಸವಾರಿ

ಡಿತದ ಆಪಾದನೆ ಮೇಲೆ ಪಾನ ರೋಧ ಅಧಿಕಾರಿಗಳ ದಸ್ತಗಿರಿ

ಚಿತ್ರದುರ್ಗದ ಪಾನ ನಿರೋಧ ಇಲಾ ಸಬ್ ಇನ್ಸ್‌ಪೆಕ್ಟರಾದ ಶ್ರೀ ಸಂಜೀವ ತ್ತಿಯವರು ಕಳೆದ ೧೮ ನೇ ತಾ|| ಮಿಠಿವೀರಿ ಕುಡಿದು, ಅಮಲಿನಲ್ಲಿ ಂಟ ಆಪಾದನೆಯ ಮೇಲೆ ಅವರನ್ನು ಗಿರಿ ಮಾಡಲಾಗಿದೆ. ಹೊಂಗಾಡುರ್ಗ ಮತ್ತು ಪೋಲೀಸರು ಅವರ ಮನೆಯ ಶೋಧಿಸಿ, ಅವರನ್ನು ಬಂಧಿಸಿದರು.

ಂಕುಗಳಿಗೆ ಷಾಪ್ ಅಸಿಸ್ಟೆಂಟ್ ಕಾನೂನಿಲ್ಲ

ಷಾಪ್ ಅಸಿಸ್ಟೆಂಟ್ ಕಾನೂನು ಬ್ಯಾಂಕುಗಳಿಗೆ ಅನ್ವಯಿಸುವುದಿಲ್ಲವೆಂದು ಸರ್ಕಾರ ಪ್ರಕಟಣೆ ತಿಳಿಸಿರುತ್ತದೆ

ರೂಪಾಯಿನ ಬೆಲೆ ಇಳಿಯಿತು

ಬ್ರಿಟನ್ನಿನ ಪೌಂಡ್ ಸ್ಟರ್ಲಿಂಗಿನ ಬೆಲೆಯನ್ನು ಇಳಿಸಿರುವುದರಿಂದ ಭಾರತ ಮು ಇತರ ೧೦ ರಾಷ್ಟ್ರಗಳು ತಮ್ಮ ನಾಣ್ಯ ಬೆಲೆಯನ್ನು ಇಳಿಸಿವೆ ೨೧ ಅಮೇರಿಕ ಸೆಂಟುಗಳಿಗೆ ಒಂದು ರೂ. ಬೆಲೆ ಎಂ ನಿರ್ಧರಿಸಲಾಗಿದೆ ಡಾಲರ್ ಸಂಬಂಧ ಗಿ ಬ್ರಿಟನ್ನಿನ ಪೌಂಡಿನ ಬೆಲೆಯನ್ನು ಶೇಕಡಾ ೩೦ ರಷ್ಟು ತಗ್ಗಿಸಲಾಗಿದೆ. ರಿಂದ ಭಾರತದ ಒಳ ವ್ಯಾಪಾರದಲ್ಲಿ ಬದಲಾವಣೆ ಏನೂ ಆಗುವುದಿಲ್ಲ ವೂ, ಆದರೆ ಅಮೇರಿಕದಿಂದ ಬರುವ ಸಾಗ್ರಿಗಳಿಗೆ ಸ್ವಲ್ಪ ಹೆಚ್ಚು ಬೆಲೆ ಕೊಡಬೇಕಾಗುವುದೆಂದೂ ಅಭಿಪ್ರಾಯ ಪಡ ಡೆ. ಇದರಿಂದ ಬ್ರಿಟನ್ನಿನ ವ್ಯಾಪಾರವು ವುದೆಂದು ನಿರೀಕ್ಷಿಸಲಾಗಿದೆ.

ಇಂಗ್ಲೀಷ್ ಕಾಲುವೆಯನ್ನು ಈಜಿದ ಸೇನಾನಿ

ಈಜಿಪ್ಟಿನ ಸೈನ್ಯಾಧಿಕಾರಿಗಳಾದ ೪೦ ವ ದ ವರ್ಷ ಅಬ್ದುಲ್ ರಹೀಂರವರು ಕ ಶನಿವಾರ ಇಂಗ್ಲೀಷ್ ಕಾಲುವೆಯ. ೧೫ ಗಂಟೆ ೫೨ ನಿಮಿಷಗಳ ದಾಟಿದರು. ಅವರು ಪುನಃ ಫ್ರಾನ್ಸಿನ ಕ ರಿಂದ ಇಂಗ್ಲೆಂಡಿಗೆ ೧೬ ಗಂಟೆ ೩೮ ನಿ ಗಳ ಕಾಲದಲ್ಲಿ ಹಿಂತಿರುಗಿದರು ಎರ ದೆಸೆಗಳಿಂದಲೂ ಈಜಿದವರ ಪೈಕಿ ಇ ವ ನೂರನೆಯವರೆಂದು ಹೇಳಲಾಗಿದೆ

೧೬೦ ಚದುರ ಅಂಗುಲದ ತಾಳೆ ಗರಿಯಲ್ಲಿ ಭಗವದ್ಗೀತೆ

೧೬|| ಅಂಗುಲ ಉದ್ದ ಮತ್ತು ೧೦|| ಅಂಗುಲ ಅಗಲದ ತಾಳೆ ಗರಿಯ ಮೇಲೆ ಭಗವದ್ಗೀತೆಯ ೭೦೦ ಶ್ಲೋಕಗಳನ್ನು ಚಿತ್ರ ಸಹಿತವಾಗಿ ಬೊಂಬಾಯಿನ ಶ್ರೀ ಎಸ್ ವಿ. ಗೋಖಲೆಯವರು ಬರೆದಿರುವರೆಂದೂ, ಅದನ್ನು ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಇಡಲಾಗುವುದೆಂದೂ ಗೊತ್ತಾಗಿದೆ ಅದನ್ನು ರಚಿಸಲು ೩ ತಿಂಗಳ ಕಾಲ ಹಿಡಿಯಿತು

ರೂಪಾಯಿ ಇಳಿತಾಯದಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ

ಭಾರತದಲ್ಲಿ ರೂಪಾಯಿಯ ಬೆಲೆಯನ್ನು ಇಳಿಸಿರುವುದರಿಂದ ಒಳದೇಶದ ವಾಣಿಜ್ಯ ವ್ಯವಹಾರದಲ್ಲಿ ಬೆಲೆಯ ವ್ಯತ್ಯಾಸವಾಗುವುದಿಲ್ಲ ಜನಗಳ ಕೈಲಿರುವ ಹಣಕಾಗಲೀ ಅಥವ ಬ್ಯಾಂಕುಗಳಲ್ಲಿರುವ ಡಿಪಾಜಿಟ್‌ಗಾಗಲೀ ಯಾವ ಇಳಿತಾಯವೂ ಆಗುವುದಿಲ್ಲ ದೇಶದಲ್ಲಿ ಉತ್ಪತ್ತಿಯಾಗುವ ಆಹಾರ ಪದಾರ್ಥ ಮತ್ತು ಇತರ ವಸ್ತುಗಳ ಬೆಲೆಯಲ್ಲಿ ಯಾವ ಹೆಚ್ಚು ಕಡಿಮೆಯೂ ಆಗ ವುದಿಲ್ಲ-ಎಂದು ಭಾರತ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ದಕ್ಷಿಣ ಚೀಣಾದಿಂದ ಸರ್ಕಾರೀ ಸೈನ್ಯ ವಾಪಸು

ದಕ್ಷಿಣ ಚೀಣಾದ ಉತ್ತರ ಕ್ಯಾಂಟಂಗ್ ಪ್ರದೇಶದಲ್ಲಿರುವ ಎಲ್ಲ ಸರ್ಕಾರೀ ಸೈನಿಕರೂ ಕ್ಯಾಂಟನ್ನಿಗೆ ಹಿಂತಿರುಗಬೇಕೆಂದು ಚಿಯಾಂಗರು ಆಜ್ಞೆ ಮಾಡಿದ್ದಾರೆ ಅಲ್ಲಿಂದ ಅವರನ್ನು ಫಾರ್ಮೋಸಾಕ್ಕೆ ಕಳುಹಿಸಲಾಗುವುದೆಂದು ಹೇಳಲಾಗಿದೆ

ದೆಹಲಿಗೆ ದಾಸಪ್ಪನವರ ಭೇಟಿ

ಭಾರತ ಸರ್ಕಾರದಲ್ಲಿ ಮೈಸೂರು ಪಣಕಾಸನ್ನು ಐಕ್ಯಮಾಡುವ ವಿಚಾರವಾಗಿ ಅಂತ್ಯ ಮಾತುಕತೆ ನಡೆಸಲು ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ದೆಹಲಿಗೆ ಇದೇ ೨೮ ನೇ ತಾ|| ಪ್ರಯಾಣ ಬೆಳೆಸುವರು.

ಗ್ರಾಮಗಳಿಗೆ ರೇಡಿಯೋ ಸರಬರಾಜು

ಸಂಸ್ಥಾನದ ೩೦೦ ಗ್ರಾಮ ಪಂಚಾಯಿತಿಗಳಿಗೆ ಒಂದೊಂದು ರೇಡಿಯೋ ಸೆಟ್ಟನ್ನು ಒದಗಿಸಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದಾರೆಂದು ತಿಳಿದುಬಂದಿದೆ

ಮದರಾಸಿನಲ್ಲಿ ಹೊಸ ಅಕ್ಕಿ ಮಿಲ್ಲುಗಳಿಗೆ ನಿಷೇಧ

ಮದರಾಸ್ ಪ್ರಾಂತ್ಯದಲ್ಲಿ ಇನ್ನು ಮುಂದೆ ಹೊಸ ಅಕ್ಕಿ ಮಿಲ್ಲುಗಳನ್ನು ತೆರೆಯುವುದಕ್ಕೆ ರಹದಾರಿಯನ್ನು ಸರ್ಕಾರದವರು ಕೊಡುವುದಿಲ್ಲವೆಂದು ಅಲ್ಲಿನ ವ್ಯವಸಾಯ ಸಚಿವರು ತಿಳಿಸಿರುತ್ತಾರೆ ಆಹಾರದ ಹೆಚ್ಚು ಬೆಳೆ ಯೋಜನೆಯ ಅಂಗವಾಗಿ ೩ ವರ್ಷದ ನೂತನ ೩|| ಕೋಟಿ ರೂ ಯೋಜನೆಯನ್ನು ಮಂಜೂರು ಮಾಡಲಾಗಿದೆಯೆಂದೂ, ಇದರಿಂದ ೧೩ ಲಕ್ಷ ಟನ್ ಅಕ್ಕಿ ಮತ್ತು ಇತರ ಆಹಾರ ಧಾನ್ಯಗಳು ಉತ್ಪತ್ತಿಯಾಗುವುವೆಂದೂ ಅವರು ತಿಳಿಸಿರುತ್ತಾರೆ

ಪಶ್ಚಿಮ ಪಂಜಾಬಿನಲ್ಲಿ ಸಲಹೆಗಾರರ ಸರ್ಕಾರ

ಪಶ್ಚಿಮ ಪಂಜಾಬಿನಲ್ಲಿ ಸಲಹೆಗಾರರ ಸರ್ಕಾರವನ್ನು ಏರ್ಪಡಿಸಲಾಗುವುದೆಂದೂ, ಸಲಹೆಗಾರರ ಹೆಸರುಗಳನ್ನು ಅಲ್ಲಿನ ಮುಸ್ಲಿಂ ಲೀಗಿನ ಅಧ್ಯಕ್ಷರು. ಗವರ್ನರಿಗೆ ಒಪ್ಪಿಸಬೇಕೆಂದು ನಿರ್ಧರಿಸಲಾಗಿದೆಯೆಂದೂ ವರದಿಯಾಗಿದೆ

ಕೆಲಸ ಹೋದ ಸಂಗೀತ ಗಾರರಿಗೆ ಪ್ರೋತ್ಸಾಹ

ಮಹಾರಾಜರುಗಳ ಆಶ್ರಯದಲ್ಲಿದ್ದು ಈಗ ಕೆಲಸ ಕಳೆದುಕೊಂಡಿರುವ ಸಂಗೀತಗಾರರಿಗೆ ಭಾರತ ಸರ್ಕಾರದವರು ಕೆಲಸಗಳನ್ನು ಕೊಡಬೇಕೆಂದು ಗುಜರಾತಿನ ಸುಪ್ರಸಿದ್ಧ ಸಂಗೀತಗಾರರಾದ ಪಂಡಿತ ಓಂಕಾರ ನಾಥ್‌ರವರು ಸರ್ದಾರ್ ಪಟೇಲರಿಗೆ ಪತ್ರ ಬರೆದಿರುವರೆಂದು ತಿಳಿದು ಬಂದಿದೆ. ಉಚಿತ ಸಂಗೀತ ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಿ, ಅಲ್ಲಿ ಕೆಲಸ ಕಳೆದುಕೊಂಡ ಸಂಗೀತಗಾರರನ್ನು ನೇಮಿಸಬೇಕೆಂದು ಅವರು ಸಲಹೆ ಮಾಡಿರುತ್ತಾರೆ

ಗುಮಾಸ್ತರ ಆತ್ಮಹತ್ಯೆ

ಬೆಂಗಳೂರಿನ ಪೋಲೀಸ್ ಡಿ ಐ ಜಿ ಕಛೇರಿಯ ಹಣಕಾಸಿನ ಗುಮಾಸ್ತರಾದ ಶ್ರೀ ಜಿ ಚನ್ನಬಸಪ್ಪ ಎಂಬುವರು ಸ್ನಾನದ ಕೋಣೆಯಲ್ಲಿ ಬಿಸ್ತು ಆತ್ಮಹತ್ಯೆ ಮಾಡಿಕೊಂಡರೆಂದೂ, ತಾವು ಪ್ರಾಣ ತೆಗೆದುಕೊಳ್ಳುವುದಕ್ಕೆ ಕಾರಣವನ್ನು ತಿಳಿಸಿ, ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಬಂದ ಕಾಗದವನ್ನು ಒಪ್ಪಿಸಿದ್ದರೆಂದೂ ವರದಿಯಾಗಿದೆ.

ಚಂದ್ರನಗರದಲ್ಲಿ ಕಾನೂನು ಭಂಗ ಚಳುವಳಿಯೋ?

ಮುಂದಿನ ತಿಂಗಳು ೩೧ ನೇ ತಾ||ನೊಳಗಾಗಿ ಚಂದ್ರನಗರವನ್ನು ಭಾರತದಲ್ಲಿ ಐಕ್ಯ ಮಾಡದಿದ್ದಲ್ಲಿ, ವೈಯಕ್ತಿಕ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸಬೇಕೆಂದು ಅಲ್ಲಿ ಮೊನ್ನೆ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಲಾಗಿದೆ

ಇನ್ನು ೪ ವರ್ಷದಲ್ಲಿ ಭಾಷಾವಾರು ಪ್ರಾಂತ್ಯಗಳು

ಇನ್ನು ೩ ಅಥವ ೪ ವರ್ಷಗಳಲ್ಲಿ ಭಾಷಾವಾರು ಪ್ರಾಂತ್ಯಗಳು ವಿಂಗಡಿಸಲ್ಪಡುವುವೆಂದೂ, ಒಕ್ಕೂಟದ ಕರ್ನಾಟಕವು ಮೈಸೂರಿನೊಳಗೆ ಐಕ್ಯವಾಗಿ ಕರ್ನಾಟಕ ಪ್ರಾಂತ್ಯವಾಗುವುದೆಂದೂ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ

ಹಣದ ದುರುಪಯೋಗಕ್ಕಾಗಿ ಅಧಿಕಾರಿಯ ಬಂಧನ

ತಿರುವಾಂಕೂರಿನ ಮಾಜಿ ವಾರ್ತಾ ಇಲಾಖಾ ಡೈರೆಕ್ಟರಾದ ಶ್ರೀ ಎಸ್ ಪಿ ಹಂಪರ್‌ರವರು ಸರ್ಕಾರೀ ಹಣವನ್ನು ದುರುಪಯೋಗಪಡಿಸಿದರೆಂಬ ಆಪಾದನೆಯ ಮೇಲೆ ಅವರನ್ನು ನಿನ್ನೆ ದಿನ ದಸ್ತಗಿರಿ ಮಾಡಲಾಯಿತು. ಅವರು ತಮ್ಮ ಹುದ್ದೆಗೆ ನಿನ್ನೆ ರಾಜೀನಾಮೆ ಕೊಟ್ಟಿದ್ದರು.

ಕುದುರೆ ಜೂಜಿನ ಬೆಟ್ಟಿಂಗ್ ನಿಷೇಧ ರದ್ದು

ಮದರಾಸ್ ಪ್ರಾಂತ್ಯದಲ್ಲಿ ಕುದುರೆ ಜೂಜಿನ ಬೆಟ್ಟಿಂಗನ್ನು ನಿಷೇಧಿಸುವ ಕಾನೂನನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಸಧ್ಯದಲ್ಲಿಯೇ ನಡೆಯಲಿರುವ ಮದರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪೀಠಾಪುರಂ ಯುವರಾಜರು ಮಂಡಿಸಲಿದ್ದಾರೆ

ಗಾಂಧೀ ಜಯಂತಿ

ಹಿಂದೂ ಪಂಚಾಂಗದ ಪ್ರಕಾರ ನಿನ್ನೆಯಿಂದ ಗಾಂಧೀ ಜಯಂತಿಯು ಪ್ರಾರಂಭವಾಯಿತು. ಜಾರಿ ಮಳೆ ಬರುತ್ತಿದ್ದರೂ ನಿನ್ನೆ ದಿನ ದೆಹಲಿಯ ರಾಜಘಾಟಿನಲ್ಲಿ ಪ್ರಾರ್ಥನೆ ನಡೆಯಿತು ಬೆಳಿಗ್ಗೆ ೮ ಗಂಟೆಯಿಂದ ೧೨ ಗಂಟೆಗಳ ಕಾಲ ಅವಿಚ್ಛಿನ್ನ ನೂಲುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಪೌಂಡ್ ಇಳಿತಾಯದಿಂದ ಮೈಸೂರಿಗೆ ಲಾಭವಿಲ್ಲ

ಪೌಂಡ್ ಸ್ಟರ್ಲಿಂಗಿನ ಬೆಲೆಯನ್ನು ಬ್ರಿಟನ್ನು ಇಳಿಸಿರುವುದರಿಂದ. ಮೈಸೂರಿಗೆ ಯಾವ ಲಾಭವೂ ಉಂಟಾಗುವುದಿಲ್ಲವೆಂದು ಅಡಿಷನಲ್ ಕೈಗಾರಿಕಾ ಡೈರೆಕ್ಟರಾದ ಶ್ರೀ ಕೆ. ನಾರಾಯಣ ಸ್ವಾಮಿಯವರು ತಿಳಿಸಿರುತ್ತಾರೆ. ಇದರಿಂದ ಭಾರತಕ್ಕೆ ಬ್ರಿಟನ್ನಿನಿಂದ ಬರಬೇಕಾದ ಬಾಕಿ ಹಣವನ್ನು ಶೀಘ್ರದಲ್ಲಿಯೇ ವಾಪಸು ಪಡೆಯಲು ಅನುಕೂಲವಾಗುವುದೆಂದೂ ಅವರ ಅಭಿಪ್ರಾಯ ಪಟ್ಟಿರುತ್ತಾರೆ

ತಿರುವಾಂಕೂರು ವಿಶ್ವವಿದ್ಯಾನಿಲಯದ ಇಂಟರ್ ಪರೀಕ್ಷೆಯ ಕೆಲವು ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿದ್ದುದರಿಂದ ಅಲ್ಲಿನ ಕೆಲವು ವಿದ್ಯಾರ್ಥಿಗಳು ಪರೀಕ್ಷೆಗೆ ಮೊನ್ನೆ ದಿನ ಬಹಿಷ್ಕಾರ ಹಾಕಿ ಪೀರವಣಿಗೆಯಲ್ಲಿ ಹೋಗಿ ಅರಮನೆ ಕಛೇರಿ ಮುಂದೆ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ

ಗೋಶಾಲೆ ಸ್ಥಾಪಿಸಲು ನಿರ್ಧಾರ

ಗುಂಡ್ಲುಪೇಟೆ ೧೮

ಇಲ್ಲಿನ ತಾಲ್ಲೂಕು ಅಭಿವೃದ್ಧಿ ಸಮಿತಿಯ ಸಭೆಯು ನಿನ್ನೆ ದಿನ ಶ್ರೀ ಬಿ. ದೊಡ್ಡಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಗುಂಡ್ಲುಪೇಟೆಯಲ್ಲಿ ಒಂದು ಗೋಶಾಲೆಯನ್ನು ತೆರೆಯಬೇಕೆಂದು ನಿರ್ಧರಿಸಲಾಯಿತು. ರಸ್ತೆ ಮತ್ತು ಭಾವಿಗಳ ರಿಪೇರಿಗಾಗಿ ಹಣವನ್ನು ಮಂಜೂರು ಮಾಡಲಾಯಿತು. ಗ್ರಾಮಾಂತರಗಳ ವ್ಯಾಕ್ಸಿನೇಷನ್ ಬಗ್ಗೆ ರಚಿಸಲ್ಪಟ್ಟಿರುವ ಉಪಸಮಿತಿಯ ವರದಿಯನ್ನು ಪರಿಶೀಲಿಸಲಾಯಿತು

ಇಲ್ಲಿನ ತಾಲ್ಲೂಕು ಆಹಾರ ಸಮಿತಿಯ ಸಭೆಯು ಜನಾಬ್ ಮೀರ್ ಮಹಮದ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಅಕ್ಕಿ ಸಕ್ಕರೆ ಮತ್ತು ಸೀಮೆ ಎಣ್ಣೆಗಳ ಹಂಚಿಕೆ ಮತ್ತು ಜೋಳದ ಶೇಖರಣೆ ಮುಂತಾದ ವಿಷಯಗಳು ಪರಿಶೀಲಿಸಲ್ಪಟ್ಟವು

ಅಕ್ಷರ ಪ್ರಚಾರ ಸಮಿತಿಯ ವಾರ್ಷಿಕ ಸಭೆ

ಸಂಸ್ಥಾನದ ಅಕ್ಷರಪ್ರಚಾರ ಸಮಿತಿಯ ವಾರ್ಷಿಕ ಸಭೆಯು ಕಳೆದ ಶನಿವಾರ ಶ್ರೀ ಟಿ ಮಾದಯ್ಯ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು ಕಾರ್ಯದರ್ಶಿಗಳ ವರದಿ ಮತ್ತು ಮುಂದಿನ ವರ್ಷದ ಅಂದಾಜು ಪಟ್ಟಿಯನ್ನು ಅಂಗೀಕರಿಸಿದ ನಂತರ, ಕೆಳಗೆ ಕಂಡ ಅಧಿಕಾರಿ ವರ್ಗದವರ ಚುನಾವಣೆ ನಡೆಯಿತು:—ಅಧ್ಯಕ್ಷರು-ಶ್ರೀ ಟಿ ಮಾದಯ್ಯ ಗೌಡರು; ಉಪಾಧ್ಯಕ್ಷರು ಮತ್ತು ಖಜಾಂಚಿ-ಪ್ರೊ॥ ಡಬ್ಲ್ಯು. ಜಿ ಈಗಲ್‌ಟನ್, ಕಾರ್ಯದರ್ಶಿ-ಶ್ರೀ ಎಸ್ ಭದ್ರಯ್ಯ, ಶ್ರೀಗಳಾದ ಟಿ. ಕೃಷ್ಣಮೂರ್ತಿ, ಎಂ ಮಾದಯ್ಯ, ಪಿ. ಶಿವಶಂಕರ್ ಮತ್ತು ಶ್ರೀಮತಿ ಪಿ. ಇಂದಿರಮ್ಮನವರುಗಳು ಕಾರ್ಯಕಾರೀ ಸಮಿತಿಗೆ ಚುನಾಯಿತರಾದರು. ಜಿಲ್ಲಾ ಕಾರ್ಯದರ್ಶಿಗಳ ಪರವಾಗಿ ಚಿಕ್ಕಮಗಳೂರಿನ ಶ್ರೀ ಬಿ ಕೆ. ನರಸಿಂಹ ಮೂರ್ತಿಯವರನ್ನು ಚುನಾಯಿಸಲಾಯಿತು

ಯುಗಶಕ್ತಿ ಎಂಬ ನೂತನ ವಾರ ಪತ್ರಿಕೆ

ಇದೇ ೨೮ನೇ ತಾ॥ ನಿಂದ "ಯುಗಶಕ್ತಿ" ಎಂಬ ಕನ್ನಡ ವಾರ ಪತ್ರಿಕೆಯು ರಾಜಧಾನಿಯಿಂದ ಶ್ರೀ ಎಸ್. ದೇವಣ್ಣನವರ ಸಂಪಾದಕತ್ವದಲ್ಲಿ ಪ್ರಕಟವಾಗುವುದು

ಪ್ರೀವಿ ಕೌನ್ಸಿಲ್ಲಿನಲ್ಲಿ ಗೋಡ್ಸೆಯ ಅಪೀಲು

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥೂರಾಂ ಗೋಡ್ಸೆ ಮತ್ತು ಆಪ್ಟೆಗಳು ಪ್ರೀವಿ ಕೌನ್ಸಿಲಿನ ಮುಂದೆ ಹಾಕಿರುವ ಅಪೀಲು ಅರ್ಜಿಯನ್ನು ಮುಂದಿನ ತಿಂಗಳು ವಿಚಾರಣೆಗೆ ತೆಗೆದುಕೊಳ್ಳಲಾಗುವುದೆಂದೂ, ಅವರ ಪರ ವಾದಿಸಲು ಮದರಾಸಿನ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾದ ಸರ್ ಮಾಧವ ಮೇನನ್‌ರವರು ಲಂಡನ್ನಿಗೆ ಹೋಗುವರೆಂದೂ ಹೇಳಲಾಗಿದೆ.

ದೇವಸ್ಥಾನದಲ್ಲಿ ಮಹಾತ್ಮರ ಪ್ರತಿಮೆ

ಭೂಪಾಲಿಗೆ ೩೦ ಮೈಲಿ ದೂರವಿರುವ ಶಹೋರಿನ ದೇವಸ್ಥಾನದೊಳಗೆ ಮಹಾತ್ಮಾ ಗಾಂಧಿಯವರ ಪ್ರತಿಮೆಯನ್ನು ಅಲ್ಲಿನ ಕೆಲವು ನಾಯಕರು ಸ್ಥಾಪಿಸಿದರು. ದೇವಸ್ಥಾನದೊಳಗೆ ಮಹಾತ್ಮರ ಪ್ರತಿಮೆಯನ್ನು ಇಡುವುದರಿಂದ, ಅದನ್ನು ಜನರು ಪೂಜಿಸುವರೆಂದೂ, ಅದು ಗಾಂಧೀಜೀಯವರ ತತ್ವಕ್ಕೆ ವಿರೋಧವಾಗುವುದೆಂದೂ ತಿಳಿಸಿ, ಅಲ್ಲಿನ ಕಾಂಗ್ರೆಸ್ ನಾಯಕರುಗಳು ವಿರೋಧಿಸಿ, ಅನಾವರಣ ಮಹೋತ್ಸವಕ್ಕೆ ಅಡ್ಡಿ ತಂದುದರಿಂದ, ಅದನ್ನು ಮುಂದಕ್ಕೆ ಹಾಕಲಾಗಿದೆ

ರಾಮಸ್ವಾಮಿ ನಾಯಕರ ಮೇಲೆ ಅವಿಶ್ವಾಸ

ದ್ರಾವಿಡ ಸಂಘದ ನಾಯಕರಾದ ಶ್ರೀ ಇ. ವಿ ರಾಮಸ್ವಾಮಿ ನಾಯಕರ ಮೇಲೆ ಅವಿಶ್ವಾಸ ಸೂಚಿಸುವ ನಿರ್ಣಯವು ಸಂಘದ ಕಾರ್ಯಕಾರೀ ಮಂಡಲಿಯ ಕೆಲವು ಸದಸ್ಯರ ಸಭೆಯಲ್ಲಿ ಅಂಗೀಕೃತವಾಗಿ, ನೂತನ ಸಂಘವೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ.

ಭಾರತದಲ್ಲಿ ಚೀಣಾದ ಚಿನ್ನ?

ಚೀಣಾದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್‌ರವರು ತಮ್ಮ ದೇಶದ ಚಿನ್ನದ ಆಸ್ತಿಯಲ್ಲಿ ಕಾಲುಭಾಗವನ್ನು ಭಾರತದಲ್ಲಿಟ್ಟಿರುವರೆಂದೂ ಮಿಕ್ಕ ಆಸ್ತಿಯನ್ನು ಒಂದು ವಿಶೇಷ ವಿಮಾನದಲ್ಲಿಡಲಾಗಿದೆಯೆಂದೂ ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ

ದೇವಸ್ಥಾನದ ಪುನರ್ವ್ಯವಸ್ಥೆಗಾಗಿ ಉಪವಾಸ

ಮೇಲುಕೋಟೆ ೧೮

ಹಿಂದೆಯೇ ತಿಳಿಸಿದ್ದಂತೆ ಇಲ್ಲಿನ ದೇವಸ್ಥಾನದ ಅಭಿವೃದ್ಧಿಗಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ಶ್ರೀಗಳಾದ ಅರೆಯಾರ್ ಶ್ರೀನಿವಾಸ ಅಯ್ಯಂಗಾರ್ ಮತ್ತು ಬಿ ವಿ. ಸಂಪತ್ಕುಮಾರ್‌ರವರು ಮೊನ್ನೆಯಿಂದ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ. ಮಂಡ್ಯದ ಜಿಲ್ಲಾಧಿಕಾರಿಗಳು ಮತ್ತು ಸಬ್ ಡಿವಿಜನ್ ಅಧಿಕಾರಿಗಳು ಇಲ್ಲಿಗೆ ಬಂದು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿಯೂ, ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದೂ ತಿಳಿಸಿದರು. ಆದರೆ ಉಪವಾಸವು ಮುಂದುವರಿಯುತ್ತಿದೆ

ಕೋಮುವಾರು ಭೇದವಿಲ್ಲದ ವಿದ್ಯಾರ್ಥಿ ನಿಲಯಗಳ ಅಗತ್ಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಮೈಸೂರು ಕಾಂಗ್ರೆಸ್ ಮಾಜಿ ಕಾರ್ಯದರ್ಶಿಗಳಾದ ಶ್ರೀ ಕೆ ಪಟ್ಟಾಭಿ ರಾಮನ್‌ರವರು ನಿನ್ನೆ ದಿನ ಭೇಟಿ ಇತ್ತು ಅಲ್ಲಿನ ವಿದ್ಯಾರ್ಥಿಗಳನ್ನು ದ್ದೇಶಿಸಿ ಭಾಷಣ ಮಾಡಿದರು. ಕೋಮುವಾರು ಭೇದ ಭಾವನೆಗಳಿಲ್ಲದೆ ಸ್ಥಾಪಿತವಾಗಿರುವ ಇಂತಹ ನಿಲಯವು ಸಂಸ್ಥಾನದಲ್ಲಿ ಮೊದಲನೆಯದೆಂದೂ, ದೇಶದ ಪ್ರಗತಿಗೆ ಇಂತಹ ನಿಲಯಗಳು ಮುಖ್ಯವೆಂದೂ, ಅಂತಹವುಗಳನ್ನು ಇತರ ಭಾಗಗಳಲ್ಲೂ ತೆರೆಯಲು ಸಾರ್ವಜನಿಕರು ಬೆಂಬಲ ಕೊಡಬೇಕೆಂದೂ ಅವರು ತಿಳಿಸಿದರು

ಸರೆನ್ನೈಕಾ ರಾಷ್ಟ್ರವು ಸ್ವತಂತ್ರವಾಯಿತು

೩॥ ಲಕ್ಷ ಜನ ಸೆನೂಸ್ಸಿ ಅರಬ್ಬಿಯರಿರುವ ಸರೆನ್ನೈಕಾ ಸಂಸ್ಥಾನವು ಮೊನ್ನೆಯಿಂದ ಸ್ವತಂತ್ರ ರಾಷ್ಟ್ರವಾಯಿತೆಂದು ಅದರ ರಾಜರಾದ ಎಮಿರ್ ಸೈಯದ್ ಇದ್ರಿಸ್ ಸೆನೂಸ್ಸಿಯವರು ಘೋಷಣೆಯೊಂದನ್ನು ಹೊರಡಿಸಿರುತ್ತಾರೆ. ಯುದ್ಧಕ್ಕೆ ಮುಂಚೆ ಇದು ಇಟಲಿಯ ಆಡಳಿತದಲ್ಲಿದ್ದಿತು

ಆದಾಯ ತೆರಿಗೆಯಿಂದ ... ಕೋಟಿ ರೂ. ವರಮಾನ

ಭಾರತದಲ್ಲಿ ಆದಾಯ ತೆರಿಗೆಯಿಂದ ೧೦ ಕೋಟಿ ರೂ. ಹೆಚ್ಚು ವರಮಾನ ... ರಬಹುದೆಂದು ಕೇಂದ್ರ ಆದಾಯ ... ಲನಾ ಸಮಿತಿಯವರು ತಿಳಿಸಿರುತ್ತಾರೆ ... ಗ ದೇಶದಲ್ಲಿ ತೆರಿಗೆ ವಿಧಿಸಬಹುದಾದ ... ಸ್ತಿಪಾಸ್ತಿಗಳು ಒಂದು ಸಾವಿರ ಕೋ... ರೂ. ವರೆವಿಗೂ ಇವೆಯೆಂದೂ, ಬೊಂ... ಯಿ ಪ್ರಾಂತ್ಯ ಒಂದರಲ್ಲೇ ೩೦೦ ಕೋ... ರೂ ಗಳಷ್ಟು ಇವೆಯೆಂದೂ, ಯುದ್ಧ... ಗಿದ ಮೇಲೆ ೮೦ ಕೋಟಿ ರೂ. ಗಳ... ರಿಗೆ ಹಾಕಬಹುದಾದ ಹಣದ ಲೆಕ್ಕ... ಕ್ಕದೆ ತೆರಿಗೆಯು ತಪ್ಪಿಹೋಗಿದೆ... ದೂ, ಅವರು ಅಭಿಪ್ರಾಯ ಪಟ್ಟಿರುತ್ತಾ...

ಮುಸ್ಲಿಮರು ಕಾಂಗ್ರೆಸ್ಸಿ... ಸೇರಲು ನಿರ್ಧಾರ

ಮಧ್ಯ ಪ್ರಾಂತ ಮತ್ತು ಬೀರಾ... ಮುಸ್ಲಿಂ ಸಮ್ಮೇಳನವು ಜನಾಬ್ ಎ... ವೈ. ಷರೀಫ್‌ರವರ ಅಧ್ಯಕ್ಷತೆಯಲ್ಲಿ ... ನ್ನೆ ದಿನ ಸೇರಿ, ಎಲ್ಲ ಮುಸ್ಲಿಮರೂ ... ಗ್ರೆಸ್ಸಿಗೆ ಸೇರಿ ಅದರ ಪ್ರಗತಿಗಾಗಿ ದುಡಿ... ಬೇಕೆಂದು ನಿರ್ಧರಿಸಲಾಯಿತು.

ಉಪಯುಕ್ತ ಜಾನುವಾ... ಗಳ ಕೊಲೆಗೆ ನಿಷೇಧ

ಉಪಯೋಗಕ್ಕೆ ಬರುವ ಜಾನುವಾ... ಗಳ ಕೊಲೆ ಮಾಡುವುದನ್ನು ನಿಷೇ... ಬೇಕೆಂದು ಪ್ರಾಂತ ಮತ್ತು ಸಂಸ್ಥಾ... ಳಿಗೆ ಭಾರತ ಸರ್ಕಾರದವರು ಸೂ... ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಫಸ್ಟ್ ಗ್ರೇಡ್ ಕಾಲೇಜಿನ ಕರ್ನಾಟಕ ಸಂಘ

ರಾಜಧಾನಿಯ ಫಸ್ಟ್ ಗ್ರೇಡ್ ಕಾ... ಜಿನ ಕರ್ನಾಟಕ ಸಂಘದ ಚುನಾವಣೆ ... ಮೊನ್ನೆ ದಿನ ನಡೆದು ಶ್ರೀ ಹೆಚ್. ಗಂಗಾ... ಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಎ... ವೀರರಾಜೇ ಅರಸಿನವರು ಕಾರ್ಯ... ದರ್ಶಿಯಾಗಿಯೂ ಚುನಾಯಿತರಾದರು

ಸಮತಾವಾದಿ ಪಕ್ಷದ ಕಾರ್ಯಕಾ... ಸಮಿತಿ

ಅಖಿಲ ಭಾರತ ಸಮತಾವಾದಿ ಪ... ಕಾರ್ಯಕಾರೀ ಸಮಿತಿಯ ಸಭೆಯು ... ೨೪ನೇ ತಾ॥ನಿಂದ ಬೆಂಗಳೂರಿನಲ್ಲಿ ... ಯುವುದು ಶ್ರೀ ಜಯ ಪ್ರಕಾಶ... ರಾಯಣ್ ಮತ್ತು ಇತರ ನಾಯಕ... ಳು ಆ ದಿನ ಬೆಂಗಳೂರಿಗೆ ಬರಲಿದ್ದಾ...

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ವಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು

U HARI SHENOY B A

ಏಜಂಟ್

ಗಾಯತ್ರೀ ಟಾಕೀಸ್

21-9-49ರಿಂದ 2 ದಿನಗಳು ಮಾತ್ರ

ದಿನವಹಿ ೨ ಆಟಗಳು

M. G. M's

BOOM TOWN

ಬೂಮ್ ಟೌನ್

Guarantees thrill every minute in Two-fisted action Story

With- Clark Gable

- Next Change -

TYCOON

ರಾಜಕಮಲ್

ಟಾಕೀಸ್, ಮೈಸೂರು

16—9—49 ರಿಂದ

ಅಮೋಘ 2 ನೇ ವಾರ...

ನಾಗಕನ್ನಿಕಾ

[ಕನ್ನ...]

ಮಧುರ ಸಂಗೀತಗಳಿಂದಲೂ ಮನಮೋಹಕ ಅಭಿನಯ ನೃತ್ಯಗಳಿಂದಲೂ ಕೂಡಿದ ಮನೋನ್ನತ ಚಿತ್ರ

Edited, printed and published by A. R. Nagarajan at Sadhvi Press, D. Subbiah Road, Mysore

※ ಕಬ್ಬಿಣದ ಪೆಟ್ಟಿಗೆಗಳು, ತರಹಾವರಿ ಹೊಸ ಡಿಸೈನ್‌ಗಳು, ಕ್ಯಾಷ್ ಬಾಕ್ಸ್, ಬೀರುಗಳು ※

ಕಡಿಮೆ ಬೆಲೆಗಳಲ್ಲಿ ದೊರೆಯುತ್ತವೆ. ಟಿ ಸಿ. ಐ. ವರ್ಕ್ಸ್, ೨೬೬೭, ಹಳ್ಳದಕೇರಿ (ಛತ್ರಿ ಮರದ ಹತ್ತಿರ), ಮೈಸೂರು.

ಫೋ॥ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨೧-೯-೧೯೪೫ [ಸಂಚಿಕೆ ೪೭

-ಸಿನಿಮಾಗಳ ಮೇಲೆ- ಸಿ.ವಿ.ರಾಮನ್ನರ ಆಗ್ರಹ

ಅಭಿವೃದ್ಧಿ ಕಾರ್ಯಗಳಿಗೆ ಗ್ರ್ಯಾಂಟು

(ಸಂ.ಸು ಫೋ॥) ಬೆಂಗಳೂರು ೨೧ ಸರಕಾರದವರು ಹಲವು ಅಭಿವೃದ್ಧಿ ಕಾರ್ಯಗಳಿಗಾಗಿ ಕೆಳಗೆ ಕಾಣಿಸಿದಂತೆ ಗ್ರ್ಯಾಂಟುಗಳನ್ನು ಮಂಜೂರು ಮಾಡಿರುತ್ತಾರೆ:-ಸಿವಿಲ್ ಸ್ಟೇಷನ್ನಿನ ಕ್ಷಯದ ಆಸ್ಪತ್ರೆ ಬಡಾವಣೆಗೆ ೬೬ ಸಾವಿರ ರೂ, ಸೋಲೆಯಲ್ಲಿ ವಿದ್ಯುಚ್ಛಕ್ತಿಯ ಸರಬರಾಜಿಗಾಗಿ ೬೬.೭೫ ರೂಪಾಯಿ; ಪಿರಿಯಾಪಟ್ಟಣ ತಾಲ್ಲೂಕು ಆಫೀಸಿನ ಕಟ್ಟಡಕ್ಕಾಗಿ ೧೭ ಸಾವಿರ ರೂ, ಬೆಂಗಳೂರು ದೊಡ್ಡ ಲಾಲ್‌ಬಾಗಿನ ಬಡಾವಣೆಯ ಪೈಪಿನ ವ್ಯವಸ್ಥೆ ನೀರು ಸರಬರಾಯಿಗೆ ೧೩ ಲಕ್ಷ, ... ನರಸಿಂಹರಾಜಯನ ಗುಡ್ಡದ ಬಡಾವಣೆ ... ಮೇಲ್ ನೀರು ಸರಬರಾಯಿ ಲೈನಿಗೆ ... ಲಕ್ಷ೧೯ ಸಾವಿರ ರೂ.,ಹುಣಸೂರಿನ ಸ್ಕೂಲು ಕಟ್ಟಡಕ್ಕೆ ೪೩ ಸಾವಿರ ರೂ. ... ಶ್ರೀ ಚೇತಮಂಗಲದ ರಿಸರ್ವಾಯರಿನಿಂದ ಹಾಕಿರುವ ಉಕ್ಕಿನ ಮೇಲ್ ಲೈನನ್ನು ತೆಗೆದು ಕಬ್ಬಿಣದ ಕೊಳಾಯಿ ಹಾಕುವುದಕ್ಕೆ ೬ ಲಕ್ಷ ೮ ಸಾವಿರ ರೂ.

ರೆಡ್ಡಿಯವರು ವಾಪಸು

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ಪ್ರಾತಃಕಾಲ ೧೧-೪೫ಕ್ಕೆ ವಿಮಾನದಲ್ಲಿ ಆಗಮಿಸಿದರು. ಮಧ್ಯಾಹ್ನ ೩ ಗಂಟೆಗೆ ಅವರ ಅಧ್ಯಕ್ಷತೆಯಲ್ಲಿ ಮಂತ್ರಿಮಂಡಲದ ಸಭೆ ನಡೆಯುವುದು

ರಜಾ

ಸರಕಾರದ ಲೇಬರ್ ಕಮೀಷನರಾದ ... ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಈ ತಿಂಗಳು ೨೦ರಿಂದ ಮೂರು ವಾರಗಳ ರಜಾ ಕೊಡಲಾಗಿದೆ ಅವರ ಕೆಲಸವನ್ನು ಅವರ ಸಹಾಯಕರಾದ ಶ್ರೀ ಎಸ್. ಶೀನು ಅಯ್ಯಂಗಾರರವರು ನೋಡಿಕೊಳ್ಳುವರು

ಕುಣಿಗಲ್ ಸ್ಟಡ್ ಫಾರಂ

ಕುಣಿಗಲಿನಲ್ಲಿರುವ ಸ್ಟಡ್ ಫಾರಂನ ಆಡಳಿತವನ್ನು ಮಿಲಿಟರಿ ಇಲಾಖೆಯಿಂದ ... ಇಲಾಖೆಗೆ ವರ್ಗಾಯಿಸಲಾಗಿದೆ

ಸಹಕಾರ ಪದ್ಧತಿ ಮೇಲೆ ಹಾಲಿನ ಸರಬರಾಜು

ಇಲ್ಲಿನ ಪೌರಸಭೆಯು ನೆನ್ನೆ ಸೇರಿದ್ದಾಗ ಸಹಕಾರದ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರು ಹಾಜರಿದ್ದು ನಗರದ ಹಾಲು ಸರಬರಾಜನ್ನು ಸಹಕಾರ ಪದ್ಧತಿಯ ಮೇಲೆ ಏರ್ಪಾಡು ಮಾಡಿಕೊಳ್ಳುವ ವಿಷಯವನ್ನು ಪೌರಸಭೆಯ ಗಮನಿಸಬೇಕೆಂದು ಹೇಳಿದರು ಆಹಾರದ ಸಂಬಂಧವಾಗಿ ಸರಕಾರದವರು ತಯಾರಿಸಿರುವ ನವ ಯೋಜನೆಯನ್ನು ಪ್ರಸ್ತಾಪಿಸಿ, ಈ ... ಕೋಟಿ ರೂ. ಯೋಜನೆಯನ್ನು ... ಜಾರಿಗೆ ತರಲಾಗುವುದೆಂದೂ. ... ಭಾರತ ಸರ್ಕಾರದ ಸಹಾಯವು ದೊರಕುವುದೆಂದೂ ತಿಳಿಸಿದರು. ... ಸಾವಿರ ಎಕರೆ ಜಮೀನಿನಲ್ಲಿ ಬೆಳೆಯ ... ಹಾಕಲಾಗಿದೆಯೆಂದೂ, ೬.೬೦ ಸಾವಿರ ಎಕರೆಯಲ್ಲಿ ಭತ್ತವನ್ನು ಬೆಳೆಯಲಾಗುವುದೆಂದೂ ಹೇಳಿದರು

ಪಾಕಿಸ್ತಾನದ ರೂಪಾಯಿ ಕಡಮೆಯಾಗುವುದಿಲ್ಲ

... ಗಂಟೆ ಕಾಲ ಪರಿಶೀಲನೆ ನಡೆಸಿ ರೂಪಾಯಿನ ಬೆಲೆಯನ್ನು ಇಳಿಸುವುದಿಲ್ಲ ... ಪಾಕಿಸ್ತಾನ ಸರ್ಕಾರವು ನಿರ್ಧರಿ

ಎಲ್ಲ ತಾಲ್ಲೂಕುಗಳಿಗೂ ಟೆಲಿಫೋನ್ ಸೌಕರ್ಯ

ಬೆಂಗಳೂರು ೨೧

ಸಂಸ್ಥಾನದಲ್ಲೇ ಟೆಲಿಫೋನ್ ಯಂತ್ರಗಳು ತಯಾರಾಗುತ್ತಲಿರುವುದರಿಂದ ೧೯೫೦ ನೇ ದಿನ ವರ್ಷ ಎಲ್ಲ ತಾಲ್ಲೂಕಿನ ಮುಖ್ಯ ಸ್ಥಳಗಳಿಗೂ ಟೆಲಿಫೋನ್ ಸೌಕರ್ಯವನ್ನು ಏರ್ಪಡಿಸಬೇಕೆಂದು ಸರ್ಕಾರದವರು ಯೋಚಿಸುತ್ತಿರುವರೆಂದು ಶಾಸನಿಕ ಪಟಣದಾ... ಶ್ರೀ ಕೆ ಟಿ ಭಾಷ್ಯಂರವರು ತಿಳಿಸಿರುವುದಾಗಿ ವರದಿಯಾಗಿದೆ.

ಸರ್ ಎಂ. ವಿ. ಯವರಿಗೆ ಅಭಿನಂದನೆ

ಹಂಗಾಮಿ ಮುಖ್ಯ ಮಂತ್ರಿಗಳಾದ ಹೆಚ್. ಸಿ ದಾಸಪ್ಪನವರು ಸರ್ ಎಂ. ವಿಶ್ವೇಶ್ವರಯ್ಯನವರ ೮೯ನೇ ವರ್ಧಂತಿ ಸಂದರ್ಭದಲ್ಲಿ ಅವರಿಗೆ ತಂತಿ ಕಳುಹಿಸಿ ಅವರ ಸೇವೆಗೆ ಕೃತಜ್ಞತೆ ವ್ಯಕ್ತಪಡಿಸಿದ್ದರು. ಉತ್ತರವಾಗಿ ಸರ್. ಎಂ.ವಿ ಯವರು ತಂತಿ ಕಳುಹಿಸಿ, ಸಂದೇಶವನ್ನು ತಾವು ಅನುಮೋದಿಸುವುದೆಂದು ಭಾವಿಸುವುದಾಗಿ ತಿಳಿಸಿದ್ದಾರೆ

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ -ವ್ಯವಸ್ಥಾಪಕ

... ದನಕರುಗಳಿಗೆ ತಗಲುವ ರೋಗಗಳನ್ನು ತಪ್ಪಿಸುವ ಸಂಬಂಧವಾಗಿ ಸರಕಾರದವರು ಒಂದು ಮಸೂದೆಯನ್ನು ಪ್ರ॥ಪ್ರ॥ ಸಭೆಯಲ್ಲಿ ತರಲಿರುವರೆಂದು ಗೊತ್ತಾಗಿದೆ

ಹೈದರಾಬಾದಿನಲ್ಲಿ ಜಹಗೀರುಗಳ ರದ್ದು

ಹೈದರಾಬಾದಿನ ಮಿಲಿಟರಿ ಗವರ್ನರಾದ ಶ್ರೀ ಎಂ ಕೇ ವೆಲ್ಲೋಡಿಯವರನ್ನು ಜಹಗೀರು ದಾರಿ ರದ್ದು ಶಾಸನದ ಮುಖ್ಯ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಇದೇ ... ನೇ ತಾ॥ ಔರಂಗಾಬಾದ್, ಆದಿಲಾಬಾದ್, ಬಿದಾರ್, ಗುಲ್ಬರ್ಗ, ನಲಗೊಂಡ ಹೈದರಾಬಾದ್, ರಾಯಚೂರು, ವಾರಂಗಲ್ ಮುಂತಾದ ೧೬ ಜಿಲ್ಲೆಗಳಲ್ಲಿರುವ ಜಹಗೀರುಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಲಾಗುವುದು ದೇವಸ್ಥಾನ, ಮಸೀದಿ ಮತ್ತು ಧಾರ್ಮಿಕ ಸಂಸ್ಥೆಗಳಿಗಾಗಿ ಬಿಟ್ಟ ಜಹಗೀರುಗಳ ವರಮಾನದಲ್ಲಿ ಶೇಕಡ ೧೧ ರಷ್ಟನ್ನು ಸರ್ಕಾರಕ್ಕೆ ಕೊಡಬೇಕೆಂದು ಆಜ್ಞೆ ಮಾಡಲಾಗಿದೆ.

ದಸರಾ ವಸ್ತು ಪ್ರದರ್ಶನ

ಮೈಸೂರು ೨೧

ಮೈಸೂರು ದಸರಾ ವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನು ಮಹಾತ್ಮರ ಶಿಷ್ಯಂದಿರೂ ಮತ್ತು ವಾರ್ಧಾ ಆಶ್ರಮದ ಅಧ್ಯಾಪಕರೂ ಆದ ಆಚಾರ್ಯ ಕಾಕಾ ಕಾಲೇಲ್ಕರ್‌ರವರು ನಾಳೆ ಮಧ್ಯಾಹ್ನ ೨-೩೦ ಘಂಟೆಗೆ ನೆರವೇರಿಸುವರು.

ಬಂಡೆ ಬಿದ್ದು ರೈಲು ಸಂಚಾರಕ್ಕೆ ತೊಂದರೆ

ಮೈಸೂರು-ಅರಸೀಕೆರೆ ರೈಲ್ವೆ ಮಾರ್ಗದಲ್ಲಿರುವ ಹೆಬ್ಬನ ಘಟ್ಟದ ಪತ್ರಿರ ... ಭಾರಿ ಬಂಡೆಯೊಂದು ನಿನ್ನೆ ಮಧ್ಯಾಹ್ನ ರೈಲ್ವೆ ಲೈನಿನ ಮೇಲೆ ಬಿದ್ದುದರಿಂದ ರೈಲುಗಳು ಓಡಾಡಲು ಅಡಚಣೆಯಾಗಿ, ಅರಸೀಕೆರೆಯಿಂದ ಇಲ್ಲಿಗೆ ನಿನ್ನೆ ರಾತ್ರಿ ೮-೩೫ಕ್ಕೆ ಬರಬೇಕಾದ ರೈಲು ರಾತ್ರಿ ... ಗಂಟೆಗೆ ಬಂದಿತು

ವಿಶ್ವದ ವರಮಾನ ೫೩೧ ಕೋಟಿ ಡಾಲರುಗಳು

ಈ ವರ್ಷ ವಿಶ್ವದ ಒಟ್ಟು ವರಮಾನ ೫೩೧ ಕೋಟಿ ಡಾಲರುಗಳೆಂದು ಅಂದಾಜು ಮಾಡಲಾಗಿದೆ. ಅದರ ಪೈಕಿ ಉತ್ತರ ಅಮೆರಿಕಕ್ಕೆ ೨೪೦ ಕೋಟಿ, ಯೂರೋಪಿಗೆ ೧೧೦ ಕೋಟಿ, ರಷ್ಯ ೫೪ ಕೋಟಿ ಡಾಲರುಗಳ ವರಮಾನವೆಂದು ಹೇಳಲಾಗಿದೆ.

೨೬ನೇ ತಾ॥ ಸೋಮವಾರ ದಿಂದ ರಾಜ್ಯಾಂಗ ಸಭೆ

ಮೈಸೂರು ೨೧

ಮೈಸೂರು ರಾಜ್ಯಾಂಗ ಸಭೆಯ ಅಧಿವೇಶನವು ಈ ತಿಂಗಳು ೨೬, ೨೭ ಮತ್ತು ೨೮ ನೇ ತಾ॥ ರಾಜಧಾನಿಯ ಪ್ರಾರ್ಥನಾ ಭವನದಲ್ಲಿ ನಡೆಯುವುದಾಗಿ ಗೊತ್ತಾಗಿದೆ

ಬಂಜರು ಜಮೀನಿನ ವ್ಯವಸಾಯಕ್ಕೆ ಮಸೂದೆ

ಖಾಲಿ ಬಿದ್ದಿರುವ ಜಮೀನುಗಳಲ್ಲಿ ವ್ಯವಸಾಯ ಮಾಡಿಸುವ ಶಕ್ತಿ ಮಾಲೀಕರುಗಳನ್ನು ಒತ್ತಾಯ ಪಡಿಸುವುದು, ಅವರು ಹಾಗೆ ಮಾಡದಿದ್ದರೆ ಜಿಲ್ಲಾಧಿಕಾರಿಗಳೇ ಜಮೀನುಗಳನ್ನು ವಶಪಡಿಸಿಕೊಂಡು, ... ಗಳಲ್ಲಿ ಸಾಗುವಳಿ ಮಾಡಿಸಲು ... ಮಸೂದೆಯೊಂದನ್ನು ಸರ್ಕಾರದವರು ಪ್ರ॥ ಪ್ರ॥ ಸಭೆಯಲ್ಲಿ ಮಂಡಿಸಲಿದ್ದಾರೆ.

ನಾನು ಸರ್ವಾಧಿಕಾರಿಯಾಗಿದ್ದರೆ ಸಿನಿಮಾಗಳನ್ನೆಲ್ಲ ಮುಚ್ಚಿಸಿಬಿಡುತ್ತಿದ್ದೆ

ಸರ್ ಸಿ. ವಿ. ರಾಮನ್ನರ ಹೇಳಿಕೆ

ಸಿನಿಮಾಗಳು ನೀತಿ ಪತನಕ್ಕೆ ಮೂಲಸ್ಥಾನಗಳು; ನಾನು ಸರ್ವಾಧಿಕಾರಿಯಾಗಿದ್ದರೆ ಅವುಗಳನ್ನೆಲ್ಲಾ ಮುಚ್ಚಿಸಿ ಬಿಡುತ್ತಿದ್ದೆನು. ಹೋಟಲುಗಳಿಂದ ಹೆಚ್ಚಾಗುವಷ್ಟೇ ಆಹಾರ ಹಣವು ಸಿನಿಮಾಗಳಿಂದಲೂ ವ್ಯರ್ಥವಾಗುತ್ತದೆ-ಎಂಬ ಅಭಿಪ್ರಾಯವನ್ನು ಸುಪ್ರಸಿದ್ಧ ವಿಜ್ಞಾನ ಸಂಶೋಧಕರಾದ ಡಾ॥ ಸಿ ವಿ. ರಾಮನ್ನರವರು ಹೊರಗೆಡಹಿದ್ದಾರೆ ಸಿನಿಮಾಗಳನ್ನು ನೋಡುವುದರಲ್ಲಿ ಕಾಲವನ್ನೂ, ಹಣವನ್ನೂ ವ್ಯರ್ಥಮಾಡುವುದಕ್ಕಿಂತ ಭಾಗವತ ಮತ್ತು ಇತರ ಪುಣ್ಯಕಥೆಗಳನ್ನು ಕೇಳಲು ನಾನು ಹೆಚ್ಚು ಆಸಕ್ತನಾಗಿದ್ದೇನೆ.ಜನರಿಗೆ ವಿನೋದ ಮತ್ತು ಉದ್ರೇಕಗಳು ಬೇಕೆಂಬುದು ನನಗೆ ಗೊತ್ತು; ಆದರೆ ನಿಜವಾದ ಉದ್ರೇಕವು ಬೇಕಾದರೆ ಒಬ್ಬರೊಡನೊಬ್ಬರು ಕುಸ್ತಿ ಮಾಡುವುದು ಒಳ್ಳೆಯದು -ಎಂದೂ ಅವರು ಹೇಳುತ್ತಾರೆ

ಫಿಲಾಸಫಿ ಪಿ. ಎಚ್. ಡಿ. ಪ್ರಶಸ್ತಿ

ಮೈಸೂರು ೨೧

ಫಿಲಾಸಫಿ ಭಾಗದಲ್ಲಿ ಪಿ ಹೆಚ್. ಡಿ ಪ್ರಶಸ್ತಿಯನ್ನು ಇವುಮಂತೆ ಈ ದಿನ ವಿಶ್ವವಿದ್ಯಾಲಯದ ಅಕಡೆಮಿಕ್ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಲಾಯಿತು ಬಿಎಸ್ಸಿ ಡಿಗ್ರಿ ಕಾರ್ಸ್ ಕಾಲೇಜಿಗೆ ಒಂದು ವರ್ಷ ಕಾಲ ತಾತ್ಕಾಲಿಕ ಅಂಗೀಕಾರ, ಬೆಂಗಳೂರು ಸೆಂಟ್ ಜೋಸೆಫ್ ಇಂಟರ್ ಕಾಲೇಜಿಗೆ ಶಾಶ್ವತವಾದ ಅಫಿಲಿಯೇಷನ್ ಪಾಕಿಸ್ತಾನದಿಂದ ಬಂದಿರುವ ಮುಸ್ಲಿಮ್ ಕರು ಪರೀಕ್ಷೆಗೆ ಕೂರಲು ಸೌಲಭ್ಯ-ಮುಂತಾದುವುಗಳ ಬಗ್ಗೆಯೂ ನಿರ್ಣಯಗಳಾದವು. ಡಾ॥ ಎಸ್. ರಾಮಚಂದ್ರರಾಯರನ್ನು ಕೌನ್ಸಿಲ್ಲಿನಿಂದ ಸೆನೆಟ್‌ಗೆ ಸದಸ್ಯರಾಗಿ ಚುನಾಯಿಸಲಾಯಿತು

ಪ್ರಭುಗಳ ರಾಜಧನ ೨೬ ಲಕ್ಷ ರೂ

ಕಳೆದ ವರ್ಷ ಶ್ರೀಮನ್ಮಹಾರಾಜರವರ ರಾಜಧನವನ್ನು ೪೦ ಲಕ್ಷ ರೂಪಾಯಿನಿಂದ ೨೬ ಲಕ್ಷಕ್ಕೆ ಇಳಿಸಲಾಯಿತಷ್ಟೆ ಇದನ್ನು ಇನ್ನೂ ಕಡಿಮೆ ಮಾಡುವ ಆಲೋಚನೆಯು ಸರ್ಕಾರದವರಿಗೆ ಇಲ್ಲವೆಂದು ತಿಳಿದು ಬಂದಿದೆ

ಹರಿಕಥೆ

ರಾಜಧಾನಿಯ ಕೋತ್ವಾಲರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಿಸಾಲಾಂಬಾ ನಿಲಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಮಹಾಲಯ ಅಮಾವಾಸ್ಯೆ ಪ್ರಯುಕ್ತ ಶ್ರೀ ಎಂ. ಎಲ್ ನಾರಾಯಣ ದಾಸರಿಂದ "ಭೀಷ್ಮ ಪ್ರತಿಜ್ಞೆ" ಎಂಬ ಹರಿಕಥೆ ನಡೆಯತ್ತೆ

ನಾಗಮಂಗಲ ... ದಕಾಯಿತರು

ರಾಜಕೋಟೆ ... ದಲಿನ ಪಲ ... ಬಳ್ಳಿಯ ... ಸರ್ಕಾರ ... ಪಕಯಿ ... ಸಹಿತ ... ನನ್ನ ... ವಿ ... ರಿನ ಅಸ್ತಿಯನ್ನು ಲೂಟಿ ಮಾಡಿದರೆಂದು ವರದಿಯಾಗಿದೆ ... ದೆಂದೂ ಹೇಳಲಾಗಿದೆ

ಉಪವಾಸದ ಬಗ್ಗೆ ಸಾರ್ವಜನಿಕ ಸಹಾನುಭೂತಿ

ಮೇಲುಕೋಟೆ ೧೯

ಇಲ್ಲಿನ ದೇವಸ್ಥಾನದ ಪುನರ್ವ್ಯವಸ್ಥೆಗಾಗಿ ಒಂದು ಸಮಿತಿಯನ್ನು ನೇಮಿಸಬೇಕೆಂದು ಕಳೆದ ೪ ದಿನಗಳಿಂದಲೂ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿರುವ ಶ್ರೀಗಳಾದ ಅರೆಯರ್ ಶ್ರೀನಿವಾಸ ಅಯ್ಯಂಗಾರ್ಯರು ಮತ್ತು ಬಿ ವಿ ಸಂಪತ್ಕುಮಾರಾಚಾರ್ಯರುಗಳಿಗೆ ಸಹಾನುಭೂತಿ ತೋರಿಸಲು ಇಲ್ಲಿನ ಪುರ ಜನರ ಮತ್ತು ಉಭಯ ಗೋಷ್ಠಿಯವರ ಸಭೆಯೊಂದು ವಿದ್ವಾನ್, ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ನಡೆಯಿತು ಶ್ರೀಗಳಾದ ಅಳಸಿಂಗಾಚಾರ್ಯರು, ರಂಗಸ್ವಾಮಿ ಶೆಟ್ಟರು ಮತ್ತು ತಿಂಗಪ್ಪನವರು ಭಾಷಣ ಮಾಡಿ, ದೇವಸ್ಥಾನದ ಪುನರ್ವ್ಯವಸ್ಥೆಯ ಅಗತ್ಯವನ್ನು ತಿಳಿಸಿದರು ಸರ್ಕಾರದವರು ಕೂಡಲೇ ಸತ್ಯಾಗ್ರಹಿಗಳ ಬೇಡಿಕೆಯನ್ನು ಈಡೇರಿಸಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

೭೫ ಕೋಟಿ ರೂ.ನ ರಚನಾತ್ಮಕ ಯೋಜನೆ

ಬೊಂಬಾಯಿ ಸರ್ಕಾರದವರು ಕೈಗೊಂಡಿರುವ ೭೫ ಕೋಟಿ ರೂ.ನ ರಚನಾತ್ಮಕ ಯೋಜನೆಯ ಪ್ರಾರಂಭೋತ್ಸವವನ್ನು ಅಲ್ಲಿನ ಮುಖ್ಯ ಮಂತ್ರಿ ಶ್ರೀ ಬಿ ಜಿ ಖೇರರವರು ನೊನ್ನೆ ದಿನ ನೆರವೇರಿಸಿದರು ಮನೆ ಮತ್ತು ರಸ್ತೆಗಳ ಸೌಕರ್ಯ, ವ್ಯವಸಾಯಾಭಿವೃದ್ಧಿ, ಮತ್ತು ನಿಮ್ನ ವರ್ಗದವರ ಉದ್ಧಾರ ಮುಂತಾದ ಕಾರ್ಯಕ್ರಮಗಳು ಈ ಯೋಜನೆಯಲ್ಲಿ ಸೇರಿವೆ

ಆಂಜನೇಯ ಸ್ವಾಮಿ ವಿಗ್ರಹದ ಜೀರ್ಣೋದ್ಧಾರ

ರಾಜಧಾನಿಯ ಸೊಪ್ಪಿನ ಕೊಳದ ಸಣ್ಣ ಗರ್ಭಾಂಗಣ ಮಂಟಪದಲ್ಲಿ ಇದೇ ೨೩ನೇ ತಾ॥ ನಿಂದ ಕಿಲ್ಲೇ ಮೊಹಲ್ಲಾದ ಶ್ರೀನಿವಾಸ ರಾಘವೇಂದ್ರ ಮತ್ತು ಸತ್ಯನಾರಾಯಣ ಲೋಕ ಕಲ್ಯಾಣ ಸೇವಾ ಮಂದಿರದವರು ಶ್ರೀ ಆಂಜನೇಯ ಸ್ವಾಮಿಯವರ ಜೀರ್ಣೋದ್ಧಾರ ಮತ್ತು ಶ್ರೀ ಗುರುಗಳವರ ಮಹಾಭಿಷೇಕ ಪೂಜಾ ಮತ್ತು ಪಾರಾಯಣಗಳನ್ನು ಆಚರಿಸುವುದರಿಂದ ಭಕ್ತಾದಿಗಳು ಸಹಾಯ ಮಾಡಬೇಕೆಂದು ಕೋರಲಾಗಿದೆ

FOR EXHIBITION

SIGN BOARDS & Stall Decoration

Consult N. Chandran's FILM ARTS, Behind Rajkamal, MYSORE

ಹೈದರಾಬಾದಿನ ಮಾಜಿ ಅಧಿಕಾರಿಗಳ ಆಸ್ತಿಗಳ ವಶ

ಹೈದರಾಬಾದಿನ ಮಾಜಿ ಆರ್ಥಿಕ ಸಚಿವರಾಗಿದ್ದ ಮೋಯಿನ್ ನವಾಬ್ ಜಂಗ್ ಮತ್ತು ಅವರ ಪತ್ನಿ, ಲಾಯಕ್ ಅಲಿ ಮಂತ್ರಿ ಮಂಡಲದಲ್ಲಿದ್ದ ರಹಮುಲ್ಲಾ, ಪಾಕಿಸ್ತಾನದಲ್ಲಿ ಏಜೆಂಟ್ ಜನರಲ್ಲರಾಗಿದ್ದ ಮುಸ್ತಾಕ್ ಅಹಮದ್ ಖಾನ್ ಮತ್ತು ಲಂಡನ್ನಿನಲ್ಲಿ ಏಜೆಂಟ್ ಜನರಲ್ಲರಾಗಿದ್ದ ನವಾಬ್ ಮೀರ್ ನವಾಜ್ ಜಂಗ್ ಬಹದ್ದೂರ್ ಮುಂತಾದವರ ಆಸ್ತಿಪಾಸ್ತಿಗಳೆಲ್ಲವನ್ನೂ ಸರ್ಕಾರದವರು ವಶಪಡಿಸಿಕೊಂಡಿರುವರೆಂದು ತಿಳಿದುಬಂದಿದೆ

ರಷ್ಯದಲ್ಲಿ ಚೀಣಾದ ಮಾಜಿ ರಾಯಭಾರಿ ಕೊಲೆ

ಚೀಣಾದ ಮಾಜಿ ರಾಯಭಾರಿಯಾದ ೬೦ ವರ್ಷದ ಜನರಲ್ ಯಾಂಗ್‌ಚಿ ಎ ಹಾರವರನ್ನು ಮಾಸ್ಕೋದಲ್ಲಿ ಕೊಲೆ ಮಾಡಲಾಯಿತೆಂದು ವರದಿಯಾಗಿದೆ ಪೀಕಿಂಗಿನಲ್ಲಿರುವ ಕಮ್ಯೂನಿಸ್ಟರೊಂದಿಗೆ ಸೇರಲು ಅವರು ಸಧ್ಯದಲ್ಲಿಯೇ ಅಲ್ಲಿಗೆ ಹೊರಡಲು ಸಿದ್ಧತೆ ಮಾಡುತ್ತಿದ್ದರೆಂದು ಹೇಳಲಾಗಿದೆ

ಬೊಂಬಾಯಿನಲ್ಲಿ ೨೫೦೦೦ ವಿದ್ಯಾರ್ಥಿಗಳ ಮುಷ್ಕರ

ಸರ್ಕಾರದವರು ಶಾಲಾ ಫೀಜುಗಳನ್ನು ಶೇಕಡ ೨೦ ರಷ್ಟು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಬೊಂಬಾಯಿ ನಗರದ ೨೫ ಸಾವಿರ ವಿದ್ಯಾರ್ಥಿಗಳು ನಿನ್ನೆ ದಿನ ಮುಷ್ಕರ ಹೂಡಿದ್ದರು

೨೫ ವಯಸ್ಸಿಗೆ ಕಮ್ಮಿಯ ಸೈನಿಕರಿಗೆ ವಿವಾಹವಿಲ್ಲ

ಭಾರತ ಸೈನ್ಯ ಶಾಖೆಯಲ್ಲಿರುವ ಯುವಕರು ೨೫ ವರ್ಷ ವಯಸ್ಸಾಗದೇ ಮದುವೆ ಮಾಡಿಕೊಳ್ಳಲಾಗದೆಂದು ಒಂದು ಆಜ್ಞೆಯನ್ನು ಹೊರಡಿಸಲಾಗಿದೆ. ೨೫ ವರ್ಷದೊಳಗಿರುವ ಸೈನ್ಯಾಧಿಕಾರಿಗಳು ವಿವಾಹವಾಗುತ್ತಿರುವುದನ್ನು ನಿಲ್ಲಿಸಲು ಈ ನಿರ್ಬಂಧವನ್ನು ಹಾಕಲಾಗಿದೆ

೬೫೬ ಖೈದಿಗಳ ಪರಾರಿ

ದಕ್ಷಿಣ ಕೊರಿಯಾದಲ್ಲಿರುವ ಮೋಕ್ಪೋ ಜೈಲಿನಲ್ಲಿದ್ದ ಖೈದಿಗಳು ಮೊನ್ನೆ ದಿನ ದೊಂಬಿ ಎದ್ದು ಅಲ್ಲಿಂದ ೬೫೬ ಮಂದಿ ತಪ್ಪಿಸಿಕೊಂಡು ಪರಾರಿಯಾದರೆಂದೂ, ಗಲಭೆಯಲ್ಲಿ ೫೧ ಮಂದಿ ಮರಣ ಹೊಂದಿದರೆಂದೂ ವರದಿಯಾಗಿದೆ

ನೊಣಗಳನ್ನು ಕೊಲ್ಲುವ 'ಅಣು ಬಾಂಬು'

ಮನೆಗಳಲ್ಲಿರುವ ನೊಣಗಳನ್ನು ನಾಶ ಮಾಡುವ ನೂತನ 'ಅಣು ಬಾಂಬನ್ನು' ಬ್ರಿಟನ್ನಿನ ವೈಜ್ಞಾನಿಕರು ಕಂಡುಹಿಡಿದಿದ್ದಾರೆ ವಿದ್ಯುಚ್ಛಕ್ತಿ ಯಂತ್ರದಿಂದ ಎಣ್ಣೆಯನ್ನು ಎರಚುವುದರಿಂದ ನೊಣಗಳು ಸಂಪೂರ್ಣವಾಗಿ ನಾಶವಾಗುವುವೆಂದೂ ಎಣ್ಣೆಯು ಆಹಾರ ಅಥವ ಇತರ ಸಾಮಾನುಗಳ ಮೇಲೆ ನಿಲ್ಲುವುದಿಲ್ಲವೆಂದೂ ಹೇಳಲಾಗಿದೆ

ಬ್ಯಾಂಕಾಕಿಗೆ ನೆಹರೂರವರ ಭೇಟಿ

ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಚರ್ಚಿಸುವ ಬಗ್ಗೆ ಸೈಯಾಮಿನ ಪ್ರಧಾನಿಗಳು ಈ ವರ್ಷ ಬ್ಯಾಂಕಾಕಿನಲ್ಲಿ ಕರೆದಿರುವ ಸಮ್ಮೇಳನದಲ್ಲಿ ಪಂಡಿತ ನೆಹರೂರವರು ಭಾಗವಹಿಸುವರೆಂದು ಗೊತ್ತಾಗಿದೆ

ಡಚ್ ಯೂನಿಯನ್ನಿನ ಬಗ್ಗೆ ಒಪ್ಪಂದ

ನೆದರ್‌ಲೆಂಡ್ ಮತ್ತು ಇಂಡೋನೇಷ್ಯಗಳ ಯೂನಿಯನ್ ಸ್ಥಾಪನೆ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಗಿದೆಯೆಂದು ವರದಿಯಾಗಿದೆ ಈಗ ಹೇಗಿನಲ್ಲಿ ನಡೆಯುತ್ತಿರುವ ದುಂಡು ಮೇಜಿನ ಅಧಿವೇಶನವು ಅಷ್ಟು ಫಲಕಾರಿಯಾಗಿಲ್ಲವೆಂದೂ ಹೇಳಲಾಗಿದೆ

ನಿದ್ರೆ ಮಾಡುವ ಖಾಯಿಲೆ

ಟೋಕಿಯೋದಲ್ಲಿ ನಿದ್ರೆ ಮಾಡುವ ಖಾಯಿಲೆಯು ಪ್ರಾರಂಭವಾಗಿ ೧೪೦ ಪ್ರಸಂಗಗಳು ವರದಿಯಾಗಿವೆಯೆಂದೂ, ಅದರ ಪೈಕಿ ೨೦ ಜನರು ಮರಣ ಹೊಂದಿದರೆಂದೂ ತಿಳಿದುಬಂದಿದೆ

ಪುರಸಭಾಧ್ಯಕ್ಷರು, ಸದ[ಸ್ಯರ] ರಾಜೀನಾಮೆ

ಉದಕಮಂಡಲದ ಪುರ ಸಭೆಯ ... ಕಾರಿಗಳನ್ನು ಆಗಿಂದಾಗ್ಗೆ ವರ್ಗಾ[ಯಿಸು]ತ್ತಿರುವುದನ್ನು ಮತ್ತು ಒಬ್ಬ ಇಂಜ[ನಿಯ]ರನ್ನು ಪುರ ಸಭೆಯ ನಿರ್ಧಾರಕ್ಕೆ ವಿರು[ದ್ಧ]ವಾಗಿ ವರ್ಗಾಯಿಸಿರುವುದನ್ನು ಪ್ರತಿ[ಭಟಿ]ಸಲು ಅಲ್ಲಿನ ಅಧ್ಯಕ್ಷರೂ ಮತ್ತು ಕಾಂ[ಗ್ರೆ]ಸ್ ಪಕ್ಷದ ಸದಸ್ಯರುಗಳೂ ರಾಜೀನಾ[ಮೆ] ಸಲ್ಲಿಸಿರುತ್ತಾರೆ.

ಒಡೆಯದ ಪಿಂಗಾಣಿ ಸಾಮಾನುಗಳು

ಕೆಳಕ್ಕೆ ಕೆಡವಿದರೂ ಒಡೆಯದ[ಂತಹ ಪಿಂ]ಗಾಣಿ ಸಾಮಾನುಗಳನ್ನು ದಕ್ಷಿಣ ... ರೊಲಿನಾದಲ್ಲಿ ತಯಾರಿಸಲಾಗಿದೆ ... ಕಾಲೇಜ್ ವೈಜ್ಞಾನಿಕರ ಎರಡು ... ಸಂಶೋಧನೆ ನಡೆಸಿ, ಅಲ್ಲಿ ಸಿಕ್ಕುವ ... ದು ವಿಶೇಷ ಖನಿಜದಿಂದ ಒಡೆಯದ ... ಗಾಣಿಯನ್ನು ತಯಾರಿಸಬಹುದೆಂದ ... ಳಿಸಿರುತ್ತಾರೆ

ರೇಡಿಯೋ ರಹದಾರಿ ಶು[ಲ್ಕ] ಹೆಚ್ಚಿತು

ಬರುವ ನವೆಂಬರ್ ತಿಂಗಳಿಂದ ... ಯೋ ರಹದಾರಿ ದರಗಳನ್ನು ಹೆಚ್ಚಿ... ಗುವುದೆಂದು ಭಾರತದ ಅಂಚೆ ಇ... ಯ ಪ್ರಕಟಣೆ ತಿಳಿಸುತ್ತದೆ ಮನೆ... ಉಪಯೋಗಿಸುವ ರೇಡಿಯೋಗಳ... ಷಕ್ಕೆ ೧೫ ರೂ, ಹೋಟೇಲು, ... ಮತ್ತು ಇತರ ರೇಡಿಯೋಗಳಿಗೆ ವ... ೫೦ ರೂ ಎಂದು ನಿಗದಿ ಮಾಡಲ...

Edited, printed and pub-lished by A R. Nagar... at Sadhvi Press, D Subb... Road, Mysore.

ಪ್ರಭಾ ★ ಈ ರಾತ್ರಿ

ಪ್ರತಿ ದಿನ 3 ಆಟಗಳು

ಜನಭರಿತ 3ನೆಯ ವಾರ

ಫೇಮಸ್ ಪಿಕ್ಚರ್ಸ್ ರವರ ಹಿಂದಿ ಚಿತ್ರ ಬಡಿ ಬಹೆನ್

ತಂಗಿಯ ಏಳಿಗೆಗಾಗಿ ಸ್ವಸುಖಕ್ಕೆ ತಿಲಾಂಜಲಿಯನ್ನಿತ್ತ ಅಕ್ಕ

ನೊಬ್ಬಳ ಹಿರಿಮೆಯ ಕಥೆ

ಭೂಮಿಕೆಯಲ್ಲಿ.— ಸಂಗೀತದ ರಾಣಿ

ಸುರೈಯ್ಯ, ಗೀತಾ ಬಾಲಿ, ರೆಹಮಾನ್, ಉಲ್ಹಾಸ್

ಪ್ರಭುದೇವಾ ಟಾಕೀಸ್

22-9-49 ರಿಂದ ಅನೋಘ ಆರಂ[ಭ]

— ಮಾಯಾ ಕುದುರೆ

(ತಮಿಳು)

ಪ್ರತಿ ದಿನ ಮೂರು ಆಟಗಳು

ಮ್ಯಾಟನಿ 2-30, ಮೊದಲನೆ ಆಟ 6 30 ಮತ್ತು ರಾತ್ರಿ 10ಕ್ಕೆ

ಪಾತ್ರ:- ಅಂಜಲೀ ದೇವಿ ಮತ್ತು ನಾಗೇಶ್ವರರಾವ್

ಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೩-೧೦-೧೯೫೧ [ಸಂಚಿಕೆ ೪೯

ಆಸ್ಟ್ರೇಲಿಯಾ ಪ್ರವಾಹ ೨೦೦೦೦ ದನಗಳ ಸಾವು

ನೆಹರೂರವರಿಗೆ ನಗರದ ಚಿನ್ನದ ಬೀಗದಕೈ ಅರ್ಪಣೆ

ಪಂಡಿತ ನೆಹರೂರವರು ಮುಂದಿನ ತಿಂಗಳು ಅಮೇರಿಕದಲ್ಲಿ ಪ್ರವಾಸ ಮಾಡುವಾಗ ನ್ಯೂ ಆರ್ಲಿಯನ್ಸ್ ನಗರಕ್ಕೆ ಭೇಟಿ ಕೊಟ್ಟಾಗ, ಅವರ ಗೌರವಾರ್ಥವಾಗಿ ನಗರದ ಚಿನ್ನದ ಬೀಗದಕೈಯನ್ನು ಅಲ್ಲಿನ ಅಧ್ಯಾಧಿಕಾರಿಗಳಾದ ಲೇಡೆಯವರು ಅವರಿಗೆ ಅರ್ಪಿಸುವರೆಂದು ಹೇಳಲಾಗಿದೆ.

ಭಾರಿ ಮೊಸಳೆಯ ಕೊಲೆ

ತಿರುಚನಾಪಳ್ಳಿಗೆ ೧೨ ಮೈಲಿ ದೂರದಲ್ಲಿರುವ ಕಾವೇರಿ ನದಿಯ ಜಲಾಶಯದಲ್ಲಿ ೧೨ ಅಡಿ ಉದ್ದ ಮತ್ತು ೪೦೦ ಪೌಂಡು ತೂಕದ ಭಾರಿ ಮೊಸಳೆಯನ್ನು ಗುಂಡಿನಿಂದ ಹೊಡೆದು ಸಾಯಿಸಲಾಯಿತೆಂದೂ, ಅದು ಅನೇಕ ಜಾನುವಾರು ಮತ್ತು ಜನರನ್ನು ಅಪಹರಿಸುತ್ತಿತ್ತೆಂದೂ ವರದಿಯಾಗಿದೆ. ಅದರ ಹೊಟ್ಟೆಯಲ್ಲಿ ಮನುಷ್ಯನ ಕೈಯೊಂದು ಇತ್ತೆಂದೂ ಹೇಳಲಾಗಿದೆ.

ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಾಳೆ ರಾತ್ರಿ ೯ ಗಂಟೆಗೆ ಧನ್ವಂತರಿ ರಸ್ತೆಯಲ್ಲಿರುವ ಹೊಸ ಇಂದ್ರಭವನದಲ್ಲಿ ನಡೆಯುವುದು. ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಮಾರ್ಕೆಟ್ ಪ್ರದರ್ಶನ

ಇದೇ ೨೭ ನೇ ತಾ|| ಬೆಳಿಗ್ಗೆ ದೇವರಾಜ ಮಾರ್ಕೆಟ್ಟಿನಲ್ಲಿ ನಡೆಯುವ ಮಾರ್ಕೆಟ್ ಹಣ್ಣು ಹಂಪಲು ಪುಷ್ಪಗಳ ಪ್ರದರ್ಶನದಲ್ಲಿ ಸ್ಪರ್ಧಿಸುವವರು ಸಮಿತಿಯವರಿಂದ ಪ್ರಕಟಿಸಿರುವ ಪ್ರವೇಶ ಪತ್ರಗಳಲ್ಲಿ ಬರೆದು ಸಂಜೆ ೬ ಘಂಟೆಯೊಳಗೆ ಮಾರ್ಕೆಟ್ ಕಛೇರಿಗೆ ತಲುಪಿಸಬೇಕೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಪತ್ರಿಕಾ ಸಲಹಾ ಸಮಿತಿ

ನೂತನವಾಗಿ ರಚಿಸಲ್ಪಟ್ಟಿರುವ ಸಂಸ್ಥಾನದ ಪತ್ರಿಕಾ ಸಲಹಾ ಸಮಿತಿಯ ಪ್ರಥಮ ಸಭೆಯು ಇದೇ ೩೦ ನೇ ತಾ|| ಮಧ್ಯಾಹ್ನ ೩ ಘಂಟೆಗೆ ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಸಿ. ಆರ್. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪ್ರಾರಂಭ ಭಾಷಣ ಮಾಡುವರು.

ಶ್ರೀ ಕೃಷ್ಣ ನಿಯಂ ... ವಾ ದ ಸ

ಚಲುವಾಂಬಾ ಅಗ್ರಹಾರದ ಹಿಂಭಾಗದ ಹಳೇ ಬಂಡೀಕೇರಿ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ರಾತ್ರಿ ೮ ಘಂಟೆಗೆ ವಿ|| ಎಸ್. ಎನ್. ... ಯ್ಯನವರ ಹಾರ್ಮೋನಿಯಂ ಕಛೇರಿಯು ನಡೆಯುವುದು ಸರ್ವರಿಗೂ ಸ್ವಾಗತವಿದೆ.

ಚಾಮುಂಡೇಶ್ವರಿ ಭವನ

ಜಯಚಾಮರಾಜೇಂದ್ರ ಸರ್ಕಲ್ಲಿನ ... ರಸ್ತೆಯಿಂದ ಹೋಟೆಲಿನವರು ಪ್ರಕಟಿಸಿರುವ ಕ್ಯಾಲೆಂಡರು ನಮ್ಮ ಹಸ್ತಗತವಾಗಿದೆ. ಅದರಲ್ಲಿ ಶ್ರೀಮನ್ಮಹಾರಾಜರವರು, ಮಹಾತ್ಮ ಗಾಂಧೀಜಿ, ಪಂಡಿತ ನೆಹರೂ, ... ಮುಂತಾದವರುಗಳ ಸುಂದರ ಚಿತ್ರಗಳೂ ಇತರ ಉಪಯುಕ್ತ ವಿಷಯಗಳೂ ...

ವಸ್ತು ಪ್ರದರ್ಶನದಲ್ಲಿ ಗಾಂಧಿಜೀಯವರ ಕುಟೀರ

ಮೈಸೂರು, ೨೯

ಈ ಸಲದ ದಸರಾ ವಸ್ತುಪ್ರದರ್ಶನದಲ್ಲಿ ಭಾರತದ ಅನೇಕ ಪ್ರಾಂತ್ಯ ಮತ್ತು ಸಂಸ್ಥಾನಗಳವರು ತಮ್ಮ ವಸ್ತು ಸಂಪತ್ತುಗಳನ್ನು ಪ್ರದರ್ಶಿಸಿರುತ್ತಾರೆ. ಒರಿಸ್ಸಾ, ಮಧ್ಯಪ್ರಾಂತ್ಯ, ಕಾಶ್ಮೀರ, ಮದರಾಸು ಮುಂತಾದ ಕಡೆಗಳಿಂದ ಬಂದಿರುವ ಪ್ರದರ್ಶನಗಳನ್ನು ಇಡಲಾಗಿದೆ. ಅಖಿಲ ಭಾರತ ಕಲಾ ಸಂಘದವರು ನಾನಾ ಭಾಗಗಳಿಂದ ಶೇಖರಿಸಿ ತಂದಿರುವ ಅಪೂರ್ವ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘದವರೂ ತಮ್ಮ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಜರ್ಮನ್ ದೇಶದ ಕೈಗಾರಿಕೆಗಳ ಪ್ರದರ್ಶನವನ್ನು ಪ್ರತ್ಯೇಕ ಕಟ್ಟಡದ ಮಹಡಿಯ ಮೇಲೆ ಇಡಲಾಗಿದೆ. ಇದಕ್ಕೆ ಶ್ರೀ ... ಲಾಲ್‌ರವರು ವ್ಯವಸ್ಥೆ ಮಾಡಿದ್ದಾರೆ. ಇದರ ಸಮೀಪದಲ್ಲಿರುವ ಕಸ್ತೂರಿ ಬಾ ಶಿಕ್ಷಣ ಶಿಬಿರದವರು ವಿಶೇಷ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ.

ಸರ್ಕಾರದ ಕೈಗಾರಿಕಾ ಮತ್ತು ವ್ಯವಸಾಯ ಇಲಾಖೆಗಳವರೂ ಪ್ರದರ್ಶನಗಳನ್ನು ಇಟ್ಟಿದ್ದಾರೆ.

ಈ ವರ್ಷದ ವಿಶೇಷ ಅಂಶ ವೇನೆಂದರೆ ಜೀವಣ್ಣರಾಯನ ಕಟ್ಟೆ ಮೈದಾನದಲ್ಲಿ ಗಾಂಧೀಜಿ ಮತ್ತು ಕಸ್ತೂರಿಬಾರವರುಗಳ ಕುಟೀರಗಳ ಪ್ರದರ್ಶನ. ಮಹಾತ್ಮರು ವಾರ್ಧಾ ಆಶ್ರಮದಲ್ಲಿ ಯಾವರೀತಿ ವಾಸಿಸುತ್ತಿದ್ದರೆಂಬುದನ್ನು ತಿಳಿಸಲು ಅಲ್ಲಿ ಯಾವ ತರಹದ ಗೋಡೆ, ಮಂಚಗಳು ಇದ್ದುವೋ ಅದೇ ರೀತಿಯ ಎರಡು ಮನೆಗಳನ್ನು ಇಲ್ಲಿ ಕಟ್ಟಲಾಗಿದೆ. ಇದರೊಳಗೆ ಗಾಂಧೀಜಿಯವರು ಉಪಯೋಗಿಸುತ್ತಿದ್ದ ಸ್ಥಳ ಮತ್ತು ಇತರ ವಸ್ತುಗಳನ್ನು ತೋರಿಸಲಾಗುತ್ತಿದೆ. ಅವುಗಳ ಮುಂಭಾಗದಲ್ಲಿ ಅನೇಕ ಕ್ಷಣ ಭಜನೆ ಮಾಡುವಂತೆ ಏರ್ಪಾಡು ಮಾಡಲಾಗಿದೆ.

ಗಾಂಧೀ ಜಯಂತಿ

ಆದಿಕರ್ನಾಟಕಪುರದಲ್ಲಿರುವ ... ಮ್ಮನ ದೇವಸ್ಥಾನದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ಪಿ. ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಉತ್ಸವವು ನಡೆಯುವುದು.

ಟೋಕಿಯೋದಲ್ಲಿ ಇಂದಿರಾ ಆನೆಗೆ ಗಾಯ

ಜಪಾನಿಗೆ ಮೈಸೂರಿನಿಂದ ಕಳುಹಿಸಿದ ಇಂದಿರಾ ಎಂಬ ಆನೆಯು ನಿನ್ನೆ ದಿನ ಟೋಕಿಯೋ ನಗರವನ್ನು ತಲುಪಿತು. ಅಲ್ಲಿನ ಒಂದೆಡೆಯಲ್ಲಿ ಅದನ್ನು ಇಳಿಸುತ್ತಿದ್ದಾಗ ಅದು ತಲೆಕೆಳಗಾಗಿ ಉರುಳಿತೆಂದೂ, ಇದರಿಂದ ಬಲದ ಕಿವಿಯ ಭಾಗಕ್ಕೆ ಸ್ವಲ್ಪ ಗಾಯವಾಯಿತೆಂದೂ ವರದಿಯಾಗಿದೆ. ಈ ದಿನ ಅದನ್ನು ಮೃಗಾಲಯಕ್ಕೆ ಕಳುಹಿಸಲಾಗುವುದು.

ಅರಾರಾ ಕಛೇರಿ ಮುಂದೆ ಉಪವಾಸ

ಹರಿಹರದ ಪುರಸಭೆಯಲ್ಲಿ ಮೈಸವಕ್ಯಸ್ಪರ್ಧೆಗಾಗಿ, ಅಲ್ಲಿನ ಸಾರ್ವಜನಿಕರ ಉಪಯೋಗಕ್ಕಾಗಿ ಬಸ್ ನಿಲ್ದಾಣ ಮತ್ತು ಮಾರ್ಕೆಟುಗಳನ್ನು ಕಟ್ಟಿಸುವುದಕ್ಕಾಗಿ ಖಾಸಗಿ ಜನರಿಂದ ತೆಗೆದುಕೊಂಡಿದ್ದ ನಿವೇಶನವನ್ನು ಸ್ವಂತಗಳಾಗಿ ಹಿಂಗಡಿಸಬೇಕೆಂದು ಇತ್ತಿರುವ ಆಜ್ಞೆಯನ್ನು ಪ್ರತಿಭಟಿಸಲು ಅಲ್ಲಿನ ಶ್ರೀ ನಾರಾಯಣ ರಾವರವರು ಬೆಂಗಳೂರು ಅರಾರಾ ಕಚೇರಿಯ ಮುಂದೆ ಮೊನ್ನೆಯಿಂದ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಸರ್ಕಾರದವರು ಈ ಬಗ್ಗೆ ಹಿಂದೆ ಕೊಟ್ಟ ವಚನವನ್ನು ಕಾಪಾಡಿಕೊಂಡು ಹರಿಹರದ ನಾಗರೀಕರಿಗೆ ನ್ಯಾಯ ದೊರಕಿಸಬೇಕೆಂದು ಅವರು ಕೋರಿರುತ್ತಾರೆ.

೧೨ ಲಕ್ಷ ಜನರಿಂದ ಅಕ್ಕಿ ತ್ಯಾಗ

ಪೂಣೆಯಲ್ಲಿ ನಾಳೆ ದಿನ ಸೇರಲಿರುವ ೧೨ ಲಕ್ಷ ಸಹಕಾರ ಸಂಘಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಸದಸ್ಯರು ವಾರಕ್ಕೆ ಒಪ್ಪತ್ತು ಅಕ್ಕಿಯನ್ನು ಬಿಡಬೇಕೆಂದ ನಿರ್ಧರಿಸಲಾಗುವುದೆಂದು ತಿಳಿದುಬಂದಿದೆ.

ಕಾಸಿಟ್ಟು ಇಸ್ಪೀಟು ಆಡು ವುದು ಅಪರಾಧ

ಸಾರ್ವಜನಿಕ ಸ್ಥಳಗಳು, ಕ್ಲಬ್ಬುಗಳು ಮತ್ತು ಖಾಸಗೀ ಮನೆಗಳಲ್ಲಿ ಕಾಸಿಟ್ಟು ಇಸ್ಪೀಟು ಆಡುವುದು ಅಪರಾಧವೆಂದು ಮೊನ್ನೆ ಬಾರು ... ನ ಸಭೆಯಲ್ಲಿ ನ್ಯಾಯಾಂಗ ಸಚಿವ ಶ್ರೀ ದಿನಕರ್ ದೇಸಾಯಿಯವರು ತಿಳಿಸಿರುತ್ತಾರೆ. ಆದರೆ ಕಾಸಿಲ್ಲದೆ ಇಸ್ಪೀಟು ಆಡುವುದಕ್ಕೆ ಯಾವ ನಿರ್ಬಂಧವೂ ಇಲ್ಲವೆಂದು ಅವರು ಹೇಳಿರುತ್ತಾರೆ.

ಮೈಸೂರು ರೈಲಿಗೆ ಭಾರತ ಸರ್ಕಾರದ ಅಧಿಕಾರಿ

ಸ್ವಂ ಸು ಫೋ॥] ಬೆಂಗಳೂರು ೨೯

ಮೈಸೂರು ರೈಲ್ವೆಯನ್ನು ಮುಂದಿನ ಏಪ್ರಿಲ್ ತಿಂಗಳಿನಲ್ಲಿ ಭಾರತ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಲಾಗುವುದಷ್ಟೆ. ಈ ಮಧ್ಯೆ ಮೈಸೂರು ರೈಲಿನ ಆಡಳಿತವನ್ನು ನೋಡಿಕೊಳ್ಳಲು ಭಾರತ ಸರ್ಕಾರದ ಅಧಿಕಾರಿಗಳೊಬ್ಬರನ್ನು ನೇಮಿಸಲಾಗುವುದೆಂದೂ, ಅವರು ಮುಂದಿನ ತಿಂಗಳು ಅಧಿಕಾರ ವಹಿಸುವರೆಂದೂ ತಿಳಿದುಬಂದಿದೆ.

ಜಯಪ್ರಕಾಶ್ ನಾರಾಯಣರ ಆಗಮನ

ಅಖಿಲ ಭಾರತ ಸಮತಾವಾದಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರವರು ಈ ದಿನ ಬೆಳಿಗ್ಗೆ ೧೦ ಘಂಟೆಗೆ ಆಗಮಿಸಿದರು. ನಿಲ್ದಾಣದಲ್ಲಿ ಸಮತಾವಾದಿ ಪಕ್ಷದವರೂ, ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರೂ ಹಾಜರಿದ್ದರು.

ಪ್ರವಾಹದಿಂದ ೨೦ ಸಾವಿರ ದನಗಳ ಮರಣ

ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸಿನಲ್ಲಿ ವಿಪರೀತ ಪ್ರವಾಹವುಂಟಾಗಿ, ೨೦ ಸಾವಿರ ದನಗಳು ಅದರಲ್ಲಿ ಮುಳುಗಿ ಸತ್ತು ಹೋದುವೆಂದೂ, ಇನ್ನೂ ಸಾವಿರಾರು ದನಗಳು ಮೇವಿಲ್ಲದೆ ಸಾಯುತ್ತಿವೆಯೆಂದೂ ವರದಿಯಾಗಿದೆ.

ರಾಜಧಾನಿಗೆ ಮದರಾಸ್ ಪ್ರಧಾನಿ

ಮದರಾಸಿನ ಪ್ರಧಾನಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರು ನವರಾತ್ರಿ ಉತ್ಸವದಲ್ಲಿ ವಿಶೇಷ ಆಹ್ವಾನಿತರಾಗಿ ರಾಜಧಾನಿಗೆ ನಾಳೆ ಆಗಮಿಸುವರು.

ಅಕ್ಕಿಯ ಪಾಲಿಷ್‌ಗೆ ನಿಷೇಧ

ಅಕ್ಕಿಯನ್ನು ಯಾರೂ ಪಾಲಿಷ್ ಮಾಡಕೂಡದೆಂದು ಪೂರ್ವ ಪಂಜಾಬ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಬೊಂಬಾಯಿನಲ್ಲಿ ೪೦ ಗಂಟೆಗಳ ಕಾಲ ಮಳೆ

ಬೊಂಬಾಯಿ ನಗರದಲ್ಲಿ ಸಂಭವಿಸಿದ ಭಾರಿ ಮಳೆಯು ೪೦ ಘಂಟೆಗಳ ಕಾಲ ಅವಿಚ್ಛಿನ್ನವಾಗಿ ಸುರಿದು, ನಿನ್ನೆ ಮಧ್ಯಾಹ್ನ ೧ ಘಂಟೆಗೆ ಸಂಪೂರ್ಣವಾಗಿ ನಿಂತಿತು.

ಪ್ರಜಾ ಸಂಘದ ಸಭೆ

ಮೈಸೂರು ಪ್ರಜಾ ಸಂಘದ ಸಭೆಯು ನಿನ್ನೆ ದಿನ ಶ್ರೀ ಟಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇತರ ರಾಜಕೀಯ ಪಕ್ಷದ ಸದಸ್ಯರಾಗಿರುವವರು ಈ ಸಂಘದ ಸದಸ್ಯರಾಗಿರಕೂಡದೆಂದೂ, ನಾನಾ ಮೊಹಲ್ಲಾಗಳಲ್ಲಿ ಇನ್ನು ಮುಂದೆ ಕಾರ್ಯಕಾರೀ ಸಮಿತಿ ಸಭೆಯನ್ನು ನಡೆಸಬೇಕೆಂದೂ ತೀರ್ಮಾನಿಸಲಾಯಿತು. ಸಂಘದ ಧ್ಯೇಯ ಸಾಧನೆಗಾಗಿ ... ಪ್ರಚಾರ ... ಮಾಡಬೇಕೆಂದೂ ... ನ ಭಾಗಗಳಲ್ಲಿ ... ನಡೆಸುವ ...

... ಪ್ರಚಾರ ... ಕಾರ್ಯ ... ಸರ್ಕಾರ ... ತಿಳಿಸಿರುತ್ತಾರೆ.

ಪ್ರದರ್ಶನಗಳು ಜನಜೀವನದ ಪ್ರತಿಬಿಂಬವಾಗಬೇಕು

ಕಾಲೇಲ್ಕರ್‌ರವರಿಂದ ವಸ್ತು ಪ್ರದರ್ಶನದ ಆರಂಭ

ಮೈಸೂರು ೨೪

ದಸರಾ ವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನು ನಿನ್ನೆ ಮಧ್ಯಾಹ್ನ ವಾರ್ಧಾದ ಆಚಾರ್ಯ ಕಾಕಾ ಸಾಹೇಬ್ ಕಾಲೇಲ್ಕರ್‌ರವರು ನೆರವೇರಿಸಿದರು. ಸಮಾರಂಭವು ಜೀವಣ್ಣರಾಯನ ಕಟ್ಟೆಯಲ್ಲಿರುವ ನಾಟಕ ಮಂದಿರದಲ್ಲಿ ನಡೆಯಿತು.

ಶ್ರೀಮತಿ ರಾಜಮ್ಮ ಕಲ್ಲೋಳಿ ಮಠ್‌ರವರಿಂದ ಪ್ರಾರ್ಥನೆಯಾದನಂತರ, ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ ಹೆಚ್. ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿ ೬೧ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಮೈಸೂರು ವಸ್ತು ಪ್ರದರ್ಶನವು ದಿನೇ ದಿನೇ ಹೆಚ್ಚು ಜನಾದರಣೀಯವಾಗುತ್ತಿದೆಯೆಂದೂ, ಅನೇಕ ಪ್ರಾಂತೀಯ ಮತ್ತು ಸಂಸ್ಥಾನಗಳವರು ಇದರಲ್ಲಿ ಭಾಗವಹಿಸುತ್ತಿರುವರೆಂದೂ ತಿಳಿಸಿದರು.

ಅನಂತರ ಶ್ರೀ ಕಾಲೇಲ್ಕರ್‌ರವರು ಹಿಂದಿಯಲ್ಲಿ ಭಾಷಣ ಮಾಡಿ ಈ ರೀತಿ ಹೇಳಿದರು :—

ಸಂಸ್ಥಾನಕ್ಕೆ ನಾನು ಅನೇಕ ಬಾರಿ ಭೇಟಿ ಕೊಟ್ಟಿದ್ದೇನೆ ಇಲ್ಲಿನ ಕಲೆ, ಉದ್ಯೋಗ ಮತ್ತು ಸಂಗೀತಗಳ ಪ್ರಗತಿಯನ್ನು ನೋಡಲು ಶಿಷ್ಯ ಭಾವದಿಂದ ಇಲ್ಲಿಗೆ ಬಂದಿದ್ದೇನೆ ಪುರಾತನವಾದ ಅನೇಕ ಸ್ಥಳಗಳು ಇಲ್ಲಿ ಇವೆ ಬೇಲೂರಿನಲ್ಲಿರುವ ಕಲಾ ಕೌಶಲ್ಯವು ಭಾರತದಲ್ಲಿ ಎಲ್ಲೂ ಇಲ್ಲ ಕಲಾ ಅಭಿವೃದ್ಧಿಯೊಡನೆ ಉದ್ಯೋಗದ ಪ್ರಗತಿಯೂ ಮುಂದುವರೆದಿದೆ. ನೀವು ಚಿನ್ನಕ್ಕೆ ಪರಿಮಳವನ್ನು ಉಂಟು ಮಾಡುತ್ತಿದ್ದೀರಿ

ವಸ್ತು ಪ್ರದರ್ಶನಗಳು ಜನ ಸಾಮಾನ್ಯರ ಜೀವನದ ಆದರ್ಶವನ್ನು ತೋರಿಸುವಂತಿರಬೇಕು. ಪ್ರತಿಯೊಂದು ಬಾಬಿನಲ್ಲೂ ನಿಯೋಜಿತ ಯೋಜನೆ ಇರಬೇಕು. ಅದನ್ನು ಪ್ರದರ್ಶನಗಳು ಪ್ರತಿಬಿಂಬಿಸಬೇಕು. ಒಂದು ಊಟ ಮತ್ತು ಎರಡು ೬ ಇಟಿಗೆಗಳು ಸಾಕೆಂಬ ನಮ್ಮ ಹಿಂದಿನ ಕಾಲದ ಯೋಗಿಗಳ ವೈರಾಗ್ಯವು ಈಗ ದೇಶಕ್ಕೆ ಹಾನಿಕರವು ಅದರಿಂದ ಪಶುಜೀವನವುಂಟಾಗುವುದೇ ಹೊರತು ದೇಶವು ಮುಂದುವರೆಯುವುದಿಲ್ಲ ವರ್ಣ ವಿಂಗಡಗಳಿಂದ ದೇಶದಲ್ಲಿ ಬಡವರು ಹೆಚ್ಚಾಗಿದ್ದಾರೆ ಇದರಿಂದ ದೇಶವು ನಶಿಸಿ ಹೋಗುತ್ತಿದೆ

ದೇಶದ ಜನರಿಗೆ ಹೊಟ್ಟೆ ತುಂಬಾ ಅನ್ನ ಮತ್ತು ಬಟ್ಟೆ ಇರಬೇಕೆಂದು ಗಾಂಧೀಜಿಯವರೇ ಹೇಳಿದ್ದಾರೆ ದರಿದ್ರ ನಾರಾಯಣನ ಸೇವೆಯನ್ನು ಮಾಡಬೇಕು

ಗಾಂಧೀಜಿಯವರು ಹೇಳಿರುವಂತೆ ಪರದೇಶದ ಸಾಮಾನುಗಳನ್ನೇ ಪ್ರದರ್ಶನಗಳಲ್ಲಿ ಇಡುವುದು ದೇಶಕ್ಕೆ ಹಾನಿಕರ. ಪ್ರದರ್ಶನಗಳು ಗ್ರಾಮಗಳನ್ನು ಮೇಲಕ್ಕೆ ಎತ್ತುವ ಮಾರ್ಗವನ್ನು ತೋರಿಸಿಕೊಡಬೇಕು ಗ್ರಾಮಗಳ ಉದ್ಧಾರದಿಂದಲೇ ದೇಶದ ಉದ್ಧಾರವು ಆಗುವುದು

ಭಾರತ ವಿಭಜನೆಯಾದ ಮೇಲೆ ದೇಶದಲ್ಲಿ ಮನೆಗಳ ಸಮಸ್ಯೆಯು ವಿಶೇಷ ಕ್ಲಿಷ್ಟವಾಗಿದೆ. ಪಟ್ಟಣಗಳಲ್ಲಿ ೧ ಸಾವಿರ ರೂ ಕೊಟ್ಟರೂ ಒಂದು ಕೊಠಡಿ ಸಿಕ್ಕುವುದಿಲ್ಲ ವಿವಾಹವಾಗಲಿಚ್ಛಿಸುವವನು ಮೊದಲು ಹೆಂಡತಿಯನ್ನು ಹುಡುಕುವ ಬದಲು ಕೊಠಡಿಯನ್ನು ಹುಡುಕಬೇಕಾಗಿದೆ ಈ ಸಮಸ್ಯೆಯನ್ನು ಬಗೆಹರಿಸಲು ಇಂಜನಿಯರುಗಳು ಸರ್ವ ಪ್ರಯತ್ನ ಮಾಡಬೇಕು. ಪ್ರತಿಯೊಂದು ಇಂಜನಿಯರಿಂಗ್ ಶಾಲಾ ಕಾಲೇಜುಗಳಲ್ಲೂ ಮನೆ ಕಟ್ಟುವ ಶಿಕ್ಷಣವನ್ನು ಕೊಡಲು ವ್ಯವಸ್ಥೆ ಮಾಡಬೇಕು ದೇಶಕ್ಕೆ ಸ್ವರಾಜ್ಯ ಬಂದ ಮೇಲೂ ನಾವುಗಳು ಆಹಾರ ಮತ್ತು ಸಿದ್ಧಗೊಳಿಸಲ್ಪಟ್ಟ ಮನೆಗಳಿಗಾಗಿ ಪರದೇಶಗಳನ್ನು ಅವಲಂಬಿಸಿರುವುದು ವಿಷಾದಕರ. ಸಿದ್ಧಗೊಳಿಸಲ್ಪಟ್ಟ ಮನೆಗಳು ನಮ್ಮ ದೇಶಕ್ಕೆ ಅನಿಷ್ಟಪ್ರಾಯವಾಗಿವೆ ಮೈಸೂರು ಮತ್ತು ಇತರ ಕಡೆಗಳಲ್ಲಿ ಮನೆ ಕಟ್ಟಲು ಎಲ್ಲ ಸಲಕರಣೆಗಳೂ ಇರುವಾಗ ನಾವು ಅಂತಹ ಮನೆಗಳನ್ನು ಏತಕ್ಕೆ ಕಟ್ಟಬಾರದು?

ನಗರಗಳು ಮತ್ತು ಪಟ್ಟಣಗಳು ರಸ್ತೆ ಮತ್ತು ಇತರ ವಿಷಯಗಳಲ್ಲಿ ಪ್ರಗತಿ ಹೊಂದಿದ್ದರೂ, ಹಳ್ಳಿಗಳು ಪೂರ್ವ ಕಾಲದಲ್ಲಿ ಇದ್ದಂತೆಯೇ ಇವೆ ಹಳ್ಳಿಗಾಡಿನವರ ಸ್ಥಿತಿಗತಿಗಳು ಉತ್ತಮವಾಗಬೇಕು ದರಿದ್ರರನ್ನು ಉಪೇಕ್ಷೆ ಮಾಡಬಾರದು ಅವರ ಸ್ಥಿತಿಗತಿಗಳನ್ನು ಪರಿಶೀಲಿಸಲು ಒಂದು ಇಂಜನಿಯರುಗಳ ಕಮೀಷನ್ ರಚಿಸಲ್ಪಡಬೇಕು

ಪಟ್ಟಣ ಮತ್ತು ಹಳ್ಳಿಗಳ ಸಂಸ್ಕೃತಿ ಸಮನ್ವಯವಾಗಬೇಕು ಕರ್ನಾಟಕದ ಸಂಗೀತದಲ್ಲಿ ಹಿಂದೂಸ್ಥಾನಿ ಸಂಗೀತ ಸಮ್ಮೇಳನವಾಗಬೇಕು. ದಕ್ಷಿಣ ದೇಶದಲ್ಲಿ ಸಂಸ್ಕೃತಿಯು ಹೆಚ್ಚಿನ ಮಟ್ಟದಲ್ಲಿದೆ ಅನೇಕ ಆಚಾರ್ಯ ಪುರುಷರು ಸಂಸ್ಕೃತ ಭಾಷೆಯನ್ನು ಕಲಿತು ಉತ್ತರದೇಶದಲ್ಲಿ ತಮ್ಮ ಸಂಸ್ಕೃತಿಯನ್ನು ಹರಡಿದರು ಆದರೆ ಈಗ ಇಂಗ್ಲೀಷ್ ಭಾಷೆಯಿಂದ ಉತ್ತರ ದೇಶದಲ್ಲಿ ದಕ್ಷಿಣದವರು ಸಂಸ್ಕೃತಿ ಹರಡಲು ಸಾಧ್ಯವಿಲ್ಲ. ಅಲ್ಲಿನ ಭಾಷೆಯಲ್ಲೇ ಮಾಡಬೇಕು ದಕ್ಷಿಣ ದೇಶದ ಜನರು ಹಾಗೆ ಮಾಡುವರೆಂದು ನಂಬಿದ್ದೇನೆ ಅಖಿಲ ಭಾರತ ಗಾಂಧಿ ಸ್ಮಾರಕ ಸಮಿತಿಯವರು ಏರ್ಪಡಿಸಲಿರುವ ಮಹಾತ್ಮರ ವಸ್ತು ಸಂಗ್ರಹಾಲಯಕ್ಕೆ ಮೈಸೂರಿನ ಜನರು ತಮ್ಮಲ್ಲಿ ಗಾಂಧೀಜಿಯವರ ಜೀವನಕ್ಕೆ ಸಂಬಂಧ ಪಟ್ಟ ವಸ್ತುಗಳು ಇದ್ದರೆ ಕೊಡಬೇಕೆಂದು ಪ್ರಾರ್ಥಿಸಿದರು. ಸಂಸ್ಥಾನದಲ್ಲಿ ಮಹಾತ್ಮರು ಭೇಟಿ ಕೊಟ್ಟ ಸ್ಥಳದಲ್ಲೆಲ್ಲಾ ಒಂದೊಂದು ಸ್ಮಾರಕ ಶಿಲೆಯನ್ನು ಪ್ರತಿಷ್ಠಿಸಬೇಕೆಂದೂ ತಿಳಿಸಿದರು.

ಪ್ರದರ್ಶನದ ಉಪಾಧ್ಯಕ್ಷರಾದ ಶ್ರೀ ಕೆ. ಚಿಕ್ಕನಾರಾಯಣಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ಶ್ರೀ ಮತಿ ಮಾಧುರಿ ಕರೆಯವರಿಂದ 'ರಾಷ್ಟ್ರಗೀತೆ' ಯೊಡನೆ ಸಮಾರಂಭವು ಮುಕ್ತಾಯವಾಯಿತು

ಅನಂತರ ಹೊರ ಭಾಗದಲ್ಲಿ ಆಚಾರ್ಯ ಕಾಲೇಲ್ಕರ್ ಮತ್ತು ಶ್ರೀ ಕೆ.ಸಿ ರೆಡ್ಡಿಯವರು ಭಾರತ ಮತ್ತು ಮೈಸೂರು ಧ್ವಜಾರೋಹಣ ನಡೆಸಿದರು

ಮೇಲುಕೋಟೆ ದೇವಸ್ಥಾ[ನ] ಉಪವಾಸ ಮುಕ್ತಾ[ಯ]

ಮೇಲುಕೋಟೆ ಶ್ರೀ ಚೆಲುವ[ರಾಯ]ಸ್ವಾಮಿ ದೇವಸ್ಥಾನದ ಅಭಿವೃ[ದ್ಧಿಗೆ] ಒಂದು ಸ್ಥಳೀಯ ಸಮಿತಿಯನ್ನು [ರಚಿ]ಸಬೇಕೆಂದು ಕಳೆದ ೧೭ ನೇ ತಾ[ರೀಖಿನಿಂದ] ಅಲ್ಲಿನ ಕಾಂಗ್ರೆಸ್ ಸಮಿತಿಯ ಶ್ರೀ [...]ತ್ಯಮಾರ್ಗ ಮತ್ತು ಶ್ರೀ ಆರಿಯಾ[...] ನಿವಾಸ ಅಯ್ಯಂಗಾರ್ಯರವರುಗಳು [...]ಡಿದ್ದ ಉಪವಾಸ ಸತ್ಯಾಗ್ರಹವು [...] ದಿನ ಮುಕ್ತಾಯವಾಯಿತು [...]ಯ್ ಸಚಿವರಾದ ಶ್ರೀ ಪಾಮಡಿ[...] ರಾಮ ಶೆಟ್ಟಿಯವರು ಅಲ್ಲಿಗೆ ಭೇಟಿ [...] ದೇವಸ್ಥಾನದ ಆಡಳಿತವನ್ನು [...] ಸಮಿತಿಗೆ ವರ್ಗಾಯಿಸುವುದನ್ನು [...]ಸಲು ಒಂದು ಸಮಿತಿಯನ್ನು [...]ಗುವುದೆಂದು ಭರವಸೆಇತ್ತುದರಿಂ[ದ ಉ]ಪವಾಸವನ್ನು ಮುಕ್ತಾಯಗೊಳಿ[ಸಿದ]ರೆಂದು ತಿಳಿದುಬಂದಿದೆ

ಚೀನಾದಲ್ಲಿ ಪ್ರಜೆಗ[ಳ] ರಿಪಬ್ಲಿಕ್ಕಿನ ಘೋಷ[ಣೆ]

ಚೀನಾದಲ್ಲಿ ಪ್ರಜೆಗಳ ರಿಪಬ್ಲಿ[ಕ್ಕನ್ನು] ಸ್ಥಾಪಿಸಲಾಗಿದೆಯೆಂದು ಕಮ್ಯೂ[ನಿಸ್ಟ್] ನಾಯಕರಾದ ಮೋ-ಸಿ-ಟಂಗ್‌ರವ[ರು ನಿ]ನ್ನೆ ದಿನ ಪೀಕಿಂಗಿನಲ್ಲಿ ಘೋಷಿ[ಸಿದರು.] ಚೀನಾದಲ್ಲಿ ಕಮ್ಯೂನಿಸ್ಟ್ ಸರ್ಕಾ[ರವನ್ನು] ಘೋಷಿಸಿದೊಡನೆಯೇ ಅದನ್ನು [ಅಂಗೀ]ಕರಿಸಲು ಬ್ರಿಟನ್ನು ನಿರ್ಧರಿಸಿದೆ [...] ಅಮೆರಿಕದಲ್ಲಿ ಇತ್ತೀಚೆಗೆ ನಡೆದ [...]ಕಾಂಗ ಮಂತ್ರಿಗಳ ಸಮ್ಮೇಳನ[ದಲ್ಲಿ ಈ] ನಿರ್ಧಾರಕ್ಕೆ ಬರಲಾಯಿತೆಂದೂ [ತಿಳಿಯ]ಲಾಗಿದೆ.

ಚಿತ್ತಗಾಂಗಿನ ಹೆಸ[ರು] ಇಸ್ಲಾಮಾಬಾದ್

ಚಿತ್ತಗಾಂಗಿನ ಹೆಸರನ್ನು [ಇಸ್ಲಾಮಾ]ಬಾದ್ ಎಂದು ಕರೆಯಬೇಕೆಂದ[ು ಅಲ್ಲಿನ] ಪುರಸಭೆಯವರು ನಿರ್ಣಯ ಮ[ಾಡಿ ಸ]ರ್ಕಾರಕ್ಕೆ ಕಳುಹಿಸಿದ್ದಾರೆ.

ಸೆಂಟ್ರಿ ಬಾಕ್ಸ್ ಬಿಕರಿಗಿದೆ

ಬೀದಿ ಅಂಗಡಿ ಜೋಡಿಸುವುದಕ್ಕೆ, ಬುಕ್ಕಿಂಗ್ ಆಫೀಸು, ಛತ್ರದ ಕಣಜ, ಸಿಗಾಯಿ ಶಿಬ್ಬಿ ನ್ನುದಕ್ಕೆ ಉಪಯೋಗವಾಗಬಹುದಾದ ತ್ಯಾಗದ ಮರದ ಸೆಂಟ್ರಿ ಬಾಕ್ಸ್ ಒಂದು ಮೈಸೂರು ಪ್ಯಾಲೇಸ್ ರಸ್ತೆ, ಆರಾಧ್ಯ ಯುವಕ ಸಂಘದ ಕಾಂಪೌಂಡಿನಲ್ಲಿ ಬಿಕರಿಗೆ ಸಿದ್ಧವಾಗಿದೆ ಇತರೆ ವಿಷಯ ಜೈನ ಬೋರ್ಡಿಂಗ್ ಹೋಂ ಮ್ಯಾನೇಜರಲ್ಲಿ ವಿಚಾರಿಸಿ

ಸುಸ್ವಾಗತಂ ಸುಸ್ವಾಗತಂ

ಎಂ. ಸಿ. ಎಲ್. ಪತಿಯವರ

ಮೈಸೂರ್ ಹೋಟೆಲ್ ಬೆಂಗಳೂರು

ವಿದ್ಯಾರ್ಥಿಗಳಿಗೂ, ವರ್ತಕರಿಗೂ, ಆಫೀಸರುಗಳಿಗೂ, ಸಂಸಾರಿಗಳಿಗೂ ಬ್ರಾಹ್ಮಣರುಚಿಯಾದ ಊಟ ಮತ್ತು ಉಪಹಾರಾದಿಗಳಿಗೂ ಆಧುನಿಕ ಸಲಕರಣೆಗಳಿರುವ ರೂಮುಗಳಿಗೂ ರಿಯಾಯಿತಿ ದರ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸೇರಿ ೧ ದಿನಕ್ಕೆ ೧ ರೂಪಾಯಿ ಮಾತ್ರ ಪೋಸ್ಟಾಫೀಸ್ ಕೃಷ್ಣರಾಜೇಂದ್ರ ರೋಡ್ (ಕೋಟೆ ಪೋಲೀಸ್ ಸ್ಟೇಷನ್ ಹತ್ತಿರ)

ಬೆಂಗಳೂರು.

ಪ್ರಭುದೇವಾ ಟಾಕೀಸ್

22-9-49 ರಿಂದ ಅಮೋಘ ಆರಂಭ

- ಮಾಯಾ ಕುದುರೈ -

[ತಮಿಳು]

ಪ್ರತಿ ದಿನ ಮೂರು ಆಟಗಳು

ಮ್ಯಾಟನಿ 2-30, ಮೊದಲನೇ ಆಟ 6-30 ಮತ್ತು ರಾತ್ರಿ 10 ಕ್ಕೆ

ಪಾತ್ರ:- ಅಂಜಲೀ ದೇವಿ ಮತ್ತು ನಾಗೇಶ್ವರರಾವ್

ಶ್ರೀ ಗಣೇಶಾ-ಚಾಮುಂಡೇಶ್ವರೀ

ಟಾಕೀಸುಗಳಲ್ಲಿ

23-9-49 ರಿಂದ ಜ್ಯುಪಿಟರ್ ರವರ

ಯಶಸ್ವೀ 2ನೇ ವಾರ

ಕನ್ನಿಯಿನ್ ಕಾದಲಿ

(ತಮಿಳು)

ಪಾತ್ರ:— ಸಾರಂಗಪಾಣಿ, ಪುಳಿಮೂಟೈ, ಅಂಜಲಿ, ಮಾಧುರಿ

ಬೆಂಗಳೂರು- ಸೂಪರ್, ೧೧ ನೇ ವಾರ

ಕೆ. ಜಿ. ಎಫ್. ಒಲಂಪಿಯಾ ೪ ನೇ ವಾರ

ದಿನವಹಿ 3 ಆಟಗಳು | ಕರ್ನಾಟಕ ರಿಲೀಸ್

ರಾಜಕಮ[ಲ್]

ಮೈಸೂರು

23-9-49 ರಿಂದ ಅಮೋಘ 3[ನೇ ವಾರ]

ಮಹಾತ್ಮಾ ಪಿಕ್ಚರ್ಸ್‌ರವರ

ನಾಗಕನ್ನಿ[ಕೆ]

(ಕನ್ನಡ)

ಪ್ರತಿ ದಿನ ಮೂರು ಪ್ರದರ್ಶನ

ಪಾತ್ರ - ವೀರಭದ್ರಪ್ಪ, ಜ[...] ಬಳ್ಳಾರಿ ರತ್ನಮಾಲಾ

-: ಬೆಳಗಿನ ಪ್ರದರ್ಶನ :-

25-9-49 ನೇ ಭಾನುವಾರ 5 ದಿನಗಳು ಮಾತ್ರ

* ಕಿಸ್ಮತ್

(ಹಿಂದಿ – ಹೊಸ ಮುದ್ರ[ಣ] ಅಶೋಕ ಕುಮಾರ್, ಮುಮ[ತಾಜ್] ಶಾಂತಿ ಪಾತ್ರ

Edited, printed and [pub]lished by A R Nag[...] at Sadhvi Press, D S[...] Road, Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೨೫-೯-೧೯೪೯ [ಸಂಚಿಕೆ ೧೦

ರಾಜಧಾನಿಯಲ್ಲಿ ೨ ಲಕ್ಷ ರೂ. ಕ್ರೀಡಾರಂಗ

ನಾರಾಯಣ ಸಾರವರ ಬಂಧನ

[ಸು ಪ್ರೋ.] ಬೆಂಗಳೂರು ೨೫ ಬೆಂಗಳೂರು ಅ ರಾ ರಾ ಕಚೇರಿಯ ಮುಂದೆ ಮೊನ್ನೆಯಿಂದ ಆಮರಣಾಂತ ಉಪವಾಸ ಕೈಗೊಂಡಿದ್ದ ಶ್ರೀ ನಾರಾಯಣ ಸಾರವರನ್ನು ನೆನ್ನೆ ದಿನ ಪೊಲೀಸರು ಬಂಧಿಸಿದರೆಂದು ವರದಿಯಾಗಿದೆ. ಈ ಬ ಸರ್ಕಾರದವರು ಪ್ರವೇಶಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ... ತ್ರಾಯವಡಿಸಲಾಗಿದೆ

ಕಾಫಿ ಬೆಲೆ ಇಳಿಯುವುದು

ಮುಂದಿನ ತಿಂಗಳಿನಿಂದ ಕಾಫಿ ಬೆಲೆಯನ್ನು ಕಡಿಮೆ ಮಾಡಲಾಗುವುದೆಂದೂ ... ದಿಂದ ಇನ್ನು ಮುಂದೆ ಒಂದು ಪೌಂಡಿಗೆ ರೂ ೧-೧೧-೩ ಇರದೆ ೧-೧೦-೦ ಆಗಿರುವುದೆಂದೂ ಅಖಿಲ ಭಾರತ ಕಾಫಿ ಬೋರ್ಡಿನ ಅಧಿಕಾರಿಗಳಾದ ಶ್ರೀ ಮಾಚ ... ನವರು ತಿಳಿಸಿರುತ್ತಾರೆ. ಬೋರ್ಡಿನವರು ನಡೆಸುತ್ತಿರುವ ಕಾಫಿ ಹರಾಜಿನಲ್ಲಿ ಹೆಚ್ಚು ಲಾಭ ಪಡೆಯುತ್ತಿರುವರೆಂಬುದಕ್ಕೆ ಆಧಾರವಿಲ್ಲವೆಂದೂ, ಇಲ್ಲಿಯವರೆಗೆ ಒಂದು ಹಂಡ್ರಡ್‌ವೇಟಿಗೆ ೧೩೪ ರೂ ೧೪೦ ರಂತೆ ಸಹಕಾರ ಸಂಘಗಳಿಗೆ ಬೋರ್ಡು ಹಂಚು ... ದೆಯೆಂದೂ, ಮುಂದಿನ ತಿಂಗಳಿನಿಂದ ... ನ್ನು ೭॥ ರೂ ಅಷ್ಟು ಇಳಿಸಲಾಗುವುದೆಂದೂ ಅವರು ಹೇಳಿರುತ್ತಾರೆ

ಮಳೆಯಿಂದ ೧೫೦೦ ಮನೆಗಳ ನಾಶ

... ಆದವಾನಿಯಲ್ಲಿ ಕಳೆದ ೩ ದಿನಗಳಿಂದ ... ರೀತ ಮಳೆ ಸಂಭವಿಸಿ, ೧೫೦೦ ಮನೆಗಳು ಒಟ್ಟಿಗೆ ಕುಸಿದು ಸಂಪೂರ್ಣ ನಾಶವಾಗಿವೆಯೆಂದೂ, ಇನ್ನೂ ನೂರಾರು ಮನೆಗಳಿಗೆ ನಷ್ಟ ಉಂಟಾಗಿದೆಯೆಂದೂ ವರದಿಯಾಗಿದೆ ಇದರಿಂದ ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ.

ನೆಲ್ಲೂರಿನಲ್ಲೂ ಭಾರಿ ಮಳೆ ಬಿದ್ದು ... ೦ ಗುಡಿಸಲುಗಳು ನಾಶವಾಗಿವೆ

ದಿವಾಕರರ ಆಗಮನ

ಮೈಸೂರು ೨೫

ಕೇಂದ್ರ ಸರಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್ ದಿವಾಕರ್‌ರವರು ... ತಿಂಗಳು ೨೯ನೇ ತಾ॥ ಇಲ್ಲಿಗೆ ಆಗಮಿಸುವರು ಇಲ್ಲಿ ಅಕ್ಟೋಬರ್ ೧ ನೇ ತಾರೀಖಿನವರೆಗೂ ಇರುವರು ನಂತರ ಬೆಂಗಳೂರಿಗೆ ಹೋಗಿ ಎರಡು ದಿನಗಳು ಇದ್ದು ವಾಪಸು ದೆಹಲಿಗೆ ತೆರಳುವರು

ಗೀತಾ- ಗಾಂಧಿ

ಈ ದಿನ ಸಂಜೆ ೭ ಘಂಟೆಗೆ ಮೈಸೂರು ಸುಬ್ಬರಾಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಶ್ರೀ ... ಗಿ ಶೇಷಾಚಾರ್ಯರಿಂದ 'ಗೀತಾ-ಗಾಂಧಿ' ಎಂಬ ವಿಷಯವಾಗಿ ಉಪನ್ಯಾಸವು ಏರ್ಪಡಿಸಲಾಗಿದೆ

ಕೃಷ್ಣರಾಜೇಂದ್ರ ಸೊಸೈಟಿ

ಮೈಸೂರು ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿಗೆ ಪ್ರಸ್ತುತ ... ನೆ ಕೆಳಗೆ ಕಂಡ ಮೇರೆ ಆಡಳಿತ ವರ್ಗದ ಚುನಾವಣೆಯು ನಡೆದಿದೆ - ಶ್ರೀಗಳು ಎಂ ಎಸ್. ರಾಮಸ್ವಾಮಿ-ಅಧ್ಯಕ್ಷ ... ಟಿ ಎಸ್ ಸುಬ್ಬರಾವ್-ಉಪಾಧ್ಯಕ್ಷರು ... ಎಸ್. ರಾಮಸ್ವಾಮಿ-ಗೌ॥ ಕಾರ್ಯದರ್ಶಿ, ಎ ಎಸ್ ಸಿದ್ದರಾಜ ಅರಸ್-ಜಂಟಿ ಕಾರ್ಯದರ್ಶಿ, ಬಿ. ಪದ್ಮರಾಜ ... ಯ್ಯ ಸಲಹೆಗಾರರು

ಸನ್ಯಾಸಿಯ ಮಂಕು ಬೂದಿಯಿಂದ ಕನ್ಯಾಪಹಾರವೇ?

ಮೈಸೂರು ೨೫

ನಿನ್ನೆ ರಾತ್ರಿ ಒಬ್ಬ ಸನ್ಯಾಸಿಯು ಪಕ್ಕದ ಬೀದಿಯ ಮನೆಯ ನೆರೆದಿಂದ ೨೭ ವರ್ಷ ವಯಸ್ಸಿನ ತರುಣಿಗೆ ಒಂದು ಚೀಟಿಯಲ್ಲಿ ಕುಂಕುಮವನ್ನಿಟ್ಟು ಕೊಟ್ಟು ಹೋದ ಮೇಲೆ ಮಧ್ಯ ರಾತ್ರಿಯಿಂದ ಆಕೆಯು ಕಣ್ಮರೆಯಾಗಿರುವಳೆಂಬ ವಾರ್ತೆಯು ರಾಜಧಾನಿಯ ಚಾವಣಿ ರಸ್ತೆಯಿಂದ ವರದಿಯಾಗಿರುತ್ತದೆ. ಅಲ್ಲಿನ ಸತ್ಯನಾರಾಯಣ ಹೋಟಲು ಮಾಲೀಕರಾದ ಶ್ರೀ ಸುಬ್ಬರಾಯರ ಮಗಳು ಸತ್ಯಭಾಮಾ ಎಂಬಾಕೆಯೇ ಈ ರೀತಿ ಪತ್ತೆಯಿಲ್ಲವೆಂದು ಹೇಳಲಾಗಿದೆ ನಿನ್ನೆ ರಾತ್ರಿ ೮ ೩೦ ಗಂಟೆಯಲ್ಲಿ ಒಬ್ಬ ಸನ್ಯಾಸಿಯು ಭಿಕ್ಷೆ ಬೇಡಲು ಅವರ ಮನೆಯ ಮುಂದೆ ಬಂದು ನಿಂತನು. ಮುಂದಕ್ಕೆ ಹೋಗುವಂತೆ ಸತ್ಯಭಾಮಾ ಬಾಯಿಂದ ಹೇಳಿದಾಗ ಕುಂಕುಮವನ್ನು ಚೀಟಿಯಲ್ಲಿಟ್ಟು ಆಕೆಯ ಕೈಗೆ ಕೊಟ್ಟು ಓಡಿಹೋದನು ನಂತರ ಆಕೆಯು ಒಳಗೆ ಹೋಗಿ ಮಲಗಿದಳು ೧೨ ಗಂಟೆ ರಾತ್ರಿಯಲ್ಲಿ ಬಾಗಿಲು ಶಬ್ದವಾದಂತೆ ಕಾಣಲು ಆಕೆಯ ತಾಯಿ ನೋಡಲಾಗಿ ಹಿಂಬಾಗದ ಬಾಗಿಲು ತೆಗೆದಿತ್ತೆಂದೂ ತರುಣಿಯು ಮಾಯವಾಗಿದ್ದಳೆಂದೂ ಹೇಳಲಾಗಿದೆ ಮನೆಯವರು ಆಕೆಗಾಗಿ ಎಲ್ಲೆಲ್ಲೂ ಹುಡುಕುತ್ತಿದ್ದಾರೆ ಪೋಲೀಸರಿಗೂ ಸಹ ದೂರನ್ನು ಕೊಡಲಾಗಿದೆ

ವಿದೇಶಗಳಿಗೆ ಮನಿಯಾರ್ಡರ್ ನಿಂತಿದೆ.

ಪಾಕಿಸ್ತಾನವನ್ನೂ ಸೇರಿ ಎಲ್ಲ ವಿದೇಶಗಳಿಗೆ ಕಳುಹಿಸಲಾಗುವ ಮನಿಯಾರ್ಡರುಗಳನ್ನೂ ಭಾರತದ ಅಂಚೆ ಇಲಾಖೆಯು ನಿಲ್ಲಿಸಿದೆ ರೂಪಾಯಿಯ ಬೆಲೆ ಇಳಿಸಿದ ಪರಿಣಾಮವಾಗಿ ಈ ಆಜ್ಞೆಯನ್ನು ಮಾಡಲಾಗಿದೆ

ಸರ್ಕಾರಿ ನೌಕರಿಯಲ್ಲಿ ಜಾತಿಯ ಸೂಚನೆ ಕೂಡದು

ಸರ್ಕಾರಿ ನೌಕರಿಗೆ ಸೇರುವವರು ತಮ್ಮ ಜಾತಿ, ಮತ, ಮುಂತಾದುವನ್ನು ಬರೆಯಬೇಕಾಗಿರುವುದನ್ನು ತೆಗೆದುಹಾಕಬೇಕೆಂದು ಶ್ರೀ ಆರ್ ಆರ್ ದಿವಾಕರ್ ಸಚಿವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ

ರಾಜಧಾನಿಯಲ್ಲಿ ೨ ಲಕ್ಷ ರೂ ವಿನ ಸ್ಟೇಡಿಯಂ

ಮೈಸೂರು ೨೫

ರಾಜಧಾನಿಯ ಬ್ಲೂಸ್ ಫುಟ್ ಬಾಲ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಗಣಪತಿ ಮಂಗಳಾರತಿಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ ಗೋಪಾಲಕೃಷ್ಣ ಶೆಟ್ಟರು ಭಾಷಣ ಮಾಡುತ್ತಾ, ರಾಜಧಾನಿಯ ಕ್ರೀಡಾರಂಗವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಒಂದು ಸ್ಟೇಡಿಯಂ ಅನ್ನು ನಿರ್ಮಿಸಲು ನಗರಾಭಿವೃದ್ಧಿ ಸಮಿತಿಯವರು ೨ ಲಕ್ಷ ರೂ ಗಳ ಯೋಜನೆಯೊಂದನ್ನು ಮಂಜೂರ್ಮಾಡಿದ್ದಾರೆ ದೂ ಇದಕ್ಕಾಗಿ ನಕ್ಷೆಯ ರಚನೆ ಮುಂತಾದ ಪೂರ್ವ ಸಿದ್ಧತೆಗಳಾಗುತ್ತಿವೆಯೆಂದೂ ತಿಳಿಸಿದರು ಹಲವು ತಿಂಗಳುಗಳಲ್ಲಿಯೇ ಈ ಕಾರ್ಯ ಕೈಗೂಡುವುದೆಂದೂ ಹೇಳಿದರು ಈ ಸಂಜೆ ೬-೩೦ ಕ್ಕೆ ಸದರಿ ಕ್ಲಬ್ಬಿನ ಆಶ್ರಯದಲ್ಲಿ ಗಣಪತಿ ಉತ್ಸವವು ನಡೆಯುವುದು

(ಹಿಂದಿನ ಪುಟದಿಂದ ಮುಂದುವರಿದಿದೆ)

ಭೀಟಿ ಜಾತ

ಧನು—ಅನಾಮತ ಮತ್ತು ಸಂಕಟದ ವಾರವಿದು ಆಕಸ್ಮಿಕ ಅಪಘಾತ, ಅದರಿಂದ ಸ್ವಾಲ್ಪವಾದರೂ ಶಾರೀರಿಕ ಯಾತನೆಯುಂಟು ವ್ಯಾಪಾರಾದಿಗಳಲ್ಲಿ ಇಲ್ಲದ ತೊಂದರೆ ಹಾನಿಯುಳ್ಳ ತಾ॥ ೨೩, ೨೭ ೨೮ ಕ್ಷೇಮ, ಧನು

ಮಕರ ತೊಂದರೆಗಳ ಮೇಲೆ ತೊಂದರೆ ಮನಸ್ಸು ಸ್ವಸ್ಥವಿರದು ಪ್ರಿಯ ಜನರಿಂದ ವಿವಂಚನೆ, ಸ್ತ್ರೀಯರಿಂದ ಅಪಮಾನ ಪತ್ನಿಗೆ ಅನಾರೋಗ್ಯ ತಾ॥ ೨೬, ೨೯, ೩೦ ವ್ಯವಸಾಯಾದಿಗಳಲ್ಲಿ ಕತ್ತೃಷ್ಟ, ನಾಶನಾಪೇಕ್ಷ

ಕುಂಭ—ಹೊಸ ವ್ಯವಹಾರಗಳ ಪ್ರಾರಂಭಿಸುವುದು ಧನಿಕ ಮಿತ್ರರಿಂದ ಸ್ವಂತ ಕಾರ್ಯದಲ್ಲಿ ಸಹಾಯ. ಯಾವ ಅಧಿಕಾರಿಯು ತಪ್ಪನ್ನು ತೋರಿಸಿದ್ದರೋ ಅತನೇ ಅದನ್ನು ಒಪ್ಪಿಕೊಳ್ಳುವನು ಪ್ರವಾಸ ಪರಿಕರ ತಾ॥ ೨೭, ೨೮ ನೌಕರಿಯಲ್ಲಿ ಸನ್ಮಾನ

ಮೀನ—ಆರೋಗ್ಯ ನೆಟ್ಟಗೆ, ಗೂಢಾಲೋಚನೆಗಳಿಂದ ಕ್ಲೇಶ ನೌಕರಿಯಲ್ಲಿ ಚೆನ್ನಾಗಿರುವುದು ತಾ॥ ೨೬ ೨೭ ಲಾಭ ಶುಭ ವಾರ್ತೆ

ವಿ. ಡಿ. ರಾಜಾರಾಂರವರ ನಿಧನದ ಬಗ್ಗೆ ಸಂತಾಪ

ಮೈಸೂರು ೨೫

ನಿನ್ನೆ ದಿನ ರಾಜಧಾನಿಯ ಪೌರಸಭೆಯ ಅಧಿವೇಶನವು ನಡೆಯಿತು. ದಿವಂಗತ ಧರ್ಮಪ್ರಕಾಶ ವಿ ಡಿ. ರಾಜಾರಾಂರವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಿ ಸಭಾಸದಸ್ಯರು ಎರಡು ನಿಮಿಷ ಎದ್ದು ನಿಂತು ನಿರ್ಣಯವನ್ನು ಅಂಗೀಕರಿಸಿದರು,

ಇಂದ್ರಭವನದವರು ಹೊಸದಾಗಿ ಏರ್ಪಡಿಸಲಿರುವ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಶಾಖೆಗೆ ಅನುಮತಿ ಕೊಡುವ ಬಗ್ಗೆ ಅಭಿಪ್ರಾಯವನ್ನು ಕೇಳಿ ಸರ್ಕಾರದ ಆಹಾರ ಶಾಖಾ ಕಾರ್ಯದರ್ಶಿಗಳಿಂದ ಬಂದಿದ್ದ ಪತ್ರದ ವಿಷಯವಾಗಿ ವಿಶೇಷ ಚರ್ಚೆ ನಡೆಯಿತು ಇಂದಿನ ಆಹಾರ ಪರಿಸ್ಥಿತಿಯಲ್ಲಿ ಇದಕ್ಕೆ ರಹದಾರಿಯನ್ನು ಕೊಡಕೂಡದೆಂದು ಶ್ರೀ ಎ ವೆಂಕಟೇಶಯ್ಯ ಮತ್ತು ಜ॥ ಮಹಮದ್ ಸೇಟ್‌ರವರು ಹೇಳಿದರು

ಆಹಾರ ಸರಬರಾಜು ಡೈರಕ್ಟರವರಿಂದ ಅನುಮತಿ ಪಡೆಯದೇ ಇರತಕ್ಕವರಿಗೆ ಹೊಸದಾಗಿ ಹೋಟೆಲು ತೆಗೆಯಲು ರಹದಾರಿ ಕೊಡಕೂಡದೆಂದು ಸರ್ಕಾರದವರು ಆಜ್ಞೆ ಹೊರಡಿಸಿರುವುದರಿಂದಲೂ, ದಿನೇ ದಿನೇ ಅಕ್ಕಿ ಮತ್ತು ಇತರ ಆಹಾರ ಪದಾರ್ಥಗಳಿಗೆ ಅಭಾವವು ಹೆಚ್ಚುತ್ತಿರುವುದರಿಂದಲೂ, ಹೊಸ ಹೋಟಲುಗಳನ್ನು ತೆರೆಯಲು ಅನುಮತಿ ಕೊಡಬಾರದೆಂದು ಪೌರಸಭೆಯು ತನ್ನ ನೀತಿಯನ್ನು ನಿರ್ಧರಿಸಿರುವುದರಿಂದಲೂ, ಮೇಲ್ಕಂಡ ಹೋಟಲಿಗೆ ಆಹಾರ ಶಾಖೆಯವರು ಅನುಮತಿ ಕೊಡುವರೇ ಎಂಬ ಅಂಶವನ್ನು ತಿಳಿದುಕೊಳ್ಳತಕ್ಕದ್ದೆಂದು ನಿರ್ಣಯ ಮಾಡಲಾಯಿತು.

ಹಂಗೇರಿಯ ವಿದೇಶಾಂಗ ಮಂತ್ರಿಗೆ ಮರಣ ದಂಡನೆ

ಹಂಗೇರಿಯ ವಿದೇಶಾಂಗ ಮಂತ್ರಿಯು ಅಲ್ಲಿನ ಸರ್ಕಾರವನ್ನು ಉರುಳಿಸುವುದರಲ್ಲಿ ಪಿತೂರಿ ನಡೆಸುತ್ತಿದ್ದನೆಂದು ಆತನಿಗೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಲಾಗಿದೆ ಈ ಪಿತೂರಿಯಲ್ಲಿ ಸಹಕರಿಸಿದ ಹಲವರನ್ನು ಮಿಲಿಟರಿ ಕೋರ್ಟು ವಿಚಾರಣೆಗೆ ಗುರಿಪಡಿಸಿದೆ

ರಷ್ಯದ ಅಣು ಬಾಂಬಿನ ಸ್ಫೋಟನೆ

ಹಲವು ವಾರಗಳ ಹಿಂದೆ ರಷ್ಯದಲ್ಲಿ ಒಂದು ಕಡೆ ಅಣು ಬಾಂಬಿನ ಸ್ಫೋಟನೆಯಾಯಿತೆಂಬ ನಿಖರವಾದ ಸುದ್ದಿ ದೊರೆತಿರುವುದಾಗಿ ಅಮೆರಿಕಾದ ಅಧ್ಯಕ್ಷ ಟ್ರೂಮನ್‌ರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುವರು ಅಮೆರಿಕಕ್ಕೆ ಈ ಬಗ್ಗೆ ಎಲ್ಲಾ ವಿವರಗಳೂ ತಿಳಿದಿರುವುದಾಗಿ ಅವರು ವ್ಯಕ್ತಪಡಿಸಿ, ಅಣುಶಕ್ತಿಯನ್ನು ಅಂತರರಾಷ್ಟ್ರೀಯ ಹತೋಟಿಗೆ ಒಳಪಡಿಸ ಬೇಕೆ ದೂ ... ಪ್ರಕಾರ ಅಮೆರಿಕೆಯ ... ರಷ್ಯದಿಂದ ... ಹೊರತಾಗಿದೆ ... ರಷ್ಯವು ... ಅಣುಬಾಂಬನ್ನು ... ಹೇಳಲಾಗಿದೆ ... ಬಾಂಬು ಇರುವುದರಿಂದ ಅಮೆರಿಕದ ಮೇಲೆ ಅದನ್ನು ... ದು ಹೇಳಲಾಗಿದೆ

ವಾರ ಭವಿಷ್ಯ

ತಾ॥ ೨೫-೯-೪೯ರಿಂದ ೧-೧೦-೪೯ರ ವರೆಗೆ

ಮೇಷ—ಸಂದೇಹದಾಯಕ ಘಟನೆಗಳಾಗವು. ಎಲ್ಲೆಲ್ಲೂ ತೊಂದರೆ ಜಮೀನು ವಿಚಾರದಲ್ಲಿ ತಕರಾರು ಬುದ್ಧಿ ಸಾಮರ್ಥ್ಯ ದನಕರುಗಳ ಹಾನಿ ನೆರೆಯವರೊಡನೆ ಕಲಹ ತಾ॥೨೬, ೨೭, ೨೯ ಅಪಘಾತ, ಭಯ ವಾಹನಗಳ ಹಾನಿ ವಿಯೋಗ

ವೃಷಭ—ಪ್ರತಿಸ್ಪರ್ಧಿಗಳನ್ನು ಸೋಲಿಸುವಿರಿ ಮಹತ್ವದ ಘಟನೆ ನೌಕರಿಯಲ್ಲಿ ಎಷ್ಟೋ ಜನರಿಗೆ ಮೇಲಧಿಕಾರ ದೊರಿಯುವುದು ಮಾನ ಸನ್ಮಾನ ಉಂಟು ಪತ್ನಿಯ ಆರೋಗ್ಯ ನೆಟ್ಟಗೆ ಸುಖಪ್ರವಾಸ. ತಾ॥ ೨೮, ೨೯, ೩೦ ಮನೋರಂಜಕ ವಸ್ತು ಖರೀದಿ

ಮಿಥುನ—ಗಡಿಬಿಡಿ, ಒಂದು ಕೆಲಸವೂ ಕೈಗೂಡದು ಆರೋಗ್ಯ ಮಾತ್ರ ನೆಟ್ಟಗೆ ಮಿತ್ರರ ಆಗ್ರಹದಿಂದ ಜಾಗರಣೆ ನೌಕರಿ ಕೆಲಸ ಹಾಗೆಯೇ ಉಳಿಯುವುದು ಹಣಕಾಸಿನ ಲಾಭ ಚೆನ್ನಾಗಿದೆ ಆದರೆ ಖರ್ಚು ಉಂಟು ವ್ಯಾಪಾರಾದಿಗಳಲ್ಲಿ ಅಪಯಶವಿಲ್ಲ ತಾ॥ ೨೬ ೨೭ ಮನರಂಜನೆ

ಕರ್ಕ—ವಿಘ್ನಗಳು ಬರುವುವು ಆರೋಗ್ಯ ನೆಟ್ಟಗಿರದ. ಎತ್ತರದಿಂದ ಕಾಲುಜಾರುವ ಪ್ರಸಂಗದಿಂದ ತಲೆಗೆ ಜಖಂ ವಿಶ್ವಾಸಘಾತ ಕೌಟುಂಬಿಕ ಅಸಮಾಧಾನ ಹೆಚ್ಚುವುದು ತಾ॥ ೨೮, ೩೦ ಖರ್ಚು, ಚಿಂತೆ

ಸಿಂಹ—ನಾನಾ ಚಿಂತೆ ಕಾಲು ಜಾರಿ ಬೀಳುವ ಪ್ರಸಂಗ ವ್ಯಾಪಾರ ವ್ಯವಹಾರಗಳಲ್ಲಿ ಬಿಕ್ಕಟ್ಟಿನ ಸ್ಥಿತಿ. ಕೌಟುಂಬಿಕ ಸ್ಥಿತಿ ಉತ್ತಮವಿರದು. ಪ್ರವಾಸಬೇಡ ತಾ॥ ೨೬, ೨೭, ೧೦ ಆಕಸ್ಮಿಕ ಖರ್ಚು ದುಃಖ

ಕೊಡುವ ಶಬ್ದವನ್ನು ಕೇಳಬೇಕಾಗುವುದು

ಕನ್ಯಾ—ಪ್ರವಾಸ ಸುಖಕರವದ್ದು [ಉದ್ದೇಶದ ಸಾಫಲ್ಯ ಆರೋಗ್ಯ, ನೆಟ್ಟಗೆ ನೌಕರಿ ಪಂಥಗಳಲ್ಲಿ ಹಿತದಾಯಕ ಘಟನೆ ಮಿತ್ರರನ್ನು ಜಯಿಸುವಿರಿ ಆಕಸ್ಮಿಕ ಹಣ ಲಾಭ ತಾ॥ ೨೫, ೨೭ ಶುಭ ವಾರ್ತೆ, ಸುಖ.

ತುಲಾ—ಯಾರ ಭೇಟಿಗಾಗಿ ಕಾತರಿಸು

ತ್ತಿದ್ದಿರೋ ಅವರೇ ನಿಮ್ಮೆಡೆಗೆ ಹಠಾತ್ತನೆ ಬರುವರು ಮಹತ್ವದ ಚರ್ಚೆಯಿಂದ ಅನುಕೂಲ ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಇಷ್ಟದಾಯಕ ಘಟನೆ ಪಂಥದಲ್ಲಿ ಲಾಭ ತಾ॥ ೨೭, ೨೮ ಧನಲಾಭ ಅಲ್ಪ ಪ್ರವಾಸ

ವೃಶ್ಚಿಕ—ಶತ್ರುಗಳ ಅಭಿಸಂಧಿಯಿಂದ ಅವರೇ ನಾಶವಾಗುವರು ಆರೋಗ್ಯ ನೆಟ್ಟಗೆ ಮಿತ್ರರ ಆಗ್ರಹದಿಂದ ಪ್ರವಾಸ. ಅದರಿಂದ ಲಾಭ ಪತ್ನಿ ಆರೋಗ್ಯ ನೆಟ್ಟಗೆ ತಾ॥ ೨೮, ೨೯, ೩೦ ಲಾಭ ಆಪ್ತರ

(ಹಿಂದಿನ ಪುಟ ನೋಡಿ)

ಸುಖಾಗಮನ! ಸುಖಾಗಮನ!

ಎಂ. ಸಿ. ಎಲ್. ಶೆಟ್ಟಿಯವರ

ನ್ಯೂ ಹೋಟೆಲ್ ಬೆಂಗಳೂರು

ವಿದ್ಯಾರ್ಥಿಗಳಿಗೂ, ವರ್ತಕರಿಗೂ, ಆಫೀಸರುಗಳಿಗೂ, ಸಂಸಾರಿಗಳಿಗೂ, ಬ್ರಾಹ್ಮಣರಿಂದ ರುಚಿಯಾದ ಊಟ ಮತ್ತು ಉಪಾಹಾರಗಳಿಗೂ ಆಧುನಿಕ ಸಲಕರಣೆಗಳುಳ್ಳ ರೂಮುಗಳಿಗೂ ನ್ಯಾಯವಾದ ದರ, ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸೇರಿ ೧ ದಿನಕ್ಕೆ ೧ ಸೀಟಿಗೆ ರೂ ೩ ಮತ್ತು ಮೇಲ್ಪಟ್ಟು. ೫. ಎ. ಕ್ರೆಸೆಂಟ್ ರೋಡ್ (ರೇಸ್ ಕೋರ್ಸ್ ಹತ್ತಿರ) ಬೆಂಗಳೂರು.

ನ್ಯೂ ಅಪೇರಾ

ಟಾಕೀಸ್, ಮೈಸೂರು

§

23-9-49 ರಿಂದ

ಅಮೋಘ ೩ ನೇ ವಾರ

ಭಾಗ್ಯ ಪಿಕ್ಚರ್ಸ್‌ರವರ

ಮಂಗಯಾರ್ ಕರಸಿ

ಕನ್ನಾಂಬ, ಅಂಜಲಿ ದೇವಿ, ಟಿ ಯು. ಚಿನ್ನಪ್ಪ, ಎನ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ-ಪದ್ಮಿನಿ ಪಾತ್ರ ವಹಿಸಿರುವ ತಮಿಳು ಚಿತ್ರ

ಪ್ರದರ್ಶನ – ಮಧ್ಯಾಹ್ನ ೩, ಸಂಜೆ ೬-೩೦ ಮತ್ತು ರಾತ್ರಿ ೯–೪೫

Distributors for Mysore State, S. Canara & Coorg

R. V. PICTURES,

157, Subedar Chatram Road, Bangalore 2

|| ಜೈ ಹಿಂದ್ ||

ಭಾರತ್ ಮರ್ಟೆ ಷಾಪ್

ದೇವರಾಜ ಮಾರ್ಕೆಟ್, ನಂ ೪೫೨-೧೪ ಮೈಸೂರು

ತಾ॥ 27-9-49 ಮಂಗಳವಾರ ಬೆಳಗ್ಗೆ ಪೋಲ್ಯಂದವರಲ್ಲಿ ಅತ್ಯುತ್ತಮವಾದ

೩೫೦ ರೂಪಾಯಿನ

ಟಿಗರು

ಮಾರ್ಕೆಟ್ ಪ್ರದರ್ಶನದ ಸಲುವಾಗಿ ಕುಯ್ಯಿಸಲಾಗುವುದು ಇಷ್ಟಪಟ್ಟವರು ಮೇಲಿನ ಅಡ್ರೆಸ್ಸಿನಲ್ಲಿ ಬಂದು ನೋಡಬಹುದು

ಪ್ರೊ॥ ಡಿ. ಗಿರಿತಿಮ್ಮಯ್ಯ ಅಂಡ್ ಬ್ರದರ್ಸ್

Edited, printed and published by A R Nagarajan at Sadhvi Press, D Subbiah Road, Mysore.

ರಾಜಕಮಲ್

ಮೈಸೂರು

23-9-49ರಿಂದ ಅಮೋಘ 3ನೇ

ಮಹಾತ್ಮಾ ಪಿಕ್ಚರ್ಸ್‌ರವರ

ನಾಗಕನ್ನಿಕ

(ಕನ್ನಡ)

ಪ್ರತಿ ದಿನ ಮೂರು ಪ್ರದರ್ಶನಗ

ಪಾತ್ರ - ವೀರಭದ್ರಪ್ಪ, ಜಯ

ಬಳ್ಳಾರಿ ರತ್ನಮಾಲಾ

-: ಬೆಳಗಿನ ಪ್ರದರ್ಶನಗ

25-9-49 ನೇ ಭಾನುವಾರದಿ

5 ದಿನಗಳು ಮಾತ್ರ

※ ಕಿಸ್ಮತ್

(ಹಿಂದಿ – ಹೊಸ ಮುದ್ರಣ

ಅಶೋಕ ಕುಮಾರ್, ಮುಮ್ತಾ

ಶಾಂತಿ ಪಾತ್ರ

SRI GAYATH

Dasara Special Progra

on 25th & 26th Septem

DAILY THREE SHOW

M G M's

Ziegfeld Foll

(TECHNICOLOUR)

Morning Shows 25th,

MADAME CUR

ಎಲ್ಲವನ್ನೂ ಶುದ್ಧಪಡಿಸಲು

ಉತ್ತಮವಾದ

- ಮೈಸೂರು ಸೋಪ್ -

ಎಲ್ಲೆಲ್ಲೂ ದೊರೆಯುತ್ತವೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಸೆಂಟ್ರಿ ಬಾಕ್ಸ್ ಬಿಕರಿಗಿದೆ

ಬೀದಿ ಅಂಗಡಿ ಜೋಡಿಸುವುದಕ್ಕೆ ಬುಕ್ಕಿಂಗ್ ಆಫೀಸು, ಛತ್ರದ ಕಣಜ, ಸಿಗಾಯಿ ನಿಲ್ಲುವುದಕ್ಕೆ ಉಪಯೋಗವಾಗಬಹುದಾದ ತ್ಯಾಗದ ಮರದ ಸೆಂಟ್ರಿ ಬಾಕ್ಸ್ ಒಂದು ಮೈಸೂರು ಮೈಸೂರ್ ರಸ್ತೆ, ಅರಾಧ್ಯ ಯುವಕ ಸಂಘದ ಕಾಂಪೌಂಡಿನಲ್ಲಿ ಬಿಕರಿಗೆ ಸಿದ್ಧವಾಗಿದೆ ಇದರ ಪಕ್ಕದ ಜೈನ ಬೋರ್ಡಿಂಗ್ ಹೌಸ್ ಮ್ಯಾನೇಜರಲ್ಲಿ ವಿಚಾರಿಸಿ

ಗಾಗಿ ಖರ್ಚು.

CENTRAL FOOD TECHNOLOGICAL RESEARCH INSTITUTE, MYSORE

Sealed tenders in quadruplicate are invited for the following items of work:–

Installation of Heating & Power and connecting it to the existing mains, installation of additional wall brackets and wiring of a separate main, installation of additional heating plugs supplying & installation of Flourescent tube lights & wiring of a separate main.

Detailed specifications, wiring diagrams etc can be had from the Mechanical Engineer on any working day. Tenders will be received by the Planning Officer up to 4 30 P M on 2-10-1949, and the work will have to be undertaken and completed within ten days after the work is entrusted

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು.

U HARI SHENOY

ಏಜಂಟ್.

※ ಕಬ್ಬಿಣದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್, ಅಲಾರಂ ಸೇಫ್. ಸುಲಭವಾದ ಬೆಲೆ. ※

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್, ೨೭೭, ಹಳ್ಳದಕೇರಿ ಮತ್ತು ಜೀವನರಾಯನ ಕಟ್ಟೆ (ಸ್ಟಾಲ್ ನಂ ೧೧) ಮೈಸೂರು.

ಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೨೬-೯-೧೯೪೯ [ಸಂಚಿಕೆ ೫೦

ರಾಜಧಾನಿಯಲ್ಲಿ ಕಾನ್ಸೆಂಬ್ಲಿ ಅಧಿವೇಶನ

ಇಡೀ ದೇಶದ ಭದ್ರತೆಯೇ ಗುರಿಯಾದ ರಾಜ್ಯಾಂಗ ಬೇಕು

ಮಹಾರಾಜರಸ್ಥಾನಕ್ಕೆ ಚ್ಯುತಿಯಿಲ್ಲ

ರಾಜ್ಯಾಂಗ ಸಭೆ ಅಧಿವೇಶನ

ಮೈಸೂರು ೨೬

ಸಂಸ್ಥಾನದ ರಾಜ್ಯಾಂಗ ಸಭೆಯು ಇಂದು ಮಧ್ಯಾಹ್ನ ಜಗನ್ಮೋಹನ ಭವನದಲ್ಲಿ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರ ನೇತೃತ್ವದಲ್ಲಿ ಸೇರಿತು ಪ್ರತಿನಿಧಿಗಳನೇಕರು ಹಾಜರಿದ್ದರು.

ಸಭಾ ಪ್ರಾರಂಭವಾಗುವುದಕ್ಕೆ ಸೀತಿತೆಯಾಗಿ ಅಧ್ಯಕ್ಷರು ಒಂದು ಹೇಳಿಕೆಯನ್ನು ಮಾಡಿ, ಕಳೆದ ಸಭಾಧಿವೇಶನದಲ್ಲಿ ಆಗಿದ್ದ ತೀರ್ಮಾನದಂತೆ ತಾವು ಕೇಂದ್ರ ರಾಜ್ಯಾಂಗ ರಚನಾ ಸಭೆಯಲ್ಲಿ ಸಂಸ್ಥಾನಗಳ ಬಗ್ಗೆ ರಚಿತವಾದ ಅಧ್ಯಾಯವು ಒಪ್ಪಿಗೆಯಾಗುವ ಪೂರ್ವಭಾವಿಯಾಗಿ ಇಲ್ಲಿನ ಸಭೆಗೆ ರಾಜ್ಯಾಂಗದ ಕರಡನ್ನು ಪರಿಶೀಲನೆಗಾಗಿ ಕಳುಹಿಸಬೇಕೆಂದು ಕೋರಿದ್ದಂತೆ ತಾವೂ ಮತ್ತು ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರೂ ದೆಹಲಿಗೆ ಹೋಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದಾಗಿಯೂ, ಅದರಂತೆ ಅವರು ಒಂದು ಕರಡು ಪ್ರತಿಯನ್ನು ಕಳುಹಿಸಿದ್ದಾರೆಂದೂ ತಿಳಿಸಿದರು ಈ ಕರಡುಗಳಿಗೆ ತಿದ್ದುಪಡಿಗಳು ಬರುವುದಾಗಿ ಹೇಳಿದರು. ಇಡೀ ದೇಶಕ್ಕೆ ಒಂದೇ ಮಾದರಿಯ ರಾಜ್ಯಾಂಗವು ಇರಬೇಕೆಂಬುದು ಸರಿಯೆಂದೂ, ಹಲವು ಕಡೆಗಳಲ್ಲಿ ಅಲ್ಪ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದೆಂದೂ, ಎಲ್ಲಾ ಸಂಸ್ಥಾನಗಳವರೂ ಈ ಬಗ್ಗೆ ಒಮ್ಮತ ಅಭಿಪ್ರಾಯವಿರುವುದೆಂದೂ ತಿಳಿಸಿ, ಈ ಕರಡನ್ನು ಅಂಗೀಕರಿಸಲು ಅಭ್ಯಂತರವೇನೂ ಇರಬೇಕಾದುದಿಲ್ಲವೆಂದರು. ಕೇಂದ್ರದವರು ನಮ್ಮ ಅಧಿಕಾರಕ್ಕೆ ಚ್ಯುತಿ ತಂದಿರುವರೆಂಬ ಸಂದೇಹಕ್ಕೆ ಅವಕಾಶವಿಲ್ಲವೆಂದೂ, ಯಾವುದೇ ರಾಜ್ಯಾಂಗವನ್ನು ಒಪ್ಪುವಾಗ ಇಡೀ ಭಾರತ ಖಂಡದ ಭದ್ರತೆಯ ದೃಷ್ಟಿ ಕಡೆಗೆ ಗಮನವಿರಬೇಕಾದುದೆಂದೂ, ಕೇಂದ್ರದ ವಿರುದ್ಧವಾಗಿ ಹೋಗಬೇಕಾದುದಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು.

ನಂತರ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡಿಸಿ ಸಂಸ್ಥಾನದ ರಾಜ್ಯಾಂಗವು ಭಾರತದ ರಾಜ್ಯಾಂಗದಲ್ಲಿ ಹೊಂದಿಕೊಂಡಿರುವಂತೆ ಇರಬೇಕೆಂಬ ಅಂಶವನ್ನು ಸೂಚಿಸಿದರು ಈ ನಿರ್ಣಯದ ಬಗ್ಗೆ ಮಾತನಾಡಿ ಈಗಿನ ಸಂದಿಗ್ಧ ಪರಿಸ್ಥಿತಿಯನ್ನು ಸಭಿಕರ ಗಮನಕ್ಕೆ ತಂದು ದೇಶವು ಸ್ವತಂತ್ರವಾದ ಮೇಲೆ ರಕ್ಷಣೆಯ ಜವಾಬ್ದಾರಿಯು ಬಿದ್ದಿರುವುದರಿಂದ ಆದರ ಆಧಾರದ ಮೇಲೆ ನಾವು ರಾಜ್ಯಾಂಗವನ್ನು ರಚಿಸಬೇಕಾಗಿದೆಯೆಂದರು ಯಾವುದೇ ಸಂಸ್ಥಾನವಾಗಲಿ ಸ್ವತಂತ್ರ ಮನೋಭಾವದಿಂದ ಹೋಗುವುದು ಸರಿಯಾದುದಲ್ಲವೆಂದೂ ಭರತ ಖಂಡದ ನಾಯಕರು ಎಲ್ಲ ಅಧಿಕಾರಗಳನ್ನೂ ತಮ್ಮ ಕೈಯ್ಯಲ್ಲಿ ಇಟ್ಟುಕೊಳ್ಳಲು ಅಪೇಕ್ಷಿಸುತ್ತಿಲ್ಲವೆಂದೂ, ದೇಶದ ರಕ್ಷಣೆಗಾಗಿ ಹಲವು ಅಗತ್ಯವಾದ ಅಧಿಕಾರಗಳನ್ನು ಕೇಂದ್ರದವರಿಗೆ ವಹಿಸಬೇಕಾಗಿದೆಯೆಂದೂ ಹೇಳಿದರು

ನಂತರ ರಾಜ್ಯಾಂಗ ಕರಡಿಗೆ ಬಂದಿರುವ ತಿದ್ದುಪಡಿಗಳನ್ನು ಕುರಿತು ಮಾತನಾಡುತ್ತ ಮುಖ್ಯ ಮಂತ್ರಿಗಳು ಮೈಸೂರಿನ ವೈಶಿಷ್ಟ್ಯದ ಬಗ್ಗೆ ಅಭಿಪ್ರಾಯವಿತ್ತರು ಮಹಾರಾಜರ ಸ್ಥಾನ, ಮಾನ ರಾಜಧನ, ಮರ್ಯಾದೆ ಮುಂತಾದುವುಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿ, ದೆಹಲಿಯಲ್ಲಿ ಮೈಸೂರಿನ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಮನ್ನಿಸಲಾಯಿತೆಂದರು ಕಾಶ್ಮೀರ ಪ್ರಶ್ನೆಯು ಅಂತರ ರಾಷ್ಟ್ರೀಯದ್ದಾಗಿದೆ. ಹೈದರಾಬಾದಿನಲ್ಲಿ ಇನ್ನೂ ರಾಜ್ಯಾಂಗ ರಚನಾ ಸಭೆಯಾಗಬೇಕಾಗಿದೆ ರಾಜ್ಯಾಂಗ ರಚನಾ ಕರಡಿನಲ್ಲಿ ರಾಜರು ರಾಜಧನ, ವಂಶ ಪಾರಂಪರ್ಯ ಮುಂತಾದ ವಿಷಯಗಳ ನಿರ್ಧಾರವು ಭಾರತದ ಯೂನಿಯನ್ ಅಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟಿರುವುದೆಂದು ಗೊತ್ತಾಗಿದೆ. ಇಲ್ಲಿನ ವಿಷಯದ ಬಗ್ಗೆ ನಾವೇ ನಿರ್ಧರಿಸಿಕೊಳ್ಳಬಹುದಾಗಿದೆಯೆಂದರು ನಂತರ ಹಲವು ನವ ಪ್ರಯೋಗಗಳ ಬಗ್ಗೆ ಮಾತನಾಡುತ್ತಾ ಮಹಾರಾಜರನ್ನು ರಾಜ ಪ್ರಮುಖ ಎಂದು ಸಂಬೋಧಿಸುವುದಕ್ಕೆ ಅಡ್ಡಿಯೇನೂ ಇಲ್ಲವೆಂದೂ ಗೌರ್ನರಿಗೆ ಇರುವ ಅಧಿಕಾರದಷ್ಟೇ ಅಧಿಕಾರವು ಅವರಿಗೆ ಇರುವುದೆಂದೂ, ಜವಾಬ್ದಾರಿ ಸರಕಾರದ ಸ್ಥಾಪನೆಯಾದಾಗ ಯಾವ ಅಧಿಕಾರವು ಪ್ರಜೆಗಳಲ್ಲಿರಬೇಕೆಂಬುದನ್ನು ತಾವು ಅಭಿಪ್ರಾಯ ಪಟ್ಟಿದ್ದರೋ ಅವೆಲ್ಲವೂ ಕರಡಿನಲ್ಲಿದೆಯೆಂದೂ ತಿಳಿಸಿದರು ಆದ್ದರಿಂದ ರಾಜ್ಯಾಂಗದ ಕರಡು ಅಂಗೀಕೃತವಾಗಲು ಯೋಗ್ಯವಾಗಿರುವುದಾಗಿಯೂ ಇದನ್ನು

ರಾಜಕೀಯದಲ್ಲಿ ವಿದ್ಯಾರ್ಥಿಗಳ ಪಾತ್ರ

ವಿ. ವೆಂಕಟಪ್ಪನವರ ಭಾಷಣ

ಮೈಸೂರು ೨೬

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ವಿಠಲರಾವ್ ಕೇಶಣ್ಣನವರ ವಿದ್ಯಾರ್ಥಿನಿಲಯದವರು ನಿನ್ನೆ ಸಂಜೆ ಪ್ರ ಪ್ರ ಸಭೆ ಅಧ್ಯಕ್ಷರಾದ ಶ್ರೀ ವಿ. ವೆಂಕಟಪ್ಪನವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಸತ್ಕರಿಸಿದರು. ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ, ಸೂರ್ಯ ನಮಸ್ಕಾರ ಪ್ರದರ್ಶನವಾದ ನಂತರ ನಿಲಯದ ವಾರ್ಡನ್‌ರವರು ಅಲ್ಲಿನ ಕೆಲಸ ಕಾರ್ಯಗಳ ವರದಿಯನ್ನು ಒಪ್ಪಿಸಿದರು.

ಶ್ರೀ ವೆಂಕಟಪ್ಪನವರು ಭಾಷಣ ಮಾಡಿ ವಿದ್ಯಾರ್ಥಿಗಳು ರಾಜಕೀಯದಲ್ಲಿ ಆಸಕ್ತಿ ವಹಿಸಬೇಕೆಂದೂ, ಆದರೆ ನಮ್ಮ ದೇಶದ ಪರಕೀಯರನ್ನು ಓಡಿಸಲು ಕೈಗೊಳ್ಳಬೇಕಾಗಿದ್ದ ಕಾರ್ಯಕ್ರಮವು ಈಗ ಅಗತ್ಯವಿಲ್ಲದಿರುವುದರಿಂದ ಮುಂದೆ ನಾಡಿನ ಅಭ್ಯುದಯದ ಭಾರವನ್ನು ವಹಿಸಲು ವಿದ್ಯಾರ್ಥಿಗಳು ಇಂದಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕೆಂದೂ ತಿಳಿಸಿದರು ಇಂದಿನ ಮಂತ್ರಿಗಳಲ್ಲಿ ಯಾವ ಸಣ್ಣ ಪುಟ್ಟ ಲೋಪದೋಷಗಳು ಇದ್ದರೂ ಲಂಚ ರುಷುವತ್ತಿನ ಅಪಾದನೆಯು ಅವರುಗಳಿಗೆ ಸಲ್ಲುವುದಿಲ್ಲವೆಂದು ಸೂಚಿಸಿದರು

ಶ್ರೀ ಕೆ. ಸಿ ರೆಡ್ಡಿಯವರು ಮಾತನಾಡಿ, ೧೫೦ ವರ್ಷಗಳೊಳಗೆ ನಮ್ಮ ದೇಶದಲ್ಲಿ ಆಂಗ್ಲ ಭಾಷೆಯ ಪ್ರಾಬಲ್ಯವು ಹೋಗಿ ಹಿಂದಿಯೇ ಅಂತರ ಪ್ರಾಂತೀಯ ವ್ಯವಹಾರ ಭಾಷೆಯಾಗುವುದರಿಂದ ಎಲ್ಲರೂ ಅದನ್ನು ಕಲಿಯಬೇಕೆಂದೂ ಕೋರಿದರು.

ನಗರದಲ್ಲಿ ನೆಹರೂರವರಿಗೆ ವೈಭವದ ತೆಪ್ಪೋತ್ಸವ

ಪಂಡಿತ ನೆಹರೂರವರು ಮೊನ್ನೆ ಕಾಶ್ಮೀರಕ್ಕೆ ಭೇಟಿಯಿತ್ತಾಗ ಶ್ರೀನಗರದ ಝೀಲಂ ನದಿಯಲ್ಲಿ ನಯನ ಮನೋಹರವಾಗಿ ಅಲಂಕರಿಸಲಾಗಿದ್ದ ದೋಣಿಯಲ್ಲಿ ಅವರಿಗೆ ... ನಿಮಿಷಗಳ ಕಾಲ ವೈಭವಯುತ ತೆಪ್ಪೋತ್ಸವವನ್ನು ಏರ್ಪಡಿಸಲಾಗಿತ್ತು

... ಕಿಯಿಂದ ೧೦ ಲಕ್ಷ ರೂ. ಸೆಣಬಿನ ನಾಶ

ಪೂರ್ವ ಬಂಗಾಳದ ಢಕ್ಕಾವಿನ ನಾರಾಯಣ ಗಂಜಿನಲ್ಲಿ ಮೊನ್ನೆ ದಿನ ಒಂದು ಸೆಣಬಿನ ಕೋಠಿಗೆ ಬೆಂಕಿ ಬಿದ್ದು ಸುಮಾರು ೧೦ ಲಕ್ಷ ರೂ ಬೆಲೆ ಬಾಳುವ ಸೆಣಬು ಭಸ್ಮವಾಯಿತೆಂದು ವರದಿಯಾಗಿದೆ

೧೯೪೭ ರಲ್ಲೇ ರಷ್ಯಾವಿಗೆ ಅಣು ರಹಸ್ಯ ತಿಳಿದಿತ್ತು

ರಷ್ಯನರಿಗೆ ಅಣು ಬಾಂಬಿನ ರಹಸ್ಯವು ೧೯೪೭ ರಲ್ಲೇ ತಿಳಿದಿತ್ತೆಂದೂ, ಆದರೂ ಅವರು ಅದರ ಪ್ರಯೋಗದ ನಿರ್ವಹಣೆಕ್ಕೆ ಪ್ರಯತ್ನಿಸಿದ್ದರೆಂದೂ ರಷ್ಯನ 'ಟಾಸ್' ವಾರ್ತಾ ಸಂಸ್ಥೆಯು ತಿಳಿಸಿದೆ

ವಿಶ್ವ ಸಂಸ್ಥೆಗೆ ಕೊಟ್ಟ ದೂರು ವಾಪಸು

ಕಾಶ್ಮೀರ ಪ್ರಶ್ನೆ ಸಂಬಂಧವಾಗಿ ವಿಶ್ವ ಸಂಸ್ಥೆಗಾಗಿ ಭಾರತವು ಸಲ್ಲಿಸಿರುವ ದೂರನ್ನು ವಾಪಸು ತೆಗೆದುಕೊಳ್ಳಬೇಕೆಂದು ಕಾಶ್ಮೀರ ಸಂಸ್ಥಾನದ ರಾಷ್ಟ್ರೀಯ ಸರ್ಕಾರ ನಿರ್ಣಯ ಮಾಡಿದೆ

ಸಿ. ಆರ್. ರೆಡ್ಡಿಯವರ ನೇಮಕದ ಬಗ್ಗೆ ಆಜ್ಞೆ

ಆಂಧ್ರ ವಿಶ್ವವಿದ್ಯಾಲಯದ ಕೆಲಸವನ್ನೂ ನೋಡಿಕೊಳ್ಳಲು ಅನುಮತಿ

ಸ್ವಂ. ಸು. ಫೋ.] ಬೆಂಗಳೂರು ೨೬

ಸರ್ಕಾರದವರು ಶ್ರೀ ಸಿ ಆರ್ ರೆಡ್ಡಿಯವರನ್ನು ಮೈಸೂರು ವಿಶ್ವವಿದ್ಯಾಲಯದ ಪ್ರೋ ಚಾನ್ಸಲರನ್ನಾಗಿ ನೇಮಿಸಿ ಆಜ್ಞೆ ಹೊರಡಿಸಿದ್ದಾರೆ. ಅವರಿಗೆ ಮಾಹೆಯಾನಾ ೨,೫೦೦ ರೂ. ಸಂಬಳ, ಮೈಸೂರಿನಲ್ಲೊಂದು ಮತ್ತು ಬೆಂಗಳೂರಿನಲ್ಲೊಂದು ಮನೆ, ಒಂದು ಮೋಟಾರು ಕಾರು ಅದಕ್ಕೆ ಪೆಟ್ರೋಲು ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದು ಅಲ್ಲದೆ ಅವರು ಆಂಧ್ರ ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳಲು ಅನುಮತಿ ಕೊಡಲಾಗಿದೆ

○ ಎಕ್ಸೈಜ್ ಕಮಿಷನರಾದ ಶ್ರೀ ಕೆ. ಸುಬ್ಬರಾಯರಿಗೆ ಹೃದಯ ವೇದನೆಯುಂಟಾಗಿ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ

○ ದೆಹಲಿಗೆ ಇಂದು ಪ್ರಯಾಣ ಬೆಳೆಸಬೇಕಾಗಿದ್ದ ಹಣಕಾಸಿನ ಸಚಿವ ಶ್ರೀ ಎಚ್ ಸಿ ದಾಸಪ್ಪನವರು ತಮ್ಮ ಪ್ರಯಾಣವನ್ನು ನಾಳಿದ್ದಿಗೆ ಮುಂದುವರಿಸಿದ್ದಾರೆ.

ಷಾಂಘೈ ಮೇಲೆ ಸರ್ಕಾರಿ ಸೈನ್ಯದ ಬಾಂಬಿನ ಧಾಳಿ

ಚೀಣಾದ ಸರ್ಕಾರೀ ಸೈನ್ಯಗಳು ಮೊನ್ನೆ ದಿನ ಷಾಂಘೈ ಮೇಲೆ ಬಾಂಬುಗಳನ್ನು ಸುರಿಸಿ ಬಲವಾದ ಧಾಳಿ ನಡೆಸಿದುವು. ಇದರಿಂದ ಕಮ್ಯೂನಿಸ್ಟರ ೩ ಸಾವಿರ ಟನ್ ತೂಕದ ಒಂದು ಹಡಗೂ, ಇತರ ೫೦ ನೌಕೆಗಳೂ ನಾಶವಾಗಿವೆಂದು ಹೇಳಲಾಗಿದೆ.

ಅಮೇರಿಕಾಕ್ಕೆ ನೆಹರೂ ಪ್ರಯಾಣ ಬರುವ ೭ ಕ್ಕೆ

ಬರುವ ತಿಂಗಳು ೭ ನೇ ತಾರೀಖು ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಅಮೇರಿಕಾವನ್ನು ಕುರಿತು ವಿಮಾನದಲ್ಲಿ ಪ್ರಯಾಣ ಬೆಳೆಸುವರು

ಲಾಯಿಕ್ ಅಲಿ ಮಂತ್ರಿಗಳ ವಿಚಾರಣೆ

ಹೈದರಾಬಾದಿನ ಲಾಯಕಾಲಿ ಮಂತ್ರಿ ಮಂಡಲದ ಸದಸ್ಯರನ್ನು ವಿಚಾರಣೆಗೆ ಗುರಿಪಡಿಸುವ ಬಗ್ಗೆ ಶೀಘ್ರದಲ್ಲೇ ನಿರ್ಧಾರಕ್ಕೆ ಬರಲಾಗುವುದೆಂದು ಮಿಲಿಟರಿ ಗವರ್ನರು ತಿಳಿಸಿದ್ದಾರೆ

ಪರದೇಶಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಕೂಡದು

ವೈಜ್ಞಾನಿಕ ಪ್ರೌಢ ಶಿಕ್ಷಣಕ್ಕಾಗಿ ಪಾಶ್ಚಿಮಾತ್ಯ ದೇಶಗಳಿಗೆ ಭಾರತದ ವಿದ್ಯಾರ್ಥಿಗಳನ್ನು ಕಳುಹಿಸಲು ಕೇಂದ್ರ ಸರ್ಕಾರದವರು ಡಾಲರುಗಳನ್ನು ವ್ಯಯ ಮಾಡುತ್ತಿರುವುದು ವಿನಾಶಕರವೆಂದೂ, ಭಾರತದಲ್ಲೇ ವಿಶೇಷ ವೈಜ್ಞಾನಿಕ ಶಿಕ್ಷಣ ಕೊಡಲು ಸಾಧ್ಯವಿದೆಯೆಂದು ಸರ್ ಸಿ ವಿ ರಾಮನ್ನರು ಹೇಳುತ್ತಾರೆ

ಇಡೀ ಭರತ ಖಂಡದ ದೃಷ್ಟಿಯಿಂದ ಕಾಣಬೇಕೆಂದೂ ತಿಳಿಸಿ, ಭಾರತ ದೇಶದ ನಾನಾ ಸಂಸ್ಥಾನಗಳ ಹಿಂದಿನ ಚರಿತ್ರೆಯನ್ನು ಜ್ಞಾಪಿಸಿಕೊಂಡರೆ ಸ್ವತಂತ್ರ ಸಂಸ್ಥಾನಗಳಿಂದ ಎಷ್ಟು ಹಾನಿಯೆಂಬುದನ್ನು ಅರಿತುಕೊಳ್ಳಬೇಕೆಂದರು. ... ಬುತ್ತಿದೆ

ಈ ವರ್ಷ ಕಾಂಗ್ರೆಸ್ ಅಧಿವೇಶನ ಇಲ್ಲ

ಅಖಿಲ ಭಾರತ ಕಾಂಗ್ರೆಸ್ಸಿನ ಮಹಾಧಿವೇಶನವು ಈ ವರ್ಷದಲ್ಲಿ ನಡೆಯುವುದಿಲ್ಲವೆಂದೂ, ಅದು ಮುಂದಿನ ವರ್ಷ ಮಾರ್ಚಿ ಅಥವ ಏಪ್ರಿಲ್ ತಿಂಗಳಿನಲ್ಲಿ ನಡೆಯಬಹುದೆಂದೂ ಗೊತ್ತಾಗಿದೆ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಮತ್ತು ಪಂಚಾಯಿತಿಗಳ ಚುನಾವಣೆಯ ಕಾರ್ಯಕ್ರಮಗಳು ಪೂರೈಸದಿರುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆಯು ಈ ತಿಂಗಳು ೨೯ನೇ ತಾ॥ ಮಧ್ಯಾಹ್ನ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ಸೇರುವುದು

ಮಾರ್ಕೆಟ್ ಪ್ರದರ್ಶನ

ಮೈಸೂರು ಮಾರ್ಕೆಟ್ ಪ್ರದರ್ಶನದ ಆರಂಭೋತ್ಸವವನ್ನು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನಾಳೆ ಬೆಳಿಗ್ಗೆ ೮-೩೦ ಗಂಟೆಗೆ ನೆರವೇರಿಸುವರು ಶ್ರೀ ಕೆ ಟಿ ಭಾಷ್ಯಂ ರವರು ನಾಳಿದ್ದು ಬಹುಮಾನ ವಿನಿಯೋಗ ಮಾಡುವರು

ಸಂಯುಕ್ತ ಸೇವಾ ಸಂಘದ ಆರಂಭೋತ್ಸವ

ರಾಜಧಾನಿಯ ಸಂಯುಕ್ತ ಸೇವಾ ಸಂಘದ ಪ್ರಾರಂಭೋತ್ಸವವನ್ನು ಆ ಚಾರ್ಯ ಕಾಕಾ ಸಾಹೇಬ್ ಕಾಲೇಲ್ಕರ್‌ರವರು ನಾಳೆ ಸಂಜೆ ೫ ಗಂಟೆಗೆ ಟೌನ್‌ಹಾಲಿನಲ್ಲಿ ನೆರವೇರಿಸುವರು

ಪ್ರಸಾರ ಭಾಷಣ

ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ನಾಳೆ ಬೆಳಿಗ್ಗೆ ೮-೧೫ ಗಂಟೆಗೆ ಆಕಾಶವಾಣಿಯಲ್ಲಿ ಸಂಸ್ಥಾನದ ಹಣಕಾಸಿನ ಐಕ್ಯ ಎಂಬ ವಿಷಯವಾಗಿ ಪ್ರಸಾರ ಭಾಷಣ ಮಾಡುವರು

ಕಳುವು ಮಾಲುಗಳ ಪತ್ತೆ

ಮೊನ್ನೆ ದಿನ ಒಂಟಿಕೊಪ್ಪಲ್ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಸಿಬ್ಬಂದಿಯೊಡನೆ ನಾರಾಯಣ ಮತ್ತು ದೇವಯ್ಯ ಎಂಬುವರನ್ನು ದಸ್ತಗಿರಿ ಮಾಡಿ ಸುಮಾರು ಬೆಲೆ ಬಾಳುವ ಚಿನ್ನದ ಸರ ಮತ್ತು ಚಿನ್ನದ ಉಡಿದಾರಗಳನ್ನು ವಶಪಡಿಸಿಕೊಂಡು ಮುಂದಿನ ತನಿಖೆ ಕ್ರಮವನ್ನು ನಡೆಸುತ್ತಿದ್ದಾರೆ

॥ ಜೈ ಹಿಂದ್ ॥

ಭಾರತ್ ಮರ್ಟ್ ಷಾಪ್

ದೇವರಾಜ ಮಾರ್ಕೆಟ್ ನಂ ೪೯೨ ೧೪ ಮೈಸೂರು

ತಾ॥ 27-9 47 ಶನಿವಾರ ಬೆಳಿಗ್ಗೆ ... ಪ್ರಾರಂಭವಾಗುವ

೩೫೦ ರೂಪಾಯಿಯಿನ

ಹರಾಜು

ಮಾರ್ಕೆಟ್ ಪ್ರದರ್ಶನದ ... ಇಷ್ಟಪಟ್ಟ ... ಮೇಲಿನ ... ಬಂದು ನೋಡಬಹುದು

ಪ್ರೊ॥ ಡಿ ಗಿರಿತಿಮ್ಮಯ್ಯ ... ಪ್ರದರ್ಶಕ

Edited, printed and published by V R Nagarajan at Sadhvi Press D Subbiah Road Mysore

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟಣೆ

ಈ ಕೆಳಗೆ ನಮೂದಿತವಾಗಿರುವ ರೈಲುಗಳ ಕಾಲವನ್ನು ೧೯೪೭ನೇ ಅಕ್ಟೋಬರ್ ೧ನೇ ತಾರೀಖಿನಿಂದ ಬದಲಾವಣೆ ಮಾಡಲಾಗಿದೆ ಇತರ ರೈಲುಗಳ ಕಾಲವು ಈಗಿರುವಂತೆಯೇ ಇರುತ್ತದೆ

೧ ಬೆಂಗಳೂರು—ಹರಿಹರ ಭಾಗ—ಅಪ್ ಟ್ರೈನ್

		ನಂ ೩ ಘಂ ನಿ	ನಂ ೫೩ ಘಂ ನಿ	ನಂ ೫೧ ಘಂ ನಿ
ಬೆಂಗಳೂರು ಸಿಟಿ	ಹೊರಡುವುದು	೯-೨೦	೧೭-೨೫	—
ಅರಸೀಕೆರೆ	ಸೇರುವುದು	—	೨೨-೫೦	—
	ಹೊರಡುವುದು			೬-೩
ಹರಿಹರ	ಸೇರುವುದು	೧೯-೩೦		೧೨-೫

ಡೌನ್ ಟ್ರೈನ್ಸ್

		ನಂ ೪	ನಂ ೫೬	ನಂ ೫೨
ಹರಿಹರ	ಹೊರಡುವುದು	೯-೩೫	೧೫-೧೫	—
ಅರಸೀಕೆರೆ	ಸೇರುವುದು	—	೨೨-೩೫	—
	ಹೊರಡುವುದು			೧೩-೦
ಬೆಂಗಳೂರು ಸಿಟಿ	ಸೇರುವುದು	೧೯-೫೦		೧೯-೦

ನಂ ೩ ಮತ್ತು ೪ನೇ ಎಕ್ಸ್‌ಪ್ರೆಸ್ ರೈಲುಗಳು ಕ್ಯಾತಸಂದ್ರ ಮತ್ತು ತೊಳ ಹುಣಸೆ ಸ್ಟೇಷನ್‌ಗಳಲ್ಲಿ ನಿಲ್ಲುವುವು. ಈಗ ಬೆಂಗಳೂರು ಸಿಟಿ, ಚಿತ್ರದುರ್ಗಗಳ ಮಧ್ಯೆ ಓಡಾಡುತ್ತಿರುವ ಟ್ರೈ ಕಂಪೋಸಿಟ್ ಗಾಡಿಯನ್ನು ರದ್ದುಮಾಡಲಾಗುವುದು

೨ ಬೆಂಗಳೂರು—ಮೈಸೂರು ಭಾಗ ಡೌನ್ ಟ್ರೈನ್

		ನಂ ೭೨	ನಂ ೭೪	ನಂ ೭೬	ನಂ ೬	ನಂ ೭
ಬೆಂಗಳೂರು ಸಿಟಿ	ಹೊರಡುವುದು	—	೯-೪೫	೧೨ ೧೦	೧೫-೩೦	೧೮-೩
ಮದ್ದೂರು	ಸೇರುವುದು					೨೧-೨
	ಹೊರಡುವುದು	೬-೩೦				
ಮೈಸೂರು	ಸೇರುವುದು	೧೦-೦೦	೧೬-೨೫	೧೭-೧೦	೨೦-೧೦	

ಅಪ್ ಟ್ರೈನ್ಸ್

		ನಂ ೭೧	ನಂ ೫	ನಂ ೭೩	ನಂ ೭೫	ನಂ ೧	ನಂ ೮
ಮೈಸೂರು	ಹೊರಡುವುದು		೭-೧೫	೯-೨೦	೧೨-೩೦	೧೫-೪೦	೧೭ ೩
ಮದ್ದೂರು	ಸೇರುವುದು						೨೦-೩
	ಹೊರಡುವುದು	೫-೫೦					
ಬೆಂಗಳೂರು ಸಿಟಿ	ಸೇರುವುದು	೯-೩೨	೧೨-೦೦	೧೬-೨೦	೧೭-೩೦	೧೯-೩೦	

ನಂ. ೫ ಮತ್ತು ೬ನೇ ಎಕ್ಸ್‌ಪ್ರೆಸ್ ರೈಲುಗಳು ಬ್ಯಾಡರಹಳ್ಳಿ ಮತ್ತು ಹೆಜ್ಜಾಲಗಳಲ್ಲೂ ಸಹ ನಿಲ್ಲುವುವು

೩ ಮೈಸೂರು—ಚಾಮರಾಜನಗರ ಭಾಗ ಡೌನ್ ಟ್ರೈನ್

		ನಂ ೨೪	ನಂ ೪೨	ನಂ ೪೪	ನಂ ೨೮	ನಂ ೪೬
ಮೈಸೂರು	ಹೊರಡುವುದು	೬-೩೧	೯-೦೦	೧೪-೧೫	೧೭-೩೫	೨೦-೨
ನಂಜನಗೂಡು ಟೌ	ಸೇರುವುದು		೧೦-೪೦	೧೫-೧೦	—	೨೧ ೩
ಚಾಮರಾಜನಗರ	ಸೇರುವುದು	೯ ೩೦			೨೦-೧೫	

ಅಪ್ ಟ್ರೈನ್ಸ್

		ನಂ ೪೧	ನಂ ೨೩	ನಂ ೪೩	ನಂ ೨೫	ನಂ ೪೭	ನಂ ೩
ಚಾಮರಾಜನಗರ	ಹೊರಡುವುದು	—	೭-೦೦	—	೧೧ ೨೦		೧೮-೧
ನಂಜನಗೂಡು	ಹೊರಡುವುದು	೫ ೩೫		೧೧-೪೦		೧೭-೨೫	
ಮೈಸೂರು	ಸೇರುವುದು	೬-೩೦	೧೦-೦೦	೧೨-೧೦	೧೫ ೧೦	೧೮-೧೫	೨೧-೧

(ನಂ ೪೩ ಮತ್ತು ೪೪ ಪ್ರತ್ಯೇಕ ಷಟಲ್ ರೈಲುಗಳು)

೪ ಮೈಸೂರು—ಅರಸೀಕೆರೆ ಭಾಗ

ಡೌನ್ ಟ್ರೈನ್ಸ್		ನಂ ೪೮	ನಂ ೧೨	ಅಪ್ ಟ್ರೈನ್ಸ್		ನಂ ೪೯	ನಂ ೯
ಮೈಸೂರು	ಹೊರಡುವುದು	೧೨-೩೧	೧೮ ೪೫	ಅರಸೀಕೆರೆ	ಹೊರಡುವುದು	೮ ೧೧	೧೫-೨೦
ಅರಸೀಕೆರೆ	ಸೇರುವುದು	೧೯-೪೫	೦-೪೦	ಮೈಸೂರು	ಸೇರುವುದು	೧೫ ೨೦	೨೦-೨೦

ಶನಿವಾರ ಮತ್ತು ಭಾನುವಾರಗಳಲ್ಲಿ ಬೃಂದಾವನಕ್ಕೆ ಭೇಟಿ ಕೊಡುವವರ ಅನುಕೂಲಕ್ಕಾಗಿ ಮೈಸೂರು ಮತ್ತು ಕೃಷ್ಣರಾಜಸಾಗರ ಮಧ್ಯೆ ಓಡಾಡುವ ವಾರಾಂತ್ಯದ ವಿಶೇಷ ರೈಲುಗಳು ಕೆಳಗೆ ಕಾಣಿಸುವ ವೇಳೆಯಲ್ಲಿ ಚಲಿಸುವುವು

↑	೧೭-೨೦	ಹೊರಡುವುದು	ಮೈಸೂರು	ಸೇರುವುದು	೨೧ ೩೦	↓
	೧೭-೫೦	ಸೇರುವುದು	ಕೃಷ್ಣರಾಜಸಾಗರ	ಹೊರಡುವುದು	೨೧ ೦೦	

೫ ಬೆಂಗಳೂರು—ಹಿಂದೂಪುರ ಭಾಗ

ಡೌನ್ ಟ್ರೈನ್		ನಂ ೨	ಅಪ್ ಟ್ರೈನ್		ನಂ ೭೯	ನಂ
ಹಿಂದೂಪುರ	ಹೊರಡುವುದು	೩ ೩೦	ಬೆಂಗಳೂರು ಸಿಟಿ	ಹೊರಡುವುದು	೧೮-೦೦	೨೩
ಬೆಂಗಳೂರು ಸಿಟಿ	ಸೇರುವುದು	೧೭ ೪೫	ಹಿಂದೂಪುರ	ಸೇರುವುದು	೨೨ ೫೫	೧೯

೬ ಬೀರೂರು—ತಾಳಗುಪ್ಪ ಭಾಗ

ಡೌನ್ ಟ್ರೈನ್ಸ್		ನಂ ೧೮	ನಂ ೨೨		ಅಪ್ ಟ್ರೈನ್ಸ್		ನಂ ೧೯	ನಂ ೨೧	ನಂ
ಬೀರೂರು	ಹೊರಡುವುದು	೪ ೫೫	೮-೧೦	೧೭-೨೫	ತಾಳಗುಪ್ಪ	ಹೊ	೨-೩೦		೧೪-೬
ಶಿವಮೊಗ್ಗ ಟೌ	ಸೇ		೧೦ ೫೫		ಶಿವಮೊಗ್ಗ ಟೌ	ಹೊ		೧೭-೩೦	
ತಾಳಗುಪ್ಪ	ಸೇ	೧೨-೨೫		೨೩ ೪೫	ಬೀರೂರು	ಸೇ	೧೨-೫೫	೨೦ ೩೫	೨೩

ಈಗ ಹಾಲಿ ಬೆಂಗಳೂರು ಸಿಟಿ ಮತ್ತು ತಾಳಗುಪ್ಪ ಮಧ್ಯೆ ಇರುವ ಥ್ರೂ ಕ್ಯಾರೇಜು ನಂ ೩೩ ಮತ್ತು ೧೮ ಮತ್ತು ನಂ ೫೪ ರೈಲುಗಳ ಜೊತೆ ಮತ್ತೊಂದು ನ ... ತಂಗತಿ ಕ್ಯಾರೇಜು ಓಡಾಡುವುದು

೭ ಚಿಕ್ಕಜಾಜೂರು—ಚಿತ್ರದುರ್ಗ ಭಾಗ

ಡೌನ್ ಟ್ರೈನ್ಸ್		ನಂ ೩೭	ನಂ ೩೮	ನಂ ೪೦	ಅಪ್ ಟ್ರೈನ್ಸ್		ನಂ ೩೫	ನಂ ೩೭	ನಂ
ಚಿಕ್ಕಜಾಜೂರು	ಹೊರಡುವುದು	೭-೦೦	೧೧ ೫೦	೧೭ ೫೦	ಚಿತ್ರದುರ್ಗ	ಹೊ	೯ ೨೦	೧೫-೧೧	೧೯
ಚಿತ್ರದುರ್ಗ	ಸೇರುವುದು	೮ ೦	೧೩ ೦೫	೧೯ ೧೦	ಚಿಕ್ಕಜಾಜೂರು	ಸೇ	೧೦-೩೦	೧೬-೨೫	೨೦

೮ ಬೆಂಗಳೂರು ಸಿಟಿ—ಬೌರಿಂಗ್‌ಪೇಟೆ (N G) ಭಾಗ

ನಂ, ೬೨ ಮತ್ತು ೯೦ ನ್ಯಾರೋಗೇಜು ರೈಲುಗಳು ಬೆಂಗಳೂರನ್ನು ಕ್ರಮವಾಗಿ ೭ ೨೦ ಮತ್ತು ೧೭ ೦೦ ಘಂಟೆಗಳಲ್ಲಿ ಬಿಟ್ಟು ಹಾಲಿ ಈಗ ಸೇರುವ ಕಾಲಕ್ಕೆ ಸೇರುವುದು

ನಂ ೮೧ ನೇ ನ್ಯಾರೋಗೇಜು ಗಾಡಿಯು ಬೌರಿಂಗ್ ಪೇಟೆಯನ್ನು ೯ ಗಂಟೆಕ್ಕೆ ಬಿಟ್ಟು ಬೆಂಗಳೂರು ಸಿಟಿಯನ್ನು ಈಗಿನ ವೇಳೆಗೆ ಸೇರುವುದು

ಸೂಚನೆ—ವಿವರವಾದ ವೇಳಾಪಟ್ಟಿಯನ್ನು ರೈಲ್ವೆ ಸ್ಟೇಷನ್‌ಗಳಲ್ಲಿ ಪ್ರಕಟಿಸಲಾಗಿದೆ

ಮೈಸೂರು, ೧ ನೇ ಸೆಪ್ಟೆಂಬರ್ ೧೯೪೭ — ಟ್ರಾಫಿಕ್ ಮ್ಯಾನೇಜರ್

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೨೭-೯-೧೯೪೯ [ಸಂಚಿಕೆ ೫೧

- ಹೈದರಾಬಾದು - ಆಂಧ್ರದ ರಾಜಧಾನಿ?

ಮಾರ್ಕೆಟ್ ಪ್ರದರ್ಶನ

ಮೈಸೂರು ೨೭

ಪುರಸಭೆಯ ಆಶ್ರಯದಲ್ಲಿ ದೇವರಾಜಾ ಮಾರ್ಕೆಟ್ಟಿನಲ್ಲಿ ಏರ್ಪಡಿಸಿರುವ ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನದ ಪ್ರಾರಂಭೋತ್ಸವವನ್ನು ಈ ದಿನ ಬೆಳಿಗ್ಗೆ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ನೆರವೇರಿಸಿದರು

ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿದರು ಸಚಿವರು ಪ್ರಾರಂಭೋತ್ಸವವನ್ನು ನೆರವೇರಿಸಿ, ಇಂತಹ ಪ್ರದರ್ಶನಗಳ ಅವಶ್ಯಕತೆಯನ್ನು ತಿಳಿಸಿದರು ಮನೆಗಳಲ್ಲಿ ಹೆಚ್ಚು ತರಕಾರಿ ಮತ್ತು ಇತರ ಆಹಾರ ಪದಾರ್ಥಗಳನ್ನು ಬೆಳೆದವರಿಗೂ ಬಹುಮಾನಗಳನ್ನು ಕೊಡಲು ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು ಮೈಸೂರಿನ ಸೌಂದರ್ಯವನ್ನು ಕಾಪಾಡಿ ಕೊಂಡು ಬರುವ ಜೊತೆಗೆ ಈಗಿನ ಆಹಾರ ಅಭಾವವನ್ನು ನಿವಾರಿಸಲು ಸರ್ವ ಪ್ರಯತ್ನ ಮಾಡಬೇಕೆಂದೂ, ಅದಕ್ಕೆ ಸರ್ಕಾರದ ಅಧಿಕಾರಿ ವರ್ಗದವರು ಎಲ್ಲ ಸಹಕಾರವನ್ನು ನೀಡುವರೆಂದೂ ಅವರು ಹೇಳಿದರು

ಹಿಂದೀ ಸ್ಪರ್ಧೆ

ಮೈಸೂರು ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಗಾಂಧೀ ಜಯಂತಿ ಪ್ರಯುಕ್ತ ಹಿಂದೀ ಲೇಖನ ಮತ್ತು ಭಾಷಣಗಳ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಭಾಗವಹಿಸಲಿಚ್ಛಿಸುವವರು ೨ ಆಣೆ ಪ್ರವೇಶ ಶುಲ್ಕದೊಡನೆ ಹೆಸರುಗಳನ್ನು ಇದೇ ೩೦ನೇ ತಾ॥ನೊಳಗಾಗಿ ತಿಳಿಸಬೇಕೆಂದು ಕೋರಲಾಗಿದೆ

ದರಿದ್ರ ನಾರಾಯಣ ಸೇವೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಶ್ರೀ ಹೊಂಬಾಳೆ ರಂಗಯ್ಯನವರ ಕುಂಬಾರರ ವಿದ್ಯಾರ್ಥಿನಿಲಯದಲ್ಲಿ ಇದೇ ೩೦ನೇ ತಾ॥ ಶುಕ್ರವಾರ ಮಧ್ಯಾಹ್ನ ೧-೩೦ ಗಂಟೆಗೆ ದರಿದ್ರ ನಾರಾಯಣ ಸೇವೆಯು ನಡೆಯುವುದು

ಗಾಂಧೀ ಜಯಂತಿ

ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಶನಿವಾರ ಸಂಜೆ ಆದಿಕರ್ನಾಟಕಪುರ ಮಹಾ ಕಾಳಮ್ಮನ ಗುಡಿಯಲ್ಲಿ ಗಾಂಧೀ ಜಯಂತಿಯನ್ನು ಆಚರಿಸಲಾಯಿತು ಶ್ರೀ ವಿ ಪಿ ವೆಂಕಟಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಕೆ ಸಿದ್ದಯ್ಯ, ರಾಮಕೃಷ್ಣಯ್ಯ, ದೊಡ್ಡ ನಂಜಯ್ಯ, ಲಿಂಗಯ್ಯ, ಕೆ. ಶೇಷಾದ್ರಿ ಮುಂತಾದವರು ಭಾಷಣ ಮಾಡಿ ಹರಿಜನರ ಏಳಿಗೆಗಾಗಿ ಗಾಂಧೀಜಿಯವರು ಮಾಡಿರುವ ಕೆಲಸ ಕಾರ್ಯಗಳನ್ನು ವಿವರಿಸಿ ಅವರ ಮೇಲ್ಪಂಕ್ತಿಯಂತೆ ನಡೆದುಕೊಳ್ಳಬೇಕೆಂದು ಸೂಚಿಸಿದರು ವರಸೆ ಮತ್ತು ಪಟ್ಟಾ ವರಸೆಗಳು ನಡೆದುವು ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು

ತಿರುವಾಂಕೂರು, ಕೊಚ್ಚಿ ಅರಸರುಗಳ ರಾಜಧನ

ತಿರುವಾಂಕೂರು ಮತ್ತು ಕೊಚ್ಚಿ ಒಕ್ಕೂಟದ ರಾಜ ಪ್ರಮುಖರಾದ ತಿರುವಾಂಕೂರು ರಾಜರಿಗೆ ಒಟ್ಟು ೧೮ ಲಕ್ಷ ರೂ. ರಾಜಧನವನ್ನು ನಿಗದಿ ಮಾಡಲಾಗಿದೆಯೆಂದೂ ಕೊಚ್ಚಿ ಮಹಾರಾಜರಿಗೆ ೧೪ ಲಕ್ಷ ರೂ. ನಿಗದಿ ಮಾಡಲಾಗಿದೆಯೆಂದೂ ತಿಳಿದುಬಂದಿದೆ

ಪ್ರಭುಗಳನ್ನು ರಾಜಪ್ರಮುಖರೆಂದು ಕರೆಯುವುದು ಅಭಾಸ

ರಾಜ್ಯಾಂಗ ಸಭೆಯಲ್ಲಿ ಚರ್ಚೆ

ಮೈಸೂರು ೨೭

ನಿನ್ನೆ ರಾಜ್ಯಾಂಗ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಂಡಿಸಿದ ನಿರ್ಣಯದ ಮೇಲೆ ದೀರ್ಘ ಚರ್ಚೆ ನಡೆಯಿತು ಜನಾಬ್ ಒಬೈದುಲ್ ರಹಮಾನ್‌ರವರು ಮಾತನಾಡಿ, ಮೈಸೂರಿನ ವ್ಯಕ್ತಿತ್ವವನ್ನು ಉಳಿಸಿದುದಕ್ಕಾಗಿ ಮುಖ್ಯ ಮಂತ್ರಿಗಳನ್ನು ಅಭಿನಂದಿಸಿದರು

ಮೈಸೂರಿನ ರಾಜರನ್ನು ರಾಜ ಪ್ರಮುಖರೆಂದು ಕರೆಯುವುದು ಸರಿಯಲ್ಲವೆಂದು ಶ್ರೀ ಸಂಪಂಗಿ ರಾಮಯ್ಯನವರು ತಿಳಿಸಿದರು,

ಶ್ರೀ ಎಚ್ ಎಂ ಚನ್ನಬಸಪ್ಪನವರು– ಭಾರತ ಸರ್ಕಾರದವರು ಯಾವ ರೀತಿ ಹೇಳುತ್ತಾರೋ ಆ ರೀತಿ ಮುಕ್ಕ ಸಂಸ್ಥಾನಗಳವರು ನಡೆಯುತ್ತಿದ್ದಾರೆ ಆ ರೀತಿ ನಮ್ಮ ಸಂಸ್ಥಾನದವರು ಇರಬೇಕಾದ ಅವಶ್ಯಕತೆ ಇಲ್ಲ ಒಂದೇ ತರಹವಾದ ರಾಜ್ಯಾಂಗವಿರಬೇಕೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಭಾರತ ರಾಜ್ಯಾಂಗಕ್ಕೆ ಧಕ್ಕೆ ಬರದಂತೆ ನಮಗೆ ಬೇಕಾದ ರಾಜ್ಯಾಂಗವನ್ನು ರಚಿಸಿಕೊಳ್ಳಬಹುದು ಮಹಾರಾಜರನ್ನು ರಾಜರೆಂದು ಕರೆಯಬೇಕು ಶ್ರೇಷ್ಠ ನ್ಯಾಯಾಧೀಶರ ಮುಂದೆ ಮಹಾರಾಜರು ಪ್ರಮಾಣ ವಚನ ತೆಗೆದುಕೊಳ್ಳುವುದು ಅನುಚಿತ ಪ್ರಜೆಗಳ ಸಮ್ಮುಖದಲ್ಲಿ ಅದನ್ನು ತೆಗೆದುಕೊಳ್ಳಬಹುದು ರಾಜಪ್ರಮುಖರಿಗೆ ಮೈಸೂರಿನ ಮಹಾರಾಜರನ್ನು ಹೋಲಿಸುವುದು ಸರಿಯಲ್ಲ ಪರಂಪರಾಗತ ಸಂಪ್ರದಾಯದ ಪಕ್ಷವನ್ನು ರಕ್ಷಿಸಬೇಕು ಮಹಾರಾಜರ ಮೇಲೆ ಭಾರತದ ರಾಷ್ಟ್ರಪತಿ ಹತೋಟಿ ಇರಕೂಡದು.

ಶ್ರೀ ಎಂ ಎಸ್ ಜೋಯಿಸರು– ರಾಜ್ಯಾಧ್ಯಕ್ಷರ ಅಧಿಕಾರವನ್ನು ಹೆಚ್ಚು ಹೆಚ್ಚಿಸಲು ಸಾಧ್ಯವಿಲ್ಲ ಅವರು ಪ್ರಜೆಗಳಿಂದ ಚುನಾಯಿತರಾಗುವುದರಿಂದ ಅವರಿಗೆ ಅಧಿಕಾರವಿರಬೇಕು. ರಾಜ ಪ್ರಮುಖರೆಂದು ಕರೆಯುವುದರಿಂದ ಯಾವ ಅಪಾಯವೂ ಇರುವುದಿಲ್ಲ ನ್ಯಾಯಾಂಗಕ್ಕೆ ಎಲ್ಲರೂ ತಲೆ ಬಾಗಲೇ ಬೇಕು ಆದ್ದರಿಂದ ಶ್ರೇಷ್ಠ ನ್ಯಾಯಾಧೀಶರ ಮುಂದೆ ಪ್ರಮಾಣ ವಚನ ತೆಗೆದ ಕೊಳ್ಳುವುದರಿಂದ ತಪ್ಪೇನೂ ಇಲ್ಲ ಭಾರತದ ರಿಪಬ್ಲಿಕ್ಕಿನ ರಾಜ್ಯಾಂಗವನ್ನು ಜ್ಞಾಪಕದಲ್ಲಿಟ್ಟುಕೊಂಡು ಹೊಸ ವ್ಯವಸ್ಥೆಯ ದೃಷ್ಟಿಯಿಂದ ಸೂಚಿಸಿರುವ ಸಲಹೆಗಳನ್ನು ಒಪ್ಪಿಕೊಳ್ಳುವುದು ಸಾಧುವಾಗಿದೆ

ಶ್ರೀ ಎಚ್ ಎಂ ಚನ್ನಬಸಪ್ಪನವರು ಒಂದು ಕ್ರಿಯಾ ಲೋಪವನ್ನೆತ್ತಿ, ಹಿಂದೆ ಸಭೆಯವರ ಮೂಲೋದ್ದೇಶ ನಿರ್ಣಯವನ್ನು ಅಂಗೀಕರಿಸಿರುವಾಗ ಶಾಸನ ಬದ್ಧ ರಾಜತ್ವಕ್ಕೆ ಮತ್ತು ನಿರ್ಣಯಕ್ಕೆ ಧಕ್ಕೆ ಒದಗುವಂತಹ ಸೂಚನೆಗಳನ್ನು ಒಪ್ಪುವುದು ಸಾಧ್ಯವಿಲ್ಲವೆಂದು ತಿಳಿಸಿದರು

ರಾಜಪ್ರಮುಖ ಸ್ಥಾನವು ಶಾಸನ ಬದ್ಧ ರಾಜತ್ವಕ್ಕೆ ವಿರೋಧವಲ್ಲವೆಂದು ಅಧ್ಯಕ್ಷರು ತಿಳಿಸಿ, ಕ್ರಿಯಾ ಲೋಪವನ್ನು ತಳ್ಳಿಹಾಕಿದರು

ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ೩೫ ಕೋಟಿ ಜನಗಳಿಗಾಗಿ ಇರುವ ಭಾರತ ರಾಜ್ಯಾಂಗ ಸಭೆಯು ದ ಒಂದು ಕರಡು ಪ್ರತಿಯನ್ನು ಈ ಸಭೆಗೆ ಪರಿಶೀಲನೆಗಾಗಿ ಕಳುಹಿಸಿರುವುದು ಇತಿಹಾಸದಲ್ಲೇ ಒಂದು ವಿಶೇಷವಾದುದೆಂದು ತಿಳಿಸಿದರು ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರಿನ ಪ್ರತಿನಿಧಿಗಳು ಇದ್ದರೂ, ಅದನ್ನು ಇಲ್ಲಿನ ಪರಿಶೀಲನೆಗೆ ಕಳುಹಿಸಿರುವುದರಿಂದ ಅದನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕು ರಾಜವಂಶಕ್ಕೆ ಎಲ್ಲ ಗೌರವಗಳೂ ಸಲ್ಲಬೇಕು ರಾಜರಿಗೆ ಮಾತ್ರ ರಾಜಾಧ್ಯಕ್ಷ ಅಥವಾ ರಾಜ್ಯಾಧ್ಯಕ್ಷ ಎಂಬ ಹೆಸರು ಇಟ್ಟುಕೊಳ್ಳಬಹುದು ಎಂದು ಸೂಚಿಸಿದರು

ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ಪ್ರಾಂತಗಳ ಗವರ್ನರರ ಅಧಿಕಾರವು ಶಾಸನ ಸಭೆಗಳಿಗೆ ಒಳಪಟ್ಟಿರುವಾಗ ಸಂಸ್ಥಾನಗಳ ಮೇಲೆ ಅಧ್ಯಕ್ಷರಿಗೆ ಅಧಿಕಾರವಿರುವುದು ಯಾವ ನ್ಯಾಯವೆಂದು ಕೇಳಿದರು

ಶ್ರೀ ಕೆ ಟಿ ಭಾಷ್ಯಂ ಅವರು - ಮೈಸೂರು ರಾಜರನ್ನು ರಾಜಪ್ರಮುಖರೆಂದು ಕರೆಯುವುದು ಅಭಾಸ ಮಿಕ್ಕ ಸಣ್ಣ ಸಣ್ಣ ರಾಜರುಗಳನ್ನು ಪ್ರಿನ್ಸ್ ಎಂದೂ ೬ ಜನ ಪ್ರಮುಖರನ್ನು ರೂಲರುಗಳೆಂದೂ ಕರೆಯಬಹುದು ಪರಂಪರಾಗತ ರಾಜತ್ವ ಉಳಿಯಬೇಕು ಮತ್ತು ಮಹಾರಾಜರ ಘನತೆಯನ್ನು ಕಾಪಾಡಬೇಕು ರಾಜಪ್ರಮುಖರ ಅಧಿಕಾರ ನಿಗದಿ ಮಾಡುವುದನ್ನು

ಬ್ರಿಟನ್ನಿನಲ್ಲಿ ಅಣು ಬಾಂಬು ತಯಾರಿ

ಬ್ರಿಟನ್ನು ಸದ್ಯದಲ್ಲಿಯೇ ಅಣುಬಾಂಬುಗಳನ್ನು ತಯಾರಿಸುವುದೆಂದೂ, ಸೆಲ್ಲಫೀಲ್ಡ್ ಎಂಬಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲಾಗಿದೆಯೆಂದೂ ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ

ಮದರಾಸಿನಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಬಹಿಷ್ಕಾರ

ಮದರಾಸ್ ಪ್ರಾಂತ್ಯದಲ್ಲಿ ಕಮ್ಯೂನಿಸ್ಟರು ಹಿಂಸಾತ್ಮಕ ಕಾರ್ಯಗಳಲ್ಲಿ ತೊಡಗಿ ದೇಶದ ಶಾಂತಿ ಮತ್ತು ನೆಮ್ಮದಿಗೆ ಧಕ್ಕೆ ತರುವವರಾಗಿರುವುದರಿಂದ ಅವರ ಪಕ್ಷವನ್ನು ನ್ಯಾಯಬಾಹಿರ ಸಂಸ್ಥೆಯೆಂದು ಸರ್ಕಾರದವರು ಘೋಷಿಸಿರುತ್ತಾರೆ

ಆಂಧ್ರ ಪ್ರಾಂತಕ್ಕೆ ಹೈದರಾಬಾದು ರಾಜಧಾನಿ

ಮದರಾಸು ಪ್ರಾಂತದ ಹನ್ನೊಂದು ತೆಲುಗು ಜಿಲ್ಲೆಗಳನ್ನೂ ಹೈದರಾಬಾದಿನ ತೆಲಂಗಾಣ್ಯ ಜಿಲ್ಲೆಗಳನ್ನೂ ಒಟ್ಟುಗೂಡಿಸಿ, ಕೂಡಲೇ ಆಂಧ್ರ ಪ್ರಾಂತ್ಯವನ್ನು ರಚಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ, ಹೀಗೆ ರಚಿತವಾಗುವ ಪ್ರಾಂತ್ಯಕ್ಕೆ ಹೈದರಾಬಾದ-ಸಿಕಂದರಾಬಾದನ್ನು ರಾಜಧಾನಿಯನ್ನಾಗಿ ಮಾಡಬೇಕೆಂದೂ ಸೂಚಿಸುವ ನಿರ್ಣಯವನ್ನು ಮದರಾಸು ಶಾಸನ ಸಭೆಯಲ್ಲಿ ಮಂಡಿಸಲು ಅದರ ಸದಸ್ಯರಾದ ಶ್ರೀ ಕೆ ಬ್ರಹ್ಮಾನಂದ ರೆಡ್ಡಿಯವರು ಮಂಡಿಸಬಿದ್ದಾರೆ

ಸಾರ್ವಜನಿಕ ವಿದ್ಯಾರ್ಥಿನಿಲಯ

ನೇಲ್ಕಂಡ ನಿಲಯದಲ್ಲಿ ಗಾಂಧಿ ಜಯಂತಿ ಪ್ರಯುಕ್ತ ಹರಿಜನ ಬಾಲಕರಿಗೆ ಸಿಹಿ ತಿಂಡಿಯನ್ನು ಮೊನ್ನೆ ದಿನ ಹಂಚಲಾಯಿತು ಅದೇ ದಿನ ಶ್ರೀಗಳಾದ ಟಿ ಸುಬ್ರಹ್ಮಣ್ಯಂ, ಎಂ ವಿ ರಾಮರಾಯರು ಮತ್ತು ಎಂ ಎಸ್ ಜೋಯಿಸರವರುಗಳು ನಿಲಯಕ್ಕೆ ಭೇಟಿ ಇತ್ತಿದ್ದರು

ಪ್ರಸಾರ ಭಾಷಣ

ನಾಳೆ ಬೆಳಿಗ್ಗೆ ೮-೧೫ ಗಂಟೆಗೆ ಆಕಾಶವಾಣಿಯಲ್ಲಿ ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಆಹಾರ ಉತ್ಪತ್ತಿಗಾಗಿ ನೀರು ಮತ್ತು ವಿದ್ಯುಚ್ಛಕ್ತಿಯ ಉಪಯೋಗ ಎಂಬ ವಿಷಯವಾಗಿ ಪ್ರಸಾರ ಭಾಷಣ ಮಾಡುವರು

ಸಂಸ್ಥಾನದ ಶಾಸನ ಸಭೆಗೆ ಬಿಡಬೇಕು ಬ್ರಿಟನ್ನಿನ ಭದ್ರತೆಗೆ ಅಲ್ಲಿನ ರಾಜತ್ವವೇ ಕಾರಣವಾಗಿದೆ

ಶ್ರೀ ಎಚ್ ಸಿ ದಾಸಪ್ಪನವರು ಮಾತನಾಡಿ, ಹಿಂದಿನಿಂದ ಅನುವಂಶಿಕವಾಗಿ ಬಂದಿರುವಂತೆ ಮಹಾರಾಜರೆಂದೆ ಕರೆಯಬೇಕೇ ಹೊರತು ರಾಜಪ್ರಮುಖರೆಂದು ಕರೆಯುವುದು ಸರಿಯಲ್ಲವೆಂದು ತಿಳಿಸಿದರು ... ರಾಜತ್ವಕ್ಕೆ ಕೊಟ್ಟಿರುವ ಭರವಸೆಯನ್ನು ... ಭಾರತ ಸರ್ಕಾರದವರು ಕೊಡಬೇಕು, ಪ್ರಜಾ ಪ್ರಭುತ್ವಕ್ಕೆ ಲೋಪ ಬರದಂತೆ ಈ ದಿನ ಪದ್ಧತಿಗಳನ್ನು ಅನುಸರಿಸಿಕೊಂಡು ಬರಬೇಕು ... ಯಾವ ರಾಜಾಂಗವು ನಮಗೆ ಬೇಕಾಗಿದ್ದ ಮುಖ್ಯವಾದ ಪ್ರಶ್ನೆ ... ವಿವಿಧವಾದ ರೀತಿಗಳಿಂದ ಕೂಡಿದ ರಾಜ್ಯಾಂಗವನ್ನು ರಚಿಸಬೇಕು ಎಂದು ತಿಳಿಸಿದರು.

ಬದನವಾಳ ಬಡತನವೇ ?

ರಾಜಧಾನಿಯಲ್ಲಿ ನಡೆಯುತ್ತಿರುವ ಪ್ರದರ್ಶನಾಲಯದಲ್ಲಿ ಬದನವಾಳ ಖಾದೀ ಕೇಂದ್ರಕ್ಕೆ ವಿಶಾಲವಾದ ಸ್ಥಳವು ದೊರೆಯುತ್ತಿತ್ತು. ಖಾದೀ ಸ್ಟಾಲಂತೂ ರಮ್ಯವಾಗಿ ಕಂಗೊಳಿಸುತ್ತ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಇಡೀ ದೇಶದ ಹೆಮ್ಮೆಯ ಹೆಗ್ಗುರುತಾಗಿತ್ತು. ಖಾದೀ ಧಾರಿಗಳಿಗೂ ಮತ್ತು ಕಾಂಗ್ರೆಸ್ಸಿನವರಿಗೂ ತವರು ಮನೆಯಂತಿತ್ತು ದೇಶ ವಿದೇಶಗಳಲ್ಲೂ ಸುವರ್ಣ ಪದಕಗಳು ಬರುತ್ತಿದ್ದವು.

ಹಿಂದಿದ್ದ ಮಹಾರಾಜರ ಆಶ್ರಯ ದೊರಕಿ ಅಧಿಕಾರಿಗಳು ಪೂರ್ಣ ಬೆಂಬಲ ಕೊಟ್ಟು ಶ್ರಮಿಸುತ್ತಿದ್ದರು. ಈ ಖಾದಿ ನೆರಳಿನಲ್ಲಿ ಮಹಾತ್ಮರನ್ನೂ ಮುಗ್ಗಗೊಳಿಸುತ್ತಿದ್ದರು

ಈಗ ನಡೆಯುತ್ತಿರುವ ವಸ್ತುಪ್ರದರ್ಶನದಲ್ಲಿ ಕೈಗಾರಿಕಾ ಇಲಾಖೆಯ ನಾನಾ ಬಾಬಿನ ಕಲಸುಮೇಲೋಗರದ ಸ್ಟಾಲೊಂದಿದೆ ಅದರಲ್ಲಿ ಸಣ್ಣ ಬಾಗಿಲಿನ ಮೇಲೆ ಒಂದು ಅಡಿ ಜಾಗದಲ್ಲಿ ಎರಡು ಬಟ್ಟೆಗಳನ್ನಿಟ್ಟು ಸಣ್ಣ ಬೋರ್ಡ್ ಹಾಕಿದ್ದಾರೆ. ಇದು ಬದನವಾಳ ಬಡತನವೋ! ಖಾದಿಯ ಕೊಲೆಯೋ! ತಿಳಿಯುವದಾಗಿದೆ.

ಬಾಪೂಜೀಯವರನ್ನು ಕಳೆದುಕೊಂಡ ನವ್ಯದ ಕಾಲದಲ್ಲಿ. ಮೂದಲೀ ಮೈಸೂರಿನ ಪ್ರದರ್ಶನದಲ್ಲಿ ಖಾದಿಗೆ ಈ ಅನಾದರವ ಗಬಾರದಾಗಿತ್ತು ಇಲಾಖೆಯ ಹೊಣೆ

SRI GAYATHRI

Dasara Special Programme
on 27th & 28th September
DAILY THREE SHOWS
20th Century
BLACK SWAN
(TECHNICOLOUR)

Morning Shows 27th, 28th
ANNA & THE
KING OF SIAM

ಮೈಸೂರು ಸಿಟಿ ರೇಷನಿಂಗ್ ಆಫೀಸ್
ತಾ|| ೧೬ ೯—೯—೪೯.

ನೋಟಿಫಿಕೇಷನ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪ್ಪೋ, ವರ್ತಕರ ಡಿಪ್ಪೋ ಸಹಕಾರ ಸಂಘಗಳು ಮತ್ತು ಹೋಟೆಲ್ಲು ಸಹ ಗೋಡೌನ್‍ಗಳು ಈ ಕೆಳಗೆ ... [illegible]

[illegible]

[illegible]

ಡಿ. ಜಿ. ... [illegible]
[illegible]
ಮೈಸೂರು ಸಿಟಿ

ಅಣು ಶಸ್ತ್ರಗಳ ನಿಷೇಧ

ಅಣು ಶಕ್ತಿಯಿಂದ ಉತ್ಪನ್ನವಾಗುವ ಶಸ್ತ್ರಗಳ ಮೇಲೆ ನಿರ್ಬಂಧ ಹಾಕಬೇಕೆಂದು ಪ್ರಪಂಚ ಸಂಸ್ಥೆಯ ಮುಂದೆ ರಷ್ಯದ ಪ್ರತಿನಿಧಿ ಆಂಡ್ರಿ ವಿಷಿಸ್ಕಿಯವರು ವಾದ ಹೂಡಿದ್ದಾರೆ ಅದಲ್ಲದೆ ಶಾಂತಿಯನ್ನು ಭದ್ರಪಡಿಸುವ ಸಲುವಾಗಿ ಪಂಚ ಮಹಾರಾಷ್ಟ್ರಗಳ ನಾಯಕರು ಒಪ್ಪಂದಕ್ಕೆ ಬರಬೇಕೆಂದು ತಿಳಿಸಿರುತ್ತಾರೆ

ಗೌರ್ನರರ ಪತ್ನಿಯಿಂದ ವಾರಕ್ಕೆ ೧ ದಿನ ಉಪವಾಸ

ವಾರಕ್ಕೆ ಒಂದು ದಿನದ ಪಡಿತರವನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಲು ಪೂರ್ವ ಪಂಜಾಬ್ ಗೌರ್ನರರ ಪತ್ನಿ ಶ್ರೀಮತಿ ತ್ರಿವೇದಿಯವರು ನಿರ್ಧರಿಸಿದ್ದಾರೆ

ಗಾರರು ಈ ದೃಷ್ಟಿಯಿಂದ ಪಾಠಗಳು ಯುತ್ತಿಸಬೇಕು

ಈಗಲೇ ಹೀಗಾದರೆ ಇನ್ನು ರೆಯಾರ್ ಬಬ್ಬು ಬಂದಮೇಲೆ ಬದನವಾಳ ಭವಿಷ್ಯವೇನು? ಎಲ್ಲರೂ ಈ ಕಡೆಗೆ ಗಮನ ಕೊಟ್ಟು ದೇಶಕ್ಕಾಗಿ ಈ ಕೇಂದ್ರವನ್ನು ಉಳಿಸಿ ಬೆಳಸಬೇಕೆಂದು ನನ್ನ ಪ್ರಾರ್ಥನೆ. ನುಡಿಯಂತೆ ನಡೆಯಬೇಕು

ಎ. ಎನ್. ಸೂರ್ಯನಾರಾಯಣ ರಾವ್.
ಮುನಿಸಿಪಲ್ ಕೌನ್ಸಿಲರ್

ರಾಜಕಮಲ್,
ಮೈ ಸೂ ರು
23-9-49ರಿಂದ ಅಪೋಲೊ 3ನೇ ವಾರ
ಮಹಾತ್ಮಾ ಪಿಕ್ಚರ್ಸ್‌ರವರ

ನಾಗಕನ್ನಿಕಾ
(ಕನ್ನಡ)
ಪ್ರತಿ ದಿನ ಮೂರು ಪ್ರದರ್ಶನಗಳು
ಪಾತ್ರ:- ವೀರಭದ್ರಪ್ಪ, ಜಯಶ್ರೀ, ಬಳ್ಳಾರಿ ರತ್ನಮಾಲಾ

-:ಬೆಳಗಿನ ಪ್ರದರ್ಶನಗಳು:-
25-9-49 ನೇ ಭಾನುವಾರದಿಂದ
5 ದಿನಗಳು ಮಾತ್ರ

* ಕಿಸ್ಮತ್ *
(ಹಿಂದಿ - ಹೊಸ ಮುದ್ರಣ)
ಅಶೋಕ ಕುಮಾರ್, ಮುಮ್ತಾಜ್ ಶಾಂತಿ ನಟಿತ್ತ

ಮಕ್ಕಳ
ಲಿವರ್ ಕಾಯಿಲೆ -
ಪರೀಕ್ಷೆ
• ಪರಿಶೀಲನೆ
• ಸಲಹ ಸೂಚನೆ
ಳವುಗಳಿಗೆ
[illegible] ಹೌಸ್,
ಶಾಸ್ತ್ರಿ ರಾಜಪುರ, ಮೈಸೂರು
([illegible])
ವೇಳೆ- ಬೆಳಗ್ಗೆ ೭ ರಿಂದ ೧೦
[illegible] ದಿನಗಳು ಮಾತ್ರ

ಕೃ ಷ್ಣ ಜ ಯಂ ತಿ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ೨೧ ನೇ ತಾ|| ಶ್ರೀ ಕೃಷ್ಣ ಜಯಂತಿಯು ಶ್ರೀ ಆರ್ ಎ. ಸಂಪತ್ಕುಮಾರಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮೂಹಿಕ ಪ್ರಾರ್ಥನೆ, ಶ್ರೀಮತಿ ಕೆ. ಆರ್. ನಾಗರತ್ನರವರಿಂದ ಸಂಗೀತಗಳಾದನಂತರ, ಸಂಘದ ಅಧ್ಯಕ್ಷಿಣಿ ಶ್ರೀಮತಿ ವಿ. ಎಸ್ ತಂಗಮ್ಮನವರು ಸ್ವಾಗತಬಯಸಿದರು ಅಧ್ಯಕ್ಷರು ಭಾಷಣ ಮಾಡಿ ಧರ್ಮಸ್ಥಾಪನೆಗಾಗಿ ಅವತರಿಸಿದ ಶ್ರೀ ಕೃಷ್ಣ ಪರಮಾತ್ಮನ ಜಯಂತ್ಯುತ್ಸವದ ಆವಶ್ಯಕತೆಯನ್ನು ತಿಳಿಸಿದರು.

ವಿ ವಾ ಹ ಮ ಹೋ ತ್ಸ ವ

ರಾಜಧಾನಿಯ ಗವರ್ನಮೆಂಟ್ ಸರ್ಟಿಫೈಡ್ ಆಡಿಟರವರೂ ಮತ್ತು ಒ ಲಿಂ ಪಿಯಾ ಟಾಕೀಸಿನ ಮ್ಯಾನೇಜರರೂ ಆದ ಶ್ರೀ ಬಿ ಶೇಷಗಿರಿರಾಯರು ತಮ್ಮ ಪುತ್ರಿ ಚಿ|| ಸೌ|| ರಮಾಬಾಯಿಯನ್ನ ಶ್ರೀ|| ಆನವಟ್ಟಿ ರಾಮರಾಯರ ಪುತ್ರರಾದ ಶ್ರೀ|| ನಾಗರಾಜರಾಯರಿಗೆ ಕೊಟ್ಟು ನೆನ್ನೆ ದಿನ ವಿವಾಹವನ್ನು ನೆರವೇರಿಸಿದರು

ದ ಸ ರಾ ಸ್ಪೆ ಷ ಲ್
ರ ತ್ನ ಕಂ ಬ ಳಿ ಗ ಳು
ರೂ 1-8-0 ಇಂದ 8-8-0
ಚಾ ಮು ಸಾ ರ್ ಕಂ ಪ ನಿ
ಎಗ್ಜಿಬಿಷನ್ ಸ್ಟಾಲ್ ನಂ C. 13

ದೇವಿ ಯಜ್ಞ, ರುದ್ರ, ಸ್ವಾಹಾ[illegible]

ರಾಜಧಾನಿಯ ರಾಮಾನುಜ ರಸ್ತೆ ೬ನೇ ನಂಬರ್ ಮನೆಯಲ್ಲಿ ಕ[illegible] ಪಾಡ್ಯಮಿಯಿಂದ ಬರುವ ತಿಂಗಳು ೧[illegible] ತಾರೀಖಿನವರೆಗೆ ಶ್ರೀ ರಾಜರಾಜೇಶ್ವ[illegible] ನ್ನಿಧಾನದಲ್ಲಿ ಶ್ರೀ ದೇವಿ ಯಜ್ಞ [illegible] ಸ್ವಾಹಾಕಾರ ಪ್ರಯುಕ್ತ ಬೆಳಿಗ್ಗೆ [illegible] ಗೆ ಕುಮಾರಿ ಪೂಜೆ, ರಾಜಾ ಶಿ[illegible] ಮುಂತಾದುವುಗಳು ನಡೆಯು[illegible] ೬ ನೇ ತಾ|| ದೇವಿಯಜ್ಞಾಂಗ[illegible] ವನ ಪೂರ್ಣಾಹುತಿಯೂ ಮಾರನೇ[illegible] ರುದ್ರ ಸ್ವಾಹಾಕಾರ ಪೂರ್ಣಾಹುತಿ[illegible] ಜರುಗುವುವು

ಸುಖಾಗಮನ! ಸುಖಾಗ[illegible]
ಎಂ. ಸಿ. ಎಲ್. ಪತಿಯವ[illegible]
ನ್ಯೂಹೋಟೆಲ್, ಬೆಂಗಳೂ[ರು]
ವಿದ್ಯಾರ್ಥಿಗಳಿಗೂ, ವರ್ತಕರಿಗೂ, [illegible] ರುಗಳಿಗೂ, ಸಂಸಾರಿಗಳಿಗೂ, ಬಾಹ್ಯ[illegible] ರುಚಿಯಾದ ಊಟ ಮತ್ತು ಉಪಾಹಾರ[illegible] ಆಧುನಿಕ ಸಲಕರಣೆಗಳಿರುವ [illegible] ಗಳಿಗೂ ರಿಯಾಯಿತಿ ದರ, ಬೋರ್ಡಿಂಗ್ ತ್ತು ಲಾಡ್ಜಿಂಗ್ ಸೇರಿ ೧ ದಿನಕ್ಕೆ ೧ [illegible] ರೂ. ೪ ಮತ್ತು ಮೇಲ್ಪಟ್ಟು ಜಿ. ಎ. ಸ್ಟ್ರೀ[ಟ್] ರೋಡ್ (ರೇಸ್ ಕೋರ್ಸ್ ಹತ್ತಿರ) ಬೆಂಗಳೂರು,

Edited, printed and [pub-]lished by A. R. Nagar[...] at Sadhvi Press, D.Subb[...] Road, Mysore.

MYSORE CITY MUNICIPALITY

NOTICE

Sealed tenders will be received by the Munic[ipal] Engineer for the following works on 3-10-1949 up[to] 4 p m

1. Constructing a tunnel by the side of the Tem[po]rary sheep slaughter house in Jalapuri.
2. Constructing burnt stone "L" Shaped drain [be]hind Door No. 2133 Turballi Street, Ma[...] Mohalla
3. Constructing burnt stone "L" Shaped dr[ain] behind Door No. 3453 1st Edigha, Ma[...] Mohalla.
4. Providing Teak Wood ventilators and asbe[stos] plain sheet sun-shades to the newly conver[ted] jutka stand into shops in V. V Mohalla
5. Pitching and grouting the bed of main dra[in in] the lower reaches and approaches to Sub[ba]rayanakere, Chamaraja Mohalla.
6. Repairing the storm water drain running in fr[ont] of Masjid-E-Azam, Asoka Road
7. Repairing the existing Band Stand in Peo[ple's] park Lashkar Mohalla.
8. For repairing the Lambani Toddy shop [in] Mandi Mohalla.

Each tender must be accompanied with a ch[allan] for having remitted Rs 90, Rs 73, Rs 37, Rs 28, R[s] Rs 77, Rs 115 and Rs 50 for items 1 to 8 respecti[vely]. For full particulars please see the detailed not[ifica]tion on the office notice board

(Sd) V. K. Mukun[...]
Municipal Engine[er]

❋ ಜಪ್ಪಿನಾದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸು, ಅಲಾರಂ ಸೇಫ್. ಸುಲಭವಾದ ಬೆಲೆ. ❋
ದಿ ಸಿಟಿ ಇಂಜಿನಿಯರಿಂಗ್ ವರ್ಕ್ಸ್ ೨೩೬೭, ಹಳ್ಳದಕೇರಿ ಮತ್ತು ಜೀವನರಾಯನ ಕಟ್ಟೆ (ಸ್ಟಾಲ್ ನಂ ೧೧) ಮೈಸೂರು

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨೮-೯-೧೯೪೯ [ಸಂಚಿಕೆ ೫೨

ಸರ್ಕಾರಿ ಸಂಸ್ಥೆಗಳಲ್ಲೆಲ್ಲ ಮಹಾತ್ಮರ ಭಾವ ಚಿತ್ರ

ಮಹಾರಾಜರ ಸ್ಥಾನಮಾನಗಳ ಪ್ರಶ್ನೆ

ರಾಜ್ಯಾಂಗ ಸಭೆಯಲ್ಲಿ ಚರ್ಚೆ

ಮೈಸೂರು ೨೮

ಸಂಸ್ಥಾನದ ರಾಜ್ಯಾಂಗ ಸಭೆಯ ಅಧಿವೇಶನವು ನಿನ್ನೆ ಮಧ್ಯಾಹ್ನ ಚರ್ಚೆ ಮುಂದುವರಿಸಿತು

ಶ್ರೀ ಹುಚ್ಚೇಗೌಡರು ಮಾತನಾಡಿ, ರಾಜ್ಯಾಂಗವನ್ನು ರಚಿಸುವ ಬದಲು ಕೆಲ ತಿದ್ದುಪಡಿಗಳನ್ನು ಅನುಮೋದಿಸಬೇಕಾದ ಸ್ಥಿತಿಯು ಬಂದಿರುವುದು ವಿಷಾದಕರವೆಂದು ತಿಳಿಸಿದರು ರಕ್ಷಣೆ, ಸಂಚಾರ ಮತ್ತು ವಿದೇಶಾಂಗ ವಿಷಯಗಳನ್ನು ಬಿಟ್ಟು ಮಿಕ್ಕ ವಿಚಾರಗಳಲ್ಲಿ ರಾಜ್ಯಾಂಗವನ್ನು ರಚಿಸಲು ಮೈಸೂರಿನವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೆಂದು ರಾಜ ಘೋಷಣೆಯಾಗಿದೆ ನಾವು ರಾಜ್ಯಾಂಗವನ್ನು ರಚಿಸಿ ಶ್ರೀಮನ್ಮಹಾರಾಜರಿಗೆ ಒಪ್ಪಿಸಬೇಕಾಗಿದೆ ಆದರೆ ಈಗಿನ ಪರಿಸ್ಥಿತಿಯು ತಿದ್ದುಪಡಿಗಳನ್ನು ಮಾತ್ರ ಅನುಮೋದಿಸಬೇಕಾಗಿರುವುದರಿಂದ ಅದು ಅಕ್ರಮವಾಗಿದೆ ತಿದ್ದುಪಡಿಗಳನ್ನು ಒಪ್ಪುವುದರಿಂದ ಮೈಸೂರಿಗೆ ಕುಂದಕ ಬರುವುದು ಇವುಗಳಿಂದ ಸಂಸ್ಥಾನಕ್ಕೆ ಅನುಕೂಲವಿಲ್ಲ ಎಲ್ಲರಿಗೂ ಇದರಿಂದ ಸಂಪೂರ್ಣ ನಿರಾಶೆಯುಂಟಾಗಿದೆ- ಎಂದು ಹೇಳಿದರು

ಶ್ರೀ ಎ ಭೀಮಪ್ಪ ನಾಯಕರು– ಮೈಸೂರಿನ ವೈಶಿಷ್ಟ್ಯ ಮತ್ತು ವ್ಯಕ್ತಿತ್ವವನ್ನುಳಿಸಲು ಪ್ರಯತ್ನಪಟ್ಟುದಕ್ಕೆ ಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ತಿದ್ದುಪಡಿಗಳಿಂದ ಮೈಸೂರಿನ ಸ್ಥಾನಮಾನಗಳು ಹೆಚ್ಚಿವೆ ಗೌರವ ದೊರೆತಿದೆ. ಮಹಾರಾಜರನ್ನು ತೆಗೆಯುವುದಕ್ಕೂ ಪ್ರಯತ್ನಪಟ್ಟಿಲ್ಲ ಭಾರತಕ್ಕೆ ದಕ್ಕಿರದಂತಹ ಮತ್ತು ಮೈಸೂರನ್ನು ಭಾರತದ ಮಟ್ಟಕ್ಕೆ ಏರಿಸುವಂತಹ ರಾಜ್ಯಾಂಗವನ್ನು ಸಂಸ್ಥಾನ ಶಾಸಕರು ಸೃಷ್ಟಿ ಮಾಡಿದ್ದಾರೆ. ಮಹಾರಾಜರೆಂದು ಕರೆಯಲು ಯಾರ ಅಡ್ಡಿಯೂ ಇಲ್ಲ ಒಂದೆರಡು ತಿದ್ದುಪಡಿಗಳು ಹೊರತು ಮಿಕ್ಕವುಗಳು ಭಾರತದ ಮತ್ತು ಮೈಸೂರಿನ ಹಿತದೃಷ್ಟಿಯಿಂದ ಸೂಕ್ತವಾಗಿವೆ ಶ್ರೀಮನ್ಮಹಾರಾಜರವರ ಸ್ಥಾನಮಾನ ಅಥವ ಸಂಸ್ಥೆಯ ವ್ಯಕ್ತಿತ್ವಕ್ಕೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ

ಜನಾಬ್ ಹನೀಫ್.– ನಾವು ಭಾರತದ ಅಂಗವೆಂಬ ಅಂಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಸಂಸ್ಥಾನಗಳಲ್ಲಿ ಹಿಂದೆ ಹೋರಾಟನಡೆಸಿದುದು ರಾಜರುಗಳ ಅಧಿಕಾರವನ್ನು ಜನರ ಕೈಗೆ ಪಡೆಯುವುದಕ್ಕಾಗಿ. ಆ ಹೋರಾಟದಿಂದಲೇ ಸಂಸ್ಥಾನಗಳಲ್ಲಿ ಬದಲಾವಣೆಗಳು ಉಂಟಾಗಿವೆ ಪ್ರತ್ಯೇಕ ಭಾವನೆಗಳಿಂದ ದೇಶಕ್ಕೆ ಹಾನಿಯುಂಟಾಗುವುದು ನಾವು ಭಾರತದ ಅಂಗವಾದುದರಿಂದ ಮೈಸೂರಿಗೆ ಪ್ರತ್ಯೇಕ ಸ್ಥಾನಮಾನವಿರುವುದು ಸಾಧ್ಯವಿಲ್ಲ ಮೈಸೂರು ಸಂಸ್ಥಾನವು ಇತರ ಸಂಸ್ಥಾನಗಳಿಗಿಂತ ಯಾವ ದೊಡ್ಡ ಸ್ಥಾನವನ್ನೂ ಪಡೆಯಲು ಸಾಧ್ಯವಿಲ್ಲ ಎನ್ನುತ್ತಾ, ರಾಜರು ಅಥವಾ ರಾಜಪ್ರಮುಖರುಗಳು ಮುಂದೆ ಜನರ ಆಕಾಂಕ್ಷೆಯಂತೆ ನಡೆಯಬೇಕು. ಪ್ರಜಾಪ್ರಭುತ್ವ ರಿಪಬ್ಲಿಕ್ಕಿಗೆ ಮಿಕ್ಕ ಸಂಸ್ಥಾನಗಳು ಒಪ್ಪಿದುವಾಗ ಮೈಸೂರು ಸಹ ಅದನ್ನು ಒಪ್ಪಬೇಕು ವಂಶಪಾರಂಪರ್ಯ ರಾಜತ್ವವು ಮುಂದೆ ಇರುವುದೇ– ಎಂಬುದು ಸಂದೇಹಾಸ್ಪದವಾಗಿದೆ

ಹಿಂದೆ ಮೈಸೂರಿನಲ್ಲಿ ಯಾವ ತತ್ವಕ್ಕಾಗಿ ಹೋರಾಟ ನಡೆಸಿದರೋ ಅಂತಹವರು ಈಗ ಪಲ್ಲಿ ಹೊಡೆದಿದ್ದಾರೆ.

ಶ್ರೀ ಎಚ್. ಸಿ ದಾಸಪ್ಪನವರು ಕ್ರಿಯಾಲೋಪವನ್ನೆತ್ತಿ ಪಲ್ಟಿ ಹೊಡೆದಿರುವರೆಂದು ಹೇಳಿರುವುದು ಸರಿಯಾದುದಲ್ಲವೆಂದೂ, ಮೂಲೋದ್ದೇಶನಿರ್ಣಯಕ್ಕೆ ಅನುಸಾರವಾಗಿ ನಡೆಯಲಾಗುತ್ತಿದೆಯೆಂದೂ ಸದಸ್ಯರು ಅದಕ್ಕೆ ವಿರೋಧವಾಗಿ ಮಾತನಾಡುತ್ತಿದ್ದಾರೆಂದೂ ಹೇಳಿದರು

ಅಧ್ಯಕ್ಷರು ರೂಲಿಂಗ್ ಕೊಟ್ಟು, ಮೂಲೋದ್ದೇಶ ನಿರ್ಣಯ ದಲ್ಲಿ ಅನೇಕ ಬದಲಾವಣೆಯಾಗಿವೆ ಎಂದೂ, ಸದಸ್ಯರು ವಂಶಪಾರಂಪರ್ಯ ರಾಜತ್ವದ ವಿಚಾರವಾಗಿ ಮಾತನಾಡುತ್ತಿದ್ದಾರೆಂದೂ, ಯಾವ ಕ್ರಿಯಾಲೋಪವೂ ಇಲ್ಲವೆಂದೂ ತಿಳಿಸಿದರು

ಜನಾಬ ಹನೀಫ್‌ರವರು ತಮ್ಮ ಭಾಷಣವನ್ನು ಮುಂದುವರಿಸಿ, ಶ್ರೀಮನ್ಮಹಾರಾಜರವರು ಇರಕೂಡದೆಂದು ನಾವು ಹೇಳಲಿಲ್ಲವೆಂದು ತಿಳಿಸಿದರು ದೇಶದಲ್ಲಿ ಆಗುತ್ತಿರುವ ಬದಲಾವಣೆಗೆ ಅನುಗುಣವಾಗಿ ಅನುಸರಿಸಿಕೊಂಡು ಹೋಗಬೇಕು. ಭಾರತದ ಐಕ್ಯತೆಗೆ ಧಕ್ಕೆ ಬರುವಂತಹ ರೀತಿಯಲ್ಲಿ ಯಾರೂ ವರ್ತಿಸಕೂಡದು ನಾವು ಭಾರತದ ಅಂಗವಾಗಿರಲು ಮತ್ತು ಒಂದೇ ರಾಜ್ಯಾಂಗದಲ್ಲಿರಲು ಒಪ್ಪಿರುವಾಗ ರಾಜಪ್ರಮುಖ, ಮಹಾರಾಜ ಎಂಬ ಪದಗಳಿಗಾಗಿ ಏತಕ್ಕೆ ವಾದ ಮಾಡಬೇಕು? ಮೈಸೂರಿನ ಅಸ್ತಿತ್ವವು ಮೈಸೂರಿನ ಕೈಲಿಲ್ಲ ಅದು ಕೇಂದ್ರದವರಲ್ಲಿದೆ ಭಾಷಾವಾರು ಪ್ರಾಂತ್ಯಗಳು ಆಗಬೇಕೆಂದು ಹಲವರು ಹೇಳುತ್ತಿದ್ದಾರೆ ಮತ್ತು ಕನ್ನಡ ಪ್ರಾಂತ್ಯಗಳನ್ನೆಲ್ಲವನ್ನೂ ಒಟ್ಟಿಗೆ ಸೇರಿಸಬೇಕೆಂದು ಪ್ರಚಾರ ನಡೆಯುತ್ತಿದೆ ಆದುದರಿಂದ ಮೈಸೂರಿನ ಅಸ್ತಿತ್ವವು ಉಳಿಯುವುದು ಅಥವಾ ಬಿಡುವುದು ಕೇಂದ್ರಕ್ಕೆ ಸೇರಿದೆ ಕೇಂದ್ರದಲ್ಲಿ ಭದ್ರವಾದ ಸರ್ಕಾರವಿರಬೇಕು ಮೈಸೂರಿಗೂ ಮತ್ತು ಭಾರತಕ್ಕೂ ಶ್ರೇಯಸ್ಸುಂಟಾಗುವಂತೆ ರಾಜ್ಯಾಂಗವು ರಚಿತವಾಗಲಿ- ಎಂದು ತಿಳಿಸಿದರು

ಶ್ರೀ ಡಿ ಎಂ ಸಿದ್ದಯ್ಯನವರು ಮಾತನಾಡಿ, ಶಾಸನ ಒಪ್ಪ ರಾಜತ್ವವನ್ನು ಉಳಿಸಿಕೊಳ್ಳುವುದು ತಮ್ಮ ಮೊದಲನೆಯ ಕರ್ತವ್ಯವೆಂದು ತಿಳಿಸಿದರು ಎಲ್ಲ ತಿದ್ದುಪಡಿಗಳನ್ನೂ ಒಪ್ಪಲು ಸಾಧ್ಯವಿಲ್ಲ ರಾಜಪ್ರಮುಖರೆಂದು ಕರೆಯುವುದು ಅನುಚಿತ ...

ಎಲ್ಲ ಸರ್ಕಾರಿ ಸಂಸ್ಥೆಗಳಲ್ಲೂ ಗಾಂಧೀಜಿ ಚಿತ್ರ

ಎಲ್ಲ ಸರ್ಕಾರಿ ಸಂಸ್ಥೆಗಳಲ್ಲೂ ಶ್ರೀಮನ್ಮಹಾರಾಜರವರ ಚಿತ್ರದೊಡನೆ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಇಡಬೇಕೆಂತೆ ಮೈಸೂರು ಸರ್ಕಾರದವರು ಸದ್ಯದಲ್ಲಿಯೇ ಆಜ್ಞೆಯನ್ನು ಹೊರಡಿಸಲಿರುವರೆಂದು ತಿಳಿದುಬಂದಿದೆ

ವಿಮಾನದಲ್ಲಿ ಸಭೆ

ವಿಶ್ವಸಂಸ್ಥೆಯ ಮುಖ್ಯ ಅಧಿಕಾರಿಸ್ಥಾನಗಳಿಗೆ ಹೆಚ್ಚು ಮಹಿಳೆಯರನ್ನು ನೇಮಿಸಬೇಕೆಂದು ಒತ್ತಾಯ ಪಡಿಸಲು ೪೦ ಜನ ಮಹಿಳೆಯರು ಒಂದು ವಿಮಾನದಲ್ಲಿ ಕುಳಿತು ವಿಶ್ವಸಂಸ್ಥೆಯ ಕೇಂದ್ರದ ಮೇಲೆ ಹಾರಾಡಿದರೆಂದು ವರದಿಯಾಗಿದೆ

ವ್ಯಕ್ತಿರ ಮೇಲ್ವಿಚಾರಣೆ ಇರಕೂಡದು ಎಂದು ಹೇಳಿದರು

ಶ್ರೀ ಗೋವಿಂದ ರೆಡ್ಡಿಯವರು ಮಾತನಾಡಿ, ಸಂಸ್ಥಾನ ರಾಜರುಗಳು ರಾಜಪ್ರಮುಖರೆಂದು ನೇಮಿಸಲ್ಪಡುವುದು ಸರಿಯಾಗಿದೆಯೆಂದೂ, ಶ್ರೀಮನ್ಮಹಾರಾಜರವರ ಸ್ಥಾನಮಾನಕ್ಕೆ ಧಕ್ಕೆ ಬರಕೂಡದೆಂದೂ, ಆದರೆ ವಂಶಪರಂಪರೆಯ ವಿಚಾರವನ್ನು ಪ್ರಕೃತದಲ್ಲಿ ನಿರ್ಧರಿಸದೆ ಮುಂದಕ್ಕೆ ಬಿಡಬೇಕೆಂದೂ ಸಂಸ್ಥಾನದ ಶಾಸನ ಸಭೆಗೆ ರಾಜಪ್ರಮುಖರ ಭಕ್ತದ ಮೇಲೆ ಹತೋಟಿ ಇರಬೇಕೆಂದೂ ತಿಳಿಸಿದರು

ಶ್ರೀ ಎಸ್ ರಂಗರಾಮಯ್ಯ ಸಂಸ್ಥಾನದಲ್ಲಿ ರಾಜರಿರ ಬೇಕೆ ಬೇಡವೆ ಎಂಬ ಮಾತಕ್ಕೆ ನಾವು ಹೊಣೆಗಾರರಾಗಿಲ್ಲ ಅವರು ವಂಶಪಾರಂಪರ್ಯವಾದ ಗವರ್ನರಂತೆ ಇರುವರಲ್ಲದೇ ಮಹಾರಾಜರೆಂಬ ಹೆಸರನ್ನು ಉಳಿಸಿಕೊಳ್ಳುವುದರಿಂದ ರಾಜತ್ವಾಭಿಲಾಷಿ ಹಲವರಿಗೆ ಸಮಾಧಾನವಾಗುವುದು ಮತ್ತು ಒಂದು ಮರ್ಯಾದೆಯುಳ್ಳ ಸ್ಥಾನ ಎಂಬ ಅಭಿಪ್ರಾಯವು ಇರುವುದು ನಮ್ಮ ಸಂಸ್ಥಾನವು ಮಹಾರಾಜರ ನಾಯಕತ್ವದ ಆದರ್ಶ ರಾಜ್ಯವಾಗ ಬೇಕೆಂದು ತೋರಿಸೋಣ

ಶ್ರೀ ಕೆ ಹನುಮಂತಪ್ಪ ... ರಾಜರ ... ಒಡೆಯರು ... ವಂಶ ... ಬೇಕು ಕೇಂದ್ರ ಸರ್ಕಾರವು ನಮ್ಮ ಸ್ಥಿತಿ ... ಸರ್ಕಾರ ನಮ್ಮ ಪ್ರಗತಿಗಾಗಿದೆ ... ಎಲ್ಲವನ್ನು ಮಾಡುವರು ರಾಜ ...

ಮಾರ್ಕೆಟ್ ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

ಮೈಸೂರು ೨೮

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿ ಏರ್ಪಡಿಸಿರುವ ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನದ ಬಹುಮಾನ ವಿನಿಯೋಗವನ್ನು ಇಂದಿನ ಬೆಳಿಗ್ಗೆ ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ. ಭಾಷ್ಯಂರವರು ಮಾಡಿದರು ಪ್ರಾರ್ಥನೆಯಾದನಂತರ ಪುರಸಭಾ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಸ್ವಾಗತ ಭಾಷಣಮಾಡಿದರು. ಸಚಿವರು ೧೦೦ಕ್ಕೆ ಮೇಲ್ಪಟ್ಟು ಬಹುಮಾನಗಳನ್ನು ಉತ್ತಮ ಸ್ಪರ್ಧಿಗಳಿಗೆ ಹಂಚಿದರು. ಅವರು ಭಾಷಣ ಮಾಡಿ, ತರಕಾರಿ ಮತ್ತು ಫಲ ಪುಷ್ಪಗಳನ್ನು ಬೆಳೆಯುವವರಿಗೆ ಪ್ರೋತ್ಸಾಹ ಕೊಡುವುದರ ಜೊತೆಗೆ ಕ್ಯಾನಿಂಗ್ (ರಕ್ಷಣೆ) ಕೈಗಾರಿಕೆಗೆ ಹೆಚ್ಚು ಗಮನ ಕೊಡಬೇಕೆಂದು ತಿಳಿಸಿದರು ಮೈಸೂರು ನಗರವು ಭರತ ಖಂಡದಲ್ಲೆಲ್ಲಾ ಅತ್ಯಂತ ಸುಂದರವಾದುದೆಂದು ಹೆಸರುಗೊಂಡಿದೆ ಪುರಾತನ ಕಾಲದಲ್ಲಿ ಹಿಮಾಲಯ ಪರ್ವತವೂ ಗಂಗಾನದಿಯೂ ಸಮುದ್ರದ ಅಡಿಯಲ್ಲಿ ಸೇರಿ ಹೋಗಿದ್ದವೆಂದೂ, ಆದರೆ ಮೈಸೂರು ಸಂಸ್ಥಾನವು ಮಾತ್ರ ಮೇಲುಗಡೆಯೇ ಇತ್ತೆಂದೂ ಒಂದು ಪುರಾಣದಲ್ಲಿ ತಾವು ಓದಿರುವುದಾಗಿಯೂ ಶ್ರೀ ಭಾಷ್ಯಂರವರು ತಿಳಿಸಿ ಇಂತಹ ಶ್ರೇಷ್ಠವಾದ ದೇಶಕ್ಕೆ ಸೇರಿದ ಪ್ರಜೆಗಳೆಲ್ಲರೂ ಪ್ರಪಂಚಕ್ಕೆ ಮಾದರಿಯಾಗಬೇಕೆಂದು ಕೋರಿದರು.

ಶ್ರೀ ಟಿ. ನರಸಿಂಹಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ, ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

○ ದಸರಾ ಪ್ರಯುಕ್ತ ಅಕ್ಟೋಬರ್ ಮಾಹೆಯ ಮೊದಲನೇ ವಾರದ ರೇಷನ್ನನ್ನು ಕಾರ್ಡ್ ಹೋಲ್ಡರುಗಳು ನಾಳೆ ದಿನ ಪಡೆಯಬಹುದೆಂದು ತಿಳಿಸಲಾಗಿದೆ

ಜನರಿಗೆ ಬಿಳಿ ಅಕ್ಕಿ ಕೊಡಬೇಕು

ಅಕ್ಕಿಯ ದಾಸ್ತಾನು ಇಲ್ಲವೆಂದು ಆನೆಗಳಿಗೆ ಕೊಡುತ್ತಿದ್ದ ನುಚ್ಚು ಸ್ವಚ್ಛ ಮಾಡಿದಲ್ಲಿ ೭ ಔನ್ಸಿಗೆ ೪ ಔನ್ಸ್ ಆಗುವ ಅಕ್ಕಿಯನ್ನು ರಾಜಧಾನಿಯ ಜನರಿಗೆ ಕೊಟ್ಟು ಸದಸ್ಯ ... ಬರುತ್ತಿರುವ ಜನರಿಗೆ ಕೊಡುವ ತಕ್ಕರು ಸಣ್ಣ ಅಕ್ಕಿಯನ್ನು ಕೊಡಬೇಕಾಗಿರುವುದಕ್ಕೆ ಕಾರಣವೇನು? ಇಂತಹ ಕಷ್ಟಕಾಲದಲ್ಲಿ ಹೋಟೇಲುಗಳು ಮತ್ತು ಇತರ ಪ್ರಸಂಗಗಳಿಗೆ ಧಾರಾಳವಾಗಿ ಕೊಟ್ಟಿರುವುದು ಏಕೆ? ಸರ್ಕಾರದವರು ಹಸಿದ ಜನರಿಗೆ ಆಹಾರವನ್ನು ಒದಗಿಸಬೇಕಾದುದು ಅವರ ಕರ್ತವ್ಯ ... ಹೋಟೆಲುಗಳ ... ಗಳನ್ನು ಸರ್ಕಾರದವರು ನಮ್ಮಕ್ಕೆ ... ಒಪ್ಪಿ ... ವಾಸಮಾಡುವವರುಗಳಿಗೆ ಹೆಚ್ಚು ಗಮನ ಕೊಡಬೇಕು ಎಂದು ನಗರದ ರೇಷನ್ ಕಾರ್ಡ್ ಹೋಲ್ಡರುಗಳ ಸಂಘದ ಕಾರ್ಯದರ್ಶಿ ಶ್ರೀ ಎಸ್ ನರಸಿಂಹಯ್ಯನವರು ತಿಳಿಸುತ್ತಾರೆ

ಮಹಾರಾಜರವರು ... ಎಲ್ಲಾ ... ರಾಜರಿಗೆ ... ಕೊಟ್ಟಿರುವ ... ವಾಗಿರುವುದು ... ಪ್ರಜೆಗಳೆಲ್ಲ ...

ರಾಷ್ಟ್ರದ ಪುನರುದ್ಧಾರದಲ್ಲಿ ಸಹಕಾರದ ಅವಶ್ಯಕತೆ

ಸಹಕಾರ ಸಮ್ಮೇಳನದಲ್ಲಿ ಟಿ. ಮರಿಯಪ್ಪನವರ ಭಾಷಣ

ಮೈಸೂರು ೨೮

ಸಂಸ್ಥಾನದ ಬಳಸುವವರ ಸಹಕಾರ ಸಂಸ್ಥೆಗಳ ಸಮ್ಮೇಳನವು ಈ ದಿನ ಬೆಳಿಗ್ಗೆ ಸಹಕಾರ ಭವನದಲ್ಲಿ ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ಪ್ರಾರ್ಥನೆಯಾದ ನಂತರ ಸಹಕಾರ ಪ್ರಚಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾಸರವರು ಸ್ವಾಗತ ಭಾಷಣ ಮಾಡಿ, ದೇಶದಲ್ಲಿ ಬಳಸುವವರ ಸಹಕಾರ ಸಂಘಗಳ ಪ್ರಾಮುಖ್ಯತೆಯನ್ನು ವಿವರಿಸಿದರು ಯುದ್ಧದ ಪರಿಣಾಮದಿಂದ ಹಲವಾರು ದುರಂತಗಳಿಗೆ ಈಡಾಗಿರುವ ರಾಷ್ಟ್ರವನ್ನು ಅಂಧಕಾರದಿಂದ ಪಾರುಮಾಡಲು ಸಹಕಾರದಿಂದಲೇ ಸಾಧ್ಯವೆಂದೂ, ಭಾರತವು ಬೇಗನೆ ಸಹಕಾರ ರಾಷ್ಟ್ರವಾಗಲೆಂದೂ ಆಶಿಸಿದರು

ಶ್ರೀ ಟಿ ಮರಿಯಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಈ ರೀತಿ ತಿಳಿಸಿದರು.- ' ರಾಜಕೀಯ ಸ್ವಾತಂತ್ರ ಬಂದ ಮೇಲೆ ಅದನ್ನು ಭದ್ರಪಡಿಸಿಕೊಂಡು ಭವಿಷ್ಯವನ್ನು ಆಶಾದಾಯಕವನ್ನಾಗಿ ಮಾಡಿಕೊಳ್ಳಬೇಕು ಪಡೆದು ಉತ್ಪತ್ತಿಮಾಡಿದ ಸಂಪತ್ತನ್ನು ಸರಿಯಾದ ಮಾರ್ಗದಲ್ಲಿ ವಿಲೇವಾರಿ ಮಾಡುವ ಜವಾಬ್ದಾರಿಯು ಸಹಕಾರ ಸಂಸ್ಥೆಗಳ ಮೇಲೆ ಬಿದ್ದಿದೆ ಬ್ರಿಟಿಷರು ದೇಶವನ್ನು ಹೀರಿ ಸಪ್ಪೆಮಾಡಿಬಿಟ್ಟು ಹೋಗಿದ್ದಾರೆ ಜನಜೀವನದ ಪ್ರತಿಯೊಂದು ಅಂಶವನ್ನೂ ಅಭಿವೃದ್ಧಿ ಪಡಿಸಬೇಕಾಗಿದೆ ಅನೇಕ ವರ್ಷಗಳ ಪರಕೀಯರ ಆಡಳಿತದಿಂದ ಕ್ಷೀಣವಾಗಿರುವ ದೇಶವನ್ನು ಪುನರುದ್ಧಾರ ಮಾಡುವ ಜವಾಬ್ದಾರಿಯು ಸಹಕಾರ ಸಂಸ್ಥೆಗಳ ಮೇಲೆ ಬಿದ್ದಿದೆ. ರಾಜಕೀಯ ಸ್ವಾತಂತ್ರ ಬಂದಿದ್ದರೂ ಆರ್ಥಿಕ ಸ್ವಾತಂತ್ರ ಬಂದಿಲ್ಲ ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಸಹಕಾರ ಸಂಸ್ಥೆಯವರು ಮಾರ್ಗದರ್ಶಕರಾಗಬೇಕು. ಪ್ರಜೆಗಳೆಲ್ಲರೂ ಸಹಕಾರದಲ್ಲಿ ಸಂಪೂರ್ಣವಾಗಿ ಸೇರಿಲ್ಲದಿರುವುದು ವಿಷಾದಕರ ಇನ್ನು ೧೦ ವರ್ಷಗಳಲ್ಲಿ ಸಹಕಾರ ಚಳುವಳಿಯು ಸುವ್ಯವಸ್ಥೆಯಾಗಿ, ಅದು ವಾಣಿಜ್ಯ ಮತ್ತು ಉತ್ಪತ್ತಿ ನಡೆಸುವ ಸಂಘಗಳಾಗಬೇಕು ರಾಜಕೀಯ ಕ್ಷೇತ್ರಕ್ಕಿಂತಲೂ ಸಹಕಾರದಲ್ಲಿ ಹೆಚ್ಚು ಸೇವೆ ಮಾಡಲು ಅವಕಾಶವಿದೆ ಪಟ್ಟಣ ಮತ್ತು ಗ್ರಾಮಾಂತರ ವ್ಯವಹಾರಗಳೆಲ್ಲವೂ ಸಹಕಾರ ಸಂಸ್ಥೆಗಳ ಮೂಲಕವೇ ನಡೆಯುವಂತಾಗಬೇಕು ಲಕ್ಷಾಂತರ ನೌಕರರು, ಕಾರ್ಮಿಕರಿಗೂ ಮತ್ತು ನಾಗರೀಕರಿಗೂ ಸಂಪರ್ಕ ಕಲ್ಪಿಸಲು ಸಹಕಾರ ಒಂದು ಮಾರ್ಗ ಸಹಕಾರದ ಬೆಳವಣಿಗೆ, ಅವುಗಳ ಸುವ್ಯವಸ್ಥೆ ಮತ್ತು ಇತರ ವಿಷಯಗಳ ಬಗ್ಗೆ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆ,

ಘಟಿಕೋತ್ಸವ 1949

ವಿಶ್ವವಿದ್ಯಾಲಯದ ಪದವಿಯನ್ನು ಕೊಡುವ ಸಲುವಾಗಿ ವಿಶ್ವವಿದ್ಯಾಲಯದ ಮುವತ್ತನೆಯ ವಾರ್ಷಿಕ ಘಟಿಕೋತ್ಸವವು ೧೯೪೯ನೇ ನವಂಬರ್ ೩ನೇ ತಾರೀಖು ಗುರುವಾರ ನಡೆಯುವುದೆಂದು ಈ ಮೂಲಕ ಪ್ರಚುರ ಪಡಿಸಲಾಗಿದೆ

ಘಟಿಕೋತ್ಸವ ಸಮಾರಂಭದ ವೇಳೆ ಮತ್ತು ಸ್ಥಳವನ್ನು ಇನ್ನುರಲ್ಲೇ ಪ್ರಕಟಿಸಲಾಗುವುದು

ವಿದ್ಯಾರ್ಥಿಗಳು ಕಳೆದ ಬಾರಿ ಡಿಗ್ರಿ ಪರೀಕ್ಷೆಗೆ ಓದಿದ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಘಟಿಕೋತ್ಸವದ ಪ್ರವೇಶಕ್ಕೆ ಅರ್ಜಿ ನಮೂನೆಗಳನ್ನು (ಖುದ್ದಾಗಿಯೂ ಮತ್ತು ಗೈರು ಹಾಜರಿನಲ್ಲಿಯೂ) ಪಡೆಯಬಹುದು.

ಘಟಿಕೋತ್ಸವಕ್ಕೆ ಪ್ರವೇಶದ ಅರ್ಜಿಗಳು ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರಿಗೆ ೧೯೪೯ ನೇ ಅಕ್ಟೋಬರ್ ೮ನೇ ತಾರೀಖು ಶನಿವಾರದ ದಿನ ಅಥವಾ ಅದಕ್ಕೆ ಮುಂಚೆ ತಲುಪುವಂತೆ ಕಳುಹಿಸಬೇಕು

ಸಿ. ರಂಗನಾಥಾರ್.
ರಿಜಿಸ್ಟ್ರಾರ್.

ಮೈಸೂರು ಸಿಟಿ ರೇಷನಿಂಗ್ ಆಫೀಸ್
ತಾ|| ೧೭-೯-೧೯೪೯.

ನೋಟಿಫಿಕೇಷನ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ವರ್ತಕರ ಡಿಪೋ ಸಹಕಾರ ಸಂಘಗಳು ಮತ್ತು ಮೊಹಲ್ಲಾ ಸಪ್ಲೈ ಗೋಡೋನುಗಳು ಸಹ ಈ ಕೆಳಗೆ ಕಂಡ ತಾರೀಖುಗಳಲ್ಲಿ ವ್ಯಾಪಾರಕ್ಕೆ ಮುಚ್ಚಲ್ಪಡುತ್ತವೆ

೩೦-೯-೪೯ ಶುಕ್ರವಾರ, ಮಹಾನವಮಿ ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ

೧-೧೦-೪೯ ಶನಿವಾರ ವಿಜಯದಶಮಿ ಪ್ರಯುಕ್ತ ಮಧ್ಯಾಹ್ನ ಮಾತ್ರ ಮುಚ್ಚಲ್ಪಡುತ್ತವೆ

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

ಆಹಾರದ ಆಜ್ಞೆ ಉಲ್ಲಂಘಿಸಿದುದಕ್ಕೆ ದಂಡ

ಆಹಾರ ಹತೋಟಿ ಆಜ್ಞೆಗೆ ವಿರುದ್ಧವಾಗಿ ೪ ಬಗೆಯ ಆಹಾರ ಪದಾರ್ಥಗಳನ್ನು ನಾಟಕ ಮಂಡಲಿಯವರಿಗೆ ಕೊಟ್ಟರೆಂಬ ಆಪಾದನೆಯ ಮೇಲೆ ಬೊಂಬಾಯಿನ ಹೋಟೇಲ್ ಡೈರೆಕ್ಟರವರಿಗೆ ೮೦ ಸಾವಿರ ರೂ ದಂಡ ೬ ತಿಂಗಳ ಕಠಿಣ ಶಿಕ್ಷೆ, ಹೋಟೇಲ್ ಮ್ಯಾನೇಜರಿಗೆ ೨೦ ಸಾವಿರ ರೂ ದಂಡ ಮತ್ತು ೩ ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ

ಭವಿಷ್ಯ

೧೨ ವರ್ಷದ ನಿಮ್ಮ ರಾಶಿಯ ಭವಿಷ್ಯ ಪುಸ್ತಕ

ಇಂದೇ ತರಿಸಿಕೊಳ್ಳಿರಿ ೧೫-೪-೧೯೫೦ ರಿಂದ ೧೩-೪-೧೯೬೨ರ ವರೆಗಿನ ಸಕಲ ಯೋಗಾದಿಗಳನ್ನೊಳಗೊಂಡಿದೆ ಉದ್ಯೋಗ-ಕೃಷಿ-ವ್ಯಾಪಾರಾದಿಗಳಲ್ಲಿನ ವೃದ್ಧಿಕ್ಷೀಣತೆಯ ವಿಚಾರವನ್ನೂ ತೀರ್ಥಯಾತ್ರೆ, ವಿವಾಹ, ಸಂತಾನ, ಧನ ಭಾಗ್ಯಾಭಿವೃದ್ಧಿಯ ಕಾಲವನ್ನೂ ಅನರ್ಥ ಸಂಕಟ ವಿಪತ್ತು ಋಣರೋಗಾದಿ ಪರಿಹಾರ ಕ್ರಮಗಳೊಂದಿಗೆ ಒದಗಿರುವವು ಇದರಿಂದ ತಮ್ಮ ಕಷ್ಟಗಳನ್ನು ತಿಳಿದು ಕಡಿಮೆ ಮಾಡಿಕೊಂಡು ಸುಖಭಾಗ್ಯಾದಿ ಶುಭಯೋಗವನ್ನು ಹೆಚ್ಚಿಸಿಕೊಳ್ಳಿರಿ ರೂ ೪ ಪೋಸ್ಟೇಜು ೦-೭-೦

ನಿಮ್ಮ ರಾಶಿಯನ್ನು ತಿಳಿಸಿ ಬರೆಯಿರಿ

ಎನ್. ವೆಂಕಟಸುಬ್ಬ ಪುತ್ರನ್,
ಶ್ರೀ ವೇಂಕಟೇಶ್ವರ ಜ್ಯೋತಿಷಾಲಯ, ಉಡುಪಿ
ಈ ಪುಸ್ತಕ ದೊರೆಯುವ ಸ್ಥಳ:
ಮೈಸೂರು ದಸರ ಎಕ್ಸಿಬಿಷನ್
ಜೀವಣ್ಣರಾಯನ ಕಟ್ಟೆ
ಸ್ಟಾಲ್ ನಂ ೩ರಲ್ಲಿ ದೊರೆಯುತ್ತೆ.

ಮನೆ ಬಿಕರಿಗೆ ಇದೆ

ಬೆಲೆ ರೂ. 10,000

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿಗೆ ಬಹಳ ಸಮೀಪದಲ್ಲಿ ದೇವಾಂಗದ ಮೊಹಲ್ಲ ಶ್ರೀರಾಮ ಪೇಟೆ ರಾಜಾ... ಕನ ಗರಡಿ ಬಳಿ ಇರುವ ಮುನ್ಸಿಪಲ್ ಡೋರ್ ನಂ ೭೭೭ನೇ ನಂಬರು ... ಉಳ್ಳ ಹೆಂಚಿನ ಹಲಗು ಸೇರುವ ... ಮನೆ ಖರೀದಿಗೆ ಪಡೆಯಲು ಇಷ್ಟ ಪಡುವವರು ೧ ವಾರದೊಳಗೆ ಈ ಕೆಳಗಿನವರಿಂದ ಪಡೆಯಬಹುದು

ಎಸ್. ಆರ್. ನರಹರಿ ...
ಪಬ್ಲಿಕ್ ಸರ್ವೆಂಟ್, ಕ್ವಾರ್ಟರ್ ...
ಮೈಸೂರು

ಮಕ್ಕಳ

- ಲಿವರ್ ಕಾಯಿಲೆ

ಸಮರ್ಪಕ

ಪರಿಶೀಲನೆ

ಸಲಹೆ ಸೂಚನೆ.

ಇವುಗಳಿಗೆ

ಲಿವರ್ ಹೌಸ

ಮಕ್ಕಳ ಲಿವರ್‌ಹೌಸ್

ಸಿಲೋನ್

ಲಿವರ್‌ಹೌಸ್, ಮೈಸೂರು

ಚಾಮರಾಜಪುರಂ, ಮೈಸೂರು
(ಕೋ ಆಪರೇಟಿವ್ ಸೊಸೈಟಿ ...)

ವೇಳೆ.- ಬೆಳಗ್ಗೆ ೮ ರಿಂದ ...

ತಾ|| ...ರಿಂದ ೩ ದಿನಗಳು ...

Edited, printed and [pub]lished by A. R. Naga[...] at Sadhvi Press, D Su[...] Road, Mysore.

ಪ್ರಭುದೇವಾ ಟಾಕೀಸ್

29-9-49 ರಿಂದ ಅಮೋಘ 2ನೇ ವಾರ

- ಮಾಯಾ ಕುದುರೆ

[ತಮಿಳು]

ಪ್ರತಿ ದಿನ ಮೂರು ಆಟಗಳು

ಮ್ಯಾಟಿನಿ 2-30, ಮೊದಲನೇ ಆಟ 6-30 ಮತ್ತು ರಾತ್ರಿ 10 ಕ್ಕೆ

ಪಾತ್ರ:- ಅಂಜಲೀ ದೇವಿ ಮತ್ತು ನಾಗೇಶ್ವರರಾವ್

ದಸರಾ ಹಬ್ಬಕ್ಕಾಗಿ ತರಿಸಿದೆ.

ಪ್ಲೈನ್ ಮತ್ತು ಪ್ರಿಂಟೆಡ್ ಸಿಲ್ಕ್ಸ್, ಜಾರ್ಜೆಟ್ಸ್, ಕ್ರೇಪ್ಸ್, ಸಾಟಿನ್ಸ್, ಲಿನನ್ಸ್, ಪುಲ್ಲೆ ಪೀಸ್ ಗೂಡ್ಸ್ ಮತ್ತು ನವೀನ ಮಾದರಿಯ

ಮೈಸೂರು ಸಿಲ್ಕ್ಸ್ ಮತ್ತು ಸೀರೆಗಳು

(ನಮ್ಮ ಕಾರ್ಖಾನೆಯಲ್ಲಿ ಸ್ಪೆಷಲ್ಲಾಗಿ ತಯಾರಿಸಿದ್ದು)

ಇಂದೇ ಭೇಟಿ ಕೊಡಿ

ಮೈಸೂರು ದಸರಾ ಎಗ್ಸಿಬಿಷನ್, ಬ್ಲಾಕ್ ೪ ಸ್ಟಾಲ್ಸ್ 18 19

ಚಂದೀರಾವರ್ ಬ್ರದರ್ಸ್,

ಮಹಾತ್ಮ ಗಾಂಧಿ ರೋಡು, ಬೆಂಗಳೂರು.

ಶ್ರೀ ಗಣೇಶಾ ಟಾಕೀಸ್

ತಾ|| 30-9-49ರಿಂದ ಪ್ರತಿ ದಿನ ೩ ಪ್ರದರ್ಶನಗಳು

ಸುರಭಿ ಪಿಕ್ಚರ್ಸ್‌ರವರ ಅತ್ಯುತ್ತಮ ಪೌರಾಣಿಕ ಕನ್ನಡ ಚಿತ್ರ

ಭಕ್ತ ಕುಂಬಾರ

ಶ್ರೀಮಾನ್ ಹೊನ್ನಪ್ಪ ಭಾಗವತರ್, ಲಕ್ಷ್ಮೀಬಾಯಿ, ಸುಂದರಿಬಾಯಿ ಜಯಶ್ರೀ ರವರು ನಟಿಸಿರುವ ...

ಫೋ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೯-೯-೧೯೪೯ [ಸಂಚಿಕೆ ೫೩

ಇಂಜನಿಯರಿಂಗ್ ಇಲಾಖೆಯ ಪುನರ್‍ರಚನೆ

ರಾಜರನ್ನು ರೂಲರ್ ಎಂದು ಕರೆಯಬೇಕು

ರಾಜ್ಯಾಂಗ ಸಭೆಯಲ್ಲಿ ತಿದ್ದುಪಡಿಗೆ ಅಂಗೀಕಾರ

ಮೈಸೂರು ೨೯

ನಿನ್ನೆ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನದ ರಾಜ್ಯಾಂಗವು ಭಾರತದ ರಾಜ್ಯಾಂಗಕ್ಕೆ ಅಡಕವಾಗಬೇಕೆಂಬ ನಿರ್ಣಯದ ಮೇಲೆ ಚರ್ಚೆ ಮುಂದುವರಿಯಿತು.

ಶ್ರೀ ಎಂ. ವಿ. ರಾಮರಾಯರು ಮಾತನಾಡಿ, ಸಂಸ್ಥಾನ ಶಾಖೆಯವರು ಸೂಚಿಸಿರುವ ತಿದ್ದುಪಡಿಗಳನ್ನು ಸ್ವಾಗತಿಸಿದರು. ರಾಜಪ್ರಮುಖರೆಂದು ಹೆಸರಿಟ್ಟಿರುವುದು ಅರ್ಥವಾದುದು. ರಾಜಪ್ರಮುಖರು ಶ್ರೀ ನ್ಯಾಯಾಧೀಶರ ಮುಂದೆ ಪ್ರಮಾಣ ವಚನ ತೆಗೆದುಕೊಳ್ಳುವುದು ಅವರ ಸ್ಥಾನಕ್ಕೆ ಅಪಮಾನವೆಂದು ಹೇಳುವುದು ಸರಿಯಲ್ಲ. ಶ್ರೇಷ್ಠ ನ್ಯಾಯಾಧೀಶರು ಧರ್ಮದ ಪ್ರತಿನಿಧಿಗಳು. ರಿಪಬ್ಲಿಕ್ಕಿನ ಅಧ್ಯಕ್ಷರೂ ಶ್ರೇಷ್ಠ ನ್ಯಾಯಾಧೀಶರ ಮುಂದೆ ಪ್ರಮಾಣ ವಚನ ತೆಗೆದುಕೊಳ್ಳಬೇಕಾಗಿರುವುದರಿಂದ ರಾಜಪ್ರಮುಖರು ಆ ರೀತಿ ಮಾಡಿದರೆ ಯಾವ ಗೌರವಕ್ಕೂ ಚ್ಯುತಿ ಬರುವುದಿಲ್ಲ ರಾಜಧನ ಮತ್ತು ವಂಶಪಾರಂಪರಿಯ ರಾಜತ್ವ ವಿಚಾರಗಳು ಸಂಬಂಧಪಟ್ಟವರಿಗೂ ಕೇಂದ್ರ ಸರ್ಕಾರಕ್ಕೂ ವ್ಯವಹಾರದ ಮೂಲಕ ನಿರ್ಧರವಾಗುವುದು ಉತ್ತಮ. ಮೂಲ ಅಧಿಕಾರವು ಜನರಲ್ಲಿ ಸೇರಿರುವುದು ಅಧ್ಯಕ್ಷರು ಪ್ರಜೆಗಳಿಂದ ಚುನಾಯಿತರಾದವರು. ಆದ್ದರಿಂದ, ಅವರಿಂದ ಅಪ್ಪಣೆ ಪಡೆದು ರಾಜಪ್ರಮುಖರು ಅಧಿಕಾರ ಸ್ವೀಕರಿಸುವುದು ಉಚಿತವಾಗಿದೆ. ಪ್ರತ್ಯೇಕ ಭಾವನೆಯನ್ನು ಬಿಟ್ಟು ಎಲ್ಲರೂ ಭಾರತದ ಪ್ರಜೆಗಳೆಂದು ಭಾವಿಸಬೇಕು ಎಂದು ಅವರು ತಿಳಿಸಿದರು.

ಜನಾಬ್ ಮಹಮದ್ ಇಮಾಂ-ಮೈಸೂರಿನ ಮೂಲೋದ್ದೇಶ ನಿರ್ಣಯದ ಪ್ರಕಾರ ಸಂಸ್ಥಾನದ ವೈಶಿಷ್ಟ್ಯ ಮತ್ತು ಮಹಾರಾಜರ ಸ್ಥಾನಮಾನಗಳನ್ನು ಕಾಪಾಡಿಕೊಳ್ಳಬೇಕಾದುದು ಅತ್ಯಾವಶ್ಯಕವಾಗಿದೆ. ಇದರಿಂದ ರಾಜ್ಯಾಂಗ ಪರಿಶೀಲನಾ ಸಮಿತಿಯವರ ವರದಿಯಮೇಲೆ ಅಭಿಪ್ರಾಯಗಳನ್ನು ಸೂಚಿಸಲು ನಮ್ಮ ಮುಂದೆ ಇಟ್ಟಿದ್ದಾರೆ. ಭಾರತವನ್ನು ಭದ್ರವಾದ ಸಂಯುಕ್ತ ದೇಶವನ್ನಾಗಿ ಪರಿವರ್ತಿಸಲು ದೇಶೀಯ ಸಂಸ್ಥಾನಾಧೀಶರುಗಳು ಹೆಚ್ಚು ಸೇವೆ ಸಲ್ಲಿಸಿದ್ದಾರೆ. ಅವರು ತ್ಯಾಗ ಮಾಡದಿದ್ದರೆ ಭಾರತವು ಈಗಿನ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಅವರ ಸ್ಥಾನಮಾನಗಳನ್ನು ಕಾಪಾಡಬೇಕು ಮೈಸೂರು ಸಂಸ್ಥಾನವು ಇಷ್ಟು ಪ್ರಗತಿಪರವಾದುದಕ್ಕೆ ಶ್ರೀಮನ್ಮಹಾರಾಜರೇ ಕಾರಣರು. ಆದುದರಿಂದ ಅವರ ಗೌರವಕ್ಕೆ ಚ್ಯುತಿ ಬರಬಾರದು.

ಶ್ರೀ ಎ ಜಿ ಬಂದೀಗೌಡರು ಮಾತನಾಡಿ ರಾಜಪ್ರಮುಖರೆಂದು ಕರೆಯುವುದು ಸರಿಯಾದುದಲ್ಲವೆಂದೂ ೬೦ ಸಾವಿರ ಪ್ರಜೆಗಳಿಗೆ ಒಬ್ಬ ಪ್ರತಿನಿಧಿಯಂತೆ ಮೈಸೂರು ಶಾಸನ ಸಭೆಗಳನ್ನು ರಚಿಸುವುದು ಸಾಧುವಾದುದಲ್ಲವೆಂದೂ ಮೈಸೂರಿನ ವೈಶಿಷ್ಟ್ಯವು ಉಳಿಯುವಂತೆ ರಾಜ್ಯಾಂಗವು ರಚಿತವಾಗಬೇಕೆಂದೂ ತಿಳಿಸಿದರು

ಶ್ರೀ ಎಚ್ ಸಿದ್ದಲಿಂಗಪ್ಪನವರು:- ಹಿಂದೂಸ್ಥಾನದ ಭದ್ರತೆಗೆ ಅನುಗುಣವಾಗಿ ಸಂಸ್ಥಾನಗಳು ಅನುಸರಿಸಿಕೊಂಡು ಹೋಗಬೇಕೆಂದು ವಿಶೇಷ ವಿಚಕ್ಷಣೆಯಿಂದ ರಾಜ್ಯಾಂಗವನ್ನು ರಚಿಸಲಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ರಾಜರುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದರಲ್ಲೇ ಕಾಲ ಮುಗಿಯಿತು. ಆದರಿಂದಲೇ ಸಂಸ್ಥಾನಗಳಿಗೆ ರಾಜ್ಯಾಂಗವನ್ನು ರಚಿಸಲು ತಡವಾಯಿತು ೫೬೨ ಸಂಸ್ಥಾನಗಳ ಭವಿಷ್ಯವನ್ನು ನಿರ್ಧರಿಸಿ ಹರಿದು ಹಂಚಿ ಹೋದ ಭಾರತವನ್ನು ಭದ್ರಪಡಿಸುವುದಕ್ಕಾಗಿ ಸರ್ದಾರ್ ಪಟೇಲರನ್ನು ಸಾವಿರ ಬಾರಿ ಅಭಿನಂದಿಸಬೇಕಾಗಿದೆ ರಾಜರುಗಳ ತ್ಯಾಗಕ್ಕಿಂತಲೂ ಪ್ರಜೆಗಳ ತ್ಯಾಗವು ಹೆಚ್ಚಾಗಿದೆ. ಅವರುಗಳನ್ನೂ ಸ್ಮರಿಸಿಕೊಳ್ಳಬೇಕು. ಮೈಸೂರಿನ ಮಹಾರಾಜರು ಇಡೀ ಕರ್ನಾಟಕದ ಅಧಿಪತಿಗಳಾಗಬೇಕೆಂದು ನನ್ನ ಅಭಿಲಾಷೆ. ಆದರೆ ಅವರ ರಾಜಧನ ಮತ್ತು ವಂಶಪರಂಪರೆಯ ರಾಜತ್ವ ವಿಚಾರಗಳನ್ನು ಸಭೆಯವರು ನಿರ್ಧರಿಸುವುದಕ್ಕಿಂತ ಸಂಬಂಧಪಟ್ಟವರು ಭಾರತ ಸರ್ಕಾರದೊಡನೆ ಒಪ್ಪಂದಕ್ಕೆ ಬರುವುದು ಉತ್ತಮ. ಹಿಂದೂಸ್ಥಾನವು ಇಡೀ ವಿಶ್ವಕ್ಕೆ ಒಂದು ಹೊಸ ದಾರಿಯನ್ನು ತೋರಿಸಲು ಹೊರಟಿದೆ ಅದು ಯಶಸ್ವಿಯಾಗಲು ಪ್ರತಿಯೊಬ್ಬರೂ ಸಹಕರಿಸಬೇಕು ಭಾರತದ ಭದ್ರತೆಗೂ ಮತ್ತು ನೂತನ ರಾಜ್ಯಾಂಗಕ್ಕೂ ಅನುಸರಿಸಿಕೊಂಡು ಹೋಗಬೇಕು ಮತ್ತು ನಾವು ಮಾಡುವ ಸೂಚನೆಗಳು ಕೇಂದ್ರದವರು ಒಪ್ಪುವಂತಿರಬೇಕು.

ಶ್ರೀ ಹೆಚ್ ಕೆ ವೀರಣ್ಣಗೌಡರು ಮಾತನಾಡಿ ವಂಶ ಪರಂಪರೆಯ ರಾಜತ್ವವಿರಬೇಕೆಂದು ಅಭಿಪ್ರಾಯಪಟ್ಟರು

ಡಾ|| ರಾಮಚಂದ್ರರಾಯರು ಮಾತನಾಡಿ ನೂರಾರು ವರ್ಷಗಳಿಂದ ಬಂದಿರುವ ರಾಜತ್ವವನ್ನು ಉಳಿಸಿಕೊಳ್ಳುವ ಮೈಸೂರಿನ ಪ್ರಯತ್ನವು ಅಭಿನಂದನಾರ್ಹವೆಂದು ತಿಳಿಸಿದರು. ರಿಪಬ್ಲಿಕ್ಕಿನಲ್ಲಿ ರಾಜತ್ವವನ್ನು ಉಳಿಸಿಕೊಳ್ಳುವ ಒಂದು ನೂತನ ಪ್ರಯೋಗವನ್ನು ಮಾಡುತ್ತಿರುವುದು ಒಂದು ವಿಶೇಷವೆಂದು ಹೇಳಿದರು

ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಅನಂತರ ಚರ್ಚೆಗೆ ಉತ್ತರಕೊಡುತ್ತಾ ಸಂಸ್ಥಾನ ಶಾಖೆಯವರು ಸೂಚಿಸಿರುವ ರಾಜ್ಯಾಂಗಕ್ಕೆ ಸಭೆಯಲ್ಲಿ ಯಾವ ವಿರೋಧ ಅಭಿಪ್ರಾಯವೂ ಸೂಚಿತವಾಗಿಲ್ಲ. ಕೆಲವು ಸಣ್ಣಪುಟ್ಟ ತಿದ್ದುಪಡಿಗಳ ಬಗ್ಗೆ ಭಿನ್ನಾಭಿಪ್ರಾಯ ಉಂಟಾಗಿದೆ ಭಾರತದ ಭದ್ರತೆಯನ್ನು ರಕ್ಷಿಸಲು ನಮ್ಮವರು ಸಹಕರಿಸಬೇಕು ಈ ಸಭೆಯ ಮೂಲೋದ್ದೇಶದ ನಿರ್ಣಯಕ್ಕೆ ಯಾವ ಚ್ಯುತಿಯೂ ಉಂಟಾಗಿಲ್ಲ ಮೈಸೂರಿನ ಪ್ರಜೆಗಳು ಮತ್ತು ರಾಜರ ಸಹಕಾರದಿಂದ ಭಾರತವು ಸುವ್ಯವಸ್ಥಿತ ರಾಜ್ಯವಾಗುವಂತೆ ಏರ್ಪಾಡಾಗಲಿ. ಮೈಸೂರಿನಲ್ಲಿ ರಾಜತ್ವವಿರಲು ಕೇಂದ್ರದವರ ವಿರೋಧವಿಲ್ಲ-ಎಂದು ಹೇಳಿದರು

ಅನಂತರ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

೮೦ ತಿದ್ದುಪಡಿಗಳನ್ನು ಸದಸ್ಯರು ಸೂಚಿಸಿದ್ದಾರೆಂದೂ, ಅವುಗಳ ಪೈಕಿ ೪೭ ತಿದ್ದುಪಡಿಗಳನ್ನು ವಾಪಸು ತೆಗೆದುಕೊಳ್ಳಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು ಉಳಿದ ತಿದ್ದುಪಡಿಗಳ ಮೇಲೆ ಚರ್ಚೆ ಪ್ರಾರಂಭವಾಯಿತು.

ರಾಜಪ್ರಮುಖರ ಬದಲು ಮಹಾರಾಜರೆಂದು ಹೆಸರಿರಬೇಕೆಂಬ ಶ್ರೀ ಸುಬ್ಬೇಗೌಡರ ತಿದ್ದುಪಡಿಯು ಯಾವ ಚರ್ಚೆಯೂ ಇಲ್ಲದೆ ಬಿದ್ದುಹೋಯಿತು. (ರೂಲರ್) ಎಂದು ಇರಬೇಕೆಂಬ ಶ್ರೀ ಕೆ. ಟಿ. ಭಾಷ್ಯಂರವರ ತಿದ್ದುಪಡಿಯು ಅಂಗೀಕೃತವಾಯಿತು

ಒಂದೇ ಒಂದು ಶಾಸನ ಸಭೆಯು ಇರುವುದರ ಬದಲು ಎರಡು ಸಭೆಗಳಿರಲು ಅವಕಾಶ ವಿರಬೇಕೆಂದೂ, ಅಸೆಂಬ್ಲಿಯ ಅಧ್ಯಕ್ಷರ ಜೊತೆಗೆ ಶಾಸನ ಸಭೆಯ ಅಧ್ಯಕ್ಷರಿರಲು ಅನುಕೂಲ ವಿರಬೇಕೆಂದೂ ಸೂಚಿಸುವ ತಿದ್ದುಪಡಿಗಳನ್ನು ಶ್ರೀ ಕೆ ಟಿ ಭಾಷ್ಯಂರವರು ಸೂಚಿಸಿದರು ಅದನ್ನು ಶ್ರೀ ಹೆಚ್. ಸಿದ್ದಯ್ಯನವರು ಅನುಮೋದಿಸಿದರು. ನೂರಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಸಂಸ್ಥಾನದ ಎರಡು ಸಭೆಗಳನ್ನು ತೆಗದುಹಾಕುವುದು ಸಾಧ್ಯವಾದುದಲ್ಲವೆಂದೂ, ಅವುಗಳಿಂದ ಹೆಚ್ಚಿನ ಪ್ರಯೋಜನವಿದೆಯೆಂದೂ ಶ್ರೀ ಭಾಷ್ಯಂರವರು ತಿಳಿಸಿದರು

ತಿದ್ದುಪಡಿಗಳು ಸರ್ವಾನುಮತದಿಂದ ಅಂಗೀಕೃತವಾದುವು

ಔದ್ಯೋಗಿಕ ವ್ಯವಸಾಯ ಕೇಂದ್ರಗಳನ್ನು [illegible] ಪ್ರತಿಯೊಂದು ಜಿಲ್ಲೆಯಲ್ಲಿ [illegible] ಸಂಗ್ರಹಿಸುವ [illegible] ೨೯,೦೦೦ [illegible] ಎಂದು ಸಚಿವರು [illegible] ತಿಳಿಸಿದರು

ಮರಾಮತ್ತು ಮತ್ತು ವ್ಯವಸಾಯ ಇಲಾಖೆಗಳ ಪುನರ್ವ್ಯವಸ್ಥೆ

ಮೈಸೂರು ೨೯

ಸಂಸ್ಥಾನದಲ್ಲಿ ಆಹಾರ ಬೆಳೆಯನ್ನು ಹೆಚ್ಚಿಸಲು ಇಂಜನಿಯರಿಂಗ್ ಮತ್ತು ವ್ಯವಸಾಯ ಇಲಾಖೆಗಳನ್ನು ಪುನರ್ವ್ಯವಸ್ಥೆಗೊಳಿಸಲಾಗುವುದೆಂಬ ಅಂಶವನ್ನು ಈ ದಿನ ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಇಂಜನಿಯರಿಂಗ್ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಸುವ್ಯವಸ್ಥೆಯಿಂದ ನಡೆಯದೆ ಆಹಾರ ಉತ್ಪತ್ತಿ ಯೋಜನೆಗೆ ಸಂಬಂಧಪಟ್ಟ ಅನೇಕ ನೀರಾವರಿ ಮತ್ತು ಇತರ ಕೆಲಸಗಳು ಜಾಗ್ರತೆ ಪೂರೈಸುತ್ತಿಲ್ಲ. ಆದುದರಿಂದ ಆ ಇಲಾಖೆಯನ್ನು ಕೂಡಲೇ ಪುನರ್ವ್ಯವಸ್ಥೆ ಮಾಡಲು ಸರ್ಕಾರದವರು ನಿರ್ಧರಿಸಿದ್ದಾರೆ ನೀರಾವರಿ ಮತ್ತು ರಸ್ತೆಗಳಿಗೆ ಪ್ರತ್ಯೇಕ ಚೀಫ್ ಇಂಜನಿಯರುಗಳು ಇರುವುದನ್ನು ವಜಾ ಮಾಡಿ, ಒಬ್ಬರನ್ನೇ ನೇಮಿಸಲಾಗುವುದು ಲಕ್ಕವಳ್ಳಿ, ತುಂಗಭದ್ರ ಮುಂತಾದ ವಿಶೇಷ ದೊಡ್ಡ ನೀರಾವರಿ ಯೋಜನೆಗಳಿಗಾಗಿ ಒಬ್ಬ ಚೀಫ್ ಇಂಜನಿಯರಿರುವರು ಅವರು ಸರ್ಕಾರದ ಇಲಾಖಾ ಕಾರ್ಯದರ್ಶಿಗಳಾಗಿಯೂ ಇರುವರು ಕಾವೇರಿ, ಶಿವಮೊಗ್ಗ ಮತ್ತು ತುಮಕೂರು ಕೇಂದ್ರಗಳನ್ನು ರಚಿಸಿ, ಅವುಗಳಿಗೆ ಒಬ್ಬೊಬ್ಬ ಸೂ|| ಇಂಜನಿಯರನ್ನು ನೇಮಿಸಲಾಗುವುದು ನೀರು ಮತ್ತು ಸ್ಯಾನಿಟರಿ ಇಲಾಖೆಗಳನ್ನು ಒಂದುಗೂಡಿಸಿ ತುಮಕೂರು ಕೇಂದ್ರದ ಆಡಳಿತಕ್ಕೆ ಒಳಪಡಿಸಲಾಗುವುದು.

ವಿಶೇಷ ಯೋಜನೆಗಳು ಪೂರೈಸಿದನಂತರ ಈಗ ಇರುವ ೮ ಹಂಗಾಮಿ ಡಿವಿಜನ್ನುಗಳನ್ನು ವಜಾ ಮಾಡಲಾಗುವುದು. ಗ್ರಾಮಾಭಿವೃದ್ಧಿ ಇಲಾಖೆ, ಅಂತರ ಗ್ರಾಮ ರಸ್ತೆ, ಜಿಲ್ಲಾಬೋರ್ಡುಗಳಿಗಾಗಿ ಇರುವ ಪ್ರತ್ಯೇಕ ಸಬ್ ಡಿವಿಜನ್ನುಗಳನ್ನು ವಜಾಮಾಡಿ ೮೦ ಕೇಂದ್ರಗಳಿಗೂ ಒಬ್ಬೊಬ್ಬ ಅಸಿಸ್ಟೆಂಟ್ ಇಂಜನಿಯರನ್ನು ನೇಮಕ ಮಾಡಲಾಗುವುದು. ಕುಣಿಗಲ್ ಮತ್ತು ಆಲೂರು ತಾಲ್ಲೂಕುಗಳನ್ನು ಬಿಟ್ಟು ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬೊಬ್ಬ ಪದವೀಧರ ಸೂಪರ್‌ವೈಸರನ್ನು ಇಡಲಾಗುವುದು ಈ ಪುನರ್ವ್ಯವಸ್ಥೆಯಿಂದ ಒಬ್ಬ ಸೂ|| ಇಂಜನಿಯರ, ೧೮ ಅಸಿಸ್ಟೆಂಟ್ ಇಂಜನಿಯರುಗಳು, ೩೩ ಪದವೀಧರ ಸೂಪರ್‌ವೈಸರು ಮತ್ತು ೩೩ ಸಬ್ ಓವರ್‌ಸೀಯರುಗಳು ಉಳಿತಾಯವಾಗುವರು

ವ್ಯವಸಾಯ ಇಲಾಖೆ

ವ್ಯವಸಾಯಕ್ಕೆ ಸಂಬಂಧಪಟ್ಟ ಸಂಶೋಧನೆ ಮತ್ತು ಇತರ ಕೆಲಸ ಕಾರ್ಯಗಳನ್ನೇ ಇಲಾಖೆಯವರು ನಡೆಸುವಂತೆ ಅನುಕೂಲವಾಗಲು ಈಗ ಇಲಾಖೆಯಲ್ಲಿರುವ ಬೀಜ, ಗೊಬ್ಬರ [illegible]

[illegible]

ಸೂಚನೆ

ಆಯುಧ ಪೂಜೆ ಪ್ರಯುಕ್ತ ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ.

ರಾಜ್ಯಾಂಗ ಸಭೆಯ ಕಿರು ನೋಟ

ಎಂ. ಗೋವಿಂದ ರೆಡ್ಡಿ-ನನ್ನ ಮಕ್ಕಳು, ಮೊಮ್ಮಕ್ಕಳು ಮರಿ ಮಕ್ಕಳು ರಾಜತ್ವದ ತತ್ವಕ್ಕೆ ಗಂಟು ಬೀಳುವಂತೆ ಒತ್ತಾಯ ಪಡಿಸಲು ನಾನು ಬಯಸುವುದಿಲ್ಲ

ಶ್ರೀ ನಿಜಲಿಂಗಪ್ಪ- ಗೋವಿಂದ ರೆಡ್ಡಿಯವರಿಗೆ ಮದುವೆಯಾಗಿದೆಯೋ?

ಗೋವಿಂದರೆಡ್ಡಿ-ನನ್ನ ಮಕ್ಕಳಿಗಲ್ಲದಿದ್ದರೂ ನನ್ನ ಮಿತ್ರರ ಮಕ್ಕಳಿಗಾಗಿ ನಾನು ವಾದಿಸುತ್ತಿದ್ದೇನೆ

o o o

ಶ್ರೀ ಹೆಚ್. ಎಂ. ಚನ್ನಬಸಪ್ಪ - ಕೇಂದ್ರದಿಂದ ಬಂದಿರುವ ಸಲಹೆಗಳು ಗಂಟಲಲ್ಲಿರುವ ಬಿಸಿ ತುಪ್ಪದಂತಿವೆ ನುಂಗುವುದಕ್ಕೂ ಇಲ್ಲ, ಉಗುಳುವುದಕ್ಕೂ ಇಲ್ಲ

ಶ್ರೀ ಟಿ ಮರಿಯಪ್ಪ- ನಾವೆಲ್ಲರೂ ಏಕಕಂಠರಾದರೆ ಉತ್ತಮ

ಅಧ್ಯಕ್ಷ ಸುಬ್ರಹ್ಮಣ್ಯಂ– ಕನ್ನಡದಲ್ಲಿ ಹೇಳಬೇಕಾದರೆ ನಂಜುಂಡರಾಗಬೇಕ

o o o

ಶ್ರೀ ಭಾಷ್ಯಂ- ಸತ್ಯವಾದ ಅಂಶವನ್ನಾದರೂ ಹಿತಕರವಾಗಿ ಹೇಳಿದರೆ ನಮ್ಮ ಕಾರ್ಯ ಸಾಧನೆಯಾಗುವುದು

ಶ್ರೀ ಕೆ ಸಿ ರೆಡ್ಡಿ- ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್

ಶ್ರೀ ಭಾಷ್ಯಂ ನಾನೂ ಬಹಳ ದಿನದಿಂದ ಹೀಗೆ ಹೇಳುತ್ತಾ ಬಂದಿದ್ದೇನೆ ಆಚರಣೆ ಮಾತ್ರ ಸ್ವಲ್ಪ ಕಠಿಣ

ನಾಯಿ ತಪ್ಪಿಸಿಕೊಂಡಿದೆ

ಬಣ್ಣ ಕೆಂಪು, ಮೇಲ್ಭಾಗ ಕಪ್ಪು, ಸುಮಾರು ವರುಷಗಳು ಅಡಿಯಿಂದ ಒಂದು ಅಡಿ ಸೈಜು ಇರುವ ನಾಯಿಯೊಂದು ತಪ್ಪಿಸಿಕೊಂಡಿದೆ ತಂದುಕೊಟ್ಟವರಿಗೆ ತಕ್ಕ ಬಹುಮಾನ ಕೊಡಲಾಗುತ್ತದೆ

ಅಡ್ರೆಸ್. ಐ. ಜಿ. ಪಿ. (ಕ್ಯಾಂಪ್) ಗೆಸ್ಟ್ ಕ್ವಾರ್ಟರ್ಸ್, ಮೈಸೂರು

ಶ್ರೀ ಚಾಮುಂಡೇಶ್ವರೀ ಟಾಕೀಸ್

30-9 49ರಿಂದ ಯಶಸ್ವೀ 3ನೇ ವಾರ

ಜೂಪಿಟರ್‌ರವರ ತಮಿಳು ಚಿತ್ರ

ಕನ್ನಿಯಿನ್ ಕಾದಲಿ

ಪಾತ್ರ ಸಾರಂಗಪಾಣಿ, ಪುಳಿಮೂಟೈ, ಅಂಜಲಿ, ಮಾಧುರಿ

ದಿನವಹಿ 3 ಆಟಗಳು

[ಕರ್ನಾಟಕ ರಿಲೀಸ್

ಜಂಬೂಸವಾರಿ ನೋಟದ ಟಿಕೆಟ್ಟುಗಳು

ನಾಳಿದ್ದು ಸಂಜೆ ಜಂಬೂಸವಾರಿ ದೃಶ್ಯವನ್ನು ಟೌನ್‌ಹಾಲ್ ಮೈದಾನದಲ್ಲಿ ಹಾಕಿರುವ ಡೇರೆಯಿಂದ ನೋಡಲು ಪೌರಸಭಾ ಕಛೇರಿಯಲ್ಲಿ ಟಿಕೇಟುಗಳನ್ನು ಗಂಡಸರಿಗೆ ೨ ರೂ ಹೆಂಗಸರಿಗೆ ೧ ರೂ. ನಂತೆ ಮಾರಲಾಗುವುದು ಚಿಂ ಟೈನ ಟಿಕೇಟಿಗೆ ೮ ಆಣೆ,

ಸೆನ್ಸಸ್ ಕಮೀಷನರ್

ಶ್ರೀ ಜೆ. ಬಿ ಮಲ್ಲಾರಾಧ್ಯರನ್ನು ಸೆನ್ಸೆಸ್ ಕಮೀಷನರಾಗಿ ನೇಮಕ ಮಾಡಲಾಗಿದೆ

ದಸರಾ ಸ್ಪೆಷಲ್ ರತ್ನ ಕಂಬಳಿಗಳು

ರೂ 1-8-0 ಇಂದ 8-8-0

ಬಾಹುಸಾರ್ ಕಂಪನಿ

ಎಗ್ಜಿಬಿಷನ್ ಸ್ಟಾಲ್ ನಂ C 13

SRI GAYATHRI

Dasara Special Programme

on 29th & 30th September

DAILY THREE SHOWS

Cecil B. De Mille's

Unconquered

(Technicolour)

– MORNING SHOWS –

Sign of the Cross

ಮೈಸೂರು ಶ್ರೀಮನ್ಮಹಾರಾಜರವರ ಪ್ರಶಸ್ತಿ ಪಡೆದ ಅಂಬಳೆ ವೈದ್ಯರ ...

ಸಂತಾನ ಸಿಂಧೂರ

ಬಹುಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ. ಇಂಥವರಿಗೆ ಗ್ಯಾರಂಟೀ ಔಷಧ ಕ್ರಯ ೧-೧ ಸೆಟ್ ರೂ. ೩-೪-೦ ತಯಾರಕರು -ಎ ರಾಮಸ್ವಾಮಿ ಅಯ್ಯಂಗಾರ್, ಅಂಬಳೆ, ಯಳಂದೂರು.

ಇವರು ಮೈಸೂರು ಕೃಷ್ಣರಾಜ ಫ್ಲೋರ್ ಸ್ಟೋರ್ಸ ಎದುರು, ಸೊಪ್ಪಿನ ಕೋಳದ ಬೀದಿ ೧೩೭೩ನೆ ನಂಬರ್ ಮನೆಯಲ್ಲಿ ಅಕ್ಟೋಬರ್ ೨, ೩, ೪, ೫, ೬, ಈ ತಾರೀಖುಗಳಲ್ಲಿ ಕ್ಯಾಂಪ್ ಮಾಡುತ್ತಾರೆ

ನೋಡತಕ್ಕ ಕಾಲ –ಬೆಳಿಗ್ಗೆ ೮ರಿಂದ ೧೧, ಮಧ್ಯಾಹ್ನ ೩ ರಿಂದ ೫.

Edited, printed and published by A R. Nagarajan at Sadhvi Press, D Subbiah Road, Mysore

ಎಂ ಸಿ ಎಲ್ ಸೆಟ್ಟಿಯವರ

‡ ನ್ಯೂ. ಹೋಟೇಲ್ ‡

ಹೈಗ್ರೌಂಡ್ಸ್ (ರೇಸ್ ಕೋರ್ಸ್ ಹತ್ತಿರ) ಬೆಂಗಳೂರು

ಬ್ರಾಹ್ಮಣರ ಅಡಿಗೆ ಊಟ, ಟಿಫನ್ ಕಾಫಿ, ಸ್ನಾನ, ಸಜ್ಜಾದ ಬಾತ್ ಅಟಾಚ್ಡ್ ರೂಮು, ದಿನ ೧ಕ್ಕೆ ಸೀಟು ೧ಕ್ಕೆ ರೂ ೩ ಮತ್ತು ಮೇಲ್ಪಟ್ಟು

ಮಕ್ಕಳ ಲಿವರ್ ಕಾಯಿಲೆಗೆ

ಸಿರ್ಲೋಜ್ಯಮ್

ಮಕ್ಕಳ

- ಲಿವರ್ ಕಾಯಿಲೆ -

ಸಮರ್ಪಕ

- ಪರಿಶೀಲನೆ
- ಸಲಹೆ ಸೂಚನೆ

ಇವುಗಳಿಗೆ

ಲಿವರ್ ಹೌಸ್,

ಚಾಮರಾಜಪುರಂ, ಮೈಸೂರು

(ಕೋ ಆಪರೇಟಿವ್ ಸೊಸೈಟಿ ಹತ್ತಿರ)

ವೇಳೆ – ಬೆಳಿಗ್ಗೆ ೮ ರಿಂದ ೧೨

ತಾ|| ೭ರಿಂದ ೫ ದಿನಗಳು ಮಾತ್ರ

ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್ ಮೈಸೂರು

ಟೆಂಡರ್ ನೋಟೀಸ್

ಶ್ರೀ ಕೃಷ್ಣರಾಜೇಂದ್ರ ಮಿಲ್ಸಿನ ಲೇಬರ್ ಕಾಲೊನಿಯ ಆವರಣದಲ್ಲಿ ಕಟ್ಟಿರುವ ಹಂಗಾಮಿ ಮನೆಗಳ ಕಟ್ಟಡಗಳನ್ನು ಉತ್ತಮಪಡಿಸುವುದಕ್ಕೂ ಮಿಲ್ಲಿನಲ್ಲಿ ಆರ್. ಸಿ ಸಿ ಮೇಲ್ಛಾವಣಿಯಿಂದ ಕೂಡಿದ ಒಂದು ಸಣ್ಣ ಕಟ್ಟಡವನ್ನು ಕಟ್ಟಲೂ ಮೊಹರಾದ ಟೆಂಡರುಗಳನ್ನು ೧೯೪೯ನೇ ಅಕ್ಟೋಬರ್ ೫ನೇ ತಾರೀಖು ಮಧ್ಯಾಹ್ನ ೪ ಘಂಟೆವರೆಗೆ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕಾರ್ಯದರ್ಶಿಗಳು ಸ್ವೀಕರಿಸುತ್ತಾರೆ ಪ್ರತಿ ಟೆಂಡರಿನೊಡನೆ ೧೦೦ ರೂ (ಒಂದು ನೂರು ರೂ.) ಮೊಬಲಗನ್ನು ಠೇವಣಿ ಇಡಬೇಕು

ಅಪೇಕ್ಷಿಸುವ ಟೆಂಡರುದಾರರು, ಕಛೇರಿಯಲ್ಲಿ ನಿಗದಿಯಾದ ಟೆಂಡರ್ ಫಾರಮ್ಮುಗಳು, ವಿವರವಾದ ಅಂದಾಜು ಮತ್ತು ಬೇಕಾಗುವ ಪ್ರಮಾಣಗಳನ್ನು ಪಡೆಯಬಹುದು ಕೆಲಸದ ಹೊತ್ತು ಕಾಲಗಳಲ್ಲಿ ಮಿಲ್ಲಿನ ಕಛೇರಿ ನಕ್ಷೆಗಳನ್ನು ನೋಡಬಹುದು

ಟೆಂಡರನ್ನು ಅಂಗೀಕರಿಸಿದ ಮೂರು ತಿಂಗಳೊಳಗಾಗಿ ಪೂರ್ತಿ ಕೆಲಸ ಮುಗಿಸಬೇಕು

(ಸಹಿ) ಬಿ. ಎಸ್. ವಿಶ್ವೇಶ್ವರಯ್ಯ ಕಾರ್ಯದರ್ಶಿ

ರಾಜಕಮಲ

ಮೈಸೂರು

30-9-49ರಿಂದ

ಫಿಲ್ಮಿಸ್ತಾನ್‌ರವರ

- ಆಕ್ರೆಸ್

ರೆಹನ, ನಿರ್ಮಲ, ಪ್ರೇಮ್ ಅದೀಬ್ ಅಭಿನಯಿಸಿರುವ ಹಿಂದಿ ಚಿತ್ರ

MORNING SHOWS From 30-9-49 for 4 days

IT HAD TO BE YOU

With - Ginger Rogers & Cornel Wilde

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನದ ಒಡವೆಗಳ ಈಡಿನ ಮೇಲೆ ಸುಲಭವಾದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು

U HARI SHENOY

ಏಜೆಂಟ್

ಶ್ರೀ ಗಣೇಶ ಟಾಕೀಸ್

ತಾ|| 30 9 49ರಿಂದ ಪ್ರತಿ ದಿನ ೩ ಪ್ರದರ್ಶನಗಳು

ಸುರಭಿ ಪಿಕ್ಚರ್ಸ್‌ರವರ ಅತ್ಯುತ್ತಮ ಪೌರಾಣಿಕ ಕನ್ನಡ ಚಿತ್ರ

ಭಕ್ತ ಕುಂಬಾರ

ಪಾತ್ರ ಹೊನ್ನಪ್ಪ ಭಾಗವತರ್, ಲಕ್ಷ್ಮೀಬಾಯಿ, ಪಂಡರಿಬಾಯಿ, ಜಯಶ್ರೀ ಮುಂತಾದವರು

✻ ಕಬ್ಬಿಣದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್, ಅಲಾರಂ ಸೇಫ್. ಸುಲಭವಾದ ಬೆಲೆ. ✻

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್, ೨೭೬೭, ಹಳ್ಳದಕೇರಿ ಮತ್ತು ಜೀವನರಾಯನ ಕಟ್ಟೆ (ಸ್ಟಾಲ್ ನಂ ೧೧) ಮೈಸೂರು

ಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೨] ಶನಿವಾರ ೧-೧೦-೧೯೪೯ [ಸಂಚಿಕೆ ೫೪

ಕಾಶ್ಮೀರ ಕಮಿಷನ್ನಿನ ಸಲಹೆಗಾರರ ಬಂಧನ

ಪ್ರಭುಗಳ ಅಧಿಕಾರದ ಬಗ್ಗೆ ಕೇಂದ್ರದೊಡನೆ ಕರಾರು

ರಾಜ್ಯಾಂಗ ಸಭೆಯಲ್ಲಿ ನಿರ್ಣಯ

ಮೈಸೂರು ೩೦

ಶ್ರೀಮನ್ಮಹಾರಾಜರವರ ಹಕ್ಕು ಬಾಧ್ಯತೆಗಳು, ವಿಶೇಷಾಧಿಕಾರ ಅಂತಸ್ತು, ರಾಜಧನ ಮತ್ತು ವಂಶ ಪಾರಂಪರ್ಯ ರಾಜತ್ವಗಳನ್ನು ಉಳಿಸಿಕೊಳ್ಳುವ ಬಗ್ಗೆ ಭಾರತ ಸರ್ಕಾರದೊಡನೆ ಪ್ರಭುಗಳು ಒಂದು ಕರಾರನ್ನು ಮಾಡಿಕೊಳ್ಳಬೇಕೆಂದು ಶ್ರೀಗಳಾದ ಎ ಜಿ ರಾಮಚಂದ್ರರಾಯರು ಮತ್ತು ಎಂ ಎಚ್ ಜೋಯಿಸರುಗಳು ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ನಿನ್ನೆ ರಾಜ್ಯಾಂಗ ಸಭೆಯಲ್ಲಿ ಅಂಗೀಕೃತವಾಯಿತು

ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ಮೈಸೂರು ಕಾಂಗ್ರೆಸ್ಸಿಗೂ ಮತ್ತು ಶ್ರೀಮನ್ಮಹಾರಾಜರವರಿಗೂ ಆದ ಒಪ್ಪಂದ, ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ರಾಜ್ಯಾಂಗ ಸಭೆಯಲ್ಲಿ ಮೂಲೋದ್ದೇಶ ನಿರ್ಣಯದ ವಿವರಗಳನ್ನು ತಿಳಿಸಿ ಪ್ರಭುಗಳ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವ ಅಗತ್ಯವನ್ನು ತಿಳಿಸಿದರು

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿರ್ಣಯವನ್ನು ಅನುಮೋದಿಸಿ, ಅದರ ಅಗತ್ಯವನ್ನು ತಿಳಿಸಿದರು ಭಾರತ ರಾಜ್ಯಾಂಗದಲ್ಲಿ ಶಾಸನ ಒಪ್ಪ [illegible] ಇಟ್ಟುಕೊಳ್ಳಲು ಅವಕಾಶ ಕಲ್ಪಿಸಲಾಗಿ [illegible] ಅನೇಕ ಸಂಸ್ಥಾನಾಧೀಶರುಗಳು ಇದ[illegible] ಒಪ್ಪಿ ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆ ಬಗ್ಗೆ ಒಪ್ಪಂದವನ್ನು ಮಾಡಿಕೊಂಡಿದ್ದಾರೆ ಮೈಸೂರಿನ ಪ್ರಭುಗಳು ಆ ರೀತಿ ಯಾವ ಒಪ್ಪಂದವನ್ನೂ ಮಾಡಿಕೊಂಡಿಲ್ಲ ಆದುದರಿಂದ ಹಾಗೆ ಮಾಡುವುದು ಅವಶ್ಯಕ ಇದರಿಂದ ಶ್ರೀಮನ್ಮಹಾರಾಜರವರಿಗೆ ಹೆಚ್ಚಿನ ಅಂತಸ್ತು ಮತ್ತು ಹಕ್ಕು ಬಾಧ್ಯತೆಗಳನ್ನು ಕೇಳಲಾಗುತ್ತಿದೆ ಎಂದು ಭಾವಿಸಬಾರದು ಎಂದು ತಿಳಿಸಿದರು

ಶ್ರೀಗಳಾದ ಟಿ ಎಂ ಸಿದ್ದಯ್ಯ, ಹುಚ್ಚೇಗೌಡ, ಶ್ರೀಮತಿ ರತ್ನಮ್ಮ ಇಸಾಕ ಮೊದಲಾದವರು ಮಾತನಾಡಿ, ಶ್ರೀಮನ್ಮಹಾರಾಜರವರ ಸ್ಥಾನಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು

ಜನಾಬ್ ವಲ್ಲಿಯುಲ್ಲಾರವರು ನಿರ್ಣಯವನ್ನು ವಿರೋಧಿಸಿ, ಭಾರತದ ರಿಪಬ್ಲಿಕ್ಕಿನ ಅಧ್ಯಕ್ಷರಿಗಿರುವಂತೆಯೇ ಶ್ರೀಮನ್ಮಹಾರಾಜರವರಿಗೂ ಗೌರವ ಪ್ರತಿಷ್ಠೆ ಇರಬೇಕೆಂದು ಭಾವಿಸಿಕೊಂಡು ಅವರೊಡನೆ ಕರಾರಿನ ವ್ಯವಹಾರ ನಡೆಸಬಾರದೆಂದು ಹೇಳಿದರು

ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಸಂಸ್ಥಾನದ ಮೇಲೆ ಹತೋಟಿಯನ್ನು ಕೇಂದ್ರವು ಇಟ್ಟುಕೊಳ್ಳುವ ಅಧಿಕಾರದ ಕಾನೂನು ಸಂಪೂರ್ಣವಾಗಿ [illegible] ಬೇಕೆಂದ ಜನಾಬ್ ಸೈಯದ್ [illegible] ರಹಮಾನರು ಸೂಚಿಸಿದ ನಿರ್ಣಯದ ಮೇಲೆ ದೀರ್ಘ ಚರ್ಚೆ ನಡೆದು ಅದನ್ನು ವಾಪಸು ತೆಗೆದುಕೊಳ್ಳಲಾಯಿತು

ಜನಾಬ್ ಮಹಮದ್ ಇಮಾಮರವರು ಮಾತನಾಡಿ ಸಂಸ್ಥಾನದವರ ಸೌಕರ್ಯ [illegible] ಸ್ವಭಾವದಿಂದ ಕೇಂದ್ರ [illegible] ಪ್ರತಿಕೂಲವಾಗಿ ಸಹಕಾರ [illegible] ಸಹ ಕಾರ್ಯೋದ್ದೇಶವನ್ನು ನೀಡಿದೆ ಎಂದು ತಿಳಿಸಿದರು

ಮೋಟಾರು ಕಾನೂನನ್ನು ಮಾರ್ಪಡಿಸಬೇಕು ಅಥವ ಮೈಸೂರಿಗೆ ಈ ಒಗ್ಗೆ ವಿನಾಯಿತಿ ಕೊಡಬೇಕು ಎಂಬ ಶ್ರೀ ಕೆ ಟಿ ಭಾಷ್ಯಂರವರ ತಿದ್ದುಪಡಿಯು ಅಂಗೀಕೃತವಾಯಿತು

ಶ್ರೀ ಕೆ ಟಿ ಭಾಷ್ಯಂರವರು ಮಾತನಾಡು [illegible] ನ್ಯಾಯ [illegible] ಸಂಸ್ಥಾನಗಳ ಹೆಸರನ್ನು [illegible] ಸಂಸ್ಥಾನದ ಶಾಸನ ಸಭೆಯ ಒಪ್ಪಿಗೆಯಿಲ್ಲದೆ ಮೊದಲು ನಡೆಯಬೇಕೆಂದು ತಿಳಿಸಿದರು

ಶ್ರೀ ಎಸ್ ಸಿದ್ದಲಿಂಗಪ್ಪನವರು ಮಾತನಾಡಿ, ಭಾರತವರ್ಷ ಮತ್ತು ಮೈಸೂರಿಗೆ ಪರಿಸ್ಥಿತಿ ಬೇರೆಯೇ, ಮೈಸೂರು ತನ್ನ ವ್ಯಕ್ತಿತ್ವವನ್ನು ಬಿಟ್ಟುಕೊಡಬಾರದು [illegible] ಬೇರೆ ಕಾರಣ [illegible] ಬರಬೇಕೆಂದ ಒಪ್ಪಿರುವ [illegible] ಮೈಸೂರಿಗೆ ಮಾತ್ರ ಪ್ರತ್ಯೇಕ ವಿನಾಯಿತಿ ಕೇಳುವುದು ಸಾಧ್ಯವಿಲ್ಲವೆಂದೂ ತಿಳಿಸಿದರು ಹಿಂದುಳಿದ ಪ್ರದೇಶಗಳನ್ನು [illegible] ಸಂಸ್ಥಾನ [illegible] ಕೇಂದ್ರಕ್ಕೆ ಈ ಅಧಿಕಾರವಿರಬೇಕೆಂದು ತಿಳಿಸಿದರು

ತಿದ್ದುಪಡಿಯು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು

ಮಹಾರಾಜರಿಗೆ ವಾಹನಕ್ಕೆ [illegible] ಭತ್ಯೆ ಮುಂತಾದುವುಗಳನ್ನು ಸಂಸ್ಥಾನದ ಶಾಸನ ಸಭೆಗಳೇ ನಿರ್ಧರಿಸುವ ಮಧ್ಯಕಾಲದಲ್ಲಿ ಭಾರತಾಧ್ಯಕ್ಷರೇ ಅದನ್ನು ತೀರ್ಮಾನ ಮಾಡಬಹುದೆಂದ ಶ್ರೀ ಕೆ ಟಿ ಭಾಷ್ಯಂರವರು ಸೂಚಿಸಿದ ತಿದ್ದುಪಡಿಯು ಅಂಗೀಕೃತವಾಯಿತು

ಸಭೆಯು [illegible] ಗಂಟೆಗೆ [illegible] ಮುಂದಕ್ಕೆ ಹೋಯಿತು

ವಿಶ್ವಸಂಸ್ಥೆಯ ಅಧಿಕಾರಿಯ ಬಂಧನ

[illegible]

ಗಾಂಧಿ ಜಯಂತಿ ಕಾರ್ಯಕ್ರಮ

ಮೈಸೂರು ೧

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಿರುವ ಗಾಂಧಿ ಜಯಂತಿ ಮಹೋತ್ಸವದ ಕಾರ್ಯಕ್ರಮಗಳು ಈ ರೀತಿ ಇವೆ –

ನಾಳೆ ಬೆಳಗ್ಗೆ ೭ ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ, ೮ ರಿಂದ ೫ ಘಂಟೆ ವರೆಗೆ ಪ್ರಾರ್ಥನೆ ಮತ್ತು ಸೂತ್ರಯಜ್ಞ, ಸಂಜೆ ೬ ಘಂಟೆಗೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆ

ಮೈಸೂರು ಮಕ್ಕಳ ಕೂಟದಲ್ಲಿ ಗಾಂಧಿ ಜಯಂತಿ ಪ್ರಯುಕ್ತ ನಾಳೆ ಬೆಳಗ್ಗೆ ೬॥ ಕ್ಕೆ ಬೆಳಗಿನ ಸಭೆ ನಡೆಯುವುದು

ಪೌರ ಸಭೆಗೆ ಕಾಂಗ್ರೆಸ್ಸು ಸ್ಪರ್ಧಿಸಬಾರದೆಂಬ ನಿರ್ಣಯದ ತಿರಸ್ಕಾರ

ನಗರ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆಯು ನಡೆದು, ಬರುವ ನಗರ ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ನಿಲ್ಲಿಸಕೂಡದೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶಿಫಾರಸ ಮಾಡಬೇಕೆಂದು ಶ್ರೀಗಳಾದ ಎ ರಾಮಣ್ಣ ಮತ್ತು ಬಿ ಬಾಲಯ್ಯನವರುಗಳು ತಂದಿದ್ದ ನಿರ್ಣಯವು ಬಿದ್ದುಹೋಯಿತು

೦ ಡಿ ಸುಬ್ಬಯ್ಯ ಶೆಟ್ಟಿಯವರ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಆರೋಗ್ಯ ಶಾಖಾ ಸಚಿವರಾದ ಜನಾಬ್ ಮಹಮದ್ ಷರೀಫ್ ರವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಸಪ್ತಾಹವು ಪ್ರಾರಂಭಿಸಲ್ಪಡುತ್ತದೆ ಶ್ರೀಮಾನ್ ಎಂ ವಿ ಕೃಷ್ಣರಾವ್ ಮತ್ತು ಶ್ರೀಮಾನ್ ಆಗರಂ ರಂಗಯ್ಯ ಇವರುಗಳ ಭಾಷಣವನ್ನು ಮತ್ತು [illegible] ಕಾರ್ಯಕ್ರಮವನ್ನು ಸಹ ಏರ್ಪಡಿಸಲಾಗಿದೆ

[illegible]

[illegible] ಪ್ರಕಟನೆ ಮಾಡಿದೆ [illegible]

ಪತ್ರಿಕೋದ್ಯಮವು ಸಭ್ಯ ಗೃಹಸ್ಥನ ವೃತ್ತಿ

ಪತ್ರಿಕಾ ಸಲಹಾ ಸಮಿತಿಯಲ್ಲಿ ಸಿ. ಆರ್ ಶ್ರೀನಿವಾಸನ್ನರ ಭಾಷಣ

ಮೈಸೂರು ೧

ಸಂಸ್ಥಾನದ ಪತ್ರಿಕಾ ಸಲಹಾ ಸಮಿತಿಯ ಪ್ರಥಮ ಸಭೆಯು ನಿನ್ನೆ ದಿನ ಸಚಿವಾಲಯ ಭವನದಲ್ಲಿ ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಸಿ ಆರ್ ಶ್ರೀನಿವಾಸನ್ನರವರ ಅಧ್ಯಕ್ಷತೆಯಲ್ಲಿ ನಡೆಯಿತು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಪ್ರಾರಂಭೋತ್ಸವವನ್ನು ನೆರವೇರಿಸಿದರು

ಸಮಿತಿಯ ವ್ಯವಸ್ಥಾಪಕರೆಂದ ಶ್ರೀ ಎಚ್ ಎಸ್ ವೆಂಕೋಬರಾಯರು ಸ್ವಾಗತ ಭಾಷಣ ಮಾಡಿ, ಸಂಸ್ಥಾನದಲ್ಲಿ ಸಮಿತಿಯನ್ನು ರಚಿಸಲು ಅ॥ ಭಾ॥ ಪತ್ರಿಕಾ ಸಂಪಾದಕರ ಸಮ್ಮೇಳನದ ಸಹಾಯಕ್ಕಾಗಿ ವಂದನೆಯನ್ನು ಅರ್ಪಿಸಿದರು ೧೯೪೭ ರಿಂದ ಇದು ವರೆಗೆ ಪತ್ರಿಕೆಗಳ ಮೇಲೆ ತೆಗೆದುಕೊಂಡಿರುವ ಇನ್ನೂ ಕೆಲವು ಕಾರ್ಯಕ್ರಮಗಳು ರದ್ದಾಗಬೇಕೆಂದು ಕೋರಿದರು

ಶ್ರೀ ರೆಡ್ಡಿಯವರು, ಪತ್ರಿಕೆಗಳೂ ಸರ್ಕಾರಕ್ಕೂ ಮಧುರ ಬಾಂಧವ್ಯವು ಇನ್ನು ಮುಂದೆ ಕೂಡ ಇರಲೆಂದು ಹಾರೈಸಿದರು ಪತ್ರಿಕಾ ಸ್ವಾತಂತ್ರ್ಯದೊಡನೆ ಹೊಂದಿರಬೇಕಾಗಿರುವ ಪತ್ರಿಕೆಗಳ ಜವಾಬ್ದಾರಿಯನ್ನು ಅರಿತುಕೊಂಡು ಪತ್ರಿಕೋದ್ಯೋಗಿಗಳು ತಮ್ಮ ವರ್ತನೆಯ ನೀತಿಯನ್ನು ತಾವೇ ನಿರ್ಧರಿಸಿ, ಅದರಂತೆ ನಡೆದುಕೊಂಡು ದೇಶಕ್ಕೂ, ಸಮಾಜಕ್ಕೂ ಸೇವೆ ಸಲ್ಲಿಸಬೇಕೆಂದು ಕೋರಿದರು

ಶ್ರೀ ದಿವಾಕರರು ತಮ್ಮ ಭಾಷಣದಲ್ಲಿ ಪತ್ರಿಕೋದ್ಯಮದಲ್ಲಿ ಉಚಿತ ಪರಿಮಿತಿಯನ್ನು ಮೀರಿ ಅವಳಿತ ಸ್ವಾತಂತ್ರ್ಯವನ್ನು ವಹಿಸಿರುವರೆಂದೂ ಪತ್ರಿಕೋದ್ಯೋಗಿಗಳಲ್ಲಿ ಉತ್ತಮವಾದ ರಾಜನೀತಿ ನೈಪುಣ್ಯವೂ ಇರಬೇಕೆಂದೂ ಹೇಳಿದರು ಸರ್ಕಾರದ ಎಚ್ಚರಿಕೆ ಮುಂತಾದುವುಗಳ ಕ್ರಮ ಕಠಿಣವಾಗಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಅಡ್ಡಿ ಬಾರದೆಂದು ಹೇಳಿ ಮೈಸೂರಿನ ಪತ್ರಿಕೋದ್ಯೋಗಿಗಳು ತಮಗೆ ಯಾವ ಬಗೆಯ ವಿಶೇಷ ಸೌಲಭ್ಯ ಮತ್ತು ರಿಯಾಯಿತಿಗಳೂ ಬೇಕಿಲ್ಲವೆಂದು ಸರ್ಕಾರದವರಿಗೆ ತಿಳಿಸಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು ಪತ್ರಿಕೆಗಳ ಮೇಲೆ ಹಾಕಿದ ಹತೋಟಿಗಿಂತಲೂ ಆತ್ಮ ಸಂಯಮವೇ ಪ್ರಭಾವಶಾಲಿಯಾದ ಪರಿಣಾಮವನ್ನುಂಟುಮಾಡಬಲ್ಲದೆಂದು ಹೇಳಿದರು

ಶ್ರೀ ಸಿ. ಆರ್ ಶ್ರೀನಿವಾಸನ್ನರು ಮಾತನಾಡಿ ಇನ್ನು [illegible] ಜೀವನದ [illegible] ಉತ್ತಮ [illegible] ಇದನ್ನು [illegible]

[illegible]

ರೈಲ್ವೆ ಕೆಲಸಗಾರರಿಗೆ ಒಂದು ತಿಂಗಳ ಬೋನಸ್ಸು

ಮೈಸೂರು ೧

ರೆವಿನ್ಯೂ ಮತ್ತು ರೈಲ್ವೆ ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರು ಮೊನ್ನೆ ದಿನ ಮೈಸೂರು ರೈಲ್ವೆ ಕೆಲಸಗಾರರ ಸಂಘಕ್ಕೆ ಭೇಟಿ ಕೊಟ್ಟು ಅದರ ಅಧಿಕಾರೀ ವರ್ಗದವರೊಡನೆ ಕೆಲಸಗಾರರ ಕುಂದುಕೊರತೆ ಬಗ್ಗೆ ಮಾತುಕತೆ ನಡೆಸಿದರು

ಕೆಲಸಗಾರರ ಸಹಕಾರ ಮತ್ತು ಪ್ರಾಮಾಣಿಕ ಸೇವೆಯ ಫಲವಾಗಿ ಹಿಂದಿನ ವರ್ಷ ರೈಲ್ವೆಯಲ್ಲಿ ಉತ್ತಮ ಕೆಲಸ ನಡೆದಿರುವುದೆಂದೂ, ಅದಕ್ಕಾಗಿ ಸರ್ಕಾರದವರು ಸಂತೋಷಪಟ್ಟು ಕೆಲಸಗಾರರಿಗೆ ಬೋನಸ್ಸು ಕೊಡಲು ನಿರ್ಧರಿಸಿದ್ದಾರೆಂದೂ ಅವರ ತಿಳಿಸಿದರು ಇದರಿಂದ ಶೇಕಡ ೬೪ ರಷ್ಟು ಮಂದಿಗೆ ಒಂದು ತಿಂಗಳ ಸಂಬಳ, ಶೇಕಡ ೧೬ ರಷ್ಟು ಜನರಿಗೆ ಶೇಕಡ ೭೫ ರಷ್ಟು ಸಂಬಳ ಮತ್ತು ಉಳಿದವರಿಗೆ ಶೇಕಡ ೭೦ ರಷ್ಟು ಸಂಬಳ ಹೆಚ್ಚಾಗಿ ಒರುವುದೆಂದು ಹೇಳಿದರು

ಈದ್ ಹಬ್ಬದಲ್ಲಿ ಗೋವಧೆ ಯಿಲ್ಲ

ಕಲ್ಕತ್ತ ಹತ್ತಿರ ಇರುವ ಸೆಣಬಿನ ಕಾರ್ಖಾನೆಯ ೪ ಸಾವಿರ ಮುಸ್ಲಿಂ ಕೆಲಸಗಾರರು ಈ ವರ್ಷ ಬರುವ ಈದ್ ಹಬ್ಬದಲ್ಲಿ ಗೋವಧೆ ಮಾಡುವುದಿಲ್ಲವೆಂದು ತೀರ್ಮಾನಿಸಿದ್ದಾರೆ

ಹಿಂದೀ ತರಗತಿ

ರಾಜಧಾನಿಯ ಮಾಧವರಾವ್ ಸರ್ಕಲ್ಲಿನಲ್ಲಿರುವ ಲೋಕಸೇವಾ ಮಂಡಲಿಯಲ್ಲಿ ದಸರಾ ರಜದ ಹಿಂದೀ ತರಗತಿಗಳು ಇದೇ ೨೫ ನೇ ತಾ॥ ನಿಂದ ಪ್ರಾರಂಭವಾಗಿವೆ ಮಹಾಜನರು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಗಾಂಧಿ ಜಯಂತಿಯ ಅಂಗವಾಗಿ ನಾಳೆ ಬೆಳಗ್ಗೆ ೧೦ ಘಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ನಗರ ಕಾಂಗ್ರೆಸ್ ಕರ್ತರ ಸಭೆಯು ನಡೆಯುವುದು ಆಚಾರ್ಯ ಕಾಕಾ ಕಾಲೇಲ್ಕರ್ರವರು ಭಾಷಣ ಮಾಡುವರು

ಇದು ಕಡೇ ದರ್ಬಾರು ಅಲ್ಲ

ಇದು ಕಡೆಯ ದರ್ಬಾರು ಎಂದು ಜನರಲ್ಲಿ ಹುಟ್ಟಿರುವ ಸಂಶಯಕ್ಕೆ ಆಧಾರವಿಲ್ಲವೆಂದೂ ವರ್ಧಂತಿ ಮತ್ತು ದಸರಾ ದರ್ಬಾರುಗಳು ಎಂದಿನಂತೆ ಆಗುವುವೆಂದೂ, ರಾಜ್ಯಾಂಗದಲ್ಲಿರುವ ಎಲ್ಲಾ ಅಧಿಕಾರಗಳನ್ನೂ ಮಹಾರಾಜರು ಚಲಾಯಿಸುವರೆಂದೂ, ಅವರ ಹಕ್ಕುಗಳು ಹಾಗೇಯೇ ಉಳಿಯುವುವೆಂದೂ ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಪತ್ರಿಕಾ ಭೇಟಿಯಲ್ಲಿ ತಿಳಿಸಿದ್ದಾರೆ

ಎಂ ಸಿ ಎಲ್ ಪತಿಯವರ
‡ ಮೈ. ಹೋಟೇಲ್ ‡
ಹೈಗ್ರೌಂಡ್ಸ್ (ರೇಸ್ ಕೋರ್ಸ್ ಹ
ಬೆಂಗಳೂರು
ಬ್ರಾಹ್ಮಣರ ಅಡಿಗೆ (ಊಟ, ಕಾಫಿ) ಸ್ನಾನ, ಸಜ್ಜಾದ ಅಟೋಚ್ಡ್ ಬಾತ್ ರೂಮು
ಸೀಟು ೧ಕ್ಕೆ ರೂ ೩ ಮತ್ತು ಮೇಲ್ಪ

ಭವಿಷ್ಯ
೧೨ ವರ್ಷದ ನಿಮ್ಮ ರಾಶಿಯ ಭವಿಷ್ಯ ಪುಸ್ತಕ
ಇಂದೇ ತರಿಸಿಕೊಳ್ಳಿರಿ ೧೯೪೯ ರಿಂದ ೧೯೬೧ರ ವರೆಗಿನ ಸಕಲ ಯೋಗಾದಿಗಳನ್ನೊಳಗೊಂಡಿದೆ ಉದ್ಯೋಗ ಕೃಷಿ ವ್ಯಾಪಾರಾದಿಗಳಲ್ಲಿನ ವೃದ್ಧಿ ಕ್ಷೀಣತೆಯ ವಿಚಾರವನ್ನೂ ತೀರ್ಥಯಾತ್ರಾ, ವಿವಾಹ, ಸಂತಾನ, ಧನ ಭಾಗ್ಯಾಭಿವೃದ್ಧಿಯ ಕಾಲವನ್ನೂ ಅನರ್ಥ ಸಂಕಟ ವಿಪತ್ತು ರೋಗರೋಗಾದಿ ಪರಿಹಾರ ಕ್ರಮಗಳೊಂದಿಗೆ ಬರೆದಿರುವುದು ಇದರಿಂದ ತಮ್ಮ ಕಷ್ಟಗಳನ್ನು ತಿಳಿದು ಕಡಿಮೆ ಮಾಡಿಕೊಂಡು ಸುಖಭಾಗ್ಯ ಶುಭಯೋಗವನ್ನು ಹೆಚ್ಚಿಸಿಕೊಳ್ಳಿರಿ ಬೆಲೆ ೪ ಪೋಸ್ಟೇಜು ೦ ೭ ೦
ನಿಮ್ಮ ರಾಶಿಯನ್ನು ತಿಳಿಸಿ ಬರೆಯಿರಿ -
ಎಸ್. ವೆಂಕಟಸುಬ್ಬ ಪುತ್ರಾನ್,
ಶ್ರೀ ದೇವಿಪ್ರಸಾದ್ ಜ್ಯೋತಿಷ್ಯಾಲಯ,
ಈ ಪುಸ್ತಕ ದೊರೆಯುವ ಸ್ಥಳ
ಮೈಸೂರು ದಸರಾ ಎಕ್ಸಿಬಿಷನ್
ಜೀವನ್ನಾರಾಯಣ ಕಟ್ಟೆ
ಸ್ಟಾಲ್ ನಂಬರಲ್ಲಿ ದೊರೆಯುತ್ತೆ

SRI GAYATHR
DAILY THREE SHOWS
on 1st & 2nd October 1
Spanish Main
Starring - Paul Henre
Maureen O Hara
- MORNING SHOWS -
WALT DISNEY's
VARIETY CARTOO

WANTED
Applications are rec ... ved by the President D... trict Board, Mysore till ... October 1949 for the ... of a temporary Ste... grapher on pay of Rs 7... per mensem with the us... Dearness allowance T... qualifications prescr... are - S S L C, Se... Short hand and Se... Type writing

ದಸರಾ ಸ್ಪೆಷಲ್
ರತ್ನ ಕಂಬಳಿಗಳು
ರೂ 1೫0 ಇಂದ ೩80
ಜಾ ಫು ಸಾ ರ್ ಕಂಪನಿ
ಎಗ್ಜಿಬಿಷನ್ ಸ್ಟಾಲ್ ನಂ C 13

ಮೈಸೂರು ಶ್ರೀಮನ್ಮಹಾರಾಜರ ಪ್ರದಿಕ್ಷಣ
೨೦ ಒಡೆಯರವರ ಬಾಸ್ ವೈದ್ಯ ಅಂಬಳೆ
ನರಸಿಂಹ ಸಂತರ ಮಕ್ಕಳ
ಸಂತಾನ ಸಿಂಧೂರ
ಬಹುಪ್ಟೈಕ ಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ ಕ್ರಯ -೧ ಸೆಟ್ ರೂ ೩-೪-೦ ತಯಾರಕರು -ಎ ರಾಮಸ್ವಾಮಿ ಅಯ್ಯಂಗಾರ್, ಅಂಬಳೆ, ಯಳಂದೂರು
ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೋಳದ ಬೀದಿ ೧೩೯೩ನೆ ನಂಬರ್ ಮನೆಯಲ್ಲಿ ಅಕ್ಟೋಬರ್ ೨, ೩, ೪, ೫, ೬, ಈ ತಾರೀಖುಗಳಲ್ಲಿ ಕ್ಯಾಂಪ್ ಮಾಡುತ್ತಾರೆ
ನೋಡತಕ್ಕ ಕಾಲ -ಬೆಳಗ್ಗೆ ೮ರಿಂದ ೧೧, ಮಧ್ಯಾಹ್ನ ೩ ರಿಂದ ೫

ಮಕ್ಕಳ ಲಿವರ್‌ಕಾಹಿಲೆಗ
ಸಿರ್ಯೋಜ್ಯಮ್
ಮಕ್ಕಳ
- ಲಿವರ್ ಕಾಹಿಲೆ -
ಸಮರ್ಪಕ
• ಪರಿಶೀಲನೆ
• ಸಲಹೆ ಸೂಚನೆ
ಇವುಗಳಿಗೆ
ಲಿವರ್ ಹೌಸ್,
ಚಾಮರಾಜಪುರಂ, ಮೈಸೂರು
(ಕೋ-ಆಪರೇಟಿವ್ ಸೊಸೈಟಿ ಪಕ್ಕದಲ್ಲಿ)
ವೇಳೆ - ಬೆಳಗ್ಗೆ ೮ ರಿಂದ ೧೨
ತಾ॥ ೨೯ರಿಂದ ೫ ದಿನಗಳು ಮಾತ್ರ

ಶ್ರೀ ಗಣೇಶಾ ಟಾಕೀಸ್
ತಾ॥ 30-9-49ರಿಂದ ಪ್ರತಿ ದಿನ ೩ ಪ್ರದರ್ಶನಗಳು
ಸುರಭಿ ಪಿಕ್ಚರ್ಸ್‌ರವರ ಅತ್ಯುತ್ತಮ ಪೌರಾಣಿಕ ಕನ್ನಡ ಚಿತ್ರ
ಭಕ್ತ ಕುಂಬಾರ
ತಾರಾಗಣ - ಹೊನ್ನಪ್ಪ ಭಾಗವತರ್, ಲಕ್ಷ್ಮೀಬಾಯಿ,
ಪಂಡರಿಬಾಯಿ, ಜಯಶ್ರೀ ಮುಂತಾದವರು

ರಾಜಕಮಲ್,
ಮೈಸೂರು
30-9-49ರಿಂದ
ಫಿಲ್ಮಿಸ್ತಾನ್‌ರವರ
- ಆಕ್ರೈಸ್ -
ರೆಹನ, ಮೀನಾ, ಪ್ರೇಮ್ ಅದೀಬ್
ಅಭಿನಯಿಸಿರುವ ಹಿಂದಿ ಚಿತ್ರ
MORNING SHOWS From 30-9-49 for 4 days
IT HAD TO BE YOU
With Ginger Rogers & Cornel Wilde

ದಸರಾ ಹಬ್ಬಕ್ಕಾಗಿ ತರಿಸಿದೆ.
ಪ್ಲೈನ್ ಮತ್ತು ಪ್ರಿಂಟೆಡ್ ಸಿಲ್ಕ್ಸ್, ಜಾರ್ಜೆಟ್ಸ್, ಕ್ರೇಪ್ಸ್, ಸಾಟಿನ್ಸ್, ಲಿನನ್ಸ್, ವುಲ್ಲನ್ ಪೀಸ್ ಗೂಡ್ಸ್ ಮತ್ತು ನವೀನ ಮಾದರಿಯ
ಮೈಸೂರು ಸಿಲ್ಕ್ಸ್ ಮತ್ತು ಸೀರೆಗಳು
(ನಮ್ಮ ಕಾರ್ಖಾನೆಯಲ್ಲಿ ಸ್ಪೆಷಲ್ಲಾಗಿ ತಯಾರಿಸಿದ್ದು)
ಇಂದೇ ಭೇಟಿ ಕೊಡಿ -
ಮೈಸೂರು ದಸರಾ ಎಗ್ಜಿಬಿಷನ್, ಬ್ಲಾಕ್ 'ಸಿ' ಸ್ಟಾಲ್ಸ್ 18 19
ಚಂದೀರಾಮ್ ಬ್ರದರ್ಸ್,
ಮಹಾತ್ಮಾ ಗಾಂಧಿ ರೋಡ ಬೆಂಗಳೂರು

✻ ಕಬ್ಬಿಣದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್, ಅಲಾರಂ ಸೇಫ್ ಸುಲಭವಾದ ಬೆಲೆ. ✻
ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್, ಹಳ್ಳದಕೇರಿ ಮತ್ತು ಜೀವನರಾಯನ ಕಟ್ಟೆ (ಸ್ಟಾಲ್ ನಂ) ಮೈಸೂರು

Edited, printed and published by A R Nagarajan at Sadhvi Press, D Subbiah Road, Mysore

ಫೋ|| ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೩-೧೦-೧೯೪೯ [ಸಂಚಿಕೆ ೫೫

ಚೀಣದಲ್ಲಿ ಕಮ್ಯೂನಿಸ್ಟ್ ರಿಪಬ್ಲಿಕ್ ಸ್ಥಾಪನೆ

ಗಾಂಧಿ ಜಯಂತಿ

ಮೈಸೂರು ೩

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಗಾಂಧಿ ಜಯಂತಿ ಪ್ರಯುಕ್ತ ಶ್ರೀಮತಿಗಳಾದ ಕಮಲಾ ಗಾಂಧಿ, ಸರಸ್ವತಿ ಗಾಂಧಿ ಮತ್ತು ಸುಬ್ಬಮ್ಮನವರುಗಳಿಂದ ಪ್ರಾರ್ಥನೆ ನಡೆಯಿತು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ವಿದ್ಯಾ ಸಚಿವ ಶ್ರೀ ಡಿ ಎಚ್. ಚಂದ್ರಶೇಖರಯ್ಯ ಮತ್ತು ಇತರರು ಅದರಲ್ಲಿ ಭಾಗ ವಹಿಸಿದ್ದರು.

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಶ್ರದ್ಧಾನಂದ ಔಷಧಾಲಯದ ಬಳಿ ನಿನ್ನೆ ಸಂಜೆ ೪ ಘಂಟೆಗೆ ಸಚಿವ ಜನಾಬ್ ಮಹಮ್ಮದ್ ಷರೀಫರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯು ನಡೆಯಿತು ಶ್ರೀ ಎಂ ವಿ ಕೃಷ್ಣರಾಯರಿಂದ ಗಾಂಧಿಜೀಯವರ ಆದರ್ಶ ಜೀವನ ಮತ್ತು ಶ್ರೀ ಅ ರಂಗಯ್ಯನವರಿಂದ ಮಾನವ ಸೇವೆ ಎಂಬ ವಿಚಾರವಾಗಿ ಭಾಷಣಗಳಾದುವು

ಹಿಂದೀ ಪ್ರಚಾರ ಸಭೆಗೆ ದಿವಾಕರರ ಭೇಟಿ

ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರರು ಕಳೆದ ಶುಕ್ರವಾರ ನಗರದ ಹಿಂದೀ ಪ್ರಚಾರ ಸಭೆಗೆ ಭೇಟಿ ಇತ್ತು, ಕಾರ್ಯಕರ್ತರುಗಳನ್ನು ಉದ್ದೇಶಿಸಿ ಬಾಷಣ ಮಾಡಿದರು

ಶ್ರೀ ಎಗ್. ನಾಗಪ್ಪನವರಿಂದ ಸ್ವಾಗತ ಭಾಷಣವಾದನಂತರ ಶ್ರೀ ದಿವಾಕರರು ಮಾತನಾಡಿ, ರಾಷ್ಟ್ರ ಭಾಷೆಯಾದ ಹಿಂದಿಯನ್ನು ಪ್ರತಿಯೊಬ್ಬರೂ ಕಲಿಯುವ ತೆ ಹೆಯನ್ನ ಯವರು ಪ್ರಯತ್ನ ಮಾಡಬೇಕೆಂದೂ, ಸಂಸ್ಕೃತದ ಸಹಾಯ ಪಡೆದು ಪ್ರಾಂತೀಯ ಭಾಷೆಗಳ ಶಬ್ದಗಳನ್ನು ಉಪಯೋಗಿಸಿ, ಹಿಂದಿಯನ್ನು ಜನ ಸಾಮಾನ್ಯರ ಭಾಷೆಯನ್ನಾಗಿ ಮಾಡಬೇಕೆಂದೂ ತಿಳಿಸಿದರು

ಬ್ರಿಟನ್ನಿನಲ್ಲಿ ಕೃತಕ ಮಳೆ

ವಿಮಾನದ ಮೂಲಕ ರಸಾಯನ ವಸ್ತುಗಳನ್ನು ಮೋಡಗಳ ಮೇಲೆ ಚಲ್ಲಿ ಕೃತಕ ಮಳೆಯನ್ನು ಮೊಟ್ಟಮೊದಲನೆಯ ಬಾರಿ ಬ್ರಿಟನ್ನಿನಲ್ಲಿ ಬರಿಸಲಾಯಿತೆಂದು ವರದಿಯಾಗಿದೆ ಟೀಟ್ ಎಂಬ ಪ್ರದೇಶದ ಲ್ಲಿ ಮಳೆಯ ಅಭಾವದಿಂದ ಅನೇಕ ಕೈಗಾರಿಕೆಗಳನ್ನು ಮುಚ್ಚಬೇಕಾದ ಪ್ರಸಂಗ ಬಂದುದರಿಂದ, ಈ ಭಾರಿ ಇಂತಹ ವಿಧಾನದಿಂದ ಮಳೆಯನ್ನು ಸುರಿಸಲಾಯಿತೆಂದು ಹೇಳಲಾಗಿದೆ

೬೦ ವರ್ಷ ಜೈಲುವಾಸ

ಅಮೃತಸರದ ಅರ್ಜನ್ ಸಿಂಗ್ ಎಂಬ ೭೫ ವರ್ಷದ ಸಿಕ್ ಮುದುಕನು ತನ್ನ ಜೀವಮಾನದಲ್ಲಿ ೬೦ ವರ್ಷವನ್ನು ಜೈಲಿನಲ್ಲೇ ಕಳೆದಿರುವನೆಂದು ವರದಿಯಾಗಿದೆ ೫೦ ಬಾರಿ ಅವನಿಗೆ ಶಿಕ್ಷೆ ವಿಧಿಸಲಾಗಿತ್ತು. ಕೆಲವು ದಿನಗಳ ಹಿಂದೆ ಆತನು ಜೈಲಿನಿಂದ ಬಿಡುಗಡೆಯಾದಕೂಡಲೇ ಕಳ್ಳತನ ಮಾಡಿದುದರಿಂದ ಪುನಃ ೩ ವರ್ಷ ಸಜಾ ಶಿಕ್ಷೆಯನ್ನು ವಿಧಿಸಿ, ಆತನನ್ನು ಜೈಲಿಗ ಕಳುಹಿಸಲಾಯಿತು. ಜೀವಮಾನವನ್ನು ಕಳೆಯಲು ಆತನಿಗೆ ಬೇರೆ ಯಾವ ಸ್ಥಳವೂ ಇಲ್ಲವೆಂದೂ ಮತ್ತು ಮುಂದೆ ಯಾವ ಅಪರಾಧವನ್ನೂ ನಡೆಸಲು ಅವಕಾಶವಾಗದಂತೆಯೂ ಆತನು ತನ್ನ ಜೀವಮಾನದ ಉಳಿದ ಕಾಲವನ್ನು ಜೈಲಿನಲ್ಲಿ ಕಳೆಯಬೇಕೆಂದು ನ್ಯಾಯಾಧೀಶರು ತಿಳಿಸಿರುತ್ತಾರೆ.

ಚೀಣಾದಲ್ಲಿ ಕಮ್ಯೂನಿಸ್ಟ್ ಸರಕಾರದ ಸ್ಥಾಪನೆ

ಚೀಣಾ ಕಮ್ಯೂನಿಸ್ಟ್ ಪಂಗಡದ ನಾಯಕ ಮೊಟ್ಸೆ ತುಂಗ್‌ರವರನ್ನು ಚೀಣಾ ರಿಪಬ್ಲಿಕ್ಕಿನ ಪ್ರಜಾ ಸರ್ಕಾರದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು ಚೀಣಾ ರಿಪಬ್ಲಿಕ್ಕನ್ನು ಸ್ಥಾಪನೆ ಮಾಡಿದ ಸರ್ ಯಾತ್ ಸೇನರ ಪತ್ನಿ ಮೆ ಡಾಂ ಸೇನರನ್ನೂ ಕಮ್ಯೂನಿಸ್ಟ್ ಪಂಗಡದ ಮುಖ್ಯ ಸೇನಾಧಿಕಾರಿ ಜ|| ಚೂಟೆರವರನ್ನೂ ಉಪಾಧ್ಯಕ್ಷರುಗಳನ್ನಾಗಿ ಆರಿಸಲಾಗಿದೆ

ನೂತನ ಸರ್ಕಾರಕ್ಕೆ ರಷ್ಯವು ಅಂಗೀಕಾರ ಕೊಟ್ಟಿದೆ ರಷ್ಯಾಯು ಸರ್ಕಾರದೊಡನೆ ರಾಯಭಾರಿ ಸಂಬಂಧವನ್ನು ಕಡಿದು ಹಾಕಿದೆ

ಚೀಣಾದಲ್ಲಿ ಪ್ರಜಾ ರಿಪಬ್ಲಿಕ್ ಸರ್ಕಾರವನ್ನು ಸ್ಥಾಪಿಸಿದುದಕ್ಕಾಗಿ ಕಮ್ಯೂನಿಸ್ಟ್ ನಾಯಕರಾದ ಮೋಸೆ ತುಂಗ್ ರವರನ್ನು ಅಭಿನಂದಿಸಿ ಶ್ರೀ ಶರತ್ ಚಂದ್ರ ಬೋಸರು ಒಂದು ಸಂದೇಶವನ್ನು ಕಳುಹಿಸಿರುತ್ತಾರೆ

ಕಾಲೇಜ್ ಉಪಾಧ್ಯಾಯರ ವಜಾ

ಹೈದರಾಬಾದ್ ಕಾಲೇಜಿನ ಅಧ್ಯಾಪಕರೊಬ್ಬರು ಅಲ್ಲಿನ ಸುಲ್ತಾನ್ ಬಜಾರ್ ಸರಕಾರಿ ಹೈಸ್ಕೂಲಿನ ವಿದ್ಯಾರ್ಥಿಯ ಪರ ಅಕ್ರಮವಾಗಿ ಪರೀಕ್ಷೆಯಲ್ಲಿ ಕುಳಿತು ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆದರೆಂದು ಅವರನ್ನು ಸರ್ಕಾರದವರು ಕೆಲಸದಿಂದ ವಜಾ ಮಾಡಿದ್ದಾರೆ ೫ ವರ್ಷ ಪರೀಕ್ಷೆಗೆ ವಿದ್ಯಾರ್ಥಿಯು ಕುಳಿತ ಕೊಳ್ಳಕೂಡದೆಂದೂ ಆಜ್ಞೆ ಮಾಡಲಾಗಿದೆ

'ಯುಗ ಶಕ್ತಿ'

ಶ್ರೀ ಎಸ್ ಶಿವಣ್ಣನವರ ಸಂಪಾದಕತ್ವದಲ್ಲಿ ರಾಜಧಾನಿಯಿಂದ ಪ್ರಕಟವಾಗಿರುವ 'ಯುಗ ಶಕ್ತಿ' ಎಂಬ ಕನ್ನಡ ವಾರ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಕೇವಲ ನುಡಿಯಲ್ಲಿರುವ ಪ್ರಜಾಪ್ರಭುತ್ವ ತತ್ವಗಳು ನಮ್ಮಲ್ಲಿ ಆಚರಣೆಗೆ ಬಂದು ಪ್ರಜಾ ಸಾಮ್ಯದ ಪರಮಾದರ್ಶಕ್ಕೆ ಮನ್ನಣೆ ದೊರೆಯಲು ಮತ್ತು ಪ್ರಬಲ ಪ್ರತಿಪಕ್ಷವಿಲ್ಲದೆ ಏಕ ಪಕ್ಷದಬ್ಬಾಳಿಕೆಯಿಂದ ಪ್ರಜಾ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗುತ್ತಿರಲು ಸೇವೆ ಸಲ್ಲಿಸಲು ಜನತಾ ಳಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂದು ಹಾರೈಸುತ್ತೇವೆ ಬೆಲೆ ೩ ಕಾಸು

ಜಿನ್ನಾ ಸ್ಮಾರಕ ನಿಧಿಗೆ ಕೇವಲ ೩ ಲಕ್ಷ ರೂ

ಪಾಕೀಸ್ತಾನದ ಗವರ್ನರ್ ಜನರಲ್ಲಾಗಿದ್ದ ಜಿನ್ನಾರವರ ಸ್ಮಾರಕ ನಿಧಿಗೆ ಕೇವಲ ೩,೫೫,೦೦೦ ರೂ ಸಂಗ್ರಹವಾಗಿದೆಯೆಂದೂ, ಅದರ ಪೈಕಿ ೧,೩೯,೦೦೦ ರೂ ಅನ್ನು ಪಾರ್ಸಿ ಜನಾಂಗದವರು ಕೊಟ್ಟಿರುವರೆಂದೂ ಹೇಳಲಾಗಿದೆ

ಕಾರ್ಯಾಂಗದಿಂದ ನ್ಯಾಯಾಂಗದ ಪ್ರತ್ಯೇಕ

ಮದರಾಸ್ ಪ್ರಾಂತ್ಯದ ಉತ್ತರ ಆರ್ಕಾಟ್ ಮತ್ತು ಚಿಂಗಲ್‌ಪಟ್ ಜಿಲ್ಲೆಗಳಲ್ಲಿ ಮೊನ್ನೆಯಿಂದ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲಾಯಿತು ಇಂತಹ ಸುಧಾರಣೆಯು ಭಾರತದಲ್ಲಿ ಇದೇ ಪ್ರಥಮ ವೆಂದು ಹೇಳಲಾಗಿದೆ

ಶಬ್ದದ ಸಹಾಯದಿಂದ ಬೆಳೆ

ಶಬ್ದದ ಸಹಾಯದಿಂದ ತರಕಾರಿಯನ್ನು ಬೆಳೆಯಬಹುದೆಂದೂ ಮತ್ತು ಅನೇಕ ಕಾಹಿಲೆಗಳನ್ನು ಗುಣಪಡಿಸಬಹುದೆಂದೂ ಬ್ರಿಟನ್ನಿನ ವೈಜ್ಞಾನಿಕರು ತಿಳಿಸಿರುತ್ತಾರೆ ಒಂದು ಬಗೆಯ ಶಬ್ದದ ಅಲೆಗಳನ್ನು ಸಸ್ಯಗಳ ಮೇಲೆ ಬಿಡುವುದರಿಂದ ಬೆಳೆಯ ಉತ್ಪತ್ತಿಯನ್ನು ಮಾಡಬಹುದೆಂದು ಹೇಳಲಾಗಿದೆ

೧೩ ಮೈಲಿ ಕಾಣುವ ವಿದ್ಯುಚ್ಛಕ್ತಿ ದೀಪ

೧೩ ಮೈಲಿಗಳಷ್ಟು ದೂರ ಕಾಣುವ ೧ ಲಕ್ಷ ೪೦ ಸಾವಿರ ಕ್ಯಾಂಡಲ್ ಪವರುಳ್ಳ ವಿದ್ಯುಚ್ಛಕ್ತಿ ದೀಪವನ್ನು ಕ್ಯಾಲಿಫೋರ್ನಿಯಾ ಬಂದರಿನ ದೀಪದ ಮನೆಗೆ ಹಾಕಲಾಗಿದೆಯೆಂದು ಹೇಳಲಾಗಿದೆ ಈ ದೀಪವು ಮನುಷ್ಯನ ಸಹಾಯವಿಲ್ಲದೆ ಒಂದು ಗಡಿಯಾರದ ಮೂಲಕ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ

ಸಕ್ಕರೆ ಬೆಲೆ

ಇದೇ ೧ ನೇ ತಾ|| ನಿಂದ ಸಕ್ಕರೆ ಬೆಲೆಯನ್ನು ಕೆಳಗೆ ಕಂಡಂತೆ ಮೈಸೂರು ನಗರದಲ್ಲಿ ನಿಗದಿ ಮಾಡಲಾಗಿದೆಯೆಂದು ರೇಷನಿಂಗ್ ಅಧಿಕಾರಿಗಳು ತಿಳಿಸಿರುತ್ತಾರೆ ಒಂದು ಮೂಟೆಗೆ ೫೫-೩-೦ರೂ ಒಂದು ವೀಸೆಗೆ ಮಾರಾಟದ ಬೆಲೆ ಸೇರು ರೂ ೧ ೪-೦

ಶ್ರವಣಬೆಳಗೊಳದಲ್ಲಿ ಮಹಾತ್ಮರ ಸ್ಮಾರಕ

ಮಹಾತ್ಮ ಗಾಂಧೀಜಿಯವರ ಸ್ಮಾರಕವನ್ನು ರಚಿಸಲು ಶ್ರವಣಬೆಳಗೊಳ ದೇವಸ್ಥಾನದಷ್ಟು ಶ್ರೇಷ್ಠವಾದ ಸ್ಥಳವು ಭಾರತದಲ್ಲಿ ಎಲ್ಲೂ ಇಲ್ಲವೆಂದು ಆಚಾರ್ಯ ಕಾಕಾ ಕಾಲೇಲ್ಕರ್‌ರವರು ಅಲ್ಲಿಗೆ ಮೊನ್ನೆ ದಿನ ಭೇಟಿ ಇತ್ತಾಗ ತಿಳಿಸಿರುತ್ತಾರೆ

ಲಕ್ನೋವಿನಲ್ಲಿ ಆಧುನಿಕ ಜೈಲು

ಲಕ್ನೋವಿನಲ್ಲಿ ಅತ್ಯಾಧುನಿಕ ಜೈಲನ್ನು ಕಟ್ಟಲಾಗುತ್ತಿದೆಯೆಂದೂ, ಅದರಲ್ಲಿ ಖೈದಿಗಳನ್ನು ಸಮಾಜಕ್ಕೆ ವಾಪಸು ತೆಗೆದುಕೊಳ್ಳುವಂತೆ ಅವರನ್ನು ಸುಧಾರಿಸುವ ವ್ಯವಸ್ಥೆ ಮಾಡಲಾಗುವುದೆಂದೂ, ಇಂತಹ ಜೈಲು ಭಾರತದಲ್ಲೇ ಪ್ರಥಮವೆಂದೂ ಹೇಳಲಾಗಿದೆ

ಮಾರ್ಷಲ್ ಟಿಟೋರವರ ಕೊಲೆ ಪ್ರಯತ್ನ

ಯುಗೋಸ್ಲೇವಿಯಾ ಅಧ್ಯಕ್ಷರಾದ ಮಾರ್ಷಲ್ ಟಿಟೋರವರನ್ನು ಕೊಲೆ ಮಾಡಲು ಪ್ರಯತ್ನಿಸಿದರೆಂಬ ಅಪಾದನೆಯ ಮೇಲೆ ಪೋಲೋ ಎಂಬ ನೌಕಾ ಕೇಂದ್ರದಲ್ಲಿ ಅನೇಕ ಕಮ್ಯೂನಿಸ್ಟರನ್ನು ದಸ್ತಗಿರಿ ಮಾಡಲಾಗಿದೆಯೆಂದು ವರದಿಯಾಗಿದೆ

ಕೋಮುವಾರು ವಿದ್ಯಾರ್ಥಿನಿಲಯಗಳಿಗೆ ಅಂಗೀಕಾರ ಕೂಡದು

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಗಾಂಧಿ ಜಯಂತಿಯು ನಿನ್ನೆ ಪ್ರೊ|| ಆಚಾರ್ಯ ಕಾಕಾ ಕಾಲೇಲ್ಕರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಆಚಾರ್ಯರು ಭಾಷಣ ಮಾಡಿ, ಹರಿಜನರನ್ನು ಸರಿಸಮಾನರನ್ನಾಗಿ ಕಾಣದ ಕೋಮುವಾರು ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರದವರು ಅಂಗೀಕಾರ ಕೊಡಕೂಡದೆಂದು ತಿಳಿಸಿದರು ಯಾವ ಕೋಮಿನ ನಿಲಯವೇ ಆಗಲೀ ಶೇಕಡ ೨೦ರಷ್ಟು ಹರಿಜನರನ್ನು ಸೇರಿಸಬೇಕೆಂದು ಕಾನೂನು ಮಾಡಬೇಕೆಂದೂ, ಇಂತಹ ಸಾರ್ವಜನಿಕ ಸಂಸ್ಥೆಗಳಿಗೆ ಜನರು ಹೆಚ್ಚು ಸಹಾಯ ನೀಡಬೇಕೆಂದೂ ಹೇಳಿದರು

ಅಚ್ಯುತ ಪಟ್ವರ್ಧನ್‌ರವರ ಭಾಷಣ

ಅಖಿಲ ಭಾರತ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಅಚ್ಯುತ ಪಟ್ವರ್ಧನರವರು ನಾಳೆ ಬುಧವಾರ ಸಂಜೆ ೬ ಗಂಟೆಗೆ ಟೌನ್‌ಹಾಲ್ ನಲ್ಲಿ ಸಮಾಜವಾದಿ ವಿದ್ಯಾರ್ಥಿ ಸಂಸ್ಥೆಯ ಆಶ್ರಯದಲ್ಲಿ ಭಾಷಣ ಮಾಡುವರು

ಗಾಂಧಿ ಜಯಂತಿ ಹಸ ಹರಿಜನರಿಗೆ ...

ಗಾಂಧಿ ಜಯಂತಿ ... ಅಂದು ... ನೇ ತಾ|| ... ಪ್ರಾಂತ್ಯದ ... ಮದರಾಸಿನ ... ಭಾಗದ ... 'ವಿದ್ಯಾ ...' ... ನಿ ... ವರ್ಗ ... ದಿಗೆ ... ವಾಗ ...

ಬೌದ್ಧ ... ಬೋಧನೆ ... ಯನ್ನು ...

ಪುರಸಭಾಧ್ಯಕ್ಷರ ವಂದನೆ

ಮೈಸೂರು ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಈ ಕೆಳಗೆ ಕಂಡಂತೆ ಹೇಳಿಕೆಯನ್ನಿತ್ತಿದ್ದಾರೆ:-

ಮೈಸೂರಿನಲ್ಲಿ ನವರಾತ್ರಿ ಮಹೋತ್ಸವವು ಈ ವರ್ಷವೂ ಎಂದಿನಂತೆ ವಿಜೃಂಭಣೆಯಿಂದಲೂ ಯಶಸ್ವಿಯಾಗಿಯೂ ನಡೆಯಿತು. ಹಿಂದೆ ನೆರೆಯುತ್ತಿದ್ದುದಕ್ಕಿಂತ ಬಹುಮಟ್ಟಿಗೆ ಹೆಚ್ಚಾಗಿ ಮೈಸೂರು ದೇಶದಿಂದ ಮಾತ್ರವಲ್ಲದೆ ಭಾರತದ ಅನೇಕ ಭಾಗಗಳಿಂದ ಜನರು ಬಂದಿದ್ದರು ಈ ಜನ ಸಮುದಾಯಕ್ಕೆ ಬೇಕಾದ ಎಲ್ಲಾ ಅನುಕೂಲಗಳನ್ನೂ ಪುರಸಭೆಯವರು ಒದಗಿಸುವುದಕ್ಕೆ ಸಾಧ್ಯವಾಗದಿದ್ದರೂ ನಮ್ಮ ಕೈಲಾದ ಮಟ್ಟಿಗೆ ಒದಗಿಸಿದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಪುರಸಭೆಯವರೊಡನೆ ಸಹಕರಿಸಿದ್ದಕ್ಕಾಗಿ ನಮ್ಮೂರಿಗೆ ಬಂದ ಎಲ್ಲಾ ಹೊರಗಿನವರಿಗೂ, ನಗರ ನಿವಾಸಿಗಳಿಗೂ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ

ಹೊರಗಿನಿಂದ ಬಂದ ಲಕ್ಷಾಂತರ ಜನರಿಗೆ ನೀರನ್ನೊದಗಿಸಬೇಕಾದ ಕಾರಣದಿಂದ ನಗರದ ಕೆಲವು ಭಾಗಗಳಲ್ಲಿ ನೀರಿನ ಸರಬರಾಯಿ ಕೊರತೆ ಒಂದೆರಡು ದಿನ ಸ್ವಲ್ಪಮಟ್ಟಿಗೆ ಉಂಟಾದರೂ, ನಗರ ನಿವಾಸಿಗಳು ಶಾಂತತೆಯಿಂದಲೂ ಸೌಹಾರ್ದದಿಂದಲೂ ನಮ್ಮೊಡನೆ ಸಹಕರಿಸಿದ್ದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ

ಕಾರಣಾಂತರಗಳಿಂದ ನವರಾತ್ರಿಯ ಮೆರವಣಿಗೆ ಕಳೆದ ಕೆಲವು ವರ್ಷಗಳಲ್ಲಿ ನಡೆಯಲಿಲ್ಲ ಮಹಾಸ್ವಾಮಿಯವರು ಕೃಪೆಮಾಡಿ ಈ ವರ್ಷ ಜಂಬೂಸವಾರಿಯಲ್ಲಿ ಚಿತ್ತೈಸಿದರು ಈ ಉತ್ಸವವನ್ನು ನೋಡಲು ಲಕ್ಷಗಟ್ಟಳೆ ಜನರು ಹಿಂದೆಂದೂ ಸೇರದಿದ್ದಷ್ಟು ಸಂಖ್ಯೆಯಲ್ಲಿ ಸೇರಿ ಶ್ರೀಮನ್ಮಹಾರಾಜರವರಲ್ಲಿ ತಮಗಿರುವ ಭಕ್ತಿ ವಿಶ್ವಾಸಗಳನ್ನು ಸೂಚಿಸಿದರು ಜನ ಶ್ರೇಣಿಯಲ್ಲಾ ದಾರಿಯುದ್ದಕ್ಕೂ ಶಿಸ್ತಿನಿಂದಲೂ, ಕಟ್ಟಳೆಯಿಂದಲೂ ವರ್ತಿಸಿ ಉತ್ಸವವು ಯಶಸ್ವಿಯಾಗುವಂತೆ ಮಾಡಿದರು ಮಳೆಯ ದೆಸೆಯಿಂದ ಬನ್ನಿ ಮಂಟಪದಿಂದ ಅರಮನೆಗೆ ರಾತ್ರಿ ಮೆರವಣಿಗೆ ನಡೆಯಲು ಸಾಧ್ಯವಾಗದೆ ಹೋದುದು ನಮ್ಮ ದುರದೃಷ್ಟ ಸವಾರಿಯ ಉತ್ಸವದಲ್ಲಿ ಪುರಸಭೆಯ ಕಾರ್ಯಭಾಗಕ್ಕೆ ನೆರವಾದ ಎಲ್ಲ ಮಹನೀಯರಿಗೂ ಶಾಂತಿ ಸಂರಕ್ಷಣೆ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಮಾಡಿದ ಪೋಲೀಸಿನವರಿಗೂ ಪುರಸಭೆಯ ಪರವಾಗಿ ವಂದನೆಗಳನ್ನು ಸಮರ್ಪಿಸುತ್ತೇನೆ.

ಶ್ರೀಮನ್ಮಹಾರಾಜರವರ ಕೃಪೆಯಿಂದಲೂ ಮೈಸೂರು ಸರ್ಕಾರದವರ ಸಹಾಯದಿಂದಲೂ ಪುರಸಭೆಯವರು ಆರು ಕೇಂದ್ರಗಳಲ್ಲಿ ಊಟದ ಏರ್ಪಾಡನ್ನು ನವರಾತ್ರಿಯ ಕಡೇ ನಾಲ್ಕು ದಿನಗಳಲ್ಲಿ ಮಾಡಿದ್ದರು ಸಾವಿರಾರು ಜನ ಈ ಕೇಂದ್ರಗಳಲ್ಲಿ ಪ್ರತಿದಿನವೂ ಊಟ ಮಾಡಿದರು ಈ ಸಂದರ್ಭದಲ್ಲಿ ಅನೇಕ ಮಹಿಳೆಯರೂ ಮಹನೀಯರೂ ವಿಶೇಷ ಶ್ರಮವಹಿಸಿ ನಮಗೆ ಸಹಾಯ ಮಾಡಿದ್ದಾರೆ ಅವರೆಲ್ಲರಿಗೂ ಪುರಸಭೆಯ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ನವರಾತ್ರಿಯ ಮಹೋತ್ಸವದಲ್ಲಿ ನಗರದ ಸಾರ್ವಜನಿಕ ಆರೋಗ್ಯ ಸ್ಥಿತಿಯೂ ನೈರ್ಮಲ್ಯವೂ, ರಸ್ತೆಗಳೂ ಪೌರಜೀವನಕ್ಕೆ ಅವಶ್ಯಕವಾದ ಇತರ ಅನುಕೂಲತೆಗಳೂ ಉತ್ತಮ ಸ್ಥಿತಿಯಲ್ಲಿ ಇರುವಂತೆ ಶ್ರಮಪಟ್ಟು ಕೆಲಸಮಾಡಿದ ಪುರಸಭೆಯ ಅಧಿಕಾರಿಗಳಿಗೂ ನೌಕರರಿಗೂ ನಗರ ನಿರ್ಮಲೀಕರಣ ಮಾಡುವವರಿಗೂ ಈ ಕಾರ್ಯಗಳಲ್ಲಿ ನೆರವಾದ ಪುರಜನರಿಗೂ ನನ್ನ ಕೃತಜ್ಞತೆಯನ್ನು ಸೂಚಿಸುತ್ತೇನೆ

ಎಂ ಸಿ ಎಲ್. ಶೆಟ್ಟಿಯವರ

‡ ಮೈ. ಹೋಟೇಲ್ ‡

ಹೈಗ್ರೌಂಡ್ಸ್ (ರೇಸ್ ಕೋರ್ಸ್ ಹತ್ತಿರ) ಬೆಂಗಳೂರು

ಬ್ರಾಹ್ಮಣರ ಅಡಿಗೆ. (ಊಟ, ತಿಂಡಿ, ಕಾಫಿ) ಸ್ನಾನ, ಸಜ್ಜಿದ ಅಟ್ಯಾಚ್ಡ್ ಬಾತ್ ರೂಮು

ಸೀಟು ೧ಕ್ಕೆ ರೂ ೩ ಮತ್ತು ಮೇಲ್ಪಟ್ಟು

ಘಟಿಕೋತ್ಸವ 1949

ವಿಶ್ವವಿದ್ಯಾಲಯದ ಪದವಿಯನ್ನು ಕೊಡುವ ಸಲುವಾಗಿ ವಿಶ್ವವಿದ್ಯಾಲಯದ ಮೂವತ್ತನೆಯ ವಾರ್ಷಿಕ ಘಟಿಕೋತ್ಸವವು ೧೯೪೯ ನೇ ನವಂಬರ್ ೩ನೇ ತಾರೀಖು ಗುರುವಾರ ನಡೆಯುವುದೆಂದು ಈ ಮೂಲಕ ಪ್ರಚುರ ಪಡಿಸಲಾಗಿದೆ

ಘಟಿಕೋತ್ಸವ ಸಮಾರಂಭದ ವೇಳೆ ಮತ್ತು ಸ್ಥಳವನ್ನು ಇಷ್ಟರಲ್ಲೇ ಪ್ರಕಟಿಸಲಾಗುವುದು

ವಿದ್ಯಾರ್ಥಿಗಳು ಕಳೆದ ಬಾರಿ ಡಿಗ್ರಿ ಪರೀಕ್ಷೆಗೆ ಓದಿದ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಘಟಿಕೋತ್ಸವದ ಪ್ರವೇಶಕ್ಕೆ ಅರ್ಜಿ ನಮೂನೆಗಳನ್ನು (ಖುದ್ದಾಗಿಯೂ ಮತ್ತು ಗೈರು ಹಾಜರಿನಲ್ಲಿಯೂ) ಪಡೆಯಬಹುದು.

ಘಟಿಕೋತ್ಸವಕ್ಕೆ ಪ್ರವೇಶದ ಅರ್ಜಿಗಳು ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾಲಯ. ಮೈಸೂರು ಇವರಿಗೆ ೧೯೪೯ ನೇ ಅಕ್ಟೋಬರ್ ೮ನೇ ತಾರೀಖು ಶನಿವಾರದ ದಿನ ಅಥವಾ ಅದಕ್ಕೆ ಮುಂಚೆ ತಲುಪುವಂತೆ ಕಳುಹಿಸಬೇಕು.

ಸಿ. ರಂಗಾಚಾರ್.
ಆಕ್ಟಿಂಗ್ ರಿಜಿಸ್ಟ್ರಾರ್.

SRI GAYATHRI
3rd and 4th Oct.
THE
ANGRY GOD
ಕುಂಭ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ತಾ॥ ೧೦ ೧೧ ಪೆಟ್ಟಿ ಖರೀದಿ

ಮೀನ—ನಿಮ್ಮ ಮತ್ತು ಪತ್ನಿ ಆರೋಗ್ಯ ನೆಟ್ಟಗೆ, ಆದರೆ ಆಲಸ್ಯ ನೌಕರಿ ದಂಧೆಗಳಲ್ಲಿ ಪರಿಸ್ಥಿತಿ ಚೆನ್ನಾಗಿದೆ. ಪ್ರವಾಸಕ್ಕೆ ಒಳ್ಳೆಯದ ತಾ॥ ೧೩ ೧೪ ಹಣಕಾಸಿನ ಮುಗ್ಗಟ್ಟು

ಧ್ವಜಾರೋಹಣ ಸಮಾರಂಭ

ಮೈಸೂರು ೯

ಗಾಂಧಿ ಜಯಂತಿ ಪ್ರಯುಕ್ತ ಈ ದಿನ ಬೆಳಿಗ್ಗೆ ಟೌನ್ ಹಾಲ್ ಮೈದಾನದಲ್ಲಿ ಧ್ವಜಾರೋಹಣ ನಡೆಯಿತು ನಗರ ಕಾಂಗ್ರೆಸ್ ಕೆಲಸಗಾರರೂ ಹೋಂ ಗಾರ್ಡುಗಳೂ ಇತರ ಮಹನೀಯರೂ ನೆರೆದಿದ್ದರು ಶ್ರೀ ಎಸ್ ಚನ್ನಯ್ಯನವರು ರಾಷ್ಟ್ರ ಧ್ವಜವನ್ನೂ ಶ್ರೀ ಟಿ ವೆಂಕಟರಮಣಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು

ಶ್ರೀ ಎಸ್ ಚನ್ನಯ್ಯನವರು ಮಾತನಾಡಿ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಅಲ್ಲಿನ ಧ್ವಜಕ್ಕೆ ಕೊಡತಕ್ಕ ಮನ್ನಣೆಯನ್ನು ವಿವರಿಸಿದರು ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ನಾವು ರಾಷ್ಟ್ರಧ್ವಜಕ್ಕೆ ಕೊಟ್ಟ ಮನ್ನಣೆಯನ್ನು ಪ್ರಸ್ತಾಪಿಸಿ ಮುಂದೆಯೂ ಅದನ್ನು ಸಂರಕ್ಷಿಸಿಕೊಂಡುಬರಬೇಕೆಂದು ಹೇಳಿದರು ಪಾಶ್ಚಿಮಾತ್ಯ ದೇಶಗಳಲ್ಲಿ ಮಹಾತ್ಮರ ವಿಚಾರದಲ್ಲಿರುವ ಅಮೂಲ್ಯಾಭಿಪ್ರಾಯವನ್ನು ವಿವರಪಡಿಸಿ, ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯಲ್ಲಿ ಕೆಲವನ್ನಾದರೂ ಆಚರಣೆಗೆ ತರಬೇಕೆಂದು ಹೇಳಿದರು.

ಅನಂತರ ಟೌನ್ ಹಾಲಿನಲ್ಲಿ ಪ್ರಾರ್ಥನಾ ಸಭೆಯು ನಡೆಯಿತು. ತರುವಾಯ ಸೂತ್ರಯಜ್ಞವು ಪ್ರಾರಂಭವಾಯಿತು ಇದು ಸಂಜೆ ೬ ಗಂಟೆವರೆಗೂ ಸತತವಾಗಿ ನಡೆಯುವುದು ಅನಂತರ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯುವುದು.

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ರೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು

U HARI SHENOY B A
ಏಜಂಟ್

ರಾಜಕಮಲ್,

ಮೈಸೂರು

7-10-49 ರಿಂದ

ಅಮೋಘವಾದ ೭ನೇ ವಾರ

ಫಿಲ್ಮಿಸ್ತಾನರವರ

– ಆಕ್ಟ್ರೆಸ್ –

ರೆಹನ, ಮೀನ, ಪ್ರೇಮ್ ಅದೀಬ್ ಅಭಿನಯಿಸಿರುವ ಹಿಂದಿ ಚಿತ್ರ

Morning Shows From 7-10-49 for 4 days

COLUMBIA'S

WALK A CROOKED MILE

With -Louis Hayward and Dennis O'Keefe

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಪಂಚಾಮೃತ ಮತ್ತು ಪಂಚಾಗ್ನಿ ಲವಣ

ಮಲೆ ರಿಯಾ ಗೆಡ್ಡೆ ಕರಗಿಸುವುದರಲ್ಲಿ ೪೦ ವರ್ಷಗಳ ಖ್ಯಾತಿ ಪಡೆದ ಸಿದ್ಧ ಸಂಜೀವನ

ಉಪ್ಪಿನ ಬಿಳಿ ದಲ್ಲುಪುಡಿ - ಹೊಗೆಸೊಪ್ಪಿನ ಬೂದಿ ಸೇರದ ಸಣ್ಣ[illegible] ಸ್ಪೆಷಲ್ ಟೂತ್ ಪೌಡರ್

ಪುಟ್ಟಿ ೧ಕ್ಕೆ ೦-೧-೬

S. N. PANDIT & SONS

90 Lansdowne Buildings Mysore

ಉಪವಾಸ ಮಾಡಲು ಕಾಂಗ್ರೆಸ್ಸಿನ ಅನುಮತಿ ಬೇಕು

ಪ್ರಾಂತೀಯ ಸರ್ಕಾರದ ಅಥವಾ ಕಾಂಗ್ರೆಸ್ ಸಂಸ್ಥೆಗಳ ನಿರ್ಧಾರವನ್ನು [illegible]ಟಿಸಲು ಉಪವಾಸ ಮುಷ್ಕರ ಹೂಡ[illegible]ಕಾದರೆ ಇನ್ನು ಮುಂದೆ ಕಾಂಗ್ರೆಸ್ [illegible] ಸಮಿತಿಯ ಅನುಮತಿಯನ್ನು ಪಡೆಯಬೇಕೆಂದು ಸಂಯುಕ್ತ ಪ್ರಾಂತ್ಯ ಕಾಂ[illegible] ಸಮಿತಿಯು ತೀರ್ಮಾನಿಸಿದೆ

ಶ್ರೀ ಶ್ರೀಗಳವರ ಗ್ರಂಥ ವ್ಯಾ[illegible]

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯ ಆವರಣದಲ್ಲಿರುವ ಶ್ರೀ [illegible]ವರ ದೇವಾಲಯದಲ್ಲಿ ನಾಳೆಯಿಂದ [illegible] ದಿನ ಸಂಜೆ ೭ ಗಂಟೆಗೆ ಶ್ರೀ ಶಂಕರ ವಿಲಾಸದ ಗ್ರಂಥ ಮತ್ತು ಅರ್ಥ [illegible]ಗಳು ಶ್ರೀ ಮಿರ್ಲೆ ಸುಬ್ರಹ್ಮಣ್ಯ [illegible] ಮತ್ತು ಶ್ರೀ ಬಿ ಎಸ್ ವೆಂಕಟ[illegible]ಯ್ಯನವರಿಂದ ನಡೆಯುವುವು

ಗಾಂಧಿ ಜಯಂತಿ

ರಾಜಧಾನಿಯ ಹಿಂದೀ ಪ್ರಚಾರ[illegible]ಯ ಆಶ್ರಯದಲ್ಲಿ ನೆನ್ನೆಯ ಸಂಜೆ [illegible] ಘಂಟೆಗೆ ಚಾಮರಾಜ ರಸ್ತೆಯಲ್ಲಿ[illegible] ಪಕಾರ ಭವನದಲ್ಲಿ ಪುರಸಭಾ [illegible]ದ ಶ್ರೀ ಟಿ ವೆಂಕಟರಮಣಯ್ಯನವ[illegible] ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯು ತು

ಶ್ರೀ ಜಗದಂಬಾ ಶಿಶುವಿಹಾ[illegible]

ದಿವಾನ್ಸ್ ರಸ್ತೆ, ಮೈಸೂರು

ನವರಾತ್ರಿ ರಜೆಗಳಾದನಂತರ [illegible]ಲ್ಲಿಂದ ಶಿಶು ವಿಹಾರವು ಈಗ [illegible] ಯಲ್ಪಟ್ಟು ತನ್ನ ವೇತನದ ಅಥವಾ [illegible] [illegible] ಸಲಕರಣೆಗಳಿಂದ ಕೂಡಿದ [illegible] ಶಿಕ್ಷಣ ಕಾರ್ಯವನ್ನು ಆರಂಭಿಸಿದೆ [illegible] ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ [illegible] ಪಿತೃಗಳು ಎಂದಿನಂತೆ ಸಂಸ್ಥೆಯ [illegible] ಜನವನ್ನು ಹೊಂದುವುದರ ಮೂಲಕ ಪ್ರೋತ್ಸಾಹಿಸುವರೆಂದು ನಂಬಲಾಗಿ[illegible]

ನ್ಯೂ ಹೋಟೇಲ್

[illegible]

ಬೆಂಗಳೂರು

ಬ್ರಾಹ್ಮಣರ [illegible] (ಊಟ ಕಾಫಿ) ಸ್ವಚ್ಛ, ಸಜ್ಜಾದ [illegible] ದಿನ ೧ಕ್ಕೆ ಸೀಟ್ ೧ಕ್ಕೆ ರೂ [illegible] ಗೊತ್ತುಪಡಿಸಲ್ಪಟ್ಟಿ

Liver

Dependable Consulting at

LIVER HOUSE

Chamarajapuram

MYSORE

(Near Co op. Society)

Edited, printed and published by A R Nag[illegible] at Sadhvi Press, D Sub Road Mysore

✻ ಕಬ್ಬಿಣದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್, ಅಲಾರಂ ಸೇಫ್. ಸುಲಭವಾದ ಬೆಲೆ. ✻

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್ [illegible] ಹಳ್ಳದಕೇರಿ ಮತ್ತು ಜೀವನರಾಯನ ಕಟ್ಟೆ (ಸ್ಟಾಲ್ ನಂ [illegible]) ಮೈಸೂರು.

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮ ಸೋಮವಾರ ೧೦-೧೦-೧೯೪೯ ಸಂಚಿಕೆ ೬೧

ಆವಶ್ಯಕ ಪದಾರ್ಥಗಳ ಬೆಲೆ ಇಳಿಸಲು ಪ್ರಯತ್ನ

ಪಂಡಿತ ನೆಹರೂರವರಿಗೆ ಗ್ರಂಥಗಳ ಅರ್ಪಣೆ

ಮುಂದಿನ ತಿಂಗಳು ೧೪ ನೇ ತಾ|| ಪಂಡಿತ ನೆಹರೂರವರ ೬೧ ನೇ ವರ್ಷ ವರ್ಧಂತಿಯು ಜ್ಞಾಪಕಾರ್ಥವಾಗಿ ಅವರಿಗೆ ನೆಹರೂರವರ ಜೀವನ ಚರಿತ್ರೆಯು ಇಂಗ್ಲಿಷ್ ಮತ್ತು ಹಿಂದಿಯ ಎರಡು ಗ್ರಂಥಗಳನ್ನು ಅರ್ಪಿಸಲು ಡಾ|| ರಾಜೇಂದ್ರ ಪ್ರಸಾದ್, ಪುರುಷೋತ್ತಮ ದಾಸ್ ಟಾಂಡನ್, ರಾಧಾಕೃಷ್ಣನ್, ಮತ್ತು ಕೆ ಎಂ ಮುನ್ಷಿಯವರನ್ನೊಳಗೊಂಡ ಒಂದು ಸಮಿತಿಯು ರಚಿಸಲಾಗಿದೆ. ನೆಹರೂರವರು ಆ ದಿನ ಭಾರತದಲ್ಲಿರುವುದಿಲ್ಲವಾದುದರಿಂದ ಜನವರಿ ೨೬ ನೇ ತಾ|| ಅವನ್ನು ಅರ್ಪಿಸಲಾಗುವುದೆಂದು ಹೇಳಲಾಗಿದೆ.

ಹೆಂಗಸಿನ ವೇಷಧರಿಸಿ ನೃತ್ಯ ಮಾಡಿದುದಕ್ಕೆ ಜುಲ್ಮಾನೆ

ಸಂಯುಕ್ತ ಪ್ರಾಂತ್ಯದ ಅರಿ ಎಂಬ ಹಳ್ಳಿಯಲ್ಲಿ ಬಾಲಕನೊಬ್ಬನು ಹೆಂಗಸಿನ ವೇಷಧರಿಸಿ ಉತ್ಸವವೊಂದರಲ್ಲಿ ನೃತ್ಯ ಮಾಡುದನ್ನು ಅಲ್ಲಿನ ಪಂಚಾಯಿತಿಯವರು ಆಕ್ಷೇಪಿಸಿ, ಆತನಿಗೆ ೧೦ ರೂ ದಂಡವನ್ನು ವಿಧಿಸಿದುದಲ್ಲದೆ, ೫ ರೂ ತೆರಿಗೆ ಕೊಡಬೇಕೆಂದೂ ತೀರ್ಪು ಇತ್ತಿದ್ದಾರೆ. ಅಲ್ಲಿನವರು ಈ ಬಗ್ಗೆ ಅಸಮಾಧಾನಗೊಂಡು ಮೇಲಿನ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ ಇಂತಹ ಶಿಕ್ಷೆಯು ದೇಶದಲ್ಲಿ ಇದೇ ಮೊದಲನೆಯದೆಂದು ಹೇಳಲಾಗಿದೆ

ಹೆಂಡತಿಯನ್ನು ಹೊಡೆಯುವುದು ತಪ್ಪಲ್ಲ

ನ್ಯೂಜೀಲೆಂಡಿನ ಕೋರ್ಟಿನಲ್ಲಿ ಪತ್ನಿಯನ್ನು ಹೊಡೆದ ಮೊಕದ್ದಮೆಯೊಂದರ ನ್ಯಾಯಾಧೀಶರು ತೀರ್ಪಿತ್ತು, ಪತ್ನಿಯನ್ನು ಕೆಲವು ಬಾರಿ ಹೊಡೆಯುವುದು ಯುಕ್ತವೆಂದೂ, ಆದರೆ ಸರಿಯಾಗಿ ಹೊಡೆಯಬೇಕೆಂದೂ ತಿಳಿಸಿರುತ್ತಾರೆ. ಉದ್ರೇಕಗೊಂಡು ಆ ರೀತಿ ಮಾಡದೆ ಪ್ರೀತಿಗಾಗಿ ನಡೆಯಬೇಕೆಂದೂ ಹೇಳಿರುತ್ತಾರೆ

೧೦ ಗಂಟೆ ಕಾಲ ಭೂಮಿಯಲ್ಲಿ ಹೂಳಲ್ಪಟ್ಟ ಮನುಷ್ಯ

ನಾಗಪುರದಲ್ಲಿ ಒಬ್ಬನು ತನ್ನ ಕೈಯನ್ನು ಬಿಟ್ಟು ಉಳಿದ ಶರೀರವನ್ನು ಬೆಳಿಗ್ಗೆಯಿಂದ ಸಂಜೆ ೬ ಗಂಟೆ ವರೆಗೆ ಭೂಮಿಯಲ್ಲಿ ಹೂತಿಟ್ಟಿದ್ದ ಪ್ರಸಂಗ ವರದಿಯಾಗಿದೆ ಅಷ್ಟು ಹೊತ್ತು ಮಣ್ಣಿನಲ್ಲಿ ಹೂಳಲ್ಪಟ್ಟಿದ್ದರೂ, ಆತನು ಜೀವಂತನಾಗಿ ಹೊರಕ್ಕೆ ಬಂದನೆಂದೂ, ಆತನ ಕೈನಲ್ಲಿ ಒಂದು ಸಿಂಬೇಹಣ್ಣು ಮತ್ತು ಶಂಕವಿದ್ದಿತೆಂದೂ ಹೇಳಲಾಗಿದೆ

ವ್ಯವಸಾಯ ಮಾಡದಿದ್ದರೆ ಭೂಮಿಗಳು ಸರ್ಕಾರಕ್ಕೆ

ಇನ್ನು ಒಂದು ವಾರದಲ್ಲಿ ಯಾರು ವ್ಯವಸಾಯಕ್ಕನುಕೂಲವಾದ ಭೂಮಿಯನ್ನು ವ್ಯವಸಾಯ ಮಾಡುವುದಿಲ್ಲವೋ ಅವರ ಭೂಮಿಗಳನ್ನು ವಶಪಡಿಸಿಕೊಳ್ಳಲಾಗುವುದೆಂದು ಪೂರ್ವ ಪಂಜಾಬ್ ಸರ್ಕಾರದವರು ಎಚ್ಚರಿಕೆ ಕೊಟ್ಟಿರುತ್ತಾರೆ

ಮೈಸೂರಿಗೆ ಸಯಾಂ ಅಕ್ಕಿ

ಸಯಾಂನಿಂದ ಮೈಸೂರಿಗಾಗಿ ೮೬೪೪ ಟನ್ ಅಕ್ಕಿಯು ಮದರಾಸಿಗೆ ಮೊನ್ನೆ ದಿನ ಬಂದಿದೆ

ಆಹಾರ ಪದಾರ್ಥದ ಬೆಲೆ ಕಡಿಮೆಮಾಡಲು ನಿರ್ಧಾರ

ದೇಶದ ಆರ್ಥಿಕ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಜನಸಾಮಾನ್ಯರಿಗೆ ಬೇಕಾಗುವ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡಬೇಕಾದುದು ಅತ್ಯಾವಶ್ಯಕವೆಂದು ಕಂಡುಬಂದಿರುವುದರಿಂದ ಆಹಾರ ಧಾನ್ಯದ ಬೆಲೆಯನ್ನು ಶೇಕಡ ೧೦ ರಷ್ಟು ಕಡಿಮೆ ಮಾಡಬೇಕೆಂದೂ ಮತ್ತು ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳ ಬೆಲೆಯನ್ನು ಇಳಿಸಬೇಕೆಂದೂ ನಿನ್ನೆ ದಿನ ದಿಪಲಿಯಲ್ಲಿ ನಡೆದ ಪ್ರಾಂತೀಯ ಮತ್ತು ಸಂಸ್ಥಾನಗಳ ಆಹಾರ ಸಚಿವರ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು

ಮೀನಿನ ಚರ್ಮದಿಂದ ಉಡುಪು

ಮೀನಿನ ಚರ್ಮದಿಂದ ಮಹಿಳೆಯರಿಗೆ ಬೇಕಾಗುವ ಎಲ್ಲ ಉಡುಪುಗಳನ್ನು ತಯಾರಿಸಲು ಪೋಲೆಂಡಿನ ಇಬ್ಬರು ವೈಜ್ಞಾನಿಕರು ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಲಾಗಿದೆ

ಸತಿ ಸನ್‌ಯಾತ್ ಸೇನರ ಬಂಧನಕ್ಕೆ ಆಜ್ಞೆ

ಕಮ್ಯೂನಿಸ್ಟರೊಡನೆ ಸೇರಿಕೊಂಡ ಸತಿ ಸನ್‌ಯಾತ್ ಸೇನರನ್ನು ಬಂಧಿಸಲು ಚೀಣಾದ ರಾಷ್ಟ್ರೀಯ ಸರಕಾರವು ಆಜ್ಞೆಯನ್ನು ಹೊರಡಿಸಲಿದೆಯೆಂದು ಹೇಳಲಾಗಿದೆ.

ಚೀಣಾ ಕಮ್ಯೂನಿಸ್ಟ್ ರಿಪಬ್ಲಿಕ್ಕಿನ ಪ್ರಧಾನಿ

ಪೀಕಿಂಗಿನಲ್ಲಿ ನಡೆದ ಭಾರಿ ಕಮ್ಯೂನಿಸ್ಟರ ಸಭೆಯಲ್ಲಿ ಚು-ಎನ್-ಲೈರವರನ್ನು ಚೀಣಾ ಕಮ್ಯೂನಿಸ್ಟ್ ರಿಪಬ್ಲಿಕ್ಕಿನ ಪ್ರಧಾನಿಯನ್ನಾಗಿ ಚುನಾಯಿಸಲಾಗಿದೆ

ಕ್ಯಾಂಟನ್‌ನಿಂದ ಚೀಣಾ ಅಧಿಕಾರಿಗಳ ರವಾನೆ

ಕ್ಯಾಂಟನ್ ನಗರಕ್ಕೆ ಕಮ್ಯೂನಿಸ್ಟರ ಧಾಳಿಯು ಪ್ರಾರಂಭವಾಗಿರುವುದರಿಂದ ಚೀಣಾ ಸರ್ಕಾರಿ ಅಧಿಕಾರಿಗಳು ಮತ್ತು ಅವರ ಸಂಸಾರದವರನ್ನು ಅಲ್ಲಿಂದ ಚುಂಕಿಂಗಿಗೆ ರವಾನಿಸಲು ಸಿದ್ಧತೆ ನಡೆಯುತ್ತಿದೆಯೆಂದು ಹೇಳಲಾಗಿದೆ ಇದಕ್ಕಾಗಿ ೧೦ ವಿಮಾನಗಳನ್ನು ಸಿದ್ಧವಾಗಿ ಇಡಲಾಗಿದೆ

ಈಜಿಪ್ಟ್ ಮಾಜಿ ಪ್ರಧಾನಿ ಕೊಲೆ ಮಾಡಿದವನಿಗೆ ಫಾಸಿ

ಈಜಿಪ್ಟಿನ ಮಾಜಿ ಪ್ರಧಾನಿ ನಕ್ರೋಷಿ ಪಾಷಾರವರನ್ನು ಗುಂಡಿನಿಂದ ಹೊಡೆದು ಕೊಲೆ ಮಾಡಿದ ೨೨ ವರ್ಷದ ಅಬಿದ್ ಮಜಿದ್ ಹಸನ್ ಎಂಬ ವಿದ್ಯಾರ್ಥಿಗೆ ಮರಣದಂಡನೆಯನ್ನು ವಿಧಿಸಲಾಗಿದೆ

೭೩ ವರ್ಷದ ಮುದುಕನಿಗೂ ಮುತ್ತಜ್ಜಿಗೂ ವಿವಾಹ

ಬ್ರಿಟನ್ನಿನ ಪೋರ್ಟ್ಸ್‌ಮೌತ್ ಎಂಬಲ್ಲಿನ ೭೬ ವರ್ಷದ ಅಜ್ಜನೊಬ್ಬನು ೭೩ ವರ್ಷದ ಮುತ್ತಜ್ಜಿಯನ್ನು ಮದುವೆಯಾಗಲು ನಿರ್ಧರಿಸಿದ್ದಾನೆ ಅವರಿಬ್ಬರಿಗೂ ಮಕ್ಕಳೂ ಮೊಮ್ಮಕ್ಕಳೂ ಇದ್ದಾರೆ

ಮದರಾಸಿಗೆ ಬ್ರಾಹ್ಮಣ ಅಧಿಕಾರಿಗಳು ಬೇಡ

ಮದರಾಸಿಗೆ ಬ್ರಾಹ್ಮಣ ಅಧಿಕಾರಿಗಳನ್ನು ಭಾರತ ಸರ್ಕಾರದವರು ಕಳುಹಿಸಿದಾಗ ತಮಗೆ ಅವರು ಬೇಡವೆಂದೂ, ಬ್ರಾಹ್ಮಣೇತರ ಅಧಿಕಾರಿಗಳು ಮಾತ್ರ ಬೇಕೆಂದು ಮದರಾಸ್ ಸರ್ಕಾರದವರು ತಿಳಿಸಿದರೆಂದೂ, ಅಂತಹವರನ್ನೇ ಕೇಂದ್ರ ಸರ್ಕಾರದವರು ಕೊನೆಯಲ್ಲಿ ಕಳುಹಿಸಬೇಕಾಯಿತೆಂದೂ ಬೊಂಬಾಯಿ ನ ಪತ್ರಿಕೆಯೊಂದು ಪ್ರಕಟಿಸಿದೆ.

ಜಿಲ್ಲಾ ಕಾಂ|| ಸಮಿತಿ ಕಾರ್ಯದರ್ಶಿಯ ಪ್ರವಾಸ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಜೆಚ್ ಕೆ ಕುಮಾರಸ್ವಾಮಿಯವರು ನಾಳಿದ್ದು ಬುಧವಾರ ಬೆಳಿಗ್ಗೆ ೧೧ ಗಂಟೆಗೆ ನಂಜನಗೂಡಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರುಗಳನ್ನು ಭೇಟಿ ಮಾಡಿ ಅಖಿಲ ಭಾರತ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಬಗ್ಗೆ ಕಾರ್ಯಕ್ರಮವನ್ನು ಗೊತ್ತುಮಾಡುವರು. ಅದೇ ದಿನ ಸಂಜೆ ೫ ಗಂಟೆಗೆ ಚಾಮರಾಜನಗರದಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಗವಹಿಸುವರು

ಸೆರೆ ಗಲಬೆ ಮೊಕದ್ದಮೆಯ ಅಪರಾಧಿಯ ಮರಣ

ಸೆರೆ ಗಲಭೆ ಮೊಕದ್ದಮೆಯಲ್ಲಿ ೭ ತಿಂಗಳು ಶಿಕ್ಷೆಗೆ ಗುರಿಯಾಗಿದ್ದ ಷೇಕ್ ಮೊಹಿಯುದ್ದೀನ್ ಎಂಬುವನು ನಿನ್ನೆ ಬೆಳಿಗ್ಗೆ ಸೆಂಟ್ರಲ್ ಜೈಲಿನಲ್ಲಿ ಹೃದಯರೋಗದಿಂದ ಮರಣ ಹೊಂದಿದನು

ಲಂಡನ್ನಿನಲ್ಲಿ ನೆಹರೂ

ಪಂಡಿತ ನೆಹರೂರವರು ಮೊನ್ನೆ ದಿನ ಲಂಡನ್ನಿಗೆ ಆಗಮಿಸಿದರು ಅವರು ಹಣಕಾಸಿನ ಸಚಿವರಾದ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರೊಡನೆ ಮಾತುಕತೆ ನಡೆಸಿದರು. ನಾಳೆ ದಿನ ಅವರು ಅಮೇರಿಕಕ್ಕೆ ಪ್ರಯಾಣ ಬೆಳೆಸುವರು. ಅವರನ್ನು ಕರೆದೊಯ್ಯಲು ಅಧ್ಯಕ್ಷ ಟ್ರೂಮನ್‌ರವರ ಸ್ವಂತ ವಿಮಾನವು ಮೊನ್ನೆ ರಾತ್ರಿ ಲಂಡನ್ನಿನ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು ಅದು ಇಳಿದೊಡನೆಯೇ ಅದನ್ನು ಯಾರೂ ಪ್ರವೇಶಿಸದಂತೆ ರಕ್ಷಣಾ ಕಾನೂನನ್ನು ಜಾರಿ ಮಾಡಲಾಯಿತು. ಅಮೇರಿಕ ಪೋಲೀಸ್ ಪಡೆಯ ಇಬ್ಬರು ಅಧಿಕಾರಿಗಳು ಅದನ್ನು ಕಾಯುತ್ತಿದ್ದಾರೆ. ಟ್ರೂಮನ್ನರ ಮಿಲಿಟರಿ ಅಂಗರಕ್ಷಕ ಬ್ರಿಗೇಡಿಯರ್ ಜನರಲ್ ರಾಬರ್ಟ್ ಲ್ಯಾಂಡ್ರೀರವರು ಅದನ್ನು ನಡೆಸುವರು

ಪಾಕೀಸ್ತಾನದಲ್ಲಿ ಸಾರ್ವಜನಿಕ ರಕ್ಷಣಾ ಶಾಸನ

ಪಾಕೀಸ್ತಾನ ಸರ್ಕಾರದವರು ಸಾರ್ವಜನಿಕ ರಕ್ಷಣಾ ಕಾನೂನನ್ನು ಜಾರಿಗೆ ತಂದಿದ್ದಾರೆ ಈ ಆಜ್ಞೆಯು ಕೂಡಲೇ ಜಾರಿಗೆ ಬಂದು ೧ ವರ್ಷ ಇರುವುದು ಗಡೀಪಾರು, ಬಂಧನ, ಬಾಹಿರ ಸಂಘಗಳ ನಿಷೇಧ, ಸುದ್ದಿಗಳ ಮೇಲೆ ಹತೋಟಿ ಇವೇ ಮುಂತಾದುವುಗಳ ಬಗ್ಗೆ ಸರ್ಕಾರಕ್ಕೆ ವಿಶೇಷ ಅಧಿಕಾರ ಕೊಡಲಾಗಿದೆ

ಬ್ರಿಟನ್ನಿನಲ್ಲಿ ಹೆಂಗಸರೇ ಹೆಚ್ಚು

ಬ್ರಿಟನ್ನಿನಲ್ಲಿ ಗಂಡಸರಿಗಿಂತ ಹೆಂಗಸರು ಹೆಚ್ಚಾಗಿದ್ದಾರೆಂದೂ, ಪ್ರತಿ ೯೪೦ ಗಂಡಸರಿಗೆ ಒಂದು ಸಾವಿರ ಮಹಿಳೆಯರು ಇದ್ದಾರೆಂದೂ ಹೇಳಲಾಗಿದೆ.

೧೩ ಸಾವಿರ ರೂ. ಕಳುವಾದ ವಿಚಿತ್ರ ಪ್ರಸಂಗ

ಹುಬ್ಬಳ್ಳಿಯ ಉಣ್ಣೆ ವ್ಯಾಪಾರಿಗಳಾದ ಶ್ರೀ ಮಲ್ಲಪ್ಪನವರು ಕಳೆದ ಮಂಗಳವಾರ ಬೆಂಗಳೂರಿಗೆ ಬಂದು ತಮಗೆ ಬಾಕಿ ಬರಬೇಕಾದ ೧೩೬೦೦ ರೂ. ಅನ್ನು ಪಡೆದು ಮಿಲಿಟರಿ ಹೋಟೇಲೊಂದರಲ್ಲಿ ಊಟ ಮಾಡಿ ಬಿಸಿ ಪಾನೀಯವನ್ನು ತೆಗೆದುಕೊಂಡರು ಅದೇ ಸಂಜೆ ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿದ್ದಾಗ ಅವರಿಗೆ ಜ್ಞಾನ ತಪ್ಪಿ ರಸ್ತೆಯಲ್ಲಿ ಬಿದ್ದಿದ್ದರು ಪೋಲೀಸರು ಅವರನ್ನು ಆಸ್ಪತ್ರೆಗೆ ಸಾಗಿಸಿದರು ಅವರಿಗೆ ಜ್ಞಾನ ಬಂದಾಗ, ತಮ್ಮಲ್ಲಿದ್ದ ೧೩೬೦೦ ರೂ ಪೈಕಿ, ೬ ಸಾವಿರ ರೂ ಮಾತ್ರವಿದೆಯೆಂದೂ, ಮಿಕ್ಕ ಹಣ ಕಳುವಾಗಿದೆಯೆಂದೂ ದೂರು ಕೊಟ್ಟಿದ್ದಾರೆ.

ಲೌಡ್ ಸ್ಪೀಕರುಗಳಿಗೆ ನಿಷೇಧ

ಸಾರ್ವಜನಿಕರಿಗೆ ತೊಂದರೆಯುಂಟಾಗುವುದೆಂದು ಲೌಡ್ ಸ್ಪೀಕರುಗಳನ್ನು ಹೋಟೇಲು, ಮತ್ತು ಸ್ಟೇಷನುಗಳಲ್ಲೂ ಮತ್ತು ಸಿನಿಮಾ ಹೊರಭಾಗಗಳಲ್ಲೂ ಉಪಯೋಗಿಸಕೂಡದೆಂದು ಮಂಗಳೂರು ಪುರಸಭೆಯವರು ನಿರ್ಧರಿಸಿದ್ದಾರೆ

○ ಪಾಕೀಸ್ತಾನಕ್ಕೆ ಸೇರಿರುವ ಮೈಮನ್‌ಸಿಂಗ್ ಪತ್ತೆಯಾಗಿರುವ ಕಾಂಗ್ರೆಸ್ ಸದಸ್ಯರ ೧೦೦೦ ಮಣ ಪತ್ತವನ್ನು ... ದೋಣಿಯೊಂದು ನದಿಯಲ್ಲಿ ಮುಳುಗಿ ೫೦ ಜನರು ನೀರು ಪಾಲಾದರೆಂದು ವರದಿಯಾಗಿದೆ.

ಗಾಂಧೀ ಜಯಂತಿ

ಮೈಸೂರು ೧೦

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಗಾಂಧಿ ಜಯಂತಿಯ ಕೊನೆಯ ದಿನದ ಅಂಗವಾಗಿ ಬಹಿರಂಗ ಸಭೆಯು ಶ್ರೀ ವಿ. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಮೂಹಿಕ ಪ್ರಾರ್ಥನೆಯಾದನಂತರ, ಅಧ್ಯಕ್ಷರು ಭಾಷಣ ಮಾಡಿ ಮಹಾತ್ಮರ ತತ್ವಗಳನ್ನು ಎಲ್ಲರೂ ಆಚರಿಸಬೇಕೆಂದು ತಿಳಿಸಿದರು ಶ್ರೀಗಳಾದ ಎಸ್ ರಂಗರಾಮಯ್ಯ, ಟಿ ಎಸ್ ರಾಜಗೋಪಾಲ್ ಮತ್ತು ಸ್ವಾಮಿ ನಿರ್ಮಲಾನಂದರವರು ಭಾಷಣ ಮಾಡಿ, ಮಹಾತ್ಮರ ಗುಣಕಥನ ಮಾಡಿದರು

ಕನ್ನೇಗೌಡನ ಕೊಪ್ಪಲಿನ ರೈತಯುವಕರ ಸಂಘದಲ್ಲಿ ನಿನ್ನೆ ಸಂಜೆ ಪೈಲ್ವಾನ್ ಬಸವಯ್ಯನವರ ಅಧ್ಯಕ್ಷತೆಯಲ್ಲಿ ಗಾಂಧೀ ಜಯಂತಿಯು ನಡೆಯಿತು ಸಂಘದ ಕಾರ್ಯದರ್ಶಿ ಶ್ರೀ ಕೆ ಸಿ ಬಂದೀಗೌಡ ಮತ್ತು ಶ್ರೀ ಎನ್ ಎಸ್ ನಾರಾಯಣ ಸ್ವಾಮಿಯವರು ಭಾಷಣಮಾಡಿದರು ಸಿಹಿ ತಿಂಡಿ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು

ರಾಜವಾಸಿಯ ವನಿತಾ ಸದನದಲ್ಲಿ ಮೊನ್ನೆ ದಿನ ಗಾಂಧೀ ಜಯಂತಿಯು ಶ್ರೀ ಬಿ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಧ್ವಜವಂದನೆ, ಪ್ರಾರ್ಥನೆ ಮತ್ತು ಗೀತೆಗಳಾದನಂತರ ಅಧ್ಯಕ್ಷರು ಭಾಷಣಮಾಡಿ, ಬಾಪೂಜಿಯವರ ತತ್ವವನ್ನು ಎಲ್ಲರೂ ಪಾಲಿಸಬೇಕೆಂದೂ, ಮಹಿಳೆಯರು ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕೆಂದೂ ತಿಳಿಸಿದರು

ಮೇಕೆದಾಟು ಯೋಜನೆಯ ಶಂಕುಸ್ಥಾಪನೆ

ಮೇಕೆದಾಟಿನ ವಿದ್ಯುಚ್ಛಕ್ತಿ ಯೋಜನೆಯ ಶಂಕುಸ್ಥಾಪನೆಯನ್ನು ಮುಂದಿನ ಜನವರಿ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ನೆರವೇರಿಸುವರೆಂದೂ, ಅದಕ್ಕೆ ಶ್ರೀ ಕೃಷ್ಣರಾಜೇಂದ್ರ ವಿದ್ಯುಚ್ಛಕ್ತಿ ಕೇಂದ್ರ ಎಂದು ಹೆಸರಿಡಲಾಗುವುದೆಂದೂ ಗೊತ್ತಾಗಿದೆ

ಕಾಂಗ್ರೆಸ್ ಸದಸ್ಯತನ

ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಬಗ್ಗೆ ಸಲಹೆಗಳನ್ನು ಕೊಡಲಿಚ್ಛಿಸುವವರು ಇದೇ ೧೨ನೇ ತಾ॥ ಬೆಳಿಗ್ಗೆ ೯ ರಿಂದ ೧೦ ಗಂಟೆವರಗೆ ಕಾರ್ಯದರ್ಶಿಯವರಿಗೆ ತಿಳಿಸಬೇಕೆಂದು ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಕೋರಿರುತ್ತಾರೆ

ರೈಲಿನಲ್ಲಿ ನಾಲ್ಕು ತರಗತಿ ಗಾಡಿಗಳು

ಮುಂದಿನ ಡಿಸೆಂಬರ್ ತಿಂಗಳಿನಿಂದ ಭಾರತದ ರೈಲುಗಳಲ್ಲಿ ನಾಲ್ಕು ವಿಧವಾದ ತರಗತಿ ಗಾಡಿಗಳ ವ್ಯವಸ್ಥೆ ಮಾಡಲಾಗುವುದೆಂದೂ ಗೊತ್ತಾಗಿದೆ ಈಗಿರುವ ೩ ತರಗತಿಗಳ ಜೊತೆಗ ವಿಶೇಷ ಎರಡನೇ ತರಗತಿ ಗಾಡಿಯನ್ನು ಏರ್ಪಡಿಸಿ, ಅದಕ್ಕೆ ವೈಲಿಗೆ . ಕಾಸನ್ನು ವಸೂಲುಮಾಡಲಾಗುವುದು

Edited, printed and published by V R Nagarajan at Sadhvi Press, D Subbiah Road, Mysore

ಔಷಧಿಗಳ ಹತೋಟಿ ಆಜ್ಞೆ

ಸಂಸ್ಥಾನದಲ್ಲಿ ಔಷಧಿಗಳ ಮಾರಾಟ ಬೆಲೆ ಹತೋಟಿ ಆಜ್ಞೆಯೊಂದನ್ನು ಸರ್ಕಾರದವರು ಜಾರಿಮಾಡಿದ್ದಾರೆ ಪ್ರತಿ ಔಷಧಿ ಮಾರಾಟಗಾರರೂ ತಮ್ಮ ಅಂಗಡಿಯಲ್ಲಿ ಸರ್ಕಾರದವರು ನಿಗದಿ ಮಾಡಿರುವ ಬೆಲೆಯ ಪಟ್ಟಿಯನ್ನು ಪ್ರದರ್ಶಿಸಬೇಕು ಅದು ಇಂಗ್ಲೀಷಿನಲ್ಲಿರಬೇಕು ೫ ರೂ ಗೆ ಮೇಲ್ಪಟ್ಟ ಸಾಮಾನುಗಳನ್ನು ಕೊಳ್ಳುವವರಿಗೆ ರಶೀದಿ ಕೊಡಬೇಕು. ಔಷಧಿಗಳನ್ನು ಮಾರಲು ನಿರಾಕರಿಸುವುದು ಅಪರಾಧ ಈ ಸೂಚನೆಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು-ಎಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ಓಟರುಗಳ ಪಟ್ಟಿಯಲ್ಲಿ ೧೮ ಕೋಟಿಜನರ ಹೆಸರು

ಭಾರತದ ವಯಸ್ಕರ ಮತದಾನದ ಪದ್ಧತಿ ಪ್ರಕಾರ, ಓಟರುಗಳ ಪಟ್ಟಿಯಲ್ಲಿ ೧೮ ಕೋಟಿ ಜನರ ಹೆಸರಿರುವುದೆಂದೂ, ಪಟ್ಟಿಯ ಉದ್ದವು ಮುಕ್ಕಾಲು ಪರ್ಲಾಂಗು ದೂರದಷ್ಟು ಇರುವುದೆಂದೂ ಡಾ॥ ರಾಜೇಂದ್ರ ಪ್ರಸಾದ್‌ರವರು ತಿಳಿಸಿರುತ್ತಾರೆ

ಜೈಲಿನಲ್ಲಿ ಉಪವಾಸ ಮಾಡುವುದು ಅಪರಾಧ

ಜೈಲುಗಳಲ್ಲಿ ಖೈದಿಗಳು ಉಪವಾಸ ಕೈಗೊಳ್ಳುವುದು ಅಪರಾಧವೆಂದು ಅಸ್ಸಾಂ ಸರ್ಕಾರದವರು ಒಂದು "ಜ್ಞೆಯನ್ನು ಹೊರಡಿಸಿರುತ್ತಾರೆ ಆರೀತಿ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದು ತಿಳಿಸಲಾಗಿದೆ

ಆಗಾಖಾನರ ದ್ವಿತೀಯ ಪುತ್ರನಿಗೂ ವಿವಾಹವೇ ?

ಆಗಾಖಾನರವರ ಎರಡನೇ ಪುತ್ರ ಬದ್ರುದ್ದೀನ್ ಖಾನ್‌ರವರು ಫ್ರಾನ್ಸಿನ ೧೭ ವರ್ಷದ ನೃತ್ಯಗಾರಳನ್ನು ವಿವಾಹವಾಗಲು ಇಚ್ಛಿಸಿರುವರೆಂದೂ, ಆದರೆ ಇಬ್ಬರಿಗೂ ಕೇವಲ ೧೭ ವರ್ಷವಾಗಿರುವುದರಿಂದ ಆಕೆಯು ಇನ್ನು ೧೦ ವರ್ಷ ಮದುವೆಯಾಗುವುದಿಲ್ಲವೆಂದೂ ತಿಳಿಸಿರುವಳೆಂದೂ ವರದಿಯಾಗಿದೆ

ಓಲೆಗಾಗಿ ಕಿವಿಯನ್ನು ಕತ್ತರಿಸಲಾಯಿತು

ಅಮೃತಸರದ ಬಳಿ ಒಬ್ಬ ಮಹಿಳೆಯು ತನ್ನ ಸಹೋದರಿ ಸಂಗಡ ಹಳ್ಳಿಗೆ ಹೋಗುತ್ತಿದ್ದಾಗ ದೊಂಬಿಕೋರರು ಅವರ ಮೇಲೆ ಬಿದ್ದು ಓಲೆಯನ್ನು ಕಿತ್ತುಕೊಳ್ಳಲು ಆಕೆಯ ಕಿವಿಯನ್ನು ಕತ್ತರಿಸಿ ಹಾಕಿದರೆಂದೂ ಮತ್ತು ಅವರಲ್ಲಿದ್ದ ಹಣ ಮತ್ತು ಇತರ ವಸ್ತುಗಳನ್ನು ಅಪಹರಿಸಿಕೊಂಡು ಹೋದರೆಂದೂ ವರದಿಯಾಗಿದೆ

ಪ್ರಭಾ

ಮುಂದಿನ ಬದಲಾವಣೆ

ಕಾರ್ನರ್ ಪಿಕ್ಚರ್ಸ್‌ರವರ

* ಕನೀಜ್ *

ಪಾತ್ರ ಮುನವರ್ ಸುಲ್ತಾನಾ ಶ್ಯಾಮ್ ಖುರ್ಷೀದ್, ಕುಲ್‌ದೀಪ್, ಕಕ್ಕೂ

ಸಂಗೀತ - ಗುಲಾಮ್ ಹೈದರ್

ಮೈಸೂರಿಗೆ ಅಮೆರಿಕದ ವೈದ್ಯರುಗಳ ಭೇಟಿ

ಮೈಸೂರು ಸಂಸ್ಥಾನದಲ್ಲಿ ಕರುಳಿನ ರೋಗದ ಒಗ್ಗೆ ಸಂಶೋಧನೆ ನಡೆಸಲು ಅಮೆರಿಕದ ಸುಪ್ರಸಿದ್ಧ ವೈದ್ಯರುಗಳು ಮುಂದಿನ ವರ್ಷ ಬರಲಿದ್ದಾರೆಂದೂ, ಅವರು ಇಲ್ಲಿ ೬ ತಿಂಗಳು ಪ್ರವಾಸ ಮಾಡುವರೆಂದೂ ತಿಳಿದುಬಂದಿದೆ ಮಲೇರಿಯಾ ಪ್ಲೇಗ್ ಮುಂತಾದ ರೋಗಗಳ ಸಂಶೋಧನೆಯನ್ನೂ ಅವರು ನಡೆಸುವರೆಂದು ಹೇಳಲಾಗಿದೆ ಆಸ್ಪತ್ರೆಗಳಲ್ಲಿ ಎಲ್ಲ ಸೌಲಭ್ಯಗಳನ್ನೂ ಅವರಿಗೆ ಕೊಡಲು ಮೈಸೂರು ಸರ್ಕಾರದವರು ಒಪ್ಪಿದ್ದಾರೆ

ಡೆಲ್ವಾಯ್‌ರವರು ಸಮಜಾಯಿಷಿಕೊಡಬೇಕು

ಕಾಶ್ಮೀರ ಕದನ ವಿರಾಮ ಮಿಲಿಟರಿ ಸಲಹೆಗಾರರಾದ ಮಿ॥ ಡೆಲ್ವಾಯ್‌ರವರು ಇತ್ತೀಚೆಗೆ ಜಿನೀವಾಕ್ಕೆ ತೆರಳಲಿರುವರು ಅವರು ಕಾಶ್ಮೀರದಿಂದ ಪಾಕಿಸ್ತಾನಕ್ಕೆ ಕಳ್ಳತನದಲ್ಲಿ ಬೆಲೆ ಬಾಳುವ ವಸ್ತುಗಳನ್ನು ಸಾಗಿಸಿದರೆಂದು ಬಂದಿರುವ ಆಪಾದನೆ ಬಗ್ಗೆ ಸಮಜಾಯಿಷಿ ಕೊಡಬೇಕೆಂದು ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಮಿ॥ ಟ್ರಿಗ್ವೆಲೀಯವರು ,ಅವರನ್ನು ಕೇಳಿರುವರೆಂದು ಹೇಳಲಾಗಿದೆ

ಸಾಮೂಹಿಕ ವ್ಯವಸಾಯ

ರೈತರುಗಳು ಮತ್ತು ಮಾಲೀಕರುಗಳು ಸದಸ್ಯರಾಗಿರುವ ಸಹಕಾರ ಸಂಘಗಳ ಮೂಲಕ ಸಾಮೂಹಿಕ ವ್ಯವಸಾಯ ನಡೆಸುವ ಯೋಜನೆಯನ್ನು ಮದರಾಸಿನಲ್ಲಿ ಪ್ರಾರಂಭಿಸಲಾಗಿದೆ ರೈತರಿಗೂ ಮತ್ತು ಜಮೀನುದಾರರಿಗೂ ಮಧುರ ಬಾಂಧವ್ಯ ಏರ್ಪಡಿಸುವುದೇ ಇದರ ಧ್ಯೇಯವೆಂದು ಹೇಳಲಾಗಿದೆ

ಜೆಕೋಸ್ಲವೇಕಿಯಾದಲ್ಲಿ ಸಾಮೂಹಿಕ ದಸ್ತಗಿರಿ

ಜಕೋಸ್ಲವೇಕಿಯಾದಲ್ಲಿ ಕಮ್ಯೂನಿಸ್ಟರಿಗೆ ವಿರೋಧವಾದವರೆಲ್ಲರನ್ನೂ ಬಂಧಿಸಿ ಜೈಲುಗಳಿಗೆ ಕಳುಹಿಸಲಾಗುತ್ತಿದೆ ಯೆಂದೂ, ವೈದ್ಯರು, ಲಾಯರು, ಮುಂತಾದ ಎಲ್ಲರನ್ನೂ ದಸ್ತಗಿರಿ ಮಾಡಲಾಗುತ್ತಿದೆ ಯೆಂದೂ, ಇದರಿಂದ ಸಾವಿರಾರು ಸಂಸಾರದವರು ಕಷ್ಟಪಡುತ್ತಿದ್ದಾರೆಂದೂ ಹೇಳಲಾಗಿದೆ

ಚೀನಾ ರಾಯಭಾರಿಯ ವಜಾ

ಜೆಕೊಸ್ಲೊವೇಕಿಯಾದಲ್ಲಿ ಚೀನಾ ರಿಪಬ್ಲಿಕ್ ಸರ್ಕಾರದವರು ನೇಮಿಸಿದ್ದ ತಮ್ಮ ರಾಯಭಾರಿಯನ್ನು ಕೆಲಸದಿಂದ ವಜಾಮಾಡಬೇಕೆಂದು ಆಜ್ಞೆಮಾಡಿರುವರೆಂದು ವರದಿಯಾಗಿದೆ

೫೬ ವರ್ಷ ವಿರಾಮ ವೇತನ ಪಡೆದ ವಿಧವೆ

ಅಮೀನಾಬಾಯಿ ಬದಿವಾಲೆ ಎಂ... ೧೦೭ ವರ್ಷದ ಮುಸ್ಲಿಂ ಮುದುಕಿ... ಸಾಂಗ್ಲಿಯಲ್ಲಿ ಇತ್ತೀಚಿಗೆ ಮರಣ ಹೊ... ದಳೆಂದು ಹೇಳಲಾಗಿದೆ. ಆಕೆಯ ಪತಿ... ಪೋಲೀಸ್ ಅಧಿಕಾರಿಯಾಗಿದ್ದು ಬೆಳ... ಮಿನಲ್ಲಿ ನಡೆದ ಗಲಭೆಯಲ್ಲಿ ಸತ್ತು ಹೋ... ದುದರಿಂದ, ಆಕೆಗೆ ಸರ್ಕಾರದವರು ವಿ... ಮ ವೇತನ ಕೊಟ್ಟಿದ್ದರೆಂದೂ, ಅದ... ೫೬ ವರ್ಷಗಳ ಕಾಲ ಪಡೆದಳೆಂದೂ, ... ಗೆ ೬೦ ವರ್ಷದ ಮಗನಿರುವನೆಂದೂ ... ದಿಯಾಗಿದೆ

೩ ದಿವಸ ಬಾವಿಯೊಳಗೆ

ದರೋಡೆಕಾರರಿಂದ ಅಪಹರಿಸಲ್ಪ... ದ ಇಟಲಿಯ ಭಾರಿ ಜಮೀನುದಾರರ... ಗ ಮಿಚೆಲ್ ಎಂಬುವನು ೩ ದಿನಗ... ಒಂದು ಬಾವಿಯೊಳಗೆ ಅವಿತುಕೊಂಡಿ... ಅನಂತರ ವಾಪಸು ಬಂದನೆಂದು ಹೇ... ಲಾಗಿದೆ

ವಿಮಾನ ನಿಲ್ದಾಣಗಳ ಆಡಳಿತ ಭಾರತಕ್ಕೆ

ಸಂಸ್ಥಾನ ಮತ್ತು ಪ್ರಾಂತ್ಯಗಳಲ್ಲಿ... ವಿಮಾನ ನಿಲ್ದಾಣಗಳ ಆಡಳಿತವ... ಭಾರತ ಸರ್ಕಾರದವರು ವಹಿಸಿಕೊಳ್ಳು... ರೆಂದೂ, ಈ ಒಗ್ಗೆ ಪರಿಶೀಲನೆ ನಡೆ... ವೈಮಾನಿಕ ಶಾಖೆಯ ಡೆಪ್ಯೂಟಿ ಡೈ... ಯಾದ ಶ್ರೀ ಕೆ ಎಂ ರಾಹರವರು ಸಧ... ಲ್ಲಿಯೇ ಬೆಂಗಳೂರು ಮತ್ತು ಮೈಸೂ... ಭೇಟಿ ಕೊಡುವರೆಂದೂ ತಿಳಿದುಬಂದಿ...

ಮಹಿಳೆಯ ಕಿವಿಯು ಮಾರಾಟಕ್ಕೆ

ಅಮೆರಿಕದ ಲಾಸ್ ಏಂಜಲೀಸಿನ... ವರ್ಷದ ಕಾರ್ವಾರ್ ಎಂಬ ಮಹಿಳೆ... ತನ್ನ ಎಡಕಿವಿಯನ್ನು ೨೫ ಸಾವಿರ ಡಾ... ರುಗಳಿಗೆ ಮಾರುವುದಾಗಿ ಜಾಹಿರಾತ... ಪ್ರಕಟಿಸಿರುತ್ತಾಳೆ ತನ್ನ ಕಲೆಯ ... ಮವನ್ನು ಮುಂದುವರಿಸಲು ಈ ... ಬೇಕೆಂದು ತಿಳಿಸಿರುತ್ತಾಳೆ

ಶ್ರೀ ಜಗದಂಬಾ ಶಿಶುವಿಹಾ...

ದಿವಾನ್ಸ್ ರಸ್ತೆ, ಮೈಸೂರು

ನವರಾತ್ರಿ ರಜಾ ಕಳೆದನಂತರ, ... ಲ್ಯಂದ ಶಿಶು ವಿಹಾರವು ಈಗ ತಾನೆ ... ಯುಳ್ಳಪಟ್ಟು ತನ್ನದೇ ಆದ ಆಧುನಿಕ ... ಣ ಸಲಕರಣೆಗಳಿಂದ ಕೂಡಿದ ವಾ... ಶಿಕ್ಷಣ ಕಾರ್ಯವನ್ನು ಆರಂಭಿಸಿದೆ ... ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ ಮಾ... ಪಿತೃಗಳು ಎಂದಿನಂತೆ ಸಂಸ್ಥೆಯ ಪ್ರಯ... ಜನವನ್ನು ಹೊಂದುವುದರ ಮೂ... ಪ್ರೋತ್ಸಾಹಿಸುವರೆಂದು ನಂಬಲಾಗಿದೆ

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ



ಪಂಚಾಮೃತ ಮತ್ತು ಪಂಚಾಗ್ನಿ ಲವಣ

ಮಲೇರಿಯಾ ಗೆಡ್ಡೆ ಕರಗಿಸುವುದರಲ್ಲಿ ೪೦ ವರ್ಷ... ಖ್ಯಾತಿ ಪಡೆದ ಸಿದ್ಧ ಸಂಜೀವನ

ಉಪ್ಪಿನ ಬಿಳಿ ಹಲ್ಲುಪುಡಿ ಹೊಟ್ಟಿನ ಬೂದಿ ... ಸುಣ್ಣವಿಲ್ಲದ ಸ್ಪೆಷಲ್ ಟೂತ್ ಪೌಡರ್

ಪೊಟ್ಟಣ ಒಕ್ಕೆ ೦-೧-೬

S. N. PANDIT & SONS

90 Lansdowne Buildings, Mysore

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಮಂಗಳವಾರ ೧೧-೧೦-೧೯೪೯ [ಸಂಚಿಕೆ ೬೨

-ಭಾರತದೊಡನೆ- ಮೈಸೂರು ಸೈನ್ಯ ಐಕ್ಯ

ಜ|| ಕರಿಯಪ್ಪನವರ ಆಗಮನ

ಮೈಸೂರು ೧೧

ಭಾರತದ ಶ್ರೇಷ್ಠ ಸೇನಾಧಿಕಾರಿಗಳಾದ ಜ|| ಕೆ. ಎಂ. ಕರಿಯಪ್ಪನವರು ಈ ದಿನ ಬೆಳಿಗ್ಗೆ ಗಂಟೆಗೆ ಮಿಲಿಟರಿ ವಿಮಾನದಲ್ಲಿ ತಿರುವಾಂಕೂರಿನಿಂದ ಆಗಮಿಸಿದರು. ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಯವರಾದ ಶ್ರೀ ಸಫಿದಾರಾ ಪಾ, ಸಂಸ್ಥಾನದ ಮುಖ್ಯ ಸೇನಾನಿ, ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯ, ಪುರಸಭಾ ಕಮೀಷನರು, ಜಿಲ್ಲಾಧಿಕಾರಿಗಳು ಅವರನ್ನು ಸ್ವಾಗತಿಸಿದರು. ಮೂರನೇ ಪದಾತಿ ದಳದವರಿಂದ ಗಾರ್ಡ್ ಆಫ್ ಆನರ್ ಸ್ವೀಕರಿಸಿ, ಅವರು ಪ್ರಭುತ್ವ ಭವನಕ್ಕೆ ತೆರಳಿದರು.

ಡಾ|| ಕುಪ್ಪುಸ್ವಾಮಿಯವರಿಗೆ ಮದರಾಸಿನಲ್ಲಿ ಹುದ್ದೆ

ಮೈಸೂರು ಮಹಾರಾಜಾ ಕಾಲೇಜಿನ ಅಸಿ ಪ್ರೊಫೆಸರಾದ ಡಾ|| ಕುಪ್ಪುಸ್ವಾಮಿಯವರನ್ನು ಮದರಾಸ್ ವಿಶ್ವವಿದ್ಯಾನಿಲಯದ ಮನಶ್ಶಾಸ್ತ್ರದ ಪ್ರೊಫೆಸರನ್ನಾಗಿ ನೇಮಿಸಲಾಗಿದೆ

ಫಸ್ಟ್ ಗ್ರೇಡ್ ಕಾಲೇಜಿನ ಅಸಿ ಪ್ರೊಫೆಸರಾದ ಡಾ|| ಜ. ವಿ. ಕೃಷ್ಣಯ್ಯಂಗಾರ್ ರವರನ್ನು ಮಹಾರಾಜಾ ಕಾಲೇಜ್ ವಿದ್ಯಾರ್ಥಿನಿಲಯದ ವಾರ್ಡನ್ನಾಗಿ ನೇಮಿಸಲಾಗಿದೆ

ಟಿ. ಎಸ್. ಅಲ್ಲೀಖಾನರ ನಿಧನ

ಮೈಸೂರು ಪುರಸಭೆಯ ಮತ್ತು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಜನಾಬ್ ಟಿ ಎಸ್. ಅಲ್ಲೀಖಾನ್ ರವರು ಕಳೆದ ಶನಿವಾರ ರಾತ್ರಿ ತಮ್ಮ ೬೫ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರು ಟಿಪ್ಪುಸುಲ್ತಾನರ ವಂಶಕ್ಕೆ ಸೇರಿದವರು.

ಏಪ್ರಿಲ್ ೧ ರಿಂದ ಆರ್ಥಿಕ ಹೊಸ ವರ್ಷ

ಸ್ವಂ.ಸು.ಪ್ರೋ] ಬೆಂಗಳೂರು ೧೧

ಸಂಸ್ಥಾನದ ಆರ್ಥಿಕ ವರ್ಷವು ಇನ್ನು ಮುಂದೆ ಜುಲೈ ತಿಂಗಳ ಬದಲು ಏಪ್ರಿಲ್ ೧ನೇ ತಾ|| ನಿಂದ ಪ್ರಾರಂಭವಾಗುವುದೆಂದು ಸರ್ಕಾರದ ಆಜ್ಞೆಯಾಗಿದೆ

ಬ್ರಿಟಿಷ್ ರಾಜರ ಅರಮನೆಯಲ್ಲಿ ಕಳ್ಳ

ಬ್ರಿಟನ್ನಿನ ರಾಜರ ಬಕಿಂಗ್‌ಹ್ಯಾಂ ಅರಮನೆಯಲ್ಲಿ ಮೊನ್ನೆ ದಿನ ೨೬ ವರ್ಷದ ಯುವಕನೊಬ್ಬನು ೧೦ ಅಡಿಗಳ ಗೋಡೆಯನ್ನು ಹಾರಿ, ಉಪವನದಿಂದ ಮಹಡಿಯನ್ನು ಪ್ರವೇಶಿಸಿ, ರಾಜಕುಮಾರಿಯವರ ಮಂಚದ ಕೆಳಗೆ ಅವಿತುಕೊಂಡಿದ್ದುದನ್ನು ಪತ್ತೆ ಮಾಡಲಾಯಿತು. ರಾಜದಂಪತಿಗಳು ಅರಮನೆಯಲ್ಲಿರಲಿಲ್ಲ

ಸರ್ಕಾರಕ್ಕೆ ಪೆಟ್ರೋಲ್ ವಾಪಸು

ಮಳೆಯ ದೆಸೆಯಿಂದ ಲಾರಿಗಳನ್ನು ಓಡಿಸಲು ಸಾಧ್ಯವಾಗದಿದ್ದುದರಿಂದ ವಿ ರ ನ ಲಾಜಪತೇಯದಲ್ಲಿ ನೊಂದವರ ಮೋಟಾರು ಕೆಲಸಗಾರರ ಸಂಘದವರು ೪೮೦ ಗ್ಯಾಲನ್ ಪೆಟ್ರೋಲನ್ನು ಸರ್ಕಾರಕ್ಕೆ ಕಳೆದ ತಿಂಗಳು ವಾಪಸು ಮಾಡಿದ್ದಾರೆಂದು ವರದಿಯಾಗಿದೆ.

ಮೈಸೂರು ಸೈನ್ಯವು ಭಾರತಕ್ಕೆ ಸೇರುವುದು

ಸೈನಿಕ ಪ್ರದರ್ಶನದಲ್ಲಿ ಜ|| ಕರಿಯಪ್ಪನವರ ಭಾಷಣ

ಮೈಸೂರು ೧೧

ಭಾರತದ ಶ್ರೇಷ್ಠ ಸೇನಾನಿ ಜ|| ಕೆ. ಎಂ. ಕರಿಯಪ್ಪನವರು ಈ ದಿನ ಬೆಳಿಗ್ಗೆ ೧೧-೩೦ ಗಂಟೆಗೆ ಪ್ರಭುತ್ವ ಭವನದ ಆವರಣದಲ್ಲಿ ನಡೆದ ಸೈನಿಕ ಪ್ರದರ್ಶನದಲ್ಲಿ ಸಲ್ಯೂಟನ್ನು ಸ್ವೀಕರಿಸಿದರು. ಮೈಸೂರು ಕುದುರೆ, ಪದಾತಿ, ಮಹಾರಾಣೀ ಪದಾತಿ ಮತ್ತು ಅಂಗರಕ್ಷಕ ದಳಗಳು ಇದರಲ್ಲಿ ಭಾಗವಹಿಸಿದ್ದವು. ಜ|| ಕರಿಯಪ್ಪನವರು ಆಗಮಿಸಿದೊಡನೆಯೇ ಮೈಸೂರು ಮತ್ತು ಭಾರತ ಧ್ವಜಗಳನ್ನು ಹಾರಿಸಿ, ಅವರಿಗೆ ದಳದವರ ಗೌರವ ಸೆಲ್ಯೂಟನ್ನು ಲೆ|| ಕ|| ನಂಜರಾಜ ಬಹದ್ದೂರ್‌ರವರು ಸಲ್ಲಿಸಿದರು. ಅನಂತರ ಅವರು ಮೋಟಾರು ಜೀಪಿನಲ್ಲಿ ನಿಂತುಕೊಂಡು ಹೊರಟು ಎಲ್ಲ ಸೈನಿಕ ದಳಗಳನ್ನು ಪರೀಕ್ಷಿಸಿದರು ಸೈನಿಕರ ಮಾರ್ಚ್‌ಪಾಸ್ಟ್ ನಡೆಯಿತು

ಮೈಸೂರು ಸೈನ್ಯದಲ್ಲಿ ೩೨ ವರ್ಷ ಸೇವೆಮಾಡಿದ ದಿವಂಗತ ಸುಬೇದಾರ್ ಮೇಜರ್ ಕೆಂಪರಾಜೇ ಅರಸ್ ಬಹದ್ದೂರ್‌ರವರಿಗೆ ಭಾರತ ಸರ್ಕಾರದವರು ಕೊಟ್ಟಿದ್ದ ಓ. ಬಿ. ಇ ಎಂಬ ದ್ವಿತೀಯ ತರಗತಿ ಪಾರಿತೋಷಕವನ್ನು ಅವರ ಮಗನಿಗೆ ಜ|| ಕರಿಯಪ್ಪನವರು ಕೊಟ್ಟು, ತಂದೆಯಂತೆ ಆತನೂ ಸಹ ದೇಶ ಸೇವೆ ಮಾಡಬೇಕೆಂದು ಕನ್ನಡದಲ್ಲಿ ತಿಳಿಸಿದರು.

ಅನಂತರ ಜ|| ಕರಿಯಪ್ಪನವರು ಸೈನಿಕರನ್ನುದ್ದೇಶಿಸಿ ಉರ್ದುವಿನಲ್ಲಿ ಭಾಷಣ ಮಾಡಿದರು

ಮೈಸೂರು ಸೈನ್ಯದ ಶಿಸ್ತು ಮತ್ತು ದಕ್ಷತೆಯನ್ನು ಅವರು ಪ್ರಶಂಸಿಸಿ, ಸದ್ಯದಲ್ಲಿಯೇ ಮೈಸೂರು ಸೈನ್ಯವು ಭಾರತ ಸೈನ್ಯದಲ್ಲಿ ಐಕ್ಯವಾಗುವುದೆಂದು ತಿಳಿಸಿದರು. ಅನಂತರ ಮೈಸೂರು ಸೈನ್ಯದಲ್ಲಿ ಕೆಲವು ಜನರನ್ನು ಖೋತಾ ಮಾಡಲಾಗುವುದೆಂದೂ, ಅದರಿಂದ ಅವರುಗಳು ನಿರುತ್ಸಾಹಗೊಳ್ಳದೆ ತಮ್ಮ ಸ್ಥಳಗಳಿಗೆ ಹೋಗಿ ದೇಶಸೇವೆ ಮಾಡಬೇಕೆಂದೂ ಹೇಳಿದರು. ಅಂತಹವರ ಜವಾಬ್ದಾರಿಯು ಗುರುತರವಾದುದೆಂದೂ, ತಮ್ಮ ಪ್ರದೇಶಗಳಲ್ಲಿ ಉಂಟಾಗುವ ಬುಡಮೇಲು ಚಟುವಟಿಕೆಗಳನ್ನು ಅವರು ನಿರ್ಮೂಲನಮಾಡಿ, ದೇಶದ ಶಾಂ

ಬಟ್ಟೆ ಬೆಲೆಯನ್ನು ಇಳಿಸಲಾಗುವುದು

ಬಟ್ಟೆ ಬೆಲೆಯನ್ನು ಶೇಕಡ ೧೦ ರಷ್ಟು ಇಳಿಸಬೇಕೆಂಬ ಸಲಹೆಯನ್ನು ಭಾರತ ಸರ್ಕಾರದ ಬಟ್ಟೆ ಸಲಹಾ ಸಮಿತಿಯವರು ನಿನ್ನೆ ದೆಹಲಿಯಲ್ಲಿ ನಡೆದ ಸಭೆಯಲ್ಲಿ ಅಂಗೀಕರಿಸಿರುತ್ತಾರೆ

ದೇಶ ಸೇವೆಗಾಗಿ ಕ್ಷತ್ರಿಯ ಧರ್ಮ ಸ್ವೀಕರಿಸಬೇಕು

ಭಾರತ ಪ್ರಾದೇಶಿಕ ಸೇನೆಯ ಪ್ರಾರಂಭೋತ್ಸವವನ್ನು ಗವರ್ನರ್ ಜನರಲ್ ರಾಜಾಜಿಯವರು ಮೊನ್ನೆ ದಿನ ದೆಹಲಿಯಲ್ಲಿ ನೆರವೇರಿಸಿದರು ಆ ಸಮಯದಲ್ಲಿ ಅವರು ಭಾಷಣ ಮಾಡಿ, ಹಿಂದೆಯೇ ಸರ್ವರನ್ನು ಪ್ರಕಟದಿಂದ ಕ್ಷತ್ರಿಯ ವರ್ಣವನ್ನು ರದ್ದು ಮಾಡಿದ್ದೇವೆ ಈಗ ಪ್ರತಿಯೊಬ್ಬನೂ ಸ್ವಇಚ್ಛಾಪೂರ್ವಕವಾಗಿ ಶಿಕ್ಷಣ ಪಡೆದು, ಸುಸಜ್ಜಿತನಾಗಿ ಅಗತ್ಯ ಒದಗಿದಾಗ ದೇಶ ಸೇವೆ ಮಾಡಲು ಕ್ಷತ್ರಿಯ ಧರ್ಮ ಸ್ವೀಕಾರ ಮಾಡಬೇಕೆಂದು ತಿಳಿಸಿರುತ್ತಾರೆ

ತಿರುವಾಂಕೂರಲ್ಲಿ ನವರಾತ್ರಿ ಮೆರವಣಿಗೆಯು ರದ್ದು

ತಿರುವಾಂಕೂರಿನಲ್ಲಿ ಈ ವರ್ಷ ನವರಾತ್ರಿ ಮೆರವಣಿಗೆಯು ನಡೆಯುವುದಿಲ್ಲ ಇದಕ್ಕಾಗಿ ಸರ್ಕಾರದಿಂದ ಹಣ ಖರ್ಚು ಮಾಡಲು ಒಪ್ಪದೆ ರಾಜಪ್ರಮುಖರೇ ತಮ್ಮ ರಾಜಧನದಿಂದ ಖರ್ಚು ಮಾಡಬೇಕೆಂದು ಮಂತ್ರಿಗಳು ತಿಳಿಸಿದುದರಿಂದ ಮೆರವಣಿಗೆಯನ್ನು ರಾಜರು ರದ್ದು ಮಾಡಿದರೆಂದು ಹೇಳಲಾಗಿದೆ.

ತಿಗೆ ಸರ್ಕಾರದೊಡನೆ ಸಹಕರಿಸಬೇಕೆಂದೂ ಸಲಹೆ ಇತ್ತರು.

ಪ್ರತಿಯೊಬ್ಬ ಸೈನಿಕನೂ ಭಾರತದ ರಕ್ಷಕನೆಂದು ಅರಿತು, ಯಾವ ಭಾಗದಲ್ಲಾದರೂ ಸೇವೆ ಸಲ್ಲಿಸಲು ಸಿದ್ಧರಾಗಿರಬೇಕು. ತನ್ನ ಮನೆ, ಸಂಸಾರ ಆಸ್ತಿಪಾಸ್ತಿಗಳಿರುವ ಕಡೆಯೇ ಇರಬೇಕೆಂದು ಅಪೇಕ್ಷಿಸಬಾರದು. ಸೈನಿಕರು ಯಾವ ಪಂಗಡಗಳ ರಾಜಕೀಯದಲ್ಲೂ ಆಸಕ್ತಿ ವಹಿಸಬಾರದು. ಸೈನ್ಯದಲ್ಲಿ ಕೋಮುವಾರು ಭಾವನೆಯನ್ನು ಸಂಪೂರ್ಣವಾಗಿ ತೊಡೆದುಹಾಕಲಾಗುವುದು. ನಾಡಿನ ರಕ್ಷಣಾ ಕಾರ್ಯದಲ್ಲಿ ಮಾತ್ರವಲ್ಲದೆ ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲೂ ಸೈನಿಕರು ಸಹಕರಿಸಬೇಕು---ಎಂದು ಅವರು ತಿಳಿಸಿದರು.

೧ ಕೋಟಿ ರೂ. ಖರ್ಚಿನಲ್ಲಿ ಗಾಂಧೀ ಸ್ಮಾರಕ ಸಂಗ್ರಹಾಲಯ

ಭಾರತ ಸರ್ಕಾರದವರು ಸದ್ಯದಲ್ಲಿಯೇ ೧ ಕೋಟಿ. ರೂ. ಖರ್ಚಿನಿಂದ ಗಾಂಧೀ ಸ್ಮಾರಕ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಿರುವರೆಂದು ಗೊತ್ತಾಗಿದೆ ಯಾವ ಸ್ಥಳದಲ್ಲಿ ಅದನ್ನು ರಚಿಸಬೇಕೆಂಬುದು ನಿರ್ಧಾರವಾಗಿಲ್ಲವಾದರೂ, ಬೊಂಬಾಯಿ, ದೆಹಲಿ, ಸಬರ್ಮತಿ ಮತ್ತು ವಾರ್ಧಾ ಇವುಗಳಲ್ಲಿ ಒಂದು ಸ್ಥಳವನ್ನು ಆರಿಸಲಾಗುವುದೆಂದು ಹೇಳಲಾಗಿದೆ.

ಬೊಂಬಾಯಲ್ಲಿ ಸಕ್ಕರೆಗಾಗಿ ೪೦೦೦ ಜನರ ಪ್ರದರ್ಶನ

ಬೊಂಬಾಯಿನ ಸಕ್ಕರೆ ವರ್ತಕರ ಸಂಘದ ಮುಂದೆ ನಿನ್ನೆ ದಿನ ೪ ಸಾವಿರ ಜನರು ಮತ್ತು ಸಣ್ಣ ವ್ಯಾಪಾರಿಗಳು ಪ್ರದರ್ಶನ ನಡೆಸಿ, ಸಕ್ಕರೆ ಸರಬರಾಜು ಮಾಡಬೇಕೆಂದು ಗಲಭೆ ನಡೆಸಿದರು. ಅವರ ಜೊತೆಗೆ ಅನೇಕ ಮಹಿಳೆಯರೂ ಸೇರಿದ್ದರು. ಪೋಲೀಸರು ಬಂದು ಪರಿಸ್ಥಿತಿಯನ್ನು ಹತಬಂದಿಗೆ ತಂದರು.

ಸಂಯುಕ್ತ ಪ್ರಾಂತ್ಯದಲ್ಲಿ ಸಕ್ಕರೆ ಮತ್ತು ಇತರ ಪದಾರ್ಥಗಳ ಕ್ಷಾಮವುಂಟಾಗಿದೆಯೆಂದೂ, ಅದನ್ನು ನಿವಾರಿಸಲು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಅಲ್ಲಿನ ಗೃಹ ಸಚಿವರು ಸರ್ದಾರ್ ಪಟೇಲರಿಗೆ ತಂತಿ ಕಳುಹಿಸಿರುತ್ತಾರೆ

ದಂಡವಾಟೆಯ ಬಿಡುಗಡೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪಾದಿತರಲ್ಲೊಬ್ಬನಾಗಿ, ಇತ್ತೀಚೆಗೆ ಬಂಧಿಸಲ್ಪಟ್ಟಿದ್ದ ಗಂಗಾಧರ ದಂಡವಾಟೆಯನ್ನು ಇಂದೂರು ಜೈಲಿನಿಂದ ಬಿಡುಗಡೆ ಮಾಡಿ, ಆತನು ಇಂದೂರು ಜಿಲ್ಲೆಯನ್ನು ಬಿಟ್ಟು ಹೋಗಕೂಡದೆಂದು ನಿರ್ಬಂಧ ಹಾಕಲಾಗಿದೆ

ಬ್ರಿಟನ್ನಿನಲ್ಲಿ ಚುನಾವಣೆ

ಬ್ರಿಟನ್ನಿನಲ್ಲಿ ಮಹಾ ಚುನಾವಣೆಯು ಸದ್ಯದಲ್ಲಿಯೇ ನಡೆಯುವುದೆಂದು ಅಲ್ಲಿನ ಆರೋಗ್ಯ ಮಂತ್ರಿಗಳು ತಿಳಿಸಿರುತ್ತಾರೆ

ಶ್ರೀಮನ್ಮಹಾರಾಜರೆಂದು ಕರೆಯಲು ಆಕ್ಷೇಪಣೆ ಇಲ್ಲ

ಮೈಸೂರಿನ ಮಹಾರಾಜರವರನ್ನು ಶ್ರೀಮನ್ಮಹಾರಾಜರೆಂದು ಕರೆಯಲು ಭಾರತ ಸರ್ಕಾರದ ಆಕ್ಷೇಪಣೆಯೇನೂ ಇಲ್ಲವೆಂದು ಸರ್ದಾರ್ ಪಟೇಲರು ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರಿಗೆ ತಿಳಿಸಿದ್ದಾರೆಂದು ಗೊತ್ತಾಗಿದೆ.

ಶಾರದಾ ಸಂಘ

ಶ್ರೀ ಶಾರದಾ ನಿಕೇತನ ಹಾಸ್ಟಲಿನಲ್ಲಿರುವ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ಭಾನುವಾರ ಗಾಂಧೀ ಜಯಂತಿಯನ್ನು ಆಚರಿಸಲಾಯಿತು ಸಂಘದ ಅಧ್ಯಕ್ಷರಾದ ಶ್ರೀ ವಿ ಚಂದ್ರಶೇಖರಯ್ಯ ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ ಎಸ್ ಸೋಮಸುಂದರಂ ಅವರು " ಗಾಂಧೀಯವರ ಹುಟ್ಟು ಮತ್ತು ಅವರ ಕಾರ್ಯ " ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಭಾರತ ಭಾಜನ, ಗೀತಾ ಪಠನ ಮತ್ತು ಭಾಷಣಗಳು ನಡೆದವು

ಮೈಸೂರು ಸಂಸ್ಥಾನವೇ ಒಂದು ವಸ್ತು ಪ್ರದರ್ಶನ

ಬಹುಮಾನ ವಿನಿಯೋಗದಲ್ಲಿ ಚನ್ನಯ್ಯನವರ ಭಾಷಣ

ಮೈಸೂರು ೧೧

ದಸರಾ ವಸ್ತುಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವು ನಿನ್ನೆ ಸಂಜೆ ಜೇವಣ್ಣರಾಯನ ಕಟ್ಟೆಯಲ್ಲಿರುವ ಧನಲಕ್ಷ್ಮೀ ನಾಟಕದ ಮಂದಿರದಲ್ಲಿ ನಡೆಯಿತು. ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ರತ್ನಮ್ಮನವರಿಂದ ಪ್ರಾರ್ಥನೆಯಾದನಂತರ, ವಿದ್ಯಾ ಸಚಿವರೂ ಮತ್ತು ಸಮಿತಿಯ ಅಧ್ಯಕ್ಷರೂ ಆದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿದರು.

ಉಪಾಧ್ಯಕ್ಷರಾದ ಶ್ರೀ ಕೆ ಚಿಕ್ಕನಾರಾಯಣ ಸ್ವಾಮಿಯವರು ವರದಿಯನ್ನು ಒಪ್ಪಿಸಿದರು. ೬೦ ವರ್ಷಗಳಿಂದ ನಡೆಯುತ್ತಿರುವ ಪ್ರದರ್ಶನವು ಈ ವರ್ಷ ವಿಶೇಷ ಮನರಂಜಕವಾಗಿದ್ದು, ಎಲ್ಲ ವರ್ಷಕ್ಕಿಂತಲೂ ಹೆಚ್ಚಾಗಿ ಈ ವರ್ಷ ೪ ಲಕ್ಷಕ್ಕಿಂತ ಹೆಚ್ಚಿನ ಪ್ರೇಕ್ಷಕರು ಬಂದಿದ್ದರು. ಪ್ರದರ್ಶನವನ್ನು ಪ್ರತಿ ವರ್ಷವೂ ಖಾಯಂ ಆಗಿ ನಡೆಯುವಂತೆ ವ್ಯವಸ್ಥೆ ಮಾಡಲು ಸರ್ಕಾರದವರು ಆಜ್ಞೆ ಮಾಡಬಹುದೆಂದು ತಿಳಿಸಿ, ಭಾರತದ ಅನೇಕ ಭಾಗಗಳಿಂದ ಬಂದಿದ್ದ ವಸ್ತುಗಳನ್ನು ವಿವರಿಸಿದರು.

ಶ್ರೀ ಚನ್ನಯ್ಯನವರು ಬಹುಮಾನಗಳನ್ನು ವಿನಿಯೋಗಿಸಿ ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು —

ವಸ್ತು ಪ್ರದರ್ಶನಗಳು ಜನರಿಗೆ ಹೆಚ್ಚು ಉಪಯುಕ್ತವಾಗುವಂತೆ ಮಾಡಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ನಾನಾ ವಸ್ತುಗಳ ಪ್ರತ್ಯೇಕ ಪ್ರದರ್ಶನಗಳು ತಿಂಗಳು ತಿಂಗಳಿಗೂ ನಡೆಯುತ್ತವೆ. ಇದರಿಂದ ನೂತನವಾಗಿ ತಯಾರಾದ ವಸ್ತುಗಳು ಪ್ರದರ್ಶಿಸಲ್ಪಟ್ಟು ಜನರಿಗೆ ವಿಶೇಷ ಪ್ರಯೋಜನವುಂಟಾಗುವುದು. ವಸ್ತುಪ್ರದರ್ಶನದಲ್ಲಿ ಮಾರಾಟದ ಒಂದೇ ಗುರಿ ಇರಕೂಡದು. ವ್ಯಾಪಾರಸ್ಥರು ಅದನ್ನು ಮಾರಾಟದ ಸಂತೆಯೆಂದು ತಿಳಿಯಬಾರದು. ಪಾಶ್ಚಿಮಾತ್ಯ ದೇಶದಲ್ಲಿರುವಂತೆ ವಸ್ತುಪ್ರದರ್ಶನವು ವಿವಿಧ ರೂಪದಲ್ಲಿದ್ದು ಹೊಸ ವಸ್ತುಗಳು ಪ್ರದರ್ಶಿತವಾಗಬೇಕು. ನೂತನ ವಸ್ತುಗಳನ್ನು ಕಂಡುಹಿಡಿದವರಿಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಟ್ಟು ಅದನ್ನು ಪ್ರದರ್ಶಿಸುವಂತೆ ಮಾಡಬೇಕು. ಇವುಗಳ ಜೊತೆಗೆ ಮಿಲಿಟರಿ ಪ್ರದರ್ಶನಗಳೂ ಆಗಬೇಕು. ದೇಶದ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ವಸ್ತುಪ್ರದರ್ಶನಗಳು ಜ್ಞಾನ ಪ್ರಸಾರರೂಪದಲ್ಲಿ ನಡೆಯಬೇಕು. ಭಾರತದಲ್ಲಿ ಮೈಸೂರು ದೇಶವೇ ಒಂದು ವಸ್ತುಪ್ರದರ್ಶನದಂತಿದೆ. ಅದು ಇದುವರೆಗೆ ಸಾಧಿಸಿರುವ ಪ್ರಗತಿಯನ್ನು ಮುಂದವರಿಸಿಕೊಂಡು ಬರಬೇಕು. ಮೈಸೂರು ವಸ್ತುಪ್ರದರ್ಶನವನ್ನು ಖಾಯಂ ಮಾಡಿ, ಅದಕ್ಕೆ ಬೇಕಾದ 'ಒಕ್ಕಣೆ', ಕಟ್ಟಡದ ಅಭಿವೃದ್ಧಿ ಮುಂತಾದ ಕಾರ್ಯಗಳಿಗಾಗಿ ಒಂದು ಖಾಯಂ ಸಮಿತಿಯನ್ನು ರಚಿಸಬೇಕು. ಪ್ರತಿ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿಯೂ ಇಂತಹ ಪುಟ್ಟ ಪ್ರದರ್ಶನಗಳನ್ನು ಏರ್ಪಡಿಸಬೇಕು.

ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರಿಂದ ವಂದನಾರ್ಪಣೆಯಾದನಂತರ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಪ್ರಭಾ

ಮುಂದಿನ ಬದಲಾವಣೆ

ಕಾರ್ಡಿನಲ್ ಪ್ರೊಡ್ಯೂಸರವರ

✻ ಕನೀಜ್ ✻

ಪಾತ್ರ ಮುನವರ್ ಸುಲ್ತಾನ, ಶ್ಯಾಮ್

ಕುಲ್‌ದೀಪ್, ಕಕ್ಕೂ

ಸಂಗೀತ – ಗುಲಾಮ್ ಹೈದರ್

ಆರೋಗ್ಯ ಕೇಂದ್ರಕ್ಕೆ ಸಚಿವರ ಭೇಟಿ

ಮೈಸೂರು ೧೧

ಕೃಷ್ಣರಾಜ ನಗರದ ಆರೋಗ್ಯ ಕೇಂದ್ರಕ್ಕೆ ಸಚಿವರಾದ ಜನಾಬ್ ಮಹಮದ್ ಶರೀಫ್‌ರವರು ನಿನ್ನೆ ಭೇಟಿ ಇತ್ತು, ಪರಿಶೀಲನೆ ನಡೆಸಿದರು. ಅವರೊಡನೆ ಸೀನಿಯರ್ ಸರ್ಜನರಾದ ಡಾ॥ ಬಿ ಜಯರಾಂ, ಆರೋಗ್ಯ ಇಲಾಖಾಧಿಕಾರಿಗಳಾದ ಡಾ॥ ಚಂದ್ರಶೇಖರಯ್ಯ, ಜಿಲ್ಲಾಧಿಕಾರಿಗಳಾದ ಶ್ರೀ ಜಿ ಎನ್ ನಾಗರಾಜರಾವ್ ಮತ್ತು ಇತರರು ಭೇಟಿ ಇತ್ತಿದ್ದರು. ಮಲೇರಿಯಾ ನಿವಾರಣೆಗಾಗಿ ಆರೋಗ್ಯ ಕೇಂದ್ರದವರು ಮಾಡುತ್ತಿರುವ ಒಳ್ಳೆ ಕೆಲಸ ಕಾರ್ಯಗಳನ್ನು ನೋಡಿ ಎಲ್ಲರೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಕೆಲಸ ಕಾರ್ಯಗಳ ಪರಿಣಾಮವಾಗಿ ಜನರಲ್ಲಿ ಹೆಚ್ಚು ಆರೋಗ್ಯ ಪರಿಸ್ಥಿತಿಯು ಉಂಟಾಗಿ ಹೆಚ್ಚಿನ ವ್ಯವಸಾಯಕ್ಕೂ ಸಹ ಸಹಾಯವಾಗಿದೆಯೆಂದು ತಿಳಿದು ಬಂದಿದೆ.

ಪ್ರಜಾ ಪ್ರತಿನಿಧಿ ಸಭೆ

ಈ ತಿಂಗಳು ೨೪ನೇ ತಾ॥ ಸೋಮವಾರ ಮಧ್ಯಾಹ್ನ ೧ ಗಂಟೆಗೆ ರಾಜಧಾನಿಯ ಜಗನ್ಮೋಹನ ಬಂಗ್ಲೆಯಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವು ಪ್ರಾರಂಭವಾಗುವುದು.

— ನ್ಯೂ ಹೋಟೇಲ್ —

ಪತಿಯವರ

ಹೈ ಗ್ರೌಂಡ್ಸ್ (ರೇಸ್ ಕೋರ್ಸ್ ಬಳಿ), ಬೆಂಗಳೂರು

ಬ್ರಾಹ್ಮಣರ ಅಡಿಗೆ ಊಟ, ಟಿಫನ್, ಕಾಫಿ, ಸ್ನಾನ, ಸಜ್ಜಾದ ಬಾತ್ ಅಟ್ಯಾಚ್ಡ್ ರೂಂ ದಿನ ಒಂದಕ್ಕೆ ಸೀಟ್ ಒಂದಕ್ಕೆ ರೂ ೧ ಮತ್ತು ಮೇಲ್ಪಟ್ಟು

ಮೈಸೂರು ಸರ್ಕಾರದ ಜೀವ ವಿಮೆ ಶಾಖೆ

ಪಬ್ಲಿಕ್ ಬ್ರಾಂಚ್

ನಂಜನಗೂಡು ಎಕ್ಸೈಜ್ ಪ್ಯೂನ್ ಶ್ರೀ ಕೃಷ್ಣ ಇವರ ಪಾಲಿಸಿ ನಂ ೭೭೮೭ ಕಳೆದುಹೋಗಿದ ಮೂಲಕ ಹೊಸದಾಗಿ ಪಾಲಿಸಿ ಅಪೇಕ್ಷಿಸುತ್ತಿದ್ದಾರೆ. ಇದರ ಮೇಲೆ ತಕರಾರಿದ್ದ ಪಕ್ಷದಲ್ಲಿ ಕೆಳಗೆ ಸಹಿ ಮಾಡಿರುವವರಲ್ಲಿ ಒಂದು ತಿಂಗಳೊಳಗಾಗಿ ತಿಳಿಸತಕ್ಕದ್ದು.

[ಸಹಿ] ಎಮ್ ಶಾಮಣ್ಣ, ಸೆಕ್ರೆಟರಿ,
ಬೆಂಗಳೂರು. ೧೧-೧೦-೪೯

ಮದರಾಸಿನಲ್ಲಿ ವೈದ್ಯರುಗಳ ಅಭಾವ

ಮದರಾಸ್ ಪ್ರಾಂತ್ಯದಲ್ಲಿ ವೈದ್ಯರುಗಳ ಅಭಾವವು ವಿಶೇಷವಾಗಿದೆಯೆಂದೂ, ಪ್ರಾಂತ್ಯದ ೫೩೪ ಲಕ್ಷ ಜನ ಸಂಖ್ಯೆ ಇದ್ದು ೩ ಸಾವಿರ ಜನರಿಗೆ ಒಬ್ಬ ವೈದ್ಯರು ಮಾತ್ರ ಇದ್ದಾರೆಂದೂ, ಇಲ್ಲಿನ ಸಚಿವರಾದ ಡಾ॥ ಟಿ ಎಸ್ ಎಸ್ ರಾಜನ್‌ರವರು ತಿಳಿಸಿರುತ್ತಾರೆ. ಒಟ್ಟು ೧೪೬೧೫ ವೈದ್ಯರುಗಳು ಮಾತ್ರ ಇದ್ದಾರೆಂದೂ, ಆದುದರಿಂದ ಮೆಡಿಕಲ್ ಕಾಲೇಜುಗಳನ್ನು ಹೆಚ್ಚು ಮಾಡಿ, ವೈದ್ಯರುಗಳ ಸಂಖ್ಯೆಯನ್ನು ದ್ವಿಗುಣ ಮಾಡಬೇಕೆಂದೂ ಹೇಳಿರುತ್ತಾರೆ.

ಬೊಂಬಾಯಿನಲ್ಲಿ ಸಕ್ಕರೆಗೆ ಕ್ಷಾಮ

ಬೊಂಬಾಯಿನಲ್ಲಿ ಸಕ್ಕರೆಗೆ ಕ್ಷಾಮವುಂಟಾಗಿ, ಅನೇಕ ಭಾಗಗಳಲ್ಲಿ ಜನರು ಪ್ರದರ್ಶನ ನಡೆಸಿ ಗಲಭೆ ಮಾಡಿದರೆಂದೂ, ಪೋಲೀಸರು ಬಂದು ಜನರ ಗುಂಪನ್ನು ಚದುರಿಸಬೇಕಾಯಿತೆಂದೂ ವರದಿಯಾಗಿದೆ. ಬೆಳಗಿನಿಂದ ಜನರ ಗುಂಪು ಸಾಲಾಗಿ ನಿಂತು, ಸಕ್ಕರೆ ಸಿಕ್ಕದೆ ನಿರಾಶೆಗೊಂಡು ಗಲಭೆ ನಡೆಸಿದರು.

ಮೋಹನಲಾಲ್ ಸಾಕ್ಸೇನಾರವರು

ಭಾರತ ಸರ್ಕಾರದ ಪುನರ್ರಚನಾ ಇಲಾಖೆಯ ಮಂತ್ರಿಗಳಾದ ಶ್ರೀ ಮೋಹನಲಾಲ್ ಸಾಕ್ಸೇನಾರವರು ನಾಳೆ ಬೆಂಗಳೂರಿಗೆ ಬಂದು ನಾಳಿದ್ದು ಮೈಸೂರಿಗೆ ಭೇಟಿಕೊಡುವರು. ಅವರು ಶ್ರೀಮನ್ಮಹಾರಾಜರವರನ್ನು ಸಂದರ್ಶಿಸುವರು.

ವಿವಾಹ ವಿಚ್ಛೇದನವಿಲ್ಲ ಮದುವೆಯಾದುದಕ್ಕೆ

ಕಾನ್ಪುರದ ೨೨ ವರ್ಷದ ಜ
ಬೇಗಂ ಎಂಬ ಮುಸ್ಲಿಂ ವಿವಾಹಿತಳ
ನ್ನ ಪ್ರಥಮ ಪತಿಯನ್ನು ವಿಚ್ಛೇದನ
ಪಡೆದೆ ಬೇರೊಬ್ಬರನ್ನು ಮದುವೆಯಾ
ದುದಕ್ಕಾಗಿ ೬ ತಿಂಗಳು ಶಿಕ್ಷೆಯನ್ನು ವಿ
ಲಾಗಿದೆ ಆಕೆಯ ತಾಯಿ, ಮತ್ತು ಪ್ರ
ಹಿತರವರಿಗೂ ೪ ತಿಂಗಳ ಶಿಕ್ಷೆ ವಿಧಿ
ಯಿತು

§ ಕಮ್ಯೂನಿಸ್ಟ್ ಚೀಣಾದಲ್ಲಿ ಸುಭಾ
ಇದ್ದಾರೆಂದು ಶ್ರೀ ಶರತ್ ಚಂದ್ರಬೋ
ರು ತಿಳಿಸಿರುವುದಕ್ಕೆ ಯಾವ ಆಧಾ
ಇಲ್ಲವೆಂದು ಭಾರತ ಸರ್ಕಾರದ ಅಧಿ
ಯೊಬ್ಬರು ತಿಳಿಸಿರುತ್ತಾರೆ

ಅಮರ ಪ್ರೇಮವನ್ನು ನಿರೂಪಿಸ

ಆತ್ಮ ಕಥೆ

ಸುರೇಂದ್ರ-ಮುನಾವರ್ ಸು

ನಟಿಸಿರುವ ಹಿಂದಿ ಚಿತ್ರ

ಮೇರಿ ಕಹಾ

9—10—49 ರಿಂದ

ವುಡ್‌ಲ್ಯಾಂಡ್ಸ್‌ನಲ್ಲಿ

[G. F D Rele

Edited, printed and p
lished by A R Nagara
at Sadhvi Press, D Subb
Road, Mysore,

ರಾಜಕಮಲ್

ಮೈಸೂರು

7-10-49 ರಿಂದ

ಅಮೋಘವಾದ ೭ನೇ ವಾ

ಫಿಲ್ಮಿಸ್ತಾನರವರ

– ಆಕ್ಟ್ರೆಸ್

ರೆಹನ, ನೀನ, ಪ್ರೇಮ್ ಅದೀ

ಅಭಿನಯಿಸಿರುವ ಹಿಂದಿ ಚಿತ್ರ

Municipal Offices,
Mysore, Dated. 8th October 19

NOTIFICATION

— o —

It is hereby notified for the information of th public that the Mysore City Municipal Council hav proposed to amend the octroi bye-laws of the Mysor City Municipality relating to the grant of the exemp tion from the levy of the octroi duty on slates, th particular item being shown as item No 32 unde the exemptions of schedule of exemptions in th octroi bye law of the Mysore city Municipality An person having objection to the same may prefer th same in writing within one month from the date o this notification after which no objection will b heard

Sd C Narasimha Moorty,
Municipal Commissioner

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪ ಬುಧವಾರ ೧೨-೧೦-೧೯೪೯ ಸಂಚಿಕೆ ೬೩

– ಕೇಂದ್ರ ಮಂತ್ರಿಗಳ – ಸಂಬಳದಲ್ಲಿ ಖೋತಾ

ವಿಕ್ಟೋರಿಯಾ ಆಸ್ಪತ್ರೆ ನಿಧಿಗೆ ೧ ಲಕ್ಷ ರೂ.

ಸ್ವಂ.ಸು.ಫೋ.] ಬೆಂಗಳೂರು ೧೧

ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯ ವಜ್ರೋತ್ಸವದ ನಿಧಿಗಾಗಿ ಪೌರ ಸಭೆಯುವರು ಒಂದು ಲಕ್ಷ ರೂ ಅನ್ನು ಕೊಡಲು ನಿರ್ಧರಿಸಿದ್ದಾರೆ

○ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ನಿನ್ನೆ ದಿನ ದೆಹಲಿಯಿಂದ ಹಿಂದಿರುಗಿದರು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ೧೭ ನೇ ತಾ|| ಬರುವರು

○ ಭಾರತದ ಸಚಿವರಾದ ಶ್ರೀ ಮೋಹನ ಲಾಲ್ ಸಾಕ್ಸೇನಾರವರ ಆಗಮನದ ಕಾರ್ಯಕ್ರಮ ರದ್ದಾಗಿದೆ.

○ ದಿವಂಗತ ಡಿ ಎಸ್ ಮಲ್ಲಪ್ಪನವರ ಸ್ಥಾನದಲ್ಲಿ ಬರುವ ತಿಂಗಳು ೧೩ ನೇ ತಾ|| ನ್ಯಾಯ ವಿಧಾಯಕ ಸಭೆಗೆ ತುಮಕೂರು ಜಿಲ್ಲೆಯಿಂದ ಉಪ ಚುನಾವಣೆ ನಡೆಯುವಂತೆ ಆಜ್ಞೆಯಾಗಿದೆ

ಅಮೇರಿಕದಲ್ಲಿ ನೆಹರೂರವರಿಗೆ ಅಭೂತ ಪೂರ್ವ ಸ್ವಾಗತ

ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ದಿನ ಅಮೇರಿಕದ ರಾಜಧಾನಿಯಾದ ವಾಷಿಂಗ್‌ಟನ್ನಿಗೆ ಲಂಡನ್ನಿನಿಂದ ಆಗಮಿಸಿದರು ವಿಮಾನ ನಿಲ್ದಾಣದಲ್ಲಿ ಅವರನ್ನು ಅಧ್ಯಕ್ಷ ಟ್ರೂಮನ್, ಅವರ ಪತ್ನಿ, ಮಂತ್ರಿ ಮಂಡಲದವರು ಮತ್ತು ಇತರ ಅಧಿಕಾರಿಗಳು ಸ್ವಾಗತಿಸಿದರು ಅಮೇರಿಕದ ಎಲ್ಲಾ ಶಾಖಾ ಸೈನ್ಯ ಪಡೆಯವರು ಅವರಿಗೆ ಗಾರ್ಡ್ ಆಫ್ ಆನರ್ ಅರ್ಪಿಸಿದರು ಅವರ ಗೌರವಾರ್ಥವಾಗಿ ೧೯ ಕುಶಾಲತೋಪುಗಳನ್ನು ಹಾರಿಸಲಾಯಿತು.

ಅಧ್ಯಕ್ಷ ಟ್ರೂಮನ್‌ರವರು ನೆಹರೂರವರನ್ನು ಸ್ವಾಗತಿಸುತ್ತಾ ಈರೀತಿ ತಿಳಿಸಿರುತ್ತಾರೆ-ಅಮೇರಿಕದ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ನಿಮ್ಮನ್ನು ಪ್ರಧಾನಿಗಳೆಂದು ಮಾತ್ರವೇ ಅಲ್ಲದೆ, ಸ್ವಾತಂತ್ರ್ಯ ಪಡೆದ ದೊಡ್ಡ ರಾಷ್ಟ್ರದ ಜನಪ್ರಿಯರಾದ ಮತ್ತು ಗೌರವಿತ ನಾಯಕರೆಂದು ಸ್ವಾಗತಿಸುತ್ತೇನೆ ನಿಮ್ಮ ದೇಶವನ್ನು ಕಂಡುಹಿಡಿಯಲು ಹೋದವರು ನಮ್ಮ ದೇಶವನ್ನು ಕಂಡು ಹಿಡಿಯಬೇಕೆಂದು ವಿಧಿ ನಿಯಮವಾಗಿತ್ತು ಆದರೆ ನಿಮ್ಮ ಭೇಟಿಯೂ ನಿಜವಾಗಿಯೂ ಅಮೇರಿಕದ ಸತ್ವವನ್ನು ಕಂಡುಹಿಡಿದ ಹಾಗೆಯೇ ಇದೆಯೆಂದು ಆಶಿಸುತ್ತೇನೆ

ಜ|| ಕರಿಯಪ್ಪನವರಿಗೆ ಪೌರಸಭೆಯ ಸತ್ಕಾರ

ಮೈಸೂರು ಪುರ ಸಭೆಯವರು ನಿನ್ನೆ ಜ|| ಕರಿಯಪ್ಪನವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪ, ಸಂಸ್ಥಾನದ ಶ್ರೇಷ್ಠ ಸೇನಾನಿ, ಶ್ರೀ ಪೊನ್ನಪ್ಪ ಮತ್ತು ಇನ್ನಿತರ ಗಣ್ಯ ಮಹನೀಯರೂ ಮಹಿಳೆಯರೂ ಸಮಾರಂಭಕ್ಕೆ ದಯಮಾಡಿಸಿದ್ದರು ಉಪಾಹಾರದನಂತರ, ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಭಾಷಣ ಮಾಡಿ, ಸ್ವತಂತ್ರ ಭಾರತದ ಪ್ರಥಮ ಶ್ರೇಷ್ಠ ಸೇನಾನಿಯ ಸೇವೆಯನ್ನು ಕೊಂಡಾಡಿದರು. ಜ|| ಕರಿಯಪ್ಪನವರು ವಂದನೆಯನ್ನು ಅರ್ಪಿಸಿದರು

ಪ್ರಥಮ ಶ್ರೇಣಿಯ ಸೈನ್ಯ ನಿರ್ಮಾಣಕ್ಕೆ ಮಹಾಜನರ ಬೆಂಬಲ

ಪುರಸಭಾ ಸಮಾರಂಭದಲ್ಲಿ ಶ್ರೇಷ್ಠ ದಂಡನಾಯಕರ ಮನವಿ

ಮೈಸೂರು ೧೧

ಭಾರತದ ಶ್ರೇಷ್ಠ ಸೇನಾಪತಿಗಳಾದ ಜ|| ಕೆ. ಎಂ ಕರಿಯಪ್ಪನವರಿಗೆ ನಿನ್ನೆ ಸಂಜೆ ಪುರ ಸಭೆಯವರು ಟೌನ್‌ಹಾಲಿನಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರು

ಶ್ರೀಮತಿ ರಾಜಮ್ಮ ಕಲ್ಲೋಳಿ ಮಠರವರಿಂದ ಪ್ರಾರ್ಥನೆಯಾದನಂತರ, ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಬಿನ್ನವತ್ತಳೆಯನ್ನು ಓದಿ, ದಂತದ ಪಾರಿತೋಷಕವನ್ನು ಅರ್ಪಿಸಿದರು ಮಹಾಭಾರತದ ಯುದ್ಧದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದ ದೃಶ್ಯವನ್ನು ಅತಿ ಸುಂದರವಾಗಿ ಅದರಲ್ಲಿ ಕೆತ್ತಲಾಗಿದೆ

ಜ|| ಕರಿಯಪ್ಪನವರು, ಭಾರತದ ಒಬ್ಬ ಸೈನಿಕನನ್ನು ಪುರ ಸಭೆಯವರು ಸನ್ಮಾನಿಸಿದುದಕ್ಕಾಗಿ ವಂದನೆಯನ್ನು ಅರ್ಪಿಸಿ, ಈ ರೀತಿ ಭಾಷಣ ಮಾಡಿದರು:-

ಮಹಾತ್ಮ ಗಾಂಧಿಯವರೊಡನೆ ಒಮ್ಮೆ ನಾನು ಮಾತನಾಡಿದಾಗ ಸೈನ್ಯವೆಂದರೆ ಕೇವಲ ವಿನಾಶ ಕಾರಕ ಶಕ್ತಿಯೆಂದೂ, ದೂಷ್ಯವಾದ ವಸ್ತುವೆಂದೂ ಕೆಲವರು ಭಾವಿಸಿರುವುದಾಗಿ ನಾನು ವಿಷಾದದಿಂದ ಹೇಳಿದೆನು ಆದರೆ ಸೈನ್ಯವು ಕೇವಲ ರಕ್ತಪಾತ, ಕೊಲೆ, ಯುದ್ಧ ಮತ್ತು ವಿನಾಶ ಕಾರ್ಯಗಳಿಗಾಗಿಯೇ ಇರುವುದಲ್ಲ ರಾಷ್ಟ್ರದ ಹಿತ ಸಾಧನೆಯಲ್ಲಿ ಅದರ ಪಾತ್ರವು ಮಹತ್ತರವಾದುದು

ಹೊರಗಿನ ಆಕ್ರಮಣದಿಂದ ದೇಶವನ್ನು ರಕ್ಷಿಸುವುದು, ಸೈನಿಕನ ಪ್ರಥಮ ಕರ್ತವ್ಯ, ಯುದ್ಧ ಮಾಡುವುದಕ್ಕೆ ಹಾತೊರೆಯುವುದಲ್ಲ ನಿಜವಾಗಿಯೂ ಯುದ್ಧವನ್ನು ಹೂಡುವವರು, ರಾಜ ತಾಂತ್ರಿಕರು ಮತ್ತು ರಾಜಕೀಯ ಧುರೀಣರು ಅವರ ನಿರ್ಧಾರಕ್ಕೆ ಅನುಗುಣವಾಗಿ ಸೈನಿಕರು ನಡೆಯಲೇ ಬೇಕಾಗುವುದು ಇತರ ನಾಗರೀಕರಂತೆಯೇ ಸೈನಿಕರಿಗೂ ಯುದ್ಧವು ಬೇಸರವಾದ ಪ್ರಸಂಗ ಪ್ರಕೃತದಲ್ಲಿ ದೇಶದ ಸ್ವಾತಂತ್ರ್ಯ ರಕ್ಷಣೆಗೆ ಸೈನಿಕರು ಸಿದ್ಧರಾಗಿರಬೇಕಾಗಿದೆ

ಎರಡನೆಯದಾಗಿ ಕಾನೂನು ಮತ್ತು ಶಿಸ್ತನ್ನು ಸಂರಕ್ಷಿಸಲು ಸೈನಿಕರು ನೆರವಾಗುವರು ಈ ಕಾರ್ಯವು ಪ್ರಥಮತಃ ಪೋಲೀಸರದು ಇದರಲ್ಲಿ ಪ್ರವೇಶಿಸುವುದು ಸೈನಿಕರಿಗೆ ಸಮರ್ಪಕವಲ್ಲದ ಅಂಶ ಶತ್ರುಗಳ ಮೇಲೆ ಕೈಗೊಳ್ಳುವ ಕಾರ್ಯಾಚರಣೆಯನ್ನು ಸ್ವಜನರ ಮೇಲೆ ಪ್ರಯೋಗಿಸುವ ಪ್ರಸಂಗವು ಯಾರಿಗೂ ಹಿತಕರವಲ್ಲ ಆದರೂ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಅಗತ್ಯ ಬಿದ್ದರೆ ಸೈನಿಕರು ಪೋಲೀಸರಿಗೆ ನೆರವಾಗುವರು

ನಾಡಿನ ಆರ್ಥಿಕ ಸಮಸ್ಯೆಯ ಪರಿಹಾರದಲ್ಲಿಯೂ ಸೈನಿಕರ ಪಾತ್ರವು ಪ್ರಾಮುಖ್ಯವಾಗಿರುತ್ತದೆ ಆಹಾರದ ಉತ್ಪತ್ತಿಯಲ್ಲಿ ನಾವು ಅತ್ಯಂತ ಆಸಕ್ತಿಯುಳ್ಳವರಾಗಿದ್ದೇವೆ ಅಸ್ಸಾಂ ಪ್ರಾಂತ್ಯದಲ್ಲಿ ಭಾರಿ ಪ್ರಯೋಗಗಳನ್ನೇ ನಡೆಸುತ್ತಿದ್ದೇವೆ

ದೊಡ್ಡ ದೊಡ್ಡ ಪ್ರಮಾಣದಲ್ಲಿ ಗಿಡಗಳನ್ನು ನೆಡುವ ಕಾರ್ಯಗಳನ್ನು ದೇಶದಲ್ಲೆಲ್ಲಾ ಸೈನಿಕರು ಕೈಗೊಳ್ಳುತ್ತಿರುವರು ಧಾನ್ಯ, ತರಕಾರಿ ಮತ್ತು ಹಣ್ಣುಗಳ ಬೆಳೆಯನ್ನು ಅನೇಕ ಕಡೆಗಳಲ್ಲಿ ಕೈಗೊಂಡಿರುತ್ತೇವೆ

ಭೂಮಿಯ ಗುಣವನ್ನು ವೃದ್ಧಿಗೊಳಿಸಲು ನಾವು ಪ್ರಯೋಗ ನಡಸುತ್ತಿದ್ದೇವೆ

ದೇಶಕ್ಕೆ ಅತ್ಯುತ್ತಮ ವರ್ಗದ ಸೇನೆಯ ಅಗತ್ಯವಿದೆ ಸೈನಿಕರು ಸರ್ವ ವಿಧದಲ್ಲಿಯೂ ಪರಿಷ್ಕಾರ ಹೊಂದಿದವರಾಗಿರಬೇಕು ನಮ್ಮ ಮಹಿಳೆಯರು ಉತ್ತಮವಾದ ಸಂತಾನವನ್ನು ಬೆಳೆಸಿ, ದೇಶದ ಸೇವೆಗಾಗಿ ಅರ್ಪಿಸಬೇಕು ಪ್ರತಿ ವರ್ಷವೂ ನಮ್ಮ ದೇಶದ ಜನ ಸಂಖ್ಯೆಯು ೩೦ ಲಕ್ಷದಷ್ಟು ಹೆಚ್ಚುತ್ತಿದೆ ಇಷ್ಟು ಜನರಿಗೆ ಅನ್ನ ಬಟ್ಟೆಗಳನ್ನು ಒದಗಿಸುವ ಮತ್ತು ಶಿಕ್ಷಣದ ವರೆಗೂ ಸೌಕರ್ಯವಿರುವುದಿಲ್ಲ ಆದುದರಿಂದ ನಿಯಮಿತ ಸಂತಾನದ ಯೋಜನೆಯನ್ನು ಜಾರಿಗೆ ತರಲು ನಾವು ಕಾರ್ಯಕ್ರಮ ಕೈಗೊಂಡಿದ್ದೇವೆ

ಈ ಬಗೆಯ ನಾಗರೀಕ ಸೇವೆಯ ಕಾರ್ಯಕ್ರಮಗಳಲ್ಲಿ ಸೈನಿಕರು ದೇಶಕ್ಕೆ ವಿಶೇಷವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಸೈನಿಕರು ಯಾವ ಭೇದಭಾವವೂ ಇಲ್ಲದೆ ಒಟ್ಟಿಗೆ ಕಲೆತು ಕೆಲಸ ಮಾಡುತ್ತಾರೆ ಆಟವಾಡುತ್ತಾರೆ ಊಟ ಮಾಡುತ್ತಾರೆ ಶಿಕ್ಷಣ ಪಡೆಯುತ್ತಾರೆ ಕದನದಲ್ಲಿ ಹೋರಾಡುತ್ತಾರೆ ಕಡೆಗೆ ಒಟ್ಟಿಗೆ ರಣರಂಗದಲ್ಲಿ ಮಡಿಯಲೂ ಸಿದ್ಧರಾಗಿರುತ್ತಾರೆ

ಅತ್ಯುತ್ತಮ ವರ್ಗದ ಸೇನೆಯನ್ನು ಸಂಗ್ರಹಿಸಿ ದೇಶದ ಭದ್ರತೆಯನ್ನು ಕಾಪಾಡಲು ನಾವು ಸರ್ವಪ್ರಯತ್ನಗಳನ್ನು ಮಾಡುತ್ತೇವೆ ಇದರಲ್ಲಿ ಮಾತೃಭೂಮಿಗೆ, ಪಕ್ಷಪಾತ, ಅಥವ ಶಿಫಾರಸುಗಳಿಗೂ ಅವಕಾಶವಿರುವುದಿಲ್ಲ ಈ ಕಾರ್ಯದಲ್ಲಿ ನಮ್ಮಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟು ದೇಶಬಾಂಧವರೆಲ್ಲರೂ ನಮ್ಮೊಡನೆ ಸಹಕರಿಸಬೇಕೆಂದು ಬೇಡುತ್ತೇನೆ

ಕಲಾವಿದರಾದ ಶ್ರೀ ಎಸ್. ಎಸ್ ಸ್ವಾಮಿಯವರು ಜ|| ಕರಿಯಪ್ಪನವರಿಗೆ ಅವರ ಛಾಯಾಚಿತ್ರವನ್ನೂ ಶ್ರೀ ವೆಂಕಟಸುಬ್ಬಯ್ಯ ಶೆಟ್ಟಿಯವರು ಒಂದು ಗಂಧದ ಮರದ ಪೆಟ್ಟಿಗೆಯನ್ನೂ ಅರ್ಪಿಸಿದರು.

ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಜ|| ಕರಿಯಪ್ಪನವರು ಈ ದಿನ ಬೆಳಗ್ಗೆ ಮಡಿಕೇರಿಗೆ ಪ್ರಯಾಣ ಬೆಳೆಸಿದರು ಅವರು ಇಂದೇ ರಾತ್ರಿ ಬೆಂಗಳೂರಿಗೆ ಹಿಂತಿರುಗಿ ದೆಹಲಿಗೆ ಪ್ರಯಾಣ ಬೆಳೆಸುವರು

ಸಂಬಳದ ಖೋತಾಕ್ಕೆ ಕೇಂದ್ರ ಮಂತ್ರಿಗಳ ನಿರ್ಧಾರ

ಭಾರತ ಸರ್ಕಾರದ ಸಚಿವರುಗಳು ೩ ನೇ ತಿಂಗಳಿನಿಂದ ತಮ್ಮ ಸಂಬಳಗಳಲ್ಲಿ ಶೇಕಡ ೧೫ ರಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿದ್ದಾರೆ

ಶಾಸನ ಸಭಾ ಸದಸ್ಯರಲ್ಲಿ ಹೊಡೆದಾಟ

ಪೂರ್ವ ಪಂಜಾಬ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಇಬ್ಬರು ಸದಸ್ಯರು ನಿನ್ನೆ ಸಿಮ್ಲಾದಲ್ಲಿ ಸಭೆ ಮುಗಿದನಂತರ, ಜಗಳವಾಡಿ ಮುಷ್ಟಿಯುದ್ಧ ನಡೆಸಿದರೆಂದೂ, ಕಟ್ಟಿಗೆ ಪ್ರಯೋಗ ಬಗ್ಗೆ ಈ ಜಗಳವು ಬಂತೆಂದೂ ಹೇಳಲಾಗಿದೆ

ಜಪಾನಿನ ಮಕ್ಕಳಿಂದ ಭಾರತಕ್ಕೆ ಕರಡಿ

ಭಾರತವು ಕಳುಹಿಸಿರುವ ಆನೆಗೆ ಬದಲಾಗಿ ಜಪಾನಿನ ಮಕ್ಕಳು ಅಲ್ಲಿಂದ ಒಂದು, ಜೊತೆ ಕರಡಿಗಳನ್ನು ಬಹುಮಾನವಾಗಿ ಕಳುಹಿಸಿವೆ

ಟಿಕೇಟಿಲ್ಲದವನಿಂದ ರೈಲ್ವೆ ಪೋಲೀಸಿನವನ ಕೊಲೆ

ಟಿಕೆಟ್ಟು ಇಲ್ಲದ ಇಬ್ಬರು ಪ್ರಯಾಣಿಕರನ್ನು ಕದಿರಿ ರೈಲ್ವೆ ನಿಲ್ದಾಣದಲ್ಲಿ ಪೋಲೀಸರು ಕಳೆದ ಶನಿವಾರ ರಾತ್ರಿ ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದ್ದರು. ಒಬ್ಬನನ್ನು ಪೋಲೀಸ್ ಕಾನ್‌ಸ್ಟೇಬಲ್ಲು ಠಾಣ್ಯಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ, ಆ ಕೈದಿಯು ಕಬ್ಬಿಣದ ತುಂಡಿನಿಂದ ಪೋಲೀಸನವನ ತಲೆಯ ಮೇಲೆ ಹೊಡೆದು, ತೀವ್ರ ಗಾಯಪಡಿಸಿ, ಪರಾರಿಯಾದನು ಪೋಲೀಸ್ ಕಾನ್‌ಸ್ಟೇಬಲನು ಅಲ್ಲೇ ಸತ್ತು ಹೋದನು

ಚೀಣಾ ಪ್ರಧಾನಿಗಳು ಕ್ಯಾಂಟನ್ ತ್ಯಜಿಸಿದರು

ಚೀಣಾ ರಾಷ್ಟ್ರೀಯ ಸರ್ಕಾರದ ಅಧ್ಯಕ್ಷರೂ, ೨೦೦ ಜನ ಅಧಿಕಾರಿಗಳೂ ಮತ್ತು ಇತರರೂ ಕ್ಯಾಂಟನ್ನನ್ನು ತ್ಯಜಿಸಿದ್ದಾರೆಂದು ವರದಿಯಾಗಿದೆ

ಆಗಾಖಾನರು ಪರ್ಷಿಯಾದ ಪ್ರಜೆ

ಆಗಾಖಾನರ ಸ್ವಂತ ಕೋರಿಕೆಯ ಮೇರೆಗೆ ಅವರು ಪರ್ಷಿಯಾ ದೇಶದ ಪ್ರಜೆಯೆಂದು ಪರ್ಷಿಯಾ ಸರ್ಕಾರವು ಘೋಷಿಸಿದೆ

ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬಾರದು

ಜ|| ಕರಿಯಪ್ಪನವರ ಹಿತೋಕ್ತಿ

ಮೈಸೂರು ೧೨

ನಿನ್ನೆ ಮಧ್ಯಾಹ್ನ ಮಹಾರಾಜಾ ಕಾಲೇಜಿನ ಆವರಣದಲ್ಲಿ ಜ|| ಕರಿಯಪ್ಪನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಪ್ರಿನ್ಸಿಪಾಲರಾದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ಸ್ವಾಗತ ಬಯಸಿದರು.

ಜ|| ಕರಿಯಪ್ಪನವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:- ಯೋಧರಂತೆ ವಿದ್ಯಾರ್ಥಿಗಳೂ ಕೂಡ ರಾಜಕೀಯದಲ್ಲಿ ಭಾಗವಹಿಸಬಾರದು. ವಿದ್ಯಾರ್ಥಿಗಳು ಮುಂದಿನ ನಾಯಕರಾದುದರಿಂದ ಇರುವ ಕಾಲವನ್ನು ಸದುಪಯೋಗಿಸಿಕೊಂಡು ಉತ್ತಮ ಜ್ಞಾನವನ್ನು ಪಡೆಯಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ವಿದ್ಯಾರ್ಥಿ ವೃಂದದಲ್ಲಿ ಶಿಸ್ತು ಮಾಯವಾಗಿದೆ. ಶಿಸ್ತಿಲ್ಲದೆ ದೇಶವು ಪ್ರಗತಿ ಹೊಂದುವುದಿಲ್ಲ. ದೇಶದಲ್ಲಿ ಎಲ್ಲರೂ ಶಿಸ್ತು, ನೀತಿ ನಿಯತ್ತು ಇತರ ನಿಯಮಗಳನ್ನು ಆಚರಿಸದಿದ್ದಲ್ಲಿ ಗಳಿಸಿದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದು. ಮಹಾತ್ಮರ ಉಪದೇಶಗಳನ್ನು ಜನರು ಬರಿ ಮಾತಿನಲ್ಲಿ ಹೇಳುತ್ತಿದ್ದಾರೆಯೇ ಹೊರತು, ಆಚರಣೆಗೆ ತಂದಿಲ್ಲ. ಅಹಿಂಸಾ ತತ್ವವನ್ನು ಭಾರತವು ಒಪ್ಪಿದ್ದರೂ, ದೇಶದ ರಕ್ಷಣೆಗಾಗಿ ಸೈನ್ಯದ ಅಗತ್ಯವಿದ್ದೇ ಇದೆ. ಸಾಮಾನ್ಯ ಜನರು ಯುದ್ಧವನ್ನು ಎಷ್ಟು ದ್ವೇಷಿಸುವರೋ ಅಷ್ಟೇ ಸೈನಿಕರು ಸಹ ದ್ವೇಷಿಸುವರು. ಯುದ್ಧವು ಸೈನಿಕರಿಂದ ಆದುದಲ್ಲ. ಅದು ರಾಜಕಾರಣಿಗಳಿಂದ ಉಂಟಾಗಿರುವುದು. ಭಾರತಕ್ಕೆ ಪ್ರಥಮ ತರಗತಿಯ ಸೈನ್ಯವಿರಬೇಕು. ಆದಕಾರಣ ವಿದ್ಯಾರ್ಥಿಗಳು ಉತ್ತಮ ಜ್ಞಾನಾರ್ಜನೆಯನ್ನು ಪಡೆದು, ದೃಢಕಾಯರಾಗಿ ಮುಂದೆ ದೇಶದ ಸೇವೆಗಾಗಿ ಸೈನಿಕರಾಗಬೇಕು. ಪಾಶ್ಚಿಮಾತ್ಯ ದೇಶಗಳಂತೆ ಇತ್ತೀಚೆಗೆ ಭಾರತದಲ್ಲೂ ಮಹಿಳೆಯರು ಸೈನ್ಯಕ್ಕೆ ಸೇರಬೇಕೆಂದು ಚಳುವಳಿ ನಡೆಸುತ್ತಿದ್ದಾರೆ. ಭಾರತದಲ್ಲಿ ಸೈನ್ಯಕ್ಕೆ ಸೇರಲು ಸಾಕಷ್ಟು ಗಂಡಸರು ಇದ್ದಾರೆ. ಸೈನ್ಯಕ್ಕೆ ಸೇರುವುದಕ್ಕಿಂತ ಇನ್ನು ಹೆಚ್ಚಿನ ಮತ್ತು ಗುರುತರವಾದ ಕೆಲಸವು ಮಹಿಳೆಯರಿಗೆ ಇದೆ. ದೇಶದಲ್ಲಿ ಪೌರಷ ಜನಾಂಗವನ್ನು ಪಡೆಯಲು ಮಹಿಳೆಯರು ಸಹಾಯಕರಾಗಬೇಕು. ಅವರು ಉತ್ತಮ ತಾಯಂದಿರು, ಪತ್ನಿಯರೂ ಆಗಿ ಮಕ್ಕಳಿಗೆ ಒಳ್ಳೆಯ ವಿದ್ಯೆ ಮತ್ತು ನೀತಿಯನ್ನು ಹೇಳಿಕೊಡುವುದರಲ್ಲಿ ಆಸಕ್ತರಾಗಬೇಕು. ದೇಶದಲ್ಲಿ ಉಂಟಾಗಿರುವ ದಾದಿಗಳ ಅಭಾವವನ್ನು ಅವರು ನಿವಾರಿಸಬೇಕು.

ಅಮರ ಪ್ರೇಮವನ್ನು ನಿರೂಪಿಸುವ ಅತ್ಯ ಕಥೆ
ಸುರೇಂದ್ರ, ಮುನಾವರ್ ಸುಲ್ತಾನ ನಟಿಸಿರುವ ಹಿಂದಿ ಚಿತ್ರ
ಮೇರಿ ಕಹಾನಿ
9-10-49 ರಿಂದ
ಪ್ರಜ್‌ಲ್ಯಾಂಡ್ಸ್‌ನಲ್ಲಿ
(I D Release

ಜಿನ್ನಾರವರ ಸೋದರಿಯ ಆಸ್ತಿಬದಲಿಗೆ ನಿರಾಕರಣೆ

ಭಾರತದಲ್ಲಿರುವ ಜಿನ್ನಾರವರ ಸೋದರಿ ಫಾತಿಮಾ ಜಿನ್ನಾರವರ ಆಸ್ತಿಪಾಸ್ತಿಗೆ ಪಾಕೀಸ್ತಾನದಲ್ಲಿರುವ ಒಬ್ಬರು ಪ್ರಮುಖ ಹಿಂದೂಗಳ ಆಸ್ತಿಗಳನ್ನು ಬದಲುಮಾಡಬೇಕೆಂಬ ಪಾಕೀಸ್ತಾನದ ಮನವಿಯನ್ನು ಭಾರತ ಸರ್ಕಾರದವರು ನಿರಾಕರಿಸಿದ್ದಾರೆ.

ಗಾಂಧಿ ಸೇವಾ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಕಳೆದ ಭಾನುವಾರ ಸಂಜೆ ಪುರಭವನದಲ್ಲಿ ಗಾಂಧಿ ಜಯಂತಿ ಸಂದರ್ಭದಲ್ಲಿ ನೂಲುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮೊದಲನೆ ಬಹುಮಾನವಾಗಿ ಖದ್ದರ್ ಪರಸ್ಪರ ಸಹಾಯ ಸಂಘದವರು ಕೊಟ್ಟ ಪೆಟ್ಟಿಗೆ ಚರಕವನ್ನು ಶ್ರೀಮತಿ ರಾಧಾಬಾಯಿಯವರಿಗೆ ಕೊಡಲಾಯಿತು. ಇದಲ್ಲದೆ ಇತರ ಬಹುಮಾನಗಳನ್ನು ಕೊಡಲಾಯಿತು. ಈ ಬಹುಮಾನಗಳನ್ನು ಶ್ರೀಯುತರುಗಳಾದ ಅಗರಂ ರಂಗಯ್ಯನವರು ಮತ್ತು ಸತ್ಯನಾರಾಯಣರವರು ಕೊಟ್ಟಿದ್ದರು.

ಶೃಂಗೇರಿ ಮಠದ ಸಲಹಾ ಸಮಿತಿ

ಶೃಂಗೇರಿ ಮಠದ ಮೇಲ್ವಿಚಾರಣಾಧಿಕಾರಿಗಳಿಗೆ ಸೂಕ್ತ ಸಲಹೆ ಕೊಡಲು ಒಂದು ಸಮಿತಿಯನ್ನು ರಚಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ತಿಳಿದುಬಂದಿದೆ.

ನಾಯಿ ಕೆಮ್ಮಿಗೆ ಔಷಧಿ
Whooping Cough Remedy
ಗೂರಲು, ಉಬ್ಬಸ, ಪರಿಣಾಮಕೂಲೆ ಮತ್ತು ಗಲಾಯಕಕ್ಕೆ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಭಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ
ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

ಆಹಾರದ ಸಂಗ್ರಹಣೆ ಬೆಲೆ ಇಳಿಯುವುದಿಲ್ಲ

ಭಾರತದಾದ್ಯಂತ ಆಹಾರ ಧಾನ್ಯಗಳ ಬೆಲೆಯನ್ನು ಶೇಕಡ ೧೦ ರಷ್ಟು ಇಳಿಸಬೇಕೆಂದು ನಿರ್ಧಾರವಾಗಿದ್ದರೂ ಸರ್ಕಾರದವರು ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಕೊಡುವ ಬೆಲೆಯನ್ನು ಕಡಿಮೆ ಮಾಡಲಾಗುವುದಿಲ್ಲವೆಂದು ಮದರಾಸಿನ ಆಹಾರ ಸಚಿವರು ತಿಳಿಸಿರುತ್ತಾರೆ.

ಜಪಾನಿನ ರಾಜಕುಮಾರರ ಜೀವನ

ಜಪಾನಿನ ಮಾಜಿ ರಾಜಕುಮಾರ ಮತ್ತು ರಾಜಕುಮಾರಿಗಳು ಎರಡು ವರ್ಷಗಳ ಹಿಂದೆ ತಮ್ಮ ಗೌರವ ಪ್ರಶಸ್ತಿಗಳನ್ನು ವಾಪಸು ಕೊಟ್ಟರಷ್ಟೆ. ಈಗ ಅವರುಗಳು ವ್ಯಾಪಾರ ಮತ್ತು ವ್ಯವಸಾಯದಲ್ಲಿ ತೊಡಗಿ ಜೀವಿಸುತ್ತಿದ್ದಾರೆಂದು ಹೇಳಲಾಗಿದೆ.

ದೇವಸ್ಥಾನಗಳಲ್ಲಿ ಹಿಂದೂಗಳಲ್ಲದವರಿಗೆ ಪ್ರವೇಶವಿಲ್ಲ

ಹಿಂದೂಗಳಲ್ಲದವರೂ, ಭಿಕ್ಷುಕರೂ ಮತ್ತು ಸೂತಕವಿದ್ದವರೂ ದೇವಸ್ಥಾನಗಳನ್ನು ಪ್ರವೇಶಿಸಕೂಡದೆಂದು ಮಧ್ಯಪ್ರಾಂತ್ಯ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ.

ಗಣೇಶಾ ಟಾಕೀಸ್
13—10—49 ರಿಂದ 8 ದಿನ ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಶಿವಕವಿ
(ತಮಿಳು)
-: ಮುಖ್ಯ ಪಾತ್ರ :-
ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ
ದೀಪಾವಳಿ ಸ್ಪೆಷಲ್ ಪ್ರೋಗ್ರಾಂ
21—10—49 ರಿಂದ
ಪೆರಿಲ್ಸ್ ಆಫ್ ದಿ ರಾಯಲ್ ಮೌಂಟೆಡ್
ಪೂರ್ತಿ ಸೀರಿಯಲ್

ಪ್ರಭುದೇವಾ ಟಾಕೀಸ್
13-10-49 ರಿಂದ ಅಮೋಘ 4 ನೇ ವಾರ
- ಮಾಯಾ ಕುದುರೆ -
[ತಮಿಳು]
ಪ್ರತಿ ದಿನ ಮೂರು ಆಟಗಳು

ಪ್ರಭಾ ★ 14-10-49 ರಿಂದ
ದಿನವಹಿ 3 ಆಟಗಳು
ಕಾರ್ದಾರ್ ಪಿಕ್ಚರ್ಸ್‌ರವರ * ಕನೀಜ್ *
ಮುನವರ್ ಸುಲ್ತಾನಾ, ಶ್ಯಾಮ್, ಊರ್ಮಿಳ, ಕುಲ್‌ದೀಪ್, ಕಕ್ಕೂ
ಸಂಗೀತ.- ಗುಲಾಮ್ ಹೈದರ್
ಬೆಳಗಿನ ಪ್ರದರ್ಶನ 14-10-49 ರಿಂದ 4 ದಿನಗಳು
ನೂರ್ ಜಹಾನ್ ಮತ್ತು ಯಾಕೂಬ್ ನಟಿಸಿರುವ
— ಬಡಿ ಮಾ —

ಕಾಶಿಯ ಹನುಮಾ ಘಟ್ಟದ ಅಭಿವೃದ್ಧಿ

ಕಾಶಿಯಲ್ಲಿರುವ ೬೦ ಸ್ನಾನಘಟ್ಟ ಪೈಕಿ, ಹನುಮಾನ್ ಘಟ್ಟವು ಮೈಸೂ ಸರ್ಕಾರದ ಆಡಳಿತದಲ್ಲಿದ್ದು, ಹೆಚ್ಚು ಶಿಸ್ತಿ ಪಡೆದಿರುತ್ತದೆ ಅದನ್ನು ಇನ್ನೂ ಚ್ಚಿಗೆ ಅಭಿವೃದ್ಧಿ ಮಾಡಿ, ಸುಂದರ ಮಾಡಲು ಶೀಘ್ರದಲ್ಲಿಯೇ ಮರಾಮ ಶಾಖೆಯ ಒಬ್ಬ ಅಧಿಕಾರಿಗಳನ್ನು ಸ ರದವರು ಕಳುಹಿಸಲಿರುವರೆಂದು ತಿ ಬಂದಿದೆ. ಅಲ್ಲಿಗೆ ಭೇಟಿ ಕೊಡಲಿ ಮುಜರಾಯಿ ಸಚಿವ ಶ್ರೀ ಪಾಮಡಿ ರಾಮಶೆಟ್ಟರು ಅದನ್ನು ಪರಿಶೀಲಿಸುವ

ಕಮ್ಯೂನಿಸ್ಟ್ ಚೀಣಾ ಸರ್ಕಾರಕ್ಕೆ ಭಾರತದ ಮನ್ನಣೆ

ಪಂಡಿತ ನೆಹರೂರವರು ಲಂಡನ್ನಿ ಮೊನ್ನೆ ಪ್ರಧಾನಿ ಆಟ್ಲೀಯವರನ್ನು ಭೇ ಮಾಡಿ, ಕಾಶ್ಮೀರ, ಕಮ್ಯೂನಿಸ್ಟ್ ಚೀ ದ ಅಂಗೀಕಾರ, ಮುಂತಾದ ವಿಚಾ ಬಗ್ಗೆ ಮಾತುಕತೆ ನಡೆಸಿದರೆಂದೂ, ಭಾ ತವು ಕಮ್ಯೂನಿಸ್ಟ್ ಸರ್ಕಾರಕ್ಕೆ ಅಂಗೀ ರ ಕೊಡಬಹುದೆಂದೂ ತಿಳಿದುಬಂದಿದೆ

WANTED

Applications are invit for the post of a full-tim Secretary for the Mysor City Hotels' Associati on a salary of Rs. 75/- pe month, in the grade Rs. 75-5-100 plus Rs 20 D. A

The Applicant must a graduate of any recog sed University and shou also possess a thorou knowledge and worki experience of Typewrit Short hand and Accoun Preference will be giv to candidates with pre ous experience.

The selected candida will be required to inte view at their own cost if appointed, must be pr pared to furnish a Ca Security of Rs. 2,000/- a also a personal security the extent of Rs. 5,000 -

Last date for receivi applications is 20th Oc 1949.

P. V. Rama Iye
Hon. Secretary,
Mysore City Hotels' As
2203 3, New Santhep
MYSORE.

Edited printed and p lished by A. R. Nagaraj at Sadhvi Press, D.Subb Road, Mysore.

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೩-೧೦-೧೯೪೯ [ಸಂಚಿಕೆ ೬೪

ಗೋಡ್ಸೆ ಮತ್ತು ಇತರರ ಅಪೀಲುಗಳ ವಜಾ

ಸಂಸ್ಥಾನದಲ್ಲಿ ಕ್ಷಯ ರೋಗ ಹರಡುವ ಸೂಚನೆ

ಮೈಸೂರು ೧೨

ಸಂಸ್ಥಾನದ ಕ್ಷಯ ರೋಗ ನಿವಾರಣಾ ಸಂಘದ ವಾರ್ಷಿಕ ಸಭೆಯು ಮೊನ್ನೆ ದಿನ ಆರೋಗ್ಯ ಸಚಿವ ಜ|| ಮಹಮದ್ ಷರೀಫರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯದರ್ಶಿಗಳ ವರದಿಯ ನಂತರ, ಡಾ|| ಜಯರಾಂರವರು ಭಾಷಣ ಮಾಡಿ, ಸಂಘವು ಸರಿಯಾಗಿ ಕೆಲಸಮಾಡದಿರಲು ಅದಕ್ಕೆ ಅಧಿಕಾರ ವರ್ಗದಲ್ಲಿರುವ ವೈದ್ಯರುಗಳಿಗೆ ಕಾಲಾವಕಾಶವಿಲ್ಲದಿರುವುದೇ ಕಾರಣವೆಂದೂ, ಆದುದರಿಂದ ಹೊರಗಿನವರನ್ನು ಸಂಘಕ್ಕೆ ಸೇರಿಸಿಕೊಂಡು ಅದನ್ನು ವಿಸ್ತರಿಸಬೇಕೆಂದೂ ತಿಳಿಸಿದರು. ಕ್ಷಯ ರೋಗವು ಹರಡದಂತೆ ನೋಡಿಕೊಳ್ಳುವುದೇ ಸಂಘದ ಉದ್ದೇಶ. ದೇಶದಲ್ಲಿ ಕ್ಷಯ ರೋಗವು ವಿಪರೀತವಾಗಿ ಹರಡುವ ಸೂಚನೆ ಇದೆ. ಅದನ್ನು ಪ್ರಾರಂಭದಲ್ಲೇ ತಡೆಗಟ್ಟಬೇಕು. ಸಂಸ್ಥಾನಕ್ಕೆ ಒಂದು ವೈಜ್ಞಾನಿಕ ಸಂಶೋಧನಾಲಯದ ರಚನೆಯಾಗಬೇಕು. ಜಿಲ್ಲಾವಾರು ಸಮಿತಿಗಳು ಸ್ಥಾಪಿತವಾಗಬೇಕು. ಈ ಸಮಿತಿಗಳು ಪ್ರಚಾರ ಕಾರ್ಯ ನಡೆಸಿ ಜನತೆಗೆ ತಿಳುವಳಿಕೆ ಕೊಡಬೇಕು. ರಾಜಧಾನಿಯ ಒಂದು ಮೊಹಲ್ಲಾದ ಎಲ್ಲರ ಮನೆಯಲ್ಲೂ ರೋಗ ತಗಲುವ ಸೂಚನೆ ಇರುವ ಜನರಿರುವುದು ಕಂಡುಬಂದಿದೆ. ಆದುದರಿಂದ ಬಿ ಸಿ ಜಿ ವ್ಯಾಕ್ಸಿನ್ ಪ್ರಯೋಗವನ್ನು ಜಾರಿಗೆ ತರುವುದು ಅಗತ್ಯ—ಎಂದು ಅವರು ಹೇಳಿದರು.

ಸಚಿವರು ಭಾಷಣ ಮಾಡಿ ಸರ್ಕಾರವು ಎಲ್ಲ ಸಹಾಯವನ್ನೂ ನೀಡುವುದಾಗಿ ಭರವಸೆ ಇತ್ತರು. ಜನತೆಯಲ್ಲಿ ಆರ್ಥಿಕ ದುಃಸ್ಥಿತಿ, ಆಹಾರದ ಅಭಾವಗಳು ಕೊಂಚಮಟ್ಟಿಗೆ ಕ್ಷಯ ರೋಗವು ಹರಡುವುದಕ್ಕೆ ಕಾರಣವೆಂದು ತಿಳಿಸಿದರು. ಸರ್ಕಾರದವರು ಕೂಡಲೇ ಕ್ಷಯ ರೋಗ ಸಂಬಂಧಪಟ್ಟ ಕೇಂದ್ರ ವೈಜ್ಞಾನಿಕ ಸಂಶೋಧನಾಲಯವನ್ನು ರಚಿಸಬೇಕೆಂದೂ, ಕ್ಷಯ ರೋಗ ನಿವಾರಣಾ ಯೋಜನೆಯೊಂದನ್ನು ಕೂಡಲೇ ಡಾ|| ಜಯರಾಂರವರು ತಯಾರಿಸಬೇಕೆಂದೂ ನಿರ್ಧರಿಸಲಾಯಿತು. ಅಖಿಲ ಭಾರತ ಕ್ಷಯ ರೋಗ ನಿವಾರಣಾ ಸಂಘಕ್ಕೆ ಮೈಸೂರಿನ ಪರವಾಗಿ ಶ್ರೀ ವೆಂಕಟರಮಣಯ್ಯ ಮತ್ತು ಡಾ|| ಭದ್ರಶೇಖರಯ್ಯನವರುಗಳನ್ನು ಚುನಾಯಿಸಲಾಯಿತು.

ಮೈಸೂರಿಗೆ ಬಿಳೀ ಆನೆ

ಕೊಡಗಿನಲ್ಲಿ ಒಂದು ಬಿಳೀ ಆನೆಯು ಹಿಡಿಯಲಾಗಿದೆಯೆಂದೂ ಅದನ್ನು ಮೈಸೂರಿಗೆ ಕೊಡಲಾಗುವುದೆಂದೂ ತಿಳಿದುಬಂದಿದೆ. ಪುಣಜನೂರಿನ ಹತ್ತಿರ ಇರುವ [illegible]ಯಲ್ಲಿ ಅದನ್ನು ಇಡಲಾಗಿದೆ.

[illegible] ದಿನಗಳು ಅಂತರಿಕ್ಷದಲ್ಲೇ ವಾಸ

ಕ್ಯಾಲಿಫೋರ್ನಿಯಾಕ್ಕೆ ಸೇರಿದ ಯೂಮಾದ [illegible] ವೈಮಾನಿಕರಾದ ಓಡ್‌ಹೌಸ್ ಮತ್ತು ಜೋನ್‌ಗ್‌ವರ್ಡ್ ಎಂಬುವರು ೧೧೨೪ ಗಂಟೆ ಮತ್ತು ೧೪ ನಿಮಿಷಗಳ ಕಾಲ ಅಂತರಿಕ್ಷದಲ್ಲಿಯೇ ವಿಮಾನದಲ್ಲಿ ಇದ್ದು [illegible] ಗಂಟೆಗಳ ಹಾರಾಟದ ರೆಕಾರ್ಡನ್ನು ಮುರಿದಿದ್ದಾರೆ. ಅವರುಗಳು [illegible] ದಿನಗಳು ಅಂತರಿಕ್ಷದಲ್ಲಿಯೇ ಇದ್ದಂತಾಯಿತು.

ರೈಲ್ವೆ ಅಪಘಾತ

ಬೆಂಗಳೂರು ೧೩

ನಿನ್ನೆ ಬೆಳಿಗ್ಗೆ ಬೆಂಗಳೂರಿನಿಂದ ಬಂಗಾರಪೇಟೆಗೆ ಹೊರಟ ರೈಲು ೧೧-೪೫ ಘಂಟೆ ಸಮಯದಲ್ಲಿ ಶಿಡ್ಲಘಟ್ಟದ ಹತ್ತಿರ ಕಂಬಿ ತಪ್ಪಿ ಅಪಘಾತಕ್ಕೆ ಒಳಗಾಯಿತೆಂದೂ; ಇದರಿಂದ ೬ ವ್ಯಾಗನ್ನು ಮತ್ತು ೩ ಪ್ರಯಾಣಿಕ ಗಾಡಿಗಳಿಗೆ ಜಖಂ ಆಯಿತೆಂದೂ, ಆದರೆ ಯಾವ ಸಾವು ನೋವೂ ಉಂಟಾಗಲಿಲ್ಲವೆಂದೂ ವರದಿಯಾಗಿದೆ. ಒಬ್ಬ ಪ್ರಯಾಣಿಕನಿಗೆ ಸ್ವಲ್ಪ ಗಾಯವಾಯಿತು. ಕೂಡಲೇ ಒಂದು ವಿಶೇಷ ರೈಲನ್ನು ಕಳುಹಿಸಿ, ಪ್ರಯಾಣಿಕರನ್ನು ರವಾನಿಸುವ ಬಗ್ಗೆ ಏರ್ಪಾಡು ಮಾಡಲಾಯಿತೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಶಿವಮೊಗ್ಗ ಬಳಿ ಸಕ್ಕರೆ ಕಾರ್ಖಾನೆ

೬೦೦ ಟನ್ ಸಕ್ಕರೆ ತಯಾರಿಸುವ ಒಂದು ಕಾರ್ಖಾನೆಯನ್ನು ಶಿವಮೊಗ್ಗಾ ಬಳಿ ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ. ಅದಕ್ಕೆ ೫೦ ಲಕ್ಷ ರೂ. ಖರ್ಚಾಗುವುದು. ಮೈಸೂರು ಸಕ್ಕರೆ ಕಂಪೆನಿ ಮತ್ತು ಸರ್ಕಾರದವರು ಸೇರಿ ಶೇಕಡ ೫೧ ರಷ್ಟು ಷೇರುಗಳನ್ನು ಅದರಲ್ಲಿ ತೆಗೆದುಕೊಳ್ಳಲಿದ್ದಾರೆ.

ಪಾಕೀಸ್ತಾನದಲ್ಲಿ ಪತ್ರಿಕೆಗಳ ಹರತಾಳ

ಲಾಹೋರಿನ ಸಿವಿಲ್ ಅಬ್ಸರ್ವರ್ ಎಂಬ ಪತ್ರಿಕೆಯ ಮಾಲೀಕರು ಸಂಪಾದಕೀಯ ಶಾಖೆಯ ನೌಕರರೊಬ್ಬರನ್ನು ತುಚ್ಛವಾಗಿ ಬೈದು ಹೊಡೆದುದನ್ನು ಖಂಡಿಸಲು ಪಶ್ಚಿಮ ಪಂಜಾಬ್ ಮತ್ತು ಕರಾಚಿಯ ಪತ್ರಿಕೆಗಳೆಲ್ಲಾ ಒಂದು ದಿನ ಹರತಾಳವನ್ನು ಆಚರಿಸಬೇಕೆಂದು ತೀರ್ಮಾನಿಸಿವೆ.

ಬಿಳಿಯ ಜನರ ನಲ್ಲಿಯಲ್ಲಿ ನೀರು ಕುಡಿದುದಕ್ಕೆ ಶಿಕ್ಷೆ

ಬಿಳಿಯ ಜನರಿಗಾಗಿ ಮೀಸಲಾಗಿದ್ದ ನಲ್ಲಿಯಲ್ಲಿ ನೀರನ್ನು ಕುಡಿದರೆಂದು ಜನ್ಸ್‌ಕಾಪ ೬ ಜನ ನೀಗ್ರೋ ಜನರಿಗೆ ೩ ತಿಂಗಳು ಶಿಕ್ಷೆಯನ್ನು ವಿಧಿಸಲಾಗಿದೆ. ಅವರುಗಳು ಬ್ರಿಟಿಷ್ ಪ್ರಜೆಗಳೆಂದೂ ಇಂತಹ ವರ್ಣ ಬೇಧಗಳು ಜನ್ಸ್‌ಕಾಪಿನಲ್ಲಿ ಇದ್ದರೆ [illegible] ಪ್ರತಿಭಟಿಸಿ, ನೀಗ್ರೋ ಜನರಿಗಾಗಿ ಇದ್ದ ಕೊಳಾಯಿಯಲ್ಲಿ ನೀರು ಕುಡಿಯಲು ನಿರಾಕರಿಸಿ, ಗಲಭೆ ಮಾಡಿದರೆಂದು ಅವರನ್ನು ದಸ್ತಗಿರಿ ಮಾಡಲಾಗಿತ್ತು.

ಗೋಡ್ಸೆ ಅಪೀಲು ವಜಾ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥೂರಾಂ ಗೋಡ್ಸೆ ಮತ್ತು ಆಪ್ಟೆರವರ ಅಪೀಲು ಅರ್ಜಿಯನ್ನು ಪ್ರೀವಿ ಕೌನ್ಸಿಲಿನವರು ವಜಾ ಮಾಡಿದ್ದಾರೆ. ಇತರ ಅಪರಾಧಿಗಳ ಅಪೀಲನ್ನೂ ವಜಾ ಮಾಡಲಾಗಿದೆ.

ಭವಿಷ್ಯ ನುಡಿಯುವ ಯಂತ್ರ

ವಿಶ್ವದ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ವಿವರಗಳನ್ನು ತಯಾರಿಸುವ ಮತ್ತು ಮುಂದೆ ಸಂಭವಿಸುವ ಘಟನೆಗಳ ಭವಿಷ್ಯವನ್ನು ನುಡಿಯುವ ಯಂತ್ರದ ಬಗ್ಗೆ ಬ್ರಿಟನ್ನಿನ ಡಾ|| ಗ್ರೇ ವಾಲ್ಟರ್ ಎಂಬ ವೈಜ್ಞಾನಿಕರು ವಿವರಗಳನ್ನು ಕೊಟ್ಟಿರುತ್ತಾರೆ. ಅವನ್ನು ಸ್ಥಾಪಿಸಲು ೧೦೦೦೦ ವಿದ್ಯುಚ್ಛಕ್ತಿ ಅಣುಗಳುಳ್ಳ ಭವನವನ್ನು ಕಟ್ಟುವ ಬಗ್ಗೆ ಪರಿಶೀಲನೆ ನಡೆಸಲಾಗಿದೆಯೆಂದೂ, ಅಂತಹ ಯಂತ್ರವು ಮುಂದೆ ಎರಡು ರಾಷ್ಟ್ರಗಳಿಗೆ ಸಂಭವಿಸಬಹುದಾದ ಯುದ್ಧದ ದಿನ ಮತ್ತು ಇತರ ಭವಿಷ್ಯಗಳನ್ನು ತಪ್ಪಿಲ್ಲದೆ ತಿಳಿಸುವುದೆಂದೂ ಅವರು ಹೇಳಿದ್ದಾರೆ. ಯಂತ್ರದ ಮಿದುಳಿಗೆ ವಿಶ್ವದ ಸಮಸ್ಯೆಯ ಅಂಕೆಗಳನ್ನು ತುಂಬಿ, ಅದರ ಹಿಡಿಯನ್ನು ತಿರುಗಿಸಿದರೆ ಮುಂದಿನ ಘಟನೆಗಳನ್ನು ತಿಳಿಸುವುದೆಂದು ಗೊತ್ತಾಗಿದೆ.

ಭಾರತದ ಅಧ್ಯಕ್ಷರಿಗೆ ೧೦ ಸಾವಿರ ರೂ. ಸಂಬಳ

ಭಾರತದ ಅಧ್ಯಕ್ಷರ ಸಂಬಳವು ತಿಂಗಳಿಗೆ ೧೦ ಸಾವಿರ ರೂ ಇರಬೇಕೆಂದು ಕೇಂದ್ರ ರಾಜ್ಯಾಂಗ ಸಭೆಯು ನಿರ್ಧರಿಸಿದೆ. ಅದರ ಪೈಕಿ ೫,೫೦೦ ರೂ ವರಮಾನ ತೆರಿಗೆಗಾಗಿ ಹೋಗುವುದು.

ಈ ಬಗ್ಗೆ ಕೇಂದ್ರ ರಾಜ್ಯಾಂಗ ಸಭೆಯಲ್ಲಿ ನಿನ್ನೆ ಚರ್ಚೆಯಾದಾಗ, ಶ್ರೀ ಮಹಾವೀರ ತ್ಯಾಗಿಯವರು ಭಾಷಣ ಮಾಡಿ, ಭಾರತದ ಅಧ್ಯಕ್ಷರು ಹಿಂದಿನ ಕಾಲದ ಸನ್ಯಾಸಿಗಳಂತೆ ಸೇವಾಭಾವನೆಯಿಂದ ಕೆಲಸ ಮಾಡಬೇಕೆಂದೂ ಹಳೆಯ ಕಾಲದ ಋಷಿಗಳ ಜೀವನ ಬೇಕೆಂದೂ ತಿಳಿಸಿರುತ್ತಾರೆ. ಅವರ ಸಂಬಳವು ತಿಂಗಳಿಗೆ ಒಂದೇ ಒಂದು ರೂ ಇರಬೇಕೆಂದು [illegible] ಸದಸ್ಯರು ಸೂಚಿಸಿದರು. ಅವುಗಳನ್ನು [illegible] ತಿರಸ್ಕರಿಸಲಾಯಿತು.

ಮೈಸೂರಿಗೆ ಪಂಡಿತ ನೆಹರೂರವರ ಭೇಟಿ

ಮೈಸೂರು ೧೩

ಕೃಷ್ಣರಾಜಸಾಗರದ ಬೃಂದಾವನದಲ್ಲಿ ಮುಂದಿನ ತಿಂಗಳು ೨ ನೇ ತಾ|| ನಿಂದ ೬ ವಾರಗಳು ಅಂತರ ರಾಷ್ಟ್ರೀಯ ವಯಸ್ಕರ ವಿದ್ಯಾಭ್ಯಾಸ ಚರ್ಚಾ ಗೋಷ್ಠಿಯು ನಡೆಯುವುದು. ಭಾರತದ ವಿದ್ಯಾ ಸಚಿವರಾದ ಮೌಲನಾ ಅಬುಲ್ ಕಲಾಂ ಅಜಾದರು ಅದರ ಪ್ರಾರಂಭೋತ್ಸವ ನೆರವೇರಿಸುವರು. ಪಂಡಿತ ನೆಹರೂರವರು ಡಿಸೆಂಬರ್ ಎರಡನೇ ವಾರದಲ್ಲಿ ಅದರ ಮುಕ್ತಾಯ ಭಾಷಣ ಮಾಡಬಹುದೆಂದು ಗೊತ್ತಾಗಿದೆ.

ಡಾಲರುಗಳ ದೇಶದಿಂದ ಆಮದು ರದ್ದು

ರೂಪಾಯಿನ ಬೆಲೆಯನ್ನು ಕಡಿಮೆ ಮಾಡಿರುವುದರ ಪ್ರಯುಕ್ತ ಡಾಲರುಗಳನ್ನು ಮಿತವಾಗಿ ಖರ್ಚುಮಾಡುವ ಪರಿಸ್ಥಿತಿ ಒದಗಿರುವುದರಿಂದ, ಡಾಲರುಗಳ ದೇಶಗಳಿಂದ ಸಾಮಾನುಗಳನ್ನು ಆಮದು ಮಾಡಲು ಕೊಟ್ಟಿರುವ ಆರ್ಡರುಗಳನ್ನು ರದ್ದು ಮಾಡಬೇಕೆಂದು ಮೈಸೂರು ಸರ್ಕಾರದವರು ಎಲ್ಲ ಇಲಾಖೆಗಳಿಗೂ ಸೂಚನೆ ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಬ್ರಿಟನ್ನಿನಿಂದ ಮೈಸೂರಿಗೆ ೧೦ ರೈಲ್ವೆ ಎಂಜಿನ್ನುಗಳು

ಮೈಸೂರು ರೈಲ್ವೆಗಾಗಿ ೧೦ ಎಂಜಿನ್ನುಗಳು ಬ್ರಿಟನ್ನಿನಿಂದ ಮೊನ್ನೆ ಸಂಜೆ ಮದರಾಸ್ ಬಂದರಿಗೆ ಬಂದಿರುತ್ತವೆ.

ಮೈಸೂರಿನಲ್ಲಿ ಪೆನಿಸಿಲಿನ್ ತಯಾರಿ

ಸಂಸ್ಥಾನದಲ್ಲಿ ಪೆನ್ಸಿಲಿನ್ ಔಷಧವನ್ನು ತಯಾರಿಸುವ ಬಗ್ಗೆ ಸರ್ಕಾರದವರು ಪರ್ಯಾಲೋಚನೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ.

ಅಧ್ಯಕ್ಷ ಟ್ರೂಮನ್‌ರಿಂದ ನೆಹರೂರವರ ಪ್ರಶಂಸೆ

ಭಾರತದ ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ದಿನ ಅಧ್ಯಕ್ಷ ಟ್ರೂಮನ್‌ರವರೊಡನೆ ೨ ಗಂಟೆಗಳ ಕಾಲ ಮಾತುಕತೆ ನಡೆಸಿದರು. ನೆಹರೂರವರ ಗೌರವಾರ್ಥವಾಗಿ ಟ್ರೂಮನ್‌ರವರು ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು. ನೆಹರೂರವರು "ಮಾನವ ಶ್ರೇಷ್ಠ ಮತ್ತು ವೀರ ಯೋಧ" ಎಂದು ಅವರು ಪ್ರಶಂಸೆ ಮಾಡಿದ್ದಾರೆ.

ಪಂಡಿತ ನೆಹರೂರವರು ಅಮೇರಿಕದ ಪ್ರಥಮ ಅಧ್ಯಕ್ಷರಾದ ಜಾರ್ಜ್ ವಾಷಿಂಗ್ಟನ್‌ರವರ ಸ್ಮಾರಕ ಭವನಕ್ಕೆ ಭೇಟಿ ಇತ್ತರು ಮತ್ತು ಅಮೇರಿಕದ "ಅಜ್ಞಾತ ಸೇನಾನಿಗಳ ಸ್ಮಾರಕ" ಸ್ಥಳಕ್ಕೂ ಭೇಟಿ ಇತ್ತು ಪುಷ್ಪ ಹಾರವನ್ನು ಅರ್ಪಿಸಿದರು.

೨ ತಲೆ, ೪ ಕಾಲುಗಳ ಮಗು

ಮದರಾಸ್ ಪ್ರಾಂತ್ಯದ ವಾಲಾಜಾಪೇಟೆಯಲ್ಲಿ ಒಬ್ಬ ಹೆಂಗಸಿಗೆ ೨ ತಲೆ, ೪ ಕಾಲು, ೪ ಕೈ ಮತ್ತು ಒಂದೇ ದೇಹವುಳ್ಳ ಶಿಶುವು ಜನಿಸಿತೆಂದೂ, ಆದರೆ ಅದು ಕೂಡಲೇ ಸತ್ತುಹೋಯಿತೆಂದೂ ವರದಿಯಾಗಿದೆ.

ಪಲ್ಲಿಂಡವರ ಮೇಲೆ ಕಮ್ಯೂನಿಸ್ಟರ ಗುಂಡು

ಹೈದರಾಬಾದಿನ ನಲಗೊಂಡ ಜಿಲ್ಲೆಯ ನಂದಿಗೋಡು ಗ್ರಾಮಸ್ಥರಿಗೂ ಕಮ್ಯೂನಿಸ್ಟರಿಗೂ ಘರ್ಷಣೆಯಾಗಿ, ಕಮ್ಯೂನಿಸ್ಟರು ಗುಂಡು ಹಾರಿಸಿದರೆಂದೂ, ಇಬ್ಬರು ಸತ್ತು, ಮೂವರಿಗೆ ಗಾಯ ಆಯಿತೆಂದೂ ವರದಿಯಾಗಿದೆ.

ಮೂರನೇ ಮಹಾ ಯುದ್ಧ ಪ್ರಾರಂಭವಾಗಿದೆ

ವಿಶ್ವದ ಮೂರನೇ ಮಹಾ ಯುದ್ಧವು ಈಗಾಗಲೇ ಪ್ರಾರಂಭವಾಗಿದೆ. ಈಗಿನ ಚೀಣಾದ ನೂತನ ರಿಪಬ್ಲಿಕ್ ರಷ್ಯದ ಕೈಗೊಂಬೆಯಾಗಿದೆ. ಇದರಿಂದ ಚೀಣಾವನ್ನು ರಷ್ಯವು ಗೆದ್ದಂತಾಗಿದೆ. ಸಾಮೂಹಿಕ ಭದ್ರತಾ ದೃಷ್ಟಿಯಿಂದ ಪ್ರಜಾಪ್ರಭುತ್ವ ರಾಷ್ಟ್ರಗಳು ಸಕಾಲದಲ್ಲಿ ಒಟ್ಟಾಗಿ ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ ರಷ್ಯದ ಆಕ್ರಮಣ ತಪ್ಪಿಸಲು ಕಷ್ಟವಾಗುವದು-ಎಂದು ಜಿಯಾಂಗ್ ಕೈಷೇಕರು ತಿಳಿಸಿರುತ್ತಾರೆ.

ಮೂರು ಕಾಲಿನ ಕರು

ಕುಣಿಗಲ್ ತಾಲ್ಲೂಕಿನ ಹಳೇ ಊರು ಗ್ರಾಮದಲ್ಲಿ ಇದೇ ೭ನೇ ತಾ॥ ಮುಂದೆ ಎರಡು ಕಾಲುಗಳು, ಹಿಂದೆ ಒಂದು ಕಾಲು ಇದ್ದ ಕರುವೊಂದು ಜನನವಾಯಿತೆಂದೂ, ಅದು ಆರೋಗ್ಯವಾಗಿದೆಯೆಂದೂ ವರದಿಯಾಗಿದೆ

ಕೇಂದ್ರಸರ್ಕಾರದ ಅಧಿಕಾರಿಗಳಮೇಲೆ ಲಂಚ ಆಪಾದನೆ

ಭಾರತ ಸರ್ಕಾರದ ಆಹಾರ ಶಾಖೆಯ ಮಾಜಿ ಡೈರೆಕ್ಟರಾದ ಶ್ರೀ ಎಸ್. ಡಿ. ರಬಿ ಮತ್ತು ಇತರ ಮೂರು ಜನ ಅಧಿಕಾರಿಗಳ ಮೇಲೆ ಲಂಚ, ಪಿತೂರಿ ಮತ್ತು ದುರ್ವ್ಯಾಪಾರದ ಮೇಲೆ ದೆಹಲಿ ಅಡಿಷನಲ್ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ. ಮದರಾಸ್ ಪ್ರಾಂತ್ಯಕ್ಕೆ ಆಹಾರ ಧಾನ್ಯಗಳನ್ನು ಒಳಸಂಚಿನಿಂದ ಕಳುಹಿಸಿ, ಲಕ್ಷಗಟ್ಟಲೆ ಹಣವನ್ನು ಸಂಪಾದಿಸಿದರೆಂದು ಅವರ ಮೇಲೆ ಆಪಾದಿಸಲಾಗಿದೆ

ಕೀರ್ತನಕಾರ ಮಂಡಲಿ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯ ಮೂರನೇ ವಾರ್ಷಿಕ ಮಹೋತ್ಸವದ ಅಂಗವಾಗಿ ಇದೇ ೨೧ ನೇ ತಾ॥ ನಿಂದ ೨೪ ದಿನಗಳು ಪ್ರತಿ ದಿನ ಕೀರ್ತನೆ, ಪುರಾಣ, ಯಕ್ಷಗಾನ ಮತ್ತು ಸಂಗೀತಗಳನ್ನು ನಡೆಸಲಾಗುವುದು. ಮಹಾ ಜನರು ಇದಕ್ಕೆ ಸಹಾಯ ಮಾಡಬೇಕೆಂದು ಕೋರಲಾಗಿದೆ

ಸತ್ಕಾರ ಕೂಟ

ಅಖಿಲ ಭಾರತ ಪ್ರದರ್ಶನಕಾರರ ಸಂಘದವರು ಮೊನ್ನೆ ಬೆಳಗ್ಗೆ ದಸರಾ ವಸ್ತು ಪ್ರದರ್ಶನದ ಸಮಿತಿಯವರನ್ನು ಆಹ್ವಾನಿಸಿ ಸತ್ಕರಿಸಿದರು. ವಿದ್ಯಾ ಸಚಿವರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಅಧ್ಯಕ್ಷತೆವಹಿಸಿದ್ದರು. ಉಪಾಹಾರ, ಶ್ರೀಮತಿ ಚಂದ್ರಭಾಗಾ ಬಾಯಿ ಸಹೋದರಿಯರಿಂದ ಸಂಗೀತಗಳಾದನಂತರ, ಸಂಘದ ಅಧ್ಯಕ್ಷರಾದ ಶ್ರೀ ಯಂ. ಎಲ್. ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿ, ಪ್ರದರ್ಶನಕಾರರ ಕುಂದುಕೊರತೆಗಳನ್ನು ವಿವರಿಸಿದರು. ಅಧ್ಯಕ್ಷರು ಈ ಬಗ್ಗೆ ಸೂಕ್ತ ಉತ್ತರವಿತ್ತರು

ವಿವಾಹ ಮಹೋತ್ಸವ

ಮೈಸೂರು ರೈಲ್ವೆಯ ನಿವೃತ್ತ ಪಿ. ಡಬ್ಲ್ಯು. ಇನ್ಸ್‌ಪೆಕ್ಟರಾದ ಶ್ರೀ ಕೆ ಸುಬ್ಬರಾಯರು ತಮ್ಮ ಪುತ್ರಿ ಚಿ॥ ಸೌ॥ ಹೇಮಾವತಿಯನ್ನು ಶ್ರೀ ಎಂ ಸುಬ್ಬರಾಯರ ಪುತ್ರ ಶ್ರೀ ಎಂ ಎಸ್ ಸುಂದರರಾಜ್‌ರವರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

೧೩೫ಮೈಲಿ ಎಣ್ಣೆ ಪೈಪು ಲೈ[ನು]

ಲಾಹವರೆಯಿಂದ ಪ್ಯಾರಿಸ್ಸಿಗೆ [...] ಮೈಲಿ ಎಣ್ಣೆ ಪೈಪು ಲೈನನ್ನು ಫ್ರೆಂಚ್ [ಸ]ರ್ಕಾರದವರು ಹಾಕಲಿದ್ದಾರೆಂದು [...]ಲಾಗಿದೆ

ಗಣೇಶಾ ಟಾಕೀಸ್

13—10 49 ರಿಂದ 8 ದಿನ ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು

ತಿ ಪ ಕ ವಿ

(ತಮಿಳು)
-.ಮುಖ್ಯ ಪಾತ್ರ -
ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ

ದೀಪಾವಳಿ ಸ್ಪೆಷಲ್ ಪ್ರೋಗ್ರಾಂ
21—10—49 ರಿಂದ
ಪೆರಿಲ್ಸ್ ಆಫ್ ದಿ ರಾಯಲ್ ಮೌಂಟೆಡ್
ಪೂರ್ತಾ ಸೀರಿಯಲ್

ಗಾಯತ್ರೀ ಟಾಕೀಸ್

13-10-49ರಿಂದ 3 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಹಾಸ್ಯಮಯ ಚಿತ್ರ

Feuding, Fussing & a Fighting

MORNING SHOWS
on 15th and 16th
M. G. M's
YOLANDA & the THIEF
(In Technicolour)

ಆತುರ ಪ್ರೇಮವನ್ನು ನಿರೂಪಿಸುವ ಚಿತ್ರ ಕಥೆ
ಸುರೇಂದ್ರ, ಮುನಾವರ್ ಸುಲ್ತಾನ ನಟಿಸಿರುವ ಹಿಂದಿ ಚಿತ್ರ

ಮೇರಿ ಕಹಾನಿ

9—10- 94 ರಿಂದ
ವುಡ್ ಲ್ಯಾಂಡ್ಸ್‌ನಲ್ಲಿ
[G P D Release

Edited, printed and published by V R Nagarajan at Sadhvi Press, D Subbiah Road Mysore

ಪ್ರಭಾ ★ 14-10-49 ರಿಂದ

ದಿನವಹಿ 3 ಆಟಗಳು
ಕಾರದಾರ್ ಪಿಕ್ಚರ್ಸ್‌ರವರ
✻ ಕನೀಜ್ ✻
ಮುನವರ್ ಸುಲ್ತಾನಾ, ಶ್ಯಾಮ್, ಊರ್ಮಿಳ, ಕುಲದೀಪ್, ಕಕ್ಕೂ
ಸಂಗೀತ.-ಗುಲಾಮ್ ಹೈದರ್

ಬೆಳಗಿನ ಪ್ರದರ್ಶನ 14-10-49 ರಿಂದ 4 ದಿನಗಳು
ನೂರ್ ಜಹಾನ್ ಮತ್ತು ಯಾಕೂಬ್ ನಟಿಸಿರುವ
— ಬಡಿ ಮಾ —

[ಸ್ಥಾಪನೆ: 1906]
ಕೆನರಾ ಬ್ಯಾಂಕ್, ಲಿಮಿಟೆಡ್
(ಮೈಸೂರು ಬ್ರಾಂಚ್)
(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)
ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು
U. HARI SHENOY B. A.
ಏಜಂಟ್

ಎಲ್ಲವನ್ನೂ ಶುದ್ಧಪಡಿಸಲು
ಉತ್ತಮವಾದ
- ಮೈಸೂರು ಸೋಪ್ -
ಎಲ್ಲೆಲ್ಲೂ ದೊರೆಯುತ್ತವೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ರಾಜಕಮಲ
ಮೈಸೂರು
14-10-49 ರಿಂ[ದ]
ಅಮೋಘವಾದ 3ನೇ ವಾ[ರ]
ಫಿಲ್ಮಿಸ್ತಾನರವರ
- ಆಕ್ರೈಸ್ -
ರೆಹನ, ಮೀನ, ಪ್ರೇಮ್ ಅದಿ[ಬ್]
ಅಭಿನಯಿಸಿರುವ ಹಿಂದಿ ಚಿತ್ರ

MORNING SHOW[S]
From 14-10-49
For 4 Days only
Columbia's Super Soc[ial] Hit
LOVES OF CARMEN
With.- Rita Hayworth, Glennford & Ron Ran[dell]
(In Technicolor)
Today is the **Time** to [...] that **Talking**, feel th[at] **Loving**, see tha[t] **Heart-happy Columb[ia] SMASH**

SEE TO DAY
LAKSHMI
THEATRE
Film dedicated to the [me]mory of late Saigal, t[he] Veteran Actor of Ind[ia]
PARAVAN[A]
With-Saigal, Suriya, Na[...]
Running for the
SUCCESSFUL II WE[EK]
From 14—10—49
— —:o:— —
ಲಕ್ಷ್ಮೀ ಥಿಯೇಟ[ರ್]
ಪ್ರತಿಯೊಬ್ಬ ಸಿನಿಮಾ ಪ್ರೇಮಿ[ಯೂ] ನೋಡಲೇಬೇಕಾದ ಚಿತ್ರ
ಪರವಾನ
ಕಡೇಸಾರಿ ಸೈಗಾಲನು ಅಭಿನಯಿ[ಸಿದ] ಸರ್ವೋತ್ಕೃಷ್ಟ ಚಿತ್ರ
ಜೊತೆಗೆ ಸುರೈಯ್ಯ ಮತ್ತು [...]
ಸಹಸ್ರಾರು ಮಂದಿ ನೋಡಿ ತೃ[ಪ್ತಿ]ಪಟ್ಟಿರುವರು
ತಾ॥ 14-10-49ರಿಂದ 2ನೇ [ವಾರ]

MORNING SHOW
From 14-10-49 for 3 [...]
Down to Ear[th]
(In Technicolour)

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮| ಶುಕ್ರವಾರ ೧೯-೧೦-೧೯೪೮ |ಸಂಚಿಕೆ ೬೫

ಡಿಸೆಂಬರ್ ತಿಂಗಳಲ್ಲಿ ಪುನಃ ಖೆಡ್ಡಾ ಪ್ರದರ್ಶನ

ಅಂಕಿ ಅಂಶಗಳ ಇಲಾಖೆ

(... ಸು ಫೋ] ಬೆಂಗಳೂರು ೧೮ ಅಂಕಿ ಅಂಶಗಳ (ಸ್ಟ್ಯಾಟಿಸ್ಟಿಕಲ್) ನೂ ... ಖಾತೆಯೊಂದನ್ನು ಸರ್ಕಾರದವರು ...ಸಿ, ಅದಕ್ಕೆ ಆರ್ಥಿಕ ಅಭಿವೃದ್ಧಿ ಅಧಿ ...ಗಳಾದ ಶ್ರೀ ಜೆ ಬಿ. ಮಲ್ಲಾರಾಧ್ಯ ...ರನ್ನು ಮುಖ್ಯಾಧಿಕಾರಿಗಳನ್ನಾಗಿ ನೇ ...ಸಿದ್ದಾರೆ

ಪ್ರ|| ಪ್ರ|| ಸಭೆ

ಇದೇ ೨೦ನೇ ತಾ||ನಿಂದ ಪ್ರಾರಂಭ ...ಗುವ ಪ್ರಜಾಪ್ರತಿನಿಧಿ ಸಭೆಯ ... ದಿನ ...ಸಿ ನಡೆಯುವುದು ಅಧಿವೇಶನದಲ್ಲಿ ...ನಿರ್ಣಯಗಳು, ೩೦ ಸರ್ಕಾರಿ ಮ ...ಡೆಗಳು ಮತ್ತು ೧೨೮ ಪ್ರಶ್ನೆಗಳು ಬ ...ವೆ

○ ಬೃಂದಾವನದಲ್ಲಿ ಮುಂದಿನ ತಿಂ ...ಗಳ ೨ನೇ ತಾ||ನಿಂದ ೬ ವಾರಗಳು ನಡೆ ...ಲಿರುವ ಅಂತರ ರಾಷ್ಟ್ರೀಯ ವಯಸ್ಕರ ...ವ್ಯಾಖ್ಯಾನ ಚರ್ಚಾಗೋಷ್ಠಿಯ ಸಂಬಂ ...ದಲ್ಲಿ ಮೈಸೂರು ಸಬ್ ಡಿವಿಜನ್ ಅಧಿ ...ಗಳಾದ ಜನಾಬ್ ಅಬು ಬೇಕರ್‌ರವ ...ನ್ನು ವಿಶೇಷ ಅಧಿಕಾರಿಗಳನ್ನಾಗಿ ನೇಮಿ ...ಲಾಗಿದೆ

○ ಭಾರತ ಸರ್ಕಾರದ ಸಚಿವ ಶ್ರೀ ...ಹನಲಾಲ್ ಸಾಕ್ಸೇನಾರವರು ಈ ...ನ ಮಧ್ಯಾಹ್ನ ಇಲ್ಲಿಗೆ ಆಗಮಿಸಿ, ನ ...ಧಾನಿಗೆ ಭೇಟಿ ಕೊಡ ವರ

ಬಿ ಸಿ. ಜಿ. ವ್ಯಾಕ್ಸೀನ್ ಪ್ರಯೋಗ ...ಸಂಸ್ಥಾನದಲ್ಲಿ ಕ್ಷಯ ರೋಗವನ್ನು ತ ...ಗಟ್ಟಲು ಬಿ ಸಿ ಜಿ ವ್ಯಾಕ್ಸೀನ್‌ ಪನ್ನ ...ಸಾಮೂಹಿಕವಾಗಿ ಹಾಗೆ ತರಲ ...ಜಿಲ್ಲೆಯಲ್ಲೂ ಕ್ಷಯರೋಗ ನಿವಾರ ...ಸಮಿತಿಗಳನ್ನು ನೇಮಿಸಿ, ಅವುಗ ...ಮೂಲಕ ಪ್ರಚಾರ ಕಾರ್ಯ ನಡೆಸುವ ವಿಚಾ ...ವನ್ನು ಸರ್ಕಾರದವರು ಪರಿಶೀಲಿಸುತ್ತಿ ...ದ್ದಾರೆಂದು ತಿಳಿದುಬಂದಿದೆ

ಇಂದಿರಾ ನೋಡಲು ೧೦ ಸಾವಿರ ಜಪಾನಿನ ಮಕ್ಕಳು

ಭಾರತದಿಂದ ಬಂದಿರುವ ಇಂದಿರಾ ಆ ...ನೆಯನ್ನು ನೋಡಲು ಜಪಾನಿನ ಮೃಗಾ ...ಲಯಕ್ಕೆ ಪ್ರತಿ ದಿನ ೧೦ ಸಾವಿರಕ್ಕಿಂತ ಹೆ ...ಚ್ಚಿಗೆ ಮಕ್ಕಳ ಜನಸಂದಣಿ ಒದಗುತ್ತಿದೆ ...ಯೆಂದು ಹೇಳಲಾಗಿದೆ

...ಗಳು ಡಿಕ್ಕಿ ಹೊಡೆದು ೪೦ ಜನರ ಸಾವು

ಬ್ಯೂನೋ ಏರ್ ಎಂಬಲ್ಲಿ ವಿದ್ಯುಚ್ಛಕ್ತಿ ...ಪ್ರಯಾಣಿಕ ರೈಲು ಗುಡ್ಸ್ ರೈಲೊಂ ...ಕ್ಕೆ ಮೊನ್ನೆ ರಾತ್ರಿ ಡಿಕ್ಕಿ ಹೊಡೆದ ದರಿಂ ...೪೦ ಜನರು ಸತ್ತು, ೧೦೦ ಜನರಿಗೆ ಗಾ ...ಯವಾಯಿತೆಂದು ವರದಿಯಾಗಿದೆ

...ಸ್ಕೂಲು ಕಟ್ಟಿಡಕ್ಕೆ ಉದಾರ ಸಹಾಯ

...ಡ್ಲುಪೇಟೆ ತಾಲ್ಲೂಕು ... ...ನ ಪಂಚಾಯಿತಿ ಅಧ್ಯಕ್ಷರಾದ ಶ್ರೀ ... ...ರವರು ಸಿರಿಯಸ್ಸನವರ ... ...ಬೋರ್ಡು ಹೈಸ್ಕೂಲು ಕಟ್ಟಡವ ... ...ವೇ ಕಟ್ಟಿಸಿಕೊಡುವುದಾಗಿ ಮಾ ... ...ನ ಸಾರ್ವಜನಿಕರಿಂದ ಹಿವಕ್ಕಾಗಿ ಜೀ ... ...೩೦ ಸಾವಿರ ರೂ ಅನ್ನು ಕೊಡವು ... ...ಗಿ ತಿಳಿಸಿರುತ್ತಾರೆ ಶ್ರೀ ಸಾಸು ... ...ವ ರಾಮನಗರು ಸುಬ್ಬಣ್ಣನವರ ... ...ಅವರ ಮಕ್ಕಳು ಹೈಸ್ಕೂಲಿನ ವಿ ... ...ನಿಲಯದ ಕಟ್ಟಡಕ್ಕಾಗಿ ೨೦ ಸಾ ... ...೦ ಉದಾರ ಸಹಾಯ ಮಾಡಲು ... ...ದ್ದಾರೆ

ರಾಜ್ಯಾಂಗ ಸಭೆಯು ಶಾಸನ ಸಭೆಯಾಗುವುದೇ?

ಬೆಂಗಳೂರು ೧೮

ಭಾರತದ ನೂತನ ರಾಜ್ಯಾಂಗವು ಒರು ...ವ ಜನವರಿ ೨೬ ನೇ ತಾ|| ಆಚರಣೆಗೆ ಬಂ ...ದ ಮೇಲೆ ಈಗಿರುವ ಪ್ರಜಾ ಪ್ರತಿನಿಧಿ ಸ ...ಭೆ ಮತ್ತು ನ್ಯಾಯಾಂಗ ಸಭೆಗಳನ್ನು ರ ...ದ್ದು ಮಾಡಿ ರಾಜ್ಯಾಂಗ ಸಭೆಯನ್ನು ...ಒಂದೇ ಶಾಸನ ಸಭೆಯನ್ನಾಗಿ ಪರಿವರ್ತಿ ...ಸುವ ವಿಚಾರವು ಸರ್ಕಾರದ ಪರ್ಯಾಲೋ ...ಚನೆಯಲ್ಲಿದೆಯೆಂದು ತಿಳಿದುಬಂದಿದೆ ...೧೯೫೦ ನೇ ಮಾರ್ಚಿ ತಿಂಗಳಿಗೆ ಶಾಸನ ...ಸಭೆಗಳ ಕಾಲಾವಧಿಯು ಮುಗಿಯುವು ...ದು. ಜನವರಿ ೨೬ ನೇ ತಾ|| ನಿಂದಲೇ ...ನೂತನ ರಾಜ್ಯಾಂಗವು ಜಾರಿಗೆ ಬರುವುದ ...ರಿಂದ, ಹೊಸ ಚುನಾವಣೆ ನಡೆಯುವವರೆ ...ವಿಗೂ ಕೇಂದ್ರ ಪಾರ್ಲಿಮೆಂಟು ಸಭೆಯಂ ...ತೆ, ಮೈಸೂರು ರಾಜ್ಯಾಂಗ ಸಭೆಯನ್ನು ...ಶಾಸನ ಸಭೆಯನ್ನಾಗಿ ಮಾಡಲಾಗುತ್ತ ...ದೆಂದು ಹೇಳಲಾಗಿದೆ

ರೈಲ್ವೆ ಅಪಘಾತದಿಂದ ೫ ಜನರ ಮರಣ

ಬೊಂಬಾಯಿ—ಕಲ್ಕತ್ತ ಮೇಲು ರೈಲು ಗಾಡಿಯು ಮೊನ್ನೆ ರಾತ್ರಿ ಖರಗ್‌ಪುರದ ಬಳಿ ಕಂಬಿ ತಪ್ಪಿ, ಉರುಳಿ ಅಪಘಾತಕ್ಕೆ ಒಳಗಾಯಿತೆಂದೂ, ಅದರಿಂದ ೫ ಜನರು ಸತ್ತು, ೩೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ

ಐಕ್ಯವಾದ ಸಂಸ್ಥಾನಗಳು ಪುನಃ ರಾಜರಿಗೆ ಬರುವುದಿಲ್ಲ

ಪ್ರಾಂತ್ಯಗಳಲ್ಲಿ ಐಕ್ಯವಾದ ಸಂಸ್ಥಾನಗಳನ್ನು ವಾಪಸು ರಾಜರುಗಳಿಗೆ ಕೊಡಲಾಗುವುದಿಲ್ಲವೆಂದೂ, ಅವುಗಳು ಪ್ರಾಂತಗಳಿಂದ ಪ್ರತ್ಯೇಕಗೊಳ್ಳುವುದಿಲ್ಲವೆಂದೂ ಬೊಂಬಾಯಿನ ಶಾಸನ ಸಭೆಯಲ್ಲಿ ಪ್ರಧಾನಿ ಶ್ರೀ ಬಿ ಜಿ ಖೇರ್‌ರವರು ತಿಳಿಸಿದ್ದಾರೆ

ಇಂಜನಿಯರಿಂಗ್ ಶಾಲೆಗೆ ೧೦ ಸಾವಿರ ರೂ. ದಾನ

ಮೈಸೂರು ೧೮

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಶಾಲೆ ಕಟ್ಟಡದ ನಿಧಿಗೆ ಮೈಸೂರ ಹೋಟೇಲ್ ಮಾಲೀಕರಾದ ಶ್ರೀ ... ಸೀತಾರಾಮಯ್ಯರವರು ೧೦ ಸಾವಿರ ರೂ ದಾನ ಸಹಾಯ ಮಾಡಿರುತ್ತಾರೆ

ಮಹಾರಾಜರಿಗೆ ರಾಜಪ್ರಮುಖರೆಂಬ ಹೆಸರು

ಮೈಸೂರು ಮಹಾರಾಜರನ್ನು ರಾಜಪ್ರಮುಖರೆಂದು ಕರೆಯುವುದು ಸಾಧುವಲ್ಲವೆಂದು ಮೈಸೂರು ರಾಜ್ಯಾಂಗ ಸಭೆಯಲ್ಲಿ ಅಭಿಪ್ರಾಯ ಪಡಲಾಗುತ್ತು. ಆದರೆ ನಿನ್ನೆ ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳ ರಾಜ್ಯಾಂಗದ ವಿಚಾರವಾಗಿ, ಸ್ಟೇಟ್ಸ್ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಾತನಾಡುತ್ತಾ, ಒಪ್ಪಂದದ ಪತ್ರದಲ್ಲಿ ರಾಜಪ್ರಮುಖ ಎಂದು ಇರುವುದರಿಂದ ಅದೇ ಪದವು ಈಗಲೂ ಇರುವುದು ಸೂಕ್ತವೆಂದು ತಿಳಿಸಿದ್ದಾರೆ

ಹುಲಿಯಿಂದ ಪೋಷಿಸಲ್ಪಟ್ಟ ಮನುಷ್ಯ

ಅಸ್ಸಾಂ ಪ್ರಾಂತ್ಯದ ಕುಮಾರ್ ಗುಡ್ಡ ಪ್ರದೇಶದ ೨೫ ವರ್ಷದ ನಾಗಾ ಬಾಲಕ ಎಂಬುವನನ್ನು ಹುಲಿಯೊಂದು ಮಗುವಾಗಿದ್ದಾಗಿನಿಂದ ಪೋಷಿಸಿ, ರಕ್ಷಿಸಿದ ಪ್ರಸಂಗವು ವರದಿಯಾಗಿದೆ ಪ್ರಾಣಿಗಳಂತೆ ಆತನು ಕೈಗಳನ್ನು ಕಾಲುಗಳಂತೆ ಉಪಯೋಗಿಸಿ, ಹುಲ್ಲು ತಿಂದ, ನೀರಿಗಾಗಿ ... ಕೊಂಡು ಮೇಲಿದ್ದ ಮಂಜನ್ನು ನಕ್ಕುವನೆಂದೂ ಹೇಳಲಾಗಿದೆ ಆತನು ಬಾಲ್ಯದಿಂದ ಹುಲಿಯ ಸಂಗಡವಿದ್ದು, ವಯಸ್ಸಾದಮೇಲೆ ಜಂಕೆಗಳೊಡನೆ ಇದ್ದನೆಂದೂ, ಆತನನ್ನು ರಾಜರೊಬ್ಬರು ಕಂಡು, ಪರಿಣತ ... ಹಿಡಿದುಕೊಂಡು ತಮ್ಮ ಊರಿಗೆ ಕರೆತಂದರೆಂದೂ ಹೇಳಲಾಗಿದೆ ಆತನಿಗೆ ೨೦ ಎಕರೆ ಜಮೀನನ್ನು ಕೊಟ್ಟು, ಅಲ್ಲಿ ಹುಲ್ಲು ಬೆಳೆಯ ... ಮಾಡಿದ್ದಾರೆ ಆತನಿಗೆ ಮನುಷ್ಯನನ್ನು ಕಂಡರೆ ಆಗುವುದಿಲ್ಲ

ಕೇಂದ್ರದ ಮತೋಟ ಮೈಸೂರಿನ ಮೇಲೆ ಇಲ್ಲ

ಸಂಸ್ಥಾನಗಳ ಮೇಲೆ ಕೇಂದ್ರದ ಹತೋಟಿ ಇರಬೇಕೆಂಬ ನಿಯಮದ ಬಗ್ಗೆ ಭಾರತದ ರಾಜ್ಯಾಂಗ ಸಭೆಯಲ್ಲಿ ನಿನ್ನೆ ಚರ್ಚೆ ನಡೆದು, ಅದನ್ನು ಅನೇಕ ಸದಸ್ಯರು ತೀವ್ರವಾಗಿ ಟೀಕಿಸಿದರು ಆದು ಕೇವಲ ೧೦ ವರ್ಷದ ಅವಧಿಗೆ ಸೇರಿಸಲ್ಪಟ್ಟಿದೆಯೆಂದೂ, ಮೈಸೂರು ಮತ್ತು ತಿರುವಾಂಕೂರು ಒಕ್ಕೂಟಗಳಿಗೆ ಅನ್ವಯಿಸುವುದಿಲ್ಲವೆಂದೂ ಸರ್ದಾರ್ ಪಟೇಲರು ಭರವಸೆ ಕೊಟ್ಟನಂತರ ... ಅಂಗೀಕರಿಸಲಾಯಿತು

ಬರುವ ಡಿಸೆಂಬರಿನಲ್ಲಿ ಪುನಃ ಖೆಡ್ಡಾ

ಮುಂದಿನ ಡಿಸೆಂಬರ್ ತಿಂಗಳಿನಲ್ಲಿ ಕಾಕನಕೋಟೆ ಕಾಡಿನಲ್ಲಿ ಪುನಃ ಖೆಡ್ಡಾ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಡಿಸಲಿದ್ದಾರೆಂದು ತಿಳಿದುಬಂದಿದೆ ಅದೇ ಸಮಯದಲ್ಲಿ ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ, ವಿವಿಧಉಷ್ಣಗಳ ವಯಸ್ಕರ ವಿದ್ಯಾಭ್ಯಾಸ ಚರ್ಚಾ ಗೋಷ್ಠಿ ಮತ್ತು ಭಾರತದ ಕಾರ್ಮಿಕ ಸಚಿವರುಗಳ ಸಮ್ಮೇಳನಗಳು ನಡೆಯಲಿರುವುದರಿಂದ, ಅದರಲ್ಲಿ ಭಾಗವಹಿಸುವ ಪ್ರತಿನಿಧಿಗಳ ಗೌರವಾರ್ಥವಾಗಿ ಅದನ್ನು ಏರ್ಪಡಿಸಲಾಗುವುದೆಂದು ಹೇಳಲಾಗಿದೆ

ಮೋಹನಲಾಲ್ ಸಾಕ್ಸೇನಾರವರ ಭಾಷಣ

ಭಾರತ ಸರ್ಕಾರದ ಸಚಿವರಾದ ಶ್ರೀ ಮೋಹನಲಾಲ್ ಸಾಕ್ಸೇನಾರವರು ನಾಳೆ ಸಂಜೆ ೫ ಗಂಟೆಗೆ ಸೆಂಟ್ರಲ್ ಕಾಲೇಜ್ ಸಂಘದಲ್ಲಿ ಭಾಷಣ ಮಾಡುವರು

ಮೈಸೂರಿನ ಸೂಚನೆಗೆ ಪುರಸ್ಕಾರವಿಲ್ಲ

ಸಂಸ್ಥಾನಗಳ ಗಡಿ ಪ್ರದೇಶಗಳನ್ನು ಬದಲಾಯಿಸುವಾಗ ಆಯಾ ಸಂಸ್ಥಾನಗಳ ಶಾಸನ ಸಭೆಯ ಅನುಮತಿಯನ್ನು ಪಡೆಯಬೇಕೆಂಬ ಮೈಸೂರು ರಾಜ್ಯಾಂಗ ಸಭೆಯ ಸೂಚನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಸರ್ದಾರ್ ಪಟೇಲರು ನಿನ್ನೆ ಕೇಂದ್ರ ರಾಜ್ಯಾಂಗ ಸಭೆಯಲ್ಲಿ ತಿಳಿಸಿರುತ್ತಾರೆ

ಕಮ್ಯೂನಿಸ್ಟರಿಂದ ಕ್ಯಾಂಟನ್ ನಗರದ ಆಕ್ರಮಣ

ಚೀನಾ ರಾಷ್ಟ್ರೀಯ ಸರ್ಕಾರದ ರಾಜಧಾನಿಯಾಗಿದ್ದ ಕ್ಯಾಂಟನ್ ನಗರವನ್ನು ಕಮ್ಯೂನಿಸ್ಟರು ನಿನ್ನೆ ದಿನ ಆಕ್ರಮಿಸಿದರೆಂದೂ ಅದನ್ನು ಇನ್ನೆರಡು ದಿನಗಳಲ್ಲಿ ಸಂಪೂರ್ಣವಾಗಿ ವಶಪಡಿಸಿಕೊಳ್ಳುವುದಾಗಿಯೂ ವರದಿಯಾಗಿದೆ ನಗರವು ನಿರಾತಂಕವಾಗಿ ಬಿದ್ದಿದೆ ರಾಷ್ಟ್ರೀಯ ಸರ್ಕಾರದವರು ಅದನ್ನು ಸಂಪೂರ್ಣವಾಗಿ ತ್ಯಜಿಸಿ, ಚುಂಕಿಂಗಿನಲ್ಲಿ ರಾಜಧಾನಿಯನ್ನು ಏರ್ಪಡಿಸಿದ್ದಾರೆ ೬ ತಿಂಗಳಿನಲ್ಲಿ ಇದು ನಾಲ್ಕನೇ ರಾಜಧಾನಿಯಾಗಿದೆ

ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ತಾಟಸ್ಥ್ಯದಿಂದಿರಲಾಗದು

ಅಮೆರಿಕದ ಸೆನೆಟ್ ಸಭೆಯಲ್ಲಿ ನೆಹರೂರವರ ಘೋಷಣೆ

ನಿನ್ನೆ ದಿನ ಪಂಡಿತ ನೆಹರೂರವರು ಅಮೆರಿಕದ ಕಾಂಗ್ರೆಸ್ಸನ್ನು ಉದ್ದೇಶಿಸಿ ಭಾರತದ ನೀತಿಯ ಬಗ್ಗೆ ಇತಿಹಾಸ ಪ್ರಸಿದ್ಧವಾದ ಘೋಷಣೆಯನ್ನು ಮಾಡಿದರು ಸ್ವಾತಂತ್ರ್ಯಕ್ಕೆ ಧಕ್ಕೆಯ ... ಉಂಟಾಗ, ನ್ಯಾಯಕ್ಕೆ ... ಭಾರತವು ತಟಸ್ಥವಾಗಿ ನಿಲ್ಲಲಾರದೆಂದು ಅವರು ಸಾರಿದರು ... ಕಮ್ಯೂನಿಸ್ಟ್ ... ರಕ್ಷಿಸಲು ... ಅವರು ತಿಳಿಸಿದರು.

ಬೊಂಬಾಯಿನಲ್ಲಿ ೧೧೪ ಕೋಟಿ ರೂ. ಯೋಜನೆ

ಯುದ್ಧಾನಂತರದ ಪಂಚ ವಾರ್ಷಿಕ ಯೋಜನೆಯ ಪ್ರಕಾರ, ೧೬ ಭಾರಿ ನೀರಾವರಿ ಕಾರ್ಯಗಳಿಗಾಗಿ ೧೧೪ ಕೋಟಿ ರೂ ಖರ್ಚು ಮಾಡಲಾಗುವುದೆಂದು ಬೊಂಬಾಯಿ ಸರಕಾರದ ಸಚಿವರಾದ ಶ್ರೀ ವೆಂಕಟಾರಾವ್‌ರವರು ತಿಳಿಸಿರುತ್ತಾರೆ. ಈ ಯೋಜನೆಯಿಂದ ೨೫ ಲಕ್ಷ ಎಕರೆ ಜಮೀನ ಸಾಗುವಳಿಗೆ ಒಂದು, ೮ ಲಕ್ಷ ಟನ್ ಆಹಾರ ಧಾನ್ಯ ಹೆಚ್ಚಾಗಿ ಉತ್ಪತ್ತಿಯಾಗುವುದೆಂದು ಅವರು ಹೇಳುತ್ತಾರೆ. ಬೊಂಬಾಯಿ ಕಣಿವೆ ವಿದ್ಯುಚ್ಛಕ್ತಿ ಯೋಜನೆಗೆ ೪೨೬೦ ಲಕ್ಷ ರೂ. ಖರ್ಚಾಗುವುದೆಂದೂ ಅದು ೧೯೬೦ರ ಹೊತ್ತಿಗೆ ಪೂರೈಸುವುದೆಂದೂ ಅದರಿಂದ ೨೦ ಲಕ್ಷ ಎಕರೆ ಜಮೀನು ಸಾಗುವಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದೆಂದೂ ತಿಳಿಸಿರುತ್ತಾರೆ.

ಲೂಟಿ ಮಾಡಿದ ಸ್ವತ್ತನ್ನು ಪಡೆಯುವ ಉಪಾಯ

ಪಾಟಿಯಾಲಕ್ಕೆ ಸೇರಿದ ಬಾರನಾಲ ಜಿಲ್ಲೆಯಲ್ಲಿ ಲೂಟಿಯಾದ ೧೦ ಸಾವಿರ ರೂ ಸ್ವತ್ತನ್ನು ನೂತನ ಉಪಾಯದಿಂದ ಅಲ್ಲಿನ ಅವಲ್ದಾರರಾದ ಸ ಸಿಂಗ್‌ರವರು ವಸೂಲು ಮಾಡಿದರೆಂದು ವರದಿಯಾಗಿದೆ. ಅಲ್ಲಿನ ಜನರೆಲ್ಲರನ್ನೂ ಸಿಕ್ಕರ ದೇವಾಲಯಕ್ಕೆ ಕರೆಸಿ, ಲೂಟಿ ಮಾಡಿದ ಸ್ವತ್ತುಗಳನ್ನು ವಾಪಸ ಮಾಡದವರ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಅವರು ತಿಳಿಸಿದರು. ತಮ್ಮಲ್ಲಿದ್ದ ಲೂಟಿಯಾದ ಸ್ವತ್ತುಗಳನ್ನು ಒಟ್ಟೊಟ್ಟಾಗಿ ಅವರು ಒಪ್ಪಿಸಿ ಕೊಟ್ಟರೆಂದೂ, ಅವನ್ನು ನಿರಾಶ್ರಿತರಿಗೆ ಕೊಡಲಾಯಿತೆಂದೂ ಹೇಳಲಾಗಿದೆ.

ಕಾಳ ಸಂತೆಯಲ್ಲಿ ಸಕ್ಕರೆ ಬೆಲೆ ಸೇರಿಗೆ ೩-೪-೦

ಜಬ್ಬಲ್ಪುರದಲ್ಲಿ ಸಕ್ಕರೆ ಕ್ಷಾಮ ಉಂಟಾಗಿದ ಅನೇಕ ಜನರು ಸಕ್ಕರೆ ಇಲ್ಲದ ಪಾನೀಯವನ್ನು ಕುಡಿಯುತ್ತಿದ್ದಾರೆ. ಕಾಳ ಸಂತೆಯಲ್ಲಿ ಸಕ್ಕರೆಯನ್ನು ಸೇರಿಗೆ ೩ ರೂ ಮತ್ತು ಬೆಲ್ಲ ಸೇರಿಗೆ ೧ ರೂ ನಂತೆ ಮಾರಲಾಗುತ್ತಿದೆ. ದೀಪಾವಳಿ ಸಮಯಕ್ಕೆ ಸಕ್ಕರೆ ಸರಬರಾಜಾಗದಿದ್ದರೆ, ಇದರ ಬೆಲೆಯು ಸೇರಿಗೆ ೫ ರೂ ಗೆ ಏರುವುದೆಂದು ಜನರು ಗಾಬರಿಗೊಂಡಿದ್ದಾರೆ.

ಮೈಸೂರಿಗೆ ಮದರಾಸ್ ಸಚಿವರ ಭೇಟಿ

ಮದರಾಸಿನ ಕೈಗಾರಿಕಾ ಸಚಿವರಾದ ಶ್ರೀ ... ರೆಡ್ಡಿಯವರ ಇದೇ ...ನೇ ತಾ॥ ರಾಜಧಾನಿಗೆ ಆಗಮಿಸುವರು.

ಪುರಸಭಾ ಚುನಾವಣೆಗೆ ಕಾಂ॥ ಉಮೇದುವಾರರು

ಪೌರಸಭಾ ಚುನಾವಣೆಯಲ್ಲಿ ಲಷ್ಕರ್ ಮೊಹಲ್ಲಾದಿಂದ ೫ ಸ್ಥಾನಗಳಿಗೆ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರಾಗಿ ... ಸಾರ್ವಜನಿಕರ ... ಪ್ರತಿನಿಧಿಗಳೇ ಇರಬೇಕೆಂದ ... ಇದೇ ... [illegible]

ಬ್ರಿಟನ್ನಿಗೆ ಆಸ್ಟ್ರೇಲಿಯದಿಂದ ೨೦ ಕೋಟಿ ಮೊಟ್ಟೆಗಳು

ಆಹಾರಕ್ಕಾಗಿ ಆಸ್ಟ್ರೇಲಿಯಾದಿಂದ ಬ್ರಿಟನ್ನಿಗೆ ೨೦ ಕೋಟಿ ಮೊಟ್ಟೆಗಳನ್ನು ರವಾನಿಸಲಾಗಿದೆಯೆಂದೂ ಅವುಗಳ ಆಹಾರವು ಬ್ರಿಟನ್ನಿನ ಹೋಟೇಲುಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆಯೆಂದೂ ಹೇಳಲಾಗಿದೆ.

ಹೋಟೇಲು ಕೆಲಸಗಾರರ ಸಂಘದ ಸಭೆ

ರಾಜಧಾನಿಯ ಹೋಟೇಲು ಕೆಲಸಗಾರರ ಸಂಘದ ಸಭೆಯು ನಾಳೆ ರಾತ್ರಿ ೮-೩೦ ಗಂಟೆಗೆ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ.

ಅಂಗಡಿ ಕೆಲಸಗಾರರ ತೊಂದರೆ

ಸಂಸ್ಥಾನದಲ್ಲಿ ಷಾಪ್ ಅಸಿಸ್ಟೆಂಟ್ ಕಾನೂನು ಜಾರಿಗೆ ಬಂದಿದ್ದರೂ, ಅನೇಕ ಅಂಗಡಿಯವರು ಅದನ್ನು ಆಚರಣೆಗೆ ತರುತ್ತಿಲ್ಲ. ಸಂತೇಪೇಟೆ ಮತ್ತು ಸಯ್ಯಾಜಿರಾವ್ ರಸ್ತೆಯಲ್ಲಿರುವ ಅನೇಕ ಅಂಗಡಿಯವರು ಮೊದಲು ಭಾನುವಾರದ ದಿವಸ ತಮ್ಮ ವ್ಯಾಪಾರವನ್ನು ನಿಲ್ಲಿಸುತ್ತಿದ್ದರೂ ಇತ್ತೀಚೆಗೆ ೩ ಗಂಟೆಯ ತನಕ ವ್ಯಾಪಾರ ನಡೆಸುತ್ತಿದ್ದಾರೆ. ಇದರಿಂದ ಕೆಲಸಗಾರರಿಗೆ ರಜಾ ಇಲ್ಲದೆ ಕಷ್ಟಪಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ, ಕೆಲಸಗಾರರ ಕುಂದುಕೊರತೆಗಳನ್ನು ನಿವಾರಿಸಬೇಕೆಂದು ಮೈಸೂರು ಅಂಗಡಿ ಕೆಲಸಗಾರರ ಸಂಘದ ಉಪಾಧ್ಯಕ್ಷರು ಪ್ರಾರ್ಥಿಸಿರುತ್ತಾರೆ.

ಸೋಮಾರಿತನದಿಂದ ಆಯುಸ್ಸು ಹೆಚ್ಚುವುದೇ ?

ಸೋಮಾರಿತನದಿಂದ ಆಯುಸ್ಸನ್ನು ಹೆಚ್ಚಿಸಬಹುದೆಂದು ವೈಜ್ಞಾನಿಕರು ಅಭಿಪ್ರಾಯ ಪಟ್ಟಿರುತ್ತಾರೆ. ಬ್ರಿಟನ್ನಿನ ಸುಪ್ರಸಿದ್ಧ ವೈಜ್ಞಾನಿಕರಾದ ಜಾರ್ಜ್ ಜೀನಾರ್ಧರವರು ಪ್ರಾಣಿಗಳ ಮೇಲೆ ಸಂಶೋಧನ ನಡೆಸಿ, ಸೋಮಾರಿತನದಿಂದಲೇ ಆಮೆಯು ೨೦೦ ಅಥವ ೩೦೦ ವರ್ಷ ಬದುಕಿರುವುದೆಂದೂ, ಹಂಸವು ೧೦೦ ವರ್ಷ, ಆನೆ ೨೦೦ ವರ್ಷ ಬದುಕಿರುವುದೆಂದೂ ತಿಳಿಸಿರುತ್ತಾರೆ. ವಿಶೇಷ ಚಟುವಟಿಕೆಯಿಂದಿರುವ ನಾಯಿಗಳು ಕೇವಲ ೧೦ ಇಲ್ಲ, ಇಲಿಯು ೩-೪ ವರ್ಷಗಳು ಬದುಕಿರುವುದೆಂದೂ ಹೇಳಿರುತ್ತಾರೆ.

ಗವರ್ನರುಗಳ ಸಂಬಳ ೫೫೦೦ ರೂ.

ಭಾರತದ ರಿಪಬ್ಲಿಕ್ಕಿನ ಸಂಸ್ಥಾನಗಳ ಗವರ್ನರುಗಳಿಗೆ ತಿಂಗಳಿಗೆ ೫೫೦೦ ರೂ, ಶ್ರೇಷ್ಠ ನ್ಯಾಯಾಧೀಶರಿಗೆ ೫೫೦೦ ರೂ ಮತ್ತು ಇತರ ನ್ಯಾಯಾಧೀಶರಿಗೆ ೪ ಸಾವಿರ ರೂ ಸಂಬಳ ಇರಬೇಕೆಂದು ಕೇಂದ್ರ ರಾಜ್ಯಾಂಗ ಸಭೆಯು ನಿರ್ಧರಿಸಿದೆ.

೨೪ನೇ ತಾ॥ ವಿಶ್ವ ಸಂಸ್ಥೆಯ ದಿನಾಚರಣೆ

ಇದೇ ೨೪ನೇ ತಾ॥ ಸಂಯುಕ್ತ ಜನಾಂಗದ ದಿನಾಚರಣೆಯನ್ನು ನಡೆಸಬೇಕೆಂದು ಭಾರತ ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಉಪಾಧ್ಯಾಯರನ್ನು ಪಾ... ರಕ್ಷೆಯಿಂದ ಹೊಡೆದ ಪ್ರಸಂ...

ಹೊಸಂಗಾಬಾದಿನ ಶಾಲಾ ಉಪಾ...ಯರೊಬ್ಬರು ರಸ್ತೆಯಲ್ಲಿ ಹೋಗುತ್ತಿ...ಗ ಅವರನ್ನು ಪಾದರಕ್ಷೆಯಿಂದ ವಿ...ರ್ಥಿಯ ತಂದೆಯೊಬ್ಬರು ಹೊಡೆದ... ವರದಿಯಾಗಿದೆ. ಆ ವಿದ್ಯಾರ್ಥಿಯ... ನ್ನು ಬೈದುದಕ್ಕಾಗಿ ಅವರು ಶಿಕ್ಷಿ... ದುದೇ ಇದಕ್ಕೆ ಕಾರಣವೆಂದು ಹೇಳ... ದೆ.

ಸರ್ ಬಾಯಿಡ್‌ರವರಿಗೆ ನೊಬೆಲ್ ಬಹುಮಾನ

ವಿಶ್ವ ಸಂಸ್ಥೆಯ ಆಹಾರ ಮತ್ತು ... ಸಾಯ ಶಾಖೆಯ ಮಾಜಿ ಡೈರೆಕ್ಟರ್... ರಲ್ಲರಾದ ಸರ್ ಬಾಯಿಡ್ ಆರ್‌... ನೊಬೆಲ್ ಶಾಂತಿ ಬಹುಮಾನವನ್ನು... ವರ್ಷ ಕೊಡಲಾಗಿದೆ.

ಸಕ್ಕರೆ ಲೂಟಿಮಾಡಿದನ... ಮೇಲೆ ಗುಂಡು

ಬೊಂಬಾಯಿನ ಮಾತುಂಗಾದಲ್ಲಿ... ನ್ನೆ ದಿನ ಇಬ್ಬರು ಅಂಗಡಿಯವರು ... ಉಪ್ಪು ಮತ್ತು ಬೆಂಕಿಕಡ್ಡಿಯನ್ನು ... ತ ಬೆಲೆಗೆ ಮಾರುತ್ತಿದ್ದುದನ್ನು ಪ್ರ... ಸಲು ಜನರ ಗುಂಪು ಅಂಗಡಿಗಳ ಸಾ... ನುಗಳನ್ನು ಹೊಂಕ್ಕೆ ಎಸೆದು ಲೂಟಿ... ಡಿದರೆಂದೂ, ಪೋಲೀಸರು ಗುಂಡ... ಸಿ ಗುಂಪನ್ನು ಚದುರಿಸಿದರೆಂದೂ ... ಯಾಗಿದೆ.

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಪಂಚಾಮೃತ ಮತ್ತು ಪಂಚಾಗ್ನಿ ಲವಣ
ಮಲೇರಿಯಾ ಗಡ್ಡೆ ಕರಗಿಸುವುದರಲ್ಲಿ ೪೦ ವರ್ಷಗಳ ಖ್ಯಾತಿ ಪಡೆದ ಸಿದ್ಧ ಸಂಜೀವನ
ಉಪ್ಪಿನ ಬಿಳಿ ಹಲ್ಲುಪುಡಿ - ಹೊಟ್ಟಿನ ಬೂದಿ ಸೀಮೆ ಸುಣ್ಣವಿಲ್ಲದ ಸ್ಪೆಷಲ್ ಟೂತ್ ಪೌಡರ್
ಪೊಟ್ಟಣ ೧ಕ್ಕೆ ೦-೧-೬
S. N. PANDIT & SONS,
90 Lansdowne Buildings, Mysore

ಪ್ರಭಾ ★ 14-10-49 ರಿಂದ
ದಿನವಹಿ 3 ಆಟಗಳು
ಕಾರ್ದಾರ್ ಪಿಕ್ಚರ್ಸ್‌ರವರ
ಕನೀಜ್

ಮುನವರ್ ಸುಲ್ತಾನಾ, ಶ್ಯಾಮ್ ಕುಮಾರ್ ಕುಲ್‌ದೀಪ್, ಕಕ್ಕೂ
ಸಂಗೀತ - ಗುಲಾಮ್ ಹೈದರ್
ಬೆಳಗಿನ ಪ್ರದರ್ಶನ 14-10-49 ರಿಂದ + ದಿನಗಳು
ನೂರ್ ಜಹಾನ್ ಮತ್ತು ಯಾಕೂಬ್ ನಟಿಸಿರುವ
— ಬಡಿ ಮಾ —

Edited, printed and published by A R Nagarajan, at Sadhvi Press, D Subbiah Road, Mysore

ಶ್ರೀ ಜಗದಂಬಾ ಶಿಶುವಿಹಾ...
ದಿವಾನ್ಸ್ ರಸ್ತೆ, ಮೈಸೂರು
§
ನವರಾತ್ರಿ ರಜಾ ಕಳೆದನಂತರ, ... ಲ್ಲಿಂದ ಶಿಶು ವಿಹಾರವು ಈಗ ತಾನೆ... ಯುಳ್ಳಟ್ಟ ತನ್ನದೇ ಆದ ಆಧುನಿಕ... ಣ ಸಲಕರಣೆಗಳಿಂದ ಕೂಡಿದ ವಿ... ಶಿಕ್ಷಣ ಕಾರ್ಯವನ್ನು ಆರಂಭಿಸಿದೆ. ... ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ ಮ... ಪಿನ್ನವರು ಎಂದಿನಂತೆ ಸಂಸ್ಥೆಯ ಕ... ಜನವನ್ನು ಹೊಂದುವುದರ ಮೂ... ಪ್ರೋತ್ಸಾಹಿಸುವರೆಂದು ನಂಬಲಾಗಿ...

ಅಮರ ಪ್ರೇಮವನ್ನು ನಿರೂಪಿಸಿ... ಆತ್ಮ ಕಥೆ
ಸುರೇಂದ್ರ ಮುನಾವರ್ ಸುಲ್ತ...
ನಟಿಸಿರುವ ಹಿಂದಿ ಚಿತ್ರ
ಮೇರಿ ಕಹಾ...
9-10 49 ರಿಂದ
ಪುಡ್ ಲ್ಯಾಂಡ್ಸ್ ನ...
[G F D Rel...

ನಾಯಿ ಕೆಮ್ಮಿಗೆ ಔಷ...
Whooping Cough Rem...
ಗೂರಲು, ಉಬ್ಬಸ, ಪಕ್ಕಶೂಲ... ಮತ್ತು ಗಲಾಯಕಕ್ಕೆ (Tonsil) ... ರಿಯಾದ ಔಷದಿ ದೊರೆಯುತ್ತದೆ. ... ಕ ದೊಡ್ಡ ಮನುಷ್ಯರು ಸರ್ಟಿ... ವತ್ತು ಬಂಗಾರದ ಮೆಡಲುಗಳನ್ನು... ಟ್ಟಿದ್ದಾರೆ.
ಆರ್ ಎಸ್ ಪಂಡಿತರು
ರಾಮಗೋಪಾಲ ವೈದ್ಯ...
ದಿವಾನರ ರಸ್ತೆ, ಮೈಸೂರು

ಫೋನ್ ನಂ 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮೭ ಶನಿವಾರ ೧೫-೧೦-೧೯೪೯ [ಸಂಚಿಕೆ ೬೩

– ಅಮೆರಿಕದಲ್ಲಿ –
ಅಣು ಬಾಂಬು ರಾಶಿ

...॥ ಪ್ರ॥ ಸಭೆಯಲ್ಲಿ ನೂತನ ಮಸೂದೆಗಳು

..ಸು ಪ್ರೋ.] ಬೆಂಗಳೂರು ೧೫
ಇದೇ ೨೪ ನೇ ತಾ॥ ಪ್ರಾರಂಭವಾಗು
ಪ್ರಜಾ ಪ್ರತಿನಿಧಿ ಸಭೆ ಅಧಿವೇಶನದಲ್ಲಿ
...ರ್ಕಾರದವರು ೩೭ ಮಸೂದೆಗಳನ್ನು
...ಡಿಸಲಿದ್ದಾರೆ. ಅವುಗಳ ಪೈಕಿ ೯ ನೂ
ಮಸೂದೆಗಳು ಇವೆ. ಬೆಂಗಳೂರು ನ
ಮತ್ತು ದಂಡಿನ ಆಸ್ತಿ ಪಾಸ್ತಿಗಳ ಸ
, ಸಂಸ್ಥಾನದಲ್ಲಿ ವ್ಯವಸಾಯ ಸಲಕ
...ಗಳನ್ನು ಖಾಸಗಿಯವರು ದಾಸ್ತಾನು
...ಡಲು ಮಳಿಗೆಗಳ ಸ್ಥಾಪನೆ, ನರ್ಸಿಂ
ಗೃಹಗಳ ಹತೋಟಿ, ದಾದಿಗಳು, ಸೂ
...ತ್ರಿಗಳ ರಿಜಿಸ್ಟ್ರೇಷನ್, ಆಯುರ್ವೇದ
ಮತ್ತು ಯುನಾನಿ ಹತೋಟಿಯ ಸ
...., ಔಷಧಿಗಳ ಹತೋಟಿ ಮತ್ತು ...
...ಳ ನಿರ್ಬಂಧ– ಇವುಗಳ ಬಗ್ಗೆ ಮಸೂ
...ಳನ್ನು ತರಲಾಗಿದೆ.

ಬೊಂಬಾಯಿ ಹೋಟೇಲು ಗಳ ಮುಷ್ಕರ

ಸರ್ಕಾರದವರು ಸಕ್ಕರೆಯ ಅಭಾವವ
ನೀಗಿಸಿಲ್ಲವೆಂದು ಪ್ರತಿಭಟಿಸಲು
...ಂಬಾಯಿನ ಹೋಟೇಲುಗಳೆಲ್ಲಾ ನಿನ್ನೆ
... ಮುಷ್ಕರ ಹೂಡಿದ್ದವು.

...ಶಾಸನ ಸಭಾ ಸದಸ್ಯರಿಗೆ ...ವ್ಯಾಪಾರ ರಹದಾರಿ ಇಲ್ಲ

ಹತೋಟಿ ವಸ್ತುಗಳನ್ನು ವ್ಯಾಪಾರ
...ಡಲು ಶಾಸನ ಸಭೆಯ ಸದಸ್ಯರುಗಳು
...ತ್ತು ಅವರ ಸಂಬಂಧಿಗಳಿಗೆ ರಹದಾರಿ
...ಡಕೂಡದೆಂದು ಮದರಾಸ್ ಸರ್ಕಾರ
...ರು ಆಜ್ಞೆ ಮಾಡಿರುತ್ತಾರೆ

ಆಂಧ್ರ ಪ್ರಾಂತ್ಯ ರಚನೆ

ಆಂಧ್ರ ಪ್ರಾಂತ್ಯದ ರಚನೆ ಬಗ್ಗೆ ಗೌ
...ರ್ ಜನರಲ್ಲರು ಮುಂದಿನ ತಿಂಗಳು
...ನೇ ತಾ॥ ವಿಶೇಷ ಜರೂರು ಆಜ್ಞೆಯ
...ಜಾರಿ ಮಾಡುವರೆಂದು ತಿಳಿದುಬಂ
...ದೆ.

...ರ್ವ ಪಂಜಾಬಿನ ಪ್ರಧಾನಿ ...ಯಲ್ಲಿ ವಿಶ್ವಾಸ ಸೂಚನೆ

ಪೂರ್ವ ಪಂಜಾಬಿನ ಪ್ರಧಾನಿ ಶ್ರೀ ಬೀ
...ಸೇನಸಾಚಾರರು ಇದೇ ೧೭ನೇ ತಾ॥
...ಳಗಾಗಿ ಕಾಂಗ್ರೆಸ್ ಪಕ್ಷದಿಂದ ವಿಶ್ವಾ
...ಪಡೆಯಬೇಕೆಂದು ಕಾಂಗ್ರೆಸ್ ಕೇಂದ್ರ
...ರ್ಲಿಮೆಂಟರಿ ಬೋರ್ಡಿನವರು ಸೂಚ
...ಇತ್ತಿದ್ದಾರೆ

ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಕಾರ್ಯಕ್ರಮ

ನಂಜನಗೂಡು ೧೪
ಅಖಿಲ ಭಾರತ ಕಾಂಗ್ರೆಸ್ಸಿನ ನೂತನ
...ಗ ರಚನೆ ಪ್ರಕಾರ ನಂಜನಗೂಡು ತಾ
...ಕನ್ನು ೨೯ ಪ್ರಾಥಮಿಕ ಕಾಂಗ್ರೆಸ್ ಸ
...ತಿಗಳನ್ನಾಗಿ ವಿ ಗಡಿಸಲಾಗಿದೆ ಈಗ
...ಸದಸ್ಯರನ್ನು ಸೇರಿಸುವ ಬಗ್ಗೆ ಉಪ
...ತಿಗಳನ್ನು ನೇಮಿಸಲಾಗಿದೆ ಇದೇ
...ಗಳ ಅಂತ್ಯದೊಳಗಾಗಿ ಈ ಕೆಲಸವು
...ಗಿಯಬೇಕಾಗಿರುವುದರಿಂದ ಕಾಂಗ್ರೆಸ್
...ಸಗಾರರು ಮತ್ತು ಮಹಾಜನರು ಸಪ
...ಬೇಕೆಂದೂ ಮತ್ತು ಸದಸ್ಯರಾಗುವ
...ಕೆ ಮಂತ್ರಿತರ ವಿಷಯಗಳನ್ನು ಕಾಂ
...ಕಛೇರಿಯಲ್ಲಿ ಪಡೆಯಬಹುದೆಂದೂ,
...ಕಿಯ ಕಾರ್ಯದರ್ಶಿಗಳಾದ ಶ್ರೀ ಶೆಟ್ಟಿ
ಲಿಂಗಣ್ಣನವರು ಕೋರಿರುತ್ತಾರೆ

ರೈಲ್ವೆ ಕೆಲಸಗಾರರಿಗೆ ೩ ತಿಂಗಳ ಬೋನಸ್ಸು

ಮೈಸೂರು ೧೫
ಮೈಸೂರು ರೈಲ್ವೆ ಕೆಲಸಗಾರರ ಸಂಘ
ದ ಆಶ್ರಯದಲ್ಲಿ ಮೊನ್ನೆ ದಿನ ೧ ಸಾವಿರ
ಕಾರ್ಮಿಕರ ಸಾಮೂಹಿಕ ಸಭೆಯು ಜನಾ
ಬ್ ಗುಲಾಂ ಪಾದಪ್ರರ ಅಧ್ಯಕ್ಷತೆಯಲ್ಲಿ
ನಡೆಯಿತು ಸರ್ಕಾರದವರ ಇತ್ತೀಚೆಗೆ
ಮಂಜೂರು ಮಾಡಿರುವ ಹೆಚ್ಚಿನ ಬೋ
ನಸ್ಸು ಪ್ರಮಾಣವು ಅತೃಪ್ತಿಕರವಾಗಿದೆ
ಯೆಂದೂ, ಇದರಿಂದ ಕೆಲಸಗಾರರಲ್ಲಿ ಭಿ
ನ್ನ ಭಾವ ಉಂಟಾಗುವುದೆಂದೂ, ಕಳೆದ
ವರ್ಷ ಬಂದಿರುವ ೬೦ ಲಕ್ಷ ರೂ ವರ
ಮಾನದ ದೃಷ್ಟಿಯಿಂದ ಇದು ಅತಿ ಕಡಿ
ಮೆಯೆಂದೂ, ಆದುದರಿಂದ ಇದನ್ನು ಸ
ರ್ಕಾರದವರು ಪುನರ್ವಿಮರ್ಶಿಸಿ, ೩ ತಿಂ
ಗಳ ಬೋನಸ್ಸನ್ನು ಎಲ್ಲ ಕೆಲಸಗಾರರಿಗೂ
ಯಾವ ಷರತ್ತುಗಳೂ ಇಲ್ಲದೆ ಕೊಡಬೇ
ಕೆಂದೂ ಒತ್ತಾಯಪಡಿಸುವ ನಿರ್ಣಯವ
ನ್ನು ಮಾಡಲಾಯಿತು.

ಮೈಸೂರು ರೈಲು ಭಾರತದೊಡನೆ ಐ
ಕ್ಯವಾಗುವುದರಿಂದ, ಕೇಂದ್ರ ಸಂಬಳ ಸ
ಮಿತಿಯವರು ಸೂಚಿಸಿರುವ ಸಂಬಳ ಸಾ
ರಣಿ ಇತ್ಯಾದಿಗಳನ್ನು ಕೂಡಲೇ ಕೊಡಬೇ
ಕೆಂದೂ ಮತ್ತು ಕೆಲವು ಕೆಲಸ ಗಾರರ
ಮೇಲೆ ಕೈಗೊಂಡಿರುವ ಕಾರ್ಯಕ್ರಮವನ್ನು
ರದ್ದು ಮಾಡಬೇಕೆಂದೂ ಪ್ರಾರ್ಥಿಸಲಾ
ಯಿತು.

ಮೋಹನಲಾಲ್ ಸಾಕ್ಸೇನಾರವರ ಭೇಟಿ

ಭಾರತ ಸರ್ಕಾರದ ಸಚಿವರಾದ ಶ್ರೀ
ಮೋಹನಲಾಲ್ ಸಾಕ್ಸೇನಾರವರು ನಾಳೆ
ಬೆಂಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತ
ರುಗಳನ್ನುದ್ದೇಶಿಸಿ ಭಾಷಣ ಮಾಡುವ
ರು ನಿರಾಶ್ರಿತರ ಪರಿಹಾರ ಸಮಿತಿಯವ
ರೊಡನೆ ಮಾತುಕತೆ ನಡೆಸುವರು

ಸನ್ಮಾನ ಕೂಟ

ರಾಜಧಾನಿಯ ನೂತನ ನ್ಯಾಯಾಲಯದ
ವ ಛೀ॥ ಶ್ರೀ॥ ಹೊಂಬಾಳೆ ರಂಗಸ್ವಾಮಿಯವರ
ಕಾಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ಇ
ದೇ ೨೩ ನೇ ತಾರೀಖು ಬೆಳಿಗ್ಗೆ ೧೧-೩೦
ಗಂಟೆಗೆ ದಫೇದಾರರುಗಳ ಸತ್ಕಾರ ಕೂಟ
ವೊಂದು ನಿವೃತ್ತ ದ್ವಿತೀಯ ನ್ಯಾಯಾಧಿ
ಕಾರದ ಶ್ರೀ ಬಿ. ವೆಂಕಟರಾಮರಾಯರವ
ರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದೆ

ವಿಶ್ವ ಸಂಸ್ಥೆಯನ್ನು ಬಿಡುವು ದಾಗಿ ರಷ್ಯದ ಬೆದರಿಕೆ

ಯುಗೋಸ್ಲವೇಕಿಯಾವು ವಿಶ್ವಸಂಸ್ಥೆ
ಯ ಸೆಕ್ಯೂರಿಟಿ ಕೌನ್ಸಿಲಿಗೆ ಚುನಾಯಿಸ
ಲ್ಪಟ್ಟರೆ ತಾನು ವಿಶ್ವ ಸಂಸ್ಥೆಯನ್ನು ತ್ಯಜಿ
ಸುವುದಾಗಿ ರಷ್ಯವು ಸಂಸ್ಥೆಯ ಸಕ್ರೆಟರಿ
ಜನರಲ್ಲರಿಗೆ ಎಚ್ಚರಿಕೆ ಕೊಟ್ಟಿದೆಯೆಂದು
ಹೇಳಲಾಗಿದೆ

ರೈಲು ಗಾಡಿಯಲ್ಲಿ ಶಿಶುವಿನ ಜನನ

ಕಳೆದ ಸೋಮವಾರ ಬೆಳಿಗ್ಗೆ ರಾಜಧಾ
ನಿಯಿಂದ ಅರಸೀಕೆರೆಗೆ ಹೊರಟ ರೈಲಿನಲ್ಲಿ
ಹೊಳೇ ನರಸೀಪುರದ ಹೆರಿಗೆ ಆಸ್ಪತ್ರೆಗೆ
ಹೋಗಬೇಕೆಂದು ಹೋಗುತ್ತಿದ್ದ ಹೆಂಗ
ಸೊಬ್ಬಳು ಮಂದಗೆರೆಯಲ್ಲಿ ಹೆಣ್ಣು ಶಿಶು
ವೊಂದನ್ನು ಪ್ರಸವಿಸಿದಳೆಂದು ಹೇಳ
ಲಾಗಿದೆ

ಕೇಂದ್ರ ಸರ್ಕಾರದ ನೌಕರರ ಸಂಬಳ ಖೋತಾ

ಭಾರತ ಸರ್ಕಾರದ ನೌಕರರ ಸಂಬಳ
ದಲ್ಲಿ ಮಂತ್ರಿಗಳ ಸಂಬಳದಂತೆಯೇ ಖೋ
ತಾ ಮಾಡಲಾಗುವುದೆಂದು ತಿಳಿದು
ಬಂದಿದೆ

ಅಣು ಬಾಂಬಿಗಿಂತಲೂ ಕ್ರಿಮಿ ಯುದ್ಧವು ಭೀಕರ

ರೋಗ ಕ್ರಿಮಿಗಳ ಯುದ್ಧವು ಅತಿ ಭೀ
ಕರವೆಂದೂ, ಅಣುಬಾಂಬು ಮತ್ತು ಇತರ
ಎಲ್ಲ ಯುದ್ಧ ಆಯುಧಗಳನ್ನು ಇದು ನಿ
ಷ್ಪ್ರಯೋಜಕವನ್ನಾಗಿ ಮಾಡುವುದೆಂದೂ
ವಿಶ್ವ ಸಂಸ್ಥೆಯ ಆರೋಗ್ಯ ಶಾಖೆಯ ಡೈ
ರೆಕ್ಟರ್ ಜನರಲ್ಲರವರು ತಿಳಿಸಿರುತ್ತಾರೆ
ಈ ಕ್ರಿಮಿ ಯುದ್ಧದಿಂದ ಪಾರಾಗಲು ಮಾ
ನವ ರಕ್ಷಣೆಯೂ ಇಲ್ಲವೆಂದೂ, ಮಾನವ
ಜನಾಂಗವೇ ನಿರ್ಮೂಲವಾಗುವುದೆಂದೂ
ಅವರು ಹೇಳಿರುತ್ತಾರೆ

ಭಾರತ ರಾಜ್ಯಾಂಗಕ್ಕೆ ಪ್ರತಿಯೊಬ್ಬ ಸದಸ್ಯರ ರುಜು

ಭಾರತದ ರಾಜ್ಯಾಂಗ ಸಭೆಯಲ್ಲಿ ರಾ
ಜ್ಯಾಂಗದ ಕರಡಿನ ತೃತೀಯ ಪಠಣವು ಪ
ಥ್ಯದಲ್ಲಿಯೇ ಆಗುವುದೆಂದೂ ಬರುವ ನ
ವೆಂಬರ್ ತಿಂಗಳು ೨೬ ನೇ ತಾರೀಖಿನೊ
ಳಗಾಗಿ ಎಲ್ಲ ಸದಸ್ಯರ ರುಜುಗಳನ್ನೂ ಸ
ಕ್ ರಿದಕ್ಕೆ ತೆಗೆದುಕೊಳ್ಳಲಾಗುವುದೆಂದೂ
ಹೇಳಲಾಗಿದೆ

ಅಮೆರಿಕದಲ್ಲಿ ಅಣು ಬಾಂಬು ಗಳ ಶೇಖರಣೆ

ವಿಶೇಷ ಸಂಖ್ಯೆಯಲ್ಲಿ ಅಣು ಬಾಂಬು
ಗಳ ಶೇಖರಣೆಯು ಅಮೆರಿಕದಲ್ಲಿ ಆಗುತ್ತಿ
ದೆಯೆಂದೂ, ಇದರಿಂದ ಯಾವ ರಾಷ್ಟ್ರ
ವೂ ಅಮೆರಿಕದ ಮೇಲೆ ಧಾಳಿ ನಡೆಸಲು
ಹೆದರುವುದೆಂದೂ ಅಣು ಸಮಿತಿಯವರು
ಅಭಿಪ್ರಾಯಪಟ್ಟಿರುತ್ತಾರೆ ಅಮೆರಿಕದ
ರಕ್ಷಣೆಗೆ ಅಣುಬಾಂಬುಗಳೇ ಮುಖ್ಯವಾದ
ಆಯುಧವೆಂದು ಪರಿಗಣಿಸಕೂಡದೆಂದೂ,
ಅಮೆರಿಕಕ್ಕಿಂತ ರಷ್ಯದಲ್ಲಿ ವಿಮಾನ ಬಲ
ವು ಹೆಚ್ಚಾಗಿರಬಹುದೆಂದೂ ಅಡ್ಮಿರಲ್
ನಿಮಿಟ್ಸ್‌ರವರು ಹೇಳುತ್ತಾರೆ.

ಹುಬ್ಬಳ್ಳಿ ಉಪಾಧ್ಯಾಯರು ಗಳ ಉಪವಾಸ ಮುಷ್ಕರ

ಸರ್ಕಾರದ ನೌಕರರುಗಳಂತೆಯೇ ತ
ಮಗೂ ಸಂಬಳ ಮತ್ತು ಭತ್ಯಗಳನ್ನು ಕೊ
ಡಿಸಬೇಕೆಂದು ಹುಬ್ಬಳ್ಳಿ ಪೌರಸಭಾ ಶಾಲೆ
ಗಳ ಉಪಾಧ್ಯಾಯರುಗಳು ಮಂಡಿಸಿರುವ
ಬೇಡಿಕೆಗೆ ಬೊಂಬಾಯಿ ಸರಕಾರದವರ
ಸಮ್ಮತಿಯಿದ್ದರೂ ಸಹ ಪೌರಸಭೆಯವ
ರು ಅವರ ಬೇಡಿಕೆಗಳನ್ನು ಈಡೇರಿಸದೆ
ಇರುವ ಪ್ರಯುಕ್ತ ಅವರುಗಳು ಒಂದು ದಿ
ನದ ಉಪವಾಸ ಮುಷ್ಕರವನ್ನು ಕೈಗೊಳ್ಳ
ಲು ನಿರ್ಧರಿಸಿರುತ್ತಾರೆ ಮತ್ತು ಪೌರಸಭೆ
ಯ ಮೇಲೆ ಕೋರ್ಟಿನಲ್ಲಿ ಕಾರ್ಯಕ್ರಮ
ಕೈಗೊಳ್ಳಲೂ ಸಹ ಆಲೋಚಿಸುತ್ತಿ
ದ್ದಾರೆ.

ರಣಜೋಧ್ ಸಿಂಗರ ಕಾರಿಗೆ ಡಿಕ್ಕಿ

ಸಂಸ್ಥಾನದ ಪೋಲೀಸ್ ಮಹಾಧಿಕಾ
ರಿಗಳಾದ ಶ್ರೀ ಪಿ ಎಂ. ಹೆಚ್. ರಣಜೋ
ಧ್ ಸಿಂಗ್‌ರವರು ಕೋಲಾರದಿಂದ ನಿನ್ನೆ
ವಾಪಸು ಬರುತ್ತಿದ್ದಾಗ, ಅವರ ಮೋಟಾ
ರು ಕಾರಿಗೂ ಒಂದು ಮಿಲಿಟರಿ ಲಾರಿಗೂ
ದಾರಿಯ ಬೆಸಿಡೆನ್ಸಿ ರಸ್ತೆಯಲ್ಲಿ ಡಿಕ್ಕಿ ಹೊಡೆ
ದುದರಿಂದ ಒಳಗಡೆ ಕುಳಿತಿದ್ದ ಅವರ ಪ
ತ್ನಿಯವರಿಗೆ ಗಾಯವಾಗಿ ಆಸ್ಪತ್ರೆಗೆ ದಾ
ಖಲು ಮಾಡಲ್ಪಟ್ಟಿದ್ದಾರೆ. ಕಾರಿಗೆ
ತುಂಬಾ ಜಖಂ ಉಂಟಾಗಿದೆ

ರೈಲ್ವೆ ಗಾಡಿಗಳ ತಯಾರಿಕಾ ಕಾರ್ಖಾನೆ

ಪಗುರವಾದ ರೈಲ್ವೆ ಗಾಡಿಗಳನ್ನು ತ
ಯಾರಿಸುವ ಕಾರ್ಖಾನೆಯೊಂದನ್ನು ಬೆಂ
ಗಳೂರಿನಲ್ಲಿ ಸ್ಥಾಪಿಸುವುದಾಗಿ ಭಾರತದ
ರೈಲ್ವೆ ಚೀಫ್ ಕಮೀಷನರಾದ ಶ್ರೀ ಪಿ ಸಿ
ಬಕಾಲೆಯವರು ತಿಳಿಸಿರುತ್ತಾರೆ.

ಮಕ್ಕಳೊಡನೆ ನೆಹರೂರವರ ಆಟ

ವಾಷಿಂಗ್ಟನ್ನಿನ ಬ ... ರಾಯ
... ಕಛೇರಿಯ ನೌಕರರ ೩೦ ಮಕ್ಕ
ಳೊಡನೆ ನಿನ್ನೆ ದಿನ ಪಂಡಿತ ನೆಹರೂರವ
ರು ಆಟವಾಡಿ ಬಂದ. ... ಆನಂ
ದದಿಂದ ಕಾಲವನ್ನು ಕಳೆದರೆಂದು ವರದಿ
ಯಾಗಿದೆ ಅನೇಕ ಮಕ್ಕಳನ್ನು ತೂಗಾಡಿ
ಸದರು, ಹೆಗಲ ಮೇಲೆ ಹತ್ತಿಕೊಂಡರು
ಮತ್ತು ನಗಿಸಿ ನಲಿದರು. ... ಪ್ರ
ತನಗೂ ... ... ಕೇಳ ...
... ... ಮಗುವಿನ ... ...
... ಸಂಕೋಚಪಡುತ್ತಿದ್ದುದನ್ನು ಅ
ವರು ಕಂಡು ಅದನ್ನು ಎತ್ತಿಕೊಂಡ ಆಡಿ
ಸಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮೈಸೂರು ೧೪

ಮೈಸೂರು ಕಾಂಗ್ರೆಸ್ಸಿನ ಭವಿಷ್ಯದ ಬಗ್ಗೆ ಅಭಿಪ್ರಾಯವನ್ನು ಸೂಚಿಸಲು ನಾಳೆ ಸಂಜೆ ೫-೩೦ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ನಗರ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ನಡೆಯುವುದು ಕಾರ್ಯಕರ್ತರೆಲ್ಲರೂ ದಯಮಾಡಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಮೈಸೂರು ಜಿಲ್ಲೆಯಲ್ಲಿ ಪ್ರಭುಗಳ ಪ್ರವಾಸ

ಮುಂದಿನ ಜನವರಿ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರೆಂದು ತಿಳಿದುಬಂದಿದೆ

ಮೈಸೂರು ಸಮಾಜವಾದಿ ಪಕ್ಷದ ರದ್ದು

ಮೈಸೂರು ಸಂಸ್ಥಾನದಲ್ಲಿ ಇದ್ದ ಪ್ರತ್ಯೇಕ ಸಮಾಜವಾದಿ ಪಕ್ಷವು ರದ್ದಾಗಿ, ಅದರ ಸದಸ್ಯರೆಲ್ಲರೂ ಭಾರತದ ಸಮಾಜವಾದಿ ಪಕ್ಷದ ಸದಸ್ಯರಾಗಿ ಸೇರಿದ್ದಾರೆ

ಹರಿಕಥೆ

ರಾಜಭಾರತ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಎಂ ಎಲ್ ನಾರಾಯಣದಾಸರಿಂದ ಸೂರ್ಯ ವಿವಾಹ ಎಂಬ ಹರಿಕಥೆ ನಡೆಯುವುದು

ಬೊಂಬಾಯಿನಲ್ಲಿ ಉಪ್ಪಿನ ಬೆಲೆ ಸೇರಿಗೆ ೨ ರೂ.

ಬೊಂಬಾಯಿ ನಗರದಲ್ಲಿ ಸಕ್ಕರೆಯ ಜೊತೆಗೆ ಉಪ್ಪು ಮತ್ತು ಬೆಂಕಿ ಪೊಟ್ಟಣಗಳ ಅಭಾವವುಂಟಾಗಿದೆ, ಕಾಸಿನ ಬೆಂಕಿ ಪೊಟ್ಟಣದ ಬೆಲೆಯು ೨ ಆಣೆ ಮತ್ತು ಉಪ್ಪಿನ ಬೆಲೆಯು ಸೇರಿಗೆ ೨ ರೂ ಆಗಿದೆಯೆಂದು ಹೇಳಲಾಗಿದೆ ೪೫ ಲಕ್ಷ ಮಣದಷ್ಟು ಉಪ್ಪು ಮತ್ತು ಸಾಕಷ್ಟು ಬೆಂಕಿ ಪೊಟ್ಟಣಗಳು ದಾಸ್ತಾನು ಇದೆಯೆಂದು ಸರ್ಕಾರದವರು ತಿಳಿಸಿರುತ್ತಾರೆ

ಪೂರ್ವ ಬಂಗಾಳದಿಂದ ಹಿಂದೂಗಳನ್ನು ಓಡಿಸಲು ಪ್ರಯತ್ನ

ಪೂರ್ವ ಬಂಗಾಳದಲ್ಲಿ ಹಿಂದೂಗಳ ಹಕ್ಕು ಬಾಧ್ಯತೆಗಳಿಗೆ ಸರ್ಕಾರದವರು ಚ್ಯುತಿ ತಂದಿದ್ದಾರೆಂದು ಪೂರ್ವ ಮತ್ತು ಪಶ್ಚಿಮ ಬಂಗಾಳದ ಅಲ್ಪ ಸಂಖ್ಯಾತರ ಹಿತ ರಕ್ಷಣಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜೆ ಸಿ ಮಿತ್ರಾರವರು ವಿಶ್ವ ಸಂಸ್ಥೆಗೆ ದೂರು ಕೊಟ್ಟಿರುತ್ತಾರೆ ಪೂರ್ವ ಬಂಗಾಳವನ್ನು ಸಂಪೂರ್ಣವಾಗಿ ಮುಸ್ಲಿಂ ಪ್ರದೇಶವನ್ನಾಗಿ ಮಾಡಲು, ಹಿಂದೂಗಳಿಗೆ ಅನೇಕ ಹಿಂಸೆಗಳನ್ನು ಕೊಟ್ಟು, ಕಳೆದ ೨ ವರ್ಷಗಳಲ್ಲಿ ೨೦ ಲಕ್ಷ ಹಿಂದೂಗಳು ದೇಶವನ್ನು ಬಿಟ್ಟು ಓಡುವಂತೆ ಸರ್ಕಾರದವರು ಮಾಡಿದ್ದಾರೆಂದೂ ಇದರಿಂದ ೭೦ ಕೋಟಿ ರೂ ಆಸ್ತಿಪಾಸ್ತಿಗಳನ್ನು ಬಿಟ್ಟು ೪ ಲಕ್ಷ ಹಿಂದೂ ಸಂಸಾರದವರು ಭಾರತಕ್ಕೆ ಹೋಗಿದ್ದಾರೆಂದೂ ಅವರು ತಿಳಿಸಿರುತ್ತಾರೆ

ಚೀಣಾ ಸಮುದ್ರದಿಂದ ಹಿಂದೂ ಸಾಗರಕ್ಕೆ ಸಂಚಾರ ಮಾರ್ಗ

ಬರ್ಮಾ, ಥೈಲೆಂಡ್ ಮತ್ತು ಇಂಡೋಚೀಣಾದ ಮಾರ್ಗವಾಗಿ ಹಿಂದೂ ಸಾಗರದಿಂದ ಚೀಣಾ ಸಮುದ್ರಕ್ಕೆ ರಸ್ತೆ ಅಥವ ರೈಲು ಸಂಚಾರ ಮಾರ್ಗವನ್ನು ಏರ್ಪಡಿಸಬೇಕೆಂದು ವಿಶ್ವ ಸಂಸ್ಥೆಯ ಸಂಚಾರಮಾರ್ಗದ ಸಮಿತಿಯಲ್ಲಿ ಥೈಲೆಂಡಿನ ಪ್ರತಿನಿಧಿಗಳು ತಿಳಿಸಿರುತ್ತಾರೆ

MORNING SHOWS
CHAMUNDESHWARI
TALKIES
From 14-10-49 for 3 days
PARAMOUNT'S
WILD HARVEST
Featuring -Allan Ladd and Dorothy Lamar

ಬ್ರಿಟನ್ನಿನಲ್ಲಿ ಚುನಾವಣೆಇಲ್ಲ

ಈ ವರ್ಷ ಬ್ರಿಟನ್ನಿನಲ್ಲಿ ಮಹಾಚುನಾವಣೆ ನಡೆಯುವುದಿಲ್ಲವೆಂದು ಸರ್ಕಾರದವರು ತಿಳಿಸಿರುತ್ತಾರೆ

ಗಾಯತ್ರೀ ಟಾಕೀಸ್
ಪ್ರತಿ ದಿನ 3 ಪ್ರದರ್ಶನಗಳು
15-10-49 ಮತ್ತು 16ನೇ ಭಾನುವಾರ ಬೆಳಗಿನ ಪ್ರದರ್ಶನಕ್ಕೆ ಮಾತ್ರ
ಕನಸಿನ ಸಾಮ್ರಾಜ್ಯ ವೈಭವ, ಸ್ವರ್ಗದ ಸೌಂದರ್ಯ, ನೆನೆಯುವ ರಮ್ಯದೃಶ್ಯಗಳನ್ನೊಳಗೊಂಡ ಸುಂದರವಾದ ವರ್ಣ ರಂಜಿತ ನೋಟವೆಂದರೆ ಒಂದೇ ಆದ ಚಿತ್ರ
M G M's
ಯೊಲಾಂಡಾ ಅಂಡ್ ದಿ ಥೀಫ್
YOLANDA & the THIEF
16-10-49ರಿಂದ 2 ದಿನಗಳು
M G M's
ತ್ರೀ ಡೇರಿಂಗ್ ಡಾಟರ್ಸ್
THREE DARING DAUGHTERS
(In Technicolour)

ರಾಜಕಮಲ್
ಮೈಸೂರು
14—10—49 ರಿಂ
ಅಮೋಘವಾದ 3ನೇ ವಾ
ಫಿಲ್ಮಿಸ್ತಾನ್‌ರವರ
— ಆಕ್ರೆಸ್
ರೆಹನ, ಮೀನ, ಪ್ರೇಮ್ ಅದೀ
ಅಭಿನಯಿಸಿರುವ ಹಿಂದಿ ಚಿತ್ರ
MORNING SHOWS
From 14 10 49 for 4 D
Columbia's Super Soc
Hit
LOVES OF CARMEN
With.- Rita Hayworth Glennford & Ron Rand
(in Technicolor)
Today is the Time to he that Talking, feel the Loving, see that Heart-happy Columbia SMASH

ಮೈಸೂರು ವಿಶ್ವವಿದ್ಯಾಲಯ

ಪ್ರಕಟಣೆ

ನಂ ಎ 3-899 48 49, ತಾ|| ೬ನೇ ಅಕ್ಟೋಬರ್ 19

ಮೈಸೂರು ವಿಶ್ವ ವಿದ್ಯಾಲಯದಲ್ಲಿ ಗಣಿತ ಶಾಸ್ತ್ರದ ಪ್ರೊಫೆಸರರ ಹುದ್ದೆಗೆ ... ರ್ಹರಾದ ಉಮೇದುವಾರರುಗಳಿಂದ ಅರ್ಜಿಗಳನ್ನು ಸ್ವಾಗತಿಸಲಾಗಿದೆ ಆ ಹು... ಸಂಬಳದ ಪ್ರಮಾಣ ರೂ ೪೦೦-೨೫-೭೦೦, ಹುದ್ದೆಯು ಖಾಯಂ ಆದುದು ... ರಿಸಲ್ಪಟ್ಟ ಉಮೇದುವಾರರಿಗೆ ಕನಿಷ್ಠ ಸಂಬಳವಾದ ರೂ ೪೦೦ ಅನ್ನು ಕೊಡ... ಗುವುದು ಮತ್ತು ಎರಡು ವರ್ಷಗಳ ಕಾಲ ಅವರು ಪ್ರೊಬೇಷನ್ ಮೇಲೆ ಇರಬೇ... ವರು ಯೋಗ್ಯತೆಗಳ ಪ್ರಕಾರ ಹೆಚ್ಚಿನ ಪ್ರಾರಂಭದ ಸಂಬಳವನ್ನು ಕೊಡುವ ... ಷಯವನ್ನೂ ಸಹ ಪರ್ಯಾಲೋಚಿಸಲಾಗುವುದು ಇದಕ್ಕೆ ಬೇಕಾದ ಕನಿಷ್ಠ ವಿ... ಅರ್ಹತೆಯೆಂದರೆ ಗಣಿತ ಶಾಸ್ತ್ರದಲ್ಲಿ ಮಾಸ್ಟರ್ ಅಥವಾ ಅದಕ್ಕೆ ಸಮಸಮಾನಾದ ... ವಿ ಪರಿಕ್ರಮ ಮತ್ತು ಸಂಶೋಧನಾಕಾರ್ಯದಲ್ಲಿ ಅಭ್ಯಾಸ ಹೊಂದಿರುವ ಮತ್ತು ... ಶೋಧನಾ ಕಾರ್ಯಗಳನ್ನು ಮಾಡಿರತಕ್ಕ ಉಮೇದುವಾರರಿಗೆ ಹೆಚ್ಚಿನ ಪುರಸ್ಕಾರ ದೊರೆಯುವುದು.

೨ ಹುದ್ದೆಯು ನಿವೃತ್ತಿ ವೇತನ ಪಡೆದಿರುವಂತಹುವುದು ಸಂಬಳ, ... ಜಾ, ನಿವೃತ್ತಿ ವೇತನ ಇತ್ಯಾದಿಗಳು ಮೈಸೂರು ಸರ್ವಿಸ್ ನಿಬಂಧನೆಗಳಿಗೆ ಒ... ಟ್ಟಿರುತ್ತವೆ. ಮತ್ತು ಶಿಸ್ತು ಸಂಬಂಧವಾಗಿ ವಿಶ್ವವಿದ್ಯಾಲಯದ ನಿಯಮಗಳಿ... ಳಪಟ್ಟಿರುವುದು ಆರಿಸಲ್ಪಟ್ಟ ಉಮೇದುವಾರರು ತಮಗೆ ಉದ್ಯೋಗದ ಆ... ಯು ತಲುಪಿದ ತಕ್ಷಣವೇ ಕೆಲಸದ ಮೇಲೆ ಹಾಜರಾಗಬೇಕು

೩ ಅರ್ಜಿಗಳಲ್ಲಿ ಕೆಳಗೆ ಕಾಣಿಸಿರುವ ವಿಷಯಗಳಿರಬೇಕು —

ವಯಸ್ಸು, ಜಾತಿ ಅಥವಾ ಮತ, ವಿದ್ಯಾ ಅರ್ಹತೆಗಳು (ಪಡೆದ ಪದವಿ ... ವಿಶ್ವವಿದ್ಯಾಲಯದ ಹೆಸರು ತೇರ್ಗಡೆಯಾದ ತಾರೀಖು ಮತ್ತು ತರಗತಿ) ... ವ ಹುದ್ದೆ ಮತ್ತು ಸಂಬಳ ಮತ್ತು ಹಿಂದಿನ ಸರ್ವಿಸ್, ಇದ್ದರೆ ಇವುಗ... ಗ್ರಂಥಗಳೇನಾದರೂ ಬರೆಯಲ್ಪಟ್ಟಿದ್ದರೆ ಅವುಗಳು ಮತ್ತು ಇತರ ವಿವರಗಳು

ಅರ್ಜಿಯ ಜೊತೆಗೆ ಪ್ರಶಂಸಾ ಪತ್ರಗಳು ಇರಬೇಕು (ಇವುಗಳನ್ನು ಹಿಂ... ಗಿ ಕೊಡಲಾಗುವುದಿಲ್ಲ) ಅರ್ಜಿಯು ಮತ್ತು ಪ್ರಶಂಸಾ ಪತ್ರಗಳ ಆರು ಪ್ರತಿ... ಬೇಕಾಗಿವೆ ಈಗಾಗಲೇ ನೌಕರಿಯಲ್ಲಿರುವ ಅರ್ಜಿದಾರರು ತಮ್ಮ ಅರ್ಜಿಗಳ... ತಮ್ಮ ಮೇಲ್ಪಟ್ಟ ಅಧಿಕಾರಿಗಳ ಮುಖಾಂತರ ಕಳುಹಿಸಬೇಕು ಪ್ರಕಟವಾದ... ಪರುಗಳ ಪುನರ್ಮುದ್ರಣಗಳನ್ನು ಅರ್ಜಿಯ ಜೊತೆಗೆ ಕಳುಹಿಸಬೇಕು ಇವ... ನ್ನು ವಾಪಸು ಕೊಡಲಾಗುವುದಿಲ್ಲ

೪ ಬೇಕಾದ ಪಕ್ಷದಲ್ಲಿ ಉಮೇದುವಾರರು ತಮ್ಮ ಖರ್ಚಿನಿಂದ ಭ... ಬರಲು ಸಿದ್ಧರಾಗಿರಬೇಕು

೫ ಅರ್ಜಿಗಳನ್ನು ರಿಜಿಸ್ಟ್ರಾರ್, ಯೂನಿವರ್ಸಿಟಿ ಆಫ್ ಮೈಸೂರು ... ಸೂರು ಇವರ ವಿಳಾಸಕ್ಕೆ ಬರೆಯಬೇಕು ಮತ್ತು ೧೫ನೇ ನವಂಬರ್ ೨೦ ... ವಾ ಅದಕ್ಕೆ ಮುಂಚಿತವಾಗಿ ಕಳುಹಿಸಬೇಕು

ಸಿ. ರಂಗಾಚಾರ್,
ಆಕ್ಟಿಂಗ್ ರಿಜಿಸ್ಟ್ರಾರ್

ಪ್ರಭಾ ★ 14-10-49 ರಿಂದ
ದಿನವಹಿ 3 ಆಟಗಳು
ಕಾರ್ದಾರ್ ಪಿಕ್ಚರ್ಸ್‌ರವರ
ಕನೀಜ್
... ನರ್ಗಿಸ್ ಬಾನು ಮತ್ತು ... ಕುಲದೀಪ ಕಕ್ಕರ್
ಸಂಗೀತ - ಗುಲಾಮ್ ಹೈದರ್

ಬೆಳಗಿನ ಪ್ರದರ್ಶನ 14-10-49 ರಿಂದ 4 ದಿನಗಳು
ನರ್ಗಿಸ್ ... ಮತ್ತು ... ನಟಿಸಿರುವ
— ಬಡಿ ಮಾ —

Edited, printed and published by A R Nagarajan, at Sadhvi Press D Subbiah Road, Mysore,

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ, ೧೬ ೧೦-೧೯೫೯ [ಸಂಚಿಕೆ ೧೩

- ಮದರಾಸಿನಲ್ಲಿ ಜಮೀನು - ಕಂದಾಯದ ಮೇಲೆ ತೆರಿಗೆ?

ಮೋಹನ್‌ಲಾಲ್ ಸಾಕ್ಸೇನಾರವರ ಕಾರ್ಯಕ್ರಮ

ನಿರಾಶ್ರಿತರ ಪುನರ್ವ್ಯವಸ್ಥೆ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರೊಡನೆ ಮಾತುಕತೆ

ಮೈಸೂರು ೧೬

ಕೇಂದ್ರ ಸರ್ಕಾರದ ಪುನರ್ವ್ಯವಸ್ಥಾ ಸಚಿವರಾದ ಶ್ರೀ ಮೋಹನಲಾಲ್ ಸಾಕ್ಸೇನಾರವರು ನೆನ್ನೆ ಸಂಜೆ ಇಲ್ಲಿನ ...ಗ್ರೇಡ್ ಕಾಲೇಜಿನಲ್ಲಿ ಭಾಷಣ ಮಾ... ವಿದ್ಯಾರ್ಥಿಗಳಿಗೆ ಹಿತೋಕ್ತಿಯನ್ನ... ದರು. ಈ ಸಂದರ್ಭದಲ್ಲಿ, ಸ್ವತಂತ್ರ ...ರತವು ಕಳೆದ ಎರಡು ವರ್ಷಗಳಿಂದ ...ಸಿರುವ ಪ್ರಗತಿಯು ಪರಿಣಾಮವೇ ...ದು ಅಮೆರಿಕದಲ್ಲಿ ಪಂಡಿತ ನೆಹರೂ... ಗೆ ದೊರೆಯುತ್ತಿರುವ ಉಚ್ಚರೀತಿಯ ...ಗತಗಳಿಗಾಗಿ ಕಾರಣವೆಂದು ಅವರು ...ಳಿದರು.

ನಿರಾಶ್ರಿತರ ಪುನರ್ವಸತಿಯ ಬಗ್ಗೆ ...ತನಾಡುತ್ತಾ ಮೈಸೂರಿನಲ್ಲಿ ನೆಲೆಸಿರು... ...೦೦ ನಿರಾಶ್ರಿತರ ಸಂಸಾರಗಳ ಪುನ...ವಸ್ಥೆ ಬಗ್ಗೆ ಏರ್ಪಾಡುಗಳನ್ನು ಮಾ...ಲಾಗಿದೆಯೆಂದು ತಿಳಿಸಿದರು.

...ದ್ಯಾರ್ಥಿಗಳು ರಾಜಕೀಯವನ್ನು ತಿ...ಕೊಳ್ಳಬೇಕೆಂದೂ ಆದರೆ ಯಾವ ಪಂ...ಗಳಿಗೂ ಸೇರಬಾರದೆಂದೂ, ಈಗಿನ ...ಸ್ಸಿನ ಮುಖಂಡರುಗಳ ಕಾಲವಾದ ...ರ ವಿದ್ಯಾರ್ಥಿಗಳು ಅವರ ಸ್ಥಾನಗ...ರಲು ತಕ್ಕ ಅರ್ಹತೆ ಸಂಪಾದಿಸಿಕೊ...ಪ್ರದಲ್ಲಿ ತೊಡಗಬೇಕೆಂದೂ ಅವರು ...ದರು.

...ಜಧಾನಿಯ ಹಲವು ಮಂದಿ ನಿರಾ...ರು ನೆನ್ನೆ ದಿನ ಶ್ರೀ ಮೋಹನಲಾಲ್ ...ಕ್ಸೇನಾರವರನ್ನು ತಮ್ಮ ಶಿಬಿರಕ್ಕೆ ಕರೆ...ದುಕೊಂಡು ತಮ್ಮ ಕುಂದುಕೊರತೆಗ... ಅವರಲ್ಲಿ ನಿವೇದಿಸಿಕೊಂಡರು. ಶ್ರೀ ...ನಾರವರು ನೆನ್ನೆ ರಾತ್ರಿ ನಗರ ಕಾಂ...ಕಛೇರಿಗೆ ಭೇಟಿಇತ್ತು, ಕಾಂಗ್ರೆಸ್ ...ರ್ಯಕರ್ತರೊಡನೆ ನಿರಾಶ್ರಿತರ ಪುನ...ಗೆ ಸರ್ಕಾರದ ಸಹಾಯದಲ್ಲದೇ ಖಾ... ಸಂಸ್ಥೆಗಳಿಂದ ಆಗಬೇಕಾದ ಸಹಾ...ದ ಬಗ್ಗೆ ಮಾತನಾಡಿ ಸ... ಸೂಕ್ತ ಸಲಹೆಗಳನ್ನಿತ್ತರು. ನಗರ ...ಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನ...ಯವರು ಮಾನ್ಯ ಮಂತ್ರಿಗಳಿಗೆ ಕಾಂ... ಸಮಿತಿಯ ಪರವಾಗಿ ಪುಷ್ಪಹಾರ ...ರ್ಪಿಸಿದರು. ನಿರಾಶ್ರಿತರ ಬಗ್ಗೆ ಮೈ...ರು ಸರ್ಕಾರದವರು ನೇಮಿಸಿರುವ ಸ...ಯ ಅಧ್ಯಕ್ಷರಾದ ಶ್ರೀ ಎಲ್ ಎಸ್ ...ಜರಾಯರೂ ಸಭೆಗೆ ಬಂದಿದ್ದರು.

...ಗೀತ ಪರಿಷತ್ತಿನ ಕೇಂದ್ರ ...ಮಿತಿಯ ತ್ರೈಮಾಸಿಕ ಸಭೆ

...ಲ್ಲಿಂದ ಪರಿಷತ್ತಿನ ಕೇಂದ್ರ ಸಮಿ...ತಾ|| ...ನಗರ ...ರಿನಲ್ಲಿ ಸಭೆ ಸೇರಿ ... ಗಳನ್ನು ಚರ್ಚಿಸಿ, ಸಂಸ್ಥಾನದ ...ತ ಪರಿಷತ್ತಿನ ಸಾಧಾರಣ ... ...ವನ್ನು ... ...ಬೆಂಗಳೂರಿನಲ್ಲಿ ನಡೆಸ... ...ನಿಶ್ಚಯಿಸಲಾಗಿದೆ. ಸಂಗೀತ ... ...ಸ್ಥಾನಿಕ ... ...ಬಗ್ಗೆ ನಡೆಯುತ್ತಿದೆ.

...ಂಟಿಕ್ ನಗರದ ಪತನ

...ನ ರಾಜಧಾನಿಯಾಗಿದ್ದ ... ...ಗಿತ್ತು ... ...ದಿದೆ

ನ್ಯೂಯಾರ್ಕಿನಲ್ಲಿ ಪಂಡಿತ ನೆಹರೂ

ವಾಷಿಂಗ್ಟನ್ನಿನ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ನೆನ್ನೆ ದಿನ ಅಮೆರಿಕಾದ ರಕ್ಷಣಾ ಖಾತಾ ಕಾರ್ಯದರ್ಶಿಗಳ ವಿಮಾನದಲ್ಲಿ ನ್ಯೂಯಾರ್ಕಿಗೆ ಭಾರತದ ಪ್ರಧಾನಿ ನೆಹರೂರವರು ತೆರಳಿದರು. ಅವರೊಡನೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಇಂದಿರಾ ಗಾಂಧಿಯವರು ಇತರರೂ ಪ್ರಯಾಣ ಮಾಡಿದರು. ನ್ಯೂಯಾರ್ಕ್ ವಿಮಾನ ನಿಲ್ದಾಣದಲ್ಲಿ ಮಂಜು ಕವಿದು ವಿಮಾನವು ಕೆಳಕ್ಕೆ ಇಳಿಯಲು ಅರ್ಧ ಗಂಟೆ ತಡವಾಯಿತೆಂದು ಹೇಳಲಾಗಿದೆ. ವಿಮಾನ ನಿಲ್ದಾಣದಲ್ಲಿ ಪತ್ರಿಕೋದ್ಯೋಗಿಗಳು ಪಂಡಿತ ನೆಹರೂರವರನ್ನು ಭೇಟಿ ಮಾಡಿ ಅಧ್ಯಕ್ಷ ಐಸೆನ್ ಹೋವರ್‌ರನ್ನು ಭಾರತಕ್ಕೆ ಆಹ್ವಾನಿಸಿದಿರಾ? ಎಂದು ಪ್ರಶ್ನಿಸಿದ್ದಕ್ಕೆ, ತಾವು ಟ್ರೂಮನ್ನರನ್ನು ಭಾರತಕ್ಕೆ ಆಹ್ವಾನಿಸಲು ತುಂಬಾ ಹರ್ಷಸೂಚಕವಾಗಿ ತಮ್ಮ ನುಡಿದರು. ಅನಂತರ ಅವರು ಮೋಟಾರಿನಲ್ಲಿ ಇಂಡಿಯಾ ಹೌಸಿಗೆ ತೆರಳಿದರು. ಪಂಡಿತ ನೆಹರೂರವರು ನ್ಯೂಯಾರ್ಕಿನಲ್ಲಿ ಆರು ದಿನಗಳಿರುವರು. ಇಷ್ಟರಲ್ಲೇ ಅವರು ವಿಶ್ವ ಸಂಸ್ಥೆಯ ಕೇಂದ್ರ ಕಛೇರಿಗೂ ಭೇಟಿಯೀಯುವರೆಂದು ಗೊತ್ತಾಗಿದೆ.

ಪ್ರಾಂತ್ಯಗಳಿಗೆ ಹೊಸ ಹೆಸರು

ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರು ಪ್ರಾಂತ್ಯಗಳಿಗೆ ಹೊಸ ಹೆಸರುಗಳನ್ನು ಇಡುವ ಬಗ್ಗೆ ಸೂಚನೆಯನ್ನು ... ಸಭೆ. ಮುಖ್ಯ ಮಂತ್ರಿಗಳು ಮತ್ತು ಪ್ರಾಂತ್ಯ ... ಅಭಿಪ್ರಾಯ ತೆಗೆದುಕೊಂಡು ... ಎಂದು ತಿಳಿಸಿದರು.

ಜ್ಯೋತಿಷ್ಯರ ದಸ್ತಗಿರಿ

[ಪ್ರ. ಸ.] ಜಾಮಧಾಜನಗರ ೧೫

ಇಲ್ಲಿನ ಪ್ರಸಿದ್ಧ ಜ್ಯೋತಿಷ್ಯರಾದ ಶ್ರೀ ...ನಾಥ ಓಮನಾರ್ ಮತ್ತು ಅವರ ನಾಲ್ಕು ಜನ ಅನುಯಾಯಿಗಳನ್ನು ನೆನ್ನೆ ದಿನ ಪೋಲೀಸರು ದಸ್ತಗಿರಿ ಮಾಡಿ, ಅವರಲ್ಲಿದ್ದ ತಾಳೆ ಗರಿ ಓಲೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಮೋಸದ ಆಪಾದನೆಯ ಮೇಲೆ ಅವರನ್ನು ಬಂಧಿಸಲಾಗಿದೆಯೆಂದು ತಿಳಿದುಬಂದಿದೆ. ಅವರು ಸುಮಾರು ತಿಂಗಳಿಗೆ ೬ ಸಾವಿರ ರೂ. ಗಳ ಸಂಪಾದಿಸುತ್ತಿದ್ದರೆಂದು ಹೇಳಲಾಗಿದೆ.

ಇಪಿ ಫಕೀರನಿಗೆ ಉಬ್ಬಸದ ರೋಗ

ಪಾಕೀಸ್ತಾನ ಮತ್ತು ಆಫ್ಘಾನಿಸ್ತಾನಗಳ ನಡುವೆ ಇರುವ ಗುಡ್ಡಗಾಡಿನ ಪ್ರದೇಶದ ಜನರ ಮುಖಂಡರಾದ ಇಪಿ ಫಕೀರರು ಉಬ್ಬಸದ ರೋಗದಿಂದ ಹಾಸಿಗೆ ಹಿಡಿದಿದ್ದಾರೆಂದು ಹೇಳಲಾಗಿದೆ. ಅವರ ಪತ್ನಿ ಮತ್ತು ಮಗಂದಿರು ಅವರಿಗೆ ಶುಶ್ರೂಷೆ ಮಾಡುತ್ತಿರುವುದಾಗಿ ಪಾಕೀಸ್ತಾನ ಸುದ್ದಿಯೊಂದು ಹೇಳಿದೆ.

ಅಣು ಬಾಂಬಿನ ರಕ್ಷಣೆಗಾಗಿ ಅಮೆರಿಕದ ಸಿದ್ಧತೆ

ರಷ್ಯದಲ್ಲಿ ಅಣುಬಾಂಬು ಇರುವುದೆಂದು ತಿಳಿದುಬಂದಮೇಲೆ ಅಮೆರಿಕಾದಲ್ಲಿ ಅದರ ಪ್ರಯೋಗದ ವಿರುದ್ಧವಾಗಿ ರಕ್ಷಣಾ ಸಿದ್ಧತೆಗಳಾಗುತ್ತಿರುವುದಾಗಿಯೂ, ಯಾವ ದಿನ ರಷ್ಯವು ಯುದ್ಧ ಹೂಡಬಹುದೋ ಅದನ್ನು ನಿರೀಕ್ಷಿಸಿ, ಎಲ್ಲ ಏರ್ಪಾಡುಗಳನ್ನೂ ಮಾಡಲಾಗುತ್ತಿದೆಯೆಂದೂ ಹೇಳಲಾಗಿದೆ.

ರಾಜ ಪ್ರಮುಖರೆಂದರೆ ಮಹಾರಾಜರು

ರಾಜ ಪ್ರಮುಖರೆಂದರೆ ಭಾರತದ ಅಧ್ಯಕ್ಷರು ಪರಿಗಣಿಸುವ ಮೈಸೂರಿನ ಮಹಾರಾಜರು, ಹೈದರಾಬಾದಿನ ನೈಜಾಮರು ಮತ್ತು ಇತರ ಸಂಸ್ಥಾನ ಒಕ್ಕೂಟಗಳ ರಾಜಪ್ರಮುಖರು ಎಂದು ತಿದ್ದುಪಡಿಯು ನೆನ್ನೆ ಭಾರತ ರಾಜ್ಯಾಂಗ ಸಭೆಯಲ್ಲಿ ಅಂಗೀಕೃತವಾಯಿತು.

ಹೈದರಾಬಾದಿಗೆ ರಾಜಾಜಿ ಭೇಟಿ

ಬರುವ ಡಿಸೆಂಬರ್ ತಿಂಗಳು ಎರಡನೇ ವಾರದಲ್ಲಿ ಗವರ್ನರ್ ಜನರಲ್ ರಾಜಾಜಿಯವರು ಹೈದರಾಬಾದ್ ಸಂಸ್ಥಾನಕ್ಕೆ ಭೇಟಿ ಕೊಡಲಿರುವರು.

ಸೈಕಲ್ ಕಳುವು

ದಿವಾನರ ರಸ್ತೆಯಲ್ಲಿರುವ ನೆಸ್ಟ್ ಎಂಡ್ ಲಾಡ್ಜಿನಿಂದ ಸೈಕಲ್ಲೊಂದನ್ನು ಕಳುವು ಮಾಡಲು ಪ್ರಯತ್ನಿಸಿ ಸುಬ್ಬರಾವ್ ಎಂಬುವನು ಪೋಲೀಸರಿಗೆ ಸಿಕ್ಕಿಬಿದ್ದಿದ್ದಾನೆಂದು ಗೊತ್ತಾಗಿದೆ.

○ ಮಣಿಪುರ, ತ್ರಿಪುರ ಮತ್ತು ಕಾಶಿ ಸಂಸ್ಥಾನಗಳ ಆಡಳಿತವನ್ನು ನೆನ್ನೆ ದಿನ ಭಾರತ ಸರ್ಕಾರದವರು ವಹಿಸಿಕೊಂಡರು.

ಮದರಾಸಿನಲ್ಲಿ ಭೂ ಕಂದಾಯದ ಮೇಲೆ ತೆರಿಗೆ

ಮದರಾಸ್ ಸರ್ಕಾರದವರು ಹೊಸದಾಗಿ ತಯಾರಿಸಿರುವ ನೀರಾವರಿ, ವಿದ್ಯುಚ್ಛಕ್ತಿ ಮತ್ತು ಇತರ ಯೋಜನೆಗಳನ್ನು ಕಾರ್ಯಗತ ಮಾಡಿ ಅದರ ಫಲವನ್ನು ಅಲ್ಲಿನ ಜನರಿಗೆ ದೊರಕಿಸಿಕೊಡುವ ಸಲುವಾಗಿ ಕೇಂದ್ರ ಸರ್ಕಾರದವರನ್ನು ಆರು ಕೋಟಿ ರೂ. ಸಾಲ ಕೇಳಿದ್ದರು. ಅವರು ಸಾಲ ಕೊಡಲು ನಿರಾಕರಿಸಿರುವುದರಿಂದ ಈ ಬಗ್ಗೆ ಬೇರೆ ಮಾರ್ಗವನ್ನು ಹುಡುಕಲು ಸರ್ಕಾರದ ನೌಕರರ ಸಂಬಳದಲ್ಲಿ ಸ್ವಲ್ಪ ಭಾಗವನ್ನು ಕಟಾಯಿಸಿ, ಅದನ್ನು ಸರ್ಕಾರಕ್ಕೆ ಸಾಲವಾಗಿ ತೆಗೆದುಕೊಂಡು ಮತ್ತು ಭೂ ಕಂದಾಯದ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಆ ಮೂಲಕ ಮೇಲ್ಕಂಡ ಯೋಜನೆಗಳನ್ನು ಕಾರ್ಯಗತ ಮಾಡಲು ಆಲೋಚಿಸಿರುವುದಾಗಿಯೂ ವರದಿಯಾಗಿದೆ.

ಬಂಜೆಯಿಂದ ಬಾಲಕನ ಹತ್ಯೆ

ಹೋಷಿಯಾರ್‌ಪುರದ ಒಬ್ಬ ಬಂಜೆ ಹೆಂಗಸು ಮಕ್ಕಳನ್ನು ಪಡೆಯುವ ಆಕಾಂಕ್ಷೆಯಿಂದ ಮಂತ್ರವಾದಿಯೊಬ್ಬನನ್ನು ಸಲಹೆ ಕೇಳಿದಳು. ಒಂದು ಗಂಡು ಮಗುವಿನ ಕತ್ತು ಕಿವುಚಿ ಕೊಂದುಹಾಕಿ, ಅದರ ತಲೆ, ಕಣ್ಣು ಮತ್ತು ಮೂಗುಗಳಿಗೆ ಮೊಳೆಯನ್ನು ಹೊಡೆದು, ಮಗುವಿನ ಶರೀರದ ಮೇಲೆ ನಿಂತು ಆಕೆಯು ಸ್ನಾನಮಾಡಿದಲ್ಲಿ ಆಕೆಗೆ ಮಕ್ಕಳಾಗುವುದೆಂದು ಆತನು ಹೇಳಿದನು. ಇದನ್ನು ನಂಬಿ ಆಕೆಯು ಒಂದು ದಿನ ಬೀದಿಯಲ್ಲಿ ಆಡುತ್ತಿದ್ದ, ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ ೫ ವರ್ಷದ ಮಗುವನ್ನು ತನ್ನ ಮನೆಗೆ ಎತ್ತಿಕೊಂಡು ಹೋಗಿ ಮಂತ್ರವಾದಿಯು ಹೇಳಿದಂತೆ ಮಾಡಿದಳು. ಅನಂತರ ಅವಳು ಆ ಮಗುವನ್ನು ಬಟ್ಟೆಯಲ್ಲಿ ಸುತ್ತಿ ಊರು ಹೊರಗಿನ ಒಂದು ಗೊಬ್ಬರದ ಗುಂಡಿಯಲ್ಲಿ ಬಿಸಾಡಿದಳು. ಇದನ್ನು ಪೋಲೀಸರು ಪತ್ತೆಹಚ್ಚಿ ಆಕೆಯನ್ನು ದಸ್ತಗಿರಿ ಮಾಡಿದ್ದಾರೆ.

ಕಾಂಗ್ರೆಸ್‌ಗೆ ಸದಸ್ಯರನ್ನು ಸೇರಿಸುವ ಕಾರ್ಯ

ಮೈಸೂರು ೧೬

ಭಾ|| ಕಾಂಗ್ರೆಸ್ಸಿನ ಹೊಸ ನಿಯಮಾವಳಿಯ ಪ್ರಕಾರ ನೂತನವಾಗಿ ಕಾಂಗ್ರೆಸ್ಸಿನ ಸದಸ್ಯರನ್ನು ಸೇರಿಸುವ ಬಗ್ಗೆ ನೆನ್ನೆ ದಿನ ನಗರ ಕಾಂಗ್ರೆಸ್ ಸಮಿತಿಯ ಸಭೆಯು ಕಾಂಗ್ರೆಸ್ ಕಛೇರಿಯಲ್ಲಿ ಸೇರಿತ್ತು. ನಗರವನ್ನು ಪ್ರತಿ ಭಾಗದಲ್ಲೂ ಸುಮಾರು ೫ ಸಾವಿರ ಪ್ರಜಾ ಸಂಖ್ಯೆಯ ಪ್ರಕಾರವಾಗಿ ೨೫ ಭಾಗಗಳಾಗಿ ವಿಂಗಡಿಸಲಾಯಿತು. ಈ ಬಗ್ಗೆ ಸೂಕ್ತವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಶ್ರೀ ಎಸ್. ಚನ್ನಯ್ಯ, ಬಿ. ಸುಬ್ಬರಾವ್ ಉಪಾಧ್ಯ ಮತ್ತು ಟಿ. ನರಸಿಂಹಯ್ಯಂಗಾರ್ಯರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು.

ಸರ್ಕಾರದ ಸಹಾಯಕ್ಕೆ ರೈಲ್ವೆ ನೌಕರರ ತಿರಸ್ಕಾರ

ರೈಲ್ವೆ ನೌಕರರು ನಡೆಸಿದ ಸೇವೆಗಾಗಿ ಮೈಸೂರು ಸರಕಾರದವರು ಕೊಟ್ಟ ೩ ಲಕ್ಷ ರೂ ಗಳ ಗ್ರಾಂಟನ್ನು ರಾಜಧಾನಿಯಲ್ಲಿ ಸೇರಿದ್ದ ರೈಲ್ವೆ ಕೆಲಸಗಾರರ ಸಭೆಯು ನಿರಾಕರಿಸಿತು.

ವಾರ ಭವಿಷ್ಯ

ತಾ|| ೧೬-೧೦-೪೯ರಿಂದ ೨೨-೧೦-೪೯ರ ವರೆಗೆ

ಮೇಷ—ಆರೋಗ್ಯ ನೆಟ್ಟಗೆ ಪತ್ನಿಯ ಸಹಕಾರ ಪರೋಪಕಾರ ಕಾರ್‍ಯ ಧನವ್ಯಯ ತಾ|| ೨೧, ೨೨ ಸಂತತಿಗೆ ಕ್ಲೇಶ ನೌಕರಿಯಲ್ಲಿ ಜವಾಬ್ದಾರಿ

ವೃಷಭ ಹಣಕಾಸಿನ ಖರ್ಚು ಹೆಚ್ಚುವುದು. ಆರೋಗ್ಯಕ್ಕೆ ಕೊಂಚ ಧಕ್ಕೆ. ನೌಕರಿಯಲ್ಲಿ ಜವಾಬ್ದಾರಿ ಕೆಲಸದ ದೆಸೆಯಿಂದ ವಿಶ್ರಾಂತಿ ದೊರಕದು ಮಕ್ಕಳಿಗೆ ಅನಾರೋಗ್ಯ ವಂಥೆಯಲ್ಲಿ ಹಾನಿಯಿರದಿದ್ದರೂ, ಆತಂಕ. ತಾ|| ೧೭ ೧೮ ಪತ್ನಿಯೊಡನೆ ಮನಸ್ತಾಪ ಶೋಕ ವಾರ್ತೆ

ಮಿಥುನ—ಈ ವಾರ ಒಟ್ಟಿನಲ್ಲಿ ಚೆನ್ನಾಗಿದೆ ಆರೋಗ್ಯ ನೆಟ್ಟಗೆ ಹಣ ಕೈ ಸೇರುವುದು ನೌಕರಿಯಲ್ಲಿ ಮೇಲಧಿಕಾರಿಗಳ ಮೆಚ್ಚಿಗೆ ಅಪ್ತರ ಭೇಟಿ ಪತ್ನಿಯ ನೆರವು ತಾ|| ೧೯, ೨೦, ೨೧ ಮನರಂಜನೆ, ಬಟ್ಟೆ ಖರೀದಿ

ಕರ್ಕ—ಈ ವಾರದಿಂದ ಪರಿಸ್ಥಿತಿ ಉತ್ತಮ ನೌಕರಿ ದಂಧೆಯಲ್ಲಿ ಉತ್ಸಾಹ ಜನಕ ಘಟನೆ ಉತ್ತಮ ವಾರ್ತೆ ಶ್ರುತ ಪತ್ನಿಯ ಸಂತೃಪ್ತಿ ಧನ ಲಾಭಮಾತ್ರ ಇಲ್ಲ ತಾ|| ೧೮, ೨೦ ಶುಭವಾರ್ತೆ. ಮಿತ್ರರಿಂದ ಹಿತ ಚಿಂತನೆ

ಸಿಂಹ -ದುಡುಕದಿರಿ ಆರೋಗ್ಯದ ಕಡೆ ಲಕ್ಷ್ಯವಿರಲಿ. ಹಣಕ್ಕಾಗಿ ಚಿಂತೆ ಬೇಡ ತಾ|| ೧೬, ೧೭ ಕಲಹ ಖರ್ಚು.

ಕನ್ಯಾ—ನಿಷ್ಕಾರಣ ಹಣದ ಖರ್ಚು ಮಿತಾಹಾರಿಗಳಾಗಿರಿ ಹೊಟ್ಟೆ ನೋವಿನ ಪ್ರಸಂಗ ತಾ|| ೧೭, ೧೮, ೧೯ ಕಾಲಿಗೆ ಅಥವಾ ತಲೆಗೆ ಜಖಂ ಹಣದ ಕಳುವು ಪ್ರವಾಸದಲ್ಲಿ ಸಂಕಟ

ತುಲಾ—ಒಟ್ಟಿನಲ್ಲಿ ಪ್ರಗತಿ. ಆರೋಗ್ಯ ನೆಟ್ಟಗೆ ನೂತನ ಪರಿಚಯ. ಸುಖ ಪ್ರವಾಸ. ನೌಕರಿ ದಂಧೆಯಲ್ಲಿ ಪ್ರೋತ್ಸಾಹ ಖರ್ಚು ಹೆಚ್ಚಿದರೂ ಹಣದ ತೊಂದರೆ ಇರುವುದಿಲ್ಲ ತಾ|| ೧೯, ೨೦, ೨೧ ಅಪಯಶವಿಲ್ಲ.

ವೃಶ್ಚಿಕ—ಕೈಗೊಂಡ ಕಾರ್ಯದ ಸಾಫಲ್ಯತೆ ಆರೋಗ್ಯ ನೆಟ್ಟಗೆ ಧನ ಲಾಭ ನೌಕರಿಯಲ್ಲಿ ಮೇಲಿನವರಿಂದ ಪ್ರಸಂಶೆ ಪತ್ನಿ ಪುತ್ರರ ಆರೋಗ್ಯ ನೆಟ್ಟಗೆ ಅಪ್ತರ ಭೇಟಿ ತಾ|| ೧೬, ೨೦ ಪಕ್ವಾನ್ನ ಭೋಜನ

ಧನು—ಕಾರ್ಯಾರಂಭ ಮಾಡಿರಿ ಎದುರಾಳಿಯ ಆಟ ಸಾಗದು. ಸಾಧು ಸಂತರ ಭೇಟಿ ನೌಕರಿ ದಂಧೆಯಲ್ಲಿ ಲಾಭ ಕೋರ್ಟಿನಲ್ಲಿ ಜಯ ತಾ|| ೧೮, ೨೦ ಸನ್ಮಾನ, ಸುವಾರ್ತೆ

ಮಕರ—ಕೈಗೊಂಡಕಾರ್ಯದ ಭಗ್ನ,

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

ಗೂರಲು ಉಬ್ಬಸ, ಪರಿಣಾಮಕಾರಿ ಮತ್ತು ಗಲಗ್ರಂಥಿ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ವ್ಯಕ್ತಿಗಳು ಸರ್ಟಿಫಿಕೇಟು ಮತ್ತು ಭಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ

ಆರ್. ಎಸ್. ಪಂಡಿತರು,

ರಾಮ ಗೋಪಾಲ ವೈದ್ಯ ಶಾಲಾ,

ಸಯಾಮಿನ ಆನೆಗೆ ಕೃತಕ ಕಾಲು

ಈ ವರ್ಷ ಲಾಸ್ ಏಂಜಲೀಸಿಗೆ ಬರಲಿರುವ ಸಯಾಮಿನ ಟ್ಯೂಬಿ ಎಂಬ ಆನೆಗೋಸ್ಕರ ಕೃತಕ ಕಾಲೊಂದನ್ನು ಲಾಸ್ ಏಂಜಲೀಸ್ ಬಳಿ ನಿರ್ಮಿಸಲಾಗುವುದು ಪ್ರಾಕೃತಿಕ ಅವರಣಗಳಿಲ್ಲದೆ ಇತರ ಕಡೆಗಳಲ್ಲಿ ಹುಟ್ಟಿದ ತಮ್ಮ ಮರಿಗಳನ್ನು ಆನೆಗಳು ಕೊಂದುಬಿಡುವುವೆಂದೂ ಹೇಳಲಾಗಿದೆ

ಜನವರಿಯಲ್ಲಿ ಪುರಸಭೆಗಳ ಚುನಾವಣೆ

ಸಂಸ್ಥಾನದ ಟೌನ್ ಮತ್ತು ಮೈನರ್ ಮುನಿಸಿಪಾಲಿಟಿಗಳ ಚುನಾವಣೆಗಳನ್ನು ಬರುವ ಜನವರಿ ತಿಂಗಳಿನಲ್ಲಿ ನಡೆಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಶೋಕ ವಾರ್ತೆ ಶ್ರುತ ಮನಸ್ಸಿನ ಆತಂಕದಿಂದ ಶರೀರಕ್ಕೆ ತೊಂದರೆ ಅಗ್ನಿ ಭಯ, ಶಸ್ತ್ರದಿಂದ ಪೆಟ್ಟು, ನೌಕರಿಯಲ್ಲಿ ಶತ್ರುಗಳ ಜನಮೇಲಧಿಕಾರಿಗಳೊಡನೆ ವೈಮನಸ್ಸು. ತಾ|| ೧೭, ೧೮ ಧನ ಹಾನಿ ಕಾರ್ಯ ಹಾನಿ

ಕುಂಭ—ವಿಶ್ವಾಸ ಘಾತ ಪತ್ನಿಗೆ ಜಖಂ ಹೃದಯ ಬೇಧಕ ಪತ್ರ, ಆರೋಗ್ಯ ನೆಟ್ಟಗಿದ್ದರೂ, ಮಾನಸಿಕ ತ್ರಾಸ ಅಪೇಕ್ಷಾ ಭಂಗದ ದಾರುಣ ದುಃಖ, ನಿಮಗೆ ಅಪ್ತರಾದವರಿಂದಲೇ ವಿರೋಧ ವಿಯೋಗ, ವ್ಯಥೆ ತಾ|| ೧೬, ೨೧ ಸಿದ್ಧ್ಯಾನಾಶ ಖರ್ಚು

ಮೀನ—ವಿಶೇಷ ಲಾಭ ಆರೋಗ್ಯ ನೆಟ್ಟಗೆ ಶತ್ರುಗಳು ನಿರ್ವೀರ್ಯರಾಗುವರು ನೌಕರಿಯಲ್ಲಿ ಮೇಲಿನವರ ಸಂತುಷ್ಟಿ ಬುದ್ಧಿಯ ಪ್ರಕಾಶ ಸುಖ ಪ್ರವಾಸ. ಶುಭ ವಾರ್ತೆ ತಾ|| ೧೬, ೨೦, ಮಹತ್ವದ ಮಾತುಕತೆ ಧನ ಲಾಭ

ರಾಜಕಮಲ್,
ಮೈಸೂರು
14-10-49 ರಿಂದ
ಅನೋಘವಾದ 3ನೇ ವಾರ
ಫಿಲ್ಮಿಸ್ತಾನರವರ
— ಶುಕ್ರಿಸ್ —
ರೆಹಾನ, ಮೀನ, ಪ್ರೇಮ್ ಅದೀಬ್
ಅಭಿನಯಿಸಿರುವ ಹಿಂದಿ ಚಿತ್ರ
MORNING SHOWS
From 14-10-49 for 4 Days
Columbia's Super Social Hit
LOVES OF CARMEN
With - Rita Hayworth, Glennford & Ron Randell
(in Technicolor)
Today is the Time to hear that Talking, feel that Loving, see that Heart-happy Columbia's SMASH

ಜಯಂತಿ ಲಾವಣಿ ಕಾಣಿಕೆ

ರಾಜಧಾನಿಯ ಲಾವಣಿ ವಿದ್ವಾನ್ ಎನ್ ವಿಷಕಂಠರಾಯರು ಗಾಂಧೀಜಿಯವರ ಅಗಲೇ ಜಯಂತಿಯ ಸ್ಮರಣಾರ್ಥವಾಗಿ ಪ್ರಕಟಿಸಿರುವ ಜಯಂತಿ ಲಾವಣಿ ಕಾಣಿಕೆ ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ ಯುಗ ಪುರುಷೋತ್ತಮಗಾಂಧೀಜಿ, ಅನ್ನ ಬ್ರಹ್ಮ, ಪಂಡಿತ ನೆಹರೂ, ಸ್ವಾತಂತ್ರ್ಯ ಸೂರ್ಯೋದಯ, ಬಡ ಬೋರೇಗೌಡನ ಹಳ್ಳಿಯ ಜೀವನ ಮುಂತಾದ ಉತ್ತಮ ಲಾವಣಿಗಳನ್ನು ಪ್ರಕಟಿಸಿರುತ್ತಾರೆ ಬೆಲೆ ೪ ಆಣೆ

ಮಜ್‌ದೂರ್

ಮೈಸೂರುನಗರದ ಸಮತಾವಾದಿ ಪಕ್ಷದವರು ಶ್ರೀ ಬಿ ಶ್ರೀಕಂಠಪ್ಪನವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ 'ಮಜ್‌ದೂರ್' ಎಂಬ ಕನ್ನಡ ವಾರ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಇದರಲ್ಲಿ ಅನೇಕ ಉಪಯುಕ್ತ ಲೇಖನಗಳು ಪ್ರಕಟವಾಗಿವೆ ಅದು ಚಿರಕಾಲ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ. ಬಿಡಿ ಪತ್ರಿಕೆ ಬೆಲೆ ೧ ಆಣೆ

ರಾಷ್ಟ್ರ ಗೀತೆ ನಿರ್ಧಾರದ ಬಗ್ಗೆ ಸಮಿತಿ

ಭಾರತದ ರಾಷ್ಟ್ರ ಗೀತೆಯನ್ನು ನಿರ್ಧರಿಸುವ ಬಗ್ಗೆ ಒಂದು ಸಮಿತಿಯನ್ನು ರಚಿಸಬೇಕೆಂದು ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಅಧ್ಯಕ್ಷರು ಸೂಚನೆ ಇತ್ತಿದ್ದಾರೆ

ಪೊಲೀಸರಿಗೆ ಪಾನ ನಿರೋಧ ಕಾರ್ಯ

ಸಂಸ್ಥಾನದಲ್ಲಿ ಪಾನ ನಿರೋಧ ಕಾರ್ಯಕ್ರಮವನ್ನು 'ಪೊಲೀಸ್' ಇಲಾಖೆಗೆ ವಹಿಸಲು ಸರ್ಕಾರದವರು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ

ಸ್ವಿಟ್ಜರ್ಲೆಂಡಿನಲ್ಲಿ ಚಿಯಾಂಗರ ೩೦೦ ಕೋಟಿ ಡಾಲರು

ಚೀಣಾದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್‌ರವರು ಸ್ವಿಟ್ಜರ್ಲೆಂಡಿನ ಒಂದು ಬ್ಯಾಂಕಿನಲ್ಲಿ ೩೦೦ ಕೋಟಿ ಡಾಲರುಗಳನ್ನು ಇಟ್ಟಿದ್ದಾರೆಂದು ರೇಡಿಯೋ ವರದಿ ಮಾಡಿದೆ

ಷರ್ಲಿಟೆಂಪಲ್ಲಳ ವಿವಾಹ ವಿಚ್ಛೇದನ

ಹಾಲಿವುಡ್ಡಿನ ಸುಪ್ರಸಿದ್ಧ ಸಿನಿಮಾ ನಟಿ ಷರ್ಲಿ ಟೆಂಪಲ್ಲಳು ವಿವಾಹವಾದ ಎರಡು ವರ್ಷಗಳನಂತರ ವಿಚ್ಛೇದನದ ಅರ್ಜಿಯನ್ನು ಸಲ್ಲಿಸಿರುತ್ತಾಳೆ ಗಂಡ ಜಾರ್ಜ್ ಆಗರನು ತನ್ನ ಮನಸ್ಸಿಗೆ ನೋವನ್ನುಂಟುಮಾಡುತ್ತಿರುವುದೇ ಇದಕ್ಕೆ ಕಾರಣವೆಂದುಹೇಳಲಾಗಿದೆ ಎರಡು ವರ್ಷದ ಮಗುವನ್ನು ತನ್ನ ವಶಕ್ಕೆ ಕೊಡಬೇಕೆಂದು ಕೋರಿರುತ್ತಾಳೆ.

ಚಾಮುಂಡಿ ಬಡಾವಣೆಗೆ ನೀರು ಸರಬರಾಯಿ

ರಾಜಧಾನಿಯ ಚಾಮುಂಡಿ ಬಡಾವಣೆಗೆ ನೀರು ಸರಬರಾಜನ್ನು ಉತ್ತಮಪಡಿಸಲು ಸರ್ಕಾರದವರು ೬೧|| ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ

ಸಂಯುಕ್ತ ರಾಷ್ಟ್ರ ದಿನಾಚರಣೆ

ಸಂಯುಕ್ತ ರಾಷ್ಟ್ರ ದಿನಾಚರಣೆ ಸಂಬಂಧವಾಗಿ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ನಾಳೆಯಿಂದ ಇಪ್ಪತ್ತು ದಿನಗಳು ೨೪ನೇ ತಾರೀಖಿನವರೆಗೆ ಪ್ರತಿ ದಿನ ಭಾಷಣಗಳನ್ನು ಏರ್ಪಡಿಸಲಾಗಿದೆ ೨೪ನೇ ತಾ|| ಸಂಜೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯು ನಡೆಯುವುದು ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಅಧ್ಯಕ್ಷತೆ ವಹಿಸುವರು

[ಸ್ಥಾಪನೆ 1906]
ಕೆನರಾ ಬ್ಯಾಂಕ್, ಲಿಮಿಟೆಡ್
(ಮೈಸೂರು ಬ್ರಾಂಚ್)
(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ವಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)
ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು
U HARI SHENOY
ಏಜೆಂಟ್

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಪಂಚಾಮೃತ ಮತ್ತು ಪಂಚಾಗ್ನಿ ಲವಣ
ಮಲೇರಿಯಾ ಗೆಡ್ಡೆ ಕರಗಿಸುವುದರಲ್ಲಿ ೪೦ ವರ್ಷ
ಖ್ಯಾತಿ ಪಡೆದ ಸಿದ್ಧ ಸಂಜೀವನ
ಉಪ್ಪಿನ ಬಿಳಿ ಹಲ್ಲುಪುಡಿ-ಹೊಟ್ಟಿನ ಬೂದಿ
ಸುಣ್ಣವಿಲ್ಲದ ಸ್ಪೆಷಲ್ ಟೂತ್ ಪೌಡರ್
ಪೊಟ್ಟಣ ೧ಕ್ಕೆ ೦-೧-೬
S. N. PANDIT & SONS,
90 Lansdowne Buildings, Mysore

Edited, printed and published by A. R. Nagaraj at Sadhvi Press, D. Subbiah Road, Mysore,

ಫೋ। ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೫ ಸೋಮವಾರ ೧೭-೧೦-೧೯೪೯ ಸಂಚಿಕೆ ೬೭

– ಭಾರತಕ್ಕೆ ರಷ್ಯದ – ಭೀತಿಯೇನೂ ಇಲ್ಲ

ಮೈಸೂರು ಕಾಂಗ್ರೆಸ್ಸಿನ ಭವಿಷ್ಯ

ಮೈಸೂರು ೧೭

ನಿನ್ನೆ ಸಂಜೆ ನಗರ ಕಾಂಗ್ರೆಸ್ ಕಛೇರಿ ...ಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯು ... ಎಸ್ ಚನ್ನಯ್ಯನವರ ಅಧ್ಯಕ್ಷತೆಯು ...ಸೇರಿ ಮೈಸೂರು ಕಾಂಗ್ರೆಸ್ಸಿನ ಭವಿಷ್ಯ ...ಬಗ್ಗೆ ಸಮಾಲೋಚನೆ ನಡೆಸಿತು

ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಮೈಸೂ... ಸಂಸ್ಥಾನಕ್ಕೆ ಪ್ರತ್ಯೇಕ ಪ್ರಾಂತದ ಸ್ಥಾ...ಮಾನವನ್ನು ಕೊಡುವ ವಿಚಾರದಲ್ಲಿ ಇ...ವರೆಗೆ ನಡೆದಿರುವ ಪ್ರಯತ್ನಗಳನ್ನು ...ರ್ಶಿಸಲಾಯಿತು ಮೈಸೂರು ಕಾಂಗ್ರೆ...ಸ್ ಉದ್ದೇಶವು ಈಡೇರಿರುವುದರಿಂದ ..., ಅಖಿಲ ಭಾರತ ಕಾಂಗ್ರೆಸ್ಸಿನ ಮೂ...ವೇ ಎಲ್ಲ ಕೆಲಸಗಳನ್ನೂ ಮಾಡಲು. ಅ...ಶವಿರುವುದರಿಂದಲೂ ಅದನ್ನು ಕೂ...ಡಲೇ ಮುಕ್ತಾಯ ಮಾಡಲು ಬಹಿರಂಗ ...ವೇಶನವನ್ನು ಕರೆಯಬೇಕೆಂದು ಹಲವು ...ಸ್ಯರು ಸೂಚಿಸಿದರು ಜನವರಿ ೨೬ನೇ ...ನಿಂದ ಸಂಸ್ಥಾನಕ್ಕೂ ಸಹ ಇತರ ...ಂತಗಳಂತೆ ಪ್ರತ್ಯೇಕ ಆಡಳಿತದ ಸ್ಥಾ...ನಗಳು ಬರಲಿರುವುದರಿಂದ ಇಲ್ಲಿ ...ಗ್ರೆಸ್ಸಿನ ಪ್ರತ್ಯೇಕ ಪ್ರಾಂತ್ಯವು ಇರಬೇ... ಅವಶ್ಯಕತೆಯನ್ನು ಹಲವರು ಒತ್ತಿ ...ದರು. ಈ ವಿಷಯದಲ್ಲಿ ಸಧ್ಯದಲ್ಲಿ ... ನಡೆಯಬಹುದಾದ ನಿರ್ಧ್ಯಮಾನಗ...ಳ ಪರಿಶೀಲಿಸಿ, ಮುಂದೆ ಕೈಗೊಳ್ಳಬೇ... ಕಾರ್ಯಕ್ರಮವನ್ನು ಕ್ರಮೇಣ ಸ...ಚಿಸಲು ಸಭೆಯನ್ನು ಮುಂದಕ್ಕೆ ...ಲಾಯಿತು.

ಧನ್ವಂತರಿ ಜಯಂತಿ

...ಷ್ಣರಾಜ ಮೊಹಲ್ಲಾದಲ್ಲಿರುವ ಅ...ಯುರ್ವೇದ ವೈದ್ಯ ಸಂಘದ ಆಶ್ರಯದಲ್ಲಿ ...೧೯ನೇ ತಾ॥ ಬುಧವಾರ ಸಂಜೆ ೬ ...ಗಂಟೆಗೆ ಶ್ರೀ ಧನ್ವಂತರಿ ಜಯಂತಿಯು ... ಮಹಾಪಾಠಶಾಲೆಯಲ್ಲಿ ಆಯು... ...ದ ವಿದ್ವಾನ್ ಭಿಷಗ್ರತ್ನ ಬಿ ವಿ ಪಂಡಿ... ಅಧ್ಯಕ್ಷತೆಯಲ್ಲಿ ನಡೆಯುವುದು

"...ಪ ಜಪ್ಪ ಬೆಳೆಯನ್ನು ಬೆಳೆಯಿರಿ"

...ಂಗಳೂರಿನಲ್ಲಿರುವ ಪೇಟೆಹಳ್ಳಿ ಶ್ರಿ ...ನಾರಾಯಣರವರು ಪ್ರಕಟಿಸಿರುವ "... ಬೆಳೆಯನ್ನು ಬೆಳೆಯಿರಿ" ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ. ಸಂ...ದಲ್ಲಿ ಆಹಾರ ಉತ್ಪತ್ತಿಯನ್ನು ಹೆಚ್ಚಿ...ಸಲು ಉಪಯೋಗವಾಗುವಂತೆ, ಹಳ್ಳಿಯ ಜನರಿಗೆ ಪ ನವಟ್ಟಾಗುವ ರೀತಿಯಲ್ಲಿ ಪ...ಗಳನ್ನು ಒರೆದಿರುತ್ತಾರೆ ಇದಕ್ಕೆ ಪಟ...ಟಿ ಮೊದಲಿಯರ್... ಮುನ್ನುಡಿ ...ದಿದ್ದಾರೆ. ಬೆಲೆ ೧ ಆಣೆ.

"ಪ್ರಥಮ ಚಿಕಿತ್ಸೆಯ ಅಕ್ಷರ ಮಾಲೆ"

...ಸೂರು ಜಿಲ್ಲಾ ಸ್ಕೌಟ್ ಕೌನ್ಸಿಲಿನ ...ಲ್ ಅಸಿಸ್ಟೆಂಟರಾದ ಶ್ರೀ ಜಿ ಕೆ ...ರವರು ಇಂಗ್ಲೀಷಿನಲ್ಲಿ ಪ್ರಕಟಿಸಿರು... ...ಥಮ ಚಿಕಿತ್ಸೆಯ ಅಕ್ಷರ ಮಾಲೆ" ...ಪುಸ್ತಕವು ನಮ್ಮ ಹಸ್ತಗತವಾಗಿದೆ ... ಚಿಕಿತ್ಸೆ ವಿಚಾರವು ಸ್ಕೌಟುಗಳ... ...ಗೆ ಸುಲಭವಾಗಿ ಗೊತ್ತಾಗುವಂತೆ ವಿವರಗ...ಳನ್ನು ಕೊಟ್ಟಿರುತ್ತಾರೆ. ಅದರ ಬೆಲೆ ... ...ಇದು ರಾಜಧಾನಿಯ ಮೈಸೂರು ಜಿಲ್ಲಾ ಸ್ಕೌಟ್ ಕಛೇರಿಯಲ್ಲಿ ...ದೊರೆಯುವುದು

೨೨ಅಡಿ ಉದ್ದದ ಸಮುದ್ರದ ಅದ್ಭುತ ಭೂತ

ಕೆರಾಚಿಯ ಹತ್ತಿರವಿರುವ ಮನೋರಾ ದ್ವೀಪದಲ್ಲಿದ್ದ ೨೨ ಅಡಿ ಉದ್ದದ ಅದ್ಭುತ ಪ್ರಾಣಿಯನ್ನು ಅಲ್ಲಿನ ; ಮೀನು ಹಿಡಿಯುವವರು ೩೪ ಗಂಟೆಗಳ ಕಾಲ ಸಮುದ್ರದಲ್ಲಿ ಅದರ ಸಂಗಡ ಹೋರಾಡಿ, ಅದನ್ನು ಹಿಡಿದು ದಡಕ್ಕೆ ಎಳೆದುಕೊಂಡು ಬಂದರೆಂದು ವರದಿಯಾಗಿದೆ

ಕ್ಯಾಂಟನ್ ನಗರದ ಪತನ

ಚೀಣಾ ರಾಷ್ಟ್ರೀಯ ಸರ್ಕಾರದ ನೂತನ ರಾಜಧಾನಿಯಾದ ಕ್ಯಾಂಟನ್ ನಗರವು ಸಂಪೂರ್ಣವಾಗಿ ಕಮ್ಯೂನಿಸ್ಟರ ವಶವಾಗಿದೆ. ಇದರಿಂದ ಕಮ್ಯೂನಿಸ್ಟರು ಇಲ್ಲಿಯವರೆಗೆ ಚೀಣಾದ ಮುಕ್ಕಾಲುಭಾಗ ಪ್ರದೇಶವನ್ನು ಆಕ್ರಮಿಸಿಕೊಂಡಂತಾಗಿದೆ

ಕಾಶಿ ವಿಶ್ವವಿದ್ಯಾಲಯಕ್ಕೆ ೧೨ ಲಕ್ಷ ರೂ. ದಾನ

ಸಂಯುಕ್ತ ಸಂಸ್ಥಾನದಲ್ಲಿ ಲೀನವಾಗಲಿರುವ ಕಾಶಿ ಸಂಸ್ಥಾನದ ಮಹಾರಾಜರವರು ಅಲ್ಲಿನ ಹಿಂದೂ ವಿಶ್ವವಿದ್ಯಾನಿಲಯಕ್ಕೆ ೧೨ ಲಕ್ಷ ರೂ ಉದಾರದಾನ ಮಾಡಿರುವರು ಇವರ ಜೊತೆಗೆ ಆಸ್ಪತ್ರೆ ಮತ್ತು ಇತರ ಕಟ್ಟಡಗಳನ್ನೂ ಕೊಟ್ಟಿರುತ್ತಾರೆ.

ಪಶ್ಚಿಮ ಪಂಜಾಬಿನಲ್ಲಿ ೧೭ ಲಕ್ಷ ಮರಗಳು

ಪಶ್ಚಿಮ ಪಂಜಾಬಿನಲ್ಲಿ ೧೭ ಲಕ್ಷ ಮರಗಳನ್ನು ಸುಮಾರು ೫೦೦೦ ಎಕರೆ ಪ್ರದೇಶದಲ್ಲಿ ನೆಡಲಾಗಿದೆಯೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ ಇದಕ್ಕಾಗಿ ೫೦ ಮಣ ಬೀಜಗಳನ್ನು ಬಿತ್ತಲಾಯಿತೆಂದೂ, ಇದರಿಂದ ಇನ್ನು ೧೦ ವರ್ಷಗಳಲ್ಲಿ ಪ್ರಾಂತ್ಯಕ್ಕೆ ಬೇಕಾದಷ್ಟು ಮರಗಳು ಉತ್ಪತ್ತಿಯಾಗುವುದೆಂದೂ ಹೇಳಲಾಗಿದೆ

ಆಹಾರ ಅಭಾವ

ಜಿಂಜಿನಾಟಿ ೧೭

ಇಲ್ಲಿನ ರೇಷನ್ ಡಿಪೋವಿನಲ್ಲಿ ಸರಿಯಾಗಿ ಆಹಾರ ಪದಾರ್ಥಗಳು ಸರಬರಾಜಾಗದೆ, ರೇಷನ್ ಕೊಡುವುದನ್ನು ನಿಲ್ಲಿಸಲಾಗಿದೆ ಇದರಿಂದ ಜನರಿಗೆ ತುಂಬಾ ಕಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಸರಿಪಡಿಸಬೇಕೆಂದು ಕೋರಲಾಗಿದೆ.

ಭಾರತಕ್ಕೆ ರಷ್ಯದ ಭೀತಿ ಇಲ್ಲವೆಂದು ನೆಹರೂ

ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳಿಗೆ ಉಂಟಾಗಿರುವ ರಾಜತಾಂತ್ರಿಕ ಯುದ್ಧದಲ್ಲಿ ಭಾರತವು ಸಂಪೂರ್ಣವಾಗಿ ತಟಸ್ಥವಾಗಿರುವುದೆಂದು ಪ್ರಧಾನಿ ಪಂಡಿತ ನೆಹರೂರವರು ಮೊನ್ನೆ ದಿನ ವಾಷಿಂಗ್ಟನ್ನಿನಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಹೋರಾಟದಲ್ಲಿ ಭಾರತವು ಶಾಂತರೀತಿಯನ್ನು ಮತ್ತು ಪ್ರಜಾ ಪ್ರಭುತ್ವ ಮಾರ್ಗಗಳನ್ನು ಅನುಸರಿಸುವುದ ಭಾರತಕ್ಕೆ ತನ್ನ ಉತ್ತರದ ಗಡಿಯಿಂದ ರಷ್ಯದ ಧಾಳಿಯ ಭಯವೇನೂ ಇಲ್ಲ ಮತ್ತು ರಷ್ಯದಲ್ಲಿ ಅಣು ಬಾಂಬುಗಳು ಇರುವುದು ಘೋಷಣೆಯಿಂದ ಭಾರತದ ಮನೋಭಾವದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ– ಎಂದು ಅವರು ಹೇಳುತ್ತಾರೆ

ಸೈಕಲ್ಲಿಗಿಂತ ವೇಗವಾಗಿ ಸಂಚರಿಸುವ ವಾಹನ

ಕಾಲಿಗೆ ಕಟ್ಟಿಕೊಂಡು ಓಡುವ ವಾಹನಕ್ಕೆ ಬೆಂಕಿ ಪೊಟ್ಟಣದಷ್ಟು ಗಾತ್ರವಿರುವ ಪುಟ್ಟ ಮೋಟಾರು ಯಂತ್ರವನ್ನು ಸೇರಿಸಿ, ಗಂಟೆಗೆ ೨೦ ಮೈಲಿ ವೇಗವಾಗಿ ಸಂಚರಿಸುವ ವಿಧಾನವನ್ನು ಜರ್ಮನ್ ವಿಜ್ಞಾನಿಗಳೊಬ್ಬರು ಕಂಡುಹಿಡಿದಿದ್ದಾರೆ ಅದಕ್ಕೆ ಗುಳಿಗೆಯ ರೂಪದಲ್ಲಿರುವ ೬ ಆಣೆ ಬೆಲೆಯ ಪೆಟ್ರೋಲ್ ಟ್ಯೂಬನ್ನು ಉಪಯೋಗಿಸುವುದರಿಂದ ಎರಡು ಘಂಟೆ ಕಾಲ ಸಂಚರಿಸಬಹುದೆಂದೂ, ಜಾರುವ ಯಂತ್ರವನ್ನು ಜನರು ಕಟ್ಟಿ ಕೊಂಡು ಹೋಗಬಹುದೆಂದೂ ಹೇಳಲಾಗಿದೆ

ಸಂಬಳಕ್ಕಾಗಿ ಚೀನಾ ಸೈನಿಕರ ಮುಷ್ಕರ

ಚೀಣಾ ರಾಜಧಾನಿಯಾಗಿದ್ದ ಕ್ಯಾಂಟನ್ ನಗರದ ಹೊರ ಭಾಗದಲ್ಲಿ ರಕ್ಷಣೆ ಸಿದ್ಧ ರಾಷ್ಟ್ರೀಯ ಸೈನಿಕರಿಗೆ ಕಳೆದ ಮೂರು ತಿಂಗಳಿಂದ ಸಂಬಳ ಕೊಟ್ಟಿರಲಿಲ್ಲ ವಾದುದರಿಂದ ಅವರುಗಳು ಮುಷ್ಕರ ಹೂಡಿದರೆಂದೂ, ಇದರಿಂದ ನಗರದ ರಕ್ಷಣೆ ಬಹು ಕುಸಿದು ಬಿದ್ದಿತೆಂದೂ ಹೇಳಲಾಗಿದೆ ಫಾರ್ಮೋಸಾದಲ್ಲಿ ಚಿಯಾಂಗರ ಸಂಗ್ರಹದಲ್ಲಿದ್ದ ಬಹುದೊಡ್ಡ ೧೦ ಕೋಟಿ ಡಾಲರು ಚಿನ್ನದ ಗಟ್ಟಿಗಳನ್ನು ಸಂಬಳಕ್ಕಾಗಿ ಉಪಯೋಗಿಸಲು ಅವರು ನಿರಾಕರಿಸಿದರೆಂದು ವರದಿಯಾಗಿದೆ

ಗೋಡ್ಸೆಯನ್ನು ಗಲ್ಲಿಗೆ ಏರಿಸುವುದೆಂದು ?

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥುರಾಂ ಗೋಡ್ಸೆ ಮತ್ತು ಆಪ್ಟೆಗಳ ಅಪೀಲು ಅರ್ಜಿಯನ್ನು ಪ್ರಿವಿ ಕೌನ್ಸಿಲ್ಲು ನಿರಾಕರಿಸಿರುವುದರಿಂದ, ಅವರನ್ನು ಗಲ್ಲಿಗೇರಿಸುವ ದಿನವು ಇನ್ನು ನಿರ್ಧರವಾಗಬೇಕಾಗಿದೆಯೆಂದು ಹೇಳಲಾಗಿದೆ ಪ್ರಿವಿ ಕೌನ್ಸಿಲಿನ ತೀರ್ಪಿನ ವಿವರವು ಅಧಿಕೃತವಾಗಿ ಭಾರತ ಸರ್ಕಾರಕ್ಕೆ ತಲುಪಿದ ಮೇಲೆ, ಅದನ್ನು ಶಿಕ್ಷೆ ವಿಧಿಸಿದ ನ್ಯಾಯಾಧೀಶರಿಗೆ ಕಳುಹಿಸಲಾಗುವುದೆಂದೂ, ಅವರು ೨೧ ದಿನಗಳ ಕಾಲಾವಧಿಯನ್ನು ಕೊಟ್ಟು ನೇಣು ಹಾಕುವ ದಿನವನ್ನು ನಿರ್ಧರಿಸುವರೆಂದೂ ಹೇಳಲಾಗಿದೆ ಈ ಅವಧಿಯಲ್ಲಿ ಅಪರಾಧಿಗಳು ದಯಾ ಭಿಕ್ಷೆಯ ಅರ್ಜಿಯನ್ನು ಸಲ್ಲಿಸಬಹುದು

ಭಾರತೀಯರು ದಾನ ಅಪೇಕ್ಷಿಸುವುದಿಲ್ಲ

ಸುಸಂಸ್ಕೃತರಾದ ಮತ್ತು ಗರ್ವವುಳ್ಳ ಭಾರತೀಯರಾದ ನಾವು ಯಾರಿಂದಲೂ ದಾನವನ್ನು ಅಪೇಕ್ಷಿಸುವುದಿಲ್ಲ ಮತ್ತು ಅಮೇರಿಕದಿಂದ ಅಂತಹ ಸಹಾಯವನ್ನು ಪಡೆಯಲು ನಾನು ಅಮೇರಿಕಕ್ಕೆ ಬಂದಿಲ್ಲ– ಎಂದು ಪಂಡಿತ ನೆಹರೂರವರು ನ್ಯೂಯಾರ್ಕಿನಲ್ಲಿ ತಿಳಿಸಿರುತ್ತಾರೆ

ಪಟಾಕಿ ಆಸ್ಫೋಟನೆಯಿಂದ ೫ ಜನರ ಮರಣ

ರಾಜಮಹೇಂದ್ರಿಯ ಪಟಾಕಿ ತಯಾರಿಕಾ ಕಾರ್ಖಾನೆಯಲ್ಲಿ ಕಳೆದ ೧೨ ನೇ ತಾ' ಆಸ್ಫೋಟನವಾಗಿ, ಭಾರಿ ಬೆಂಕಿ ಅನಾಹುತ ಉಂಟಾಗಿ ೫ ಜನರು ಸತ್ತರೆಂದು ವರದಿಯಾಗಿದೆ.

ಸೇಂದಿ ಅಂಗಡಿ ಮುಚ್ಚಿಸಲು ಆಮರಣಾಂತ ಉಪವಾಸ

ಸಿಂಹಳ ದ್ವೀಪದ ಪಶ್ಚಿಮ ತೀರಕ್ಕೆ ೧೧ ಮೈಲಿ ದೂರವಿರುವ ಪಂಜಾಪಸರಂ ಜಾಲ್ ಹಳ್ಳಿಯಲ್ಲಿರುವ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳ ಸದಸ್ಯರು ಅಲ್ಲಿರುವ ಹೆಂಡದ ಅಂಗಡಿಗಳನ್ನು ಮುಚ್ಚಿಸಲು ಆಮರಣಾಂತ ಉಪವಾಸ ಕೈಗೊಳ್ಳಬೇಕೆಂದು ನಿರ್ಧರಿಸಿದ್ದಾರೆ

ಅಂತರ ಪ್ರಾಂತೀಯ ವ್ಯಾಪಾರಕ್ಕೆ ಸಾಗಾಟದ ತೆರಿಗೆ ಇಲ್ಲ

ಭಾರತದ ಪ್ರಾಂತಗಳ ನಡುವೆ ನಡೆಯುವ ವ್ಯಾಪಾರ ಸಾಮಾನುಗಳ ಮೇಲೆ ವಿಧಿಸುವ ಸಾಗಾಟದ ತೆರಿಗೆಯನ್ನು ರದ್ದುಮಾಡುವ ವಿಧಿಯನ್ನು ನಿನ್ನೆ ರಾಜ್ಯಾಂಗ ಸಭೆಯಲ್ಲಿ ಅನುಮೋದಿಸಲಾಯಿತು. ಯಾವ ಪ್ರಾಂತವೇ ಆಗಲಿ ಕೊಳ್ಳುವ ಅಥವ ಮಾರಾಟಮಾಡುವ ಪದಾರ್ಥಗಳ ಮೇಲೆ ಮಾರಾಟದ ತೆರಿಗೆ ವಿಧಿಸಕೂಡದು

ಕೈಗಾರಿಕಾ ಅಭಿವೃದ್ಧಿ ಪರಿಶೀಲನೆಗೆ ಅಮೇರಿಕದ ಪ್ರವೀಣರು

ಅಮೇರಿಕದ ಕೈಗಾರಿಕಾ ಪ್ರವೀಣರಾದ ಡಾ॥ ಎಸ್ ಎ ಪಿಟ್ರೀರವರು ಸಂಸ್ಥಾನದ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಪರಿಶೀಲನೆ ನಡೆಸಲು ಬೆಂಗಳೂರಿಗೆ ಇದೇ ೨೦ ನೇ ತಾ॥ ಆಗಮಿಸುವರು. ಮಾರನೇ ದಿನ ಬನ್ನೂರು ಗಣಿ ಪ್ರದೇಶಕ್ಕೆ ಭೇಟಿ ಕೊಟ್ಟು, ೨೫ ನೇ ತಾ॥ ರಾಜಧಾನಿಗೆ ಆಗಮಿಸುವರು.

ನೀಲಕಂಠ ವನದ ಆರಂಭೋತ್ಸವ

ಮೈಸೂರು ೧೭

ಮೈಸೂರ ತಾಲ್ಲೂಕು ಹಿನಕಲ್ಲಿನಲ್ಲಿ ರಾಜಧಾನಿಯ ಕಂಟ್ರಾಕ್ಟರಾದ ಶ್ರೀ ಬಿ ಎಸ್ ಕಾಂತನ ಮೂರ್ತಿಯವರು ಏರ್ಪಡಿಸಿರುವ ನೀಲಕಂಠ ವ ಹೆಸರಿನ ಆಧುನಿಕ ವ್ಯವಸಾಯ ಕ್ಷೇತ್ರ ಮತ್ತು ವಿದ್ಯುಚ್ಛಕ್ತಿ ಪಂಪಿನ ಪ್ರಾರಂಭೋತ್ಸವವನ್ನು ನಿನ್ನೆ ಬೆಳಿಗ್ಗೆ ೧೦॥ ಇಂಜನಿಯರಾದ ಶ್ರೀ ಎಲ್ ಸಿ ಕೆಂಪ್ಪನವರು ನೆರವೇರಿಸಿದರು ಶ್ರೀ ಎಸ್ ರಂಗರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು ರಾಜಧಾನಿಯಿಂದ ಅನೇಕ ಮಹನೀಯರು ಸಮಾರಂಭಕ್ಕೆ ಬಂದಿದ್ದರು ಶ್ರೀ ರಂಗರಾಮಯ್ಯನವರು ಭಾಷಣ ಮಾಡಿ, ಹೆಚ್ಚು ಆಹಾರದ ಉತ್ಪತ್ತಿಯ ಯೋಜನೆಗಾಗಿ ಸರ್ಕಾರದವರು ಬಾವಿ ಸಗೀ ಮಹನೀಯರುಗಳಿಗೆ ಎಲ್ಲ ಸೌಕರ್ಯವನ್ನೂ ನೀಡುವರೆಂದು ತಿಳಿಸಿ ಈ ಉದ್ಯಮವನ್ನು ಕೈಗೊಂಡಿರುವ ಶ್ರೀಕಾಂತನ ಮೂರ್ತಿಯವರನ್ನು ಪ್ರಶಂಸಿಸಿದರು.

ಕಾಮೇಶ್ವರಮ್ಮನವರ ಸೇವೆಯ ಪ್ರಶಂಸೆ

ಮೈಸೂರು ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯ ನಿರ್ವಾಹಕ ಮಂಡಲಿಯ ಸಭೆ ಮೊನ್ನೆ ನಡೆದ, ಕಳೆದ ೧೮ ವರ್ಷಗಳಿಂದಲೂ ಹರಿಜನೋದ್ಧಾರ ಮತ್ತು ಇತರ ಕಾರ್ಯಗಳಲ್ಲಿ ತೊಡಗಿದ್ದು ಈಗ ತಾತ್ಕಾಲಿಕವಾಗಿ ಮದರಾಸಿಗೆ ತೆರಳಲಿರುವ ಶ್ರೀಮತಿ ಕಾಮೇಶ್ವರಮ್ಮನವರ ಸೇವೆಯನ್ನು ಕೊಂಡಾಡಿ, ಅವರಿಗೆ ಸುಖ ಪ್ರಯಾಣವನ್ನು ಬಯಸುವ ನಿರ್ಣಯವನ್ನು ಮಾಡಲಾಯಿತು

ಎಂ. ಸಿ. ಮೋದಿಯವರಿಗೆ ಗೌರವ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ॥ ಎಂ ಸಿ ಮೋದಿಯವರನ್ನು ನ್ಯೂಯಾರ್ಕ್ ನಗರದಲ್ಲಿರುವ ವೈ ಎಂ ಸಿ ಎ ಸಂಘದ ಅಂತರ ರಾಷ್ಟ್ರೀಯ ಸದಸ್ಯರನ್ನಾಗಿ ಆರಿಸಲಾಗಿದೆ

ನಾಗರಿಕರಿಗೆ ಶಿಸ್ತಿನ ಪಾಠ

ಈ ದಿನದಿಂದ ಬೆಂಗಳೂರಿನಲ್ಲಿ ನಾಗರಿಕರು ಶಿಸ್ತನ್ನು ಪಾಲಿಸುವ ಒಗ್ಗೆ ತಕ್ಕ ಶಿಕ್ಷಣವನ್ನು ೮ ದಿನಗಳ ಕಾಲ ಕೊಡಲಾಗುವುದು

ಆಂಗ್ಲೋ ಇಂಡಿಯನ್ ಪ್ರೇಮಿಯ ದುರಂತ

ಮೊನ್ನೆ ಬೆಂಗಳೂರಿನ ಪತ್ತಿರ ವೈಟ್ ಫೀಲ್ಡಿನಲ್ಲಿರುವ ಆಂಗ್ಲೋ ಇಂಡಿಯನ್ನನೊಬ್ಬನು ತಾನು ಪ್ರೀತಿಸುತ್ತಿದ್ದ ಸಿಂಜ್ರಾ ಎಂಬ ಮಹಿಳೆಯೊಬ್ಬಳು ಮತ್ತೊಬ್ಬನನ್ನು ಪ್ರೀತಿಸಿದುದಕ್ಕಾಗಿ, ಅವಳನ್ನು ಚೂರಿಯಿಂದಿರಿದು, ತಾನೂ ಇರಿದುಕೊಂಡು ಸತ್ತನು. ಹೆಂಗಸು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗುಣಮುಖಳಾಗುತ್ತಿದ್ದಾಳೆ.

ಬೆಂಗಳೂರು ಮಾಜಿ ಮಂತ್ರಿಗೆ ಗಲ್ಲು

ಹಾಗೇ ರಿಂ ರವರನ್ನು ಉಪ್ಪಿಸಲು ಪಿತೂರಿ ನಡೆಸಿದ ಅಪ್ಪನ ಮಾಜಿ ವಿದೇಶಾಂಗ ಮಂತ್ರಿ ... ಗಲ್ಲಿಗೇರಿಸಲಾಗಿದೆ ... ಮತ್ತು ಇಪ್ಪತ್ತೊಂದು ಸಲ ... ನಿನ್ನೆ ಗಲ್ಲಿಗೇರಿಸಲಾಯಿತು.

ಸಕ್ಕರೆ ಕಂಪೆನಿ ಕೆಲಸಗಾರರ ಸತ್ಯಾಗ್ರಹ

ಮಂಡ್ಯ ೧೫

ಇಲ್ಲಿನ ಮೈಸೂರು ಸಕ್ಕರೆ ಕಂಪೆನಿಯ ೧೫೦೦ ಉದ್ಯೋಗಿಗಳು ಕಂಪೆನಿಯ ಜನರಲ್ ಮ್ಯಾನೇಜರ್ ಶ್ರೀ ದಾಸೇಗೌಡರ ಬಂಗಲೆಯಲ್ಲಿ ಸತ್ಯಾಗ್ರಹವನ್ನು ಮೊನ್ನೆ ಪ್ರಾರಂಭಿಸಿದರು ಕಂಪೆನಿಗೆ ಸಂಬಂಧಿಸಿದ ಬ್ಯಾಂಕಿನಲ್ಲಿ ಉದ್ಯೋಗಿಗಳು ಇದುವರೆಗೆ ಮಾಡಿದ ಸಾಲದ ತೀರ್ವೆ ಮತ್ತು ಚಂದಾ ಹಾನಿತಿ ಬಗ್ಗೆ ಕಂಪೆನಿಯವರು ಇದುವರೆಗೂ ಅವರ ಸಂಬಳಗಳನ್ನು ಹಿಡಿದು ತೀರಿಸುತ್ತಿದ್ದ ಪದ್ಧತಿಯನ್ನು ತಪ್ಪಿಸಿದುದಕ್ಕಾಗಿ ಈ ಸತ್ಯಾಗ್ರಹವು ನಡೆಯಿತು ಈ ಆಜ್ಞೆಯನ್ನು ಈಚೆಗೆ ರದ್ದು ಮಾಡಲಾಯಿತೆಂದೂ, ಕೆಲಸಗಾರರು ಸತ್ಯಾಗ್ರಹವನ್ನು ನಿಲ್ಲಿಸಿದರೆಂದೂ ಗೊತ್ತಾಗಿದೆ ಮನೆಯ ಆವರಣಕ್ಕೆ ಅವರು ಪ್ರವೇಶ ಮಾಡಿದರೆಂದು ಪೋಲೀಸರಿಗೆ ದೂರು ಕೊಡಲಾಯಿತೆಂದು ಹೇಳಲಾಗಿದೆ

ಇಂಗ್ಲೀಷ್ ಕಡಲ್ಗಾಲುವೆಯನ್ನು ಈಜಿ ದಾಟಲು ಭಾರತೀಯನ ಯತ್ನ

ಮಲಬಾರಿನ ಸುಪ್ರಸಿದ್ಧ ಈಜುಗಾರನಾದ ಬಿ ಜಕಾರಿಯಾ ಎಂಬಾತನು ೨೦ ಮೈಲಿ ಅಗಲದ ಇಂಗ್ಲೀಷ್ ಕಡಲ್ಗಾಲುವೆಯನ್ನು ಈಜಿ ದಾಟಲು ಇಷ್ಟರಲ್ಲೇ ಪ್ರಯತ್ನಿಸಲಿರುವನೆಂದು ವರದಿಯಾಗಿದೆ ಆತನ ವಯಸ್ಸು ೨೩ ಈ ತಿಂಗಳ ಕೊನೆಯಲ್ಲಿ ಅವನು ಇಂಗ್ಲೆಂಡಿಗೆ ಪ್ರಯಾಣ ಬೆಳಸುವನೆಂದು ಹೇಳಲಾಗಿದೆ

ಮಕ್ಕಳ ಅಳುವಿಕೆಗೆ ಕಾರಣದ ಶೋಧನೆ

ಚಿಕಾಗೊ ವಿಶ್ವವಿದ್ಯಾಲಯದ ವೈಜ್ಞಾನಿಕರು ಮಕ್ಕಳು ಮಲಗುವ ತೊಟ್ಟಿಲುಗಳಿಗೆ ಒಂದು ಹೊಸದಾದ ಯಂತ್ರವನ್ನು ಕಟ್ಟಿ ಅವುಗಳು ಅಳುವ ಕಾರಣವನ್ನು ತಿಳಿದುಕೊಳ್ಳಲು ಏರ್ಪಾಡು ಮಾಡುವುದಾಗಿ ಗೊತ್ತಾಗಿದೆ ಆರು ವಾರದಿಂದ ಹಿಡಿದು ೨೬ ವಾರಗಳ ಮಕ್ಕಳತೊಟ್ಟಿಲುಗಳಿಗೆ ಕಟ್ಟಲಾಗುವುದು ಈ ಯಂತ್ರವು ಮಕ್ಕಳ ಪ್ರತಿಯೊಂದು ಚಟುವಟಿಕೆಯನ್ನು ರಿಕಾರ್ಡು ಮಾಡಿಕೊಳ್ಳಬಲ್ಲದೆಂದು ಹೇಳಲಾಗಿದೆ

'ಅಜಾದ್‌ಕಾಶ್ಮೀರ್' ಸೈನ್ಯಕ್ಕೆ ಪಾಕೀಸ್ತಾನದ ಸಹಾಯ

ಅಜಾದ್ ಕಾಶ್ಮೀರ ಸೈನ್ಯವನ್ನು ಪಾಕೀಸ್ತಾನವು ಅರಾತುರಿಯಲ್ಲಿ ಹೆಚ್ಚಿಸುತ್ತಿರುವುದಾಗಿ ತಿಳಿದುಬಂದಿದೆ

ಕನಿಷ್ಟ ಕೂಲಿ ತಿಂಗಳಿಗೆ ನೂರು ರೂ. ಇರಬೇಕು

ಸಾಮಾನ್ಯ ಮನುಷ್ಯನು ತಿಂಗಳಿಗೆ ಕನಿಷ್ಟವಾಗಿ ಒಂದು ನೂರು ರೂಪಾಯಿಗಳನ್ನು ಸಂಪಾದಿಸಲು ತಕ್ಕ ಅವಕಾಶವನ್ನು ಸರಕಾರದವರು ಕಲ್ಪಿಸಬೇಕೆಂದು ಸುಪ್ರಸಿದ್ಧ ಆರ್ಥಿಕ ಪ್ರವೀಣರಾದ ಶ್ರೀ ಪಿ ಜೆ ಥಾಮಸ್‌ರವರು ತಿಳಿಸಿದ್ದಾರೆ

ಕಡಿದ ಹಾವನ್ನು ಕಚ್ಚಿ ಬದುಕಿದ ಮನುಷ್ಯ

ಉತ್ತರ ತಿರುವಾಂಕೂರಿನಿಂದ ಬಂದ ಸುದ್ದಿ ಪ್ರಕಾರ ಒಬ್ಬಾತನನ್ನು ವಿಷಪೂರಿತ ಸರ್ಪವೊಂದು ಕಚ್ಚಿತೆಂದೂ ಆತನು ತಕ್ಷಣವೇ ಆ ಸರ್ಪದ ತಲೆ ಮೇಲೆ ಒಟ್ಟೆಯನ್ನು ಎಸೆದು ಅದನ್ನು ಹಿಡಿದು ಕಚ್ಚಲು ಆ ಸರ್ಪವು ಸತ್ತು, ಆತನು ಬದುಕಿದನೆಂದು ಗೊತ್ತಾಗಿದೆ

ಅಪಹೃತ ಸ್ತ್ರೀಯರ ವಾಪಸು

ಕಳೆದ ತಿಂಗಳಿನಲ್ಲಿ ಪೂರ್ವ ಪಂಜಾಬು ಸರಕಾರವು ಪಶ್ಚಿಮ ಪಂಜಾಬು ಸರಕಾರಕ್ಕೆ ೧೫೭೭ ಮಂದಿ ಮುಸ್ಲಿಂ ಅಪಹೃತ ಸ್ತ್ರೀಯರನ್ನು ವಾಪಸ ಕಳುಹಿಸಿಕೊಟ್ಟಿದೆ ಅದೇ ತಿಂಗಳಿನಲ್ಲಿ ಪಶ್ಚಿಮ ಪಂಜಾಬು ಸರಕಾರವು ೯ ಮಂದಿ ಮುಸ್ಲಿಮೇತರ ಸ್ತ್ರೀಯರನ್ನೂ ಇಬ್ಬರು ಮಕ್ಕಳನ್ನೂ ವಾಪಸು ಕಳುಹಿಸಿದೆ

ಭರತ ನಾಟ್ಯ ಶಾಸ್ತ್ರದ ಪುಸ್ತಕ ಪ್ರಕಟಣೆ

ರಾಯಲ್ ಏಷ್ಯಾಟಿಕ್ ಸೊಸೈಟಿಯವರು ಭರತ ನಾಟ್ಯ ಶಾಸ್ತ್ರವನ್ನು ಇಂಗ್ಲೀಷ್ ಭಾಷಾಂತರದೊಡನೆ ಎಂಟು ಸಂಪುಟಗಳಲ್ಲಿ ಪ್ರಕಟಿಸಲು ಆಲೋಚಿಸಿರುವರೆಂದು ವರದಿಯಾಗಿದೆ ಇದಕ್ಕಾಗಿ ಮೇಲ್ಕಂಡ ಸಂಸ್ಥೆಯವರು ಭಾರತದ ಎಲ್ಲಾ ಪ್ರಮುಖ ಪುಸ್ತಕ ಭಂಡಾರಗಳ ನೆರವನ್ನೂ ಕೋರಿ ಪತ್ರ ಬರೆದಿರುವರೆಂದು ಹೇಳಲಾಗಿದೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ನವರಾತ್ರಿ ರಜಾ ಕಳೆದನಂತರ, ಮೇಲ್ಕಂಡ ಶಿಶು ವಿಹಾರವು ಈಗ ತಾನೆ ತೆರೆಯಲ್ಪಟ್ಟು ತನ್ನ ದೇ ಆದ ಆಧುನಿಕ ಶಿಕ್ಷಣ ಸಲಕರಣೆಗಳಿಂದ ಕೂಡಿದ ಮಕ್ಕಳ ಶಿಕ್ಷಣ ಕಾರ್ಯವನ್ನು ಆರಂಭಿಸಿದೆ ಏರ ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ ಮಾತಾಪಿತೃಗಳು ಎಂದಿನಂತೆ ಸಂಸ್ಥೆಯ ಪ್ರಯೋಜನವನ್ನು ಹೊಂದುವುದರ ಮೂಲಕ ಪ್ರೋತ್ಸಾಹಿಸುವರೆಂದು ನಂಬಲಾಗಿದೆ

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ



ಪಂಚಾಮೃತ ಮತ್ತು ಪಂಚಾಗ್ನಿ ಲವಣ

ಮಲೇರಿಯಾ ಗೆಡ್ಡೆ ಕರಗಿಸುವುದರಲ್ಲಿ ೪೦ ವರ್ಷಗಳ ಖ್ಯಾತಿ ಪಡೆದ ಸಿದ್ಧ ಸಂಜೀವನ

ಉಪ್ಪಿನ ಬಿಳಿ ಹಲ್ಲುಪುಡಿ - ಹೊಟ್ಟಿನ ಬೂದಿ ಸೀಮೆ

ಸಣ್ಣ ಲಕ್ಷದ ಪ್ರಸಲ್ ಟೂತ್ ಪೌಡರ್

ಪುಟ್ಟ ೧೬೬ ೮-೧-೬

S. N. PANDIT & SONS.

90 Lansdowne Buildings Mysore

Edited, printed and published by A R Nagarajan at Sadhvi Press D Subbaiah Road Mysore

ಆಹಾರದ ಸರಬರಾಜಿನ ತಾರತಮ್ಯ

ಗಂಜಾಮಿನ ರೇಷನ್ ಡಿಪೋ... ನರಿಗೆ ಅ ಅಣೆಗೆ ಅಕ್ಕಿ, ರಾಗಿ ಅರ್ಧ ... ರಿ ಸಿಕ್ಕುವುದೂ ಕಷ್ಟವಾಗಿರುತ್ತದೆ ... ಬಾಗ ಇಲ್ಲಿನ ಒಬ್ಬ ಮಹನೀ... ೧೩ ನೇ ತಾ॥ ಮುಕ್ಕಾಲು ಪೌ... ಶ, ಅರ್ಧ ಮೂಟೆ ಅಕ್ಕಿಯನ್ನು ... ರುವುದು ಎಲ್ಲರಿಗೂ ಆಶ್ಚರ್ಯವನ್ನು ... ಮಾಡಿರುತ್ತದೆ ಸಂಬಂಧಪಟ್ಟ ... ಗಳು ಈ ಬಗ್ಗೆ ತನಿಖೆ ನಡೆಸಿ, ಬ... ಗೆ ಆಹಾರ ಸಿಕ್ಕುವಂತೆ ಮಾಡಬೇ... ದು ಅಲ್ಲಿನ ಶ್ರೀ ತಿಮ್ಮಯ್ಯ ... ಒಂದು ಪತ್ರ ಬರೆದು ಪ್ರಾರ್ಥಿಸಿ...

ಹೊಟೇಲ್ ಕೆಲಸಗಾರರ ಸಭೆ

ರಾಜಧಾನಿಯ ಹೊಟೇಲ್ ಕೆ... ರ ಸಂಘದ ಸಭೆಯು ಮೊನ್ನೆ ... ಟಿ ಎಸ್. ಸುಬ್ಬಣ್ಣನವರ ಅಧ್ಯ... ಲ್ಲಿ ನಡೆಯಿತು ಬರುವ ಜನವ... ತಾ॥ ಸಂಘದ ತೃತೀಯವಾರ್ಷಿಕೋ... ವನ್ನು ನಡೆಸಬೇಕೆಂದೂ, ಇದಕ್ಕಾ... ಸಗಾರರಿಗೆ ಮಾಲೀಕರು ರಜಾ ಕೊ... ಕೆಂದೂ ನಿರ್ಧರಿಸಲಾಯಿತು. ಬೋ... ಪ್ರಾವಿಡೆಂಟ್‌ಫಂಡ್ ವಿಚಾರವಾ... ದವರು ನೋಟೀಸು ಕೊಟ್ಟರೂ ... ಕರು ಮತ್ತು ಸರ್ಕಾರದವರು ... ರ್ಯಕ್ರಮವನ್ನೂ ಕೈಗೊಳ್ಳದಿರುವು... ಷಾದವನ್ನು ವ್ಯಕ್ತಪಡಿಸಿ, ಕೂ... ನೋಟೀಸ್ ಆಫ್ ಛೇಂಜನ್ನು ... ಕೆಂದು ತೀರ್ಮಾನಿಸಲಾಯಿತು

ರೇಷನಿಂಗ್ ಆಫೀಸರು ಕಛೇರಿ, ಮೈಸೂರು

ಮೈಸೂರ ಸಿಟಿಯಲ್ಲಿ ಆಹಾ... ದೇಗಳನ್ನು ರವಾನಿಸಲು ಟೆಂಡ...

ನೋಟೀಸ್

ಮೇಲ್ಕಂಡ ಟೆಂಡರಿಗೆ ಸಂಬ... ಸಮಸ್ತರಿಗೂ ತಿಳಿಯಪಡಿಸ... ದರೆ –

ಮೈಸೂರು ಸಿಟಿಯಲ್ಲಿ ಆಹಾ... ರ್ಥಗಳನ್ನು ಸಾಗಿಸಲು ಟೆಂಡ... ತೆಗೆದುಕೊಳ್ಳಲು ನಿಗದಿ ಮಾಡಿ... ವನ್ನು ಇದೇ ಮಾಹೆ ೧೯ನೇ ತಾ... ದ ೨೫ನೇ ತಾರೀಖಿನವರೆಗೆ ... ರಿಸಲಾಗಿದೆ

ಇತರ ತಪ್ಸೀಲನ್ನು ಮೈಸೂ... ರೇಷನಿಂಗ್ ಆಫೀಸರ ಕಛೇರಿ... ಯಬಹುದು

(ಸಹಿ) ಬಿ. ಜಿ. ಬಾ...

ರೇಷನಿಂಗ್ ಆಫೀ...

ನಾಯಿ ಕೆಮ್ಮಿಗೆ ಔ...

Whooping Cough R...

ಗೂರಲು, ಉಬ್ಬಸ, ಪಡಿಶ... ಮತ್ತು ಗಲಾಯಕಕ್ಕೆ (Tonsil... ರಿಯಾದ ಔಷಧಿ ದೊರೆಯುತ್ತದೆ ... ಕ ದೊಡ್ಡ ಮನುಷ್ಯರು ಸಹ... ಮತ್ತು ಜಂಗಾರದ ಮೊದಲಾ... ಟ್ಟಿರುತ್ತಾರೆ

ಆರ್. ಎಸ್. ಪಂಡಿತ್

ರಾಮ ಗೋಪಾಲ ವೈದ್ಯ...

ದಿವಾನರ ರಸ್ತೆ, ಮೈಸೂ...

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮ | ಮಂಗಳವಾರ ೧೮-೧೦-೧೯೪೯ | ಸಂಚಿಕೆ ೬೮

– ಭಾರತವು ಸ್ವತಂತ್ರ – ನೀತಿ ಅನುಸರಿಸುವುದು

ಪೂರ್ವ ಪಂಜಾಬ್ ಪ್ರಧಾನಿಯ ರಾಜೀನಾಮೆ

ಪೂರ್ವ ಪಂಜಾಬ್ ಪ್ರಾಂತ್ಯದ ಪ್ರಧಾನಿ ಶ್ರೀ ಭೀಮಸೇನ ಸಾಚಾರ್‌ರವರು ನಿನ್ನೆ ಸಂಜೆ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು. ಅವರು ಶಾಸನ ಸಭೆಯ ಪಕ್ಷದ ವಿಶ್ವಾಸವನ್ನು ಪಡೆಯಬೇಕೆಂದು ಕೇಂದ್ರ ಪಾರ್ಲಿಮೆಂಟರಿ ಸಮಿತಿಯವರು ಸೂಚನೆ ಕೊಟ್ಟಿದ್ದರು. ನಿನ್ನೆ ರಾತ್ರಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಸೇರುವುದಕ್ಕಿಂತ ಮುಂಚೆಯೇ ಅವರು ರಾಜೀನಾಮೆ ಕೊಟ್ಟರು. ಪಕ್ಷದ ಸಭೆಯು ಸೇರಿ ಡಾ|| ಗೋಪಿಚಂದ್ ಭಾರ್ಗವರವರನ್ನು ನಾಯಕರನ್ನಾಗಿ ಚುನಾಯಿಸಿತು. ಅವರು ಈ ದಿನ ಪ್ರಧಾನಿಯ ಹುದ್ದೆಯನ್ನು ಸ್ವೀಕರಿಸುವರು.

ಕಾಶ್ಮೀರ ಸಮಸ್ಯೆಯಲ್ಲಿ ಈಜಿಪ್ಟಿನ ಮಧ್ಯಸ್ತಿಕೆ

ಕಾಶ್ಮೀರದ ಬಗ್ಗೆ ಭಾರತ ಮತ್ತು ಪಾಕೀಸ್ತಾನಗಳಿಗೆ ಉಂಟಾಗಿರುವ ಬಿಕ್ಕಟ್ಟನ್ನು ಬಗೆ ಹರಿಸಲು ಈಜಿಪ್ಟ್ ಮಧ್ಯಸ್ತಿಕೆ ವಹಿಸಬಹುದೆಂದು ಅಲ್ಲಿನ ವಿದೇಶಾಂಗ ಶಾಖೆಯ ಅಧಿಕಾರಿಗಳು ತಿಳಿಸಿರುತ್ತಾರೆ.

ರಾಜ್ಯಾಂಗ ಸಭಾ ಸದಸ್ಯರ ಭತ್ಯದಲ್ಲಿ ಖೋತಾ

ಭಾರತ ರಾಜ್ಯಾಂಗ ಸಭಾ ಸದಸ್ಯರುಗಳಿಗೆ ಇದುವರೆವಿಗೆ ಕೊಡುತ್ತಿದ್ದ ದಿನದ ಭತ್ಯವನ್ನು ೪೫ ರಿಂದ ४೦ ರೂ. ಗೆ ಇಳಿಸಬೇಕೆಂದು ನಿನ್ನೆ ದಿನ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಿಗ್ರೋವಿಗೆ ನ್ಯಾಯಾಧೀಶರ ಪದವಿ

ಅಮೆರಿಕದ ವರ್ಜಿನ್ ದ್ವೀಪದ ಗವರ್ನರಾದ ವಿಲಿಯಂ ಹೇಸ್ಟಿ ಎಂಬ ನಿಗ್ರೋರವರನ್ನು ಮೊಟ್ಟಮೊದಲನೆಯದಾಗಿ ಸಂಯುಕ್ತ ಸಂಸ್ಥಾನದ ಫೆಡರಲ್ ಕೋರ್ಟಿನ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದೆ

ಸಿಕ್ಕರು ಮಸೀದಿಗಳ ಪವಿತ್ರತೆ ಉಳಿಸಬೇಕು

ಮುಸ್ಲಿಂ ನಿರಾಶ್ರಿತರು ಬಿಟ್ಟುಹೋದ, ಮಸೀದಿ ಮುಂತಾದ ಪೂಜಾ ಸ್ಥಾನಗಳ ಪವಿತ್ರತೆಯನ್ನು ಸಿಕ್ಕರು ಕಾಪಾಡಬೇಕೆಂದ ಶಿರೋಮಣಿ ಅಕಾಲಿ ದಳದ ಕಾರ್ಯಕಾರಿ ಸಮಿತಿಯು ನಿರ್ಣಯಿಸಿದೆ

ಭಾರತವು ಯಾವ ರಾಷ್ಟ್ರವನ್ನೂ ಹಿಂಬಾಲಿಸುವುದಿಲ್ಲ

ಕೊಲಂಬಿಯಾ ವಿಶ್ವ ವಿದ್ಯಾಲಯದಲ್ಲಿ ನೆಹರೂರವರ ಘೋಷಣೆ

ನಿನ್ನೆ ದಿನ ಕೊಲಂಬಿಯಾ ವಿಶ್ವವಿದ್ಯಾಲಯದವರು ಪಂಡಿತ ನೆಹರೂರವರಿಗೆ ಡಾಕ್ಟರ್ ಆಫ್ ಲಾಸ್ ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟಾಗ ಭಾರತದ ವಿದೇಶಾಂಗ ನೀತಿಯನ್ನು ವಿವರಿಸಿ, ಅವರು ಮಹತ್ತರವಾದ ಘೋಷಣೆಯೊಂದನ್ನು ಮಾಡಿದರು. ಭಾರತವು ಯಾವ ದೊಡ್ಡ ರಾಷ್ಟ್ರವನ್ನೂ ಹಿಂಬಾಲಿಸಿ ನಡೆಯುವುದಿಲ್ಲ. ವಿಶ್ವದ ಶಾಂತಿ ಸ್ಥಾಪನೆಗೆ ತನ್ನದೇ ಆದ ಸ್ವತಂತ್ರ ಕಾರ್ಯ ನೀತಿಯನ್ನು ಅನುಸರಿಸುತ್ತದೆ ರಾಷ್ಟ್ರ ಸ್ವಾತಂತ್ರ್ಯ ಮಾನವ ಹಕ್ಕುಗಳು ಮತ್ತು ಶಿಸ್ತು, ವ್ಯವಸ್ಥೆಗಳ ರಕ್ಷಣೆಗೆ ಭಂಗ ಬಂದಾಗಲೆಲ್ಲಾ ಆದ ದಿಟ್ಟತನದಿಂದ ಪ್ರತಿಭಟಿಸಿ ನಿಲ್ಲುವುದು ಅಮೆರಿಕ ಮತ್ತು ಭಾರತಗಳ ಧ್ಯೇಯವು ಒಂದೇ ಆಗಿರುತ್ತದೆ. ಆದುದರಿಂದ ಈ ಎರಡು ರಾಷ್ಟ್ರಗಳೂ ಕಲೆತು ಜಗತ್ತಿನ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸಬೇಕೆಂದು ನಾನು ಬಯಸುತ್ತೇನೆ ಎಂದು ಅವರು ಹೇಳಿದರು.

ಬಿಹಾರಿನಲ್ಲಿ ೫ ಕೋಟಿ ರೂ. ಮೂಲ ಶಿಕ್ಷಣ ಯೋಜನೆ

೫ ಕೋಟಿ ರೂ ಖರ್ಚಿನಿಂದ ಇನ್ನು ೩ ವರ್ಷಗಳಲ್ಲಿ ೧೬೦೦ ಮೂಲ ಶಿಕ್ಷಣ ಶಾಲೆಗಳನ್ನೂ, ಅದರ ಒಂದು ಕಾಲೇಜು ಮತ್ತು ೨೫ ಶಿಕ್ಷಣ ಕೇಂದ್ರಗಳನ್ನೂ ತೆರೆಯಲು ಬಿಹಾರ್ ಸರ್ಕಾರದವರು ನಿರ್ಧರಿಸಿದ್ದಾರೆ

ಕೊಳದಲ್ಲಿ ದೇವರ ಪ್ರತಿಮೆ

ನಾಲಘಾಟಿನ ಸುಪ್ರಸಿದ್ಧ ಶ್ರೀ ಪದಕಾಂತರ ದೇವರ ಪ್ರತಿಮೆಯು ಕಳೆದ ಗುರುವಾರ ಮಾಯವಾಗಿತ್ತು. ಜ್ಯೋತಿಷ್ಯರ ಸೂಚನೆ ಮೇರೆ ದೇವಸ್ಥಾನದ ಕೊಳವನ್ನು ಶೋಧಿಸಲಾಗಿ ಅದು ಪತ್ತೆಯಾಯಿತೆಂದು ಹೇಳಲಾಗಿದೆ.

ರಷ್ಯದ ವಿದೇಶಾಂಗ ಮಂತ್ರಿ ಯೊಡನೆ ನೆಹರೂ ಭೇಟಿ

ನ್ಯೂಯಾರ್ಕಿನಲ್ಲಿ ರಷ್ಯದ ವಿದೇಶಾಂಗ ಮಂತ್ರಿ ಆಂಡ್ರಿ ವಿಶಿನ್ಸ್ಕಿಯವರನ್ನು ಪಂಡಿತ ನೆಹರೂರವರು ಭೇಟಿ ಮಾಡಿದರು.

...ನೇ ತಾ|| ವಿಶ್ವವಿದ್ಯಾಲಯ ಪರೀಕ್ಷಾ ಫಲಿತಾಂಶ

ಮೈಸೂರು ೧೮

...ವಿಶ್ವವಿದ್ಯಾನಿಲಯದ ಸೆಪ್ಟೆಂಬರ್ ತಿಂ... ಪರೀಕ್ಷಾ ಫಲಿತಾಂಶವು ಇದೇ ೨೨ ತಾ|| ಶನಿವಾರ ಬೆಳಗ್ಗೆ ೯ ಘಂಟೆಗೆ ...ಟವಾಗುವುದು.

...೦ ಪ್ರೈಮರಿ ಶಾಲಾಧ್ಯಾಪಕರ ನೇಮಕ

...ಸಂಸ್ಥಾನದ ಪ್ರೈಮರಿ ಶಾಲೆಗಳಿಗೆ ... ಜನ ಹೆಚ್ಚು ಉಪಾಧ್ಯಾಯರುಗಳ... ತೆಗೆದುಕೊಳ್ಳಲು ಸರ್ಕಾರದವರು ಅ...ತಿ ಕೊಟ್ಟಿದ್ದಾರೆ

...ತಿಂಗಳಿಗೆ ಪ್ರತಿಯೊಬ್ಬರಿಗೂ ...ಮುಕ್ಕಾಲು ವೀಸೆ ಸಕ್ಕರೆ

...ನಗರದ ರೇಷನ್ ಕಾರ್ಡುಗಳಲ್ಲಿ ನಮೂ...ವ ಪ್ರತಿಯೊಬ್ಬರಿಗೂ ತಿಂಗಳಿಗೆ ...ಕ್ಕಾಲು ಪಂಚೇರು ಸಕ್ಕರೆಯನ್ನು ಕೊ...ಗುವುದು. ತಮಗೆ ಬೇಕಾದಷ್ಟು ಸ...ಯನ್ನು ಮಾತ್ರ ಜನರು ತೆಗೆದುಕೊಂ...ಸಹಕರಿಸಬೇಕೆಂದು ರೇಷನಿಂಗ್ ಅ...ರಿಗಳು ಕೋರಿರುತ್ತಾರೆ

...ತಾನಾದೀ ಕಾರ್ಯಕರ್ತರ ಸಭೆ

...ಳೆ ಬೆಳಗ್ಗೆ ೯-೩೦ ಘಂಟೆಗೆ ರಾಜ...ಯ ಶಿವರಾಂಪೇಟೆಯಲ್ಲಿರುವ ಸಮ...ವಾದೀ ಪಕ್ಷದ ಕಛೇರಿಯಲ್ಲಿ ಕಾರ್ಯ...ರ ಸಭೆಯು ನಡೆಯುವುದು ಶ್ರೀ ...ವ ನಾಗಭೂಷಣ ಮತ್ತು ಸಿ ಜಿ ಕೆ ...ಯವರು ಭಾಗ ವಹಿಸುವರು.

...ಷ್ಣರಾಜಸಾಗರದ ಅಣೆಕಟ್ಟಿಗೆ ಹೊಸ ತೂಬುಗಳು

...ಷ್ಣರಾಜಸಾಗರದ ಅಣೆಕಟ್ಟಿಗೆ ನೂತ...ತೂಬುಗಳನ್ನು ಹಾಕಲು ಸರ್ಕಾರದವ... ೫ ಲಕ್ಷ ರೂ ಅನ್ನು ಮಂಜೂರು ...ದರು ತ್ತಾರೆ ಅಣೆಕಟ್ಟಿನ ಮೇಲಿನ ರ...ನ್ನು ವಿಸ್ತರಿಸಲು ४೫,೮೦೦ ರೂ. ...ಸಲಾಗಿದೆ

...೦೦ ರೂ. ನೋಟಿನ ಬೆಲೆ ಇಳಿದಿಲ್ಲ

...೦೦ ರೂ. ನೋಟಿನ ಬೆಲೆಯು ಇಳಿ...ವುದೆಂದು ಕೆಲವರು ಗ್ರಾಮಾಂತರ ...ಶಗಳಲ್ಲಿ ಸುಳ್ಳು ಪ್ರಚಾರ ನಡೆಸುತ್ತಿ...ರೆ ಮತ್ತು ಕೆಲವು ಹಳ್ಳಿಯವರು ಗು...ಹಿಂತ ಕಮ್ಮಿ ಬೆಲೆಗೆ ೧೦೦ ರೂ ...ಟನ್ನು ಮಾರುತ್ತಿದ್ದಾರೆಂದು ಸಮಾ...ಬಂದಿದೆ. ಆದರೆ ಅದರ ಬೆಲೆಯು ಇಳಿದಿಲ್ಲವೆಂದೂ, ಜನರು ಆ ರೀತಿ ...ರಿಗೊಳ್ಳಬಾರದೆಂದೂ ಸರ್ಕಾರದ ಪ್ರ...ತೆ ತಿಳಿಸಿರುತ್ತದೆ.

ಮಹಾರಾಜಾ ಕಾಲೇಜ್ ಸಂಘದ ಪ್ರಾರಂಭ ಭಾಷಣ

...ಮಹಾರಾಜಾ ಕಾಲೇಜ್ ಸಂಘದ ಪ್ರಾ...ಭಾಷಣವನ್ನು ನಾಳೆ ಸಂಜೆ ೫ ಘಂ...ಮಾಜಿ ದಿವಾನರಾದ ಸರ್ ಆರ್ಕಾಟ್ ...ಸ್ವಾಮಿ ಮೊದಲಿಯಾರರು ಮಾಡು...

...ಬ್ದುಲ್ಲಾರವರು ಅರಬ್ ...ಪ್ಯಾಲೆಸ್ತೀನಿನ ದೊರೆಗಳು

...ಟ್ರಾನ್ಸ್‌ಜೋರ್ಡಾನಿನ ದೊರೆಯಾದ ...ಲ್ಲಾರವರು ತಾವು ನೂತನ ಸಂಯು... ...ಬ್ ಪ್ಯಾಲೆಸ್ತೀನ್ ಮತ್ತು ಜೋ...ನ್ ರಾಜ್ಯದ ಚಕ್ರವರ್ತಿಯಾಗಿ ...ದಿನ ಡಿಸೆಂಬರಿನಲ್ಲಿ ಘೋಷಿಸುವರೆಂ...ಸಲಾಗಿದೆ

ಹಣದ ದುರುಪಯೋಗದ ಆಪಾದನೆ ಮೇಲೆ ದಸ್ತಗಿರಿ

ಮೈಸೂರು ೧೮

ಮೈಸೂರು ರೈಲ್ವೆಯ ಆಡಿಟ್ ಶಾಖೆಯ ಸರಾಫರಾದ ಶ್ರೀ ಮಹಲಿಂಗಯ್ಯ ಎಂಬುವರು ಸರ್ಕಾರಕ್ಕೆ ಸೇರಿದ ೧೬೨|| ಸಾವಿರ ರೂ. ಹಣವನ್ನು ದುರುಪಯೋಗಪಡಿಸಿದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಅವರು ಕಳೆದ ಜೂನ್ ೧ನೇ ತಾ|| ಮೈಸೂರು ಖಜಾನೆಯಲ್ಲಿ ರೈಲ್ವೆಯ ೨|| ಲಕ್ಷ ರೂ ಹಣವನ್ನು ಕಟ್ಟಲು ಬಂದು ಅಷ್ಟೇ ಹಣಕ್ಕೆ ಚಲನ್ ಬರೆದು ೧೬೨೫೦೦ ರೂ. ಕಡಿಮೆ ಮಾಡಿ, ಬಾಕಿ ಹಣವನ್ನು ಕಟ್ಟಿದರೆಂದೂ, ಅದು ಈಗ ಪತ್ತೆಯಾಗಿ ಅವರನ್ನು ದಸ್ತಗಿರಿ ಮಾಡಲಾಯಿತೆಂದೂ ತಿಳಿದುಬಂದಿದೆ.

ಶ್ಯಾಮ ಪ್ರಸಾದ್ ಮುಖರ್ಜಿಯವರಿಂದ ಘಟಿಕೋತ್ಸವಭಾಷಣ

ಮುಂದಿನ ತಿಂಗಳು ೩ನೇ ತಾ|| ನಡೆಯುವ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾರತ ಸರ್ಕಾರದ ಕೈಗಾರಿಕಾ ಸಚಿವರಾದ ಡಾ|| ಶ್ಯಾಮ ಪ್ರಸಾದ್ ಮುಖರ್ಜಿಯವರು ಭಾಷಣ ಮಾಡುವರು

ನ್ಯೂಯಾರ್ಕಿನಲ್ಲಿ ನೆಹರೂರವರಿಗೆ ರಾಜವೈಭವದ ಸ್ವಾಗತ

ನಿನ್ನೆ ದಿನ ನ್ಯೂ ಯಾರ್ಕ್ ನಗರವು ಪಂಡಿತ ನೆಹರೂರವರಿಗೆ ಅತ್ಯಂತ ವೈಭವದ ಸ್ವಾಗತವನ್ನು ಇತ್ತಿತು. ಅವರ ಬಿಡಾರದಿಂದ ಮೆರವಣಿಗೆಯಲ್ಲಿ ಹೊರಟಾಗ ಅವರ ಮುಂದೆ ಸೈನ್ಯ, ವಿಮಾನ ಮತ್ತು ಭೂ ಸೈನ್ಯ ಪಡೆಗಳು ಹೊರಟು ಗೌರವವನ್ನು ಸಲ್ಲಿಸಿದುವು. ಅವರ ಹಿಂದೆ ೧೫ ಮೋಟಾರುಗಳಲ್ಲಿ ಅವರ ಅನುಯಾಯಿಗಳು ಮುಂತಿಸಿದ್ದರು. ನಗರದ ಅಧ್ಯಕ್ಷರಾದ ಮಿ|| ವಿಲಿಯಂ ಓಡ್ವೈಯರ್‌ರವರು ಅವರನ್ನು ಸಕಲ ಮರ್ಯಾದೆಗಳೊಡನೆ ನಗರ ಭವನದಲ್ಲಿ ಸ್ವಾಗತಿಸಿ, ಸತ್ಕರಿಸಿದರು.

ಜನವರಿ ೨೬ನೇ ತಾ|| ಭಾರತದ ರಿಪಬ್ಲಿಕ್ ಸ್ಥಾಪನೆ

ಅಖಿಲ ಭಾರತ ಕಾಂಗ್ರೆಸ್ಸಿನ ಆಜ್ಞೆಯ ರೀತ್ಯಾ ಭಾರತವು ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞಾ ವಚನವನ್ನು ಕೈಗೊಂಡ ೨೦ ವರ್ಷಗಳ ನಂತರ ಅಂದರೆ ಬರುವ ಜನವರಿ ೨೬ ನೇ ತಾ|| ಭಾರತದಲ್ಲಿ ಸರ್ವ ತಂತ್ರ ಸ್ವತಂತ್ರ ರಿಪಬ್ಲಿಕ್ ಜನನವಾಗುವುದು. ಆ ದಿನ ಭಾರತದ ರಿಪಬ್ಲಿಕ್ಕಿನ ಉದ್ಘಾಟನೆ ನಡೆಸಬೇಕೆಂದೂ ಮತ್ತು ೧೯೩೫ ಮತ್ತು ೧೯೪೭ನೇ ಶಾಸನಗಳನ್ನು ರದ್ದುಗೊಳಿಸಬೇಕೆಂದೂ ನಿನ್ನೆ ಕೇಂದ್ರ ರಾಜ್ಯಾಂಗ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರು ಎಂ.ಬಿ.ಬಿ.ಎಸ್. ಪದವಿಗೆ ಮನ್ನಣೆ

ಭಾರತ ಸರ್ಕಾರದ ಆರೋಗ್ಯ ಸಚಿವರಾದ ರಾಜ ಕುಮಾರಿ ಅಮೃತ ಕೌರ್‌ರವರ ಅಧ್ಯಕ್ಷತೆಯಲ್ಲಿ ಕಳೆದ ೧೫ ನೇ ತಾ|| ಡೆಹಲಿಯಲ್ಲಿ ನಡೆದ ಭಾರತದ ವೈದ್ಯ ಸಂಘದ ಸಭೆಯಲ್ಲಿ ಮೈಸೂರು ಮತ್ತು ಪಂಜಾಬ್ ವಿಶ್ವವಿದ್ಯಾನಿಲಯಗಳ ಎಂ. ಬಿ ಬಿ ಎಸ್. ಪದವಿಗೆ ಭಾರತ ಸರ್ಕಾರದವರು ಮನ್ನಣೆ ಕೊಡಬೇಕೆಂದು ನಿರ್ಣಯ ಮಾಡಲಾಯಿತು.

ಮೈಸೂರು ಸಂಸ್ಥಾನದ ಸಮ್ಮೇಳನ

ಮೈಸೂರು ೧೭

ಸಂಸ್ಥಾನದ ಸ್ವಾತಂತ್ರ್ಯವನ್ನು ಕಾಪಾಡಲು ಇದೇ ೨೦ ನೇ ತಾ॥ ರಾಜಧಾನಿಯಲ್ಲಿ ಸಂಸ್ಥಾನದ ಮಹಾ ಜನರ ಸಮ್ಮೇಳನವನ್ನು ಕರೆಯಲು ನಿರ್ಧರಿಸಿದೆ ಸಂಸ್ಥಾನವು ಭಾರತದೊಳಗೆ ವಿಲೀನವಾಗಬೇಕೆಂದೂ ಮತ್ತು ಇಡೀ ಕರ್ನಾಟಕವು ಒಂದು ಪ್ರಾಂತ್ಯವಾಗಿ ಅದರಲ್ಲಿ ಮೈಸೂರು ವಿಲೀನವಾಗಬೇಕೆಂದೂ ಪ್ರಬಲವಾದ ಪ್ರಯತ್ನಗಳು ನಡೆಯುತ್ತಲಿರುವುದರಿಂದ ಈ ವಿಷಯದಲ್ಲಿ ಪ್ರಜಾ ಅಭಿಪ್ರಾಯ ಪಡೆಯಬೇಕಾದುದು ಅತ್ಯಗತ್ಯವಾಗಿದೆ ಆದುದರಿಂದ ಮಹಾಜನರು ಈ ಸಮ್ಮೇಳನದಲ್ಲಿ ಸೇರಬೇಕಾಗಬೇಕು—ಎಂದು ಇದರ ಕಾರ್ಯದರ್ಶಿಗಳಾದ ಶ್ರೀಗಳು ಎಂ ಸಿ ಲಿಂಗೇಗೌಡ ಮತ್ತು ಬಿ ಎಸ್ ಸುಬ್ಬರಾಯರುಗಳು ಒಂದು ಮನವಿಯನ್ನು ಹೊರಡಿಸಿರುತ್ತಾರೆ ಸಮ್ಮೇಳನಕ್ಕೆ ಪರಸ್ಥಳದಿಂದ ಬರುವವರ ವಸತಿ ಮುಂತಾದ ಸೌಕರ್ಯಕ್ಕಾಗಿ ಮುಂಚಿತವಾಗಿ ಕಾರ್ಯದರ್ಶಿಗಳಿಗೆ ಬರೆಯಬೇಕೆಂದು ಕೋರಲಾಗಿದೆ

—

ಮೈಸೂರು ಸಿಟಿ ರೇಷನಿಂಗ್ ಆಫೀಸು

ನೋಟಿಫಿಕೇಷನ್

ನಂ R ೦ 10 49 50

ತಾ॥ ೧೭–೧೦–೪೯

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಭಾ ಗೋಡೌನ್ ವರ್ತಕರ ಡಿಪೋ ಮತ್ತು ಸಹಕಾರ ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಡುತ್ತವೆ –

ತಾ 20–10–49ನೇ ಗುರುವಾರ ನರಕ ಚತುರ್ದಶೀ ಪ್ರಯುಕ್ತ ಎಲ್ಲಾ ಡಿಪೋಗಳಿಗೂ ಪೂರ್ತಾ ರಜಾ

ತಾ॥ 22–10–49ನೇ ಶನಿವಾರ ಬಲಿಪಾಡ್ಯಮಿ ಪ್ರಯುಕ್ತ ಎಲ್ಲಾ ಡಿಪೋಗಳಿಗೂ ಮಧ್ಯಾಹ್ನ ಮಾತ್ರ ರಜಾ

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್ ಮೈಸೂರು ಸಿಟಿ

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

ಗೂರಲು, ಉಬ್ಬಸ, ಪಕ್ಕೆಶೂಲೆ ಮತ್ತು ಗಲಾಯುಕಕ್ಕೆ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ನವರಾತ್ರಿ ರಜಾ ಕಳೆದನಂತರ ಮೊದಲ್ಗೊಂಡು ಶಿಶುವಿಹಾರದ ಈಗ ತಾನೆ ಶುರು ಮಾಡಲ್ಪಟ್ಟ ತನ್ನದೇ ಆದ ಆಧುನಿಕ ಶಿಕ್ಷಣ ... ಮಕ್ಕಳ ಶಿಕ್ಷಣ ಕಾರ್ಯವನ್ನು ಆರಂಭಿಸಿದೆ ಶಿಶುವಿಹಾರ ಸದ್ಯಕ್ಕೆ ಆವಶ್ಯಕವಿರುವ ಮಾತಾಪಿತೃಗಳು ... ಒಪ್ಪಿಸುವುದರ ... ಒಡನೆ ... ಸಂಬಂಧಾಗಿದೆ

ಪ್ರವಾಹದಿಂದ ೧೨ ಜನರ ಮರಣ

ತುಂಗಭದ್ರಾ ಮತ್ತು ಕೃಷ್ಣಾ ನದಿಗಳಲ್ಲಿ ವಿಪರೀತ ಪ್ರವಾಹವುಂಟಾಗಿ ಕರ್ನೂಲು ಜಿಲ್ಲೆಯ ಪ್ರದೇಶದಲ್ಲಿ ೧೨ ಜನರು ಸತ್ತರೆಂದೂ, ೪ ಸಾವಿರ ಜನರು ಮನೆ, ಮಠಗಳನ್ನು ಕಳೆದುಕೊಂಡು ನಿರ್ಗತಿಕರಾದರೆಂದೂ ಮತ್ತು ನೂರಾರು ದನ ಕರುಗಳು ಕೊಚ್ಚಿಹೋದುವೆಂದೂ ವರದಿಯಾಗಿದೆ

ಟೆನೆಸ್ಸಿ ಕಣಿವೆ ಅಧಿಕಾರಿಗಳೊಡನೆ ನೆಹರೂ ಭೇಟಿ

ಅಮೇರಿಕದ ಸುಪ್ರಸಿದ್ಧ ಟೆನೆಸ್ಸಿ ವ್ಯಾಲಿ ಅಧ್ಯಕ್ಷರಾದ ಮತ್ತು ಈಗ ಅಣು ಶಕ್ತಿಯ ಸಮಿತಿಯ ಮುಖ್ಯಸ್ಥರಾದ ಅಲಿಯರ್ ಲಿಲಿಯಂಥಾಲ್ ರವರನ್ನು ಪಂಡಿತ ನೆಹರೂರವರು ಭೇಟಿ ಮಾಡಿ ಭಾರತದಲ್ಲಿ ವಿದ್ಯುಚ್ಛಕ್ತಿಯ ಅಭಿವೃದ್ಧಿ ಬಗ್ಗೆ ಮಾತುಕತೆ ನಡೆಸಿದರು

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು

ಮೈಸೂರ ಸಿಟಿಯಲ್ಲಿ ಆಹಾರ ಪದಾರ್ಥಗಳನ್ನು ರವಾನಿಸಲು ಟೆಂಡರು

ನೋಟಿಫಿಕೇಷನ್

ಮೇಲ್ಕಂಡ ಟೆಂಡರಿಗೆ ಸಂಬಂಧಪಟ್ಟ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ –

ಮೈಸೂರು ಸಿಟಿಯಲ್ಲಿ ಆಹಾರ ಪದಾರ್ಥಗಳನ್ನು ಸಾಗಿಸಲು ಟೆಂಡರುಗಳನ್ನು ತೆಗೆದುಕೊಳ್ಳಲು ನಿಗದಿ ಮಾಡಿದ್ದ ಕಾಲವನ್ನು ಇದೇ ಮಾಹೆ ೧೫ನೇ ತಾರೀಖಿನಿಂದ ೨೫ನೇ ತಾರೀಖಿನವರೆವಿಗೆ ಮುಂದುವರಿಸಲಾಗಿದೆ

ಇತರ ವಿವರಗಳನ್ನು ಮೈಸೂರು ಸಿಟಿ ರೇಷನಿಂಗ್ ಆಫೀಸರ ಕಛೇರಿಯಲ್ಲಿ ತಿಳಿಯಬಹುದು

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರು

ರೂಸ್‌ವೆಲ್ಟರ ಸಮಾಧಿಗೆ ನೆಹರೂರವರ ಭೇಟಿ

ನ್ಯೂಯಾರ್ಕ್ ಸಂಸ್ಥಾನದಲ್ಲಿರುವ ಹೈಡ್ ಪಾರ್ಕಿಗೆ ಪಂಡಿತ ನೆಹರೂರವರು ಮೊನ್ನೆ ದಿನ ಭೇಟಿ ಇತ್ತು, ದಿವಂಗತ ಅಧ್ಯಕ್ಷ ರೂಸ್‌ವೆಲ್ಟರ ಸಮಾಧಿಗೆ ಪುಷ್ಪಹಾರವನ್ನು ಅರ್ಪಿಸಿದರು ಅನಂತರ ಸತಿ ರೂಸ್‌ವೆಲ್ಟರೊಡನೆ ಉಪಾಹಾರವನ್ನು ಸ್ವೀಕರಿಸಿದರು. ರೂಸ್‌ವೆಲ್ಟರು ಮಾನವ ವರ್ಗಕ್ಕೆ ಸಲ್ಲಿಸಿದ ಸೇವೆಯನ್ನು ನೆಹರೂರವರು ಕೊಂಡಾಡಿ, ಅವರ ಮಾರ್ಗದಲ್ಲೇ ಸತಿ ರೂಸ್‌ವೆಲ್ಟರೂ ಸಹ ನಡೆಸುತ್ತಿರುವ ಸೇವೆಗಾಗಿ ತಮ್ಮ ವಂದನೆಯನ್ನರ್ಪಿಸಿದರು

ಚೀನಾ ಸರ್ಕಾರದ ರಾಜಧಾನಿ

ಚೀನಾ ರಾಷ್ಟ್ರೀಯ ಸರ್ಕಾರದ ರಾಜಧಾನಿಯು ಕುನ್ಮಿಂಗ್ ಇರಬೇಕೆಂದು ಅದರ ಮಂತ್ರಿಮಂಡಲ ನಿರ್ಧರಿಸಿದೆ

ಮನೆ ಕ್ರಯಕ್ಕಿದೆ

ನಂ 2831 10 ನೇ ಕ್ರಾಸ್, ವಾಣೀವಿಲಾಸ ಮೊಹಲ್ಲಾ ವಿವರಗಳಿಗೆ —

ಆರ್. ಗುಂಡೂರಾವ್,
ಶ್ರೀರಾಂಪೇಟೆ, ಮೈಸೂರು

ರಾಜಕಮಲ್,

ಮೈಸೂರು

14–10–49 ರಿಂದ

ಅಮೋಘವಾದ 3ನೇ ವಾರ

ಫಿಲ್ಮಿಸ್ತಾನರವರ

– ಆಕ್ರೆಸ್ –

ರೆಹನ, ಮೀನ, ಪ್ರೇಮ್ ಅದೀಬ್
ಅಭಿನಯಿಸಿರುವ ಹಿಂದಿ ಚಿತ್ರ

ಮಹಾರಾಜರ ಹೆಸರು ಇರಬೇಕೆಂದು ಪ್ರಾರ್ಥನೆ

ಮೈಸೂರು ಸಂಸ್ಥಾನದ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ಶ್ರೀಗಳು ಎಂ ಸಿ ಲಿಂಗೇಗೌಡ ಬಿ ಎಸ್ ಸುಬ್ಬರಾಯರು ಮೊನ್ನೆ ಗವರ್ನರ್ ಜನರಲ್, ಪ್ರಧಾನಿ, ಉಪಪ್ರಧಾನಿ, ಶ್ರೀ ವಿ ಪಿ ಮೆನನ್, ರಾಜ್ಯಾಂಗ ಸಭಾಧ್ಯಕ್ಷರು ಮತ್ತು ಪ್ರಾಂತ್ಯ ಮುಖ್ಯ ಮಂತ್ರಿಗಳಿಗೆ ತಂತಿ ಕಳುಹಿಸಿ, ಮಹಾರಾಜರ ಹೆಸರನ್ನಿಟ್ಟು ಪ್ರಾಂತೀಯ ಸ್ವಾತಂತ್ರ್ಯ ... ಈಗಿರುವ ಸರಹದ್ದುಗಳನ್ನೂ ... ಕೆಂದು ಪ್ರಾರ್ಥಿಸಿರುತ್ತಾರೆ

ರಾಷ್ಟ್ರೀಯ ರಕ್ಷಣಾ ಕೇಂದ್ರ ಮೈಸೂರಿನ ಕಟ್ಟಡ

ಪುಣೆಯ ಹತ್ತಿರ ಖಾಡಕವಾಸ್ಲದಲ್ಲಿರುವ ರಾಷ್ಟ್ರೀಯ ರಕ್ಷಣಾ ಕೇಂದ್ರ ಮೈಸೂರಿನ ಹೆಸರಿನಲ್ಲಿ ಒಂದು ... ನ್ನು ಕಟ್ಟಲು ಸರ್ಕಾರದವರು ... ರಾತಿಯನ್ನು ಕೊಟ್ಟಿದ್ದಾರೆ

ಹೋಟೇಲ್ ಕೆಲಸಗಾರರ ಸಂಬಳ

ರಾಜಧಾನಿಯ ಕೆಲವು ಹೋಟೇಲ್ ಮಾಲೀಕರುಗಳ ತಮ್ಮ ಕೆಲಸಗಾರರಿಗೆ ದಸರಾ ಕಾಲದಲ್ಲಿ ಹೆಚ್ಚಿಗೆ ... ಮಾಡಿದುದಕ್ಕೆ ಕಾನೂನು ಪ್ರಕಾರ ... ಬೇಕಾದ ಹೆಚ್ಚಿಗೆ ಸಂಬಳವನ್ನು ... ಸೇರುಕುಳ ಕೊಡುತ್ತಿರುವುದು ... ವೆಂದೂ, ಕೆಲಸಗಾರರಿಗೆ ದಸರಾ ... ಮತ್ತು ವರ್ಷಾಂತ್ಯದ ೩೦ ದಿವಸ... ವನ್ನು ಕೊಡಲೇ ಕೊಡಬೇಕೆಂದು ... ದ ಹೋಟೇಲ್ ಕೆಲಸಗಾರರ ... ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ದೀಪಾವಳಿ ಶುಭಾಶಯಗಳು

— ೦ —

ನಾರ್ಥರ್ನ್ ಕಾಫಿ ... ಜನರಲ್ ಸ್ಟೋರ್ಸ್

ಹಳೇ ಅಗ್ರಹಾರ, ಮೈಸೂರು
ಮತ್ತು

ನೆಹರೂ ಕಾಫಿ ... ಜನರಲ್ ಸ್ಟೋರ್ಸ್

ಚಾಮುಂಡಿ ಬಡಾವಣೆ, ಮೈಸೂರು

★

ದೀಪಾವಳಿಯ ಪ್ರಯುಕ್ತ ... ಬಾಲಕಬಾಲಕಿಯರುಗಳಿಗೆ ... ವಿಧವಿಧವಾದ ಪಟಾಕಿ ಮತ್ತು ... ಗಳು ಅತ್ಯಂತ ಕಡಿಮೆ ಬೆಲೆಗೆ ... ತ್ತವೆ ಒಂದು ಸಲ ಪರೀಕ್ಷಿಸಿ ...

ಹೂವಿನ ಕಡ್ಡಿ (ಸಣ್ಣದು) ...
,, (ದೊಡ್ಡದು) ,
ಮತಾಪು
ಚೈನಾ ಚ...
ಏರೋಪ್ಲೇನ್
,, (ದೊಡ್ಡದು)
ಭೂ ಚಕ್ರ
, (ಸಣ್ಣದು)
ತುಕಡಿ ಪಟಾಕಿ ೧೦ ಸರ...ಗಳ ಕಟ್ಟು ...

ಸ್ಪೆಷಲ್ ಕಾಫಿ ...

ಪೌಂಡು ಒಕ್ಕೆ ರೂ ...

ಹಣವಂತರೇ!

ನೀವು ಗಳಿಸಿದ ಹಣ ಭದ್ರವಾಗಿರಬೇಕು

ಒಂದು ವೇಳೆ ಬ್ಯಾಂಕ್ ದಿವಾಳಿಯಾದರೇನು ಗತಿ?

ನಿಮ್ಮ ಮಾಡಿದ ಸ್ಥಿರಾಸ್ತಿಯೇ ಮೇಲಲ್ಲವೇ ?

ಸೇಕಡ 6 ಬಡ್ಡಿ ಬರುವ, ತಿಂಗಳಿಗೆ 150 ರೂ ಬಾಡಿಗೆ ಬರುವ ಆಫೀಸ್, ಹೋಟೇಲ್, ವಾಸಗಳಿಗನುಕೂಲವಾದ

ಮನೆ 28,750 ರೂ. ಬೆಲೆಗಿದೆ.

ನಲ್ಲಿ, ದೀಪ, ಮಹಡಿ, ಫ್ಲಷ್, ಗ್ಯಾರೇಜ್ ಎಲ್ಲಾ ಇವೆ, ಖಾಲಿ ಜಾಗ ಮಾತ್ರ ಇಲ್ಲ ರಾಜಧಾನಿಯ ಕ್ಲಾಕ್ ಟವರ್ ಸ್ಟ್ರೀಟ್ ಸಮೀಪದಲ್ಲಿದೆ

ಬಿ. ಎಸ್. ಸುಬ್ಬರಾವ್,

ಜಗನ್ಮೋಹನ ಬಂಗ್ಲೆ ಬಳಿ : ಮೈಸೂರು

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಪಂಚಾಮೃತ ಮತ್ತು ಪಂಚಾಗ್ನಿ ಲವಣ

ಮಲೇರಿಯಾ ಗೆಡ್ಡೆ ಕರಗಿಸುವುದರಲ್ಲಿ ೪೦ ವರ್ಷಗಳ ಖ್ಯಾತಿ ಪಡೆದ ಸಿದ್ಧ ಸಂಜೀವನ

ಉಪ್ಪಿನ ಬಿಳಿ ಹಲ್ಲುಪುಡಿ ಹೊಟ್ಟಿನ ಬೂದಿ ಸೀಮೆ ಸುಣ್ಣ ಇಲ್ಲದ ಸ್ಪೆಷಲ್ ಟೂತ್ ಪೌಡರ್

ಪೊಟ್ಟಣ ಒಕ್ಕೆ ೦–೧–೬

S. N. PANDIT & SONS,
90 Lansdowne Buildings Mysore

Edited, printed and published by A. R. Nagarajan at Sadhvi Press D. Subbiah Road, Mysore,

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೧೯-೧೦-೧೯೪೯ [ಸಂಚಿಕೆ ೬೯

- ಸಂಸ್ಥಾನದಲ್ಲಿ -
ಆರೋಗ್ಯ ತೆರಿಗೆಯೇ?

ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವುದು

ಮೈಸೂರು ೧೯

ಅಖಿಲ ಭಾರತ ಕಾಂಗ್ರೆಸ್ಸಿನ ನೂತನ ...ಗ ರಚನೆಯ ಪ್ರಕಾರ, ಮೈಸೂರು ನ...ವನ್ನು ೨೯ ಪಂಚಾಯಿತಿಗಳನ್ನಾಗಿ ವಿಂ...ಸಿ, ಅವುಗಳಿಗೆ ತಾತ್ಕಾಲಿಕ ಕಾರ್ಯ...ರ್ವಾಹಕ ಸಮಿತಿಗಳನ್ನು ರಚಿಸಲಾಗಿದೆ ...ಚಾಯಿತಿಗಳ ಎಲ್ಲೆಗಳಲ್ಲಿರುವ ೨೧ ವ...ಕ್ಕೆ ಮೇಲ್ಪಟ್ಟವರು ಮತ್ತು ಕಾಂಗ್ರೆ...ಘಟನೆಯ ಮೊದಲನೆಯ ನಿಯಮವ... ಒಪ್ಪಿಕೊಳ್ಳುವವರು ಅದಕ್ಕೆ ಸದಸ್ಯ...ಗಬಹುದು. ಕಾಂಗ್ರೆಸ್ ಸದಸ್ಯರಾಗ...ಸುವವರು ತಮ್ಮ ಹೆಸರುಗಳನ್ನು ಕಾ...ರ್ಯ ನಿರ್ವಾಹಕರಿಗೆ ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ನಗರದ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ...ರುತ್ತಾರೆ.

ಕಾಂಗ್ರೆಸ್ ಘಟನೆಯ ಮೊದಲನೇ ನಿ...ವ ಪ್ರ ಈ ರೀತಿ ಇದೆ- "ಹಿಂದೂ...ದ ಜನತೆಯ ಸುಖ, ಹಾಗೂ ಪ್ರಗ...ನ್ನು ಸಾಧಿಸುವುದು ಮತ್ತು ವಿಶ್ವ...ಧತ್ವ, ಹಾಗೂ ಶಾಂತಿಯ ಗುರಿಯು ...ರಾಜಕೀಯ, ಆರ್ಥಿಕ, ಸಾಮಾಜಿಕ ...ತೆಯ ತಳಹದಿಯ ಮೇಲೆ ಭಾರತದ ...ರೋಗ್ಯ ಮತ್ತು ಶಾಂತ ಉಪಾಯಗ... ಸಹಕಾರಿ ರಾಜ್ಯ ಪದ್ಧತಿಯನ್ನು ...ಸುವುದೇ ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯ".

...ಟಾರು ಕೆಲಸಗಾರರ ಸಂಘದ ವಾರ್ಷಿಕೋತ್ಸವ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ವಾರ್ಷಿಕೋತ್ಸವವು ಇ... ...ನೇ ತಾ॥ ಭಾನುವಾರ ಮಧ್ಯಾ... ...ಕಾರ್ಮಿಕ ಸಚಿವ ಶ್ರೀ ಎಚ್. ಸೀತಾರಾಮ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದರಿಂದ ಆ ದಿನ ಎಲ್ಲ ಕೆಲಸಗಾರರಿಗೂ ರಜಾ ಕೊಡಬೇಕೆಂದು ಮಾಲೀಕರ... ...ಪ್ರಾರ್ಥಿಸಲಾಗಿದೆ. ಆ ದಿನ ಬಸ್ಸುಗಳು ...ಲ್ಲಿಸಲ್ಪಟ್ಟು ಸಾರ್ವಜನಿಕರಿಗೆ ಸ್ವಲ್ಪ ...ತೊಂದರೆಯಾಗಬಹುದು. ಆದರೂ ಅವರುಗಳು ಸಹಕರಿಸಬೇಕೆಂದು ಸಂಘದ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

...ರನ್ನು ನಾಶ ಮಾಡುವುದನ್ನು ...ಡೆಯಲು ಖೆಡ್ಡಾ ವ್ಯವಸ್ಥೆ

...ಸ್ಥಾನದಲ್ಲಿ ಸಾವಿರಾರು ರೂ. ಬೆಲೆ...ವ ಪೈರುಗಳನ್ನು ಆನೆಗಳು ನಾಶ ಮಾಡುತ್ತಿರುವುದನ್ನು ನಿಲ್ಲಿಸಿ ರೈತರಿಗೆ ಅ...ಲವಾಗುವಂತೆ ಮಾಡಲು, ಬರುವ ...ರ್ ತಿಂಗಳಿನಲ್ಲಿ ಕಾಕನಕೋಟೆ...ಲ್ಲಿ ಖೆಡ್ಡಾ ವ್ಯವಸ್ಥೆ ಮಾಡಲಾಗು...ತ್ತು. ಅದಕ್ಕೆ ೭೫ ಸಾವಿರ ರೂ. ಖರ್ಚು ... ಪಂಡಿತ ನೆಹರೂರವರ ಗೌರವಾರ್ಥವಾಗಿ ಕಳೆದ ಡಿಸೆಂಬರಿನಲ್ಲಿ ನಡೆದ ಖೆ...ಡ್ಡಾದಲ್ಲಿ ೪೦ ಆನೆಗಳನ್ನು ಹಿಡಿಯಲಾ...ಯಿತು. ಅದಕ್ಕೆ ೧,೦೪,೯೪೫ ರೂ. ಖ...ರ್ಚಾಗಿ ೧,೦೭,೪೪೫ ರೂ ವರಮಾನ ...ಬಂತು ಎಂದು ಸರ್ಕಾರದ ಪ್ರಕಟಣೆ ...ತಿಳಿಸುತ್ತದೆ

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ... ಎಂ. ಓ. ಡಾ॥ ಮಾಸ್ಕರೆನ್ಹಾಸರವರನ್ನು ಭದ್ರಾವತಿಗೂ, ಮೇಜರ್ ...ಸಲಾಯರನ್ನು ಮೈಸೂರಿಗೂ ವರ್ಗಾಯಿಸಲಾಗಿದೆ

ಗ್ರಾಮ ಕಲೆಗಳ ವಸ್ತು ಸಂಗ್ರಹಾಲಯ

ಮೈಸೂರು ೧೯

ಗ್ರಾಮಗಳು ಉದ್ಧಾರವಾಗಬೇಕಾದರೆ ಗ್ರಾಮ ಕಲೆಯು ಉದ್ಧಾರವಾಗಬೇಕು ಈ ಪುನರುದ್ಧಾರದ ಕಾರ್ಯದಲ್ಲಿ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ಅಪಾರ ಕೆಲಸ ನಡೆಸುತ್ತಿದ್ದಾರೆ ಈ ಸಂದರ್ಭದಲ್ಲಿ ಗ್ರಾಮ ನೃತ್ಯ, ಸಂಗೀತ, ಆಟಪಾಟ, ಕೋಲಾಟ, ಯಕ್ಷಗಾನ ಮುಂತಾದ ಎಲ್ಲ ಹಳ್ಳಿಗಳಿಗೆ ಸಂಬಂಧಿಸಿದ ಸಲಕರಣೆಗಳ ಒಂದು ಶಾಶ್ವತ ವಸ್ತು ಸಂಗ್ರಹಾಲಯವನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ತೆರೆಯಬೇಕೆಂದು ನಿರ್ಧರಿಸಲಾಗಿದೆ. ಇದಕ್ಕೆ ಪ್ರತಿ ತಾಲ್ಲೂಕು ಮತ್ತು ಜಿಲ್ಲೆಯ ಅಕ್ಷರ ಪ್ರಚಾರದ ಅಧಿಕಾರಿಗಳೂ ಮತ್ತು ಸಾರ್ವಜನಿಕರೂ ಸಲಕರಣೆ ವಸ್ತುಗಳನ್ನು ಸಂಗ್ರಹಿಸಿ, ಕಳುಹಿಸಬೇಕು- ಎಂದು ಪ್ರಾರ್ಥಿಸಿ, ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ಮರಿಯಪ್ಪ ಗೌಡರು ಪ್ರಕಟನೆ ಹೊರಡಿಸಿರುತ್ತಾರೆ

ಈ ವಸ್ತು ಸಂಗ್ರಹಾಲಯವನ್ನು ಅಂತರ ರಾಷ್ಟ್ರೀಯ ವಯಸ್ಕರ ವಿದ್ಯಾಭ್ಯಾಸ ಗೋಷ್ಠಿಯ ವಸ್ತು ಪ್ರದರ್ಶನದ ಅಂಗವಾಗಿ ತೆರೆಯಲಾಗುವುದು.

ಯುವಕರ ಸಂಘದ ಅಧಿಕಾರಿ ವರ್ಗ

ರಾ ಜ ಧಾ ನಿ ಯ ಚಾಮುಂಡಿ ಪುರದ ಯುವಕರ ಸಂಘದ ವಾರ್ಷಿಕ ಸಭೆಯು ಕಳೆದ ೧೬ ನೇ ತಾ॥ ನಡೆದು, ಶ್ರೀ ಸಿ ಜಿ ರಾಮಕೃಷ್ಣ ಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಪಿ ವಿ ವೆಂಕಟರಾಮು ಮತ್ತು ಜಿ ಕೇಶವಮೂರ್ತಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು

ಶ್ರೀ ಎಂದು ಹೆಂಗಸರಿಗೂ ಉಪಯೋಗಿಸಬಹುದು

'ಶ್ರೀ' ಎಂಬ ಪದವನ್ನು ಗಂಡಸರು ಮತ್ತು ಹೆಂಗಸರಿಗೆ ಉಪಯೋಗಿಸಬಹುದೇ ಎಂಬ ಪ್ರಶ್ನೆಯು ಪೂರ್ವ ಪಂಜಾಬ್ ಶಾಸನ ಸಭೆಯಲ್ಲಿ ಬಂದಿತು. ಶ್ರೀ ಸೀತಾದೇವಿ ಎಂದು ಕರೆಯಬಹುದೇ ಎಂದು ಅಧ್ಯಕ್ಷರು ಕಾರ್ಮಿಕ ಸಚಿವರನ್ನು ಕೇಳಿದರು. ಶ್ರೀ ಎಂಬುದು ಏಕಲಿಂಗವಾಚಕವಾದುದರಿಂದ ಇಬ್ಬರಿಗೂ ಅದನ್ನು ಉಪಯೋಗಿಸಬಹುದೆಂದು ಅವರು ಹೇಳಿದುದರಿಂದ ಅನಂತರ ಅವ..ರು ತೀರ್ಮಾನ ಕೊಟ್ಟರು

ಆರೋಗ್ಯ ತೆರಿಗೆ ವಿಧಿಸಬೇಕೆಂದು ಸಲಹೆ.

ಸ್ವಂ.ಸು.ಫೋ[ನ್] ಬೆಂಗಳೂರು ೧೯

ಸಂಸ್ಥಾನದ ಆರೋಗ್ಯ ಬಾಬಿಗಾಗಿ ಹಣ ಖರ್ಚುಮಾಡಲು ಆರೋಗ್ಯ ತೆರಿಗೆಯನ್ನು ವಿಧಿಸಬೇಕೆಂದು ನಿನ್ನೆ ನಡೆದ ಆರೋಗ್ಯ ಬೋರ್ಡಿನ ಸಭೆಯಲ್ಲಿ ಸರ್ಕಾರಕ್ಕೆ ಸಲಹೆ ಮಾಡುವ ನಿರ್ಣಯ ಮಾಡಲಾಯಿತು ಆರೋಗ್ಯ ಸಚಿವ ಜನಾಬ್ ಮಹಮೂದ್ ಷರೀಫ್‌ರವರು ಅಧ್ಯಕ್ಷತೆ ವಹಿಸಿದ್ದರು

ಮೌಲಾನಾ ಆಜಾದರಿಗೆ ಮಾನಪತ್ರವನ್ನು ಅರ್ಪಿಸಲು ಬೆಂಗಳೂರು ಪೌರಸಭೆಯವರು ೨ ಸಾವಿರ ರೂ. ಅನ್ನು ಮಂಜೂರು ಮಾಡಿರುತ್ತಾರೆ

ಪ್ರತಿ ಹಳ್ಳಿಗೂ ಕುಡಿಯುವ ನೀರಿನ ಸೌಕರ್ಯ

ಸಂಸ್ಥಾನದಲ್ಲಿರುವ ಪ್ರತಿಯೊಂದು ಹಳ್ಳಿಯಲ್ಲೂ ಕುಡಿಯುವ ನೀರಿನ ಸೌಕರ್ಯ ಒದಗಿಸುವ ಯೋಜನೆಯೊಂದನ್ನು ಕಾರ್ಮಿಕ ಸಚಿವ ಶ್ರೀ ಕೆ ಟಿ. ಭಾಷ್ಯಂರವರು ತಯಾರಿಸಿದ್ದಾರೆ. ಇದರ ಪ್ರಕಾರ ಭಾವಿ ಅಥವಾ ಕೆರೆಯಿಂದ ನೀರನ್ನು ಪಂಪುಗಳ ಮೂಲಕ ಒಂದು ಟ್ಯಾಂಕಿನಲ್ಲಿ ಶೇಖರಿಸಿ, ಅದನ್ನು ನಲ್ಲಿಗಳಿಂದ ಸರಬರಾಜು ಮಾಡಲಾಗುವುದು. ೧೦ ಸಾವಿರ ರೂ ಖರ್ಚಿನಿಂದ ಮಾದರಿಯೊಂದನ್ನು ಸಿದ್ಧಗೊಳಿಸಲಾಗಿದೆ. ಅದು ಮಂಜೂರಾದರೆ, ಕೂಡಲೇ ೧೨ ಹಳ್ಳಿಗಳಲ್ಲಿ ಅದನ್ನು ಸ್ಥಾಪಿಸಲಾಗುವುದು.

ಅಮೆರಿಕಕ್ಕೆ ವಿದ್ಯಾರ್ಥಿಗಳು ಹೋಗಲು ನಿರ್ಬಂಧ

ದೇಶದ ಆರ್ಥಿಕ ಪರಿಸ್ಥಿತಿಯಿಂದಲೂ ಮತ್ತು ಡಾಲರುಗಳ ಕೊರತೆಯು ಅಗತ್ಯವಿರುವುದರಿಂದಲೂ ಅಮೆರಿಕ ಮತ್ತು ಇತರ ಡಾಲರು ರಾಷ್ಟ್ರಗಳಿಗೆ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಹೋಗುವ ಖಾಸಗೀ ವಿದ್ಯಾರ್ಥಿಗಳ ಮೇಲೆ ನಿರ್ಬಂಧ ಹಾಕಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ ಭಾರತದಲ್ಲಿ ಅಥವ ಡಾಲರು ಪ್ರದೇಶಗಳಲ್ಲದ ರಾಷ್ಟ್ರಗಳಲ್ಲಿ ಅಂತಹ ವಿದ್ಯಾಭ್ಯಾಸ ಶಿಕ್ಷಣ ದೊರೆಯದಿದ್ದ ಪಕ್ಷದಲ್ಲಿ ಮಾತ್ರ ಖಾಸಗೀ ವಿದ್ಯಾರ್ಥಿಗಳ ಅಮೆರಿಕಕ್ಕೆ ಹೋಗಲು ಅನುಮತಿ ಕೊಡಲಾಗುವುದೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಮಕ್ಕಳೊಡನೆ ನೆಹರೂ

ನ್ಯೂಯಾರ್ಕಿನ ಶಾಲಾ ಮಕ್ಕಳೊಡನೆ ಪಂಡಿತ ನೆಹರೂರವರು ಹತ್ತು ನಿಮಿಷಗಳ ಕಾಲ ಸಂತೋಷವಾಗಿ ತಮ್ಮ ಕಾಲವನ್ನು ಕಳೆದರು. ಸುಮಾರು ೨೦ ಬಾಲಕರು ಅವರನ್ನು ಮುತ್ತಿ ಪ್ರಶ್ನೆಗಳ ಸುರಿಮಳೆ ಹಾಕಿದರು. ರಷ್ಯದ ಮೇಲೆ ಅಮೆರಿಕವು ಯುದ್ಧ ನಡೆಸಿದಲ್ಲಿ ಭಾರತವು ಅಮೆರಿಕದೊಡನೆ ಸೇರುವುದೇ ಎಂದು ಒಬ್ಬ ಬಾಲಕನು ಕೇಳಿದ ಪ್ರಶ್ನೆಗೆ, ಇನ್ನು ಮುಂದೆ ಯುದ್ಧಗಳೇ ಇರಕೂಡದೆಂದೂ, ಆದರೆ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಲ್ಲಿ ಆಗ ಅದನ್ನು ಕಾಪಾಡಬೇಕಾಗುವುದೆಂದೂ ನೆಹರೂರವರು ಉತ್ತರವಾಗಿ ತಿಳಿಸಿದರು. ಭಾರತದಲ್ಲಿ ಇಂದು ಅತ್ಯಂತ ಕಠಿಣ ಸಮಸ್ಯೆ ಯಾವುದು ಎಂಬ ಮತ್ತೊಂದು ಪ್ರಶ್ನೆಗೆ ಬಡತನ ಎಂದು ಹೇಳಿದರು. ನೆಹರೂರವರಿಗೆ ಮಕ್ಕಳು ಹೂವು ಮತ್ತು ಚಿತ್ರಾಲಂಕಾರಗಳನ್ನು ಅರ್ಪಿಸಿದರು

ಗಾಂಧೀ ಕೊಲೆ ಮೊಕದ್ದಮೆ ಅಪಾದಿತನ ದಸ್ತಗಿರಿ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪಾದಿತನಾಗಿ ತಲೆತಪ್ಪಿಸಿಕೊಂಡಿದ್ದ ಗಂಗಾಧರ ಜಾದವ ಎಂಬುವನನ್ನು ಗ್ವಾಲಿಯರಿನಲ್ಲಿ ನಿನ್ನೆ ದಸ್ತಗಿರಿ ಮಾಡಲಾಯಿತು. ಮತ್ತೊಬ್ಬ ಅಪಾದಿತನಾದ ಸೂರ್ಯದೇವ ಶರ್ಮರವರು ಇನ್ನೂ ಪತ್ತೆ ಆಗಿಲ್ಲ.

ನೈತಿಕ ಶಕ್ತಿಯಿಂದಲೇ ವಿಶ್ವದ ಶಾಂತಿ

ಪ್ರಪಂಚದ ಶಾಂತಿಯನ್ನು ಗೆಲ್ಲಬೇಕಾದರೆ ಮಹಾತ್ಮ ಗಾಂಧೀಜಿಯವರ ನೈತಿಕ ಶಕ್ತಿಯಿಂದಲೇ ಹೊರತು ಪಾಶವಿಕ ಶಕ್ತಿಯಿಂದಲ್ಲ. ಅದನ್ನು ಪ್ರಪಂಚದ ಎಲ್ಲ ವಿಚಾರಪರ ಜನರೂ ಅಂಗೀಕರಿಸಬೇಕೆಂದು ಪಂಡಿತ ನೆಹರೂರವರು ಮೊನ್ನೆ ದಿನ ಕೊಲಂಬಿಯಾ ವಿಶ್ವ ವಿದ್ಯಾನಿಲಯದಲ್ಲಿ ತಿಳಿಸಿರುತ್ತಾರೆ

ಡಿಸೆಂಬರ್ ೧೫ ರಿಂದ ಬೆಂಗಳೂರು ಕಾರ್ಪೊರೇಷನ್

ಬೆಂಗಳೂರು ಕಾರ್ಪೊರೇಷನ್ ಮಸೂದೆಗೆ ಶ್ರೀಮನ್ಮಹಾರಾಜರವರು ತಮ್ಮ ಅಂಗೀಕಾರವನ್ನಿತ್ತಿದ್ದಾರೆ ಅದು ಬರುವ ಡಿಸೆಂಬರ್ ೧೫ನೇ ತಾ॥ನಿಂದ ಜಾರಿಗೆ ಬರುವುದೆಂದು ತಿಳಿದುಬಂದಿದೆ. ಅಂದಿನಿಂದ ನಗರ ಮತ್ತು ದಂಡಿನ ಪ್ರದೇಶಗಳ ಎರಡು ಪುರಸಭೆಗಳನ್ನು ಒಂದುಗೂಡಿಸಿ, ಕಾರ್ಪೊರೇಷನ್ ಆಗಿ ಮಾಡಲಾಗುವುದು ಮತ್ತು ಜನವರಿ ತಿಂಗಳಿನಲ್ಲಿ ಮೇಯರ್‌ರವರ ಚುನಾವಣೆ ನಡೆಯುವುದು

ಶಿಕ್ಷಣ ಸಮ್ಮೇಳನದಲ್ಲಿ ಮಾದರಿ ಗ್ರಾಮ ನಿರ್ಮಾಣ

ಕೃಷ್ಣರಾಜಸಾಗರದ ಬೃಂದಾವನದಲ್ಲಿ ಮುಂದಿನ ೩ ನೇ ತಾ॥ ನಿಂದ ನಡೆಯಲಿರುವ ಅಂತರ ರಾಷ್ಟ್ರೀಯ ವಯಸ್ಕರ ವಿದ್ಯಾಭ್ಯಾಸ ಗೋಷ್ಠಿಯ ಅಂಗವಾಗಿ, ಗ್ರಾಮಾಂತರ ವಯಸ್ಕರ ಶಿಕ್ಷಣ ಪ್ರದರ್ಶನ ಮತ್ತು ಮಾದರಿ ಗ್ರಾಮ ನಿರ್ಮಾಣ ವ್ಯವಸ್ಥೆಗಳು ಹುಲಿಕೆರೆ ಮತ್ತು ಕಟ್ಟೇರಿ ಗ್ರಾಮಗಳಲ್ಲಿ ನಡೆಯಲು ಏರ್ಪಾಡಾಗಿದೆ ಸಮ್ಮೇಳನದ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಗೋಷ್ಠಿಯ ಡೈರೆಕ್ಟರಾದ ಹುಮಾಯೂನ್ ಕಬೀರರವರೂ ಭಾರತ ಸರ್ಕಾರದ ಹಿಂಗೊರಾಣಿಯವರು ಇಲ್ಲಿಗೆ ಬಂದಿದ್ದಾರೆ.

ಚೌಧುರಿಯವರು ಲಂಡನ್ನಿಗೆ

ಹೈದರಾಬಾದಿನ ಮಿಲಿಟರಿ ಗೌರ್ನರರಾದ ಮೇ. ಜ|| ಚೌಧುರಿಯವರು ಲಂಡನ್ನಿಗೆ ತೆರಳಿರುವರು ಬ್ರಿಟನ್ನಿನಲ್ಲಿ ವಿಶೇಷ ಮಿಲಿಟರಿ ಕಾರ್ಯ ಗೌರವದ ಮೇಲೆ ಅವರು ಹೋಗಿರುವುದಾಗಿ ನಂಬಲಾಗಿದೆ

ಭಾರತಕ್ಕೆ ಏಚಿಸನ್ನರ ಭೇಟಿ

ಅಮೆರಿಕದ ವಿದೇಶಾಂ ಮಂತ್ರಿ ಡೀನ್ ಏಚಿಸನ್ನರು ಮುಂದಿನ ವರ್ಷದಲ್ಲಿ ಭಾರತಕ್ಕೆ ಭೇಟಿಯೀಯುಬಹುದೆಂದು ಹೇಳಲಾಗಿದೆ

ಗಣೇಶಾ ಟಾಕೀಸ್

21-10-49ರಿಂದ ಒಂದು ವಾರ ಮಾತ್ರ

ಪ್ರತಿ ದಿನ 3 ಆಟಗಳು

ಕೊಲಂಬಿಯಾರವರ ಪೂರ್ತಿ ಸೀರಿಯಲ್

Perils of the Royal Mounted

ಪೆರಿಲ್ಸ್ ಆಫ್ ದಿ ರಾಯಲ್ ಮೌಂಟೆಡ್

ಮೈಸೂರು ಸಿಟಿ ರೇಷನಿಂಗ್ ಆಫೀಸು

ನೋಟಿಫಿಕೇಷನ್

ನಂ R 6-10 49 50

ತಾ|| ೧೦-೧೦-೪೯

ಮೈಸೂರು ಸಿಟಿಯ ಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊದಲ್ಗೊಂಡು ಖಾಸಗೀ ಗೋಧೋ ವರ್ತಕರ ಡಿಪೋ ಮತ್ತು ಸಹಕಾರ ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಟ್ಟಿರುತ್ತವೆ –

ತಾ|| 20-10-49ನೇ ಗುರುವಾರ ನರಕ ಚತುರ್ದಶೀ ಪ್ರಯುಕ್ತ ಎಲ್ಲಾ ಡಿಪೋಗಳಿಗೂ ಪೂರ್ತಾ ರಜಾ

ತಾ|| 22-10-49ನೇ ಶನಿವಾರ ಬಲಿಪಾಡ್ಯಮಿ ಪ್ರಯುಕ್ತ ಎಲ್ಲಾ ಡಿಪೋಗಳಿಗೂ ಮಧ್ಯಾಹ್ನ ಮಾತ್ರ ರಜಾ

(ಸಹಿ) ಡಿ. ಜೆ. ಬಾಲರಾಜ್,

ರೇಷನಿಂಗ್ ಆಫೀಸರ್ ಮೈಸೂರು ಸಿಟಿ

ಬೆಂಗಳೂರಿನಲ್ಲಿ ಮತ್ತೊಂದು ಮೆಡಿಕಲ್ ಕಾಲೇಜು

೧೯೫೦ರಿಂದ ಬೆಂಗಳೂರಿನಲ್ಲಿ ಮತ್ತೊಂದು ಮೆಡಿಕಲ್ ಕಾಲೇಜನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ

ಸುಸಮಯ ಸ್ಪೆ...

ದೀಪಾವಳಿ ಸ್ಪೆಷಲ್

ಅಸಲಿ ಆಗ್ರಾ ಪೇಟೆ 1 ರೂ 1¼ ಸೇರು ಮಾತ್ರ

ಶೇಷಾಚಲ ಸ್ಟೋರ್ಸ್,

ನಾರಾಯಣ ಶಾಸ್ತ್ರಿ ರೋಡ್, ಮೈಸೂರು,

ಇವರಲ್ಲಿ ಇಂದೇ ಭೇಟಿ ಕೊಡಿ

ಚಾಮುಂಡೇಶ್ವರಿ ಟಾಕೀಸ್

21-10-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಜೆಮಿನಿಯವರ 'ಅದ್ಭುತ ತಮಿಳು ಚಿತ್ರ

ಅಪೂರ್ವ ಸಹೋದರರ್‌ಗಳ್

STRANGE BROTHERS

- ಮುಖ್ಯ ಪಾತ್ರ -

ಎಂ. ಕೆ. ರಾದಾ, ಭಾನುಮತಿ ನಾಗೇಂದ್ರರಾವ್

ಸಾಧನ ಔಷಧಾಲಯ

ಢಾಕಾ (ಬಂಗಾಳ)

ನಮ್ಮ ಮೇಲ್ಕಂಡ ಔಷಧಾಲಯದ ಮೈಸೂರು ಶಾಖೆಯನ್ನು ಜಗನ್ಮೋಹನ ಬಂಗ್ಲೆ ರಸ್ತೆಯಿಂದ ಶ್ರೀರಾಂಪೇಟೆಯಲ್ಲಿ ನಂ ೧೧೬೭ನೇ ಕಟ್ಟಡಕ್ಕೆ ಈ ತಿಂಗಳಿಂದ ಬದಲಾಯಿಸಿದ್ದೇವೆ

Edited, printed and published by A R Nagarajan at Sadhvi Press, D Subbiah Road, Mysore

ದೀಪಾವಳಿ ಶುಭಾಶಯಗಳು

ನಾರ್ಥ್ ಕಾಫಿ ಮತ್ತು ಜನರಲ್ ಸ್ಟೋರ್ಸ್

ಹಳೇ ಅಗ್ರಹಾರ, ಮೈಸೂರು ಮತ್ತು

ನೆಹರೂ ಕಾಫಿ ಮತ್ತು ಜನರಲ್ ಸ್ಟೋರ್ಸ್

ಚಾಮುಂಡಿ ಬಡಾವಣೆ, ಮೈಸೂರು

ದೀಪಾವಳಿಯ ಪ್ರಯುಕ್ತ ನಮ್ಮಲ್ಲಿ ಬಾಲಿಕಬಾಲಕಿಯರುಗಳಿಗೆ ಬೇಕಾಗುವ ವಿಧವಿಧವಾದ ಪಟಾಕಿ ವಗೈರೆ ಸಾಮಾನುಗಳು ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತವೆ ಒಂದು ಸಲ ಪರೀಕ್ಷಿಸಿ ನೋಡಿ

ಹೂವಿನ ಕಡ್ಡಿ (ಸಣ್ಣದು) ಗುರ್ಸ್ಕೆ	೦-೬-೬
,, (ದೊಡ್ಡದು) ,,	೦-೫-೦
ಮತಾಪು	೦-೦-೬
ಚೈನಾ ಚುಪ	೦-೧-೦
ಏರೋಪ್ಲೇನ್	೦-೧-೦
,, (ದೊಡ್ಡದು)	೦-೧-೬
ಭೂ ಚಕ್ರ	೦-೧-೬
,, (ಸಣ್ಣದು)	೦-೧-೦
ತುಕಡಿ ಪಟಾಕಿ ೧೦ ಸರ	
೧೦ ಕಟ್ಟು ಗುರ್ಸ್ಕೆ	೧-೨-೦

ಸ್ಪೆಷಲ್ ಕಾಫಿ ಪುಡಿ

ಪೌಂಡು ಗುರ್ಸ್ಕೆ ರೂ ೨-೪-೦

ಮನೆ ಕ್ರಯಕ್ಕಿದೆ

ನಂ 2831 10ನೇ ಕ್ರಾಸ್, ನಾಣೀ ವಿಲಾಸ ಮೊಹಲ್ಲಾ ವಿವರಗಳಿಗೆ —

ಆರ್. ಗುಂಡೂರಾವ್,

ಶ್ರೀರಾಂ ಪೇಟೆ, ಮೈಸೂರು

ಲಕ್ಷ್ಮೀ ಥಿಯೇಟರ್

ಪ್ರತಿ ದಿನ ಮೂರು ಆಟಗಳು

ದೀಪಾವಳಿ ಸ್ಪೆಷಲ್ ಪ್ರೋಗ್ರಾಂ

ತಾ|| 21—10—49 ರಿಂದ

ರತನ್ ಪಿಕ್ಚರ್ಸ್‌ರವರ ಸಂಗೀತ ರಸಮಯ ಹಿಂದಿ ಚಿತ್ರ

ಕಾಜಲ್

- ಭೂಮಿಕೆ -

ಸುರಯ್ಯ, ಶಾಸ್ತ್ರಿ, ಗೋಪ

MORNING SHOWS

From 20-10 49 for 4 days

COLUMBIA's

You Were Never Lovelier

With - Fred Astaire Rita Hayworth

ಶೀಘ್ರದಲ್ಲಿ ಬರಲಿದೆ

ಇನ್ಬವಲ್ಲಿ

ಪಾತ್ರ - ಟಿ ಆರ್ ಮಹಾಲಿಂಗಂ, ಎನ್ ಎಸ್ ಕೃಷ್ಣನ್, ಟಿ ಎ ಮಧುರಂ

ಶ್ರೀ ಗಾಯತ್ರೀ ಟಾಕೀಸ್

ತಾ|| 20-10-49ನೇ ಗುರುವಾರದಿಂದ ಪ್ರತಿ ದಿನ 3 ಪ್ರದರ್ಶನಗಳು

ಎಂ ಜಿ ಎಂ ರವರ ಅಂತರ ರಾಷ್ಟ್ರೀಯ ಅನುಪಮ ಕಲಾ ಕೌಶಲ್ಯದಿಂದೊಡಗೂಡಿ ಚಿತ್ರರಂಗದಲ್ಲಿ ಬಹುಮಾನ ಪಡೆದು ಪ್ರಕಾಶಿಸುತ್ತಿರುವ ವರ್ಣರಂಜಿತ ಚಿತ್ರ ಯಾವುದು?

ಗಾನ್ ವಿತ್ ದಿ ವಿಂಡ್

GONE WITH THE WIND

ಪಾತ್ರ – ಕ್ಲಾರ್ಕ್ ಗೇಬಲ್ ಮತ್ತು ಒಲಿವಿಯಾ ಡಿ ಹವಿಲ್ಯಾಂಡ್

ವಿ ಸೂ:— ಪ್ರದರ್ಶನ ಕಾಲಗಳು ಬೆಳಿಗ್ಗೆ ೯ಕ್ಕೆ, ಮಧ್ಯಾಹ್ನ ೩ಕ್ಕೆ ಮತ್ತು ರಾತ್ರಿ ೮ಕ್ಕೆ ಪ್ರವೇಶ ದರ ಕಡೇ ೩ ತರಗತಿಗಳು ಮಾತ್ರ ೦-೬-೬

ಪ್ರಭುದೇವಾ ಟಾಕೀಸ್

'20-10-49ರಿಂದ 5ನೇ ವಾರ

– ಮಾಯಾ ಕುದುರೈ –

[ತಮಿಳು]

ಪಾತ್ರ:- ಅಂಜಲಿ ದೇವಿ ಮತ್ತು ನಾಗೇಶ್ವರ ರಾವ್

[ಸ್ಥಾಪನೆ 1906]

ಕೆನರಾ ಬ್ಯಾಂಕ್, ಲಿಮಿಟೆಡ್

(ಮೈಸೂರು ಬ್ರಾಂಚ್)

(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎಸ್. ರೆಟ್ಟಾಜಿರಾವ್ ಅಂಡ್ ಸನ್ಸ್‌ರವರ ಮೈಸೂರು ಹಾಲ್ ಇವರ ಮಾಳಿಗೆಯಲ್ಲಿ)

ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರದ ಬಡ್ಡಿಗೆ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು ಬ್ಯಾಂಕಿನಲ್ಲಿ ಪಡೆಯಬಹುದು.

U HARI SHENOY B A

ಏಜಂಟ್

ಮೈಸೂರು ವಿಶ್ವವಿದ್ಯಾಲಯ

ಮೈಸೂರು ವಿಶ್ವವಿದ್ಯಾಲಯದ ಕಛೇರಿ ೧೯-೧೦-೪೯

ಪ್ರಕಟಣೆ

ಮೈಸೂರು ಜಗನ್ಮೋಹನ ಭವನದಲ್ಲಿ ೧೯೪೯ನೇ ನವೆಂಬರ್ ೩ನೇ ತಾರೀಖು ಗುರುವಾರ ಬೆಳಗ್ಗೆ ೯-೩೦ ಘಂಟೆಗೆ ನಡೆಯುವ ಘಟಿಕೋತ್ಸವ ಪದವಿಯನ್ನು ಪಡೆಯುವ ಉಮೇದುವಾರರು ಈ ಕೆಳಗೆ ಕಂಡ ತಾರೀಖುಗಳಲ್ಲಿ ಮೈಸೂರಿನ ಈ ವಿಶ್ವವಿದ್ಯಾಲಯದ ಕಛೇರಿಗೆ ಬಂದು ರಿಜಿಸ್ಟರಿನಲ್ಲಿ ಕಾಣಿಸಿರುವ ಡಿಕ್ಲರೇಷನ್ನಿಗೆ ರುಜು ಹಾಕಬೇಕೆಂದು ಕೋರಲಾಗಿದೆ ಹೀಗೆ ರುಜು ಹಾಕಿದಲ್ಲದೆ ಅವರನ್ನು ಡಿಗ್ರಿಗಳಿಗೆ ಸೇರಿಸಲಾಗುವುದಿಲ್ಲ

ಸೋಮವಾರ, ೩೧-೧೦-೪೯ ಬೆಳಗ್ಗೆ ೧೧-೩೦ ರಿಂದ ಸಂಜೆ ೫ ಗಂಟೆವರೆಗೆ

ಮಂಗಳವಾರ ೧-೧೧-೧೯೪೯ ಬೆಳಗ್ಗೆ ೧೧ ೩೦ ರಿಂದ ಸಂಜೆ ೫ ಗಂಟೆವರೆಗೆ

ಬುಧವಾರ, ೨-೧೧-೧೯೪೯ ಬೆಳಗ್ಗೆ ೧೦ ಘಂಟೆಯಿಂದ ೧೨ ಘಂಟೆವರೆಗೆ

೧೯೪೯ನೇ ನವೆಂಬರ್ ೩ನೇ ತಾರೀಖು ಬೆಳಗ್ಗೆ ೮-೩೦ ಘಂಟೆ ಒಳಗೆ ಉಮೇದುವಾರರು ತಮ್ಮ ಅಕೆಡೆಮಿಕ್ ಗೌನು ಮತ್ತು ಹುಡ್ಡುಗಳೊಡನೆ ಘಟಿಕೋತ್ಸವದ ಭವನಕ್ಕೆ ಬರಬೇಕು. ಇದಲ್ಲದೆ ಪುರುಷ ಉಮೇದುವಾರರು ನಿಯಮಿತವಾದ ಉಡುಪನ್ನೂ ಸಹಾ ಧರಿಸಬೇಕು

ಡಿಕ್ಲರೇಷನ್ನಿಗೆ ರುಜು ಮಾಡುವಾಗ ವಿವರವಾದ ಸೂಚನೆಗಳ ಪ್ರತಿಯನ್ನು ಉಮೇದುವಾರರುಗಳಿಗೆ ಕೊಡಲಾಗುವುದು.

ಸಿ. ರಂಗಾಚಾರ್, ಈ|| ರಿಜಿಸ್ಟ್ರಾರ್

* ಉಡುಪು ಬಿಳಿಯ ಅಥವಾ ಕರಿಯ ನಿಲುವಂಗಿ, ಬಿಳಿಯ ಕರಿಯ ಪಗಡಿಗೆ ಇರುವ ಅಥವಾ ಇಲ್ಲದಿರುವ ರುಮಾಲು ಮತ್ತು ಉತ್ತರೀಯ ಒಮಟುಗಳನ್ನು ಮೂಗಳನ್ನೂ ಬೇಕಾದರೆ ಹಾಕಬಹುದು ಐರೋಪ್ಯರಿಗೆ ಬೇಗಿನ ಉಡುಪು ಮತ್ತು ಅಕೆಡೆಮಿಕ್ ಟೋಪಿ

...ಮಾನದಲ್ಲಿ ಮಗುವಿನ ಜನನ

...ರ್ಲೆಂಡಿನಿಂದ ಹೊರಟ ಅಮೆರಿಕದ ...ಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ...ಯಾರ್ಕಿನ ಡಾರನಿಕ್ ಪಾರ್ಕರ್ ಎಂ ...ಮಹಿಳೆಗೆ ಕಳೆದ ಸೋಮವಾರ ಗಂಡು ...ಮಗು ಜನನವಾಯಿತೆಂದೂ, ಅದರಲ್ಲಿ ...ವೈದ್ಯರು ಹೆರಿಗೆ ಕಾಲದಲ್ಲಿ ಆಕೆಗೆ ಶ ...ಶು ಮಾಡಿದರೆಂದೂ ವರದಿಯಾಗಿದೆ

...ರುಪತಿ ಆಂಧ್ರ ಪ್ರಾಂತ್ಯದ ರಾಜಧಾನಿ

...ಆಂಧ್ರ ಪ್ರಾಂತ್ಯಕ್ಕೆ ಮದರಾಸು ರಾಜ ...ಧಾನಿಯಾಗಲು ಅವಕಾಶವಾಗದಿದ್ದ ಪಕ್ಷ ...ತಿರುಪತಿಯನ್ನು ರಾಜಧಾನಿಯನ್ನಾ ...ಮಾಡಬಹುದೆಂದು ಪ್ರೊ|| ಎನ್ ಜಿ ...ಗಾರವರು ತಿಳಿಸಿರುತ್ತಾರೆ

...ಚಿವರು ಕಸ ಗುಡಿಸಿದರು

...ಕಾಟೀಯಾಲಾದ ಕಾರ್ಮಿಕ ಸಚಿವರಾ ... ಲಕ್ಷ್ಮಣ ದಾಸ್‌ರವರು ಅಲ್ಲಿ ನಗರ ...ಶುಚೀಕರಣ ವಾರದ ಆಚರಣೆಯ ಪ್ರಾ ...ರಂಭೋತ್ಸವವನ್ನು ನೆರವೇರಿಸಿ, ತಾವೇ ...ರು ಕಸವನ್ನು ಗುಡಿಸಿ, ಮೇಲ್ಪಂಕ್ತಿ ...ಕೊಟ್ಟರು ಅನಂತರ ಜಿಲ್ಲಾಧಿಕಾರಿ ... ಶಾಲಾ ಮತ್ತು ಕಾಲೇಜ್ ವಿದ್ಯಾ ...ಗಳೂ ಕಸ ಗುಡಿಸಿದರು

...ಫ್ರೆಂಚ್ ಪ್ರದೇಶಗಳಲ್ಲಿ ಮತಗಣನೆ ಮುಂದೆ ಹೋಯಿತು

...ದಕ್ಷಿಣ ಭಾರತದಲ್ಲಿರುವ ಫ್ರೆಂಚ್ ಪ್ರ ...ದೇಶಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊ ...ಡುವುದಾಗಿ ಫ್ರೆಂಚ್ ಸರ್ಕಾರದವರು ತಿಳಿ ...ಸಿದುದರಿಂದ ಭಾರತದೊಳಗೆ ವಿಲೀನ ...ವಾಗುವ ಒಪ್ಪಿ ಬರುವ ಡಿಸೆಂಬರ್ ೧೧ನೇ ... ನಡೆಯಬೇಕಾಗಿದ್ದ ಜನಾಭಿಪ್ರಾ ...ಯ ಸಂಗ್ರಹಣವನ್ನು ಅನಿಶ್ಚಿತ ಕಾಲದ ...ವರೆಗೆ ಮುಂದು ಹಾಕಬೇಕೆಂದು ಪುದು ...ಚೇರಿ ಪುರಸಭೆಯ ಕಾಂಗ್ರೆಸ್ ಪಕ್ಷದ ...ವರು ನಿರ್ಧರಿಸಿದ್ದಾರೆ

...ವಿವಿದ ವಿನೋದಾವಳಿ

...ರಾಜಧಾನಿಯ ಗೊಲ್ಲಗೇರಿಯಲ್ಲಿರುವ ...ಯುವ ಸಹಾಯ ಸಂಘದ ನಿಧಿಗಾಗಿ ...ಮುಂದಿನ ಶನಿವಾರ ಸಂಜೆ ೭ ಗಂಟೆಗೆ ವಿ ...ವಿನೋದಾವಳಿಯ ೨ ಒನುಮಯ್ಯನ ...ಹೈಸ್ಕೂಲಿನಲ್ಲಿ ಶ್ರೀ ಡಿ ಬಿ ಕೃಷ್ಣಪ್ಪ ...ರ ಅಧ್ಯಕ್ಷತೆಯಲ್ಲಿ ನಡೆಯುವುದು

ದೀಪಾವಳಿ ನಿಧಿ

...ದೇವಿಲಾಸ ಮೋಹಲ್ಲಾದಲ್ಲಿರ ವ ...ಮಿಜನ ಹೈಸ್ಕೂಲಿನ ಶಾಶ್ವತ ನಿಧಿ ...ಪ್ರತಿ ವರ್ಷದಂತೆ ಈ ಸಾರಿಯೂ ...ದೀಪಾವಳಿಯ ಸಂಬಂಧದಲ್ಲಿ ಹಣ ಶೇಖ ...ರಿಸಲು ವಿದ್ಯಾರ್ಥಿಗಳ ಬರುವರು ಮಹಾ ...ಜನರು ಸಹಾಯ ಮಾಡಬೇಕೆಂದು ಅದರ ...ಕಾರ್ಯದರ್ಶಿಯಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅ ...ಯ್ಯರವರು ಪ್ರಾರ್ಥಿಸಿರುತ್ತಾರೆ

...ನ್ಯೂ ಇನ್‌ಸ್ಪೆಕ್ಟರುಗಳು ಗ್ರಾಮ ...ಸೇವಾ ಸಹಕಾರ ಸಂಘದ ಅಧಿಕಾರಿಗಳು

...ರಾಜ್ಯದಲ್ಲಿರುವ ರೆವಿನ್ಯೂ ಇನ್‌ಸ್ಪೆಕ್ಟ ...ರುಗಳ ಕೆಲವರನ್ನು ಸಮಗ್ರ ಗ್ರಾ ...ಮಸೇವಾ ಸಹಕಾರ ಸಂಘಗಳ ಅಧಿಕಾರಿ ...ಗಳಾಗಿ ನೇಮಿಸಲಾಗುವುದೆಂದೂ, ಅ ...ವರಿಗೆಂದು ಒಕ್ಷಣ ಶಾಲೆಯನ್ನು ತೆ ...ರೆಯಲಾಗುವುದೆಂದೂ ತಿಳಿದು ಬಂದಿದೆ

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮ ಗುರುವಾರ ೨೦-೧೦-೧೯೪೯ ಸಂಚಿಕೆ ೭೦

ಆಂಧ್ರ ಪ್ರಾಂತ್ಯಕ್ಕೆ ತಿರುಪತಿ ರಾಜಧಾನಿ?

ನ್ಯೂಯಾರ್ಕಿನ ಪುರಸಭಾ ಕೆಲಸಗಾರರ ಪ್ರದರ್ಶನ

ನ್ಯೂಯಾರ್ಕಿನ ಪುರಸಭೆಯ ನಿರ್ಮಲೀಕರಣ ಶಾಖೆಯ ೨ ಸಾವಿರ ಮಂದಿ ಕೆಲಸಗಾರರು ಮೊನ್ನೆ ದಿನ ಪಂಡಿತ ನೆಹರೂರವರು ಪುರಭವನಕ್ಕೆ ಬರುವುದಕ್ಕಿಂತ ಸ್ವಲ್ಪ ಮುಂಚೆ ಹೆಚ್ಚುವೇತನಕ್ಕಾಗಿ ಮೆರವಣಿಗೆ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ

ಪಾಕಿಸ್ತಾನದ ಆಟಪಾಟಗಳ ಕೈಗಾರಿಕೆಗೆ ದಕ್ಕೆ

ರೂಪಾಯಿನ ಬೆಲೆಯನ್ನು ಇಳಿಸದಿದ್ದುದರಿಂದ ಪೂರ್ವ ಪಾಕಿಸ್ತಾನದ ಆಟಪಾಟಗಳ ಕೈಗಾರಿಕೆಗೆ ಧಕ್ಕೆಯುಂಟಾಗಿದೆಯೆಂದೂ, ಆ ವಸ್ತುಗಳನ್ನು ಹೊರಕ್ಕೆ ಕಳುಹಿಸಲು ಆಗದೆ, ತಯಾರಾದ ಸಾಮಾನುಗಳೆಲ್ಲಾ ಹಾಗೆಯೇ ಬಿದ್ದಿವೆಯೆಂದೂ ವರದಿಯಾಗಿದೆ

ಮನೆ ಕುಸಿದು ಬಿದ್ದು ವಿದ್ಯಾಧಿಕಾರಿಗಳ ಸಾವು

ಕರ್ನೂಲಿನಲ್ಲಿ ವಿಪರೀತ ಮಳೆಯಾಗಿ, ನಿನ್ನೆ ಬೆಳಗ್ಗೆ ಮನೆಯು ಕುಸಿದು ಬಿದ್ದು, ಅದರಲ್ಲಿ ಮಲಗಿದ್ದ ವಿದ್ಯಾಧಿಕಾರಿಗಳಾದ ಶ್ರೀ ಡಿ ನರಸಿಂಹ ಶಾಸ್ತ್ರಿಗಳು ಮತ್ತು ಅವರ ೫ ತಿಂಗಳಿನ ಮೊಮ್ಮಗಳೂ ಸಹ ಸತ್ತುಹೋದರು ಅವರ ಪತ್ನಿ ಮತ್ತು ಪುತ್ರಿಯುವರಿಗೆ ಗಾಯವಾಗಿದೆ

ಅನಾವೃಷ್ಟಿ ಅಭಿಷೇಕದಿಂದ ಮಳೆ ಬಂದಿತು

ಆಗರ-ಮಾಂಬಳ್ಳಿ ೧೮

ಇಲ್ಲಿನ ಶ್ರೀ ದುರ್ಗಾಂಬಾ ದೇವಾಲಯದಲ್ಲಿ ಕಳೆದ ೧೪ ದಿನಗಳಿಂದಲೂ ಅನಾವೃಷ್ಟಿ ಅಭಿಷೇಕ ನಡೆದು, ಭಾರಿ ಮಳೆ ಬಂದಿತು ೧೩ನೇ ತಾ|| ಬೆಳಗ್ಗೆ ಅರ್ಚಕರು ಎಂದಿನಂತೆ ಪೂಜೆಗಾಗಿ ದೇವಸ್ಥಾನಕ್ಕೆ ಹೋದಾಗ, ಗರ್ಭಗುಡಿಯ ಬಲ ಭಾಗದ ಗೋಡೆಯು ಮಳೆಯ ಹೊಡೆತದಿಂದ ಉರುಳಿಹೋಯಿತು ಆದರೆ ಅರ್ಚಕರಿಗೂ, ದೇವರಿಗೂ ಯಾವ ಅಪಾಯವೂ ಸಂಭವಿಸಲಿಲ್ಲ ಮಳೆಯು ೮ ದಿನಗಳಿಂದಲೂ ಬಹಳವಾಗಿ ಬೀಳುತ್ತಿದ್ದ ಇದರಿಂದ ದೇವಸ್ಥಾನದ ಇತರ ಗೋಡೆಗಳೂ ಬಿದ್ದುಹೋಗುವ ಸಂಭವವುಂಟು ಸಂಬಂಧಪಟ್ಟವರು ಕೂಡಲೇ ಗಮನ ಕೊಡಬೇಕೆಂದು ಕೋರಲಾಗಿದೆ

ನಂಜರಾಜ ಬಹದ್ದೂರ್ ರವರಿಗೆ ಕರ್ನಲ್ ಪದವಿ

ಸ್ವಂ ಸು ಪ್ರೋ॥] ಬೆಂಗಳೂರು ೨೦

ಮೈಸೂರು ೩ನೇ ಪದಾತಿ ದಳದ ಸೈನ್ಯಾಧಿಕಾರಿಗಳಾದ ಲೆ|| ಕ|| ನಂಜರಾಜ ಬಹದ್ದೂರ್‌ರವರನ್ನು ಮೈಸೂರಿನ ಸ್ಟೇಷನ್ ಕಮ್ಯಾಂಡರಾಗಿ ನೇಮಿಸಿ, ಅವರನ್ನು ಸ್ಥಳೀಯ ಕರ್ನಲ್ ಪದವಿಗೆ ಏರಿಸಲಾಗಿದೆ

ಎಲ್. ಎಸ್. ರಾಜುರವರ ಮೇಲೆ ಫಿರ್ಯಾದು

ದಿವಂಗತ ಶ್ರೀ ಟಿ ಪರಮಶಿವಯ್ಯರ್‌ರವರ ಆಸ್ತಿಪಾಸ್ತಿಗಳ ವಿಚಾರವಾಗಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಶ್ರೀ ಎಲ್ ಎಸ್ ರಾಜುರವರ ಮೇಲೆ ಜಿಲ್ಲಾ ನ್ಯಾಯಾಧೀಶರು ಫಿರ್ಯಾದನ್ನು ದಾಖಲು ಮಾಡಿದ್ದಾರೆ

○ ದೆಹಲಿಗೆ ಹೋಗಿದ್ದ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ನಿನ್ನೆ ಸಂಜೆ ಹಿಂತಿರುಗಿದರು

ವೀರವಾಣಿಗೆ ನೋಟೀಸು

ಮೈಸೂರು ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ತಮಗೆ ಸಂಬಂಧಿಸಿದ ಸುದ್ದಿಯ ಬಗ್ಗೆ 'ವೀರವಾಣಿ' ಪತ್ರಿಕೆಗೆ ನೋಟೀಸು ಕೊಡಿಸಿದ್ದಾರೆಂದೂ ಗೊತ್ತಾಗಿದೆ

ಸೂಚನೆ

ದೀಪಾವಳಿ ಪ್ರಯುಕ್ತ, ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಹರಿ ಕಥೆ

ಮಂಡಿ ಮೊಹಲ್ಲಾ ಕಾಳಪ್ಪನ ಗರಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀಮತಿ ಪಂಕಜಮ್ಮನವರಿಂದ ನಾರದ ಪರ್ವತರ ಗರ್ವಭಂಗ ಎಂಬ ಹರಿಕಥೆ ನಡೆಯುವುದು

ಬೆಂಗಳೂರಿನಲ್ಲಿ ಮರ್‌ಕ್ಯುರಿ ದೀಪಗಳು

ಬೆಂಗಳೂರು ನಗರದ ಮುಖ್ಯ ರಸ್ತೆಗಳಲ್ಲಿ ಮರ್‌ಕ್ಯುರಿ ವಿದ್ಯುಚ್ಛಕ್ತಿ ದೀಪಗಳನ್ನು ಹಾಕುವ ಯೋಜನೆಯೊಂದನ್ನು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರು ತಯಾರಿಸಿದ್ದಾರೆ ಅದನ್ನು ಪುರಸಭೆಯ ಪರಿಶೀಲನೆಗಾಗಿ ಕಳುಹಿಸಲಾಗಿದೆ ಪ್ರತಿ ದೀಪಕ್ಕಾ ೩೦೦ ರೂ ಖರ್ಚಾಗುವುದು

ಗಾಂಧೀ ಕೊಲೆಯಲ್ಲಿ ಕೊನೇ ಅಪಾದಿತನ ದಸ್ತಗಿರಿ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪಾದಿತನಾಗಿದ್ದು ತಲೆ ಮರೆಸಿಕೊಂಡಿದ್ದ ಸೂರ್ಯದೇವ ಶರ್ಮನನ್ನು ಸಂಯುಕ್ತ ಪ್ರಾಂತ್ಯದ ಘಾಜೀಪುರದಲ್ಲಿ ನಿನ್ನೆ ದಿನ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ತಪ್ಪಿಸಿಕೊಂಡಿದ್ದ ಎಲ್ಲ ಅಪಾದಿತರನ್ನೂ ಈಗ ಬಂಧಿಸಿದಂತಾಯಿತು

ಪೋಲೀಸರ ಮೇಲೆ ಬಾಂಬುಗಳು

ಕಲ್ಕತ್ತೆಯ ಕಮ್ಯೂನಿಸ್ಟ್ ಮಹಿಳೆಯರ ಮೆರವಣಿಗೆಯನ್ನು ಚದುರಿಸಲು ಪೋಲೀಸರು ಅಶ್ರುವಾಯು ಮತ್ತು ಲಾಠಿಗಳನ್ನು ಪ್ರಯೋಗಿಸಿದುದನ್ನು ಪ್ರತಿಭಟಿಸಲು ನಿನ್ನೆ ಜನರ ಗುಂಪು ಪ್ರಧಾನಿಯವರ ಮನೆ ಮುಂದೆ ಪ್ರದರ್ಶನ ನಡೆಸಿ, ಪೋಲೀಸರ ಮೇಲೆ ಬಾಂಬುಗಳನ್ನು ಹಾಕಿದರು ೪ ಜನ ಪೋಲೀಸರಿಗೆ ಗಾಯವಾಯಿತು ಪೋಲೀಸರು ಲಾಠಿ ಪ್ರಯೋಗಿಸಿ, ಗುಂಪನ್ನು ಚದುರಿಸಿದರು

ಬೊಂಬಾಯಿನಲ್ಲಿ ೫೦ ಜನ ಸಮತಾವಾದಿಗಳ ದಸ್ತಗಿರಿ

ಬೊಂಬಾಯಿನಲ್ಲಿ ೫೦ ಜನ ಸಮತಾವಾದಿಗಳು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಮೆರವಣಿಗೆ ನಡೆಸಿ, 'ಸಕ್ಕರೆ ರೇಷನ್ ಮಾಡಿ, ಕಾಳಸಂತೆಕೋರರನ್ನು ಶಿಕ್ಷಿಸಿ' ಎಂದು ಘೋಷಿಸುತ್ತಾ ಪ್ರದರ್ಶನ ನಡೆಸಿದರೆಂದೂ ಅವರುಗಳನ್ನು ಪೋಲೀಸರು ನಿನ್ನೆ ದಿನ ದಸ್ತಗಿರಿ ಮಾಡಿದರೆಂದೂ, ವರದಿಯಾಗಿದೆ

ಸೇಲಂ ಮತ್ತು ಚಿತ್ತೂರಿನಲ್ಲಿ ಚಿನ್ನದ ಪತ್ತೆ

ಮದರಾಸ್ ಪ್ರಾಂತ್ಯದ ಸೇಲಂ ಮತ್ತು ಚಿತ್ತೂರು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಚಿನ್ನದ ಅದುರನ್ನು ಭೂಗರ್ಭ ಇಲಾಖೆಯವರು ಕಂಡುಹಿಡಿದಿದ್ದಾರೆ

ರಷ್ಯದಲ್ಲಿ ಅಣು ಬಾಂಬು

೧೯೪೭ ರಲ್ಲೇ ರಷ್ಯದಲ್ಲಿ ಅಣು ಬಾಂಬು ಇದ್ದಿತೆಂದು ಅದರ ವಿದೇಶಾಂಗ ಮಂತ್ರಿಗಳು ತಿಳಿಸಿರುತ್ತಾರೆ

ಜನಾಭಿಪ್ರಾಯ ತೆಗೆದುಕೊಳ್ಳಲು ಬೆಲ್ಜಿಯಂ ದೊರೆಯ ಒಪ್ಪಿಗೆ

ದೇಶಭ್ರಷ್ಟರಾಗಿರುವ ಬೆಲ್ಜಿಯಂ ದೊರೆಗಳಾದ ಲಿಯೊಪಾಲ್ಡ್‌ರವರು ಸಿಂಹಾಸನಕ್ಕೆ ವಾಪಸು ಬರಲು ಜನಾಭಿಪ್ರಾಯ ತೆಗೆದುಕೊಳ್ಳುವ ಸೂಚನೆಗೆ ಒಪ್ಪಿದ್ದಾರೆಂದೂ ಆ ವಿಚಾರದಲ್ಲಿ ತಮಗೆಶೇಕಡ ೫೫ ಕ್ಕಿಂತ ಕಡಿಮೆ ಓಟುಗಳು ಬಂದರೆ ಸಿಂಹಾಸನವ ತ್ಯಜಿಸುವುದಾಗಿಯೂ ತಿಳಿಸಿರುತ್ತಾರೆ

ವಿಶ್ವದ ಶಾಂತಿಗಾಗಿ ನೋಬೆಲ್ ಬಹುಮಾನದ ಹಣ

ಈ ವರ್ಷದ ನೋಬೆಲ್ ಬಹುಮಾನವನ್ನು ಪಡೆದ ಲಾರ್ಡ್ ಬಾಯ್ಡ್ ಆರ್‌ರವರು ತಮಗೆ ಬರುವ ೧೦ ಸಾವಿರ ಪೌಂಡುಗಳನ್ನು ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ರಚಿಸಲ್ಪಟ್ಟಿರುವ ವಿಶ್ವದ ಫೆಡರಲ್ ಸರ್ಕಾರ ಎಂಬ ಸಂಘಕ್ಕಾಗಿ ಖರ್ಚು ಮಾಡುವುದಾಗಿ ಅವರು ತಿಳಿಸಿರುತ್ತಾರೆ

ಲಕ್ಷ್ಮಿ ಥಿಯೇಟರ್

ಪ್ರತಿ ದಿನ ಮೂರು ಆಟಗಳು

ದೀಪಾವಳಿ ಸ್ಪೆಷಲ್ ಪ್ರೋಗ್ರಾಂ

ತಾ|| 21—10—49 ರಿಂದ

ರಣಜಿತ್ ಪಿಕ್ಚರ್ಸ್‌ರವರ ಸಂಗೀತ ರಸಮಯ ಹಿಂದಿ ಚಿತ್ರ

ಕಾಜಲ್

-: ಭೂಮಿಕೆ :-

ಸುರಯ್ಯಾ, ವಾಸ್ತಿ, ಗೋಪ್

MORNING SHOWS

From 20-10-49 for 4 days

COLUMBIA'S

You Were Never Lovelier

With:- Fred Astaire
Rita Hayworth

ಶೀಘ್ರದಲ್ಲಿ ಬರಲಿದೆ

ಇನ್ಬವಲ್ಲಿ

ಪಾತ್ರ:- ಟಿ. ಆರ್. ಮಹಾಲಿಂಗಂ, ಎಸ್. ಎಸ್. ಕೃಷ್ಣನ್, ಟಿ. ಎ. ಮಧುರಂ

ಸಾಧನ ಔಷಧಾಲಯ

ಡಾಕಾ (ಬಂಗಾಳ).

ನಮ್ಮ ಮೇಲ್ಕಂಡ ಔಷಧಾಲಯದ ಮೈಸೂರು ಶಾಖೆಯನ್ನು ಜಗನ್ಮೋಹನ ಬಂಗ್ಲೆ ರಸ್ತೆಯಿಂದ ಶ್ರೀರಾಂಪೇಟೆಯಲ್ಲಿ ನಂ ೧೦೭೭ನೇ ಕಟ್ಟಡಕ್ಕೆ ಈ ತಿಂಗಳಿಂದ ಬದಲಾಯಿಸಿದ್ದೇವೆ.

ಗಾಯತ್ರೀ ಟಾಕೀಸ್

20-10-49ರಿಂದ ಪ್ರತಿ ದಿನ 3 ಆಟಗಳು

ಗಾನ್ ವಿತ್ ದಿ ವಿಂಡ್

ಪಾತ್ರ:- ಕ್ಲಾರ್ಕ್ ಗೇಬಲ್ ಮತ್ತು ಒಲಿವಿಯಾ ಡಿ ಹೆವಿಲ್ಯಾಂಡ್

ವಿ.ಸೂ: ಪ್ರದರ್ಶನ ಕಾಲಗಳು ಬೆಳಿಗ್ಗೆ ೯ಕ್ಕೆ, ಮಧ್ಯಾಹ್ನ ೩.೩೦ಕ್ಕೆ ಮತ್ತು ರಾತ್ರಿ ೮ಕ್ಕೆ ಪ್ರವೇಶ ದರ ಕಡೇ ೩ ತರಗತಿಗಳು ಮಾತ್ರ ೦—೬—೬

ದೀಪಾವಳಿ ಶುಭಾಶಯಗಳು

ವಾರ್ಧಾ ಕಾಫಿ ಮತ್ತು ಜನರಲ್ ಸ್ಟೋರ್ಸ್

ಹಳೇ ಅಗ್ರಹಾರ, ಮೈಸೂರು ಮತ್ತು

ನೆಹರೂ ಕಾಫಿ ಮತ್ತು ಜನರಲ್ ಸ್ಟೋರ್ಸ್

ಚಾಮುಂಡಿ ಬಡಾವಣೆ, ಮೈಸೂರು

ದೀಪಾವಳಿಯ ಪ್ರಯುಕ್ತ ನಮ್ಮಲ್ಲಿ ಬಾಲಕಬಾಲಕಿಯರುಗಳಿಗೆ ಬೇಕಾಗುವ ವಿಧವಿಧವಾದ ಪಟಾಕಿ ವಗೈರೆ ಸಾಮಾನುಗಳು ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತವೆ. ಒಂದು ಸಲ ಪರೀಕ್ಷಿಸಿ ನೋಡಿ.

ಹೂವಿನ ಕಡ್ಡಿ (ಸಣ್ಣದು)	೧ಕ್ಕೆ	೦-೨-೬
,, (ದೊಡ್ಡದು)	,,	೦-೫-೦
ಮತಾಪು		೦-೦-೬
ಚೈನಾ ಚುವ		೦-೧-೦
ಏರೋಪ್ಲೇನ್		೦-೧-೦
,, (ದೊಡ್ಡದು)		೦-೧-೬
ಭೂ ಚಕ್ರ	,,	೦-೧-೬
,, (ಸಣ್ಣದು)		೦-೧-೦
ತುಕಡಿ ಪಟಾಕಿ ೧೦ ಸರ ಗಳ ಕಟ್ಟು ೧ಕ್ಕೆ		೧-೦-೦

ಸ್ಪೆಷಲ್ ಕಾಫಿ ಪುಡಿ

ಪೌಂಡು ೧ಕ್ಕೆ ರೂ. ೨—೪—೦

ಅಮರ ಪ್ರೇಮವನ್ನು ನಿರೂಪಿಸುವ ಅತ್ಯ ಕಥೆ

ಸುರೇಂದ್ರ, ಮುನಾವರ್ ಸುಲ್ತಾನ ನಟಿಸಿರುವ ಹಿಂದಿ ಚಿತ್ರ

ಮೇರಿ ಕಹಾನಿ

16-10-49ರಿಂದ ಅಮೋಘ 2ನೇ ವಾರ

ವುಡ್‌ಲ್ಯಾಂಡ್ಸ್‌ನಲ್ಲಿ

[G. F. D. Release

ಮೈಸೂರು ಸಿಟಿ ಕೊ-ಆಪರೇಟಿವ್

ಬ್ಯಾಂಕ್ ಲಿ., ಮೈಸೂರು

	ರೂ.
ಅಧಿಕೃತ ಷೇರು ಬಂಡವಾಳ	1,50,000
ಗಾವತಿಯಾಗಿರುವ ಷೇರು ಬಂಡವಾಳ	1,45,450
ಅಪದ್ಧನ	1,37,240
ಠೇವಣಾತಿಗಳು	8,27,125

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸಡ್ ಡಿಪಾಜಿಟ್ಟುಗಳನ್ನು ಸ್ವೀಕರಿಸಲಾಗುವುದು.

1 ವರ್ಷ ಗಾಪಾಯಿದೆಗೆ	ಶೇಕಡಾ ಸಾ	2½
2 ,,	,,	3
3 ,,	,,	3½

ಕೆ. ಪುಟ್ಟೂರಾವ್
ಗೌ|| ಕಾರ್ಯದರ್ಶಿ.

Edited, printed and published by A. R. Nagarajan at Sadhvi Press, D. Subbiah Road, Mysore.

ಭಜನ ಸಪ್ತಾಹ

ಜಗತ್ ಕಲ್ಯಾಣಕ್ಕಾಗಿ ಇದೇ ದ ೩೦ನೇ ತಾ|| ವರೆವಿಗೆ ಸಕಲೇ ಸಕಲೇಶ್ವರ ದೇವಸ್ಥಾನದಲ್ಲಿ ಮ ಡು ಕ್ಷೇತ್ರದ ಶ್ರೀ ಬಾಪೂ ದೀಕ್ಷಿ ಗಳು ನಿದ್ರಾಹಾರ ರಹಿತರಾಗಿ ಓ ಲ್ಲಿ ಕುಳಿತು ಶ್ರೀ ಸದ್ಗುರು ಚಿದಾ ಭಜನ ಸಪ್ತಾಹವನ್ನು ಅಖಂಡ ಸುವರು. ೩೦ನೇ ತಾ|| ರುದ್ರಸ್ನ ರುಗ,ವುದು. ಈ ಕಾರ್ಯಕ್ಕೆ ಸಾರ್ವ ಸಹಾಯ ಮಾಡಬೇಕೆಂದು ಆ ಹಾಜನರು ಪ್ರಾರ್ಥಿಸಿರುತ್ತಾರೆ.

ಗಣೇಶಾ ಟಾಕಿ

21-10-49ರಿಂದ ಒಂದು ವಾ

ಪ್ರತಿ ದಿನ 3 ಆಟಗಳು

ಕೊಲಂಬಿಯಾರವರ ಪೂರ್ಣ ಸ

Perils of th Royal Moun

ಪೆರಿಲ್ಸ್ ಆಫ್ ದಿ ರಾ ಮೌಂಟೆಡ್

ಮನೆ ಕ್ರಯಕ್ಕೆ

ನಂ 2831. 10 ನೇ ಕ್ರಾಸ್ ವಿಲಾಸ ಮೊಹಲ್ಲಾ. ವಿವರಗಳ ಆರ್. ಗುಂಡೂ ರಾ ಶ್ರೀ ರಾಂ ಪೇಟೆ, ಮೈಸೂ

ರಾಜಕಮಲ್ ಟಾಕೀಸ್

ದೀಪಾವಳಿ ಪ್ರಯುಕ್ತ

21—10—49ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

★ಚಾಂದನಿ ರಾತ್★ (ಹಿಂದಿ)

ತಾರಾಗಣ:— ನಾಸಿರಂ (ಪುಕಾರ್ ಪ್ರಖ್ಯಾತಿ), ಶ್ಯಾಮ್, ಉಲ್ಲಾಸ್

Morning Shows From 21-10-49 for 4 days

A SONG TO REMEMBER

A glorious new form of entertainment in TECHNICOLOR

With:—Paul Muni, Merle Oberon, Cornal Wilde

As long as all the World loves a lover-this Romance Will Live!

ಪ್ರಭಾ ★ 21-10-49 ರಿಂದ

ಅಮೋಘ 2ನೇ ವಾರ ದಿನವಹಿ 3 ಆಟಗಳು

ಕಾರದಾರ್ ಪಿಕ್ಚರ್ಸ್‌ರವರ ❊ ಕನೀಜ್ ❊

ಮುನವರ್ ಸುಲ್ತಾನಾ, ಶ್ಯಾಮ್, ಗೂರ್ವಿಲ ಕುಲದೀಪ್, ಕಕ್ಕೂ

21-10-49ರಿಂದ ಬೆಳಗಿನ ಪ್ರದರ್ಶನ 4 ದಿನಗಳು ಮಾತ್ರ

ಜೀಬ ಮಾಧುರಿ ಮತ್ತು ಮಹಸರ್‌ಜಾ ನಟಿಸಿರುವ ಹಿಂದಿ ಚಿತ್ರ

— ಬಚಪನ್ —

ಚಾಮುಂಡೇಶ್ವರಿ ಟಾಕೀಸ್

21—10—49ರಿಂದ :: ದಿನವಹಿ 3 ಆಟ

ಜೆಮಿನಿಯವರ

ಅಪೂರ್ವ

ಸಹೋದರರು

-: ಮುಖ್ಯ ಪಾತ್ರ :-

ಎಂ. ಕೆ. ರಾಧಾ, ಭಾನುಮತಿ, ನಾಗೇಂದ್ರರಾವ್

ಬಾಲ್ಕನಿ ಸೀಟುಗಳನ್ನು ಮುಂಚಿತವಾಗಿ ರಿಸರ್ವ್ ಮಾಡಲಾಗುತ್ತೆ

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿ

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮ ಶನಿವಾರ ೨೨-೧೦-೧೯೪೯ ಸಂಚಿಕೆ ೬೧

ಕಲ್ಕತ್ತೆಯಲ್ಲಿ ೨೭,೦೦೦ ಗುಡಿಸುವರ ಮುಷ್ಕರ

...ಲೀಸ್ ನೌಕರರ ಖೋತ

...ಸು. ಫೋ.] ಬೆಂಗಳೂರು ೨೨
...ಲೀಸ್ ಇಲಾಖೆಯ ಪುನರ್ ವ್ಯವ...ಬಗ್ಗೆ ಐ. ಜಿ. ಪಿ. ಯವರ ಸಲಹೆ...ತೆ ೭೦೦ ಜನ ಪೊಲೀಸ್ ನೌಕರರ ಖೋತಾ ಮಾಡಲು ಸರ್ಕಾರದವರು ...ಸಿರುತ್ತಾರೆ ಆದರೆ ಅವರುಗಳಿಗೆ ...ದ್ಯೋಗ ಉಂಟಾಗದಿರಲು ಅವರನ್ನು ಬೇರೆ ಕೆಲಸಗಳಿಗೆ ತೆಗೆದುಕೊಳ್ಳ...ಗಿಯೂ ತಿಳಿಸಿರುತ್ತಾರೆ.

...ನವಂಬರ್ ೧ನೇ ತಾರೀಖಿನಿಂದ ದಾ...ರೆಯಲ್ಲಿ ವೃತ್ತಿ ಶಿಕ್ಷಣಾಲಯವು ಆ...ವಾಗುವಂತೆ ಸರ್ಕಾರದವರು ಆಜ್ಞೆ...ರುತ್ತಾರೆ.

...ಭಾರತ ಸರ್ಕಾರದ ಆರೋಗ್ಯ ...ಾಧಿಕಾರಿಗಳಾದ ಶ್ರೀ ಕೆ. ಸಿ. ಕೆ. ಐ. ...ರವರು ೨೭ನೇ ತಾ॥ ಇಲ್ಲಿಗೆ ಬಂ...ಹಲವು ಆರೋಗ್ಯ ಸಮಸ್ಯೆಗಳ ವಿಚಾ... ಸಮಾಲೋಚನೆ ನಡೆಸುವರು.

...ನೆನ್ನೆ ಮಧ್ಯಾಹ್ನ ಶ್ರೀ ಹೆಚ್. ಸಿ. ...ಪ್ಪನವರ ಅಧ್ಯಕ್ಷತೆಯಲ್ಲಿ ರತ್ನಕಂಬ...ಿಗಾರಿಕಾ ಸಮಿತಿಯು ಸಭೆಯು ನ...ು. ಪಾಶ್ಚಿಮಾತ್ಯ ದೇಶಗಳಲ್ಲಿ ನ...ೇಶದ ರತ್ನಕಂಬಳಿಗೆ ಇರುವ ಸು...೨೦ ಲಕ್ಷ ರೂಪಾಯಿನ ಗಿರಾಕಿಗ ...ಉತ್ತಮ ವರ್ಗದ ಸಾಮಾನುಗಳನ್ನು ...ುವ ಬಗ್ಗೆ ಕ್ರಮಗಳನ್ನು ಕೈಗೊ...ತೆ ನಿರ್ಧರಿಸಲಾಯಿತು

...ನಿನ್ನೆ ಸಂಜೆ ಮೋಟಾರು ಕೆಲಸ ...ಸಂಘದ ಸಭೆಯು ನಗರ ಭವನದ...ಯಿತು. ಶ್ರೀ ಕೆ. ಟಿ. ಭಾಷ್ಯಂ ಅ...ವಹಿಸಿದ್ದರು. ಶ್ರೀಗಳಾದ ಹೆಚ್. ...ಸಪ್ಪ, ಟಿ ಮರಿಯಪ್ಪ ಮತ್ತು ...ಸಿದ್ದಯ್ಯನವರು ನೆಹರು, ಜೋ...ಮತ್ತು ಗಾಂಧೀಜಿಯವರ ಭಾವ ಚಿತ್ರ... ಅನಾವರಣ ಮಾಡಿದರು ಮದ...ಮಂತ್ರಿ ಹೆಚ್. ಸೀತಾರಾಮ ರೆಡ್ಡಿ...ು ಆರಂಭ ಭಾಷಣ ಮಾಡಿ ಇಂದಿ...ರ್ಕಾರದೊಡನೆ ಕಾರ್ಮಿಕರು ಸಹಕ...ಿಂದಲೂ, ಸರಿಯಾದ, ನಾಯಕರು ...ಚುನಾಯಿಸಿ ತಮ್ಮ ಸಂಘಗಳ...ಕ ಪರಸ್ಪರ ಅಭ್ಯುದಯವನ್ನು ಸಾ...ಕೆಂದೂ ತಿಳಿಸಿದರು.

— —:o:— —

...ಟಾರು ಕೆಲಸಗಾರರ ಸಂಘ

...ಸೂರು ಜಿಲ್ಲಾ ಮೋಟಾರು ಕೆಲಸ ...ಸಂಘದ ವಾರ್ಷಿಕೋತ್ಸವವು ನಾ...ಹ್ನ ೩ ಘಂಟೆಗೆ ರೆವಿನ್ಯೂ ಮಂತ್ರಿ ...ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ...ಾಲಿನಲ್ಲಿ ನಡೆಯುವುದು. ಮದ...ಮಂತ್ರಿ ಶ್ರೀ ಹೆಚ್. ಸೀತಾರಾಮರೆ...ರು ಆರಂಭ ಭಾಷಣ ಮಾಡುವ...ಹ ಸಚಿವ ಟಿ. ಮರಿಯಪ್ಪನವರು ...ಭಾವ ಚಿತ್ರವನ್ನು ಅನಾವರಣ ...ರು

...ತ್ತುಸ್ವಾಮಿ ದೀಕ್ಷಿತರ ದಿನಾಚರಣೆ

...ಸಿದ್ಧ ಸಂಗೀತ ಶಾಸ್ತ್ರ ವಿಶಾರದ ...ಮುತ್ತುಸ್ವಾಮಿ ದೀಕ್ಷಿತರವರ ದಿ...ಯನ್ನು ಈ ದಿನ ಸಂಜೆ ೬ ಘಂ...ರಡಿ ರಸ್ತೆಯಲ್ಲಿರುವ ವರಲಕ್ಷ್ಮೀ ...ವಿದ್ಯಾಮಂದಿರದಲ್ಲಿ ಶ್ರೀ ಎಂ. ...ೋಯಸರ ಅಧ್ಯಕ್ಷತೆಯಲ್ಲಿ ನೆರ...ಾಗುವುದು.

...ದಿನ ನ್ಯಾಷನಲ್ ಇಂಜನಿಯ...ಾಲೆಯ ವಿದ್ಯಾರ್ಥಿಗಳು ಈ ಉ...ವೈಭವದಿಂದ ಆಚರಿಸಿದರು.

ಲಂಚದ ಆಪಾದನೆ

ಗುಂಡ್ಲುಪೇಟೆ ೧೮

ಈ ತಾಲ್ಲೋಕಿನ ಓವರ್ ರೆವಿನ್ಯೂ ಇನ್ಸ್‌ಪೆಕ್ಟರು, ಜೋಳದ ವಸೂಲಿ ಸಂಬಂಧದಲ್ಲಿ ಲಂಚ ಪಡೆದರೆಂದು, ಕೆಲ ಗ್ರಾಮಸ್ಥರಿಂದ ಜಿಲ್ಲಾಧಿಕಾರಿಗಳಿಗೆ ದೂರು ಕೊಡಲ್ಪಟ್ಟು ೧೭-೧೦-೪೯ ರಂದು, ಜಿಲ್ಲಾಧಿಕಾರಿಗಳಿಂದ ಹಲವರ ತನಿಖೆ ನಡೆಸಲ್ಪಟ್ಟು, ಉಳಿದವರ ತನಿಖೆ ಬಗ್ಗೆ ತಾಲ್ಲೂಕು ಅಮಲ್ದಾರ್‌ರವರನ್ನು ನೇಮಿಸಿ, ವಿಚಾರಣೆ ಮುಂದುವರೆಯುತ್ತಲಿದೆ ಸದರಿ ರೆವಿನ್ಯೂ ಇನ್ಸ್‌ಪೆಕ್ಟರ ಮೇಲೆ ಹಲವಾರು ದೂರುಗಳಿರುತ್ತವೆ.

ಗೋ ಸೇವಾ ಸಪ್ತಾಹ

ಈ ತಿಂಗಳು ೨೭ನೇ ತಾರೀಖಿನಿಂದ ೩೧ ರವರಿಗೆ ಗೋ ಸಪ್ತಾಹವನ್ನು ಆಚರಿಸಬೇಕೆಂದು ದೆಹಲಿಯ ಅಖಿಲ ಭಾರತ ಗೋ ಸೇವಾ ಸಂಘದವರು ಪ್ರಾರ್ಥಿಸಿರುತ್ತಾರೆ. ಈ ಕಾಲದಲ್ಲಿ ಹಸು ಎತ್ತು, ಎಮ್ಮೆ ಕೋಣಗಳಿಗೆ ಮೈ ತೊಳೆದು ಅಲಂಕರಿಸಿ ವಾದ್ಯದೊಡನೆ ಮೆರವಣಿಗೆ ಮಾಡಿ ಸಭೆ ನಡೆಸಿ ಅವುಗಳ ಯೋಗಕ್ಷೇಮಕ್ಕಾಗಿ ನಿರ್ಣಯಗಳನ್ನು ಮಾಡಬೇಕೆಂದು ಗೋ ಸೇವಕರಾದ ಬಿ. ಎಂ. ಎ ಪಾದರ್‌ರವರು ಪ್ರಾರ್ಥಿಸಿರುತ್ತಾರೆ.

ಸ್ವೀಕಾರ

ದೇವರಾಜ ಮಾರ್ಕೆಟ್ಟಿನ ಸೌಭಾಗ್ಯ ಸ್ಟೋರ್ಸ್ಸಿನವರು ಕಳುಹಿಸಿ ಕೊಟ್ಟಿರುವ ದೀಪಾವಳಿ ಶುಭಾಶಯಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಕರ್ಣಾಟಕ ಸಂಘ

ವಿಶ್ವವಿದ್ಯಾಲಯದ ಕರ್ಣಾಟಕ ಸಂಘದ ಆರಂಭೋತ್ಸವವು ೨೫ ನೇ ತಾರೀಖು ಮಂಗಳವಾರ ಸಂಜೆ ಕಾಲೇಜಿನಲ್ಲಿ ನಡೆಯುವುದು. ಗೃಹ ಸಚಿವ ಟಿ ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು. ಕಾರ್ಮಿಕ ಸಚಿವ ಭಾಷ್ಯಂರವರು ಆರಂಭ ಭಾಷಣ ಮಾಡುವರು.

ಧನಲಕ್ಷ್ಮಿ ಪೂಜೆ

ದೇವರಾಜ ಮಾರ್ಕೆಟ್ಟಿನಲ್ಲಿರುವ ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್ಸಿನವರೂ, ಅಶೋಕಾ ರಸ್ತೆಯಲ್ಲಿರುವ ಮಾಣಿಕ್ ಚಂದ್ ಫುಕ್‌ರಾಜ್‌ರವರೂ, ಮತ್ತು ಶ್ರೀ ಕೃಷ್ಣ ಅಂಡ್ ಸೆಂಟ್ರಲ್ ಸ್ಟೋರ್ಸ್ಸಿನವರು ನೆನ್ನೆ ದಿನ ಧನಲಕ್ಷ್ಮೀ ಪೂಜೆಯನ್ನು ನೆರವೇರಿಸಿ ಅನೇಕ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಕಲ್ಕತ್ತದಲ್ಲಿ ೨೭ ಸಾವಿರ ಗುಡಿಸುವವರ ಮುಷ್ಕರ

ತಮಗೆ ಹೆಚ್ಚಿನ ಸಂಬಳ ಮತ್ತು ಭತ್ಯವನ್ನು ಕೊಡಬೇಕೆಂದು ಕೋರಿ ಕಲ್ಕತ್ತೆಯ ೨೭ ಸಾವಿರ ಗುಡಿಸುವವರು ನಿನ್ನೆ, ಇಂದು ಕೆಲಸಕ್ಕೆ ಹೋಗದೇ ಮುಷ್ಕರ ಹೂಡಿದ್ದಾರೆ. ಮುಷ್ಕರವು ಅಕ್ರಮವಾದುದೆಂದು ಸರ್ಕಾರದವರು ಘೋಷಿಸಿದ್ದಾರೆ ಮತ್ತು ಅವರ ಕೆಲಸವನ್ನು ಮಾಡಲು ಸೈನಿಕರ ಸಹಾಯವನ್ನು ತೆಗೆದುಕೊಂಡಿದ್ದಾರೆ.

ನೆಹರೂರವರಿಗೆ ಬಾಸ್ಟನ್ ನಗರದ ಪೌರ ಸ್ವಾತಂತ್ರ್ಯ

ಅಮೆರಿಕದ ಸ್ವಾತಂತ್ರ್ಯವು ಘೋಷಿಸಲ್ಪಟ್ಟ ಬಾಸ್ಟನ್ ನಗರಕ್ಕೆ ನೆಹರೂರವರು ನಿನ್ನೆ ಭೇಟಿ ಇತ್ತಾಗ ಅಲ್ಲಿನ ಅಧ್ಯಕ್ಷರು ಅವರಿಗೆ ಆ ನಗರದ ಪೌರ ಸ್ವಾತಂತ್ರ್ಯದ ಗೌರವವನ್ನು ಅರ್ಪಿಸಿ ಸತ್ಕರಿಸಿದರು.

ಹಂದಿ ಸಾಕುವುದಕ್ಕೆ ನಿಷೇಧ

ಕುಂಭಕೋಣದ ಪೌರ ಸರಹದ್ದಿನಲ್ಲಿ ಹಂದಿ ಸಾಕುವುದನ್ನು ನಿಷೇಧಿಸಬೇಕೆಂದು ಅಲ್ಲಿನ ಪುರಸಭೆಯವರು ನಿರ್ಧರಿಸಿದ್ದಾರೆ.

ವಿದ್ಯಾರ್ಥಿ ಕಾಂಗ್ರೆಸ್

ಇದೇ ೩೦ನೇ ತಾರೀಖು ಸಂಜೆ ೫ ರಿಂದ ೭ ಘಂಟೆವರೆಗೆ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ವಿದ್ಯಾರ್ಥಿ ಕಾಂಗ್ರೆಸ್ ಕಛೇರಿಯಲ್ಲಿ ಹೊಸ ವರ್ಷದ ಚುನಾವಣೆಯನ್ನು ನಡೆಸಲಾಗುವುದು. ಉಮೇದುವಾರರು ೨೮ನೇ ತಾರೀಖು ಸಂಜೆ ೬ ಘಂಟೆಯೊಳಗೆ ತಮ್ಮ ಉಮೇದುವಾರಿಕೆ ಪತ್ರವನ್ನು ಕಳುಹಬೇಕು.

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ೩ ಘಂಟೆಗೆ ಶ್ರೀ ಎಂ. ಎಲ್. ನಾರಾಯಣ ದಾಸರಿಂದ ಭಕ್ತ ಪ್ರಹ್ಲಾದ ಎಂಬ ಕಥೆ ನಡೆಯುತ್ತದೆ.

೦೫ ಸಾವಿರ ರೂ.ಗಿಂತ ಹೆಚ್ಚಿನ ಮೊಕದ್ದಮೆಗಳಲ್ಲಿ ಹಾಜರಾಗುವ ಪ್ರಥಮ ದರ್ಜೆಯ ವಕೀಲರುಗಳು ಜೂನಿಯರ್ ವಕೀಲರುಗಳ ಸಹಾಯವನ್ನು ಪಡೆಯಬೇಕೆಂದು ನಿರ್ಬಂಧ ಹಾಕುವ ಮಸೂದೆಯನ್ನು ಮದರಾಸ್ ಸರ್ಕಾರದವರು ತರಲಿದಾರೆ.

ಮೈಸೂರು ರೈಲ್ವೆ ಎಂ. ಎಸ್. ಎಂ., ಎಸ್. ಐ, ಗಳಲ್ಲಿ ಐಕ್ಯ

ಭಾರತದ ರೈಲ್ವೆಗಳನ್ನೆಲ್ಲಾ ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ ಅವುಗಳನ್ನು ತಲಾ ೭೦೦೦ ಮೈಲಿ ಉದ್ದದ ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಲು ಕೇಂದ್ರ ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿದುಬಂದಿದೆ ಇದರಿಂದ ಆಡಳಿತ ವೆಚ್ಚವು ಬಹಳವಾಗಿ ಕಡಮೆಯಾಗುವುದು ಮೈಸೂರು, ಎಂ. ಎಸ್. ಎಂ ಮತ್ತು ಎಸ್ ಐ. ರೈಲ್ವೆಗಳು ಒಂದು ಗುಂಪಿಗೆ ಸೇರುವುವು.

ಭದ್ರತಾ ಸಮಿತಿಗೆ ಭಾರತ

ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಭಾರತ, ಈಕ್ವೆಡಾರ್ ಮತ್ತು ಯುಗೋಸ್ಲಾವಿಯಾಗಳು ಚುನಾಯಿಸಲ್ಪಟ್ಟಿವೆ.

ನಾರಾಯಣ ಆಪ್ಟೆಯ ಕ್ಷಮಾ ಭಿಕ್ಷೆಯೇ?

ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವವರ ಅಪೀಲು ಪ್ರೀವಿ ಕೌನ್ಸಿಲಿನಲ್ಲಿ ತಿರಸ್ಕರಿಸಲ್ಪಟ್ಟಿರುವುದಷ್ಟೆ ಎರಡನೇ ಆಪಾದಿತನಾದ ನಾರಾಯಣ ಆಪ್ಟೆಯ ಬಂಧುಗಳು ಗೌರ್ನರ್ ಜನರಲ್ಲರಿಗೆ ದಯಾ ಭಿಕ್ಷೆಯ ಅರ್ಜಿಯನ್ನು ಸಲ್ಲಿಸಿ ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಬೇಕೆಂದು ಪ್ರಾರ್ಥಿಸಿರುವರು. ಆಪ್ಟೆಯೂ ಸಹ ಸದ್ಯದಲ್ಲೆ ಅದೇ ರೀತಿ ಅರ್ಜಿ ಸಲ್ಲಿಸುವನೆಂದು ವರದಿಯಾಗಿದೆ. ಆತನ ಪತ್ನಿಯೂ ತನ್ನ ಪತಿಯನ್ನು ಉಳಿಸಲು ಪ್ರತ್ಯೇಕ ಮನವಿಯನ್ನು ಒಪ್ಪಿಸುವಳೆಂದು ಹೇಳಲಾಗಿದೆ.

ಒಪ್ಪತ್ತು ಊಟ ಬಿಡುವ ಚಳುವಳಿ

ವಾರಕ್ಕೆ ಒಪ್ಪತ್ತು ಊಟವನ್ನು ಬಿಡುವ ಚಳುವಳಿಯನ್ನು ಡಿಸೆಂಬರ್ ಮೊದಲನೇ ವಾರ ದೇಶದಲ್ಲೆಲ್ಲಾ ಆರಂಭಿಸುವುದಾಗಿ ಆದರ ವ್ಯವಸ್ಥಾಪಕರಾದ ಜಗತ್ಪ್ರವೇಶ ಚಂದ್ರರವರು ತಿಳಿಸಿರುತ್ತಾರೆ.

ಆರು ಅಂಗುಲ ಕೊಂಬುಳ್ಳ ಹೆಂಗಸು

ತಿರುವಾಂಕೂರಿನ ವೈಕಂ ಎಂಬಲ್ಲಿಯ ಐದು ಮಕ್ಕಳ ತಾಯಿ, ೩೫ ವರ್ಷ ವಯಸ್ಸಿನ ಹೆಂಗಸೊಬ್ಬಳ ಬಲಗಿವಿಯ ಮೇಲೆ ಆರು ಅಂಗುಲದ ಕೊಂಬು ಬೆಳೆದಿರುತ್ತದೆ. ಅದು ಒಂದು ಅಂಗುಲದಷ್ಟು ದಪ್ಪವಿದೆ. ಟಗರಿನ ಕೊಂಬಿನಂತೆ ಸುರುಳಿ ಸುತ್ತಿದೆ. ಅದು ಕಳೆದ ೨೦ ವರ್ಷಗಳಿಂದ ಬೆಳೆಯುತ್ತಿದೆ. ಇದರಿಂದ ಅಕೆಗೆ ನಿಶ್ಶಕ್ತಿಯುಂಟಾಗುತ್ತಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾಳೆ.

ಕಾಲೇಜು ಸಂಘ

ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜು ಸಂಘದಲ್ಲಿ ಮದರಾಸ್ ಮಂತ್ರಿ ಹೆಚ್. ಸೀತಾರಾಮರೆಡ್ಡಿಯವರು ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ

ಗ್ರಾಮಾಧಿಕಾರಿಗಳ ಸಮ್ಮೇಳನ

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನದ ಆರಂಭೋತ್ಸವವನ್ನು ಕೇಂದ್ರ ಸರ್ಕಾರದ ಸಚಿವ ಶ್ರೀ ಆರ್. ಆರ್. ದಿವಾಕರರು ನವಂಬರ್ ೫ ನೇ ತಾ॥ ನೆರವೇರಿಸುವರು.

ಬೆಂಗಳೂರಿಗೆ ರಾಜಾಜಿ

ಜನವರಿ ತಿಂಗಳಲ್ಲಿ ಗೌರ್ನರ್ ಜನರಲ್ ರಾಜಾಜಿಯವರು ಬೆಂಗಳೂರಿಗೆ ಭೇಟಿ ಕೊಡುವರೆಂದು ಗೊತ್ತಾಗಿದೆ

ಮೈಸೂರು ಐಕ್ಯದ ಬಗ್ಗೆ ಸರ್ವ ಪಕ್ಷ ಸಮ್ಮೇಳನ

'ಪೌರವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಹೆಚ್. ಎಸ್. ದೊರೆಸ್ವಾಮಿಯವರು ದೆಹಲಿಯಲ್ಲಿ ಸರ್ದಾರ್ ಪಟೇಲ್, ರಾಷ್ಟ್ರಪತಿ ಮೊದಲಾದ ನಾಯಕರುಗಳನ್ನು ಕರ್ನಾಟಕ ಪ್ರಾಂತ್ಯದ ರಚನೆ ಬಗ್ಗೆ ಭೇಟಿ ಮಾಡಿ, ಬೊಂಬಾಯಿಗೆ ದಯಮಾಡಿಸಿದರು. ಅಲ್ಲಿನ ಪತ್ರಿಕೋದ್ಯೋಗಿ ಸಂಘದಲ್ಲಿ ಭಾಷಣ ಮಾಡಿದರು. ನೂತನವಾಗಿ ರಚಿಸಲಿರುವ ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರು ಐಕ್ಯವಾಗುವುದಕ್ಕೆ ಸಂಸ್ಥಾನದ ಯುವಕರ ಮತ್ತು ಪ್ರಗತಿದಾಯಕರ ಬೆಂಬಲವಿದೆ. ಆದರೆ ಇತ್ತೀಚೆಗೆ ಮೈಸೂರು ಮಂತ್ರಿಮಂಡಲದವರು ಮತ್ತು ಕಾಂಗ್ರೆಸ್ ನಾಯಕರುಗಳು ಇದಕ್ಕೆ ವಿರೋಧವಾಗಿ ವರ್ತಿಸುತ್ತಿರುವುದು ಮತ್ತು ಅವರುಗಳು ಮೈಸೂರಿನಲ್ಲಿ ರಾಜತ್ವವನ್ನು ಉಳಿಸುವುದಕ್ಕೆ ಪ್ರಯತ್ನಿಸುತ್ತಿರುವುದು ಖಂಡನೀಯ. ಮೈಸೂರು ಐಕ್ಯವಾಗುವ ವಿಚಾರದಲ್ಲಿ ಪ್ರಜಾಭಿಪ್ರಾಯ ಪಡೆಯಲು ಈ ತಿಂಗಳಿನ ಕೊನೆಯಲ್ಲಿ ಅರಸೀಕೆರೆಯಲ್ಲಿ ಸರ್ವ ಪಕ್ಷ ಸಮ್ಮೇಳನವನ್ನು ನಡೆಸಲಾಗುವುದು-ಎಂದು ಅವರು ತಿಳಿಸಿದರು.

ಟೆಂಡರ್ ನೋಟೀಸು

ನಂಜನಗೂಡು ತಾಲ್ಲೂಕು ತೊರವಳ್ಳಿ ಗ್ರಾಮದ ಪ್ರೈಮರೀ ಸ್ಕೂಲು ಕಟ್ಟಡವನ್ನು ಕಟ್ಟಲು ಟೆಂಡರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಆಫೀಸಿಗೆ ಸೀಲಾದ ಕವರಿನಲ್ಲಿ ತಾ॥ ೨೭-೧೦-೪೯ ಗುರುವಾರ ಸಾಯಂಕಾಲ ೩ ಗಂಟೆ ವಳಗಾಗಿ, ಇಷ್ಟವುಳ್ಳವರು ಕಳಿಸಬಹುದು. ಅಂದಾಜ ಮೊಬಲಗು ರೂ ೮೦೦೦ ಟೆಂಡರಿನ ಷರತ್ತುಗಳು, ಅಂದಾಜ ಮತ್ತು ಪ್ಲಾನ್ ಇವುಗಳ ವಿವರಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ತಿಳಿಯ ಬಹುದು. ಟೆಂಡರು ಕೊಡತಕ್ಕವರು ಟೆಂಡರಿನ ಜೊತೆಯಲ್ಲಿ (೧೦೦) ಒಂದುನೂರು ರೂಪಾಯಿ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಮಾಡಿ ಚಲನ್ ಲಗತ್ತಿಸಿರಬೇಕು.

ಹೆಚ್. ಎಂ. ಚನ್ನಬಸಪ್ಪ
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್,
ಮೈಸೂರು.

ಪೋಲೀಸರ ಉಪವಾಸ ಮುಷ್ಕರ

ಪಾಟ್ನಾ ಪೋಲೀಸರನ್ನು ೧೯೪೭ ರಲ್ಲಿ ದಂಗೆ ಏಳಿಸಲು ಯತ್ನಿಸಿದರೆಂಬ ಅಪವಾದನೆಯ ಮೇಲೆ ರಮಾನಂದ ತಿವಾರಿಯವರಿಗೆ ೧೦ ವರ್ಷ ಶಿಕ್ಷೆಯನ್ನು ವಿಧಿಸಿದುದನ್ನು ಪ್ರತಿಭಟಿಸಲು ಅಲ್ಲಿನ ನೂರು ಜನ ಪೋಲೀಸರೂ ಮತ್ತು ಜೈಲಿನವಾರ್ಡರುಗಳೂ ೨೪ ಗಂಟೆಗಳ ಉಪವಾಸ ಮುಷ್ಕರವನ್ನು ಕೈಗೊಂಡಿದ್ದರು.

ಕಾಳ ಸಂತೆ ದರದಲ್ಲಿ ಸಕ್ಕರೆ ಮಾರುವವರಿಗೆ ಛಡಿ ಏಟು

ಸಕ್ಕರೆಯನ್ನು ಕಾಳಸಂತೆ ದರದಲ್ಲಿ ಮಾರಿದವರಿಗೆ ಸಾರ್ವಜನಿಕರ ಮುಂದೆ ಚಾವಟಿಯಿಂದ ಹೊಡೆಯಲಾಗುವುದೆಂದು ಪುಣೆಯ ಅಂಗಡಿಯವರಿಗೆ ಹಸ್ತಪತ್ರಿಕೆಗಳ ಮೂಲಕ ಎಚ್ಚರಿಕೆ ಕೊಡಲಾಗಿತ್ತೆಂದೂ, ಅಂತಹ ಪತ್ರಿಕೆಗಳನ್ನು ಅಂಗಡಿ ಗೋಡೆಗಳ ಮೇಲೆ ಅಂಟಿಸಲಾಗಿತ್ತೆಂದೂ ವರದಿಯಾಗಿದೆ.

ಚೆಲುವಾಂಬಾ ಆಸ್ಪತ್ರೆ
ಮೈಸೂರು ೨೩-೯-೪೯

ಟೆಂಡರು ನೋಟೀಸು

ಮೈಸೂರು ಚೆಲುವಾಂಬಾ ಆಸ್ಪತ್ರೆಗೆ ೧೯೫೦ನೇ ಜನವರಿ ೧ನೇ ತಾರೀಖು ಲಾಗಾಯ್ತು ಡಿಸೆಂಬರ್ ೩೧ನೇ ತಾರೀಖಿನವರೆಗೆ ಮೇಲ್ಕಂಡ ಎರಡು ದಿನಗಳೂ ಒಳಪಟ್ಟು ಬೇಕಾಗುವ ಅಸ್ಪಟ ಹಸುವಿನ ಹಾಲಿನ ಸಪ್ಲೈ ಬಗ್ಗೆ ಮೂರು ಪ್ರತಿಗಳುಳ್ಳ ಸೀಲಾದ ಟೆಂಡರುಗಳನ್ನು ಸೆಕ್ರೆಟರಿಯವರು ತಾ॥ ೩-೧೧-೧೯೪೯ನೇ ಗುರುವಾರ ಬೆಳಿಗ್ಗೆ ೧೧ ಗಂಟೆಗೆ ತೆಗೆದುಕೊಳ್ಳುತ್ತಾರೆ.

ಹೆಚ್ಚಿಗೆ ವಿವರಗಳಿಗೆ ೧೯೪೯ ನೇ ಅಕ್ಟೋಬರ್ ೬ನೇ ತಾರೀಖು ಮೈಸೂರು ಗೆಜೆಟ್ಟಿನಲ್ಲಿ ನಮೂದಿಸಿರುವ ನೋಟೀಸನ್ನು ನೋಡಬಹುದು. ತಪಸೀಲಾದ ಟೆಂಡರು ಫಾರಂಗಳನ್ನು ಮೇಲ್ಕಂಡ ಆಸ್ಪತ್ರೆ ಆಫೀಸಿನಲ್ಲಿ ಪಡೆಯಬಹುದು.

ಎಸ್. ಡಿ. ಸುಂದರಂ
ಸೆಕ್ರೆಟರಿ,
ಚೆಲುವಾಂಬಾ ಆಸ್ಪತ್ರೆ, ಮೈಸೂರು

"MORNING SHOWS at
CHAMUNDESWARI
TALKIES
From 21-10-49 for 3 days
Samuel Goldwin's
Kid From —
— Brooklyn
(In Technicolour)
-:Featuring:-
Danny Kaye and
Virginia Mayo

ಮನೆ ಕ್ರಯಕ್ಕಿದೆ
ನಂ 2831. 10 ನೇ ಕ್ರಾಸ್, ವಾಣೀವಿಲಾಸ ಮೊಹಲ್ಲಾ. ವಿವರಗಳಿಗೆ.—
ಆರ್. ಗುಂಡೂರಾವ್,
ಶ್ರೀರಾಂ ಪೇಟೆ, ಮೈಸೂರು.

ಗಾಯತ್ರೀ ಟಾಕೀಸ್
ಪ್ರತಿ ದಿನ 3 ಆಟಗಳು
ಇಂದೇ ಕಡೇ ದಿನ! ಅಪೂರ್ವ ಸಮಯ!
M. G. M's
ಗಾನ್ ವಿತ್ ದಿ ವಿಂಡ್
Gone with the Wind
23-10-49ರಿಂದ 2 ದಿನಗಳು ಮಾತ್ರ
ಹಾಸ್ಯ ಲಹರಿ, ಎಡ್ಡಿ ಕ್ಯಾಂಟರ್ ಪಾತ್ರ ವಹಿಸಿರುವ ವಿನೋದ ಚಿತ್ರ
R. K. O's
If you Knew Susie
ಇಫ್ ಯು ನ್ಯೂ ಸುಸಿ
Morning Show on 24-10-49
Gone with the Wind
at 9 a. m.

ಅಮರ ಪ್ರೇಮವನ್ನು ನಿರೂಪಿ...
ಆತ್ಮ ಕಥೆ
ಸುರೇಂದ್ರ, ಮುನಾವರ್ ಸು...
ನಟಿಸಿರುವ ಹಿಂದಿ ಚಿತ್ರ
ಮೇರಿ ಕಹಾ...
16-10-49ರಿಂದ ಅಮೋಘ 2ನೇ...
ವುಡ್ ಲ್ಯಾಂಡ್ಸ್ ...
[G. F. D. Rel...

ಸಾಧನ ಔಷಧಾಲಯ
ಢಾಕಾ (ಬಂಗಾಳ).
ನಮ್ಮ ಮೇಲ್ಕಂಡ ಔಷಧಾ... ಮೈಸೂರು ಶಾಖೆಯನ್ನು ಜಗನ್ಮೋ... ಬಂಗ್ಲೆ ರಸ್ತೆಯಿಂದ ಶ್ರೀರಾಂಪೇ... ನಂ ೧೦೭೭ನೇ ಕಟ್ಟಡಕ್ಕೆ ಈ ತಿಂ... ಬದಲಾಯಿಸಿದ್ದೇವೆ.

ದೀಪಾವಳಿ ಶುಭಾಶಯಗ...
ನಾಧರ್ಾ ಕಾಫಿ ಮ...
ಜನರಲ್ ಸ್ಟೋರ್ಸ್
ಹಳೇ ಅಗ್ರಹಾರ, ಮೈಸೂರು
ನೆಹರೂ ಕಾಫಿ ಮತ್ತು
ಜನರಲ್ ಸ್ಟೋರ್ಸ್
ಚಾಮುಂಡಿ ಬಡಾವಣೆ, ಮೈಸೂ...
ದೀಪಾವಳಿಯ ಪ್ರಯುಕ್ತ ಬಾಲಕಬಾಲಕಿಯರುಗಳಿಗೆ ಬೇ... ವಿಧವಿಧವಾದ ಪಟಾಕಿ ವಗೈರೆ ಸಾ...ಗಳು ಅತ್ಯಂತ ಕಡಿಮೆ ಬೆಲೆಗೆ ದೊ...ತ್ತವೆ. ಒಂದು ಸಲ ಪರೀಕ್ಷಿಸಿ ನೋ...
ಹೂವಿನ ಕಡ್ಡಿ (ಸಣ್ಣದು) ೧ಕ್ಕೆ
,, (ದೊಡ್ಡದು) ,,
,, ಮತಾಪು
ಚೈನಾ ಚುವ
ಏರೋಪ್ಲೇನ್
,, (ದೊಡ್ಡದು)
ಭೂ ಚಕ್ರ
,, (ಸಣ್ಣದು)
ತುಕಡಿ ಪಟಾಕಿ ೧೦ ಸರಗಳ ಕಟ್ಟು ೧ಕ್ಕೆ
ಸ್ಪೆಷಲ್ ಕಾಫಿ ...
ಪೌಂಡು ೧ಕ್ಕೆ ರೂ. ...

ಚಾಮುಂಡೇಶ್ವರಿ ಟಾಕೀಸ್
21—10—49ರಿಂದ :: ದಿನವಹಿ 3 ಆಟ...
ಜೆಮಿನಿಯವರ ಅನೋಘ ತಮಿಳು ಚಿತ್ರ
* ಅಪೂರ್ವ ಸಹೋದರರು
-:ಮುಖ್ಯ ಪಾತ್ರ:-
ಎಂ. ಕೆ. ರಾಧಾ, ಭಾನುಮತಿ, ನಾಗೇಂದ್ರರಾವ್
ಬಾಲ್ಕನಿ ಸೀಟುಗಳನ್ನು ಮುಂಚಿತವಾಗಿ ರಿಸರ್ವ್ ಮಾಡಲಾಗುತ್ತ...
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾ...

ಪ್ರಭಾ ★ 21-10-49 ರಿಂದ
ಅಮೋಘ 2ನೇ ವಾರ ದಿನವಹಿ 3 ಆಟಗ...
ಕಾರದಾರ್ ಪಿಕ್ಚರ್ಸರವರ * ಕನೀಜ್ *
ಮುನವರ್ ಸುಲ್ತಾನಾ, ಶ್ಯಾಮ್, ಊರ್ಮಿಳ, ಕುಲದೀಪ್, ಕ...
21-10-49ರಿಂದ ಬೆಳಗಿನ ಪ್ರದರ್ಶನ 4 ದಿನಗಳು ಮಾ...
ಬೇಬಿ ಮಾಧುರಿ ಮತ್ತು ಮಹಜಬೀನ್ ನಟಿಸಿರುವ ಹಿಂದಿ ಚಿತ್ರ
— ಬಚಪನ್ —

ರಾಜಕಮಲ್ ಟಾಕೀಸ್
ದೀಪಾವಳಿ ಪ್ರಯುಕ್ತ
21—10—49ರಿಂದ :: ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
* ಚಾಂದನಿ ರಾತ್ * (ಹಿಂದಿ)
ತಾರಾಗಣ — ನಾಸೀಂ (ಪ್ರಕಾರ್ ಪ್ರಖ್ಯಾತಿ), ಶ್ಯಾಮ್, ಉಲ್ಹಾಸ್
Morning Shows From 21-10-49 for 4 days
A SONG TO REMEMBER
A glorious new form of entertainment in TECHNICOLOR
With Paul Muni, Merle Oberon, Cornal Wilde
As long as all the World loves a lover-this Romance Will Live

Edited, printed and published by A. R. Nagarajan at Sadhvi Press, D Subbiah Road Mysore.

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೮ | ಭಾನುವಾರ ೨೩-೧೦-೧೯೪೯ | ಸಂಚಿಕೆ ೧೪

ಇನ್ನು ೫ ವರ್ಷದಲ್ಲಿ ಎಲ್ಲ ಗ್ರಾಮಕ್ಕೂ ವಿದ್ಯುಚ್ಛಕ್ತಿ

...ತ್ಯದಲ್ಲಿ ಪ್ರಪಂಚದ ...ತಿ ವಾದಿಗಳ ಸಮ್ಮೇಳನ

...ಹಾತ್ಮ ಗಾಂಧಿಯವರು ಮರಣ ...ದುವುದಕ್ಕೆ ಮುಂಚೆ ವಿಶ್ವ ಶಾಂತಿಗಾ ...ಕೊಟ್ಟ ಸೂತ್ರಗಳನ್ನು ಅಕ್ಷರಶ ...ಲು ಸಂಕಲ್ಪ ಮಾಡಿರುವ ೧೧ ರಾ ... ಪ್ರತಿನಿಧಿಗಳು ಬರುವ ಡಿಸೆಂಬರ್ ...ನಲ್ಲಿ ಕಲ್ಕತ್ತಾ ನಗರದಲ್ಲಿ ಸೇರಿ, ಸ ...ೋಚನೆ ನಡೆಸುವರು ಪಶು ಶಕ್ತಿ ... ನೀತಿ ಮತ್ತು ಆತ್ಮ ಬಲದಿಂದಲೇ ...ಸಬೇಕೆಂಬ ತತ್ವವನ್ನು ಅವರು ಆ ...ನದಲ್ಲಿ ತಂದಿರುವರು ವಿಶ್ವ ಕವಿ ...ದ್ರ ನಾಥ ಟಾಗೂರರ ಶಾಂತಿನಿಕೇ ...ಶ್ರಮದಲ್ಲಿ ಸಮ್ಮೇಳನವು ನಡೆಯು ... ಅನಂತರ ಅವರುಗಳು ದೇಶದ ... ಭಾಗದಲ್ಲಿರುವ ಆಶ್ರಮಗಳಿಗೂ ...ಕೊಡುವರು ಜೀವನದಲ್ಲಿ ಅಹಿಂ... ಅಭ್ಯಾಸ ಮಾಡಿ, ಸಾಮಾಜಿಕ ...ರಾಜಕೀಯ ಸಮಸ್ಯೆಗಳನ್ನು ಬ...ಲು ಬದ್ಧಕಂಕಣರಾಗಿರುವವರ ವಿ...ವೊಂದನ್ನು ಸ್ಥಾಪಿಸಲು ಅವರು ...ಸುವರು

...ಗ್ಲೆಂಡಿನಲ್ಲಿ ಸ್ತ್ರೀಯರ ಸಂಖ್ಯೆಯೇ ಹೆಚ್ಚು

...ಗ್ಲೆಂಡ್ ಮತ್ತು ವೇಲ್ಸ್ ದೇಶಗಳ ...ಸರಿಗಿಂತಲೂ ೨೫ ಲಕ್ಷ ಜನ ಹೆ...ಹೆಚ್ಚಾಗಿರುವರೆಂದು ತಿಳಿದುಬಂದಿ...ದ್ದರಿಂದ ವಯಸ್ಕರಾದ ತರುಣಿಯ...ಮದುವೆಯಾಗುವ ಯುವಕರು ಸಾ... ಸಂಖ್ಯೆಯಲ್ಲಿ ಇರುವುದಿಲ್ಲ ೬೫ ... ಮೀರಿದ ಗಂಡಸರಿಗಿಂತ ಆದೇ ...ನ ಹೆಂಗಸರ ಸಂಖ್ಯೆ ಎರಡರಷ್ಟು ... ಹೆಂಗಸರಿಗೆ ಆಯುಸ್ಸೂ ಸಹ ಹೆ...ವುದೆಂದು ವರದಿಯಾಗಿದೆ ೬೦ ...ಯುಸ್ಸಿನವರೆಗೆ ಅನೇಕ ಸ್ತ್ರೀಯರು ...ಜೀವನವನ್ನು ತಾವೇ ಕಲ್ಪಿಸಿಕೊ...ಳುವರು

...ರುಷ ವೇಷದಲ್ಲಿ ಸ್ತ್ರೀ ...ಮ್ಯೂನಿಸ್ಟರ ಲೂಟಿ

...ದ ಹವಾಯ್ ಎಂಬಲ್ಲಿನ ತವ...ಗಳಿಗೆ ೪೦೦ ಜನ ಕಮ್ಯೂನಿಸ್ಟ ... ೧೦ ಲಕ್ಷ ರೂಪಾಯಿನ ಸಾಮಾ...ನ್ನು ಕೊಳ್ಳೆ ಹೊಡೆದರೆಂದು ವರದಿ ... ಅವರ ಪೈಕಿ ಸ್ತ್ರೀಯರೂ ಸಹಾ ... ವೇಷವನ್ನು ಹಾಕಿಕೊಂಡು ...ದ್ದರೆಂದು ಹೇಳಲಾಗಿದೆ

...ಹದಲ್ಲಿ ಸಾವಿರ ಜನರ ಮರಣ

... ವಾರಗಳ ಕಾಲ ವಿಪರೀತ ಮ...ದರಿಂದ ಗ್ವಾಟೆಮಾಲಾ ನಗರದ ... ಪ್ರವಾಹದಿಂದ ಸಾವಿರ ಜನರು ...ಗಿ ೧೬ ಸಾವಿರ ಜನರು ಮನೆ ಮ... ಕಳೆದುಕೊಂಡಿರುವರೆಂದು ತಿಳಿ...ಬಂದಿದೆ ರಸ್ತೆ, ಸೇತುವೆ, ತಂತಿ ಟೆ... ಮುಂತಾದುವುಗಳಿಗೆ ಉಂಟಾಗಿ...ರುವ ನಷ್ಟವು ೬೫ ಲಕ್ಷ ಡಾಲರುಗಳಿಗಿಂತ ...ಆಗಿರುವುದೆಂದು ಅಂದಾಜಾಗಿದೆ

...ರ್ಕಾರಿ ಭವನಗಳಲ್ಲಿ ಆಹಾರದ ಬೆಳೆ

...ದಲ್ಲಿರುವ ಎಲ್ಲಾ ಸರ್ಕಾರಿ ಬ...ವನದ ತೋಟಗಳಲ್ಲೂ ಆಹಾರದ ಬೆಳೆ...ಗೆಯಲು ಅಲ್ಲಿನ ಮಾಲಿಗಳಿಗೆ ...ವರು ಸೂಚನೆ ಕೊಟ್ಟಿರುವರು

ನೆಹರೂರವರ ಟಪಾಲು ನೋಡಲು ೯ ಗುಮಾಸ್ತರು

ಅಮೆರಿಕದಲ್ಲಿ ಪಂಡಿತ ನೆಹರೂರವರಿಗೆ ಹಗಲೂ ರಾತ್ರಿಯೂ ಬರುತ್ತಿರುವ ಅಸಂಖ್ಯಾತವಾದ ಟಪಾಲುಗಳು ಮತ್ತು ಟೆಲಿಫೋನ್ ಸಂಭಾಷಣೆಗಳನ್ನು ಗಮನಿಸಲು ೯ ಜನ ಗುಮಾಸ್ತರುಗಳನ್ನೂ, ಸಹಾಯಕರುಗಳನ್ನೂ ನೇಮಿಸಲಾಗಿದೆ

ಸಿಗರೇಟಿಗಾಗಿ ಉಪವಾಸ

ತಮ್ಮ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸದಿದ್ದುದಕ್ಕಾಗಿ ಪ್ರತಿಭಟಿಸಲು ಕಾನ್ಪುರ ಜೈಲಿನ ೩೦ ಜನ ಕಮ್ಯೂನಿಸ್ಟರ ಪೈಕಿ ೧೩ ಜನರು ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ್ದಾರೆ ಅವರು ಕೇಳಿರುವ ಬೇಡಿಕೆಗಳಲ್ಲಿ ಕುಟುಂಬದ ಬತ್ಯ ಮಾಹೆಯಾನಾ ೧೦೦ ರೂಪಾಯಿ, ಅಲ್ಲದೆ ಸಿಗರೇಟಿಗಾಗಿ ತಿಂಗಳಿಗೆ ೧೫ ರೂಪಾಯಿ ಕೊಡಬೇಕೆಂಬುದೂ ಸಹ ಸೇರಿರುತ್ತದೆ

ಯುಗೊಸ್ಲೇವಿಯಾ ಗಡಿಯಲ್ಲಿ ಸೈನ್ಯ ಜಮಾವಣೆ

ಹಂಗೇರಿ, ರುಮೇನಿಯಾ ಬಲ್ಗೇರಿಯಾ ದೇಶಗಳು ತಮ್ಮ ಸೈನ್ಯ ಮತ್ತು ಪೋಲೀಸ್ ದಳಗಳನ್ನು ಯುಗೊಸ್ಲೇವಿಯಾ ಗಡಿಯಲ್ಲಿ ಜಮಾಯಿಸಿವೆಯೆಂದು ಯುಗೋಸ್ಲಾವಿಯಾ ಪತ್ರಿಕೆಯೊಂದು ವರದಿ ಮಾಡಿದೆ ಕಂದಕಗಳನ್ನು ತೋಡುವುದು, ಗುಂಡಿಗಳನ್ನು ಹೂಡೆಯುವುದು, ಆಶ್ರಯ ಸ್ಥಾನಗಳನ್ನು ಕಲ್ಪಿಸ ವಿಮಾನ ಕಂತಿ ಜೀಲಿಗಳನ್ನು ಕಟ್ಟುವುದೇ ಮುಂತಾದ ಕಾರ್ಯಗಳು ನಾಗುತ್ತಿವೆಯೆಂದೂ ಹೇಳಲಾಗಿದೆ

ಶುಭಾಶಯಗಳು

ನಯ್ಯಾಜಿರಾವ್ ರಸ್ತೆಯಲ್ಲಿ ಬಟ್ಟೆ ವ್ಯಾಪಾರಿಗಳಾಗಿರುವ ಶ್ರೀ ಎಂ ಎಲ್ ಶ್ರೀನಿವಾಸರಾಯರು ಕಳುಹಿಸಿರುವ ದೀಪಾವಳಿ ಶುಭಾಶಯಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಗಾಂಧೀ ಜಯಂತಿ

ಬನುಮಯ್ಯನವರ ಹೈಸ್ಕೂಲಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ಗಾಂಧೀ ಜಯಂತಿಯು ಶ್ರೀ ಎನ್ ವೆಂಕಟನಾರಾಯಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ರಾಘವಾಚಾರ್, ರಾವ ಸ್ವಾಮಿ ಮುಂತಾದವರು ಭಾಷಣ ಮಾಡಿದರು

ಹೈದರಾಬಾದಿನ ಮುಖ್ಯ ಮಂತ್ರಿ

ಹೈದರಾಬಾದಿನಲ್ಲಿ ಇದುವರಿಗೆ ಇರುವ ಮಿಲಿಟರಿ ಗೌರ್ನರವರ ಆಡಳಿತವನ್ನು ರದ್ದುಮಾಡಿ ಮಂತ್ರಿ ಮಂಡಲದ ಆಡಳಿತವನ್ನು ಏರ್ಪಡಿಸಲಾಗುವುದೆಂದು ಗೊತ್ತಾಗಿದೆ ಭಾರತ ಸರ್ಕಾರದ ಅಧಿಕಾರಿಗಳಾದ ಶ್ರೀ ಎಂ.ಕೆ ವೆಲ್ಲೋಡಿಯವರನ್ನು ಅಲ್ಲಿನ ಮಂತ್ರಿ ಮಂಡಲದ ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯವರು ನೇಮಿಸಿರುವರು

ಭಾರಿ ಕೊಲೆಪಾತಕನ ಬಂಧನ

ಲಕ್ನೋ ಬಳಿ ಮಿಯಗಾಪುರಿಯಲ್ಲಿ ಅನೇಕ ಡಕಾಯಿತಿಗಳಿಗೂ, ಲೂಟಿ ಮತ್ತು ಕೊಲೆಗಳಿಗೂ ಕಾರಣನೆಂದು ಪ್ರಸಿದ್ಧನಾಗಿದ್ದ ಮತ್ತು ಮಹಾ ಪ್ರಬಲಶಾಲಿಯೂ ಗಿದ್ದ ಬೀರಿ ಎಂಬುವನನ್ನು ಪೋಲೀಸರು ಈಗ ಬಂಧಿಸಿದ್ದಾರೆ ಅವನು ೫೦ ಕ್ಕಿಂತ ಹೆಚ್ಚು ಖೂನಿಗಳನ್ನು ಮಾಡಿದ್ದನು ಅವನನ್ನು ಹಿಡಿದುಕೊಟ್ಟವರಿಗೆ, ಅಥವಾ ಅವನ ತಲೆಯನ್ನು ತಂದುಕೊಟ್ಟವರಿಗೆ ೫ ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದರು.

ಧನ್ವಂತರಿ ರಸ್ತೆಯವರ ಗೋಳಾಟ

ಮೇಲ್ಕಂಡ ರಸ್ತೆಯಲ್ಲಿರುವ ಮನೆ ಮಾಲೀಕರು ತಾವಾಗಿಯೇ ಮುಂದೆ ಬಂದು ಗೊತ್ತಾಗಿರುವ ಯೋಜನೆಯಂತೆ ಇನ್ನು ಆರು ತಿಂಗಳೊಳಗಾಗಿ ಅಂಗಡಿಗಳನ್ನು ಕಟ್ಟಿಸುವುದಾದರೆ ಆಕ್ವೈರ್ ಮಾಡುವ ಕಾರ್ಯಕ್ರಮವನ್ನು ನಿಲ್ಲಿಸಲಾಗುವುದು ಎಂಬುದಾಗಿ ಇದೇ ಮೇ ತಿಂಗಳು ಏಳನೇ ತಾರೀಖಿನಲ್ಲಿ ಪೌರಸಭೆಯವರು ನಿರ್ಣಯಿಸಿರುವುದು ಸರಿಯಷ್ಟೆ, ಅದರಂತೆ ಅಲ್ಲಿಯವರು ಅಂಗಡಿಕಟ್ಟಿಸುವ ಬಗ್ಗೆ ಅರ್ಜಿ ಕೊಟ್ಟಾಗ್ಯೂ ಅವರಿಗೆ ಲೈಸನ್ಸ್ ಕೊಟ್ಟಿಲ್ಲ ೧೪೬ ರಿಂದ ಇದೇ ಗೋಳಾಟವಾಗಿದೆ. ಪ್ರಜಾ ಸರ್ಕಾರ ಬಂದರೂ ತೊಂದರೆ ತಪ್ಪಲಿಲ್ಲ ಈ ವಿಚಾರವನ್ನು ಈಗಿನ ನಗರಾಭಿವೃದ್ಧಿ ಸಮಿತಿಯ ಛೇರ್‌ಮನ್‌ರವರಾದರೂ ಗಮನಕ್ಕೆ ತಂದು ಲೈಸನ್ಸ್ ಮಂಜೂರ್ ಮಾಡಿಸಬೇಕಾಗಿ ಅಲ್ಲಿಯವರು ಪ್ರಾರ್ಥಿಸುತ್ತಾರೆ

ಮಹಾರಾಣಿ ಹೈಸ್ಕೂಲ್ ಗಡಿಯಾರಕ್ಕೆ ಸಿಡಿಲಿನೇಟು

ಮೈಸೂರು ೨೩

ನಿನ್ನೆ ದಿನ ಸಂಜೆ ಮಹಾರಾಣಿ ಹೈಸ್ಕೂಲಿನ ಗಡಿಯಾರಕ್ಕೆ ಸಿಡಿಲು ಬಡಿದು ಅದಕ್ಕೆ ತುಂಬಾ ಜಖಂ ಆಗಿರುತ್ತದೆ

ಸ್ವೀಕಾರ

ಶ್ರೀ ಚಾಮುಂಡೇಶ್ವರಿ ಭವನ, ಶ್ರೀಕೃಷ್ಣ ಭವನ ಮತ್ತು ಇಂದ್ರ ಭವನದವರು ಕಳುಹಿಸಿಕೊಟ್ಟಿರುವ ದೀಪಾವಳಿ ಶುಭಾಶಯ ಮತ್ತು ಸಿಹಿ ಫಲಾಹಾರಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಮಹಾತ್ಮ ಗಾಂಧಿ ಸೇವಾ ಸಂಘ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಮೇಲ್ಕಂಡ ಸಂಘದ ಆಶ್ರಯದಲ್ಲಿ ಈ ರಾತ್ರಿ ೬ ಘಂಟೆಗೆ ೨॥ ಅರಕೆರೆ ನಾರಾಯಣ ರಾಯರ ಸಂಗೀತ ಕಚೇರಿಯನ್ನು ಏರ್ಪಡಿಸಿರುತ್ತೆ

ಸಂಗೀತ ಕಛೇರಿ

ಈ ದಿನ ಸಂಜೆ ೬.೩೦ ಘಂಟೆಗೆ ಶಿವರಾಂಪೇಟೆ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಸಂಗೀತ ವಿದುಷಿ ಜಿ ವಿ ರಂಗನಾಯಕಮ್ಮನವರ ಸಂಗೀತವು ಆ॥ ವಿ॥ ಎಸ್ ವೆಂಕಟರಮಣಯ್ಯನವರ ಪಿಟೀಲು ವಿದ್ವಾನ್ ರಾಮಯ್ಯನವರ ಮೃದಂಗ ಮತ್ತು ವಿದ್ವಾನ್ ಸೋಸಲೆ ವೇಣುಗಿರಿದಾಸರ ಕಂಜರಿಯೊಡನೆ ನಡೆಯುವುದು ಸರ್ವರಿಗೂ ಸ್ವಾಗತವಿದೆ

ಇನ್ನು ೫ ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ

ಸಂಸ್ಥಾನದ ಎಲ್ಲಾ ಗ್ರಾಮಗಳಿಗೂ ಇನ್ನು ೫ ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು 'ಶ್ರೀಮನ್ ಮಹಾರಾಜರವರು ಆಜ್ಞೆ ಮಾಡಿರುತ್ತಾರೆಂದೂ ಅದಕ್ಕೆ ಅನುಸಾರವಾಗಿ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವುದಾಗಿಯೂ ಶ್ರೀ ಕೆ ಟಿ ಭಾಷ್ಯಂರವರು ಚನ್ನಕೆರೆಯ ವಿದ್ಯುದ್ದೀಪದ ಆರಂಭೋತ್ಸವದ ಸಂದರ್ಭದಲ್ಲಿ ತಿಳಿಸಿದರು.

ದೆಹಲಿ ಪೋಲೀಸರಿಂದ ಶೋಧನೆಗೆ ಅವಕಾಶ

ಬೆಂಗಳೂರು ೨೩

ಕೇಂದ್ರ ಸರ್ಕಾರದ ನೌಕರರಿಂದ ನಡೆಸಲ್ಪಡಬಹುದಾದ ಅಪರಾಧಗಳ ಬಗ್ಗೆ ಸಂಶೋಧನೆ ಮತ್ತು ತನಿಖೆ ನಡೆಸಲು ದೆಹಲಿಯ ವಿಶೇಷ ಪೋಲೀಸ್ ದಳದವರಿಗೆ ಅಧಿಕಾರವನ್ನು ಕೊಡುವ ಅವಸರದ ಶಾಸನ ಒಂದನ್ನು ಸರ್ಕಾರದವರು ಜಾರಿಗೆ ತಂದಿರುತ್ತಾರೆ

ಶ್ರೀ ಮೋದಪ್ಪನವರ ಮೇಲಿನ ಅಪೀಲು ತಿರಸ್ಕಾರ

ಕುದುರೆ ಪಂದ್ಯದ ಪ್ರ್ಯಾಂ... ಮೋಜರ್ ಹೀಗವೆ. ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೋದಪ್ಪನವರ ಮೇಲೆ ಹೂಡಿದ್ದ ಮಾನನಷ್ಟದ ಮೊಕದ್ದಮೆಯು ಬೆಂಗಳೂರು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಜಾ ಆಗಿ ಅವರ ಮೇಲೆ ತವರ. ಹಾಕಿದ್ದ ಅಪೀಲನ್ನೂ ಸಹಾ ಡಿವಿಷನಲ್ ಸೆಷನ್ಸ್ ನ್ಯಾಯಾಧೀಶರು ವಜಾ ಮಾಡಿರುತ್ತಾರೆ ಆಪಾದನೆಯು ನಿರಾಧಾರವಾದ್ದೆಂದು ಅವರು ಹೇಳಿರುತ್ತಾರೆ

ವಾರ ಭವಿಷ್ಯ

ತಾ|| ೨೩-೧೦-೪೯ ರಿಂದ ೩೦ ರವರೆಗೆ

— -:o:- —

ಮೇಷ—ನಿಮ್ಮ ಮತ್ತು ಪತ್ನಿಯ ಆರೋಗ್ಯ ನೆಟ್ಟಗೆ ಆದರೆ ಮಕ್ಕಳಿಗೆ ಕೊಂಚ ತೊಂದರೆ. ವ್ಯಾಪಾರ, ಉದ್ಯೋಗ ಮತ್ತು ನೌಕರಿಗಳ ಸ್ಥಿತಿ ನೆಟ್ಟಗೆ ಆಕಸ್ಮಿಕ ಪ್ರವಾಸ, ಮತ್ತು ಲಾಭ. ವ್ಯವಹಾರದಲ್ಲಿ ಧನಿಕ ಮಿತ್ರರ ಸಹಾಯ ತಾ|| ೨೪, ೨೫ ವಿಶೇಷ ಖರ್ಚು.

ವೃಷಭ—ಮಾತ್ರ ಪ್ರಿಯವರಿಗೆ ಆಕಸ್ಮಿಕ ಖಾಯಿಲೆ. ಗೃಹದಲ್ಲಿ ಸಹೋದರರೊಡನೆ ಕಲಹ ಪ್ರಸಂಗ ನೆರೆಯವರೊಡನೆ ಹಠ. ವ್ಯಾಪಾರಾದಿಗಳಲ್ಲಿ ಪರಿಸ್ಥಿತಿ ನೆಟ್ಟಗಿರದು ವಾಹನ, ಚತುಷ್ಪಾದ ಪ್ರಾಣಿಗಳಿಂದ ಅಪಘಾತ ದುಡ್ಡಿನ ದುಂದು ವೆಚ್ಚ ತಾ|| ೨೬, ೨೭ ಶೋಕ ವಾರ್ತೆ, ಹೃದಯಕ್ಕೆ ದಾರುಣ ವೇದನೆ

ಮಿಥುನ—ಧನ ಮಾನ ಮತ್ತು ಅಧಿಕಾರಗಳು ದೊರೆತು ವರ್ಚಸ್ಸು ಹೆಚ್ಚುವುದು. ಆರೋಗ್ಯ ನೆಟ್ಟಗೆ ಸಾರ್ವಜನಿಕ ಕಾರ್ಯದಲ್ಲಿ ಪತ್ನಿಯ ಸಹಕಾರ ಕೋರ್ಟು ವ್ಯವಹಾರದಲ್ಲಿ ನ್ಯಾಯ ದೊರಕುವುದು ತಾ|| ೨೬, ೨೭ ಆನಂದ ಮಿತ್ರರ ಔತಣ

ಕರ್ಕ—ಖರ್ಚು ವಿಪರೀತ ಆದರೂ ಆದಾಯವುಂಟು ವ್ಯಾಪಾರಾದಿಗಳಲ್ಲಿ ಚೆನ್ನಾಗಿರುವುದು ಸರ್ಕಾರ ದರ್ಬಾರು ಕಾರ್ಯಗಳಲ್ಲಿ ಪ್ರಮುಖಪಾತ್ರ, ತಾ|| ೨೪, ೨೮ ಶುಭವಾರ್ತೆ, ಸನ್ಮಾನ

ಸಿಂಹ—ಭಯಂಕರ ಬಿರುಗಾಳಿಯ ಹೊಡೆತದಿಂದ ಬುದ್ಧಿಯ ವೈಕಲ್ಯ ಅಪಘಾತ ಭಯ. ಚಿತ್ತ ಚಾಂಚಲ್ಯ, ಪ್ರವಾಸದಲ್ಲಿ ಭಯ ವಾಹನಾಘಾತ, ಮೋಸ ನಿಮ್ಮ ಮೇಲೆ ನಿಮಗೇ ಸಿಟ್ಟು ತಾ|| ೨೬, ೨೭ ಸ್ವಲ್ಪ ಉತ್ತಮ ಸಂಕಟ ನಿವಾರಣೆ

ಕನ್ಯಾ—ಖರ್ಚು ಬಹಳ ಕಾಲಿಗೆ ಪೆಟ್ಟು ಮನಸ್ಸಿಗೆ ಭೀತಿ. ಪ್ರವಾಸದಲ್ಲಿ ಹಾನಿ ನೌಕರಿ ದಂಧೆಗಳಲ್ಲಿ ಆಕಸ್ಮಿಕ ವ್ಯತ್ಯಾಸ. ಕೈಕೆಳಗಿನವರಿಂದ ತೊಂದರೆ ಪ್ರಿಯ ಜನ ವಿಯೋಗ. ಪತ್ನಿಯ ಅಸಹಕಾರ ತಾ|| ೨೬, ೨೭ ವೇದನೆ. ೨೪, ೨೮ ಸಂಕಟ ನಿವಾರಣೆ

ತುಲಾ—ಅಭಿವಂದನೆಯ ಸುರಿಮಳೆಯಾಗುವ ಘಟನೆ ಆರೋಗ್ಯ ನೆಟ್ಟಗೆ ಮಿತ್ರರಿಂದ ಲಾಭ ನೌಕರಿಯಲ್ಲಿ ಮೇಲಧಿಕಾರ ದೊರಕುವುದು. ವ್ಯಾಪಾರದಲ್ಲಿ ಲಾಭ ಲಾಭ ಮತ್ತು ಮಹತ್ವದ ಪತ್ರ ವ್ಯವಹಾರಕ್ಕೂ ವಾರ ಸರಿಯಾದದ್ದು ತಾ|| ೨೪, ೨೭ ಶುಭವಾರ್ತೆ ನೂತನ ಪರಿಚಯ

ವೃಶ್ಚಿಕ—ವಾರವು ಉನ್ನತ ಪ್ರದ ಸಂಪತ್ ಪ್ರದ ವಾರ ಯೋಜಿತ ಕಾರ್ಯ, ವ್ಯವಹಾರಗಳ ಒಪ್ಪಾವಣೆ ಪರಾಕ್ರಮ ಕಾರ್ಯ. ಕೋರ್ಟಿನಲ್ಲಿ ಜಯ ತಾ|| ೨೬, ೨೮ ಧನ ಲಾಭ ಮಿತ್ರ ಭೇಟಿ

ಧನು—ಯಾರ ನೆರವೂ ಬೇಡದೆ, ಕಾರ್ಯದಲ್ಲಿ ತೊಡಗಿರಿ ಆರೋಗ್ಯ ನೆಟ್ಟಗೆ ಹರ್ಷದ ಘಟನೆ ವ್ಯಾಪಾರಾದಿಗಳಲ್ಲಿ ಪ್ರತಿಸ್ಪರ್ಧಿಗಳ ಮೇಲೆ ಜಯ ತಾ|| ೨೩, ೨೪ ಖರ್ಚು

ಮಕರ—ಕಷ್ಟ ಪ್ರಸಂಗದಿಂದ ಪಾರಾಗುವಿರಿ ಆರೋಗ್ಯದ ಕಡೆ ನಿಗಾ ಬೇಕು ದೀರ್ಘ ಪ್ರವಾಸಬೇಡ ವಾಹನವೇರುವಾಗ ಎಚ್ಚರಿಕೆ ಇರಲಿ ಪ್ರತಿಸ್ಪರ್ಧಿಗಳ ಕಾಟ ತಾ|| ೨೬, ೨೭ ನಿದ್ರಾ ನಾಶ, ಅಗ್ನಿ ಭಯ

ಕುಂಭ—ಅಪ್ರಿಯ ಘಟನೆ ಆರೋಗ್ಯ ನೆಟ್ಟಗೆ ಪ್ರಿಯ ಜನರಿಂದ ಘಾತುಕತನ, ಅಸಹಾಯಕತೆ ವಿಯೋಗದಿಂದ ವ್ಯಾಕುಲ. ಪತ್ನಿಗೆ ಅನಾರೋಗ್ಯ ತಾ|| ೨೬, ೨೭ ಧನ ಸಹಾಯ

ಮೀನ—ಆರೋಗ್ಯ ನೆಟ್ಟಗೆ ಧನಲಾಭ ನಿಮ್ಮ ದಕ್ಷತೆ ಕಂಡು ಮೇಲ್ಪಟ್ಟವರು ಸುಪ್ರೀತರಾಗುವರು, ಕೌಲು ಕರಾರಿಗೆ ವಾರ ಚೆನ್ನಾಗಿದೆ ತಾ ೨೪, ೨೮ ಆಕಸ್ಮಿಕ ಧನ ಲಾಭ, ಸುಖ ವಾರ್ತೆ

ಮೈಸೂರು ಪ್ರಜಾ ಸಂಘ

ಮುಂದೆ ನಡೆಯುವ ಮೈಸೂರು ಸಿಟಿ ಪೌರಸಭಾ ಚುನಾವಣೆಯಲ್ಲಿ ಸಂಘದ ಪರವಾಗಿ ಮೊಹಲ್ಲಾವಾರು ಚುನಾವಣೆಗೆ ಉಮೇದುವಾರರಾಗಿ ನಿಲ್ಲಲು ಇಚ್ಛಿಸುವ ಪ್ರಜಾ ಸಂಘದ ಸದಸ್ಯರು ಇದೇ ತಿಂಗಳು ೨೫ನೇ ತಾರೀಖು ಸಾಯಂಕಾಲ ೮ ಗಂಟೆ ಒಳಗಾಗಿ ಬನುಮಯ್ಯನವರ ಹೈಸ್ಕೂಲ್ ಹಿಂಭಾಗದಲ್ಲಿರುವ ಸಂಘದ ಕಾರ್ಯಾಲಯಕ್ಕೆ ಬಂದು ವಿಧಾಯಕವಾದ ಫಾರಂನಲ್ಲಿ ಅರ್ಜಿ ಬರೆದುಕೊಡಬೇಕಾಗಿ ಕೋರಲಾಗಿದೆ

ಹಡಗಿಗೂ ವಿಮಾನಕ್ಕೂ ಡಿಕ್ಕಿ

ಕಳೆದ ೧೧ ನೇ ತಾರೀಖು ಕಲ್ಲಿದ್ದ... ತುಂಬಿಕೊಂಡು ಹೋಗುತ್ತಿದ್ದ '... ಸ್ಟೋ' ಎಂಬ ಹಡಗಿಗೆ 'ಅಲ್ಬ...' ಎಂಬ ನೂತನ ಬ್ರಿಟಿಷ್ ವಿಮಾನವು ... ಟ್ಲೆಂಡಿನ ಬಳಿ ಸಮುದ್ರದಲ್ಲಿ ಡಿಕ್ಕಿ... ದು ಹಡಗು ಮುಳುಗಿಹೋಯಿತು ... ಮಾರು ೨೦ ಜನರು ಮೃತಪಟ್ಟರು ... ೩ ಜನರು ಮಾತ್ರ ಬದುಕಿರುವರೆಂದು ... ಳಲಾಗಿದೆ

ಅಮರ ಪ್ರೇಮವನ್ನು ನಿರೂಪಿ...
ಆತ್ಮ ಕಥೆ
ಸುರೇಂದ್ರ, ಮುನಾವರ್ ಸು...
ನಟಿಸಿರುವ ಹಿಂದಿ ಚಿತ್ರ
ಮೇರಿ ಕಹಾ...
16-10-49ರಿಂದ ಅಮೋಘ 2ನೇ ...
ವುಡ್ ಲ್ಯಾಂಡ್ಸ್‌ನ...
[G. F. D. Rele...

[ಸ್ಥಾಪನೆ. 1906]
ಕೆನರಾ ಬ್ಯಾಂಕ್, ಲಿಮಿಟೆಡ್
(ಮೈಸೂರು ಬ್ರಾಂಚ್)
(ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶೆಟ್ಟಾಜಿರಾ...
ಅಂಡ್ ಸನ್ಸ್‌ರವರ ಮೈಸೂರು ಹಾಲ್
ಇವರ ಮಾಳಿಗೆಯಲ್ಲಿ)
ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದ...
ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹೆಚ್ಚಿನ ವಿವರಗಳನ್ನು
ಬ್ಯಾಂಕಿನಲ್ಲಿ ಪಡೆಯಬಹುದು
U. HARI SHENOY B...
ಏಜಂಟ್.

ಪ್ರಭುದೇವಾ ಟಾಕೀಸ್
ಪ್ರತಿದಿನ ೩ ಆಟಗಳು
24—10—49ನೇ ಸೋಮವಾರದಿಂದ ಪ್ರಾರಂಭ
- ಪುಚ್ಚು ಮನುಷ್ಯ -
(ತಮಿಳು)
(ಅಥವ ಮ್ಯಾಡ್ ಮ್ಯಾನ್)
ಮುಖ್ಯ ಪಾತ್ರ.-ಎನ್. ಎಸ್. ಕೃಷ್ಣನ್, ಟಿ.ಎ. ಮಧುರಂ,
ಸಹಸ್ರನಾಮಂ ಮುಂತಾದವರು

ಎಲ್ಲವನ್ನೂ ಶುದ್ಧಪಡಿಸಲು
ಉತ್ತಮವಾದ
- ಮೈಸೂರು ಸೋಪ್ -
ಎಲ್ಲೆಲ್ಲೂ ದೊರೆಯುತ್ತವೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಚಾಮುಂಡೇಶ್ವರಿ ಟಾಕೀಸ್
21—10—49ರಿಂದ :: ದಿನವಹಿ 3 ಆಟಗಳು
ಜೆಮಿನಿಯವರ ಅನೋಘ ತಮಿಳು ಚಿತ್ರ
* ಅಪೂರ್ವ ಸಹೋದರರು *
- ಮುಖ್ಯ ಪಾತ್ರ:-
ಎಂ. ಕೆ. ರಾಧಾ, ಭಾನುಮತಿ, ನಾಗೇಂದ್ರರಾವ್
ಬಾಲ್ಕನಿ. ಸೀಟುಗಳನ್ನು ಮುಂಚಿತವಾಗಿ ರಿಸರ್ವ್ ಮಾಡಲಾಗುತ್ತೆ
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾಮಾಡಿರುತ್ತೆ

ರಾಜಕಮಲ್ ಟಾಕೀಸ್
ದೀಪಾವಳಿ ಪ್ರಯುಕ್ತ
21—10—49ರಿಂದ :: ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
* ಚಾಂದನಿ ರಾತ್ *
(ಹಿಂದಿ)
ತಾರಾಗಣ — ನಾಸೀಂ ಪ್ರಕಾರ್ (ಪ್ರಖ್ಯಾತಿ), ಶ್ಯಾಮ್, ಉಲ್ಹಾಸ್

Morning Shows From 21-10-49 for 4 days
A SONG TO REMEMBER
A glorious new form of entertainment in TECHNICOLOR
With - Paul Muni, Merle Oberon, Cornal Wilde
As long as all the World loves a lover-this
Romance Will Live'

Edited, printed and published by A. R. Nagarajan at Sadhvi Press, D. Subbiah Road, Mysore

ಫೋನ್ ನಂ 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಸೋಮವಾರ ೨೪-೧೦-೪೯ [ಸಂಚಿಕೆ ೭೩

ಗೋಡ್ಸೆ ಜೀವದಾನಕ್ಕೆ ಮಾತಾಪಿತೃಗಳ ಅರ್ಜಿ

...ಗಳನ್ನು ಸ್ಥಾಪಿಸುವುದು ...ರಾಟ ನಡೆಸುವುದಕ್ಕಲ್ಲ

...ತ್ರೆ ಕೆಲಸಗಾರರ ಸಂಘದಲ್ಲಿ ...ದರಾಸ್ ಸಚಿವರ ಭಾಷಣ

ಮೈಸೂರು ೨೪

...ರದ ಆಸ್ಪತ್ರೆ ಕೆಲಸಗಾರರ ಸಂಘದ
... ಭಾಷಣವನ್ನು ಮದರಾಸ್ ಶಾ
... ಸಚಿವರಾದ ಶ್ರೀ ಹೆಚ್. ಸೀತಾರಾಮ
...ಯವರು ನಿನ್ನೆ ಸಂಜೆ ಮಾಡಿದರು
...ಗ್ಯ ಸಚಿವರಾದ ಜನಾಬ್ ಮಹ
... ಷರೀಫ್‌ರವರು ಅಧ್ಯಕ್ಷತೆ ವಹಿ
...ರು

... ಟಿ ಎಸ್ ಸುಬ್ಬಣ್ಣನವರು ಸ್ವಾಗ
...ಯಸಿದರು ನಂತರ ಶ್ರೀ ಸೀತಾರಾ
...ಯವರು ಭಾಷಣ ಮಾಡಿ ಇಂತ
...ಘಗಳ ಅವಶ್ಯಕತೆಯನ್ನು ಒತ್ತಿ
... ಸರ್ಕಾರಿ ಆಸ್ಪತ್ರೆ ಕೆಲಸಗಾರರು
...ಗಳ ನೇತೃತ್ವದಲ್ಲಿ ಸುಸಂಘಟಿತ
...ವುದು ಪ್ರಶಂಸನೀಯವಾದುದೆಂ
...ಹೇಳಿದರು ಸಂಘಗಳನ್ನು ರಚಿ
...ದು ಕೇವಲ ಯುದ್ಧಮಾಡುವುದಕ್ಕ
...ರ್ಮಿಕರು ತಮ್ಮ ಸೇವೆಯನ್ನು ನಿ
...ಯಿಂದ ಸಲ್ಲಿಸಿ ತಮಗೆ ಯಾವದಾ
... ಕುಂದು ಕೊರತೆಗಳಿದ್ದರೆ ಅವುಗಳ
...ಸಂಘಗಳ ಮೂಲಕ ಈಡೇರಿ
...ಬೇಕೇ ಹೊರತು ಅನಾವಶ್ಯಕವಾ
...ಗಳ ಮಾಡಬಾರದು ಆಸ್ಪತ್ರೆಗೆ ಬರು
...ಂಬಿಯುವರನ್ನು ತಂದೆ ತಾಯಿಗ
...ಪೋಷಿಸಬೇಕಾದುದು ...ಅವರುಗಳ
... ಸೇವಾ ಕಾಂಕ್ಷೆಯೇ ಅವರ
... ಧ್ಯೇಯವಾಗಿರಬೇಕು ಎಂದು
... ತಿಳಿಸಿದರು

... ಮಹಮೂದ್ ಷರೀಫ್‌ರವರು
... ಮಾಡಿ, ಆಸ್ಪತ್ರೆ ಕೆಲಸಗಾರರ
...ದು ಕೊರತೆಗಳನ್ನು ನಿವಾರಿಸಲು ಸ
...ದವರು ಪ್ರಯತ್ನಿಸ ವುದಾಗಿ ಬರವ
...ರು. ಬೆಂಗಳೂರಿನಲ್ಲಿ ಕೆಲಸಗಾರರಿ
...ತಿ ಏರ್ಪಡಿಸಲು ೪ ಲಕ್ಷ ರೂ
...ಜನೆ ತಯಾರಿಸಲಾಗಿದೆಯೆಂದೂ,
...ರೀತಿ ಮೈಸೂರಿನಲ್ಲೂ ಗೃಹಗಳನ್ನು
...ಸಲು ಪ್ರಯತ್ನಿಸಲಾಗುವುದೆಂದೂ
... ತಿಳಿಸಿದರು

... ರಾಮಣ್ಣನವರು ವಂದನೆಯನ್ನು
...ಸಿ, ಇತರ ಇಲಾಖೆಯವರಿಗಿರುವ
... ನೌಕರರ ಮುಂತಾದ ಸೌಲಭ್ಯಗಳ
...ಸ್ಪತ್ರೆ ಕೆಲಸಗಾರರಿಗೂ ಕೊಡಲೇ
...ಸಿಕೊಡಬೇಕೆಂದು ಕೋರಿದರು

...‖ ಪ್ರ‖ ಸಭಾ ಸದಸ್ಯರ ಮೇಲೆ ಮಾನನಷ್ಟ ಮೊಕದ್ದಮೆ

...ಲಿಗ್ರಾಮದಲ್ಲಿರುವ ಪ್ರಜಾ ಪ್ರತಿನಿಧಿ
... ಸದಸ್ಯರಾದ ಶ್ರೀ ಎಸ್ ಹೆಚ್ ತ
...ಯ್ಯನವರು ತಮ್ಮ ಮೇಲೆ ಸುಳ್ಳು ಫಿ
...ನ್ನು ಕೊಟ್ಟು ಮಾನ ನಷ್ಟ ಉಂಟು
...ದರೆಂಬುದಾಗಿ ಅಲ್ಲಿನ ಪೋಲೀಸ್ ದ
...ರ್ ಶ್ರೀ ಚಂದ್ರಶೇಖರಯ್ಯನವರು
... ಮೇಲೆ ಮಾನ ನಷ್ಟದ ನೋ
...ಯನ್ನು ಹೂಡಿರುತ್ತಾರೆ

... ಜಗತ್ ಸರ್ಕಾರದ ಸಮ್ಮೇಳನ

...ದೀ ಜಗತ್ ಸರ್ಕಾರದ ಸ್ಥಾಪನೆ
...ಮ್ಮೇಳನದ ಮುಂದಿನ ಅಧಿವೇಶನವ,
...ಭಾರತದಲ್ಲಿ ನಡೆಸಲು ಸಿದ್ಧತೆಗಳಾ

ನಗರದ ನೀರು ಸರಬರಾಜು

— ೦ —

ಮೈಸೂರು ೨೪

ಬೆಳಗೊಳದ ನೀರು ಸರಬರಾಜು ಕೇಂದ್ರದಲ್ಲಿ ದುರಸ್ತಿನ ಕೆಲಸ ನಡೆಯಬೇಕಾಗಿರುವುದರಿಂದ ಈ ದಿನ ಬೆಳಿಗ್ಯೆ ೧೧ ಗಂಟೆಯಿಂದ ಸಂಜೆ ೬ ಗಂಟೆವರೆಗೆ ನಗರದ ನಲ್ಲಿಗಳಲ್ಲಿ ನೀರನ್ನು ಒದಗಿಸಲು ಅನಾನುಕೂಲವಾಗಿರುವುದೆಂದೂ, ಸಂಜೆ ೬ ಗಂಟೆಯಿಂದ ರಾತ್ರಿ ೯ ಗಂಟೆವರೆಗೆ ನೀರು ಸರಬರಾಜಾಗುವ ವ್ಯವಸ್ಥೆ ಮಾಡಲಾಗುವುದೆಂದೂ ತಿಳಿಸಲಾಗಿದೆ

ವಿದ್ಯಾರ್ಥಿಗಳು ಅಕ್ಷರ ಪ್ರಚಾರ ಕಾರ್ಯದಲ್ಲಿ ತೊಡಗಬೇಕು.

ಮದರಾಸ್ ಸಚಿವರಾದ ಶ್ರೀ ಹೆಚ್ ಸೀತಾರಾಮರೆಡ್ಡಿಯವರು ನಿನ್ನೆ ಸಂಜೆ ಮಹಾರಾಜಾ ಕಾಲೇಜ್ ಸಂಘದ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಪ್ರಜಾ ಪ್ರಭುತ್ವವು ಮುಂದುವರಿಯಬೇಕಾದರೆ, ದೇಶದಲ್ಲಿ ಅಕ್ಷರತೆಯು ಅಭಿವೃದ್ಧಿ ಹೊಂದಬೇಕು ಭಾರತದಲ್ಲಿ ಅಕ್ಷರಸ್ಥರ ಸಂಖ್ಯೆಯು ಬಹಳ ಕಡಿಮೆಯಾಗಿದೆ ಇದರಿಂದ ದೇಶದ ಪ್ರಗತಿಗೆ ಅಡ್ಡಿ ಉಂಟಾಗಿದೆ ಆದುದರಿಂದ ವಿದ್ಯಾರ್ಥಿಗಳು ಅನಕ್ಷರತೆಯನ್ನು ನಿರ್ಮೂಲ ಮಾಡಲು ಮುಂದೆ ಬಂದು ಸೇವೆ ಸಲ್ಲಿಸಬೇಕು—ಎಂದು ಅವರು ತಿಳಿಸಿದರು

ಗೋಡ್ಸೆ ಪ್ರಾಣ ಭಿಕ್ಷೆಗಾಗಿ ಮಾತಾಪಿತೃಗಳ ಅರ್ಜಿ

ಗಾಂಧೀಜಿಯವರ ಕೊಲೆಗಾಗಿ ಮರಣ ದಂಡನೆಗೆ ಗುರಿಯಾಗಿರುವ ನಾಥೂರಾಂ ಗೋಡ್ಸೆಗೆ ಪ್ರಾಣಭಿಕ್ಷ ನೀಡಬೇಕೆಂದು ಅವನ ತಂದೆ ತಾಯಿಗಳು ಭಾರತದ ಗವರ್ನರ್ ಜನರಲ್ಲರಿಗೆ ಪ್ರಾರ್ಥನಾ ಅರ್ಜಿ ಸಲ್ಲಿಸಿದ್ದಾರೆ ತಂದೆಗೆ ೭೪ ಮತ್ತು ತಾಯಿಗೆ ೬೯ ವಯಸ್ಸಾದುದರಿಂದ ತಮ್ಮ ಪ್ರೀತಿ ಪಾತ್ರನಾದ ಮಗನನ್ನು ಈ ಇಳಿಯ ವಯಸ್ಸಿನಲ್ಲಿ ಉಳಿಸಿಕೊಡಬೇಕೆಂದು ಪ್ರಾರ್ಥಿಸಲಾಗಿದೆ ಹಾಗೆಯೇ ನಾರಾಯಣ ಆಪ್ಟೆಯ ಪತ್ನಿ ಚಂಪುಬಾಯಿ ಆಪ್ಟೆ ತನ್ನ ಗಂಡನೇ ತನ್ನ ಜೀವನದ ಸರ್ವಸ್ವವೆಂದೂ, ಆತನನ್ನು ಉಳಿಸಬೇಕೆಂದೂ ಕೋರಿ ಅರ್ಜಿ ಹಾಕಿರುತ್ತಾಳೆ

ಮೌಲಾನಾ ಅಜಾದರಿಗೆ ಪೌರಸಭಾ ಬಿನ್ನವತ್ತಳೆ

ಮೈಸೂರು ೨೪

ಭಾರತ ಸರಕಾರದ ವಿದ್ಯಾ ಮಂತ್ರಿಗಳಾದ ಮೌಲಾನಾ ಅಬುಲ್‌ಕಲಂ ಅಜಾದರು ಮುಂದಿನ ತಿಂಗಳು ೨ನೇ ತಾರೀಖಿಗೆ ಇಲ್ಲಿಗೆ ಆಗಮಿಸಿದಾಗ್ಯೆ ಅವರಿಗೆ ನಗರದ ಪೌರಸಭೆಯವರು ಒಂದು ಬಿನ್ನವತ್ತಳೆಯನ್ನು ಅರ್ಪಿಸುವರು ಇದಕ್ಕಾಗಿ ೨ ಸಾವಿರ ರೂಗಳನ್ನು ವಿನಿಯೋಗಿಸಲಾಗುವುದು

ಅಣುಬಾಂಬಿನ ತಯಾರಿಕೆಯಲ್ಲಿ ರಷ್ಯದ ಮೇಲುಗೈ

ಅಣುಬಾಂಬುಗಳ ತಯಾರಿಕೆಯಲ್ಲಿ ರಷ್ಯವು ಇನ್ನೆರಡು ವರ್ಷಗಳೊಳಗೆ ಅಮೆರಿಕವನ್ನು ಮೀರಿಸುವುದೆಂದು ಅಮೆರಿಕದ ಪ್ರಮುಖ ಅಣುಶಕ್ತಿಯ ಪ್ರವೀಣರಾದ ಡಾ‖ ಯೂರೆಯವರು ತಿಳಿಸಿದ್ದಾರೆ ಅಮೆರಿಕವು ಯುದ್ಧಕಾಲದಲ್ಲಿ ಆತುರವಾಗಿ ಅಣುಬಾಂಬು ತಯಾರಿಕೆಗೆ ಗಮನವಿತ್ತಿತೆಂದೂ, ಆದರೆ ರಷ್ಯವು ಮಾತ್ರ ಹಾಗೆ ಮಾಡದೆ ಶಾಂತಿಯ ಕಾಲದಲ್ಲಿ ಹೆಚ್ಚು ಉತ್ಸಾಹದಿಂದ ಈ ಅಸ್ತ್ರ ತಯಾರಿಕೆಯನ್ನು ಕೈಗೊಳ್ಳುತ್ತಿದೆಯೆಂದೂ ಅವರು ತಿಳಿಸಿದ್ದಾರೆ

ಕಾಂಗ್ರೆಸ್ ಸದಸ್ಯರಾಗಿ

—— § ——

ನಿಮಗೆ ೨೧ ವರ್ಷ ವಯಸ್ಸಾಗಿದೆಯೇ ?

ನೀವು ಕಾಂಗ್ರೆಸ್ ಧ್ಯೇಯಗಳನ್ನು ಒಪ್ಪುವಿರಾ ?

ಹಾಗಾದರೆ ಅಕ್ಟೋಬರ್ ೩೧ರೊಳಗಾಗಿ ಕಾಂಗ್ರೆಸ್ ಸದಸ್ಯರಾಗಿ

ಹೊಟ್ಟೆಗಿಲ್ಲದೆ ಮೂವರ ಆತ್ಮಹತ್ಯೆ

ಬಡತನದ ಬೇಗೆಯನ್ನು ಸಹಿಸಲಾರದ ಟ್ರ್ಯಾಂಕ್ವೆಬಾರಿನ ಮುರಿಯ, ಆತನ ೧೦ ವರ್ಷದ ಮಗಳ, ಕನಕಮಣಿ ಮತ್ತು ೯ ವರ್ಷದ ಮಗ ಸೆಲ್ವರಾಜ್ ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ ಅವರ ಗುಡಿಸಿಲಿನಲ್ಲಿ ಎಂಟು ಆಣೆ ನಾಣ್ಯವೂ, ಮರಣಕ್ಕೆ ಬಡತನವೇ ಕಾರಣವೆಂದು ಸೂಚಿಸುವ ಚೀಟಿಯೂ ಇದ್ದವು

ವರದಕ್ಷಿಣೆ ನಿಷೇಧದ ಕಾನೂನು ಜಾರಿಗೆತರಬೇಕು

ಪ್ರ‖ ಪ್ರ‖ ಸಭೆಯಲ್ಲಿ ಸಲಹೆ

ಮೈಸೂರು ೨೪

ಪ್ರಜಾ ಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಈ ದಿನ ಮಧ್ಯಾಹ್ನ ೧ ಘಂಟೆಗೆ ಜಗನ್ಮೋಹನ ಭವನದಲ್ಲಿ ಶ್ರೀ ಪಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾಗಿರುವ ಮಸೂದಾ ಕಾನೂನಿನ ವಿವರಗಳನ್ನು ಕಾರ್ಯದರ್ಶಿಗಳು ಮಂಡಿಸಿದರು ಮಿ‖ ರೆನಾರವರು ರಾಜ ಭಕ್ತಿ ಪ್ರಮಾಣವನ್ನು ಸ್ವೀಕರಿಸಿದನಂತರ ಪ್ರಶ್ನೋತ್ತರಗಳು ಪ್ರಾರಂಭವಾದುವು

ಸಂಸ್ಥಾನದಿಂದ ಸ್ಥಳಾಂತರ ಹೊಂದಿದವರ ಸ್ಥಿರ ಸ್ವತ್ತುಗಳನ್ನು ಮಾರಕೂಡದೆಂದು ಕಾನೂನು ಮಾಡಿರುವ ವಿಚಾರವಾಗಿ ಜ‖ ಸಾಬ್ಜು ಸಾಬ್‌ರವರು ಪ್ರಶ್ನೆ ಕೇಳಿದರು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು, ಭಾರತ ಸರಕಾರದವರು ಮಾಡಿರುವಂತೆ ಇಲ್ಲಿಯೂ ಸದರಿ ಕಾನೂನನ್ನು ಜಾರಿಗೆ ತಂದಿರುತ್ತೆ, ಇದರಿಂದ ಆಗಬಹುದಾದ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಪ್ರಯತ್ನಿಸುವುದಾಗಿ ತಿಳಿಸಿದರು ಈ ಕಾನೂನು ಮುಸಲ್ಮಾನರಿಗೆ ಮಾತ್ರವಲ್ಲದೆ ಇತರರಿಗೂ ಅನ್ವಯಿಸುವುದೆಂದು ಅವರು ಹೇಳಿದರು

ವರದಕ್ಷಿಣೆಯನ್ನು ತೆಗೆದುಕೊಳ್ಳುತ್ತಿರುವುದರಿಂದ ಆಗುತ್ತಿರುವ ಅನರ್ಥಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಿ, ವರದಕ್ಷಿಣೆಯನ್ನು ನಿಷೇಧಿಸಿ, ಶಾಸನ ಮಾಡಬೇಕೆಂಬ ಶ್ರೀ ಕುದೇರು ವೀರಣ್ಣನವರ ಸಲಹೆಗೆ ಶ್ರೀ ಕೆ ಟಿ ಭಾಷ್ಯಂರವರು ಈ ರೀತಿ ತಿಳಿಸಿದರು— ಈ ಬಗ್ಯೆ ವಿವರಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಅವಶ್ಯಕತೆ ಕಂಡುಬಂದಾಗ ಶಾಸನ ಮಾಡಲಾಗುವುದು ಸಂಸ್ಥಾನದ ರೈಲ್ವೆಯು ಕೇಂದ್ರ ಸರ್ಕಾರಕ್ಕೆ ಸೇರುವ ವಿಚಾರವಾಗಿ ಶ್ರೀ ಕೆ ಸಿದ್ದಯ್ಯನವರು ಕೇಳಿದ ಪ್ರಶ್ನೆಗೆ ಶ್ರೀ ಎಚ್ ಸಿದ್ದಯ್ಯನವರು, ಈ ವಿಚಾರದಲ್ಲಿ ಅಂತ್ಯ ನಿರ್ಧಾರವಾಗುವುದರಲ್ಲಿದೆ— ಎಂದು ತಿಳಿಸಿದರು

ಪ್ರಜಾಪ್ರತಿನಿಧಿ ಸಭಾ ಸದಸ್ಯರುಗಳಾಗಿದ್ದ ದಿವಂಗತ ಡಿ ಎಸ್. ಮಲ್ಲಪ್ಪ, ಟಿ ಎಸ್ ಅಲ್ಲೀಖಾನ್ ಮತ್ತು ಮೇಜರ್ ಪಾಲ್‌ರವರುಗಳ ನಿಧನದ ಬಗ್ಯೆ ಸಂತಾಪ ಸೂಚಿಸುವ ನಿರ್ಣಯವು ಮಂಜೂರಾಯಿತು

ಚೀಣಾದ ನಾಯಕ ಮತ್ತು ವಿಮೋಚಕರಾದ ಮೋಸೆ ತುಂಗರಿಗೆ ಅಭಿನಂದನೆಯನ್ನು ಸಲ್ಲಿಸಿ ಚೀಣಾದ ಕಮ್ಯೂನಿಸ್ಟ್ ರಿಪಬ್ಲಿಕ್ಕನ್ನು ಅಂಗೀಕರಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಪಡಿಸಬೇಕೆಂಬ ಮೂಲ್ಕ್ ಗೋವಿಂದರೆಡ್ಡಿಯವರ ವಿಶೇಷ ಸೂಚನೆಯನ್ನು ಅಧ್ಯಕ್ಷರು ಇದು ನಮ್ಮ ದೇಶಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ತಳ್ಳಿ ಹಾಕಿದರು ಈ ಸಭೆಯ ಕಾಲಾವಧಿಯು ಮೋಶಾ ಮತ್ತು ಕಾರ್ಯಕ್ರಮಗಳ ಬದಲಾವಣೆಗಳನ್ನು ಮಾಡಿ ಸಭೆಯ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದಿದೆ-ಎಂದು ಶ್ರೀ ಲಿಂಗಪ್ಪ, ಮತ್ತಿತರರು ತಂದಿದ್ದ ನಿಲುವಳಿ ಹಕ್ಕು ಬಾಧ್ಯತಾ ನಿರ್ಣಯವನ್ನು ಸಭಾಧ್ಯಕ್ಷರು ಸಭೆಗೆ ಕಾಲ ನಿಯಮಗಳನ್ನು ಹೆಚ್ಚು ಕಡಿಮೆ ಮಾಡುವ ಅಧಿಕಾರವಿರುವುದೆಂದು ತಿಳಿಸಿ ತಳ್ಳಿ ಹಾಕಿದರು

ಕೆಲಸಗಾರರು ಶಿಸ್ತಿನಿಂದ ವರ್ತಿಸಬೇಕು

ಮೋಟಾರು ಕೆಲಸಗಾರರಿಗೆ ಮದರಾಸ್ ಸಚಿವರ ಹಿತೋಕ್ತಿ

ಮೈಸೂರು ೨೪

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ದ್ವಿತೀಯ ವಾರ್ಷಿಕೋತ್ಸವವು ನಿನ್ನೆ ಟೌನ್‌ಹಾಲಿನಲ್ಲಿ ನಡೆಯಿತು ಶ್ರೀ ಸಿ ಜೆ ದೇವನಾಥನ್‌ರವರು ಅಧ್ಯಕ್ಷತೆ ವಹಿಸಿದ್ದರು ಮದರಾಸಿನ ಕಾರ್ಮಿಕ ಸಚಿವರಾದ ಶ್ರೀ ಹೆಚ್ ಸೀತಾರಾಮ ರೆಡ್ಡಿಯವರು ಪ್ರಾರಂಭ ಭಾಷಣ ಮಾಡಿದರು

ಸಂಗೀತ ಮತ್ತು ಅಧ್ಯಕ್ಷರಿಂದ ಸ್ವಾಗತ ಭಾಷಣವಾದನಂತರ, ಶ್ರೀ ಟಿ ಎಸ್ ಸುಬ್ಬಣ್ಣನವರು ವಾರ್ಷಿಕ ವರದಿಯನ್ನು ಓದಿ ಸಂಘದ ಕಾರ್ಯಕ್ರಮಗಳನ್ನು ವಿವರಿಸಿದರು ಕಳೆದ ವರ್ಷ ೨೫೭ ಸದಸ್ಯರುಗಳಿದ್ದರೆಂದೂ, ಅವರ ಸೌಕರ್ಯಕ್ಕಾಗಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆಯೆಂದೂ ವರದಿಯಲ್ಲಿ ತಿಳಿಸಲಾಯಿತು

ಶ್ರೀ ಸೀತಾರಾಮ ರೆಡ್ಡಿಯವರು ಭಾಷಣ ಮಾಡಿ, ಕೆಲಸಗಾರರ ಮತ್ತು ಮಾಲೀಕರ ಹಿತ ದೃಷ್ಟಿಯಿಂದ ಸಂಘಗಳು ಅವಶ್ಯಕವೆಂದು ತಿಳಿಸಿದರು ದೇಶದ ಮತ್ತು ಪ್ರಜಾ ರಕ್ಷಣಾ ದೃಷ್ಟಿಯಿಂದ ಮೋಟಾರು ಸರ್ವಿಸ್ ಮುಂತಾದ ಬಾಬುಗಳನ್ನು ಅತಿ ಮುಖ್ಯವಾದ ಸರ್ವಿಸುಗಳೆಂದು ಸರ್ಕಾರದವರು ಘೋಷಿಸಿದ್ದಾರೆ ಆ ರೀತಿ ಮಾಡದಿದ್ದಲ್ಲಿ ಈಗಿನ ಆಹಾರ ಪರಿಸ್ಥಿತಿಯು ಇನ್ನೂ ಕ್ಲಿಷ್ಟವಾಗುತ್ತಿತ್ತು ಪ್ರಜೆಗಳ ಅನುಕೂಲಕ್ಕಿರುವ ಈ ಕೆಲಸವನ್ನು ಕಾರ್ಮಿಕರು ಅತಿ ಜವಾಬ್ದಾರಿಯಿಂದಲೂ ಮತ್ತು ಶಿಸ್ತಿನಿಂದಲೂ ನಡೆಸಿಕೊಂಡು ಬರಬೇಕು ಮಾಲೀಕರುಗಳೂ ಸಹ ತಮ್ಮ ಜವಾಬ್ದಾರಿಯನ್ನು ಅರಿತು, ಕೆಲಸಗಾರರ ಹಿತವನ್ನು ಕಾಪಾಡಬೇಕು ಮತ್ತು ತಮಗೆ ಬರುವ ಲಾಭದಲ್ಲಿ ಸ್ವಲ್ಪ ಭಾಗವನ್ನು ಅವರುಗಳಿಗೆ ಕೊಡಬೇಕು ಇದರಿಂದ ಕಾರ್ಮಿಕರೂ ಸಹ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುವರು–ಎಂದು ಅವರು ತಿಳಿಸಿದರು

ಶ್ರೀ ರೆಡ್ಡಿಯವರು ಲಂಡನ್ನಿನ ವಾಹನ ಸಂಚಾರ ವ್ಯವಸ್ಥೆಯನ್ನು ವಿವರಿಸಿ, ಸಾರ್ವಜನಿಕರ ಸಹಕಾರದಿಂದ ಅದು ಸುವ್ಯವಸ್ಥೆಯಾಗಿರುವಂತೆ ಮಾಡಲಾಗಿದೆಯೆಂದು ತಿಳಿಸಿದರು ಲಂಡನ್ನಿನ ನಗರದ ರಸ್ತೆಗಳಲ್ಲಿ ತಿರುಗುವ ವಾಹನಗಳು ಅನವಶ್ಯಕವಾಗಿ ಹಾರ್ನ್ ಶಬ್ದ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಅದೇ ರೀತಿ ಭಾರತದಲ್ಲೂ ಸಹ ಮೋಟಾರು ಕೆಲಸಗಾರರು ಅವಶ್ಯಕವಿದ್ದಲ್ಲಿ ಮಾತ್ರ ಹಾರ್ನ್ ಮಾಡುವುದನ್ನು ಕಲಿಯಬೇಕು ಟ್ಯಾಕ್ಸಿಯವರೂ ಸಹ ಪ್ರಾಮಾಣಿಕತನದಿಂದ ವರ್ತಿಸಿ, ಹೇಗಿಸವರಿಂದ ಹೆಚ್ಚು ಹಣ ಸಂಪಾದನೆ ಮಾಡುವುದನ್ನು ನಿಲ್ಲಿಸಬೇಕು ಎಂದು ಹೇಳಿದರು

ಅನಂತರ ಅವರು ಮಹಾತ್ಮ ಗಾಂಧೀಜಿಯವರ ಭಾವ ಚಿತ್ರವನ್ನು ಅನಾವರಣ ಮಾಡಿದರು

ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಪಟಾಕಿ ಅಂಗಡಿ ಭಸ್ಮ

ಚಿಕ್ಕಮಗಳೂರಿನ ಶ್ರೀ ಎಸ್. ಅಣ್ಣಪ್ಪ ಶೆಟ್ಟರ ಅಂಗಡಿಯಲ್ಲಿದ್ದ ಪಟಾಕಿ ಮುಂತಾದ ಮದ್ದಿನ ಸಾಮಾನುಗಳಿಗೆ ಆಕಸ್ಮಾತ್ತು ಬೆಂಕಿ ಬಿದ್ದು ಅಂಗಡಿಯು ಪೂರ್ಣವಾಗಿ ಸುಟ್ಟು ಭಸ್ಮವಾಯಿತು ಸ್ವಲ್ಪ ನಗದು ಹಣವೂ ಮತ್ತು ಇತರ ವಸ್ತುಗಳೂ ಸುಟ್ಟುಹೋದುವೆಂದು ತಿಳಿದುಬಂದಿದೆ

ದೀಕ್ಷಿತರ ದಿನಾಚರಣೆ

ಮೈಸೂರು ಸಂಸ್ಥಾನವನ್ನು ಒಳಗೊಂಡು ಭಾಷೆಯ ಆಧಾರದ ಮೇಲೆ ಸಂಯುಕ್ತ ಕರ್ನಾಟಕ ಪ್ರಾಂತವನ್ನು ರಚಿಸಲು ಕಾಲವು ಅನುಕೂಲವಾಗಿಲ್ಲವೆಂದೂ, ಅಲ್ಲದೆ ಈ ಸಮಸ್ಯೆಯು ಭಾರತ ರಾಜ್ಯಾಂಗವು ಜಾರಿಗೆ ಬಂದಮೇಲೆ ಅದರ ವಿಧಿಗಳ ಪ್ರಕಾರ ತೀರ್ಮಾನಿಸಲ್ಪಡಬೇಕೆಂದೂ ನಿರ್ಣಯವನ್ನು ಈ ದಿನ ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡಿರುವುದಾಗಿ ತಿಳಿದುಬಂದಿದೆ ಕೇವಲ ೩ ಜನರು ಮಾತ್ರ ಅಖಂಡ ಕರ್ನಾಟಕ ಪ್ರಾಂತ್ಯ ನಿರ್ಮಾಣದ ಪರವಾಗಿ ವಾದಿಸಿದರೆಂದು ಹೇಳಲಾಗಿದೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರು ಕಳುಹಿಸಿದ್ದ ಪತ್ರದ ಆಧಾರದ ಮೇಲೆ ಈ ವಿಷಯವನ್ನು ವಿಮರ್ಶಿಸಿ ಮೇಲ್ಕಂಡ ನಿರ್ಧಾರಕ್ಕೆ ಬರಲಾಯಿ.

ವೈದ್ಯರಿಗೆ ಜಂಟಿ ನೊಬೆಲ್ ಬಹುಮಾನ

ಜೂರಿಕ್ ಇನ್ಸ್ಟಿಟ್ಯೂಟಿನ ಶರೀರ ಶಾಸ್ತ್ರದ ಡಾ|| ರುಡಾಲ್ಫ್ ಹೆಸ್ ಮತ್ತು ಅಂಟನ್ ಮೊನಿಜ್‌ರವರಿಗೆ ಈ ವರ್ಷದ ಆರೋಗ್ಯ ಶಾಸ್ತ್ರ ಮತ್ತು ವೈದ್ಯರ ನೊಬೆಲ್ ಬಹುಮಾನವನ್ನು ಜಂಟಿಯಾಗಿ ಕೊಡಲಾಗಿದೆ

ಕಾಶ್ಮೀರದ ಮತಗಣನೆಗೆ ಪಾಕಿಸ್ಥಾನ್ ಬೇಡಿಕೆ

ಕಾಶ್ಮೀರದಲ್ಲಿ ಶೀಘ್ರದಲ್ಲಿಯೇ ಜನರ ಮತಗಣನೆಯಾಗಬೇಕೆಂದು ಪಾಕಿಸ್ಥಾನವು ಪ್ರಪಂಚ ಸಂಸ್ಥೆಗೆ ಪತ್ರ ಬರೆದು ಕೇಳುವುದಿದೆ

ತೆಂದು ಗೊತ್ತಾಗಿದೆ ಇದೇ ಅಭಿಪ್ರಾಯವನ್ನೊಳಗೊಂಡ ನಿರ್ಣಯವನ್ನು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಶ್ರೀ ಬಿ ಎನ್ ಗುಪ್ತ ಮುಂತಾದವರು ಮಂಡಿಸಿದರು ಸಂಬಂಧಪಟ್ಟ ಮಂತ್ರಿಗಳಿಂದ ಈ ಬಗ್ಗೆ ಆಕ್ಷೇಪಣೆಯೇನೂ ಇಲ್ಲದುದರಿಂದ ಅದರ ಚರ್ಚೆಯನ್ನು ನಾಳೆವರೆಗೆ ತೆಗೆದುಕೊಳ್ಳಬಹುದೆಂದು ಅಧ್ಯಕ್ಷರು ತಿಳಿಸಿದರು

ಆಹಾರ ಧಾನ್ಯ ಮತ್ತು ಬಟ್ಟೆ ಬೆಲೆ ಇಳಿಸಲಾಯಿತು

ಭಾರತ ಸರ್ಕಾರದವರು ಆಹಾರ ಧಾನ್ಯ ಮತ್ತು ಬಟ್ಟೆಗಳ ಬೆಲೆಯನ್ನು ಇಳಿಸಲು ನಿರ್ಧರಿಸಿದ್ದಾರೆ ಆಹಾರದ ಬೆಲೆಯನ್ನು ಶೇ|| ೩ ರಿಂದ ೧೫ ರಷ್ಟು ಕಡಿಮೆ ಮಾಡಲಾಗುವುದು ನವೆಂಬರ್ ೧ ರಿಂದ ಈ ಆಜ್ಞೆಯು ಜಾರಿಗೆ ಬಂದು ಸಧ್ಯದಲ್ಲಿ ಧಾನ್ಯಗಳ ವಿನಿಮಯ ಚಾರ್ಜನ್ನು ಇಳಿಸಲಾಗುವುದು ಸುಗ್ಗಿಯ ಕಾಲದಲ್ಲಿ ಕೊಳ್ಳುವ ಬೆಲೆ ಇಳಿಯುವುದು ಪ್ರಾಂತಗಳಲ್ಲಿ ಎಷ್ಟು ಇಳಿಸಬೇಕೆಂಬುದರ ಬಗ್ಗೆ ಆಯಾ ಪ್ರಾಂತ್ಯ ಸರ್ಕಾರಗಳಿಗೇ ಅಧಿಕಾರ ಕೊಡಲ್ಪಟ್ಟಿದೆ ಬಟ್ಟೆ ಬೆಲೆಯಲ್ಲಿ ಶೇಕಡ ೪ ರಷ್ಟನ್ನು ಇಳಿಸಲಾಗುವುದು ಬೊಂಬಾಯಿನ ಬಟ್ಟೆ ಗಿರಣಿ ಮಾಲೀಕರ ಸಂಘದವರು ಯಾವ ಷರತ್ತೂ ಇಲ್ಲದೆ ಈ ನಿರ್ಧಾರವನ್ನು ಅಂಗೀಕರಿಸಿದ್ದಾರೆ ಇದು ಬರುವ ನವೆಂಬರ್ ತಿಂಗಳಿನಿಂದ ಮುಂದೆ ತಯಾರಿಸಲ್ಪಡುವ ಬಟ್ಟೆಗಳಿಗೆ ಅನ್ವಯಿಸುವುದು.

ಹಳ್ಳಿಗಳ ಹೋಟೇಲುಗಳ ಮೇಲೆ ಹತೋಟಿ

ಪ್ರ|| ಪ್ರ|| ಸಭೆಯಲ್ಲಿ ಮಸೂದೆಯ ಅಂಗೀಕಾರ

ಮೈಸೂರು ೨೮

ನಿನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟ ಎರಡನೆಯ ತಿದ್ದುಪಡಿ ಮಸೂದೆಯು ಅಂಗೀಕೃತವಾಯಿತು ಸಚಿವ ಶ್ರೀ ಟಿ. ಮರಿಯಪ್ಪನವರು ಅದನ್ನು ಮಂಡಿಸಿ ಗ್ರಾಮ ಪಂಚಾಯಿತಿಗಳ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ಹೋಟೇಲುಗಳು, ಉಪಾಹಾರ ಮಂದಿರಗಳನ್ನಿಡಲು ರಹದಾರಿ ಕೊಡುವ ಮತ್ತು ಗ್ರಾಮ ಪಂಚಾಯಿತಿಗಳ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳಲ್ಲಿಯೂ ಹತೋಟಿ ಅಧಿಕಾರವನ್ನು ಡೆಪ್ಯುಟಿ ಕಮೀಷನರ ಬದಲು ಗ್ರಾಮಾಭಿವೃದ್ಧಿ ಇಲಾಖೆಯ ಕಮೀಷನರಿಗೆ ಕೊಡುವುದೇ ಮಸೂದೆಯ ಉದ್ದೇಶವೆಂದು ತಿಳಿಸಿದರು.

ಶ್ರೀಗಳಾದ ಎ. ಎನ್. ರಾಮರಾಯರು, ಎಂ. ಲಿಂಗೇಗೌಡ ಮೊದಲಾದವರು ಅದನ್ನು ವಿರೋಧಿಸಿ, ಇದರಿಂದ ಹಳ್ಳಿಗಳಲ್ಲಿ ಹೋಟೇಲುಗಳು ಹೆಚ್ಚಾಗಲು ಪ್ರೋತ್ಸಾಹ ದೊರೆತಂತಾಗುವುದೆಂದೂ, ಹಳ್ಳಿಯ ಜನರ ಆರೋಗ್ಯಕ್ಕೆ ಧಕ್ಕೆ ಉಂಟಾಗುವುದೆಂದೂ, ಸಂಸ್ಥಾನದಲ್ಲಿ ಸರ್ಕಾರದವರೇ ಸ್ವಚ್ಛವಾದ ಹೋಟೇಲುಗಳನ್ನು ನಡೆಸಬೇಕೆಂದೂ ತಿಳಿಸಿದರು

ಪ್ರತಿಯೊಂದು ಹಳ್ಳಿಯಲ್ಲೂ ಹೋಟೇಲುಗಳಿಗೆ ರಹದಾರಿ ಕೊಡುವುದಿಲ್ಲವೆಂದೂ. ಎಲ್ಲಿ ಹೊರಗಿನಿಂದ ಜನರು ಬರುವರೋ ಅಂತಹ ಕಡೆಗಳಲ್ಲಿ ಮಾತ್ರ ರಹದಾರಿ ಕೊಡಲಾಗುವುದೆಂದೂ ಸಚಿವ ಶ್ರೀ ಮರಿಯಪ್ಪನವರು ಚರವಸೆ ಕೊಟ್ಟರು

ಮೈನರ್ ಪ್ರಾಂ ಸಭೆಗಳು ಮಲ ಮೂತ್ರಗಳು ಮತ್ತು ಕಸ ಕಡ್ಡಿಗಳನ್ನು ಶೇಖರಿಸಿ ಉಪಯೋಗಿಸುವ ಅವುಗಳಿಂದ ಕಡ್ಡಾಯವಾಗಿ ಗೊಬ್ಬರವನ್ನು ತಯಾರಿಸಲು ಅವಕಾಶ ಕಲ್ಪಿಸುವ ಮೈನರ್ ಮುನಿಸಿಪಾಲಿಟಿಗಳ ತಿದ್ದುಪಡಿ ಮಸೂದೆಯೂ ಅಂಗೀಕೃತವಾಯಿತು

ಸಂಸ್ಥಾನದಲ್ಲಿ ಕೆಲವು ತರಗತಿಗಳವರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸುವುದಕ್ಕೆ ಸಂಬಂಧಪಟ್ಟ ತಿದ್ದುಪಡಿ ಮಸೂದೆಯನ್ನು ಸಚಿವ ಶ್ರೀ ಪಾಪಿಡಿ ಸುಬ್ಬರಾಮಶೆಟ್ಟರು ಮಂಡಿಸಿದರು. ಜೈನರ ದೇವಾಲಯಗಳಿಗೂ ಕೆಲವು ತರಗತಿಗಳವರು ಪ್ರವೇಶ ಮಾಡಲು ಅವಕಾಶ ಕಲ್ಪಿಸುವುದೇ ಈ ಮಸೂದೆಯ ಉದ್ದೇಶ ಈಗಿರುವ ಕಾನೂನು ಜೈನಪಂಗಡದವರ ದೇವಾಲಯಗಳಿಗೆ ಅನ್ವಯಿಸುತ್ತದೆಯೇ ಎಂಬ ಸಂದೇಹವು ತಲೆದೋರಿರುವುದರಿಂದ ಅದರಲ್ಲಿ "ಜೈನರ ದೇವಾಲಯಗಳನ್ನು ಮತ್ತು ಹಿಂದೂಗಳು ಅಥವ ಹಿಂದೂ ಜನಾಂಗದವರು" ಎಂಬುದರಲ್ಲಿ "ಜೈನರೂ" ಎಂಬುದನ್ನು ಈ ತಿದ್ದುಪಡಿ ಕಾನೂನಿನಲ್ಲಿ ಸೇರಿಸಲಾಗಿದೆ

ಶ್ರೀಗಳಾದ ವಜ್ರನಾಭಯ್ಯ, ಮೀರ್ ನೂರ್ ಹುಸೇನ್ ಮತ್ತು ಎಚ್. ಸಿ ದೇವರಾಜೇ ಅರಸಿನವರು ಮಸೂದೆಯನ್ನು ವಿರೋಧಿಸಿ, ಮತೀಯ ವಿಚಾರದಲ್ಲಿ ಸರ್ಕಾರದವರು ಕೈ ಹಾಕಬಾರದೆಂದೂ, ಕಾನೂನಿನಿಂದ ಬಲಾತ್ಕಾರ ಮಾಡುವುದನ್ನು ಬಿಟ್ಟು, ಆ ಕೆಲಸವನ್ನು ಸಮಾಜಕ್ಕೆ ಬಿಡಬೇಕೆಂದೂ ತಿಳಿಸಿದರು. ಚರ್ಚೆಯನ್ನು ಮುಂದುವರಿಸಲಾಯಿತು

ಸರ್ಕಾರಿ ಮಸೂದೆಗಳು ಮತ್ತು ಕಾರ್ಯಕಲಾಪಗಳು ವಿಶೇಷವಾಗಿ ಉಳಿದಿರುವುದರಿಂದ ಸಭೆಯ ಕಾಲಾವಧಿಯನ್ನು ... ಸಲಾಗುವುದೇ ಎಂದು ಶ್ರೀಗಳಾದ ... ಲಿಂಗಪ್ಪ, ಎ. ಎನ್. ರಾಮರಾಯರು ... ದಲಾದವರು ಕೇಳಿದರು. ಆರ್ಥಿಕ ... ಶ್ರೀ ಹೆಚ್ ಸಿ ದಾಸಪ್ಪನವರು ... ಇತ್ತು ಒಂದು ದಿನ ಹೆಚ್ಚಿಸಬೇಕೆ... ಸರ್ಕಾರದವರು ಯೋಚಿಸಿರುವುದಾಗಿಯೂ, ಅದನ್ನು ಈ ದಿನ ನಿರ್ದಿಷ್ಟ... ತಿಳಿಸುವುದಾಗಿಯೂ ಹೇಳಿದರು.

MORNING SHOWS at
CHAMUNDESWARI
TALKIES

From 28-10-49 for 3 days

WARNERS MYSTERIOUS DRAMA

THE

BIG SLEEP

Starring:- Humphrey Bogart, Laurven Bacall

ಮೈಸೂರು ಸಿಟಿ ರೇಷನಿಂಗ್ ಆಫೀಸು

ನೋಟಿಫಿಕೇಷನ್

ನಂ R ೬೧೦/೪೯-೫೦

ತಾ|| ೧೦-೧೦-೪೯

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊದಲ್ಗೊಂಡು ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಿಗೆ ಇದೇ ಮಾಹೆ ೩ನೇ ಸೋಮವಾರ ಮೊಹರಂ ಹಬ್ಬದ ಪ್ರಯುಕ್ತ ಪೂರ್ತ ರಜ ಕೊಡಲ್ಪಟ್ಟಿರುತ್ತೆ.

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಭಾರಿ ಮನೆ ಹರಾಜು

ರಾಜಧಾನಿಯ ಅತ್ಯುತ್ತಮ, ಆರೋ... ವೆನಿಸಿದ

ಜಯಲಕ್ಷ್ಮೀಪುರಂ ಹೊಸ ಬಡಾವಣೆ
(Vanivilas Puram)

ಮುನಿಸಿಪಲ್ ಡೋರ್ ನಂ. ... ಭಾವಿ ಮತ್ತು ದೀಪ ಇರುವ ವಿಶಾಲ... ೪೦'x೪೫' ತಾರಸಿ ಮತ್ತು ಮಂಗ... ಹೆಂಚಿನ ಕಟ್ಟಡ ಸೈಟಿನ ಅಳತೆ ... ೯೦' ಅಡಿ

ಇಲವಾಲದ ರಸ್ತೆಯಲ್ಲಿ ,ಹಳೆ ಉ... ಬಳಿ ಇದೆ ಷರತ್ತುಗಳನ್ನು ಸ್ಥಳ... ನೋಡಬಹುದು

ಸಿಟಿ ಆಕ್ಷನೀಯರಿಂಗ್ ...
ಜಗನ್ಮೋಹನ ಬಂಗ್ಲೆ ಬಳಿ :: ಮೈ...

ರಾಜಕಮಲ್ ಟಾಕೀಸ್

೨೮—೧೦—೪೯ರಿಂದ :: ಅಮೋಘ ೨ನೇ ವಾ...

* ಚಾಂದನಿ ರಾತ್ *

(ಹಿಂದಿ)

ತಾರಾಗಣ:— ನಾಸೀಂ (ಪ್ರಖ್ಯಾತ ಪ್ರಖ್ಯಾತಿ), ಶ್ಯಾಮ್, ಉಲ್ಹಾಸ್

Morning Shows From 28-10-49 For 4 days

Republic Pictures' Super-stunt Drama

ANGEL & THE BAD MAN

With - John Wayne & Gail Kussel

WITH THOUSANDS OF THRILLS TO
TO THRILL THOUSANDS !

ಪ್ರಿನ್‌ಸೆಸ್ ಕೃಷ್ಣಾಜಮ್ಮಣ್ಣಿ
ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸು
ಮೈಸೂರು ತಾ|| ೨೪-೧೦-೪೯

ನೋಟಿಫಿಕೇಷನ್

ಮೈಸೂರು ಪ್ರಿನ್‌ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂಗೆ ೧೯... ನೇ ಜನವರಿ ಒಂದರ ಲಾಗಾಯ್ತು ೩೧ನೇ ಡಿಸೆಂಬರ್ ಪೂರ್ತ ಆಗುವ ... ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರತಕ್ಕ ಐಟಂಗಳ ಸರಬರಾಜು... ಮೈಸೂರು ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರು ತಮ್ಮ ... ಸಿನಲ್ಲಿ ನವೆಂಬರ್ ಮಾಹೆ ೧೫ನೇ ತಾರೀಖು ಮಂಗಳವಾರ ಕೆಳಕಂಡ ಕಾಲ... ಮೊಹರಾದ ಫುಲ್‌ಸ್ಕೇಪ್ ಸೈಜಿನ ನಾಲ್ಕು ಪ್ರತಿಗಳುಳ್ಳ ಟೆಂಡರುಗಳನ್ನು ... ಕೊಳ್ಳುತ್ತಾರೆ

೧ ರೊಟ್ಟಿ ಡಿಪಿ ...
೨ ಪಾಸ್ಟ್ರೀಸ್ ಹಾಲು ಡಿಪಿ ...
೩ ಬಟ್ಟೆ ಮತ್ತು ಸರ್ವೆಂಟ್ಸ್ ಯೂನಿಫಾರಂಗಳು ಡಿಪಿ ...
೪ ಆಹಾರ ಸಾಮಗ್ರಿ ವಸ್ತ್ರ ಡಿಪಿ ...

ಹೆಚ್ಚಿನ ವಿವರಗಳನ್ನು ಮೈಸೂರು ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸಿನಲ್ಲಿ ಪಡೆಯಬಹುದು. ಮತ್ತು ೨೦-೧೦-೪೯ರ ಮೈಸೂರು ಗೆಜೆಟ್ ...ನೇ ಭಾಗದ ೧೦೭೯ ಮತ್ತು ೧೦೮೦ನೇ ಪುಟಗಳಲ್ಲಿ ಪ್ರಕಟವಾಗಿರುವ ... ನೋಟಿಫಿಕೇಷನ್ನನ್ನು ನೋಡಬಹುದು

(ಸಹಿ) ಎಂ. ಎನ್. ನಂ...
ಸೆಕ್ರೆಟರಿ

CITY MUNICIPALITY
MYSORE

Sealed tenders will be received up to 4 P.M. on 5th November 1949 by the Municipal Engineer for (1) Constructing a Police Out post and fruit stall in Bus Terminus, Mandi, (2) improving the underground connection at the junction of Sayyajee Rao Road and Edigha Road near Rice-Mills, Mandi Mohalla, (3) Providing separate urinals in the middle rear room of the ground floor of Municipal Offices, (4) Constructing a cattle pound in Bidar Krishnappa Road, Devaraja Mohalla, (5) Constructing "L" shaped Slabbed drain in II Conservancy lane, Madigageri, between Rampart wall Road and Ommarkhayam Road, II Edigha Mandi Mohalla (6) constructing size stone storm water drain in Ramamandiram Road, II Edigha between Oomarkhayam Road and Rampart wall Road, Mandi mohalla, (7) Constructing "V" Shaped drains on both sides of Ramalingeswara Road in Chamundi Extension. Each tender must be accompanied with a chellan for having remitted Rs 190, Rs. 100 Rs. 70, Rs. 125, Rs 40, Rs 85, Rs 95, respectively in the Municipal treasury as earnest money. For full particulars please see the office notice board.

(Sd.) V. K. Mukundan,
Municipal Engineer

Edited, printed and published by A. R. Nagarajan at Sadhvi Press, D. Subbiah Road Mysore

ಫೋ|| ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೩೦-೧೦-೪೮ [ಸಂಚಿಕೆ ೧೫

ಸಂಸ್ಥಾನಸಮ್ಮೇಳನದಲ್ಲಿ - ಸಭಾ ಪರಿತ್ಯಾಗ -

ಮೈಸೂರು ರಾಜ್ಯಾಂಗ ಸಭೆಯ ವಿಸರ್ಜನೆಗೆ ನಿರ್ಣಯ

ಪ್ರಾ|| ಸಭೆಯಲ್ಲಿ ಅಧ್ಯಕ್ಷರಿಂದ ನಿರಾಕರಣೆ

ಮೈಸೂರು ೩೦

ನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಶ್ರೀ ಂಪಯ್ಯನವರು ಮಂಡಿಸಿದ್ದ ಖಾಸ ರ್ಣಯವನ್ನು ಅಧ್ಯಕ್ಷರು ತಳ್ಳಿಹಾ . ಸಂಸ್ಥಾನದ ಮುಂದಿನ ರಾ ಗ ರಚನೆಯು ಇತರ ಸಂಸ್ಥಾನಗಳ ್ಯಾಂಗ ರಚನೆಗನುಗುಣವಾಗಿ ಕೇಂದ್ರ ್ಯಾಂಗ ರಚನಾ ಸಭೆಯ ಸಲಹೆಗಳ ಗೆ ನಡೆಯುವ ಕಾರಣ ಮೈಸೂರು ್ಯಾಂಗಸಭೆಯನ್ನು ಮುಕ್ತಾಯಗೊಳಿ ಕೆಂದು ಅವರು ಪ್ರಾರ್ಥಿಸಿದ್ದರು

ರ್ಣಯವನ್ನು ಸೂಚಕರು ಮಂಡಿಸಿ ಆರ್ಥಿಕ ಸಚಿವರಾದ ಶ್ರೀ ಹೆಚ್. ಾನಪ್ಪನವರು ಕ್ರಿಯಾಲೋಪವನ್ನೆ ಈ ನಿರ್ಣಯವನ್ನು ಚರ್ಚಿಸಲು ಭೆಗೆ ಹಕ್ಕಿಲ್ಲವೆಂದೂ, ರಾಜ್ಯಾಂಗ ು ವಿಚಾರವು ಶ್ರೀಮನ್ಮಹಾರಾಜ ಅಧಿಕಾರಕ್ಕೊಳಪಟ್ಟಿದೆಯೆಂದೂ, ಭೆಯ ನಿರ್ಧಾರವು ರಾಜ್ಯಾಂಗ ಸಭೆ ್ಥಯಿಸುವುದಿಲ್ಲವೆಂದೂ ತಿಳಿಸಿದರು. ಗಳಾದ ಬಿ ಎನ್ ಗುಪ್ತ, ಪಿ ಸೀ ಮಯ್ಯನವರುಗಳು ಅದನ್ನು ಸಮ ದರು

ಗಳಾದ ಶಂಕರಲಿಂಗೇಗೌಡ, ಎ ರಾಮ ರಾವ್, ಚಿಕ್ಕಲಿಂಗಯ್ಯ ನೂರ್ ಹುಸೇನರವರುಗಳು ಕ್ರಿ ಲೋಪವನ್ನು ವಿರೋಧಿಸಿದರು ದೇ ಮಸ್ತ ಪ್ರಜೆಗಳ ಭವಿಷ್ಯ ನಿರ್ಧಾರ ರುವ ರಾಜ್ಯಾಂಗ ಸಭೆಯ ವಿಚಾರ ಸಾರ್ವಜನಿಕರ ದೃಷ್ಟಿಯಿಂದ ಈ ಅಧಿಕಾರವಿದೆ

ರ್ಣಯವನ್ನು ಚರ್ಚಿಸುವುದರಿಂದ ನ್ಮಹಾರಾಜರವರ ಹಕ್ಕು ಬಾಧ್ಯತೆ ತಿ ಬರುವುದೆಂದು ಸರ್ಕಾರಕ್ಕೆ ತಿಳಿ ನಿರ್ಣಯವನ್ನು ಅವರಿಗೆ ಮೊ ಳುಹಿಸಿ ಅದನ್ನು ರದ್ದುಮಾಡಿಸ ಾಗಿತ್ತು ಅಧ್ಯಕ್ಷರು ಅವಕಾಶ ಮೇಲೆ ಏತಕ್ಕಾಗಿ ಅಡಚಣೆ ದು ? ಎಂದು ಕೇಳಿದರು

ಧ್ಯಕ್ಷರು ಕ್ರಿಯಾಲೋಪವನ್ನು ಹಿಡಿ ಹಿಂದೆ ತಾವು ಅದಕ್ಕೆ ಅವಕಾಶ ಕಾಲಕ್ಕೂ ಈಗ್ಗೂ ಪರಿಸ್ಥಿತಿ ಬದ ಆಗಿದೆಯೆಂದೂ, ಕೇಂದ್ರ ರಾ ಸಭೆಯು ಮೈಸೂರು ರಾಜ್ಯಾಂ ಯ ಕೆಲವು ಸಲಹೆಗಳನ್ನು ಒಪ್ಪಿ ು, ಪುನಃ ಸಂಸ್ಥಾನಗಳ ರಾಜ್ಯಾಂ ತ್ಯ ಒಪ್ಪಿಗೆಗಾಗಿ ಅದನ್ನು ಕಳು ವುದರಿಂದಲೂ ಮತ್ತು ರಾಜ್ಯಾಂಗ ು ಪುನಃ ಸೇರಬೇಕಾಗಿರುವುದರಿಂ ನಿರ್ಣಯವನ್ನು ಚರ್ಚಿಸುವುದು ಲ್ಲವೆಂದು ಹೇಳಿದರು ಅದನ್ನು ಕ್ರಮದ ಪಟ್ಟಿಯಲ್ಲಿ ಸೇರಿಸಲ್ಪಟ್ಟ ಾಗಲೀ ಅಥವಾ ಅವಕಾಶ ಕೊ ಬೇರಿ ವಿಷಯವಾಗಲೀ ಕ್ರಮ ಗಿಲ್ಲವೆಂದು ತಿಳಿದುಬಂದಮೇಲೆ ಕಲ್ಪಟ್ಟ ನಿದರ್ಶನವು ಕೇಂದ್ರ ಸಭೆಯಲ್ಲಿ ಇರುವುದೆಂದೂ ಸಹಾ ತಿಳಿಸಿದರು

ನಾಂತರ ಪ್ರದೇಶಗಳಲ್ಲಿರತಕ್ಕ ಸ ಮಾಧ್ಯಮಿಕ ಶಾಲೆಗಳಲ್ಲಿಯೂ ವ್ಯ

ವಯಸ್ಕರ ವಿದ್ಯಾಭ್ಯಾಸ ಗೋಷ್ಠಿಯ ಆರಂಭ

ಮೈಸೂರು ೩೦

ವಿಶ್ವ ಸಂಸ್ಥೆಯವರು ನಡೆಸುತ್ತಿರುವ ಗ್ರಾಮಾಂತರದ ವಯಸ್ಕರ ಶಿಕ್ಷಣ ಗೋಷ್ಠಿಯ ಆರಂಭೋತ್ಸವವನ್ನು ೭ ನೇ ತಾ|| ಮಧ್ಯಾಹ್ನ ೩ ಘಂಟೆಗೆ ಜಗನ್ಮೋಹನಭವನದಲ್ಲಿ ಕೇಂದ್ರ ಸರ್ಕಾರದ ವಿದ್ಯಾ ಸಚಿವರಾದಮೌಲಾನಾಅಬುಲ್ ಕಲಾಂ ಅಜಾದರವರು ನೆರವೇರಿಸುವರು.

ಸಂಗೀತ ಕಛೇರಿ

ಈ ದಿನ ರಾತ್ರಿ ೬ ಘಂಟಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದಸ್ವಾಮಿಗಳ ಔಷಧಾಲಯದಲ್ಲಿ ಆಸ್ಥಾನ ವಿದ್ವಾಂಸರಾದ ಬಿ ಶಿವಪ್ಪ ಮತ್ತು ಬಿ ಎಸ್ ರಾಮಯ್ಯರ್ರವರ ಸಂಗೀತವು ವಿದ್ವಾನ್ ಬಿ ಕೆ. ಮೂರ್ತಿಯವರ ಪಿಟೀಲು, ವಿದ್ವಾನ್ ಡಿ. ಶೇಷಪ್ಪನವರ ಮೃದಂಗ ಮತ್ತು ವಿದ್ವಾನ್ ಜಿ. ವರದಾಚಾರ್ಯರ ಕಂಜರಿಯೊಡನೆ ನಡೆಯುವುದು.

ವಸಾಯವನ್ನು ಕಡ್ಡಾಯವಾಗಿ ಬೋಧಿಸುವ ಏರ್ಪಾಡ ಮಾಡಬೇಕೆಂದು ಶ್ರೀ ಬಿ ಜಿ. ಚಂದ್ರಶೇಖರಯ್ಯನವರು ನಿರ್ಣಯವನ್ನು ಮಂಡಿಸಿದರು ವಿದ್ಯಾ ಸಚಿವರು ಉತ್ತರವಿತ್ತು, ವ್ಯವಸಾಯ ಶಿಕ್ಷಣಕ್ಕೆ ಎಲ್ಲ ಕಡೆಯಲ್ಲಿಯೂ ಪ್ರೋತ್ಸಾಹ ಕೊಡಬೇಕೆಂಬುದು ಸರ್ಕಾರದ ಆಶಯವೆಂದರು ಅದಕ್ಕೆ ಅನೇಕ ಅಡಚಣೆಗಳಿವೆ ಎಂದೂ, ತತ್ವವನ್ನು ಸರ್ಕಾರದವರು ಒಪ್ಪಿಕೊಳ್ಳುವುದಾಗಿಯೂ, ತಿಳಿಸಿದರು, ಅದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಲಕ್ಕವಳ್ಳಿಯಿಂದ ನರಸಿಂಹರಾಜಪುರ, ಕೊಪ್ಪ, ಮತ್ತು ಶೃಂಗೇರಿಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಕೊಡಬೇಕೆಂದು ಶ್ರೀ ಬಿ ಎಂ ಪುಟ್ಟಣ್ಣ ಗೌಡರು ಮತ್ತೊಂದು ನಿರ್ಣಯವನ್ನು ಮಂಡಿಸಿದರು

ಸಚಿವ ಶ್ರೀ ಕೆ. ಟಿ ಭಾಷ್ಯಂರವರು ಉತ್ತರವಿತ್ತು, ಮುಂದಿನ ವರ್ಷದ ಅಂತ್ಯದೊಳಗಾಗಿ ಉಳಿದ ೨೭ ತಾಲ್ಲೂಕುಗಳಿಗೂ ವಿದ್ಯುಚ್ಛಕ್ತಿ ಒದಗಿಸಲಾಗುವುದೆಂದೂ, ಪ್ರತಿಯೊಂದು ಪ್ರದೇಶಗಳಿಗೂ ಅದನ್ನು ಸರಬರಾಜು ಮಾಡುವುದೇ ಸರ್ಕಾರದ ಆಶಯವೆಂದೂ ತಿಳಿಸಿದರು

ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಪ್ರಾಂತ ಮತ್ತು ಸಂಸ್ಥಾನಗಳ ಮಂತ್ರಿಗಳ ಸಮ್ಮೇಳನ

ಮೈಸೂರು ೨೯

ಭಾರತದ ಪಾರ್ಲಿಮೆಂಟಿನಲ್ಲಿ ಅಂಗೀಕೃತವಾದ ಕನಿಷ್ಠಾಂಶದ ಕೂಲಿ ಶಾಸನವನ್ನು ಜಾರಿಗೆ ತರುವ ಸಲುವಾಗಿ ಬರುವ ಡಿಸೆಂಬರ್ ೨೭ ಮತ್ತು ೨೮ರಲ್ಲಿ ಪ್ರಾಂತ ಮತ್ತು ಸಂಸ್ಥಾನಗಳ ಮಂತ್ರಿಗಳ ಸಮ್ಮೇಳನವು ಮೈಸೂರಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ರಾಜ್ಯ ಶಾಸ್ತ್ರ ಸಂಘ

ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್. ದಿವಾಕರರವರು ನಾಳೆ ಸಂಜೆ ೬ ಘಂಟೆಗೆ ಮಹಾರಾಜ ಕಾಲೇಜು ಅಂಗಳದಲ್ಲಿ ಭಾಷಣ ಮಾಡುವರು ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು

ಏಕೀಕರಣವಾದಿಗಳಿಂದ ಸಭಾ ಪರಿತ್ಯಾಗ

ಸಂಸ್ಥಾನದ ಸಮ್ಮೇಳನದ ಕಾರ್ಯಕಲಾಪಗಳು

ಮೈಸೂರು ೩೦

ಶ್ರೀಗಳಾದ ಎಂ ಸಿ ಲಿಂಗೇಗೌಡ ಮತ್ತು ಬಿ ಎಸ್ ಸುಬ್ಬರಾಯರು ಕರೆದಿದ್ದ ಮೈಸೂರು ಸಂಸ್ಥಾನ ಸಮ್ಮೇಳನ ಈ ಬೆಳಗ್ಗೆ ಟೌನ್ ಹಾಲಿನಲ್ಲಿ ನಡೆಯಿತು. ಅಧ್ಯಕ್ಷತೆ ವಹಿಸಬೇಕಾಗಿದ್ದ ಹಾಸನದ ಶ್ರೀ ಎಸ್. ವೆಂಕಟೇಶಯ್ಯನವರು ದಾರದಿದ್ದ ಪ್ರಯುಕ್ತ ಸ್ವಾಗತಾಧ್ಯಕ್ಷರಾದ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರೇ ಅಧ್ಯಕ್ಷತೆ ವಹಿಸಿದ್ದರು

ಪ್ರಾರಂಭದಲ್ಲಿ ೨೨ ಜನ ಮಾತ್ರ ಇದ್ದರು, ಕಡೆಗೆ ಸುಮಾರು ೧೦೦ ಜನರವರೆಗೆ ಸೇರಿದ್ದರು ಕರ್ಣಾಟಕ ಯುವಕ ಪರಿಷತ್ತಿನ ಸುಮಾರು ೩೦ ಜನರು ಹಾಜರಿದ್ದರು ಶ್ರೀ ಬಿ ಎಸ್. ಸುಬ್ಬರಾಯರು ಸಮ್ಮೇಳನದ ಉದ್ದೇಶವನ್ನು ವಿವರಿಸಿದರು ಶ್ರೀ ಎಂ ಸಿ ಲಿಂಗೇಗೌಡರು ಸಂದೇಶಗಳನ್ನು ಓದಿದರು. ಶ್ರೀ ಎಚ್ ಎಸ್ ದೊರೆಸ್ವಾಮಿಯವರು ಈ ಸಮ್ಮೇಳನವು ಕ್ರಮಬದ್ಧವಾಗಿಲ್ಲವೆಂದು ಕ್ರಿಯಾ ಲೋಪವೆತ್ತಿದರು ಗೊತ್ತಾದ ಅಭಿಪ್ರಾಯವುಳ್ಳ ಜನರ ಸಭೆ ಇದೆಂದು ಅಧ್ಯಕ್ಷರು ಹೇಳಿ ಬೇರೆ ಅಭಿಪ್ರಾಯ ವ್ಯಕ್ತಪಡಿಸುವವರಿಗೂ ಅವಕಾಶ ಕೊಡಲಾಗುತ್ತೆಂದು ಹೇಳಿದರು. ಈ ಸಭೆಯನ್ನು ಅರಮನೆಯಕಡೆಯಿಂದ ನಡೆಸಲಾಗುತ್ತಿದೆಯೋ ಎಂದು ಕೇಳಿದುದಕ್ಕೆ ಇಲ್ಲವೆಂದು ಅಧ್ಯಕ್ಷರು ತಿಳಿಸಿದರು. ಅನಂತರ ಏಕೀಕರಣದ ವಿಷಯವಾಗಿ ಭಾಷಣ ಮಾಡಿದ ಹಲವರಿಗೆ ಉತ್ತರ ಕೊಡಲು ಎದ್ದ ಶ್ರೀ ಎಚ್ ಎಸ್ ದೊರೆಸ್ವಾಮಿ ಮಂತ್ರಿಗರರಿಗೆ ಅಧ್ಯಕ್ಷರು ಅವಕಾಶ ಕೊಡಲಿಲ್ಲವೆಂಬ ಕಾರಣದ ಮೇಲೆ ಯುವಕ ಪರಿಷತ್ತಿನವರು ಸಭಾ ಪರಿತ್ಯಾಗ ಮಾಡಿದರು

ಟಿ. ಎಸ್. ಅಲ್ಲೀಖಾನರ ನಿಧನದ ಬಗ್ಗೆ ಪೌರಸಭೆಯ ಸಂತಾಪ

ಮೈಸೂರು ೩೦

ಅನೇಕ ವರ್ಷಕಾಲ ಪೌರಸಭೆಯ ಸದಸ್ಯರಾಗಿದ್ದ ಜ|| ಟಿ ಎಸ್. ಅಲ್ಲೀಖಾನರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ನಿನ್ನೆ ದಿನ ನಡೆದ ಪೌರಸಭೆಯ ಅಧಿವೇಶನದಲ್ಲಿ ಅಂಗೀಕರಿಸಲಾಯಿತು

ಕಾಲರಾ ವ್ಯಾಧಿಯನ್ನು ತಡೆಗಟ್ಟುವ ವಿಚಾರದಲ್ಲಿ ಕೈಗೊಳ್ಳಲಾಗಿರುವ ಕಾರ್ಯಕ್ರಮವನ್ನು ಅಧ್ಯಕ್ಷರು ವಿವರಿಸಿದರು

ಸಾಂಕ್ರಾಮಿಕ ವ್ಯಾಧಿಗಳ ಆಸ್ಪತ್ರೆಗೆ ದಾಖಲಾಗಿದ್ದ ಗೀತಾ ಎಂಬ ಮಗುವಿಗೆ ಡಿಫ್ತೀರಿಯಾ ವ್ಯಾಧಿಗೆ ಔಷಧಿಯನ್ನು ಒದಗಿಸುವಂತೆ ಅಲ್ಲಿನ ವೈದ್ಯರು ಚೀಟಿಯನ್ನು ಕೊಟ್ಟು ಅನಂತರ ಡಿಫ್ತೀರಿಯಾ ವ್ಯಾಧಿ ಇಲ್ಲವೆಂದು ಹೇಳಿ ತರುವಾಯ ಸದರಿ ಮಗುವು ಮೃತಪಟ್ಟ ವಿಚಾರವಾಗಿಯೂ ಡಿಫ್ತೀರಿಯಾ ಇಂಜಕ್ಷನ್ ಔಷಧದ ಉಪಯೋಗದ ವಿಚಾರವಾಗಿಯೂ ಶ್ರೀ ಆಗರಂ ರಂಗಯ್ಯನವರು ಹಾಕಿದ್ದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವಿತ್ತು ಈ ವಿಚಾರವಾಗಿ ಮುಂದಿನ ತನಿಖೆ ನಡೆಸಲಾಗುವುದೆಂದು ತಿಳಿಸಿದರು.

ಮಾರ್ಕೆಟ್ ಸಮಿತಿಗೆ ಪೌರ ಸಭೆಯ ಪರವಾಗಿ ಶ್ರೀ ಎಸ್ ಲಿಂಗಣ್ಣನವರು ಸದಸ್ಯರಾಗಿರುವಂತೆ ನಿರ್ಣಯ ಮಾಡಲಾಯಿತು

ಆರೋಗ್ಯ ಮತ್ತು ಕಲಾ ಪ್ರದರ್ಶನವನ್ನು ನಡೆಸಲು ೧೫೦೦ ರೂಪಾಯಿಯನ್ನು ಮಂಜೂರು ಮಾಡಲಾಯಿತು

ಶ್ರೀ ಎ ವೆಂಕಟೇಶಯ್ಯನವರು ಸಭೆಯಿಂದ ಹೊರಗೆ ಹೋಗಿ ಪುನಃ ಒಳಗೆ ಬಂದರು ಹೊರಟಿದ್ದವರು ಪುನಃ ಬಂದಿರಲ್ಲಾ ?-ಎಂದು ಒಬ್ಬ ಸದಸ್ಯರುಕೇಳಿದುದಕ್ಕೆ ಕುಪಿತರಾಗಿ ಅವರು ಮಾತನಾಡುತ್ತಿದ್ದುದನ್ನೂ ಬಿಟ್ಟು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಸಭಾ ಪರಿತ್ಯಾಗ ಮಾಡುವುದಾಗಿ ಹೇಳುತ್ತಾ ಹೊರಟು ಹೋದರು

ಕಲ್ಕತ್ತೆಯ ಗುಡಿಸುವವರ ಮುಷ್ಕರದ ಮುಕ್ತಾಯ

ಕಲ್ಕತ್ತಾ ನಗರದ ೨೭೦೦೦ ಜನಗುಡಿಸುವವರೂ, ಪೌರಸಭಾ ಕೆಲಸಗಾರರೂ ಕಳೆದ ೧ ವಾರದಿಂದ ಹೂಡಿದ್ದ ಮುಷ್ಕರವು ಈ ದಿನ ಮುಕ್ತಾಯವಾಗುವ ಸೂಚನೆ ಇರುತ್ತದೆ ಕಾರ್ಪೊರೇಷನ್ನಿನವರು ಅವರುಗಳಿಗೆ ಕೊಡಲು ಒಪ್ಪಿರುವ ರಿಯಾಯಿತಿಗಳನ್ನು ಅವರು ಅಂಗೀಕರಿಸಿರುವರೆಂದೂ ತಿಳಿದುಬಂದಿದೆ

§ ಕರ್ನಾಟಕ ಏಕೀಕರಣದ ವಿಷಯವಾಗಿ ಈ ದಿನ ಸಂಜೆ ೬-೩೦ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಕರ್ಣಾಟಕ ಯುವಕರ ಪರಿಷತ್ತಿನ ಮುಂದಾಳುಗಳು ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ.

ವಾರ ಭವಿಷ್ಯ

ತಾ|| ೩೦-೧೦-೪೯ ರಿಂದ ೫ರವರೆಗೆ

ಮೇಷ—ಆರೋಗ್ಯ ನೆಟ್ಟಗೆ. ಆದರೆ ಪರಿಸ್ಥಿತಿ ಗೊಂದಲಕರ. ಹಣಕಾಸಿನ ಸ್ಥಿತಿ ಸಮಾಧಾನಕರವಲ್ಲ. ನೌಕರಿಯಲ್ಲಿ ವರ್ಗವಾಗುವ ಸಂಭವ, ಬಡ್ತಿ. ತಾ|| ೩೦, ೩೧ ಮಿತ್ರರ ಭೇಟಿ ಲಾಭ. ಆನಂದ

ವೃಷಭ—ಆಕಸ್ಮಿಕ ಸಂಕಟ ಪ್ರಾಪ್ತಿಯಿಂದ ಸ್ಥಿತಿಯು ಪ್ರಖರವಾಗುತ್ತದೆ. ಧನಹಾನಿ, ಜನಹಾನಿ ಸಂಭವ. ನೌಕರಿಯಲ್ಲಿ ಆಕಸ್ಮಿಕ ತೊಂದರೆ. ನೆರೆಯವರೊಡನೆ ಕಲಹ ಎದುರಾಳಿಗಳ ಕಾಟ. ಕೌಟುಂಬಿಕ ಸ್ಥಿತಿ ಉಗ್ರ. ತಾ|| ೨, ೩ ಚಿಂತಾಜನಕ ಸಂಕಟ ದೂರಾಗುವುದು.

ಮಿಥುನ—ಆರೋಗ್ಯ, ಮಾನಸಿಕ ಮತ್ತು ಆರ್ಥಿಕ ಸ್ಥಿತಿ ಚೆನ್ನಾಗಿರುವುವು. ಕೈಗೊಂಡಯೋಜನೆಯು ಸಿದ್ಧಿ. ನೌಕರಿಯಲ್ಲಿ ಹಿತದಾಯಕ ಘಟನೆ. ದಂಧೆಯಲ್ಲಿ ಪ್ರಗತಿ. ಆಪ್ತ ಮಿತ್ರರ ಭೇಟಿ. ಸುಖ ಪ್ರವಾಸ. ಪವಿತ್ರಸ್ಥಳ ದರ್ಶನ ತಾ|| ೩೧, ೪ ಮಹತ್ವದ ಪತ್ರ್ಯಾಗಮನ. ಅಧಿಕಾರಿಗಳ ಪರಿಚಯ.

ಕರ್ಕ—ಅಧಿಕ ಪ್ರಮಾಣದ ಖರ್ಚು. ಆರೋಗ್ಯ ನೆಟ್ಟಗೆ. ನೌಕರಿ ದಂಧೆಗಳಲ್ಲಿ ಚೆನ್ನಾಗಿ ಕಾರ್ಯ ನಿರ್ವಹಣೆ. ಕೋರ್ಟು ಕಛೇರಿಯಲ್ಲಿ ಅನುಕೂಲದ ತೀರ್ಪು. ಎದುರಾಳಿಗಳು ಸೋಲುವರು. ತಾ|| ೨, ೫ ಆಕಸ್ಮಿಕ ಪ್ರವಾಸ. ಧನಲಾಭ.

ಸಿಂಹ—ಶ್ರದ್ಧೆ, ಸಂಯಮ ಮತ್ತು ಶಿಸ್ತಿನಿಂದ ಶತ್ರುವನ್ನು ಗೆಲ್ಲಬೇಕಾಗಿದೆ. ಆರೋಗ್ಯ ನೆಟ್ಟಗಿರದು. ನೌಕರಿಯಲ್ಲಿ ನೂತನ ಶತ್ರುಕಾಟ. ದಂಧೆಯಲ್ಲಿ ಕೆಳಗಿನವರಿಂದ ಅಪಘಾತ. ತಾ|| ೨, ೩ ಅಪಘಾತ ಭಯ, ಖರ್ಚು.

ಕನ್ಯಾ—ನೌಕರಿ ವ್ಯಾಪಾರಾದಿಗಳಲ್ಲಿ ಆಕಸ್ಮಿಕ ಹಾನಿ. ನಿಮಗೂ ನಿಮ್ಮ ಕಳತ್ರಕ್ಕೂ ಅನಾರೋಗ್ಯ. ಅನೇಕರಿಗೆ ಮಕ್ಕಳಿಂದ ಅಪಮಾನ. ಔಷಧಕ್ಕಾಗಿ ಖರ್ಚು. ಮಿತ್ರರ ಮನಸ್ಸಿನಲ್ಲಿ ಕಲ್ಮಷ. ತಾ|| ೩೧, ೪ ಕಾಲಿಗೆ ಜಖಂ. ವಸ್ತುವಿನ ಕಳವು. ನಿದ್ರಾನಾಶ.

ತುಲಾ—ಆರೋಗ್ಯ ನೆಟ್ಟಗೆ. ಮಹತ್ವದ ಕಾರ್ಯದಲ್ಲಿ ಸರಿಯಾದ ತೀರ್ಪು. ಮೇಲಧಿಕಾರಿಗಳಲ್ಲಿ ಲಾಭ. ಕೀರ್ತಿ ಹೆಚ್ಚುವುದು. ಹಟವಾದಿಗಳಿಗೆ ನಿಮ್ಮಿಂದ ತಕ್ಕ ಶಾಸ್ತಿಯುಂಟು. ಪ್ರವಾಸ ನಿರ್ವಿಘ್ನ. ತಾ|| ೨, ೩ ವಿಶೇಷ ಖರ್ಚು. ಅತಿಥಿಗಳ ಸತ್ಕಾರ.

ವೃಶ್ಚಿಕ—ಗ್ರಹಮಾನ ಚೆನ್ನಾಗಿವೆ. ಆರೋಗ್ಯ ನೆಟ್ಟಗೆ. ನೌಕರಿಯಲ್ಲಿ ಮೇಲಧಿಕಾರ ಪ್ರಾಪ್ತಿ. ಪ್ರವಾಸ, ಧನಲಾಭ. ಶತ್ರುವಿನ ಸೋಲು. ನಿಮ್ಮ ವಿಜಯ. ತಾ|| ೨, ೩ ಸತ್ಸಹವಾಸ, ಶುಭವಾರ್ತೆ. ಪ್ರಿಯಜನರಿಂದ ಲಾಭ.

ಧನು—ವ್ಯಾಪಾರ ಉದ್ಯೋಗ ಕ್ಷೇತ್ರಗಳ ವಿಸ್ತಾರಕ್ಕೆ ಧನಿಕರ ಸಹಾಯ. ಮಹತ್ವದ ಮಾತುಕತೆ. ನೌಕರಿಯಲ್ಲಿ ಪ್ರಗತಿ. ಆರೋಗ್ಯ ನೆಟ್ಟಗೆ. ಹಣ ಲಾಭ. ಮನಸ್ಸಿಗೆ ಆನಂದ. ಯಶಸ್ಸು ಲಭ್ಯ. ತಾ|| ೩೦, ೩೧ ಆಕಸ್ಮಿಕ ಅಲ್ಪ ಪ್ರವಾಸ

ಮಕರ—ಆರೋಗ್ಯ ನೆಟ್ಟಗಿರದು. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಸಂಕಟ ಪ್ರಾಪ್ತಿ. ಆದ್ದರಿಂದ ಎಚ್ಚರಿಕೆ ಇರಲಿ. ತಾ|| ೨, ೩ ಮಿತ್ರರ ಸಹಾಯ ವಿಪತ್ಪರಿಹಾರ. ಹಣದ ಮುಗ್ಗಟ್ಟಿನ ನಿವಾರಣೆ

ಕುಂಭ—ಸಪ್ತಮದಲ್ಲಿ ಶನಿ ಮಂಗಳರಿರುವುದರಿಂದ ಬಹು ಕಠಿಣ ಸ್ಥಿತಿ. [illegible] ಆರೋಗ್ಯಕ್ಕೆ [illegible] ಒದವೆ, ಮಹತ್ವದ ಕಾಗದಪತ್ರ ಇವುಗಳು ಕಳುವು ಜೋಕೆ. ವ್ಯಾಪಾರ, ಉದ್ಯೋಗ ಇವುಗಳಲ್ಲಿ ಸಂಕಟ. ತಾ|| ೩೦ ೩೧ ವಿಶ್ವಾಸ ಘಾತ.

ಮೀನ—ಶರೀರಸ್ಥಿತಿ ನೆಟ್ಟಗೆ, ಪರೋಪಕಾರ ಕಾರ್ಯ ವಿದ್ವತ್ ಪ್ರಕಾಶ. ಶತ್ರುಗಳು ಕ್ಷೀಣರಾಗುವರು. ಪುತ್ರರಿಂದ ಲಾಭ. ಸರ್ಕಾರದಲ್ಲಿ ಪ್ರತಿಷ್ಠೆ ಹೆಚ್ಚುವುದು. ತಾ|| ೩೧, ೧ ಖರ್ಚುದಾಯಕ ದಿನ.

ವಾಷಿಂಗ್ಟನ್ನಿನಲ್ಲಿ ಪ್ರಧಾನಿ ನೆಹರೂರವರು ತಮ್ಮ ಸಹೋದರಿ ವಿಜಯಲಕ್ಷ್ಮಿ ಮತ್ತು ಅಧ್ಯಕ್ಷ ಟ್ರೂಮನ್ನರೊಡನೆ ಅಧ್ಯಕ್ಷರ ನಿವಾಸಕ್ಕೆ ಮೋಟಾರಿನಲ್ಲಿ ಹೋಗುತ್ತಿರುವ ದೃಶ್ಯ

೨೨ ಗಂಟೆಯಲ್ಲಿ ಲಂಡನ್ನಿನಿಂದ ದೆಹಲಿಗೆ

ಬ್ರಿಟಿಷ್ ಓವರ್‌ಸೀಸ್ ವಿಮಾನ ಕಂಪೆನಿಯ ಹೊಸ ಏರ್ಪಾಟಿನಂತೆ ಇನ್ನು ಮುಂದೆ ಲಂಡನ್ನಿನಿಂದ ದೆಹಲಿಗೆ ೨೨ ಗಂಟೆಗಳಲ್ಲಿ ವಿಮಾನಗಳು ತಲುಪುವುವು

ಮಕ್ಕಳ ಅಪರ್ಕಾಲಗೆ

[illegible]

ಅಪರ್‌ಹೌಸ್, ಮೈಸೂರು

ಶ್ರೀ ಸರಸ್ವತೀ ಸಂಗೀತ ಸಮಾಜ,
(ರಿ) ಮೈಸೂರು.
ಅಪೋಷ್ ಸಂಗೀತ ಕಛೇರಿ
(ಮಹಿಳಾ ಗೋಷ್ಠಿಯಿಂದ)
ಮದ್ರಾಸಿನ ಶ್ರೀಮತಿಯರಾದ
ಸಿ. ವಿ. ರಾಧಾ ಮತ್ತು ಜಯಲಕ್ಷ್ಮಿ
ಯವರ ಹಾಡುಗಾರಿಕೆ,
ಕೋಮಲವಲ್ಲಿಯವರ ಪಿಟೀಲು
ಮತ್ತು ಟ್ರಿಚ್ಯೂರಿನ
ಜಾನಕಿಯವರ ಮೃದಂಗ
ಮೈಸೂರು ಟೌನ್‌ಹಾಲಿನಲ್ಲಿ
1-11-49ನೇ ಮಂಗಳವಾರ
ಸಂಜೆ ೫-೩೦ ಘಂಟೆಗೆ
ಟಿಕೆಟ್ ದರ:- ರೂ. 3, 2, 1 ಮತ್ತು ೮ ಆಣೆ

ರಾಜಕಮಲ್ ಟಾಕೀಸ್
28—10—49 ರಿಂದ :: ಅಮೋಘ ೫ನೇ ವಾ
ಚಾಂದನಿ ರಾತ್
(ಹಿಂದಿ)
ತಾರಾಗಣ:—ನಾಸೀಂ (ಪ್ರಕಾಂ ಪ್ರಖ್ಯಾತಿ), ಶ್ಯಾಮ್, ಉಲ್ಹಾಸ್
Morning Shows From 28-10-49 For 4 da
Republic Pictures' Super-stunt Drama
ANGEL & THE BAD MAN
With – John Wayne & Gail Russel
WITH THOUSANDS OF THRILLS TO
TO THRILL THOUSANDS !

ಶ್ರೀ ಗಣೇಶಾ ಟಾಕೀಸ್
31-10-49 ರಿಂದ :: ಪ್ರತಿ ದಿನ 3 ಆಟಗಳು
ಜ್ಯುಪಿಟರ್ಸ್ ರವರ ತಮಿಳು ಚಿತ್ರ
ರಾಜಕುಮಾರಿ
ಭೂಮಿಕೆ:- ಮಾಲತಿ, ತವಮಣಿ ದೇವಿ, ಟಿ. ಎಸ್. ಬಾಲಯ್ಯ
ಪುಳಿ ಮೊದಲಾದವರು.

[ಸ್ಥಾಪನೆ: 1906]
ಕೆನರಾ ಬ್ಯಾಂಕ್, ಲಿಮಿಟೆಡ್
(ಮೈಸೂರು ಬ್ರಾಂಚ್)
ಸಯ್ಯಾಜಿರಾವ್ ರಸ್ತೆಯಲ್ಲಿರುವ ಎನ್. ಶಿವಾಜಿರಾವ್
ಅಂಡ್ ಸನ್ಸ್‌ರವರ ಮೈಸೂರು ಹಾಲ್
(ಇವರ ಮಾಳಿಗೆಯಲ್ಲಿ)
ಈ ಬ್ಯಾಂಕಿನಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ಈಡಿನ ಮೇಲೆ ಸುಲಭ ದರ
ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು
ಬ್ಯಾಂಕಿನಲ್ಲಿ ಪಡೆಯಬಹುದು.
U. HARI SHENOY B.A.
ಏಜೆಂಟ್.

Edited, printed and published by A. R. Nagaraja at Sadhvi Press, D. Subbiah Road Mysore.

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಮಂಗಳವಾರ ೧-೧೧-೪೯ [ಸಂಚಿಕೆ ೭೯

ಮೈಸೂರು ಮಂತ್ರಿಮಂಡಲದ ಬದಲಾವಣೆ ಸಧ್ಯಕ್ಕೆ ಇಲ್ಲ

ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರು ಸೇರಲು ಈಗ ಸಮಯವಲ್ಲ

ಪ್ರ॥ ಪ್ರ॥ ಸಭೆಯಲ್ಲಿ ನಿರ್ಣಯದ ಅಂಗೀಕಾರ

ಮೈಸೂರು ೧

ಸಂಯುಕ್ತ ಕರ್ನಾಟಕ ಪ್ರಾಂತದೊಡನೆ ಮೈಸೂರು ಸಂಸ್ಥಾನವನ್ನು ಸೇರಿಸುವುದಕ್ಕೆ ಇದು ಸಮಯವಲ್ಲ ಈ ಸಮಸ್ಯೆಯನ್ನು ಭಾರತದ ನೂತನ ರಾಜ್ಯಾಂಗ ವ್ಯವಸ್ಥೆಯು ಜಾರಿಗೆ ಬಂದ ಮೇಲೆ ಅದರ ನಿಯಮಗಳಿಗನುಸಾರವಾಗಿ ಬಗೆಹರಿಸಬೇಕು–ಎಂಬ ಕಾಂಗ್ರೆಸ್ ಪಕ್ಷದ ವಿಶೇಷ ನಿರ್ಣಯದ ಮೇಲೆ ನಿನ್ನೆ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ದೀರ್ಘ ಚರ್ಚೆ ನಡೆಯಿತು

ಶ್ರಿ ಹೆಚ್. ಲಿಂಗಪ್ಪನವರು ಕ್ರಿಯಾಲೋಪವನ್ನೆತ್ತಿ ಈ ವಿಚಾರವನ್ನು ಚರ್ಚಿಸಲು ಸಭೆಗೆ ಅಧಿಕಾರವಿಲ್ಲವೆಂದು ತಿಳಿಸಿದರು. ಪ್ರತ್ಯೇಕ ಪ್ರಾಂತದೊಡನೆ ಮೈಸೂರು ಐಕ್ಯವಾಗುವ ವಿಚಾರವು ರಾಜಕೀಯ ವ್ಯವಸ್ಥೆ ಮತ್ತು ಆಡಳಿತಕ್ಕೆ ಸಂಬಂಧಪಟ್ಟದಾದುದರಿಂದ ಅದು ಶ್ರೀ ಮನ್ಮಹಾರಾಜರವರ ಅಧಿಕಾರಕ್ಕೆ ಒಳಪಟ್ಟಿರುವುದೆಂದೂ ಸಭೆಗೆ ಅದನ್ನು ಚರ್ಚಿಸಲು ಹಕ್ಕಿಲ್ಲವೆಂದೂ, ಅವರು ಹೇಳಿದರು ನೂತನ ರಾಜ್ಯಾಂಗವು ಜಾರಿಗೆ ಬಂದಿಲ್ಲದುದರಿಂದ ಸಂಸ್ಥಾನದ ಮೇಲಿನ ಅಧಿಕಾರವು ಪ್ರಭುಗಳಿಗೆ ಸೇರಿದುದೇ ಹೊರತು ಜನಗಳಿಗೆ ಸೇರಿಲ್ಲವೆಂದು ತಿಳಿಸಿದರು

ಶ್ರೀಗಳಾದ ಕೆ. ಚಿಕ್ಕಲಿಂಗಯ್ಯ, ವೈ ಧರ್ಮಪ್ಪ ಮೊಂತಾದವರು ಅದನ್ನು ಸಮರ್ಥಿಸಿದರು

ಶ್ರಿ ಕೆ ಹನುಮಂತಯ್ಯನವರು ಅದನ್ನು ವಿರೋಧಿಸಿ ಜವಾಬ್ದಾರಿ ಸರ್ಕಾರದ ಪದ್ಧತಿಯಲ್ಲಿ ಮಂತ್ರಿಗಳ ಸಲಹೆಯನ್ನು ಮನ್ಮಹಾರಾಜರವರು ತೆಗೆದುಕೊಳ್ಳಬೇಕೆಂದೂ, ಸರ್ಕಾರದವರು ಜನರ ಅಭಿಪ್ರಾಯವನ್ನು ಪಡೆಯದೆ ಸ್ವತಂತ್ರ ಅಭಿಪ್ರಾಯವನ್ನು ತಿಳಿಸಲು ಅವಕಾಶವಿಲ್ಲದುದರಿಂದಲೂ, ಸಭೆಯು ಈ ನಿರ್ಣಯವನ್ನು ಇಡಲಾಗಿದೆಯೆಂದೂ ಇದರಿಂದ ಶ್ರೀಮನ್ಮಹಾರಾಜರವರ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲವೆಂದೂ ಹೇಳಿದರು

ಅಧ್ಯಕ್ಷರು ಕ್ರಿಯಾಲೋಪವನ್ನು ತಳ್ಳಿ ಪ್ರಜೆಗಳ ಅಭಿಪ್ರಾಯವನ್ನು ಪಡೆಯಲು ಶ್ರೀಮನ್ಮಹಾರಾಜರವರು ಇಷ್ಟಪಡುವವರಾಗಿರುವುದರಿಂದಲೂ, ಇಂತಹ ಮಹತ್ವದ ವಿಷಯದ ಮೇಲೆ ಈ ಸಭೆಯ ತನ್ನ ಅಭಿಪ್ರಾಯ ತಿಳಿಸಬೇಕಾದ ಆವಶ್ಯಕತೆ ಇರುವುದರಿಂದಲೂ ಕಾನೂನಿನ ಅಡಚಣೆ ಇರಬಹುದಾದರೂ ತಾವು ಅವಕಾಶ ಕೊಡುವುದಾಗಿ ತಿಳಿಸಿದರು

ನಿರ್ಣಯವನ್ನು ಶ್ರೀ ಬಿ. ಎನ್. ಗುಪ್ತರು ಮಂಡಿಸಿ, ನವೆಂಬರ್ ೧೯ನೇ ತಾ॥ ವರೆಗೂ ಮೈಸೂರಿನ ಅಭಿಪ್ರಾಯವನ್ನು ತಿಳಿಸಬೇಕಾಗಿರುವುದರಿಂದ ಈ ನಿರ್ಣಯ ಮಾಡಲಾಗಿದೆಯೆಂದೂ, ಏಕೀಕರಣಕ್ಕೆ ವಿರೋಧವೇ ಹೆಚ್ಚಾಗಿದೆಯೆಂದೂ ಹೇಳಿದರು.

ಜನಾಬ್ ಎ ಜೆ ಖಲೀಲರವರು ನಿರ್ಣಯವನ್ನು ವಿರೋಧಿಸಿದರು

ಶ್ರೀ [illegible] ರಾಮಣ್ಣನವರೂ ವಿರೋಧಿಸಿ, ಇದರಿಂದ ದೇಶದಲ್ಲಿ ಅಶಾಂತಿ ಉಂಟಾಗುವುದೆಂದು ತಿಳಿಸಿದರು.

ಶ್ರೀ ವೈ ಧರ್ಮಪ್ಪನವರು.— ನಿರ್ಣಯವು ನಿರ್ದಿಷ್ಟವಾಗಿಲ್ಲ ಇದರಿಂದ ಏಕೀಕರಣವಾದಂತೆಯೇ ಸರಿ ಉಚಿತವಾದ ಅಭಿಪ್ರಾಯವನ್ನು ಸಭೆಯು ಪ್ರತಿಬಿಂಬಿಸುವುದಕ್ಕಾಗುವುದಿಲ್ಲ

ಶ್ರಿ ಹೆಚ್. ಲಿಂಗಪ್ಪ – ನಿರ್ಣಯವು ಒಂದು ಪಕ್ಷದ ಅಭಿಪ್ರಾಯವೇ ಹೊರತು, ಜನರ ಅಭಿಪ್ರಾಯವಲ್ಲ ಸಭೆಯ ೩೧೦ ಜನ ಸದಸ್ಯರು ಮಾತ್ರ ಈ ನಿರ್ಧಾರಕ್ಕೆ ಬಂದರೆ, ೭೫ ಲಕ್ಷ ಜನರ ಅಭಿಪ್ರಾಯವೂ ಅದೇ ಎಂದು ಹೇಳುವುದಕ್ಕಾಗುವುದಿಲ್ಲ

ಶ್ರಿ ಶಿವಲಿಂಗಯ್ಯ:- ನಿರ್ಣಯವು ಅಡ್ಡಗೋಡೆ ಮೇಲೆ ದೀಪವಿಟ್ಟಂತಿದೆ ದೇಶದ ಅಭಿಪ್ರಾಯ ಪಡೆದಿದ್ದರೆ ಶ್ರೀಮನ್ಮಹಾರಾಜರವರನ್ನೊಳಗೊಂಡ ಅಖಂಡ ಕರ್ನಾಟಕಕ್ಕೆ ಬೆಂಬಲ ದೊರೆಯುತ್ತಿತ್ತು

ಶ್ರಿ ಕೆ. ಹನುಮಂತಯ್ಯ. ಈಗ ಕರ್ನಾಟಕ ಏಕೀಕರಣಕ್ಕೆ ಕೆಲವರನ್ನು ಜನರು ವಿರೋಧವಾಗಿದ್ದಾರೆ ಕೆಲವು ಜನರ ದೋಷಾರೋಪಣೆಯಿಂದಲೂ ಮತ್ತು ಪತ್ರಿಕೆಗಳ ಅಪಪ್ರಚಾರದಿಂದಲೂ ಈ ಪರಿಸ್ಥಿತಿಯು ಉಂಟಾಗಿದೆ ದ್ವೇಷದಿಂದ ಏಕೀಕರಣವನ್ನು ಸಾಧಿಸಲು ಸಾಧ್ಯವಿಲ್ಲ

ಶ್ರಿ ಎಂ ರಾಮಸ್ವಾಮಿಯವರು:– ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಗಾಂಧಿಜಿಯವರು ಹೇಳಿದಂತೆ ಕಾಂಗ್ರೆಸ್ ಪಕ್ಷದವರು ಅದಕ್ಕೆ ಮನ್ನಣೆ ಕೊಟ್ಟು, ಸಭೆಯ ಮುಂದೆ ನಿರ್ಣಯವನ್ನು ತಂದುದಕ್ಕಾಗಿ ಅವರನ್ನು ಅಭಿನಂದಿಸಿದರು

ಶ್ರೀಗಳಾದ ಎಂ. ಲಿಂಗೇಗೌಡ, ಹೆಚ್ ಕೆ ವೀರಯ್ಯ, ಮುಲ್ಲಾ ಗೋವಿಂದ ರೆಡ್ಡಿ, ಮೀರ್ ನೂರ್ ಹುಸೇನ್ ಮೊಂತಾದವರು ನಿರ್ಣಯವನ್ನು ಸಮರ್ಥಿಸಿದರು

ಶ್ರಿ ಭೂಪಾಳಂ ಚಂದ್ರಶೇಖರಯ್ಯನವರು ನಿರ್ಣಯಕ್ಕೆ ಬೆಂಬಲವಿತ್ತು, ಶ್ರೀಮನ್ಮಹಾರಾಜರವರ ವ್ಯಕ್ತಿತ್ವಕ್ಕೆ ಧಕ್ಕೆ ಬರದಂತೆ, ಕರ್ನಾಟಕ ಏಕೀಕರಣವಾಗಬೇಕೆಂದ ತಿಳಿಸಿದರು

ನಿರ್ಣಯವನ್ನು ಓಟಿಗೆ ಹಾಕಿದಾಗ, ಶ್ರೀ ವೈ ಧರ್ಮಪ್ಪನವರು ಹೊರತು, ಮಿಕ್ಕವರೆಲ್ಲರೂ ಪರವಾಗಿ ಸಮ್ಮತಿ ಕೊಟ್ಟರು।

ಪುರಸಭಾ ಚುನಾವಣೆ

ಕಾಂ॥ ವೇಳಾಪಟ್ಟಿಯ ಬದಲಾವಣೆ

ಮೈಸೂರು ೧

ನಗರದ ಪೌರಸಭಾ ಚುನಾವಣೆಯ ಸಂಬಂಧವಾಗಿ ಕಾಂಗ್ರೆಸ್ಸಿನ ವೇಳಾ ಪಟ್ಟಿಯನ್ನು ಅನೇಕರ ಕೋರಿಕೆ ಪ್ರಕಾರ ಈ ರೀತಿ ಬದಲಾಯಿಸಲಾಗಿದೆಯೆಂದು ಉಪಸಮಿತಿಯ ಸಂಚಾಲಕರಾದ ಶ್ರೀ ಎಲ್. ಚನ್ನಯ್ಯನವರು ತಿಳಿಸಿರುತ್ತಾರೆ:-

೧. ಉಮೇದುವಾರರಾಗಲು ಅರ್ಜಿ ಸಲ್ಲಿಸುವ ಕಡೇ ದಿನ ೩-೧೧ ಆದ ರಾತ್ರಿ ೯ ಗಂಟೆ, ೨ ಅರ್ಜಿ ಸಲ್ಲಿಸಿದವರ ಹೆಸರುಗಳ ಪ್ರಕಟಣೆ ಅದೇ ರಾತ್ರಿ ೧೦ ಗಂಟೆ, ೩ ಉಮೇದುವಾರರುಗಳ ಬಗ್ಗೆ ತಕರಾರು ಸೂಚನೆ ತಾ॥ ೪-೧೧-೪೯ ಬೆಳಿಗ್ಗೆ ೧೦ ಗಂಟೆ, ೪ ಉಮೇದುವಾರಿ ವಾಪಸು ಅದೇ ದಿನ ಮಧ್ಯಾಹ್ನ ೧೨, ೫ ಉಳಿದ ಉಮೇದುವಾರರ ಹೆಸರುಗಳ ಪ್ರಕಟಣೆ ಅದೇ ಮಧ್ಯಾಹ್ನ ೧೨-೩೦, ೬. ಪಾರ್ಲಿಮೆಂಟರಿ ಸಮಿತಿಯವರಿಂದ ಅಂಗೀಕೃತವಾದವರ ಪ್ರಕಟಣೆ, ೬-೧೧-೪೯ ರ ಸಂಜೆ ೫ ಗಂಟೆಗೆ.

ಮೌಲಾನಾ ಅಜಾದರ ಭಾಷಣದ ಪ್ರಸಾರ

ನಾಳೆ ಮಧ್ಯಾಹ್ನ ೩ ಗಂಟೆಗೆ ಜಗನ್ಮೋಹನ ಬಂಗಲೆಯಲ್ಲಿ ಸೇರುವ ವಯಸ್ಕರ ವಿದ್ಯಾಭ್ಯಾಸದ ಪ್ರಾಂತಗೋಷ್ಠಿಯ ಪ್ರಾರಂಭೋತ್ಸವವನ್ನು ನೆರವೇರಿಸುವ ಭಾರತದ ವಿದ್ಯಾ ಮಂತ್ರಿ ಮೌಲಾನಾ ಅಜಾದರು ಮಾಡುವ ಭಾಷಣವನ್ನು ಎಲ್ಲಾ ಪೌರಸಭಾ ರೇಡಿಯೋಗಳ ಮೂಲಕವೂ ಪ್ರಸಾರ ಮಾಡಲಾಗುವುದು

ಕಟ್ಟಡಗಳಮೇಲೆ ರಾಷ್ಟ್ರಧ್ವಜ ಮತ್ತು ಮೈ॥ ಧ್ವಜ ಮಾತ್ರ

ಸ್ವಂ ವ ಫೋನ್] ಬೆಂಗಳೂರು ೧

ಯಾವ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಕಟ್ಟಡಗಳ ಮೇಲಾಗಲಿ ಭಾರತದ ರಾಷ್ಟ್ರಧ್ವಜ ಅಥವ ಮೈಸೂರು ಧ್ವಜವನ್ನು ಬಿಟ್ಟು, ಬೇರಾವ ಧ್ವಜವನ್ನೂ ಆಯಾ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೇ ಹಾರಿಸಕೂಡದೆಂದು ಸರ್ಕಾರಿ ಪ್ರಕಟಣೆಯು ತಿಳಿಸಿರುತ್ತದೆ

ಪ್ರ॥ ಪ್ರ॥ ಸಭಾಧಿವೇಶನ

ಮೈಸೂರು ೧

ಪ್ರ॥ ಪ್ರ॥ ಸಭೆಯಲ್ಲಿ ಸಚಿವ ಶ್ರಿ ಟಿ ಮರಿಯಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಆಹಾರ ಹೆಚ್ಚು ಬೆಳೆಯುವ ಯೋಜನೆಯು ನಿರೀಕ್ಷಿಸಿದಷ್ಟು ಫಲಕಾರಿಯಾಗಿಲ್ಲವೆ ಮೂ ಮುಂದಿನ ವರ್ಷ ೪॥ ಲಕ್ಷ ಎಕರೆ ಹೆಚ್ಚು ಜಮೀನನ್ನು ಸಾಗುವಳಿಗೆ ತೆಗೆದುಕೊಳ್ಳುವುದಾಗಿಯೂ, ತಿಳಿಸಿದರು

ವಿದ್ಯಾ ಸಂಸ್ಥೆಗಳ ಸ್ಕಾಲರ್ ಷಿಪ್ ಕಮಿಟಿಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ವಿಚಾರವಾಗಿ ಶ್ರೀಯುತ ಕೋಟಿನ ಈಶ್ವರಪ್ಪನವರು ಕೇಳಿದ ಪ್ರಶ್ನೆಗಳಿಗೆ ಶ್ರೀಯುತ ಹಿ. ಹೆಚ್ ಚಂದ್ರಶೇಖರಯ್ಯನವರು ಉತ್ತರವಿತ್ತು ಕಾಲೇಜುಗಳ ವಿಷಯದಲ್ಲಿ ಇಂತಹ ಸಮಿತಿಗಳನ್ನು ನೇಮಕ ಮಾಡಲು ಯೂನಿವರ್ಸಿಟಿ ಕೌನ್ಸಿಲ್ ಸಭೆಯವರಿಗೆ ಪೂರ್ಣ ಅಧಿಕಾರವಿರುವುದೆಂದೂ, ಮತ್ತು ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿ ವಿದ್ಯಾರ್ಥಿ ವೇತನಗಳನ್ನು ಹಂಚುವುದಕ್ಕಾಗಿ “ಡೆಪ್ಯೂಟಿ ಡೈರೆಕ್ಟರ್” ಸ್ಕಾಲರ್‌ಷಿಪ್ ಕಮಿಟಿಗಳನ್ನು ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರು ನೇಮಿಸುವರೆಂದೂ ತಿಳಿಸಿದರು.

ಹಿಂದೂಗಳ ಸಂಘಟನೆಯೇ ಆರ್. ಎಸ್. ಎಸ್ಸಿನ ಗುರಿ

ಗುರೂಜಿ ಗೋಲ್ವಾಲ್ಕರರ ಭಾಷಣ

ಮೈಸೂರು ೧

ಭಾರತದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಾದ ಗುರೂಜಿ ಗೋಲ್ವಾಲ್ಕರ್‌ರವರು ಈ ಪ್ರಾತಃಕಾಲ ಇಲ್ಲಿಗೆ ಆಗಮಿಸಿದರು ಅವರನ್ನು ನಗರದ ನಾನಾ ರಸ್ತೆಗಳ ಮೂಲಕ ಮೆರವಣಿಗೆಯಲ್ಲಿ ಟೌನ್‌ಹಾಲಿಗೆ ಕರೆದೊಯ್ಯಲಾಯಿತು.

ಸ್ವಾಗತ ಗೀತೆಯಾದ ನಂತರ, ಶ್ರೀ ಎ ವೆಂಕಟೇಶಯ್ಯನವರು ಸ್ವಾಗತವನ್ನು ಬಯಸಿದರು ಗುರೂಜಿಯವರು ಭಾಷಣ ಮಾಡಿ, ಸಂಘದ ಧ್ಯೇಯವನ್ನು ವಿವರಿಸಿದರು ಸಕಲ ಹಿಂದೂಗಳನ್ನೂ ಒಂದುಗೂಡಿಸಿ ನಿಜವಾದ ಸೇವೆ ಸಲ್ಲಿಸುವುದೂ, ಶಾಶ್ವತವಾದ ಸನಾತನ ಧರ್ಮದ ಅಡಿಗಲ್ಲಿನಮೇಲೆ ಭಾರತ ಧರ್ಮದ ಆದರ್ಶವನ್ನು ಎತ್ತಿ ಹಿಡಿಯುವುದೂ ತಮ್ಮ ಸಂಸ್ಥೆಯ ಗುರಿಯೆಂದು ತಿಳಿಸಿದರು. ಅಲ್ಲದೇ ತಮಗೆ ಯಾವ ಮತದವರ ಮೇಲಾಗಲಿ ವಿರೋಧವಿಲ್ಲವೆಂದೂ ಯಾವ ವ್ಯಕ್ತಿಯ ಮೇಲಾಗಲಿ ದ್ವೇಷವಿಲ್ಲವೆಂದೂ ಹೇಳಿದರು.

ಮಂತ್ರಿಮಂಡಲದ ಬದಲಾವಣೆ ಇಲ್ಲ

ಮೈಸೂರು ೧

ನಿನ್ನೆ ದಿನ ಬೆಳಿಗ್ಗೆ ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ಶ್ರೀ॥ ಕೆ. ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಮಂತ್ರಿ ಮಂಡಲದ ಪುನರ್ರಚನೆ ಬಗ್ಗೆ ಪ್ರಧಾನ ಸಚಿವರು ಕೊಟ್ಟ ಭರವಸೆಯನ್ನು ಇನ್ನೂ ಈಡೇರಿಸದಿದ್ದುದಕ್ಕಾಗಿ ಅನೇಕ ಸದಸ್ಯರು ಆಕ್ಷೇಪಿಸಿದರು.

ಪ್ರಧಾನ ಸಚಿವರು ಉತ್ತರಕೊಟ್ಟು ಪ್ರಕೃತ ಪರಿಸ್ಥಿತಿಯಲ್ಲಿ ಮಂತ್ರಿಮಂಡಲವನ್ನು ಬದಲಾಯಿಸುವುದು ಯುಕ್ತವಲ್ಲವೆಂದು ತಾವು ಭಾವಿಸಿರುವುದಾಗಿ ತಿಳಿಸಿದರು ಬರುವ ಡಿಸೆಂಬರ್ ತಿಂಗಳು ಎರಡು ಅಥವಾ ಮೂರನೇ ವಾರದಲ್ಲಿ ಉಭಯ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸದಸ್ಯರ ಜಂಟಿ ಅಧಿವೇಶನವನ್ನು ಕರೆದು ಆಗ ಮತ್ತೆ ಮಂತ್ರಿಮಂಡಲದ ಪುನರ್ರಚನೆ ಬಗ್ಗೆ ಪರಿಶೀಲನೆ ನಡೆಸುವುದಾಗಿ ಅವರು ವ್ಯಕ್ತಪಡಿಸಿದರು

ಶ್ರೀಮನ್ಮಹಾರಾಜರವರಿಂದ ಶಾಸನ ಸಭೆಗಳಲ್ಲಿ ಪ್ರಾರಂಭ ಭಾಷಣ

ಪ್ರ॥ ಪ್ರ॥ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಮೈಸೂರು ೧

ನಿನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಶ್ರೀ ಎಲ್. ಸಿದ್ದಪ್ಪನವರು, ಹಿಂದೆ ಸಭೆಯಲ್ಲಿ ನಡೆಯುತ್ತಿದ್ದ ನಡವಳಿಕೆಯನ್ನು ಅಧ್ಯಕ್ಷರ ಗಮನಕ್ಕೆ ತಂದು, ಹಿಂದಿನ ವರ್ಷದ ಆಡಳಿತದ ವರದಿ, ಸರ್ಕಾರವು ಕೈಗೊಂಡಿರುವ ಕ್ರಮ ಮತ್ತು ಮುಂದೆ ನಡೆಯಬೇಕಾಗಿರುವ ಕೆಲಸ ಕಾರ್ಯಗಳನ್ನು ದಿವಾನ್-ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸುತ್ತಿದ್ದರೆಂದೂ, ಅಂತಹ ಸತ್ ಸಂಪ್ರದಾಯವನ್ನು ಈಗ ನಿಲ್ಲಿಸಲಾಗಿದೆಯೆಂದೂ, ಇದರಿಂದ ಸರ್ಕಾರದ ಕಾರ್ಯಕ್ರಮಗಳು ಸಭೆಗೆ ಗೊತ್ತಾಗುವುದಿಲ್ಲವೆಂದೂ, ಭಾರತ ಸರ್ಕಾರದೊಡನೆ ಮೈಸೂರಿನ ಆರ್ಥಿಕ ವಿಲೀನೀಕರಣ, ಹಣದ ಮೌಲ್ಯವನ್ನು ಕಡಿಮೆ ಮಾಡಿರುವುದು-ಇವೇ ಮುಂತಾದುವುಗಳನ್ನು ಸಭೆಗೆ ತಿಳಿಸಬಹುದಾಗಿತ್ತೆಂದೂ ಹೇಳಿದರು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತು, ನೂತನ ವಿಧಾನದಲ್ಲಿ ಸರ್ಕಾರದ ಆಡಳಿತದ ಬಗ್ಗೆ ವರದಿ ಒಪ್ಪಿಸುವುದು ಸಾಧುವಲ್ಲವೆಂದು ನಿರ್ಧರಿಸಿ ಅದನ್ನು ಬಿಡಲಾಯಿತು. ಕೇಂದ್ರ ಮತ್ತು ಪ್ರಾಂತ ಶಾಸನ ಸಭೆಗಳ ಪದ್ಧತಿಗನುಸಾರವಾಗಿ ಈ ರೀತಿ ಮಾಡಲಾಗಿದೆ. ಮುಂದೆ ಭಾರತದಲ್ಲಿ ನೂತನ ರಾಜ್ಯಾಂಗ ಜಾರಿಗೆ ಬಂದವೇಳೆ, ಬ್ರಿಟಿಷ್ ಪಾರ್ಲಿಮೆಂಟಿನ ಸಂಪ್ರದಾಯದಂತೆ ಕೇಂದ್ರ ಮತ್ತು ಪ್ರಾಂತ್ಯ ಶಾಸನ ಸಭೆಗಳಲ್ಲಿ ಅಧ್ಯಕ್ಷರೂ ಮತ್ತು ಗೌರ್ನರರೂ ಪ್ರಾರಂಭ ಭಾಷಣ ಮಾಡುವರೆಂದೂ, ಅದರ ಹಾಗೆಯೇ ಮೈಸೂರಿನಲ್ಲಿ, ಶ್ರೀಮನ್ಮಹಾರಾಜರವರು ಶಾಸನ ಸಭೆಗಳ ಪ್ರಾರಂಭ ಭಾಷಣ ಮಾಡುವರೆಂದೂ, ಆ ಭಾಷಣದ ಮೇಲೆ ಚರ್ಚಿಸಲು ಅವಕಾಶವಿರುವುದೆಂದೂ ತಿಳಿಸಿದರು.

ಶಂಕರಾಚಾರ್ಯರ ದೇವಾಲಯಕ್ಕೆ ಕೇಂದ್ರ ಸಚಿವರು ಹೋಗಲಿಲ್ಲ

ತಿರುವಾಂಕೂರಿನ ಬಳಿ ಶ್ರೀ ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಟಿಯಲ್ಲಿ ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಅವಕಾಶವಿಲ್ಲದಿರುವುದರಿಂದ, ಅಲ್ಲಿಗೆ ಮೊನ್ನೆ ದಿನ ಭೇಟಿ ಕೊಡಬೇಕಾಗಿದ್ದ ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರು ತಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸಿದ್ದಾರೆ.

ಆಂಧ್ರ ಪ್ರಾಂತದ ನಿರ್ಣಯಕ್ಕೆ ಗೌರ್ನರರ ತಿರಸ್ಕಾರ

ಹೈದರಾಬಾದ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡು ಮದ್ರಾಸಿನ ಹನ್ನೊಂದು ತೆಲುಗು ಜಿಲ್ಲೆಗಳು ಮತ್ತು ಹೈದರಾಬಾದಿನ ತೆಲುಗಾಣ್ಯ ಜಿಲ್ಲೆಯನ್ನು ಸೇರಿಸಿ ಆಂಧ್ರ ಪ್ರಾಂತ ರಚಿಸಬೇಕೆಂದು ಭಾರತದ ಗೌರ್ನರ್ ಜನರಲ್ಲರಿಗೆ ಶಿಫಾರಸು ಮಾಡಬೇಕೆಂದು ಮದ್ರಾಸು ಶಾಸನ ಸಭೆಗೆ ಶ್ರೀ ಪ್ರಕಾಶಾನಂದ ರೆಡ್ಡಿಯವರು ಕಳುಹಿಸಿದ ನಿರ್ಣಯವನ್ನು ಮಂಡಿಸಲು ಮದ್ರಾಸು ಗೌರ್ನರರು ಒಪ್ಪಿಗೆ ಕೊಟ್ಟಿರುವುದಿಲ್ಲ.

ನವೆಂಬರ್ ೮ಕ್ಕೆ ಲಂಡನ್ನಿಗೆ ನೆಹರೂ

ಅಮೆರಿಕಾ ಪ್ರವಾಸವನ್ನು ಕೈಗೊಂಡಿರುವ ಭಾರತದ ಪ್ರಧಾನಿ ನೆಹರೂರವರು ಲಂಡನ್ನಿಗೆ ಮುಂದಿನ ತಿಂಗಳು ೮ಕ್ಕೆ ಬರಲಿರುವರೆಂದು ಹೇಳಲಾಗಿದೆ

ಒಂದು ಕೋತಿ ಹಿಡಿದು ಕೊಟ್ಟರೆ ೨ ರೂ.

ಕುಂಭಕೋಣದಲ್ಲಿ ಕೋತಿಗಳ ಕಾಟವು ಹೆಚ್ಚಿದೆ ಅವುಗಳನ್ನು ಹಿಡಿದು ಕೊಟ್ಟವರಿಗೆ ಕೋತಿಯೊಂದಕ್ಕೆ ೨ ರೂ ಕೊಡುವುದಾಗಿ ಅಲ್ಲಿನ ಪೌರ ಸಭಾಸದರು ತಿಳಿಸಿದ್ದಾರೆ ಅವುಗಳನ್ನು ಕಾಡಿಗೆ ಬಿಡಲಾಗುವುದು.

ಖಾದಿ ಕೈಗಾರಿಕೆ ಪರಿಶೀಲನಾ ಸಮಿತಿ

ಸಂಸ್ಥಾನದಲ್ಲಿ ಖಾದೀ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ [illegible] ಪರಿಶೀಲನೆ ನಡೆಸಲು ಕಳೆದ ಆಗಸ್ಟ್ ೨೯ನೇ ತಾ॥ ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಎ. ವಾಸುದೇವರಾವ್, ಕೈಗಾರಿಕಾ ಇಲಾಖೆಯ ಡೈರೆಕ್ಟರು-ಇವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಈಗ ಅದಕ್ಕೆ ಶ್ರೀ ಕಾನಕಾನಹಳ್ಳಿ ವೆಂಕಟರಾಮಯ್ಯನವರನ್ನೂ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ವಿನೋದ ತೆರಿಗೆ ಸ್ಟಾಂಪುಗಳ ತೊಂದರೆ

ಕಳೆದ ೧೫ ದಿನಗಳಿಂದಲೂ [illegible]ಯಲ್ಲಿ ವಿನೋದ ತೆರಿಗೆಯ ಸ್ಟಾಂ[illegible] ದೊರೆಯದೆ ಸಿನಿಮಾ ಮಂದಿರಗಳ[illegible]ಳ ತೊಂದರೆಯಾಗಿರುತ್ತದೆ. ಸಿನಿಮಾ ಮಂದಿರಗಳವರು ಟಿಕೇಟುಗಳ ಮಾರಾ[illegible]ಕ್ಕವನ್ನು ಕ್ರಮವಾಗಿ ಇಟ್ಟು, [illegible]ಟ್ಟಿಯನ್ನು ಕಳುಹಿಸಿಕೊಡುತ್ತಿದ್ದ[illegible]ಲೀಸರ ಕಿರುಕುಳವು ವಿಶೇಷವಾಗಿ[illegible] ಈ ವಿಷಯಕ್ಕೆ ಜಿಲ್ಲಾಧಿಕಾರಿಗಳ[illegible]ಲೇ ಗಮನ ಕೊಟ್ಟು ತಕ್ಕ ವ್ಯವಸ್ಥೆ[illegible]ಡಿ, ತಾತ್ಕಾಲಿಕ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಸಿನಿಮಾ[illegible]ಟ್ಟರು ಕೋರಿರುತ್ತಾರೆ.

○ ಲಕ್ನೊ ಜಿಲ್ಲೆಯ ಸರ್ಕಾರಿ [illegible]ಸಗಿ ಮನುಷ್ಯರಿಂದ ಸಾಕಲಾಗು[illegible] ಕುದುರೆಗಳಿಗೆ ಇನ್ನು ಮುಂದೆ [illegible] ಸೇರಿಗೆ ಕಡಿಮೆಯಿಲ್ಲದೆ ಹುರು[illegible] ಪಡಿತರವಾಗಿ ಕೊಡಲಾಗುವುದು

R. No 6-81/49-50

ಮೈಸೂರು ಸಿಟಿ ರೇಷನಿಂಗ್ ಆಫೀ[ಸರ್]

ಇದರಿಂದ ಸಮಸ್ತ ಜನಗಳಿ[ಗೆ ತಿಳಿ]ಯಪಡಿಸುವುದೇನೆಂದರೆ:-

ಮೈಸೂರು ಸಿಟಿಯಲ್ಲಿರುವ ಎಲ್ಲಾ [illegible] ಡಿಪೋ, ಮೊಹಲ್ಲಾ ಸಬ್ [illegible] ಮತ್ತು ಸಹಕಾರ ಸಂಘಗಳು [illegible] ಮೊಹರಂ ಹಬ್ಬದ ಪ್ರಯುಕ್ತ ೨[illegible]ನೇ ತಾರೀಖು ಈ ಕೆಳಗೆ ಕಂಡ[ಂತೆ ಮು]ಚ್ಚಲ್ಪಡುತ್ತವೆ

೧ ಮಹಮ್ಮದೀಯರಿಂದ [ನಡೆಸಲ್ಪ]ಡುವ ಡಿಪೋಗಳಿಗೆ ಪೂರಾ ರಜ[ಾ]

೨ ಮಹಮ್ಮದೀಯರಲ್ಲದವರಿ[ಂದ ನಡೆ]ಸಲ್ಪಡುವ ಡಿಪೋಗಳಿಗೆ ಮಧ್ಯಾಹ್ನ[ದ ಮಾ]ತ್ರ ರಜಾ

(ಸಹಿ) ಡಿ. ಜೆ. ಬಾಲ[illegible]

ರೇಷನಿಂಗ್ ಆಫೀ[ಸರ್]

ಮೈಸೂರು ಸಿಟಿ

ಮೈಸೂರು, ೨೮-೧೦-೪೯

4-11-49ನೇ ಶುಕ್ರವಾರದಿಂದ

ಆಪೆರಾ ಟಾಕೀಸಿನಲ್ಲಿ

ಸ್ವಾಸ್ತಿಕ್‌ರವರ

ಧರ್ಮಾಂಗದ

(ತೆಲುಗು)

— ಪ್ರಧಾನ ಭೂಮಿಕೆಯಲ್ಲಿ —

ಕೃಷ್ಣವೇಣಿ, ಯಶೋದಮಣಿ, ಸುಬ್ಬರಾವ್, ಲಿಂಗಮೂರ್ತಿ

R. V. Pictures' Release

Edited, printed and published by A. R. Nagarajan at Sadhvi Press, D. Subbiah Road Mysore.

ಗಾಯತ್ರೀ ಟಾಕೀಸ್

ದಿನವಹಿ ಮೂರು ಪ್ರದರ್ಶನಗಳು

ಕಡೇ ದಿನ ! ತಪ್ಪಿಸಬೇಡಿರಿ !!

ಬ್ಲಡ್ ಅಂಡ್ ಸ್ಯಾಂಡ್

2-11-49ರಿಂದ 5 ದಿನಗಳು

ನಿರಾಶೆ ಹೊಂದಿದವರಿಗೆ ಪೂರ್ಣ ಕಳೆಯ ಸ್ನೇಯಾವ ಮತ್ತೊಂದು ವಿವಿಧ ವರ್ಣಗಳ ನೋಟ

Arabian Nights

ಅರೇಬಿಯನ್ ನೈಟ್ಸ್

ಪಾತ್ರ:- ಮೈಸೂರು ಸಾಬು ಮತ್ತು ಜಾನ್ ಹಾಲ್

ಪ್ರಿನ್‌ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸು

ಮೈಸೂರು ತಾ॥ ೨೮-೧೦-೪೯

ನೋಟಿಫಿಕೇಷನ್

ಮೈಸೂರು ಪ್ರಿನ್‌ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂಗೆ ೧೯೫೦ನೇ ಜನವರಿ ಒಂದರಿಂದ ಆರಂಭವಾಗಿ ೩೧ನೇ ಡಿಸೆಂಬರ್ ಪೂರ್ತಾ ಆಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರತಕ್ಕ ಐಟಂಗಳ ಸರಬರಾಜು ಬಗ್ಗೆ ಮೈಸೂರು ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರು ತಮ್ಮ ಆಫೀಸಿನಲ್ಲಿ [illegible] ತಾರೀಖು [illegible] ಕೆಳಕಂಡ ಕಾಲಗಳಲ್ಲಿ ಮೊಹರಾದ ಫುಲ್‌ಸ್ಕೇಪು ಸೈಜಿನ ನಾಲ್ಕು ಪ್ರತಿಗಳುಳ್ಳ ಟೆಂಡರುಗಳನ್ನು ತೆಗೆದುಕೊಳ್ಳುತ್ತಾರೆ

೧ ರೊಟ್ಟಿ	ದಿವ ೯-೩೦
೨ ಪಾಸ್ಚರೈಸ್ಡ್ ಹಾಲು	ದಿವ ೧೦ ೦
೩ ಬಟ್ಟೆ ಮತ್ತು ಸರ್ಜಿಕಲ್ ಸಾಮಾನುಗಳು	ದಿವ ೧೦-೩೦
೪ ಆಹಾರ ಸಾಮಗ್ರಿ ವಗೈರೆ	ದಿವ ೧೧-೩೦

ಹೆಚ್ಚಿನ ವಿವರಗಳನ್ನು ಮೈಸೂರು ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸಿನಲ್ಲಿ ಪಡೆಯಬಹುದು ಮತ್ತು ೨೦-೧೦ ೪೯ರ ಮೈಸೂರು ಗೆಜೆಟ್ಟಿನ [illegible]ನೇ ಭಾಗದ [illegible] ಪುಟಗಳಲ್ಲಿ ಪ್ರಕಟಿಸಿರತಕ್ಕ ನೋಟಿಫಿಕೇಷನನ್ನು ನೋಡಬಹುದು.

(ಸಹಿ) ಎಂ. ಎನ್. ನಂಜಪ್ಪ,

ಸೆಕ್ರೆಟರಿ

ರಾಜಕಮಲ್ ಟಾಕೀಸ್

5—11—49ರಿಂದ : : ಅಮೋಘ ಪ್ರಾರಂಭ

ಭರಣಿಯವರ ಅಪ್ರತಿಮ ಪ್ರೇಮಮಯ ತೆಲುಗು ಚಿತ್ರ

— ಲೈಲಾ ಮಜ್ನು

ಪಾತ್ರ:-ಭಾನುಮತಿ, ನಾಗೇಶ್ವರರಾವ್, ಶಿವರಾವ್, ಲಲಿತಾ-ಪ[ದ್ಮಿನಿ]

ಕಡೇ 4 ದಿನಗಳು ಚಾಂದನಿ ರಾತ್ (ಹಿಂದಿ)

ಪ್ರಭುದೇವಾ ಟಾಕೀಸ್

2-11-49ನೇ ಬುಧವಾರದಿಂದ ಪ್ರಾರಂಭ

ಪ್ರತಿ ದಿನ ೩ ಆಟಗಳು

— ಕನಕತಾರಾ —

ಕನ್ನಾಂಬಾ, ದಮ್ಮೋಟಿ ಪಾತ್ರವಹಿಸಿರುವ ತೆಲುಗು ಚಿತ್ರ

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨-೧೧-೪೯ [ಸಂಚಿಕೆ ೮೦

ಭದ್ರಾವತಿಯಲ್ಲಿ ಉಪಕರಣ ಕಾರ್ಖಾನೆ

ಪ್ರ॥ ಪ್ರ॥ ಸಭೆಯೇ ಭಾರತ ಪಾರ್ಲಿಮೆಂಟಿನ ಚುನಾವಣಾ ಕ್ಷೇತ್ರವಾಗಬೇಕು

ಮುಲ್ಕಾ ಗೋವಿಂದ ರೆಡ್ಡಿಯವರ ವಿಶೇಷನಿರ್ಣಯಕ್ಕೆ ಅವಕಾಶವಿಲ್ಲ

ಮೈಸೂರು ೨

ಭಾರತದ ಪಾರ್ಲಿಮೆಂಟಿಗೆ ಮೈಸೂರಿನಿಂದ ಆರಿಸಲ್ಪಡುವ ಪ್ರತಿನಿಧಿಗಳ ಚುನಾವಣೆ ಕ್ಷೇತ್ರವು ಈಗ ಇರುವ ಪ್ರಜಾಪ್ರತಿನಿಧಿ ಸಭೆಯೇ ಆಗಬೇಕೆ ಬುದರ ಬಗ್ಗೆ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರ ವಿಶೇಷ ನಿರ್ಣಯವೊಂದನ್ನು ಕಳುಹಿಸಿದ್ದರು ಅಧ್ಯಕ್ಷರು ನಿರ್ಣಯಕ್ಕೆ ಅವಕಾಶವೀಯಲಿಲ್ಲ ಅವರು ಕೊಟ್ಟಿರುವ ಉತ್ತರದಲ್ಲಿ ಭಾರತದ ಪಾರ್ಲಿಮೆಂಟಿನ ಚುನಾವಣೆಯು ಅಲ್ಲಿನರಾಜ್ಯಾಂಗ ಮತ್ತು ಅದರ ನಿಬಂಧನೆಗೆ ಒಳಪಟ್ಟಿದ್ದರಿಂದ ಪ್ರ॥ ಪ್ರ॥ ಸಭೆಯಲ್ಲಿ ಅದನ್ನು ಪರ್ಯಾಲೋಚಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ

ಮೈಸೂರಿನಲ್ಲಿ ೨೫೩೫ ಸುಳ್ಳು ರೇಷನ್ ಕಾರ್ಡುಗಳ ಪತ್ತೆ

ಸಂಸ್ಥಾನದಲ್ಲಿ ಉಂಟಾಗಿರುವ ಆಹಾರಾಭಾವ ಪರಿಸ್ಥಿತಿಯನ್ನು ಸುಧಾರಿಸಲು ಸುಳ್ಳು ರೇಷನ್ ಕಾರ್ಡುಗಳನ್ನು ಪತ್ತೆ ಮಾಡಲು ತೀವ್ರ ಕಾರ್ಯಕ್ರಮವು ಕೈಗೊಳ್ಳಲಾಗಿದೆ ಕಳೆದ ಜನವರಿ ತಿಂಗಳಿನಿಂದ ಈವರೆಗೆ ಮೈಸೂರು ನಗರದಲ್ಲಿ ೨೫೩೫ ಕಾರ್ಡುಗಳನ್ನೂ ಬೆಂಗಳೂರಿನಲ್ಲಿ ೩೭೮೩ ಕಾರ್ಡುಗಳನ್ನೂ ಪತ್ತೆ ಹಚ್ಚಲಾಯಿತು ಇದರಿಂದ ಮೈಸೂರಿನಲ್ಲಿ ತಿಂಗಳಿಗೆ ೧೩೮೦ ಪಲ್ಲ ಬೆಂಗಳೂರಿನಲ್ಲಿ ... ಪಲ್ಲ ಆಹಾರ ಧಾನ್ಯಗಳು ಉಳಿತಾಯವಾಯಿತು ಈ ಕಾರ್ಯದಲ್ಲಿ ಮಹಾಜನರು ಸಹಕರಿಸಬೇಕು-ಎಂದು ಸರ್ಕಾರದ ಪ್ರಕಟಣೆ ಹೊರಡಿಸಿರುತ್ತಾರೆ

ಸಿ ಆರ್. ರೆಡ್ಡಿಯವರ ಕಾರ್ಯದರ್ಶಿಗಳು

... ವಿದ್ಯಾಲಯದ ಪ್ರೊಚಾನ್ಸೆಲರ ಶ್ರೀ ಸಿ ಆರ್ ರೆಡ್ಡಿಯವರ ಕಾರ್ಯದರ್ಶಿಗಳಾಗಿ ಪ್ರೊ॥ ಶ್ರೀ ಎನ್ ಎಸ್ ... ವೆಂಕಟರಾಂರವರನ್ನು ನೇಮಿಸಲಾಗಿದೆ ... ವಿಶ್ವ ವಿದ್ಯಾಲಯದ ಕಚೇರಿಯ ... ಯವರನ್ನು ಅವರ ಸಹಾಯಕ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಗಿದೆ

...ರುಗಾಳಿಯಿಂದ ಐದು ...ಪಿರ ಕಾಗೆಗಳ ಸಾವು

... ಜಬಿ ನಾಡದಲ್ಲಿ ಕಳೆದ ಮೂರು ದಿನ ... ದೆ ಉಂಟಾದ ಶೀತಮಾರುತದಿಂ ... ಕೇಪ ಜನ ದನ ನಷ್ಟವಾದುದಲ್ಲದೆ, ... ಳಿಗೂ ಹಾನಿಯುಂಟಾಗಿವೆ ಅನೇಕ ... ಗಳಿಗೆ ನಿವಾಸ ಸ್ಥಾನವಾಗಿದ್ದ ಒಂದು ಮರವು ಬುಡಸಮೇತ ಉರುಳಿದು ... ಸುಮಾರು ಐದು ಸಾವಿರ ಕಾಗೆಗ ... ವಿಗೀಡಾದವು ಈ ಕಾಗೆಗಳ ಶವಗ ... ಲಿತೆಂಬ ಕಾದ ಜನರಿಗೆ ಆಹಾರ ...

...ಚೆಯವನಿಂದ ಹಿಂದೂ ಸ್ತ್ರೀ ಅಪಹಾರ

... ಕೋಟಿಯ ... ವ ಹಮೀದ್ ಎಂಬ ... ಮಾನನು ಅಲ್ಲಿನ ಕಟ್ಟೆ ನಾರಾಯಣ ... ಪತ್ನಿ ... ಯನ್ನು ... ಹಿಸಿ ... ಸೇರಿಸಿದನೆಂಬ ಆಪಾದನೆ ... ಹಿಸಿಷಣ ನ್ಯಾಯಸ್ಥಾನದಲ್ಲಿ ...

ಅಬ್ದುಲ್ ವಾಹಬ್‌ರವರಿಗೆ ಬಲಾತ್ಕಾರದ ನಿವೃತ್ತಿ

ಸ್ವಂ ಸು ಫೋನ್] ಬೆಂಗಳೂರು ೨

ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಜನಾಬ್ ಅಬ್ದುಲ್ ವಾಹಬ್‌ರವರನ್ನು ಬಲಾತ್ಕಾರವಾಗಿ ನಿವೃತ್ತಿಮಾಡುವಂತೆ ಸರ್ಕಾರದ ಆಜ್ಞೆಯಾಗಿದೆ ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ನಡೆದ ಒಂದು ಪ್ರಕರಣದ ಪರಿಣಾಮವಾಗಿ ಈ ರೀತಿ ಆಜ್ಞೆ ಮಾಡಲಾಗಿದೆಯೆಂದು ತಿಳಿದುಬಂದಿದೆ.

ಸಮತಾವಾದಿಗಳ ಬಂಧನ ಮತ್ತು ಬಿಡುಗಡೆ

ನಿನ್ನೆ ಇಲ್ಲಿಗೆ ಆಗಮಿಸಿದ ಆರ್ ಎಸ್ ಎಸ್ ನಾಯಕ ಶ್ರೀ ಗೋಲ್ವಾಲ್ಕರರವರ ಮುಂದೆ ವಿರೋಧ ಪ್ರದರ್ಶನ ನಡೆಸುತ್ತಿದ್ದ ಬ ಗುಮಾನಿ ಮೇಲೆ ಬಾ ಸು ಕೃಷ್ಣಮೂರ್ತಿ ಮತ್ತು ಇತರ ೨೦ ಜನ ಸಮತಾವಾದಿಗಳನ್ನು ಪೋಲೀಸಿನವರು ಬಂಧಿಸಿಟ್ಟು ರಾತ್ರಿ ಹೊತ್ತಿಗೆ ಬಿಟ್ಟುಬಿಟ್ಟರು

ಶ್ರೀ ಗೋಲ್ವಾಲ್ಕರರು ಭಾರಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ ಸನಾತನ ಧರ್ಮ, ಹಿಂದೂ ಸಂಸ್ಕೃತಿ ಮುಂತಾದ ವಿಷಯಗಳನ್ನು ವಿವರಿಸಿದರು

ಪಂಡಿತ ನೆಹರೂರವರ ೬೧ ನೇ ಜನ್ಮೋತ್ಸವ

ಪಂಡಿತ ನೆಹರೂರವರು ನವೆಂಬರ್ ೧೩ ನೇ ತಾರೀಖು ಬೊಂಬಾಯಿಗೆ ಆಗಮಿಸುವರು ೧೪ನೇ ತಾರೀಖು ನಡೆಯಲಿರುವ ತಮ್ಮ ೬೧ ನೇ ಜನ್ಮೋತ್ಸವವನ್ನು ಬೊಂಬಾಯಿನಲ್ಲೇ ನೆರವೇರಿಸಲು ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಕೋರಿಕೆ ಮೇರೆ ಸಮ್ಮತಿಸಿರುತ್ತಾರೆ ಸದರಿ ಸಮಿತಿಯವರು ಈ ಬಗ್ಗೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿರುವರೆಂದು ವರದಿಯಾಗಿದೆ

ಒಂದು ಕೊಡ ನೀರಿಗೆ ನಾಲ್ಕಾಣೆ

ಕೊಯಮುತ್ತೂರು ಜಿಲ್ಲೆಯ ಉದಲಂಪೇಟೆಯಲ್ಲಿ ನೀರಿನ ಅಭಾವವುಂಟಾಗಿ, ಒಂದು ಕೊಡ ನೀರಿಗೆ ೪ ಆಣೆಯಂತೆ ಮಾರಾಟವಾಗುತ್ತಿದೆ ಕೊಯಮುತ್ತೂರು ಜಿಲ್ಲೆಯ ಬಹು ಭಾಗವು ನೀರಿನ ಅಭಾವಕ್ಕೆ ಸಿಕ್ಕಿರುವುದೆಂದೂ, ಅಡಿಗೆ ಮತ್ತು ಕುಡಿಯುವ ನೀರನ್ನು ಬಹು ದೂರದಿಂದ ಹೊತ್ತು ತರಬೇಕಾಗಿದೆಯೆಂದೂ ತಿಳಿದುಬಂದಿದೆ

ಮಂತ್ರಿ ಮಂಡಲದಲ್ಲಿ ಮೂಲತಃಬದಲಾವಣೆಬೇಕು

ಪತ್ರಿಕಾ ಸಮ್ಮೇಳನದಲ್ಲಿ ಹನುಮಂತಯ್ಯನವರ ವಿವರಣೆ

ಸ್ವಂ ಸು ಫೋನ್] ಬೆಂಗಳೂರು ೨

ಈ ದಿನ ಮಧ್ಯಾಹ್ನ ಕಾಂಗ್ರೆಸ್ ಶಾಸನ ಸಭಾ ಪಕ್ಷದ ಉಪ ನಾಯಕರಾದ ಶ್ರೀ ಕೆ ಹನುಮಂತಯ್ಯನವರು ಪತ್ರಿಕಾ ಸಮ್ಮೇಳನವನ್ನು ಕರೆದು, ಈಗಿನ ಮಂತ್ರಿ ಮಂಡಲದಲ್ಲಿ ಮೂಲತಃ ಬದಲಾವಣೆಯು ಅಗತ್ಯವೆಂದು ತಿಳಿಸಿದರು ಒಂದೆರಡು ಸ್ಥಾನಗಳ ಬದಲಾವಣೆಯನ್ನು ಮಾತ್ರ ಮಾಡುವುದು ಸರಿಯಲ್ಲವೆಂದು ಹೇಳಿದರು ಅಲ್ಲದೆ ದೇಶದಲ್ಲಿ 'ಶಾಸನದ ರಾಜ್ಯ" (ರೂಲ್ ಆಫ್ ಲಾ) ವು ನಡೆದುಬರಬೇಕೆಂದು ಹೇಳಿ, ದಿವಾನರ ಪದವಿ ರದ್ದಾದರೂ ಸಹ ಇನ್ನೂ ಕಾರ್ಲ್ಟನ್ ಭವನದಲ್ಲಿ ಸರ್ ಅರ್ಕಾಟರು ಇರುವುದು ತರವಲ್ಲವೆಂದೂ ತಿಳಿಸಿದರು ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನ್ ಪದವಿಯನ್ನು ಬಿಟ್ಟಾಗ್ಯೆ ಅರಮನೆಗೆ ಹೋಗಾಗ ಸರ್ಕಾರಿ ಮೋಟಾರಿನಲ್ಲಿ ಹೋಗಿ, ವಾಪಸು ಬರುವಾಗ ಸ್ವಂತ ಕಾರಿನಲ್ಲಿ ಬಂದ ವಿಷಯವನ್ನು ಎತ್ತಿ ತೋರಿಸಿ, ಇಂತಹ ಉದಾತ್ತ ಆದರ್ಶವೇ ನಮ್ಮಲ್ಲಿ ಬಳಕೆಗೆ ಬರಬೇಕೆಂದೂ ತಿಳಿಸಿದರು

ಭದ್ರಾವತಿಯಲ್ಲಿ ಯಂತ್ರೋಪಕರಣಗಳ ಕಾರ್ಖಾನೆ

ಭಾರತ ಸರ್ಕಾರದವರು ೧೫ ಕೋಟಿ ರೂ ವೆಚ್ಚದಿಂದ ಏರ್ಪಡಿಸಬೇಕೆಂದಿರುವ ಯಂತ್ರೋಪಕರಣಗಳ ಕಾರ್ಖಾನೆಯು ಭದ್ರಾವತಿಯಲ್ಲಿ ಸ್ಥಾಪಿಸಲ್ಪಡುವುದೆಂದು ತಿಳಿದುಬಂದಿದೆ ಈ ಬಗ್ಗೆ ಕೇಂದ್ರ ಸರ್ಕಾರದ ಸಚಿವರಾದ ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರು ಸ್ಥಳ ಪರಿಶೀಲನೆಗಾಗಿ ಈ ದಿನ ಅಲ್ಲಿಗೆ ತೆರಳಿದರು

ಇಂಡೋ ಚೀನಾ ಸಮಸ್ಯೆಗೆ ನೆಹರೂ ಮಧ್ಯಸ್ತಿಕೆ

ಇಂಡೋ ಚೀಣಕ್ಕೂ ಮತ್ತು ಫ್ರಾನ್ಸಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳ ಬಗ್ಗೆ ಪಂಡಿತ ನೆಹರೂರವರು ಮಧ್ಯಸ್ತಿಕೆಗಾರರಾಗಬೇಕೆಂದು ಫ್ರಾನ್ಸಿನ ಮುಖ್ಯ ಮಂತ್ರಿಗಳು ಕೋರಿಕೊಂಡರೆಂದು ಪ್ಯಾರಿಸ್ ಪತ್ರಿಕೆಗಳು ತಿಳಿಸಿವೆ

ದೆಹಲಿಯಲ್ಲಿ ನೇಪಾಳದ ರಾಣಾರವರ ಬಂಧನ

ನೇಪಾಳದ ಮೇಜರ್ ಜನರಲ್ ರಾಣಾ ಪಂಷೇರ್ ಜಂಗ್ ಬಹದ್ದೂರ್‌ರವರು ದೆಹಲಿಯ ಒಂದು ಚಿನ್ನ ಬೆಳ್ಳಿ ಅಂಗಡಿಯಲ್ಲಿ ಕಳೆದ ವರ್ಷ ೨೬ ಸಾವಿರ ರೂ ಬೆಲೆ ಬಾಳುವ ಆಭರಣಗಳನ್ನು ಕೊಂಡು ಮತ್ತೆ ಕಳೆದ ತಿಂಗಳು ೨೨ ನೇ ತಾ॥ ಆ ಅಂಗಡಿಗೆ ಬಂದು ಇನ್ನೂ ೭,೫೦೦ ರೂ ನ ಆಭರಣಗಳನ್ನು ತೆಗೆದುಕೊಂಡು ಅವುಗಳ ಬಗ್ಗೆ ೩೧ ಸಾವಿರ ರೂ ಗಳಿಗೆ ಒಂದು ಚೆಕ್ಕನ್ನು ಕೊಟ್ಟರು ಹಣದ ವಸೂಲಿಗಾಗಿ ಚೆಕ್ಕನ್ನು ಬ್ಯಾಂಕಿಗೆ ಕಳುಹಿಸಲಾಗಿ ಬ್ಯಾಂಕಿನವರು ಅದರ ಮೊಬಲಗನ್ನು ಪಾವತಿ ಮಾಡುವ ವ್ಯವಸ್ಥೆಯಾಗಿಲ್ಲವೆಂದು ಬರೆದು ಚೆಕ್ಕನ್ನು ವಾಪಸು ಕಳುಹಿಸಿಬಿಟ್ಟರು ಇದರ ಮೇಲೆ ಮೇಲ್ಕಂಡ ಅಂಗಡಿಯವರು ದೆಹಲಿ ನಗರ ನ್ಯಾಯಾಧೀಶರಲ್ಲಿ ದೂರು ಕೊಡಲು ಅವರು ರಾಣಾರವರ ದಸ್ತಗಿರಿ ವಾರಂಟನ್ನು ಹೊರಡಿಸಿದರು ಪೋಲೀಸರು ಅವರನ್ನು ದಸ್ತಗಿರಿ ಮಾಡಿದರು ೩೦ ಸಾವಿರ ರೂ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ

ಬೇಗ ಗಲ್ಲಿಗೆ ಹಾಕುವಂತೆ ಗೋಡ್ಸೆ ಮನವಿ

ಗೋಡ್ಸೆಯು ಗವರ್ನರ್ ಜನರಲ್ಲರಿಗೆ ಪ್ರಾರ್ಥನಾ ಪತ್ರವೊಂದನ್ನು ಸಲ್ಲಿಸಿ, ತನ್ನ ಮಾತಾ ಪಿತೃಗಳನ್ನೂ, ಬಂಧುಗಳನ್ನೂ ನೋಡಲು ಅವಕಾಶವಾಗುವಂತೆ ತನ್ನ ಸ್ವಂತ ಪ್ರಾಂತಕ್ಕೆ ವರ್ಗಾಯಿಸಬೇಕೆಂದೂ, ಗಲ್ಲಿಗೇರಿಸಲು ಗೊತ್ತುಮಾಡಿರುವ ತಾರೀಖಿಗೆ ಮುಂಚಿತವಾಗಿಯೇ ತನ್ನನ್ನು ಫಾಸಿಗೆ ಹಾಕಬೇಕೆಂದೂ ಕೋರಿದ್ದಾನೆ ಆಪ್ಟೆಯು ಪ್ರಾಣ ಭಿಕ್ಷೆ ಬೇಡಿದ್ದಾನೆ.

ದೇವಾಲಯ ಪ್ರವೇಶ ಮಸೂದೆ

ಜೈನರಿಗೂ ದಿಗಳಿಗೆ ಅನ್ವಯಿಸಕೂಡದು

ರಾಜಧಾನಿಯ ಜೈನ ಸಮಾಜದವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆ ಮನವಿಯನ್ನು ಕಳುಹಿಸಿ ಮೈಸೂರು ದೇವಾಲಯ ಪ್ರವೇಶದ ಬಗ್ಗೆ ಪ್ರ॥ ಪ್ರ॥ ಸಭೆಯಲ್ಲಿ ತರಲಾಗಿರುವ ಮಸೂದೆಯಲ್ಲಿ ಜೈನರನ್ನೂ, ಜೈನರ ದೇವಾಲಯಗಳನ್ನೂ ಹಿಂದೂಗಳಂತೆ ಮತ್ತು ಹಿಂದೂ ದೇವಾಲಯಗಳಂತೆ ಪರಿಗಣಿಸಕೂಡದೆಂದು ತಿಳಿಸಿರುತ್ತಾರೆ ಈ ಮಸೂದೆಯ ಬಗ್ಗೆ ಭಾರತದ ನಾನಾ ಭಾಗಗಳಲ್ಲಿರುವ ಜೈನರು ಮೈಸೂರು ಸರ್ಕಾರಕ್ಕೆ ಪ್ರತಿಭಟನೆಯನ್ನು ಕಳುಹಿಸಿರುವುದಾಗಿ ಮನವಿಯಲ್ಲಿ ತಿಳಿಸಿರುತ್ತಾರೆ

ಪಟೇಲರ ವರ್ಧಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದವರು ಈ ದಿನ ಬೆಳಗ್ಗೆ ವಿಜಯ ಪತ್ರಿಕೆ ಸಂಪಾದಕರಾದ ಶ್ರೀ॥ ಎ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸ॥ ವಲ್ಲಭಾಯಿ ಪಟೇಲರ ೭೫ ನೇ ವರ್ಷ ವರ್ಧಂತಿಯನ್ನು ಆಚರಿಸಿದರು ಈ ಸಂಬಂಧದಲ್ಲಿ ಸರ್ದಾರ್ ಪಟೇಲರಿಗೆ ಅಭಿನಂದನಾ ಸಂದೇಶವನ್ನು ಕಳುಹಿಸಬೇಕೆಂದೂ ತೀರ್ಮಾನಿಸಲಾಯಿತು

Edited, printed and published by A R Nagarajan at Sadhvi Press, D Subbiah Road Mysore

ರೈತರಿಗೆ ಕೊಡುವ ಬೆಲೆಯನ್ನು ಕಡಿಮೆ ಮಾಡಕೂಡದು

ಪ್ರ|| ಪ್ರ|| ಸಭೆಯಲ್ಲಿ ಆಹಾರದ ಮೇಲೆ ಚರ್ಚೆ

ಮೈಸೂರು ೩

ನಿನ್ನೆ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಆಹಾರದ ವಿಷಯವಾಗಿ ದೀರ್ಘ ಚರ್ಚೆ ನಡೆಯಿತು. ಶ್ರೀ ಮರಿಯಪ್ಪನವರು ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ದೀರ್ಘ ವಿವರಣೆಯನ್ನು ಕೊಟ್ಟು ಈ ರೀತಿ ತಿಳಿಸಿದರು:-

೧೯೪೯ನೇ ಇಸವಿಯಲ್ಲಿ ಸಂಸ್ಥಾನದಲ್ಲಿ ೧,೮೦,೦೦೦ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆಯಿರುವುದಾಗಿ ತಿಳಿಸಲಾಗಿತ್ತು. ಅದಕ್ಕೆ ಇಂಡಿಯಾ ಸರ್ಕಾರದವರು ೧,೦೨,೦೦೦ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಸಂಸ್ಥಾನಕ್ಕೆ ಒದಗಿಸಿಕೊಡುವುದಾಗಿ ಸೂಚಿಸಿದ್ದಾರೆ. ಈ ಪೈಕಿ ೨೪,೦೦೦ ಟನ್ನುಗಳು ಅಕ್ಕಿ, ೨೫,೦೦೦ ಟನ್ನುಗಳು ಗೋಧಿ ಮತ್ತು ೫೩,೦೦೦ ಟನ್ನುಗಳು ಇತರ ಚಿಲ್ಲರೆ ಧಾನ್ಯಗಳು. ಇಂಡಿಯಾ ಸರ್ಕಾರದವರು ಒದಗಿಸಿದ ಈ ಪ್ರಮಾಣಗಳು ಸಾಲದಿದ್ದುದರಿಂದ, ಇನ್ನೂ ಹೆಚ್ಚಿಗೆ ಪ್ರಮಾಣವನ್ನು ಒದಗಿಸಬೇಕೆಂಬುದಾಗಿ ಕೇಂದ್ರ ಸರ್ಕಾರದವರನ್ನು ಒಂದೇ ಸಮನಾಗಿ ಒತ್ತಾಯಪಡಿಸಲಾಯಿತು. ಹಾಗೆ ಒತ್ತಾಯಪಡಿಸಿದುದರ ಫಲಿತಾಂಶವಾಗಿ ಇಂಡಿಯಾ ಸರ್ಕಾರದವರಿಂದ ಒದಗತಕ್ಕ ಪರಮಾವಧಿ ಪ್ರಮಾಣವನ್ನು ಇತ್ತೀಚೆಗೆ ೧,೫೦,೦೦೦ ಟನ್ನುಗಳಿಗೆ ಹೆಚ್ಚಿಸಲಾಗಿದೆ.

ಕೇಂದ್ರ ಸರ್ಕಾರದವರು ಪ್ರಾಂತಗಳಿಗೂ ಮತ್ತು ಸಂಸ್ಥಾನಗಳಿಗೂ ೧೯೫೦ನೇ ಇಸವಿಯಲ್ಲೂ ಮತ್ತು ೧೯೫೧ನೇ ಇಸವಿಯಲ್ಲೂ ಒದಗಿಸತಕ್ಕ ಆಹಾರ ಧಾನ್ಯಗಳ ಪ್ರಮಾಣಗಳನ್ನು ಮಿತಿ ಮಾಡುತ್ತಾರೆ. ಹೀಗೆ ಮಿತಿ ಮಾಡಲ್ಪಟ್ಟಿರುವ ಪ್ರಮಾಣವನ್ನು ಪ್ರಾಂತಗಳವರೂ ಮತ್ತು ಸಂಸ್ಥಾನಗಳವರೂ ಆಯಾ ಪ್ರಾಂತಗಳಲ್ಲಿಯೂ ಮತ್ತು ಸಂಸ್ಥಾನಗಳಲ್ಲಿಯೂ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಸುವುದರ ಮೂಲಕವೂ ಮತ್ತು ಪರಮಾವಧಿ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವುದರ ಮೂಲಕವೂ ಸರಿಪಡಿಸಿಕೊಳ್ಳಬೇಕೆಂದು ಅವರಿಗೆ ತಿಳಿಸಿದ್ದಾರೆ. ಆಮದಿನ ಪರಿಸ್ಥಿತಿಯು ಬಹಳ [illegible] ೧೯೫೦ನೇ ಇಸವಿಯಲ್ಲಿ ದೊರಕುವಂತೆ ಅಕ್ಕಿಯು ಆಮದು ಆಗುವುದಿಲ್ಲವೆಂದೂ, ಇತರ ಆಹಾರ ಧಾನ್ಯಗಳ ಆಮದನ್ನೂ [illegible] ಸಬೇಕಾಗಿದೆಯೆಂದೂ [illegible] ತಿಳಿಸಲ್ಪಟ್ಟಿದೆ. ಈ ಕಾರಣಗಳಿಂದ, ೧೯೫೦ನೇ ಇಸವಿಗೆ, ಆಯಾ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿಯೇ ಆಹಾರ ಧಾನ್ಯಗಳು ದೊರೆಯುವ ಸಾಧನಗಳಿಂದ ಪರಮಾವಧಿ ಪ್ರಯೋಜನವನ್ನು ಪಡೆದು [illegible] ಉಪಯೋಗಿಸಿಕೊಂಡು, [illegible] ಆಹಾರ ಧಾನ್ಯ [illegible] ಮಟ್ಟಕ್ಕೆ [illegible] ಯೋಜನೆಗಳನ್ನು [illegible] ಪಡಿಸಿಕೊಳ್ಳಬೇಕೆಂದು [illegible] ಸಂಸ್ಥಾನಗಳವರಿಗೂ ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ.

ಸುಗ್ಗಿಯ ಕಾಲದಲ್ಲಿ ಆಹಾರ ಧಾನ್ಯಗಳ ಸಂಗ್ರಹಕ್ಕೆ ಸಂಬಂಧಪಟ್ಟ ಹುಕುಮಿನಲ್ಲಿ "ವಿನಾಯಿಸಲ್ಪಟ್ಟ ಹಿಡುವಳಿದಾರರಿಗೆ" ಸಂಬಂಧಪಟ್ಟ ಎಲ್ಲ ನಿಯಮಗಳನ್ನೂ ತೆಗೆದುಹಾಕಿ ಆ ಹುಕುಮನ್ನು ತಿದ್ದುಪಾಟು ಮಾಡಬೇಕೆಂದು ಉದ್ದೇಶಿಸಲಾಗಿದೆ.

ಇಂಡಿಯಾದ ಇತರ ಎಲ್ಲ ಭಾಗಗಳಲ್ಲಿಯೂ ಆಚರಣೆಗೆ ತರುವ ಉದ್ದೇಶದಿಂದಲೂ ಮತ್ತು ಸಂಸ್ಥಾನದಲ್ಲಿ ಸಂಗ್ರಹವಾಗುವ ಆಹಾರ ಧಾನ್ಯಗಳ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದಲೂ ಹಿಡುವಳಿದಾರರುಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ಇಟ್ಟುಕೊಳ್ಳತಕ್ಕ ಆಹಾರ ಧಾನ್ಯಗಳ ಪ್ರಮಾಣವನ್ನು ತಲೆಯೊಂದಕ್ಕೆ ೧ ಪೌಂಡಿಗೆ ಇಳಿಸಬೇಕೆಂದು ಸಹ ಕೇಂದ್ರ ಸರ್ಕಾರದವರು ಒತ್ತಾಯಪಡಿಸಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಕೊರತೆಯು ವಿಶೇಷವಾಗಿರುವುದರಿಂದ, ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ಕಡಿಮೆಮಾಡುವ ವಿಚಾರವನ್ನು ಯೋಚಿಸುವುದಕ್ಕೆ ಇದು ಇನ್ನೂ ತಕ್ಕ ಸಮಯವಾಗಿಲ್ಲ.

ಜೀವನಕ್ಕೆ ಅತ್ಯಾವಶ್ಯಕವಾದ ಪದಾರ್ಥಗಳ ಬೆಲೆಗಳನ್ನು ತಗ್ಗಿಸಬೇಕಾದುದು ಅಗತ್ಯವಾಗಿದೆ. ಅದಕ್ಕಾಗಿ ದೇಶದ ಎಲ್ಲ ಕಡೆಗಳಲ್ಲಿಯೂ ಒಟ್ಟಾಗಿ ಮತ್ತು ಏಕಕಾಲದಲ್ಲಿ, ರೇಷನ್ ಏರ್ಪಾಡಿಗೊಳಪಟ್ಟ ಆಹಾರ ಧಾನ್ಯಗಳ ಧಾರಣೆಗಳನ್ನೂ ಮತ್ತು ವ್ಯವಸಾಯಗಾರರಿಗೆ ಅವಶ್ಯಕವಾದ ಮುಖ್ಯ ಸಾಮಾನುಗಳ ಬೆಲೆಗಳನ್ನೂ ತಗ್ಗಿಸಬೇಕು. ಮತ್ತು ಹಾಗೆ ಒಟ್ಟಾಗಿ ಏಕಕಾಲದಲ್ಲಿ ಬೆಲೆಗಳನ್ನು ತಗ್ಗಿಸುವ ಯೋಜನೆಯ ಅಂಗವಾಗಿ ಎಲ್ಲ ಪ್ರಾಂತಗಳವರೂ ಮತ್ತು ಸಂಸ್ಥಾನಗಳವರೂ, ಆಹಾರ ಧಾನ್ಯಗಳನ್ನು ಸಂಗ್ರಹಿಸುವುದರ ಸಂಬಂಧದಲ್ಲಿ ತಗಲುತಕ್ಕ ವೆಚ್ಚಗಳನ್ನೂ ಮತ್ತು ಕಡಿಮೆ ಮಾಡುವುದರ ಮೂಲಕವೂ ಮತ್ತು ಸಂಗ್ರಹಿಸಿದ ಆಹಾರ ಧಾನ್ಯಗಳಿಗಾಗಿ ಕೊಡತಕ್ಕ ಬೆಲೆಗಳನ್ನು ತಗ್ಗಿಸುವುದರ ಮೂಲಕವೂ, ಒಟ್ಟು ಇಂಡಿಯಾ ದೇಶದಲ್ಲಿ ಪಡಿತರವಾಗಿ ("ರೇಷನ್") ಕೊಡುವ ಆಹಾರ ಧಾನ್ಯಗಳ ಚಿಲ್ಲರೆ ಮಾರಾಟದ ಬೆಲೆಗಳನ್ನು ಸಾರ್ವತ್ರಿಕವಾಗಿ ಶೇಕಡ ೧೦ ರಂತೆ ತಗ್ಗಿಸ[illegible]ದ ಸಾಧ್ಯವಿರುವ ಮಟ್ಟಿಗೂ ಪ್ರಯತ್ನಗಳನ್ನು ನಡೆಯಿಸಬೇಕು—ಎಂದು ತೀರ್ಮಾನಿಸಲಾಗಿದೆ.

ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮಾತನಾಡಿ, ರೈತನಿಗೆ ಈ ಕೊಡುತ್ತಿರುವ ಆಹಾರ ವಸ್ತುಗಳ ಬೆಲೆಯನ್ನು ತಗ್ಗಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಖಚಿತವಾಗಿ ತಿಳಿಸಬೇಕೆಂದೂ, ಈಗಿರುವ 'ಎ' ಮತ್ತು 'ಬಿ' ತರಗತಿ ರೇಷನ್ ಕಾರ್ಡುಗಳ ವಿಂಗಡದ ವಿಧಾನವನ್ನು ರದ್ದು ಮಾಡಬೇಕೆಂದೂ, ಎಲ್ಲರೂ ಮಿಶ್ರ ಆಹಾರವನ್ನು ತೆಗೆದುಕೊಳ್ಳುವಂತೆ ಪ್ರಚಾರ ನಡೆಸಬೇಕೆಂದೂ ತಿಳಿಸಿದರು.

ಶ್ರೀ ಎ. ಹುಚ್ಚೇಗೌಡರು:- ದೇಶದಲ್ಲಿ ವ್ಯವಸಾಯ ಉತ್ಪನ್ನ ಕಡಿಮೆಯಾಗಿರುವುದನ್ನು ನೋಡಿದರೆ ವ್ಯವಸಾಯವು ಲಾಭದಾಯಕವಾಗಿಲ್ಲವೆಂದು ತಿಳಿದುಬರುತ್ತದೆ. ಈ ಮನೋಭಾವನೆಯನ್ನು ತಪ್ಪಿಸಲು ರೈತರಿಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹಕೊಡಬೇಕು.

ಶ್ರೀ ಡಿ. ದೇವರಾಜೇ ಅರಸಿನವರು ಆಹಾರ ಬೆಲೆಯನ್ನು ಶೇಕಡ ೧೦ ರಷ್ಟು ಇಳಿಸುವುದಕ್ಕೆ ರೈತರು ಒಪ್ಪುವುದಿಲ್ಲವೆಂದು ಹೇಳಿದರು.

ಜನಾಬ್ ಎ ಜೆ ಖಲೀಲ್:- [illegible]ದ ಪರಿಸ್ಥಿತಿಯಂತೆ ಆಹಾರದ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು.

ಶ್ರೀ ದೇವರ ಕೊಂಡಪ್ಪ:- ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ಹೋಟೇಲುಗಳು ವಿಶೇಷವಾಗಿ ಇರುವುದರಿಂದ ರೈತರ ಮತ್ತು ಜನರ ಆರೋಗ್ಯ ಕೆಡುತ್ತಿರುವುದಲ್ಲದೆ, ಆಹಾರದ ವ್ಯಯವಾಗುತ್ತಿದೆ ಮತ್ತು ಕಾಳಸಂತೆಗೆ ಅವಕಾಶವಾಗಿದೆ. ಅವುಗಳನ್ನು ಸಂಪೂರ್ಣವಾಗಿ ಮುಚ್ಚಬೇಕು.

ಶ್ರೀಮತಿ ಸುಬ್ಬಮ್ಮನವರು:- ಬೆಲೆಯನ್ನು ಇಳಿಸುವುದರಿಂದ ರೈತರಿಗೆ ತೊಂದರೆಯಾಗುವುದು. ರೈತಾಪಿ ಜನರಿಗೆ ಸಕಾಲದಲ್ಲಿ ಪ್ರೋತ್ಸಾಹ ಕೊಟ್ಟ ಪಕ್ಷದಲ್ಲಿ ಅವರುಗಳು ಹೆಚ್ಚು ಬೆಳೆಯನ್ನು ಮಾಡುವರು.

ಶ್ರೀ ಶಿವನಂಜೇಗೌಡರು:- ಗ್ರಾಮಾಂತರ ಪ್ರದೇಶಗಳಲ್ಲೂ ರೇಷನಿಂಗ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಸಾಗುವಳಿ ಮಾಡುವ ಸೈನ್ಯವನ್ನು ಏರ್ಪಡಿಸಬೇಕು.

ಶ್ರೀಗಳಾದ ರಾಮಣ್ಣ, ಶಿವಪ್ಪ, ಮತ್ತು ಇನ್ನು ಹಲವು ಸದಸ್ಯರು ಮಾತನಾಡಿದರು.

೩|| ಗಂಟೆ ಕಾಲ ಚರ್ಚೆ ನಡೆದ
ರ, ಸಚಿವ ಶ್ರೀ ಮರಿಯಪ್ಪನವರು
ವಿತ್ತರು. ಆಹಾರ ಉತ್ಪತ್ತಿ ಹೆಚ್ಚಿಸ
ಗ್ಗೆ ರೈತರಿಗೆ ಆದಷ್ಟು ಸಹಾಯ
ಪ್ರೋತ್ಸಾಹಗಳನ್ನು ಸಕಾಲದಲ್ಲಿ
ಸರ್ಕಾರದವರು ತೀವ್ರಾಸಕ್ತಿಯು
ಗಿದ್ದಾರೆ. ಮಲೆನಾಡು ಮತ್ತು ಹೆಚ್ಚು
ರು ಇರುವ ಪ್ರದೇಶಗಳಲ್ಲಿ ಉದ್ದಿ
ವಳಿ ಯೋಜನೆಯನ್ನು ಕೈಗೊಳ್ಳ
ಹಿಂದಿನ ವರ್ಷ ೫೦ ಸಾವಿರ ಎಕರೆ
ಕರು ರಾಗಿ ಬೆಳೆಯಲಾಯಿತು.
ವರ್ಷ ಕೃಷ್ಣರಾಜಸಾಗರದಲ್ಲಿ
ಕಡಿಮೆಯಾಗಿರುವುದರಿಂದ ಕಾ
ಬೆಳೆಯಲು ಅವಕಾಶವಿ
ಗಿದೆ ಆದರೂ ಬೇಸಿಗೆಯಲ್ಲಿ ರಾಗಿ
ಯನ್ನು ಬೆಳೆಯಲು ಹೆಚ್ಚು ನೀರು
ಸಿಕೊಳ್ಳಲು ಅವಕಾಶ ಕೊಡಬೇಕ
ಮದರಾಸ್ ಸರ್ಕಾರದವರನ್ನು ಪ್ರಾ
ಲಾಗಿದೆ. ವಿದ್ಯುಚ್ಛಕ್ತಿ ಪಂಪುಗಳ
ರಾವರಿ ಸಾಗುವಳಿ ಯೋಜನೆ
ಪರಿಶೀಲಿಸಲಾಗುತ್ತಿದೆ. ಮುಖ್ಯವಾ
ರಾವರಿ ಜಲಾಶಯಗಳನ್ನು ಏರ್ಪಡಿಸ
ದು ಮರಾಮತ್ತು ಇಲಾಖೆಯನ್ನು
ರ್ಪಡಿಸಲಾಗಿದೆ

ವ್ಯವಸಾಯ ಇಲಾಖೆಯು ಪ್ರ
ನೆಗಳನ್ನು ನಡೆಸಿ ಮಾರ್ಗದರ್ಶ
ಬೇಕೆ ಹೊರತು ಸಾಗುವಳಿ ಮ
ಇಲಾಖೆಯಾಗುವುದು ಸರಿಯಲ್ಲ
ಗಳಿಗೆ ಈಗಿರುವ ಸಣ್ಣಪುಟ್ಟ ಕಟ್ಟು
ಳನ್ನು ತಪ್ಪಿಸಲಾಗುವುದು
ಸಂಬಂಧದ ಮೊಕದ್ದಮೆಗಳನ್ನು
ಮಂತ್ರಿಗಳಾಗಲಿ ವಾಪಸು ತೆಗೆ
ಬೇಕೆಂದು ಆಜ್ಞೆ ಮಾಡಕೂಡ
ಮಂತ್ರಿ ಮಂಡಲದವರ ಅನುಮ
ಯಾವ ಮೊಕದ್ದಮೆಯನ್ನೂ ವಾ
ದುಕೊಳ್ಳಕೂಡದೆಂದೂ ನಿರ್ಧಾ
ಲಾಗಿದೆ.

SPECIAL COACHING FOR
B. Sc., & INTERMEDIATE
EXAMS OF MARCH 1950
City Tutorial College
1531, [illegible] ROAD,
MYSORE

ಮಕ್ಕಳ ಆವರ್ಕಾಲಿಗ
ಸಿದ್ಧಾಪ್ರಿಸಾ
ಆವರ್ ಹೌಸ್, ಮೈಸೂರು

ಪ್ರಭಾ ಪಿಕ್ಚರ್ ಹೌಸ್, ಮೈಸೂರು
4-11-49ರಿಂದ ಅಮೋಘ ಪ್ರಾರಂಭ : ಪ್ರತಿದಿನ
ಪ್ರೇಕ್ಷಕ ವರ್ಗದಿಂದ ಉತ್ತಮವಾದ ಚಿತ್ರವೆಂದು ಹೊಗಳಲ್ಪಟ್ಟ 'ಕಿಸ್ಮತ್'
ನಂತರ ತಯಾರಿಸಲ್ಪಟ್ಟ ಬಾಂಬೆ ಟಾಕೀಸಿನವರ ಸಂಗೀತದಿಂದ
ಕೂಡಿದ ಅಪ್ರತಿಮ ಕಲಾಕೃತಿ

— ಜಿದ್ದಿ — (ಹಿಂ
—: ತಾರಾಗಣ: —
ಕಾಮಿನಿ ಕೌಶಲ್, ದೇವ್ ಆನಂದ್, ನವಾಬ್,
ಬೆಳಗಿನ ಪ್ರದರ್ಶನ 4—11—49 ರಿಂದ 4 ದಿನಗಳು
— ವುಲ್ಫ್ ಡಾಗ್ —

ಪ್ರಭುದೇವಾ ಟಾಕೀಸ್
2—11—49ನೇ ಬುಧವಾರದಿಂದ ಪ್ರಾರಂಭ
ಪ್ರತಿ ದಿನ ೩ ಆಟಗಳು
— ಕನಕ ತಾರಾ —
ಕನ್ನಾಂಬಾ. ದಮ್ಮೋಟಿ ಪಾತ್ರವಹಿಸಿರುವ ತೆಲುಗು ಚಿತ್ರ

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು



ಸಂಪುಟ ೮] ಗುರುವಾರ ೩-೧೧-೪೯ [ಸಂಚಿಕೆ ೮೧

ಘಟಿಕೋತ್ಸವದಲ್ಲಿ ೧೨೧೮ ಜನರಿಗೆ ಪದವಿ

...ಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಕಾರ್ಯಕ್ಕೆ ...ಚ್ಚು ಪ್ರೋತ್ಸಾಹ ಬೇಕು

...ಟಿಕೋತ್ಸವದಲ್ಲಿ ಮುಖರ್ಜಿಯವರ ಭಾಷಣ

ಮೌಲಾನಾ ಆಜಾದರಿಗೆ ಡಿ ಲಿಟ್ ಗೌರವ ಪ್ರಶಸ್ತಿ

ಮೈಸೂರು ೨

...ಭಾರತ ಸರ್ಕಾರದ ವಿದ್ಯಾ ಮಂತ್ರಿ, ...ಲಾನಾ ಆಜಾದರಿಗೆ ಮೈಸೂರು ವಿಶ್ವ...ವಿದ್ಯಾನಿಲಯವು ಗೌರವದ ಡಿ ಲಿಟ್ ...ಶಸ್ತಿಯನ್ನು ಈ ದಿನ ಜಗನ್ಮೋಹನ ...ಭವನದಲ್ಲಿ ನಡೆದ ಘಟಿಕೋತ್ಸವ ಸಮಾ...ರಂಭದಲ್ಲಿ ಅರ್ಪಿಸಿತು. ಅಲ್ಲದೆ ಸುಮಾರು ...೧೮ ಜನ ಪದವೀಧರರಿಗೆ ಪ್ರಶಸ್ತಿ...ಗಳನ್ನು ಕೊಡಲಾಯಿತು. ಚಾನ್ಸಲ...ರ್ ಶ್ರೀಮನ್ಮಹಾರಾಜರವರು ಪದ್ಧತಿ... ಸಕಲ ಮರ್ಯಾದೆಗಳೊಡನೆ ...ಭವನಕ್ಕೆ ದಯಮಾಡಿಸಿ ಸಮಾ...ರಂಭವನ್ನು ನೆರವೇರಿಸಿದರು.

...ಭಾರತ ಸರ್ಕಾರದ ಕೈಗಾರಿಕಾ ಮಂ...ತ್ರಿ ಡಾ॥ ಶ್ಯಾಮಪ್ರಸಾದ ಮುಖರ್ಜಿ...ಯವರು ಪದವೀಧರರನ್ನು [illegible] ...ಮಾಡಿ ವಿಶ್ವವಿದ್ಯಾಲಯಗಳಲ್ಲಿ ಸಂ...ಶೋಧನಾ ಕಾರ್ಯಕ್ಕೆ ಹೆಚ್ಚು ಪ್ರೋತ್ಸಾ...ಹ ಕೊಡುವುದರ ಆವಶ್ಯಕತೆಯನ್ನು ಒ...ತ್ತಿ ಹೇಳಿದರು. ಉಪಕುಲಪತಿಗಳಾದ ...ರಾಜ್ಯಸೇವಾಸಕ್ತ ರಾಜಕಾರ್ಯಪ್ರವೀಣ ... ಮೌಲಾನಾರವರನ್ನು ಪರಿಚಯ ಮಾಡಿಕೊಟ್ಟು ... ವಿದ್ಯಾ ಪ್ರತಿಭೆ, ದೇಶಭಕ್ತಿ ... ಮುಂತಾದ ಗುಣಗಳನ್ನು ಕೊಂಡಾಡಿ, ...ಗೆ ಗೌರವ ಪ್ರಶಸ್ತಿ ನೀಡಲು ... ಬೇಕೆಂದು [illegible]

[illegible]

ಆಡಳಿತ, ಕೈಗಾರಿಕೆ, ವ್ಯಾಪಾರ ಮತ್ತು ಇತರ ಉದ್ಯಮಗಳಿಗೆ ಬೇಕಾದ ನಾಯಕರನ್ನು ನಮ್ಮ ವಿಶ್ವವಿದ್ಯಾಲಯಗಳು ಒದಗಿಸಬೇಕಾಗಿದೆ. ಅಪಾರ ಬಡತನ, ಅಜ್ಞಾನ ನಿವಾರಣೆ, ರೋಗಗಳ ಪರಿಹಾರ ಕಾರ್ಯವು ಸಾಗಬೇಕಾಗಿದೆ. ಇಲ್ಲದಿದ್ದರೆ ನಿಜವಾದ ಸ್ವಾತಂತ್ರ್ಯಕ್ಕೆ ಸ್ಥಾನವಿಲ್ಲ.

ನಮ್ಮ ವಿದ್ಯಾಭ್ಯಾಸ ಕ್ರಮವು ಹೊಸ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳಬೇಕಾಗಿದೆ. ಸ್ವತಂತ್ರ ಸಾರ್ವಭೌಮ ... ರಿಪಬ್ಲಿಕ್ ರಾಜ್ಯಾಂಗವು ಈಗ ... ಸಕಲ ಪ್ರಜೆಗಳಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಮತ್ತು ಸೋದರತೆಗಳು ದೊರೆಯಬೇಕು. ಈ ಗುರಿಗೆ ಅನುಗುಣವಾಗಿ ನಮ್ಮ ವಿದ್ಯಾಭ್ಯಾಸವನ್ನು ರೂಪಿಸಬೇಕು. ಹಿಂದಿನ ನಮ್ಮ ಆಡಳಿತಗಾರರು ... ಮತ್ತು ... ಪದ್ಧತಿಯನ್ನು ಯಶಸ್ವಿಯಾಗಿ ನಡೆಸಿದರು ... ಇತ್ತೀಚಿನ ವರ್ಷಗಳಲ್ಲಿ ... ವಿಫಲರಾಗುತ್ತಿದ್ದಾರೆ. ಈಗ ... ಹೆಚ್ಚು [illegible] ... ಸಮಾಜ ಸೇವೆ ಮತ್ತು ... ಜೀವನ ಕ್ರಮದಲ್ಲಿ [illegible] ... ಪ್ರಜಾಪ್ರಭುತ್ವವು ಕೇವಲ ಆಡಳಿತದ ಒಂದು ರೂಪವಲ್ಲ. ಅದು ಜೀವನದ ಸ್ವರೂಪ. ತಿಳುವಳಿಕೆ ಮತ್ತು ಸಹಕಾರ ... [illegible]

[illegible]

ವಿಶ್ವವಿದ್ಯಾಲಯಗಳು ಸಂಶೋಧನಾ ಕಾರ್ಯಕ್ಕೆ ವಿಶೇಷ ಗಮನ ಕೊಡಬೇಕು. ಇದಕ್ಕಾಗಿ ವೆಚ್ಚ ಮಾಡಿದ ಹಣವು ಒಂದಕ್ಕೆ ನೂರರಷ್ಟಾಗಿ ಪ್ರತಿಫಲವನ್ನು ಕೊಡುವುದು. ಉನ್ನತ ಶಿಕ್ಷಣಕ್ಕೆ ಪ್ರತ್ಯೇಕ ಸಹಾಯ ಮಾಡಲು ಸರ್ಕಾರವು ತನ್ನ ಜವಾಬ್ದಾರಿಯನ್ನು ಪೂರ್ಣವಾಗಿ ತಿಳಿಯಬೇಕು. ಆದರೆ ವಿಶ್ವವಿದ್ಯಾನಿಲಯಗಳ ಸ್ವತಂತ್ರ ಪರಿಗೆ ಸರ್ಕಾರಗಳು ಯಾವ ಬಗೆಯ ಪ್ರತಿಬಂಧಕವನ್ನೂ ಒಡ್ಡಬಾರದು. ವಿಶ್ವವಿದ್ಯಾಲಯಗಳು ಸೆಕ್ರೆಟೇರಿಯಟ್ಟಿನ ಒಂದು ಶಾಖೆಯಾಗಬಾರದು. ಸರ್ಕಾರದ ಸಹಾಯವು ಸರ್ಕಾರದ ದರ್ಪಕ್ಕೆ ... ಪರಿಣಮಿಸಬಾರದು. ... ಸಂಸ್ಕೃತಿಯನ್ನು ಬೆಳೆಸುವ ಜವಾಬ್ದಾರಿಯು ನಮ್ಮ ವಿಶ್ವವಿದ್ಯಾಲಯಗಳ ಮೇಲೆ ಬಿದ್ದಿದೆ. ಜನರಲ್ಲಿ ... ಭಿನ್ನತೆಗಳು ಇದ್ದರೂ ... ಭಾರತ ನಾಗರಿಕತೆಗೆ ಮೂಲಭೂತವಾದ ಏಕತೆಯನ್ನು ಸಾಧಿಸಲು ಪ್ರಯತ್ನಿಸಬೇಕು. ಎಲ್ಲ ಭಾಷೆಗಳಿಗೂ ತಾಯಿಯಾದ ಸಂಸ್ಕೃತದ ಶಿಕ್ಷಣವನ್ನು ಪ್ರಮುಖವಾಗಿ ನಡೆಸಬೇಕು.

ಭಾರತ ಸ್ವಾತಂತ್ರ್ಯ ... ಆಗ ... ನಡೆದ ... ಸ್ವತಂತ್ರ ಭಾರತದ ರಚನಾತ್ಮಕ ಕಾರ್ಯ... [illegible]

[illegible]

ವಯಸ್ಕರ ನಿರಕ್ಷರತೆಯ ನಿರ್ಮೂಲನದ ಅಗತ್ಯ

ವಿಶ್ವ ಸಂಸ್ಥೆಯ ಗೋಷ್ಠಿಯಲ್ಲಿ ಮೌ॥ ಆಜಾದರ ಭಾಷಣ

ಮೈಸೂರು ೩

ವಿಶ್ವ ಸಂಸ್ಥೆಯವರು ಏರ್ಪಡಿಸಿರುವ ಗ್ರಾಮಾಂತರ ವಯಸ್ಕರ ಶಿಕ್ಷಣದ ಗೋಷ್ಠಿಯು ನಿನ್ನೆ ದಿನ ಜಗನ್ಮೋಹನ ಭವನದಲ್ಲಿ ಆರಂಭವಾಯಿತು. ವಿದ್ಯಾ ಮಂತ್ರಿ ಶ್ರೀ ಡಿ ಎಚ್ ಚಂದ್ರಶೇಖರಯ್ಯನವರು ವಿವಿಧ ರಾಷ್ಟ್ರಗಳ ಪ್ರತಿನಿಧಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು.

ಕೇಂದ್ರ ಸರ್ಕಾರದ ವಿದ್ಯಾ ಮಂತ್ರಿ ಮೌಲಾನಾ ಆಜಾದರವರು ಸಮಾರಂಭವನ್ನು ಆರಂಭಿಸಿ ಭಾಷಣ ಮಾಡಿದರು. ಅವಿದ್ಯಾವಂತ ವಯಸ್ಕರು ಇಂದಿನ ಸಮಾಜಕ್ಕೆ ಹೇಗೆ ಅನರ್ಥಕಾರಿಗಳಾಗುವರೆಂಬುದನ್ನು ವಿವರಿಸಿ, ಎಲ್ಲ ಪ್ರಜೆಗಳೂ ವಿದ್ಯಾವಂತರಾಗುವಂತೆ ಮಾಡುವುದು ಪ್ರಭುತ್ವದ ಪ್ರಥಮ ಕರ್ತವ್ಯವೆಂದು ತಿಳಿಸಿದರು.

ವಿಶ್ವ ಸಂಸ್ಥೆಯ ಪ್ರಧಾನ ಡೈರೆಕ್ಟರಿಂದ ಬಂದಿದ್ದ ಸಂದೇಶವನ್ನು ಡಾ॥ ಎಫ್. ಟಿ ...ರವರು ಓದಿದರು. ಪ್ರಪಂಚದ ಯಾವ ಒಂದು ಭಾಗದಲ್ಲಿ ಅಜ್ಞಾನವಿದ್ದರೂ ಇಡೀ ಜಗತ್ತೇ ಅಂಧಕಾರದಲ್ಲಿ ಮುಳುಗುವುದೆಂದು ಅದರಲ್ಲಿ ಸೂಚಿಸಲಾಗಿತ್ತು.

ಗೋಷ್ಠಿಯ ಡೈರೆಕ್ಟರಾದ ... ದೇಶದ ಮಾಲ್ಕಮ್ ... ರವರು ಭಾಷಣ ಮಾಡಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು.

ಇಪ್ಪತ್ತು ರಾಷ್ಟ್ರಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿರುವರು. ಮುಂದಿನ ವಾರ ... ಗೋಷ್ಠಿಯು ಕೃಷ್ಣರಾಜಸಾಗರದಲ್ಲಿ ಸೇರುವುದು.

ವಿರೋಧಿ ದಿನ ಪತ್ರಿಕೆ

'ವಿರೋಧಿ' ನಾಮಕನಾದ ... ದಿನ ಪತ್ರಿಕೆಯು ಶ್ರೀ ಗುಂಡಪ್ಪ ಶೆಟ್ಟಿಯವರ ಸಂಪಾದಕತ್ವದಲ್ಲಿ ನಾಳೆಯಿಂದ ಪ್ರತಿ ಸಂಜೆ ಬೆಂಗಳೂರು ನಗರದಲ್ಲಿ ಪ್ರಕಟವಾಗುವುದು. ದೇಶದಲ್ಲಿನ ಪ್ರಗತಿಪರ ಶಕ್ತಿಗಳ ಏಕತೆ, ಹಾಗೂ ದೇಶಾಭ್ಯುದಯ ಸಾಧನೆಗೇ ವಿರೋಧಿಯು ಜೀವಿಸುವುದೆಂದು ಪ್ರಕಟಣೆಯಿಂದ ತಿಳಿಸಲಾಗಿದೆ.

ಕೃಷ್ಣಾ ಜಿಲ್ಲೆಯಲ್ಲಿ ಚಂಡ ಮಾರುತದ ಹಾವಳಿ

ಆಂಧ್ರ ದೇಶದ ಕೃಷ್ಣಾ ಜಿಲ್ಲೆಯಲ್ಲಿ [illegible] ಅನೇಕ ಮನೆಗಳು [illegible] ಜನ [illegible] ಬೆಳೆಯೆಲ್ಲಾ [illegible] ನಷ್ಟವಾಗಿವೆಯೆಂದು [illegible] ಬಂದಿದೆ.

ಮುಂದಿನ ತಿಂಗಳಲ್ಲಿ ಇಂಡೋನೇಷ್ಯಾ ರಿಪಬ್ಲಿಕ್

[illegible] ದುಂಡು ಮೇಜಿನ ಗೋಷ್ಠಿಯಲ್ಲಿ ಮುಂದಿನ ತಿಂಗಳು ... ಇಂಡೋನೇಷ್ಯಾ ರಿಪಬ್ಲಿಕ್ ... ಉದಯವಾಗುವುದೆಂದು ಪ್ರಕಟಿಸಲಾಗಿದೆ.

[illegible]

ಹರಿಜನರ ಏಳ್ಗೆಗಾಗಿ ದಶ ವಾರ್ಷಿಕ ಯೋಜನೆ

ಪ್ರಾ॥ ಪ್ರಾ॥ ಸಭೆಯಲ್ಲಿ ನಿರ್ಣಯ

ಮೈಸೂರು ೨

ಸಂಸ್ಥಾನದ ಹರಿಜನರ ಏಳಿಗೆ ಬಗ್ಗೆ ಸರ್ಕಾರ ಮತ್ತು ಖಾಸಗಿ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಬೇಕೆಂದೂ ಮತ್ತು ಇದಕ್ಕಾಗಿ ಒಂದು ದಶವಾರ್ಷಿಕ ಯೋಜನೆಯನ್ನು ತಯಾರಿಸಿ ೨॥ ಕೋಟಿ ರೂ ಮಂಜೂರು ಮಾಡಬೇಕೆಂದೂ ಶ್ರೀ ಸ್ಕಿಟಿ ಹನುಮಂತಯ್ಯನವರು ನೆನ್ನೆ ಒಂದು ನಿರ್ಣಯವನ್ನು ಮಂಡಿಸಿದರು. ಸಚಿವ ಶ್ರೀ॥ ಚನ್ನಿಗರಾಮಯ್ಯನವರು ಉತ್ತರವಿತ್ತು, ಸರ್ಕಾರದವರು ಹರಿಜನರ ಏಳಿಗೆ ಬಗ್ಗೆ ಶ್ರದ್ಧಾಸಕ್ತಿಯಿಂದಿರುವರೆಂದೂ, ಅವರಿಗಾಗಿ ವರ್ಷಂಪ್ರತಿ ೪೪॥ ಲಕ್ಷ ರೂ ವೆಚ್ಚ ಮಾಡಲಾಗುತ್ತಿದೆಯೆಂದೂ, ಸದ್ಯದ ಆರ್ಥಿಕ ಪರಿಸ್ಥಿತಿಯಿಂದ ಹೆಚ್ಚು ಹಣವನ್ನು ಒದಗಿಸಲು ಸಾಧ್ಯವಿಲ್ಲವೆಂದೂ ತಿಳಿಸಿದರು ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಪಿ. ಜಯರಾಜರ್ ಕೊಲಂಬೊವಿಗೆ

ಹಿಂದೆ ಬೆಂಗಳೂರು ದಂಡಿನ ಕಲೆಕ್ಟರಾಗಿದ್ದ ಪಿ ಜಯರಾಜರವರು ಭಾರತದ ಸಿಲೋನಿಗೆ ತೆರಳಿ ಅಲ್ಲಿ ಕೊಲಂಬೋವಿನ ಪೌರ ಕಮಿಷನರ ಅಧಿಕಾರವನ್ನು ವಹಿಸಿಕೊಳ್ಳುವರು ಇದಕ್ಕಾಗಿ ಇಲ್ಲಿಯ ಅಧಿಕಾರದಿಂದ ನಿವೃತ್ತರಾಗಲಿರುವರು

ಅಣು ಶಕ್ತಿಯಿಂದ ಮೇಘ ನಿರ್ಮಾಣ

ಶತ್ರು ಸೈನ್ಯಗಳನ್ನು ನಾಶ ಪಡಿಸಲು ರಷ್ಯವು ಅಣು ಶಕ್ತಿಯಿಂದ ಉತ್ಪನ್ನವಾಗುವ ಮೇಘಗಳನ್ನು ನಿರ್ಮಾಣಮಾಡುವ ಕಾರ್ಯದಲ್ಲಿ ನಿರತವಾಗಿದೆಯೆಂದು ಹೇಳಲಾಗಿದೆ

ಕ್ವಿಟ್ ಫ್ರೆಂಚ್ ಇಂಡಿಯಾ

ಫ್ರೆಂಚ್ ಭಾರತದ ರಾಜಧಾನಿ ಪುದುಚೇರಿಯ ಗೋಡೆಗಳ ಮೇಲೆ ಫ್ರೆಂಚ್ ಮತ್ತು ತಮಿಳು ಭಾಷೆಗಳಲ್ಲಿ ಫ್ರೆಂಚರು ದೇಶಬಿಟ್ಟು ಹೊರಡಬೇಕೆಂದು ಸೂಚಿಸುವ ಬೋರ್ಡುಗಳು ಅಂಟಿಸಲ್ಪಟ್ಟಿವೆ ಭಾರತ ಸರಕಾರವು ಫ್ರೆಂಚ್ ಭಾರತದ ಸಂಬಂಧವಾಗಿ ಅನುಸರಿಸುತ್ತಿರುವ ನೀತಿಯನ್ನು ಬದಲಿಸಬೇಕೆಂದು ಬರೆಯಲಾಗಿದೆ

ಕೀರ್ತನಕಾರ ಮಂಡಲಿ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯ ತೃತೀಯ ವಾರ್ಷಿಕೋತ್ಸವವು ಮಿರ್ಜಾ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮನವರ ದೇವಾಲಯದ ಹಿಂಭಾಗದ ಧರ್ಮಛತ್ರದಲ್ಲಿ ಸೋಮವಾರ ನಡೆಯಿತು ವಾರ್ಷಿಕೋತ್ಸವದ ಅಂಗವಾಗಿ ಪ್ರತಿ ಸಂಜೆ ೭ ಗಂಟೆಗೆ ಕೀರ್ತನ, ಪುರಾಣ, ಸಂಗೀತ ನೃತ್ಯ, ಯಕ್ಷಗಾನಗಳು ೬ ದಿನ ನಡೆಯುವುವು

೮ ತಿಂಗಳ ಮಗುವಿನ ಹೊಟ್ಟೆಯಲ್ಲಿ ಶಿಶು

ಜಪಾನಿನಲ್ಲಿ ೮ ತಿಂಗಳಿನ ಗಂಡು ಮಗುವಿನ ಹೊಟ್ಟೆಯನ್ನು ಒಬ್ಬ ವೈದ್ಯರು ಶಸ್ತ್ರ ಚಿಕಿತ್ಸೆಗೆ ಗುರಿಪಡಿಸಿದಾಗ ಒಂದು ಶಿಶುವು ಸಿಕ್ಕಿತೆಂದು ಹೇಳಲಾಗಿದೆ ಹೊಟ್ಟೆಯಲ್ಲಿದ್ದ ಮಗುವಿಗೆ ಆಗಲೇ ಆರು ತಿಂಗಳಾಗಿತ್ತು. ಈ ತಿಂಗಳ ಮಗುವಿನ ಹೊಟ್ಟೆಯೊಂದು ಬಿಟ್ಟು ಉಳಿದ ಶರೀರ ಭಾಗವು ಕೃಶವಾಗುತ್ತಿದ್ದುದನ್ನು ಕಂಡು ಮಾತಾಪಿತೃಗಳು ಆಸ್ಪತ್ರೆಗೆ ಕರೆತಂದರು ಈಗ ಆ ಮಗುವಿಗೆ ೧೧ ತಿಂಗಳಾಗಿದೆ ಮತ್ತು ಆರೋಗ್ಯವಾಗಿದೆ

Edited, printed and published by A R Nagarajan at Sadhvi Press, D Subbiah Road Mysore

ಲಕ್ಷ್ಮೀ

4-11-49 ರಿಂದ

ಪ್ರತಿ ದಿನ 3 ಆಟಗಳು

ಜ್ಯುಪಿಟರ್ಸ್‌ರವರ ತಮಿಳು ಚಿ

ಮೋಹಿನಿ

ಪಾತ್ರ -V N ಜಾನಕಿ, ಲಲಿತ-ಪದ್ಮಿ

MORNING SHOWS

From 4-11-49 for 3 day

COLUMBIA'S

Pardon My Pa

With - Fred Mac Murra

ಮೈಸೂರು ವಿಶ್ವವಿದ್ಯಾಲಯ

ಪ್ರಕಟಣೆ

ನಂ ಎ ೨ 239 48-49 30-10-194

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜನಿಯರಿಂಗಿ ಇಬ್ಬರು ಅಸಿಸ್ಟೆಂಟ್ ಪ್ರೊಫೆಸರುಗಳ ಖಾಲಿ ಸ್ಥಾನಗಳು

೧ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಿವಿಲ್ ಇಂಜನಿಯರಿಂಗಿನ ಅಸಿಸ್ಟೆಂಟ್ ಪ್ರೊಫೆಸರುಗಳ ಸ್ಥಾನಗಳಿಗೆ ಅರ್ಹರಾದ ಮೈಸೂರಿನವರುಗಳಿಂದ ಅರ್ಜಿಗಳನ್ನು ಸ್ವಾಗತಿಸಲಾಗಿದೆ ಈ ಹುದ್ದೆಗಳಿಗೆ ಸಂಬಳದ ಪ್ರಮಾಣ ರೂ ೨೦೦-೪೦-೩-೩೦೦ ಈ ನೌಕರಿಗಳು ಖಾಯಂ ಆದುವು ಆರಂಭದ ಸಂಬಳ ೨೦೦ ಇದಕ್ಕೆ ಬೇಕಾದ ಕನಿಷ್ಠ ವಿದ್ಯಾ ಅರ್ಹತೆ ಇಂಜನಿಯರಿಂಗಿನಲ್ಲಿ ಒಳ್ಳೆಯ ಬ್ಯಾಚಲರ್ ಡಿಗ್ರಿ ಶಿಕ್ಷಣ ಕ್ರಮದಲ್ಲಿ ಒಳ್ಳೆಯ ತರಪೇತನ್ನು ಹೊಂದಿ ಅನುಭವವನ್ನು ಹೊಂದಿರತಕ್ಕವರಿಗೆ ಹೆಚ್ಚಿನ ಪುರಸ್ಕಾರ ದೊರೆಯುವುದು.

೨. ಸಂಬಳ ರಜಾ ಇತ್ಯಾದಿಗಳು ಮೈಸೂರು ಸರ್ವಿಸ್ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ ಮತ್ತು ಶಿಸ್ತು ಸಂಬಂಧವಾಗಿ ವಿಶ್ವವಿದ್ಯಾಲಯದ ನಿಯಮಗಳಿಗೆ ಒಳಪಟ್ಟಿರುವುದು ಆರಿಸಲ್ಪಟ್ಟ ಉಮೇದುವಾರರು ತಮಗೆ ಉದ್ಯೋಗದ ಸ್ಥಾನ ತಿಳಿಸಿದ ಕ್ಷಣವೇ ಕೆಲಸದ ಮೇಲೆ ಹಾಜರಾಗಬೇಕು

೩. ಅರ್ಜಿಗಳಲ್ಲಿ ಕೆಳಗೆ ಕಾಣಿಸುವ ವಿಷಯಗಳಿರಬೇಕು —

ವಯಸ್ಸು, ಜಾತಿ ಅಥವಾ ಮತ, ವಿದ್ಯಾ ಅರ್ಹತೆಗಳು (ಪಡೆದ ಪದವಿ ಮತ್ತು ವಿಶ್ವವಿದ್ಯಾಲಯದ ಹೆಸರು, ತೇರ್ಗಡೆಯಾದ ತಾರೀಖು ಮತ್ತು ತರಗತಿ) ಅನುಭವ ಮತ್ತು ಸಂಬಳ ಮತ್ತು ಹಿಂದಿನ ಸರ್ವಿಸ್, ಇದ್ದರೆ ಇವುಗಳಲ್ಲದೆ ಗ್ರಂಥಗಳೇನಾದರೂ ಬರೆಯಲ್ಪಟ್ಟಿದ್ದರೆ ಅವುಗಳು ಮತ್ತು ಇತರ ವಿವರಗಳು

೪ ಅರ್ಜಿಯ ಜೊತೆಗೆ ಪ್ರಶಂಸಾ ಪತ್ರಗಳು ಇರಬೇಕು (ಇವುಗಳನ್ನು ಹಿಂದಿರುಗಿ ಕೊಡಲಾಗುವುದಿಲ್ಲ) ಅರ್ಜಿಯ ಮತ್ತು ಪ್ರಶಂಸಾ ಪತ್ರಗಳ ಆರು ಪ್ರತಿಗಳು ಬೇಕಾಗಿವೆ ಈಗಾಗಲೇ ನೌಕರಿಯಲ್ಲಿರುವ ಅರ್ಜಿದಾರರು ತಮ್ಮ ಅರ್ಜಿಗಳನ್ನು ತಮ್ಮ ಮೇಲ್ಪಟ್ಟ ಅಧಿಕಾರಿಗಳ ಮುಖಾಂತರ ಕಳುಹಿಸಬೇಕು

೫ ಬೇಕಾದ ಪಕ್ಷದಲ್ಲಿ ಉಮೇದುವಾರರು ತಮ್ಮ ಖರ್ಚಿನಿಂದ ಭೇಟಿಗೆ ಬರಲು ಸಿದ್ಧರಾಗಿರಬೇಕು.

೬. ಅರ್ಜಿಗಳನ್ನು ರಿಜಿಸ್ಟ್ರಾರ್, ಯೂನಿವರ್ಸಿಟಿ ಆಫ್ ಮೈಸೂರ್, ಮೈಸೂರು ಇವರ ವಿಳಾಸಕ್ಕೆ ಬರೆಯಬೇಕು ಮತ್ತು ೧೯೪೯ನೇ ನವೆಂಬರ್ ೩೦ ಅಥವಾ ಅದಕ್ಕೆ ಮುಂಚಿತವಾಗಿ ಕಳುಹಿಸಬೇಕು

ಪಿ. ರಂಗಾಚಾರ್,
ಆಕ್ಟಿಂಗ್-ರಿಜಿಸ್ಟ್ರಾರ್

ರಾಜಕಮಲ್ ಟಾಕೀಸ್

5-11-49ರಿಂದ ದಿನವೂ 3 ಆಟಗಳು ಅಮೋಘ ಪ್ರಾರಂಭ

ಭರಣಿಯವರ ಅಪ್ರತಿಮ ಪ್ರೇಮಮಯ ತೆಲುಗು ಚಿತ್ರ

- ಲೈಲಾ ಮಜ್ನು -

ಪಾತ್ರ - ಭಾನುಮತಿ, ನಾಗೇಶ್ವರರಾವ್, ಶಿವರಾವ್, ಲಲಿತಾ-ಪದ್ಮಿನಿ

ಕಡೇ 2 ದಿನಗಳು ಚಾಂದನಿ ರಾತ್ (ಹಿಂದಿ)

Morning Shows From 4-11-49 For 4 days

REPUBLIC'S I've Always Loved you

A Great love story enriched by a powerful cast and

ROMANTIC TECHNICOLOR

With Philip Dorn, Catherine Mcleod, William Carter

ಪ್ರಭಾತ್ ಪಿಕ್ಚರ್ ಹೌಸ್, ಮೈಸೂರು

4-11-49ರಿಂದ ಅಮೋಘ ಪ್ರಾರಂಭ ಪ್ರತಿದಿನ ' ಆಟಗಳು

ಪ್ರೇಕ್ಷಕ ವರ್ಗದಿಂದ ಉತ್ತಮವಾದ ಚಿತ್ರವೆಂದು ಹೊಗಳಲ್ಪಟ್ಟ [illegible] ನಂತರ ತಯಾರಿಸಲ್ಪಟ್ಟ [illegible] ಸಂಗೀತದಿಂದ ಕೂಡಿದ ಅಪ್ರತಿಮ ಕಲಾಕೃತಿ

★ ಜಿದ್ದಿ

(ಹಿಂದಿ)

— ತಾರಾಗಣ

ಕಾಮಿನಿ ಕೌಶಲ್ ದೇವ್ ಆನಂದ್ ನವಾಬ್, ವೀರಾ.

Bombay Talkies Super Picture

Ziddi

• KAMINI KAUSHAL • VEERA • DEVANAND • NAWAB etc.

ಬೆಳಗಿನ ಪ್ರದರ್ಶನ 11-49ರಿಂದ 4 ದಿನಗಳು ಮಾತ್ರ

— ವುಲ್ಫ್ ಡಾಗ್ —

[illegible]

ಪ್ರಭುದೇವಾ ಟಾಕೀಸ್

2 11 49ನೇ ಬುಧವಾರದಿಂದ ಪ್ರಾರಂಭ

- ಮನದೇಶಂ -

ಕೃಷ್ಣವೇಣಿ, [illegible] ಪಾತ್ರವಹಿಸಿರುವ ತೆಲುಗು ಚಿತ್ರ

[illegible]

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] [illegible] [ಸಂಚಿಕೆ [illegible]

ಶಾಸನ ಸಭೆಗಳೆರಡೂ ಮುಂದುವರಿಯಲಿವೆ

ಜೈನರ ದೇವಾಲಯಗಳಿಗೆ ಹರಿಜನರ ಪ್ರವೇಶ

ಪ್ರ॥ ಪ್ರ॥ ಸಭೆಯಲ್ಲಿ ಮಸೂದೆಯ ಅಂಗೀಕಾರ

ಮೈಸೂರು ೪.

ಸಂಸ್ಥಾನದಲ್ಲಿ ಕೆಲವು ತರಗತಿಗಳವರಿಗೆ ದೇವಾಲಯ ಪ್ರವೇಶದ ಅವಕಾಶ ಕಲ್ಪಿಸುವ ಕಾನೂನನ್ನು ಜೈನರ ದೇವಾಲಯಗಳಿಗೂ ಅನ್ವಯಿಸಬೇಕೆಂಬ ತಿದ್ದುಪಡಿ ಮಸೂದೆಯ ಮೇಲೆ ನಿನ್ನೆ ದಿನ ಪ್ರ॥ ಸಭೆಯಲ್ಲಿ ಚರ್ಚೆ ಮುಂದುವರಿತು.

ಶ್ರೀ ಹೆಚ್. ಲಿಂಗಪ್ಪನವರು:— ಕೇಂದ್ರ ಪಾರ್ಲಿಮೆಂಟಿನಲ್ಲಿ ಹಿಂದೂ ಮಸೂದೆ [illegible] ಪರಿಶೀಲನೆ ನಡೆಯುತ್ತಿರುವುದರಿಂದ [illegible] ತೀರ್ಮಾನವಾಗುವವರೆಗೂ [illegible] ದಿನ ಜನವರಿ [illegible] ನೇ ತಾ॥ ಸಂ[illegible] ಪ್ರತಿ ಸಂಪೂರ್ಣವಾಗಿ [illegible] ಈ ಮಸೂದೆಯನ್ನು ಸಧ್ಯಕ್ಕೆ [illegible] ತೆಗೆದುಕೊಳ್ಳಬೇಕು.

ಶ್ರೀ ಭೂಸಾಳಂ ಚಂದ್ರಶೇಖರಯ್ಯನವರು:— ಜೈನ ದೇವಾಲಯಗಳಿಗೆ ಹರಿಜನರು [illegible] ಕೂಡದೆಂದು ಅವರು ಹೇಳಿ[illegible] ದೇವಾಲಯಗಳಿಗೆ ಹಿಂದೂ ದೇವಾಲಯಗಳಂತೆಯೇ ಕೊಡುತ್ತಿರುವ [illegible]ಗಳನ್ನು ಬಿಡಬೇಕಾಗುವುದು [illegible] ತತ್ವಗಳನ್ನು ಜೈನ ಧರ್ಮವು [illegible] ವರ್ಗಗಳ ಹಿಂದೆಯೇ [illegible] ಈಗ ಜೈನರು ಅದಕ್ಕೆ [illegible] ಕರಿಸಬಾರದೆಂದು [illegible] ಜೈನರು ಸಮ್ಮೇಳನವನ್ನು [illegible] ಅವರೇ ಸ್ವಯಂ ಪ್ರೇರಿತರಾಗಿ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸ[illegible] ಈ ಮಸೂದೆ[illegible] ತೆಗೆದುಕೊಳ್ಳಬೇಕು.

ಶ್ರೀ [illegible]ಲಿಂಗೇಗೌಡರು ಮಸೂದೆಯನ್ನು ವಿರೋಧಿಸಿ, [illegible] ಸರ್ಕಾರದವರು ಪ್ರವೇಶ [illegible] ಸಂಸ್ಥಾನದಲ್ಲಿ [illegible] ತಿಳಿಸಿದರು.

ಶ್ರೀ ಎ. ಜೆ. ಬಿಲೀಮೋರಿಯರವರು:— [illegible] ರಾಜ್ಯಾಂಗದಲ್ಲಿ [illegible] ಒಳಪಡಿಸುವುದು [illegible] ಜನವ[illegible] ವರೆಗೆ ಈ [illegible] ಮುಂದುವರಿಸುವುದು [illegible] ವಿಚಾರದಲ್ಲಿ [illegible] ಪರಿಗಣಿಸಬೇಕು [illegible] ಜೈನರ ಮೇಲೆ ಇಂತಹ [illegible] ಮಾಡುವುದು ತಪ್ಪು. ಜೈನ[illegible] ಎಂದು ಅವರು ತಿಳಿಸಿ[illegible] ಈ ರೀತಿ ಬಲಾತ್ಕಾರ ಮಾಡು[illegible] ಧರ್ಮ [illegible] ಗಾಂಧಿ[illegible] ಬಲಾತ್ಕಾರದಿಂದ ದೇವಾಲಯ ಪ್ರವೇಶ ಮಾಡಕೂಡದೆಂದು [illegible] ಅವರಿಗೆ ರಕ್ಷಣೆ [illegible] ಸಂಸ್ಥಾನದಲ್ಲಿ ಅನೇಕ [illegible] ಇದೆ [illegible].

[illegible] ಜನಾಂಗದ [illegible] ಎನ್ನ [illegible] ಇದಕ್ಕೆ ರಕ್ಷಣೆ [illegible].

[illegible] ಬಲಾತ್ಕಾರವಾಗಿ [illegible]

ವೀಣಾ ವಾದನ

ಮೈಸೂರು ೪

ನಾಳೆ ರಾತ್ರಿ ೯ ಘಂಟೆಗೆ ಮದ್ರಾಸಿನ ಪ್ರಯುಕ್ತ ಡಿ. ಸುಬ್ಬಯ್ಯ ರೆಡ್ಡಿಯಾರ್‌ರವರ ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ಮೈಸೂರು ಸಹೋದರರಿಂದ ವೀಣಾ ವಾದನವು ನಡೆಯುವುದು ಸರ್ವರಿಗೂ ಸ್ವಾಗತವಿದೆ.

ತೈಲ ಚಿತ್ರ ಸಮರ್ಪಣೆ

ರಾಜಧಾನಿಯ ಕಲಾವಿದರಾದ ಶ್ರೀ ಎಂ. ಹೆಚ್. ರಾಮೂರವರು [illegible] ಭಕ್ತ ಭವನದಲ್ಲಿ ಭಾರತ ಸರಕಾರದ ವಿದ್ಯಾ ಮಂತ್ರಿಗಳಾದ ಮೌ॥ [illegible] ಕಲಾಂ ಆಜಾದರನ್ನು ಭೇಟಿಮಾಡಿ ಅವರಿಗೆ ತಾವು ಬರೆದಿದ್ದ ಆಜಾದರವರ [illegible] ಚಿತ್ರವನ್ನು ಕೊಟ್ಟರು. ಮೌ॥ ಆಜಾದರು ಈ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿ ಶ್ರೀ ರಾಮೂರವರನ್ನು [illegible].

ಹಿಂದೂ ಧರ್ಮಕ್ಕೆ [illegible] ಈ ಮಸೂದೆಯು [illegible] ಶದಲ್ಲಿ ಅಸ್ಪೃಶ್ಯತೆಯು ಸಂಪೂರ್ಣವಾಗಿ [illegible] ಲವಾಗಬೇಕೆಂಬುದೇ ಸರ್ಕಾರದ [illegible] ವೆಂದೂ ತಿಳಿಸಿದರು. [illegible] ಮುಂತಾದ [illegible] ಇಂತಹ ಮಸೂದೆ[illegible] ದೂ, ಎಲ್ಲ ಜನಾಂಗದವರಿಗೂ [illegible] ದ್ವೇಷ ಇದೆಯೆಂದೂ, ಈ ವಿಚಾರಕ್ಕೆ [illegible] ಕೇಯ ಒಣ್ಣ ತರುವುದು [illegible] ವೆಂದೂ ಹೇಳಿದರು.

ಮಸೂದೆಯು ಬಹುಮತದಿಂದ ಅಂಗೀಕೃತವಾಯಿತು.

ಬೆಂಗಳೂರು, ಮತ್ತು [illegible] ದಿನ ಪ್ರದೇಶಗಳಲ್ಲಿ ಸ್ವತ್ತುಗಳ ಸಂಬಂಧವಾಗಿ [illegible] ನಡೆಸಲು ಅವಕಾಶ ಕಲ್ಪಿಸುವ [illegible] ಮಸೂದೆಯೂ [illegible] ಅಂಗೀಕೃತವಾಯಿತು.

ಪ್ರ. ಸಭೆಗೆ [illegible] ಅಂಗೀಕಾರ[illegible] ನವನ್ನು ಕೊಡದವರನ್ನು [illegible] ಸಭೆಗಳಲ್ಲಿ [illegible] ಅವಶ್ಯಕತೆ ಇರುವುದರಿಂದ ಅವನ್ನು ಕಲ್ಪಿ[illegible] ಮೈಸೂರು ಸಿಟಿ [illegible] ಮಸೂದೆ, [illegible] ಕಾರ್ಪೊರೇಷನ್ [illegible] ಮುನಿಸಿಪಾಲಿಟಿಗ[illegible] ಮಸೂದೆ [illegible] ಅಂಗೀಕೃತವಾದುವು.

ಇನ್ನು ೩-೪ ವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ಸರ್ಕಾರಿ ಬಸ್ಸುಗಳು

ಪ್ರ॥ ಪ್ರ॥ ಸಭೆಯಲ್ಲಿ ಸರ್ಕಾರದವರ ಸೂಚನೆ

ಮೈಸೂರು ೪

ಮೈಸೂರು ಸಿಟಿ ಬಸ್ಸನ್ನು ಸರ್ಕಾರದವರೇ ನಡೆಸಬೇಕೆಂಬ ಉದ್ದೇಶವಿದೆಯೆಂದೂ, [illegible] ಮೈಸೂರು ಪಟ್ಟಣಕ್ಕೆ ಸಿಟಿ ಬಸ್ಸನ್ನು ನಡೆಸಲು [illegible] ಯೋಜನೆಯಿಲ್ಲವೆಂದೂ, ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯನ್ನು [illegible] ವಹಿಸಿಕೊಳ್ಳುವ [illegible] ಸರ್ಕಾರದವರ ಗಮನದಲ್ಲಿದೆಯೆಂದೂ [illegible] ಸಿಟಿ ಬಸ್ಸನ್ನು [illegible] ಮಾಡುವ ಯೋಜನೆಯೂ ಸರ್ಕಾರದ್ದಿದೆಯೆಂದೂ ಪ್ರ॥ ಪ್ರ॥ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ [illegible] ಶ್ರೀ ಎಚ್. ಸಿದ್ದಯ್ಯನವರು ತಿಳಿಸಿದರು.

ಸರ್ಕಾರಿ ಬಸ್ಸಿನಲ್ಲಿ ಏನಾದರೂ [illegible] ಇದೆಯೇ ಎಂದು ಕೇಳಲಾದ [illegible] ಅದಕ್ಕೆ ಅವಕಾಶವಿಲ್ಲವೆಂದೂ, [illegible] ಮಾಡಿದರೆ ಡ್ರೈವರ್ [illegible] ದಕ್ಷರ [illegible] ಶಿಕ್ಷೆ ವಿಧಿಸಲಾಗುವುದೆಂದೂ ತಿಳಿಸಲಾಯಿತು. [illegible] ಸ್ಥಾನಗಳನ್ನು [illegible] ಕೇಳ[illegible] ಹೇಳಲು ಸಾಧ್ಯವಿಲ್ಲವೆಂದು ಸಚಿವರು ತಿಳಿಸಿದರು.

ಮುಂದಿನ ವರ್ಷ, [illegible] ಕ್ಷೇತ್ರಗಳಲ್ಲಿ [illegible] ೨೦೦ ಬಸ್ಸುಗಳು ಬೇಕಾಗುವುದೆಂದೂ ಇನ್ನು ೩-೪ ವರ್ಷಗಳಲ್ಲಿ ಸಂಸ್ಥಾನದಲ್ಲೆಲ್ಲಾ ಸರ್ಕಾರಿ ಬಸ್ಸುಗಳನ್ನು ನಡೆಸಬೇಕಾಗುವುದೆಂದೂ [illegible] ದರು.

ಸರ್ಕಾರಿ ಬಸ್ಸಿನಲ್ಲಿ [illegible] [illegible] ಪ್ಪಿಲ್ಲವೆಂದೂ ತಿಳಿಸಲಾಯಿತು.

ಸಮಾಚಾರಗಳ ಪಟ್ಟಿ

[illegible]

ಎರಡು ಶಾಸನ ಸಭೆಗಳೂ ಮುಂದುವರಿಯುವುವು

ಅಲ್ಪಾವಧಿ ಪ್ರಶ್ನೆಗೆ ಸರ್ಕಾರದವರ ಉತ್ತರ

ಮೈಸೂರು ೪

ಶ್ರೀಗಳಾದ ಹುಚ್ಚೇಗೌಡ ಮತ್ತು ಚನ್ನಬೈರೇಗೌಡರು ಹಾಕಿದ ಅಲ್ಪ ಕಾಲಾವಧಿ ಪ್ರಶ್ನೆಗೆ, ಭಾರತ ರಾಜ್ಯಾಂಗ ರಚನಾ ಸಭೆಯ ತೀರ್ಮಾನದ ಪ್ರಕಾರ ಈಗಿನ ಶಾಸನ ಸಭೆಗಳನ್ನೇ ಮುಂದುವರಿಸಲಾಗುವುದೆಂದು ಪ್ರಧಾನ ಸಚಿವ ಶ್ರೀ ಕೆ.ಸಿ. ರೆಡ್ಡಿಯವರು ಉತ್ತರವಿತ್ತರು. ಮೈಸೂರು ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯಾಗಿ ಪರಿವರ್ತಿಸಲಾಗುವುದೇ ಎಂದು ಶ್ರೀ ಎ. ಜೆ. ಬಿಲೀಮೋರಿಯರವರು ಕೇಳಿದ ಉಪ ಪ್ರಶ್ನೆಗೆ ಈ ವಿಚಾರದಲ್ಲಿ ಸರ್ಕಾರದವರು ಯಾವ ನಿರ್ಧಾರವನ್ನೂ ಮಾಡಿಲ್ಲವೆಂದು ತಿಳಿಸಲಾಯಿತು.

ಮಹಾ ಚುನಾವಣೆಯನ್ನು [illegible] ಕೊನೆಯಲ್ಲೋ, ೫೧ನೇ [illegible] ಮೊದಲಿನಲ್ಲೋ ನಡೆಸಲು ಸಿದ್ಧತೆಗಳನ್ನು ಮಾಡಲಾಗುತ್ತಿದೆಯೆಂದೂ, ವಯಸ್ಕರ ಮತದಾನ ಪದ್ಧತಿಯ ಮೇಲೆ ಚುನಾವಣೆಗಳು ನಡೆಯುವುವೆಂದೂ ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಭಾರತದ ಭವಿಷ್ಯವು ಭವ್ಯತರವಾದುದು

ರಾಜ್ಯ ಶಾಸ್ತ್ರ ಸಂಘದಲ್ಲಿ ದಿವಾಕರರ ಭಾಷಣ

ಮೈಸೂರು ೪

ಮಹಾರಾಜ ಕಾಲೇಜು ರಾಜ್ಯ ಶಾಸ್ತ್ರ ಸಂಘದ ಆಶ್ರಯದಲ್ಲಿ ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರವರು ಕಳೆದ ಸೋಮವಾರ ಭಾಷಣ ಮಾಡಿದರು. ಶ್ರೀ ಕೆ. ಹನುಮಂತಯ್ಯನವರು ಅಗ್ರಾಸನ ವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಎಂ. ವಿ. ಕೃಷ್ಣರಾವ್‌ರು ಸ್ವಾಗತ ಭಾಷಣ ಮಾಡಿ ಸಂಘದ ಕೆಲವು ಕಾರ್ಯಗಳನ್ನು ವಿವರಿಸಿದರು.

ಈಗಿನ ಕಾಲದಲ್ಲಿ ರಾಜಕೀಯ ಶಾಸ್ತ್ರಕ್ಕೆ ಹಿರಿದಾದ ಸ್ಥಾನವಿದೆಯೆನ್ನುವುದನ್ನು ಶ್ರೀ ದಿವಾಕರರು ವಿವರಿಸಿ, ಮಹಾತ್ಮ ಗಾಂಧಿಯವರ ಆಗಮನದ [illegible] ಭಾರತೀಯರ ಜೀವನದಲ್ಲಿ [illegible] ಮಾಡಿರುವುದೆಂದು ಹೇಳಿದರು. ಭಾರತ [illegible] ಪ್ರಾಚೀನ ಸಂಸ್ಕೃತಿ [illegible] ಜೀವನದ ಆದರ್ಶಗಳು ಭವ್ಯವಾಗಿದ್ದ [illegible] ಭವಿಷ್ಯವು ಇನ್ನೂ ಭವ್ಯತರವಾಗಿರಬಲ್ಲದು—ಎಂದು ಅವರು ತಿಳಿಸಿದರು. [illegible] ರಾಜ್ಯ ವಿಭಾಗಗಳನ್ನು ಚೆನ್ನಾಗಿ [illegible] ಮಾಡಿ [illegible] ಯಾಗಿ [illegible] ಯನ್ನು ಸಂಪಾದಿಸಿಕೊಳ್ಳಬೇಕೆಂದು [illegible] ದರು.

[illegible] ವಂದನಾರ್ಪಣೆಯೊಡನೆ ಸಭಾ [illegible] ವಾಯಿತು.

[illegible] ಪ್ರಚಾರೋಪನ್ಯಾಸ

[illegible] ಬೆಂಗಳೂರಿನ [illegible] ಕಾರ್ಯಕ್ರಮಗಳಲ್ಲಿ [illegible]

ಪಕ್ಷತೆ ತನಿಖೆ ಇಲಾಖೆಯ ಕೆಲಸಕಾರ್ಯಗಳು

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆ

ಮೈಸೂರು ೪

ನಿನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ, ಪಕ್ಷತೆ ತನಿಖೆ ಇಲಾಖೆಯು ೧೯೪೭ ನೇ ಜುಲೈ ತಿಂಗಳಿನಲ್ಲಿ ಸ್ಥಾಪಿಸಲ್ಪಟ್ಟಿತೆಂದೂ, ಕಳೆದ ವರ್ಷ ೮೫ ಕಛೇರಿಗಳು, ಈ ವರ್ಷ ೧೦೬ ಕಛೇರಿಗಳಲ್ಲಿ ಆಡಿಟ್ ತನಿಖೆ ನಡೆಸಲಾಯಿತೆಂದೂ, ಇಲ್ಲಿಯವರೆಗೆ ಅದಕ್ಕೆ ಒಟ್ಟು ೭೮,೫೬೧ ರೂ ಖರ್ಚಾಗಿದೆಯೆಂದೂ ಸಚಿವ ಜನಾಬ್ ಮಹಮದ್ ಷರೀಫ್‌ರವರು ಶ್ರೀ ಎಸ್. ಶಿವಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಖಾಸಗೀ ಜನರು ಹೋಗಿ ತನಿಖೆ ನಡೆಸುವದಾಗಿಲ್ಲ ಒಂದು ತಿಂಗಳಿನಲ್ಲಿ ಇಷ್ಟೇ ಕಛೇರಿಗಳಲ್ಲಿ ತನಿಖೆ ನಡೆಸಬೇಕೆಂಬ ನಿಭಾಯಿಸಿ ಇಲ್ಲ. ಆರೀತಿ ನಿಯಮ ಮಾಡಲು ಸಾಧ್ಯವಿಲ್ಲ ಸರ್ಕಾರದ ಪ್ರತಿಯೊಂದು ಇಲಾಖೆಯೂ ಈ ಆಡಿಟ್ ತನಿಖೆಗೆ ಒಳಪಟ್ಟಿದೆ. ಗ್ರಾಮಾಭಿವೃದ್ಧಿ ಸಮಿತಿಗಳ ತನಿಖೆ ನಡೆದಿಲ್ಲ-ಎಂದು ಉಪ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು

ಸಂಸ್ಥಾನದಲ್ಲಿ ೧೨೦೦ ನೂತನ ಮಾಧ್ಯಮಿಕ ಶಾಲೆಗಳನ್ನು ತೆರೆಯಲಾಗಿದೆ, ಪ್ರತಿಯೊಂದು ಹೋಬಳಿಯಲ್ಲಿಯೂ ಮಾಧ್ಯಮಿಕ ಶಾಲೆಗಳನ್ನು ತೆರೆಯಲು ಸಧ್ಯಕ್ಕೆ ಹಣದ ಅಭಾವದಿಂದ ಸಾಧ್ಯವಿಲ್ಲ-ಎಂದು ವಿದ್ಯಾ ಸಚಿವ ಶ್ರೀ ಡಿ. ಹೆಚ್ ಚನ್ನಬಸವಯ್ಯನವರು ಶ್ರೀ ಚಿಕ್ಕೇಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಸಚಿವ ಶ್ರೀ ಟಿ. ಮರಿಯಪ್ಪನವರು ಜನಾಬ್ ಸಿ ಅಬ್ದುಲ್ ಕರೀಂರವರ ಅಲ್ಪಕಾಲಾವಧಿ ಪ್ರಶ್ನೆಗೆ ಉತ್ತರವಿತ್ತು, ಅಕ್ಕಪಕ್ಕದ ಪ್ರಾಂತಗಳಿಂದ ತೊಗರಿ ಬೇಳೆ ಮತ್ತು ಇತರ ದ್ವಿದಳ ಧಾನ್ಯಗಳನ್ನು ತರಿಸಿಕೊಳ್ಳಲು ಕಳೆದ ಆಗಸ್ಟ್ ತಿಂಗಳ ೩ನೇ ತಾ॥ ನಿ

ಕುಕ್ಕರಹಳ್ಳಿ ಕೆರೆಯಲ್ಲಿ ಶವ

ಮೈಸೂರು ೪

ನಿನ್ನೆ ಸಂಜೆ ಕುಕ್ಕರಹಳ್ಳಿ ಕೆರೆಯಲ್ಲಿ ಒಂದು ಶವವು ತೇಲುತ್ತಿದ್ದುದನ್ನು ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ನಿನವರ ತೆಗೆಯಿಸಿ ಪೋಸ್ಟ್‌ಮಾರ್ಟಮ್ಮಿಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಶವವು ಇದ್ದ ಬಳಿಯಲ್ಲಿ ಒಂದು ಕೈಚೀಲವು ಇದ್ದಿತು. ಅದರಲ್ಲಿ ಎಂ. ಶ್ರೀಕಂಠನ್ ಎಂದು ಬರೆದಿದ್ದ ಮೈಸೂರು ದಸರ ವಸ್ತುಪ್ರದರ್ಶನದ ಒಂದು ಸ್ಪೆಷಲ್ ಪಾಸು ಇದ್ದಿತು ಮತ್ತು ಕಮಲ ಎಂಬ ವಿದ್ಯಾರ್ಥಿನಿಯು ಮಿಡ್ಲ್ ನಾಲ್ಕನೇ ತರಗತಿಯ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆದಿದ್ದ ಎರಡು ಕಾಗದಗಳೂ ಇದ್ದವು ಶವದ ವಾರಸುದಾರರಾರೆಂಬುದು ಗೊತ್ತಿಲ್ಲ

ಅಂಥ ಸಾಕಲಾಯಿತೆಂದೂ, ಭಾರತದಲ್ಲೆಲ್ಲಾ ಒಂದೇ ವಿಧವಾದ ಕಾರ್ಯ ನೀತಿಯನ್ನು ಅನುಸರಿಸಬೇಕೆಂಬ ಕೇಂದ್ರ ಸರ್ಕಾರದ ಸೂಚನೆ ಮೇಲೆ ಈರೀತಿ ಮಾಡಲಾಗಿದೆಯೆಂದೂ ತಿಳಿಸಿದರು

ಗಾಯತ್ರೀ ಟಾಕೀಸ್

ದಿನವಹಿ ಮೂರು ಪ್ರದರ್ಶನಗಳು

2-11-49ರಿಂದ 3 ದಿನಗಳು

ಸಿರಾಕಿ ಹೊಂದಿದವರಿಗೆ ಪೂರ್ಣ ಕಳೆಯನ್ನೀಯುವ ಮತ್ತೊಂದು ವಿವಿಧ ವರ್ಣಗಳ ನೋಟ

Arabian Nights

ಅರೇಬಿಯನ್ ನೈಟ್ಸ್

ಪಾತ್ರ:- ಮೈಸೂರು ಸಾಬು ಮತ್ತು ಜಾನ್ ಹಾಲ್

Edited, printed and published by A. R. Nagarajan at Sadhvi Press, D. Subbiah Road Mysore.

ಓವಾಸಿಂಗ್‌ಟನ್ನಿನ ವಿಮಾನ ನಿಲ್ದಾಣದ ಮೇಲೆ ಆಕಾಶದಲ್ಲಿ ಪ್ರಯಾಣದ ವಿಮಾನಕ್ಕೂ ಮಿಲಿಟರಿ ವಿಮಾನಕ್ಕೂ ನೊನ್ನೆ ದಿನ ಡಿಕ್ಕಿಯಾದುದರ ಪರಿಣಾಮವಾಗಿ ೫೫ ಜನರು ಸತ್ತರು

MORNING SHOWS at

CHAMUNDESWARI

TALKIES

From 3rd Nov for 3 days

at 10 30 a. m.

PARAMOUNT'S

IF I WERE KING

(ಇಫ್ ಐ ವರ್ ಕಿಂಗ್)

Starring:-Ronald Colman

- ಲಕ್ಷ್ಮೀ -

4-11-49 ರಿಂದ

ಪ್ರತಿ ದಿನ 3 ಆಟಗಳು

ಜ್ಯೂಪಿಟರ್ಸ್‌ರವರ ತಮಿಳು ಚಿ

ಮೋಹಿ

ಪಾತ್ರ:-V.N ಜಾನಕಿ, ಲಲಿತ-ಪದ್ಮಿ

MORNING SHOWS

From 4-11-49 for 3 day

COLUMBIA'S

Pardon My Pas

With:- Fred Mac Murra

ಮೈಸೂರು ವಿಶ್ವವಿದ್ಯಾಲಯ

ಪ್ರಕಟಣೆ

ನಂ ಎ5 2೩9 48-49 30-10-1949

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜನಿಯರಿಂಗಿನ ಇಬ್ಬರು ಅಸಿಸ್ಟೆಂಟ್ ಪ್ರೊಫೆಸರುಗಳ ಖಾಲಿ ಸ್ಥಾನಗಳು:

೧ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಿವಿಲ್ ಇಂಜನಿಯರಿಂಗಿನ ಅಸಿಸ್ಟೆಂಟ್ ಪ್ರೊಫೆಸರುಗಳ ಸ್ಥಾನಗಳಿಗೆ ಅರ್ಹರಾದ ಮೈಸೂರಿನವರುಗಳಿಂದ ಅರ್ಜಿಗಳನ್ನು ಸ್ವಾಗತಿಸಲಾಗಿದೆ ಈ ಹುದ್ದೆಗಳಿಗೆ ಸಂಬಳದ ಪ್ರಮಾಣ ರೂ ೩೦೦-೪೦-೫-೪೦೦ ಈ ನೌಕರಿಗಳು ಖಾಯಂ ಆದುವು ಆರಂಭದ ಸಂಬಳ ೩೦೦ ಇದಕ್ಕೆ ಬೇಕಾದ ಕನಿಷ್ಠ ವಿದ್ಯಾ ಅರ್ಹತೆ ಇಂಜನಿಯರಿಂಗಿನಲ್ಲಿ ಒಳ್ಳೆಯ ಬ್ಯಾಚಲರ್ ಡಿಗ್ರಿ ಶಿಕ್ಷಣ ಕ್ರಮದಲ್ಲಿ ಒಳ್ಳೆಯ ತೇರ್ಪಡೆತನ್ನು ಹೊಂದಿ ಅನುಭವವನ್ನು ಹೊಂದಿರತಕ್ಕವರಿಗೆ ಹೆಚ್ಚಿನ ಪುರಸ್ಕಾರ ದೊರೆಯುವುದು.

೨ ಸಂಬಳ, ರಜಾ, ಇತ್ಯಾದಿಗಳು ಮೈಸೂರು ಸರ್ವಿಸ್ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ ಮತ್ತು ಶಿಸ್ತು ಸಂಬಂಧವಾಗಿ ವಿಶ್ವವಿದ್ಯಾಲಯದ ನಿಯಮಗಳಿಗೆ ಒಳಪಟ್ಟಿರುವುದು. ಆರಿಸಲ್ಪಟ್ಟ ಉಮೇದುವಾರರು ತಮಗೆ ಉದ್ಯೋಗದ ಜ್ಞಾಪನೆಯು ತಲುಪಿದ ತಕ್ಷಣವೇ ಕೆಲಸದ ಮೇಲೆ ಹಾಜರಾಗಬೇಕು

೩ ಅರ್ಜಿಗಳಲ್ಲಿ ಕೆಳಗೆ ಕಾಣಿಸಿರುವ ವಿಷಯಗಳಿರಬೇಕು :—

ವಯಸ್ಸು, ಜಾತಿ ಅಥವಾ ಮತ, ವಿದ್ಯಾ ಅರ್ಹತೆಗಳು (ಪಡೆದ ಪದವಿ ಮತ್ತು ವಿಶ್ವವಿದ್ಯಾಲಯದ ಹೆಸರು, ತೇರ್ಗಡೆಯಾದ ತಾರೀಖು ಮತ್ತು ತರಗತಿ) ಈಗಿರುವ ಹುದ್ದೆ ಮತ್ತು ಸಂಬಳ ಮತ್ತು ಜ ದಿನ ಸರ್ವಿಸ್, ಇದ್ದರೆ, ಇವುಗಳಲ್ಲದೆ ಗ್ರಂಥಗಳೇನಾದರೂ ಬರೆಯಲ್ಪಟ್ಟಿದ್ದರೆ ಅವುಗಳು ಮತ್ತು ಇತರ ವಿವರಗಳು.

೪ ಅರ್ಜಿಯ ಜೊತೆಗೆ ಪ್ರಶಂಸಾ ಪತ್ರಗಳು ಇರಬೇಕು (ಇವುಗಳನ್ನು ಹಿಂದಿರುಗಿ ಕೊಡಲಾಗುವುದಿಲ್ಲ) ಅರ್ಜಿಯ ಮತ್ತು ಪ್ರಶಂಸಾ ಪತ್ರಗಳ ಆರು ಪ್ರತಿಗಳು ಬೇಕಾಗಿವೆ ಈಗಾಗಲೇ ನೌಕರಿಯಲ್ಲಿರುವ ಅರ್ಜಿದಾರರು ತಮ್ಮ ಅರ್ಜಿಗಳನ್ನು ತಮ್ಮ ಮೇಲ್ಪಟ್ಟ ಅಧಿಕಾರಿಗಳ ಮುಖಾಂತರ ಕಳುಹಿಸಬೇಕು

೫ ಬೇಕಾದ ಪಕ್ಷದಲ್ಲಿ ಉಮೇದುವಾರರು ತಮ್ಮ ಖರ್ಚಿನಿಂದ ಭೇಟಿಗೆ ಬರಲು ಸಿದ್ಧರಾಗಿರಬೇಕು

೬ ಅರ್ಜಿಗಳನ್ನು 'ರಿಜಿಸ್ಟ್ರಾರ್, ಯೂನಿವರ್ಸಿಟಿ ಆಫ್ ಮೈಸೂರ್, ಮೈಸೂರು' ಇವರ ವಿಳಾಸಕ್ಕೆ ಬರೆಯಬೇಕು ಮತ್ತು ೧೯೪೯ನೇ ನವೆಂಬರ್ ೩೦ ನೇ ತಾ ಅದಕ್ಕೆ ಮುಂಚಿತವಾಗಿ ಕಳುಹಿಸಬೇಕು

ಸಿ. ರಂಗಾಚಾರ್,

ಆಕ್ಟಿಂಗ್-ರಿಜಿಸ್ಟ್ರಾರ್

ಚಾಮುಂಡೇಶ್ವರಿ ಟಾಕೀಸ್

4-11-49 ರಿಂದ ಅಮೋಘವಾದ ೩ನೇ ವಾರ

ಜೆಮಿನಿಯವರ ಅಮೋಘ ತಮಿಳು ಚಿತ್ರ

* ಅಪೂರ್ವ ಸಹೋದರರು *

ಮುಖ್ಯ ಪಾತ್ರ:- ಆರ್. ನಾಗೇಂದ್ರ ರಾವ್,

ಎಂ. ಕೆ. ರಾಧಾ, ಭಾನುಮತಿ,

ಪ್ರಭಾ ಪಿಕ್ಚರ್ ಹೌಸ್, ಮೈಸೂರು

4-11-49ರಿಂದ ಅಮೋಘ ಪ್ರಾರಂಭ ಪ್ರತಿದಿನ ' ಆಟಗಳು

ಪ್ರೇಕ್ಷಕ ವರ್ಗದ ಉತ್ತಮವಾದ ಚಿತ್ರವೆಂದು ಹೊಗಳಲ್ಪಟ್ಟ 'ಶಿಕ್ಷ ತ್'

ನಂತರ ತಯಾರಿಸಲ್ಪಟ್ಟ ಬಾಂಬೆ ಟಾಕೀಸಿನವರ ಸಂಗೀತದಿಂದ

ಕೂಡಿದ ಅಪೂರ್ವ ಕಲಾಕೃತಿ

* ಜಿದ್ದಿ *

(ಹಟ)

Bombay Talkies Super Picture

Ziddi

* KAMINI KAUSHAL * VEERA
* DEVANAND * NAWAB etc.

ಪ್ರಭುದೇವಾ ಟಾಕೀಸ್

2 11 49ನೇ ಬುಧವಾರದಿಂದ ಪ್ರಾರಂಭ

ಆಟಗಳು

- ಕನಕ ತಾರಾ -

ಕನ್ನಾಂಬಾ, ದಸ್ಸೋಟಿ ಪಾತ್ರವಹಿಸಿರುವ ತೆಲುಗು ಚಿತ್ರ

ಸಂಸ್ಥಾನದ ಆರ್ಥಿಕ ವಿಲೀನೀಕರಣ

ಪ್ರ॥ ಪ್ರ॥ ಸಭೆಯಲ್ಲಿ ಚರ್ಚೆ

ಮೈಸೂರು ೫

ನಿನ್ನೆ ದಿನ ಬೆಳಗ್ಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾರತದೊಡನೆ, ಸಂಸ್ಥಾನದ ಆರ್ಥಿಕ ವಿಲೀನೀಕರಣದ ವಿಚಾರವಾಗಿ ಚರ್ಚೆ ನಡೆಯಿತು.

ಆರ್ಥಿಕ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಈ ಬಗ್ಗೆ ವಿವರಣೆಯನ್ನು ಕೊಟ್ಟು ಈ ರೀತಿ ತಿಳಿಸಿದರು:–

ಸಂಯುಕ್ತ ವ್ಯವಸ್ಥೆಯ ಹಣಕಾಸಿನ ವಿಲೀನೀಕರಣ ನಡೆಯುವುದರಿಂದ ಸಂಸ್ಥಾನದ ನಿವ್ವಳ ಹುಟ್ಟುವಳಿಯಲ್ಲಿ ೨೭೦ ಲಕ್ಷ ರೂ ಕಡಿಮೆ ಬೀಳುವುದೆಂದು ಲೆಕ್ಕಾಚಾರ ಮಾಡಲಾಗಿದೆ ಇದನ್ನು ಸರಿಪಡಿಸಲು ಮೊದಲಿನ ಐದು ವರ್ಷಗಳಲ್ಲಿ ಪ್ರತಿ ವರ್ಷವೂ ಕೇಂದ್ರ ಸರ್ಕಾರದವರು ಹಣವನ್ನು ಪಾವತಿ ಮಾಡಲು ಖಾತರಿ ಕೊಟ್ಟಿದ್ದಾರೆ ಅನಂತರ ಮುಂದೆ ೫ ವರ್ಷದ ಕಾಲ ಪ್ರತಿ ವರ್ಷವೂ ಒಂದೇ ಪ್ರಮಾಣದಲ್ಲಿ ಮೊಬಲಗನ್ನು ಕಡಿಮೆ ಮಾಡಲಿಸುತ್ತಾ ಬಂದು, ಹುಟ್ಟುವಳಿಯು ಕಡಿಮೆ ಬಿದ್ದಿರುವ ಮೊಬಲಗಿನ ಶೇಕಡ ೦ರಷ್ಟು ಹಣವನ್ನು ಹತ್ತನೆಯ ವರ್ಷದಲ್ಲಿ ಪಾವತಿ ಮಾಡಲು ಅನುಕೂಲಿಸುವಂತೆ ಪ್ರತಿ ವರ್ಷವೂ ಕೇಂದ್ರ ಸರ್ಕಾರದವರು ಮೈಸೂರಿಗೆ ಹಣ ಪಾವತಿ ಮಾಡುತ್ತಾರೆ. ಈ ವಿಲೀನೀಕರಣದ ಯೋಜನೆಯಿಂದ ಸಂಸ್ಥಾನದಲ್ಲಿ ಯಾವ ಏರುಪೇರುಗಳೂ ಉಂಟಾಗುವುದಿಲ್ಲ. ಸಂಸ್ಥಾನವು ೬ನೇ ವರ್ಷದಿಂದಾಚೆಗೆ ಯಾವ ತೊಂದರೆಯೂ ಇಲ್ಲದೆ ತನ್ನ ಭಾಗದ ಹೊರೆಯನ್ನು ವಹಿಸಿಕೊಳ್ಳಲು ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಲು ಸಾಧ್ಯವಾಗುವುದು ಈ ಬಗ್ಗೆ ಹುಟ್ಟುವಳಿ ಸಾಧನಗಳನ್ನು ಹೆಚ್ಚು ಮಾಡಿಕೊಳ್ಳುವ ರೀತಿಗಳು ಯಾವುವೆಂದರೆ — ಪ್ರಸ್ತುತದ ವ್ಯವಸಾಯಗಾರರ ಮೇಲೆ ವರಮಾನ ತೆರಿಗೆ ಹಾಕುವುದು ತೋಟದ ತೆರಿಗೆಯಲ್ಲಿ ಹೆಚ್ಚು ವಿನಾಯಿತಿಗಳು ಇರುವುದನ್ನು ಕಡಿಮೆ ಮಾಡುವುದು, ರಜಿಸ್ಟ್ರೇಷನ್ ಫೀಜು ಮತ್ತು ಸ್ಟಾಂಪುಗಳ ದರವನ್ನು ಹೆಚ್ಚಿಸುವುದು, ಮತ್ತು ಮೋಟಾರು ವಾಹನಗಳ ತೆರಿಗೆ ಏರಿಸುವುದು. ಕೃಷ್ಣರಾಜಸಾಗರ ನೀರಾವರಿ ಕಾಮಗಾರಿಗಳ ವಿಚಾರದ ೧೫೦ ಲಕ್ಷಕ್ಕಿಂತ ಹೆಚ್ಚಾದ ಮೌಲ್ಯವನ್ನು ಲಾಭದಾಯಕವಾದ ಬಂಡವಾಳದ ವೆಚ್ಚವೆಂದು ಪರಿಗಣಿಸುವುದು ನ್ಯಾಯವಲ್ಲವೆಂದು ಸಮಿತಿಯವರು ಅಭಿಪ್ರಾಯ ಪಟ್ಟಿರುತ್ತಾರೆ ಮತ್ತು ಅದನ್ನು ಲೆಕ್ಕಕ್ಕೆ ಸೇರಿಸದೆ ಬಿಡುವುದಕ್ಕೆ ಸಮಿತಿಯವರು ಒಪ್ಪಿಗೆ ಕೊಟ್ಟಿರುವುದರಿಂದ ಸಾಲ ತೆಗೆದ ಹಣವನ್ನು ಇತರ ಕಾಮಗಾರಿಗಳಿಗೆ ಉಪಯೋಗಿಸಬೇಕಾಗಿದೆ.

ಮೈಸೂರು ರೈಲ್ವೆಯು ನಿಧಿಯಲ್ಲಿ ಇರುವ ಲೆವಲ್ ತಿದ್ದುಪಡಿ ನಿಧಿಯೆಂದು ೧೪೬ ಲಕ್ಷ ರೂ ಗಳು ಇವೆ ಅದನ್ನು ವಿಶೇಷ ರೀತಿಯ ರೈಲ್ವೆ ನಿಧಿಯೆಂದು ಸೇರಿಸಿಕೊಂಡಿದ್ದಾರೆ ಮತ್ತು ಅದನ್ನು ಅವರ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಆ ಹಣವನ್ನು ಸಂಸ್ಥಾನದಲ್ಲಿ ನಡೆಯಬೇಕಾದ ಸಾಮಾನ್ಯ ಕಾರ್ಯಗಳಿಗೆ ಕೊಡಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ, ೧೫-೧೧-೪೯ [ಸಂಚಿಕೆ ೮೩

ವಿಲೀನೀಕರಣದ ಬಗ್ಗೆ ವಿಪುಲ ಚರ್ಚೆ

ಸರ್ಕಾರದವರು ನಡೆಸುತ್ತಿರುವ ವಿಮೆ ಮತ್ತು ಸೇವಿಂಗ್ ಬ್ಯಾಂಕ್ಸ್ ಯೋಜನೆಗಳು ಸಂಸ್ಥಾನದ ಹತೋಟಿಯಲ್ಲಿರುವುದು.

ಸಂಸ್ಥಾನದಲ್ಲಿ ಸರ್ಕಾರಿ ಕಾಗದ ಪತ್ರಗಳನ್ನು ಮುಫತ್ತಾಗಿ ಸಾಗಿಸುವ ಅಂಚೆ ವಿನಾಯಿತಿಯು (೨೧-೩೮ ಲಕ್ಷ ರೂ ಖರ್ಚು) ನಿಂತು ಹೋಗುವುದು. ಸಂಸ್ಥಾನದಲ್ಲಿ ಒಟ್ಟು ೩೩೦ ಮೈಲಿಗಳ ದೂರದ ಕೆಲವು ರಸ್ತೆಗಳನ್ನು ರಾಷ್ಟ್ರೀಯ ಘಾಟಾ ಮಾರ್ಗಗಳು ಎಂದು ಪರಿಗಣಿಸಲಾಗಿದೆ. ಇದಕ್ಕೆ ಪ್ರತಿ ವರ್ಷ ತಗಲತಕ್ಕ ೯೯೦ ಲಕ್ಷ ರೂ. ಅನ್ನು ಹುಟ್ಟುವಳಿಯಿಂದ ಒದಗಿಸಬೇಕಾಗಿದೆ.

ಮನ್ನೆಹಾಂಜರವರಿಗೆ ಕೊಡಬೇಕಾದ ಖಾಸಾ ಬೊಕ್ಕಸದ ಹಣವು ಫೆಡರಲ್ ಸ್ವಭಾವದ ವೆಚ್ಚವಾಗಿ ಪರಿಗಣಿಸಲ್ಪಡುವುದು. ಮುಂದೆ ಈ ಹಣವನ್ನು ಮೈಸೂರು ಸರ್ಕಾರದಿಂದ ಪ್ರತ್ಯೇಕವಾಗಿ ಕೊಡಬೇಕಾಗಿರುವುದಿಲ್ಲ.

ಕಾರ್ಪೊರೇಷನ್ ತೆರಿಗೆ ೨೫.೧೫ ಲಕ್ಷ ರೂ. ವ್ಯವಸಾಯದ ವರಮಾನ ತೆರಿಗೆ ೧೪೪೯೦ ಲಕ್ಷ ರೂ. ಎಕ್ಸೈಜ್ ೬.೨೬ ಲಕ್ಷ ರೂ ರೈಲ್ವೆ ೭೬.೭೧, ಟೆಲಿಫೋನ್ ೩.೧೬ ಲಕ್ಷ ರೂ. ಒಟ್ಟು ೩.೭೦.೫೯ ಲಕ್ಷ ರೂ ಭಾರತಕ್ಕೆ ಸೇರುವುದು ಉಪ್ಪಿನ ತೆರಿಗೆ ಮತ್ತು ಒಳ ವ್ಯಾಪಾರದ ಆಮದು ಮತ್ತು ರಫ್ತಿನ ಮೇಲಿನ ಸುಂಕಗಳು ರದ್ದಾಗುವುವು

ಭಾರತವನ್ನು ಬಲಪಡಿಸುವುದಕ್ಕಾಗಿ ವಿಲೀನೀಕರಣವು ಅಗತ್ಯ ಇದರಿಂದ ಸಂಸ್ಥಾನಕ್ಕೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಸಮಿತಿಯವರು ಸಹಾನುಭೂತಿಯಿಂದ ವರ್ತಿಸಿದ್ದಾರೆ- ಎಂದು ಸಚಿವರು ತಿಳಿಸಿದರು

ಶ್ರೀ ಭೂಪಾಳಂರವರು ,ಗೂಕನೂರು, ಈಗಿನ ಪರಿಸ್ಥಿತಿಯಲ್ಲಿ ಕೇಂದ್ರವನ್ನು ಬಲಪಡಿಸಬೇಕಾಗಿರುವುದರಿಂದ ಈ ಕರ್ತವ್ಯದಲ್ಲಿ ಎಲ್ಲರೂ ಸಹಕರಿಸಬೇಕಾಗಿದೆ ಆದರೆ ವರಮಾನ ತೆರಿಗೆಯಿಂದ ಶೇಕಡ ೫೦ರಷ್ಟು ಆದಾಯ ಕಡಿಮೆಯಾಗುವುದು ಹೊರಗಿರುವ ಸಂಬಳ ಸಾರಿಗೆಯ ಪ್ರಮಾಣವನ್ನು ಇಲ್ಲೂ ಕೊಡಬೇಕಾಗಿರುವುದರಿಂದ ಹೆಚ್ಚು ಖರ್ಚು ಉಂಟಾಗುವುದು. ಸಂಸ್ಥಾನದ ವರಮಾನವನ್ನು ಹೆಚ್ಚಿಸಲು ಅವಕಾಶವಿಲ್ಲವಾಗಿ ಹತ್ತು ವರ್ಷಗಳಲ್ಲಿ ಆಯವ್ಯಯವನ್ನು ಸರಿದೂಗಿಸಲು ಸಾಧ್ಯವಿಲ್ಲವಾದುದರಿಂದ ಕೇಂದ್ರದವರು ಸಂಸ್ಥಾನಕ್ಕೆ ಸಹಾಯ ಮಾಡಬೇಕೆಂದು ಕೋರಬೇಕು ಇಲ್ಲಿನ ಹಣಕಾಸಿನ ಇಲಾಖೆಯು ಬಹಳ ಮುಂದುವರಿದಿರುವುದರಿಂದ ಮೇಲ್ವಿಚಾರಣಾ ಸಮಿತಿಯು ಸಂಸ್ಥಾನಕ್ಕೆ ಬೇಕಾಗಿಲ್ಲ. ಪಾನ ನಿರೋಧ ಕಾರ್ಯಕ್ರಮವನ್ನು ಮುಂದುವರಿಸಲು ಯಾವ ಅಡ್ಡಿಯೂ ಇರಕೂಡದು–ಎಂದು ತಿಳಿಸಿದರು

ಶ್ರೀ ಶಂಕರ ಲಿಂಗೇಗೌಡರು ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸಿ, ವಿಲೀನೀಕರಣದಿಂದ ಸಂಸ್ಥಾನಕ್ಕೆ ಅಪಾಯ ಉಂಟಾಗುವುದೆಂದು ಹೇಳಿದರು. ಭಾರತಕ್ಕೆ ಹೆಚ್ಚು ಸಾಲವಿದೆಯೇ ಹೊರತು ಆಸ್ತಿ ಇಲ್ಲ ಆರ್ಥಿಕ ಐಕ್ಯದಿಂದ ಸಂಸ್ಥಾನವೂ ಸಹ ಆ ಸಾಲವನ್ನು ಹೊರಬೇಕಾಗುವುದು ಶ್ರೀಮನ್ಮಹಾರಾಜರವರ ರಾಜಧನದ ಜವಾಬ್ದಾರಿಯನ್ನು ಕೇಂದ್ರಕ್ಕೆ ಬಿಟ್ಟಿರುವುದು ವಿಷಾದಕರವೆಂದು ಹೇಳಿದರು.

ಜನಾಬ್ ಖಲೀಲ್:–ಸಂಸ್ಥಾನದ ಆರ್ಥಿಕ ಭದ್ರತೆಯನ್ನು ಕಾಪಾಡಲು ಮಂತ್ರಿ ಮಂಡಲವು ತಮ್ಮ ಕರ್ತವ್ಯವನ್ನು ಮಾಡಲಿಲ್ಲ ನಮ್ಮಲ್ಲಿ ಹೆಚ್ಚು ಹಣ ಇರುವ ಪರಿಸ್ಥಿತಿಯು ಹೋಗಿ, ದೆಹಲಿಯಿಂದ ಹಣವನ್ನು ಯಾಚಿಸಬೇಕಾದ ಪ್ರಸಂಗ ಒದಗುವುದು. ನಮಗಿರುವ ಹಣದ ವರಮಾನವನ್ನು ಕೇಂದ್ರಕ್ಕೆ ಬಿಟ್ಟು ಕೊಡುವುದು ವಿಷಾದಕರ. ಸರ್ಕಾರದವರು ಇನ್ನು ಮುಂದೆ ತಮ್ಮ ಕಾರ್ಯಕ್ರಮಗಳಲ್ಲಿ ಅತಿ ಜಾಗರೂಕತೆಯಿಂದ ವರ್ತಿಸಬೇಕು ವಿಲೀನೀಕರಣಕ್ಕೆ ರುಜು ಹಾಕುವುದಕ್ಕಿಂತ ಮುಂಚಿತವಾಗಿ ಸಭೆಯ ನಂಬಿಕೆಯನ್ನು ತೆಗೆದುಕೊಳ್ಳಬೇಕಾಗಿತ್ತು

ಶ್ರೀ ಬಿ ಎನ್. ಗುಪ್ತರವರು ಸರ್ಕಾರದ ನೀತಿಯನ್ನು ಸಮರ್ಥಿಸಿ, ಇಂತಹ ಆರ್ಥಿಕ ವಿಲೀನೀಕರಣದ ವಿಚಾರದಲ್ಲಿ ಯಾವ ಸರ್ಕಾರವೇ ಆಗಲಿ ತಸಿಟಿ ನಡೆಸಿ ಜನಾಭಿಪ್ರಾಯ ಪಡೆಯುವುದು. ಸಂಪ್ರದಾಯವಲ್ಲ ಇದಕ್ಕೆ ೦ ಚರ್ಚೆಯ ಬಗ್ಗೆ ಕೊಟ್ಟು ಟೀಕೆ ಮಾಡಕೂಡದೆಂದು ತಿಳಿಸಿದರು

ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಮ್ಮ ನೂತನಾಡ ಭಾರತದ ಭದ್ರತೆಯೂ ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕೂ ವಿಶಾಲವಾದ ಮನೋಭಾವನೆ ಇರಬೇಕು. ಮೈಸೂರಿನ ದೃಷ್ಟಿಯಿಂದಲೇ ನೋಡುವುದನ್ನು ಬಿಡಬೇಕು ಬಿಟ್ಟು ಕೊಟ್ಟಿರುವ ನೀತಿಯಿಂದಲೇ ನಮ್ಮ ಉಳಿವು ಇದೆ.ಇದಕ್ಕಿಂತಲೂ ಒಳ್ಳೆಯ ಒಪ್ಪಂದಕ್ಕೆ ಸಾಧ್ಯವಿಲ್ಲ ಇನ್ನು ೫ ವರ್ಷಗಳಲ್ಲಿ ನಮ್ಮ ಪರಿಸ್ಥಿತಿ ಉತ್ತಮಗೊಳ್ಳುವುದು. ವಿಲೀನೀಕರಣದಿಂದ ಯಾವ ಧಕ್ಕೆಯೂ ಉಂಟಾಗುವುದಿಲ್ಲ ಹತ್ತು ವರ್ಷಗಳ ನಂತರ ಕೇಂದ್ರದ ಪರಿಶೀಲನಾ ಕಮಿಷನನ್ನು ನೇಮಿಸಿ, ಅವರು ಯಾವ ಸಂಸ್ಥಾನ ಮತ್ತು ಭಾರತಕ್ಕೂ ಧಕ್ಕೆ ಬರದಂತೆ ಪರಿಶೀಲಿಸಿ ನಡೆಸುವರು– ಎಂದು ತಿಳಿಸಿದರು.

ಸಚಿವ ಶ್ರೀ ಹೆಚ್ ಸಿ. ದಾಸಪ್ಪನವರು ಚರ್ಚೆಗೆ ಉತ್ತರವಿತ್ತು, ವಿಲೀನೀಕರಣದಿಂದ ಮೈಸೂರಿಗೆ ಲಾಭವಾಗುವುದೇ ಹೊರತು ಯಾವ ಧಕ್ಕೆಯೂ ಉಂಟಾಗುವುದಿಲ್ಲವೆಂದೂ, ಈ ವರ್ಷಗಳಲ್ಲಿ ಮುಖ್ಯ ಅಭಿವೃದ್ಧಿ ಯೋಜನೆಗಳಿಗೆ ಹಣದ ಸಹಾಯವು ದೊರೆಯುವುದೆಂದೂ, ತಿಳಿಸಿದರು.

ಅನಂತರ ಅಧಿವೇಶನವು ಮುಕ್ತಾಯಗೊಂಡಿತು

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ

ಸ್ವಂ.ಸು ಫೋ.] ಬೆಂಗಳೂರು ೫

ಈ ದಿನ ಬೆಳಗ್ಗೆ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಕರ್ನಾಟಕ ಪ್ರಾಂತ ನಿರ್ಮಾಣದ ವಿಚಾರವಾಗಿ ಚರ್ಚೆ ನಡೆಯಿತೆಂದು ತಿಳಿದುಬಂದಿದೆ. ವಿಶೇಷ ಆಹ್ವಾನದ ಮೇಲೆ ಕೆ ಪಿ ಸಿ. ಸಿ ಕಾರ್ಯದರ್ಶಿಗಳಾದ ಶ್ರೀ ಮಾಗಡಿ, ಅದರ ಸದಸ್ಯರಾದ ಶ್ರೀ ವೀರಣ್ಣಗೌಡ ಪಾಟೀಲ್ ಮತ್ತು ಶ್ರೀ ಮಂಗಳವೇಡು ಶ್ರೀನಿವಾಸರಾಯರು ಸಭೆಯಲ್ಲಿ ಹಾಜರಿದ್ದರು.

ಪಬ್ಲಿಕ್ ಲೈಬ್ರರಿಯಲ್ಲಿ ಪ್ರತಿಭಟನಾ ಸಭೆ

ರಾಜಧಾನಿಯ ಪಬ್ಲಿಕ್ ಲೈಬ್ರರಿಯು ಹಿಂದಿನ ರೈಲ್ವೆ ಕಛೇರಿಯ ಕಟ್ಟಡದಿಂದ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಕಟ್ಟಡಕ್ಕೆ ವರ್ಗವಾಗಿ ೬ ತಿಂಗಳಾದರೂ ಅಲ್ಲಿಗೆ ವಿದ್ಯುಚ್ಛಕ್ತಿ ದೀಪವನ್ನು ಒದಗಿಸದಿರುವುದನ್ನು ಪ್ರತಿಭಟಿಸಲು ನಾಳೆ ದಿನ ಲೈಬ್ರರಿಯ ಆವರಣದಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ. ಓದುಗಾರರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆ

ರಾಜಧಾನಿಯ ಸಹಕಾರ ಭವನದಲ್ಲಿ ಈದಿನ ಸಂಜೆ ೬ ಘಂಟೆಗೆ ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಏರ್ಪಡಿಸಲಾಗಿದೆ. ಇಂಡಿಯಾ ಸರ್ಕಾರದ ಆರ್ಥಿಕ ಸಚಿವರಾದ ಡಾ॥ ಜಾನ್ ಏ ಸಾಲ್ಮರ್ ರವರು ಅಧ್ಯಕ್ಷತೆವಹಿಸುವರು.

ಮೋಟಾರು ಕೆಲಸಗಾರರ ಮುಷ್ಕರವೇ?

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಜನರಲ್ ಸಭೆಯು ಕಳೆದ ಸೋಮವಾರ ಸೇರಿ ಕೆಳಗೆ ಕಂಡ ನಿರ್ಣಯವನ್ನು ಅಂಗೀಕರಿಸಿತು:– ತಾ॥ ೧೦-೧೧-೪೯ರ ಒಳಗಾಗಿ ಮುಷ್ಕರದ ಬ್ಯಾಲಟ್ ತೆಗೆದುಕೊಳ್ಳಬೇಕೆಂದು ಅಸಿಸ್ಟೆಂಟ್ ಲೇಬರ್ ಕಮಿಷನರವರನ್ನು ಪ್ರಾರ್ಥಿಸುವುದು ಆ ಅವಧಿಯೊಳಗೆ ಬ್ಯಾಲಟ್ ತೆಗೆದುಕೊಳ್ಳದಿದ್ದಲ್ಲಿ ಕೂಡಲೇ ಮುಷ್ಕರ ಹೂಡಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಮಾಜವಾದಿಗಳ ಸತ್ಯಾಗ್ರಹ ಇಲ್ಲ

ಕಳೆದ ಸೆಪ್ಟೆಂಬರ್ ತಿಂಗಳು ೧೯ ರಿಂದಲೂ ಅಹಮದಾಬಾದಿನಲ್ಲಿ ಮುಚ್ಚಲಾಗಿರುವ ಗಿರಣಿಗಳನ್ನು ತೆರೆಯುವ ಸಲುವಾಗಿ ಹೂಡಲಾಗಿದ್ದ ಸತ್ಯಾಗ್ರಹವನ್ನು ಅಲ್ಲಿನ ಸಮಾಜವಾದಿ ಪಕ್ಷದವರು ತ್ಯಜಿಸಿದ್ದಾರೆ. ಸತ್ಯಾಗ್ರಹದಿಂದ ಹಿಂಸಾ ಚಳುವಳಿಯನ್ನು ಬಿಟ್ಟು ಉಗ್ರವಾದ ಬೇರೆ ರೀತಿಯ ಚಳುವಳಿಯನ್ನು ಹೂಡಲಿದ್ದಾರೆ

ಟೆಂಡರ್ ನೋಟೀಸು

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು ಈ ಕೆಳಗೆ ನಮೂದಿಸಿರುವ ಕಟ್ಟಡದ ಕೆಲಸಕ್ಕೆ ಟೆಂಡರುಗಳನ್ನು ನವೆಂಬರು ತಾರೀಖು ೭ನೇ ಸೋಮವಾರ ಸಾಯಂಕಾಲ ಮೂರು ಗಂಟೆಯ ತನಕ ತೆಗೆದುಕೊಳ್ಳುತ್ತಾರೆ. ಟೆಂಡರು ಕೊಡಲಿಚ್ಛಿಸುವವರು ಸದರಿ ಕೆಲಸದ ಪ್ಲಾನು ಮತ್ತು ಅಂದಾಜುಗಳನ್ನು ಆಫೀಸಿನ ವೇಳೆಯಲ್ಲಿ ನೋಡಬಹುದು. ಟೆಂಡರಿನ ಜೊತೆಯಲ್ಲಿ ಐವತ್ತು ರೂಪಾಯಿಗಳನ್ನು ಟ್ರೆಜರಿ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಮಾಡಿದ ಬಗ್ಗೆ ಟ್ರೆಜರಿ ಚಲನ್ನನ್ನು ಲಗತ್ತಿಸಿರಬೇಕು.

ಚಾಮರಾಜನಗರದ ತಾಲ್ಲೂಕು ಸಂತೇಮರಹಳ್ಳಿ ಮುಸಾಫಿರಖಾನದ ಆವರಣದಲ್ಲಿ ಕಟ್ಟಬೇಕಾಗಿರುವ ಜಾಡಮಾಲಿಗಳ ವಾಸದ ಮನೆ.

ಅಂದಾಜು ಮೊಬಲಗು ೨೧೦೦-೦-೦.

ಎಚ್. ಎಂ. ಚನ್ನಬಸಪ್ಪ,
ಅಧ್ಯಕ್ಷ,
ಡಿಸ್ಟ್ರಿಕ್ಟ್ ಬೋರ್ಡ್, ಮೈಸೂರು

ಕೆ. ಜಿ. ಎಫ್. ಗಣಿಯಲ್ಲಿ ಗಂಜ ತೊಲ ಚಿನ್ನದ ಕಳುವು

ನಂದಿದುರ್ಗ ಚಿನ್ನದ ಗಣಿ ಕಾರ್ಖಾನೆಯಲ್ಲಿ ಫೋರ್ಮನ್ ಆಗಿದ್ದ ನೆಲ್ಸನ್ ಎಂಬಾತನು ಕಳೆದ ಸೋಮವಾರ ಗಂಜ ತೊಲ ಚಿನ್ನವನ್ನು ಕಳ್ಳತನದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಕೆ. ಜಿ. ಎಫ್. ಮತ್ತು ಉರಿಗಾಂ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟನು. ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ, ಅವನು ಕೆ ಜಿ. ಎಫ್.ಅನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಲಾಗಿದೆ. ಪೋಲೀಸರು ಅವನ ಮೇಲೆ ಮೊಕದ್ದಮೆ ಹೂಡಿದ್ದಾರೆ.

Intermediate Examination
— OF MARCH 1950 —
Classes begin on 11-11-49
City Tutorial College
1531 VANIVILAS ROAD,
MYSORE

ನೀವು ಸಂಪಾದಿಸಿದ ಹಣ
ಬ್ಯಾಂಕಿನಲ್ಲಿಡಬೇಡಿ.
ಅದಕ್ಕಿಂತಲೂ ಭದ್ರತೆಯುಳ್ಳ
ಮನೆ ಮೇಲೆ ಹಾಕಿ
6-11-49ನೇ ಭಾನುವಾರ ಬೆಳಗ್ಗೆ
ಭಾರಿ ಮನೆ ಹರಾಜು
೨೭೬ನೇ ನಂ. ಪಡುವಾರಹಳ್ಳಿ,
ಹೋಟೆಲ್ ಹಿಂದೆ, ಹಳೇ ರೈಲ್ವೆ ಸ್ಟೇಷನ್ ಬಳಿ
ಮೊತ್ತ ಸಂಸಾರಕ್ಕನುಕೂಲವಾಗಿ, ರಾಜಧಾನಿಯ ಅತ್ಯುತ್ತಮ ಆರೋಗ್ಯ
ಸ್ಥಳದಲ್ಲಿದೆ
ವಿವರಗಳು ನಮ್ಮಲ್ಲಿವೆ
ಸಿಟಿ ಇಂಜಿನೀರಿಂಗ್ ಕೋ.,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

ರಾಜಕಮಲ್ ಟಾಕೀಸ್
5-11-49ರಿಂದ ದಿನವಹಿ 3 ಆಟಗಳು **ಅಮೋಘ ಪ್ರಾರಂಭ**

ಭರಣಿಯವರ ಅದ್ಭುತವು ಪ್ರೇಮಮಯ ತೆಲುಗು ಚಿತ್ರ
- ಲೈಲಾ ಮಜ್ನು -
ಪಾತ್ರ:-ಭಾನುಮತಿ, ನಾಗೇಶ್ವರರಾವ್, ಶಿವರಾವ್, ಲಲಿತಾ-ಪದ್ಮಿ

Morning Shows From 4-11-49 For 4 days
REPUBLIC'S **I've Always Loved you**
A Great love-story enriched by a powerful cast an
ROMANTIC TECHNICOLOR
With:-Philip Dorn, Catherine Mcleod,
William Carter

Edited, printed and published by A. R. Nagaraja at Sadhvi Press, D. Subbiah Road, Mysore.

ಪ್ರಭುದೇವಾ ಟಾಕೀಸ್
2—11—49ನೇ ಬುಧವಾರದಿಂದ ಪ್ರಾರಂಭ
ಪ್ರತಿ ದಿನ ೩ ಆಟಗಳು
ಕನಕ ತಾರಾ
ಕನ್ನಾಂಬಾ, ದಸ್ಯೋಟಿ ಪಾತ್ರವಹಿಸಿರುವ ತೆಲುಗು ಚಿತ್ರ

ಅಪೇರಾ ಟಾಕೀಸಿನಲ್ಲಿ
4-11-49ನೇ ಶುಕ್ರವಾರದಿಂದ
ಅಮೋಘ ಆರಂಭ : ಪ್ರತಿದಿನ ೩ ಆಟಗಳು
ಸ್ವಾಸ್ತಿಕ್‌ರವರ ತೆಲುಗು ಚಿತ್ರ
- ಧರ್ಮಾಂಗದ -
—:ಪ್ರಧಾನ ಭೂಮಿಕೆಯಲ್ಲಿ:
ಕೃಷ್ಣವೇಣಿ, ಋಷ್ಯೇಂದ್ರಮಣಿ, ಸುಬ್ಬರಾವ್,
ಲಿಂಗಮೂರ್ತಿ

Distributors:- R. V. Pictures]

ಫೋ। ನಂ 792 WEEKLY EDITION ಇಂದಿನ ಪತ್ರಿಕೆ ೦-೦-೬

ಸಾಧ್ವಿ

ಸಂಪುಟ ೧೪] ಭಾನುವಾರ ೬-೧೧-೪೯ [ಸಂಚಿಕೆ ೧೬

ಮುಂದಿನ ವರ್ಷ ೩ನೇ ಮಹಾ ಯುದ್ಧ?

ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪಾತ್ರ

ಮಹಿಳಾ ಸಮ್ಮೇಳನದಲ್ಲಿ ರಾಜಕುಮಾರಿಯವರ ಭಾಷಣ

ಬೆಂಗಳೂರು ೬

ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ ೨೧ ನೇ ಅಧಿವೇಶನವು ನೆನ್ನೆ ನ ಬೆಂಗಳೂರು ಬಸವನಗುಡಿಯಲ್ಲಿ ನಡೆಯಿತು ರಾಜಕುಮಾರಿ ಲೀಲಾವತಿ ದೇವಿ ಚೇ ಅರಸ್‌ರವರು ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಸಮ್ಮೇಳನಗಳ ಸಂಸ್ಥಾಪಕರಲ್ಲೊಬ್ಬರಾದ ಶ್ರೀಮತಿ ಸರೋಜಿನಿ ನಾಯ್ಡುರವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ರಾಜಕುಮಾರಿ ಲೀಲಾವತಿಯವರು ಭಾಷಣ ಮಾಡಿ ಇನ್ನು ಮುಂದೆ ಮಹಿಳೆಯರು ಹೆಚ್ಚು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಾಗಬೇಕೆಂದೂ, ಮುಖ್ಯವಾಗಿ ಮಹಿಳೆಯರಲ್ಲಿ ಅಜ್ಞಾನವನ್ನು ತೊಲಗಿಸಿ ವಿದ್ಯಾ ಪ್ರಸಾರಕ್ಕೆ ಹೆಚ್ಚು ಗಮನ ಕೊಡಬೇಕೆಂದೂ ತಿಳಿಸಿದರು.

ಅಖಿಲ ಭಾರತ ಮಹಿಳಾ ಸಮ್ಮೇಳನದ ಮಹಾ ಕಾರ್ಯದರ್ಶಿನಿಯರಾದ ಶ್ರೀಮತಿ ಲಕ್ಷ್ಮೀ ಮೆನನ್‌ರವರು ಈ ಸಮ್ಮೇಳನದ ಸಿಸ್ಸ್ಪತ್ರಿತರ ಸುಧಾರಣೆ ಬಗ್ಗೆ ಮಹಿಳೆಯರು ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿದರು.

ಸ್ಮರಣಾ ದಿನ

ಈ ದಿನವನ್ನು ಕಳೆದ ಯುದ್ಧಗಳ ಸ್ಮರಣಾ ದಿನವನ್ನಾಗಿ ಆಚರಿಸಬೇಕೆಂದು ಬ್ರಿಟಿಷ್ ರಾಜರು ಕಾಮನ್‌ವೆಲ್ತ್ ರಾಷ್ಟ್ರಗಳಿಗೆಲ್ಲಾ ಮನವಿ ಮಾಡಿಕೊಂಡಿದ್ದರು ಇದಕ್ಕೆ ಮನ್ನಣೆ ಕೊಟ್ಟು ಆಚರಿಸಬೇಕೆಂದು ಮೈಸೂರಿನ ಶ್ರೀಮನ್ಮಹಾರಾಜರೂ ಸಿರೂಪ ಹೊರಡಿಸಿದ್ದರು.

○ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆನ್ನೆ ಮಧ್ಯಾಹ್ನ ೭ ಘಂಟೆಯಿಂದ ರಾತ್ರಿ ೯ ಘಂಟೆವರೆಗೆ ಮತ್ತೆ ಸಭೆ ಸೇರಿ ಕರ್ನಾಟಕ ಏಕೀಕರಣದ ವಿಚಾರವಾಗಿ ಚರ್ಚಿಸಿತು. ಯಾವ ನಿರ್ಧಾರವೂ ಹೊರಬಿದ್ದಿಲ್ಲ.

ಸರ್ವ ಪಕ್ಷ ಸಮ್ಮೇಳನ

ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಸರ್ಕಾರದಿಂದ ಯಾವ ಅಡ್ಡಿಯೂ ಇಲ್ಲ ಎನ್ನ ಸೂಚಿಸಲು ಅರಸೀಕೆರೆಯ ... ಮಧ್ಯಾಹ್ನ ೪ ಗಂಟೆಗೆ ಸರ್ವ ಪಕ್ಷ ಸಮ್ಮೇಳನವು ನಡೆಯುವುದು.

ಪತ್ನಿಯ ಕೊಲೆಗಾಗಿ ರಾಜಕುಮಾರನಿಗೆ ಮರಣ ದಂಡನೆ

ಕೊಲ್ಹಾಪುರ ಸಂಸ್ಥಾನದ ಖಾನ್ ಸಾಹೇಬರ ... ರಾಜಕುಮಾರ ಮಹಮದ್ ... ಎಂಬುವರು ತಮ್ಮ ಪತ್ನಿಯನ್ನು ಕೊಲೆ ಮಾಡಿದರೆಂಬ ಅಪಾದನೆಯ ಮೇಲೆ ಮರಣ ದಂಡನೆಯನ್ನು ವಿಧಿಸಲಾಗಿದೆ.

ಹರಿಕಥೆ

ಹನುಮಂತನಗರದ ... ಬೀದಿಯಲ್ಲಿರುವ ಶ್ರೀ ರಾಮಮಂದಿರದಲ್ಲಿ ನಾಳೆ ಮಧ್ಯಾಹ್ನ ೩-೩೦ ಗಂಟೆಗೆ ಶ್ರೀ ಎಂ. ಎಲ್. ನಾರಾಯಣ ದಾಸರು ... ಮತ್ತು ಗಂಧಿ ವಿವಾಹ ಎಂಬ ಹರಿಕಥೆ ನಡೆಯುತ್ತದೆ.

ಕರ್ನಾಟಕದ ನಿರ್ಮಾಣಕ್ಕೆ ಮೈ॥ ಕಾಂಗ್ರೆಸ್ ಅಧ್ಯಕ್ಷರ ಭರವಸೆ

ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತವನ್ನು ನಿರ್ಮಿಸುವ ಕಾರ್ಯದಲ್ಲಿ ತಾವು ಸರ್ವ ಪ್ರಯತ್ನ ಮಾಡುವುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಕರ್ನಾಟಕ ಯುವಕ ಪರಿಷತ್ತಿನ ಅಧ್ಯಕ್ಷರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ.

ಬದನವಾಳು ಕೆಲಸಗಾರರ ಬೇಡಿಕೆ

ಬದನವಾಳು ಖಾದಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ನೌಕರವರ್ಗದವರು ತಮ್ಮ ಸಂಬಳ, ಭತ್ಯ, ಪ್ರಾವಿಡೆಂಟ್ ಫಂಡ್ ವಗೈರೆಗಳ ವಿಚಾರವಾಗಿ ಮಾಡಿಕೊಂಡ ಬೇಡಿಕೆಗಳಿಗೆ ಸರ್ಕಾರದಿಂದ ಇದುವರೆಗೆ ಸೂಕ್ತ ಪರಿಹಾರ ದೊರೆತಿಲ್ಲವಾಗಿ ಇರುವುದರಿಂದ ಈ ಬಗ್ಗೆ ಈ ತಿಂಗಳು ೧೫ ನೇ ತಾರೀಖಿನೊಳಗಾಗಿ ಸರ್ಕಾರದವರು ತಮ್ಮ ಅಭಿಪ್ರಾಯ ನಿರ್ಧಾರವನ್ನು ತಿಳಿಸಬೇಕೆಂತ ಅವರು ಬೇಡಿರುವರೆಂದು ತಿಳಿದುಬಂದಿದೆ.

ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ವನ್ಯಾರಾಜರವರ ಶ್ರೇಯಃ ಪ್ರಾರ್ಥನಾ ಸಂಘದ ೯ ನೇ ವಾರ್ಷಿಕೋತ್ಸವವು ಕಳೆದ ಸೋಮವಾರ ನಡೆಯಿತು. ಈ ಸಂದರ್ಭದಲ್ಲಿ ಕೋಟೆ ಶ್ರೀ ಶ್ರೀ ನಯನೇಶ್ವರ ದೇವಾಲಯದಲ್ಲಿ ... ಸೇವೆ ವತ್ತು ... ಮಹೋತ್ಸವವನ್ನೂ, ಮತ್ತು ... ಪರೇಡಿನ್ ... ಮುಂದಾಗವ ... ಪ್ರಾರ್ಥನೆಯನ್ನೂ ನಡೆಸಲಾಯಿತು. ಶ್ರೀ ಎಚ್. ಎಲ್. ಗೋವಿಂದರಾಜೇ ಅರಸಿನವರು ಹಿಂದೂ ಮತ ... ವಿಚಾರವಾಗಿ ಭಾಷಣ ಮಾಡಿದರು. ಜನಾಬ್ ಎ ಕೆ ಸೈಯದ್ ... ಸಾಹೇಬರು ಮೈಸೂರು ರಾಜವಂಶಸ್ಥರ ... ಹಿಂದೂ ಮುಸ್ಲಿಂ ಐಕ್ಯತೆ ... ಮತ್ತು ಈಗ ತೋರಿಸುತ್ತಿರುವ ದಯೆಯ ಬಗ್ಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

○ ಜಪಾನಿನ ಪ್ರೊಫೆಸರ್ ಹಿಡಿಕಿ ಯುಕಾವಾರವರಿಗೆ ಭೌತಿಕ ಶಾಸ್ತ್ರ, ಅಮೇರಿಕದ ಪ್ರೊ॥ ವಿಲಿಯಂ ಫ್ರಾನ್ಸಿಸ್‌ರವರಿಗೆ ರಸಾಯನ ಶಾಸ್ತ್ರದಲ್ಲೂ ನೊಬೆಲ್ ಬಹುಮಾನಗಳನ್ನು ಕೊಡಲಾಗಿದೆ.

ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆ

ಮೈಸೂರು ೬

ನೆನ್ನೆ ದಿನ ಸಹಕಾರ ಭವನದಲ್ಲಿ ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆಯು ಮೈಸೂರು ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ನಡೆಯಿತು. ಇವಾನ್ ದೇವರ ಡಾ॥ ಹರ್ಷ ಸಾಲ್ಮನ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಸ್ವಾಗತ ಭಾಷಣವನ್ನಾಡಿ, ಸಂಸ್ಥಾನದಲ್ಲಿ ಸಹಕಾರ ಸಂಘಗಳ ಕಾರ್ಯಕ್ರಮಗಳನ್ನು ವಿವರಿಸಿದರು. ಉತ್ತರ ಕೆರೊಲಿನ ವಿಶ್ವ ವಿದ್ಯಾಲಯದ ಡಾ॥ ಕಾರ್ಸನ್‌ರಯಾನ್, ಟಿ ನರಸೀಪುರದ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ ಮತ್ತು ಮೈಸೂರು ವಿಶ್ವ ವಿದ್ಯಾಲಯದ ಶ್ರೀ ಎಂ ವಿ ಕೃಷ್ಣರಾಯರು ಸಹಕಾರ ತತ್ವದ ವಿಚಾರವಾಗಿ ಭಾಷಣ ಮಾಡಿದರು. ಶ್ರೀ ಎಂ ಎಸ್. ರಾಮಸ್ವಾಮಿಯವರು ಸಹಕಾರ ಪ್ರತಿಜ್ಞೆಯನ್ನು ಪಠಿಸಿದರು. ಶ್ರೀಮತಿ ಜಿ ಎ ರಂಗನಾಯಕಮ್ಮನವರಿಂದ ಸುಶ್ರಾವ್ಯವಾದ ಸಂಗೀತ ನಡೆಯಿತು.

○ ಇನಾಂದಾರ ಭಾಷಣ

ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊಫೆಸರರೂ, ಉತ್ತಮ ಕನ್ನಡ ಸಾಹಿತಿಗಳೂ ಆದ ಶ್ರೀ ವಿ ಎಂ ಇನಾಂದಾರರು ವಿಶ್ವವಿದ್ಯಾಲಯದ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪-೩೦ಕ್ಕೆ ಜೂನಿಯರ್ ಬಿ ಎ ಹಾಲಿನಲ್ಲಿ 'ಸಾಹಿತ್ಯದ ಉಪಯೋಗ' ಎಂಬ ವಿಷಯದ ಮೇಲೆ ಭಾಷಣ ಮಾಡುವರು ... ಆಹ್ವಾನವಿದೆ.

ಭಾಷಣ ಮತ್ತು ಭಾರತ ವಾಚನ

ಈ ದಿನ ಸಂಜೆ ೬ ಘಂಟೆಗೆ ೩ನೆ ಸಣ್ಣಯ್ಯ ರಸ್ತೆಯಲ್ಲಿರುವ ಬ್ರಾಹ್ಮಣರ ವಿದ್ಯಾರ್ಥಿನಿಲಯದ ... ಗಾಂಧಿ ಸ್ಮಾರಕ ... ಆಶ್ರಯದಲ್ಲಿ ಶ್ರೀ ಕೆ ಶೇಷಾಚಾರ್ಯರಿಂದ ... ವಿಚಾರವಾಗಿ ಭಾಷಣವೂ ಮತ್ತು ಶ್ರೀ ... ರವರಿಂದ ಭಾರತ ವಾಚನವೂ ನಡೆಯುವುವು.

○ ಇದುವರೆಗೆ ತಾವು ೯೫ ತಿಂಗಳುಗಳನ್ನು ಜೈಲುವಾಸದಲ್ಲಿ ಕಳೆದಿರುವುದಾಗಿ ಪಂಡಿತ ನೆಹರೂರವರು ತಮ್ಮ ಅಮೇರಿಕಾ ಪ್ರವಾಸದಲ್ಲಿ ಪತ್ರಿಕಾ ಪ್ರತಿನಿಧಿಯೊಬ್ಬರಿಗೆ ತಿಳಿಸಿದರು.

ಬರುವ ವರ್ಷದಲ್ಲಿ ಮೂರನೇ ಮಹಾ ಯುದ್ಧ

ಫಾರ್ಮೋಸಾ ದ್ವೀಪದಲ್ಲಿ ವಾಸಿಸುತ್ತಿರುವ ಭವಿಷ್ಯಕಾರರೊಬ್ಬರು ಬರುವ ವರ್ಷದಲ್ಲಿ ಪ್ರಪಂಚದ ತೃತೀಯ ಮಹಾ ಯುದ್ಧವು ನಡೆಯುವುದೆಂದು ತಿಳಿಸಿದ್ದಾರೆ ಎರಡು ವರ್ಷಗಳವರೆಗೆ ಇದು ನಡೆಯುವುದೆಂದೂ, ಕೊನೆಗೆ ಸರ್ವಾಧಿಕಾರತ್ವದ ರಾಷ್ಟ್ರಗಳಮೇಲೆ ಇತರ ಯುದ್ಧ ವಿರೋಧಿ ರಾಷ್ಟ್ರಗಳು ಜಯಪಡೆಯುವುವೆಂದೂ ಅವರು ಹೇಳಿದ್ದಾರೆ. ಬರುವ ವಸಂತ ಮತ್ತು ಗ್ರೀಷ್ಮ ಋತುವಿನಲ್ಲಿ ಯುದ್ಧ ನಡೆಯುವುದು ಇವರು ಹಿಂದೆ ನುಡಿದ ಭವಿಷ್ಯಗಳೆಲ್ಲವೂ ಸತ್ಯವಾಗಿದ್ದವೆಂದು ಹೇಳಲಾಗಿದೆ.

ನಂಜನಗೂಡುಮುನಿಸಿಪಲ್ ಕೆಲಸಗಾರರ ಮುಷ್ಕರ

ನಂಜನಗೂಡಿನ ೩೦೦ ಜನ ಗುಡಿಸುವವರು ನೆನ್ನೆಯಿಂದ ಮುಷ್ಕರಹೂಡಿರುವುದಾಗಿ ತಿಳಿದುಬಂದಿದೆ. ಅವರ ಜೊತೆಗೆ ಮನೆಗಳಲ್ಲಿ ಕೆಲಸಮಾಡುವವರೂ, ಗ್ಯಾಂಗಿನವರೂ ಸೇರಿದ್ದಾರೆ.

ಪಂಡಿತ ನೆಹರೂರವರಿಗೆ ನಿಧಿ ಸಮರ್ಪಣೆ

ಇದೇ ತಿಂಗಳು ೧೪ನೇ ತಾ॥ ಬೊಂಬಾಯಿನಲ್ಲಿ ಪಂಡಿತ ಜವಹರಲಾಲ್ ನೆಹರೂರವರ ೬೧ನೇ ವರ್ಷದ ವರ್ಧಂತಿಯನ್ನು ಆಚರಿಸಲು, ಶ್ರೀ ಎಸ್ ಕೆ ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಪಂಡಿತ ಜವಹರಲಾಲ್ ನೆಹರೂ ಮಹೋತ್ಸವ ಆಚರಣಾ ಸಮಿತಿಯವರು ಎಲ್ಲ ಏರ್ಪಾಡುಗಳನ್ನೂ ಮಾಡುತ್ತಿದ್ದಾರೆ ಈ ಬಗ್ಗೆ ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಪರೀಕ್ಷಾರ್ಥವಾಗಿ ಯೋಜನೆಗಳನ್ನು ಸಿದ್ಧಗೊಳಿಸಿದ್ದಾರೆ ಆ ದಿನ ಚೌಪಾತಿ ತೀರದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಅಲ್ಲಿ ಪಂಡಿತ ನೆಹರೂರವರು ಭಾಷಣ ಮಾಡುವರು ಆ ದಿನದ ವಿಶೇಷ ಕುರುಹಾಗಿ ಒಬ್ಬೊಬ್ಬರ ಮನುಷ್ಯನಿಂದಲೂ ೬೧ ಕಾಸು ಮೊದಲ್ಗೊಂಡು, ೬೧ ರಂತೆ ಇತರ ನಾಣ್ಯಗಳ ನಿಧಿಯನ್ನು ಶೇಖರಿಸುವ ಕೆಲಸ ಮತ್ತು ಬೊಂಬಾಯಿ ನಾಗರಿಕರ ಪರವಾಗಿ ಪಂಡಿತ ನೆಹರೂರವರಿಗೆ ಒಂದು ನಿಧಿಯನ್ನು ಸಮರ್ಪಿಸುವ ಏರ್ಪಾಟಾಗಿದೆ.

ಖದ್ದರ್ ಪರಸ್ಪರ ಸಹಾಯ ಸಂಘದ ಚುನಾವಣೆ

ರಾಜಧಾನಿಯ ಖದ್ದರ್ ಪರಸ್ಪರ ಸಹಾಯ ಸಂಘದ ವಾರ್ಷಿಕ ಮಹಾಸಭೆಯು ಕಳೆದ ಭಾನುವಾರ ನಡೆದು ಕೆಳಗೆಕಂಡಂತೆ ಕಾರ್ಯ ನಿರ್ವಾಹಕ ಸಮಿತಿಯ ಚುನಾವಣೆಯು ನಡೆಯಿತು.

ಶ್ರೀ ಎಲ್ ಲಕ್ಷ್ಮೀನಾರಾಯಣರಾಯರು—ಅಧ್ಯಕ್ಷರು, ಶ್ರೀ॥ ಎಸ್ ಶ್ರೀರಂಗಾಚಾರ್ಯ—ಉಪಾಧ್ಯಕ್ಷರು, ಶ್ರೀ ಎಂ ಎಸ್ ಕೃಷ್ಣಮೂರ್ತಿಯವರು—ಗೌರವ ಕಾರ್ಯದರ್ಶಿ, ಶ್ರೀಗಳಾದ ಟಿ ಎಸ್ ಸುಬ್ಬಣ್ಣ, ಎ ಕೆ ರಂಗೇಗೌಡ, ಎಂ ವಿ ವೆಂಕಟಯ್ಯ, ಎಸ್ ಎಸ್ ಶಾಸ್ತ್ರಿ, ಎ ರಾಮಣ್ಣ, ಪಿ ಗೋಪಾಲಕೃಷ್ಣ ಶೆಟ್ಟಿ, ಎಂ ಎ ನಾರಸಿಂಹಸ್ವಾಮಿ ಅಯ್ಯಂಗಾರ್, ಎಂ ವಿ ಕೃಷ್ಣಮಾಚಾರ್, ಎಂ ಎಸ್ ರಂಗಾಚಾರ್, ಪ್ರೊ॥ ಎಸ್ ... ಸೂರ್ಯನಾರಾಯಣ ... ಸೂರ್ಯನಾರಾಯಣ ... ಮತ್ತು ಪಿ ಪಿ ... ಇವರು ಸದಸ್ಯರುಗಳು.

ವಾರ ಭವಿಷ್ಯ

೬-೧೧-೪೯ರಿಂದ ೧೨ರ ವರೆಗೆ

ಮೇಷ—ನಿಮ್ಮ ವಂಶದ ಸ್ತ್ರೀಯ ಆರೋಗ್ಯ ನೆಟ್ಟಗಿರ ಧಾರ್ಮಿಕ ಕಾರ್ಯಗಳ ಸಿದ್ಧಿ ಸರಕಾರಿ ಕಾರ್ಯಗಳಲ್ಲಿಯೂ ಆರ್ಥಿಕ ಸಮಸ್ಯೆಯು ನಿವಾರಣೆ ಮಿತ್ರರ ಭೇಟಿ ನೌಕರಿಯಲ್ಲಿ ಹಿತದಾಯಕ ಘಟನೆ ಧನಿಕ ಮಿತ್ರರಿಂದ ಸಹಾಯದ ಭರವಸೆ ವಿವಾಹ ನಿಶ್ಚಿತಾರ್ಥ ತಾ॥ ೯, ೧೦ ಆಕಸ್ಮಿಕ ಪ್ರವಾಸ

ವೃಷಭ—ವಾರ ಆರಂಭ ಕ್ರಾಂತಿಯ ಕವಲ್ಲ. ಕುಟುಂಬಿಕ ತೊಡಕು ಉಂಟು ಆರೋಗ್ಯದ ಕಡೆ ಗಮನ ಬೇಕು ಮಕ್ಕಳು ಶತ್ರುಗಳಿಗೆ ದೇವಾಲಯ ನೌಕರಿಯ ದಿನಗಳಲ್ಲಿ ಸಮರ್ಥ ಕಾರ್ಯದಲ್ಲಿ ಪ್ರವಾಸದಲ್ಲಿ ಕಷ್ಟ ವಾಹನ ಪಾತ ತಾ॥ ೧೦, ೧೧ ಧನ ಚಿಂತಾ ನಿವಾರಣ ದೂರ ದೇಶದಲ್ಲಿರ ವ ವರ್ತ್ತ ವಾರ್ತೆ ಶ್ರವಣ

ಮಿಥುನ—ಆರೋಗ್ಯ ನೆಟ್ಟಗೆ ಹಣದ ಲಾಭದ ಅನೇಕ ಸಂದರ್ಭಗಳು ಕೋರ್ಟು ವ್ಯವಹಾರಗಳಲ್ಲಿ ಜಯ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಮಿತ್ರ ಸಹಾಯ ಮಕ್ಕಳು ವರಿಗಳ ಭೇಟಿ ದೇವ ದರ್ಶನಗಳ ಲಭ್ಯ [illegible] ಧನ [illegible]

ಕರ್ಕ—ಆರೋಗ್ಯ ನೆಟ್ಟಗೆ ಕಾರ್ಯ [illegible] ಖರ್ಚು ವಿರೋಧ ಕಳಕ್ಕರ ಹೊಂದು ನೆಚ್ಚಿದ ವ್ಯವಹಾರ ವಹಿವಾಟು [illegible] ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಸ್ಥಿತಿಯು ಹತೋಟಿಗೆ ಸಿಕ್ಕುವುದು ಜವಾಬ್ದಾರಿ ಕಾರ್ಯಗಳಿಂದ ನಂಬಿಕೆ ತಾ॥ ೯, ೧೦ ಜಾಗರಣೆ, ಅಲ್ಪ ಪ್ರವಾಸ

ಸಿಂಹ—ಆರೋಗ್ಯದ ಕಡೆ ಗಮನ ವಿರಲಿ ಸದ್ಯದ ಕಾಲ ನಿಮಗೆ ಕಷ್ಟದ ಕಷ್ಟ ಜೀದದ್ದು ಕಾರ್ಯಗಳು ಕೆಡುತ್ತವೆ ಶತ್ರುಗಳು ಹುಟ್ಟಿಕೊಳ್ಳುವರು ಪ್ರಿಯ ಜನವಿಯೋಗ, ಖರ್ಚು ಹೆಚ್ಚು ಪ್ರವಾಸಕ್ಕೆ ಕಷ್ಟ ತಾ॥ ೧೦ ಮಿತ್ರ ಸಹಾಯದಿಂದ ಸಂಕಟ ನಾಶ, ಧನ [illegible]

ಕನ್ಯಾ—ಒಂದೇ ವಾರ ಹಣ ಒದವಿಲ್ಲ ಇತರರಿಗ ಕೊಡಬೇಕಾದ ಹಣದ ಒಳ್ಳೆ [illegible] ದೈಶಿಕರಿಗೆ ಜಯ ಪ್ರವಾಸದಲ್ಲಿ [illegible] ಮಾರ್ಗದಲ್ಲಿ ಅಪಘಾತ [illegible] [illegible] ತಾ॥ [illegible] [illegible]

ತುಲಾ—ಆರೋಗ್ಯ ನೆಟ್ಟಗೆ ನೌಕರಿಯಲ್ಲಿ [illegible] [illegible]

[illegible]

ವೃಶ್ಚಿಕ [illegible] ಮಾನ [illegible] ಆರೋಗ್ಯ ನೆಟ್ಟಗೆ ತಾ॥ ೯, ೧೦ [illegible]

ಧನು [illegible] ನೌಕರಿಯಲ್ಲಿ [illegible] ತಾ॥ [illegible] ವಿಶೇಷ ಖರ್ಚು

ಮಕರ [illegible] ದಿಂದ ಒಳ್ಳೆ [illegible] [illegible]

ದಂಪತಿಗಳ ಸ್ಥಿತಿ ಏಕ ಚಿಂತಾಕ್ರಾಂತವು ಬಿಚ್ಚಿಡಹೆಚ್ಚುವುದು ಪ್ರಿಯಜನವಿಯೋಗ ಅಂತ ಕರಣಕ್ಕೆ ವ್ಯಾ ತಾ॥ ೯, ೧೦ ಮೇಲಧಿಕಾರಿಗಳೊಡನೆ ಕಲಹ ಎಚ್ಚರಿಕೆ ಚಿಂಗ

ಕುಂಭ—ಕಷ್ಟದಿನಗಳು ಸನ್ನಿಹಿತ ಕಾಲ ನಿಮಗನುಕೂಲವಲ್ಲ ಸಂಸ್ಥಿತಿ ವಿನ್ಯಾಗಿರದು ಉಗ್ರಸ್ವಭಾವ ತಾಳಿದ ವನಸ್ಸು ಅಸ್ವಸ್ಥ ಮಾನಹಾನಿ ತಾ ೭ ೮, ರಕ್ತ ಪೀಡೆ

ಮೀನ—ಪ್ರವಾಸ ಯೋಗ ಆಪ್ತರ ಭೇಟಿ ನೌಕರಿಯಲ್ಲಿ ಮೇಲಧಿಕಾರ ಪ್ರಾಪ್ತಿ ವ್ಯಾಪಾರಾದಿಗಳಲ್ಲಿ ಲಾಭ ಆರೋಗ್ಯ ನೆಟ್ಟಗ ಪರೀಕ್ಷಾರ್ಥಿಸಸ್ಥಿತಿ ಉತ್ತಮ ತಾ॥ ೯, ೧೦ ಶುಭ ಕಾರ್ಯಕ್ಕಾಗಿ ಖರ್ಚು

Intermediate Examinations
— OF MARCH 1950 —
Classes begin on 11-11-49
City Tutorial College
1511 VANIVILAS ROAD
MYSORE

SRI GAYATHRI
Daily 3 Shows
Last Day, Dont Miss
Arabian Nights
From 7-11-49 for 2 days
20th s
ESCAPE
With Rex Harrison
From 9th for 3 days
CAPTAIN FROM CASTILE
(In Technicolor)
WITH – TYRONE POWER

ಲಕ್ಷ್ಮೀ ಟಾಕೀಸ್
7-10-49ರಿಂದ ಅನೋಘ 2ನೇ ವಾರ ಪ್ರತಿ ದಿನ 3 ಪ್ರದರ್ಶನ
ಜೂಪಿಟರ್ ರವರ ತಮಿಳು ಚಿತ್ರ
ರಾಜಕುಮಾರಿ
ಪಾತ್ರ – ವಸುಂ ತವಮಣಿ ದೇ

ಪ್ರಭುದೇವಾ ಟಾಕೀಸ್
2-11-49ನೇ ಬುಧವಾರದಿಂದ ಪ್ರಾರಂಭ
ಪ್ರತಿ ದಿನ 3 ಆಟಗಳು
ಕನಕ ತಾರಾ
ಕನ್ನಾಂಬಾ, ದವ್ಯೋಟಿ ಪಾತ್ರವಹಿಸಿರುವ ತೆಲುಗು ಚಿತ್ರ

ಪ್ರಭಾ
4-11-49 ರಿಂದ
ಅನೋಘ ಪ್ರಾರಂಭ ದಿನ 3 ಆಟ
ಬಾಂಬೆ ಟಾಕೀಸ್‌ರವರ
ಜಿದ್ದಿ
(ಹಿಂದಿ)
— ಪಾತ್ರಗಳ
ಕಾಮಿನಿ ಕೌಶಲ್,
ದೇವ ಆನಂದ್
ವೀರಾ
ನವಾಬ್
Bombay Talkies Super Picture
Ziddi
KAMINI KAUSHAL • VEERA
• DEVANAND • NAWAB etc

Edited, printed and published by A R Nagaraja at Sadhvi Press, D Subbiah Road Mysore

*ರಾಜಕಮಲ್ ಟಾಕೀಸ್, ಮೈಸೂರು

5-11-49 ರಿಂದ
ಅನೋಘ ಪ್ರಾರಂಭ
ದಿನವೂ 3 ಆಟಗಳು
ಭರಣಿಯವರ ಅಪ್ರತಿಮ ಪ್ರೇಮ ತೆಲುಗು ಚಿತ್ರ
ಲೈಲಾ ಮಜ್ನು
ಮುಖ್ಯ ಪಾತ್ರ –
ಭಾನುಮತಿ,
ನಾಗೇಶ್ವರರಾವ್,
ಶಿವರಾವ್,
ಲಲಿತಾ ಪದ್ಮಿನಿ

Morning Shows
From 4-11-49
For 4 days
RELEASES
I've Always Loved you
(TECHNICOLOR)
With Philip Dorn
Catherine Mcleod
William Carter

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ವಾದಿ

ಸಂಪುಟ ೮] ಸೋಮವಾರ ೭-೧೧-೪೯ [ಸಂಚಿಕೆ ೮೪

- ನೆಹರೂರವರಿಗೆ - ವಜ್ರದ ಅಶೋಕ ಸ್ತಂಭ

ಪೌರಸಭಾ ಚುನಾವಣೆಗೆ ಕಾಂ॥ ಉಮೇದುವಾರರು

ಮೈಸೂರು ೭

ಇಲ್ಲಿನ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪರವಾಗಿ ನಿಲ್ಲಲು ಈ ಕೆಳಗೆ ಕಂಡ ಉಮೇದುವಾರರನ್ನು ಪಾರ್ಲಿಮೆಂಟರಿ ಸಮಿತಿಯವರು ಒಪ್ಪಿದ್ದಾರೆ.

ಶ್ರೀಗಳಾದ ಎಂ. ಎಸ್ ನಂಜಪ್ಪ, ಯು ಎಲ್ ರಾಮಚಂದ್ರರಾವ್, ಎಸ್. ಲಿಂಗಣ್ಣ, ಟಿ ವೆಂಕಟರಮಣಯ್ಯ, ಇ ೭. ನಂಜಪ್ಪ, ಎ ಕೃಷ್ಣಮೂರ್ತಿ ರಾವ್, ಕೆ ಚಾಮುಂಡಯ್ಯ, ಪಿ ಸೀತಾರಾಮಯ್ಯ, ಎಸ್ ಶ್ರೀರಂಗಾಚಾರ್, ಕೆ ಎಸ್ ಸತ್ಯನಾರಾಯಣರಾವ್, ಚೌಡಯ್ಯ, ಕೆ ಪುಟ್ಟಸಾಮಿ, ಜಿ ಆರ್ ರಂಗಸ್ವಾಮಯ್ಯ, ಬಿ ನಾರಾಯಣಸ್ವಾಮಿ, ಅಗರಂ ರಂಗಯ್ಯ, ೭. ಚಂದ್ರಶೇಖರಗೌಡ ಮತ್ತು ಸಿ ಎಸ್ ವೆಂಕಟಸುಬ್ಬಶೆಟ್ಟರು

ಉಳಿದ ಆರು ಸ್ಥಾನಗಳಿಗೆ ಉಮೇದುವಾರರ ಹೆಸರುಗಳನ್ನು ಈ ರಾತ್ರಿ ೮ ಘಂಟೆಗೆ ಪ್ರಕಟಿಸಲಾಗುವುದು

ಶಾರದಾ ವಿಲಾಸ ಕಾಲೇಜ್ ಯೂನಿಯನ್ ಭಾಷಣ

ರಾಜಧಾನಿಯ ಶಾರದಾ ವಿಲಾಸ ಕಾಲೇಜ್ ಯೂನಿಯನ್ನಿನ ಆಶ್ರಯದಲ್ಲಿ ನಾಳೆ ಬೆಳಗ್ಗೆ ೧೧ ಘಂಟೆಗೆ ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊ॥ ವಿ ಎಂ ಇನಾಂದಾರರು ಭಾಷಣ ಮಾಡುವರು

ವಯಸ್ಕರ ಶಿಕ್ಷಣ ಪ್ರದರ್ಶನದ ಪ್ರಾರಂಭ

ಈ ಸಂಜೆ ೬ ಘಂಟೆಗೆ ವಸ್ತುಪ್ರದರ್ಶನ ಆಲಯದಲ್ಲಿ ವಿಶ್ವ ಸಂಸ್ಥೆಯ ಹಳ್ಳಿಗಾಡಿನ ವಯಸ್ಕರ ವಿದ್ಯಾಭ್ಯಾಸದ ವಸ್ತುಪ್ರದರ್ಶನವನ್ನು ವಿದ್ಯಾ ಮಂತ್ರಿ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ನೆರವೇರಿಸುವರು

ಕರ್ನಾಟಕ ಸಂಘಗಳ ಸಮ್ಮೇಳನ

ಇಂಟರ್‌ಮೀಡಿಯೇಟ್ ಕಾಲೇಜು ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಿಂಗಳು ಕೊನೆಯ ವಾರದಲ್ಲಿ ಅಖಿಲ ಭಾರತ ವಿಶ್ವವಿದ್ಯಾಲಯ ಕರ್ನಾಟಕ ಸಂಘಗಳ ಸಮ್ಮೇಳನವನ್ನು ಸಮಾವೇಶ ಗೊಳಿಸುವ ಸಿದ್ಧತೆಯಾಗುತ್ತಿದೆ ಸಮ್ಮೇಳನಕ್ಕೆ ಅಭಿಮಾನಿಗಳ ಆರ್ಥಿಕ ಬೆಂಬಲವನ್ನು ನೀಡಬೇಕೆಂದು ಕೋರಲಾಗಿದೆ ಇದಕ್ಕಾಗಿ ತಾ॥ ೧೦-೪೯ನೇ ಗುರುವಾರ ಸಂಜೆ ೬ ಗಂಟೆಗೆ ಮೈಸೂರು ಟೌನ್ ಹಾಲಿನಲ್ಲಿ 'ಸಂಸಾರ ನೌಕ' ಎಂಬ ನಾಟಕವನ್ನು ಏರ್ಪಡಿಸಲಾಗಿದೆ ಮಹನೀಯರು ಪ್ರೋತ್ಸಾಹಿಸಬೇಕಾಗಿಯೂ ಪ್ರಾರ್ಥಿಸಲಾಗಿದೆ.

ಹರಿಕಥೆ

ಪಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಪ್ರಕಾಶಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ರಾತ್ರಿ ೮ ಘಂಟೆಗೆ ಶ್ರೀಮತಿ ಸಂಪತ್ತಮ್ಮನವರಿಂದ ಶ್ರೀಮತಿ ಪರಿಣಯ ಹರಿಕಥೆ ನಡೆಯುವುದು

ಹಿಂದೀ ಕಾರ್ಯಕರ್ತರ ಸಭೆ

ಮೈಸೂರು ನಗರದ ಹಿಂದೀ ಕಾರ್ಯಕರ್ತರ ಸಭೆಯು ಕಳೆದ ಸೋಮವಾರ ಶ್ರೀಮಾನ್ ಟಿ ಸುದರ್ಶನಾಚಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿ, ದಕ್ಷಿಣ ಭಾರತ ಹಿಂದೂಸ್ತಾನಿ ಪ್ರಚಾರ ಸಭೆಯ ರಾಷ್ಟ್ರಭಾಷಾ ಪ್ರವೀಣ ಪರೀಕ್ಷೆಗೆ ಮೈಸೂರು ನಗರವನ್ನು ಕೇಂದ್ರವನ್ನಾಗಿ ಮಾಡಬೇಕೆಂದು ನಿರ್ಣಯ ಮಾಡಿ ಮದ್ರಾಸ್ ದಕ್ಷಿಣ ಭಾರತ ಹಿಂದೂಸ್ತಾನಿ ಪ್ರಚಾರ ಸಭೆಗೆ ಅದನ್ನು ಕಳುಹಿಸಲಾಯಿತು

ನೆಹರೂರವರಿಗೆ ವಜ್ರ ಖಚಿತ ಅಶೋಕ ಸ್ತಂಭ

ಬೊಂಬಾಯಿನ ಮಹಾಜನರ ಪರವಾಗಿ ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಪಂಡಿತ ನೆಹರೂರವರಿಗೆ ಅವರ ೬೧ ನೇ ವರ್ಧಂತಿಯ ಸಂಬಂಧದಲ್ಲಿ ವಜ್ರ ಖಚಿತವಾದ ಅಶೋಕ ಸ್ತಂಭವೊಂದನ್ನು ಅರ್ಪಿಸಬೇಕೆಂದು ನಿರ್ಧರಿಸಿದ್ದಾರೆ

ಪೋಲೀಸರ ಮೇಲೆ ಬಾಂಬುಗಳು

ಕಲ್ಕತ್ತದಲ್ಲಿ ಕಮ್ಯೂನಿಸ್ಟರಿಂದ ಪ್ರೇರೇಪಿತರಾಗಿ ನಿನ್ನೆ ಸಂಜೆ ಹೊರಟ ವಿದ್ಯಾರ್ಥಿ ಮತ್ತು ಕಾರ್ಮಿಕರ ಮೆರವಣಿಗೆಯನ್ನು ಚದುರಿಸಲು ಪೋಲೀಸರು ೬ ಬಾರಿ ಅಶ್ರುವಾಯುವನ್ನು ಉಪಯೋಗಿಸಿದರೆಂದೂ, ಈ ಗಲಭೆಯಲ್ಲಿ ಪೋಲೀಸರ ಮೇಲೆ ಹಲವಾರು ಬಾಂಬುಗಳನ್ನು ಎಸೆಯಲಾಯಿತೆಂದೂ, ಆದರೆ ಇದರಿಂದ ಯಾರಿಗೂ ಅಪಾಯ ಸಂಭವಿಸಲಿಲ್ಲವೆಂದೂ ವರದಿಯಾಗಿದೆ

ಹಿಂದೂಸ್ತಾನಿ ಭಾಷೆ ಪ್ರಸಾರಕ್ಕೆ ೧೦ ಕೋಟಿ ರೂ.

ಹಿಂದೂಸ್ತಾನಿ ಭಾಷೆಯನ್ನು ಪ್ರಸಾರ ಮಾಡಲು ಭಾರತ ಸರ್ಕಾರದವರು ೧೦ ಕೋಟಿ ರೂ ಗಳನ್ನು ಮಂಜೂರು ಮಾಡುವುದಾಗಿ ಗೊತ್ತಾಗಿದೆ

ಸಕ್ಕರೆಯು ಹತೋಟಿಗೆ ಒಳಪಟ್ಟಿತು

ಭಾರತ ಸರ್ಕಾರದವರು ಸಕ್ಕರೆಯನ್ನು ತಮ್ಮ ಹತೋಟಿಗೆ ತೆಗೆದುಕೊಂಡಿದ್ದಾರೆ ಇದರಿಂದ ಯಾವುದೇ ಸಕ್ಕರೆ ಕಾರ್ಖಾನೆಯು ಸಕ್ಕರೆಯನ್ನು ಸರ್ಕಾರದ ಅಪ್ಪಣೆಯಿಲ್ಲದೆ ಹೊರಕ್ಕೆ ಕಳುಹುವಂತಿಲ್ಲ ಮತ್ತು ಸರ್ಕಾರದವರೇ ಹೊರಗಡೆ ಮಾರುವ ಬೆಲೆಯನ್ನು ನಿಗದಿಮಾಡುತ್ತಾರೆ ಈ ಆಜ್ಞೆಯು ಕೂಡಲೇ ಜಾರಿಗೆ ಬರಲಿದೆ

ಚಿತ್ರಾಂಗಿನಿ

ಬೆಂಗಳೂರಿನ ಶ್ರೀ ಬಿ ಕೆ ಗರುಡಾಚಾರ್‌ರವರ ಸಂಪಾದಕತ್ವದಲ್ಲಿ ಹೊರಡುವ 'ಚಿತ್ರಾಂಗಿನಿ' ಎಂಬ ನೂತನ ಸಚಿತ್ರ ಮತ್ತು ಸಾಮಾಜಿಕ ವಿದ್ಯಾರ್ಥಿ ಕನ್ನಡ ಮಾಸ ಪತ್ರಿಕೆಯು ನಮ್ಮ ಹಸ್ತಗತವಾಗಿದೆ ಈ ನೂತನ ಪತ್ರಿಕೆಯು ಚಿರಕಾಲ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ ಬೆಲೆ ೪ ಆಣೆ

ಶಾಂತಿ ಸಮ್ಮೇಳನಕ್ಕೆ ನೀಗ್ರೋ ಅಧ್ಯಕ್ಷರು

ಅಮೇರಿಕದ ಸುಪ್ರಸಿದ್ಧ ನೀಗ್ರೋ ಸಂಗೀತಗಾರರಾದ ಪಾಲ್‌ರಾಬ್ಸನ್ನರು ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನವರು ಏರ್ಪಡಿಸಿರುವ ಅ॥ ಭಾ॥ ಶಾಂತಿ ಸಮ್ಮೇಳನದ ಅಧ್ಯಕ್ಷತೆ ವಹಿಸುವರು ಈ ತಿಂಗಳು ೨೪ ರಿಂದ ೨೭ರವರೆಗೆ ಕಲ್ಕತ್ತದಲ್ಲಿ ಈ ಸಮ್ಮೇಳನವು ಸೇರುವುದು

ಸಿಂಗಪುರದಿಂದ ನ್ಯೂಯಾರ್ಕಿಗೆ ಮೃಗಗಳ ರವಾನೆ

ಕಳೆದ ತಿಂಗಳು ೧೯ ನೇ ತಾರೀಖು ಸಿಂಗಪುರದ ೩೦೦ ಜಾವಾ ಕೋತಿಗಳು, ೧೨ ಹೆಬ್ಬಾವುಗಳು, ೪ ಆನೆಮರಿಗಳು, ೪ ಕರಿಯ ಚಿರತೆಗಳು, ಒಂದು ದೊಡ್ಡ ಹುಲಿ, ೨೬ ಕಪಿಗಳು ಮತ್ತು ಬಾರ್ನಿಯೋದ ಒಂದು ಹೆಬ್ಬಾವು- ಇವುಗಳಿಂದ ಕೂಡಿದ ಒಂದು ಸಣ್ಣ ಮೃಗಾಲಯವನ್ನೇ ಹೊತ್ತು ಒಂದು ವಿಮಾನವು ಕಲ್ಕತ್ತಾ ಮಾರ್ಗವಾಗಿ ನ್ಯೂಯಾರ್ಕಿಗೆ ಹೊರಟಿತೆಂದು ವರದಿಯಾಗಿದೆ

ಕಾಶ್ಮೀರ ನಿರಾಶ್ರಿತರಿಗೆ ಪಟೇಲರ ದ್ರವ್ಯ ಸಹಾಯ

ಕಾಶ್ಮೀರ ಕಣಿವೆಯಲ್ಲಿ ವಾಸಿಸುತ್ತಿರುವ ನಿರಾಶ್ರಿತ ಜನರಿಗೆ ಚಳಿಗಾಲದ ಬಟ್ಟೆಗಳನ್ನು ದೊರಕಿಸುವ ಸಲುವಾಗಿ ಸರದಾರ್ ಪಟೇಲರು ೧ ಲಕ್ಷ ರೂಪಾಯಿಗಳ ದ್ರವ್ಯ ಸಹಾಯ ಮಾಡಿರುತ್ತಾರೆ ಪಂಡಿತ ನೆಹರೂರವರು ಜಮ್ಮುವಿನ ನಿರಾಶ್ರಿತರಿಗೆ ಪರಿಹಾರ ಒದಗಿಸಲು ೧೦ ಸಾವಿರ ರೂಗಳನ್ನು ಕೊಟ್ಟಿರುತ್ತಾರೆ

ಅಮೇರಿಕದಲ್ಲಿ ಏಳು ವರ್ಷ ವಯಸ್ಸಿನ ನೆಹರೂ

ಪಂಡಿತ ನೆಹರೂರವರನ್ನು ಹಿಂದೆ ಬ್ರಿಟಿಷ್ ಸರ್ಕಾರದವರು ಸೆರೆಮನೆಗೆ ಹಾಕಿದುದನ್ನು ಪ್ರತಿಭಟಿಸಲು ಅಮೇರಿಕದ ಹರ್ಬರ್ಟ್ ಡಾರ್ ಎಂಬ ಪ್ರೊಫೆಸರನು ಆಗ ತಾನೇ ಹುಟ್ಟಿದ ತನ್ನ ಮಗುವಿಗೆ ನೆಹರೂರವರ ಹೆಸರನ್ನಿಟ್ಟನು ಆ ಹುಡುಗನ ಪೂರ್ಣ ಹೆಸರು ಆರ್ಗ್ಯಾಂಡರ್ ನೆಹರು ಮಾರ್ಟಿನ್ ಆತನನ್ನು ಎಲ್ಲರೂ ಪಂಡಿತ್ ಎಂದು ಕರೆಯುತ್ತಾರೆ

ಹೈದ್ರಾಬಾದಿನಲ್ಲಿ ಮಿಲಿಟರಿ ಸರ್ಕಾರದ ಮುಕ್ತಾಯ

ಕಳೆದ ೧೪ ತಿಂಗಳಿನಿಂದಲೂ ಹೈದರಾಬಾದಿನಲ್ಲಿದ್ದ ಮಿಲಿಟರಿ ಆಡಳಿತವು ಈ ವರ್ಷಾಂತ್ಯದಲ್ಲಿ ಮುಕ್ತಾಯಗೊಳ್ಳುವುದೆಂದೂ, ಗೌರ್ನರರಾಗಿರುವ ಮೇಜರ್ ಜನರಲ್ ಚೌಧರಿಯವರ ಸ್ಥಾನದಲ್ಲಿ ಕೇಂದ್ರ ಸರ್ಕಾರದ ಸಂಸ್ಥಾನದ ಶಾಖೆಯ ಶ್ರೀ ಎ ಕೆ ವೆಲ್ಲೋಡಿಯವರನ್ನು ನೇಮಿಸಲಾಗುವುದೆಂದೂ ಗೊತ್ತಾಗಿದೆ ಈ ಬಗ್ಗೆ ನಾಳಿದ್ದು ಅಧಿಕೃತ ಪ್ರಕಟಣೆ ಹೊರಬೀಳಲಿದೆ.

ಸ್ಥಳೀಯ ಸಂಸ್ಥೆಗಳಿಗೂ ವಯಸ್ಕರ ಮತದಾನ ಪದ್ಧತಿ

ಬೊಂಬಾಯಿ ಪ್ರಾಂತದಲ್ಲಿರುವ ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ವಯಸ್ಕರ ಮತದಾನ ಪದ್ಧತಿಯನ್ನು ಜಾರಿಗೆ ತರಲು ಅಲ್ಲಿನ ಸರ್ಕಾರದವರು ತೀರ್ಮಾನಿಸಿದ್ದಾರೆ

ಪಾಕೀಸ್ತಾನದಿಂದ ಗಡಿ ಅತಿಕ್ರಮಣ

ಭಾರತ ಮತ್ತು ಪಾಕೀಸ್ತಾನಗಳ ಗಡಿ ಪ್ರದೇಶದಲ್ಲಿ ಖಾಸಿ ಮತ್ತು ಜಯಂತಿಯ ಗುಡ್ಡಗಳ ಬಳಿ ಭಾರತಕ್ಕೆ ಸೇರಿದ್ದ ಒಂದು ಮೈಲಿ ಪ್ರದೇಶವನ್ನು ಪಾಕೀಸ್ತಾನವು ಅಕ್ರಮವಾಗಿ ಆಕ್ರಮಿಸಿಕೊಂಡಿದೆ ಯೆಂದು ಹೇಳಲಾಗಿದೆ ಕಳೆದ ಜನವರಿ ೧ನೇ ತಾ॥ ಪಾಕೀಸ್ತಾನದ ಅಧಿಕಾರಿಗಳು ಶಿಲ್ಲಾಂಗ್ ಮತ್ತು ಸಿಲ್ಹಟ್ ರಸ್ತೆಯ ೩೬ ನೇ ಮೈಲಿಯ ಬಳಿ ಇದ್ದ ಗಡಿಯನ್ನು ನಾಶಪಡಿಸಿ, ಅದನ್ನು ಒಂದು ಮೈಲಿ ದೂರಕ್ಕೆ ಹಾಕಿದ್ದಾರೆಂದು ವರದಿಯಾಗಿದೆ

ಮೈಸೂರನ್ನೊಳಗೊಂಡ ಕರ್ಣಾಟಕ ಪ್ರಾಂತ ರಚನೆ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರ

ಬೆಂಗಳೂರು ೭

ಮೈಸೂರನ್ನೊಳಗೊಂಡ ಕರ್ಣಾಟಕ ಪ್ರಾಂತ್ಯವು ರಚನೆಯಾಗಿ ಅದಕ್ಕೆ ಶ್ರೀ ಮನ್ಮಹಾರಾಜರವರು ಶಾಸನ ಬದ್ಧ ಅಧಿಪತಿಗಳಾಗಿರಬೇಕಾದದು ಅವಶ್ಯಕವೆಂದೂ, ಈ ಕಾರ್ಯಕ್ರಮವು ನೂತನ ಭಾರತ ರಾಜ್ಯಾಂಗದಲ್ಲಿ ನಮೂದಿಸಿರುವ ಪ್ರಕಾರ ನಡೆಯತಕ್ಕದ್ದೆಂದೂ, ಮೊನ್ನೆ ದಿನ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ

ಜಾಡಮಾಲಿಗಳ ಮುಷ್ಕರ ಮುಕ್ತಾಯ

ನಂಜನಗೂಡು ೭

ಇಲ್ಲಿನ ಪುರಸಭೆಯವರಿಗೂ ಮತ್ತು ಕೆಲಸಗಾರರಿಗೂ ಆದ ಸಂಧಾನದ ಫಲವಾಗಿ ಜಾಡಮಾಲಿಗಳ ಮುಷ್ಕರವು ಮೊನ್ನೆಯಿಂದ ಮುಕ್ತಾಯಗೊಂಡು ಜನರುಗಳು ಕೆಲಸಕ್ಕೆ ಹಿಂದಿರುಗಿದರು. ಗಂಡಸರಿಗೆ ೧೮ ರೂ ಸಂಬಳ, ೧೩ ರೂ ತುಟ್ಟಿ ಭತ್ಯ ಮತ್ತು ಹೆಂಗಸರಿಗೆ ೧೪ ರೂ ಸಂಬಳ ಮತ್ತು ೧೩ ರೂ ತುಟ್ಟಿ ಭತ್ಯ ಮತ್ತು ಇತರ ಸೌಲಭ್ಯಗಳನ್ನು ಕೊಡಲು ಪುರಸಭೆಯವರು ಒಪ್ಪಿದ್ದಾರೆ

ರಾಜಧಾನಿಯ ಧನ್ವಂತರಿ ರಸ್ತೆಯಲ್ಲಿರುವ ೧೧ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲ್ ಕಟ್ಟಡಗಳಲ್ಲಿ ಮೈಸೂರಿನ ಹಿಂದಿ ವಿದ್ಯಾಲಯದವರು ಪ್ರತಿದಿನ ಸಂಜೆ ೫-೩೦ ರಿಂದ ೭-೩೦ರವರೆಗೆ ಹಿಂದಿ ಶಿಕ್ಷಣ ತರಗತಿಗಳನ್ನು ನಡೆಸಲು ಏರ್ಪಡಿಸಿದ್ದಾರೆ

ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣವೇ ನಮ್ಮ ಗುರಿ

ಸರ್ವ ಪಕ್ಷ ಸಮ್ಮೇಳನದಲ್ಲಿ ಶ್ರೀ ಬೋರಣ್ಣ ಗೌಡರ ಭಾಷಣ

ಅರಸೀಕೆರೆ, ೭

ನಿನ್ನೆ ಇಲ್ಲಿ ನಡೆದ ಸರ್ವಪಕ್ಷ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದ ಶ್ರೀ ಬಿ.ಎನ್. ಬೋರಣ್ಣಗೌಡರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು:—

ನಾವು ಕಾಂಗ್ರೆಸ್ ಸಂಸ್ಥೆಯಲ್ಲಿ ಹಲವಾರು ವರುಷಗಳಿಂದ ಕನ್ನಡ ಪ್ರಾಂತ ರಚನೆಯಾಗಬೇಕೆಂದು ಹೇಳಿಕೊಂಡು ಬಂದಿದ್ದೇವೆ. ಅ|| ಭಾ|| ಕಾಂಗ್ರೆಸ್ಸಿನವರು ನೆಹ್ರು ಸಮಿತಿಯ ವರದಿಗನುಸಾರವಾಗಿ ೧೯೨೦ನೇ ಸಂವತ್ಸರದಲ್ಲೇ ಕರ್ನಾಟಕ ಪ್ರಾಂತದ ರೂಪು ನಿರ್ಧರಿಸಿ ಇಲ್ಲಿಗೆ ಒಂದೇ ಕಾಂಗ್ರೆಸ್ ಕಮಿಟಿಯನ್ನು ರಚಿಸಿದರು. ಅಲ್ಲಿಂದ ಇಲ್ಲಿಯವರೆಗೆ ಪ್ರತಿಯೊಬ್ಬ ವಿಚಾರಶೀಲ ಕನ್ನಡಿಗನ ಹೃದಯದಲ್ಲೂ ನಾಡಿನ ಹೊಂಗನಸು ಮೂಡಿಬರುತ್ತಿತ್ತು. ಮೈಸೂರು ಕಾಂಗ್ರೆಸ್ಸಿನಲ್ಲಿಯೂ ಕೂಡ ಶಿವಪುರದಿಂದ ಹಿಡಿದು ಸುಭಾಷ್ ನಗರದ ಅಧಿವೇಶನದ ವರೆಗೆ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ಘೋಷಣೆಗಳನ್ನು ಮಾಡಿಕೊಂಡು ಬಂದಿವೆ. ಈ ಚಿಗೂಬೀರೂರು ಎ.ಐ.ಸಿ.ಸಿ ಅಧಿವೇಶನದಲ್ಲಿ ಅದನ್ನು ಪುನಃ ಘೋಷಿಸಲಾಗಿದೆ. ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷದವರು ಅಧಿಕಾರಕ್ಕೆ ಬರುವವರೆಗೆ ಪ್ರಾಂತೀಕರಣಕ್ಕೆ ಯಾರೊಬ್ಬರೂ ಮರುಮಾತು ನುಡಿಯುವವರಿರಲಿಲ್ಲ.

ಅಷ್ಟೇ ಏಕೆ, ನಾವೆಲ್ಲರೂ ಕನ್ನಡನಾಡಿನ ನಾನಾ ಭಾಗಗಳಲ್ಲಿ ಅಣ್ಣ ತಮ್ಮಂದಿರಂತೆ ನಿಂತು ಹೋರಾಡಿದೆವು. ನಾವು ಸಿರಸಿ, ಸಿದ್ದಾಪುರಗಳಲ್ಲಿ ಆದ ಸತ್ಯಾಗ್ರಹದಲ್ಲಿ ಭಾಗವಹಿಸಿ ಅಲ್ಲೇ ತುರುಂಗ ಸೇರಿದ್ದೇವೆ. ಹತ್ತಾರು ವರ್ಷ ಅಲ್ಲೇ ನಿಂತು ಕೆಲಸ ಮಾಡಿದ್ದೇವೆ. ಉತ್ತರ ಕರ್ನಾಟಕದವರು ಕೂಡ ನಮ್ಮ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಭಾಗವಹಿಸಿದ್ದಾರೆ. ೧೯೪೭ರ ಹೋರಾಟದಲ್ಲಿಯೂ ಅವರು ತುಂಬ ಸಹಾಯ ಮಾಡಿದುದು ಎಲ್ಲರಿಗೂ ತಿಳಿದೇ ಇದೆ. ಆಗಿನಿಂದಲೂ ನಾವು ಒಂದು ಪ್ರಾಂತಕ್ಕೆ ಸೇರಿದವರೆಂಬ ಭರವಸೆಯಿಂದಲೇ ಕೆಲಸ ಮಾಡುತ್ತಿದ್ದೇವೆ.

ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಮೇಲೆ ನಮ್ಮ ನಾಯಕರು ತಿರುಗುಮುರುಗಾಗಿದ್ದಾರೆ. ಒಮ್ಮೆಗೇ ಇವರಲ್ಲಿ ರಾಜಪ್ರೇಮ ಉದಯಿಸಿದೆ. ಹೀಗೆ ಅಂತರರಾಷ್ಟ್ರೀಯ ತತ್ವಗಳನ್ನು ಬಾಯಲ್ಲಿ ಹೇಳುತ್ತಾ ಕೊನೆಗೆ ಏಕೀಕರಣಕ್ಕೆ ಇದು 'ಸಕಾಲವಲ್ಲ' ಎಂದು ಹೇಳುವ ಮಟ್ಟಿಗೆ ಬಂದಿದ್ದಾರೆ. ಮೊನ್ನೆ ಅಸೆಂಬ್ಲಿಯಲ್ಲಿ ಆದ ನಿರ್ಣಯ ಈ ಮಾತನ್ನಾಡಿಸಿದೆ. ಹೀಗೆ ಪ್ರಗತಿ ವಿರುದ್ಧವಾಗಿ ಹರಿಯುತ್ತಿರುವ ಪಕ್ಷವನ್ನು ವಿರೋಧಿಸಿ ನಮ್ಮ ಕರ್ತವ್ಯವನ್ನು ನಡೆಸಲು ಉದ್ದೇಶಿಸಿ ಹೊರಟಿರುವ ಈ ಸಮ್ಮೇಳನವನ್ನು ನಾನು ಅತ್ಯಂತ ಆನಂದದಿಂದ ಉದ್ಘಾಟಿಸುತ್ತೇನೆ.

ರಾಜಪ್ರೇಮ ಎಂಥದು

ಮೈಸೂರಿನ ಹಲವರಲ್ಲಿ ಹಠಾತ್ತನೆ ಬೆಳೆದಿರುವ ಈ ರಾಜಪ್ರೇಮ, ಸ್ವಾರ್ಥ ... ಜನರಿಗೆ ... ಅನೇಕ ರಾಜರವಿರುದ್ಧ ಘೋಷಣೆಗಳನ್ನು ಮಾಡಿರುವ ತುರಂಗ ಸೇರಿದವರೂ ಇದ್ದಾರೆ ಈಗ್ಗೆ ಎರಡು ವರ್ಷಗಳಲ್ಲಿ ರಾಜರನ್ನು ಕಿತ್ತು ಹಾಕಲು ಪಣ ತೊಟ್ಟಿದ್ದವರೂ ಇದ್ದಾರೆ. ಈಗ ಮಾತ್ರ 'ರಾಜರು ದೇವಾಂಶ' ಎಂದು ಹೇಳಲೂ ಹೇಸುತ್ತಿಲ್ಲ. ಇದರ ಹಿನ್ನಲೆ ಎಲ್ಲರಿಗೂ ತಿಳಿದಿದೆ. ಕರ್ನಾಟಕ ಏಕೀಕರಣ ಸಾಧಿಸಲು ಮೈಸೂರು ಕಾಂಗ್ರೆಸ್ ಬದ್ಧವಾಗಿದೆ. ಹಿಂದಿನ ನಿರ್ಣಯಗಳೇ ಇದಕ್ಕೆ ಆಧಾರ.

ಇದನ್ನು ತಿಳಿದ ವಿರೋಧಿಗಳು ರಾಜರನ್ನು ಹಿಡಿದರೆ ತಮಗೆ ಉಳಿಗಾಲವೆಂದು ರಾಜರ ಹೆಸರನ್ನು ಮೇಲೆ ಎತ್ತಲು ಪ್ರಾರಂಭ ಮಾಡಿದರು. ರಾಜರು ಉಳಿಯಲಿ ಎಂದು ಪ್ರಯತ್ನ ಮಾಡಿದರು. ಮುಖ್ಯಮಂತ್ರಿ ರೆಡ್ಡಿಯಂಥವರೂ ಕೂಡಾ ಈ ನಾಟಕವಾಡಲು ತೊಡಗಿದ್ದಾರೆ ಅವರ ಹಿಂಬಾಲಕರಂತೂ ಸರಿಯೇ ಸರಿ. ಇದರ ಪರಿಣಾಮವಾಗಿ ಮೊನ್ನಿನ ಅಸೆಂಬ್ಲಿ ನಿರ್ಣಯವಾಗಿದೆ ಆದರೆ ಜನತೆಗೆ ಇದರ ಹಿನ್ನಲೆ ತಿಳಿಯಲಿಲ್ಲ ಏಕೀಕರಣವನ್ನು ವಿರೋಧಿಸಲು ಹೂಡಿದ ಆಟಗಳು ಇವೆಲ್ಲ ಬೀಸುವ ದೊಣ್ಣೆಗೆ ತಲೆ ತಪ್ಪಲಿ ಎಂಬ ಕುತಂತ್ರಗಳು.

ಇದು ನಿಜವಾದ ರಾಜಪ್ರೇಮದಿಂದ ಅಲ್ಲ. ನಾನು ಈ ವಿರೋಧ ಮಾಡುವವರ ಕೂಡ ಮಾತನಾಡಿದ್ದೇನೆ ಅವರು ಅಂತರಂಗವಾಗಿ ಮಾತನಾಡುವಾಗ 'ರಾಜರ ಮೇಲಿನ ಪ್ರೇಮವೇನಿಲ್ಲ" ಎಂದು ಒಪ್ಪಿಕೊಳ್ಳುತ್ತಾರೆ ಇಂಥ ಹಿಂಬಾಲಕರನ್ನು ಇಟ್ಟುಕೊಂಡು ನಮ್ಮ ರಾಜರು ಮೋಸ ಹೋಗುತ್ತಿದ್ದಾರೆ. ಹಿಂದೊಮ್ಮೆ ತಂಬೂಚೆಟ್ಟಿ, ಆರ್ಕಾಟ್ ಮೊದಲಿಯಾರರ ಮಾಯಾ ಜಾಲಕ್ಕೂ ಸಿಕ್ಕಿ ಪ್ರಗತಿ ವಿರೋಧವಾಗಿ ವರ್ತಿಸಿ ನೂರಾರು ಮೈಸೂರು ಮಕ್ಕಳ ಬಲಿಯಾಗುವಂತೆ ಆಯಿತು. ಈಗ ಈ ಎರಡನೆಯ ಜಾಲದಲ್ಲಿ ಸಿಕ್ಕಬೇಡಿರೆಂದು ನಾವು ಅತ್ಯಂತ ವಿನಯದಿಂದ ಅವರನ್ನು ಕೇಳಿಕೊಳ್ಳುತ್ತೇವೆ ದೇಶದಲ್ಲಿ ಹರಿಯುತ್ತಿರುವ ಪ್ರಗತಿ ಶಕ್ತಿಗಳನ್ನು ತಿಳಿದುಕೊಂಡು ಮುನ್ನಡೆಯಬೇಕೆಂದು ಪ್ರಾರ್ಥಿಸುತ್ತೇವೆ ಇದೇ ಸಮಯದಲ್ಲಿ ನಾನು ಒಂದು ಮಾತನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ ನಮಗೆ ರಾಜರ ಮೇಲೆ ಇರತಕ್ಕ ನಿರ್ವ್ಯಾಜ ಪ್ರೇಮದಿಂದ ಅವರಿಗೆ ಈ ಮಾತು ಹೇಳುತ್ತಿದ್ದೇನೆಯೇ ವಿನಾ ದ್ರೋಹದಿಂದಲ್ಲ.

ಸಕಾಲವಲ್ಲವೆ ?

'ಇದು ಸಕಾಲವಲ್ಲ' ಎಂದು ಇವರು ಹೇಳುತ್ತಾರೆ. ಏನು ಹಾಗೆಂದರೆ? ಯಾಕೆ ಸಕಾಲವಲ್ಲ-ಎಂದು ಅವರು ಸ್ಪಷ್ಟಪಡಿಸಿಲ್ಲ. ದೇಶದಲ್ಲಿ ಅಶಾಂತಿ ಹಬ್ಬುವುದು, ಹಿಂದೂಸ್ಥಾನದ ಸರಕಾರಕ್ಕೆ ಬೇರೆ ಮುಖ್ಯವ ಕೆಲಸಗಳಿವೆ ಇತ್ಯಾದಿ ಕಾರಣವನ್ನು ಕೆಲವರು ಕೊಡುತ್ತಿರುತ್ತಾರೆ ಈಗಾಗಲೇ ಆಂಧ್ರ, ಮಹಾರಾಷ್ಟ್ರ ಮುಂತಾದ ಪ್ರಾಂತರಚನೆಯ ಸಿದ್ಧತೆಗಳು ಕಾಣುತ್ತಿವೆ ಅವೆಲ್ಲಾ ಆಗಬಹುದಾದಾಗ ಕನ್ನಡ ಪ್ರಾಂತರಚನೆಗೇಕೆ ಅಡ್ಡಿ? ಇವೆಲ್ಲ ಕಾರಣವಲ್ಲ. ನಮ್ಮ ವಿರೋಧಿಗಳ ಹೇಳುವ ಮಾತಿನ ಹಿಂದೆ ಯಾವುದೋ ಕಾರಣವಿದೆ. ಅದನ್ನು ಬಾಯಲ್ಲಿ ಆಡುವುದಿಲ್ಲ ಅಷ್ಟೆ

ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ

ಈಗಿನ ಮಂತ್ರಿಗಳಲ್ಲಿ ಕೆಲವರು ಅವರ ಹಿಂಬಾಲಕರು, ಅವರಿಂದ ಪ್ರತಿಫಲ ಪಡೆಯುತ್ತಿರುವವರು, ಇವರೆಲ್ಲ ಪ್ರಾಂತೀಕರಣ ಬೇಡವೆನ್ನುತ್ತಿದ್ದಾರೆ ಹಾಗೆ ವಿಶಾಲ ಪ್ರಾಂತವಾದರೆ ತಮ್ಮ ಅಧಿಕಾರವೇ ನಡೆಯುವುದಿಲ್ಲ-ಎಂಬ ಹೆದರಿಕೆ. ಇವರಿಗೆ ತಮ್ಮ ಸರ್ವಾಧಿಕಾರ ತಪ್ಪುವುದೆಂಬ ಭಯವಿದೆ ತಾವು ಪಡೆಯುತ್ತಿದ್ದ ಸವಲತ್ತುಗಳಿಗೆ ಕಲ್ಲು ಬೀಳುವುದೆಂಬ ಸಂಶಯವಿದೆ ಹೀಗೆ ಅಧಿಕಾರ ಸ್ವಾರ್ಥ ಇದೇ ಈ ವಿರೋಧಿಗಳ ಕಾರಣವಾಗಿದೆ.

ಈ ಅನ್ಯಾಯ ತಾಳಲಾರೆವು

ಈ ಅನ್ಯಾಯವನ್ನು ನಾವು ತಾಳಲಾರೆವು. ವರುಷ ವರುಷಗಳಿಂದ ನಾವು ಹಂಬಲಿಸುತ್ತಿದ್ದ ಕನಸು ನನಸಾಗುವ ಈ ಸಮಯದಲ್ಲಿ ಕೇಂದ್ರದವರು ಒಪ್ಪಿ ನಿಮ್ಮ ಪ್ರಾಂತ ರಚನೆ ಮಾಡಿಕೊಳ್ಳಿ ಎಂದು ಹೇಳಿರುವ ಈ ಸಮಯದಲ್ಲಿ ಹೀಗೆ ವಿರೋಧ ಬಂದಿರುವುದು ನಮ್ಮ ದೇಶದ ದೌರ್ಭಾಗ್ಯ. ಇದನ್ನು ಕಂಡು 'ಪ್ರತಿಗಾಮಿ ಶಕ್ತಿಗಳು' ಬಲವಾಗುತ್ತಿವೆ ಎಂದು ಹೇಳದೆ ವಿಧಿಯಿಲ್ಲ.

ಕನ್ನಡ ಪ್ರಾಂತ ರಚನೆಯಾದರೆ ಬುದ್ಧಿಜೀವಿಗಳಾದ ಮೈಸೂರಿನವರಿಗೆ ಪ್ರಾಧಾನ್ಯತೆ ಸಿಕ್ಕೇಸಿಗುವುದು ಕರ್ನಾಟಕದ ಅರ್ಧಭಾಗವೇ ಇರುವ ಮೈಸೂರು ಯಾವ ವಿಧದಲ್ಲೂ ಹಿಂದುಳಿಯುವುದಿಲ್ಲ ಉತ್ತರ ಕರ್ನಾಟಕದ ಅತುಳ ಭೂ ಸಂಪತ್ತು ಸಮುದ್ರ ತೀರದ ಅನುಕೂಲತೆಗಳು ಒದಗಿ ನಮ್ಮ ಪ್ರಾಂತ ಆಹಾರದ ವಿಷಯದಲ್ಲಿ ಸ್ವಯಂ ಪೂರ್ಣವಾಗುವುದು.

ಕೇಂದ್ರದ ಪ್ರಗತಿ ಧೋರಣೆ

ಕೇಂದ್ರ ಸರ್ಕಾರದವರು ನಮಗಿಂತ ಪ್ರಗತಿಶೀಲರಾಗಿದ್ದಾರೆ "ಮೈಸೂರಿಗೆ ಪ್ರತ್ಯೇಕತೆ ಬೇಕು, ವೈಶಿಷ್ಟ್ಯ ಉಳಿಸಿಕೊಡಬೇಕು, ಮಹಾರಾಜರಿಗೆ ವಿಶೇಷ ಅಧಿಕಾರ ಬೇಕು. 'ರೂಲರು'ಎಂಬ ಹೆಸರಿಡಬೇಕು, ನಮ್ಮ ಮೇಲೆ ಕೇಂದ್ರದ ಹತೋಟಿ ಇರಬಾರದು." ಹೀಗೆ ಅನೇಕ ಬೇಡಿಕೆಗಳನ್ನು ಮೈಸೂರಿನವರು ಇಟ್ಟಾಗ್ಯೂ ಅದನ್ನು ಒಂದನ್ನೂ ಕೇಂದ್ರದವರು ಮಾನ್ಯ ಮಾಡಲಿಲ್ಲ ಇದರಲ್ಲಿ ಅವರ ಧೋರಣೆ ಸ್ಪಷ್ಟವಾಗಿ ತಿಳಿಯುವುದು. ಮಹಾರಾಜರು ರಾಜಪ್ರಮುಖರಾಗುವರು. ಮುಂದಿನ ಹೆಜ್ಜೆಯೇನು ಎಂಬುದು ಎಲ್ಲರಿಗೂ ತಿಳಿದೇ ಇದೆ. "ರಿಪಬ್ಲಿಕ್" "ಸರ್ವತಂತ್ರ ಸ್ವತಂತ್ರ" ವಾದ ದೇಶದ ಮಡಿಲಲ್ಲಿ ಒಂದು ರಾಜಶಾಹಿಯನ್ನು ಉಳಿಸಿಕೊಂಡು ಬರುವುದೆಂದರೆ, ಅದು ಪರಸ್ಪರ ವಿರೋಧಾಭಾಸ ವೆಂಬ ವಿಷಯ ಎಲ್ಲ ರಾಜಕಾರಣಿಗೆ ತಿಳಿದಿದೆ. ಕೇಂದ್ರ ಸರಕಾರಕ್ಕೂ ತಿ... ಬೇಕು.

ಸದವಕಾಶ

ನಮ್ಮಲ್ಲಿ ಆಡಳಿತ ನಡೆಸುತ್ತಿರುವ... ಗೆ ದೇವರು ಈಗಲಾದರೂ ಬುದ್ಧಿ ಕೊ... ಲಿ. ನವೆಂಬರು ೧೫ರೊಳಗೆ ಪ್ರಾಂತ ... ಮಾಡಬಹುದಾದ ಅವಕಾಶ ನಮಗೆ ... ಗಿ ಬಂದಿದೆ ಅದನ್ನು ಅವರು ಕಳೆದು ... ಕ್ಕದಿರಲಿ.

Intermediate Examination
— OF MARCH 1950 —
Classes begin on 11—11—49
City Tutorial College
1531 VANIVILAS ROAD, MYSORE

ಮಕ್ಕಳ ಅಪತ್ಕಾಲಿಗೆ
ಅವರ್ ಹೌಸ್, ಮೈಸೂರು

Edited, printed and published by A.R Nagarajan at Sadhvi Press, D Subbiah Road, Mysore.

ರೂಪಾಯಿಗೆ ಚಿಲ್ಲರೆ ಕೊಡಬಲ್ಲ ಪಕ್ಷಿ

ಕುಂಭಕೋಣದಲ್ಲಿ ಒಬ್ಬ ವ್ಯಾಪಾ... ನ ಬಳಿ ಇರುವ ಪಕ್ಷಿಯೊಂದು ರೂಪಾ... ಯನ್ನು ಕೊಟ್ಟರೆ ಅದಕ್ಕೆ ಬದಲಾಗಿ ... ರೆಯನ್ನು ಎಣಿಕೆ ಮಾಡಿಕೊಡುತ್ತದೆ... ನ್ನ ಯಜಮಾನನ ಸೂಚನೆ ಪ್ರಕಾ... ದು ನಡೆದುಕೊಳ್ಳುತ್ತದೆ ಹಣದ ... ಯು ಎದುರಿಗಿದ್ದರೆ, ಅದರಿಂದ ... ರೂ ಚಿಲ್ಲರೆ ಕೇಳಿದರೆ ಸರಿಯಾಗಿ ... ಕೊಡಬಲ್ಲದು ಇದಕ್ಕೆ ಗಣಿತ ಶಾ... ಗೊತ್ತೆಂದು ಕಾಣಬರುತ್ತದೆ. ನಾ... ಕೊಟ್ಟರೆ, ಅರ್ಧಾಣೆಯನ್ನಿಟ್ಟುಕೊ... ಉಳಿದುದನ್ನು ವಾಪಸು ಕೇಳಿದರೆ ... ಣೆಯನ್ನು ಎಣಿಸಿಕೊಡಬಲ್ಲದು. ಹ... ಕಾಲದ ನಾಣ್ಯಗಳನ್ನು ಈಗ ಚಲಾ... ಯಲ್ಲಿರುವ ನಾಣ್ಯಗಳಿಂದ ಸುಲಭ... ಪ್ರತ್ಯೇಕಿಸುವುದು ಮತ್ತು ತಮಿಳ... ಷೆಯಲ್ಲಿ ಕೊಡಬಹುದಾದ ಎಲ್ಲಾ ... ನೆಗಳನ್ನೂ ಅರ್ಥ ಮಾಡಿಕೊಳ್ಳಬ...

ಕೂನೂರು ಹತ್ತಿರ ಭೂಕ...

ಕೂನೂರಿಗೆ ಆರು ಮೈಲಿದೂರ... ವೆಲ್ಲಿಂಗ್‌ಟನ್ನಿನ ಬಳಿ ಕಳೆದ ಬುಧ... ಭೂಮಿಯು ನಡುಗಿದುದರ ಫಲವಾ... ಫರ್ಲಾಂಗ್ ನಷ್ಟು ದೂರದವರೆಗೆ ಭೂ... ಯು ಧಾರಿ ಬಿರುಕನ್ನು ಬಿಟ್ಟು, ೭೦ ... ಎತ್ತರದವರೆಗೆ ಕನಗಿದ ಕಪ್ಪು ಮಣ್ಣು ... ಲಕ್ಕೆ ಎರಚಲ್ಪಟ್ಟಿತೆಂದು ಹೇಳಲಾ... ಯಾರಿಗೂ ಪ್ರಾಣಾಪಾಯವಾಗಲಿಲ್ಲ...

ಪರ್ಷಿಯಾ ಮಾಜಿ ಪ್ರಧಾ... ಕೊಲೆ

ಪರ್ಷಿಯಾದ ಮಾಜಿ ಪ್ರಧಾನಿ ... ಲ್ ಹುಸೇನ್ ಅಜಿಹೀರ್‌ರವರು ... ಡಿನ ಮಸೀದಿಯಲ್ಲಿ ಪ್ರಾರ್ಥನೆಗಾಗಿ ... ಗಿದ್ದಾಗ ಅವರ ಮೇಲೆ ಮುಸ್ಲಿಮನೊ... ನು ಗುಂಡು ಹಾರಿಸಿದನೆಂದೂ, ಅದ... ಅವರಿಗೆ ತೀವ್ರ ಗಾಯವಾಗಿ ಮೃತ... ರೆಂದೂ ವರದಿಯಾಗಿದೆ.

ಟೆಂಡರು ಪ್ರಕಟಣೆ

ಆಹಾರ ಮತ್ತು ಆಸ್ಪತ್ರೆಗೆ ಆವಶ್ಯಕ... ಇತರ ಸಾಮಾನುಗಳ ಮತ್ತು ಶುದ್ಧವಾದ ... ಸುವಿನ ಹಾಲಿನ ಸರಬರಾಜಿನ ಬಗ್ಗೆ ೧೯... ನವೆಂಬರ್ ೧೧ನೇ ಸೋಮವಾರ ಪ್ರಾತಃ... ೧೧ ಘಂಟೆಯಿಂದ ೧೧ ಘಂಟೆವರೆಗೆ ಕೆಳಗೆ ರುಜು ... ರುವವರಿಂದ ಅವರ ಕಛೇರಿಯಲ್ಲಿ ಮೊ... ಟೆಂಡರುಗಳು ಸ್ವೀಕರಿಸಲ್ಪಡುವುವು.

ಹೆಚ್ಚಿನ ವಿವರಗಳಿಗೆ ೧೯೪೯ನೇ ಅಕ್ಟೋ... ೨೬ನೇ ತಾರೀಖಿನ ಮೈಸೂರು ಗೆ... ೨ನೇ ಭಾಗದಲ್ಲಿ ೧೧೧೧ ಮತ್ತು ... ಪುಟವನ್ನು ದಯವಿಟ್ಟು ನೋಡಿ.

ಮೆಡಿಕಲ್ ಆಫೀ...
ಸಾಂಕ್ರಾಮಿಕ ರೋ...
ಆಸ್ಪತ್ರೆ, ಮೈಸೂ...

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೮-೧೧-೪೯ [ಸಂಚಿಕೆ ೮೫

ಕರ್ಣಾಟಕ ಪ್ರಾಂತ – ರಚನೆಗೆ ಒತ್ತಾಯ –

ಗೋಡ್ಸೆ, ಆಪ್ಟೆರವರುಗಳ ಕ್ಷಮಾ ಅರ್ಜಿ ನಿರಾಕರಣೆ

ಮಹಾತ್ಮ ಗಾಂಧಿ ಕೊಲೆ ಪಾತಕರಾದ ನಾಥುರಾಂ ಗೋಡ್ಸೆಯ ಪರವಾಗಿ ಅವರ ಬಂಧುಗಳೂ ಮತ್ತು ನಾರಾಯಣ ಆಪ್ಟೆಯೂ ಗವರ್ನರ್ ಜನರಲ್ಲರಿಗೆ ಸಲ್ಲಿಸಿದ್ದ ಕ್ಷಮಾ ಅರ್ಜಿಯನ್ನು ಅವರು ನಿರಾಕರಿಸಿರುತ್ತಾರೆ. ಮೊದಲೇ ವಿಧಾಯಿಸಿದಂತೆ ಅವರುಗಳನ್ನು ಇದೇ ೧೫ನೇ ತಾರೀಖು ಅಂಬಾಲದಲ್ಲಿ ಗಲ್ಲಿಗೇರಿಸಲಾಗುವುದು.

ಬೊಂಬಾಯಿ ಲಕ್ಷಾಧೀಶರಿಗೆ ೧ ದಿನ ಸಾದಾ ಸಜಾ

ಅಕ್ರಮವಾಗಿ ೧೪೧ ಪೌಂಡು ಸಕ್ಕರೆಯನ್ನು ತಮ್ಮಲ್ಲಿ ದಾಸ್ತಾನಿಟ್ಟಿದ್ದರೆಂಬ ಕಾರಣದ ಮೇಲೆ ಬೊಂಬಾಯಿನ ಲಕ್ಷಾಧೀಶರೊಬ್ಬರಿಗೆ ಒಂದು ದಿನ ಸಾದಾ ಸಜಾ ಮತ್ತು ೨೦೦ ರೂ. ಜುಲ್ಮಾನೆ ವಿಧಿಸಲಾಗಿದೆ.

ನೆಹರೂರವರ ಅಮೆರಿಕ ಪ್ರವಾಸ ಮುಕ್ತಾಯ

ಪ್ರಧಾನಿ ಪಂಡಿತ ನೆಹರೂರವರು ತಮ್ಮ ಅಮೆರಿಕಾ ಪ್ರವಾಸವನ್ನು ಮುಗಿಸಿಕೊಂಡು ಈ ದಿನ ಇಂಗ್ಲೆಂಡನ್ನು ತಲಪುವರೆಂದು ಹೇಳಲಾಗಿದೆ.

ರಷ್ಯದಿಂದ ಕಮ್ಯೂನಿಸ್ಟ್ ಚೀನಾ ಸೈನ್ಯಗಳ ತರಪೇತು

ಚೀನಾ ಕಮ್ಯೂನಿಸ್ಟ್ ಸರ್ಕಾರವು ಆಗಾಧ ವೈಮಾನಿಕ ಪಡೆಯನ್ನು ಸಿದ್ಧಗೊಳಿಸುತ್ತಿದೆಯೆಂದೂ, ಈಗಾಗಲೇ ಉತ್ತರ ಮಂಚೂರಿಯಾದಲ್ಲಿ ರಷ್ಯವು ಚೀನಾ ಕಮ್ಯೂನಿಸ್ಟ್ ಪಡೆಗಳಿಗೆ ತರಪೇತು ಕೊಡುತ್ತಿದೆಯೆಂದೂ ವರದಿಯಾಗಿದೆ

ಪುರಸಭಾ ಚುನಾವಣಾ ಪ್ರಚಾರದ ಪ್ರಾರಂಭೋತ್ಸವ

ಮೈಸೂರು ೮

ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಾಳಿದ್ದು ಗುರುವಾರ ಸಂಜೆ ೬–೩೦ ಗಂಟೆಗೆ ಟೌನ್‌ಹಾಲಿನಲ್ಲಿ ಪುರಸಭಾ ಚುನಾವಣಾ ಪ್ರಚಾರದ ಪ್ರಾರಂಭ ಭಾಷಣ ಮಾಡುವರೆಂದು ಚುನಾವಣಾ ಸಮಿತಿಯ ಸಂಚಾಲಕರಾದ ಶ್ರೀ ಎಸ್. ಚನ್ನಯ್ಯನವರು ತಿಳಿಸಿರುತ್ತಾರೆ. ಸರ್ವರಿಗೂ ಸ್ವಾಗತವಿದೆ

ವಿರೋಧಿ ದಿನ ಪತ್ರಿಕೆ

ಬೆಂಗಳೂರಿನಲ್ಲಿ ಶ್ರೀ ಗುಂಡಯ್ಯ ಶೆಟ್ಟಿರವರಿಂದ ೮ ಮತ್ತು ೫ನೇ ತಾರೀಖಿನಲ್ಲಿ ಪ್ರಕಟಿಸಲ್ಪಟ್ಟ ವಿರೋಧಿ ದಿನ ಪತ್ರಿಕೆಯ ಪ್ರಥಮ ಮತ್ತು ದ್ವಿತೀಯ ಸಂಚಿಕೆಗಳು ನಮ್ಮ ಹಸ್ತಗತವಾಗಿವೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ದುಡಿಯುವುದಲ್ಲದೇ, ಈ ಪತ್ರಿಕೆಯು ಹಿಂದೂ ಅಲ್ಪಸಂಖ್ಯಾತರ ಪಕ್ಷ ... ತೆಗಳಿಗೆ ಸಾಕಷ್ಟು ರಕ್ಷಣೆ ಸಿಗದಿರುವುದನ್ನು ತಡೆಯುವುದನ್ನೂ ತನ್ನ ಧ್ಯೇಯವನ್ನಾಗಿ ಇಟ್ಟುಕೊಂಡಿದೆ ಜಾತೀಯತೆ ... ಎಂಬ ರೋಗಿನಲ್ಲಿ ಇತರರ ನ್ಯಾಯ ... ಸ್ವೀಕೃತ ಸೌಲಭ್ಯಗಳನ್ನು ಕುಂದಿಸುತ್ತಿದೆಯೆಂದೂ ಇದನ್ನು ವಿರೋಧಿಸಿ ನಡೆಯುವುದೆಂದೂ ಹೇಳಲಾಗಿದೆ. ಪತ್ರಿಕೆಯು ಎರಡು ಪುಟದಿಂದ ಕೂಡಿ, ... ಬೆಲೆಯುಳ್ಳದ್ದಾಗಿದೆ ಇದು ... ಬಾಳಲೆಂಬುದೇ ನಮ್ಮ ಆಶಯ

ವಯಸ್ಕರ ವಿದ್ಯಾಭ್ಯಾಸ ವಸ್ತುಪ್ರದರ್ಶನ

ಮೈಸೂರು ೮

ವಿಶ್ವ ಸಂಸ್ಥೆಯ ವಯಸ್ಕರ ವಿದ್ಯಾಭ್ಯಾಸ ಗೋಷ್ಠಿಯ ಆಶ್ರಯದಲ್ಲಿ ಏರ್ಪಡಿಸಿರುವ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ವಿದ್ಯಾ ಸಚಿವರಾದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ನಿನ್ನೆ ಸಂಜೆ ಇಲ್ಲಿನ ವಸ್ತುಪ್ರದರ್ಶನಾಲಯದಲ್ಲಿ ನೆರವೇರಿಸಿದರು ಪ್ರಪಂಚದಲ್ಲಿ ಶಾಂತಿ ಸುಖಗಳು ನೆಲೆಸಲು ಮತ್ತು ಭಿನ್ನಾಭಿಪ್ರಾಯಗಳು ಹೋಗಿ ಸೌಹಾರ್ದ ಉಂಟಾಗಲು ವಯಸ್ಕರ ವಿದ್ಯಾಭ್ಯಾಸವು ಅತ್ಯಗತ್ಯವೆಂದೂ, ಅದನ್ನು ಪ್ರತಿಯೊಂದು ರಾಷ್ಟ್ರದವರೂ ಅರಿತು ಹೆಚ್ಚು ಪ್ರಾಮುಖ್ಯತೆ ಕೊಡುತ್ತಿರುವರೆಂದೂ ಸಚಿವರು ತಿಳಿಸಿದರು ಇಂತಹ ವಸ್ತುಪ್ರದರ್ಶನಗಳಿಂದ ಜನರಿಗೆ ಹೆಚ್ಚು ತಿಳುವಳಿಕೆ ಉಂಟಾಗುವುದೆಂದೂ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದರಲ್ಲಿ ಮೈಸೂರು ಮೊಟ್ಟಮೊದಲನೆಯದೆಂದೂ ಹೇಳಿದರು.

ವಸ್ತುಪ್ರದರ್ಶನದಲ್ಲಿ ಅಮೆರಿಕ, ಬ್ರಿಟನ್, ಇಂಡೋನೇಷ್ಯ, ಥೈಲೆಂಡ್, ಸ್ವೀಡನ್, ಬರ್ಮಾ, ವಿಶ್ವಸಂಸ್ಥೆ, ಬಂಗಾಳ ಸಂಯುಕ್ತ ಮತ್ತು ಮಧ್ಯ ಪ್ರಾಂತ್ಯಗಳು, ಹೈದರಾಬಾದ್, ಮದರಾಸ್, ಮೈಸೂರು ದೇಶಗಳು ವಯಸ್ಕರ ವಿದ್ಯಾಭ್ಯಾಸದ ಯೋಜನೆಯ ವಿವರಗಳನ್ನು ಪ್ರದರ್ಶಿಸಿವೆ

ವಿದ್ಯಾರ್ಥಿ ಕಾಂಗ್ರೆಸ್ಸಿನ ಚುನಾವಣೆ

ಮೈಸೂರು ನಗರ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಭೆಯು ಕಳೆದ ೩೦ ನೇ ತಾ॥ ನಡೆದು, ಶ್ರೀ ಪ್ರಭಾಕರ ಶರ್ಮರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ವೇದಾಂತ ಹೆಮ್ಮಿಗೆ ಮತ್ತು ರೇಣುಕಾ ಪ್ರಸಾದ್‌ರವರುಗಳನ್ನು ಕಾರ್ಯದರ್ಶಿಗಳಾಗಿಯೂ, ಚುನಾಯಿಸಲಾಯಿತು. ಶ್ರೀಗಳಾದ ರಾಘವೇಂದ್ರಾಚಾರ್, ಪ್ರತಾಪಸಿಂಗ್, ತೆಲಿಂಗಯ್ಯ, ರಾಮಚಂದ್ರ ಘಡ್ಲಿ, ಎಸ್. ಕೆ. ಸುಬ್ಬಣ್ಣ, ಶಿವಪ್ಪದೇವರು, ಡಿ ನಂಜಪ್ಪ, ಎಸ್. ಕೆ. ಮೂರ್ತಿ, ಸತ್ಯ ಪ್ರಕಾಶ್, ರತ್ನಂ, ಕೃಷ್ಣಯ್ಯ, ಚೆನಕಪ್ಪ ಮತ್ತು ಮಹಂತ ಕುಮಾರ್‌ರವರುಗಳು ಕಾರ್ಯನಿರ್ವಾಹಕ ಸಮಿತಿಗೆ ಚುನಾಯಿತರಾಗಿದ್ದಾರೆ

○ ಪ್ರಧಾನ ಸಚಿವ ಶ್ರೀ॥ ಕೆ. ಸಿ. ರೆಡ್ಡಿಯವರು ಈ ದಿನ ತಿರುಪತಿಗೆ ಪ್ರಯಾಣ ಬೆಳೆಸುವರು ... ನಾಳೆ ... ಹಿಂದಿರುಗುವರು.

ಕರ್ಣಾಟಕ ಏಕೀಕರಣ ಅತ್ಯಗತ್ಯ

ಸರ್ವ ಪಕ್ಷ ಸಮ್ಮೇಳನದಲ್ಲಿ ನಿರ್ಣಯ

ಅರಸೀಕೆರೆ ೭

ಸರ್ವ ಪಕ್ಷ ಸಮ್ಮೇಳನವು ಶ್ರೀಮತಿ ಬಳ್ಳಾರಿ ಸಿದ್ದಮ್ಮನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಪಂಚಾಕ್ಷರಪ್ಪನವರು ಸ್ವಾಗತ ಬಯಸಿದನಂತರ, ಅಧ್ಯಕ್ಷರು ಭಾಷಣ ಮಾಡಿ, ಮೈಸೂರನ್ನೊಳಗೊಂಡ ಅಖಂಡ ಕರ್ಣಾಟಕ ಪ್ರಾಂತ ರಚನೆಯ ಅಗತ್ಯವನ್ನು ತಿಳಿಸಿದರು.

'ಪೌರವಾಣಿ' ಸಂಪಾದಕರಾಗಿದ್ದ ಶ್ರೀ ಹೆಚ್ ಎಸ್. ದೊರೆಸ್ವಾಮಿಯವರು ಸಮ್ಮೇಳನದ ಉದ್ದೇಶವನ್ನು ವಿವರಿಸಿ, ಕರ್ಣಾಟಕ ಏಕೀಕರಣವು ಕೂಡಲೇ ಆಗಬೇಕೆಂದೂ, ಅದಕ್ಕೆ ಮೈಸೂರು ಬೆಂಬಲ ಕೊಡಬೇಕೆಂದೂ ಸೂಚಿಸುವ ನಿರ್ಣಯವನ್ನು ಮಂಡಿಸಿದರು ಕರ್ಣಾಟಕ ಏಕೀಕರಣಕ್ಕೆ ಈಗ ಮೈಸೂರಿನಿಂದ ಘಟನಾತ್ಮಕವಾದ ಯಾವ ತೊಡಕೂ ಉಂಟಾಗಲಾರದ ಪ್ರಯುಕ್ತ, ಈ ಕೂಡಲೇ ಕರ್ಣಾಟಕ ಪ್ರಾಂತ್ಯವಾಗಬೇಕೆಂಬ ಶ್ರೀ ಭೂಪಾಳಂರವರ ತಿದ್ದುಪಡಿಯೊಡನೆ ನಿರ್ಣಯವು ಅಂಗೀಕೃತವಾಯಿತು

ಕರ್ಣಾಟಕ ಏಕೀಕರಣ ಪ್ರಶ್ನೆಯು ತಡವಾಗುವುದಾದರೆ ಮಹಾರಾಜರನ್ನು ದೇಶದಲ್ಲಿನ ಇತರ ಕಡೆಯ ವ್ಯವಸ್ಥೆಗನುಗುಣವಾಗಿ ಉಳಿಸಿಕೊಳ್ಳಲು ಒಪ್ಪುತ್ತೇವೆ ಎಂಬ ಮತ್ತೊಂದು ನಿರ್ಣಯವೂ ಅನುಮೋದಿಸಲ್ಪಟ್ಟಿತು.

ಮಂಡ್ಯದಲ್ಲಿ ಪ್ರತಿಬಂಧಕಾಜ್ಞೆ ಜಾರಿ

ಮಂಡ್ಯ ಸಕ್ಕರೆ ಕಂಪೆನಿಯ ೧೬೦೦ ಜನ ಕಾರ್ಮಿಕರು ಇದೇ ೪ ನೇ ತಾ॥ ನಿಂದ ಕೆಲವು ಕೆಲಸಗಾರರಿಗೆ ಗೈರುಹಾಜರು ಹಾಕಿದುದನ್ನು ಪ್ರತಿಭಟಿಸಲು ಮುಷ್ಕರ ಹೂಡಿರುವಂತೆ, ಅದು ಅಕ್ರಮ. ಮುಷ್ಕರವೆಂದು ಸಾರಿರುವುದರಿಂದ, ಆಡಳಿತಗಾರರು ನಿನ್ನೆ ಯಿಂದ ತಿಂಗಳು ಸಂಬಳ ಮತ್ತು ಹೊಸ ಗ್ರಾಮಸ್ಥ ಕೆಲಸ ಇತರ ಸಹಾಯದಿಂದ ಕಾರ್ಖಾನೆಯ ಕೆಲಸವನ್ನು ಪ್ರಾ... [illegible]

ಪೌರಸಭಾ ಚುನಾವಣೆಗೆ ಉಳಿದ ಕಾಂಗ್ರೆಸ್ ಉಮೇದುವಾರರು

ಮುಸ್ಲಿಮರಿಗೆ ೨ ಸ್ಥಾನಗಳನ್ನು ಬಿಟ್ಟುಕೊಡಲಾಗಿದೆ

ಮೈಸೂರು ೮

ಕಾಂಗ್ರೆಸ್ಸಿನ ಪರವಾಗಿ ಪೌರಸಭಾ ಚುನಾವಣೆಯಲ್ಲಿ ಉಮೇದುವಾರರಾಗಲು ಶ್ರೀಗಳಾದ ಬಿ. ಕೆ ರಾಜಶೇಖರಯ್ಯ, ಸಿ. ಜೆ. ದೇವನಾಥ್ ಮತ್ತು ಡಾ॥ ಬಿ. ಎಸ್. ಸೂರ್ಯನಾರಾಯಣರಾಯರ ಹೆಸರುಗಳನ್ನು ಈ ದಿನ ಅನುಮೋದಿಸಿ ಪ್ರಕಟಿಸಲಾಗಿದೆ

ಮಹಿಳೆಯರಿಗಾಗಿ ಒಂದು ಸ್ಥಾನವನ್ನು ಮೀಸಲಾಗಿಟ್ಟಿದೆ. ಅದಕ್ಕೆ ಯಾರೂ ಬಾರದಿದ್ದರೆ ಪುರುಷರ ಪೈಕಿಯೇ ಇನ್ನೊಬ್ಬರನ್ನು ಆರಿಸಲಾಗುವುದು.

ಮುಸ್ಲಿಮರಿಗಾಗಿ ೨ ಸ್ಥಾನಗಳನ್ನು ಪಾರ್ಲಿಮೆಂಟರಿ ಸಮಿತಿಯವರು ಬಿಟ್ಟುಕೊಟ್ಟಿರುವರು. ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಒಪ್ಪೊಟ್ಟು ಮುಸ್ಲಿಮ್ ಉಮೇದುವಾರರಿಗೆ ಕಾಂಗ್ರೆಸ್ಸು ಬೆಂಬಲಕೊಡುವುದು ಹಾಜಿ ಅಹಮದ್ ಖಾನರವರೂ, ಹಾಜಿ ಅಮೀರ್ ಉದ್ದೀನ್ ಖುರೇಷಿಯವರು ಈ ಸ್ಥಾನಗಳಿಗೆ ನಿಲ್ಲಬಹುದೆಂದು ಗೊತ್ತಾಗಿದೆ.

'ವಾಣಿ' ಮಾಸ ಪತ್ರಿಕೆ

• ಬೆಂಗಳೂರಿನಿಂದ ಕಳೆದ ೭ ವರ್ಷಗಳಿಂದಲೂ ಪ್ರಕಟವಾಗುತ್ತಿರುವ 'ವಾಣಿ' ಮಾಸ ಪತ್ರಿಕೆಯು ಈ ತಿಂಗಳಿನಿಂದ ಶ್ರೀ ನಾಗರಾಜ ಶರ್ಮರವರ ಸಂಪಾದಕತ್ವದಲ್ಲಿ ಹೊರಟಿದೆ ಶ್ರೀ ಟಿ. ಟಿ ಶರ್ಮರವರು ಅದಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ ಪತ್ರಿಕೆಯ ಬೆಲೆ ೨ ಆಣೆ ಅದು ಚಿರಕಾಲ ಬಾಳಲೆಂದು ಆಶಿಸುತ್ತೇವೆ

ಜೆ.ಬಿ. ಮಲ್ಲಾರಾಧ್ಯರು ದೆಹಲಿಗೆ

ಸ್ವಂ.ಸು ಫೋನ್] ಬೆಂಗಳೂರು ೮.

ಮೈಸೂರು ಸರ್ಕಾರದವರು ಹಾಕಿಕೊಂಡಿರುವ ಕೈಗಾರಿಕೆ ಯೋಜನೆಗಳಿಗೆ ಭಾರತ ಸರ್ಕಾರದಿಂದ ದ್ರವ್ಯ ಸಹಾಯ ಮತ್ತು ಸಾಲಗಳನ್ನು ಪಡೆಯುವ ಬಗ್ಗೆ ಮಾತುಕತೆ ನಡೆಸಲು ಶ್ರೀ ಜೆ ಬಿ. ಮಲ್ಲಾರಾಧ್ಯರ ಇದೇ ೧೦ನೇ ತಾ॥ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡುವರು.

ಎಸ್. ಆರ್. ಜಯರಾಯರು ಮೈಸೂರಿಗೆ

ರಜದ ಮೇಲಿರುವ ತುಮಕೂರಿನ ಜಿಲ್ಲಾ ಮತ್ತು ಸೆಷನ್ ಜಡ್ಜರಾದ ಶ್ರೀ ಎಸ್. ಆರ್. ಜಯರಾಯರನ್ನು ಮೈಸೂರು ಜಿಲ್ಲೆಯ ಮುಖ್ಯ ಜಿಲ್ಲಾ ಮತ್ತು ಸೆಷನ್ ಜಡ್ಜರನ್ನಾಗಿ ನೇಮಿಸಲಾಗಿದೆ. ಶ್ರೀ ಗಣಪತಿ ಸುಂದರರಾಯರವರನ್ನು ಬೆಂಗಳೂರು ಅಡಿಷನಲ್ ಜಿಲ್ಲಾ ಮತ್ತು ಸೆಷನ್ ಜಡ್ಜರನ್ನಾಗಿ ವರ್ಗಾಯಿಸಲಾಗಿದೆ

○ ಹೈದರಾಬಾದಿನಲ್ಲಿರುವ ಮೈಸೂರಿನ ಸಶಸ್ತ್ರ ಸೈನಿಕ ತುಕಡಿಗಳನ್ನು ಪರಿಶೀಲಿಸಿ ಬರಲು ಗೃಹ ಸಚಿವ ಶ್ರೀ॥ ಟಿ. ಮರಿಯಪ್ಪನವರು ಈ ದಿನ ವಿಮಾನದಲ್ಲಿ ಅಲ್ಲಿಗೆ ತೆರಳಿದರು. ಅವರು ನಾಳಿದ್ದು ಹಿಂದಿರುಗುವರು

ಲಾಗಿದೆ ಮಂಡ್ಯದಲ್ಲಿ ೧೪೪ ನೇ ಸೆಕ್ಷನ್ ... [illegible]

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ!

ಪುರಸಭಾ ಚುನಾವಣೆಯ ಬಗ್ಗೆ ಕಾಂಗ್ರೆಸ್ಸಿನ ಮನವಿ

ಮೈಸೂರು ೭

ಮೈಸೂರು ಪುರಸಭಾ ಕಾಂಗ್ರೆಸ್ ಚುನಾವಣಾ ಉಪಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಈ ಕೆಳಗೆ ಕಂಡಂತೆ ಮನವಿಯನ್ನು ಹೊರಡಿಸಿರುತ್ತಾರೆ.—

ಈ ತಿಂಗಳು ೨೩ ನೇ ತಾ|| ಈ ನಗರದ ಪುರಸಭೆಯ ಚುನಾವಣೆ ನಡೆಯಲಿದೆ ಎಂದಿನಂತೆ ಈಸಾರಿಯೂ ಮೈಸೂರು ಕಾಂಗ್ರೆಸ್ ತನ್ನ ಉಮೇದುವಾರರನ್ನು ನಿಲ್ಲಿಸಲು ತೀರ್ಮಾನಿಸಿದೆ

ನಮ್ಮ ನಾಡಿಗೆ ಸ್ವಾತಂತ್ರ್ಯ ಬಂದಮೇಲೆ ಈ ನಗರ ಸಭೆಗೆ ನಡೆಯಲಿರುವ ಈ ಚುನಾವಣೆಯೇ ಮೊದಲನೆಯದು ನಾಡಿಗೆ ಸ್ವಾತಂತ್ರ್ಯ ಗಳಿಸಿಕೊಟ್ಟ ಕಾಂಗ್ರೆಸ್ಸಿಗೆ ಈ ಮೈಸೂರು ನಗರದ ಮಹಾಜನರು ಅಪಾರ ಸೇವೆ ಸಲ್ಲಿಸಿದ್ದಾರೆ ಮೊದಲಿಂದಲೂ ಕಾಂಗ್ರೆಸ್ಸಿಗೆ ಜಯಗಳಿಸುವುದರಲ್ಲಿ ಮೈಸೂರು ಜನ ಕೀರ್ತಿ ಗಳಿಸಿದ್ದಾರೆ

ಪುರಸಭೆಗೆ ಕಾಂಗ್ರೆಸ್ಸಿನ ಪರ ನಿಂತು ಜಯಶಾಲಿಗಳಾಗಿ ಬಂದ ಸದಸ್ಯರು ನಿಜವಾಗಿಯೂ ನಗರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ ಅವರ ಸದಸ್ಯತನದ ೩ ವರ್ಷದ ಅವಧಿಯಲ್ಲಿ ಮೊದಲ ಎರಡು ವರ್ಷ ಸ್ವಾತಂತ್ರ್ಯದ ಹೋರಾಟದ ದಾರಿಯಲ್ಲಿ ಸಾಗಬೇಕಾಯಿತು. ಕೊನೆಯ ಎರಡು ವರ್ಷ ಗಳಿಸಿದ ಸ್ವಾತಂತ್ರ್ಯವನ್ನು ರೂಪುಗೊಳಿಸುತ್ತಿರುವ ಸರಕಾರದೊಡನೆ ಸಹಕರಿಸುತ್ತಾ ಈ ನಗರದ ಪುರೋಭಿವೃದ್ಧಿಗೆ ಶ್ರಮಿಸಿದ್ದಾರೆ ಮೈಸೂರು ನಗರದ ಪೌರಸಭಾ ಕಾಂಗ್ರೆಸ್ ಪಕ್ಷ ದೇಶದಲ್ಲಿ ನಿಜವಾಗಿಯೂ ಒಂದು ವೈಶಿಷ್ಟ್ಯವನ್ನು ಪಡೆದಿದೆ ಶಿಸ್ತು ಪರಿಪಾಲನೆಯಲ್ಲಿ ಕಾರ್ಯ ನಿರ್ವಹಣೆಯಲ್ಲಿ ತನಗೆ ಒದಗಿದ ಕಷ್ಟಪರಂಪರೆಗಳನ್ನು ಎದುರಿಸಿ ಸಾಹಸವಾದ ಕಾರ್ಯ ಸಾಧಿಸುವ ರೀತಿಯಲ್ಲಿ ಒಳ್ಳೆಯ ಹೆಸರು ಗಳಿಸಿದೆ. ಎಂಬೀ ವಿಷಯ ನಿಷ್ಪಕ್ಷಪಾತದಿಂದ ನೋಡುವ, ಉದ್ರೇಕಿಗಳಾಗಿಲ್ಲದವರಿಗೆಲ್ಲ ತಿಳಿದ ವಿಷಯ

ಆದರೆ ಈಚೆಗೆ ಸ್ವಾತಂತ್ರ್ಯ ಬಂದ ಮೇಲೆ ಅಪಪ್ರಚಾರ ನಡೆಯಿತು ಕೆಲವರು ಏನೋ ಕಾರಣದಿಂದ ಇಲ್ಲ ಸಲ್ಲದ ಸುಳ್ಳು ಹರಡಿದರು ಇದರಿಂದ ಜನರ ಮನಸ್ಸು ಕೊಂಚ ಕದಡಿರಬಹುದು ಆದರೆ ಕಾರ್ಯರಂಗದಲ್ಲಿ ಇವರು ಬಂದ ದಾರಿಯ ಎಡರು ತೊಡರುಗಳನ್ನು ಕೂಲಂಕಷವಾಗಿ ತಿಳಿದು ನೋಡಿದರೆ ನಮ್ಮ ಪೌರಸಭಾ ಸದಸ್ಯರು ನಡೆದುಕೊಂಡಿರುವ ರೀತಿ ನೀತಿ, ಅವರು ನಡೆಸಿರುವ ಕಾರ್ಯ ಸ್ತುತ್ಯಾರ್ಹವಾದವು

ಹೀಗೆ ಕೆಲಸ ನಡೆಯಲು ಸಾಧ್ಯವಾದುದು ಯಾವಾಗಲೂ ಜನರ ಹಿತವನ್ನೇ, ಸತ್ಯಸಾಧನೆಯನ್ನೇ ಗುರಿಯಾಗುಳ್ಳ ಕಾಂಗ್ರೆಸ್ ಸಂಸ್ಥೆಯ ಶಿಸ್ತಿಗೆ ಒಳಗಾಗಿ ಒಮ್ಮತವಾಗಿ ನಡೆಯಬೇಕಾಗಿರುವುದರಿಂದ ಮುಂದೆಯೂ ಕೂಡ ಮೈಸೂರು ಪುರಸಭೆ ಇನ್ನೂ ಉತ್ತಮವಾಗಿ ಇನ್ನೂ ಯಶಸ್ವಿಯಾಗಿ ಕೆಲಸ ಮಾಡುವಂತೆ ಮಾಡಲು ಈ ಚುನಾವಣೆಯಲ್ಲೂ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸುತ್ತದೆ. ನಮ್ಮ ಮೈಸೂರು ಮಹಾಜನರು ಇಲ್ಲ ಸಲ್ಲದ ಮಾತಿಗೆ ಮಾರುಹೋಗುವವರಲ್ಲ ಎಂದಿನಂತೆಯೇ ಈ ಸಾರಿಯೂ ಜನತೆಯ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಪೂರ್ಣ ಜಯಗಳಿಸಿಕೊಡಬೇಕಾಗಿ ಮೈಸೂರು ಮಹಾಜನರಲ್ಲಿ ಸವಿನಯ ಪ್ರಾರ್ಥನೆ.

ಸಂಗೀತ ಪರಿಷತ್ತಿನ ಅಧಿಕಾರಿ ವರ್ಗ

ಸಂಸ್ಥಾನದ ಸಂಗೀತ ಪರಿಷತ್ತಿನ ಪ್ರಥಮ ವಾರ್ಷಿಕ ಸಭೆಯು ಕಳೆದ ೩೦ ನೇ ತಾ|| ಬೆಂಗಳೂರಿನಲ್ಲಿ ನಡೆದು, ಶ್ರೀ ಕೆ. ಟಿ ಸುದರ್ಶನಯ್ಯಂಗಾರ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ವಿ ಡಿ ಸುಬ್ಬರಾಮಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಕೆ ಎಸ್ ಚಂದ್ರಶೇಖರಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಬೆಳಕವಾಡಿ ವರದರಾಜಯ್ಯಂಗಾರ್ಯರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು

ಜಪಾನಿನಲ್ಲಿ ಗರ್ಭಸ್ರಾವವು ಹೆಚ್ಚುತ್ತಿದೆ

ಜಪಾನಿನಲ್ಲಿ ವರ್ಷಕ್ಕೆ ೧೦ ಲಕ್ಷದಷ್ಟು ಜನ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಗರ್ಭಸ್ರಾವವನ್ನು ಕಾನೂನು ಬದ್ಧವೆಂದು ಪರಿಗಣಿಸಲಾಗಿದೆಯೆಂದು ಸರ್ಕಾರವು ಆಜ್ಞೆ ಮಾಡಿದೆ ಕಳೆದ ವರ್ಷ ಗರ್ಭಸ್ರಾವವು ಶೇಕಡ ೩೦೦ ರಷ್ಟು ಹೆಚ್ಚಾಗಿತ್ತು ಮತ್ತು ಮಕ್ಕಳ ಜನನದ ಸಂಖ್ಯೆಯು ಸಾವಿರಕ್ಕೆ [illegible] ರಿಂದ [illegible] ಕ್ಕೆ ಇಳಿದಿತ್ತು.

ಭಾರತದಲ್ಲೇ ಗಡಿಯಾರಗಳ ತಯಾರಿ

ಭಾರತದ ಹವಾಮಾನ ಇಲಾಖೆಯವರು ತಮ್ಮಲ್ಲಿರುವ ಸಾಮಗ್ರಿಗಳಿಂದ ದೊಡ್ಡ ಮತ್ತು ಚಿಕ್ಕ ಗಡಿಯಾರಗಳನ್ನು ತಯಾರಿಸಲು ಸಿದ್ಧತೆ ಮಾಡಿದ್ದಾರೆ ಭಾರತ ಸರ್ಕಾರದ ನಾನಾ ಕಛೇರಿಗಳಿಗೆ ಬೇಕಾಗುವ ಗಡಿಯಾರಗಳನ್ನೆಲ್ಲಾ ಈ ಇಲಾಖೆಯಲ್ಲಿ ತಯಾರಿಸಲಾಗುವುದು

ವಿವಾಹ ಮಹೋತ್ಸವ

ಕಳಲೆಯಗ್ರಾಮ ಪಂಚಾಯಿತಿ ಅಧ್ಯಕ್ಷರೂ ಮತ್ತು ಜಮೀನುದಾರರೂ ಆದ ಶ್ರೀ ಕೆ ಸುಬ್ಬರಾಯರು ತಮ್ಮ ಜ್ಯೇಷ್ಠ ಪುತ್ರ ಶ್ರೀ ಕೆ ಎಸ್ ಸತ್ಯನಾರಾಯಣರವರಿಗೆ ನವಜ್ಯೋತಿ ಸ್ಟುಡಿಯೋವಿನ ಮ್ಯಾನೇಜರಾದ ಶ್ರೀ ಜೆ ಪಿ. ನರಸಿಂಗರಾಯರ ಸಹೋದರಿ ಶ್ರೀಮತಿ ಪಿ ಸತ್ಯವತಿಯವರನ್ನು ತಂದುಕೊಂಡು ಕಳೆದ ಗುರುವಾರ ವಿವಾಹವನ್ನು ರಾಜಧಾನಿಯಲ್ಲಿ ನೆರವೇರಿಸಿದರು

ನದಿಯಲ್ಲಿ ಅಲಂ ಅವತಾ

ಹೊಳೇನರಸೀಪುರದ ಮುಸ್ಲಿಮ ಕಳೆದ ಮೊಹರಂ ಹಬ್ಬದ ಕಡೇ ದಿನವ ಎಂದಿನಂತೆ ಆಚರಿಸಿ, ಹೇಮಾವತಿ ನ ತೀರದಲ್ಲಿರುವ ಬಡೀ ಮಕಾನಿಗೆ ಪ್ರಾರ್ಥ ಗಾಗಿ ಹೋದಾಗ, ಹೊಳೆಯಲ್ಲಿ ಒಂದು ಪೆಟ್ಟಿಗೆ, ಅದರಮೇಲೆ ದೊಡ್ಡ ಕಟ್ಟು, ಯಲ್ಲಿ ೫ ಅಲಂಗಳು ಪ್ರಕಾಶಮಾನವಾ ಹೊಳೆಯುತ್ತಿದ್ದುದನ್ನು ಕಂಡು ಅವುಗ ನ್ನು ಹಿಡಿಯಲು ಕೆಲವು ಮುಸ್ಲಿಮ ಹೋದಾಗ, ಮಿಂಚಿನಂತೆ ಅವುಗಳು ಬೇ ಕು ಬೀರಿ ಮಧ್ಯದ ಹೊಳೆಗೆ ಹೋದುವ ದೂ, ಅನಂತರ ಎರಡು ನಿಮಿಷಗಳಲ್ಲಿ ದುಸಾರಿ ನೀರು ಕುದಿದು ಗುಳ್ಳೆಗಳು ಣಿಸಿಕೊಂಡು, ಹೂಗೆಯಾಡುತ್ತಿದ್ದು ಕಾಣಬಂದಿತೆಂದೂ, ವರದಿಯಾಗಿದೆ ; ದೇ ರೀತಿ ೨೦ ವರ್ಷಗಳ ಹಿಂದೆ ನಡೆ ತೆಂದು ಹೇಳಲಾಗಿದೆ

ಮೈಸೂರು ಸ್ಟೇಟ್ ರೈಲ್ವೆ

ನೋಟೀಸು

೧೯೪೯ನೇ ನವೆಂಬರ್ ೧ನೇ ತಾ|| ನಿಂದ ಮೈಸೂರಿನಲ್ಲಿರುವ ಮೈಸೂರು ಟ್ ರೈಲ್ವೆಯ ರೈಲ್ವೆ ಪ್ರಯಾಣಿಕರ ಕಂಟ್ರೋಲರ್ರವರ ಕಛೇರಿಯು ವ ರ್ಜಿಸಲಾಗಿದೆ ಅಂದಿನಿಂದ ರೈ ಗಳಲ್ಲಿ ಅಗತ್ಯವಾದ ಪದಾರ್ಥಗಳ ರವಾ ಬಗ್ಗೆ ರೈಲ್ವೆ ಪ್ರಯಾಣಿಕರನ್ನು ಮೈ ರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಫಿಕ್ ಮ್ಯಾನೇಜರವರೇ ಕೊಡುವ ವ್ಯವಸ್ಥೆ ಮಾಡಲಾಗಿದೆ. ಈ ಸಂಬಂಧ ಲ್ಲಿ ಇನ್ನು ಮುಂದೆ ಅವರೊಡನೆಯೇ ವಹಾರ ನಡೆಸಬಹುದು.

(ರುಜು) ಆರ್. ರಾಮಕೃಷ್ಣ
ರೈಲ್ವೆ ಪ್ರಯಾಣಿಕರ ಸ್ಟೇಟ್
ಕಂಟ್ರೋಲರು, ಮೈಸೂರು ಸ್ಟೇಟ್

ಸಾಮಾಜಿಕ ಚಲನ ಚಿತ್ರ ಜಗತ್ತಿನ
ವಿಶೇಷ ವಿವರಗಳಿಗೆ

ಚಿತ್ರಾಂಗಿನಿ

ಮಾಸ ಪತ್ರಿಕೆಯನ್ನು ಓದಿರಿ
ವಾರ್ಷಿಕ ಚಂದಾ :: ೩
ಬಿಡಿ ಪ್ರತಿ :: ೦

—: ವಿವರಗಳಿಗೆ :—
P. G. K. Murthy
Circulation Manag
Chitrangini,
2871. Saraswathipura
Mysore

ರಾಜಕಮಲ್ ಟಾಕೀಸ್
5-11-49 ರಿಂದ :: ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಭರಣಿಯವರ ಅಪ್ರತಿಮ ಪ್ರೇಮಮಯ ತೆಲುಗು ಚಿತ್ರ
ಲೈಲಾ ಮಜ್ನು
ಪಾತ್ರ:- † ಭಾನುಮತಿ, † ನಾಗೇಶ್ವರ ರಾವ್, † ಲಲಿತಾ-ಪದ್ಮಿನಿ

ಪ್ರಭಾ ★ ಈ ರಾತ್ರಿ
ಪ್ರತಿ ದಿನ 3 ಆಟಗಳು
ಬಾಂಬೆ ಟಾಕೀಸ್‌ರವರ
ಕಾಮಿನಿ ಕೌಶಲ್, ದೇವ್ ಆನಂದ್, ನವಾಬ್, ಪೀರಾ, ಇಂದು ಪಾತ್ರ ವಹಿಸಿರುವ
ಜಿದ್ದಿ (ಹಿಂದಿ)
Morning Shows From 11-11-49 For 4 days
Perils of Nyoka
IN REPUBLIC SERIAL

Intermediate Examination
— OF MARCH 1950 —
Classes begin on 11-11-49
City Tutorial College
1531 VANIVILAS ROAD,
MYSORE

Edited printed and published by V R Nagarajan, at Sadhvi Press D Subbiah Road, Mysore.

ಪ್ರಭುದೇವಾ ಟಾಕೀಸ್
9-11-49 ರ 2 ನೆಯ ವಾರ
ಅಮೋಘ
ಕನಕತಾರ, ದಮ್ಮೇಟಿ ಪಾತ್ರ ವಹಿಸಿರುವ
- ಕನಕ ತಾರ -
ತೆಲುಗು ಭಾಷೆ
ದಿನವಹಿ 3 ಆಟಗಳು

ಪೊ ೧೧ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮ | ಬುಧವಾರ ೯-೧೧-೪೮ [ಸಂಚಿಕೆ ೮೬

ಜೋಡಿ, ಇನಾಂ ಪದ್ಧತಿ ಮೈಸೂರಿನಲ್ಲಿ ರದ್ದು?

ಸುವ್ಯವಸ್ಥಿತ ಸಮಾಜದಲ್ಲಿ ಗ್ರಾಮಾಧಿಕಾರಿಗಳ ಪಾತ್ರ

ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಕಡೂರು ೮

ಸಂಸ್ಥಾನದ ಗ್ರಾಮಾಧಿಕಾರಿಗಳ ೧೭ನೇ ಸಮ್ಮೇಳನವು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ನಡೆಯಿತು ಭಾರತ ಸರ್ಕಾರದ ... ಸಚಿವರಾದ ಶ್ರೀ ಆರ್ ಆರ್ ದಿವಾಕರರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು

ಶ್ರೀ ಹೆಚ್ ಎಂ ಚನ್ನಬಸಪ್ಪನವರು ಭಾಷಣ ಮಾಡಿ ಈರೀತಿ ತಿಳಿಸಿದರು -

ಗ್ರಾಮಾಧಿಕಾರಿಗಳಲ್ಲಿ ಪರಸ್ಪರ ಸಂಪರ್ಕ, ಸಹಕಾರ, ಸಹಾನುಭೂತಿಗಳನ್ನು ಬೆಳೆಯಿಸಿ ಅವರ ಕಾರ್ಯದಕ್ಷತೆಯನ್ನು ಹೆಚ್ಚಿಸುವುದರ ಮೂಲಕ ಇನ್ನೂ ಉತ್ತಮ ರೀತಿಯಲ್ಲಿ ಜನತಾ ಸೇವೆ ಸಲ್ಲಿಸಲು ಅವಕಾಶಮಾಡಿಕೊಡಬೇಕೆಂಬುದೇ 'ಗ್ರಾಮಾಧಿಕಾರಿ' ಸಂಘದ ಗುರಿ ಸಂಘದ ... ಶಕ್ತಿ, ಕರ್ತವ್ಯ ನಿಷ್ಠೆಗಳಿಗೆ ... ದೊರಕುವ ವಾತಾವರಣ ನಿರ್ಮಾಣವಾಗಬೇಕು ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳುವುದು ಅನವಶ್ಯಕ

ಗ್ರಾಮಾಧಿಕಾರಿಗಳು ಸ್ವಾಭಾವಿಕವಾದ ಪ್ರಜಾಪ್ರತಿನಿಧಿಗಳಾಗಿದ್ದುಕೊಂಡು, ದೈವಭೀತಿಯಿಂದ ಸತ್ಯ, ಧರ್ಮ, ಸಹನ ... ಗಳೇ ಮೊದಲಾದ ಆದರ್ಶ ಧ್ಯೇಯಗಳನ್ನು ಅನುಸರಿಸಿ ಅಂತರಂಗ ಬಹಿರಂಗ ಶುದ್ಧಿಯಿಂದ ಜನತಾ ಸೇವೆಯನ್ನು ಸಲ್ಲಿಸಿಕೊಂಡು ಬಂದರೆ ಈ ಸಂಸ್ಥೆಯು ಸ್ಥಾನಮಾನ, ಗೌರವ ಪ್ರತಿಷ್ಠೆಗಳು ಅಚ್ಚಳಿಯದೆ ಅನುವಂಶೀಯವಾಗಿ ಉಳಿದ ಕೊಂಡುಬ ದಿರುವುದಕ್ಕೆ ಮುಖ್ಯ ಕಾರಣವೆಂದು ... ಧಾರಾಳವಾಗಿ ಹೇಳಬಹುದು

ಅನೇಕ ಶತಮಾನಗಳಿಂದ ಗ್ರಾಮಾಧಿಕಾರಿಗಳು ಒಂದು ಕಡೆ ಪ್ರಜಾಪ್ರತಿನಿಧಿ ಸ್ವರೂಪಿಗಳಾಗಿದ್ದು, ಮತ್ತೊಂದು ಕಡೆ ಅರಸನಿಗಾದ ಅಧಿಕೃತ ಪ್ರತಿನಿಧಿಯಾಗಿದ್ದುಕೊಂಡು ಉಭಯ ಪ್ರಜಾವರ್ಗಳ ಸಾಮರಸ್ಯದಿಂದ ಸಮಾಜ ಮತ್ತು ರಾಜ್ಯಾಡಳಿತಗಳ ರಚನಾತ್ಮಕ ಬೆಳವಣಿಗೆಗೆ ನೆರವು ... ದೇಶಾಭ್ಯುದಯಕ್ಕೆ ಚಿರಸ್ಮರಣೀಯವಾದ ಸೇವೆ ಸಲ್ಲಿಸಿರುವುದು ... ಹಳ್ಳಿಗಳಲ್ಲಿ ರಚನಾತ್ಮಕ ಕಾರ್ಯಗಳು ಸುಲಭವಾಗಿ ಮತ್ತು ಯಶಸ್ವಿಯಾಗಿ ಜರುಗಬೇಕಾದರೆ ಅಲ್ಲಿರುವ ... ವಿಶ್ವಾಸಗಳಿಸಿರುವ ಗ್ರಾಮಾಧಿಕಾರಿ ... ಸಹಕಾರದಿಂದ ಸುಲಭಸಾಧ್ಯವೆಂಬ ... ಅನುಭವದ ಮಾತು ಗ್ರಾಮ ... ದಪು ಯೋಜನೆಗಳು ಯಶಸ್ವಿ ... ಕಾರ್ಯಗತವಾಗಬೇಕಾದರೆ ಮೊ ... ದಲು ಗ್ರಾಮಾಧಿಕಾರಿಗಳ ಶಕ್ತಿ, ... ಪ್ರಭಾವ ಮತ್ತು ದಕ್ಷತೆಗಳ ... ಹೆಚ್ಚಿಸುವುದು ಎಷ್ಟು ಅವಶ್ಯಕವೊ ... ಅನಿವಾರ್ಯವಾದ ದೆಂದು ಆದ ... ಸೂಚಿಸಲು ಇಚ್ಛಿಸುತ್ತೇನೆ

... ಪರಿಸ್ಥಿತಿಯನ್ನು ... ಪ್ರವಾಹ ಜೊತೆಗೆ ... ತಗೆದು ...

ದು ದೇಶದ ಹಿತದೃಷ್ಟಿಯಿಂದ ಅತ್ಯವಶ್ಯಕ ತೃಪ್ತಿಕರವಾದ ಪ್ರತಿಫಲವಿಲ್ಲದೆ ನಿಷ್ಪಕ್ಷಪಾತವಾದ ಸೇವೆಯನ್ನು ನಿರೀಕ್ಷಿಸುವುದೂ ಸರಿಯಲ್ಲವೆಂದು ನನ್ನ ಅಭಿಪ್ರಾಯ. ಈ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ಅನೇಕ ವರ್ಷಗಳಿಂದಲೂ ಒತ್ತಾಯಪಡಿಸುತ್ತಿರುವುದು ಎಲ್ಲರ ಗಮನದಲ್ಲಿಯೂ ಇದೆ ಇಂತಹ ಮುಖ್ಯ ವಿಷಯದ ಕಡೆ ಇದುವರೆವಿಗೂ ಗಮನ ಕೊಡದಿರುವುದು ವಿಷಾದಕರ

ಒಂದು ಸಂಸಾರವು ನೆಮ್ಮದಿಯಿಂದ ಜೀವನ ನಡೆಯಿಸಲು ಬೇಕಾಗುವಷ್ಟು ಭೂಮಿಯನ್ನು ಆಯಾ ಪ್ರಾಂತ್ಯಗಳ ಪರಿಸ್ಥಿತಿಯನ್ನನುಸರಿಸಿ ನಿರ್ಧಾರ ಮಾಡಿ, ಆಯಾ ಗ್ರಾಮಾಧಿಕಾರಿ ಸಂಸ್ಥೆಗೆ ಇನಾಂ ಆಗಿ ಬಿಡುವುದರ ಮೂಲಕ ಗ್ರಾಮಾಧಿಕಾರಿಗಳ ಆರ್ಥಿಕ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸಲು ಸಾಧ್ಯ

ಅವರ ಪರಿಸ್ಥಿತಿಗಳನ್ನು ಉತ್ತಮಪಡಿಸಿ ದಕ್ಷತೆಯನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಸಲಹೆ ಮಾಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಸೂಚಿಸಬಯಸುತ್ತೇನೆ

ಹೊಸ ಪರಿಸ್ಥಿತಿಗೆ ಹೊಂದಿಕೊಂಡು ಹಿಂದಿಗಿಂತಲೂ ಮುಂದೆ ಹೆಚ್ಚಿನ ದಕ್ಷತೆಯಿಂದ ಜವಾಬ್ದಾರಿಯನ್ನು ನಿರ್ವಹಿಸುವ ಭಾರ ನಿಮ್ಮ ಮೇಲೆ ಬಿದ್ದಿದೆ

ಅದರಲ್ಲಿಯೂ ಈ ... ಯುಗದಲ್ಲಿ ಸ್ವತಂತ್ರ್ಯದ ಸರಿಯಾದ ಅರ್ಥ ಜನರಲ್ಲಿ ಮನವರಿಕೆಯಾಗದಿರುವ ಸಮಯದಲ್ಲಿ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವವರಿಗೆ ಬಹಳ ಒಡಿ ಆತಂಕ ... ಗ್ರಾಮಾಂತರಗಳಲ್ಲಿ ಸುವ್ಯವಸ್ಥಿತ ಸಮಾಜವನ್ನು ... ಸುಭದ್ರವಾಗಿ ... ರಿಗೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು ಗ್ರಾಮಾಂತರಗಳಲ್ಲಿ ಸಣ್ಣಪುಟ್ಟ ವ್ಯವಹಾರಗಳನ್ನು ... ಜನರಲ್ಲಿ ಪರಸ್ಪರ ವಿರೋಧವನ್ನು ಬೆಳೆಯಿಸಿ ಅವ್ಯವಸ್ಥಿತ ಸಮಾಜವನ್ನು ಕಟ್ಟಿ ... ಸ್ವಾಭಾವಿಕ ...

ಪುರಸಭಾ ಚುನಾವಣಾ ಪ್ರಚಾರದ ಪ್ರಾರಂಭೋತ್ಸವ

ಮೈಸೂರು ೮

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಾಳೆ ಗುರುವಾರ ಸಂಜೆ ೬-೩೦ ಗಂಟೆಗೆ ಟೌನ್ ಹಾಲಿನಲ್ಲಿ ಪುರಸಭಾ ಚುನಾವಣಾ ಪ್ರಚಾರದ ಪ್ರಾರಂಭ ಭಾಷಣ ಮಾಡುವರೆಂದು ಚುನಾವಣಾ ಸಮಿತಿಯ ಸಂಚಾಲಕರಾದ ಶ್ರೀ ಎಚ್ ಚನ್ನಯ್ಯನವರು ತಿಳಿಸಿರುತ್ತಾರೆ, ಸರ್ವರಿಗೂ ಸ್ವಾಗತವಿದೆ

ಭಾವಚಿತ್ರ ಅನಾವರಣ

ಮೈಸೂರು ಮಹಾರಾಜಾ ಕಾಲೇಜಿನ ರಾಜನೀತಿ ಶಾಸ್ತ್ರ ಸಂಘದಲ್ಲಿ ನಿನ್ನೆ ಸಂಜೆ ಭಾರತ ಸರ್ಕಾರದ ವಿದ್ಯಾ ಇಲಾಖಾ ಜಂಟಿ ಕಾರ್ಯದರ್ಶಿಯಾದ ಪ್ರೊ॥ ಹುಮಾಯೂನ್ ಕಬೀರರವರ ... ಎಂಬ ಸಾಕ್ಷಿಮಾತ್ರ ತತ್ವಜ್ಞಾನಿಯ ಭಾವಚಿತ್ರ ಅನಾವರಣೋತ್ಸವವನ್ನು ನಡೆಸಿದರು ಭಾರತ ದೇಶದ ವೇದಾಂತ ತತ್ವಗಳನ್ನು ಪರದೇಶಗಳಿಗೆ ಅವರು ಮೊದಲು ... ಪರಿಚಯ ಮಾಡಿಕೊಟ್ಟರೆಂದು ತಿಳಿಸಿ, ಅವರ ಅದ್ಭುತ ಕವಿತೆ ಮತ್ತು ಜ್ಞಾನವನ್ನು ಪ್ರಶಂಸಿಸಿದರು ಡಾ॥ ಪುರುಷೋತ್ತಮರವರು ಅಧ್ಯಕ್ಷತೆ ವಹಿಸಿದ್ದರು

... ಸ್ಥಿತಿಯಲ್ಲಿ ... ಸಂಗತಿಗಳು ಅವ್ಯಾಹತವಾಗಿ ಸಾಗುತ್ತಿವೆ ಆಡಳಿತದಲ್ಲಿ ... ಒಂದಿಲ್ಲ ಒಂದು ... ದಿನದಿನಕ್ಕೆ ಬಿಕ್ಕಟ್ಟಾಗುತ್ತಿವೆ ಗ್ರಾಮ ಪುನರುಜ್ಜೀವನ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಿಲ್ಲ ಆಹಾರ ಸಮಸ್ಯೆ ಒಂದು ... ಭೂತವಾಗಿದೆ ಇಂತಹ ಕ್ಲಿಷ್ಟ ಸಮಸ್ಯೆಗಳು ನೂರಾರು ... ತಮ್ಮದೇ ... ಜೇರಿಕೊಂಡು ಅನಂತ ಕ್ಲಿಷ್ಟ ಸಮಸ್ಯೆಗಳನ್ನೊಳಗೊಂಡ ಕರ್ನಾಟಕವನ್ನು ... ರಚಿಸಬೇಕೆಂದು ... ನೀವೇ ...

ಜೋಡಿ ಮತ್ತು ಇನಾಂದಾರಿ ಪದ್ಧತಿ ರಜಾ

ಬೆಂಗಳೂರು ೯

ಸಂಸ್ಥಾನದ ಜೋಡಿ ಮತ್ತು ಇನಾಂತಿಗಳನ್ನು ಸರ್ಕಾರದವರು ವಶಪಡಿಸಿಕೊಂಡು, ಮದರಾಸ್ ಮತ್ತು ಇತರ ಪ್ರದೇಶಗಳಲ್ಲಿ ಕೊಡುತ್ತಿರುವಂತೆ ಪರಿಹಾರವನ್ನು ಇನಾಂದಾರರುಗಳಿಗೆ ಕೊಡಬೇಕೆಂದು ಮೈಸೂರು ಭೂಕಂದಾಯ ಸುಧಾರಣಾ ಸಮಿತಿಯವರು ಸಲಹೆ ಮಾಡಬೇಕೆಂದು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ

ಲಂಡನ್ನಿನಲ್ಲಿ ನೆಹರೂ

ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ೨೬ ದಿನಗಳ ಕಾಲ ತಮ್ಮ ಅಮೆರಿಕದ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ದಿನ ಅಧ್ಯಕ್ಷ ಟ್ರೂಮನ್ನರ ವಿಮಾನದಲ್ಲಿ ಲಂಡನ್ನಿಗೆ ಆಗಮಿಸಿದರು ಲಂಡನ್ ವಿಮಾನ ನಿಲ್ದಾಣವನ್ನು ಅವರು ನಿಗದಿಯಾಗಿದ್ದ ಕಾಲಕ್ಕಿಂತಲೂ ಒಂದೂವರೆ ಗಂಟೆ ಮುಂಚಿತವಾಗಿಯೇ ತಲುಪಿದರು ಅನಂತರ ಅವರು ಬ್ರಿಟನ್ನಿನ ಪ್ರಧಾನಿ ಮಿ॥ ಅಟ್ಲಿ, ಸರ್ ಸ್ಟಾಫರ್ಡ್ ಕ್ರಿಪ್ಸ್ ಮೊದಲಾದವರನ್ನು ಭೇಟಿ ಮಾಡಿದ್ದರು ಅವರ ಗೌರವಾರ್ಥವಾಗಿ ಇಂಡಿಯಾ ಹೌಸಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು ಪಂಡಿತ ನೆಹರೂರವರು ಡೌನಿಂಗ್ ರಸ್ತೆಯಲ್ಲಿರುವ ನಂಬರ್ ೧೦ನೇ ಭವನದಲ್ಲಿ ಬ್ರಿಟಿಷ್ ಮಂತ್ರಿಮಂಡಲದವರನ್ನು ಮತ್ತು ಇತರ ಪ್ರಮುಖರನ್ನು ಭೇಟಿ ಮಾಡಲಿರುವರೆಂದು ವರದಿಯಾಗಿದೆ

ಶಾಲೆಗೆ ಮಕ್ಕಳನ್ನು ಕಳುಹಿಸದಿದ್ದುದಕ್ಕೆ ಜುಲ್ಮಾನೆ

ಮೈಸೂರು ತಾಲ್ಲೂಕು ವರಣ, ಚಿಕ್ಕಹಳ್ಳಿ ... ಗಂಗನೂರು ಹುಂಡಿ ಮುಂತಾದ ಪ್ರದೇಶಗಳ ೯ ಜನ ನಿವಾಸಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದುದಕ್ಕಾಗಿ ತಾಲ್ಲೂಕು ಅಮಲ್ದಾರರು ಕಳೆದ ೩ನೇ ತಾ॥ ಅವರುಗಳಿಗೆ ಜುಲ್ಮಾನೆಯನ್ನು ವಿಧಿಸಿರುತ್ತಾರೆ

ಪುಸ್ತಕಗಳ ಸ್ವೀಕಾರ

ರಾಜಧಾನಿಯ ವನಿತಾ ಸದನದ ಶಿಶು ಸಾಹಿತ್ಯ ಸಂಘದವರು ಪ್ರಕಟಿಸಿರುವ ಬುದ್ಧನ ಕಥೆ, ಹೊರದೇಶದ ಸ್ನೇಹಿತರು ಚಿತ್ರ ಪುಸ್ತಕ, ಕಂದ ಎಂಬ ಪುಸ್ತಕದ ೧ ಮತ್ತು ೨ನೇ ಭಾಗಗಳು ಇವೇ ಮುಂತಾದ ಪುಸ್ತಕಗಳನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ

○ ಪಂಡಿತ ನೆಹರೂರವರು ತಮ್ಮ ಅಮೆರಿಕದ ಪ್ರವಾಸದಲ್ಲಿ ೧೧ ಡಾಲರುಗಳ ಬೆಲೆಬಾಳುವ ಒಂದು ... ಮಾತ್ರ ಕೊಂಡುಕೊಂಡರೆಂದು ಹೇಳಲಾಗಿದೆ

ಯು ಪಾ ಧ್ಯಾ ಯ ರು ಗ ಳ ಮು ಷ್ಕ ರ

ಶ್ರೀರಂಗಪಟ್ಟಣ ೯

ಇಲ್ಲಿನ ಸ್ಕೂಲು ... ಗಳು ಒಂದು ... ಸಂಬಳ ... ಕರು ... ಮಾಡಿದ ...

ಉತ್ಪತ್ತಿ ಹೆಚ್ಚಿಸಿದರೆ ಹೆಚ್ಚು ಸೌಲಭ್ಯಗಳು

ಸರ್ಕಾರಿ ಮುದ್ರಣಾಲಯದ ಕೆಲಸಗಾರರಿಗೆ ಸೂಚನೆ

ಮೈಸೂರು ೭

ರಾಜಧಾನಿಯ ಸರ್ಕಾರಿ ಮುದ್ರಣಾಲಯದ ಕೆಲಸಗಾರರ ಸಂಘದ ೩ನೇ ವಾರ್ಷಿಕೋತ್ಸವವು ಮೊನ್ನೆ ದಿನ ಸರ್ಕಾರದ ಕೇಂದ್ರ ಮುದ್ರಣಾಲಯದ ಡೈರೆಕ್ಟರಾದ ಶ್ರೀ ಬಿ. ಕೃಷ್ಣಸ್ವಾಮಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು

ಸ್ವಾಗತ ಗೀತೆ, ಕಾರ್ಯದರ್ಶಿಗಳಿಂದ ವಾರ್ಷಿಕ ವರದಿಗಳಾನಂತರ, ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿ. ಲೋಗನಾಥರವರು ಬಿನ್ನವತ್ತಳೆಯನ್ನು ಅಧ್ಯಕ್ಷರಿಗೆ ಅರ್ಪಿಸಿ, ಕೆಲಸಗಾರರ ಕುಂದು ಕೊರತೆಗಳನ್ನು ಬಿನ್ನವಿಸಿಕೊಂಡರು. ಅಧ್ಯಕ್ಷರು ಭಾಷಣ ಮಾಡಿ, ಈಗಲೇ ಕೆಲಸಗಾರರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಸರ್ಕಾರದವರು ಕಲ್ಪಿಸಿಕೊಟ್ಟಿರುವರೆಂದೂ, ಕೆಲಸಗಾರರು ವಿಶೇಷ ಶ್ರಮವಹಿಸಿ ಉತ್ಪತ್ತಿಯನ್ನು ಹೆಚ್ಚಿಸಿದಲ್ಲಿ ಅವರಿಗೆ ಇನ್ನೂ ಹೆಚ್ಚು ಸೌಲಭ್ಯಗಳನ್ನು ಒದಗಿಸಲಾಗುವುದೆಂದೂ ತಿಳಿಸಿದರು.

ಮಹಿಳಾ ಸದನ

ರಾಜಧಾನಿಯ ಮಹಿಳಾ ಸದನದ ವಾರ್ಷಿಕೋತ್ಸವವು ಕಳೆದ ಭಾನುವಾರ ಶ್ರೀಮತಿ ಕಮಲಮ್ಮ ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಅಧ್ಯಕ್ಷಿಣಿ ಶ್ರೀಮತಿ ತಂಗಮ್ಮನವರಿಂದ ಸ್ವಾಗತ ಭಾಷಣವಾದನಂತರ, ಶ್ರೀಮತಿ ತಂಗಮ್ಮ ಮತ್ತು ಸದಸ್ಯರವರುಗಳಿಂದ ಸಂಗೀತವು ಜರುಗಿತು ಉಪಾಧ್ಯಕ್ಷರಾದ ಶ್ರೀಮತಿ ಕಣ್ಣಮ್ಮನವರು ಕಳೆದ ವರ್ಷದ ವರದಿಯನ್ನು ಒಪ್ಪಿಸಿದರು ಹಿಂದೀ, ಸಂಗೀತ ಮುಂತಾದ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷಿಣಿಯರು ಬಹುಮಾನಗಳನ್ನು ವಿನಿಯೋಗಿಸಿ, ಸ್ತ್ರೀಯರ ಏಳಿಗೆಗೆ ಇಂತಹ ಸಂಸ್ಥೆಗಳ ಆವಶ್ಯಕತೆಯನ್ನು ತಿಳಿಸಿ ಭಾಷಣ ಮಾಡಿದರು. ವಧು ಪರೀಕ್ಷೆ ಎಂಬ ನಾಟಕ ಪ್ರದರ್ಶನವಾದನಂತರ ಸಮಾರಂಭವು ಮುಕ್ತಾಯವಾಯಿತು.

ವಿವಿಧ ವಿನೋದಾವಳಿ

ರಾಜಧಾನಿಯ ದಳವಾಯಿ ಶಾಲೆಯ ಸಹಾಯಾರ್ಥವಾಗಿ ಇದೇ ೧೨ನೇ ತಾರೀಖು ಸಂಜೆ ೬ ಗಂಟೆಗೆ ವಿವಿಧ ವಿನೋದಾವಳಿಯು, ಶಾಲೆಯ ಸಭಾಂಗಣದಲ್ಲಿ ಶ್ರೀ ಜೋಡೀದಾರ್ ಕೆ. ನಾರಾಯಣಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದ [illegible] ಸಹಾಯ ಮಾಡಬೇಕೆಂದು ಕೋರಲಾಗಿದೆ

ನೂತನ ಪ್ರಾಥಮಿಕ ಶಾಲೆಯ ಆರಂಭ

ನಂಜನಗೂಡು ತಾಲ್ಲೂಕು ಕುಂಬರಹಳ್ಳಿಯಲ್ಲಿ ಕಳೆದ ತಿಂಗಳು ೨೪ ನೇ ತಾರೀಖು ನೂತನ ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವವನ್ನು ಶಾಲಾ ಇನ್ಸ್‌ಪೆಕ್ಟರಾದ ಶ್ರೀ ಬಿ ಎಸ್ ಮಲ್ಲಪ್ಪನವರು ನೆರವೇರಿಸಿದರು

Edited printed and published by [illegible] R. Nagarajan, at Sadhvi Press D. Subbiah [illegible]

ವಿರೋಧ ಪ್ರದರ್ಶನ ನಡೆಸಿದುದಕ್ಕಾಗಿ ವಿದ್ಯಾರ್ಥಿಗಳಿಗೆ ಬಹಿಷ್ಕಾರ

ಪಾಕೀಸ್ಥಾನದ ಪ್ರಧಾನಿ ಲಿಯಾಖತ್ ಅಲಿ ಖಾನರವರ ಪತ್ನಿಯವರು ಢಾಕಾದ ಮಿಡ ಫೋರ್ಡ್ ಆಸ್ಪತ್ರೆಗೆ ಭೇಟಿ ಇತ್ತಾಗ ಅಲ್ಲಿ ನಡೆದ ಸಾಮೂಹಿಕ ವಿದ್ಯಾರ್ಥಿ ವಿರೋಧ ಪ್ರದರ್ಶನದಲ್ಲಿ ಭಾಗವಹಿಸಿದರೆಂದು ಮೆಡಿಕಲ್ ಸ್ಕೂಲಿನ ೬ ಜನ ವಿದ್ಯಾರ್ಥಿಗಳನ್ನು ಬಹಿಷ್ಕರಿಸಲಾಗಿದೆ ಮತ್ತು ೫ ಮಂದಿಗಳು ೧ ವರ್ಷಕಾಲ ಶಾಲೆಗೆ ಬರಕೂಡದೆಂದೂ ಆಜ್ಞೆ ಮಾಡಲಾಗಿದೆ. ಅಲ್ಲಿನ ಮೆಡಿಕಲ್ ಶಾಲಾ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಪೂರ್ವ ಬಂಗಾಳಾ ಪ್ರಾಂತದಿಂದ ಗಡೀಪಾರು ಮಾಡಲಾಗಿದೆ

ಫ್ರೆಂಚ್ ಸರ್ಕಾರಕ್ಕೆ ಭಾರತದ ಪ್ರತಿಭಟನೆ

ಮುಂದಿನ ತಿಂಗಳು ೧೪ ನೇ ತಾ|| ಫ್ರೆಂಚ್ ಭಾರತದಲ್ಲಿ ಸಾರ್ವತ್ರಿಕ ಮತಗಣನೆ ನಡೆಸಲು ಭಾರತಕ್ಕೂ ಮತ್ತು ಫ್ರೆಂಚ್ ಸರ್ಕಾರಗಳಿಗೂ ಆದ ಒಪ್ಪಂದವನ್ನು ಫ್ರೆಂಚ್ ಸರ್ಕಾರದವರು ಉಲ್ಲಂಘಿಸಿ, ಫ್ರೆಂಚ್ ಭಾರತದಲ್ಲಿ ಸ್ವತಂತ್ರ ಸಂಯುಕ್ತ ಪ್ರಾಂತ ಸ್ಥಾಪನೆಯ ಬಗ್ಗೆ ಅವರು ಕೈಗೊಂಡಿರುವ ಕಾರ್ಯಕ್ರಮವನ್ನು ಪ್ರತಿಭಟಿಸಿ ಭಾರತ ಸರ್ಕಾರದವರು ಪತ್ರ ಬರೆದಿರುವರೆಂದು ತಿಳಿದುಬಂದಿದೆ

ಬಿರುಗಾಳಿಯಿಂದ ೭೦೦ ಜನರ ಮರಣ

ದಕ್ಷಿಣ ಫಿಲಿಪ್ಪೈನಿನ ವಿಸಿಯಾದ್ವೀಪದಲ್ಲಿ ಕಳೆದವಾರ ಉಂಟಾದ ಪ್ರಚಂಡ ಬಿರುಗಾಳಿಯಿಂದ ೭೦೦ ಜನರು ಸತ್ತರೆಂದೂ, ಲಕ್ಷಾಂತರ ಡಾಲರುಗಳಷ್ಟು ನಷ್ಟಸಂಭವಿಸಿದೆಯೆಂದು ಹೇಳಲಾಗಿದೆ.

ನೀರಾವರಿ ಯೋಜನೆಗೆ ಅಣು ಶಕ್ತಿ ಉಪಯೋಗ

ಸೈಬೀರಿಯಾದಲ್ಲಿರುವ ಓಬಿ ಮತ್ತು ಯನಸಿ ನದಿಗಳ ನೀರು ಸಮುದ್ರಕ್ಕೆ ಹರಿದು ವ್ಯರ್ಥವಾಗುವುದನ್ನು ತಡೆಯಲು ರಷ್ಯದ ವೈಜ್ಞಾನಿಕರು ಅಣುಶಕ್ತಿಯನ್ನು ಉಪಯೋಗಿಸುತ್ತಿದ್ದಾರೆಂದೂ, ಅದನ್ನು ಯುರಾಲ್ ಗುಡ್ಡಗಳನ್ನು ಛೇದಿಸಲು ಉಪಯೋಗಿಸಲಾಗುತ್ತಿದೆಯೆಂದೂ ಹೇಳಲಾಗಿದೆ ಇದರಿಂದ ಕ್ಯಾಸಪಿಯನ್ ಮತ್ತು ಅರಾಲ್ ಸಮುದ್ರಗಳ ಮಧ್ಯೆ ಭಾರಿ ನೀರಾವರಿ ಯೋಜನೆಯನ್ನು ತಯಾರಿಸಲು ಅನುಕೂಲವಾಯಿತೆಂದು ಹೇಳಲಾಗಿದೆ

ಮಧ್ಯ ಪ್ರಾಂತದ ರೈತರಿಗೆ ತಕಾವಿ ಸಾಲ

ಮಧ್ಯ ಪ್ರಾಂತ್ಯದ ರೈತರುಗಳ ವ್ಯವಸಾಯದ ಯಂತ್ರ [illegible] ಕೊಳ್ಳುವುದಕ್ಕಾಗಿ ತಕಾವಿ ಸಾಲವನ್ನು ಕೊಡಲು ಅಲ್ಲಿನ ಸರ್ಕಾರದವರು ಆಲೋಚಿಸಿದ್ದಾರೆ

Intermediate Examination
— OF MARCH 1950 —
Classes begin on 11-11-49
City Tutorial College
1531 [illegible] ROAD,
[illegible]

ಮೃತ್ಯುವಿನಿಂದ ಇಸ್ರೇಲ್ ಸಚಿವರುಗಳು ಪಾರಾದರು

ಕೆಲವು ದಿವಸಗಳ ಹಿಂದೆ ಇಸ್ರೇಲ್ ಪಾರ್ಲಿಮೆಂಟ್ ಸಭೆಯು ಸಮಾವೇಶಗೊಂಡಿದ್ದಾಗ ಸಭೆಯಲ್ಲಿದ್ದ ಪ್ರೇಕ್ಷಕನೊಬ್ಬನು ಹಠಾತ್ತನೆ ಸಚಿವರುಗಳು ಕುಳಿತಿದ್ದ ಮೇಜಿನಬಳಿ ಬಂದು, ಅವರುಗಳನ್ನು ಕುರಿತು "ನೀವುಗಳು ಜರೂಸಲೆಮ್ಮಿನ ದೇವಾಲಯವನ್ನು ಪುನರುದ್ಧಾರ ಮಾಡುವುದಕ್ಕೆ ಇಷ್ಟಪಡುವುದಿಲ್ಲ, ನಿಮ್ಮನ್ನು ಸಾಯಿಸಿಬಿಡುತ್ತೇನೆ" ಎಂದು ಅರ್ಭಟಿಸಿ ಒಂದು ಸ್ಟೆನ್‌ಗನ್ನನ್ನು ಅವರ ಕಡೆ ತೋರಿಸಿದನು. ಸಭಿಕರೆಲ್ಲರೂ ಕ್ಷಣಕಾಲ ಸ್ತಬ್ಧರಾಗಿದ್ದು, ಅನಂತರ ಉಪಾಯವಾಗಿ ಅಲ್ಲಿನ ಜವಾನರು ಮತ್ತು ಪ್ರೇಕ್ಷಕರು ಅವನ ಕೈಯಿಂದ ಸ್ಟೆನ್‌ಗನ್ನನ್ನು ಕಿತ್ತುಕೊಂಡು ಅವನನ್ನು ಬಂಧಿಸಿದರು

ಫಿಲಿಪ್ಪೈನ್ ಘರ್ಷಣೆಯಲ್ಲಿ ೧೭ ಜನರ ಮರಣ

ಫಿಲಿಪ್ಪೈನ್ ಅಧ್ಯಕ್ಷ ಚುನಾವಣೆಗೆ ಮೂರು ಮಂದಿ ಸದಸ್ಯರು ಸ್ಪರ್ಧಿಸಿದ್ದರು ನೆನ್ನೆ ಅಲ್ಲಿ ಚುನಾವಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಘರ್ಷಣೆಯುಂಟಾಗಿ ೧೭ ಮಂದಿ ಮಡಿದರೆಂದು ವರದಿಯಾಗಿದೆ.

ಮದರಾಸಿನಲ್ಲಿ ಆಹಾರ ಪದಾರ್ಥಗಳ ಬೆಲೆ ಖೋತಾ

ಭಾರತ ಸರ್ಕಾರದ ಸೂಚನೆಗನುಗುಣವಾಗಿ ಮದರಾಸ್ ಪ್ರಾಂತ್ಯದಲ್ಲಿ ಮೊದಲನೆ ದರ್ಜೆಯ ಭತ್ತ ಮತ್ತು ರಾಗಿಗಳಿಗೆ ಮಣ ೧ಕ್ಕೆ ೩ ಆಣೆ ಮತ್ತು ಎರಡನೇ ದರ್ಜೆಗೆ ಮಣ ೧ಕ್ಕೆ ೪ ಆಣೆ ಯಂತೆ ಸರ್ಕಾರದವರು ಕೊಳ್ಳುವ ಬೆಲೆಯನ್ನು ಇಳಿಸಲಾಗುವುದೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತಾರೆ. ಇದರಂತೆ ಪ್ರಜೆಗಳು ಕೊಳ್ಳುವ ಆಹಾರ ಪದಾರ್ಥಗಳ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಇಳಿಸಲಾಗುವುದು.

ರಬ್ಬರ್ ರಸ್ತೆಗಳು

ಜಾರದಂತಹ ಮತ್ತು ಧೂಳು ಇಲ್ಲದ ರಬ್ಬರಿನಿಂದ ತಯಾರಿಸಲ್ಪಟ್ಟ ಎರಡು ರಸ್ತೆಗಳನ್ನು ಸಿಂಗಪುರದಲ್ಲಿ ನಿರ್ಮಿಸಲಾಗುತ್ತಿದೆಯೆಂದು ಹೇಳಲಾಗಿದೆ ಇಂತಹ ರಸ್ತೆಗಳಿಗೆ ಖರ್ಚು ಕಡಿಮೆಯಾಗಿದ್ದು ಅಂದವಾಗಿ ಬಹುಕಾಲ ಉಪಯೋಗಕ್ಕೆ ಬರುವುವೆಂದೂ, ಇದಕ್ಕೆ ದುರಸ್ತು ಖರ್ಚು ಉಳಿತಾಯವಾಗುವುದೆಂದೂ ಹೇಳಲಾಗಿದೆ.

○ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೧೪ನೇ ತಾ|| ದೆಹಲಿಗೆ ಪ್ರಯಾಣ ಮಾಡುವರು.

ಸಾಮಾಜಿಕ ಚಲಿಸ ಚಿತ್ರ ಜಗತ್ತಿನ
ವಿಶೇಷ ವಿವರಗಳಿಗೆ
ಚಿತ್ರಾಂಗಿನಿ
ಮಾಸ ಪತ್ರಿಕೆಯನ್ನು ಓದಿರಿ
ವಾರ್ಷಿಕ ಚಂದಾ . ೩-೮-೦
ಬಿಡಿ ಪ್ರತಿ :: ೦-೪-೦
ವಿವರಗಳಿಗೆ :—
P. G. K. Murthy
Circulation Manager
Chitrangini
287[illegible] [illegible]ipuram
[illegible]

ಕಾಲರಾ ಮುಂಜಾಗ್ರ[illegible] ಕಾರ್ಯಕ್ರಮ

ನಂಜನಗೂಡು

ಇಲ್ಲಿ ಕಾಲರಾರೋಗವು ಹರಡ[illegible] ಪೌರಸಭೆಯವರು ತಕ್ಕ ಕಾರ್ಯಕ್ರಮ[illegible] ಕೈಗೊಂಡಿದ್ದಾರೆ ಸಾಮೂಹಿಕ ಇನ[illegible] ಲೇಷನ್ ಮಾಡಲಾಗುತ್ತಿದೆ. ಹೋಟೆ[illegible] ಮುಂತಾದ ಆಹಾರ ಪದಾರ್ಥಗಳ [illegible] ಡಿಗಳನ್ನೂ ಮುಚ್ಚಲಾಗಿದೆ. ವೈದ್ಯ[illegible] ಳು ೩೦-೪೦ ಖಾಯಿಲೆಗಳನ್ನು ಗು[illegible] ಡಿಸಿರುತ್ತಾರೆ. ಆದರೂ ಅಲ್ಲಲ್ಲಿ [illegible] ತಲೆದೋರುತ್ತಿವೆ. ಪಟ್ಟಣದ ಒಳ[illegible] ೨ ಸಿನಿಮಾ ಮಂದಿರಗಳನ್ನು ಕೂ[illegible] ಮುಚ್ಚಿಸಬೇಕು-ಎಂದು ಕೋರಲಾಗಿ[illegible]

ಕಾಲರಾ ಉಪದ್ರವ

ಹಂಪಾಪುರ ಮತ್ತು ಸುತ್ತ ಮು[illegible] ಪ್ರದೇಶಗಳಲ್ಲಿ ಕಾಲರಾ ಉಪದ್ರವ[illegible] ಚ್ಚಾಗಿದೆ ಚಿನ್ನಹಳ್ಳಿಯಲ್ಲಿ ೪ ಮ[illegible] ಕಾಲರಾ ರೋಗವು ತಗುಲಿದೆ ಚಿಕ್ಕ[illegible] ಯಲ್ಲಿ ಇಬ್ಬರು ಮೃತರಾಗಿದ್ದಾರೆ. [illegible] ಗವನ್ನು ತಡೆಗಟ್ಟಲು ಇಲ್ಲಿ ಯಾವ[illegible] ಕ್ರಮವನ್ನೂ ಕೈಗೊಂಡಿಲ್ಲ ವೈದ್ಯರು [illegible] ಕಾರ್ಯ ಗೌರವದ ನಿಮಿತ್ತ ಬೇರೆ [illegible] ಹೋಗಿದ್ದಾರೆ. ಸಂಬಂಧ ಪಟ್ಟವರು [illegible] ಡಲೇ ನಿವಾರಣೆ ಕಾರ್ಯಕ್ರಮಗಳನ್ನು [illegible] ಗೊಳ್ಳಬೇಕೆಂದು ಅಲ್ಲಿನ ನಿವಾಸಿಗಳು [illegible] ರ್ಥಿಸುತ್ತಾರೆ.

ಮದಗಾಸ್ಕರಿನಿಂದ ಭಾರತೀಯರಿಗೆ ಉಚ್ಚಾ[illegible]

ಆಫ್ರಿಕಾ ಖಂಡದ ದಕ್ಷಿಣ [illegible] ಬಳಿ ಇರುವ ಮಾಡಗಾಸ್ಕರ್ ದ್ವೀ[illegible] ರುವ ಭಾರತೀಯರೆಲ್ಲರೂ ಅಲ್ಲಿಂದ [illegible] ಹೊರಡಬೇಕೆಂದು ಆಜ್ಞೆ ಮಾಡಲ[illegible] ಇದರಿಂದ ಅಲ್ಲಿ ನೆಲೆಸಿರುವ ಸುಮಾರು ೧೫ ಸಾವಿರ ಮಂದಿ ಭಾರತೀ[illegible] ಬಹಳ ತೊಂದರೆಯಾಗಿದೆ. ಅಲ್ಲದೆ [illegible] ತಾತ್ಕಾಲಿಕವಾಗಿ ಮಡಗಾಸ್ಕರಿನಿಂ[illegible] ರತಕ್ಕೆ ಬಂದಿರುವವರೂ ಸಹ ಅಲ್ಲಿಗೆ [illegible] ದಿರುಗಲು ಅವಕಾಶವಿಲ್ಲ.

ಗಾಯತ್ರೀ ಟಾಕೀ[illegible]
ದಿನವಹಿ ಮೂರು ಪ್ರದರ್ಶನಗ[illegible]
9-11-49ರಿಂದ 3 ದಿನಗಳ
ಅದ್ಭುತ ಸಾಹಸ ವರ್ಣರಂಜಿತ
ಕ್ಯಾಪ್ಟನ್ ಫ್ರಂ ಕ್ಯಾಸ್ಟೈ[illegible]
Captain from Castile
WITH—TYRONE POW[illegible]
Morning Shows
on 12th & 13th Nov
UNDER TWO FLA[illegible]
-:Next Change:-
ALIBABA AND FORTY THI[illegible]

ಮಕ್ಕಳ ಅವರ್‌ಕಾ[illegible]
[illegible]
ಅವರ್‌ಗ್ಲಾಸ್, ಮೈಸೂ[illegible]

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೦-೧೧-೪೯ [ಸಂಚಿಕೆ ೮೭

ಅಖಂಡ ಕರ್ಣಾಟಕ ಸ್ಥಾಪನೆಗೆ ಚಳುವಳಿ ?

ಪೌರಸಭಾ ಚುನಾವಣೆಗೆ ೧೨೦॥ ಉಮೇದುವಾರರು

ಮೈಸೂರು ೧೦

ಈ ಕೆಳಗೆ ಕಂಡವರು ಪುರಸಭಾ ಚುನಾವಣೆಗೆ ಕಾಂಗ್ರೆಸ್ಸಿನ ಪರವಾಗಿ ಈ ದಿನ ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿರುವರು:-

ಚಾಮರಾಜ ಮೊಹಲ್ಲಾ:-ಶ್ರೀಗಳಾದ ... ನಾರಾಯಣ ಸ್ವಾಮಿ, ಅಗರಂ ರಂಗಯ್ಯ, ಎಸ್ ಶ್ರೀರಂಗಾಚಾರ್, ಸಿ.ಜಿ ದೇವನಾಥ್

ಕೃಷ್ಣರಾಜ'- ಶ್ರೀಗಳಾದ ಪಿ. ಸೀತಾರಾಮಯ್ಯ, ಡಾ॥ ಬಿ ಎಸ್. ಸೂರ್ಯನಾರಾಯಣ ರಾವ್, ಕೆ. ಎಸ್ ಸತ್ಯನಾರಾಯಣ ರಾವ್, ಟಿ ಎಸ್. ರಾಜಗೋಪಾಲಯ್ಯಂಗಾರ್

ಕಿಲ್ಲೆ - ಶ್ರೀ ಎ ಕೃಷ್ಣಮೂರ್ತಿ ರಾವ್.

ನಜರಬಾದ್:-ಶ್ರೀ ಎಸ್. ಲಿಂಗಣ್ಣ.

ಲಷ್ಕರ್:-ಶ್ರೀಗಳಾದ ಇ ಪಿ. ನಂಜಪ್ಪ, ... ಚಂದ್ರಶೇಖರ ಗೌಡ, ಸಿ ಎಸ್. ವೆಂಕಟಸುಬ್ಬಶೆಟ್ಟಿ, ರಾಜಶೇಖರಯ್ಯ

ಮಂಡಿ:-ಶ್ರೀಗಳಾದ ಕೆ. ಪುಟ್ಟಸ್ವಾಮಿ, ... ರಂಗಸ್ವಾಮಯ್ಯ, ಎಂ. ಎಸ್. ನಂಜಪ್ಪ, ಕೆ ಚಾಮುಂಡಯ್ಯ

ದೇವರಾಜ:-ಶ್ರೀಗಳಾದ ಟಿ. ನರಸಿಂಹಯ್ಯಂಗಾರ್, ಟಿ. ವೆಂಕಟರಮಣಯ್ಯ ... ಎಲ್. ರಾಮಚಂದ್ರ ರಾವ್, ... ಗೌಡಯ್ಯ

ಮುಸ್ಲಿಂ ಉಮೇದುವಾರರು:- ಹಾಜಿ ಅಮೀರುದ್ದೀನ್ ಖುರೇಷಿಯವ ... ಒಸ್ಮಾನ್ ಮತ್ತು ಹಾಜಿ ಜಿ. ... ಸರ್ದಾರವರು ಮಂಡಿ ಮೊಹಲ್ಲಾದಿಂದ ಉಮೇದುವಾರರಾಗಿರುವರು ಇವರುಗಳಿಗೆ ಕಾಂಗ್ರೆಸ್ಸು ಬೆಂಬಲ ನೀಡುವುದು.

ಸಂಯುಕ್ತ ಪ್ರಾಂತ್ಯಕ್ಕೆ ಆರ್ಯಾವರ್ತ ಎಂಬ ಹೆಸರು

ಸಂಯುಕ್ತ ಪ್ರಾಂತದ ಹೆಸರನ್ನು ಬದಲಾಯಿಸಿ ಆರ್ಯಾವರ್ತ ಎಂದು ಕರೆಯಬೇಕೆಂದು ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಸಲಹೆ ಮಾಡಿರುತ್ತಾರೆ

ಶೀಘ್ರ ಲಿಪಿಗಾರರಿಗೆ ಪಕ್ಷಪಾತವೇ ?

ಸಂಸ್ಥಾನದ ನ್ಯಾಯ ಇಲಾಖೆಗಳಲ್ಲಿ ಪ್ರಥಮ ದರ್ಜೆಯ ಅರ್ಹತೆ ಪಡೆದಿರುವ ಎಲ್ಲ ಶೀಘ್ರ ಲಿಪಿಗಾರರಿಗೂ ಮತ್ತು ಟೈಪಿಸ್ಟರುಗಳಿಗೂ ೧-೧-೪೭ರಿಂದ ಮಂಜೂರು ಮಾಡಿರುವ ಸಂಬಳದ ಸ್ಕೇಲನ್ನು (೭೫-೫-೧೦೦-೧೦-೧೫೦, ೧೦-೨೦೦ ರೂ) ಸರ್ಕಾರದವರು ೩೧-೧೦-೪೯ರಲ್ಲಿ ಮಂಜೂರು ಮಾಡಿರುತ್ತಾರೆ ಆದರೆ ಅದೇ ಅರ್ಹತೆಯನ್ನು ಪಡೆದು ೧೫-೨೦ ವರ್ಷಗಳಿಂದ ಉಳಿದ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಶೀಘ್ರ ಲಿಪಿಗಾರರಿಗೆ ಅದೇ ಅವಕಾಶವನ್ನು ಕೊಡದಿರುವುದು ವಿಷಾದಕರ ... -೧-೪೭ರ ಹಿಂದೆ ಪ್ರಥಮ ದರ್ಜೆಗೆ ... ಅವಕಾಶ ಒದಗದಿರುವ ಶೀಘ್ರ ಲಿಪಿಗಾರರ ಸಂಖ್ಯೆಯು ಕೇವಲ ಅತ್ಯಲ್ಪವಾಗಿವೆ ನ್ಯಾಯ ಇಲಾಖೆಯ ಶೀಘ್ರಲಿಪಿಗಾರರ ಕೆಲಸವು ಎಷ್ಟು ಜವಾಬ್ದಾರಿಯುತವಾಗಿದೆಯೋ ಅಷ್ಟೆ ಇತರರದೂ ಆಗಿದೆ ... ಅವರುಗಳ ಕಷ್ಟಗಳನ್ನೂ ... ನಿವಾರಿಸಿ ನ್ಯಾಯ ... ಕಲ್ಪಿಸಬೇಕೆಂದ ... ಕೋರಿ ಪತ್ರ ಬರೆದಿದ್ದಾರೆ

ಕರ್ಣಾಟಕ ಪ್ರಾಂತ ರಚನೆ ಬಗ್ಗೆ ಕೇಂದ್ರಕ್ಕೆ ಎಚ್ಚರಿಕೆ

ಕೆ. ಪಿ. ಸಿ. ಸಿ..ಯಲ್ಲಿ ನಿರ್ಣಯ

ದಾವಣಗೆರೆ ೯

ಮೈಸೂರು ಮತ್ತು ಕರ್ಣಾಟಕದ ಪ್ರಜೆಗಳ ಅಪೇಕ್ಷೆಯಂತೆ ಅಖಂಡ ಕರ್ಣಾಟಕವನ್ನು ರಚಿಸಲು ಈಗ ಸಕಾಲವಾಗಿರುವುದರಿಂದ ಈ ವರ್ಷಾಂತ್ಯದೊಳಗಾಗಿ ಕರ್ಣಾಟಕ ಪ್ರಾಂತ್ಯವನ್ನು ರಚಿಸಬೇಕೆಂದು ಕೇಂದ್ರ ಸರ್ಕಾರದವರನ್ನೂ ಮತ್ತು ಕಾಂಗ್ರೆಸ್ಸನ್ನೂ ಪ್ರಾರ್ಥಿಸುವುದು. ಆ ರೀತಿ ರಚಿಸದಿದ್ದಲ್ಲಿ ಭಾರತದ ನೂತನ ರಾಜ್ಯಾಂಗವು ಕನ್ನಡಿಗರಿಗೆ ಅಂಗೀಕಾರಾರ್ಹವಲ್ಲವೆಂದು ಎಚ್ಚರಿಸುವುದು ಮತ್ತು ಈ ಉದ್ದೇಶ ಸಾಧನೆಗಾಗಿ ವಿಧಿಯಿಲ್ಲದೆ ಚಳುವಳಿಯನ್ನು ಕೈಗೊಳ್ಳಬೇಕಾಗುವುದು ಎಂಬ ನಿರ್ಣಯವು ಇಲ್ಲಿ ಈ ದಿನ ನಡೆದ ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಆರೋಗ್ಯ, ಮತ್ತು ಕಲಾ ವಸ್ತು ಪ್ರದರ್ಶನ

ಮೈಸೂರು ೧೦

ನಾಗರಿಕರಿಗೆ ಆರೋಗ್ಯ ವಿಷಯವಾಗಿ ತಿಳುವಳಿಕೆಯನ್ನೂ, ಹೆಚ್ಚಿನ ಆಹಾರದ ಬೆಳೆಗೆ ಉತ್ತೇಜನವನ್ನೂ, ಕಲೆ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೂ ನೀಡಲು ಮುಂದಿನ ತಿಂಗಳು ೩೦ರಿಂದ ೩ನೇ ತಾ ವರೆಗೆ ದಸರಾ ವಸ್ತು ಪ್ರದರ್ಶನಾಲಯದಲ್ಲಿ ಪ್ರದರ್ಶನವನ್ನು ಪೌರ ಸಭೆಯವರು ಏರ್ಪಡಿಸಲಿದ್ದಾರೆ ಇದರ ಅಂಗವಾಗಿ ಮನೆಗಳ ಕೈತೋಟದ ಸ್ಪರ್ಧೆಯೂ ಸಹ ನಡೆಯಲಿದೆ ಬಾಲಕ ಬಾಲಕಿಯರಿಗೆ ಮೈದಾನದ ಆಟಪಾಟಗಳು, ಕುಸ್ತಿ ಮತ್ತು ಇತರ ಮನರಂಜನೆಗಳನ್ನು ಏರ್ಪಡಿಸಲಾಗಿದೆ

ಚುನಾವಣೆ ಪ್ರಚಾರ ಸಭೆ ಮುಂದುವರಿಯಿತು

ಈ ಸಂಜೆ ಟೌನ್ ಹಾಲಿನಲ್ಲಿ ನಡೆಯಬೇಕಾಗಿದ್ದ ಪುರಸಭಾ ಚುನಾವಣಾ ಕಾಂಗ್ರೆಸ್ ಪಕ್ಷದ ಪ್ರಚಾರ ಸಭೆಯು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ... ಕಾರಣಾಂತರಗಳಿಂದ ... ಮುಂದೂಡಲಾಗಿದೆ ... ದಿನವನ್ನು ... ತಿಳಿಸಲಾಗುವುದು

ನೆಹರೂರವರಿಗೆ ವರ್ಧಂತಿ ಉಡುಗೆರೆ

೬೦ ತೊಲ ಚಿನ್ನದ ೯ ಅಂಗುಲದ ಅಶೋಕ ಸ್ತಂಭ

ಪಂಡಿತ ನೆಹರೂರವರು ತಮ್ಮ ಪಾಶ್ಚಿಮಾತ್ಯ ಪ್ರವಾಸವನ್ನು ಮುಗಿಸಿಕೊಂಡು ಬೊಂಬಾಯಿಗೆ ತಮ್ಮ ವರ್ಧಂತಿ ಉತ್ಸವದ ದಿವಸವಾದ ೧ನೇ ೧೪ನೇ ತಾ॥ ಸೋಮವಾರ ಸಂಜೆ ೬ ಗಂಟೆಗೆ ಆಗಮಿಸುವರು ಅದೇ ದಿನ ಸಂಜೆ ೬-೩೦ ಗಂಟೆಗೆ ಅವರ ಗೌರವಾರ್ಥವಾಗಿ ಬೊಂಬಾಯಿನ ಚೌಪಾತಿ ಸಮುದ್ರ ತೀರ ಪ್ರದೇಶದಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿರುವ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು ರಾತ್ರಿ ೯ ಗಂಟೆಗೆ ಸಂಸ್ಕೃತ ಸಂಘದಲ್ಲಿ ಭಾಗ ವಹಿಸುವರು ಮಾರನೇ ದಿನ ಬೆಳಿಗ್ಗೆ ದೆಹಲಿಗೆ ತೆರಳುವರು.

ಬೊಂಬಾಯಿನಲ್ಲಿ ಅವರ ವರ್ಧಂತಿ ಉತ್ಸವವನ್ನು ವೈಭವದಿಂದ ಆಚರಿಸಲು ಸಕಲ ಸಿದ್ಧತೆಗಳೂ ಆಗುತ್ತಿವೆ ಬಹಿರಂಗ ಸಭೆಯಲ್ಲಿ ಬೊಂಬಾಯಿನ ನಿವಾಸಿಗಳ ಪರವಾಗಿ ೬೦ ತೊಲ ತೂಕವುಳ್ಳ, ಮತ್ತು ೯ ಅಂಗುಲ ಉದ್ದದ ವಜ್ರ ಖಚಿತವಾದ ಚಿನ್ನದ ಅಶೋಕ ಸ್ತಂಭವನ್ನು ಅವರಿಗೆ ಅರ್ಪಿಸಲಾಗುವುದು ಅವರ ವರ್ಧಂತ್ಯುತ್ಸವದ ಪಾರಿತೋಷಕವಾಗಿ ವಜ್ರದ ಈ ಸ್ತಂಭವನ್ನು ಕೊಡಲಾಗುವುದು ಮಹಾಜನರ ಪ್ರೀತಿ ಮತ್ತು ಗಾಢವಾದ ಸ್ನೇಹವನ್ನು ಸೂಚಿಸುವ ಲಿಖಿತವನ್ನೂ ಸಹ ಅದರಲ್ಲಿ ಕೆತ್ತಲಾಗುವುದು. ಇದಲ್ಲದೆ ಅವರಿಗೆ ಒಂದು ಖಾದಿ ಶೇರ್ವಾನಿ, ಸೂಟು ಒಂದು ಶಾಲು ಮತ್ತು ಅಂಗ ವಸ್ತ್ರವನ್ನೂ ಸಹ ಸಮರ್ಪಿಸಲಾಗುವುದು.

ಸಕ್ಕರೆ ಕಂಪೆನಿಯು ೪೦೦ ಜನ ಕೆಲಸಗಾರರ ವಜಾ

ಇದೇ ೮ ನೇ ತಾ॥ ನಿಂದ ಮಂಡ್ಯದ ಸಕ್ಕರೆ ಕಾರ್ಖಾನೆಯ ಕೆಲಸಗಾರರು ಮುಷ್ಕರ ಹೂಡಿರುವನಷ್ಟೆ ಅವರ ಪೈಕಿ ೪೦೦ ಜನ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿ, ೨೪ ಗಂಟೆಗಳೊಳಗೆ ಕಂಪೆನಿಯವರು ಕೊಟ್ಟಿರುವ ಮನೆಗಳನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಲಾಗಿದೆ ... ಇವರಿಗೆ ... ಕೊಡಬೇಕಾದ ... ಬಾಕಿ ... ತಿಳಿಸಲಾಗಿದೆ

ಎಸ್. ಎಸ್. ಶಾಸ್ತ್ರಿಗಳ ಅಪೀಲು ತಿರಸ್ಕಾರ

ಮೈಸೂರು ೧೦

ಶ್ರೀ ಎಸ್. ಎಸ್ ಶಾಸ್ತ್ರಿಗಳು ಪುರ ಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರಾಗಿರಲು ಸಲ್ಲಿಸಿದ್ದ ಅರ್ಜಿಯನ್ನು ಕಾಂಗ್ರೆಸ್ ಚುನಾವಣಾ ಸಮಿತಿಯವರು ತಿರಸ್ಕರಿಸಿದುದರ ಮೇಲೆ ಶ್ರೀ ಶಾಸ್ತ್ರಿಗಳು ಕಾಂಗ್ರೆಸ್ ಅಧ್ಯಕ್ಷರಿಗೆ ಅಪೀಲು ಮಾಡಿಕೊಂಡಿದ್ದರು. ಅವರ ಉಮೇದುವಾರಿಕೆಯನ್ನು ಅಂಗೀಕರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರು ಆಜ್ಞೆ ಮಾಡಿದ್ದರೆಂದೂ, ಆದರೆ ಈ ವಿಚಾರದಲ್ಲಿ ವೈಯಕ್ತಿಕವಾಗಿ ಅಧ್ಯಕ್ಷರಿಗೆ ಅಧಿಕಾರವಿಲ್ಲವೆಂದೂ, ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೆ ಮಾತ್ರ ಈ ಅಧಿಕಾರವಿರುವುದೆಂದೂ ಆರ್ಡ್ ಹಾಕ್ ಸಮಿತಿಯವರು ನಿರ್ಧರಿಸಿ, ಅದರಂತೆ ಶ್ರೀ ಶಾಸ್ತ್ರಿಗಳಿಗೆ ತಿಳುವಳಿಕೆ ಕೊಟ್ಟಿದ್ದಾರೆಂದು ಗೊತ್ತಾಗಿದೆ.

ಗೋಡ್ಸೆಯ ಫಾಸಿ ಬಗ್ಗೆ ನೆಹರೂರವರ ಅಭಿಪ್ರಾಯ

ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆಯನ್ನು ಗಲ್ಲಿಗೇರಿಸುವುದು ಗಾಂಧಿಜೀಯವರ ತತ್ವಕ್ಕೆ ವಿರೋಧವಲ್ಲವೇ ಎಂದು ಅಮೇರಿಕದಲ್ಲಿ ಪಂಡಿತ ನೆಹರೂರವರನ್ನು ಪ್ರಶ್ನೆ ಮಾಡಿದಾಗ, ಅವರು ಈ ರೀತಿ ಉತ್ತರ ಕೊಟ್ಟಿದ್ದಾರೆ:-ಕೆಲವು ಕಾಲದ ಹಿಂದೆ ಮರಣದಂಡನೆಯನ್ನು ರದ್ದು ಮಾಡಬೇಕೆಂದು ಭಾರತೀಯರು ಯೋಚಿಸಿದ್ದರು ಅದು ನಿರ್ಧಾರವಾಗದಿರುವುದರಿಂದಲೂ, ಸಾಮಾನ್ಯ ಕೊಲೆ ಪಾತಕಿಗಳನ್ನು ಗಲ್ಲಿಗೇರಿಸುತ್ತಿರುವುದರಿಂದಲೂ, ರಾಷ್ಟ್ರದ ಮಹಾ ನಾಯಕರನ್ನು ಕೊಂದವರ ಜೀವ ಮಾತ್ರ ಸುಖವಾಗಿರಬೇಕೆಂಬುದು ನ್ಯಾಯವಾಗಲಾರದು

ಬಟ್ಟೆಗಳ ರವಾನೆಗೆ ನಿಷೇಧ

೧೯೫೦ ನೇ ಮಾರ್ಚಿ ತಿಂಗಳವರೆಗೆ ಯಾವ ಹತ್ತಿ ಗಿರಣಿಗಳೂ ತಮ್ಮ ಬಟ್ಟೆಗಳನ್ನು ಹೊರದೇಶಗಳಿಗೆ ರವಾನಿಸುವ ಬಗ್ಗೆ ಕರಾರು ಮಾಡಿಕೊಳ್ಳಕೂಡದೆಂದು ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಸ್ವತಂತ್ರ ಪುಸ್ತೂನ್ ಸ್ಥಾನ

ಪೆಷಾವರ್ ಮತ್ತು ಖೈಬರ್ ಕಣಿವೆಗಳ ಮಧ್ಯೆ ಇರುವ ೭೦೦ ಚದರ ಮೈಲಿ ಪ್ರದೇಶದಲ್ಲಿರುವ ಅಫ್ರಿದಿ ಮತ್ತು ಇತರ ಜನರು ಸ್ವತಂತ್ರ ಪುಸ್ತೂನ್ ಸ್ಥಾನವನ್ನು ಸ್ಥಾಪಿಸಿ, ಒಂದು ರಾಷ್ಟ್ರೀಯ ಶಾಸನ ಸಭೆಯನ್ನು ರಚಿಸಿದ್ದಾರೆ

ಪುರಸಭಾ ಚುನಾವಣೆಗೆ ಸ್ವತಂತ್ರ ಉಮೇದುವಾರರು

ಮೈಸೂರು ೧೦

ಸತ್ಯವಾದಿ' ಪತ್ರಿಕೆಯ ಸಂಪಾದಕರಾದ ಶ್ರೀ ಎಂ. ಎಸ್. ಕೃಷ್ಣರಾವ್ ಮತ್ತು ರಾಜಶೇಖರ ಮೂರ್ತಿಯವರುಗಳು ಚಾಮರಾಜ ಮೊಹಲ್ಲಾದಿಂದಲೂ, ಶ್ರೀ ಸುಂದರರಾವ್ ರವರು ನಜರಬಾದಿನಿಂದಲೂ ಸ್ವತಂತ್ರರಾಗಿ ಉಮೇದುವಾರಿಕೆಯನ್ನು ಸಲ್ಲಿಸಿರುತ್ತಾರೆ

○ ... ಗಳೂರಿನಲ್ಲಿ ಟ್ರಿನಿಟಿ ಟ್ಯಾಬ ... ಕಾರ್ಖಾನೆಯನ್ನು ಸ್ಥಾಪಿಸುವ ... [illegible]

[illegible]

ಕಾಲರಾದಿಂದ ೧೭೭ ಜನರ ಸಾವು

— — ೧೦ — —

ಮಹಾದೇವೇಶ್ವರ ಬೆಟ್ಟದ ಜಾತ್ರೆಯಿಂದ ಹಿಂತಿರುಗಿದ ಯಾತ್ರಿಕರ ಪೈಕಿ ಅನೇಕರು ಕಾಲರಾ ರೋಗಕ್ಕೆ ತುತ್ತಾದರಷ್ಟೆ. ಕಾಲರಾ ಉಪದ್ರವವನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆಯೆಂದೂ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟು [illegible] ಜನರಿಗೆ ರೋಗ ತಗುಲಿ, ೧೭೭ ಮಂದಿ ಸತ್ತರೆಂದೂ, ಒಟ್ಟು [illegible] ಹಳ್ಳಿಗಳಲ್ಲಿ ರೋಗವು ಕಾಣಿಸಿಕೊಂಡಿತೆಂದೂ ಆರೋಗ್ಯ ಸಚಿವ ಒನಾಬ್ ಮಹಮದ್ ಷರೀಫರವರು ತಿಳಿಸಿದ್ದಾರೆ. [illegible] ಜನರಿಗೆ ರೋಗ ತಗುಲಿ [illegible] ಮಂದಿ [illegible] ಜನರಿಗೆ [illegible] ಕೃಷ್ಣರಾಜನಗರದ [illegible] ಮೈಸೂರು [illegible] ಪಿರಿಯಾಪಟ್ಟಣ [illegible] ಮತ್ತು [illegible] ಜನರು ಸತ್ತರೆಂದು ಹೇಳಲಾಗಿದೆ

ಚೀಣೀ ಸರ್ಕಾರಿ ವಿಮಾನಗಳು ಶತ್ರು ಪಕ್ಷ ಸೇರಿದುವು

ನೆನ್ನೆ ದಿನ ಹಾಂಗ್ ಕಾಂಗಿನಿಂದ ಹೊರಟ ಚೀಣೀ ಸರ್ಕಾರದ [illegible] ವಿಮಾನಗಳು ಕಮ್ಯೂನಿಸ್ಟರೊಡನೆ ಸೇರಿಕೊಂಡವೆಂದು ವರದಿಯಾಗಿದೆ. ಅವುಗಳು ಪೀಪಿಂಗಿನಲ್ಲಿ ಇಳಿದುವೆಂದು ಗೊತ್ತಾಗಿದೆ. ಆ ವಿಮಾನದಲ್ಲಿದ್ದ ಇಬ್ಬರು ಸರ್ಕಾರಿ ವಿಮಾನ ಸಂಸ್ಥೆಯ ಅಧಿಕಾರಿಗಳು ತಾವು ಕಮ್ಯೂನಿಸ್ಟರಿಗೆ ಸೇರಿರುವುದೆಂದು ಘೋಷಿಸಿದರೆಂದು ಹೇಳಲಾಗಿದೆ. ಚೀಣಾ ರಿಪಬ್ಲಿಕ್ ಸರ್ಕಾರದವರು ಅಲ್ಲಿನ ಬಂದರುಗಳಲ್ಲಿರುವ ಒಂದು ಪ್ರಮುಖ ನೌಕಾ ಕಂಪೆನಿಯು ಹಡಗುಗಳು ಬಂದರನ್ನು ಬಿಟ್ಟು ಹೋಗಕೂಡದೆಂದು ಆಜ್ಞೆಮಾಡಿದ್ದಾರೆ

ರಾಯಭಾರಿ ಕಛೇರಿಯಲ್ಲಿ ವಿಷ ಮಿಶ್ರಿತ ಆಹಾರ

ಕೆಲವು ದಿನಗಳಹಿಂದೆ ರೋಮಿನಲ್ಲಿ [illegible] ಒಬ್ಬರೊಂದಿಗೆ ರಾಯಭಾರಿಯು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಆ ಸಮಾರಂಭಕ್ಕೆ ಆಗಮಿಸಿದ್ದ [illegible] ರಾಯಭಾರಿ ಕಛೇರಿ ಅಧಿಕಾರಿ [illegible] ಬಡಿಸಿದ [illegible] ತಿಂದ [illegible] ಕೆಲ [illegible] ಆಸ್ಪತ್ರೆಗೆ [illegible] ವಿಷಮಿಶ್ರಿತವಾಗಿತ್ತೆಂದು [illegible] ಪತ್ತೆ ಹಚ್ಚಲು [illegible] ನಡೆಸುತ್ತಿದ್ದಾರೆ

ಇಂಡೋ ಚೀಣಾದಿಂದ ಫ್ರೆಂಚ್ ಸೈನ್ಯದ ವಾಪಸು

ಇಂಡೋ ಚೀಣಾದೇಶದಿಂದ [illegible] [illegible]

ಕರಾಚಿ ಜಾಡಮಾಲಿಗಳ ಮುಷ್ಕರ

ಶೇಕಡ ೫೦ ರಷ್ಟು ಸಂಬಳವನ್ನು ಹೆಚ್ಚಿಸಬೇಕೆಂದೂ ೨೦ ರೂ ತುಟ್ಟಿ ಭತ್ಯ ಕೊಡಬೇಕೆಂದೂ ೧೬೦೦ಜನ ಕರಾಚಿಯ ಜಾಡಮಾಲಿಗಳು ಮುಷ್ಕರ ಹೂಡಿದ್ದಾರೆ. ಅವರ ಬೇಡಿಕೆಗಳನ್ನು ಪುರಸಭೆಯವರು ತಿರಸ್ಕರಿಸಿದುದನ್ನು ಪ್ರತಿಭಟಿಸಲು ೬೦೦ ಜನರು ಕಛೇರಿಯ ಮುಂದೆ ಪ್ರದರ್ಶನ ನಡೆಸಿ ಗಲಭೆ ಮಾಡಿದರೆಂದೂ, ಪೊಲೀಸರು ಬಂದು ಗುಂಪನ್ನು ಚದುರಿಸಿದರೆಂದೂ ವರದಿಯಾಗಿದೆ

ಪಂಡಿತ ನೆಹರೂ ಮತ್ತು ಬ್ರಿಟಿಷ್ ರಾಜರ ಭೇಟಿ

ಪಂಡಿತ ನೆಹರೂರವರು ನೆನ್ನೆ ಲಂಡನ್ನಿನಲ್ಲಿ ಬ್ರಿಟಿಷ್ ರಾಜರನ್ನು ಭೇಟಿ ಮಾಡಿದ್ದರು. ಬ್ರಿಟಿಷ್ ಪ್ರಧಾನಿ ಅಟ್ಲೀಯವರು ನೆನ್ನೆ ದಿನ ಪಂಡಿತ ನೆಹರೂರವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಈ ಸಮಾರಂಭದಲ್ಲಿ ಬ್ರಿಟನ್ನಿನ ಮಾಜಿ ಪ್ರಧಾನಿ ಮಿ॥ ಚರ್ಚಿಲ್ಲರೂ ಭಾಗಿಗಳಾಗಿದ್ದರು

ಬಿರುಗಾಳಿ ಮತ್ತು ಪ್ರವಾಹಗಳಿಂದ ೧೦॥ ಸಾವಿರ ಜಾನುವಾರುಗಳ ನಾಶ

ಕೃಷ್ಣಾ ಗೋದಾವರಿಯಲ್ಲಿ ಇತ್ತೀಚೆಗೆ ಸಂಭವಿಸಿದ ಬಿರುಗಾಳಿ ಮತ್ತು ಪ್ರವಾಹದ ಹಾವಳಿಯಿಂದ ೫೫ ಜನರು ಸತ್ತರೆಂದೂ, ೫ ಲಕ್ಷ ರೂ ಬೆಲೆಬಾಳುವ ೧೦,೫೦೦ ಜಾನುವಾರುಗಳು ಪ್ರವಾಹದಿಂದ ಮುಳುಗಿ ಹೋದವೆಂದೂ, ೪೦ ಲಕ್ಷ ಎಕರೆ ಜಮೀನುಗಳ ಪೈರುಗಳಿಗೆ ನಷ್ಟವುಂಟಾಗಿದೆಯೆಂದೂ ಅಂದಾಜು ಮಾಡಲಾಗಿದೆ

ಗೋಡ್ಸೆಯನ್ನು ಮಗ್ಗಾಯಿಸುವ ಬೇಡಿಕೆಗೆ ತಿರಸ್ಕಾರ

ಬೊಂಬಾಯಿ ಪ್ರಾಂತ್ಯದಲ್ಲಿರುವ ತನ್ನ ಸ್ವಂತ ಸ್ಥಳಕ್ಕೆ ವರ್ಗಾಯಿಸಿ, ಅಲ್ಲಿಗಲ್ಲಿಗೇರಿಸಬೇಕೆಂಬ ಮಹಾತ್ಮರ ಕೊಲೆಪಾತಕನಾದ ನಾಥೂರಾಂ ಗೋಡ್ಸೆಯ ಪ್ರಾರ್ಥನೆಯನ್ನು ಗೌರ್ನರ್ ಜನರಲ್ಲರು ತಿರಸ್ಕರಿಸಿದ್ದಾರೆ

ಕೊಡಗಿನ ಭವಿಷ್ಯದ ಬಗ್ಗೆ ದೆಹಲಿಯಲ್ಲಿ ಸಭೆ

ಕೊಡಗಿನ ಭವಿಷ್ಯವನ್ನು ನಿರ್ಧರಿಸುವ ವಿಚಾರವನ್ನು ಪರಿಶೀಲಿಸಲು ಅಲ್ಲಿನ ೧೦ ಜನ ಪ್ರಮುಖ ನಾಯಕರನ್ನೊಳಗೊಂಡ ಒಂದು ಸಭೆಯನ್ನು ಕೇಂದ್ರ ಸರ್ಕಾರದವರು ದೆಹಲಿಯಲ್ಲಿ ಇದೇ ೧೬ ನೇ ತಾ॥ ಕರೆದಿದ್ದಾರೆ. ಸಂಸ್ಥಾನ ಖಾತೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರವರು ಅಧ್ಯಕ್ಷತೆ ವಹಿಸುವರು

ಧಾರವಾಡದ ರೇಡಿಯೋ ಕೇಂದ್ರ

ಒರುವ ಜನವರಿ [illegible] ಧಾರವಾಡದಲ್ಲಿ ಅಖಿಲ ಭಾರತ ರೇಡಿಯೋದವರು ಒಂದು ಕೇಂದ್ರವನ್ನು ತೆರೆಯಲಿದ್ದಾರೆ

ಪುರಸಭಾ ಚುನಾವಣೆ

ಪ್ರಜಾ ಸಂಘ ಮತ್ತು ಸ್ವತಂತ್ರ ಉಮೇದುವಾರರು

ಮೈಸೂರು ೧೦.

ಇದೇ ೨೬ನೇ ತಾ॥ ನಡೆಯಲಿರುವ ಪುರಸಭಾ ಚುನಾವಣೆಯಲ್ಲಿ ಕೆಳಗೆ ಕಂಡ ಉಮೇದುವಾರರು ಪ್ರಜಾಸಂಘದ ಪರವಾಗಿಯೂ, ಸ್ವತಂತ್ರರಾಗಿಯೂ ಉಮೇದುವಾರಿಕೆ ಅರ್ಜಿಯನ್ನು ನೆನ್ನೆ ಸಲ್ಲಿಸಿರುತ್ತಾರೆ -

ಚಾಮರಾಜ ಮೊಹಲ್ಲಾ:— ಶ್ರೀಗಳಾದ ಎ ವೆಂಕಟೇಶಯ್ಯ, ಬಿ ಜಿ ದಾಸ್, ವೀರರಾಜ ಅರಸ್, ಬಿ ಕೆ ರಾಮಕೃಷ್ಣಯ್ಯನವರು,(ಸ್ವ) ಹೊಂಬಾಳೆ ರಂಗಯ್ಯ (ಸ್ವ)

ಕಿಲ್ಲೆ ಮೊಹಲ್ಲಾ:—ಶ್ರೀ ಟಿ. ನಾರಾಯಣ

ದೇವರಾಜ:—ಶ್ರೀಗಳಾದ ಡಿ ಬಿ ಕೃಷ್ಣಪ್ಪ, ಎಸ್ ರಾಮರಾವ್, ಸಿ ಆರ್. ಕೃಷ್ಣರಾವ್

ನಜರಬಾದ್ :—ಶ್ರೀ ಎಸ್. ಕೃಷ್ಣ ಅಯ್ಯಂಗಾರ್

ಲಷ್ಕರ್ .—ಶ್ರೀಗಳಾದ ಎಸ್. ದೇವಿದಾಸ್, ಪಿ ಡಿ, ಕೃಷ್ಣಸ್ವಾಮಿ, ಹೆಚ್. ಎಂ ಮುದ್ದಪ್ಪ, ಎಂ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ ಸ ಬೈಣ್ಣ

ಕೃಷ್ಣರಾಜ .—ಶ್ರೀಗಳಾದ ಟಿ ನಾರಾಯಣಪ್ಪ, ಎಂ. ಸಿ ಮಹದೇವಸ್ವಾಮಿ, ಎಚ್ ಎಸ್ ರಾಮರಾವ್, ಜಿ ನರಸಿಂಹಯ್ಯ

ಮಂಡಿ ಶ್ರೀಗ [illegible] ವೃಷಭಲಿಂಗಪ್ಪ, [illegible] ಶ್ರೀ [illegible] ಎಂ. ಸಿ ಮಹದೇವಪ್ಪ

ಕಲ್ಲಿದ್ದಲು ಕೆಲಸಗಾರರ ಮುಷ್ಕರದ ಮುಕ್ತಾಯ

ಕಳೆದ ೫೭ ದಿನಗಳಿಂದಲೂ ಅಮೆರಿಕದ ೪ ಲಕ್ಷ ಜನ ಕಲ್ಲಿದ್ದಲು ಗಣಿ ಕೆಲಸಗಾರರು ಹೂಡಿದ್ದ ಮುಷ್ಕರವು ನಿನ್ನೆ ಮುಕ್ತಾಯವಾಯಿತು

ಹೈದರಾಬಾದಿನಲ್ಲಿ ನೆಹರೂ ವಾಚನಾಲಯ

ಪಂಡಿತ ನೆಹರೂರವರ ವರ್ಧಂತಿ ಗೌರವಾರ್ಥವಾಗಿ ಹೈದರಾಬಾದಿನಲ್ಲಿ ಬರುವ ಸೋಮವಾರ ಒಂದು ವಾಚನಾಲಯವನ್ನು ಸ್ಥಾಪಿಸಲು ಸಿದ್ಧತೆಗಳಾಗುತ್ತಿವೆ ಆ ನರ [illegible] ವರ್ಧಂತಿ ಗೌರವಾರ್ಥವಾಗಿ ವಾಚನಾಲಯಕ್ಕೆ [illegible] ಸಾವಿರ ರೂ ಸಂಗ್ರಹಿಸಲು ಏರ್ಪಾಡಾಗಿರುತ್ತದೆ.

ವಿಶ್ವವಿದ್ಯಾಲಯದ ಪರೀಕ್ಷೆ ಪಠ್ಯಪುಸ್ತಕಗಳ ಬದಲಾವ[ಣೆ]

— — —

ವಿಶ್ವವಿದ್ಯಾನಿಲಯದ ಕಳೆದ ಸೆಪ್ಟೆಂಬರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದ [illegible] ಎ., ಬಿ ಎಸ್‌ಸಿ ಮತ್ತು ಆನರ್ಸ್ ವಿದ್ಯಾರ್ಥಿಗಳು ೧೯೫೦ನೇ ಮಾರ್ಚ್ ಪರೀಕ್ಷೆಗೆ ಗೊತ್ತುಪಡಿಸಿರುವ ಪಠ್ಯ ಪುಸ್ತಕಗಳನ್ನು ಓದಬೇಕೆಂದು ನಿಗದಿ ಮಾಡಲಾಗಿದೆ. ಹೋದ ವರ್ಷ ತಮ್ಮ ಹಿಂದಿನ ಪಠ್ಯಪುಸ್ತಕಗಳನ್ನೇ ಓದಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಲಾಗಿತ್ತು. ನೂತನ ಪುಸ್ತಕಗಳನ್ನು ಓದಲು ಸೌಲಭ್ಯಗಳಿಲ್ಲದ [illegible] ಲ್ಯಾಂಡ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ [illegible] ವಾಗುವುದು. ಆದುದರಿಂದ ಹಿಂದಿನ ಪಠ್ಯಪುಸ್ತಕಗಳನ್ನೇ ಓದಿ ಪರೀಕ್ಷೆಗೆ [illegible] ತುಕೊಳ್ಳಲು ಅವಕಾಶ ಕೊಡಬೇಕೆಂದು [illegible] ನೊಂದ ವಿದ್ಯಾರ್ಥಿಯೊಬ್ಬರು ಪತ್ರಿಕೆಗೆ ಪತ್ರ ಬರೆದಿರುತ್ತಾರೆ.

ಸ್ಟ್ಯಾಟ್ ಕೌನ್ಸಿಲಿನ ಸಭೆ

ಸಂಸ್ಥಾನದ ಸ್ಟ್ಯಾಟ್ ಕೌನ್ಸಿಲಿನ ನೆಯ ವಾರ್ಷಿಕ ಸಭೆಯು ಇದೇ ೧೩ ತಾ॥ ಮಧ್ಯಾಹ್ನ ೩ ಗಂಟೆಗೆ ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ವಿದ್ಯಾ ಸಚಿವರಾದ ಶ್ರೀ ಡಿ ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು

Intermediate Examination
— OF MARCH 1950 —
Classes begin on 11-11-
City Tutorial College
531 VANIVILAS ROAD, MYSORE

॥ಶ್ರೀ॥
ಗಣೇಶಾ ಟಾಕೀಸ
11—11—49 ರಿಂದ ಪ್ರಾರಂಭ
ದಿನವಹಿ 3 ಆಟಗಳು
ಮಹಾತ್ಮ ಕಬೀರ (ಕನ್ನಡ)
ಶಾಸ್ತ್ರಿ-ಸುಬ್ಬಯ್ಯ ನಾಯ್ಡು, ಲಕ್ಷ್ಮೀ [illegible]
[illegible]
ನಂತರದ ಬದಲಾವಣೆ
ಮಹಾಸ್ಥಿಯವರ—
ಭಕ್ತ ಪೋತನ (ತೆಲುಗು)

ರಾಜಕಮಲ್ ಟಾಕೀಸ್
5-11-49 ರಿಂದ :: ಅನೋಘ ಪ್ರಾರಂಭ
ದಿನವಹಿ 3 ಆಟಗಳು
ಭರಣಿಯವರ ಅತ್ಯುತ್ತಮ ಪ್ರೇಮಕಥೆಯ ತೆಲುಗು ಚಿತ್ರ
ಲೈಲಾ ಮಜ್ನು
ಚಿತ್ರ-[illegible] ಭಾನುಮತಿ, [illegible] ನಾಗೇಶ್ವರರಾವ್, [illegible] ಲಲಿತಾ-ಪದ್ಮಿನಿ
Morning Show From [illegible]-11-49 For 4 days
DARK COMMAND
A Spectacular Adventure Drama
With Walter Pidgeon John Wayne and
R[illegible] P[illegible]ers

Edited, printed and published by A. R. Nagarajan at Sadhvi Press, D. Subbiah Road, Mysore

ಫೋ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಶುಕ್ರವಾರ ೧೧-೧೧-೪೭ [ಸಂಚಿಕೆ ೮೮

ಇದೇ ೧೫ನೇ ತಾರೀಕು ಮೈ॥ ರಾಜ್ಯಾಂಗ ಸಭೆ

ಪೌರಸಭಾ ಚುನಾವಣೆಗೆ ೫೫ ಉಮೇದುವಾರರು

ಮೈಸೂರು ೪

ರಾಜಧಾನಿಯ ಪೌರಸಭಾ ಚುನಾವಣೆಗೆ ಒಟ್ಟು ೫೫ ಜನರು ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದುವರೆಗೆ ಪ್ರಕಟವಾಗಿರುವ ಹೆಸರುಗಳಲ್ಲದೆ ಸ್ವತಂತ್ರ್ಯವಾಗಿ ಶ್ರೀಗಳಾದ ಎಸ್. ಸುಂದರರಾವ್ ಕೆ ಕರಿಯಣ್ಣ, ಡಿ. ಎ ಎಸ್ ರಾಜನ್ ಡಿ ಎ ಗೋವಿಂದರಾವ್, ಬಿ ಎಂ ರಾಜಶೇಖರಮೂರ್ತಿ ಶಿವನಂಜಯ್ಯ ಇವರುಗಳೂ ಸಹಾ ಅರ್ಜಿ ಸಲ್ಲಿಸಿರುವರು.

ಮೈಸೂರು ಪುರಸಭಾ ಚುನಾವಣಾ ಇತಿಹಾಸದಲ್ಲಿ ಇಷ್ಟು ಜನ ಉಮೇದುವಾರರು ಸ್ಪರ್ಧಿಸುತ್ತಿರುವುದು, ಒಂದು ಸಂಸ್ಥೆಯ ಮೂಲಕ ಕಾಂಗ್ರೆಸ್ಸನ್ನು ವಿರೋಧಿಸುವುದು ಮತ್ತು ಮುಸ್ಲಿಂ ಉಮೇದುವಾರರಿಗೆ ಕಾಂಗ್ರೆಸ್ಸು ಬೆಂಬಲ ಕೊಡುವುದು ಇದೇ ಮೊದಲನೆಯ ಬಾರಿ ಚಾಮರಾಜ ಮೊಹಲ್ಲಾ ಒಂದರಿಂದಲೇ ೧೧ ಜನರು ಸ್ಪರ್ಧಿಸಿದ್ದಾರೆ

ಆಯುರ್ವೇದ ಮತ್ತು ಯುನಾನಿ ಕಾಲೇಜ್ ಸಂಘ

ಸರ್ಕಾರದ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಸಂಘದ ಚುನಾವಣೆಯು ಕಳೆದ ಮಂಗಳವಾರ ನಡೆದು, ಡಾ॥ ಸಿ ದ್ವಾರಕಾನಾಥರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಎಸ್ ರಂಗರಾಜುರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಕೆ ಎ ಚಿಟ್ಟೆಯಣ್ಣ ಮತ್ತು ಪಿ ಆರ್ ಸೀತಾರಾಂರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ

ರೇಷ್ಮೆ ನೂಲುವ ಕಾರ್ಖಾನೆಯಲ್ಲಿ ೭ ಸಾವಿರ ಖೋತಾ

ಮೈಸೂರು ಸರ್ಕಾರಿ ರೇಷ್ಮೆ ನೂಲುವ ಕಾರ್ಖಾನೆಯಲ್ಲಿ ೧೯೪೬ನೇ ಜುಲೈ ನಿಂದ ೬೭ ತಿಂಗಳವರೆಗೆ ಮಾರಾಟದ ಶಾಖೆಯಲ್ಲಿ ೭ ಸಾವಿರ ರೂ. ಖೋತಾ ಬಂದಿರುವುದೆಂದೂ ಗೊತ್ತಾಗಿ ಒಬ್ಬ ನೌಕರನನ್ನು ಕೆಲಸದಿಂದ ಸಸ್ಪೆಂಡ್ ಮಾಡಿ, ಮುಂದಿನ ತನಿಖೆ ನಡೆಸಲಾಗುತ್ತಿದೆ ಯೆಂದು ತಿಳಿದು ಬಂದಿದೆ

ರೇಸ್ ಕ್ಲಬ್ಬಿನ ಆಡಳಿತದಲ್ಲಿ ಅಧಿಕಾರಿಗಳು ಇರಕೂಡದು

ಬೆಂಗಳೂರು ರೇಸ್ ಕ್ಲಬ್ಬಿನ ಆಡಳಿತದಲ್ಲಿ ಸರ್ಕಾರಿ ಅಧಿಕಾರಿಗಳು ಭಾಗವಹಿಸಕೂಡದೆಂದು ಮೈಸೂರು ಸರ್ಕಾರದವರು [illegible] ಮಾಡಿರುವರೆಂದೂ, ಈಗಿರುವ ಅಧಿಕಾರಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದು ಸೂಚಿಸಿರುವರೆಂದೂ ತಿಳಿದುಬಂದಿದೆ

ಕಾಲರಾ ನಿವಾರಣೆಗಾಗಿ ಭಜನೆ ಸಪ್ತಾಹ

ನಂಜನಗೂಡು ೧೦

ಇಲ್ಲಿ ಉಂಟಾಗಿರುವ ಕಾಲರಾ ಉಪದ್ರವದ ನಿವಾರಣೆಯಾಗಿ ಪ್ರಜಾ ನೆಮ್ಮದಿ ನೆಲೆಗೊಳ್ಳಲೆಂದು ಕಳೆದ ಶುಕ್ರವಾರ [illegible]ದಿನ ಆಗಮಿಕ ಶ್ರೀ ನಂಜುಂಡಸ್ವಾಮಿಯವರ ಮನೆಯಲ್ಲಿರುವ ಶ್ರೀ ಗಣಪತಿ [illegible] ಬಳ್ಳಿಯ ಶ್ರೀ ಶಂಕರಾಚಾ[illegible] ಭಜನೆ, ಪೂಜೆ ಮೊದಲಾದ ವಿಶೇಷ [illegible] ಕ್ರಮವನ್ನು ಸಪ್ತಾಹ ರೂಪದಲ್ಲಿ ನೆರವೇರಿಸುತ್ತಿದ್ದಾರೆ ಮುಂದಿನ [illegible]ನೇ ತಾ॥ ವರೆಗೆ ಸಪ್ತಾಹವು [illegible] ಎಲ್ಲರೂ ಸಹಕರಿಸಬೇಕೆಂದು [illegible]ಕೋರಲಾಗಿದೆ

ಜಪಾನಿಗೆ ಮೈಸೂರಿನ ಮತ್ತೊಂದು ಆನೆ

ಮದರಾಸಿನ ಪೌರಸಭಾಧ್ಯಕ್ಷರಾದ ಶ್ರೀ ಎಸ್ ರಾಮಸ್ವಾಮಿನಾಯಡುರವರು ಮೈಸೂರು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ಪತ್ರ ಬರೆದು ಉಚಿತವಾಗಿ ಆಗಲೀ ಬೆಲೆಗಾಗಲೀ ತಮಗೆ ಒಂದು ಆನೆ ಮರಿಯನ್ನು ಕಳುಹಿಸಿ ಕೊಡಲು ಸಾಧ್ಯವಾಗುವುದೇ ಎಂದು ಕೇಳಿರುತ್ತಾರೆ ಜಪಾನಿನ ಮಕ್ಕಳಿಗೆ ಅವರು ಅದನ್ನು ಬಹುಮಾನವಾಗಿ ಕಳುಹಿಸಿ ಕೊಡುವುದಾಗಿ ತಿಳಿಸಿರುತ್ತಾರೆ

ರೀವಾ ಮಹಾರಾಜರ ವಿಮುಕ್ತಿ

ಡೆಹ್ರಾಡೂನ್ ಸೆರೆಮನೆಯಲ್ಲಿ ಕಳೆದ ೧೯ ತಿಂಗಳಿಂದ ಸ್ಥಾನಬದ್ಧರಾಗಿದ್ದ ರೀವಾದ ಮಾಜಿ ಮಹಾರಾಜ ಗುಲಾಬ್‌ಸಿಂಗರನ್ನು ಇದೇ ೧ ನೇ ತಾ॥ ಬಿಡುಗಡೆ ಮಾಡಿ, ಅವರು ಸಂಯುಕ್ತ ಪ್ರಾಂತ, ರೀವಾ, ವಿಂಧ್ಯ ಪ್ರದೇಶ ಮತ್ತು ಜಬ್ಬಲ್‌ಪುರ ಜಿಲ್ಲೆಗಳಲ್ಲಿ ಮಾತ್ರ ಇರಬೇಕೆಂದು ಆಜ್ಞೆ ಮಾಡಲಾಗಿದೆ ಅವರಿಗೆ ೧ ಸಾವಿರ ರೂ ಮಾಸಾಶನವನ್ನು ನಿಗದಿ ಮಾಡಲಾಗಿದೆ

ಮೈಸೂರನ್ನು ಬಿಟ್ಟಾದರೂ ಕರ್ನಾಟಕ ಪ್ರಾಂತ್ಯವಾಗಲಿ

ಮೈಸೂರು ಸೇರಿ ಕರ್ನಾಟಕ ಪ್ರಾಂತವಾಗುವ ಹಾಗಿಲ್ಲದಿದ್ದಲ್ಲಿ ಅದನ್ನು ಬಿಟ್ಟು ಉಳಿದ ಕನ್ನಡ ಭಾಗಗಳನ್ನು ಸೇರಿಸಿ ಕೂಡಲೇ ಕರ್ನಾಟಕ ಪ್ರಾಂತ ರಚನೆ ಆಗಬೇಕು. ಮತ್ತು ಯಾವುದೇ ಕಾರಣದಿಂದ ಕರ್ನಾಟಕ ಪ್ರಾಂತ ರಚನೆಯು ಮುಂದೆ ಹಾಕಲ್ಪಡ ಕೂಡದು ಎಂಬ ನಿರ್ಣಯವನ್ನು ಧಾರವಾಡದಲ್ಲಿ ಶ್ರೀ ಉರವಕೊಂಡ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾಡಲಾಗಿದೆ

ಕೈಗಾರಿಕಾ ಅಧಿಕಾರಿಗಳು ಭಾರತ ಸರಕಾರಕ್ಕೆ

ಸ್ವಂ ಸು ಫೋ] ಬೆಂಗಳೂರು ೧೧

ಕೈಗಾರಿಕಾ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಕೆ ಎಲ್ ನಂಜಪ್ಪನವರನ್ನು ಭಾರತ ಸರಕಾರದ ಗೃಹ ಕೈಗಾರಿಕೆಗಳ ಡೆಪ್ಯುಟಿ ಡೈರೆಕ್ಟರಾಗಿ ನೇಮಿಸಲಾಗಿದೆ

ರಾಜ್ಯಾಂಗ ಸಭೆಯ ಅಧಿವೇಶನ

ಸ್ವಂ. ಸು ಫೋ] ಬೆಂಗಳೂರು ೧೧

ಮೈಸೂರು ರಾಜ್ಯಾಂಗ ಸಭೆಯ ಅಧಿವೇಶನವು ಇದೇ ೧೫ನೇ ತಾ॥ ಮಂಗಳವಾರ ಮಧ್ಯಾಹ್ನ ೩ ಗಂಟೆಗೆ ಇಲ್ಲಿನ ಶಾಸನ ಸಭಾ ಭವನದಲ್ಲಿ ನಡೆಯುವುದು

§ ಇದೇ ೧೪ನೇ ತಾ॥ ದೆಹಲಿಗೆ ತೆರಳಬೇಕಾಗಿದ್ದ ಪ್ರವಾಸವನ್ನು ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ರದ್ದು ಮಾಡಿರುತ್ತಾರೆ

ಕೆ.ಸಿ. ರೆಡ್ಡಿಯವರು ವಾಪಸು

ತಿರುಪತಿಗೆ ತೆರಳಿದ್ದ ಶ್ರೀ ಕೆ ಸಿ ರೆಡ್ಡಿ ರೆಡ್ಡಿಯವರು ನಿನ್ನೆ ರಾತ್ರಿ ಹಿಂದಿರುಗಿದರು

○ ಹೈದರಾಬಾದಿಗೆ ತೆರಳಿದ್ದ ಶ್ರೀ ಟಿ ಮರಿಯಪ್ಪನವರೂ ಸಹ ಬಂದರು

ಮಂತ್ರಿ ಪದವಿಯ ವ್ಯಾಮೋಹ ಬೇಡ

ಶ್ರೀ ಕೆ ಹನುಮಂತಯ್ಯನವರು ನೆನ್ನೆ ದಿನ ಇಂಜನಿಯರಿಂಗ್ ಕಾಲೇಜಿನ ಸಂಘದ ಆರಂಭ ಭಾಷಣವನ್ನು ಮಾಡಿದರು ವಿದ್ಯಾರ್ಥಿಗಳು ಮತ್ತು ಕಾರ್ಮಿಕರಲ್ಲಿ ಪರದ ಮನೋಭಾವವು ಇರಬಾರದೆಂದು ಅವರು ಸೂಚಿಸಿದರು ಅವರಲ್ಲಿ ಕಂಡು ಬರುವ ದಂಗೆ ಏಳುವ ಮನೋಭಾವವು ಉಚಿತವಲ್ಲವೆಂದು ಹೇಳಿದರು ಮಂತ್ರಿ ಪದವಿಯ ಚಾಪಲ್ಯವನ್ನು ಎಲ್ಲರೂ ಬಿಡಬೇಕೆಂದು ಸೂಚಿಸಿದರು ಮೈಸೂರಿನ ಮಂತ್ರಿ ಪದವಿಯು ತಮಗೆ ಸುಲಭ ಸಾಧ್ಯವಾಗಿದೆಯೆಂದೂ, ದೆಹಲಿಯ ಮಂತ್ರಿ ಸ್ಥಾನವೂ ಸಹ ತಮಗೆ ದೊರೆಯುವುದು ಅಸಂಭವವಲ್ಲವೆಂದೂ ಆದರೆ ತಾವು ಅದಕ್ಕೆ ಹಂಬಲಿಸುವುದಿಲ್ಲವೆಂದೂ ಹೇಳಿದರು ಈ ದಿನ ಅವರು ದೆಹಲಿಗೆ ಪ್ರಯಾಣ ಮಾಡಿದರು

ಎಸ್. ಎಸ್. ಶಾಸ್ತ್ರಿಗಳ ಉಮೇದುವಾರಿಕೆ

ಪೌರಸಭಾ ಚುನಾವಣೆಗೆ ನಗರ ಚುನಾವಣಾ ಸಮಿತಿಯಿಂದ ಆರಿಸಲ್ಪಡದೆ ಕಾಂಗ್ರೆಸ್ ಅಧ್ಯಕ್ಷರಲ್ಲಿ ಅಪೀಲು ಮಾಡಿ ಚುನಾವಣೆಗೆ ನಿಲ್ಲಿಸುವಂತೆ ಆಜ್ಞೆಯನ್ನು ತಂದಿದ್ದ ಶ್ರೀ ಎಸ್ ಎಸ್ ಶಾಸ್ತ್ರಿಗಳ ಉಮೇದುವಾರಿಕೆಯನ್ನು ಸ್ಥಳೀಯ ಸಮಿತಿಯವರು ನಿರಾಕರಿಸಿದ ಮೇಲೆ ಶ್ರೀ ಶಾಸ್ತ್ರಿಗಳು [illegible] ನಿನ್ನೆ ದಿನ ತಮ್ಮ ಉಮೇದು[illegible] ಸಲ್ಲಿಸಿದರೆಂದು ತಿಳಿದು ಬಂದಿದೆ

ಗೋಪಾಲ ರಾವ್ ವ್ಯವಹಾರದ ಅಪೀಲು ವಿಚಾರಣಾ ಸಮಿತಿ

ಸ್ವಂ ಸು ಫೋ] ಬೆಂಗಳೂರು ೧೧

ಗೋಪಾಲರಾಯರೊಡನೆ ಲೇವಾದೇವಿ ನಡೆಸಿದ ಶ್ರೀ ಅಪ್ಪಯ್ಯ ನಾಯುಡು ಮುಂತಾದವರ ಅಪೀಲುಗಳನ್ನು ವಿಚಾರಿಸಲು ಸರಕಾರದವರು ಶ್ರೀಗಳಾದ ಹೆಚ್. ಸಿ ದಾಸಪ್ಪ, ಕೆ ಟಿ ಭಾಷ್ಯಂ ಮತ್ತು ಟಿ ಮರಿಯಪ್ಪನವರನ್ನೊಳಗೊಂಡ ಉಪಸಮಿತಿಯನ್ನು ನೇಮಿಸಿದ್ದಾರೆ ನಿನ್ನೆ ನಾಯುಡುರವರ ಪರವಾಗಿ ಶ್ರೀ ಎಸ್. ಕೆ ವೆಂಕಟರಂಗಯ್ಯಂಗಾರ್ಯರು ವಾದ ನಡೆಸಿದರು. ಗೋಪಾಲರಾವ್ ವಿಚಾರಣಾ ಸಮಿತಿಯವರು ನಡುರಾತ್ರಿಯಲ್ಲಿ ನಾಯುಡುರವರಿಂದ ಬಲಾತ್ಕಾರವಾಗಿ ಬರೆಸಿಕೊಂಡರೆಂದು ಹೇಳಲಾದ ಪತ್ರದ ವಿಚಾರವು ವಿಮರ್ಶೆಗೆ ಬಂದಿತ್ತು ಈ ಸಂಬಂಧವಾದ ದಾಖಲಾತಿಗಳು ರಹಸ್ಯವಾದುದರಿಂದ ಅವುಗಳ ನಕಲುಗಳನ್ನು ಕೊಡಲಾಗುವುದಿಲ್ಲವೆಂದು ಸಮಿತಿಯವರು ಕೊಟ್ಟಿದ್ದ ಸೂಚನೆಯ ಮೇಲೆ ವಾದ ವಿವಾದಗಳು ನಡೆದು ಅವುಗಳನ್ನು ಹಾಜರು ಮಾಡುವಂತೆ ಆಜ್ಞೆ ಮಾಡಲಾಯಿತು

ಆರ್. ಎಸ್. ಎಸ್. ಮೇಲೆ ಕಾಂಗ್ರೆಸ್ಸಿನ ಪ್ರತಿಬಂಧಕವೇ ಇಲ್ಲ

ಆರ್ ಎಸ್ ಎಸ್ ನವರು ಕಾಂಗ್ರೆಸ್ಸನ್ನು ಸೇರುವ ವಿಚಾರವಾಗಿ ದೇಶದಲ್ಲಿ ಉಂಟಾಗಿರುವ ತವಕದ ಪರಿಸ್ಥಿತಿಯನ್ನು ಕುರಿತು ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಆಶ್ಚರ್ಯವನ್ನು ವ್ಯಕ್ತಪಡಿಸಿರುತ್ತಾರೆ. ಕಾಂಗ್ರೆಸ್ಸಿನವರು ಆ ಸಂಸ್ಥೆಯ ಮೇಲೆ ನಿಷೇಧಿಸುವ ನಿರ್ಣಯವನ್ನು ಹಿಂದೆ ಯಾವಾಗಲೂ ಮಾಡಿರಲಿಲ್ಲವೆಂದೂ, ಆದುದರಿಂದ ಪ್ರತಿಬಂಧಕವನ್ನು ತೆಗೆದುಹಾಕುವ ಪ್ರಶ್ನೆಯೇ ಇಲ್ಲವೆಂದೂ ಬಿಹಾರಿನಲ್ಲಿ ನಡೆದ ಕಾರ್ಯ ಸಮಿತಿಯ ಸಭೆಯಲ್ಲಿ ಒಬ್ಬ ಸದಸ್ಯರು ಆರ್. ಎಸ್. ಎಸ್. ಮೇಲೆ ಪ್ರತಿಬಂಧಕವಿದೆಯೋ ಎಂದು ಕೇಳಿದಾಗ, ಇಲ್ಲವೆಂದು ತಿಳಿಸಲಾಯಿತೆಂದೂ ಅವರು ಹೇಳಿರುತ್ತಾರೆ

ಜೂಜಾಡಿದವರಿಗೆ ಅರ್ಧ ಕ್ಷೌರ ಮಾಡಿ ಮೆರವಣಿಗೆ

[illegible]ತ್ರಿಯಲ್ಲಿ ದೀಪಾವಳಿ ಹಬ್ಬದ ದಿನ ಜೂಜಾಡುತ್ತಿದ್ದ ಅನೇಕ ಜನರನ್ನು ಪೋಲೀಸರು ದಸ್ತಗಿರಿ ಮಾಡಿ, ಅವರ ತಲೆಯನ್ನು ಅರ್ಧ ಕ್ಷೌರ ಮಾಡಿ [illegible] ಬೀದಿಗಳಲ್ಲಿ ಮೆರವಣಿಗೆ ಮಾಡಿಸಿದರೆಂದು ವರದಿಯಾಗಿದೆ ಹಿಂದಿನ ಕಾಲದಲ್ಲಿ ಆ ದೇಶದಲ್ಲಿ ಈ ಪದ್ಧತಿ ಇದ್ದಿತೆಂದು ಹೇಳಲಾಗಿದೆ

ಉಮೇದುವಾರಿಕೆ ವಾಪಸು

ಮೈಸೂರು ೧೧

ಪೌರಸಭಾ ಚುನಾವಣೆಗೆ ನಿಂತಿದ್ದ ಈ ಕೆಳಗೆ ಕಂಡವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ— ಶ್ರೀಗಳಾದ ಹೆಚ್ ಎಸ್ ರಾಮರಾವ್, ಎಸ್ [illegible] ರಾವ್, [illegible] ನಂಜಪ್ಪ

ದಕ್ಷಿಣ ಕನ್ನಡ ಜಿಲ್ಲೆಗೆ ಜೋಗಿನಿಂದ ವಿದ್ಯುಚ್ಛಕ್ತಿ

ಮಹಾತ್ಮಾ ಗಾಂಧಿ ಜೋಗ್ ವಿದ್ಯುಚ್ಛಕ್ತಿ ಕೇಂದ್ರದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ೮ ಸಾವಿರ ಕಿಲೋವೆಟ್ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಮೈಸೂರು ಸರ್ಕಾರವು ಒಪ್ಪಿದೆಯೆಂದು ಮದರಾಸ್ ಶಾಸನ ಸಭೆಯಲ್ಲಿ ತಿಳಿಸಲಾಗಿದೆ

ಶಾಸನ ಸಭೆಯಲ್ಲಿ ಶಸ್ತ್ರ ಪ್ರದರ್ಶನಗಳಿಗೆ ನಿಷೇಧ

ಮದರಾಸ್ ಶಾಸನ ಸಭೆಯಲ್ಲಿ ಸಾರ್ವಜನಿಕ ರಕ್ಷಣಾ ಶಾಸನ ಮಸೂದೆಯ ಬಗ್ಗೆ ಮೊನ್ನೆ ದಿನ ಚರ್ಚೆ ನಡೆಯುತ್ತಿದ್ದಾಗ ಬಂದೂಕದ [illegible] ವರದ ಚೂರುಗಳು [illegible] ಪ್ರದರ್ಶನಕ್ಕೆ ಇಟ್ಟಿದ್ದಾಗ, ಅಂತಹ ವಸ್ತುಪ್ರದರ್ಶನಕ್ಕೆ ಸಭೆಯಲ್ಲಿ ಅವಕಾಶ ವಿಲ್ಲವೆಂದು ಅಧ್ಯಕ್ಷರು ಆಜ್ಞೆಮಾಡಿ ಅವುಗಳನ್ನು ತೆಗೆಸಿದರು.

ಸಿಗರೇಟ್ ಭತ್ಯಕ್ಕಾಗಿ ಕಮ್ಯೂನಿಸ್ಟರ ಉಪವಾಸ

ಕಾನ್ಪುರದ ಜಿಲ್ಲಾ ಜೈಲಿನಲ್ಲಿರುವ ೨೯ ಜನ ಕಮ್ಯೂನಿಸ್ಟ್ ಖೈದಿಗಳು ಕಳೆದ ತಿಂಗಳು ೧೬ ನೇ ತಾ॥ ನಿಂದ ಉಪವಾಸವನ್ನು ಪ್ರಾರಂಭಿಸಿದ್ದಾರೆ ತಮಗೆ ಸಿಗರೇಟಿಗಾಗಿ ತಿಂಗಳಿಗೆ ೧೫ ರೂ, ೧೦೦ ರೂ ಸಂಸಾರದ ಭತ್ಯ, ತಮ್ಮ ಒಪ್ಪಿಗೆ ಇಲ್ಲದೆ ತಮ್ಮನ್ನು ವರ್ಗಾಯಿಸದೇ ಇರುವುದು ಮುಂತಾದ ಬೇಡಿಕೆಗಳಿಗಾಗಿ ಅವರು ಉಪವಾಸ ಹೂಡಿದ್ದಾರೆ

ಭಾರತದೊಡನೆ ಹೈದರಾಬಾದಿನ ಲೀನ

ಹೈದರಾಬಾದು ಶಾಶ್ವತವಾಗಿ ಭಾರತ ಯೂನಿಯನ್ನಿನೊಡನೆ ವಿಲೀನ ವಾಗುವುದೆಂದೂ, ಈಬಗ್ಗೆ ಸಂಸ್ಥಾನ ದಾಖಾ ಸಲಹೆಗಾರರಾದ ಶ್ರೀ ವಿ ಪಿ ಮೆನನ್‌ರವರು ನೈಜಾಮರೊಡನೆ ಮಾತುಕತೆ ನಡೆಸಿದರೆಂದೂ ತಿಳಿದುಬಂದಿದೆ

Intermediate Examination

— OF MARCH 1950 —

Classes begin on 11-11-49

City Tutorial College,

531 VANIVILAS ROAD, MYSORE

ಮೈಸೂರು ರಾಜ್ಯಾಂಗ ಸಭೆ ಕರೆಯಬೇಕೆಂದು ಪ್ರಾರ್ಥನೆ

ಇದೇ ೧೪ನೇ ತಾ॥ ನೊಳಗಾಗಿ ಮೈಸೂರು ರಾಜ್ಯಾಂಗ ಸಭೆಯ ಅಧಿವೇಶನವನ್ನು ಕರೆಯಬೇಕೆಂದು ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಎಂ ಗೋವಿಂದ ರೆಡ್ಡಿ ನಂಜರಾಜೆ ಅರಸ್, ಮಹಮದ್ ಇಮಾಂ ಮುಂತಾದವರು ಅಧ್ಯಕ್ಷರಿಗೆ ಪತ್ರ ಬರೆದಿರುವರೆಂದು ತಿಳಿದು ಬಂದಿದೆ ಭಾರತದ ರಾಜ್ಯಾಂಗದ ಕರಡು ಪ್ರತಿಯು ಅಂಗೀಕಾರವಾಗುವುದಕ್ಕೆ ಮುಂಚೆ ಸಂಸ್ಥಾನಗಳಿಗೆ ಅನ್ವಯಿಸುವ ರಾಜ್ಯಾಂಗವನ್ನು ಪರಿಶೀಲಿಸಿ ಕಟ್ಟಕಡೆಯ ಸಲಹೆಯನ್ನು ಕೂಡಲೇ ಕಳುಹಿಸ ಬೇಕಾಗಿರುವುದರಿಂದ ಸಭೆಯನ್ನ ಕೂಡಲೇ ಕರೆಯ ಬೇಕೆಂದು ಅವರು ತಿಳಿಸಿರುತ್ತಾರೆ.

ನೂತನ ನೇಗಿಲು

ದೆಹಲಿಯಲ್ಲಿರುವ ಭಾರತದ ವ್ಯವಸಾಯ ಸಂಶೋಧನಾ ಶಾಲೆಯವರು ನೂತನ ನೇಗಿಲನ್ನು ತಯಾರಿಸಿದ್ದಾರೆ. ಇದರಲ್ಲಿ ಎರಡು ನೇಗಿಲುಗಳು ಒಂದಾಗಿದ್ದು, ೪ ಎತ್ತುಗಳಿಂದ ಎಳೆಯಲ್ಪಡುವುದೆಂದೂ, ಇದರಿಂದ ಹೆಚ್ಚು ಪ್ರದೇಶವನ್ನು ಉಳಬಹುದೆಂದೂ ಹೇಳಲಾಗಿದೆ. ಇದಕ್ಕೆ ಹೆಚ್ಚು ಹಣ ಖರ್ಚಾಗದೆ, ಹಳ್ಳಿಗಳಲ್ಲೇ ಇದರ ರಿಪೇರಿ ಕೆಲಸಗಳನ್ನು ರೈತರೇ ಮಾಡಿಕೊಳ್ಳಬಹುದೆಂದೂ ಹೇಳಲಾಗಿದೆ.

ಗಾಯತ್ರೀ ಟಾಕೀಸ್

ದಿನವಹಿ ಮೂರು ಪ್ರದರ್ಶನಗಳು

ಕಡೇದಿನ, ಖಂಡಿತಾ ತಪ್ಪಬೇಡಿ

ಕ್ಯಾಪ್ಟನ್ ಫ್ರಂ ಕ್ಯಾಸ್ಟೀಲ್

12-10-49ರಿಂದ ಅಮೋಘವಾದ ಚಿತ್ರ ಪ್ರಾರಂಭ ನೀವು ನೋಡಲೇಬೇಕು

ಆಲಿಬಾಬಾ ಅಂಡ್ ಫಾರ್ಟಿ ಥೀವ್ಸ್

Alibaba & Forty Thieves

ಬೆಳಗಿನ ಚಿತ್ರ

ತಾ॥ 12-11-49 ರಿಂದ 2 ದಿನಗಳು

ಅಂಡರ್ ಟೂ ಫ್ಲಾಗ್ಸ್

ಪಾತ್ರ-ರೊನಾಲ್ಡ್ ಕೋಲ್‌ಮನ್

ಉಳಿತಾಯ ಹಣವನ್ನು ರೈಲ್ವೆ ಕೆಲಸಗಾರರಿಗೆ ಕೊಡಬೇಕು

ಭಾರತದ ಇತರ ರೈಲ್ವೆ ಕೆಲಸಗಾರರು ಅನುಭವಿಸುತ್ತಿರುವ ಸುಲಭ ಧಾನ್ಯ ಸೌಲಭ್ಯ, ತುಟ್ಟಿ ಭತ್ಯ ಮತ್ತು ಇತರ ಅನುಕೂಲತೆಗಳನ್ನು ಮೈಸೂರು ರೈಲ್ವೆ ಕಾರ್ಮಿಕರಿಗೆ ಕೊಡದೆ ೧೪೭ ಲಕ್ಷ ರೂ. ಉಳಿತಾಯ ನಿಧಿಯನ್ನು ಗಳಿಸಲಾಗಿದೆ ಈ ಹಣವನ್ನು ರೈಲ್ವೆಗಾಗಿಯೇ ಉಪಯೋಗಿಸಬೇಕೆಂದು ಕೇಂದ್ರ ಸರ್ಕಾರದ ಶ್ರೀ ಕೃಷ್ಣಮಾಚಾರಿ ಸಮಿತಿಯವರು ತಿಳಿಸಿರುತ್ತಾರೆ ಆದುದರಿಂದ ಮೈಸೂರು ರೈಲ್ವೆ ಕೆಲಸಗಾರರು [illegible] ರಿಂದ ಅನುಭವಿಸದ ಸೌಲಭ್ಯಗಳನ್ನು ಮೇಲ್ಕಂಡ ನಿಧಿಯಿಂದ ಪೂರೈಸಿ [illegible] ಯೋಗಿಸಬೇಕು ಮತ್ತು ಕಾರಣವಿಲ್ಲದೆ ಕೆಲಸದಿಂದ ತೆಗೆದುಹಾಕಿರುವ ರೈಲ್ವೆ ನೌಕರರನ್ನು ವಾಪಸು ತೆಗೆದುಕೊಳ್ಳಬೇಕು-ಎಂದು ಸಂಸ್ಥಾನದ ಮಜದೂರ್ ಸಭೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ನಾಗಭೂಷಣರವರು ಮನವಿ ಮಾಡಿರುತ್ತಾರೆ.

ವಿಶ್ವ ಸಂಸ್ಥೆಯ ವಯಸ್ಕರ ಶಿಕ್ಷಣ ಶಾಖೆಯ ಆಶ್ರಯದಲ್ಲಿ

ಮೈಸೂರು ದಸರಾ ವಸ್ತು ಪ್ರದರ್ಶನ ಭವನದಲ್ಲಿ

ವಯಸ್ಕರ ಶಿಕ್ಷಣ ವಸ್ತು ಪ್ರದರ್ಶನ

ಪ್ರತಿ ದಿನವೂ ಸಾಯಂಕಾಲ ೪ ರಿಂದ ೯ ಗಂಟೆವರೆಗೆ ಏರ್ಪಡಿಸಲ್ಪಟ್ಟಿದೆ

ಪ್ರಪಂಚದ ವಿವಿಧ ದೇಶಗಳಲ್ಲಿ ವಯಸ್ಕರ ವಿದ್ಯಾಭ್ಯಾಸದ ರೀತಿ ನೀತಿ ಸಾಧನೆಗಳು ಮುಂತಾದ ಬಗ್ಗೆ ಸ್ವಾರಸ್ಯವಾದ ಈ ಪ್ರದರ್ಶನವನ್ನು ಸರ್ವರೂ ನೋಡತಕ್ಕದ್ದಾಗಿದೆ

ಎಂ. ವೀರಪ್ಪ,
ಜಂಟಿ ಸೆಕ್ರಟರಿ

ಪಾಕೀಸ್ತಾನದಲ್ಲಿ ಹಿಂದೂಗಳ ಆಸ್ತಿಗಳ ವ[illegible]

ಸಿಂಧ್ ಹೈದರಾಬಾದ್ ಶಿಕಾರಪುರದಲ್ಲಿರುವ [illegible] ಹಿಂದೂಗಳನ್ನೂ ನಿರಾಶ್ರಿತರೆಂದು [illegible]ಸಿ ಅವರುಗಳ ಆಸ್ತಿಯನ್ನು ಏಕೆ ವ[illegible] ಸಿಕೊಳ್ಳಬಾರದೆಂದು ಅಲ್ಲಿನ ಅಧಿಕಾರಿ[illegible] ನೋಟೀಸು ಜಾರಿ ಮಾಡಿರುತ್ತಾರೆ. [illegible] ರುಗಳ ಪೈಕಿ ಅನೇಕ ಹಿಂದೂಗಳು [illegible] ಯಂ ಆಗಿ ಪಾಕೀಸ್ತಾನದಲ್ಲಿ ನೆಲೆಸಿ [illegible] ಆಸ್ತಿಗಳನ್ನು ಹೊಂದಿದ್ದಾರೆ.

ಹೈದರಾಬಾದಿನ ಆಡಳಿತದ[illegible] ಬದಲಾವಣೆ ಇಲ್ಲ

ಮುಂದಿನವರ್ಷದ ಆದಿ ಭಾಗದಲ್ಲಿ [illegible] ಕನ ಚುನಾವಣೆ ನಡೆಯುವವರೆಗೂ ಹೈ[illegible]ರಾಬಾದಿನ ಆಡಳಿತದಲ್ಲಿ ಯಾವ ಬದ[illegible] ವಣೆಯೂ ನಡೆಯುವುದಿಲ್ಲವೆಂದು ತಿಳಿ[illegible] ಬಂದಿದೆ

UNESCO SEMINAR

—:o:—

Exhibition 1949

Exhibition Buildings, Mysore.

★

Education is the only way to Peace & Happiness. Please come and see the progress of Adult Education in the various countries of the World. The Exhibition is kept open

From 4 p m to 9 p. m.

M Veerappa
Joint Secretary

Edited, printed and published by A.R. Nagarajan at Sadhvi Press, D. Subbaiah Road, Mysore.

ಲಕ್ಷ್ಮಿ

ಅಮೋಘವಾದ ೨ನೇ ವಾರ

ಜ್ಯೂಪಿಟರ್ಸ್‌ರವರ ತಮಿಳು ಚಿತ್ರ

ಮೋಹಿನಿ

ಪಾತ್ರ ವಿ. ಎನ್. ಜಾನಕಿ ಲಲಿತ - ಪದ್ಮಿನಿ

Morning Shows From 11-11-49 For 3 days

COLUMBIA'S (In Technicolour) CORNER CREEK

With--Randolph Scott, Marguerite Chapman

ಚಾಮುಂಡೇಶ್ವರಿ ಟಾಕೀಸ್

11-11-49 ರಿಂದ ಅಮೋಘ 4 ನೆಯ ವಾರ

ಜೆಮಿನಿಯವರ ಅಮೋಘ ತಮಿಳು ಚಿತ್ರ

* ಅಪೂರ್ವ ಸಹೋದರರು *

ಮುಖ್ಯ ಪಾತ್ರ:- ಆರ್. ನಾಗೇಂದ್ರ ರಾವ್

ಎಂ. ಕೆ. ರಾಧಾ, ಭಾನುಮತಿ,

ಶ್ರೀ ಗಣೇಶ ಟಾಕೀಸ್

11-11-49 ರಿಂದ ಪ್ರಾರಂಭ ಪ್ರತಿ ದಿನ 3 ಆಟಗಳು

ಮಹಾತ್ಮ ಕಬೀರ್ (ಕನ್ನಡ)

ಪಾತ್ರ-ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ, ಮರಿಯಪ್ಪ

ಮೈಸೂರಿನ ಆರ್. ನಾಗೇಂದ್ರರಾವ್

ಮುಂದಿನ ಬದಲಾವಣೆ - 'ಭಕ್ತ ಪೋತನ' (ತೆಲುಗು)

ಅಮೋಘ ಪ್ರಾರಂಭ

ರಣಜಿತ್ ಟಾಕೀಸ್

ಚರ್ಚ್ ರಸ್ತೆ, :: ಮೈಸೂರು

ತಾ॥ 11-11-49ನೇ ಶುಕ್ರವಾರದಿಂದ

ಪ್ರತಿ ದಿನ 3 ಪ್ರದರ್ಶನಗಳು

ಸಂಸ್ಥಾನದ ನಾಟಕರಂಗ ನಟನ ಶ್ರೀ ಕೆ. ಟಿ. ಭಾಷ್ಯಂರವರು ಉದ್ಘಾಟನೆಯನ್ನು ನೆರವೇರಿಸುವರು

[illegible] ವಜೀದ್ ಖಾನ್ ರವರ ಅತ್ಯುತ್ತಮ ಚಿತ್ರ

ಸಂಗೀತ - ನೌಷದ್

* ದಿಲ್ಲಗಿ *

ಪಾತ್ರ ಸುರಯ್ಯಾ, ಶ್ಯಾಮ್ (ಹಿಂದಿ)

ಪ್ರವೇಶ ದರ [illegible]

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೧೨-೧೧-೪೯ [ಸಂಚಿಕೆ ೮೯

ವಿಶ್ವದ ಕೋರ್ಟಿಗೆ ಆಪ್ಟೆಯ ಅಪ್ಪೀಲು

ವಿಶ್ವವಿದ್ಯಾಲಯದ ಉಪಸ್ಥಾನ ಪತಿ

ಮೈಸೂರು ೧೨

ಮೈಸೂರು ವಿಶ್ವವಿದ್ಯಾಲಯದ ಉಪಸ್ಥಾನಪತಿಗಳಾದ ಶ್ರೀ ಆರ್. ಕಸ್ತೂರಿರಂಗ ಚೆಟ್ಟಿಯವರನ್ನೇ ಆ ಸ್ಥಳದಲ್ಲಿ ಖಾಯಂ ಮಾಡಿ, ಉಪಾಧ್ಯಾಯರ ಶಿಕ್ಷಣ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಎಂ. ಸಿದ್ಧಲಿಂಗಯ್ಯನವರನ್ನು ವಿದ್ಯಾ ಇಲಾಖಾಧಿಕಾರಿಗಳನ್ನಾಗಿ ನೇಮಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ತಿಳಿದುಬಂದಿದೆ.

ಕನ್ನಡ ನಾಡ ಹಬ್ಬ

ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇಜು ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಕನ್ನಡ ನಾಡ ಹಬ್ಬವನ್ನು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರಾರ್ಥನೆ, ಕುಮಾರಿ ಶಾಂತ ಮತ್ತು ಶಕುಂತಲರವರಿಂದ ನೃತ್ಯ ಮತ್ತು ಭಾರತ ವಾಚನಗಳಾದನಂತರ, ಶ್ರೀ ಶಾಸ್ತ್ರಿಯವರು ಭಾಷಣ ಮಾಡಿ, ನಾಡ ಸ್ಕೃತ ಮಹಿಮೆಯನ್ನು ತಿಳಿಸಿದರು. "ಕನ್ನಡ ತಾಯಿ ನೋಟ" ಎಂಬ ನಾಟಕ ಪ್ರದರ್ಶನದ ನಂತರ ಸಮಾರಂಭವು ಮುಕ್ತಾಯವಾಯಿತು.

ಇನ್ನೊಬ್ಬರ ಉಮೇದುವಾರಿಕೆ ವಾಪಸು

ಪುರಸಭಾ ಚುನಾವಣೆಗೆ ನಿಂತಿದ್ದ 'ಪಕ್ಕವಾದಿ' ಪತ್ರಿಕಾ ಸಂಪಾದಕರಾದ ಶ್ರೀ ಎಂ. ಎಸ್. ಕೃಷ್ಣರಾಯರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ

ಕಡಕೊಳದಲ್ಲಿ ಕಾಲರಾ ಉಪದ್ರವ

ಮೈಸೂರು ತಾಲ್ಲೂಕಿನ ಕಡಕೊಳ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಲರಾ ಉಪದ್ರವವಿರುವುದರಿಂದ ಎಣ್ಣೆಹೊಳೆ ಮತ್ತು ಅದರ ಕಾಲುವೆಗಳ ನೀರನ್ನು ಉಪಯೋಗಿಸಬಾರದೆಂದೂ ಮತ್ತು ಅಲ್ಲಿನ ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂದೂ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ನಡೆಯುತ್ತಿದೆ

ಮಂಡ್ಯದ ಸಕ್ಕರೆ ಕಂಪೆನಿಯ ಕಾರ್ಮಿಕರು ಕಳೆದ ೪ ನೇ ತಾರೀಕಿನಿಂದ ಮುಷ್ಕರ ಹೂಡಿರುವರಷ್ಟೆ. ಇದೇ ೭ನೇ ತಾರೀಕಿನಿಂದ ರೈತರ ಮತ್ತು ಕೈಗಾರಿಕಾ ಇಲಾಖೆಯ ಪ್ರವೀಣರುಗಳ ಸಹಾಯದಿಂದ ಕೆಲಸವನ್ನು ಪ್ರಾರಂಭಿಸಿ, ೧೧ನೇ ತಾರೀಕು ವರೆಗೆ ೧೨೫೧ ಟನ್ನುಗಳಷ್ಟು ಕಬ್ಬನ್ನು ಅರೆಯಲಾಯಿತು, ಮತ್ತು ೧೬೫೭ ಚೀಲ ಸಕ್ಕರೆಯನ್ನು ತಯಾರಿಸಲಾಯಿತು. ಒಟ್ಟು ೧೬೪೮ ಚೀಲಗಳಷ್ಟು ಸಕ್ಕರೆ ದಾಸ್ತಾನು ಆ ದಿನ ಇತ್ತು - ಎಂದು ಕಂಪೆನಿಯ ಜನರಲ್ ಮ್ಯಾನೇಜರ್‌ರವರು ತಿಳಿಸುತ್ತಾರೆ

ತಿರುಪತಿ ದೇವಾಲಯದ ಆಭರಣಗಳ ರಿಪೇರಿ

ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಮೈಸೂರು ಸಂಸ್ಥಾನದವರು ಕೊಟ್ಟಿರುವ ಆಭರಣಗಳ ರಿಪೇರಿಗಾಗಿ ಸರ್ಕಾರದವರು ೩೦ ಸಾವಿರ ರೂ ಮಂಜೂರು ಮಾಡಲಿದ್ದಾರೆಂದು ತಿಳಿದು ಬಂದಿದೆ

ರಣಜಿತ್ ಟಾಕೀಸ್ ಪ್ರಾರಂಭೋತ್ಸವ

ಮೈಸೂರು ೧೨

ತಂಬೂಚೆಟ್ಟಿ ರಸ್ತೆಯಲ್ಲಿ ನೂತನವಾಗಿ ನಿರ್ಮಿತವಾಗಿರುವ ರಣಜಿತ್ ಸಿನಿಮಾ ಮಂದಿರದ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ಕಾರ್ಮಿಕ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನೆರವೇರಿಸಿದರು.

ಮಂದಿರದ ಮಾಲೀಕರಾದ ಶ್ರೀ ಎ. ಎಂ. ಪಟೇಲ್‌ರವರು ಸ್ವಾಗತ ಭಾಷಣ ಮಾಡಿ, ಸಚಿವರಿಗೆ ಸುಂದರವಾದ ಗಂಧದ ಕರಂಡವನ್ನು ಅರ್ಪಿಸಿದರು

ಶ್ರೀ ಭಾಷ್ಯಂರವರು ಭಾಷಣಮಾಡಿ ದೇಶದ ಸಂಸ್ಕೃತಿಯ ಬೆಳವಣಿಗೆಗೆ ಸಿನಿಮಾ ಕೈಗಾರಿಕೆಯು ಅತಿ ಮುಖ್ಯವಾದುದೆಂದೂ, ಅದನ್ನು ಗಮನಿಸಿ ಸಿನಿಮಾ ತಯಾರಕರು ಲಾಭದಾಸೆಯನ್ನೇ ಪ್ರಧಾನವಾಗಿಟ್ಟುಕೊಳ್ಳದೆ ಒಳ್ಳೆಯ ಚಿತ್ರಗಳನ್ನು ತಯಾರಿಸಬೇಕೆಂದೂ ತಿಳಿಸಿದರು. ಮದರಾಸಿನಲ್ಲಿ ೩೦ ಸಾವಿರಕ್ಕೆ ಒಂದು ಸಿನಿಮಾ, ಬೊಂಬಾಯಿ ಮತ್ತು ದೆಹಲಿಯಲ್ಲಿ ೪೦ ಸಾವಿರಕ್ಕೆ ೧, ಕಲ್ಕತ್ತದಲ್ಲಿ ೬೦ ಸಾವಿರಕ್ಕೆ ೧ ಮಂದಿರವಿರುವಾಗ, ಮೈಸೂರು ನಗರದಲ್ಲಿ ೨೦ ಸಾವಿರ ಜನಕ್ಕೆ ಒಂದು ಸಿನಿಮಾ ಇರುತ್ತದೆ. ಇಷ್ಟು ಸಿನಿಮಾಗಳು ಇರುವಾಗ, ನೂತನ ಮಂದಿರಗಳಿಗೆ ಪ್ರೋತ್ಸಾಹ ಕೊಡಬೇಕೆ ಎಂಬ ಸಂದೇಹ ಬರಬಹುದು. ಆದರೂ ಸಿನಿಮಾಗಳಲ್ಲಿ ನಾನಾ ರೀತಿ ಮಂದಿರಗಳಿವೆ. ಅವುಗಳಿಂದ ಜನರಿಗೆ ನೀತಿ ಪತನವಾಗದೆ, ವಿದ್ಯಾಪ್ರಚಾರ ಮತ್ತು ಮನರಂಜನೆಯಾಗುವಂತೆ ಆಗಬೇಕು. ಸಿನಿಮಾ ಮಂದಿರದವರು ಒಳ್ಳೆಯ ಚಿತ್ರಗಳನ್ನೇ ಪ್ರದರ್ಶಿಸಬೇಕು. ಇದರಿಂದ ಲಾಭ ಕಡಿಮೆಯಾದರೂ, ತಯಾರಿಕಾಗಾರರು ಒಳ್ಳೆಯ ಚಿತ್ರಗಳನ್ನು ತಯಾರಿಸಲು ಒತ್ತಾಯ ಮಾಡಿದಂತಾಗುವುದು. ಇಂತಹ ಕಾರ್ಯದಲ್ಲಿ ಈ ನೂತನ ಸಿನಿಮಾ ಮಂದಿರದವರು ಮುಕ್ತು ಇತರರ ಸಹಕರಿಸಬೇಕೆಂದು ಆಶಿಸುತ್ತೇನೆ - ಎಂದು ಸಚಿವರು ತಿಳಿಸಿದರು

ಅನಂತರ 'ಏಕ್ಸ್ಲಿಗ್' ಎಂಬ ಹಿಂದೀ ಚಿತ್ರವನ್ನು ಪ್ರದರ್ಶಿಸಲಾಯಿತು. ಆಹ್ವಾನಿತರೆಲ್ಲರಿಗೂ ಫಲ ಪುಷ್ಪ ತಾಂಬೂಲಗಳನ್ನು ವಿನಿಯೋಗಿಸಲಾಯಿತು

ಮಂದಿರವನ್ನು ಆಧುನಿಕ ರೀತಿಯಲ್ಲಿ ಆಕರ್ಷಣೀಯವಾಗಿ ಕಟ್ಟಲಾಗಿದೆ

ಚುನಾವಣಾ ಪ್ರಚಾರ ಸಭೆ

ಮೈಸೂರು ೧೨

ಪುರಸಭಾ ಚುನಾವಣಾ ಪ್ರಚಾರ ಪ್ರಾರಂಭೋತ್ಸವವನ್ನು ಈ ದಿನ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆರವೇರಿಸುವರೆಂದು ಕಾಂಗ್ರೆಸ್ ಚುನಾವಣಾ ಉಪಸಮಿತಿಯ ಸಂಚಾಲಕರಾದ ಶ್ರೀ ಎಸ್. ಚನ್ನಯ್ಯನವರು ತಿಳಿಸಿರುತ್ತಾರೆ

ಹಿಂದೂ ಮಹಾ ಸಭೆಯ ಪತ್ರಿಕೆ

ಸಂಸ್ಥಾನದ ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಎಂ. ಸಿ. ಮಲ್ಲಪ್ಪನವರು ದೆಹಲಿಗೆ ಪ್ರಯಾಣ ಮಾಡಿರುತ್ತಾರೆ. ಅಖಿಲ ಭಾರತ ಹಿಂದೂ ಮಹಾ ಸಭೆಯ ಆಶ್ರಯದಲ್ಲಿ ದೆಹಲಿಯಿಂದ ಪ್ರಕಟವಾಗಲಿರುವ ಆಂಗ್ಲೇಯ ದೈನಂದಿನ ಪತ್ರಿಕೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವಿಚಾರವಾಗಿ ಸಮಾಲೋಚನೆ ನಡೆಸಲು ಅವರನ್ನು ಆಹ್ವಾನಿಸಲಾಗಿದೆ ಮತ್ತು ಶ್ರೀಯುತರನ್ನೇ ಆ ಪತ್ರಿಕೆಯ ಸಂಪಾದಕರನ್ನಾಗಿ ನೇಮಿಸುವ ಸಂಭವವಿದೆಯೆಂದೂ ತಿಳಿದುಬಂದಿದೆ

ಜೈ ಹಿಂದ್!

ಪೌರಸಭಾ ಚುನಾವಣೆ

★

ದಯವಿಟ್ಟು ತಮ್ಮ ಅಮೂಲ್ಯವಾದ ಓಟನ್ನು

ಕಾಂಗ್ರೆಸ್ಸಿಗೇ ಕೊಡಿರಿ!

ವೀರಶೈವ ಮಹಾ ಸಭೆ

ರಾಜಧಾನಿಯಲ್ಲಿ ದಸರಾ ಕಾಲದಲ್ಲಿ ನಡೆಯಬೇಕಾಗಿದ್ದ ಅಖಿಲ ಭಾರತ ವೀರಶೈವ ಮಹಾ ಸಭೆಯ ಅಧಿವೇಶನವು ಮಾರ್ಚಿ ತಿಂಗಳು ನಡೆಯುವುದೆಂದು ತಿಳಿಸಲಾಗಿದೆ

ಕೊಲಂಬಿಯಾದಲ್ಲಿ ಗಲಭೆ ಪರಿಸ್ಥಿತಿ

ಕೊಲಂಬಿಯಾದಲ್ಲಿ ಅಸಾಧಾರಣ ಗಲಭೆ ಪರಿಸ್ಥಿತಿ ಉಂಟಾಗಿದೆಯೆಂದು, ಅಲ್ಲಿನ ರಿಪಬ್ಲಿಕ್ ಸರ್ಕಾರವು ಘೋಷಿಸಿದೆ ಮತ್ತು ಪಾರ್ಲಿಮೆಂಟ್ ಸಭೆಯನ್ನು ವಿಸರ್ಜಿಸಲಾಗಿದೆ. ಅಧ್ಯಕ್ಷರ ಚುನಾವಣೆಯಲ್ಲಿ ಗಲಭೆ ನಡೆದು ೧೬ ಜನರು ಮರಣ ಹೊಂದಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ವಿಶ್ವದ ಕೋರ್ಟಿಗೆ ಆಪ್ಟೆಯ ಅಪ್ಪೀಲು

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಆಪ್ಟೆಯು ತನಗೆ ನ್ಯಾಯವಾದ ವಿಚಾರಣೆ ದೊರೆಯಲಿಲ್ಲವೆಂದು ಅಂತರ ರಾಷ್ಟ್ರೀಯ ಕೋರ್ಟಿಗೆ ಅಪ್ಪೀಲು ಮಾಡುವುದಾಗಿ ಆತನ ವಕೀಲರು ತಿಳಿಸಿರುತ್ತಾರೆ. ಈ ವಿಚಾರವು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ಇದರಿಂದ ಆತನ ಮರಣ ದಂಡನೆಯು ತಾತ್ಕಾಲಿಕವಾಗಿ ಮುಂದುವರಿಯಬಹುದೆಂದು ಹೇಳಲು ಸಾಧ್ಯವಿಲ್ಲವೆಂದೂ ಸರ್ಕಾರೀ ಅವರಣದಲ್ಲಿ ಹೇಳಲಾಗಿದೆ.

ನ್ಯಾಯಾಧೀಶರುಗಳ ಮುಷ್ಕರ

ಫ್ರಾನ್ಸ್ ಹೈಕೋರ್ಟಿನ ೧೫೫ ಜನ ನ್ಯಾಯಾಧೀಶರುಗಳು ವಿಪರೀತ ಚಳಿಯಾಗಿರುವುದರಿಂದ ನ್ಯಾಯಾಲಯಗಳಲ್ಲಿ ಬೆಚ್ಚಗಿರುವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದ್ದರೂ, ಅದಕ್ಕೆ ಸರ್ಕಾರವು ಗಮನಕೊಡದಿದ್ದುದನ್ನು ಪ್ರತಿಭಟಿಸಲು, ಅವರುಗಳು ವಿಚಾರಣೆಗಳನ್ನು ನಿಲ್ಲಿಸಿ ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಹೂಡಿದ್ದಾರೆ.

ರೇಷ್ಮೆ ಹುಳು ಅಭಿವೃದ್ಧಿ ಸಂಶೋಧನೆ

ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಹುಳುಗಳ ಅಭಿವೃದ್ಧಿ ಬಗ್ಗೆ ಸಂಶೋಧನೆ ನಡೆಸಲು ೨೪ ಸಾವಿರ ರೂ ಗ್ರಾಂಟನ್ನು ಕೇಂದ್ರ ರೇಷ್ಮೆ ಬೋರ್ಡಿನವರು ಮಂಜೂರು ಮಾಡಿರುತ್ತಾರೆ. ರೇಷ್ಮೆ ಕೈಗಾರಿಕಾ ಅಭಿವೃದ್ಧಿಗೆ ಬೇಕಾದ ಯಂತ್ರ ಸಲಕರಣೆಗಳನ್ನು ಪಡೆಯಲು ಮೈಸೂರು ರೇಷ್ಮೆ ಇಲಾಖಾಧಿಕಾರಿಗಳಾದ ಜನಾಬ್ ಕೆ. ಎಂ. ಸುದ್ದೀನರವರನ್ನು ಜಪಾನಿಗೆ ಕಳುಹಿಸಬೇಕೆಂದು ಬೋರ್ಡಿನವರು ತೀರ್ಮಾನಿಸಿದ್ದಾರೆ. ರೇಷ್ಮೆ ಫಿಲೇಚರ್ ಕೈಗಾರಿಕಾ ಅಭಿವೃದ್ಧಿಗಾಗಿ ೧೦ ಲಕ್ಷ ರೂ ಗ್ರಾಂಟನ್ನು ಮಂಜೂರು ಮಾಡಲಾಗಿದೆ.

ಏಷ್ಯಾದಲ್ಲಿ ಕ್ರಾಂತಿಹೂಡಲು ಕಮ್ಯೂನಿಸ್ಟರ ಪ್ರಯತ್ನ

ಪೆಸಿಫಿಕ್ ಮತ್ತು ಪ್ರಾಚ್ಯ ಏಷ್ಯಾ ರಾಷ್ಟ್ರಗಳಲ್ಲಿ ಕ್ರಾಂತಿ ಹೂಡುವ ಬಗ್ಗೆ ಯೋಜನೆ ತಯಾರಿಸಲು ಈ ದಿನ ಪಿಕಿಂಗಿನಲ್ಲಿ ಆಸ್ಟ್ರೇಲಿಯಾ, ಏಷ್ಯಾದ ಯೂರೋಪಿನ ರಾಷ್ಟ್ರಗಳು ಮತ್ತು ಏಷ್ಯಾ ದೇಶಗಳು ಸಮ್ಮೇಳನ ಸೇರಲಿವೆಯೆಂದು ತಿಳಿದುಬಂದಿದೆ

ಬಿರುಗಾಳಿಯಿಂದ ೫೦೦ ಜನರ ಮರಣ

ಕೃಷ್ಣಾ ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರಚಂಡ ಬಿರುಗಾಳಿ ಮತ್ತು ಪ್ರವಾಹದಿಂದ ೫೦೦ ಜನರು ಸತ್ತರೆಂದೂ, ಮುಕ್ಕಾಲುಪಾಲು ಜಮೀನುಗಳು ನೀರಿನಲ್ಲಿ ಮುಳುಗಿವೆಯೆಂದೂ ಹೇಳಲಾಗಿದೆ.

ಉದಾರ ಸಹಾಯ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಯುವಕರ ಸಂಘದ ಸಹಾಯಾರ್ಥವಾಗಿ ಶ್ರೀ ಕೇಶವ ಕಮಲ ಕಲಾ ಮಂಡಲಿಯವರು ಕಳೆದ ಬುಧವಾರ ಧರ್ಮರಕ್ಷಕರ ಎಂಬ ನಾಟಕವನ್ನು ಅಭಿನಯಿಸಿ ೭೫ ರೂ ಗಳನ್ನು ಕೊಟ್ಟರು

ಕೇಂದ್ರ ಸರ್ಕಾರದ ಕಛೇರಿಗಳ ವರ್ಗ

ಕೇಂದ್ರ ಸರ್ಕಾರದ ಕೆಲವು ಕಛೇರಿಗಳನ್ನು [illegible]ಗಪುರ ಮತ್ತು ಜಬ್ಬಲ್‌ಪುರಗಳಿಗೆ ವರ್ಗಾಯಿಸುವ ವಿಚಾರವನ್ನು ಭಾರತ ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ತಿಳಿದು ಬಂದಿದೆ

ಮೈಸೂರಿನವರಿಗೆ ಭಾರತ ಸರ್ಕಾರದ ಹುದ್ದೆ

ಬೆಂಗಳೂರು [illegible] ಔದ್ಯೋಗಿಕ [illegible] ಶ್ರೀ ಡಿ ಎಸ್ ವೆಂಕಣ್ಣನವರನ್ನು [illegible] ಭಾರತ ಸರ್ಕಾರದವರು [illegible] ತಿಳಿದು ಬಂದಿದೆ

ಆಹಾರ ನೀತಿಗೆ ಸೈನಿಕರ ಸಹಾಯ

[illegible] ಸ್ಥಾನದಲ್ಲಿ ಹತ್ತು [illegible] ವೃತ್ತದಲ್ಲಿ ಸೈನಿಕರು ಎಷ್ಟು ಮಟ್ಟಿಗೆ ನೆರವಾಗಬಹುದು [illegible] ಪ್ರಶ್ನೆ [illegible] ಸಮಾಲೋಚನೆ ನಡೆಸಿದರು

ಹರಿಕಥೆ

[illegible] ಕೊತ್ತಾಳ ರಾಮಯ್ಯನವರ ಬಂಗಲೆಯ [illegible] ಶ್ರೀ [illegible]ಲ್ಲಿ ನಾಳೆ ಮಧ್ಯಾಹ್ನ [illegible] ಗಂಟೆಗೆ ಶ್ರೀ ಎ. ಎಲ್ ನಾರಾಯಣದಾಸರಿಂದ ರುಕ್ಮಿಣೀ ಕಲ್ಯಾಣ ಎಂಬ ಹರಿಕಥೆ ನಡೆಯುವುದು

ನಿಧನ

ನಿವೃತ್ತ ತಮಿಳು ಪಂಡಿತರಾದ ಶ್ರೀ [illegible] ತಮ್ಮ [illegible] ರಾಜಧಾನಿಯ [illegible]

Intermediate Examination
[illegible]
Classes begin on 11-11-49
City Tutorial College
[illegible]
Mysore

ಆಂಧ್ರ ಪ್ರಾಂತ ನಿರ್ಮಾಣಕ್ಕೆ ಒತ್ತಾಯ

ಆಂಧ್ರಕ್ಕೆ ಸೇರಿದ ಪ್ರದೇಶಗಳನ್ನೆಲ್ಲಾ ಸೇರಿಸಿ ಕೂಡಲೇ ಆಂಧ್ರ ಪ್ರಾಂತವನ್ನು ರಚಿಸಬೇಕೆಂದೂ, ಮದರಾಸ್ ನಗರವನ್ನು ಮತ್ತು ಅಕ್ಕಪಕ್ಕದಲ್ಲಿರುವ ಇತರ ದ್ವಿಭಾಷಾ ಪ್ರದೇಶಗಳನ್ನೂ ಕೇಂದ್ರ ಸರ್ಕಾರವೇ ತನ್ನ ಆಡಳಿತಕ್ಕೆ ತೆಗೆದುಕೊಳ್ಳಬೇಕೆಂದೂ, ತಮಿಳು ಮತ್ತು ಆಂಧ್ರ ಪ್ರಾಂತಗಳು ತಮ್ಮ ರಾಜಧಾನಿಗಳನ್ನು ಸ್ಥಾಪಿಸಿಕೊಳ್ಳುವವರೆಗೆ ಎರಡು ಸರ್ಕಾರಗಳ ಕೇಂದ್ರಗಳೂ ಮದರಾಸಿನಲ್ಲೇ ಇರಬೇಕೆಂದೂ ಮೊನ್ನೆ ದಿನ ನಡೆದ ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ

ಪ್ಲಾಸ್ಟಿಕ್ಕಿನಿಂದ ಕೃತಕ ನೇತ್ರ

ಕಣ್ಣು ಗುಡ್ಡೆಯ ಸೂಕ್ಷ್ಮ ಮಾಂಸವನ್ನು ತೆಗೆದುಹಾಕಿ ಪ್ಲಾಸ್ಟಿಕ್ಕಿನಿಂದ ತಯಾರಾದ ಕೃತಕ ನೇತ್ರದ ಗುಡ್ಡೆಗಳನ್ನು ಜೋಡಿಸುವ ವಿಧಾನವನ್ನು ಬ್ರಿಟನ್ನಿನ ವೈದ್ಯರು ಕಂಡುಹಿಡಿದಿದ್ದಾರೆಂದು ವರದಿಯಾಗಿದೆ ಅವುಗಳು ಸಾಧಾರಣ ಗುಡ್ಡೆಗಳಂತೆಯೇ ಕಾಣುವುವು

ಜಪಾನಿಗೆ ಅಣು ಸಂಶೋಧನಾ ವಸ್ತುಗಳ ರವಾನೆ

ಅಣು ಸಂಶೋಧನೆಗೆ ಉಪಯುಕ್ತವಾದ ಹಲವು ರಸಾಯನಿಕ ಪದಾರ್ಥಗಳನ್ನು ಅಮೆರಿಕವು ಜಪಾನಿಗೆ ಕಳುಹಿಸಲು ನಿರ್ಧರಿಸಿದೆ ಜಪಾನಿನಲ್ಲಿ ಅಣು ಸಂಶೋಧನೆಯ ಪೂರ್ಣ ಹತೋಟಿಯು ಜನರಲ್ ಮೆಕ್ ಆರ್ಥರ್‌ರವರಿಗೆ ಇರುವುದೆಂದು ವರದಿಯಾಗಿದೆ

ವಿಶ್ವನಾಥ

[illegible] ವರ್ಷದ ಹುಡುಗನು [illegible] ಮನೆಬಿಟ್ಟು ಹೋಗಿ [illegible] ತಿಂಗಳಾಯಿತು ಪತ್ತೆ [illegible] ಯಾರಾದರೂ ಇವನನ್ನು ಕಂಡರೆ ಕೂಡಲೇ ಸಾಧ್ವಿ ಪತ್ರಿಕೆಗೆ ತಿಳಿಸಿ ಉಪಕಾರ ಮಾಡಿರಿ

ಖಾಸಗೀ ವಿದ್ಯಾ ಸಂಸ್ಥೆಗಳ ಆವಶ್ಯಕತೆ

ಮೈಸೂರು ೧೧

ಪಾಶ್ಚಾತ್ಯ ದೇಶಗಳ ಪ್ರವಾಸದಿಂದ ಹಿಂತಿರುಗಿರುವ ಶ್ರೀ ಎಸ್ ಚೆನ್ನಯ್ಯನವರ ಗೌರವಾರ್ಥವಾಗಿ ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾ ವರ್ಧಕ ಸಂಘದವರು ಮೊನ್ನೆ ಸಂಜೆ ಒಂದು ಚಹಾಕೂಟವನ್ನು ಏರ್ಪಡಿಸಿದ್ದರು ಸಂಘದ ಅಧ್ಯಕ್ಷರಾದ ಶ್ರೀ ಎಂ ಶಂಕರಯ್ಯನವರು ಸ್ವಾಗತ ಭಾಷಣ ಮಾಡಿದರು

ಶ್ರೀ ಚೆನ್ನಯ್ಯನವರು ತಮ್ಮ ಪಾಶ್ಚಾತ್ಯ ದೇಶದ ಅನುಭವಗಳನ್ನು ವಿವರಿಸಿ, ಅಲ್ಲಿ [illegible]ಕ್ಕಿಂತ ಹೆಚ್ಚಾಗಿ ಖಾಸಗೀ ಶಾಲೆಗಳೇ ವಿಶೇಷವಾಗಿವೆಯೆಂದೂ, ಸರ್ಕಾರದ ಆಶ್ರಯವನ್ನು ಬಯಸದೆ ಖಾಸಗೀ ವಿದ್ಯಾ ಸಂಸ್ಥೆಗಳು ಸಂಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪನೆಯಾಗಬೇಕೆಂದೂ ತಿಳಿಸಿದರು ಮೈಸೂರು ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಎಲ್ಲರೂ ಬೆಂಬಲ ನೀಡಬೇಕೆಂದು ಕೋರಿದರು.

ಭಾರತ ಪಠಣ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ರಾತ್ರಿ ೭ ಗಂಟೆಗೆ ಶ್ರೀ ಶೌಲಗಿ ಶೇಷಾಚಾರ್ಯರಿಂದ ಗೀತಾ ಕಾಲಕ್ಷೇಪ ಮತ್ತು ೮-೩೦ ಗಂಟೆಗೆ ಶ್ರೀಮತಿ ಲಲಿತಮ್ಮನವರಿಂದ ಭಾರತ ಪಠಣವೂ ನಡೆಯುವುವು

ಪ್ರಭಾ
11-11-49ರಿಂದ ಅಮೋಘವಾದ 2ನೇ ವಾರ
ಬಾಂಬೆ ಟಾಕೀಸ್‌ರವರ
— ಜಿದ್ದಿ —
(ಹಿಂದಿ)
ಕಾಮಿನಿ ಕೌಶಲ್, ದೇವ್ ಆನಂದ್,
ನವಾಬ್, ವೀರಾ, ಇಂದು

Edited, printed and published by A R Nagarajan, at Sadhvi Press, D Subbiah Road, Mysore

ಗೋಡ್ಸೆಗೆ ಕ್ಷಮೆ ತೋರಿ[illegible]ಬೇಕೆಂದು ಮನವಿ

ಮಹಾತ್ಮರ ಕೊಲೆಪಾತಕನಾದ [illegible]ಥೂರಾಂ ಗೋಡ್ಸೆಗೆ ಕ್ಷಮೆ ತೋರಿ[illegible]ಕೆಂದು ಸಬರಮತಿ ಆಶ್ರಮದವರು [illegible]ರಾತಿನ ಜನರ ರುಜು ಪಡೆದ ಮನವಿ[illegible]ನ್ನು ಗೌರ್ನರ್ ಜನರಲ್ಲರಿಗೆ ಕಳುಹಿ[illegible]ದ್ದಾರೆಂದು ಹೇಳಲಾಗಿದೆ

ಸಕ್ಕರೆದಾಸ್ತಾನು ತಿಳಿಸದಿದ್ದ[illegible]ದಕ್ಕೆ ಶಿಕ್ಷೆ

೪೦ ಪೌಂಡಿಗಿಂತಲೂ ಹೆಚ್ಚಿಗೆ [illegible]ಯನ್ನು ಪಡೆದಿರುವವರು ತಮ್ಮ ದಾಸ್ತಾ[illegible]ನ್ನು ತಿಳಿಸಬೇಕೆಂಬ ಆಜ್ಞೆಯನ್ನು [illegible]ಸಿದರೆಂಬ ಆಪಾದನೆಯ ಮೇಲೆ [illegible]ಬಾಯಿನ ಡಾ॥ ದೀಕ್ಷಿತ ಎಂಬ [illegible] ವಯಸ್ಸಿನ ವೃದ್ಧರಿಗೆ ಒಂದು [illegible] ಸಾದಾ ಸಜ ಮತ್ತು ೮ ಸಾವಿರ ರೂ [illegible]ಡವನ್ನು ನ್ಯಾಯಾಧೀಶರು ವಿಧಿಸಿದ್ದಾ[illegible]

ಲಿಬಿಯಾಕ್ಕೆ ಸ್ವಾತಂತ್ರ್ಯ

ಸಿರನೈಕಾ, ಟ್ರಿಪೋಲಿಟ್ಯಾನಿಯಾ [illegible] ಫೆಜ್ಜಾನ್ ಪ್ರದೇಶಗಳಿಂದ ಕೂಡಿದ [illegible]ಬಿಯಾಕ್ಕೆ ೧೯೫೨ರ ಒಳಗಾಗಿ ಸ್ವಾತಂ[illegible] ಕೊಡಬೇಕೆಂದು ವಿಶ್ವ ಸಂಸ್ಥೆಯ [illegible]ಕೀಯ ಸಮಿತಿಯು ನಿರ್ಧರಿಸಿದೆ

ರಾಜಕಮಲ್
ಮೈಸೂರು
ತಾ॥ 12-11-49 ರಿಂದ 2ನೇ ವಾ[illegible]
ದಿನವಹಿ 3 ಆಟಗಳು
ಭರಣಿಯವರ ಅದ್ಭುತ ಪ್ರೇಮ[illegible]
ತೆಲುಗು ಚಿತ್ರ
ಲೈಲಾ ಮಜ್ನು
ಪಾತ್ರ - ಭಾನುಮತಿ, ನಾಗೇಶ್ವ[illegible] ರಾವ್, ಲಲಿತಾ ಪದ್ಮಿನಿ
Morning Shows For 4 days
From 11-11-49
Dark Command
With — Walter Pidgeon
John Wayne and
Roy Rogers

ಲಕ್ಷ್ಮಿ
ಅಮೋಘವಾದ ೨ನೇ ವಾರ
ಜುಪಿಟರ್ಸ್‌ರವರ ತಮಿಳು ಚಿತ್ರ
ಮೋಹಿನಿ
ಪಾತ್ರ ವಿ ಎನ್ ಜಾನಕಿ ಲಲಿತ ಪದ್ಮಿನಿ
Morning Shows From 11-11-49 For 3 days
(In Technicolor) CORNER CREEK
With Randolph Scott, Marguerite Chapman

ರಂಜಿತ್ ಟಾಕೀಸ್
ತಾ॥ 11-11-49ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು
ಎ ಆರ್ ಕಾರ್ದಾರ್‌ರವರ ಅತ್ಯುತ್ತಮ ಚಿತ್ರ
* ದಿಲ್ಲಗಿ *
ಪಾತ್ರ
ಸುರಯ್ಯಾ, ಶ್ಯಾಮ್
(ಹಿಂದಿ)
ಪ್ರವೇಶ ದರ [illegible]

ರಸಿಕರಿಗೆ ಅಚ್ಚುಮೆಚ್ಚಾದುವು
ಮೈಸೂರು ರೇಷ್ಮೆ ವಸ್ತ್ರಗಳು
ಮಿತವ್ಯಯ-ಹಾಗೂ, ಸುರುಚಿ.
ಮೈಸೂರು ರೇಷ್ಮೆ ಸಮಾಜದಲ್ಲಿ ಮೇಲ್ಮೆಯ ಕುರುಹು ಮುತ್ತೈದೆಯರಲ್ಲಿ ಅನುಪಮವಾದುದು
ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನಸೆಳೆವ ಮಾದರಿಗಳು
ಇಂದಿನ ಅಂದದ ರಂಗುಗಳು
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು.

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೪] ಬುಧವಾರ ೧೪-೧೧-೪೯ [ಸಂಚಿಕೆ ೧೭

ನಾಳೆ ಬೊಂಬಾಯಿಗೆ ನೆಹರೂ ಆಗಮನ

ಕಾಂಗ್ರೆಸ್ ಚುನಾವಣೆ ಪ್ರಚಾರ ಸಮಿತಿ

ಮೈಸೂರು ೩೩

ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರ ಪರವಾಗಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿದೆ. ಅದಕ್ಕೆ ಶ್ರೀ ಎಂ ಎಸ್. ಜೋಯಿಸರು ಅಧ್ಯಕ್ಷರು, ಶ್ರೀ ಎಂ ಶಂಕರಯ್ಯನವರು ಉಪಾಧ್ಯಕ್ಷರು, ಶ್ರೀಗಳಾದ ಎಚ್. ಕೆ ಕುಮಾರ ಸ್ವಾಮಿ, ಎ. ಎಸ್. ಸೂರ್ಯನಾರಾಯಣರಾವ್, ಕೆ. ಎಸ್. ಸೂರ್ಯನಾರಾಯಣರಾವ್, ಎಸ್. ಕೆ ಲಕ್ಷ್ಮೀನರಸಿಂಹಯ್ಯ, ಶ್ರಾವಣ ವಿಷ್ಣುರಾವ್ ಮುಂತಾದವರು ಸದಸ್ಯರು, ಶ್ರೀ ಎ ಸುಬ್ಬರಾವ್ ಉಪಾಧ್ಯರು ಕಾರ್ಯದರ್ಶಿ.

ರಾಜಧಾನಿಯಲ್ಲಿ ಹಣ್ಣುಗಳ ಮುರಬ್ಬ ಕಾರ್ಖಾನೆ

ಮೈಸೂರಿನಲ್ಲಿ ಹಣ್ಣುಗಳ ಮುರಬ್ಬ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು, ಅದಕ್ಕಾಗಿ ಒಂದು ಸಹಕಾರ ಸಂಘವನ್ನು ರಚಿಸಬೇಕೆಂದೂ ಬೆಂಗಳೂರಿನಲ್ಲಿ ನಡೆದ ಮುರಬ್ಬ ಸಹಕಾರ ಸಂಘದ ಸಭೆಯಲ್ಲಿ ತೀರ್ಮಾನವಾಗಿ ಅದಕ್ಕಾಗಿ ೫ ಸಾವಿರ ರೂ. ಗ್ರಾಂಟನ್ನು ಮಂಜೂರು ಮಾಡಲಾಯಿತು.

ನಾರೀ ಶಾಲಾ ಸ್ಥಾಪನೆ

ನಿರಾಶ್ರಿತ ಮಹಿಳೆಯರ ಪುನರ್ವಸತಿ ಮತ್ತು ಮರುವಸತಿ ಬಗ್ಗೆ ಬೆಂಗಳೂರಿನಲ್ಲಿರುವ ನಿರಾಶ್ರಿತ ಮಹಿಳೆಯರಿಗೆ ಹೊಲಿಗೆ, ಕಸೂತಿ ಮೊದಲಾದ ಗೃಹಕೈಗಾರಿಕೆಗಳಲ್ಲಿ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಸರ್ಕಾರದವರು ಬೆಂಗಳೂರಿನಲ್ಲಿ ಒಂದು ನಾರೀ ಶಾಲೆಯನ್ನು ತೆರೆಯಲು ಸರ್ಕಾರದವರು ತೀರ್ಮಾನಿಸಿದ್ದಾರೆ.

ಓಟುಮಾಡುವಾಗ ಸದಸ್ಯರು ಮೌನ ತಾಳಲಾಗದು

ಶಾಸನ ಸಭೆಯಲ್ಲಿ ಒಂದು ನಿರ್ಣಯ ಅಥವ ಮಸೂದೆಯನ್ನು ಓಟಿಗೆ ಹಾಕಿದಾಗ, ಸದಸ್ಯರು 'ಉಂಟು' ಅಥವ 'ಇಲ್ಲ' ಎಂದು ಕೂಗದೇ ಸುಮ್ಮನೆ ಕುಳಿತುಕೊಂಡಿರಬಹುದೇ—ಎಂಬ ಪ್ರಶ್ನೆಯು ಮದರಾಸ್ ಶಾಸನ ಸಭೆಯಲ್ಲಿ ಉದ್ಭವವಾಯಿತು. ಸಾರ್ವಜನಿಕ ರಕ್ಷಣಾ ಶಾಸನದ ಒಂದು ಭಾಗವನ್ನು ಓಟಿಗೆ ಹಾಕಿದಾಗ, ಬಹುಮತದಲ್ಲಿರುವ ಕಾಂಗ್ರೆಸ್ ಪಕ್ಷದವರು ಅದು ತಾನಾಗಿಯೇ ಅಂಗೀಕೃತವಾಗುವುದೆಂದು ಸುಮ್ಮನೆ ಕುಳಿತಿದ್ದರು. ವಿರೋಧ ಪಕ್ಷದವರು 'ಇಲ್ಲ' ಎಂದು ಕೂಗುವುದರಿಂದ ಪ್ರಯೋಜನವಿಲ್ಲವೆಂದು ಅವರು ಸುಮ್ಮನೆ ಕುಳಿತಿದ್ದರು. ಸದಸ್ಯರು ಈ ರೀತಿ ಮೌನ ತಾಳು ವುದಕ್ಕೆ ಅವಕಾಶವಿಲ್ಲವೆಂದೂ, 'ಉಂಟು' ಅಥವ 'ಇಲ್ಲ' ಎಂದು ಕೂಗಲೇಬೇಕೆಂದೂ, ಇಲ್ಲವಾದರೆ ಸಭೆಯನ್ನು ಮುಂದೂಡಬೇಕಾಗುವುದೆಂದೂ ಅಧ್ಯಕ್ಷರು ತಿಳಿಸಿದರು.

೧೧ ವರ್ಷದ ಹುಡಗಿಗೆ ಮಗುವಿನ ಜನನ

ದಕ್ಷಿಣ ಆಫ್ರಿಕದಲ್ಲಿ ೧೧ ವರ್ಷದ ಬಾಲೆ [illegible] ಹುಡುಗಿಯೊಬ್ಬಳಿಗೆ ಮಗು [illegible] ಜನನವಾಗಿದೆಯೆಂದೂ, [illegible] ಆರೋಗ್ಯವಾಗಿದ್ದಾರೆಂದೂ ವರದಿಯಾಗಿದೆ. [illegible] ಆಕೆಯ ಮೇಲೆ ಅತ್ಯಾಚಾರ ನಡೆಸಿದ [illegible] [illegible] ಈಗ ಪೈಲಿನಲ್ಲಿದ್ದಾನೆ.

ನಾಳೆ ಮಧ್ಯಾಹ್ನ ನೆಹರೂ ರವರ ಆಗಮನ

ಪಂಡಿತ ಜವಹರಲಾಲ್ ನೆಹರೂರವರು ತಮ್ಮ ಅಮೇರಿಕಾ ಮತ್ತು ಇಂಗ್ಲೆಂಡ್ ಪ್ರವಾಸಗಳನ್ನು ಮುಗಿಸಿಕೊಂಡು ನಾಳೆ ಮಧ್ಯಾಹ್ನ ೧ ೩೦ ಘಂಟೆಗೆ ಏರ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆಯ ವಿಮಾನದಲ್ಲಿ ಬೊಂಬಾಯಿಯನ್ನು ತಲುಪುವರು. ಇದುವರೆಗಿನ ಪ್ರವಾಸದಿಂದ ಅವರಿಗೆ ತುಂಬಾ ಸ್ಟ್ರೈನ್ [illegible] ದಾಗಿಯೂ, ಆದ್ದರಿಂದ ಅವರು ಬೊಂಬಾಯಿನಲ್ಲಿ ಯಾವ ದೊಡ್ಡ ಸಮಾರಂಭದಲ್ಲೂ ಭಾಗವಹಿಸಲಾರರು. ಆದರೆ ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಅವರಿಗೆ ಅಭೂತಪೂರ್ವ ಸ್ವಾಗತ ನೀಡಲು ಸರ್ವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಬರುವ ಮಂಗಳವಾರ ದೆಹಲಿಯಲ್ಲೂ ಅವರಿಗೆ ವೈಭವಯುತ ಸ್ವಾಗತ ನೀಡಲು ಏರ್ಪಾಡಾಗುತ್ತಿವೆ.

ಸ॥ ಪಟೇಲರ ಆರೋಗ್ಯಕ್ಕಾಗಿ ಯಜ್ಞ

ಕೆಲವು ಗ್ರಹಗಳ ಪ್ರಭಾವದಿಂದ ಸರ್ದಾರ್ ಪಟೇಲರ ಆರೋಗ್ಯವು ಕೆಟ್ಟಿರುವುದನ್ನು ತಪ್ಪಿಸಲು ಅವುಗಳ ಶಾಂತಿಗಾಗಿ ಬೊಂಬಾಯಿನಲ್ಲಿರುವ ಅವರ ಮಕ್ಕಳ ಗೃಹದಲ್ಲಿ ಕಳೆದ ೩ ನೇ ತಾ॥ನಿಂದ ಯಜ್ಞವನ್ನು ಶಾಸ್ತ್ರೋಕ್ತವಿಧಿಯಂತೆ ನಡೆಸಲಾಗುತ್ತಿದೆಯೆಂದೂ, ಅದು ನಾಳಿದ್ದು ಮುಕ್ತಾಯವಾಗುವುದೆಂದೂ ತಿಳಿದುಬಂದಿದೆ.

೩೦ ವರ್ಷದವನಿಗೆ ೩೧ ಮದುವೆ

ಉತ್ತರ ಮಲಯದ [illegible] ವಾಸಿಸುವ ಭಾರತದ ವ್ಯಕ್ತಿಯೊಬ್ಬನು ಕೇವಲ ೮ ವರ್ಷಗಳಲ್ಲಿ ೩೧ ಬಾರಿ ಹೆಂಡಿರನ್ನು ಮದುವೆಯಾಗಿ ಎಲ್ಲರನ್ನೂ [illegible] [illegible] ಕಳೆದ [illegible] ಮದುವೆಯಾದವರ ಪೈಕಿ [illegible] ಜನ [illegible] ಅವನನ್ನು [illegible] ಮದುವೆಯಾಗುವುದಕ್ಕೆ ಮೊದಲು ಸಿಧ್ಧರಾಗಿದ್ದರೆಂದೂ [illegible] [illegible] ತಿಂಗಳಿಗೆ ಮೇಲ್ಪಟ್ಟು [illegible] [illegible] ಕೆಲವರು [illegible] [illegible] [illegible]

ರಾಜಾಜಿಗೆ ಡಾಕ್ಟರೇಟ್ ಪ್ರಶಸ್ತಿ

ಬೆಂಗಳೂರು ೧೩

ಗವರ್ನರ್ ಜನರಲ್ ರಾಜಗೋಪಾಲಾಚಾರಿಯವರು ೩೦ ನೆ ತಿಂಗಳು ೧೯ ನೇ ತಾರೀಖು ಮೈಸೂರಿಗೆ ಭೇಟಿ ಕೊಡುವರು. ಅಂದು ವಿಶೇಷ ಘಟಿಕೋತ್ಸವವನ್ನು ಏರ್ಪಡಿಸಿ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಕೊಡಲಾಗುವುದು.

ನೆಹರೂರವರ ಅಮೇರಿಕದ ಭಾಷಣಗಳ ಪ್ರಸಾರ

ಪಂಡಿತ ನೆಹರೂರವರು ಅಮೇರಿಕಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅವರು ಮಾಡಿದ ಹಲವು ಭಾಷಣಗಳ ರಿಕಾರ್ಡುಗಳನ್ನು ಈ ದಿನ ರಾತ್ರಿ ೯-೧೫ ಗಂಟೆಯಿಂದ ೧೦ ೩೦ ಗಂಟೆಯವರೆಗೆ ಮದರಾಸ್ ರೇಡಿಯೋದಿಂದ ಪ್ರಸಾರ ಮಾಡಲಾಗುವುದು.

ಪೈ ಓಂ ದ!

ಪೌರಸಭಾ ಚುನಾವಣೆ

ದಯವಿಟ್ಟು ತಮ್ಮ ಅಮೂಲ್ಯವಾದ ಓಟನ್ನು

ಕಾಂಗ್ರೆಸ್ಸಿಗೇ ಕೊಡಿರಿ !

ಆಂಧ್ರ ಪ್ರಾಂತ್ಯ ರಚನೆಗೆ ಒಪ್ಪಿಗೆ

ಅಖಿಲ ಭಾರತ ಕಾಂಗ್ರೆಸ್ಸಿನ ಕ್ರಿಯಾಸಮಿತಿಯು ವರದಿಯಾ ಪ್ರಕಾರ ಆಂಧ್ರ ಪ್ರಾಂತ್ಯದ ರಚನೆಯಾಗಬೇಕೆಂದು ಮದರಾಸ್ ಮಂತ್ರಿಮಂಡಲವು ನಿರ್ಧರಿಸಿರುತ್ತದೆ.

ಚುನಾವಣೆಯ ದಿನ ಸಾರ್ವತ್ರಿಕ ರಜಾ

ಮೈಸೂರು ೧೩

ಪೌರಸಭಾ ಚುನಾವಣೆಯ ಸಂಬಂಧವಾಗಿ ಈ ತಿಂಗಳು ೨೩ ನೇ ತಾ॥ ರಾಜಧಾನಿಯಲ್ಲಿ ಸಾರ್ವತ್ರಿಕ ರಜಾ ಕೊಡಲಾಗಿದೆ.

ನವಾಬ್ [illegible] ನಿಧನ

ರಾಜಧಾನಿಯ ಪ್ರಸಿದ್ಧ [illegible] ಮತ್ತು ನಗರದ ಚಿಕಿತ್ಸಕರಾದ ನವಾಬ್ [illegible] [illegible]

ನೆಹರೂ ಜಯಂತಿ ಕಾರ್ಯಕ್ರಮ

ಮೈಸೂರು ೧೩.

ಪಂಡಿತ್ ಜವಹರಲಾಲ ನೆಹರೂರವರ ೬೧ನೇ ವರ್ಷ ವರ್ಧಂತಿ ಪ್ರಯುಕ್ತ ರಾಜಧಾನಿಯಲ್ಲಿ ಕೆಳಗೆ ಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ನಗರದ ಎಲ್ಲಾ ನಿವಾಸಿಗಳೂ, ಸಂಸ್ಥೆಗಳೂ ಭಾಗವಹಿಸಿ ಸಹಕರಿಸಬೇಕೆಂದು ಕೋರಲಾಗಿದೆ. ಸಂಜೆ ೫-೩೦ ಗಂಟೆಗೆ ಕಾಂಗ್ರೆಸ್ ಆಫೀಸಿನಿಂದ ಮೆರವಣಿಗೆ ೬-೩೦ ಗಂಟೆಗೆ ಟೌನ್ ಹಾಲಿನಲ್ಲಿ ಬಹಿರಂಗ ಸಭೆ.

ಡಿ ಸುಬ್ಬಯ್ಯರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಬಹ್ಮಾನಂದ ಔಷಧಾಲಯದ ಬಳಿ ನಾಳೆ ಸಂಜೆ ೫-೩೦ ಗಂಟೆಗೆ ನೆಹರೂ ಜಯಂತಿಯನ್ನು ಆಚರಿಸಲಾಗುವುದು. ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಸಿ ಜೆ. ವಾರ್ಕೀಯವರು ಅಧ್ಯಕ್ಷತೆ ವಹಿಸುವರು.

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಾಳೆ ಬೆಳಗ್ಗೆ ೬-೩೦ ಗಂಟೆಗೆ ಸುಬ್ಬರಾಯನಕೆರೆಯಲ್ಲಿ ನೆಹರು ಜಯಂತಿಯನ್ನು ಆಚರಿಸಲಾಗುವುದು. ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸುವರು. ಎಂ ಎಸ್ ಜೋಯಿಸರು ಧ್ವಜಾರೋಹಣ ಮಾಡುವರು. ಶ್ರೀ ಎಚ್. ಕೆ ಕುಮಾರಸ್ವಾಮಿಯವರು ಭಾಷಣ ಮಾಡುವರು.

ವಾಣೀವಿಲಾಸ ಮೊಹಲ್ಲಾದಲ್ಲಿರುವ ಮಹಾಜನ ಪ್ರೌಢ ವಿದ್ಯಾಶಾಲೆಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಪಂ॥ ನೆಹರೂರವರ ಜಯಂತಿಯು ನಾಳೆ ಸಂಜೆ ೬-೩೦ ಗಂಟೆಗೆ ಮೈಸೂರು ಪುರಸಭಾಧ್ಯಕ್ಷ ಶ್ರೀ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು. ಪ್ರಸಿದ್ಧ ವಾಗ್ಮಿ ಶ್ರೀ ಟಿ. ಎಸ್. ವೆಂಕಟರಾಯರು? [illegible] ಭಾಷಣ ಮಾಡುವರು.

ರಾಜಧಾನಿಯ ಫಸ್ಟ್‌ಗ್ರೇಡ್ ಕಾಲೇಜ್ ಮತ್ತು ಮಹಾರಾಜ ಕಾಲೇಜ್ ಸಂಘಗಳ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಘಂಟೆಗೆ ಮಹಾರಾಜ ಕಾಲೇಜ್ ಒಳಾಂಗಣದಲ್ಲಿ ನೆಹರೂ ಜಯಂತಿಯನ್ನು ಆಚರಿಸಲಾಗುವುದು. ಶ್ರೀ ಆರ್ಯನಾಯಕಂರವರು ಅಧ್ಯಕ್ಷತೆ ವಹಿಸುವರು.

ರಾಜ್ಯಾಂಗ ಸಭೆಯೇ ಶಾಸನ ಸಭೆಯಾಗಲು ನಿರ್ಣಯ

ಸ್ವಂ ಸ॥ ವರದಿ] ಬೆಂಗಳೂರು ೧೩

ನಾಳಿದ್ದು ನಡೆಯಲಿರುವ ರಾಜ್ಯಾಂಗ ಸಭೆಯಲ್ಲಿ ಶಾಸನ ಸಭೆಯನ್ನು ರದ್ದುಮಾಡಿ ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯನ್ನಾಗಿ ಮಾರ್ಪಡಿಸಬೇಕೆಂಬ ಮಹಾ ನಿರ್ಣಯವು ಮಂಡಿಸಲ್ಪಡುವುದೆಂದು ವರದಿಯಾಗಿದೆ.

ಸರ್ಕಾರಿ ನೌಕರರಿಗೆ ಕಡ್ಡಾಯ ಕೂಡಿಹಾಕುವ ಯೋಜನೆ

ತಿಂಗಳಿಗೆ ೫೦ ರೂ [illegible] ಮೇಲ್ಪಟ್ಟು ಸಂಬಳ ಪಡೆವ ಸರ್ಕಾರಿ ನೌಕರರೆಲ್ಲರೂ ಕಡ್ಡಾಯವಾಗಿ [illegible] ಯೋಜನೆಯಲ್ಲಿ ಭಾಗ ವಹಿಸಬೇಕೆಂದು ಭಾರತ ಸರ್ಕಾರದವರು [illegible] [illegible] [illegible] [illegible]

ಕಾಂ॥ ಉಮೇದುವಾರರಿಗೇ ಬೆಂಬಲ ನೀಡಿರಿ

ಕೆ. ಸಿ. ರೆಡ್ಡಿಯವರಿಂದ ಚುನಾವಣಾ ಪ್ರಚಾರ ಪ್ರಾರಂಭ

ಮೈಸೂರು ೧೩

ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ನಿನ್ನೆ ರಾತ್ರಿ ಟೌನ್ ಹಾಲಿನಲ್ಲಿ ಕಾಂಗ್ರೆಸ್ಸಿನ ಪರವಾಗಿ ಪೌರಸಭಾ ಚುನಾವಣಾ ಪ್ರಚಾರ ಕಾರ್ಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಭವನದ ತುಂಬ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಚುನಾವಣಾ ಉಮೇದುವಾರರು ಹಾಜರಿದ್ದರು. ಸ್ವಾಗತ ಗೀತೆಯಾದ ನಂತರ ಶ್ರೀ ಎಸ್. ರಂಗರಾಮಯ್ಯನವರು ಭಾಷಣ ಮಾಡಿ, ಪೌರಸಭೆಯಲ್ಲಿ ಕಾಂಗ್ರೆಸ್ಸಿನವರು ಕಳೆದ ಒಂಭತ್ತು ವರ್ಷಗಳಿಂದಲೂ ಕೈಗೊಂಡಿರುವ ಕಾರ್ಯಗಳನ್ನು ವಿವರಿಸಿದರು.

ಶ್ರೀ ರೆಡ್ಡಿಯವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:- ನಮ್ಮ ದೇಶದಲ್ಲಿ ಕಾಂಗ್ರೆಸ್ಸು ಇತರ ಎಲ್ಲಾ ಸಂಸ್ಥೆಗಳಿಗಿಂತಲೂ ಹಿರಿದಾದ ಪ್ರಭಾವಶಾಲಿಯಾದ ಮತ್ತು ಸುಪ್ರಸಿದ್ಧವಾದ ಸಂಸ್ಥೆ, ನಾಡಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಿರುವ ಸಂಸ್ಥೆ ಆದ್ದರಿಂದಲೇ ಇಡೀ ಭಾರತ ಖಂಡದಲ್ಲಿ ಅದಕ್ಕೆ ಪ್ರಾಶಸ್ತ್ಯತೆ ಇದೆ. ಮೈಸೂರು ಕಾಂಗ್ರೆಸ್ಸು ಸಹ ಅಖಿಲ ಭಾರತ ಕಾಂಗ್ರೆಸ್ಸಿನ ನೇತೃತ್ವದಲ್ಲಿಯೇ ಮುನ್ನಡೆಯುತ್ತಿದೆ. ವ್ಯಕ್ತಿಗಳಲ್ಲಿ ತೋಷದೋಷಗಳಿರಬಹುದು. ಆದರೆ ಸಂಸ್ಥೆಯ ಉದಾತ್ತ ಧ್ಯೇಯ ಧೋರಣೆಗಳೂ, ರೀತಿನೀತಿಗಳೂ ಕಾರ್ಯಕ್ರಮಗಳೂ ಪವಿತ್ರವಾದವು. ಅವುಗಳಿಗೆ ಸಕಲರ ಪುರಸ್ಕಾರವೂ ಇರಲೇಬೇಕು.

ಮೈಸೂರು ನಗರದಲ್ಲಿ ಕಾಂಗ್ರೆಸ್ ಸಂಸ್ಥೆಯು ಮಹಾಜನರ ಬೇಡಿಕೆ ಅಪ್ರತಿಮವಾದ ಪ್ರಭಾವವನ್ನು ಬೀರಿದೆ. ಹಿಂದೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಇಲ್ಲಿ ಅಖಂಡ ವಿಜಯವು ದೊರೆತಿದೆ. ಇಡೀ ಭರತ ಖಂಡವನ್ನೇ ಆ ಚುನಾವಣೆಗಳು ಪ್ರಭಾವಗೊಳಿಸಿವೆ. ಮೈಸೂರು ಪೌರಸಭಾ ಸದಸ್ಯರುಗಳೂ ಸಹ ಶಿಸ್ತು ವ್ಯವಸ್ಥೆಗಳಿಂದ ಕೆಲಸ ಮಾಡಿ ಎಲ್ಲರ ಮೆಚ್ಚಿಗೆಗೂ ಪಾತ್ರರಾಗಿದ್ದಾರೆ. ಮೈಸೂರು ನಗರದ ಕಾಂಗ್ರೆಸ್ ಪ್ರಭಾವ ಅಭಿವೃದ್ಧಿಯಾಗಿದೆ. ಈ ಸಾರಿಯ ಚುನಾವಣೆಗಳಲ್ಲಿಯೂ ಇಲ್ಲಿನ ಮತದಾರರು ಕಾಂಗ್ರೆಸ್ಸಿನವರಿಗೆ ಪೂರ್ಣ ಬೆಂಬಲ ನೀಡಿ, ಎಂದಿನಂತೆ ಅಖಂಡವಾದ ವಿಜಯವನ್ನು ಗಳಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಂತ್ರಿ ಮಂಡಲವು ಒಂದು ಪಕ್ಷದ ಚುನಾವಣೆಯಲ್ಲಿ ಭಾಗವಹಿಸಬಹುದೇ ಎಂಬ ಪ್ರಶ್ನೆ ಬಂದಿದೆ. ಈ ಬಗೆಯ ಪದ್ಧತಿಯು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿದೆ. ನಮ್ಮ ದೇಶದಲ್ಲಿ ಹೊಸದಾಗಿ ಕಾಣಬಹುದು. ಆದರೆ ಈ ಸತ್ಸಂಪ್ರದಾಯವನ್ನು ನಾವು ರೂಢಿಗೆ ತರುತ್ತಿದ್ದೇವೆ. ಇದರಲ್ಲಿ ಏನೂ ದೋಷವಿಲ್ಲ. ಸರ್ಕಾರದ ಮುಖ್ಯಾಧಿಕಾರಿಯಾಗಿ ನಾನು ಇಲ್ಲಿ ಬಂದಿಲ್ಲ ನಾನಿನ್ನೂ ಕಾಂಗ್ರೆಸ್ಸಿನವನಾಗಿ ಬಂದಿದ್ದೇನೆ. ಇಂಗ್ಲೆಂಡಿನ ಪ್ರಭುತ್ವ ನಡೆಸುತ್ತಿರುವ ಲೇಬರ್ ಪಕ್ಷದ ಮಂತ್ರಿಮಂತ್ರಿಯವರೂ ಚುನಾವಣಾ ಪ್ರಚಾರದಲ್ಲಿ ತಮ್ಮ ಪಕ್ಷದ ಪರವಾಗಿ ಭಾಷಣ ಮಾಡಿ [illegible]

ಜನರಿಗೆ ತಿಳಿಸಲು ಇದೊಂದು ಅವಕಾಶ. ಇತರ ಪಂಗಡಗಳು ಅಧಿಕಾರದಲ್ಲಿದ್ದಾಗಲೂ ಅದೇ ನೀತಿಯನ್ನು ಅನುಸರಿಸಿರುವುವು.

ಮಂತ್ರಿಗಳಾಗಿರುವವರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ ಮಾತ್ರಕ್ಕೆ ಸರ್ಕಾರವೇ ಭಾಗವಹಿಸಿದಂತೆ ಆಗುವುದಿಲ್ಲ. ಅಲ್ಲದೆ ಇತರ ಪಂಗಡಗಳವರಿಗೆ ಇದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ. ಎಲ್ಲರೂ ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ಧಾರಾಳವಾಗಿ ಪ್ರತಿಪಾದಿಸಲು ಪೂರ್ಣ ಅವಕಾಶ ಕೊಡಲಾಗುವುದೆಂಬ ಭರವಸೆಯನ್ನು ನಾನು ನೀಡುತ್ತೇನೆ. ಆದರೆ ಎಲ್ಲರೂ ಶಾಂತಿ ಮತ್ತು ಶಿಸ್ತಿನಿಂದ ತಮ್ಮ ಕೆಲಸಗಳಲ್ಲಿ ತೊಡಗಬೇಕು.

ಕಾಂಗ್ರೆಸ್ಸು ಸ್ವಾತಂತ್ರ್ಯ ಬಂದಮೇಲೆ ಅನೇಕ ಕಾರ್ಯಗಳನ್ನು ಮಾಡಬೇಕೆಂದು ಬಯಸಿತ್ತು. ಆದರೆ ತನಂತರ ನಡೆದ ಘಟನೆಗಳಿಂದ ಅದಕ್ಕೆ ಅವಕಾಶವಾಗಲಿಲ್ಲ. ಈ ಸಮಸ್ಯೆಗಳನ್ನು ಒಂದು ದಿನ, ಒಂದು ತಿಂಗಳು ಅಥವ ವರ್ಷದಲ್ಲಿ ಪರಿಹರಿಸಲು ಸಾಧ್ಯವಿಲ್ಲ. ಅನೇಕ ವರ್ಷ ಕಾಲ ದುಡಿಯಬೇಕು. ಕೇವಲ ಸರ್ಕಾರವೊಂದರಿಂದಲೇ ಇದು ಸಾಧ್ಯವಿಲ್ಲ. ಮಹಾಜನರ ಸಹಕಾರವೂ ಬೇಕು.

ಪೋಲೀಸಿನವರ ವಿಷಯದಲ್ಲಿ ಹಿಂದೆ ಇಟ್ಟಿದ್ದ ಮನೋಭಾವನನ್ನು ನಾವು ಬಿಡಬೇಕು. ಅವರೂ ನಮ್ಮ ಅಣ್ಣ ತಮ್ಮಂದಿರು, ಶಾಂತಿ ಶಿಸ್ತುಗಳ ರಕ್ಷಕರು. ಜನಾನುರಾಗದ ಸರ್ಕಾರವೇ ಆಗಲಿ ಈ ವಿಚಾರದಲ್ಲಿ ತನ್ನ ಕರ್ತವ್ಯವನ್ನು ತ್ಯಜಿಸಲಾಗದು.

ಆಹಾರ ಧಾನ್ಯಗಳ ತೊಂದರೆಯು ಇಡೀ ದೇಶಕ್ಕೆಲ್ಲ ಬಂದಿದೆ. ಇದನ್ನು ಪರಿಹರಿಸಲು ಭಾರತ ಸರ್ಕಾರವು ಸರ್ವ ಪ್ರಯತ್ನವನ್ನೂ ಮಾಡುತ್ತಿದೆ. ಇದರಲ್ಲಿ ಪ್ರಜೆಗಳ ಪೂರ್ಣ ಸಹಕಾರವು ಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ಸಾರಿ ಚುನಾಯಿತರಾಗಿರುವವರನ್ನೇ ಪುನಃ ಚುನಾಯಿಸುವರು. ಅವರ ಕಾರ್ಯನೀತಿಗಳಲ್ಲಿ ಮಹಾ ಜನರ ಬೆಂಬಲವನ್ನು ಸೂಚಿಸಲು ಇದೊಂದು ಮಾರ್ಗ. ಆದ್ದರಿಂದ ಪದೇ ಪದೇ ಹೊಸಬರನ್ನೇ ಚುನಾವಣೆಗೆ ನಿಲ್ಲಿಸುವ ಬದಲು ಹಳಬರಿಗೇ ಬೆಂಬಲ ಕೊಡುವುದರಲ್ಲಿಯೂ ವಿಶೇಷ ಪ್ರಯೋಜನವಿದೆ.

ಒಟ್ಟಿನಲ್ಲಿ ಮೈಸೂರು ನಗರದ ಮಹಾಜನಗಳು ಕಾಂಗ್ರೆಸ್ಸಿಗೆ ಸಂಪೂರ್ಣ ಸಹಕಾರ ನೀಡಿ, ಬರುವ ಚುನಾವಣೆಯಲ್ಲಿ ಎಲ್ಲ ಕಾಂಗ್ರೆಸ್ ಉಮೇದುವಾರರೂ ಆರಿಸಿ ಬರುವಂತೆ ಮಾಡಿ ಅವರಿಗೆ ಅಖಂಡ ವಿಜಯವನ್ನು ಗಳಿಸಿಕೊಡಬೇಕೆಂದು ಒತ್ತಾಯಪೂರ್ವಕ ಅರಿಕೆ ಮಾಡುತ್ತೇನೆ. ಮತ್ತು ಅವರಿಗೆ ಪೂರ್ಣ ಯಶಸ್ಸನ್ನು ಕೋರುತ್ತೇನೆ. ಧನ್ಯವಾದಗಳಾದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು.

The Champion METROPOLITAN College of Commerce,
Co-operators' Home
100' Ft Road Mysore

Fresh Admissions for Shorthand and Typewriting only are now being received. Students who commence now can appear for November 1950 Examinations by putting attendance for two terms

ಮಕ್ಕಳ ಅಭಿವರ್ಧನಕ್ಕಾಗಿ
[illegible]
ಅಪರ್‌ಹೌಸ್, ಮೈಸೂರು

Edited, printed and published by A R Nagarajan at Sadhvi Press D Subbiah Road, Mysore

ವಾರ ಭವಿಷ್ಯ

ತಾ॥ ೧೩-೧೧-೪೯ರಿಂದ ೨೦-೧೧-೪೯ರ ವರೆಗೆ

ಮೇಷ—ಈ ವಾರ ನಿಮ್ಮ ಆರೋಗ್ಯವು ನೆಟ್ಟಗಿರುವುದಾದರೂ ಮಕ್ಕಳು ಮರಿಗಳ ಆರೋಗ್ಯವು ಸಮರ್ಪಕವಾಗಿರುವುದಿಲ್ಲ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ವ್ಯಾಪಾರ, ಉದ್ಯೋಗಗಳಲ್ಲಿ ಯಶಸ್ಸು, ವಿಶೇಷ ಖರ್ಚಿನ ಸಂಭವವಿರುವುದಾದರೂ ಆರ್ಥಿಕ ಮುಗ್ಗಟ್ಟು ಉಂಟಾಗುವುದಿಲ್ಲ. ತಾ॥ ೧೬, ೧೭ ಸ್ವಲ್ಪ ದೇಹಾಲಸ್ಯ, ಖರ್ಚು.

ವೃಷಭ—ಸಾಂಸಾರಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಬಿಗಡಾಯಿಸುವ ಸಂಭವ. ವ್ಯಾಪಾರ ವ್ಯವಹಾರಗಳು ಲಾಭದಾಯಕವಲ್ಲ. ಮಕ್ಕಳು ಮರಿಗಳ ಅನಾರೋಗ್ಯದಿಂದ ಅಧಿಕ ಖರ್ಚು. ತಾ॥ ೧೪, ೧೫ ಅಪ್ರಿಯ ವಾರ್ತೆ.

ಮಿಥುನ—ಈ ವಾರದಲ್ಲಿ ನಿಮಗೆ ಎಲ್ಲ ವಿಧದಲ್ಲೂ ಯಶಸ್ಸು. ವ್ಯಾಪಾರ ವ್ಯವಹಾರಗಳಲ್ಲಿ ಧನಿಕರ ನೆರವು ದೊರೆಯುವುದು. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಲಭಿಸುವುದು. ತಾ॥ ೧೭, ೧೮ ಮಿತ್ರರಾಗಮನ, ಹಚ್ಚಿನ ಖರ್ಚು.

ಕಟಕ—ನಿಮ್ಮ ಆರೋಗ್ಯವು ಉತ್ತಮ. ಇದುವರೆಗೆ ನಿಮಗಿದ್ದ ಆರ್ಥಿಕ ಮುಗ್ಗಟ್ಟು ಮಾಯವಾಗುವುದು. ನೌಕರಿಯಲ್ಲಿ ಮೇಲಧಿಕಾರಿಗಳ ಸನ್ಮಾನ. ಪ್ರವಾಸ ಲಾಭ. ಶತ್ರುನಾಶ. ತಾ॥ ೧೪, ೧೭ ಆಪ್ತೇಷ್ಟರ ಭೇಟಿ.

ಸಿಂಹ—ನಿಮ್ಮ ಜೀವಿತದಲ್ಲಿ ಹಲವು ಎಡರುಗಳು ಸಂಭವಿಸಬಹುದು. ಶರೀರಕ್ಕೆ ಪೆಟ್ಟಾಗಿ ರಕ್ತ ಹರಿಯುವ ಸಂಭವವೂ ಉಂಟು. ವ್ಯಾಪಾರ ವ್ಯವಹಾರಗಳಲ್ಲಿ ಕಿರುಕುಳ. ತಾ॥ ೧೬, ೧೮ ಧನ ನಾಶ.

ಕನ್ಯಾ—ನಿಮ್ಮ ಗೃಹಕೃತ್ಯದಲ್ಲಿ ಅನೇಕ ತೊಡಕುಗಳನ್ನು ನೀವು ಎದುರಿಸಬೇಕಾಗುವುದು. ಪತ್ನಿ ಮತ್ತು ಮಿತ್ರರ ವಂಚಿತರಾಗುವಿರಿ. ಪ್ರಿಯ ವಸ್ತುವಿನ ಬಗ್ಗೆ ಎಚ್ಚರದಿಂದಿರಿ. ನೌಕರಿಯಲ್ಲಿ ಮೇಲಧಿಕಾರಿಗಳ ಆಗ್ರಹ. ತಾ॥ ೧೩, ೧೪, ... ಹಾನಿ, ಕಳುವಿನ ಸಂಭವ.

ತುಲಾ—ಆರೋಗ್ಯ ಉತ್ತಮ. ಮಕ್ಕಳುಮರಿಗಳ ಶುಭ ಮಂಗಳಕಾರ್ಯಗಳು ನಿಶ್ಚಿತವಾಗುವುವು. ವಿದ್ಯಾರ್ಥಿಗಳಿಗೆ ಯಶಸ್ಸು. ಕೋರ್ಟು ವ್ಯವಹಾರಗಳಲ್ಲಿ ಜಯ. ತಾ॥ ೧೬, ೧೭ ಖರ್ಚು.

ವೃಶ್ಚಿಕ—ಸರ್ವ ವಿಧದಲ್ಲೂ ಈ ವಾರವು ಯಶಸ್ಸಿನದಾಗಿದೆ. ಸಾಂಸಾರಿಕ ವ್ಯವಹಾರಗಳಲ್ಲಿ ಪತ್ನಿಯ ಸೌಹಾರ್ದಪೂರ್ಣ ಸಹಕಾರ. ವ್ಯಾಪಾರ ವ್ಯವಹಾರಗಳಲ್ಲಿ ಧನ ಲಾಭ. ತಾ॥ ೧೬, ೧೭ ಪ್ರವಾಸ; ಪತ್ನಿ ಲಾಭ.

ಧನು—ದೈವ ಸಹಾಯದಿಂದ ನಿಮ್ಮ ಎದುರಾಳಿಗಳು ಹತರಾಗುವರು. ಸಾರ್ವಜನಿಕ ಮತ್ತು ಸಮಾಜಸೇವಾಕಾರ್ಯಗಳಲ್ಲಿ ನಿರತರಾಗುವಿರಿ. ಧನಲಾಭ ಮತ್ತು ಅಧಿಕಾರ ಲಾಭವುಂಟು. ತಾ॥ ೧೪, ... ಶುಭ ವಾರ್ತೆ.

ಮಕರ—ನಿಮ್ಮ ಆರೋಗ್ಯವು ... ಮಟ್ಟಿಗೆ ಕೆಡುವ ಸಂಭವವುಂಟು. ಜೀವನದ ಎಲ್ಲ ಕ್ಷೇತ್ರಗಳಲ್ಲೂ ನೀವು ಎಚ್ಚರದಿಂದಿರಬೇಕು. ತಾ॥ ೧೩, ೧೪ ವ್ಯಾಪಾರದಲ್ಲಿ ತೊಡಕು, ಶಸ್ತ್ರಭಯ.

ಕುಂಭ—ಆರೋಗ್ಯ ಉತ್ತಮ, ... ತೃಪ್ತಿ. ಮೇಲಧಿಕಾರಿಗಳಿಂದ ... ಕುಳ. ಪತ್ನಿಗೆ ಕ್ಲೇಶ. ತಾ॥ ೧೭-೧೮ ... ಖರ್ಚು. ಅಪ್ರಿಯ ವಾರ್ತೆ.

ಮೀನ—ಈ ವಾರದಲ್ಲಿ ನಿಮಗೆ ಎಲ್ಲ ವಿಧದಲ್ಲೂ ಪ್ರೋತ್ಸಾಹ ದೊರೆಯುವುದು. ಪ್ರವಾಸ ಲಾಭ. ವಿದ್ಯಾರ್ಥಿ ಮತ್ತು ಕೀರ್ತಿವರ್ಗಕ್ಕೆ ಯಶಸ್ಸು. ವಿವಾಹ ಕಾರ್ಯಗಳು ನಿಶ್ಚಿತವಾಗುವುವು. ತಾ॥ ೧೪, ೧೫ ... ಮಹತ್ವ ಪತ್ರಾಗಮನ.

ರಾಜಕಮಲ್
ಮೈಸೂರು
ತಾ॥ 12-11-49 ರಿಂದ 2ನೇ ವಾರ
ದಿನವಹಿ 3 ಆಟಗಳು
ಭರಣಿಯವರ ಅಪ್ರತಿಮ ಪ್ರೇಮ...
ತೆಲುಗು ಚಿತ್ರ
ಲೈಲಾ ಮಜ್ನು
ಪಾತ್ರ:-ಭಾನುಮತಿ, ನಾಗೇಶ್ವರ ರಾವ್, ಲಲಿತಾ-ಪದ್ಮಿನಿ

Morning Shows For 4 days
From 11-11-49
Dark Command
With — Walter Pidgeon
John Wayne and
Roy Rogers

ರಂಜಿತ್ ಟಾಕೀಸ್
11—11—49 ರಿಂದ : ಪ್ರತಿ ದಿನ 3 ಪ್ರದರ್ಶನಗಳು
ಸಂಜೆ ೪, ರಾತ್ರಿ ೭ ... ೧೦ ಗಂಟೆಗೆ
ಭಾನುವಾರಗಳಲ್ಲಿ ಮಾತ್ರ ೪, ೭-೩೦, ೧೦ ಗಂಟೆಗೆ
ಎ. ಆರ್. ಕರ್ದಾರ್‌ರವರ ಚತುಷ್ಕಸ ನಾಕ್ಷಿತ್ರ
* ದಿಲ್ಲಗಿ *
ಪಾತ್ರ - ಸುರಯ್ಯ, ಶ್ಯಾಮ್
(ಹಿಂದಿ)
ಪ್ರವೇಶ ದರ ...

ರೇ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೧೪-೧೧-೪೯ [ಸಂಚಿಕೆ ೯೦

ನೆಹರೂ ಜಯಂತಿ

ಮೈಸೂರು ೧೪

ಈ ದಿನ ಬೆಳಗ್ಗೆ ಪಂಡಿತ ಜವಹರಲಾಲ್ ನೆಹರೂರವರ ಜಯಂತಿ ಪ್ರಯುಕ್ತ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಮಹಾರಾಜಾ ಕಾಲೇಜಿನಿಂದ ಸುಬ್ರಾಯನ ಕೆರೆಗೆ ಪ್ರಭಾತ ಫೇರಿ ನಡೆಸಿ ಅನಂತರ ಧ್ವಜಾರೋಹಣ ಸಮಾರಂಭವನ್ನು ಜರುಗಿಸಿದರು ಶ್ರೀ ಎಂ ಎ. ಜೋಯಿಸರು ಧ್ವಜವನ್ನು ಏರಿಸಿದರು ಶ್ರೀ ಎಸ್ ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ, ಎಂ ಎ ಜೋಯಿಸ್ ಮತ್ತು ಅಧ್ಯಕ್ಷರು ಭಾಷಣ ಮಾಡಿ ವಿದ್ಯಾರ್ಥಿಗಳು ನೆಹರೂರವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಆಚರಣೆಗೆ ತಂದು ತಾವೂ ದೇಶ ಸೇವೆ ಮಾಡಬೇಕೆಂದು ತಿಳಿಸಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ರಾಜಧಾನಿಯ ಪ್ರಭಾ ಕಲಾವಿದರ ಸಂಘದಲ್ಲಿ ಈ ದಿನ ಬೆಳಗ್ಗೆ ನೆಹರೂ ಜಯಂತಿಯನ್ನು ಆಚರಿಸಿ, ಭಗವಂತನು ಅವರಿಗೆ ದೀರ್ಘಾಯುರಾರೋಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸಲಾಯಿತು

ಅಂಚೆ ಕಾರ್ಡಿನಲ್ಲಿ ನೆಹರೂರವರ ಆತ್ಮ ಚರಿತ್ರೆ

ಬೊಂಬಾಯಿನ ಶ್ರೀ ಅನಂತ ಭಟ್ ಎಂಬ ಕಲಾವಿದರರು ಪಂಡಿತ ನೆಹರೂರವರ ಆತ್ಮ ಚರಿತ್ರೆಯನ್ನು ೨ ಲಕ್ಷ ಪದಗಳಲ್ಲಿ ಒಂದು ಅಂಚೆ ಕಾರ್ಡಿಗಿಂತಲೂ ಸ್ವಲ್ಪ ದೊಡ್ಡದಾದ ಕಾಗದದಲ್ಲಿ ಬರೆದಿರುತ್ತಾರೆ ಅದನ್ನು ಈ ದಿನ ಅವರು ನೆಹರೂರವರಿಗೆ ಅರ್ಪಿಸುವರು ೧೯೪೨ ರಲ್ಲಿ ಅವರು ೩೦ ಸಾವಿರ ಪದಗಳಲ್ಲಿ ಮಹಾತ್ಮರ ಜೀವನ ಚರಿತ್ರೆಯನ್ನು ಅಂಚೆ ಕಾರ್ಡಿನ ಒಂದು ಭಾಗದಲ್ಲಿ ಬರೆದಿದ್ದರು

ವಿಶ್ವದ ಮಕ್ಕಳ ಪ್ರದರ್ಶನ

ಮುಂದಿನ ವರ್ಷಾರಂಭದಲ್ಲಿ ವಿಶ್ವದ ಮಕ್ಕಳ ಪ್ರದರ್ಶನವನ್ನು ಏರ್ಪಡಿಸಬೇಕೆಂದು ಕಾನ್ಪುರದ ಮಕ್ಕಳ ಸಂಘದವರು ಭಾರತ ಸರ್ಕಾರದವರನ್ನು ಪ್ರಾರ್ಥಿಸಿರುತ್ತಾರೆ

○ ಈ ಸಂಜೆ ಐದೂವರೆ ಗಂಟೆಗೆ ಕಾಂಗ್ರೆಸ್ ಕಚೇರಿಯಿಂದ ಟೌನ್ ಹಾಲಿಗೆ ಮೆರವಣಿಗೆಯನ್ನೂ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನೂ ಏರ್ಪಡಿಸಲಾಗಿದೆ ಮಹಾಜನರೆಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ

ನೆಹರೂರವರು ಚಿರಾಯುವಾಗಲಿ !

" ನಿಮ್ಮ ವೀರ್ಯ, ಸತ್ವ ಮತ್ತು ತೇಜಸ್ಸು ಕುಂದದೇ ವರ್ಷೇ ವರ್ಷೇ ವೃದ್ಧಿಯಾಗಲಿ "

—ರಾಜಾಜಿ

ನಾಥೂರಾಂ ಗೋಡ್ಸೆಯ ಅಂತ್ಯಕ್ರಿಯೆಗಾಗಿ ಪ್ರಾರ್ಥನೆ

ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆಯ ಸಹೋದರನಾದ ದತ್ತಾತ್ರೇಯ ಗೋಡ್ಸೆಯು ಭಾರತ ಸರ್ಕಾರಕ್ಕೆ ಒಂದು ತಂತಿಯನ್ನು ಕಳುಹಿಸಿ, ನಾಥೂರಾಂ ಗೋಡ್ಸೆಯನ್ನು ಗಲ್ಲಿಗೇರಿಸಿದ ನಂತರ ಅತನ ಅಂತ್ಯ ಕ್ರಿಯೆಗಳನ್ನು ಮಾಡಲು ಜೈಲಿನಲ್ಲಿರುವ ಗೋಪಾಲ ಗೋಡ್ಸೆಯನ್ನು ೧೫ ದಿನಗಳ ಪೆರೋಲ್ ಮೇಲೆ ಬಿಡುಗಡೆ ಮಾಡಬೇಕೆಂದೂ ಮತ್ತು ಗೋಡ್ಸೆಯ ದೇಹವನ್ನು ಅತನ ಬಂಧು ವರ್ಗದವರಿಗೆ ಒಪ್ಪಿಸಬೇಕೆಂದೂ ಪ್ರಾರ್ಥಿಸಿದ್ದಾನೆ.

ಪಂದ್ಯದಲ್ಲಿ ಇಂದಿರಾ ಆನೆಗೆ ಜಯ

ಮೈಸೂರಿನಿಂದ ಜಪಾನಿಗೆ ಕಳುಹಿಸಲಾದ ಇಂದಿರಾ ಆನೆಗೂ ಮತ್ತು ೫೦ ಮಂದಿಗೂ ಕೆಲವು ದಿವಸಗಳ ಹಿಂದೆ ಟೋಕಿಯೋವಿನಲ್ಲಿ ಒಂದು ಟಗ್ ಆಫ್ ವಾರ್ ಪಂದ್ಯವನ್ನು ಏರ್ಪಡಿಸಲಾಗಿತ್ತು ಹಗ್ಗದ ಒಂದು ಕೊನೆಯನ್ನು ಹಿಡಿದಿದ್ದ ೫೦ ಮಂದಿಯನ್ನೂ ಆನೆಯು ಹಿಡಿದು ಸರಾಗವಾಗಿ ಎಳೆದು ಬಿಟ್ಟಿತು ಇನ್ನೊಂದಾವರ್ತಿ ೫೦ ಜನರೊಂದಿಗೆ ಮತ್ತೆ ೫೦ ಜನರನ್ನು ಸೇರಿಸಿ ಪಂದ್ಯ ನಡೆಸಿದಾಗ ಆನೆಯು ಸೋತು ಹೋಯಿತು

ಪಂಡಿತ ನೆಹರೂರವರ ಕಂಚಿನ ಪ್ರತಿಮೆ

ಲಂಡನ್ನಿನ ಪ್ರೈಡ್ ಎಂಬ ಪ್ರಸಿದ್ಧ ಶಿಲ್ಪ ಕಲಾವಿಪ್ರತಿಯು ಪಂಡಿತ ಜವಹರಲಾಲ್ ನೆಹರೂರವರ ಎರಡು ಕಂಚಿನ ವಿಗ್ರಹಗಳನ್ನು ತಯಾರಿಸಿ ಒಂದನ್ನು ಭಾರತಕ್ಕೂ ಮತ್ತೊಂದನ್ನು ಲಂಡನ್ನಿನ ಇಂಡಿಯಾ ಹೌಸಿಗೂ ಕೊಡಲಿರುವನೆಂದು ವರದಿಯಾಗಿದೆ

ಸಕ್ಕರೆ ಕಾರ್ಖಾನೆ ಕೆಲಸಗಾರರ ರಜಾ

ಮಂಡ್ಯ ಸಕ್ಕರೆ ಕಾರ್ಖಾನೆಗೆ ಸೇರಿದ [illegible], ಬಸವನಪಾಡಿ, [illegible] ಕೊಡಿಶೆಟ್ಟಿ, ಮಲ್ಲಿಗೆರೆ [illegible] ನ ಫಾರಂಗಳ ಕೆಲಸಗಾರರ [illegible] ಜನರನ್ನು ಕೆಲಸದಿಂದ ರಜಾ ಮಾಡಲಾಗಿದೆ [illegible] ಕೇಂದ್ರದ ಕೆಲಸಗಾರರನ್ನು [illegible] ಎತ್ತಿಯೋ ಬಿಟ್ಟರೆಂದು ಹೇಳಲಾಗಿದೆ ಕಂಪೆನಿಯ [illegible] ಅಧಿಕಾರಿಗಳಾದ ಶ್ರೀ [illegible] ಗುಮಾಸ್ತರನ್ನಾಗಿ [illegible]

ಬಿ ಎಸ್ ರಾಘವೇಂದ್ರರಾಯರಿಗೆ ನೂತನ ಹುದ್ದೆ

[illegible] ಸಂಸ್ಥಾನದ [illegible] ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ [illegible] [illegible]

ಜಿಲ್ಲಾ ಬೋರ್ಡು ಸಭೆ

ಇದೇ ೨೧ನೇ ತಾ॥ ಬುಧವಾರ ಮಧ್ಯಾಹ್ನ ೧ ಗಂಟೆಗೆ ಮೈಸೂರು ಜಿಲ್ಲಾ ಬೋರ್ಡು ಸಭೆಯು ನಡೆಯುವುದು.

ಮುಖ್ಯ ಮಂತ್ರಿಗಳಿಂದ ಆಕ್ಷಿಡಿಸ್ಪೋಗಳ ಪರಿಶೀಲನೆ

ಮೈಸೂರು ೧೪

ಮೈಸೂರು ನಗರದಲ್ಲಿ ಇದೇ ತಿಂಗಳು ೧೩ ನೇ ತಾರೀಖು ಭಾನುವಾರ ನಡೆದ ಬಹಿರಂಗ ಸಭೆಯೊಂದರಲ್ಲಿ ಮಾನ್ಯ ಮುಖ್ಯಮಂತ್ರಿಗಳವರಿಗೆ ನಗರದ ನಿವಾಸಿಗಳೊಬ್ಬರು ತೀರಾ ಕೆಟ್ಟುಹೋಗಿರುವ ಅಕ್ಕಿಯ ನಮೂನೆಯನ್ನು ತಂದು ತೋರಿಸಿ ಅಂಥ ಅಕ್ಕಿಯನ್ನು ನಗರದ ರೇಷನ್ ಡಿಪೋಗಳಲ್ಲಿ ಮಾರಲಾಗುತ್ತಿದೆಯೆಂದು ತಿಳಿಸಿದರು ಮಾನ್ಯ ಮುಖ್ಯ ಮಂತ್ರಿಗಳು ಯಾವ ಡಿಪೋವಿನಲ್ಲಿ ಈರೀತಿ ಕೆಟ್ಟುಹೋದ ಅಕ್ಕಿಯು ಮಾರಾಟವಾಗುತ್ತಿದೆಯೆಂದು ತಿಳಿಸಲಾಯಿತೋ ಆ ಡಿಪೋವಿಗೂ ಇತರ ಕೆಲವು ಡಿಪೋಗಳಿಗೂ ಭೇಟಿಯಿತ್ತು ತಮಗೆ ಬಂದ ದೂರನ್ನು ಪರಿಶೀಲಿಸಿದರು ಪರಿಶೀಲನೆಯಿಂದ ಯಾವ ಡಿಪೋವಿನಲ್ಲಿಯೂ ಕೆಟ್ಟುಹೋದ ಅಕ್ಕಿಯ ಮಾರಾಟವಾಗುತ್ತಿಲ್ಲವೆಂಬ ಅಂಶವು [illegible] ನಗರದಲ್ಲಿ ಸಿವಿಲ್ ಸಪ್ಲೈನಿಂದ ಬಂದಿರುವ ದಸ್ತುಕ್ಷಿಯನ್ನೂ ಪರಿಶೀಲಿಸಿ [illegible] ಮಾರಾಟ ಮಾಡಲಾಗುತ್ತಿದೆ [illegible] ಯಾವ [illegible] ಪ್ರಧಾನ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ. ನರಸಿಂಹಮೂರ್ತಿಯವರು ತಿಳಿಸುತ್ತಾರೆ

ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮನ್ಯ ದಸ್ತಾನುಗಳ ಔಷಧಾಲಯದ ಬಳಿ ಈ ರಾತ್ರಿ ೮ ಗಂಟೆಗೆ ಶ್ರೀ ವೆಂಕಟಸುಬ್ಬದಾಸರವರಿಂದ ಭಕ್ತ ಕನಕದಾಸ ಎಂಬ ಹರಿಕಥೆ ನಡೆಯುವುದು

ಭಾವಚಿತ್ರ ಅನಾವರಣ

ವಿದ್ಯಾಲಯವಾದ ಶೇಷಾದ್ರಿಪುರಂ [illegible] ನಿನ್ನೆ ದಿನ ಶ್ರೀ ಎಂ. [illegible] ಮಹಾತ್ಮಾಗಾಂಧಿಯವರ ಭಾವಚಿತ್ರದ ಅನಾವರಣ ಮಾಡಿದರು. ವಿದ್ಯಾರ್ಥಿಗಳು [illegible] [illegible] [illegible] [illegible] ಬೇಕೆಂದು [illegible] [illegible] [illegible] ಭರವಸೆ [illegible]

ಯಕ್ಷಗಾನ

[illegible] ಕೀರ್ತನಕಾರರುಂಡಲಿ [illegible] ಯಕ್ಷಗಾನ [illegible] [illegible] ಡೆಯುವುದು.

ಸರ್ದಾರ್ ಪಟೇಲರ ರೇಡಿಯೋ ಭಾಷಣ

[illegible] ಭಾರತ [illegible] [illegible]

ಮೆಣಸಿನಕಾಯಿ ರಫ್ತನ್ನು ನಿಲ್ಲಿಸಬೇಕು

ಮೆಣಸಿನ ಕಾಯಿಯ ಸುಗ್ಗಿಯು ಪ್ರಾರಂಭವಾಗಿ ಸುಮಾರು ಎಂಟು ತಿಂಗಳಾಯಿತು ಈ ಸಾರಿ ಮೈಸೂರಿನಲ್ಲಿ ಇದರ ಬೆಳೆಯು ಬಹಳ ಚೆನ್ನಾಗಿರುವುದರಿಂದ ಬೆಲೆ ೩೦ ರಾತ್ಲುಗಳ ಮಣ ೧೩ಕ್ಕೆ ೧೦ ರೂ ನಿಂದ ೧೫ ರೂ ಗಳವರೆಗೆ ಇರಬೇಕಾಗಿತ್ತು ಮೊದಮೊದಲು ಹಾಗೆಯೇ ಇತ್ತು! ಆದರೆ ಮದರಾಸಿನಲ್ಲಿ ಬೆಳೆಯು ಸಾಕಾದಷ್ಟು ಆಗದೇ ಹೋದದ್ದರಿಂದ, ಅಲ್ಲಿನ ವರ್ತಕರು ಮೈಸೂರು, ಬೆಂಗಳೂರು ಮತ್ತು ದಾವಣಗೆರೆಗಳಲ್ಲಿ ಮೆಣಸಿನ ಕಾಯಿಯ ಬೆಲೆಯನ್ನು ಒಂದಕ್ಕೆ ಎರಡು ಎರಡೂವರೆಯಷ್ಟು ಹೆಚ್ಚಿಸಿ, ಈಗಾಗಲೇ ರೈಲು ಮತ್ತು ಲಾರಿಗಳಲ್ಲಿ ಲಕ್ಷಾಂತರ ಮೂಟೆಗಳನ್ನು ಸಾಗಿಸಿಬಿಟ್ಟಿರುತ್ತಾರೆ ಇದೇ ಸಮಯವೆಂದು ಅನೇಕ ಕಾಳ ಸಂತೆಯ ವರ್ತಕರು ಮತ್ತು ದಲ್ಲಾಳಿಗಳು ತಮ್ಮ ಸ್ವಪ್ರಯೋಜನವನ್ನೇ ಮುಖ್ಯವೆಂದು ಭಾವಿಸಿ, ಹಳ್ಳಿಗಳಲ್ಲಿರುವ ಮೆಣಸಿನಕಾಯಿಯನ್ನೆಲ್ಲಾ ಒಟ್ಟೊಟ್ಟಾಗಿ ಹೆಚ್ಚಿನ ಬೆಲೆಗೆ ಕೊಂಡು ಹೊರಗಿನ ಕಾಳಸಂತೆಯ ವ್ಯಾಪಾರಸ್ಥರಿಗೆ ಮಾರಾಟ ಮಾಡುತ್ತಿರುವುದರಿಂದ ಮೆಣಸಿನ ಕಾಯಿಯ ಬೆಲೆಯು ಮಣ ೧೩ಕ್ಕೆ ೩೦ ರಿಂದ ೩೫ ರೂ ಗಳವರೆಗೆ ಏರಿಹೋಗಿದೆ ಇನ್ನೂ ಏರುತ್ತಲೇ ಇದೆ! ನಮ್ಮ ದೇಶಕ್ಕೆ ಸಾಕಾಗುವಷ್ಟು ಸರಕನ್ನು ಇಟ್ಟುಕೊಂಡು ಹೆಚ್ಚಿಗೆ ಇರುವುದನ್ನು ಮಾತ್ರ ಒಂದು ಕ್ಲುಪ್ತವಾದ ಬೆಲೆಗೆ ಮಾರಿದ್ದರೆ ನಮ್ಮ ದೇಶಕ್ಕೂ, ಹೊರಗಿನವರಿಗೂ ಪ್ರಯೋಜನವಾಗುತ್ತಿತ್ತು ಇದು ಹೀಗೆಯೇ ಮುಂದುವರಿದರೆ, ಇದನ್ನು ಪ್ರತಿನಿತ್ಯ ಉಪಯೋಗಿಸುವ ಬಡ ಜನರ ಗತಿಯೇನು? ಸರಕಾರದವರು ಇದರ ಕಡೆಗೆ ಸ್ವಲ್ಪವೂ ಗಮನ ಕೊಡದಿರುವುದು ಆಶ್ಚರ್ಯಕರವಾಗುತ್ತದೆ ಈಗಲಾದರೂ ಸರಕಾರದವರು ರೈಲು ಮತ್ತು ಲಾರಿಗಳಲ್ಲಿ ಮೆಣಸಿನಕಾಯಿಯನ್ನು ಸಾಗಿಸದಂತೆ ಪ್ರತಿಬಂಧಕ ಹಾಕಿ, ಒಂದು ಕ್ಲುಪ್ತವಾದ ಬೆಲೆಗೆ ಮಾರಾಟವಾಗುವಂತೆ ಏರ್ಪಾಡು ಮಾಡಬೇಕು-ಎಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ತಿಳಿಸಿರುತ್ತಾರೆ

ನಾಜಿ ತತ್ವದ ಪುನರುದ್ಧಾರ

ಪಶ್ಚಿಮ ಜರ್ಮನಿಯಲ್ಲಿ ನಾಜಿಗಳ ಪಕ್ಷ, ನಾಜಿ ತತ್ವದ ಬಗ್ಗೆ ಯುವಕರ ನವೀನ ನೀತಿಯು ಬಹಳ ಹುಟ್ಟಿಗೆ ಬೆಳೆಯುತ್ತಿದೆಯೆಂದು ವರದಿಯಾಗಿದೆ ನಾಜಿ ತತ್ವದ ಪುನರುದ್ಧಾರಕ್ಕಾಗಿ [illegible] ಗುಪ್ತ ಪಡೆಯು [illegible] ಕೆಲಸ ಮಾಡುತ್ತಿದೆಯೆಂದೂ, ಅವರು ಜರ್ಮನಿಯ [illegible] ನೋಟುಗಳ ಮೇಲೆ ಸ್ವಾಸ್ತಿಕ ಚಿಹ್ನೆಯನ್ನು ಮುದ್ರಿಸುತ್ತಿರುವರೆಂದು ಹೇಳಲಾಗಿದೆ ಈ ಗುಪ್ತಪಡೆಯವರನ್ನು ಪತ್ತೆ ಹಚ್ಚಲು ಜರ್ಮನಿಯ [illegible] [illegible] ಬ್ರಿಟಿಷ್ ಪೋಲೀಸ್ ಅಧಿಕಾರಿಗಳು ಶ್ರಮಿಸುತ್ತಿರುವರು

ಸಾದೆ ಬೆಲೆಯನ್ನು ಏರಿಸಕೂಡದು

ಪೌರಸಭೆಯವರು ಅನೇಕ ದಿನಗಳಿಂದ ರಾಜಧಾನಿಯ ಜನರಿಗೆ ಸಾದೆಯನ್ನು ಆದಷ್ಟು ಅಗ್ಗವಾಗಿ ಕೊಡಿಸಬೇಕೆಂದು ಪ್ರಯತ್ನಿಸಿ ಅದರಂತೆ ಮಾಡುತ್ತಿರುವುದು ಶ್ಲಾಘನೀಯವೇ ಸರಿ. ಆದರೆ ಈಚೆಗೆ ತಿಳಿದು ಬಂದಿರುವುದರಲ್ಲಿ ಕೆಲವು ಸಾದೆ ವ್ಯಾಪಾರಿಗಳು ಹೇಗಾದರೂ ಮಾಡಿ ಒಂದು ರೂಪಾಯಿಗೆ ಮೂರೂವರೆ ಮಣದಂತೆ ಮಾರಬೇಕೆಂದು ತರಲೆ ಮಾಡುತ್ತಿರುವುದಾಗಿ ತಿಳಿದುಬಂದಿದೆ ಅವರಿಗೆ ಹೇರಳವಾದ ಲಾಭ ಬರುತ್ತಿದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಕೆಲವರು ಈಚೆಗೆ ಲುಕ್ಸಾನು ಆಗುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ ಇದನ್ನು ನಂಬುವುದು ಕಷ್ಟ ಇದನ್ನು ಪರೀಕ್ಷಿಸಬೇಕಾದರೆ ಲುಕ್ಸಾನು ಆಗುತ್ತೆಂದು ಹೇಳುವ ವ್ಯಾಪಾರಿಗಳನ್ನು ತೆಗೆದುಹಾಕಿ ಅವರ ತೊಂದರೆಯನ್ನು ತಪ್ಪಿಸಿ ಹೊಸವ್ಯಾಪಾರಿಗಳಿಗೆ ಅವಕಾಶ ಕೊಟ್ಟರೆ ಉಭಯ ಪಕ್ಷಗಳಿಗೂ ಅನುಕೂಲ ಆದ್ದರಿಂದ ಪೌರಸಭೆಯವರು ಒಡನೆಯೇ ಗಮನಕೊಟ್ಟು ಸಾದೆ ಬೆಲೆ ಏರಿಸಲು ಅವಕಾಶಕೊಡಬಾರದೆಂದೂ ಇದಲ್ಲದೆ ಸಾದೆ ವ್ಯಾಪಾರಿಗಳು ಹೆಚ್ಚು ಬೆಲೆಗೆ ಮಾರುವುದನ್ನು ಕಾನೂನು ಮೂಲಕ ತಪ್ಪಿಸಿ ಸಹಾಯ ಮಾಡಬೇಕೆಂದೂ ಶ್ರೀ ಬಿ. ಎಸ್. ಸುಬ್ಬರಾಯರು ಪ್ರಾರ್ಥಿಸಿರುತ್ತಾರೆ

ಬಿರುಗಾಳಿಯಿಂದ ೮೦೧ ಜನರ ಮರಣ

ಇತ್ತೀಚೆಗೆ ಉಂಟಾದ ಪ್ರಚಂಡ ಬಿರುಗಾಳಿಯಿಂದ ಮದರಾಸ್ ಪ್ರಾಂತದಲ್ಲಿ ೮೦೧ ಮಂದಿ ಮಡಿದು, ಸಾವಿರಾರು ಮಂದಿಗೆ ಗಾಯಗಳಾಗಿವೆಯೆಂದೂ, ಸುಮಾರು ೬ ಲಕ್ಷ ಎಕರೆ ಜಮೀನಿನಲ್ಲಿ ಫಸಲು ನಷ್ಟ ಸಂಭವಿಸಿದೆಯೆಂದೂ ವರದಿ ಮಾಡಲಾಗಿದೆ ಕೃಷ್ಣಜಿಲ್ಲೆಯಲ್ಲೇ ವಿಪರೀತ ನಷ್ಟ ಉಂಟಾಗಿದೆ

ಚುಂಗ್‌ಕಿಂಗಿನಲ್ಲಿ ಪ್ರಬಲ ಕದನದ ನಿರೀಕ್ಷಣೆ

ಚೀನಾ ರಿಪಬ್ಲಿಕ್ ಸರ್ಕಾರದ ಕೇಂದ್ರವಾದ ಚುಂಗ್‌ಕಿಂಗಿಗೆ ದಕ್ಷಿಣದಲ್ಲಿ ೧೪ ಮೈಲಿವರೆಗೆ ಕಮ್ಯೂನಿಸ್ಟ್ ಪಡೆಗಳು ಬಂದಿವೆಯೆಂದು ವರದಿಯಾಗಿದೆ. ಆ ಪ್ರದೇಶಕ್ಕೆ ಹೆಚ್ಚಿನ ಸರ್ಕಾರಿ ಪಡೆಗಳನ್ನು ಕಳುಹಿಸಲಾಗಿದೆ ಅಲ್ಲಿ ಪ್ರಬಲವಾದ ಕದನ ನಡೆಯುವ ನಿರೀಕ್ಷಣೆ ಇದೆ

ಧನ್ವಂತರಿ ಜಯಂತಿ

ನಂಜನಗೂಡು. ಶ್ರೀ ಬಿ. ವಿ. ಪಂಡಿತರ [illegible]ದಲ್ಲಿ ಇದೇ [illegible] ತಾ॥ ಶುಕ್ರವಾರ ಸಂಜೆ [illegible] ಗಂಟೆಗೆ ಶ್ರೀ ಧನ್ವಂತರಿ ಜಯಂತಿಯು ನಡೆಯುವುದು ಶ್ರೀ [illegible] ಶಾಸ್ತ್ರಿಗಳವರ ಭಾಷಣವನ್ನು [illegible] ಸುಬ್ರಹ್ಮಣ್ಯಯ್ಯರವರ ಸಂಗೀತವು ಜರುಗುವುದು

ಹಳ್ಳಿಗಾಡಿನಲ್ಲಿ ಸ್ಕೌಟ್ ಚಳುವಳಿ ಹರಡಬೇಕು

ವಾರ್ಷಿಕ ಸಭೆಯಲ್ಲಿ ಸಚಿವರ ಭಾಷಣ

ಮೈಸೂರು ೧೪

ಸಂಸ್ಥಾನದ ಸ್ಕೌಟ್ ಕೌನ್ಸಿಲ್ಲಿನ [illegible]ನೇ ವಾರ್ಷಿಕ ಸಭೆಯು ನಿನ್ನೆ ಮಧ್ಯಾಹ್ನ ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ [illegible]ದ್ಯಾ ಸಚಿವ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಚೀಫ್ ಸ್ಕೌಟ್ ಕಮೀಷನರಾದ ಶ್ರೀ ಶಿವಶಂಕರ್‌ರವರಿಂದ ಸ್ವಾಗತ ಭಾಷಣವಾದನಂತರ, ಕಾರ್ಯದರ್ಶಿಗಳು ವಾರ್ಷಿಕ ವರದಿಯನ್ನು ಒಪ್ಪಿಸಿದರು. ಚೀಫ್ ಸ್ಕೌಟ್ ಕಮೀಷನರಾಗಿದ್ದ ಮೇಜರ್ ಪಿ.ಕೆ ಮೂರ್ತಿಯವರ ನಿಧನದ ಬಗ್ಗೆ [illegible] ತಾಪ ಸೂಚಿಸುವ ನಿರ್ಣಯವನ್ನು ಮಾಡಲಾಯಿತು

ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಆರ್. ಕಸ್ತೂರಿರಂಗ ಚೆಟ್ಟಿಯವರಿಗೆ ಗಂಡಭೇರುಂಡದ ಹಾರ, ಮೈಸೂರು ಪ್ರಧಾನ ಅಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯ, ಶ್ರೀ ಪಿ. ಸೀತಾರಾಮಯ್ಯ, ಡಾ॥ ಎಂ. ವಿ. ಗೋಪಾಲಸ್ವಾಮಿ ಮುಂತಾದ ೧೩ ಮಹನೀಯರುಗಳಿಗೆ ಸ್ಕೌಟ್ ಸೇವಾಪದಕಗಳನ್ನು ಸಚಿವರು ವಿನಿಯೋಗಿಸಿದರು. ಅನಂತರ ಅವರು ಭಾಷಣ ಮಾಡಿ, ಸ್ಕೌಟ್ ಚಳುವಳಿಯ ಧ್ಯೇಯ ಮತ್ತು ತತ್ವಗಳನ್ನು ತಿಳಿಸಿ, ಇಂತಹ ಜಾತಿ ಭೇದವಿಲ್ಲದ ಮತ್ತು ರಾಜಕೀಯ ರಹಿತವಾದ ಸಂಸ್ಥೆಯಿಂದ ದೇಶಕ್ಕೆ ಹೆಚ್ಚು ಉಪಯೋಗವಾಗುತ್ತಿದೆಯೆಂದು ಹೇಳಿದರು ಈಗಿನ ನೂತನ ಪರಿಸ್ಥಿತಿಯಲ್ಲಿ ಸ್ಕೌಟ್ ಚಳುವಳಿಯನ್ನು ಯಾವ ರೀತಿ ಹೆಚ್ಚಿನ ಉಪಯೋಗಿಸಿಕೊಳ್ಳಬೇಕೆಂಬುದನ್ನು ಪರಿಶೀಲಿಸಲು ಸರ್ಕಾರದವರು ಸಮಿತಿಯನ್ನು ನೇಮಿಸಿದ್ದಾರೆ [illegible]ದ ಅಧ್ಯಕ್ಷರು ಸಚಿವರಾಗಿರದೆ, ಚಳುವಳಿಯಲ್ಲಿ ವಿಶೇಷ ಅನುಭವವುಳ್ಳವರೊಬ್ಬರು ಅಧ್ಯಕ್ಷರಾದರೆ ಹೆಚ್ಚು ಕೆಲಸ ಮಾಡಲು ಅವಕಾಶವಾಗುವುದು ಸರ್ಕಾರದವರು [illegible]ಚ್ಚು ಹಣ ಕೊಡಲು ಸಾಧ್ಯವಿಲ್ಲವಾದ್ದರಿಂದ ಸಂಸ್ಥೆಯವರು ಹಣ ಶೇಖರಣೆ ಬಗ್ಗೆ [illegible] ಪ್ರಯತ್ನ ಪಡಬೇಕು ಹಳ್ಳಿಗಾಡಿನಲ್ಲಿ ಸ್ಕೌಟ್ ಚಳುವಳಿಯು ವಿಶೇಷವಾಗಿ ಹರಡಬೇಕು ಎಂದು ಸಚಿವರು ಹೇಳಿದರು

ಸಂಜೆ ೬ ಗಂಟೆಗೆ ಮಹಾರಾಜಾ [illegible] ಕಾಲೇಜಿನ ಒಳಾಂಗಣದಲ್ಲಿ ಸ್ಕೌಟುಗಳ ಶಿಬಿರಾಗ್ನಿ ನಡೆಯಿತು

ನಾಯಿ ಕೆಮ್ಮಿಗೆ ಔಷಧಿ

Whooping Cough Remed[y]

ಗೂರಲು ಉಬ್ಬಸ, ಹರಿಣಾಮೂರ್ಛೆ ಮತ್ತು ಗಲಗ್ರಂಥಿಗೆ (Tonsil) [illegible]ಯಾದ ಔಷಧಿ ದೊರೆಯುತ್ತದೆ [illegible] ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಮೆಡಲುಗಳನ್ನು [illegible]ಟ್ಟಿರುತ್ತಾರೆ

ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲೆ
ದಿವಾನರ ರಸ್ತೆ, ಮೈಸೂರು

ಆರಾಮ ಕುರ್ಚಿಯ ಕ್ಯಾನ್‌ವಾಸ್ ಬಟ್ಟೆ ಮತ್ತು ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟ್
ಒಳ್ಳೆ ನಮೂನೆಯಲ್ಲಿ ಬಂದಿವೆ
ಬಾಮ್‌ಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

Edited, printed and pu[b]lished by A R. Nagaraja[n] at Sadhvi Press, D. Subb[ai]ah Road, Mysore.

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮| ಮಂಗಳವಾರ ೧೫-೧೧-೪೯ [ಸಂಚಿಕೆ ೯೧

ಗೋಡ್ಸೆ ಮೃತ ದೇಹ ಕೊಡಲು ನಿರಾಕರಣೆ

ನೆಹರೂರವರಿಗೆ ರತ್ನ ಖಚಿತ ಸ್ತಂಭದ ಅರ್ಪಣೆ

ಬೊಂಬಾಯಿ ನಿವಾಸಿಗಳ ಕಾಣಿಕೆ

ಅಮೆರಿಕದ ಪ್ರವಾಸವನ್ನು ಮುಗಿಸಿಕೊಂಡು ಪಂಡಿತ ನೆಹರೂರವರು ನಿನ್ನೆ ಮಧ್ಯಾಹ್ನ ೪-೩೦ ಗಂಟೆಗೆ ಲಂಡನ್ನಿನಿಂದ ಬೊಂಬಾಯಿಗೆ ಆಗಮಿಸಿದರು. ಅಸಂಖ್ಯಾತ ಜನರು ಅವರಿಗೆ ವಿಮಾನ ನಿಲ್ದಾಣದಲ್ಲಿ ಸ್ವಾಗತ ಬಯಸಿದರು.

ನೆಹರೂರವರ ವರ್ಧಂತಿ ಉತ್ಸವವು ಅತಿ ವೈಭವದಿಂದ ಬೊಂಬಾಯಿನಲ್ಲಿ ನಿನ್ನೆ ಜರುಗಿತು ಸಂಜೆ ಶಿವಾಜಿ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ನೆಹರೂರವರಿಗೆ ಬೊಂಬಾಯಿನ ಜನರ ಪರವಾಗಿ, ಮೇಯರಾದ ಶ್ರೀ ಎಸ್. ಕೆ. ಪಾಟೀಲ್‌ರವರು ರತ್ನ ಖಚಿತವಾದ ಬಂಗಾರದ ಅಶೋಕ ಸ್ತಂಭವನ್ನು ಅರ್ಪಿಸಿದರು. ಇದು ೧೩॥ ಅಂಗುಲ ಎತ್ತರವಿದ್ದು, ೩೩॥ ತೊಲ ಚಿನ್ನ ಮತ್ತು ೧೩॥ ತೊಲ ಪ್ಲಾಟಿನಂ ಲೋಹಗಳಿಂದ ತಯಾರಿಸಲ್ಪಟ್ಟಿದೆ ಅಶೋಕ ಚಕ್ರವು ವಜ್ರದಿಂದ ಕೆತ್ತಲ್ಪಟ್ಟು, ಮಧ್ಯದ ಹರಳು ೧೦-೬೪ ಕ್ಯಾರೆಟ್ ತೂಕವಿದೆ ಒಟ್ಟು ೩೦೭ ಸಣ್ಣ ವಜ್ರಗಳು ಅದರಲ್ಲಿ ಇವೆ ಅದಕ್ಕೆ ಒಟ್ಟು ೬೦ ಸಾವಿರ ರೂ ಖರ್ಚಾಗಿದೆಯೆಂದು ಹೇಳಲಾಗಿದೆ

ಪಂಡಿತ ನೆಹರೂರವರು ಭಾಷಣ ಮಾಡಿ, ತಮ್ಮ ವಿದೇಶಿ ಪ್ರವಾಸದ ವಿವರವನ್ನು ತಿಳಿಸಿ, ಈಗ ಜಗತ್ತಿನಲ್ಲಿ ಯುದ್ಧದ ಭಯ ಕಡಿಮೆಯಾಗಿದೆಯೆಂದೂ, ಅನೇಕ ರಾಷ್ಟ್ರಗಳಲ್ಲಿ ಶಾಂತಿ ಮನೋಭಾವ ಕಂಡುಬರುತ್ತಿದೆಯೆಂದೂ ಹೇಳಿದರು ಭಾರತವನ್ನು ಜಗತ್ತು ಆಕರ್ಷಿಸುತ್ತಿರುವುದಕ್ಕೆ ಮಹಾತ್ಮರ ಬೋಧನೆಗಳೇ ಕಾರಣವೆಂದೂ, ಅವುಗಳನ್ನು ಪಾಶ್ಚಿಮಾತ್ಯರ ಅನುಷ್ಠಾನಕ್ಕೆ ತರುವುದರಿಂದ ಘರ್ಷಣೆಗಳು ನಿಲ್ಲಬಹುದೆಂದು ಅಭಿಸಿದ್ದಾರೆಂದೂ ಅವರು ತಿಳಿಸಿದರು

ರಷ್ಯದ ಸ್ಟಾಲಿನ್, ಬ್ರಿಟನ್, ಅಮೆರಿಕ, ಐರ್ಲೆಂಡ್, ಇಂಡೋನೇಷ್ಯ ಮುಂತಾದ ರಾಷ್ಟ್ರಗಳ ನಾಯಕರುಗಳು ನೆಹರೂರವರಿಗೆ ಶುಭಾಶಯಗಳನ್ನು ಕಳುಹಿಸಿರುತ್ತಾರೆ.

ಆಹಾರ ಉತ್ಪತ್ತಿ ಹೆಚ್ಚಿಸುವ ಯೋಜನೆ

ಅಂತರ ರಾಷ್ಟ್ರೀಯ ಬ್ಯಾಂಕಿನವರು ಭಾರತಕ್ಕೆ ಇತ್ತೀಚೆಗೆ ಮಂಜೂರು ಮಾಡಿರುವ ೧೦೦ ಲಕ್ಷ ಡಾಲರುಗಳ ಸಹಾಯದಿಂದ ದೇಶದಲ್ಲಿ ಪ್ರತಿ ವರ್ಷವೂ ೧೦ ಲಕ್ಷ ಟನ್ ಆಹಾರ ಧಾನ್ಯವು ಹೆಚ್ಚಾಗಿ ಉತ್ಪತ್ತಿಯಾಗುವುದೆಂದು ಗೊತ್ತಾಗಿದೆ ಬರುವ ೭ ವರ್ಷಗಳಲ್ಲಿ ೩೦ ಲಕ್ಷ ಎಕರೆ ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾಗುವಂತೆ ಮಾಡಲಾಗುವುದೆಂದೂ, ೩೭೫ ಟ್ರಾಕ್ಟರುಗಳನ್ನು ಮುಂದಿನ ವರ್ಷದಿಂದ ಉಪಯೋಗಿಸಲಾಗುವುದೆಂದೂ ಇವುಗಳಿಂದ [illegible] ಒಳಗಾಗಿ ಆಹಾರ ಉತ್ಪತ್ತಿಯು ಹೆಚ್ಚುವುದೆಂದೂ ನಿರೀಕ್ಷಿಸಲಾಗಿದೆ

ಸಿದ್ಧ ಮಾಡಿದ ಮನೆಗಳ ಶಿಕ್ಷಣ ಶಾಲೆ

ಸಿದ್ಧ ಮಾಡಿದ ಮನೆಗಳನ್ನು ತಯಾರಿಸುವ ಶಿಕ್ಷಣವನ್ನು ಭಾರತೀಯರಿಗೆ ಕೊಡುವ ಬಗ್ಗೆ ದೆಹಲಿಯಲ್ಲಿ ಒಂದು ಶಾಲೆಯು ಸ್ಥಾಪಿತವಾಗುವುದು. ಅಲ್ಲಿ ಶಿಕ್ಷಣ ಕೊಡಲು ಬ್ರಿಟನ್ನಿನ ೨೦ ಜನ ಪ್ರವೀಣ [illegible]

ಗೋಡ್ಸೆಯ ಮೃತ ದೇಹ ಕೊಡಲು ನಿರಾಕರಣೆ

ಮಹಾತ್ಮರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆ ಮತ್ತು ಆಪ್ಟೆಯ ಮೃತ ದೇಹಗಳನ್ನು ಅವರ ಬಂಧು ವರ್ಗದವರಿಗೆ ಕೊಡಬೇಕೆಂದೂ ಮತ್ತು ಗೋಡ್ಸೆಯ ಅಂತ್ಯ ಕ್ರಿಯೆಗಳನ್ನು ನಡೆಸಲು ಗೋಪಾಲ ಗೋಡ್ಸೆಯನ್ನು ಪೆರೋಲ್ ಮೇಲೆ ಬಿಡಬೇಕೆಂದೂ ಮಾಡಿದ್ದ ಪ್ರಾರ್ಥನೆಯನ್ನು ಭಾರತ ಸರ್ಕಾರವು ತಿರಸ್ಕರಿಸಿದೆ

ಗಲ್ಲಿಗೇರಿಸುವುದನ್ನು ತಡೆಯಬೇಕೆಂದು ಸಲ್ಲಿಸಿದ್ದ ಗೋಡ್ಸೆ ಮತ್ತು ಆಪ್ಟೆಯವರ ಅರ್ಜಿಯನ್ನು ಪೂರ್ವ ಪಂಜಾಬ್ ಹೈಕೋರ್ಟಿನವರು ನಿರಾಕರಿಸಿದ್ದಾರೆ ಅವರಿಬ್ಬರೂ ನಿನ್ನೆ ದಿನ ೪ ಗಂಟೆಗಳ ಕಾಲ ತಮ್ಮ ಬಂಧು ವರ್ಗದವರೊಡನೆ ಮಾತನಾಡಿದರು ತಮ್ಮ ಬೂದಿಯನ್ನು ಸಿಂಧು ನದಿಯಲ್ಲಿ ಕದಡಬೇಕೆಂದು ಅವರಿಬ್ಬರೂ ತಮ್ಮ ಬಂಧುವರ್ಗದವರಿಗೆ ತಿಳಿಸಿದ್ದರೆಂದು ಗೊತ್ತಾಗಿದೆ ನಾಥೂರಾಂ ಗೋಡ್ಸೆಯು ಕೋರಿಕೆ ಮೇಲೆ ಆತನ ತಾಯಿಯು ಸೋಮನಾಥ ದೇವಾಲಯಕ್ಕೆ ೧೦೦೦ ರೂ. ದಾನ ಮಾಡಿರುತ್ತಾರೆ

ಕಾಂಗ್ರೆಸ್ಸಿಗೆ ಸದಸ್ಯರಾಗಲು

ಇಂದೇ ಕಡೇ ದಿನ

ಇನ್ನೂ ನೀವು ಸದಸ್ಯರಾಗದಿದ್ದರೆ ಕೂಡಲೆ ಆಗಿರಿ

ತಪ್ಪಿದರೆ ಇನ್ನು ಮೂರು ವರ್ಷ ಅವಕಾಶವಿಲ್ಲ

ಮಧ್ಯ ಪ್ರಾಂತ್ಯಕ್ಕೆ ಮಧ್ಯ ಪ್ರದೇಶ ಎಂಬ ಹೆಸರು

ಮಧ್ಯ ಪ್ರಾಂತ್ಯ ಮತ್ತು ಬೀರಾರನ್ನು ಮಧ್ಯ ಪ್ರದೇಶ ಎಂದು ನೂತನ ರಾಜ್ಯಾಂಗದಲ್ಲಿ ಕರೆಯಬೇಕೆಂದು ಅಲ್ಲಿನ ಸರ್ಕಾರದವರು ಪ್ರಾರ್ಥಿಸಿದ್ದಾರೆ ಅದಕ್ಕೆ ಕೆಲವರು ವಿದರ್ಭ ಎಂಬ ಹೆಸರಿಡಬೇಕೆಂದು ಕೇಂದ್ರ ರಾಜ್ಯಾಂಗ ಸಭೆಯ [illegible]

ಎಂಟು ಕಾಲಿನ ಕುರಿ

ಮೈಸೂರು ೧೪

ಕೃಷ್ಣರಾಜಪೇಟೆ ತಾಲ್ಲೂಕು ಶೀಳನೆರೆ ಗ್ರಾಮದ ಆದಿ ಕರ್ಣಾಟಕರೊಬ್ಬರ ಮನೆಯಲ್ಲಿ ಮೊನ್ನೆ ದಿನ ಬೆಳಿಗ್ಗೆ ಎಂಟು ಕಾಲುಗಳು, ಒಂದು ತಲೆ, ಎರಡು ಶರೀರಗಳು ಎರಡು ಬಾಲಗಳುಳ್ಳ ಒಂದು ಕುರಿಮರಿಯು ಹುಟ್ಟಿ, ಒಂದಕ್ಕೊಂದು ಅಂಟಿಕೊಂಡು, ಅವೆರಡಕ್ಕೂ ಒಂದೊಂದು ಬಾಲದಿಂದ ಕೂಡಿದ ಒಂದು ಕುರಿಮರಿಯು ಜನ್ಮ ತಾಳಿತು ಹುಟ್ಟಿದ ಕೂಡಲೇ ಮರಿಯು ಮೃತಪಟ್ಟಿತು ಅದನ್ನು ಪರೀಕ್ಷಾರ್ಥವಾಗಿ ರಾಜಧಾನಿಯ ಮಹಾರಾಜಾ ಕಾಲೇಜಿನ ಪ್ರಾಣಿ ಶಾಸ್ತ್ರ ಶಾಖೆಗೆ ಕಳುಹಿಸಲಾಗಿದೆ

ಬ್ರಿಟನ್ನಿನ ವಿದ್ಯಾಧಿಕಾರಿಗಳ ಭಾಷಣ

ಮೈಸೂರು ಉಪಾಧ್ಯಾಯರ ಶಿಕ್ಷಣ ಕಾಲೇಜಿನಲ್ಲಿ ನಾಳೆ ಸಂಜೆ ೬ ಗಂಟೆಗೆ ಬ್ರಿಟನ್ನಿನ ಈಸ್ಟ್ ಸಫೋಲ್ಕಿನ ಮುಖ್ಯ ವಿದ್ಯಾಧಿಕಾರಿಗಳಾದ ಮಿ॥ಎಲ್ ಆರ್ ಮಿಸರಿ ರವರು ಇಂಗ್ಲೆಂಡಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾ ಪ್ರಗತಿ ಎಂಬ ವಿಷಯವಾಗಿ ಭಾಷಣ ಮಾಡುವರು

ಶೇಷಣ್ಣ ವಿದ್ಯಾರ್ಥಿ ನಿಲಯ

ಈ ನಿಲಯದಲ್ಲಿ ವಿಶ್ವ ವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ವಿಶೇಷ ಸುವರ್ಣ ಪದಕಗಳನ್ನು ಮತ್ತು ಬಹುಮಾನಗಳನ್ನೂ ಪಡೆದವರಿರುವರು. ಎಂ ಎ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಜೆ ರಂಗನಾಥರಾವ್, ಕೆ. ವಿ ಸುಬ್ಬರಾಯ, ಮತ್ತು ಎಸ್. ಎನ್ ಸುಬ್ರಹ್ಮಣ್ಯ ಶಾಸ್ತ್ರಿ ಇವರುಗಳಿಗೆ ತಲಾ ಒಂದೊಂದು ಸುವರ್ಣ ಪದಕ ಬಿ ಎ ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಬಿ ನಂಜುಂಡಯ್ಯನವರಿಗೆ ಎರಡು ಸುವರ್ಣಪದಕ ಮತ್ತು ಒಂದು ಬಹುಮಾನ, ಬಿ ಸುಬ್ರಹ್ಮಣ್ಯ ಶಾಸ್ತ್ರಿ ಇವರಿಗೆ ಹೊನ್ನಶೆಟ್ಟಿ ಬಹುಮಾನವೂ ದೊರಕಿವೆ

೦ನೆ ನವರ ಹೈಕೋರ್ಟಿನ ಮಂಗಳವಾರ ಪ್ರಿನ್ಸ್ ಸ್ನಾಯಾಧಿಕಾರಿಗಳಾಗಿರುವ ⓑ ಮೇ [illegible] ದಪ್ಪನವರನ್ನು ಜಸ್ಟಿಸರನ್ನಾಗಿ ನೇಮಿಸಲಾಗಿದೆ ಹೈಕೋರ್ಟಿನ ಹಂಗಾಮಿ ನ್ಯಾಯಾಧೀಶರಾಗಿರುವ ಶ್ರೀ ಟಿ. ಎ. ನ. [illegible] ನವರ ಸ್ಥಾನದಲ್ಲಿ ಖಾ [illegible]

ಉಮೇದುವಾರಿಕೆಗಳ ರದ್ದು

ಮೈಸೂರು ೧೪

ಪೌರಸಭಾ ಚುನಾವಣೆಗೆ ಪ್ರಜಾ ಸಂಘದ ಪರವಾಗಿ ದೇವರಾಜಾ ಮೊಹಲ್ಲಾದಿಂದ ನಿಂತಿದ್ದ ಶ್ರೀ ಎಸ್. ರಾಮರಾಯರು ಪೌರ ಸಭೆಯ ಕಂಟ್ರಾಕ್ಟನ್ನು ಇನ್ನೂ ನಡೆಸುತ್ತಿರುವುದರಿಂದ ಅವರು ಕಾನೂನು ಪ್ರಕಾರ ಉಮೇದುವಾರಿಕೆಗೆ ಅರ್ಹರಲ್ಲವೆಂದು ಹೇಳಿ ನಿನ್ನೆ ದಿನ ಚುನಾವಣಾಧಿಕಾರಿಗಳು ಅವರ ಉಮೇದುವಾರಿಕೆಯನ್ನು ರದ್ದು ಮಾಡಿದರು

ಕಾಂಗ್ರೆಸ್ ಅಧ್ಯಕ್ಷರ ಒಪ್ಪಿಗೆಯಂತೆ ಕೃಷ್ಣರಾಜ ಮೊಹಲ್ಲಾದಿಂದ ನಿಂತಿದ್ದ ಶ್ರೀ ಎಸ್ ಎಸ್. ಶಾಸ್ತ್ರಿಯವರ ಹೆಸರಿನಲ್ಲಿ ಬಾಕಿ ಇರದೆ ಅವರಿಗೆ ವೋಟರು ಪಟ್ಟಿಯಲ್ಲಿ ಪ್ರತ್ಯೇಕ ನಂಬರು ಕೊಡಲ್ಪಡದೇ ಇರುವುದರಿಂದ ಕಾನೂನು ಪ್ರಕಾರ ಅವರ ಅರ್ಜಿಯನ್ನು ತಿರಸ್ಕರಿಸಲಾಯಿತು ಇನ್ನುಳಿದ ೪೯ ಜನರು ೨೪ ಸ್ಥಾನಗಳಿಗೆ ಸ್ಪರ್ಧಿಸುವರು

ಹಾರುವ ಹಾವು

೩೫೦೦ ಅಡಿ ಎತ್ತರಕ್ಕೆ ಹಾರಿದ ಹಾವು ಉತ್ತರ ಬೋರ್ನಿಯೋದಲ್ಲಿ ಕಂಡುಬಂದಿತೆಂದು ವರದಿಯಾಗಿದೆ ಆ ಹಾವು ೩ ಅಡಿ ಉದ್ದವಿದ್ದು ೪೦ ಅಡಿ ಎತ್ತರದ ಮರದಿಂದ ೩೫೦ ಅಡಿ ದೂರದ ಮರಕ್ಕೆ ಹಾರಿತೆಂದೂ, ಅದು ನೀರಿನ ಮೇಲೆ ಈಜುವ ಹಾಗೆಯೇ ಹಾರುತ್ತಿದ್ದಂತೆ ಕಾಣುತ್ತಿತ್ತೆಂದೂ ಹೇಳಲಾಗಿದೆ.

ಗೆದ್ದಲಿನಿಂದ ೧೧ ಸಾವಿರ ರೂ. ನೋಟುಗಳ ನಾಶ

ಮದರಾಸ್ ಪ್ರಾಂತ್ಯದ ಚಿಂಗಲ್‌ಪೇಟೆಯ ವ್ಯಾಪಾರಿಯೊಬ್ಬನು ತನ್ನ ಜಮೀನನ್ನು ಮಾರಿ ಬಂದ ೧೧ ಸಾವಿರ ರೂ ಅನ್ನು ೧೦೦ ರೂ ನೋಟುಗಳಂತೆ ಒಂದು ಮರದ ಪೆಟ್ಟಿಗೆಯಲ್ಲಿ ಇಟ್ಟಿದ್ದನೆಂದೂ, ಅದನ್ನೆಲ್ಲಾ ಗೆದ್ದಲು ತಿಂದು ನಾಶ ಪಡಿಸಿವೆಯೆಂದೂ ವರದಿಯಾಗಿದೆ

ಕೇಂದ್ರ ರಾಜ್ಯಾಂಗಕ್ಕೆ ಅನುಗುಣವಾಗಿ ಮೈಸೂರು ರಾಜ್ಯಾಂಗ

ಕೆ. ಸಿ. ರೆಡ್ಡಿಯವರ ನಿರ್ಣಯ

ಸ್ವಂ. ವ. ಫೋ॥] ಬೆಂಗಳೂರು ೧೪.

ಮೈಸೂರು ರಾಜ್ಯಾಂಗ ಸಭೆಯ ಅಧಿವೇಶನವು ಈ ದಿನ ಮಧ್ಯಾಹ್ನ ೨ ಗಂಟೆಗೆ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಭಾರತ ರಾಜ್ಯಾಂಗ ಸಭೆಯವರು ಮೈಸೂರು ಸಂಸ್ಥಾನದ ಆಡಳಿತದ ಬಗ್ಗೆ ಅನುಮೋದಿಸಿರುವ ಬದಲಾವಣೆಗಳು ಮತ್ತು ಅಧಿಕಾರಗಳನ್ನು ಸಂಸ್ಥಾನದ ರಾಜ್ಯಾಂಗ ಸಭೆಯು ಅಂಗೀಕರಿಸುವುದು-ಎಂದು ಶ್ರೀ ಕೆ ಸಿ ರೆಡ್ಡಿಯವರು ನಿರ್ಣಯ ಪ್ರಾವನ್ನು ಮಂಡಿಸಿದರು.

ನೆಹರೂ ಜಯಂತಿ

ನಿನ್ನೆ ದಿನ ಬನವನಗುಡಿಯ ಯುವಕರ ಸಂಘದ ಆಶ್ರಯದಲ್ಲಿ ನೆಹರೂ ಜಯಂತಿಯನ್ನು ಆಚರಿಸಲಾಯಿತು ಈ ಸಂದರ್ಭದಲ್ಲಿ ಪ್ರಧಾನಿ ಶ್ರೀ ಕೆ ಸಿ ರೆಡ್ಡಿಯವರು ಭಾಷಣಮಾಡಿ, ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರಿಗೆ ನಾವು ಸರ್ವವಿಧದಲ್ಲೂ ಬೆಂಬಲಕೊಡಬೇಕೆಂದು [illegible]

ಪಂಡಿತ ನೆಹರೂರವರ ಕಾಂಗ್ರೆಸ್ ಭಕ್ತಿ

ಬಹಿರಂಗ ಸಭೆಯಲ್ಲಿ ಭಾಷಣಗಳು

ಮೈಸೂರು ೧೫

ಪಂಡಿತ ಜವಾಹರಲಾಲ್ ನೆಹರೂರವರ ೬೧ನೇ ವರ್ಷ ವರ್ಧಂತಿಯನ್ನು ಆಚರಿಸಲು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು ಶ್ರೀ ಎಸ್. ಚನ್ನಯ್ಯನವರು ಅಗ್ರಾಸನವನ್ನು ವಹಿಸಿದ್ದರು ಶ್ರೀಗಳಾದ ಅಗರಂ ಸೂರ್ಯನಾರಾಯಣ ಪಂಡಿತ್, ಎಸ್. ರಂಗರಾಮಯ್ಯ ಮತ್ತು ಎಂ ಎ ಜೋಯಿಸರು ಭಾಷಣ ಮಾಡಿ ನೆಹರೂರವರು ಗಳಿಸಿರುವ ಅಂತರ ರಾಷ್ಟ್ರೀಯ ಖ್ಯಾತಿಯನ್ನು ವಿವರಿಸಿ ಅವರ ಅಪಾರವಾದ ದೇಶ ಸೇವೆ, ಸ್ವಾರ್ಥತ್ಯಾಗ ಮತ್ತು ಧೈರ್ಯ ಸಾಹಸಗಳನ್ನು ಕೊಂಡಾಡಿದರು ಕೆಲವು ವರ್ಷಗಳ ಹಿಂದೆ ನೆಹರೂರವರ ಮೈಸೂರಿಗೆ ಭೇಟಿ ಇತ್ತಾಗ ಅರಮನೆಯಿಂದಲೂ, ಇತರ ಪಕ್ಷ ಮತ್ತು ಸಂಸ್ಥೆಗಳಿಂದಲೂ ಅವರಿಗೆ ಆಹ್ವಾನ ಹೋದಾಗ ಅವರು ಹಾಗೆ ಇಲ್ಲಿನ ಕಾಂಗ್ರೆಸ್ ಸ್ವಾಗತ ಪ್ರಥಮ ಗೌರವವನ್ನು ಕೊಟ್ಟು ಅದರ ಅಭಿಪ್ರಾಯವನ್ನು ಪಡೆದನಂತರವೇ ಅವರ ಆಹ್ವಾನವನ್ನು ಅಂಗೀಕರಿಸಿದರೆಂಬ ಅಂಶವನ್ನು ಶ್ರೀ ರಂಗರಾಮಯ್ಯನವರು ತಿಳಿಸಿದರು ನೆಹರೂರವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿ ಶುಭಾಶಯಗಳನ್ನು ಸಲ್ಲಿಸುವ ನಿರ್ಣಯವನ್ನು ಮಾಡಲಾಯಿತು. ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು

೪ ಸಾವಿರ ಮಂದಿ ಕ್ರೈಸ್ತರು ಹಿಂದುಗಳಾದರು

ತಿರುವಾಂಕೂರಿನ ಕವಿಯೂರ್ ಎಂಬಲ್ಲಿ ಕಳೆದ ಶುಕ್ರವಾರ ದೇವಾಲಯ ಪ್ರವೇಶ ಘೋಷಣೆಯ ಸ್ಮಾರಕೋತ್ಸವದ ಸಂದರ್ಭದಲ್ಲಿ ೩ ಸಾವಿರ ಮಂದಿ ಕ್ರೈಸ್ತರನ್ನು ಹಿಂದೂಗಳನ್ನಾಗಿ ಮತಾಂತರಗೊಳಿಸಲಾಯಿತು. ಮುಂದಿನ ಎರಡು ದಿನಗಳಲ್ಲಿ ಮತ್ತೊಂದು ಸಾವಿರ ಮಂದಿಯನ್ನು ಮತಾಂತರಗೊಳಿಸಲಾಯಿತೆಂದೂ ವರದಿಯಾಗಿದೆ ಉತ್ತರ ಭಾರತದ ಅನೇಕ ಮಂದಿ ಹಿಂದೂ ಪ್ರಮುಖರು ತಿರುವಾಂಕೂರಿಗೆ ಆಗಮಿಸಿ ಈ ಕಾರ್ಯದಲ್ಲಿ ತೊಡಗಿರುವರೆಂದು ಹೇಳಲಾಗಿದೆ

— COACHING CLASSES —

INTER - L&G, P.C.M. C.B.Z.,

S S L.C & M S { All Subjects

City Tutorial College.

531 ... ROAD,

MYSORE

ನೆಹರೂ ಜಯಂತಿ

ಡಿ. ಬನುಮಯ್ಯನವರ ಹೈಸ್ಕೂಲು ಸಾಹಿತ್ಯ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಪಂಡಿತ ನೆಹರೂರವರ ಜಯಂತಿಯು ಶ್ರೀ ಡಿ ಎಲ್ ನರಸಿಂಹಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಕೃಷ್ಣಮೂರ್ತಿಯವರಿಂದ ವೀಣಾವಾದನವಾದನಂತರ. ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ, ಕೆ ಜಿ ಸತ್ಯನಾರಾಯಣರಾವ್ ಮತ್ತು ಕೆ ವಿ ಶ್ರೀನಿವಾಸ ಮೂರ್ತಿಗಳು ಭಾಷಣ ಮಾಡಿದರು

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಔಷಧಾಲಯದ ಬಳಿ ನಿನ್ನೆ ಸಂಜೆ ನೆಹರೂರವರ ೬೧ ನೇ ವರ್ಷ ವರ್ಧಂತಿಯನ್ನು ಸೆಂಟ್ ಫಿಲೋಮಿನಾ ಕಾಲೇಜ್ ಪ್ರಿನ್ಸಿಪಾಲರಾದ ಡಾ|| ಸಿ ಜೆ ವಾರ್ಕಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಶ್ರೀ ಸಂಗೀತ ಮತ್ತು ಸ್ವಾಗತ ಭಾಷಣಗಳಾದ ನಂತರ, ಶ್ರೀ ಎ ವೆಂಕಟೇಶಯ್ಯ ಮತ್ತು ಅಧ್ಯಕ್ಷರು ಭಾಷಣ ಮಾಡಿ, ನೆಹರೂರವರ ಪ್ರತಿಭೆಯನ್ನು ಕೊಂಡಾಡಿದರು

ಕನ್ನಡ ಚರ್ಚಾ ಸ್ಪರ್ಧೆ

ರಾಜಧಾನಿಯ ವಿಠ್ಠಲರಾವ್ ಶೇಷಣ್ಣನವರ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ಇದೇ ೨೦ನೇ ತಾ|| ಭಾನುವಾರ ಅಂತರ ವಿದ್ಯಾರ್ಥಿ ನಿಲಯಗಳ ಕನ್ನಡ ಚರ್ಚಾ ಸ್ಪರ್ಧೆಯು ನಡೆಯುವುದು

ರಾಜಕಮಲ್

ಮೈ ಸೂ ರು

ತಾ|| 12-11-49 ರಿಂದ 2ನೇ ವಾರ

ದಿನವೂ 3 ಆಟಗಳು

ಭರಣಿಯವರ ಅಪ್ರತಿಮ ಪ್ರೇಮಮಯ ತೆಲುಗು ಚಿತ್ರ

ಲೈಲಾ ಮಜ್ನು

ಪಾತ್ರ.-ಭಾನುಮತಿ, ನಾಗೇಶ್ವರ ರಾವ್, ಲಲಿತಾ ಪದ್ಮಿನಿ

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

ಗೂರ್ಲು ಉಬ್ಬಸ, ಪಡಿಶಾಮಶೂಲೆ, ಮತ್ತು ಗಲಾಯುಕಕ್ಕೆ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟ್ ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ

ದಿವಾನರ ರಸ್ತೆ, ಮೈಸೂರು

Edited, printed and published by A R Nagarajan, at Sadhvi Press, D. Subbiah Road, Mysore

ಹಿಂದೂ ಮಹಾ ಸಭೆಗೆ ಸದಸ್ಯರಾಗಬೇಕೆಂದು ಮನವಿ

ಅಖಿಲ ಭಾರತ ಹಿಂದೂ ಮಹಾ ಸಭೆಯು ನಿರ್ಧಾರದಂತೆ ಪುನಃ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಬೇಕಾಗಿರುವುದರಿಂದ ಎಲ್ಲಾ ಪ್ರಾಂತೀಯ ಶಾಖೆಗಳು ಈ ವರ್ಷದೊಳಗಾಗಿ ಸದಸ್ಯರನ್ನು ಸೇರಿಸಿ ಸಮಿತಿಗಳನ್ನು ಪುನರ್ರಚನೆ ಮಾಡಬೇಕು ಇದಕ್ಕಾಗಿ ಸಂಸ್ಥಾನದ ಸಂಸ್ಥೆಯ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎ ಪುಟ್ಟವೀರಯ್ಯನವರು ಸಂಸ್ಥಾನಾದ್ಯಂತ ಪ್ರವಾಸ ಕೈಗೊಂಡಿರುತ್ತಾರೆ ಹಿಂದೂ ಧರ್ಮಾಭಿಮಾನಿಗಳೆಲ್ಲರೂ ಸಹಕರಿಸಿ, ಸಂಘಕ್ಕೆ ಸದಸ್ಯರಾಗಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಒಂದು ಪೂರ್ಣ ವಿರಾಮದ ತೂಕವೆಷ್ಟು ?

ಬರವಣಿಗೆಯಲ್ಲಿ ಉಪಯೋಗಿಸಲ್ಪಡುವ ಒಂದು ಪೂರ್ಣ ವಿರಾಮ ಚಿಹ್ನೆಯ ತೂಕವೆಷ್ಟೆಂಬುದನ್ನು ನ್ಯೂ ಜರ್ಸಿಯ ನ್ಯೂ ಬ್ರನ್ಸ್‌ವಿಕ್ ಅಣು ಶಕ್ತಿ ಪ್ರಯೋಗ ಶಾಲೆಯಲ್ಲಿ ಕಂಡುಹಿಡಿಯಲಾಗಿದೆ ಮೊದಲು ಒಂದು ಸೂಕ್ಷ್ಮವಾದ ರಸಾಯನಿಕ ತಕ್ಕಡಿಯಲ್ಲಿ ಒಂದು ಚೂರು ಕಾಗದವನ್ನು ತೂಕ ಮಾಡಲಾಯಿತು ಅನಂತರ ಅದರ ಮೇಲೆ ಟೈಪ್ ರೈಟರಿನಿಂದ ಒಂದು ಪೂರ್ಣ ವಿರಾಮ ಚಿಹ್ನೆಯನ್ನು ಬರೆದು, ಮತ್ತೆ ಕಾಗದವನ್ನು ತೂಕ ಮಾಡಲಾಯಿತು ಮೊದಲಿನ ಮತ್ತು ಎರಡನೇ ತೂಕಗಳ ವ್ಯತ್ಯಾಸದಿಂದ ಪೂರ್ಣ ವಿರಾಮ ಚಿಹ್ನೆಯ ತೂಕವು ಒಂದು ಗ್ರಾಮಿನ ಹತ್ತು ಲಕ್ಷದ ಒಂದು ಭಾಗದಷ್ಟಿರುವುದೆಂದು ಕಂಡುಹಿಡಿಯಲಾಗಿದೆ

ಇಂಡಿಯಾ ಕಾಫಿ ಅಂಗಡಿಗಳಿಗೆ ಕಾನೂನು ವಿನಾಯಿತಿ

ಮದರಾಸ್ ಪ್ರಾಂತ್ಯದಲ್ಲಿ ಇಂಡಿಯಾ ಕಾಫಿ ಬೋರ್ಡಿನವರಿಂದ ನಡೆಸಲ್ಪಡುತ್ತಿರುವ ಎಲ್ಲಾ ಅಂಗಡಿಗಳಿಗೂ ಪಾತ್ರೆಗಳ ಕಾನೂನು ಅನ್ವಯಿಸುವುದಿಲ್ಲವೆಂದು ಮದರಾಸ್ ಸರ್ಕಾರದವರು ವಿನಾಯಿತಿ ಕೊಟ್ಟಿದ್ದಾರೆ

||ಶ್ರೀ||

ಗಣೇಶಾ ಟಾಕೀಸ್

16-11-49ರಿಂದ ದಿನ 3 ಆಟಗಳು

ವಾಹಿನಿಯವರ

ಭಕ್ತ ಪೋತನ

(ತೆಲುಗು)

ಪಾತ್ರ -

ನಾಗಯ್ಯ, ಲಿಂಗಮೂರ್ತಿ

ವಿವಾಹ ಮಹೋತ್ಸವಗಳು

ಮೈಸೂರು ನಗರ ನ್ಯಾಯಾಧೀಶರಾದ ಕೆ. ಗೋಪಾಲರಾಜೇ ಅರಸಿನವರು ತಮ್ಮ ಸಹೋದರರ ಪುತ್ರಿ ಚಿ|| ಸೌ|| ಜಯಲಕ್ಷ್ಮಿಯವರನ್ನು ದರ್ಬಾರ್ ಭಕ್ಷಿಗಳಾದ ಸರ್ದಾರ್ ಹೆಚ್ ಎಲ್ ದೇವರಾಜೇ ಅರಸಿನವರ ಪುತ್ರ ಶ್ರೀ ಹೆಚ್ ಡಿ ಗೋಪಾಲರಾಜೇ ಅರಸ್‌ರವರಿಗೆ ಕೊಟ್ಟು ನಿನ್ನೆ ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಬೆಂಗಳೂರಿನ ಪತ್ರಿಕೋದ್ಯೋಗಿಗಳಾದ ಶ್ರೀ ಮಾ ನ ಚೌಡಪ್ಪನವರು ತಮ್ಮ ಸಹೋದರರಾದ ಶ್ರೀ ಎಂ.ಎ ರಾಮನವರಿಗೆ ತಮ್ಮ ಸೋದರ ಸೊಸೆ ಚಿ|| ಪಾರ್ವತಮ್ಮನನ್ನು ತಂದು ಕೊಂಡು ನಿನ್ನೆ ಮಾಗಡಿ ಸಂದ್ರದಲ್ಲಿ ವಿವಾಹ ಮಹೋತ್ಸವವನ್ನು ಜರುಗಿಸಿದರು

ಪ್ರಭುಗಳೊಡನೆ ಭೇಟಿ

ಗ್ರಾಮಾಧಿಕಾರಿಗಳ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಎಲ್ ನರಸಿಂಹಯ್ಯನವರು ನಿನ್ನೆ ದಿನ ಶ್ರೀಮನ್ ಮಹಾರಾಜರವರನ್ನು ಭೇಟಿ ಮಾಡಿ ಕಡೂರಿನಲ್ಲಿ ನಡೆದ ಗ್ರಾಮಾಧಿಕಾರಿಗಳ ಸಮ್ಮೇಳನದ ತೀರ್ಮಾನಗಳನ್ನು ವರದಿ ಮಾಡಿದರು

ಮೈಸೂರು ವಿಶ್ವವಿದ್ಯಾಲಯ

ನಂ G. 3 481/49 50

ಮೈಸೂರು ವಿಶ್ವವಿದ್ಯಾಲಯದ ಕಛೇರಿ

ಮೈಸೂರು, ತಾ|| ೧೦ ೧೧ ೧೯೪೯

ಪ್ರಕಟಣೆ

ಸ್ಟ್ಯಾಟ್ಯೂಟ್ 79* (1947—48 ಕ್ಯಾಲೆಂಡರ್ ವಾಲ್ಯುಂ 1 ಪುಟ 31) ಪ್ರಕಾರ ಈ ವಿಶ್ವವಿದ್ಯಾಲಯದ ರಿಜಿಸ್ಟರ್ಡ್ ಪದವೀಧರರು (ರಿಜಿಸ್ಟರ್ಡ್ ಪದವೀಧರರು ಎಂದು ಎನ್‌ರೋಲ್ ಆಗಿರುವವರು ಮಾತ್ರ) ಪುನರ್ವಿಮರ್ಶೆ ಅಥವಾ ... ಪಡಿಗಾಗಿ ಈ ಕೆಳಗೆ ನಮೂದಿತವಾಗಿರುವ ನಮೂನೆಯಲ್ಲಿ ತಮ್ಮ ಅರ್ಜಿಗಳನ್ನು 1949ನೇ ಡಿಸೆಂಬರ್ 15ನೇ ತಾರೀಖು ಅಥವಾ ಅದರೊಳಗಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು.

* ಸ್ಟ್ಯಾಟ್ಯೂಟ್ 79 ಪ್ರಕಾರ ... ಮಾಡಿ ಮೊದಲನೇ ದಿನ ಗ್ರಾಜುಯೇಟುಗಳ ರಿಜಿಸ್ಟರುಗಳನ್ನು ಪುನರ್ವಿಮರ್ಶಿಸಲಾಗುವುದು, ಮತ್ತು ತಿದ್ದುಪಡಿ ಮಾಡಲಾಗುವುದು ಪುನರ್ವಿಮರ್ಶೆ ಇಲ್ಲವೇ ತಿದ್ದುಪಡಿಗಳನ್ನು ರಿಜಿಸ್ಟ್ರಾರ್‌ರವರಿಗೆ ಡಿಸೆಂಬರ್ ... ನೇ ತಾರೀಖಿನೊಳಗಾಗಿ ತಲುಪುವಂತೆ ಕಳುಹಿಸಬೇಕು

1 ಡಿಗ್ರಿ ಅಥವಾ ಡಿಗ್ರಿಗಳೊಂದಿಗೆ ಹೆಸರು

2 ಎನ್‌ರೋಲ್‌ಮೆಂಟ್ ನಂ

3 ವಿಳಾಸ

ಶೃಷ್ಣಶೆ ಮೋರೆಗ

(ಸಹಿ) ಸಿ. ರಂಗಾಚಾರ್

ಆಫೀಸಿಂಗ್ ರಿಜಿಸ್ಟ್ರಾರ್

ಪ್ರಭುದೇವಾ ಟಾಕೀಸ್

16—11-49 ರಿಂದ ಅಮೋಘವಾದ 3 ನೆಯ ವಾರ

ಕನಕತಾರ, ದಸ್ಕೋಟ ಚಿತ್ರವಟಿಸಿರುವ

— ಕನಕ ತಾರ —

ತೆಲುಗು ಭಾಷೆ

ದಿನ ಎರಡು ಆಟಗಳು

18 11 49ನೇ ಶುಕ್ರವಾರದಿಂದ ಪ್ರತಿ ದಿನ 4 ಆಟಗಳು

* ರಾಧಿಕ *

ಬಾಲಸರಸ್ವತಿ, ರಾಜರಾಮಯ್ಯ, ವಾಸಿರೆಡ್ಡಿ ಕೋಟೇಶ್ವರ, ಪದ್ಮನಾಭರಾವ್ ನಟಿಸಿರುವ ತೆಲುಗು ಚಿತ್ರ

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಪೌರ

ಸಂಪುಟ ೮] ಬುಧವಾರ ೧೬-೧೧-೪೯ [ಸಂಚಿಕೆ ೯೩

ರಾಜ್ಯಾಂಗ ಸಭೆಯನ್ನು ರದ್ದುಮಾಡಲು ನಿರ್ಣಯ

ಗೋಡ್ಸೆ ಮತ್ತು ಆಪ್ಟೆಗಳನ್ನು ಗಲ್ಲಿಗೇರಿಸಲಾಯಿತು

ಸೆರೆಮನೆಯಲ್ಲೇ ಶವಗಳ ಸಂಸ್ಕಾರ

ನಾಥೂರಾಂ ವಿನಾಯಕ ಗೋಡ್ಸೆ ಮತ್ತು ನಾರಾಯಣ ಆಪ್ಟೆರವರುಗಳನ್ನು ನೆನ್ನೆ ಬೆಳಿಗ್ಗೆ ೮ ಗಂಟೆಗೆ ಅಂಬಾಲಾ ಸೆರೆಮನೆಯಲ್ಲಿ ಗಲ್ಲಿಗೇರಿಸಲಾಯಿತು. ಅವರನ್ನು ಗಲ್ಲಿಗೇರಿಸುವ ಸ್ಥಳಕ್ಕೆ ೭-೫೫ ಗಂಟೆಗೆ ಸರಿಯಾಗಿ ಕರೆದುಕೊಂಡು ಹೋಗಲಾಯಿತು. ಅಲ್ಲಿಗೆ ಅವರು ಹೋಗುವಾಗ "ಅಖಂಡ ಭಾರತ್ ಹಮಾರಾ ಹೈ" "ವಂದೇ ಮಾತರಂ" ಎಂದು ಕೂಗಿದರು. ಕ್ಷಣವೇ ಗೋಡ್ಸೆಯ ಪ್ರಾಣ ವಾಯು ಹಾರಿಹೋಯಿತು. ಆದರೆ ಆಪ್ಟೆಯು ಪ್ರಾಣ ಬಿಡಲು ಎರಡು ನಿಮಿಷ ಬೇಕಾಯಿತು.

ಅವರ ಮೃತ ದೇಹಗಳನ್ನು ಬಂಧುಗಳಿಗೆ ಕೊಡಲು ನಿರಾಕರಿಸಿ ಜೈಲು ಅಧಿಕಾರಿಗಳೇ ಶವ ಸಂಸ್ಕಾರವನ್ನು ಹಿಂದೂ ಶಾಸ್ತ್ರ ಪದ್ಧತಿಯಂತೆ ನಡೆಸಿದರು. ಮೊನ್ನೆ ಅವರ ಪತ್ನಿಯರು, ಇಬ್ಬರು ಸಹೋದರರು ಮತ್ತು ಸೋದರಿಯರು ಅವರನ್ನು ಭೇಟಿ ಮಾಡಿದ್ದರು. ಗೋಡ್ಸೆಯ ಸಹೋದರಿಯು ಆರತಿ ಬೆಳಗಲು ಬೇಡಿದ್ದು ಅನುಮತಿ ಕೊಡಲಿಲ್ಲ.

ದಕ್ಷಿಣ ಭಾರತದ ಇಬ್ಬರು ಗೋಡ್ಸೆ ಮತ್ತು ಆಪ್ಟೆಗಳನ್ನು ನೋಡಲು ಅವಕಾಶ ದೊರೆಯದಿದ್ದುದರಿಂದ ಮೊನ್ನೆ ರಾತ್ರಿ ಅವರುಗಳು ಜೈಲಿನ ಗೋಡೆ ಹತ್ತಿ ಪ್ರವೇಶ ಮಾಡಲು ಯತ್ನಿಸಿದರೆಂದೂ, ಕಾವಲುಗಾರರು ಅವರನ್ನು ದಸ್ತಗಿರಿ ಮಾಡಿದರೆಂದೂ ತಿಳಿದು ಬಂದಿದೆ.

ಗೋಡ್ಸೆಯ ತಂದೆತಾಯಿಗಳು ಆತನಿಗೆ ಒಂದು ತಂತಿ ಕಳುಹಿಸಿ, "ನಿನಗೆ ನಮ್ಮ ಪೂರ್ಣ ಆಶೀರ್ವಾದಗಳು ದೇವರು ನಿನಗೆ ಧೈರ್ಯವನ್ನೀಯಲಿ' ಎಂದು ತಿಳಿಸಿದ್ದರು.

ಗೋಡ್ಸೆ ಮತ್ತು ಆಪ್ಟೆಗಳನ್ನು ಗಲ್ಲಿಗೇರಿಸುವ ಕಾಲದಲ್ಲಿ ಪತ್ರಿಕೆಗಳವರು ಹಾಜರಿರಲು ಅವಕಾಶ ಕೊಡಲಿಲ್ಲ. ಸೆರೆಮನೆಯ ಸುತ್ತಲೂ ಬಲವಾದ ಪೋಲೀಸ್ ಕಾವಲನ್ನು ಹಾಕಲಾಗಿತ್ತು.

ಅವರುಗಳ ಶವ ಸಂಸ್ಕಾರದ ಕಾಲದಲ್ಲಿ ಯಾವ ಸಂಬಂಧೀಕರೂ ಇರಲು ಅವಕಾಶವಿರಲಿಲ್ಲ. ಅಸ್ಥಿ ಶೇಷಗಳನ್ನು ಸಂಬಂಧೀಕರಿಗೆ ಕೊಡಲಿಲ್ಲ. ಸರ್ಕಾರದವರೇ ಅಸ್ಥಿ ವಿಸರ್ಜನ ಕಾರ್ಯವನ್ನು ನಡೆಸುವರು.

ಗೋಡ್ಸೆ ಮತ್ತು ಆಪ್ಟೆರವರುಗಳು ಮರಣಕ್ಕೆ ಮುಂಚೆ ಪೂಜೆ ಮತ್ತು ಪ್ರಾರ್ಥನೆ ನಡೆಸಿದರು. ತಮ್ಮ ಕೊನೆಯ ಉಯಿಲನ್ನು ಬರೆದಿಟ್ಟಿದ್ದರೆಂದೂ ತಿಳಿದುಬಂದಿದೆ.

ಎಂ. ಎಸ್. ರಾಮದಾಸಪ್ಪನವರ ನಿಧನ

ಮೈಸೂರು ತಾಲ್ಲೋಕು ಅನಂತಪುರದ ಶ್ರೀ ಎಂ. ಎಸ್. ರಾಮದಾಸಪ್ಪನವರು ನೆನ್ನೆ ದಿನ ಕಾರ್ತಿಕ ಸೋಮವಾರ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ದೇವರ ಪೂಜೆಯನ್ನು ಮಾಡುತ್ತಾ ಕುಳಿತಿದ್ದಂತೆಯೇ ಹಠಾತ್ತಾಗಿ ಮರಣವನ್ನು ಹೊಂದಿದರು. ಅವರಿಗೆ ೬೮ ವರ್ಷ ವಯಸ್ಸಾಗಿತ್ತು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸಿ ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

ಭಾರತದಿಂದ ಮೈಸೂರಿಗೆ ೨೪ ಲಕ್ಷ ರೂ. ಸಹಾಯ

ಸ್ವಂ. ಸು. ಫೋ.] ಬೆಂಗಳೂರು ೧೬

ಮೈಸೂರಿನ ಹೆಚ್ಚು ಆಹಾರದ ಬೆಳೆ ಯೋಜನೆಗಾಗಿ ಭಾರತ ಸರ್ಕಾರದವರು ೮ ಲಕ್ಷ ರೂ ಗ್ರಾಂಟು ಮತ್ತು ೧೬ ಲಕ್ಷ ರೂ ಸಾಲವನ್ನು ಕೊಟ್ಟಿರುತ್ತಾರೆ.

ಗ್ರಾಮಾಧಿಕಾರಿಗಳಿಗೆ ಧಾನ್ಯದ ಕಮೀಷನ್

ಗ್ರಾಮಾಧಿಕಾರಿಗಳಿಗೆ ಆಹಾರದ ಪ್ರೋಕ್ಯೂರ್‌ಮೆಂಟಿಗೆ ಮತ್ತು ಕಮೀಷನನ್ನು ಹಿಂದಿನ ವರ್ಷದಲ್ಲಿ ಕೊಡುತ್ತಿದ್ದಂತೆಯೇ ಕಳೆದ ವರ್ಷಕ್ಕೆ ಕೊಡತಕ್ಕದ್ದೆಂದೂ ಅವನ್ನು ಕೂಡಲೇ ಪಾವತಿ ಮಾಡಬೇಕೆಂದೂ ಸರ್ಕಾರದ ಆಜ್ಞೆಯಾಗಿದೆ.

ರಂಗನಾಥುಲುರವರಿಗೆ ೩ ವರ್ಷ ಕಠಿಣ ಶಿಕ್ಷೆ

ರಾಜಾರಾಂ ಅಗ್ರಹಾರದ ಕೊಲೆ ಮೊಕದ್ದಮೆ ಅಪೀಲಿನಲ್ಲಿ ತೀರ್ಪು

ಮೈಸೂರು, ೧೬

ಪೌರಸಭೆಯ ನೌಕರರಾಗಿದ್ದ ಸಿ. ರಂಗನಾಥುಲು ಎಂಬುವರು ೨೭-೫-೪೮ನೇ ರಾತ್ರಿ ರಾಜಧಾನಿಯ ರಾಜಾರಾಂ ಅಗ್ರಹಾರದ ಬಳಿ ನಾರಾಯಣ ಮೂರ್ತಿ ಎಂಬುವರ ಟಾಂಗಾ ಹೊಡೆಯುವ ನಾರಾಯಣಸ್ವಾಮಿ ಎಂಬುವನನ್ನು ಗುಂಡಿನಿಂದ ಹೊಡೆದು ಸಾಯಿಸಿದರೆಂದೂ ಮತ್ತು ನಾರಾಯಣ ಮೂರ್ತಿಗೆ ಗಾಯಮಾಡಿದರೆಂದೂ ಆಪಾದಿಸಲಾಗಿದ್ದ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರ ಕೋರ್ಟಿನಲ್ಲಿ ಬಿಡುಗಡೆ ಹೊಂದಿದ್ದರು. ಸರ್ಕಾರದವರು ಆ ತೀರ್ಪಿನ ಮೇಲೆ ಹೈಕೋರ್ಟಿಗೆ ಅಪೀಲು ಮಾಡಿದ್ದರು. ಹೈಕೋರ್ಟ್ ನ್ಯಾಯಾಧೀಶರು ತೀರ್ಪಿತ್ತು ನ್ಯಾಯರಕ್ಷಣೆ ದೃಷ್ಟಿಯಿಂದ ಖುಲಾಸೆ ಆಜ್ಞೆಯಲ್ಲಿ ಪ್ರವೇಶ ಮಾಡುವುದು ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟು, ಆಪಾದಿತನು ತಪ್ಪಿತಸ್ಥನೆಂದು ತೀರ್ಮಾನಿಸಿ ೩ ವರ್ಷ ೬ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ.

○ ರಾಜಕೋಟೆಗೆ ೭೦ ಮೈಲಿ ದೂರದಲ್ಲಿರುವ ಜುಂಘಾ ಹಾದಿಯಲ್ಲಿ ೧೦೬ ವರ್ಷ ವಯಸ್ಸಿನ ವೃದ್ಧನು ಮರಣಹೊಂದಿದನೆಂದು ವರದಿಯಾಗಿದೆ. ಆತನು ಸಾಯುವಾಗ ಇನ್ನೂ ಹಲ್ಲುಗಳು ಗಟ್ಟಿಯಾಗಿದ್ದುವೆಂದು ಆತನ ೮೦ ವರ್ಷದ ಮಗನು ತಿಳಿಸಿರುತ್ತಾನೆ.

ರಾಜ್ಯಾಂಗ ಸಭೆಯೇ ಶಾಸನ ಸಭೆಯಾಗಬೇಕು

ಜನಾಬ್ ವಲಿಯುಲ್ಲಾರವರ ನಿರ್ಣಯ

ಸ್ವಂ ಸು. ಫೋ.] ಬೆಂಗಳೂರು ೧೬

ಭಾರತ ರಾಜ್ಯಾಂಗ ಸಭೆಯು ಮೈಸೂರು ಸಂಸ್ಥಾನದ ಆಡಳಿತದ ಬಗ್ಗೆ ಒಪ್ಪಿತಕ್ಕ ರಾಜ್ಯಾಂಗ ವಿಧಾನಗಳನ್ನು ಈ ಸಭೆಯು ಅಂಗೀಕರಿಸಬೇಕೆಂದು ಶ್ರೀಮನ್ಮಹಾರಾಜರವರಿಗೆ ಶಿಫಾರಸು ಮಾಡುವುದು ಎಂಬ ಶ್ರೀ ಕೆ ಸಿ ರೆಡ್ಡಿಯವರ ನಿರ್ಣಯವು ನಿನ್ನೆ ರಾಜ್ಯಾಂಗ ಸಭೆಯಲ್ಲಿ ಅಂಗೀಕೃತವಾಯಿತು.

ಸಂಸ್ಥಾನದಲ್ಲಿ ನೂತನ ರಾಜ್ಯಾಂಗವು ಜಾರಿಗೆ ಬರುವವರೆಗೆ ಈಗಿನ ಶಾಸನ ಸಭೆಗಳನ್ನು ರದ್ದು ಮಾಡಿ, ಅವುಗಳ ಕೆಲಸಗಳನ್ನು ರಾಜ್ಯಾಂಗ ಸಭೆಯೇ ನಡೆಸುವ ಹಾಗೆ ಶ್ರೀಮನ್ಮಹಾರಾಜರವರು ಒಂದು ವಿಶೇಷ ಆಜ್ಞೆಯನ್ನು ಹೊರಡಿಸಬೇಕೆಂ-

ಜೈ ಹಿಂದ್!

ಪೌರಸಭಾ ಚುನಾವಣೆ

★

ದಯವಿಟ್ಟು ತಮ್ಮ ಘನವಾದ ಓಟನ್ನು

ಕಾಂಗ್ರೆಸ್ಸಿಗೇ ಕೊಡಿರಿ!

-ದು ಪ್ರಾರ್ಥಿಸಲು ಜನಾಬ್ ವಲಿಯುಲ್ಲಾರವರು ನಿರ್ಣಯವನ್ನು ಮಂಡಿಸಿದರು.

ಜನಾಬ್ ಇಮಾಂರವರು ಕ್ರಿಯಾಲೋಪವನ್ನೆತ್ತಿ, ಈ ಸಭೆಯ ಅಧಿಕಾರ ವ್ಯಾಪ್ತಿಗೆ ನಿರ್ಣಯವು ವಿರೋಧವಾಗಿದೆಯೆಂದೂ ಆದುದರಿಂದ ಅದನ್ನು ಚರ್ಚಿಸಲು ಅವಕಾಶವಿಲ್ಲವೆಂದೂ ತಿಳಿಸಿದರು.

ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಕೆ ಸಿ ರೆಡ್ಡಿರವರುಗಳು ಕ್ರಿಯಾಲೋಪವನ್ನು ವಿರೋಧಿಸಿದರು. ಚರ್ಚೆಯನ್ನು ಈ ದಿನಕ್ಕೆ ಮುಂದೆ ಹಾಕಲಾಯಿತು.

ರೈಲು ನದಿಗೆ ಬಿದ್ದು ೭೧ ಜನರ ಮರಣ

ಮೊನ್ನೆ ರಾತ್ರಿ ಟ್ರಾನ್ಸ್‌ವಾಲಿನ ದಕ್ಷಿಣ ಭಾಗದಲ್ಲಿ ೨೦೦ ಜನ ಪ್ರಯಾಣಿಕರ ರೈಲು ೩೦ ಅಡಿ ಎತ್ತರದ ಸೇತುವೆಯಿಂದ ನದಿಯಲ್ಲಿ ಬಿದ್ದುದರ ಪರಿಣಾಮವಾಗಿ ೭೧ ಜನರು ನೀರಿನಲ್ಲಿ ಮುಳುಗಿ ಸತ್ತುಹೋದರು. ೧೦೦ ಜನರಿಗೆ ತೀವ್ರ ಗಾಯಗಳು ಸಂಭವಿಸಿರುವುದಾಗಿ ವರದಿಯಾಗಿದೆ.

ಜಮೀನುದಾರರಿಗೆ ಆಹಾರ ಧಾನ್ಯಗಳ ಪ್ರಮಾಣ

ಮೈಸೂರು ೧೬

ಮೈಸೂರು ಜಿಲ್ಲೆಯಲ್ಲಿರುವ ಪ್ರತಿಯೊಬ್ಬ ಜಮೀನುದಾರರೂ ತಮ್ಮ ಜಮೀನುಗಳು ಇರುವ ಸ್ಥಳದಿಂದ ರೇಷನ್ ಜಾರಿಯಲ್ಲಿರುವ ಬೇರೆ ಕಡೆಗಳಲ್ಲಿದ್ದ ಪಕ್ಷದಲ್ಲಿ ಆಯಾ ತಾಲ್ಲೂಕು ಅಮಲ್ದಾರರಿಗೆ ತಮ್ಮ ರೇಷನ್ ಕಾರ್ಡಿನ ಅಧಿಕಾರಯುತವಾದ ಪ್ರತಿಯನ್ನು ಅಥವಾ ರೇಷನ್ ಇಲ್ಲದ ಪ್ರದೇಶದಲ್ಲಿರುವವರು ತಮ್ಮ ಸಂಸಾರದಲ್ಲಿರುವ ಜನರ ಹೆಸರುಗಳನ್ನು ಆಹಾರ ಇಲಾಖಾ ಅಧಿಕಾರಿಗಳ ಸರ್ಟಿಫಿಕೇಟ್ ಸಮೇತ ಅಥವಾ ನ್ಯಾಯಾಧೀಶರ ಅಥವಾ ಸಬ್ ರಿಜಿಸ್ಟ್ರಾರರ ಮುಂದೆ ಪ್ರಮಾಣ ಹೇಳಿಕೆಯ ಸಹಿತ ಮುಂದಿನ ತಿಂಗಳು ೨೫ನೇ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಜಿಲ್ಲಾಧಿಕಾರಿಗಳು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಜಮೀನುದಾರರು ತಮ್ಮ ಸ್ವಂತ ಉಪಯೋಗಕ್ಕಾಗಿ ಎಷ್ಟು ಆಹಾರ ಧಾನ್ಯಗಳನ್ನು ಇಟ್ಟುಕೊಳ್ಳಬಹುದೆಂಬುದನ್ನು ನಿರ್ಧರಿಸಲು ಈ ಆಜ್ಞೆಯನ್ನು ಹೊರಡಿಸಲಾಗಿದೆ. ಮೇಲ್ಕಂಡ ಸೂಚನೆಗೆ ಗಮನ ಕೊಡದಿದ್ದವರು ಸರ್ಕಾರದವರು ನಿಗದಿ ಮಾಡಿದಷ್ಟು ಆಹಾರ ಧಾನ್ಯವನ್ನು ಸರ್ಕಾರಕ್ಕೆ ಕೊಡಬೇಕಾಗುವುದು.

○ ಸಂಗೀತ ಪರಿಷತ್ತಿನ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಭಕ್ಷಿ ಬಸಪ್ಪಾಜಿ ಬಡಾವಣೆಯಲ್ಲಿರುವ ಆರ್. ವಿ. ಸ್ವಾಮಿ ಮೂರ್ತಿಗಳ (ವೆಂಕಟನಾರಾಯಣರಾವ್) ಮನೆಯಲ್ಲಿ ಶ್ರೀ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆಯನ್ನು ನಡೆಸಲಾಗುವುದು.

ಭಾರತಕ್ಕೆ ಕೆನಡಾದ ಭಾರಿ ಕೆಂಪು ಮರದ ಸಸಿ

ಪಂಡಿತ ನೆಹರೂರವರು ಕೆನಡಾಕ್ಕೆ ಭೇಟಿ ಇತ್ತಾಗ, ಅಲ್ಲಿನ ಬ್ರಿಟಿಷ್ ಕೊಲಂಬಿಯಾ ಜನರು ಅವರಿಗೆ ಅರ್ಪಿಸಿದ ಕೆಂಪು ಮರದ ಸಸಿಯೊಂದನ್ನು ಭಾರತಕ್ಕೆ ತಂದಿದ್ದಾರೆ. ಅದನ್ನು ಅವರು ದೆಹಲಿಗೆ ತೆಗೆದುಕೊಂಡು ಹೋದರು. ಅದು ಅತ್ಯಂತ ಎತ್ತರವಾಗಿ ಬೆಳೆಯುವುದೆಂದೂ ಸಾವಿರಾರು ವರ್ಷ ಇರುವುದೆಂದೂ ಹೇಳಲಾಗಿದೆ.

ರಾಜ್ಯಾಂಗ ಸಭೆಯು ರದ್ದಾಗಬೇಕು

ಸ್ವಂ ಸು ಫೋ.] ಬೆಂಗಳೂರು ೧೬

ಸಂಸ್ಥಾನದಲ್ಲಿ ಈಗಿರುವ ಶಾಸನ ಸಭೆಗಳನ್ನು ರದ್ದು ಮಾಡಿ, ಅವುಗಳ ಕಾರ್ಯಗಳನ್ನು ರಾಜ್ಯಾಂಗ ಸಭೆಯೇ ನಡೆಸಬೇಕೆಂದು ಜನಾಬ್ ವಲಿಯುಲ್ಲಾರವರು ಮಂಡಿಸಿದ್ದ ನಿರ್ಣಯವನ್ನು ಈ ದಿನ ರಾಜ್ಯಾಂಗ ಸಭೆಯಲ್ಲಿ ಅವರು ವಾಪಸು ತೆಗೆದುಕೊಂಡರು. ಜನಾಬ್ ಇಮಾಂರವರು ಎತ್ತಿದ ಕ್ರಿಯಾಲೋಪವನ್ನು ಅಧ್ಯಕ್ಷರು ಒಪ್ಪಲಿಲ್ಲವಾದರೂ ಆ ನಿರ್ಣಯದ ಔಚಿತ್ಯದ ಬಗ್ಗೆ ಅವರು ಸಂದೇಹವನ್ನು ವ್ಯಕ್ತಪಡಿಸಿದುದರಿಂದ, ಅದನ್ನು ವಾಪಸು ತೆಗೆದುಕೊಳ್ಳುವುದಾಗಿ ಸೂಚಕರು ತಿಳಿಸಿದರು.

ರಾಜ್ಯಾಂಗ ಸಭೆಯಲ್ಲಿ ಇನ್ನು ಮುಂದೆ ಕಾರ್ಯ ಕಲಾಪಗಳಿಗೆ ಅವಕಾಶ ಇಲ್ಲದುದರಿಂದ ಅದನ್ನು ರದ್ದು ಮಾಡಬೇಕೆಂದು ಜನಾಬ್ ಇಮಾಂರವರ ನಿರ್ಣಯವನ್ನು ಮಂಡಿಸಿದರು. ಅದರ ಮೇಲೆ ಚರ್ಚೆ ನಡೆಯುತ್ತಿದೆ.

ನೆಹರೂರವರು ವಿಶ್ವದ ಶ್ರೇಷ್ಠ ರಾಜಕಾರಣ ಪಟು

ವರ್ಧಂತಿ ಮಹೋತ್ಸವದಲ್ಲಿ ಚೀಣಾ ಪ್ರತಿನಿಧಿಗಳ ಪ್ರಶಂಸೆ

ಮೈಸೂರು ೧೫

ರಾಜಧಾನಿಯ ವಿವಿಧ ಕಾಲೇಜ್ ಸಂಘಗಳ ಆಶ್ರಯದಲ್ಲಿ ಮೊನ್ನೆ ಸಂಜೆ ಮಹಾರಾಜಾ ಕಾಲೇಜಿನ ಒಳಾಂಗಣದಲ್ಲಿ ನೆಹರೂರವರ ೬೧ನೇ ವರ್ಷದ ವರ್ಧಂತ್ಯುತ್ಸವವು ವಾರ್ಧಾದ ಶ್ರೀ ಆರ್ಯನಾಯಕರವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ ಮತ್ತು ಮಹಾರಾಜಾ ಕಾಲೇಜ್ ಸಂಘದ ಅಧ್ಯಕ್ಷರಿಂದ ಸ್ವಾಗತ ಭಾಷಣವಾದ ನಂತರ, ಅರಮನೆ ಆರ್ಕೆಸ್ಟ್ರಾದವರಿಂದ ಸಂಗೀತವು ನಡೆಯಿತು. ವಿಶ್ವಸಂಸ್ಥೆಯ ವಯಸ್ಕರ ವಿದ್ಯಾಭ್ಯಾಸ ಗೋಷ್ಠಿಯ ಚೀಣಾ ಪ್ರತಿನಿಧಿಗಳಾದ ಡಾ|| ಟು, ಯುನೆಸ್ಕೋ ಸಂಸ್ಥೆಯ ಟೆಕ್ನಿಕಲ್ ಪ್ರವೀಣರಾದ ಡಾ|| ಓ. ವ ತ್ತು ದೆಹಲಿಯ ಕೇಂದ್ರ ವಿದ್ಯಾ ಶಾಲಾ ಪ್ರಿನ್ಸಿಪಾಲರಾದ ಡಾ|| ಎ ಎನ್ ಬಾಸೂರವರುಗಳು ಭಾಷಣ ಮಾಡಿ, ಪಂಡಿತ ನೆಹರೂರವರಿಗೆ ವಿದ್ಯಾ ಗೋಷ್ಠಿಯ ಪರವಾಗಿ ಶುಭಾಶಯಗಳನ್ನು ಕೋರಿದರು.

ನೆಹರೂರವರ ವಿಶ್ವದ ಅತ್ಯಂತ ಶ್ರೇಷ್ಠ ರಾಜಕಾರಣಿಗಳೆಂದು ಡಾ ಚೂ ರವರು, ತಿಳಿಸಿ ಅಂತರ ರಾಷ್ಟ್ರೀಯ ವ್ಯಾಪಿಯನ್ನ ಪಡೆದಿರುವ ನೆಹರೂರವರ ನಾಯಕತ್ವದಲ್ಲಿ ಇಡೀ ವಿಶ್ವದಲ್ಲಿ ಶಾಂತಿ ನೆಲೆಸಲು ಅವಕಾಶವಾಗಲೆಂದು ಆಶಿಸಿ, ಚೀಣಾ ದೇಶದ ಪರವಾಗಿ ಅವರಿಗೆ ಶುಭಾಶಯವನ್ನು ಕೋರಿದರು

ಅಧ್ಯಕ್ಷರಾದ ಡಾ|| ಬಾಸೂರವರು ಭಾಷಣ ಮಾಡಿ, ಪಂಡಿತ ನೆಹರೂರವರ ಸೇವೆಯನ್ನು ಕೊಂಡಾಡಿ ದೇಶದಲ್ಲಿರುವ ಅನಕ್ಷರತೆಯನ್ನು ನಿರ್ಮೂಲ ಮಾಡಲು, ವಿಶ್ವ ವಿದ್ಯಾನಿಲಯದ ಅಧ್ಯಾಪಕರೂ

||ಶ್ರೀ||

ಗಣೇಶಾ ಟಾಕೀಸ್

16-11-49ರಿಂದ ದಿನ ೩ ಆಟಗಳು

ವಾಹಿನಿಯವರ

ಭಕ್ತ ಪೋತನ

(ತೆಲುಗು)

—ನಾತ್ರಿ—

ನಾಗಯ್ಯ, ಲಿಂಗಮೂರ್ತಿ

FOR SALE

A Bungalow Site in Gokulam Road, Vontikoppal. Foundations & Basement of kitchen block completed Well sunk. A few building materials cement & steel available Contact SRIDHARA, Architect. 2994 Gokulam Road, Mysore

ಮಕ್ಕಳ ಲಿವರ್ ಕಾಯಿಲೆಗೆ

ನಿರ್ಗ್ಲೋಜ್ಯಮ್

ಅಪರ್ ಹಾಲ್ಸ್, ಮೈಸೂರು

ವಿದ್ಯಾಭ್ಯಾಸದಲ್ಲಿ ಸುಧಾರಣೆ

ಸಿ. ಆರ್. ರೆಡ್ಡಿಯವರ ವರದಿ

ಸಂಸ್ಥಾನದ ವಿಶ್ವ ವಿದ್ಯಾನಿಲಯ ಮತ್ತು ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಡಾ|| ಸಿ. ಆರ್. ರೆಡ್ಡಿಯವರು ಸರ್ಕಾರಕ್ಕೆ ಒಪ್ಪಿಸಿರುವ ವರದಿಯನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ. ಅದರ ಪ್ರತಿಯೊಂದು ಈಗ ನಮ್ಮ ಹಸ್ತಗತವಾಗಿದೆ ವರದಿಯು ೨೧೫ ಪುಟಗಳನ್ನೊಳಗೊಂಡಿದೆ. ಡಾ|| ರೆಡ್ಡಿಯವರು ವಿಶ್ವ ವಿದ್ಯಾನಿಲಯ, ಅದರ ಸಂಸ್ಥೆಗಳು ಮತ್ತು ಇತರ ೨೫ ವಿದ್ಯಾ ಶಾಲೆಗಳಿಗೆ ಭೇಟಿ ಇತ್ತು ಪರಿಶೀಲನೆ ನಡೆಸಿದರು ಅವರ ಮುಖ್ಯ ಸಲಹೆಗಳು ಈ ರೀತಿ ಇವೆ: -

ವಿಶ್ವ ವಿದ್ಯಾನಿಲಯದ ಬೆಳವಣಿಗೆಗಾಗಿ ಸರ್ಕಾರದವರು ೨ ಕೋಟಿ ರೂ. ನಿಧಿಯನ್ನು ಕೊಡಬೇಕು. ವಿಶ್ವವಿದ್ಯಾನಿಲಯ ಸಂಪೂರ್ಣವಾಗಿ ಸ್ವತಂತ್ರವಾಗಿರತಕ್ಕದ್ದು ಆಡಳಿತ ಕಛೇರಿಯು ವಿಶ್ವವಿದ್ಯಾನಿಲಯದ ಆಡಳಿತ ಜವಾಬ್ದಾರಿಯನ್ನು ವಹಿಸುವುದಾದರೆ ವಿಶ್ವವಿದ್ಯಾನಿಲಯದ ಅವಶ್ಯಕತೆಯೇ ಇಲ್ಲ. ಸರ್ಕಾರವು ತನ್ನ ಹಣ

ಶಾಸನ ಮತ್ತು ಇತರ ಕಾರ್ಯಕ್ರಮಗಳಿಂದ ವಿಶ್ವವಿದ್ಯಾನಿಲಯದ ಅಧಿಕಾರವನ್ನು ಮೊಟಕು ಮಾಡುವುದಾದರೆ ವಿಶ್ವವಿದ್ಯಾನಿಲಯವು ಊರ್ಜಿತವಾಗುವುದಿಲ್ಲ ವಿಶ್ವವಿದ್ಯಾನಿಲಯದ ಆಡಳಿತಾಧಿಕಾರವನ್ನು ಪ್ರತ್ಯೇಕವಾಗಿ ವಿಭಾಗಿಸಬೇಕು ಅಕಡೆಮಿಕ್ ಕೌನ್ಸಿಲ್ಲಿಗೆ ಪರೀಕ್ಷಾ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು ಮತ್ತು ಆದರಿಂದ ವಿಶ್ವವಿದ್ಯಾನಿಲಯದ ಕೌನ್ಸಿಲಿಗೆ ಪ್ರತಿನಿಧಿಗಳನ್ನು ಕಳುಹಿಸುವ ಪದ್ಧತಿ ರದ್ದಾಗಬೇಕು. ಸೆನೆಟ್ ಸಭೆಯು ಈಗಿರುವಂತೆ ಇದ್ದು, ವಾಣಿಜ್ಯ ಸಂಸ್ಥೆ, ಮೆಡಿಕಲ್ ಕೌನ್ಸಿಲ್, ವಕೀಲರ ಸಂಘಗಳಿಂದ ಒಬ್ಬೊಬ್ಬ ಪ್ರತಿನಿಧಿಗಳನ್ನು ಅದಕ್ಕೆ ಛಾನ್ಸಲರು ನಾಮಕರಣ ಮಾಡಬೇಕು. ವಿಶ್ವವಿದ್ಯಾನಿಲಯದ ಕೌನ್ಸಿಲ್ಲನ್ನು ಇನ್ನು ಮುಂದೆ ಸಿಂಡಿಕೇಟ್ ಎಂದು ಕರೆಯತಕ್ಕದ್ದು ವಿಶ್ವವಿದ್ಯಾನಿಲಯದ ರೀತಿ ನೀತಿ, ಸಂಬಳ ಇತ್ಯಾದಿಗಳನ್ನು ಸಿಂಡಿಕೇಟ್ ಸಲಹೆ ಮೇರೆ ಸೆನೆಟ್ ಸಭೆಯು ನಿರ್ಧರಿಸತಕ್ಕದ್ದು ವಿಶ್ವವಿದ್ಯಾನಿಲಯದಲ್ಲಿ ರಾಜಕೀಯಕ್ಕೂ ಮತ್ತು ಅಧಿಕಾರಿ ಮತ್ತು ಬಾಸಗೀ ಎಂಬ ಭೇದ ಭಾವನೆಗಳಿಗೂ ಅವಕಾಶವಿರಕೂಡದು. ಉದ್ಯೋಗಗಳ ನೇಮಕವನ್ನು ಪರಿಶೀಲಿಸಲು ಒಂದು ಶಾಸನ ಬದ್ಧ ಸಮಿತಿ ಇರಬೇಕು ವಿಶ್ವವಿದ್ಯಾನಿಲಯಗಳ ಅಧ್ಯಾಪಕರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಬೇಕು ಮಿಲಿಟರಿ ಮತ್ತು ವ್ಯಾಯಾಮ ಶಿಕ್ಷಣವನ್ನು ಕೊಡತಕ್ಕದ್ದು. ಗೃಹ ವಿಜ್ಞಾನ ಕಾಲೇಜಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು

ಎಲ್ಲ ಪ್ರಾಥಮಿಕ ಶಾಲೆಗಳಲ್ಲೂ ಮೂಲ ಶಿಕ್ಷಣವನ್ನು ಕೊಡತಕ್ಕದ್ದು. ಬಾಲಕಿಯರ ಶಾಲೆಯಲ್ಲಿ ಮಹಿಳೆಯರೇ ಅಧ್ಯಾಪಕಿಯರಾಗಿರತಕ್ಕದ್ದು.

ಮತ್ತು ವಿದ್ಯಾರ್ಥಿಗಳೂ ದುಡಿಯಬೇಕೆಂದು ತಿಳಿಸಿದರು

ಶ್ರೀ ಬಾಸೂರವರು ಭಾಷಣ ಮಾಡಿ, ನೆಹರೂರವರು ಭಾರತ ಯುವಕ ಸ್ತೋಮದ ಮೂರ್ತಿ ಸ್ವರೂಪರೆಂದೂ, ಅವರ ನಾಯಕತ್ವದಲ್ಲಿ ಪಡೆದಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಯುವಕರೆಲ್ಲರೂ ಸೇವೆ ಸಲ್ಲಿಸಬೇಕೆಂದೂ ಹೇಳಿದರು

ಅಧ್ಯಕ್ಷರು ಭಾಷಣ ಮಾಡಿ, ನೆಹರೂರವರ ಆದರ್ಶವನ್ನು ಯುವಕರು ಮುಂದಿಟ್ಟುಕೊಂಡು ದೇಶ ಸೇವೆಗಾಗಿ ದುಡಿಯಬೇಕೆಂದು ತಿಳಿಸಿದರು

ಶ್ರೀ ಗಾಯತ್ರೀ

ದಿನವಹಿ ಮೂರು ಪ್ರದರ್ಶನಗಳು

17-11-49ರಿಂದ 3 ದಿನಗಳು ಮಾತ್ರ

ಸೋರ್ಡ್ ಆಫ್ ದಿ ಅವೆಂಜರ್

Sword of the Avenger

Morning Shows on 19th & 20th Nov.

EVERY GIRL SHOULD BE MARRIED

ಪ್ರಭಾ ಈ ರಾತ್ರಿ

ಬಾಂಬೆ ಟಾಕೀಸ್‌ರವರ ಹಿಂದಿ ಚಿತ್ರ

ಜಿದ್ದಿ

ಕಾಮಿನಿ ಕೌಶಲ್ ದೇವ್ ಆನಂದ್

ಮುಂದಿನ ಆಕರ್ಷಣೆ

ರಂಜಿತ್ ಸ್ಟುಡಿಯೋದವರ

ಜೀತ್ ಲೋ ದಿಲ್ (ಹಿಂದಿ)

ಸುರೈಯ್ಯಾ, ಶ್ಯಾಮ್, ಕಕ್ಕು, ...

Edited printed and published by A. R. Nagarajan, at Sadhvi Press D. Subbiah Road, Mysore

ಮೈಸೂರು ವಿಶ್ವವಿದ್ಯಾಲಯ

ನಂ. G. 3 481/49 50

ಮೈಸೂರು ವಿಶ್ವವಿದ್ಯಾಲಯದ ಕಛೇರಿ ಮೈಸೂರು, ತಾ ೧೦ ೧೧ ೧೯೪೯.

ಪ್ರಕಟಣೆ

ಸ್ಟ್ಯಾಚ್ಯೂಟ್ 79* (1947—48ರ ಕ್ಯಾಲೆಂಡರ್ ವಾಲ್ಯಂ 1 ಪುಟ 31) ರ ಪ್ರಕಾರ ಈ ವಿಶ್ವವಿದ್ಯಾಲಯದ ರಿಜಿಸ್ಟರ್ಡ್ ಪದವೀಧರರು (ರಿಜಿಸ್ಟರ್ಡ್ ಪದವೀಧರರು ಎಂದು ಎನ್‌ರೋಲ್ ಆಗಿರುವವರು ಮಾತ್ರ) ಪುನರ್ವಿಮರ್ಶೆ ಅಥವಾ ತಿದ್ದುಪಡಿಗಾಗಿ ಈ ಕೆಳಗೆ ನಮೂದಿಸಿರುವ ನಮೂನೆಯಲ್ಲಿ ತಮ್ಮ ಅರ್ಜಿಗಳನ್ನು 1949ನೇ ಡಿಸೆಂಬರ್ 15ನೇ ತಾರೀಖು ಅಥವಾ ಅದರೊಳಗಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು

* ಸ್ಟ್ಯಾಚ್ಯೂಟ್ 79: ಪ್ರತಿ ವರ್ಷದ ಜನವರಿ ಮಾಹೆ ಮೊದಲನೇ ದಿನ ಗ್ರಾಜುಯೇಟುಗಳ ರಿಜಿಸ್ಟರುಗಳನ್ನು ಪುನರ್ವಿಮರ್ಶೆಗಳಾಗುವುದು, ಮತ್ತು ತಿದ್ದುಪಡಿ ಮಾಡಲಾಗುವುದು ಪುನರ್ವಿಮರ್ಶೆ ಇಲ್ಲವೇ ತಿದ್ದುಪಡಿಗಾಗಿ ಅರ್ಜಿಗಳನ್ನು ರಿಜಿಸ್ಟ್ರಾರ್‌ರವರಿಗೆ ಡಿಸೆಂಬರ್ ೧೫ ನೇ ತಾರೀಖಿನೊಳಗಾಗಿ ತಲುಪುವಂತೆ ಕಳುಹಿಸಬೇಕು.

1 ಡಿಗ್ರಿ ಅಥವಾ ಡಿಗ್ರಿಗಳೊಂದಿಗೆ ಹೆಸರು
2 ಎನ್‌ರೋಲ್‌ಮೆಂಟ್ ನಂ
3 ವಿಳಾಸ

ಅಪ್ಪಣೆ ಮೇರೆಗೆ

(ಸಹಿ) ಸಿ. ರಂಗಾಚಾರ್

ಆಕ್ಟಿಂಗ್ ರಿಜಿಸ್ಟ್ರಾರ್

ಸಂಸ್ಥಾನಗಳ ರಾಜ್ಯಾಂಗ

ನೈಜಾಮರ ಒಪ್ಪಿಗೆ

ಭಾರತ ರಾಜ್ಯಾಂಗ ಸಭೆಯು ಸಂಸ್ಥಾನಗಳಿಗೆ ಅನ್ವಯಿಸುವಂತೆ ನಿರ್ಧರಿಸಿ ರಾಜ್ಯಾಂಗವನ್ನೇ ಹೈದರಾಬಾದಿಗೂ ಯಿಸುವ ಬಗ್ಗೆ ನೈಜಾಮರು ಒಪ್ಪಿಗೆ ರುವರೆಂದೂ, ಇನ್ನು ಕೆಲವು ದಿನ ಈ ಬಗ್ಗೆ ಘೋಷಣೆ ಹೊರಬೀಳುವು ದೂ, ಸಂಸ್ಥಾನ ಶಾಖೆಯ ಸಲಹೆಗಾ ದ ವಿ ಪಿ ಮೆನನ್‌ರವರು ತಿಳಿಸಿರುತ್ತಾ ಈ ವರ್ಷಾಂತ್ಯದಲ್ಲಿ ಹೈದರಾಬಾದಿನ ಲಿಟರಿ ಸರ್ಕಾರವು ರದ್ದಾಗಿ, ಸಿವಿಲ್ ರ್ಕಾರವನ್ನು ರಚಿಸಲಾಗುವುದೆಂದೂ ರು ಹೇಳಿರುತ್ತಾರೆ.

ಮೈಸೂರು ಸಿಟಿ ಮುನಿಸಿಪಾಲ್

—:o:—

ಹರಾಜು ಇಸ್ತಿಹಾರ್

ಇದರಿಂದ ಸಮಸ್ತ ಜನಗಳಿಗೂ ಯಪಡಿಸುವುದೇನೆಂದರೆ.—

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ೧೯೪೯ನೇ ಇಸವಿ ನವೆಂಬರ್ ಮಾಹೆ ತಾ|| ೨೩ ಬುಧವಾರ ಪ್ರಾತಃಕಾಲ ಒಂಭತ್ತು ಗಂಟೆ ಲಾಗಾಯ್ತು ಹಾಲ್ ಆವರಣದಲ್ಲಿ ಬಹಿರಂಗವಾಗಿ ರಾಜು ಇಸ್ತಿಹಾರು ಷರತ್ತುಗಳಿಗೆ ಒಳ ಸಿ ಹರಾಜು ಮಾಡಲಾಗುತ್ತೆ ಇಷ್ಟ ವರು ಹರಾಜಿನಲ್ಲಿ ಹಾಜರಾಗಿ ಭಾಗ ಖುಸ್ತು ಪಡೆದು ಸಾಮಾನುಗಳ ಹೊಂದಬಹುದು. ಆಕೈರು ಬಿಡ್ಡು ರು ಪೂರ್ತಾ ಹಣವನ್ನು ಹರಾಜಾದ ಡಲೇ ಪಾವತಿ ಮಾಡತಕ್ಕದ್ದು. ನ್ನು ಹರಾಜು ಮಂಜೂರಾದನಂತರ ಫರ್ದು ಕೊಡಲಾಗುತ್ತೆ ಹರಾಜು ಜೂರಿ ಸಂಗತಿ ತಿಳಿಸಿದ ಕೂಡಲೇ ಲುಗಳನ್ನು ಸಾಗಿಸತಕ್ಕದ್ದು.

ತಪ್ಸೀಲು

೧ ಹಳೇ ಟೈರುಗಳು ಮತ್ತು ಟ್ಯೂಬುಗಳು. (ಉಪಯುಕ್ತ ಮತ್ತು ಅನುಪಯುಕ್ತವಾದುವು)

೨ ಮಿಲಿಟರಿ ಟೈರುಗಳು ಮತ್ತು ಟ್ಯೂಬುಗಳು. (ಉಪಯುಕ್ತವಾದುವು)

೩ ಹಳೆಯ ಖಾಲಿ ಟಾರ್ ಡ್ರಮ್‌ಗಳು.

ಹೆಚ್. ಎಸ್. ನಾರಾಯಣರಾವ್

ಕಮಿಷನರಿಗಾಗಿ,

ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

ಗೂರಲು ಉಬ್ಬಸ, ಪರಿಣಾಮಕಾರಿ ಮತ್ತು ಗಲಾಯುಕಟ್ಟೆ (Tonsil) ಗಾಗಿ ರಿಯಾದ ಔಷಧಿ ದೊರೆಯುತ್ತದೆ ಅನೇಕ ಮಂದಿ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ

ದಿವಾನರ ರಸ್ತೆ, ಮೈಸೂರು

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೭-೧೧-೪೯ [ಸಂಚಿಕೆ ೯೩

ಮೈ|| ಜಿಲ್ಲಾ ಮೋಟಾರು ಕೆಲಸಗಾರರ ಮುಷ್ಕರ

ಗಾಯಿತ್ರೀ ದೇವಿಯವರ ತುಲಾ ಭಾರ

ಶ್ರೀಮನ್ಮಹಾರಾಜರವರು ಶ್ರೀಮನ್ಮಹಾರಾಣಿಯವರು ಮತ್ತು ರಾಜಕುಮಾರಿ ಶ್ರೀ ಗಾಯಿತ್ರೀದೇವಿಯವರನ್ನೊಡಗೂಡಿ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಭೇಟಿ ಇತ್ತು, ಶ್ರೀ ಗಾಯಿತ್ರೀ ದೇವಿಯವರ ತುಲಾ ಭಾರ ಸೇವೆಯನ್ನು ಚಿನ್ನ ಬೆಳ್ಳಿಗಳಿಂದ ನಡೆಸಿದರು. ರಾಜಮನೆತನದಲ್ಲಿ ಸಂತಾನಕ್ಕಾಗಿ ಹಿಂದೆ ಶ್ರೀಮನ್ಮಹಾರಾಜರವರು ಈ ಕ್ಷೇತ್ರದಲ್ಲಿ ಪ್ರಾರ್ಥಿಸಿ ಕೊಂಡಿದ್ದರೆಂದೂ, ತನ್ನ ಅಭೀಷ್ಟನೆರವೇರಿಸಿದುದಕ್ಕಾಗಿ ರಾಜಕುಮಾರಿಯವರ ತುಲಾ ಭಾರ ಸೇವೆ ಸಲ್ಲಿಸಲು ಈ ಪ್ರವಾಸವನ್ನು ಕೈಗೊಂಡಿದ್ದರೆಂದೂ ತಿಳಿದು ಬಂದಿದೆ

ಭೀಕರ ವಿಮಾನ ಅನಾಹುತ

ನಿನ್ನೆ ಬೆಳಗ್ಗೆ ಕಲ್ಕತ್ತ ನಗರದ ಮೇಲೆ ಹಾರಾಡುತ್ತಿದ್ದ ಎರಡು ವಿಮಾನಗಳು ಒಂದಕ್ಕೊಂದು ಡಿಕ್ಕಿ ಹೊಡೆದು ಕೆಳಕ್ಕೆ ಬಿದ್ದು ನಾಶವಾದವು. ಒಂದು ವಿಮಾನವು ಮೆಡಿಕಲ್ ಕಾಲೇಜಿನಲ್ಲಿರುವ ವೈದ್ಯಶಾಲೆಯ ಮೇಲೆ ಬಿದ್ದು ಬೆಂಕಿ ಹತ್ತಿಕೊಂಡಿತು ಚಿವರ ವೈಮಾನಿಕರು ಬೆಂಕಿಯಲ್ಲಿ ಸುಟ್ಟು ಭಸ್ಮವಾದರು. ಮತ್ತೊಂದು ವಿಮಾನವು ವಿಕ್ಟೋರಿಯಾ ಬಾಲಕಿಯರ ಕಾಲೇಜಿನ ಸೇವಕರ ಗೃಹಗಳ ಮೇಲೆ ಬಿದ್ದು ನಾಶವಾಯಿತು ಆದರೆ ವೈಮಾನಿಕರು ಪ್ಯಾರಚೂಟ್ ಸಹಾಯದಿಂದ ಕೆಳಕ್ಕೆ ದುಮಿಕಿ ಪ್ರಾಣಾಪಾಯದಿಂದ ತಪ್ಪಿಸಿಕೊಂಡರು. ೩೭ ಜನರಿಗೆ ಗಾಯವಾಗಿ ಅವರುಗಳನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಗಾಯಗೊಂಡವರ ಪೈಕಿ, ಇಬ್ಬರು ಮಕ್ಕಳು ಸೇರಿ ೫ ಜನರು ಆಸ್ಪತ್ರೆಯಲ್ಲಿ ಮರಣಹೊಂದಿದರು.

೮ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ

ಬೆಂಗಳೂರು ಚಾಮರಾಜಪೇಟೆಯಲ್ಲಿ ೮ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಲು ಪ್ರಯತ್ನಿಸಿದ ಬಿ ಎಸ್ ರಂಗಯ್ಯ ಶೆಟ್ಟಿ ಎಂಬುವನಿಗೆ ನಗರ ನ್ಯಾಯಾಧೀಶರು ೧೦೦ ರೂ ದಂಡವನ್ನು ವಿಧಿಸಿದ್ದಾರೆ

ಮದರಾಸ್ ಮುಸ್ಲಿಮರಿಗೆ ಪೋಲೀಸಿನಲ್ಲಿ ಕೆಲಸವಿಲ್ಲ

ಮದರಾಸ್ ಪ್ರಾಂತ್ಯದ ಪೋಲೀಸ್ ಇಲಾಖೆಯಲ್ಲಿ ಈಗಾಗಲೇ ಹೆಚ್ಚು ಮಂದಿ ಮುಸ್ಲಿಮರು ಇರುವುದರಿಂದ ಇನ್ನು ಮುಂದೆ ಮುಸ್ಲಿಮರನ್ನು ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಜಿಲ್ಲಾ ಟ್ರಾಫಿಕ್ ಸಲಹಾ ಸಮಿತಿ

ಮೈಸೂರು ಜಿಲ್ಲಾ ಟ್ರಾಫಿಕ್ ಸಲಹಾ ಸಮಿತಿಯನ್ನು ಸರ್ಕಾರದವರು ಪುನರ್ರಚಿಸಿ ಶ್ರೀಗಳಾದ ಹೆಚ್ ಎಂ ಚನ್ನಬಸಪ್ಪ, ಎಂ ಮಾದಯ್ಯ, ಕೆ ಪುಟ್ಟಸ್ವಾಮಿ, ಎಚ್ ಆರ್ ತಮ್ಮಯ್ಯ, ಕೆ. ವಿ. ವೀರಣ್ಣ, ಎಂ ಎ ಶ್ರೀನಿವಾಸ ಅಯ್ಯಂಗಾರ್, ಎಸ್ ರಂಗರಾಮಯ್ಯ, ಎಂ. ಮರಿಗೌಡ, ಕೆ. ಬಸಪ್ಪ ಮತ್ತು ಡಿ ದೇವರಾಜ ಅರಸ್‌ರವರು, ಜಿಲ್ಲಾ ಪೋಲೀಸ್ ಅಧಿಕಾರಿಗಳು, ಮೈಸೂರು ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟ್‌ರು, ಎಕ್ಸಿಕ್ಯೂಟಿವ್ ಇಂಜನಿಯರುಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ ಆದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರು

ರೆಡ್ಡಿಯವರ ಸಲಹೆ ಕಾರ್ಯರೂಪಕ್ಕೆ ತರಲು ಸಮಿತಿ

ಮೈಸೂರು ೧೭

ಸಂಸ್ಥಾನದ ವಿಶ್ವ ವಿದ್ಯಾನಿಲಯ ಮತ್ತು ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಡಾ|| ಸಿ ಆರ್ ರೆಡ್ಡಿಯವರು ಸೂಚಿಸಿರುವ ಸಲಹೆಗಳನ್ನು ಕಾರ್ಯ ರೂಪಕ್ಕೆ ತರಲು ಸರ್ಕಾರದವರು ಡಾ|| ಸಿ ಆರ್ ರೆಡ್ಡಿ, ಶ್ರೀಗಳಾದ ಆರ್ ಕಸ್ತೂರಿರಾಜ ಶೆಟ್ಟಿ, ಟಿ. ಸಿಂಗಾರವೇಲು ಮೊದಲಿಯಾರ್, ಬಿ ಎಸ್ ಮಂಜನಾಥ್ ಮತ್ತು ಎಂ ನಾರಾಯಣ ರಾಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿದ್ದಾರೆ. ಈಗಿರುವ ವಿಶ್ವವಿದ್ಯಾನಿಲಯದ ಶಾಸನವನ್ನು ಬದಲಾಯಿಸಲು ಸೂಕ್ತ ಸಲಹೆಕೊಡಬೇಕೆಂದು ಸಮಿತಿಯವರಿಗೆ ಸೂಚನೆ ಕೊಡಲಾಗಿದೆ.

ವರಮಾನ ತೆರಿಗೆ ಅಧಿಕಾರಿಗಳಿಗೆ ಸರ್ಕಾರದ ಸೂಚನೆ

ಭಾರತದೊಡನೆ ಮೈಸೂರಿನ ವರಮಾನ ತೆರಿಗೆ ಇಲಾಖೆಯು ಸಧ್ಯದಲ್ಲಿಯೇ ಐಕ್ಯವಾಗಲಿರುವುದರಿಂದ ಆ ಇಲಾಖೆಯ ಅಧಿಕಾರಿಗಳನ್ನು ಅರ್ಥಸಚಿವ ಶ್ರೀ ಹೆಚ್ ಸಿ. ದಾಸಪ್ಪನವರು ಕರೆಸಿಕೊಂಡು ಅವರುಗಳು ಇಷ್ಟಪಟ್ಟರೆ, ಕೇಂದ್ರ ಸರ್ಕಾರಕ್ಕೆ ಸೇರಬಹುದೆಂದೂ ಅಥವ ಸಂಸ್ಥಾನದ ವ್ಯಾಪಾರ ತೆರಿಗೆ ಇಲಾಖೆಯಲ್ಲೇ ಇರಬಹುದೆಂದೂ ತಿಳಿಸಿದರೆಂದು ಗೊತ್ತಾಗಿದೆ

ಸಕ್ಕರೆ ಕಾರ್ಖಾನೆಯಲ್ಲಿ ಮುಷ್ಕರವಿಲ್ಲ

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಅಕ್ರಮ ಮುಷ್ಕರವೆಂದು ಪ್ರಚಾರವಾಗಿ ಸಕ್ಕರೆ ಅಭಾವಕ್ಕೆ ಕೆಲಸಗಾರರ ವರ್ತನೆಯೇ ಕಾರಣವೆಂದು ಹೇಳಲಾಗುತ್ತಿದೆ ೪ ನೇ ತಾ|| ಕೆಲವು ಕಾರ್ಮಿಕರು ಕೆಲಸಕ್ಕೆ ಹೋಗದಿದ್ದರೂ ಸಂಘದ ಅಧ್ಯಕ್ಷರ ಬುದ್ಧಿವಾದದ ಮೇಲೆ ಕೆಲಸಕ್ಕೆ ಹಿಂತಿರುಗಿದರು ಆಡಳಿತ ವರ್ಗದವರ ಕಾರ್ಯಕ್ರಮದಿಂದ ವಾತಾವರಣವು ಕದಡಿತು ಆದರೂ ಕೆಲಸಗಾರರಿಂದ ಯಾವ ವಿಧವಾದ ಅಡ್ಡಿ ಆತಂಕಗಳೂ ಇರಲಿಲ್ಲ ಕೆಲಸದಿಂದ ವಜಾ ಆದ ಮತ್ತು ಸಸ್ಪೆಂಡ್ ಆದ ೬೦ ಕಾರ್ಮಿಕರ ವಿನಹ ಮತ್ತೆಲ್ಲರೂ ಕೆಲಸಕ್ಕೆ ಹೋಗುತ್ತಿದ್ದಾಗಿ ಆದ್ದರಿಂದ ಅಲ್ಲಿ ಯಾವ ಮುಷ್ಕರವೂ ಇಲ್ಲ-ಎಂದು ಸಕ್ಕರೆ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎ ರಾಮಣ್ಣನವರು ತಿಳಿಸಿರುತ್ತಾರೆ

ರಾಜ್ಯಾಂಗ ಸಭೆಯು ಮುಕ್ತಾಯ

ಬೆಂಗಳೂರು ೧೭

ನಿನ್ನೆ ರಾಜ್ಯಾಂಗ ಸಭೆಯಲ್ಲಿ ಈ ಅಧಿವೇಶನವನ್ನು ಮುಕ್ತಾಯಗೊಳಿಸಿ ಮುಂದೆ ಅಧ್ಯಕ್ಷರಿಗೆ ತೋರಿದಾಗ ಅದನ್ನು ಕರೆಯುವ ಅಧಿಕಾರವನ್ನು ಅವರಿಗೆ ಕೊಡಬೇಕೆಂದು ಶ್ರೀ ಎ ಜಿ ರಾಮಚಂದ್ರರಾಯರು ಸೂಚಿಸಿದ ನಿರ್ಣಯವು ಅಂಗೀಕೃತವಾಯಿತು ಅದನ್ನು ಜನಾಬ್ ಇಮಾಂರವರು ವಿರೋಧಿಸಿ, ಇನ್ನು ಮುಂದೆ ಸಭೆ ಸೇರುವ ಕಾರಣವಿಲ್ಲವೆಂದೂ, ವೃಥಾ ಹಣವನ್ನು ವೆಚ್ಚ ಮಾಡುವ ಬದಲು ಅದನ್ನು ಹೆಚ್ಚು ಆಹಾರ ಬೆಳೆ ಯೋಜನೆಗೆ ಉಪಯೋಗಿಸಬೇಕೆಂದೂ ತಿಳಿಸಿದರು

ರಾಜ್ಯಾಂಗದ ವಿಷಯದಲ್ಲಿ ಕೇಂದ್ರದವರಾಗಲೀ ಮಹಾರಾಜರವರಾಗಲೀ ಈ ಸಭೆಯ ಅಭಿಪ್ರಾಯವನ್ನು ಕೇಳಲು ಅವಕಾಶ ವಿರಬೇಕೆಂದು ಶ್ರೀ ಕೆ ಸಿ ರೆಡ್ಡಿಯವರು ಹೇಳಿದರು

ಶಾಸನ ಸಭೆಯ ಅಧಿವೇಶನವಿಲ್ಲ

ಮುಂದಿನ ತಿಂಗಳು ನಡೆಯಬೇಕಾಗಿದ್ದ ನ್ಯಾಯ ವಿಧಾಯಕ ಸಭೆಯ ಅಧಿವೇಶನವು ಈ ಸಾರಿ ನಡೆಯುವುದಿಲ್ಲವೆಂದು ತಿಳಿದುಬಂದಿದೆ

ನೆಹರೂರವರಿಗೆ ಮತ್ತೊಂದು ವಜ್ರದ ಪಾರಿತೋಷಕ

ಒಂದುಬೆಳ್ಳಿಯ ಭಾರತದ ಭೂಪಟದ ಮಧ್ಯೆ ಮನುಷ್ಯನ ಹಸ್ತ ಒಂದರಲ್ಲಿ ಉರಿಯುವ ಪಂಜು. ರಾಜಧಾನಿಯಾದ ದೆಹಲಿಯಿಂದ ಹೊರಕ್ಕೆ ಎದ್ದು ಒಂದಂತೆ ಕಾಣುತ್ತಿರುವುದು ಮತ್ತು ಆ ಪಂಜಿನ ಮಧ್ಯದಲ್ಲಿ ೬೦ ವಜ್ರಗಳಿಂದ ಸ್ವಾತಂತ್ರ್ಯ ಎಂಬ ಅಕ್ಷರಗಳನ್ನು ಕೆತ್ತಿರುವುದು– ಈ ಪಾರಿತೋಷಕವನ್ನು ದೆಹಲಿಯ ಪ್ರಜೆಗಳು ಇದೇ ೨೩ನೇ ತಾ|| ಕೆಂಪುಕೋಟೆಯಲ್ಲಿ ಪಂಡಿತ ನೆಹರೂರವರಿಗೆ ಅರ್ಪಿಸಲು ವ್ಯವಸ್ಥೆ ಮಾಡಿದ್ದಾರೆ

೭೭ ವರ್ಷ ಸೇವೆ ಮಾಡಿದ ಪ್ರೊಫೆಸರ್

ಬ್ರಿಟನ್ನಿನ ಕೇಂಬ್ರಿಡ್ಜ್ ವಿಶ್ವ ವಿದ್ಯಾನಿಲಯದಲ್ಲಿ ೭೭ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಡಾ ಬರ್ಕೆನ್ಸ್ ಎಂಬುವರು ನಿಧನರಾದರೆಂದು ವರದಿಯಾಗಿದೆ ಅವರು ೧೮೭೨ ರಲ್ಲಿ ವಿದ್ಯಾರ್ಥಿಯಾಗಿ ಸೇರಿ, ಅಲ್ಲೇ ಅಧ್ಯಾಪಕರಾಗಿದ್ದರು

೨೮ನೇ ತಾ|| ನಿಂದ ಮೋಟಾರ ಕೆಲಸಗಾರರ ಮುಷ್ಕರ

ಮೈಸೂರು ೧೭

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ಸಂಜೆ ಶ್ರೀ ಸಿ. ಹೆ. ದೇವನಾಥರವರ ಅಧ್ಯಕ್ಷತೆಯಲ್ಲಿ ನಡೆಯಿತು ಕೆಲಸಗಾರರ ಬೇಡಿಕೆಗಳ ಬಗ್ಗೆ ಮಾಲೀಕರುಗಳ ಮುಂದೆ ನಡೆದ ಸಂಧಾನವು ಮುರಿದು ಬಿದ್ದು ಹೋಗಿ ಕಾರ್ಮಿಕರ ಕಾನೂನಿನ ಪ್ರಕಾರ ಅಸಿಸ್ಟೆಂಟ್ ಲೇಬರ್ ಕಮೀಷನರು ಇದುವರೆಗೂ ಮುಷ್ಕರ ಬ್ಯಾಲೆಟ್ ತೆಗೆದುಕೊಳ್ಳದೆ ಹೋಗಿರುವುದರಿಂದ, ಇದೇ ೨೮ನೇ ತಾ|| ನಿಂದ ಕಾನೂನು ಬದ್ಧವಾದ ಸಾಮೂಹಿಕ ಮುಷ್ಕರವನ್ನು ಹೂಡಬೇಕೆಂದು ನಿರ್ಣಯ ಮಾಡಲಾಯಿತು

ಸಂಗೀತ.

ರಾಜಧಾನಿಯ ಕೃಷ್ಣರಾಜಮೊಹಲ್ಲಾ ನಾಲ ಬೀದಿಯಲ್ಲಿರುವ ದೊಡ್ಡರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ವಿದ್ವಾನ್ ಚಿಕ್ಕಸ್ವಾಮಿಯವರಿಂದ ಸಂಗೀತವು ನಡೆಯುವುದು

೧೦೦ ವರ್ಷದ ಮಹಿಳೆಯ ನಿಧನ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಯಳಂದೂರಿನ ಶ್ರೀ ಗೋಪಾಲ ಶಾಸ್ತ್ರಿಗಳ ಮಾತೋಶ್ರೀಯವರಾದ ಶ್ರೀಮತಿ ಗೌರಮ್ಮನವರು ಈ ದಿನ ಮುದ್ಯಾಹ್ನ ತಮ್ಮ ೧೦೦ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಆತ್ಮಕ್ಕೆ ಭಗವಂತನು ಶಾಂತಿಯೀಯಲೆಂದು ಪ್ರಾರ್ಥಿಸಿ, ಬಂಧುವರ್ಗದವರಿಗೆ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

ಜೈ ಹಿಂದ್ !

ಪೌರಸಭಾ ಚುನಾವಣೆ

★

ದಯವಿಟ್ಟು ತಮ್ಮ ಘನವಾದ
ಓಟನ್ನು

ಕಾಂಗ್ರೆಸ್ಸಿಗೇ ಕೊಡಿರಿ !

ಕೂಡಲೇ ಆಂಧ್ರ ಪ್ರಾಂತ್ಯ ರಚಿಸಲು ನಿರ್ಣಯ

ಕೂಡಲೇ ಆಂಧ್ರ ಪ್ರಾಂತವನ್ನು ನಿರ್ಮಿಸಬೇಕೆಂದು ಭಾರತ ಸರ್ಕಾರಕ್ಕೆ ತಿಳಿಸುವ ನಿರ್ಣಯವು ನಿನ್ನೆ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯಲ್ಲಿ ಅಂಗೀಕೃತವಾಯಿತು

ಸಬ್ ಅಸಿಸ್ಟೆಂಟ್ ಸರ್ಜನರುಗಳ ಹೆಸರು ಬದಲಾವಣೆ

ಸಂಸ್ಥಾನದ ಸಬ್ ಅಸಿಸ್ಟೆಂಟ್ ಸರ್ಜನರುಗಳನ್ನು ಇನ್ನು ಮುಂದೆ ಅಸಿಸ್ಟೆಂಟ್ ಸರ್ಜನರುಗಳು (ಎರಡನೇ ಗ್ರೇಡು) ಎಂದು ಕರೆಯಲಾಗುವುದು

ವಿಮಾನದಲ್ಲಿ ಮಗುವಿನ ಜನನ

ಸ್ಕಾಟ್ಲೆಂಡಿನಿಂದ ನ್ಯೂಯಾರ್ಕಿಗೆ ಪ್ರಯಾಣ ಮಾಡುತ್ತಿದ್ದ ವಿಮಾನವೊಂದರಲ್ಲಿ ಪೋಲೆಂಡಿನ ಮಹಿಳೆಯೊಬ್ಬಳು ಪ್ರಸವ ವೇದನೆ ಕಂಡು ಬಂದುದರಿಂದ ವೈಮಾನಿಕನು ವೈದ್ಯರ ಸಹಾಯಕ್ಕಾಗಿ ವೈರ್‌ಲೆಸ್ ವಾರ್ತೆಯನ್ನು ನಿಲ್ದಾಣಕ್ಕೆ ಕಳುಹಿಸಿದನು ಅಷ್ಟರಲ್ಲಿ ಆಕೆಗೆ ಹೆಣ್ಣು ಮಗವು ಜನನವಾಯಿತು ಮಗು ಬಾಣಂತಿಯರು ಸೌಖ್ಯವಾಗಿದ್ದಾರೆಂದು ಕೇಳಲಾಗಿದೆ

ನೆಹರೂರವರಿಂದ ಅಶೋಕ ಸ್ತಂಭದ ಅರ್ಪಣೆ

ವರ್ಧಂತ್ಯುತ್ಸವದ ಕಾಣಿಕೆಯಾಗಿ ಪಂಡಿತ ನೆಹರೂರವರಿಗೆ ಬೊಂಬಾಯಿನ ಜನರು ರತ್ನ ಖಚಿತವಾದ ಚಿನ್ನದ ಅಶೋಕ ಸ್ತಂಭವನ್ನು ಮೊನ್ನೆ ದಿನ ಅರ್ಪಿಸಿದ ಸಮಯದಲ್ಲಿ ಪಂಡಿತ ನೆಹರೂರವರು ಭಾಷಣ ಮಾಡಿ, ತಮಗೆ ಇಷ್ಟು ಭಾರಿ ಬೆಲೆ ಬಾಳುವ ಕಾಣಿಕೆಯನ್ನು ಕೊಟ್ಟಿರುವುದು ತಮ್ಮನ್ನು ಸಂಕೋಚದ ಇಕ್ಕಟ್ಟಿನಲ್ಲಿಟ್ಟಂತಾಗಿದೆಯೆಂದು ತಿಳಿಸಿದರು. ಅದು ತುಂಬಾ ಅಮೂಲ್ಯವಾದುದರಿಂದ ಅದನ್ನು ಒಯ್ಯಲು ಕಷ್ಟವೆಂದೂ, ಸಂರಕ್ಷಿಸುವುದು ಅಸಾಧ್ಯವೆಂದೂ, ಅದನ್ನು ಯಾವ ಒಳ್ಳೆಯ ಕೆಲಸಕ್ಕೂ ಉಪಯೋಗಿಸಲು ಸಾಧ್ಯವಿಲ್ಲವೆಂದೂ, ಅಭಿಪ್ರಾಯಪಟ್ಟಿರುತ್ತಾರೆ. ಅದನ್ನು ಯಾವ ರೀತಿ ಉಪಯೋಗಿಸಬೇಕೆಂಬುದು ನಿರ್ಧಾರವಾಗುವವರೆಗೂ ಅದನ್ನು ಬೊಂಬಾಯಿನಲ್ಲೇ ಬಿಡುವುದಾಗಿಯೂ, ಅದನ್ನು ಬಹಿರಂಗವಾಗಿ ಹರಾಜು ಮಾಡಿ, ಬಂದ ಹಣವನ್ನು ಒಳ್ಳೆಯ ಕೆಲಸಕ್ಕೆ ಉಪಯೋಗಿಸುವುದು, ಅಥವ ವಸ್ತು ಸಂಗ್ರಹಾಲಯದಲ್ಲಿ ಅದನ್ನು ಇಡುವುದು ಒಳ್ಳೆಯದೆಂದೂ ತಿಳಿಸುತ್ತಾರೆ. ಚಿನ್ನ ಅಥವ ಬೆಳ್ಳಿಯ ಯಾವ ವಸ್ತುಗಳನ್ನೂ ತಾವು ಇಡುವುದಿಲ್ಲವೆಂದು ೨೦ ವರ್ಷಗಳ ಕೆಳಗೆ ಪ್ರತಿಜ್ಞೆ ತೆಗೆದುಕೊಂಡಿದ್ದ ವಿಷಯವನ್ನು ನೆಹರೂರವರು ತಿಳಿಸಿದರು.

ಕಲ್ಕತ್ತಾ ಉಪಾಧ್ಯಾಯರುಗಳ ಮುಷ್ಕರ

ಕಲ್ಕತ್ತಾ ವಿಶ್ವವಿದ್ಯಾನಿಲಯ ಮತ್ತು ಇತರ ವಿದ್ಯಾ ಸಂಸ್ಥೆಗಳ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡದಿರುವುದನ್ನು ಪ್ರತಿಭಟಿಸಲು, ನಿನ್ನೆಯಿಂದ ಅಲ್ಲಿನ ಉಪಾಧ್ಯಾಯರುಗಳು ಮುಷ್ಕರ ಹೂಡಿದ್ದಾರೆ. ಇದರಿಂದ ಸರ್ಕಾರಿ ಶಾಲೆಗಳನ್ನು ಬಿಟ್ಟು ಮಿಕ್ಕ ವಿದ್ಯಾ ಸಂಸ್ಥೆಗಳೆಲ್ಲಾ ಮುಚ್ಚಲ್ಪಟ್ಟಿವೆ.

— COACHING CLASSES —

INTER—ENG, P C M, C B Z,

S.S.L.C & M S { ALL SUBJECTS

The City TUTORIAL COLLEGE

[illegible] ROAD, MYSORE

ನಾಯಕರ ಹೆಸರನ್ನು ಉಪಯೋಗಿಸಕೂಡದು

ಮಹಾತ್ಮ ಗಾಂಧೀಜಿ ಮೊದಲಾದ ರಾಷ್ಟ್ರದ ನಾಯಕರುಗಳ ಹೆಸರುಗಳನ್ನು ಯಾವ ವ್ಯಾಪಾರಿ, ಅಥವ ಉದ್ಯೋಗ ಸಂಸ್ಥೆಯಾಗಲಿ ಮತ್ತು ಟ್ರೇಡ್ ಮಾರ್ಕುಗಳಾಗಲೀ ಉಪಯೋಗಿಸಕೂಡದೆಂದು ನಿಷೇಧಿಸುವ ಶಾಸನವನ್ನು ಭಾರತ ಸರ್ಕಾರದವರು ಸಧ್ಯದಲ್ಲಿಯೇ ಜಾರಿಗೆ ತರಲಿರುವರೆಂದೂ, ರಾಷ್ಟ್ರಧ್ವಜ, ಕೇಂದ್ರ ಮತ್ತು ಪ್ರಾಂತದ ಸರ್ಕಾರಗಳ ಮುದ್ರೆಯನ್ನು ಸಹ ಖಾಸಗಿಯವರು ಉಪಯೋಗಿಸುವುದನ್ನು ಸಹ ನಿಷೇಧಿಸಲಾಗುವುದೆಂದೂ ತಿಳಿದುಬಂದಿದೆ.

ನೆಹರೂರವರಿಗೆ ಮಹಿಳೆಯರ ವರ್ಧಂತಿ ಕಾಣಿಕೆ

ಪಂಡಿತ ನೆಹರೂರವರ ೬೧ನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾಶ್ಮೀರದ ಸಹಾಯ ಸಮಿತಿಯವರು ಬೊಂಬಾಯಿನಲ್ಲಿ ನೆಹರೂರವರಿಗೆ ೬೦ ವಿವಿಧ ಬಣ್ಣಗಳ ದೀಪಗಳಿಂದ ಕೂಡಿದ್ದ ಪುಷ್ಪದಹೊಟ್ಟೆಯನ್ನು ಅರ್ಪಿಸಿದರು. ಕಾಶ್ಮೀರದಲ್ಲಿರುವ ಭಾರತ ಸೈನಿಕರ ಸೌಲಭ್ಯಗಳಿಗಾಗಿ ೩೦ ಸಾವಿರ ರೂ ನಿಧಿಯನ್ನೂ ಸಹ ಕೊಟ್ಟರು. ಪಂಡಿತ ನೆಹರೂರವರು ಭಾಷಣ ಮಾಡಿ, ತಮಗೆ ಸಕ್ಕರೆಗಿಂತಲೂ ಪುಷ್ಪಗಳು ಇಷ್ಟವೆಂದು ತಿಳಿಸಿದರು. ಕಾಶ್ಮೀರದ ವಿಚಾರವಾಗಿ ಮಾತನಾಡಿ, ತಮಗೆ ಯುದ್ಧ ಕಂಡರೆ ಆಗದಿದ್ದರೂ, ಕೆಟ್ಟದರಿಂದ ಒಳ್ಳೆಯದು ಉಂಟಾಗುವುದೆಂದು ಹೇಳಿದರು. ವರ್ಧಂತ್ಯುತ್ಸವಗಳು ತಮಗೆ ವ್ಯಥೆಯನ್ನುಂಟುಮಾಡುವುವೆಂದೂ, ಆದರೂ ಒಬ್ಬರಿಗೆ ಇನ್ನೊಬ್ಬರಲ್ಲಿ ಪ್ರೀತಿ ಮತ್ತು ಪ್ರೇಮ ಇರುವುದು ಒಳ್ಳೆಯದೆಂದೂ ತಿಳಿಸಿರುತ್ತಾರೆ.

ಬಿರುಗಾಳಿಯಿಂದ ನೊಂದವರಿಗೆ ನೆಹರೂ ಸಹಾಯ

ಮದರಾಸ್ ಪ್ರಾಂತ್ಯದ ಆಂಧ್ರ ಪ್ರದೇಶದಲ್ಲಿ ಉಂಟಾದ ಪ್ರಚಂಡ ಬಿರುಗಾಳಿಯಲ್ಲಿ ನೊಂದವರ ಸಹಾಯಾರ್ಥವಾಗಿ ಪಂಡಿತ ನೆಹರೂರವರು ರಾಷ್ಟ್ರೀಯ ಸಹಾಯ ನಿಧಿಯಿಂದ ೨೫ ಸಾವಿರ ರೂ ಗಳನ್ನು ಕೊಟ್ಟಿರುತ್ತಾರೆ.

ನೆಹರೂರವರ ವರ್ಧಂತ್ಯುತ್ಸವ

ಮೈಸೂರು ಮಕ್ಕಳ ಕೂಟದವರು ಕಳೆದ ಸೋಮವಾರ ಸಂಜೆ ಪಂಡಿತ ನೆಹರೂರವರ ವರ್ಧಂತಿಯನ್ನು ಶ್ರೀಮತಿ ಪುಟ್ಟತಾಯಮ್ಮನವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಮಕ್ಕಳಿಂದ ಭಾಷಣ, ಸಂಗೀತ, ನಕಲಿ ಮುಂತಾದ ಕಾರ್ಯಕ್ರಮಗಳಾದನಂತರ ಶ್ರೀಮತಿ ಲೀಲಾವತಿ ಅಂಜನಪ್ಪನವರು ಚಿತ್ರಗಳನ್ನು ಪ್ರದರ್ಶಿಸಿದರು.

ವಾಣೀವಿಲಾಸ ಮೊಹಲ್ಲಾದ ಮಾಧ್ಯಮಿಕ ಬಾಲಕಿಯರ ಪಾಠಶಾಲೆಯಲ್ಲಿ ನೆಹರೂ ಜಯಂತಿ ನಡೆಯಿತು. ಶ್ರೀ ಕೃಷ್ಣಮೂರ್ತಿ, ಚಿಕ್ಕಸಿದ್ದಯ್ಯ ಮತ್ತು ಶ್ರೀಮತಿ ಪಂಕಜಮ್ಮನವರುಗಳು ಭಾಷಣ ಮಾಡಿ ನೆಹರೂರವರಿಗೆ ಶುಭಾಶಯಗಳನ್ನು ಕೋರಿದರು. ಅವರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು.

ರಾಜಧಾನಿಯ ಸದ್ವಿದ್ಯಾ ಶಾಲೆಯಲ್ಲಿ ೬೧ನೇ ಜನ್ಮೋತ್ಸವವು ಧರ್ಮಪ್ರವರ್ತ ಎ. ಎಸ್. ರಂಗಸ್ವಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ನೆಹರೂರವರ ಪ್ರತಿಭೆಯನ್ನು ಕೊಂಡಾಡಿ, ಅವರಿಗೆ ದೀರ್ಘಾಯಸ್ಸನ್ನು ಕೋರಿದರು.

ಮೈಸೂರಿಗೆ ಭಾರತದ ಅಧಿಕಾರಿಗಳು

ಮೈಸೂರು ಸರ್ಕಾರದ ಮುಖ್ಯಾಧಿಕಾರಿಗಳ ಹುದ್ದೆಗಳ ಪೈಕಿ ೫ ಸ್ಥಾನಗಳಿಗೆ ಭಾರತ ಸರ್ಕಾರದ ಅಧಿಕಾರಿಗಳನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ.

ಪರ್ಷಿಯಾ ದಂಗೆಕೋರರಿಗೆ ಮರಣ ದಂಡನೆ

ಪರ್ಷಿಯಾದ ಮಾಜಿ ಪ್ರಧಾನಿ ಅಬ್ದುಲ್ ಹಸನ್ ಹಜೀರ್ ಅವರನ್ನು ಕೊಲೆ ಮಾಡಿದ ಪಾತಕಿಯನ್ನು ಇದೇ ೯ನೇ ತಾ|| ಬಹಿರಂಗವಾಗಿ ಗಲ್ಲಿಗೇರಿಸಲಾಯಿತು. ಟೆಹರಾನಿನ ಹತ್ತಿರ ಚುನಾವಣೆಯ ಸಂದರ್ಭದಲ್ಲಿ ದಂಗೆ ನಡೆಸಿ ಚುನಾವಣಾ ಸಮಿತಿಯ ೫ ಜನ ಸದಸ್ಯರನ್ನು ಹೊಡೆದು ಸಾಯಿಸಿದರ್ [illegible] ಮಂದಿಗೆ ಮರಣ ದಂಡನೆ ಮತ್ತು ಇನ್ನು ಆರು ಜನರಿಗೆ ಕಠಿಣ ೧೦ ವರ್ಷ ಶಿಕ್ಷೆ ವಿಧಿಸಲಾಗಿದೆ.

ನೆಹರೂರವರ ವರ್ಧಂತಿ

ಮೈಸೂರು, ೧೬

ರಾಜಧಾನಿಯ ಮಹಿಳಾಸದನದಲ್ಲಿ ಪಂಡಿತ ನೆಹರೂರವರ ವರ್ಧಂತ್ಯುತ್ಸವವು ನಿನ್ನೆ ಸಂಜೆ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಎಸ್. ವಿ. ನರಸಮ್ಮನವರಿಂದ ಪ್ರಾರ್ಥನೆಯಾದ ನಂತರ, ಶ್ರೀ ಎನ್. ಎಸ್. ವೆಂಕಟಸುಬ್ಬರಾಯರು ಪರಿಚಯ ಭಾಷಣ ಮಾಡಿದರು. ಶ್ರೀಮತಿ ಡಿ. ನಾಗರತ್ನಮ್ಮನವರಿಂದ ಸಂಗೀತವು ನಡೆಯಿತು. ಅಧ್ಯಕ್ಷರು ಭಾಷಣ ಮಾಡಿ, ನೆಹರೂರವರ ಅಪಾರ ಸೇವೆ ಮತ್ತು ಪ್ರತಿಭೆಯನ್ನು ಕೊಂಡಾಡಿ, ಅವರಿಗೆ ಶುಭಾಶಯಗಳನ್ನು ಕೋರಿದರು.

ಧನ್ವಂತರಿ ಜಯಂತಿ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪದವೀಧರರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಆಯುರ್ವೇದ ಕಾಲೇಜಿನಲ್ಲಿ ಧನ್ವಂತರಿ ಜಯಂತಿಯು ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ರಾಜಕಮಲ್

ಮೈಸೂರು

ತಾ|| 12-11-49 ರಿಂದ 2ನೇ ವಾರ

ದಿನವಹಿ 3 ಆಟಗಳು

ಜನತೆಯವರ ಅತ್ಯತಿಯ ಪ್ರೇಮಾಮಯ

ತೆಲುಗು ಚಿತ್ರ

ಲೈಲಾ ಮಜ್ನು

ಪಾತ್ರ -ಭಾನುಮತಿ, ನಾಗೇಶ್ವರ

Morning Shows For 4 days

From 18-11-49

DAKOTA

With - John Wayne

A Romantic Spectacle of The West

Edited, printed and published by A. R. Nagarajan, at Sadhvi Press, D. Subbiah Road, Mysore.

ಜೈ ಹಿಂದ್!

ಚಾಮರಾಜ ಮೊಹಲ್ಲಾ ಓಟರುಗಳಲ್ಲಿ ವಿನಂತಿ

೨೬-೧೧-೪೯ನೇ ಶನಿವಾರ ಲಕ್ಷ್ಮೀಪುರಂ ಸ್ಕೂಲಿನಲ್ಲಿ ನಡೆಯುವ ಪೌರಸಭಾ ಚುನಾವಣೆಯಲ್ಲಿ ದಯವಿಟ್ಟು ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ ತಮ್ಮ ಘನವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

ಸಂಖ್ಯೆ	ಹೆಸರು	ಚಿಹ್ನೆ	ಓಟಿನ ಗುರುತು
7	ಎಸ್. ಶ್ರೀರಂಗಾಚಾರ್ ಬಿ ಎ ಎಲ್ ಎಲ್ ಬಿ	ಕೈ ರಾಟೆ	X
8	ಸಿ. ಜಿ. ದೇವನಾಥ್ ಬಿ ಎ ಎಲ್ ಎಲ್ ಬಿ	ರಾಷ್ಟ್ರ ಧ್ವಜ	X
9	ಅಗರಂ ರಂಗಯ್ಯ ಬಿ ಎ	ಹಸು	X
10	ಬಿ. ನಾರಾಯಣಸ್ವಾಮಿ ಬಿ ಎ, ಎಚ್ ಲ್,	ಭಾರತ ಮಾತ	X

ಪ್ರಭಾ

18—11—49 ರಿಂದ

ಅಶೋಕ ಪ್ರಾರಂಭ

ದಿನವಹಿ 3 ಆಟಗಳು

ರತನ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

— ಚಾರ್ ದಿನ್ —

ಮುಖ್ಯ ಪಾತ್ರ

ಸುರೈಯಾ, ಶ್ಯಾಮ್, ಜಯಂತ್ ಮತ್ತು ಕಕ್ಕೂ

ಪ್ರಭುದೇವಾ ಟಾಕೀಸ್

18-11-49ನೇ ಶುಕ್ರವಾರದಿಂದ ಪ್ರಾರಂಭ

ರಾಧಿಕ

[illegible]

ಪ್ರತಿ ದಿನ ೩ ಆಟಗಳು

ಮ್ಯಾಟಿನಿ 3-30, 1ನೇ ಆಟ 6-30, 2ನೇ ಆಟ 10

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಶುಕ್ರವಾರ ೧೮-೧೧-೪೯ [ಸಂಚಿಕೆ ೯೪

ಆಹಾರ ಯೋಜನೆ ಬದಲಾವಣೆ ಆಗುವುದೆ

ನೆಹರೂ ಜಯಂತಿ

ಮೈಸೂರು ೧೭

ರಾಜಧಾನಿಯ ಬನುಮಯ್ಯನವರ ಕಾಮರ್ಸ್ ಕಾಲೇಜಿನ ಸಂಘದ ಆಶ್ರಯದಲ್ಲಿ ನಿನ್ನೆ ಮಧ್ಯಾಹ್ನ ಪಂಡಿತ ನೆಹರೂರವರ ೬೧ನೇ ವರ್ಷ ವರ್ಧಂತ್ಯುತ್ಸವವು ಶ್ರೀ ಅ ಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ವಿದ್ಯಾರ್ಥಿನಿಯರಾದ ಶ್ರೀಮತಿ ಎಸ್ ಅನುಸೂಯಾ ಮತ್ತು ಎಸ್ ಭಾರತಿಯವರುಗಳ ಸಂಗೀತವಾದನಂತರ ಪ್ರಿನ್ಸಿಪಾಲರಾದ ಶ್ರೀ ಬಿ ವಿ ಬನುಮಯ್ಯನವರು ಸ್ವಾಗತ ಭಾಷಣಮಾಡಿದರು. ಶ್ರೀ ಎಂ ಎ ದೊರೆಸ್ವಾಮಿ ಅಯ್ಯಂಗಾರ್‌ರವರು ಭಾಷಣ ಮಾಡಿ, ಪಂಡಿತ ನೆಹರೂರವರ ಪ್ರತಿಭೆಯನ್ನು ಕೊಂಡಾಡಿ, ಅವರಿಗೆ ಶುಭಾಶಯಗಳನ್ನು ಕೋರಿದರು.

ನೆಹರೂರವರಿಗೆ ಶುಭಾಶಯ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಮೊನ್ನೆ ದಿನ ಶ್ರೀ ಸಿ ಜೆ ದೇವನಾರ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಪಂಡಿತ ನೆಹರೂರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಅವರಿಗೆ ಶುಭಾಶಯಗಳನ್ನು ಕೋರುವ ನಿರ್ಣಯವನ್ನು ಮಾಡಲಾಯಿತು.

ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆ

ರಾಜಧಾನಿಯ ಕುಕ್ಕರಹಳ್ಳಿ ಕೆರೆಯಲ್ಲಿ ನಿನ್ನೆ ಬೆಳಗ್ಗೆ ೬ ಘಂಟೆ ಸಮಯದಲ್ಲಿ ಒಂದು [illegible] ಮೊಸಳೆಯು ಕೆರೆಯ ಅಂಚಿನ [illegible] ಮಲಗಿದ್ದುದು ಕಂಡುಬಂದಿತೆಂದೂ, [illegible] ಈ ಪ್ರದೇಶದಲ್ಲಿ ತಿರುಗಾಡುವುದ[illegible] ಅದನ್ನು ಕೂಡಲೇ [illegible] ವ್ಯವಸ್ಥೆ ಮಾಡಬೇಕೆಂದೂ ಪಡುವಾರಹಳ್ಳಿ [illegible] ನಿವಾಸಿಯೊಬ್ಬರು ತಿಳಿಸಿರುತ್ತಾರೆ.

ಸತ್ಕಾರ ಕೂಟ

[illegible] ಹೋಬಳಿ ಕೊಡಗಹಳ್ಳಿಯ [illegible] ಕಳೆದ ಭಾನುವಾರ ಶ್ರೀ ಎಸ್ ಚೆನ್ನಯ್ಯನವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಜಿಲ್ಲಾ ರೈತರ ಸಂಘದ ಉಪಾಧ್ಯಕ್ಷರಾದ ಶ್ರೀ [illegible]ಹಳ್ಳಿ ರಾಮಸ್ವಾಮಿ ಯವರು ಬಿನ್ನವತ್ತಳೆಯನ್ನು ಅರ್ಪಿಸಿ, ಸ್ವಾಗತಿಸಿದರು. ಶ್ರೀ[illegible] ಕೆ ಪುಟ್ಟಸ್ವಾಮಿ ಮತ್ತು [illegible] ನವರು ಭಾಷಣ ಮಾಡಿದರು. ಶ್ರೀ ಚನ್ನಯ್ಯನವರು ಸತ್ಕಾರಕ್ಕಾಗಿ ವಂದನೆ[illegible] ಅರ್ಪಿಸಿ, ರೈತರುಗಳು ಹೆಚ್ಚು [illegible] ಯೋಜನೆಯಲ್ಲಿ ಸಹಕರಿಸಬೇಕೆಂದು [illegible].

ಮೈಸೂರು ಕರ್ಣಾಟಕ ಪ್ರಾಂತ್ಯ ಆಗಬೇಕು

ಮೈಸೂರು ಸಂಸ್ಥಾನ, ಇಡೀ ಬಳ್ಳಾರಿ [illegible] ಮತ್ತು ಇತರ ಕನ್ನಡ ಪ್ರದೇಶಗಳ[illegible]ಗೊಂಡ ಕರ್ಣಾಟಕ ಪ್ರಾಂತ್ಯವನ್ನು [illegible] ರಚಿಸಬೇಕೆಂಬ ನಿರ್ಣಯ[illegible] ಬಳ್ಳಾರಿ ಜಿಲ್ಲಾ ಬೋರ್ಡಿನವರು [illegible].

ಕಮ್ಯೂನಿಸ್ಟ್ ಚೀಣಾಕ್ಕೆ ಭಾರತದ ಅಂಗೀಕಾರ

[illegible]ದಲ್ಲಿರುವ ಕಮ್ಯೂನಿಸ್ಟ್ ಸರ[illegible] ಭಾರತವು ಒಪ್ಪುವುದಾಗಿ ಪ್ರ[illegible] ನೆಹರೂರವರು ತಿಳಿಸಿರುತ್ತಾರೆ. ಈ [illegible] ಇತರ ಸರಕಾರಗಳೊಡನೆ [illegible] ಸಹ ನಿರ್ಧರಿಸ[illegible] ಭಾರತಕ್ಕೆ ಸ್ವಾತಂತ್ರ್ಯವಿರುವ[illegible] ಅವರು ಹೇಳಿದ್ದಾರೆ.

ಆಹಾರ ಯೋಜನೆಯಲ್ಲಿ ಬದಲಾವಣೆ

ಸ್ವಂ ಸು ಫೋ] ಬೆಂಗಳೂರು ೧೭

ಸರಕಾರದವರು ಅಧಿಕ ಆಹಾರದ ಬೆಳೆಗಾಗಿ ಕೈಗೊಂಡಿರುವ ೧೫ ಕೋಟಿ ರೂ ಯೋಜನೆಯಲ್ಲಿ ಬದಲಾವಣೆಯಾಗುವ ಸಂಭವವಿದೆ. ಇದು ದೀರ್ಘಕಾಲದ ಯೋಜನೆಯೆಂದೂ ಇನ್ನು [illegible] ವರ್ಷಗಳಲ್ಲಿ [illegible] ಯೋಜನೆಗಳನ್ನು ಕೈಗೊಳ್ಳಬೇಕೆಂದೂ ಭಾರತ ಸರ್ಕಾರದ ಆಹಾರ ಕಮೀಷನರಾದ ಶ್ರೀ ಆರ್. ಕೆ ಪಾಟೀಲ್‌ರವರು ಕೊಟ್ಟಿರುವ ಸಲಹೆಯು ನಿನ್ನೆ ಮಂತ್ರಿ ಮಂಡಲದಲ್ಲಿ ಚರ್ಚಿಸಲ್ಪಟ್ಟಿತೆಂದು ತಿಳಿದುಬಂದಿದೆ. ಇದರಿಂದ ಯೋಜನೆಯು [illegible] ಯಾಗಬಹುದೆಂದೂ ನಿರೀಕ್ಷಿಸಲಾಗಿದೆ.

ಮರಣ ದಂಡನೆ ಶಿಕ್ಷೆ ಕಡಿಮೆಯಾಯಿತು

[illegible] ಗ್ರಾಮದ ಲಕ್ಷ್ಮೀದೇವಮ್ಮನವರನ್ನು ಕೊಲೆ ಮಾಡಿದುದಕ್ಕಾಗಿ ಮರಣ ದಂಡನೆಗೆ ಗುರಿಯಾಗಿದ್ದ ತಿಮ್ಮ[illegible] ಮತ್ತು [illegible]ನವರುಗಳ ಶಿಕ್ಷೆಯನ್ನು ಜೀವಾವಧಿ ಸಜಾಕ್ಕೆ ಇಳಿಸಿ ಹೈಕೋರ್ಟಿನವರು ಅಪ್ಪೀಲಿನಲ್ಲಿ ತೀರ್ಪಿತ್ತಿದ್ದಾರೆ.

ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯನ್ನಾಗಿ ಪರಿವರ್ತಿಸುವ ವಿಚಾರ

ಮೈಸೂರು ೧೭

ಮೈಸೂರು ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯನ್ನಾಗಿ ಪರಿವರ್ತಿಸಬೇಕೆಂದು ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದವರು ನಿರ್ಣಯ ಮಾಡಿದ್ದಾರೆಂದು ತಿಳಿದು ಬಂದಿದೆ. ಪ್ರಜಾಪ್ರತಿನಿಧಿ ಸಭೆಯ [illegible] ಕಾಂಗ್ರೆಸ್ ಪಕ್ಷದವರು ಇದನ್ನು ವಿರೋಧಿಸಿದ್ದರು. ಆದ್ದರಿಂದ ಈ ಪ್ರಶ್ನೆಯನ್ನು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಸಂಸ್ಥಾನ[illegible] ಅಭಿಪ್ರಾಯಕ್ಕಾಗಿ ಕಳುಹಿಸಿದ್ದಾರೆಂದೂ, ಅವರು ನಾಳೆ ದೆಹಲಿಗೆ ಪ್ರಯಾಣ ಮಾಡಿ, ಅಲ್ಲಿ ಸರ್ದಾರ್ ಪಟೇಲರೊಡನೆ ಈ ವಿಷಯ [illegible] ನಡೆಸುವರೆಂದೂ ತಿಳಿದು ಬಂದಿದೆ.

○ [illegible]ಗಳನ್ನು [illegible] ಪ್ರತಿ [illegible] ಒಂದು [illegible] ತೆಗೆದುಕೊಳ್ಳ[illegible]. [illegible] ಆಜ್ಞೆ ಮಾಡಿದ್ದಾರೆ.

ಸದ್ಯಕ್ಕೆ ರಾಜ ಘೋಷಣೆ ಇಲ್ಲ

ಮೈಸೂರು ೧೭

ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಈ ದಿನ ಮಧ್ಯಾಹ್ನ ೧೨ ಗಂಟೆಗೆ ಶ್ರೀಮನ್ಮಹಾರಾಜರವರನ್ನು ಭೇಟಿಮಾಡಿದ್ದರು.

ಭಾರತ ರಾಜ್ಯಾಂಗ ಸಭೆಯು ಸಂಸ್ಥಾನಗಳ ಬಗ್ಗೆ [illegible] ರಾಜ್ಯಾಂಗವನ್ನು ಮೈಸೂರು ಅಂಗೀಕರಿಸುವ ಬಗ್ಗೆ ರಾಜಘೋಷಣೆಯು, ತಾವು [illegible] ಸಂಸ್ಥಾನ [illegible] ಮಾತುಕತೆ [illegible] ವರೆಗೂ ಹೊರಬೀಳುವುದಿಲ್ಲವೆಂದು ಮುಖ್ಯ ಮಂತ್ರಿಗಳು ಈ ದಿನ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಓಟರುಗಳ ಬಹಿರಂಗ ಸಭೆ

ಪುರಸಭಾ ಚುನಾವಣೆಯ ಸಂಬಂಧದಲ್ಲಿ [illegible] ಸಂಜೆ ೬ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಎಲ್ಲ ಮೊಹಲ್ಲಾಗಳ ಓಟರುಗಳ ಬಹಿರಂಗಸಭೆಯನ್ನು ಏರ್ಪಡಿಸಲಾಗಿದೆಯೆಂದು ಡಾ॥ ಎ ಎಸ್ [illegible]ರವರು ತಿಳಿಸಿರುತ್ತಾರೆ.

ನಗರದಲ್ಲಿ ೩೫ ಸಾವಿರ ಜನರ ಸಂಖ್ಯೆ ಕಡಿಮೆಯಾಗಿದೆ

ಮೈಸೂರು ೧೭

ಕಳೆದ ಜನವರಿ ೧ನೇ ತಾ॥ ರೇಷನ್ ಕಾರ್ಡುಗಳ ಪ್ರಕಾರ ನಗರದಲ್ಲಿ [illegible]೦೦೦ ಜನರು ಇದ್ದರು. ಈ [illegible] ನೂತನ ರೇಷನ್ ಕಾರ್ಡುಗಳ ಮೇರೆಯ[illegible] ಮತ್ತು ೧೮ ಸಾವಿರ [illegible] ರೇಷನ್ ಕಾರ್ಡುಗಳನ್ನು ಪತ್ತೆಮಾಡಿರುವುದರಿಂದಲೂ ಕಳೆದ ತಿಂಗಳ [illegible]ದಲ್ಲಿ [illegible]೦೦೦ ಜನರಿರುವರೆಂದು ಅಂದಾಜು ಮಾಡಲಾಗಿದೆ. ಇದರಿಂದ ೩೫ ಸಾವಿರ ಜನ ಸಂಖ್ಯೆ ಕಡಿಮೆ ಆಗಿ, ತಿಂಗಳಿಗೆ [illegible] ಪಲ್ಲ ಆಹಾರ ಧಾನ್ಯಗಳು [illegible] ಕಡಿಮೆಯಾಗಿದೆ. ನಗರಕ್ಕೆ ಹೊರಗಿನಿಂದ [illegible] ಕದ್ದು [illegible] ಪ್ರತಿಬಂಧಿಸಲು [illegible] ಮೂಲಕ ಕೆಲಸ[illegible] ಎಂದು [illegible] ಅಧಿಕಾರಿಗಳಾದ ಶ್ರೀ [illegible] ಈ ದಿನ ಪತ್ರಿಕಾ [illegible]ದಲ್ಲಿ ತಿಳಿಸಿದರು.

ವಿಶ್ವ ಸಂಸ್ಥೆಯ ವೈದ್ಯ ಪ್ರವೀಣರ ಆಗಮನ

ವಿಶ್ವ [illegible] ಆರೋಗ್ಯ [illegible] [illegible] ಡಾ॥ [illegible]

ಯೋಗ್ಯರಾದವರಿಗೆ ಓಟು ಕೊಡಿ!

ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಭಾಷಣ

ಮೈಸೂರು ೧೭

'ನಾನು ಕಾಂಗ್ರೆಸ್ಸಿನವನೂ ಅಲ್ಲ, ಪ್ರಜಾ ಸಂಘದವನೂ ಅಲ್ಲ. ಈ ಸಭೆಯ ಅಧ್ಯಕ್ಷತೆ ವಹಿಸುವಂತೆ ಕೋರಿದುದರಿಂದ ಇಲ್ಲಿಗೆ ಬಂದಿದ್ದೇನೆ. ಯಾರಿಗೆ ಓಟು ಕೊಡಬೇಕೆಂಬುದು ಮಹಾ ಜನರಿಗೇ ಗೊತ್ತು. ಓಟರುಗಳಿಗೆ ಬುದ್ಧಿ ಇದೆ. ಕಾಂಗ್ರೆಸ್ಸಿನವರೂ ಓಟು ಕೇಳುತ್ತಾರೆ, ಪ್ರಜಾ ಸಂಘದವರೂ ಕೇಳುತ್ತಾರೆ. ನಿಷ್ಪಕ್ಷಪಾತವಾಗಿ ಯಾರು ಅರ್ಹರೆಂದು ತೋರುತ್ತದೋ ಅವರಿಗೆ ಓಟು ಕೊಡಿ'- ಎಂಬ ಅಭಿಪ್ರಾಯಗಳನ್ನು ನಿನ್ನೆ ಪ್ರಜಾ ಸಂಘದ ಪರವಾಗಿ ಟೌನ್ ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ವ್ಯಕ್ತಪಡಿಸಿದರು.

ಮೊದಲನೇ ಭಾಷಣಕಾರರಾದ ಶ್ರೀ ಜಿ [illegible]ನವರು, ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಅವರ ಮೋಟಾರು ಕಾರು, ಅದರ ಡ್ರೈವರ್ ಮತ್ತು ಅದಕ್ಕೆ ಹಾಕುವ ಪೆಟ್ರೋಲ್ ಮುಂತಾದುವುಗಳನ್ನೊಳಗೊಂಡು ಅನೇಕ ವಿಷಯಗಳ ಮೇಲೆ ಟೀಕೆ ಮಾಡುತ್ತಿದ್ದಾಗ ಅಧ್ಯಕ್ಷರು ಅವರನ್ನು ತಡೆದು ಪ್ರಸ್ತುತ ವಿಷಯದ ಮೇಲೆ ಮಾತನಾಡುವಂತೆ ಸೂಚಿಸಿದರು. ಭಾಷಣಕಾರರು ಇನ್ನೂ ಹಲವು ಟೀಕೆಗಳನ್ನು ಮಾಡತೊಡಗಿದ್ದಾಗ ಪೌರ ಸಭಾ ಚುನಾವಣೆಗೂ ರಾಜಕೀಯಕ್ಕೂ ಸಂಬಂಧವಿಲ್ಲವೆಂದು ಅಧ್ಯಕ್ಷರು ತಿಳುವಳಿಕೆ ಕೊಟ್ಟರು.

ಬೆಂಗಳೂರಿನಿಂದ ಬಂದಿದ್ದ ಲೋಕಸೇವಾನಿರತ ಡಿ ಎಸ್ ಕೃಷ್ಣಯ್ಯಶೆಟ್ಟರು ಮಾತನಾಡಿ, [illegible] ಕಾಂಗ್ರೆಸ್ಸಿನವರಿಗೆ ಅವಕಾಶ ಕೊಟ್ಟೆವು, ಈಗ ಪ್ರಜಾ ಸಂಘದವರಿಗೆ ಕೊಟ್ಟು ನೋಡೋಣ. ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಅವರನ್ನೂ ಉಚ್ಚಾಟನೆ ಮಾಡುವುದು ನಮ್ಮ ಕೈಯಲ್ಲಿದೆ ಎಂದು ಮಾರ್ಮಿಕವಾಗಿ ಹೇಳಿದರು.

ಗಂಗಾಧರ್ ಎಂಬ ವಿದ್ಯಾರ್ಥಿಯು ಮಾತನಾಡಿ, ಕಾಂಗ್ರೆಸ್ಸಿನವರು ಬರುವುದಕ್ಕೆ ಮುಂಚೆ ಬಿದಿರಕ್ಕಿಯು ಅಗ್ಗವಾಗಿ ಸಿಕ್ಕುತ್ತಿತ್ತೆಂದೂ, ಈಗ [illegible] ಸಹ ಸಿಕ್ಕುವುದಿಲ್ಲವೆಂದೂ ಹೇಳಿದರು.

ಶ್ರೀ ಎ ವೆಂಕಟೇಶಯ್ಯನವರು ಮಾತನಾಡಿ, ಪೌರಸಭೆಯ [illegible] ವ್ಯವಹಾರ[illegible] ಮೇಲೆ ಹೊರಿಸಿ [illegible], ಇದನ್ನು ತಪ್ಪಿಸುವ [illegible] ಉದ್ದೇಶವೆಂದು ಹೇಳಿದರು. ತಾವು [illegible] ಹೇಳುವುದು [illegible] ಕೇವಲ ಅತಿ[illegible] ಮಾತ್ರ [illegible] ಕಾಂಗ್ರೆಸ್ಸಿಗೆ ತಾವು ವಿರೋಧಿ[illegible] ಅವರ [illegible] ಅಕ್ರಮಗಳನ್ನು [illegible] ಅವ[illegible]

[illegible] ವೈದ್ಯ [illegible] ಪ್ರವೀಣ[illegible] ಸಂಸ್ಥಾನದ [illegible] ಸಂರಕ್ಷಣ [illegible] ಬೆಂಗಳೂರಿಗೆ [illegible] ಬನ[illegible] ಇತರ ಪ್ರದೇಶ[illegible]

ನಗರಾಭಿವೃದ್ಧಿ ಸಮಿತಿಯ ಯೋಜನೆಗಳು

ಮೈಸೂರು ೧೭

ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಕಳೆದ ಸೋಮವಾರ ಬೆಂಗಳೂರಿನಲ್ಲಿ ಹಣಕಾಸಿನ ಸಚಿವ ಶ್ರೀ ಎಚ್ ಸಿ ದಾಸಪ್ಪನವರನ್ನು ಕಂಡು ಬೋರ್ಡಿನವರು ಕೈಗೊಂಡಿರುವ ೧೦ ಲಕ್ಷ ರೂ ಯೋಜನೆಯ ಬಗ್ಗೆ ಮಾತುಕತೆ ನಡೆಸಿದರು. ನಗರದ ೫ ಪ್ರದೇಶಗಳಲ್ಲಿ ಹರಿಜನರಿಗಾಗಿ ೪ ಲಕ್ಷ ರೂ ಖರ್ಚಿನಿಂದ ೧೯೩ ಮನೆಗಳು, ಯಾದವಗಿರಿಯಲ್ಲಿ ೩೦೦ ನಿವೇಶನಗಳನ್ನು ನಿರ್ಮಿಸಲು ೪ ಲಕ್ಷ ರೂ ಮತ್ತು ಇತರ ಪ್ರದೇಶಗಳಲ್ಲಿ ನಿವೇಶನಗಳ ಏಂಗಡಣೆಯನ್ನು ಬೋರ್ಡಿನವರು ಕೈಗೊಂಡಿರುವುದನ್ನು ವಿವರಿಸಿದರೆಂದು ಗೊತ್ತಾಗಿದೆ

ಸಮತಾವಾದಿ ಪಕ್ಷದ ಸಭೆ

ಕರ್ನಾಟಕ ಪ್ರಾಂತ ಸಮತಾವಾದಿ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ಇದೇ ೩೦ ನೇ ತಾ॥ ಬೆಳಿಗ್ಗೆ ೧೦ ಘಂಟೆಗೆ ಬೆಂಗಳೂರಿನಲ್ಲಿ ನಡೆಯುವುದು

ವನಸ್ಪತಿ ತುಪ್ಪ ತಯಾರಿಕೆಗೆ ನಿಷೇಧ

ವನಸ್ಪತಿ ತುಪ್ಪ ತಯಾರಿಸುವುದನ್ನು ನಿಷೇಧಿಸಬೇಕೆಂದು ಬೊಂಬಾಯಿನ ಶಾಸನ ಸಭೆಯಲ್ಲಿ ಖಾಸಗೀ ಮಸೂದೆಯನ್ನು ಮಂಡಿಸಲಾಗುವುದು.

ಆರೆಸ್ಸೆಸ್ ಕಾಂಗ್ರೆಸ್ ನೀತಿಗೆ ಹೊಂದುವಂತಿಲ್ಲ

ಆರ್ ಎಸ್.ಎಸ್. ಸಂಸ್ಥೆಯವರು ಅನುಸರಿಸುತ್ತಿರುವ ರೀತಿನೀತಿಗಳು ಕಾಂಗ್ರೆಸ್ಸಿನ ಮನೋಭಾವಕ್ಕೆ ಹೊಂದುವಂತಿಲ್ಲ ಆರೆಸ್ಸೆಸ್ ಕೋಮುವಾರು ಭಾವನೆಯಿಂದ ಕೂಡಿದುದು. ಆದುದು ಸ್ವಯಂಸೇವಕ ಸಂಘ ಕಾಂಗ್ರೆಸ್ಸಿನವರು ಸೇವಾದಳದ ಹೊರತಾಗಿ ಮತ್ತಾವುದಕ್ಕೂ ಸೇರಲು ಸಾಧ್ಯವಿಲ್ಲ ಆದುದರಿಂದ ಸ್ವಯಂಸೇವಕ ಸಂಘದಿಂದ ಹೊರಗಾಗದೆ ಆರೆಸ್ಸೆಸ್ ಸದಸ್ಯರು ಕಾಂಗ್ರೆಸ್ಸಿಗೆ ಸೇರಲು ಸಾಧ್ಯವೇ ಇಲ್ಲ- ಎಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ

ಬಟ್ಟೆ, ದಾರದ ರವಾನೆಯ ನಿಷೇಧ ರದ್ದು

ಹತ್ತಿ ಬಟ್ಟೆ ಮತ್ತು ದಾರವನ್ನು ಅಂಚೆಯ ಮೂಲಕ ರವಾನಿಸಲು ಇದ್ದ ಪ್ರತಿಬಂಧಕವನ್ನು ನಿನ್ನೆಯಿಂದ ತೆಗೆದುಹಾಕಲಾಗಿದೆಯೆಂದು ಭಾರತ ಸರ್ಕಾರದ ಆಜ್ಞೆಯಾಗಿದೆ

ಬಿರುಗಾಳಿ ಪರಿಹಾರ ನಿಧಿಗೆ ರಾಜಾಜಿಯ ಸಹಾಯ

ಆಂಧ್ರ ಪ್ರದೇಶಗಳಲ್ಲಿ ಸಂಭವಿಸಿದ ಬಿರುಗಾಳಿಯಿಂದ ನೊಂದವರ ಸಹಾಯಾರ್ಥವಾಗಿ ಗವರ್ನರ್ ಜನರಲ್ ರಾಜಾಜಿಯವರು ೧೦ ಸಾವಿರ ರೂ ಅನ್ನು ಕೊಟ್ಟಿರುತ್ತಾರೆ

ಪೂರ್ವ ಬಂಗಾಳದ ಹಿಂದುಗಳ ಆಸ್ತಿ ವಶ

ಪೂರ್ವ ಬಂಗಾಳದಲ್ಲಿರುವ ಹಿಂದೂಗಳ ಚರಸ್ಥಿರ ಆಸ್ತಿಪಾಸ್ತಿಗಳನ್ನೆಲ್ಲಾ ವಶಪಡಿಸಿಕೊಳ್ಳಲು ಪಾಕಿಸ್ಥಾನ ಸರ್ಕಾರವು ಪ್ರಯತ್ನಿಸುತ್ತಿದೆಯೆಂದು ತಿಳಿದುಬಂದಿದೆ ಅಂತಹ ಆಸ್ತಿಪಾಸ್ತಿಗಳ ಪಟ್ಟಿಯನ್ನು ಕೂಡಲೇ ಸಿದ್ಧಗೊಳಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ಕೊಡಲಾಗಿದೆ

ಪೋರ್ಸಿಲೇನ್ ಕೈಗಾರಿಕಾ ಯೋಜನೆ

ತುಮಕೂರು ಜಿಲ್ಲೆಯ ಹೆಬ್ಬೂರಿನಲ್ಲಿ ಬಟ್ಟಲು, ತಟ್ಟೆ ಮುಂತಾದ ಪದಾರ್ಥಗಳನ್ನು ತಯಾರಿಸಲು ಉತ್ಕೃಷ್ಟವಾದ ಚೀನೀ ಮಣ್ಣು ಇರುವುದನ್ನು ಪತ್ತೆ ಮಾಡಲಾಗಿದೆಯೆಂದೂ, ಬೆಂಗಳೂರಿನಲ್ಲಿರುವ ಪೋರ್ಸಲೇನ್ ಕಾರ್ಖಾನೆಯವರು ಅದನ್ನು ಉಪಯೋಗಿಸಿಕೊಂಡು ಉತ್ತಮ ದರ್ಜೆಯ ಪದಾರ್ಥಗಳನ್ನು ತಯಾರಿಸಲು ಸರ್ಕಾರದವರು ಯೋಜನೆ ಮಾಡಿದ್ದಾರೆಂದು ತಿಳಿದು ಬಂದಿದೆ

Edited, printed and published by A R Nagarajan, at Sadhvi Press D. Subbiah Road, Mysore.

ಮೊಸರು ಮಾರುವವರಿಗೆ ಕಿರುಕುಳ

ತಾಲೂಕು ಉಪದ್ರವವನ್ನು ತಡೆಗಟ್ಟಿ

ಮೈಸೂರು ನಗರಕ್ಕೆ ಹೊರಗಿನಿಂದ ಹಣ್ಣೆ, ಹಾಲು ಮತ್ತು ಮೊಸರು ಬರುವುದನ್ನು ಪೌರ ಸಭೆಯವರು ತಡೆಗಟ್ಟಿದ್ದಾರೆ ಆದರೆ ಒಂದು ಮೊಸರಿನ ಕುಕ್ಕೆಗೆ ... ಯನ್ನು ಕೊಟ್ಟರೆ ಒಳಗೆ ಬಿಡುವುದಾಗಿ ಳಿಸಿ, ಹಳ್ಳಿಯವರಿಂದ ಹಣ ತೆಗೆದುಕೊಳ್ಳಲಾಗುತ್ತಿದೆ. ಇದರಿಂದ ಮೊಸರು ಮಾರುವವರಿಗೆ ತುಂಬಾ ತೊಂದರೆಯಾಗಿದೆ ಪೌರ ಸಭೆಯವರು ಇದಕ್ಕೆ ಗಮನ ಕೊಟ್ಟು ಮೇಲ್ಕಂಡ ತೊಂದರೆಯನ್ನು ತಪ್ಪಿಸಬೇಕೆಂದು ಹುಯಿಲಾಳು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಪಿ ಎಸ್ ರಾಮಚಂದ್ರಯ್ಯನವರು ತಿಳಿಸಿರುತ್ತಾರೆ

ಚಾಮುಂಡೇಶ್ವರಿ ಟಾಕೀಸ್

18-11-49ರಿಂದ ಕಿಕ್ಕಿರಿದ ಪ್ರೇಕ್ಷಕರಿಂದ 5ನೇ ವಾರದಲ್ಲಿ ಪ್ರದರ್ಶಿಸಲಾಗುತ್ತಿದೆ

ಜೆಮಿನಿಯವರ ತಮಿಳು ಚಿತ್ರ

ಅಪೂರ್ವ ಸಹೋದರರು

ಮುಖ್ಯಪಾತ್ರ —ಆರ್ ನಾಗೇಂದ್ರರಾವ್ ಭಾನುಮತಿ, ಎಂ ಕೆ. ರಾಧಾ

ಪ್ರಭುದೇವಾ ಟಾಕೀಸ್

18-11-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಬಾಲಸರಸ್ವತಿ, ರಘುರಾಮಯ್ಯ, ದಾಸರಿ ಕೋಟಿರತ್ನಂ, ಪದ್ಮನಾಭಂ ನಟಿಸಿರುವ ತೆಲುಗು ಚಿತ್ರ

* ರಾಧಿಕ *

ಮ್ಯಾಟಿನಿ 3-30, 1ನೇ ಆಟ 6-30, 2ನೇ ಆಟ 10

ಜೈ ಹಿಂದ್!

ಪೌರಸಭಾ ಚುನಾವಣೆ

ದಯವಿಟ್ಟು ತಮ್ಮ ಘನವಾದ ಓಟನ್ನು

ಕಾಂಗ್ರೆಸ್ಸಿಗೇ ಕೊಡಿರಿ!

ಜೈ ಹಿಂದ್!

ಚಾಮರಾಜ ಮೊಹಲ್ಲಾ ಓಟರುಗಳಲ್ಲಿ ವಿನಂತಿ

26-11-49ನೇ ಶನಿವಾರ ಲಕ್ಷ್ಮೀಪುರಂ ಸ್ಕೂಲಿನಲ್ಲಿ ನಡೆಯುವ ಪೌರಸಭಾ ಚುನಾವಣೆಯಲ್ಲಿ ದಯವಿಟ್ಟು ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ ತಮ್ಮ ಘನವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

ಸಂಖ್ಯೆ	ಹೆಸರು	ಚಿಹ್ನೆ	ಓಟಿನ ಗುರುತು
7.	ಎಸ್. ಶ್ರೀರಂಗಾಚಾರ್ ಬಿ ಎ ಎಲ್. ಎಲ್. ಬಿ	ಕೈ ರಾಟೆ	X
8	ಸಿ. ಜೆ. ದೇವನಾಥ್ ಬಿ ಎ ಎಲ್. ಎಲ್ ಬಿ	ರಾಷ್ಟ್ರ ಧ್ವಜ	X
9	ಅಗರಂ ರಂಗಯ್ಯ ಬಿ ಎ	ಹಸು	X
10	ಬಿ. ನಾರಾಯಣಸ್ವಾಮಿ ಬಿ ಎ, ಬಿ. ಎಲ್,	ಭಾರತ ಮಾತೆ	X

ರಣಜಿತ್ ಟಾಕೀಸ್

18—11—49 ರಿಂದ ಯಶಸ್ವಿಯಾದ 2ನೇ ವಾರ

ಎ ಆರ್ ಕರ್ದಾರ್‌ರವರ ಸಂಗೀತಮಯ ಹಿಂದಿ ಚಿತ್ರ

ಸುರಯ್ಯ, ಶ್ಯಾಮ್ ಪಾತ್ರವಹಿಸಿರುವ → ದಿಲ್ಲಗಿ

ಪ್ರತಿ ದಿನ ಮೂರು ಪ್ರದರ್ಶನಗಳು

ಪ್ರಭಾ

18—11 49 ರಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ರತನ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

— ಚಾರ್ ದಿನ್ —

— ಮುಖ್ಯ ಪಾತ್ರ, —

ಸುರೈಯ, ಶ್ಯಾಮ್, ಜಯಂತ್ ಮತ್ತು ಕಕ್ಕೂ

MYSORE CITY MUNICIPALITY

Sealed tenders will be received up to 4 p m on 22nd November 1949 by the Municipal Engineer for (1) constructing a size stone masonary tunnel of 3 × 2 in place of dry rough stone masonary tunnel across Vene Seshanna street, K R Mohalla, (2) constructing burnt stone slabbed drain in Hosakumbgeri street Chamaraja Mohalla

Each tender must be accompanied with a chellan for having remitted Rs 35 and Rs 60 respectively in the Municipal treasury as earnest money Tenders without deposit will on no account be considered For full particulars please see the office notice board

(Sd) **V. K Mukundan,**
Municipal Engineer

ಕ್ರೋ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೧೯-೧೧-೪೯ [ಸಂಚಿಕೆ ೯೫

ಹೈಸ್ಕೂಲುಗಳಲ್ಲಿ ಕಡ್ಡಾಯ ಹಿಂದಿ ಶಿಕ್ಷಣ

ಹೈಸ್ಕೂಲಿನಲ್ಲಿ ಕಡ್ಡಾಯದ ಹಿಂದಿ ಶಿಕ್ಷಣ

ಸ್ವಂ ಸು ಫೋ॥] ಬೆಂಗಳೂರು ೧೯

ಸಂಸ್ಥಾನದ ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಹಿಂದಿ ಶಿಕ್ಷಣವನ್ನು ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಹಿಂದಿ ಉಪಾಧ್ಯಾಯರುಗಳು ವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕೆಂದೂ ಅವರುಗಳನ್ನು ೬೦ ರೂ. ಸಂಬಳದ ಮೇಲೆ ತೆಗೆದುಕೊಳ್ಳಲಾಗುವುದೆಂದೂ ಸರ್ಕಾರದವರು ತಿಳಿಸಿರುತ್ತಾರೆ, ಸ್ಕೂಲ್ ಫೈನಲ್ ಪರೀಕ್ಷೆಗೆ ಹಿಂದಿಯು ಕಡ್ಡಾಯವಾಗಿರುವುದಿಲ್ಲ

○ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಾಳೆ ದೆಹಲಿಗೆ ಪ್ರಯಾಣ ಬೆಳೆಸುವರು

○ ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ಇದೇ ೨೪ನೇ ತಾ ರಾಜಧಾನಿಯ ರೇಷನ್ ಡಿಪೋ ವರ್ತಕರ ಮತ್ತು ಅಕ್ಕಿ ಗಿರಣಿ ಮಾಲೀಕರಸಂಘಗಳವರೊಡನೆ ಮಾತುಕತೆ ನಡೆಸುವರು

ವಿಚಿತ್ರ ಮೋಸದ ಆಪಾದನೆ

ಚಿಕ್ಕಪೇಟೆಯ ದೇವಿಚಂದ್‌ರವರಲ್ಲಿ ೬ ಸಾವಿರ ರೂ ಮತ್ತು ಹಾಜಿ ಇಬ್ರಾಹಿಂರವರಲ್ಲಿ ೧೧ ಸಾವಿರ ರೂ ನ ಒಡವೆ ತೆಗೆದುಕೊಂಡು ಆದಕ್ಕಾಗಿ ಚೆಕ್ಕುಗಳನ್ನು ಕೊಟ್ಟು ಪುನಃ ಅವೇ ಒಡವೆಗಳನ್ನು ಮೈಸೂರು ಬ್ಯಾಂಕಿನಲ್ಲಿ ಗಿರವಿ ಇಡಲು ಹೋದ ಪುಟ್ಟರಾಮಯ್ಯ ಎಂಬಾತನನ್ನು ಮೋಸದ ಆಪಾದನೆಯ ಮೇಲೆ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ

ಪ್ರಭುಗಳಿಂದ ಬೆಂಗಳೂರು ಕಾರ್ಪೊರೇಷನ್ ಪ್ರಾರಂಭ

ಮುಂದಿನ ತಿಂಗಳು ೮ನೇ ತಾ॥ ಶ್ರೀ ಮನ್ಮಹಾರಾಜರವರು ಬೆಂಗಳೂರು ಕಾರ್ಪೊರೇಷನ್ನಿನ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದು ತಿಳಿದುಬಂದಿದೆ

ವಿಶ್ವ ಸಂಸ್ಥೆಯ ಅಧಿಕಾರಿಗಳ ಆಗಮನ

ವಿಶ್ವ ಸಂಸ್ಥೆಯ ಕಾರ್ಮಿಕ ಸಮಿತಿಯ ಡೈರೆಕ್ಟರ್ ಜನರಲ್ಲರಾದ ಮಿ॥ ಡೇವಿಡ್ ಮಾರ್ಸ್‌ರವರು ರಾಜಧಾನಿಗೆ ಮುಂದಿನ ತಿಂಗಳು ೨೪ ನೇ ತಾ॥ ಆಗಮಿಸುವರೆಂದು ಗೊತ್ತಾಗಿದೆ

ವಿವಾಹ ಮಹೋತ್ಸವ

ಬೆಂಗಳೂರಿನ ವಕೀಲರಾದ ಶ್ರೀ ಜಿ ಸಿ ವೀರಪ್ಪನವರು ತಮ್ಮ ಪುತ್ರಿ ಚಿ ಸೌ॥ ಗಿರಿಜಾ ದೇವಿಯನ್ನು ಮೈಸೂರಿನ ಶ್ರೀ ಎ ಮಾದಪ್ಪನವರ ಪುತ್ರ ಶ್ರೀ ಎಂ ಸಿ ಸ ... ಪ್ಪನವರಿಗೆ ಕೊಟ್ಟು ವಿವಾಹವನ್ನು ರಾಜಧಾನಿಯಲ್ಲಿ ಮೊನ್ನೆ ದಿನ ನೆಡೆಸಿದರು

ರಾಜಾಜಿಯವರಿಗೆ ಪ್ರಶಸ್ತಿ

... ರಿಯ ಪಂಡಿತ ಮಂಡಲಿಯವರು ಗವರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಮುಂದಿನ ತಿಂಗಳು ... ತಾ॥ 'ಭಾರತ ಭಾಸ್ಕರ' ಎಂಬ ಪ್ರಶಸ್ತಿಯನ್ನು ಜಗನ್ನಾಥ ದೇವಾಲಯದಲ್ಲಿ ಅರ್ಪಿಸುವರು

ನೆಹರೂ ಜಯಂತಿ

ರಾಜಧಾನಿಯ ಇಟ್ಟಿಗೆಗೂಡು ಗಾಂಧಿ ಸೇವಾಸದನ ಆಶ್ರಮದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಜಿ ಎಸ್. ಹಾಲಪ್ಪನವರ ಅಧ್ಯಕ್ಷತೆಯಲ್ಲಿ ನೆಹರೂ ಜಯಂತಿಯು ನಡೆಯುವುದು

ಮಂತ್ರಿಮಂಡಲವು ಬದಲಾವಣೆಗೆ ಲಕ್ಷ್ಯ ಕೊಡುತ್ತಿಲ್ಲ

ಸಿದ್ಧಲಿಂಗಯ್ಯನವರ ಹೇಳಿಕೆ

ಬೆಂಗಳೂರು ೧೯

ಮಂತ್ರಿಮಂಡಲವು ಬದಲಾವಣೆಯಾಗಬೇಕೆಂಬ ಸತತವಾದ ಬೇಡಿಕೆಗಳ ಕಡೆಗೆ ಮಂತ್ರಿಮಂಡಲದವರು ಲಕ್ಷ್ಯ ಕೊಡುತ್ತಿಲ್ಲ ಪ್ರಜಾ ಸತ್ತಾತ್ಮಕ ಸರ್ಕಾರವು ತನ್ನ ಸೇವೆಯಿಂದ ಸಾರ್ವಜನಿಕರ ಪ್ರೇಮ ಮತ್ತು ವಿಶ್ವಾಸಗಳನ್ನು ಗಳಿಸದಿದ್ದರೆ ಅದು ಉಳಿಯುವುದು ಸಾಧ್ಯವಿಲ್ಲ ಎಲ್ಲೆಲ್ಲೂ ಅಸಮಾಧಾನದ ಚಿಹ್ನೆಗಳು ಕಾಣಬರುತ್ತಿವೆ ತಾವು ದೆಹಲಿಯಿಂದ ಹಿಂತಿರುಗಿದ ನಂತರ ಈ ಬಗ್ಗೆ ಸೂಕ್ತ ಕಾರ್ಯ ಕೈಗೊಳ್ಳಲು ಗಮನಕೊಡಲಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ಧಲಿಂಗಯ್ಯನವರು ತಿಳಿಸಿರುತ್ತಾರೆ

॥ ವಂದೇ ಮಾತರಂ ॥

★

ಜನರಿಗೆ ಸ್ವಾತಂತ್ರ್ಯ ತಂದಿತ್ತು ದೇಶದ ಅಭ್ಯುದಯಕ್ಕೆ ದಾರಿ, ವ್ಯಕ್ತಿಗಳನ್ನು ತಿದ್ದಿ, ಶಿಸ್ತು ಪಾಲಿಸಲು, ಸಾವಿರಾರು ಸತ್ಯಾಗ್ರಹಿಗಳ ತ್ಯಾಗದ ಶಕ್ತಿಯನ್ನು ಪಡೆದಿರುವುದು	ಕಾಂ ಗ್ರೆ ಸ್

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ

ಚುನಾವಣಾ ಸಮಿತಿ, ಮೈಸೂರು

ಹರಿಕಥೆ

ನಾಳೆ ಸಂಜೆ ೬ ಗಂಟೆಗೆ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದಲ್ಲಿ ಶ್ರೀ ಸಂಜೀವಮೂರ್ತಿಗಳಿಂದ ಚಂದ್ರಹಾಸ ಚರಿತ್ರೆ ಎಂಬ ಹರಿಕಥೆ ಏರ್ಪಾಡಾಗಿದೆ

ನೂತನ ರೇಷನ್ ಕಾರ್ಡುಗಳ ಹಂಚಿಕೆ

ಮುಂದಿನ ತಿಂಗಳು ೧೦ ನೇ ತಾ॥ ನಿಂದ ರಾಜಧಾನಿಯಲ್ಲಿ ನೂತನ ರೇಷನ್ ಕಾರ್ಡುಗಳನ್ನು ಹಂಚಲಾಗುವುದೆಂದು ಮುಖ್ಯ ರೇಷನಿಂಗ್ ಅಧಿಕಾರಿಗಳು ತಿಳಿಸಿರುತ್ತಾರೆ

ಕಾಲರಾದಿಂದ ಮೈಸೂರು ಜಿಲ್ಲೆಯಲ್ಲಿ ೫೭೯ ಜನರ ಮರಣ

ಮೈಸೂರು ೧೯

ಕಾಲರಾ ರೋಗದಿಂದ ಮೈಸೂರು ನಗರದಲ್ಲಿ ೧೯ ಜನರು, ಜಿಲ್ಲೆಯಲ್ಲಿ ೫೭೯ ಮಂದಿಯೂ ಸತ್ತರು ರೈಲ್ವೆ ವರ್ಕ್‌ಷಾಪಿನ ಕಾಲೋನಿಯಲ್ಲಿ ಒಂದು ಸಂಸಾರದವರಿಗೆ ಕಾಲರಾ ತಗಲಿ ೪ ಜನರು ಸತ್ತುಹೋದರು ಉಪದ್ರವವನ್ನು ತಡೆಗಟ್ಟಲು ಎಲ್ಲ ಮುಂಜಾಗ್ರತೆ ಕಾರ್ಯಕ್ರಮ ಕೈಗೊಳ್ಳಲಾಗಿದೆ ಜಿಲ್ಲೆಯಲ್ಲಿ ಒಟ್ಟು ೧,೫೫,೦೦೦, ನಗರದಲ್ಲಿ ೬೫೦೮ ಜನರಿಗೆ ಇನಾಕ್ಯುಲೇಷನ್ ಮಾಡಲಾಗಿದೆ ಎಂದು ಪುರಸಭಾ ಕಮೀಷನರಾದ ಶ್ರೀ ಸಿ ನರಸಿಂಹಮೂರ್ತಿಯವರು ನಿನ್ನೆ ದಿನ ನಡೆದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ಕನ್ನಡ ಆಶು ಭಾಷಣ ಸ್ಪರ್ಧೆ

ರಾಜಧಾನಿಯ ಶಾರದಾವಿಲಾಸ ಹೈಸ್ಕೂಲ್‌ನಲ್ಲಿ ನಾಳೆ ಬೆಳಿಗ್ಗೆ ೮-೩೦ ಗಂಟೆಗೆ ಕನ್ನಡ ಆಶು ಭಾಷಣ ಸ್ಪರ್ಧೆಯು ನಡೆಯುವುದು ಸಂಜೆ ೬ ಗಂಟೆಗೆ ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಪಂಡಿತ ನೆಹರೂ ಅವರ ವರ್ಧಂತ್ಯುತ್ಸವವು ಜರುಗುವುದು

ಲಲಿತಾ ಕಲಾ ಸಂಘದ ಅಧಿಕಾರಿ ವರ್ಗ

ರಾಜಧಾನಿಯ ಲಲಿತ ಕಲಾ ಸಂಘದ ವಾರ್ಷಿಕ ಸಭೆಯು ಕಳೆದ ಶನಿವಾರ ಶ್ರೀ ಪಿ ಶಿವಶಂಕರ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಪಿ ಶಿವಶಂಕರ್‌ರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಸ್ ಆರ್ ಅಯ್ಯಂಗಾರ್ ಮತ್ತು ಸೀತಾರಾಮರವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ವೈ ನಾಗರಾಜರವರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು

ಹೈದರಾಬಾದಿನ ನೂತನ ಗೌರ್ನರರು

ಭಾರತದ ಸಂಸ್ಥಾನ ಶಾಖೆಯ ಸೆಕ್ರೆಟರಿಗಳಾದ ಶ್ರೀ ಎಂ ಕೆ ವೆಲ್ಲೋಡಿಯವರನ್ನು ಹೈದರಾಬಾದಿನ ಗೌರ್ನರರನ್ನಾಗಿ ನೇಮಿಸಲಾಗಿದೆ ಅವರು ಮುಂದಿನ ತಿಂಗಳು ೧ ನೇ ತಾ॥ ಅಧಿಕಾರ ವಹಿಸಿಕೊಳ್ಳುವರು

ಸಿಲೋನಿನ ಪೌರಸಭಾಧ್ಯಕ್ಷರ ಕೊಲೆ

ಸಿಲೋನಿನ ಹಿಂದಿನ ಕಾಲದ ರಾಜಧಾನಿಯಾದ ಕ್ಯಾಂಡಿ ಬಳಿ ಇರುವ ಮಾತಲೆ ಎಂಬ ಊರಿನ ಪೌರಸಭಾಧ್ಯಕ್ಷರಾದ ಕೆ. ಎಂ. ಎಂ ಹುಸೇನರವರನ್ನು ಕಳೆದ ಮಂಗಳವಾರ ರಾತ್ರಿ ಗುಂಡಿನಿಂದ ಕೊಲ್ಲಲಾಯಿತು ಡಿಸೆಂಬರ್ ೧೬ ರಲ್ಲಿ ನಡೆಯುವ ಚುನಾವಣೆಗೆ ಮುಂಚಿತವಾಗಿ ಅವರನ್ನು ಕೊಲೆ ಮಾಡುವುದಾಗಿ ಅವರಿಗೆ ಪತ್ರಗಳನ್ನು ಬರೆಯಲಾಗಿತ್ತೆಂದು ಹೇಳಲಾಗಿದೆ

ಬ್ರಿಟಿಷ್ ರಾಜರ ವರ್ಧಂತಿಗೆ ರಜವಿಲ್ಲ

ಮುಂದಿನ ವರ್ಷದಿಂದ ಬ್ರಿಟಿಷ್ ರಾಜರ ವರ್ಧಂತಿಗೆ ಭಾರತದಲ್ಲಿ ರಜಾ ಕೊಡುವುದಿಲ್ಲವೆಂದು ಪ್ರಕಟಿಸಲಾಗಿದೆ

ತುರ್ಕಿ ಅಧ್ಯಕ್ಷರ ಕೊಲೆ ಪ್ರಯತ್ನ

ತುರ್ಕಿಯ ಅಧ್ಯಕ್ಷ ಇನ್ನೂನುರವರನ್ನು ಕೊಲೆ ಮಾಡಿ, ಸರ್ಕಾರವನ್ನು ಉರುಳಿಸುವ ಒಳಸಂಚು ನಡೆಸುತ್ತಿದ್ದರೆಂದು ಅಲ್ಲಿನ ಶಾಸನ ಸಭೆಯ ಇಬ್ಬರು ಸದಸ್ಯರನ್ನು ದಸ್ತಗಿರಿ ಮಾಡಲಾಗಿದೆ

ಸಂಸ್ಥಾನ ಶಾಖೆಯ ಸಲಹೆಗಾರರ ಹುದ್ದೆ ರದ್ದು

ಮುಂದಿನ ತಿಂಗಳು ೧ ನೇ ತಾ॥ ನಿಂದ ಭಾರತ ಸರ್ಕಾರದ ಸಂಸ್ಥಾನದ ಶಾಖಾ ಸಲಹೆಗಾರರ ಹುದ್ದೆಯನ್ನು ರದ್ದು ಮಾಡಲಾಗುವುದೆಂದೂ, ಶ್ರೀ ವಿ ಪಿ ಮೆನನ್‌ರವರು ಆ ಶಾಖೆಯ ಕಾರ್ಯದರ್ಶಿಗಳಾಗುವರೆಂದೂ ತಿಳಿದು ಬಂದಿದೆ ಇನ್ನು ಕೆಲವು ತಿಂಗಳೊಳಗಾಗಿ ಸಂಸ್ಥಾನ ಶಾಖೆಯನ್ನು ಗೃಹ ಶಾಖೆಯೊಳಗೆ ಐಕ್ಯ ಮಾಡಲಾಗುವುದೆಂದೂ ತಿಳಿದುಬಂದಿದೆ

ಪಾಟಿಯಾಲದಲ್ಲಿ ಕಾವಲು ಗಾರ ಸರ್ಕಾರ

ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಸಂಸ್ಥಾನ ಯೂನಿಯನ್‌ಗಳ ತಾತ್ಕಾಲಿಕ ಮಂತ್ರಿ ಮಂಡಲವನ್ನು ಅದರ ರಾಜಪ್ರಮುಖರು ಇಂದಿನಿಂದ ರದ್ದು ಮಾಡಿರುತ್ತಾರೆ ಮತ್ತು ಕಾವಲುಗಾರ ಸರ್ಕಾರವೊಂದನ್ನು ಏರ್ಪಡಿಸಿದ್ದಾರೆ

ಮಂತ್ರಿಗಳು ಕಾಂಗ್ರೆಸ್ ಅಧಿಕಾರಿಗಳಾಗಿರಕೂಡದು

ಕೇಂದ್ರ ಅಥವ ಪ್ರಾಂತೀಯ ಮಂತ್ರಿಗಳು ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿಗಳು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿಯಾಗಲಿ ಅಥವ ಕಾರ್ಯದರ್ಶಿಯಾಗಿಯಾಗಲೀ ಇರಕೂಡದೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನಿರ್ಣಯ ಮಾಡಿದೆ

ಕರ್ನಾಟಕ ಪ್ರಾಂತ ರಚನೆ ಬಗ್ಗೆ ಪ್ರಚಾರ

ಸಮಿತಿ ಸಮ್ಮೇಳನದ ಅಧ್ಯಕ್ಷರಾದ ಶ್ರೀಮತಿ ಬಳ್ಳಾರಿ ಸಿದ್ದಮ್ಮ ಮತ್ತು ಸಂಚಾಲಕರಾದ ಹೆಚ್ ಎಸ್ ದೊರೆಸ್ವಾಮಿಯವರು ಈ ದಿನ ರಾಜಧಾನಿಗೆ ಬರಬೇಕಾಗಿದ್ದ ಕಾರ್ಯಕ್ರಮವನ್ನು ಮುಂದುವರಿಸಿದ್ದಾರೆ ಅವರುಗಳು ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಭದ್ರಾವತಿ ಚಿಕ್ಕಮಗಳೂರು, ಕಡೂರುಗಳಿಗೆ ಭೇಟಿ ಕೊಟ್ಟು ೨೬ನೇ ತಾ॥ ಇಲ್ಲಿಗೆ ಆಗಮಿಸುವರು ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಪ್ರಚಾರ ಮಾಡಲು ಅವರು ಪ್ರವಾಸವನ್ನು ಕೈಗೊಂಡಿದ್ದಾರೆ

ಕರ್ನಾಟಕ ಪ್ರಾಂತ ರಚನೆಗೆ ಸಾ ವ ಕಾ ಶ

ದೆಹಲಿಯಲ್ಲಿ ಸೇರಿರುವ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯಲ್ಲಿ ಕರ್ನಾಟಕ ಪ್ರಾಂತರಚನೆಯ ವಿಷಯವು ಚರ್ಚಿಸಲ್ಪಟ್ಟಿತೆಂದೂ, ಅದು ಅಷ್ಟು ಸುಲಭಸಾಧ್ಯವಲ್ಲವೆಂದೂ ಅಭಿಪ್ರಾಯ ಬಂದಿತೆಂದು ದೇಶಪಾಂಡೆ ಮುನ್ಷಿ ಜೋಷಿ ... ಪ್ರಿಂಸಿ... ಪ್ರದಾನಿಯವರು ಮತ್ತು ಕೆಲವರು ಈ ಪ್ರದೇಶಗಳ ... ವಾಗಿ ... ಬೇಕಾಗಿದೆ ... ಕರ್ನಾಟಕ ಪ್ರಾಂತದ ರಚನೆಗೆ ... ಅವಕಾಶವಾಗುತ್ತಿದೆಯೆಂದು ಹೇಳಲಾಗಿದೆ

Morning Shows at
CHAMUNDESWARI TALKIES
From 18th Nov. 49
For 3 days at 10-30 a.m.
Paramount's
The Buccaneers
(ದಿ ಬುಕನೀರ್ಸ್)
—: Starring :—
Fredrick March, Franciska Gala

Edited, printed and published by A. R. Nagarajan, at Sadhvi Press, D. Subbiah Road, Mysore

ಆರೆಸ್ಸೆಸ್‌ನವರು ಕಾಂಗ್ರೆಸ್ಸಿಗೆ ಸೇರಲು ನಿಷೇಧ

ಆರೆಸ್ಸೆಸ್ ಸಂಸ್ಥೆಯವರು ಕಾಂಗ್ರೆಸ್ಸಿಗೆ ಸದಸ್ಯರಾಗಲು ಸಾಧ್ಯವಿಲ್ಲವೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ತೀರ್ಮಾನಿಸಿದೆ.

ಸ್ವಾಗತ ಸಮಾರಂಭ

ದರ್ಬಾರು ಭಕ್ಷೀಗಳಾದ ಸರ್ದಾರ್ ಹೆಚ್. ಎಲ್. ದೇವರಾಜೆ ಅರಸಿನವರು ತಮ್ಮ ಪುತ್ರ ಶ್ರೀ ಹೆಚ್. ಡಿ. ಗೋಪಾಲರಾಜೆ ಅರಸಿನವರ ವಿವಾಹ ಸಂಬಂಧದಲ್ಲಿ ನಿನ್ನೆ ಸಂಜೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿ, ಅನೇಕ ಮಹನೀಯರುಗಳನ್ನು ಆಹ್ವಾನಿಸಿ ಫಲಪುಷ್ಪ ತಾಂಬೂಲಗಳಿಂದ ಸತ್ಕರಿಸಿದರು

ಶ್ರೀ ಗಾಯತ್ರಿ
20-11-49ರಿಂದ 2 ದಿನಗಳು ಪ್ರತಿ ದಿನವೂ ಮೂರು ಪ್ರದರ್ಶನಗಳು
ಹೋಂ ಕಮಿಂಗ್
Home Coming
With :—Clark Gable
Morning Shows on 19th & 20th Nov.
EVERY GIRL SHOULD BE MARRIED

ರಾಜಕಮಲ್
ಮೈ ಸೂ ರು
19-11-49ರಿಂದ ಅಮೋಘ ಪ್ರಾರಂಭ
ದಿನವೂ 3 ಆಟಗಳು
ಮಹಾತ್ಮಾ ಪಿಕ್ಚರ್ಸ್‌ರವರ
ಕೃಷ್ಣಲೀಲಾ (ಕನ್ನಡ)
ಪಾತ್ರ:- ಕುಮಾರಿ ಉಷಾ, ಬಳ್ಳಾರಿ ಲಲಿತ, ಕೆಂಪರಾಜ್

ಪ್ರಭುದೇವಾ ಟಾಕೀಸ್
18-11-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನವೂ 3 ಆಟಗಳು
ಮಾಲತಿಸಪ್ರತಿ, ರಘುರಾಮಯ್ಯ, ದಾಸರಿ ಕೋಟಿರತ್ನಂ, ಪದ್ಮನಾಭಂ, ನಟಿಸಿರುವ ತೆಲುಗು ಚಿತ್ರ
* ರಾ ಧಿ ಕ *
ಮ್ಯಾಟಿನಿ 3-30, 1ನೇ ಆಟ 6-30, 2ನೇ ಆಟ 10

LAKSHMI THEATRE
Morning Shows :—
From 19-11-49 For 2 days
Double Programme
The Jade Mask
AND
One Thrilling Night
With :-Edwin Luk & John Beal

Morning Shows For 4 days
From 18-11-49
DAKOTA
With:- John Wayne
A Romantic Spectacle of The West

ಮೈಸೂರು ಸ್ಟೇಟ್ ರೈಲ್ವೆ
ಪ್ರ ಕ ಟ ಣೆ

ಮೈಸೂರು ರೈಲ್ವೆ, ಭಾರತ ರೈಲ್ವೆ ಮತ್ತು ಸಂಸ್ಥಾನದ ರೈಲ್ವೆಗಳಲ್ಲಿ ೧೯೪೯ನೇ ಡಿಸೆಂಬರ್ ೧ರಿಂದ ಪ್ರಥಮ ಮತ್ತು ದ್ವಿತೀಯ ತರಗತಿ ಮಧ್ಯೆ 'ಎರಡನೇ ತರಗತಿ ಸ್ಪೆಷಲ್' ಎಂಬ ನೂತನ ತರಗತಿಯನ್ನು, ಮಾಲಗಳಿಗೆ ... ಈ ಕೆಳಗೆ ನಮೂದಾದ ರೈಲುಗಳಲ್ಲಿ ಒದಗಿಸಲಾಗಿದೆ

ವಿಭಾಗಗಳು	ರೈಲುಗಳಲ್ಲಿ
(೧) ಮೈಸೂರು ಬೆಂಗಳೂರು	೧ ಅಪ್ ಮತ್ತು ೨ ಡೌನ್ ಮೇಲ್
	೭ ,, ,, ೮ ,, ಪ್ಯಾಸೆಂಜರ್
(೨) ಬೆಂಗಳೂರು-ಹಿಂದೂಪುರ	೧ ,, ,, ೨ ಡೌನ್ ಮೇಲ್
	೬೭ ,, ,, ೬೮ ,, ಪ್ಯಾಸೆಂಜರ್
(೩) ಬೆಂಗಳೂರು-ಹರಿಹರ	೩೩ ,, ,, ೩೪ ಡೌನ್ ಮೇಲ್
	೩ ,, ,, ೪ ,, ಎಕ್ಸ್‌ಪ್ರೆಸ್
(೪) ಮೈಸೂರು-ಅರಸೀಕೆರೆ	೧೧ ,, ,, ೧೨ ,, ಪ್ಯಾಸೆಂಜರ್
(೫) ಬೀರೂರು-ತಾಳಗುಪ್ಪ	೧೭ ,, ,, ೧೮ ,, ,,

೨. ಮೈಲಿಗೆ ಜಾತ ಪ್ರತಿ ಪ್ರಯಾಣಿಕರಿಗೂ ಪ್ರತಿ ಮೈಲಿಗೆ ೧೪ ಕಾಸು

೩. ಎರಡನೆಯ ತರಗತಿಯ ಟಿಕೆಟುಗಳ ಮೇಲೆ 'ಸ್ಪೆಷಲ್' ಎಂಬ ಪದ ಉಪಯೋಗಿಸಿ ಗುರುತು ಸಿಗುವಂತೆ ಉಪಯೋಗಿಸಲಾಗುವುದು,

(೧) ಪ್ರಯಾಣದ ಒಂದು ಭಾಗದಲ್ಲಿ 'ಎರಡನೆ ಸ್ಪೆಷಲ್' ಅನುಕೂಲ ಒದಗಿಸಲ್ಪಡದಿದ್ದಲ್ಲಿ ಕಂಬೈನ್ಡ್ ಎರಡನೇ ಸ್ಪೆಷಲ್ ತರಗತಿ ಮತ್ತು ಎರಡನೆ ಸಾಧಾರಣ ಟಿಕೇಟುಗಳನ್ನು ಕೊಡಲಾಗುವುದು (೨) ಟಿಕೆಟುಗಳು ಪ್ರಯಾಣದ ೧೦ ದಿನದ ಮುಂಚಿತವಾಗಿ ಸಿಗುವುವು. (೩) ಎರಡನೆಯ ಸ್ಪೆಷಲ್ ತರಗತಿಯ ೨ ಪ್ರಯಾಣಿಕರ ಟಿಕೆಟುಗಳಿಗೆ ಒಬ್ಬ ಆಳಿನ ಟಿಕೆಟ್ ಕೊಡಲಾಗುತ್ತೆ

೪. ಅಧಿಕೃತ ಬುಕಿಂಗ್ ಏಜೆಂಟರು ಎರಡನೇ ತರಗತಿ ಟಿಕೇಟುಗಳನ್ನು ಮಾರಾಟ ಮಾಡಲು ಅವಕಾಶ ಕೊಡಲಾಗುವುದು

(೫) ರಿಜರ್ವೇಷನ್-ಮೊದಲನೆ ತರಗತಿಯಂತೆಯೇ ಈ ತರಗತಿಯನ್ನು ರಿಜರ್ವ್ ಮಾಡಲು ... ಮುಂತಾದ್ದು ಲಗೇಜ್ ಛಾರ್ಜ್:-ಪ್ರತಿ ಪ್ರಯಾಣಿಕನಿಗೂ ... ಲಗೇಜ್, ಸಾಮಾನನ್ನು ಮುಂಚಿತವಾಗಿ ಸಾಗಿಸಲು ಅನುಮತಿ ... ಗುರುತು-ಎರಡನೆ ತರಗತಿಯ ಸ್ಪೆಷಲ್ ಕಂಪಾರ್ಟ್‌ಮೆಂಟನ್ನು ಗುರುತಿಸಲು ... ತರಗತಿ ಎ. ಒ. ಸೂಚನೆಯು ಪಕ್ಕದಲ್ಲಿ 'ಎಸ್.(S)' ಎಂದು ಸೂಚಿತವಾಗಿರುವುದು. ೭. ಅನುಕೂಲತೆ-ಚಾಲ್ತಿಯಲ್ಲಿರುವ ಎರಡನೆಯ ತರಗತಿಗೆ ಅನುಕೂಲತೆ ಮತ್ತು ವ್ಯತ್ಯಾಸಗಳಲ್ಲಿಯೂ ಈ ತರಗತಿಯಲ್ಲಿರುವುವು ... ಟೆಕ್ ... ಅನುಕೂಲತೆ ... ತರಗತಿಯ ಪ್ರಯಾಣಿಕರಲ್ಲಿಯೂ ವಿಶಿಷ್ಟ ಕಾರಣವಾದವು. ... ಭೋಜನಕ್ಕಾಗಿ ಟೆಲಿಗ್ರಾಂ ಸೌಕರ್ಯ:-ಮುಂಚಿತವಾಗಿ ತಂತಿ ಸಲ್ಲಿಸಿ ... ಮತ್ತು ಒನೆಯ ತರಗತಿಯಲ್ಲಿ ಈಗಿರುವಂತೆ ... ಚಾರ್ಜು ... ಸಾಧಾರಣ ಗಾಡಿಗಳಲ್ಲಿ ... ವ್ಯಾಪಾರ ಬದಲಾವಣೆ ಇರುವುದಿಲ್ಲ

ಟ್ರಾಫಿಕ್ ಮ್ಯಾನೇಜರ ಕಚೇರಿ ... ಸಿ. ಎಸ್. ... ವಿ.ಎ.ಎಫ್. ಇನಾಯತ್ ಹುಸೇನ್ ... ಟ್ರಾಫಿಕ್ ಮ್ಯಾನೇಜರ್

ಜೈ ಹಿಂದ್!

ಚಾಮರಾಜ ಮೊಹಲ್ಲಾ ಓಟರುಗಳಲ್ಲಿ ವಿನಂತಿ

26-11-49ನೇ ಶನಿವಾರ ಲಕ್ಷ್ಮೀಪುರಂ ಸ್ಕೂಲಿನಲ್ಲಿ ನಡೆಯುವ ಪೌರಸಭಾ ಚುನಾವಣೆಯಲ್ಲಿ ದಯವಿಟ್ಟು ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ ತಮ್ಮ ಬೆಲೆಬಾಳುವ ಓಟುಗಳನ್ನು ಕೊಡಬೇಕಾಗಿ ವಿನಂತಿ

ಸಂಖ್ಯೆ	ಹೆಸರು	ಚಿಹ್ನೆ	ಓಟಿನ ಗುರುತು
7	ಎಸ್. ಶ್ರೀರಂಗಾಚಾರ್ ಬಿ ಎ ಎಲ್. ಎಲ್. ಬಿ	ಕೈ ರಾಟೆ	X
8	ಸಿ. ಜೆ. ದೇವನಾಥ್ ಬಿ ಎ ಎಲ್. ಎಲ್. ಬಿ.	ರಾಷ್ಟ್ರ ಧ್ವಜ	X
9	ಅಗರಂ ರಂಗಯ್ಯ ಬಿ ಎ	ಹಸು	X
10	ಬಿ. ನಾರಾಯಣಸ್ವಾಮಿ ಬಿ. ಎ., ಬಿ. ಎಲ್.	ಭಾರತ ಮಾತ	X

ರಣಜಿತ್ ಟಾಕೀಸ್
18—11—49 ರಿಂದ : ಯಶಸ್ವಿಯಾದ 2ನೇ ವಾರ
ಎ ಆರ್. ಕರ್ದಾರ್‌ರವರ ಸಂಗೀತಮಯ ಹಿಂದಿ ಚಿತ್ರ
ಸುರಯ್ಯ, ಶ್ಯಾಮ್ ಪಾತ್ರವಹಿಸಿರುವ → ದಿಲ್ಲಗಿ
ಪ್ರತಿ ದಿನ ಮೂರು ಪ್ರದರ್ಶನಗಳು

ಪ್ರ ಭಾ
18—11—49 ರಿಂದ ಅಮೋಘ ಪ್ರಾರಂಭ
ದಿನವೂ 3 ಆಟಗಳು
ರತನ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ
- ಚಾರ್ ದಿನ್ -
—ಮುಖ್ಯ ಪಾತ್ರ—
ಸುರೈಯಾ, ಶ್ಯಾಮ್, ಜಯಂತ್ ಮತ್ತು ಕಕ್ಕೂ

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ವೃದ್ಧಿ

ಸಂಪುಟ ೧೪ | ಭಾನುವಾರ ೨೦-೧೧-೪೯ | ಸಂಚಿಕೆ ೧೮

ಮೈಸೂರಿನಲ್ಲಿ ಫಿಲಂ ತಯಾರಿಕೆ ಕಾರ್ಖಾನೆ

ಮೈಸೂರಿನಲ್ಲಿ ಕಚ್ಚಾ ಫಿಲಂ ತಯಾರಿಕಾ ಕಾರ್ಖಾನೆ

ಸ್ವಂ ಸು ಫೋನ್] ಬೆಂಗಳೂರು ೨೦

ಸ್ವಿಟ್ಜರ್ಲೆಂಡಿನ ಫಿಲಂ ತಯಾರಿಕಾ ಕಂಪೆನಿಯೊಂದು ಮೈಸೂರಿನಲ್ಲಿ ಫೋಟೋಗಳನ್ನು ತೆಗೆಯಲು ಬೇಕಾದ ಕಚ್ಚಾ ಫಿಲಮ್ಮುಗಳ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಆಲೋಚಿಸಿದೆ ಮೇಲ್ಕಂಡ ಸಂಸ್ಥೆಯ ಬಂಡವಾಳವು ೧೫೦ ಲಕ್ಷ ರೂ ಆಗುವುದೆಂದೂ, ಮೈಸೂರು ಸರ್ಕಾರದವರು ಇದರಲ್ಲಿ ಶೇಕಡ ೧೦ ರಷ್ಟು ಷೇರುಗಳನ್ನು ಕೊಳ್ಳುವರೆಂದೂ ಹೇಳಲಾಗಿದೆ ಇದಕ್ಕೆ ಭಾರತ ಸರ್ಕಾರದ ಅನುಮತಿ ದೊರೆತಿದೆ. ಕಂಪೆನಿಯನ್ನು ನಂಜನಗೂಡಿನಲ್ಲೋ ಅಥವಾ ಕೃಷ್ಣರಾಜ ಸಾಗರದಲ್ಲೋ ಸ್ಥಾಪಿಸಲಾಗುವುದು

ಯುಗೋಸ್ಲಾವಿಯ ರಾಯಭಾರಿ ಗೂಢಚರ್ಯೆ ?

ಮಾಸ್ಕೋದಲ್ಲಿರುವ ಯುಗೋಸ್ಲಾವಿಯ ರಾಯಭಾರಿಯು ಗೂಢಚರ್ಯೆ ಮತ್ತು ಪಿತೂರಿ ನಡೆಸುವುದರಲ್ಲಿ ನಿರತರಾಗಿರುವರೆಂದೂ, ಆದ್ದರಿಂದ ಅವರನ್ನು ವಾಪಸು ಕರೆಸಿಕೊಳ್ಳಬೇಕೆಂದೂ ರಷ್ಯವು ಯುಗೋಸ್ಲಾವಿಯಾಕ್ಕೆ ಪತ್ರ ಬರೆದಿದೆ

ಸಕ್ಕರೆ ಕಾರ್ಖಾನೆ ಕೆಲಸಗಾರರ ವಜಾ

ಮಂಡ್ಯ ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಮೂರ್ತಿಗೌಡರನ್ನೂ ಮತ್ತು ಶ್ರೀಗಳಾದ ಶೇಷಗಿರಿ ಕೆಂಪಯ್ಯ ಮತ್ತು ಬೋರೆಶೆಟ್ಟಿ ಎಂಬುವರನ್ನೂ ಕೆಲಸದಿಂದ ವಜಾಮಾಡಿರುವುದಾಗಿ ಗೊತ್ತಾಗಿದೆ

ಹೈದರಾಬಾದ್ ನೈಜಾಮರು ರಾಜ ಪ್ರಮುಖರೇ?

ಭಾರತ ಸರ್ಕಾರದವರು ತಯಾರಿಸಿದ ರಾಜ್ಯಾಂಗದಲ್ಲಿ ಹೈದರಾಬಾದಿನ ನಿಜಾಮರನ್ನು ರಾಜಪ್ರಮುಖರೆಂದು ನಮೂದಿಸಲಾಗಿದೆಯೆಂದೂ ಮತ್ತು ಅವರು ಹೈದರಾಬಾದ್ ಸಂಸ್ಥಾನದ ಶಾಸನ ಬದ್ಧ ಪ್ರಮುಖರಾಗುವರೆಂದೂ ಹೇಳಲಾಗಿದೆ

ಯಡತೊರೆಗೆ ಷಟಲ್ ರೈಲು ಏರ್ಪಾಡಾಗಲಿ

ಕಳೆದ ತಿಂಗಳು ೧ ರಿಂದ ಮೈಸೂರಿನಿಂದ ಅರಸೀಕೆರೆಗೆ ಸಂಜೆ ಹೊರಡುವ ೧೬ ಡೌನ್ ರೈಲು ಮೈಸೂರನ್ನು ೬-೫೫ಕ್ಕೆ ತಲುಪುವುದು. ಮಧ್ಯದಲ್ಲಿ ಸಾಗರ ಕಟ್ಟೆ ಹತ್ತಿರ ೨೦ ನಿಮಿಷ ಕಾಲ ಗಂಟೆಯನ್ನು ರೈಲ್ವೆ ಕ್ರಾಸಿಂಗಿಗಾಗಿ ನಿಲ್ಲುವುದು. ಇದರಿಂದ ಸ್ಟೇಷನ್ನಿನಿಂದ ಊರಿಗೆ ಹೋಗಲು ರಾತ್ರಿ ತುಂಬಾ ಹೊತ್ತಾಗುವುದು. ಸ್ವಾತಂತ್ರ್ಯಕ್ಕಾಗಿ ಚಳವಳಿಯಿಂದ ಬರುವ ಸುಮಾರು ೧೧೦ ವಿದ್ಯಾರ್ಥಿಗಳಿಗೆ ಪಾಠಗಳನ್ನು ಓದಿಕೊಳ್ಳಲು ತುಂಬಾ ಅನಾನುಕೂಲವಾಗುತ್ತಿದೆಯೆಂದೂ, ಈ ಬಗ್ಗೆ ರೈಲ್ವೆ ಮಂತ್ರಿ ಮತ್ತು ಟ್ರಾಫಿಕ್ ಮ್ಯಾನೇಜರ್ರವರುಗಳಿಗೆ ಅರಿಕೆ ಮಾಡಿಕೊಳ್ಳಲಾಯಿತೆಂದೂ ಆದಷ್ಟು ಜಾಗ್ರತೆ ಅನುಕೂಲ ಮಾಡಿಕೊಡಲಾಗುವುದೆಂದು ಭರವಸೆ ನೀಡಲಾಯಿತೆಂದೂ ಆದರೂ ಸಹ ಇನ್ನೂ ಮಾಡಲಾಗಿಲ್ಲದಿರುವುದರಿಂದ ಯಡತೊರೆ-ಮೈಸೂರು ಮಧ್ಯೆ ಒಂದು ಷಟಲ್ ರೈಲನ್ನು ಹೊಸದಾಗಿ ಏರ್ಪಡಿಸಬೇಕೆಂದೂ ಹಲವು ವಿದ್ಯಾರ್ಥಿಗಳು ಕೋರಿರುತ್ತಾರೆ

ಹೈದ್ರಾಬಾದಿನ ಆಡಳಿತಗಾರರಾಗಿ ವೆಲ್ಲೋಡಿ ನೇಮಕ

ಹೈದರಾಬಾದಿನ ಮಿಲಿಟರಿ ಗೌರ್ನರರಾದ ಮೇ|| ಜ|| ಚೌಧುರಿಯವರ ಸ್ಥಾನದಲ್ಲಿ ಭಾರತ ಸಂಸ್ಥಾನ ಇಲಾಖಾ ಕಾರ್ಯದರ್ಶಿಗಳಾದ ಎಂ. ಕೆ. ವೆಲ್ಲೋಡಿಯವರನ್ನು ಆಡಳಿತಗಾರರನ್ನಾಗಿ ನೇಮಿಸಲಾಗಿದೆ

ಮೇ|| ಜ|| ಚೌಧುರಿಯವರು ಒರಕ್ತಿಗಳಿಂದ ಭಾರತದ ಮಿಲಿಟರಿ ಇಲಾಖೆಗೆ ವಾಪಸು ಹೋಗುವರು ಹೈದರಾಬಾದಿನಲ್ಲಿ ವೆಲ್ಲೋಡಿಯವರ ನೇಮಕದ ನಂತರ ಮತ್ತಾವ ಬದಲಾವಣೆಯೂ ಆಗುವುದಿಲ್ಲವೆಂದು ಮೇ|| ಜ|| ಚೌಧುರಿಯವರು ತಿಳಿಸಿದ್ದಾರೆ.

ಶ್ರವಣ ಬೆಳಗೊಳದಲ್ಲಿ ವಿಚಿತ್ರ ಮೃಗದ ಹಾವಳಿ

ಶ್ರವಣಬೆಳಗೊಳದ ಹೋಬಳಿಯಲ್ಲಿ ಒಂದು ವಿಚಿತ್ರ ಮೃಗವು ಸೇರಿಕೊಂಡು ಕೈಗೆ ಸಿಕ್ಕಿದ ಪ್ರಾಣಿ ಮತ್ತು ಮನುಷ್ಯರನ್ನು ಎತ್ತಿಕೊಂಡು ಹೋದ ಮೇಲಕ್ಕೆ ಹತ್ತಿ ಕುಳಿತುಕೊಂಡು ತಿನ್ನುವುದೆಂದೂ, ಇತ್ತೀಚೆಗೆ ಅಕ್ಕನ ಮಹಿಳೆಯೊಬ್ಬರು ಈ ಮೃಗಕ್ಕೆ ಬಲಿಯಾದರೆಂದೂ ವರದಿಯಾಗಿದೆ ಆ ಮೃಗವು ದಿನವೊಂದಕ್ಕೆ ೩೦ ಮೈಲಿ ಸಂಚರಿಸ ಬಹುದೆಂದು ಹೇಳಲಾಗಿದೆ

ನೇಪಾಳಕ್ಕೆ ಚೀಣಾ ಕಮ್ಯೂನಿಸ್ಟರಿಂದ ಗಂಡಾಂತರ?

ಚೀಣೀ ಕಮ್ಯೂನಿಸ್ಟರು ಟಿಬೆಟ್ಟಿನ ಪ್ರದೇಶವನ್ನು ಆಕ್ರಮಿಸುವುದರಿಂದ ಭಾರತದ ಭದ್ರತೆಗೆ ಧಕ್ಕೆಬರಬಹುದೆಂದೂ ಮತ್ತು ನೇಪಾಳಕ್ಕೂ ಗಂಡಾಂತರ ಪ್ರಾಪ್ತಿಸಬಹುದೆಂದೂ ಇಂಗ್ಲೆಂಡಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ವರದಿಮಾಡಿದೆ

ಎಟ್ರಿಂಯಾದ ಗಲಭೆಯಲ್ಲಿ ಭಾರತೀಯನ ಕೊಲೆ

ಆಫ್ರಿಕಾ ಖಂಡದ ಎರಿಟ್ರಿಯಾದಲ್ಲಿ ದಂಗೆಗಳು ನಡೆದ ದಿನ ಮೂವರು ಇಟಲಿ ದೇಶದವರು, ಒಬ್ಬ ಗ್ರೀಕ್ ಮತ್ತು ಒಬ್ಬ ಭಾರತೀಯನ ಕೊಲೆಯಾಗಿದೆ

ಕೈ ಚಿಗುರುವದಲ್ಲಿ ಕರೂಸಿನ ಪಡೆಗೆ ಕೌ. ರಾಷ್ಟ್ರೀಯ ಸರ್ಕಾರದ ಕೇಂದ್ರಸ್ಥಾನ ಚುಂಗ್ ಕಿಂಗಿಗೆ ೧೦ ಮೈಲಿ ಹತ್ತಿರಕ್ಕೆ ಮುಂದುವರಿದರೆ ಬಾಧಿಸಬಹುದೆಂದು ವರದಿಯಾಗಿದೆ

ನಿಜಾಮರ ಭವಿಷ್ಯದ ಬಗ್ಗೆ ರಾಜ್ಯಾಂಗಸಭೆಯಲ್ಲಿ ಚರ್ಚೆ

ಹೈದರಾಬಾದು ಮತ್ತು ಅಲ್ಲಿನ ನಿಜಾಮರ ಭವಿಷ್ಯವನ್ನು ನಿರ್ಧರಿಸುವ ಬಗ್ಗೆ ಭಾರತ ರಾಜ್ಯಾಂಗ ಸಭೆಯು ಚರ್ಚಿಸಲಿದೆಯೆಂದು ಗೊತ್ತಾಗಿದೆ

೩೩ ರೂಗೆ ೩೧೫೦೦ ರೂ. ತೆಗೆದುಕೊಂಡು ಮೋಸ

ಲಾಹೋರಿನ ಪುಸ್ತಕದ ಅಂಗಡಿಯವರೊಬ್ಬರು ಜೊಬಾಯಿನ ಎಡಿಟರೊಬ್ಬರಿಗೆ ಇತ್ತ ೩೩ ರೂ. ಚೆಕ್ಕನ್ನು ಬೊಂಬಾಯಿನ ವರ್ತಕರೊಬ್ಬರ ಸಹಾಯದಿಂದ ೩೧೫೦೦ ರೂಗೆ ಬದಲಾಯಿಸಿ, ಅಷ್ಟು ಹಣವನ್ನು ಬ್ಯಾಂಕಿನಿಂದ ಪಡೆದರೆಂಬ ಆಪಾದನೆಯಮೇಲೆ ಎಡಿಟರನ್ನು ದಸ್ತಗಿರಿ ಮಾಡಲಾಗಿದೆ.

|| ವಂದೇ ಮಾತರಂ ||

ಜನರಿಗೆ ಸ್ವಾತಂತ್ರ್ಯ ತಂದದ್ದು,

ದೇಶದ ಐಕ್ಯತೆಯನ್ನು ಸಾಧಿಸಿದ್ದು,

ವ್ಯಕ್ತಿಗಳನ್ನು ತಿದ್ದಿ, ತಿಕ್ಕಿ, ಪಾಲಿಸಲು,

ಸಾವಿರಾರು ಸತ್ಯಾಗ್ರಹಿಗಳ ತ್ಯಾಗದ ಶಕ್ತಿಯನ್ನು ಪಡೆದಿರುವುದು

ಕಾಂಗ್ರೆಸ್

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ

ಚುನಾವಣಾ ಸಮಿತಿ, ಮೈಸೂರು

ಬೊಂಬಾಯಿಯಲ್ಲಿ ಒತ್ತಾಯದ ಉಳಿತಾಯ ಯೋಜನೆ

ಬರುವ ತಿಂಗಳಿನಿಂದ ಬೊಂಬಾಯಿನ ಕಡ್ಡಾಯದ ಉಳಿತಾಯ ಯೋಜನೆಯನ್ನು ಜಾರಿಗೆ ತರಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ

ವಿದ್ಯಾರ್ಥಿಗಳ ಮುಷ್ಕರದಿಂದ ಕಾಲೇಜು ಮುಚ್ಚಲ್ಪಟ್ಟಿತು

ಕಲ್ಕತ್ತಾದ ಸ್ಕಾಟಿಷ್ ಚರ್ಚ್ ಕಾಲೇಜಿನ ಒಬ್ಬ ವಿದ್ಯಾರ್ಥಿಯ ದುರ್ವರ್ತನೆಗಾಗಿ ಅವನನ್ನು ಕೆಲವು ದಿವಸಗಳ ಹಿಂದೆ ಕಾಲೇಜಿನಿಂದ ವಜಾ ಮಾಡಲಾಗಿತ್ತು ಹಲವು ಮಂದಿ ವಿದ್ಯಾರ್ಥಿಗಳು ಇದನ್ನು ಪ್ರತಿಭಟಿಸಿ ಕಾಲೇಜಿನ ಆವರಣದಲ್ಲಿ ಸಭೆ ಮತ್ತು ಪ್ರದರ್ಶನಗಳನ್ನು ನಡೆಸಿದರು. ಇದರಿಂದ ಕಾಲೇಜನ್ನು ಮೊನ್ನೆಯಿಂದ ಅನಿರ್ದಿಷ್ಟ ಕಾಲದವರೆಗೆ ಮುಚ್ಚಲಾಗಿದೆ.

ಪಾಕೀಸ್ತಾನದ ಸೈನ್ಯಕ್ಕೆ ಚೀಣೀ ಮುಸ್ಲಿಮರು

ಇತ್ತೀಚೆಗೆ ಚೀಣೀ ಟರ್ಕಿಸ್ತಾನದ ಮುಸ್ಲಿಮರು ಬಹು ಸಂಖ್ಯೆಯಲ್ಲಿ ತುರ್ಕಿಸ್ತಾನದ ಮಾರ್ಗವಾಗಿ ಪಾಕೀಸ್ತಾನಕ್ಕೆ ಬರುತ್ತಿರುವರೆಂದು ವರದಿಯಾಗಿದೆ ಅವರುಗಳನ್ನು ಪಾಕೀಸ್ತಾನದ ಸೈನ್ಯದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲಾಗುತ್ತಿದೆಯೆಂದೂ, ಇದರಿಂದ ಕಾಶ್ಮೀರಕ್ಕೆ ಆಕ್ರಮಣ ಭೀತಿಯು ಮತ್ತೂ ಹೆಚ್ಚುವುದೆಂದೂ, ಅಲ್ಲದೆ ಕಾಶ್ಮೀರದ ಸಮಸ್ಯೆಯು ಸುಸೂತ್ರವಾಗಿ ಬಗೆಹರಿಯುವ ಭರವಸೆಯೂ ಇಲ್ಲವೆಂದೂ ಹೇಳಲಾಗಿದೆ

ಬರುವ ವಾರದಲ್ಲಿ ಕಾಶ್ಮೀರದ ವರದಿ

ಬರುವ ವಾರದಲ್ಲಿ ಕಾಶ್ಮೀರ ಸಮಿತಿಯು ವರದಿಯು ವಿಶ್ವ ಸಂಸ್ಥೆಗೆ ಸಲ್ಲಲಿದೆ ಈ ವಿಷಯವು ಬರುವ ೧೫ನೇ ತಾರೀಖು ಭದ್ರತಾ ಸಮಿತಿಯಲ್ಲಿ ಪರ್ಯಾಲೋಚಿಸಲ್ಪಡುವುದೆಂದು ಹೇಳಲಾಗಿದೆ

ಪ|| ಬಂಗಾಳಾದಲ್ಲಿ ಉಪ್ಪಿನ ಕಾರ್ಖಾನೆ

ಪಶ್ಚಿಮ ಬಂಗಾಳದ ವಿದ್ಯಾಪುರದಲ್ಲಿ ಉಪ್ಪುತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲು ಆಲೋಚಿಸಲಾಗಿದೆ ಈ ಬಗ್ಗೆ ಹಲವು ಮಂದಿ ವಿದೇಶೀ ತಜ್ಞರು ಅಲ್ಲಿಗೆ ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ

೦ ಭಾರತೀಯ ಸಾಮಾಜಿಕ ಸಮ್ಮೇಳನದ ಮೈಸೂರು ಶಾಖೆಯ ಆರಂಭೋತ್ಸವವನ್ನು ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ಈ ವಾರ ಕಾಲ ಸರ್ವಪಕ್ಷದಿಂದ ನೆರವೇರಿಸಿದರು ಶ್ರೀಮತಿ ರುಕ್ಮಿಣಿ ಅರುಂಡೇಲ್ರವರು ಅಧ್ಯಕ್ಷತೆ ವಹಿಸಿದ್ದರು

ಚೀಣೀ ರಾಷ್ಟ್ರೀಯ ಸರ್ಕಾರಕ್ಕೆ ಮನ್ನಣೆ ಕೊಡಕೂಡದು

ಚೀಣಾ ರಾಷ್ಟ್ರೀಯ ಸರ್ಕಾರವು ನಿರ್ಮೂಲವಾಗದ ಹೊರತು ಹೊಸದಕ್ಕೆ ಮನ್ನಣೆ ಕೊಡಬಾರದೆಂದು ಚೀಣಾದ ಪ್ರಜಾ (ಕಮ್ಯೂನಿಸ್ಟ್) ಸರ್ಕಾರವು ವಿಶ್ವ ಸಂಸ್ಥೆಯ ಸೆಕ್ರೆಟರಿ ಜನರಲ್ಲರಿಗೆ ತಂತಿಯನ್ನು ಕಳುಹಿಸಿದೆ

೦ ಶ್ರೀ ಶಾರದಾ ಸಿದ್ಧೇಶ್ವರ ಸ್ವಾಮಿಗಳು ಶ್ರೀ ನಂದಿಹಳ್ಳಿ ವಿರಕ್ತ ಮಠದಲ್ಲಿ ಆಗಮಿಸಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಸ್ ವಿ ಸ್ವಾಮಿಗಳ ಕೊಡುಗೆಯ ವರದಿಯ ಶ್ರೀ ಚನ್ನಬಸವ ಸ್ವಾಮಿಗಳವರ ನೇತೃತ್ವದಲ್ಲಿ ಸಭೆಯು ನಡೆಯಿತು

ವಾರ ಭವಿಷ್ಯ

[illegible]

ಮೇಷ—ನಿಮ್ಮ ಮನೆ ಕುಟುಂಬದ ಆರೋಗ್ಯ [illegible] ನಿಮ್ಮ ಆರೋಗ್ಯವು ತೃಪ್ತಿಕರವಾಗಿರುವುದಿಲ್ಲ [illegible] ಮಾನಸಿಕ ಚಿಂತೆ [illegible]

ವೃಷಭ—ಈ ವಾರದಲ್ಲಿ ನಿಮಗೆ [illegible] ಕೆಲಸವನ್ನು ಮಾಡಬೇಕಾಗುವುದು [illegible] ಮನೆಯಲ್ಲಿ [illegible]

ಮಿಥುನ—ನಿಮ್ಮ ಆರೋಗ್ಯವು ಈ ವಾರದಲ್ಲಿ ಉತ್ತಮಗೊಂಡು ನಿಮಗೆ [illegible] ಉದ್ಯೋಗಗಳಲ್ಲಿ ಮೇಲಧಿಕಾರಿಗಳ [illegible] ವಿದ್ಯಾರ್ಥಿಗಳಿಗೆ [illegible] ಅತಿಥಿ ಸತ್ಕಾರ

ಕಟಕ—ನಿಮ್ಮ ಎಲ್ಲ ವ್ಯವಹಾರಗಳಲ್ಲೂ ವಂಚಕರ ಬಗ್ಗೆ ಎಚ್ಚರದಿಂದಿರಬೇಕು. [illegible] ಮಿತ್ರರ ಭೇಟಿ, ಧನ ಪ್ರಾಪ್ತಿ

ಸಿಂಹ—ಈ ವಾರದಲ್ಲಿ ನೀವು ಹಲವು ಕಷ್ಟಗಳನ್ನು ಎದುರಿಸಬೇಕಾಗುವುದು. ಆರೋಗ್ಯ ನೆಟ್ಟಗಿರದು. ಮಾನಸಿಕ ಚಿಂತೆ [illegible] ಅಗ್ನಿ ಭಯ, ಧನ ಹಾನಿ

ಕನ್ಯಾ—ನೀವು ಹಲವು [illegible] ಸಂಭವ [illegible] ಗೃಹ ಕಲಹ

ತುಲಾ—ನಿಮ್ಮ ಆರೋಗ್ಯವು ತೃಪ್ತಿಕರವಾಗಿ [illegible] ಅಧಿಕಾರಿಗಳ ಪ್ರಸನ್ನತೆಯಿಂದ [illegible] ಪ್ರವಾಸ

ವೃಶ್ಚಿಕ—ನೀವು ಕೈಕೊಂಡ ಕಾರ್ಯಗಳು [illegible] ನಿಮ್ಮ ಮನೆ ಕುಟುಂಬದ ಆರೋಗ್ಯವು ಉತ್ತಮಗೊಳ್ಳುವುದು. ಕೋರ್ಟು, ಕಚೇರಿ [illegible] ನೌಕರಿ, ದಂಧೆಗಳಲ್ಲಿ [illegible] ಧನಲಾಭ [illegible]

ಧನು—ಈ ವಾರದಲ್ಲಿ ನೀವು [illegible]

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

[illegible]

ಸಂಗೀತ ಕಛೇರಿ

ಶ್ರೀ ಸುಬ್ಬಯ್ಯ ಶೆಟ್ಟಿಯ ಬ್ರಹ್ಮಾನಂದ ಸ್ವಾಮಿಗಳ ದೇವಸ್ಥಾನದಲ್ಲಿ ಇದಿನ ಸಂಜೆ ೭ ಘಂಟೆಗೆ ಶ್ರೀ ವಿ. ಎಂ. ಎಸ್. ಚಂದ್ರಶೇಖರಯ್ಯನವರ ಹಾಡುಗಾರಿಕೆಯು ವಿ. ಪಿ. ಕೇಶವಮೂರ್ತಿಯವರ ಪಿಟೀಲು ಮತ್ತು ಶ್ರೀ ವಿ. ವೆಂಕಟೇಶದೇವರುರವರ ಮೃದಂಗದೊಡನೆ ನಡೆಯುವುದು

[illegible] ಎಚ್ಚರದಿಂದರಬೇಕು ಆರೋಗ್ಯವು ತೃಪ್ತಿಕರವಾಗಿರುವುದು ತೀರ್ಥ ಯಾತ್ರೆ ಹೋಗವುಂಟು [illegible] ಅಪೂರ್ವ ಮಿತ್ರರ ಭೇಟಿ

ಮಕರ—ಸಾಂಸಾರಿಕ ವ್ಯವಹಾರದಿಂದ ನಿಮ್ಮ [illegible] ಆರೋಗ್ಯವು ತೃಪ್ತಿಕರವಾಗಿರದು. ನಿಮಗೆ ಒದಗಬಹುದಾದ ಹಲವು ತೊಡಕುಗಳನ್ನು ಧೈರ್ಯದಿಂದ ಎದುರಿಸಬೇಕು [illegible] ಧನ ಭಯ, ಅಪ್ರಿಯ ವಾರ್ತೆ

ಕುಂಭ—ಆರೋಗ್ಯವು ನೆಟ್ಟಗಿದ್ದರೂ ಮನಸ್ಸು ನೆಮ್ಮದಿಯಿಂದಿರದು. ಪಲವರ ಆಕ್ಷೇಪಣೆಗೆ ಗುರಿಯಾಗುವಿರಿ. ಕೈಗೊಂಡ ಕಾರ್ಯಗಳಿಗೆ ವಿಘ್ನ [illegible] ಕ್ಲೇಶ, ಖರ್ಚು

ಮೀನ—ಈ ವಾರದಲ್ಲಿ ನಿಮ್ಮ ಪ್ರತಿಗಾಮಿ ಶಕ್ತಿಗಳೆಲ್ಲವೂ ನಾಶವಾಗಿ ನಿಮಗೆ ಜಯ ಲಭಿಸುವುದು. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುವು. ಧನಾದಾಯ ವ್ಯಾಪಾರ, ಉದ್ಯೋಗಗಳೆಲ್ಲವೂ ತೃಪ್ತಿಯಾಗಿ ಜರುಗುವುವು [illegible] ಪ್ರಿಯಜನ ಭೇಟಿ, ಮೃಷ್ಟಾನ್ನ ಭೋಜನ

Coaching in P C M
B Sc , Examination of March
1949
The City
TUTORIAL-COLLEGE
VANIVILAS ROAD, MYSORE

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿ.

ನೋಟೀಸು

೧ ನಮ್ಮಲ್ಲಿ ಫಿಕ್ಸೆಡ್ ಡಿಪಾಸಿಟ್‌ಗೆ ಈ ಕೆಳಗೆ ಕಂಡಂತೆ ಬಡ್ಡಿಯನ್ನು ಕೊಡಲಾಗುತ್ತೆ —

6	ತಿಂಗಳಿಗೆ	ಶೇಕಡ	2
1	ವರ್ಷಕ್ಕೆ	,,	3
2	,,	,,	3¼
3	,,	,,	3½
4	,,	,,	4
5	,,	,,	4¼

೨ ಪ್ರಾವಿಡೆಂಟ್ ಫಂಡನ್ನು ವಾಪಸು ಮಾಡುವ ದರ (ಇದು ಮೆಂಬರುಗಳಿಗೆ ಮಾತ್ರ)

೩	ವರ್ಷಕ್ಕೆ	೩೪-೦-೦
೫	,,	೬೭-೮-೦
೭	,,	೧೦೦-೦-೦

ಆನರರಿ ಸೆಕ್ರೆಟರಿ

ಮಕ್ಕಳ ಲಿವರ್ ಕಾಯಿಲೆಗೆ
ಲಿಫ್ಲೋಜೈಮ್
ಅಪರ್ ನಾಗ್, ಮೈಸೂರು

ಆರಾರಾ ಕಛೇರಿ ಮುಂದೆ ಸೂತ್ರ ಯಜ್ಞ

ಬೆಂಗಳೂರಿಗೆ ಖಾದಿ ಕೆಲಸಗಾರರ ಕಾಲ್ನಡಿಗೆಯ ಯಾತ್ರೆಯೇ?

ಬದನವಾಳು ೧೭

ಕಳೆದ ಬುಧವಾರ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆದ ಖಾದಿ ಕೆಲಸಗಾರರ ಸಭೆಯಲ್ಲಿ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು—

ಸರ್ಕಾರದ ನೆರಳಿನಲ್ಲಿ ಬೆಳೆಯುತ್ತಿರುವ ಖಾದಿ ಕೇಂದ್ರವನ್ನು ಖಾಯಂ ಮಾಡಿ, ಕೆಲಸಗಾರರನ್ನು ಖಾಯಂ ಮಾಡುವುದಲ್ಲದೆ, ಇತರ ಸರ್ಕಾರಿ ನೌಕರರಿಗೆ ಕೊಡುತ್ತಿರುವಂತೆ ಸಂಬಳ ಸಾರಿಗೆಗಳನ್ನೂ ಮತ್ತು ನಿವೃತ್ತಿ ವೇತನವನ್ನೂ ಕೊಡಬೇಕು. ಖಾದಿ ಬೆಳವಣಿಗೆಗೆ ಅವಶ್ಯಕವಾದ ಯೋಜನೆಯನ್ನು ಸರ್ಕಾರವು ಜಾರಿಗೆ ಕೊಟ್ಟರೆ ಅದನ್ನು ಕಾರ್ಯಗತ ಮಾಡುವುದಾಗಿ ಕೆಲಸಗಾರರು ಭರವಸೆ ಕೊಡುವರು. ಒಂದು ತಿಂಗಳು ಅವಧಿಯೊಳಗಾಗಿ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಎಲ್ಲ ಕೆಲಸಗಾರರೂ ಒಟ್ಟುಗೂಡಿ ಕೈಗಾರಿಕಾ ಸಚಿವರನ್ನು ಬೆಂಗಳೂರು ಆರಾರಾ ಕಛೇರಿಯಲ್ಲಿ ಸಂದರ್ಶಿಸುವುದು ಮತ್ತು ಆ ಕಛೇರಿಯ ಮುಂದೆ ಯಾರಿಗೂ ತೊಂದರೆಯಾಗದಂತೆ ಕುಳಿತು ಸೂತ್ರಯಜ್ಞ ಮಾಡುವುದು. ಕೆಲಸಗಾರರೆಲ್ಲರೂ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ದಿನ ಒಂದಕ್ಕೆ ೧೦ ಮೈಲಿಗಳಂತೆ ಪ್ರಯಾಣ ಮಾಡಿ, ನಿಗದಿಯಾದ ಸ್ಥಳದಲ್ಲಿ ತಂಗಿ ಆ ಪ್ರದೇಶಗಳಲ್ಲಿ ಗಾಂಧೀಜಿಯವರ ಖಾದಿ ತತ್ವವನ್ನು ಪ್ರಚಾರ ಮಾಡುವುದಲ್ಲದೆ ನೂಲುವ ಪ್ರದರ್ಶನ ಮಾಡುವುದು

ರಾಜಕಮಲ್
19-11-49ರಿಂದ ದಿನವಹಿ 3 ಆಟಗಳು
ಮಹಾತ್ಮಾ ಪಿಕ್ಚರ್ಸ್‌ರವರ
ಕೃಷ್ಣಲೀಲ
(ಕನ್ನಡ)
ಪಾತ್ರ - ಕುಮಾರಿ ಉಷಾ, ಬಳ್ಳಾರಿ ಲಲಿತ, ಕೆಂಪರಾಜ್

Edited, printed and published by A R Nagarajan, at Sadhvi Press, D Subbiah Road, Mysore

ಸಂಸ್ಥಾನಗಳ ಅರಸರ ರಾಜಧನ

ಬೊಂಬಾಯಿಯಲ್ಲಿ ಐಕ್ಯವಾದ [illegible] ಸಂಸ್ಥಾನಗಳ ಅರಸರಿಗೆ ಒಟ್ಟು [illegible] ರೂ ರಾಜಧನವನ್ನು ಕೊಡಲು ಭಾರತ ಸರಕಾರವು ಒಪ್ಪಿದೆ

ಫ್ರೆಂಚ್ ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಮತಗಣನೆ ತೆಗೆದುಕೊಳ್ಳುವ [illegible] ರ್ಯವನ್ನು ತ್ವರಿತಗೊಳಿಸಬೇಕೆಂದು ಭಾರತ ಸರ್ಕಾರದವರು ಫ್ರೆಂಚ್ ಸರ್ಕಾರದವರನ್ನು ಒತ್ತಾಯಪಡಿಸಿರುವರೆಂದು ವರದಿಯಾಗಿದೆ

ಶ್ರೀರಂಗಪಟ್ಟಣದಲ್ಲಿ

ದಿವಂಗತ ಮಳಿಗೆ ದಾಸಶೆಟ್ಟರ ವೆಂಕಟರಮಣ ಶೆಟ್ಟರ ಜ್ಞಾಪಕಾರ್ಥವಾಗಿ

ರಾಜಧಾನಿಯ ಚಾಮುಂಡಿಪುರ ಬಡಾವಣೆಯ ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆಯ ಶ್ರೀ ಎಸ್. ಶಾಮಣ್ಣನವರು ತಾವು ಜನಿಸಿದಾರಭ್ಯ ಮೂವತ್ತು [illegible] ರುಷ ಜೀವಿತ ಕಾಲವನ್ನು ಕಳೆದ ಶ್ರೀರಂಗಪಟ್ಟಣದಲ್ಲಿ ತಮ್ಮ ಪುರೋಭಿವೃದ್ಧಿ ಮೂಲ ಕಾರಣರಾದ ಮಳಿಗೆ ವೆಂಕಟರಮಣ ಶೆಟ್ಟರ ಜ್ಞಾಪಕಾರ್ಥದಲ್ಲಿ ಒಂದು ವೈದ್ಯಶಾಲೆಯನ್ನೇರ್ಪಡಿಸುವರು. ಮಲೇರಿಯಾ ಜ್ವರ, ಮಕ್ಕಳ ಲಿವರ್ ಅಂಡ್ ಸ್ಪ್ಲೀನ್ (ಮಲೇರಿಯಾ ಗಡ್ಡೆ), ನಾಯಿಕೆಮ್ಮು, ಕಠಿಣ ಕೆಮ್ಮು, ಮೂಲವ್ಯಾಧಿ, ಪಂಚಾಮಶೂಲೆ, ಹಲ್ಲು ಬಾಧೆ, ವ್ರಣಗಳಿಗೆ ಶೀಘ್ರ ಗುಣಕಾರಿಯಾದ ಶ್ರೇಷ್ಠ ಚಿಕಿತ್ಸೆಗೆ ಏರ್ಪಡಿಸುವರು. ಆಲಯ [illegible] ಅನುಕೂಲ್ಯವು ದೊರೆಯುವವರೆಗೆ ತಾ. ೨೨-೧೧-೧೯೪೯ನೇ ಮಂಗಳವಾರದಿಂದ ಅವರ ಆಪ್ತ ಮಿತ್ರರುಗಳಾದ ರಿಟೈರ್ಡ್ ಹೆಡ್ ಮಾಸ್ಟರ್ ಶ್ರೀ ಕೆ. ನಾರಾಯಣ ಶಾಸ್ತ್ರಿಗಳು ಮತ್ತು ವಕೀಲರು ಶ್ರೀ [illegible] ಸಿಂಹರವರ ನಿವಾಸದ ಬಳಿ [illegible] ಮಂಗಳವಾರ, ಗುರುವಾರ, ಭಾನುವಾರಗಳಲ್ಲಿ ಹಗಲು ೧೦ ಘಂಟೆಯಿಂದ ಮಧ್ಯಾಹ್ನ ೧-೩೦ರ ವರೆಗೆ ಚಿಕಿತ್ಸೆ ಜರುಗಲು ಏರ್ಪಡಿಸಿದೆ

ಬಡವರಿಗೆ ಉಚಿತ

ಎಸ್. ಶಾಮಣ್ಣ ಅಂಡ್ ಸನ್ಸ್
ಮೈಸೂರು

ಶ್ರೀ ಎಂ. ವಿ. ಸುಬ್ಬಯ್ಯನಾಯ್ಡು
ಇವರ
ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ (ರಿ),
ಮೈಸೂರು
ಇವರು ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ
23-11-49ನೇ ಬುಧವಾರ ಸಂಜೆ ೬-೩೦ಕ್ಕೆ
ರಂಗಭೂಮಿಯಲ್ಲಿ ಖ್ಯಾತಿವಂತರಾಗಿ, ಚಲನ ಚಿತ್ರಗಳಲ್ಲಿ ಪ್ರಸಿದ್ಧರಾದ
ಶ್ರೀ ಎಂ. ವಿ ಸುಬ್ಬಯ್ಯನಾಯ್ಡು ಮತ್ತು ಶ್ರೀಮತಿ ಲಕ್ಷ್ಮೀಬಾಯಿ
ಇವರು ಇತರ ಸುಪ್ರಸಿದ್ಧ ನಟನಟಿಯರೊಡಗೂಡಿ ನೂತನ ರೀತಿಯ ರಂಗ
ಸಂವಿಧಾನ ಮಾರ್ಪಾಡುಗಳಿಂದಲೂ ವಿದ್ಯುಚ್ಛಕ್ತಿಯ ವೈಖರಿಗಳಿಂದಲೂ
- ಭಕ್ತ ಅಂಬರೀಷ -
ಎಂಬ ಹೊಸ ನಾಟಕವನ್ನು ಅಭಿನಯಿಸುವರು
[illegible], ಗುರು, ಶುಕ್ರ, ಭಾನು ಮತ್ತು ಮಂಗಳವಾರಗಳಲ್ಲಿ ಸಂಜೆ ೬ ಘಂಟೆಗೆ
[illegible] ವಾರಗಳಲ್ಲಿ ರಾತ್ರಿ [illegible] ನಾಟಕವಿರುತ್ತೆ

ಫೋ: ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೨೧-೧೧-೪೯ [ಸಂಚಿಕೆ ೯೬

ಮಧ್ಯಮ ಮಾರ್ಗವೇ – ಭಾರತದ ನೀತಿ –

ನೆಹರೂ ಜಯಂತಿ

ಮೈಸೂರು ೨೦

ರಾಜಧಾನಿಯ ಶಾರದಾವಿಲಾಸ ಹೈಸ್ಕೂಲಿನಲ್ಲಿ ನಿನ್ನೆ ಸಂಜೆ ಪಂಡಿತ ನೆಹರೂರವರ ೬೧ನೇ ವರ್ಷ ವರ್ಧಂತ್ಯುತ್ಸವವು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಿತು ಶಾಲಾ ಕಾರ್ಯದರ್ಶಿಗಳಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರ ಸ್ವಾಗತ ಭಾಷಣ ಮತ್ತು ಶ್ರೀ ರಾಜಗೋಪಾಲಯ್ಯಂಗಾರ್ಯರಿಂದ ಕಾವ್ಯ ವಾಚನಗಳಾದನಂತರ, ಸಚಿವರು ನೆಹರೂರವರ ಭಾವಚಿತ್ರ ಅನಾವರಣ ಮಾಡಿ, ಅವರ ನಿಸ್ವಾರ್ಥ ಸೇವೆ ಮತ್ತು ಪ್ರತಿಭೆಗಳನ್ನು ಕೊಂಡಾಡಿದರು ಪಂಡಿತ ನೆಹರೂರವರು ಅದ್ಭುತ ವ್ಯಕ್ತಿಯೆಂದೂ, ಗಾಂಧೀಜಿಯವರ ಪ್ರಿಯ ಶಿಷ್ಯರಾದ ಅವರ ದೇಶದ ಮುಂದಿನ ಭವಿಷ್ಯಕ್ಕೆ ಕಾರಣಕರ್ತರೆಂದೂ ತಿಳಿಸಿದರು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಲಾಯಿತು

ವಿಶ್ವಕರ್ಮ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ

ರಾಜಧಾನಿಯ ವಿಶ್ವಕರ್ಮ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವವು ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಗುರುವಾರ ನಡೆಯಿತು. ಕುಮಾರಿ ಸುಶೀಲ ಮತ್ತು ಶಾಂತಾರವರಿಂದ ಸಂಗೀತ ವಾದ್ಯ ವಂದನೆಗಳಾದನಂತರ ಸಂಘದ ಅಧ್ಯಕ್ಷರಾದ ಶ್ರೀ ಟಿ ಚಲುವಾಚಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಚನ್ನಯ್ಯನವರು ಭಾಷಣ ಮಾಡಿ, ವಿದ್ಯಾರ್ಥಿಗಳು ತಮ್ಮ ವ್ಯಾಸಂಗಕ್ಕೆ ಹೆಚ್ಚು ಗಮನ ಕೊಟ್ಟು, ಶಿಸ್ತಿನಿಂದ ವರ್ತಿಸಬೇಕೆಂದು ತಿಳಿಸಿದರು

ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ

ಸಂಸ್ಥಾನದ ಸಂಗೀತ ಪರಿಷತ್ತಿನ ಮೈಸೂರು ಶಾಖೆಯ ಆಶ್ರಯದಲ್ಲಿ ಕಳೆದ ಬುಧವಾರ ಶ್ರೀ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆಯನ್ನು ಆ। ವಿ॥ ಸ್ವರ ವಾಣಿ .. ರವರ ಗೃಹದಲ್ಲಿ ನೆರವೇರಿಸಲಾಯಿತು ಶ್ರೀ ಕೆ ಎಸ್ ಚಂದ್ರಶೇಖರಯ್ಯನವರಿಂದ ಸ್ವಾಗತ ಭಾಷಣವಾದನಂತರ, ಶ್ರೀ ಆರ್ ಅನಂತ ಕೃಷ್ಣ ಶರ್ಮರವರು ದೀಕ್ಷಿತರ ವಿಚಾರವಾಗಿ ಭಾಷಣ ಮಾಡಿ, ಸಂಗೀತಕ್ಕೆ ಅವರು ಸಲ್ಲಿಸಿರುವ ಸೇವೆಯನ್ನು ಕೊಂಡಾಡಿದರು ವಿದ್ವಾನ್ ಎಂ ಎಸ್ ಸದಾಶಿವಯ್ಯ ಮತ್ತು ಚನ್ನಕೇಶವಯ್ಯನವರುಗಳು ಕೀರ್ತನೆಗಳನ್ನು ಹಾಡಿದರು

ಫುಟ್‌ಬಾಲ್ ಪಂದ್ಯ

ನಿನ್ನೆ ಸುಬ್ಬಕೃಷ್ಣಯ್ಯ ಸ್ಮಾರಕ ಫುಟ್‌ಬಾಲ್ ಪಂದ್ಯದಲ್ಲಿ ಮರಿಮಲ್ಲಪ್ಪ ಹೈಸ್ಕೂಲಿನವರು ಒನಮಯ್ಯ ಹೈಸ್ಕೂಲಿನವರನ್ನು ಒಂದು ಗೋಲಿನಿಂದ ಸೋಲಿಸಿದರು

ನಾಡ ಹಬ್ಬ

ಮೈಸೂರು ಮಹಾರಾಜಾ ಕಾಲೇಜು ಸಂಘದ ಆಶ್ರಯದಲ್ಲಿ ಮೊನ್ನೆ ಸಂಜೆ ನಾಡಹಬ್ಬವು ಶ್ರೀ ಸಿ ಆರ್ ನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿತು ಸ್ವಾಗತ ಭಾಷಣ ಕಾವ್ಯ ವಾಚನ ಮತ್ತು ಸಂಗೀತಗಳಾದನಂತರ, ಶ್ರೀ ವಿ ಸೀತಾರಾಮಯ್ಯನವರು ಭಾಷಣ ಮಾಡಿ, ನಾಡಹಬ್ಬದ ಪ್ರಾಮುಖ್ಯತೆಯನ್ನು ತಿಳಿಸಿದರು ನೃತ್ಯ ಮತ್ತು ನಾಟಕಗಳ ಪ್ರದರ್ಶನದೊಡನೆ ಸಮಾರಂಭವು ಮುಕ್ತಾಯವಾಯಿತು

ತಮಗೆ ೬೦ ವರ್ಷವೇ ಎಂದು ನೆಹರೂರವರಿಗೆ ಆಶ್ಚರ್ಯ

"ನನಗೆ ೬೦ ವರ್ಷ ಎಂದು ತಿಳಿಸುವುದು ಆಶ್ಚರ್ಯವನ್ನುಂಟುಮಾಡಿದೆ ಇಷ್ಟು ಕಾಲವೂ ನಾನು ದೇಶ ಸೇವೆಯಲ್ಲಿ ಮಗ್ನನಾಗಿದ್ದುದರಿಂದ ನನಗೆ ೬೦ ವರ್ಷವಾಗಿದೆಯೆಂದು ಭಾವಿಸಲು ಸಾಧ್ಯವಿಲ್ಲವಾಗಿದೆ ಒಬ್ಬ ಮನುಷ್ಯನಿಗೆ ೬೦ ವರ್ಷವಾದರೆ, ಆತನು ಮಾತನಾಡದೆ ಸುಮ್ಮನಿರಬೇಕು ಮನುಷ್ಯನಿಗೆ ೫೫ ವರ್ಷವಾದರೆ ಆತನು ಕೆಲಸದಿಂದ ನಿವೃತ್ತನಾಗಿ, ವಿರಾಮ ವೇತನಕ್ಕೆ ಅರ್ಹನು ಅಷ್ಟು ವರ್ಷವಾಯಿತು ಎಂದು ಒಬ್ಬ ಮನುಷ್ಯನಿಗೆ ಜ್ಞಾಪಿಸುವುದು ಸರಿಯಾದುದಲ್ಲ ಏಕೆಂದರೆ ತನಗೆ ವೃದ್ಧಾಪ್ಯ ಬಂದಿದೆಎಂಬ ನೆನಪು ಆತನಿಗೆ ಬರುವುದು. ನನಗೆ ಆ ರೀತಿ ಜ್ಞಾಪಿಸುವುದಕ್ಕಾಗಿ ನೀವುಗಳು ಇಲ್ಲಿ ಸೇರಿದ್ದೀರಿ ಆದರೂ ನನಗೆ ೬೦ ವರ್ಷವಾಗಿದೆಯೇ ಎಂಬ ಸಂದೇಹವು ನನ್ನಲ್ಲೇ ಉದ್ಭವಿಸಿದೆ ಮತ್ತು ನಾನು ನನ್ನ ಕಾರ್ಯದಲ್ಲಿ ವಿಶೇಷವಾಗಿ ತೊಡಗಿರುವುದರಿಂದ ನನಗೆ ವೃದ್ಧಾಪ್ಯ ಬಂದಿದೆಯೆಂದು ತಿಳಿಯಲು ಅವಕಾಶವಿಲ್ಲವಾಗಿದೆ ಮನುಷ್ಯನಿಗೆ ವಯಸ್ಸು ಮುಖ್ಯವಲ್ಲ ಕಷ್ಟ ಜನರಿಗೆ ಉಪಯುಕ್ತವಾದ ಸೇವೆ ಮಾಡುವ ಶಕ್ತಿಯೇ ಮುಖ್ಯವಾದುದು ಒಳ್ಳೆಯ ಕೆಲಸದಲ್ಲಿ ತೊಡಗಿದ್ದೇನೆಂದು ತನ್ನ ಮನಸ್ಸಿಗೆ ತೃಪ್ತಿ ಮತ್ತು ಹೃದಯಕ್ಕೆ ಶಾಂತಿಗಳಿಂದ ಉಂಟಾದ ಫಲಕ್ಕಿಂತಲೂ ಮನುಷ್ಯನಿಗೆ ಬೇರೆ ಇಲ್ಲ" ಎಂದು ಪಂಡಿತ ನೆಹರೂರವರು ಬೊಂಬಾಯಿನಲ್ಲಿ ತಮ್ಮ ವರ್ಧಂತ್ಯುತ್ಸವ ಸಮಾರಂಭದ ಸಭೆಯಲ್ಲಿ ತಿಳಿಸಿದರು

ನೆಹರೂರವರು ಭಾಷಣ ಮಾಡುತ್ತಿದ್ದಾಗ ವೇದಿಕೆ ಕುಸಿಯಿತು

ದೆಹಲಿಯ ರಾಮಲೀಲಾ ಮೈದಾನದಲ್ಲಿ ನಿನ್ನೆ ದಿನ ಪಂಡಿತ ನೆಹರೂರವರು ಭಾಷಣ ಮಾಡುತ್ತಿದ್ದಾಗ, ಅವರು ನಿಂತಿದ್ದ ವೇದಿಕೆಯು ಕುಸಿದು, ಒಂದು ಭಾಗವು ಮುರಿದು ಬಿದ್ದಿತು. ಪುನಃ ಎರಡನೇ ಬಾರಿ ಅದು ಕುಸಿಯಲು, ನೆಹರೂರವರು ಆಯ ತಪ್ಪಿ ಕೆಳಕ್ಕೆ ಬೀಳುವುದರಲ್ಲಿದ್ದರು ಧೈರ್ಯವಹಿಸಿ ಅವರು ಬಿಳದೆ ಸರಿಯಾಗಿ ನಿಂತರು. ಜನರು ನೂಕುನುಗ್ಗಲು ಏರ್ಪಟ್ಟಿತ್ತು ಆದರೆ ಯಾರಿಗೂ ಗಾಯವಾಗಲಿಲ್ಲ

ದಿವಾನ್ ರಾಮಲಾಲರ ನಿಧನ

ಇಟಲಿಯಲ್ಲಿ ಭಾರತದ ರಾಯಭಾರಿಯಾಗಿದ್ದ ದಿವಾನ್ ರಾಮಲಾಲರವರು ತಮ್ಮ ೬೧ನೇ ವಯಸ್ಸಿನಲ್ಲಿ ನಿನ್ನೆ ಜಿನೀವಾನಲ್ಲಿ ನಿಧನರಾದರು

ಗಣಿತ ಪ್ರಶ್ನೋತ್ತರ ಮಾಲಾ

ಮರಿಮಲ್ಲಪ್ಪನವರ ಹೈಸ್ಕೂಲಿನ ನಿವೃತ್ತ ಉಪಾಧ್ಯಾಯರಾದ ಶ್ರೀ ಎ ಸೀತಾರಾಮಯ್ಯನವರು ಪ್ರಕಟಿಸಿರುವ ಎಸ್. ಎಸ್ ಪರೀಕ್ಷೆಯ ಗಣಿತ ಪ್ರಶ್ನೋತ್ತರ ಮಾಲೆಯು ಪ್ರಥಮ ಮತ್ತು ದ್ವಿತೀಯ ಭಾಗಗಳನ್ನೊಳಗೊಂಡ ಪುಸ್ತಕವು ನಮ್ಮ ಹಸ್ತಗತವಾಗಿದೆ ವಿದ್ಯಾರ್ಥಿಗಳಿಗೆ ಇದರಿಂದ ಹೆಚ್ಚು ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ ಬೆಲೆ ೧-೮-೦.

ಮಧ್ಯ ಮಾರ್ಗವೇ ಭಾರತದ ನೀತಿ

ವಿಶ್ವದ ಸಮಸ್ಯೆಯನ್ನು ಎಂದಿಗೂ ಸಮರದಿಂದ ಬಗೆಹರಿಸಲು ಸಾಧ್ಯವಿಲ್ಲವೆಂದೂ, ಅದನ್ನು ಶಾಂತಿಯುತವಾದ ಮತ್ತು ಸಂಧಾನ ಮಾರ್ಗಗಳಿಂದಲೇ ಬಗೆಹರಿಸಬೇಕೆಂದೂ ಪಂಡಿತ ನೆಹರೂರವರು ನಿನ್ನೆ ದೆಹಲಿಯ ಬಹಿರಂಗ ಸಭೆಯಲ್ಲಿ ತಿಳಿಸಿರುತ್ತಾರೆ ಇತರ ರಾಷ್ಟ್ರಗಳ ಮತ್ತು ಅಧಿಕಾರೀ ಪಕ್ಷಗಳ ವಿಷಯದಲ್ಲಿ ಭಾರತವು ಯಾವಾಗಲೂ ಮಧ್ಯ ಮಾರ್ಗವನ್ನು ಅನುಸರಿಸುವುದು. ಭಯದಿಂದ ಅಥವಾ ಇತರರನ್ನು ತೃಪ್ತಿ ಪಡಿಸಲು ಭಾರತವು ಯಾರಿಗೂ ತಲೆ ತಗ್ಗಿಸುವುದಿಲ್ಲ. ಎಂದು ಅವರು ಹೇಳುತ್ತಾರೆ

ಕಮ್ಯೂನಿಸ್ಟರ ವಿರೋಧ ಪ್ರಚಾರಕ್ಕಾಗಿ ಏಷ್ಯಾ ರಾಷ್ಟ್ರಗಳಿಗೆ ಸಹಾಯ

ಕಮ್ಯೂನಿಸ್ಟರ ಮುನ್ನಡೆಯನ್ನು ತಡೆಗಟ್ಟಲು ಆಸ್ಟ್ರೇಲಿಯಾ ಮತ್ತು ಇತರ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳು ವಿಶೇಷ ಹಣ ವೈದ್ಯ ಮತ್ತು ಸಾಂಸ್ಕೃತಿಕ ಸಹಾಯವನ್ನು ಏಷ್ಯಾ ರಾಷ್ಟ್ರಗಳಿಗೆ ಕೊಡಲು ನಿರ್ಧರಿಸಿವೆ

ಅಜ್ಞಾನ, ದಾರಿದ್ರ್ಯವನ್ನು ನಿರ್ಮೂಲ ಮಾಡಬೇಕು

ಮಹಿಳೆಯರಿಗೆ ಸಚಿವರ ಹಿತೋಕ್ತಿ

ಮಂಡ್ಯದ ಕರ್ನಾಟಕ ಸಂಘದ ಮಹಿಳಾ ಶಾಖೆಯ ಆಶ್ರಯದಲ್ಲಿ ಏರ್ಪಡಿಸಿದ್ದ ಮಹಿಳಾ ಗೋಷ್ಠಿಯ ಉದ್ಘಾಟನೋತ್ಸವವನ್ನು ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಕಳೆದ ಶುಕ್ರವಾರ ನಡೆಸಿದರು ಸಚಿವರು ಭಾಷಣ ಮಾಡಿ ದೇಶದಲ್ಲಿ ಆವರಿಸಿರುವ ಅಜ್ಞಾನವೂ ಮತ್ತು ದಾರಿದ್ರ್ಯವೂ ಪರಿಹಾರವಾಗಬೇಕಾದರೆ ಸ್ತ್ರೀ ಪುರುಷರಿಬ್ಬರೂ ವಿಶೇಷ ಶ್ರಮ ವಹಿಸಬೇಕೆಂದೂ, ಗಂಡಸರಿಗಿಂತಲೂ ಹೆಂಗಸರು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಸಾಧ್ಯವೆಂದು ತಿಳಿಸಿದರು ನಾಡಿನ ಅಭ್ಯುದಯ ಸಾಧನೆಗೆ ಮಹಿಳೆಯರಿಂದ ಇನ್ನೂ ಹೆಚ್ಚು ಮಹತ್ವವಾದ ಸೇವೆಯು ಸಲ್ಲಬೇಕಾಗಿದೆ ಸ್ತ್ರೀ ವಿದ್ಯಾಭ್ಯಾಸ, ಮಹಿಳೆಯರಲ್ಲಿ ಆರೋಗ್ಯ ಪ್ರಚಾರ, ಜನಪದ ಗೀತೆಗಳ ಸಂಗ್ರಹ, ಈ ಕಾರ್ಯಗಳನ್ನು ಮಹಿಳೆಯರ ಕೈಗೊಂಡು, ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಜೈ ಹಿಂದ್!

ಚಾಮರಾಜ ಮೊಹಲ್ಲಾ ಓಟರುಗಳ ವಿನಂತಿ

26-11-49ನೇ ಶನಿವಾರ ಲಕ್ಷ್ಮೀಪುರಂ ಸ್ಕೂಲಿನಲ್ಲಿ ನಡೆಯುವ ಪೌರಸಭಾ ಚುನಾವಣೆಯಲ್ಲಿ ದಯವಿಟ್ಟು ಈ ಕೆಳಗೆ ಕಂಡ ಕಾಂಗ್ರೆಸ್ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

ಸಂಖ್ಯೆ	ಹೆಸರು	ಚಿಹ್ನೆ	ಓಟಿನ ಗುರುತು
7	ಎಸ್. ಶ್ರೀರಂಗಾಚಾರ್ ಬಿ ಎ ಎಲ್ ಎಲ್ ಬಿ	ಕೈಗಾಡಿ	X
8	ಸಿ ಜಿ. ದೇವನಾಥ್ ಬಿ ಎ ಎಲ್ ಎಲ್ ಬಿ	ರಾಷ್ಟ್ರಧ್ವಜ	X
9	ಅಗರಂ ರಂಗಯ್ಯ ಬಿ ಎ	ದನು	X
10	ಬಿ. ನಾರಾಯಣಸ್ವಾಮಿ ಬಿ ಎ, ಬಿ ಎಲ್	ಭಾರತ ಮಾತೆ	X

ಜಯಲಕ್ಷ್ಮೀ ಟಾಕೀಸ್

ಶ್ರೀರಂಗಪಟ್ಟಣ

21-11-49ರಿಂದ ಪ್ರತಿದಿನ 2 ಆಟಗಳು ೬-೩೦ ಮತ್ತು ೯-೩೦ಕ್ಕೆ

ಜ್ಯುಪಿಟರ್ ರವರ

ಮೋಹಿನಿ

(ತಮಿಳು)

ಪಾತ್ರ ಟಿ. ಎಸ್. ಬಾಲಯ್ಯ ಕೆ. ಎಲ್. ಜಾನಕಿ, ಕುಮಾರಿ ದೇವಿ ಮುತ್ತಿತರರು

॥ ವಂದೇ ಮಾತರಂ ॥

ಕಾಂಗ್ರೆಸ್ ಉಮೇದು ವಾರರಿಗೇ ಬೆಂಬಲ ಕೊಡಿರಿ!

ಚುನಾವಣಾ ಸಮಿತಿಯ ವಿನಂತಿ

ಇದೇ ೨೬-೧೧-೪೯ನೇ ಶನಿವಾರ ನಗರ ಪೌರಸಭೆಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ಸು ಸ್ಪರ್ಧಿಸುವುದು ಸರಿಯಷ್ಟೆ. ಕಾಂಗ್ರೆಸ್ಸಿಗೆ ಕಳೆದ ಹಲವಾರು ವರ್ಷಗಳಿಂದಲೂ ಪುರ [ಜನರು ಉತ್ತಮ ರೀತಿಯ ಸಹಾಯ ಮತ್ತು ಬೆಂಬಲವನ್ನು ನೀಡಿ ಅದು ತನ್ನ ಗುರಿಯನ್ನು ಸಾಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಹಿಂದೆ ನಡೆದ ಚುನಾವಣೆಗಳೇ ಇದಕ್ಕೆ ದೃಷ್ಟಾಂತ. ಅದರಂತೆಯೇ ಈ ಸಾರಿಯೂ ಸಹ ಕಾಂಗ್ರೆಸ್ಸಿಗೆ ಜಯವನ್ನು ಗಳಿಸಿಕೊಡಲು ಅವರೆಲ್ಲರೂ ಪ್ರಯತ್ನ ಮಾಡುವರೆಂಬ ನಂಬಿಕೆ ಕಾಂಗ್ರೆಸ್ಸಿಗೆ ಇದೆ.

ಹಿಂದೆ ಇತ್ತೀಚೆಗೆ ಹಲವೆಡೆಗಳಲ್ಲಿ ಸ್ವತಂತ್ರ, ಇ. ಧನಿಕರ ಇಲ್ಲವಲ್ಲದ ಲೀಗಿಗಳೂ, ಅನೇಕ ಪಕ್ಷ ಪ್ರಯೋಗಗಳೂ, ಪ್ರಚಾರಗಳೂ, ನಡೆಯುತ್ತಿವೆ. ರಾಷ್ಟ್ರ ದಿಂದ ನಿಜವಾಗಿ ಪ್ರಜಾ ಹಿತ ಸಾಧನೆಯ ಕೆಲಸದ ಉಪಯೋಗಿಸಲ್ಪಡುತ್ತಿವೆ. ಹಿಂದೆ ಕಷ್ಟಗಳನ್ನನುಭವಿಸಿದ ಅನೇಕ ಸತ್ಯಾಗ್ರಹಿಗಳ ಸೇವಾ ಬಲದಿಂದ ಕಟ್ಟಲ್ಪಟ್ಟ ಈ ಸಂಸ್ಥೆಯ ಮೇಲೆ ಹಲವರು ತಮ್ಮ ವೈಯಕ್ತಿಕ ಕಾರಣಗಳಿಗಾಗಿ ವಿರೋಧವನ್ನು ತಾಳಿ, ಜನರಿಗೆ ಕಾಂಗ್ರೆಸ್ಸಿನಲ್ಲಿ ಇರುವ ಸ್ವಾಭಾವಿಕವಾದ ನಂಬಿಕೆ ಮತ್ತು ವಿಶ್ವಾಸಗಳನ್ನು ಅಳಿಸಲು ಅವಾಸ್ತವವಾಗಿ ಪ್ರಯತ್ನಿಸುತ್ತಿದ್ದಾರೆ. ಸ್ವಾತಂತ್ರ್ಯದ ನಿಜವಾದ ಕಲ್ಪನೆಯೂ ಸಹ ಈ ಜನರಿಗೆ ಆಗಿದೆಯೋ ಎಂಬುದು ಸಂದೇಹ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾವ್ಯಕ್ತಿಯೆಂದ ರ್ಥವಲ್ಲ.

ಸ್ವಾತಂತ್ರ್ಯ ಬಂದನಂತರ ಸ್ವಾಭಾವಿಕವಾಗಿ ಹುಟ್ಟಿದ ಹಲವಾರು ಸಮಸ್ಯೆಗಳಿಂದ ತೊಂದರೆಗಳು [illegible] ಬಂದಿವೆ. ಅವುಗಳು ಇಡೀ ದೇಶಕ್ಕೆ ಸಂಬಂಧಪಟ್ಟವು. ಒಂದೊಂದು ಊರಿಗೆ ಬಂದಿರುವುದಲ್ಲ. ಅವುಗಳನ್ನು ಪರಿಹರಿಸಲು ಕಾಂಗ್ರೆಸ್ಸು ಸತತವಾಗಿ ಶ್ರಮಿಸುತ್ತಿದೆ. [illegible] ಜನರಿಗೆ [illegible] ಈ ಜನರ [illegible] ಕಾಂಗ್ರೆಸ್ಸು ಮೊದಲಿನಿಂದ [illegible] ಕಾಂಗ್ರೆಸ್ಸಿಗೆ [illegible]

ಪೌರಸಭಾ ಚುನಾವಣೆಗೆ ಕಾಂಗ್ರೆಸ್ಸು [illegible]

ಆರಿಸಿ ಕಾಂಗ್ರೆಸ್ಸು ಹಿಂದೆ ಸ್ಪರ್ಧಿಸಿತು. ಹಲವಾರು ಉಪಯುಕ್ತ ಕೆಲಸಗಳು ಅದರಿಂದ ಆದವು. ಪೌರಸಭಾ ಸದಸ್ಯರೆಲ್ಲರೂ ಪ್ರತಿ ಬೀದಿ ಮತ್ತು ಪ್ರತಿ ಮನೆಗೂ ಬಂದು ಜನರ ಕುಂದುಕೊರತೆಗಳನ್ನು ಕೇಳುವ ಪದ್ಧತಿಯನ್ನು ಜಾರಿಗೆ ತಂದರು. ನೌಕರರಿಗೆ ಪ್ರಾವಿಡೆಂಟ್ ಫಂಡ್ ಮುಂತಾದ ಸೌಲಭ್ಯಗಳನ್ನು ಏರ್ಪಡಿಸಿಕೊಟ್ಟರು. ನಗರದ ನಾನಾ ಗಲ್ಲಿಗಳ ಕಡೆ ಗಮನವು ಬರುವಂತಾಯಿತು. ಊರಿನ ಸೌಂದರ್ಯವೂ ಸಹ ಕೆಡದಂತೆ ನೋಡಿಕೊಳ್ಳಲಾಗುತ್ತಿದೆ. ನೀರಿನ ತೊಂದರೆಯನ್ನು ನಿವಾರಿಸಲು ಕಾಂಗ್ರೆಸ್ಸು ಪಟ್ಟ ಶ್ರಮವು ಜನರಿಗೆ ತಿಳಿದ ಅಂಶವೇ ಆಗಿದೆ.

ಆದರೆ ಯುದ್ಧ ಕಾಲ ಮತ್ತು ಯುದ್ಧಾನಂತರದ ತೊಂದರೆಗಳು ಹಾಗೆಯೇ ಉಳಿದಿವೆ. ಅವುಗಳನ್ನು ಕ್ರಮವಾಗಿ ಬಗೆಹರಿಸಲು ಕಾಂಗ್ರೆಸ್ಸು ಬದ್ಧ ಕಂಕಣವಾಗಿರುವುದು. ನಗರದ ನಿವಾಸಿಗಳ ಸಂಖ್ಯೆ ದಿನದಿನಕ್ಕೂ ಹೆಚ್ಚಿದಂತೆಲ್ಲಾ ಪೌರಸಭಾ ಜವಾಬ್ದಾರಿಯೂ ಹೆಚ್ಚುತ್ತಿದೆ. ಇದನ್ನರಿತೇ ಕಾಂಗ್ರೆಸ್ಸು ತನ್ನ ಯಾವತ್ತೂ ಶಕ್ತಿಯನ್ನು ಈ ಕಡೆಗೆ ಒಟ್ಟುಗೂಡಿಸಿ ಜನರ ಶ್ರೇಯಸ್ಸಿಗಾಗಿ ಶ್ರಮಿಸುವುದು.

ಮನೆಗಳಿಲ್ಲದವರಿಗೆ ಮನೆ ಕಟ್ಟಿಸಿ ಕೊಡುವುದು, ಮುಂತಾದ ಯೋಗ್ಯ ಯೋಜನೆಗಳನ್ನು ಕಾಂಗ್ರೆಸ್ಸು ಪೂರೈಸಬೇಕಾಗಿದೆ. ಇವೆಲ್ಲಕ್ಕೂ ಹಣ ಬೇಕು. ಪೌರ ಸಭಾ ಹಣವು ಯಾವ ವಿಧದಲ್ಲೂ ದುರ್ವ್ಯಯವಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತಿದೆ.

ಕಷ್ಟ ಕಾರ್ಪಣ್ಯಗಳಿಗೆ ಹಿಂದೆ ಕಾಂಗ್ರೆಸ್ಸು ಹೆದರಲಿಲ್ಲ. ಅಧಿಕಾರವಿದೆ ಎಂಬ ಅಹಂಭಾವನೆಯು ಕಾಂಗ್ರೆಸ್ಸಿಗೆ ಇಲ್ಲ. ಅದರ ಮಾರ್ಗ ಸತ್ಯ. ಅದರ ಗುರಿ ದೀನ ದಲಿತರ ಕಲ್ಯಾಣ.

ಈ ಕಾರಣಗಳಿಂದ ಎಲ್ಲ ಕಾಂಗ್ರೆಸ್ಸು ಉಮೇದುವಾರರೂ ಚುನಾಯಿತರಾಗಿ ಬರುವಂತೆ ಮಾಡಬೇಕೆಂದು ಪುರ ಜನರಲ್ಲಿಯೂ, ಓಟರುಗಳಲ್ಲಿಯೂ ಕಾಂಗ್ರೆಸ್ಸಿನ ಸವಿನಯ ಪ್ರಾರ್ಥನೆ.

Coaching in P.C. & B.Sc. Examination of March 1949

The City TUTORIAL COLLEGE

[illegible] ROAD, MYSORE

Edited, printed and published by V. K. Nagarajan, at Sadhvi Press, D. Subbi[illegible] [illegible] Mysore.

* ಲಕ್ಷ್ಮಿ *

22-11-49ರಿಂದ ಅಮೋಘ ಪ್ರಾರಂಭ

ದಿನವಹಿ ೩ ಪ್ರದರ್ಶನಗಳು

BELOVED

(ಸಜನಿ)

ಬಾಬು ರಾವ್, ಬ್ರಿಜ್ ರಾಣಿ ನಟಿಸಿರುವ ಹಿಂದಿ ಚಿತ್ರ

ನಿರೀಕ್ಷಿಸಿರಿ—

ಇಂಬವಲ್ಲಿ

(ತಮಿಳು)

ನಾಯಿ ಕೆಮ್ಮಿಗೆ ಔಷಧಿ

ಗೂರಲ್ ಕೆಮ್ಮು, ಪರಿಣಾಮಕಾರಿ, ಮತ್ತು ಗಳಗಂಡಕ್ಕೆ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಕೊಟ್ಟಿದ್ದಾರೆ.

ಆರ್. ಎಸ್. ಪಂಡಿತರು

ರಾಮಗೋಪಾಲ ಸ್ಟೋರ್ಸ್, ದಾಬಾ

ದಿವಾನರ ರಸ್ತೆ, ಮೈಸೂರು.

'ವಿಕಾಸ' ಕನ್ನಡ ಮಾಸ ಪತ್ರಿಕೆ

ವಿಚಾರಪೂರಿತ ಲೇಖನಗಳು, ಸಣ್ಣ ಕಥೆಗಳು ನೀಳ್ಗತೆಗಳು, ಮಹಾಪುರುಷರ ಜೀವನ ಚಿತ್ರಗಳು, ಚಿತ್ರ ಪ್ರಪಂಚ ವಿಮರ್ಶೆ, ಮತ್ತು ಸಂಗೀತಗಳಿಂದ [illegible] 'ವಿಕಾಸ' ಎಂಬ ಕನ್ನಡ ಮಾಸ [illegible]ಯು ಶ್ರೀ ಎಂ. ಆರ್ ಅನಂತಾಚಾ[illegible]ರ ಸಂಪಾದಕತ್ವದಲ್ಲಿ ಬೆಂಗಳೂರು [illegible] ಪಾಳ್ಯದಿಂದ ಮುಂದಿನ ತಿಂಗಳು [illegible] ತಾ॥ನಿಂದ ಪ್ರಕಟವಾಗುವುದು

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟಣೆ

ಮೈಸೂರು ರೈಲ್ವೆ, ಭಾರತ ರೈಲ್ವೆ ಮತ್ತು ಸಂಸ್ಥಾನದ ರೈಲ್ವೆಗಳಲ್ಲಿ ೧೯೪೯ ನವೆಂಬರ್ ೧ರಿಂದ ಪ್ರಥಮ ಮತ್ತು ದ್ವಿತೀಯ ತರಗತಿ ಮಧ್ಯೆ 'ಎರಡನೇ ತರಗತಿ ಸ್ಪೆಷಲ್' ಎಂಬ ನೂತನ ತರಗತಿಯನ್ನು, ಮಲಗಲನುಕೂಲ ದೊರಕಿಸಿ, ಈ ಕೆಳಗೆ ನಮೂದಾದ [illegible]ಗಳಲ್ಲಿ ಒದಗಿಸಲಾಗಿದೆ.

ವಿಭಾಗಗಳು				ರೈಲುಗಳಲ್ಲಿ
(೧) ಮೈಸೂರು-ಬೆಂಗಳೂರು	೧	ಅಪ್ ಮತ್ತು	೨	ಡೌನ್ ಮೇಲ್
	೭	,, ,,	೮	,, ಪ್ಯಾಸೆಂಜರ್
(೨) ಬೆಂಗಳೂರು-ಹಿಂದೂಪುರ	೧	,, ,,	೨	ಡೌನ್ ಮೇಲ್
	೬೭	,, ,,	೬೮	,, ಪ್ಯಾಸೆಂಜರ್
(೩) ಬೆಂಗಳೂರು-ಹರಿಹರ	೩೩	,, ,,	೩೪	ಡೌನ್ ಮೇಲ್
	೩	,, ,,	೪	,, ಎಕ್ಸ್‌ಪ್ರೆಸ್
(೪) ಮೈಸೂರು-ಅರಸೀಕೆರೆ	೧೧	,, ,,	೧೨	,, ಪ್ಯಾಸೆಂಜರ್
(೫) ಬೀರೂರು-ತಾಳಗುಪ್ಪ	೧೭	,, ,,	೧೮	,, ,,

೨ ತೆರಿಗೆ ಜಾತ ಪ್ರತಿ ಪ್ರಯಾಣಿಕರಿಗೂ ಪ್ರತಿ ಮೈಲಿಗೆ ೧೪ ಕಾಸು

೩ ಎರಡನೆಯ ತರಗತಿಯ ಟಿಕೆಟ್ಟುಗಳ ಮೇಲೆ 'ಸ್ಪೆಷಲ್' ಎಂಬ ಪದ[illegible] ಯೋಗಿಸಿ ಗುರುತು ಸಿಗುವಂತೆ ಉಪಯೋಗಿಸಲಾಗುವುದು,

(೧) ಪ್ರಯಾಣದ ಒಂದು ಭಾಗದಲ್ಲಿ 'ಎರಡನೆ ಸ್ಪೆಷಲ್' ಅನುಕೂಲ[illegible]ಗಿಸಿಲ್ಲದಿದ್ದಲ್ಲಿ ಕಂಬೈನ್ಡ್ ಎರಡನೇ ಸ್ಪೆಷಲ್ ತರಗತಿ ಮತ್ತು ಎರಡನೆ ಸಾಧಾ[illegible] ಟಿಕೆಟ್ಟುಗಳನ್ನು ಕೊಡಲಾಗುವುದು. (೨) ಟಿಕೆಟ್ಟುಗಳು ಪ್ರಯಾಣದ ೧೦[illegible]ದ ಮುಂಚೆಯಿಂದ ಸಿಗುವುವು (೩) ಎರಡನೆಯ ಸ್ಪೆಷಲ್ ತರಗತಿಯ ೨ ಪ್ರಯಾಣಿಕರ ಟಿಕೆಟ್ಟುಗಳಿಗೆ ಒಬ್ಬ ಆಳಿನ ಟಿಕೆಟ್ ಕೊಡಲಾಗುತ್ತೆ

೪. ಅಧಿಕೃತ ಟೂರಿಂಗ್ ಏಜೆಂಟರು ಎರಡನೇ ತರಗತಿ ಟಿಕೆಟ್ಟುಗಳ ಮಾರಾಟ ಮಾಡಲು ಅವಕಾಶ ಕೊಡಲಾಗುವುದು

(೪) ರಿಜರ್ವೇಷನ್—ಮೊದಲನೆ ತರಗತಿಯಂತೆಯೇ ಈ ತರಗತಿಯನ್ನು ರಿಜರ್ವ್ ಮಾಡಲಾಗುವುದು ೫ ಮುಫತ್ತು ಲಗೇಜ್ ಛಾರ್ಜ್ :—ಪ್ರತಿ ಪ್ರಯಾಣಿಕನಿಗೂ ೪ ಮಣ ತೂಕದಷ್ಟು ಲಗೇಜ್, ಸಾಮಾನನ್ನು ಮುಫತ್ತಾಗಿ ಹಾಕಿಸಲು ಅನುಮತಿಯುಂಟು. ೬ ಗುರುತು:—ಎರಡನೆ ತರಗತಿಯ ಸ್ಪೆಷಲ್ ಕಂಪಾರ್ಟ್‌ಮೆಂಟನ್ನು ಗುರುತಿಸಲು '೨ನೆ ತರಗತಿ' ಎಂಬ ಸೂಚನೆಯ ಪಕ್ಕದಲ್ಲಿ 'ಎಸ್ (ಸ್[illegible]' ಎಂದು ಸೂಚಿತವಾಗಿರುವುದು ೭ ಅನುಕೂಲತೆ—ಚಾಲ್ತಿಯಲ್ಲಿರುವ ಎರಡನೆ ತರಗತಿಗಳ ಅನುಕೂಲತೆ ಮತ್ತು ರಮ್ಯತೆಗಳೆಲ್ಲವೂ ಈ ತರಗತಿಯಲ್ಲಿರುವುವು [illegible] ವೇಟಿಂಗ್ ರೂಂ ಅನುಕೂಲತೆ—೨ನೆಯ ತರಗತಿಯ ಪ್ರಯಾಣಿಕರೆಲ್ಲರಿಗೂ ಏ[illegible]ಕಾರವಾದುದು. ೯. ಭೋಜನಕ್ಕಾಗಿ ಟೆಲಿಗ್ರಾಂ ಸೌಕರ್ಯ :—ಮುಫತ್ತಾಗಿ [illegible] ಸುದ್ದಿ ಕೊಡಬಹುದು ೧೦. ೧, ೨ ಮತ್ತು ೩ನೆಯ ತರಗತಿಯಲ್ಲಿ ಈಗಿರುವ[illegible]ಯೇ ಛಾರ್ಜು ಇರುವುದು. ೧೧ ೨ನೆ ತರಗತಿಯ ಸಾಧಾರಣ ಗಾಡಿಗ[illegible] ೧-೧೨-೧೯೪೯ರಿಂದ ಹೋಗುವ ಸೌಕರ್ಯವಿರುವುದಿಲ್ಲ.

ಟ್ರಾಫಿಕ್ ಮ್ಯಾನೇಜರರ ಕಛೇರಿ ಎಂ.ಎಸ್. ಮಿರ್ಜಾ ಇನಾಯತ್ ಹುಸೇನ್ ರೈಲ್ವೆ, ಮೈಸೂರು, ೧೯೪೯ನೆ ನವೆಂಬರ್ ೧೦ ಟ್ರಾಫಿಕ್ ಮ್ಯಾನೇಜರ್.

ರಸಿಕರಿಗೆ ಅಚ್ಚುಮೆಚ್ಚಾದುವು

ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ-ಹಾಗೂ, ಸುರುಚಿ.

ಮೈಸೂರು ರೇಷ್ಮೆ ಸಮಾಜದಲ್ಲಿ ಮೇಲ್ಮೆಯ ಕುರುಹು ಮುತ್ಸಂಜೆಯಲ್ಲಿ ಅನುಪಮವಾದುದು

ಜಾರ್ಜೆಟ್, ಕ್ರೇಪ್,

ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು

ಮನ ಸೆಳೆವ ಮಾದರಿಗಳು

ಇಂದಿನ ಅಂದದ ರಂಗುಗಳು.

ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,

ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೭ ಕಾಸು

ವೃದ್ಧಿ

ಸಂಪುಟ ೮ | ಬುಧವಾರ ೨೩-೧೧-೪೯ | ಸಂಚಿಕೆ ೯೮

ಭಾರತದಲ್ಲಿ ಅಣು ತಯಾರಿಕೆ ಕಾರ್ಖಾನೆ

ಸಿದ್ಧಲಿಂಗಪುರದ ಜಾತ್ರೆಗೆ ಪ್ರತಿಬಂಧಕ

ಮೈಸೂರು ೨೩

ಮೈಸೂರು ತಾಲ್ಲೂಕಿನಲ್ಲಿ ಕಾಲರಾ ಉಪದ್ರವವಿರುವುದರಿಂದ ಇದೇ ೨೬ನೇ ೨ ಸಿದ್ಧಲಿಂಗಪುರದಲ್ಲಿ ನಡೆಯಲಿರುವ ಸುಬ್ರಾಯನ ಷಷ್ಠಿ ಜಾತ್ರೆಯನ್ನು ನಡೆಸಕೂಡದೆಂದು ಆರೋಗ್ಯ ಕಾನೂನಿನ ಮೇರೆ ಜಿಲ್ಲಾಧಿಕಾರಿಗಳು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿರುತ್ತಾರೆ.

ಶೃಂಗೇರಿ ಮಠದ ಸಲಹಾ ಸಮಿತಿ

ಶೃಂಗೇರಿ ಸ್ವಾಮಿಗಳ ಆರೋಗ್ಯವು ಚಿಕಿತ್ಸೆಗೆ ತೃಪ್ತಿಕರವಾಗಿಲ್ಲದಿರುವುದರಿಂದ ಆ ಮಠದ ಆಡಳಿತಾಧಿಕಾರಿಗಳಿಗೆ ಸಹಾಯಕವಾಗುವಂತೆ ಒಂದು ಸಲಹಾ ಸಮಿತಿಯನ್ನು ಎರಡು ವರ್ಷಗಳವರೆಗೆ ಸರ್ಕಾರದವರು ನೇಮಿಸಿದ್ದಾರೆ. ಸಾಮಾನ್ಯವಾದ ಆಡಳಿತದಲ್ಲಿ ಸಮಿತಿಯು ಕೈ ಹಾಕುವುದಿಲ್ಲವೆಂದೂ, ಸಮಿತಿಯವರು ಶ್ರೀ ಸ್ವಾಮಿಗಳ ಸಲಹೆ ಪಡೆಯುತ್ತಿರುವರೆಂದೂ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಸಮಿತಿಗೆ ಶ್ರೀಗಳಾದ ಎಲ್. ಆರ್. ನಾಗೇಶ್ವರ ಅಯ್ಯರ್, ಎಸ್. ನಾರಾಯಣರಾಯರು, ಕೆ. ನಾಗಭೂಷಣ ಭಟ್ಟರುಗಳು ಸದಸ್ಯರಾಗಿರುವರೆಂದು ತಿಳಿದು ಬಂದಿದೆ.

ಮೆಣಸಿನಕಾಯಿ ರಫ್ತಿಗೆ ಪ್ರತಿಬಂಧಕ

ಸಂಸ್ಥಾನದಿಂದ ಸರ್ಕಾರದ ಅನುಮತಿಯಿಲ್ಲದೆ ಮೆಣಸಿನ ಕಾಯಿಯನ್ನು ರಫ್ತು ಮಾಡಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ವಿದ್ಯಾವರ್ಧಕ ಹೈಸ್ಕೂಲ್ ವಿದ್ಯಾರ್ಥಿ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರ ೬೦ ನೆಯ ವರ್ಷದ ವರ್ಧಂತಿಯನ್ನು ನೆನ್ನೆ ಆಚರಿಸಲಾಯಿತು. ಟ್ರೈನಿಂಗ್ ಕಾಲೇಜಿನ ಅಧ್ಯಾಪಕರಾದ ಎಲ್. ಆರ್. ಶೇಷುರವರು ಅಧ್ಯಕ್ಷತೆವಹಿಸಿದ್ದರು. ಮಹಾಜನ ಹೈಸ್ಕೂಲಿನ ಕನ್ನಡ ಅಧ್ಯಾಪಕರಾದ ಶ್ರೀಮಾನ್ ಆರ್. ಎಸ್. ರಾಘವಾಚಾರ್ಯರವರು ಜವಹರರ ಸಮಗ್ರ ಜೀವನದ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಿದರು. ರಾಷ್ಟ್ರಗೀತೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ನೃತ್ಯ ಪ್ರದರ್ಶನ

ರಾಜಧಾನಿಯ ಶ್ರೀ ರಾಜಲಕ್ಷ್ಮಿ ನೃತ್ಯಕಲಾ ಮಂದಿರದವರು ಕಳೆದ ಭಾನುವಾರ ತಮ್ಮ ಮಂದಿರದ ಸಹಾಯಾರ್ಥವಾಗಿ ಟೌನ್ ಹಾಲಿನಲ್ಲಿ ನೃತ್ಯ ಮತ್ತು ಸಂಗೀತ ಪ್ರದರ್ಶನವನ್ನು ಏರ್ಪಡಿಸಿದ್ದರು. ತಾಯಿನಾಡು ಪತ್ರಿಕಾ ಪ್ರತಿನಿಧಿಗಳಾದ ಶ್ರೀ ಎನ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡಿ ಮೇಲ್ಕಂಡ ಮಂದಿರದವರು ನೃತ್ಯಕಲೆ ಪುನರುದ್ಧಾರಕ್ಕೆ ಶ್ರಮಿಸುತ್ತಿರುವ ಬಗ್ಗೆ ಪ್ರಶಂಸಿದರು.

ಕೊಡಗಿನ ಆಡಳಿತದಲ್ಲಿ ಬದಲಾವಣೆ ಇಲ್ಲ

ಕೊಡಗಿನ ಆಡಳಿತದಲ್ಲಿ ಸಧ್ಯಕ್ಕೆ ಯಾವ ಬದಲಾವಣೆಯೂ ಆಗದೆ, ಈಗಿನ ಆಡಳಿತವೇ ನಡೆದುಕೊಂಡು ಬರುವುದೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ.

ಭಾರತದಲ್ಲಿ ಅಣು ತಯಾರಿಕಾ ಕಾರ್ಖಾನೆ

ಇನ್ನು ಒಂದು ವರ್ಷದೊಳಗಾಗಿ ಭಾರತದಲ್ಲಿ ಅಣು ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದೂ, ಸಂಶೋಧನಾ ಕಾರ್ಯಗಳನ್ನು ನಡೆಸಲು ಫ್ರಾನ್ಸಿನಿಂದ ಒಬ್ಬ ವೈಜ್ಞಾನಿಕ ಪ್ರವೀಣರು ಬರಲಿದ್ದಾರೆಂದೂ ತಿಳಿದುಬಂದಿದೆ.

ರೇಡಿಯೋ ಮೂಲಕ ಹಿಂದಿ ಶಿಕ್ಷಣ

ಹಿಂದಿಯ ಭಾಷೆಯನ್ನು ಜನರು ಸುಲಭವಾಗಿ ಕಲಿಯಲು ಅನುಕೂಲವಾಗುವಂತೆ ಅಖಿಲ ಭಾರತ ರೇಡಿಯೋ ಕೇಂದ್ರದವರು ಹಿಂದಿ ಶಿಕ್ಷಣ ಪ್ರಸಾರಗಳನ್ನು ೩ ತಿಂಗಳ ಕಾಲ ನಡೆಸಲು ವ್ಯವಸ್ಥೆ ಮಾಡಿದ್ದಾರೆ. ಇದೂ ಅಲ್ಲದೆ ಕಾಲೇಜು ಮತ್ತು ಇತರ ಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೂ ಪ್ರತ್ಯೇಕ ಹಿಂದೀ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸಲಾಗುವುದೆಂದೂ ತಿಳಿಸಲಾಗಿದೆ.

ಪಾಕೀಸ್ತಾನದ ರೈಲುಗಳಿಗೆ ಹಸುರು ಬಣ್ಣ

ರೈಲುಗಳಿಗೆ ಕೆಂಪು ಬಣ್ಣವನ್ನು ಬಳಿದಿರುವುದು ಪಾಕೀಸ್ತಾನದ ಪ್ರಯಾಣಿಕರಿಗೆ ರಾವು ಬಡಿದಂತಾಗಿದೆಯೆಂದೂ ಆದುದರಿಂದ ಅಲ್ಲಿನ ಸರ್ಕಾರದವರು ರೈಲುಗಳಿಗೆ ಹಸುರು ಮತ್ತು ಬಿಳಿಯ ಬಣ್ಣಗಳನ್ನು ಬಳಿಯಲು ನಿರ್ಧರಿಸಿ, ಈಗಾಗಲೇ ೩೦೦ ಗಾಡಿಗಳಿಗೆ ಹೊಸ ಬಣ್ಣವನ್ನು ಹಾಕಲಾಗಿದೆಯೆಂದೂ ಗೊತ್ತಾಗಿದೆ.

ಕೋತಿಗಳಿಂದ ದಿನಕ್ಕೆ ಒಂದು ಕೋಟಿ ರೂ. ನಷ್ಟ

ಸಂಯುಕ್ತ ಪ್ರಾಂತ್ಯದಲ್ಲಿ ಕೋತಿಗಳ ಹಾವಳಿಯು ವಿಪರೀತವಾಗಿ, ರೈತರು ಮತ್ತು ನಗರದ ನಿವಾಸಿಗಳು ತೊಂದರೆಗೆ ಒಳಗಾಗಿದ್ದಾರೆ. ಆ ಪ್ರಾಂತ್ಯದಲ್ಲಿ ೩ ಕೋಟಿ ಕೋತಿಗಳಿವೆಯೆಂದೂ, ಅವುಗಳಿಂದ ಸರ್ಕಾರಕ್ಕೆ ದಿನವೂ ದಕ್ಕೆ ಒಂದು ಕೋಟಿ ರೂ. ನಷ್ಟವಾಗುತ್ತಿದೆಯೆಂದೂ ಅಂದಾಜು ಮಾಡಲಾಗಿದೆ. ಕಾಶಿಯಲ್ಲಿ ಅವುಗಳ ಹಾವಳಿಯನ್ನು ತಡೆಗಟ್ಟಲು ಅಲ್ಲಿನ ಪುರಸಭೆಯವರು ೫೦ ಸಾವಿರ ರೂ. ಮಂಜೂರು ಮಾಡಿರುತ್ತಾರೆ. ಲಕ್ನೋ ನಗರದಲ್ಲಿ ಕೋತಿಗಳು ಮನೆ ಮತ್ತು ಶಾಲೆಗಳ ಆವರಣಗಳಿಗೆ ನುಗ್ಗಿ, ಅಲ್ಲಿ ಬೆಳೆಯುತ್ತಿರುವ ಆಹಾರ ಧಾನ್ಯಗಳನ್ನು ನಾಶಪಡಿಸುತ್ತಿವೆ.

ಆಂಧ್ರ ಪ್ರಾಂತಕ್ಕೆ ಸರ್ಕಾರದ ಸಮ್ಮತಿ

ಸಧ್ಯದಲ್ಲಿಯೇ ಆಂಧ್ರ ಪ್ರಾಂತವನ್ನು ರಚಿಸಲು ಭಾರತ ಸರ್ಕಾರದವರು ಒಪ್ಪಿದ್ದಾರೆಂದೂ, ಅದರ ಬಗ್ಗೆ ಕಾರ್ಯಕ್ರಮ ನಡೆಸಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಸಧ್ಯದಲ್ಲಿಯೇ ಚೀಣಾದ ಪತನ

೨೨ ವರ್ಷದ ಚೀಣಾ ರಾಷ್ಟ್ರೀಯ ಸರ್ಕಾರವು ಸಧ್ಯದಲ್ಲಿಯೇ ಪತನವಾಗುವುದೆಂದೂ, ಇನ್ನು ಕೆಲವು ದಿನಗಳಲ್ಲಿ ಅದರ ರಾಜಧಾನಿಯಾದ ಚುಂಕಿಂಗ್ ಕಮ್ಯೂನಿಸ್ಟರ ವಶವಾಗುವುದೆಂದೂ ವರದಿಯಾಗಿದೆ.

ಜೈ ಹಿಂದ್ ॥

ಕಾಂಗ್ರೆಸ್ಸಿನ ಆಧಾರವೇ ಮೈಸೂರು

ಮೈಸೂರು ಕಾಂಗ್ರೆಸ್ಸಿಗೆ ಜನ್ಮ ಕೊಟ್ಟ ಊರು - ಮೈಸೂರು

ಮೈಸೂರು ಕಾಂಗ್ರೆಸ್ಸು ಗುರಿ ಸಾಧಿಸಲು ಸಹಾಯ ಮಾಡಿದ್ದು ಮೈಸೂರು

ಕಾಂಗ್ರೆಸ್ಸು ಪಾರ್ಲಿಮೆಂಟರಿ ಕಾರ್ಯಕ್ರಮ ಹಾಕಿದ್ದು ಮೈಸೂರು

ಮೈಸೂರು ಕಾಂಗ್ರೆಸ್ಸು-ಕಳೆದ ಎರಡು ವರ್ಷದಲ್ಲಿ ಮಾಡಿದ ಸತ್ಯಾಗ್ರಹದ ಕೇಂದ್ರ-ಮೈಸೂರು

ಮೈಸೂರು ಕಾಂಗ್ರೆಸ್ಸು ಜನತಾ ಸಹಾಯದಿಂದ ಜನತೆಗಾಗಿ ಜವಾಬ್ದಾರಿ ಸರಕಾರ ಪಡೆದದ್ದು-ಮೈಸೂರು

ಅಂತಹ ಕೀರ್ತಿಯುತ ಮೈಸೂರು ಇಂದು ಯಾವ ಪುರಸ್ಕಾರ ಕಾಂಗ್ರೆಸ್ಸಿಗೆ ಕೊಡುವುದು ?—

ಪೌರ ಚುನಾವಣೆಯಲ್ಲಿ ಸಂಪೂರ್ಣ ಜಯ ಕೊಡುವುದಿಲ್ಲವೇ ?

ಸಿಕಂದರಾಬಾದು ಆಂಧ್ರದ ರಾಜಧಾನಿಯೇ ?

ಹೈದರಾಬಾದನ್ನು ಭಾಷಾವಾರಾಗಿ ವಿಭಾಗಿಸಬೇಕೆಂಬ ಅಭಿಪ್ರಾಯಕ್ಕೆ ಸಂಸ್ಥಾನದಲ್ಲಿ ಸರ್ವಾನುಮತವಿರುವುದಾಗಿ ತಿಳಿದುಬಂದಿದೆ. ಆ ರೀತಿ ಆದಲ್ಲಿ ಆಂಧ್ರರು ತಮ್ಮ ರಾಜಧಾನಿಯ ರಚನೆಗಾಗಿ ಯಾವ ಕಷ್ಟವನ್ನೂ ಪಡದೆ, ಸರ್ವ ಸಿದ್ಧತೆಗಳಿಂದ ಕೂಡಿದ ಸಿಕಂದರಾಬಾದನ್ನು ರಾಜಧಾನಿಯನ್ನಾಗಿ ಮಾಡಲು ಯೋಗ್ಯವಾಗಿದೆಯೆಂದು ಅಭಿಪ್ರಾಯ ಪಡಲಾಗಿದೆ.

ಪಾಳು ಜಮೀನು ಸರ್ಕಾರದ ವಶ

ಬೊಂಬಾಯಿ ಪ್ರಾಂತ್ಯದಲ್ಲಿ ೨ ವರ್ಷಗಳಿಂದ ಸಾಗುವಳಿ ಆಗದೆ ಪಾಳು ಬಿದ್ದಿರುವ ಜಮೀನುಗಳೆಲ್ಲವನ್ನೂ ಸರ್ಕಾರದ ಹತೋಟಿಗೆ ತೆಗೆದುಕೊಳ್ಳಬೇಕೆಂದು ಬೊಂಬಾಯಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಸೆಣಬು ಬೀಜಗಳ ರಫ್ತಿಗೆ ಪ್ರತಿಬಂಧಕ

ಸಂಸ್ಥಾನದಲ್ಲಿ ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುತ್ತಿರುವ ಅಪ್ಪಟ ಸೆಣಬು ಬೀಜಗಳನ್ನು ಹೊರಕ್ಕೆ ಸಾಗಿಸುತ್ತಿರುವುದರಿಂದ ಅದರ ಅಭಾವವು ಉಂಟಾಗಿ ಹೊರಗಿನಿಂದ ತರಿಸಬೇಕಾದ ಪರಿಸ್ಥಿತಿ ಒದಗಿದೆ. ಆದುದರಿಂದ ಇದನ್ನು ಆಹಾರದ ಕಮಿಷನರ ಅನುಮತಿಯಿಲ್ಲದೆ ಸಂಸ್ಥಾನದಿಂದ ಹೊರಕ್ಕೆ ಸಾಗಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬೆಂಬಲ

ರಾಜಧಾನಿಯ ಒಬಿಜ ಸಂಘದ ಸಭೆಯು ಪ್ರ॥ ಪ್ರ॥ ಸಭೆಯ ಸದಸ್ಯರಾದ ಶ್ರೀ ಜಿ. ಜನಾರ್ಧನ ನಾಯ್ಡುರವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ಸೇರಿ ಬರುವ ಶನಿವಾರ ನಡೆಯುವ ಪೌರ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಬೆಂಬಲ ನೀಡಬೇಕೆಂದು ನಿರ್ಣಯ ಮಾಡಿದೆ.

ತಾತಯ್ಯನವರ ದಿನ ಪತ್ರಿಕೆ

ಸಂಪದಭ್ಯುದಯ

ತಾ॥ 24-11-49ನೇ ಗುರುವಾರದಿಂದ ಪ್ರತಿ ಸಾಯಂಕಾಲ ಪ್ರಕಟವಾಗುವುದು

ಮುಂದಿನ ವರ್ಷ ಖಾನೇಷುಮಾರಿ

ಭಾರತದಲ್ಲಿ ಮುಂದಿನ ವರ್ಷ ಜನಗಣತಿ ಭಾರತದಲ್ಲಿ ಖಾನೇಷುಮಾರಿ ನಡೆಸಲು ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ವ್ಯವಸ್ಥೆ ಮಾಡುತ್ತಿವೆ.

ಸುದ್ದಿ ಸರಿಯಲ್ಲ

ಮೈಸೂರು ಪುರಸಭೆಯ ಅಧ್ಯಕ್ಷರಿಗೆ ... ಕೆಲವು ದಿನಗಳ ಹಿಂದೆ ಹೂವಿನ ಹಾರ ... ಮೈಸೂರು ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಗೆ ಆಧಾರವಿಲ್ಲವೆಂದೂ, ... ಮಾಡಿರುವುದೇ ... ಮುಖಂಡರುಗಳು ... ಶ್ರೀ ... ಲಿಂಗ ... ತ್ತಾರೆ.

ಕರ್ನಾಟಕ ಏಕೀಕರಣದ ಬಗ್ಗೆ ಅಪಪ್ರಚಾರ

ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಈ ರೀತಿ ತಿಳಿಸಿರುತ್ತಾರೆ:-

ಕೆಲವು ಕರ್ನಾಟಕವಾದಿಗಳು ಇತ್ತೀಚೆಗೆ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ತೀರ್ಮಾನವನ್ನು ಅಪಾರ್ಥ ಮಾಡಿ ಪ್ರಚಾರ ಹಡಿಸುತ್ತಿರುವುದು ಆಶ್ಚರ್ಯಕರವಾಗಿದೆ. 'ವರ್ಕಿಂಗ್ ಕಮಿಟಿಯವರು ರಾಜ್ಯಾಂಗದಲ್ಲಿ ವಿಧಾಯಕವಾಗುವ ರೀತಿಯಲ್ಲಿ ಕರ್ನಾಟಕ ಆಗಬಹುದು ಎಂತ ಹೇಳಿದ್ದಾರೆ. ಅಂದ ಮಾತ್ರಕ್ಕೆ ಕಾಲ, ದೇಶ ವರ್ತಮಾನ ಪರಿಸ್ಥಿತಿಗಳನ್ನು ಲಕ್ಷ್ಯ ಇದೆ ಮಾಡಬೇಕೆಂಬರ್ಥದಲ್ಲಿ ಹಾಗೆ ಅರ್ಥ ಮಾಡುವುದು ಅವಿವೇಕತ್ವವನ್ನು ತೋರಿಸುತ್ತದೆ.

ಕೆ. ಪಿ. ಸಿ. ಸಿ. ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ದಾವಣಗೆರೆಯಲ್ಲಿ ಮಾತನಾಡುತ್ತ, ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ತೀರ್ಮಾನದ ಬಗ್ಗೆ ಮಾಡಿರುವ ವ್ಯಾಖ್ಯಾನವು ಗಮನಾರ್ಹವಾಗಿದೆ. ಭಾರತ ರಾಜ್ಯಾಂಗದ ೩ನೇ ವಿಧಿಯಲ್ಲಿ ನಮೂದಿರುವ ರೀತಿ, ಅಂದರೆ ಕೊಡಗು, ಮದ್ರಾಸು, ಬೊಂಬಾಯಿ, ಮೈಸೂರು ಮತ್ತಿತರ ಸಂಸ್ಥಾನಗಳಲ್ಲಿರುವ ಶಾಸನ ಸಭೆಗಳ ಅಭಿಪ್ರಾಯ ಪಡೆದು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಶಾಸನ ಮಾಡುವುದರ ಮೂಲಕ ,ಮಾತ್ರ ಕರ್ನಾಟಕ ಏರ್ಪಡುವುದು ಸೂಕ್ತವೆಂದು ವರ್ಕಿಂಗ್ ಕಮಿಟಿಯವರು ಅಭಿಪ್ರಾಯ ಪಟ್ಟಿದ್ದಾರೆ. ಈ ತೀರ್ಮಾನಕ್ಕೆ ಶ್ರೀ ನಿಜಲಿಂಗಪ್ಪನವರೂ ಭಾಗಿಗಳು. ಹಾಗಿದ್ದೂ ಕೂಡ ಕರ್ನಾಟಕ ಏರ್ಪಡಲು ಯಾವ ನಿರ್ಬಂಧವನ್ನೂ ವರ್ಕಿಂಗ್ ಕಮಿಟಿಯವರು ಹಾಕಿಲ್ಲವೆಂದೂ, ಮೈಸೂರಿನಲ್ಲಿ ಕರ್ನಾಟಕ ವಿರೋಧಾಭಿಪ್ರಾಯವು ಗಣನೀಯವಾಗಿಲ್ಲವೆಂದೂ ಶ್ರೀ ನಿಜಲಿಂಗಪ್ಪನವರು ಈ ರೀತಿ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆಂಬುದನ್ನು ನಂಬುವುದು ಬಹಳ ಕಷ್ಟವಾಗಿದೆ. ಇದು ನಿಜವಾಗಿದ್ದಲ್ಲಿ ಉಗ್ರವಾಗಿ ಖಂಡಿಸಲೇಬೇಕು. ಈ ವಿಷಯವನ್ನು ಅವರು ಕೂಡಲೆ ಸ್ಪಷ್ಟಪಡಿಸಬೇಕು. ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ತೀರ್ಮಾನವನ್ನು … ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಕಾಂಗ್ರೆಸ್ಸಿನ ಮತ್ತು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯ. ಜನತೆಯ ಹಿತಾಹಿತಗಳ ಮೇಲೆ ತೀರ್ಮಾನಗಳ ವಿಷಯದಲ್ಲಿ ಅಪಾರ್ಥ ಪ್ರಚಾರ ಮಾಡುವುದು ರಾಜಕೀಯ ಅನೀತಿಯೆಂಬುದನ್ನು ದೇಶದ ಮುಖಂಡರೆನಿಸಿಕೊಂಡವರು ಗಮನಿಸಬೇಕಾಗಿ ವಿನಂತಿ.

॥ ಶ್ರೀ ॥

ಗಣೇಶಾ ಟಾಕೀಸ್

23-11-49ರಿಂದ ದಿನವಹಿ 3 ಆಟಗಳು

ಅಶೋಕ - ಕುಮಾರ್

ನಾಗಯ್ಯ, ಕನ್ನಾಂಬ, ತ್ಯಾಗರಾಜ ಭಾಗವತರ್, ಕೃಷ್ಣನ್, ಮಧುರಂ ಪಾತ್ರ ವಹಿಸಿರುವ ತಮಿಳು ಚಿತ್ರ

॥ ವಂದೇ ಮಾತರಂ ॥

ಪೌರರಲ್ಲಿ ಪ್ರಾರ್ಥನೆ

ಓಟುಕೊಡಿರಿ ನಿಮ್ಮ ಓಟುಕೊಡಿರಿ ನಿಮ್ಮ
ಕಾಂಗ್ರೆಸ್ಸಿಗೆ ನಿಮ್ಮ ಓಟುಕೊಡಿರಿ!
ಬೂಟಾಟಿಕೆ ಬೇಹಾರಿ ಬಜಾರಿಗೆ
ಓಟಿನ ಧಾರೆಯ ನೆರೆಯದಿರಿ ॥-ಪ-॥
ದೇಹ-ಕೀರ್ತಿ ಯಾಯೆರಡರೊಳುಳಿವುದು
ದೇಹವೂ? ಕೀರ್ತಿಯೊ? ಯೋಚಿಸಿರಿ!
ದೇಹಬಿಟ್ಟು ಸ್ಥಿರ ಕೀರ್ತಿಯುಗಳಿಸಿದ
ಮಹಾತ್ಮ ಗಾಂಧಿಯ ಜ್ಞಾಪಿಸಿರಿ ॥-೧-॥
ದೇಶಭಕ್ತರ ಗಳ ಗೊಬ್ಬರದಿಂದಲಿ ಬೆಳೆದುದ
ಕಾಂಗ್ರೆಸ್ ದೇವಿಸಿರಿ!
ದೇಹಿಯೆಂಬ ವಿದ್ರೋಹಿಗಳಾಟಕೆ
ಮೋಹಗೊಂಡು ಓಟನೀಡದಿರಿ ॥-೨-॥
ಕರ್ಮ ಮಾಡುವುದು ಮಾನವ ಧರ್ಮವು
ಭಾರತ ಸರ್ಕಾರದ ವಿದ್ಯಾ ಮಂತ್ರಿ ಮೌಲಾನಾ ಅಜಾದರು ನಾಳೆ ದಿನ ಮೈಸೂರಿಗೆ ಬರುವುದಿಲ್ಲವೆಂದು ತಿಳಿದು ಬಂದಿದೆ. ಆದುದರಿಂದ ಅವರಿಗೆ ಪೌರಸಭೆಯವರು ಏರ್ಪಡಿಸಲಿದ್ದ ಬಿನ್ನವತ್ತಳೆಯ ಕಾರ್ಯಕ್ರಮವು ರದ್ದಾಗಿದೆ. ವಿಶ್ವಸಂಸ್ಥೆಯ ವ್ಯಾಸಂಗ ಗೋಷ್ಠಿಯ ಪರಿಸಮಾಪ್ತಿ ಸಮಾರಂಭವು ನಾಳೆ ಮಧ್ಯಾಹ್ನ ೨-೩೦ ಘಂಟೆಗೆ ಜಗನ್ಮೋಹನಭವನದಲ್ಲಿ ಜರುಗುವುದು

ಕೀರ್ತನಕಾರ ಮಂಡಲಿ

ಮಂಡಲಿಯ ಮೂರನೇ ವರ್ಷದ ಮಹಾಮಂಗಳೋತ್ಸವವು ಶ್ರೀ ಎಲ್ಲಮ್ಮ ದೇವಾಲಯದಲ್ಲಿ ನಾಳೆ ಬೆಳಿಗ್ಗೆ ೮ ಘಂಟೆಗೆ ನಡೆಯುವುದು. ನಾಳೆ ಸಂಜೆ ೭ ಘಂಟೆಗೆ ಶ್ರೀ ಆರ್. ಎಸ್. ಕೇಶವಗಿರಿದಾಸರಿಂದ "ಪ್ರೇಮಭಕ್ತಿ" ಎಂಬ ಕಥೆಯು ಜರುಗುವುದು

೧ ಲಕ್ಷ ರೂ. ಸರಕಾರಿ ಹಣ ಉಳಿಸಿದ ನೌಕರ

ಸರಕಾರಕ್ಕೆ ಸೇರಿದ ೧ ಲಕ್ಷ ರೂ ಗಳ ನೋಟು ಮತ್ತು ನಾಣ್ಯಗಳನ್ನು ಪ್ರವಾಹದಿಂದ ರಕ್ಷಿಸಿದ ಗುಮಾಸ್ತನೊಬ್ಬನ ಕಥೆ ಮಲಬಾರಿನ ತಾಣೆ ಎಂಬಲ್ಲಿಂದ ಬಂದಿದೆ. ಕಳೆದ ಅಕ್ಟೋಬರ್ ೨೬ ರಲ್ಲಿ ತಣೆಯಲ್ಲಿ ಉಂಟಾದ ನದಿ ಪ್ರವಾಹದಿಂದ ಸ್ಥಳೀಯ ಟ್ರೆಜರಿಗೆ ನೀರು ನುಗ್ಗಿತೆಂದೂ, ಅಲ್ಲಿ ಇದ್ದ ಗುಮಾಸ್ತನು ೧ ಲಕ್ಷರೂ ನೋಟು, ನಾಣ್ಯಗಳನ್ನು ತೆಗೆದು ಮೇಜಿನ ಮೇಲಿಟ್ಟು ತಾನೇ ಬಂದೂಕ ಹಿಡಿದು ಪಹರೆ ನಿಂತಿದ್ದನೆಂದೂ, ನಂತರ ನೀರು ಇನ್ನೂ ಹೆಚ್ಚಿದ ಕಾರಣ ಹಣದಗಂಟನ್ನು ಮೇಲ್ಛಾವಣಿಯ ಕಬ್ಬಿಣದ ಸರಳವನ್ನು ಹಿಡಿದು ಬಹಳ ಹೊತ್ತು ಇದ್ದನೆಂದೂ, ಪ್ರವಾಹವು ಇಳಿಮುಖವಾದ ನಂತರ, ಸುರಕ್ಷಿತವಾಗಿ ಕೆಳಕ್ಕೆ ಬಂದನೆಂದೂ ಹೇಳಲಾಗಿದೆ. ಇದಕ್ಕಾಗಿ ಅವನನ್ನು ಹುಜೂರ್ ಅಕೌಂಟೆಂಟನನ್ನಾಗಿ ನೇಮಿಸಲಾಯಿತು.

ಶೃಂಗೇರಿಮಠದ ಆಡಳಿತದಲ್ಲಿ ಸರಕಾರದ ಕೈವಾಡ ಬೇಡ

ಮಠದ ಶಿಷ್ಯರ ಸಮ್ಮೇಳನದ ಪ್ರಾರ್ಥನೆ

ಶೃಂಗೇರಿ ಮಠದ ಶಿವಮೊಗ್ಗ, ಮತ್ತು ತಿರುವಾಂಕೂರು ಕೊಚ್ಚಿ ಯೂನಿಯನ್ನಿನ ಶಿಷ್ಯಂದಿರು ತಿರುಚನಾಪಳ್ಳಿಯಲ್ಲಿ ಮೊನ್ನೆ ಸಮ್ಮೇಳನ ನಡೆಸಿದರು. ಮಠದ ಆಡಳಿತದ ಸಂಬಂಧವಾಗಿ ಸಲಹೆ ನೀಡಲು ಐದು ಜನರ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯು ಮೂರು ತಿಂಗಳೊಳಗಾಗಿ ತನ್ನ ವರದಿಯನ್ನು ಮೈಸೂರು ಸರಕಾರ ಮತ್ತು ಸಮ್ಮೇಳನಕ್ಕೆ ಕಳುಹಿಸ ಬೇಕೆಂದು ತೀರ್ಮಾನವಾಯಿತು. ಮೈಸೂರು ಸರಕಾರದವರು ಈ ಸಮಿತಿ ಸದಸ್ಯರೊಬ್ಬರನ್ನು ನೇಮಿಸಬಹುದೆಂದು ಸೂಚಿಸಲಾಯಿತು.

ಮಠದ ಆಡಳಿತದಲ್ಲಿ ಮೈಸೂರು ಸರ್ಕಾರದವರು ಪ್ರವೇಶಿಸಬಾರದೆಂದು ಪ್ರಾರ್ಥಿಸಲಾಯಿತು. ಅಲ್ಲದೆ ಸರಕಾರದವರು ಸ್ಥಾಪಿಸಬೇಕೆಂದಿದ್ದ ಸಲಹಾ ಸಮಿತಿಯ ಬಗ್ಗೆ ಅವರು ತಮ್ಮ ನಿರ್ಧಾರವನ್ನು ಮರು ಪರಿಶೀಲಿಸಬೇಕೆಂದು ಕೋರಲಾಯಿತು.

ಎಲ್. ಎಸ್. ರಾಜು ರವರ ಮನೆ ಶೋಧನೆ

ಸ್ವಂ ಸು ಫೋ] ಬೆಂಗಳೂರು ೩

ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಲ್. ಎಸ್. ರಾಜು ರವರ ಮನೆಗೆ ನಿನ್ನೆ ಡಿ ಎಸ್ ಪಿ ಮುಂತಾದ ಹಲವು ಪೋಲೀಸು ಅಧಿಕಾರಿಗಳು ಪ್ರವೇಶಿಸಿ ಶೋಧನೆ ನಡೆಸಿದರೆಂದೂ ಅವರ ಮೇಲೆ ಈಗ ನಡೆಯುತ್ತಿರುವ ಮೊಕದ್ದಮೆಯ ಸಂಬಂಧವಾದ ಒಂದು ಪತ್ರಿಕೆಯನ್ನು ತೆಗೆದುಕೊಂಡು ಹೋದರೆಂದೂ ಹೇಳಲಾಗಿದೆ.

ಸಂಸ್ಥಾನಕ್ಕೆ ೧೮ ಮಂದಿ ಕೇಂದ್ರ ಅಧಿಕಾರಿಗಳು

ಸಂಸ್ಥಾನಕ್ಕೆ ೧೮ ಮಂದಿ ಕೇಂದ್ರಾಧಿಕಾರಿಗಳನ್ನು ತೆಗೆದುಕೊಳ್ಳಬೇಕೆಂದು ಭಾರತ ಸರಕಾರದ ಸಂಸ್ಥಾನ ಶಾಖೆಯಿಂದ ಮೈಸೂರು ಸರಕಾರಕ್ಕೆ ಪತ್ರ ಬಂದಿರುವುದಾಗಿ ಹೇಳಲಾಗಿದೆ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ

ಇದೇ ೫ನೇ ತಾ॥ ಸೋಮವಾರ ಬೆಳಗ್ಗೆ ೭ ಘಂಟೆಗೆ ಕಳ್ಳಿಂಪೆ ಂಟರಿ ಸ್ಕೂಲ್ ಫೈನಲ್ ಫಲಿತಾಂಶವು ಪ್ರಕಟಿಸಲ್ಪಡುವುದೆಂದು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ರವರು ತಿಳಿಸಿರುತ್ತಾರೆ

ಕಾಲೇಜು ಅಧ್ಯಾಪಕರ ಮೇಲೆ ಆಪಾದನೆ

ತುಮಕೂರಿನ ಇಂಟರ್ ಕಾಲೇಜು ಉಪಾಧ್ಯಾಯರೊಬ್ಬರು ಒಬ್ಬ ವಿದ್ಯಾರ್ಥಿನಿಗೆ ಅನುಚಿತವಾಗಿ ಗೋತ್ರ ಮುಂತಾದವುಗಳನ್ನು ವಿಚಾರಿಸಲು ಯತ್ನಿಸಿದರೆಂದು ಮುಂತಾಗಿ ಅವರ ವರ್ತನೆ ಬಗ್ಗೆ ವಿದ್ಯಾರ್ಥಿಗಳು ವಿದ್ಯಾಸಿಸುವ ಮುಖ್ಯಸ್ಥರ ಪತ್ರಿಕೆ ... ಅಲ್ಲಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ರಂಗಯ್ಯಂಗಾರ್ ರವರು ... ಬರೆದು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ

ವಿಮಾನದಲ್ಲಿ ಜೂಜಿನ ಕುದುರೆ ರವಾನೆ

ಐರ್ಲೆಂಡ್, ಒಂದರ ಮತ್ತು ... ಗಳಿಂದ ಐದು ಜೂಜಿನ ಕುದುರೆಗಳನ್ನು ಬೊಂಬಾಯಿಗೆ ವಿಮಾನದಲ್ಲಿ ಮೊನ್ನೆ ತಂದಿಳಿಸಲಾಯಿತು.

ರಾಜ್ಯಾಂಗ ಸಭೆಗೆ ಹೆಚ್ಚಿನ ಸದಸ್ಯರು

ಸ್ವಂ.ಸು ಫೋ] ಬೆಂಗಳೂರು ೩

ಸಂಸ್ಥಾನದ ರಾಜ್ಯಾಂಗ ಸಭೆಯೇ ಶಾಸನ ಸಭೆಯಾಗುವುದರಿಂದ ಆ ಸಭೆಯನ್ನು ವಿಸ್ತರಿಸಿ ಈಗ ಇರುವ ಶಾಸನ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿರುವ ಹಲವು ಸದಸ್ಯರು ಮತ್ತು ಉಪ್ಪುಗಳಲ್ಲಿಯೂ ಇರದ ಇನ್ನು ಕೆಲವರನ್ನು ರಾಜ್ಯಾಂಗ ಸಭೆಗೆ ಸೇರಿಸಿಕೊಳ್ಳುವ ವಿಷಯವನ್ನು ಮಂತ್ರಿ ಮಂಡಲದವರು ನಿನ್ನೆ ಮತ್ತು ಈ ದಿನ ಸೇರಿದ್ದ ಸಭೆಯಲ್ಲಿ ಪರಿಶೀಲಿಸಿದರೆಂದು ಗೊತ್ತಾಗಿದೆ

ಜೆ. ಬಿ. ಮಲ್ಲಾರಾಧ್ಯ

ಸಂಸ್ಥಾನದ ಆರ್ಥಿಕ ಮತ್ತು ಯೋಜನಾ ಶಾಖೆ ಸಚಿವರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರನ್ನು ಮಲೆನಾಡು ಅಭಿವೃದ್ಧಿ ಸಂಬಂಧವಾಗಿ ಕೇಂದ್ರ ಸರ್ಕಾರದವರು ಸ್ಥಾಪಿಸಿರುವ ಸಮಿತಿಗೆ ಸಹಾಯ ಮಾಡಲು ಮೂರು ತಿಂಗಳ ಕಾಲ ತೆಗೆದುಕೊಂಡಿರುವುದಾಗಿ ಗೊತ್ತಾಗಿದೆ.

ಪಠ್ಯ ಪುಸ್ತಕ ಸಮಿತಿ

ಪಠ್ಯ ಪುಸ್ತಕಗಳ ಸಮಿತಿಯ ಕಾರ್ಯದರ್ಶಿಗಳನ್ನಾಗಿ ಮುಂಚೆ ಸರ್ಕಾರಿ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಪಿ ವಿ ತಿಮ್ಮೇಗೌಡರನ್ನು ನೇಮಿಸಲಾಗಿದೆ ... ವರನ್ನು ವಿದ್ಯಾಧಿಕಾರಿಗಳ ಕಛೇರಿಯಲ್ಲಿ ... ಅಧಿಕಾರಿಗಳನ್ನಾಗಿ ... ಮಾಡಲಾಗಿದೆ

ಮೋಟಾರ್ ಕೆಲಸಗಾರರಿಂದ ಗಡ್ಡದ ದೀಕ್ಷೆ ಸತ್ಯಾಗ್ರಹ

ಮದರಾಸ ಸರ್ಕಾರದವರು ಕೈಗಾರಿಕೆ ವ್ಯವಹಾರಗಳ ಪಂಚಾಯತಿ ಮಂಡಳಿಯವರ ತೀರ್ಪನ್ನು ಜಾರಿಗೆ ತರದಿದ್ದುದಕ್ಕಾಗಿ ... ಪ್ರತಿಭಟನೆಯನ್ನು ... ಮೋಟಾರು ಕೆಲಸಗಾರರು ... ಗದಿಂದ ... ಗಡ್ಡವನ್ನು ಬೋಳಿಸದೆ ದೀಕ್ಷೆಯನ್ನು ... ಮಾಡಿದ್ದಾರೆ

[illegible]

ವ್ಯಾಸಂಗ ಗೋಷ್ಠಿಯವರಿಗೆ ಪೌರಸಭಾ ಸತ್ಕಾರ

ಮೈಸೂರು ೩

ವಿಶ್ವ ಸಂಸ್ಥೆಯ ವ್ಯಾಸಂಗ ಗೋಷ್ಠಿಯ ಸದಸ್ಯರನ್ನು ಬರಮಾಡಿಕೊಂಡು ನಿನ್ನೆ ದಿನ ಪೌರಸಭೆಯವರು ಸತ್ಕರಿಸಿದರು. ಅಧ್ಯಕ್ಷರಾದ ಶ್ರೀ ಬಿ. ವೆಂಕಟರಮಣಯ್ಯನವರು ಭಾಷಣ ಮಾಡಿ, ವಿವಿಧ ರಾಷ್ಟ್ರಗಳ ಪ್ರತಿನಿಧಿಗಳನ್ನು ಸ್ವಾಗತಿಸುವ ಅವಕಾಶವು ದೊರೆತುದಕ್ಕಾಗಿ ಪೌರಸಭೆಯ ಕೃತಜ್ಞತೆಯನ್ನು ಸಲ್ಲಿಸಿದರು. ವ್ಯಾಸಂಗ ಗೋಷ್ಠಿಯ ನಾಯಕರಾದ ಸಯಾಂ ದೇಶದ ಮಾಲಿಕೂಲ್ ಮತ್ತು ಅಮೇರಿಕ, ಇಂಗ್ಲೆಂಡ್, ಇರಾನ್, ಅರೇಬಿಯಾ, ಬರ್ಮಾ ಮುಂತಾದ ರಾಷ್ಟ್ರಗಳ ಪ್ರತಿನಿಧಿಗಳೂ ಭಾಷಣ ಮಾಡಿ, ಮೈಸೂರಿನ ಅಂದ, ಚಂದ ಸೌಂದರ್ಯ ಮತ್ತು ಸೌಲಭ್ಯಗಳನ್ನು ಕೊಂಡಾಡಿದರು.

ಕರಾಚಿಯಲ್ಲಿ ಹೈದ್ರಾಬಾದ್ ಪ್ರತಿ ಸರ್ಕಾರ

ಕರಾಚಿಯಲ್ಲಿ ಆಶ್ರಯ ಹೊಂದಿರುವ ಹೈದರಾಬಾದಿನ ಮಾಜಿ ಅಧಿಕಾರಿಗಳು ಹೈದರಾಬಾದಿನ ಪ್ರತಿ ಸರ್ಕಾರ ಎಂಬ ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸಿರುವರೆಂದೂ, ಹೈದರಾಬಾದು ಸಂಸ್ಥಾನವನ್ನು ಭಾರತ ಸರ್ಕಾರದ ಹಿಡಿತದಿಂದ ಬಿಡಿಸುವುದೇ ಇದರ ಉದ್ದೇಶವೆಂದೂ ಮಂದಿಗಾಗಿದೆ ಜನಪದವನ್ನು ಪುನಃ ಸ್ಥಾಪಿಸಿ, ಅದನ್ನು ಪಾಕಿಸ್ತಾನಕ್ಕೆ ಸೇರಿಸಲು ಜನಮತದ ಉದ್ದೇಶ ... ಎಂಬ ಇನ್ನೊಂದು ಸಂಸ್ಥೆಯೂ ಸಹ ಕರಾಚಿಯಲ್ಲಿ ಅವತಾರ ತಾಳಿದೆಯೆಂದೂ ಹೇಳಲಾಗಿದೆ.

ಪೋಲೀಸು ಕಾರ್ಯಾಚರಣೆ ವೆಚ್ಚ ಹೈದರಾಬಾದು ತೆರಬೇಕು

ಹೈದರಾಬಾದಿನಲ್ಲಿ ಇತ್ತೀಚೆಗೆ ನಡೆದ ಪೋಲೀಸು ಕಾರ್ಯಾಚರಣೆಯ ವೆಚ್ಚವನ್ನು ಆ ಸಂಸ್ಥಾನದಿಂದ ವಸೂಲು ಮಾಡಲಾಗುವುದೆಂದು ಉಪಮುಖ್ಯ ಮಂತ್ರಿ ಸರದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ

ವಿಮಾನಾಧಿಕಾರಿಗಳ ಆಗಮನ

ಮೈಸೂರು ೩

ಈದಿನ ಮಧ್ಯಾಹ್ನ ೧೨ ಘಂಟೆಗೆ ಭಾರತದ ವಿಮಾನ ದಳಗಳ ಮುಖ್ಯಸೇನಾನಿಗಳಾದ ಸರ್ ಥಾಮಸ್ ಎಮ್ಹರ್ಸ್ಟ ರವರು ವಿಶೇಷ ವಿಮಾನದಲ್ಲಿ ಮದ್ರಾಸಿನಿಂದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಅವರನ್ನು ಶ್ರೀಮನ್ಮಹಾರಾಜರ ಅಪ್ತಕಾರ್ಯದರ್ಶಿ ಸರ್ದಾರಾಮಾ ಮೈಸೂರು ಸೈನ್ಯಗಳ ಚೀಫ್ ಕಮ್ಯಾಂಡೆಂಟರಾದ ಬ್ರಿ॥ ಪೊನ್ನಪ್ಪ ಇವರುಗಳು ಸ್ವಾಗತಿಸಿದರು. ಶ್ರೀಮನ್ಮಹಾರಾಜರ ಸ್ವಂತ ಸೈನ್ಯಗಳ ಗಾರ್ಡ್ ಆಫ್ ಆನರ್ ಅನ್ನು ಸ್ವೀಕರಿಸಿ ಅವರು ಅರಮನೆಗೆ ತೆರಳಿದರು

ಸಂಗೀತ ಕಛೇರಿ

ನವಪಕ್ಷ ... ತಾ ... ದಿನ ಸಂಜೆ ೭ ಘಂಟೆಗೆ ... ಅರಮನೆ ಗಾಯಿಕರಾದ ... ದೇವೇಂದ್ರ ... ವಲ್ಲಿ ... ಕೃಷ್ಣ ... ಮೂರ್ತಿ ... ಗಾಯನವಿರುವುದು.

...ಆಫ್ರಿಕವನ್ನು ...ನ ಭಾರತೀಯರಿಗೆ ಬೋಧಿಸಿದ್ದು

ದಕ್ಷಿಣ ಆಫ್ರಿಕದ ಭಾರತೀಯರನ್ನು ಹೊರದೂಡಲು ...ನ ಸರ್ಕಾರದವರು ಒಂದು ... ವನ್ನು ಮಾಡಿದ್ದಾರೆ ... ಹೋಗುವ ... ಕೊಡುವ ... [illegible]

ಅಮೆರಿಕದಲ್ಲಿ ... ಲಕ್ಷ ಗಣಿ ಕೆಲಸಗಾರರ ಮುಷ್ಕರ

ಅಮೆರಿಕದ ... ಗಳಲ್ಲಿ ಕೆಲಸ ಮಾಡುವ ... ಲಕ್ಷ ಜನ ಕೆಲಸಗಾರರ ಸನ್ನೆಯಿಂದ ಮುಷ್ಕರವನ್ನು ಆರಂಭಿಸಿದ್ದಾರೆ ಅವರು ಈ ... ನಡೆಸುವುದು. ಈ ವರ್ಷದಲ್ಲಿ ... ಇದುವರೆಗೆ ನಡೆದಿರುವ ... ಮುಷ್ಕರದಿಂದ ಒಟ್ಟು ... ಲಕ್ಷ ಜನ ... ದಿನ ಮುಷ್ಕರ ನಡೆಸಿದರೆ ... ನಷ್ಟ ಉಂಟಾಗಿದೆ ... ಕಂಟ್ರ್ಯಾಕ್ಟು ... ಇಂದು ... ಈ ಮುಷ್ಕರವನ್ನು ಹೂಡಲಾಗಿದೆ

ಕರಾಚಿಗೆ ಷರ್ಷೆಯಾದ ಷಾ ರವರ ಭೇಟಿ

... ಷರ್ಷೆಯಾದ ... ಜನವರಿ ... ತಿಂಗಳಲ್ಲಿ ಭೇಟಿ ಕೊಡಲಿರುವರೆಂದು ತಿಳಿದು ಬಂದಿದೆ

ಮುದರಾಸಿನ ಶಾಲೆಗಳಲ್ಲಿ ಒತ್ತಾಯದ ನೂಲುವ ಶಿಕ್ಷಣ

ಪೌರಸಭೆಯು ... ನಗರದ ... ಶಾಲೆಗಳಲ್ಲಿ ಒತ್ತಾಯವಾಗಿ ನೂಲುವ ಶಿಕ್ಷಣವನ್ನು ಕೊಡುವ ನಿರ್ಣಯವನ್ನು ... ಪೌರಸಭೆಯು ... ಅಂಗೀಕರಿಸುತ್ತದೆ ... ಸಾವಿರ ... ರೂಪಾಯಿಯನ್ನು ಕೊಡಲು ಒಪ್ಪಿರುತ್ತಾರೆ

ಆಂಧ್ರದ ನಿರಾಶ್ರಿತರಿಗೆ ಕೇಂದ್ರದಿಂದ ಅಕ್ಕಿ

ಆಂಧ್ರ ದೇಶದಲ್ಲಿ ... ತಪಾನುತದಿಂದ ನಷ್ಟಹೊಂದಿದ ನಿರಾಶ್ರಿತರ ... ಕೇಂದ್ರಸರಕಾರದವರು ... ಟನ್ ಅಕ್ಕಿಯನ್ನು ಕೊಡಲೊಪ್ಪಿದ್ದಾರೆ

ಸಂಸ್ಥಾನಗಳ ಐಕ್ಯ

ರಾಂಪುರ, ಕಾಶಿ, ಟಿಪರಿ ... ಸಂಸ್ಥಾನಗಳು ಮೊನ್ನೆಯಿಂದ ಸಂಯುಕ್ತ ಪ್ರಾಂತದೊಡನೆ ಐಕ್ಯವಾಗಿರುವುದರಿಂದ ಆ ಪ್ರಾಂತವು ... ಅತ್ಯಂತ ಹಿರಿದಾಗಿರುತ್ತದೆ

ಸಣ್ಣ ಅಣು ಬಾಂಬುಗಳು

ವಿಶೇಷ ನಷ್ಟವನ್ನುಂಟು ಮಾಡದೆ ರಕ್ಷಣಾ ದಳಗಳ ಶಕ್ತಿಯನ್ನು ಬಲಪಡಿಸಲು ಸಹಾಯಕವಾಗುವ ಸಣ್ಣ ಪ್ರಮಾಣದ ಬಾಂಬುಗಳನ್ನು ... ತಯಾರಿಸಲಾಗಿದೆ ಅವುಗಳ ... ಪೌಂಡುಗಳು. ಇನ್ನೊಂದು ಯುದ್ಧವು ಸಂಭವಿಸಿದರೆ ಪಶ್ಚಿಮ ಯೂರೋಪಿನ ಸೈನ್ಯಗಳ ಮೊದಲನೆ ರಕ್ಷಣಾ ... ಇವುಗಳ ಸಹಾಯವನ್ನು ... ನೀಡುವುವು

ಇಂಡೋನೇಷ್ಯಕ್ಕೆ ಅಧಿಕಾರ ವರ್ಗ

ಇದೇ ತಿಂಗಳು ...ರಲ್ಲಿ ಇಂಡೋನೇಷ್ಯಕ್ಕೆ ರಾಜ್ಯಾಧಿಕಾರವನ್ನು ವರ್ಗಾಯಿಸಲಾಗುವುದೆಂದು ... ಸರ್ಕಾರದ ಪ್ರಕಟಣೆಯು ತಿಳಿಸಿದೆ

ಹೈಸ್ಕೂಲುಗಳಲ್ಲಿ ಕಡ್ಡಾಯದ ಸಂಸ್ಕೃತ ಶಿಕ್ಷಣ

ಹೈಸ್ಕೂಲುಗಳ ನಾಲ್ಕು ವರ್ಷಗಳ ವ್ಯಾಸಂಗದಲ್ಲಿ ಸಂಸ್ಕೃತದ ಪಾಠವನ್ನು ಕಡ್ಡಾಯವಾಗಿ ಓದುವಂತಾಗಬೇಕೆಂದು ಮಧ್ಯಪ್ರಾಂತದ ಹೈಸ್ಕೂಲು ವಿದ್ಯಾ ಬೋರ್ಡಿನವರು ಸಲಹೆ ಮಾಡಿದ್ದಾರೆ.

ಬಾಲ್ಟಿಕ್ ಸಮುದ್ರ ದಿಂದ ಬಾಲ್ಕನ್ ಸಮುದ್ರಕ್ಕೆ ಕಾಲುವೆ

ಉತ್ತರ ... ಯೂರೋಪಿನಲ್ಲಿರುವ ಬಾಲ್ಟಿಕ್ ಸಮುದ್ರವನ್ನು ಬಲ್ಕನ್ ಸಮುದ್ರಕ್ಕೆ ಸೇರಿಸುವ ಯೋಜನೆಯನ್ನು ರಷ್ಯವು ಕೈಗೊಳ್ಳಲಿದೆಯೆಂದು ಗೊತ್ತಾಗಿದೆ ಈಗಾಗಲೆ ... ಮೈಲಿಯಷ್ಟು ದೂರ ಕಾಲುವೆಯನ್ನು ಉತ್ತರ ಭಾಗದಲ್ಲಿ ತೋಡಲಾಗಿದೆ ... ವರ್ಷದಲ್ಲಿ ಈ ಕಾರ್ಯವು ಮುಗಿಯುವುದೆಂದು ತಿಳಿದುಬಂದಿದೆ

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

5—12—49ನೇ ಸೋಮವಾರದಿಂದ

ಶ್ರೀ ಕೃಷ್ಣಲೀಲಾ (ತೆಲುಗು)

ಪಾತ್ರ ಗಗ್ಗಯ್ಯ, ರಾಮತಿಲಕಂ, ಶ್ರೀರಂಜಿನಿ, ಕಾರುಪಲ್ಲಿ ರಾಜೇಶ್ವರ ರಾವ್ ಮುಂತಾದವರು

ರಾಜಕಮಲ್

ಮೈಸೂರು

3-12-49ರಿಂದ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳ

ಸೋನಾ - ಚಾಂದಿ

(ಹಿಂದಿ)

ಪಾತ್ರ—ಸುರೇಶ್, ಕಕ್ಕೂ

ಬೆಳಗಿನ ಆಟಗಳು

2-12-49ರಿಂದ 4 ದಿನಗಳು ಮಾತ್ರ

ಮಿರಾಂಡಾ MIRANDA

With Glynis Johns Googie Withers

ಶ್ರೀ ಗಾಯತ್ರೀ

ಪ್ರತಿ ದಿನ ತ ಆಟಗಳು

ಕಡೇ ದಿನ

ಸೀಕ್ರೆಟ್ ಲೈಫ್ ಆಫ್ ವಾಲ್ಟರ್ ಮಿಟ್ಟಿ

(SECR[illegible] LIFE OF WALTER MITTY

4-12-49ನೇ ... ದಿಂದ

TAP ROOTS

(ಟ್ಯಾಪ್ ರೂಟ್ಸ್)

(ವರ್ಣದ ಚಲನ ಚಿತ್ರ)

ಬೆಳಗಿನ ಆಟಗಳು

ಡಿಸೆಂಬರ್ 3 ಮಾತ್ರ

The Mark of Zorro

ದಿ ಮಾರ್ಕ್ ಆಫ್ ಜೋರೊ

ಪಾತ್ರ ಟೈರೋನ್ ಪವರ್

ರಸಿಕರಿಗೆ ಅಚ್ಚುಮೆಚ್ಚಾದುವು

ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ-ಹಾಗೂ, ಸುರುಚಿ.

ಮೈಸೂರು ರೇಷ್ಮೆ — ಸಮಾನವಿಲ್ಲ ... ಪ್ರಸಿದ್ಧಿಯಲ್ಲಿ ... ವಾದುದು

ಜಾರ್ಜೆಟ್, ಕ್ರೇಪ್,

ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು

ಮನ ಸೆಳೆವ ಮಾದರಿಗಳು

ಇಂದಿನ ಅಂದದ ರಂಗುಗಳು.

ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,

ಮೈಸೂರು.

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

... ಬೆಲೆ ... ಕೊಡಲಾಗುವುದು

"ಸಾಧ್ವೀ" ... ಮೈಸೂರು

ಮೈಸೂರು ನಗರ ಪೌರಸಭೆ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ

(ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ)

22—12—49 ರಿಂದ 29—12—49ರ ವರೆಗೆ

ಆರೋಗ್ಯ, ... ವಿವಿಧ ... ವ್ಯಾಯಾಮದ ಆಟಪಾಟಗಳು ಅನೇಕ ಮನರಂಜನೆಗಳು ... ಸುಮಾರು 1500 ರೂಪಾಯಿಗಳ ಬಹುಮಾನಗಳನ್ನು ಕೊಡಲು ಏರ್ಪಡಿಸಿದೆ ... 10-12-49ರ ಒಳಗೆ ... ಗಳನ್ನು ಸಲ್ಲಿಸಬೇಕು

... ವಿ. ನರಸಿಂಹಯ್ಯಂಗಾರ್, ಬಿ. ಎಸ್. ರಂಗರಾಜ್, ಕಾರ್ಯದರ್ಶಿಗಳು, ... ಪೌರಸಭೆ ಕಚೇರಿ, ಮೈಸೂರು

Edited printed and published by ... at the Sadhvi Press ...

ಜಿ॥ ನಂ. 192 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೪। ಭಾನುವಾರ ೪ ೧೨-೪೯ [ಸಂಚಿಕೆ ೨೦

ಆಗ್ನೇಯ ಏಷ್ಯ ರಕ್ಷಣೆಗೆ ಭಾರತದ ನಾಯಕತ್ವ

ಮದರಾಸಿನಲ್ಲಿ ಅಕ್ಕಿ ಬೆಲೆ ಇಳಿಸಲಾಯಿತು

ಧಾನ್ಯವನ್ನು ಕೊಳ್ಳುವ ಬೆಲೆಯನ್ನು ಇಳಿಸಿ, ಮಾರುವ ಬೆಲೆಯನ್ನೂ ಕಡಿಮೆ ಮಾಡಲು ಭಾರತ ಸರ್ಕಾರದವರು ಹಾಕಿರುವ ನೀತಿಗೆ ಅನುಗುಣವಾಗಿ ಮದರಾಸು ಸರ್ಕಾರದವರು ಇಂದಿನಿಂದ ರೂಪಾಯಿಗೆ ಒಂದು ಆಳಾಕು (ಆರೆ ಪಾವಿಗಿಂತ ಸ್ವಲ್ಪ ಹೆಚ್ಚು) ಅಕ್ಕಿ ಮಾರುವಂತೆ ಆಜ್ಞೆ ಮಾಡಿರುತ್ತಾರೆ

ನೆಹರೂರವರಿಗೆ ಕಪ್ಪು ಬಾವುಟ ತೋರಿದವನು ಮೈಸೂರಿನವನೇ ?

ಪಂಡಿತ ನೆಹರೂರವರು ಲಂಡನ್ನಿಗೆ ತೆರಳಿದ್ದಾಗ ಕಪ್ಪು ಬಾವುಟವನ್ನು ಹಿಡಿದವರ ಪೈಕಿ ಒಬ್ಬನು ಚಿಕ್ಕಮಗಳೂರಿನವನೆಂದೂ, ಅವನು ಹಲವು ದೇಶಗಳನ್ನು ಸುತ್ತಿ, ಮೈಸೂರು ನಗರಕ್ಕೆ ಬಂದು ಲಷ್ಕರ್ ಮೊಹಲ್ಲೆಯಲ್ಲಿದ್ದನೆಂದೂ ಒಂದು ವರದಿಯು ತಿಳಿಸಿರುತ್ತದೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಈ ವರ್ಷದ ಅಂತ್ಯದಲ್ಲಿ ಸೊಲ್ಲಾಪುರದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರನ್ನು ಒಮ್ಮತದಿಂದ ಆರಿಸಲಾಗಿದೆ.

ನೌಕರರು ಬಿಟ್ಟಿ ಪಾಸು ಕೇಳಕೂಡದು

ಸಿನಿಮಾ, ನಾಟಕ ಮುಂತಾದುವುಗಳಿಗೆ ಬಿಟ್ಟಿ ಪಾಸುಗಳನ್ನು ಕೇಳಿ ಗಿಟ್ಟಿಸಿಕೊಳ್ಳುವ ಅಧಿಕಾರಿಗಳ ಮೇಲೆ ಉಗ್ರ ಕ್ರಮ ಕೈಗೊಳ್ಳುವುದಾಗಿ ಬಿಹಾರ್ ಸರ್ಕಾರದವರು ಎಚ್ಚರಿಸಿರುತ್ತಾರೆ

ಕರ್ಣಾಟಕ ಏಕೀಕರಣಕ್ಕೆ ಶ್ರೀ ಅರವಿಂದರ ಆಶೀರ್ವಾದ

ಕಳೆದ ೧೫ನೇ ತಾ॥ ಮಾರ್ಕರ್ ಜಿ ... ದರ್ಶನಕ್ಕಾಗಿ ಪುದುಚೇರಿಯಲ್ಲಿ ... ತನ್ನ ಆಶ್ರಮದಲ್ಲಿ ೧೭೦೦ ಜನ ಭಕ್ತರಿಗೆ ದರ್ಶನವಿತ್ತಾಗ ಕರ್ಣಾಟಕ ಏಕೀಕರಣದ ವಿಚಾರಕ್ಕೆ ತಮ್ಮ ಆಶೀರ್ವಾದವನ್ನು ಅನುಗ್ರಹಿಸಿ ಭಾಷಾವಾರು ಪ್ರಾಂತರಚನೆಗೆ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದರೆಂದು ವರದಿಯಾಗಿದೆ

ಏಕೀಕರಣದ ಚಳುವಳಿ ಸರ್ದಾರರ ಕೈಯಲ್ಲಿ

ಕರ್ಣಾಟಕ ಏಕೀಕರಣದ ಬಗ್ಗೆ ... ಯಾವ ಚಳುವಳಿಯನ್ನೂ ಕೈಗೊಳ್ಳಬಾರದೆಂದೂ, ಈ ಪ್ರಶ್ನೆಯನ್ನು ತಾವೇ ತಮ್ಮ ಕೈಗೆ ತೆಗೆದುಕೊಂಡಿರುವುದಾಗಿಯೂ, ಅದನ್ನು ಸೂಕ್ತ ಕಾಲದಲ್ಲಿ ಬಗೆಹರಿಸುವುದಾಗಿಯೂ, ಈಗ ಎಲ್ಲೆಲ್ಲೂ ಶಾಂತ ವಾತಾವರಣವು ಬೇಕಾಗಿರುವುದೆಂದೂ ಸರ್ದಾರ್ ಪಟೇಲರು ಬೆಂಗಳೂರಿಗೆ ತಂತಿ ಕಳುಹಿಸಿರುವುದಾಗಿ ತಿಳಿದುಬಂದಿದೆ

ರಷ್ಯದಲ್ಲಿ ೩ ವಾರಕ್ಕೆ ೨ ಅಣು ಬಾಂಬು ತಯಾರಿ

ಪ್ರತಿ ಮೂರು ವಾರಗಳಲ್ಲಿ ಎರಡೆರಡು ಅಣು ಬಾಂಬುಗಳನ್ನು ಇನ್ನು ಮುಂದೆ ರಷ್ಯ ತಯಾರಿಸಬಲ್ಲದೆಂದು ಅಮೆರಿಕದ ... ಸ್ಟಾಲಿನ್ನರಿಗೆ ... ಗೊತ್ತಾಗಿದೆ

ರಾಜಾಜಿಯವರಿಂದ ಬಿರುದಿನ ನಿರಾಕರಣೆ

ಬಿರುದುಗಳು ಮಾನವನನ್ನು ಅಹಂಕಾರಕ್ಕೆ ಗುರಿಮಾಡುವುವು

ಪೂರಿಯ ಮುಕ್ತ ಮಂಟಪದ ಸಭೆ ... ಮಂಡಲದವರು ಗವರ್ನರ್ ಜನರಲ್ ರಾಜಗೋಪಾಲಾಚಾರಿಯವರಿಗೆ ಮೊನ್ನೆ ದಿನ "ಭಾರತ ಭಾಸ್ಕರ" ಎಂಬ ಬಿರುದನ್ನು ಕೊಡಲು ಬಯಸಿದಾಗ ಅವರು ಅದನ್ನು ವಿನಯಪೂರ್ವಕವಾಗಿ ನಿರಾಕರಿಸಿದರು. ಬಿರುದುಗಳನ್ನು ಕೊಡುವುದು ಸರ್ಕಾರದ ಕೆಲಸವೆಂದೂ, ಇತರರು ಅವನ್ನು ಕೊಡಬಾರದೆಂದೂ ಅವರು ಹೇಳಿದರು

ಬಿರುದುಗಳನ್ನು ಕೊಡುವ ... ನ್ನು ನಮ್ಮ ಸರ್ಕಾರವು ... ವಾಗಿ ತ್ಯಜಿಸಿರುತ್ತದೆ ... ಕೊಡುವ ಅಧಿಕಾರವು ಸರ್ಕಾರಕ್ಕೆ ಮಾತ್ರ ಇರುತ್ತದೆ. ಸರ್ಕಾರದವರೇ ಅವನ್ನು ಕೊಡದಿರುವಾಗ ಇತರರು ಕೊಡುವುದು ಹೇಗೆ ಸಾಧ್ಯ? ನಾವು ... ಸಾಧನೆಯಿಂದ ... ಬಿರುದುಗಳು ... ಜನರು ... ವುಗಳನ್ನು ಕೊಡುವ ... ನೀವು ನನ್ನನ್ನು ಭಾಸ್ಕರನೆಂದು ಕರೆದ ಮಾತ್ರಕ್ಕೆ ನಾನು ಸೂರ್ಯನಾಗಿಬಿಡುವೆನೆ? ... ಒಂದು ಅಕಸ್ಮಿಕ ... ಅತ್ಯಂತ ಉದ್ವೇಗ ... ನೀವು ... ನನಗೆ ... ಭಾರತ ಭಾಸ್ಕರ ... ನನಗೆ ... ನನ್ನನ್ನು ನೀವು ... ಅವಕಾಶವಾಗುವುದು ... ನನ್ನಂತಹ ... ನನಗೆ ಕೊಡುವಂತೆ ... ಮೇಲೆ ...

ಮಂತ್ರಿಗಳ ಸಂಬಳದಲ್ಲಿ ಖೋತಾ

ಬೆಂಗಳೂರು ೪

ಭಾರತ ಸರ್ಕಾರದ ಸೂಚನೆಯ ಪ್ರಕಾರ ಪ್ರಾಂತಗಳ ಮಂತ್ರಿಗಳು ತಮ್ಮ ಸಂಬಳದಲ್ಲಿ ಶೇ॥ ಹನ್ನೆರಡರವರೆಗೂ ಖೋತಾ ಮಾಡಿಕೊಳ್ಳಲು ... ಮುಂದೆ ಬಂದಿರುವಂತೆ ನಮ್ಮ ಸಂಸ್ಥಾನದ ಮಂತ್ರಿಗಳೂ ಸಹ ಖೋತಾ ಮಾಡಿಕೊಳ್ಳುವ ವಿಚಾರವನ್ನು ಪರಿಶೀಲಿಸುತ್ತಿರುವರೆಂದು ತಿಳಿದುಬಂದಿದೆ

ಪ್ರಭುಗಳ ಭೇಟಿಗೆ ಮುಖ್ಯಮಂತ್ರಿಗಳ ಅಪ್ಪಣೆ ಬೇಕು

ನಾವು ಜನರು, ಮಂತ್ರಿಗಳು ... ಮುಂದೆ ಶ್ರೀಮನ್ಮಹಾರಾಜರನ್ನು ಭೇಟಿಮಾಡಬೇಕಾದರೆ ಮುಖ್ಯಮಂತ್ರಿಗಳ ಅಪ್ಪಣೆ ಪಡೆಯಬೇಕೆಂದು ... ತಿಳಿದುಬಂದಿದೆ

ಸುತ್ತೂರು ಮಠಕ್ಕೆ ಸರ್ಕಾರದ ಸಹಾಯ

ಸುತ್ತೂರು ವೀರಸಿಂಹಾಸನ ಮಠಕ್ಕೆ ಸರ್ಕಾರದವರು ಇದುವರೆಗೆ ಕೊಡುತ್ತಿದ್ದ ... ಇನ್ನೂರು ರೂಪಾಯಿ ... ಸಹಾಯಕ್ಕೆ ... ಹೆಚ್ಚಿಸಲಾಗುವುದಾಗಿ ತಿಳಿದುಬಂದಿದೆ

ಹೊಸ ಪ್ರಾಂತಗಳ ರಚನೆಗೆ ಸಾವಕಾಶ

ಸದ್ಯದಲ್ಲಿಯೇ ... ಪ್ರಾಂತವನ್ನು ನಿರ್ಮಾಣ ಮಾಡಲಾಗುವುದೆ? ... ರಚನೆಯಾದ ಮೇಲೆ ... ದಕ್ಷಿಣಕ್ಕೆ ... ನೋಡಿಕೊಂಡು ಇತರ ಪ್ರಾಂತಗಳ ರಚನೆಯ ವಿಚಾರಕ್ಕೆ ... ಬರುವುದೆಂದು ತಿಳಿದುಬಂದಿದೆ

... ಅನಂದ ಮತ್ತು ... ವನ್ನು ... ಪರಿಕಲ್ಪನೆ ... ದಿವಸ ... ಹೊಸ ... ಪ್ರಸ್ತಾಪ ... ವಿರೋಧ ...

ಆಗ್ನೇಯ ಏಷ್ಯಾ ರಾಷ್ಟ್ರಗಳ ರಕ್ಷಣೆ

ಬರುವ ಫೆಬ್ರವರಿ ತಿಂಗಳಿನಲ್ಲಿ ಆಗ್ನೇಯ ಏಷ್ಯಾ ರಾಷ್ಟ್ರಗಳು ಸಭೆ ಸೇರಿ, ತಮ್ಮ ಪ್ರಜಾ ಪ್ರಭುತ್ವ ಮತ್ತು ಸಾರ್ವಭೌಮತ್ವದ ರಕ್ಷಣೆ ಬಗ್ಗೆ ಸಮಾಲೋಚನೆ ನಡೆಸುವವೆಂದೂ, ಆ ರಾಷ್ಟ್ರಗಳ ನಾಯಕತ್ವವು ಭಾರತ ಖಂಡಕ್ಕೇ ಕೊಡಲ್ಪಡುವುದೆಂದೂ ತಿಳಿದುಬಂದಿದೆ

ರಾಜೇಂದ್ರ ಪ್ರಸಾದರ ವರ್ಧಂತಿ

ಭಾರತ ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರವರ ೬೫ನೇ ವರ್ಷದ ವರ್ಧಂತಿಯು ನಿನ್ನೆ ದೇಶದಲ್ಲೆಲ್ಲಾ ಆಚರಿಸಲ್ಪಟ್ಟಿತು. ರಾಷ್ಟ್ರನಾಯಕರು ಅವರಿಗೆ ಶುಭಾಶಯಗಳನ್ನು ಸಲ್ಲಿಸಿದರು.

ಸರಕಾರಕ್ಕೆ ಏಕೀಕರಣದ ಬಗ್ಗೆ ಪ್ರಾರ್ಥನೆ

ಕರ್ನಾಟಕ ಏಕೀಕರಣದ ಸಂಬಂಧವಾಗಿ ಕೂಡಲೇ ಎಲ್ಲ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಅರಸೀಕೆರೆಯಲ್ಲಿ ಸೇರಿದ್ದ ಸರ್ವ ಪಕ್ಷ ಸಮ್ಮೇಳನದ ಕ್ರಿಯಾಸಮಿತಿಯು ಮೈಸೂರು ಸರಕಾರಕ್ಕೂ, ಮೈಸೂರು ಕಾಂಗ್ರೆಸ್ಸಿಗೂ ತಿಳಿಸಿದೆಯೆಂದು ಗೊತ್ತಾಗಿದೆ. ಇದೇ ೩೦ನೇ ತಾ॥ ನೊಳಗೆ ... ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ, ಆ ಉದ್ದೇಶದ ಸಾಧನೆಗಾಗಿ ಕ್ರಿಯಾ ಸಮಿತಿಯು ಸೂಕ್ತ ಮಾರ್ಗವನ್ನು ಕೈಗೊಳ್ಳುವುದಾಗಿ ತಿಳಿಯಪಡಿಸುವುದೆಂದೂ ವರದಿಯಾಗಿದೆ

ಕಳ್ಳನಿಗೆ ಕಲಿಸ ಬೇಕಂತೆ

ತನಗೆ ಕಳ್ಳತನ ಮಾಡುವುದು ಬಿಟ್ಟು ಬೇರೆ ಏನೂ ಬರುವುದಿಲ್ಲವೆಂದೂ ಅದರಲ್ಲೇ ನಿಪುಣನಾಗಿರುವುದಾಗಿಯೂ ... ದ ೧೫ ... ಶ್ರೀ ... ದಾಗಿಯೂ ... ಯ ಒಬ್ಬ ... ನನ್ನು ... ನಗೆ ಯಾವುದಾದರೂ ಕೆಲಸ ಕೊಡಿಸುವಂತೆ ... ಅರ್ಜಿ ... ಹಾಕಿಕೊಂಡಿದ್ದಾನೆ ... ಮುಂದೆ ತನ್ನ ಕಸುಬನ್ನು ಬಿಟ್ಟುಬಿಡುವುದಾಗಿಯೂ ... ಸಂಸಾರ ಮಾಡಿಕೊಂಡಿರುವುದಾಗಿ ... ಜೀವನಕ್ಕೆ ... ತಿಳಿಸಿದ್ದಾನೆ ... ಅರ್ಜಿಯನ್ನು ಪರಿಶೀಲಿಸಿ ಕೆಲಸವನ್ನು ಕೊಡಲು ... ನಿರ್ಧರಿಸಿರುತ್ತಾರೆ

ಮೈಸೂರಿಗೆ ಪಂಜಾಬಿನಿಂದ ದರುಳಿ

ಪೂರ್ವ ಪಂಜಾಬ್ ... ನಿಯನ್ನು ಗೆ ಸೇರಿದ ... ದ ಬಂಗಾಳ ಮತ್ತು ಮೈಸೂರು ಸಂಸ್ಥಾನಗಳಿಗೆ ೪೯ ಸಾವಿರ ಮಣ ... ನ್ನು ರಫ್ತು ಮಾಡಲಾಗುವುದೆಂದು ತಿಳಿದುಬಂದಿದೆ

ಮಧ್ಯ ಪ್ರಾಂತದಲ್ಲಿ ೫ ನಾರಿಯರ ... ನವರ ಪ್ರವಾಸ

... ಶ್ರೀ ... ತಿಂಗಳು ... ಪ್ರಾಂತ್ಯಕ್ಕೆ ... ಇತರ ...

ವಾರ ಭವಿಷ್ಯ

[illegible]

ಮೇಷ—ಈ ವಾರದಲ್ಲಿ ನಿಮ್ಮ ಆಪೀಸ ಗೃಹ ಚಟುವಟಿಕೆಗಳು ... ನಿಮ್ಮನ್ನು ... ಗಳು ಒದಗಬಹುದು. ನಿಮ್ಮ ... ದಲ್ಲಿ ಧನಿಕರ ನೆರವು ದೊರೆಯುವುದು. ವಿವಾಹಗಳು ಜರುಗುವುವು. ... ಧನಲಾಭ, ಚಿತ್ತದ ಭೀತಿ

ವೃಷಭ - ಎಲ್ಲ ವ್ಯವಹಾರಗಳಲ್ಲೂ ಬಹಳ ಎಚ್ಚರಿಕೆಯಿಂದ ವರ್ತಿಸಬೇಕು. ನಿಮ್ಮ ಆರೋಗ್ಯದ ಬಗ್ಗೆ ಮತ್ತು ವ್ಯಾಪಾರ ವ್ಯವಹಾರಗಳಲ್ಲಿ ಹುಷಾರಾಗಿರಬೇಕು. ಅಧಿಕ ವಿಚಾರಗಳು ... ತಾ|| ... ಚಿತ್ತ ಚಿಂತೆ.

ಮಿಥುನ—ನಿಮ್ಮ ಆರೋಗ್ಯವು ಈ ವಾರದಲ್ಲಿ ತೃಪ್ತಿಕರವಾಗಿರುವುದು. ಅಧಿಕಾರದಲ್ಲಿ ಬಡ್ತಿ. ಮನೆಯಲ್ಲಿ ವಿವಾಹ ಧರ್ಮ ಕಾರ್ಯಗಳು ಜರುಗುವುವು. ಸರ್ಕಾರಿ ವ್ಯವಹಾರಗಳಲ್ಲಿ ಹೆಚ್ಚಿನ ಸನ್ಮಾನ ದೊರೆಯುವುದು ತಾ|| ... ಅತಿಥಿ ಸತ್ಕಾರ

ಕಟಕ—ನಿಮ್ಮ ವಿರೋಧಿಗಳ ಕುಟಿಲ ಕಾರ್ಯಗಳು ಫಲಿಸದೆ ಅವರು ಪರಾಜಿತರಾಗುವರು. ಆರೋಗ್ಯವು ಚೆನ್ನಾಗಿರುವುದು. ವ್ಯಾಪಾರ, ವ್ಯವಹಾರ ಮತ್ತು ಧರ್ಮ ಕಾರ್ಯಗಳು ಸಾಂಗವಾಗಿ ನಡೆಯುವುವು. ತಾ|| ... ಅತಿಥಿ ಸತ್ಕಾರ ಮತ್ತು ಗೊಂದಲ

ಸಿಂಹ—ಸಧ್ಯದ ಪರಿಸ್ಥಿತಿಯು ನಿಮಗೆ ಅಷ್ಟು ಅನುಕೂಲವಾಗಿಲ್ಲ. ಅದ್ದರಿಂದ ಎಚ್ಚರಿಕೆಯಿಂದಿರಬೇಕು. ಆರೋಗ್ಯವು ನೆಟ್ಟಗಿರದು. ಪ್ರವಾಸ, ಲಾಟರಿ ಮೊದಲಾದ ವ್ಯವಹಾರಗಳಿಂದ ಲಾಭವಿಲ್ಲ. ತಾ|| ... ಮಿತ್ರ ಸಹಾಯ, ಮನಶ್ಯಾಂತಿ

ಕನ್ಯಾ—ಈ ವಾರ ನೀವು ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾಗುವುದು. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ವೆಚ್ಚದಲ್ಲೂ ಮಿತವ್ಯಯದಿಂದ ಇರಬೇಕು. ತಾ|| ... ಮಹತ್ವ ಪತ್ರಾಗಮನ

ತುಲಾ—ನೀವು ಈ ವಾರದಲ್ಲಿ ಸಜ್ಜನ ಸೇವೆ ಮತ್ತು ಮಂಗಳ ಕಾರ್ಯಗಳನ್ನು ನೆರವೇರಿಸುವಿರಿ. ಅಧಿಕಾರದಲ್ಲಿ ಬಡ್ತಿ ದೊರೆಯುವುದು. ಪ್ರವಾಸದ ಯೋಗವು ಉಂಟು. ಆರೋಗ್ಯವೂ ನೆಟ್ಟಗಿರುವುದು. ತಾ|| ... ವಿಶೇಷ ಖರ್ಚು

ವೃಶ್ಚಿಕ—ನಿಮ್ಮ ಎದುರಾಳಿಗಳನ್ನು ನೀವು ಧೈರ್ಯದಿಂದ ಎದುರಿಸುವಿರಿ. ಆರೋಗ್ಯ ಮತ್ತು ಮಾನಸಿಕ ಸ್ಥಿತಿಯು ತೃಪ್ತಿಕರವಾಗಿರುವುದು. ಪ್ರವಾಸ ಸಂಭವ. ತಾ|| ... ಧನಲಾಭ, ಮಿತ್ರಭೇಟಿ

ಧನು—ನೀವು ಕೈಗೊಂಡ ಎಲ್ಲಾ ಕಾರ್ಯದಲ್ಲೂ ಜಯ. ಕೋರ್ಟು ವ್ಯವಹಾರಗಳಲ್ಲಿ ಯಶಸ್ಸು. ಗೃಹಕೃತ್ಯದಲ್ಲಿ ತೃಪ್ತಿ. ತಾ|| ... ಪ್ರವಾಸ, ಮಿತ್ರಭೇಟಿ

ಮಕರ—ಈ ವಾರದಲ್ಲಿ ನೀವು ಬಹಳ ಹುಷಾರು ತನದಿಂದ ವರ್ತಿಸಬೇಕು. ನಿಮ್ಮ ಪರಿಸ್ಥಿತಿಯು ಕೆಡಗೆಟ್ಟು ಅನಾರೋ...

ವಿಶ್ವವಿದ್ಯಾನಿಲಯ ... ವಿದ್ಯಾರ್ಥಿಗಳ ವರ್ತನೆ

... ವಿದ್ಯಾರ್ಥಿಗಳು ... ವಿಶ್ವವಿದ್ಯಾನಿಲಯಗಳಲ್ಲಿ ... ಪರಿಸ್ಥಿತಿ ... ವರದಿಯಾಗಿದೆ

... ಸ್ತ್ರೀಗಾಗಿ ... ತಿದ್ದುಪಡಿ

... ಕೇಂದ್ರ ಶಾಸನ ಸಭೆಯಲ್ಲಿ ... ಬಿಲ್ಲನ್ನು ... ಮಂಡಿಸಲಾಗಿದೆ ... ಅಂಗೀಕೃತವಾಯಿತು ... ಲಕ್ಷ ... ಈಗ ಸಿಕ್ಕುವುದಿದೆ

ಗೃಹದಲ್ಲಿ ... ತಾ|| ... ಕಲಹ, ಚಿತ್ತ ಭಯ.

ಕುಂಭ—ನೀವು ಕೈಗೊಳ್ಳುವ ಎಲ್ಲ ಕಾರ್ಯದಲ್ಲಿ ಶತ್ರುಗಳ ಕೈವಾಡವು ಪ್ರಬಲವಾಗಿರುವುದು. ಗೃಹ ಕಲಹ. ವ್ಯಾಪಾರ ವ್ಯವಹಾರಗಳಲ್ಲಿ ಅತೃಪ್ತಿ. ತಾ|| ... ಖರ್ಚು, ಚಿಂತೆ.

ಮೀನ—ಆರೋಗ್ಯವು ತೃಪ್ತಿಕರವಾಗಿರುವುದು. ಇತರ ವ್ಯವಹಾರಗಳ ಬಗ್ಗೆ ಎಚ್ಚರದಿಂದಿರಬೇಕು. ಮನೆಯಲ್ಲಿ ವಿವಾಹ ಕಾರ್ಯಗಳು ಜರುಗುವುವು. ತಾ|| ... ಪ್ರವಾಸ, ಧನಲಾಭ

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಒಂದು ಬೇಲು ಬಿಕರಿಗೆ ದೊರೆಯುತ್ತದೆ

ಕೂಡಲೇ ವಿಚಾರಿಸಿರಿ:-

"ಸಾಧ್ವಿ" ಆಫೀಸು, ಮೈಸೂರು.

ಮಂತ್ರಿಗಳಿಗೆ ಮಾತ್ರವೇ ಪೋರ್ಟ್ ಫೋಲಿಯೋಗಳಲ್ಲ

ಕೇವಲ ಮಂತ್ರಿಗಳಿಗೆ ಮಾತ್ರ ಪೋರ್ಟ್ ಫೋಲಿಯೋಗಳನ್ನು ಕೊಡಲಾಗಿದೆಯೆಂದು ತಿಳಿಯಬಾರದು. ನನ್ನಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಪೋರ್ಟ್ ಫೋಲಿಯೋಗಳನ್ನು ಪರಮಾತ್ಮನು ಕೊಟ್ಟಿದ್ದಾನೆ. ಒಬ್ಬ ಮಂತ್ರಿಯು ಇನ್ನೊಬ್ಬನ ಕೆಲಸವನ್ನು ಮಾಡಲು ತೊಡಗಿದರೆ ಎಲ್ಲವೂ ಕೆಟ್ಟು ಹೋಗುವುದು. ಜನ್ಮ ಅಥವಾ ಸೌಕರ್ಯ ಅಥವಾ ... ಯಾವುದರಿಂದ ನಮಗೆ ಒಂದಿರುವ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಿ ಅದನ್ನು ಶ್ರೀ ಪರಮಾತ್ಮನಿಗೆ ಸಮರ್ಪಿಸೋಣ—ಎಂದು ಗೌರ್ನರ್ ಜನರಲ್ ರಾಜಾಜಿಯವರು ಪೂನಾದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಸ್ತ್ರೀಯರಿಗೆ ಸರ್ಕಾರಿ ನೌಕರಿ

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಅರ್ಹತೆಯುಳ್ಳ ಸ್ತ್ರೀಯರಿಗೆ ಪುರುಷರಂತೆಯೇ ಸಮಾನಾವಕಾಶವಿರಬೇಕೆಂಬ ಆಜ್ಞೆಯನ್ನು ಒರಿಸ್ಸಾ ಸರ್ಕಾರದವರು ಹೊರಡಿಸಿರುತ್ತಾರೆ.

ಮಕ್ಕಳಿಂದ ಪುಸ್ತಕಗಳ ಪ್ರದರ್ಶನ

ಈ ತಿಂಗಳು ಮೂರನೇ ವಾರದಲ್ಲಿ ಮಕ್ಕಳ ಪುಸ್ತಕ ಪ್ರದರ್ಶನವೊಂದನ್ನು ಕಾಸಗಿ ... ಹಳ್ಳಿಯಲ್ಲಿ ನಡೆಸಲು ಮಕ್ಕಳ ಪುಸ್ತಕ ಸಮಿತಿಯವರು ಏರ್ಪಡಿಸಿರುತ್ತಾರೆ. ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರಕಟವಾದ ಮಕ್ಕಳ ಬೆಳವಣಿಗೆಗೆ ಸಂಬಂಧಪಟ್ಟ ಪುಸ್ತಕಗಳನ್ನು ಪ್ರದರ್ಶಿಸಲಾಗುವುದು.

ಹೋಟೆಲು ಮಾಲೀಕನಿಗೆ ಶಿಕ್ಷೆ

ಮಂಡಿಮೊಹಲ್ಲಾ ... ಹೋಟೆಲು ಮಾಲೀಕನಾದ ... ಬಾಕಿ ... ನೇ ತಾ|| ಸಲಾವು ಮಾಡಿದುದ್ದಕ್ಕಾಗಿ ಮೊದಲನೇ ಮ್ಯಾಜಿಸ್ಟ್ರೇಟರು ಆತನಿಗೆ ೫೦ ರೂ ಜುಲ್ಮಾನೆ ತಪ್ಪಿದರೆ ೬ ದಿನಗಳ ಶಿಕ್ಷೆ ವಿಧಿಸಿರುತ್ತಾರೆ.

|| ಶ್ರೀ ||

ಗಣೇಶಾ ಟಾಕೀಸ್

3-11-49ರಿಂದ ದಿನವಹಿ 3 ಆಟಗಳು

ಕೊಲಂಬಿಯಾರವರ

ಪೂರ್ಣ ಸೀರಿಯಲ್

ಫ್ಯಾಂಟಂ

PHANTOM

ಪಾತ್ರ:- ... ಟಾಂ ಟೈಲರ್

ರಾಜಕಮಲ್

ಮೈಸೂರು

3-12-49ರಿಂದ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಸೋನಾ - ಚಾಂದಿ

(ಹಿಂದಿ)

ಪಾತ್ರ:- ಸುರೇಶ್, ಕಕ್ಕೂ

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

5—12—49ನೇ ಸೋಮವಾರದಿಂದ

ಶ್ರೀ ಕೃಷ್ಣ ಲೀಲಾ

(ತೆಲುಗು)

ಪಾತ್ರ: ... ಗಗ್ಗಯ್ಯ, ರಾಮತಿಲಕಂ, ... ನಾಗಯ್ಯ ...

— ಜೋಕರ್ ...

ಯುದ್ಧ ಭೀತಿಯಿಂದ ಜಗತ್ತಿನ ಪ್ರಗತಿಗೆ ಅಡ್ಡಿ

ಯುದ್ಧ ಮತ್ತು ಅದಕ್ಕಿಂತಲೂ ಹಾನಿಕರವಾದ ಯುದ್ಧದ ಭೀತಿ ಇವೆರಡು ಪ್ರಪಂಚದ ಅಭ್ಯುದಯಕ್ಕೆ ಅಡಚಣೆಗಳಾಗಿರುತ್ತವೆ. ಭಾರತದ ಸಂಸ್ಕೃತಿ ಮತ್ತು ಆದರ್ಶಗಳು ಪ್ರೇಮ ಮತ್ತು ಶಾಂತಿಯಿಂದಲೇ ಪ್ರೇರಿತಗಳಾಗಿವೆ. ಪ್ರಪಂಚದಲ್ಲಿರುವ ಶಾಂತಿಪ್ರಿಯರಿಗೂ ಸಂಗ್ರಾಮಪ್ರೇಮಿಗಳಿಗೂ ಭಾರತದಿಂದ ಒಂದು ಪವಿತ್ರವಾದ ಯಾತ್ರಾಸ್ಥಳವಾಗಿರುತ್ತದೆ. ... ನಾಯಕರನ್ನು ಮಾಡಿರುತ್ತದೆ ಎಂದು ಗೌರ್ನರ್ ಜನರಲ್ ರಾಜಾಜಿಯವರು ಶಾಂತಿನಿಕೇತನದಲ್ಲಿ ನಡೆದ ... ಶಾಂತಿ ಸಾಧಕರ ಸಮ್ಮೇಳನಕ್ಕೆ ಕಳುಹಿಸಿರುವ ಸಂದೇಶದಲ್ಲಿ ತಿಳಿಸಿರುತ್ತಾರೆ.

ಮದರಾಸಿನಲ್ಲಿ ೧೪೭ ಅಡಿ ಎತ್ತರದ ಗಾಂಧಿ ಸ್ತೂಪ

ಮದರಾಸಿನ ತಿರುವಲ್ಲಿಕ್ಕೇಣಿ ಬಳಿ ಸಮುದ್ರತೀರದಲ್ಲಿ ಮಹಾತ್ಮಾ ಗಾಂಧಿಯ ಜ್ಞಾಪಕಾರ್ಥವಾಗಿ ೧೪೭ ಅಡಿ ಎತ್ತರದ ಸ್ತೂಪವನ್ನು ಕಟ್ಟಲು ಏರ್ಪಾಡುಗಳಾಗುತ್ತಿವೆ. ಅದರಲ್ಲಿ ಧ್ಯಾನಾರೂಢರಾಗಿರುವ ಮಹಾತ್ಮರ ಪ್ರತಿಮೆಯನ್ನೂ ಅವರ ಬೋಧನೆಗಳನ್ನು ಕೆತ್ತಲಾಗುತ್ತದೆ.

ಬುದ್ಧಿ ಶಕ್ತಿಗಿಂತಲೂ ಒಳ್ಳೆಯ ನಡತೆಯೇ ಮುಖ್ಯ

ಇಂದು ದೇಶಕ್ಕೆ ಬೇಕಾಗಿರುವುದು ಕೇವಲ ಬುದ್ಧಿ ಶಕ್ತಿಯು ಮಾತ್ರವಲ್ಲ. ಒಳ್ಳೆಯ ನಡತೆಯೂ ಮುಖ್ಯವಾಗಿ ಬೇಕು. ಶೀಲವಿಲ್ಲದಿದ್ದರೆ ಎಂತಹ ರಾಷ್ಟ್ರವಾದರೂ ಅಧಃಪತನವನ್ನು ಹೊಂದುವುದು ಎಂದು ಗೌರ್ನರ್ ಜನರಲ್ ರಾಜಾಜಿಯವರು ಮೊನ್ನೆ ಕಲಕತ್ತೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಕೈಲಾಸಂ ದಿನಾಚರಣೆ

ವಾಣೀವಿಲಾಸ ಮೊಹಲ್ಲಾ ಜಯಪ್ರಕಾಶ ಮಂದಿರದಲ್ಲಿರುವ ತಿಲಕ್ ಸಂಘದವರು ಈ ಸಂಜೆ ೬ ಘಂಟೆಗೆ ಕೈಲಾಸಂ ದಿನಾಚರಣೆಯನ್ನು ಶ್ರೀ ಹೆಚ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಶ್ರೀ ಎ. ... ನಾರಾಯಣರವರು ಭಾಷಣ ಮಾಡುವರು. ನಾಟಕ ಪ್ರದರ್ಶನವನ್ನು ಸಹಾ ಏರ್ಪಡಿಸಲಾಗಿದೆ.

ನೆ ಹ ರು ಜ ಯಂ ತಿ

ಭಗಿನೀ ಸೇವಾ ಸಮಾಜದವರು ಮೊನ್ನೆ ದಿನ ನೆಹರೂ ಜಯಂತಿಯನ್ನು ನೆರವೇರಿಸಿದರು. ಪೌರಸಭಾ ಕಮೀಷನರಾದ ಶ್ರೀ ಸಿ. ನರಸಿಂಹದ ... ಯವರ ಪತ್ನಿಯವರು ಅಧ್ಯಕ್ಷಸ್ಥಾನವನ್ನು ವಹಿಸಿ ನೆಹರೂರವರ ಜೀವನ ಚರಿತ್ರೆಯನ್ನು ವಿವರಿಸಿ ಅವರಿಗೆ ಭಗವಂತನು ದೀರ್ಘಾಯುರಾರೋಗ್ಯಗಳನ್ನು ಕರುಣಿಸಲೆಂದು ಹಾರೈಸಿದರು.

ಮಕ್ಕಳ ಅವರ್‌ಕಾಂಬಿಗ ...

... ಮೈಸೂರು

Edited, printed and published by A. R. Nagarajan, at Sadhvi ... Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮ | ಸೋಮವಾರ ೫-೧೧-೪೯ | ಸಂಚಿಕೆ ೧೧೦೬

ಶಾಸನ ಸಭೆಗಳಿಗೆ ಕನ್ನಡಿಗರ ರಾಜೀನಾಮೆ

ಹೈದರಾಬಾದಿನಲ್ಲಿ ೮೭ ಲಕ್ಷ ಓಟರುಗಳು

ವಯಸ್ಕರ ಮತದಾನ ಪದ್ಧತಿಯಂತೆ ಸಿದ್ಧವಾಗಿರುವ ಹೈದರಾಬಾದಿನ ಓಟರುಗಳ ಪಟ್ಟಿಯಲ್ಲಿ ನೈಜಾಮರೂ ಸೇರಿ ೮೭ ಲಕ್ಷ ಜನರ ಹೆಸರುಗಳಿರುವುದಾಗಿ ತಿಳಿದುಬಂದಿದೆ. ಬಂಧನದಲ್ಲಿರುವ ಅಕ್ಷನ ಅಧಿಕಾರಿಗಳ ಹೆಸರುಗಳೂ ಸಹ ಸೇರಿಸಲ್ಪಟ್ಟಿವೆ.

ಪಾಕಿಸ್ತಾನ ನಾಣ್ಯದ ಬೆಲೆ ಇಳಿತಾಯ

ಶೀಘ್ರದಲ್ಲಿಯೇ ಪಾಕಿಸ್ತಾನದ ನಾಣ್ಯದ ಬೆಲೆಯನ್ನು ಇಳಿಸಲಾಗುವುದೆಂದು ಬೊಂಬಾಯಿಯ ಸುದ್ದಿಯೊಂದು ತಿಳಿಸಿದೆ. ಕಳೆದ ವಾರ ಹಲವು ಪಾಕೀಸ್ತಾನೀ ಬಂಡವಾಳಗಾರರು ಬಹುವಾಗಿ ಬ್ರಿಟಿಷ್ ನಾಣ್ಯವನ್ನು ಕೊಂಡರೆಂದು ಹೇಳಲಾಗಿದೆ. ಇವರುಗಳೇ ಪಾಕಿಸ್ತಾನದ ಹಣಕಾಸಿನ ನೀತಿಯ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಿರುವರೆಂದು ತಿಳಿಸಲಾಗಿದೆ.

ಅಮೂಲ್ಯ ಗಿಡ ಮೂಲಿಕೆಯ ಪತ್ತೆ

ಬ್ಲ್ಯಾಕ್ ವಾಟರ್ ಫೀವರ್ (ಸಮುದ್ರ ತೀರದ ಜ್ವರ) ಎಂಬ ರೋಗಕ್ಕೆ ಸಿದ್ಧೌಷಧವನ್ನು ತಯಾರಿಸಬಲ್ಲ ಅಮೂಲ್ಯ ಗಿಡ ಮೂಲಿಕೆಯೊಂದು ಮದರಾಸು ಪ್ರಾಂತ್ಯದಲ್ಲಿ ಸಿಕ್ಕಿದೆ. ಈ ಮೂಲಿಕೆಯು ಹಿಮಾಲಯ ಮುಂತಾದ ಪ್ರದೇಶಗಳಲ್ಲಿ ಮಾತ್ರ ದೊರಕುತ್ತಿತ್ತೆಂದು ಹೇಳಲಾಗಿದೆ.

ಬ್ರಿಟನ್ನಿನಲ್ಲಿ ಹಡಿನ ಹಾಲಿನ ಬಳಕೆ

ಬ್ರಿಟನ್ನಿನಲ್ಲಿ ಹಾಲಿನ ಅಭಾವವು ಹೆಚ್ಚುಗುವುದರಿಂದಲೂ ಮತ್ತು ಕ್ಷಯ ರೋಗವೂ ಹರಡುತ್ತಿರುವುದರಿಂದಲೂ ಅವುಗಳ ನಿವಾರಣೆಗಾಗಿ ಆಡನ್ನು ಸಾಕಿ ಅದರ ಹಾಲನ್ನು ಹೆಚ್ಚಾಗಿ ಬಳಸುವುದರ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಆಡಿನ ಹಾಲಿನಲ್ಲಿ ಕ್ಷಯರೋಗದ ಕ್ರಿಮಿಗಳಿರುವುದಿಲ್ಲವೆಂದೂ ಮತ್ತು ಅದು ಒಳ್ಳೆಯ ಪೌಷ್ಟಿಕಾರಿಯೆಂದೂ ಹೇಳಲಾಗಿದೆ.

ಸುವಾಸನೆಯಿಂದ ಕೂಡಿದ ಕೃತಕ ಪುಷ್ಪಗಳು

ಸಮುದ್ರದಲ್ಲಿರುವ ಕಳೆಗಳಿಂದ ಸ್ವಾಭಾವ ಪಸ್ಯಪಾಡ ವಾಸನೆಗಳಿಂದ ಕೂಡಿದ ಪುಷ್ಪಗಳನ್ನು ಬ್ರಿಟನ್ನಿನ ಕಾರ್ಖಾನೆಯೊಂದರಲ್ಲಿ ತಯಾರಿಸಲಾಗುತ್ತಿದೆಯೆಂದು ವರದಿಯಾಗಿದೆ. ಈ ಕ್ರಮದಲ್ಲಿ ಈಗಾಗಲೇ ಸುಗಂಧರಾಜ ಪುಷ್ಪವನ್ನು ತಯಾರಿಸಿ ಮಾರಲಾಗುತ್ತಿದೆಯೆಂದು ಹೇಳಲಾಗಿದೆ.

ಶ್ರೀರಾಮಾ ಲೀಗ್

ರಾಜಧಾನಿಯ ಶ್ರೀರಾಮಾ ಲೀಗಿನ ೩ ಸ್ವಪ್ತನೆಯ ವಾರ್ಷಿಕೋತ್ಸವವು ಮೊನ್ನೆ ದಿನ ಪುರಭವನದಲ್ಲಿ ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರು ಡಾ॥ ಎ. ಎಂ. ನಟೇಶರವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿವಿಧ ವೇಷಗಳ ಪ್ರದರ್ಶನ, ನೃತ್ಯ, ನಾಟಕ, ಸಂಭಾಷಣೆ ಮುಂತಾದುವುಗಳು ನಡೆದುವು. ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ ಸಂಘದ ಕೆಲಸ ಕಾರ್ಯಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿದರು. ಉತ್ತಮವಾದ ಒಂದು ರಂಗಮಂಟಪದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಕಾಲೇಜಿನ ಪ್ರಿನ್ಸಿಪಾಲರನ್ನು ಕೂಡಿಹಾಕಿದ್ದರು

ಕಲ್ಕತ್ತದ ಅಶುತೋಷ್ ಕಾಲೇಜಿನ ಕಾಮರ್ಸ್ ಶಾಖಾ ವಿದ್ಯಾರ್ಥಿಗಳು ಕಳೆದ ಎರಡು ವಾರಗಳಿಂದ ನಡೆಸುತ್ತಿರುವ ಮುಷ್ಕರದ ಸಹಾನುಭೂತಿಗಾಗಿ ನಗರದ ಅನೇಕ ಕಾಲೇಜುಗಳ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರ ಹೂಡಿದ್ದರು. ಉತ್ತರ ಕಲ್ಕತ್ತೆಯ ಕಾಲೇಜಿನ ಪ್ರಿನ್ಸಿಪಾಲರು ಮತ್ತು ಕೆಲವು ಅಧ್ಯಾಪಕರುಗಳನ್ನು ಮುಷ್ಕರಗಾರರು ಒಳಗೆ [illegible] ಕೆಲವು ಗಂಟೆಕಾಲ ಕೂಡಿಹಾಕಿದ್ದರೆಂದೂ, ಅನಂತರ ಬಿಡುಗಡೆ ಮಾಡಲಾಯಿತೆಂದೂ ವರದಿಯಾಗಿದೆ.

ಶಿಸ್ತನ್ನು ಪಾಲಿಸದಿದ್ದಲ್ಲಿ ಕಾಲೇಜುಗಳನ್ನೇ ಮುಚ್ಚಬೇಕು

ಮದರಾಸಿನ ಪ್ರಧಾನಿ ಶ್ರೀ ಪಿ. ಎಸ್. ಕುಮಾರಸ್ವಾಮಿರಾಜಾರವರು ಅಣ್ಣಾಮಲೈ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ಕಾಲೇಜುಗಳಲ್ಲಿ ಶಿಸ್ತನ್ನು ಪಾಲಿಸಬೇಕಾದುದು ಅತ್ಯಗತ್ಯವೆಂದೂ, ಯಾವ ವಿದ್ಯಾಸಂಸ್ಥೆಯಲ್ಲಿ ಅದನ್ನು ಜಾರಿಗೆ ತರಲು ಅಸಾಧ್ಯವಾಗುವುದೋ ಅಂತಹ ಸಂಸ್ಥೆಗಳನ್ನು ಮುಚ್ಚಿಬಿಡಬೇಕೆಂದೂ ತಿಳಿಸಿರುತ್ತಾರೆ.

ಸುಳ್ಳು ವರದಿ

ನಾಗಮಂಗಲದ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸು ಸ್ಪರ್ಧಿಸಿತ್ತೆಂದೂ ಮತ್ತು ಎ. ಎಂ. ಸಿ. ಸಿ. ಸದಸ್ಯರಾದ ಶ್ರೀ ಎಂ. ಆರ್. ಎನ್. ಶಾಸ್ತ್ರಿಗಳು ಸೋತರೆಂದೂ ಮೈಸೂರಿನ ಒಂದು ಪತ್ರಿಕೆಯಲ್ಲಿ ಬಂದಿರುವ ವರದಿ ಸುದ್ದಿಗಳೂ ನಿರಾಧಾರವಾದುವೆಂದೂ, ತಾವು ಚುನಾವಣೆಗೆ ನಿಂತೇ ಇರಲಿಲ್ಲವೆಂದೂ, ಶ್ರೀ ಶಾಸ್ತ್ರಿಗಳವರು ತಿಳಿಸಿರುತ್ತಾರೆ.

ಸತ್ಕಾರ ಕೂಟ

ವಿಶ್ವಸಂಸ್ಥೆಯ ವಿದ್ಯಾನಿಯೋಗದ [illegible] ಪ್ರತಿನಿಧಿಗಳ ಗೌರವಾರ್ಥವಾಗಿ ಮೊನ್ನೆ ಸಂಜೆ ಪ್ರಿನ್ಸ್ ಭವನದ ಉದ್ಯಾನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

○ ನವಜೀವನ ಕೊಳ್ಳೆಗಾಲದ ಬೆಲೆ [illegible] ರೂ ಎಂದು ಸರ್ಕಾರವು [illegible] ನಿಗದಿ ಮಾಡಿರುತ್ತಾರೆ.

ಮಂತ್ರಿಗಳ ಸಂಖ್ಯೆಯಲ್ಲಿ ಕಡಿಮೆ ಇಲ್ಲ

ಮೈಸೂರು ೫

ಸಂಸ್ಥಾನದ ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆ ಮಾಡಲಾಗುವುದೆಂಬ ಸುದ್ದಿಗೆ ಆಧಾರವಿಲ್ಲವೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ಮೈಸೂರಿನಲ್ಲಿ ಚುನಾವಣೆ ನಡೆಸಲು ಭಾರತ ನಾಯಕರಿಗೆ ಮನವಿ

ಸಂಸ್ಥಾನದ ಶಾಸನ ಸಭೆಗಳನ್ನು ರದ್ದುಮಾಡಿ, ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯನ್ನಾಗಿ ಪರಿವರ್ತಿಸುವುದು ಸತ್ಸಂಪ್ರದಾಯಕ್ಕೂ ಗಣಿಸಲಾರದ ಮೈಸೂರು ಶಾಸನಕ್ಕೂ ಮತ್ತು ಕೇಂದ್ರ ರಾಜ್ಯಾಂಗ ಸಭೆಯ ಶಾಸನ ವಿಧಿಗೂ ವಿರೋಧವಾಗಿದೆಯೆಂದೂ ಮತ್ತು ತಕ್ಷಣ ಮಹಾಚುನಾವಣೆ ನಡೆಯಬೇಕೆಂದೂ ಸೂಚಿಸಿ ಶ್ರೀಗಳಾದ ಭೂಪಾಳಂ ಚೆಂಗ ರೆಡ್ಡಿಯವರು ಮತ್ತು ಮರಿಯಪ್ಪ ಗೋವಿಂದ ರೆಡ್ಡಿಯವರುಗಳು ಗೌರ್ನರ್ ಜನರಲ್ ಮತ್ತು ಇತರ ಕೇಂದ್ರ ನಾಯಕರುಗಳಿಗೆ ಪತ್ರ ಬರೆದಿರುತ್ತಾರೆ.

ಕರ್ಣಾಟಕ ಪ್ರಾಂತ್ಯಕ್ಕಾಗಿ ಪ್ರಭುಗಳು ತ್ಯಾಗ ಮಾಡಬೇಕು

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಆಗಾಗ್ಗೆ ಇತ್ತ ಭರವಸೆಯಂತೆ ನೂತನ ರಾಜ್ಯಾಂಗವು ಜಾರಿಗೆ ಬರುವುದರೊಳಗಾಗಿ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗದ ಕಾರಣ ಕರ್ಣಾಟಕದಲ್ಲಿ ಅತೃಪ್ತಿ ಮತ್ತು ನಿರಾಶೆ ಉಂಟಾಗಿದೆ. ಕನ್ನಡಿಗರ ಅನುದಿನದ ಒದರಿಕೆ ಅನಸುನೀವಾಗಿ ಮತ್ತು ಕಾಂಗ್ರೆಸ್ಸಿನ [illegible] ಕರ್ಣಾಟ [illegible] ಕ ಪ್ರಾಂತ್ಯವನ್ನು [illegible] [illegible] ಜನ [illegible] ಕಾಂಗ್ರೆಸ್ಸಿನ [illegible] ಪ್ರಾಂತ್ಯದಲ್ಲಿ ಕರ್ಣಾಟಕದ ಭಾಗಗಳನ್ನು ಸೇರಿಸಲು [illegible] ಸಂಸ್ಥಾನಗಳನ್ನು [illegible] [illegible] ನಡೆದ ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ [illegible] ಮಾಡಲಾಗಿದೆ.

ಶಾಸನ ಸಭೆ [illegible] ಕರ್ಣಾಟಕ ನಾಯಕರ ರಾಜೀನಾಮೆ

ಕರ್ಣಾಟಕ ಪ್ರಾಂತ್ಯವನ್ನು ರಚಿಸಲು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳದಿರುವುದನ್ನು ಪ್ರತಿಭಟಿಸಲು ೧೫ ಜನ ಕರ್ಣಾಟಕ ನಾಯಕರುಗಳು, ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳಿಗೆ ರಾಜೀನಾಮೆ ಇತ್ತಿದ್ದಾರೆ. ಕೇಂದ್ರ ರಾಜ್ಯಾಂಗ ಸಭೆಗೆ ಶ್ರೀ ಎಸ್. ನಿಜಲಿಂಗಪ್ಪ, ಮದರಾಸ್ ಶಾಸನ ಸಭೆಗೆ ಶ್ರೀಗಳಾದ ಕೆ. ಆರ್. ಕಾರಂತ್ ಮತ್ತು ಬಿ. ಅನಂತಾಚಾರ್, ಬೊಂಬಾಯಿ ಶಾಸನ ಸಭೆಗೆ ಶ್ರೀಗಳಾದ ಕೆ. ಎಫ್. ಕಂಠಿ, ಬಿ. ಡಿ. ಜಟ್ಟಿ, ಸಿ. ಜೆ. ದೊಡ್ಡಮೇಟಿ, ಎಂ. ಜೆ. ಷಾ, ಎಸ್. ಗೋಪಾಂಕರ್, ಟಿ. ಆರ್. ನೆಸ್ವಿ, ಎ. ಪಿ. ಪಾಟೀಲ್ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ.

ಸಕ್ಕರೆ ಯಿಂದ ರಕ್ತ

ಜನರು ತಾವಾಗಿಯೇ ರಕ್ತವನ್ನು ದಾನ ಮಾಡುವುದು ಬ್ರಿಟನ್ನಿನಲ್ಲಿ ಕಡಿಮೆಯಾಗುತ್ತಿರುವುದರಿಂದ ಸಕ್ಕರೆಯಿಂದ ಕೃತಕ ರಕ್ತವನ್ನು ತಯಾರಿಸಲು ಲಂಡನ್ನಿನಲ್ಲಿ ಸಂಶೋಧನೆ ನಡೆಸಲಾಗುತ್ತಿದೆಯೆಂದು ಹೇಳಲಾಗಿದೆ.

ಬೇಗನೆ ಅಂಚೆ ಕಾಗದ ಪತ್ರ ತಲುಪಿಸಲು ಏರ್ಪಾಡು

ಇನ್ನು ಮುಂದೆ ಕಾಲ ವಿಳಂಬವಿಲ್ಲದೆ ಅಂಚೆಯ ಕಾಗದಗಳು, ಪಾರ್ಸಲ್‌ಗಳು ಮತ್ತು ವಿ. ಪಿ. ಗಳನ್ನು ತಲುಪಿಸಲು ಏರ್ಪಾಡಾಗುವುದೆಂದು ತಿಳಿದುಬಂದಿದೆ.

೧೫ ಸಾವಿರ ನೆರೆ ಪ್ರದೇಶಗಳ ಗಡಿ ರದ್ದು

ಪ್ರಾಂತ್ಯ ಮತ್ತು ಸಂಸ್ಥಾನಗಳೊಳಗೆ ಇರುವ ೧೫ ಸಾವಿರ ನೆರೆ ಪ್ರದೇಶಗಳನ್ನು ರದ್ದುಮಾಡಿ, ಆಯಾ ಗಡಿ ಪ್ರದೇಶಗಳಿಗೆ ಅವುಗಳನ್ನು ಸೇರಿಸಬೇಕೆಂದು ದೆಹಲಿಯಲ್ಲಿ ನಡೆದ ಪ್ರಾಂತೀಯ ಮತ್ತು ಸಂಸ್ಥಾನಗಳ ಸಮ್ಮೇಳನದಲ್ಲಿ ನಿರ್ಧಾರವಾಗಿದೆ. ಈ ತಿಂಗಳಿನ ಅಂತ್ಯದೊಳಗಾಗಿ ಗಡಿಗಳನ್ನು ಬದಲಿಸಲಾಗುವುದೆಂದು ತಿಳಿದುಬಂದಿದೆ.

ಮದರಾಸಿನಲ್ಲಿ ಗಾಂಧೀ ಸ್ಮಾರಕ ಸ್ತೂಪ

ಮದರಾಸಿನ ನಗರಸಭೆಯ [illegible] ಲ್ಲಿ ಮಹಾತ್ಮಾಜಿ [illegible] ಸ್ತೂಪವನ್ನು ೩ ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು [illegible] ಕಾರ್ಪೊರೇಷನ್ ನಿರ್ಧರಿಸಿದ್ದಾರೆ. [illegible] ೧೦೦ ಅಡಿ ಎತ್ತರವಿದ್ದು [illegible] ಸಾರ್ವಜನಿಕ ಸಭೆಗಳನ್ನು ನಡೆಸಲು [illegible] [illegible] [illegible] [illegible] [illegible] ಗಳನ್ನು [illegible] ಸೂಚಿಸಲು [illegible] [illegible] ನ್ನು [illegible].

...ತೆಯು ದೇಶಕ್ಕೆ ಅಪಾಯಕರ

ಯುನೆಸ್ಕೋ ಗೋಷ್ಠಿಯ ಪರಿಷತ್ತಿನಲ್ಲಿ ಭಾಷಣ

ಕಳೆದ ... ತಿಂಗಳ ... ನೈಸ್ಸೂರು ನಗರದಲ್ಲಿ ನಡೆಯುತ್ತಿರುವ ... ಯ ವಿದ್ಯಾಗೋಷ್ಠಿಯ ... ನೂರಂಭವು ... ಸ್ಟೋಟೆಲ್ ಭವನದಲ್ಲಿ ... ರತ ಸರ್ಕಾರದ ವಿದ್ಯಾ ... ದಕ್ಷಿಣಾಮೂರ್ತಿ ಡಾ॥ ... ಅಧ್ಯಕ್ಷತೆ ವಹಿಸಿದ್ದರು. ಸಮಾರಂಭಕ್ಕೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಪಟೇಲರು ಶ್ರೀಗಳು ಟಿ. ಮರಿಯಪ್ಪ, ಕೆ. ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ ಮತ್ತು ಇತರ ಅನೇಕ ಗಣ್ಯ ಮಹಿಳೆಯರು ಮತ್ತು ಮಹನೀಯರುಗಳು ದಯಮಾಡಿಸಿದ್ದರು. ಯುನೆಸ್ಕೋ ಸಂಸ್ಥೆಯ ಡೈರೆಕ್ಟರ್ ಜನರಲ್ಲರ ಪರವಾಗಿ ಡಾ॥ ... ಭಾಷಣ ಮಾಡಿ ಭಾರತ ಮತ್ತು ಮೈಸೂರು ಸರ್ಕಾರದವರಿಗೆ ಸಂಸ್ಥೆಯ ಕೃತಜ್ಞತೆಯನ್ನು ಸೂಚಿಸಿದರು. ವಿಶ್ವದಲ್ಲಿರುವ ಅನಕ್ಷರತೆಯನ್ನು ನಿರ್ಮೂಲ ಮಾಡುವ ಕಾರ್ಯದಲ್ಲಿ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಸ್ನೇಹ ಮತ್ತು ಸೌಹಾರ್ದದಿಂದ ಕೂಡಿ ನಡೆಸಿದ ಕೆಲಸಕಾರ್ಯಗಳು ಫಲದಾಯಕವಾಗಿ ವಿಶ್ವದಲ್ಲಿ ಶಾಂತಿ ನೆಲೆಸುವಂತೆ ಆಗಲೆಂದು ಹಾರೈಸಿದರು.

ಅನಂತರ ಗೋಷ್ಠಿಯ ಗುಂಪುಗಳ ಅಧ್ಯಕ್ಷರುಗಳಾದ ಡಾ॥ ಹೆಚ್. ಎ. ... ಮಿಸ್ ... ಡಾ॥ ಡಿ. ... ಮತ್ತು ಪ್ರೊ॥ ಎ. ... ಗುಂಪುಗಳ ಕಾರ್ಯಕ್ರಮಗಳ ವರದಿಯನ್ನು ಒಪ್ಪಿಸಿದರು.

ಯುನೆಸ್ಕೋ ಡೈರೆಕ್ಟರಾದ ಡಾ॥ ... ಮಲಾಲುದ್ದೀನರು ಗೋಷ್ಠಿಯ ವರದಿಯನ್ನು ಒಪ್ಪಿಸಿದರು. ದೇಶದಲ್ಲಿರುವ ಮುಕ್ಕಾಲು ಭಾಗದ ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕಾದುದು ಎಲ್ಲರ ಕರ್ತವ್ಯವೆಂದೂ, ಆದರೆ ಅಕ್ಷರ ಕಲಿತವರು ಅದನ್ನು ಮುಂದುವರಿಸಿ, ಅದರ ಉಪಯೋಗವನ್ನು ಪಡೆಯುವಂತೆ ವ್ಯವಸ್ಥೆ ಮಾಡಬೇಕೆಂದೂ ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ॥ ತಾರಾಚಂದ್‌ರವರು ವಿದ್ಯಾ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದರವರ ಭಾಷಣವನ್ನು ಓದಿದರು. ವಿದ್ಯಾಗೋಷ್ಠಿಯು ನಡೆಸಿರುವ ಅಮೋಘವಾದ ಕೆಲಸವನ್ನು ಪ್ರಶಂಸಿಸಿ, ಅದರ ಸಲಹೆಗಳನ್ನು ಭಾರತ ಸರ್ಕಾರದವರು ಸಹಾನುಭೂತಿ...

ಅಣು ಸಂಶೋಧನೆಗೆ ವಿಜ್ಞಾನಿಗಳ ನೇಮಕ

ಅಣುಶಕ್ತಿ ಸಂಶೋಧನೆಯನ್ನು ತ್ವರಿತಗೊಳಿಸುವ ಸಲುವಾಗಿ, ಬ್ರಿಟನ್ನಿನ ... ಕೇಂದ್ರಗಳಲ್ಲಿ ... ಸಂಶೋಧನೆಯನ್ನು ಹೆಚ್ಚು ... ನೇಮಿಸಿಕೊಳ್ಳಲಾಗುತ್ತಿದೆ ... ಯೋಜನೆಗಳನ್ನು ... ಅಮೇರಿಕ ... ಬ್ರಿಟನ್ನಿಗೆ ... ವಿಜ್ಞಾನಿಗಳು ... ಸಂಶೋಧನೆ ... ನಡೆಸಲಾಗುವುದೆಂದೂ ಹೇಳಲಾಗಿದೆ.

ಭಾರತದಲ್ಲಿ ೨ ಕೋಟಿ ಜನ ಮಾತ್ರ ಅಕ್ಷರಸ್ಥರು

ವಯಸ್ಕರ ಮತದಾನ ಪದ್ಧತಿಯಂತೆ ಭರತ ಖಂಡದಲ್ಲಿ ೧೮ ಕೋಟಿ ಜನರಿಗೆ ಓಟುಕೊಡುವ ಅಧಿಕಾರವು ಬರುವುದೆಂದೂ ಅವರ ಪೈಕಿ ಎರಡು ಕೋಟಿ ಜನರು ಮಾತ್ರ ಅಕ್ಷರಸ್ಥರಾಗಿರುವರೆಂದೂ ತಿಳಿದು ಬಂದಿದೆ.

...ಯಿಂದ ಪರಿಶೀಲಿಸುವುದಾಗಿ ಮೌ॥ ಆಜಾದರವರು ಭರವಸೆ ಕೊಟ್ಟರು. ದೇಶದಲ್ಲಿ ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಸಲಹೆಗಳನ್ನು ನೀಡುವ ಯೋಜನೆಯನ್ನು ತಾವು ಪರಿಶೀಲಿಸುವುದಾಗಿ ತಿಳಿಸಿದರು.

ಡಾ॥ ತಾರಾಚಂದ್‌ರವರು ಅನಂತರ ಭಾಷಣಮಾಡಿ, ಭಾರತದಲ್ಲಿ ಶೇಕಡ ೮೦ ರಷ್ಟು ಜನರು ಅನಕ್ಷರಸ್ಥರೆಂದೂ ಈ ಸ್ಥಿತಿ ಇರುವುದು ದೇಶಕ್ಕೆ ಅಪಾಯಕರವೆಂದೂ, ಅದನ್ನು ನಿರ್ಮೂಲ ಮಾಡಲು ಸರ್ಕಾರದವರೂ ಮತ್ತು ಸಾರ್ವಜನಿಕರೂ ಸಹಕರಿಸಬೇಕೆಂದೂ ತಿಳಿಸಿದರು. ಭಾರತ ಸರ್ಕಾರದ ಪರವಾಗಿ ಯುನೆಸ್ಕೋ ಸಂಸ್ಥೆಯ ಡೈರೆಕ್ಟರ್ ಮತ್ತು ಇತರ ಪ್ರತಿನಿಧಿಗಳಿಗೆ ವಂದನೆಯನ್ನು ಅರ್ಪಿಸಿದರು.

ಮೈಸೂರಿನ ವಿದ್ಯಾ ಸಚಿವರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ಭಾರತದ ಅಧಿಕಾರಿಯ ಅಪಹಾರ

ತ್ರಿಪುರಾ ಸಂಸ್ಥಾನದ ಅಧಿಕಾರಿಗಳಾದ ಕಾಂಟ್ರಾಕ್ಟರ್ ಬರ್ಮನ್ ಎಂಬುವರನ್ನು ಹಲವು ಪಾಕಿಸ್ತಾನ ಮುಸ್ಲಿಮರು ಬಲಾತ್ಕಾರದಿಂದ ಎತ್ತಿಕೊಂಡು ಹೋದರೆಂದು ಗೊತ್ತಾಗಿದೆ. ತ್ರಿಪುರದ ಗಡಿಯೊಳಗೆ ಇದ್ದ ಜಮಾನಿನ ಪೈರನ್ನು ರಹದಾರಿಯಿಲ್ಲದೆ ಕುಯ್ಯಲು ಹೋದ ಮುಸ್ಲಿಮನೊಬ್ಬನನ್ನು ಅಧಿಕಾರಿಗಳು ತಡೆದುದಕ್ಕಾಗಿ ಈ ರೀತಿಯ ಅಪಹಾರವಾಗಿದೆ. ಅವರನ್ನು ಮುಸ್ಲಿಮರು ಹೊಡೆದು ಕೊನೆಗೆ ಪಾಕಿಸ್ತಾನದ ಪೊಲೀಸಿನವರ ವಶಕ್ಕೆ ಒಪ್ಪಿಸಿದರೆಂದೂ ಹೇಳಲಾಗಿದೆ.

ದಕ್ಷಿಣ ಚೀನಾದಲ್ಲಿ ಕಮ್ಯೂನಿಸ್ಟರಿಗೆ ತಡೆ

ಚೀನಾದ ದಕ್ಷಿಣ ಪ್ರಾಂತಗಳಾದ ಕ್ವಾಂಗ್ಸಿ ಮತ್ತು ಕ್ವಾಂಗ್‌ಟಂಗ್ ಪ್ರಾಂತಗಳಲ್ಲಿ ಮುನ್ನುಗ್ಗಿ ಬರುತ್ತಿರುವ ಕಮ್ಯೂನಿಸ್ಟ್ ಸೈನ್ಯಗಳನ್ನು ತಡೆಯಲು ರಾಷ್ಟ್ರೀಯ ಸರಕಾರದ ಅಧ್ಯಕ್ಷರಾದ ಲಿ ಸುಂಗ್ ಜೆನ್‌ರವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ. ಅವರು ಅಮೇರಿಕಾಕ್ಕೆ ಹೋಗಿ ಅಲ್ಲಿನ ಸರಕಾರದ ಸಹಾಯವನ್ನು ಬೇಡುವರೆಂದು ಹೇಳಲಾಗಿದೆ.

ಬರುವ ವರ್ಷ ಬ್ರಿಟನ್ನಿನಲ್ಲಿ ಚುನಾವಣೆ

ಬರುವ ವರ್ಷ ಬ್ರಿಟನ್ನಿನಲ್ಲಿ ಮಹಾ ಚುನಾವಣೆ ... ನಡೆಯುವುದು. ಮುಖ್ಯಮಂತ್ರಿ ಅಟ್ಲಿಯವರ ಕ್ಷೇತ್ರದಲ್ಲಿ ಅವರ ಮೇಲೆ ಸ್ಪರ್ಧೆ ನಡೆಸಲು ಅವರ ಪಕ್ಷದಿಂದ ಓಡಿಸಲ್ಪಟ್ಟ ... ಎಂಬುವರು ನಿರ್ಧರಿಸಿದ್ದಾರೆ.

Edited, printed and published by A. R. Nagarajan, at Sadhvi Press, D. Subbiah Road, Mysore.

ಸೈನ್ಯಕ್ಕೆ ಮಾಜಿ ನಾಜಿಗಳ ನೇಮಕ

ಅಮೇರಿಕನ್ನರಿಂದ ಜರ್ಮನಿಯಲ್ಲಿನ್ನು ವಶಪಡಿಸಿಕೊಳ್ಳಲಾಗಿರುವ ಸೈನ್ಯಕ್ಕೆ ಹಿಟ್ಲರನ ಬಲುವನ್ನು ಸಂಪಾದಿಸಿದ್ದ ಜನರಲ್ ಡ್ರಾಂ ... ಮತ್ತು ಗುಡೇರಿಯನ್ ಎಂಬಿಬ್ಬ ನಾಜಿ ಸೈನ್ಯಾಧಿಕಾರಿಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಪಶ್ಚಿಮ ಜರ್ಮನಿಯ ಪತ್ರಿಕೆಯೊಂದು ತಿಳಿಸಿದೆ.

ಹನುಮಜ್ಜಯಂತಿ

ರಾಜಧಾನಿಯ ದೇವರಾಜ ಮೊಹಲ್ಲಾ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಗಾನವಿಶಾರದ ಬಿ. ದೇವೇಂದ್ರಪ್ಪನವರ ಗೃಹದಲ್ಲಿ ಹನುಮಜ್ಜಯಂತಿ ಪ್ರಯುಕ್ತ ಸಾಯಂಕಾಲ ... ಗಂಟೆಗೆ ಶ್ರೀಮತಿ ... ಮತ್ತು ಶಕುಂತಲಾರವರ ಸಂಗೀತವು ನಡೆಯುವುದು.

ಸಂತಾನ ಸಿಂಧೂರ

ಮೈಸೂರು ಶ್ರೀಮನ್ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ, ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆ ನೋವು ಉಂಟು, ಮಕ್ಕಳಿಲ್ಲ—ಇಂಥವರಿಗೆ ಗ್ಯಾರಂಟಿ ಔಷಧ. ಕ್ರಯ ರೂ ... ಪ್ಯಾಕಿಂಗ್ ಮತ್ತು ಟಪಾಲ್ ... ತಯಾರಕ ವರು:— ಎ. ರಾಮಸ್ವಾಮಿ ಅಯ್ಯಂಗಾರ್, ಅಂಬಳೆ, ಯಳಂದೂರು ಪಿ. ಓ. ಮಹಿಳೆಯರು ಮೈಸೂರು ಸಿಟಿ ... ಕೊಳದ ಬೀದಿ ... ನೇ ನಂಬರ್ ಮನೆಯಲ್ಲಿ ... ರಿಂದ ಸಾಯಂಕಾಲ ... ಘಂಟೆವರೆಗೆ ಮೇಲ್ಕಂಡ ಔಷಧವನ್ನು ಮಹಿಳೆಯರಿಂದಲೇ ಪಡೆಯಬಹುದು.

ಟಪ್ಪಾಲು ಮೂಲಕ ತರಿಸಿಕೊಳ್ಳತಕ್ಕವರು ಮೇಲ್ಕಂಡ ವಿಳಾಸಕ್ಕೆ ರೂ ... M. O. ಮಾಡಬೇಕು.

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಒಂದು ಬೇಲು ಬೆಲೆಗೆ ದೊರೆಯುತ್ತದೆ

ಕೂಡಲೇ ವಿಚಾರಿಸಿರಿ:—

“ಸಾಧ್ವಿ” ಆಫೀಸು, ಮೈಸೂರು.

ನಾಯಿ ಕೆಮ್ಮಿಗೆ ಔಷಧಿ

Whooping Cough Remedy

ಗೂರಲು ಉಬ್ಬಸ, ಸರಿಜಾಮ, ಗೂಲೆ ಮತ್ತು ಗಲಾಯಮಕಕ್ಕೆ (Tonsil) ಖಾತ್ರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ.

ಆರ್. ಎಸ್. ಪಂಡಿತರು

ರಾಮಗೋಪಾಲ ಫಾರ್ಮಸಿ, ದಿವಾನರ ರಸ್ತೆ, ಮೈಸೂರು.

॥ ಶ್ರೀ ॥

ಗಣೇಶಾ ಟಾಕೀಸ್

5-11-49ರಿಂದ ದಿನವಹಿ 3 ಆಟಗಳು

ಕೊಲಂಬಿಯಾರವರ

ಪ್ರಖ್ಯಾತ ಚಿತ್ರ

ಫ್ಯಾಂಟಮ್

PHANTOM

... ...

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

5—12—49ನೇ ಸೋಮವಾರದಿಂದ

ಶ್ರೀ ಕೃಷ್ಣಲೀಲಾ

(ತೆಲುಗು)

ಪಾತ್ರ:—ಗಗ್ಗಯ್ಯ, ರಾಮತಿಲಕಂ, ಶ್ರೀರಂಜನಿ, ಪಾರುಪಲ್ಲಿ ಸುಬ್ಬರಾವ್ ... ರಾಜೇಶ್ವರರಾವ್ ಮುಂತಾದವರು

ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಪಂಚಾಮೃತ ಮತ್ತು ಪಂಚಾಗ್ನಿ ಲವಣ

ಕುಲೀಜನ ಗಡ್ಡೆ ಕರಗಿಸುವುದರಲ್ಲಿ ೪೦ ವರ್ಷಗಳ ಖ್ಯಾತಿ ಪಡೆದ ಸಿದ್ಧ ಸಂಜೀವನ

ಉಪ್ಪಿನ ಬಿಳಿ ಹಲ್ಲುಪುಡಿ—ಹೊಟ್ಟಿನ ಬೂದಿ ಸೀಸೆ,

ಸುಣ್ಣವಿಲ್ಲದ ಸ್ಪೆಷಲ್ ಟೂತ್ ಪೌಡರ್

ಪೊಟ್ಟಣ ಗಳಿಗೆ ೨-೦-೬

S. N. PANDIT & SONS,

90 Lansdowne Buildings, Mysore

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೬-೧೧-೪೯ [ಸಂಚಿಕೆ ೧೦೭

ಮೈಸೂರಿಗೆ ಜ. ನೇತಾ ನೆಹರೂರವರ ಭೇಟಿ

ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ಸೌಹಾರ್ದವಿರಬೇಕು

ಸರ್ಕಾರವೂ ಮತ್ತು ಕಾಂಗ್ರೆಸ್ಸೂ ಅನ್ಯೋನ್ಯವಾಗಿ ಕೆಲಸ ಕಾರ್ಯಗಳನ್ನು ಮಾಡಬೇಕು ಅವೆರಡೂ ಒಂದು ಬಂಡಿಯ ಎರಡು ಚಕ್ರಗಳಂತೆ ಚಲಿಸಬೇಕು ಮಂತ್ರಿ ಮಂಡಲವನ್ನು ರಚಿಸುವುದಕ್ಕೂ ಕೆಳಗಿಳಿಸುವುದಕ್ಕೂ ಶಕ್ತಿಹೊಂದಿರುವ ಕಾಂಗ್ರೆಸ್ ಪಕ್ಷವು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಒಳ್ಳೆಯ ವಾತಾವರಣವನ್ನು ಉಂಟುಮಾಡಬೇಕು ಎಂದು ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ ಶಾಸನ ಸಭೆಗಳನ್ನಾಗಲೀ, ಅಥವಾ ಕಾರ್ಯಕಾರಿ ಮಂಡಲವನ್ನಾಗಲೀ ಕೇಳದೆ ನಾಯಕರು ರದ್ದುಮಾಡಿರುವುದು ಸರಿಯೇ ಎಂಬುದನ್ನು ಪಕ್ಷದ ಸಭೆಯು ಪರಿಶೀಲಿಸುವುದೆಂದು ಅವರು ಹೇಳಿರುತ್ತಾರೆ.

ಗೋಡೆ ಕುಸಿದು ೮ ಜನರ ಮರಣ

ಪೂನಾ ಹತ್ತಿರವಿರುವ ಯರವಾಡ ಹಳ್ಳಿಯಲ್ಲಿ ಕುಡಿಯುವ ನೀರಿನ ತೊಟ್ಟಿಯೊಂದರ ಗೋಡೆಗಳು ಆಕಸ್ಮಾತ್ ಕುಸಿದು ಬಿದ್ದು ಶಾಲಾ ಬಾಲಕರೂ ಸೇರಿ ೮ ಜನರು ಸತ್ತುಹೋದರೆಂದು ವರದಿಯಾಗಿದೆ

ಭಾರತ ಸರಕಾರದ ಚಿನ್ನದ ದಾಸ್ತಾನು

ಭಾರತದಲ್ಲಿ ಕಳೆದತಿಂಗಳು ೩೧ನೇ ತಾ॥ ವರೆಗೆ ೧೧೧೯ ೪೩ ಕೋಟಿ ರೂ. ನೋಟುಗಳನ್ನು ಚಲಾವಣೆಗೆ ಕೊಡಲಾಗಿತ್ತೆಂದೂ ಅದರ ಬೆಲೆಗಾಗಿ ೪೦ ೦೩ ಕೋಟಿ ರೂ ಚಿನ್ನವನ್ನು ರಿಜರ್ವ್ ಬ್ಯಾಂಕಿನಲ್ಲಿ ಇಡಲಾಗಿದೆಯೆಂದೂ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ತಿಳಿಸಿರುತ್ತಾರೆ ಕಾನೂನಿನ ಪ್ರಕಾರ ಕನಿಷ್ಠ ೪೦ ಕೋಟಿಯ ಚಿನ್ನವನ್ನು ಠೇವಣಿಯನ್ನಾಗಿ ಇಡಲಾಗಿದೆಯೆಂದು ಅವರು ಹೇಳಿರುತ್ತಾರೆ

ರಾಜಾಜಿಯವರ ಹಸ್ತಾಕ್ಷರಕ್ಕೆ ೫ ರೂ.

ಗೌರ್ನರ್ ಜನರಲ್ ರಾಜಾಜಿಯವರ ಒಂದು ಹಸ್ತಾಕ್ಷರಕ್ಕೆ ೫ರೂ ಕೊಡಬೇಕೆಂದೂ ಅವರಿಂದ ಬಂದಹಣವನ್ನು ಹರಿಜನ ನಿಧಿಗೆ ಕೊಡಲಾಗುವುದೆಂದೂ ಪ್ರಕಟಿಸಲಾಗಿದೆ ೫ ರೂನೊಡನೆ ಹಸ್ತಾಕ್ಷರದಪುಸ್ತಕವನ್ನು ಗೌರ್ನರ್ ಜನರಲ್ಲರ ಅಂಗರಕ್ಷಕರಿಗೆ ಕಳುಹಿಸಿದಲ್ಲಿ ಅದನ್ನು ಹಸ್ತಾಕ್ಷರದೊಡನೆ ವಾಪಸು ಕಳುಹಿಸಲಾಗುವುದು

ಪ್ರತಿ ಮೊಹಲ್ಲಾದಲ್ಲೂ ಆಹಾರ ಸಲಹಾ ಸಮಿತಿಗಳನ್ನು ನೇಮಿಸಬೇಕು

ಈಗಿನ ಆಹಾರ ಅಭಾವ ತಪ್ಪಿಸುವುದಕ್ಕು ಮತ್ತು ರೇಷನ್ ಡಿಪೋಗಳಲ್ಲಿ ಜನರಿಗೆ ಒಳ್ಳೆಯ ಮತ್ತು ಸರಿಯಾದ ಆಹಾರ ಪದಾರ್ಥಗಳು ಸಿಕ್ಕಿ ಜನರ ತೊಂದರೆ ನಿವಾರಣೆಯಾಗಲೂ ಪ್ರತಿ ಮೊಹಲ್ಲಾದಲ್ಲಿ ೫ ೬ ಚುನಾಯಿತರಾದ ೫ ಜನರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಬೇಕು. ತಿಂಗಳಿನ ಕೊನೆಯಲ್ಲಿ ತೆಗೆದುಕೊಳ್ಳದೇ ಬಿಟ್ಟುಹೋದ ರೇಷನನ್ನು ಮುಂದಿನ ತಿಂಗಳು ತೆಗೆದುಕೊಳ್ಳಲು ಅನುಮತಿ ಕೊಡಬೇಕು. ಪ್ರತಿ ಮೊಹಲ್ಲಾದಲ್ಲಿ ಊಟದ ಮತ್ತು ಹಾಲಿನ ಕೇಂದ್ರಗಳನ್ನು ಸರ್ಕಾರದವರು ಸ್ಥಾಪಿಸಬೇಕು ಎಂದು ಹಳ್ಳದಕೇರಿಯ ಶ್ರೀ ಎಂ ಬಿ ಪುಟ್ಟಣ್ಣನವರು ಸೂಚಿಸಿರುತ್ತಾರೆ

ಆಹಾರದ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ನೆಹರೂರವರ ಭರವಸೆ

ಭಾರತದ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಸೂಚನೆಗಳು ಕಾಣಬರುತ್ತಿವೆ ಮತ್ತು ಆರ್ಥಿಕಪರಿಸ್ಥಿತಿಯೂ ಉತ್ತಮಗೊಳ್ಳುತ್ತಿದೆ ಆದರೆ ಆಧಿಕ ಸಮಸ್ಯೆಗಳನ್ನು ಕೇವಲ ತಾತ್ಕಾಲಿಕವಾಗಿ ಪರಿಹಾರ ಮಾಡುವುದರಿಂದ ಪ್ರಯೋಜನವಿಲ್ಲ ಅವುಗಳನ್ನು ಶಾಶ್ವತವೂ ಮತ್ತು ಪರಿಣಾಮಕಾರಿಯೂ ಆಗುವ ಪರಿಹಾರ ಕಾರ್ಯದಲ್ಲಿ ತೊಡಗಬೇಕು. ಈ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಒಂದು ಸಮಿತಿಯನ್ನು ನೇಮಿಸಬೇಕು ಎಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ

ವೇದಾರಣ್ಯದಲ್ಲಿ ಉಪ್ಪಿನ ಸತ್ಯಾಗ್ರಹ ಸ್ಮಾರಕ

ಗೌರ್ನರ್ ಜನರಲ್ ರಾಜಾಜಿಯವರು ೧೯೩೦ರಲ್ಲಿ ನಡೆಸಿದ ಚರಿತ್ರಾರ್ಹವಾದ ಉಪ್ಪಿನ ಸತ್ಯಾಗ್ರಹದ ಜ್ಞಾಪಕಾರ್ಥವಾಗಿ ಮದರಾಸು ಪ್ರಾಂತ್ಯದ ಟಂಗಲ್ ಪೇಟೆಯ ಹತ್ತಿರವಿರುವ ವೇದಾರಣ್ಯದಲ್ಲಿ ಸ್ಮಾರಕವೊಂದನ್ನು ಸರ್ಕಾರದವರು ಸ್ಥಾಪಿಸಲಿದ್ದಾರೆ ಅದರ ಶಂಕುಸ್ಥಾಪನೆಯನ್ನು ಗೌರ್ನರರು ಮೊನ್ನೆ ದಿನ ನೆರವೇರಿಸಿದರು.

ಸರ್ಕಾರದ ಕಾಗದ ಪತ್ರದಲ್ಲಿ ಜಾತಿ ಹೆಸರಿರಕೂಡದು

ಸರ್ಕಾರದ ಪತ್ರಗಳು ಮತ್ತು ಆಜ್ಞೆಗಳಲ್ಲಿ ಜಾತಿ ಮತಗಳ ಹೆಸರುಗಳನ್ನು ಸಾಧ್ಯವಾದಷ್ಟು ನಮೂದಿಸದಂತೆ ಪ್ರಯತ್ನ ಪಡಬೇಕೆಂದು, ಪ್ರಾಂತೀಯ ಸರ್ಕಾರಗಳಿಗೆ ದಿವಾಕರ ಸಮಿತಿಯವರು ಸಲಹೆ ಮಾಡಿರುತ್ತಾರೆ

"ಶ್ರಮ ಜೀವಿ"

"ಶ್ರಮಜೀವಿ" ಎಂಬ ಹೊಸ ವಾರ ಪತ್ರಿಕೆಯು ಬೆಂಗಳೂರಿನ ಶ್ರೀ ಹೆಚ್ ಎ ರಾಮಸ್ವಾಮಿಯವರಿಂದ ಪ್ರಕಟಿಸಲ್ಪಟ್ಟಿದೆ ಅದರ ಪ್ರಥಮ ಸಂಚಿಕೆಯು ನಮ್ಮ ಪಕ್ಷಗತವಾಗಿದೆ ಪತ್ರಿಕೆಯ ಧ್ಯೇಯ, ಕಾರ್ಮಿಕ ರಾಜ್ಯಸ್ಥಾಪನೆಗಾಗಿ ದುಡಿಯುವುದೆಂದು ತಿಳಿಸಲಾಗಿದೆ ೪ ಪುಟಗಳಿಂದ ಕೂಡಿದ್ದು ಇದರ ಬೆಲೆ ಒಂದಾಣೆ ಇದು ಚಿರಕಾಲ ಬಾಳಿ ಆದರ್ಶ ಗುರಿಯನ್ನು ಸಾಧಿಸಲೆಂಬ ಹೇ ನಮ್ಮ ಹಾರೈಕೆ

ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ

ನೆಹರೂರವರಿಂದ ಆರಂಭೋತ್ಸವ

ಮೈಸೂರು ೬

ಇದೇ ತಿಂಗಳು ೨೭ನೇ ತಾ॥ ನಿಂದ ರಾಜಧಾನಿಯ ಜಗನ್ಮೋಹನ ಭವನದಲ್ಲಿ ಪ್ರಾರಂಭವಾಗುವ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಏಷ್ಯಾ ಮಹಾಧಿವೇಶನದ ಪ್ರಾರಂಭೋತ್ಸವವನ್ನು ಅಂದಿನ ದಿನ ತಿಂಗಳು ೩ ನೇ ತಾ॥ ಪ್ರಧಾನಿ ಪಂಡಿತ ನೆಹರೂರವರು ನೆರವೇರಿಸುವರೆಂದು ತಿಳಿದುಬಂದಿದೆ ಶ್ರೀಮನ್ಮಹಾರಾಜರವರು ಸ್ವಾಗತ ಭಾಷಣ ಮಾಡುವರು ಸಂಸ್ಥೆಯ ಚೇರ್ಮನ್ನರಾದ ಶ್ರೀ ಎಸ್ ಲಾಲ್ ರವರು ಅಧ್ಯಕ್ಷತೆ ವಹಿಸುವರು. ಸಮ್ಮೇಳನದ ಪ್ರತಿನಿಧಿಗಳನ್ನು ಲಲಿತ ಮಹಲ್ ಮತ್ತು ಇತರ ಭವನಗಳಲ್ಲಿ ಬಿಡಾರ ಮಾಡಿಸಲಾಗುವುದೆಂದೂ, ಪಂಡಿತ ನೆಹರೂರವರು ವಸಂತ ಮಹಲ್ ಅರಮನೆಯಲ್ಲಿ ತಂಗುವರೆಂದೂ ವರದಿಯಾಗಿದೆ

ಜ್ವಾಲಾಮುಖಿಯ ಆರ್ಭಟ

ಸಿಸಿಲಿ ದ್ವೀಪದಲ್ಲಿರುವ ಎಟ್ನಾ ಜ್ವಾಲಾಮುಖಿಯು ಹಠಾತ್ತಾಗಿ ಬೆಂಕಿಯನ್ನು ಕಾರಲು ಆರಂಭಿಸಿದೆ ಹತ್ತು ಅಡಿ ಗೋಡೆ ಎತ್ತರವಿರುವ ಕರಗಿಸಿದ ಲೋಹದ ಅಗ್ನಿಪ್ರವಾಹವು ಆಘಟದಿಂದ ಪರ್ವತದ ತಪ್ಪಲಿನಲ್ಲಿ ಹಾಯ್ದು ನೆರೆಯ ಗ್ರಾಮಗಳಿಗೆ ಮೊನ್ನೆ ಪ್ರವೇಶಿಸಿತು. ಹಳ್ಳಿಗಾಡಿನವರು ಗಾಬರಿಯಿಂದ ಬೆದರಿ ದಿಕ್ಕಾಪಾಲಾಗಿ ಓಡಿದರು. ಒಂದು ನಿಮಿಷಕ್ಕೆ ಎರಡು ಅಡಿ ಯಂತೆ ಅಗ್ನಿಪ್ರವಾಹವು ಹರಿಯುತ್ತಿದೆ ತಮ್ಮ ಆಸ್ತಿಪಾಸ್ತಿಗಳನ್ನು ತತ್ತರಿಸಿ ಹೇರಿಕೊಂಡು ಪ್ರಾಣರಕ್ಷಣೆಗಾಗಿ ಗ್ರಾಮಸ್ಥರು ಬೇರೆ ಕಡೆಗೆ ಹೋಗುತ್ತಿದ್ದಾರೆ ಒಂದುಕಡೆ ಪ್ರವಾಹವು ಮನೆಯೊಂದನ್ನು ಆಹುತಿ ತೆಗೆದುಕೊಂಡಿತು

ಗಣಿ ಸ್ಫೋಟದಿಂದ ೩೪೦ ಜನರ ಮರಣ

ಸಿಕ್ಯಾಂಗ್ ಪ್ರಾಂತ್ಯದ ಜಪಾನಿಯ ಕ್ಷಿಪ್ರ ಮೆಯೆನ್ ಗಣಿಯಲ್ಲಿ ಕಳೆದ ತಿಂಗಳು ೨ನೇ ತಾ॥ ಭಾರಿ ಸ್ಫೋಟನೆಯಾಗಿ ೩೪೦ ಜನ ಕಾರ್ಮಿಕರು, ಸತ್ತರೆಂದೂ, ೩೪೦ ಜನರನ್ನು ರಕ್ಷಿಸಿದ ನಾಡು ಮಾಡಲಾಯಿತೆಂದು ವರದಿಯಾಗಿದೆ

ಮಂಡ್ಯದ ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ

ಮಂಡ್ಯದ ಸಕ್ಕರೆ ಕಂಪೆನಿಯ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ಮೊನ್ನೆ ದಿನ ಶ್ರೀ ಎಚ್. ಎಸ್. ಮಾಸ್ತಿಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು ಕಾರ್ಖಾನೆಯಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ಕೈಗೊಂಡ ಸಂಧಾನ ಕಾರ್ಯಕ್ರಮಗಳು ವಿಫಲವಾದುದರಿಂದ, ಇದೇ ೧೦ ನೇ ತಾ॥ ನೊಳಗೆ ಅಧಿಕಾರ ವರ್ಗದವರ ಬಿಕ್ಕಟ್ಟನ್ನು ಬಗೆಹರಿಸದಿದ್ದ ಪಕ್ಷದಲ್ಲಿ ೧೧ ನೇ ತಾ॥ ನಿಂದ ಸಾಮೂಹಿಕ ಮುಷ್ಕರ ಹೂಡಬೇಕೆಂದು ತೀರ್ಮಾನಿಸಲಾಯಿತು

ಪೂರ್ವ ಬಂಗಾಳದ ಸಚಿವರ ರಾಜೀನಾಮೆ

ಪಾಕೀಸ್ಥಾನದಲ್ಲಿ ರೂ.ನ ಬೆಲೆಯನ್ನು ಇಳಿಸಬೇಕೆಂದು ಪೂರ್ವ ಬಂಗಾಳದ ಆರ್ಥಿಕ ಸಚಿವರಾದ ಹಮಿದುಲ್ ಹಕ್ ಚೌಧುರಿಯವರು ಒತ್ತಾಯ ಪಡಿಸಿದುದರಿಂದ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟು ಉಂಟಾಗಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ ಇನ್ನಿಬ್ಬರು ಸಚಿವರುಗಳೂ ರಾಜೀನಾಮೆ ಕೊಡಲಿದ್ದಾರೆಂದು ಹೇಳಲಾಗಿದೆ

ಚೀನಾ ಸರ್ಕಾರದ ಫಾರ್ಮೋಸಾ ದ್ವೀಪಕ್ಕೆ

ಎರಡು ವಿಮಾನಗಳಲ್ಲಿ ಚೀನಾ ರಾಷ್ಟ್ರೀಯ ಸರ್ಕಾರದ ಅಧಿಕಾರಿಗಳೂ ಅವರ ಕುಟುಂಬದವರೂ ಚೆಂಗ್‌ಟುವಿನಿಂದ ಹೊರಟು ಫಾರ್ಮೋಸಾ ದ್ವೀಪಕ್ಕೆ ತೆರಳಿರುವರು ಅವರ ನಾಲ್ಕನೆಯ ರಾಜಧಾನಿಯಾದ ಚೆಂಗ್‌ಟು ನಗರವನ್ನು ಅವರು ಹೆಚ್ಚು ದಿನಗಳ ಕಾಲ ರಕ್ಷಿಸಲು ಶಕ್ತರಾಗಿಲ್ಲವೆಂದು ಇದರಿಂದ ಅರ್ಥ ಮಾಡಲಾಗಿದೆ

ಶಾಂತಿ ವಾದಿಗಳು ೭ ದಿನ ಉಪವಾಸ ಮಾಡಬೇಕು

ಸೇವಾ ಗ್ರಾಮದಲ್ಲಿ ಸಮ್ಮೇಳನವು ಸೇರಿದಾಗ ಎಲ್ಲರೂ ೭ ದಿನಗಳು ಉಪವಾಸ ಮಾಡಿ, ಪ್ರಾರ್ಥನೆ ನಡೆಸಬೇಕೆಂದು ಶಾಂತಿನಿಕೇತನದಲ್ಲಿ ಸೇರಿದ ವಿಶ್ವ ಶಾಂತಿವಾದಿಗಳ ಸಮ್ಮೇಳನದಲ್ಲಿ ಶ್ರೀ ಮಣಿಲಾಲ್ ಗಾಂಧಿಯವರು ಸಲಹೆ ಮಾಡಿದ್ದಾರೆ

ಧ್ವಜ ದಿನಾಚರಣೆ

ಭಾರತ ಸೈನಿಕರಿಗೆ ಬೇಕಾದ ಸೌಲಭ್ಯಗಳನ್ನು ನೀಡಲು ನಾಳೆದಿನ ನಡೆಯುವ ಧ್ವಜ ದಿನಾಚರಣೆಯ ಸಂದರ್ಭದಲ್ಲಿ ಪ್ರತಿಯೊಬ್ಬರೂ ನಿಧಿಗೆ ಸಹಾಯ ಮಾಡಿ ಸೈನಿಕರಿಗೆ ಸಹಾಯ ಮಾಡಬೇಕೆಂದು ... ಮನವಿ ಮಾಡಿರುತ್ತಾರೆ

ಕಾರ್ಮಿಕ ಸಚಿವರುಗಳ ಸಮ್ಮೇಳನ

ಭಾರತದ ಪ್ರಾಂತೀಯ ಮತ್ತು ಸಂಸ್ಥಾನಗಳ ಕಾರ್ಮಿಕ ಸಚಿವರುಗಳ ಸಮ್ಮೇಳನವು ದೆಹಲಿಯಲ್ಲಿ ಇದೇ ೨೬ ಮತ್ತು ೨೭ನೇ ತಾರೀಖುಗಳು ... ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಶ್ರೀ ಜಗಜೀವನ್ ರಾಂರವರ ಅಧ್ಯಕ್ಷತೆಯಲ್ಲಿ ನಡೆಯುವುದು ... ಸಮ್ಮೇಳನಕ್ಕೆ ಇಂಡಿಯನ್ ... ಅಧ್ಯಕ್ಷರಾದ ... ಮತ್ತು ... ಮೊದಲಾದವರು ಬರುವರು

ಪೂರಿ ದೇವಾಲಯದ ಅಡಿಗೆ ಮನೆಯಲ್ಲಿ ನಿಜವಾದ ಕಮ್ಯೂನಿಸಂ

ಪೂರಿಯ ಜಗನ್ನಾಥ ದೇವಾಲಯದಲ್ಲಿರುವ ಪಾಕ ಶಾಲೆಯಲ್ಲಿ ಯುಗಾಂತರಗಳಿಂದಲೂ ನಿಜವಾದ ಕಮ್ಯೂನಿಸಂ ಜಾರಿಯಲ್ಲಿದೆಯೆಂದು ಗೌರ್ನರ್ ಜನರಲ್ ರಾಜಾಜಿಯವರು, ತಾವು ಅಲ್ಲಿಗೆ ಮೊನ್ನೆ ದಿನ ಭೇಟಿ ಕೊಟ್ಟಾಗ ತಿಳಿಸಿರುತ್ತಾರೆ ೮ ಆಣೆಗೆ ಇಬ್ಬರು ಹೊಟ್ಟೆ ತುಂಬಾ ತಿನ್ನುವ ಊಟವನ್ನು ಅಲ್ಲಿ ಕೊಡಲಾಗುತ್ತಿದೆ, ಇಷ್ಟು ಅಲ್ಪ ಬೆಲೆಯಲ್ಲಿ ಬಡವರಿಗೆ ಆಹಾರ ಒದಗಿಸುವುದು ಗಮನಾರ್ಹವಾದುದೆಂದು ಅವರು ಹೇಳಿರುತ್ತಾರೆ ಪ್ರತಿ ದಿನವೂ ಅಲ್ಲಿ ೧೦ ಸಾವಿರ ಜನರಿಗೆ ಆಗುವಷ್ಟು ಆಹಾರವನ್ನು ಬೇಯಿಸಲಾಗುತ್ತಿದೆ ಈ ಅಡಿಗೆ ಮನೆಯಲ್ಲಿ ನಿತ್ಯವೂ ಸಾವಿರ ಅಡಿಗೆಯವರು ಸಂಬಳವಿಲ್ಲದೇ ದುಡಿಯುತ್ತಿದ್ದಾರೆ ಅವರಿಗೆ ದುಡ್ಡಿನ ಬದಲು ಆಹಾರವನ್ನು ಕೊಡುತ್ತಾರೆ ಇಲ್ಲಿ ಸಾಮಾನ್ಯವಾಗಿ ದಿನವಹಿ ೧೦ ಸಾವಿರ ಜನರಿಗೆ ಅನ್ನವು ದೊರಕುವುದು ರಥೋತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ೫೦ ಸಾವಿರ ಜನರಿಗೆ ಆಹಾರವನ್ನು ಕೊಡಲಾಗುವುದು.

ಪೂನಾ ನಗರದಲ್ಲಿ ಚಿರತೆಯ ಬೇಟೆ

ಪೂನಾದ ಸಂಗಂ ಸೇತುವೆಯ ಹತ್ತಿರ ಅವಿತುಕೊಂಡಿದ್ದ ಭಾರಿ ಚಿರತೆಯೊಂದನ್ನು ಕೊಲ್ಲಲು ಅಲ್ಲಿನ ಪೋಲೀಸರು ಮತ್ತು ೪ ಸಾವಿರ ಜನರು ೮ ಗಂಟೆಗಳ ಕಾಲ ಬೇಟೆ ನಡೆಸಿದರೆಂದು ವರದಿಯಾಗಿದೆ ಚಿರತೆಯ ಹತ್ತಿರ ಹೋದವನೊಬ್ಬನನ್ನು ಅದು ಗಾಯಪಡಿಸಿತು ಅನಂತರ ಅದು ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮೇಲೆ ಬಿದ್ದಿತು ಆತನು ಅದರ ಸಂಗಡ ಬರೀ ಕೈನಲ್ಲಿ ಹೋರಾಡಿದನು ಅನಂತರ ಪಕ್ಕದಲ್ಲಿದ್ದವರು ಗುಂಡಿನಿಂದ ಹೊಡೆದು ಅದನ್ನು ಸಾಯಿಸಿದರು

ಅಮೇರಿಕದ ಪ್ರತಿ ನಿವೃತ್ತ ಮನುಷ್ಯನಿಗೂ ೪೭೭ ರೂ. ವೇತನ

ಅಮೇರಿಕದಲ್ಲಿ ಕೆಲಸದಿಂದ ನಿವೃತ್ತರಾದ ಪ್ರತಿಯೊಬ್ಬರಿಗೂ ತಿಂಗಳಿಗೆ ೪೭೭ ರೂ ವೇತನವನ್ನು ಕೊಡಬೇಕೆಂದು ಅಲ್ಲಿನ ಕಾರ್ಮಿಕ ಶಾಖೆಯ ಕಾರ್ಯದರ್ಶಿ ಮಾರಿಸ್ ಟೊಬಿನರು ಸಲಹೆ ಮಾಡಿರುತ್ತಾರೆ ಕಾರ್ಮಿಕರ ವೇತನವನ್ನು ಗಂಟೆಗೆ ೩-೧೨ ಆಣೆಯಿಂದ ೪-೧೨ ಆಣೆಗೆ ಏರಿಸಬೇಕೆಂದು ಅವರು ಸೂಚನೆ ಇತ್ತಿದ್ದಾರೆ

ಓಟರು ಪಟ್ಟಿಯಲ್ಲಿ ನಿಜಾಮರ ಹೆಸರು

ಹೈದ್ರಾಬಾದು ನಗರದ ೬ ವಾರ್ಡಿನ ಎರಡನೇ ಬ್ಲಾಕಿನ ಓಟರುಗಳ ಪಟ್ಟಿಯಲ್ಲಿ ನಿಜಾಮರ ಹೆಸರು ಮೊದಲು ಬಂದಿದೆ ಅವರ ಇಬ್ಬರು ಗಂಡು ಮಕ್ಕಳು, ಜೈಲಿನಲ್ಲಿರುವ ಮೀರ್ ಲಾಯಕ್ ಆಲಿ ಮತ್ತು ಅವರ ಸಹೋದ್ಯೋಗಿಗಳ ಹೆಸರುಗಳೂ ಸೇರಿಸಲ್ಪಟ್ಟಿವೆ ಕರಾಚಿಯಲ್ಲಿ ಈಗ ನೆಲೆಸಿರುವ ನವಾಬ್ ಮೋಯಿನ್ ನವಾಜ್ ಜಂಗ್‌ರ ಹೆಸರೂ ಇದೆ ರಜಾಕರರ ಮುಖಂಡ ರಜ್ವಿಯ ಹೆಸರೂ ಸೇರಿಸಲ್ಪಟ್ಟಿದೆ ಆದರೆ ಅವನು ಓಟುಮಾಡಲಾರದವನಾಗಿದ್ದಾನೆ ಓಟು ಮಾಡುವ ದಿನದಲ್ಲಿ ಬಿಡುಗಡೆಯಾಗದಿದ್ದರೆ ಜೈಲಿನಲ್ಲಿರುವವರ‍್ಯಾರೂ ಓಟು ಮಾಡುವಂತಿಲ್ಲ

ರೈಲ್ವೆ ಪ್ರಯಾಣಿಕನ ಕೊಲೆ

ಚಿದಂಬರದ ಪ್ರಯಾಣಿಕನೊಬ್ಬನು ಕುಂಭಕೋಣದ ರೈಲ್ವೆ ನಿಲ್ದಾಣದಲ್ಲಿಳಿದು ಊರಿಗೆ ಹೋಗುತ್ತಿದ್ದಾಗ ಕೆಲವು ಜನರು ಆತನ ಮೇಲೆ ಬಿದ್ದು ಚಾಕುವಿನಿಂದ ತಿವಿದು ಕೊಲೆಮಾಡಿದರೆಂದೂ ಇದನ್ನು ಅನೇಕರು ನೋಡಿ ಸುಮ್ಮನಿದ್ದರೆಂದೂ ವರದಿಯಾಗಿದೆ ದುರಾತ್ಮರು ಜನರನ್ನು ಹೊಡೆಯುವುದಾಗಿ ಬೆದರಿಸಿದುದರಿಂದ ಜನರು ಕೊಲೆಯನ್ನು ತಪ್ಪಿಸಲು ಸಾಧ್ಯವಿಲ್ಲವಾಯಿತೆಂದೂ ಹೇಳಲಾಗಿದೆ

ಪಾಕೀಸ್ತಾನದಿಂದ ಹೆಚ್ಚು ಹಿಂದೂಗಳು ಬರುತ್ತಿದ್ದಾರೆ

ಕಳೆದ ನವೆಂಬರ್ ತಿಂಗಳಿನ ಅಂತ್ಯದ ಮೂರು ತಿಂಗಳಿನಲ್ಲಿ ಪಾಕೀಸ್ತಾನದಿಂದ ಹಿಂದೂಗಳು ಹೆಚ್ಚು ಸಂಖ್ಯೆಯಲ್ಲಿ ಭಾರತಕ್ಕೆ ಹಿಂತಿರುಗಿದ್ದಾರೆಂದು ಕೇಂದ್ರ ಸರ್ಕಾರದ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ ನಿರಾಶ್ರಿತರ ಆಸ್ತಿ ಪಾಸ್ತಿಗಳನ್ನು ಪಾಕೀಸ್ತಾನ ಸರ್ಕಾರದವರು ವಶಪಡಿಸಿಕೊಳ್ಳುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಮೈಸೂರಿಗೆ ನೆರೆ ಪ್ರದೇಶಗಳು

ಭಾರತದ ಪ್ರಾಂತ ಮತ್ತು ಸಂಸ್ಥಾನಗಳಲ್ಲಿರುವ ನೆರೆ ಪ್ರಾಂತ್ಯಗಳ ಗಡಿ ಬದಲಾವಣೆ ಸಂಬಂಧವಾಗಿ ದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ರೆವಿನ್ಯೂ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರು ಭಾಗವಹಿಸಿ ಬೆಂಗಳೂರಿಗೆ ವಾಪಸು ಬಂದಿದ್ದಾರೆ ಮದರಾಸ್ ಪ್ರಾಂತ್ಯದ ಒಳಗಿರುವ ೨೩ ಸಣ್ಣ ಪ್ರದೇಶಗಳನ್ನು ಮೈಸೂರಿಗೂ ಮೈಸೂರಿನೊಳಗಿರುವ ೧೫ ಪ್ರದೇಶಗಳನ್ನು ಮದರಾಸಿಗೂ ಸೇರಿಸುವ ಒಪ್ಪಂದ ನಿರ್ಧಾರವಾಗಿದೆಯೆಂದು ತಿಳಿದುಬಂದಿದೆ

ನೆಹರೂರವರಿಗಿತ್ತ ಕರಂಡ ಕಾಂಗ್ರೆಸ್ಸಿಗೆ

ಪಂಡಿತ ನೆಹರೂರವರ ೬೦ನೇ ವರ್ಷದ ಹುಟ್ಟಿದ ಹಬ್ಬದಲ್ಲಿ ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ವರು ಅವರಿಗೆ ಒಪ್ಪಿಸಿದ ದಂತ ಮತ್ತು ಗಂಧದ ಮರದಲ್ಲಿ ಮಾಡಿದ ಕರಂಡವನ್ನು ಅವರು ಅಹಮದಾಬಾದ್ ಸಿಟಿ ಕಾಂಗ್ರೆಸ್ ಸಮಿತಿಗೆ ಕೊಟ್ಟಿದ್ದಾರೆ ಇದರೊಡನೆ ಸಾವಿರದ ಒಂದು ರೂ ಅನ್ನೂ ಕೊಟ್ಟಿದ್ದಾರೆ

೭೫೦ ಲಕ್ಷ ರೂ. ಗೃಹ ಯೋಜನೆ

ಬೊಂಬಾಯಿನಲ್ಲಿ ಮುಂದಿನ ವರ್ಷ ನೂತನ ಗೃಹಗಳನ್ನು ಕಟ್ಟಲು ೭೫೦ ಲಕ್ಷ ರೂ ಯೋಜನೆಯನ್ನು ಸರ್ಕಾರದವರು ತಯಾರಿಸಿದ್ದಾರೆ ೧೦ ವರ್ಷಗಳಲ್ಲಿ ೧೦ ಲಕ್ಷ ಮನೆಗಳನ್ನು ಕಟ್ಟಲು ಸರ್ಕಾರದವರು ವ್ಯವಸ್ಥೆ ಮಾಡಿದ್ದಾರೆ ಈ ವರ್ಷ ೧೦ ಸಾವಿರ ಗೃಹಗಳನ್ನು ಕಟ್ಟಲು ೪ ಕೋಟಿ ರೂ ಮಂಜೂರು ಮಾಡಲಾಗಿದೆ

ಸತ್ತ ಪ್ರಾಣಿಗಳ ಮಾಂಸ ಭಕ್ಷಣಾ ನಿಷೇಧ

ಮದರಾಸು ಪ್ರಾಂತ್ಯದಲ್ಲಿ ಹರಿಜನರು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಕೂಡದೆಂದು ಸರ್ಕಾರದವರು ನಿಷೇಧಾಜ್ಞೆಯನ್ನು ಹೊರಡಿಸಿರುತ್ತಾರೆ

ಸರ್ವಾಕ್ ಗೌರ್ನರರ ಇರಿತ

ಸರ್ವಾಕ್ ದ್ವೀಪದ ಗೌರ್ನರರಾದ ಡಂಕನ್ ಜಾರ್ಜ್ ಸ್ಟೂವರ್ಟರವರನ್ನು ಮೊನ್ನೆ ದಿನ ಇಬ್ಬರು ಮಲಯಾದ ಜನರು ತಿವಿದು ತೀವ್ರ ಗಾಯಪಡಿಸಿದರೆಂದೂ ಅವರ ಸ್ಥಿತಿಯು ಚಿಂತಾಜನಕವಾಗಿದೆಯೆಂದೂ ವರದಿಯಾಗಿದೆ ಬ್ರಿಟನ್ನಿಗೆ ಸರ್ವಾಕನ್ನು ಸೇರಿಸುವುದನ್ನು ಪ್ರತಿಭಟಿಸ ಸಂಸ್ಥೆಗೆ ಆಪಾದಿತರು ಸೇರಿದವರೆಂದೂ ಹೇಳಲಾಗಿದೆ

ಬೊಂಬಾಯಿ ಗೌರ್ನರರ ಸಂಬಳದಲ್ಲಿ ಖೋತಾ

ಬೊಂಬಾಯಿನ ಗೌರ್ನರರಾದ ರಾಜಾ ಮಹಾರಾಜಾ ಸಿಂಗ್‌ರವರು ಕಳೆದ ತಿಂಗಳಿಂದ ತಮ್ಮ ಸಂಬಳದಲ್ಲಿ ಶೇಕಡ ೧೫ರಷ್ಟು ಕಡಿಮೆ ಮಾಡಿಕೊಂಡಿರುತ್ತಾರೆ

ರಾಜೇಂದ್ರ ಪ್ರಸಾದರವರ ವರ್ಧಂತ್ಯುತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದವರು ಮೊನ್ನೆ ದಿನ ಶ್ರೀ ಜಿ ಎಸ್ ಚಾಂಡಿಯವರ ಅಧ್ಯಕ್ಷತೆಯಲ್ಲಿ ಡಾ॥ ರಾಜೇಂದ್ರ ಪ್ರಸಾದರವರ ೬೬ನೇ ವರ್ಷ ವರ್ಧಂತಿಯನ್ನು ಆಚರಿಸಿದರು

ಗೌರ್ನರ್ ಜನರಲ್ಲರಿಗೆ ಜಪಾನ್ ಚಕ್ರವರ್ತಿಯ ಬಹುಮಾನ

ಜಪಾನ್ ಚಕ್ರವರ್ತಿ ಹಿರೊ ಹಿಟೊರು ಭಾರತದ ಗೌರ್ನರ್ ಜನರಲ್ ರಾಜಗೋಪಾಲಾಚಾರಿಯವರಿಗೆ ಅವರ ರಾಜಮುದ್ರೆಯಿಂದಕೂಡಿದ ಬೆಳ್ಳಿ ಕುಂಡವನ್ನು ಕಳುಹಿಸಿಕೊಟ್ಟಿದ್ದಾರೆ ಭಾರತದ ಬಹುಮಾನವನ್ನು ಮನ್ನಿಸಿ ಇಲ್ಲಿಗೆ ಬಂದಿದ್ದ ಏಳು ಜನ ಜಪಾನ್ ಯಾಂತ್ರಿಕ ತಜ್ಞರು ಇದನ್ನು ತಂದಿದ್ದಾರೆ

ಕಾಳ ಸಂತೆಕೋರರನ್ನು ಬಹಿಷ್ಕರಿಸಬೇಕು

ಕಾಳ ಸಂತೆಕೋರರು ಮತ್ತು ಲಾಭಕೋರರನ್ನು ಬಹಿಷ್ಕರಿಸಬೇಕೆಂದು ಕೇಂದ್ರ ಸರ್ಕಾರದ ಕಾರ್ಮಿಕ ಸಚಿವರಾದ ಶ್ರೀ ಜಗಜೀವನ್ ರಾಂರವರು ಸೂಚನೆ ಇತ್ತಿದ್ದಾರೆ

ಗೀತಾ ಸಪ್ತಾಹಕ್ಕೆ ಉದಾರ ಸಹಾಯ

ರಾಜಧಾನಿಯ ಗೀತಾ ಸದನದಲ್ಲಿ ಪ್ರತಿ ವರ್ಷವೂ ಸಪ್ತಾಹ ನಡೆಸಲು ಅಶೋಕ ರಸ್ತೆಯಲ್ಲಿರುವ ಚೌಡ್ರಿ ಕೃಷ್ಣಶೆಟ್ಟರು ೧೦೦೦ ರೂ ಉದಾರ ಸಹಾಯ ಮಾಡಿರುತ್ತಾರೆ

ತಿದ್ದುಪಡಿ

ಕಳೆದ ೩ನೇ ತಾ॥ನ ನಮ್ಮ ಪತ್ರಿಕೆಯಲ್ಲಿ ಶ್ರೀ ಎಲ್ ಎಸ್ ರಾಜುರವರ ವ... ಯನ್ನು ಪೋಲೀಸಿನವರು ಶೋಧನೆ ಮಾಡಿದರೆಂಬ ವಿಚಾರವಾಗಿ ಪ್ರಕಟವಾಗಿದ್ದ ಸುದ್ದಿಯು ಸಂಪೂರ್ಣವಾಗಿ ನಿರಾಧಾರವಾದುದೆಂದೂ, ಪೋಲೀಸ್ ಅಧಿಕಾರಿಗಳು ಬಂದು ಬೇರೆ ಮತ್ತೊಂದು ಮೊಕದ್ದಮೆ ಸಂಬಂಧಪಟ್ಟ ಅಂಶಗಳನ್ನು ಮಾತ್ರ ಕೇಳಿಕೊಂಡು ಹೋದರೆಂದೂ ಶ್ರೀ ಎಲ್ ಎಸ್ ರಾಜುರವರು ತಿಳಿಸಿರುತ್ತಾರೆ ತಪ್ಪು ಪ್ರಕಟಣೆಗಾಗಿ ನಾವು ವಿಷಾದಿಸುತ್ತೇವೆ

ನ್ಯೂಸ್ ಪ್ರಿಂಟ್
ಡಬ್ಬಲ್ ಕ್ರೌನ್ ಸೈಜು
ಒಂದು ಬೇಲು ಬಿಕರಿಗೆ ದೊರೆಯುತ್ತದೆ
ಕೂಡಲೇ ವಿಚಾರಿಸಿರಿ –
"ಸಾಧ್ವಿ" ಆಫೀಸು,
ಮೈಸೂರು.

Edited, printed and published by A R Nagarajan at Sadhvi Press, D Subbaiah Road, Mysore

ರಾಜಕಮಲ್
ಮೈಸೂರು
3-12-49ರಿಂದ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಸೋನಾ – ಚಾಂದಿ
(ಹಿಂದಿ)
... ಎಲೆಕ್ಸ್, ಕತ್ತು

ನಾಯಿ ಕೆಮ್ಮಿಗೆ ಔಷಧಿ
Whooping Cough Remedy
ಗೂರ್ಲು ಉಬ್ಬಸ, ಪರಿಣಾಮಕಾರಿ ಮತ್ತು ಗಲಾಯುಕ್ತ (Tonsil) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ
ಆರ್. ಎಸ್. ಪಂಡಿತರು,
ರಾಮ ಗೋಪಾಲ ವೈದ್ಯಶಾಲೆ,
ದಿವಾನರ ರಸ್ತೆ, ಮೈಸೂರು

ಪ್ರಭುದೇವಾ ಟಾಕೀಸ್
ದಿನವಹಿ ಮೂರು ಆಟಗಳು
5—12—49ನೇ ಸೋಮವಾರದಿಂದ
ಶ್ರೀ ಕೃಷ್ಣಲೀಲಾ
(ತೆಲುಗು)
ಪಾತ್ರ ಗಗ್ಗಯ್ಯ, ರಾಮತಿಲಕಂ, ಶ್ರೀರಂಜನಿ, ಪಾರುಪಲ್ಲಿ ರಾಜೇಶ್ವರ ರಾವ್ ಮುಂತಾದವರು

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೭-೧೨-೪೯ [ಸಂಚಿಕೆ ೧೦೮

ಜಿಲ್ಲಾ ಬೋರ್ಡುಗಳಿಗೆ ೧ ವರ್ಷ ಜೀವದಾನ

ಸಂಗೀತ ಕಛೇರಿ

ಮೈಸೂರು ೭

೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಕಛೇರಿಯ ಮಹಡಿ ಮೇಲೆ ಈ ದಿನ ರಾತ್ರಿ ೮-೩೦ ಘಂಟೆಗೆ ಮೈಸೂರು [illegible] ಸಹೋದರರಿಂದ ಸಂಗೀತವು ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ

ಉಪನ್ಯಾಸ

ಮೈಸೂರು ಶಾಖೆಯ ಎಜುಕೇಷನ್ ಫೆಲೋಷಿಪ್ಪಿನಾಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಉಪಾಧ್ಯಾಯರ ಕಾಲೇಜಿನಲ್ಲಿ ಅಕಾಡೆಮಿ [illegible] ಡೈರೆಕ್ಟರಾದ ಡಾ|| ಎ. ಎಂ. ನಟೇಶನ್‌ರವರು ಅಮೇರಿಕದಲ್ಲಿ ವಿದ್ಯಾಭ್ಯಾಸದ ರೀತಿಗಳು ಎಂಬ ವಿಷಯವಾಗಿ ಭಾಷಣ ಮಾಡುವರು

ಪೂರ್ವ ಜಾವಾದಲ್ಲಿ ದೌರ್ಜನ್ಯಕಾರರ ಹಾವಳಿ

ಪೂರ್ವ ಜಾವಾದ ಸೌರಬಾಯಾ ಪ್ರದೇಶದಲ್ಲಿ ಅಪಹರಣ, ಕೊಲೆ ಮತ್ತು ಇತರ ಹಿಂಸಾ ಕೃತ್ಯಗಳು ಹೆಚ್ಚಿರುವುದರಿಂದ ಅವನ್ನು ಅಡಗಿಸಲು ಸೈನ್ಯವನ್ನು ಕಳುಹಿಸಲಾಗಿದೆಯೆಂದು ವರದಿಯಾಗಿದೆ ಸೌರಬಾಯಾದಲ್ಲಿ ೪೦ ಜನ ಟ್ಯಾಕ್ಸಿ ಡ್ರೈವರುಗಳು ಪೋಲೀಸ್ ಸಿಬ್ಬಂದಿಯ ಒಳ ಪ್ರದರ್ಶನ ನಡೆಸಿ, ಪೋಲೀಸರ ಮೇಲೆ ಕಲ್ಲುಗಳನ್ನು ಎಸೆದರೆಂದೂ, ಅವರುಗಳನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರೆಂದೂ, ಅದರಿಂದ ೪ ಜನರು ಸತ್ತು ೧೦ ಮಂದಿಗೆ ಗಾಯವಾಯಿತೆಂದು ಹೇಳಲಾಗಿದೆ

ಬೊಂಬಾಯಿ ಕಾರ್ಮಿಕರ ೪ ಮೈಲಿ ಮೆರವಣಿಗೆ

ಬೊಂಬಾಯಿ ಪ್ರಾಂತ್ಯದಲ್ಲಿ ಗೃಹಗಳ ಅಭಾವ ಮತ್ತು ನಿರುದ್ಯೋಗ ಹೆಚ್ಚುತ್ತಿರುವುದನ್ನು ಪ್ರತಿಭಟಿಸಲು ಇದೇ ೧೮ನೇ ತಾ|| ಕಾರ್ಮಿಕರ ಪ್ರತಿಭಟನಾ ಮೆರವಣಿಗೆಯನ್ನು ನಡೆಸಬೇಕೆಂದು ಬೊಂಬಾಯಿನಲ್ಲಿ ಮೊನ್ನೆ ನಡೆದ ಸಮತಾವಾದಿ ಪಕ್ಷದ ಸಭೆಯಲ್ಲಿ ನಿರ್ಧರಿಸಲಾಯಿತು ಬೊಂಬಾಯಿನ ಕಾಮಗಾರ್ ಮೈದಾನದಿಂದ ಚೌಪಾತಿಗೆ ೪ ಮೈಲಿ ಮೆರವಣಿಗೆಯಲ್ಲಿ ಹೊರಟು ಸಭೆ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಜ್ವಾಲಾಮುಖಿ ನಿಂತಿತು

ಕಳೆದ ಮೂರು ದಿನಗಳಿಂದ ಬೆಂಕಿ ಕಾರುತ್ತಿದ್ದ ಎಟ್ನಾ ಪರ್ವತದ ಜ್ವಾಲಾಮುಖಿಯು ಈಗ ಸಂಪೂರ್ಣವಾಗಿ ನಿಂತಿದೆಯೆಂದೂ [illegible] ಗಾಬರಿಯಿಂದ ಓಡಿಹೋಗಿದ್ದ ಜನರು ಹಿಂತಿರುಗುತ್ತಿದ್ದಾರೆಂದೂ ಹೇಳಲಾಗಿದೆ

ಪರಸ್ಪರ ತೀರ್ಮಾನದಿಂದ ಕರ್ನಾಟಕ ಪ್ರಾಂತ

ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಕಮಿಟಿಗಳ ವರದಿಯನ್ನು ಭಾರತ ಸರ್ಕಾರ ಒಪ್ಪಿದೆ ಅದರ ಬಗ್ಗೆ ಏರ್ಪಡುವ [illegible] ಗಳು ಬಿಟ್ಟು ಶೀಘ್ರದಲ್ಲಿ ಆಂಧ್ರ ಪ್ರಾಂತ ಮತ್ತು ಇತರ ಭಾಷಾವಾರು ಪ್ರಾಂತಗಳನ್ನು ಸ್ಥಾಪಿಸಲು ಸಾಧ್ಯವಾಗುವುದು [illegible] ಸರ್ಕಾರವು ಬಲವಂತಪಡಿಸದೆ ಹೋಗುವುದಿಲ್ಲ ಸಂಬಂಧಪಟ್ಟವರು ಪರಸ್ಪರ ತೀರ್ಮಾನಿಸಿಕೊಂಡಲ್ಲಿ ಅದು [illegible] ವುದು ಎಂದು ಪಂಡಿತ ನೆಹರೂರವರು ಕರ್ನಾಟಕ ಪ್ರಾಂತ ರಚನೆ ಬಗ್ಗೆ ತಿಳಿಸಿರುತ್ತಾರೆ

ಖಾದಿಕೆಲಸಗಾರರ ಚಳುವಳಿ ಮುಂದೆಹೋಯಿತು

ಬದನವಾಳು ಖಾದಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯು ಸಭೆಯು ಕಳೆದ ಭಾನುವಾರ ನಡೆದು ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಇದೇ ೧೫ನೇ ತಾ|| ನಿಂದ ಪ್ರಾರಂಭಿಸಬೇಕಾಗಿದ್ದ ಚಳುವಳಿಯನ್ನು ಇದೇ ೩೧ನೇ ತಾ|| ವರೆಗೆ ಮುಂದುವರೆಸಬೇಕೆಂದು ತೀರ್ಮಾನಿಸಲಾಯಿತು [illegible] ಸಮಿತಿಯು ತೀರ್ಮಾನವನ್ನು [illegible] ಬೇಕೆಂದು ಸಲಹೆ [illegible] ರೀತಿ ಮಾಡಲಾಯಿತೆಂದು [illegible] ಲ್ಲಿ ಕೆಲಸಗಾರರ [illegible] ದಿದ್ದ ಪಕ್ಷದಲ್ಲಿ ಚಳುವಳಿ ಪ್ರಾರಂಭಿಸಬೇಕೆಂದೂ ನಿರ್ಣಯ ಮಾಡಲಾಯಿತು.

ಅಣು ಬಾಂಬುಗಳನ್ನು ನಾಶ ಮಾಡಬೇಕು

ಪಶ್ಚಿಮದಲ್ಲಿರುವ ಅಣು ಬಾಂಬುಗಳನ್ನೆಲ್ಲವನ್ನೂ ನಾಶ ಮಾಡಬೇಕೆಂದು ನ್ಯೂಯಾರ್ಕಿನಲ್ಲಿ ನಿನ್ನೆ ನಡೆದ ಅಮೇರಿಕ ಮತ್ತು ರಷ್ಯ ರಾಷ್ಟ್ರೀಯ ಸೌಹಾರ್ದ ಸಮಿತಿಯವರು ನಿರ್ಣಯ ಮಾಡಿರುತ್ತಾರೆ ಅಮೇರಿಕದ ರಕ್ಷಣಾ ಖರ್ಚನ್ನು ಕಡಿಮೆ ಮಾಡಿ ರಷ್ಯ ಜೊತೆ ವ್ಯಾಪಾರ ಸಂಬಂಧವನ್ನು ಏರ್ಪಡಿಸಬೇಕೆಂದು ಅಧ್ಯಕ್ಷ ಟ್ರೂಮನ್‌ರವರನ್ನು ಪ್ರಾರ್ಥಿಸುವ ನಿರ್ಣಯವನ್ನೂ ಮಾಡಲಾಗಿದೆ

ಭಾರತಕ್ಕೆ ಅಮೇರಿಕದಿಂದ ಗೋಧಿ

ರಿಯಾಯಿತಿ ದರದಲ್ಲಿ ೧೦ ಲಕ್ಷ ಟನ್ ಗೋಧಿಯನ್ನು ಭಾರತಕ್ಕೆ ಕಳುಹಿಸುವ ವಿಚಾರವನ್ನು ಅಮೇರಿಕ ಪರ್ಯಾಲೋಚಿಸುತ್ತಿದೆಯೆಂದು ಹೇಳಲಾಗಿದೆ

ಬೆಂಕಿ ಅನಾಹುತದಲ್ಲಿ ಹೆಂಗಸು ಬೆಂದುಹೋದಳು

[illegible]

ದ್ವಿದಳ ಧಾನ್ಯಗಳನ್ನು ತಿನ್ನುವುದಿಲ್ಲವೆಂದು ಪ್ರತಿಜ್ಞೆ

ಸರ್ಕಾರದವರು ಆಹಾರ ಹತೋಟಿ ಅಜ್ಞೆಗಳನ್ನು ಸಡಿಲ ಮಾಡುವವರೆಗೂ ದ್ವಿದಳ ಧಾನ್ಯಗಳಿಂದ ತಯಾರಾದ ತಿಂಡಿ ಪದಾರ್ಥಗಳನ್ನು ತಿನ್ನುವುದಿಲ್ಲವೆಂದು [illegible] ಇಬ್ಬರು ಪ್ರತಿಜ್ಞೆ ತೆಗೆದುಕೊಂಡಿದ್ದಾರೆ ಅವರಲ್ಲಿ ಒಬ್ಬರು [illegible] ಬಲೀ ಪಾಲಿಸ್ಸೀ ಸೇವಿಸುತ್ತಿದ್ದಾರೆ

[illegible] ಕೋಟಿ [illegible] ಯೋಜನೆ

[illegible] ಯೋಜನೆಯನ್ನು [illegible] ಸರ್ಕಾರದವರು [illegible] ಕೈಗಾರಿಕೆಗಳು ಒಂದಿವೆಯೆಂದು [illegible] ಲಾಗಿದೆ

ನಿರಾಶ್ರಿತರ ಪ್ರತಿಭಟನಾ ಮೆರವಣಿಗೆ

ನಿರಾಶ್ರಿತರು ಆಸ್ತಿಪಾಸ್ತಿಗಳ ವಶದ ಕಾನೂನನ್ನು ಪ್ರತಿಭಟಿಸಲು ಪಾಕಿಸ್ತಾನದಿಂದ ಬಂದ ೬ ಸಾವಿರ ಜನ ನಿರಾಶ್ರಿತರು ಲಕ್ನೋ ನಗರದಲ್ಲಿ ಕಪ್ಪು ಬಾವುಟಗಳನ್ನು ಹಿಡಿದುಕೊಂಡು ಮೆರವಣಿಗೆಯಲ್ಲಿ ಹೊರಟು ಮೊನ್ನೆ ದಿನ ಪ್ರದರ್ಶನ ನಡೆಸಿದರು [illegible] ಪ್ರತಿಭಟನಾ ಸಭೆಗಳು ನಡೆದುವು

ಚೀಣಾ ಕಮ್ಯೂನಿಸ್ಟರಿಗೆ ಭಾರತದ ಅಂಗೀಕಾರ

ಇದೇ [illegible] ಚೀಣಾ ಕಮ್ಯೂನಿಸ್ಟ ಸರ್ಕಾರವನ್ನು ಭಾರತವು ಅಂಗೀಕರಿಸುವುದೆಂದು ತಿಳಿಯುವುದು [illegible] ಅಂಗೀಕಾರ [illegible]

[illegible] ಅಶಾಂತಿ

[illegible]

ಜಿಲ್ಲಾ ಬೋರ್ಡುಗಳಿಗೆ ಜೀವದಾನ

ಸ್ವಂ. ವ. ಫೋನ್] ಬೆಂಗಳೂರು ೭

ಬರುವ ಜನವರಿ ತಿಂಗಳ ಕೊನೆಗೆ ಮುಕ್ತಾಯವಾಗಲಿರುವ ಈಗಿನ ಜಿಲ್ಲಾ ಬೋರ್ಡುಗಳ ಅವಧಿಯನ್ನು ಒಂದು ವರ್ಷಕಾಲ ಹೆಚ್ಚಿಸುವಂತೆ ಶ್ರೀ ಎ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಸ್ಥಳೀಯ ಸಂಸ್ಥೆಗಳ ವಿಚಾರಣಾ ಸಮಿತಿಯವರು ಸರಕಾರಕ್ಕೆ ಶಿಫಾರಸು ಮಾಡಿರುವರು ಈ ಸೂಚನೆಯಂತೆ ಸರ್ಕಾರದವರು ಆಜ್ಞೆ ಹೊರಡಿಸಲಿರುವರೆಂದು ತಿಳಿದುಬಂದಿದೆ

ಮಾಜೀ ಅಧ್ಯಕ್ಷರುಗಳ ಭಾವಚಿತ್ರ ಅನಾವರಣ

ಪೌರಸಭೆಯ ಮಾಜೀ ಅಧ್ಯಕ್ಷರುಗಳಾದ ಶ್ರೀ ಡಬ್ಲ್ಯು. ಹೆಚ್. ಹನುಮಂತಪ್ಪ, ಸಿ ಎಸ್ ನರಸಿಂಗರಾವ್, ಹೆಚ್ ಸಿ ಸೂರ್ಯನಾರಾಯಣ ರಾವ್, ಪಿ ಎಸ್. ಶಿವಶಂಕರ್, ಎ ಜೆ ಮಿಲ್ಲರ್, ಮತ್ತು ಕೆ ಶ್ಯಾಮರಾಜ ಅಯ್ಯಂಗಾರ್ಯರ ಭಾವಚಿತ್ರಗಳನ್ನು ಈ ದಿನ ಶ್ರೀ ಕೆ ಟಿ ಭಾಷ್ಯಂರವರು ಪೌರ ಸಭಾಭವನದಲ್ಲಿ ಅನಾವರಣ ಮಾಡಿದರು ಶ್ರೀ ಗಾನಮೂರ್ತಿ ಸುಬ್ಬಾರಾಮಚೆಟ್ಟಿ ಅಗ್ರಾಸನವನ್ನು ವಹಿಸಿದ್ದರು.

ಕಾರ್ಪೊರೇಷನ್ ಸಮಾರಂಭದ ಪ್ರಸಾರ

ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ನಡೆಯಲಿರುವ ಬೆಂಗಳೂರು ಕಾರ್ಪೊರೇಷನ್ನಿನ ಉದ್ಘಾಟನೋತ್ಸವ ಸಮಾರಂಭವನ್ನು ಆಕಾಶವಾಣಿಯ ಮೂಲಕ ಪ್ರಸಾರ ಮಾಡಲಾಗುವುದು.

ಇದೇ ೩೦ನೇ ತಾ|| ಹೆಡ್ಡಾ

ಶಾಸನಸಭೆ [illegible] ಇದೇ ೩೦ನೇ ತಾ|| ಹೆಡ್ಡಾ [illegible] ನಡೆಸಲು ವ್ಯವಸ್ಥೆ ಮಾಡಲಾಗಿದೆಯೆಂದು ತಿಳಿದು ಬಂದಿದೆ

ಹೊಸ ಫೈಟರ್ ವಿಮಾನದ ತಯಾರಿ

ನೂತನ ಫೈಟರ್ ವಿಮಾನವೊಂದನ್ನು ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿದೆಯೆಂದೂ, ಅದು ಮುಂದಿನ ವರ್ಷದ ಮಧ್ಯಭಾಗದಲ್ಲಿ ಸಿದ್ಧವಾಗುವುದೆಂದೂ ಹೇಳಲಾಗಿದೆ

○ ಮೆ [illegible] ಶ್ರೀ ಎಸ್ ಆರ್ ಜಯರಾಮುರಿಗೆ ಒಂದು ತಿಂಗಳ [illegible] ಶ್ರೀ [illegible] ಶ್ರೀ ಕೆ ಎಸ್ [illegible] ಜವಾಬ್ದಾರಿ [illegible]

[illegible] ೬೦೦ ಜನರ [illegible]

[illegible]

○ [illegible]

ಶ್ರೀ ನೆಹರೂರವರ ರೇಡಿಯೋ ಭಾಷಣ

ಈ ರಾತ್ರಿ ೮ ೩೦ ಘಂಟೆಗೆ ಸರಿಯಾಗಿ ಪ್ರಧಾನಿ ಪಂಡಿತ ನೆಹರೂರವರು ಅಖಿಲ ಭಾರತ ರೇಡಿಯೋ ಕೇಂದ್ರದಿಂದ ಇಂಗ್ಲೀಷ್ ಮತ್ತು ಹಿಂದೂಸ್ತಾನಿಯಲ್ಲಿ ಭಾಷಣ ಮಾಡುವರು

ವಯಸ್ಕರ ವಿದ್ಯಾಭ್ಯಾಸಕ್ಕೆ ೧ ಕೋಟಿ ರೂ

ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಭಾರತ ಸರ್ಕಾರದವರು ಪ್ರಸಕ್ತ ಸಾಲಿಗೆ ೧ ಕೋಟಿ ರೂ ಮಂಜೂರು ಮಾಡಿದ್ದಾರೆ

ರಾಜ್ಯಾಂಗ ಭವನದಮೇಲೆ ಬ್ರಿಟಿಷ್ ರಾಜರ ಕಿರೀಟವಿಲ್ಲ

ದೆಹಲಿಯ ರಾಜ್ಯಾಂಗ ಸಭಾ ಭವನದ ಮೇಲೆ ಇದ್ದ ೫೦೦ ಪೌಂಡು ತೂಕದ ಬ್ರಿಟಿಷ್ ದೊರೆಗಳ ಲೋಹದ ಕಿರೀಟವನ್ನು ಈಗ ತೆಗೆದುಹಾಕಿ ಅದರ ಸ್ಥಳದಲ್ಲಿ ಅಶೋಕ ಸ್ತಂಭದ ಮೇಲಿನ ಸಿಂಹಗಳ ಪ್ರತಿಮೆಗಳನ್ನು ಇಡಲಾಗಿದೆ

ಚಿಯಾಂಗ್ ಕೈಷೇಕರೇ ಅಧ್ಯಕ್ಷರಾದರು

ಕಮ್ಯೂನಿಷ್ಟರ ಧಾಳಿಯನ್ನು ಎದುರಿಸಲಾರದೆ ಚೀಣಾ ರಾಷ್ಟ್ರೀಯ ಸರ್ಕಾರದ ಅನೇಕ ಪ್ರಮುಖರು ಬೇರೆ ಬೇರೆ ಕಡೆಗಳಿಗೆ ಪಲಾಯನ ಮಾಡಿದ್ದಾರೆ ಅಧ್ಯಕ್ಷಸ್ಥಾನವನ್ನು ವಹಿಸಲು ಎಲ್ಲರೂ ಹಿಂತೆಗೆದುದರಿಂದ ಚಿಯಾಂಗ್ ಕೈಷೇಕರು ತಾವೇ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿರುವರು ಅವರು ಫಾರ್ಮೋಸಾ ದ್ವೀಪಕ್ಕೆ ತೆರಳಿರುವರು

ಅಮೆರಿಕಕ್ಕೆ ಚೀಣಾ ಅಧ್ಯಕ್ಷರು

ಕಮ್ಯೂನಿಷ್ಟರ ಮುನ್ನಡೆಯನ್ನು ಕೊನೆಯದಾಗಿ ತಡೆಗಟ್ಟಲು ಅಮೆರಿಕದಿಂದ ಸಹಾಯ ಪಡೆಯಲು ಚೀಣಾ ರಾಷ್ಟ್ರೀಯ ಸರ್ಕಾರದ ಅಧ್ಯಕ್ಷರಾದ ಜ॥ ಲಿಸಂಗ್ ಜನ್ ರವರು ಹಾಂಕಾಂಗಿನಿಂದ ನಿನ್ನೆ ದಿನ ಅಮೆರಿಕಕ್ಕೆ ತೆರಳಿದರು ಅಮೆರಿಕದಿಂದ ಸಹಾಯ ದೊರೆಯದಿದ್ದ ಪಕ್ಷದಲ್ಲಿ ಅವರು ಚೀಣಾಕ್ಕೆ ವಾಪಸ್ಸು ಬರುವುದಿಲ್ಲವೆಂದು ಹೇಳಲಾಗಿದೆ.

ಭಾರತಕ್ಕೆ ಜರ್ಮನಿಯಿಂದ ಯುದ್ಧ ನಷ್ಟ ಪರಿಹಾರ

ಯುದ್ಧ ಪರಿಹಾರಕ್ಕಾಗಿ ಭಾರತಕ್ಕೆ ಜರ್ಮನಿಯಿಂದ ೨೪ ಕೋಟಿ ರೂ ಆಸ್ತಿಪಾಸ್ತಿಗಳು ಬಂದಿವೆಯೆಂದು ತಿಳಿಸಲಾಗಿದೆ

ಸಂಸ್ಕಾರದ ಟೀಕೆಗಾರರಿಗೆ ರಾಷ್ಟ್ರಪತಿಗಳ ಉತ್ತರ

ಸ್ವಾತಂತ್ರ್ಯಗಳಿಸಿದನಂತರ ಭಾರತ ಸರ್ಕಾರವು ಎದುರಿಸಬೇಕಾದ ಕಷ್ಟ ಪರಂಪರೆಗಳನ್ನು ಅನೇಕ ವಿರುದ್ಧ ಶಕ್ತಿಗಳಿದ್ದರೂ ಸಹ ಹೆದರದೆ ಯಶಸ್ವಿಯಾಗಿ ಎದುರಿಸಿರುವುದನ್ನು ಎಲ್ಲರೂ ಮನಗಾಣ ಬೇಕೆಂದು ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಪಾಟ್ನಾದ ಸಾರ್ವಜನಿಕ ಸಭೆಯಲ್ಲಿ ತಿಳಿಸಿರುತ್ತಾರೆ ದೇಶದಲ್ಲಿ ಐಕ್ಯತೆಯನ್ನು ನೆಲೆಗೊಳಿಸಿ, ಸಂಸ್ಥಾನಗಳನ್ನು ವಿಲೀನೀಕರಣ ಮಾಡಿ ಜನರಲ್ಲಿದ್ದ ಪ್ರತ್ಯೇಕ ಭಿನ್ನ ವರ್ಗಗಳನ್ನು ತೊಡೆದು ಹಾಕಲಾಗಿದೆಯೆಂದೂ ಮಹಾತ್ಮಾಜೀಯವರ ಆಕಾಂಕ್ಷೆಯಾದ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಿ,ಕೋಮುವಾರು ಸೌಹಾರ್ದವನ್ನು ಏರ್ಪಡಿಸಲಾಗಿದೆಯೆಂದೂ ತಿಳಿಸಿರುತ್ತಾರೆ

ಮುಂದಿನ ವರ್ಷ ಅಕ್ಕಿ ಬೆಲೆ ಇಳಿಯಬಹುದು

೧೯೫೦ ರಲ್ಲಿ ಗೋಧಿಯ ಬೆಲೆಯು ಶೇಕಡ ೪೪ ರಷ್ಟು ಹೆಚ್ಚಬಹುದೆಂದೂ ಮತ್ತು ಅಕ್ಕಿ ಧಾರಣೆಯು ತಗ್ಗಬಹುದೆಂದೂ ಕೇಂದ್ರ ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಸಲಾಗಿದೆ ೧೯೫೦ನೇ ಸಾಲಿಗೆ ಅರ್ಜೆಂಟೈನಾದಿಂದ ೩,೯೦,೦೦೦ ಟನ್ ಗೋಧಿಯ ಹೊರತು ಇನ್ನಾವ ಆಹಾರ ಧಾನ್ಯವನ್ನೂ ಆಮದು ಮಾಡುವುದಿಲ್ಲವೆಂದೂ ಆಹಾರ ಸಚಿವರು ತಿಳಿಸಿರುತ್ತಾರೆ

ಇನ್ನೂ ಮೂರುಜನ ಕರ್ನಾಟಕದವರ ರಾಜೀನಾಮೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ನಿರ್ಧಾರದಂತೆ ೧೩ ಜನ ನಾಯಕರುಗಳೊಡನೆ ಬೊಂಬಾಯಿ ಶಾಸನ ಸಭೆಯ ಶ್ರೀಗಳಾದ ದಳವಾಯ್, ಎಸ್ ಬಿ .ಕುಟ್ರಿ, ವೆಂಕಟರಡ್ಡಿ ಹೂಲಿಯವರುಗಳೂ ತಮ್ಮ ಸದಸ್ಯತನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ

ಮದ್ರಾಸು ಮತ್ತು ಮೈಸೂರು ಪ್ರದೇಶಗಳ ವಿನಿಮಯ

ಗಡಿಯಲ್ಲಿರುವ ಪ್ರದೇಶಗಳನ್ನು ವಿನಿಮಯ ಮಾಡುವ ಕ್ರಮದ ಪ್ರಕಾರ ಮೈಸೂರು ಸಂಸ್ಥಾನದಿಂದ ಮದರಾಸಿಗೆ ಸೇರುವ ಪ್ರದೇಶಗಳ ಒಟ್ಟು ವಿಸ್ತೀರ್ಣವು ಕೇವಲ ಹತ್ತು ಮೈಲಿಗಳಾಗುವುದೆಂದು ಹೇಳಲಾಗಿದೆ ಮತ್ತು ಜನವರಿ ೨೬ನೇ ತಾ॥ ನ ಹೊತ್ತಿಗೆ ಅವುಗಳ ವರ್ಗೀಕರಣವಾಗುವುದೆಂದು ಹೇಳಲಾಗಿದೆ.

ವಿದ್ಯಾರ್ಥಿ ಸಂಘ

ಶ್ರೀರಂಗಪಟ್ಟಣ ೬

ಇಲ್ಲಿಯ ವಿದ್ಯಾರ್ಥಿ ಸಂಘದ ಸಾಮಾನ್ಯ ಸಭೆಯು ಕಳೆದ ಬಾನುವಾರ ನಡೆದು ಮುಂದಿನ ಸಾಲಿಗೆ ಶ್ರೀ ಎಸ್ ಎ ಸುಬ್ಬರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಕೆ ಎಸ್. ಕೃಷ್ಣಪ್ಪ ಮತ್ತು ಕೆ ವಿ ಕೃಷ್ಣಪ್ಪನವರನ್ನು ಕಾರ್ಯದರ್ಶಿಗಳಾಗಿಯೂ ಚುನಾಯಿಸಲಾಯಿತು

ಪುರಸಭೆಯಲ್ಲಿ ರಾಜ ಪರಿವಾರದವರ ಪ್ರಾತಿನಿಧ್ಯಬೇಕು

ರಾಜಧಾನಿಯ ರಾಜಪರಿವಾರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ಭಾನುವಾರ ಶ್ರೀ ಎಸ್ ದೇವಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಪೌರಸಭೆಯಲ್ಲಿ ರಾಜಪರಿವಾರ ಜನಾಂಗದ ಪರವಾಗಿ ಶ್ರೀ ಎಸ್. ಸಿದ್ದಯ್ಯನವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು

ಆರೋಗ್ಯ ಪ್ರದರ್ಶನದಲ್ಲಿ ಕುಸ್ತಿ ಪಂದ್ಯಗಳು

ಮೈಸೂರು ಪೌರಸಭೆಯವರು ಏರ್ಪಡಿಸಿರುವ ಆರೋಗ್ಯ, ಕಲಾ ಪ್ರದರ್ಶನದ ಅಂಗವಾಗಿ ನಗರದ ಎಲ್ಲಾ ಗರಡಿಗಳ ಎರಡು ತರಗತಿಗಳಲ್ಲಿ ಕುಸ್ತಿ ಪಂದ್ಯಗಳು ೨೨-೧೨-೪೯ರಿಂದ ನಡೆಯಲು ಏರ್ಪಡಿಸಲಾಗಿದೆ ಜಯಿಸಿದವರಿಗೆ ಬೆಳ್ಳಿ ಬಟ್ಟಲನ್ನು ಕೊಡಲಾಗುವುದು. ಇದರಲ್ಲಿ ಭಾಗವಹಿಸುವವರು ತಮ್ಮ ಗರಡಿ ಮಾಸ್ತರ ಮೂಲಕ ಒಂದು ರೂಪಾಯಿ ಪ್ರವೇಶ ಧನದೊಡನೆ ಇದೇ ೧೦ನೇ ತಾ॥ನೊಳಗೆ ಕಾರ್ಯದರ್ಶಿಗಳಿಗೆ ಅರ್ಜಿ ಕಳುಹಿಸಬೇಕು

ವಿದ್ಯಾಶಾಖೆಯಲ್ಲಿ ಮಿತವ್ಯಯ

ವಿದ್ಯಾಭ್ಯಾಸ ಇಲಾಖೆಯಲ್ಲಿ ೨೬ ಲಕ್ಷದಷ್ಟು ಖರ್ಚು ಕಡಿಮೆ ಮಾಡಲು ನಿರ್ಧಾರವಾಗಿದೆಯೆಂದು ಸಚಿವ ಮೌಲಾನಾ ಆಜಾದರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

5—12—49ನೇ ಸೋಮವಾರದಿಂದ

ಶ್ರೀ ಕೃಷ್ಣಲೀಲಾ (ತೆಲುಗು)

ಪಾತ್ರ — ಗಗ್ಗಯ್ಯ, ರಾಮತಿಲಕಂ, ಶ್ರೀರಂಜನಿ, ಪಾರುಪಲ್ಲಿ ರಾಜೇಶ್ವರ ರಾವ್ ಮುಂತಾದವರು

ಪ್ರಭಾ 9—12—49 ರಿಂದ

ಅನೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಫಿಲ್ಮಿಸ್ತಾನರವರ

- ಮಜ್ದೂರ್ - (ಹಿಂದಿ)

ಮುಖ್ಯ ಪಾತ್ರ:- ಇಂದುಮತಿ, ವೀರ, ನಾಸಿರ್ ಖಾನ್

ಡೈರೆಕ್ಟರ್ - ನೀತಿನ್ ಬೋಸ್

ಬೆಳಗಿನ ಪ್ರದರ್ಶನಗಳು

9-12-49ರಿಂದ 4 ದಿನಗಳು

ಡಿಕ್ ಟ್ರೇಸಿ ರಿಟರ್ನ್ಸ್

—: ಬರುತ್ತದೆ :—

ನ್ಯೂ ಥಿಯೇಟರ್ಸ್‌ರವರ

ಛೋಟಾ ಭಾಯ್ (ಹಿಂದಿ)

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಒಂದು ಬೇಲು ಬೆಲೆಗೆ ದೊರೆಯುತ್ತದೆ

ಕೂಡಲೇ ವಿಚಾರಿಸಿರಿ –

''ಸಾಧ್ವಿ'' ಆಫೀಸು,

ಮೈಸೂರು

ಮೈಸೂರು ನಗರ ಪೌರಸಭೆ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ

(ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ)

22—12—49 ರಿಂದ 29—12—49ರ ವರೆಗೆ

ಆರೋಗ್ಯ, ಆಹಾರ, ವಿಷಯವಾಗಿ ತಿಳುವಳಿಕೆ ಕೊಡುವುದಲ್ಲದೆ ಕುಸ್ತಿ, ಮಕ್ಕಳಿಗೆ ಮೈದಾನದ ಆಟಪಾಟಗಳು ಆನೆ ಮನರಂಜನೆಗಳು ಮತ್ತು ಕೈತೋಟದ ಸ್ಪರ್ಧೆ ಏರ್ಪಡಿಸಿದೆ 15-0-0 ರೂಪಾಯಿಗಳಿಗೆ ಮಳಿಗೆಗಳನ್ನು ಕೊಡಲು ಏರ್ಪಡಿಸಿದೆ ವ್ಯಾಪಾರಸ್ಥರಿಗೆ ಒಳ್ಳೇ ಸಮಯ ೧೫ ರೂ ಸಂಗಡ 10-12-49ರ ಒಳಗೆ ಅರ್ಜಿಗಳನ್ನು ಸಲ್ಲಿಸಬೇಕು

(ಸಹಿ) ಟಿ. ನರಸಿಂಹಯ್ಯಂಗಾರ್, ಬಿ. ಎನ್ ಲಿಂಗರಾಜ್, ಕಾರ್ಯದರ್ಶಿಗಳು, ವಸ್ತು ಪ್ರದರ್ಶನ ಸಮಿತಿ, ಪೌರಸಭಾ ಕಛೇರಿ, ಮೈಸೂರು

Edited printed and published by A R Nagarajan, at Sadhvi Press, D. Subbiah Road, Mysore

ಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೮] ಗುರುವಾರ ೮-೧೨-೪೯ [ಸಂಚಿಕೆ ೧೦೯

ಬೆಂಗಳೂರಿನಲ್ಲಿ ಕಾರ್ಪೊರೇಷನ್ ಆರಂಭ

ಕಾರ್ಪೊರೇಷನ್ ಬಗ್ಗೆ ಸರ್ಕಾರದ ಆಜ್ಞೆ

ಸ್ವ ಸು ಫೋನ್] ಬೆಂಗಳೂರು ೮

ವಯಸ್ಕರ ಮತದಾನ ಪದ್ಧತಿಯಂತೆ ಬೆಂಗಳೂರು ಕಾರ್ಪೊರೇಷನ್ನಿಗೆ ಹೊಸ ಚುನಾವಣೆಗಳು ನಡೆಯುವವರೆಗೂ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಿ ಸರ್ಕಾರದವರು ವಿಶೇಷ ಆಜ್ಞೆಯನ್ನು ಹೊರಡಿಸಿರುತ್ತಾರೆ ಕಾರ್ಪೊರೇಷನ್ನಿನ ಕಚೇರಿಯು ಮೇಯೋ ಭವನದಲ್ಲಿರುತ್ತದೆ ಕಾರ್ಪೊರೇಷನ್ನಿನ ಸದಸ್ಯರಾಗಿರುವರು ನಗರ ಸಭೆಯ ಅಧ್ಯಕ್ಷರಾಗಿರುವ ಶ್ರೀ [illegible] ತಾತ್ಕಾಲಿಕ ಮೇಯರ್ ಆಗಿರುವರು ದಂಡಿನ ಪ್ರದೇಶದ ಉಪಾಧ್ಯಕ್ಷರಾಗಿರುವ ಶ್ರೀ ದೀನದಯಾಳ ನಾಯ್ಡು ಉಪ ಮೇಯರಾಗಿರುವರು ಹೊಸ ಕಾರ್ಪೊರೇಷನ್ ಸಭೆಯು ಇನ್ನು ಹತ್ತು ದಿನಗಳನಂತರ ಖಾಯಂ ಮೇಯರ್ ಮತ್ತು ಉಪ ಮೇಯರ್‌ಗಳನ್ನು ಚುನಾಯಿಸುವುದು

ಈಗ ಪೌರಸಭಾ ಕಮಿಷನರಾಗಿರುವ ಶ್ರೀ ಜಾರ್ಜ್ ಮ್ಯಾಥ್ಯೂರವರೇ ಕಮಿಷನರಾಗಿರುವರು ಶ್ರೀ ಎ ಎಲ್ ಗೋವರ್ಧನರವರನ್ನು ಆರೋಗ್ಯಾಧಿಕಾರಿಗಳಾಗಿಯೂ, ಶ್ರೀ ಎಸ್ ಹೆಚ್ ಧನರಾಜ್‌ರವರನ್ನು ಎಂಜಿನಿಯರಾಗಿಯೂ ನೇಮಿಸಲಾಗಿದೆ

ಗಾಂಧೀ ಕೊಲೆ ಮೊಕದ್ದಮೆಗೆ ೯।। ಲಕ್ಷರೂ. ಖರ್ಚು

ಮಹಾತ್ಮರ ಕೊಲೆ ಮೊಕದ್ದಮೆಗಾಗಿ ಸರ್ಕಾರಕ್ಕೆ ೯,೬೬,೩೩೮ರೂ ಖರ್ಚಾಗಿದೆಯೆಂದೂ, ವಕೀಲರು, [illegible] ೩,೮೯,೩೩೦ರೂ ಮತ್ತು ಅಡ್ವೊಕೇಟ್ ಜನರಲ್ ಮತ್ತು ಅವರ ಇಬ್ಬರು ಸಹಾಯಕರಿಗೆ ೩,೪೭,೭೮೩ ರೂ ಗಳನ್ನು ಕೊಡಲಾಗಿದೆಯೆಂದೂ ತಿಳಿಸಲಾಗಿದೆ

ಉಚಿತ ಪಾಠ ಪ್ರವಚನ

ಮೈಸೂರು ವಿದ್ಯಾರ್ಥಿ [illegible] ಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಇಂಟರ್ ಮತ್ತು ಬಿ ಎಸ್ ಸಿ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗಾಗಿ ಉಚಿತ ಪಾಠಪ್ರವಚನಗಳನ್ನು ಏರ್ಪಡಿಸಲಾಗಿದೆ ಸೇರಲಿಚ್ಛಿಸುವವರು ನ್ಯಾಷನಲ್ ಇಂಜನಿಯರಿಂಗ್ ಶಾಲೆಯಲ್ಲಿ ವಿಚಾರಿಸಬಹುದು.

ಬೆಂಗಳೂರು ಕಾರ್ಪೊರೇಷನ್ನಿನ ಆರಂಭೋತ್ಸವ

ಶ್ರೀಮನ್ಮಹಾರಾಜರವರ ಸಂದೇಶ

ಸ್ವ ಸು ಫೋನ್] ಬೆಂಗಳೂರು ೮

ಬೆಂಗಳೂರು ನಗರ ಮತ್ತು ದಂಡಿನ ಪ್ರದೇಶಗಳೆರಡನ್ನೂ ಸೇರಿಸಿ ಕಾರ್ಪೊರೇಷನ್ ಆಗಿ ಪರಿವರ್ತಿಸುವ ಸಮಾರಂಭದ ಆರಂಭೋತ್ಸವವನ್ನು ಇದಿನ ಬೆಳಿಗ್ಗೆ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮೇಯೋ ಭವನದಲ್ಲಿ ನೆರವೇರಿಸಿದರು. ಪೌರಸಭೆಯ ಸಭಾಪತಿಗಳಾದ ಶ್ರೀ [illegible] ಸುಬ್ಬರಾಮ ಶೆಟ್ಟರು ಅಧ್ಯಕ್ಷತೆಯನ್ನು ವಹಿಸಿದ್ದರು ಪ್ರಾರ್ಥನೆಯಾದನಂತರ, ಶ್ರೀಮನ್ಮಹಾರಾಜರವರು ಕಳುಹಿಸಿದ್ದ ಸಂದೇಶವನ್ನು ಓದಲಾಯಿತು ಶ್ರೀ ಸುಬ್ಬರಾಮಶೆಟ್ಟರು ಭಾಷಣ ಮಾಡಿ, ಬೆಂಗಳೂರು ನಗರ ಮತ್ತು ದಂಡಿನ ಪೌರಸಭೆಗಳ ಇತಿಹಾಸವನ್ನು ವಿವರಿಸಿದರು. ಇತ್ತೀಚೆಗೆ ನಗರವು ವಿಸ್ತಾರದಲ್ಲಿಯೂ ಸೌಂದರ್ಯದಿಂದ [illegible] ಬೆಳೆದು ಬಂದ [illegible] ತಿಳಿಸಿದರು ಎರಡು ಪ್ರದೇಶಗಳೂ ಒಂದೇ ಪೌರಸಭೆಯ [illegible] ಒಳಪಡುವುದರಿಂದ [illegible] [illegible] [illegible] [illegible]

ರಾಜಕೀಯ [illegible] ಪ್ರಜಾಸತ್ತೆಯ ಪ್ರಜ್ಞೆ ನಾಗರಿಕರ ಆವಶ್ಯಕತೆಗಳಿಗೆ [illegible] [illegible] ಶ್ರೀಮನ್ಮಹಾರಾಜರವರ ಸಂದೇಶ

ಮಹಾ ಪ್ರಭುಗಳು [illegible] ಸಂದೇಶದಲ್ಲಿ ಈ ರೀತಿ ತಿಳಿಸುತ್ತಾರೆ - ಇದು [illegible] ದಿನ [illegible] [illegible] ನಗರ ಮತ್ತು [illegible] ಪ್ರದೇಶಗಳನ್ನು ಒಟ್ಟಿಗೆ ಸೇರಿಸಲಾಗಿದೆ [illegible] [illegible] [illegible] ಪ್ರದೇಶ ಕಾರ್ಪೊರೇಷನ್ನು [illegible] [illegible] ವಿಲ್ಲ ಪ್ರಜಾಪ್ರಭುತ್ವ ಆಡಳಿತ ನಿರ್ವಹಿಸುವುದರಲ್ಲಿ ನೀವುಗಳು ಹೆಚ್ಚು ಅನುಭವ ಪಡೆದಿದ್ದೀರಿ ೩೦ ಚದುರ ಮೈಲಿ ವಿಸ್ತೀರ್ಣವಾದ ಮತ್ತು ೭ ಲಕ್ಷ ಪ್ರಜಾ ಸಂಖ್ಯೆವುಳ್ಳ ಪ್ರದೇಶದ ಆಡಳಿತವನ್ನು ನಿರ್ವಹಿಸುವ ನಿಮ್ಮ ಜವಾಬ್ದಾರಿಯು ಗುರುತರವಾದುದು ಸೇವಾ ಧರ್ಮವನ್ನೇ ಮುಂದಿಟ್ಟುಕೊಂಡು ಪ್ರಜೆಗಳಿಗೆ ಉಪಕಾರ ಮಾಡಬೇಕು

ರಾಜಾಜಿಯವರ ಸಂದೇಶ

ನಗರ ಮತ್ತು ದಂಡಿನ ಪ್ರದೇಶಗಳನ್ನು ಒಳಗೊಂಡ ಭಾರಿ ಜನಸಮುದಾಯದ ಯೋಗಕ್ಷೇಮವನ್ನು ನಿರ್ವಹಿಸುವ ಜವಾಬ್ದಾರಿಯು ಗುರುತರವಾದುದು ಬೆಂಗಳೂರು ನಗರವು ಸಕಲ ವಿಧಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಿದೆ ಅದರ ನೈಸರ್ಗಿಕ ಸೌಂದರ್ಯ, ಪ್ರಜಾ ಸೌಕರ್ಯದ ವ್ಯವಸ್ಥೆ ಮುಂತಾದ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ಬೆಳೆಯಲಿ ಪೌರಸಭೆಯಲ್ಲಿ ಯಾವ ಪಂಗಡವೇ ಬಹು ಸಂಖ್ಯೆಯಲ್ಲಿರಲಿ ನಗರದ ನಿವಾಸಿಗಳ ಕುಂದು ಕೊರತೆಗಳಿಗೆಲ್ಲಾ ಅವರೇ ಉತ್ತರವಾದಿಗಳೆಂಬ ಹೊಣೆಯನ್ನು ಅರಿತುಕೊಳ್ಳಬೇಕು ಅಲ್ಪ ಸಂಖ್ಯಾತರ ಮೇಲೆ ಜವಾಬ್ದಾರಿಯನ್ನು ಹಾಕಬಾರದು ಎಂಬುದಾಗಿ ಗೌರ್ನರ್ ಜನರಲ್ ರಾಜಾಜಿಯವರು ಸಮಾರಂಭಕ್ಕೆ ಕಳುಹಿಸಿರುವ ಸಂದೇಶದಲ್ಲಿ ತಿಳಿಸಿರುತ್ತಾರೆ

ಮಹಾಪ್ರಧಾನಿ ಪಂಡಿತ ನೆಹರೂರವರು ಶುಭಾಶಯಗಳನ್ನು ಕಳುಹಿಸಿ ಕಾರ್ಪೊರೇಷನ್ನಿಗೆ ಯಶಸ್ಸು ಉಂಟಾಗಲೆಂದು ಕೋರಿರುತ್ತಾರೆ

ಸರದಾರ ವಲ್ಲಭಭಾಯಿ ಪಟೇಲ್ ಮತ್ತು ಶ್ರೀ [illegible] ರವರು ಸಹ ಶುಭ-ಸಂದೇಶವನ್ನು ಕಳುಹಿಸಿರುತ್ತಾರೆ

ಮುಖ್ಯ ಮಂತ್ರಿಗಳ ಭಾಷಣ

ಶ್ರೀ ಕೆ ಸಿ ರೆಡ್ಡಿಯವರು ಕಾರ್ಪೊರೇಷನ್ನಿನ ಆರಂಭೋತ್ಸವವನ್ನು ನೆರವೇರಿಸಿ ಉಭಯ ಪೌರಸಭೆಗಳ ಇತಿಹಾಸವನ್ನು ವಿವರಿಸಿದರು. ಭರತ ಖಂಡದಲ್ಲಿ ಅನೇಕ ದೊಡ್ಡ ಪಟ್ಟಣ ಪ್ರದೇಶಗಳ ವಿಲೀನೀಕರಣ ಆಗುತ್ತಿರುವ [illegible] [illegible] ಈ ಎರಡು ಪೌರಸಭೆಗಳ ಐಕ್ಯತೆಯು ಹೊಸ [illegible] ವಿಚಾರವಾಗಿ [illegible] [illegible] ಮತ್ತು [illegible] [illegible]

[illegible] [illegible] [illegible] [illegible] ಕಾರ್ಪೊರೇಷನ್ನನ್ನು [illegible] [illegible] [illegible]

[illegible] [illegible] [illegible] [illegible]

ಜನವರಿ ೨೬ ರಿಂದ ನೂತನ ನೋಟುಗಳು

[illegible] [illegible] [illegible] [illegible] [illegible] ನೂತನ [illegible] [illegible] [illegible] [illegible]

ಎನ್. ಎಸ್. ಸುಬ್ಬರಾಯರ ಸ್ಮಾರಕ ಚರ್ಚಾ ಸ್ಪರ್ಧೆ

ಮೈಸೂರು, ೮

ಮಹಾರಾಜಾ ಕಾಲೇಜ್ ಸಂಘದ ಆಶ್ರಯದಲ್ಲಿ ಎನ್ ಎಸ್ ಸುಬ್ಬರಾಯರ ಸ್ಮಾರಕ ಅಖಿಲ ಕರ್ನಾಟಕ ಚರ್ಚಾ ಸ್ಪರ್ಧೆಯು ಶ್ರೀ ಜಿ ಆರ್ ಮಹಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ನಡೆಯಿತು ಭಾಷಾವಾರು ಪ್ರಾಂತಗಳ ರಚನೆಯು ಭಾರತದ ಏಕಮತ್ಯ ಮತ್ತು ಒಗ್ಗಟ್ಟಿಗೆ ಪುಷ್ಟಿಯುಂಟುಮಾಡುವುದು ಎಂಬ ವಿಷಯದ ಮೇಲೆ ಚರ್ಚೆ ನಡೆದು ಎರಡು ಪಕ್ಷದವರಿಗೂ ಸಮನಾಗಿ ಓಟು ಬಿದ್ದಿತು ಒಟ್ಟು ೧೬ ಕಾಲೇಜುಗಳು ಭಾಗವಹಿಸಿದ್ದವು ಕೋಲಿಂಗ್ ಷೀಲ್ಡು ಮಹಾರಾಜಾ ಕಾಲೇಜಿಗೂ ಪ್ರಥಮ ಬಹುಮಾನವು ಮಹಾರಾಜಾ ಕಾಲೇಜಿನ ಶ್ರೀ ಸಿದ್ದಪ್ಪ, ಎರಡನೇ ಬಹುಮಾನವು ಬೆಳಗಾಂ ಲಾ ಕಾಲೇಜಿನ ಶ್ರೀ ಕೆ ಭಂಡಾರಿ, ಮೂರನೇ ಬಹುಮಾನವು ಮೈಸೂರು ಇಂಜನಿಯರಿಂಗ್ ಶಾಲೆಯ ಚಂದ್ರಶೇಖರಯ್ಯನವರಿಗೂ ದೊರೆತುವು

ಭಾವಸಾರ ಕ್ಷತ್ರಿಯ ಮಂಡಲಿ

ರಾಜಧಾನಿಯ ಭಾವಸಾರ ಕ್ಷತ್ರಿಯ ಮಂಡಲಿಯ ಕಾರ್ಯಕಾರೀ ಸಮಿತಿಗೆ ಶ್ರೀ ಗಂಗಾಧರ ಎಲ್ ರಾಮಚಂದ್ರರಾವ್ ಶಕುಂಗೆ [illegible] ರಾವ್, ರಾಜಾರಾಮ್ ರಾವ್ [illegible] ಸಂತೋಷರಾವ್, ಹಲಾಲೆ ಧೋಂಡೋಜಿ ರಾವ್, ಟಿಕಾರೆ ಚಂದ್ರಶೇಖರ ರಾವ್, ಪುಟ್ಟಸ್ವಾಮಿರಾವ್, ಬೇದರೆಗೋವಿಂದರಾವ್, ಲಾಲೆ ವೆಂಕಟರಾವ್, [illegible] ರಾವ್, ಶೇಷಗಿರಿರಾವ್, ನರಸಿಂಗರಾವ್, ಎನ್ ಎಸ್ ರಾಮರಾವ್, ಎಸ್. ಲಕ್ಷ್ಮಣರಾವ್, ಮತ್ತು ಭಗವಂತರಾವ್‌ರವರುಗಳು ಚುನಾಯಿತರಾಗಿದ್ದಾರೆ

ಆವಳಿ ಜವಳಿಯ ಬಗ್ಗೆ ಸಂಶೋಧನೆ

ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಸಂಶೋಧನಾಲಯದಲ್ಲಿ ಅತ್ಯಾಕರ್ಷಣೀಯವಾದ ಮಾನಸಿಕ ಸಂಶೋಧನೆಗಳನ್ನು ನಡೆಸಲಾಗುತ್ತಿದೆ ಇದಕ್ಕೆ ಅವಳಿಯಾಗಿ ಜನಿಸಿದ ಸೋದರ ಮತ್ತು ಸೋದರಿಯರ ಸಹಕಾರವು ಬಹಳ ಅವಶ್ಯಕವಾಗಿದೆ ಆದ್ದರಿಂದ ಮೈಸೂರು ನಗರದಲ್ಲಿ ಮತ್ತು ಅದರ ಸಮೀಪದಲ್ಲಿ ೧೦ ವರ್ಷಗಳಿಗೆ ಮೀರಿದ ವಯಸ್ಸಿನ ಯಮಳ ಬಾಲಕರು ಅಥವಾ ಬಾಲಕಿಯರು ಇದ್ದರೆ ಬಂದರೆ ಅವರ ಹೆಸರು ಮತ್ತು ವಿಳಾಸವನ್ನು ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್‌ರವರಿಗೆ ದಯವಿಟ್ಟು ತಿಳಿಸಬೇಕೆಂದು ಡಾ॥ ಎಂ ವಿ ಗೋಪಾಲಸ್ವಾಮಿಯವರು ಪ್ರಾರ್ಥಿಸಿರುತ್ತಾರೆ

ಕೇಡಿಗಳ ಪಟ್ಟಿಯಲ್ಲಿ ಗೌರ್ನರರ ಹೆಸರು

ಕೇಡಿಗಳ ಹೆಸರಿನ ಪಟ್ಟಿಯಲ್ಲಿ ಒರಿಸ್ಸಾ ಗೌರ್ನರರಾದ ಶ್ರೀ ಆಸಫ್ ಅಲಿಯವರ ಹೆಸರು ಇರುವುದನ್ನು ಕೆಲವು ದಿನಗಳ ಹಿಂದೆ ದೆಹಲಿಯ ಉನ್ನತ ಪ್ರೋಲೀಸ್ ಅಧಿಕಾರಿಗಳು ಕಂಡುಹಿಡಿದರಂತೆ ಈ ಪಟ್ಟಿಯು ೨೦ ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ತಯಾರಾಗಿತ್ತಂತೆ, ಈಗ ಈ ಹಳೆಯ ಪಟ್ಟಿಯನ್ನು ರದ್ದು ಮಾಡಬೇಕೆಂದು, ಆಜ್ಞೆಯಾಗಿರುವುದಾಗಿಯೂ ತಿಳಿದುಬಂದಿದೆ

ಸಮತಾವಾದಿ ಪಕ್ಷವು ಸರ್ಕಾರದ ಎದುರು ಪಕ್ಷ

ಭಾರತ ಸಮತಾವಾದಿ ಪಕ್ಷವು ಕಾಂಗ್ರೆಸ್ಸಿನ ಒಂದು ಪಕ್ಷವೂ ಅಲ್ಲ ಮತ್ತು ಅದರ ವೈರಿಯೂ ಅಲ್ಲವೆಂದೂ ಪ್ರಜಾಪ್ರಭುತ್ವದಲ್ಲಿ ಇರಬೇಕಾದ ಸರ್ಕಾರದ ಪ್ರತಿಪಕ್ಷವೆಂದೂ ಅದರ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್ ರವರು ತಿಳಿಸಿರುತ್ತಾರೆ

ಕಲ್ಕತ್ತೆಗೆ ಸಿದ್ಧಗೊಳಿಸಿದ ಮನೆಗಳು

ಸ್ವೀಡನ್ನಿನಿಂದ ೧ ಸಾವಿರ ಸಿದ್ಧಗೊಳಿಸಿದ ಮನೆಗಳನ್ನು ಕಲ್ಕತ್ತ ನಗರಕ್ಕೆ ಕಳುಹಿಸಲಾಗಿದೆ

C T C.

COACHING CLASSES

B Sc – P C M only

INTER – English (49 & 50 texts) P C M or C B Z Kan or Sanskrit

S S L C – All Subjects

For details –

City

TUTORIAL COLLEGE

1531 V V ROAD, MYSORE

ಭಾರತದಲ್ಲಿ ಕೇಬಲ್ ತಂತಿಗಳ ತಯಾರಿ ಕಾರ್ಖಾನೆ

ಭಾರತದಲ್ಲಿ ಕೇಬಲ್ ತಂತಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲು ಲಂಡನ್ನಿನ ಸ್ಟಾಂಡರ್ಡ್ ಟೆಲಿಫೋನ್ ಮತ್ತು ಕೇಬಲ್ ಕಂಪೆನಿಯೊಡನೆ ಒಪ್ಪಂದವಾಗಿದೆಯೆಂದು ತಿಳಿದುಬಂದಿದೆ

ತುರುವೇಕೆರೆ ಬಸವರಾಜ ಅರಸಿನವರ ನಿಧನ

ಲೋಕಹಿತೈಷಿ ತುರುವೇಕೆರೆ ಬಸವರಾಜ ಅರಸಿನವರು ಕಳೆದ ಸೋಮವಾರ ತಮ್ಮ ಊರಿನ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರಿಗೆ ೫ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳೂ ಇದ್ದಾರೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ

ಏಪ್ರಿಲ್ ತಿಂಗಳಿನಲ್ಲಿ ಆಂಧ್ರ ಪ್ರಾಂತ್ಯ

ಜನವರಿ ೨೬ನೇ ತಾ|| ಸೋಳಗಾಗಿ ಆಂಧ್ರ ಪ್ರಾಂತ್ಯವನ್ನು ನಿರ್ಮಿಸಲು ಸಾಧ್ಯವಿಲ್ಲವೆಂದೂ, ಅದನ್ನು ಏಪ್ರಿಲ್ ೧ನೇ ತಾ|| ನ ಹೊತ್ತಿಗೆ ಏರ್ಪಡಿಸಬಹುದೆಂದೂ ಮದರಾಸ್ ಸರ್ಕಾರದವರು ತೀರ್ಮಾನಕ್ಕೆ ಬಂದಿದ್ದಾರೆ

ಪಂಚಾಯಿತಿ ಚುನಾವಣೆ ರಂಪಿನ ಗಲಭೆ

ಶಿವಮೊಗ್ಗ ತಾಲ್ಲೂಕು ಹಾರನಹಳ್ಳಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನೊನ್ನೆ ದಿನ ಹೊಡೆದಾಟವಾಗಿ ಒಬ್ಬನಿಗೆ ತೀವ್ರ ಗಾಯವಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ

ಚಾಮುಂಡೇಶ್ವರಿ ಟಾಕೀಸ್

9-12-49ರ ರ ಅಮೋಘ 8ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಅಪೂರ್ವ ಸಹೋದರರು

ಮುಖ್ಯ ಪಾತ್ರ - ಎಂ. ಕೆ. ರಾಧಾ, ಭಾನುಮತಿ, ಎಂ. ಕೆ. ರಾಧಾ

ಹೊಸ ಮಂತ್ರಿ ಮಂಡಲವು ಅಧಿಕಾರ ವಹಿಸಿಕೊಂಡಮೇಲೆ ಸರ್ಕಾರದ ತಿಥಿಗಳಿಗಾಗಿ ಇದುವರೆಗೆ ೩|| ಲಕ್ಷ ರೂಪಾಯಿ ವೆಚ್ಚವಾಗಿದೆಯೆಂದು ತಿಳಿದುಬಂದಿದೆ

* ಲಕ್ಷ್ಮೀ *

9—12—49 ರಿಂದ

ಅಮೋಘವಾದ ೨ನೇ ವಾರ

ಇನ್ಬವಲ್ಲಿ

(ತಮಿಳು)

ಭೂಮಿಕೆ - T.R. ಮಹಾಲಿಂಗಂ, N.S. ಕೃಷ್ಣನ್, T.A. ಮಧುರ

MORNING SHOWS

From 10-12-49 For 2 days

Fighting – Guardsman

With - Willard Parker Anita Louise

Story adopted from Alexander Dumas 'Companions of Jehu

RAJAKAMAL

MYSORE

MORNING SHOWS

From 9-12-49 For 4 days

CAESAR AND CLEOPATRA

With - Vivien Leigh, Claud Rains and Stewart Granger

Edited, printed and published by A R Nagarajan, at Sadhvi Press D Subbiah Road, Mysore

ಶ್ರೀ ಗಾಯತ್ರೀ

ದಿನವೂ ಮೂರು ಆಟಗಳು

ಕಡೇ ದಿನ

ಟ್ರ್ಯಾಪ್ ರೂಟ್ಸ್

9-12-49ರಿಂದ 2 ದಿನಗಳು ಮಾತ್ರ

ವಿವಿಧ ವಿನೋದಗಳಿಂದಲೂ! ವಿರಾಮವಿಲ್ಲದಯೇ!! ನಗುವಿನಿಂದೊಡ ಗೂಡಿರುವ ಚಿತ್ರ

ದಿ ಕ್ಯಾಟ್ ಅಂಡ್ ದಿ ಕ್ಯಾನರಿ

THE CAT & THE CANARY

ಪಾತ್ರ—ವಿನೋದಿನಿ ಬಾಬ್ ಹೋಪ್

ತಾ|| 10 ಮತ್ತು 11 ಕ್ಕೆ ಬೆಳಗಿನ ಚಿತ್ರ

ನಾರ್ತ್ ವೆಸ್ಟ್ ಮೌಂಟೆಡ್ ಪೊಲೀಸ್

ಪಾತ್ರ – ಗ್ಯಾರಿ ಕೂಪರ್

CHANGE OF ADDRESS

DECCAN HERALD & PRAJAVANI Office, is shifted from present premises to next building, upstairs Door No 1510, west of Rajkamal Talkies, Shivarampet, and a new Phone bearing No 532 will be installed very shortly.

Mysore, 7th December 1949 Manager

॥ ಶ್ರೀ ॥

ಗಣೇಶ - ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

10–12–49 ರಿಂದ ಅಮೋಘ ಆರಂಭ

ಪ್ರತಿದಿನ ೩ ಪ್ರದರ್ಶನಗಳು

ಭಾಸ್ಕರ್ ಪಿಕ್ಚರ್ಸ್‌ರವರ ಸಂಗೀತ ಮತ್ತು ನೃತ್ಯಮಯ ತಮಿಳು ಟಾಕ್ ಚಿತ್ರ

ನಾಟ್ಯರಾಣಿ

– ನಟೀಗಳು –

ವಸುಂಧರಾದೇವಿ, ಬಿ. ಎಸ್ ಸರೋಜ, ಜಯಮ್ಮ, ತವನುಣಿ, ಟಿ ಎಸ್. ಬಾಲಯ್ಯ, ಬಿ ಎಸ್ ರಾಜಯ್ಯಂಗಾರ್, ಚಾರ್ಲಿ ಮುಂತಾದವರು.

– ಹಿನ್ನೆಲೆ ಸಂಗೀತ –

ಡಿ. ಕೆ. ಪಟ್ಟಮ್ಮಾಳ್, ಮತ್ತು ಕೊತ್ತಮಂಗಲಂ ಸೀನು

[Gayathri Release

ರಾಜಕಮಲ್ ಟಾಕೀಸ್

ಅಮೋಘ ಪ್ರಾರಂಭ

9-12-49 ರಿಂದ : ದಿನ 3 ಆಟಗಳು

ಎಂ. ಆರ್. ಎ. ರವರ ತೆಲುಗು ಚಿತ್ರ

– ಮನದೇಶಂ –

ಭೂಮಿಕೆ – ಕೃಷ್ಣವೇಣಿ, ನಾಗಯ್ಯ, ನಾರಾಯಣರಾವ್, ಕಾಂಚನ ಮುಂತಾದವರು

ಡೈರೆಕ್ಟರ – ಪ್ರಸಾದ್ (ದ್ರೋಹಿ ಖ್ಯಾತಿ)

[A Yashodhara Release

ಪ್ರಭಾ

9—12—49 ರಿಂದ

ಅಮೋಘ 2ನೇ ವಾರ

ದಿನವೂ 3 ಆಟಗಳು

ಪಿಲ್ಮಿಸ್ತಾನ್‌ರವರ

– ಮಜಬೂರ್ –

(ಹಿಂದಿ)

ನಟವರ್ಗ ಮುನವ್ವರ್ ಸುಲ್ತಾನ, ಶ್ಯಾಮ್, ನಾಸಿರ್‌ಖಾನ್

ಡೈರೆಕ್ಟರ್ – ನಿತಿನ್ ಬೋಸ್

ಬೆಳಗಿನ ಪ್ರದರ್ಶನಗಳು

9-12 – 4 ದಿನಗಳು

ಡಿಕ್ ಟ್ರೇಸಿ ರಿಟರ್ನ್ಸ್

— ಬರುತ್ತದೆ.—

ನ್ಯೂ ಥಿಯೇಟರ್ಸ್‌ರವರ

ಛೋಟಾ ಭಾಯಿ

(ಹಿಂದಿ)

ಫೋ॥ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೯-೧೨-೪೯ [ಸಂಚಿಕೆ ೧೧೦

ಮಂತ್ರಿಮಂಡಲದ ಪುನರ್ರಚನೆ ೧೪ನೇ ತಾ॥

ಭತ್ತದ ಬೆಲೆಯನ್ನು ಹೆಚ್ಚಿಸಲಾಯಿತು

[ಸ್ವಂ. ಸು. ಫೋ॥] ಬೆಂಗಳೂರು ೯

ಸರ್ಕಾರದವರು ಈ ವರ್ಷದ ಸುಗ್ಗಿಯಲ್ಲಿ ಕೊಳ್ಳುವ ಭತ್ತದ ದರವನ್ನು ಸೂನ ಸುಗ್ಗಿ ಆಜ್ಞೆಯ ಪ್ರಕಾರ ನಿಗದಿಯಾಗಿರುವುದಕ್ಕಿಂತ ಒಂದು ರೂ ನಷ್ಟು ಹೆಚ್ಚಿಸಲಾಗಿದೆಯೆಂದು ತಿಳಿಸಿರುತ್ತಾರೆ. ಮೊದಲನೆ ದರ್ಜೆ ೨೧ ರೂ ಮತ್ತು ಎರಡನೆ ದರ್ಜೆ ೧೯ ರೂ ಎಂದು ನಿಗದಿಮಾಡಲಾಗಿದೆ

೧ ಪ್ರೋ ಟೇ ಷ ನ್ನಿ ನ ಅ ವ ಧಿ

ನೂತನ ಕಾರ್ಪೊರೇಷನ್ನಿನ ತಾತ್ಕಾಲಿಕ ಅಧ್ಯಕ್ಷರು ಮತ್ತು ಸದಸ್ಯರುಗಳ ಕಾಲಾವಧಿಯು ಬರುವ ಮಾರ್ಚಿ ೩೧ನೇ ತಾ॥ ಮುಕ್ತಾಯವಾಗುವುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

○ ಬೆಂಗಳೂರು ಪುರಸಭೆಯ ಮಾಜಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸಲ್ಲಿಸಿದ ಅಪೋಘ ಸೇವೆಯನ್ನು ಪ್ರಶಂಸಿಸಿ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ

○ ಚೀಣಾ ಪ್ರಜಾಪ್ರಭುತ್ವದ ಸಮತಾವಾದಿ ಪಕ್ಷದ ನಾಯಕರಾದ ಡಾ॥ ಕಾರ್ ಸನ್ ಚಂಗ್ ರವರು ಇದೇ ೧೩ ೧೪ ಮತ್ತು ೧೫ ನೇ ತಾ॥ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡುವರು.

○ ಅಸಿಸ್ಟೆಂಟ್ ಕಂಟ್ರೋಲರಾದ ಶ್ರೀ ಎಸ್ ಚಲುವಯ್ಯನವರು ನಿವೃತ್ತರಾಗುವುದಕ್ಕೆ ಮುನ್ನ ಇದೇ ೧೫ನೇ ತಾ॥ ನಿಂದ ೪ ತಿಂಗಳು ರಜಾ ಕೊಡಲಾಗಿದೆ

○ ಇಲ್ಲಿನ ಜಿಲ್ಲಾ ಪೋಲೀಸ್ ಅಧಿಕಾರಿಗಳ ಕಛೇರಿಯ ಆವರಣದಲ್ಲಿದ್ದ ಮೋಟಾರು ಬಸ್ಸಿಗೆ ನಿನ್ನೆ ರಾತ್ರಿ ಅಕಸ್ಮಾತ್ ಬೆಂಕಿ ಬಿದ್ದು ಅದು ಸಂಪೂರ್ಣವಾಗಿ ಸುಟ್ಟು ಹೋಯಿತು.

ಪ್ರಜಾಭಿಪ್ರಾಯವಿಲ್ಲದೆ ವಿಲೀನೀಕರಣ ಕೂಡದು

ಮೈಸೂರಿನ ಪ್ರಜೆಗಳ ಅಭಿಪ್ರಾಯವನ್ನು ಪಡೆಯದೆ ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರನ್ನು ಸೇರಿಸಲು ಅವಕಾಶ ಕೊಡಕೂಡದೆಂದೂ, ಕೆಲವು ಮಂದಿಗಳ ಚಳುವಳಿಗೆ ಕೇಂದ್ರದವರು ಎಂದಿಗೂ ಬಗ್ಗಕೂಡದೆಂದೂ ಸೂಚಿಸಿ ಸಂಸ್ಥಾನದ ಶಾಸನಸಭೆಗಳ ಸದಸ್ಯರುಗಳಾದ ಶ್ರೀ ನಾರಾಯಣಸ್ವಾಮಿ ಮುಂತಾದ ೨೪ ಜನರು ಪಂಡಿತ ನೆಹರೂ ಮತ್ತು ಸರದಾರ್ ಪಟೇಲ್‌ರವರುಗಳಿಗೆ ತಂತಿ ಕಳುಹಿಸಿರುತ್ತಾರೆ

ನೆರೆ ಪ್ರದೇಶಗಳ ವರ್ಗ

ಭಾರತದಲ್ಲಿರುವ ೫೧ ಸಾವಿರ ನೆರೆ ಪ್ರದೇಶಗಳನ್ನು ಐಕ್ಯ ಮಾಡುವ ಬಗ್ಗೆ ಗವರ್ನರ್ ಜನರಲ್ಲರು ಒಂದು ವಿಶೇಷ ಆಜ್ಞೆಯನ್ನು ಹೊರಡಿಸಲಿರುವರೆಂದೂ, ಅದು ಜನವರಿ ೨೬ನೇ ತಾ॥ ಜಾರಿಗೆಬರುವುದೆಂದು ತಿಳಿದುಬಂದಿದೆ ಅದರ ಪ್ರಕಾರ ಮದರಾಸು ಪ್ರಾಂತದಿಂದ ಮೈಸೂರಿಗೆ ೩೦ ಸಾವಿರ ಎಕರೆ ಪ್ರದೇಶಗಳ ೧೫ ಗ್ರಾಮಗಳನ್ನು ಮತ್ತು ಮೈಸೂರಿನಿಂದ ಮದರಾಸಿಗೆ ೧೩ ಗ್ರಾಮಗಳನ್ನು ವರ್ಗಾಯಿಸಲಾಗುವದು.

Edited, printed and published by A. R. Nagarajan, at Sadhvi Press, D Subbaiah Road, Mysore

೨೦ನೇ ತಾ॥ನಿಂದ ನೂತನ ರೇಷನ್ ಕಾರ್ಡು ಹಂಚಿಕೆ

ಮೈಸೂರು ೯

ಇದೇ ೨೦ನೇ ತಾ॥ನಿಂದ ಮುಂದಿನ ತಿಂಗಳು ೭ನೇ ತಾ॥ವರೆಗೆ ನೂತನ ರೇಷನ್ ಕಾರ್ಡುಗಳನ್ನು ಆಯಾ ಡಿಪೋಗಳಲ್ಲಿ ಹಂಚಲಾಗುವುದು ಕಾರ್ಡ್ ಹೋಲ್ಡರುಗಳೇ ಸ್ವತಃ ಹೋಗಿ ಹಳೆಯ ಕಾರ್ಡುಗಳನ್ನು ಕೊಟ್ಟು ನೂತನ ಕಾರ್ಡುಗಳನ್ನು ಪಡೆಯಬೇಕೆಂದು ರೇಷನ್ ಅಧಿಕಾರಿಗಳು ತಿಳಿಸಿರುತ್ತಾರೆ

ನೆಹರೂ ಜಯಂತಿ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ ಸಂಜೆ ೯-೩೦ಗಂಟೆಗೆ ನೆಹರೂ ಜಯಂತಿಯು ಶ್ರೀ ಬಂಗಾರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಪ್ರೊ॥ ಎಸ್ ವಿ ರಂಗಣ್ಣನವರು ಭಾಷಣ ಮಾಡುವರು.

ಗ್ರಾಮಾಧಿಕಾರಿಗಳ ಸಮ್ಮೇಳನದ ಸಮಿತಿ

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನದ ಕಾರ್ಯಕಾರೀಸಮಿತಿಯ ಸಭೆಯು ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆದು ಸಂಸ್ಥೆಯ ಅಂಗರಚನೆ ಮತ್ತು ಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಲಾಯಿತು

ಮಾನವ ಹಕ್ಕುಗಳ ದಿನಾಚರಣೆ

ಮಾನವ ಹಕ್ಕಿನ ದಿನಾಚರಣೆಯ ಸಂಬಂಧದಲ್ಲಿ ನಾಳೆ ಶನಿವಾರ ಸಂಜೆ ೬ಗಂಟೆಗೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಶಾಸನಸಭೆಯ ಸೆಕ್ರೆಟರಿ ಶ್ರೀ ಕೆ ಟಿ ಭಾಷ್ಯಂ ರವರ ಅಧ್ಯಕ್ಷತೆಯಲ್ಲಿ ವಿಶ್ವ ಸಂಸ್ಥೆಯ ಮೈಸೂರು ಶಾಖೆಯ ಆಶ್ರಯದಲ್ಲಿ ಬಹಿರಂಗ ಸಭೆಯು ನಡೆಯುವುದು

ಜೈಲಿನಿಂದ ೧೬ ಬಂದಿಗಳ ಪರಾರಿ

ವಿಂಧ್ಯ ಪ್ರದೇಶದ ಅಜೈಗರ್ ಜೈಲಿನೊಳಗೆ ಕೆಲವು ಖೈದಿಗಳ ವಿಚಾರಣೆನಡೆಯುತ್ತಿದ್ದಾಗ, ಆಪಾದಿತರು ಗಲಭೆ ಎಬ್ಬಿಸಿ ಕಾವಲುಗಾರರಲ್ಲಿದ್ದ ಬಂದೂಕುಗಳನ್ನು ಕಿತ್ತುಕೊಂಡು, ಜೈಲಿನ ಬಾಗಿಲನ್ನು ಮುರಿದು ಹಾಕಿ, ೧೬ ಜನ ಪರಾರಿಯಾದರೆಂದು ವರದಿಯಾಗಿದೆ

ಸಧ್ಯಕ್ಕೆ ಜನಗಣಮನವೇ ರಾಷ್ಟ್ರಗೀತೆ

[ಸ್ವಂ ಸು ಫೋ॥] ಬೆಂಗಳೂರು ೯

ಭಾರತ ರಾಜ್ಯಾಂಗ ಸಭೆಯು ಕೊನೆಯದಾಗಿ ನಿರ್ಧರಿಸುವವರೆಗೂ "ಜನಗಣಮನವು" ರಾಷ್ಟ್ರಗೀತೆಯಾಗಿರಬೇಕು ಅದನ್ನು ೪೫ ಸೆಕೆಂಡು ಅಥವಾ ೧ ನಿಮಿಷಕ್ಕಿಂತ ಹೆಚ್ಚಿಗೆ ಹಾಡಬಾರದು ಮತ್ತು ಅದನ್ನು ಅಗ್ಗವಾಗಿ ಮಾಡದೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಾಡಬೇಕು. ಸಿನಿಮಾ ಮಂದಿರಗಳಲ್ಲಿ ಅದನ್ನು ಹಾಡಕೂಡದು ಮತ್ತು ರಾಷ್ಟ್ರದ ಧ್ವಜವನ್ನು ಬೇಕಾದರೆ ಕೊನೆಯಲ್ಲಿ ಪ್ರದರ್ಶಿಸ ಬಹುದು —ಎಂಬುದಾಗಿ ಸೂಚಿಸಿ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ

ಕೋತಿಗಳನ್ನು ಕೊಲ್ಲಲು ೧೦೦ ರೂ. ಸಂಬಳ

ಹೆಚ್ಚು ಆಹಾರದ ಬೆಳೆಯ ಅಂಗವಾಗಿ ಕೋತಿಗಳನ್ನು ಕೊಲ್ಲುವ ಯೋಜನೆಯನ್ನು ಪೂರ್ವ ಪಂಜಾಬ್ ಸರ್ಕಾರದವರು ಕೈಗೊಂಡಿದ್ದಾರೆ ಅಂಬಾಲಾ ಜಿಲ್ಲೆಯಲ್ಲಿ ಅವುಗಳನ್ನು ನಾಶಮಾಡಲು ತಿಂಗಳಿಗೆ ೧೦೦ ರೂ ಸಂಬಳದ ಮೇಲೆ ಜನರನ್ನು ನೇಮಿಸಿಕೊಳ್ಳುವಂತೆ ತೀರ್ಮಾನಿಸಲಾಗಿದೆ

೪ ದಿನಗಳಲ್ಲಿ ಚಂದ್ರಗ್ರಹಕ್ಕೆ ಪ್ರಯಾಣ

ನಾಲ್ಕು ದಿನಗಳಲ್ಲಿ ಚಂದ್ರಗ್ರಹವನ್ನು ಮನುಷ್ಯನು ತಲುಪಲು ಸಾಧ್ಯವಾಗಬಹುದು ಬ್ರಿಟಿಷ್ ಮತ್ತು ಅಮೆರಿಕದ ವೈಜ್ಞಾನಿಕರು ಅಭಿಪ್ರಾಯಪಟ್ಟಿರುವರು ರಾಕೆಟ್ ವಿಮಾನದಮೂಲಕ ಆ ಗ್ರಹವನ್ನು ತಲುಪಬಹುದೆಂದು ವಿಜ್ಞಾನಿ ... ಡೆ... ಅವರು ಹೇಳುತ್ತಾರೆ ಕಳೆದ ಯುದ್ಧದಲ್ಲಿ ರಾಕೆಟ್ ಬಾಂಬುಗಳು ಘಂಟೆಗೆ ೩ ಸಾವಿರ ಮೈಲಿ ವೇಗದಲ್ಲಿ ಹೋಗುತ್ತಿದ್ದವು ಅವುಗಳ ವೇಗವನ್ನು ಘಂಟೆಗೆ ೨೫ ಸಾವಿರ ಮೈಲಿಗೆ ಏರಿಸಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ

○ ದಕ್ಷಿಣ ಚೀಣಾದಲ್ಲಿ ಚಿಯಾಂಗ್ ಕೈಷೇಕರು ಯುದ್ಧ ಕಾರ್ಯಾಚರಣೆಯ ನಾಯಕತ್ವವನ್ನು ವಹಿಸಿಕೊಂಡು ಯುದ್ಧದ ನಿರ್ದೇಶನವನ್ನು ಮಾಡುತ್ತಿರುವರೆಂದು ತಿಳಿದು ಬಂದಿದೆ

೧೪ನೇ ತಾ॥ ಮಂತ್ರಿ ಮಂಡಲದ ಪುನರ್ರಚನೆ

ನೂತನ ನಾಯಕರ ಚುನಾವಣೆ

ಬೆಂಗಳೂರು ೯

ಸಂಸ್ಥಾನದ ಶಾಸನ ಸಭೆಗಳು ಇದೇ ೧೪ ನೇ ತಾ॥ನಿಂದ ರದ್ದಾಗಿ ರಾಜ್ಯಾಂಗ ಸಭೆಯೇ ಶಾಸನಸಭೆಯಾಗುವುದರಿಂದ ಹೊಸ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ೧೪ನೇ ತಾ॥ ಸೇರಿ ನೂತನ ನಾಯಕರನ್ನು ಚುನಾಯಿಸುವುದು ಆ ದಿನವೇ ಮಂತ್ರಿಮಂಡಲದ ರಾಜೀನಾಮೆಯನ್ನು ಮುಖ್ಯ ಮಂತ್ರಿಗಳು ಮಹಾ ಪ್ರಭುಗಳಿಗೆ ಒಪ್ಪಿಸುವರು ನಾಯಕರು ಆ ದಿನ ಹೊಸ ಮಂತ್ರಿ ಮಂಡಲವನ್ನು ರಚಿಸಲಿರುವರೆಂದು ತಿಳಿದುಬಂದಿದೆ.

ಬೆಂಗಳೂರಿನಲ್ಲಿ ಆಕ್ಟ್ರಾಯ್ ಸುಂಕದ ವಜಾ

ಇಲ್ಲಿನ ಪೌರಸಭೆಯವರು ವಿಧಿಸಿರುವ ಆಕ್ಟ್ರಾಯ್ ಸುಂಕವನ್ನು ಮುಂದಿನ ತಿಂಗಳಿಂದ ವಜಾ ಮಾಡುವ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆಂದು ತಿಳಿದುಬಂದಿದೆ ಇದರಿಂದ ಪುರಸಭೆಗೆ ವರ್ಷಕ್ಕೆ ೧೦ ಲಕ್ಷ ರೂ ವರಮಾನ ಬರುತ್ತಿದೆ ಈ ಸುಂಕವನ್ನು ರದ್ದು ಮಾಡಿದ ಮೇಲೆ ಪುರಸಭೆಗೆ ಸೂಕ್ತ ಪರಿಹಾರವನ್ನು ಸರ್ಕಾರದವರು ಕೊಡಲಿದ್ದಾರೆ

ಗಾಂಧಿ ನಿಧಿಯ ಹಣ ಸಂದಾಯ ಮಾಡದವರ ಹೆಸರು ಪ್ರಕಟಣೆ

ಗಾಂಧೀ ಸ್ಮಾರಕ ನಿಧಿಗೆ ಸಂಬಂಧಪಟ್ಟ ರಶೀತಿ ಪುಸ್ತಕಗಳನ್ನು ಅನೇಕ ಬಾರಿ ಪ್ರಾರ್ಥಿಸಿದರೂ ಇನ್ನೂ ಕಳುಹಿಸದಿರುವುದು ವಿಷಾದಕರ ಇದೇ ೧೬ನೇ ತಾ॥ನೊಳಗಾಗಿ ಅವುಗಳ ಬಳಿಯಿದ್ದಲ್ಲಿ ಹಣ ಸಂದಾಯಮಾಡದಿರುವವರ ಹೆಸರುಗಳನ್ನು ಪ್ರಕಟಿಸಲಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ. ಟಿ ಸಿದ್ದಲಿಂಗಯ್ಯನವರು ತಿಳಿಸಿರುತ್ತಾರೆ

ಕರ್ನಾಟಕ ಪ್ರಾಂತ ರಚನೆಗೆ ಮಹಾರಾಜರ ಅಡ್ಡಿ ಇಲ್ಲ

ಮೈಸೂರು ಸರ್ಕಾರವು ಕರ್ನಾಟಕ ಪ್ರಾಂತ ರಚನೆಯ ತತ್ವವನ್ನು ಒಪ್ಪಿಕೊಂಡಿದೆ ಅದಕ್ಕೆ ಮಹಾರಾಜರು ಅಡ್ಡಿ ಬರುವುದಿಲ್ಲ ಆದುದರಿಂದ ಅದರ ಬಗ್ಗೆ ಚಳುವಳಿಯಾಗಲಿ ಸತ್ಯಾಗ್ರಹವಾಗಲಿ ಅನಾವಶ್ಯಕ ಭಾರತ ರಾಜ್ಯಾಂಗ ಶಾಸನ ವಿಧಿಗಳ ಪ್ರಕಾರ ಕರ್ನಾಟಕ ಪ್ರಾಂತ್ಯ ರಚನೆಗೆ ಕ್ರಮವಾಗಿ ... ಕ್ರಮವನ್ನು ಕೈಗೊಳ್ಳಬಹುದೆಂದು ಭಾರತ ಸರ್ಕಾರಕ್ಕೆ ತಿಳಿಸಲಾಗಿದೆ. ಕೇಂದ್ರದ ಅಭಿಪ್ರಾಯವನ್ನೇ ಮೈಸೂರು ಸಹ ಹೊಂದಿದೆ ಎಂಬುದೇ ಮೈಸೂರು ಸರ್ಕಾರದ ಅಭಿಪ್ರಾಯವೆಂದು ವರದಿಯಾಗಿದೆ

ಮಂತ್ರಿಗಳ ಸಂಬಳದಲ್ಲಿ ಖೋತಾ

[ಸ್ವಂ. ಸು. ಫೋ॥] ಬೆಂಗಳೂರು ೯

ಭಾರತದ ಸರ್ಕಾರದ ಮಿತವ್ಯಯ ಯೋಜನೆಯನ್ನನುಸರಿಸಿ ಮೈಸೂರು ಮಂತ್ರಿ ಮಂಡಲದವರು ತಮ್ಮ ಸಂಬಳದಲ್ಲಿ ಶೇಕಡ ೧೦ ರಷ್ಟು ಈ ತಿಂಗಳಿಂದ ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿರುವುದಾಗಿ ... ಶ್ರೀ ... ಕೆ. ಚೆಂಗಲರಾಯ ರೆಡ್ಡಿಯವರು ತಿಳಿಸಿರುತ್ತಾರೆ

...ಯ ದಸ್ತಗಿರಿ

...ಗೆ ಬರಕೂಡದೆಂಬ ಪ್ರತಿ ...ಜ್ಞೆಯನ್ನು ಉಲ್ಲಂಘಿಸಿ ಸಾರ್ವ ...ಸಭೆಯಲ್ಲಿ ಭಾಷಣ ಮಾಡಲು ಯತ್ನಿಸಿದ ಮಹಾತ್ಮರ ಕೊಲೆ ಮೊಕದ್ದ ...ಮೆಯಲ್ಲಿ ಅಪಾದಿತನಾಗಿದ್ದ ಡಾ॥ ಸದಾಶಿವ ಪರಾಂಜುರೆಯನ್ನು ಮೊನ್ನೆ ದಿನ ದಸ್ತಗಿರಿ ಮಾಡಲಾಯಿತು

Morning Shows at
CHAMUNDESWARI TALKIES
From 9th Dec. 49
For 3 days at 10-30 a.m.
UNIVERSAL's
Canyon Passage
In Technicolor
With:—Susan Hayward
Brian Donlevy

*** ಲಕ್ಷ್ಮೀ ***
9—12—49 ರಿಂದ
ಅಮೋಘವಾದ ೨ನೇ ವಾರ
ಇನ್ಬವಲ್ಲಿ
(ತಮಿಳು)
ಭೂಮಿಕೆ:—T.R. ಮಹಾಲಿಂಗಂ, N.S. ಕೃಷ್ಣನ್, T.A. ಮಧುರಂ

MORNING SHOWS
From 10-12-49 For 2 days
Fighting - - Guardsman
With:—Villiard Parker, Anita Louise
Story adopted from Alexander Dumas' "Companions of Jehu"

ಉದಾರ ಸಹಾಯ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಜಗದಾಂಬಾ ಶಿಶುವಿಹಾರದಲ್ಲಿ ಓದುವ ಅರುವತ್ತ ಬಾಲಕರ ಉಪಯೋಗಕ್ಕಾಗಿ ದೇವರಾಜ ಮಾರ್ಕೆಟ್ ಚೌಕದ ಶ್ರೀ ಕೃಷ್ಣಭವನದ ಮಾಲೀಕರಾದ ಶ್ರೀ ಮುನ್ನಿಲಾಲರು ಉಡಿಗೆ ತೊಡಿಗೆಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ.

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್
ಡೈರೆಕ್ಟರುಗಳ ಚುನಾವಣೆ
ತಾ॥ 11-12-49ನೇ ಭಾನುವಾರ
ಮಧ್ಯಾಹ್ನ ೩ ಗಂಟೆಗೆ
ಸಾಹುಕಾರ್ ರಾ॥ ಬ॥ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುತ್ತದೆ
ದಯಮಾಡಿ ತಮ್ಮ ಘನವಾದ 2 ಓಟುಗಳನ್ನು ಈ ಕೆಳಗೆ ಕಂಡವರಿಗೆ ಕೊಡಬೇಕಾಗಿ ಸವಿನಯ ಪ್ರಾರ್ಥನೆ:—
ನಂ 4 ಎ ಕೃಷ್ಣಮೂರ್ತಿ ರಾವ್
ನಂ 23 ಎಂ. ಆರ್. ಸಿ. ಬಸಪ್ಪ
ಕಳೆದ 10 ವರ್ಷಗಳಿಂದಲೂ ಸಹಕಾರ ಸಂಘಗಳಲ್ಲಿ ನಿರ್ಭಯ, ನಿರ್ದಾಕ್ಷಿಣ್ಯದಿಂದ ನಮ್ಮ ಕೈಲಾದ ಮಟ್ಟಿಗೆ ಸೇವೆಯನ್ನು ಸಲ್ಲಿಸಿರುತ್ತೇವೆ. ಇನ್ನು ಮುಂದೆಯೂ ತಮ್ಮ ಸೇವೆ ಮಾಡಲು ತಮ್ಮ ಮತವನ್ನು ಕೊಟ್ಟು ಉತ್ತೀರ್ಣರನ್ನಾಗಿ ಮಾಡಲು ಪ್ರಾರ್ಥಿಸಿಕೊಳ್ಳುತ್ತೇವೆ.
ತಮ್ಮ ವಿಧೇಯರು,
ಎ. ಕೃಷ್ಣಮೂರ್ತಿ ರಾವ್, ಎಂ. ಆರ್. ಸಿ. ಬಸಪ್ಪ.

॥ ಶ್ರೀ ॥
ಗಣೇಶಾ - ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
10-12-49 ರಿಂದ ಅಮೋಘ ಆರಂಭ
ಪ್ರತಿದಿನ ೩ ಪ್ರದರ್ಶನಗಳು
ಭಾಸ್ಕರ್ ಪಿಕ್ಚರ್ಸ್‌ರವರ ಸಂಗೀತ ಮತ್ತು ನೃತ್ಯಮಯ ತಮಿಳು ಟಾಕ್ ಚಿತ್ರ

ನಾಟ್ಯರಾಣಿ
—ನಟವರ್ಗ:—
ವಸುಂಧರಾದೇವಿ, ಬಿ. ಎಸ್. ಸರೋಜ, ಜಯಮ್ಮ, ತವಮಣಿ, ಟಿ. ಎಸ್. ಬಾಲಯ್ಯ, ಬಿ. ಎಸ್. ರಾಜಯ್ಯಂಗಾರ್, ಚಾರ್ಲಿ ಮುಂತಾದವರು
—ಹಿನ್ನಲೆ ಸಂಗೀತ:—
ಡಿ. ಕೆ. ಪಟ್ಟಮ್ಮಾಳ್, ಮತ್ತು ಕೊತ್ತಮಂಗಲಂ ಸೀನು
[Gayathri Release

ಪ್ರಭಾ
9—12—49 ರಿಂದ
ಅಮೋಘ ೭ನೇ ವಾರ
ದಿನವಹಿ 3 ಆಟಗಳು
ಫಿಲ್ಮಿಸ್ತಾನ್‌ರವರ
- ಮಜ್ದೂರ್ -
(ಹಿಂದಿ)
ಮುಖ್ಯಪಾತ್ರ:—ಇಂದುಮತಿ, ವೀರ, ನಾಸಿರ್‌ಖಾನ್
ಡೈರೆಕ್ಟರ್:— ನೀತಿನ್ ಬೋಸ್

ಬೆಳಗಿನ ಪ್ರದರ್ಶನಗಳು	—: ಬರುತ್ತದೆ :—
9-12-49 ರಿಂದ 4 ದಿನಗಳು	ನ್ಯೂ ಥಿಯೇಟರ್ಸ್‌ರವರ
ಡಿಕ್ ಟ್ರೇಸಿ ರಿಟರ್ನ್ಸ್	ಛೋಟಾ ಭಾಯ್ (ಹಿಂದಿ)

*** ರಾಜಕಮಲ್ ಟಾಕೀಸ್, ಮೈಸೂರು ***

A Yashodhara Release]

ಅಮೋಘ ಪ್ರಾರಂಭ
9-12-49 ರಿಂದ
ದಿನವಹಿ 3 ಆಟಗಳು
ಎಂ. ಆರ್. ಎ. ರವರ ತೆಲುಗು ಚಿತ್ರ
- ಮನದೇಶಂ -
—:ಮುಖ್ಯ ಪಾತ್ರ:—
ಕೃಷ್ಣವೇಣಿ, ನಾಗಯ್ಯ, ನಾರಾಯಣರಾವ್, ಮತ್ತು ಕಾಂಚನ್ ಮುಂತಾದವರು
ಡೈರೆಕ್ಟರು:- ಪ್ರಸಾದ್. (ದ್ರೋಹಿ ಖ್ಯಾತಿ)

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೧೦-೧೨-೪೯ [ಸಂಚಿಕೆ ೧೧೧

೧೭ನೇ ತಾ॥ ನೂತನ ನಾಯಕರ ಚುನಾವಣೆ

ರಾಜಾಜಿ ಕಾರ್ಯಕ್ರಮ

ಮೈಸೂರು ೧೦

ಗೌರ್ನರ್ ಜನರಲ್ ರಾಜಾಜಿಯವರು ಈ ತಿಂಗಳು ೧೯ನೇ ತಾ॥ ಬೆಳಗ್ಗೆ ೧೦ ಗಂಟೆಗೆ ರಾಜಧಾನಿಗೆ ಆಗಮಿಸುವರು. ಲಲಿತ ಮಹಲ್ ಭವನದಲ್ಲಿ ಬಿಡಾರ ಮಾಡುವರು. ಅಲ್ಲಿಂದ ಶ್ರೀಮನ್ಮಹಾರಾಜರೊಡನೆ ರಾಜ ಮರ್ಯಾದೆಯಿಂದ ಮೆರವಣಿಗೆಯಲ್ಲಿ ಹೊರಟು ಜಗನ್ಮೋಹನ ಭವನದಲ್ಲಿ ೧೧॥ ಗಂಟೆಗೆ ವಿಶೇಷ ಛಟಿಕೋತ್ಸವದಲ್ಲಿ ಗೌರವ ಪ್ರಶಸ್ತಿಯನ್ನು ಸ್ವೀಕರಿಸುವರು. ಮಧ್ಯಾಹ್ನ ೩ ಗಂಟೆಗೆ ಹೈದರಾಬಾದಿಗೆ ತೆರಳುವರು

ವ್ಯಾಯಾಮ ಸ್ಪರ್ಧೆ

ಪೌರಸಭೆಯ ಆಶ್ರಯದಲ್ಲಿ ಇದೇ ೨೨ನೇ ತಾ॥ ನಿಂದ ವಸ್ತುಪ್ರದರ್ಶನಾಲಯದಲ್ಲಿ ನಡೆಯುವ ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆಗಳ ಪ್ರದರ್ಶನದ ಅಂಗವಾಗಿ ವ್ಯಾಯಾಮ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಅದರಲ್ಲಿ ಭಾಗವಹಿಸಲಿಚ್ಛಿಸುವ ವ್ಯಾಯಾಮ ಶಾಲೆಗಳವರು ಇದೇ ೧೬ನೇ ತಾ॥ ನೊಳಗಾಗಿ ೨ ರೂ. ಪ್ರವೇಶ ಧನದೊಡನೆ ಕಾರ್ಯದರ್ಶಿಗಳಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಗೋಷಾ ಮಹಿಳೆಯ ಸಹಾಯದಿಂದ ಕೇಬಲ್ಲುಗಳ ಕಳವು

ಹಬ್ಬಾಳಿನ ಹತ್ತಿರ ಕೇಬಲ್ ತಂತಿಗಳನ್ನು ಕಳುವು ಮಾಡುವುದನ್ನು ಪೋಲೀಸರು ಪತ್ತೆಮಾಡಿ, ಒಬ್ಬಳು ಗೋಷಾ ಸ್ತ್ರೀ ಆಕೆಯ ಇಬ್ಬರು ಮಕ್ಕಳು ಆದಿಯಾಗಿ ೬ ಜನರನ್ನು ದಸ್ತಗಿರಿ ಮಾಡಿದ್ದಾರೆ. ಕಳೆದ ಸೋಮವಾರ ಬೆಂಗಳೂರಿನ ಕಡೆಗೆ ಬರುತ್ತಿದ್ದ ಗೋಷಾ ಗಾಡಿಯನ್ನು ಶೋಧಿಸಿದಾಗ, ಅಲ್ಲಿ ೧೮। ಮಣ ಸೀಸ ಮತ್ತು ೬॥ ಮಣ ತಾಮ್ರದ ತಂತಿಗಳು ಸಿಕ್ಕಿದವೆಂದು ವರದಿಯಾಗಿದೆ.

೧೭ ಲಕ್ಷ ರೂ. ಬೆಲೆಬಾಳುವ ವಜ್ರಗಳ ಕಳುವು

ಹೈದರಾಬಾದಿನ ನವಾಬ್ ಜಹೀರ್ ಯಾರ್ ಜಂಗ್ ಬಹದ್ದೂರ್‌ರವರ ಭವನದಲ್ಲಿ ೧೭ ಲಕ್ಷ ರೂ. ಬೆಲೆಬಾಳುವ ವಜ್ರಗಳನ್ನು ಕಳುವು ಮಾಡಿದ ಮೂರು ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಜಮೀನುಗಳ ಬೇಸಾಯಕ್ಕೆ ಕಡ್ಡಾಯದ ಆಜ್ಞೆ

೮೦೦ ಎಕರೆಗಿಂತ ಹೆಚ್ಚು ಜಮೀನು ಉಳ್ಳವರು ತಮ್ಮ ಜಮೀನುಗಳನ್ನು ಇನ್ನು ಮೂರು ತಿಂಗಳೊಳಗಾಗಿ ಬೇಸಾಯ ಮಾಡಬೇಕೆಂದೂ, ತಪ್ಪಿದಲ್ಲಿ ಅವರನ್ನು ವಶಪಡಿಸಿ ಮಾಡಿ ಜಮೀನುಗಳನ್ನು ಬೇಸಾಯಗಾರರಿಗೆ ಕೊಡುವುದಾಗಿಯೂ ಹೈದರಾಬಾದಿನ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುತ್ತಾರೆ.

ಬೊಂಬಾಯಿ ಅಧಿಕಾರಿಗಳ ಸಂಬಳದಲ್ಲಿ ಖೋತಾ

೩ ಸಾವಿರ ರೂ.ಗಿಂತ ಹೆಚ್ಚಿಗೆ ಸಂಬಳ ಪಡೆಯುವ ಅಧಿಕಾರಿಗಳಿಗೆ ೨೫೦ ರೂ. ಖೋತಾ ಮಾಡಲು ಬೊಂಬಾಯಿ ಸರ್ಕಾರದವರು ನಿರ್ಧರಿಸಿದ್ದಾರೆ. ೨೫೦ ರೂ.ಗಿಂತ ಹೆಚ್ಚಿಗೆ ಸಂಬಳ ಬರುವ ಅಧಿಕಾರಿಗಳಿಗೆ [illegible] ಉಳಿತಾಯದ ಯೋಜನೆಗೆ ರೂ.ನಲ್ಲಿ ೨॥ ಆಣೆಯಿಂದ ೧॥ ಆಣೆವರೆಗೆ ಕೊಡಬೇಕೆಂದೂ ಆಜ್ಞೆ ಮಾಡಲಾಗಿದೆ

ಪೋಲೀಸರನ್ನು ನದಿಗೆ ಎಸೆದ ೨೪ ಮಂದಿಗೆ ಶಿಕ್ಷೆ

ಹೈದರಾಬಾದಿನ ಬೀದರ್ ಜಿಲ್ಲೆಯ ಫಸಲವಾಡಿ ಹಳ್ಳಿಯಲ್ಲಿ ೨೪ ಜನರು ಗಲಭೆ ನಡೆಸಿ ಧಾಳಿ ಮಾಡುತ್ತಿದ್ದವರನ್ನು ತಡೆಯಲು ಹೋದ ೮ ಜನ ಪೋಲೀಸರನ್ನು ಹಿಡಿದು ಅವರ ಕೈಕಾಲುಗಳನ್ನು ಕಟ್ಟಿ ನದಿಗೆ ಹಾಕಿ ಕೊಲೆ ಮಾಡಿದರೆಂಬ ಕಾರಣದ ಮೇಲೆ ಅಪರಾಧಿಗಳೆಲ್ಲರಿಗೂ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ.

ಇನ್ನೂ ೯ ಜನ ಕನ್ನಡಿಗರ ರಾಜೀನಾಮೆ

ಕೆ. ಪಿ. ಸಿ. ಸಿ. ಯ ನಿರ್ಧಾರದಂತೆ ಮದರಾಸಿನ ಶಾಸನ ಸಭೆ ಸ್ವತಂತ್ರ ಸದಸ್ಯರಾದ ಶ್ರೀಮತಿ ಸುಮಂಗಲಮ್ಮ, ಕಾಂಗ್ರೆಸ್ ಸದಸ್ಯರಾದ ಶ್ರೀಗಳು ಮಂಜಯ್ಯ ಹೆಗ್ಗಡೆ, ಯು. ಪಿ. ಮಲ್ಯ, ಎಲ್. ಸಿ. ಪೈಸ್‌ರವರು ಬೊಂಬಾಯಿ ಶಾಸನ ಸಭೆಯ ಸದಸ್ಯರಾದ ಶ್ರೀಗಳು ಆರ್. ಎಸ್. ಹುಕ್ಕೇರಿಕರ್, ಜಿ. ಎನ್. ಪಟ್ಟಣ, ಎನ್. ಡಿ. ಪೋಳ್ದೆ, ಕೆ. ಬಿ. ದಂಡೂರ್, ಲಿಂಗಣ್ಣಗೌಡ ಪಾಟೀಲ್‌ರವರುಗಳು ರಾಜೀನಾಮೆ ಇತ್ತಿದ್ದಾರೆ.

ಆಯುರ್ವೇದ ಮತ್ತು ಯುನಾನಿ ಕಾಲೇಜ್ ಸಂಘ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪದವೀಧರರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೩-೩೦ ಗಂಟೆಗೆ ಶ್ರೀ ಎಸ್. ಸಿ. ಮಲ್ಲಯ್ಯನವರು ತಿಂಗಳ ಕ್ಲಿನಿಕಲ್ ಅಧಿವೇಶನದ ಆರಂಭೋತ್ಸವವನ್ನು ನಡೆಸುವರು.

ಚಿನ್ನ ಪತ್ತಳೆಗಳ ವೆಚ್ಚ ೧೫ ರೂ.ಗೆ ಮೀರಕೂಡದು

ಗೌರ್ನರ್ ಜನರಲ್, ಪ್ರಾಂತೀಯ ಗೌರ್ನರುಗಳು ಮತ್ತು ಇತರ ಪ್ರಮುಖರುಗಳಿಗೆ ಅರ್ಪಿಸುವ ಚಿನ್ನ ಪತ್ತಳೆಗಳ ಖರ್ಚು ೧೫ ರೂ.ಗೆ ಮೀರಕೂಡದೆಂದು ಬೊಂಬಾಯಿ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಸೈನಿಕರಿಂದ ಬೇಸಾಯ

ಕೊಲ್ಲೇಗಾಲ ಪೇಟೆ ಮತ್ತು [illegible] ತಾಲ್ಲೂಕುಗಳಲ್ಲಿ ೩೦೦ ರಿಂದ ೫೦೦ ಎಕರೆಯ ಒಂದೇ ತಾಕಿನ ಜಮೀನುಗಳಲ್ಲಿ ಹೆಚ್ಚು ಆಹಾರ ಬೆಳೆಯುವ ಯೋಜನೆಯ ಅಂಗವಾಗಿ ಸೈನಿಕರಿಂದ ಬೇಸಾಯ ಮಾಡಿಸಲು ಕಾರ್ಯಕ್ರಮವನ್ನು ಸರ್ಕಾರದವರು ತಯಾರಿಸಿದ್ದಾರೆಂದು ತಿಳಿದುಬಂದಿದೆ

ಕಾರ್ಮಿಕರ ಪಂಚಾಯಿತಿ ಸಮಿತಿ

ಮೈಸೂರು ೧೦

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರು ಸಿ. ಟಿ. ಸಿ. ಮತ್ತು ಮಾರುತಿ ಸರ್ವಿಸುಗಳು ಮತ್ತು ಜಿಲ್ಲಾ ಲಾರಿ ಮತ್ತು ಬಸ್ಸುಗಳ ಮಾಲೀಕರುಗಳ ವ್ಯವಹಾರಗಳನ್ನು ವಿಚಾರಿಸಿ ಇತ್ಯರ್ಥ ಮಾಡಲು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿರುವರು. ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎ. ಆರ್. ನಾಗೇಶ್ವರ ಅಯ್ಯರ್, ಶ್ರೀಗಳಾದ ಎಂ. ಎ. ಜೋಯಿಸ್ ಮತ್ತು ಪಿ. ಗೋಪಾಲಕೃಷ್ಣ ಶೆಟ್ಟಿ ಅವರ ಸದಸ್ಯರುಗಳು.

ಸಕ್ಕರೆ ಕೆಲಸಗಾರರ ಮುಷ್ಕರದ ಸಂಧಾನ ವಿಫಲ

ಮಂಡ್ಯದ ಸಕ್ಕರೆ ಕಂಪೆನಿ ಕೆಲಸಗಾರರು ಇದೇ ೧೧ ನೇ ತಾ॥ ನಿಂದ ಮುಷ್ಕರ ಹೂಡಬೇಕೆಂದು ನಿರ್ಧರಿಸಿರುವರಷ್ಟೆ? ಈ ಬಗ್ಗೆ ಕಾರ್ಮಿಕ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ಸಂಘದ ಪ್ರತಿನಿಧಿಗಳನ್ನೂ ಕಂಪೆನಿ ಮುಖ್ಯಸ್ಥರನ್ನೂ ಕರೆಯಿಸಿಕೊಂಡು ಮೊನ್ನೆ ದಿನ ಸಂಧಾನಕ್ಕಾಗಿ ಮಾತುಕತೆ ನಡೆಸಿದರೆಂದೂ, ಆದರೆ ಅದು ವಿಫಲವಾಯಿತೆಂದೂ, ಆದುದರಿಂದ ೧೧ ನೇ ತಾ॥ ನಿಂದ ಮುಷ್ಕರ ಪ್ರಾರಂಭವಾಗುವುದೆಂದೂ ತಿಳಿದುಬಂದಿದೆ

ಕೆಲಸಗಾರರ ರಾಜೀನಾಮೆ

ಇದೇ ೧೧ ನೇ ತಾ॥ ನಿಂದ ಮುಷ್ಕರ ಹೂಡಬೇಕೆಂಬ ನಿರ್ಧಾರವನ್ನು ಪ್ರತಿಭಟಿಸಿ ಮಂಡ್ಯ ಸಕ್ಕರೆ ಕಂಪೆನಿ ಕೆಲಸಗಾರರ ಪೈಕಿ ೬೦೦ ಜನರು ಸಂಘಕ್ಕೆ ರಾಜೀನಾಮೆ ಇತ್ತಿರುವರೆಂದೂ, ಸಂಘದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಎರಡು ಪಕ್ಷಗಳು ತಲೆದೋರಿವೆಯೆಂದೂ ಹೇಳಲಾಗಿದೆ.

ಪ್ರಾಥಮಿಕ ಕಾಂಗ್ರೆಸ್ ಸದಸ್ಯರ ಪಟ್ಟಿ

ಮೈಸೂರು ಜಿಲ್ಲೆಯ ನಾನಾ ತಾಲ್ಲೂಕುಗಳ ಪಂಚಾಯಿತಿಗಳಿಗೆ ಕಾಂಗ್ರೆಸ್ ಸದಸ್ಯರುಗಳನ್ನು ಸೇರಿಸುವ ಕಾಲಾವಧಿ ಮುಗಿದಿದ್ದರೂ ಪ್ರಾಥಮಿಕ ಸದಸ್ಯರ ಪಟ್ಟಿಯನ್ನು ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಕಳುಹಿಸಿ ಕೊಟ್ಟಿಲ್ಲವೆಂದೂ ಇದೇ ೧೫ನೇ ತಾ॥ ನೊಳಗಾಗಿ ಅದನ್ನು ಕಳುಹಿಸಿ ಕೊಡಬೇಕೆಂದೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ [illegible] ಪ್ರಕಟಿಸಿದ್ದಾರೆ

೧೭ ನೇ ತಾ॥ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ಸಭೆ

ಸ್ವಂ. ಸು. ಪೋ.] ಬೆಂಗಳೂರು ೧೦

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿನ್ನೆ ಸೇರಿ ನೂತನ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ೧೭ ನೇ ತಾ॥ ಮಧ್ಯಾಹ್ನ ೨ ಗಂಟೆಗೆ ಸಭೆಸೇರಿ ನಾಯಕರ ಚುನಾವಣೆ ಮುಂತಾದ ವಿಷಯಗಳನ್ನು ಪರಿಶೀಲಿಸತಕ್ಕದ್ದೆಂದು ಗೊತ್ತು ಮಾಡಿರುತ್ತದೆ.

ಬೆಂಗಳೂರು ಕಾರ್ಪೊರೇಷನ್ನಿನ ಕಾಂಗ್ರೆಸ್ ಪಕ್ಷದ ಸದಸ್ಯರೊಡನೆ ಪಾರ್ಲಿಮೆಂಟರಿ ಸಮಿತಿಯವರು ೧೭ ನೇ ತಾ॥ ಸಂಜೆ ೫ ಗಂಟೆಗೆ ಸಮಾಲೋಚನೆ ನಡೆಸುವರು.

೨೬ ನೇ ತಾ॥ ಜನವರಿ ಅಥವಾ ಭಾರತ ರಾಜ್ಯಾಂಗ ಸಭೆಯು ರದ್ದಾಗುವವರೆಗೆ ಮೈಸೂರು ರಾಜ್ಯಾಂಗ ಸಭೆಯೂ ಮುಂದುವರಿಯಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಪಾರ್ಲಿಮೆಂಟರಿ ಸಮಿತಿಯು ಶಿಫಾರಸು ಮಾಡಿದೆ.

ಪಾನ ನಿರೋಧದ ಬಗ್ಗೆ ಪರಿಶೀಲನೆ

ಮೊನ್ನೆ ದಿನ ಸಂಸ್ಥಾನದ ಎಕ್ಸೈಜ್ ಅಧಿಕಾರಿಗಳು ತಿಪ್ಪಗೊಂಡನಹಳ್ಳಿಯಲ್ಲಿ ಸಭೆ ಸೇರಿ ಪಾನ ನಿರೋಧದ ಕಾರ್ಯಕ್ರಮವನ್ನು ಮುಖ್ಯವಾಗಿ ಜಾರಿಗೆ ತರುವ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿದರು. ಈಗಿನ ನೌಕರರಿಗೆ ರೆವಿನ್ಯೂ ಮತ್ತು ಪೋಲೀಸ್ ಸಿಬ್ಬಂದಿಗಳಂತೆಯೇ ವೇತನಗಳನ್ನೂ ಭತ್ಯಗಳನ್ನೂ ಕೊಟ್ಟು ಇತರ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅವರೇ ಈ ಕಾರ್ಯಗನ್ನು ಸಮರ್ಪಕವಾಗಿ ನೋಡಿಕೊಳ್ಳಬಲ್ಲರೆಂಬ ಅಭಿಪ್ರಾಯವು ವ್ಯಕ್ತಪಡಿಸಲ್ಪಟ್ಟಿತು.

ಕ್ರಿಸ್‌ಮಸ್ಸಿಗೆ ೪ ದಿನ ಮಾತ್ರ ರಜಾ

ಸ್ವಂ. ಸು. ಪೋ.] ಬೆಂಗಳೂರು ೧೦

ಈ ತಿಂಗಳು ೨೬, ೩೧ ಮತ್ತು ಜನವರಿ ೧ ನೇ ತಾ॥ ಮಾತ್ರ ಕ್ರಿಸ್‌ಮಸ್ ರಜಾ ದಿನಗಳಾಗಿ ಪರಿಗಣಿಸಲ್ಪಡುವುವೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಆದರೆ ವಿದ್ಯಾ ಸಂಸ್ಥೆಗಳಿಗೆ ಈ ವರ್ಷ ಮಾತ್ರ ಈ ತಿಂಗಳು ೨೪ರಿಂದ ಜನವರಿ ೯ರವರೆಗೆ ರಜಾ ಕೊಡಲಾಗುವುದು.

ವಿ. ವೆಂಕಟಪ್ಪನವರೇ ನೂತನ ಶಾಸನ ಸಭಾಧ್ಯಕ್ಷರು

ರಾಜ್ಯಾಂಗ ಸಭೆಗೆ ಶ್ರೀ ಟಿ. ಸುಬ್ರಹ್ಮಣ್ಯಂರವರು ಅಧ್ಯಕ್ಷರಾಗಿರುವುದರಿಂದ, ನೂತನ ಶಾಸನಸಭೆಗೆ ಶ್ರೀ ವಿ. ವೆಂಕಟಪ್ಪನವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗುವುದೆಂದು ತಿಳಿದುಬಂದಿದೆ.

ಕರ್ನಾಟಕ ಮಂತ್ರಿಗಳ ರಾಜೀನಾಮೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ನಿರ್ಧಾರದಂತೆ ಬೊಂಬಾಯಿನ ವ್ಯವಸಾಯ ಸಚಿವರಾದ ಶ್ರೀ ಎಂ. ಪಿ. ಪಾಟೀಲ್‌ರವರು ತಮ್ಮ ಮಂತ್ರಿ ಪದವಿಗೂ ಮತ್ತು ಶಾಸನ ಸಭೆಗೂ ರಾಜೀನಾಮೆ ಕೊಡಲು ನಿರ್ಧರಿಸಿದ್ದಾರೆ ಅಲ್ಲಿನ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್. ಎಚ್. ಕಂಗಡಿಯವರು ತಮ್ಮ ಸದಸ್ಯತನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ. ಬೊಂಬಾಯಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀಗಳು ಎಸ್. ಆರ್. ಕಾಂತಿ [illegible]

[illegible]

ಲಕ್ಷ್ಮೀ - ಅಪೇರಾ

9-12-49ರಿಂದ ಶುನೋಘ 2ನೇ ವಾರ

ಇಷ್ಟವಲ್ಲಿ

— A NANDI RELEASE —

ಮನೆ ಕ್ರಯಕ್ಕಿದೆ

ದೋರ್ ನಂ ೨೦೩, ತಳೂರು ಮಠದ ಬೀದಿ, ಬಿಳ್ಳಿ ಮೂಹಲ್ಲಾ, ಮೈಸೂರು. ವಿವರಗಳಿಗೆ: ಆರ್ ಗುಂಡೂರಾವ್, ಬ್ರೋಕರ್, ಶ್ರೀರಾಂಪೇಟೆ, ಮೈಸೂರು.

WANTED

An experienced correspondent with knowledge of Accounts and Typing to take up work in a Coffee & Orange Estate in Ittimattu, South Coorg on decent salary with free quarters. Family people preferred. Minimum qualification S S L C. For full details apply in person to

K B Biddiah,
Shivananda Electric Stores,
Sayyaji Rao Road, Mysore

Edited, printed and published by A R Nagarajan, at Sadhvi Press, D Subbaiah Road, Mysore

RAJAKAMAL
MYSORE
MORNING SHOWS
From 9-12-49 For 4 days

CAESAR AND CLEOPATRA

With Vivien Leigh, Claud Rains and Stewart Granger

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್

ಡೈರೆಕ್ಟರುಗಳ ಚುನಾವಣೆ

ತಾ॥ 11-12-49ನೇ ಭಾನುವಾರ

ಮಧ್ಯಾಹ್ನ ೩ ಗಂಟೆಗೆ

ಸಾಹುಕಾರ್ ರಾ॥ ಬ॥ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುತ್ತದೆ

ದಯಮಾಡಿ ತಮ್ಮ ಅಮೂಲ್ಯವಾದ 2 ಓಟುಗಳನ್ನು ಈ ಕೆಳಗೆ ಕಂಡವರಿಗೆ ಕೊಡಬೇಕೆಂದು ಪ್ರಾರ್ಥನೆ

ನಂ 4 ಎ ಕೃಷ್ಣಮೂರ್ತಿ ರಾವ್

ನಂ 23 ಎಂ ಆರ್. ಸಿ. ಬಸಪ್ಪ

ಕಳೆದ 10 ವರ್ಷಗಳಿಂದಲೂ ಸಹಕಾರ ಸಂಘಗಳಲ್ಲಿ ...

ಕೃಷ್ಣಮೂರ್ತಿರಾವ್, ಎಂ ಆರ್ ಸಿ ಬಸಪ್ಪ

... ಟಾಕೀಸ್

... ನರಸಿಂಹ ...

* ... *

ನಾಷನಲ್

॥ ಶ್ರೀ ॥

ಗಣೇಶಾ - ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

10—12—49 ರಿಂದ ಅನೋಘ ಆರಂಭ

ಪ್ರತಿದಿನ ೩ ಪ್ರದರ್ಶನಗಳು

ಭಾಸ್ಕರ್ ಪಿಕ್ಚರ್ಸ್‌ರವರ ಸಂಗೀತ ಮತ್ತು ನೃತ್ಯಮಯ ತಮಿಳು ಸಾಮಾಜಿಕ ಚಿತ್ರ



ನಾಟ್ಯರಾಣಿ

ನಟರು

ವಸುಂಧರಾದೇವಿ, ಬಿ ಎಸ್ ಸರೋಜ, ಅಂಬುಮ್ಮ, ತವಮಣಿ, ಟಿ ಎಸ್ ಬಾಲಯ್ಯ, ಬಿ ಎಸ್ ರಾಜಯ್ಯಂಗಾರ್, ಚಾರ್ಲಿ

ಮುಂತಾದವರು

ಹಿನ್ನಲೆ ಸಂಗೀತ—

ಡಿ. ಕೆ. ಪಟ್ಟಮ್ಮಾಳ್ ಮತ್ತು ಕೂತ್ತನೂಂಗಲಂ ಸೀನು

[Gayathri Release

* ರಾಜಕಮಲ್ ಟಾಕೀಸ್, ಮೈಸೂರು *

A Vauhini Release

ಅನೋಘ ಪ್ರಾರಂಭ

9-12-49 ರಿಂದ

ದಿನವೂ 3 ಆಟಗಳು

ಎಂ ... ರವರ ತೆಲುಗು ಚಿತ್ರ

ಮನದೇಶಂ -

ಮುಖ್ಯ ಪಾತ್ರ

... ಗುಪ್ತ, ನಾರಾಯಣರಾವ್,
... ಶಿವರಾಂ

ಮುಂತಾದವರು

... ಪ್ರಸಾದ್ (ದ್ರೋಹಿ ಖ್ಯಾತಿ)

ರಿ. ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೪] ಭಾನುವಾರ ೧೧-೧-೫೦ [ಸಂಚಿಕೆ ೨೧

೧೫ನೇ ತಾ|| ತಾತ್ಕಾಲಿಕ ಮಂತ್ರಿಮಂಡಲ ರಚನೆ

ಕರ್ಣಾಟಕ ಪ್ರಾಂತ್ಯ ಆಗಬೇಕೆಂದು ಮೈಸೂರು ಕಾಂಗ್ರೆಸ್ ನಾಯಕರ ಮನವಿ

ಮೈಸೂರನ್ನೊಳಗೊಂಡ ಕರ್ಣಾಟಕ ಪ್ರಾಂತ್ಯವು ಕೂಡಲೇ ರಚನೆಯಾಗಬೇಕೆಂದು ಕೋರಿ ಮೈಸೂರು ಕಾಂಗ್ರೆಸ್ಸಿನ ಪ್ರಮುಖರೂ, ಜಿಲ್ಲಾ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರೂ ಆದಿಯಾಗಿ ಸೇರಿ ಒಟ್ಟು ೨೫೦ ಜನರು ಸಹಿ ಮಾಡಿದ ಪತ್ರವನ್ನು ಸರದಾರ್ ಪಟೇಲರಿಗೆ ಕಳುಹಿಸಿದ್ದಾರೆ

ಭಾರತದ ರಿಪಬ್ಲಿಕ್ ಆರಂಭೋತ್ಸವ

ಜನವರಿ ೨೬ನೇ ತಾ|| ಭಾರತದ ರಿಪಬ್ಲಿಕ್ ದಿನಾಚರಣೆಯನ್ನು ಯಾವ ಆಡಂಬರವೂ ಇಲ್ಲದೆ ಸರಳ ರೀತಿಯಲ್ಲಿ ನೆರವೇರಿಸಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ ಹೆಚ್ಚು ಹಣ ಖರ್ಚು ಮಾಡದೆ ಸಾಮಾನ್ಯ ರೀತಿಯಲ್ಲಿ ಅದನ್ನು ಆಚರಿಸಬೇಕೆಂದು ಪ್ರಾಂತ್ಯಗಳು ಮತ್ತು ಸಂಸ್ಥಾನಗಳಿಗೆ ಸೂಚನೆ ಕೊಡಲಾಗಿದೆ. ಆ ದಿನ ಬೆಳಗ್ಗೆ ದಹಲಿಯ ದರ್ಬಾರು ಹಾಲಿನಲ್ಲಿ ನೂತನ ಅಧ್ಯಕ್ಷರು ಅಧಿಕಾರ ಸ್ವೀಕಾರ ಮಾಡುವರು. ಅನಂತರ ಅವರು ಮಂತ್ರಿ ಮಂಡಲದವರಿಂದ ಪ್ರಮಾಣ ವಚನ ಪಡೆಯುವರು. ಸರ್ಕಾರಿ ಭವನದಿಂದ ಅಧ್ಯಕ್ಷರ ಮೆರವಣಿಗೆ ಮತ್ತು ಸಂಜೆ ಇರ್ವಿನ್ ಸ್ಟೇಡಿಯಂನಲ್ಲಿ ಧ್ವಜಾರೋಹಣ ನಡೆಯುವುದು

ಸಂಸ್ಥಾನದಲ್ಲಿ ಹೆಚ್ಚು ಕಡೆ ಭಂಗಾರ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹತ್ತಿರ ಇರುವ ಹೊನ್ನೆಗುಡ್ಡ, ಹಾಸನ ಜಿಲ್ಲೆಯಲ್ಲಿ ಕೆಂಪಿನ ಕೋಟೆ ಮತ್ತು ಮೈಸೂರು ಜಿಲ್ಲೆಯ ಅಂಬಳೆ ಮತ್ತು ಪೂಣಿಗಿಂಗಳಲ್ಲಿ ಬಂಗಾರವು ದೊರಕುವುದೆಂದು ಹೇಳಲಾಗಿದೆ ತುಮಕೂರು ಜಿಲ್ಲೆಯ ಟಿ ಕ್ಯಾರದಲ್ಲಿ ಭೂಗರ್ಭ ಇಲಾಖೆಯವರು ನಡೆಸುತ್ತಿರುವ ಚಟುವಟಿಕೆ ಪ್ರಕಾರ ಆ ಕ್ಷೇತ್ರದಲ್ಲಿ ಹೇರಳವಾಗಿ ಚಿನ್ನವು ದೊರಕುವುದೆಂದು ಕಾಣಬರುತ್ತಿದೆ ಇದಲ್ಲದೇ ಚಿತ್ರದುರ್ಗ ಜಿಲ್ಲೆಯಲ್ಲೂ ಅದು ಸಿಗುವುದು ಈ ಬಗ್ಗೆ ಕೋಲಾರದ ಗಣಿಗಳನ್ನು ನೋಡಿಕೊಳ್ಳುತ್ತಿರುವ ಜಾನ್ ಟೇಲರ್ ಕಂಪೆನಿಯವರು ಸರಕಾರಕ್ಕೆ ವರದಿಯನ್ನು ಸಲ್ಲಿಸಿ ಮೇಲ್ಕಂಡ ಪ್ರದೇಶಗಳಲ್ಲಿ ಚಿನ್ನ ತೆಗೆಯಲು ಅನುಕೂಲವಿರುವುದಾಗಿಯೂ ಈ ಪ್ರಶ್ನೆಯು ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಗೊತ್ತಾಗಿದೆ.

೪೦ ಸಾವಿರ ಹಳ್ಳಿಗರಿಗೆ ನೀರಿನ ಸೌಕರ್ಯ

ಭಾರತದ ಅತ್ಯಂತ ದೊಡ್ಡ ಗ್ರಾಮಾಂತರ ನೀರು ಸರಬರಾಯಿನ ಯೋಜನೆಯಾದ ಲಜಪತರಾಯ್ ವಾಟರ್ ವರ್ಕ್ಸ್ ಎಂಬುದನ್ನು ಕಳೆದ ಮಂಗಳವಾರ ಈಸ್ಟ್ ಪಂಜಾಬಿನ ಗೌರ್ನರಾದ ಸರ್ ಚಂದೂಲಾಲ್ ತ್ರಿವೇದಿಯವರು ಹೊಶಿಯಾರ್ಪುರ ಗುಡ್ಡ ಪ್ರದೇಶವೊಂದರಲ್ಲಿ ಪ್ರಾರಂಭಿಸಿದರು ಈ ಯೋಜನೆಯಿಂದ ಸುಮಾರು ೪೦ ಮೈಲಿ ಫಾಸಲೆಯಲ್ಲಿ ೫೬ ಹಳ್ಳಿಗಳಲ್ಲಿರುವ ೪೦ ಸಾವಿರ ಜನರಿಗೆ ಮಳೆಯಿಂದ ನೀರನ್ನು ಒದಗಿಸಲು ಸಾಧ್ಯವಾಗುವುದು

ಬ್ಯಾಂಕಿನ ಚುನಾವಣೆ ರದ್ದು

ಮೈಸೂರು ೧೧

ಮೈಸೂರು ಸಹಕಾರ ಸಂಘಗಳ ರಿಜಿಸ್ಟ್ರಾರರು ತಾ|| ೨೧-೧೨-೪೯ ರಲ್ಲಿ ನಡೆದಿದ್ದ ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯನ್ನು ರದ್ದುಪಡಿಸಿ ಪುನಃ ಚುನಾವಣೆ ನಡೆಯಬೇಕೆಂದು ಮಾಡಿದ್ದ ೨೧-೧೨-೪೯ ಮತ್ತು ೨೬-೧೨-೪೯ನೇ ತಾರೀಖುಗಳ ಎರಡು ಆರ್ಡರುಗಳ ಮೇಲೆ ಸರ್ಕಾರದಲ್ಲಿ ಅಪೀಲು ನಡೆದು ಮೇಲ್ಕಂಡ ಎರಡು ಆರ್ಡರುಗಳನ್ನು ರದ್ದುಪಡಿಸಿರುವುದಾಗಿಯೂ ಹೊಸದಾಗಿ ಚುನಾವಣೆ ನಡೆಯ ಬೇಕಾಗಿಲ್ಲವೆಂದೂ, ಮತ್ತು ತಾ|| ೨೧-೧೨-೪೯ ರಲ್ಲಿ ಚುನಾಯಿಸಲ್ಪಟ್ಟ ಡೈರೆಕ್ಟರುಗಳೇ ಇರಬಹುದೆಂದೂ ಆಜ್ಞೆಯಾಗಿದೆ ಮತ್ತು ಈ ದಿನ ನಡೆಯಬೇಕಾಗಿದ್ದ ಚುನಾವಣೆ ಸಹ ನಿಲ್ಲಿಸಲಾಗಿದೆ

ಅಪ್ಪಯ್ಯ ನಾಯ್ಡುರವರ ಅಪ್ಪೀಲು ವಜಾ

ಗೋಪಾಲರಾಯರ ವಿಚಾರಣಾ ಸಮಿತಿಗೆ ೪ ಲಕ್ಷ ರೂ ಹಣವನ್ನು ವಾಪಸು ಕೊಡಬೇಕೆಂಬ ತೀರ್ಪಿನ ಮೇಲೆ ಬೆಂಗಳೂರಿನ ಅಪ್ಪಯ್ಯ ನಾಯ್ಡುರವರು ಹಾಕಿದ್ದ ಅಪ್ಪೀಲು ಅರ್ಜಿಯನ್ನು ಸರ್ಕಾರದ ಉಪಸಮಿತಿಯವರು ತಿರಸ್ಕರಿಸಿದ್ದಾರೆ

ಭಾರತದಲ್ಲಿ ಕೃತಕ ಮಳೆ ಬರಿಸಲು ಪ್ರಯತ್ನವಿಲ್ಲ

ಭಾರತದಲ್ಲಿ ಕೃತಕ ಮಳೆಯನ್ನು ಬರಿಸಲು ಯಾವ ಪ್ರಯೋಗವನ್ನೂ ನಡೆಸಿಲ್ಲವೆಂದೂ, ಅದಕ್ಕೆ ತಕ್ಕ ಸೌಕರ್ಯವಿಲ್ಲದೆ ಸಂಶಯಾತ್ಮಕ ಪ್ರಯೋಜನವುಳ್ಳ ಈ ಕಾರ್ಯಕ್ಕೆ ಹಣ ವೆಚ್ಚಮಾಡಲು ಸಾಧ್ಯವಿಲ್ಲವೆಂದೂ ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ

೨ ಸಾವಿರ ಜನರನ್ನು ಗಲ್ಲಿಗೇರಿಸಿದ ಮನುಷ್ಯ

ಜರ್ಮನಿಯಲ್ಲಿ ಗಲ್ಲಿಗೇರಿಸುವ ಕೆಲಸದಲ್ಲಿದ್ದ ಜೋನಿ ರೀಚಾರ್ಡ್ ಎಂಬುವನು ಕಳೆದ ೨೫ ವರ್ಷಗಳಲ್ಲಿ ೨೦೦೦ ಜನರನ್ನು ಗಲ್ಲಿಗೇರಿಸಿರುವುದಾಗಿ ಪೋಲೀಸರಿಗೆ ತಿಳಿಸಿರುತ್ತಾನೆ ಯುದ್ಧ ಪಾತಕರಿಗೆ ಶಿಕ್ಷೆ ವಿಧಿಸುವ ಅಧಿಕಾರಿಗಳಿಗೆ ತಿಂಗಳು ಶಿಕ್ಷೆ ವಿಧಿಸಲಾಗಿದೆ ಎಂದು ತಿಳಿದಿದೆ.

ಕೆಲಸ ಮಾಡುವ ಕಾಲದ ನಿಗದಿ

ಸ್ವಂ. ವ. ಪ್ರ.] ಬೆಂಗಳೂರು ೧೧

ಬೆಂಗಳೂರು ಮೈಸೂರು, ಕೋಲಾರ ದಾವಣಗೆರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳಲ್ಲಿ ಬರುವ ಮಾರ್ಚಿ ೧ನೇ ತಾರೀಖಿನಿಂದ ಯಾವ ಅಂಗಡಿ ಮತ್ತು ವ್ಯಾಪಾರಸ್ಥಳವನ್ನೂ ಬೆಳಗ್ಗೆ ೮ ಘಂಟೆಗೆ ಮುಂಚೆಯೂ ರಾತ್ರಿ ೮ ಘಂಟೆಯ ನಂತರವೂ ತೆರೆದಿಡಲಾಗದೆಂದು ಕಾರ್ಮಿಕ ಶಾಸನದ ಪ್ರಕಾರ ಸರ್ಕಾರದವರು ಆಜ್ಞೆ ಮಾಡಬೇಕೆಂದಿರುತ್ತಾರೆ

ಅದರಂತೆಯೇ ಯಾವ ನಾಟಕಶಾಲೆ ಇತರ ವಿನೋದದ ಸ್ಥಳಗಳನ್ನೂ ಬೆಳಗ್ಗೆ ೮ ಘಂಟೆಗೆ ಮುಂಚೆಯೂ ರಾತ್ರಿ ೧ ಘಂಟೆಯ ನಂತರವೂ ತೆರೆದಿಡಲಾಗದು

ಹೋಟಲುಗಳನ್ನು ಬೆಳಗ್ಗೆ ೬ ಘಂಟೆಗೆ ಮುಂಚೆಯೂ ರಾತ್ರಿ ೧೧ ಘಂಟೆ ನಂತರವೂ ತೆರೆದಿಡಲಾಗದು

ಇದಕ್ಕೆ ಆಕ್ಷೇಪಣೆ ಇರುವವರು ಜ|| ೧೫ನೇ ತಾ|| ನೊಳಗಾಗಿ ತಿಳಿಸಬೇಕೆಂದು ಕೋರಲಾಗಿದೆ

ಪ್ರಕಟಣ ಶಾಖೆಯ ಪುನರ್ರಚನೆ

ಸರ್ಕಾರದ ಪ್ರಕಟಣ ಶಾಖೆಯನ್ನು ಪುನರ್ರಚನೆಮಾಡಿ ಅದನ್ನು ಐದು ವಿಭಾಗಗಳಾಗಿ ವಿಭಾಗಿಸಲಾಗಿದೆ ಹಂಗಾಮಿ ಪ್ರಕಟಣಾಧಿಕಾರಿಗಳಾಗಿರುವ ಶ್ರೀ ಎಸ್ ಕೃಷ್ಣನ್‌ರವರನ್ನು ಪ್ರಧಾನ ಇನ್‌ಫರ್ಮೇಷನ್ ಆಫೀಸರ್ ಎಂಬ ಹೆಸರಿನಿಂದ ರೂ ೬೦೦-೫೦ ಸಂಬಳ ಮೇಲೂ, ಶ್ರೀ ಡಿ ಆರ್ ರಾಮಯ್ಯನವರನ್ನು ರೂ ೪೦೦-೩೦-೫೫೦ ಮೇಲೆ ಡೆಪ್ಯುಟಿ ಡೈರೆಕ್ಟರ್ ಆಫೀಸರಾಗಿಯೂ ಶ್ರೀ ಬಿ ಎಂ ಶ್ರೀನಿವಾಸರನ್ನು ರೂ ೩೦೦ ಸಂಬಳ ಮೇಲೆ ಅಸಿಸ್ಟೆಂಟರನ್ನಾಗಿಯೂ ನೇಮಿಸಲಾಗಿದೆ

ಮೈಸೂರು ಬ್ಯಾಂಕಿಗೆ ೫|| ಲಕ್ಷ ರೂ ಮೋಸ

ಬೆಂಗಳೂರಿನ ಕಾಗದದ ವ್ಯಾಪಾರಿಗಳಾದ ಶ್ರೀ.....ನವರು ಖೋಟಾ ರಸೀದಿಗಳನ್ನಿತ್ತು ಹಣ ಪಡೆದು ಅದರಿಂದ ೫|| ಲಕ್ಷ ರೂ ಮೋಸ ಮಾಡಿದ ವಿಷಯ ಮೈಸೂರು ಬ್ಯಾಂಕಿನವರು ಪೋಲೀಸರಿಗೆ ದೂರು ಕೊಟ್ಟಿದ್ದಾರೆ.

೧೫ನೇ ತಾ|| ರಾಜಘೋಷಣೆ

ಈಗಿನ ನವ ಮಂತ್ರಿಗಳ ತಾತ್ಕಾಲಿಕ ಸರ್ಕಾರ

ಮೈಸೂರು ೧೧

ಈ ತಿಂಗಳ ೧೫ನೇ ತಾ|| ಶಾಸನ ಸಭೆಗಳು ರದ್ದಾದನಂತರ ಆ ದಿನ ಸಂಜೆ ಇಂದಿನ ಒಂಭತ್ತು ಜನ ಮಂತ್ರಿಗಳೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವರು. ಮುಂದೆ ಹೊಸ ರಾಜ್ಯಾಂಗದ ಪ್ರಕಾರ ಸಾರ್ವಜನಿಕ ಚುನಾವಣೆಗಳು ನಡೆಯುವವರೆಗೆ ಸುತ್ತೊಂದು ತಾತ್ಕಾಲಿಕ ಮಂತ್ರಿಮಂಡಲವನ್ನು ಕಾಂಗ್ರೆಸ್ ನಾಯಕರು ರಚಿಸುವುದಕ್ಕೆ ಪೂರ್ವಭಾವಿಯಾಗಿ ಮಧ್ಯಕಾಲದ ಮಂತ್ರಿಮಂಡಲಕ್ಕೆ ಈಗಿನ ನವ ಮಂತ್ರಿಗಳನ್ನೇ ಪುನಃ ನೇಮಿಸಿ ಶ್ರೀಮನ್ಮಹಾರಾಜರವರು ಒಂದು ಘೋಷಣೆಯನ್ನು ಅದೇ ದಿನ ಹೊರಡಿಸುವರೆಂದೂ ತಿಳಿದುಬಂದಿದೆ

ಕಾರ್ತೀಕೋತ್ಸವ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿರುವ ಶ್ರೀ ಸದ್ಗುರು ಸೇವಾ ಮಂಡಲದ ಆಶ್ರಯದಲ್ಲಿ ಇದೇ ೧೬ನೇ ತಾ|| ಸಂಜೆ ೬-೩೦ ಗಂಟೆಗೆ ಶ್ರೀ ಶ್ರೀಗಳ ದೇವಾಲಯದಲ್ಲಿ ಕಾರ್ತೀಕೋತ್ಸವವು ನಡೆಯುವುದು

ನೆಹರೂ ಜಯಂತಿ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ನಿನ್ನೆ ದಿನ ನೆಹರೂ ಜಯಂತಿಯನ್ನು ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಪ್ರಾರ್ಥನೆ ಮತ್ತು ರಾಷ್ಟ್ರಗೀತೆಗಳ ನಂತರ ಶ್ರೀ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿ ಮುಂದಿರದ ಕೆಲಸ ಕಾರ್ಯಗಳನ್ನು ವಿವರಿಸಿದರು. ರಾ|| ಬ|| ರಾಮಸ್ವಾಮಿಯವರ್ೂ, ಅಧ್ಯಕ್ಷರೂ ನೆಹರೂರವರ ವಿಚಾರವಾಗಿ ಭಾಷಣ ಮಾಡಿ ಅವರ ದೇಶಸೇವೆ, ಸ್ವಾರ್ಥತ್ಯಾಗ ಮತ್ತು ಮಾನವ ಪ್ರೇಮಗಳನ್ನು ಪ್ರಶಂಸಿಸಿ ಅವರಿಗೆ ಭಗವಂತನು ಸಮಸ್ತ ಸನ್ಮಂಗಳಗಳನ್ನೂ ಕರುಣಿಸಲೆಂದು ಹಾರೈಸಿದರು

ಶಿವ ಛತ್ರಪತಿ ಸಹಕಾರ ಸಂಘ

ರಾಜಧಾನಿಯ ಶ್ರೀ ಶಿವಛತ್ರಪತಿ ಸಹಕಾರ ಸಂಘಕ್ಕೆ ಶ್ರೀ ರಾಮರಾವ್ ಸಿಂಧೇರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎನ್ ಹಿರೋಜೀರಾವ್ ಇಂಗಳೆರವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಗಿದೆ

ಚೀಫ್ ಇಂಜನಿಯರುಗಳ ನೇಮಕ

ಸ್ವಂ. ವ. ಪ್ರ.] ಬೆಂಗಳೂರು ೧೧

ನಿವೃತ್ತ ಚೀಫ್ ಇಂಜನಿಯರಾದ ಶ್ರೀ ಬಿ ಎಸ್ ನರಸಿಂಗರಾಯರನ್ನು ಸ್ಪೆಷಲ್ ಚೀಫ್ ಇಂಜನಿಯರಾಗಿಯೂ, ಮತ್ತು ಸರ್ಕಾರದ ಸೆಕ್ರೆಟರಿಯವರಾಗಿಯೂ ನೇಮಿಸಲಾಗಿದೆ ಶ್ರೀ ಎಂ ಎನ್ ಲಕ್ಷ್ಮಣರಾಯರನ್ನು ನೀರಾವರಿ, ಸ್ಯಾನಿಟರಿ ಮುಂತಾದ ಇಲಾಖೆಗಳ ಚೀಫ್ ಇಂಜನಿಯರಾಗಿ ನೇಮಕ ಮಾಡಲಾಗಿದೆ ಮೈಸೂರಿನ ಸೂಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಎಚ್. ಬೆಳಗಿರಿ ರಾಯರನ್ನು ಪಿ. ಡಬ್ಲ್ಯು. ಡಿ. ಚೀಫ್ ಇಂಜನಿಯರಾಗಿ ನೇಮಿಸಿ ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ

ವಾರ ಭವಿಷ್ಯ

ತಾ|| ೧೧-೧೨ ರಿಂದ ೧೮-೧೨-೪೯ರ ವರೆಗೆ

ಮೇಷ— ಧನಲಾಭದ ಯೋಗ. ಆ ದಿಂದ ತನಿಕ ತೊಂದರೆಯಾ ನಿವಾರಣೆ ಆರೋಗ್ಯ ನೆಟ್ಟಗೆ, ಹರ್ಷ. ಮಕ್ಕಳ ರುಚಿ ಗಳ ಭೇಟಿ ನೌಕರ ವ್ಯಾಪಾರಿಗಳಲ್ಲಿ ಹಿತದಾಯಕ ಪ್ರಸಂಗಗಳು. ತಾ|| ೧೩—೧೪ ತಾಂತ್ರಿಕ ಮುಗ್ಗಟ್ಟು ಸ್ವಲ್ಪ ಗೊಂದಲ

ವೃಷಭ—ಕುಟುಂಬದವರ ಬಾಯಿಂದ ಇದುವರೆಗೆ ಬೇಸತ್ತಿದ್ದೀರಿ ಈ ವಾರದಿಂದ ಅದು ದೂರಾಗಲು ಪ್ರಾರಂಭ ವಾಗುವುದು. ಅನ್ಯ ಶಾಸ್ತ್ರಿಗಳ ತಕರಾರು ಸಮಾಧಾನವಾಗಿ ಪರಿಹಾರವಾಗುವುದು ಶರೀರ ಸ್ಥಿತಿ ಇದ್ದುದರಲ್ಲಿ ಉತ್ತಮ. ಆರ್ಥಿಕ ಅಡಚಣೆ ದೂರವಾಗುವುದು ತಾ||೧೩ ೧೪ ಪಿ.ಹಿತ್ತಿಲ ನಿರೂಪ ನಿವ ಕೈಸೇರುವುದು ನೌಕರ ಮಂದಿಗಳಲ್ಲಿ ಶುಭವಾರ.

ಮಿಥುನ—ಭಾವನಾಪರರಾಗುವುದಕ್ಕಿಂತಲೂ ಕರ್ತವ್ಯಪರರಾಗಿರಿ ಪ್ರತಿ ಕಾರ್ಯದಲ್ಲೂ ಎಚ್ಚರಿಕೆ ಇರಲಿ ನಂಬಿದ ಕಾಲವ ತೊಂದರೆ ಬಂದು ಆರೋಗ್ಯ ನೆಟ್ಟಗೆ ಮನಸ್ಸಿನಲ್ಲಿ ತಳಮಳ ಪಡಬಾರದು ... ಅಧಿಕಾರಿಗಳ ದ ಮೆಚ್ಚಿಗೆ ... ರಣೆ

... ಆರೋಗ್ಯ ನೆಟ್ಟಗೆ ... ಭೇಟಿ ... ಯೋಗ ... ಪ್ರಾರಂಭದ ... ವ್ಯಾಪಾರಿಗಳಲ್ಲಿ ... ಬುದ್ಧಿಶಕ್ತಿ ...

ಸಿಂಹ— ... ಘಟನೆಯಿಂದ ... ಜೀವನದಲ್ಲಿ ... ಯೋಚನೆ ... ದೂರ ... ಸಂಕಟ ...

ತುಲಾ— ಧನಲಾಭ ಎರಡು ಅಷ್ಟರಲ್ಲಿ ಭಯ ಸುಖ, ಅರೋಗ್ಯ

ಕನ್ಯಾ— ಪಿತ್ತವಿಕಾರದ ... ವ್ಯಾಪಾರದಲ್ಲಿ ... ನೌಕರಿ ... ಆರೋಗ್ಯ ...

ತುಲಾ— ... ವ್ಯಾಪಾರ ಉದ್ಯೋಗಗಳಲ್ಲಿ ... ಲಾಭ.

ವೃಶ್ಚಿಕ—ಆರೋಗ್ಯ ನೆಟ್ಟಗೆ ಧರ್ಮಕಾರ್ಯ ಕೋರ್ಟು ವ್ಯವಹಾರದಲ್ಲಿ ... ನೌಕರಿಯಲ್ಲಿ ಮೇಲ್ಮಟ್ಟ ... ಉತ್ತಮ ಕಾಲ ತಾ|| ೧೬-೧೭ ಆಕಸ್ಮಿಕಲಾಭ ಶುಭವಾರ್ತೆ

ಧನು—ಶುಭಕಾರ್ಯ ನಡೆಯುವುದು ವ್ಯಾಪಾರ ವ್ಯವಹಾರಗಳಲ್ಲಿನ ಬಾಕಿಯು ವಸೂಲಿ ನೌಕರಿಯಲ್ಲಿ ಮೇಲಿನವರ ಪ್ರಶಂಸೆ ಪ್ರಯತ್ನಗಳ ಸಾಫಲ್ಯ ಆರೋಗ್ಯ ನೆಟ್ಟಗೆ ತಾ ೧೮-೧೯ ಶುಭವಾರ್ತೆ ಧನಲಾಭ

ಮಕರ—ಕಷ್ಟ ಕಾಲವು ಮುಗಿಯುತ್ತಿದೆ ಆರೋಗ್ಯದ ಕಡೆ ಲಕ್ಷ್ಯವಿರಲಿ ಮುಂದಿನ ವಾರ ಮಹತ್ವದ ಕಾರ್ಯ ಧನಲಾಭ ... ತಾ|| ೧೧-೧೨ ... ಶಾಂತಿ ಇರಲಿ

ಕುಂಭ ನೌಕರಿ ವ್ಯಾಪಾರಾದಿಗಳಲ್ಲಿ ... ಭೇಟಿಯಾಗುವ ಜನರನ್ನು ... ಮಾನಸಿಕ ಕ್ಲೇಶವುಂಟು ... ಧನನಾಶ. ಪ್ರಿಯ ಜನ ವಿಯೋಗ

ಮೀನ—ನೌಕರಿ ದಂಧೆಗಳಲ್ಲಿ ಬಿನ್ನವಾಗುವ ವರ್ತಮಾನ ಮುಟ್ಟುವುದು ಆ ... ಧನಯಾಚನೆಯ ಪ್ರಸಂಗ ... ಆರೋಗ್ಯ ಇಷ್ಟವಿಲ್ಲದ ... ಕಾಗುವುದು

ಹೈದರಾಬಾದ್ ಕಾಂಗ್ರೆಸ್ಸಿನಲ್ಲಿ ಒಪ್ಪಂದ

ಹೈದರಾಬಾದಿನ ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷದವರಿಗಿದ್ದ ಭಿನ್ನಾಭಿಪ್ರಾಯಗಳು ತೊಲಗಿ ಈಗ ಅವರಿಬ್ಬರೂ ಒಪ್ಪಂದಕ್ಕೆ ಬಂದಿದ್ದಾರೆ

ದಲಾಯ್ ಲಾಮಾರವರನ್ನು ಅಪಹರಿಸಲು ಯತ್ನ

ಚೀನಾ ಕಮ್ಯೂನಿಸ್ಟರು ಟಿಬೆಟ್ ಮೇಲೆ ದಂಡಯಾತ್ರೆ ನಡೆಸಿದಿದ್ದರೂ ... ದಲಾಯ್ ಲಾಮಾರವರನ್ನು ಅಪಹರಣ ಮಾಡಿ ಬೇರೊಬ್ಬನನ್ನು ಅವರ ... ದಲ್ಲಿ ನೇಮಿಸುವ ಹಂಚಿಕೆ ನಡೆಸಿ ... ದ್ವಾರಿಂದು ವರದಿಯಾಗಿದೆ ... ಚೀನಾ ಕಮ್ಯೂನಿಸ್ಟರುಗಳ ಸಹಾಯ ... ದ ಮತ್ತೊಬ್ಬ ಲಾಮಾರವರು ಈಗಾಗಲೇ ೧೫ ಸಾವಿರ ಸೈನಿಕರನ್ನು ಸಜ್ಜುಗೊಳಿಸಿರುವರೆಂದೂ ಹೇಳಲಾಗಿದೆ

C. T. C.

COACHING CLASSES

B. Sc. – P.C.M. only

INTER – English (49 50 texts) P.C.M. or C.B.Z. Kan or Sanskrit

S.S.L.C. – All Subjects

For details -

City TUTORIAL COLLEGE

1534 V.V. ROAD, MYSORE

ಶ್ರೀ ಗಾಯತ್ರೀ

ದಿನವಹಿ ಮೂರು ಪ್ರದರ್ಶನಗಳು

11-12-49ರಿಂದ 3 ದಿನಗಳು ಯೂನಿವರ್ಸಲ್‌ರವರ

ವಿಜಿಲೆಂಟ್ಸ್ ರಿಟರ್ನ್

Vigilants Return

(In Cinecolor)

ಪಾತ್ರ—ಜಾನ್ ಹಾಲ್

Next Change — CORSICAN BROS

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

12-12-49ರಿಂದ ಜಿಮ್ನೋಫ 2ನೇ ವಾರ

ಶ್ರೀ ಕೃಷ್ಣಲೀಲಾ (ತೆಲುಗು)

ಪಾತ್ರ -ಗಗ್ಗಯ್ಯ, ರಾಮತಿಲಕಂ, ಶ್ರೀರಂಜಿನಿ, ಪಾರುಪಲ್ಲಿ ರಾಜೇಶ್ವರ ರಾವ್ ಮುಂತಾದವರು

VANITHA SADAN

Jayananagar, Mysore

Coaching classes and supervised studies for M. S. and S. S. L. C. candidates will be conducted as follows —

Coaching classes	Supervised studies
For Girls 7-30 to 10 a.m.	3 to 5 p.m.
For Boys 7 to 9-30 p.m.	5 to 7 a.m.

Experienced teachers and specialists in the line like Sri N. Nagesha Rao M.A. Rtd Superintendent Intermediate College, will handle the classes. For more particulars, please contact the Organiser between 9 and 10 a.m. within the 15th inst.

Praphull Krishna Iyengar
Secretary

ಪ್ರಭಾ

11—12—49 ರಿಂದ ಜಿಮ್ನೋಫ ಪ್ರಾರಂಭ ದಿನವಹಿ 3 ಆಟಗಳು

ಪೂರ್ಣಿಮಾ ಪ್ರೊಡಕ್ಷನ್ಸ್‌ರವರ (ಹಿಂದಿ ಚಿತ್ರ)

* ರಾಮಾಯಣ *

ಪಾತ್ರ ನರ್ಗೀಸ್, ಶಶಿ ಸನ್ಯಾಲ್, ಚಂದ್ರಮೋಹನ್ ಮತ್ತು ಕೋರಸ್

... ಸರ್ವೋತ್ತಮ ...

ರಾಜಕಮಲ್

ಮೈಸೂರು

೯—೧೨—೪೯ರಿಂದ

ಜಿಮ್ನೋಫ ೮ರ ಘ, ದಿನವಹಿ 3 ಆಟಗಳು ಎಂ ಆರ್ ಎ ರವರ ತೆಲುಗು ಚಿತ್ರ

ಮನ ದೇಶಂ

ಪಾತ್ರ— ಕೃಷ್ಣವೇಣಿ, ನಾಗಯ್ಯ, ನಾರಾಯಣ ರಾವ್ ಮತ್ತು ಕಾಂಚನ

ಮನೆ ಕ್ರಯಕ್ಕಿದೆ

ಡೋರ್ ನಂ ೧೧೨೩, ತಳೂರು ಮನಪದ ಬೀದಿ, ಪಿಳ್ಳೆ ಮೊಹಲ್ಲಾ, ಮೈಸೂರು. ವಿವರಗಳಿಗೆ: ಆರ್. ಗುಂಡೂರಾವ್, ಬ್ರೋಕರ್, ಶ್ರೀರಾಂಪೇಟೆ, ಮೈಸೂರು.

ಪ್ರಕಟಣೆ

ಕೆಳಗೆ ಕಂಡ ಆಸ್ತಿಗಳು ನನ್ನ ... ನಾಯುತರಿಗೆ ಸೇರಿದ್ದು ... ನನ್ನ ತಂದೆ ಸ್ವಾಧೀನಾನುಭವಕ್ಕೆ ... ದು, ಈಗ್ಗೆ ಸುಮಾರು ಇಪ್ಪತ್ತೈದು ... ವರ್ಷದಿಂದ ನನ್ನನ್ನು ಮನೆವಾರ್ತೆ ... ಮಾಡಿಯ್ಯ ಎಂಬವರಿಗೆ ... ಮಾಡಿ ಮನೆಯಲ್ಲಿ ಇಟ್ಟುಕೊಂಡ ... ಯಿತ, ನನ್ನ ಪಕ್ಕ ಮತ್ತು ... ದ್ದಿರುತ್ತೆ ನನ್ನ ತಂದೆ ಸಿದ್ದನಾಯಕ ... ಪ್ರೋಸನೆಗೆ ಕಷ್ಟ ವಿಕ್ರಾಯ ಮಾಡಿ ... ಯಾದ್ದರಿಂದ ಸ್ವತ್ತುಗಳನ್ನು ನನ್ನ ... ಮಾಡಿ ಸಿನಾಯು ಸದ್ರಿಯವರು ಸದರಿ ... ಯಾ ಯಾವರೀತಿ ವಿಲೇ ಮಾಡಲು ... ಕ್ಕ ಇರುವುದಿಲ್ಲ ಅದರಿಂದ ಒಟ್ಟಿ ... ದ ಯಾವ ಲೇವಾದೇವೀ ... ಕ್ಕದ್ದಲ್ಲ-ಎಂತ ಸಾರ್ವಜನಿಕರಿಗೆ ... ದೆ.

... ತಾಲ್ಲೂಕ್ ಮೈಸೂರು ... ಮಸ್ತೆ ... ನಂ ... ಮೂರು ಎಕ್ರೆ ... ನಗರದ ತಾಲ್ಲೂಕು ... ದ ನಂ ... ಎಕ್ರೆ ... ಗ್ರಾಮದ ಮನೆ ಮತ್ತು ... ಮಾದವ್ವ ...

Edited printed and published by A. R. Nagarajan at Sadhvi Press, D. Subbiah Road, Mysore

ಫೋನ್ ನಂ. ೭೪೨ || ವಂದೇ ಮಾತರಂ || ಈ ದಿನದ ಪತ್ರಿಕೆ ೬ ಕಾಸು

ವಿಶ್ವ

ಸಂಪುಟ ೮] ಸೋಮವಾರ ೧೭-೧೦-೪೯ [ಸಂಚಿಕೆ ೧೧೨

ಮಂಡ್ಯದ ಕೆಲಸಗಾರರ ಮೇಲೆ ಗುಂಡಿನೇಟು

ಛತ್ರವನ್ನು ಯಾವ ಮಿಲ್ಲಿಗಾದರೂ ಕೊಡಬಹುದು

ಬೆಂಗಳೂರು ೧೨

ಒಂದು ಪ್ರದೇಶದವರು ಒಂದುಗೊತ್ತಾದ ಗಿರಣಿಯ ಮೂಲಕವೇ ಛತ್ರವನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಹಿಂದೆ ಮಾಡಿದ್ದ ಆಜ್ಞೆಯಿಂದ ಹೆಚ್ಚಿನ ದಾಸ್ತಾನು ದಾರರಿಗೆ ಅನಾನುಕೂಲವಾಗುವುದೆ ದು ದೂರು ಬಂದಿರುವುದರಿಂದ ಇನ್ನು ಮುಂದೆ ೫ ಮೈಲಿ ಆವರಣದಲ್ಲಿರುವ ಯಾವುದಾದರೂ ಅಕ್ಕಿ ಗಿರಣಿಗಳಿಗೆ ದಾಸ್ತಾನುದಾರರು ಛತ್ರವನ್ನು ಕೊಡಬಹುದು. ಆದರೆ ಗಿರಣಿಯ ಹೆಸರನ್ನು ಪ್ರತ್ಯೇಕವಾಗಿ ಹೆಚ್ ಎಸ್ ಫಾರಂನಲ್ಲಿ ನಮೂದಿಸಿರಬೇಕು. ೫ ಮೈಲಿ ಆವರಣದಲ್ಲಿ ಯಾವ ಗಿರಣಿಯೂ ಇಲ್ಲದಿದ್ದ ಪಕ್ಷದಲ್ಲಿ ಸರ್ಕಾರದವರಿಂದ ನಿಗದಿ ಮಾಡಿದ ಗಿರಣಿಗೆ ಛತ್ರವನ್ನು ಕೊಡಬೇಕು ಎಂದು ಸರ್ಕಾರದವರು ಆಜ್ಞೆಮಾಡಿರುತ್ತಾರೆ. ಹೆಚ್ಚಿ ದಾಸ್ತಾನುದಾರರಿಗೆ ಯಾವ ಬೋನಸ್ಸಾಗಲೀ ಅಥವ ಹೆಚ್ಚಿನ ಬೆಲೆಯನ್ನಾಗಲೀ ಇನ್ನು ಮುಂದೆ ಕೊಡುವುದಿಲ್ಲವೆಂದ ತಿಳಿಸಿರುತ್ತಾರೆ

ನೋಟುಗಳನ್ನು ತಯಾರಿಸಿ ಕೊಡುವುದಾಗಿ ಮೋಸ

ಸಾಮಾನ್ಯ ಕಾಗದದ ಚೂರಿನಿಂದ ನೋಟುಗಳನ್ನು ತಯಾರಿಸಿಕೊಡುವುದಾಗಿ ತಿಳಿಸಿ ಜನರಿಂದ ೨೧,೪೦೦ ರೂಗಳನ್ನು ಪಡೆದು ಮೋಸಪಡಿಸಿದ ಪ್ರಸಂಗವು ಮದರಾಸ್ ಪ್ರಾಂತ್ಯದ ತಿರುನೆಲ್ವೆಲ್ಲಿಯಿಂದ ವರದಿಯಾಗಿದೆ. ಮೋಸಗಾರರ ಗುಂಪಿನವರು ಜನರಲ್ಲಿ ನಂಬಿಕೆ ಹುಟ್ಟಿಸಿ ಅವರಿಂದ ನೋಟುಗಳನ್ನು ಪಡೆದು, ಅವರ ಕೈಯಲ್ಲಿ ಒಂದು ಕಾಗದ ಪೊಟ್ಟಣವನ್ನು ಕೊಟ್ಟು, ಅದನ್ನು ದೇವಾಲಯದಲ್ಲಿ ದೇವರಿಗೆ ಕೋಳಿಯ ರಕ್ತವನ್ನು ಅರ್ಪಿಸಿದ ನಂತರ ಒಡೆಯಬೇಕೆಂದು ತಿಳಿಸಿ ಹಣದೊಡನೆ ಪರಾರಿಯಾದರೆಂದೂ, ಆ ಕಾಗದ ಪೊಟ್ಟಣದಲ್ಲಿ ನೋಟುಗಳ ಆಕಾರದಲ್ಲಿರುವ ಬಿಳಿ ಕಾಗದಗಳು ಮಾತ್ರ ಇದ್ದವೆಂದೂ ಹೇಳಲಾಗಿದೆ. ಈ ಸಂಬಂಧದಲ್ಲಿ ೧೫ ಜನರನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ

ಆಸ್ಟ್ರೇಲಿಯಾದಲ್ಲಿ ಹಿಟ್ಲರನ ಆನೆ

ಹಿಟ್ಲರನ ಜೋರಿ ಎಂಬ ಆನೆಯನ್ನು ಈಗ ಆಸ್ಟ್ರೇಲಿಯದ ಮೃಗಾಲಯದಲ್ಲಿ ಇಡಲಾಗಿದೆಯೆಂದು ಹೇಳಲಾಗಿದೆ. ನಾಜಿಗಳಂತೆ ಈ ಆನೆಯೂ ಸಹ ಕೋಪೋದ್ರೇಕವುಳ್ಳದ್ದಾಗಿ, ಅನೇಕ ಬಾರಿ ಮಾವಟಿಗರನ್ನು ಕೆಳಕ್ಕೆ ಉರುಳಿಸಿದೆಯೆಂದು ವರದಿಯಾಗಿದೆ

ಸಾರವಾಕ್ ಗೌರ್ನರರ ಮರಣ

ಕಳೆದ ೩ನೇ ತಾ|| ಚೂರಿಯಿಂದ ತಿವಿಯಲ್ಪಟ್ಟು ಗಾಯಗೊಂಡ ಸಾರವಾಕಿನ ಗೌರ್ನರರಾದ ಡಂಕನ್ ಜಾರ್ಜ್ ಸ್ಟೀವರ್ಟರವರು ಮೊನ್ನೆ ದಿನ ಮರಣ ಹೊಂದಿದರೆಂದು ವರದಿಯಾಗಿದೆ

ಕಬ್ಬಿಣ ಮತ್ತು ಉಕ್ಕಿನ ಬೆಲೆ ಇಳಿಯಿತು

ಈ ದಿನದಿಂದ ಕಬ್ಬಿಣ ಮತ್ತು ಉಕ್ಕಿನ ಬೆಲೆಯನ್ನು ಶೇಕಡ ೩೦ ರಷ್ಟು ಕಡಿಮೆ ಮಾಡಲು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ

ಡಾ|| ರೆಡ್ಡಿಯವರ ವರದಿಯ ಮೇಲೆ ಸೆನೆಟ್ಟಿನ ಪರಿಶೀಲನೆ

ಮೈಸೂರು ೧೨

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ವಿಶೇಷ ಅಧಿವೇಶನವು ಈ ದಿನ ಉಪಸ್ಥಾನಪತಿಗಳಾದ ಶ್ರೀ ಆರ್ ಕೆ ಶಾಸ್ತ್ರಿ ರಾಜಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾಭ್ಯಾಸದ ಸುಧಾರಣೆ ಬಗ್ಗೆ ಡಾ|| ಸಿ ಆರ್ ರೆಡ್ಡಿಯವರ ವರದಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಲು ಸೆನೆಟ್ ಸಭೆಯನ್ನು ವಿಶೇಷವಾಗಿ ಸಂದರ್ಶಿಸಬೇಕೆಂಬ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರ ನಿರ್ಣಯವು ಅಂಗೀಕೃತವಾಯಿತು. ನಂತರ ಸಮಿತಿಯ ಕಾರ್ಯಕಲಾಪಗಳ ರಹಸ್ಯವಾಗಿ ಮುಂದುವರೆದವು

ಸಹಾಯಾರ್ಥ ನೃತ್ಯ ಸಂಗೀತ

ನಗರದ ಹೋಟೇಲ್ ಕೆಲಸಗಾರರ ಸಂಘದ ಸಮ್ಮೇಳನದ ಸಹಾಯಾರ್ಥವಾಗಿ ತಾ|| ರಾತ್ರಿ ೯-೩೦ ಗಂಟೆಗೆ ಟೌನ್ ಹಾಲಿನಲ್ಲಿ ಶ್ರೀ ರಾಜಲಕ್ಷ್ಮಿ ನೃತ್ಯಕಲಾ ಮಂದಿರದವರಿಂದ ನೃತ್ಯ ಸಂಗೀತ ನಡೆಯುವುದು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ

ಶಾರದಾ ದೇವಿ ಜನ್ಮೋತ್ಸವ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ಈ ದಿನ ಸಂಜೆ ೬ ಗಂಟೆಗೆ ಶ್ರೀ ಶಾರದಾ ದೇವಿಯವರ ಜನ್ಮದಿನಾಚರಣೆಯು ನಡೆಯುವುದು. ಶ್ರೀಮತಿಗಳಾದ ನೀಲಮ್ಮ ಕಡಾಂಬಿಯವರಿಂದ ಸಂಗೀತವೂ ಮತ್ತು ಕಮಲಮ್ಮ ಮತ್ತು ಲಕ್ಷ್ಮಮ್ಮ ಕೃಷ್ಣಪ್ಪನವರುಗಳಿಂದ ಭಾಷಣಗಳೂ ಜರುಗುವುವು

ಹಗಲಿನಲ್ಲೇ ಕಳವು

ರಾಜಧಾನಿಯ ಸೀತಾವಿಲಾಸ ಛತ್ರದಲ್ಲಿರುವ ಜ್ಯೋತಿಷ ವಿದ್ವಾನ್ ನಾರಾಯಣಶಾಸ್ತ್ರಿಗಳ ಮನೆಯಲ್ಲಿ ಕಳೆದ ಬುಧವಾರ ಮಧ್ಯಾಹ್ನ ಒಬ್ಬ ಅಪರಿಚಿತನು ನಿರ್ಭಯವಾಗಿ ಬಂದು, ಮನೆಯಲ್ಲಿ ... ಇರುವುದನ್ನು ನೋಡಿಕೊಂಡು, ... ಗಡಿಯಾರವನ್ನು ... ಹೋದನು ... ಪೂರ್ವ ... ತ್ರಿಮಲೆ ... ಈ ಬಗ್ಗೆ ... ವಿಚಾರಣೆ ... ಬೇಕೆಂದು ... ಪಡಿಸಲಾಗಿದೆ

ಮಂಡ್ಯ ಸಕ್ಕರೆ ಕೆಲಸಗಾರರ ಮೇಲೆ ಗುಂಡು

ಕಾರ್ಮಿಕರ ಮುಖಂಡರ ದಸ್ತಗಿರಿ

ಮಂಡ್ಯ ೧೨

ಇಲ್ಲಿನ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಮೊದಲೇ ನಿಶ್ಚಯಿಸಿದಂತೆ ಮುಷ್ಕರ ಹೂಡಲು ತಮ್ಮ ಕಾಲೋನಿಯಲ್ಲಿ ಗಾಢ ಧ್ವಜಾರೋಹಣವನ್ನು ನಡೆಸುವುದಕ್ಕಾಗಿ ನೆನ್ನೆ ಸಭೆ ಸೇರಿದ್ದಾಗ ಪೊಲೀಸರು ಅವರನ್ನು ಚದುರಿಸಲು ಗುಂಡು ಹಾರಿಸಿದ ... ಗುಂಪಿನವರು ಪೊಲೀಸರ ಮೇಲೆ ಕಲ್ಲೆಸೆದರೆಂದೂ, ಪೊಲೀಸರು ಅಶ್ರುವಾಯು ಗ್ಯಾಸನ್ನು ಉಪಯೋಗಿಸಿದರೆಂದೂ ಹೇಳಲಾಗಿದೆ. ಇದರಿಂದ ಹಲವರು ಪ್ರಜ್ಞೆ ತಪ್ಪಿದರೆಂದೂ, ಇತರ ಕಾರ್ಮಿಕರು ಓಡಿಹೋದರೆಂದೂ, ಪ್ರಜ್ಞೆ ತಪ್ಪಿದವರನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ತಿಳಿದುಬಂದಿದೆ

ಪೊಲೀಸರು ೧೪ ರೌಂಡುಗಳ ಗುಂಡನ್ನು ಹಾರಿಸಿದರೆಂದು ಹೇಳಲಾಗಿದೆ. ಸಕ್ಕರೆ ಕಾರ್ಖಾನೆಯ ಒಳಗೂ ಸಹ ಗುಂಡು ಹಾರಿದ ಶಬ್ದವು ಕೇಳಿಬಂದಿತೆಂದು ವರದಿಯಾಗಿದೆ. ಕಾರ್ಖಾನೆಯು ಮುತ್ತಿಗೆಯಲ್ಲಿ ಪೊಲೀಸರ ಸುಪರ್ದಿಗೆ ... ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಮಾಸ್ತಿಗೌಡ, ಕಾರ್ಯದರ್ಶಿ ಶ್ರೀ ಎ ರಾಮಣ್ಣ ಮುಂತಾದ ಸುಮಾರು ೪೮ ಮಂದಿ ಕಾರ್ಮಿಕ ನಾಯಕರ ದಸ್ತಗಿರಿಯಾಗಿದೆ. ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ

ಮುಷ್ಕರಗಾರರು ಮತ್ತು ಇತರ ಮೇಲೆ ಪೊಲೀಸರು ಲಾಠಿ ಪ್ರಯೋಗ ಮಾಡಿದರೆಂದೂ, ಅನೇಕರಿಗೆ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿರುವರೆಂದೂ ಸಹ ತಿಳಿದುಬಂದಿದೆ

ಸುಮಾರು ೭೦೦-೮೦೦ ಜನ ಕೆಲಸಗಾರರು ಮುಷ್ಕರದಲ್ಲಿ ಭಾಗವಹಿಸಿದ್ದರೆ ಇನ್ನು ೨೦೦-೩೦೦ ಜನರು ಕೆಲಸಕ್ಕೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಅನೇಕ ... ಜನರನ್ನು ... ಪಡಿಸಲಾಗುತ್ತಿದೆ ...

ಲಾಕಪ್ಪಿನಲ್ಲಿ ಸತ್ತ ಮಹಿಳೆ ಬಗ್ಗೆ ವಿಚಾರಣೆ

ಹೊಸದುರ್ಗ ಪೊಲೀಸ್ ಲಾಕಪ್ಪಿನಲ್ಲಿ ಪೊಲೀಸರ ಅತ್ಯಾಚಾರದಿಂದ ಸುಶೀಲ ಎಂಬ ೧೮ ವರ್ಷದ ಯುವತಿಯು ಮೃತಳಾದಳೆಂದು ಚಾಮುಂಡಿ ಎಂಬಾಕೆಯು ಕೊಟ್ಟ ದೂರಿನ ಮೇಲೆ ದಾವಣಗೆರೆ ಸಬ್ ಡಿವಿಜನ್ ಅಧಿಕಾರಿಗಳು ಕಳೆದ ೬ನೇ ತಾ|| ನಿಂದ ವಿಶೇಷ ಕೋರ್ಟನ್ನು ನಡೆಸಿ ವಿಚಾರಣೆ ಮಾಡುತ್ತಿದ್ದಾರೆ

ಶಿವಮೊಗ್ಗೆಯಲ್ಲಿ ಸೆಣಬಿನ ಬೆಳೆ

ಶಿವಮೊಗ್ಗ ಜಿಲ್ಲೆಯಲ್ಲಿ ಸೆಣಬನ್ನು ಬೆಳೆಯಲು ಸರ್ಕಾರದವರು ಯೋಜನೆ ತಯಾರಿಸಿದ್ದಾರೆಂದು ತಿಳಿದುಬಂದಿದೆ. ವರ್ಷಕ್ಕೆ ೬೦ ಅಂಗುಲಗಳಷ್ಟು ಮಳೆ ಬೀಳುವುದರಿಂದ ಆ ಪ್ರದೇಶದ ಕೆಲವು ಭೂಮಿಗಳಲ್ಲಿ ನಡೆಸಿದ ಸಂಶೋಧನೆಯು ಫಲದಾಯಕವಾಗಿದೆಯೆಂದೂ, ಆಹಾರ ಬೆಳೆಗೆ ಧಕ್ಕೆ ಬರದಂತೆ ಇದನ್ನು ಬೆಳೆಯಬಹುದೆಂದೂ ಹೇಳಲಾಗಿದೆ

ಮೈಸೂರಿನಲ್ಲಿ ಈಜಿಪ್ಟಿನ ಹತ್ತಿ ಬೆಳೆ

ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮುಂದಿನ ವರ್ಷ ಈಜಿಪ್ಟಿನ ಹತ್ತಿಯನ್ನು ಬೆಳೆಯಲು ಸರ್ಕಾರದವರು ಯೋಚಿಸಿದ್ದಾರೆಂದೂ, ಒಟ್ಟು ೬ ಸಾವಿರ ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗುವುದೆಂದೂ ತಿಳಿದು ಬಂದಿದೆ

ರೈಲ್ವೆ ಕೆಲಸಗಾರರ ಬಹಿರಂಗ ಸಭೆ

ಮೈಸೂರು ರೈಲ್ವೆ ಕೆಲಸಗಾರರು ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯನ್ನು ನಡೆಸಿ ... ಸಭೆಯಲ್ಲಿ ... ಶ್ರೀ ಎಚ್ ... ರಾಘವರಾಜ್ ರವರನ್ನು ಸತ್ಕರಿಸಿದರು. ಶ್ರೀ ಗಳಾದ ಮಾರ್ಚ್, ನಾಯ್ಡು, ವೇಲುಪಿಳ್ಳೆ, ಲಕ್ಷ್ಮಣ್ ಮುಂತಾದವರು ಭಾಷಣ ಮಾಡಿ ಶ್ರೀ ರಾಜರವರ ಸೇವೆಯನ್ನು ಕೊಂಡಾಡಿದರು. ಶ್ರೀ ರಾಜರವರು ಭಾಷಣ ಮಾಡಿ ಕಳೆದ ಮುಷ್ಕರದಲ್ಲಿ ಅನೇಕ ಕೆಲಸಗಾರರನ್ನು ಸರ್ಕಾರದವರು ಕೆಲಸದಿಂದ ತೆಗೆದು ಹಾಕಿದ್ದರೂ ಇದುವರೆವಿಗೆ ಕೆಲಸಗಾರರ ಹಿತರಕ್ಷಣೆಯನ್ನು ಸರ್ಕಾರದವರು ಮಾಡದಿರುವುದು ವಿಷಾದಕರವೆಂದು ಹೇಳಿ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡುವುದೆಂದೂ ತಾವು ಸ್ವತಂತ್ರರಾಗಿ ದೇಶಸೇವೆ ಮಾಡಲು ಸಿದ್ಧರಾಗಿರುವುದಾಗಿಯೂ ತಿಳಿಸಿದರು

ಪರೀಕ್ಷಾ ಭವನದಿಂದ ವಿದ್ಯಾರ್ಥಿಗಳು ಹೊರಕ್ಕೆ

ಪಾಠಪ್ರವಚನದ ಪಟ್ಟಿಯಲ್ಲಿ ಇಲ್ಲದ ವಿಷಯಗಳ ಮೇಲೆ ಪ್ರಶ್ನೆಗಳನ್ನು ಕೊಡಲಾಗಿದೆಯೆಂದು ಕಲ್ಕತ್ತಾ ವಿಶ್ವವಿದ್ಯಾನಿಲಯದ ಎಂ ಎ ಅರ್ಥಶಾಸ್ತ್ರ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳು ಮೊನ್ನೆ ದಿನ ಪ್ರತಿಭಟಿಸಿ, ಪರೀಕ್ಷಾ ಭವನದಿಂದ ಹೊರಗೆ ಬಂದರೆಂದೂ, ಅನಂತರ ಬೇರೆ ಪರೀಕ್ಷೆ ... ನಡೆಸುವುದಾಗಿ ... ಗಳು ತಿಳಿಸಿರುವುದಾಗಿ ವರದಿಯಾಗಿದೆ

... ಇದರ ... ಹೊರ ... ದ ... ಪರೀಕ್ಷೆ ... ಪ್ರಶ್ನೆ ... ಇದನ್ನು ... ಪ್ರಶ್ನೆ ... ವ್ಯಕ್ತಪಡಿಸಿದ್ದಾರೆ

ಸತ್ತು ಸ್ಮಶಾನಕ್ಕೆ ಹೋಗಿ ವಾಪಸು ಬಂದ ಹುಡುಗಿ

ವಿರುಧುನಗರದ ಹತ್ತಿರ ಇರುವ ವಟ್ಟಕುಮಾರಪುರದ ಹತ್ತು ವರ್ಷದ [illegible] ಎಂಬ ಹುಡುಗಿಯು [illegible] ಬಂದ ದಾಗಿ ವರದಿಯಾಗಿದೆ. ಈ ಹುಡುಗಿಯು ಕಳೆದ [illegible] ನೀರನ್ನು ಸೇದಲು ಹೋದಾಗ, ಕಾಲು ಜಾರಿ ಬಾವಿಯೊಳಗೆ ಬಿದ್ದಳೆಂದೂ, ಅವಳನ್ನು ಮೇಲಕ್ಕೆ ಎತ್ತಿದಾಗ ಪ್ರಾಣ ಹೋಗಿತ್ತೆಂದೂ, ದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅದಕ್ಕೆ [illegible] ಆಕೆಯು [illegible] ಪ್ರಜ್ಞೆ [illegible] ನಂತರ [illegible] ಎದ್ದು [illegible] ದಳೆಂದೂ ಹೇಳಲಾಗಿದೆ. [illegible] ಆಕೆಯನ್ನು [illegible] ತಪ್ಪು ವಿರೋಧವನ್ನು ಸೂಚಿಸಿದ್ದಾರೆ. ಹುಡುಗಿಗೆ ಒಬ್ಬ ಸಿದ್ಧವೈದ್ಯರು ಚಿಕಿತ್ಸೆ ನಡೆಸುತ್ತಿದ್ದಾರೆ.

ಪೆಟ್ರೋಲಿನ ಬದಲು ನೂತನ ಎಣ್ಣೆ

ಬಾಕ್ಸ್‌ಟ್ರಾಲ್ ಎಂಬ ನೂತನ ಮೋಟಾರು ಎಣ್ಣೆಯನ್ನು ಬ್ರಿಟನ್ನಿನ ಕಂಪೆನಿಯೊಂದು ತಯಾರಿಸಿದೆಯೆಂದೂ ಪೆಟ್ರೋಲ್ ಬದಲು ಇದರಿಂದ [illegible] ಓಡಿಸಬಹುದೆಂದೂ ಇದರ ಬೆಲೆಯು [illegible] ಕಡಿಮೆ ಯೆಂದೂ ಹೇಳಲಾಗಿದೆ.

ಚಂದ್ರನಿಗೆ ರೇಡಿಯೋ ಸಮಾಚಾರ

ಚಂದ್ರನಿಗೆ ರೇಡಿಯೋ ಮೂಲಕ ಸಮಾಚಾರವನ್ನು ಕಳುಹಿಸ [illegible] ಯಂತ್ರವನ್ನು [illegible] ಕಟ್ಟಲಾಗುವುದೆಂದೂ ಈ [illegible] ಲಂಡನ್ನಿನಲ್ಲಿ ನಡೆಯುವ ಪ್ರದರ್ಶನದಲ್ಲಿ [illegible] ಲಾಗುವುದೆಂದೂ ಹೇಳಲಾಗಿದೆ.

ಮನೆ ಕ್ರಯಕ್ಕಿದೆ

ಡೋರ್ ನಂ [illegible], ತಳೂರು ಮಠದ ಬೀದಿ, ಖಿಲ್ಲೆ ಮೊಹಲ್ಲಾ, ಮೈಸೂರು. ವಿವರಗಳಿಗೆ: ಆರ್ ಗುಂಡೂರಾವ್, ಬ್ರೋಕರ್, ಶ್ರೀರಾಂಪೇಟೆ, ಮೈಸೂರು.

ಭಾರತದಲ್ಲಿ ಲಿಯಾಖತ್ ಆಲಿಯವರ ಆಸ್ತಿಗಳು

[illegible] ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿಯವರ [illegible] ಆಸ್ತಿಪಾಸ್ತಿಗಳ [illegible] ವರ್ಷ [illegible] ಆಸ್ತಿಪಾಸ್ತಿಗಳ ವರಿತ ಕಾನೂನಿನ ಪ್ರಕಾರ ಈಗ ಹಣ ಕಳುಹಿಸುವುದನ್ನು [illegible] ಲಾಗಿದೆಯೆಂದೂ ತಿಳಿಸಲಾಗಿದೆ.

ಹೆಗ್ಗಡದೇವನಕೋಟೆ ಪೌರಸಭಾ ಚುನಾವಣೆ

ಹೆಗ್ಗಡದೇವನಕೋಟೆ ೧೦ ನೆನ್ನೆ ದಿನ ಇಲ್ಲಿ ನಡೆದ ಟೌನ್ ಪೌರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ [illegible] ಜನರ ಪೈಕಿ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ - ಶ್ರೀಗಳಾದ ಹೆಚ್. ವಿ ದಾಸೇಗೌಡರವರು, [illegible] ಶೆಟ್ಟರು, ಹೆಚ್. ಬಿ ಲಿಂಗಣ್ಣನವರು, ಹೆಚ್. ಸಿ ದೇವನಾಯಕರು, ಹೆಚ್. ವಿ ಸುಬ್ಬರಾಯರು, ಹೆಚ್. ಎ ನರಸಿಂಹ ಶೆಟ್ಟಿ, ಹೆಚ್. ವಿ [illegible], ಎಸ್ [illegible] ನಾಯಕರು, ಬಿಳ್ಳ ನಾಯಕರು, ಚಿಕ್ಕನಾಯಕರು.

|| ಶ್ರೀ ||

ಸರಸ್ವತಿ ಸಂಗೀತ ಸಮಾಜ

(ರಿ), ಮೈಸೂರು

16-12-49 ನೇ

ಶುಕ್ರವಾರ ಸಂಜೆ 6 ಘಂಟೆಗೆ

ಮೈಸೂರು ಟೌನ್‌ಹಾಲಿನಲ್ಲಿ

ಡಾ॥ ಜಿ. ಎನ್ ಬಾಲಸುಬ್ರಹ್ಮಣ್ಯಂ ಮತ್ತು ಪಾರ್ಟಿಯವರಿಂದ

ಗಾಯನ ಸಂಗೀತ

ಟಿಕೆಟ್ ದರ ರೂ [illegible] [illegible] ಟಿಕೆಟುಗಳು [illegible] ಜಗನ್ಮೋಹನ [illegible], ಕೃಷ್ಣವಿಲಾಸದಲ್ಲಿ, ಇವರಲ್ಲಿ [illegible] ಅಗಾಯಿತು [illegible]

ಅಮೇರಿಕಕ್ಕೆ ಪಾಕ್ ಪ್ರಧಾನಿ

ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿಖಾನರು ಅಮೇರಿಕದ ಆಹ್ವಾನವನ್ನು ಸ್ವೀಕರಿಸಿ ವಾಷಿಂಗ್‌ಟನ್ನಿಗೆ ಭೇಟಿಯಾಗುವುದಾಗಿ ಗೊತ್ತಾಗಿದೆ. ಅಲ್ಲಿಗೆ ಅವರು [illegible] ಟ್ರೂಮನ್ ದಂಪತಿಗಳ ಅತಿಥಿಗಳಾಗಿರುವರು.

ಜರೂಸೆಲಂ ನಗರದ ಮೇಲೆ ವಿಶ್ವಸಂಸ್ಥೆ ಹತೋಟಿ

ಇಸ್ರೇಲ್ ರಾಜ್ಯದಲ್ಲಿರುವ ಜರೂಸೆಲಂ ನಗರದ ಮೇಲೆ ಖಾಯಂ ಆದ ಅಂತರ ರಾಷ್ಟ್ರೀಯ ಹತೋಟಿಯಿರಬೇಕೆಂದು ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ತೀರ್ಮಾನವಾಗಿರುತ್ತೆ.

ಯುಗೋಸ್ಲೇವಿಯಾದಲ್ಲಿದ್ದ ರಷ್ಯನರಿಗೆ ಸಜಾ

ಯುಗೋಸ್ಲೇವಿಯಾದಲ್ಲಿ ಸೋವಿಯಟ್ ರಷ್ಯದ ಪರವಾಗಿ ಗೂಢಚಾರರಾಗಿ ಕೆಲಸ ಮಾಡಿದರೆಂಬ ಆಪಾದನೆ ಮೇಲೆ ಹತ್ತು ಜನ ಬಿಳಿಯ ರಷ್ಯನರಿಗೆ ಒಂದರಿಂದ ಹದಿನೈದು [illegible] ವರ್ಷಗಳ ಸಜವನ್ನು ವಿಧಿಸಲಾಗಿದೆ.

ತುರ್ಕಿಗೆ ೫೩ ಹಡಗುಗಳು

ಅಮೇರಿಕದ ಮಾರ್ಷಲ್ ಸಹಾಯದ ಸಾಲದಿಂದ ತುರ್ಕಿಯು [illegible] ಹಡಗುಗಳನ್ನು ಕೊಳ್ಳಲು ನಿರ್ಧರಿಸಿದೆ.

ಹಳೇ ವಿದ್ಯಾರ್ಥಿ ಸಂಘ

ನಂಜನಗೂಡು [illegible]

ಸರಕಾರಿ ಹೈಸ್ಕೂಲು ಹಳೆಯ ವಿದ್ಯಾರ್ಥಿಗಳ ಸಂಘದ ಸಭೆಯು ಸೇರಿ, ಶಾಲೆಯ ವಾರ್ಷಿಕ ಸಮಾರಂಭವನ್ನು ನಡೆಸಲು ಒಂದು ಸಮಿತಿಯನ್ನು ರಚಿಸಿ, ಅದಕ್ಕೆ ಶ್ರೀ ಎನ್ ಶ್ರೀಕಂಠಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಂ [illegible] ರಾಜರಾವ್ ಮತ್ತು ಬಿ ಚಂದ್ರಶೇಖರರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

ರೈತರುಗಳಿಂದ ಮುಂಗಡವಾಗಿ ಕಂದಾಯದ ಸ್ವೀಕಾರ

ಹತ್ತು ರೂಗಿಂತ ಹೆಚ್ಚು ಕಂದಾಯ ಕೊಡುವ ರೈತರಿಂದ ಒಂದು ವರ್ಷದ ಕಂದಾಯವನ್ನು ಮುಂಗಡವಾಗಿ ಸ್ವೀಕರಿಸುವುದರ ಒತ್ತಾಯದಿಂದ ಸಾಲದ ರೂಪದಲ್ಲಿ ತೆಗೆದುಕೊಳ್ಳುವ ಯೋಜನೆಯನ್ನು [illegible] ಮದ್ರಾಸ್ ಸರ್ಕಾರದವರು ತಯಾರಿಸಿದ್ದಾರೆ.

೯೦ ವರ್ಷದವನಿಗೆ ಪುತ್ರ

ಅವಿಭಕ್ತ [illegible] ಲೂಯಿ ಕಾರಿಚಾಲ್ [illegible] ೯೦ ವರ್ಷದ ಮುದುಕನಿಗೆ ಪುತ್ರನು ಜನಿಸಿದನು. ಆತನ ನಾಲ್ಕನೇ ಹೆಂಡತಿ ಕಳೆದ ನಾಲ್ಕು ವರ್ಷಗಳಲ್ಲಿ ೪ ಮಕ್ಕಳು ಹುಟ್ಟಿವೆಯೆಂದು ಹೇಳಲಾಗಿದೆ.

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ, ಲಿ.

ನೋಟೀಸು

೧ ನಮ್ಮಲ್ಲಿ ಫಿಕ್ಸೆಡ್ ಡಿಪಾಜಿಟ್ ಈ ಕೆಳಗೆ ಕಂಡಂತೆ ಬಡ್ಡಿಯನ್ನು ಕೊಡಲಾಗುತ್ತೆ -

6 ತಿಂಗಳಿಗೆ	ಶೇಕಡ	2
1 ವರ್ಷಕ್ಕೆ	,,	3
2 ,,	,,	3½
3 ,,	,,	3¾
4 ,,	,,	4
5 ,,	,,	4½

೨ ಪ್ರಾವಿಡೆಂಟ್ ಫಂಡನ್ನು ವಾಪಸ್ ಮಾಡುವ ದರ —

(ಇದು ಮೆಂಬರುಗಳಿಗೆ ಮಾತ್ರ)

3 ವರ್ಷಕ್ಕೆ	38 0 0
5 ,,	67 8 0
7 ,,	100 0 0

ಎಂ. ಎನ್ ರಾಮಸ್ವಾಮಿ
ಆನರರಿ ಸೆಕ್ರೆಟರಿ

Edited, printed and published by A. R. Nagarajan, at Sadhvi Press, D Subbiah Road, Mysore

---

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟೀಸ್ ಕೇಪರ್

(ನಂಬರ್ R. 8 G 1 607 49)

ಈ ವರ ಇಲ್ಲಿ ಸಮಸ್ತ ಜನರಿಗೂ ತಿಳಿಯ ಪಡಿಸುವುದೇನೆಂದರೆ -

೧ ಈ ಮುನಿಸಿಪಲ್ ದೇವರಾಜ ಮಾರ್ಕೆಟ್ಟಿನಲ್ಲಿ [illegible] ಹತ್ತಿರ [illegible] ಮಳಿಗೆಗಳನ್ನು ಮಾಸಿಕ ಬಾಡಿಗೆಗೆ [illegible] [illegible] ಮಾರಾಟ [illegible] ಬಹಿರಂಗವಾಗಿ [illegible] ಇವುಗಳನ್ನು [illegible] ಷರತ್ತುಗಳನ್ನು [illegible] ನಡೆಯುವ [illegible]

Mysore City }
6 12 49 }

(Sd) [illegible] Rama Rao
For Municipal Commissioner

CITY MUNICIPALITY, MYSORE

— o —

Sealed tenders will be received up to 4 p m on 19th December 1949 by the Municipal Engineer for urgent repairs to the II Floor of the Town Hall. Each tender must be accompanied with a challan for having remitted Rs 245 in the Municipal Treasury as earnest money. For full particulars please see the office notice Board. Tenders without deposit will on no account be considered.

V. K. Mukundan,
Municipal Engineer

ಪ್ರಭಾ

11—12—49 ರಿಂದ ಪ್ರತಿದಿನ 3 ಆಟಗಳು

ಪೂರ್ಣಿಮಾ ಪ್ರೊಡಕ್ಷನ್ಸ್‌ರವರ

* ರಾಮಾಯಣ *

ಸಾಮಾಜಿಕ ಹಿಂದಿ ಚಿತ್ರ

ಪಾತ್ರ: ನರ್ಗೀಸ್, ಪ್ರೇಮ್ ಅದೀಬ್, ಚಂದ್ರಮೋಹನ, ರೋಸ್

ನಿರ್ದೇಶನ: ಸರ್ವೋತ್ತಮ ಬಾದಾಮಿ

ಫೋ॥ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಮಂಗಳವಾರ ೧೩-೬-೫೨ [ಸಂಚಿಕೆ ೧೫೩

ನಾಯಕ ಚುನಾವಣೆಗೆ ಹನುಮಂತಯ್ಯ - ರೆಡ್ಡಿ

ಗೋಪಾಲರಾವ್ ದೇಣಿಗಾರರಿಗೆ ಮತ್ತೆ ೨ ಆಣೆ ಡಿವಿಡೆಂಡ್

ಬೆಂಗಳೂರು ೧೨

ಗೋಪಾಲರಾಯರ ವ್ಯವಹಾರದ ವಿಚಾರಣಾ ಸಮಿತಿಯವರು ತಮ್ಮ ಕಾರ್ಯಗಳನ್ನು ಮುಕ್ತಾಯಗೊಳಿಸಿ, ವರದಿಯನ್ನು ಮುಂದಿನ ವಾರ ಸರ್ಕಾರಕ್ಕೆ ಒಪ್ಪಿಸುವರೆಂದೂ, ಹಿಂದೆ ಕೊಟ್ಟ ೪ ಆಣೆಯ ಜೊತೆಗೆ ಈಗ ೨ ಆಣೆ ಡಿವಿಡೆಂಡನ್ನು ಕೊಡಲು ನಿರ್ಧರಿಸಿರುವರೆಂದೂ ತಿಳಿದು ಬಂದಿದೆ. ಸಮಿತಿಯವರು ಒಟ್ಟು ೬೦ ಲಕ್ಷ ರೂ. ಗಳನ್ನು ವಸೂಲು ಮಾಡಿರುತ್ತಾರೆ. ಮೈಸೂರು ಸರ್ಕಾರದ ಕೆಲವು ಅಧಿಕಾರಿಗಳ ವ್ಯವಹಾರದ ವಿಚಾರವಾಗಿ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಸಮಿತಿಯವರು ಮಾಡಿದ್ದಾರೆಂದೂ, ಗೋಪಾಲರಾಯರು ಮತ್ತು ಅವರ ಸಂಸಾರದವರಿಗೆ ಯಾವ ಜೀವನ ವೆಚ್ಚವನ್ನೂ ಕೊಡಬೇಕಾಗಿಲ್ಲವೆಂದು ತಿಳಿಸಿರುವರೆಂದೂ ಗೊತ್ತಾಗಿದೆ. ಸಮಿತಿಗೆ ಒಟ್ಟು ೨ ಲಕ್ಷ ರೂ. ಖರ್ಚಾಗಿದೆ.

ಲಂಚದ ಆಪಾದನೆಗಾಗಿ ಅಧಿಕಾರಿಯ ಸೆಷನ್ಸ್ ವಿಚಾರಣೆ

ಪಾಕಿಸ್ತಾನದ ಸರ್ಕಾರಿ ನೌಕರರ ಸ್ವಾಧೀನದಲ್ಲಿ ೨ ಸಾವಿರ ಅಪಹೃತ ಹಿಂದೂ ಮಹಿಳೆಯರಿರುವರೆಂದೂ, ಭಾರತವು ೧೩ ಸಾವಿರ ಅಪಹೃತ ಮುಸ್ಲಿಂ ಮಹಿಳೆಯರನ್ನು ಪತ್ತೆ ಮಾಡಿ ಪಾಕಿಸ್ತಾನಕ್ಕೆ ಕಳುಹಿಸಿದೆಯೆಂದೂ ಭಾರತದ ಪಾರ್ಲಿಮೆಂಟಿನಲ್ಲಿ ನಿನ್ನೆ ದಿನ ತಿಳಿಸಲಾಯಿತು.

ಪಾಕಿಸ್ತಾನದಲ್ಲಿ ೪ ಸಾವಿರ ಕೋಟಿ ರೂ. ಹಿಂದೂಗಳ ಆಸ್ತಿ

ಪಶ್ಚಿಮ ಪಾಕಿಸ್ತಾನವನ್ನು ಬಿಟ್ಟು ಬಂದಿರುವ ಹಿಂದೂ ನಿರಾಶ್ರಿತರ ಆಸ್ತಿಪಾಸ್ತಿಗಳ ಬೆಲೆಯು ೪ ಸಾವಿರ ಕೋಟಿ ರೂ. ಆಗುವುದೆಂದೂ, ಭಾರತದಲ್ಲಿ ಮುಸ್ಲಿಂ ನಿರಾಶ್ರಿತರ ಆಸ್ತಿಪಾಸ್ತಿಗಳು ಕೇವಲ ೩೫೦ ಕೋಟಿ ರೂ. ಎಂದೂ ಅಂದಾಜು ಮಾಡಲಾಗಿದೆ.

LATEST NEWS

ಕೆ. ಸಿ. ರೆಡ್ಡಿಯವರೇ ನಾಯಕರು

ಸ್ವಂತ ವರದಿಗಾರ] ಬೆಂಗಳೂರು ೧೭

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಗಾಗಿ ಈ ಮಧ್ಯಾಹ್ನ ೨-೩೦ ಗಂಟೆಗೆ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಕುಮಾರ ಪಾರ್ಕಿನಲ್ಲಿ ಸಭೆ ಸೇರಿತ್ತು. [illegible] ಸರ್ವಾನುಮತದಿಂದ ನಾಯಕರನ್ನು ಆರಿಸುವುದು ಉತ್ತಮವೆಂದು [illegible] ಅಧ್ಯಕ್ಷರು ಸೂಚಿಸಿದರು. ಶ್ರೀ ಎಚ್. ಎ. ಚನ್ನಬಸಪ್ಪನವರು [illegible] ಸದಸ್ಯರು [illegible] ಹೇಳಿದರು. ಶ್ರೀ ಟಿ. ಸಿದ್ದಲಿಂಗಯ್ಯನವರು ಅದನ್ನು ಸಮರ್ಥಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರ ಹೆಸರನ್ನು ಶ್ರೀ [illegible] ಸೂಚಿಸಿದರು. ಶ್ರೀ [illegible] ಅದನ್ನು ಅನುಮೋದಿಸಿದರು. ಶ್ರೀ ಹನುಮಂತಯ್ಯನವರ ಹೆಸರನ್ನು ಶ್ರೀ ಟಿ. ಸಿದ್ದಲಿಂಗಯ್ಯನವರು ಸೂಚಿಸಿದರು. [illegible] ಅದನ್ನು ಅನುಮೋದಿಸಿದರು.

[illegible] ಶ್ರೀ ರೆಡ್ಡಿಯವರಿಗೆ [illegible] ಶ್ರೀ ಹನುಮಂತಯ್ಯನವರಿಗೆ [illegible], ಶ್ರೀ ರೆಡ್ಡಿಯವರು [illegible] ಆರಿಸಲ್ಪಟ್ಟರು.

ಮಾಲೀಕರೂ ವಾರಕ್ಕೊಂದು ದಿನ ರಜಾ ತೆಗೆದುಕೊಳ್ಳಬೇಕು

ಬೆಂಗಳೂರು ೧೬

ಸಾಪ್ ಅಸಿಸ್ಟೆಂಟ್ ಶಾಸನವನ್ನು ಅಂಗಡಿ ಮಾಲೀಕರು ಕಾರ್ಯರೂಪಕ್ಕೆ ತರಲು ಅನುಕೂಲವಾಗುವಂತೆ ಅಂಗಡಿಗಳನ್ನು ೩ ವಿಭಾಗವಾಗಿ ಲೇಬರ್ ಕಮಿಷನರು ವಿಂಗಡಿಸಿದ್ದಾರೆ

೧ ಕೆಲಸಗಾರರಿಲ್ಲದೆ ಮಾಲೀಕ ಮನೆಯವರೇ ನಡೆಸಲ್ಪಡುವ ಅಂಗಡಿಯಲ್ಲಿ ವ್ಯಾಪಾರದ ಕಾಲಾವಧಿ ಮತ್ತು ರಜೆ ದಿನಗಳೂ ಇನ್ನೂ ಜಾರಿಗೆ ಬರಬೇಕು. ಮತ್ತು ಬೆಳಗ್ಗೆ ೬ ರಿಂದ ರಾತ್ರಿ ೧೦ ಗಂಟೆ ವರೆಗೂ ಅಂಗಡಿಯನ್ನು ತೆರೆದಿಡಬಹುದು. ಆದರೆ ವಾರದಲ್ಲಿ ಒಂದು ದಿನ ಮಾತ್ರ ಅಂಗಡಿಯನ್ನು ಮುಚ್ಚಲೇಬೇಕು

೨ ೮ ಗಂಟೆಗೆ ಮೀರದೆ ಕೆಲಸ ಮಾಡುವವರಿರುವ ಅಂಗಡಿಗಳಲ್ಲಿ ಕಾಲಾವಧಿ ಮತ್ತು ರಜದ ದಿನದ ಬೋರ್ಡನ್ನು ಹಾಕಬೇಕು. ಹಾಜರು ಪುಸ್ತಕ, ಸಂಬಳ, ನಕ್ಕ ಇವುಗಳ ರಜಿಸ್ಟರುಗಳನ್ನು ಇಟ್ಟಿರಬೇಕು. ಕೆಲಸಗಾರರಿಗೆ ರಜದ ಪುಸ್ತಕಗಳನ್ನು ಕೊಡಬೇಕು ಮತ್ತು ಸಂಬಳ ಕೊಡುವ ದಿನವನ್ನು ಅದರಲ್ಲಿ ನಮೂದಿಸಬೇಕು

೩ ೮ ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡುವ ಅಂಗಡಿಗಳಲ್ಲಿ ಕೆಲಸಗಾರರಿಗೆ ಕೊಡುವ ರಜಾದಿನ, ಕೆಲಸಗಾರರ ಕಾಲಾವಧಿ ಗಳನ್ನು ನಮೂದಿಸಿರುವ ಪಟ್ಟಿ... ಲ್ಲಿ ರಿಜಿಸ್ಟರುಗಳು ಮತ್ತು ಇನ್ಸ್ಪೆಕ್ಟರು ಅಭಿಪ್ರಾಯಗಳನ್ನು ಸೂಚಿಸಲು ಒಂದು ಪ್ರತ್ಯೇಕ ಪುಸ್ತಕವನ್ನು ಇಟ್ಟಿರಬೇಕು ಎಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ

ಕಿವುಡರಿಗೆ ರೇಡಿಯೋ

ಕಿವುಡರಿಗೆ ಉಪಯೋಗವಾಗುವಂತಹ ರೇಡಿಯೋ ಮತ್ತು ಕೇಳುವ ಯಂತ್ರ ವೊಂದನ್ನು ಲಂಡನ್ನಿನಲ್ಲಿ ತಯಾರಿಸಲಾಗಿದೆ. ಜೇಬಿನಲ್ಲಿ ಇಟ್ಟುಕೊಳ್ಳಬಹುದಾದ ಪುಟ್ಟ ಕೇಳುವ ಯಂತ್ರದಲ್ಲಿರುವ ವಿದ್ಯುಚ್ಛಕ್ತಿ ಸ್ವಿಚ್ಚನ್ನು ಹಾಕುವುದರಿಂದ ಅದು ರೇಡಿಯೋವಾಗಿ ಪರಿವರ್ತನೆ ಹೊಂದುವುದೆಂದು ಹೇಳಲಾಗಿದೆ.

೬೬ ದಿನದ ಚಿಕಿತ್ಸೆ

ನಿಮೋನಿಯಕ್ಕೆ ೬೬ ದಿನ ಚಿಕಿತ್ಸೆಯ ಬಳಿಕ ಗುಣಹೊಂದುತ್ತಿರುವ ... ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಲಾಗಿದೆ ... ಬೇಗನೆ ಗುಣಹೊಂದುತ್ತಿದ್ದಾರೆ ...

ಮನೆ ಬಾಡಿಗೆಗೆ ಬೇಕಾಗಿದೆ

ಚಿಕ್ಕ ಸಂಸಾರಕ್ಕೆ ... ಮನೆ ... ವಿದ್ಯುಚ್ಛಕ್ತಿ, ನಲ್ಲಿ ... ಸೌಕರ್ಯಗಳಿರುವ ಸ್ಥಳದಲ್ಲಿ ಒಂದು ಬೇಕಾಗಿದೆ

ವಿಳಾಸ —

ಎಂ. ವಿ. ರಾಮಸ್ವಾಮಿ,

... ... ಮೈಸೂರು.

ಗ್ರೈಸ್ಟ್ ನೌಕರನ ಮನೆಯಲ್ಲಿ ೪೦ ಸಾವಿರ ರೂ. ಆಸ್ತಿ ವಶ

ವಾಷಿಂಗ್ಟನ್ನಿನಲ್ಲಿ ... ಕಿಂಗ್ಸ್‌ಟನ್ ... ಕರೆಯುವ ... ಎಂಬುವರ ಮನೆಯನ್ನು ಪೊಲೀಸರು ಶೋಧಿಸಿ, ೨೦ ಸಾವಿರ ರೂ. ಬೆಲೆ ಬಾಳುವ ವಸ್ತುಗಳನ್ನೂ ಮತ್ತು ೫೦ ಸಾವಿರ ರೂ. ಬೆಲೆ ಬಾಳುವ ... ವಶಪಡಿಸಿಕೊಂಡಿರುತ್ತಾರೆ. ... ವಸ್ತುಗಳಿಂದ ಈ ಆಸ್ತಿಯನ್ನು ಅವರು ಮಾಡಿರುವರೆಂದು ... ಅನುಮಾನ ... ಮಾಡಲಾಗಿದೆ.

ಬೆಟ್ಟಗಳನ್ನು ಒಡೆಯಲು ಅಣು ಶಕ್ತಿ

ರಷ್ಯಾ ವಿಸ್ಟಬೀರಿಯಾ ನದಿಗಳಿಂದ ಕಾಲುವೆಯನ್ನು ತೆಗೆಯಲು ಮಾರ್ಗದಲ್ಲಿ ಅಡ್ಡಿಯಾಗಿರುವ ಬೆಟ್ಟಗಳನ್ನು ಒಡೆಯಲು ಅಣು ಶಕ್ತಿಯನ್ನು ಉಪಯೋಗಿಸಲಾಗಿದೆಯೆಂದು ವರದಿಯಾಗಿದೆ. ಮಾನವನ ಉಪಯೋಗಕ್ಕಾಗಿ ಅಣು ಶಕ್ತಿಯನ್ನು ಪ್ರಯೋಗಿಸಿರುವುದು ಇದೇ ಪ್ರಥಮ ಬಾರಿಯೆಂದು ಹೇಳಲಾಗಿದೆ

ವಜ್ರ ಸಾಗಿಸಿದುದಕ್ಕೆ ೩ ಲಕ್ಷ ಪೌಂಡು ದಂಡ

ತೆರಿಗೆಯನ್ನು ಕೊಡದೆ ಅಕ್ರಮವಾಗಿ ವಜ್ರಗಳನ್ನು ಹೊರಕ್ಕೆ ಸಾಗಿಸಿದರೆಂಬ ಆಪಾದನೆಯ ಮೇಲೆ ಬ್ರಿಟನ್ನಿನ ವ್ಯಾಪಾರ ಸಂಸ್ಥೆಯೊಂದಕ್ಕೆ ... ದಂಡ ... ಡಬ್ಲ್ಯೂ ... ಅವರ ... ಭೆಡರಿಕ್ ಪ್ರಿನ್ಸ್‌ರವರಿಗೆ ... ಶಿಕ್ಷೆ ಮತ್ತು ೩೭,೧೦೦ ಪೌಂಡು ದಂಡವನ್ನು ವಿಧಿಸಲಾಗಿದೆ. ಇವರು ಟಾಂಜೀರಿಗೆ ವಜ್ರಗಳನ್ನು ಕಳುಹಿಸಿ ಅವನ್ನು ಅಮೆರಿಕದಲ್ಲಿ ಮಾರಿ ಬ್ರಿಟನ್ನಿಗೆ ೬೫,೫೫೫ ಪೌಂಡು ಬೆಲೆ ಬಾಳುವ ಡಾಲರುಗಳ ನಷ್ಟ ಉಂಟುಮಾಡಿದರೆಂದು ಆಪಾದಿಸಲಾಗಿತ್ತು

SRI GAYATHRI

Daily 3 Shows

From 18-12-49 for 3 days

Shame Come out of the Shadows and Changed A Young girl's Life

WARNER'S

JOHNNY - BELINDA

With Jane Wyman & Lew Ayres

ವಾರಕ್ಕೆ ಮನೆ ಇಲ್ಲದೆ ದಸ್ತಗಿರಿ ಮಾಡಿಸಿಕೊಂಡ

ಲಂಡನ್ನಿನ ಆಲ್ಬರ್ಟ್ ಡಂಗ್ ಎಂಬ ೫೫ ವರ್ಷದ ಕಾರ್ಮಿಕನು ತನಗೆ ವಾಸಕ್ಕೆ ಮನೆ ಸಿಕ್ಕದೆ ರಸ್ತೆಯಲ್ಲಿ ರಾತ್ರಿ ತಿರುಗುತ್ತಿದ್ದಾಗ ಪೊಲೀಸರ ಅವನನ್ನು ದಸ್ತಗಿರಿ ಮಾಡಿ ಪೊಲೀಸ್ ಠಾಣೆಯಲ್ಲಿಟ್ಟಿದ್ದರು ಮಾರನೇ ದಿನ ಅವನನ್ನು ಕೋರ್ಟಿನ ಮುಂದೆ ಹಾಜರು ಪಡಿಸಿದಾಗ, ಮನೆಗಳ ಅಭಾವದಿಂದ ಅನೇಕ ಜನರು ಪೊಲೀಸ್ ಠಾಣೆಯಲ್ಲಿ ಸುಖವಾಗಿ ರಾತ್ರಿಕಾಲವನ್ನು ಕಳೆಯ ಬಹುದೆಂದು ದಸ್ತಗಿರಿ ಮಾಡಿಸಿಕೊಳ್ಳುತ್ತಿದ್ದಾರೆಂದು ಪೊಲೀಸರು ತಿಳಿಸಿದರು ... ಮುಂದೆ ಈ ರೀತಿ ಮಾಡಿದಲ್ಲಿ ಜೈಲಿಗೆ ಕಳುಹಿಸುವುದಾಗಿ ಅಪರಾಧಿಗೆ ಎಚ್ಚರಿಕೆ ಕೊಟ್ಟು ನ್ಯಾಯಾಧೀಶರು ಅವನನ್ನು ಬಿಡುಗಡೆ ಮಾಡಿದರು

ಕೇಂದ್ರ ಕಛೇರಿಯಲ್ಲಿ ೬೭೧೮ ಜನ ನೌಕರರು

ದೆಹಲಿಯ ಕೇಂದ್ರ ಕಛೇರಿಯಲ್ಲಿ ಒಟ್ಟು ೬೭೧೮ ಜನ ನೌಕರರಿರುವರೆಂದೂ, ಅವರಿಗಾಗಿ ಸೆಪ್ಟೆಂಬರ್ ಗಣನೆ ವಾರದವರೆಗೆ ಸಂಬಳಕ್ಕಾಗಿ ... ರೂ ಖರ್ಚಾಗಿದೆಯೆಂದೂ ತಿಳಿಸಲಾಗಿದೆ

ಬೆಂಕಿ ಅನಾಹುತದಿಂದ ೧೧ ಜನರ ಮರಣ

ಲ್ಯಾಟಿನ್ ಅಮೆರಿಕಕ್ಕೆ ಸೇರಿದ ಗೋಟಾ ... ಎಂಬಲ್ಲಿ ಮನೆ ಒಂದಕ್ಕೆ ಭಾರಿ ಬೆಂಕಿ ... ವರ್ಷದ ತರುಣಿ, ಆಕೆಯ ಮಗು ... ಮತ್ತು ೬ ಮಂದಿ ... ಬೂದಿ ಯಾದರೆಂದೂ, ೩ ಜನ ಕೆಲಸಗಾರರು ... ಬೆಂದು ಹೋದರೆಂದೂ ವರದಿಯಾಗಿದೆ

ಹಿಂದೂ ವಿದ್ಯಾರ್ಥಿ ಫೆಡರೇಷನ್ ಸಮ್ಮೇಳನ

ಇದೇ ೨೩ನೇ ತಾ|| ಕಲ್ಕತ್ತದಲ್ಲಿ ನಡೆಯುವ ಅಖಿಲ ಭಾರತದ ಹಿಂದೂ ವಿದ್ಯಾರ್ಥಿ ಫೆಡರೇಷನ್ನಿನ ೭ನೇ ಅಧಿವೇಶನಕ್ಕೆ ಬೆಂಗಳೂರಿನ ಶ್ರೀ ಜಿ ವಿ ರಾಮಾಚಾರ್ಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ.

ಗಣೇಶಾ ಟಾಕೀಸ್

17-12-49ರಿಂದ ಪ್ರತಿದಿನ 3 ಆಟಗಳು

ಆದಿತ್ಯನ - ಕನಸು

(ತಮಿಳು)

ಪಾತ್ರ – ಟಿ ಆರ್ ಮಹಾಲಿಂಗಂ, ಕಾಳಿ ಎನ್ ರತ್ನಂ, ಅಂಜಲಿ ದೇವಿ ಲಲಿತಾ ಪದ್ಮಿನಿ, ... ಚೌಧ್ರಿ

ಮಂಡ್ಯದ ಸಕ್ಕರೆ ಕಾರ್ಖಾನೆಯ ಪ್ರಕರಣ

ಮಂಡ್ಯದ ಸಕ್ಕರೆ ಕಂಪೆನಿಯು ಪ್ರಶ್ನೆ ಇನ್ನು ಸಂಸ್ಥಾನಕ್ಕೆ ಸೇರಿದ ... ಬಾಗಿಲ್ಲವೆಂದೂ, ಕಾರ್ಮಿಕರ ಮೇಲೆ ... ವೆಂದೂ, ನಡೆಯುದ ದಬ್ಬಾಳಿಕೆಯು ... ದು ನಡೆಯುತ್ತಿರುವುದು ಪ್ರಕಟಿಯಬ್ಬಾ ... ಗಂಟಿನ ಮನಸ್ಸನ್ನು ಕಲಕಿರುವುದೆಂದೂ, ಈಗಲಾದರೂ ಸರ್ಕಾರವು ದುರಭ್ಯಾ ... ಯಿಂದ ವರ್ತಿಸಿ, ಸಂಸ್ಥಾನಕ್ಕೆ ... ತರುವಂತೆ ಈ ಪ್ರಕರಣವನ್ನು ಬಗೆಹರಿಸಬೇಕೆಂದೂ ರಾಜಧಾನಿಯ ಇಕ್ಕೆಗೆ ... ನ ಯುವಕರ ಸಂಘದ ಅಧ್ಯಕ್ಷರಾದ ಶ್ರೀ ಎಂ ಪಿ ಕೃಷ್ಣಸ್ವಾಮಿಯವರು ಬರೆದಿರುತ್ತಾರೆ

ಭಾವಸಾರ ಕ್ಷತ್ರಿಯ ಮಂಡಳಿ

ರಾಜಧಾನಿಯ ಭಾವಸಾರ ಕ್ಷತ್ರಿಯ ಮಂಡಲಿಯ ಆಡಳಿತ ವರ್ಗದ ಚುನಾವಣೆಯು ನಡೆದು, ಶ್ರೀ ಎಂ ಶೇಷಗಿರಿರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಪಿ ಎಸ್. ರಾಜಾರಾಂರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಪಿ ಜಿ ... ರನ್ನು ಕಾರ್ಯದರ್ಶಿಯನ್ನಾಗಿಯೂ ಶ್ರೀ ಆರ್ ... ರಾಯರನ್ನು ಖಜಾಂಚಿಯನ್ನಾಗಿ ಆರಿಸಲಾಗಿದೆ

'ಪ್ರಜಾಧರ್ಮ'

ಸದಭಿಪ್ರಾಯದಿಂದ ಒರೆದ ಪ್ರತಿ ... ಚಿಕ್ಕಮಗಳೂರಿನ ಇಂಟರ್ ಕಾಲೇಜು ... ಶ್ರೀ ಎಸ್ ಸೂರ್ಯನಾರಾಯಣರಾಯರು ಪ್ರಕಟವಾಗಿರುವ 'ಪ್ರಜಾಧರ್ಮ' ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ ... ಜಾಧರ್ಮ, ಪೌರನೀತಿ ಮತ್ತು ನೈತಿಕ ಸಂಸ್ಥಾನ ಮತ್ತು ಭಾರತದ ಚರಿತ್ರೆ ... ಇತರ ಉಪಯುಕ್ತ ವಿಷಯಗಳು ಇದರಲ್ಲಿ ಕೂಡಿವೆ ಬೆಲೆ ೮ ಆಣೆ

ಕಮ್ಯೂನಿಸ್ಟರ ಚೀಣಾಕ್ಕೆ ಬರ್ಮಾದ ಅಂಗೀಕಾರ

ಬರ್ಮಾ ಸರ್ಕಾರವು ಕಮ್ಯೂನಿಸ್ಟ್ ಚೀಣಾಕ್ಕೆ ಈದಿನ ಅಂಗೀಕಾರವನ್ನು ... ಯುವ ನಿರೀಕ್ಷಣೆ ಇದೆ

ರಾಜಕಮಲ್

ಮೈ ಸೂ ರು

16—12—49ರಿಂದ

ಅನೋಘವಾದ ೨ನೇ ವಾರ

ದಿನವೂ 3 ಆಟಗಳು

ಎಂ. ಆರ್. ಎ ರವರ ತೆಲುಗು ಚಿತ್ರ

ಮನ ದೇಶಂ

ಪಾತ್ರ.– ಕೃಷ್ಣವೇಣಿ, ನಾಗಯ್ಯ ... ಮಣ ರಾವ್ ಮತ್ತು ಕಾಂತ

From 16-12-49 for 4 days

Morning Shows

Love From a - Stranger

With - John Hodial Sylvia Sidney, Ann Richards

TENDER NOTICE

Sealed tenders for the supply of about 1750 pallas of Horsegram to the Palace will be received by the undersigned on Monday the 19th December 1949

Particulars may be obtained from the Bakshi Palace Mothikhana Mysore

H Niranjen Raj Urs,
Huzur Secretary
H H the Maharaja of Mysore
Mysore

Edited, printed and published by A R Nagarajan at Sadhvi Press, D Sub ... th Road, Mysore

ರೋ॥ ನಂ. 792 WEEKLY EDITION [illegible]

ಸಾಧ್ವಿ

ಸಂಪುಟ ೧೪] ಭಾನುವಾರ [illegible] [ಸಂಚಿಕೆ [illegible]

ಮಂತ್ರಿಮಂಡಲದ ಪುನರ್ರಚನೆ ಸದ್ಯದಲ್ಲೇ

ಕೆ. ಸಿ. ರೆಡ್ಡಿಯವರಿಗೆ ಅಭಿನಂದನೆಗಳು

ಸ್ವಂ.ಸು.ಪ್ರೊ॥] ಬೆಂಗಳೂರು ೧೬

ನಿನ್ನೆಯ ದಿವಸ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯು ನಡೆದನಂತರ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಚನ್ನಯ್ಯನವರು ಭಾಷಣಮಾಡಿ [illegible] ರೆಡ್ಡಿಯವರನ್ನು ಅಭಿನಂದಿಸಿದರು. ಈಗ ಶ್ರೀ ರೆಡ್ಡಿಯವರ ಮೇಲಿನ ಹೊಣೆಗಾರಿಕೆಯು ಹೆಚ್ಚಿದೆಯೆಂದೂ ಮತ್ತು ಕಾಂಗ್ರೆಸ್ಸಿನಮೇಲೆ ಅದು ಇನ್ನೂ ಹೆಚ್ಚಿನದಾಗಿದೆಯೆಂದೂ, ಮುಂದೆ ಒಂದು ಹೊಸ ಅಧ್ಯಾಯವೇ ಆರಂಭವಾಗಬೇಕಾಗಿದೆಯೆಂದೂ ಅವರು ಹೇಳಿದರು. ಈಗಿನ ಮಂತ್ರಿಮಂಡಲ ಮತ್ತು ಕಾಂಗ್ರೆಸ್ಸಿನ ಕೆಲಸಕಾರ್ಯಗಳು ಎಲ್ಲ ವಿಷಯದಲ್ಲೂ ಸಮರ್ಪಕವಾಗಿವೆಯೆಂದು ತಾವು ಹೇಳುವುದಿಲ್ಲವೆಂದೂ ಶ್ರೀ ಚನ್ನಯ್ಯನವರು ತಿಳಿಸಿದರು. ಶ್ರೀ ಕೆ. ಹನುಮಂತಯ್ಯನವರು ಶ್ರೀ ರೆಡ್ಡಿಯವರಿಗೆ ತಮ್ಮ ಸಹಕಾರ ನೀಡಲೆಂದು ಅವರು ಆಶಿಸಿದರು.

ಶ್ರೀ ಗಳಾದ ಎಸ್. ರಂಗರಾಮಯ್ಯ, ಎಂ ಎಸ್ ಜೋಯಿಸ್ ಮತ್ತು ಕಡಿದಾಳ್ ಮಂಜಪ್ಪನವರು ಭಾಷಣಮಾಡಿ ಶ್ರೀ ರೆಡ್ಡಿಯವರನ್ನು ಅಭಿನಂದಿಸಿದರು. ಶ್ರೀ ಕೆ. ಹನುಮಂತಯ್ಯನವರು ಭಾಷಣಮಾಡಿ, ಈಗಿನ ಆಡಳಿತ ನೀತಿಯು ಅಸಮರ್ಪಕವಾಗಿದೆಯೆಂದೂ, ಇದನ್ನು ಪ್ರದರ್ಶನಕ್ಕೆ ತರುವುದೇ ತಮ್ಮ ಉದ್ದೇಶವಾಗಿತ್ತೆಂದೂ ಆದ್ದರಿಂದ ತಾವು ಚುನಾವಣೆಯಲ್ಲಿ ಸ್ಪರ್ಧಿಸಿದುದಾಗಿಯೂ ತಿಳಿಸಿ ತಮಗೆ ಸೋಲುಂಟಾಗಿರುವುದಾದರೂ ಮುಂದಿನ ಆಡಳಿತದ ಬಗ್ಗೆ ಶ್ರೀ ಚನ್ನಯ್ಯನವರು ಇಟ್ಟುಕೊಂಡಿರುವ ಭರವಸೆಯು ತಮಗಿಲ್ಲವೆಂದೂ ತಿಳಿಸಿದರು.

ಅನಂತರ ಶ್ರೀ ಕೆ. ಸಿ. ರೆಡ್ಡಿಯವರು ತಮ್ಮನ್ನು ಚುನಾಯಿಸಿದುದಕ್ಕಾಗಿ ವಂದನೆಯನ್ನು ಸಲ್ಲಿಸಿದರು.

ಮಂತ್ರಿಮಂಡಲದಲ್ಲಿ ಬದಲಾವಣೆ

ಪತ್ರಿಕೋದ್ಯೋಗಿಗಳು ಶ್ರೀ॥ ರೆಡ್ಡಿಯವರನ್ನು ಭೇಟಿ ಮಾಡಿ ಮಂತ್ರಿಮಂಡಲದಲ್ಲಿ ಬದಲಾವಣೆಯೇನಾದರೂ ಮಾಡಲಾಗುವುದೇ ಎಂದು ಕೇಳಿದುದಕ್ಕೆ ಅಗುವ ಸಂಭವವುಂಟೆಂದೂ, ಯಾವಾಗ ಎಂದು ಕೇಳಿದುದಕ್ಕೆ ಸಾಧ್ಯವಾದಷ್ಟು ಬೇಗನೆ ಎಂದು ತಿಳಿಸಿದರು. ಹಲವು ಕಾರ್ಯಗೌರವಗಳ ನಿಮಿತ್ತ ಮಂತ್ರಿ ಮಂಡಲದ ರಚನೆಯು ಸ್ವಲ್ಪ ತಡವಾಗಬಹುದೆಂದು ಅವರು ಹೇಳಿದರು.

ಪ್ರಭುಗಳಿಂದ ಶಾಸನ ಸಭೆಗಳ ಪ್ರಶಂಸೆ

ಇತ್ತೀಚೆಗೆ ರದ್ದುಗೊಳಿಸಲ್ಪಟ್ಟ ಮೈಸೂರು ಪ್ರಜಾಪ್ರತಿನಿಧಿ ಮತ್ತು ಶಾಸನ ಸಭೆಗಳ ಬಗ್ಗೆ ಶ್ರೀಮನ್ಮಹಾರಾಜರವರು ತಮ್ಮ ಮೆಚ್ಚುಗೆ ಮತ್ತು ಸಂತೋಷವನ್ನು ವ್ಯಕ್ತಪಡಿಸಿರುವರು. ಈ ಬಗೆ ಒಂದು ವಿಶೇಷ ಗೆಜೆಟ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಪ್ರೋಲೆಂಡ್ ಕೈಗಾರಿಕೆಗಳ ನಾಶಕ್ಕೆ ಫ್ರಾನ್ಸಿನ ಪಿತೂರಿ

ಪೋಲೆಂಡಿನಲ್ಲಿರುವ ಸರಕಾರಿ ಕಚೇರಿ, ಗಣಿಗಳು ಮತ್ತು ಉತ್ಪತ್ತಿ ಕಾರ್ಖಾನೆಗಳನ್ನು ನಾಶಪಡಿಸುವ ಉದ್ದೇಶದಿಂದ ಫ್ರಾನ್ಸ್ ಪಿತೂರಿ ನಡೆಸಿರುವುದೆಂದು ಪೋಲೆಂಡು [illegible] ವರದಿಸಿದೆ

ಭತ್ತ ಬೆಳೆಯುವವರಿಗೆ ಸೂಚನೆ

ಮಂಡ್ಯ ಜಿಲ್ಲೆಯಿಂದ ಭತ್ತವನ್ನು ರಾಜಧಾನಿಗೆ [illegible] ಉಪಯೋಗಕ್ಕಾಗಿ ತರಲು ಭತ್ತದ [illegible] ತಮ್ಮ ಹೊಸ [illegible] ಪಡೆಯಲು [illegible] ತಿಂಗಳು ೧೧ನೇ ತಾ॥ ವರೆಗೆ ಅವಧಿಯನ್ನು ಹೆಚ್ಚಿಸಲಾಗಿದೆ [illegible] ಜಿಲ್ಲೆಯಲ್ಲಿ [illegible] ಜನವರಿ ೩೧ನೇ ತಾ॥ ವರೆಗೆ ಅವಧಿಯನ್ನು ಹೆಚ್ಚಿಸಲಾಗಿದೆ

ಭತ್ತ ಕುಟ್ಟಲು ರಹದಾರಿ ಪಡೆಯಬೇಕು

ಭತ್ತ [illegible] ಭತ್ತವನ್ನು ಕುಟ್ಟುವಾಗ ಆಹಾರದ ಅಧಿಕಾರಿಗಳ ಅನುಮತಿ ಇಲ್ಲದೆ ಕುಟ್ಟಲಾಗದೆಂದು ತಿಳಿಸಿ ಸರ್ಕಾರದವರು ಭಾರತ ರಕ್ಷಣಾ ಶಾಸನದ ಪ್ರಕಾರ ಆಜ್ಞೆಯೊಂದನ್ನು ಹೊರಡಿಸಿ [illegible] ಮತ್ತು ಹಾಗೆ ಕುಟ್ಟಿದ ಭತ್ತದ ಲೆಕ್ಕವನ್ನು ಸಹಾ ಇಡಬೇಕೆಂದು ಸೂಚಿಸಲಾಗಿದೆ. ಹಲವು ವಿಶೇಷ ಸಂದರ್ಭಗಳಿಗೆ ಮಾತ್ರ ವಿನಾಯಿತಿಯನ್ನು ಕೊಡಲಾಗಿದೆ.

ಸಹಕಾರಿಗಳ ಸಭೆ

ಸಹಕಾರಿಗಳ ಕಾನೂನಿಗೆ ಸಂಬಂಧಿಸಿದ ಹೊಸ ನಿಬಂಧನೆಗಳ ಬಗ್ಗೆ [illegible] ಕಗಳನ್ನು ವಿಮರ್ಶಿಸಿ ಸೂಕ್ತ [illegible] ಗಳನ್ನು ಸರಕಾರಕ್ಕೆ ಕಳುಹಿಸುವುದರ ಸಲುವಾಗಿ ರಾಜಧಾನಿಯ ಸಹಕಾರ ಭವನದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ [illegible] ಸ್. ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸಹಕಾರಿಗಳ ಸಭೆಯು ನಡೆಯುವುದು

ಸಂಗೀತ ವಿದ್ಯಾ ಶಾಲೆ

ಹಿಂದೂಸ್ತಾನಿ ಸಂಗೀತದಲ್ಲಿ ಶಿಕ್ಷಣ ಮತ್ತು [illegible] ನಡೆಸಲು [illegible] ವಿನಲ್ಲಿ [illegible] ಸಂಗೀತ ಶಾಲೆಯನ್ನು [illegible] ಸರ್ಕಾರದವರು ಸ್ಥಾಪಿಸಿದ್ದಾರೆ

ಭಾರತಕ್ಕೊಂದು ಮಾದರಿ ಪುಸ್ತಕ ಭಂಡಾರ

ಭಾರತದಲ್ಲಿ [illegible] ಮಾದರಿ ಸಾರ್ವಜನಿಕ ಪುಸ್ತಕ ಭಂಡಾರವನ್ನು [illegible]

ಹೈದರಾಬಾದ್ ಅಂಚೆ, ತಂತಿ ಫೋನ್ ರೇಡಿಯೋ ಕೇಂದ್ರಕ್ಕೆ

[illegible] ತಿಂಗಳಿನಿಂದ ಹೈದರಾಬಾದಿನ ಅಂಚೆ ಇಲಾಖೆಯನ್ನು ವರ್ಗ ಮಾಡಿ ಕೇಂದ್ರ ಸರ್ಕಾರದವರೇ ಅದರ ಸ್ವಾಧೀನಪಡಿಸಿಕೊಳ್ಳಲು [illegible] ರು [illegible] ಅಂಚೆ ಇಲಾಖೆ [illegible] ಹೈದರಾಬಾದು ಪ್ರದೇಶವೂ [illegible] ಅದೇ [illegible] ಹೈದರಾಬಾದಿನ ರೇಡಿಯೋ ಮತ್ತು ಟೆಲಿಫೋನುಗಳ [illegible] ಕೇಂದ್ರ ಸರ್ಕಾರದ ಅಧೀನಕ್ಕೆ ಬರುವವು

ರೇಡಿಯೋ ಮೂಲಕ ಹಿಂದಿ ಶಿಕ್ಷಣ

ರಾಷ್ಟ್ರಭಾಷೆಯಾದ ಹಿಂದಿಯನ್ನು [illegible] ದಿವಸಗಳ [illegible] ಕಾರ್ಯಕ್ರಮವನ್ನು [illegible] ಭಾರತದ [illegible] ರೇಡಿಯೋ ಕೇಂದ್ರಗಳಲ್ಲಿ [illegible] ಪ್ರತಿ ದಿನವೂ [illegible] ಗಳ ಕಾಲ ಪಾಠಗಳನ್ನು [illegible] ವಾರಕ್ಕೆ [illegible] ಪಾಠಗಳಂತೆ [illegible] ಪಾಠಗಳನ್ನು [illegible] [illegible] ಕೆಲವು [illegible], [illegible] ಮೈಸೂರು, [illegible] ಮತ್ತು [illegible] ಪ್ರಸಾರಗಳು [illegible]

ಸ್ಟಾಲಿನ್ನರಿಗೂ ಮಾವೋತ್ಸೆ ಟುಂಗರಿಗೂ ಭೇಟಿ

[illegible] ಸ್ಟಾಲಿನ್ನರವರನ್ನು ಭೇಟಿ ಮಾಡಿದರು [illegible] ಅವರ ಪೀಕಿಂಗ್ [illegible]

[illegible] ಅಂದೋನೇಷ್ಯಾ [illegible]

[illegible]

ಹೊಸ ಶಾಸನ ಸಭಾಧಿವೇಶನ

ಮೈಸೂರಿನ ಹೊಸ ಶಾಸನ ಸಭೆಯ ಅಧಿವೇಶನವು ಬರುವ ಜನವರಿ ತಿಂಗಳ [illegible] ಭಾಗದಲ್ಲಿ ನಡೆಯುವುದೆಂದು ಗೊತ್ತಾಗಿದೆ.

ನಾಳಿದ್ದು ದಿವಾಕರರ ರಾಜೀನಾಮೆ

ಕೇಂದ್ರ ಸರ್ಕಾರದ ವಾರ್ತಾ ಸಚಿವ ಶ್ರೀ ಆರ್. ಆರ್. ದಿವಾಕರರು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ತೀರ್ಮಾನವನ್ನು ಅನುಸರಿಸಿ ನಾಳಿದ್ದು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಲಿರುವರೆಂದು ತಿಳಿದುಬಂದಿದೆ

ನರಭಕ್ಷಕ

[illegible] ನರಭಕ್ಷಕ [illegible] ಜನರನ್ನು ಕೊಂದುಹಾಕಿದ [illegible]

ಇಂಗ್ಲೆಂಡಿನಲ್ಲಿ ಮಕ್ಕಳ ಕಾಳಸಂತೆ

ಇಂಗ್ಲೆಂಡಿನಲ್ಲಿ [illegible] ಮಕ್ಕಳ ಕಾಳಸಂತೆಯೊಂದು [illegible]

ಪತ್ರೋಟಿ ಅವಶ್ಯಕತೆ ಬಗ್ಗೆ ರಾಜಾಜಿ

[illegible] ಜನರ ಪ್ರಾಣವನ್ನು [illegible] ಅವಶ್ಯಕವಾದುವೆಂದು [illegible] ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ತಿಳಿಸಿದ್ದಾರೆ [illegible]

[illegible]

[illegible]

[illegible] ಮತ್ತು ಲಾರಿ [illegible]

ಬೆಂಗಳೂರು ೧೬

[illegible]

ವಾರ ಭವಿಷ್ಯ

ತಾ॥ ೧೮-೧೨-೪೯ರಿಂದ ೨೪-೧೨-೪೯ರ ವರೆಗೆ

ಮೇಷ—ಏನೂರಾ [illegible] ನಿಮ್ಮ [illegible] ವ್ಯವಹಾರವನ್ನ [illegible] ಉದ್ಯೋಗದ [illegible] ವ್ಯಾಪಾರಾದಿಗಳಲ್ಲಿ ಲಾಭ. ತಾ॥ [illegible], ಗೆಲುವು.

ವೃಷಭ—[illegible] ಆರೋಗ್ಯ [illegible] ನೌಕರಿಯಲ್ಲಿ [illegible] ವ್ಯಾಪಾರಾದಿಗಳಲ್ಲಿ [illegible] ಬರುವುದು. ತಾ॥ [illegible] ಅಪಘಾತ ಭಯ.

ಮಿಥುನ—ಆರೋಗ್ಯ, [illegible] ಪ್ರವಾಸಕ್ಕೆ ಈ ವಾರ [illegible] ನೌಕರಿಯಲ್ಲಿ [illegible] ತಾ॥ ೨೩, ೨೪ [illegible] ಭಯ.

ಕರ್ಕ—[illegible] ವ್ಯಾಪಾರಾದಿಗಳಲ್ಲಿ [illegible] ತಾ॥ ೧೯, ೨೦ ಧನಲಾಭ [illegible]

ಸಿಂಹ—ಭಯ ಸಂಕಷ್ಟಗಳ [illegible] ಭಯ, ಮಾನಹಾನಿ ಭಯ.

ಕನ್ಯಾ—ತೊಂದರೆಗಳ ಮೇಲೆ ತೊಂದರೆ [illegible] ಆರೋಗ್ಯ [illegible] ನೌಕರಿಯಲ್ಲಿ [illegible] ಕಷ್ಟದಿಂದ ಪಾರಾಗುವಿರಿ. [illegible] ತಾ॥ ೧೮, ೨೦ [illegible] ಯೋಗ.

ತುಲಾ—ಮಾಡಿದ ಸ್ನೇಹಿತರಿಂದ ನಿಮ್ಮ ಮೇಲೆ ಅಪವಾದನೆ. ಆಕಸ್ಮಿಕ ಖರ್ಚು. ನೌಕರಿ ಮುಂತಾದುವುಗಳಲ್ಲಿ ಉತ್ಸಾಹವಿರದು. ತಾ॥ ೨೩, ೨೪ ಅನಿಷ್ಟ ವಾರ್ತೆ. ಚೋರಭಯ. ಪ್ರವಾಸದಲ್ಲಿ ಸಂಕಟ ವಿಶ್ವಾಸಘಾತ.

ವೃಶ್ಚಿಕ—ನಿಮ್ಮ ಮನೋಭೀಷ್ಟಗಳ ಸಿದ್ಧಿ. ಆರೋಗ್ಯ ನೆಟ್ಟಗೆ. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಲಾಭ. ಮೇಲಧಿಕಾರಿಗಳಿಂದ [illegible] ಕಾರ್ಯ [illegible] ತಾ॥ ೨೩, ೨೪ ಧನಲಾಭ ಶುಭವಾರ್ತೆ

ಧನು—[illegible] ಪ್ರಶಂಸೆ [illegible]

ಭಾರತದ ರಿಪಬ್ಲಿಕ್ ಬಗ್ಗೆ ಬ್ರಿಟಿಷ್ ರಾಜರ ಪ್ರಶಂಸೆ

ಭಾರತವು ಬ್ರಿಟಿಷ್ ಕಾಮನ್‌ವೆಲ್ತಿನ [illegible] ಸದಸ್ಯ ರಾಷ್ಟ್ರವಾಗಿದ್ದೂ ಸಾರ್ವಭೌಮ ಸ್ವತಂತ್ರ ರಿಪಬ್ಲಿಕ್ ಆಗುವುದು ಒಂದು ಚರಿತ್ರಾರ್ಹವಾದ ಒಡಂಬಡಿಕೆ ಎಂದು ಬ್ರಿಟಿಷ್ ರಾಜರು ಅಲ್ಲಿನ ಪಾರ್ಲಿಮೆಂಟಿನಲ್ಲಿ [illegible]. ಬ್ರಿಟನ್ನಿನ [illegible] ಪ್ರಕಾರ ಭಾರತಕ್ಕೆ ಲಭಿಸಿರುವ ಹಕ್ಕುಬಾಧ್ಯತೆಗಳ ಬಗ್ಗೆ ಮುಂದಿನ [illegible] ದಿನ ಶಾಸನವಾಯಿತು.

ಬ್ಯಾಂಕ್ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯ

[illegible] ಆಗ್ರ, ಮೀರತ್, ಬರೇಲಿ, ಗೋರಖ್‌ಪುರ ಮತ್ತು ಕಾಶಿಗಳ ಬ್ಯಾಂಕು ನೌಕರರಿಗೆ [illegible] ನೂರರ ಒಂದರಷ್ಟು ಹೆಚ್ಚಿನ ತುಟ್ಟಿ ಭತ್ಯವನ್ನು ಕೊಡಬೇಕೆಂದು ಸರ್ಕಾರದಿಂದ ರಚಿಸಲ್ಪಟ್ಟಿರುವ ಅಖಿಲ ಭಾರತ [illegible] ತೀರ್ಪಿತ್ತಿದ್ದಾರೆ.

ಸ್ಟ್ಯಾಲಿನ್ನರ ನಿವೃತ್ತಿ

ರಷ್ಯದ ಮಾರ್ಷಲ್ ಸ್ಟ್ಯಾಲಿನರು [illegible] ನಿವೃತ್ತರಾಗಿ ವಿಶ್ರಾಂತಿ ಪಡೆಯುವರೆಂದು ತಿಳಿದುಬಂದಿದೆ.

ಯುಗಶಕ್ತಿ ಪತ್ರಿಕೆ

ಯುಗಶಕ್ತಿ ಪತ್ರಿಕೆಗೆ [illegible] ಪ್ರಕ್ರಿಯೆ [illegible] ಪತ್ರಿಕಾ [illegible] ಪತ್ರಿಕೆಗಳು ಮತ್ತು ಇತರ [illegible] ತಿಳಿದುಬಂದಿದೆ.

[illegible] ನೆರಾರಗಳಲ್ಲಿ ಧನಲಾಭ [illegible] ತಾ॥ ೧೮, ಮಧ್ಯ ೨೩, ೨೪ ಮಹತ್ವದ ಪತ್ರಾಗಮನ.

ಮಕರ—ಆರ್ಥಿಕ ತೊಂದರೆ ಕಡಿಮೆ. ಆರೋಗ್ಯದ ಸುಧಾರಣೆ ಕೈಗೂಡಿದ [illegible] ತಾ॥ ೧೯, ೨೦ ಪರಿಚಿತರ [illegible]

ಕುಂಭ—ಚಿಕ್ಕಪುಟ್ಟ [illegible] ವಾಹನಾಘಾತ. [illegible] ನೌಕರಿಯಲ್ಲಿ [illegible] ತಾ॥ ೨೩, ೨೪ [illegible]

ಮೀನ—ವಿಚಿತ್ರ ಸಂಗತಿ [illegible] ಅಪಘಾತ [illegible] ವ್ಯಾಪಾರಾದಿಗಳಲ್ಲಿ [illegible] ತಾ॥ ೨೩, ೨೪ ಮಿತ್ರರ ಸಹಾಯ ಸಂಕಟದಿಂದ ಪಾರು.

ಅಧ್ಯಕ್ಷರ ಪ್ರಾರ್ಥನೆ ಮೀರಿ ಪ್ರತಿಜ್ಞೆ ಮುರಿಯಬಹುದು

ಅಧ್ಯಕ್ಷರ ಪ್ರಾರ್ಥನೆಯ ಮೀರಿ ಸದಸ್ಯರು ತಾವು ತೆಗೆದುಕೊಂಡಿರುವ ಪ್ರತಿಜ್ಞೆಯನ್ನು ಮುರಿಯಬಹುದೆಂದು ಭಾರತದ ಪಾರ್ಲಿಮೆಂಟ್ ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್ಯರು ತೀರ್ಪಿತ್ತಿದ್ದಾರೆ. ಸೇಟ್ ಗೋವಿಂದದಾಸರು ಹಿಂದಿಯಲ್ಲಿ ಉಪಪ್ರಶ್ನೆಯೊಂದನ್ನು ಕೇಳಿದಾಗ, ಆಹಾರ ಸಚಿವರಿಗೂ ಮತ್ತು ಅಧ್ಯಕ್ಷರಿಗೂ ಅರ್ಥವಾಗದಿದ್ದುದರಿಂದ ಸದಸ್ಯರು ಇಂಗ್ಲೀಷಿನಲ್ಲಿ ಮಾತನಾಡುವಂತೆ ಅಧ್ಯಕ್ಷರು ಕೋರಿದರು. ಶ್ರೀ ಗೋವಿಂದದಾಸರು ಇಂಗ್ಲೀಷಿನಲ್ಲಿ ಮಾತನಾಡುವುದಿಲ್ಲವೆಂದು ಪಣತೊಟ್ಟಿಲ್ಲವೇ ಎಂದು ಮತ್ತೊಬ್ಬ ಸದಸ್ಯರು ಪ್ರಶ್ನಿಸಿದಾಗ, ಮೇಲ್ಕಂಡಂತೆ ಅಧ್ಯಕ್ಷರು ತೀರ್ಪನ್ನು ಕೊಟ್ಟರು.

"ಗಣಿತ ಶಾಸ್ತ್ರ"

ಇಂಟರ್ ಮೀಡಿಯೇಟ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತಹ ಗಣಿತ ಶಾಸ್ತ್ರದ [illegible] ಭಾಗದ ವಿವರಗಳನ್ನೊಳಗೊಂಡ ದ್ವಿತೀಯ ಭಾಗದ ಪುಸ್ತಕವನ್ನು ರಾಜಧಾನಿಯ ಕಾಲೇಜಿನ ಗಣಿತ ಶಾಸ್ತ್ರ ಅಧ್ಯಾಪಕರಾದ ಶ್ರೀ [illegible] ಪ್ರಕಟಿಸಿರುತ್ತಾರೆ. ಇದರ ಬೆಲೆ [illegible] ರೂ. ಇದರ ಪ್ರತಿಯೊಂದನ್ನ ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಮಂತ್ರಿಮಂಡಲವು ಏಕಪಕ್ಷದಿಂದಿರಕೂಡದು

[illegible] ಪಕ್ಷದ [illegible] ಮೈಸೂರಿನ ಮಂತ್ರಿ ಮಂಡಲವು ಒಂದೇ ಪಕ್ಷದ ಸದಸ್ಯರನ್ನೊಳಗೊಳ್ಳದೆ ಪಕ್ಷದ ಗಣನೆಯಿಲ್ಲದೆ ಅಡಳಿತ ನಿಪುಣರು ಮತ್ತು ಶೀಲರನ್ನೊಳಗೊಂಡ ಮಂತ್ರಿಮಂಡಲವಿರಬೇಕೆಂದು ಬೆಂಗಳೂರಿನ ವಾಣಿಜ್ಯ ಸಂಸ್ಥೆಯವರು ಅಭಿಪ್ರಾಯಪಟ್ಟಿರುತ್ತಾರೆ.

ಸಂಗೀತ ಕಛೇರಿ

ರಾಜಧಾನಿಯ ಪಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ [illegible] ಈರಾತ್ರಿ ೭ ಘಂಟೆಗೆ ವಿ॥ ವಿ. [illegible] ಸಂಗೀತವು ವಿ॥ [illegible] ಅಯ್ಯಂಗಾರ್ಯರ ಪಿಟೀಲು. ಮತ್ತು ವಿ॥ ಎಸ್. ಆರ್. ವರದಾಚಾರ್ಯರವ ಮೃದಂಗಗಳೊಡನೆ ನಡೆಯುವುದು [illegible] ಮತ್ತು ಆರೋಗ್ಯ ಪ್ರಚಾರ [illegible] ಸಹಾಯಾರ್ಥವಾಗಿದೆ.

ಆಕಾಶವಾಣಿಯಲ್ಲಿ ಜಿ. ಎ[illegible] ಬಿ. ಯವರ ಸಂಗೀತ

ಮೈಸೂರು, [illegible]

ನಾಳೆ ರಾತ್ರಿ ೮-೩೦ ಘಂಟೆಯಿಂದ [illegible] ಘಂಟೆವರೆಗೆ ಆಕಾಶವಾಣಿಯಲ್ಲಿ ವಿ॥ ಎ[illegible] ಬಾಲಸುಬ್ರಹ್ಮಣ್ಯಂರವರ ಗಾಯನ ನಡೆಯುವುದು.

ಹೊಸ ಎಕ್ಸ್‌ರೇ ಯಂತ್ರ

ಸ್ವೀಡನ್ನಿನ ವಿಶ್ವವಿದ್ಯಾನಿಲಯದ [illegible] ವಿಜ್ಞಾನಿಕರೊಬ್ಬರು ಮನುಷ್ಯನ ಶರೀರ [illegible] ರುವ ಅಸ್ಥಿ ಪಂಜರವಲ್ಲದೇ, ಮಾಂಸ, ಚರ್ಮ ಮತ್ತು ಕೊಬ್ಬುಗಳನ್ನು ಫೋಟೋ ತೆಗೆಯಬಲ್ಲ [illegible] ವಾದಂಥ ಎಕ್ಸ್‌ರೇ ಯಂತ್ರವನ್ನು [illegible] ಹುಡುಕಿರುತ್ತಾರೆ.

ಹತ್ತು ವರ್ಷದ ಹಿಂದೆ ಅಪಹೃತವಾದ ಬಾಲಕಿ

ಕಳೆದ ಹತ್ತು ವರ್ಷಗಳಿಂದಲೂ [illegible] ಟ್ಟಿಸಿಕೊಂಡಿದ್ದ" ಹದಿನಾಲ್ಕು ವರ್ಷದ ಹುಡುಗಿಯೊಬ್ಬಳು [illegible] ಪ್ಪಿಸಿಕೊಂಡಿರುವಳು. [illegible] ವರ್ಷ ವಯಸ್ಸಿನಲ್ಲಿ [illegible] ಹುಡುಗಿಯನ್ನು ಅಪಹರಿಸಿ [illegible] ಹುಡುಗಿಗೆ ತನ್ನ ತಂದೆ ಹೆಸರು [illegible] ತಿಳಿದಿಲ್ಲ ಆದರೆ ಆತನು ಒಬ್ಬ ವೈದ್ಯ [illegible] ಬುದು ಮಾತ್ರ ಆಕೆಗೆ ಗೊತ್ತು.

ಆಕಾಶವಾಣಿಯಲ್ಲಿ ಘಟಿಕೋತ್ಸವದ ಪ್ರಸಾರ

ಭಾರತದ ಗೌರ್ನರ್ ಜನರಲ್ [illegible] ಜಿಯವರಿಗೆ ವಿಶ್ವವಿದ್ಯಾಲಯದವರು [illegible] ಡಲಿರುವ ಗೌರವ ಪ್ರಶಸ್ತಿಯ ಸಂಬಂಧವಾದ ವಿಶೇಷ ಘಟಿಕೋತ್ಸವದ [illegible] ಭಾಷಣಗಳನ್ನು ನಾಳೆ ಬೆಳಗ್ಗೆ [illegible] ಘಂಟೆಯಿಂದ ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುವುದು.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ [illegible] ಕಮ್ಮನಗುಡಿ ಬೀದಿಯಲ್ಲಿರುವ ಶ್ರೀ [illegible] ಲಿಂಗ ಚಾಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ನಾಳೆ ರಾತ್ರಿ ೭ ಘಂಟೆಗೆ, ವೇ॥ಬ್ರ॥ ಶ್ರೀ [illegible] ದ ಮೂರ್ತಿ ಭಾಗವತರಿಂದ '[illegible]' ಎಂಬ ಹರಿಕಥೆ ನಡೆಯುವುದು.

ರಾಜಕಮಲ್

ಮೈಸೂರು

೧೮-೧೨-೪೯ರಿಂದ

[illegible]

[illegible]

[illegible] ಚಿತ್ರ

ಮನ ದೇಶಂ

[illegible]

ಜೆ ಬಿ ಫಿ ಟ್ ಷೋ

[illegible] ಹಿಂದೀ [illegible]

[illegible] ಸಹಾಯಾರ್ಥವಾಗಿ

ಗಣೇಶಾ ಟಾಕೀಸಿನಲ್ಲಿ

18ನೇ ತಾ॥ ಬೆಳಿಗ್ಗೆ

✲ ಏ ಕಾ ನ್ ✲

ಚಿತ್ರ ಪ್ರದರ್ಶನವನ್ನು 20ನೇ ತಾ॥ ಮಂಗಳವಾರ ಬೆಳಗ್ಗೆ [illegible] ಘಂಟೆಗೆ [illegible]

ಗಣೇಶಾ ಟಾಕೀಸ್

17-12-49ರಿಂದ ಪ್ರತಿದಿನ 3 ಆಟಗಳು

ಅದಿತ್ಯನ - ಕನಸು

(ತಮಿಳು)

ತಾರೆ:— [illegible]

[illegible]

GRAND DOUBLE ATTRACTIO[N]

CHAMUNDESWARI

TALKIES

From Friday the 16th De[c]

49, for 4 days at 10-30 a[.m.]

Full-length hilarious

Comedy Drama

Beau Hunks an[d] Pack Up You[r] Troubles

(ಬ್ಯೂ ಹಂಕ್ಸ್ ಮತ್ತು ಪ್ಯಾಕ್ ಅಪ್ ಯುವರ್ ಟ್ರಬಲ್ಸ್)

Starring :- Comedy Kin[g]

LAUREL & HARDY

Edited, printed and pub[-]lished by A. R. Nagaraja[n] at Sadhvi Press, D Sub[b]iah Road, Mysore.

ರೀ| ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೮ | ಸೋಮವಾರ ೧೯-೧೨-೪೯ | ಸಂಚಿಕೆ ೧೧೮

- ರಾಜಾಜಿಯವರಿಗೆ -
ಗೌರವದ ಪ್ರಶಸ್ತಿ

ಗವರ್ನರ್ ಜನರಲ್ಲರ ಆಗಮನ

ಮೈಸೂರು ೧೮

ಗವರ್ನರ್ ಜನರಲ್ ಶ್ರೀ ಸಿ. ರಾಜಾಗೋಪಾಲಾಚಾರಿಯವರು ತಮ್ಮ ಪುತ್ರಿ ಶ್ರೀ ನಾಮಗಿರಿಯವರೊಡನೆ ಈ ದಿನ ೧ ಘಂಟೆಗೆ, ಗೊತ್ತಾಗಿದ್ದ ಕಾಲಕ್ಕೆ ೧೦ ನಿಮಿಷ ಮುಂಚಿತವಾಗಿಯೇ ಮದರಾಸಿನ ವಿಮಾನದಲ್ಲಿ ಆಗಮಿಸಿ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ತಲಪಿದರು. ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರವರೂ ಮತ್ತು ಪ್ರಧಾನ ಸಚಿವ ಶ್ರೀ ಕೆ. ಚೆಂಗಲರಾಯರೆಡ್ಡಿಯವರೂ ಅವರನ್ನು ಸ್ವಾಗತಿಸಿದರು. ... ಪ್ರಮುಖರು ... ಸಚಿವರುಗಳನ್ನೂ, ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪ, ವಿಶ್ವ ವಿದ್ಯಾನಿಲಯದ ಪ್ರೋ ಚಾನ್ಸಲರಾದ ಡಾ|| ... ರೆಡ್ಡಿ, ಕಾಂಗ್ರೆಸ್ ಅಧ್ಯಕ್ಷರಾದ ... ಸಿದ್ದಲಿಂಗಯ್ಯ, ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂ, ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯ ಮತ್ತು ಸರ್ಕಾರದ ... ಅರಮನೆ ಉನ್ನತಾಧಿಕಾರಿಗಳನ್ನು ... ಹಲವು ಶಾಸಕರು ... ನಗರಸಭೆ ... ಸಮಿತಿಗಳ ಅಧ್ಯಕ್ಷರುಗಳಾದ ... ಟಿ. ವೆಂಕಟರಮಣಯ್ಯ ಮತ್ತು ... ಪಾಲಕೃಷ್ಣ ಶೆಟ್ಟರುಗಳನ್ನು ... ಮಾಡಿಕೊಟ್ಟರು. ಶ್ರೀಮನ್ಮಹಾರಾಜರವರ ಸೈಂಕ ಪದಾತಿ ದಳದವರು ರಾಜಾಜಿಯವರಿಗೆ ಗಾರ್ಡ್ ಆಫ್ ಆನರ್ ಸಲ್ಲಿಸಿದರು. ಅನಂತರ ಅವರು ಶ್ರೀಮನ್ಮಹಾರಾಜರೊಡನೆ ಲಲಿತ ಮಹಲ್ ಭವನಕ್ಕೆ ತೆರಳಿದರು. ಬೆಳಿಗ್ಗೆ ೧೧-... ಘಂಟೆಗೆ ... ಅಲ್ಲಿಂದ ಸಕಲ ಮರ್ಯಾದೆಗಳೊಡನೆ, ಶ್ರೀಮನ್ಮಹಾರಾಜರ ಸಮೇತ ಕುದುರೆ ಸಾರೋಟಿನಲ್ಲಿ ಜಗನ್ಮೋಹನ ಮಹಲಿಗೆ ಮೆರವಣಿಗೆಯಲ್ಲಿ ತೆರಳಿದರು.

ಶ್ರಮ ಜೀವಿ ಗೃಹಿಣಿಯರಿಗೆ ವೇತನ

ತಿಂಗಳು ವರಮಾನವನ್ನು ಪಡೆಯುವ ... ಹೆಚ್ಚುಹೊತ್ತು ದುಡಿದು ಶ್ರಮಿಸುವ ... ಸುಮಾರು ನಾಲ್ಕು ಕೋಟಿ ... ಗೃಹಿಣಿಯರಿಗೆ ನಿಯಮ ವೇತನ ಕೊಡಬೇಕೆಂದು ... ಬ್ರಿಟಿಷ್ ... ಸಲಹೆ ಮಾಡಿದ್ದಾರೆ.

... ಇದುವರೆಗೆ ಹೈದರಾಬಾದಿನ ಮಿಲಿಟರಿ ... ರಾಗಿದ್ದ ಮೇಜರ್ ಜನರಲ್ ... ಯವರು ದುಗ್ಗಾಸ್ಪತ್ರೆಯಲ್ಲಿ ಈಗ ಮಿಲಿಟರಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಬ್ಯಾಂಕಿನಿಂದ ವಜಾ

... ಸಿಟಿ ಕೋ-ಆಪರೇಟಿವ್ ... ಸದಸ್ಯರುಗಳಾದ ಶ್ರೀ ... ಆರ್ ಸಿ ... ಮತ್ತು ... ರಿಗೆ ... ೧೯-೧೧-೪೯ ... ಸದಸ್ಯತ್ವದಿಂದ ವಜಾ ಮಾಡಿರುವರು. ... ಸಭೆಯಲ್ಲಿ ... ಶ್ರೀ ... ಅವಿಶ್ವಾಸ ... ಸದಸ್ಯತ್ವದಿಂದ ತೆಗೆದುಹಾಕಿರುವರೆಂದು ... ಬಂದಿದೆ.

ಚೆನ್ನಯ್ಯನವರ ಮೇಲೆ ಶಿಸ್ತಿನ ಕ್ರಮವೇ ?

ಮೈಸೂರು ೧೮

ಕಳೆದ ಮೈಸೂರ ಪೌರಸಭಾ ಚುನಾವಣೆಯಲ್ಲಿ ಶ್ರೀ ಎಸ್. ಎಸ್. ಶಾಸ್ತ್ರಿಗಳು ಸಲ್ಲಿಸಿದ್ದ ಉಮೇದುವಾರಿಕೆಯನ್ನು ... ನಾವಣೆ ಉಪಸಮಿತಿಯವರು ... ದರ ಮೇಲೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರು ಅವರ ಅಪ್ಪೀಲು ಅರ್ಜಿಯನ್ನು ... ಅವರನ್ನು ಉಮೇದುವಾರರನ್ನಾಗಿ ... ಶ್ರೀ ಎಸ್. ಚೆನ್ನಯ್ಯನವರು ... ವಿಚಾರ ... ನನ್ನು ... ಕೈಗೊಳ್ಳಬೇಕೆಂದು ... ಸ್ತರು ನೋಟೀಸು ಕೊಟ್ಟಿರುತ್ತಾರೆ.

ಬೀಡಿ ಕೆಲಸಗಾರರ ಸಮ್ಮೇಳನ

ಜನವರಿ ೧೧ನೇ ತಾ|| ಮೈಸೂರು ಬೀಡಿ ಕೆಲಸಗಾರರ ವಾರ್ಷಿಕ ಸಮ್ಮೇಳನವನ್ನು ನಡೆಸುವಂತೆ ಕಳೆದ ೧೧ನೇ ತಾ|| ನಡೆದ ಬೀಡಿ ಕಾರ್ಮಿಕ ಸಂಘದ ಸಭೆಯಲ್ಲಿ ನಿರ್ಧರಿಸಲಾಯಿತು. ಕಾರ್ಯಕರ್ತರು ... ಸದಸ್ಯರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸಮ್ಮೇಳನದ ನಿಧಿಗಳಿಗಾಗಿ ಸಾರ್ವಜನಿಕರಿಂದ ಉದಾರ ಸಹಾಯ ಮತ್ತು ಸಂಪೂರ್ಣ ಸಹಕಾರವನ್ನು ನಿರೀಕ್ಷಿಸಲಾಗಿದೆ.

ಫುಟ್ ಬಾಲ್ ಪಂದ್ಯ

ಶ್ರೀ ಮಮ್ಮಡಿ ... ರಾಜರವರ ವರ್ಧಂತಿ ಫುಟ್‌ಬಾಲ್ ಟೋರ್ನಮೆಂಟಿನ ಫೈನಲ್ ಪಂದ್ಯವು ನಿನ್ನೆ ದೊಡ್ಡಕೆರೆ ಮೈದಾನದಲ್ಲಿ ... ಪೊಲೀಸ್ ಸ್ಪೋರ್ಟ್ಸ್ ಕ್ಲಬ್ಬಿಗೂ ... ಮಿಲ್ಸ್‌ಗೂ ನಡೆಯಿತು ... ಶ್ರೀ ... ಕಾರ್ಯದರ್ಶಿಗಳಾದ ಶ್ರೀ ... ರಾವ್ ... ರವರು ಬಹುಮಾನಗಳನ್ನು ಹಂಚಿದರು.

ನಮ್ಮ ನಾಡು

ಬಿ. ಎಂ. ... ಅಧ್ಯಕ್ಷರ ಸಂಪಾದಕತ್ವದಲ್ಲಿ ನಿನ್ನೆಯಿಂದ ಹೊರಬೀಳುವ ನಮ್ಮ ನಾಡು ಎಂಬ ವಾರ ಪತ್ರಿಕೆಯನ್ನು ನಾವು ... ಬೆಲೆ ಒಂದಾಣೆ ... ನಾಡು ಮತ್ತು ... ಸೇವೆಯನ್ನು ಮಾಡಲೆಂದು ... ಶ್ರೀವೆ

ಶಾರೀರಿಕ ಶ್ರಮದ ಪ್ರಾಮುಖ್ಯತೆ

ವಿಶೇಷ ಘಟಿಕೋತ್ಸವದಲ್ಲಿ ರಾಜಾಜಿಯವರ ಭಾಷಣ

ಮೈಸೂರು ೧೮

ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಘಟಿಕೋತ್ಸವವು ಈ ದಿನ ಬೆಳಿಗ್ಗೆ ಜಗನ್ಮೋಹನ ಭವನದಲ್ಲಿ ನಡೆದು, ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಡಾಕ್ಟರ್ ಆಫ್ ಲಾಸ್ ಎಂಬ ಗೌರವ ಪ್ರಶಸ್ತಿಯನ್ನು ಕೊಡಲಾಯಿತು.

ಶ್ರೀಮನ್ಮಹಾರಾಜರವರು ರಾಜಾಜಿಯವರನ್ನು ... ಸ್ವಾಗತಿಸಿ ... ವರ ಅಪೂರ್ವ ಮೇಧಾಶಕ್ತಿಯನ್ನೂ, ಅಮೋಘವಾದ ಸಂಘಟನಾ ಕೌಶಲ್ಯವನ್ನೂ ಕೊಂಡಾಡಿದರು. ... ವರಿಗೆ ಪ್ರಿಯವಾದ ಪರಿಜನ ಸೇವೆಯಲ್ಲಿ ಮೈಸೂರು ಸಂಸ್ಥಾನವು ಬಹಳ ಮುಂದಿರುವುದಾಗಿ ... ಇರುತ್ತಿರುವ ... ವನ್ನೂ ವಿವರಿಸಿದರು.

ರಾಜಾಜಿಯವರ ಭಾಷಣ

ಗವರ್ನರ್ ಜನರಲ್ ರಾಜಾಜಿಯವರು ಭಾಷಣ ಮಾಡಿ ತಾವು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉಪಕಾರಿಯಾಗಿ ವಿದ್ಯಾಭ್ಯಾಸ ನಡೆಸಿ ... ಈಗ ಮೈಸೂರು ವಿಶ್ವವಿದ್ಯಾನಿಲಯವು ತನ್ನನ್ನು ಗೌರವಿಸುತ್ತಿರುವುದರಿಂದ ತನ್ನ ಜವಾಬ್ದಾರಿಯು ಇನ್ನೂ ಹೆಚ್ಚಿನದಾಗಿದೆಯೆಂದು ... ರಲ್ ... ರವರಿಗೆ ... ಹೇಳಿದರು.

... ಸಂಶೋಧನ ... ಪ್ರಸಕ್ತ ... ವಿಶ್ವವಿದ್ಯಾನಿಲಯಗಳ ಕರ್ತವ್ಯ ... ತಾವು ... ಕೇವಲ ... ವಿಜ್ಞಾನ ಮತ್ತು ... ಧನಿಯ ... ವಿಶ್ವವಿದ್ಯಾ ... ಬೋಧಿಸುವುದು ... ಭಾರತದಲ್ಲಿ ವಿಶ್ವವಿದ್ಯಾನಿಲಯಗಳು ... ಶ್ರಮ ... ಮನಸ್ಸು ... ಕೈಗಳು ... ಅವರು ಹೇಳಿದರು ... ಹೀಗೆ ... ವಿದ್ಯಾರ್ಥಿಗಳು ...

ಬ್ಲಿಡೇಕೆ ವಿಶ್ವವಿದ್ಯಾನಿಲಯದ ... ಗಳಾದವರು ಇನ್ನೂ ಹೆಚ್ಚಿನ ... ಕಾರ್ಯವನ್ನು ಮಾಡಬೇಕಾಗಿದೆ.

ಸರ್ಕಾರದ ಸಕಲ ವಿಭಾಗಗಳಲ್ಲಿಯೂ ಮಾದರಿ ಜೀವನದ ಆದರ್ಶವನ್ನು ವಿಶ್ವವಿದ್ಯಾಲಯಗಳು ನಮ್ಮ ಮುಂದೆ ಇಡಬೇಕಾಗಿದೆ. ದೇಶದ ಆರ್ಥಿಕ ಮತ್ತು ನೈತಿಕ ಸಂಪತ್ತನ್ನು ಬೆಳಸುವ ರೀತಿಯಲ್ಲಿ ನಮ್ಮ ಕರ್ತವ್ಯ ... ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ... ಕಾರ್ಯದ ... ಬಲವತ್ತರವಾಗಿರುತ್ತದೆ. ಜೀವನದ ಸಕಲ ಮೆಟ್ಟಲುಗಳಲ್ಲಿಯೂ ತ್ಯಾಗ ಮತ್ತು ಸೇವೆಯು ಅಗತ್ಯವಾಗಿದೆ.

ಈಗಾಗಲೇ ಅನೇಕ ... ಗಳೂ ... ಗಳೂ ನಮಗೆ ... ವಾಗಿವೆ. ಧೈರ್ಯ ಮತ್ತು ತ್ಯಾಗಗಳ ... ರಾಟದ ಕಾಲಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈಗ ಬೇಕಾಗಿವೆ. ಇಂದಿನ ... ಯಿಂದ ನಾವು ಧೈರ್ಯಗೆಡದೆ ಮುಂದಿನ ... ನಾಗರಿಕರಾಗಿ ನಾವು ದುಡಿಯೋಣ.

ಭಾರತವು ವಿಶ್ವದ ರಾಜಕಾರಣ ... ಗಳಲ್ಲಿ ದೊಡ್ಡ ಅಧಿಕಾರವನ್ನು ... ವಹಿಸುತ್ತದೆ. ಗಾಂಧೀಜಿಯವರ ಉದಾತ್ತ ಜೀವನವೇ ಇದಕ್ಕೆ ಕಾರಣ.

... ನನ್ನ ಪದವಿಯಿಂದ ನಿವೃತ್ತನಾಗಲಿದ್ದೇನೆ. ಮೈಸೂರಿನ ಜನರು ತಮ್ಮ ... ನ್ನು ... ಸಂಪೂರ್ಣವಾದ ಶಾಂತಿ ... ನನಗೆ ... ಕೇವಲ ಓದುವುದರಿಂದಲೇ ಮನುಷ್ಯ ... ವಿದ್ಯಾಭ್ಯಾಸ ಕ್ರಮದಲ್ಲಿ ಶಾರೀರಿಕ ಶ್ರಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ ... ಶಾರೀರಿಕ ಶ್ರಮದ ಕಾರ್ಯಕ್ರಮ ... ಹೆಚ್ಚು ಅಗತ್ಯವಾಗಿರುತ್ತದೆ. ಈ ಕ್ರಾಂತಿಕಾರಕ ಬದಲಾವಣೆಯಿಂದ ಇಂದಿನ ವಿದ್ಯಾರ್ಥಿಗಳ ... ಸಾಧ್ಯ ... ಕರ್ತವ್ಯಗಳಲ್ಲಿ ... ಈ ವಿಷಯದಲ್ಲಿ ಅಧಿಕಾರಿಗಳು ... ವಿದ್ಯಾರ್ಥಿಗಳು ... ಮುಂದೆ ಬಂದು ಸಹಕಾರ ನೀಡಬೇಕೆಂದು ಕೋರುತ್ತೇನೆ.

ರಾಜಾಜಿಯವರ ನಿರ್ಗಮನ

ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ಮಧ್ಯಾಹ್ನ ... ವಿಮಾನದಲ್ಲಿ ... ಮದರಾಸಿಗೆ ಪ್ರಯಾಣ ಬೆಳೆಸಿದರು. ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರವರ ... ಬೀಳ್ಕೊಟ್ಟರು.

ಪತ್ರಿಕೋದ್ಯೋಗಿಗಳ ಸಂಘ

... ಪತ್ರಿಕೋದ್ಯೋಗಿಗಳ ... ಸಂಘದ ... ಸದಸ್ಯರೆಲ್ಲರೂ ... ಬೇಕೆಂದು ... ಕೋರಿರುತ್ತಾರೆ

ಪಾಕಿಸ್ಥಾನದಲ್ಲಿ ಹಿಂದೂ ಸ್ತ್ರೀಯರ ಮಾಂಗಲ್ಯ ಹರಣ

ಹಿಂದೂಗಳ ಸಮ್ಮುಖದಲ್ಲಿ ಚಿನ್ನ ಬೆಳ್ಳಿಗಳನ್ನು ಹೊರಕ್ಕೆ ಸಾಗಿಸಲಾಗದೆಂದು ಪಾಕಿಸ್ಥಾನವು ವಿಧಿಸಿರುವ ಪ್ರತಿಬಂಧಕದಿಂದ ಅವರು ಚಿನ್ನ ಬೆಳ್ಳಿಗಳಿಂದ ಕೂಡಿದ ವಸ್ತುಗಳನ್ನು ಮಾಡಿಸಿ ದಾಟಿಸಿ ಪಾರ ಮೇಲೆ ಧರಿಸಿ ಅವುಗಳನ್ನು ತಮ್ಮ ದೇಶಕ್ಕೆ ಸಾಗಿಸುತ್ತಿರುವರೆಂಬ ಅನುಮಾನದಿಂದ ನೋಡಿ ಆ ದೇಶದಿಂದ ಹೊರಕ್ಕೆ ಹೋಗುತ್ತಿರುವ ಮಹಿಳೆಯರನ್ನು ಶೋಧನೆ ಮಾಡಿ ಅವರ ಮೇಲಿರುವ ಆಭರಣಗಳನ್ನು ಕಸಿದುಕೊಳ್ಳಲಾಗುತ್ತಿದೆಯೆಂದು ವರದಿಯಾಗಿದೆ. ಅವರ ಮೇಲಿರುವ ಮಾಂಗಲ್ಯ ಸೂತ್ರಗಳನ್ನೂ ಬಿಡದೆ ತೆಗೆದುಕೊಳ್ಳಲಾಗುತ್ತಿದೆ ಎಂದೂ ಹೇಳಲಾಗಿದೆ

ಚಿನ್ನದ ಗಣಿಗಳಲ್ಲಿ ಮಾರಾಟದ ತೆರಿಗೆ

ಕೋಲಾರದ ಚಿನ್ನದ ಗಣಿಗಳಲ್ಲಿ ಉತ್ಪತ್ತಿಯಾಗುವ ಚಿನ್ನದ ಮೇಲೆ ಮಾರಾಟದ ತೆರಿಗೆಯನ್ನು ವಿಧಿಸುವ ಬಗ್ಗೆ ಸಂಸ್ಥಾನದ ಮಾರಾಟದ ತೆರಿಗೆ ಅಧಿಕಾರಿಗಳಾದ ಶ್ರೀ ಎಲ್. ಮಾಧವರಾಯರು ಗಣಿಗಳ ಸಮಿತಿ ಕಾರ್ಯದರ್ಶಿ ಮಿ|| ಎಚ್. ಸ್ಟೀವರ್ಡರವರನ್ನು ಕಂಡು ಮಾತನಾಡಿದರೆಂದು ವರದಿಯಾಗಿದೆ. ಕಾರ್ಯದರ್ಶಿಯವರು ಚಿನ್ನವನ್ನು ಸ್ಥಳದಲ್ಲಿ ಮಾರಲಾಗುತ್ತಿಲ್ಲವೆಂದೂ ಉತ್ಪತ್ತಿಯಾದ ಚಿನ್ನ ಬೆಳ್ಳಿಗಳನ್ನೂ ಬೊಂಬಾಯಿಗೆ ಸಾಗಿಸಲಾಗುತ್ತಿದೆಯೆಂದೂ ಆದ್ದರಿಂದ ಮಾರಾಟದ ತೆರಿಗೆ ಕೊಡಬೇಕಾದ ಅವಶ್ಯಕತೆಯಿಲ್ಲವೆಂದೂ ತಿಳಿಸಿದರೆಂದು ಹೇಳಲಾಗಿದೆ. ಈ ಬಗ್ಗೆ ಸರಕಾರದೊಡನೆ ಪರ್ಯಾಲೋಚಿಸಲು ಅಧಿಕಾರಿಗಳು ಬೆಂಗಳೂರಿಗೆ ಹಿಂತಿರುಗಿದ್ದಾರೆ

ಗೃಹಕೃತ್ಯದ ನೋಟೀಸು

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ -

ನಂಜನಗೂಡು ತಾಲ್ಲೂಕು, ಹೆಡತಲೆ ಗ್ರಾಮದಲ್ಲಿರುವ ವಾಸುದೇವ ಜೋಯಿಸರು ಉರುಫ್ ಸುಬ್ರಹ್ಮಣ್ಯ ಜೋಯಿಸರ ಸ್ವಾಧೀನ ಶ್ರೀಕಂಠಯ್ಯನು ತಿಳಿಯಪಡಿಸುವುದೇನೆಂದರೆ—ನಂಜನಗೂಡು ಟವನ್ನಿನಲ್ಲಿದ್ದ ನಮ್ಮ ತಮ್ಮ ನಂಜಮ್ಮನವರು ನಮ್ಮ ಕಡೆಬಿಟ್ಟು ಅಗ್ನಿ ಬಂದು ವಾಸವಾಗುತ್ತಾ ಬಂದಿರುತ್ತೆ. ಆದರೆ ಈ ಮಧ್ಯೆ ನಮಗೂ ನಂಜನಗೂಡು ತಾಲ್ಲೂಕು [illegible] ಗ್ರಾಮಕ್ಕೆ ಸೇರಿದ [illegible] [illegible] ಶ್ರೀಕಂಠಯ್ಯ

[illegible] ೧೬-೧೨-೪೯

ನಾಟಕದ ರಜತೋತ್ಸವ

ಶ್ರೀ ಎಂ. ವಿ. ಸುಬ್ಬಯ್ಯನಾಯ್ಡುರವರ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ ಯವರು ರಾಜಧಾನಿಯಲ್ಲಿ ಅಭಿನಯಿಸುತ್ತಿರುವ "ಶಕ್ತಿ ಅಂಬಿಗ" ನಾಟಕದ ರಜತ ಮಹೋತ್ಸವವು ನಿನ್ನೆ ನಡೆಯಿತು. ವರ್ತಮಾನ ಪತ್ರಿಕೆಯವರಾದ ಶ್ರೀ ಹೆಚ್. ಎಲ್. ದೇವರಾಜೇ ಅರಸಿನವರು ಅಗ್ರಾಸನ ವಹಿಸಿದ್ದು, ಶ್ರೀ ಎಂ. ಕೆ. ಮಾದೇವ ಸ್ವಾಮಿಯವರು ಮುಖ್ಯವಾಗಿ ಸದರಿ ನಾಟಕಕ್ಕೆ ಮಹಾಜನರ ಕೊಡುತ್ತಿರುವ ಪ್ರೋತ್ಸಾಹಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು. ಶ್ರೀ ಸುಬ್ಬಯ್ಯನಾಯ್ಡುರವರಿಗೆ ಮಹಾತ್ಮರ ಛಾಯಾಚಿತ್ರವನ್ನೂ ಮತ್ತು ನಾಸ್ಟ್ ವರ ಬೆಳ್ಳಿಯ ಬಟ್ಟಲುಗಳನ್ನು ಕಾಣಿಕೆಯಾಗಿ ಅರ್ಪಿಸಲಾಯಿತು. ಅಧ್ಯಕ್ಷರು ಭಾಷಣಮಾಡಿ ನಾಟಕಪ್ರದರ್ಶನದಿಂದ ಆಗುವ ಮುಖ್ಯವಾಗಿರುವ ಅಂಶವನ್ನು ವ್ಯಕ್ತಪಡಿಸಿದರು. ಶ್ರೀ ಸುಬ್ಬಯ್ಯನಾಯ್ಡುರವರು ಮಹಾಜನರ ಪ್ರೋತ್ಸಾಹಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿದರು

ನಾಣ್ಯಗಳನ್ನು ಸಮುದ್ರಕ್ಕೆ ಎಸೆಯಲಾಯಿತು

ನ್ಯೂಯಾರ್ಕಿನ ಬಳಿ ಇರುವ ಲಾಂಗ್ ಐಲೆಂಡ್ ಸಮುದ್ರದಲ್ಲಿ ಚೇಸ್ ರಾಷ್ಟ್ರೀಯ ಬ್ಯಾಂಕಿನವರು ಒಂದೂವರೆ ಟನ್ನಿನಷ್ಟು ತೂಕದ ವಿದೇಶಿ ನಾಣ್ಯಗಳನ್ನು ಎಸೆದಿದ್ದಾರೆಂದು ವರದಿಯಾಗಿದೆ. ಆ ನಾಣ್ಯಗಳು ಈಗ ಚಲಾವಣೆಯಲ್ಲಿ ಉಪಯೋಗವಾಗುವುದಿಲ್ಲವೆಂದೂ ಅವುಗಳನ್ನು ತವರಿನಲ್ಲಿ ವಾಪಸು ಕಳುಹಿಸಲು ಅಥವಾ ಕರಗಿಸಲು ತಗಲುವ ವೆಚ್ಚ ಅವುಗಳ ಡಾಲರ್ ಬೆಲೆಗಿಂತಲೂ ಹೆಚ್ಚು ವೆಚ್ಚವಾಗುವುದೆಂದೂ ಅವರು ತಿಳಿಸಿರುವರು

ಹಿಂದೂಕೋಡ್ ಮಸೂದೆ ವಿರುದ್ಧವಾಗಿ ಸತ್ಯಾಗ್ರಹ

ಹಿಂದೂ ಧರ್ಮ ಸಂಘದ ಅಧ್ಯಕ್ಷರಾದ ಸ್ವಾಮಿ ಕರಪಾತ್ರಿ ಮಹಾರಾಜರವರು ಪಂಡಿತ ನೆಹರೂರವರಿಗೆ ಬಹಿರಂಗ ಪತ್ರವೊಂದರಲ್ಲಿ ಬರೆದು ಧರ್ಮ ವಿರುದ್ಧವಾದ ಹಿಂದೂಕೋಡ್ ಮಸೂದೆಯನ್ನು ಕೈಬಿಡದಿದ್ದರೆ ತಾವು ಶಾಂತವಾದ ಮತ್ತು ಅಹಿಂಸಾಯುತ ಸತ್ಯಾಗ್ರಹ ಚಳುವಳಿಯನ್ನು ಹೂಡಲು ನಿರ್ಧರಿಸಿರುವುದಾಗಿ ತಿಳಿಸಿದ್ದಾರೆ

ಆನೆಯಂತೆ ಸೊಂಡಲಿರುವ ಬಾಲಕ

ಪೆಸಿಫಿಕ್ ಸಮುದ್ರದ ಗೌರು ಎಂಬ ದ್ವೀಪದಲ್ಲಿ ಎರಡು ವರ್ಷ ವಯಸ್ಸಿನ ರೊಹೋಚ್ ಎಂಬ ಬಾಲಕನೊಬ್ಬನಿಗೆ ಮೂಗಿನ ಕೆಳಗೆ ಆನೆಯಂತೆ ಐದು ಅಂಗುಲದ ಸೊಂಡಲು ಇರುವುದಾಗಿ ವರದಿಯಾಗಿದೆ. ಜನರು ಅವನನ್ನು "ಆನೆಯ ಹುಡುಗ" ನೆಂದು ಕರೆಯುತ್ತಿದ್ದರು. ಅಲ್ಲಿಂದ ೩ ಸಾವಿರ ಮೈಲಿ ದೂರದಲ್ಲಿರುವ ಮೆಲ್ಬೋರನ್ನಿಗೆ ಅವನನ್ನು ವಿಮಾನದಲ್ಲಿ ಕಳುಹಿಸಿ ವೈದ್ಯರ ಮೂಲಕ ಶಸ್ತ್ರಚಿಕಿತ್ಸೆ ಮಾಡಲಾಗಿ ಆ ಬಾಲಕನು ಇತರ ಮಕ್ಕಳಂತೆಯೇ ಈಗ ಇರುವನೆಂದು ಗೊತ್ತಾಗಿದೆ

ಸಮುದ್ರದ ಅಲೆಗಳಿಂದ ವಿದ್ಯುಚ್ಛಕ್ತಿ

ಸ್ಪೇನಿನ ಇಂಜನಿಯರಾದ ಸಿನಾರ್ ಲು ಫಿನೋಡ್ಯೂಲ್ ಎಂಬುವರು ಸಮುದ್ರದ ಅಲೆಗಳಿಂದಲೂ ಉಬ್ಬರ ಇಳಿತದಿಂದಲೂ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಸಾಧನವನ್ನು ಕಂಡುಹಿಡಿದಿರುವುದಾಗಿ ತಿಳಿದುಬಂದಿದೆ. ಈಗ ಪರದೇಶಗಳಿಂದ ಕೊಂಡುಕೊಳ್ಳುತ್ತಿರುವ ವಿದ್ಯುಚ್ಛಕ್ತಿಯ ಬೆಲೆಯಲ್ಲಿ ಶೇ|| ೬೦ ರಷ್ಟನ್ನು ಉಳಿಸಬಹುದೆಂದು ಅವರು ಹೇಳಿರುತ್ತಾರೆ. ಅವರ ಯಂತ್ರಕ್ಕೆ ೧೫ ಲಕ್ಷ ಪೌಂಡು ಖರ್ಚು ಬೀಳುವುದು

ರೈತರಿಗೆ ಜಮೀನು ಗಳೆಲ್ಲವನ್ನೂ ಬಿಟ್ಟುಕೊಟ್ಟ ಸಮಾಜವಾದಿ

ಒರಿಸ್ಸಾ ಜಿಲ್ಲಾ ರೈತ ಪಂಚಾಯಿತಿಯ ಸಹ ಕಾರ್ಯದರ್ಶಿಯಾದ ಪಟೇಲ್ ಬಹದೂರ್ ಖಾನರು ತಮ್ಮ ೬೫ ಎಕರೆಯ ಜಮೀನನ್ನು ಉಳುತ್ತಿದ್ದ ರೈತರಿಗೆ ಬಿಟ್ಟುಕೊಟ್ಟಿರುವುದಾಗಿ ವರದಿಯಾಗಿದೆ

ಮನೆ ಕ್ರಯಕ್ಕಿದೆ

೪೦'x೬೦' ಮಂಗಳೂರು ಹೆಂಚಿನ ಮನೆ ವಿದ್ಯುಚ್ಛಕ್ತಿ ದೀಪ, ನಲ್ಲಿ ಮುಂತಾದ ಸೌಕರ್ಯಗಳಿವೆ ಸ್ಥಳದಲ್ಲಿ ಬಂದು ವಿಚಾರಿಸಿರಿ

ವಿಳಾಸ —

ಎಂ. ವಿ. ರಾಮಸ್ವಾಮಿ,

ಡೋರ್ ನಂಬರು ೩೯೧೫, ೬ನೇ ಕ್ರಾಸ್ ರೋಡ್, ಚಾಮುಂಡಿಪುರಂ, ಮೈಸೂರು

ಪ್ರಭುದೇವಾ ಟಾಕೀಸ್

ದಿನವಹಿ ಮೂರು ಆಟಗಳು

19-12-49ನೇ ಸೋಮವಾರದಿಂದ

ಅಮೋಘವಾದ ೩ನೇ ವಾರ

- ಶ್ರೀ ಕೃಷ್ಣ ಲೀಲಾ -

(ತೆಲುಗು)

— ಬರಲಿರುವ ಚಿತ್ರ —

21-12-49 ರಿಂದ

ಸರ್ ಚಿಫ್ ಜಾಂಬು

(ತಮಿಳು)

ಕಚ್ಚಾ ಹತ್ತಿ ಇಲ್ಲದೆ ಮಿಲ್ಲುಗಳು ಬಂದ್

ಬೊಂಬಾಯಿ ಪ್ರಾಂತದಲ್ಲಿರುವ ಅನೇಕ ಗಿರಣಿಗಳು ಕಚ್ಚಾ ಹತ್ತಿ ದೊರೆಯದಿರುವ ಕಾರಣದಿಂದ ಮುಚ್ಚಬೇಕಾದ ಸ್ಥಿತಿ ಒದಗುವುದಾಗಿ ನೋಟೀಸು ಕೊಡಲಾಗಿದೆ

ವರಲಕ್ಷ್ಮೀ ಸಂಗೀತ ಮಂದಿರ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ನಾಲ್ಕನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಸಹಕಾರ ಭವನದಲ್ಲಿ ನಡೆಯಿತು. ವಿದ್ಯಾ ಸಚಿವರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಅಗ್ರಾಸನ ವಹಿಸಿದ್ದರು. ಪ್ರಾರ್ಥನೆ, ರಾಷ್ಟ್ರಗೀತೆ, ಸಂಗೀತ ಮತ್ತು ವರದಿಗಳನಂತರ ಅಧ್ಯಕ್ಷರು ಭಾಷಣ ಮಾಡಿ ರಾಷ್ಟ್ರದ ಉನ್ನತಿಗೆ ಲಲಿತಕಲೆಗಳ ಅಭಿವೃದ್ಧಿಯು ಎಷ್ಟು ಅವಶ್ಯಕವೆಂಬುದನ್ನು ವಿವರಿಸಿ ಹೇಳಿದರು. ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದವರು ಮಾಡುತ್ತಿರುವ ಸೇವೆಗಾಗಿ ಮೆಚ್ಚಿಗೆಯನ್ನು ಸೂಚಿಸಿ ಸಂಸ್ಥೆಯು ಇನ್ನೂ ಮುಂದಕ್ಕೆ ಬರಲೆಂದು ಹಾರೈಸಿದರು.

ಮೈಸೂರು ಸಿಟಿ ರೇಷನಿಂಗ್ ಆಫೀಸ್

ನೋಟಿಫಿಕೇಷನ್

ನಂ. 249/49-50

ತಾ|| ೧೮-೧೧-೪೯

ಮೈಸೂರು ರೇಷನಿಂಗ್ ಆರ್ಡರ್ (ಫುಡ್) ೧೯೪೬ ರೂಲ್ ೧೧, (i) ಮತ್ತು (ii) ರೀತ್ಯಾ ಅಧಿಕಾರವನ್ನು ಹೊಂದಿರುವ ಮೈಸೂರು ಸಿಟಿ ರೇಷನಿಂಗ್ ಆಫೀಸರ್, ಶ್ರೀ ಡಿ. ಜೆ. ಬಾಲರಾಜ್ ಆದ ನಾನು ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಕಾರ್ಡುದಾರರಿಗೂ ತಿಳಿಯಪಡಿಸುವುದೇನೆಂದರೆ.—

೩೦-೧೩-೧೯೪೯ರಿಂದ ೭-೧ ೧೯೫೦ ರವರೆಗೆ ಆಯಾಯಾ ರೇಷನ್ ಡಿಪೋಗಳಲ್ಲಿ ಹೊಸ ಕಾರ್ಡುಗಳು, ಡಿಸೆಂಬರ್ ತಿಂಗಳ ಪಡಿತರವನ್ನು ಪೂರ್ತಿ ತೆಗೆದ ಕೊಂಡನಂತರ, ಹಂಚಲ್ಪಡುತ್ತವೆ. ಹಾಲಿ ಚಾಲ್ತಿಯಲ್ಲಿರುವ ಖಾಯಂ ಹಾಗೂ ತಾತ್ಕಾಲಿಕ ಕಾರ್ಡುಗಳು ೧-೧-೧೯೫೦ರಿಂದ ಚಾಲ್ತಿಯಲ್ಲಿರುವುದಿಲ್ಲ. ಎಲ್ಲಾ ಕಾರ್ಡುದಾರರೂ ತಮ್ಮ ಹಳೆಯ ರೇಷನ್ ಕಾರ್ಡನ್ನು ಮತ್ತು ರಿಜಿಸ್ಟ್ರೇಷನ್ ಫಾರಂ ಕೊಟ್ಟಿದ್ದಕ್ಕೆ ರಸೀತಿಯನ್ನು ಸಹ ಡಿಪೋಗಳಲ್ಲಿ ವಾಪಸ್ಸು ಮಾಡಿ ಹೊಸ ಕಾರ್ಡುಗಳನ್ನು ಪಡೆಯತಕ್ಕದ್ದು

ಮೇಲ್ಕಂಡ ಕಾನೂನು ೧೧, ಕ್ಲಾಸ್ (1) ನೇ ರೀತ್ಯಾ ಪ್ರತಿಯೊಬ್ಬ ರೇಷನ್ ಕಾರ್ಡುದಾರನೂ ತಾನೇ ಖುದ್ದಾಗಿ ಅಥವಾ ಯಾವ ಮುಖಾಂತರ [illegible] ಪ್ರತಿನಿಧಿ [illegible] ಕಾರ್ಡು ಪಡೆಯುವ ಬಗ್ಗೆ ಸಹಿ ಮಾಡಬೇಕೆಂಬ ಕಾನೂನು ಇರುತ್ತದೆಂಬುದನ್ನು ಈ ಮೂಲಕ ತಿಳಿಯಪಡಿಸಿರುತ್ತೆ

(ಸಹಿ) ಡಿ. ಜೆ. ಬಾಲರಾಜ್,

ರೇಷನಿಂಗ್ ಆಫೀಸರ್

ಮೈಸೂರು ಸಿಟಿ

Edited printed and published by V. R. Nagaraju at Sadhvi Press D Subbiah Road, Mysore

ಫೋನ್ ನಂ. 792 ॥ ವಂದೇ ಮಾತರಂ ॥ [illegible]

ಸಾಧ್ವಿ

ಸಂಪುಟ ೮ ಮಂಗಳವಾರ ೨೦-೧೨-೪೯ [ಸಂ. [illegible]

೨೦೦೦೦ ಕಾರ್ಮಿಕರ ಖಂಡನಾ ಮೆರವಣಿಗೆ

ಹಿಂದೂ ಮಸೂದೆಗೆ ಪ್ರತಿಭಟನೆ

ಮೈಸೂರು ೨೦

ಮೊನ್ನೆ ದಿನ ಸಂಸ್ಕೃತಮಹಾಪಾಠಶಾಲೆಯ ಪಂಡಿತ ಮಂಡಲದ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ಶ್ರೀ ಅಂಬಳೆ ಕೃಷ್ಣಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನಡೆದು ಭಾರತದ ಪಾರ್ಲಿಮೆಂಟಿನಲ್ಲಿ ಮಂಡಿಸಿರುವ ಹಿಂದೂ ಮಸೂದೆಯು ಭಾರತದ ಸಂಸ್ಕೃತಿಗೆ ಧಕ್ಕೆ ತರುವುದೆಂದೂ, ಹಿಂದೂ ಮತಕ್ಕೆ ಕಳಂಕಪ್ರಾಯವಾಗಿದೆಯೆಂದೂ, ಇಂತಹ ಕಾನೂನುಗಳನ್ನು ಭಾರತೀಯರ ಮೇಲೆ ಹೊರಿಸಲಾಗದೆಂದೂ ಮತ್ತು ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸಲಾಗುವುದೆಂದೂ ಘೋಷಿಸುವ ನಿರ್ಣಯಗಳನ್ನು ಮಾಡಲಾಯಿತು. ಅವುಗಳನ್ನು ಪಂಡಿತ ನೆಹರೂ ಮತ್ತು ಪಾರ್ಲಿಮೆಂಟ್ ಸಭೆಯ ಅಧ್ಯಕ್ಷರಿಗೆ ಕಳುಹಿಸಲಾಗಿದೆ

ಮಹಾರಾಜರನ್ನು ತೆಗೆದು ಹಾಕಲು ಪ್ರಯತ್ನ

ನಿಜಲಿಂಗಪ್ಪನವರ ಹೇಳಿಕೆ

ಕರ್ನಾಟಕ ಏಕೀಕರಣವು ತಡವಾದಷ್ಟೂ ಕಾಂಗ್ರೆಸ್ಸು ದುರ್ಬಲವಾಗುತ್ತದೆ. ಅನೇಕ ಪ್ರತಿಗಾಮಿ ಶಕ್ತಿಗಳು ಉದ್ಭವವಾಗುತ್ತವೆ. ಮಹಾರಾಜರ ಬಳಿಯಲ್ಲಿ ಪಕ್ಷಪಾತ ತಲೆಹಾಕುತ್ತಿದೆ. ಇದು ದೇಶಕ್ಕೆ ಹಾನಿ. ಕನ್ನಡ ಪ್ರದೇಶಗಳೆಲ್ಲಾ ಒಂದಾಗಬೇಕಾದ [illegible] ಪ್ರಕಾರ ಮಹಾರಾಜರು ಇದುವರೆಗೂ ಮೈಸೂರು ಮತ್ತು ಕರ್ನಾಟಕದ ಇತರ ಭಾಗಗಳು ಸೇರಲು ಅಡ್ಡಿಯಾಗಿವೆ. ಶ್ರೀಮನ್ಮಹಾರಾಜರವರು ಏಕೀಕರಣಕ್ಕೆ ಅಡ್ಡಿಯಾಗಿದ್ದಾರೆಂಬ ಅಭಿಪ್ರಾಯವು ಬಲವಾಗುತ್ತಿದೆ. ಮೈಸೂರಿನ ಅನೇಕ ಭಾಗಗಳಲ್ಲಿ ಅವರನ್ನು ತೆಗೆದುಹಾಕಲು ಪ್ರಯತ್ನ ನಡೆಯುತ್ತಿದೆ. ಕರ್ನಾಟಕ ಪ್ರಾಂತ್ಯ ರಚನೆಗೆ ಸಂಸ್ಥಾನದವರು ಸಾಮಾನ್ಯವಾಗಿ ಒಪ್ಪಿಗೆ ಇತ್ತಿದ್ದರೂ, ಕರ್ನಾಟಕದ ನಾಯಕರು ಇತ್ತೀಚೆಗೆ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಯಾವ ಉತ್ಸಾಹವೂ ಕಂಡುಬಂದಿಲ್ಲ. ಮತ್ತು ಕರ್ನಾಟಕದ ಪ್ರಶ್ನೆಯನ್ನು ದೆಹಲಿಯ ನಾಯಕರಿಗೆ ಬಿಡಬೇಕೆಂಬುದೇ ಮೈಸೂರು ಸರ್ಕಾರದ ಅಭಿಪ್ರಾಯವಾಗಿದೆ. ಧಾರವಾಡ [illegible] ಪ್ರಾಂತ್ಯ ರಚನೆಗೆ ರಾಜಪ್ರಮುಖರು ಅಡ್ಡಿಯಾಗಿದ್ದಾರೆಂದು ಸರ್ದಾರ್ ಪಟೇಲರು ತಿಳಿಸಿರುವುದರಿಂದ ಕರ್ನಾಟಕದ ಪ್ರಶ್ನೆಯನ್ನು [illegible] ಮಾಡಕೂಡದು. ಆಂಧ್ರ ಪ್ರಾಂತ್ಯ ರಚನೆಯಾಗಿರುವಾಗ ಕರ್ನಾಟಕ ಪ್ರಾಂತ್ಯ ರಚನೆಯನ್ನು ಮಾಡದಿರುವುದಕ್ಕೆ ಯಾವ ಕಾರಣವೂ ಇಲ್ಲವೆಂದು ಶ್ರೀ ಎಸ್. ನಿಜಲಿಂಗಪ್ಪನವರ ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ

೩ ವರ್ಷದ ಮಗುವಿಗೆ ಕೃತಕ ಹಲ್ಲುಗಳು

ಲಂಡನ್ನಿನ ಮೂರು ವರ್ಷದ ಒಂದು ಹೆಣ್ಣು ಮಗುವಿಗೆ ಆ ಚಿಕ್ಕವಯಸ್ಸಿನಲ್ಲೇ ಸಹಜ ೧೪ ಹಲ್ಲುಗಳು ಹುಳುಕಾಗಿದ್ದುದರಿಂದ ದಂತ ವೈದ್ಯರು ಆ ಮಗುವಿಗೆ ಕೃತಕ ಹಲ್ಲುಗಳನ್ನು ಕಟ್ಟಿಸುವರೆಂದು ವರದಿಯಾಗಿದೆ. ಆ ಮಗುವಿಗೆ ೧೦ನೇ ವಯಸ್ಸಿನ ವರೆಗೂ ಕೃತಕ ಹಲ್ಲುಗಳಿದ್ದು ಆನಂತರ ಹೊಸ ಹಲ್ಲುಗಳು ಮೊಳೆಯುವುವೆಂದು ಅಭಿಪ್ರಾಯ ಪಡಲಾಗಿದೆ

೨೦ ಸಾವಿರ ಕಾರ್ಮಿಕರ ಪ್ರತಿಭಟನಾ ಮೆರವಣಿಗೆ

ಬೊಂಬಾಯಿನಲ್ಲಿ ಈಗ ಉಂಟಾಗಿರುವ ನಿರುದ್ಯೋಗ ಮತ್ತು ಮನೆಗಳ ಅಭಾವಗಳನ್ನು ಪ್ರತಿಭಟಿಸಲು ಮೊನ್ನೆ ದಿನ ಸಮಾಜವಾದಿ ಪಕ್ಷದ ನಾಯಕತ್ವದಲ್ಲಿ ೨೦-ಸಾವಿರ ಕಾರ್ಮಿಕರು ಒಂದು ಬೃಹತ್ ಮೆರವಣಿಗೆ ನಡೆಸಿದರು

ಭಾರತದಲ್ಲಿ ಈಗ ೨೦೬ ಕಾರ್ಖಾನೆಗಳು ಮುಚ್ಚಿ ೮೦ ಸಾವಿರ ಮಂದಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆಂದೂ, ಇನ್ನೂ ೪೦ ಕಾರ್ಖಾನೆಗಳು ಮುಚ್ಚಿಹೋಗಿ ೮೦ ಸಾವಿರ ಜನರಿಗೆ ಕೆಲಸವಿಲ್ಲದೆ ಹೋಗುವ ಸಂಭವವಿದೆಯೆಂದೂ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಅಶೋಕ ಮೆಹತಾರವರು ಬಹಿರಂಗ ಸಭೆಯಲ್ಲಿ ತಿಳಿಸಿದ್ದಾರೆ.

ಪ್ರಪಂಚದ ಬ್ಯಾಂಕಿಗೆ ಭಾರತದ ೮೦ ಕೋಟಿ ರೂ

ವಿಶ್ವದ ಬ್ಯಾಂಕಿನ ಸೆಕ್ಯೂರಿಟಿಗಳನ್ನು ತೆಗೆದುಕೊಂಡಿದ್ದ ಸಂದರ್ಭದಲ್ಲಿ ಭಾರತವು ಕೊಡಬೇಕಾಗಿದ್ದ ಹಣಕ್ಕಿಂತಲೂ ಹೆಚ್ಚಾಗಿ ೮೦ ಕೋಟಿ ರೂಗಳನ್ನು ಕೊಡಬೇಕಾಗಿದೆ. ನಾಣ್ಯದ ಬೆಲೆಯ ಇಳಿತಾಯದಿಂದ ಈ ರೀತಿಯಾಗಿ ಹೆಚ್ಚು ಹಣವನ್ನು ಕೊಡಬೇಕಾಗಿರುವುದು.

ಭಗತ್‌ಸಿಂಗ್ ಸ್ಮಾರಕದ ಸ್ಥಾಪನೆ

ಅಮೃತಸರದ ಕಾಂಗ್ರೆಸ್ ಕಾರ್ಯಕರ್ತರು ಸಭೆ ಸೇರಿ ಭಗತ್‌ಸಿಂಗರ ಸ್ಮಾರಕವನ್ನು ಸ್ಥಾಪಿಸಬೇಕೆಂದು ನಿರ್ಣಯ ಮಾಡಿದ್ದಾರೆ. ಈ ಬಗ್ಗೆ ಒಂದು ಸಮಿತಿಯನ್ನೂ ರಚಿಸಲಾಗಿದೆ.

ವಿದ್ಯಾರ್ಥಿಗಳ ಉಪಾಹಾರ ಸಮಿತಿಗೆ ಸಹಾಯ

ರಾಜಧಾನಿಯ ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯ ಉಪಾಹಾರ ಸಮಿತಿಯ ಸಭೆಯು ಶ್ರೀ ಟಿ. ಸಿ. ಹೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಾಗ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಉಪಾಹಾರ ಕೊಡಲು ಸಹಾಯ ಮಾಡಿದವರೆಲ್ಲರಿಗೂ ವಂದನೆಯನ್ನು ಅರ್ಪಿಸಲಾಯಿತು. [illegible] ಈ ನಿಧಿಗೆ ಇನ್ನೂ ಹೆಚ್ಚು [illegible] ಮಾಡಬೇಕೆಂದು [illegible] ಕೋರಲಾಯಿತು.

ಪ್ರಭುಗಳೊಡನೆ ರೆಡ್ಡಿಯವರ ಭೇಟಿ

ಮೈಸೂರು, ೨೦

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದಿನ ಬೆಳಿಗ್ಗೆ ೧೦ ಗಂಟೆಗೆ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರು. ನೂತನ ಮಂತ್ರಿ ಮಂಡಲದ ರಚನೆ ಬಗ್ಗೆ ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದು ಅವರು ತಿಳಿಸಿರುವರು.

ಪ್ರತಿಗಾಮಿ ಕೋಮುವಾರು ಚಳವಳಿಗೆ ಅವಕಾಶ ಕೊಡಕೂಡದು

ಕರ್ನಾಟಕ ಪ್ರಾಂತ್ಯ ರಚನೆಗೆ ಈಗ ಸಮಯವಲ್ಲವೆಂದು ಶ್ರೀಗಳಾದ ಹೆಚ್. ಸಿ. ದಾಸಪ್ಪ, ಹೆಚ್. ಬಿ. ಗುಂಡಪ್ಪಗೌಡ ಮತ್ತಿತರ ೮೧ ಮಂದಿ ಶಾಸನಸಭೆಯ ಸದಸ್ಯರು ದೆಹಲಿಗೆ ಕಳುಹಿಸಿರುವ ಮನವಿಯನ್ನು ಪ್ರತಿಭಟಿಸಿ ಈ ವಿರುದ್ಧ ಮನವಿಯು ಮೈಸೂರಿನಲ್ಲಿ ಪ್ರಗತಿಪರ ಗುಂಪಿನವರ ಕೂಗೆಂದೂ, ಅದಕ್ಕೆ ಮಾನ್ಯತೆ ಕೊಡಬಾರದೆಂದೂ ಈ ಪ್ರತಿಗಾಮಿ ಕೋಮುವಾರು ಚಳವಳಿಯನ್ನು ಈಗಲೇ ನಾಶಪಡಿಸದಿದ್ದಲ್ಲಿ ಮೈಸೂರು ರಾಷ್ಟ್ರೀಯತೆಯು ನಶಿಸಿಹೋಗುವುದೆಂದೂ [illegible] ಪಕ್ಷದ ಸತ್ಯಾಗ್ರಹದ ಸಂಚಾಲಕರಾದ ಶ್ರೀ ಹೆಚ್. ಎಸ್. ದೊರೆಸ್ವಾಮಿಯವರು, ರಾಷ್ಟ್ರಪತಿ ಮತ್ತು ಇತರ ನಾಯಕರುಗಳಿಗೆ ತಂತಿ ಕಳುಹಿಸಿದ್ದಾರೆ

ನಿಜಲಿಂಗಪ್ಪನವರ ಮೇಲೆ ಶಿಸ್ತಿನ ಕ್ರಮ ನಡೆಸುವಂತೆ ತಂತಿ

ಭಾರತವು ಉತ್ಕಟ ಸಮಸ್ಯೆಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಕೆ.ಪಿ.ಸಿ.ಸಿ. ಕಾರ್ಯಸಮಿತಿಯ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕ ಚಳವಳಿಯನ್ನು ನಡೆಸಿ ದೇಶದ ಶಾಂತಿ ಭಂಗ ಮಾಡುವಂತೆ ಪರಿಸ್ಥಿತಿಯುಂಟುಮಾಡುತ್ತಿರುವುದರಿಂದ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು [illegible] ಶ್ರೀ ಎಚ್. ಎ. ಚನ್ನಬಸಪ್ಪ [illegible] ಕಾಂಗ್ರೆಸ್ [illegible] ತಂತಿ ಕಳುಹಿಸಿದ್ದಾರೆ. [illegible]

ಆಹಾರ ಕೊಡದಿದ್ದುದಕ್ಕಾಗಿ ಸಾಧುವಿನ ಶಾಪ

ಮಧ್ಯ ಪ್ರಾಂತ್ಯದ ಸಾಗರ್ ಜಿಲ್ಲೆಯ ಪ್ರದೇಶದ ಒಬ್ಬ ರೈತನ ಮನೆಗೆ ಒಬ್ಬ ಸಾಧುವು ಬಂದು ಊಟ ಬೇಡಿದನು. ಅದನ್ನು ತಿರಸ್ಕರಿಸಿ ಸಾಧುವನ್ನು ಆತನು ಓಡಿಸಿದನು. ಅದಕ್ಕೆ ಸಾಧು ರೇಗಿ ಆತನು ನನ್ನವನಿಂದ ಊಟ ಮಾಡದಿರುವೆಂತಾಗಲೆಂದು ಶಪಿಸಿದನು. ಅನಂತರ ಆವನ ಊಟಕ್ಕೆ ಕುಳಿತುಕೊಂಡಾಗಲೆಲ್ಲಾ ಮನೆಯೆಲ್ಲಾ ಅಮೇಧ್ಯ ಮಯವಾಗಿಯೂ, ಮತ್ತು ಆ ಕಾರಣದಿಂದ ಮಲಿನವಾಗಿಯೂ ಕಾಣುತ್ತಿತ್ತು. ಅಮೇಧ್ಯವು ಮಾಳಿಗೆ ಮನೆಯ ಪ್ರತಿಯೊಂದು ಭಾಗಗಳಿಂದಲೂ ಸುರಿಯುತ್ತಿತ್ತು. ೨ ದಿನಗಳು ಆಹಾರವಿಲ್ಲದೆ ಆತನು ಬೇರೊಂದು ಮನೆಗೆ ಹೋದನೆಂದೂ, ಅದರೂ ಆ ಬಂದ ಮನೆಯಲ್ಲಿ ಅಮೇಧ್ಯವು ತುಂಬಿಹೋಗಿ ಆತನಿಗೆ ಆಶ್ಚರ್ಯ ಮತ್ತು ಜಿಗುಪ್ಸೆ ಉಂಟುಮಾಡಿತೆಂದೂ ಹೇಳಲಾಗಿದೆ.

ಪಾರ್ಲಿಮೆಂಟಿಗೆ ಮೈಸೂರು ಪ್ರತಿನಿಧಿಗಳ ಆಯ್ಕೆ

ಮೈಸೂರು, ಮತ್ತು ತಿರುವಾಂಕೂರು-ಕೊಚ್ಚಿ ಯೂನಿಯನ್‌ಗಳಿಂದ ಭಾರತದ ಪಾರ್ಲಿಮೆಂಟಿಗೆ ಪ್ರತಿನಿಧಿಗಳನ್ನು ಚುನಾಯಿಸುವ ವಿಚಾರವನ್ನು ದೆಹಲಿಯಲ್ಲಿ ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಸಮಿತಿಯವರು ಪರಿಶೀಲಿಸಿ, ಸ್ಥಳೀಯ ಪಾರ್ಲಿಮೆಂಟರಿ ಸಮಿತಿಗಳೇ ಆಯಾ ಸ್ಥಳದ ಶಾಸನ ಸಭಾ ಪಕ್ಷದವರ ಸಲಹೆ ಪಡೆದು ಪ್ರತಿನಿಧಿಗಳನ್ನು ಆರಿಸಬಹುದೆಂದು ತೀರ್ಮಾನಿಸಿದ್ದಾರೆ.

ಸಿರಿಯಾದಲ್ಲಿ ಪುನಃ ಕ್ರಾಂತಿ

೯ ತಿಂಗಳಲ್ಲಿ ಮೂರನೇ ಬಾರಿ ರಾಜಕ್ರಾಂತಿಯು ಸಿರಿಯಾದಲ್ಲಿ ಈಗ ಉಂಟಾಗಿದೆ. ಅರಬ್ ಸ್ವಾತಂತ್ರ್ಯ ಸೈನ್ಯದ ದಂಡನಾಯಕರಲ್ಲೊಬ್ಬರಾದ ಕರ್ನಲ್ ಅದೀಬ್ ಶಿಷ್ಕ್ಲಿಯವರು ಸಾವಿ ಹಿನ್ನಾವಿಯಿಂದ ಅಧಿಕಾರವನ್ನು ಕಿತ್ತುಕೊಂಡು, ಸರ್ಕಾರದ ಭವನವನ್ನು ವಶಪಡಿಸಿಕೊಂಡಿದ್ದಾರೆ

ಹೈದರಾಬಾದಿನ ಗ್ರಾಮಾಧಿಕಾರಿಗಳಿಗೆ ಹೆಚ್ಚು ಸಂಬಳ

ಹೈದರಾಬಾದಿನ ಗ್ರಾಮಾಧಿಕಾರಿಗಳ ಸಂಬಳವನ್ನು ಶೇಕಡ [illegible] ರಷ್ಟು ಹೆಚ್ಚಿಸಲಾಗಿದೆ. ಮೂರು ವರ್ಷಗಳಿಂದ ಅವರ ಸಂಬಳವನ್ನು ಶೇಕಡ [illegible] ರಷ್ಟು ಕಡಿಮೆ ಮಾಡಲಾಗಿತ್ತು. ಈಗ [illegible] ಭತ್ಯವನ್ನು ಶೇಕಡ [illegible] ರಷ್ಟು ಹೆಚ್ಚಿಸಲಾಗಿದೆ

ಗೌರ್ನರ್ ಜನರಲ್ಲರೊಡನೆ ಭೇಟಿ

ಗೌರ್ನರ್ ಜನರಲ್ ರಾಜಾಜಿಯವರು [illegible] ವಿಶ್ವವಿದ್ಯಾನಿಲಯದ [illegible] ಶ್ರೀ ವಿ. ಎಸ್. [illegible] ರವರಿಗೆ ಭೇಟಿಯನ್ನು ದಯಪಾಲಿಸಿದ್ದರು.

[illegible] ಕರ್ನಾಟಕ [illegible] ವಿರೋಧಿಸಿ, [illegible] ಕಾರ್ಯಕರ್ತ [illegible] ರಾಜಧಾನಿ [illegible]

[illegible]

ಕರ್ನಾಟಕ ಪ್ರಾಂತ್ಯಕ್ಕಾಗಿ ಸತ್ಯಾಗ್ರಹವಿಲ್ಲ

ಕರ್ನಾಟಕ ಪ್ರಾಂತ್ಯದ ನಿರ್ಮಾಣಕ್ಕಾಗಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ಸತ್ಯಾಗ್ರಹದ ಪ್ರಕ್ರಿಯೆ ನಡೆಸುವುದಿಲ್ಲವೆಂದು ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಕೆ. ಪಿ. ಸಿ. ಸಿ. ಗಳಿಗೆ [illegible] ಕರ್ನಾಟಕಕ್ಕೆ ತೃಪ್ತಿ [illegible]ವಾಗುವುದೆಂದು ಅವರು [illegible] ಮೈಸೂರನ್ನು [illegible] ಕರ್ನಾಟಕದಲ್ಲಿ ಮೈಸೂರು [illegible] ಜೆ. ವಿ. ಪಿ. ವರದಿಯ ಪ್ರಕಾರ ಕರ್ನಾಟಕ ಪ್ರಾಂತವಾಗದೇ ಇದ್ದರೆ ಮೈಸೂರು ಮಾಡುವಾಗುವುದೆಂದು, ಶ್ರೀಮನ್ನಾರಾಯಣರು ಈಗಿನ ರಾಜ್ಯಾಂಗದ ಪ್ರಕಾರ ಒಬ್ಬ ಗೌರ್ನರ್ [illegible] ಇರುವರೆಂದೂ, ಆದ್ದರಿಂದ [illegible] ಮಾಡಬೇಕಾಗುವುದೆಂದು [illegible] ಪಟ್ಟರು.

ಮತ್ತೊಂದು ಸರ್ವಪಕ್ಷ ಸಮ್ಮೇಳನ

ಮೈಸೂರಿನ ವಿಲೀನೀಕರಣದ ಬಗ್ಗೆ ಜನಾಭಿಪ್ರಾಯವನ್ನು ಪಡೆಯಲು ಮುಂದಿನ [illegible] ನೆ ತಾರೀಖಿನಂದು ನಗರದಲ್ಲಿ [illegible] ಶ್ರೀ ಹೆಚ್. ವಿ. [illegible] ಅಧ್ಯಕ್ಷತೆಯಲ್ಲಿ ಮತ್ತೊಂದು ಸರ್ವಪಕ್ಷಗಳ ಸಮ್ಮೇಳನವು ನಡೆಯುವುದು. ಶ್ರೀಗಳಾದ ಭೀಮಪ್ಪನಾಯಕ್, ಎಂ. ಗೋವಿಂದರೆಡ್ಡಿ, ಹೆಚ್. ಎಂ. ಚನ್ನಬಸಪ್ಪ, ಬಿ. ಪುಟ್ಟೇಗೌಡ, ಮುಲ್ಕಾ ಗೋವಿಂದರೆಡ್ಡಿ ಮುಂತಾದವರನ್ನೊಳಗೊಂಡ ಒಂದು ಸ್ವಾಗತ ಸಮಿತಿಯನ್ನು ಇದಕ್ಕಾಗಿ ರಚಿಸಲಾಗಿದೆ.

ಅನಾದರಣೋತ್ಸವ

ರಾಜಧಾನಿಯ ಸರ್ಕಾರಿ ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿ - ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ [illegible] ಗಂಟೆಗೆ [illegible] ಶ್ರೀ [illegible] ಛಾಯಾ ಚಿತ್ರದ [illegible] ಮಹೋತ್ಸವವನ್ನು ಶ್ರೀ [illegible] ನೆರವೇರಿಸುವರು.

ಪೋಲೀಸರ ಮೇಲೆ ಬಾಂಬು

[illegible]ದ ಕಲ್ಕತ್ತದಲ್ಲಿ ಮೊನ್ನೆ ರಾತ್ರಿ [illegible] ಪೋಲೀಸರ ಸಮೂಹದ ಮೇಲೆ ಬಾಂಬುಗಳನ್ನು ಎಸೆದು [illegible] ಪೋಲೀಸು ಕಮೀಷನರರಿಗೂ, [illegible] ಗಾಯವಾಗಿದೆ. ಪೋಲೀಸರು ಮೊದಲು ಅಶ್ರುವಾಯು ಪ್ರಯೋಗಿಸಿ, ನಂತರ [illegible] ಕಲ್ಕತ್ತದ [illegible] ನಡೆದ ಗಲಭೆಗಳ ಬಗ್ಗೆ ಪೋಲೀಸರ [illegible] ಕೇಂದ್ರ [illegible] ಪರಿಣಾಮವಾಗಿ ಈ ಗಲಾಟೆಯಾಯಿತು.

ಸರ್ಕಸ್ ಆನೆಯ ಮದ

ಬ್ರಿಟನ್ನಿನ [illegible] ನಲ್ಲಿ ಸಾಗುತ್ತಿದ್ದ ಸರ್ಕಸ್ ಆನೆಯೊಂದು ಮದದಿಂದ ರೋಷಗೊಂಡು ಒಬ್ಬನನ್ನು ಕಿಟಕಿಯಿಂದ ಹೊರಕ್ಕೆ ಬಿಸಾಡಿ, [illegible] ಕಟ್ಟಡಗಳನ್ನು ಶಿಥಿಲಗೊಳಿಸಿತೆಂದೂ, ಸೈನಿಕರು ಬಂದು ಅದನ್ನು ಕೊಂದರೆಂದೂ ವರದಿಯಾಗಿದೆ.

ಪ್ರಪಂಚದ ಮೊದಲನೇ ಟೆಲಿವಿಷನ್ ನಗರ

ಲಂಡನ್ ನಗರದ ಮಧ್ಯಭಾಗದಲ್ಲಿ ಪ್ರಪಂಚದ ಮೊದಲನೇ ಟೆಲಿವಿಷನ್ ನಗರವನ್ನು ನಿರ್ಮಿಸಲಾಗುವುದೆಂದು ತಿಳಿದುಬಂದಿದೆ. ಲಂಡನ್ನಿನ ಪ್ರಖ್ಯಾತ ಶಿಲ್ಪಿಗಳಾದ ನಿಪುಣರೊಬ್ಬರು ಇದನ್ನು ನಿರ್ಮಿಸಲು ಚುನಾಯಿತರಾಗಿದ್ದಾರೆ. ಈ ನಗರವು [illegible] ಎಕರೆ ಜಾಗವನ್ನು ಆಕ್ರಮಿಸುವುದೆಂದೂ, ಇದರ ನಿರ್ಮಾಣಕ್ಕೆ [illegible] ರಿಂದ [illegible] ಲಕ್ಷ ಪೌಂಡುಗಳ ವರೆಗೆ ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ.

ಕರ್ನಾಟಕ ಪ್ರಾಂತ್ಯರಚನೆಗೆ ಇಂದು ಸಮಯವಲ್ಲ

ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತ್ಯ ರಚನೆಯು ಈಗ ಆಗುವುದು ರಕ್ಷಣೆಯ ಮತ್ತು ಭಾರತದ ಹಿತ ದೃಷ್ಟಿಯಿಂದ ಸಾಧುವಲ್ಲವೆಂದೂ, ಕರ್ನಾಟಕ ಪ್ರಾಂತ್ಯ ರಚನೆಯು ಒತ್ತಾಯಕ್ಕೆ ಕೇಂದ್ರ ಸರಕಾರವೂ ಮತ್ತು ಕಾಂಗ್ರೆಸ್ಸೂ ಒಳಗಾಗಬಾರದೆಂದೂ ನೂತನ ಶಾಸನ ಸಭೆಯ [illegible] ಮಂದಿ ಸದಸ್ಯರು ರಾಜ್ಯಪಾಲರಾಗಿ ಗೌರ್ನರ್ ಜನರಲ್, ಪಂಡಿತ ನೆಹರೂ, ಸರದಾರ್ ಪಟೇಲ್ ಮತ್ತು ರಾಷ್ಟ್ರಪತಿ ಡಾ|| ಪಟ್ಟಾಭಿ ಸೀತಾರಾಮಯ್ಯನವರಿಗೆ ಪತ್ರ ಬರೆದಿರುತ್ತಾರೆಂದು ತಿಳಿದುಬಂದಿದೆ. ಕರ್ನಾಟಕ ಪ್ರಾಂತ ರಚನೆಯು ವಿಚಾರದಲ್ಲಿ ನಡೆಯುತ್ತಿರುವ ಪ್ರಚಾರವು ಅತ್ಯಂತ ವಿಷಾದಕ್ಕೆಡೆಗೊಡುವಷ್ಟು [illegible] ಹೋಗಿದೆಯೆಂದೂ ವ[illegible] ಭಾರತದ ಈ ದಿನ [illegible] ಪರಿಣಾಮದಿಂದ ದೇಶದಲ್ಲಿ ಏನಾಗಬಹುದೆಂಬುದನ್ನು ಊಹಿಸಲು ಸಾಧ್ಯವಿಲ್ಲವೆಂದೂ ರುಜು ಮಾಡಿರುವ ಶ್ರೀ [illegible] ಎಂ. ಚನ್ನಬಸಪ್ಪ, ಪಿ. ವಿ. [illegible] ಬಿ. ಗುಂಡಪ್ಪಗೌಡ ಮುಂತಾದವರು ತಿಳಿಸಿರುತ್ತಾರೆ.

ಮನೆಯ ಮೇಲೆ ವಿಮಾನ ಬಿದ್ದು ೮ ಜನರ ಮರಣ

[illegible]ನಿಂದ ಬ್ರಸೆಲ್ಸ್ ನಗರಕ್ಕೆ ಪ್ರಯಾಣ ಮಾಡುತ್ತಿದ್ದ ವಿಮಾನವೊಂದು ಅಪಘಾತಕ್ಕೆ ಒಳಗಾಗಿ ಮನೆಯ ಮೇಲೆ ಬಿದ್ದಿತೆಂದೂ, ೮ ಮಂದಿ ಪ್ರಯಾಣಿಕರು ಮತ್ತು ೪ ಜನ ವೈಮಾನಿಕರು ಸತ್ತರೆಂದು ವರದಿಯಾಗಿದೆ. ಮನೆಯ ಅರ್ಧಭಾಗವು ಮುರಿದುಹೋಗಿದೆ. ಇಬ್ಬರಿಗೆ ಯಾವ ಅಪಾಯವೂ ಉಂಟಾಗಲಿಲ್ಲ.

ಹಿಂದೂ ಮಸೂದೆ ವಿರೋಧಕ್ಕಾಗಿ ಸಹಸ್ರ ಹಸ್ತರ ನಿಯೋಗ

ಕೇಂದ್ರ ಪಾರ್ಲಿಮೆಂಟಿನ ಮುಂದೆ ಇರುವ ಹಿಂದೂ ಶಾಸನದ ಸುಧಾರಣೆ ಮಸೂದೆಗೆ ವಿರೋಧವನ್ನು ವ್ಯಕ್ತಪಡಿಸಲು [illegible] ಪ್ರಧಾನಿ ಪಂಡಿತ ನೆಹರೂರವರಲ್ಲಿ ಆರ್ಯ ಸಮಾಜ, ಸನಾತನ ಧರ್ಮ, ಆರ್. ಎಸ್. ಎಸ್. ಜೈನರು [illegible] ರು ಮತ್ತು ಹಲವು ಮಹಿಳಾ ಸಂಸ್ಥೆಗಳ ಪ್ರತಿನಿಧಿಗಳು ನಿಯೋಗ ಹೋಗಿದ್ದರು. ಪ್ರಧಾನಿಗಳು ನಿಯೋಗದವರ ಅಭಿಪ್ರಾಯವನ್ನು ಸಹಾನುಭೂತಿಯಿಂದ ಕೇಳಿದರು.

ಕಾಶ್ಮೀರಕ್ಕೆ ಸಿಂಕಿಯಾಂಗ್ ಗೌರ್ನರರ ಪಲಾಯನ

[illegible]ಕಿಯಾಂಗಿನ ಮಾಜಿ ರಕ್ಷಣಾ ಗೌರ್ನರಾದ [illegible] ಮೊದಲಾದ [illegible] ಜನರ ಕವಾಯಿತಿನಿಂದ [illegible] ಕೊಂಡು ಕಾಶ್ಮೀರಕ್ಕೆ ಬಂದಿದ್ದಾರೆ. ೦ ಈ ವರ್ಷದಲ್ಲಿ ಚೀನಾದಿಂದ ನಾರಿನ [illegible] ಲಕ್ಷ ಡಾಲರ್ ಹಣವನ್ನು ಕೊಟ್ಟು ಬಂದೂಕ ಮತ್ತು ರೈಫಲ್‌ಗಳನ್ನು ಕೊಂಡಿರುವುದಾಗಿ ಗೊತ್ತಾಗಿದೆ.

ಗಾಯತ್ರೀ ಟಾಕೀಸ್

ದಿನವಹಿ 3 ಪ್ರದರ್ಶನಗಳು

ಉತ್ತಮ ದರ್ಜೆಯ ಹಾಗೂ ಪ್ರೇಕ್ಷಕವೃಂದಕ್ಕೆ ಕಳೆಯುತ್ತಿರುವ ಚಿತ್ರ ಇಂದೇ ಕಡೇ ದಿನ

ಜಾನಿ ಬಿಲೆಂಡ

21-12-49ರಿಂದ 2 ದಿನಗಳು

ಮ್ಯಾನ್ ಆಫ್ ಕಾಂಕ್ವೆಸ್ಟ್

Man of Conquest

ಇದು ಸ್ವಾರಸ್ಯಹಾಗೂ ಸಾಹಸದಿಂದೊಡಗೂಡಿರುವ ಚಿತ್ರ

ಪ್ರಭಾ

23—12—49 ರಿಂದ

ಆಮೋಘ ಪ್ರಾರಂಭ

ದಿನವಹಿ 3 ಆಟಗಳು

ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ಉಂಚ್ ನೀಚ್

ಪಾತ್ರ - ಭಾರತಿ, ಸುಮಿತ್ರಾ

ಸಂಗೀತ — [illegible]

- ಬೆಳಗಿನ ಪ್ರದರ್ಶನಗಳು -

23-12-49 ರಿಂದ 7 ದಿವಸಗಳು ಮಾತ್ರ

ಕಿಂಗ್ ಆಫ್ ದಿ ಮೌಂಟೀಸ್

ಗಣೇಶಾ ಟಾಕೀಸ್

17-12-49ರಿಂದ ದಿನ 3 ಆಟಗಳು

ಆದಿತ್ಯನ - ಕನಸು

[illegible]

ಪ್ರಭುದೇವಾ ಟಾಕೀಸ್

21-12-1949 [illegible]

[illegible] OF ZAMBOC

ಜಾಂಬು ಕುಮಾರ

(ಹಿಂದಿ)

ದಿನವಹಿ ಮೂರು ಆಟಗಳು

[illegible] ಟಾಕೀಸ್

[illegible]

ದರ್ಕಾನ್

[illegible] ರಾಜಜ್ಯೋತಿ [illegible] ನಟಿಸಿರುವ ಹಿಂದಿ ಚಿತ್ರ

ರಾಜಕಮಲ್

ಮೈಸೂರು

23—12—49 ರಿಂದ

ಆಮೋಘ ಪ್ರಾರಂಭ

ದಿನವಹಿ 3 ಆಟಗಳು

ಎ. ವಿ. ಎಂ. ರವರ

ಜೀವನಂ

(ತಮಿಳು)

[illegible]

[illegible], ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

ಕಡೇ ಎರಡು ದಿನಗಳು

ಮನದೇಶಂ

Morning Shows

Woman Hater

Edited, printed and published by A. R. Nagarajan at Sadhvi Press, D. Subbi Road, Mysore.

ಕೋರ್ಟ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨೮-೧೨-೪೯ [ಸಂಚಿಕೆ ೧೨೦

ಆಹಾರ ಧಾನ್ಯಗಳ ಬೆಲೆ ಇಳಿಯುವುದು

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಕರ್ನಾಟಕದ ಬಗ್ಗೆ ಚರ್ಚೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ದೆಹಲಿಯಲ್ಲಿ ಸೇರಿ, ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಕೆ ಪಿ ಸಿ ಸಿ.ಯವರು ಮಾಡಿದ ನಿರ್ಣಯ ಮತ್ತು ರಾಜೀನಾಮೆಯ ವಿಷಯವನ್ನು ಎರಡು ನಿಮಿಷಗಳ ಕಾಲ ಪರಿಶೀಲಿಸಿತೆಂದು ತಿಳಿದುಬಂದಿದೆ. ಶ್ರೀ ... ಸಿದ್ದಲಿಂಗಪ್ಪನವರು ಕೆ. ಪಿ. ಸಿ ... ಯವರು ಕೈಗೊಂಡ ಎಲ್ಲ ಕಾರ್ಯಕ್ರಮಗಳನ್ನು ಸಭೆಯಲ್ಲಿ ವಿವರಿಸಿದರೆಂದೂ, ಈ ... ಒತ್ತದ ಪ್ರಶ್ನೆಯು ಈ ದಿನ ಪುನಃ ಪರಿಶೀಲನೆಗೆ ಬರಲಿದೆಯೆಂದೂ ಗೊತ್ತಾಗಿದೆ. ... ರಾಜೀನಾಮೆಗಳನ್ನು ಕಾರ್ಯಕಾರೀ ಸಮಿತಿಯವರು ಒಪ್ಪುವುದಿಲ್ಲವೆಂದೂ, ರಾಜೀನಾಮೆ ಕೊಡಬೇಕೆಂಬ ನಿರ್ಧಾರವು ದಾವಣಗೆರೆಯಲ್ಲಿ ನಡೆದ ಕೆ ಪಿ ಸಿ ಸಿ ಯ ಸಾಮಾನ್ಯ ಸಭೆಯ ನಿರ್ಧಾರಕ್ಕೆ ವಿರುದ್ಧವಾಗಿರುವುದೆಂದೂ ಹೇಳಲಾಗಿದೆ.

ಕಾಶ್ಮೀರದ ಮೇಲೆ ಬೀಳಲು ಪಾಕೀಸ್ಥಾನದ ಸಿದ್ಧತೆ

ಕಾಶ್ಮೀರದ ಮೇಲೆ ಪುನಃ ಧಾಳಿ ನಡೆಸಲು ಪಾಕೀಸ್ಥಾನವು ಯುದ್ಧ ಸನ್ನಾಹಗಳನ್ನು ಮಾಡುತ್ತಿದೆಯೆಂದು ಕಾಶ್ಮೀರದ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ... ಮೊಹಿಯುದ್ದೀನ್ ಹಂದಾನಿಯವರು ಎಚ್ಚರಿಕೆ ಕೊಟ್ಟಿರುತ್ತಾರೆ.

ಲಂಚ ರುಷುವತ್ತಿಗೆ ಉಗ್ರ ಶಿಕ್ಷೆ

ಲಂಚಕೋರತನವನ್ನು ಘೋರ ಅಪರಾಧವೆಂದು ಪರಿಗಣಿಸಿ ಅದಕ್ಕಾಗಿ ಕಠಿಣ ಶಿಕ್ಷೆ ವಿಧಿಸಬೇಕೆಂದು ಕಾಶ್ಮೀರ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಸರ್ಕಾರಿ ನೌಕರರಲ್ಲಿ ತಮ್ಮ ವರಮಾನಕ್ಕಿಂತ ಹೆಚ್ಚು ಆಸ್ತಿಪಾಸ್ತಿಗಳಿದ್ದ ಪಕ್ಷದಲ್ಲಿ ಅದು ಹಣದ ದುರ್ವಿನಿಯೋಗವೆಂದು ಪರಿಗಣಿಸಲಾಗುವುದು ಮತ್ತು ಅವರುಗಳ ಬ್ಯಾಂಕಿನ ಲೆಕ್ಕಾಚಾರಗಳನ್ನು ಪರಿಶೀಲಿಸಲು ಲಂಚ ರುಷುವತ್ತು ನಿಷೇಧ ಅಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ.

ಅನುಭವವುಳ್ಳ ಅಧಿಕಾರಿಗಳ ಅಭಾವ

ಮದ್ರಾಸಿನಲ್ಲಿ ಅನುಭವವುಳ್ಳ ಅಧಿಕಾರಿಗಳ ಅಭಾವವಿರುವುದರಿಂದ ನಿವೃತ್ತರಾದ ಕೆಲವನ್ನು ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಂಡು, ಕೆಲವರನ್ನು ... ಅವಧಿಯವರೆಗೆ ಉಳಿಸಿಕೊಂಡಿರುವರು ... ನೇಮಕ ಮಾಡಲಾಗಿದೆಯೆಂದು ... ರವರು ತಿಳಿಸಿರು...

ಭಾರತ ರಾಜ್ಯಾಂಗದ ಹಿಂದೀ ತರ್ಜುಮೆ

ಭಾರತ ರಾಜ್ಯಾಂಗದ ಹಿಂದೀ ತರ್ಜುಮೆ ... ಕರಡು ಪ್ರತಿಯೊಂದನ್ನು ಶಾಸನ ಸಭೆಯಲ್ಲಿ ಅಂಗೀಕರಿಸುವ ... ಸಭೆಯಲ್ಲಿ ಪ್ರಯತ್ನ ನಡೆಯುತ್ತಿದೆ. ... ಈಗ ಅಲ್ಲಿರುವ ಡಾ|| ರಾಜೇಂದ್ರ ಪ್ರಸಾದರು ಹಿಂದೀ ತರ್ಜುಮೆಯನ್ನು ಪರಿಶೀಲಿಸುತ್ತಿರುವರೆಂದೂ ... ಬಂದಿದೆ.

ಮುರಿಯಪ್ಪನವರು ನಾಗಪುರಕ್ಕೆ

ಸ್ವಂತ ವರದಿಗಾರ] ಮಂಗಳೂರು ೨೮

ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರು ಇದೇ 24ನೇ ತಾ|| ನಾಗಪುರಕ್ಕೆ ಪ್ರಯಾಣಮಾಡಿ, ಅಲ್ಲಿ ನಡೆಯುವ ಅಖಿಲ ಭಾರತ ... ಮಹಾಸಭೆಯ ಅಧ್ಯಕ್ಷತೆ ವಹಿಸುವರು ... ಶ್ರೀ ... ಯವರ ... ಮಹೋತ್ಸವವನ್ನು ನಡೆಸುವರು.

ಮಂತ್ರಿಮಂಡಲದ ಸಭೆ

ಈ ದಿನ ಬೆಳಿಗ್ಗೆ ೧೧ ಗಂಟೆಗೆ ಮಂತ್ರಿಮಂಡಲದ ಸಭೆಯು ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರಿಗೆ ಜ್ವರವಿದ್ದುದರಿಂದ ಅವರು ಸಭೆಗೆ ಬರಲಿಲ್ಲ.

... ಸರ್ಕಾರ ... ಸಭೆಯು ಪ್ರಾರಂಭೋತ್ಸವವನ್ನು ನಾಳೆ ... ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಡೆಸುವರು.

ಅಮೆರಿಕದಲ್ಲಿ ಸಕ್ಕರೆ ಬಗ್ಗೆ ಸಂಶೋಧನಾ ಸ್ಪರ್ಧೆ

ಸಕ್ಕರೆಯನ್ನು ಉಪಯೋಗಿಸುವ ಬಗ್ಗೆ ನೂತನ ವಿಧಾನಗಳನ್ನು ಕಂಡುಹಿಡಿಯಲು ಅಮೆರಿಕದಲ್ಲಿ ಅಂತರ ರಾಷ್ಟ್ರೀಯ ಸಂಶೋಧನಾ ಸ್ಪರ್ಧೆ ... ವಿಜಯಶಾಲಿಗೆ ... ಡಾಲರ್ ... ಬಹುಮಾನವನ್ನು ಕೊಡಲು ನಿಶ್ಚಯವಾಗಿದೆ.

ಬರ್ಮಾದೊಡನೆ ರಾಷ್ಟ್ರೀಯ ಚೀನಾದ ಸಂಬಂಧವಿಲ್ಲ

ಚೀನಾ ಕಮ್ಯೂನಿಸ್ಟರ ಸರ್ಕಾರಕ್ಕೆ ಬರ್ಮಾ ಅಂಗೀಕಾರ ಕೊಟ್ಟಿರುವುದನ್ನು ಪ್ರತಿಭಟಿಸಿ, ಚೀನಾ ರಾಷ್ಟ್ರೀಯ ಸರ್ಕಾರವು ಬರ್ಮಾದೊಡನೆ ಸಂಬಂಧವನ್ನು ಕಡಿದುಹಾಕಿದೆ.

ಗಾಜಿನ ರಲ್ಲಿ ಉಪ್ಪನ್ನು ಕೊಳ್ಳಬೇಕಾಗುವುದಿಲ್ಲ

ನಾರಕವಾದ ಉಪಯೋಗಿಸುವ ಉಪ್ಪನ್ನು ... ರ ಜೊತೆಗೆ ... ಯಾಗಿದೆಯೆಂದೂ ... ಕೊಳ್ಳಬೇಕಾಗುವುದಿಲ್ಲವೆಂದೂ ... ಸೈಗಾರಿಕೆಗಳ ... ಪ್ರತಿ ... ರನ್ನು ... ದು ಹೇಳಲಾಗಿದೆ.

ಪತ್ರಿಕೋದ್ಯೋಗಿಗಳ ಅಸೌಕರ್ಯದ ಬಗ್ಗೆ ವಿಷಾದ

ಮೈಸೂರು ೨೮

ಕೇಂದ್ರ ಸರ್ಕಾರದ ಸಚಿವರೂ ಮುಖ್ಯ ನಾಯಕರುಗಳೂ, ರಾಜಮಾನ್ಯರಿಗೆ ಆಗಮಿಸಿದಾಗ ಏರ್ಪಡಿಸಲಾದ ... ಇತರ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪತ್ರಿಕೋದ್ಯೋಗಿಗಳು ವರದಿಮಾಡಲು ಸರ್ಕಾರದವರು ಸರಿಯಾದ ವ್ಯವಸ್ಥೆ ಮಾಡದೆ ಅವರ ಗೌರವಕ್ಕೆ ಧಕ್ಕೆಯುಂಟಾದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಇನ್ನು ಮುಂದೆ ಆ ರೀತಿ ಆಗದಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರನ್ನು ಕೋರುವ ನಿರ್ಣಯವು ಶ್ರೀ ... ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ನಗರದ ಪತ್ರಿಕೋದ್ಯೋಗಿಗಳ ಸಂಘದ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಸಹಕಾರ ನೌಕರರ ಸಭೆ

ಸಹಕಾರ ಶಾಸನಕ್ಕೆ ಸಂಬಂಧಪಟ್ಟ ... ಬಾಧಕಗಳನ್ನು ... ಸೂಕ್ತ ತಿದ್ದುಪಡಿಗಳನ್ನು ಮಾಡುವಂತೆ ಪ್ರಾರ್ಥಿಸುವ ಸಲುವಾಗಿ ... ತಾ|| ... ಮಧ್ಯಾಹ್ನ ... ಗಂಟೆಗೆ ನಗರದ ಸಹಕಾರ ಭವನದಲ್ಲಿ ... ಸಂಘಗಳ ನೌಕರರ ಸಭೆಯು ... ಶ್ರೀ ... ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ದಸ್ತಗೀರ ಸಹಸ್ರಮಾನೋತ್ಸವ

... ಕಾಲೇಜು ... ಆವರಣದಲ್ಲಿ ನಾಳೆ ಸಂಜೆ ... ಗಂಟೆಗೆ ... ಸಹಸ್ರಮಾನೋತ್ಸವವು ಪ್ರೊ|| ಎಸ್. ವಿ ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಗಾಂಧಿ ನಿಧಿ ರಸೀದಿ ಪುಸ್ತಕಗಳ ವಾಪಸಿಗೆ ಕಡೆಯ ತಾರೀಖು

... ಪ್ರತಿ ... ಪುಸ್ತಕಗಳನ್ನು ... ಕಾಂಗ್ರೆಸ್ ... ಪ್ರತಿ ... ತ್ತಾರೆ.

ಆಹಾರ ಧಾನ್ಯಗಳ ಬೆಲೆ ಇಳಿಯುವುದು

ಸಧ್ಯದಲ್ಲಿಯೇ ಆಹಾರ ಧಾನ್ಯಗಳ ಬೆಲೆಯನ್ನು ಇಳಿಸಲಾಗುವುದೆಂದು ಕೇಂದ್ರ ಸರ್ಕಾರದ ಆಹಾರ ಧಾನ್ಯಗಳ ಸಮಿತಿಯ ಅಧ್ಯಕ್ಷರಾದ ಪಂಡಿತ ಲಕ್ಷ್ಮೀಕಾಂತ ಮೈತ್ರರವರು ತಿಳಿಸಿರುತ್ತಾರೆ.

ಜನವರಿ ೨೪ಕ್ಕೆ ಭಾರತದ ಅಧ್ಯಕ್ಷರ ಚುನಾವಣೆ

ಭಾರತದ ರಿಪಬ್ಲಿಕ್ಕಿನ ಪ್ರಥಮ ಅಧ್ಯಕ್ಷರ ಚುನಾವಣೆಯು ಮುಂದಿನ ತಿಂಗಳು ೨೪ನೇ ತಾ|| ಮಧ್ಯಾಹ್ನ ೧೧ ಗಂಟೆಗೆ ರಾಜ್ಯಾಂಗ ಸಭೆಯಲ್ಲಿ ನಡೆಯುವುದು.

ಅಸ್ಸಾಂ ಗಡಿಯಲ್ಲಿ ರಕ್ಷಣಾ ವ್ಯವಸ್ಥೆ

ಚೀನಾದಲ್ಲಿ ... ಇರುವ ಇತ್ತೀಚಿನ ವಿದ್ಯಮಾನಗಳ ದೃಷ್ಟಿಯಿಂದ ಅಸ್ಸಾಂ ಗಡಿಯ ಪ್ರದೇಶದಲ್ಲಿ ಎಲ್ಲ ರಕ್ಷಣಾ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆಯೆಂದು ಪಾರ್ಲಿಮೆಂಟಿನಲ್ಲಿ ಸರ್ದಾರ್ ಪಟೇಲರು ತಿಳಿಸಿರುತ್ತಾರೆ.

ಮತ್ತೊಂದು ವರ್ಷ ಹತೋಟಿ

ಮುಂದಿನ ವರ್ಷ ಏಪ್ರಿಲ್ ತಿಂಗಳಿಂದ ಮತ್ತೊಂದು ವರ್ಷ ... ಸಾಮಾನುಗಳ ಮೇಲಿನ ಹತೋಟಿ ಮತ್ತು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಶಾಸನಗಳನ್ನು ಮುಂದುವರಿಸಲು ಭಾರತದ ಪಾರ್ಲಿಮೆಂಟು ಅನುಮತಿ ಕೊಟ್ಟಿದೆ.

ಪಾಕೀಸ್ಥಾನಕ್ಕೆ ಕಾಶ್ಮೀರದ ಹಳ್ಳಿಯವರ ಎಚ್ಚರಿಕೆ

ಪಾಕೀಸ್ಥಾನದ ಆಕ್ರಮಿತ ಕಾಶ್ಮೀರದ ... ಹಳ್ಳಿಯ ನಿವಾಸಿಗಳು, ಪಾಕೀಸ್ಥಾನ ಸರ್ಕಾರಕ್ಕೆ ಒಂದು ನೋಟೀಸು ಕೊಟ್ಟು, ... ತಿಂಗಳೊಳಗಾಗಿ ಅಲ್ಲಿ ಉಂಟಾಗಿರುವ ಉತ್ಕಟವಾದ ಬಟ್ಟೆಯ ಅಭಾವವನ್ನು ನಿವಾರಿಸದಿದ್ದ ಪಕ್ಷದಲ್ಲಿ ತಾವು ಭಾರತದ ಪ್ರದೇಶಕ್ಕೆ ವಲಸೆ ಹೋಗುವುದಾಗಿ ತಿಳಿಸಿರುತ್ತಾರೆ.

ಶಿವಕೂಟದಲ್ಲಿ ಹಳೇ ಕರ್ನಾಟಕರಿಗೆ ಊಟ

ಮಂಗಳೂರು ೨೮

ಆದಮೂಜಾಜನಗರದ ದೇವಸ್ಥಾನದ ಶಿವಕೂಟದಲ್ಲಿ ಹಳೇನಾಡು ಕರ್ನಾಟಕ ಬ್ರಾಹ್ಮಣವಿದ್ಯಾರ್ಥಿಗಳಿಗೂ ಭೋಜನಕ್ಕೆ ಅವಕಾಶ ಕಲ್ಪಿಸಬೇಕೆಂದು ಸರ್ಕಾರದವರು ಆಜ್ಞೆಮಾಡಿದ ಪ್ರಕಾರ ಇತರ ವಿದ್ಯಾರ್ಥಿಗಳು ಆಕ್ಷೇಪಣೆ ಇಟ್ಟಿದ್ದಾಗ್ಯೂ ಅವರಿಗೂ ... ಭೋಜನವನ್ನು ಏರ್ಪಡಿಸಲಾಯಿತೆಂದು ... ಹೇಳಲಾಗಿದೆ. ಈಗ ದಿನಾ ... ಬರಲಾಯುತ್ತಿರುವ ... ಇತರ ವಿದ್ಯಾರ್ಥಿಗಳು ಇದಕ್ಕೆ ಯಾವ ಆಕ್ಷೇಪಣೆಯನ್ನೂ ಎತ್ತಬಾರದೆಂದು, ಅವರಿಗೆ ಸಲಹೆ ಕೊಡುವಂತೆ ... ಅಧಿಕಾರಿಗಳಿಗೆ ತಿಳಿಸಲಾಗಿದೆ.

ಸಮಾಜವಾದಿ ಕಾರ್ಯಕರ್ತರ ಸಭೆ

ರಾಜಧಾನಿಯಲ್ಲಿ ಮುಂದಿನ ತಿಂಗಳ ಕೊನೆಯ ವಾರದಲ್ಲಿ ಸಂಸ್ಥಾನದ ಸಮಾಜವಾದಿ ... ಸಮ್ಮೇಳನವನ್ನು ನಡೆಸುವ ಬಗ್ಗೆ ಕಾರ್ಯಕ್ರಮವನ್ನು ... ಗೊತ್ತುಪಡಿಸುವ ... ಸಲುವಾಗಿ ... ಗಂಟೆಗೆ ನಗರದ ಸಮಾಜವಾದಿ ಪಕ್ಷದ ಕಾರ್ಯಕರ್ತರುಗಳ ಸಭೆಯು ... ಕಛೇರಿಯಲ್ಲಿ ನಡೆಯುವುದು.

ಕೈಬೇಡಿ ಹಾಕಿದ ದರೋಡೆಯಿತನಿಂದ ಪೋಲೀಸರ ಕೊಲೆ

ಕೈಬೇಡಿಗಳನ್ನು ತೊಟ್ಟ ದರೋಡೆಕೋರನೊಬ್ಬನು ತನ್ನನ್ನು ಸ್ಟೇಷನಿಗೆ ಕರೆದುಕೊಂಡು ಹೋಗುತ್ತಿದ್ದ ಇಬ್ಬರು ಪೋಲೀಸರನ್ನು ಗುಂಡಿನಿಂದ ಹೊಡೆದು ಕೊಂದ ಸಮಾಚಾರವು ವರದಿಯಾಗಿದೆ. ಬಿಹಾರ್ ಪ್ರಾಂತದ ಚಂಪಾರಣ್ ಎಂಬ ಹಳ್ಳಿಯಲ್ಲಿ ಪೋಲೀಸರು ರಾತ್ರಿಯಂದು ದಾರಿಯಲ್ಲಿ ತಂಗಿ ಇದ್ದಲ್ಲಿಯೇ [illegible] ಸಮಯ ಸಾಧಿಸಿ ದರೋಡೆಕಾರನು ಅವರ ಪಕ್ಕದಲ್ಲಿ ಇದ್ದ ಬಂದೂಕವನ್ನು ತೆಗೆದುಕೊಂಡು ಅವರನ್ನು ಕೊಂದು ಓಡಿದನು. ಆದರೆ ಸ್ವಲ್ಪ ಹೊತ್ತಿನ ಮೇಲೆ ಇತರ ಪೋಲೀಸಿನವರಿಂದ ಅವನು ಕೊಲ್ಲಲ್ಪಟ್ಟನು.

ಕಾರ್ಮಿಕರ ವಸತಿಗಾಗಿ ಮಾಲೀಕರ ಮೇಲೆ ತೆರಿಗೆ

ಬೊಂಬಾಯಿನಲ್ಲಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡಲು ಮಾಲೀಕರ ಮೇಲೆ ತೆರಿಗೆ ವಿಧಿಸಬೇಕೆಂದು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ.

ಇಂಡೋನೇಷ್ಯದ ಪ್ರಧಾನಿ

ನೂತನ ಇಂಡೋನೇಷ್ಯ ರಿಪಬ್ಲಿಕ್ಕಿನ ಪ್ರಧಾನ ಮಂತ್ರಿ ಪದವಿಗೆ ಡಾ॥ ಹಟ್ಟರವರನ್ನು ನೇಮಿಸಲಾಗಿದೆ.

ರೇಡಿಯೋ ಕೇಂದ್ರಗಳಲ್ಲಿ [illegible] ಗಂಟೆ ದೇವರ ಕೀರ್ತನೆ

ಭಾರತದಲ್ಲಿರುವ ಎಲ್ಲ ರೇಡಿಯೋ ಕೇಂದ್ರಗಳಲ್ಲಿಯೂ ದಿನಕ್ಕೆ [illegible] ಗಂಟೆಕಾಲ ದೇವರ ಕೀರ್ತನೆ ಮತ್ತು ಭಜನೆಗಳನ್ನು ಪ್ರಸಾರ ಮಾಡಲಾಗುತ್ತದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಆಸ್ಟ್ರೇಲಿಯಾದ ನೂತನ ಮಂತ್ರಿ ಮಂಡಲ

ಆಸ್ಟ್ರೇಲಿಯಾದ ನೂತನ ಪ್ರಧಾನಿ ಮಿ॥ ಆರ್. ಜಿ. ಮೆಂಜಿಯವರು ಮಂತ್ರಿ ಮಂಡಲವನ್ನು ಮೊನ್ನೆ ದಿನ ರಚಿಸಿದ್ದಾರೆ. ಇದರಲ್ಲಿ [illegible] ಮಿ॥ ಆರ್. ಜಿ. [illegible] ರೂ ಇದ್ದಾರೆ.

ಮದರಾಸ್ ಶಾಸನ ಸಭೆಯ ಕನ್ನಡ ಸದಸ್ಯರ ರಾಜೀನಾಮೆ

ಮದರಾಸ್ ಶಾಸನ ಸಭೆಯ ಮುಸ್ಲಿಂ ಲೀಗ್ ಸೇರಿದ ಕರ್ನಾಟಕದ ಸದಸ್ಯರಾದ ಜನಾಬ್ ಎಂ. [illegible] ಕರ್ನಾಟಕ ಪ್ರಾಂತ್ಯ ರಚನೆ ಆಗದಿರುವುದನ್ನು ಪ್ರತಿಭಟಿಸಿ ರಾಜೀನಾಮೆ ಸಲ್ಲಿಸಿರುತ್ತಾರೆ.

—

ಮನೆ ಪ್ರಯುಕ್ತದೆ

[illegible] ಮನೆ ಬಿಡಲ್ಪಟ್ಟಿತ್ತು. [illegible] ನಲ್ಲಿ ಮುಂ [illegible] ವಿಚಾರಿಸಿ.

ವಿಳಾಸ.—

[illegible] ವಿ. ರಾಮಸ್ವಾಮಿ.

[illegible]

[illegible] ಮೈಸೂರು

Edited, printed and published by V. R. Nagarajan at Sadhvi Press, D. Subbiah Road, Mysore.

ತಾರಾಬಲವನ್ನು ನೋಡುವ ಪದ್ಧತಿ ಸರಕಾರಕ್ಕೆ ಇಲ್ಲ

ಜನವರಿ ೨೬ನೇ ತಾರೀಖು ಭಾರತದ ರಿಪಬ್ಲಿಕ್ಕಿನ ಸ್ಥಾಪನೆ ಸಂಬಂಧವಾಗಿ ನಡೆಯಲಿರುವ ಏರ್ಪಾಡುಗಳ ಬಗ್ಗೆ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಿದ್ದಾಗ ಬಳ್ಳಾರಿ ಜಿಲ್ಲೆಯ ಪ್ರತಿನಿಧಿಯೊಬ್ಬರು ಅದು ಪ್ರಶಸ್ತವಾದ ದಿನವಲ್ಲವೆಂದು ಸರಕಾರಕ್ಕೆ ಜ್ಯೋತಿಷಿಗಳಿಂದ ತಿಳಿದಿಲ್ಲವೇ ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಪಂಡಿತ ನೆಹರೂರವರು ಸರಕಾರವು ಅದರ ಕಾರ್ಯಕ್ರಮವನ್ನು ಹಾಕಿಕೊಳ್ಳುವಾಗ ತಾರಾಬಲವನ್ನು ನೋಡುವ ಪದ್ಧತಿ ಇಲ್ಲವೆಂದು ಹೇಳಿದರು.

ಶಿಶು ಸಾಹಿತ್ಯ

ರಾಜಧಾನಿ [illegible] ಗಳಿಂದ ಪ್ರಕಟಿಸಲ್ಪಟ್ಟಿರುವ 'ಜೀವನ ದಿನಚರಿ' ಮತ್ತು ಗಾಂಧೀಜೀ ಮತ್ತು ಸಂಸಾರ ಎಂಬ ಪುಸ್ತಕಗಳು ನಮ್ಮ ಹಸ್ತಗತವಾಗಿದೆ. ಚಿತ್ರದ ಮೂಲಕ ವಿಷಯಗಳನ್ನು ಸರಳ ಭಾಷೆಯಲ್ಲಿ ಮಕ್ಕಳಿಗೆ ಉಪಯೋಗವಾಗುವಂತೆ ಬರೆಯಲ್ಪಟ್ಟಿವೆ. ಮಕ್ಕಳ ಪುರೋಭಿವೃದ್ಧಿಗಾಗಿ ಪ್ರಾರಂಭಿಸಿರುವ ಈ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಪೌರಸಭೆಯ ವಿಶೇಷ ಅಧಿವೇಶನ

ಕಳೆದ ವರ್ಷದ ಆಡಳಿತ ವರದಿಯನ್ನು ಪರಿಶೀಲಿಸಲು ನಾಳೆ ಮಧ್ಯಾಹ್ನ [illegible] ಗಂಟೆಗೆ ಪೌರಸಭೆಯ ವಿಶೇಷ ಅಧಿವೇಶನವು ನಡೆಯುವುದು.

ಸತ್ಕಾರ ಕೂಟ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ಮಂಡಳಿಯ ವಾರ್ಷಿಕೋತ್ಸವದ ಸಂಬಂಧದಲ್ಲಿ ನಿನ್ನೆ ಸಂಜೆ ಮೈಸೂರು ಸಹೋದರರು ಅನೇಕ ಪುರ ಪ್ರಮುಖರನ್ನು ಆಹ್ವಾನಿಸಿ ಸತ್ಕರಿಸಿದರು. ಮಂಡಳಿಯ ಅಧ್ಯಕ್ಷರಾದ ರಾವ್ ಬಹದ್ದೂರ್ ಎಂ. [illegible] ಸ್ವಾಮಿಯವರು ಮಂಡಳಿಯು ದುಃಸ್ಥಿತಿಯಾಗಿ ಕೆಲಸಕಾರ್ಯಗಳನ್ನು ನಡೆಸಲು ಸಹಾಯಕರಾದವರೆಲ್ಲರನ್ನು ಅಭಿನಂದಿಸಿದರು. ಗೌರವ ಬುದ್ಧ ಎಂಬ ನಾಟಕ ಪ್ರದರ್ಶನವಾದನಂತರ ಸಮಾರಂಭವು ಮುಕ್ತಾಯವಾಯಿತು.

ಸಂಸ್ಕೃತ-ಇಂಗ್ಲೀಷ್ ನಿಘಂಟಿಗೆ ಸಹಾಯಧನ

ಸಂಸ್ಕೃತ-ಇಂಗ್ಲೀಷ್ ನಿಘಂಟನ್ನು ರಚಿಸಲು ಪ್ರಾಂತ್ಯದ ಸಂಸ್ಥೆಯೊಂದು ವರ್ಷಕ್ಕೆ [illegible] ಸಾವಿರ ರೂ ಗ್ರಾಂಟನ್ನು ಕೊಡಲು ನಿರ್ಧರಿಸಿದೆ. ಈ ನಿಘಂಟಿನ ಕೆಲಸವು [illegible] ಡೆಕ್ಕನ್ ಕಾಲೇಜಿನ ಸಂಶೋಧನಾ ಶಾಖೆಯವರಿಂದ ನಡೆಯುತ್ತಿದೆ.

ನೈಜಾಮರ ಚಿನ್ನದ ಮಾರಾಟ

ಹೈದರಾಬಾದಿನ ನೈಜಾಮರಿಗೆ ಸೇರಿದ ೭೦,೦೦೦ ತೊಲಗಳಷ್ಟು ಚಿನ್ನವನ್ನು ಬೊಂಬಾಯಿನಲ್ಲಿ ರಿಸರ್ವ್ ಬ್ಯಾಂಕಿನವರು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನೈಜಾಮರಿಗೆ ಕೊಟ್ಟಿರುವರೆಂದು ತಿಳಿದುಬಂದಿದೆ.

ಸಿರಿಯಾದಲ್ಲಿ ನೂತನ ಸರ್ಕಾರ

ಸಿರಿಯಾದಲ್ಲಿ ಮೊನ್ನೆ ದಿನ ಕ್ರಾಂತಿ ನಡೆದು ಬಂಧಿಸಲ್ಪಟ್ಟಿದ್ದ ಅಧ್ಯಕ್ಷ ಸಾಮಿ [illegible] ಯನ್ನು ಬಿಡುಗಡೆ ಮಾಡಿ ಅವರಿಗೆ ಪಿಂಚಣಿ ವೇತನವನ್ನು ಕೊಟ್ಟು ಕೆಲಸದಿಂದ ನಿವೃತ್ತಿ ಮಾಡಲಾಗಿದೆ. ಅಲ್ಲಿನ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿದೆ. ಹಾ॥ [illegible] ಅವರ ನೂತನ ಮಂತ್ರಿಮಂಡಲವನ್ನು ರಚಿಸಲಾಗಿದೆ. ಹಾಸಿಂ ಅಟಾಸಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಭೂಕಂದಾಯ ಪರಿಶೀಲನಾ ಸಮಿತಿ

ಸಂಸ್ಥಾನದಲ್ಲಿ ಭೂಕಂದಾಯ ಪದ್ಧತಿಯನ್ನು ಪರಿಶೀಲಿಸಲು ನೇಮಿಸಲ್ಪಟ್ಟಿರುವ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಮತ್ತು [illegible] ಮಂದಿ ಸದಸ್ಯರುಗಳು ಮೊನ್ನೆ ದಿನ ತಿರುವಾಂಕೂರಿಗೆ ಪ್ರಯಾಣ ಬೆಳೆಸಿದರು. ಸಮಿತಿಯವರು ಕೊಚ್ಚಿ, ಕೊಯಮತ್ತೂರು ಮತ್ತು ನೀಲಗಿರಿಗಳಿಗೆ ಭೇಟಿ ಕೊಡುವರು.

ಪ. ಜರ್ಮನಿಯಲ್ಲಿ ಸ್ಟಾಲಿನ್ನರ ವಿರೋಧಿ ಸಂಘಟನೆ

ಹಳೆಯ ಮತ್ತು ಈಗಿನ ಅನೇಕ ಜರ್ಮನ್ ಕಮ್ಯೂನಿಸ್ಟರು ಬರ್ಲಿನ್ನಿನಲ್ಲಿ ಕಳೆದ ಭಾನುವಾರ ಸ್ಟಾಲಿನ್ನರ ವಿರೋಧವಾದ ಸಂಗಡವನ್ನು ಸ್ಥಾಪಿಸಿ ಅದಕ್ಕೆ ಸ್ವತಂತ್ರ ಕೂಲಿಗಾರರ ಪಕ್ಷವೆಂದು ಹೆಸರಿಟ್ಟಿದ್ದಾರೆ. ಇವರ ಮುಖಂಡರೊಬ್ಬರು ಹೇಳಿಕೆಕೊಟ್ಟು ಸ್ಟಾಲಿನ್ನರು ಕಮ್ಯೂನಿಸಂ ತತ್ವದ ಒಳ್ಳೆಯ [illegible] ಹೆಸರನ್ನು ಕೆಡಿಸಿರುವರೆಂದು ತಿಳಿಸಿರುವರು.

ಅಮೆರಿಕದಲ್ಲಿ ಜಪಾನಿಯರಿಗೆ ಆಡಳಿತ ಶಿಕ್ಷಣ

ಜಪಾನನ್ನು ಪ್ರಜಾರಾಷ್ಟ್ರ ಕೂಟದಲ್ಲಿ ಸೇರಿಸಿಕೊಳ್ಳುವ ಉದ್ದೇಶದಿಂದ ಜಪಾನಿನ ರಾಜ್ಯಾಧಿಕಾರಿಗಳೂ, ಶಾಸನಸಭಾ ಸದಸ್ಯರೂ ಪತ್ರಿಕೋದ್ಯೋಗಿಗಳು ಮತ್ತು ಇತರರಿಗೆ ಅಮೆರಿಕದಲ್ಲಿ ಪ್ರಜಾಪ್ರಭುತ್ವ ಆಡಳಿತ ವಿಚಾರದಲ್ಲಿ ಶಿಕ್ಷಣ ಕೊಡಲಾಗುವುದೆಂದು ಹೇಳಲಾಗಿದೆ.

ಪ್ರಭುದೇವಾ ಟಾಕೀಸ್

21—12 49ನೇ ಬುಧವಾರದಿಂದ

SON OF ZAMBOO (HINDI)

ಜಾಂಬು ಕುಮಾರ

[illegible], ನವೀನ [illegible] ನಟಿಸಿರುವ ಹಿಂದಿ ಚಿತ್ರ

[illegible]

ಅಸ್ಸಾಮಿನ ಮುಸ್ಲಿಂ ಲೀಗ್ ಸದಸ್ಯನ ದಸ್ತಗಿರಿ

ಅಸ್ಸಾಮಿನ ಪ್ರಾಂತ ಶಾಸನ ಸಭಾ ಸದಸ್ಯರೂ, ಮತ್ತು ಮುಸ್ಲಿಂ ಲೀಗಿನವರೂ ಆದ ಅಸಾಬುದ್ದೀನ್ ಚೌಧರಿಯವರು ದೇಶದ್ರೋಹದ ಕಾರ್ಯಗಳಲ್ಲಿ ನಿರತರಾಗಿದ್ದರೆಂದು ಆ ಪ್ರಾಂತದ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿಯಾಗಿದ್ದಾರೆ.

ಅಮೆರಿಕದಲ್ಲಿ ೪೧ ಸಾವಿರ ಮಕ್ಕಳಿಗೆ ಪಾರ್ಶ್ವವಾಯು

ಅಮೆರಿಕದಲ್ಲಿ ಕಳೆದ ಒಂದು ವರ್ಷದಲ್ಲೇ ೪೧ ಸಾವಿರ ಮಕ್ಕಳು ಪಾರ್ಶ್ವವಾಯುವಿನಿಂದ ನರಳುತ್ತಿದ್ದವೆಂದೂ, ವಿಶ್ವದ ಬೇರಾವ ಭಾಗದಲ್ಲೂ ಇಷ್ಟು ಪ್ರಬಲವಾಗಿ ರೋಗವು ಹರಡಿಲ್ಲವೆಂದೂ ಅಲ್ಲಿನ ಮುಖ್ಯ ಸಾರ್ವಜನಿಕ ಆಸ್ಪತ್ರೆಯ ಅಧ್ಯಕ್ಷರು ತಿಳಿಸುತ್ತಾರೆ.

ಪೂರ್ವ ಪಂಜಾಬಿನಲ್ಲಿ ಸಿನಿಮಾ ಮಂದಿರಗಳಲ್ಲಿ ಧೂಮಪಾನವನ್ನು ನಿಷೇಧಿಸಲಾಗುವುದೆಂದು ಅಲ್ಲಿನ ಪ್ರಧಾನಿಯವರು ತಿಳಿಸಿರುತ್ತಾರೆ.

ಪಿರಿಯಾಪಟ್ಟದ ತಾಲ್ಲೂಕು ಅಭಿವೃದ್ಧಿ

ಪಿರಿಯಾಪಟ್ಟದ ತಾಲ್ಲೂಕು ಹಿಂದುಳಿದ ಪ್ರಾಂತ್ಯವಾಗಿದ್ದು, ಅನೇಕ ಗ್ರಾಮಗಳಿಗೆ ಆರೋಗ್ಯ, ಸಂಚಾರ, ನೀರು ಮುಂತಾದ ಸೌಕರ್ಯವಿಲ್ಲದೆ ಜನರು ತುಂಬಾ ಕಷ್ಟಪಡುತ್ತಿದ್ದಾರೆ. ಇದರ ಪರಿಹಾರಕ್ಕಾಗಿ ಕಳೆದ [illegible] ವರ್ಷಗಳಿಂದಲೂ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲಾಗುತ್ತಿದೆ. [illegible] ನೇ ಅಕ್ಟೋಬರಿನ ಜಿಲ್ಲಾ ಸಮ್ಮೇಳನದಲ್ಲಿ ಚರ್ಚೆ ನಡೆದು, ತಾಲ್ಲೂಕನ್ನು ಅಭಿವೃದ್ಧಿಪಡಿಸಲು ಒಂದು ಉಪಸಮಿತಿಯನ್ನು ರಚಿಸಿ ಅದು ಕೆಲವು ಸಲಹೆಗಳನ್ನು ಮಾಡಿತು. ಆ ಸಲಹೆಗಳು ಸರ್ಕಾರಕ್ಕೆ ತಲುಪಿ [illegible] ತಿಂಗಳಾದರೂ ಅವರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲದಿರುವುದು ವಿಷಾದಕರ. ಈಗಲಾದರೂ ಸರ್ಕಾರದವರು ಇದಕ್ಕೆ ಗಮನ ಕೊಟ್ಟು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಎಂದು ಮೈಸೂರು ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಸಿ. ವೆಂಕಟಸುಬ್ಬಯ್ಯನವರು ಪತ್ರ ಬರೆದಿರುತ್ತಾರೆ.

Applications will be received by the undersigned for the post of an Accounts Clerk in Sharada Vilas College, Mysore. Minimum qualification Senior Accountancy and Type writing. Selected candidate must be prepared to give a cash security if demanded. Starting salary Rs 40 plus D A 15. Apply before 23-12-1949 stating qualifications and experience.

P. Gopalakrishna Setty
Hon. Secretary

ಫೋ: ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೨-೧೨-೪೯ [ಸಂಚಿಕೆ ೧೨೦

ಕರ್ನಾಟಕ ಪ್ರಾಂತ್ಯ ಸದ್ಯಕ್ಕೆ ಸಾಧ್ಯವಿಲ್ಲ!

ಜನರು ಪೆಡ್ಡಾ ನೋಡಲು ೩೧ನೇ ತಾ|| ನಿಂದ ಅವಕಾಶ

ಮೈಸೂರು ೨೨

ಕಾಳನಕೋಟೆ ಕಾಡಿನಲ್ಲಿ ಏರ್ಪಡಿಸಿರುವ ಪೆಡ್ಡಾ ಕಾರ್ಯಕ್ರಮವನ್ನು ಇದೇ ೩೧ನೇ ತಾ||ನಿಂದ ಸಾರ್ವಜನಿಕರು ನೋಡಲು ಅವಕಾಶ ಕೊಡಲಾಗಿದೆ. ಮೈಸೂರು ಜಿಲ್ಲಾಧಿಕಾರಿಗಳೂ ಅಥವ ಅರಣ್ಯಾಧಿಕಾರಿಗಳಿಂದ ಕಲಾ ೧ ರೂ ಟಿಕೆಟ್ ಪಡೆದು ಅಲ್ಲಿಗೆ ಹೋಗಬಹುದೆಂದೂ, ಹನ್ನೆರಡು ವರ್ಷಕ್ಕೆ ಕಡಿಮೆ ವಯಸ್ಸಿನವರಿಗೆ ಅವಕಾಶವಿಲ್ಲವೆಂದೂ ಸರ್ಕಾರದ ಪ್ರಕಟನೆ ತಿಳಿಸಿರುತ್ತದೆ

ಅಣು ಬಾಂಬು ತಯಾರಿಕೆ ನಿಷೇಧಕ್ಕೆ- ಪ್ರಥಮ ಸ್ಥಾನ

ಅಣು ಬಾಂಬುಗಳ ತಯಾರಿಕೆಯನ್ನು ನಿಷೇಧಿಸುವ ಬಗ್ಗೆ ಅಣು ಶಸ್ತ್ರಗಳುಳ್ಳ ಆರು ಭಾರಿ ರಾಷ್ಟ್ರಗಳಲ್ಲಿ ತಾತ್ಕಾಲಿಕ ಒಪ್ಪಂದವಾಗುವ ವಿಷಯಕ್ಕೆ ಅಗ್ರಸ್ಥಾನವನ್ನು ಕಲ್ಪಿಸಬೇಕೆಂದು [illegible] ಅಧ್ಯಕ್ಷರಾದ ಜಾ|| ಕಾಲೋಸ್ [illegible] ರೋಮರು ತಿಳಿಸಿರುತ್ತಾರೆ. ಈ ಬಗೆ ಒಪ್ಪಂದವಾಗಬೇಕೆಂದು ಅವರು ಅಭಿಪ್ರಾಯಪಟ್ಟಿರುವರು

ಲಂಡನ್ನಿನ ನಾಟಕ ಭವನಕ್ಕೆ ಬೆಂಕಿ

ಲಂಡನ್ನಿನ ಸುಪ್ರಸಿದ್ಧ ಅತ್ಯಂತ ಭಾರಿ ನಾಟಕ ಮಂದಿರವಾದ ಆಪೇರಾ ಹೌಸಿಗೆ ಮೊನ್ನೆ ದಿನ ಆಕಸ್ಮಾತ್ ಬೆಂಕಿ ಬಿದ್ದು ಇಡೀ ಭವನವೂ ಮತ್ತು ಸುತ್ತಮುತ್ತಲಿನ ಅನೇಕ ಕಟ್ಟಡಗಳು ಸುಟ್ಟು ನಾಶವಾದವೆಂದು ವರದಿಯಾಗಿದೆ. ಹಲ ಅಗ್ನಿಶಾಮಕ ದಳಗಳು ಎಲ್ಲ ಗಂಟೆಗಳ ಕಾಲ ಹೋರಾಡಿದವು. ಅಗ್ನಿಶಮನ ಇಲಾಖಾಧಿಕಾರಿಯೊಬ್ಬರು ಸತ್ತುಹೋದರು ಮತ್ತು ೨೦ ಜನರಿಗೆ ಗಾಯವಾಗಿದೆ.

ಮೈಸೂರು ನಗರ ಪೌರ ಸಭೆ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ (೧೯೪೯)

22-12-49ರಿಂದ 29-12-49ರ ವರೆಗೆ

— ಕಾರ್ಯಕ್ರಮ : —

ರಿಂದ 12 ಘಂಟೆಯ ವರೆಗೆ ಮತ್ತು 3 ರಿಂದ 9 ಘಂಟೆಯ ವರೆಗೆ

ಪ್ರಾತಃಕಾಲ:- 1) ವಸ್ತು ಪ್ರದರ್ಶನ [illegible] ಉತ್ಪತ್ತಿಸುವುದು

2) ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಪ್ರದರ್ಶನ

ಸಾಯಂಕಾಲ:- 4-30 [illegible]

5-00 ರಿಂದ ಪಾಠಶಾಲಾ ಪ್ರದರ್ಶನ

6-00 ರಿಂದ ನಾಟಕ, ನೃತ್ಯ ಮತ್ತು ಸಂಗೀತ

ನಾಟಕ, ನೃತ್ಯ ಮತ್ತು ಸಂಗೀತಕ್ಕೆ ಪ್ರವೇಶ ಧನ:- 0-8-0

ಟಿ. ನರಸಿಂಹ ಅಯ್ಯಂಗಾರ್, ಬಿ. ಎನ್. ಲಿಂಗರಾಜ್, ಕಾರ್ಯದರ್ಶಿಗಳು.

ಕರ್ನಾಟಕ ಪ್ರಾಂತ್ಯ ರಚನೆ ಈಗ ಸಾಧ್ಯವಿಲ್ಲ

[illegible] ಅನುಮತಿ ಇಲ್ಲ [illegible]

ಕೆ. ಪಿ. ಸಿ. ಸಿ. ಯವರು ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕೆಂದು ಪ್ರತಿಭಟನೆ [illegible] ಕ್ರಮವನ್ನೂ, ಅದರಿಂದ [illegible] ಪ್ರಸ್ತುತ ಅವಕಾಶವಾಗುವುದೆಂದೂ, ಅದರಿಂದ [illegible] ಸಾಧ್ಯವಿಲ್ಲವೆಂದೂ, ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ನಿರ್ಣಯ ಮಾಡಿರುತ್ತಾರೆ. ನಿರ್ಣಯವು ಈ ರೀತಿ ಇದೆ:-

ಕರ್ನಾಟಕ ಪ್ರಾಂತ ರಚನೆಯು ಪ್ರಸ್ತುತ ವಿಶೇಷ ತೊಡಕಿನ ಸಮಸ್ಯೆಯಾಗಿದೆ. ಅದರಲ್ಲಿ ಮೈಸೂರಿನ ಭವಿಷ್ಯ ಮತ್ತು ಇತರ ಕಠಿಣ ಸಮಸ್ಯೆಗಳು ಸೇರಿವೆ. ಅವುಗಳನ್ನು ಸಂಬಂಧಪಟ್ಟ ಪ್ರಜೆಗಳ ಬಹುಮತಾಭಿಪ್ರಾಯವನ್ನು ಪಡೆಯದೆ ಇತ್ಯರ್ಥಪಡಿಸಲು ಸಾಧ್ಯವಿಲ್ಲ. ಅಲ್ಲದೆ ಇನ್ನೂ ಕೇವಲ [illegible] ವಾರಗಳಲ್ಲಿ ನೂತನ ರಾಜ್ಯಾಂಗವು ಜಾರಿಗೆ ಬರಲಿದೆ. ಈ ಸನ್ನಿವೇಶದಲ್ಲಿ ಹೊಸ ಪ್ರಾಂತದ ರಚನೆಗೆ ಕೈಹಾಕುವುದು ಸಾಧ್ಯವಿಲ್ಲ ಮತ್ತು ಸಾಧುವೂ ಅಲ್ಲ.

ಕೆ. ಪಿ. ಸಿ. ಸಿ. [illegible] ಕೈಗೊಂಡಿರುವ [illegible] ಕ್ರಮವು [illegible] ಸ್ಥಿತಿಯಲ್ಲಿ [illegible] ನಿರ್ಣಯದ [illegible] ಕಾಂಗ್ರೆಸ್ಸಿನಲ್ಲಿ [illegible]. ನಿರ್ಣಯವು [illegible] ನಿರ್ಧಾರದಲ್ಲಿ ಈ ಸಮಸ್ಯೆಯ [illegible] ಕೈಗೊಳ್ಳುವ [illegible] ಪರಿಣಾಮವು [illegible] ಕೊ [illegible] ಕರ್ನಾಟಕ [illegible] ಒಪ್ಪುವುದಿಲ್ಲ [illegible] ಕಾಂಗ್ರೆಸ್ [illegible] ಪ್ರಶ್ನೆ [illegible] ಬಹುಮತ [illegible] ಲು ಬಾಧಕವಿಲ್ಲ

ಮುಚ್ಚಿರುವ ಹತ್ತಿ ಗಿರಣಿಗಳು ಸರ್ಕಾರದ ವಶ

ಮುಚ್ಚಲ್ಪಟ್ಟಿರುವ ಹತ್ತಿಗಿರಣಿಗಳನ್ನು ವಶಪಡಿಸಿಕೊಂಡು ಪ್ರಾಂತ ಸರ್ಕಾರಗಳೇ ನಡೆಸಲನುಕೂಲವಾಗುವಂತಹ ವಿಶೇಷ ಆಜ್ಞೆಯೊಂದನ್ನು ಶೀಘ್ರದಲ್ಲಿಯೇ ಹೊರಡಿಸುವುದಾಗಿ ಭಾರತ ಸರ್ಕಾರದವರು ಬೊಂಬಾಯಿ ಸರ್ಕಾರಕ್ಕೆ ತಿಳಿಸಿರುತ್ತಾರೆ. ಅದು ಇದೇ ೨೫ನೇ ತಾ|| ಹೊರಬೀಳುವ ನಿರೀಕ್ಷೆ ಇದೆ.

ವಿಂಧ್ಯ ಪ್ರದೇಶ ಸಂಸ್ಥಾನಗಳ ವಿಸರ್ಜನೆ

ವಿಂಧ್ಯ ಪ್ರದೇಶದ ಬುಂದೇಲ್‌ಖಂಡದ ಸಂಸ್ಥಾನಗಳ ಅರಸರು ತಮ್ಮ ಸಂಸ್ಥಾನಗಳನ್ನು ಸಂಯುಕ್ತ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ವಿಲೀನಗೊಳಿಸಲು ಒಪ್ಪಿಗೆ ಕೊಟ್ಟಿರುತ್ತಾರೆ. ಇತರ ಬಗ್ಗೆ ವಿಂಧ್ಯ ಪ್ರದೇಶದ ರಾಜಪ್ರಮುಖರಾದ ರೀವಾ ಮಹಾರಾಜರು ತಮ್ಮ ರಾಜೀನಾಮೆ ನೀಡಿರುತ್ತಾರೆ.

ಹಗಲಿನಲ್ಲೇ ವ್ಯಾಪಾರಿಗಳ ಕೊಲೆ

ಕರಾಚಿಯ ಪ್ರಸಿದ್ಧ ರತ್ನಪಡಿ ವ್ಯಾಪಾರಿಗಳಾದ ಹಾಸಿಮ್ ಜವೇರಿವಾಲಾ ಎಂಬುವರ ಅಂಗಡಿಗೆ ಮೊನ್ನೆ ದರೋಡೆಗಾರರೊಬ್ಬರು ಮೋಟಾರಿನಲ್ಲಿ ಬಂದು, ಅಂಗಡಿಯೊಳಗಿದ್ದ ಜವೇರಿವಾಲಾ ಮತ್ತು ಅವರ ಮಿತ್ರರೊಬ್ಬರನ್ನು ಗುಂಡಿನಿಂದ ಹೊಡೆದು, ಕಬ್ಬಿಣದ ಪೆಟ್ಟಿಗೆಯಲ್ಲಿ ೭೦ ಸಾವಿರ ರೂ ಬೆಲೆಯ ಚಿನ್ನ ದೋಚಿಕೊಂಡು ಪರಾರಿಯಾದರೆಂದೂ, ಗುಂಡಿನಿಂದ ಅವರಿಬ್ಬರೂ ಸತ್ತುಹೋದರೆಂದೂ ವರದಿಯಾಗಿದೆ.

ಡಕಾಯಿತರಿಂದ ಪೋಲೀಸ್ ಇನ್ಸ್‌ಪೆಕ್ಟರರ ಕೊಲೆ

[illegible] ಪೋಲೀಸ್ [illegible] ಡಕಾಯಿತರು [illegible] ಹೊಡೆದು [illegible] ಸರ್ಕಾರ [illegible] ಸಿಪಾಯಿಗಳು [illegible]

ಆರೋಗ್ಯ ಮತ್ತು ಕಲಾ ಪ್ರದರ್ಶನ

ಮೈಸೂರು ೨೨

ಪೌರಸಭೆಯ ಆಶ್ರಯದಲ್ಲಿ ಏರ್ಪಾಡಾಗಿರುವ ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆಗಳ ಪ್ರದರ್ಶನವು ಈ ದಿನ ಬೆಳಿಗ್ಗೆ ವಸ್ತು ಪ್ರದರ್ಶನ ಭವನದಲ್ಲಿ ಆರಂಭವಾಯಿತು. ಪೌರಸಭಾಧ್ಯಕ್ಷರೂ, ಪೌರಸಭಾ ಸದಸ್ಯರುಗಳೂ, ಕಮೀಷನರೂ, ಆರೋಗ್ಯಾಧಿಕಾರಿಗಳೂ, ಇಂಜನಿಯರ್ ಮುಂತಾದ ಅಧಿಕಾರಿಗಳೂ ಅಲ್ಲದೆ ಅನೇಕ ಅತಿಥಿಗಳೂ ದಯಮಾಡಿಸಿದ್ದರು. ಪ್ರದರ್ಶನದಲ್ಲಿ ಏರ್ಪಾಡಾಗಿರುವ ವಿವಿಧ ಭಾಗಗಳಿಗೆ ಭೇಟಿ ಇತ್ತು ಎಲ್ಲರೂ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

ಮುಷ್ಕರವನ್ನು ನಿಲ್ಲಿಸಲು ಕಾರ್ಮಿಕರ ಉಪವಾಸ

ಬರೋಡಾ ಮಹಾರಾಜರ ಅರಮನೆಯ ಕೆಲಸಗಾರರ ಮುಷ್ಕರವನ್ನು ನಿಲ್ಲಿಸುವಂತೆ ಒತ್ತಾಯ ಪಡಿಸಲು ಅಲ್ಲಿನ ೩ ಸಾವಿರ ಜನ ಕಾರ್ಮಿಕರು ಒಂದು ದಿನ ಉಪವಾಸ ಮುಷ್ಕರ ಕೈಗೊಳ್ಳಬೇಕೆಂದು ನಿರ್ಧರಿಸಿದ್ದಾರೆ

ಬೆಂಗಳೂರಿಗೆ ವಿ. ಪಿ. ಮೆನನ್‌ರವರ ಭೇಟಿ

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರವರು ಬೆಂಗಳೂರಿಗೆ ಇದೇ ೨೬ನೇ ತಾರೀಖಿನಂದು ಬರುವರು. ಮಾರನೇ ದಿನ ಕಾಕನಕೋಟೆ ಕಾಡಿನಲ್ಲಿ ಏರ್ಪಡಿಸಿರುವ ಖೆಡ್ಡಾವನ್ನು ವೀಕ್ಷಿಸುವರು.

ಬಿಹಾರಿನಲ್ಲಿ ಕಡ್ಡಾಯದ ಮೂಲ ಶಿಕ್ಷಣ

೬ ರಿಂದ ೧೧ ವರ್ಷದೊಳಗಿನ ಬಾಲಕ ಬಾಲಕಿಯರಿಗೆಲ್ಲಾ ಮೂಲ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರಲಾಗುವುದೆಂದೂ ಅದು ಉಚಿತವಾಗಿರುವುದೆಂದೂ ಬಿಹಾರಿನ ವಿದ್ಯಾ ಮಂತ್ರಿಗಳು ತಿಳಿಸಿರುತ್ತಾರೆ.

ಅಮೇರಿಕಾ ಮತ್ತು ರಷ್ಯಗಳಲ್ಲಿ ಶಸ್ತ್ರಾಸ್ತ್ರ ಪೈಪೋಟಿ

ಎಲ್ಲಾ ರಾಷ್ಟ್ರಗಳ ಸಾಮಾನ್ಯ ಪ್ರಜೆಗಳೂ ಈಗಲೇ ಕಡೆಗಟ್ಟಿದ್ದಾರೆ, ಅಮೇರಿಕಾ ಮತ್ತು ರಷ್ಯಗಳು ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ನಡೆಸುತ್ತಿರುವ ಪೈಪೋಟಿಯಿಂದ ಪ್ರಪಂಚವು ಭಾರಿ ವಿಪತ್ತಿಗೆ ಗುರಿಯಾಗಬೇಕಾಗುವುದೆಂದು ಭಾರತದ ರಾಷ್ಟ್ರಸಭಾ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ. ರಾಷ್ಟ್ರಗಳು ಭೌತಿಕ ವಸ್ತುಗಳ ಲಾಭಗಳಿಗೆ ಆಸೆಪಡುವುದರಿಂದಲೇ ಈ ಭಯ ಕೇಳಿಬರುತ್ತಿದೆಯೆಂದೂ, ಅದರ ಬದಲು ತ್ಯಾಗ ಮತ್ತು ಸೇವಾ ಬುದ್ಧಿಯಿಂದ ಜನರು ಪ್ರೇರಿತರಾಗಬೇಕೆಂದೂ ಅವರು ತಿಳಿಸಿರುವರು.

ಚೀಣಾ ತೀರದ ಹೊರಗಡೆ ಸೈನ್ಯಗಳು

[illegible] ಚೀಣಾ [illegible] ಭಾಗದಲ್ಲಿ [illegible] ಚೀಣಾ ರಾಷ್ಟ್ರೀಯ [illegible]

ಮೈಸೂರು ಮಕ್ಕಳ ಕೂಟ

ಮೈಸೂರು ಮಕ್ಕಳ ಕೂಟದ ೧೧ನೇ ವಾರ್ಷಿಕೋತ್ಸವವನ್ನು ಭಾನುವಾರ ಸಂಜೆ ಕಲ್ಯಾಣ ಮಂಟಪದಲ್ಲಿ ಆಚರಿಸಲಾಯಿತು ... ಶ್ರೀ ಟಿ ವಿ ಕಟೆಗಮಣ್ಣನವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದರು ... ಸಭೆಗೆ ಮಕ್ಕಳೂ, ಹಿರಿಯರೂ ಬಹಳ ಮಂದಿ ಬಂದಿದ್ದರು. ಮಕ್ಕಳಿಂದ ಸಂಗೀತ ಮತ್ತು ನಾಟಕ ಪ್ರದರ್ಶನಗಳಾದುವು ... ಮಕ್ಕಳ ಕೂಟದ ಕಾರ್ಯದರ್ಶಿಯವರು ವರದಿಯನ್ನೋದಿದರು ... ಮಕ್ಕಳಿಗೆ ಬಹುಮಾನಗಳನ್ನು ಹಂಚಲಾಯಿತು. ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕೂಟದ ಮೇಲ್ವಿಚಾರಣೆಗಾಗಿ ಪಕ್ಷ ... ಹಿರಿಯರೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ.

ಕಳೆದ ಸೋಮವಾರ ಸಂಜೆ ... ಅಖಿಲ ಭಾರತ ರೆಡ್ ಕ್ರಾಸ್ ಸಂಸ್ಥೆಯ ... ಶ್ರೀ ... ರವರು ... ಮಕ್ಕಳ ಕೂಟಕ್ಕೆ ಭೇಟಿ ಕೊಟ್ಟು ... ಕೂಟದವರ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ... ಪ್ರದರ್ಶಿಸಿದರು.

ತೇರ್ಗಡೆಯಾದ ವಿದ್ಯಾರ್ಥಿಗಳು ಪುನಃ ಪರೀಕ್ಷೆಗೆ

ಕೊಲ್ಹಾಪುರದ ರಾಜಾರಾಂ ಕಾಲೇಜಿನ ... ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ... ವಿದ್ಯಾರ್ಥಿಗಳು ಪುನಃ ಈಗ ... ಎಸ್.ಎಲ್. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದೆ. ಈ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆಂದು ಮೊದಲು ... ಅನಂತರ ... ಒಂದು ಭಾಗದಲ್ಲಿ ಉತ್ತೀರ್ಣರಾಗಿರಲಿಲ್ಲವೆಂದು ಗೊತ್ತಾಯಿತು.

ತಿಂಗಳಿಗೆ ೨ ದಿವಸ ಪ್ರಧಾನಿಗಳ ಉಪವಾಸ

ಒಂದು ಹೊತ್ತು ಬಿಡಿ ಎಂಬ ಚಳುವಳಿಯನ್ನು ಕಾರ್ಯರೂಪಕ್ಕೆ ತರಲು ಬೊಂಬಾಯಿನ ಪ್ರಧಾನಿ ಶ್ರೀ. ಬಿ. ಜಿ. ಖೇರ್ ರವರು ತಿಂಗಳಿನಲ್ಲಿ ಎರಡು ದಿನಗಳು ಊಟವನ್ನು ಮಾಡುತ್ತಿಲ್ಲವೆಂದು ಅವರೇ ತಿಳಿಸಿರುತ್ತಾರೆ.

ನೈಜಾಮರ ಅತಿಥಿಗಳ ಅರಮನೆಯಲ್ಲಿ ರಾಜಾಜಿ

ಗೌರ್ನರ್ ಜನರಲ್ ರಾಜಾಜಿಯವರು ... ಹೈದರಾಬಾದಿಗೆ ಭೇಟಿ ಇತ್ತಾಗ ಅವರನ್ನು ನೈಜಾಮರು ... ತಮ್ಮ ಅತಿಥಿ ... ಅರಮನೆಯಲ್ಲಿ ... ಭಾರತೀಯರಲ್ಲಿ ರಾಜಾಜಿಯವರೇ ಮೊದಲನೆಯವರೆಂದೂ, ... ನೈಜಾಮರ್ ಮತ್ತು ಇತರ ... ದೇಶಗಳ ಗಣ್ಯ ವ್ಯಕ್ತಿಗಳ ಬಿಡಾರಕ್ಕಾಗಿ ... ಆ ಅರಮನೆಯಲ್ಲಿ ಪ್ರಿನ್ಸ್ ... ಪ್ರಿನ್ಸ್ ಆಫ್ ವೇಲ್ಸ್ ಮುಂತಾದವರು ತಂಗಿದ್ದರು.

ಒಂದು ಕೊಂಬಿನ ಘೇಂಡಾ ಮೃಗ

ಅಸ್ಸಾಂ ಕಾಡಿನಲ್ಲಿ ಅಪರೂಪವಾಗಿ ದೊರೆಯುವ ಒಂದು ಕೊಂಬಿನ ಘೇಂಡಾ ಮೃಗಗಳನ್ನು ಸಧ್ಯದಲ್ಲಿಯೇ ಬೊಂಬಾಯಿನ ಮೃಗಾಲಯಕ್ಕೆ ತರಲಾಗುವುದೆಂದು ಹೇಳಲಾಗಿದೆ. ಅಲ್ಲಿಗೆ ಸಿಲೋನಿನಿಂದ ಹೊಸ ರೀತಿಯ ಕೋತಿಗಳನ್ನೂ ತರಿಸಲಾಗಿದೆ. ಅವು ರಾತ್ರಿಕಾಲದಲ್ಲಿ ಎಚ್ಚರವಾಗಿರುತ್ತವೆ. ಮಾಂಸವನ್ನೂ ತಿನ್ನುತ್ತವೆ.

ಆತ್ಮಹತ್ಯೆ ಅಪರಾಧವಲ್ಲ ವೆಂಬ ಮಸೂದೆ

ಆತ್ಮಹತ್ಯೆ ಮಾಡಿಕೊಳ್ಳುವುದು ಅಪರಾಧವಲ್ಲವೆಂಬ ಬಗ್ಗೆ ಮಸೂದೆಯನ್ನು ಶ್ರೀ ಕಾಮತ್ ರವರು ಪಾರ್ಲಿಮೆಂಟ್ ಸಭೆಯಲ್ಲಿ ಮಂಡಿಸಲು ಅವಕಾಶ ದೊರೆಯಲಿಲ್ಲ. ಮುಂದಿನ ಅಧಿವೇಶನದಲ್ಲಿ ಅದನ್ನು ಪುನಃ ತರುವುದಾಗಿ ಅವರು ತಿಳಿಸಿರುತ್ತಾರೆ.

ಅಸ್ಸಾಮಿನಲ್ಲಿ ಸಾಮೂಹಿಕ ದಸ್ತಗಿರಿ

ಸಾರ್ವಜನಿಕ ರಕ್ಷಣಾ ಕಾನೂನಿನ ಪ್ರಕಾರ ಅಸ್ಸಾಂ ಪ್ರಾಂತ್ಯದಲ್ಲಿ ಸಾಮೂಹಿಕ ದಸ್ತಗಿರಿಗಳಾಗುತ್ತಿವೆಯೆಂದೂ, ಅನೇಕ ವಿದ್ಯಾರ್ಥಿ ... ನಾಯಕರನ್ನು ಬಂಧಿಸಲಾಗುತ್ತಿದೆಯೆಂದೂ ವರದಿಯಾಗಿದೆ.

ಮಿಡ್ಲ್ ಮತ್ತು ಹೈಸ್ಕೂಲು ಗಳಲ್ಲಿ ಕಡ್ಡಾಯ ಹಿಂದಿ ಶಿಕ್ಷಣ

ಮಧ್ಯ ... ಮತ್ತು ಹೈಸ್ಕೂಲ್ ತರಗತಿಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಿಕೊಡಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ.

ಮಹಾರಾಜರು ಶಾಸನ ಬದ್ಧ ಅಧಿಪತಿಯಾಗಿರಬಹುದು

ಕರ್ನಾಟಕ ಏಕೀಕರಣಕ್ಕೆ ಮೈಸೂರಿನವರ ವಿರೋಧವಿಲ್ಲ. ಪ್ರಾಂತ ನಿರ್ಮಾಣಕ್ಕೆ ಇದೆ. ... ಕೆಲವರು ಹೇಳಿದ್ದಾರೆ. ಅವರಲ್ಲಿ ಕೆಲವರು ಶ್ರೀಮನ್ಮಹಾರಾಜರವರು ನೂತನ ಪ್ರಾಂತದ ಶಾಸನ ಬದ್ಧ ಅಧಿಪತಿಗಳಾಗಬೇಕೆನ್ನುತ್ತಿದ್ದಾರೆ. ಆದರೆ ಬಹಳ ... ಮಹಾರಾಜರು ಹೋಗಬೇಕೆಂದು ಬಯಸುತ್ತಿದ್ದಾರೆ.

ಮಹಾರಾಜರು ಇದ್ದೇ ಇರಬೇಕೆಂದು ಒತ್ತಾಯಪಡಿಸುವುದಾದರೆ ಕನ್ನಡಿಗರು ಅವರನ್ನು ಶಾಸನ ಬದ್ಧ ಅಧಿಪತಿಗಳನ್ನಾಗಿ ಒಪ್ಪಿಕೊಳ್ಳಲು ಸಿದ್ಧರಿದ್ದಾರೆ -ಎಂದು ಶ್ರೀ ಎಸ್ ನಿಜಲಿಂಗಪ್ಪನವರು ತಿಳಿಸಿರುತ್ತಾರೆ.

ಮದರಾಸಿನಲ್ಲಿ ಪೆನಲ್ಟಿ ನೋಟ ಶನಿವಾರದ ರಜಾ

ಸರ್ಕಾರದ ಸೆಕ್ರೆಟರಿಯಟ್ಟಿನಲ್ಲಿರುವ ಎಲ್ಲ ಕಛೇರಿಗಳಿಗೂ ಮುಂದಿನ ವರ್ಷ ಪೆನಲ್ಟಿ ನೋಟ ಶನಿವಾರದ ದಿನ ರಜಾ ಕೊಡಬೇಕೆಂದು ಮದರಾಸ್ ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

"ಕಿಂಗ್" ಚೀಟಾಕ್ಕೆ ಭಾರತದ ಮಾನ್ಯತೆ

ಭಾರತವು ಚೀನಾದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಕಮ್ಯೂನಿಸ್ಟ್ ಪ್ರಭುತ್ವವನ್ನು ಮನ್ನಿಸುವುದೆಂದೂ ಇದಕ್ಕೆ ಶೀಘ್ರದಲ್ಲೇ ಘೋಷಣೆಯೊಂದು ಹೊರಬೀಳಲಿದೆಯೆಂದೂ ಹೇಳಲಾಗಿದೆ.

ಎಂ ವಿ ಸುಬ್ಬಯ್ಯನಾಯ್ಡುರವರ
ಶ್ರೀ ಸಾಹಿತ್ಯ ಸಾಮ್ರಾಜ್ಯ
ನಾಟಕ ಮಂಡಲಿ, ಮೈಸೂರು
ಮೈಸೂರ ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ತಾ॥ 24 12-49ನೇ ಶನಿವಾರದಿಂದ
ಪ್ರತಿ ದಿನವೂ
ಪ್ರತಿ—ಶನಿ, ಸೋಮ, ಬುಧವಾರಗಳಲ್ಲಿ ರಾತ್ರಿ ೧೦ಕ್ಕೆ
ಪ್ರತಿ—ಭಾನು, ಮಂಗಳ, ಗುರು ಶುಕ್ರ ವಾರಗಳಲ್ಲಿ ಸಂಜೆ ೭ಕ್ಕೆ
ಭೂ ಕೈಲಾಸ
ಎಂಬ ನಾಟಕವನ್ನು ಅಭಿನಯಿಸುತ್ತಾರೆ

Edited, printed and published by A. R. Nagarajan, at Sadhvi Press, D Subbiah Road, Mysore.

ರಾಜಕಮಲ್ ಟಾಕೀಸ್,
ಮೈಸೂರು
23—12—49 ರಿಂದ ಅಮೋಘ ಆರಂಭ
ಪ್ರತಿ ದಿನ ಮೂರು ಆಟಗಳು

ಎ. ವಿ. ಎಂ. ರವರ
ಜೀವನಂ
(ತಮಿಳು)
(LIFE)
—:ಭೂಮಿಕೆ:—
† ವೈಜಯಂತಿ ಮಾಲಾ
† ಟಿ. ಆರ್. ರಾಮಚಂದ್ರ
† ಲಲಿತ - ಪದ್ಮಿನಿ
[A Tallam Release
Morning Shows From 23-12-49 for 4 days
WOMAN HATER
With:-Stewart Granger, Edwige Fenillere

ಪ್ರಭಾ ...
23—12—49 ರಿಂದ
ಅಮೋಘ ಪ್ರಾರಂಭ
ದಿನವಹಿ 3 ಆಟಗಳು
... ಭಾವಪೂರಿತ ...
ನ್ಯೂ ಥಿಯೇಟರ್ಸ್ ರವರ ಹಿಂದಿ ಚಿತ್ರ
ಔಟ್ ಲಾ
(THE OUTCAST)
... ಸುಮಿತ್ರಾ
Morning Show Daily at 10 30 a. m.
King of the M...

ರಣಜಿತ್ ಟಾಕೀಸ್
23-12-49 ರಿಂದ :: ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
ಭಾರತ ದೇಶದ ಚಿತ್ರರಂಗದಲ್ಲಿ ಅಲ್ಲೋಲ ಕಲ್ಲೋಲ ಪಡಿಸಿದ
ಮೆಹಬೂಬ್ ರವರ ಹಿಂದಿ ಚಿತ್ರ ರತ್ನ
- ಅಂದಾಜ್ -
ಸಂಗೀತ:- ನೌಷಾದ್
ಪಾತ್ರ:-ನರ್ಗಿಸ್, ದಿಲೀಪ್ ಕುಮಾರ್, ರಾಜ ಕಪೂರ್,
ವಿ. ಎಚ್. ದೇಸಾಯ್ ಮುಂತಾದವರು

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ವೃದ್ಧಿ

ಸಂಪುಟ ೧೪] ಭಾನುವಾರ ೨೫-೧೨-೪೯ [ಸಂಚಿಕೆ ೨೩

ಜ|| ೨೬ ಅರಮನೆಯಲ್ಲಿ ವಿಶೇಷ ದರ್ಬಾರು

ಭಾರತ ಕಾರ್ಮಿಕ ಮಂತ್ರಿಗಳ ಆಗಮನ

ಮೈಸೂರು ೨೫

ಭಾರತದ ಕಾರ್ಮಿಕ ಮಂತ್ರಿಗಳಾದ ಶ್ರೀ ಜಗಜೀವನರಾಂರವರು ಕೇಂದ್ರ ಸರಕಾರದ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ಲಾಲ್‌ರವರೊಡನೆ ನಿನ್ನೆ ವಿಮಾನದಲ್ಲಿ ರಾಜಧಾನಿಗೆ ಆಗಮಿಸಿದರು. ಅವರನ್ನು ಸಂಸ್ಥಾನದ ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಸ್ವಾಗತಿಸಿದರು. ನಾಳೆದಿನ ನಡೆಯಲಿರುವ ಪ್ರಾಂತ ಮತ್ತು ಸಂಸ್ಥಾನಗಳ ಕಾರ್ಮಿಕ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಅವರಿಬ್ಬರೂ ಇಲ್ಲಿಗೆ ಬಂದಿರುತ್ತಾರೆ.

ಸಿ. ಆರ್. ರೆಡ್ಡಿಯವರಿಂದ ವ್ಯಾಸಂಗ ಗೋಷ್ಠಿ ಆರಂಭ

ವಿಶ್ವ ವಿದ್ಯಾನಿಲಯದ ಪ್ರೋ ಚಾನ್ಸೆಲರಾದ ಡಾ|| ಸಿ ಆರ್ ರೆಡ್ಡಿಯವರು ನಾಳೆ ದಿನ ಮಧ್ಯಾಹ್ನ ೪-೩೦ಗಂಟೆಗೆ ಪೌರಸಭಾ ಕಚೇರಿಯಲ್ಲಿ ಸಮಾಜಸೇವೆ ಸಂಘದವರು ಏರ್ಪಡಿಸಿರುವ ವ್ಯಾಸಂಗ ಗೋಷ್ಠಿ ಆರಂಭೋತ್ಸವವನ್ನು ನೆರವೇರಿಸುವರು. ಈ ಗೋಷ್ಠಿಯ ಅಂಗವಾಗಿ ರಾಜಧಾನಿಯಲ್ಲಿ ಹಲವು ಸಮಾಜ ಸೇವಾ ಕಾರ್ಯಗಳ ಬಗ್ಗೆ ಉಪನ್ಯಾಸಗಳನ್ನೂ ಏರ್ಪಡಿಸಲಾಗಿದೆ

ತಾತಯ್ಯನವರ ದಿನಾಚರಣೆ

ರಾಜಧಾನಿಯ ಅನಾಥಾಲಯದ ಸಾಹಿತ್ಯ ಪರಿಷದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ದಿನಾಚರಣೆಯು ಡಾ|| ಪಿಚ್ ಎಲ್. ಹರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ತಾತಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಲಾಗುವುದು.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಪ್ಪನ ಗುಡಿ ಬೀದಿ ಕೊಳದ ಸಂದಿ ಕೋಟಿಂಗಡಿ ಬಿ ಕೆಂಚಪ್ಪನವರ ಮನೆಯ ಮುಂಭಾಗದಲ್ಲಿ ಈ ರಾತ್ರಿ ೯ ಘಂಟೆಗೆ ಕೊಳ್ಳೇಗಾಲದ ಎಂ. ಎಸ್. ನಾಗಲಿಂಗಾಚಾರಿಂದ "ಪಾಂಡವರ ಸ್ವರ್ಗಾರೋಹಣ"ವೆಂಬ ಹರಿಕಥೆ ನಡೆಯುತ್ತದೆ

ವಿಮೆ ಕಾರ್ಯಕರ್ತರುಗಳ ಸಭೆ

ವಿಮೆದಾರರು ಮತ್ತು ಅದರ ಕೆಲಸಗಾರರ ಹಿತರಕ್ಷಣೆಗಾಗಿ ಅಖಿಲ ಭಾರತ ವಿಮೆದಾರರ ಮತ್ತು ಕಾರ್ಯಕರ್ತರುಗಳ ಸಂಘವನ್ನು ಸ್ಥಾಪಿಸಲು ಇದೇ ೨೬ನೇ ತಾ|| ಸಂಜೆ ೬ ಗಂಟೆಗೆ ಸಹಕಾರ ಭವನದಲ್ಲಿ ಶ್ರೀ ಜಿ ಆರ್ ಜೋಸ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

ಸಮತಾವಾದಿ ಸಮ್ಮೇಳನ

ರಾಜಧಾನಿಯ ಸಮತಾವಾದಿ ಪಕ್ಷದ ಕಾರ್ಯಕರ್ತರುಗಳ ಸಭೆಯು ಮೊನ್ನೆ ಶ್ರೀ ಬಿ ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ತಿಂಗಳ ಕೊನೆವಾರದಲ್ಲಿ ಸಂಸ್ಥಾನದ ಸಮತಾವಾದಿ ಪಕ್ಷದ ಸಮ್ಮೇಳನವನ್ನು ಮೈಸೂರಿನಲ್ಲಿ ಸೇರಬೇಕೆಂದು ನಿರ್ಧರಿಸಲಾಯಿತು. ಮಂಡ್ಯದ ಸಕ್ಕರೆ ಕಂಪೆನಿಯವರು ಕಾರ್ಖಾನೆ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ, ಕಾರ್ಖಾನೆಯನ್ನು ಸರ್ಕಾರದವರು ವಶಪಡಿಸಿಕೊಂಡು ವಜಾ ಮಾಡಿದ ಕೆಲಸಗಾರರನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಲಾಯಿತು

ಭಾರತದ ರಿಪಬ್ಲಿಕ್ಕಿನ ನೂತನ ಅಂಚೆ ಲಕ್ಕೋಟೆ

ಭಾರತದ ರಿಪಬ್ಲಿಕ್ಕಿನ ಜ್ಞಾಪಕಾರ್ಥವಾಗಿ ಜನವರಿ ೨೬ನೇ ತಾ|| ಅಂಚೆ ಇಲಾಖೆಯವರು ನೂತನ ಲಕ್ಕೋಟೆ ಮತ್ತು ಸ್ಟಾಂಪು ಫೋಲ್ಡರುಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಲಕ್ಕೋಟೆಯ ಮೇಲೆ ಇಬ್ಬರುಭಾರತ ತರುಣಿಯರು ತುತ್ತೂರಿಯನ್ನು ಊದುತ್ತಿರುವ ಚಿತ್ರವಿದೆ. ಸ್ಟಾಂಪು ಫೋಲ್ಡರಿನ ಮೇಲೆ ಭಾರತನಾರಿಯೊಬ್ಬಳು ಪ್ರಣಾಮ ಮಾಡುವ ಚಿತ್ರವಿರುತ್ತದೆ

ಬೌದ್ಧ ದೇವಾಲಯಕ್ಕೆ ಬೆಂಕಿ

ಜಪಾನಿನ ರಾಜಧಾನಿ ಟೋಕಿಯೋ ನಗರಕ್ಕೆ ಪಶ್ಚಿಮದಲ್ಲಿರುವ ಮೈನಾಬ ಪರ್ವತ ಶಿಖರದ ಮೇಲೆ ೩೫೦ ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಭವ್ಯವಾದ ಬುದ್ಧ ದೇವಾಲಯಕ್ಕೆ ಮೊನ್ನೆ ಬೆಂಕಿ ಬಿದ್ದು, ಅದು ಪೂರ್ಣವಾಗಿ ಸುಟ್ಟುಹೋಯಿತು

ದತ್ತು ಮಾಡಿಕೊಳ್ಳಲು ೬ ಸಾವಿರ ಮೈಲಿ ಪ್ರಯಾಣ

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಗಂಡು ಮಗುವು ಸತ್ತ ಮೇಲೆ ಪುನಃ ತಾನು ತಾಯಿಯಾಗಲು ಇಷ್ಟಪಡದೇ ಇರುವ ಮಿಸೆಸ್ ಆಲಿವ್ ಸವರ್ ಎಂಬಾಕೆಯು ಪಿಲೋಸಿನಿಂದ ಇಂಗ್ಲೆಂಡಿಗೆ ಆರು ಸಾವಿರ ಮೈಲಿ ಪ್ರಯಾಣ ಮಾಡಿರುವಳು. ಒಬ್ಬ ಇಂಗ್ಲಿಷ್ ಹುಡುಗನನ್ನು ದತ್ತು ತೆಗೆದುಕೊಳ್ಳುವ ಉದ್ದೇಶ್ಯದಿಂದ ಆವಳು ಈ ರೀತಿ ಪ್ರಯಾಣ ಹೊರಟಿದ್ದಾಳೆ

ಲಂಡನ್ನಿನಲ್ಲಿ ಭಾರತದ ರಾಜರುಗಳ ಕಂಪೆನಿ

ಭಾರತದ ೫ ಜನ ರಾಜರುಗಳು ತಮ್ಮ ಆಸ್ತಿಪಾಸ್ತಿಗಳನ್ನು ರಕ್ಷಿಸಲು ಮತ್ತು ಅವುಗಳನ್ನು ನೋಡಿಕೊಳ್ಳಲು ಲಂಡನ್ನಿನಲ್ಲಿ ಒಂದು ಕಂಪೆನಿಯನ್ನು ತೆರೆಯಲು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ

ಹೊಸ ದೆಹಲಿಗೆ ಪ್ರತ್ಯೇಕ ಆಡಳಿತ

ಹೊಸ ದೆಹಲಿಯನ್ನು ಹಳೆಯದೆಹಲಿಯ ಆಡಳಿತದಿಂದ ಬೇರ್ಪಡಿಸಿ ಪ್ರತ್ಯೇಕ ಆಡಳಿತವನ್ನು ಏರ್ಪಡಿಸಲಾಗುವುದೆಂದು ಪ್ರಧಾನಿ ಪಂಡಿತ ನೆಹರೂರವರು ಭಾರತದ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ

ಗಡಿ ಪ್ರದೇಶಗಳಲ್ಲಿ ಪಾಕಿಸ್ಥಾನಸೈನ್ಯದ ಕಿರುಕುಳ

ಕಾಶ್ಮೀರದ ಚಿತ್ರಾಲ್ ಕಡೆಯಿಂದ ಬಂದ ಸುದ್ದಿ ಪ್ರಕಾರ ಪಾಕಿಸ್ಥಾನ ಸೈನ್ಯಗಳು ಭಾರತದ ಗಡಿಯೊಳಗೆ ಅರುವೈಲಿಗಳ ವರೆಗೆ ನುಗ್ಗಿಬಂದು ಪೋಲೀಸು ಠಾಣೆಯ ಮೇಲೆ ಬಿದ್ದವೆಂದು ಗೊತ್ತಾಗಿದೆ. ಅಲ್ಲಿದ್ದ ವಸ್ತುಗಳನ್ನು ಲೂಟಿ ಮಾಡಿದ ನಂತರ ಆ ಸೈನ್ಯಗಳು ಠಾಣೆಗೆಬೆಂಕಿಹಚ್ಚಿದವು. ಹಾಗೆಯೇ ಉಮ್ಮತಪರದ ಪಶ್ಚಿಮ ಭಾಗಗಳಲ್ಲಿಯೂ ಸಹ ಮೂರು ಬಾರಿ ಧಾಳಿಗಳಾದವೆಂದು ಹೇಳಲಾಗಿದೆ

ಗರ್ಭಾಂಗಣದಲ್ಲಿ ಹರಿಜನ ಮಂತ್ರಿಗೆ ಅವಕಾಶವಿಲ್ಲ

ಬರೋಡಾದಲ್ಲಿರುವ ಧಾಕೇಶ್ವರ ದೇವಾಲಯದ ಗರ್ಭಾಂಗಣಕ್ಕೆ ಬೊಂಬಾಯಿನ ಹರಿಜನ ಮಂತ್ರಿ ಶ್ರೀ ಜಿ ಡಿ. ತಾಪಸೆಯವರನ್ನು ಬಿಡಲು ಅವಕಾಶ ಕೊಡಲಿಲ್ಲವೆಂದೂ, ಅವರು ಅದರ ಬಾಗಿಲ ಹತ್ತಿರವೇ ನಿಂತು ಪೂಜೆಗೈದರೆಂದೂ ತಿಳಿಸಲಾಗಿದೆ

ಪಾಕಿಸ್ತಾನದ ಮೇಲೆ ಭಾರತದ ಪ್ರತೀಕಾರ

ಭಾರತಕ್ಕೆ ಬರಬೇಕಾಗಿದ್ದ ಸೆಣಬನ್ನು ಪಾಕಿಸ್ತಾನವು ಕಳಿಸದೆ ನಿಲ್ಲಿಸುತ್ತಿರುವುದರಿಂದ ಭಾರತವು ಪಾಕಿಸ್ತಾನಕ್ಕೆ ಕಲ್ಲಿದ್ದಲನ್ನು ಕಳಿಸಕೂಡದೆಂದು ತೀರ್ಮಾನಿಸಿ ಆಜ್ಞೆಯೊಂದನ್ನು ಹೊರಡಿಸಿದೆ

ಕರ್ನಾಟಕ ಪ್ರಾಂತದ ಬಗ್ಗೆ ಸಮಾಜವಾದಿಗಳ ನಿರ್ಣಯ

ಮೈಸೂರು ೨೫

ಸಂಸ್ಥಾನದ ಸಮಾಜವಾದಿಗಳ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ರಾತ್ರಿ ಮಂಡ್ಯದಲ್ಲಿ ಶ್ರೀ ಕಣ್ಣೂರರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಘಕ್ಕೆ ಹೆಚ್ಚು ಮಂದಿ ಸದಸ್ಯರನ್ನು ಕೂಡಿಸಬೇಕೆಂದೂ, ಪ್ರತಿ ಜಿಲ್ಲೆಯಲ್ಲೂ ಸಂಘದ ಶಾಖೆಗಳನ್ನು ತೆರೆಯಬೇಕೆಂದೂ ನಿರ್ಧರಿಸಲಾಯಿತು. ಕರ್ನಾಟಕ ಏಕೀಕರಣದ ತತ್ವವನ್ನು ಒಪ್ಪಿಕೊಂಡ, ಸಮಿತಿಯು, ಈಗ ಏಕೀಕರಣದ ಪರ ಮತ್ತು ವಿರೋಧವಾಗಿನಡೆಯುತ್ತಿರುವ ಚಳುವಳಿಗಳು ಕೇವಲ ಕೆಲವು ಸ್ವಾರ್ಥಿಗಳ ಹಿತರಕ್ಷಣೆಗಾಗಿಯೇ ಆಗಿದೆಯೆಂದೂ, ಆದ್ದರಿಂದ, ಸಾರ್ವಜನಿಕ ಅಭಿಪ್ರಾಯ ಪ್ರ... ಕಂಡುಕೊಳ್ಳಬೇಕೆಂದೂ ಅಭಿಪ್ರಾಯ ಪಡಲಾಯಿತು

ರಿಪಬ್ಲಿಕ್ ದಿನಾಚರಣೆಗೆ ಅರಮನೆಯಲ್ಲಿ ದರ್ಬಾರು

ಮೈಸೂರು ೨೫

ಭಾರತ ರಿಪಬ್ಲಿಕ್ ದಿನಾಚರಣೆಯ ಪ್ರಯುಕ್ತ ಬರುವ ಜನವರಿ ೨೬ನೇ ತಾ|| ಬೆಳಿಗ್ಗೆ ಶ್ರೀಮನ್ಮಹಾರಾಜರವರು ಅರಮನೆಯಲ್ಲಿ ವಿಶೇಷ ದರ್ಬಾರು ನಡೆಸುವರೆಂದು ತಿಳಿದುಬಂದಿದೆ ಮತ್ತು ಅದೇ ದಿನ ಸಂಜೆ ಅವರು ರಾಜಮರ್ಯಾದೆಗಳೊಡನೆ ಪ್ರಭುತ್ವ ಭವನಕ್ಕೆ ತೆರಳಿ ಅಲ್ಲಿ ನಡೆಯುವ ಸೈನಿಕರ ಪ್ರದರ್ಶನದಲ್ಲಿ ಸೆಲ್ಯೂಟನ್ನು ಸ್ವೀಕರಿಸುವ ಕಾರ್ಯಕ್ರಮವೂ ಏರ್ಪಾಡಾಗಿದೆಯೆಂದೂ ಗೊತ್ತಾಗಿದೆ. ೨೬ನೇ ತಾ|| ಕಾರ್ಯಕ್ರಮದ ವಿವರಗಳು ಇನ್ನೂ ಸಿದ್ಧವಾಗಿರುವುದಿಲ್ಲ

ಸಿ. ಪಿ. ಸಿ. ಕಂಪೆನಿಗೆ ಮೋಟಾರು ಸಂಘದ ನೋಟೀಸು

ಮೊನ್ನೆ ಸಂಜೆ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಶ್ರೀ ಕೆ. ದೌಲತ್ ರಾಯರ ಅಧ್ಯಕ್ಷತೆಯಲ್ಲಿ ನಡೆದು ಸಿ. ಪಿ. ಸಿ. ಕಂಪೆನಿಯಲ್ಲಿ ಕಂಡಕ್ಟರಾಗಿದ್ದ ಶ್ರೀ ಎಸ್ ಜೆ. ಗುಂಡಪ್ಪ ಮತ್ತು ಕೆ.ಆರ್. ಗೋಪಾಲಯ್ಯನವರುಗಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳದ ಪ್ರಯುಕ್ತ ಕಂಪೆನಿಗೆಬದಲಾವಣೆಯ ನೋಟೀಸನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು. ನಗರದಲ್ಲಿರುವ ಸಿಟಿಬಸ್ ಸರ್ವಿಸ್ಸಿನಲ್ಲಿ ಕೆಲಸ ಮಾಡುತ್ತಿರುವವರಿಗೆ ಬಹಳ ತೊಂದರೆಯಾಗುತ್ತಿರುವುದರಿಂದಲೂ, ಹೆಚ್ಚಿನಬಸ್ಸುಗಳನ್ನು ಕಂಪೆನಿಯವರು ಓಡಿಸಲು ಇಚ್ಛೆ ಪಡದಿರುವುದರಿಂದಲೂ, ಈ ಸರ್ವಿಸ್ಸನ್ನು ರದ್ದುಪಡಿಸಿ, ಪೌರಸಭೆಗಾಗಲಿ, ಅಥವಾ ಜಾಯಿಂಟ್ ಸ್ಟಾಕ್ ಕಂಪೆನಿಗಾಗಲಿ, ಸರ್ಕಾರದವರು ಅಗಲೀ ವಹಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು.

ನೂತನ ಶಾಸನ ಸಭಾಧಿವೇಶನ

ಬೆಂಗಳೂರು ೨೫

ಹೊಸ ಶಾಸನ ಸಭೆಯ ಮೊದಲನೇ ಅಧಿವೇಶನವು ಜನವರಿ ೧೨ನೇ ತಾ|| ಆರಂಭವಾಗುವುದು. ಅದೇ ದಿನ ಅಧ್ಯಕ್ಷರ ಚುನಾವಣೆಯೂ ನಡೆಯುವುದು. ಭಾರತದ ಪಾರ್ಲಿಮೆಂಟಿಗೆ ಹೊಸದಾಗಿ ಪುನಃ ಕಳುಹಿಸಬೇಕಾದ ಏಳು ಜನರ ಚುನಾವಣೆಯೂ ಅಂದೇ ನಡೆಯುವುದು.

ಮಧ್ಯ ಪ್ರಾಂತ್ಯದ ಮುಖ್ಯ ಮಂತ್ರಿಗಳ ಆಗಮನ

ಮಧ್ಯಪ್ರಾಂತ್ಯದ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರವರು ಈದಿನ ಇಲ್ಲಿಗೆ ಆಗಮಿಸಿ ರಾಜಧಾನಿಗೆ ತೆರಳುವರು. ಅಲ್ಲಿ ನಾಲ್ಕು ದಿನಗಳಿರುವರು

ಯುಗೋಸ್ಲೇವಿಯಾ ಮೇಲೆ ರಷ್ಯದ ಯುದ್ಧವೆ?

ಮಾರ್ಷಲ್ ಟಿಟೋರವರನ್ನು ಪದಚ್ಯುತರನ್ನಾಗಿ ಮಾಡಲು ರಷ್ಯವು ಯುಗೋಸ್ಲೇವಿಯಾ ಮೇಲೆಯಾವಘಳಿಗೆಯಲ್ಲಾದರೂ ಬೀಳಬಹುದೆಂದು ಆ ದೇಶದ ಸೈನ್ಯಗಳ ದಿನಾಚರಣೆ ನಡೆಸುವ ಸಂದರ್ಭದಲ್ಲಿ ಪ್ರಧಾನ ಕಮ್ಯಾಂಡರು ತಿಳಿಸಿದ್ದಾರೆ. ರಷ್ಯವುಯುಗೋಸ್ಲೇವಿಯಾ ಮೇಲೆ ಬಿದ್ದರೆ, ಆಗ ಇಡೀ ಪ್ರಪಂಚದ ರಾಷ್ಟ್ರಗಳೆಲ್ಲವೂ ಅದರಲ್ಲಿ ಭಾಗವಹಿಸಬೇಕಾಗಿ ಬರಬಹುದೆಂದೂ, ಇದರಿಂದ ತೃತೀಯ ಮಹಾ ಯುದ್ಧವೇ ಆಗುವುದೆಂದೂ ಅವರು ಹೇಳುತ್ತಾರೆ

ವಾರ ಭವಿಷ್ಯ

ತಾ|| ೨೫-೧೨-೪೯ರಿಂದ ೧-೧-೫೦ರ ವರೆಗೆ

ಮೇಷ—ಶ್ರದ್ಧಾನ್ವಿತ ಪರೋಪಕಾರ ಕಾರ್ಯ. ಆರೋಗ್ಯ ನೆಟ್ಟಗೆ. ಮಾನ ಸನ್ಮಾನ ನೌಕರಿ, ವ್ಯಾಪಾರ, ಉದ್ಯೋಗಗಳಲ್ಲಿ ಇಷ್ಟದಾಯಕ ಘಟನಾವಳಿ. ಸಾರ್ವಜನಿಕ ಕಾರ್ಯಗಳಲ್ಲಿ ಪ್ರಭಾವ ಹೆಚ್ಚುತ್ತೆ. ಸುಖ ಪ್ರವಾಸ ತಾ|| ೨೬, ೨೭ ಶುಭವಾರ್ತೆ ಸ್ವಪ್ನದಲ್ಲಿ ಸಾಧು ದರ್ಶನ

ವೃಷಭ—ಆರೋಗ್ಯ ನೆಟ್ಟಗೆ ಮನಸ್ಸಿನ ಸ್ಥಿತಿ ಹಾಗಲ್ಲ ನೌಕರಿಯಲ್ಲಿ ತೊಂದರೆ ಇಲ್ಲದಿದ್ದರೂ ಮೇಲ್ಪಟ್ಟವರ ಗೊಣಗಾಟದಿಂದ ಬೇಸರಿಕೆ. ಪತ್ನಿಯ ಸಹಕಾರ ಪತ್ನಿಯ ಆರೋಗ್ಯಕ್ಕೆ ಕೊಂಚ ಕ್ಲೇಶ ತಾ|| ೨೯, ೩೦ ಹಣಕಾಸಿನ ಮುಗ್ಗಟ್ಟು

ಮಿಥುನ—ಕಲಹಪ್ರದ ವಾರವಿದು. ಭಿನ್ನಾಭಿಪ್ರಾಯ ಹೆಚ್ಚುವುದು ಏನೇನೋ ಪ್ರಾಪ್ತಿ. ಆಸ್ತಿಪಾಸ್ತಿ ವಿಷಯವಾಗಿ ಕೈತರ ತಕರಾರು. ಹೊಸ ಹೊಸ ತೊಂದರೆ ಪ್ರಾಪ್ತಿ ವ್ಯಾಪಾರ, ಮಾಲೀಕರುಗಳಿಗೆ ನೌಕರರಿಂದ ತೊಂದರೆ ಮುಷ್ಕರದ ಬೆದರಿಕೆ. ಈ ವಾರ ಆರಂಭ ಪ್ರದವಾಗಿರುವುದು. ತಾ|| ೨೯, ೩೦ ಕ್ಲೇಶನಾಶ, ಆದಾಯ

ಕರ್ಕ—ಕೈಗೊಂಡ ಕಾರ್ಯ ಸಲೀಸಾಗಿ ನಡೆಯುವುದು ಆರೋಗ್ಯ ನೆಟ್ಟಗೆ ಬುದ್ಧಿಶಕ್ತಿಯ ತೀವ್ರತೆ ವಿದ್ಯಾದಾನ ಸುಖಪ್ರವಾಸ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಸಂತೋಷದ ಸಂಗತಿ. ಅಧಿಕಾರ ವ್ಯಾಪ್ತಿಯ ಹೆಚ್ಚಳಿಕೆ ತಾ|| ೨೬, ೨೭ ಅಭಿನಂದನೆ, ಧನ ಲಾಭ

ಸಿಂಹ—ಕಷ್ಟ ದಿನಗಳಾದುದರಿಂದ ಸಹನೆ ಇರಲಿ. ಮಾನಸಿಕ ತ್ರಾಸ ನೌಕರಿಯಲ್ಲಿ ಅನೇಕ ಅಪ್ರಿಯ ಘಟನೆ ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಅಂದಾಜು ಸರಿಯೋಗದು ಮನೆಯವರ ಸ್ಥಿತಿಯೂ ಸಹ ಕಷ್ಟಕರವಾದುದು ತಾ|| ೨೬, ೨೭, ಅಪ್ರಿಯ ವಾರ್ತೆ, ಪ್ರಿಯ ಜನ ವಿಯೋಗ. ವಾಹನಾಘಾತ

ಕನ್ಯ—ವಾರದಲ್ಲಿ ನಿಮ್ಮ ಸ್ಥಿತಿ ಚಿಂತಾದಾಯಕ ತಲೆಯು ಸಿಡಿಯುವಷ್ಟು ತ್ರಾಸ ಕಳವಳ. ನೌಕರಿಯಲ್ಲಿ ಪದೇಪದೇ ಅಪಮಾನ ತಾ|| ೨೯, ೩೦ ಕೌಟುಂಬಿಕ ಚಿಂತೆ. ಧನ ಹಾನಿ, ವಿಯೋಗ

ತುಲಾ—ಅತ್ಯಂತ ಕಷ್ಟಕರವಾದ ವಾರ ಆರಂಭ ಆಕಸ್ಮಿಕಗಳ ತೀವ್ರತೆ ದರೋಡೆಗಾರರ ಉಪಟಳ ಧನನಾಶ ಮಾನಹಾನಿ ಆರೋಗ್ಯ ನೆಟ್ಟಗಿರದು ಕುಟುಂಬದಲ್ಲಿ ಘಾತ ತಾ|| ೨೬, ೨೭, ೨೮ ವ್ಯಾಪಾರದಲ್ಲಿ ವಿಶ್ವಾಸ ಘಾತ ಅಪಘಾತ

ವೃಶ್ಚಿಕ ನಿಮ್ಮ ಪರಾಕ್ರಮಕ್ಕೆ ಅನುಗುಣವಾದ ವಿಜಯ ಪ್ರಾಪ್ತಿ. ಆರೋಗ್ಯ ಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ನಿಮ್ಮ ಶಕ್ತಿ ಹೆಚ್ಚುವದು. ಶತ್ರುಪಕ್ಷದವರು ಹಿಮ್ಮೆಟ್ಟುವರು. ನೌಕರಿಯಲ್ಲಿ ವರ್ಗ. ತಾ|| ೨೯, ೩೦ ಅತಿಥಿಗಳಾಗಿ ಖರ್ಚು

ಧನು—ಸತ್ಕಾರ್ಯಗಳಲ್ಲಿ ಪಾಲು. ಆರೋಗ್ಯ ನೆಟ್ಟಗೆ ಸುಖ ಪ್ರವಾಸ, ಆಪ್ತೇಷ್ಟರ ಸಹವಾಸ ಕೋರ್ಟು ವ್ಯವಹಾರ ಜಯ. ನೌಕರಿಯಲ್ಲಿ ಭಾಗ್ಯೋದಯ. ತಾ|| ೨೬, ೨೭ ಕ್ರಮ

ಮಕರ—ಒಂದು ಆನಂದದಾಯಕ ಘಟನೆ ಸಂಭವ ಜನ್ಮದಿವಸದ ಉಪೇಕ್ಷೆ ಪೂರ್ತಿ ನೌಕರಿಯಲ್ಲಿ ಲಾಭ ಆರೋಗ್ಯದ ಸುಧಾರಣೆ ಆರ್ಥಿಕ ವಿವಂಚನೆ ಮಿತ್ರಲಾಭ ಚಿತ್ರನಾಶ ತಾ|| ೨೯, ೩೦ ಧರ್ಮ ಕಾರ್ಯಕ್ಕಾಗಿ ಖರ್ಚು

ಕುಂಭ—ಮನಸ್ಸಿಗೆ ಧಕ್ಕೆಬರುವ ಅನೇಕ ಘಟನೆ ಆರೋಗ್ಯ ಕೆಡುವುದು ಸಮಾಪದವರೊಬ್ಬರ ಮೃತ್ಯು. ನೌಕರಿಯಲ್ಲಿ ಮೇಲಧಿಕಾರಿಗಳೊಡನೆ ವಿನಸ್ವಾಸ ವ್ಯಾಪಾರಾದಿಗಳಲ್ಲಿ ವಿಶ್ವಾಸ ಘಾತ ತಾ|| ೨೯, ೩೦ ಸಂಕಟನಾಶ, ಮಹತ್ವದ ಪತ್ರಾಗಮನ

ಮೀನ—ಆಪ್ತಸ್ನೇಹಿತರ ಸಂಯೋಗ ನ ಆರೋಗ್ಯ ಚೆನ್ನಾಗಿದೆ ಮಾನಸಿಕ ವಿಕೃತಿಯ ವಿರೋಧ ಸೌ||ಯ ಅಸಮಾಧಾನ ನೌಕರಿಯಲ್ಲಿ ಸುಳ್ಳು ಆರೋಪಣೆ ತಾ|| ೨೫, ೨೬ ಮುಂದು ಖರ್ಚು ಗುಪ್ತ ಚಿಂತೆ

ಕನ್ನಡ ಟೈಪ್ ರೈಟರ್

ಕನ್ನಡದ ಲಿಪಿಯನ್ನು ಬದಲಾಯಿಸದೆ ಈಗಿರುವ ಅಕ್ಷರಗಳಂತೆಯೇ ಟೈಪ್ ರೈಟರನ್ನು ತಯಾರಿಸಬಹುದೆಂಬುದನ್ನು ಈಗಾಗಲೇ ಪ್ರದರ್ಶಿಸಲಾಗಿದೆ ಕನ್ನಡ ಅಂಕಿಗಳಿಗೆ ಬದಲಾಗಿ ಒಂದೇ ಸಮನಾದ ಸಾರ್ವತ್ರಿಕ ಉಪಯೋಗಕ್ಕಾಗಿ ಅಂತರ ರಾಷ್ಟ್ರೀಯ ಅಂಕಿಗಳನ್ನೇ ಸೇರಿಸಬೇಕೆಂದು ಭಾರತ ಮತ್ತು ಮೈಸೂರು ಸರ್ಕಾರಗಳು ಅಭಿಪ್ರಾಯಪಟ್ಟಿವೆ ಕನ್ನಡ ಅಂಕಿಗಳಲ್ಲಿ ಇತರ ಲಿಪಿಗಳಿಗಿಂತಲೂ ಹೆಚ್ಚಿನ ಸೌಕರ್ಯವು ಇರುವುದರಿಂದ ಅವನ್ನು ಉಳಿಸಿಕೊಳ್ಳಲೂಬಹುದು ಅಥವ ಅದಕ್ಕೆ ಬದಲಾಗಿ ಇಂಗ್ಲೀಷ್ ಅಂಕಿಗಳನ್ನೇ ಜಾರಿಗೆ ತರಬಹುದು ಈ ಪ್ರಶ್ನೆಯು ಅತಿ ಮುಖ್ಯವಾದುದರಿಂದ ಸಾರ್ವಜನಿಕರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೂಡಲೇ ತಿಳಿಸಬೇಕು - ಎಂದು ಕನ್ನಡ ಟೈಪ್ ರೈಟರನ್ನು ರಚಿಸಿರುವ ರಾಜಧಾನಿಯ ಪತ್ರಿಕೋದ್ಯೋಗಿಗಳಾದ ಶ್ರೀ ಕೆ ಅನಂತಸುಬ್ಬರಾಯರು ಮನವಿ ಹೊರಡಿಸಿದ್ದಾರೆ.

ದ. ಆಫ್ರಿಕಾದಲ್ಲಿ ಒಂದು ವಾರದ ಮುಷ್ಕರ

ದ ಆಫ್ರಿಕಾದ ಸರಕಾರದ ವರ್ಣ ಭೇದ ನೀತಿಯನ್ನು ಎಲ್ಲಾ ವಿಧಾನದಲ್ಲೂ ಪ್ರತಿಭಟಿಸಬೇಕೆಂದು ದಕ್ಷಿಣ ಆಫ್ರಿಕಾದ ಕರಿಯ ಜನರ ಮುಖಂಡರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ ಮುಖಂಡರ ಹೇಳಿಕೆಪ್ರಕಾರ ಎಲ್ಲಾ ಐರೋಪ್ಯೇತರರೂ ಒಂದು ವಾರದ ಮುಷ್ಕರವನ್ನು ಹೂಡಬೇಕೆಂದೂ ಎಲ್ಲಾ ಐರೋಪ್ಯ ವ್ಯಾಪಾರ ಮಂಡಲಗಳಿಗೂ ಬಹಿಷ್ಕಾರ ಹಾಕಬೇಕೆಂದೂ ಮತ್ತು ಅಂಚೆ ಕಛೇರಿಗಳಲ್ಲಿಟ್ಟಿರುವ ಹಣಗಳನ್ನು ವಾಪಸು ತೆಗೆದ ಕೊಳ್ಳಬೇಕೆಂದೂ ಸೂಚಿಸಿರುತ್ತಾರೆ ತಮ್ಮ ಆಜನ್ಮ ಸಿದ್ಧ ಹಕ್ಕಿಗಾಗಿ ತಾವು ಹೋರಾಡುವುದಾಗಿ ಮುಖಂಡರು ತಿಳಿಸಿರುತ್ತಾರೆ.

ಆಫ್ಘಾನಿಸ್ಥಾನದ ಈಗಿನ ಮತ್ತು ಮಾಜೀ ದೊರೆಗಳ ಸಮಾಗಮ

ಇಟಲಿಯ ನೈಸ್ ನಗರಕ್ಕೆ ಆಫ್ಘಾನಿಸ್ಥಾನದ ಅರಸರಾದ ಜಾಹಿರ್‌ಷಾರವರು ಹೋಗಿರುತ್ತಾರೆ, ಅವರು ಕ್ರಿಸ್‌ಮಸ್ ಹಬ್ಬವನ್ನು ಮಾಜೀ ಅರಸರಾದ ಅಮಾನುಲ್ಲಾರವರೊಡನೆ ಕಳೆಯುವರೆಂದು ಹೇಳಲಾಗಿದೆ.

ವಿ. ಪಿ. ಇಡುವ ಕಾಲ

ವಿಳಾಸದಾರರಿಗೆ ತಿಳಿಸಿದಮೇಲೆ ವಿ ಪಿ ಯನ್ನು ಅಂಚೆ ಇಲಾಖೆಯಲ್ಲಿ ಇಟ್ಟಿರುವ ಕಾಲವನ್ನು ೭ ದಿನಗಳಿಂದ ೫ ದಿನಗಳಿಗೆ ಜನವರಿ ೧ನೇ ತಾ|| ನಿಂದ ತಗ್ಗಿಸಲಾಗುವುದೆಂದೂ, ಅದನ್ನು ೫ ದಿನಗಳ ನಂತರ ಇಡಬೇಕಾದರೆ ಪಾರ್ಸಲ್ಲಿಗೆ ದಿನಕ್ಕೆ ೪ ಆಣೆ ಮತ್ತು ವಿ ಪಿ. ಗೆ ದಿನಕ್ಕೆ ೨ಆಣೆಯಂತೆ ಕೊಡಬೇಕಾಗುವುದೆಂದೂ ಅಂಚೆ ಇಲಾಖೆಯ ಪ್ರಕಟಣೆ ತಿಳಿಸುತ್ತದೆ.

ಗಂಧದ ಕಾರ್ಖಾನೆಗೆ ಸ್ಕೌಟುಗಳ ಭೇಟಿ

ಮೈಸೂರು ಮರಿಮಲ್ಲಪ್ಪನವರ ಪ್ರಾಕ್ಟೀಸಿಂಗ್ ಮಿಡಲ್ ಸ್ಕೂಲಿನ ಸ್ಕೌಟ್ ದಳದವರು ಕಳೆದ ಬುಧವಾರ ಇದೇ ಊರಿನಲ್ಲಿರುವ ರೇಷ್ಮೆ ಮತ್ತು ಗಂಧದ ಎಣ್ಣೆ ಕಾರ್ಖಾನೆಗಳಿಗೆ ಹೋಗಿದ್ದಾಗ ಅಲ್ಲಿಯ ವ್ಯವಸ್ಥಾಪಕರುಗಳು ಎಲ್ಲ ವಿಚಾರಗಳನ್ನೂ ಬಾಲಕರಿಗೆ ತಿಳಿಸಲು ತಕ್ಕ ಏರ್ಪಾಡುಗಳನ್ನು ಮಾಡಿದ್ದರು.

ಬೆಂಗಳೂರಿನಲ್ಲಿ ಮತ್ತೊಂದು ಮೆಡಿಕಲ್ ಕಾಲೇಜು

ಹಾಸನ ೨.

ಇಲ್ಲಿನ ಜಿಲ್ಲಾಬೋರ್ಡ್ ಸದಸ್ಯರೊಡನೆ ಚರ್ಚೆಮಾಡುತ್ತಾ, ಸರಕಾರದ ಸೀನಿಯರ್ ಸರ್ಜನ್ನರಾದ ಡಾ|| ಬಿ. ಜಯರಾಂರವರು ಬೆಂಗಳೂರಿನಲ್ಲಿರುವ ಎಲ್. ಎಂ. ಪಿ ತರಗತಿಯನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ ಎಂ ಬಿ ಬಿ. ಎಸ್ ತರಗತಿಯನ್ನು ತೆರೆಯಲಾಗುವುದೆಂದೂ, ಮೆಡಿಕಲ್ ಸ್ಕೂಲನ್ನೂ ಕಾಲೇಜನ್ನಾಗಿ ಪರಿವರ್ತಿಸಲಾಗುವುದೆಂದೂ ತಿಳಿಸಿದರು

ಇಂಡೊನೇಷ್ಯಾದ ಖೋತಾ ಆಯವ್ಯಯ

ಇಂಡೊನೇಷ್ಯಾದ ಆಯವ್ಯಯ ಅಂದಾಜಿನ ಪ್ರಕಾರ ವರುಷದ ಖೋತಾ ೧೪೦ ಕೋಟಿ ಗಿಲ್ಡರ್‌ಗಳಷ್ಟು ಖೋತಾ ಬರುವುದೆಂದು ಹೇಳಲಾಗಿದೆ ಸೈನ್ಯದ ಖರ್ಚನ್ನು ಕಡಿಮೆ ಮಾಡುವುದರಿಂದಲೂ, ಹೆಚ್ಚಿನ ತೆರಿಗೆ ಹಾಕಿ, ಇಲಾಖೆಗಳಲ್ಲಿ ಖೋತಾ ಮಾಡುವುದರಿಂದಲೂ, ಆಯವ್ಯಯವು ಸರಿತೂಗಬಹುದೆಂದು ಹಣಕಾಸಿನ ಇಲಾಖಾ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಗಾಯತ್ರೀ ಟಾಕೀಸ್

ದಿನವಹಿ 3 ಪ್ರದರ್ಶನಗಳು

25-12-49ರಿಂದ 2 ದಿನಗಳು

ಸೆಸಿಲ್ ಬಿ ಡಿ ಮಿಲ್‌ರವರ ಅದ್ಭುತ ಸಾಹಸಮಯ ವರ್ಣರಂಜಿತ ಚಿತ್ರ

ಅನ್‌ಕಾನ್‌ಕರ್ಡ್

Unconquered

ಪಾತ್ರ:— ಗ್ಯಾರಿ ಕೂಪರ್

—:ಮುಂದಿನ ಬದಲಾವಣೆ.—

ಟಿಲ್ ದಿ ಕ್ಲೌಡ್ಸ್ ರೋಲ್ ಬೈ

ಮೈಸೂರು ನಗರ ಪೌರ ಸಭೆ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ (೧೯೪೯)

22-12-49ರಿಂದ 29-12-49ರ ವರೆಗೆ

—: ಕಾರ್ಯಕ್ರಮ :—

9ರಿಂದ 12 ಘಂಟೆಯ ವರೆವಿಗೆ ಮತ್ತು 3 ರಿಂದ 9 ಘಂಟೆಯ ವರೆಗೆ

ಪ್ರಾತಃಕಾಲ:- 1) ವಸ್ತು ಪ್ರದರ್ಶನ ತೆರೆಯಲ್ಪಟ್ಟಿರುವುದು
2) ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಪ್ರದರ್ಶನ

ಸಾಯಂಕಾಲ:- 4-30 ರಿಂದ ಉತ್ಸಾಹ ಸಂಧ್ಯ
5-00 ರಿಂದ ವ್ಯಾಯಾಮ ಪ್ರದರ್ಶನ.
6-00 ರಿಂದ ನಾಟಕ, ನೃತ್ಯ ಮತ್ತು ಸಂಗೀತ,

ನಾಟಕ, ನೃತ್ಯ ಮತ್ತು ಸಂಗೀತಕ್ಕೆ ಪ್ರವೇಶ ಧನ:— 0-8-0

ಟಿ. ನರಸಿಂಹ ಅಯ್ಯಂಗಾರ್,
ಬಿ. ಎನ್. ಲಿಂಗರಾಜ್.
ಕಾರ್ಯದರ್ಶಿಗಳು

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಒಂದು ಬೇಲು ಬೆಲೆಗೆ ದೊರೆಯುತ್ತದೆ

ಕೂಡಲೇ ವಿಚಾರಿಸಿರಿ:—

“ಸಾಧ್ವಿ” ಆಫೀಸು,
ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

23—12—49 ರಿಂದ ಅಮೋಘ ಆರಂಭ

ಪ್ರತಿ ದಿನ ಮೂರು ಆಟಗಳು

ಎ. ವಿ. ಎಂ. ರವರ

ಜೀವನಂ - (LIFE)

(ತಮಿಳು)

—:ಭೂಮಿಕೆ:—

† ವೈಜಯಂತಿ ಮಾಲಾ † ಟಿ.ಆರ್. ರಾಮಚಂದ್ರ

† ಲಲಿತ - ಪದ್ಮಿನಿ

Edited, printed and published by A R. Nagarajan, at Sadhvi Press, D Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೨೬-೧೨-೪೯ [ಸಂಚಿಕೆ ೧೨೪

ಅಖಿಲ ಭಾರತ ಕಾರ್ಮಿಕ – ಸಚಿವರ ಸಮ್ಮೇಳನ –

ರನ್ನನ ಸಹಸ್ರಮಾನೋತ್ಸವ

ಮೈಸೂರು ೨೭

ರಾಜಧಾನಿಯ ಶಾರದಾವಿಲಾಸ ಕಾಲೇಜ್ ಸಂಘದ ಆಶ್ರಯದಲ್ಲಿ ಕಳೆದ ಗುರುವಾರ ಪ್ರೊ|| ಎಸ್. ವಿ ರಂಗಣ್ಣನವರ ಅಧ್ಯಕ್ಷತೆಯಲ್ಲಿ ರನ್ನ ಕವಿಯ ಸಹಸ್ರಮಾನೋತ್ಸವವನ್ನು ಆಚರಿಸಲಾಯಿತು ಶ್ರೀ ತ ಸು ಶಾಮರಾವ್ ಮತ್ತು ಡಾ|| ಕೆ. ಕೃಷ್ಣಮೂರ್ತಿರವರುಗಳು ಭಾಷಣ ಮಾಡಿದ ನಂತರ "ಗದಾಯುದ್ಧ" ನಾಟಕವನ್ನು ಅಭಿನಯಿಸಲಾಯಿತು.

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಶುಕ್ರವಾರ ರನ್ನ ಕವಿಯ ಸಹಸ್ರಮಾನೋತ್ಸವವನ್ನು ಮಹಾರಾಜ ಕಾಲೇಜಿನ ಅಧ್ಯಾಪಕರಾದ ಶ್ರೀ ಎ. ಅನಂತರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತ ಪ್ರಾರ್ಥನೆ, ಕರಿಚಯ ಭಾಷಣ ಮತ್ತು ಸಂಗೀತಗಳಾದನಂತರ ಅಧ್ಯಕ್ಷರು ಭಾಷಣಮಾಡಿ ರನ್ನನ ಕವಿತಾ ಪ್ರೌಢಿಮೆಯನ್ನು ಪ್ರಶಂಸಿಸಿ, ಆತನ ಕಾವ್ಯದಲ್ಲಿ ಪ್ರತಿಪಾದಿತವಾದ ಉದಾತ್ತ ಧ್ಯೇಯ ಮತ್ತು ತತ್ವಗಳನ್ನು ಎಲ್ಲರೂ ಅನುಸರಿಸಬೇಕೆಂದು ತಿಳಿಸಿದರು

ದಿವಂಗತ ವಿ. ಸುಬ್ರಹ್ಮಣ್ಯ ಅಯ್ಯರ್‌ರವರು

ಮೈಸೂರು ೨೭.

ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿದ್ದ ಶ್ರೀ ವಿ ಸುಬ್ರಹ್ಮಣ್ಯ ಅಯ್ಯರ್‌ರವರು ನಿನ್ನೆ ೩-೩೦ ಗಂಟೆಕೊಪ್ಪಲಿನ ತಮ್ಮ ಗೃಹದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೮೩ ವರ್ಷ ವಯಸ್ಸಾಗಿತ್ತು. ಕೆಲವು ದಿನಗಳಿಂದಲೂ ಅವರು ಅಸ್ವಸ್ಥರಾಗಿದ್ದರು.

ಅವರ ಗತರಿಗೆ ೧೦೦ ವರ್ಷಕ್ಕೆ ವಿಸರಿದ ಸತ್ವ ಮಾತೆಯೂ ಪತ್ನಿಯವರೂ, ಏಕಮಾತ್ರ ಪುತ್ರ ಜಿಲ್ಲಾ ರೈಲ್ವೆ ಇಂಜನಿಯರ್ ಶ್ರೀ ವೆಂಕಟರಮಣನ್‌ರವರೂ ಪೌತ್ರರೂ, ಅನೇಕ ಜನ ಮೊಮ್ಮಕ್ಕಳೂ ಪರಿವಾರದವರೂ ಇರುವರು.

ದಿವಂಗತರು ಆಳಿದ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ವಿಶೇಷ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು ವೇದಾಂತ ಧರ್ಮ ಮತ್ತು ಇತರ ಅನೇಕ ಗಹನ ವಿಚಾರಗಳಲ್ಲಿ ಅವರು ಪರಸ್ಪರ ಸಮಾಲೋಚನೆ ನಡೆಸುತ್ತಿದ್ದರು ಪಾಶ್ಚಿಮಾತ್ಯ ಪ್ರವಾಸಗಳಲ್ಲಿ ಅವರು ಇಬ್ಬರೂ ಕಲೆತು ತೆರಳಿದ್ದರು.

ತತ್ವಶಾಸ್ತ್ರ ವಿಚಾರಗಳಲ್ಲಿ ಶ್ರೀ ಅಯ್ಯರ್ ರವರು ದೊಡ್ಡ ಸ್ಥಾನವನ್ನು ಪಡೆದಿದ್ದರು. ಅನೇಕರಿಗೆ ಈ ವಿಚಾರದಲ್ಲಿ ಮಾರ್ಗವನ್ನು ಸಹಾ ಹೇಳುತ್ತಿದ್ದರು

ಗಂಟೆಕೊಪ್ಪಲಿನ ಶ್ರೀ ರಾಮಕೃಷ್ಣಾಶ್ರಮಕ್ಕೆ ಅವರು ಜೀವನಾಧಾರವಾಗಿದ್ದರು ಕಷ್ಟದಲ್ಲಿ ಸಿಲುಕಿರುವವರಿಗೆಲ್ಲಾ ತಮ್ಮ ಕೈಲಾದ ಉಪಕಾರವನ್ನು ಮಾಡುತ್ತಿದ್ದರು ... ಗಳವರುಯ್ಯೋಗಾಧ್ಯಾಯರಾಗಿ ತಮ್ಮ ... ವಾದ ಪ್ರತಿಭೆಯನ್ನು ತೋರಿಸಿ ... ಸಂಸ್ಥಾನದ ಸಕಲ ಸಾರ್ವಜನಿಕ ಕಾರ್ಯಗಳಲ್ಲಿಯೂ ಸಂಪೂರ್ಣವಾದ ... ಸಮಯೋಚಿತವಾದ ಸಲಹೆಗಳನ್ನು ನೀಡುತ್ತಿದ್ದರು ಇಂತಹ ... ಯಿಂದ ನಿಧನದಿಂದ ದೇಶಕ್ಕೆ ... ನಷ್ಟವುಂಟಾಗಿರುತ್ತದೆ.

... ಆತ್ಮಕ್ಕೆ ಭಗವಂತನು ಶಾಶ್ವತ ... ಯನ್ನಿತ್ತು ಬೇಡಿ ಅವರ ಬಂಧುವರ್ಗಕ್ಕೆ ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ

ಕಾರ್ಪೋರೇಷನ್ ಮೇಯರ್ ಮತ್ತು ಡೆ|| ಮೇಯರ್

ಸ್ವಂ ಸು ಫೋ] ಬೆಂಗಳೂರು ೨೭

ಬೆಂಗಳೂರು ಕಾರ್ಪೊರೇಷನ್ನಿನ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸೇರಿ, ಮೇಯರ ಸ್ಥಾನಕ್ಕೆ ಶ್ರೀ ಎ ಕೇಶವಯ್ಯಂಗಾರ್ಯರನ್ನೂ, ಡೆ|| ಮೇಯರರ ಸ್ಥಾನಕ್ಕೆ ಶ್ರೀ ಎ. ಸಿ ನಾಯುಡುರವರನ್ನೂ ನಿಲ್ಲಿಸುವಂತೆ ತೀರ್ಮಾನಿಸಲಾಯಿತು ಶ್ರೀ ಎಸ್. ಎಂ. ಮುನಿಸ್ವಾಮಯ್ಯನವರನ್ನು ನಾಯಕರನ್ನಾಗಿ ಆರಿಸಲಾಯಿತು

ಕಲ್ಕತ್ತದ ಪೋಲೀಸರಿಗೂ ಮೆರವಣಿಗೆಕಾರರಿಗೂ ಹೊಡೆದಾಟ

ಮೊನ್ನೆ ದಿನ ಕಮ್ಯೂನಿಸ್ಟ್ ಪ್ರೇರಿತ ಮೆರವಣಿಗೆಯೊಂದು ಹೊರಟಿದ್ದಾಗ ಅದರಲ್ಲಿದ್ದವರಿಗೂ ಪೋಲೀಸರಿಗೂ ಘರ್ಷಣೆಯಾಗಿ ಒಬ್ಬ ಸಬ್ ಇನ್ಸ್ಪೆಕ್ಟರರೂ ಸೇರಿ ೪ ಮಂದಿಗೆ ಗಾಯವಾಗಿದೆ ಮಹಿಳೆಯರೂ ಸೇರಿ, ನೂರು ಜನರನ್ನು ದಸ್ತಗಿರಿ ಮಾಡಲಾಗಿದೆ ಬಹಿರಂಗ ಸಭೆಯೊಂದು ನಡೆದು ಅಲ್ಲಿ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿದನಂತರ ಜನರು ಈ ರೀತಿ ಮೆರವಣಿಗೆ ಹೊರಟಿದ್ದರು.

ಪಾಕಿಸ್ತಾನದ ನಿರ್ಮಾಣಕ್ಕೆ ಮಹಾ ಸಭೆ ಒಪ್ಪುವುದಿಲ್ಲ

ಅಖಂಡ ಭಾರತದ ಗುರಿಯೇ ಹಿಂದೂ ಮಹಾಸಭೆಯ ಗುರಿಯಾಗಿರುವ ಕಾರಣ ಪಾಕಿಸ್ತಾನದ ನಿರ್ಮಾಣಕ್ಕೆ ಒಪ್ಪಿಕೊಳ್ಳುವುದು ಸಾಧ್ಯವಿಲ್ಲವೆಂದು ಅ|| ಭಾ|| ಹಿಂದೂ ಮಹಾಸಭೆಯ ೨೯ನೇ ಅಧಿವೇಶನವು ಮೊನ್ನೆ ಕಲ್ಕತ್ತದಲ್ಲಿ ನೆರೆದಿದ್ದಾಗ ಅಧ್ಯಕ್ಷರಾದ ಡಾ|| ಎನ್ ಬಿ. ಖರೆಯವರು ತಿಳಿಸಿದರು ಹಿಂದೂ ಮಹಾಸಭೆಯು ಪುನಃ ರಾಜಕೀಯಕ್ಕೆ ಇಳಿದಿರುವ ವಿಷಯವನ್ನು ಅವರು ಸಭೆಯ ಗಮನಕ್ಕೆ ತಂದು, ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದೇ ತಮ್ಮ ಧ್ಯೇಯವೆಂದೂ ಹಿಂದೂ ಮಹಾಸಭೆಯು ಕೋಮುವಾರು ರಹಿತ ಸರಕಾರದ ಸ್ಥಾಪನೆಗೂ, ಎಲ್ಲ ಕೋಮಿನವರಿಗೂ ಸಹ ಸಮಾನಾವಕಾಶವಿರಬೇಕೆಂಬುದಕ್ಕೂ, ತನ್ನ ಅಭಿಮತವಿರುವುದೆಂದೂ ಡಾ|| ಖಾರೆಯವರು ಹೇಳಿದರು

ಕಾರ್ಮಿಕರ ಜೀವನ ಮಟ್ಟವನ್ನು ಏರಿಸಬೇಕು

ಕಾರ್ಮಿಕ ಸಚಿವರ ಸಮ್ಮೇಳನದಲ್ಲಿ ಜಗಜೀವನ್‌ರಾಂರವರ ಭಾಷಣ

ಮೈಸೂರು ೨೭

ಭಾರತದ ಪ್ರಾಂತ್ಯ ಮತ್ತು ಸಂಸ್ಥಾನಗಳ ಕಾರ್ಮಿಕ ಸಚಿವರುಗಳ ಸಮ್ಮೇಳನವು ಈ ದಿನ ಬೆಳಿಗ್ಗೆ ೧೦-೩೦ ಗಂಟೆಗೆ ಚಲುವಾಂಬಾ ಭವನದಲ್ಲಿ ಕೇಂದ್ರ ಕಾರ್ಮಿಕ ಸಚಿವ ಶ್ರೀ ಜಗಜೀವನ್ ರಾಂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸಮ್ಮೇಳನಕ್ಕೆ ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಮಧ್ಯಪ್ರಾಂತ್ಯ, ಅಸ್ಸಾಂ, ಬಿಹಾರ್, ಒರಿಸ್ಸಾ, ಬಂಗಾಳ, ಪೂರ್ವ ಪಂಜಾಬ್, ಮದರಾಸ್, ವಿಂಧ್ಯ ಪ್ರಾಂತ್ಯ ಪಾಟಿಯಾಲಾ, ಹೈದರಾಬಾದ್, ಮೈಸೂರು, ಮುಂತಾದ ಪ್ರದೇಶಗಳ ಕಾರ್ಮಿಕ ಸಚಿವರುಗಳು ದಯಮಾಡಿಸಿದ್ದರು. ಕೇಂದ್ರ ಕಾರ್ಮಿಕ ಶಾಖೆಯ ಕಾರ್ಯದರ್ಶಿ ಶ್ರೀ ಲಾಲ್‌ರವರೂ ಬಂದಿದ್ದರು.

ಮೈಸೂರಿನ ಕಾರ್ಮಿಕ ಸಚಿವರಾದ ಕೆ ಟಿ ಭಾಷ್ಯಂರವರು ಸ್ವಾಗತ ಭಾಷಣಮಾಡಿ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಮೈಸೂರು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವನ್ನು ವಿವರಿಸಿದರು

ಶ್ರೀ ಜಗಜೀವನರಾಂರವರು ಭಾಷಣ ಮಾಡಿ ಈರೀತಿ ತಿಳಿಸಿದರು :—

ದೇಶದಲ್ಲಿ ಒಂದು ಶಸವಾದ ಸಮಾಜವನ್ನು ನಿರ್ಮಿಸುವುದೇ ಈ ಸಮ್ಮೇಳನದ ಉದ್ದೇಶ. ಈಗಿನ ಆರ್ಥಿಕ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳದಿದ್ದಪಕ್ಷದಲ್ಲಿ ಭಾರತದ ಭವಿಷ್ಯಕ್ಕೆ ಧಕ್ಕೆ ಉಂಟಾಗುವುದು ಈಗಿರುವ ಮುಖ್ಯವಾದ ಸಮಸ್ಯೆ ಆಹಾರ ಸಂಬಂಧಿಯಲ್ಲಿ ಭಾರಿ ಖೋತಾ ಉಂಟಾಗುವುದು ಇದು ಅನೇಕ ಕೈಗಾರಿಕೆಗಳಲ್ಲೂ ಸಂಭವಿಸುತ್ತದೆ ಹೆಚ್ಚು ತಯಾರಿಕೆ ಆಗಬೇಕಾದ ಸಮಯದಲ್ಲಿ ಇದು ಸಂಭವಿಸುವುದು ವಿಷಾದಕರ ಆದುದರಿಂದ ಅದನ್ನು ತಡೆಗಟ್ಟಲು ಸರ್ವ ಪ್ರಯತ್ನ ಮಾಡಬೇಕು ಕನಿಷ್ಠ ಸಂಬಳ ನಿಗದಿ ಮಾಡಬೇಕಾದುದು ಮತ್ತೊಂದು ಭಾರಿ ಪ್ರಶ್ನೆಯಾಗಿದೆ. ಅದಕ್ಕಾಗಿಯೇ ಸರ್ಕಾರದವರು ೧೯೪೮ರಲ್ಲಿ ಒಂದು ಕಾನೂನನ್ನು ಜಾರಿಗೆ ತಂದರು ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಅದನ್ನು ಕಾರ್ಯರೂಪಕ್ಕೆ ತರಲು ಕಷ್ಟವಾಗಿದೆ ಆದರೂ ಅದನ್ನು ಆದಷ್ಟು ಬೇಗನಾದರೂ ಕಾರ್ಯರೂಪಕ್ಕೆ ತಂದು ಕಾರ್ಮಿಕರಿಗೆ ಉಪಯೋಗವಾಗುವಂತೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ವ್ಯವಸಾಯದ ಕೂಲಿಯವರಿಗೂ ಅದನ್ನು ಜಾರಿಗೆ ತರುವುದಕ್ಕಾಗಿ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಲಾಗಿದೆ

ಮತ್ತೊಂದು ಮುಖ್ಯ ಪ್ರಶ್ನೆಯು ಕಾರ್ಮಿಕರಿಗೆ ವಸತಿಗಳನ್ನು ನಿರ್ಮಿಸುವುದು ಇದಕ್ಕಾಗಿ ಯೋಜನೆಗಳನ್ನು ತಯಾರಿಸಿದ್ದರೂ ಅವನ್ನು ಕಾರ್ಯರೂಪಕ್ಕೆ ತಂದಿಲ್ಲ ಹಣಕಾಸಿನ ಅಭಾವವಿದ್ದರೂ ಅವುಗಳನ್ನು ನಿರ್ಮಿಸಲು ಪ್ರಯತ್ನಿಸಬೇಕು ಕೈಗಾರಿಕಾ ನಾಗರೀಕರುಗಳ ಮೇಲೂ ಸಹ ಈ ವಿಚಾರದಲ್ಲಿ ಹೆಚ್ಚು ಜವಾಬ್ದಾರಿ ಬಿದ್ದಿದೆ ಕಾರ್ಮಿಕರಿಗೆ ವಾಸಿಸಲು ಗೃಹಗಳನ್ನು ಒದಗಿಸದಿದ್ದ ಪಕ್ಷದಲ್ಲಿ ಕೈಗಾರಿಕೆಯ ಅಭಿವೃದ್ಧಿ ಹೊಂದುವುದಿಲ್ಲ ಮತ್ತು ಕಾರ್ಮಿಕರ ಜೀವನದ ಮಟ್ಟ ಇಳಿಯುವುದು ಗೃಹ ಅಭಾವ ಪರಿಸ್ಥಿತಿ ಇರುವವರೆಗೂ ಯಾವ ಸರ್ಕಾರಕ್ಕೂ ಮನ ನೆಮ್ಮದಿ ಇರುವುದಿಲ್ಲ. ಭಾರತದ ಕಾರ್ಮಿಕರಿಗೆ ಸರಿಯಾದ ಗೃಹ ವಸತಿ, ಹೆಚ್ಚು ವರಮಾನ ಮತ್ತು ಇತರ ಸೌಲಭ್ಯಗಳು ಇಲ್ಲದಿದ್ದರೂ ಅವರುಗಳು ತೋರುತ್ತಿರುವ ದೇಶ ಪ್ರೇಮಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ ಆದುದರಿಂದ ಅವರ ಜೀವನ ಮಟ್ಟವನ್ನು ಏರಿಸಲು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕಾದುದು ಎಲ್ಲರ ಕರ್ತವ್ಯ.

ಪ್ರಭುಗಳೊಡನೆ ಭೇಟಿ

ಮೈಸೂರು ೨೭

ಭಾರತದ ಕಾರ್ಮಿಕ ಸಚಿವರಾದ ಶ್ರೀ ಜಗಜೀವನ ರಾಂ, ವಿಶ್ವ ಸಂಸ್ಥೆಯ ಕಾರ್ಮಿಕ ಸಮ್ಮೇಳನದ ಡೈರೆಕ್ಟರ್ ಜನರಲ್ ಮಿ|| ಮೋರ್ಸ್‌ಡೇವಿಡ್ ಮತ್ತು ಭಾರತ ಸರ್ಕಾರದ ಕಾರ್ಮಿಕ ಶಾಖೆಯ ಕಾರ್ಯದರ್ಶಿ ಶ್ರೀ ಲಾಲ್‌ರವರುಗಳು ಈದಿನ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರು.

ದೆಹಲಿಗೆ ಶ್ರೀ ಕೆ. ಸಿ. ರೆಡ್ಡಿ

ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಇದೇ ೩೦ನೇ ತಾರೀಖು ದೆಹಲಿಗೆ ಪ್ರಯಾಣ ಮಾಡಲಿರುವರೆಂದು ತಿಳಿದುಬಂದಿದೆ ನೂತನ ಮಂತ್ರಿ ಮಂಡಲದ ಬಗ್ಗೆ ಅಲ್ಲಿ ಸಮಾಲೋಚನೆ ನಡೆಸಬಹುದೆಂದೂ, ಅಲ್ಲಿಂದ ೩ನೇ ತಾರೀಖು ವಾಪಸು ಬಂದಮೇಲೆ ಅವರು ಮಂತ್ರಿಗಳ ಹೆಸರುಗಳನ್ನು ಪ್ರಕಟಿಸಬಹುದೆಂದೂ ಹೇಳಲಾಗಿದೆ.

ಕಾಳಸಂತೆ ವ್ಯಾಪಾರಕ್ಕಾಗಿ ಕಠಿಣ ಸಜಾ

ಸ್ವಂ. ಸು] ಚಾಮರಾಜನಗರ ೨೮

ಈ ಊರಿನ ದಳ್ಳಾಳಿಗಳಾದ ಮಹಮದ್ ಸಾಬ್ ಮತ್ತು ಮಹಮದ್ ಪೀರ್ ಎಂಬುವರು ಕಾಳಸಂತೆಯಲ್ಲಿ ರೂ.ಗೆ ೧೧ ಪಾವಿನಂತೆ ಜೋಳವನ್ನು ಮಾರುತ್ತಿದ್ದರೆಂದು ಆಪಾದಿಸಿ ಪೋಲೀಸರು ನಂಜನಗೂಡು ಒಂದನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು ಅಪರಾಧಿಗಳಿಗೆ ತಲಾ ೨೫೦ ರೂ. ಜುಲ್ಮಾನೆ ಮತ್ತು ೧೫ ದಿನಗಳು ಕಠಿಣಸಜಾ ವಿಧಿಸಲಾಯಿತು. ಜುಲ್ಮಾನೆ ಕೊಡಲು ತಪ್ಪಿದಲ್ಲಿ ಮತ್ತೆ ೧|| ತಿಂಗಳು ಕಠಿಣ ಸಜಾ ಅನುಭವಿಸಬೇಕೆಂದೂ ತಿಳಿಸಲಾಯಿತು.

ಕವಿ ಸಾರ್ವಭೌಮರಿಗೆ ಸುಸ್ವಾಗತವನ್ನು ನೀಡಿ

ಮೈಸೂರು ೨೩

೧೯-೧೨-೪೯ ರಿಂದ ಮೈಸೂರಿನಲ್ಲಿ ಮೂರು ದಿವಸಗಳ ಕಾಲ ನಡೆಯಲಿರುವ, ಅಖಿಲ ಭಾರತ ಕರ್ನಾಟಕ ಸಂಘಗಳ ಸಮ್ಮೇಳನದ ಮೊದಲನೆಯ ದಿನದ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಕವಿ ಸಾರ್ವಭೌಮ ಗೋವಿಂದ ಪೈರವರು ಬರಲಿದ್ದಾರೆ. ಅವರಿಗೆ ಸ್ವಾಗತವನ್ನು ನೀಡುವುದು ಪ್ರತಿಯೊಬ್ಬ ನಾಗರಿಕನ ಮತ್ತು ಕನ್ನಡಿಗನ ಮುಖ್ಯ ಕರ್ತವ್ಯವಾಗಿದೆ. ಆದ್ದರಿಂದ ಮೈಸೂರಿನ ಮಹಾಜನರೆಲ್ಲರೂ ಸಮ್ಮೇಳನವು ಯಶಸ್ವಿಯಾಗಿ ನಡೆಯಲು ಉದಾರ ಧನಸಹಾಯ ನೀಡಬೇಕೆಂದು, ಕಾರ್ಯದರ್ಶಿಗಳಾದ ಶ್ರೀ ವೇದಾಂತ ಹೆಮ್ಮಿಗೆಯವರು ಮನವಿ ಮಾಡಿಕೊಂಡಿರುತ್ತಾರೆ.

ವಿವಿಧ ವೇಷಗಳ ಸ್ಪರ್ಧೆ

ಮೈಸೂರು ಪೌರಸಭೆಯ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕಾ ಪ್ರದರ್ಶನದ ಸಂಬಂಧವಾಗಿ ೩೦ನೇ ತಾ॥ ಸಂಜೆ ೬ ಘಂಟೆಗೆ ವಿವಿಧ ವೇಷಗಳ ಸ್ಪರ್ಧೆಯನ್ನು ಏರ್ಪಡಿಸಿದೆ. ಅದರಲ್ಲಿ ಭಾಗವಹಿಸಲು ಅಪೇಕ್ಷಿಸುವವರು ೪ ಆಣೆ ಪ್ರವೇಶ ಧನದೊಡನೆ ತಾವು ಹಾಕಿಕೊಳ್ಳುವ ವೇಷವನ್ನು ತಿಳಿಸಿ ತಾ॥ ೨೭ನೇ ರಾತ್ರಿ ೯ ಘಂಟೆಯೊಳಗೆ ಅರ್ಜಿಯನ್ನು ಕಾರ್ಯದರ್ಶಿಗಳಿಗೆ ತಲುಪಿಸಬೇಕೆಂದು ಸೂಚಿಸಲಾಗಿದೆ.

ಕೊಲೆಯಾದ ಸಿಕ್ಕನ ದಹನಕ್ಕಾಗಿ ಉಪವಾಸ

ಕೊಲೆಯಾದ ೨೧ ವರ್ಷ ವಯಸ್ಸಿನ ಸಿಕ್ ಯುವಕನ ಶರೀರವನ್ನು ಸಿಕ್ ಮತೀಯ ಪದ್ಧತಿ ಪ್ರಕಾರ ಸುಡದೇ ಪೋಲೀಸರು ನೆಲದಲ್ಲಿ ಹೂಳಲಿಟ್ಟಿರುವುದನ್ನು ತಪ್ಪಿಸಲು ಇಂಗ್ಲೆಂಡಿನ ಬಿ.ಸಿ. ಎಂಬಲ್ಲಿ ನಲವತ್ತು ಮಂದಿ ಸಿಕ್ಕರು ಉಪವಾಸ ವ್ರತವನ್ನು ಕೈಗೊಂಡಿದ್ದಾರೆ. ಶರೀರವನ್ನು ವಿಚಾರಣೆ ಕಾಲದಲ್ಲಿ ಹೊರಕ್ಕೆ ತೆಗೆಯಬಹುದಾದ ಕಾರಣ ಅದನ್ನು ಹೂಳಬೇಕೆಂದು ಪೋಲೀಸರು ಅಭಿಪ್ರಾಯಪಟ್ಟಿದ್ದಾರೆ.

ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಕೂಡದು

ಮಾಧ್ಯಮಿಕ ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ರಾಜಕೀಯ ಸಭೆಗಳಿಗೆ ಹೋದರೂ ಅದರ ಚಟುವಟಿಕೆಗಳಲ್ಲಿ ಭಾಗವಹಿಸಕೂಡದು. ೧೫ ವರ್ಷಕ್ಕೆ ಮೀರಿದ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಯಾವ ರಾಜಕೀಯ ಪಕ್ಷಕ್ಕಾದರೂ ಸದಸ್ಯರಾಗಬಹುದು ಆದರೆ ಹಿಂಸಾತ್ಮಕ ಮತ್ತು ಕೋಮು-ವಾರು ಪಕ್ಷಕ್ಕೆ ಅವರುಗಳು ಸೇರಕೂಡದು. ಉಪಾಧ್ಯಾಯರುಗಳು ಶಾಲಾ ಆವರಣದಲ್ಲಿ ಅಥವ ಕೆಲಸದಲ್ಲಿದ್ದಾಗ ರಾಜಕೀಯದಲ್ಲಿ ತೊಡಗಬಾರದು, ... ರವರು ಸೂಚನೆ ಇತ್ತಿದ್ದಾರೆ

ಪೌರಸಭಾಧ್ಯಕ್ಷರಾಗಲು ಲಂಚ

ಕೊಲಂಬೋದಿನ ಪೌರಸಭೆಯ ಮೇಯರ್ ಸ್ಥಾನವನ್ನು ಗಳಿಸಿಕೊಳ್ಳಲು ಮಾಜಿ ಮೇಯರರಾದ ಎ. ಎಫ್. ಎಲ್. ಡಿ ಮೆಲ್ಲೋರವರು ಒಂಭತ್ತು ಮಂದಿ ಸದಸ್ಯರುಗಳಿಗೆ ಲಂಚ ಕೊಟ್ಟರೆಂದು ಸಿಲೋನಿನ ಲಂಚ ನಿರೋಧ ಶಾಖೆಯ ಕಮಿಷನರವರು ತಿಳಿಸಿದ್ದಾರೆ. ಈ ಹತ್ತು ಮಂದಿಯ ಮೇಲೂ ಲಂಚದ ಆಪಾದನೆ ಹೊರಿಸಲಾಗಿದೆ

ಹಿಂದಿಯಲ್ಲಿ ಭಾರತದ ಭೂಪಟ

ಹಿಂದಿಯಲ್ಲಿ ಭಾರತದ ಭೂಪಟವನ್ನು ರಚಿಸುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆಯೆಂದು ಪಾರ್ಲಿಮೆಂಟ್ ಸಭೆಯಲ್ಲಿ ಆಹಾರ ಸಚಿವರು ತಿಳಿಸಿರುತ್ತಾರೆ. ಯೂನಿಯನ್ ಒಳಗಿರುವ ೧೨ ಲಕ್ಷ ಚದುರ ಮೈಲಿ ಪ್ರದೇಶದ ಪೈಕಿ, ೧,೪೧,೦೦೦ ಚದುರ ಮೈಲಿಗಳಷ್ಟನ್ನು ಆಧುನಿಕ ರೀತಿಯಲ್ಲಿ ಸರ್ವೆ ಮಾಡಬೇಕಾಗಿದೆಯೆಂದೂ ಅವರು ಹೇಳಿರುತ್ತಾರೆ.

ನ್ಯೂಯಾರ್ಕಿನಲ್ಲಿ ರಷ್ಯನ್ ವ್ಯಾಪಾರಿಗಳ ದಸ್ತಗಿರಿ

ರಷ್ಯಾದ ಪರವಾಗಿ ಗೂಢಚಾರರಾಗಿ ಕೆಲಸ ಮಾಡುತ್ತಿದ್ದರೆಂಬ ಆಪಾದನೆ ಮೇಲೆ ನ್ಯೂಯಾರ್ಕಿನಲ್ಲಿದ್ದ ಐದು ಜನ ರಷ್ಯನ್ ವ್ಯಾಪಾರಿಗಳನ್ನು ದಸ್ತಗಿರಿ ಮಾಡಲಾಗಿದೆ

ಉತ್ತಮ ರಾಸುಗಳ ವಧೆ

ಕ್ರಿಸ್ಮಸ್ಸಿಗಾಗಿ ಪ್ರತಿ ವರ್ಷವೂ ಡಿಸೆಂಬರ್ ೨೪ ರಿಂದ ಜನವರಿ ೧ನೇ ತಾರೀಖಿನವರೆಗೆ ಉತ್ತಮ ದನಗಳ ವಧೆ ಬಹಿರಂಗವಾಗಿ ನಡೆಯುತ್ತಿತ್ತು. ಈಗ ಮುಖ್ಯ ಮಾರ್ಗಗಳಲ್ಲಿ ಈ ನೀಚ ಕೃತ್ಯ ನಡೆಯಲಿದೆ. ಆದುದರಿಂದ ಸರ್ಕಾರದವರೂ ಸಾರ್ವಜನಿಕರೂ ಸಂಪೂರ್ಣ ನಿಗಾಕೊಟ್ಟು ದುಷ್ಕರನ್ನು ತಕ್ಕ ಶಿಕ್ಷೆಗೆ ಗುರಿಪಡಿಸಿ, ಪುಣ್ಯಭಾಗಿಗಳಾಗಬೇಕಾಗಿ ಗೋ ಸೇವಕರಾದ ಬಿ. ಎಂ. ಎ. ಖಾದರ್‌ರವರು ಕೋರಿರುತ್ತಾರೆ

ವಿದ್ಯಾರ್ಥಿ ಕಾಂಗ್ರೆಸ್

೪೮-೪೯ನೇ ಸಾಲಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯ ಸಂಗ್ರಹಣ ಪುಸ್ತಕಗಳನ್ನು ತೆಗೆದುಕೊಂಡುಹೋಗಿರುವ ಪ್ರಮುಖರೆಲ್ಲರೂ ಸದರೀ ಪುಸ್ತಕಗಳನ್ನು ಹಣದ ಸಮೇತ ತಾ॥೧೫-೧-೫೦ ರ ಒಳಗಾಗಿ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯಕ್ಕೆ ತಲುಪಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ವೇದಾಂತ ಹೆಮ್ಮಿಗೆಯವರು ಪ್ರಾರ್ಥಿಸಿದ್ದಾರೆ

ಸಂಸ್ಥಾನದಲ್ಲಿ ಕೇಂದ್ರ ವರಮಾನ ತೆರಿಗೆ ಕಛೇರಿ

ಕೇಂದ್ರ ಸರಕಾರದ ಶ್ರೀ ಗೋವಿಂದರಾಯ್ ರವರು ಮೊನ್ನೆ ದಿನ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರನ್ನು ಭೇಟಿ ಮಾಡಿದ್ದರು. ಸಂಸ್ಥಾನದಲ್ಲಿ ಕೇಂದ್ರದ ವರಮಾನ ತೆರಿಗೆ ಕಛೇರಿಯನ್ನು ತೆರೆಯುವ ... ಚರ್ಚಿಸಲ್ಪಟ್ಟಿತು

ಪಂಡಿತ ನೆಹರೂರವರಿಗೆ ಸಿಲೋನಿನ ಗೌರವ ಪ್ರಶಸ್ತಿ

ಸಿಲೋನಿನ ವಿಶ್ವ ವಿದ್ಯಾಲಯದವರು ಭಾರತದ ಪ್ರಧಾನಿ ಪಂಡಿತ ನೆಹರೂರವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿದ್ದಾರೆ

ಬ್ರಿಟನ್-ಹಂಗೇರಿ ವ್ಯಾಪಾರಿ ಮಾತುಕತೆ ನಿಂತಿತು

ಬ್ರಿಟಿಷ್ ವ್ಯಾಪಾರಿ ಎಡ್ವರ್ಡ್ ಸ್ಯಾಂಗ್‌ಸ್ಟರವರನ್ನು ಹಂಗೇರಿ ಅಧಿಕಾರಿಗಳು ದಸ್ತಗಿರಿ ಮಾಡಿದ ಪ್ರಯುಕ್ತ ಬ್ರಿಟನ್-ಹಂಗೇರಿಗಳಿಗೆ ನಡೆಯುತ್ತಿದ್ದ ವ್ಯಾಪಾರದ ಮಾತುಕತೆಗಳನ್ನು ಬ್ರಿಟನ್ನು ಕಡಿದು ಹಾಕಿದೆ.

ನಯನಜ ಕ್ಷತ್ರಿಯರ ಸಂಗೀತ ಶಾಲೆ

ಮೈಸೂರು ನಯನಜ ಕ್ಷತ್ರಿಯ ಸಂಘದ ಸಭೆಯು ಕಳೆದ ಬುಧವಾರ ಶ್ರೀ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಆಶ್ರಯದಲ್ಲಿ ಶ್ರೀ ಗಾಯತ್ರಿ ಗಾನ ಸಂಗೀತ ಪಾಠಶಾಲೆಯೊಂದನ್ನು ಮುಂದಿನ ತಿಂಗಳು ಮೊದಲನೇ ವಾರದಲ್ಲಿ ತೆರೆಯಬೇಕೆಂದು ತೀರ್ಮಾನಿಸಲಾಯಿತು. ವಿದ್ಯಾರ್ಥಿನಿಲಯದ ಜೀರ್ಣೋದ್ಧಾರಕ್ಕಾಗಿ ... ಕೈಗೊಳ್ಳಬೇಕೆಂದೂ ನಿರ್ಧರಿಸಲಾಯಿತು

ಭತ್ತದ ಪಾವತಿಗೆ ಅನಾನುಕೂಲ

ನಂಜನಗೂಡು ತಾಲ್ಲೂಕು ... ಹಳ್ಳಿ ಗ್ರಾಮದ ರೈತರು ಸರ್ಕಾರಕ್ಕೆ ಕೊಡಬೇಕಾದ ಭತ್ತವನ್ನು ಪಕ್ಕದ ಹೊಸಕೋಟೆ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಪಾವತಿಮಾಡಲು ಬಹಳ ತೊಂದರೆಯಾಗಿರುತ್ತದೆ. ಭತ್ತವನ್ನು ತೆಗೆದುಕೊಂಡು ಹೋಗಲು ಬಾಡಿಗೆ ಗಾಡಿಮಾಡುವುದು ಮತ್ತು ಒಂದೆರಡು ದಿನಗಳು ಪಕ್ಕದ ಗ್ರಾಮದಲ್ಲಿ ತಂಗುವುದು ಇವು ಕಷ್ಟಕರವಾದುವು. ಅಲ್ಲದೆ ಹೊಸಕೋಟೆ ಗ್ರಾಮದಲ್ಲಿ ಕಾಲರಾ ಗಲಾಟೆಯೂ ಇದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅನುಕೂಲವಾಗಿರುವ ನಮ್ಮೂರಿನಲ್ಲೇ ಕಳೆದ ವರ್ಷದಂತೆ ನಮ್ಮ ರೈತರು ಭತ್ತವನ್ನು ಪಾವತಿ ಮಾಡುವಂತೆ ಏರ್ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಟಿ. ಎನ್. ನಾಗರಾಜ್.

೧೮ ವರ್ಷದ ತರುಣಿಯ ಸಹಗಮನ

ಲಕ್ನೋ ಬಳಿ ಸೀತಾಪುರ ಜಿಲ್ಲೆಗೆ ... ದ ಗ್ರಾಮವೊಂದರಲ್ಲಿ ೧೮ ವರ್ಷ ವಯಸ್ಸಿನ ತರುಣಿಯೊಬ್ಬಳು ಸಹಗಮನ ಮಾಡಿದ ಅಂಶವು ವರದಿಯಾಗಿದೆ. ... ಗಂಡನು ಮೃತಪಟ್ಟನೆಂದು ತಿಳಿದ... ಆಕೆಯು ಸ್ವಲ್ಪವೂ ದುಃಖವನ್ನು ... ರ್ಪಡಿಸಿಕೊಳ್ಳದೆ ರಾಮಾಯಣ ಪಾರಾ... ಗ ಮಾಡುತ್ತಾ, ಪತಿಯ ದೇಹದ ... ಕುಳಿತಿದ್ದಳು ಸ್ಮಶಾನಕ್ಕೆ ಶವವನ್ನು ... ದುಹೋಗಿ ಚಿತೆಯನ್ನು ಸಿದ್ಧಪಡಿ... ಮೇಲೆ ಆಕೆಯು ಅದರ ಮೇಲೆ ಕುಳಿ... ನ್ನ ತೊಡೆಯಮೇಲೆ ಗಂಡನ ತಲೆಯಿ... ಟ್ಟುಕೊಂಡು ತಾನೇ ಅಗ್ನಿ ಸ್ಪರ್ಶ... ಪತಿಯೊಡನೆ ದಗ್ಧವಾದಳೆಂದು ತಿಳಿ... ಬಂದಿದೆ

ಪ್ರತಿ ೨೭ ಮಂದಿಯಲ್ಲಿ ಒಬ್ಬರಿಗೆ ಕಾರು

ಸ್ವೀಡನ್ನಿನಲ್ಲಿ ಪ್ರತಿ ೨೭ ಮಂದಿಗೆ ಒಬ್ಬರು ಮೋಟಾರನ್ನು ಹೊಂದಿರುವ... ದೂ, ಯೂರೋಪಿನಲ್ಲಿ ಈ ವರ್ಷ ... ಚ್ಚು ಮೋಟಾರುಗಳನ್ನು ಹೊಂದಿರುವ... ರ ಪೈಕಿ ಸ್ವೀಡನ್ನಿಗೆ ನಾಲ್ಕನೇ ಸ್ಥಾ... ದೊರಕಿದೆಯೆಂದೂ ಗೊತ್ತಾಗಿದೆ. ಯು... ರೋಪ್ ರಾಷ್ಟ್ರಗಳ ಪ್ರಜಾಸಂಖ್ಯೆಗೆ ... ಗುಣವಾಗಿ, ಮೋಟಾರು ಸೈಕಲ್ಲುಗಳ... ಹೆಚ್ಚಾಗಿ ಹೊಂದಿರುವವರ ಪೈಕಿ ಸ್ವೀ... ಡನ್ನಿಗೆ ಪ್ರಥಮ ಸ್ಥಾನ ದೊರಕಿದೆಯೆಂದು ಗೊತ್ತಾಗಿದೆ.

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಒಂದು ಬೇಲು ಬಿಕರಿಗೆ ದೊರೆಯುತ್ತದೆ

ಈ ವಿಳಾಸಕ್ಕೆ ವಿಚಾರಿಸಿ:—

"ಸಾಧ್ವಿ" ಆಫೀಸು,

ಮೈಸೂರು.

Edited, printed and published by A. R. Nagarajan, at Sadhvi Press, D. Subbiah Road, Mysore

ಮೈಸೂರು ನಗರ ಪೌರ ಸಭೆ

5 ನೇ ದಿನ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ (೧೯೪೯)

22-12-49 ರಿಂದ 29-12-49 ರ ವ...

—: ಕಾರ್ಯಕ್ರಮ :—

9 ರಿಂದ 12 ಘಂಟೆಯ ವರೆವಿಗೆ ಮ...

3 ರಿಂದ 9 ಘಂಟೆಯ ವರೆಗೆ

ಪ್ರಾತಃಕಾಲ:- 1) ವಸ್ತು ಪ್ರದರ್ಶನ ಏರ್ಪಡಿಸಲ್ಪಟ್ಟಿರುವುದು

2) ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಪ್ರದರ್ಶನ

ಸಾಯಂಕಾಲ:- 4-30 ರಿಂದ ... ಸಂಧ್ಯ

5-00 ರಿಂದ ನಾಟಕ ಪ್ರದರ್ಶನ.

6-00 ರಿಂದ ನಾಟ್ಯ ಮತ್ತು ಸಂಗೀತ

ಮಕ್ಕಳಿಗೆ ರಾಟೆ, ಒಂಟೆ ಸವಾರಿ, ತರ... ವಾದ್ಯ ಗೋಷ್ಠಿ ಇತ್ಯಾದಿ

ಪ್ರವೇಶ 0—2—0

ಟಿ. ನರಸಿಂಹ ಅಯ್ಯಂಗಾರ್

ಬಿ. ಎನ್. ಲಿಂಗರಾಜ್

ಕಾರ್ಯದರ್ಶಿಗಳು

ವಿ. ಸಿ. ಪಿ. ಇಂಪ್ಲಿಮೆಂಟ್ಸ್ ವರ್ಕ್ಸ್

... ಸ್ಟ್ಯಾನ್ ... ಪಳ್ಳದಕೇರಿ, ಮೈಸೂರು

ತೆಪ್ಪೆಯಾದ ಪೆಟ್ಟಿಗೆಗಳು, ಬೀರುಗಳು ಮತ್ತು ಕ್ಯಾಷ್ ಬಾಕ್ಸ್‌ಗಳು ಇಲ್ಲಿ ದೊರೆಯುತ್ತವೆ.

ಆಹಾರ, ಆರೋಗ್ಯ, ಕಲಾ, ಮತ್ತು ಕೈಗಾರಿಕೆ ವಸ್ತು ಪ್ರದರ್ಶನದ ... ನಂ. ... ನೇ ನಮ್ಮ ಸ್ಟಾಲಿಗೆ ಭೇಟಿ ಕೊಡಿ.

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೨೭-೧೨-೪೯ [ಸಂಚಿಕೆ ೧೭೫

ರಾಜೇಂದ್ರ ಪ್ರಸಾದರು ಭಾರತದ ಅಧ್ಯಕ್ಷರು

ಕೇಂದ್ರ ರೈಲ್ವೆ ಬೋರ್ಡ್ ಸದಸ್ಯರ ಆಗಮನ

ಮೈಸೂರು ೨೭

ಭಾರತ ಸರ್ಕಾರದ ರೈಲ್ವೆಬೋರ್ಡು ಸದಸ್ಯರಾದ ಶ್ರೀ ವಸಿಷ್ಠರವರು ಮೊನ್ನೆ ದಿನ ರಾಜಧಾನಿಗೆ ಆಗಮಿಸಿದರು. ಬರುವ ಏಪ್ರಿಲ್ ತಿಂಗಳಿನಿಂದ ಮೈಸೂರು ರೈಲ್ವೆಯನ್ನು ಭಾರತ ಸರಕಾರಕ್ಕೆ ವಹಿಸಿಕೊಳ್ಳಲಿರುವುದರಿಂದ ಮೈಸೂರು ರೈಲ್ವೆ ನಿಲ್ದಾಣವನ್ನೂ, ವರ್ಕ್‌ಷಾಪನ್ನೂ ಪರೀಕ್ಷಿಸಿದರು. ಹಲವು ರೈಲ್ವೆ ಅಧಿಕಾರಿಗಳು ಅವರನ್ನು ಭೇಟಿಮಾಡಿದ್ದರು. ರೈಲ್ವೆ ಕೆಲಸಗಾರರ ಸಂಘದ ಪರವಾಗಿ ಶ್ರೀಗಳಾದ ..ಆ ನ..ಗಂ ಮತ್ತು ನರಸಪ್ಪನವರುಗಳು ಶ್ರೀ ವಸಿಷ್ಠರವರಿಗೆ ಮನವಿಯೊಂದನ್ನು ಸಲ್ಲಿಸಿದರು. ಮೈಸೂರು ರೈಲ್ವೆಯು ಭಾರತ ಸರ್ಕಾರಕ್ಕೆ ಸೇರಿದ ನಂತರ ಇಲ್ಲಿನ ನೌಕರರಿಗೆ ಕೊಡುವ ಸಂಬಳದ ಬಗ್ಗೆ ಅವರಲ್ಲಿ ಪ್ರಸ್ತಾಪಿಸಲಾಗಿತ್ತು. ರೈಲ್ವೆ ವರ್ಕ್‌ಷಾಪನ್ನು ಬೇರೆಕಡೆಗೆ ವರ್ಗಾಯಿಸುವ ಅಂಶವನ್ನು ಪ್ರಸ್ತಾಪಿಸಿ ಅದರಿಂದ ಸುಮಾರು ೧೫೦೦ ಸಂಸಾರಸ್ಥರಿಗೆ ತೊಂದರೆಯಾಗುವುದೆಂದೂ ಮನವಿಯಲ್ಲಿ ಸೂಚಿಸಲಾಗಿತ್ತು. ಆ ವಿಷಯದಲ್ಲಿ ಸೂಕ್ತ ಆಲೋಚನೆ ಮಾಡಲಾಗುವುದೆಂದು ಶ್ರೀ ವಸಿಷ್ಠರು ಉತ್ತರಕೊಟ್ಟರು

ಬೃಂದಾವನದ ವಿಶೇಷ ದೀಪೋತ್ಸವಕ್ಕೆ ರುಸುಂ

ಕೃಷ್ಣರಾಜ ಸಾಗರದ ಬೃಂದಾವನದಲ್ಲಿ ವಿಶೇಷ ದೀಪೋತ್ಸವವನ್ನು ಮಾಡಲು ಅದಕ್ಕೆ ತಗಲುವ ಖರ್ಚನ್ನು ಫೀಜಿನ ಮೂಲಕ ವಸೂಲು ಮಾಡುವ ಸಲಹೆಗೆ ಸರಕಾರದ ಒಪ್ಪಿಗೆ ದೊರೆತಿದೆ. ಈ ಸಲಹೆಯನ್ನು ಮಾಡಿದ ಚೀಫ್ ಇಂಜನಿಯರು ಮೊದಲನೆ ಘಂಟೆಗೆ ೫೦ ರೂ ಗಳಂತೆಯೂ ಅನಂತರ ಪ್ರತಿ ಘಂಟೆಗೂ ೩೦ ರೂ ಗಳಂತೆಯೂ ವಸೂಲು ಮಾಡಬೇಕೆಂದು ತಿಳಿಸಿರುತ್ತಾರೆ. ಒಟ್ಟು ಮೂರು ಗಂಟೆಗಳ ಕಾಲ ಮಾತ್ರ ಈ ದೀಪೋತ್ಸವ ನಡೆಸಲಾಗುವುದು.

ಅಕ್ರಮ ಪುರಿ ತಯಾರಿ ಪತ್ತೆ

ಪರವಾನಿಯಿಲ್ಲದೆ ಪುರಿವಿಗಾಡುತ್ತಿದ್ದರೆಂದ ಚಾಮರಾಜನಗರದ ವರ್ತಕರಾದ ಪುಟ್ಟಣ್ಣಶೆಟ್ಟಿಎಂಬುವರ ಮನೆಯನ್ನು ಶೋಧಿಸಿ ಮನೆಯಲ್ಲಿದ್ದ ಪುರಿ, ಅಕ್ಕಿ ಮತ್ತು ಇತರ ಸಾಮಾನುಗಳನ್ನು ವಶಪಡಿಸಿಕೊಂಡ. ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ

ತ್ಯಾಗರಾಜ ಗಾಯನ ಸಭಾ

ರಾಜಧಾನಿಯ ತ್ಯಾಗರಾಜ ಗಾಯನ ಸಭೆಯ ಜನರಲ್ ಬಾಡಿ ಮೀಟಿಂಗು ಮೊನ್ನೆ ದಿನ ನಡೆದು ಶ್ರೀ ಬಿ ವೆಂಕಟಾದ್ರಿ ನಾಯುಡುರವರು ಅಧ್ಯಕ್ಷರಾಗಿಯೂ, ಶ್ರೀ ಕೆ ಗುಂಡೂರಾಯರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಎಂ ಆರ್ ರಾಮಕೃಷ್ಣ ಭಾಗವತರು ಗೌ॥ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು

ಸರದಾರ್ ಪಟೇಲರಿಗೆ ವಿಶ್ರಾಂತಿ ಅಗತ್ಯ

ಸರದಾರ್ ಪಟೇಲರು ವಿಶ್ರಾಂತಿ ಮತ್ತು ಚಿಕಿತ್ಸೆ ಪಡೆಯುವುದು ಅಗತ್ಯವಾಗಿದೆಯೆಂದು ಅವರ ವೈದ್ಯರು ಸಲಹೆ ಮಾಡಿರುವ ಕಾರಣ ಅವರು ಶೀಘ್ರದಲ್ಲಿ ಬೊಂಬಾಯಿಗೆ ತೆರಳಲಿರುವರು

ಭಾರತದೊಡನೆ ಮೈಸೂರು ಹಣಕಾಸಿನ ಐಕ್ಯ

ಬೆಂಗಳೂರು ೨೭

ಭಾರತದೊಡನೆ ಸಂಸ್ಥಾನವು ಹಣಕಾಸಿನ ಬಗ್ಗೆ ಐಕ್ಯವಾಗುವುದರಿಂದ ಮೈಸೂರಿಗೆ ವರಮಾನದಲ್ಲಿ ೨॥ ಕೋಟಿ ರೂ ನಷ್ಟವುಂಟಾಗುವುದೆಂದು ತಿಳಿದುಬಂದಿದೆ. ಸಂಸ್ಥಾನಕ್ಕೆ ವರ್ಷಕ್ಕೆ ೨೭೦ ಲಕ್ಷ ರೂ. ನಷ್ಟವಾಗುವುದೆಂದು ಕೇಂದ್ರ ಹಣಕಾಸಿನ ಸಮಿತಿಯವರು ಅಂದಾಜು ಮಾಡಿರುತ್ತಾರೆ. ಇದರಿಂದ ಸಂಸ್ಥಾನಕ್ಕೆ ಆರ್ಥಿಕ ಬಿಕ್ಕಟ್ಟು ಉಂಟಾಗದಂತೆ, ಪ್ರತಿ ವರ್ಷ ೨೭೦ ಲಕ್ಷ ರೂ.ಗಳನ್ನು ಐದು ವರ್ಷಗಳ ಕಾಲ ಕೇಂದ್ರದವರು ಕೊಡಬೇಕೆಂದು ಅವರು ಸಲಹೆ ಮಾಡಿರುತ್ತಾರೆ. ಸಂಸ್ಥಾನದ ವರಮಾನ ತೆರಿಗೆ, ಅಬ್ಕಾರಿ, ರೈಲ್ವೆ, ಟೆಲಿಫೋನ್ ಮುಂತಾದ ಬಾಬುಗಳಿಂದ ಕೇಂದ್ರಕ್ಕೆ ೩೨೧೪೯ ಲಕ್ಷ ರೂ. ವರಮಾನ ಹೋಗುವುದೆಂದೂ ಈ ಶಿಫಾರಸುಗಳಿಗೆ ಒಟ್ಟು ೫೧೬೪ ಲಕ್ಷ ರೂ. ಖರ್ಚು ಉಂಟಾಗುವುದೆಂದೂ ಹೇಳಲಾಗಿದೆ

ಸರ್ಕಾರದ ಕಾಗದ ಪತ್ರಗಳನ್ನು ಅಂಚೆ ಇಲಾಖೆಯ ... ಇನ್ನು ಮುಂದೆಯೂ ಉಚಿತವಾಗಿ ಕಳುಹಿಸುವರೆಂದೂ ತಿಳಿದುಬಂದಿದೆ. ಜನವರಿ ೨೬ನೇ ತಾ॥ ನಿಂದ ಸಂಸ್ಥಾನದಲ್ಲಿ ಪ್ರತ್ಯೇಕ ಆಡಿಟ್ ಮತ್ತು ಅಕೌಂಟ್ಸ್ ಇಲಾಖೆ ... ಇದ್ದು, ಅದು ಭಾರತದ ಹಣಕಾಸಿನ ಇಲಾಖೆಯ ಆಡಳಿತದಲ್ಲಿರುವುದು

ಭಾರತ ಸೈನ್ಯದಲ್ಲಿ ಗೌರವ ಪದವಿ ಇಲ್ಲ

ಭಾರತದ ಸೈನ್ಯದಲ್ಲಿ ಗೌರವ ಪದವಿಗಳನ್ನು ಕೊಡುವುದನ್ನು ಇನ್ನುಮುಂದೆ ನಿಲ್ಲಿಸಲಾಗುವುದೆಂದು ಕೇಂದ್ರ ರಕ್ಷಣಾ ಶಾಖೆಯವರು ಆಜ್ಞೆ ಮಾಡಿರುತ್ತಾರೆ

ಶೃಂಗೇರಿ ಆಡಳಿತ ಸಮಿತಿ ಅನಾವಶ್ಯಕ

ಚಿಕ್ಕಮಗಳೂರು ೨೭

ಜಿಲ್ಲಾ ಬೋರ್ಡ್ ಸಭೆಯಲ್ಲಿ ಶ್ರೀ ವೀರಪ್ಪಗೌಡರು ಶೃಂಗೇರಿ ಆಡಳಿತದ ಬಗ್ಗೆ ಸರಕಾರದವರು ರಚಿಸಬೇಕೆಂದಿರುವ ಸಮಿತಿಯು ಅನಾವಶ್ಯಕವೆಂದೂ ಈಗ ಇರುವಂತೆಯೇ ಆಡಳಿತವು ನಡೆದುಕೊಂಡು ಬರಬೇಕೆಂದೂ ತಂದ ನಿರ್ಣಯವನ್ನು ... ಸರ್ವಾನುಮತದಿಂದ ಅಂಗೀಕರಿಸಿತು.

ತಾತಯ್ಯನವರ ದಿನಾಚರಣೆ

ಮೈಸೂರು ೨೭.

ವೃದ್ಧ ಪಿತಾಮಹ, ದಯಾ ಸಾಗರ, ಎಂ. ವೆಂಕಟ ಕೃಷ್ಣಯ್ಯನವರ ದಿನಾಚರಣೆಯು ನಿನ್ನೆ ದಿನ ಅನಾಥಾಲಯದ ಸಾಹಿತ್ಯ ಸಂಘದ ಆಶ್ರಯದಲ್ಲಿ ನೆರವೇರಿಸಲ್ಪಟ್ಟಿತು. ಡಾ॥ ಹೆಚ್ ಎಲ್. ಪುಟ್ಟಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರ್ಥನೆ, ಸ್ವಾಗತ ಭಾಷಣಗಳಾದ ನಂತರ ಪೂಜ್ಯ ತಾತಯ್ಯನವರ ಭಾವಚಿತ್ರದ ಅನಾವರಣವನ್ನು ಅಧ್ಯಕ್ಷರು ನೆರವೇರಿಸಿದರು. ತಾತಯ್ಯನವರ ಮೊಮ್ಮಕ್ಕಳಾದ ಶ್ರೀ॥ ಎಂ ಎಸ್ ಶ್ರೀನಿವಾಸರಾಯರು ಈ ಚಿತ್ರವನ್ನು ಉಚಿತವಾಗಿ ಅರ್ಪಿಸಿದ್ದರು. ವಿ॥ ಟಿ ಎಲ್ ಶ್ರೀನಿವಾಸರವರ ಗಾಯನ ... ವಿ॥ ಸಿ ಎಸ್ ಶ್ರೀನಿವಾಸನವರ ... ಪಿಟೀಲು ಮತ್ತು ವಿ॥ ಹೆಚ್. ಟಿ ... ನವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು. ಶ್ರೀಗಳಾದ ಅಗರಂ ರಂಗಯ್ಯ, ವೆಂಕಟಸುಬ್ಬಯ್ಯ ಮತ್ತು ಆಲಯದ ವಿದ್ಯಾರ್ಥಿಗಳಾದ ಬಿ ಎಸ್. ಸುಬ್ರಹ್ಮಣ್ಯ ಜೋಯಿಸ್ ಮತ್ತು ಕೆ. ಟಿ ಕೃಷ್ಣಮೂರ್ತಿಯವರು ಭಾಷಣ ಮಾಡಿ ವೃದ್ಧ ಪಿತಾಮಹರ ... ಗುಣಗಾನ ಮಾಡಿದರು. ... ತಾತಯ್ಯನವರ ಆಶೀರ್ವಾದ ... ವಿದ್ಯಾರ್ಥಿಗಳು ... ಕೃತಜ್ಞತೆ ... ದ.

ಮೈಸೂರು ಜಿಲ್ಲಾ ಕಂಟ್ರಾಕ್ಟರುಗಳಲ್ಲಿ ವಿನಂತಿ

ಇದೇ ತಿಂಗಳು ೨೯ನೇ ತಾ॥ ತುಮಕೂರಿನಲ್ಲಿ ಶ್ರೀ ಟಿ ಸುಬ್ರಹ್ಮಣ್ಯನವರ ಅಧ್ಯಕ್ಷತೆಯಲ್ಲಿ ಅಖಿಲ ಮೈಸೂರು ಮುನಿಸಿಪಲ್ ಮತ್ತು ಕಂಟ್ರಾಕ್ಟರುಗಳ ಎರಡನೇ ಸಮ್ಮೇಳನವು ನಡೆಯುವುದು. ಈ ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಲು ಮೈಸೂರು ಜಿಲ್ಲೆಯ ಕಂಟ್ರಾಕ್ಟರುಗಳೆಲ್ಲರೂ ಸಹಕರಿಸಿ ಸಮ್ಮೇಳನದಲ್ಲಿ ಹಾಜರಾಗಬೇಕಲ್ಲದೆ ವಾಗ್ದಾನ ಮಾಡಿರುವ ಧನ ಸಹಾಯವನ್ನು ಕೂಡಲೇ ಪಾವತಿ ಮಾಡಬೇಕೆಂದು ... ಶ್ರೀ ಎಸ್ ... ಪ್ರಾರ್ಥಿಸಿರುತ್ತಾರೆ ... ...

ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಸ್ತಿನ ಅಗತ್ಯ

ಸಿ. ಆರ್. ರೆಡ್ಡಿಯವರ ಭಾಷಣ

ಮೈಸೂರು ೨೭

ರಾಜಧಾನಿಯ ಸಂಯುಕ್ತ ಸೇವಾ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಸಮಾಜ ಸೇವಾ ವ್ಯಾಸಂಗ ಗೋಷ್ಠಿಯ ಆರಂಭೋತ್ಸವವನ್ನು ಪೌರಸಭಾ ಭವನದಲ್ಲಿ ವಿಶ್ವ ವಿದ್ಯಾನಿಲಯದ ಪ್ರೋ ಚಾನ್ಸಲರಾದ ಡಾ॥ ಸಿ ಆರ್. ರೆಡ್ಡಿಯವರು ನೆರವೇರಿಸಿದರು. ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಾಮಯ್ಯನವರು ಅತಿಥಿಗಳಿಗೆ ಸ್ವಾಗತನೀಡಿ ನಗರದಲ್ಲಿರುವ ಎಲ್ಲ ಸೇವಾ ಸಂಸ್ಥೆಗಳನ್ನೂ ಒಂದು ಕೇಂದ್ರ ಸಂಘದ ಮೂಲಕ ಸಮನ್ವಯಗೊಳಿಸಿ ಅವುಗಳ ಕಾರ್ಯಕಲಾಪಗಳು ಹೆಚ್ಚು ಯಶಸ್ವಿಯಾಗಿ ನಡೆಯಲು ಕೈಗೊಳ್ಳಬೇಕಾಗಿರುವ ಕಾರ್ಯಕ್ರಮಗಳನ್ನು ವಿವರಿಸಿದರು

ರಾಜಸೇವಾಸಕ್ತ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ನಗರದಲ್ಲಿ ನಡೆಯುತ್ತಿರುವ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಕಾರ್ಯ, ಶ್ರೀಮತಿ ರೆಚ್. ವೈ ಸರಸ್ವತಿಯವರು ಮಕ್ಕಳ ಪುರೋಭಿವೃದ್ಧಿ ಶ್ರೀ ನಾರಾಯಣ ಸ್ವಾಮಿಯವರು ಯುವಕರ ಚಳುವಳಿ, ಶ್ರೀ ಎ ಶ್ರೀನಿವಾಸ ಮೂರ್ತಿಯವರು ಹರಿಜನರ ಸೇವೆ, ಶ್ರೀ ಟಿ ಕೃಷ್ಣಮೂರ್ತಿಯವರು ವಯಸ್ಕರ ವಿದ್ಯಾಭ್ಯಾಸ, ಶ್ರೀ ಮಂಜನಾಥರವರು ಗುಡಿಸಲುಗಳ ಏಳಿಗೆ, ಮುಂತಾದ ವಿಚಾರವಾಗಿ ಉಪಯುಕ್ತ ಭಾಷಣಗಳನ್ನು ಮಾಡಿದರು.

ಡಾ॥ ರೆಡ್ಡಿಯವರು, ಮಾತನಾಡಿ, ನಗರದ ವಿವಿಧ ಸಂಸ್ಥೆಗಳು ಸಾರ್ವಜನಿಕರಿಗೆ ಸಲ್ಲಿಸುತ್ತಿರುವ ಸೇವೆಗಾಗಿ ಮೆಚ್ಚಿಗೆಯನ್ನು ಸೂಚಿಸಿದರು. ದೇಶಕ್ಕೆ ದೊರೆತಿರುವ ಸ್ವಾತಂತ್ರ್ಯ ಪ್ರಜಾ ಪ್ರಭುತ್ವವು ಯಶಸ್ವಿಯಾಗಲು ಪ್ರತಿಯೊಬ್ಬರಲ್ಲಿಯೂ ಸಂಪೂರ್ಣವಾದ ಶಿಸ್ತು ಇರಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ನಾಟ್ಯ ಪ್ರದರ್ಶನ

ಮಕ್ಕಳ ಆಟಾಗಳ ಬೆಳೆಯುವ ಕಾರ್ಯಕ್ರಮದ ಅಂಗವಾಗಿ ಗ್ರಾಮಾಭಿವೃದ್ಧಿ ಇಲಾಖೆಯವರು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ನಟ್ಯ ... ಮಂಡಲಿಯವರಿಂದ ಪ್ರದರ್ಶನವನ್ನು ಏರ್ಪಡಿಸಿದ್ದರು. ... ವನ್ನು ... ಸಿಬ್ಬಂದಿ ... ವಿಚಾರವು ಹೃದಯಂಗಮವಾಗಿ ... ಆರ್ಥಿಕ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಭಾಷಣ ಮಾಡಿ ನಾಟ್ಯ ಮಂಡಲಿಯವರ ಕಲಾ ಕೌಶಲ್ಯಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು.

ರಾಜೇಂದ್ರ ಪ್ರಸಾದರು ಪ್ರಥಮ ರಾಷ್ಟ್ರಾಧ್ಯಕ್ಷರು

ಸರ್ದಾರ್ ಪಟೇಲರ ಭವನದಲ್ಲಿ ಮೊನ್ನೆ ದಿನ ನಡೆದ ಶಾಸನ ಸಭೆಯ ಪ್ರಮುಖ ಸದಸ್ಯರ ಸಭೆಯಲ್ಲಿ ಭಾರತ ರಿಪಬ್ಲಿಕ್ಕಿನ ಪ್ರಥಮ ಅಧ್ಯಕ್ಷ ಸ್ಥಾನಕ್ಕೆ ಡಾ॥ ರಾಜೇಂದ್ರ ಪ್ರಸಾದರನ್ನು ಚುನಾಯಿಸಬೇಕೆಂದು ನಿರ್ಧರಿಸಲಾಯಿತೆಂದು ತಿಳಿದು ಬಂದಿದೆ. ಜನವರಿ ೨೪ನೇ ತಾ॥ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಡೆದು. ಡಾ॥ ಪ್ರಸಾದರನ್ನು ಚುನಾಯಿಸುವುದು.

ವಿಶ್ವದ ಮಹಾಪುರುಷರಲ್ಲಿ ಗಾಂಧೀಜೀಗೆ ಅಗ್ರ ಸ್ಥಾನ

ಕಳೆದ ಎರಡು ಸಾವಿರ ವರ್ಷಗಳಿಂದ ಕ್ರೈಸ್ತನನ್ನು ಹೊರತು ನೋಡುವ ಮನು ಷ್ಯನೆಂದರೆ ಗಾಂಧಿ ಎಂದು ಸೂಚಿಸಿ ಅವ ರಿಗೆ ಅಗ್ರಸ್ಥಾನವನ್ನು ಕೆನಡಾದ 'ಮ್ಯಾ ಕ್ಲೀನ್ಸ್ ಮ್ಯಾಗಜೀನ್' ಎಂಬ ಪತ್ರಿಕೆಯು ಕೊಟ್ಟಿದೆ. ಗಾಂಧೀಜಿ ಚರ್ಚಿಲ್, ಸಿ ಗ್ಮಂಡ್ ಫ್ರಾಯ್ಡ್, ಹಚ್ ರೂಜ್‌ವೆಲ್ಟ್, ಲೆ ನಿನ್, ಆಲ್ಬರ್ಟ್ ಐನ್‌ಸ್ಟೀನ್ ಮತ್ತು ಹೆನ್ರಿ ಫೋರ್ಡ್ ರವರುಗಳು ವಿಶ್ವದ ಮಹಾಪುರುಷರೆಂದೂ ಆ ಪತ್ರಿಕೆಯು ತಿಳಿಸಿದೆ

ಭಾರತದ ಪ್ರಧಾನಾಧ್ಯಕ್ಷ ರಾಗಿ ಅರವಿಂದ ಘೋಷ್

ಪೊರ್ನ್ಯಾರಿನ ಹೋಮಿಯೋಪತಿಕ್ ವೈದ್ಯರುಗಳ ಸಂಘದ ಸಾಧಾರಣ ಸಭೆಯು ಕಳೆದ ಬುಧವಾರ ನಡೆದು, ಭಾರತದ ರಿಪಬ್ಲಿಕ್ ಪ್ರಥಮ ಅಧ್ಯಕ್ಷರನ್ನಾಗಿ ಪುದುಚೇರಿಯಲ್ಲಿರುವ ಶ್ರೀ ಅರವಿಂದ ಘೋಷರನ್ನು ಚುನಾಯಿಸಬೇಕೆಂದೂ, ಅದರಿಂದ ತಾಯಿನಾಡಿನ ಆಧ್ಯಾತ್ಮಿಕ ಹಿನ್ನೆಲೆಯನ್ನೂ ವರ್ತಮಾನದ ರಾಜಕೀಯವನ್ನೂ ಏಕಕಾಲದಲ್ಲಿ ಗೌರವಿಸಿದಂತಾಗುತ್ತದೆಂದೂ ಸೂಚಿಸಿದೆ

ಶಾಂತಿವಾದಿಗಳ ಸಮ್ಮೇಳನ

ಪ್ರಪಂಚದ ಶಾಂತಿವಾದಿಗಳ ಎರಡನೆ ಸಮ್ಮೇಳನವು ವಾರ್ಧಾ ಬಳಿ ಸೇವಾಗ್ರಾಮದಲ್ಲಿರುವ ಮಹಾತ್ಮ ಗಾಂಧಿಯವರ ಆಶ್ರಮದಲ್ಲಿ ಆರಂಭವಾಯಿತು. ಬಾಬು ರಾಜೇಂದ್ರಪ್ರಸಾದರು ಅಧ್ಯಕ್ಷತೆ ವಹಿಸಿದ್ದರು. ಭರತ ಖಂಡವು ಅನಾದಿಕಾಲದಿಂದಲೂ ಶಾಂತಿ ಮಾರ್ಗವನ್ನೇ ಅವಲಂಬಿಸುತ್ತಿರುವುದೆಂದೂ, ಈ ಆದರ್ಶವೇ ಜಗತ್ತಿನ ಕಲ್ಯಾಣದ ಸಾಧನವೆಂದೂ ಅವರು ತಮ್ಮ ಭಾಷಣದಲ್ಲಿ ತಿಳಿಸಿದರು.

ಉದಾರ ದಾನ

ರಾಜಧಾನಿಯ ಶ್ರೀ ವರಲಕ್ಷ್ಮಿ ವಿಗ್ನಾ ಮಂದಿರದವರು ಕಲೆಗೂ ಮತ್ತು ಜನತೆಗೂ ಸಲ್ಲಿಸುತ್ತಿರುವ ಸೇವೆಯನ್ನು ಮೆಚ್ಚಿ ನಾಟಕ ಶಿರೋಮಣಿ ವರದಾಚಾರ್ಯರ ಸ್ನೇಹಿತರೂ ಅರಮನೆ ವಿದ್ವಾಂಸರೂ ಆದ ಶ್ರೀ ಸಿ ಆನಂದ ರಾಯರು ಕೆಲವು ಪ್ರಾಚೀನ ಸಂಗೀತ ಗ್ರಂಥಗಳನ್ನು ಮಂದಿರಕ್ಕೆ ದಾನ ಮಾಡಿದ್ದಾರೆ

ರಿಕ್ಷಾ ಎಳೆಯುವವರ ಮುಷ್ಕರ

ಪುರಸಭೆಯಿಂದ ರಹದಾರಿ ಪಡೆಯಬೇಕೆಂಬ ಆಜ್ಞೆಯನ್ನು ಪ್ರತಿಭಟಿಸಲು ಕಾರ್ಪೊರೇಷನ್ ಸಾವಿರ ಮಂದಿ ರಿಕ್ಷಾ ಎಳೆಯುವವರು ಮೊನ್ನೆ ದಿನ ಮುಷ್ಕರ ಪ್ರಾರಂಭಿಸಿ ನಗರದ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿದರು

ಸರ್ ಹರಿಸಿಂಗ್ ಗೌರರ ನಿಧನ

ಹಿಂದೆ ಮೈಸೂರಿನ ಮಂತ್ರಿಮಂಡಲದ ಸದಸ್ಯರಾಗಿದ್ದು, ಕೆಲವು ಕಾಲ ಮಧ್ಯ ಪ್ರಾಂತದ ಗವರ್ನರರಾಗಿದ್ದ ಸರ್ ಹರಿಸಿಂಗ್ ಗೌರರವರ ಮೊನ್ನೆ ನಿಧನರಾದರು

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಸಹೋದರರಾದ ಶ್ರೀ ವೆಂಕಟರಾಮರೆಡ್ಡಿಯವರುಗಳು ಮೊನ್ನೆ ಮರಣವನ್ನೈದಿದರು. ಆದಕಾರಣ ಶ್ರೀ ರೆಡ್ಡಿಯವರು ಕ್ಯಾಸಂಬಳ್ಳಿಗೆ ಹೋಗಿದ್ದರು

ಪ್ರಭಾ
ಇನ್ನು ನಾಲ್ಕು ದಿನ ಮಾತ್ರ
ದಿನವಹಿ 3 ಆಟಗಳು
ಮಧುರ ಸಂಗೀತದಿಂದಲೂ ಶಕ್ತಿಯುತ ಸಂಭಾಷಣೆಗಳಿಂದಲೂ ಕೂಡಿದ ಭಾವನಾಪೂರಿತ ಕಥೆ
ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ಊಚ್ ನೀಚ್
(THE OUTCAST)
ಪಾತ್ರ - ಭಾರತಿ, ಸುಮಿತ್ರಾ
ಸಂಗೀತ:- ಪಂಕಜ್ ಮಲ್ಲಿಕ್
Morning Shows Daily at 10-30 a m
King of the Mounties

ರಸಿಕರಿಗೆ ಅಚ್ಚುಮೆಚ್ಚಾದುವು
ಮೈಸೂರು ರೇಷ್ಮೆ ವಸ್ತ್ರಗಳು
ಮಿತವ್ಯಯ-ಹಾಗೂ, ಸುರುಚಿ.
ಮೈಸೂರು ರೇಷ್ಮೆ ಸಮಾಜದಲ್ಲಿ ಮೇಲ್ಮೆಯ ಕುರುಹು ಮುತ್ಸಂಜೆಯಲ್ಲಿ ಅನುಸರಣವಾದುದು
ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನ ಸೆಳೆವ ನಮೂದರಿಗಳು
ಇಂದಿನ ಅಂದದ ರಂಗುಗಳು.
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು.

ಚಾಮುಂಡೇಶ್ವರಿ ಟಾಕೀಸ್
26-12-49ರಿಂದ 3 ದಿನಗಳು ಮಾತ್ರ
ದಿನವಹಿ 3 ಆಟಗಳು
ಪ್ರಭಾತರವರ
ಅಮರ - ಜ್ಯೋತಿ
(ಹಿಂದಿ)
ಭೂಮಿಕೆ:-ಶಾಂತಾ ಆಪ್ಟೆ, ಚಂದ್ರಮೋಹನ್, ದುರ್ಗಾ ಖೋಟೆ, ವಾಸಂತಿ.

ಖಾಲಿ ಸೈಟ್ಸ್
ಶಿಂಷಾರಿ ಇರುವ ಒ ಕಡೆ ರಸ್ತೆ ಇರುವ ಜಂಬೂಸವಾರಿ ರಸ್ತೆಯಲ್ಲಿ ಹೊಸ ಒಂಟಿ ಬಜಾರಿನಲ್ಲಿ
ಬೆಲೆ ರೂ 5000
ಮನೆಗಳೂ ಇವೆ
ಶಾರದಾ ವಿಲಾಸ್ ಕಾಲೇಜ್ ಬಳಿ ತಾರಸಿ ಮನೆ ರೂ 5250
ರಾಜಾರಾಂ ಅಗ್ರಹಾರದ ಬಳಿ ನಲ್ಲಿ, ದೀಪವಿರುವ ಮನೆ ರೂ. 5250
ಬಿ. ಎಸ್. ಸುಬ್ಬರಾವ್,
ಅನಂತ್ಯೋದನ ಬಂಗ್ಲೆ ಬೀದಿ, ಮೈಸೂರು

ಪ್ರಭುದೇವಾ ಟಾಕೀಸ್
28-12-49ನೇ ಬುಧವಾರದಿಂದ
ಅಮೋಘ ಪ್ರಾರಂಭ : ದಿನವಹಿ 3 ಆಟಗಳು
ಹಮಾರಾ ಸಂಸಾರ್
(ನಮ್ಮ ಸಂಸಾರ) (ಹಿಂದಿ)
ಮಾಸ್ಟರ್ ಪಾತ್ರ-ಜೀವನ್, ರಂಜನ, ಉಮಾಕಾಂತ, ರಾಜಕುಮಾರಿ, ಮುಂತಾದವರು

ಸಕ್ಕರೆ ಸೇರಿಗೆ ೧ ||| ರೂ.

ದೆಹಲಿಯ ವ್ಯಾಪಾರೀ ಕ್ಷೇತ್ರಗಳಲ್ಲಿ ಸಕ್ಕರೆಯು ಸೇರಿಗೆ ೧ ಮೂರು ರೂ. ನಂತೆ ಮಾರಲ್ಪಡುತ್ತಿದೆ

GAYATHRI
TALKIES
From 27-12-49 for 3 days
Daily 3 Shows
M.G.M's Mightiest Drama
Till The Clouds Roll By
(Technicolor)
Featuring -Van Johnson & Judy Garland
Packed with Exciting thrill & Colourful love story
Next Change—
BEST YEARS OF OUR LIFE

ರಾಜಕಮಲ್
ಮೈಸೂರು
23-12-49ರಿಂದ ದಿನವಹಿ 3 ಆಟಗಳು
ಜೀವನಂ
—.ಭೂಮಿಕೆ: --
ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ

ಮೈಸೂರು ನಗರ ಪೌರ ಸಭೆ
6 ನೇ ದಿನ
ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ
(೧೯೪೯)
22 12-49ರಿಂದ 29-12-49ರ ವರೆಗೆ
—: ಕಾರ್ಯಕ್ರಮ :—
9ರಿಂದ 12 ಘಂಟೆಯ ವರೆವಿಗೆ ಮತ್ತು 3 ರಿಂದ 9 ಘಂಟೆಯ ವರೆಗೆ
ಪ್ರಾತಃಕಾಲ.- 1) ವಸ್ತು ಪ್ರದರ್ಶನ ಹೆಚ್ಚಿಸಲ್ಪಟ್ಟಿರುವುದು
2) ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಪ್ರದರ್ಶನ
ಸಾಯಂಕಾಲ - 4-30 ರಿಂದ ಬ್ಯಾಂಡ್
5-00 ರಿಂದ ವಾಣಿಜ್ಯ ಪ್ರದರ್ಶನ.
6 00 ರಿಂದ ನಾಟ್ಯ ನೃತ್ಯ ಮತ್ತು ಸಂಗೀತ
ಮಕ್ಕಳಿಗೆ ರಾಟೆ, ಒಂಟೆ ಸವಾರಿ, ವಾದ್ಯ ಗೋಷ್ಠಿ ಇತ್ಯಾದಿ
ಪ್ರವೇಶ 0—2—0
ಟಿ. ನರಸಿಂಹ ಅಯ್ಯಂಗಾರ್
ಬಿ. ಎನ್ ಲಿಂಗರಾಜ
ಕಾರ್ಯದರ್ಶಿಗಳು

Edited, printed and published by A R Nagarajrao at Sadhvi Press, D Subbarao Road, Mysore.

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೨೮-೧೨-೪೯ [ಸಂಚಿಕೆ ೧೨೩

-ಪಾಕೀಸ್ತಾನದಲ್ಲಿ- ಗೋವಧೆಗೆ ನಿಷೇಧ

ಕೆ. ಸಿ. ರೆಡ್ಡಿಯವರು ಬೊಂಬಾಯಿಗೆ

ಮೈಸೂರು ೨೮

ಮುಖ್ಯ ಮಂತ್ರಿ ಶ್ರೀ ಚಂಗಲರಾಯ ರೆಡ್ಡಿಯವರು ೩೦ನೇ ತಾ॥ ದೆಹಲಿಗೆ ತೆರಳುವುದಿಲ್ಲ ಸರ್ದಾರ್ ಪಟೇಲರು ಬೊಂಬಾಯಿಗೆ ಬರಲಿರುವುದರಿಂದ ಆ ದಿನ ರೆಡ್ಡಿಯವರು ಅವರನ್ನು ಬೊಂಬಾಯಿಯಲ್ಲಿಯೇ ಭೇಟಿಮಾಡುವರೆಂದು ತಿಳಿದುಬಂದಿದೆ

ಮೆನನ್‌ರವರು ಬರುವುದಿಲ್ಲ

ಭಾರತ ಸರ್ಕಾರದ ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ ಪಿ ಮೆನನ್‌ರವರು ಕಾರ್ಯ ಗೌರವದ ನಿಮಿತ್ತ ಈ ದಿನ ಮೈಸೂರಿಗೆ ಬರಲಿಲ್ಲ

ನೆಹರೂರವರ ತೈಲಚಿತ್ರದ ದಾನ

ರಾಮಂದೂರು ಟೊಬ್ಯಾಕೊ ಕಂಪೆನಿಯ ಮಾಲೀಕರಾದ ಸಾಹುಕಾರ್ ಶ್ರೀ ಶಿವಲಿಂಗಶೆಟ್ಟರವರು ಶ್ರೀ ರಾಮುರವರಿಂದ ಬರೆಯಲ್ಪಟ್ಟ ಪಂಡಿತನೆಹರೂರವರ ದೊಡ್ಡ ತೈಲಚಿತ್ರವನ್ನು ಮೈಸೂರು ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ದಾನ ಮಾಡಿರುತ್ತಾರೆ

ಸೈಕಲ್ ಕಾರ್ಖಾನೆಗೆ ಸರ್ ಆರ್ಕಾಟರು ಅಧ್ಯಕ್ಷರು

ಮದರಾಸಿನ ಹತ್ತಿರ ಒಂದು ಪ್ರದೇಶದಲ್ಲಿ ಪರ್‌ಕ್ಯುಲಿಸ್ ಸೈಕಲ್ಲುಗಳನ್ನು ತಯಾರಿಸಲಿರುವ ಮೆ॥ ಟ್ಯೂಬ್‌ಇನ್ವೆಸ್ಟ್‌ಮೆಂಟ್ ಕಂಪೆನಿಯ ಅಧ್ಯಕ್ಷರಾಗಿ ಮಾಜಿ ದಿವಾನರಾದ ಸರ್ ಎ ಆರ್. ಮೊದಲಿಯಾರರು ನೇಮಕವಾಗಿದ್ದಾರೆ

ಎರಡು ಸಾರಿ ಓಟು ಕೊಟ್ಟ ಪೌರಾಧ್ಯಕ್ಷರ ಮೇಲೆ ಚಾರ್ಜು

ವಿರುಧುನಗರದ ಪೌರಸಭಾಧ್ಯಕ್ಷರಾದ ಶ್ರೀ ಎಸ್. ಪಿ ನಾಡಾರ್ ಮತ್ತು ಅವರ ತಂದೆ ಶಾಂತಿಕುಮಾರ ನಾಡಾರ್‌ರವರುಗಳು ಎರಡು ವರ್ಷಗಳ ಹಿಂದೆ ನಡೆದ ಚುನಾವಣೆಗಳಲ್ಲಿ ತಮ್ಮ ಪಕ್ಷದವನೊಬ್ಬನಿಗೆ ಬೆಂಬಲವಾಗಿ ಎರಡು ಸಾರಿ ಓಟುಕೊಟ್ಟರೆಂಬ ಆಪಾದನೆ ಮೇಲೆ ಶಿವಕಾಶಿಯ ೧ನೇ ಮ್ಯಾಜಿಸ್ಟ್ರೇಟರು ಅವರಿಬ್ಬರ ಮೇಲೆ ಚಾರ್ಜು ಹೊರಿಸಿದ್ದಾರೆ

ಪಾಕಿಸ್ತಾನ ನಿರ್ಮಾಣಕ್ಕೆ ಜನತೆ ಒಪ್ಪಲಿಲ್ಲ

ಹಿಂದೂ ಮಹಾಸಭೆ ನಿರ್ಣಯ

ಪಾಕಿಸ್ತಾನ ರಾಜ್ಯದ ಸ್ಥಾಪನೆಗೆ ಭಾರತದ ಜನತೆಯು ಒಪ್ಪಿರಲಿಲ್ಲವೆಂದೂ, ಸಾವಿರಾರು ನಿರಪರಾಧಿ ಸ್ತ್ರೀ ಮಕ್ಕಳು ಪುರುಷರು ಆ ರಾಜ್ಯಸ್ಥಾಪನೆಯಿಂದ ನಿಷ್ಕಾರಣವಾಗಿ ಹತರಾದರೆಂದೂ, ಅನೇಕ ಮಂದಿ ಸ್ತ್ರೀಯರಿನ್ನೂ ಬಂಧನದಲ್ಲಿ ಸಿಕ್ಕಿರುವರೆಂದೂ, ಆದ್ದರಿಂದ ಆ ರಾಜ್ಯವನ್ನು ಸ್ಥಾಪಿಸಲು ಅವಕಾಶವಾದ ಒಪ್ಪಂದವನ್ನೇ ರದ್ದು ಮಾಡಬೇಕೆಂದೂ ಸೂಚಿಸುವ ನಿರ್ಣಯವು ಕಲ್ಕತ್ತದಲ್ಲಿ ನೆರೆದಿದ್ದ ಹಿಂದೂ ಮಹಾಸಭೆಯ ೩೦ನೇ ಅಧಿವೇಶನದಲ್ಲಿ ಅಂಗೀಕೃತವಾಯಿತು. ಕಾಶ್ಮೀರದ ಷೇಕ್ ಅಬ್ದುಲ್ಲಾರವರ ಸರಕಾರವನ್ನು ರದ್ದುಗೊಳಿಸುವುದು, ನಿಜಾಮ್‌ಷಾಹಿಯನ್ನು ಕೊನೆಗಾಣಿಸುವುದು ಇವೇ ಮುಂತಾದ ಇತರ ನಿರ್ಣಯಗಳೂ ಆದುವು

ಸ್ವತಂತ್ರ ಇಂಡೊನೇಷ್ಯ

ಹಿಂದೂ ಮತ್ತು ಪೆಸಿಫಿಕ್ ಸಾಗರಗಳ ಮಧ್ಯೆ ಇರುವ ೩೦೦೦ ಸಣ್ಣ ದ್ವೀಪಗಳನ್ನುಳ್ಳ ಇಂಡೊನೇಷ್ಯ ರಾಷ್ಟ್ರವು ನಿನ್ನೆಯಿಂದ ಸ್ವತಂತ್ರವಾಯಿತು ಈ ಬಗ್ಗೆ ಹಾಲೆಂಡಿನ ರಾಜಧಾನಿ ಆಂಸ್ಟರ್‌ಡಾಮಿನಲ್ಲಿ ಅಧಿಕಾರ ವರ್ಗಾವಣೆಯ ಸಮಾರಂಭವೂ, ಇಂಡೊನೇಷ್ಯದ ರಾಜಧಾನಿ ಜೋಗ್ಯಕರ್ತದಲ್ಲಿ ಅಧಿಕಾರ ಸ್ವೀಕರಣ ಮಹೋತ್ಸವವೂ ನಿನ್ನೆ ನಡೆದುವು ಭಾರತದ ಪರವಾಗಿ ಶ್ರೀಮತಿ ಅಮೃತಕೌರ್‌ರವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಹತ್ತೊಂಭತ್ತು ವರ್ಷದಲ್ಲಿ ಪ್ರತಿಜ್ಞಾ ಪೂರೈಕೆ

ಆಗ್ರಾ ಜಿಲ್ಲೆಯ ಸರೇಂಧಿಯ ಕಾಂಗ್ರೆಸ್ ಕೆಲಸಗಾರರಾದ ಠಾಕೂರ್ ಜಗನ್ನಾಥ ಸಿಂಹರು ಹತ್ತೊಂಬತ್ತು ವರ್ಷಗಳಾದ ನಂತರ ಗಾಂಧಿ ಟೋಪಿಯನ್ನು ಧರಿಸಿದರೆಂದು ವರದಿಯಾಗಿದೆ ೧೯೩೦ ರಲ್ಲಿ ಜಗನ್ನೇರ್ ಪೋಲೀಸರು ಅವರ ಟೋಪಿಯನ್ನು ಸುಟ್ಟರೆಂದೂ, ನಂತರ ಸ್ವಾತಂತ್ರ್ಯವು ಬಂದ ಮೇಲೆ ತಾವು ಅದನ್ನು ಧರಿಸುವುದಾಗಿ ಅಂದು ಪ್ರತಿಜ್ಞೆಮಾಡಿದ್ದರೆಂದೂ ಹೇಳಲಾಗಿದೆ.

ಉಪಾಧ್ಯಾಯರುಗಳ ಉಪವಾಸ

ಲೂಧಿಯಾನ ಜಿಲ್ಲೆಯ ೬೦೦೦ ಉಪಾಧ್ಯಾಯರುಗಳು ತಮ್ಮ ಬೇಡಿಕೆಗಳ ವಿಚಾರವಾಗಿ ಸರ್ಕಾರದವರು ತೋರಿರುವ ನಿರ್ಲಕ್ಷ್ಯ ಭಾವವನ್ನು ಪ್ರತಿಭಟಿಸಲು ಮುಂದಿನತಿಂಗಳ ಮೊದಲನೆ ಭಾನುವಾರದಲ್ಲಿ ಒಂದುದಿನ ಉಪವಾಸ ಮಾಡಲು ನಿರ್ಧರಿಸಿದ್ದಾರೆ

ಭದ್ರಾವತಿಯಲ್ಲಿ ರಸಾಯನಿಕ ಗೊಬ್ಬರದ ಕಾರ್ಖಾನೆ

ಭದ್ರಾವತಿಯಲ್ಲಿ ನೂತನವಾಗಿ ಸ್ಥಾಪಿತವಾಗಲಿರುವ ರಸಾಯನಿಕ ಗೊಬ್ಬರದ ಕಾರ್ಖಾನೆಯ ಸಂಬಂಧವಾಗಿ ಹೆಚ್ಚಿನ ವಿಚಾರ ವಿನಿಮಯಕ್ಕಾಗಿ ಮೈಸೂರಿನ ಫರ್ಟಿಲೈಸರ್ ಯೋಜನೆಯ ಸ್ಪೆಷಲ್ ಆಫೀಸರ್ ಶ್ರೀ ಪಿ ಆರ್ ಬಾಲಕೃಷ್ಣರವರು ಲಂಡನ್ನಿಗೆ ತೆರಳಿದ್ದಾರೆ ಇವರೊಡನೆ ಎನ್ವಿರೊಟಿವ್ ಇ ಜನಿಯರಾದ ಶ್ರೀ ಎಚ್ ಪಿ ಎಂ ರೆಡ್ಡಿಯವರೂ ಲಂಡನ್ನಿಗೆ ಹೋಗಿರುವರು

ಜೋಡಿಗ್ರಾಮಗಳ ರೈತರ ರಕ್ಷಣಾ ಕಾನೂನು

ಬೆಂಗಳೂರು ೨೮

ಸಂಸ್ಥಾನದ ಜೋಡಿ ಮತ್ತು ಇನಾಮು ಗ್ರಾಮಗಳ ರೈತರಿಗೆ ರಕ್ಷಣೆ ಕೊಡುವ ಅವಸರದ ಶಾಸನಕ್ಕೆ ಶ್ರೀಮನ್ಮಹಾರಾಜರವರ ಒಪ್ಪಿಗೆ ದೊರೆತಿದೆಯೆಂದು ವಿಶೇಷ ಗೆಜೆಟ್ ಪ್ರಕಟಣೆ ಆಗಿದೆ. ಈ ಕಾನೂನಿನ ಪ್ರಕಾರ ೧೯೪೭ನೇ ಜುಲೈ ೧ನೇ ತಾ॥ನಿಂದ ಜೋಡಿ ಜಮೀನುಗಳನ್ನು ಮಾಡಿಕೊಂಡು ಸರಿಯಾಗಿ ಕಂದಾಯ ಕಟ್ಟಿಕೊಂಡು ಬರುತ್ತಿರುವ ರೈತರಿಗೆ ಜೋಡಿದಾರರು ಯಾವ ತೊಂದರೆಯನ್ನು ಕೊಡದಂತೆ ರಕ್ಷಣೆ ಕೊಡಲಾಗಿದೆ

ಕೇಂದ್ರ ಶಾಸನ ಸಭೆಗೆ ಮೈಸೂರಿನ ಉಮೇದುವಾರರ ಅರ್ಜಿ

ಭಾರತದ ಪಾರ್ಲಿಮೆಂಟಿಗೆ ಮೈಸೂರು ಸಂಸ್ಥಾನದಿಂದ ಚುನಾಯಿಸಬೇಕಾದ ೭ ಜನ ಸದಸ್ಯಸ್ಥಾನಗಳಿಗೆ ಕಾಂಗ್ರೆಸ್ಸಿನವರು ಪಾರ್ಲಿಮೆಂಟರಿ ಸಮಿತಿಗೆ ಬರುವ ೩ನೇ ತಾರೀಖಿನೊಳಗೆ ಅರ್ಜಿಗಳನ್ನು ಹಾಕಿಕೊಳ್ಳಬಹುದೆಂದು ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ

೫ ಸಾವಿರ ಹೊಸ ಟೆಲಿಫೋನ್ ವ್ಯವಸ್ಥೆ

ಬೆಂಗಳೂರಿಗೆ ೫ ಸಾವಿರ ಹೊಸ ಟೆಲಿಫೋನುಗಳನ್ನು ಹಾಕುವ ವ್ಯವಸ್ಥೆಗಾಗಿ ಸರ್ಕಾರದವರು ೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ,

○ ಈ ಸಾರು ಗಲಭೆಯಲ್ಲಿ ನೊಂದವರಿಗೆ ಪರಿಹಾರ ಕೊಡಲು ಸರ್ಕಾರದವರು ತೀರ್ಮಾನಿಸಿದ್ದಾರೆ

○ ಶ್ರೀ ಆ ಮುಕುಂದಪ್ಪ ನವರ ಪಾರ್ಟಿಯಲ್ಲಿ ಎಲ್ಲ ತೊಂದರೆಗಳಿಗೂ ಮತ್ತು ಸಂಗತ್ಯೆ ಅವಕಾಶವಿರಬಹುದು. ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಪಾಕೀಸ್ತಾನದಲ್ಲಿ ಗೋವಧೆ ನಿಲ್ಲಿಸಲಾಗುವುದು

ಪಾಕೀಸ್ತಾನದ ರಾಜಧಾನಿಯಾದ ಕರಾಚಿ ಮತ್ತು ಇತರ ನಗರಗಳಲ್ಲಿ ಉಪಯುಕ್ತವಾದ ಗೋವುಗಳ ವಧೆಯು ವಿಶೇಷವಾಗಿ ನಡೆಯುತ್ತಿರುವುದರಿಂದ ಅದನ್ನು ಸಧ್ಯದಲ್ಲಿಯೇ ನಿಷೇಧಿಸಲಾಗುವುದೆಂದು ಅಲ್ಲಿನ ಮಂತ್ರಿಗಳು ತಿಳಿಸಿದ್ದಾರೆ

ಜಗಜೀವನರಾಂರವರಿಗೆ ಸತ್ಕಾರ

ಮೈಸೂರು ೨೮

ಈ ಪ್ರಾತಃಕಾಲ ಕೇಂದ್ರ ಸರಕಾರದ ಕಾರ್ಮಿಕ ಮಂತ್ರಿಗಳಾದ ಶ್ರೀ ಜಗಜೀವನರಾಂರವರನ್ನು ರಾಜಧಾನಿಯ ಪೌರಸಭೆಯವರು ಬರಮಾಡಿಕೊಂಡು ಸತ್ಕರಿಸಿದರು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಡೇವಿಡ್ ಎ ಮಾರ್ಸ್‌ರವರೂ, ಸಂಸ್ಥಾನ ಮತ್ತು ಪ್ರಾಂತಗಳ ಮಂತ್ರಿಗಳೂ ಆಗಮಿಸಿದ್ದರು.

ಪೌರಸಭೆಯಪರವಾಗಿ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಮುಖ್ಯ ಅತಿಥಿಗಳನ್ನು ಸ್ವಾಗತಿಸುತ್ತಾ ಇದುವರೆಗೆ ಪೌರಸಭೆಯು ಮಾಡಿರುವ ಕಾರ್ಯಗಳನ್ನು ವಿವರಿಸಿದರು

ಕಾರ್ಮಿಕ ಮಂತ್ರಿಗಳು ಮೈಸೂರಿನ ಸೌಂದರ್ಯವನ್ನು ಕಂಡು ಮೆಚ್ಚಿದರು. ಮಹಾತ್ಮ ಗಾಂಧಿಯವರ ಆದರ್ಶವಾದ ಅಧಿಕಾರ ವಿಕೇಂದ್ರೀಕರಣವೇ ಪೆಗ್ಗುರಿಯಾಗಿಯುಳ್ಳ ಈ ಪೌರಸಭೆಗಳೇ ಮುಂತಾದ ಸ್ಥಳೀಯ ಸಂಸ್ಥೆಗಳು ಜನರಿಗೆ ಹೆಚ್ಚು ಉಪಯುಕ್ತವಾಗುವುದಕ್ಕೆ ಅವಕಾಶವಾಗುವುದೆಂದು ತಿಳಿಸಿ ಆ ಉದ್ದೇಶ್ಯ ಸಾಧನೆಯು ಸ್ಥಳೀಯ ಸಂಸ್ಥೆಗಳಿಂದ ಆಗಬೇಕಾಗಿದೆಯೆಂದು ಅತಿಸಿದರು ಈಗ ಸಂಸ್ಥಾನ ಮತ್ತು ಪ್ರಾಂತಗಳ ವಿಬೇಧವು ಹೋಗಿರುವುದರಿಂದ ಒಳ್ಳೆಯ ಕೆಲಸಗಳು ಎಲ್ಲೆಲ್ಲಿ ಸಾಧಿಸಲ್ಪಟ್ಟಿರುವುವೋ ಅವೆಲ್ಲವೂ ಇತರ ಕಡೆಗಳಿಗೆ ಆದರ್ಶವಾಗಲೆಂದು ಹಾರೈಸಿದರು ಹಾಗೆ ಇದರಿಂದ ದೇಶದ ನಾನಾ ಭಾಗಗಳು ಒಟ್ಟಿಗೆ ಬೆಳೆಯಲು ಸಾಧ್ಯವಾಗುವುದೆಂದು ಶ್ರೀ ಜಗಜೀವನರಾಂರವರು ಅಭಿಪ್ರಾಯಪಟ್ಟರು. ಭಾರತದಲ್ಲಿ ಹಿಂದಿನಿಂದಲೂ ನಿಜವಾದ ಸೇವಕರಿಗೆ ಮನ್ನಣೆ ದೊರೆಯುತ್ತಿಲ್ಲವೆಂದೂ ಕಸಗುಡಿಸುವವರನ್ನು ಕೀಳು ಜನರನ್ನಾಗಿ ನೋಡಲಾಗುತ್ತಿದೆಯೆಂದೂ, ಈ ಮನೋಭಾವನೆಯೂ ನಿರ್ಮೂಲವಾಗದಿದ್ದ ಪಕ್ಷದಲ್ಲಿ ಭಾರತದ ಪ್ರಗತಿಗೆ ಧಕ್ಕೆ ಉಂಟಾಗುವುದೆಂದೂ ಅವರು ತಿಳಿಸಿದರು

ಉಪಾಧ್ಯಕ್ಷರಾದ ಶ್ರೀ ಟಿ ನರಸಿಂಹ ಅಯ್ಯಂಗಾರ್ಯರು ವಂದನೆಯನ್ನು ಅರ್ಪಿಸಿದರು.

ಲಂಚದ ಆಪಾದನೆ ಮೇಲೆ ಅಧಿಕಾರಿಗಳ ಸಸ್ಪೆಂಡು

ತಿರುವಾಂಕೂರು ಮತ್ತು ಕೊಚ್ಚಿ ಒಕ್ಕೂಟದ ಸರಕಾರದವರು ಅಲ್ಲಿ ಮುಖ್ಯ ವಿದ್ಯುಚ್ಛಕ್ತಿ ಅಧಿಕಾರಿಗಳಾದ ಶ್ರೀ ಜೋಸೆಫ್ ಜಾನ್, ಆಹಾರ ಶಾಖೆಯ ಕಮಿಷನರ್ ಶ್ರೀ ಗೋಪಾಲ ಸ್ವಾಮಿ ಅಯ್ಯರ್, ಸಹಕಾರ ಅಭಿವೃದ್ಧಿ ಅಧಿಕಾರಿ ವಿ ಆರ್. ಪಿಳ್ಳೆ ಮತ್ತಿತರ ಅಧಿಕಾರಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡಿದ್ದಾರೆ. ಅವರ ಮೇಲೆ ಲಂಚ ಮತ್ತು ನೀತಿಯುಕ್ತವಲ್ಲದ ಆಸೀತಿ ಮುಂತಾದ ಅನೇಕ ಆರೋಪಣೆಗಳನ್ನು ಮಾಡಲಾಗಿದೆ ಅವರುಗಳ ಬಗ್ಗೆ ವಿಚಾರಣೆ ನಡೆಸಲು ಸರ್ಕಾರದವರು ಆಜ್ಞೆ ಮಾಡಿದ್ದಾರೆ

○ ಫ್ರಾನ್ಸಿನ ಮಾಜಿ ಪ್ರಧಾನರೂ ಮತ್ತು ಸುಪ್ರಸಿದ್ಧ ಅರ್ಥಿಕ ಪ್ರವೀಣರೂ ಆದ ಮಾ ಲಿಯೋ ಬ್ಲೂಮ್‌ರವರು ನೆನ್ನೆ ದಿನ ರಾತ್ರಿ ಇಲ್ಲಿಗೆ ಆಗಮಿಸಿದರು. ಅವರು ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದಲ್ಲಿ ಭಾಗವಹಿಸುವರು.

ಒಪ್ಪೆತ್ತು ಊಟಬಿಟ್ಟರೆ ನೂರು ಕೋಟಿ ರೂ. ಉಳಿತಾಯ

ದೇಶದಾದ್ಯಂತವೂ ವಾರಕ್ಕೆ ಒಂದು ಹೊತ್ತು ಊಟಬಿಡುವ ಚಳುವಳಿಯನ್ನು ಮುಂದಿನ ತಿಂಗಳಿಂದ ನಡೆಸಲಾಗುವುದು. ಈ ಚಳುವಳಿಯ ವ್ಯವಸ್ಥಾಪಕರಾದ ಶ್ರೀ ಜಗತ್ಪ್ರವೇಶಚಂದ್ರರು ರಾಜಕೀಯವಿಲ್ಲದ ಈ ಖಾಸಗಿ ಚಳುವಳಿಯು ಸಫಲವಾಗಿ ಸುಮಾರು ಒಂದು ನೂರು ಕೋಟಿ ರೂ ಗಳು ಮತ್ತು ೩೦ ಲಕ್ಷ ಟನ್ ಗೋದಿಯು ವರ್ಷಂಪ್ರತಿ ಉಳಿಯುವುದೆಂದೂ ತಿಳಿಸಿದ್ದಾರೆ. ರೇಷನ್ ಪದ್ಧತಿಗೆ ಒಳಪಟ್ಟಿರುವ ೧೩ ಕೋಟಿ ಪ್ರಜೆಗಳೂ ಇದರಲ್ಲಿ ಭಾಗಿಗಳಾದರೆ, ಶೇಕಡ ೭ರಷ್ಟು ಆಹಾರ ಕೊರತೆಯು ಹೋಗುವುದೆಂದು ಹೇಳಲಾಗಿದೆ. ಮಹಾತ್ಮ ಗಾಂಧಿಯವರು ಕೊಲೆಯಾದ ದಿನ ಶುಕ್ರವಾರವಾದುದರಿಂದ ಆದಿನ ಊಟವನ್ನು ಬಿಡುವವರು ಮಹಾತ್ಮರನ್ನು ಸ್ಮರಿಸಿಕೊಳ್ಳಲು ಅವಕಾಶವಾಗುವುದೆಂದು ಅವರು ಹೇಳಿದ್ದಾರೆ

ಮಣಿಲಾಲ್ ಗಾಂಧಿಯವರ ಉಪವಾಸ

ಮಹಾತ್ಮ ಗಾಂಧಿಯವರ ದ್ವಿತೀಯ ಪುತ್ರರೂ, ದಕ್ಷಿಣ ಆಫ್ರಿಕದಲ್ಲಿ ಹೊರಡುವ ಇಂಡಿಯನ್ ಒಪಿನಿಯನ್ ಪತ್ರಿಕಾ ಸಂಪಾದಕರೂ ಆದ ಶ್ರೀ ಮಣಿಲಾಲ್ ಗಾಂಧಿಯವರು ಏಳು ದಿನಗಳ ಉಪವಾಸವನ್ನು ಕೈಗೊಂಡಿದ್ದಾರೆ. ಯುದ್ಧ ವಿರೋಧಿಗಳೆಲ್ಲರೂ ಹೀಗೆ ಉಪವಾಸ ಮಾಡುವುದು ಅಗತ್ಯವೆಂದು ತಾವೇ ಮಾಡಿದ ಸೂಚನೆಗನುಸಾರವಾಗಿ ಅವರು ಈ ರೀತಿಯ ವ್ರತವನ್ನು ಕೈಗೊಂಡಿದ್ದಾರೆ

ಅಕ್ಷರಸ್ಥರಿಗೆ ಬೋನಸ್

ಮದರಾಸ್ ಸರ್ಕಾರದವರು ೧॥ ಲಕ್ಷ ರೂ ನ ವಯಸ್ಕರ ವಿದ್ಯಾಭ್ಯಾಸದ ಯೋಜನೆಗೆ ಮಂಜೂರಾತಿಯನ್ನಿತ್ತು, ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಸುಮಾರು ೫೦೦ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆಯಲು ನಿರ್ಧರಿಸಿದ್ದಾರೆ. ಪ್ರತಿಯೊಬ್ಬ ವಯಸ್ಕನೂ ವಿದ್ಯಾವಂತನಾದರೆ ೧ ರೂ ಬೋನಸ್ ಕೊಡಲಾಗುವುದು.

ಕರ್ನಾಟಕ ಏಕೀಕರಣಕ್ಕಾಗಿ ಸತ್ಯಾಗ್ರಹವೇ?

ಸಂಸ್ಥಾನದ ಕಾಂಗ್ರೆಸ್ ಪಕ್ಷ ಸಮ್ಮೇಳನದ ಸಭೆಯು ಶ್ರೀಮತಿ ಬಳ್ಳಾರಿ ಸಿದ್ದಮ್ಮನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಬೆಂಗಳೂರಿನಲ್ಲಿ ನಡೆದು ಕರ್ನಾಟಕ ಏಕೀಕರಣದ ಬಗ್ಗೆ ಅಖಿಲಭಾರತ ಕಾಂ॥ ಕಾರ್ಯಕಾರಿ ಸಮಿತಿಯವರು ಮಾಡಿರುವ ನಿರ್ಣಯವನ್ನು ಪ್ರತಿಭಟಿಸಿ ವಿಷಾದವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮಾಡಲಾಯಿತು. ತ್ರಿಮೂರ್ತಿಗಳ ವರದಿಯನ್ನು ಕೂಡಲೇ ಒಪ್ಪಿಕೊಂಡು ಏಕೀಕರಣಕ್ಕೆ ಮೈಸೂರು ಸರ್ಕಾರವು ಅನುಕೂಲ ಮಾಡಿಕೊಡದಿದ್ದರೆ ಸತ್ಯಾಗ್ರಹ ಮಾಡಬೇಕಾಗುವುದೆಂದು ಅನೇಕ ಸದಸ್ಯರು ಅಭಿಪ್ರಾಯ ಪಟ್ಟರು

ಮಗಳ ಕೊಲೆಪ್ರಯತ್ನಕ್ಕಾಗಿ ತಾಯಿಗೆ ಶಿಕ್ಷೆ

೧೪ ವರ್ಷದ ಅಲಮೇಲು ಎಂಬ ತನ್ನ ಮಗಳನ್ನು ಭಾವಿಗೆ ಎತ್ತಿಹಾಕಿ ಕೊಲ್ಲಲು ಪ್ರಯತ್ನಿಸಿದಳೆಂದು ಕಾಳಿಯಮ್ಮಾಳ್ ಎಂಬುವಳಿಗೆ ೬ ವರ್ಷ ಕಠಿಣ ಶಿಕ್ಷೆಯನ್ನು ಸೇಲಂ ಸೆಷನ್ಸ್ ಜಡ್ಜರು ವಿಧಿಸಿದ್ದಾರೆ. ಬಡತನದ ಬೇಗೆಯನ್ನು ತಾಳಲಾರದೆ ಆಕೆಯು ಮಗಳ ಕೈಕಾಲುಗಳನ್ನು ಕಟ್ಟಿ, ದಾರಿಪಕ್ಕದಲ್ಲಿದ್ದ ಒಂದು ಭಾವಿಯೊಳಕ್ಕೆ ನೂಕಿದಳೆಂದೂ, ಅನಂತರ ತಾನೂ ಆತ್ಮಹತ್ಯ ಮಾಡಿಕೊಳ್ಳಬೇಕೆಂದಿದ್ದಳೆಂದೂ ಹೇಳಲಾಗಿದೆ

ಲಕ್ಷ್ಮೀ ಥಿಯೇಟರ್

28-12-49 ರಿಂದ ದಿನ 3 ಆಟಗಳು

* ಕಸಂ *

(ಪ್ರತಿಜ್ಞೆ) (ಹಿಂದಿ)

ಪಾತ್ರ:-ಪ್ರೇಂ ಅದೀಬ್ ಮತ್ತು ನಜ್ಮ

—: Morning Shows :—

From 30-12-49 for 3 days

Four Feathers

(Technicolor)

An Alexander Korda Production

ದಕ್ಷಿಣ ಆಫ್ರಿಕದೊಡನೆ ಪಾಕೀಸ್ತಾನದ ವ್ಯಾಪಾರ

ಪಾಕಿಸ್ತಾನವು ವ್ಯಾಪಾರ ಒಪ್ಪಂದವನ್ನು ಮುರಿದುದರಿಂದ ಅಲ್ಲಿಗೆ ಕಲ್ಲಿದ್ದಲನ್ನು ಕಳುಹಿಸುವುದನ್ನು ಭಾರತವು ನಿಲ್ಲಿಸಿರುವುದನ್ನು ಪ್ರತಿಭಟಿಸಲು ಇಲ್ಲಿಯವರೆಗೆ ನಡೆಸಿರುವ ವ್ಯಾಪಾರ ಸಂಬಂಧವನ್ನು ಪುನಃ ದಕ್ಷಿಣ ಆಫ್ರಿಕದೊಡನೆ ಪಾಕೀಸ್ತಾನವು ಪ್ರಾರಂಭಿಸಿ, ಅಲ್ಲಿಂದ ಕಲ್ಲಿದ್ದಲನ್ನು ತರಿಸುವುದೆಂದು ವರದಿಯಾಗಿದೆ. ಪೂರ್ವ ಪಂಜಾಬಿಗೆ ಪೆಟ್ರೋಲು ಸರಬರಾಜನ್ನೂ ಮತ್ತು ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ರೈಲ್ವೆ ಸಂಚಾರವನ್ನೂ ಪಾಕೀಸ್ತಾನವು ನಿಲ್ಲಿಸುವುದೆಂದೂ ಹೇಳಲಾಗಿದೆ

ಕ್ರಿಮಿ ಯುದ್ಧ ಪ್ರಯೋಗಾಲಯದಲ್ಲಿ ೩ ಸಾವಿರ ಮಂದಿಯ ಕೊಲೆ

ಜಪಾನಿನ ಮಂಚೂರಿಯಾ ಕ್ರಿಮಿ ಸರಿಮನೆಯಲ್ಲಿ ಕ್ರಿಮಿ ಯುದ್ಧ ಪ್ರಯೋಗ ಸಂಶೋಧನೆಗಾಗಿ ೩ ಸಾವಿರ ಜನರನ್ನು ೫ ವರ್ಷಗಳಲ್ಲಿ ಕೊಲೆ ಮಾಡಲಾಯಿತೆಂದು ವಿಚಾರಣೆಗೆ ಗುರಿಯಾಗಿರುವ ಜಪಾನಿನ ವೈದ್ಯರೊಬ್ಬರು ಕೋರ್ಟಿನಲ್ಲಿ ತಿಳಿಸಿರುವರು

ಜನವರಿ೧೫ಕ್ಕೆ ಆಂಧ್ರಪ್ರಾಂತ

ಬರುವ ತಿಂಗಳು ೧೫ನೇ ತಾ॥ ದಿನ ಆಂಧ್ರ ಪ್ರಾಂತದ ರಚನೆಯಾಗುವುದೆಂದು ಹೇಳಲಾಗಿದೆ. ಆಂಧ್ರ ಪ್ರಾಂತ್ಯದ ನೂತನ ಶಾಸನ ಸಭೆಗೆ ೯೦ ಜನ ಸದಸ್ಯರಿರಬೇಕೆಂದೂ, ಪ್ರತ್ಯೇಕ ಗವರ್ನರಿರಬೇಕೆಂದೂ, ಆಂಧ್ರ ಮತ್ತು ತಮಿಳು ನಾಡಿಗೆ ಸದ್ಯಕ್ಕೆ ಒಂದೇ ಹೈಕೋರ್ಟು ಇರಬೇಕೆಂದೂ ನಿರ್ಧರಿಸಲಾಗಿದೆ

Edited, printed and published by A.R. Nagarajan, at Sadhvi Press, D Subbiah Road, Mysore.

ದೇವರ ಪ್ರಸಾದದಲ್ಲಿ ವಿಷ

ತಂಜಾವೂರಿನ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಕಳೆದ ಶುಕ್ರವಾರ ದೇವರ ಪ್ರಸಾದವನ್ನು ತಿಂದ ೩೫ ಜನರಿಗೆ ವಾಂತಿಭೇದಿ ಪ್ರಾರಂಭವಾಗಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆಯೆಂದೂ, ಅವರ ಪೈಕಿ ಒಂದು ಹುಡುಗಿಯು ಸತ್ತುಹೋಯಿತೆಂದೂ ವರದಿಯಾಗಿದೆ. ಪ್ರಸಾದವು ವಿಷಮಿಶ್ರವಾಗಿ ಇರಬಹುದೆಂದು ಹೇಳಲಾಗಿದೆ

ಮೈಸೂರು ನಗರ ಪೌರ ಸಭೆ

7ನೇ ದಿನ

ಆಹಾರ, ಆರೋಗ್ಯ, ಕಲಾ ಮತ್ತು ಕೈಗಾರಿಕೆ ಪ್ರದರ್ಶನ

(೧೯೪೯)

22-12-49ರಿಂದ 29-12-49ರ ವರೆಗೆ

—: ಕಾರ್ಯಕ್ರಮ :—

9ರಿಂದ 12 ಘಂಟೆಯ ವರೆಗೆ ಮ.

3 ರಿಂದ 9 ಘಂಟೆಯ ವರೆಗೆ

ಪ್ರಾತಃಕಾಲ:- 1) ವಸ್ತು ಪ್ರದರ್ಶನ ... ಯಲ್ಪಟ್ಟಿರುವುದು

2) ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಪ್ರದರ್ಶನ

ಸಾಯಂಕಾಲ:- 4-30 ರಿಂದ ಕು... ಪಂದ್ಯ

5-00 ರಿಂದ ಪಾಕಶಾಸ್ತ್ರ ಪ್ರದರ್ಶನ.

6-00 ರಿಂದ ನಾಟ್ಯ ನೃತ್ಯ ಮತ್ತು ಸಂಗೀತ

ಮಕ್ಕಳಿಗೆ ರಾಟಿ, ಒಂಟೆ ಸವಾರಿ, ... ವಾದ್ಯ ಗೋಷ್ಠಿ ಇತ್ಯಾದಿ

ಪ್ರವೇಶ 0—2—0

ಟಿ. ನರಸಿಂಹ ಅಯ್ಯಂಗಾರ್

ಬಿ. ಎನ್. ಲಿಂಗರಾಜ್,

ಕಾರ್ಯದರ್ಶಿಗಳು

ಶ್ರೀ ಗಣೇಶಾ ಟಾಕೀಸ್

29-12-49 ರಿಂದ : ದಿನವಹಿ 3 ಆಟಗಳು

* ಶ್ರೀ ಆಂಡಾಳ್ *

(ತಮಿಳು)

ಭೂಮಿಕೆ:-ಇನ್ಸೈವಾಣಿ ಯು ಆರ್. ಜೀವರತ್ನಂ, ಪಿ. ಎಸ್. ಗೋವಿಂದನ್, ಮತ್ತು ಕಾಳಿ ಎನ್. ರತ್ನಂ

ಪ್ರಭುದೇವಾ ಟಾಕೀಸ್

28—12—49ನೇ ಬುಧವಾರದಿಂದ

ಅಮೋಘ ಪ್ರಾರಂಭ : ದಿನವಹಿ ೩ ಆಟಗಳು

ಹಮಾರಾ ಸಂಸಾರ್

(ನಮ್ಮ ಸಂಸಾರ) (ಹಿಂದಿ)

ಮುಖ್ಯ ಪಾತ್ರ:-ಜೀವನ್, ರಂಜನ, ಉಮಾಕಾಂತ, ರಾಜಕುಮಾರಿ

[illegible]

ಚಾಮುಂಡೇಶ್ವರೀ ಟಾಕೀಸ್

29-12-49ರಿಂದ :: ದಿನವಹಿ 3 ಆಟಗಳು

ವಾಹಿನಿಯವರ ಅಮೋಘವಾದ ತೆಲುಗು ವಾಕ್ಚಿತ್ರ

ಗುಣ ಸುಂದರಿ ಕಥಾ

—: ಭೂ ಮಿ ಕೆ :—

ಮಾಲತಿ, ಶಾಂತ ಕುಮಾರಿ, ಶ್ರೀರಂಜನಿ, ಡಾ॥ ಸುಬ್ಬರಾವ್, ಮತ್ತು ಶಿವರಾವ್

ಪ್ರಭಾ ★ ಈ ರಾತ್ರಿ

ದಿನವಹಿ 3 ಆಟಗಳು

ಮಧುರ ಸಂಗೀತದಿಂದಲೂ ಶಕ್ತಿಯುತ ಸಂಭಾಷಣೆಗಳಿಂದಲೂ ಕೂಡಿದ ಭಾವನಾಪೂರಿತ

ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ಊಂಚ್ ನೀಚ್

(THE OUTCAST)

ಪಾತ್ರ:- ಭಾರತಿ, ಸುಮಿತ್ರಾ

ಸಂಗೀತ:— ಪಂಕಜ್ ಮಲ್ಲಿಕ್

31-12-49 ರಿಂದ ಪ್ರತಿದಿನ 3 ಆಟಗಳು

[illegible] ಸ್ವಯಂ ಸಿದ್ಧ ಪಾತ್ರ:- ಶಾಂತ ಆ... ಮೊಲಿನಾ [illegible]

ಶೋ॥ ನಂ 792 ॥ ವಂದೇ ಮಾತರಂ॥ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೯-೧೨-೪೯ [ಸಂಚಿಕೆ ೧೨೭

ಮಂತ್ರಿಮಂಡಲದ ರಚನೆ ಬಗ್ಗೆ ಹನುಮಂತಯ್ಯನವರ ಟೀಕೆ

ಕಾಕನಕೋಟೆಯಲ್ಲಿ ಖೆಡ್ಡಾ

೪೦ ಆನೆಗಳ ಬಂಧನ

ಮೈಸೂರು ೨೮

ಭಾರತ ಖಂಡದ ಕಾರ್ಮಿಕ ಮಂತ್ರಿಗಳ ಸಮ್ಮೇಳನದ ಗೌರವಾರ್ಥವಾಗಿ ನಿನ್ನೆ ದಿನ ಕಾಕನಕೋಟೆ ಕಾಡಿನಲ್ಲಿ ಆನೆಗಳನ್ನು ಹಿಡಿಯುವ ಕಾರ್ಯಕ್ರಮವು ಏರ್ಪಾಡಾಗಿತ್ತು. ಭಾರತ ಸರಕಾರದ ಕಾರ್ಮಿಕ ಮಂತ್ರಿ ಶ್ರೀ ಜಗಜೀವನರಾಂರವರೂ, ಶ್ರೀ ಮನ್ಮಹಾರಾಜರವರೂ, ಕಾರ್ಮಿಕ ಮಂತ್ರಿಗಳೂ, ಸಂಸ್ಥಾನ ಮಂತ್ರಿಗಳೂ, ಮತ್ತು ಇತರ ಹಲವಾರು ಮಾನ್ಯ ಅತಿಥಿಗಳೂ ದಯಮಾಡಿಸಿದ್ದರು.

ಸುಮಾರು ೩ ತಿಂಗಳಿಂದಲೂ ಅರಣ್ಯ ಮಧ್ಯದಲ್ಲಿ ಕೂಡಿಹಾಕಲ್ಪಟ್ಟಿದ್ದ ಕಾಡಾನೆಗಳ ಗುಂಪನ್ನು ಮಧ್ಯಾಹ್ನ ೨-೩೦ ಗಂಟೆ ಹೊತ್ತಿಗೆ ಕಪಿನಿ ನದಿಯ ಕಡೆಗೆ ಓಡಿಸಲಾಯಿತು. ನೂರಾರು ಜನ ಕಾಡು ಕುರುಬರು ಕೊಂಬು ಕಹಳೆ ಮತ್ತು ಬಿದುರು ಬೊಂಬಿನ ಕಟ್ಟಿಗೆಗಳನ್ನು ಕುಟ್ಟುತ್ತಾ ಕೋಲಾಹಲದಿಂದ ಆನೆಗಳನ್ನು ಅಟ್ಟಿಕೊಂಡು ಹೊರಟರು. ನದಿಯಲ್ಲಿ ಹೊಸ ಆನೆಗಳು ಸ್ವೇಚ್ಛೆಯಾಗಿ ಈಜಾಡುತ್ತಾ ವಿಸ್ತಾರವಾದ ಆವರಣದ ಕಡೆಗೆ ಹೋಗುತ್ತಿದ್ದ ದೃಶ್ಯವು ರಮಣೀಯವಾಗಿದ್ದಿತು. ಪಳಗಿದ ಆನೆಗಳ ಮೇಲೆ ಅರಣ್ಯ ಅಧಿಕಾರಿಗಳೂ ಇತರ ಸಿಬ್ಬಂದಿಯವರೂ ಹಿಂಭಾಗದಲ್ಲಿ ದೂರವಾಗಿ ಸಾಗುತ್ತಿದ್ದರು. ತುಂಟಾಟ ಮಾಡುತ್ತಿದ್ದ ಕೆಲವು ಆನೆಗಳನ್ನು ದಡದಿಂದಲೇ ಬಂದೂಕದ ಮೂಲಕ ಹೊಡೆದು ಸರಿಯಾದ ದಾರಿಗೆ ತಿರುಗಿಸುತ್ತಿದ್ದರು. ಸುಮಾರು ೪೦ ಆನೆಗಳು ಈ ರೀತಿ ಅರ್ಧ ಗಂಟೆಯೊಳಗೆ ನದಿಯ ಮೂಲಕ 'ಸ್ಟಾಕೇಡ್' ಎಂಬ ಆವರಣದೊಳಗೆ ಸೇರಿಸಲ್ಪಟ್ಟವು. ನಾಲ್ಕಾರು ಆನೆಗಳು ಈ ಕಟ್ಟುಪಾಡಿಗೆ ಒಳಪಡದೇ ನದಿಯ ಮೂಲಕ ತಪ್ಪಿಸಿಕೊಂಡು ಓಡಿಹೋದವು.

ಬಂದಿದ್ದ ಅತಿಥಿಗಳೆಲ್ಲರಿಗೂ ಅಧಿಕಾರಿಗಳು ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿದ್ದುದಲ್ಲದೇ, ಉಪಾಹಾರವನ್ನೂ ಸಹ ಏರ್ಪಡಿಸಿದ್ದರು.

ಸಂಜೆ ೪-೩೦ ಗಂಟೆಗೆ ಆನೆಗಳ ಕತ್ತಿಗೆ ಹಗ್ಗವನ್ನು ಬಿಗಿಯುವ ಕಾರ್ಯಕ್ರಮವು ಆರಂಭವಾಗಿ ಸಂಜೆ ೬ ಗಂಟೆವರೆಗೆ ನಡೆಯಿತು. ಸರ್ಕಸ್ ಪ್ರದರ್ಶನದ ಅಂಗಳಕ್ಕಿಂತಲೂ ಕಿರಿದಾದ ಆವರಣದೊಳಗೆ ಮೂರು ಹೊಸ ಆನೆಗಳನ್ನು ತಂದು ಸೇರಿಸಿಕೊಂಡು, ಆ ಪಕ್ಕದ ಇತರ ಆನೆಗಳ ಮೂಲಕ ಹಗ್ಗವನ್ನು ಬಿಗಿಯುವ ದೃಶ್ಯವು ಸಾಹಸಮಯವಾಗಿದ್ದಿತು. ದೊಡ್ಡ ದೊಡ್ಡ ಮರದ ದಿಮ್ಮಿಗಳಿಂದ ಬಿಗಿಯಾಗಿ ಈ ಆವರಣದ ಮೇಲೆ ಕಟ್ಟಿದ್ದ ಅಟ್ಟಣೆಯ ಮಾದರಿಯ ವೇದಿಕೆಯಲ್ಲಿ ಶ್ರೀಮನ್ಮಹಾರಾಜರವರೂ, ಸಚಿವರುಗಳೂ ಅತಿಥಿಗಳೂ ಬಹಳ ಇಕ್ಕಟ್ಟಿನಿಂದ ಕುಳಿತು ಕುತೂಹಲದಿಂದ ಈ ಸಾಹಸವನ್ನು ನೋಡಿದರು.

ಕೇವಲ ಅರ್ಧ ಗಂಟೆ ಕಾಲದ ಹಿಂದೆ ವಿಶಾಲವಾದ ಅರಣ್ಯ ಪ್ರದೇಶದಲ್ಲಿ ಸ್ವೇಚ್ಛೆಯಾಗಿ ಓಡಾಡುತ್ತಿದ್ದ ತನ್ನ ಸ್ವಾತಂತ್ರ್ಯಕ್ಕೆ ಉಂಟಾದ ಅಡ್ಡಿಗಾಗಿ ಪ್ರತಿಭಟಿಸಲೋ ಎಂಬಂತೆ ಹೊಸ ಆನೆಗಳು ಆರ್ಭಟಿಸುತ್ತಾ ಆವರಣದೊಳಗೆ ಸಿಕ್ಕಿ ನರಳುತ್ತಿದ್ದುದನ್ನೂ ಹೊಟ್ಟೆಯೊಳಗೆ ಅಡಗಿಸಿಕೊಂಡಿದ್ದ ... ಆಗ...

ಭಾರತದ ರಿಪಬ್ಲಿಕ್ ದಿನಾಚರಣೆಗಾಗಿ ಸಮಿತಿಯ ರಚನೆ

ಸ್ವಂ. ವ. ಪ್ರ.] ಬೆಂಗಳೂರು ೨೮

ಭಾರತದ ರಿಪಬ್ಲಿಕ್ ದಿನಾಚರಣೆಯ ಸಂಬಂಧವಾಗಿ ಸಂಸ್ಥಾನದಲ್ಲಿ ಕಾರ್ಯಕ್ರಮಗಳನ್ನು ಸೂಚಿಸಲು ಶ್ರೇಷ್ಠ ಕಾರ್ಯದರ್ಶಿಗಳಾದ ಶ್ರೀ ಕೆ. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆ. ಐ. ಜಿ. ಪಿ., ಶ್ರೇಷ್ಠ ದಂಡನಾಯಕರು, ರೆವಿನ್ಯೂ ಕಮೀಷನರು, ಚೀಫ್ ಎಲೆಕ್ಟ್ರಿಕಲ್ ಇಂಜನಿಯರು, ಬೆಂಗಳೂರಿನ ಮೇಯರು ಮತ್ತು ಮೈಸೂರಿನ ಪುರಸಭಾಧ್ಯಕ್ಷರುಗಳು ಈ ಸಮಿತಿಯ ಸದಸ್ಯರು.

ದಾಗ್ಯೂ ಸ್ವಲ್ಪ ಸ್ವಲ್ಪವಾಗಿ ಸೊಂಡಲಿನ ಮೂಲಕ ತಿಗಿದು ಮಾವುತರ ಮೇಲೆ ರೋಷದಿಂದ ಎರಚುತ್ತಿದ್ದುದನ್ನೂ ಮಾವುತರು ಇತರ ಆನೆಗಳ ಮೂಲಕ ತಡೆಗಟ್ಟಿ ಹೊಸ ಆನೆಗಳ ಚಲನವಲನಕ್ಕೆ ಅವಕಾಶವಿಲ್ಲದಂತೆ ಅವುಗಳನ್ನು ಇತರ ಆನೆಗಳ ಮಧ್ಯೆ ಸಿಕ್ಕಿಸಿಕೊಂಡು ಬಹು ಲಘವಾಯಿಂದ ಅವುಗಳ ಕತ್ತಿಗೆ ದಪ್ಪ ಹಗ್ಗಗಳನ್ನು ಬಿಗಿಯುತ್ತಿದ್ದರು. ಈ ಕಾರ್ಯದಲ್ಲಿ ಅವರು ತೋರಿಸುತ್ತಿದ್ದ ಕೌಶಲ್ಯವು ಅದ್ಭುತವಾಗಿದ್ದಿತು. ಅನಂತರ ಆನೆಗಳ ಕಾಲಿಗೂ ಹಗ್ಗವನ್ನು ಬಿಗಿದು ಅವುಗಳನ್ನು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಳ್ಳುತ್ತಿದ್ದರು. ನಿನ್ನೆ ಮೂರು ಆನೆಗಳಿಗೆ ಈ ರೀತಿ ಹಗ್ಗವನ್ನು ಬಿಗಿಯಲಾಯಿತು. ಈ ಕಾರ್ಯಕ್ರಮವು ಮುಗಿದು ಪಳಗಿದ ಆನೆಗಳ ಬೆನ್ನಿಗೆ ಆ ಹೊಸ ಆನೆಗಳನ್ನು ದಪ್ಪ ಹಗ್ಗಗಳ ಮೂಲಕ ಬಿಗಿದು ಮಾವುತರುಗಳು ಜಯ ಘೋಷ ಮಾಡುತ್ತಾ ಸಾಲಾಗಿ ಆನೆಗಳನ್ನು ದೊಡ್ಡ ಆವರಣದೊಳಗೆ ಎಳೆದುಕೊಂಡು ಹೋಗುತ್ತಿದ್ದ ದೃಶ್ಯವು ರಣರಂಗದ ವಿಜಯೋತ್ಸವವನ್ನು ನೆನಪಿಗೆ ತರುವಂತಿತ್ತು. ಕೇವಲ ೩ ತಿಂಗಳ ಹಿಂದೆ ಜನಿಸಿದ್ದ ೩॥ ಅಡಿ ಎತ್ತರದ ಮರಿ ಆನೆಯು ಬಂಧಿಸಲ್ಪಟ್ಟಿದ್ದ ತನ್ನ ತಾಯಿಯೊಡನೆ ಯಾವ ಬಂಧನವೂ ಇಲ್ಲದೆ ಹಿಂಬಾಲಿಸುತ್ತಾ ನಡೆಯಿತು.

ಇಂದು ಇನ್ನು ಕೆಲವು ಆನೆಗಳಿಗೆ ಇದೇ ರೀತಿ ಹಗ್ಗವನ್ನು ಕಟ್ಟಲಾಗುವುದು. ನಾಳೆಯಿಂದ ಸಾರ್ವಜನಿಕರಿಗೆ ಪ್ರವೇಶವಿರುವುದು.

ಮಾತುಮಾತಿಗೂ ದೆಹಲಿ ಯಾತ್ರೆ ಸರಿಯಲ್ಲ

ಪತ್ರಿಕಾ ಸಮ್ಮೇಳನದಲ್ಲಿ ಹನುಮಂತಯ್ಯನವರ ಹೇಳಿಕೆ

ಮೈಸೂರು ೨೮

ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಹನುಮಂತಯ್ಯನವರು ಈದಿನ ಬೆಳಗ್ಗೆ 'ಸಾಧ್ವಿ' ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿದರು. ಈ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಶ್ರೀ ಹನುಮಂತಯ್ಯನವರು ಮೈಸೂರು ಸರ್ಕಾರದವರು ಪ್ರಜಾಪ್ರಭುತ್ವ ತತ್ವವನ್ನು ಸರಿಯಾಗಿ ಅನುಸರಿಸುತ್ತಿಲ್ಲವೆಂದು ತಿಳಿಸಿದರು.

ದಿವಾನ್ ಪದವಿಯಿಂದ ನಿವೃತ್ತರಾಗಿರುವ ಸರ್ ಅರ್ಕಾಟರಿಗೆ ಸರ್ಕಾರಿ ಭವನಗಳಾದ ಕಾರ್ಲ್‌ಟನ್ ಮತ್ತು ಲೇಕ್‌ವ್ಯೂ ಬಂಗಲೆಗಳನ್ನೂ ಮತ್ತು ಸರ್ಕಾರದಿಂದ ೩೫೦ ರೂ ಸಂಬಳ ಪಡೆಯುತ್ತಿರುವ ಒಬ್ಬ ಅಧಿಕಾರಿಯನ್ನೂ ಕೊಟ್ಟಿರುವುದರ ಬಗ್ಗೆ ಟೀಕಿಸಿದರು.

ಈಗಿನ ಮಂತ್ರಿ ಮಂಡಲದವರು ಯಾರ ಮೇಲೆಯೂ ಕೆಡಕು ಭಾವನೆ ಇಲ್ಲದೆ ಕೆಲಸ ಮಾಡುತ್ತಿರುವರಾದರೂ ಹಲವರ ವ್ಯಾಮೋಹಕ್ಕಾಗಿ ತಮ್ಮ ನಿಷ್ಪಕ್ಷಪಾತ ಕೆಲಸಗಳ ನಿರ್ವಹಣೆಯಲ್ಲಿ ಹಿಂದೆ ಬಿದ್ದಿದ್ದಾರೆಂದು ಹೇಳಿದರು. ಇತ್ತೀಚೆಗೆ ನಡೆದ ನಾಯಕ ಚುನಾವಣೆಯಲ್ಲಿ ತಮಗೆ ಸೋಲುಂಟಾದರೂ ಅದರಿಂದ ತಮಗೆ ಅಸಮಾಧಾನವಾಗಿಲ್ಲವೆಂದೂ ಮತ್ತು ಈಗ ತಾವು ಪಡೆದಿರುವ ೩೩ ಮಂದಿ ಸದಸ್ಯರ ಬೆಂಬಲವು ಮುಂದೆಯೂ ಕ್ರಮೇಣ ಹೆಚ್ಚಿ ತಮ್ಮ ಅಭಿಪ್ರಾಯ ಮತ್ತು ನೀತಿಗೆ ಬಹುಮತ ದೊರೆಯುವುದೆಂಬ ಭರವಸೆಯನ್ನು ತಾವು ಹೊಂದಿರುವುದಾಗಿಯೂ ತಿಳಿಸಿದರು.

ಪ್ರತಿಯೊಂದು ಅಂಶಗಳಲ್ಲೂ ನಮ್ಮ ನಾಯಕರು ಪರಿಶೀಲನೆ ನಡೆಸಲು ದೆಹಲಿ ಯಾತ್ರೆ ಕೈಗೊಳ್ಳುವುದು ಸರ್ವಥಾ ಯುಕ್ತವಲ್ಲವೆಂದೂ ಇದರಿಂದ ನಮ್ಮ ಜನರ ಅಭಿಪ್ರಾಯವನ್ನು ನಾವೇ ನಿರ್ಲಕ್ಷಿಸಿ ನಮ್ಮ ಆತ್ಮವಿಶ್ವಾಸವನ್ನು ವಿನಾಶ ಮಾಡಿದಂತಾಗುವುದೆಂದೂ ಅವರು ತಿಳಿಸಿದರು.

ಮಂತ್ರಿ ಮಂಡಲದಲ್ಲಿ ೫ ಜನರಿದ್ದರೆ ಸಾಕೆಂಬುದು ತಮ್ಮ ವೈಯಕ್ತಿಕ ಅಭಿಪ್ರಾಯವೆಂದು ಶ್ರೀ ಹನುಮಂತಯ್ಯನವರು ನುಡಿದರು. ಅನೇಕ ಇಲಾಖೆಗಳು

ಇನಾಂ ಗ್ರಾಮಗಳ ರೈತರಿಗೆ ಕಂದಾಯದ ರಿಯಾಯಿತಿ

ಮೈಸೂರು ಸರ್ಕಾರದವರು ಒಂದು ವಿಶೇಷ ಶಾಸನವನ್ನು ಮಾಡಿ ಯಾವುದಾದರೂ ಪ್ರದೇಶದಲ್ಲಿ ಮಳೆ ಬಾರದೆ ಫಸಲು ನಷ್ಟ ಸಂಭವಿಸಿದ ಪಕ್ಷದಲ್ಲಿ ಅಲ್ಲಿನ ರೈತರಿಗೆ ಕೊಡುವ ಕಂದಾಯದ ರಿಯಾಯಿತಿಯನ್ನು ಜೋಡಿ ಮತ್ತು ಇನಾಂ ಗ್ರಾಮಗಳ ರೈತರುಗಳು ಅನುಭವಿಸಲು ಹಕ್ಕುಳ್ಳವರಾಗಿರುವರೆಂದು ನಮೂದಿಸಲಾಗಿದೆ. ಅಲ್ಲದೆ ಇನಾಂ ಮತ್ತು ಜೋಡಿ ಗ್ರಾಮಗಳಲ್ಲಿರುವ ಯಾವ ಮರವನ್ನೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅನುಮತಿ ಪಡೆಯದೆ ಯಾರೂ ಕಡಿಯಕೂಡದೆಂದೂ ಆಜ್ಞೆ ಮಾಡಲಾಗಿದೆ.

ಕೇಂದ್ರ ಸರ್ಕಾರಕ್ಕೆ ವರ್ಗವಾಗುವುದರಿಂದ ಈ ಸಣ್ಣ ಸಂಸ್ಥಾನಕ್ಕೆ ೯ ಮಂದಿ ಮಂತ್ರಿಗಳ ಅವಶ್ಯಕತೆ ಇಲ್ಲವೆಂದು ಅವರು ತಿಳಿಸಿದರು.

ಹೊಸ ಮಂತ್ರಿಮಂಡಲವು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕೂಡಿದವರಿಂದಲೇ ರಚಿತವಾಗಬೇಕು. ಕೋಮುವಾರು ಧ್ಯೇಯವುಳ್ಳವರಿಗೆ ಅವಕಾಶವಿರಬಾರದೆಂದೂ ಸಹ ಅವರು ಅಭಿಪ್ರಾಯಪಟ್ಟರು.

ಹೊಸದಾಗಿ ರಚಿತವಾಗಲಿರುವ ಮಂತ್ರಿ ಮಂಡಲದಲ್ಲಿ ನಿಮಗೂ ಮತ್ತು ನಿಮ್ಮ ಪಕ್ಷದ ಇಬ್ಬರಿಗೂ ಸ್ಥಾನ ದೊರೆಯುವುದೆಂದು ಹರಡಿರುವ ಸುದ್ದಿಯ ಬಗ್ಗೆ ನಿಮಗೂ ಮತ್ತು ಶ್ರೀ ಕೆ. ಸಿ. ರೆಡ್ಡಿಯವರಿಗೂ ಮಾತುಕತೆಗಳು ನಡೆದವೆ?- ಎಂದು ಕೇಳಿದ ಪ್ರಶ್ನೆಗೆ ಹತ್ತು ದಿವಸಗಳ ಹಿಂದೆ ತಮಗೂ ಶ್ರೀ ಕೆ. ಸಿ. ರೆಡ್ಡಿಯವರಿಗೂ ಪೀಠಿಕಾರೂಪದ ಮಾತುಕತೆಗಳು ನಡೆದವೆಂದೂ ಅನಂತರ ಯಾವ ಸಮಾಲೋಚನೆಯೂ ನಡೆದಿಲ್ಲವೆಂದೂ ತಿಳಿಸಿದರು.

ಮುಂದೆ ನೀವು, ಕಾಂಗ್ರೆಸ್ಸಿನೊಳಗೇ ಆಗಲೀ ಅಥವಾ ಹೊರಗಾಗಲೀ ಹೊಸ ಪಕ್ಷವನ್ನು ಕಟ್ಟುವಿರಾ?-ಎಂದು ಕೇಳಿದುದಕ್ಕೆ ಅಂತಹ ಸಂಭವವೇನೂ ಇಲ್ಲವೆಂದೂ ಮತ್ತು ಅದು ಈಗ ಸೂಕ್ತವೂ ಅಲ್ಲವೆಂದೂ ಶ್ರೀ ಹನುಮಂತಯ್ಯನವರು ಹೇಳಿದರು.

ಮಂತ್ರಿ ಪದವಿ ನಿಮ್ಮ ಜೇಬಿನಲ್ಲಿಯೇ ಇರುವುದಾಗಿ ನೀವು ಹೇಳಿದ್ದುದು ನಿಜವೆ? ಎಂದು ಕೇಳಲಾಗಿ ಬೆಂಗಳೂರು ಇಂಜನಿಯರಿಂಗ್ ಕಾಲೇಜಿನ ಸಮಾರಂಭವೊಂದರಲ್ಲಿ ಮಾತನಾಡುತ್ತಾ ಆ ರೀತಿ ಸಂದೇಹಾಸ್ಪದವಾದ ಅರ್ಥ ಬರುವ ಮಾತುಗಳನ್ನು ಆಡಿದುದಾಗಿಯೂ, ಪತ್ರಿಕೆಗಳಲ್ಲಿ ಪೂರ್ಣವಾದ ವರದಿ ಬಂದಿಲ್ಲವೆಂದೂ, ಆ ಮಾತುಗಳನ್ನು ಆಡಿದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುವುದಾಗಿಯೂ ತಿಳಿಸಿದರು.

ಬೆಳ್ಳಿ ಉಡಿದಾರ ಸಿಕ್ಕಿದೆ

ಮಗುವಿನ ಉಡಿದಾರವೊಂದು ಸಿನಿಮಾ ಮಂದಿರದಲ್ಲಿ ದೊರೆತಿದೆ. ಸಂಬಂಧಪಟ್ಟವರು ರುಜುವಾತು ಕೊಟ್ಟು ಪಡೆಯಬಹುದು. ಸಾಧ್ವಿ ಕಚೇರಿಯಲ್ಲಿ ವಿಚಾರಿಸಿ.

Edited, printed and published by A R. Nagarajan, at Sadhvi Press, D Subbiah Road, Mysore.

ಪ್ರಜಾಸತ್ತೆಯಲ್ಲಿ ಸಿವಿಲ್ ಸರ್ವಿಸ್ಸಿನವರ ಭಾಗ

ಸಚಿವ ಸಿದ್ದಯ್ಯನವರ ಹಿತೋಕ್ತಿ

ಬೆಂಗಳೂರು ೨೮

ಮೈಸೂರು ಸಿವಿಲ್ ಸರ್ವಿಸ್ ಸಂಘದ ೨೨ನೇ ಅಧಿವೇಶನದ ಪ್ರಾರಂಭೋತ್ಸವ ವನ್ನು ಶಪನಾತ ನಡಿಸುತ್ತಾ ರೆವಿನ್ಯೂ ಸಚಿವರಾದ ಶ್ರೀ ಟಿ. ಸಿದ್ದಯ್ಯನವರು ಪ್ರಜಾಸತ್ತಾತ್ಮಕವಾದ ಹೊಸ ರಾಜ್ಯಾಂಗದಲ್ಲಿ ಸಿವಿಲ್ ಸರ್ವಿಸ್ಸಿನವರ ಪಾತ್ರವು ಬಹು ಮುಖ್ಯವಾದುದೆಂದು ಹೇಳಿದರು. ಆಡಳಿತ ಯಂತ್ರವು ಸರಿಯಾಗಿ ಕೆಲಸ ನಿರ್ವಹಿಸದೇ ಇದ್ದರೆ, ಪ್ರಜಾಸತ್ತೆಯು ಕೇವಲ ಹಾಸ್ಯಾಸ್ಪದವಾಗುತ್ತದೆಂದೂ, ಆದಕಾರಣ ಭಾರತ ಸರ್ಕಾರದವರು ಎಲ್ಲಾ ನೌಕರರಲ್ಲೂ ಐಕ್ಯತೆ ತರಲು ವ್ಯವಸ್ಥೆ ಮಾಡಿರುವರೆಂದೂ, ಮೈಸೂರೂ ಸಹ ಈ ಸಂಘಟನೆಯಲ್ಲಿ ಸೇರಿರುವುದೆಂದೂ ಅವರು ತಿಳಿಸಿದರು. ಮೈಸೂರಿನ ಸಿವಿಲ್ ಸರ್ವಿಸ್ಸಿನವರನ್ನು ಅವರು ಹೊಗಳಿ, ಈ ೨೬ ತಿಂಗಳ ಅವಧಿ ಬಹು ಚೆನ್ನಾಗಿ ವರ್ತಿಸಿರುವರೆಂದು ಹೇಳಿದರು.

ಜಪಾನಿಗೆ ೨೪ ಮಿಲಿಯನ್ ಡಾಲರ್ ಸಾಲ

ಜಪಾನಿಗೆ ಅಮೆರಿಕವು ಹೊಸದಾಗಿ ೨೪ ಮಿಲಿಯನ್ ಡಾಲರ್ ಸಾಲವನ್ನು ಕೊಡಲು ತೀರ್ಮಾನಿಸಿರುವುದಾಗಿ ಜ॥ ಮೆಕಾರ್ಥರ್ ಪ್ರವರು ತಿಳಿಸುತ್ತಾರೆ. ಈ ಮೊಬಲಗನ್ನು ಜಪಾನ್ ವಾಣಿಜ್ಯ, ನೌಕೆಗಳನ್ನು ಕಟ್ಟಲು ಉಪಯೋಗಿಸಲಾಗುವುದೆಂದು ಗೊತ್ತಾಗಿದೆ.

ಜಪಾನಿನಿಂದ ಭಾರತಕ್ಕೆ ವಿದ್ಯುದ್ಯಂತ್ರ

ಜಪಾನ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಎಷ್ಟರ ಮಟ್ಟಿಗೆ ಮುಂದುವರಿದಿದೆ ಯೆಂಬುದನ್ನು ತಿಳಿಯಲು ಭಾರತವು ಆ ದೇಶಕ್ಕೆ ಒಂದು ಪಾರಿಭಾಷಿಕ ನಿಯೋಗವನ್ನು ಕಳುಹಿಸುವುದೆಂದು ಗೊತ್ತಾಗಿದೆ. ಆರ್ಥಿಕ ಹಿಡಿತದಿಂದ ಭಾರತದ ವಿದ್ಯುದ್ಯೋಜನೆಗಳು ನಿಧಾನವಾಗಿ ಕಾರ್ಯರೂಪಕ್ಕೆ ಬರುತ್ತಿರುವ ಕಾರಣ, ಕಡಿಮೆ ಖರ್ಚು ಆಗುವ ಜಪಾನ್ ಯಂತ್ರಗಳನ್ನು ತರಿಸಲು ವಿಚಾರ ಮಾಡಲಾಗುತ್ತದೆಂದು ಹೇಳಲಾಗಿದೆ.

ತುರ್ಕಿಯ ಭದ್ರತೆಗಾಗಿ ಹೆಚ್ಚು ಖರ್ಚು

ತುರ್ಕಿ ರಾಷ್ಟ್ರವು ಸುಭದ್ರವಾಗಿರುವ ಕಾರಣ, ಅದನ್ನು ಕಾಪಾಡಿಕೊಂಡು ಬರಲು ರಾಷ್ಟ್ರವು ಸದಾ ಸಿದ್ಧವಾಗಿರಬೇಕೆಂದು ಆ ದೇಶದ ವಿದೇಶಾಂಗ ಮಂತ್ರಿಗಳು ತಿಳಿಸುತ್ತಾರೆ. ಅದಕ್ಕಾಗಿಯೇ ವರ್ಷದ ಬಜೆಟ್ಟಿನಲ್ಲಿ ರಕ್ಷಣೆಗೆ ಹೆಚ್ಚಿಗೆ ಖರ್ಚು ಮಾಡಬೇಕಾಗಿದೆಯೆಂದೂ ಅವರು ತಿಳಿಸುತ್ತಾರೆ.

ಅತ್ತೆಯ ಕಿರುಕುಳದಿಂದ ಸೊಸೆಯ ಆತ್ಮಹತ್ಯಪ್ರಯತ್ನ

ಕಲ್ಕತ್ತೆಯಲ್ಲಿ ಜ್ಯೋತ್ಸ್ನಾರಾಣಿ ಚಂದ್ರ ಎಂಬ ಯುವತಿಯನ್ನು ಆಕೆಯ ಗಂಡ ಮತ್ತು ಅತ್ತೆ ಯು ಆಕೆಯು ತನ್ನ ತೌರುಮನೆಯಿಂದ ಹೆಚ್ಚು ಒಡವೆ ವಸ್ತ್ರಗಳನ್ನು ತರಲಿಲ್ಲವೆಂಬ ನೆಪದ ಮೇಲೆ ಬಹಳವಾಗಿ ಹಿಂಸಿಸಿದುದರಿಂದ ಆಕೆಯು ಗಂಗೆಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳಲು ತೀರ್ಮಾನಿಸಿ ಮನೆ ಬಿಟ್ಟು ಹೊರಟಳು. ದಾರಿಯಲ್ಲಿ ಒಬ್ಬ ವ್ಯಕ್ತಿಯು ಆಕೆಯನ್ನು ಕಂಡು ಸಂಗತಿಯನ್ನು ವಿಚಾರಿಸಿ, ಆಕೆಯನ್ನು ಸಂತೈಸಿ ಅವಳ ತೌರುಮನೆಗೆ ಕರೆದುಕೊಂಡುಹೋಗಿ ಬಿಟ್ಟನು. ಈ ಸಂಗತಿಯನ್ನು ಪೊಲೀಸರು ತಿಳಿದು ಆಕೆಯ ಗಂಡ ಮತ್ತು ಅತ್ತೆಯವರುಗಳ ಮೇಲೆ ಮೊಕದ್ದಮೆ ಹೂಡಿದ್ದರು. ಅವರಿಗೆ ಒಂದು ತಿಂಗಳು ಸಾದಾ ಸಜ ಮತ್ತು ಜುಲ್ಮಾನೆ ವಿಧಿಸಲಾಯಿತು.

ಕಾಶ್ಮೀರದಿಂದ ಭಾರತ ಸೈನ್ಯ ವಾಪಸಿಗೆ ಸಲಹೆ?

ಭದ್ರತಾ ಸಮಿತಿಯ ಅಧ್ಯಕ್ಷರಾದ ಜ॥ ಮೆಕ್ ನಾರ್ಟನ್‌ರವರು ಕಾಶ್ಮೀರದ ಬಿಕ್ಕಟ್ಟಿನ ಪರಿಹಾರದ ಸಂಬಂಧವಾಗಿ ಸಲಹೆಯೊಂದನ್ನು ಕೊಟ್ಟು ಭಾರತ ಮತ್ತು ಪಾಕಿಸ್ಥಾನಗಳೆರಡೂ ಕಾಶ್ಮೀರದಿಂದ ಸೈನ್ಯಗಳನ್ನು ಹಿಂದಕ್ಕೆ ಕರೆಸಬೇಕೆಂದೂ, ಉತ್ತರ ಭಾಗದ ಪರ್ವತ ನಾಡಿನ ಆಡಳಿತವನ್ನು ವಿಶ್ವ ಸಂಸ್ಥೆಗೆ ವಹಿಸಬೇಕೆಂದೂ, ಆಜಾದ್ ಕಾಶ್ಮೀರ ಸೈನ್ಯಗಳನ್ನು ವಿಸರ್ಜಿಸಬೇಕೆಂದೂ ಸಲಹೆ ಮಾಡಿರುತ್ತಾರೆಂದು ಹೇಳಲಾಗಿದೆ. ಈ ಸಲಹೆಗಳನ್ನು ಭಾರತ ಸರ್ಕಾರವು ನಿರಾಕರಿಸುವುದೆಂದು ತಿಳಿದುಬಂದಿದೆ.

ಏಷ್ಯಕ್ಕೂ ಮಾರ್ಷಲ್ ಯೋಜನೆ ಬೇಕು

ಏಷ್ಯಾ ರಾಷ್ಟ್ರಗಳಲ್ಲಿ ಹೊಸದಾಗಿ ಸೃಷ್ಟಿಯಾಗಿರುವ ಪ್ರಜಾಸತ್ತೆಯು ಭದ್ರವಾಗಿರಲು ಏಷ್ಯಕ್ಕೊಂದು ಮಾರ್ಷಲ್ ಅಭಿವೃದ್ಧಿ ಯೋಜನೆಯನ್ನು ಏರ್ಪಾಡು ಮಾಡುವುದು ಅಗತ್ಯವೆಂದು ಪ್ರೊ॥ರಂಗಾರವರು ಆರ್ಥಿಕ ಸಮ್ಮೇಳನದ ಉದ್ಘಾಟನೆ ಮಾಡುತ್ತಾ ತಿಳಿಸಿದರು.

ಕಾಶ್ಮೀರವನ್ನು ಮಿಲಿಟರಿ ಆಡಳಿತಕ್ಕೊಪ್ಪಿಸಬೇಕು

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಶೇಕ್ ಅಬ್ದುಲ್ಲಾ ಸರ್ಕಾರವನ್ನು ರದ್ದುಗೊಳಿಸಿ ಪ್ಲೆಬಿಸೈಟಿನಲ್ಲಿ ಏರ್ಪಡಿಸಿದ್ದಂತೆ, ಕಾಶ್ಮೀರ ಸಂಸ್ಥಾನದ ಎಲ್ಲ ಭಾಗಗಳನ್ನೂ ಜನಾಭಿಪ್ರಾಯ ಪಡೆಯುವವರೆಗೆ ಸಂಸ್ಥಾನವನ್ನು ಮಿಲಿಟರಿ ಆಡಳಿತಕ್ಕೆ ಒಪ್ಪಿಸಬೇಕೆಂದು ಕಲ್ಕತ್ತಾದಲ್ಲಿ ನಡೆಯುತ್ತಿರುವ ಅಖಿಲ ಭಾರತ ಹಿಂದೂ ಮಹಾಸಭಾ ಅಧಿವೇಶನದಲ್ಲಿ ನಿರ್ಣಯ ಮಾಡಲಾಯಿತು.

ಬೇವಿನ ಮರದಿಂದ ಹಾಲು

ಚಿಕ್ಕಮಗಳೂರು ೨೭

ಈ ತಾಲ್ಲೂಕು ಬೇಲಾವಾಡಿ ಗ್ರಾಮದ ಹಳೇ ಕೆರೆಯ ಪಕ್ಕದ ಇರುವ ಒಂದು ಬೇವಿನ ಮರದಲ್ಲಿ ಈಗ ನಾಲ್ಕೈದು ದಿನಗಳಿಂದ ಹಾಲು ಧಾರಾಕಾರವಾಗಿ ಸುರಿಯುತ್ತಿದೆಯೆಂದೂ, ಅದನ್ನು ಕುಡಿದರೆ ಕಬ್ಬಿನಹಾಲಿನ ರುಚಿ ಸಿಹಿಯಾಗಿದೆಯೆಂದೂ ಹೇಳಲಾಗಿದೆ.

ಜಪಾನಿನಲ್ಲಿ ಮತ್ತೆ ಭೂಕಂಪ

ಕಳೆದ ಸೋಮವಾರ ಜಪಾನಿನ ದಕ್ಷಿಣ ದ್ವೀಪ ಕಿಯುಸುವಿನಲ್ಲಿ ಮೂರು ಬಾರಿ ಭೂಕಂಪವುಂಟಾಯಿತು. ಜಪಾನ್ ರಾಜಧಾನಿ ಟೋಕಿಯೋ ಮತ್ತು ಯೊಕೋಹಾಮಗಳಲ್ಲಿ ಕಿಟಕಿಗಳು, ಗಾಜುಗಳು ಮುರಿದವು. ಸ್ತ್ರೀಯರು ಮಕ್ಕಳನ್ನು ಎತ್ತಿ ಬೀದಿಗೆ ಓಡಿದರು. ಜಪಾನಿನ ಅತಿ ಹಿರಿದಾದ ಜ್ವಾಲಾಮುಖಿ ಅಸೋಬೆಟ್ಟವು ೬೦೦ ಗಜದಷ್ಟು ಎತ್ತರದವರೆಗೆ ಬೆಂಕಿಬೂದಿಯನ್ನು ಉಗುಳಿತು. ಇದು ೩೦ ಮೈಲಿ ದೂರದವರೆಗೂ ಹರಡಿತು. ಏಳು ಜನರು ಹತರಾದರೆಂದು ತಿಳಿದುಬಂದಿದೆ.

ಇಂಡೋ ಚೀನಾಕ್ಕೆ ನಾಳೆ ಅಧಿಕಾರ ವರ್ಗ

ನಾಳೆ ಫ್ರೆಂಚರು ಇಂಡೋ ಚೀನಾದ ಬಾವೋಡಾಯಿ ಸರ್ಕಾರಕ್ಕೆ ಪೂರ್ಣ ಅಧಿಕಾರವನ್ನು ವಹಿಸಿಕೊಟ್ಟು ತಮ್ಮ ಆಳಿತವನ್ನು ಕೊನೆಗಾಣಿಸುವರು.

ಇಂಡೋನೇಷ್ಯಾ ಧ್ವಜಕ್ಕೆ ಪ್ರತಿಬಂಧಕ

ಸಿಂಗಪುರದಲ್ಲಿರುವ ಇಂಡೋನೇಷ್ಯದ ಪ್ರತಿನಿಧಿಯು ಮೊನ್ನೆ ದಿನ ನಡೆದ ಇಂಡೋನೇಷ್ಯಾ ರಿಪಬ್ಲಿಕ್ ಸ್ಥಾಪನೆಯ ಉತ್ಸವದಲ್ಲಿ ಸಿಂಗಪುರದಲ್ಲಿ ಇಂಡೋನೇಷ್ಯದ ಧ್ವಜವನ್ನು ಸಾರ್ವಜನಿಕವಾಗಿ ಹಾರಿಸಲು ಅನುಮತಿ ಕೇಳಿದ್ದರು. ಸಿಂಗಪುರದ ಸರ್ಕಾರದವರು ಇದನ್ನು ನಿರಾಕರಿಸಿದರೆಂದು ಹೇಳಲಾಗಿದೆ.

ಬ್ರಿಟಿಷ್ ಸರಕಾರದವರು ಕಮ್ಯೂನಿಸ್ಟ್ ಚೀಣಕ್ಕೆ ಮನ್ನಣೆ ಕೊಟ್ಟನಂತರ ಸಿಂಗಪುರದಲ್ಲಿ ಚೀಣೀ ಕಮ್ಯೂನಿಸ್ಟ್ ಧ್ವಜವನ್ನೂ ಹಾರಿಸಲು ಕೇಳಿದ ಅನುಮತಿಯನ್ನೂ ನಿರಾಕರಿಸಲಾಗಿದೆ.

ನೇಪಾಳ ಮುಖ್ಯ ಮಂತ್ರಿಗೆ ನೆಹರೂ ಆಹ್ವಾನ

ನೇಪಾಳದ ಮುಖ್ಯ ಮಂತ್ರಿಗಳು ದೆಹಲಿಗೆ ಬರುವಂತೆ ಪ್ರಧಾನಿ ನೆಹರೂರವರು ಅವರನ್ನು ಆಹ್ವಾನಿಸಿದ್ದಾರೆ. ಎರಡೂ ಭಯ ರಾಷ್ಟ್ರಗಳಿಗೂ ಸಾಮಾನ್ಯವಾಗಿರುವ ವಿಷಯಗಳನ್ನು ಕುರಿತು ಪರ್ಯಾಲೋಚಿಸಲು ಈ ಸಮ್ಮೇಳನವು ನಡೆಯುವುದು.

ರಾಜಕಮಲ್
ಮೈಸೂರು
30-12-49 ರಿಂದ
ಜನಭರಿತವಾದ ೨ನೇ ವಾರ
ಜೀವನಂ
—ಭೂಮಿಕೆ—
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರನ್, ಲಲಿತ-ಪದ್ಮಿನಿ
ಬೆಳಗಿನ ಪ್ರದರ್ಶನಗಳು
30-12-49ರಿಂದ 4 ದಿನಗಳು ಮಾತ್ರ
ಇಸ್ ಮತ್
(ಹಿಂದಿ)
ಭೂಮಿಕೆ—ನಾಂದ್ರೇಕರ್, ಮೆಹತಾಬ್, ನರ್ಗೀಸ್

ಗಾಯತ್ರೀ ಟಾಕೀಸ್
ದಿನವಹಿ 3 ಪ್ರದರ್ಶನಗಳು
29-12-49ರ ದ 3 ದಿನಗಳು
ಹಾಲಿವುಡ್ ಚಿತ್ರರಂಗದಲ್ಲಿ ಪ್ರಖ್ಯಾತವಾದ ಪ್ರಣಯ ಕಥೆ
The Best Years of Our Lives
Featuring.-Marina Loy. Fredrick March
Next Change.--
EASTER PARADE
ಈಸ್ಟರ್ ಪೆರೇಡ್

ಚಾಮುಂಡೇಶ್ವರೀ ಟಾಕೀಸ್
29-12-49ರಿಂದ : ದಿನವಹಿ 3 ಆಟಗಳು
ವಾಹಿನಿಯವರ ಅಮೋಘವಾದ ತೆಲುಗು ಚಿತ್ರ
ಗುಣ ಸುಂದರಿ ಕಥಾ
ಭೂಮಿಕೆ —
ಮಾಲತಿ, ಶಾಂತಕುಮಾರಿ, ಶ್ರೀರಂಜನಿ, ಡಾ॥ ಸುಬ್ಬರಾವ್, ಮತ್ತು ಶಿವರಾವ್

ಪ್ರಭಾ
ಅಮೋಘ ಪ್ರಾರಂಭ
31-12-49 ರಿಂದ
ಪ್ರತಿದಿನ 3 ಆಟಗಳು
ಪಾಪಿಷ್ಠ ಸ್ತ್ರೀಯರ ವ್ಯಾಮೋಹಗಳನ್ನು ಎತ್ತಿಹಿಡಿದ ಮಹಿಳೆಯ ಪ್ರಶಂಸನೀಯ ಪ್ರಯತ್ನ!
ಸ್ವಯಂ ಸಿದ್ಧ
ಭೂಮಿಕೆ—ಛವಿ, ಶೋಭನಾ, ಗೀತಾ ಪ್ರಿಯ, ಬಿಪಿನ್ ಗುಪ್ತ

ಶ್ರೀ ಗಣೇಶಾ ಟಾಕೀಸ್
29-12-49 ರಿಂದ : ದಿನವಹಿ 3 ಆಟಗಳು
✻ ಶ್ರೀ ಆಂಡಾಳ್ ✻
(ತಮಿಳು)
ಭೂಮಿಕೆ — ಜೀವರತ್ನಂ, ... ಗೋವಿಂದರ್.

ಜೋ॥ ನಂ 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಶುಕ್ರವಾರ [illegible] [ಸಂಚಿಕೆ ೧೨೮]

ಮೈಸೂರು ಪೌರಸಭೆಗೆ ನಾಮಕರಣ ಸದಸ್ಯರು

ಔದ್ಯೋಗಿಕ ಸಹಕಾರದಿಂದ ವಿಶ್ವದಲ್ಲಿ ಶಾಂತಿ

ಪತ್ರಿಕಾ ಸಮ್ಮೇಳನದಲ್ಲಿ ಐ. ಎಲ್. ಓ. ನಾಯಕರ ಸೂಚನೆ

ಮೈಸೂರು ೩೦

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಡೈರೆಕ್ಟರ್ ಜನರಲ್ಲಾದ ಮಿ॥ ಡೇವಿಡ್ ಮಾರ್ಸರವರು ನಿನ್ನೆ ಬೆಳಿಗ್ಗೆ ಚಲುವಾಂಬಾ ಭವನದಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಜನವರಿ ೩ನೇ ತಾ॥ ನಿಂದ ನಡೆಯುವ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಆಡಳಿತ ಸಭೆಯ ಉದ್ದೇಶವನ್ನು ವಿವರಿಸಿದರು.

ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಿ ಅವರ ಪುರೋಭಿವೃದ್ಧಿಗಾಗಿ ದುಡಿಯುತ್ತಿರುವ ಈ ಸಂಸ್ಥೆಯು ೩೦ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತು. ರಷ್ಯ, ಜಪಾನ್, ಮತ್ತು ಸ್ಪೇನ್ ದೇಶಗಳು ಹೊರತು ವಿಶ್ವ ರಾಷ್ಟ್ರಗಳೆಲ್ಲಾ ಈ ಸಂಸ್ಥೆಗೆ ಸದಸ್ಯರಾಗಿವೆ. ಸದಸ್ಯರಾದ ಎಲ್ಲಾ ರಾಷ್ಟ್ರಗಳೂ ಔದ್ಯೋಗಿಕ ಸಹಕಾರವನ್ನು ನೀಡಬೇಕಾಗುತ್ತದೆ. ಇದರಿಂದ ಹಿಂದುಳಿದ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಗೊಳಿಸುವುದಲ್ಲದೆ ವಿಶ್ವದಲ್ಲಿ ಶಾಂತಿ ನೆಲೆಸಲು ಅವಕಾಶವಾಗುತ್ತದೆ. ಮೈಸೂರಿನಲ್ಲಿ ನಡೆಯುವ ಅಧಿವೇಶನವು ಏಷ್ಯಾ ರಾಷ್ಟ್ರಗಳಲ್ಲಿ ಪ್ರಥಮ. ಆದರೂ ಈ ಸಭೆಯಲ್ಲಿ ಏಷ್ಯಾ ರಾಷ್ಟ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಪರಿಶೀಲಿಸುವುದಿಲ್ಲ. ಎಲ್ಲಾ ರಾಷ್ಟ್ರಗಳ ವಿಷಯಗಳನ್ನು ಚರ್ಚಿಸಲಾಗುವುದು. ಮುಂದಿನ ತಿಂಗಳು ಸಿಂಹಳದ್ವೀಪದಲ್ಲಿ ನಡೆಯುವ ಸಮ್ಮೇಳನದಲ್ಲಿ ಏಷ್ಯಾಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಪರಿಶೀಲಿಸಲಾಗುವುದು. ಈ ಸಂಸ್ಥೆಯು ಶಾಖೆಯೊಂದನ್ನು ದೆಹಲಿಯಲ್ಲಿ ಸ್ಥಾಪಿಸಲಾಗಿದೆ. ಕಳೆದ ೬ ತಿಂಗಳಿಂದ ಬೆಂಗಳೂರಿನಲ್ಲಿ ಔದ್ಯೋಗಿಕ ಶಿಕ್ಷಣ ಶಾಲೆಯೊಂದನ್ನು ತೆರೆಯಲಾಗಿತ್ತು. ಇದರಲ್ಲಿ ಸುಶಿಕ್ಷಿತ ಕಾರ್ಮಿಕರನ್ನು ತರಪೇತುಮಾಡಿ ಹಿಂದುಳಿದ ರಾಷ್ಟ್ರಗಳಿಗೆ ಅವರನ್ನು ಕಳುಹಿಸಲಾಗುವುದು. ಜವಳಿ [illegible] ನಿರುದ್ಯೋಗ, ಜನಜೀವನದ ಮಟ್ಟವನ್ನು ಹೆಚ್ಚಿಸುವುದು 'ಗೃಹಗಳ ವ್ಯವಸ್ಥೆ' ಸ್ತ್ರೀ ಮತ್ತು ಬಾಲ ಕೂಲಿಗಾರರ ಅಭಿವೃದ್ಧಿ ಮತ್ತು ಕೈಗಾರಿಕೆಯಲ್ಲಿ ಹೆಚ್ಚು ಉತ್ಪತ್ತಿ, ಇವೇ ಮುಂತಾದ ವಿಷಯಗಳು ಅಧಿವೇಶನದಲ್ಲಿ ಪರಿಶೀಲಿಸಲ್ಪಡುವುವು ಎಂದು ಅವರು ತಿಳಿಸಿದರು.

ವಿಮೆದಾರರ ಮತ್ತು ಕೆಲಸಗಾರರ ಸಂಘ

ರಾಜಧಾನಿಯ ವಿಮೆದಾರರ ಮತ್ತು ಕೆಲಸಗಾರರ ಸಭೆಯು ಮೊನ್ನೆ ದಿನ ಶ್ರೀ ಬಿ. ಆರ್. ಜೋಯಿಸರವರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾರತದ ವಿಮೆ ಪದ್ಧತಿಯಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಲು ಮತ್ತು ಅದರ ಕೆಲಸಗಾರರ ಮತ್ತು ವಿಮೆದಾರರಿಗೆ ರಕ್ಷಣೆ ಸಲ್ಲಿಸಲು [illegible] ಸಂಘವನ್ನು ಸ್ಥಾಪಿಸಬೇಕೆಂದು, ನಿರ್ಣಯಿಸಿ, ಅದಕ್ಕೆ ಶ್ರೀ ಜಿ ಆರ್. ಜೋಯಿಸರವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ [illegible] ಚಿಕ್ಕೇಗೌಡ ರಾಮಪ್ಪ, ಜೆ. ಕೃಷ್ಣಸ್ವಾಮಿ, ಪಿ. ಸುಬ್ಬರಾಯ ಶಾಸ್ತ್ರಿ ಮತ್ತು [illegible] ಬಿ ಪುಟ್ಟ ಬಸಪ್ಪರವರುಗಳನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಪಿ ಎ ರಾವ್ ಮತ್ತು ಟಿ ಎಲ್ ಕಾಂತರವರನ್ನು ಕಾರ್ಯದರ್ಶಿಗಳನ್ನಾಗಿಯೂ, [illegible] ನಾಯಿಸಲಾಯಿತು.

ಕರ್ನಾಟಕ ಪ್ರಾಂತ್ಯ ರಚಿಸುವಂತೆ ಒತ್ತಾಯ

ಹಾಸನ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಮೊನ್ನೆ ದಿನ ಶ್ರೀ ಬಿ ಎಲ್. ಬೋರಣ್ಣ ಗೌಡರ ಅಧ್ಯಕ್ಷತೆಯಲ್ಲಿ ನಡೆದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಮಾಡಿರುವ ನಿರ್ಣಯವು ಅಸಮರ್ಪಕವೆಂದೂ, ಮೈಸೂರು ಸಂಸ್ಥಾನವು [illegible] ಕೂಡಲೇ ಐಕ್ಯ ಕರ್ನಾಟಕ ಪ್ರಾಂತ್ಯ [illegible] ಕರಣವನ್ನು ಸಾಧಿಸಲು, ಕೂಡಲೆ ಮೈಸೂರು ಸರ್ಕಾರವು ಕ್ರಮ [illegible] ವಹಿಯ [illegible] ನಿರ್ಣಯವು [illegible] ಮಾಡಲಾಯಿತು.

ಭತ್ತದ ರಹದಾರಿ ಪಡೆಯಲು ತೊಂದರೆ

ಶ್ರೀರಂಗಪಟ್ಟಣದ ತಾಲ್ಲೂಕಿನ [illegible] ರು ಮತ್ತು ಬೇಸಾಯಗಾರರು [illegible] ಕೊಡಬೇಕಾದ ಭತ್ತವನ್ನು [illegible] ದ ಬಗ್ಗೆ [illegible] ಶ ಮೈಲಿ ಅಂತರದಲ್ಲಿರುವ [illegible] ಗಾರರೂ ಭತ್ತ ಕೊಡಬೇಕಾದುದು [illegible] ಯಾಗಿದ್ದರೂ ಕ್ಯಾಂಪಿನ ಉಪಭೋಗದ [illegible] ಕೊಟ್ಟು ನಿ [illegible] ಭತ್ತವನ್ನು ಕೊಡಬೇಕಾಗಿದೆ ಅರ್ಜಿಗಳನ್ನು ರೆವಿನ್ಯೂ [illegible] ವೇರ ಇಟ್ಟುಕೊಂಡು ರಹದಾರಿ ಬರೆದು ಕೊಡುವುದಕ್ಕೆ ದಕ್ಷಿಣೆ ಕೊಡಬೇಕಾಗಿದೆ. ಅಲ್ಲದೆ [illegible] ರೈತರೂ ಮತ್ತು ಇತರರೂ ತೊಂದರೆಗೆ ಒಳಗಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸಿಗುವರೋ [illegible] ತೊಂದರೆಯನ್ನು ತಪ್ಪಿಸಬೇಕೆಂದು ಕೂಟದ ನೊಂದವರೊಬ್ಬರು ಪತ್ರ ಬರೆಯುತ್ತಾರೆ.

ಹನುಮಂತಯ್ಯನವರೊಡನೆ ದಿಲ್ಲಿಯ ತರ ಮಾತುಕತೆ

[illegible] ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ದಿನ [illegible] ಕಾಂಗ್ರೆಸ್ ಅಧ್ಯಕ್ಷರಾದ [illegible] ಲಿಂಗಯ್ಯ ಮತ್ತು ಶ್ರೀ [illegible] ಯ್ಯನವರೊಡನೆ ದೀರ್ಘ ಸಮಾಲೋಚನೆ [illegible] ನಡೆಸಿದರೆಂದು ತಿಳಿದು [illegible] ಮೈಸೂರು ಕೈಮಗ್ಗ [illegible] ನ್ನಾಗಿ ಆಹಾರದ ಇಲಾಖೆಯ [illegible] ಕಾರ್ಯದರ್ಶಿಗಳಾಗಿ [illegible] ಅವರನ್ನು ನೇಮಿಸಲಾಗಿ [illegible]

ಪೌರಸಭೆಗೆ ನಾಮಕರಣ ಸದಸ್ಯರು

ಸ್ವಂ. ಸು. ಫೋ] ಬೆಂಗಳೂರು ೩೦

ಈ ಕೆಳಗೆ ಕಂಡವರು ಮೈಸೂರು ಪುರಸಭೆಗೆ ಸದಸ್ಯರಾಗಿ ಸರ್ಕಾರದವರಿಂದ ನಾಮಕರಣ ಮಾಡಲ್ಪಟ್ಟಿರುತ್ತಾರೆ:- ಶ್ರೀಗಳಾದ ಜಿ. ಲಿಂಗಪ್ಪ, ಎನ್. ರಾಚಯ್ಯ, ಅಬ್ದುಲ್ ರಹಮಾನ್, ಮಿರ್ಜಾ ನೂರ್ [illegible] ಬಿ. ಎಲ್. ರಾಮಸ್ವಾಮಿ ಶೆಟ್ಟಿ ಮತ್ತು [illegible] ಆಚಾರ್ಯ

ಕ್ರಿಕೆಟ್ ಪಂದ್ಯ

ಮೈಸೂರಿಗೂ ಬೊಂಬಾಯಿಗೂ ಇಂ [illegible] ಕ್ರಿಕೆಟ್ ಪಂದ್ಯ [illegible] ಕಾಲೇಜಿನಲ್ಲಿ [illegible] ದಿನ ಬೊಂಬಾಯಿ ನವರು [illegible] ವಿಕೆಟ್ಟುಗಳಿಗೆ [illegible] ರನ್ನುಗಳನ್ನು ಮಾಡಿದ್ದರು.

ಹೊಟೇಲ್ ಕೆಲಸಗಾರರ ಸಭೆ

ಮೈಸೂರು ನಗರದ ಹೊಟೇಲ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು [illegible] ರಾತ್ರಿ [illegible] ಗಂಟೆಗೆ ಶ್ರೀ [illegible] ಅಧ್ಯಕ್ಷತೆಯಲ್ಲಿ ನಡೆಯುವುದು.

ಬಟ್ಟೆ ವರ್ತಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಬಟ್ಟೆ ವರ್ತಕರ ಸಂಘದ [illegible] ನೇ ವಾರ್ಷಿಕ ಸಭೆಯು ನಿನ್ನೆ ರಾತ್ರಿ ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಹಾರದ ನಂತರ, ಸಂಘದ ಅಧ್ಯಕ್ಷರಾದ ಶ್ರೀ ಯು ಎಲ್ [illegible] ಚಂದ್ರರಾಯರು ಸ್ವಾಗತ ಭಾಷಣ ಮಾಡಿದರು. ವಾರ್ಷಿಕ ವರದಿಯನ್ನು ಕನ್ನಡದಲ್ಲೂ ಮತ್ತು ಇಂಗ್ಲೀಷಿನಲ್ಲೂ ಶ್ರೀಗಳಾದ ಜಿ ವಿ ಸೂರ್ಯನಾರಾಯಣ ಶೆಟ್ಟಿ ಮತ್ತು ಬಿ ಎಲ್ ರುದ್ರಪ್ಪನವರುಗಳು ಓದಿದರು. ಅಧ್ಯಕ್ಷರು [illegible] ಭಾಷಣದಲ್ಲಿ [illegible] [illegible]

ಮೇಯರ್ ಮತ್ತು ಡೆ॥ ಮೇಯರ್ ಚುನಾವಣೆ

ಸ್ವಂ. ಸು. ಫೋ] ಬೆಂಗಳೂರು ೩೦

ಹೊಸ ಕಾರ್ಪೊರೇಷನ್ನಿನ ಮೊದಲ ಸಭೆಯು ಇಂದಿನ ಬೆಳಿಗ್ಗೆ ಮೇಯೋ ಹಾಲಿನಲ್ಲಿ ನಡೆದು ಕಾಂಗ್ರೆಸ್ ಪಕ್ಷದ ಉಮೇದುವಾರರಾದ ಶ್ರೀ ಎನ್. ಕೇಶವಯ್ಯಂಗಾರ್ಯರು ಮೇಯರಾಗಿಯೂ, ಶ್ರೀ ಎ. ಚೆಂಗಲರಾಯ ನಾಯುಡುರವರು ಡೆಪ್ಯುಟಿ ಮೇಯರ್ ಆಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು.

ಮೇಯರಿಗೆ ಮೀಸಲಾಗಿದ್ದ ಉಡುಪನ್ನು ಧರಿಸಿ, ಬೆಳ್ಳಿ ದಂಡದ ಸಹಿತ ತಾತ್ಕಾಲಿಕ ಮೇಯರಾಗಿದ್ದ ಶ್ರೀ ಆರ್ ಸುಬ್ಬಣ್ಣನವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮೊದಲು ಅವರು ಪ್ರಭುಗಳಲ್ಲಿ ರಾಜ ಭಕ್ತಿ ಸೂಚಿಸುವ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಅನಂತರ ಇತರರೂ ಸ್ವೀಕರಿಸಿದರು.

. ಚುನಾಯಿತ ಸದಸ್ಯರಲ್ಲದೇ ಡಿ. ಐ. ಜಿ. ಶ್ರೀ ಬಾಬುರೆಡ್ಡಿ, ಸೀನಿಯರ್ ಮೆಡಿಕಲ್ ಆಫೀಸರ್, ಸ್ಯಾನಿಟರಿ ಇಂಜನಿಯರ್, ಸ್ಕೂಲ್ಸ್ ಇನ್ಸ್‌ಪೆಕ್ಟರ್ [illegible] ಆಫೀಸರ್ ಮತ್ತು ಶಾಲೆಗಳ ಇನ್ಸ್‌ಪೆಕ್ಟರುಗಳು ಕಾರ್ಪೊರೇಷನ್ನಿನ ಅಧಿಕಾರಿ ಸದಸ್ಯರುಗಳಾಗಿ ನೇಮಿಸಲ್ಪಟ್ಟಿರುವರು.

ಮೇಯರರ ಸ್ಥಾನಕ್ಕೆ ಮಿಸ್ಟರ್ ಕಾಲಿನ್ಸ್ ಎಂಬವರ ಹೆಸರನ್ನು [illegible] ಆಲ್ಬುಕರ್ಕ್‌ರವರು ಸೂಚಿಸಿದ್ದರು. ಆದರೆ ಶ್ರೀ ನರಸಿಂಹರವರು ಅದನ್ನು ನಿರಾಕರಿಸಿದರು.

ಮೇಯರಿನ ಚುನಾವಣೆಯು ನಡೆದ ಮೇಲೆ ಶ್ರೀ ಎನ್ ಕೇಶವಯ್ಯಂಗಾರ್ಯರನ್ನು ಆ ಸ್ಥಾನದಲ್ಲಿ ಕೂರಿಸಿ ಶ್ರೀ ಆರ್. ಸುಬ್ಬಣ್ಣನವರು ಅವರಿಗೆ ಗೌನನ್ನೂ ಮತ್ತು ದಂಡವನ್ನೂ ಒಪ್ಪಿಸಿದರು. ಅನಂತರ ಡೆಪ್ಯುಟಿ ಮೇಯರರ ಚುನಾವಣೆ ನಡೆಯಿತು. ತರುವಾಯ ಪರಸ್ಪರ ಅಭಿನಂದನೆಗಳೂ, ಧನ್ಯವಾದಗಳೂ ಜರುಗಿದುವು.

ರೆಡ್ಡಿಯವರು ಬೊಂಬಾಯಿಗೆ

ಸ್ವಂ. ಸು. ಫೋ] ಬೆಂಗಳೂರು ೩೦

ಈ ದಿನ ಬೆಳಿಗ್ಗೆ ಶ್ರೀ ಕೆ ಸಿ. ರೆಡ್ಡಿಯವರು ಬೊಂಬಾಯಿಗೆ ತೆರಳಿದರು. ಸರದಾರ್ ಪಟೇಲರನ್ನು ಭೇಟಿಮಾಡಿ, ನಾಳೆ ಸಂಜೆ ಇವರು ಹಿಂತಿರುಗುವ ನಿರೀಕ್ಷಣೆ ಇದೆ.

ರಾಮ [illegible] ಅರ್ಕಾಟರ್ ಶ್ರೀ ಹೆಚ್ ವಿ. ನಿಕ್ಕಿಸ್ವಾಮಿಯವರಿಗೆ ನಿವೃತ್ತರಾಗುವ ಮುಂಚೆ ಕೈವಾರದ ಒಂದು ತಿಂಗಳ ರಜಾ ಕೊಡಲಾಗಿದೆ.

ಹೈದರಾಬಾದ್ ವಿಮಾನ ನಿಲ್ದಾಣ ಭಾರತಕ್ಕೆ

ಹೈದರಾಬಾದಿನಲ್ಲಿರುವ ಹಕೀಂಪೇಟೆ, ಬೇಗಂಪೇಟೆ ಮತ್ತು ಬೀದರ್ ವಿಮಾನ ನಿಲ್ದಾಣಗಳನ್ನು ಸದ್ಯದಲ್ಲಿಯೇ ಭಾರತ ಸರ್ಕಾರದವರು ತೆಗೆದುಕೊಳ್ಳುವರು.

ಭಾರತದಲ್ಲಿ ಹೈದರಾಬಾದಿನ ಸೇನೆಯ ಐಕ್ಯ

[illegible] ಜನವರಿ [illegible] ನೇ ತಾ॥ ನಿಂದ [illegible] ಅಧಿಕಾರವು [illegible] ಪ್ರಾಪ್ತವಾಗುವುದೆಂದೂ, [illegible] ಹೈದರಾಬಾದ್ ಸೈನ್ಯದ ಭಾಗಗಳು ಭಾರತದಲ್ಲಿ ಐಕ್ಯವಾಗುವುವೆಂದೂ [illegible] ತಿಳಿದುಬಂದಿದೆ.

ಹಗಲಿನಲ್ಲೇ ೫॥ ಲಕ್ಷ ರೂ. ದರೋಡೆ

ಬೊಂಬಾಯಿನ ಸೆಂಟ್ರಲ್ ಬ್ಯಾಂಕಿನ ಕೇಂದ್ರ ಕಛೇರಿಯಿಂದ ನಿನ್ನೆ ಬೆಳಿಗ್ಗೆ ಅಲ್ಲಿನ ಫ್ಯಾಂಡ್ ರೋಡ್ ನಲ್ಲಿರುವ ಅದೇ ಬ್ಯಾಂಕಿನ ಶಾಖಾ ಕಛೇರಿಯೊಂದಕ್ಕೆ ಪದ್ಧತಿಯ ಮೇರೆ ಒಂದು ಮೋಟಾರು ಕಾರಿನಲ್ಲಿ ಹಣವನ್ನು ಕಳುಹಿಸಲಾಯಿತು. ಆ ಹಣವು ನೌಕರರು ಜವಾನರೊಡನೆ ಬ್ಯಾಂಕಿನಿಂದ ಹೊರಕ್ಕೆ ಬಂದು ಮೋಟಾರಿನಿಂದ ಹಣದ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದುಕೊಳ್ಳುತ್ತಿದ್ದ ವೇಳೆಯಲ್ಲಿ ಅಲ್ಲೇ ಇದ್ದ ೫ ಮಂದಿ ದರೋಡೆಕೋರರು ಬ್ಯಾಂಕಿನ ನೌಕರರ ಮೇಲೆಬಿದ್ದು ಅವರುಗಳನ್ನು ಚಾಕುವಿನಿಂದ ಇರಿದು ಗಾಯಗೊಳಿಸಿ ಹಣದ ಪೆಟ್ಟಿಗೆಗಳನ್ನು ಅಪಹರಿಸಿಕೊಂಡು ಒಂದು ಮೋಟಾರಿನಲ್ಲಿ ಪರಾರಿಯಾದರೆಂದು ವರದಿಯಾಗಿದೆ. ಪೆಟ್ಟಿಗೆಗಳಲ್ಲಿ ೫॥ ಲಕ್ಷ ರೂ. ಗಳಿದ್ದವೆಂದು ಹೇಳಲಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಅವರ ಸ್ಥಿತಿ ಚಿಂತಾಜನಕವಾಗಿದೆ.

ಸಿಕ್ ಪ್ರಾಂತ ಸ್ಥಾಪನೆಗೆ ಒತ್ತಾಯ

ಪೂರ್ವ ಪಂಜಾಬಿನ ಫಿರೋಜ್‌ಪುರ್ ಎಂಬಲ್ಲಿ ಗುರುಗೋವಿಂದ ಸಿಂಗರ ದಿನಾಚರಣೆ ನಡೆಸುತ್ತಾ, ಸಿಕ್ ಮುಖಂಡರಾದ ಮಾಸ್ಟರ್ ತಾರಾಸಿಂಗರು ಪಂಜಾಬಿ ಭಾಷೆಯನ್ನಾಡುವ ಜನರ ಪ್ರಾಂತವು ಸೃಷ್ಟಿಯಾಗಬೇಕೆಂದು ಒತ್ತಾಯ ಪಡಿಸಿದರು.

ಅತ್ತೆಯ ಕೊಲೆಗಾಗಿ ಮರಣ ದಂಡನೆ

ಸೇಲಂ ಜಿಲ್ಲೆ ಹಳ್ಳಿಯೊಂದರಲ್ಲಿ ಕುಪ್ಪುಗೌಂಡನ್ ಎಂಬುವನು ತನ್ನ ಅತ್ತೆಯನ್ನು ಚಾಕುವಿನಿಂದ ಇರಿದು ಕೊಂದನೆಂಬ ಅಪಾದನೆ ಮೇಲೆ ಸೇಲಂ ಸೆಷನ್ಸ್ ನ್ಯಾಯಾಧೀಶರು ಅವನಿಗೆ ಮರಣ ದಂಡನೆಯನ್ನು ವಿಧಿಸಿದ್ದಾರೆ.

ಕಮ್ಯೂನಿಸ್ಟರಿಂದ ೫೦೦೦ ಅಕ್ಕಿ ಮೂಟೆಗೆ ಬೆಂಕಿ

ಗುಡಿವಾಡ ತಾಲ್ಲೂಕು ವನ್ನಪಡಿ ಹಳ್ಳಿಯಲ್ಲಿ ಕಳೆದ ೨೬ನೇ ರಾತ್ರಿ ಕಮ್ಯೂನಿಸ್ಟರು ಐದು ಸಾವಿರ ಮೂಟೆಗಳನ್ನು ಶೇಖರಿಸಿಟ್ಟಿದ್ದ ಉಗ್ರಾಣದ ಬಣವೆಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿದರೆಂದು ವರದಿಯಾಗಿದೆ.

೨೬, ೨೭ನೇ ತಾ॥ ರಜಾ ದಿನಗಳು

ಭಾರತದ ರಿಪಬ್ಲಿಕ್ ದಿನಾಚರಣೆಗಾಗಿ ಸಂಸ್ಥಾನದಲ್ಲಿ ಜನವರಿ ೨೬ ಮತ್ತು ೨೭ನೇ ತಾ॥ ಸಾರ್ವಜನಿಕ ರಜಾದಿನಗಳೆಂದು ಸರ್ಕಾರದವರು ಆಜ್ಞೆಮಾಡಿದ್ದಾರೆ.

ನೆಹರೂ ಮಾವು

ಜಪಾನಿನ ಮಕ್ಕಳು ಪಂಡಿತ ನೆಹರೂರವರಿಗೆ 'ನೆಹರೂಮಾವು' ಎಂಬ ಬಿರುದನ್ನು ಕೊಟ್ಟಿವೆ. ಭಾರತದ ದಯೂರಾಗೆಂಬುಗಳು, ಜಪಾನಿನ ತಕ್ಷೀ ದಿನಾಚರಣೆಯಲ್ಲಿ ಪಾಲ್ಗೊಂಡ ಪಕ್ಷಿ ಮತ್ತು ಇಂದಿರಾ ಆನೆಯ ಚಿತ್ರಗಳನ್ನು ಭಾರತದ ಮಕ್ಕಳಿಗಾಗಿ ಅಲ್ಲಿನ ಮಕ್ಕಳು ಕಳುಹಿಸಿ ಕೊಟ್ಟಿವೆ. ಇದೂ ಅಲ್ಲದೆ ಮೃಗಗಳ ಸಂಗೀತ ಗೊಂಬೆಗಳನ್ನೂ ಕಳುಹಿಸಲಾಗಿದೆ.

ವಿದ್ಯೆ ಕಲಿಯುತ್ತಿರುವಾಗಲೇ ಸಂಪಾದಿಸುವ ಯೋಜನೆ

ವಿದ್ಯಾರ್ಥಿಗಳು ವಿದ್ಯೆ ಕಲಿಯುತ್ತಿರುವಾಗಲೇ ಸಂಪಾದನೆ ಮಾಡುವ ಯೋಜನೆಯನ್ನು ರಾಜಸ್ಥಾನ ಸರ್ಕಾರದವರು ಪ್ರಚಾರಕ್ಕೆ ತರಲು ಯೋಚಿಸಿದ್ದಾರೆ. ಕಾಲೇಜು ವಿದ್ಯಾರ್ಥಿಗಳಿಗೆ ಅಲ್ಪಾವಧಿ ಕಾಲದ ಕೆಲಸಗಳನ್ನು ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗುವುದು. ಅವರುಗಳಿಗಾಗಿ ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು.

ಪಾಕಿಸ್ತಾನಕ್ಕೆ ಕರೆನ್ಸಿ ನೋಟುಗಳನ್ನು ಕಳುಹಿಸುವುದು ಅಪರಾಧ

ಭಾರತದಿಂದ ಪಾಕಿಸ್ತಾನಕ್ಕೆ ಕರೆನ್ಸಿ ನೋಟುಗಳನ್ನು ಕಳುಹಿಸುವುದು ಅಪರಾಧವೆಂದು ಅಂಚೆ ಇಲಾಖೆಯವರು ತಿಳಿಸಿರುತ್ತಾರೆ. ಇದನ್ನು ಉಲ್ಲಂಘಿಸಿದವರಿಗೆ ೨ ವರ್ಷ ಶಿಕ್ಷೆ ಮತ್ತು ೫೦೦ ರೂ. ದಂಡವನ್ನು ವಿಧಿಸಲಾಗುವುದು.

ಭಾರತೀಯ ಮುಸ್ಲಿಮರಿಗೆ ಪಾಕಿಸ್ತಾನದಲ್ಲಿ ಜುಲ್ಮಾನೆ

ರಹದಾರಿ ಪಡೆದು ಭಾರತದಿಂದ ತಾತ್ಕಾಲಿಕವಾಗಿ ಪಾಕಿಸ್ತಾನಕ್ಕೆ ಹೋಗಿದ್ದ ನಾಲ್ಕು ಮಂದಿ ಮುಸ್ಲಿಮರು ಅಲ್ಲಿ ರಹದಾರಿಯಲ್ಲಿ ನಮೂದಿಸಿದ್ದ ಅವಧಿಗಿಂತ ಹೆಚ್ಚು ಕಾಲ ನಿಂತರೆಂದು ವಿಚಾರಣೆಗೆ ಗುರಿಯಾಗಿದ್ದರು. ನ್ಯಾಯಾಧೀಶರು ಅವರುಗಳಿಗೆ ತಲಾ ೭೦ ರೂ. ಜುಲ್ಮಾನೆ ವಿಧಿಸಿ ಅವರುಗಳನ್ನು ಗಡೀಪಾರು ಮಾಡಬೇಕೆಂದೂ ಆಜ್ಞೆ ಮಾಡಿದರು.

ಹರ್ಷವರ್ಧನನ ಕಾಲದ ನಗರದ ಪತ್ತೆ

ಹರ್ಷವರ್ಧನನು ಭರತ ವರ್ಷದಲ್ಲಿ ಚಕ್ರವರ್ತಿತ್ವಕಾಲದಲ್ಲಿ ನಿರ್ಮಿತವಾಗಿ ಬಹು ಪ್ರಸಿದ್ಧಿಗೆ ಬಂದಿದ್ದ ನಗರದ ಕೇಷವು ಪೂರ್ವ ಪಾಕಿಸ್ತಾನದ ಕರ್ಫೋನಾಲಿ ನದಿಯ ದಡದಲ್ಲಿರುವ ಕಪಿಲಮುನಿ ಎಂಬ ಹಳ್ಳಿ ಹತ್ತಿರ ಪತ್ತೆ ಹಿಡಿಯಲಾಗಿದೆ. ಇಟ್ಟಿಗೆಯಿಂದ ಕಟ್ಟಿದ ಮುರುಕು ಗೋಡೆ, ಮತ್ತು ಭೂಮಿಯೊಳಗೆ ಲೋಹದಿಂದ ನಿರ್ಮಿತವಾದ ರಸ್ತೆ ಮುಂತಾದುವು ಗೋಚರವಾಗಿವೆ.

ಶಾಸನ ಸಭಾ ಸದಸ್ಯರಿಗೆ ಬಟ್ಟೆ ವ್ಯಾಪಾರದ ರಹದಾರಿ

ಮದರಾಸು ಸರ್ಕಾರದವರು ಅಲ್ಲಿನ ಶಾಸನ ಸಭಾ ಸದಸ್ಯರಿಗಾಗಲಿ, ಅಥವ ಅವರ ಅವಿಭಕ್ತ ಕುಟುಂಬದವರಿಗಾಗಲಿ ಬಟ್ಟೆಯ ವ್ಯಾಪಾರದ ರಹದಾರಿಯನ್ನು ಕೊಡಕೂಡದೆಂದು ಮಾಡಿದ್ದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆ. ಬಟ್ಟೆ ಮತ್ತು ನೂಲಿನ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಈ ರೀತಿಯ ಪ್ರತಿಬಂಧಕವನ್ನು ತೆಗೆದುಹಾಕಲಾಗಿದೆ.

ಪೂರ್ವ ಪಂಜಾಬಿನ ಹೆಸರು ಪಂಜಾಬು

ಜನವರಿ ೨೬ನೇ ತಾ॥ನಿಂದ ಪೂರ್ವ ಪಂಜಾಬ್ ಪ್ರಾಂತ್ಯವನ್ನು ಪಂಜಾಬ್ ಎಂದು ಕರೆಯಲಾಗುವುದೆಂದು ಅಲ್ಲಿನ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಸುಶಿಕ್ಷಿತ ಕಾರ್ಮಿಕರ ಶಿಕ್ಷಣ ಶಾಲೆಗಳು

ಭಾರತದ ನಾನಾ ಕೈಗಾರಿಕೆಗಳಿಗೆ ಬೇಡಿಕೆಯ ಪ್ರಕಾರ ಸುಶಿಕ್ಷಿತ ಕಾರ್ಮಿಕರನ್ನು ಒದಗಿಸಿಕೊಳ್ಳುವ ಸಲುವಾಗಿ ಪ್ರತಿ ವರ್ಷವೂ ೭॥ ಸಾವಿರ ಜನರಿಗೆ ಸಾಂಭಾವಿಕ ಮತ್ತು ಔದ್ಯೋಗಿಕ ಶಿಕ್ಷಣವನ್ನು ಕೊಡಲು ದೇಶದ ನಾನಾ ಸ್ಥಳಗಳಲ್ಲಿ ಶಾಲೆಗಳನ್ನು ತೆರೆಯಲು ಭಾರತ ಸರ್ಕಾರದವರು ಏರ್ಪಡಿಸಿರುತ್ತಾರೆ. ಈ ಪೈಕಿ ಅರ್ಧ ಜನರಿಗೆ ತಲಾ ೨೫ ರಂತೆ ವಿದ್ಯಾರ್ಥಿ ವೇತನ ಕೊಡಲಾಗುವುದು.

ಪುದುಚೇರಿಯಿಂದ ಮದರಾಸಿಗೆ ಕಾಗದ ಬರಲು ೪೬ ತಿಂಗಳು

ಪುದುಚೇರಿಯಿಂದ ಮದರಾಸಿಗೆ ೧೯೪೬ನೇ ಫೆಬ್ರವರಿ ೨೫ನೇ ತಾ॥ ಕಳುಹಿಸಿದ ಅಂಚೆ ಕಾಗದವು ೪೬ ತಿಂಗಳನಂತರ ಇದೇ ೨೬ನೇ ತಾ॥ ತಲುಪಿತೆಂದು ವರದಿಯಾಗಿದೆ.

ಸ್ಕೌಟ್ ರ್‍ಯಾಲಿ

ಮೈಸೂರು ಜಿಲ್ಲಾ ಸ್ಕೌಟ್ ಸಂಘದ ಆಶ್ರಯದಲ್ಲಿ ಕಳೆದ ಶನಿವಾರದಿಂದ ೩ ದಿನಗಳು ಹುಣಸೂರಿನಲ್ಲಿ ಸ್ಕೌಟ್ ರ್‍ಯಾಲಿಯು ನಡೆಯಿತು. ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಕೃಷ್ಣರಾಜನಗರ ತಾಲ್ಲೂಕುಗಳ ೫೦೦ ಮಂದಿ ಸ್ಕೌಟುಗಳು ಅದರಲ್ಲಿ ಭಾಗವಹಿಸಿದ್ದರು. ಚೀಫ್ ಸ್ಕೌಟ್ ಕಮೀಷನರಾದ ಶ್ರೀ ಪಿ ಶಿವಶಂಕರ್‌ರವರು ಕೊನೆಯ ದಿನ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಿದರು.

ನೂತನ ವರ್ಷದ ಶುಭಾಶಯ

ರಾಜಧಾನಿಯ ಧರ್ಮಪ್ರವರ್ತ ಎಸ್ ರಂಗಸ್ವಾಮಿ ಅಯ್ಯಂಗಾರ್ಯರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ರಣಜಿತ್ ಟಾಕೀಸ್
30—12—49 ರಿಂದ
ಆಕರ್ಷಣೀಯವಾದ ೨ ನೇ ವಾರ
ದಿನವಹಿ 3 ಪ್ರದರ್ಶನಗಳು
ಭಾರತ ದೇಶದ ಚಿತ್ರರಂಗದಲ್ಲಿ ಅಲ್ಲೋಲ ಕಲ್ಲೋಲ ಪಡಿಸಿರುವ
ಮೆಹಬೂಬ್‌ರವರ ಹಿಂದಿ ಚಿತ್ರ
ಅಂದಾಜ್
ಸಂಗೀತ :- ನೌಷಾದ್
ನರ್ಗೀಸ್, ದಿಲೀಪ್ ಕುಮಾರ್, ರಾಜ ಕಪೂರ್, ವಿ. ಎಚ್. ದೇಸಾಯ್ ಮತ್ತು ಕಕ್ಕೂ

ಪ್ರಭಾ
ಅಮೋಘ ಪ್ರಾರಂಭ
31-12-49 ರಿಂದ
ಪ್ರತಿದಿನ 3 ಆಟಗಳು
ಭಾರತೀಯ ಸ್ತ್ರೀತ್ವದ ಧ್ಯೇಯಗಳನ್ನು ಎತ್ತಿಹಿಡಿದ ಮಹಿಳೆಯ ಪ್ರಶಂಸನೀಯ ಪ್ರಯತ್ನ !
ಪಿ.ಎ.ಪಿ ಪಿಕ್ಚರ್ಸ್‌ರವರ ಹಿಂದಿ ಚಿತ್ರ
ಸ್ವಯಂ ಸಿದ್ಧ
ಶಾಂತಾ ಆಪ್ಟೆ, ಮೋಲಿನಾ, ಗೀತಾ ಶ್ರೀ, ಬಿಹಾರಿ ಗುಪ್ತ

THE CITY TUTORIAL COLLEGE
C. T. C. Publications
Ready for Sale 0 8 0 Each
A very useful Guide to B. Sc. & Inter Science Examinations.
J. Naoumal & Sons, Mysore & other leading Book-sellers

CHAMUNDESWARI TALKIES
Morning Shows
From 30-12-49 for 3 days
MONSIEUR VERDOUX
-:Featuring.-
Charlie Chaplin

ಪ್ರಭುದೇವಾ ಟಾಕೀಸ್
ದಿನವಹಿ ೩ ಆಟಗಳು
1—1—50 ನೇ ಭಾನುವಾರದಿಂದ ಅಮೋಘ ಪ್ರಾರಂಭ
ಮಹಿರಾವಣ
(ತೆಲುಗು ಚಿತ್ರ)
ನ. ಪ್ರ ಪಾತ್ರ:—ಗಗ್ಗಯ್ಯ, ಕಾಂಚನ ಮಾಲಾ, ರಾಮಕೃಷ್ಣ ಶಾಸ್ತ್ರಿ ಮುಂತಾದವರು

Edited printed and published by A. R. Nagarajan, at Sadhvi Press, D. Subbiah Road, Mysore

ಫೋನ್ ನಂ 792 ವಂದೇ ಮಾತರಂ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೩೧-೧-೪೮ [ಸಂಚಿಕೆ ೧೬೯

ಅಕ್ರಮ ದಾಸ್ತಾನಿಗಾಗಿ ಬಹಿರಂಗ ಛಡಿ ಏಟು

ವಸ್ತುಪ್ರದರ್ಶನಕ್ಕೆ ಉಚಿತ ಪ್ರವೇಶ

ಮೈಸೂರು ೩೧

ಪೌರಸಭೆಯವರು ನಡೆಯಿಸುತ್ತಿರುವ ಆರೋಗ್ಯ, ಆಹಾರ ಮತ್ತು ಕಲಾ ಪ್ರದರ್ಶನಕ್ಕೆ ಈದಿನ ಸಾರ್ವಜನಿಕರನ್ನು ಉಚಿತವಾಗಿ ಬಿಡಲಾಗುವುದು ಮಹಾಜನರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ಕೋರಲಾಗಿದೆ

ಮುಷ್ಕರಗಾರರಿಗೂ ಕೆಲಸಗಾರರಿಗೂ ಘರ್ಷಣೆ

ಬೆಂಗಳೂರಿಗೆ ೭ ಮೈಲಿ ದೂರದಲ್ಲಿರುವ ಕಾಡ ಗೊಂಡನ ಹಳ್ಳಿಯಲ್ಲಿ ಚರ್ಮ ಹದ ಮಾಡುವ ಕಾರ್ಖಾನೆಯ ೭೦೦ ಮಂದಿ ಕೆಲಸಗಾರರು ಹೆಚ್ಚು ಬೋನಸ್ಸು ಕೊಡಬೇಕೆಂದು ಮೊನ್ನೆ ದಿನ ಮುಷ್ಕರ ಹೂಡಿ ಪ್ರದರ್ಶನ ನಡೆಸಿದರೆಂದೂ, ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಹೊರಕ್ಕೆ ಬರಬೇಕೆಂದು ಗಲಾಟೆ ಮಾಡಿ, ಮಾಲೀಕರೊಬ್ಬರ ಕಾರಿನ ಮೇಲೆ ಕಲ್ಲುಗಳನ್ನು ಎಸೆದರೆಂದೂ, ಅನಂತರ ಮುಷ್ಕರಗಾರರಿಗೂ, ಕೆಲಸ ಮಾಡುತ್ತಿದ್ದವರಿಗೂ ಘರ್ಷಣೆ ಆಗಿ, ೭ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ

ಕವಿತಾ ಸ್ಪರ್ಧೆ

ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇಜು ಕರ್ನಾಟಕ ಸಂಘದ ಆಶ್ರಯದಲ್ಲಿ ವಿವಿಧ ಸ್ಪರ್ಧೆಗಳು ಜನವರಿ ೯ನೇ ತಾ॥ ಯಿಂದ ಪ್ರಾರಂಭವಾಗುವುವು ೪೦ ಸಾಲುಗಳಿಗೆ ಮೀರದಂತೆ ನೂತನ ಪದ್ಯಗಳ ರೀತಿಯಲ್ಲಿ ಸ್ವತಂತ್ರ ಕವಿತೆಯನ್ನು ಜನವರಿ ೧೦ನೇ ತಾ॥ ನೊಳಗಾಗಿ ಕಳುಹಿಸಬೇಕೆಂದು ತಿಳಿಸಲಾಗಿದೆ.

ಸದ್ಯಕ್ಕೆ ಏಕೀಕರಣ ಬೇಡವೆಂದು ರೆಡ್ಡಿಯವರು

ಮೈಸೂರನ್ನು ಈಗಲೇ ಸೇರಿಸಿ ಕನ್ನಡ ಪ್ರಾಂತ್ಯದಲ್ಲಿ ವಿಲೀನಗೊಳಿಸಲು ಮೈಸೂರಿನ ಪ್ರಜೆಗಳಾಗಲೀ ಅಥವಾ ಶಾಸನ ಸಭಾ ಸದಸ್ಯರಾಗಲೀ ಸಮ್ಮತಿಸುವುದಿಲ್ಲವೆಂದು ಶ್ರೀ ಕೆ ಸಿ ರೆಡ್ಡಿಯವರು ಬೊಂಬಾಯಿನ ಪತ್ರಿಕಾ ಸಮ್ಮೇಳನವೊಂದರಲ್ಲಿ ತಿಳಿಸಿದರೆಂದು ವರದಿಯಾಗಿದೆ

ಮಧ್ಯ ಪ್ರಾಂತ್ಯದಲ್ಲಿ ಆಡಳಿತ ವಿಕೇಂದ್ರೀಕರಣ

ಮಧ್ಯ ಪ್ರಾಂತ್ಯ ಸರ್ಕಾರದವರು ಅಲ್ಲಿನ ಸರ್ಕಾರೀ ಕಾರ್ಯ ಭಾರಗಳನ್ನು ವಿಕೇಂದ್ರೀಕರಿಸಲು ನಿರ್ಧರಿಸಿದ್ದಾರೆ ಇದು ಬರುವ ಫೆಬ್ರವರಿ ೧ನೇ ತಾರೀಖಿನಿಂದ ಜಾರಿಗೆ ಬರುವುದು ಇದರ ಪ್ರಕಾರ ಅಲ್ಲಿ ಸ್ಥಾಪಿಸಲಾಗಿರುವ ಜನಪದ ಸಭೆಗಳಿಗೆ ಕೆಲವು ಕಾರ್ಯಗಳನ್ನು ವಹಿಸಲಾಗುವುದು ಪ್ರತಿಯೊಂದು ತಹಸಿಲಿನ ಮೇಲ್ಗಡೆ ಸಂಸ್ಥೆಯು ಕನಿಷ್ಠ ಆಡಳಿತ ಕೇಂದ್ರವಾಗಿರುವುದು ಮಧ್ಯ ಪ್ರಾಂತ್ಯದ ೨೨ ಜಿಲ್ಲೆಗಳ ೯೭ ತಹಸೀಲುಗಳಲ್ಲಿ ಜನಪದ ಸಭೆಯು ಈಗ ತನ್ನ ಕಾರ್ಯಚಟುವಟಿಕೆಯನ್ನು ನಡೆಸುತ್ತಿದೆ ಸ್ಥಳೀಯ ಸಂಸ್ಥೆಗಳ ಅಂಗವಾದ ಈ ಸಂಸ್ಥೆಯು ಆಹಾರ, ವ್ಯವಸಾಯ, ಮೊದಲಾದ ಬಾಬುಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ವಹಿಸಿಕೊಳ್ಳುವುದು ಈ ಸಂಸ್ಥೆಯ ಮೇಲೆ ಸರ್ಕಾರದ ಹತೋಟಿಯಿರುವುದು

ಹೋಟೇಲುಗಳ ಸಂಖ್ಯೆ ಕಡಿಮೆಯಾಗಬೇಕು

ವಸ್ತು ಪ್ರದರ್ಶನದಲ್ಲಿ ಆರೋಗ್ಯ ಸಚಿವರ ಭಾಷಣ

ಮೈಸೂರು ೩೧

ಪೌರಸಭೆಯವರು ನಡೆಸುತ್ತಿರುವ ಆಹಾರ, ಆರೋಗ್ಯ ಮತ್ತು ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದವರಿಗೆ ಬಹುಮಾನವನ್ನು ಹಂಚುವ ಸಮಾರಂಭವು ನಿನ್ನೆ ನಡೆಯಿತು ಆರೋಗ್ಯ ಸಚಿವ ಶ್ರೀ [illegible] ಹಮೂದ್ ಷರೀಫ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು [illegible] ವ್ಯಾಯಾಮ ಪ್ರದರ್ಶನವೂ [illegible] ಸಭೆಯು ನಡೆಯಿತು

ಪೌರಸಭಾಧ್ಯಕ್ಷರಾದ ಶ್ರೀ ಟಿ ವಿ [illegible] ರಮಣಯ್ಯನವರು ಸ್ವಾಗತ ಭಾಷಣ ಮಾಡಿ ಪ್ರದರ್ಶನದಲ್ಲಿ ಭಾಗವಹಿಸಿದವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು ಪೌರಸಭೆಯ ಆರೋಗ್ಯಾಧಿಕಾರಿಗಳಾದ ಶ್ರೀ ಬಿ ಎಸ್ ಲಿಂಗರಾಜುರವರು ವರದಿ [illegible] ಪ್ರದರ್ಶನವು ಹೇಗೆ [illegible] ವಾಗುತ್ತಿದೆ, [illegible] ಸಾವಿರ ಜನ [illegible] ಪ್ರದರ್ಶನವನ್ನು ನೋಡಿರುವುದಾಗಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಜಾ ಆರೋಗ್ಯ [illegible] ಸಂಪೂರ್ಣವಾಗಿ ಗಮನ ಕೊಡಬೇಕಾದ ಅಂಶವನ್ನು ಒತ್ತಿ ಹೇಳಿದರು ಆಹಾರದ ಸಮಸ್ಯೆಯು ಅತ್ಯಂತ ತೊಂದರೆಯಿಂದ ಕೂಡಿದೆಯೆಂದು ಹೇಳಿ, ಈಗಿರುವ ಅತ್ಯಧಿಕ ಸಂಖ್ಯೆಯ ಹೋಟೇಲುಗಳೇ ನಮ್ಮ ದೇಶದ ಆರೋಗ್ಯ ಮತ್ತು ಆಹಾರ ಸಂಬಂಧವಾದ ಸಕಲ ಸಮಸ್ಯೆಗಳಿಗೂ ಮುಖ್ಯ ಕಾರಣವಾಗಿರುತ್ತವೆಂದೂ, ಅವುಗಳನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸದಿದ್ದರೆ [illegible] ಕಡಿಮೆ ಮಾಡಬೇಕೆಂದೂ [illegible] ಸಮಾಜದಲ್ಲಿ ಎಲ್ಲ [illegible] ಗಳಿಗೂ ದುಷ್ಟ ಪ್ರಚಾರಗಳಿಗೂ [illegible] ಗಳೇ ಮಾತ್ರ ಸ್ಥಾನ [illegible] ಹೊಸವರ್ಷವು [illegible] ದಲ್ಲಿ, ನವಯುಗವನ್ನು [illegible] ದೂ, ನೂತನ ಸ್ವತಂತ್ರ ಪ್ರಜಾ ರಾಜ್ಯ [illegible] ಎಲ್ಲರೂ ತಮ್ಮ ತಮ್ಮ [illegible] ಯವಾಗಿ ನಿರ್ವಹಿಸಿ ದೇಶಕ್ಕೆ [illegible] ಕೆಲಸ [illegible] ಮಾಡಬೇಕೆಂದು ಹಾರೈಸಿದರು.

ಪ್ರದರ್ಶನದ ಸ್ಪರ್ಧೆಗಳಲ್ಲಿ [illegible] [illegible]

ಬೋಸರು ಬದುಕಿದ್ದಾರೆ

ಸಂಯುಕ್ತ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಆರ್ ಎಸ್ ರೂಯಿಕರ್ ರವರು ಗೌಹಾತಿಯಲ್ಲಿ ಭಾಷಣ ಮಾಡುತ್ತಾ ಸುಭಾಷ್ ಚಂದ್ರ ಬೋಸರು ಮರಣ ಹೊಂದಿದರೆಂಬ ಸುದ್ದಿಯು ನಿರಾಧಾರವಾದದ್ದೆಂದೂ, ಅವರು ಚೀಣದಲ್ಲಿ ಸೌಖ್ಯವಾಗಿರುವರೆಂದೂ ತಿಳಿಸಿರುವರು ಸರಿಯಾಗಿ ಸಮಯಕ್ಕೆ ಬೋಸರು ಭಾರತಕ್ಕೆ ಬಂದ, ಈ ದೇಶವನ್ನು ಪ್ರಜಾರಾಜ್ಯವನ್ನಾಗಿ [illegible] [illegible]

ಒಪ್ಪಂದಗಳು ಪಾಟಿಯಾಲಾ [illegible] ಅರ್ಜಿ

ಪಾಟಿಯಾಲಾ ಮತ್ತು ಪೂರ್ವ ಪಂಜಾಬಿನ [illegible] ಯೂನಿಯನ್ನಿನ [illegible] ಪ್ರಮುಖರಾದ ಪಾಟಿಯಾಲಾ ಮಹಾರಾಜರು ಆ ಪ್ರದೇಶದ [illegible] ಶಾಸನಸಭೆಗೆ ಅರ್ಜಿಯನ್ನು ಬರೆದುಕೊಟ್ಟು ತಮ್ಮ ಹೆಸರನ್ನು [illegible] ಒಪ್ಪಂದಗಳ [illegible] ಸೇರಬೇಕೆಂದು [illegible] [illegible] ಒಪ್ಪಂದ [illegible]

[illegible] ಪ್ರದೇಶದ ಆಡಳಿತ ಕೇಂದ್ರಕ್ಕೆ

[illegible] ಸಂಸ್ಥಾನಗಳನ್ನೊಳಗೊಂಡ ಮಧ್ಯ ಪ್ರದೇಶ ಯೂನಿಯನ್ನಿನ ಆಡಳಿತವನ್ನು ಜನವರಿ ೧ನೇ ತಾ॥ ನಿಂದ ಭಾರತ ಸರ್ಕಾರದವರು ವಹಿಸಿಕೊಳ್ಳುವರು [illegible] ವನ್ನು ಚೀಫ್ ಕಮಿಷನರ್ ಪ್ರಾಂತ್ಯವಾಗಿ ಪರಿಗಣಿಸಲಾಗುವುದು

ಮಿಲ್ ಬಟ್ಟೆಗಳ ಮಾರಾಟ ತೆರಿಗೆ ಹೆಚ್ಚಿತು

ಸ್ವಂತ ವರದಿಗಾರ] ಬೆಂಗಳೂರು ೩೧

ಸರ್ಕಾರದವರು ೧೯೪೮ ರ ಮಾರಾಟದ ತೆರಿಗೆ ಕಾನೂನನ್ನು ತಿದ್ದುಪಡಿ ಮಾಡಿ ಗಿರಣಿ ಮತ್ತು ಪವರ್ ಮಗ್ಗಗಳಿಂದ ತಯಾರಾದ ಬಟ್ಟೆಗಳ ಮೇಲಿನ ಮಾರಾಟದ ತೆರಿಗೆಯನ್ನು ರೂಪಾಯಿಗೆ ೩ ಕಾಸಿನಿಂದ ೬ ಕಾಸಿಗೆ ಹೆಚ್ಚಿಸಿರುತ್ತಾರೆ.

ಪವರ್ ಮಗ್ಗಗಳಿಂದ ತಯಾರಿಸಲ್ಪಟ್ಟ ಬಟ್ಟೆಗಳನ್ನು ಹೋಲ್ ಸೇಲ್ ಅಥವಾ ಚಿಲ್ಲರೆ ವ್ಯಾಪಾರಿಗಳು ಕೊಂಡುಕೊಳ್ಳುವಾಗ ಮಾರಾಟದ ತೆರಿಗೆಯ ವಿನಾಯಿತಿಯನ್ನು ಕೊಡಲಾಗಿದೆ ಮಿಲ್ಲುಗಳಿಂದ ಮಾರಾಟವಾಗುವ ಬಟ್ಟೆಗಳಿಗೆ ಒಂದಾವರ್ತಿ ಮಾತ್ರ ಸುಂಕವನ್ನು ವಸೂಲು ಮಾಡಲಾಗುವುದು

ಮಂತ್ರಿಮಂಡಲಕ್ಕೆ ಸಿದ್ದಲಿಂಗಯ್ಯನವರು?

ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಮಂತ್ರಿಮಂಡಲದಲ್ಲಿ ಒಂದು ಸ್ಥಾನ ದೊರೆಯುವ ಸಂಭವವಿದೆಯೆಂದು ಬಲವಾದ ವದಂತಿ ಹರಡಿದೆ. ಶ್ರೀ ಕೆ. ಹನುಮಂತಯ್ಯನವರೂ ಮಂತ್ರಿಮಂಡಲವನ್ನು ಪ್ರವೇಶಿಸಿ ಉಪನಾಯಕರಾಗುವ ಸಂಭವವೂ ಇರುವುದಾಗಿ ಹೇಳಲಾಗಿದೆ

ತಿರುವಾಂಕೂರು ಮಂತ್ರಿಗಳ ಸಂಖ್ಯೆಯಲ್ಲಿ ಏರಿಕೆ

ಜನವರಿ ೨೬ನೇ ತಾ॥ ಭಾರತ ರಿಪಬ್ಲಿಕ್ ದಿನಾಚರಣೆಯ ಸಂದರ್ಭದಲ್ಲಿ ತಿರುವಾಂಕೂರು ಮಂತ್ರಿಮಂಡಲದ ಪುನರ್ರಚನೆಯು ಆಗುವುದೆಂದೂ ಈಗಿರುವ ೯ ಜನ ಮಂತ್ರಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದೆಂದೂ ತಿಳಿದುಬಂದಿದೆ ಈಗಿನ ಮಂತ್ರಿಗಳು ಜನವರಿ ೨೩ನೇ ತಾ॥ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವರು ೨೬ನೇ ತಾ॥ ನಡೆಯುವ ವಿಶೇಷ ದರ್ಬಾರಿನಲ್ಲಿ ರಾಜ ಪ್ರಮುಖರೂ ಹೊಸ ಮಂತ್ರಿಗಳೂ ಪ್ರಮಾಣ ವಚನವನ್ನು ಸ್ವೀಕರಿಸುವರು

ಕಮ್ಯೂನಿಸ್ಟ್ ಚೀಣಕ್ಕೆ ಭಾರತದ ಮನ್ನಣೆ

ಭಾರತ ಸರ್ಕಾರವು ನಿನ್ನೆ ದಿನ ಕಮ್ಯೂನಿಸ್ಟ್ ಚೀಣಕ್ಕೆ ಮನ್ನಣೆಯಿತ್ತು [illegible] ಘೋಷಿಸಿತು. ಚೀಣದ ಹೊಸ ಸರ್ಕಾರದೊಡನೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸಲು ಭಾರತ ಸರ್ಕಾರವು ತನ್ನ ಸಮ್ಮತಿಯನ್ನು ಸೂಚಿಸಿ ಪತ್ರ ಬರೆದಿದೆ ಚೀಣೀ ರಾಷ್ಟ್ರೀಯ ಸರ್ಕಾರದವರು ಭಾರತದಿಂದ ತಮ್ಮ ರಾಯಭಾರಿಯನ್ನು ವಾಪಸು ಕರೆಸಿಕೊಳ್ಳಲು ನಿರ್ಧರಿಸಿದ್ದಾರೆ

ಹೆಚ್ಚು ದಾಸ್ತಾನಿಗಾಗಿ ಬಹಿರಂಗ ಛಡಿ ಶಿಕ್ಷೆ

ಜಮ್ಮು ಮತ್ತು ಕಾಶ್ಮೀರ ಸರ್ಕಾರದವರು ಹೆಚ್ಚು ಆಹಾರ ದಾಸ್ತಾನನ್ನು ವಿರೋಧಿಸಿ [illegible] ಮಾಡಿದ್ದಾರೆ ಈ ಕಾನೂನನ್ನು [illegible] ಅಪರಾಧಕ್ಕಾಗಿ [illegible] ವ್ಯಾಪಾರಿಗೆ ಮೊನ್ನೆ ದಿನ [illegible] ನಗರದ ಜನಬಂಗಾರ [illegible] ಛಡಿ ಏಟುಗಳನ್ನು ಕೊಡಲಾಯಿತು ಈ ರೀತಿ ಬಹಿರಂಗವಾಗಿ ಛಡಿಶಿಕ್ಷೆ ವಿಧಿಸಿದ್ದು ಇದೇ ಮೊದಲೆಂದು ಹೇಳಲಾಗಿದೆ.

ಕೃತಕ ಅಕ್ಕಿ

ಮೈಸೂರು ೩೦

ಮರಗೆಣಸಿನ ಜೋಳ, ಜೋಳ ಮತ್ತು ಇತರ ದ್ವಿದಳ ಧಾನ್ಯಗಳಿಂದ ಕೃತಕ ಅಕ್ಕಿಯನ್ನು ಇಲ್ಲಿನ ಚಲುವಾಂಬಾ ಭವನದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ತಯಾರಿಸಲಾಗಿದೆ. ಈ ಅಕ್ಕಿಯನ್ನು ಬೇಯಿಸಿದರೆ ಸ್ವಾಭಾವಿಕವಾದ ಅಕ್ಕಿಯು ಅನ್ನದಂತೆಯೇ ಇರುವುದೆಂದೂ ಅದರ ವಾಸನೆಯೂ ಕೂಡ ಹಿತಕರವಾಗಿರುವುದೆಂದೂ ಹೇಳಲಾಗಿದೆ. ಒಂದು ಟನ್ ಧಾನ್ಯದಿಂದ ಅರ್ಧ ಟನ್ ಕೃತಕ ಅಕ್ಕಿಯನ್ನು ತಯಾರಿಸಬಹುದು. ಈ ಅಕ್ಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸುವ ಯೋಜನೆ ನಡೆಯುತ್ತಿದೆ.

ರಾಜಧಾನಿಗೆ ಹಾಲಿವುಡ್ಡಿನ ನಟರ ಆಗಮನ

ಹಾಲಿವುಡ್ಡಿನ ಸುಪ್ರಸಿದ್ಧ ಸಿನಿಮಾ ನಟ ಎರಾಲ್ ಫ್ಲಿನ್‌ರವರು ಮೊನ್ನೆ ಸಂಜೆ ರಾಜಧಾನಿಗೆ ಆಗಮಿಸಿದರು. ಅವರು ಪಿಕ್ಚರ್‌ಗಳನ್ನು ಪರಿಶೀಲಿಸಿ, ಒಂದೆರಡು ದಿನಗಳು ರಾಜಧಾನಿಯಲ್ಲಿ ಇರುವರು. ಮೆಟ್ರೋಗೋಲ್ಡ್‌ವಿನ್ ಮೇಯರರ 'ಕಿಮ್' ಚಿತ್ರದ ತಯಾರಿಕೆಯ ಸಂಬಂಧದಲ್ಲಿ ಅವರು ಭಾರತಕ್ಕೆ ಬಂದಿದ್ದಾರೆ.

ಆಕಾಶವಾಣಿಯಲ್ಲಿ ವಿಶೇಷ ಕಾರ್ಯಕ್ರಮ

ನಾಳೆಯಿಂದ ೧೫ ದಿನಗಳಿಗೆ ಒಟ್ಟು ಮಧ್ಯಾಹ್ನ ೩-೪೦ ರಿಂದ ೩ ಘಂಟೆವರೆಗೆ ಆಕಾಶವಾಣಿಯಲ್ಲಿ ಸಣ್ಣ ಮಕ್ಕಳಿಗಾಗಿ "ಮೃಗಾಲಯಕ್ಕೆ ಭೇಟಿ" ಎಂಬ ವಿಶೇಷ ಕಾರ್ಯಕ್ರಮವನ್ನು ಪ್ರಸಾರಮಾಡಲಾಗುವುದು.

ಪಾಕಿಸ್ಥಾನದ ಅಸ್ತಿತ್ವಕ್ಕೆ ಶಾಸನದ ಆಧಾರವಿಲ್ಲ

ಭಾರತವನ್ನು ವಿಭಾಗ ಮಾಡುವಾಗ ದೇಶದ ಜನರ ಅಭಿಪ್ರಾಯವನ್ನು ಪಡೆಯದೆ ಕೇವಲ ಜಿನ್ನಾ, ಪಂಡಿತ ನೆಹರೂ ಮತ್ತು ಲಾರ್ಡ್ ಮೌಂಟ್‌ಬ್ಯಾಟನ್‌ರವರುಗಳಿಗೆ ಮಾತ್ರ ಒಪ್ಪಂದವಾದುದರಿಂದ, ಪಾಕಿಸ್ಥಾನದ ಅಸ್ತಿತ್ವಕ್ಕೆ ಶಾಸನದ ಆಧಾರವಿಲ್ಲವೆಂದೂ, ಈ ಪ್ರಶ್ನೆಯನ್ನು ವಿಶ್ವಸಂಸ್ಥೆಯು ಪರಿಶೀಲಿಸಬೇಕೆಂದೂ ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾ॥ ಖಾರೆಯವರು ತಿಳಿಸಿರುತ್ತಾರೆ.

ಬಳ್ಳಾರಿಯು ಮೈಸೂರಿಗೆ ಸೇರಬೇಕು

ಬಳ್ಳಾರಿ ಜಿಲ್ಲೆಯ ಕನ್ನಡ ಪ್ರದೇಶಗಳನ್ನು ಕರ್ನಾಟಕ ಪ್ರಾಂತ ರಚನೆಯಾಗುವವರೆಗೂ ಮೈಸೂರಿಗೆ ಸೇರಿಸಬೇಕೆಂದೂ ಮತ್ತು ಚಿತ್ರದುರ್ಗದ ಜಿಲ್ಲೆಯಲ್ಲಿರುವ ಒಟ್ಟು ಕಟ್ಟೆ ಮುಂತಾದ ಗ್ರಾಮಗಳನ್ನು ಮದರಾಸಿಗೆ ಸೇರಿಸಕೂಡದೆಂದೂ ಕೂಡ್ಲಿಗಿ ಜಗಳೂರಿನ ಪೌರಸಭಾಧ್ಯಕ್ಷರು ಪಂಡಿತ ನೆಹರೂ ಮತ್ತು ಇತರ ನಾಯಕರುಗಳಿಗೆ ತಂತಿ ಕಳುಹಿಸಿದ್ದಾರೆ.

ಹಿಂದೂ ಮಹಾಸಭಾ ಅಧಿಕಾರ ವರ್ಗ

ಕಲ್ಕತ್ತದಲ್ಲಿ ನಡೆದ ಹಿಂದೂ ಮಹಾಸಭಾಧಿವೇಶನದಲ್ಲಿ ಬರುವ ಸಾಲಿಗೆ ಡಾ॥ ಎನ್. ಬಿ. ಖಾರೆಯವರು ಅಧ್ಯಕ್ಷರಾಗಿಯೂ, ಶ್ರೀಗಳಾದ ವಿ. ಡಿ. ಸಾವರ್‌ಕರ್, ಎಲ್. ಬಿ. ಭೋಪಟ್‌ಕರ್, ಗೋಕುಲ್ ಚಂದ್ ನಾರಂಗ್, ಲಾಲಾ ನಾರಾಯಣದತ್, ದೇವೇಂದ್ರ ಮುಖರ್ಜಿ, ಬೆಂಗಳೂರಿನ ಶ್ರೀ ಜಿ. ವಿ. ರಾಮಚಂದ್ರರವರು ಉಪಾಧ್ಯಕ್ಷರುಗಳಾಗಿಯೂ, ಮಹಂತ ದಿಗ್ವಿಜಯನಾಥ ಮತ್ತು ಟಿ. ಜಿ. ದೇಶಪಾಂಡೆಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ವ್ಯಾನಿಗೂ ಬಸ್ಸಿಗೂ ಡಿಕ್ಕಿ

ಮೊನ್ನೆ ದಿನ ಮಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿ ಪೋಲೀಸ್ ವ್ಯಾನೊಂದು ಸಿಟಿ ಬಸ್ಸಿಗೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ ವ್ಯಾನು ತಲೆಕೆಳಗಾಗಿ ಬಿದ್ದು ಡ್ರೈವರ್ ಸಮೇತ ಏಳು ಜನ ಪೋಲೀಸಿನವರಿಗೆ ಗಾಯವಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಬಳ್ಳಾರಿ ಆಂಧ್ರಕ್ಕೆ ಸೇರಲು ಜಾಡಮಾಲಿಗಳ ಮುಷ್ಕರ

ಆಂಧ್ರ ಪ್ರಾಂತಕ್ಕೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಬೇಕೆಂದು ಅಲ್ಲಿನ ಪೌರಸಭೆಯ ೬೦೦ ಜನ ಜಾಡಮಾಲಿಗಳು ಮುಷ್ಕರ ಹೂಡಿ ಪ್ರದರ್ಶನ ನಡೆಸಿದರು. ಈ ಮುಷ್ಕರವು ೩ ದಿನಗಳು ನಡೆಯುವುದೆಂದು ಹೇಳಲಾಗಿದೆ.

ಪಾಕೀಸ್ಥಾನಕ್ಕೆ ೩ ಕೋಟಿ ರೂ. ನಷ್ಟ

ಕಳೆದ ೨೮ ತಿಂಗಳಿಂದ ಪಾಕಿಸ್ಥಾನಕ್ಕೆ ಹಡಗಿನ ಮೂಲಕ ಬಗುತ್ತಿದ್ದ ವ್ಯಾಪಾರದಲ್ಲಿ ೩ ಕೋಟಿ ರೂಗಳಷ್ಟು ನಷ್ಟವಾಗಿದೆಯೆಂದು ಅಲ್ಲಿನ ಹಣಕಾಸಿನ ಮಂತ್ರಿಗಳು ತಿಳಿಸಿರುತ್ತಾರೆ.

ಸ್ಥಳ ಪಲ್ಲಟ ಹೊಂದಿದವರಿಗಾಗಿ ರಟ್ಟಿನ ಮನೆ

ದೆಹಲಿಯಲ್ಲಿ ಅನೇಕ ಸ್ಥಳ ಪಲ್ಲಟ ಹೊಂದಿದವರ ಉಪಯೋಗಕ್ಕಾಗಿ ಸಣ್ಣ ಸಣ್ಣ ಆಕಾರದ ಒಂದು ಕೊಠಡಿಯುಳ್ಳ ಹತ್ತು ಸಾವಿರ ರಟ್ಟಿನ ಮನೆಗಳನ್ನು ಒದಗಿಸಲು ಬ್ರಿಟನ್ನಿಗೆ ಆರ್ಡರು ಕೊಡಲಾಗಿದೆ. ಅಂತಹ ಪ್ರತಿಯೊಂದು ಮನೆಯ ಬೆಲೆಯು ೪೭೦ ರೂಗಳಾಗುವುದೆಂದು ಹೇಳಲಾಗಿದೆ.

ಭಾರತ ಪಾಕಿಸ್ಥಾನಗಳಿಗೆ ಬೆವಿನ್ನರ ಭೇಟಿಯಿಲ್ಲ

ಕೊಲಂಬೋವಿನಲ್ಲಿ ನಡೆಯುವ ಕಾಮನ್‌ವೆಲ್ತ್ ಸಮ್ಮೇಳನವನ್ನು ಮುಗಿಸಿಕೊಂಡ ಮೇಲೆ ಭಾರತ ಮತ್ತು ಪಾಕಿಸ್ತಾನಗಳಿಗೆ ಭೇಟಿ ಕೊಡಬೇಕೆಂದು ಪ್ರಾರ್ಥಿಸಿದ್ದಕ್ಕೆ ಬೆವಿನ್ನರು ಭೇಟಿ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ಜಪಾನಿನ ರಾಜಕುಮಾರರ ಅರಮನೆ ಸುಟ್ಟಿತು

ಜಪಾನ್ ಚಕ್ರವರ್ತಿಗಳ ಕಿರಿಯ ೧೪ ವರ್ಷದ ಅಕಿಟೋರವರ ಅರಮನೆಗೆ ಆಕಸ್ಮಾತ್ ಬೆಂಕಿ ಬಿದ್ದು, ಎಲ್ಲ ವಸ್ತುಗಳೂ ಭಸ್ಮವಾದವೆಂದು ವರದಿಯಾಗಿದೆ.

CHAMUNDESWARI
TALKIES
Morning Shows
From 30-12-49 for 3 days
MONSIEUR VERDOUX
-:Featuring:-
Charlie Chaplin

ಪ್ರಭಾ
ಅಮೋಘ ಪ್ರಾರಂಭ
31-12-49 ರಿಂದ
ಪ್ರತಿದಿನ 3 ಆಟಗಳು
ಭಾರತೀಯ ಸ್ತ್ರೀತ್ವದ ಧ್ಯೇಯಗಳನ್ನು ಎತ್ತಿಹಿಡಿದ ಮಹಿಳೆಯ ಪ್ರಶಂಸನೀಯ ಪ್ರಯತ್ನ!
ಬಿ. ಎನ್. ಪಿ. ಕಿಶೋರ್‌ರವರ ಹಿಂದಿ ಚಿತ್ರ
ಸ್ವಯಂ ಸಿದ್ಧ
ಶಾಂತಾ ಆಪ್ಟೆ, ಮೋಲಿನಾ, ಗೀತಾ ಶ್ರೀ, ಬಿಪಿನ್ ಗುಪ್ತ
ಎಲ್ಲ ಕಾಂಟ್ಮೆಂಟ್ ನಾಮಗಳನ್ನು ಮನ್ನಾ ಮಾಡುತ್ತೇ



ರಾಜಕಮಲ್
ಮೈಸೂರು
30-12-49 ರಿಂದ
ಜನಭರಿತವಾದ ೨ನೇ ವಾರ
ಜೀವನಂ
— ಭೂಮಿಕೆ —
ವೈಜಯಂತಿಮಾಲಾ, ಟಿ. ಆರ್ ರಾಮಚಂದ್ರನ್, ಲಲಿತ-ಪದ್ಮಿನಿ
ಬೆಳಗಿನ ಪ್ರದರ್ಶನಗಳು
30-12-49ರಿಂದ 4 ದಿನಗಳು ಮಾತ್ರ
ಇಸ್ಮತ್
(ಹಿಂದಿ)
ಭೂಮಿಕೆ-ನಾ ಸೇಠಿ, ಮೆಹತಾಬ್ ...

ಗಣೇಶಾ ಟಾಕೀಸ್
1-1-49ರಿಂದ 3 ದಿನಗಳು ಮಾತ್ರ
ರಿಪಬ್ಲಿಕ್‌ರವರ ಪೂರ್ಣ ಸೀರಿಯಲ್
ಡಾರ್ಕೆಸ್ಟ್ ಆಫ್ರಿಕ
DARKEST AFRICA
[ಹೊಸ ಪ್ರಿಂಟ್]
ಪಾತ್ರ-ಕ್ಲೈಡ್ ಬೀಟಿ ಮತ್ತು ಮ್ಯಾನ್ಯುಲ್ ಕಿಂಗ್
— ಮುಂದಿನ ಬದಲಾವಣೆ —
Painted Stallion
(ಮೈಸೂರಿನಲ್ಲಿ ಪ್ರಥಮ ಪ್ರದರ್ಶನ)

ಪ್ರಭುದೇವಾ ಟಾಕೀಸ್
1-1-50 ನೇ
ಭಾನುವಾರದಿಂದ
ದಿನವಹಿ 4 ಆಟಗಳು
ಅಮೋಘ ಪ್ರಾರಂಭ
ಮಹಿರಾವಣ
(ತೆಲುಗು ಚಿತ್ರ)
ಮುಖ್ಯ ಪಾತ್ರ-ಗಗ್ಗಯ್ಯ, ಕಾಂಚನಮಾಲಾ, ರಾಮಕೃಷ್ಣ ಶಾಸ್ತ್ರಿ ಮುಂತಾದವರು

Edited, printed and published by A R Nagarajan, at Sadhvi Press, D. Subbiah Road, Mysore.